KARNATAKA STATE ARCHIVES

KARNATAKA
STATE
ARCHIVES

KARNATAKA STATE ARCHIVES

KARNATAKA STATE ARCHIVES

KARNATAKA
STATE
ARCHIVES

KARNATAKA STATE ARCHIVES

ARS 34 APP 82

NAVAYUGA KANNADA
WEEKLY

From 16.4.1959
Cont From Roll No 147

Roll No 148

78158.

ARS 34 APP 82

NAVAYUGA KANNADA
WEEKLY

From 16.4.1959
Cont From Roll No 147

Roll No 148

78158.

ARS 34 APP 82

NAVAYUGA KANNADA WEEKLY

From 16.4.1959

Cont From Roll No 147

Roll No 148

78158

ಟೆಯೂನರಿಗೆ ಅನುಪಮ ಶ್ರದ್ಧೆ ಭಕ್ತಿಗಳು ಇವರ ಮೇಲಿರುವುದು.

ರತದಿಂದ ಬೌದ್ಧ ಧರ್ಮದ ಸಂ ು ಹರಡಿ, ಕೆಂಪು ಬೀರಿದ ಹಲ ರಾಷ್ಟ್ರಗಳಲ್ಲಿ ಟಿಬೇಟು ಒಂದು ದು ಸತ್ಯ. ಟಿಬೇಟು ಚೀನಾ ಮ ಾರತಗಳ ನಡುವೆ ಇರುವ ದೇಶ. ಕರಾಜ ಹಿಮಾಲಯ ಟಿಬೇಟದಲ್ಲಿ ಸುಶೋಭಿತವಾಗಿದೆ.

ಜನೀತಿಕ ದೃಷ್ಟಿಯಿಂದ ಟಿಬೇಟು ಪ್ರಜಾರಾಜ್ಯದ ಅಂತರ್ಗತವಿರುವ ಸ್ವಾಯತ್ತ ಆಡಳಿತೆ ಪಡೆದಿರುವ . ಈ ಬಗ್ಗೆ ಚೀನದೊಡನೆ ೯—೫೪ರಂದು ಸಂಧಿಯೂ ಆಗಿ ದರಂತೆ, ಟಿಬೇಟಿನ ವಿದೇಶನೀತಿ ಭದ್ರತೆಗಳ ಅಧಿಕಾರವನ್ನು ಒಪ್ಪಿಸಲಾಗಿತ್ತು. ಆದರೆ, ಚೀನದ ಸಿರ್ಮಾತರಲ್ಲಿ ದ ಮೇಲೆ ತಮ್ಮ ಹೆ ಅಧಿಕಾರವನ್ನು ಚಲಾ ಹಂಬಲವು ಬೆಳೆದುದರ ಣವಾಗಿಯೇ ತಮ್ಮ ಸಂಸ್ಕೃತಿ ಪರಂಪರೆಗಳನ್ನ ಅವಿಚ್ಛಿನ್ನವಾ ಂಡೇ ಚೀನದೊಡನೆ ಸಂಬಂಧ ಬಯಸುತ್ತಿದ್ದ ಟಿಬೇಟು ಈ ವನ್ನು ಪೂರೈಸಲು ಸಿದ್ಧರಾಗಿಲ್ಲ ಈ ರಾಜಧಾನಿ ಲಾಸಾದಲ್ಲಿ ಇ ಗೊಂದಲಗಳೇಳಲು ಕಾರಣವಾ ಂಬುದು ಬಹುಮಟ್ಟಿಗೆ ಸತ್ಯ. ರೆರಾಷ್ಟ್ರವಾದ ಟಿಬೇಟಿನಲ್ಲಾದ ಯಿಂದಾಗಿ ಭಾರತೀಯರೆಲ್ಲರೂ ಂತೀತರಾಗುವುದೂ ಸ್ವಾಭಾ ದೆ.

ಮತ್ತು ಭಾರತಗಳ ಪಾರಸ್ಪರಿಕ ವು ಬಹಳ ಮಧುರವಾಗಿದೆ. ಇ ಯೇ ಭಾರತ ಪರ್ಮವು ಟಿಬೇಟ ಲ್ಲಿಯ ಧರ್ಮಗುರು ದಲಾಯ್ ಕಡೆಗೆ ವಿಶೇಷ ಅಭಿರುಚಿ ಮ ಗಳನ್ನೂ ತೋರಿಸುತ್ತದೆ. ಏಕೆಂ ಯ್ ಲಾಮಾರವರನ್ನು ಟಿಬೇ ಪರಮಾತ್ಮ ಸ್ವರೂಪಿ ಮೂದ ುದ್ಧನ ಅವತಾರನೆಂದು ತಿಳಿ ಅಲ್ಲದೇ ಸದ್ಯದ ದಲಾಯ್ ರು ಈ ಮೊದಲೊಮ್ಮೆ ಭಾರ ದರ್ಶಿಸಿದ್ದು, ಅವರಿಂದ ಪ್ರ ನತ್ತ ಕೊಡಲ್ಪಟ್ಟ ಕೆಂಪು ರು ದಿಗೂ ಅನೇಕ ಭಾರತೀಯ ದ್ರವಾಗಿದೆ. ಆದುದರಿಂದಲೇ ನಿಕ ಗವರ್ನರ ಜನರಲ್ಲರಾದ ಂಗ ಬರು ಅಂಗರಕ್ಷರನ್ನು ಳಿ ನ ಈ ಧರ್ಮಗುರು ತನ್ನಲ್ಲಿಗೆ ು ಆದೇಶಪತ್ರರಿಂದೂ, ಇವ ಧಿಸುತ್ತ ಟಿಬೇಟಿನ ಜನತೆ ಧವನ್ನಾರಂಭಿಸಿದರೆಂದೂ

ರೂಪವೇ ಟಿಬೇಟದಲ್ಲಿ ಪ್ರಚಲಿತವಿರುವ ಧರ್ಮವಾಗಿದೆ. ಈ ಧರ್ಮವು ಭಾರತೀಯರ ವಿಶ್ವಾಸಕ್ಕೂ ಪಾತ್ರವಾಗಿದೆ. ಟಿಬೇಟೀಯ ಸಂಪ್ರದಾಯಕ್ಕನುಸಾರವಾಗಿ ದಲಾಯ್ ಲಾಮಾರಿಗೆ ತನ್ನ ಉತ್ತರಾಧಿಕಾರಿಯನ್ನು ನೇಮಿಸಲಾರನು; ಅಥವಾ ಅವನನ್ನು ಆರಿಸಲಾರನು. ಭಗವಂತನಾದ ಅವಿಲೋಕಿತೇಶ್ವರ ಬುದ್ಧನು ಸ್ವಯಂ ಟಿಬೇಟಿಯನರ ಮಾರ್ಗದರ್ಶನ ಮಾಡುವುದಕ್ಕಾಗಿ ದಲಾಯ್ ಲಾಮಾರಿರುವರೆಂದು ಟಿಬೇಟೀಯರ ವಿಶ್ವಾಸವಿದೆ. ಲಾಮಾರು ತಮ್ಮ ಶರೀರವನ್ನ ಮಾತ್ರ ಬದಲಾಯಿಸುತ್ತಾರೆ, ಈ ವಿಶ್ವಾಸದ ಬಲದಿಂದಿಂದಲೇ ಒಬ್ಬ ದಲಾಯ್ ಲಾಮಾರು ದೇಹಾಂತ ಹೊಂದಿದೊಡನೆಯೇ ಆ ದಲಾಯ್‌ಲಾಮಾರ ಲಕ್ಷಣಗಳುಳ್ಳ ಅವರ ಮೃತ್ಯುವಿನ ಸಮಯ ಉತ್ಪನ್ನವಾಗಿದ್ದ ಬಾಲಕರಲ್ಲಿಯೇ ಓರ್ವನನ್ನು ಅರಸಿ, ಅಂತಹವನನ್ನು ಆ ಕೂಡಲೇ ದಲಾಯ್ ಲಾಮಾ ಪದವಿಗೇರಿಸುತ್ತಾರೆ. ಈಗಿನ ದಲಾಯ್ ಲಾಮಾರ ಶೋಧನೆಯಲ್ಲಿ ಟಿಬೇಟಿಯನರು ತೊಡಗಿ ಕೆಲವಾರು ವರ್ಷಗಳ ವರೆಗೆ ಪ್ರಯತ್ನ ಮಾಡಬೇಕಾಯಿತು.

೧೯೩೩ರಲ್ಲಿ ಈ ಹಿಂದಿನ ಲಾಮಾರು ಮೃತ್ಯುಮುಖರಾದರು. ೧೯೩೫ನೆಯ ವರ್ಷ ಕಳೆದರೂ ಟಿಬೇಟಿಯನ್ನರಿಗೆ ತಮ್ಮ ಲಾಮಾರ ಉತ್ತರಾಧಿಕಾರಿ ಪತ್ತೆಯಾಗಲಿಲ್ಲ. ಒಂದು ದಿನ ಓರ್ವ ಅಧಿಕಾರಿಯು ಚೋರ್‌ಕೋರ್ ಜೀಲಿನ ಯಾತ್ರೆಗೆ ಹೊರಟನು. ಅಲ್ಲಿ ಅವನು ಸತ್ವಪಾನ್‌ಮಾ ಪರ್ವತಗಳ ತಟದಲ್ಲಿ ಮೂರು ಪ್ರವಾಹಗಳ ಒಂದು ದೃಶ್ಯವನ್ನು ಕಂಡನು. ಈ ಪ್ರವಾಹದ ಸಮೀಪದಲ್ಲಿಯೇ ಒಂದು ಮನೆಯೂ ತೋರಿ ಬಂದಿತು. ಅಲ್ಲಿಯೇ ಅವನಿಗೆ "ಆ", "ಕ" ಮತ್ತು "ಮ" ಎಂಬ ಅಕ್ಷರಗಳು ದೃಷ್ಟಿಗೋಚ

ಕೊಂಡಿರುವಂತೆ ಕಂಡುಬಂದಿದ್ದುದೂ ಈ ಅರ್ಥ ಕಟ್ಟುವುದಕ್ಕೆ ಸಾಧನವಾಯಿತು. ಇದರಿಂದಾಗಿ ಪೂರ್ವ ದಿಕ್ಕಿನತ್ತ ದಲಾಯ್ ಲಾಮಾರವರ ಶೋಧನೆಗೆ ಮೊದಲಾಯಿತು. ಹೀಗೆ ಹೊರಟ ಒಂದು ಪಂಗಡಕ್ಕೆ ಒಂದು ನೀಲಿಯ ಬಳಿಯ ಮನೆಯ ಬಾಗಿಲಿಂದ ಮೂರು ವರ್ಷದ ಹುಡುಗನೊಬ್ಬನು ಹೊರಬರುತ್ತಿರುವುದು ಗೋಚರವಾಯಿತು. ಈ ದಳವನ್ನು ಕಂಡೊಡನೆಯೇ ಆತ "ಲಾಮಾ ಲಾಮಾ" ಎಂದು ಕೂಗಾಡಿದನು. ದಳದವರು ಕುತೂಹಲ ಪೂರ್ಣ ನೇತ್ರಗಳಿಂದ ಹುಡುಗನ ಶರೀರ ರಚನೆಯನ್ನು ನೋಡತೊಡಗಿದರು, ಅಲ್ಲದೇ ಲಾಮಾರಿಗೆ ಆದರ್ಶವಿದ್ದ ಲಕ್ಷಣಗಳು ಅವನಲ್ಲಿ ತೋರಿಬಂದುವು. ಅಲ್ಲದೆ ೧೩ನೆಯ ಲಾಮಾರ ಕುರುಹುಗಳೂ ಕಂಡುಬಂದುವು. ಆ ಮೇಲೆ ಅವನನ್ನು ಲಾಮಾರನ್ನಾಗಿ ಆರಿಸಲಾಯಿತು. ೧೯೩೯ರಲ್ಲಿ ಲಾಸಾಕ್ಕೆ ಕರೆತರಲಾಯಿತು; ಮತ್ತು ೧೯೪೦ರಲ್ಲಿ ಅವನನ್ನು ಲಾಮಾರೆಂದು ನಿಯುಕ್ತಮಾಡಲಾಯಿತು. ೧೭—೧೧—೧೯೫೦ರಂದು ಈ ಲಾಮಾರೇ ಟಿಬೇಟಿನ ಸ್ವಾಧಿಕಾರ ಸಂಪನ್ನ ಸರ್ವೋಚ್ಚ ಧಾರ್ಮಿಕ ಅಧಿಕಾರಿಯೆಂದು ಅಧಿಕಾರ ವಹಿಸಿದರ.

ದಲಾಯ್ ಲಾಮಾರ ಪದವಿಯು ಟಿಬೇಟದಲ್ಲಿ ಬಹಳ ಗೌರವಪೂರ್ಣವಾಗಿದೆ. ಕ್ರಿಸ್ತೀಯರಲ್ಲಿ ರೋಮದ ಪೋಪರಿಗಿರುವಷ್ಟೆ ಸ್ಥಾನಮಾನಗಳು ಟಿಬೇಟದಲ್ಲಿ ದಲಾಯ್ ಲಾಮಾರವರಿಗಿದೆ. ಇದರಿಂದಾಗಿಯೇ ಟಿಬೇಟಿಯನರು ಲಾಮಾರ ಮೇಲೆ ಅಪಾರ ಶ್ರದ್ಧೆಯನ್ನಿಟ್ಟಿದ್ದಾರೆ. ಅವರ ಪ್ರತಿಯೊಂದು ಮಾತನ್ನೂ ಜನರು ವೇದವಾಕ್ಯವೆಂದು ಮನ್ನಿಸುತ್ತಾರೆ.

ದಲಾಯ್‌ಲಾಮಾ ಎಂದರೆ, ಜ್ಞಾನ ಮಹಾಸಾಗರ ಎಂದರ್ಥ. ವಾಸ್ತವದಲ್ಲಿ ಲಾಮಾ ಶಬ್ದವು ಮಂಗೋಲ ಭಾಷೆಯ ಶಬ್ದ. ಮಂಗೋಲದಿಂದ ಬಂದೀಗ ಟಿಬೇ

ಇನೆಯ ಲಾಮಾನು ಆದೇಶವನ್ನು ಸಂಧಿಸಿದ್ದನು. ಆಗ ಅವನನ್ನು ಅವರು ಪ್ರಧಾನ ದಲಾಯಿ ಲಾಮಾ ಎಂಬ ಬಿರುದಿತ್ತು ಗೌರವಿಸಿದರಂತೆ.

ಇಂದಿಗೂ ತನ್ನ ಗುರು ಶಿಕ್ಷಣ ದೀಕ್ಷೆ ಮತ್ತು ಅಧ್ಯಯನಗಳಲ್ಲಿ ಪೂರ್ಣತೆಯನ್ನು ಪಡೆದಿರುವರೆಂಬ ವಿಶ್ವಾಸ ಟಿಬೇಟಿಯನರಲ್ಲಿದೆ. ದಲಾಯಿಲಾಮಾರು ಆಯ್ಕೆಯಾದ ಮೇಲೆ, ಅವರನ್ನು ತಮ್ಮ ತಂದೆತಾಯಿಯರಿಂದ ಬೇರೆಯಾಗಿಸುತ್ತಾರೆ. ಲಾಮಾರವರ ಮಹಲಿನಲ್ಲಿಯೇ ಒಂದೆಡೆ ಅವರನ್ನು ಇರಗೊಡುತ್ತಾರೆ. ಬಾಲ್ಯಾವಸ್ಥೆಯಿಂದಲೂ ಅವರ ವ್ಯಕ್ತಿತ್ವವು ಒಂದು ವಿಧದ ಗಾಂಭೀರ್ಯದಿಂದಲೇ ರೂಪಿಸಲ್ಪಡುತ್ತದೆ; ಸೌಮ್ಯವಾಗಿಯೇ ಗಚಿಸಲ್ಪಡುತ್ತದೆ.

ದಲಾಯ್ ಲಾಮಾರ ವೈಭವ ಮತ್ತು ಐಶ್ವರ್ಯಗಳು ಅಪರಿಮಿತ. ಸದ್ಯದ ದಲಾಯ್ ಲಾಮಾರು ಅಧಿಕ ಜನ ಪ್ರಿಯರಾಗಿರುವರು. ಎಂತಲೇ ಅವರ ಮೇಲೆ ಹೇರಿದ ನಿರ್ಬಂಧವನ್ನು ಕೇಳಿದ ಕೂಡಲೇ ಟಿಬೇಟಿಯಾನರು ಉರಿದು ಬಿದ್ದರು. ಲಾಮಾರ ರಕ್ಷಣೆಗಾಗಿ ಟಿಬೇಟಿಯನರು ತಮ್ಮ ಜೀವವನ್ನೂ ಮುಡುಪಾಗಿರಿಸಲು ಸಿದ್ಧರಿದ್ದಾರೆ.

ಅನುಭವಾಮೃತ

(೧೧ನೇ ಪುಟದಿಂದ)

ಕದಲ್ಲಿ ಸ್ಕೂಲ್ ಡೇ ದಿನ ಹೀರೋ ಪಾತ್ರ ಅವನದೇ. ಸರಿ! ನಾಟಕದ ಸನ್ನಿವೇಶವೊಂದರ ಬಾಯಿಪಾಠ ಮಾಡಿದ ಪುಟವೊಂದನ್ನು ಸಾಭಿನಯದಿಂದ—ಪ್ರಾರಂಭಿಸಿಯೇ ಬಿಟ್ಟ! ಇಂಗ್ಲಿಷ "ಪಟ ಪಾಟಾ ಸಟ ಸಾಟ್" ಎನ್ನುತ್ತಾ ಮನೆ ತುಂಬ ವ್ಯಾಪಿಸಿತು! ಕಿಟ್ಟು ಎದ್ದು ನಿಂತು ಕೈ ಮೇಲೆ ಮಾಡಿ ಮುಖ ಗಂಟು ಹಾಕಿ

"I heard three speak one a speech once — but it was never acted; or if, it was, not above once: for the play I remember in pleased not the millions··· ···let me see—let me see— the fair daughter and no more!"

ರಾಧಮ್ಮನವರ ಕಂಗಳಲ್ಲಿ ಆನಂದ ಬಾಷ್ಪವಿಳಿದಿದ್ದುವು. ಅಜ್ಜಯ್ಯನೆದ್ದು ಕಿಟ್ಟುವನ್ನು ಹೆಗಲು ಚಪ್ಪರಿಸಿ 'ಭೇಷ್. ಕಲಿತಿದ್ದೀ ಕಣೋ, ನಂಗೊತ್ತು—ಕಿಟ್ಟು ಅವನಪ್ಪನಂಗೇ ಅಂತ! ರಾಧುಗೆ ಗಂಡು ಹುಡುಕದಾವ ಯಾರು ನಾನೇ ಅಲ್ವೆ ಜೋಡಿ ನೋಡಿ. ಕಿಟ್ಟನಂಥವನೇ ಹುಟ್ಲಿ ಅಂತ ಹರಕೆ ಹಾಕ್ಕೊಂಡಿದ್ದೆ! ನಾಳೆಯೇ ಗ್ರಾಮದೇವರಲ್ಲಿ ದೇವಕಾರ್ಯ ಆಗ್ಬೇಕು. ಕಿಟ್ಟು ನೀನು ಓದೋದು ಮಾತ್ರ ಬಿಡಬೇಡ. ಲಂಡನ್ ವರೆಗೂ ಓ

ದಾಂಡೇಲಿ ಮತ್ತು ಯಾದಗಿರಿ

ಎರಡು ಹೊಸ ಶಾಖೆಗಳು ಸಿಂಡಿಕೇಟಿನ ಬೇಂಕಿಂಗ್ ಸೇವೆಯ ಹೆಚ್ಚಳಕ್ಕಾಗಿ

16—4—1959ರಂದು ತೆರೆಯಲ್ಪಡುವುವು.

ಇಲ್ಲಿಗೆ ನಮ್ಮ ಶಾಖೆಗಳ ಸಂಖ್ಯೆಯು 119 ಆಗುವುದು.

— ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್



ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13

ವರುಷ ೩೮. ವಾರ ೩೧. 16-4-1959 Vol. 38. No.

ವಿಚಾರ ಮಥನ

ಪಾಕಿಸ್ತಾನದ ಪಂಥಾಹ್ವಾನ

* *

ಭಾರತ ರತ್ನ ಜವಾಹರ

* *

ಮುಂದುವರಿಯುಬೇಕೆ?

* *

ಮೂರ್ಖರೊಡನೆ ಸಖ್ಯವನ್ನು ಬೆಳೆಸಿಕೊಂಡರೆ, ಅದೆಷ್ಟು ದಿನ ಉಳಿಯಬಹುದು ಎಂಬ ಪ್ರಶ್ನೆಯನ್ನು ಈಗ ಭಾರತವು ಉತ್ತರಿಸುವ ಕಾಲ ಬಂದಿದೆ. ಹೊರಗೆ ಬಣ್ಣದ ನುಡಿಗಳಿಂದ ಸಖ್ಯ, ಸೌಹಾರ್ದ, ಶಾಂತಿಗಳನ್ನೇ ಬಯಸಿ, ಭಾರತದೊಡನೆ ಹೊಂದಾಣಿಕೆಯಿಂದ ಬಾಳಬಯಸುವ ಪಾಕಿಸ್ತಾನದ ದುರಾಚಾರವು ದಿನೇ ದಿನೇ ಪ್ರವೃದ್ಧಮಾನಸ್ಥಿತಿಗೇರುತ್ತಿದೆ. ಭಾರತ-ಪಾಕ್ ಗಡಿಯಲ್ಲಿ ಮಾಡಬಾರದ ಅನ್ಯಾಯಗಳನ್ನೂ ಗಲಭೆಗಳನ್ನೂ ಮಾಡಿಕೊಂಡು ಭಾರತದ ಸಹನಾಶಕ್ತಿಗೆ ಪಂಥಾಹ್ವಾನವೀಯುವ ಪಾಕಿಸ್ತಾನ ಇದೀಗ ಮತ್ತೂ ಮತ್ತೂ ಮುಂದುವರಿಯುತ್ತಿರುವುದು ಕಂಡು ಬರುತ್ತಿದೆ. ರಾವಲ್ಪಿಂಡಿಯ ಸಮೀಪದಲ್ಲಿ ಭಾರತದ ಒಂದು ವಿಮಾನವನ್ನು ಗುಂಡಿಟ್ಟು ಕೆಳಗುರುಳಿಸಿದರು ಎಂಬ ವಾರ್ತೆಯು ಖೇದದಾಯಕವಾಗಿದೆ. ಈ ಘಟನೆ ನಡೆಯಲು ಪಾಕಿಸ್ತಾನವು ಯಾವುದೇ ಕಾರಣವನ್ನು ಮುಂದಿಟ್ಟರೂ ಈ ಕೃತ್ಯವು ಅಂತಾರಾಷ್ಟ್ರೀಯ ಕಾನೂನಿನ ದೃಷ್ಟಿಯಿಂದಲೂ ಅನ್ಯಾಯವಾಗಿದೆ ಎಂಬುದನ್ನು ಗಮನಿಸಬೇಕು. ಅತ್ತ ಕಾಶ್ಮೀರದ ಸೈನಿಕ ಕ್ಷೇತ್ರವನ್ನು ಗುಲಾಮ್ ಎಂಬ ಪಾಕ್ ಸಂಚಾರಿಯು ಅಕ್ರಮವಾಗಿ ಪ್ರವೇಶಿಸಲು ಪ್ರಯತ್ನಿಸುತ್ತಿರುವಾಗ ಬಂಧಿಸಲ್ಪಟ್ಟನೆಂದೂ ಸುದ್ದಿ ಬಂದಿದೆ. ಕಾಶ್ಮೀರದ ಯುದ್ಧವಿರಾಮ ರೇಖೆಯ ಸಮೀಪದ ಸುಧಪುರದ ಹತ್ತಿರದ ಒಂದು ಹಳ್ಳಿಯಲ್ಲಿ ಪರಿಶೀಲನೆ ನಡೆಸುತಿದ್ದ ಸಂಯುಕ್ತ ರಾಷ್ಟ್ರ ಸಂಘದ ವೀಕ್ಷಕರ ತಂಡವೊಂದರ ಮೇಲೆಯೂ ಪಾಕಿಸ್ತಾನವು ಮೆಶಿನುಗನ್ನುಗಳನ್ನು ಹಾರಿಸಿದೆ ಎಂದು ಶ್ರೀನಗರದ ವಾರ್ತೆಯಿದೆ ಹೀಗೆ ಒಂದಲ್ಲ ಹಲವು ಅವಿವೇಕಯುಕ್ತ ಕರ್ಮಗಳಿಂದ ಪಾಕಿಸ್ತಾನವು ತನ್ನ ಮೂರ್ಖತನವನ್ನೂ ಈರ್ಷೆಯ ದುರುದ್ದೇಶವೂ ಇಲ್ಲವೆಂದು ಹೇಳುವುದು ಹೇಗೆ? ಪಾಕಿಸ್ತಾನ ಸರಕಾರಕ್ಕೆ ಮಾಮೂಲು ಪ್ರಕಾರ ಈ ಕೃತ್ಯಕ್ಕೆ ವಿರೋಧ ಸೂಚಿಸುವ ಪತ್ರವು ಭಾರತದಿಂದ ಹೋಗುವುದು ಸ್ವಾಭಾವಿಕ. ಆದರೂ ಮೂರ್ಖನಿಗೆ ಬುದ್ಧಿಯನು ನೂರ್ಕಾಲ ಹೇಳಿದರೆ ಅದರಿಂದ ಪ್ರಯೋಜನವಿದೆಯೆ? ಅಂತಲೇ ಮೂರ್ಖಸ್ಯ ನಾಸ್ತ್ಯೌಷಧಂ ಎಂಬುಕ್ತಿಯಿದೆ. ಆದರೆ ಈ ಮೂರ್ಖರನ್ನು ಶಾಂತಿಪ್ರಿಯರಾದ ಭಾರತೀಯರು ಕಟ್ಟಿಕೊಂಡು ಏನು ಮಾಡಬೇಕೆಂಬುದೇ ಮಹಾ ಪ್ರಶ್ನೆಯಾಗಿದೆ. ಭಾರತದ ಸತ್ವ ಪರೀಕ್ಷೆಯ ಕಾಲ ಸನ್ನಿಹಿತವಾಗುತ್ತಿದೆ ಎಂಬುದರ ಸೂಚನೆಗಳೇ ಪಾಕಿಸ್ತಾನದಿಂದ ಅವ್ಯಕ್ತವಾಗಿ ಬರುತ್ತಿವೆಯೆ?

○○ ○○ ○○

ಭಾರತ ಮತ್ತು ಭಾರತೀಯರ ಬಗ್ಗೆ ತಮ್ಮ ಸಹಾನುಭೂತಿಯನ್ನೋ ಸಹಾನುತಾಪವನ್ನೋ ಅನೇಕಾನೇಕ ಮಹಾವ್ಯಕ್ತಿಗಳು ಪ್ರದರ್ಶಿಸಬಹುದು. ಭಾರತದಲ್ಲಿಯೂ ವಿಶಾಲ ಮನೋಭಾವನೆಯಿಂದ ಭಾರತೀಯತ ಮೇಲ್ಮೆಯನ್ನೇ ಬಯಸುವ ಪರಹಿತರಿರಬಹುದು. ಆದರೆ, ಆಹರ್ನಿಶಿ ಭಾರತೀಯರ ಮಾತ್ರವಲ್ಲ ವಿಶ್ವದ ಪ್ರಜೆಗಳೆಲ್ಲರ ಸುಖವನ್ನು ಹಾರೈಸುವ ವಿಶಾಲಹೃದಯಿ ಪಂಡಿತ ನೆಹರೂ ನಮ್ಮ ಪ್ರಧಾನಿಯಾಗಿದ್ದಾರೆ ಭಾರತವೆಂದರೆ ನೆಹರೂ ಎಂದು ವಿದೇಶೀಯರು ಅನ್ನಬಹುದು; ಆದರೆ, ನೆಹರೂ ಎಂದರೆ ಭಾರತ ಎಂದು ಅವರು ತಿಳಿದಿರಲಾರರು. ದಿನದ ಇಪ್ಪತ್ತು ಗಂಟೆಗಳ ಕಾಲ ವೈಯಕ್ತಿಕ ಹಿತಚಿಂತನೆಯನ್ನು ಬದಿಗಿರಿಸಿ, ನಲುವತ್ತು ಕೋಟಿ ಭಾರತೀಯರ ಹಿತಚಿಂತನೆಗಾಗಿ ದುಡಿಯುವ ನೆಹರೂ ಏನೆಂದರೂ ಅದಕ್ಕೊಂದು ಬೆಲೆಯಿದೆ. ಭಾರತೀಯರ ಬಡತನವನ್ನು ದೂರ ಮಾಡಲು ದರಿದ್ರತನದೊಡನೆ ಹೋರಾಟ ಹೂಡಬೇಕು; ಆಲಸ್ಯದೊಡನೆ ಕಾದಾಡಬೇಕು ಎಂದು ಉಪದೇಶಿಸುವ ನೆಹರೂ ಭಾರತದ ಮಹಾ ಸಮಸ್ಯೆಯ ಪರಿಹಾರಕ್ಕೆ, ದೇಶದ ಉ-



ಹೆನ್ರಿ ಕಬೇಟ್ ಲೋಜರು ಅಂತಾರಾಷ್ಟ್ರೀಯ ಧ್ರುವ ಪರಿಶೀಲನಾವಲಯವ[…]
ತೋರಿಸುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ತ್ಪಾದನೆಯನ್ನು ಹೆಚ್ಚಿಸಲು ತಕ್ಕ
ವರಣವನ್ನು ನಿರ್ಮಿಸಬೇಕು
ಹೇಳ ತೊಡಗಿದ್ದಾರೆ. ಜನರ ಆರ್ಥಿ
ಸ್ಥಿತಿಯು ಸುಧಾರಿಸ ಬೇಕಾದರೆ
ಮಟ್ಟವು ಹೆಚ್ಚಬೇಕು; ಈ ವೇತ
ಕೆಯು, ಉತ್ಪಾದನೆ ಹೆಚ್ಚಾದ
ಸಾಧ್ಯ. ಒಂದಷ್ಟು ಕಾಗದದ
ಳಲ್ಲಿ ನೋಟುಗಳನ್ನು ಅಚ್ಚು
ಮಾತ್ರಕ್ಕೆ ದೇಶದ ಆದಾಯವು
ತಾಗಲಿಲ್ಲ ಆ ನೋಟುಗಳಿಗೆ
ಲೆಯೂ ಬಾರದೆ ಹೋಗಬಹು
ವು ದಿವಾಳಿತನವನ್ನೂ ಎದುರಿಸ
ಬರಬಹುದು. ಆದರೆ, ಪರಿಶ್ರಮ
ವಾಗಿ ದುಡಿದಲ್ಲಿ, ರಾಷ್ಟ್ರದ
ದನೆಯಲ್ಲಿ ಹೆಚ್ಚಳ ಸಾಧಿಸಿದ
ಪ್ರತಿ ರಾಷ್ಟ್ರೀಯನ ವೈಯಕ್ತಿ
ಕಾಂಕ್ಷೆಯೂ ಈಡೇರುವುದು.
ದಲೇ ಪರಿಶ್ರಮಪೂರ್ವಕವಾಗಿ
ರಾಷ್ಟ್ರದ ಉತ್ಪಾದನೆಯನ್ನು ಹ
ಅನುಕೂಲವಾದ ವಾತಾವರಣ
ರ್ಮಿಸಲು ಹೆಣಗಬೇಕು ಎಂದ
ನೆಹರೂ ವಿನಂತಿಸಿದ್ದಾರೆ. ಇಂ
ತಾವರಣ ನಿರ್ಮಿಸುವುದೆಂದರೆ,
ಪರಿಶ್ರಮಶೀಲರಾಗುವುದೆಂದು
ಳಬೇಕಾದ ಆವಶ್ಯಕತೆಯಿಲ್ಲ ತಾ

○○ ○○ ○

ಈ ವರ್ಷದ ಮದ್ರಾಸು ಕನ
ಎಂಟನೆ ತರಗತಿಯ ಸರಕಾರಿ ಪ
ಪರೀಕ್ಷೆಗಳ ಮೇಲೆ ಕಟ್ಟು ಕಿ

ದಿ ವಿಜಯ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಸ್ಥಾಪನೆ:-
ಮಂಗಳೂರು—3. **1931.**

ಕಾಯಂ ಠೇವಣಾತಿ ಬಡ್ಡಿ ದರ

1	ತಿಂಗಳಿಂದ	5	ತಿಂಗಳ ವರೆಗೆ	$4\frac{1}{4}$%
6	,,	12	,,	$4\frac{1}{2}$%
13	,,	24	,,	$4\frac{3}{4}$%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ $\frac{1}{4}$% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

NAVAYUGA
REGD. NO. M. 3619

UDIPI, THURSDAY
9-4-1959

LICENSE NO. 31
Licensed to Post without Prepayme

ನುಡಿಚಿತ್ರ

ಟಿಬೇಟದ ಧರ್ಮಾಧಿಕಾರಿ

ದಲಾಯಿ ಲಾಮಾ

ಟಿಬೇಟಿಯಾನರಿಗೆ ಅನುಪಮ ಶ್ರದ್ಧೆ ಭಕ್ತಿಗಳು ಇವರ ಮೇಲಿರುವುದು.

ಭಾರತದಿಂದ ಬೌದ್ಧ ಧರ್ಮದ ಸಂದೇಶವು ಹರಡಿ, ಕಂಪು ಬೀರಿದ ಹಲವಾರು ರಾಷ್ಟ್ರಗಳಲ್ಲಿ ಟಿಬೇಟು ಒಂದು ಎಂಬುದು ಸತ್ಯ. ಟಿಬೇಟು ಚೀನಾ ಮತ್ತು ಭಾರತಗಳ ನಡುವೆ ಇರುವ ದೇಶ. ಪರ್ವತರಾಜ ಹಿಮಾಲಯ ಟಿಬೇಟದಲ್ಲಿಯೇ ಸುಶೋಭಿತವಾಗಿದೆ.

ರಾಜನೀತಿಕ ದೃಷ್ಟಿಯಿಂದ ಟಿಬೇಟು ಚೀನ ಪ್ರಜಾರಾಜ್ಯದ ಅಂತರ್ಗತವಿರುವ ಒಂದು ಸ್ವಾಯತ್ತ ಆಡಳಿತ ಪಡೆದಿರುವ ರಾಷ್ಟ್ರ. ಈ ಬಗ್ಗೆ ಚೀನದೊಡನೆ ೨೩—೫—೫೧ರಂದು ಸಂಧಿಯೂ ಆಗಿತ್ತು. ಇದರಂತೆ, ಟಿಬೇಟಿನ ವಿದೇಶನೀತಿ ಮತ್ತು ಭದ್ರತೆಗಳ ಅಧಿಕಾರವನ್ನು ಚೀನಕ್ಕೆ ಒಪ್ಪಿಸಲಾಗಿತ್ತು. ಆದರೆ, ಆಧುನಿಕ ಚೀನದ ನಿರ್ಮಾತರಲ್ಲಿ ಟಿಬೇಟದ ಮೇಲೆ ತಮ್ಮ ಹೆಚ್ಚಿನ ಅಧಿಕಾರವನ್ನು ಚಲಾಯಿಸುವ ಹಂಬಲವು ಬೆಳೆದುದರ ಪರಿಣಾಮವಾಗಿಯೇ ತಮ್ಮ ಸಂಸ್ಕೃತಿ ಮತ್ತು ಪರಂಪರೆಗಳನ್ನು ಅವಿಚ್ಛಿನ್ನವಾಗಿರಿಸಿಕೊಂಡೇ ಚೀನದೊಡನೆ ಸಂಬಂಧ ಬೆಳೆಸಲು ಬಯಸುತ್ತಿದ್ದ ಟಿಬೇಟು ಈ ಹಂಬಲವನ್ನು ಪೂರೈಸಲು ಸಿದ್ಧರಾಗಿಲ್ಲದಿರುವುದೇ ರಾಜಧಾನಿ ಲಾಸಾದಲ್ಲಿ ಇತ್ತೀಚೆಗೆ ಗೊಂದಲಗಳೇಳಲು ಕಾರಣವಾಗಿರುವುದೆಂಬುದು ಬಹುಮಟ್ಟಿಗೆ ಸತ್ಯ. ತನ್ನ ನೆರೆರಾಷ್ಟ್ರವಾದ ಟಿಬೇಟಿನಲ್ಲಾದ ಈ ದಂಗೆಯಿಂದಾಗಿ ಭಾರತೀಯರೆಲ್ಲರೂ ವಿಶೇಷ ಚಿಂತೆಗೀಡಾಗುವುದೂ ಸ್ವಾಭಾವಿಕವಾಗಿದೆ.

ಚೀನ ಮತ್ತು ಭಾರತಗಳ ಪಾರಸ್ಪರಿಕ ಸಂಬಂಧವು ಬಹಳ ಮಧುರವಾಗಿದೆ. ಇದರೊಡನೆಯೇ ಭಾರತ ವರ್ಷವು ಟಿಬೇಟ ಮತ್ತು ಅಲ್ಲಿಯ ಧರ್ಮಗುರು ದಲಾಯಿ ಲಾಮಾರ ಕಡೆಗೆ ವಿಶೇಷ ಅಭಿರುಚಿ ಮತ್ತು ಶ್ರದ್ಧೆಗಳನ್ನು ತೋರಿಸುತ್ತದೆ. ಏಕೆಂದರೆ, ದಲಾಯಿ ಲಾಮಾರವರನ್ನು ಟಿಬೇಟಿಯಾನರು ಪರಮಾತ್ಮ ಸ್ವರೂಪಿಯಾದ ಗೌತಮ ಬುದ್ಧನ ಅವತಾರವೆಂದು ತಿಳಿಯುತ್ತಾರೆ. ಅಲ್ಲದೇ ಸದ್ಯದ ದಲಾಯಿ ಲಾಮಾರವರು ಈ ಮೊದಲೊಮ್ಮೆ ಭಾರತವನ್ನು ಸಂದರ್ಶಿಸಿದ್ದು, ಅವರಿಂದ ಪ್ರಸಾದರೂಪದಲ್ಲಿ ಕೊಡಲ್ಪಟ್ಟ ಕೆಂಪು ರುಮಾಲು ಇಂದಿಗೂ ಅನೇಕ ಭಾರತೀಯರೊಡನೆ ಭದ್ರವಾಗಿದೆ. ಆದುದರಿಂದಲೇ ಚೀನಾದ ಸೈನಿಕ ಗವರ್ನರ ಜನರಲ್ಲರಾದ ಚಾಂಗ್ ಚಿಂಗ ಬರು ಅಂಗರಕ್ಷಕರನ್ನುಳಿದು ಟಿಬೇಟಿನ ಈ ಧರ್ಮಗುರು ತನ್ನಲ್ಲಿಗೆ ಬರಬೇಕೆಂದು ಆದೇಶವಿತ್ತರೆಂದೂ, ಇದನ್ನು ವಿರೋಧಿಸುತ್ತ ಟಿಬೇಟಿನ ಜನತೆಯು ಪ್ರತಿರೋಧವನ್ನಾರಂಭಿಸಿದರೆಂದೂ ಕೇಳಿದೊಡನೆಯೇ ಭಾರತೀಯರೆಲ್ಲರೂ ವ್ಯಾಕುಲಚಿತ್ತರಾಗುವುದು ಸ್ವಾಭಾವಿಕವೇ. ದಲಾಯಿ ಲಾಮಾರು ನಮ್ಮ ದೇಶದ ನಾಗರಿಕರಲ್ಲವಾದರೂ ನಮ್ಮೆಲ್ಲರ ಹೃದಯದಲ್ಲಿ ಅವರು ಮನೆಮಾಡಿರುವರೆಂಬುದಂತೂ ನಿಸ್ಸಂಶಯ.

ಭಾರತದ ಬೌದ್ಧ ಧರ್ಮದಿಂದ ಕವಲೊಡೆದ ಮಹಾಯಾನ ಶಾಖೆಯ ಒಂದು ರೂಪವೇ ಟಿಬೇಟದಲ್ಲಿ ಪ್ರಚಲಿತವಿರುವ ಧರ್ಮವಾಗಿದೆ. ಈ ಧರ್ಮವು ಭಾರತೀಯರ ವಿಶ್ವಾಸಕ್ಕೂ ಪಾತ್ರವಾಗಿದೆ. ಟಿಬೇಟೀಯ ಸಂಪ್ರದಾಯಕ್ಕನುಸಾರವಾಗಿ ದಲಾಯಿ ಲಾಮಾರಿಗೆ ತನ್ನ ಉತ್ತರಾಧಿಕಾರಿಯನ್ನು ನೇಮಿಸಲಾರನು, ಅಥವಾ ಅವನನ್ನು ಆರಿಸಲಾರನು. ಭಗವಂತನಾದ ಅವಲೋಕಿತೇಶ್ವರ ಬುದ್ಧನು ಸ್ವಯಂ ಟಿಬೇಟಿಯನರ ಮಾರ್ಗದರ್ಶನ ಮಾಡುವುದಕ್ಕಾಗಿ ದಲಾಯಿ ಲಾಮಾರಿರುವರೆಂದು ಟಿಬೇಟೀಯರ ವಿಶ್ವಾಸವಿದೆ. ಲಾಮಾರು ತಮ್ಮ ಶರೀರವನ್ನು ಮಾತ್ರ ಬದಲಾಯಿಸುತ್ತಾರೆ. ಈ ವಿಶ್ವಾಸದ ಬಲದಿಂದಲೇ ಒಬ್ಬ ದಲಾಯಿ ಲಾಮಾರು ದೇಹಾಂತ ಹೊಂದಿದೊಡನೆಯೇ ಆ ದಲಾಯಿ ಲಾಮಾರ ಲಕ್ಷಣಗಳುಳ್ಳ ಅವರ ಮೃತ್ಯುವಿನ ಸಮಯ ಉತ್ಪನ್ನವಾಗಿದ್ದ ಬಾಲಕರಲ್ಲಿಯೇ ಓರ್ವನನ್ನು ಆರಿಸಿ, ಅಂತಹವನನ್ನು ಆ ಕೂಡಲೇ ದಲಾಯಿ ಲಾಮಾ ಪದಕ್ಕೇರಿಸುತ್ತಾರೆ. ಈಗಿನ ದಲಾಯಿ ಲಾಮಾರ ಶೋಧನೆಯಲ್ಲಿ ಟಿಬೇಟಿಯಾನರು ತೊಡಗಿ ಕೆಲವಾರು ವರ್ಷಗಳ ವರೆಗೆ ಪ್ರಯತ್ನ ಮಾಡಬೇಕಾಯಿತು.

೧೯೩೩ರಲ್ಲಿ ಈ ಹಿಂದಿನ ಲಾಮಾರು ಮೃತ್ಯುಮುಖರಾದರು. ೧೯೩೫ನೆಯ ವರ್ಷ ಕಳೆದರೂ ಟಿಬೇಟಿಯನ್ನರಿಗೆ ತಮ್ಮ ಲಾಮಾರ ಉತ್ತರಾಧಿಕಾರಿ ಪತ್ತೆಯಾಗಲಿಲ್ಲ. ಒಂದು ದಿನ ಓರ್ವ ಅಧಿಕಾರಿಯು ಚೋರ್‌ಕೋರ್ ಜೀಲಿನ ಯಾತ್ರೆಗೆ ಹೊರಟನು. ಅಲ್ಲಿ ಅವನು ಸತ್ವವಾನ್‌ಮಾ ಪರ್ವತಗಳ ತಟದಲ್ಲಿ ನೀರು ಪ್ರವಾಹಗಳ ಒಂದು ದೃಶ್ಯವನ್ನು ಕಂಡನು. ಈ ಪ್ರವಾಹದ ಸಮೀಪದಲ್ಲಿಯೇ ಒಂದು ಮನೆಯೂ ತೋರಿ ಬಂದಿತು. ಅಲ್ಲಿಯೇ ಅವನಿಗೆ "ಅ", "ಕ" ಮತ್ತು "ಮ" ಎಂಬ ಅಕ್ಷರಗಳು ದೃಷ್ಟಿಗೋಚರವಾದುವು. ಭಾವೀ ದಲಾಯಿ ಲಾಮಾರವರು ಪೂರ್ವ ದಿಕ್ಕಿನಲ್ಲಿ ದೊರೆಯುವರೆಂದು ಧರ್ಮಜ್ಞಾನಿಗಳು ಅರ್ಥಮಾಡಿದರು. ದಲಾಯಿ ಲಾಮಾರ ಮೃತ ಶರೀರವು ಪೂರ್ವ ದಿಶೆಯತ್ತ ಮೊಗಮಾಡಿಕೊಂಡಿರುವಂತೆ ಕಂಡುಬಂದಿದ್ದುದೂ ಈ ಅರ್ಥ ಕಟ್ಟುವುದಕ್ಕೆ ಸಾಧನವಾಯಿತು. ಇದರಿಂದಾಗಿ ಪೂರ್ವ ದಿಕ್ಕಿನತ್ತ ದಲಾಯಿ ಲಾಮಾರವರ ಶೋಧನೆಗೆ ತೊಡಗಲಾಯಿತು. ಹೀಗೆ ಹೊರಟ ಒಂದು ಪಂಗಡಕ್ಕೆ ಒಂದು ನದಿಯ ಬಳಿಯ ಮನೆಯ ಬಾಗಿಲಿಂದ ಮೂರು ವರ್ಷದ ಹುಡುಗನೊಬ್ಬನು ಹೊರಬರುತ್ತಿರುವುದು ಗೋಚರವಾಯಿತು. ಈ ದಳವನ್ನು ಕಂಡೊಡನೆಯೇ ಆತ "ಲಾಮಾ ಲಾಮಾ" ಎಂದು ಕೂಗಾಡಿದನು. ದಳದವರು ಕುತೂಹಲ ಪೂರ್ಣ ನೇತ್ರಗಳಿಂದ ಹುಡುಗನ ಶರೀರ ರಚನೆಯನ್ನು ನೋಡತೊಡಗಿದರು, ಅಲ್ಲದೇ ಲಾಮಾರಿಗೆ ಆವಶ್ಯವಿದ್ದ ಲಕ್ಷಣಗಳು ಅವನಲ್ಲಿ ತೋರಿಬಂದುವು. ಅಲ್ಲದೆ ೧೩ನೆಯ ಲಾಮಾರ ಕುರುಹುಗಳೂ ಕಂಡುಬಂದುವು. ಆ ಮೇಲೆ ಅವನನ್ನು ಲಾಮಾರನ್ನಾಗಿ ಆರಿಸಲಾಯಿತು. ೧೯೩೯ರಲ್ಲಿ ಲಾಸಾಕ್ಕೆ ಕರೆತರಲಾಯಿತು, ಮತ್ತು ೧೯೪೦ರಲ್ಲಿ ಅವನನ್ನು ಲಾಮಾರೆಂದು ನಿಯುಕ್ತಮಾಡಲಾಯಿತು. ೧೭—೧೧—೧೯೫೦ರಂದ ಈ ಲಾಮಾರೇ ಟಿಬೇಟಿನ ಸ್ವಾಧಿಕಾರ ಸಂಪನ್ನ ಸರ್ವೋಚ್ಚ ಧಾರ್ಮಿಕ ಅಧಿಕಾರಿಯೆಂದು ಅಧಿಕಾರ ವಹಿಸಿದರು.

ದಲಾಯಿ ಲಾಮಾರ ಪದವಿಯು ಟಿಬೇಟದಲ್ಲಿ ಬಹಳ ಗೌರವಪೂರ್ಣವಾಗಿದೆ. ಕ್ರಿಸ್ತೀಯರಲ್ಲಿ ರೋಮದ ಪೋಪರಿಗಿರುವಷ್ಟೆ ಸ್ಥಾನಮಾನಗಳು ಟಿಬೇಟದಲ್ಲಿ ದಲಾಯಿ ಲಾಮಾರವರಿಗಿವೆ. ಇದರಿಂದಾಗಿಯೇ ಟಿಬೇಟಿಯಾನರು ಲಾಮಾರ ಮೇಲೆ ಅಪಾರ ಶ್ರದ್ಧೆಯನ್ನಿಟ್ಟಿದ್ದಾರೆ. ಅವರ ಪ್ರತಿಯೊಂದು ಮಾತನ್ನೂ ಜನರು ವೇದವಾಕ್ಯವೆಂದು ಮನ್ನಿಸುತ್ತಾರೆ.

ದಲಾಯಿ ಲಾಮಾ ಎಂದರೆ, ಜ್ಞಾನ ಮಹಾಸಾಗರ ಎಂದರ್ಥ. ವಾಸ್ತವದಲ್ಲಿ ಲಾಮಾ ಶಬ್ದವು ಮಂಗೋಲ ಭಾಷೆಯ ಶಬ್ದ. ಮಂಗೋಲದಿಂದ ಬಂದೀಗ ಟಿಬೇಟಿ ಭಾಷೆಯಲ್ಲಿ ಹುದುಗಿ ಕೊಂಡಿ
ಮಂಗೋಲಿಯಾ ಮತ್ತು ಲಾಮಾರ
ಬಂಧ ಪ್ರಾಚೀನವಿರುವುದೇ ಇದಕ್ಕೆ ಕಾ
ಣವೆನ್ನಬಹುದು. ೧೬೫೦ರಲ್ಲಿ ಮಂಗೋ
ಲಿಯಾನರ ನಿಮಂತ್ರಣವನ್ನು ಸ್ವೀಕರಿ
ಸಿನೆಯ ಲಾಮಾನು ಆದೇಶವನ್ನು ಸ
ರ್ಶಿಸಿದ್ದನು. ಆಗ ಅವನನ್ನು ಅವರು
ಪ್ರಧಾನ ದಲಾಯಿ ಲಾಮಾ ಎಂ
ಬಿರುದಿತ್ತು ಗೌರವಿಸಿದರಂತೆ.

ಇಂದಿಗೂ ತಮ್ಮಗುರು ಶಿಕ್ಷಣ ದಿ
ಮತ್ತು ಅಧ್ಯಯನಗಳಲ್ಲಿ ಪೂರ್ಣತೆ
ನ್ನು ಪಡೆದಿರುವರೆಂಬ ವಿಶ್ವಾಸ ಟಿಬೆ
ಟಿಯಾನರಲ್ಲಿದೆ. ದಲಾಯಿಲಾಮಾರು
ಪ್ರೌಢರಾದ ಮೇಲೆ, ಅವರನ್ನು ತ
ತಂದೆತಾಯಿಯರಿಂದ ಬೇರೆಯಾಗಿ
ಸ್ತಾರೆ. ಲಾಮಾರವರ ಮಹಲಿನಲ್ಲಿಯೆ
ಒಂದೆಡೆ ಅವರನ್ನು ಇರಗೊಡುತ್ತಾ
ಬಾಲ್ಯಾವಸ್ಥೆಯಿಂದಲೂ ಅವರ ವ್ಯ
ಕ್ತಿತ್ವವು ಒಂದು ವಿಧದ ಗಾಂಭೀರ್ಯದಿಂ
ಲೇ ರೂಪಿಸಲ್ಪಡುತ್ತದೆ, ಸೌಮ್ಯವ
ಯೇ ರಚಿಸಲ್ಪಡುತ್ತದೆ.

ದಲಾಯಿ ಲಾಮಾರ ವೈಭವ ಮ
ಐಶ್ವರ್ಯಗಳು ಅಪರಿಮಿತ. ಸದ್ಯದ ದ
ಯಿ ಲಾಮಾರು ಅಧಿಕ ಜನ ಪ್ರಿಯ
ಗಿರುವರು ಎಂತಲೇ ಅವರ ಮೇಲೆ ಹ
ದ ನಿರ್ಬಂಧವನ್ನು ಕೇಳಿದ ಕೂಡಲೇ
ಬೇಟಿಯಾನರು ಉರಿದು ಬಿದ್ದರು.
ಮಾರ ರಕ್ಷಣೆಗಾಗಿ ಟಿಬೇಟಿಯಾನ
ತಮ್ಮ ಜೀವವನ್ನೂ ಮುಡುಪಾಗಿರಿಸ
ಸಿದ್ಧರಿದ್ದಾರೆ.

ದಾಂಡೇಲಿ ಮತ್ತು ಯಾದಗಿರಿ

ಎರಡು ಹೊಸ ಶಾಖೆಗಳು ಸಿಂಡಿಕೇಟಿನ ಬೇಂಕಿಂಗ್ ಸೇವೆಯು ಹೆಚ್ಚಳಕ್ಕಾಗಿ

16—4—1959ರಂದು ತೆರೆಯಲ್ಪಡುವುವು.

ಇಲ್ಲಿಗೆ ನಮ್ಮ ಶಾಖೆಗಳ ಸಂಖ್ಯೆಯು 119 ಆಗುವುದು.

— ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಅನುಭವಾಮೃತ

(೧೧ನೇ ಪುಟದಿಂದ)

ಕದಲ್ಲಿ ಸ್ಕೂಲ್ ಡೇ ದಿನ ಹೀರೋ ಪ
ತ್ರ ಅವನದೇ. ಸರಿ! ನಾಟಕದ ಸನ್ನಿವೇ
ಶಾಂದರ ಬಾಯಿ ಪಾಠ ಮಾಡಿದ ಪು
ಪ್ರೊಂದನ್ನು ಸಾಭಿನಯದಿಂದ—ಪ್ರಾರ
ಭಿಸಿಯೇ ಬಿಟ್ಟ! ಇಂಗ್ಲಿಷ "ಟಟ ಪಾಟ
ಸಟ ಸಾಟ್" ಎನ್ನುತ್ತಾ ಮನೆ ತುಂ
ವ್ಯಾಪಿಸಿತು! ಕಿಟ್ಟು ಎದ್ದು ನಿಂತು
ಮೇಲೆ ಮಾಡಿ ಮುಖ ಗಂಟು ಹಾ
"I heard three speak on
a speech once — but
was never acted; or i
it was, not above once
for the play I remember
pleased not the millions
let me see—let me see-
the fair daughter and n
more!

ರಾಧಮ್ಮನವರ ಕಂಗಳಲ್ಲಿ ಆನಂದ ಬ
ಷ್ಪವಿಳಿದಿದ್ದುವು. ಅಜ್ಜಯ್ಯನೆದ್ದು ಕಿಟ
ವನ್ನು ಹೆಗಲು ಚಪ್ಪರಿಸಿ 'ಭೇಷ್' ಕ
ತಿದ್ದೀ ಕಣೋ, ನಂಗೊತ್ತು—ಕಿಟ್ಟು
ವನಪ್ಪನಂಗೇ. ಅಂತ' ರಾಧೂಗೆ ಗಂಡ
ಹುಡುಕಿದಾಗ ಯಾರು ನಾನೇ ಅ
ಜೋಡಿ ನೋಡಿ ಕಿಟ್ಟನಂಥವನೇ ಹ
ಟ್ಲಿ ಅಂತ ಹರಕೆ ಹಾಕ್ಕೊಂಡಿದ್ದೆ! ನ
ಯೇ ಗ್ರಾಮದೇವರಲ್ಲಿ ದೇವಕಾರ್ಯ
ಗ್ಬೇಕು. ಕಿಟ್ಟು ನೀನು ಓದೋದು ಮ
ತ್ರ ಬಿಡಬೇಡ ಲಂಡನ್ ವರೆಗೂ
ದ್ಬೇಕು ನೋಡು ಈ ಇಂಗ್ಲಿಷರ ಗ
ತಿಳಿದು ಅವರನ್ನು ಬಟ್ಟುತನಕ ನಮ
ಉಳಿವಿಲ್ಲ!"

— ಸಿರಿಪತಿ

Edited, Printed & Published by K. H Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ

ವರುಷ ೩೮. ವಾರ ೩೧. 16-4-1959 Vol. 38. No. 31.

ವಿಚಾರ ಮಥನ

ಪಾಕಿಸ್ತಾನದ ಪಂಥಾಹ್ವಾನ

* *

ಭಾರತ ರತ್ನ ಜವಾಹರ

* *

ಮುಂದುವರಿಯಬೇಕೆ?

* *

ಮೂರ್ಖರೊಡನೆ ಸಖ್ಯವನ್ನು ಬೆಳೆಸಿಕೊಂಡರೆ, ಅದೆಷ್ಟು ದಿನ ಉಳಿಯಬಹುದು ಎಂಬ ಪ್ರಶ್ನೆಯನ್ನು ಈಗ ಭಾರತವು ಉತ್ತರಿಸುವ ಕಾಲ ಬಂದಿದೆ. ಹೊರಗೆ ಬಣ್ಣದ ನುಡಿಗಳಿಂದ ಸಖ್ಯ, ಸೌಹಾರ್ದ, ಶಾಂತಿಗಳನ್ನೇ ಬಯಸಿ, ಭಾರತದೊಡನೆ ಹೊಂದಾಣಿಕೆಯಿಂದ ಬಾಳಬಯಸುವ ಪಾಕಿಸ್ತಾನದ ದುರಾಚಾರವು ದಿನೇ ದಿನೇ ಪ್ರವೃದ್ಧಮಾನಸ್ಥಿತಿಗೇರುತ್ತಿದೆ. ಭಾರತ-ಪಾಕ್ ಗಡಿಯಲ್ಲಿ ಮಾಡಬಾರದ ಅನ್ಯಾಯಗಳನ್ನೂ ಗಲಭೆಗಳನ್ನೂ ಮಾಡಿಕೊಂಡು ಭಾರತದ ಸಹನಾಶಕ್ತಿಗೆ ಪಂಥಾಹ್ವಾನವೀಯುವ ಪಾಕಿಸ್ತಾನ ಇದೀಗ ಮತ್ತೂ ಮತ್ತೂ ಮುಂದುವರಿಯುತ್ತಿರುವುದು ಕಂಡು ಬರುತ್ತಿದೆ. ರಾವಲ್ಪಿಂಡಿಯ ಸಮೀಪದಲ್ಲಿ ಭಾರತದ ಒಂದು ವಿಮಾನವನ್ನು ಗುಂಡಿಟ್ಟು ಕೆಳಗುರುಳಿಸಿದರು ಎಂಬ ವಾರ್ತೆಯು ಖೇದದಾಯಕವಾಗಿದೆ. ಈ ಘಟನೆ ನಡೆಯಲು ಪಾಕಿಸ್ತಾನವು ಯಾವುದೇ ಕಾರಣವನ್ನು ಮುಂದಿಟ್ಟರೂ ಈ ಕೃತ್ಯವು ಅಂತಾರಾಷ್ಟ್ರೀಯ ಕಾನೂನಿನ ದೃಷ್ಟಿಯಿಂದಲೂ ಅನ್ಯಾಯವಾಗಿದೆ ಎಂಬುದನ್ನು ಗಮನಿಸಬೇಕು. ಅತ್ತ ಕಾಶ್ಮೀರದ ಸೈನಿಕ ಕ್ಷೇತ್ರವನ್ನು ಗುಲಾಮ್ ಎಂಬ ಪಾಕ್ ಸಂಚಾರಿಯು ಅಕ್ರಮವಾಗಿ ಪ್ರವೇಶಿಸಲು ಪ್ರಯತ್ನಿಸುತ್ತಿರುವಾಗ ಬಂಧಿಸಲ್ಪಟ್ಟನೆಂದೂ ಸುದ್ದಿ ಬಂದಿದೆ. ಕಾಶ್ಮೀರದ ಯುದ್ಧವಿರಾಮ ರೇಖೆಯ ಸಮೀಪದ ಸುಧಪುರದ ಹತ್ತಿರದ ಒಂದು ಹಳ್ಳಿಯಲ್ಲಿ ಪರಿಶೀಲನೆ ನಡೆಸುತಿದ್ದ ಸಂಯುಕ್ತ ರಾಷ್ಟ್ರ ಸಂಘದ ವೀಕ್ಷಕರ ತಂಡವೊಂದರ ಮೇಲೆಯೂ ಪಾಕಿಸ್ತಾನವು ಮೆಶಿನುಗನ್ನುಗಳನ್ನು ಹಾರಿಸಿದೆಯೆಂದು ಶ್ರೀನಗರದ ವಾರ್ತೆಯಿದೆ ಹೀಗೆ ಒಂದಲ್ಲ ಹಲವು ಅವಿವೇಕಯುಕ್ತ ಕರ್ಮಗಳಿಂದ ಪಾಕಿಸ್ತಾನವು ತನ್ನ ಮೂರ್ಖತನವನ್ನೂ ಈರ್ಷೆಯನ್ನೂ ಪ್ರಕಟಗೊಳಿಸುತ್ತ ಬರುತ್ತಿದೆ. ನಿರಪರಾಧಿ ಭಾರತೀಯ ವಿಮಾನವನ್ನು ಉರುಳಿಸುವುದರಲ್ಲಿ ಪಾಕೀಸ್ಥಾನಕ್ಕೆ ಯಾವ ದುರುದ್ದೇಶವೂ ಇಲ್ಲವೆಂದು ಹೇಳುವುದು ಹೇಗೆ? ಪಾಕಿಸ್ತಾನ ಸರಕಾರಕ್ಕೆ ಮಾಮೂಲು ಪ್ರಕಾರ ಈ ಕೃತ್ಯಕ್ಕೆ ವಿರೋಧ ಸೂಚಿಸುವ ಪತ್ರವು ಭಾರತದಿಂದ ಹೋಗುವುದು ಸ್ವಾಭಾವಿಕ. ಆದರೂ ಮೂರ್ಖನಿಗೆ ಬುದ್ಧಿಯನ್ನು ನೂರ್ಕಾಲ ಹೇಳಿದರೆ ಅದರಿಂದ ಪ್ರಯೋಜನವಿದೆಯೆ? ಅಂತಲೇ ಮೂರ್ಖಸ್ಯ ನಾಸ್ತ್ಯೌಷಧಂ ಎಂಬುಕ್ತಿಯಿದೆ. ಆದರೆ ಈ ಮೂರ್ಖರನ್ನು ಶಾಂತಿಪ್ರಿಯರಾದ ಭಾರತೀಯರು ಕಟ್ಟಿಕೊಂಡು ಏನು ಮಾಡಬೇಕೆಂಬುದೇ ಮಹಾ ಪ್ರಶ್ನೆಯಾಗಿದೆ. ಭಾರತದ ಸತ್ವ ಪರೀಕ್ಷೆಯ ಕಾಲ ಸನ್ನಿಹಿತವಾಗುತ್ತಿದೆ ಎಂಬುದರ ಸೂಚನೆಗಳೇ ಪಾಕಿಸ್ತಾನದಿಂದ ಅವ್ಯಕ್ತವಾಗಿ ಬರುತ್ತಿವೆಯೆ?

೦೦ ೦೦ ೦೦

ಭಾರತ ಮತ್ತು ಭಾರತೀಯರ ಬಗ್ಗೆ ತಮ್ಮ ಸಹಾನುಭೂತಿಯನ್ನೋ ಸಹಾನುತಾಪವನ್ನೋ ಅನೇಕಾನೇಕ ಮಹಾ ವ್ಯಕ್ತಿಗಳು ಪ್ರದರ್ಶಿಸಬಹುದು. ಭಾರತದಲ್ಲಿಯೂ ವಿಶಾಲ ಮನೋಭಾವನೆಯಿಂದ ಭಾರತೀಯರ ಮೇಲ್ಮೆಯನ್ನೇ ಬಯಸುವ ಪರಹಿತಚರಿರಬಹುದು. ಆದರೆ, ಅಹರ್ನಿಶಿ ಭಾರತೀಯರ ಮಾತ್ರವಲ್ಲ ವಿಶ್ವದ ಪ್ರಜೆಗಳೆಲ್ಲರ ಸುಖವನ್ನು ಹಾರೈಸುವ ವಿಶಾಲಹೃದಯಿ ಪಂಡಿತ ನೆಹರೂ ನಮ್ಮ ಪ್ರಧಾನಿಯಾಗಿದ್ದಾರೆ. ಭಾರತವೆಂದರೆ ನೆಹರೂ ಎಂದು ವಿದೇಶೀಯರು ಅನ್ನಬಹುದು; ಆದರೆ, ನೆಹರೂ ಎಂದರೆ ಭಾರತ ಎಂದು ಅವರು ತಿಳಿದಿರಲಾರರು. ದಿನದ ಇಪ್ಪತ್ತು ಗಂಟೆಗಳ ಕಾಲ ವೈಯಕ್ತಿಕ ಹಿತಚಿಂತನೆಯನ್ನು ಬದಿಗಿರಿಸಿ, ನಲುವತ್ತು ಕೋಟಿ ಭಾರತೀಯರ ಹಿತಚಿಂತನೆಗಾಗಿ ದುಡಿಯುವ ನೆಹರೂ ಏನೆಂದರೂ ಅದಕ್ಕೊಂದು ಬೆಲೆಯಿದೆ. ಭಾರತೀಯರ ಬಡತನವನ್ನು ದೂರ ಮಾಡಲು ದರಿದ್ರತನದೊಡನೆ ಹೋರಾಟ ಹೂಡಬೇಕು; ಆಲಸ್ಯದೊಡನೆ ಕಾದಾಡಬೇಕು ಎಂದು ಉಪದೇಶಿಸುವ ನೆಹರೂ ಭಾರತದ ಮಹಾ ಸಮಸ್ಯೆಯ ಪರಿಹಾರಕ್ಕೆ, ದೇಶದ ಉತ್ಪಾದನೆಯನ್ನು ಹೆಚ್ಚಿಸಲು ತಕ್ಕ ವಾತಾವರಣವನ್ನು ನಿರ್ಮಿಸಬೇಕು ಎಂದೀಗ ಹೇಳ ತೊಡಗಿದ್ದಾರೆ. ಜನರ ಆರ್ಥಿಕ ಪರಿಸ್ಥಿತಿಯು ಸುಧಾರಿಸ ಬೇಕಾದರೆ, ವೇತನ ಮಟ್ಟವು ಹೆಚ್ಚಬೇಕು; ಈ ವೇತನದ ಏರಿಕೆಯು, ಉತ್ಪಾದನೆ ಹೆಚ್ಚಾದರೆ ಮಾತ್ರ ಸಾಧ್ಯ. ಒಂದಷ್ಟು ಕಾಗದದ ಚೂರುಗಳಲ್ಲಿ ನೋಟುಗಳನ್ನು ಅಚ್ಚು ಹಾಕಿಸಿದ ಮಾತ್ರಕ್ಕೆ ದೇಶದ ಆದಾಯವು ಹೆಚ್ಚಿದಂತಾಗಲಿಲ್ಲ. ಆ ನೋಟುಗಳಿಗೆ ಯಾವ ಬೆಲೆಯೂ ಬಾರದೆ ಹೋಗಬಹುದು. ದೇಶವು ದಿವಾಳಿತನವನ್ನೂ ಎದುರಿಸಬೇಕಾಗಿ ಬರಬಹುದು. ಆದರೆ, ಪರಿಶ್ರಮ ಸಹಿತವಾಗಿ ದುಡಿದಲ್ಲಿ, ರಾಷ್ಟ್ರದ ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸಿದಲ್ಲಿ, ಆಗ ಪ್ರತಿ ರಾಷ್ಟ್ರೀಯನ ವೈಯಕ್ತಿಕ ಹಿತಾಕಾಂಕ್ಷೆಯೂ ಈಡೇರುವುದು. ಆದುದರಿಂದಲೇ ಪರಿಶ್ರಮ ಪೂರ್ವಕವಾಗಿ ದುಡಿದು ರಾಷ್ಟ್ರದ ಉತ್ಪಾದನೆಯನ್ನು ಹೆಚ್ಚಿಸಲು ಅನುಕೂಲವಾದ ವಾತಾವರಣವನ್ನು ನಿರ್ಮಿಸಲು ಹೆಣಗಬೇಕು ಎಂದ ಪ್ರಧಾನಿ ನೆಹರೂ ವಿನಂತಿಸಿದ್ದಾರೆ. ಇಂತಹ ವಾತಾವರಣ ನಿರ್ಮಿಸುವುದೆಂದರೆ, ಸ್ವಯಂ ಪರಿಶ್ರಮಶೀಲನಾಗುವುದೆಂದು ಬೇರೆ ಹೇಳಬೇಕಾದ ಆವಶ್ಯಕತೆಯಿಲ್ಲ ತಾನೆ?

೦೦ ೦೦ ೦೦

ಈ ವರ್ಷದ ಮದ್ರಾಸು ಕರ್ನಾಟಕದ ಎಂಟನೆ ತರಗತಿಯ ಸರಕಾರಿ ಪರೀಕ್ಷೆಯ ಪ್ರಶ್ನಪತ್ರಗಳ ಮೇಲೆ ಕಟು ಟೀಕೆಗಳು ಬರಲಾರಂಭಿಸಿವೆ ಅವೆಲ್ಲವೂ ಸತ್ಯವೆಂದು ಒಪ್ಪಬೇಕು. ಪ್ರಶ್ನಪತ್ರಗಳನ್ನು ಉತ್ತರಿಸ

(೧೨ನೇ ಪುಟ ನೋಡಿರಿ)

ಹೆನ್ರಿ ಕಬೋಟ್ ಲೋಜರು ಅಂತಾರಾಷ್ಟ್ರೀಯ ಧ್ರುವ ಪರಿಶೀಲನಾವಲಯವನ್ನು ತೋರಿಸುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3.

ಸ್ಥಾಪನೆ:- 1931.

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ	5 ತಿಂಗಳ ವರೆಗೆ	4¼%
6 ,,	12 ,,	4½%
13 ,,	24 ,,	4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ....

ಸುಡಿಚಿತ್ರ

ಟಿಬೇಟದ ಧರ್ಮಾಧಿಕಾರಿ ದಲಾಯಿಯ್ ಲಾಮಾ

ಟಿಬೇಟಿಯಾನರಿಗೆ ಅನುಪಮ ಶ್ರದ್ಧೆ ಭಕ್ತಿಗಳು ಇವರ ಮೇಲಿರುವುದು.

ಭಾರತದಿಂದ ಬೌದ್ಧ ಧರ್ಮದ ಸಂದೇಶವು ಹರಡಿ, ಕಂಪು ಬೀರಿದ ಹಲವಾರು ರಾಷ್ಟ್ರಗಳಲ್ಲಿ ಟಿಬೇಟು ಒಂದು ಎಂಬುದು ಸತ್ಯ. ಟಿಬೇಟು ಚೀನಾ ಮತ್ತು ಭಾರತಗಳ ನಡುವೆ ಇರುವ ದೇಶ. ಪರ್ವತರಾಜ ಹಿಮಾಲಯ ಟಿಬೇಟದಲ್ಲಿಯೇ ಸುಶೋಭಿತವಾಗಿದೆ.

ರಾಜನೀತಿಕ ದೃಷ್ಟಿಯಿಂದ ಟಿಬೇಟು ಚೀನ ಪ್ರಜಾರಾಜ್ಯದ ಅಂತರ್ಗತವಿರುವ ಒಂದು ಸ್ವಾಯತ್ತ ಆಡಳಿತೆ ಪಡೆದಿರುವ ರಾಷ್ಟ್ರ. ಈ ಬಗ್ಗೆ ಚೀನದೊಡನೆ ೨೩—೫—೫೧ರಂದು ಸಂಧಿಯೂ ಆಗಿತ್ತು. ಇದರಂತೆ, ಟಿಬೇಟಿನ ವಿದೇಶನೀತಿ ಮತ್ತು ಭದ್ರತೆಗಳ ಅಧಿಕಾರವನ್ನು ಚೀನಕ್ಕೆ ಒಪ್ಪಿಸಲಾಗಿತ್ತು. ಆದರೆ, ಆಧುನಿಕ ಚೀನದ ನಿರ್ಮಾತರಲ್ಲಿ ಟಿಬೇಟದ ಮೇಲೆ ತಮ್ಮ ಹೆಚ್ಚಿನ ಅಧಿಕಾರವನ್ನು ಚಲಾಯಿಸುವ ಹಂಬಲವು ಬೆಳೆದುದರ ಪರಿಣಾಮವಾಗಿಯೇ ತಮ್ಮ ಸಂಸ್ಕೃತಿ ಮತ್ತು ಪರಂಪರೆಗಳನ್ನು ಅವಿಚ್ಛಿನ್ನವಾಗಿರಿಸಿಕೊಂಡೇ ಚೀನದೊಡನೆ ಸಂಬಂಧ ಬೆಳೆಸಲು ಬಯಸುತ್ತಿದ್ದ ಟಿಬೇಟು ಈ ಹಂಬಲವನ್ನು ಪೂರೈಸಲು ಸಿದ್ಧರಾಗಿಲ್ಲದಿರುವುದೇ ರಾಜಧಾನಿ ಲಾಸಾದಲ್ಲಿ ಇತ್ತೀಚೆಗೆ ಗೊಂದಲಗಳೇಳಲು ಕಾರಣವಾಗಿರುವುದೆಂಬುದು ಬಹುಮಟ್ಟಿಗೆ ಸತ್ಯ. ತನ್ನ ನೆರೆರಾಷ್ಟ್ರವಾದ ಟಿಬೇಟಿನಲ್ಲಾದ ಈ ದಂಗೆಯಿಂದಾಗಿ ಭಾರತೀಯರೆಲ್ಲರೂ ವಿಶೇಷ ಚಿಂತೆಗೀಡಾಗುವುದೂ ಸ್ವಾಭಾವಿಕವಾಗಿದೆ.

ಚೀನ ಮತ್ತು ಭಾರತಗಳ ಪಾರಸ್ಪರಿಕ ಸಂಬಂಧವು ಬಹಳ ಮಧುರವಾಗಿದೆ. ಇದರೊಡನೆಯೇ ಭಾರತ ವರ್ಷವು ತಿಬೇಟ ಮತ್ತು ಅಲ್ಲಿಯ ಧರ್ಮಗುರು ದಲಾಯಿಯ್ ಲಾಮಾರ ಕಡೆಗೆ ವಿಶೇಷ ಅಭಿರುಚಿ ಮತ್ತು ಶ್ರದ್ಧೆಗಳನ್ನೂ ತೋರಿಸುತ್ತದೆ. ಏಕೆಂದರೆ, ದಲಾಯಿಯ್ ಲಾಮಾರವರನ್ನು ಟಿಬೇಟಿಯಾನರು ಪರಮಾತ್ಮ ಸ್ವರೂಪಿಯಾದ ಗೌತಮ ಬುದ್ಧನ ಅವತಾರವೆಂದು ತಿಳಿಯುತ್ತಾರೆ. ಅಲ್ಲದೇ ಸದ್ಯದ ದಲಾಯಿಯ್ ಲಾಮಾರವರು ಈ ಮೊದಲೊಮ್ಮೆ ಭಾರತವನ್ನು ಸಂದರ್ಶಿಸಿದ್ದು, ಅವರಿಂದ ಪ್ರಸಾದರೂಪದಲ್ಲಿ ಕೊಡಲ್ಪಟ್ಟ ಕೆಂಪು ರುಮಾಲು ಇಂದಿಗೂ ಅನೇಕ ಭಾರತೀಯರೊಡನೆ ಭದ್ರವಾಗಿವೆ. ಆದುದರಿಂದಲೇ ಚೀನಾದ ಸೈನಿಕ ಗವರ್ನರ ಜನರಲ್ಲರಾದ ಚಾಂಗ್ ಚಿಂಗ ಬರು ಅಂಗರಕ್ಷಕರನ್ನುಳಿದು ಟಿಬೇಟಿನ ಈ ಧರ್ಮಗುರು ತನ್ನಲ್ಲಿಗೆ ಬರಬೇಕೆಂದು ಆದೇಶವಿತ್ತರೆಂದೂ, ಇದನ್ನು ವಿರೋಧಿಸುತ್ತ ಟಿಬೇಟಿನ ಜನತೆಯು ಪ್ರತಿರೋಧವನ್ನಾರಂಭಿಸಿದರೆಂದೂ ಕೇಳಿದೊಡನೆಯೇ ಭಾರತೀಯರೆಲ್ಲರೂ ವ್ಯಾಕುಲಚಿತ್ತರಾಗುವುದೂ ಸ್ವಾಭಾವಿಕವೇ. ದಲಾಯಿಯ್ ಲಾಮಾರು ನಮ್ಮ ದೇಶದ ನಾಗರಿಕರಲ್ಲವಾದರೂ ನಮ್ಮೆಲ್ಲರ ಹೃದಯದಲ್ಲಿ ಅವರು ಮನೆಮಾಡಿರುವರೆಂಬುದಂತೂ ನಿಸ್ಸಂಶಯ.

ಭಾರತದ ಬೌದ್ಧ ಧರ್ಮದಿಂದ ಕವಲೊಡೆದ ಮಹಾಯಾನ ಶಾಖೆಯ ಒಂದು ರೂಪವೇ ಟಿಬೇಟದಲ್ಲಿ ಪ್ರಚಲಿತವಿರುವ ಧರ್ಮವಾಗಿದೆ. ಈ ಧರ್ಮವು ಭಾರತೀಯರ ವಿಶ್ವಾಸಕ್ಕೂ ಪಾತ್ರವಾಗಿದೆ. ಟಿಬೇಟೀಯ ಸಂಪ್ರದಾಯಕ್ಕನುಸಾರವಾಗಿ ದಲಾಯಿಯ್ ಲಾಮಾರಿಗೆ ತನ್ನ ಉತ್ತರಾಧಿಕಾರಿಯನ್ನು ನೇಮಿಸಲಾರನು; ಅಥವಾ ಅವನನ್ನು ಆರಿಸಲಾರನು. ಭಗವಂತನಾದ ಅವಲೋಕಿತೇಶ್ವರ ಬುದ್ಧನು ಸ್ವಯಂ ಟಿಬೇಟಿಯನರ ಮಾರ್ಗದರ್ಶನ ಮಾಡುವುದಕ್ಕಾಗಿ ದಲಾಯಿಯ್ ಲಾಮಾರಿರುವರೆಂದು ಟಿಬೇಟೀಯರ ವಿಶ್ವಾಸವಿದೆ. ಲಾಮಾರು ತಮ್ಮ ಶರೀರವನ್ನು ಮಾತ್ರ ಬದಲಾಯಿಸುತ್ತಾರೆ, ಈ ವಿಶ್ವಾಸದ ಬಲದಿಂದಿಂದಲೇ ಒಬ್ಬ ದಲಾಯಿಯ್ ಲಾಮಾರು ದೇಹಾಂತ ಹೊಂದಿದೊಡನೆಯೇ ಆ ದಲಾಯಿಯ್‌ಲಾಮಾರ ಲಕ್ಷಣಗಳುಳ್ಳ ಅವರ ಮೃತ್ಯುವಿನ ಸಮಯ ಉತ್ಪನ್ನವಾಗಿದ್ದ ಬಾಲಕರಲ್ಲಿಯೇ ಓರ್ವನನ್ನು ಅರಸಿ, ಅಂತಹವನನ್ನು ಆ ಕೂಡಲೇ ದಲಾಯಿಯ್ ಲಾಮಾ ಪದವಿಗೇರಿಸುತ್ತಾರೆ ಈಗಿನ ದಲಾಯಿಯ್ ಲಾಮಾರ. ಶೋಧನೆಯಲ್ಲಿ ಟಿಬೇಟಿಯಾನರು ತೊಡಗಿ ಕೆಲವಾರು ವರ್ಷಗಳ ವರೆಗೆ ಪ್ರಯತ್ನ ಮಾಡಬೇಕಾಯಿತು

೧೯೩೩ರಲ್ಲಿ ಈ ಹಿಂದಿನ ಲಾಮಾರು ಮೃತ್ಯುಮುಖರಾದರು. ೧೯೩೫ನೆಯ ವರ್ಷ ಕಳೆದರೂ ಟಿಬೇಟಿಯನ್ನರಿಗೆ ತಮ್ಮ ಲಾಮಾರ ಉತ್ತರಾಧಿಕಾರಿ ಪತ್ತೆಯಾಗಲಿಲ್ಲ. ಒಂದು ದಿನ ಓರ್ವ ಅಧಿಕಾರಿಯು ಚೋಲ್‌ಕೋರ್ ಜೀಲಿನ ಯಾತ್ರೆಗೆ ಹೊರಟನು. ಅಲ್ಲಿ ಅವನು ಪತ್ವಾನ್‌ಮಾ ಪರ್ವತಗಳ ತಳದಲ್ಲಿ ಮೂರು ಪ್ರವಾಹಗಳ ಒಂದು ದೃಶ್ಯವನ್ನು ಕಂಡನು. ಈ ಪ್ರವಾಹದ ಸಮೀಪದಲ್ಲಿಯೇ ಒಂದು ಮನೆಯೂ ತೋರಿ ಬಂದಿತು. ಅಲ್ಲಿಯೇ ಅವನಿಗೆ "ಅ", "ಕ" ಮತ್ತು "ಮ" ಎಂಬ ಅಕ್ಷರಗಳು ದೃಷ್ಟಿಗೋಚರವಾದುವು. ಭಾವೀ ದಲಾಯಿಯ್ ಲಾಮಾರವರು ಪೂರ್ವ ದಿಕ್ಕಿನಲ್ಲಿ ದೊರೆಯುವರೆಂದು ಧರ್ಮಜ್ಞಾನಿಗಳು ಅರ್ಥಮಾಡಿದರು. ದಲಾಯಿಯ್ ಲಾಮಾರ ಮೃತ ಶರೀರವು ಪೂರ್ವ ದಿಶೆಯತ್ತ ಮೊಗಮಾಡಿಕೊಂಡಿರುವಂತೆ ಕಂಡುಬಂದಿದ್ದುದೂ ಈ ಅರ್ಥ, ಕಟ್ಟುವುದಕ್ಕೆ ಸಾಧನವಾಯಿತು. ಇದರಿಂದಾಗಿ ಪೂರ್ವ ದಿಕ್ಕಿನತ್ತ ದಲಾಯಿಯ್ ಲಾಮಾರವರ ಶೋಧನೆಗೆ ಮೊದಲಾಯಿತು. ಹೀಗೆ ಹೊರಟ ಒಂದು ಪಂಗಡಕ್ಕೆ ಒಂದು ನದಿಯ ಬಳಿಯ ಮನೆಯ ಬಾಗಿಲಿಂದ ಮೂರು ವರ್ಷದ ಹುಡುಗನೊಬ್ಬನು ಹೊರಬರುತ್ತಿರುವುದು ಗೋಚರವಾಯಿತು. ಈ ದಳವನ್ನು ಕಂಡೊಡನೆಯೇ ಆತ "ಲಾಮಾ ಲಾಮಾ" ಎಂದು ಕೂಗಾಡಿದನು. ದಳದವರು ಕುತೂಹಲ ಪೂರ್ಣ ನೇತ್ರಗಳಿಂದ ಹುಡುಗನ ಶರೀರ ರಚನೆಯನ್ನು ನೋಡತೊಡಗಿದರು, ಅಲ್ಲದೇ ಲಾಮಾಗೆ ಆವಶ್ಯವಿದ್ದ ಲಕ್ಷಣಗಳು ಅವನಲ್ಲಿ ತೋರಿಬಂದುವು. ಅಲ್ಲದೆ ೧೩ನೆಯ ಲಾಮಾರ ಕುರುಹುಗಳೂ ಕಂಡುಬಂದುವು ಆ ಮೇಲೆ ಅವನನ್ನು ಲಾಮಾರನ್ನಾಗಿ ಆರಿಸಲಾಯಿತು. ೧೯೩೯ರಲ್ಲಿ ಲಾಸಾಕ್ಕೆ ಕರೆತರಲಾಯಿತು; ಮತ್ತು ೧೯೪೦ರಲ್ಲಿ ಅವನನ್ನು ಲಾಮಾರೆಂದು ನಿಯುಕ್ತಮಾಡಲಾಯಿತು. ೧೭—೧೧—೧೯೫೦ರಂದು ಈ ಲಾಮಾರೇ ಟಿಬೇಟಿನ ಸರ್ವಾಧಿಕಾರ ಸಂಪನ್ನ ಸರ್ವೋಚ್ಚ ಧಾರ್ಮಿಕ ಅಧಿಕಾರಿಯೆಂದು ಅಧಿಕಾರ ವಹಿಸಿದರು.

ದಲಾಯಿಯ್ ಲಾಮಾರ ಪದವಿಯು ಟಿಬೇಟದಲ್ಲಿ ಬಹಳ ಗೌರವಪೂರ್ಣವಾಗಿದೆ ಕ್ರಿಸ್ತೀಯರಲ್ಲಿ ರೋಮದ ಪೋಪರಿಗಿರುವಷ್ಟೆ ಸ್ಥಾನಮಾನಗಳು ತಿಬೇಟದಲ್ಲಿ ದಲಾಯಿಯ್ ಲಾಮಾರವರಿಗಿದೆ. ಇದರಿಂದಾಗಿಯೇ ಟಿಬೇಟಿಯಾನರು ಲಾಮಾರ ಮೇಲೆ ಅಪಾರ ಶ್ರದ್ಧೆಯನ್ನಿಟ್ಟಿದ್ದಾರೆ ಅವರ ಪ್ರತಿಯೊಂದು ಮಾತನ್ನೂ ಜನರು ವೇದವಾಕ್ಯವೆಂದು ಮನ್ನಿಸುತ್ತಾರೆ.

ದಲಾಯಿಯ್‌ಲಾಮಾ ಎಂದರೆ, ಜ್ಞಾನ ಮಹಾಸಾಗರ ಎಂದರ್ಥ. ವಾಸ್ತವದಲ್ಲಿ ಲಾಮಾ ಶಬ್ದವು ಮಂಗೋಲ ಭಾಷೆಯ ಶಬ್ದ. ಮಂಗೋಲದಿಂದ ಬಂದೀಗ ಟಿಬೇಟಿ ಭಾಷೆಯಲ್ಲಿ ಹುದುಗಿ ಕೊಂಡಿದೆ. ಮಂಗೋಲಿಯಾ ಮತ್ತು ಲಾಮಾರ ಸಂಬಂಧ ಪ್ರಾಚೀನವಿರುವುದೇ ಇದಕ್ಕೆ ಕಾರಣವೆನ್ನಬಹುದು. ೧೫೭೮ರಲ್ಲಿ ಮಂಗೋಲಿಯಾನರ ನಿಮಂತ್ರಣವನ್ನು ಸ್ವೀಕರಿಸಿ ಮೂರನೆಯ ಲಾಮಾನು ಆದೇಶವನ್ನು ಸಂದರ್ಶಿಸಿದ್ದನು. ಆಗ ಅವನನ್ನು ಅವರು ವಜ್ರಧಾರಾ ದಲಾಯಿ ಲಾಮಾ ಎಂಬ ಬಿರುದಿತ್ತು ಗೌರವಿಸಿದರಂತೆ.

ಇಂದಿಗೂ ತಮ್ಮ ಗುರು ಶಿಕ್ಷಣ ದೀಕ್ಷೆ ಮತ್ತು ಅಧ್ಯಯನಗಳಲ್ಲಿ ಪೂರ್ಣತೆಯನ್ನು ಪಡೆದಿರುವರೆಂಬ ವಿಶ್ವಾಸ ಟಿಬೇಟಿಯಾನರಲ್ಲಿದೆ ದಲಾಯಿಲಾಮಾರು ಅಯ್ಯೆಯಾದ ಮೇಲೆ, ಅವರನ್ನು ತಮ್ಮ ತಂದೆತಾಯಿಯರಿಂದ ಬೇರೆಯಾಗಿಸುತ್ತಾರೆ. ಲಾಮಾರವರ ಮಹಲಿನಲ್ಲಿಯೇ ಒಂದೆಡೆ ಅವರನ್ನು ಇರಗೊಡುತ್ತಾರೆ, ಬಾಲ್ಯಾವಸ್ಥೆಯಿಂದಲೂ ಅವರ ವ್ಯಕ್ತಿತ್ವವು ಒಂದು ವಿಧದ ಗಾಂಭೀರ್ಯದಿಂದಲೇ ರೂಪಿಸಲ್ಪಡುತ್ತದೆ; ಸೌಮ್ಯವಾಗಿಯೇ ರಚಿಸಲ್ಪಡುತ್ತದೆ.

ದಲಾಯಿಯ್ ಲಾಮಾರ ವೈಭವ ಮತ್ತು ಐಶ್ವರ್ಯಗಳು ಅಪರಿಮಿತ. ಸದ್ಯದ ದಲಾಯಿಯ್ ಲಾಮಾರು ಅಧಿಕ ಜನ ಪ್ರಿಯರಾಗಿರುವರು. ಎಂತಲೇ ಅವರ ಮೇಲೆ ಹೇರಿದ ನಿರ್ಬಂಧವನ್ನು ಕೇಳಿದ. ಕೂಡಲೇ ಟಿಬೇಟಿಯಾನರು ಉರಿದು ಬಿದ್ದರು. ಲಾಮಾರ ರಕ್ಷಣೆಗಾಗಿ ಟಿಬೇಟಿಯಾನರು ತಮ್ಮ ಜೀವವನ್ನೂ ಮುಡುಪಾಗಿರಿಸಲು ಸಿದ್ಧರಿದ್ದಾರೆ.

ದಾಂಡೇಲಿ ಮತ್ತು ಯಾದಗಿರಿ

ಎರಡು ಹೊಸ ಶಾಖೆಗಳು
ಸಿಂಡಿಕೇಟಿನ ಬೇಂಕಿಂಗ್ ಸೇವೆಯ ಹೆಚ್ಚಳಕ್ಕಾಗಿ

16—4—1959ರಂದು ತೆರೆಯಲ್ಪಡುವುವು.

ಇಲ್ಲಿಗೆ ನಮ್ಮ ಶಾಖೆಗಳ ಸಂಖ್ಯೆಯು 119 ಆಗುವುದು.

— ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಅನುಭವಾಮೃತ

(೧೧ನೇ ಪುಟದಿಂದ)

ಕದಲ್ಲಿ ಸ್ಕೂಲ್ ಡೇ ದಿನ ಹೀರೋ ಪಾತ್ರ ಅವನದೇ. ಸರಿ! ನಾಟಕದ ಸನ್ನಿವೇಶವೊಂದರ ಬಾಯಿಪಾಠ ಮಾಡಿದ ಪುಟವೊಂದನ್ನು ಸಾಭಿನಯದಿಂದ—ಪ್ರಾರಂಭಿಸಿಯೇ ಬಿಟ್ಟ! ಇಂಗ್ಲಿಷ "ಪಟ ಪಾಟಾ ಪಟ ಪಾಟ್" ಎನ್ನುತ್ತಾ ಮನೆ ತುಂಬ ವ್ಯಾಪಿಸಿತು! ಕಿಟ್ಟು ಎದ್ದು ನಿಂತು ಕೈ ಮೇಲೆ ಮಾಡಿ ಮುಖ ಗಂಟು ಹಾಕಿ "I heard three speak one a speech once — but it was never acted; or if, it was, not above once, for the play I remember in pleased not the millions · · let me see—let me see— the fair daughter and no more!"

ರಾಧಮ್ಮನವರ ಕಂಗಳಲ್ಲಿ ಆನಂದ ಬಾಷ್ಪವಿಳಿದಿದ್ದುವು. ಅಜ್ಜಯ್ಯನೆದ್ದು ಕಿಟ್ಟುವನ್ನು ಹೆಗಲು ಚಪ್ಪರಿಸಿ ' ಭೇಷ್. ಕಲಿತಿದ್ದೀ ಕಣೋ, ನಂಗೊತ್ತು—ಕಿಟ್ಟು ಅವನಪ್ಪನಂಗೇ ಅಂತ! ರಾಧುಗೆ ಗಂಡು ಹುಡುಕಬೇಕು ಯಾರು ನಾನೇ ಅಲ್ವೆ ಜೋಡಿ ನೋಡಿ. ಕಿಟ್ಟುನಂಥವನೇ ಹುಟ್ಲಿ ಅಂತ ಹರಕೆ ಹಾಕ್ಕೊಂಡಿದ್ದೆ! ನಾಳೆಯೇ ಗ್ರಾಮದೇವರಲ್ಲಿ ದೇವಕಾರ್ಯ ಆಗ್ಬೇಕು. ಕಿಟ್ಟು, ನೀನು ಓದೋದು ಮಾತ್ರ ಬಿಡಬೇಡ. ಲಂಡನ್ ವರೆಗೂ ಓದ್ಬೇಕು. ನೋಡು ಈ ಇಂಗ್ಲಿಷರ ಗುಟ್ಟು ತಿಳಿದು ಅವರನ್ನು ಅಟ್ಟುತನಕ ನಮಗೆ ಉಳಿವಿಲ್ಲ!"

— ಸಿರಿಪತಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ

ವರುಷ ೩೮. ವಾರ ೩೧. 16-4-1959 Vol. 38. No. 31.

ವಿಚಾರ ಮಥನ

ಪಾಕಿಸ್ತಾನದ ಪಂಥಾಹ್ವಾನ

* *

ಭಾರತ ರತ್ನ ಜವಾಹರ

* *

ಮುಂದುವರಿಯಬೇಕೆ?

* *

ಮೂರ್ಖರೊಡನೆ ಸಖ್ಯವನ್ನು ಬೆಳೆಸಿಕೊಂಡರೆ, ಅದೆಷ್ಟು ದಿನ ಉಳಿಯಬಹುದು ಎಂಬ ಪ್ರಶ್ನೆಯನ್ನು ಈಗ ಭಾರತವು ಉತ್ತರಿಸುವ ಕಾಲ ಬಂದಿದೆ. ಹೊರಗೆ ಬಣ್ಣದ ನುಡಿಗಳಿಂದ ಸಖ್ಯ, ಸೌಹಾರ್ದ, ಶಾಂತಿಗಳನ್ನೇ ಬಯಸಿ, ಭಾರತದೊಡನೆ ಹೊಂದಾಣಿಕೆಯಿಂದ ಬಾಳಬಯಸುವ ಪಾಕಿಸ್ತಾನದ ದುರಾಚಾರವು ದಿನೇ ದಿನೇ ಪ್ರವೃದ್ಧಮಾನಸ್ಥಿತಿಗೇರುತ್ತಿದೆ. ಭಾರತ-ಪಾಕ್ ಗಡಿಯಲ್ಲಿ ಮಾಡಬಾರದ ಅನ್ಯಾಯಗಳನ್ನೂ ಗಲಭೆಗಳನ್ನೂ ಮಾಡಿಕೊಂಡು ಭಾರತದ ಸಹನಾಶಕ್ತಿಗೆ ಪಂಥಾಹ್ವಾನವೀಯುವ ಪಾಕಿಸ್ತಾನ ಇದೀಗ ಮತ್ತೂ ಮತ್ತೂ ಮುಂದುವರಿಯುತ್ತಿರುವುದು ಕಂಡು ಬರುತ್ತಿದೆ. ರಾವಲ್ಪಿಂಡಿಯ ಸಮೀಪದಲ್ಲಿ ಭಾರತದ ಒಂದು ವಿಮಾನವನ್ನು ಗುಂಡಿಟ್ಟು ಕೆಳಗುರುಳಿಸಿದರು ಎಂಬ ವಾರ್ತೆಯು ಖೇದದಾಯಕವಾಗಿದೆ. ಈ ಘಟನೆ ನಡೆಯಲು ಪಾಕಿಸ್ತಾನವು ಯಾವುದೇ ಕಾರಣವನ್ನು ಮುಂದಿಟ್ಟರೂ ಈ ಕೃತ್ಯವು ಅಂತಾರಾಷ್ಟ್ರೀಯ ಕಾನೂನಿನ ದೃಷ್ಟಿಯಿಂದಲೂ ಅನ್ಯಾಯವಾಗಿದೆ ಎಂಬುದನ್ನು ಗಮನಿಸಬೇಕು. ಅತ್ತ ಕಾಶ್ಮೀರದ ಸೈನಿಕ ಕ್ಷೇತ್ರವನ್ನು ಗುಲಾಮ್ ಎಂಬ ಪಾಕ್ ಸಂಚಾರಿಯು ಅಕ್ರಮವಾಗಿ ಪ್ರವೇಶಿಸಲು ಪ್ರಯತ್ನಿಸುತ್ತಿರುವಾಗ ಬಂಧಿಸಲ್ಪಟ್ಟನೆಂದೂ ಸುದ್ದಿ ಬಂದಿದೆ. ಕಾಶ್ಮೀರದ ಯುದ್ಧವಿರಾಮ ರೇಖೆಯ ಸಮೀಪದ ಸುಧಪುರದ ಹತ್ತಿರದ ಒಂದು ಹಳ್ಳಿಯಲ್ಲಿ ಪರಿಶೀಲನೆ ನಡೆಸುತ್ತಿದ್ದ ಸಂಯುಕ್ತ ರಾಷ್ಟ್ರ ಸಂಘದ ವೀಕ್ಷಕರ ತಂಡವೊಂದರ ಮೇಲೆಯೂ ಪಾಕಿಸ್ತಾನವು ಮೆಶಿನುಗನ್ನುಗಳನ್ನು ಹಾರಿಸಿದೆ ಎಂದು ಶ್ರೀನಗರದ ವಾರ್ತೆಯಿದೆ. ಹೀಗೆ ಒಂದಲ್ಲ ಹಲವು ಅವಿವೇಕಯುಕ್ತ ಕರ್ಮಗಳಿಂದ ಪಾಕಿಸ್ತಾನವು ತನ್ನ ಮೂರ್ಖತನವನ್ನೂ ಈರ್ಷೆಯನ್ನೂ ಪ್ರಕಟಗೊಳಿಸುತ್ತ ಬರುತ್ತಿದೆ. ನಿರಪರಾಧಿ ಭಾರತೀಯ ವಿಮಾನವನ್ನು ಉರುಳಿಸುವುದರಲ್ಲಿ ಪಾಕಿಸ್ತಾನಕ್ಕೆ ಯಾವ ದುರುದ್ದೇಶವೂ ಇಲ್ಲವೆಂದು ಹೇಳುವುದು ಹೇಗೆ? ಪಾಕಿಸ್ತಾನ ಸರಕಾರಕ್ಕೆ ಮಾಮೂಲು ಪ್ರಕಾರ ಈ ಕೃತ್ಯಕ್ಕೆ ವಿರೋಧ ಸೂಚಿಸುವ ಪತ್ರವು ಭಾರತದಿಂದ ಹೋಗುವುದು ಸ್ವಾಭಾವಿಕ. ಆದರೂ ಮೂರ್ಖನಿಗೆ ಬುದ್ಧಿಯನು ನೂರ್ಕಾಲ ಹೇಳಿದರೆ ಅದರಿಂದ ಪ್ರಯೋಜನವಿದೆಯೆ? ಅಂತಲೇ ಮೂರ್ಖಸ್ಯ ನಾಸ್ತ್ಯೌಷಧಂ ಎಂಬುಕ್ತಿಯಿದೆ. ಆದರೆ ಈ ಮೂರ್ಖರನ್ನು ಶಾಂತಿಪ್ರಿಯರಾದ ಭಾರತೀಯರು ಕಟ್ಟಿಕೊಂಡು ಏನು ಮಾಡಬೇಕೆಂಬುದೇ ಮಹಾ ಪ್ರಶ್ನೆಯಾಗಿದೆ. ಭಾರತದ ಸತ್ವ ಪರೀಕ್ಷೆಯ ಕಾಲ ಸನ್ನಿಹಿತವಾಗುತ್ತಿದೆ ಎಂಬುದರ ಸೂಚನೆಗಳೇ ಪಾಕಿಸ್ತಾನದಿಂದ ಅವ್ಯಕ್ತವಾಗಿ ಬರುತ್ತಿವೆಯೆ?

oo oo oo

ಹೆನ್ರಿ ಕಬೋಟ್ ಲೋಜರು ಅಂತಾರಾಷ್ಟ್ರೀಯ ಧ್ರುವ ಪರಿಶೀಲನಾವಲಯವನ್ನು ತೋರಿಸುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ಭಾರತ ಮತ್ತು ಭಾರತೀಯರ ಬಗ್ಗೆ ತಮ್ಮ ಸಹಾನುಭೂತಿಯನ್ನೋ ಸಹಾನುತಾಪವನ್ನೋ ಅನೇಕಾನೇಕ ಮಹಾವ್ಯಕ್ತಿಗಳು ಪ್ರದರ್ಶಿಸಬಹುದು. ಭಾರತದಲ್ಲಿಯೂ ವಿಶಾಲ ಮನೋಭಾವನೆಯಿಂದ ಭಾರತೀಯತ ಮೇಲ್ಮೆಯನ್ನೇ ಬಯಸುವ ಪರಹಿತರಿರಬಹುದು. ಆದರೆ, ಆಹರ್ನಿಶಿ ಭಾರತೀಯರ ಮಾತ್ರವಲ್ಲ ವಿಶ್ವದ ಪ್ರಜೆಗಳೆಲ್ಲರ ಸುಖವನ್ನು ಹಾರೈಸುವ ವಿಶಾಲಹೃದಯಿ ಪಂಡಿತ ನೆಹರೂ ನಮ್ಮ ಪ್ರಧಾನಿಯಾಗಿದ್ದಾರೆ. ಭಾರತವೆಂದರೆ ನೆಹರೂ ಎಂದು ವಿದೇಶೀಯರು ಅನ್ನಬಹುದು; ಆದರೆ, ನೆಹರೂ ಎಂದರೆ ಭಾರತ ಎಂಬುದು ಅವರು ತಿಳಿದಿರಲಾರರು. ದಿನದ ಇಪ್ಪತ್ತು ಗಂಟೆಗಳ ಕಾಲ ವೈಯಕ್ತಿಕ ಹಿತಚಿಂತನೆಯನ್ನು ಬದಿಗಿರಿಸಿ, ನಲುವತ್ತು ಕೋಟಿ ಭಾರತೀಯರ ಹಿತಚಿಂತನೆಗಾಗಿ ದುಡಿಯುವ ನೆಹರೂ ಏನೆಂದರೂ ಅದಕ್ಕೊಂದು ಬೆಲೆಯಿದೆ. ಭಾರತೀಯರ ಬಡತನವನ್ನು ದೂರ ಮಾಡಲು ದರಿದ್ರತನದೊಡನೆ ಹೋರಾಟ ಹೂಡಬೇಕು; ಆಲಸ್ಯದೊಡನೆ ಕಾದಾಡಬೇಕು ಎಂದು ಉಪದೇಶಿಸುವ ನೆಹರೂ ಭಾರತದ ಮಹಾ ಸಮಸ್ಯೆಯ ಪರಿಹಾರಕ್ಕೆ, ದೇಶದ ಉತ್ಪಾದನೆಯನ್ನು ಹೆಚ್ಚಿಸಲು ತಕ್ಕ ವಾತಾವರಣವನ್ನು ನಿರ್ಮಿಸಬೇಕು ಎಂದೀಗ ಹೇಳತೊಡಗಿದ್ದಾರೆ. ಜನರ ಆರ್ಥಿಕ ಪರಿಸ್ಥಿತಿಯು ಸುಧಾರಿಸ ಬೇಕಾದರೆ, ವೇತನ ಮಟ್ಟವು ಹೆಚ್ಚಬೇಕು; ಈ ವೇತನದ ಏರಿಕೆಯು, ಉತ್ಪಾದನೆ ಹೆಚ್ಚಾದರೆ ಮಾತ್ರ ಸಾಧ್ಯ. ಒಂದಷ್ಟು ಕಾಗದದ ಚೂರುಗಳಲ್ಲಿ ನೋಟುಗಳನ್ನು ಅಚ್ಚು ಹಾಕಿಸಿದ ಮಾತ್ರಕ್ಕೆ ದೇಶದ ಆದಾಯವು ಹೆಚ್ಚಿದಂತಾಗಲಿಲ್ಲ. ಆ ನೋಟುಗಳಿಗೆ ಯಾವ ಬೆಲೆಯೂ ಬಾರದೆ ಹೋಗಬಹುದು. ದೇಶವು ದಿವಾಳಿತನವನ್ನೂ ಎದುರಿಸಬೇಕಾಗಿ ಬರಬಹುದು. ಆದರೆ, ಪರಿಶ್ರಮ ಸಹಿತವಾಗಿ ದುಡಿದಲ್ಲಿ, ರಾಷ್ಟ್ರದ ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸಿದಲ್ಲಿ, ಆಗ ಪ್ರತಿ ರಾಷ್ಟ್ರೀಯನ ವೈಯಕ್ತಿಕ ಹಿತಾಕಾಂಕ್ಷೆಯೂ ಈಡೇರುವುದು. ಆದುದರಿಂದಲೇ ಪರಿಶ್ರಮ ಪೂರ್ವಕವಾಗಿ ದುಡಿದು ರಾಷ್ಟ್ರದ ಉತ್ಪಾದನೆಯನ್ನು ಹೆಚ್ಚಿಸಲು ಅನುಕೂಲವಾದ ವಾತಾವರಣವನ್ನು ನಿರ್ಮಿಸಲು ಹೆಣಗಬೇಕು ಎಂದ ಪ್ರಧಾನಿ ನೆಹರೂ ವಿನಂತಿಸಿದ್ದಾರೆ. ಇಂತಹ ವಾತಾವರಣ ನಿರ್ಮಿಸುವುದೆಂದರೆ, ಸ್ವಯಂ ಪರಿಶ್ರಮಶೀಲನಾಗುವುದೆಂದು ಬೇರೆ ಹೇಳಬೇಕಾದ ಆವಶ್ಯಕತೆಯಿಲ್ಲ ತಾನೆ?

oo oo oo

ಈ ವರ್ಷದ ಮದ್ರಾಸು ಕರ್ನಾಟಕದ ಎಂಟನೆ ತರಗತಿಯ ಸರಕಾರಿ ಪರೀಕ್ಷೆಯ ಪ್ರಶ್ನಪತ್ರಗಳ ಮೇಲೆ ಕಟು ಟೀಕೆಗಳು ಬರಲಾರಂಭಿಸಿವೆ ಅವೆಲ್ಲವೂ ಸತ್ಯವೆಂದು ಒಪ್ಪಬೇಕು. ಪ್ರಶ್ನ ಪತ್ರಗಳನ್ನು ಉತ್ತರಿಸ

(೧೨ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3.

ಸ್ಥಾಪನೆ:- 1931.

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ $4\frac{1}{4}\%$
6 ,, 12 ,, $4\frac{1}{2}\%$
13 ,, 24 ,, $4\frac{3}{4}\%$

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ $\frac{1}{4}\%$ ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ....

NAVAYUGA
REGD. NO. M. 3619

UDIPI, THURSDAY
9—4—1959

LICENSE NO. 31
Licensed to Post without Prepaym

ನುಡಿಚಿತ್ರ

ಟಿಬೇಟಿದ ಧರ್ಮಾಧಿಕಾರಿ

ದಲಾಯಿಲ್ ಲಾಮಾ

ಟಿಬೇಟಿಯಾನರಿಗೆ ಅನುಪಮ ಶ್ರದ್ಧೆ ಭಕ್ತಿಗಳು ಇವರ ಮೇಲಿರುವುದು.

ಭಾರತದಿಂದ ಬೌದ್ಧ ಧರ್ಮದ ಸಂದೇಶವು ಹರಡಿ, ಕಂಪು ಬೀರಿದ ಹಲವಾರು ರಾಷ್ಟ್ರಗಳಲ್ಲಿ ಟಿಬೇಟು ಒಂದು ಎಂಬುದು ಸತ್ಯ. ಟಿಬೇಟು ಚೀನಾ ಮತ್ತು ಭಾರತಗಳ ನಡುವೆ ಇರುವ ದೇಶ. ಪರ್ವತರಾಜ ಹಿಮಾಲಯು ಟಿಬೇಟದಲ್ಲಿಯೇ ಸುಶೋಭಿತವಾಗಿದೆ.

ರಾಜನೀತಿಕ ದೃಷ್ಟಿಯಿಂದ ಟಿಬೇಟು ಚೀನ ಪ್ರಜಾರಾಜ್ಯದ ಅಂತರ್ಗತವಿರುವ ಒಂದು ಸ್ವಾಯತ್ತ ಆಡಳಿತೆ ಪಡೆದಿರುವ ರಾಷ್ಟ್ರ. ಈ ಬಗ್ಗೆ ಚೀನದೊಡನೆ ೨೩—೫—೫೧ರಂದು ಸಂಧಿಯೂ ಆಗಿತ್ತು. ಇದರಂತೆ, ಟಿಬೇಟಿನ ವಿದೇಶನೀತಿ ಮತ್ತು ಭದ್ರತೆಗಳ ಅಧಿಕಾರವನ್ನು ಚೀನಕ್ಕೆ ಒಪ್ಪಿಸಲಾಗಿತ್ತು. ಆದರೆ, ಆಧುನಿಕ ಚೀನದ ನಿರ್ಮಾತರಲ್ಲಿ ಟಿಬೇಟದ ಮೇಲೆ ತಮ್ಮ ಹೆಚ್ಚಿನ ಅಧಿಕಾರವನ್ನು ಚಲಾಯಿಸುವ ಹಂಬಲವು ಬೆಳೆದುದರ ಪರಿಣಾಮವಾಗಿಯೇ ತಮ್ಮ ಸಂಸ್ಕೃತಿ ಮತ್ತು ಪರಂಪರೆಗಳನ್ನು ಅವಿಚ್ಛಿನ್ನವಾಗಿರಿಸಿಕೊಂಡೇ ಚೀನದೊಡನೆ ಸಂಬಂಧ ಬೆಳೆಸಲು ಬಯಸುತ್ತಿದ್ದ ಟಿಬೇಟು ಈ ಹಂಬಲವನ್ನು ಪೂರೈಸಲು ಸಿದ್ಧರಾಗಿಲ್ಲದಿರುವುದೇ ರಾಜಧಾನಿ ಲಾಸಾದಲ್ಲಿ ಇತ್ತೀಚೆಗೆ ಗೊಂದಲಗಳೇಳಲು ಕಾರಣವಾಗಿರುವುದೆಂಬುದು ಬಹುಮಟ್ಟಿಗೆ ಸತ್ಯ. ತನ್ನ ನೆರೆರಾಷ್ಟ್ರವಾದ ಟಿಬೇಟಿನಲ್ಲಾದ ಈ ದಂಗೆಯಿಂದಾಗಿ ಭಾರತೀಯರೆಲ್ಲರೂ ವಿಶೇಷ ಚಿಂತೀತರಾಗುವುದೂ ಸ್ವಾಭಾವಿಕವಾಗಿದೆ.

ಚೀನ ಮತ್ತು ಭಾರತಗಳ ಪಾರಸ್ಪರಿಕ ಸಂಬಂಧವು ಬಹಳ ಮಧುರವಾಗಿದೆ. ಇದರೊಡನೆಯೇ ಭಾರತ ವರ್ಷವು ಟಿಬೇಟ ಮತ್ತು ಅಲ್ಲಿಯ ಧರ್ಮಗುರು ದಲಾಯಿಲ್ ಲಾಮಾರ ಕಡೆಗೆ ವಿಶೇಷ ಅಭಿರುಚಿ ಮತ್ತು ಶ್ರದ್ಧೆಗಳನ್ನೂ ತೋರಿಸುತ್ತದೆ. ಏಕೆಂದರೆ, ದಲಾಯಿಲ್ ಲಾಮಾರವರನ್ನು ಟಿಬೇಟಿಯಾನರು ಪರಮಾತ್ಮ ಸ್ವರೂಪಿಯಾದ ಗೌತಮ ಬುದ್ಧನ ಅವತಾರವೆಂದು ತಿಳಿಯುತ್ತಾರೆ. ಅಲ್ಲದೇ ಸದ್ಯದ ದಲಾಯಿಲ್ ಲಾಮಾರವರು ಈ ಮೊದಲೊಮ್ಮೆ ಭಾರತವನ್ನು ಸಂದರ್ಶಿಸಿದ್ದು, ಅವರಿಂದ ಪ್ರಸಾದರೂಪದಲ್ಲಿ ಕೊಡಲ್ಪಟ್ಟ ಕೆಂಪು ರುಮಾಲು ಇಂದಿಗೂ ಅನೇಕ ಭಾರತೀಯರೊಡನೆ ಭದ್ರವಾಗಿದೆ. ಆದುದರಿಂದಲೇ ಚೀನಾದ ಸೈನಿಕ ಗವರ್ನರ ಜನರಲ್ಲರಾದ ಚಾಂಗ್ ಚಿಂಗ ಬರು ಅಂಗರಕ್ಷಕರನ್ನುಳಿದು ಟಿಬೇಟಿನ ಈ ಧರ್ಮಗುರು ತನ್ನಲ್ಲಿಗೆ ಬರಬೇಕೆಂದು ಆದೇಶವಿತ್ತರೆಂದೂ, ಇದನ್ನು ವಿರೋಧಿಸುತ್ತ ಟಿಬೇಟಿನ ಜನತೆಯು ಪ್ರತಿರೋಧವನ್ನಾರಂಭಿಸಿದರೆಂದೂ ಕೇಳಿದೊಡನೆಯೇ ಭಾರತೀಯರೆಲ್ಲರೂ ವ್ಯಾಕುಲಚಿತ್ತರಾಗುವುದೂ ಸ್ವಾಭಾವಿಕವೇ. ದಲಾಯಿಲ್ ಲಾಮಾರು ನಮ್ಮ ದೇಶದ ನಾಗರಿಕರಲ್ಲವಾದರೂ ನಮ್ಮೆಲ್ಲರ ಹೃದಯದಲ್ಲಿ ಅವರು ಮನೆಮಾಡಿರುವರೆಂಬುದಂತೂ ನಿಸ್ಸಂಶಯ.

ಭಾರತದ ಬೌದ್ಧ ಧರ್ಮದಿಂದ ಕವಲೊಡೆದ ಮಹಾಯಾನ ಶಾಖೆಯ ಒಂದು ರೂಪವೇ ಟಿಬೇಟದಲ್ಲಿ ಪ್ರಚಲಿತವಿರುವ ಧರ್ಮವಾಗಿದೆ. ಈ ಧರ್ಮವು ಭಾರತೀಯರ ವಿಶ್ವಾಸಕ್ಕೂ ಪಾತ್ರವಾಗಿದೆ. ಟಿಬೇಟೀಯ ಸಂಪ್ರದಾಯಕ್ಕನುಸಾರವಾಗಿ ದಲಾಯಿಲ್ ಲಾಮಾರಿಗೆ ತನ್ನ ಉತ್ತರಾಧಿಕಾರಿಯನ್ನು ನೇಮಿಸಲಾರನು; ಅಥವಾ ಆವನನ್ನು ಆರಿಸಲಾರನು. ಭಗವಂತನಾದ ಅವಿಲೋಕಿತೇಶ್ವರ ಬುದ್ಧನು ಸ್ವಯಂ ಟಿಬೇಟಿಯರ ಮಾರ್ಗದರ್ಶನ ಮಾಡುವುದಕ್ಕಾಗಿ ದಲಾಯಿಲ್ ಲಾಮಾರಿರುವರೆಂದು ಟಿಬೇಟೀಯರ ವಿಶ್ವಾಸವಿದೆ. ಲಾಮಾರು ತಮ್ಮ ಶರೀರವನ್ನ ಮಾತ್ರ ಬದಲಾಯಿಸುತ್ತಾರೆ, ಈ ವಿಶ್ವಾಸದ ಬಲದಿಂದಲೇ ಒಬ್ಬ ದಲಾಯಿಲ್ ಲಾಮಾರು ದೇಹಾಂತ ಹೊಂದಿದೊಡನೆಯೇ ಆ ದಲಾಯಿಲ್ ಲಾಮಾರ ಲಕ್ಷಣಗಳುಳ್ಳ ಅವರ ಮೃತ್ಯುವಿನ ಸಮಯ ಉತ್ಪನ್ನವಾಗಿದ್ದ ಬಾಲಕರಲ್ಲಿಯೇ ಓರ್ವನನ್ನು ಆರಿಸಿ, ಆಂತಹವನನ್ನು ಆ ಕೂಡಲೇ ದಲಾಯಿಲ್ ಲಾಮಾ ಪದವಿಗೇರಿಸುತ್ತಾರೆ. ಈಗಿನ ದಲಾಯಿಲ್ ಲಾಮಾರ ಶೋಧನೆಯಲ್ಲಿ ಟಿಬೇಟಿಯಾನರು ತೊಡಗಿ ಕೆಲವಾರು ವರ್ಷಗಳ ವರೆಗೆ ಪ್ರಯತ್ನ ಮಾಡಬೇಕಾಯಿತು.

೧೯೩೩ರಲ್ಲಿ ಈ ಹಿಂದಿನ ಲಾಮಾರು ಮೃತ್ಯುಮುಖರಾದರು. ೧೯೩೫ನೆಯ ವರ್ಷ ಕಳೆದರೂ ಟಿಬೇಟಿಯನ್ನರಿಗೆ ತಮ್ಮ ಲಾಮಾರ ಉತ್ತರಾಧಿಕಾರಿ ಪತ್ತೆಯಾಗಲಿಲ್ಲ. ಒಂದು ದಿನ ಒರ್ವ ಅಧಿಕಾರಿಯು ಚೋಲ್‌ಕೋರ್ ಜೇಲಿನ ಯಾತ್ರೆಗೆ ಹೊರಟನು. ಅಲ್ಲಿ ಅವನು ಸತ್ವಸಾನ್‌ಮಾ ಪರ್ವತಗಳ ತಟದಲ್ಲಿ ಮೂರು ಪ್ರವಾಹಗಳ ಒಂದು ದೃಶ್ಯವನ್ನು ಕಂಡನು. ಈ ಪ್ರವಾಹದ ಸಮೀಪದಲ್ಲಿಯೇ ಒಂದು ಮನೆಯೂ ತೋರಿ ಬಂದಿತು. ಅಲ್ಲಿಯೇ ಅವನಿಗೆ "ಅ", "ಕ" ಮತ್ತು "ಮ" ಎಂಬ ಅಕ್ಷರಗಳು ದೃಷ್ಟಿಗೋಚರವಾದುವು. ಭಾವೀ ದಲಾಯಿಲ್ ಲಾಮಾರವರು ಪೂರ್ವ ದಿಕ್ಕಿನಲ್ಲಿ ದೊರೆಯುವರೆಂದು ಧರ್ಮಜ್ಞಾನಿಗಳು ಅರ್ಥಮಾಡಿದರು. ದಲಾಯಿಲ್ ಲಾಮಾರ ಮೃತ ಶರೀರವು ಪೂರ್ವ ದಿಶೆಯತ್ತ ಮೊಗಮಾಡಿಕೊಂಡಿರುವಂತೆ ಕಂಡುಬಂದಿದ್ದುದೂ ಈ ಅರ್ಥ ಕಟ್ಟುವುದಕ್ಕೆ ಸಾಧನವಾಯಿತು. ಇದರಿಂದಾಗಿ ಪೂರ್ವ ದಿಕ್ಕಿನತ್ತ ದಲಾಯಿಲ್ ಲಾಮಾರವರ ಶೋಧನೆಗೆ ಮೊದಲಾಯಿತು. ಹೀಗೆ ಹೊರಟ ಒಂದು ಪಂಗಡಕ್ಕೆ ಒಂದು ನದಿಯ ಬಳಿಯ ಮನೆಯ ಬಾಗಿಲಿಂದ ಮೂರು ವರ್ಷದ ಹುಡುಗನೊಬ್ಬನು ಹೊರಬರುತ್ತಿರುವುದು ಗೋಚರವಾಯಿತು. ಈ ದಳವನ್ನು ಕಂಡೊಡನೆಯೇ ಆತ "ಲಾಮಾ ಲಾಮಾ" ಎಂದು ಕೂಗಾಡಿದನು. ದಳದವರು ಕುತೂಹಲ ಪೂರ್ಣ ನೇತ್ರಗಳಿಂದ ಹುಡುಗನ ಶರೀರ ರಚನೆಯನ್ನು ನೋಡತೊಡಗಿದರು, ಅಲ್ಲದೇ ಲಾಮಾರಿಗೆ ಆವಶ್ಯವಿದ್ದ ಲಕ್ಷಣಗಳು ಅವನಲ್ಲಿ ತೋರಿಬಂದುವು. ಅಲ್ಲದೆ ೧೩ನೆಯ ಲಾಮಾರ ಕುರುಹುಗಳೂ ಕಂಡುಬಂದುವು. ಆ ಮೇಲೆ ಆವನನ್ನು ಲಾಮಾರನ್ನಾಗಿ ಆರಿಸಲಾಯಿತು. ೧೯೩೭ರಲ್ಲಿ ಲಾಸಾಕ್ಕೆ ಕರೆತರಲಾಯಿತು; ಮತ್ತು ೧೯೪೦ರಲ್ಲಿ ಅವನನ್ನು ಲಾಮಾರೆಂದು ನಿಯುಕ್ತಗೊಳಿಸಲಾಯಿತು. ೧೭—೧೧—೧೯೫೦ರಂದು ಈ ಲಾಮಾರೇ ಟಿಬೇಟಿನ ಸರ್ವಾಧಿಕಾರ ಸಂಪನ್ನ ಸರ್ವೋಚ್ಚ ಧಾರ್ಮಿಕ ಅಧಿಕಾರಿಯೆಂದು ಅಧಿಕಾರ ವಹಿಸಿದರು.

ದಲಾಯಿಲ್ ಲಾಮಾರ ಪದವಿಯು ಟಿಬೇಟದಲ್ಲಿ ಬಹಳ ಗೌರವಪೂರ್ಣವಾಗಿದೆ. ಕ್ರಿಸ್ತೀಯರಲ್ಲಿ ರೋಮದ ಪೋಪರಿಗಿರುವಷ್ಟೆ ಸ್ಥಾನಮಾನಗಳು ಟಿಬೇಟದಲ್ಲಿ ದಲಾಯಿಲ್ ಲಾಮಾರವರಿಗಿದೆ. ಇದರಿಂದಾಗಿಯೇ ಟಿಬೇಟಿಯಾನರು ಲಾಮಾರ ಮೇಲೆ ಅಪಾರ ಶ್ರದ್ಧೆಯನ್ನಿಟ್ಟಿದ್ದಾರೆ. ಅವರ ಪ್ರತಿಯೊಂದು ಮಾತನ್ನೂ ಜನರು ವೇದವಾಕ್ಯವೆಂದು ಮನ್ನಿಸುತ್ತಾರೆ.

ದಲಾಯಿಲ್ ಲಾಮಾ ಎಂದರೆ, ಜ್ಞಾನ ಮಹಾಸಾಗರ ಎಂದರ್ಥ. ವಾಸ್ತವದಲ್ಲಿ ಲಾಮಾ ಶಬ್ದವು ಮಂಗೋಲ ಭಾಷೆಯ ಶಬ್ದ. ಮಂಗೋಲದಿಂದ ಬಂದೀಗ ಟಿಬೇಟ ಭಾಷೆಯಲ್ಲಿ ಹುದುಗಿ ಕೊಂಡಿದೆ. ಮಂಗೋಲಿಯಾ ಮತ್ತು ಲಾಮಾರ ಸಂಬಂಧ ಪ್ರಾಚೀನವಿರುವುದೇ ಇದಕ್ಕೆ ಕಾರಣವೆನ್ನಬಹುದು. ೧೫೭೮ರಲ್ಲಿ ಮಂಗೋಲಿಯಾನರ ನಿಮಂತ್ರಣವನ್ನು ಸ್ವೀಕರಿಸಿ, ೩ನೆಯ ಲಾಮಾನು ಆದೇಶವನ್ನು ಸಂದರ್ಶಿಸಿದ್ದನು. ಆಗ ಆವನನ್ನು ಅವರು ಪ್ರಧಾನ ದಲಾಯಿಲ್ ಲಾಮಾ ಎಂಬ ಬಿರುದಿತ್ತು ಗೌರವಿಸಿದರಂತೆ.

ಇಂದಿಗೂ ತಮ್ಮ ಗುರು ಶಿಕ್ಷಣ ದೀಕ್ಷೆ ಮತ್ತು ಅಧ್ಯಯನಗಳಲ್ಲಿ ಪೂರ್ಣತೆಯನ್ನು ಪಡೆದಿರುವರೆಂಬ ವಿಶ್ವಾಸ ಟಿಬೇಟಿಯಾನರಲ್ಲಿದೆ. ದಲಾಯಿ ಲಾಮಾರು ಪ್ರೌಢಯಾದ ಮೇಲೆ, ಅವರನ್ನು ತಮ್ಮ ತಂದೆತಾಯಿಯರಿಂದ ಬೇರೆಯಾಗಿಸುತ್ತಾರೆ. ಲಾಮಾರವರ ಮಹಲಿನಲ್ಲಿಯೇ ಒಂದೆಡೆ ಅವರನ್ನು ಇರಗೊಡುತ್ತಾರೆ. ಬಾಲ್ಯಾವಸ್ಥೆಯಿಂದಲೂ ಅವರ ವ್ಯಕ್ತಿತ್ವವು ಒಂದು ವಿಧದ ಗಾಂಭೀರ್ಯದಿಂದಲೇ ರೂಪಿಸಲ್ಪಡುತ್ತದೆ; ಸೌಮ್ಯವಾಗಿಯೇ ರಚಿಸಲ್ಪಡುತ್ತದೆ.

ದಲಾಯಿಲ್ ಲಾಮಾರ ವೈಭವ ಮತ್ತು ಐಶ್ವರ್ಯಗಳು ಅಪರಿಮಿತ. ಸದ್ಯದ ದಲಾಯಿಲ್ ಲಾಮಾರು ಅಧಿಕ ಜನ ಪ್ರಿಯರಾಗಿರುವರು. ಎಂತಲೇ ಅವರ ಮೇಲೆ ಹೇರಿದ ನಿರ್ಬಂಧವನ್ನು ಕೇಳಿದ ಕೂಡಲೇ ಟಿಬೇಟಿಯಾನರು ಉರಿದು ಬಿದ್ದರು. ಲಾಮಾರ ರಕ್ಷಣೆಗಾಗಿ ಟಿಬೇಟಿಯಾನರು ತಮ್ಮ ಜೀವವನ್ನೂ ಮುಡುಪಾಗಿರಿಸಲು ಸಿದ್ಧರಿದ್ದಾರೆ.

ಅನುಭವಾಮೃತ

(೧೧ನೇ ಪುಟದಿಂದ)

ಕದಲ್ಲಿ ಸ್ಕೂಲ್ ಡೇ ದಿನ ಹೀರೋ ಪಾತ್ರ ಆವನದೇ. ಸರಿ! ನಾಟಕದ ಸನ್ನಿವೇಶವೊಂದರ ಬಾಯಿಪಾಠ ಮಾಡಿದ ಪುಟವೊಂದನ್ನು ಸಾಭಿನಯದಿಂದ—ಪ್ರಾರಂಭಿಸಿಯೇ ಬಿಟ್ಟ! ಇಂಗ್ಲಿಷ "ಪಟ ಪಾಟಾ ಪಟ ಸಾಟ್" ಎನ್ನುತ್ತಾ ಮನೆ ತುಂಬ ವ್ಯಾಪಿಸಿತು! ಕಿಟ್ಟು ಎದ್ದು ನಿಂತು ಕೈ ಮೇಲೆ ಮಾಡಿ ಮುಖ ಗಂಟು ಹಾಕಿ "I heard three speak one a speech once — but it was never acted; or if, it was, not above once: for the play I remember in pleased not the millions… …let me see—let me see—the fair daughter and no more!"

ರಾಧಮ್ಮನವರ ಕಂಗಳಲ್ಲಿ ಆನಂದ ಬಾಷ್ಪವಿಳಿದಿದ್ದುವು. ಅಜ್ಜಯ್ಯನೆದ್ದು ಕಿಟ್ಟುವನ್ನು ಹೆಗಲು ಚಪ್ಪರಿಸಿ 'ಭೇಷ್. ಕಲಿತಿದ್ದೀ ಕಣೋ, ನಂಗೊತ್ತು—ಕಿಟ್ಟು ಅವನಪ್ಪನಂಗೇ ಅಂತ! ರಾಧುಗೆ ಗಂಡು ಹುಡುಕದಾವ ಯಾರು ನಾನೇ ಅಲ್ವೆ ಜೋಡಿ ನೋಡಿ. ಕಿಟ್ಟುನಂಥವನೇ ಹುಟ್ಲಿ ಅಂತ ಹರಕೆ ಹಾಕ್ಕೊಂಡಿದ್ದೆ! ನಾಳೆಯೇ ಗ್ರಾಮದೇವರಲ್ಲಿ ದೇವಕಾರ್ಯ ಆಗ್ಬೇಕು. ಕಿಟ್ಟು ನೀನು ಓದೋದು ಮಾತ್ರ ಬಿಡಬೇಡ. ಲಂಡನ್ ವರೆಗೂ ಓದ್ಬೇಕು. ನೋಡು ಈ ಇಂಗ್ಲಿಷರ ಗುಟ್ಟು ತಿಳದು ಅವರನ್ನು ಅಟ್ಟುತನಕ ನಮಗೆ ಉಳಿವಿಲ್ಲ!"

— ಸಿರಿಪತಿ.

ದಾಂಡೇಲಿ ಮತ್ತು ಯಾದಗಿರಿ

ಎರಡು ಹೊಸ ಶಾಖೆಗಳು ಸಿಂಡಿಕೇಟಿನ ಬೇಂಕಿಂಗ್ ಸೇವೆಯ ಹೆಚ್ಚಳಕ್ಕಾಗಿ

16—4—1959ರಂದು ತೆರೆಯಲ್ಪಡುವುವು.

ಇಲ್ಲಿಗೆ ನಮ್ಮ ಶಾಖೆಗಳ ಸಂಖ್ಯೆಯು 119 ಆಗುವುದು.

— ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 5-75} ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ

ವರುಷ ೩೮. ವಾರ ೩೧. 16-4-1959 Vol. 38. No. 31.

ವಿಚಾರ ಮಥನ

ಪಾಕಿಸ್ತಾನದ ಪಂಥಾಹ್ವಾನ

* *

ಭಾರತ ರತ್ನ ಜವಾಹರ

* *

ಮುಂದುವರಿಯಬೇಕೆ?

* *

ಮೂರ್ಖರೊಡನೆ ಸಖ್ಯವನ್ನು ಬೆಳೆಸಿಕೊಂಡರೆ, ಅದೆಷ್ಟು ದಿನ ಉಳಿಯಬಹುದು ಎಂಬ ಪ್ರಶ್ನೆಯನ್ನು ಈಗ ಭಾರತವು ಉತ್ತರಿಸುವ ಕಾಲ ಬಂದಿದೆ. ಹೊರಗೆ ಬಣ್ಣದ ನುಡಿಗಳಿಂದ ಸಖ್ಯ, ಸೌಹಾರ್ದ, ಶಾಂತಿಗಳನ್ನೇ ಬಯಸಿ, ಭಾರತದೊಡನೆ ಹೊಂದಾಣಿಕೆಯಿಂದ ಬಾಳಬಯಸುವ ಪಾಕಿಸ್ತಾನದ ದುರಾಚಾರವು ದಿನೇ ದಿನೇ ಪ್ರವೃದ್ಧಮಾನಸ್ಥಿತಿಗೇರುತ್ತಿದೆ. ಭಾರತ-ಪಾಕ್ ಗಡಿಯಲ್ಲಿ ಮಾಡಬಾರದ ಅನ್ಯಾಯಗಳನ್ನೂ ಗಲಭೆಗಳನ್ನೂ ಮಾಡಿಕೊಂಡು ಭಾರತದ ಸಹನಾಶಕ್ತಿಗೆ ಪಂಥಾಹ್ವಾನವೀಯುವ ಪಾಕಿಸ್ತಾನ ಇದೀಗ ಮತ್ತೂ ಮತ್ತೂ ಮುಂದುವರಿಯುತ್ತಿರುವುದು ಕಂಡು ಬರುತ್ತಿದೆ. ರಾವಲ್ಪಿಂಡಿಯ ಸಮೀಪದಲ್ಲಿ ಭಾರತದ ಒಂದು ವಿಮಾನವನ್ನು ಗುಂಡಿಟ್ಟು ಕೆಳಗುರುಳಿಸಿದರು ಎಂಬ ವಾರ್ತೆಯು ಖೇದದಾಯಕವಾಗಿದೆ. ಈ ಘಟನೆ ನಡೆಯಲು ಪಾಕಿಸ್ತಾನವು ಯಾವುದೇ ಕಾರಣವನ್ನು ಮುಂದಿಟ್ಟರೂ ಈ ಕೃತ್ಯವು ಅಂತಾರಾಷ್ಟ್ರೀಯ ಕಾನೂನಿನ ದೃಷ್ಟಿಯಿಂದಲೂ ಅನ್ಯಾಯವಾಗಿದೆ ಎಂಬುದನ್ನು ಗಮನಿಸಬೇಕು. ಅತ್ತ ಕಾಶ್ಮೀರದ ಸೈನಿಕ ಕ್ಷೇತ್ರವನ್ನು ಗುಲಾಮ್ ಎಂಬ ಪಾಕ್ ಸಂಚಾರಿಯು ಅಕ್ರಮವಾಗಿ ಪ್ರವೇಶಿಸಲು ಪ್ರಯತ್ನಿಸುತ್ತಿರುವಾಗ ಬಂಧಿಸಲ್ಪಟ್ಟನೆಂದೂ ಸುದ್ದಿ ಬಂದಿದೆ. ಕಾಶ್ಮೀರದ ಯುದ್ಧವಿರಾಮ ರೇಖೆಯ ಸಮೀಪದ ಸುಧಪುರದ ಹತ್ತಿರದ ಒಂದು ಹಳ್ಳಿಯಲ್ಲಿ ಪರಿಶೀಲನೆ ನಡೆಸುತ್ತಿದ್ದ ಸಂಯುಕ್ತ ರಾಷ್ಟ್ರ ಸಂಘದ ವೀಕ್ಷಕರ ತಂಡವೊಂದರ ಮೇಲೆಯೂ ಪಾಕಿಸ್ತಾನವು ಮೆಶಿನುಗನ್ನುಗಳನ್ನು ಹಾರಿಸಿದೆ ಎಂದು ಶ್ರೀನಗರದ ವಾರ್ತೆಯಿದೆ ಹೀಗೆ ಒಂದಲ್ಲ ಹಲವು ಅವಿವೇಕಯುಕ್ತ ಕರ್ಮಗಳಿಂದ ಪಾಕಿಸ್ತಾನವು ತನ್ನ ಮೂರ್ಖತನವನ್ನೂ ಈರ್ಷೆಯನ್ನೂ ಪ್ರಕಟಗೊಳಿಸುತ್ತ ಬರುತ್ತಿದೆ. ನಿರಪರಾಧಿ ಭಾರತೀಯ ವಿಮಾನವನ್ನು ಉರುಳಿಸುವುದರಲ್ಲಿ ಪಾಕಿಸ್ತಾನಕ್ಕೆ ಯಾವ ದುರುದ್ದೇಶವೂ ಇಲ್ಲವೆಂದು ಹೇಳುವುದು ಹೇಗೆ? ಪಾಕಿಸ್ತಾನ ಸರಕಾರಕ್ಕೆ ಮಾಮೂಲು ಪ್ರಕಾರ ಈ ಕೃತ್ಯಕ್ಕೆ ವಿರೋಧ ಸೂಚಿಸುವ ಪತ್ರವು ಭಾರತದಿಂದ ಹೋಗುವುದು ಸ್ವಾಭಾವಿಕ. ಆದರೂ ಮೂರ್ಖನಿಗೆ ಬುದ್ಧಿಯನು ನೂರ್ಕಾಲ ಹೇಳಿದರೆ ಅದರಿಂದ ಪ್ರಯೋಜನವಿದೆಯೆ? ಅಂತಲೇ ಮೂರ್ಖಸ್ಯ ನಾಸ್ತ್ಯೌಷಧಂ ಎಂಬುಕ್ತಿಯಿದೆ. ಆದರೆ ಈ ಮೂರ್ಖರನ್ನು ಶಾಂತಿಪ್ರಿಯರಾದ ಭಾರತೀಯರು ಕಟ್ಟಿಕೊಂಡು ಏನು ಮಾಡಬೇಕೆಂಬುದೇ ಮಹಾ ಪ್ರಶ್ನೆಯಾಗಿದೆ. ಭಾರತದ ಸತ್ವ ಪರೀಕ್ಷೆಯ ಕಾಲ ಸನ್ನಿಹಿತವಾಗುತ್ತಿದೆ ಎಂಬುದರ ಸೂಚನೆಗಳೇ ಪಾಕಿಸ್ತಾನದಿಂದ ಅವ್ಯಕ್ತವಾಗಿ ಬರುತ್ತಿವೆಯೆ.?

○○ ○○ ○○

ಭಾರತ ಮತ್ತು ಭಾರತೀಯರ ಬಗ್ಗೆ ತಮ್ಮ ಸಹಾನುಭೂತಿಯನ್ನೋ ಸಹಾನುತಾಪವನ್ನೋ ಅನೇಕಾನೇಕ ಮಹಾವ್ಯಕ್ತಿಗಳು ಪ್ರದರ್ಶಿಸಬಹುದು. ಭಾರತದಲ್ಲಿಯೂ ವಿಶಾಲ ಮನೋಭಾವನೆಯಿಂದ ಭಾರತೀಯತ ಮೇಲ್ಮೆಯನ್ನೇ ಬಯಸುವ ಪರಹಿತರಿರಬಹುದು. ಆದರೆ, ಅಹರ್ನಿಶಿ ಭಾರತೀಯರ ಮಾತ್ರನಲ್ಲ ವಿಶ್ವದ ಪ್ರಜೆಗಳೆಲ್ಲರ ಸುಖವನ್ನು ಹಾರೈಸುವ ವಿಶಾಲಹೃದಯಿ ಪಂಡಿತ ನೆಹರೂ ನಮ್ಮ ಪ್ರಧಾನಿಯಾಗಿದ್ದಾರೆ. ಭಾರತವೆಂದರೆ ನೆಹರೂ ಎಂದು ವಿದೇಶೀಯರು ಅನ್ನಬಹುದು; ಆದರೆ, ನೆಹರೂ ಎಂದರೆ ಭಾರತ ಎಂದು ಜನರು ತಿಳಿದಿರಲಾರರು. ದಿನದ ಇಪ್ಪತ್ತು ಗಂಟೆಗಳ ಕಾಲ ವೈಯಕ್ತಿಕ ಹಿತಚಿಂತನೆಯನ್ನು ಬದಿಗಿರಿಸಿ, ನಲುವತ್ತು ಕೋಟಿ ಭಾರತೀಯರ ಹಿತಚಿಂತನೆಗಾಗಿ ದುಡಿಯುವ ನೆಹರೂ ಏನೆಂದರೂ ಅದಕ್ಕೊಂದು ಬೆಲೆಯಿದೆ. ಭಾರತೀಯರ ಬಡತನವನ್ನು ದೂರ ಮಾಡಲು ದರಿದ್ರತನದೊಡನೆ ಹೋರಾಟ ಹೂಡಬೇಕು; ಆಲಸ್ಯದೊಡನೆ ಕಾದಾಡಬೇಕು ಎಂದು ಉಪದೇಶಿಸುವ ನೆಹರೂ ಭಾರತದ ಮಹಾ ಸಮಸ್ಯೆಯ ಪರಿಹಾರಕ್ಕೆ, ಕೇವಲ ಉತ್ಪಾದನೆಯನ್ನು ಹೆಚ್ಚಿಸಲು ತಕ್ಕ ವಾತಾವರಣವನ್ನು ನಿರ್ಮಿಸಬೇಕು ಎಂದೀಗ ಹೇಳತೊಡಗಿದ್ದಾರೆ. ಜನರ ಆರ್ಥಿಕ ಪರಿಸ್ಥಿತಿಯು ಸುಧಾರಿಸಬೇಕಾದರೆ, ವೇತನ ಮಟ್ಟವು ಹೆಚ್ಚಬೇಕು; ಈ ವೇತನದ ಏರಿಕೆಯು, ಉತ್ಪಾದನೆ ಹೆಚ್ಚಾದರೆ ಮಾತ್ರ ಸಾಧ್ಯ. ಒಂದಷ್ಟು ಕಾಗದದ ಚೂರುಗಳಲ್ಲಿ ನೋಟುಗಳನ್ನು ಅಚ್ಚು ಹಾಕಿಸಿದ ಮಾತ್ರಕ್ಕೆ ದೇಶದ ಆದಾಯವು ಹೆಚ್ಚಿದಂತಾಗಲಿಲ್ಲ. ಆ ನೋಟುಗಳಿಗೆ ಯಾವ ಬೆಲೆಯೂ ಬಾರದೆ ಹೋಗಬಹುದು. ದೇಶವು ದಿವಾಳಿತನವನ್ನೂ ಎದುರಿಸಬೇಕಾಗಿ ಬರಬಹುದು. ಆದರೆ, ಪರಿಶ್ರಮ ಸಹಿತವಾಗಿ ದುಡಿದಲ್ಲಿ, ರಾಷ್ಟ್ರದ ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸಿದಲ್ಲಿ, ಆಗ ಪ್ರತಿ ರಾಷ್ಟ್ರೀಯನ ವೈಯಕ್ತಿಕ ಹಿತಾಕಾಂಕ್ಷೆಯೂ ಈಡೇರುವುದು. ಆದುದರಿಂದಲೇ ಪರಿಶ್ರಮ ಪೂರ್ವಕವಾಗಿ ದುಡಿದು ರಾಷ್ಟ್ರದ ಉತ್ಪಾದನೆಯನ್ನು ಹೆಚ್ಚಿಸಲು ಅನುಕೂಲವಾದ ವಾತಾವರಣವನ್ನು ನಿರ್ಮಿಸಲು ಹೆಣಗಬೇಕು ಎಂದ ಪ್ರಧಾನಿ ನೆಹರೂ ವಿನಂತಿಸಿದ್ದಾರೆ. ಇಂತಹ ವಾತಾವರಣ ನಿರ್ಮಿಸುವುದೆಂದರೆ, ಸ್ವಯಂ ಪರಿಶ್ರಮಶೀಲನಾಗುವುದೆಂದು ಬೇರೆ ಹೇಳಬೇಕಾದ ಅವಶ್ಯಕತೆಯಿಲ್ಲ ತಾನೆ?

○○ ○○ ○○

ಈ ವರ್ಷದ ಮದ್ರಾಸು ಕರ್ನಾಟಕದ ಎಂಟನೆ ತರಗತಿಯ ಸರಕಾರಿ ಪರೀಕ್ಷೆಯ ಪ್ರಶ್ನಪತ್ರಗಳ ಮೇಲೆ ಕಟು ಟೀಕೆಗಳು ಬರಲಾರಂಭಿಸಿವೆ ಅವೆಲ್ಲವೂ ಸತ್ಯವೆಂದು ಒಪ್ಪಬೇಕು. ಪ್ರಶ್ನಪತ್ರಗಳನ್ನು ಉತ್ತರಿಸ

(೧೨ನೇ ಪುಟ ನೋಡಿರಿ)



ಹೆನ್ರಿ ಕಬೇಟ್ ಲೋಜರು ಅಂತಾರಾಷ್ಟ್ರೀಯ ಧ್ರುವ ಪರಿಶೀಲನಾವಲಯವನ್ನು ತೋರಿಸುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3.

ಸ್ಥಾಪನೆ:- 1931.

ಕಾಯಂ ಠೇವಣಾತಿ ಬಡ್ಡಿ ದರ

1	ತಿಂಗಳಿಂದ	5	ತಿಂಗಳ ವರೆಗೆ	4¼%
6	,,	12	,,	4½%
13	,,	24	,,	4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು, ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ....

ಕಥಾ ವಿಹಾರ

ಅವಳಿಗಾಗಿ

ಎಲ್ಲಾ ತ್ಯಜಿಸಿದ

ಎಲ್ಲವನ್ನೂ ಬಿಟ್ಟರೂ ಆಕೆಯನ್ನು ಬಿಡಲಿಲ್ಲ ಶೇಖರ; ಅವಳು....?

ಬಾಂ ಬಾಂಗೂ ಅದೇ ವಿಷಯ. ಶೇಖರನ ಅಜ್ಜಿ ಸಾಯುವಾಗ ಶೇಖರನ ಮದುವೆ ಮಾಡಿ ಸಾಯುವೆ ಎಂದು ತನ್ನ ಮಗ ಸೋಮಪ್ಪನವರಿಗೆ ಹೇಳುತ್ತಿದ್ದಳು. ಶೇಖರನು ಆಗ ಬಿ. ಎಸ್‌ಸಿ. ಮೊದಲನೆಯ ವರ್ಗದಲ್ಲಿ ಪಾಸಾಗಿದ್ದ; ಮುಂದೆ, ಎಂ. ಬಿ. ಬಿ. ಎಸ್. ಕಲಿಯಲಿಕ್ಕೆ ಹೊರಟಿದ್ದ. ಒಂದು ದಿನ ಸೋಮಪ್ಪನವರು ಶೇಖರನಿಗೆ "ಶೇಖರ, ನಿನ್ನ ಮದುವೆಗೆ ನನ್ನ ಸ್ನೇಹಿತ ಸಹದೇವನ ಮಗಳು ಶಾರದೆಯನ್ನು ಗೊತ್ತುಮಾಡಿದ್ದೇನೆ. ಅವರು ನಿನಗೆ ಕಲಿಯಲು ದುಡ್ಡು ಕೊಡುವರು" ಎಂದರು. ಇದನ್ನು ಕೇಳಿದೊಡನೆ ಶೇಖರ ತುಂಬಾ ನಿರಾಶನಾದನು. ಕೊನೆಗೆ ತನ್ನ ತಂದೆಗೆ "ಅಪ್ಪಾ ನಾನು ಇಂದೂವಿನೊಡನೆ........" ಎನ್ನುವಾಗಲೇ "ಸಾಕು ನಿನ್ನ ಅವಿವೇಕತನ; ಅವರು ವರದಕ್ಷಿಣೆ ಕೊಡುವದಿಲ್ಲ" ಎಂದು ಸಿಟ್ಟಿನಿಂದ ನುಡಿದಿದ್ದರು.

ಶೇಖರನು ಈ ವಿಷಯವನ್ನು ಚರ್ಚಿಸಿ, ಚರ್ಚಿಸಿ, ಸಾಕುಬೇಕಾಗಿದ್ದ. ಒಮ್ಮೊಮ್ಮೆ ವಿಚಾರತರಂಗದಲ್ಲಿ ಮುಳುಗಿದರೆ ಆತನಿಗೆ ದಡ ಸಿಕ್ಕುವದು ಕಷ್ಟವಾಗುತ್ತಿತ್ತು. ಶೇಖರ ತನ್ನ ಮದುವೆಗೆ ತನ್ನ ಪ್ರಾಣಕ್ಕಿಂತ ಹೆಚ್ಚಿನ ಇಂದಿರಾನನ್ನು ಬಿಟ್ಟು ಆ ಶಾರದೆಯನ್ನೇ ಛೇ, ಛೇ, ಆದಾಗದು. ಪ್ರಾಣ ಹೋದರೂ ಪರವಾಯಿಲ್ಲ. ಆ ಶಾರದೆಯ ಸಂಗಡ ಮದುವೆ ಆಗದು. ಎಂದಿಲ್ಲವೊಂದು ದಿನ ಸಾಯುವದಲ್ಲವೇ? ಎಂದು ಅನೇಕ ವಿಚಾರ ಮಾಡಿ ಸಾಕುಬೇಕಾಗಿದ್ದ. ಒಮ್ಮೆ ಈ ವಿಷಯ ಇಂದೂನಿಗೂ ತಿಳಿಸಿದಾಗ "ಶೇಖರ.... ನನಗಾವುದು ತಿಳಿಯುವದಿಲ್ಲ. ನೀನು ಆ....ಶಾರದೆಯನ್ನೇ....ಮದುವೆಯಾದಲ್ಲಿ.... ನನ್ನ... ಮುಖ... ನೀನು ಮತ್ತೆ...ಕಾಣುವದಿಲ್ಲ. ದೇವರೇ ಈಗ ನಮ್ಮಿಬ್ಬರನ್ನು ಅಗಲಿಸುವದಕ್ಕಿಂತ ನನ್ನನ್ನು ಚಿಕ್ಕವಳಿರುವಾಗಲೇ ಕೊಂದುಬಿಟ್ಟಿದ್ದರೆ ಎಷ್ಟು ಚೆನ್ನಾಗುತ್ತಿತ್ತು..." ಎನ್ನುವಾಗಲೇ "ಇಂದೂ ನಾನಿರುವಾಗ ನೀನೇಕೆ ಭಯಪಡಬೇಕು. ಅವರು ಅಂದ ವಿಷಯ ಅಷ್ಟೇ ಹೇಳಿದೆ. "I may live without air and water but not without you" ನಿನ್ನನ್ನು ಅಗಲಿ ಒಂದು ಗಳಿಗೆಯಾದರೂ ಜೀವಿಸಲಾರೆ. ಅಳಬಾರದು. ಅತ್ತರೇನಾಗುತ್ತದೆ. ("Even trident of Shiva has no power to destroy him" ಕಿಸ್ತ) ಪರಮೇಶ್ವರನ ಕೈಯಲ್ಲಿರುವಂತ ತ್ರಿಶೂಲಕ್ಕೂ ಮನುಷ್ಯನನ್ನು ನಾಶಮಾಡುವ ಅಧಿಕಾರವಿಲ್ಲದಾಗ ನಮ್ಮಿಬ್ಬರನ್ನು ಯಾವ ತಾನೇ ಅಗಲಿಸುವದು" ಎಂದು ಅವಳಿಗೆ ಸಮಾಧಾನಪಡಿಸಿದನು.

ಇಂದೂ ಶೇಖರರು ಬಾಲ್ಯದಿಂದಲೇ ಕೂಡಿ ಬೆಳೆದವರಲ್ಲದೇ ಕೂಡಿಯೇ ಕಲ್ತಿದ್ದುದರಿಂದ ಅವರಿಬ್ಬರಿಗೂ ತುಂಬಾ ಸಲಿಗೆ ಎಂದರೆ ತುಂಬಾ ಸಲಿಗೆ. ತುಂಬಾ ಆತ್ಮೀಯತೆ ಎಂದರೆ ಆತ್ಮೀಯತೆ. ಇವಳಿಗೆ ನೋವಾಯಿತೆಂದರೆ, ಅವನಿಗೆ ನೋವಾದಂತೆ. ಅವನಿಗೆ ನೋವಾಯಿತೆಂದರೆ ಇವಳಿಗೆ ನೋವಾದಂತೆ ಆಗುತ್ತಿತ್ತು. ಹಾಗಾಗಲು ಕಾರಣವೇನೆಂದರೆ—

ಒಮ್ಮೆ ಶೇಖರನ ಮನೆಯವರೆಲ್ಲರೂ ಕಾಶಿಯಾತ್ರೆಗೆ ಹೋಗಿದ್ದರು. ಅವರು ಹೋದ ಮರುದಿನವೇ ಶೇಖರನಿಗೆ ಟಾಯಿಫಾಯಿಡ್ ಆಯಿತು. ಡಾಕ್ಟರರ ಕಾಟ್ ಬಿಟ್ಟು ಏಳಕೂಡದೆಂದು ಕಟ್ಟಪ್ಪಣೆ ಮಾಡಿದ್ದರು. ಮನೆಯಲ್ಲಿ ಈತನ ಉಪಚಾರಕ್ಕಾಗಿ ಯಾರೂ ಇರಲಿಲ್ಲ ಈ ಸಂಗತಿ ಇಂದೂನಿಗೆ ತಿಳಿದಾಗ ಪರವಿಲ್ಲದೇ ಓಡುತ್ತ ಶೇಖರನ ಮನೆಗೆ ಬಂದಳು. ಶೇಖರ ಹಾಯಾಗಿ ಕಾಟಿನ ಮೇಲೆ ಮಲಗಿದ್ದಾನೆ. ಇಂದೂನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಮೆಲ್ಲನೇ ಕಾಟಿನ ಬದಿ ಬಂದು 'ಶೇಖರ' ಎಂದಳು. 'ಹಾಂ ಯಾರದು?' ಎಂದು ಹೊರಳಿ ನೋಡುವಾಗ 'ಹೊರಳಬೇಡ ಶೇಖರ ನಾನು ಇಂದಿರಾ. ಡಾಕ್ಟರರು ಅಲುಗಾಡಬೇಡವೆಂದಿದ್ದಾರೆ. ಕಾಫಿಯನ್ನಾದರೂ ಮಾಡಲೇ?' ಎಂದಳು. "ನನಗೇನೂ ಬೇಕಿಲ್ಲ ಇಂದಿರಾ, ಟಾಯಿಫಾಯಿಡ್ ಜ್ವರ. ನನ್ನ ಸ್ನೇಹಿತ ಬರುತ್ತಾನೆ, ನೀನು ಮನೆಗೆ ಹೋಗು" ಎಂದ. "ಯಾವ ಜ್ವರವಾದರೇನು?" ನಾನು ಮಾತ್ರ ಇಲ್ಲಿಂದ ಕದಲುವದಿಲ್ಲ. ನಿನಗಾರು ಉಪಚಾರ ಮಾಡಬೇಕು?" ಎಂದು ಅವರ ಮನೆಯವರು ಬರುವ ವರೆಗೂ ಹಗಲಿರುಳೆನ್ನದೇ, ಶೇಖರನಿಗೆ ಔಷಧ, ಚಹ, ಕಾಫಿ, ವೇಳೆಗೆ ಸರಿಯಾಗಿ ಕೊಡುತ್ತಿದ್ದಳು." ಅದನ್ನು ಕಂಡು ಅ ದಿನವೇ ನಿಜವಾಗಿ ಮದುವೆ ಮಾಡಿಕೊಳ್ಳುತ್ತೇನೆಂದು ಅವಳಿಗೆ ವಚನವಿತ್ತಿದ್ದ. ಮನೆಯವರು ಬರಬೇಕಾದರೆ ಒಂದು ತಿಂಗಳ ಮೇಲೆ ಆಯಿತು. ಅವರು ಬಂದಾಗ ಶೇಖರನಿಗೆ ಗುಣವಾಗಿತ್ತು. ತಾವು ಊರಿಗೆ ಹೋದಾಗ ಶೇಖರನಿಗೆ ಉಪಚಾರಮಾಡಿದ ಇಂದೂನನ್ನು ಬಾಯಿ ತುಂಬ ಹೊಗಳಿದ್ದರು.

ಇತ್ತ ಸೋಮಪ್ಪನವರಿಗೆ ಎಂ. ಬಿ. ಬಿ. ಎಸ್. ಕಲಿಯಲಿಕ್ಕೆ ಹಣ ಕೇಳಿದರೆ ಮತ್ತೆ ಅದೇ ವಿಷಯವೇ" ನನ್ನ ಹತ್ತಿರ ದುಡ್ಡಿಲ್ಲ. ಶಾರದೆಯನ್ನು ಮದುವೆಯಾದರೆ ಮಾತ್ರ ನಿನಗೆ ಅವರು ದುಡ್ಡು ಕೊಡುವರು" ಎಂದೆನ್ನುತ್ತಿದ್ದರು. ಶೇಖರ ಇನ್ನು ಹಣ ಕೇಳಬಾರದೆಂದು ರಾತ್ರಿ ಅವನ ತಂದೆ ಮಲಗಿದ ಕಾಟಿನ ಮೇಲೆ ಚೀಟಿ ಬರೆದಿಟ್ಟು ಶೇಖರ ಮಧ್ಯರಾತ್ರಿಯಲ್ಲಿ ಇಂದೂನನ್ನು ಕರೆದುಕೊಂಡು ಮುಂಬಯಿಗೆ ಹೋದ.

ಮರುದಿನ ಮುಂಜಾನೆ ಸೋಮಪ್ಪನವರು ಎದ್ದು ನೋಡಿದಾಗ ಪಕ್ಕದಲ್ಲಿ ಚೀಟಿ ಬಿದ್ದದನ್ನು ಕಂಡು ಓದತೊಡಗಿದರು.

ತಂದೆಯವರಿಗೆ—ವಂದನೆಗಳು.

ನಿಮಗೆ ಎಷ್ಟು ಬಾರಿ ಹೇಳಿದರೂ, ನೀವು ಆ ವಿಷಯವನ್ನೇ ಮುಂದುಮಾಡಿದಿರಿ. ಇಂದಿನಿಂದ ನಿಮ್ಮ ಆಸ್ತಿಪಾಸ್ತಿಗಳೇನೂ ಬೇಕಿಲ್ಲ. ಇಂದಿರಾನೇ ನನಗೆ ಸರ್ವಸ್ವ. ಹೆಚ್ಚಿಗೆ ಬರೆದರೆ ಏನು ಪ್ರಯೋಜನವಿಲ್ಲ. ನನ್ನ ಹಾಗೆ ನನ್ನ ತಮ್ಮ ಪ್ರಕಾಶನಿಗೂ ಹಾಗೆ ಮಾಡದಿರಿ.

ಇಂತು ನಿಮ್ಮ

—ಶೇಖರ.

ಈ ಕಾಗದ ಕಂಡೊಡನೆ ಸೋಮಪ್ಪನವರು "ಹೋಗಿದ್ದಾನೆ ಅವಿವೇಕಿ, ದುಡ್ಡಿಲ್ಲದೇ ಎಷ್ಟುದಿನ ಬದುಕುತ್ತಾನೆ. ನೋಡೋಣ ಒಂದು ತಿಂಗಳಲ್ಲಿಯೇ ಬರುತ್ತಾನೆ" ಎಂದು ಸುಮ್ಮನಾದರು.

ಮುಂಬಯಿ ಪಟ್ಟಣದಲ್ಲಿ ನೌಕರಿಗಾಗಿ ಅಲೆದಲೆದು. ಎರಡು-ಮೂರು ದಿನ ಉಪವಾಸ ಬೀಳಬೇಕಾಯಿತು. ಆದರೂ ನೌಕರಿ ದೊರೆಯಲಿಲ್ಲ. ಕೊನೆಗೆ ಇಂದಿರಾ— "ಶೇಖರ ನೀನು ನೌಕರಿ ಮಾಡುವದು ಬೇಕಿಲ್ಲ. M. B. B. S. ಕಲಿಯಬೇಕು" ಎಂದು ದಿನಾಲು ಮನೆಗೆ ಬಂದ ತಕ್ಷಣವೇ ಇದೇ ವಿಷಯ ಪ್ರಾರಂಭಿಸುತ್ತಿದ್ದಳು. ಈ ವಿಷಯ ಕೇಳಿ, ಕೇಳಿ, ಒಂದು ದಿನ ಶೇಖರ "ಇಂದೂ ನೀನನ್ನುವದೂ ನಿಜ. M. B. B. S. ಕಲಿಯುವದಾದಲ್ಲಿ ದುಡ್ಡು ಬೇಕಲ್ಲ" ಎಂದ. ದುಡ್ಡು ಎಂದೊಡನೆ ಇಂದಿರಾ ಕೈಯಲ್ಲಿಯ ಭಂಗಾರದ ಆಭರಣಗಳನ್ನು ಬಿಚ್ಚಿ "ಇವನ್ನೋಯಿದು ಮಾರಿಬಿಡಿ. ಬಂದ ಹಣದಲ್ಲಿ 'ಉಷಾ'ರಾಟೆಯನ್ನು ಉಳಿದ ಹಣವನ್ನು ನಿಮ್ಮ ಕಾಲೇಜಿಗೆ ಕಟ್ಟಿಬಿಡಿ." ಎಂದು ಬಲವಂತಮಾಡಿ, ಶೇಖರನನ್ನು ಪೇಟೆಗೆ ಕಳುಹಿಸಿದಳು.

ಶೇಖರನು ಬಂದ ಹಣದಲ್ಲಿ 'ಉಷಾ' ರಾಟೆಯನ್ನು ಉಳಿದ ಹಣವನ್ನು ಕಾಲೇಜಿಗೆ ಕಟ್ಟಿ, M. B. B. S. ಕಲಿಯಲು ಪ್ರಾರಂಭಮಾಡಿದ. ಇತ್ತ ಇಂದೂ, ನೆರೆ-ಹೊರೆ ಹೆಣ್ಣುಮಕ್ಕಳ ಬಟ್ಟೆಯನ್ನು ಹೊಲಿದು ಬಂದ ಹಣದಲ್ಲಿ ಮನೆತನ ಸಾಗಿಸಹತ್ತಿದಳು. ಶೇಖರನು ಸಾಯಂಕಾಲ ಕೆಲ ಹುಡಗರಿಗೆ; ಮನೆಯಲ್ಲಿ ಅಭ್ಯಾಸ ಹೇಳಿ ಆತನೂ ಬಂದ ಹಣ, ಕಲಿಯಲು ಉಪಯೋಗಿಸತೊಡಗಿದ.

ಒಂದುಸಲ ಬೇಡವಾಯಿತೆಂದರೆ ಆ ವಸ್ತುವಿನ ಕಡೆಗೆ ತಿರುಗಿ ಸಹ ನೋಡದಿರುವದು ಸೋಮಪ್ಪನವರ ಸ್ವಭಾವ. 'ತನಗಿಲ್ಲದಾವಸ್ತು ಎಲ್ಲಿದ್ದರೇನು?' ಎಂಬ ವಚನದಂತೆ, ಸೋಮಪ್ಪನವರ ಮಾತನ್ನು ಕೇಳದೇ ಶೇಖರ ಹೋದುದರಿಂದ 'ಮಾತು ಕೇಳದಮಗ ಇದ್ದರೇನು? ಹೋದರೇನು?' ಎಂದು ಶೇಖರನ ವಿಷಯವಾಗಿ, ಸೋಮಪ್ಪನವರು ಬಿಟ್ಟು ಬಿಟ್ಟಿದ್ದರು ಶೇಖರನಿಗೆ ಕೊಡಬಯಸಿದ ಶಾರದೆಯನ್ನೇ ಪ್ರಕಾಶನಿಗೆ ಮದುವೆ ಮಾಡಿದರು.

'ನಾಗರ ಪಂಚಮಿ' ನಾಡನಾರಿಯರು ತಮ್ಮ ಗಂಡಂದಿರ ಮನೆಯಿಂದ ಬರುವ ಸುದಿನ! 'Unity of the women' ಎಲ್ಲ ಹೆಣ್ಣು ಮಕ್ಕಳನ್ನು ಕೂಡಿಸುವ ಹಬ್ಬ! ಎಲ್ಲರೂ ಆ ದಿನ ನಾಗರಾಜನಿಗೆ ಹಾಲನ್ನೆರೆದು, ಉಂಡಿತಿಂದು, ಜೋಕಾಲಿ ಜೀಕಿ, ಆನಂದದಿಂದ ಇರುವ ದಿನ! ಆ ದಿನ ಪಾಪ ಆ ಬಡ ಪ್ರಾಣಿಗಳಿಗೆ ಉಂಡಿ ತಿನ್ನುವ ಸುಯೋಗ ಬರಲಾರದೇ? ಆ ದಿನ ಇಂದೂ, ಶೇಖರನ ತಾಟಿನಲ್ಲಿ ರೊಟ್ಟಿ, ನೀಡುವಾಗ ಆಕೆಯ ಕಣ್ಣೊಳಗಿಂದ ತಟಕ್ಕನೇ ಎರಡು ಹನಿ ಕಣ್ಣೀರಿಳಿದು ಅವಳ ಕೆನ್ನೆಯ ಮೇಲೆ ಇಳಿಯಲಾರಂಭಿಸಿದವು. ಅದನ್ನು ಕಂಡು ಶೇಖರ "ಇಂದಿರಾ ಇಂಥ ಆನಂದದ ದಿನದಲ್ಲಿ ಕಣ್ಣೀರು ಸುರಿಸುವಿಯಲ್ಲಾ?" ಎಂದು ಅದಾವುದನ್ನು ಅರಿಯದ ಶೇಖರ ಅವಳನ್ನು ಕೇಳಿದ. "ಏನೂ ಇಲ್ಲರಿ" ಎಂದು ನಿಟ್ಟಿಸುರು ಬಿಟ್ಟಳು. "ಇಂದಿರಾ ನಿನ್ನ ಹೃದಯವನ್ನು ಆವರಿಸಿರುವ ದುಃಖವನ್ನು ನನ್ನೆದುರು ಹೇಳುವದಿಲ್ಲವೇ?" ಎಂದ. "ಏನೂ ಇಲ್ಲ ಶೇಖರ ಎಲ್ಲರೂ; ಉಂಡಿಯನ್ನು ನೀಡುವ ಸಮಯದಲ್ಲಿ ನಾನು ನಿನಗೆ ರೊಟ್ಟಿ ನೀಡಿದೆ

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಶೈಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

4 ತಿಂಗಳ ವರೆಗೆ 4%

5 ರಿಂದ 12 ,, 4¼%

13 ,, 24 ,, 4½%

ರೂ. 10,000/- ಮತ್ತು ಮೇಲಣ ಹಣಕ್ಕೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪ್ರೊಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ಶುದ್ಧ ಹರಟೆ

ಧರ್ಮ ಸಂಕಟದ ನಡುವಿನ ಧರ್ಮ

ಧರ್ಮವೂ ಪರಿವ್ರಾಜಕವಾಗಿ ಪರಿಣಮಿಸಲು ಕಾರಣ ಹೇಳಬಲ್ಲಿರಾ?

ಅದೊಂದು ಕಾಲವಿತ್ತು. ಆಗ ಧರ್ಮವು ನಾಲ್ಕು ಕಾಲುಗಳಿಂದ ಲೋಕ ಸಂಚಾರ ಮಾಡುತಿತ್ತಂತೆ! ಆಗಲೇ—"ಧರ್ಮೋ ರಕ್ಷತಿ ರಕ್ಷಿತಃ" ಎನ್ನುವ ವೇದ ವಾಕ್ಯವು ಯಾವುನೋ ಪುಣ್ಯಾತ್ಮನ ಹೊಟ್ಟೆಯಲ್ಲಿ ಕೃತಕ ಗರ್ಭಧಾರಣೆಯಾಗಿ ಜನಿಸಿರಬೇಕು. ಆಗಲೇ— "ಸತ್ಯ ವಾಕ್ಯಕೆ ತಪ್ಪಿನಡೆದರೆ ಮೆಚ್ಚನಾ ಜಗದೀಶನು..." ಎನ್ನುವ ಮುಕ್ತಿಸಂಥಾ ಮಾತನ್ನು ಆ ಮೂಕ ಪ್ರಾಣಿಯಾದ ಪುಣ್ಯಕೋಟಿಯು ಬಾಯಿಯಿಂದ ಕೈ ಹಾಕಿ ಹೊರಗೆ ಎಳೆದು ಹಾಕಿರಬೇಕು! ಆದರೆ ಈ ಕಾಲವೋ ಅದಕ್ಕೆ ತೀರ ಪ್ರತಿಕೂಲವಾಗಿದೆ ಎನ್ನಲು ದಾಕ್ಷಿಣ್ಯವಾದರೂ ಸ್ಪಷ್ಟವಾಗಿ ಹೇಳಬೇಕಾಯ್ತು. ಧರ್ಮದ ನಾಲ್ಕು ಕಾಲುಗಳೂ ಪಕ್ಷವಾತದಿಂದ ನರಳುತ್ತಾ ಒಂದೆಡೆ ಬಿದ್ದುಕೊಂಡಿರಬೇಕಾಗಿದೆ —ಹೌದು—ಕೆಲವು ಯುಗಗಳೇ ಹೇಳದೆ ಕೇಳದೆ ಕಳೆದು ಹೋದ ಮೇಲೆ ಈ ಧರ್ಮಕ್ಕಾದರೂ ಮುದಿ ಪ್ರಾಯಬಾರದಿರುವುದುಂಟೇ? ಯೌವನದ ಹುಮ್ಮಸದಲ್ಲಿ ಬೀದಿ ಬೀದಿ ಓಣಿ ಓಣಿ ಸುತ್ತಾಡಿಕೊಂಡು 'ನಾನೂ ಇದ್ದೇನೆ ಎನ್ನುವ ನೆನಪನ್ನು ಜನರಲ್ಲಿ ಉಳಿಸಿ ಎಷ್ಟು ಕಾಲ ಬದುಕೀತು? ಅದಕ್ಕೂ ಒಂದು ಕೊನೆ ಎಂಬುದು ಬೇಕಲ್ಲ! ಪರಮಾತ್ಮನು ಸೃಷ್ಟಿ ಮಾಡಿದ ಪ್ರತಿಯೊಂದು ವಸ್ತುವೂ ಒಂದಲ್ಲ ಒಂದು ದಿನ ನಾಶವಾಗಲೇಬೇಕೆಂಬ ನಿಯಮವಿರುವಾಗ, ಈ ಧರ್ಮವೆಂಬುದು ಜನರು ಜೊಳ್ಳಿಸುವ ಬಾಯಿಯಿಂದ ಬಾಯಿಗೆ ಬಿದ್ದು ಸುಖವಾಗಿ ಎಷ್ಟು ಕಾಲ ಉಳಿದೀತು? ಅಂತಲೇ ಹೇಳಬೇಕಾಗಿದೆ ಈ ಧರ್ಮವೆಂಬ ಮೂರು ಮಾತ್ರೆಯ ಶಬ್ದಕ್ಕೆ ಯಾವ ಪುಣ್ಯಾತ್ಮ ಜನ್ಮವಿತ್ತನೋ ತಿಳಿಯದು. ಪೂರ್ವದಲ್ಲಿ ಅದೆಷ್ಟು ಕರ್ಮಮಾಡಿ ಈ ನರಲೋಕದಲ್ಲಿ ಜನ್ಮತಾಳಿತೋ ಗೊತ್ತಿಲ್ಲ! ಈಗೀಗ ಈ ಧರ್ಮಕ್ಕೆ ಬಹು ದೊಡ್ಡ ರೌರವ ನರಕವೇ ಪ್ರಾಪ್ತಿಯಾಗಿದೆ ಎನ್ನಬೇಕು ಒಂದು ದಿನವಾದರೂ ಅದಕ್ಕೆ ವಿಶ್ರಾಂತಿ ಸಿಗಲು ಈ ನರ ಜೀವಿಗಳು ಬಿಡುತ್ತಾರೆಯೇ? ಮನುಷ್ಯನ ಬಾಯಿಯಿಂದ ತಪ್ಪುವ ಒಂದೇ ಒಂದು ಘಳಿಗೆಯು ಪುರುಸೊತ್ತಾದರೂ ಅದಕ್ಕೆ ಸಿಗುತ್ತಿದ್ದರೆ ಈ ಧರ್ಮವು ಇಷ್ಟರಲ್ಲೇ ಆತ್ಮಹತ್ಯೆಯನ್ನಾದರೂ ಮಾಡಿಕೊಳ್ಳುವ ವೈರಾಗ್ಯವನ್ನು ತಾಳದಿರುತ್ತಿರಲಿಲ್ಲ!—ಅಲ್ಲವಾದರೂ ಅದಕ್ಕೆ ಒಂದಲ್ಲ ಒಂದು ದಿನ ಸಾವು ಬಂದೇ ಬರುತ್ತೆ. ಮನುಷ್ಯನಿಂದಲೇ ಹುಟ್ಟಿದ ಧರ್ಮಕ್ಕೆ ಅವನಿಂದಲೇ ಸಾವೂ ಬಂದೀತು! ಇನ್ನೇನು ಅವರ ಅಂತ್ಯಕ್ಕೆ ಹೆಚ್ಚು ಕಾಲವೂ ಹೋಗದೆನ್ನಿ!—ಈ ಕಲಿಕಾಲ ಪ್ರಾರಂಭವಾದಾಗಲೇ ಧರ್ಮಕ್ಕೆ ಜೀವ ಎಳೆಯಲು ಶುರುವಾಗಿದೆ. ಹಾಗಾಗಿಯೇ ಈಗಿನ ಆದು ಸಕಲ ಗುಣ ವಿಶೇಷತೆಗಳನ್ನೂ ಜನರು ಬಾಯಿ ತುಂಬ ಹಾಡಿ ಹೊಗಳಲು ಮುಂದಾಗಿದ್ದಾರೆ. 'ಸತ್ತ ಎಮ್ಮೆಗೇ ಹಾಲು ಹೆಚ್ಚು,' ಎಂಬೊಂದು ನಾಡಿಕೆಯು ಮಾತಿರುವಂತೆ—ಈ ಧರ್ಮದ ಕೊನೆ ಆಗುವುದಂತೂ ಖಂಡಿತವೆಂಬುದನ್ನು ತಿಳಿದ ಜನ ಅದರ ಕುರಿತಾಗಿ ಭಾರೀ ಚಲೋದಾದ ಭಾಷಣ-ಘೋಷಣೆಗಳನ್ನೇ ಮಾಡಲು ಉತ್ಸಾಹಿತರಾಗಿದ್ದಾರೆ. ಯಾವ ಪಾಪಿಗೂ ಈ 'ಧರ್ಮ'ದ ಗುಣಾವಗುಣಗಳನ್ನು ಮರೆತು ಬಿಡುವುದಕ್ಕಾಗಲಿಲ್ಲ! ಯಾವ ಕರ್ಮ ಚಂಡಾಲನೂ ಈ 'ಧರ್ಮ'ದ ಕುರಿತಾಗಿ ಒಂದೇ ಒಂದು ಮಾತನ್ನೂ ದೂಷಿಸಿ ಆಡುವ ಮನಸ್ಸು ಮಾಡಿದ್ದಿಲ್ಲ. ದೂಷಿಸುವುದಾದರೂ ಹೇಗೆ?—ಮಾತು ಬರುವ ಪ್ರತಿಯೊಬ್ಬ ಮಾನವನೂ ಅದನ್ನು ಬಹು ಪ್ರೀತಿಯಿಂದ ಸಾಕಿ ರಕ್ಷಿಸಲಿಲ್ಲವೇ? ಪ್ರತಿಯೋರ್ವ ಕಿರಿಯನೂ ತನ್ನ ಹಿರಿಯರು ಸ್ವಾರ್ಜಿತವಾಗಿ ಬಿಟ್ಟುಹೋದ "ಧರ್ಮೋಪದೇಶ"ವೆಂಬ ಅಜ್ಜ ನೆಟ್ಟ ಗೋಳೀಮರಕ್ಕೆ ನೇಣು ಹಾಕಿಕೊಳ್ಳುವ ವ್ರತಸಂಪ್ರದಾಯಕ್ಕೆ ಕಟ್ಟುಬೀಳದೆ ಹೋಗಲಿಲ್ಲ!

ಹಿಂದಿನ ಕಾಲದಲ್ಲಿ ಧರ್ಮಕ್ಕಾಗಿಯೇ ತಮ್ಮ ಸರ್ವಸ್ವವನ್ನು ಕಳಕೊಂಡು ಆ ಲೋಕದ ದಾರಿ ಹಿಡಿದಿದ್ದವರಿದ್ದರಂತೆ! ಆದರೆ ಈ ಕಾಲದಲ್ಲಿ ಹಲವರಿಗೆ ಧರ್ಮೋಪದೇಶ ಮಾಡಿ ತಮ್ಮ ಭಂಡಾರ ಭರ್ತಿ ಮಾಡಿಕೊಳ್ಳುವ ಬಗೆ ಹೇಗೆಂದು ಚಿಂತಿಸುತ್ತಿರುವವರು ರಕ್ತದ ಒತ್ತಡ ಹೆಚ್ಚಾಗಿ ಈ ಜಡದೇಹವನ್ನು ಇಲ್ಲಿಯೇ ಬಿಟ್ಟು, ತಾವು ಮಾಡಿದ ಧರ್ಮದ ಫಲವಾಗಿ ಬೆಂಬತ್ತಿದ್ದ ಕರ್ಮದ ಬುತ್ತಿಯನ್ನು ಹೊತ್ತುಕೊಂಡು ಯಮಲೋಕದಲ್ಲೆಲ್ಲಾದರೂ ಸ್ವಂತ ಮನೆಮಾಡಿಕೊಂಡಿರಬೇಕೆಂಬ ಆಸೆಯಿಂದ ಪ್ರಾಣದೊಂದಿಗೆ ಸರಾಗವಾಗಿ ಹೊರಟುಹೋಗುತ್ತಾರೆ.

ಕೈ ದಾರೆಯ ಸತಿಗೆ ಕೈಕೊಟ್ಟು ನಾಲ್ಕು ಜನರ ಮುಂದೆ 'ಇವಳೇ ನನ್ನ ಹೆಂಡ್ತಿ' ಎನ್ನುವ ಹಕ್ಕಿನಿಂದ ಹುಟ್ಟಿನ ಪ್ರೀತಿಯಲ್ಲಿ ಗೋಪ್ಯವಾಗಿ ಆಕೆಗೆ ಚೆನ್ನಾಗಿ ನಾಲ್ಕು ಗುದ್ದಿ, ಆಕ್ಷಣವೇ ಹೊರ ಚಾವಡಿಗೆ ಬಂದು— "ದಯೆಯೇ ಧರ್ಮದ ಮೂಲವಯ್ಯಾ...." ಎಂದು ಧರ್ಮದ ತಾಯಿ ಬೇರನ್ನೇ ಕಿತ್ತು ತೋರಿಸುವವರೂ ಇದ್ದಾರೆ. ತನ್ನಾತೆಯ ಮುಂದೆ ಹಿಟ್ಟಿಗಾಗಿ ಆರು ದಯಾಪ್ಪೈಸೆ ಬೇಕೆಂದು ಕೈನೀಡಿ ನಿಂತ ಪತಿಯನ್ನು ಕಂಡು— ಭಾರೀ ಸಮಾಧಾನದಿಂದ 'ಇಲ್ಲ'ವೆಂದು ಮಾಡಿನ ಹಂಚು ಹಾರುವಂತೆ ಅವಳು ಘರ್ಜಿಸುತ್ತಾ "ಪತಿಯೇ ಪರದೈವ"ವೆನ್ನುವ ಸ್ತ್ರೀ ಧರ್ಮದ ಮೇಲ್ಪಂಕ್ತಿಯನ್ನು ಬಾಯಿಪಾಠವಾಗಿ ಹೇಳುವ ಹೆಮ್ಮಕ್ಕಳನ್ನೂ ನೀವು ಕಂಡಿಲ್ಲವೇ? ಹೀಗೆಯೇ ಈ ಧರ್ಮದ ಕುರಿತಾದ ಸುಭಾಷಿತಗಳು ಈ ಕಾಲದಲ್ಲಿ ಅತ್ತ ಸಾಯಲಾರದೆ ಇತ್ತ ಬದುಕಲಾರದೆ ಉಳಿದಿವೆ. ಅಲ್ಲ— ಮಾನವ ತನ್ನ ಅನುಕೂಲಕ್ಕಾಗಿ ಅವನ್ನು ಉಳಿಸಿಕೊಂಡಿದ್ದಾನೆ. ನಾಳೆ ಕೊಡುತ್ತೇನೆಂದು ಕೊಂಡುಹೋದ ಪುಣ್ಯಾತ್ಮ ಕೆಲವು ಸಂಕ್ರಾಂತಿ ಕಳೆದುಹೋದರೂ ಕೊಡಬೇಕಾದ ನಾಲ್ಕಾಣೆಯನ್ನು ತಂದುಕೊಡಲಿಲ್ಲ! ನಾಲಕ್ಕಾಗಿ ಆತ ನನ್ನಲ್ಲಿಗೆ ಬಂದಾಗ ಬೇಕಾದ ಬೇಡವಾದ ಎಲ್ಲ ವಿಚಾರಗಳನ್ನೂ ಚರ್ಚಿಸಿ ತಾನೊಬ್ಬ ಮಹಾ ನಂಬಿಗಸ್ಥನೆನ್ನುವುದನ್ನೂ ಸಮರ್ಥಿಸುವುದಕ್ಕಾಗಿ ತನಗಾಗದ ಬೇರೆಯವರು ಮೋಸ ಮಾಡಿದ ಬಗೆಯನ್ನೂ ವರ್ಣಿಸುತ್ತಾ ಆತ ಹೇಳಿದ್ದ—"ಕೊಟ್ಟ ಮಾತನ್ನು ಇಟ್ಟುಕೊಂಡರೆ ಮನೆಮಾರು ಉಳಿಯದು" ಎಂದು. ಅದೇ ದಿನ ಕೋರ್ಟಿನಲ್ಲಿ ಸುಳ್ಳು ಸಾಕ್ಷಿ ಹೇಳಿ ಅಲ್ಲಿಯೇ ಕಂಪೌಂಡಿನೊಳಗಿರುವ ಹೊಟೇಲಲ್ಲಿ ಯಾರೋ ತೆಗೆದು ಕೊಟ್ಟ ಕಾಫಿಯನ್ನು ಕುಡಿಯುತ್ತಾ, "ಸತ್ಯಂ ಮೇವ ಜಯತೇ ನಾನೃತಂ" ಎಂದು ಯಾವುದೋ ಸುಳ್ಳಿನ ಸಮರ್ಥನೆಗಾಗಿ ಹೇಳಿದ್ದ. ಸಾಗಾಗಿ ಸುಳ್ಳು ಹೇಳುವಾಗಲೂ ನಾನು ಸತ್ಯವನ್ನೇ ನಂಬಿಕೊಂಡಿರುವವನೆಂಬುದು ನಿಮಗಿಷ್ಟರಲ್ಲೇ ತಿಳಿದಿರಬಹುದು. ಹೌದು—ಸುಳ್ಳು ಹೇಳುವಾಗ ಸತ್ಯವನ್ನೂ, ಕರ್ಮ ಮಾಡುವಾಗ ಧರ್ಮವನ್ನೂ, ಪಾಪ ಮಾಡುವಾಗ ಪುಣ್ಯವನ್ನೂ ಮನಸಾ ನೆನೆದುಕೊಂಡರೆ ಮಾತ್ರ ಸಾಕಲ್ಲವೇ? ಇದಕ್ಕಿಂತ ಹೆಚ್ಚನ್ನು ಸಾಧಿಸಲು—ಬಗೆದಂತೆ ಬಿಟ್ಟ ಈ ಮನವೆಂಬ ಮರ್ಕಟನ ಹುಟ್ಟು ಸ್ವಭಾವ ಬಿಟ್ಟೀತೇ? ಇದೇನು ಕಾಲಮಹಿಮೆಯೋ? ವಿನಾಶ ಕಾಲದ ವಿಪರೀತ ಬುದ್ಧಿಯೋ? ಹೇಳಬರುವಂತಿಲ್ಲ. "ಹಳಸಿದ ಅನ್ನ ಹೊಟ್ಟೆಗೆ ಮಾರಿ!" ಎಂಬ ಸಂಗತಿ ತಿಳಿದರೂ ನಾಲಗೆ ಅವನ್ನೇ ಅಪೇಕ್ಷಿಸುತ್ತಿದೆ ಎಂದಾದರೆ, ರೋಗಿಯಾಗಿ ನರಳುವ ಭಾಗ್ಯವನ್ನೇ ನಾವು ಬಯಸಿದಂತಲ್ಲವೇ? ಹೀಗಾಗಿ ಇರುಳು ಕಂಡ ಬಾವಿಯಲ್ಲೇ ಹಗಲಲ್ಲಿ ಬೀಳುವ ಬುದ್ಧಿವಂಥರು ನಾವಾಗುವುದೆಂದಾದರೆ ಅದಕ್ಕಿಂತ ನಮ್ಮ ಕಣ್ಣೇ ಕುರುಡಾಗಿ ಬಿಟ್ಟರೆ ಹೆಚ್ಚಿನ ನಷ್ಟವೂ ಇರದು—ಅದರಿಂದ ವಿಪರೀತ ಕಷ್ಟವೂ ಬಾರದು!

ಹೆತ್ತ ತಂದೆ-ತಾಯಿಂದಿರನ್ನು ಕೂಡಾ ಮೀಸೆ ಹುಟ್ಟಿದ ಮರು ಘಳಿಗೆಯಲ್ಲಿ ತೃಣಕ್ಕಿಂತ ಕೀಳಾಗಿ ಕಾಣುವವರೂ, "ಮಾತೃ ದೇವೋ ಭವ ಪಿತೃ ದೇವೋ ಭವ" ಎನ್ನುತ್ತಾ ಧರ್ಮದ ಮರ್ಮವನ್ನು ಎಳೆ ಎಳೆಯಾಗಿ ಬಿಡಿಸಿ ಎಷ್ಟು ಚಲೋದಾಗಿ ವಿವರಿಸುತ್ತಾರೆ?—ಹೆಚ್ಚೇಕೆ ಹಸಿದ ಭಿಕ್ಷುಕನೊಬ್ಬ ಬೇಡುತ್ತಾ ಸಿರಿವಂತನಲ್ಲಿಗೆ ಬಂದು, 'ನಿನ್ನ ಕಾಲ ಬುಡದಲ್ಲೇ ಪ್ರಾಣ ಹೋಗುತ್ತೆ; ಒಂದು ಪಾವಾಣೆ ಯಾದರೂ ಕೊಡಯ್ಯಾ—' ಎಂದು ಕೂಗಿಕಾಡಿದರೂ—ಅದನ್ನು ಕೊಟ್ಟರೆ ಎಲ್ಲಿ ತನ್ನ ಪ್ರಾಣವೇ ಹೋಗಿ ಬಿಡುತ್ತೋ? ಎಂಬ ಭಯದಿಂದ ಕೊಡುವ ಮನಸ್ಸಿದ್ದರೂ 'ಕೊಟ್ಟರೆ ಹೊಯ್ತಲ್ಲಾ?' ಎಂದು ಪರಿತಪಿಸುತ್ತಾ ಬಾದವನಿಗೆ ಬೇರೆ ಮನೆಯ ದಾರಿ ತೋರಿಸಿ ಬಿಡುವ ಉದಾರಿಗಳೂ, ದಾನಶೂರರೂ ಈ ಧರ್ಮ ರಕ್ಷಣೆಗಾಗಿ ಎಷ್ಟೊಂದು ಹೋರಾಡುವುದಿಲ್ಲ? ಹೀಗೆ ಕಾರ್ಯತಃ ಲೋಭಿಗಳಾದರೂ ಮಾತಿನಲ್ಲಿ ಈ ಧರ್ಮವನ್ನು ಸಂಕಟದಿಂದ ಪಾರು ಮಾಡಲು ಧರ್ಮದ ಕುರಿತಾದ ಮುಕ್ತಿಸಂಥಾ ಮಾತುಗಳನ್ನು ಮನಸಾ ಮೆಚ್ಚಿಕೊಂಡು ಆಡುತ್ತಾ ಹಾಡುತ್ತಾ 'ಕೊಟ್ಟದ್ದು ತನಗೆ ಬೈಚಿಟ್ಟದ್ದು ಪರರಿಗೆ ಕೊಟ್ಟು ಕೆಟ್ಟೆನೆನಬೇಡ ಅದು ಮುಂದೆ ಕಟ್ಟಿಹುದು ಬುತ್ತಿ-ಸರ್ವಜ್ಞ—' ಎಂದು ತನ್ನ ಪೆಟ್ಟಿಗೆಗೆ ಗಟ್ಟಿಯಾದ ಬೀಗ ಹಾಕಿ ಮೂರು ಮೂರು ಸಲ ಎಳೆದು ನೋಡುವವರನ್ನು ಕಂಡು, 'ನಾನು ಈ ನರನ ಕೈ ಬಾಯಿಯಿಂದ ತಪ್ಪಿ ಉಳಿಯುವ ಬಗೆ ಎಂತಯ್ಯಾ?' ಎಂದು ಧರ್ಮವು ಸಂಕಟ ಪಡುತ್ತಾ ಮೊರೆಯಿಟ್ಟಿತಂತೆ!

(೧೨ನೇ ಪುಟ ನೋಡಿರಿ)

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ನಿಮಗಾಗಿ —
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೋರೇಶನ್ ಲಿಮಿಟೆಡ್

(ಸ್ಥಾಪನೆ: ಮಾರ್ಚ್ 12, 1906)

ಪ್ರಧಾನ ಕಚೇರಿ; ಉಡುಪಿ (ದ. ಭಾರತ)

ಮದುವೆಗಳು ಜರಗತಕ್ಕ ಸಮಯವು ಸಮೀಪಿಸಿದೆ;
'ಮದುವೆ ಸೀರೆ'
ಇದೀಗ ಪ್ರಕಟವಾಗಿದೆ!
ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಾಹಸ ಶೀಲತೆ

ಇಲ್ಲಿ ಸುಮಾರು ೧೫೦ ಭಾಷೆಗಳು ಮಾತಾಡುತ್ತವೆ!

ಮಾರ್ಟಿನ್ ಟಾಯ್ಟೆಲನ ಟಾಯ್ಪ್ ರಾಯ್ಟರ ಅಂಗಡಿಯ ರೋಚಕ ವೃತ್ತಾಂತ.

ನ್ಯೂಯಾರ್ಕ ನಗರದ "ಫುಲ್ಟನ್ ಸ್ಟ್ರೀಟ್"ನಲ್ಲಿ ಒಂದು ಸಾಧಾರಣ ತರದ ಭವನದ ಮುಂದೆ ಹಲವಾರು ವರ್ಷ ಹಳೆಯದಾದ, ಧೂಳು ಮುಚ್ಚಿದ ಒಂದು ನಾಮಫಲಕವಿದೆ. ಈ ಫಲಕವು ನೀರು ಕುಡಿದು ದೂಳನ್ನು ತಿಂದುದರಿಂದ ಅಕ್ಷರಗಳು ಅಸ್ಪಷ್ಟವಿವೆಯಲ್ಲದೇ ಅವೇನೆಂದು ಅವಿರತ ಪ್ರಯತ್ನಪಟ್ಟರೆ ಮಾತ್ರ ಓದುವಂತಿವೆ. ಆ ಅಕ್ಷರಗಳು ಈ ರೀತಿಯಿವೆ: "ಮಾರ್ಟಿನ್ ಟಾಯ್ಟೆಲ್: ಇಲ್ಲಿ ಎಲ್ಲ ಪ್ರಕಾರದ ಹಳೆಯ ಟ್ಯಾಪ್ ರಾಯ್ಟರುಗಳನ್ನು ರಿಪೇರಿ ಮಾಡಲಾಗುತ್ತೆ ಮತ್ತು ಹೊಸ ಟ್ಯಾಪ್‌ರಾಯ್ಟರುಗಳನ್ನೂ ತಯಾರಿಸಲಾಗುತ್ತೆ."

ಈ ಅಂಗಡಿಯೊಳಹೊಕ್ಕೊಡನೆ ಆಗಂತುಕನಿಗೆ ಆಧುನೀಕತೆಯ ಗಂಧಗಾಳಿಯೂ ಸೋಕುವುದಿಲ್ಲ. ಒಂಮ ಸಣ್ಣದಾದ "ಬ್ಲಾಕ್"ನಲ್ಲಿ ಟಾಯ್ಟೆಲ್ಲರ ಕಾರಖಾನೆಯಿದೆ. ಇಲ್ಲಿ ಹನ್ನೊಂದು ಕುಶಲ ಕರ್ಮಚಾರಿಗಳು ದೇಶವಿದೇಶಗಳಿಂದ ಬಂದ ಬೇಡಿಕೆಗಳನ್ನು ಪೂರ್ಣೀಕರಿಸುವುದಕ್ಕೆ ಹಗಲು ಇರುಳು ನೂತನ ಟ್ಯಾಪ್‌ರಾಯ್ಟರುಗಳನ್ನು ತಯಾರಿಸುವುದರಲ್ಲಿಯೇ ನಿಮಗ್ನರಾಗಿದ್ದಾರೆ. ಇವರು ಕೇವಲ ಯಾಂತ್ರಿಕ ತಜ್ಞರು ಮಾತ್ರವಲ್ಲದೇ ಭಾಷಾ ತಜ್ಞರೂ ಹೌದು. ಪ್ರಪಂಚದ ಜ್ಞಾತ—ಅಲ್ಪ ಜ್ಞಾತ, ಪ್ರಾಚೀನ—ಅರ್ವಾಚೀನ, ಮೃತ—ಜೀವಂತ ಭಾಷೆಗಳ ವರ್ಣಮಾಲೆಗಳೂ ಸಂಖ್ಯೆಗಳೂ ಇವರಿಗೆ ತಿಳಿದಿವೆ.

ಸುಸಂಸ್ಕೃತ ಜಗತ್ತು ಪರಿಚಯಮಾಡಿಕೊಳ್ಳದಂತ ಹಲವಾರು ಭಾಷೆಗಳ ಟ್ಯಾಪ್‌ರೈಟರ್ ಮಾರ್ಟಿನ್ ಟಾಯ್ಟೆಲ್ಲನ ಅಂಗಡಿಯಲ್ಲಿ ತಯಾರಾಗುತ್ತವೆ. ಸೂಡಾನಿನ ಮರುಭೂಮಿಯಲ್ಲಿ ಆಡುವ "ಡಿಂಕ್ರಾ" ಉತ್ತರ ಅಮೇರಿಕದ ಮೂಲವಾಸಿಗಳ ಭಾಷೆಯಾದ "ಕ್ರೀ"; ಜೆರೂಸಲೇಮಿನಲ್ಲಿ ಇಂದಿಗೆ ಎರಡು ಸಾವಿರ ವರ್ಷಗಳ ಪೂರ್ವದಲ್ಲಿ ಪ್ರಚಲಿತವಿದ್ದ "ಪ್ರಾಚೀನ ಹಿಬ್ರೂ" ಮೊದಲಾದ ಭಾಷೆಗಳ ಟ್ಯಾಪರಾಯ್ಟರುಗಳೂ ಕೇವಲ ೪೮ ತಾಸು ಪೂರ್ವ ಸೂಚನೆಯಿತ್ತರೆ, ಅವಧಿಯೊಳಗೆ ಸಿದ್ಧವಾಗಿ ನಮಗೆ ದೊರೆಯುವವು.

ಟ್ಯಾಪ ರಾಯ್ಟರ ಸಂಬಂಧದಲ್ಲಿನ ಕಠಿಣ ಸಮಸ್ಯೆಗಳನ್ನು ಚಿಟಿಕೆ ಮುರಿವಷ್ಟು ಹೊತ್ತಿನಲ್ಲಿ ದೂರೀಕರಿಸುವುದು ಮಾರ್ಟಿನನ ವಿಶೇಷತೆ. ಇದರಿಂದಲೇ "ಟ್ಯಾಪ ರಾಯ್ಟರವಾಲಾ" ಎಂಬ ಉಪನಾಮಧೇಯದಿಂದಲೇ ಈತ ಅಮೇರಿಕೆ ತುಂಬ ಪ್ರಸಿದ್ಧನಾಗಿದ್ದಾನೆ. ದೇಶ-ವಿದೇಶಗಳಿಂದ ವಿವಿಧ ಬಗೆಯ ಸಾವಿರಾರು ಪತ್ರಗಳು ಮಾರ್ಟಿನನಿಗೆ ಸಿಗುತ್ತವೆ. ಕೆಲವರು ಲವರಿನಲ್ಲಿ ಮಾರ್ಟಿನ್, ಟ್ಯಾಪ್ ರಾಯ್ಟರ್ ನಿವಾರ್ತೃ ಅಮೇರಿಕ ಎಂದಿಷ್ಟೇ ಬರೆದು ಅಂಚೆಗೆ ಸುರಿಯುತ್ತಾರೆ. ಆದರೂ ಆ ಪತ್ರಗಳು ನಿರ್ದಿಷ್ಟ ಸ್ಥಾನವನ್ನು ತಡವಿಲ್ಲದೇನೇ ಸೇರುತ್ತವೆ.

ನೂರಕ್ಕೂ ಮಿಕ್ಕಿದ ಭಾಷೆಗಳನ್ನಾಡುವ ಸಾವಿರಾರು ಗ್ರಾಹಕರೊಡನೆ ವ್ಯಾಪಾರ ಸಂಬಂಧವಿಟ್ಟುಕೊಳ್ಳುವುದೆಂದರೆ, ನಕ್ಕು ಬಿಡುವ ಕೆಲಸವಲ್ಲ. ಅಧಿಕಾಂಶ ಜನರು ಕೇವಲ ತಮ್ಮ ಭಾಷೆಯನ್ನು ಮಾತ್ರ ಆಡಬಲ್ಲರಾದರೂ ತನ್ನ ಬುದ್ಧಿವಂತಿಕೆಯಿಂದ ಮಾರ್ಟಿನ್ ಈ ಪ್ರಯಾಸವನ್ನು ದೂರಮಾಡಿದ್ದಾನೆ. ಒಂದು ಕೋಣೆಯ ಗೋಡೆಯಲ್ಲಿ ಪ್ರಪಂಚದ ಸುಮಾರು ೧೫೦ ಭಾಷೆಗಳ ವರ್ಣಮಾಲೆಯ ಸಚಿತ್ರ ನಕಾಶೆಯೊಂದನ್ನು ತೂಗಹಾಕಿದ್ದಾನೆ. ಇದರಲ್ಲಿ ಗುರುತುಮಾಡಲ್ಪಟ್ಟ ಟೈಪುಗಳು ಮಾರ್ಟಿನನಲ್ಲಿ ಸದಾ ಸಿದ್ಧವಿವೆ. ಯಾರಾದರೂ ಗ್ರಾಹಕರು ತಮ್ಮ ಟಾಯ್ಪರಾಯ್ಟರದ ಕೀಯನ್ನು ಬದಲಿಸಬೇಕೆಂದು ಬಯಸಿದರೆ, ಕಾರಖಾನೆಯ ಹತ್ತು ಲಕ್ಷ ಕೀ ಸಂಗ್ರಹದಲ್ಲಿಲ್ಲವಾದರೆ, ಆಗ ಮಾರ್ಟಿನನ ಕುಶಲ ಕೆಲಸಗಾರರ ಆ ವಿಶೇಷ ಸಂಕೇತವನ್ನು ಹೋಲಬಲ್ಲ ಕೀಯನ್ನು ಅಲ್ಪ ಸ್ವಲ್ಪ ಸರಿಮಾಡಿ ರಿಕ್ತ ಸ್ಥಾನವನ್ನು ಭರ್ತಿಮಾಡುವರು.

ಹೆಚ್ಚಿನ ದೇಶಗಳ ರಾಷ್ಟ್ರಸಂಘದ ಪ್ರತಿನಿಧಿಯು ಅವಕಾಶಮಾಡಿಕೊಂಡು, ತನ್ನ ದೇಶಭಾಷೆಗಳ ಟಾಯ್ಪರಾಯ್ಟರ ತಯಾರಿಯ ಬಗ್ಗೆ ಇಲ್ಲಿಗೆ ಆಗಮಿಸುತ್ತಾನೆ. ಭಾರತೀಯ ಪ್ರತಿನಿಧಿಮಂಡಳವು ಕೆಲವು ವರ್ಷಗಳಿಗೆ ಮೊದಲು "ಗುರುಮುಖೀ" ಭಾಷೆಯ ಸರ್ವಪ್ರಥಮ ಟ್ಯಾಪರಾಯ್ಟರ ಮತ್ತು ಬಂಗಾಳಿ ಭಾಷೆಯ ಟಾಯ್ಪರಾಯ್ಟರದ ಉನ್ನತ ಸಂಸ್ಕರಣಗಳನ್ನು ಟಾಯ್ಟೆಲ್ಲನ ವಿಶ್ವವಿಖ್ಯಾತ ಮಳಿಗೆಯಲ್ಲಿಯೇ ಮಾಡಿಸಿತ್ತು.

೧೯೪೮ರಲ್ಲಿ ಐಗುಪ್ತ ಪ್ರತಿನಿಧಿಗಳು ತಮ್ಮ ಭಾಷೆಗೊಂದು ಟೈಪ್‌ರಾಯ್ಟರಿನ ಆವಶ್ಯಕತೆಯನ್ನು ಕಂಡುಕೊಂಡಾಗ, ಟಾಯ್ಟೆಲನು ಕಠಿನ ಸಮಸ್ಯೆಯೊಂದನ್ನೆದುರಿಸಬೇಕಾಯಿತು. ಐಗುಪ್ತದ ಲಿಪಿಯಲ್ಲಿಯೂ ಎರಡು ಬಗೆಗಳಿವೆ. ಒಂದು ಆಂಗ್ಲ ಭಾಷೆಯಿಂದ ಮತ್ತೊಂದು ಫ್ರೆಂಚ ಭಾಷೆಯಿಂದ ಪ್ರಭಾವಿತವಾಗಿರುವುದು. ಇವೆರಡೂ ಪರಸ್ಪರ ಮಿಶ್ರವಾಗಿ ಸಿಲ್ಪಟ್ಟಿವೆ, ಅಂತೂ ಕೊನೆಗೆ ಎರಡೂ ಲಿಪಿಯ ಟಾಯ್ಪರಾಯ್ಟರಗಳನ್ನು ತಯಾರಿಸಿ ತಮಗೆ ಬೇಕಾದುದನ್ನು ಉಪಯೋಗಿಸುವ ನಿರ್ಣಯವಮಾಡುವ ಹೊರೆಯನ್ನು ಗ್ರಾಹಕರಿಗೇನೇ ಬಿಟ್ಟುಕೊಡಲಾಯಿತು.

ನಲುವತ್ತೈದು ವರ್ಷ—ತುಸು ಹೆಚ್ಚು ಕಡಿಮೆ ಪ್ರಾಯದಲ್ಲಿ ಕಾಲಿರಿಸಿದ ಟಾಯ್ಟೆಲನ ಜೀವನವು ಅನೇಕ ಕುತೂಹಲಕಾರಕ ಘಟನೆಗಳಿಂದ ತುಂಬಿದೆ. ಆತನ ಹದಿಮೂರನೆಯ ವರ್ಷದಲ್ಲಿಯೇ ಅವನಿಗೊಂದು ಇಂಗ್ಲಿಷ್ ಟಾಯ್ಪರೈಟರನು ಸಮೀಪದಲ್ಲಿ ನೋಡುವ ಸಂದರ್ಭ ಲಭಿಸಿತ್ತು. ತನ್ನ ಅಧ್ಯಾಪಿಕೆಯರ ಅನುಪಸ್ಥಿತಿಯಲ್ಲಿ ಕಿಸೆಯಲ್ಲಿಟ್ಟುಕೊಂಡಿದ್ದ ಚೂರಿಯೊಂದರ ಸಹಾಯದಿಂದ ಅವನು ವರ್ಗದ ಕೋಣೆಯಲ್ಲಿಟ್ಟ ಟಾಯ್ಪರಾಯ್ಟರದ ಮೇಲೆ "ಪ್ರಯೋಗ" ಪ್ರಾರಂಭಿಸಿದನು. ಅಧ್ಯಾಪಿಕೆಯರು ಹಿಂದಿರುಗಿದಾಗ, ಟಾಯ್ಪರಯ್ಟರದ ಸ್ಥಾನದಲ್ಲಿ ನೂರಾರು ಸಣ್ಣ ಸಣ್ಣ ಸ್ಕ್ರೂ, ನಟ್, ಮತ್ತು ಬೋಲ್ಟ್‌ಗಳ ರಾಶಿ ಬಿದ್ದಿರುವುದನ್ನು ಕಂಡು ಕಕ್ಕಾಬಿಕ್ಕಿಯಾದರು. ಕೂಡಲೇ ಒಬ್ಬ ಕರ್ಮಚರರನ್ನು ಕರೆಯಲಾಯಿತು. ಅವನು ಅರ್ಧತಾಸಿಗೂ ಕಡಿಮೆ ಹೊತ್ತಿನಲ್ಲಿ ಆ ಲೋಹದ ಚೂರುಗಳನ್ನು ಒಂದು ಸೇರಿಸಿ ಸುಂದರ ಟಾಯ್ಪರಯ್ಟರಿನ ರೂಪಕ್ಕೆ ಪರಿವರ್ತಿಸಿದನು.

ಆದರೆ, ಟಾಯ್ಟಲನ ಉತ್ಸುಕತೆಯು ಕೇವಲ ಇದೊಂದೇ ಪ್ರಯೋಗದಿಂದ ಶಾಂತವಾಗಲಿಲ್ಲ. ಆದರೆ, ಮೂರನೇ ಬಾರಿ ಅದೇ ಕರ್ಮಚಾರಿಯು ಬಂದು ಸರಿ ಮಾಡಬೇಕಾಯಿತು. ಇದರಿಂದಾಗಿ ಟಾಯ್ಟಲ ಮತ್ತು ಅವನೊಡನೆ ನಾಲ್ಕು ಬಿಸಿಯಾದ ಮಾತುಗಳು ನಡೆದುವು. ಇದರಿಂದಾಗಿ ಟಾಯ್ಟೆಲನ ಅಂತಃಸತ್ವವು ಕೆದಕಿದಂತಾಗಿ, "ನಾನೇ ಸ್ವಯಮನಾಗಿ ಈ ಕೆಲಸವನ್ನು ಕಲಿತುಕೊಳ್ಳುವೆನು; ಮಾತ್ರವಲ್ಲ, ಕೆಟ್ಟು ಹೋದ ಟಾಯ್ಪ ರಾಯ್ಟರಗಳನ್ನು ರಿಪೇರಿ ಮಾಡಿಯೇ ನನ್ನ ಜೀವನವನ್ನು ಸಾಗಿಸುವೆನು"ಎಂದು ಪ್ರತಿಜ್ಞೆ ಮಾಡಿದನು.

ಕೇವಲ ಎರಡೇ ವರ್ಷಗಳಲ್ಲಿ ಅವನ ಪ್ರತಿಜ್ಞೆಯು ಪೂರೈಸಿತು. ಹದಿನೈದನೆಯ ವರ್ಷದಲ್ಲಿಯೇ ಅವನು ಶಾಲೆಗೆ ರಜೆ ಬರೆದು ಮನೆ ಮನೆಯ ಟಾಯ್ಪ ರೈಟರಗಳನ್ನು ಸರಿ ಮಾಡಲು ತೊಡಗಿದನು; ಇಪ್ಪತ್ತನೇ ವರುಷ ಪೂರೈಸುವಷ್ಟರಲ್ಲಿ... ವರಿಶ ಪೂದಗಿದಾಗ, ಹಳೆಯ ವಸ್ತುಗಳಿಂದ ಹೊಸ ಯಂತ್ರಗಳನ್ನೂ ರಚಿಸುವ ಪ್ರಯತ್ನ ಮಾಡಿದನು. ಹದಿನಾರನೆಯ ವರ್ಷದಲ್ಲಿಯೇ ಅವನು ತನ್ನದೇ ಆದ ಅಂಗಡಿಯೊಂದನ್ನು ತೆರೆದನು. ನಾಲ್ಕು ವರ್ಷಾನಂತರ ನ್ಯೂಯಾರ್ಕಿನ ಪ್ರಮುಖ ವ್ಯವಸಾಯ ಕ್ಷೇತ್ರ ಬ್ರಾಡ್‌ವೇಯಲ್ಲಿ ತನ್ನ ಕಾರಭಾರವನ್ನು ಮೊದಲು ಮಾಡಿದನು. ಕೆಲವೇ ವರ್ಷಗಳಲ್ಲಿ ಈತನ ವ್ಯವಸಾಯವು ಬೆಳೆದು ಬಂದು ಶೀಘ್ರವೇ ಫುಲ್ಟನ್ ಸ್ಟ್ರೀಟ್‌ನಲ್ಲಿ ತನ್ನ ಸ್ವಂತ ಗೃಹವನ್ನು ಕೊಂಡುಕೊಳ್ಳುವಂತಾಗಿ, ಅಲ್ಲೇ "ಮಾರ್ಟಿನ್ ಟಾಯ್ಟಲ್" ಎಂಬ ಹೆಸರಿನ ಜಗದ್ವಿಖ್ಯಾತ ಕಾರಖಾನೆಯನ್ನೂ ಆತ ಪ್ರಾರಂಭಗೈದನು.

ಟಾಯ್ಟೆಲ್ಲನು ಜನ್ಮತಃ ಪ್ರಯೋಗವಾದಿ. ಆತನು ಟಾಯ್ಪ ಮೆಶಿನುಗಳ 'ಕೀ'ಗಳ ರಾಶಿಯ ನಡುವೆ ಸದಾ ನಿಮಗ್ನನಾಗಿರುತ್ತಾನೆ. ಶ್ರೀಮಂತ ಬಡವರೆಲ್ಲರೂ ಆತನಲ್ಲಿಗೆ ತಮಗೆ ಬೇಕಾದ ರೀತಿಯ ಟ್ಯಾಪರಾಯ್ಟರಗಳನ್ನು ತಯಾರಿಸುವಂತೆ ಹೇಳುತ್ತಾರೆ. ಒಬ್ಬನು ಮೆಶಿನಿನ ೪೪ ಕೀಗಳೂ ಪ್ರಶ್ನಾರ್ಥಕ ಚಿಹ್ನೆಯನ್ನು ಹೊಡೆಯುವಂತೆ ಒಂದು ಟಾಯ್ಪರಯ್ಟರನ್ನು ನಿರ್ಮಿಸಿದ್ದನು. 'ಬ್ರಿಜ್'ನ ಒರ್ವ ವಿಶ್ವವಿಖ್ಯಾತ ಆಟಗಾರನಿಗಾಗಿ ಟಾಯ್ಟಲನು ಆಂಗ್ಲ ವರ್ಣಮಾಲೆ ಮಾತ್ರವಲ್ಲದೇ ಎಲೆ, ಹಕ್ಕಿ, ಇತ್ಯಾದಿಗಳನ್ನೂ ಅಚ್ಚುಮಾಡುವ ವ್ಯವಸ್ಥೆಯಿರುವ ಯಂತ್ರವೊಂದನ್ನು ತಯಾರಿಸಿದ್ದನು.

ಹಳೆಯ ಜೀರ್ಣವಾದ ಟಾಯ್ಪರಾಯ್ಟರಗಳನ್ನು ಕಾರಖಾನೆಗಳಿಗೆ ಒಯ್ದು ಹೊಚ್ಚಹೊಸತಾಗಿ ಮಾಡುವ ಕಲೆ ಟಾಯ್ಟೆಲನಿಗೆ ಕರತಲಾಮಲಕವಾಗಿತ್ತು. ಬೆಂಕಿಯಲ್ಲಿ ಉರಿದು ನಿರುಪಯೋಗಿಯಾದ್ದ ಸುಮಾರು ೨೧೦ ಟಾಯ್ಪರಾಯ್ಟರಗಳನ್ನು ಈತ ಪುನಃ ಉಪಯೋಗಿಯಾಗಿ ಮಾಡಿಕೊಟ್ಟಿದ್ದಾನೆ

ತನ್ನ ಉದ್ಯೋಗದಿಂದ ಟಾಯ್ಟೆಲನಿಗೆ ಪ್ರತಿವರ್ಷವೂ ಲಕ್ಷಾಂತರ ಡಾಲರ್ ಆಯಬರುತ್ತವೆ. ಇದರಲ್ಲಿ ಹೆಚ್ಚಿನ ಆಯ ವಿದೇಶೀ ಗ್ರಾಹಕರಿಂದ ಆಗುತ್ತದೆ. ಈತನ ಕೆಲಸಕ್ಕೆ ಮೆಚ್ಚಿ ಒಂದೊಂದು ಟಾಯ್ಪರೈಟರಿಗೆ ಸುಮಾರು ೧೦ ಸಾವಿರ ಡಾಲರ್‌ಗಳಷ್ಟು ನೀಡುವವರೂ ಇದ್ದಾರೆ! ೧೯೫೭ರಲ್ಲಿ ಒರ್ವ ಶ್ರೀಮಂತನಿಗೆ ಬರ್ಮೀ ಭಾಷೆಯ ಟಾಯ್ಪರಾಯ್ಟರನ್ನು ಕೇವಲ ಐದು ದಿನಗಳಲ್ಲಿ ಮಾಡಿಕೊಟ್ಟುದಕ್ಕೆ ಆರು ಆಂಗ್ಲ ಟೈಪ್‌ರಾಯ್ಟರಗಳ ಬೆಲೆಯು ಬಂದಿತ್ತು.

ಪ್ರತಿಯೊಂದು ಭಾಷೆಯಲ್ಲೂ ತನ್ನದೇ ಆದ ಅಕ್ಷರ ಮತ್ತು ಸಂಖ್ಯೆಗಳಿವೆ.

(೯ನೇ ಪುಟ ನೋಡಿರಿ)

ದಿ| ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2-00.

ಭಾರತದ ಕರ್ಣ

"ಭಾರತದ ಕರ್ಣನು ದಿ| ಕಿಲ್ಲೆಯವರಿಗೆ ಒಲಿದಿದ್ದ...... ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ| ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ

ಪರ್ವವಿಶೇಷ

ಹರಿದ್ವಾರದ ವೈಶಾಖೀ ಮಹಾ ಮಹೋತ್ಸವ

ಈ ಸಮಯ ಹರಿದ್ವಾರದಲ್ಲಿ ಅಖಿಲ ಭಾರತೀಯರು ಸಂದಣಿಸುತ್ತಾರೆ.

ಹರಿದ್ವಾರವು ಉತ್ತರ ಭಾರತದ ಒಂದು ಸುಪ್ರಸಿದ್ಧ ಯಾತ್ರಾಸ್ಥಳವಾಗಿದೆ. ಉತ್ತರದ ಹಿಮಾಲಯ ಪರ್ವತಗಳ ತಪ್ಪಲಲ್ಲಿರುವ ಯಮುನೋತ್ರಿ, ಗಂಗೋತ್ರಿ, ಕೇದಾರನಾಥ ಹಾಗೂ ಬದರೀನಾಥಗಳೆಂಬ ನಾಲ್ಕು ಮಹಾಸ್ಥಳಗಳ ಯಾತ್ರೆ ಯಾವರೂ ಈ ಹರಿದ್ವಾರದಿಂದಲೇ ಪ್ರಾರಂಭವಾಗುವುದರಿಂದ ಇದರ ಪ್ರಾಮುಖ್ಯವು ಮತ್ತೂ ಹೆಚ್ಚಿದೆ. ಬೇರೆ ದಾರಿಗಳಿದ್ದರೂ ಹರಿದ್ವಾರ ಮಾರ್ಗವಾಗಿಯೇ ಯಾತ್ರೆ ಬೆಳೆಸುವುದು ಉತ್ತರಾ ಪಥದ ಯಾತ್ರೆಗೆ ಸುಗಮವಾಗಿದೆ.

ಹರಿದ್ವಾರ ಗಂಗಾ ನದೀ ತಟದಲ್ಲಿದೆ. ಹರಿದ್ವಾರದ ಅನೇಕ ಸ್ಥಳಗಳು ಗಂಗಾ ನದಿಯಲ್ಲಿ ಸ್ನಾನ ಮಾಡುತ್ತಿರುತ್ತವೆ. ಜನರೂ ಸ್ನಾನಮಾಡಬಹುದು. ಸಪ್ತಸರೋವರಗಳಿಂದ ಹಿಡಿದು ಕನಖಲದ ವರೆಗೆ ಗಂಗಾ ನದಿಯ ತಟದಲ್ಲಿ ಇಳಿದು ಸ್ನಾನ ಮಾಡುವುದಕ್ಕೆ ಅನುಕೂಲವಾದ ಅನೇಕಾನೇಕ ಸ್ನಾನ ಘಟ್ಟಗಳ ವ್ಯವಸ್ಥೆಯನ್ನೂ ಮಾಡಿದ್ದಾರೆ. ಆದರೆ, ಇವೆಲ್ಲವುಗಳಿಗಿಂತಲೂ ಹರಿದ್ವಾರದ ಹರಪಾಳಿಯಲ್ಲಿರುವ ಬ್ರಹ್ಮಕುಂಡದಲ್ಲಿ ಸ್ನಾನ ಮಾಡುವುದೇ ಎಲ್ಲಕ್ಕಿಂತ ಪ್ರಾಧಾನ್ಯವನ್ನು ಪಡೆದಿದೆ. ಇಲ್ಲಿ ವರ್ಷದಲ್ಲಿ ಹಲವಾರು ದಿನ ಪರ್ವಗಳು ಜರಗುತ್ತಿರುತ್ತವೆ. ವರ್ಷಂಪ್ರತಿ ಲಕ್ಷಾಂತರ ಯಾತ್ರಿಕರು ಇಲ್ಲಿ ಸ್ನಾನಮಾಡುವುದಕ್ಕೆ ಮತ್ತು ತೀರ್ಥಯಾತ್ರೆಯ ಸಲುವಾಗಿ ಬರುತ್ತಾರೆ.

ಶಿಶಿರರ್ತು ಅಂತ್ಯಗೊಂಡನಂತರ ಮತ್ತು ಗ್ರೀಷ್ಮರ್ತು ಆರಂಭವಾಗುವುದಕ್ಕೆ ಮೊದಲು ಇಲ್ಲಿ ಪ್ರತಿವರ್ಷವೂ ವೈಶಾಖದ ಮಹಾ ಮೇಳವು ನೆರವೇರುವುದು. ಈ ವೈಶಾಖದ ವೇಳೆಯಲ್ಲಿಯೇ ಅರ್ಧಕುಂಭಿ ಮತ್ತು ಕುಂಭಗಳೆಂಬ ಮಹೋತ್ಸವಗಳೂ ಜರಗುತ್ತವೆ. ಈ ಅವಸರದಲ್ಲಿ ಸುಮಾರು ೧೦-೧೨ ಲಕ್ಷ ಜನಸಂದಣಿಯು ಇಲ್ಲಿ ಸೇರುವುದು.

ಈ ವರ್ಷ ಚೈತ್ರ ಶುಕ್ಲ ಪಂಚಮಿಯ ದಿನ ಇಲ್ಲಿ ವೈಶಾಖೀ ಸ್ನಾನವು ನೆರವೇರಿತು. ಎಂದರೆ, ಆಂಗ್ಲ ಪಂಚಾಂಗಾನುಸಾರ ಎಪ್ರಿಲ್ ೧೩ನೆಯ ದಿನಕ್ಕೆ ಅದು ಮುಗಿಯಿತು. ಎಪ್ರಿಲ್ ೯ನೆಯ ದಿನದಿಂದ ವಿಕ್ರಮ ಶಕೆಯು ಬದಲಾಗುತ್ತದೆ; ಅದರಂತೆ ಹೊಸವರ್ಷ ಪ್ರಾರಂಭವಾಗುತ್ತದೆ. ಋತುವೂ ಬೇರೆಯಾಗುತ್ತದೆ. ಜನಜೀವನದಲ್ಲಿ ಒಂದು ಹೊಸತರದ ಉತ್ಸಾಹ ಹರಿಯತೊಡಗುತ್ತದೆ. ಶಿವರಾತ್ರಿಗೆ ಎಂಟು ಹತ್ತು ದಿನಗಳಿಗೆ ಮೊದಲೇ ಹರಿದ್ವಾರದಲ್ಲಿ ಜನರಗುಂಪು ಹೆಚ್ಚುತ್ತಾ ಬರುವುದು. ಶಿವನ ಮಂದಿರಕ್ಕೆ ಗಂಗಾಜಲವೇರಿಸುವ ಬಯಕೆಯುಳ್ಳ ಅನೇಕ ಯಾತ್ರಿಕರು ಆಗಬಂದು ಸೇರುತ್ತಾರೆ. ಶಿವರಾತ್ರಿಯ ದಿನವೇ ಚಳಿಯು ಶಿವಶಿವ ಎಂದು ಮಾಯವಾಗಿ ಗ್ರೀಷ್ಮವು ಮೆಲ್ಲ ಮೆಲ್ಲನೆ ಕಾಣಿಸಿಕೊಳ್ಳುತ್ತದೆ—ವಸಂತನ ಮೂಲಕ. ಜಲದ ಶೀತಲತೆಯು ದೂರವಾಗ ತೊಡಗುತ್ತದೆ; ರಾತ್ರಿ ಉದುರುವ ಮಂಜು, ಇಬ್ಬನಿಗಳ ಭರವೂ ಕಡಿಮೆಯಾಗುತ್ತದೆ.

ವೈಶಾಖಿ ಉತ್ಸವಕ್ಕೆ ಪಂಜಾಬದಿಂದ ಅತ್ಯಧಿಕ ಜನರು ಬಂದು ನೆರೆಯುವರೆಂಬುದನ್ನಿಲ್ಲಿ ಉಲ್ಲೇಖಿಸಬೇಕು. ನೂರಾರು ವರ್ಷಗಳಿಂದಲೂ ಈ ಅವಸರದಲ್ಲಿ ಪಂಜಾಬಿಗಳದೇ ಮೇಲುಗೈ. ಈ ಸಂದರ್ಭದಲ್ಲಿ ಹರಿದ್ವಾರದಲ್ಲಿ ಗಂಗಾಸ್ನಾನ ಮಾಡುವುದಕ್ಕೆ ಅವರು ಮಹತ್ವವೀಯುತ್ತಾರೆ. ಹಾಗೆಯೇ ಇತರೆಡೆಗಳಿಂದಲೂ ತೀರ್ಥಾರ್ಥಿಗಳು ಆಗಮಿಸುತ್ತಾರೆ. ಅರ್ಧಕುಂಭಿ ಮತ್ತು ಕುಂಭದ ಸಂದರ್ಭಗಳಲ್ಲಿ ಅಖಿಲ ಭಾರತದವರು ಭಾಗವಹಿಸುತ್ತಾರೆ. ಆದರೂ ಇಲ್ಲಿಯೂ ಪಂಜಾಬಿ ಯಾತ್ರಿಕರ ಪ್ರಾಬಲ್ಯ ಅಧಿಕವಾಗಿರುತ್ತದೆ.

ಹರಿದ್ವಾರದಲ್ಲಿ ನೋಡತಕ್ಕ ಸ್ಥಳಗಳು ಅನೇಕವಿವೆ. ಮಾಯಾಪುರಿ ಕ್ಷೇತ್ರಕ್ಕೇನೇ ಹರಿದ್ವಾರ ಎಂಬ ಹೆಸರು ಬಂದಿದೆ. ಮಾಯಾಕ್ಷೇತ್ರದಲ್ಲಿ ಕನಖಲ, ಹರಿದ್ವಾರ, ಭೀಮಗೋಡಾ ಮತ್ತು ಗಂಗೆಯ ದಡದಲ್ಲಿ ಚಂಡಿಯ ಮಂದಿರದ ವರೆಗಿನ ಪ್ರದೇಶಗಳು ಬರುತ್ತವೆ. ಇಲ್ಲಿ ಅನೇಕ ದೇವಾಲಯಗಳಿವೆ; ಹಲವಾರು ಸ್ನಾನಘಟ್ಟಗಳಿವೆ. ಪ್ರತಿ ದೇವಸ್ಥಾನಗಳಿಗೂ ತಮ್ಮವೇ ಆದ ಬೇರೆ ಬೇರೆ ಮಹತ್ತಿಕೆಗಳಿವೆ. ಕನಖಲದ ದಕ್ಷೇಶ್ವರ ಮಂದಿರವು ಸತೀ ಪಾರ್ವತಿಯ ಪೌರಾಣಿಕ ಕಥೆಗೆ ಸಂಬಂಧಿಸಿದೆ. ಇಲ್ಲಿ ಶ್ರಾವಣ ಮಾಸದಲ್ಲಿ ತುಂಬ ಗುಲ್ಲು ಇರುತ್ತದೆ. ದಕ್ಷೇಶ್ವರನನ್ನು ಸ್ನಾನ ಮಾಡಿಸಲು ಸಾವಿರಾರು ನರನಾರಿಯರಿಲ್ಲಿ ಪ್ರತಿದಿನ ಕಲೆಯುತ್ತಾರೆ.

ಚಂಡಿಯ ಗುಡಿಗೆ ಹೋಗುವಾಗ ದಾರಿಯಲ್ಲಿ ಇತರ ಅನೇಕ ಮಂದಿರಗಳೂ ಕಾಣುತ್ತವೆ. ಅವುಗಳಲ್ಲಿ ಅಂಜನಾ ದೇವಿಯ ಗುಡಿ, ಬಿಲ್ವಕೇಶ್ವರ ಮಹಾದೇವ ಮಂದಿರ ಮತ್ತು ಕಾಳಿದೇವಿಯ ಮಂದಿರಗಳು ವಿಶೇಷವಾಗಿ ಉಲ್ಲೇಖನೀಯವಿವೆ. ಮನಸಾದೇವಿಯ ದೇವಾಲಯವನ್ನು ಕಾಣಬೇಕಾದರೆ, ರೇಲಿನಲ್ಲಿ ಹೋಗಬೇಕು. ಚಂಡಿಯ ಗುಡಿಯ ದಾರಿಯು ತುಸು ಪ್ರಯಾಸಕರವಿದೆ.

ಹರಿದ್ವಾರದಲ್ಲಿ ಅನೇಕ ಸಂಸ್ಥೆಗಳೂ ಇದ್ದು ಅವುಗಳೂ ಸಂದರ್ಶನೀಯವಿವೆ. ಕಾಂಗ್ರಿಯ ಗುರುಕುಲ, ಜ್ವಾಲಾಪುರ ಮಹಾವಿದ್ಯಾಲಯ, ಋಷಿಕುಲ ಕಾಲೇಜ ಮತ್ತು ಆಯುರ್ವೇದ ವಿದ್ಯಾಲಯಗಳು ಶೈಕ್ಷಣಿಕ ದೃಷ್ಟಿಯಿಂದ ಪ್ರಧಾನವಾದುವುಗಳು. ಇದೇ ಮಾದರಿಯಲ್ಲಿ ಕೆಲವು ಆಧುನಿಕ ವಿದ್ಯಾಸಂಸ್ಥೆಗಳೂ ಇಲ್ಲಿವೆ.

ಹರಿದ್ವಾರದ ಗೀತಾ ಭವನವು ದರ್ಶನೀಯವಾಗಿದೆ. ಇಲ್ಲಿ ಪ್ರತಿದಿನವೂ ಸತ್ಸಂಗವು ನಡೆಯುತ್ತದೆ. ಕಥಾ ವಾರ್ತೆಯ ಉತ್ತಮ ವ್ಯವಸ್ಥೆ ಇಲ್ಲಿದೆ. ಇದರ ಸಮೀಪದಲ್ಲಿಯೇ ಮಹಾವೀರ ದಳದ ಮುಖ್ಯ ಕಾರ್ಯಾಲಯವಿದೆ. ಯಾತ್ರಿಕರಿಗೆ ಇಲ್ಲಿ ಉಳಕೊಳ್ಳುವ ವ್ಯವಸ್ಥೆಯೂ ಇದೆ. ಗಂಗೆಯ ದಡದಲ್ಲಿ ಶ್ರವಣನಾಥ ಮಂದಿರ ಮತ್ತು ಸ್ನಾನಘಟ್ಟಗಳೂ ತಮ್ಮ ವೈಶಿಷ್ಟ್ಯವನ್ನು ಉಳಿಸಿಕೊಂಡಿವೆ. ಬ್ರಹ್ಮಕುಂಡದ ಸಮೀಪ ಅನೇಕ ಸೇವಾಸಮಿತಿಗಳು ಯಾತ್ರಿಕರಿಗೆ ಸೌಲಭ್ಯಗಳನ್ನು ಕಲ್ಪಿಸುತ್ತವೆ. ತಪ್ಪಿಸಿಹೋದವರ ಪತ್ತೆ ಹಿಡಿಯುತ್ತವೆ. ಆಪತ್ತಿನಲ್ಲಿ ಸಿಲುಕಿದವರಿಗೆ ಸಹಾಯ ನೀಡುತ್ತವೆ.

ವೈಶಾಖ ಹಬ್ಬದ ಸಂದರ್ಭದಲ್ಲಿ ಬಲವಾದ ದ್ವೀಪದಲ್ಲಿ ಯೂ ವಿಜೃಂಭಣೆ ಇದೆ. ಇಲ್ಲಿಗೆ ಹೋಗುವ ಸಲುವಾಗಿ ಗಂಗಾನದಿಗೆ ಒಂದು ಸೇತುವೆಯನ್ನೂ ಹಾಕಿರುತ್ತಾರೆ. ಅರ್ಧಕುಂಭಿ ಮತ್ತು ಕುಂಭ ಮೇಳಗಳು ನಡೆಯುವ ಸ್ಥಳವಿದು. ಇಲ್ಲಿ ಈಗ ಉತ್ತಮವಾದ ಸ್ನಾನಘಟ್ಟಗಳನ್ನೂ ರಮಣೀಯ ಉದ್ಯಾನವೊಂದನ್ನೂ ರಚಿಸಿದ್ದಾರೆ.

ಮುಖ್ಯ ಹರಿದ್ವಾರ ಮತ್ತದರ ಸಮೀಪದ ಸ್ಥಾನಗಳ ಕಥೆಯಿದು. ಇಲ್ಲಿಂದ ನಾಲ್ಕಾರು ಮೈಲು ದೂರದಲ್ಲಿರುವ ಸಪ್ತಸರೋವರವು ಕೂಡ ಪ್ರೇಕ್ಷಣೀಯವಿದೆ. ಇಲ್ಲಿ ಕೆಲ ವರ್ಷಗಳಿಂದೀಚೆಗೆ ಸಪ್ತಋಷ್ಯಾಶ್ರಮ, ವಿಶಾಲ ಶಿವ ಮಂದಿರ ಮತ್ತು ಸಂಸ್ಕೃತ ವಿದ್ಯಾಲಯದ ಭವನಗಳು ರಚಿತವಾಗಿವೆ. ಇವೆಲ್ಲವುಗಳಿಗೆ ಗೋಸ್ವಾಮಿ ಗಣೇಶ್ವರ ದತ್ತರು ಶ್ರಮಪಟ್ಟಿದ್ದಾರೆ. ಇವರ ಪರಿಶ್ರಮ ಫಲದಿಂದಲೇ ಸ್ವಾಮಿ ರಾಮತೀರ್ಥ ಭವನದ ನಿರ್ಮಾಣವೂ ಆಗಿದೆ. ಗೋಸ್ವಾಮಿಯವರು ಇಲ್ಲಿ ಸಂಸ್ಕೃತದ ಮಹಾವಿದ್ಯಾಲಯವೊಂದನ್ನು ಸ್ಥಾಪಿಸುವ ಪ್ರಯತ್ನ ಮಾಡುತಿದ್ದಾರೆ

ಹರಿದ್ವಾರದಿಂದ ಮುಂದೆ ಋಷಿಕೇಶವಿದೆ. ಇಲ್ಲಿಯೂ ಕಾಣಬಹುದಾದ ಅನೇಕ ಸ್ಥಳಗಳಿವೆ. ಹರಿದ್ವಾರವನ್ನು ಸಂದರ್ಶಿಸಿದವನು ಋಷಿಕೇಶಕ್ಕೆ ಹೋಗದೆ ಹಿಂತಿರುಗಿ ಬರುವುದೆಂದರೆ ಮಹಾ ಮೂರ್ಖತನ.

ಅಮೇರಿಕೆಯ ಸ್ವತಂತ್ರ ಬೇಸಾಯಗಾರನಾದ ರೋಬರ್ಟ್‌ಕಿಂಗ್‌ನ ಹಿರಿಯ ಮಗ ಗ್ಲೆನ್‌ನು ಕೋಳಿಗಳನ್ನು ಉಣಿಸುತಿದ್ದಾನೆ, ಈ ೪೦೦ ಕೋಳಿಗಳು ವಾರವೊಂದಕ್ಕೆ ೧,೫೦೦ ಮೊಟ್ಟೆಗಳನ್ನಿಡುವುವು.

ಹೊಸ ವರ್ಷದ ಪ್ರೋತ್ಸಾಹ ಉಡುಗೊರೆಯಾಗಿ

"ಯಾತ್ರಾ ಬಹುಮಾನ"

ತಾ. 3-5-59ರಿಂದ 12ನೇ ತಾರೀಖು ವರೆಗೆ ಇರುವ, ಮಹಾಪುಣ್ಯ ಕ್ಷೇತ್ರಗಳ ತೀರ್ಥಯಾತ್ರಾ ಪ್ರವಾಸವಾದ, **ರಾಮೇಶ್ವರ, ಕನ್ಯಾಕುಮಾರಿ, ಮಧುರೆ, ಶ್ರೀರಂಗ, ತಿರುವಾಂಕೂರು, ಪಳನಿ, ಮೈಸೂರು**, ಇತ್ಯಾದಿ ಊಟಸೇರಿ, ಸೀಟು 1ಕ್ಕೆ 105/- ರೂ. ಮಕ್ಕಳಿಗೆ 10 ವರ್ಷದ ವರೆಗೆ ½ ಚಾರ್ಜು. ಈ ಯಾತ್ರೆಗೆ, ಅತಿ ಹೆಚ್ಚು ಸೀಟುಗಳನ್ನು ಬುಕ್ ಮಾಡಿದವರಿಗೆ, ನಮ್ಮ ಕಂಪೆನಿಯ ಹೆಸರುಳ್ಳ "**ಚಿನ್ನದ ಉಂಗುರ**" ಒಂದನ್ನು ಯಾತ್ರಾ ಪ್ರವಾಸ ಪ್ರೋತ್ಸಾಹ ಬಹುಮಾನವಾಗಿ ಕೊಡಲಾಗುತ್ತದೆ. ವಿವರಗಳಿಗೆ, ಫಾರಂಗಳಿಗೆ: 8 N. P. ಸ್ಟಾಂಪುಗಳೊಂದಿಗೆ ಬರೆಯಿರಿ:—

"ಭಾರತ್ ಟೂರಿಸ್ಟ್ ಬ್ಯೂರೋ ಸರ್ವಿಸ್," ರಾಷ್ಟ್ರೀಯ ವಿದ್ಯಾಲಯ ಹಿಂದೆ, ಬೆಂಗಳೂರು—2.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆ ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: **ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕ.**

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಕನ್ನಡ ಪುಸ್ತಕಗಳಿಗೆ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಯೊಂದು ಕೆಲಸದಲ್ಲಿಯೂ ದುಡುಕದೆ ದೂರಾಲೋಚನೆಯನ್ನು ತೋರಿಸಿ ಮಾಡುವವನು ಲೋಕೋಪಕಾರಿಯಾಗುವನು. ಈ ರೀತಿ ಆಚರಿಸುವುದು ಕಷ್ಟಮಯವೆಂದು ಕಂಡು ಬರುವುದಾದರೂ ಎಂದೆಂದಿಗೂ ನಿಷ್ಫಲವೆನಿಸಲಾರದು.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೧೬-೪-'೫೯	೩೧

ಅಸಹನೀಯ ಸಾಹಸ

ಪಾಕಿಸ್ತಾನದಲ್ಲಿ ಮಿಲಿಟರಿ ಆಡಳಿತೆಯು ಬಂದು ಹಲವು ಮಾಸಗಳು ಗತಿಸಿದುವು. ಸಾಮಾನ್ಯತಃ ಪ್ರಜಾಪ್ರಭುತ್ವ ಸರಕಾರವು ಜನತೆಯನ್ನು ಸಂತೃಪ್ತಿಗೊಳಿಸಲು ಅಸಮರ್ಥಗೊಂಡಾಗ ರಕ್ತಪಾತವಾಗಿಯಾಗಲಿ ಆಗದೆಯಾಗಲಿ ಸೈನಿಕಾಡಳಿತೆಯು ಕಾಣಿಸಿಕೊಳ್ಳುತ್ತದೆ. ಅಲ್ಲದೆ, ಪರಿಸ್ಥಿತಿಯನ್ನು ಹತೋಟಿಗೆ ತಂದುಕೊಂಡು, ಹೊಸ ಚುನಾವಣೆಗಳನ್ನು ನಡೆಸಿ ಪುನಃ ಪ್ರಜಾಪ್ರಭುತ್ವ ಸರಕಾರವನ್ನು ರಚಿಸುತ್ತದೆ. ಫ್ರಾಂಸದಲ್ಲಿ ಆದ ರೀತಿಯದು. ಆದರೆ, ಪಾಕಿಸ್ತಾನದಲ್ಲಿ ಸಂವಿಧಾನವನ್ನು ಸಹ ರದ್ದುಗೊಳಿಸಿರುವುದರಿಂದ ನೂತನ ಸಂವಿಧಾನವು ರೂಪುಗೊಂಡು, ಮುಂದಿನ ಕಾರ್ಯಕ್ರಮಗಳನ್ನು ನಡೆಯಬೇಕಷ್ಟೆ. ಪಾಕಿಸ್ತಾನದ ಪ್ರಜಾಪ್ರಭುತ್ವ ಸರಕಾರವು ಹತ್ತು ವರ್ಷಗಳಲ್ಲಿ ಮಾಡಲಾಗದ ಮಹಾಕಾರ್ಯಗಳಲ್ಲಿ ಕೆಲವನ್ನು ಈ ಮಿಲಿಟರಿ ಸರಕಾರ ಕೇವಲ ಕೆಲವೇ ಮಾಸಗಳಲ್ಲಿ ಕಾರ್ಯಗತಮಾಡಿ ತೋರಿಸಿದೆ. ಪಾಕಿಸ್ತಾನದಲ್ಲಿ ಈ ಬಗ್ಗೆ ಯಾವ ವಿರೋಧಾಭಿಪ್ರಾಯವೂ ಮೂಡಿ ಬರಲು ಎಡೆಯಿಲ್ಲ. ಅದುವರೆಗೆ ಮಹಾನಾಯಕರೆನಿಸಿಕೊಂಡವರೂ ಈಗ ಮೌನವಾಗಿಯೇ ಕೂತುಕೊಳ್ಳುವಂತಾಗಿದೆ. ಆದರೂ ಅಯೂಬಖಾನರ ಆಡಳಿತೆಯು ಹಿಂದಿನ ಆಡಳಿತೆಯ ಲೋಪದೋಷಗಳನ್ನು ದೂರಮಾಡಿ, ದೇಶವನ್ನು ವಂಚಕರ ಮತ್ತು ಮೋಸಗಾರರ ದವಡೆಯಿಂದ ತಪ್ಪಿಸಿ ಎಲ್ಲರೊಡನೆ ಸರ್ವ ಸಮಭಾವನೆಯಿಂದ ನಡೆದುಕೊಂಡು ದೇಶದಲ್ಲಿ ಶಾಂತಿ ಮತ್ತು ಭದ್ರತೆಗಳನ್ನು ಕಾಯ್ದುಕೊಂಡು ದೇಶವಾಸಿಗಳನ್ನು ಸುಖೀ ರಾಜ್ಯದತ್ತ ಕರೆದೊಯ್ಯುವ ಮಹೋದ್ದೇಶದಿಂದ ಬಂದಿದೆಯೆಂಬುದನ್ನು ನೆನಪಿಸಿಕೊಂಡು, ಭಾರತದ ಕಡೆಗೆ ಮಾತ್ರ ತನ್ನ ಹಿಂದಿನವರು ತೋರಿಸುತ್ತಿದ್ದ ವಕ್ರದೃಷ್ಟಿಯನ್ನೇ ಮತ್ತೂ ಮತ್ತೂ ಬೀರುತ್ತಿರುವುದನ್ನು ನೋಡಿದರೆ, ಮಹದಾಶ್ಚರ್ಯವೆನಿಸುತ್ತದೆ.

ಭಾರತವು ಪಾಕಿಸ್ತಾನದ ನೆರೆಯ ರಾಷ್ಟ್ರ. ಹಾಗಿರುವಾಗ, ನಿಜವಾಗಿಯೂ ಈ ಎರಡು ದೇಶಗಳ ನಡುವೆ ಸ್ನೇಹ ಸೌಹಾರ್ದಗಳಿರುವುದರಿಂದ ಉಭಯತರರಿಗೂ ಕ್ಷೇಮಕರವೆಂಬುದು ಸುವಿದಿತ. ಆದರೆ, ಭಾರತವೇನೋ ತನ್ನ ಪಂಚಶೀಲಗಳನ್ನು ಸ್ಮರಣೆಗೆ ತಂದುಗೊಂಡು ತನ್ನ ಮನೆಗೆ ಬೆಂಕಿಬೀಳುತ್ತಿದ್ದರೂ ಯಾವ ಉಗ್ರವಾದ ಕ್ರಮಗಳನ್ನೂ ಕೈಗೊಳ್ಳಲಾರದು ಎಂಬ ಆತ್ಮ ವಿಶ್ವಾಸದ ಬಲದಿಂದ ಪಾಕಿಸ್ತಾನವು ಭಾರತದ ಕಡೆಗೆ ತನ್ನ ಪರಂಪರಾ ಪ್ರಾಪ್ತವಾದ ಕ್ರೂರ ಮತ್ತು ಅಸಭ್ಯ ದೃಷ್ಟಿಯನ್ನು ಹರಿಸುತ್ತಿರುವುದೂ ತನ್ಮೂಲಕ ಭಾರತವನ್ನು ಕೆರಳಿಸಲು ಬಯಸುತ್ತಿರುವುದೂ ಕಂಡು ಬರುತ್ತಿದೆ. ಇದಕ್ಕೆ ಈ ಮೊದಲೇ ನಾನಾ ದೃಷ್ಟಾಂತಗಳು ತೋರಿ ಬಂದಿವೆಯಾದರೂ ಇದೀಗ ನಿರಪರಾಧಿ ವಿಮಾನವೊಂದನ್ನು ಗುಂಡಿಕ್ಕಿ ಕೆಳಗುರುಳಿಸಿದ ದುರ್ದೈವದ ಘಟನೆಯಾದರೂ ಇದೇ ಮಾತನ್ನು ಬಲವಾಗಿ ಪುಷ್ಟೀಕರಿಸುತ್ತದೆ. ರಾವಲ್ಪಿಂಡಿಯ ಬಳಿಯ ಆಕಾಶದಲ್ಲಿ ಸುಮಾರು ೫೦ ಸಾವಿರ ಅಡಿಗಳಷ್ಟೆತ್ತರದಲ್ಲಿ ಸಂಚರಿಸುತ್ತ ಸರ್ವೆಯ ಕಾರ್ಯವನ್ನು ಮಾಡುತ್ತಿದ್ದ ಕೇವಲ ಇಬ್ಬರಿಂದ ಕೂಡಿದ ಭಾರತೀಯ ಕೆನ್‌ಬೆರಾ ವಿಮಾನವೊಂದನ್ನು ಗುಂಡು ಹೊಡೆದು ಕೆಳಗುರುಳಿಸಿದ ಕಾರಣದಿಂದ, ವಿಮಾನವು ಸಂಪೂರ್ಣ ನಾಶಗೊಂಡದಲ್ಲದೇ ಅದರಲ್ಲಿದ್ದ ಚಾಲಕ ಮತ್ತು ಇನ್ನೊಬ್ಬನಿಗೆ ಅತೀವ ಗಾಯಗಳಾಗಿವೆಯೆಂದರೆ ಇಂತಹ ಅಮಾನುಷ ಹಾಗೂ ಹಿಂಸ್ರ ಕೃತ್ಯದ ಉದ್ದೇಶವಾದರೂ ಏನಿರಬೇಕು ಎಂಬುದು ತಿಳಿಯುತ್ತಿಲ್ಲ.

ಪಾಕ್ ಹೇಳಿಕೆಯಂತೆ, ವಿಮಾನವನ್ನು ಇಳಿಯ ಹೇಳಿದರೂ ಕೇಳದ ಕಾರಣದಿಂದ ಗುಂಡಿಡಲಾಯಿತು. ಆದರೆ, ಈ ಬಗ್ಗೆ ಭಾರತೀಯ ಲೋಕ ಸಭೆಯಲ್ಲಿ ಸದಸ್ಯರ ಕೇಳಿಕೆಯಂತೆ ಸಂರಕ್ಷಣಾ ಮಂತ್ರಿ ಶ್ರೀ ವಿ. ಕೆ. ಕೃಷ್ಣ ಮೆನನರು ಇತ್ತ ಹೇಳಿಕೆಯು ಸ್ವಾಗತಾರ್ಹವಿದೆ. ಈ ವಿಮಾನವು ಯಾವ ದುರುದ್ದೇಶದಿಂದಲೂ ಹೋಗಿರದೇ ರೂಢಿಯ ಸರ್ವೆ ಚಿತ್ರಪಟ ಕಾರ್ಯಕ್ರಮದಂತೆ ತೆರಳಿರುವುದೆಂದವರು ಸ್ಪಷ್ಟೀಕರಿಸಿ, "ಪಾಕಿಸ್ತಾನಿಗಳದನ್ನು ಅಜ್ಞಾತ ವಿಮಾನವೆಂದು ಕರೆಯುತ್ತ ಬಂದಿದ್ದಾರೆ. ನಮ್ಮ ವಿಮಾನದ ಮೇಲೆ ಏರಿ ಹೋದ ವಿಮಾನವು ಗುಂಡಿಕ್ಕಬಲ್ಲುದಾದರೆ, ಅದಕ್ಕೆ ನಮ್ಮ ವಿಮಾನದ ಮೇಲಿನ ಚಿಹ್ನೆಗಳು ಕಾಣದಿರುವುದು. ಈ ವಿಮಾನವು ಎಂಥಹುದು ಎಂಬುದು ತಿಳಿಯದೆ ಹೋದುದು ಆಶ್ಚರ್ಯದ ಸಂಗತಿಯೇ ಸರಿ. ನಾವು ಪಾಕಿಸ್ತಾನವನ್ನು ನಡೆಸಿಕೊಳ್ಳುವ ರೀತಿಗೆ ಪಾಕಿಸ್ತಾನದ ಈ ಕೃತಿಯು ತೀರ ಅನುಚಿತವಾದುದು" ಎಂದವರು ತಿಳಿಸಿದ್ದಾರೆ. ಅಲ್ಲದೇ ಭಾರತವಾದರೋ ಇಂತಹ ಸಂದರ್ಭಗಳಲ್ಲಿ ಉದ್ರೇಕಗೊಳ್ಳದೆ, ತಪ್ಪಿತಸ್ಥವೆನಿಸಬಹುದಾದ ವಿಮಾನವನ್ನು ಭೂಮಿಗೆ ಇಳಿಸುವುದು ಎಂದವರು ಭಾರತದ ಕ್ರಮವನ್ನು ತಿಳಿಸಿದ್ದಾರೆ. ಈ ಪಾಕಿಸ್ತಾನದ ದುಷ್ಕೃತ್ಯ ಮತ್ತು ಹೇಳಿಕೆಗಳು ಕೇವಲ ನಿರಾಧಾರ ಮತ್ತು ಅವಿಶ್ವಾಸಾರ್ಹವಾಗಿದ್ದು ದುರುದ್ದೇಶಪೂರಿತವಾಗಿಯೇ ಇವೆ ಎಂದು ತಿಳಿಯಲೇ ಬೇಕಾಗುತ್ತದೆ.

ಪಾಕಿಸ್ತಾನದ ವಿಮಾನಗಳೂ ಸೀಮೋಲ್ಲಂಘನೆಯನ್ನು ಮಾಡುತ್ತವೆ. ಆದರೆ, ಭಾರತೀಯರು ಹೀಗೆ ಹಾದಿತಪ್ಪಿ ಬಂದವರನ್ನು ಸಹನೆಯಿಂದ ನೋಡಿಕೊಳ್ಳುತ್ತಿದ್ದಾರೆ. ಆದರೆ, ಪಾಕಿಸ್ತಾನದ ಅಧಿಕಾರಿಗಳು ಭಾರತದೊಡನೆ ಶಾಂತಿ ಸ್ನೇಹಗಳನ್ನು ಕೋರುತ್ತ ಈ ರೀತಿಯ ಅನಾಗರಿಕ ಕೃತ್ಯಗಳನ್ನು ತೋರ್ಪಡಿಸುವುದೆಂದರೆ, ಅವರ ಒಳಮನಸ್ಸು ಬೇರೆಯೇ ರೀತಿಯಿದೆ ಎಂದು ತಿಳಿಯಲೇಬೇಕಾಗುತ್ತದೆ. ಇಂತಹ ಕುತಂತ್ರಗಳಿಂದ ಭಾರತದ ಏಳಿಗೆಯಂತಿರಲಿ, ಸ್ವಯಂ ಪಾಕಿಸ್ತಾನವೂ ಊರ್ಜಿತವಾಗಲಾರದು ಎಂಬುದು ಸ್ವಯಂವಿದಿತ. ಆದುದರಿಂದಲೇ ಭಾರತವು ಕೇವಲ ವಿರೋಧ ಪ್ರದರ್ಶನದಿಂದಲೇ ತೃಪ್ತವಾಗದೆ ಇನ್ನು ಮುಂದೆಯಾದರೂ ಈ ರೀತಿಯ ಅನಾಹುತಗಳು ನಡೆಯದಂತೆ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುವುದು ಅವಶ್ಯವೆಂದು ಸೂಚಿಸಬಯಸುತ್ತೇವೆ.

ಸಂಘಟನೆ ಅವಶ್ಯ

ದೇಶದಲ್ಲಿ ಕಾಂಗ್ರೆಸ್ಸು ಪ್ರಬಲ ರಾಜಕೀಯ ಪಕ್ಷವೆಂಬುದು ಇತ್ತೀಚೆಗಿನ ಸಾರ್ವತ್ರಿಕ ಚುನಾವಣೆಗಳಿಂದ ವ್ಯಕ್ತಪಟ್ಟಿರುವುದಾದರೂ ಆ ಮೇಲೆ ನಡೆದಿದ್ದ ಕೆಲವೊಂದು ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ಸು ಪಕ್ಷವಾಗಿ ಸ್ಪರ್ಧಿಸಿ ಸೋಲನ್ನು ಅನುಭವಿಸಿರುವುದು ಗೋಚರವಾಗುತ್ತಿದೆ. ದಿಲ್ಲಿಯ ಕಾರ್ಪರೇಶನಿನ ಚುನಾವಣೆಯಲ್ಲಿ ಕಾಂಗ್ರೆಸ್ಸು ಸೋತು ಜನಸಂಘ ಹಾಗೂ ಕಮ್ಯುನಿಸ್ಟರು ಅಧಿಕಾಧಿಕ ಬೆಂಬಲವನ್ನು ಪಡೆದಿರುವುದಲ್ಲದೇ ಮೊನ್ನೆ ಮೊನ್ನೆ ನಡೆದ ಮದರಾಸು ಕಾರ್ಪರೇಷನಿನಲ್ಲಿಯೂ ಕಾಂಗ್ರೆಸ್ಸು ಸೋಲುಣ್ಣಬೇಕಾಯಿತು. ಗಾಂಧಿ ನೆಹರೂ ಮೊದಲಾದ ರಾಷ್ಟ್ರೀಯ ವ್ಯಕ್ತಿಗಳನ್ನು ನಿಂದಿಸಿ, ರಾಮ, ಗಣೇಶ ಮೊದಲಾದವರ ವಿಗ್ರಹಗಳನ್ನು ಒಡೆದು, ಪಟಗಳನ್ನು ಸುಟ್ಟು, ಭಾರತೀಯ ಸಂವಿಧಾನವನ್ನೇ ಸುಡುವುದಲ್ಲದೇ ಬ್ರಾಹ್ಮಣರ ಹೋಟೇಲುಗಳ ಗೋಡೆಗಳನ್ನೂ ಮಲಿನಗೊಳಿಸುವ ಬ್ರಾಹ್ಮಣ ವಿರೋಧೀ ಭಾವನೆಯಿಂದ ಮಾತ್ರವಲ್ಲದೇ ರಾಷ್ಟ್ರ ವಿಘಾತುಕವೆನಿಸಿದ ದುಷ್ಕೃತ್ಯಗಳನ್ನು ಪ್ರೋತ್ಸಾಹಿಸುತ್ತಿರುವ ಪ್ರತ್ಯೇಕ ತಮಿಳ ನಾಡನ್ನು ಬೇಡುತ್ತಿರುವ ದ್ರಾವಿಡ ಮುನ್ನೇತ್ರ ಕಳಗಂ ಭಾರಿ ವಿಜಯವನ್ನು ಸಂಪಾದಿಸಿದೆ. ಈ ಚುನಾವಣೆಯ ಫಲಿತಾಂಶವನ್ನು ನೋಡುವಾಗ, ಮದ್ರಾಸಿನ ಜನತೆಯಲ್ಲಿ ಕಾಂಗ್ರೆಸ್ಸಿನ ಧೋರಣೆಗಳತ್ತ ಅನಾಸಕ್ತಿಯು ಧ್ಯೆಯ ತೋರಿಬರುತ್ತಿದೆಯೇ? ಎಂಬ ಸಂದೇಹ ಬರುತ್ತಿವೆ. ಮದ್ರಾಸದ ಮುಖ್ಯಮಂತ್ರಿ ಶ್ರೀ ಕಾಮರಾಜ ನಾಡಾರರು ಮೂಲತಃ ತಮಿಳುನಾಡಿನ ಪ್ರಮುಖ ಕಾಂಗ್ರೆಸ್ ಆಧಾರಸ್ತಂಭವಾಗಿರುವರಾದರೂ, ಅಂತಃ ಅವರು ದ್ರಾವಿಡ ಮುನ್ನೇತ್ರ ಕಳಗಂ ಅನ್ನು ಪ್ರೋತ್ಸಾಹಿಸುತ್ತಿರುವರೆಂದು ತೆರೆಯ ಮರೆಯಲ್ಲಿ ಕೇಳಿಬರುತ್ತಿದೆ. ಇದರ ಸತ್ಯಾಸತ್ಯತೆಯು ಸ್ಪಷ್ಟಗೊಳ್ಳದೆ ಇವರ ವಿಷಯವಾಗಿ ಏನೂ ಹೇಳಲು ಸಾಧ್ಯವಿಲ್ಲವಾದರೂ ಕಾಂಗ್ರೆಸಿನ ಶಕ್ತಿ ಮಾತ್ರ ಕುಂದಿ, ಅಲ್ಲಿ ರಾಷ್ಟ್ರೀಯತೆಯು ದೂರವಾಗುತ್ತಿದೆಯೆಂಬುದು ಸುವಿದಿತ. ಮದ್ರಾಸ ದಿಲ್ಲಿಯಂತಹ ತಿಳುವಳಿಕೆಯಿಂದ ಕೂಡಿದ ನಾಗರಿಕರಿರುವ ಮಹಾನಗರಗಳಲ್ಲಿಯೇ ಕಾಂಗ್ರೆಸ್ಸು ಬಲಗುಂದುತ್ತ ಬರುವುದು ಅಧಿಕಾರದ ಗ್ರಹಣದ ದೃಷ್ಟಿಯಿಂದ ಮುಖ್ಯವಲ್ಲವಾದರೂ ಪಕ್ಷದ ಉನ್ನತಿ ಮತ್ತು ಸಂಘಟನೆಯ ದೃಷ್ಟಿಯಿಂದ ಗಮನಾರ್ಹವೆಂದು ತಿಳಿಯಬೇಕು.

ಇತ್ತೀಚೆಗೆ ರಾಷ್ಟ್ರದ ವಿವಿಧೆಡೆಗಳಲ್ಲಿ ಕಂಡು ಬರುತ್ತಿರುವ ಈ ರೀತಿಯ ವಿಪರ್ಯಾಸ ಫಲಶ್ರುತಿಯಿಂದ ಕಾಂಗ್ರೆಸ್ಸು ದುರ್ಬಲವಾಗುತ್ತಿದೆ, ಜನಾನುರಾಗಕ್ಕೆ ಎರವಾಗುತ್ತಿದೆ ಎಂಬುದನ್ನು ಗಮನಿಸಿ, ಈ ಕೊರತೆಗಳನ್ನು ನಿವಾರಿಸಿ, ಸುದೃಢ ಹಾಗೂ ಭದ್ರಪಕ್ಷವಾಗಿ ಮುನ್ನಡೆಸುವ ಗುರುತರ ಉತ್ತರದಾಯಿತ್ವವಿಂದು ಕಾಂಗ್ರೆಸಿಗರ ಮೇಲೆ ಇದೆ ಎಂಬುದನ್ನು ತಿಳಿಯಬೇಕು. ಇದನ್ನು ನಿರ್ಲಕ್ಷಿಸಿದರೆ, ಮುಂಬರುವ ಚುನಾವಣೆಗಳಲ್ಲಿ ಕೇರಳದಂತೆಯೇ ಉಳಿದ ಕೆಲವು ರಾಜ್ಯಗಳಲ್ಲೂ ಕಾಂಗ್ರೆಸ್ಸು ದೂರ ಸರಿದು ಕಮ್ಯುನಿಜಂ ಅಥವಾ ಅದಕ್ಕೆ ಸರಿಸಮಾನವಾದ ಇತರ ದೇಶ ಪ್ರೇಮ ವಿರಹಿತರ ಕೈಮೇಲಾಗುವ ಸಂಭವವು ಹೆಚ್ಚು. ರಾಷ್ಟ್ರದ ಐಕ್ಯವನ್ನು ಮತ್ತು ಪ್ರಜಾಪ್ರಭುತ್ವವನ್ನು ಉಳಿಸಲು ಹೆಣಗುವ ಮಹಾ ರಾಜಕೀಯ ಪಕ್ಷ ಕಾಂಗ್ರೆಸ್ಸು ತೀವ್ರ ಕಾರ್ಯಕ್ರಮಗಳನ್ನು ಕೈಗೊಂಡು ದೇಶವನ್ನು ಮುತ್ತಬಹುದಾದ ತಿಮಿರಾಂಧಕಾರವನ್ನು ದೂರೀಕರಿಸುವುದು ಅವಶ್ಯ.

ಸಂಕ್ಷಿಪ್ತ ಸುದ್ದಿಗಳು

ಮಂಗಲದಾಸ ಪಕ್ವಾಸ

ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರು ಮೂರು ತಿಂಗಳ ರಜೆಯ ಮೇಲೆ ವಿದೇಶಗಳಿಗೆ ತೆರಳಲಿರುವುದರಿಂದ, ಆ ಕಾಲಾವಧಿಗೆ ತಾತ್ಕಾಲಿಕ ರಾಜ್ಯಪಾಲರಾಗಿ ಶ್ರೀ ಮಂಗಲದಾಸ ಪಕ್ವಾಸರನ್ನು ರಾಷ್ಟ್ರಪತಿಗಳು ನೇಮಿಸಿದ್ದಾರೆ. ಶ್ರೀ ಪಕ್ವಾಸರು ಈ ಮೊದಲು ಮಧ್ಯಪ್ರದೇಶ ಹಾಗೂ ಮುಂಬಯಿಯ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಅವರಿಗೀಗ ೭೭ ವರ್ಷ ಪ್ರಾಯ. ಸಾಮಾನ್ಯವಾಗಿ ಒಂದು ರಾಜ್ಯದ ರಾಜ್ಯಪಾಲರ ಅನುಪಸ್ಥಿತಿಯಲ್ಲಿ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ತಾತ್ಕಾಲಿಕ ರಾಜ್ಯಪಾಲರೆಂದು ಕೆಲಸ ಮಾಡುವುದಾದರೂ, ಸದ್ಯ ಮೈಸೂರು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಶ್ರೀ ದಾಸಗುಪ್ತರವರೂ ರಜೆಯ ಮೇಲೆ ಹೋಗಿರುತ್ತಾರೆ. ಅದುದರಿಂದ ಈ ಹೊಸ ನೇಮಕವಾಯಿತು.

ಮಾಸ್ಟರ ತಾರಾಸಿಂಘ

ಪಂಜಾಬ ಸರಕಾರವು ಸೀಖ ಗುರುದ್ವಾರಗಳ ಆಂತರಿಕಕ್ಕೆ ಕೈಹಾಕಿದೆ ಎಂದು ದೂರಿ, ಅದನ್ನು ವಿರೋಧಿಸಿ, ಅಕಾಲಿ ದಳದ ನಾಯಕ ಮಾಸ್ಟರ ತಾರಾಸಿಂಘರು ಇದೇ ೧೬ ರಿಂದ ಆಮರಣ ಉಪವಾಸವನ್ನು ಕೈಗೊಳ್ಳುವೆನೆಂದು ಘೋಷಿಸಿದ್ದರು. ಆದರೆ, ಇತ್ತೀಚೆಗೆ ಪ್ರಧಾನಿ ನೆಹರೂ ಅವರು ಶ್ರೀ ಸಿಂಘರೊಡನೆ ಮಾತನಾಡಿ ಈ ವಿಷಯದಲ್ಲಿ ಗುರುದ್ವಾರಗಳ ಆಡಳಿತೆಯ ವಿಷಯದಲ್ಲಿ ಹಸ್ತಕ್ಷೇಪವಾಗದಂತೆ ನೋಡಿಕೊಳ್ಳುವ ಸಲುವಾಗಿ ಒಂದು ಸಮಿತಿಯನ್ನು ನೇಮಿ

ಸುವ ಸೂಚನೆಯು ಬಂದು ಅದು ಕಾರ್ಯಕಾರಿಯಾಗುವುದರಿಂದ, ತಾನು ಮೊದಲು ಮಾಡಿದ್ದ ನಿರ್ಧಾರವನ್ನು ಬದಲಿಸಿದ್ದಾರೆ. ಈಗಿನ ವರದಿಗಳಂತೆ ನೇಮಿಸಬಹುದಾದ ಸಮಿತಿಯಲ್ಲಿ ಸರಕಾರದ ಇಬ್ಬರು ಮತ್ತು ಶ್ರೀ ಸಿಂಘರಿಂದ ನೇಮಿತರಾದ ಇಬ್ಬರು ಪ್ರತಿನಿಧಿಗಳಿರುವರು. ಈ ಸಮಿತಿಯು, ಹಸ್ತಕ್ಷೇಪ ಮಾಡಿದ ಬಗ್ಗೆ ಬರುವ ಆರೋಪಗಳನ್ನು ವಿಚಾರಿಸಬೇಕು; ಸಮಿತಿಯ ಸದಸ್ಯರಲ್ಲಿ ಭಿನ್ನಾಭಿಪ್ರಾಯವು ತೋರಿಬಂದಾಗ ಪಂಜಾಬದ ರಾಜ್ಯಪಾಲರಿಗೆ ಈ ವಿಷಯವನ್ನು ಒಪ್ಪಿಸಬೇಕಾಗಿದೆ.

ದಲಾಯಿ ಲಾಮಾ

ಟಿಬೇಟದ ಧರ್ಮಾಧಿಕಾರಿಯಾದ ದಲಾಯಿ ಲಾಮಾರವರನ್ನು ಭಾರತ ಸರಕಾರವು ಆದರಪೂರ್ವಕವಾಗಿ ಸ್ವಾಗತಿಸಿ ಅವರಿಗೆ ಆಶ್ರಯವಿತ್ತು ಉಳಕೊಳ್ಳುವ ವ್ಯವಸ್ಥೆಯನ್ನು ಯೋಗ್ಯ ರೀತಿಯಲ್ಲಿ ಮಾಡಿಕೊಡಲು ನಿರ್ಧರಿಸಿದೆ. ಅವರು ಮುಸ್ಸೋರಿಯಲ್ಲಿ ವಿಶ್ರಾಂತಿ ಪಡೆಯುವರೆಂದು ತಿಳಿದು ಬಂದಿದೆ. ದಲಾಯಿ ಲಾಮಾರೊಂದಿಗೆ ಅವರ ಮಾತಾಪಿತರೂ ಕುಟುಂಬದವರೂ ಇರುವರು.

ದಿನಕರ ದೇಸಾಯಿ

ಸುಪ್ರಸಿದ್ಧ ಕನ್ನಡ ಕವಿಗಳಾದ ಶ್ರೀ ದಿನಕರ ದೇಸಾಯಿಯವರನ್ನು ಬ್ರಿಟಿಶ ಕೌನ್ಸಿಲು ತನ್ನ ಅತಿಥಿಯನ್ನಾಗಿ ಇಂಗ್ಲೆಂಡಿಗೆ ಆಮಂತ್ರಿಸಿದೆ. ಬ್ರಿಟಿಶ ಕೌನ್ಸಿಲು ಅತಿಥಿಯನ್ನಾಗಿ ಆಮಂತ್ರಿಸುವುದು ಒಂದು ಗೌರವವಾಗಿದ್ದು, ಬ್ರಿಟನ್ನಿನ ವಿದ್ಯಾ ಸಂಸ್ಥೆಗಳನ್ನೂ ಗ್ರಾಮೀಣ ವೈದ್ಯಕೀಯ ಕೇಂದ್ರಗಳನ್ನೂ ಕಾರ್ಮಿಕ ಸಂಘಗಳನ್ನೂ ಸಂದರ್ಶಿಸಲು ಒಂದು ಅವಕಾಶ ಮಾಡಿಕೊಡುವುದೇ ಈ ಆಮಂತ್ರಣದ ಉದ್ದೇಶವಾಗಿದೆ. ಭಾರತೀಯ ಕಾರ್ಮಿಕರ ಪ್ರತಿನಿಧಿಯಾಗಿ ಈ ಹಿಂದೆ ಅಮೇರಿಕೆಗೂ ಯುರೋಪಿಗೂ ಶ್ರೀ ದೇಸಾಯಿಯವರು ಹೋಗಿರುತ್ತಾರೆ. ಮುಂದಿನ ಜೂನ್ ತಿಂಗಳಲ್ಲಿ ಇವರು ಸದ್ಯದ ಆಮಂತ್ರಣದ ಮೇರೆಗೆ ಬ್ರಿಟನ್ನಿಗೆ ತೆರಳಲಿರುವರು. ಶ್ರೀ ದೇಸಾಯಿಯವರು ಅಂಕೋಲೆಯ ಕೆನರಾ ವೆಲ್‌ಫೇರ್ ಟ್ರಸ್ಟಿನ ಅಧ್ಯಕ್ಷರಿರುವರು.

ರಾಜಗೋಪಾಲಾಚಾರಿ.

ಕಾಂಗ್ರೆಸ್ ಆಡಳಿತೆಯೂ ಪಕ್ಷವೂ ಈಗ ಲಂಗುಲಗಾಮಿಲ್ಲದೆ ಇತರ ಸಾಮಾನ್ಯ ಪಕ್ಷಗಳಂತೆಯೇ ತನ್ನ ನೀತಿಯನ್ನು ರೂಪಿಸಿಕೊಳ್ಳುವುದರಿಂದ, ಅದಕ್ಕೊಂದು ತಡೆ ಹಾಕುವ ಸಾಂಪ್ರದಾಯಿಕ ಪಕ್ಷವೊಂದನ್ನು ರಚಿಸುವ ಆವಶ್ಯಕತೆಯೆಂದು ಅಧಿಕಾಧಿಕವಾಗಿದೆಯಾದದರಿಂದ ಇನ್ನು ತಡಗೆಯ್ಯದೆ ಶೀಘ್ರದಲ್ಲಿಯೇ ಈ ಪಕ್ಷವನ್ನು ಸ್ಥಾಪಿಸಬೇಕೆಂದು ರಾಜಾಜಿ ಮದ್ರಾಸಿನ ಸಭೆಯೊಂದರಲ್ಲಿ ಆಡಿದ್ದಾರೆ. ಅವರು ಮುಂದುವರಿದು ಮಿಲಿಟರಿಗಳಿಗೆ ಶಾಂತಿ ಮತ್ತು ವ್ಯವಸ್ಥೆಗಳ ಪರಿಚಯ ಮಾತ್ರವಿದ್ದು, ಕೇವಲ ಇವುಗಳಿಂದಷ್ಟೇ ಆಡಳಿತೆ ಸಾಗುವಂತಿಲ್ಲವಾದುದರಿಂದ ಭಾರತದಲ್ಲಿ ಸೈನಿಕಾಡಳಿತೆಯು ಯಶಸ್ವಿಯಾಗಲಾರದು ಎಂದು ಹೇಳಿದರು. ಮದ್ರಾಸದಲ್ಲಿ ಕಾಂಗ್ರೆಸ್ ಗೆಲ್ಲಲ್ಲು ಯಾವ ಪ್ರಯತ್ನ ನಡೆಸಿದರೂ ಅದು ಸೋತು ಹೋದುದನ್ನುದ್ದೇಶಿಸಿಯೂ ಅವರು ಮಾತಾಡಿದರು.

ಅಲ್ಲಲ್ಲಿಯ ಸುದ್ದಿಸಾರ

ಸಮಾಜ ಕಲ್ಯಾಣ ಮಂತ್ರಿ ರಾಚಯ್ಯ— ನವಲು, ತಾ. ೮ನೇ ಸಂಜೆ ಮಂಗಳೂರಿನ ಹರಿಜನ ಹಾಸ್ಟೇಲಿನಲ್ಲಿ ಜರಗಿದ ಹರಿಜನ ವಿದ್ಯಾಭಿವೃದ್ಧಿ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಭಾಷಣಮಾಡುತ್ತಾ, "ದೇಶದಲ್ಲಿ ಸುಖೀ ರಾಜ್ಯವನ್ನು ಕಟ್ಟಲು ಮೇಲುಕೀಳೆನ್ನದೆ ಪ್ರತಿಯೊಬ್ಬರಿಗೂ ವಿದ್ಯೆಯನ್ನೊದಗಿಸುವುದು ಅಗತ್ಯ. ಹಿಂದುಳಿದ ಹರಿಜನರು ಮತ್ತು ಗಿರಿಜನರಿಗೆ ಸರ್ಕಾರವು ಕಾಯ್ದಿರಿಸಿದ ಹಣದಿಂದ ಅರ್ಧದಷ್ಟನ್ನಾದರೂ ಅವರ ವಿದ್ಯಾಪ್ರಗತಿಗಾಗಿ ಉಪಯೋಗಿಸುತ್ತದೆ. ಹರಿಜನರು ಕಷ್ಟ ಸಹಿಷ್ಣುಗಳಾಗಿ ಜ್ಞಾನಾಭಿವೃದ್ಧಿಗಾಗಿ ಮುನ್ನುಗ್ಗಬೇಕು" ಎಂದು ಮುಂತಾಗಿ ಭಾಷಣವಿತ್ತರು.

ಸಮ್ಮೇಳನವನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ.ಕೆ. ಶೆಟ್ಟಿ, ಎಂ.ಎಲ್.ಸಿ, ಯವರು ಉದ್ಘಾಟಿಸಿದರು. ನಂತರ ಶ್ರೀಗಳಾದ ವೈಕುಂಠ ಬಾಳಿಗ, ಎಂ. ಎಲ್. ಎ. ಜಿಲ್ಲಾ ಬೋರ್ಡು ಅಧ್ಯಕ್ಷ ಟಿ. ಮಂಜಯ್ಯ ಹೆಗ್ಡೆ, ಎಸ್. ಸುಬ್ಬಯ್ಯ ನಾಯ್ಕ ಎಂ.ಎಲ್.ಎ, ಎಫ್. ಎಕ್ಸ್. ಡಿ. ಪಿಂಟೊ, ಎಂ ಎಲ್.ಎ. ಮೊದಲಾದವರು ಭಾಷಣವಿತ್ತರು. ಆರಂಭದಲ್ಲಿ ಶ್ರೀ ಯು. ಮಂಜಪ್ಪ, ಎಂ. ಎಲ್. ಎ.ಯವರಿಂದ ಸ್ವಾಗತ ಭಾಷಣವಾಯಿತು.

ನಂತರ ಶ್ರೀ ರಾಚಯ್ಯನವರು ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಭಾಷಣವಿತ್ತರು.

ಬಾಬುಗುಡ್ಡೆ ಹರಿಜನ ಕೊಲನಿಯಲ್ಲಿ ಶ್ರೀ ಕೆ. ರಂಗರಾಯರ ಹೆಸರಿನಲ್ಲಿ ಕಟ್ಟಿಸಲಾದ ಸಮಾಜ ಕೇಂದ್ರವೊಂದನ್ನೂ ಸೂಟರ್ ಪೇಟೆ ಹರಿಜನ್ ಕೊಲನಿಯಲ್ಲಿನ ನರ್ಸರಿ ಶಾಲೆಯ ಕಟ್ಟಡವೊಂದನ್ನೂ ಶ್ರೀ ರಾಚಯ್ಯನವರು ಬೆಳಿಗ್ಗೆ ಉದ್ಘಾಟಿಸಿದರು.

ಕೆನರಾ ಚೇಂಬರ್ ಆಫ್ ಕಾಮರ್ಸಿನ ಪರವಾಗಿ ಶ್ರೀ ಸುಜೀರ್ ದಾಮೋದರ ನಾಯ್ಕ, ಶ್ರೀ ಕೆ ಪಿ. ಹೆಗ್ಡೆ ಮತ್ತು ಶ್ರೀ ಕೆ. ಬಿ. ಪೈಯವರು ಸಚಿವರನ್ನು ಇಂದು ಕದ್ರಿ ಪ್ರವಾಸ ಬಗ್ಲೆಯಲ್ಲಿ ಭೇಟಿಯಾಗಿ, ಫ್ರೆಂಚ್ ಪಾಲ್ದಾರ್ ಕೈಗಾರಿಕಾ ಪ್ರಗತಿಗೆ ಇರುವ ಕುಂದು ಕೊರತೆಗಳನ್ನು ನಿವಾರಿಸಬೇಕೆಂಬ ಮನವಿಯೊಂದನ್ನು ಅರ್ಪಿಸಿದರು.

ಬೆಳ್ತಾರೆ ಮಂಡಲ ಕಾಂಗ್ರೆಸಿನ ಆಶ್ರಯದಲ್ಲಿ ಕಳೆದ ತಾ. ೬ರ ಸಂಜೆ ಚೊಕ್ಕಾಡಿಯಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ.ಯವರ ಹಿರಿತನದಲ್ಲಿ ಜರಗಿತು. ಶ್ರೀ ವಿ. ಆನಂದನವರ ಸ್ವಾಗತ ಭಾಷಣದ ನಂತರ ಶ್ರೀಗಳಾದ ಕೆ. ಶಂಕರ ಆಳ್ವ, ಡಾ। ಬಾಳಪ್ಪ ಸೆಟ್ಟಿ, ಕೆ. ಜತ್ತಪ್ಪ ರೈಗಳೇ ಮೊದಲಾದವರಿಂದ ಭಾಷಣವಾದ ತರುವಾಯ ಶ್ರೀ ವಿ. ಆನಂದನವರು ಧನ್ಯವಾದವಿತ್ತರು.

ಉಡುಪಿ ಪೋಲೀಸ್ ಖಾತೆಯವರ ಶ್ರೀ ಸೂಕಾಂಬಿಕಾ ಭಜನಾ ಮಂಡಳಿಯ ವಾರ್ಷಿಕೋತ್ಸವವು ತಾ. ೭ರಂದು ಡಿ. ಎಸ್. ಪಿ. ಯವರಾದ ಶ್ರೀ ಜಿ. ಎಸ್. ನಾಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಎ. ದೇವದಾಸರಿಂದ ಸ್ವಾಗತವಾದ ನಂತರ ಶ್ರೀ ತಿಮ್ಮಯ್ಯನವರು ಸ್ವಸ್ತಿವಾಚನ ಮಾಡಿದರು. ಶ್ರೀಗಳಾದ ಪದ್ಮನಾಭ ಶೆಟ್ಟಿ, ಶಾಮಸುಂದರ ದೇರಬಾಂಡೆ ಮುಂತಾದವರು ಭಜನೆಯ ಮಹತ್ವವನ್ನು ಕುರಿತ ಭಾಷಣ ಮಾಡಿದರು.

ಕುನ್ರಾಡ್ ಬೋರ್ಡ್ ಹೈಸ್ಕೂಲಿನ ವರ್ಧಂತಿಯು— ಕಳೆದ ತಾ. 28 ರಲ್ಲಿ ಶ್ರೀ ಓ. ಎಸ್. ಆಂಚನ್ ಎಂ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ನೆರೆಯಿತು. ಶ್ರೀ ಕೆ. ವೆಂಕಟ್ರಮಣ ಭಟ್ಟರು ಸ್ವಾಗತಿಸಿದ ಮೇಲೆ ಹೆಡ್ಮಾಸ್ತರ್ ಶ್ರೀ ಕೆ. ಶಂಕರನಾರಾಯಣ ಭಟ್ಟರು ವರದಿಯನ್ನೋದಿದರು. ಸಭಿಕರ ಮತ್ತು ಅಧ್ಯಕ್ಷರ ಭಾಷಣವಾದ ಮೇಲೆ ಮನರಂಜನೆಯ ಕಾರ್ಯಕ್ರಮಗಳಾದುವು. ಅಂದು ಬೆಳಿಗ್ಗೆ ಡಾ. ಎ. ವಿ. ಸೆಟ್ಟರು ಧ್ವಜಾರೋಹಣ ಮಾಡಿದ್ದರು.

ಡಾ। ಸಾಮುವೇಲ್ ಹನ್ನಿಮನ್ನರ ದಿನಾಚರಣೆ— ಯು ಮಂಗಳೂರಲ್ಲಿ ಕೆನರಾ ಹೋಮ್ಯೋಪಥಿಕ್ ಸಮಿತಿಯ ಆಶ್ರಯದಲ್ಲಿ ತಾ 10ರಲ್ಲಿ ಶ್ರೀ ಎಸ್. ನರಸಪ್ಪಯ್ಯ ಎಸ್. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಕೆ. ಶ್ರೀಧರರಾಯರು ಸ್ವಾಗತಿಸಿದ ಮೇಲೆ ಡಾ। ಪಿ. ಅಪ್ಪುಕುಟ್ಟಿ ಮೆನನ್ ಶ್ರೀ ಸಿ. ಪಿ. ಕ್ಲೀಟಸ್, ಡಾ। ಕೆ.ಎ. ಸ್ವಯಂಪ್ರಕಾಶ ಮೊದಲಾದವರು ಭಾಷಣಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಡಾ। ವಿ. ಕೆ. ಕೊಪಿಕೋಡಿಕರ್ ಅವರು ಧನ್ಯವಾದಗಳನ್ನಿತ್ತರು.

ಬ್ರಹ್ಮಾವರ— ತಾ. 9ರಲ್ಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಹೆಬ್ಬಾಗಿಲಿನಲ್ಲಿ ಶ್ರೀ ಕೃಷ್ಣ ರಾವ್, ಎಂ. ಎ. ಎಸ್. ಎಲ್. ಇವರ ಅಧ್ಯಕ್ಷತೆಯಲ್ಲಿ ಉಗಾದಿ ಸಾಹಿತ್ಯೋತ್ಸವವನ್ನು ಆಚರಿಸಲಾಯಿತು. ಶ್ರೀ ಎಂ. ಜನಾರ್ಧನ ಎಂ. ಎ. ಅವರು ಉಪನ್ಯಾಸವಿತ್ತರು. ಶ್ರೀ ಗೋಪು ಸೇರಿಗಾರ ಮತ್ತು ವೃಂದದವರಿಂದ ಕ್ಲೇರಿಯೋನೆಟ್ ವಾದನವೂ, ಶ್ರೀಮತಿ ಕಾತ್ಯಾಯಿನಿ ಕೃಷ್ಣಮೂರ್ತಿ ಮತ್ತು ವೃಂದದವರಿಂದ ಸಂಗೀತವೂ ನಡೆಯಿತು. ಕಾರ್ಯದರ್ಶಿ ಶ್ರೀ ಬೈಕಾಡಿ ವೆಂಕಟಕೃಷ್ಣರಾಯರು ಧನ್ಯವಾದಗಳನ್ನಿತ್ತರು.

ಉಡುಪಿಯಲ್ಲಿ ಸಚಿವ ರಾಚಯ್ಯನವರು— ಇದೇ ತಾ. 9ನೇ ಮಧ್ಯಾಹ್ನ ಮೈಸೂರು ಸರಕಾರದ ಸಮಾಜ ಕಲ್ಯಾಣ ಮತ್ತು ಪಾನನಿರೋಧ ಖಾತೆಗಳ ಮಂತ್ರಿ ಶ್ರೀ ಎನ್. ರಾಚಯ್ಯ ಬಿ.ಎ ಎಲ್ ಎಲ್.ಬಿ. ಇವರು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಕೆ. ಕೆ. ಸೆಟ್ಟಿ ಎಮ್. ಎಲ್. ಸಿ., ಶ್ರೀ ಮಂಜಪ್ಪ ಉಳ್ಳಾಲ ಎಂ. ಎಲ್. ಎ, ಮೊದಲಾದವರೊಂದಿಗೆ ಮಣಿಪಾಲಕ್ಕೆ ಆಗಮಿಸಿ ಡಾ. ಟಿ. ಎಂ. ಎ. ಪೈಗಳು ಏರ್ಪಡಿಸಿದ ಭೋಜನ ಸತ್ಕಾರದಲ್ಲಿ ಭಾಗವಹಿಸಿದರು. ಭೋಜನಾನಂತರ ಶ್ರೀ ಟಿ. ಎ. ಪೈಗಳು ಮಂತ್ರಿಗಳನ್ನು ಸ್ವಾಗತಿಸಿ ಮಣಿಪಾಲ ಮತ್ತು ಎಕೆಡೆಮಿಯ ವಿದ್ಯಾ ಸಂಸ್ಥೆಗಳ ಪರಿಚಯಮಾಡಿಕೊಟ್ಟು ಮಣಿಪಾಲವು ಯಾವತರದ ಜಾತೀಯತೆಯ ಸಂಕುಚಿತತೆಯೂ ಇಲ್ಲದ ವಿಶಿಷ್ಟ ಕೇಂದ್ರ ಎಂದರು. ಮಂತ್ರಿಗಳು ಮಾತನಾಡುತ್ತ ತಾನು ಮೊದಲೇ ಕೇಳಿರುವ ಇಲ್ಲಿಯ ವಿವಿಧ ವಿಖ್ಯಾತ ಸಂಸ್ಥೆಗಳನ್ನು ಪ್ರತ್ಯಕ್ಷ ನೋಡಿದಮೇಲಂತೂ ತನಗೆ ಆತ್ಯಾನಂದವಾಗಿರುವುದಂದರಲ್ಲದೆ ಮಣಿಪಾಲವು ದಕ್ಷಿಣಹಿಂದೂಸ್ಥಾನ ಜಂಶೀಪುರ ಎಂದರು. ಬಳಿಕ ಹರಿಜನ ವಿದ್ಯಾರ್ಥಿ ಭವನ, ಕಸ್ತೂರಿಬಾ ಮೆಡಿಕಲ್ ಕಾಲೇಜ್, ಇಂಜಿನಿಯರಿಂಗ್ ಕಾಲೇಜ್, ಎಂ. ಜಿ. ಎಂ. ಕಾಲೇಜುಗಳಿಗೆ ಸಂದರ್ಶನವಿತ್ತರು. ಅನಂತರ ಬನ್ನಂಜೆ ಹರಿಜನರು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ ಸಾರ್ವಜನಿಕ ಸಭೆಯಲ್ಲಿ ಬಿನ್ನವತ್ತಳೆಯನ್ನು ಸ್ವೀಕರಿಸಿದರು. ಮಂತ್ರಿಗಳು ಹರಿಜನರ ಅಭಿವೃದ್ಧಿಗಾಗಿ ಸರಕಾರ ಕೈಗೊಂಡಿರುವ ಯೋಜನೆಗಳನ್ನು ವಿವರಿಸಿ ಸರಕಾರ ಕೊಡುವ ಸಾಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕೆಂದರು. ಶ್ರೀ ಮಂಜಪ್ಪ ಉಳ್ಳಾಲ ಎಂ. ಎಲ್. ಎ. ಅವರು ಮಾತನಾಡಿದ ಮೇಲೆ ಶ್ರೀ ಟಿ. ಎ. ಪೈಗಳು ಮಾತಾಡುತ್ತ ಹರಿಜನರಲ್ಲಿ ಸಂಕುಚಿತ ಭಾವನೆ ಇರಕೂಡದೆಂದೂ ಹರಿಜನರು ಕೂಡಾ ಇತರ ಸಮಾಜದವರಿಗೆ ಮಾರ್ಗದರ್ಶಕರಾಗಬೇಕೆಂದೂ ತಮ್ಮ ಕೆಲಸವನ್ನು ನಿಷ್ಠೆಯಿಂದೇ ಮಾಡಬೇಕೆಂದೂ ಹೇಳಿದರು.

ಬಳಿಕ ಮಂತ್ರಿಗಳು ಮಲ್ಪೆಗೆ ತೆರಳಿ ಶ್ರೀ ಚಿನ್ನ ಬಸವೇಶ್ವರ ಸೇವಾಸಮಾಜ ಮಂದಿರದ ಉದ್ಘಾಟನೆ ಮಾಡಿದರು. ಶ್ರೀ ಟಿ. ಎ. ಪೈಗಳು ಅಧ್ಯಕ್ಷತೆ ವಹಿಸಿದ್ದರು.

ನಗರ ಸಭೆಯ ಮಾನಪತ್ರ— ತರುವಾಯ ಮಂತ್ರಿಗಳು ಉಡುಪಿ ಮ್ಯುನಿಸಿಪಲ್ ಶಾಲೆಯಲ್ಲಿ ನಗರ ಸಭೆಯ ಮಾನ ಪತ್ರವನ್ನು ಸ್ವೀಕರಿಸಿದರು. ಪುರ ಸಭಾಧ್ಯಕ್ಷ ಡಾ। ಕೆ. ಎಲ್. ಐತಾಳರು ಮಂತ್ರಿಗಳನ್ನು ಸ್ವಾಗತಿಸಿ ಬಿನ್ನವತ್ತಳೆಯನ್ನರ್ಪಿಸಿದರು. ಮಂತ್ರಿಗಳು ನಗರ ಸಭೆಯವರು ಪಕ್ಷ ಭಾವನೆ ಬಿಟ್ಟು ನಗರದ ಅಭಿವೃದ್ಧಿಗಾಗಿ ದುಡಿಯಬೇಕೆಂದೂ ಹಿಂದುಳಿದ ವರ್ಗದವರಿಗೂ ತಕ್ಕ ಸೌಕರ್ಯಗಳನ್ನೊದಗಿಸಬೇಕೆಂದೂ ಹೇಳಿದರು. ಅಂತ್ಯದಲ್ಲಿ ಪುರಸಭೆಯ ಉಪಾಧ್ಯಕ್ಷ ಸಿ. ರಂಗನಾಥ ಶೆಣೈಯವರು ಧನ್ಯವಾದಗಳನ್ನಿತ್ತ ಮೇಲೆ ಮಂತ್ರಿಗಳು ಮಂಗಳೂರು ಪ್ರವಾಸಕ್ಕಾಗಿ ಮಡಿಕೇರಿಗೆ ತೆರಳಿದರು.

ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾಗಿ— ತಾ. ೧೩ರಂದು ಜರಗಿದ ಜಿಲ್ಲಾ ಬೋರ್ಡ್ ಸಭೆಯಲ್ಲಿ ಕುಂದಾಪುರದ ಎಡ್ವೋಕೇಟ್ ಶ್ರೀ ಎಸ್. ಎಸ್. ಪರಮೇಶ್ವರಯ್ಯನವರು ಆರಿಸಲ್ಪಟ್ಟಿರುವರು. ಶ್ರೀ ಜಿ. ಆರ್. ಕರ್ಕೇರರ ನಿಧನದಿಂದ ಈ ಸ್ಥಾನವು ತೆರವಾಗಿತ್ತು.

ಬಂಟರ ಯಾನೆ ನಾಡವರ ಸಂಘದ ಮಹಾ ಸಭೆಯು ಮಂಗಳೂರಲ್ಲಿ ಬರುವ ತಿಂಗಳ ತಾ. ೧೧ಕ್ಕೆ, ಸುವರ್ಣ ಮಹೋತ್ಸವವು ತಾ. ೧೨ಕ್ಕೆ ಜರಗಲಿರುವುದು.

ನಿಟ್ಟೂರು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ— ಸರಕಾರದಿಂದ ಕೊಡಮಾಡಿದ ಉಪಸ್ಥಿತಿ ಶಿಷ್ಯವೃತ್ತಿಗಳನ್ನು ವಿತರಿಸುವ ಸಮಾರಂಭವು ತಾ. ೧೦ರಂದು ಶ್ರೀಯು ಬಿ. ಪ್ರಭಾಕರ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಹೆಮ್ಮಕ್ಕಳನ್ನು ಹೆಚ್ಚು ಹೆಚ್ಚಾಗಿ ಅಕ್ಷರಸ್ಥರನ್ನಾಗಿ ಮಾಡುವ ಇರಾದೆಯಿಂದ ಸರಕಾರವು ಈ ರೀತಿ ಹಿಂದಿನ ವರ್ಷದಲ್ಲಿ ಅತ್ಯಧಿಕ ದಿನ ಶಾಲೆಗೆ ಬಂದಿರುವ ಬುದ್ಧಿವಂತೆ ವಿದ್ಯಾರ್ಥಿನಿಯರಿಗೆ ಇಂತಹ ಶಿಷ್ಯವೃತ್ತಿಗಳನ್ನು ಕೊಡುತ್ತಿದೆ. ಶ್ರೀ ಎನ್. ನಾರಾಯಣ ಶೆಟ್ಟರು ವಿತರಣೆ ಮಾಡಿದರು. ಶ್ರೀ ಸಿ. ಕೆ. ಮಂಜರು ಸರಕಾರದವರೀಯುತ್ತಿರುವ ಪ್ರೋತ್ಸಾಹದಿಂದ, ಅಧಿಕಾಧಿಕ ಹೆಮ್ಮಕ್ಕಳು ಶಾಲೆಗೆ ತಪ್ಪದೆ ಬಂದು ಅಧ್ಯಯನಶೀಲರಾಗಬೇಕೆಂದು ಕೇಳಿಕೊಂಡರು. ಮುಖ್ಯೋಪಾಧ್ಯಾಯ ಶ್ರೀ ಎಫ್. ಎಕ್ಸ್. ಕರ್ನೇಲಿಯೊರು ಧನ್ಯವಾದ ಸಮರ್ಪಣೆ ಮಾಡಿದರು.

ಅಂಕೋಲಾ— ಇಲ್ಲಿಯ ಗ್ರಾಮಪಂಚಾಯತಿನ ಸರಪಂಚರ ಚುನಾವಣೆಯು ತಾ. ೬ರಂದು ನಡೆದು, ಉತ್ಸಾಹಿ ತರುಣ ಕಾರ್ಯಕರ್ತರಾದ ಶ್ರೀ ಗೋವಿಂದರಾಯ ಪೈ. ಬಗಳಿ ಇವರು ಆಯ್ಕೆಯಾದರು.

ಹಿರಿಯಡ್ಕ ಶ್ರೀ ವೀರಭದ್ರ ದೇವಸ್ಥಾನದಲ್ಲಿ ಇದೇ ತಾ. ೨೪ರಿಂದ ೨೮ರ ವರೆಗೆ ರಥೋತ್ಸವಾದಿ ಕಾರ್ಯಕ್ರಮಗಳು ಜರಗಲಿರುವುವು. ಈ ವರ್ಷ ಹೊಸತಾಗಿ ಏರ್ಪಡಿಸಿದ ಧರ್ಮ ಮತ್ತು ಸಾಹಿತ್ಯ ಸಮ್ಮೇಳನವು ತಾ. ೨೪ರಿಂದ ತಾ. ೨೬ರ ವರೆಗೆ ನೆರವೇರಲಿರುವುದು ಎಂದು ಮ್ಯಾನೇಜಿಂಗ್ ಟ್ರಸ್ಟಿ ಶ್ರೀ ಎ. ಜಗಂಜೀವ ಆಳ್ವರು ತಿಳಿಸುತ್ತಾರೆ.

ಪ್ರಕಟಣೆ
ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 49/1959.

P. ನಾರಾಯಣಾಚಾರ್ಯ ವಾದಿ.

ಮತ್ತು

ನರಸಿಂಹ ಮೂರ್ತಿ ಕೂಡಾ ಪ್ರತಿವಾದಿರು

ಇವರೊಳಗೆ.

1ನೆ ಪ್ರತಿವಾದಿ ನರಸಿಂಹ ಮೂರ್ತಿ— ವಾಸುದೇವ ಶಾಸ್ತ್ರಿಗಳ ಮಗ—ಉಡ್ಪಿ ತಾಲ್ಲೂಕು ಕೊಡವೂರು ಗ್ರಾಮದ ವಡಭಾಂಡೇಶ್ವರ— ಇವರಿಗೆ ತಿಳಿಸುವದೇನೆಂದರೆ—

ಪ್ರತಿವಾದಿರು-ವಾದಿವಳಗೆ—ಬಾಡಿಗೆಗೆ ಅನುಭವಿಸುವ ಸ್ಥಳ ಕಟ್ಟೋಣ ಸ್ವಾಧೀನತೆಗೂ ಗೇಣಿ ಬಾಕಿ ಹುಟ್ಟುವಳ್ಳಿಗೆ ಕೂಡಾ ವಾದಿಯು ದಾಖಲ್ಲು ಮಾಡಿದ ಮೇಲ್ಕಂಡ ದಾವೆಯಲ್ಲಿ 1ನೆ ಪ್ರತಿವಾದಿಯ ನೋಟೀಸು ಬಗ್ಗೆ ತಾ. 6-6-1959ಕ್ಕೆ ಯಿಟ್ಟಿದೆ— ಆ ಕುರಿತು 1ನೆ ಪ್ರತಿವಾದಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟು ಮುಂದೆ 10 ಗಂಟೆಗೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ತಿಳಿಸೋಣಾಗಿಯದೆ.

V. R. Kidyur,
Advocate for Plaintiff.

ಉಡ್ಪಿ, 14-4-1959.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು. ಸಂ. ಸ.)

ನಯದ್ಯುಮಣಿ- ಮೇಘನಾದಾರಿ ಸೂರಿ ವಿರಚಿತ (ಸಂಸ್ಕೃತ) ಸಂಪಾದಕರು: ಶ್ರೀಗಳಾದ ವಿ. ಕೃಷ್ಣಮಾಚಾರ್ಯ ಮತ್ತು ಟಿ. ವೀರರಾಘವಾಚಾರ್ಯ. ಪ್ರಕಾಶಕರು: ಮದ್ರಾಸು ಸರಕಾರದ ಪ್ರಾಚ್ಯ ಹಸ್ತಪ್ರತಿಗಳ ಭಂಡಾರ, ಮದ್ರಾಸು ಪುಟಗಳು: Lix + ೩೮೧, ಬೆಲೆ: ರೂ. ೬–೧೨–೦.

ತತ್ತ್ವ ಶಾಸ್ತ್ರದ ಕಡೆಗೆ ಭಾರತೀಯರು ಪಟ್ಟ ಪರಿಶ್ರಮ ಮತ್ತು ಅದರಿಂದ ಗಳಿಸಿದ ಸಾಧನೆಗಳು ಅಪರಿಮಿತ. ಈ ತತ್ತ್ವಶಾಸ್ತ್ರವು ಸಾಂಖ್ಯ, ವೈಶೇಷಿಕ, ಮೀಮಾಂಸ, ನ್ಯಾಯ, ವೇದಾಂತ ಮತ್ತು ಯೋಗವೆಂಬುವಾಗಿ ಆರು ಮುಖ್ಯ ದರ್ಶನಗಳಾಗಿ ವಿಭಾಜಿತವಾಗಿರುವುವಾದರೂ ಎಲ್ಲವುಗಳ ಮೂಲೋದ್ದೇಶವೂ ಆತ್ಮಜ್ಞಾನವಾಗಿದೆ. ಈ ದರ್ಶನಗಳಲ್ಲಿ ನ್ಯಾಯವು ಗೌತಮ ಋಷಿಯಿಂದ ಪ್ರಾರಂಭಿಸಲ್ಪಟ್ಟುದರಿಂದ ಇದಕ್ಕೆ ಗೌತಮ ದರ್ಶನವೆಂಬ ಹೆಸರು ಬಂದಿದೆ. ವೇದ ಪ್ರತಿಪಾದಿತ ತತ್ತ್ವಗಳನ್ನು ಒಪ್ಪುವ ಆಸ್ತಿಕರಲ್ಲಿ ಹಲವಾರು ಭೇದಗಳಿದ್ದು, ಅವುಗಳಲ್ಲಿ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತವೆಂಬ ಮೂರು ಪಂಥಗಳು ಪ್ರಮುಖವಾಗಿವೆ. ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ತತ್ತ್ವ ಪ್ರಣಾಳಿಯು ಅವರಿಗೆ ಮೊದಲೇ ಇದ್ದಿದ್ದ ಆಳ್ವಾರರುಗಳಿಂದಲೇ ಪ್ರಾರಂಭಿಸಲ್ಪಟ್ಟಿತೆಂದು ಹೇಳಬಹುದಾದರೂ ಬ್ರಹ್ಮಸೂತ್ರಕ್ಕೆ ಈ ತತ್ವದಂತೆ ಭಾಷ್ಯ ಬರೆದು, ಆ ಮತವನ್ನು ಊರ್ಜಿತಗೊಳಿಸಿದವರು ಶ್ರೀ ರಾಮಾನುಜಾಚಾರ್ಯರೆಂಬುದು ಜಗಜ್ಜನಿತ. ಇವರ ನಂತರ ಅವರ ಶಿಷ್ಯರು ವಿಶಿಷ್ಟಾದ್ವೈತ ಪ್ರಣಾಳಿಯ ಪ್ರಚಾರಕ್ಕಾಗಿ ಅನೇಕ ಕೃತಿಗಳನ್ನೂ ಭಾಷ್ಯಗಳನ್ನೂ ಬರೆದಿದ್ದಾರೆ. ಇಂತಹರಲ್ಲಿ ಮೇಘನಾದಾರಿಯೂ ಒಬ್ಬನು. ಇವನು ಕ್ರಿ.ಶ. ೧೩ನೆಯ ಶತಮಾನದಲ್ಲಿದ್ದನೆಂದೂ ಊಹಿಸಲು ಕಾರಣಗಳಿವೆ. ಮೇಘನಾದಾರಿಯು 'ನಯದ್ಯುಮಣಿ'ಯನ್ನಲ್ಲದೇ ಶ್ರೀ ರಾಮಾನುಜಾಚಾರ್ಯರ ಶ್ರೀ ಭಾಷ್ಯದ ಮೇಲಿನ ವ್ಯಾಖ್ಯಾನವಾದ 'ನಯ ಪ್ರಕಾಶಿಕಾ' ಮತ್ತು ಶ್ರೀ ಭಾಷ್ಯದ ರೂಪರೇಷೆಯಾದ 'ಭಾಷ್ಯಭಾವ ಪ್ರಬೋಧ'ವೆಂಬ ಇನ್ನೆರಡು ಗ್ರಂಥಗಳನ್ನೂ ಬರೆದಿದ್ದಾನೆ.

"ನಯದ್ಯುಮಣಿ"ಯೆಂಬುದು ಮೇಘನಾದಾರಿಯ ವಿಶಿಷ್ಟಾದ್ವೈತದತತ್ತ್ವಗಳಿಗೆಸಂಬಂಧಿಸಿದ ಸ್ವತಂತ್ರ ಕೃತಿ. ಅಲ್ಲದೇ ಈತನು 'ಮುಮುಕ್ಷೂಪಾಯ ಸಂಗ್ರಹ'ವೆಂಬ ಇನ್ನೊಂದು ಗ್ರಂಥವನ್ನೂ ಬರೆದಿರುವನೆಂದು ಡಾ। ವಾಸಿಗುಪ್ತರು ಅಭಿಪ್ರಾಯ ಪಡುವರಾದರೂ ಈ ಗ್ರಂಥವು ಅಲಭ್ಯವಿರುವುದರಿಂದ ಏನೂ ಹೇಳಲಾಗದು. "ನಯದ್ಯುಮಣಿ"ಯು ಕರ್ತೃವಿನ ಮೂರನೆಯ ಗ್ರಂಥ. ಇದರಲ್ಲಿ ಹನ್ನೆರಡು ವಿಭಾಗಗಳಿವೆ. "ನಯದ್ಯುಮಣಿ" ಎಂದರೆ, ನಯವೆಂಬ ಆಕಾಶದಲ್ಲಿನ ಮಣಿ ಎಂದರ್ಥ. ಆಕಾಶದಲ್ಲಿನ ಸೂರ್ಯನು ಹನ್ನೆರಡು ರಾಶಿಗಳಲ್ಲಿ ಸಂಚರಿಸುವಂತೆ, ನಯಾಕಾಶದ ಮಣಿಯೂ ಹನ್ನೆರಡು ಅಧ್ಯಾಯಗಳಲ್ಲಿ ಸುತ್ತುವರಿಯುತ್ತದೆ. ಶರೀರ ಲಕ್ಷಣ ನಿರೂಪಣಮ್, ಸ್ವತಃ ಪ್ರಾಮಾಣ್ಯ ನಿರೂಪಣಮ್, ವಾಕ್ಯಾರ್ಥ ಪ್ರದೀಪ, ಅಸ್ತಿತಾಭಿಧಾನ ನಿರೂಪಣಮ್, ಶಬ್ದ ನಿರೂಪಣಮ್, ಶ್ರುತಿಲಿಂಗಾದಿ ನಿರೂಪಣಮ್, ಯಥಾರ್ಥ ಖ್ಯಾತಿ ನಿರೂಪಣಮ್, ಉಪೋದ್ಘಾತ ನಿರ್ಣಯ, ಕಾಲನಿರೂಪಣಮ್, ಪ್ರಮಾಣನಿರೂಪಣಮ್ ಮತ್ತು ಪ್ರಮೇಯ ನಿರೂಪಣಮ್ ಎಂಬ ಹನ್ನೆರಡು ಪಾದಗಳಾಗಿ ಗ್ರಂಥವು ವಿಭಾಜಿತವಾಗಿದೆ. ಪ್ರತಿ ಪಾದಗಳಲ್ಲಿಯೂ ತತ್ಸಂಬಂಧಿತ ವಿಷಯವನ್ನು ಚರ್ಚಿಸಿ, ಇತರ ಮತಗಳನ್ನು ಅಲ್ಲಗಳೆದು, ಪೂರ್ವ ಪಕ್ಷಗಳನ್ನು ಎತ್ತಿ ಸಮಾಧಾನಗಳಿಂದ ದೂರೀಕರಿಸಿ, ವಿಶಿಷ್ಟಾದ್ವೈತ ಸಿದ್ಧಾಂತವನ್ನು ಸಮರ್ಥಿಸಲಾಗಿದೆ. ಮೀಮಾಂಸ ಮತ್ತು ನ್ಯಾಯದರ್ಶನಗಳಲ್ಲಿ ಗ್ರಂಥಕರ್ತೃವಿಗಿರುವ ಅನುಭವ ಹಾಗೂ ಜ್ಞಾನವು ಗ್ರಂಥದ ಪ್ರತಿ ಅಧ್ಯಾಯಗಳಲ್ಲೂ ವ್ಯಕ್ತಗೊಳ್ಳುತ್ತದೆ. ಈತನ ಶೈಲಿಯು ಸರಳವಾಗಿಯೂ ಸುಲಭಗಾಮಿಯಾಗಿಯೂ ಮುಂದುವರಿಯುವುದು. ಇವು ರಾಮಾನುಜ ಮತ್ತು ವೇದಾಂತದೇಶಿಕರಷ್ಟು ಮಧುಮಧುರವಾಗಿಲ್ಲವಾದರೂ ಅಲ್ಲಲ್ಲಿ ಕವಿಯು ತನ್ನ ಅಭಿಪ್ರಾಯಗಳನ್ನು ಪದ್ಯರೂಪದಲ್ಲಿ ಕ್ರೋಢೀಕರಿಸಿರುವುದು ಸ್ತುತ್ಯ ಉಪಕ್ರಮವಾಗಿದೆ.

ಈ ಗ್ರಂಥವು ಮದ್ರಾಸ ಸರಕಾರದ ಪ್ರಾಚ್ಯ ಹಸ್ತಪ್ರತಿ ಭಾಂಡಾಗಾರದ ಒಂದು ಪ್ರತಿಯ ಆಧಾರದಿಂದ ಮುದ್ರಿತವಾಗಿದ್ದು, ಅಡ್ಯಾರ್ ಭಾಂಡಾಗಾರದ ಪ್ರತಿಯೊಡನೆ ಸರಿನೋಡಲ್ಪಟ್ಟಿದೆ. ಅಲ್ಲದೆ, ಪಾಠಾಂತರಗಳಿದ್ದಲ್ಲಿ ಅವನ್ನೂ ಅಡಿಯಲ್ಲಿ ಕೊಡಲಾಗಿದೆ. ಆದರೂ ಸಾಮಾನ್ಯವಾಗಿ ಇಂತಹ ಬೃಹದ್ಗ್ರಂಥಗಳಲ್ಲಿ ಕಂಡುಬರುವಷ್ಟು ಪಾಠಾಂತರಗಳು ಇದರಲ್ಲಿಲ್ಲದಿರುವುದು ಸಂತೋಷದ ವಿಷಯ. ಗ್ರಂಥದ ಆದಿಯಲ್ಲಿ ಸಂಪಾದಕರಲ್ಲಿ ಒಬ್ಬರಾದ ಶ್ರೀ ವಿ. ಕೃಷ್ಣಮಾಚಾರ್ಯರು ಆಂಗ್ಲ ಭಾಷೆಯಲ್ಲೂ ಇನ್ನೊಬ್ಬ ಸಂಪಾದಕರಾದ ಶ್ರೀ ಟಿ. ವೀರರಾಘವಾಚಾರ್ಯರು ಸಂಸ್ಕೃತ ಭಾಷೆಯಲ್ಲೂ ಗ್ರಂಥಾಧ್ಯಯನಕ್ಕೆ ಯೋಗ್ಯವಾದ ಮತ್ತು ಅವಶ್ಯಕವಾದ ಉಪೋದ್ಘಾತವನ್ನು ಭೂಮಿಕೆಯಾಗಿ ಬರೆದಿದ್ದಾರೆ. ಅಂತ್ಯದಲ್ಲಿ ಪ್ರಕೃತದ ಗ್ರಂಥದಲ್ಲಿ ಉದಾಹೃತವಾದ ಅನ್ಯ ಗ್ರಂಥಗಳ ವಚನಾನುಕ್ರಮಣಿಕೆಯನ್ನು ಅವುಗಳ ಮೂಲಗ್ರಂಥಗಳ ಹೆಸರಿನೊಂದನೊಂದಿಗೆ ಕೊಡಲಾಗಿದೆ.

ಮದ್ರಾಸಿನ ಪ್ರಾಚ್ಯ ಹಸ್ತಪ್ರತಿ ಭಾಂಡಾಗಾರವು ಸರಕಾರದ ನೆರವಿನಿಂದ ಇಂತಹ ಅಮೂಲ್ಯ ಪುಸ್ತಕಗಳಿಗೆ ಅಚ್ಚಿನ ರೂಪವನ್ನು ಕೊಟ್ಟು ಪ್ರಸಿದ್ಧಿಸುತ್ತಿದೆ. ಈ ಮಹಾಕಾರ್ಯದ ಪ್ರಯೋಜನವನ್ನು ಕೇವಲ ವಿದ್ವಾಂಸರು ಮಾತ್ರ ಮಾಡಿಕೊಂಡರೆ ಸಾಲದು. ನಮ್ಮ ಮುಂದಿನ ಜನಾಂಗವಾದ ಯುವಕರಲ್ಲಿ ಅನುಕೂಲವುಳ್ಳವರಾದರೂ ಈ ಗ್ರಂಥಗಳನ್ನು ಜ್ಞಾನಲಾಭದ ದೃಷ್ಟಿಯಿಂದ ಅಭ್ಯಸಿಸಬೇಕು; ತನ್ಮೂಲಕ ಗಳಿಸಿದಜ್ಞಾನವನ್ನು ಜನೋತ್ಸರ್ಗಕ್ಕಾಗಿ ಅರ್ಪಿಸುವ ಉದಾರತೆಯನ್ನು ತೋರಿಸಬೇಕು. ಹೀಗಾದರೆ, ಇದಕ್ಕಾಗಿ ಪಟ್ಟ ಶ್ರಮ, ಮಾಡಿದ ವ್ಯಯ ಸಾರ್ಥಕವಾಗುವುದು. ಹೀಗಾಗದುಳಿದರೆ, ಆಗ, ಇಂತಹ ಗ್ರಂಥಗಳು ಪುಸ್ತಕ ಭಂಡಾರಗಳ ಅಲಂಕಾರ ಮೂರ್ತಿಗಳಾಗಿ ಪರಿಣಮಿಸುವುವು. ಆದರೆ, ಅಂತಹ ದುರ್ಗತಿಯೊದಗಿದರೆ, ಯಾರಿಗೆ ತಾನೇ ಲಾಭ?

ಮಹಾ ಭಾಸ್ಕರೀಯಮ್—ಭಾಸ್ಕರಾಚಾರ್ಯ ಕೃತಮ್. ಗೋವಿಂದ ಸ್ವಾಮಿಕೃತ ಭಾಷ್ಯ ಮತ್ತು ಪರಮೇಶ್ವರಕೃತ ಸಿದ್ಧಾಂತ ದೀಪಿಕಾ ಎಂಬ ವ್ಯಾಖ್ಯಾನ ಸಹಿತ ಸಂಪಾದಕರು: ಶ್ರೀ ಟಿ. ಎಸ್. ಕುಪ್ಪಣ್ಣ ಶಾಸ್ತ್ರಿ, ಎಂ. ಎ., ಎಲ್. ಟಿ. ಪ್ರಕಾಶಕರು: ಮದ್ರಾಸು ಸರಕಾರದ ಪ್ರಾಚ್ಯ ಹಸ್ತಪ್ರತಿಗಳ ಭಂಡಾರ, ಮದ್ರಾಸು. ಪುಟಗಳು: (XVII + 10 + ೪೪೨. ಬೆಲೆ: ರೂ. ೧೧ — ೦.

ಭಾರತೀಯರಲ್ಲಿ ಪ್ರಾಚೀನ ಕಾಲದಲ್ಲಿಯೂ ಸಾಕಷ್ಟು ಪ್ರೋತ್ಸಾಹಿತಗೊಂಡು ಮುಂದುವರಿದು ಇತ್ತೀಚೆಗೆ ತಡೆಹಿಡಿಯಲ್ಪಟ್ಟ ಶಾಸ್ತ್ರಗಳಲ್ಲಿ ಜ್ಯೋತಿಷ ಶಾಸ್ತ್ರವೂ ಒಂದು. ಈ ಶಾಸ್ತ್ರವು ಹೋರಾ, ಸಿದ್ಧಾಂತ ಮತ್ತು ಸಂಹಿತೆಗಳೆಂಬ ಮೂರು ಸ್ಕಂಧಗಳಿಂದ ಕೂಡಿದೆ. ಹೋರಾ ವಿಭಾಗದಲ್ಲಿ ಜಾತಕ ಪ್ರಶ್ನೆಗಳೂ ಸಿದ್ಧಾಂತದಲ್ಲಿ ಗ್ರಹಗಣಿತವೂ ಸಂಹಿತೆಯಲ್ಲಿ ಮೇದಿನಿಯ ಜಾತಕವೂ ಬರುವುವು. ಮಹಾ ಭಾಸ್ಕರೀಯಮ್ ಎಂಬುದು ಸಿದ್ಧಾಂತವನ್ನು ಪ್ರತಿಪಾದಿಸುವ ಗ್ರಂಥವಾಗಿದೆ.

ಜ್ಯೋತಿಷ ಶಾಸ್ತ್ರದಲ್ಲಿ ಮುಖ್ಯವಾಗಿ ಇಬ್ಬರು ಭಾಸ್ಕರಾಚಾರ್ಯರು ಎದ್ದು ತೋರುತ್ತಾರೆ. ಇವರಲ್ಲಿ ಅರ್ವಾಚೀನನಾದ ಎರಡನೆಯ ಭಾಸ್ಕರಾಚಾರ್ಯನು ಜ್ಯೋತಿಷಜ್ಞರಿಗೆಲ್ಲ ಚಿರಪರಿಚಿತನೇ ಆಗಿದ್ದಾನೆ. ಇವನು 'ಲೀಲಾವತಿ', 'ಬೀಜಗಣಿತ' ಮತ್ತು 'ಸಿದ್ಧಾಂತ ಶಿರೋಮಣಿ' ಎಂಬ ಗ್ರಂಥತ್ರಯಗಳ ಕರ್ತನಾಗಿದ್ದು ಸುಮಾರು ೧೨ನೆಯ ಶತಮಾನದ ಮಧ್ಯಾವಧಿಯಲ್ಲಿದ್ದವನು. ಪ್ರಾಚೀನನಾದ ಒಂದನೆಯ ಭಾಸ್ಕರಾಚಾರ್ಯನೇ 'ಮಹಾ ಭಾಸ್ಕರೀಯಂ'ದ ಕರ್ತೃ. ಈ ಗ್ರಂಥವಲ್ಲದೇ 'ಲಘು' ಭಾಸ್ಕರೀಯ', 'ಆರ್ಯಭಟೀಯ ಭಾಷ್ಯ'ಗಳನ್ನೂ ಬರೆದಿದ್ದನೆಂದು ತಿಳಿಯುತ್ತದೆ. ಮಹಾ ಭಾಸ್ಕರೀಯಮ್ ಆರ್ಯಭಟೀಯದ ಮೇಲಿನ ವಿವರಣಾರೂಪವಾದ ಸ್ವತಂತ್ರ ಕೃತಿಯಾಗಿದೆ. ಈತನ ಕಾಲವು ಸುಮಾರು ಕ್ರಿ. ಶ. ೬೦೦ ಎಂದು ತಿಳಿದು ಬರುತ್ತದೆ. ಗ್ರಂಥಾಧಾರದಿಂದ ಈತನು ವಲ್ಲಭಿಯ ಸಮೀಪದಲ್ಲಿ ವಾಸವಾಗಿದ್ದನೆಂದೂ ಹೇಳಬಹುದು. 'ಮಹಾ ಭಾಸ್ಕರೀಯಮ್'ಗೆ 'ಕರ್ಮನಿಬಂಧ'ವೆಂಬ ಇನ್ನೊಂದು ಹೆಸರು ಇದ್ದರೂ ಮೊದಲಿನದೇ ವಿಖ್ಯಾತವಾಗಿದೆ.

ಪ್ರಸಿದ್ಧ ಜ್ಯೋತಿಷಕಾರ ಆರ್ಯಭಟನ ಸಂಪ್ರದಾಯವನ್ನೇ ಈ ಭಾಸ್ಕರಾಚಾರ್ಯನು ಅನುಸರಿಸಿದ್ದಾನೆ. ಜ್ಯೋತಿಷಕ್ಕೂ ಕೇರಳಕ್ಕೂ ವಿಶೇಷ ಸಂಬಂಧವಿದೆ. ಕೇರಳದ ಜ್ಯೋತಿಷ ಶಾಸ್ತ್ರಜ್ಞರು ಆರ್ಯಭಟನು 'ಸೂತ್ರಕಾರ'ನೆಂದೂ ಭಾಸ್ಕರನು 'ವೃತ್ತಿಕಾರ'ನೆಂದೂ ಭಾಸ್ಕರೀಯದ ಮೇಲಿನ ಭಾಷ್ಯವನ್ನು ಬರೆದ ಗೋವಿಂದ ಸ್ವಾಮಿಯನ್ನು 'ಭಾಷ್ಯಕಾರ'ನೆಂದೂ ಅನ್ನುತ್ತಾರೆ. ಈ ಗೋವಿಂದ ಸ್ವಾಮಿಯು ಪ್ರಕೃತದ ಭಾಷ್ಯವನ್ನಲ್ಲದೇ 'ಪರಾಶರಹೋರಾ', 'ಗೋವಿಂದ ಪದ್ಧತಿ' ಮತ್ತು 'ಗೋವಿಂದಕೃತಿ' ಎಂಬಿತರ ಗ್ರಂಥಗಳನ್ನೂ ಬರೆದಿರುವನೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. 'ಸಿದ್ಧಾಂತದೀಪಿಕ'ದ ಕರ್ತೃವಾದ ಪರಮೇಶ್ವರನು ದೃಗ್ಗಣಿತ ವಿಧಾನಕ್ಕೆ ಅಪರಿಮಿತ ಶ್ರಮ ಸಲ್ಲಿಸಿದವನು.

ಮಹಾಭಾಸ್ಕರೀಯಮ್ ಅಷ್ಟಾಧ್ಯಾಯಗಳಿಂದಡಕವಾಗಿದೆ. ಅಹರ್ಗಣವನ್ನು ತರುವ ರೀತಿ, ಚಂದ್ರೋಚ್ಚಪಾತಗಳ ಕ್ಷೇಪಕಥನ, ಚಾಪೀಯ ತ್ರಿಕೋಣಮಿತಿ, ಉದಯ ಲಗ್ನ ಸಾಧನ, ಮಂಗಳ ಗುರು ಶನಿಗಳ ಪ್ರತಿಮಂಡಲ ಕರ್ಮ, ರವಿಚಂದ್ರರ ಗ್ರಹಣ, ತಾರಾ ಗ್ರಹಗಳು, ಮಧ್ಯವಿಕ್ಷೇಪ ಪಾತಗಳು ಮೊದಲಾದ ವಿಷಯಗಳು ಸವಿಸ್ತಾರವಾಗಿ ಇಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಸುಮಾರು ಒಂದೂವರೆ ಸಾವಿರ ವರ್ಷಗಳಿಗೆ ಮೊದಲೇ ಖಗೋಳ ಶಾಸ್ತ್ರದಲ್ಲಿ ಇಂತಹ ಪ್ರಗಲ್ಭ ಗ್ರಂಥವೊಂದು ರಚಿತವಾಗಿದ್ದು, ಅದರಲ್ಲಿ ಎಲ್ಲ ವಿಷಯಗಳೂ ಅಡಕವಾಗಿರುವುದು ಭಾರತೀಯರಿಗೆ ಹೆಮ್ಮೆಯ ವಿಷಯ.

ಸಾಮಾನ್ಯವಾಗಿ ಜ್ಯೋತಿಷವೆಂದರೆ, ಇಂದು ಜನತೆಯಲ್ಲಿ ತಿರಸ್ಕಾರದಭಾವನೆ ಬೆಳೆಯುತ್ತಿದೆ. ಇದಕ್ಕೆ ಆಧುನಿಕೀಯತೆಯೇ ಕಾರಣವೆನಬಹುದಾದರೂ ಜ್ಯೋತಿಷ ಶಾಸ್ತ್ರದಲ್ಲಿ ಪ್ರಶ್ನಭಾಗವೊಂದನ್ನೇ ಅಲ್ಪಸ್ವಲ್ಪ ಕಲಿತು, ತಮ್ಮ ಬುದ್ಧಿವಂತಿಕೆಯ ಬಲದಿಂದಲೇ ಮಹಾಜ್ಯೋತಿಷಿಗಳೆನಿಸಿಕೊಳ್ಳುವವರೇ ಈ ಶಾಸ್ತ್ರದ ಪಾವಿತ್ರ್ಯವನ್ನು ಅಂತಗೊಳಿಸುತಿದ್ದಾರೆಂದು ಖೇದಪೂರ್ವಕವಾಗಿ ಹೇಳಬೇಕಾಗಿದೆ. ಕೇವಲ ಪ್ರಶ್ನಭಾಗ ಅಥವಾ ಹೋರಾ ಮಾತ್ರ ಜ್ಯೋತಿಷವಲ್ಲವೆಂದೂ ತಿಳಿಯಬೇಕು. ಅಲ್ಲದೇ ಈ ಹೋರಾಕ್ಕೆ ಉಳಿದ ಸ್ಕಂಧಗಳಾದ ಸಿದ್ಧಾಂತ ಮತ್ತು ಸಂಹಿತೆಗಳೂ ನೆರವೀಯುತ್ತವೆಂಬುದನ್ನೂ ಮರೆಯಬಾರದು. ಆದುದರಿಂದ, ಜ್ಯೋತಿಷದಲ್ಲಿ ಆಸಕ್ತಿ ಇರುವವರು ಇದರ ಅಂಗಾಂಗಗಳಲ್ಲಿ ಇದುವರೆಗೆ ರಚಿತವಾದ ಎಲ್ಲ ಗ್ರಂಥಗಳ ಅಭ್ಯಾಸವನ್ನೂ ಆಳವಾಗಿ ಮಾಡಿಕೊಳ್ಳಬೇಕು. ಅಲ್ಲದೇ ಪಂಚಾಂಗಗಳನ್ನು ರಚಿಸುವಾಗ, ಹಿಂದೆ ಆರ್ಯಭಟನೋ ಭಾಸ್ಕರನೋ ಮಾಡಿಟ್ಟ ತತ್ವಗಳನ್ನೇ ಕಣ್ಮುಚ್ಚಿ ಅನುಸರಿಸಿ, ಅಂದಿನಿಂದ ಇಂದಿನ ವರೆಗಿನ ದಿನಗಳಲ್ಲಿ ಬದಲಾದ ಗ್ರಹಗತಿಯನ್ನು ಅರಿಯದೆ ಇರುವುದರಿಂದ ನಾವು ತಪ್ಪಿಬಿದ್ದೇವೆ ಎಂದು ತಿಳಿಯುತ್ತವೆ. ಇದಕ್ಕಾಗಿ ರಾಷ್ಟ್ರೀಯ ಪಂಚಾಂಗವೊಂದು ತಯಾರಾಗಿದೆಯೆನ್ನೋ ನಿಜ. ಅವರೂ ನಮ್ಮ ಜ್ಯೋತಿಷ ಶಾಸ್ತ್ರವು ಬಾಳುವ ಮತ್ತು ಬೆಳೆಯುವ ದೃಷ್ಟಿಯಿಂದ ಈ ಬಗ್ಗೆ ಇರುವ ಪ್ರಾಚೀನ ಗ್ರಂಥಾಧ್ಯಯನವು ಅವಶ್ಯಕವೆನ್ನಬಹುದು. ಆದುದರಿಂದ, ಪ್ರಕೃತದ ಈ ಮಹಾಗ್ರಂಥವು ಜ್ಯೋತಿಷ ವಿದ್ಯಾರ್ಥಿಗಳಿಗೆ ಬಹಳ ಉಪಕಾರಕ್ಕೆ ಬೀಳುವುದು.

ಸಂಪಾದಕರಾದ ಕುಪ್ಪಣ್ಣ ಶಾಸ್ತ್ರಿಗಳು ತಮ್ಮ ವಿದ್ವತ್ಪೂರ್ಣ ಭಾಷೆಯಲ್ಲಿ ಈ ಮಹಾಗ್ರಂಥಕ್ಕೆ ಉಪೋದ್ಘಾತವನ್ನು ವಿಸ್ತಾರವಾಗಿ ಬರೆದಿರುವರಲ್ಲದೇ ಗ್ರಂಥದ ಪ್ರತ್ಯಧ್ಯಾಯದಲ್ಲಿ ನಿಹಿತವಾದ ವಿಷಯಗಳ ಸ್ಥೂಲ ವೀಕ್ಷಣ ನಡೆಸಿದ್ದಾರೆ. ಆಂಗ್ಲ ಭಾಷೆಯಲ್ಲಿರುವ ಈ ಉಪೋದ್ಘಾತಾದಿಗಳು ಅಭ್ಯಾಸೇಚ್ಛುಗಳಿಗೆ ಉಪಯುಕ್ತವಿವೆ. ತಮ್ಮ ಗುರುತರವಾದ ಹೊಣೆಯನ್ನು ಎಂಟು ಹಸ್ತಪ್ರತಿಗಳ ಸಹಾಯದಿಂದ ಸುಯೋಗ್ಯವಾಗಿ ನಿರ್ವಹಿಸಿದ ಶ್ರೀ ಶಾಸ್ತ್ರಿಗಳೂ ಪ್ರಕಾಶಪಡಿಸಿದ ಭಾಂಡಾರದ ಮುಖ್ಯಸ್ಥರಾದ ಶ್ರೀ ಟಿ. ಚಂದ್ರಶೇಖರರೂ ಅಭಿನಂದನಾರ್ಹರಿದ್ದಾರೆ. ಸರಕಾರದ ಪ್ರೋತ್ಸಾಹ ಮತ್ತು ವಿದ್ವಾಂಸರ ಪರಿಶ್ರಮಗಳ ಸದುಪಯೋಗವನ್ನು ವಿದ್ಯಾರ್ಥಿಗಳು ಸಾರ್ಥಕಗೊಳಿಸಬೇಕು.

— ಗೋರಾ



ಅಮೆರಿಕೆಯ ನೌಕಾದಳವು ನೀರಿನಡಿಯಿಂದ ಮೇಲೆ ಹಿಡಿಸುವ ಕೃತ್ರಿಮ ಧ್ರುವನಕ್ಷತ್ರಗಳನ್ನು ಸುಟ್ಟಾಗ ತೆಗೆದ ಚಿತ್ರ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಸಾಹಸ ಶೀಲತೆ

(೪ನೇ ಪುಟದಿಂದ)

ಇವನ್ನು ಹೊಂದಿಕೊಂಡು ಕೀಗಳು ತಯಾರಾಗುತ್ತವೆ. ಈ ಅಕ್ಷರ-ಸಂಖ್ಯೆಗಳು ಕಡಿಮೆಯಿರುವಷ್ಟು ಟಾಯ್ಪ್ಲಲನ ಕೆಲಸ ಸುಗಮವಾಗುತ್ತದೆ. ಅಂಗ್ಲ ಮತ್ತು ಫ್ರೆಂಚ ಟಾಯ್ಪರಯ್ಟರ ತಯಾರಿಸುವುದು ಎಲ್ಲವುಗಳಿಗಿಂತ ಸರಳ. ಇವುಗಳಲ್ಲಿ ಕೇವಲ ೨೬ ವರ್ಣಗಳು ಮಾತ್ರ ಇವೆ. ಉಳಿದ ಯಾವ ಐರೋಪ್ಯ ಭಾಷೆಗೂ ಇಷ್ಟು ಕಡಿಮೆ ವರ್ಣಗಳಿರುವುದಿಲ್ಲ.

ಸಂಸ್ಕೃತ, ಪಾಳಿ, ಪ್ರಾಕೃತ, ವರ್ತಮಾನ ಹಿಂದಿ ಬಂಗಾಳಿ ಮತ್ತಿತರ ಭಾರತೀಯ ಭಾಷೆಗಳಲ್ಲಿ ಹ್ರಸ್ವ ಮತ್ತು ದೀರ್ಘ ಮಾತ್ರೆಗಳು, ಸಂಯುಕ್ತಾಕ್ಷರಗಳು ಮತ್ತು ಪಙ್ತಿಯ ಮೇಲೆ ಹಾಗೂ ಕೆಳಗೆ ಕೊಡಬಹುದಾದ ಚಿಹ್ನೆಗಳು ಇವೆ. ಇವು ಎರಡನೆಯ ಸಾಲಿಗೆ ಸೇರುತ್ತವೆ. ಅರಬಿ ಪರಿವಾರದ ಎಲ್ಲ ಭಾಷೆಗಳು, ಉದಾಹರಣೆಗೆ ಪಾರಸೀ ಮತ್ತು ಉರ್ದೂ, ಸಿರಿಯನ್ ಮತ್ತು ಐಗುಪ್ತ, ಆಧುನಿಕ ಹೇಹಲವೀ ಮತ್ತು ಪಶ್ತೊಗಳು ಭಾರತೀಯ ಭಾಷೆಗಳಿಗಿಂತಲೂ ಕುಸು ಕಠಿನವಿವೆ. ಈ ಭಾಷೆಗಳ ಟಾಯ್ಪರಾಯ್ಟರಗಳಿಗಾಗಿ ಟಾಯ್ಪ್ಲಲನ ಕರ್ಮಚಾರಿಗಳು ಬಹು ಪ್ರಯಾಸ ಪಡಬೇಕಾಗುತ್ತದೆ. ಆದರೆ, ಚೀನೀ ಭಾಷೆಯ ಕೀ ಬೋರ್ಡನ್ನು ತಯಾರಿಸುವುದಕ್ಕೆ ಟಾಯ್ಪ್ಲಲನು ಹಣೆ ಬಡೆದು ಕೊಳ್ಳುವುದನ್ನು ಯೋಚಿಸಿದರೆ, ಉಳಿದ ಭಾಷೆಗಳ ಕೀ ಬೋರ್ಡ ರಚನೆ ಕೇವಲ ಹುಡುಗಾಟ ಎನ್ನಲೇ ಬೇಕು.

ಚೀನೀ ಭಾಷೆಯ ವರ್ಣಮಾಲೆಯಲ್ಲಿ ಹೆಚ್ಚು ಅಕ್ಷರಗಳಿವೆ. ಅಲ್ಲದೇ ಪ್ರತಿ ಅಕ್ಷರದಲ್ಲಿಯೂ ತುಂಬ ಅಂತರವಿರುವುದು. ಅಪರಿಮಿತ ವ್ಯಯ ತರುವ ಮತ್ತು ದೊಡ್ಡದಾಗುವ ಕಾರಣದಿಂದ ಚೀನೀ ಭಾಷೆಯ ಸರ್ವಾಂಗ ಸುಂದರ ಟಾಯ್ಪರಯ್ಟರ ತಯಾರಾಗಿಲ್ಲ. ಒರ್ವ ಗ್ರಾಹಕನಿಗಾಗಿ ಹಲವಾರು ವರ್ಷಗಳ ಪರಿಶ್ರಮದಿಂದ ಟಾಯ್ಪ್ಲಲನು ಚೀನೀ ಭಾಷೆಯ ಟಾಯ್ಪರಾಯ್ಟರದ ಮಾದರಿಯನ್ನು ತಯಾರಿಸಿದ್ದನು. ಅದು ಆಕಾರದಲ್ಲಿ ಪಿಯಾನೋವಿಗಿಂತಲೂ ಹಿರಿದಾಗಿತ್ತು!

ಹೇಗಿದೆ ಮಾರ್ಟಿನ್ ಟಾಯ್ಪ್ಲಲನ ಸಾಹಸದ ರೋಮಾಂಚಕ ಕಥೆ!

(ವಿವಿಧ ಮೂಲಗಳಿಂದ)

— ಗೋರಾ.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)
ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಹಿಳೋದ್ಧಾರ

ಮಹಿಳೆಯರ ವ್ಯವಸ್ಥಾಪಕ ಸಂಘ ಮತ್ತು ಸಂಸ್ಥೆಗಳು

ಈ ಸಂಸ್ಥೆಗಳು ಮಾಡುವ ಕೆಲಸ ವೇನು? ಅದರಿಂದ ಮಹಿಳೋದ್ಧಾರವಾದೀತೆ?

ನವತರುಣಿಯರಿಗೆ, ರಾಜಕೀಯದಲ್ಲಿರುವವರಿಗಾಗಲಿ ಇನ್ನಿತರ ರಂಗದಲ್ಲಿರುವ ವಿದ್ಯಾವಂತೆಯರಿಗಾಗಲಿ, ಸಭೆ ಸೇರುವುದು, ಸಭೆಯಲ್ಲಿ ಯಾರ್ಯಾರು ಯಾವ್ಯಾವ ವಿಷಯದ ಕುರಿತು ಉದ್ದುದ್ದ ಭಾಷಣ ಕೊಡುತ್ತಾರೋ ಅದನ್ನು ಕೇಳುವುದಾಗಲಿ ಹೊರತು ತಾವು ಯಾವ ರೀತಿಯಲ್ಲಿ ಭಾವೀ ಜನಾಂಗಕ್ಕೆ ಮಾರ್ಗದರ್ಶಕರಾಗಿರಬೇಕೆಂಬುದರ ಗಂಧಗಾಳಿ ಸಹ ಇದ್ದಂತೆ ಭಾಸವಾಗುವುದಿಲ್ಲ. ಒಂದು ಸಭೆಯಲ್ಲಿ ಭಾಷಣ ಕೊಟ್ಟರೆ ಯಾ ಇತರರ ಭಾಷಣವನ್ನು ಕೇಳಿದರೆ, ಇನ್ನೊಂದು ಸಭೆ ಸೇರುವ ಸಮಯಕ್ಕೆ ಮೊದಲು ಹೇಳಿದುದಾಗಲಿ ಯಾ ಕೇಳಿದ್ದಾಗಲಿ ನೆನಪಿನಲ್ಲೇ ಇರುವುದಿಲ್ಲವೆಂಬ ಮಾತ್ರಕ್ಕೆ ಎಷ್ಟೊಂದು ಅಪಹಾಸಕರ! ಮಾತ್ರವಲ್ಲ ಈಗ ಸೇರುವ ಸಭೆಗಳಲ್ಲಿ ಒಂದು ವೈಶಿಷ್ಟ್ಯ ಎಂದರೆ ಮೊದಲಿನ ಸಭೆಯು ಯಥಾ ನಕಲು ಅನಂತರದ ಸಭೆಗಳೆಂದರೂ ವಿಶೇಷವಲ್ಲ. ಭಾಷಣ ಕೊಡಲು ಮಾತ್ರ ಕೆಲವರಿಗೆ ಬರುವುದಲ್ಲದೆ, ತಾವು ಬರುವ ವರ್ಷ ಯಾವ್ಯಾವ ಕಾರ್ಯಗಳನ್ನು ನೆರವೇರಿಸಬೇಕೆಂಬ ನಿರ್ಧಾರಕ್ಕೆ ಬರಲು ಸಹ ಅವರಿಂದ ಸಾಧ್ಯವಾಗುವುದಿಲ್ಲ. ಇದೇ ಪ್ರತಿಯೋರ್ವ ವಿದ್ಯಾವಂತೆಯಾದ ಮಹಿಳೆಯನ್ನು ಕಾಡುವ ವಿಷಯ. ಆಕೆಗೆ ಸರಿಯಾದ ಒಂದು ನಿರ್ಧಾರಕ್ಕೆ ಬರಲಾಗುವುದಿಲ್ಲವೆಂದರೆ ನಮ್ಮೀ ಭಾರತ ದೇಶಕ್ಕೇ ಒಂದು ಕೊರತೆಯೆಂದಂತಾಯಿತು.

ವಿದ್ಯಾಭ್ಯಾಸ

ಉದಾಹರಣೆಗೆ, ನಾರಿಯರ ವಿದ್ಯಾಭ್ಯಾಸವು ಇನ್ನೂ ಬಾಲ್ಯಾವಸ್ಥೆಯಲ್ಲೇ ಇದೆಯೆಂದರೆ ತಪ್ಪೇನಲ್ಲ. ಸ್ಟೆನೋಗ್ರಾಫರ್ಸ್ ಮತ್ತು ಗುಮಾಸ್ತರನ್ನು ಮಾತ್ರ ಒದಗಿಸಲು ನಮಗೆ ಇದುವರೆಗೆ ಸಾಧ್ಯವಾಗಿರುತ್ತದೆ ಹೊರತು ಹೆಚ್ಚೇನೂ ಇಲ್ಲ. ಹೆಣ್ಣು ಗಂಡು ಮಕ್ಕಳ ಸಹಶಿಕ್ಷಣವು ಒಳ್ಳೆಯದಿರಬಹುದು; ಆದರೆ ವಿದ್ಯಾದಾಹದಿಂದ ತುಂಬಿದ ಹೆಣ್ಣುಮಕ್ಕಳಲ್ಲಿರುವ ಆಗೋಚರವಾದ ಸಾಮರ್ಥ್ಯವನ್ನು ವೃದ್ಧಿಪಡಿಸಲು ಇದು ಅವಕಾಶವನ್ನೀಯುವುದಿಲ್ಲ. ಶಾಲೆಗಳಿರುವುದೇ ಬಹಳ ವಿರಳ; ಮಾತ್ರವಲ್ಲ ನಮಗೆ ಸ್ವಾತಂತ್ರ್ಯ ಸಿಕ್ಕಿದ ಬಳಿಕ ಹೆಣ್ಣುಮಕ್ಕಳಿಗಾಗಿಯೇ ಶಾಲೆಯನ್ನು ತೆರೆಯಲು ನಿಜವಾದ ಪ್ರಯತ್ನವೇ ಆಗಲಿಲ್ಲ.

ಹಲವಾರು ಕಾರಣಗಳಿಂದ ಹೆಣ್ಣು ಮಕ್ಕಳ ವಿದ್ಯಾಭ್ಯಾಸವು ಗಂಡು ಮಕ್ಕಳ ವಿದ್ಯಾಭ್ಯಾಸದಿಂದ ಪ್ರತ್ಯೇಕವಾಗಿರಬೇಕಾಗುತ್ತದೆ. ಕಾನೂನು, ಯಂತ್ರ ವಿದ್ಯೆ (Engineering), ಹೆಚ್ಚಿನ ವೈಜ್ಞಾನಿಕ ವಿದ್ಯೆಗಳ ಮಟ್ಟಿಗೆ ಅಗತ್ಯವಿದ್ದರೆ ಈ ಪ್ರತ್ಯೇಕತೆ ಬೇಡವೆನ್ನಬಹುದು. ಹೆಚ್ಚಿನ ವಿಷಯಗಳಲ್ಲಿ, ಮಹಿಳೆಯರಿಗೆ ಯೋಗ್ಯವಾದ ರೀತಿಯಲ್ಲಿ ವಿಸ್ತಾರವಾದ ಪಾಠಪಟ್ಟಿಯನ್ನು ತಯಾರಿಸುವುದೇ ಮಹಿಳಾ ವ್ಯವಸ್ಥಾಪಕರ ಮುಖ್ಯ ಧ್ಯೇಯವಾಗಿದ್ದು ಅನರವರಿಗೆ ಹಿತವೆನಿಸುವ ದಾರಿಯಲ್ಲಿ ಸರಿಯಾದ ಶಿಕ್ಷಣವನ್ನೊದಗಿಸಲು ಸಹಕಾರಿಯಾಗಿರಬೇಕು. ಇಪ್ಪತ್ತು—ಮೂವತ್ತು ವರ್ಷಗಳ ಪರಿಶ್ರಮದ ಫಲವಾಗಿಯೂ ನಮ್ಮಾ ಭಾರತ ದೇಶದಲ್ಲಿ ಉಪಾಧ್ಯಾಯಿನಿಯರ ಕೊರತೆಯಿದೆಯೆಂಬುದು ಬಹು ಶೋಚನೀಯಕರವಾದುದು. ಅತೀ ಪ್ರಾಮುಖ್ಯ ಆವಶ್ಯಕತೆಯೆಂದರೆ ಮಹಿಳೆಯರಿಗಾಗಿ ತೆರೆಯಲಾಗುವ ಶಾಲೆಗಳನ್ನು ನಡೆಸಲು ಯೋಗ್ಯರಾದ ಉಪಾಧ್ಯಾಯಿನಿಯರ ಸಂಖ್ಯೆ ಹೆಚ್ಚಾಗುವುದು. ಉಪಾಧ್ಯಾಯಿನಿಯರ ಕ್ಷಾಮವು ಎಷ್ಟರ ಮಟ್ಟಿಗೆ ಯಿದೆಯೆಂದರೆ ಈಗ ಇರುವ ಅಲ್ಪ ಸ್ವಲ್ಪ ಮಹಿಳಾ ಶಾಲೆಗಳನ್ನು ಕೂಡಾ ನಡೆಸಲು ಕೆಲವು ಕಡೆಗಳಲ್ಲಿ ಗಂಡಸರೇ ಸಹಾಯಕ್ಕೆ ಬರಬೇಕಾಗುತ್ತದೆ. ಗಂಡು-ಹೆಣ್ಣು ಎಂದು ಭೇದವಿಲ್ಲದೆ ಚಿಕ್ಕ ಮಕ್ಕಳನ್ನು ಕಲಿಸಲು ಮಹಿಳೆಯರೆ ಅತೀ ಯೋಗ್ಯರೆಂದು ಪರಿಗಣಿಸಲ್ಪಟ್ಟ ಈ ಕಾಲದಲ್ಲಿ, ಉಪಾಧ್ಯಾಯಿನಿಯರ ಕ್ಷಾಮವು ನಿಜವಾಗಿಯೂ ಮಹಿಳಾ ವ್ಯವಸ್ಥಾಪಕ ಸಂಘಗಳಿಗೆ ಅತೀ ದೊಡ್ಡ ಕಳಂಕವನ್ನೇ ತಂದಂತಾಗಿದೆ.

ಸಾಮಾಜಿಕ ಕೂಟಗಳು

ಮಹಿಳಾ ವ್ಯವಸ್ಥಾಪಕ ಸಂಘಗಳು ಬರೇ ಸಾಮಾಜಿಕ ಕೂಟಗಳಾಗಿದ್ದು ಇಲ್ಲಿ ಹರಟೆಹೊಡೆಯುವುದೇ ಮುಖ್ಯ ಕಾರ್ಯಕ್ರಮವಾಗಿ ಯೋಗ್ಯವಾದ ಬೇರೆ ಯಾವ ಕಾಯಕವೂ ನಡೆಯದಿರುವುದು ಬಹು ಶೋಚನೀಯ. ಇಂತಹ ಸಾಮಾಜಿಕ ಸಂಘಗಳಲ್ಲಿ ಹೆಚ್ಚೆಂದರೆ ವರ್ಷಕ್ಕೊಂದು ಸಭೆ ಸೇರುವುದು; ಮತ್ತು ಹಲ ಕೆಲವು ಪ್ರಸಿದ್ಧರೆನ್ನಿಸಿ ಕೊಂಡವರು ಯಾವ್ಯಾವುದನ್ನು ಮಾಡತಕ್ಕದ್ದು ಮತ್ತು ಯಾವ್ಯಾವುದನ್ನು ಮಾಡಕೂಡದೆಂದು ಉದ್ದುದ್ದ ಭಾಷಣ ಕೊಡುವುದು. ಪ್ರತಿಯೊಂದು ಕಾರ್ಯ ನಿರ್ವಹಣೆಗೂ ಸರಕಾರವನ್ನೇ ಅವಲಂಬಿಸಿ ಕೊಂಡಿರುವ ಸ್ವಭಾವವು, ಮಹಿಳಾ ಪ್ರವರ್ತಕರನ್ನೂ ಅಂಟಿಕೊಂಡಿರುತ್ತದೆ ಪ್ರತಿಯೊಂದು ವಿಷಯದಲ್ಲಿಯೂ ಸರಕಾರವನ್ನೇ ಅವಲಂಬಿಸಿ ಕೊಂಡಿರುವುದೆಂದರೆ ಎಷ್ಟೊಂದು ಮೂರ್ಖತನ!

ಇತ್ತೀಚೆಗೆ ಒಂದೆಡೆಯಲ್ಲಿ ಸೇರಿದ ಮಹಿಳೆಯರ ಸಭೆಯಲ್ಲಿ, ಹೆಣ್ಣು ಮಕ್ಕಳು ತಮ್ಮ ವಿದ್ಯಾಭ್ಯಾಸಕ್ಕಾಗಿ, ಹೋಸ್ಟೆಲುಗಳ ಕೊರತೆಯಿಂದ, ಪೇಟೆಗಳಿಗೆ ಬರಲು ಅನನುಕೂಲವಾದರೆ, ಅಂತಹ ಹೆಣ್ಣು ಮಕ್ಕಳ ಬಳಿಗೆ ಉಪಾಧ್ಯಾಯರೇ ಹೋಗಬೇಕೆಂಬ ನಿರ್ಣಯವಾಯ್ತಂತೆ. ಹಳ್ಳಿಯ ಹೆಣ್ಣು ಮಕ್ಕಳಿಗೆ ತಕ್ಕ ವಿದ್ಯೆಯನ್ನು ಹೇಗೆ ಕೊಡಬಹುದೆಂಬುದರ ಕುರಿತು ಸರಿಯಾದ ಯೋಜನೆಯನ್ನು ನಾವಿನ್ನೂ ಕಾಣಲಿಲ್ಲ. ಹಳ್ಳಿಯಲ್ಲಿರುವ ಹೆಣ್ಣು ಮಕ್ಕಳಿಗೆ ಸರಿಯಾದ ವಿದ್ಯೆಯನ್ನು ಕೊಟ್ಟು ಅವರನ್ನು ಸರಿ ದಾರಿಗೆ ತರುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಹೆಣ್ಣು ಮಕ್ಕಳಿಗೆ ಯೋಗ್ಯ ತರದ ವಿದ್ಯೆ ದೊರಕುವಂತೆ ಮಾಡುವುದೇ ಮಹಿಳಾ ವ್ಯವಸ್ಥಾಪಕ ಸಂಘಗಳ ನಿಜವಾದ ಧೋರಣೆಯಾಗಿರಬೇಕು.

—'ವಸಂತಿ, ಪಡುಬಿದ್ರೆ'

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	4
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	1
20	ಮೂರು ಪ್ರಹಸನಗಳು	1	2
21	ನಗೆ ನೋಟಗಳು	1	8
22	ಅನ್ನದೇವರು ಮತ್ತಿತರ ಕತೆಗಳು	1	4
23	ಭಾರತದಲ್ಲಿ ಜಾತಿಭೇದ	1	4
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	1	12
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮಿನ್ದಾರ	1	8
33	ಬಾಳಿನ ಬೆಡಗು	1	4
34	ಲೋಪಾಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10
38	ಧರ್ಮ ಸಂಕಟ	0	6
39	ಮದುವೆ ಸೀರೆ	1	0

ರೂ36-6-0ಯ ಈ ಎಲ್ಲಾ ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಂಡರೆ ರೂ.30-0-0ಕ್ಕೆ ಕೊಡಲಾಗುವುದು.
ನವಭಾರತ ಪುಸ್ತಕ ಭಂಡಾರ, ಉಡುಪಿ

ನವಯುಗವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಕುಮಾರಿ ಚಿಕ್ಕಿಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & CO. (N. J.) CALCUTTA-40.
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನುಡಿಚಿತ್ರ

ಸರದಾರ ವಲ್ಲಭ ಭಾಯಿ ಪಟೇಲರು

ಅಪ್ರತಿಮ ಸಾಹಸದಿಂದಲೇ ಜನಪ್ರಿಯರಾದ ವ್ಯಕ್ತಿಯಿವರು.

ಇಂದಿಗೆ ಸರಿಯಾಗಿ ೭೫ ವರ್ಷಗಳ ಹಿಂದೆ, ಅಕ್ಟೋಬರ್ ೩೧ರಂದು, ಸರ್ದಾರ್ ವಲ್ಲಭ್ ಭಾಯಿ ಪಟೇಲರು ಗುಜರಾತಿನ ಕೈರಾ ಜಿಲ್ಲೆಗೆ ಸೇರಿದ ಖೇಡಾ ತಾಲ್ಲೂಕಿನ ಒಂದು ಸಣ್ಣ ಗ್ರಾಮದಲ್ಲಿ ಜನಿಸಿದರು. ಅವರು ಸ್ವರ್ಗವಾಸಿಗಳಾಗಿ ಇನ್ನೂ ೮ ವರ್ಷಗಳಾಗಿಲ್ಲ. ಕಳೆದ ಈ ಎಂಟು ವರ್ಷಗಳ ಅಲ್ಪಾವಧಿಯಲ್ಲಿ ಭಾರಿ ಭಾರಿ ಘಟನೆಗಳು ನಡೆದಿವೆ. ಈ ಸಂದರ್ಭಗಳಲ್ಲಿ ನಾವು ಎಷ್ಟೋ ಸಲ ಈ ಮಹಾಪುರುಷನು ರಾಷ್ಟ್ರಕ್ಕೆ ಸಲ್ಲಿಸಿದ ಮಹತ್ಸೇವೆಯನು ನೆನಪಿಗೆ ತಂದುಕೊಂಡು ಅವರ ಮಹತ್ವವನ್ನು ಅಳೆಯುವ ಅವಕಾಶ ನಮಗೆ ದೊರೆತಿದೆ. ಅಂತಹ ಸಂದರ್ಭಗಳಲ್ಲಿ ಅವರ ಕೆಲವು ವಿಶಿಷ್ಟ ಗುಣಗಳನ್ನು ಮತ್ತು ಈ ಗುಣಗಳು ರಾಷ್ಟ್ರದ ದೃಷ್ಟಿಯಿಂದ ಎಷ್ಟು ಪ್ರಯೋಜನಕಾರಿಯಾದುವು ಎಂಬುದನ್ನೂ ತಿಳಿಯುವ ಅವಕಾಶ ನಮಗೆ ದೊರೆತಿದೆ. ನಿಷ್ಪಕ್ಷಪಾತವಾದ ರೀತಿಯಲ್ಲಿ ನಿಜಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸ್ವತಂತ್ರ ಭಾರತದ ಇತಿಹಾಸವನ್ನು ಬರೆಯುವಾಗ, ಕೆಲವರಿಗೇ ಮೀಸಲಾಗುವಂತಹ ಒಂದು ಅತ್ಯುಚ್ಚ ಸ್ಥಾನವನ್ನು ಸರ್ದಾರ್ ವಲ್ಲಭ್ ಭಾಯಿ ಪಟೇಲರಿಗೆ ನಾವು ಇತಿಹಾಸದಲ್ಲಿ ಕಲ್ಪಿಸಬೇಕಾಗುತ್ತದೆ.

ಸರ್ದಾರ್ ಪಟೇಲರ ದೀರ್ಘ ಹಾಗೂ ಮಹತ್ವಪೂರ್ಣ ಘಟನೆಗಳಿಂದ ಕೂಡಿದ ಜೀವನವನ್ನು ಸಂಕ್ಷಿಪ್ತವಾಗಿ ವಿವರಿಸಲು ಇಲ್ಲಿ ಅವಕಾಶವೂ ಇಲ್ಲ. ಇಂದಿನ ತಲೆಮಾರಿಗೆ ಅವರ ಆವಶ್ಯಕತೆಯೂ ಇಲ್ಲ— ಕಾರಣ, ಇದೇ ತಲೆಮಾರಿಗನ್ನಯಿಸಿ ಅವರು ಅಷ್ಟು ದೀರ್ಘ ಕಾಲ ಕೆಲಸಮಾಡಿ ಸುಪರಿಚಿತರಾಗಿದ್ದಾರೆ. ಆ ಮಹಾಪುರುಷರ ಮಹತ್ವಪೂರ್ಣ ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ಕೆಲವು ಉತ್ಕೃಷ್ಟ ಗುಣಗಳನ್ನು ಮಾತ್ರ ನನ್ನ ಇಂದಿನ ಪುಟ್ಟ ಭಾಷಣದಲ್ಲಿ ನನ್ನ ಶ್ರೋತೃವರ್ಗದ ಮುಂದೆ ಪ್ರಸ್ತಾಪಿಸ ಬಯಸುತ್ತೇನೆ.

ಗುಜರಾತಿ ರೈತ ಕುಟುಂಬ.

ದಿವಂಗತ ಸರ್ದಾರರು ಗುಜರಾತಿನ ಪಟೇಲರ ಮನೆತನಕ್ಕೆ ಸೇರಿದವರು. ಗುಜರಾತಿನ ಪಟೇಲರೆಂದರೆ ಕಠೋರ ಕರ್ಮನಿಷ್ಠೆಗೆ ಹೆಸರಾದವರು. ಹಿಡಿದ ಪಟ್ಟು ಬಿಡುವರಲ್ಲ. ಕಾರ್ಯ ಸಿದ್ಧಿಯ ಕಡೆಗೇ ಅವರ ದೃಷ್ಟಿ. ರೈತ ಜನರಾದ ಪಟೇಲರಿಗೆ ತಮ್ಮ ಗ್ರಾಮ ಮತ್ತು ತಮ್ಮ ಉದ್ಯೋಗವಾದ ಬೇಸಾಯ ಇವುಗಳೆಂದರೆ ವಿಶೇಷ ಅಭಿಮಾನ. ತುಂಬಾ ಉದ್ಯಮಶೀಲರು. ಭಾರತದಲ್ಲಾಗಲಿ, ಹೊರ ದೇಶದಲ್ಲೇ ಆಗಲಿ, ಅವರು ಎಲ್ಲಿ ಹೋದರಲ್ಲಿ ತಮ್ಮ ಈ ವಿಶಿಷ್ಟ ಗುಣಗಳ ಪರಿಚಯ ಮಾಡಿಕೊಟ್ಟಿದ್ದಾರೆ ಈ ಜನ ಒಳ್ಳೆ ವ್ಯಾಪಾರಿಗಳೂ ಹೌದು. ಈ ಎಲ್ಲ ವಿಶಿಷ್ಟ ಗುಣಗಳನ್ನು ಸರ್ದಾರ್ ಪಟೇಲರ ವ್ಯಕ್ತಿತ್ವದಲ್ಲಿ ತುಂಬಾ ಸ್ಪಷ್ಟವಾಗಿ ಕಾಣಬಹುದಿತ್ತು. ಅವರು ಈ ಎಲ್ಲ ಗುಣಗಳ ಉತ್ತಮ ಸಂಕೇತವಾಗಿದ್ದರು.

ಕಳೆದ ನಲ್ವತ್ತು ವರ್ಷಗಳಲ್ಲಿ ನಾನು ಎಷ್ಟೋ ಜನ ರಾಜಕಾರಣಿಗಳನ್ನು ಭೇಟಿ ಮಾಡಿದ್ದೇನೆ ಮತ್ತು ಅವರೊಡನೆ ಸೇರಿ ಕೆಲಸ ಮಾಡಿದ್ದೇನೆ. ಆದರೆ ಸರ್ದಾರ್ ಪಟೇಲರಂಥ ವ್ಯವಹಾರ ಜ್ಞಾನವಿರುವವರನ್ನು ನಾನು ಕಂಡಿಲ್ಲ. ಯಾವ ರೀತಿ ನಡೆದುಕೊಂಡರೆ ಉಚಿತವಾಗುತ್ತದೆ. ಇದರ ಪರಿಣಾಮವೇನಾಗುತ್ತದೆ ಎಂಬುದನ್ನು ಅವರು ತುಂಬಾ ಚೆನ್ನಾಗಿ ತಿಳಿದಿರುತ್ತಿದ್ದರು. ಅವರು ಯಾವ ಪ್ರಶ್ನೆಯನ್ನೇ ಆಗಲಿ, ಅದು ರಾಜನೀತಿಗೆ ಸಂಬಂಧಿಸಿದ್ದೇ ಆಗಲಿ ಆರ್ಥಿಕ ವಿಚಾರಗಳಿಗೆ ಸಂಬಂಧಿಸಿದ್ದಾಗಲಿ ಬಿಚ್ಚುಮನಸ್ಸಿನಿಂದ ನೋಡುತ್ತಿದ್ದರು. ಇಂತಹ ವಿಚಾರಗಳಲ್ಲಿ ಅವರಿಗೆ ತಮ್ಮದೇ ಆದ ವಾದವೆಂಬುದ್ದಿರುತ್ತಿರಲಿಲ್ಲ. ತಮ್ಮ ಸಿದ್ಧಾಂತಕ್ಕೇ ಅಂಟಿಕೊಂಡು ಗುದ್ದಾಡುವುದರಲ್ಲಿ ಮತ್ತು ಇತರರನ್ನು ವಾದದಲ್ಲಿ ಸೋಲಿಸುವುದನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಕಾಲಹರಣ ಮಾಡುವ ರಾಜಕಾರಣಿಗಳಂತಿರದೆ, ಸರ್ದಾರ್ ಪಟೇಲರು ಜನಾನುಚಾರಿಕ ಸಂದರ್ಭಗಳಲ್ಲಿ ಅಂತಹ ರಾಜಕಾರಣಿಗಳನ್ನು ಕಂಡು ಹಾಸ್ಯಮಾಡುತ್ತಿದ್ದರು. ಮತ್ತು ಈ ಕಾರಣದಿಂದಾಗಿ ಯಾರಾದರೂ ಅವರನ್ನು ಶುದ್ಧ ಹಳ್ಳಿ ಗಮಾರ್ ಎಂದರೂ ಅವರು ಕೋಪಗೊಳ್ಳುತ್ತಿರಲಿಲ್ಲ.

ಸರ್ದಾರ್ ಪಟೇಲರ ಒಂದು ಜನ್ಮದಿನೋತ್ಸವದ ಸಂದರ್ಭದಲ್ಲಿ ಸ್ವರ್ಗೀಯ ಸರೋಜಿನಿ ನಾಯ್ಡುರವರು ಮಾತನಾಡುತ್ತಾ, ಸರ್ದಾರ್ ಪಟೇಲರಿಗೆ ಯಾವುದಾದರೂ 'ಕಲ್ಚರ್' ಗೊತ್ತಿದ್ದರೆ ಅದು 'ಆಗ್ರಿಕಲ್ಚರ್'' ಎಂದು ಹಾಸ್ಯಪೂರ್ಣವಾಗಿ ಹೇಳಿದರು. ತಮ್ಮ ಬಗ್ಗೆ ಈ ರೀತಿಯ ಹಾಸ್ಯವನ್ನು ಕಂಡು ಸರ್ದಾರ್ ಪಟೇಲರಿಗೂ ತುಂಬಾ ನಗು ಬಂತು. ತಮ್ಮ ಪ್ರತಿಕ್ರಿಯೆಯನ್ನು ತಮ್ಮದೇ ರೀತಿಯಲ್ಲಿ ನಗುತ್ತಾ ವ್ಯಕ್ತಪಡಿಸಿದ್ದರು.

ಬಾರ್ದೋಲಿ ಸತ್ಯಾಗ್ರಹ

ಜೀವನದ ಸಮಸ್ಯೆಗಳ ವಿಚಾರದಲ್ಲಿ ಅವರು ತಮ್ಮದೇ ಆದ ಒಂದು ವ್ಯಾವಹಾರಿಕ ದೃಷ್ಟಿಯಿಟ್ಟುಕೊಂಡಿದ್ದರು. ಇತರರಿಂದ ಬಗೆಹರಿಸಲು ಸಾಧ್ಯವಾಗದೆ ಹೋಗುತ್ತಿದ್ದ ಎಷ್ಟೋ ಜಟಿಲ ಸಮಸ್ಯೆಗಳನ್ನು ತಮ್ಮ ವ್ಯಾವಹಾರಿಕ ಜ್ಞಾನದಿಂದ ಬಹು ಸುಲಭವಾಗಿ ಬಿಡಿಸಿಬಿಡುತ್ತಿದ್ದರು. ೧೯೨೮ರ ಬಾರ್ದೋಲಿ ಸತ್ಯಾಗ್ರಹ ಇದಕ್ಕೊಂದು ಜೀವಂತ ದಾಖಲೆ. ನಮ್ಮ ದೇಶದಲ್ಲಿ ಬ್ರಿಟಿಷರ ಕಪಿ ಮುಷ್ಟಿ ತುಂಬಾ ಬಲವಾಗಿದ್ದ ಕಾಲ ಅದು. ಆ ಪರಿಸ್ಥಿತಿಯಲ್ಲಿ ಸತ್ಯಾಗ್ರಹ ವಿಫಲವಾಗುವುದೆಂದು ಅನುಭವಸ್ಥ ರಾಜಕಾರಣಿಗಳನೇಕರು ನಿರೀಕ್ಷಿಸಿ ಸರ್ದಾರ್ ಪಟೇಲರನ್ನು ತುಂಬಾ ಅಪಹಾಸ್ಯ ಮಾಡಿದರು. ಆದರೆ ಸತ್ಯಾಗ್ರಹ ಯಶಸ್ವಿಯಾಗುವುದರ ಗುಟ್ಟು ಸರ್ದಾರ್ ಪಟೇಲರಿಗೆ ತಿಳಿದಿತ್ತು, ಮತ್ತು ಅದನ್ನು ಸಮಯ ನೋಡಿ ಅವರು ಪ್ರಯೋಗಿಸಿದರು.

ಬಾರ್ದೋಲಿಯ ಸತ್ಯಾಗ್ರಹವನ್ನು ಅವರು ಒಬ್ಬ ದಕ್ಷ ಸರ್ದಾರರಂತೆ ಯಶಸ್ವಿಗೊಳಿಸಿದರೆಂದೇ ಜನ ಅವರನ್ನು ಸರ್ದಾರ್ ಎಂದು ಸಂಬೋಧಿಸತೊಡಗಿದರು. ಸರ್ದಾರರಿಗೆ ತನ್ನಂತೆಯೇ ಬಾರ್ದೋಲಿಯ ರೈತರು ಭೂಮಿಯೆಂದರೆ ಪ್ರಾಣಬಿಡಲೂ ಸಿದ್ಧರಿರುತ್ತಾರೆಂಬುದು ಗೊತ್ತಿತ್ತು. ಭೂಮಿಯನ್ನು ಬಿಟ್ಟುಕೊಡಲಾಗಲಿ ಅಥವ ಹೆಚ್ಚಿನ ತೆರಿಗೆ ಕೊಡುವುದಕ್ಕಾಗಲಿ ಗುಜರಾತಿನ ರೈತ ತುಂಬಾ ಪ್ರತಿಭಟಿಸುತ್ತಾನೆ. ಚಳುವಳಿಯನ್ನು ಯಶಸ್ವೀಗೊಳಿಸುವ ಶಕ್ತಿ ಅವರಲ್ಲಿ ಸಾಕಷ್ಟಿತ್ತೆಂಬುದೂ ಅವರಿಗೆ ಗೊತ್ತಿತ್ತು.

ಬಾರ್ದೋಲಿ ಸತ್ಯಾಗ್ರಹ ಮಹಾತ್ಮಾ ಗಾಂಧಿಯವರು ನಡೆಸಿದ ಸತ್ಯಾಗ್ರಹಗಳಿಗೆ ಸಂಬಂಧಿಸಿದಂತೆ ತುಂಬಾ ಯಶಸ್ವಿಯಾಯಿತು. ಒಂದು ದೃಷ್ಟಿಯಿಂದ ನೋಡಿದರೆ, ಮುಂದೆ ನಡೆದಂತಹ ಹಲವು ಚಳವಳಿಗಳಿಗೆ ಬಾರ್ದೋಲಿ ಸತ್ಯಾಗ್ರಹ ಓಂ ಪ್ರಥಮವಾಯಿತು. ಈ ಚಳುವಳಿ ಮುಂದಿನ ಚಳುವಳಿಗಳಿಗೆ ಸಹಾಯಕವಾಗುವಂತಹ ಒಳ್ಳೆ ಅನುಭವವನ್ನೂ ಹುರುಪನ್ನೂ ಒದಗಿಸಿತು.

ಪಟ್ಟಣಗಳಲ್ಲಿ ಮತ್ತು ದೊಡ್ಡ ದೊಡ್ಡ ಊರುಗಳಲ್ಲಿ ಚಳುವಳಿ ನಡೆಸುವುದಕ್ಕಿಂತಲೂ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಸಿದರೆ, ಅದು ಹೆಚ್ಚು ಯಶಸ್ವಿಯಾಗುತ್ತದೆಯೆಂಬುದರ ಕಡೆಗೆ ಈ ಸತ್ಯಾಗ್ರಹ ರಾಷ್ಟ್ರದ ಗಮನವನ್ನು ಮುಖ್ಯವಾಗಿ ಸೆಳೆಯಿತು. ರಾಜಕೀಯ ಹೋರಾಟಕ್ಕೆ ಇದರಿಂದಾಗಿ ಒಂದು ಉತ್ತಮ ಸೂಚನೆ ದೊರಕುವಂತಹ ಅವಕಾಶ ಬಾರ್ದೋಲಿ ಸತ್ಯಾಗ್ರಹದಿಂದಾಗಿ ದೊರಕಿತು.

—ಶ್ರೀ ಎಸ್. ಕೆ. ಪಾಟೀಲರ ಭಾಷಣದಿಂದ

(ಮುಂದುವರಿಯುವುದು.)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು. ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಕೈಗನ್ನಡಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ
ಮನೆ ಮದ್ದು
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಒಂದೂವರೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶುದ್ಧ ಹರಟೆ

(೩ನೇ ಪುಟದಿಂದ)

"ದುರ್ಜನಸ್ಯ ವಿಶಿಷ್ಟತ್ವಂ। ಪರೋಪದ್ರವ ಕಾರಣಮ್॥ ಎಂದಂತೆ ತಾವು ಮಹಾ ಧಾರ್ಮಿಕರೆನ್ನಿಸಿಕೊಳ್ಳಬೇಕೆಂದು ಚಿಂತಿಸುವವರೇ—ಈ ಧರ್ಮದ ಬುಡವನ್ನು ಅಡಿಮೇಲು ಮಾಡುತ್ತಾರೆ. ಅದರಿಂದಲೇ ಈ ನರ ಲೋಕದಲ್ಲಿ ಮಹಾಧರ್ಮಿಷ್ಠರೆನ್ನಿಸಿ ಕೊಳ್ಳುವವರ ಕೈಬಾಯಿಯೊಳಗೇ ಸಿಕ್ಕಿ ಬಿದ್ದು ಧರ್ಮವು ಸಂಕಟ ಪಡುವಂತಾಗಿದೆ ಎನ್ನುವಾಗ ಯಾರಾದರೂ ಏನು ತಾನೇ ಮಾಡಲು ಸಾಧ್ಯವಿದೆ? ಎಂದಿಷ್ಟೆ ಹೇಳಿ ಬಿಟ್ಟರೆ ಈ ತಲೆಗೆ ಇನ್ನೂ ಹೆಚ್ಚಿನ ಶ್ರಮ ಕೊಡಬೇಕಾದ್ದಿಲ್ಲ. ಹಾಗೆ ಶ್ರಮ ಕೊಡುವುದು ಸುಲಭವೂ ಅಲ್ಲ! — ಯಾಕೆಂದರೆ — 'ಧರ್ಮವನ್ನು ಸಂಕಟಕ್ಕೀಡು ಮಾಡಿದವರಲ್ಲಿ ನೀನೂ ಒಬ್ಬನಾಗಿರುವೆ—' ಎಂದುಕೊಂಡು ಕೊನೆಗೆ ಈ ತಲೆಯೂ ಸತ್ಯಾಗ್ರಹ ಮಾಡಿಬಿಟ್ಟರೆ 'ಯಾರಿಗೆ ಯಾರಿಲ್ಲ ದಾರಿಗೆ ಸುಂಕವಿಲ್ಲ" ಎನ್ನುತ್ತಾ ಊರು ಸಂಚಾರಕ್ಕೆ ಹೊರಡಬೇಕಾದೀತು!

—ಕೆ. ಜಿ. ಶೆಟ್ಟಿ, ಕಡಂದಲೆ.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ಕಥಾ ವಿಹಾರ

(೨ನೇ ಪುಟದಿಂದ)

ಇದಲ್ಲದೇ ನೀವು ಅಲ್ಲಿ ಇದ್ದರೆ ಇಷ್ಟು ಕಷ್ಟಪಡಬೇಕಾಗುತ್ತಿರಲಿಲ್ಲ. ನನ್ನೊಬ್ಬಳ ಸಲುವಾಗಿ ನೀವಿಂದು ನನ್ನಂತೆ ಕಷ್ಟಪಡಬೇಕಾಯಿತಲ್ಲ" ಎಂದಳು. "ಹುಚ್ಚಿ ಇಷ್ಟಕ್ಕೇ ನೀನು ಕಣ್ಣೀರು ಕರೆಯುತ್ತೀಯಾ, ನಮ್ಮ ಪ್ರಾರಬ್ಧದಲ್ಲಿ ಏನಿದೆಯೋ ಅದನ್ನು ಅನುಭವಿಸಿ ತೀರಬೇಕಲ್ಲವೇ? ಅದಕ್ಕೆ ಯಾರು ಏನು ತಾನೇ ಮಾಡಬಲ್ಲರು? ಈ ಜಗತ್ತಿನಲ್ಲಿ ಪ್ರೇಮದ ವಿಷಯವನ್ನರಿಯದ ಮರುಳರು ಅಸಂಖ್ಯಾತರಿದ್ದಾರೆ. ವರದಕ್ಷಿಣೆಯ ಆಶೆಗಾಗಿ ನಮ್ಮ ತಂದೆ ನಮ್ಮೀರ್ವರನ್ನು ಅಗಲಿಸಲು ಪ್ರಾರಂಭ ಮಾಡಿದ. ದರಿಂದಲೇ ನಾವು ಈ ಪರಿಸ್ಥಿತಿಯಲ್ಲಿ ಉಳಿದದ್ದು ಇರಲಿ, "Love is blind" ಸೂರ್ಯನು ಹುಟ್ಟಿದಲ್ಲಿಯೇ ಮಾತ್ರ ನಿಲ್ಲಲಾರ ಮತ್ತೆ ಮೇಲೆ ಬಂದೇ ಬರುತ್ತಾನೆ ಅದರಂತೆ ಒಂದಿಲ್ಲೊಂದು ದಿನ ನಾವೂ ಅವರನ್ನು ಕೂಡಬಹುದು. 'ಸಿರಿಯಬ್ಥಿರವಲ್ಲ'. ಅದಿರಲಿ ನಮ್ಮ ಭಾರತದಲ್ಲಿ ರೊಟ್ಟಿ ಸಿಗದೇ ಉಪವಾಸದಿಂದ ಎಷ್ಟೋ ಭಿಕ್ಷುಕರು ಬೀಳುತ್ತಾರೆ, ನಾವು ರೊಟ್ಟಿಯನ್ನಾದರೂ ತಿನ್ನುತ್ತೇವಲ್ಲ ಇದೇ ನಮಗೆ ದಿಭ್ಯ. ಅಳಬಾರದು, 'ನೀನೊಲಿದರೆ ವಿಷ ಅಮೃತವಾಗುವದಯ್ಯಾ' ಎಂದು ಬಸವಣ್ಣನವರು ಅದಿಲ್ವೆ, ಅದರಂತೆ, ನೀನು ಒಲಿದು ನೀಡಿದ ರೊಟ್ಟಿ ಇದೇ ನನಗೆ ಉಂಡಿಯಾಗಿ ಪರಿಣಮಿಸುತ್ತದೆ. ಎಷ್ಟೋ ದಂಪತಿಗಳು, ಪರಸ್ಪರ ಪ್ರೇಮ, ಸೌಹಾರ್ದತೆಗಳಿಲ್ಲದೇ ಮೃಷ್ಟಾನ್ ಊಟಮಾಡುತ್ತಾರೆ. ಆದರೆ ನಾವಿಬ್ಬರೂ ಪ್ರೇಮ-ಸೌಹಾರ್ದತೆಯಜೊತೆಗೆ ರೊಟ್ಟಿಯನ್ನು ತಿಂದರೆ ಅದೇ ಮೃಷ್ಟಾನ್ನವಾಗುತ್ತದೆ" ಎಂದು ಅವಳಿಗೆ ನಾನಾ ಉದಾಹರಣೆಗಳನ್ನು ಹೇಳಿ ಗಂಡ-ಹೆಂಡಿರಿಬ್ಬರೂ ಜೊತೆಯಲ್ಲಿ ಊಟ ಮಾಡಿ ನಗುತ್ತ, ಸಂತೋಷದ ದಿನಗಳನ್ನು ಕಳೆಯಹತ್ತಿದರು.

ಇತ್ತ ಶಾರದೆ ಸಾಂಪ್ರದಾಯವಾಗಿ ಗಂಡನ ಮನೆಗೆ ಬಂದಳು ಶಾರದೆ; S. S. L. C. ಪಾಸಾಗಿದ್ದರೂ ತುಂಬಾ ಸೋಮಾರಿ ಎಂದರೆ ಸೋಮಾರಿ. ಅಷ್ಟೇ ಹಟ. ಗಂಡನ ಮನೆಗೆ ಬಂದ ಬಳಿಕಾದರೂ, ಅವಳು ಮನೆಗೆಲಸ ಮಾಡದೇ ಕಾದಂಬರಿ ಓದುತ್ತ ಕುಳಿತುಕೊಂಡು ಬಿಡುತ್ತಿದ್ದಳು. ಇದನ್ನು ಕಂಡು ಪ್ರಕಾಶ 'ಹೀಗೆ ಕುಳಿತರೆ ಮನೆಗೆಲಸ ಯಾರು ಮಾಡಬೇಕು?" ಎಂದರೆ "ಬೇಕಾದರೆ ಕೆಲಸದವರನ್ನು ಹಚ್ಚಿ ನನ್ನಿಂದಾಗದು" ಎಂದು ಸ್ಪಷ್ಟ ಹೇಳುತ್ತಿದ್ದಳು. ಒಮ್ಮೆ ಸೋಮಪ್ಪನವರೂ ಅವಳಿಗೆ ಹೇಳಿದಾಗ ಅವರಿಗೂ ಸುರುಳು ತ್ತರ ಕೊಟ್ಟುದುದರಿಂದ ಅವರೂ ಸಹ ಆವಳಿಗೆ ಏನಾದರೂ ಹೇಳುತ್ತಿರಲಿಲ್ಲ. ಶೇಖರನ ತಾಯಿ — ರತ್ನಮ್ಮನಿಗೆ ವಯಸ್ಸಾಗುತ್ತ ಬಂದಂತೆ ಅವಳಿಗೂ ಮನೆಗೆಲಸ ಮಾಡಿಕೊಂಡು ಹೋಗಲು ಆಗುತ್ತಿರಲಿಲ್ಲ. ಹೀಗಾಗಿ ಆವರ ಮನೆಯ ಪರಿಸ್ಥಿತಿ ದಿನದಿನಕ್ಕೆ ಕೆಡುತ್ತ ನಡೆಯಿತು. ಸೊಸೆಯ ವರ್ತನಕ್ಕೆ ಚಿಂತಿಸಿ, ಚಿಂತಿಸಿ ದಿನದಿನಕ್ಕೆ ಕ್ಷೀಣ ಆಗಹತ್ತಿದರು.

ಅಂತೂ ಬಡತನದಲ್ಲಿ ಒದ್ದಾಡಿ, ಒದ್ದಾಡಿ, ಕೊನೆಗೆ ಶೇಖರ M B. B.S. ಮುಗಿಸಿ M. S. ಪರೀಕ್ಷೆ ಕೊಟ್ಟು ಬಿಟ್ಟಿದ್ದ. ಇಂದೂಳ ಭಾರ ತಲೆಯ ಮೇಲಿರುವದು; ಹೆಗಲಿಗೆ ಬಂದಂತಾಯಿತು.

ಅಂದು M. S. ಪರೀಕ್ಷೆಯ ರಿಜಲ್ಟ. ಶೇಖರ ಬೇಗ ಎದ್ದು ವಾಚನಾಲಯಕ್ಕೆ ಹೋಗಿ, ಪೇಪರ ತಿರುವಹತ್ತಿದ. ತಾನು ಪ್ರಥಮ ವರ್ಗದಲ್ಲಿ ಪಾಸಾದ ಸುದ್ದಿ ಕಂಡು, ಒಂದು ಪತ್ರಿಕೆ ಕೊಂಡು ಬೇಗ ಬೇಗ ಹೆಜ್ಜೆ ಹಾಕುತ್ತ ಮನೆಗೆ ನಡೆದ.

ಮನೆಗೆ ಬಂದೊಡನೆ ಬಾಗಿಲ ಹಾಕಿತ್ತು. ಪ್ರತಿನಿತ್ಯ ಇಂದಿರಾ, ಬಾಗಿಲ ಮುಚ್ಚಿ ತನ್ನ ನಿತ್ಯಕೆಲಸ ಮಾಡುತ್ತಿದ್ದಳು. ದಿನಾಲು ಬಾಗಿಲಿನಲ್ಲಿಯೇ ನಿಂತು ಕೂಗುವ ಶೇಖರ, ಇಂದು ಬಾಗಿಲ ಕೊಂಡಿಯಿಂದ "ಕಟsss..ಕಟ್...ss" ಎಂದು ಮಾಡಿದ. ಆ ಸ್ವರ ಕೇಳಿ, ಇಂದಿರಾ "ಯಾರದು?" ಎಂದು ಕೇಳಿದಳು. ಹಾಸ್ಯಗೆಂಬ "ಬಟ್ಟೆ ಹೊಲಿಯುವದದೆ ಬಾಗಿಲ ತೆರೆಯಿರಿ" ಎಂದ. "ಇಲ್ಲಿ ಪುರುಷರ ಬಟ್ಟೆ ಹೊಲಿಯಲಿಕ್ಕಾಗದು ಸರ್" ಎಂದಳು. "ಬಾಗಿಲವನ್ನಾದರೂ ತೆರೆಯಿರಿ" ಎಂದ. ಆಕೆ ಯಾರಿರಬಹುದು? ಎಂದು ಬಾಗಿಲು ತೆರೆದಳು. ಆತ ಮತ್ತಾರಾಗದೇ ಶೇಖರನಾದುದರಿಂದ "ಬಟ್ಟೆ ಎಲ್ಲಿ? ಇನ್ನಾದರೂ ಚಿಕ್ಕವರ ಸ್ವಭಾವ ಬಿಡಿ. ಎಲ್ಲಿ ರಿಜಲ್ಟ ಏನಾಯಿತು?" ಎಂದಳು. "ಕೂತು ನೋಡು ರಾಣಿ" ಎಂದು ಪೇಪರ ಕೈಗಿತ್ತ. ಅವಳು ಶೇಖರ ಪ್ರಥಮ ವರ್ಗದಲ್ಲಿ ಪಾಸಾಗಿದ್ದುದನ್ನು ಕಂಡು ಅವಳು 'ಪೇಡೆ ಕೊಡುವುದಿಲ್ಲವೇ?' ಎಂದಳು. 'ಪೇಡೆ ಬೇಕೇ?' ಎಂದ. 'ಅಹಾಂ' ಎಂದಳು. ಶೇಖರನು ಇಂದೂವನ್ನು ಬಿಗಿದಪ್ಪಿ, ಮನತೃಪ್ತಿಯಾಗುವಂತೆ ಚುಂಬಿಸಿ, 'ಪೇಡೇ ಸಾಕೇ?' ಎಂದ. ಮತ್ತೆ ಹುಡುಗರ ಸ್ವಭಾವ ಬಿಡಲಾರದೇ ಎಂದಳು. "ಅದೇನೂ ಬೇಕಿಲ್ಲ ಇಂದೂ, ಈ ದಿನ ನೀನೇನಾದರೂ ಪೇಡೆಕೊಡುವೆಯಾ?" ಎಂದ "ಕಣ್ಣುಮುಚ್ಚಿರಿ ತಂದುಕೊಡುವೆ ಹಾಂ ಕಣ್ಣು ತೆರೆಯಬಾರದು" ಎಂದು ಆವನ ಬಾಯಿಯಲ್ಲಿ ಒಂದು ಚಮಚೆ ಸಕ್ಕರೆ ಹಾಕಿ ಇದು ಬಡವರ ಪೇಡೆ" ಎಂದು ಇಬ್ಬರೂ ಗಹಗಹಿಸಿ ನಕ್ಕರು.

ಶೇಖರ ಪ್ರತ್ಯೇಕ ಆಸ್ಪತ್ರೆ ತೆರೆಯಬೇಕೆಂದರೆ ದುಡ್ಡಿಲ್ಲ. 'ಮುಂದೆ ಏನ?' ಎಂದು ವಿಚಾರಮಾಡುತ್ತ ಕುಳಿತಿರುವಾಗ ಅಂಚೆಯವ ಒಂದು ಕಾಗದ ಕೈಗಿತ್ತು ಹೋದ. ಶೇಖರ ಒಡೆದು ಓದಲಿಕ್ಕೆ ಪ್ರಾರಂಭಮಾಡಿದ.

ಡಾಕ್ಟರ್, ಶೇಖರ. M.B.B.S, M.S.

ನನ್ನ ಆಸ್ಪತ್ರೆಯಲ್ಲಿ ಡಾಕ್ಟರರು ಬೇಕಾಗಿದ್ದಾರೆ. ತಾವು ನನ್ನಲ್ಲಿ ಬಂದರೆ ಉಪಕಾರವಾಗುವದು. ದಯೆಯಿಟ್ಟು ನಾಳೆ ಮುಂಜಾನೆ ಬಂದುಬಿಡಿ.

ಇಂತು ನಿಮ್ಮ
— ಮನೋಹರ.

ಇದನ್ನು ಕಂಡ ಬಳಿಕ ಶೇಖರನ ಆನಂದಕ್ಕೆ ಮಿತಿಯೇ ಇಲ್ಲ. ಅದನ್ನು ಇಂದೂನಿಗೂ ತಿಳಿಸಿದ. ಅವಳಿಗೂ ಪರಮಾನಂದವಾಯಿತು.

ಪತ್ರದಂತೆ ಶೇಖರ ಮರುದಿನ ಡಾ|| ಮನೋಹರರ ಆಸ್ಪತ್ರೆಗೆ ಹೊರಟ. ಬಾದರದಲ್ಲಿ ಡಾ|| ಮನೋಹರರ ದೊಡ್ಡ ಆಸ್ಪತ್ರೆ. ಡಾ|| ಮನೋಹರರಿಗೆ ಕೈತುಂಬ ಬೇಕಾದಷ್ಟು ಹಣವಿದ್ದರೂ, ಒಬ್ಬಂಟಿಗ ಜೀವನ. ಅವರು ಆಪ್ರೇಶನ್ನಿನಲ್ಲಿ ಮೇಲಗೈ. ಶೇಖರರು ಅವರ ಆಸ್ಪತ್ರೆಯನ್ನು ಪ್ರವೇಶಿಸಿ ಡಾ|| ಮನೋಹರರಿಗೆ ಭೆಟ್ಟಿಯಾದನು. ಡಾ|| ಮನೋಹರರು, ಡಾ|| ಶೇಖರರನ್ನು ಆದರದಿಂದ ಬರಮಾಡಿಕೊಂಡು, ಡಾ|| ಶೇಖರರನ್ನು ಸಂಬಳದಂತೆ ಇಟ್ಟುಕೊಳ್ಳದೇ, ಬಂದ ಲಾಭದಲ್ಲಿ ಅರ್ಧಪಾಲು ಕೊಡುವಂತೆ ಹೇಳಿ, ಮತ್ತು ಅವರಿಗೆ ಇರಲು ಆಸ್ಪತ್ರೆಯ ಬದಿಗಿರುವ ಮನೆಯನ್ನು ಕೊಟ್ಟರು.

ಚಿಕ್ಕ ಮನೆಯಲ್ಲಿ ಸಂಸಾರನಡಿಸಿದ ಇಂದಿರಾ, ಈಗ ದೊಡ್ಡ ಮನೆಯಲ್ಲಿ, ಮನೆಗೆ ಶೋಭಿಸುವಂತೆ, ಹೂವಿನ ಕುಂಡೆ 'Flowerpot' ಇಟ್ಟು ಮನೆಯನ್ನು ಅಚ್ಚುಕಟ್ಟಾಗಿ ಮಾಡಿದ್ದಳು.

ಡಾ|| ಶೇಖರ. ಡಾ|| ಮನೋಹರ, ಇಬ್ಬರೂ ಕೂಡಿ ದಿನಾಲು; ಇಪ್ಪತ್ತು-ಮೂವತ್ತು ಆಪ್ರೇಶನ್ ಮಾಡಿ, ಊರಿಗೆ ಸುಪ್ರಸಿದ್ಧ ಆಸ್ಪತ್ರೆಯಲೊಂದುಮಾಡಿ ಹೆಸರು ಗಳಿಸಿದ್ದರು. ಇದಲ್ಲದೇ; ಡಾಕ್ಟರರಿಬ್ಬರೂ, ಶಾಂತರೀತಿಯಿಂದ, ರೋಗಿಗಳೊಂದಿಗೆ ನಡೆದುಕೊಳ್ಳುವ ಸ್ವಭಾವ, ಬಡಜನರಿಗೂ ಕೂಡ ಅವರು ಆದರದಿಂದ ಕಾಣುತ್ತಿದ್ದುದನ್ನು ಕಂಡು, ಎಲ್ಲರೂ ಅವರ ಆಸ್ಪತ್ರೆಯಲ್ಲಿ ಸರತಿಗಾಗಿ 'Q' ನಿಲ್ಲಬೇಕಾಗುತ್ತಿತ್ತು. ಎಷ್ಟು ಕೆಲಸ ಮಾಡಿದರೂ ಸಹ ಇಬ್ಬರೂ ಡಾಕ್ಟರರು ಬೇಜಾರ ತಂದುಕೊಳ್ಳುತ್ತಿರಲಿಲ್ಲ. ಪಟ್ಟಣದ ಜನ ಈ ಈರ್ವ ಡಾಕ್ಟರರನ್ನು ಕಂಡು ಅಣ್ಣ-ತಮ್ಮಂದಿರೆಂದೇ ಬಲವಾಗಿ ನಂಬಿದ್ದರು.

ಡಾ। ಶೇಖರರು ಹೋಗಿ ಆರು ತಿಂಗಳುಗಳಾಗಿರಲಿಲ್ಲ. ಇಬ್ಬರೂ,—ಅಣ್ಣ — ತಮ್ಮಂದಿರಂತೆ ಕುಶಾಲದಿಂದ ನಡೆದುಕೊಳ್ಳುವದು; ಪರಮೇಶ್ವರನಿಗೆ ಅದೇಕೋ ಮನಸ್ಸಿಗೆ ಬರಲಿಲ್ಲವೆಂದು ಕಾಣುತ್ತದೆ. ಇನ್ನು ಮೊಗ್ಗೆ ಅರಳಿ, ಹೂವಾಗ, ವದಕ್ಕಿಂತ ಮೊದಲೇ ಪರಮೇಶ್ವರನು ಆ ಮೊಗ್ಗೆಯನ್ನು ತನ್ನ ಪಾದಕ್ಕೆ ಅರ್ಪಿಸಿಕೊಂಡಂತೆ, ಯಾವ ಬೇನೆ; ಬೆಸರಿಕೆ ಇಲ್ಲದೇ, ಡಾ| ಮನೋಹರರು 'Heart fail' ಹೃದಯ ವಿಕಾರದಿಂದ ಮರಣ ಹೊಂದಿದರು. ಆಗ ಡಾ। ಶೇಖರರಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ದೊಡ್ಡ ಆಸ್ಪತ್ರೆಯನ್ನು ಒಬ್ಬನಿಂದ ನಡಿಸಿಕೊಳ್ಳುವದಾಗಲಿಲ್ಲ. ಕೊನೆಗೆ; ಅನಿವಾರ್ಯದಿಂದ ಮತ್ತೊಬ್ಬ ಡಾಕ್ಟರರನ್ನು ತೆಗೆದುಕೊಳ್ಳಬೇಕಾದುದರಿಂದ ಡಾ। ಚಂದ್ರು ಅವರನ್ನು ಕರೆದುಕೊಳ್ಳಬೇಕಾಯಿತು. ಹಿರಿ ಅಣ್ಣನಂತಿರುವ ಡಾ। ಮನೋಹರರನ್ನು ಕಳೆದುಕೊಂಡು ಶೇಖರ ತುಂಬಾನೊಂದು ಕೊಂಡಿದ್ದರು. ಅವರ ನೆನಹುಗಾಗಿ ಅವರ ಮೂರ್ತಿಯನ್ನು ಆಸ್ಪತ್ರೆಯ ತೋಟದಲ್ಲಿ ಮಾಡಿಸಿದರು.

ಸೋಮಪ್ಪನವರಿಗೆ ಗಂಟಲು ಬೇನೆ (Tansil) ಆದುದರಿಂದ ಇನಲ್ಲದೇ, ಮುಂಬಯಿ ಆಸ್ಪತ್ರೆಯಲ್ಲಿ ಆಪ್ರೇಶನ್ ಚೆನ್ನಾಗಿ ಮಾಡುತ್ತಾರೆಂಬ ಮೂಲಕ, ಸೋಮಪ್ಪನವರು, ಮುಂಬಯಿಗೆ ಬಂದರು. ಡಾ। ಶೇಖರ, ದಿಲ್ಲಿಯೊಳಗೆ ಅವರ ಮಿತ್ರನ ಮದುವೆಗೆ ಅಗತ್ಯ ಬನ್ನಿ ಎಂದು ತಂತಿ 'Teligram' ಮಾಡಿದ ಮೂಲಕ, ಇಂದಿರಾ-ಶೇಖರರು ದಿಲ್ಲಿಗೆ ಹೋಗಿದ್ದರು.

ಡಾ| ಚಂದ್ರು ಅವರು ಸೋಮಪ್ಪನವರ ಆಪ್ರೇಶನ್ನ ಮಾಡಿ ಅವರಿಗೆ ೫-೬ ದಿನ ಇಲ್ಲಿ ಉಳಿಯಬೇಂಕೆಂದು ಹೇಳಿದ್ದರು.

ಗೆಳೆಯನ ಮದುವೆ ಮುಗಿಸಿ, ಇಂದೂ—ಶೇಖರರು ಮುಂಬಯಿಗೆ ಬಂದರು. ಡಾ। ಚಂದ್ರ ಆಪ್ರೇಶನ್ ಮಾಡಿದ ವಿವರ ಶೇಖರರಿಗೆ ಒಪ್ಪಿಸಿದ. ಡಾ| ಶೇಖರ ಲೀಸ್ಟಿನಲ್ಲಿ 'ಸೋಮಪ್ಪ' ಎಂದು ಹೆಸರು ಬಂದಿರುವದನ್ನು ಕಂಡು, 'ಇವರು ನನ್ನ ತಂದೆ



NAVAYUGA
REGD. NO. M. 3619

UDIPI, THURSDAY
16-4-1959

LICENSE NO. 31
Licensed to Post without Prepayment

ಯಾಕಾಗಿರ ಬಾರದು?" ಎಂದು ವಿಚಾರ ಮಾಡುತ್ತ, ಮಾಡುತ್ತ, ನಾಳೆ ಮುಂಜಾನೆ ಆಸ್ಪತ್ರೆಗೆ ಹೋದಾಗ ನೋಡಿದರಾಯಿತು ಎಂದು ಸುಮ್ಮನಾದರು.

ಮರುದಿನ ಮುಂಜಾನೆ ಆಸ್ಪತ್ರೆಗೆ ಬಂದು ನೋಡಲಾಗಿ ಅವರ ತಂದೆಯೇ ಆಗಿದ್ದರು. ಶೇಖರನು ಅವರ ಬಳಿಗೆ ಹೋಗಿ 'ಚೆನ್ನಾಗಿದ್ದಿಯಾ ಅಪ್ಪ!' ಎಂದಾಗ ಸೋಮಪ್ಪನವರು "ಶೇಖರ ನೀನು....!...ಇಲ್ಲಿ?' ಎಂದರು. 'ಹೌದಪ್ಪ. ನಾನೇ ಈ ಆಸ್ಪತ್ರೆಯ ಡಾಕ್ಟರ. ಈಗ ನಿನಗೆ ಗುಣವಾಗಿದೆ, ಮನೆಗೆ ಹೋಗೋಣ ನಡೆ' ಎಂದು ತಂದೆಯನ್ನು ಮನೆಗೆ ಕರೆದುಕೊಂಡು ಬಂದ. ಇಂದಿರಾ ಮಾವನನ್ನು ಕಂಡು, ಆದರದಿಂದ ಬರಮಾಡಿ "ಈಗ ಬಂದ್ರಿ?" ಎಂದಳು. "ಇಲ್ಲಮ್ಮ ಬಂದು ಐದಾರು ದಿನವಾಯ್ತು (Tonsil) ಗಂಟಲನೋವಿನ ಆಪ್ರೇಶನ್‌ಗಾಗಿ ಬಂದಿದ್ದೆ. ನೀವು ಇಲ್ಲಿರುವದು ಸಹ ನನಗೆ ಗೊತ್ತಿರಲಿಲ್ಲ. ಶೇಖರ ನೀನು ಸರ್ಜನ್ ಪರೀಕ್ಷೆ ಹೇಗೆ ಉತ್ತೀರ್ಣನಾದಿ? ಮನೆಯಿಂದ ಬಿಡಿ ಕಾಸು ಸಹಾ ತರಿಸಿಕೊಳ್ಳದ ನೀನು ಇಲ್ಲಿಯ ವರೆಗೆ ಹೇಗೆ ಓದಿದಿ?" ಎಂದರು. "ಅಪ್ಪಾ ನಾನು ನಿಮಗೆ ಮನೆಯನ್ನು ಬಿಡುವ ಸಮಯಕ್ಕೆ ಕಾಗದದಲ್ಲಿ ಬರೆದಿದ್ದಿಲ್ಲೆ. ಇಂದಿರಾನೆ ನನಗೆ ಸರ್ವಸ್ವ. ನನಗೆ ದುಡ್ಡು, ಆಸ್ತಿಪಾಸ್ತಿಗಳೇನೂ ಬೇಕಿಲ್ಲ' ಎಂದು. ಇಂದಿರಾ ತನಗೆ ಶಾಲೆ ಕಲಿಸಲು ಯಾವ ಯಾವ ರೀತಿಯಿಂದ ಕಷ್ಟಪಟ್ಟು ಕಲಿಸಿದ ವಿವರಗಳನ್ನು ಹೇಳಿದ. ಆತ ಹೇಳುವಾಗ ಸೋಮಪ್ಪನವರ ಕಣ್ಣಲ್ಲಿ ನೀರು ಉದುರಿದವು. ಆತನಿಗೆ ಕೊಡಬಯಸಿದ ಶಾರದೆಯನ್ನು ಪ್ರಕಾಶನಿಗೆ ಕೊಟ್ಟು ಮದುವೆ ಮಾಡಿದುದನ್ನು ಮತ್ತು ಅವಳ ಹಟ, ವಿರಕು, ಬಿರುನುಡಿ, ಆತನಿಗೆ ಹೇಳಿ "ಶೇಖರ ಅವಳನ್ನು ನಿನಗೆ ಮದುವೆ ಮಾಡಿದ್ದರೆ ನೀನು ಇಲ್ಲಿಯ ವರೆಗೆ ಓದುತ್ತಿರಲಿಲ್ಲ. ನಾನು, ನಿನಗೆ, ನಿನ್ನ ಜೀವನದಲ್ಲಿ ಮಾಸಿಹೋಗದಂಥ ಬರೆ ಎಳೆಯುತ್ತಿದ್ದೆ" ಎಂದು ಕಣ್ಣೀರಿಟ್ಟರು. "ಅಪ್ಪಾ ಅಳಬಾರದು. ಆದದ್ದು ಆಗಿಹೋಯಿತು. ಅಂಥ ತೊಡಕಿನ ಜಾಳಿಗೆಯಲ್ಲಿ ನಾನು ಬೀಳಲಿಲ್ಲವಲ್ಲ. ಹಿಂದಿನದು ಆಲೋಚಿಸಿ ಅದೇಕೆ ಕೊರಗಬೇಕಪ್ಪಾ' ಎಂದು, ಇಂದಿರಾ-ಶೇಖರರು "ನೀವು ಅಲ್ಲಿದ್ದು ದುಡಿಯಬೇಕಿಲ್ಲ. ನಮ್ಮನ್ನು ದೊಡ್ಡವರನ್ನಾಗಿ ಮಾಡಿ, ಮತ್ತೆ ನೀವು ಕೊರಗುವದು ಬೇಡ' ಎಂದು ಸೋಮಪ್ಪನವರನ್ನು ಬಲವಂತವಾಗಿ ಪೀಡಿಸಿದರು. "ಇಂದಿರಾ ನೀವೀರ್ವರನ್ನು ವರದಕ್ಷಿಣೆಯ ಆಶೆಗಾಗಿ ಅಗಲಿಸಲಿಕ್ಕೆ ಪ್ರಯತ್ನ ಮಾಡಿದ ಪಾಪಿಗೆ ಮತ್ತೆ ನಿನ್ನ ಹತ್ತಿರ ಇಟ್ಟುಕೊಂಡು ಸೇವೆಮಾಡುವಿಯಾ! ನೀನು ಸಾವಿತ್ರಿಯಲ್ಲದೇ ಮತ್ತೇನು' ಎಂದರು. 'ಅತ್ತೆ-ಮಾವರ ಸೇವೆ ಮಾಡುವದು ಪುಣ್ಯಾಬೇಕು ಎಂದು ನನಗೋಸ್ಕರವಾದರೂ ಹೋಗಬೇಡಿ' ಎಂದು ಕಾಲಿಗೆ ಎರಗಿದಳು. 'ಇಂದಿರಾ ತಪ್ಪು ಮಾಡಿದವ ನಾನು. ನನ್ನ ಕಾಲಿಗೆ ನೀನು ಬೀಳಬಾರದು' ಎಂದರು. 'ಮಾವ ತಪ್ಪು ನಿಮ್ಮದಲ್ಲ, ನನ್ನದು' ಎಂದು ಮಾವನಿಗೆ ತನ್ನ ಹತ್ತಿರ ಇಟ್ಟುಕೊಂಡಳು. ಶೇಖರನು ತನ್ನ ತಾಯಿ, ಅಜ್ಜಿ ಚಿಕ್ಕಂದಿನಿಂದಲೂ ಕಷ್ಟಪಡುತ್ತ ಬಂದವರು, ಈಗಲಾದರೂ ಸುಖದಿಂದಿರಲಿ ಎಂದು ಅವರನ್ನು ಕರೆಯಿಸಿ, ತಂದೆ-ತಾಯಿ, ಅಜ್ಜಿಗೆ ಯಾವದಕ್ಕೂ ಕೊರತೆ ಮಾಡದೇ ಗಂಡ-ಹೆಂಡರಿಬ್ಬರೂ ಅವರ ಸೇವೆ ಮಾಡ ಹತ್ತಿದರು. ಇಂದಿರಾ, ಇಷ್ಟು ಕಲಿತು, ನಿಸ್ವಾರ್ಥ ಬುದ್ಧಿಯಿಂದ ಸೇವೆ ಮಾಡುವದನ್ನು ಕಂಡು 'ಇಂದಿರಾ, ನೀನು ಆದರ್ಶ ಸಾವಿತ್ರಿಯಾಗಿ ಬಾಳೆಂದು' ಆಶೀರ್ವಾದವಿತ್ತು ಮೊಮ್ಮಗನನ್ನು ಎತ್ತಿ ಮುದ್ದಿಟ್ಟರು. ಶೇಖರನ, ತಂದೆ-ತಾಯಿ, ಅಜ್ಜಿ, ಬಂದ ನಂತರ, ಶೇಖರನ ಮನೆ ಮತ್ತಷ್ಟು ಶೋಭೆ ಕಾಣಿಸ ಹತ್ತಿತು.

— ಶ್ರೀ ಚಂದ್ರಶೇಖರ ಹುರುಳಿ.

ಕಲಾಕ್ಷೇತ್ರ

ಅಮೆರಿಕೆಯಲ್ಲಿ ಭಾರತೀಯ ಕಲಾಪ್ರದರ್ಶನ

ಫೆಡರೇಶನ್ ಆಫ್ ಆರ್ಟ್ಸ್‌ನ ಅಭಿನಂದನಾರ್ಹ ಪ್ರಯಾಸ

ಮಾರ್ಚ ೩ನೆ ವಾರದಲ್ಲಿ ವಾಶಿಂಗ್‌ಟನ್ನಿನಲ್ಲಿ ನಡೆಯುತಿದ್ದ ಭಾರತೀಯ ಪೆಯಿಂಟಿಂಗ್‌ಗಳ ಪ್ರದರ್ಶನದಲ್ಲಿ ಭಾರತದ ಸಮಕಾಲೀನ ಕಲೆ ಚೆನ್ನಾಗಿ ಪ್ರತಿನಿಧೀಕೃತವಾದಂತಿದೆ ಎಂದು ವಾಷಿಂಗ್ಟನ್ ಪೋಸ್ಟಿನ ಕಲಾ ವಿಮರ್ಶಕ ಲೆಸ್ಲಿ ಜಡ್ ಅಹ್ಲಾಂಡರ್ ಬರೆದಿದ್ದಾರೆ.

ಅಮೆರಿಕನ್ ವಿಶ್ವವಿದ್ಯಾನಿಲಯದ ವಾಟ್ಕಿನ್ಸ್ ಗ್ಯಾಲರಿಯಲ್ಲಿ ಭಾರತದ ರಾಯಭಾರಿ ಚಾಗ್ಲಾರವರು ಈ ಭಾರತೀಯ ಪ್ರದರ್ಶನವನ್ನು ವಿಧಿವಿಹಿತವಾಗಿ ಉದ್ಘಾಟಿಸಿದರು, ಇದು ವಾಷಿಂಗ್‌ಟನ್ನಿನಲ್ಲಿ ಎರಡು ಅತಿಮುಖ್ಯ ಪ್ರದರ್ಶನಗಳಲ್ಲೊಂದು ಎಂದು ಮಿಸೆಸ್ ಅಹ್ಲಾಂಡರ್ ವರ್ಣಿಸಿದರು.

ಅನೇಕ ವರ್ಷಗಳ ಹಿಂದೆ ಸ್ಮಿತಸೋನಿಯನ್ ಸಂಸ್ಥೆಯಲ್ಲಿ ಪ್ರದರ್ಶಿತವಾದ ದೊಡ್ಡ ಭಾರತೀಯ ಪ್ರದರ್ಶನದಲ್ಲಿ ವ್ಯಕ್ತವಾದ ಭಾರತೀಯ ಚಿತ್ರಣ ಕಲೆಯ ಕತೆಗಿಂತ, ಈಗಿನ ಪ್ರದರ್ಶನದಲ್ಲಿ ವ್ಯಕ್ತವಾಗುವ ಭಾರತೀಯ ಪೈಂಟಿಂಗಿನ ಕತೆ, ಒಂದು ಹೆಜ್ಜೆ ಮುಂದೆಡೆದಿದೆ ಎಂದು ವಾಟ್ಕಿನ್ಸ್ ಪ್ರದರ್ಶನ ಕುರಿತು ಮಿಸೆಸ್, ಅಹ್ಲಾಂಡರ್ ಬರೆದಿದ್ದಾರೆ.

ಅಂದಿನಿಂದ ಭಾರತದ ಕಲೆಯು ಮುಂದೆಯೂ ಸಾಗಿದೆ, ಹಿಂದೆಯೂ ಸಾಗಿದೆ, ಅಂತಾರಾಷ್ಟ್ರೀಯ ಸಮಕಾಲೀನ ಕಲೆಯ ದೊಡ್ಡ ತೊರೆಯಾಗಿ ಮುನ್ನಡೆದಿದೆ ಮತ್ತು ಸ್ಫೂರ್ತಿ ಮತ್ತು ಅವಿಚ್ಛಿನ್ನತೆಗಾಗಿ ಭಾರತದ ಸಾಂಪ್ರದಾಯಿಕವಾದ ಜಾನಪದ ಕಲೆಯತ್ತ ಹಿನ್ನಡೆದಿದೆ" ಎಂದವರು ಬರೆದಿದ್ದಾರೆ.

"ಜೈನ ಪ್ರತಿಮೆಗಳು, ಆಟದ ವಸ್ತುಗಳು, ಜಾನಪದ ಕಲೆಗಳು ಮತ್ತು ಅಜಂತಾದ ಅದ್ಭುತ ಭಿತ್ತಿ ಚಿತ್ರಗಳು— ಇವು ಈ ಪೈಯಿಂಟಿಂಗುಗಳು ಹಿನ್ನಲೆಯಲ್ಲಿನ ಕೆಲವು ಪ್ರಭಾವಗಳು, ಗ್ಯಾತೊಂಡೆಯವರ ಸಮಗ್ರ ಭಾವುಕತೆ, ರಾಮ್ ಕುಮಾರ್‌ರ ಸಾಮಾಜಿಕ ವಿಮರ್ಶೆ, ಸಮಂತ್‌ರ ಫೋಟೋಗ್ರಾಫಿಕ್ ರಚನೆಗಳು ಹೀಗೆ ಕೃತಿಗಳ ವೈವಿಧ್ಯವಿದೆ" ಎಂದು ಮಿಸ್. ಅಹ್ಲಾಂಡರ್ ಹೇಳುತ್ತಾರೆ.

ಸೋಜಾರವರು ೧೯೪೯ರಿಂದ ಯುರೋಪಿನಲ್ಲಿ ಜೀವಿಸಿದ್ದಾರೆ, ಮತ್ತಿವರ ಕೃತಿಗಳು ಕೆಲವು ವಿಷಯಗಳಲ್ಲಿ ಪಶ್ಚಿಮದ ಆಧುನಿಕ ಕೃತಿಗಳನ್ನು ಹೋಲುತ್ತಿದೆಯೆಂದು ಅಹ್ಲಾಂಡರ್ ಹೇಳಿದ್ದಾರೆ. ಹುಸೇನರ ಕೃತಿ ಹೆಚ್ಚು ಅಲಂಕಾರಮಯವಾಗಿದೆ, ಕೃಷ್ಣ ಖನ್ನಾರ ಕಲಾವಿದನ ಚಿತ್ರಣವು ಸ್ಪಷ್ಟವಾಗಿ ಐರೋಪ್ಯ ಲಕ್ಷ್ಯದ್ದಾಗಿದೆ ಎಂದು ವಿಮರ್ಶಿಸಿ ಬರೆದಿದ್ದಾರೆ.

ಅಕ್ಬರ್ ಪ್ರದಂಸೀಯವರು ತನ್ನ ಕೃತಿಯಲ್ಲಿ ಹಲವು ಶಕ್ತಿಗಳ ಸಮತೋಲನೆಗೆ ಪ್ರಯತ್ನಿಸಿದ್ದಾರೆ. ರಾಜಾರವರು ಈಗಿನ ಎಕ್ಸ್‌ಪ್ರೆಸ್‌ನಿಸ್ಟ್ ರೀತಿಗೆ ಬಹು ಹತ್ತಿರ ಬಂದಿದ್ದಾರೆ ಎಂದು ಮಿಸ್. ಅಹ್ಲಾಂಡರ್ ಹೇಳಿದ್ದಾರೆ.

ಈ ಪ್ರದರ್ಶನವು ಇಲ್ಲಿ ಮಾರ್ಚ ೨೯ರವರೆಗೆ ಪ್ರದರ್ಶಿತವಾಗುತ್ತಿತ್ತು. ಅನಂತರ ಅಮೆರಿಕದ ಫೆಡರೇಷನ್ ಆಫ್ ಆರ್ಟ್ಸ್‌ನ ಆಶ್ರಯದಲ್ಲಿ ಇದು ಅಮೆರಿಕದಾದ್ಯಂತ ಸಂಚರಿಸುವುದು.

ವಿಚಾರ ಮಥನ

(೧ನೇ ಪುಟದಿಂದ)

ಲು ಆಗದಿರಲು ಹಲವಾರು ಕಾರಣಗಳಿವೆ ಎನ್ನಬಹುದು. ಮುಖ್ಯವಾಗಿ ಬಹಳ ಟೀಕೆಗೆ ಗುರಿಯಾದ ಗಣಿತಪ್ರಶ್ನೆಪತ್ರದ ಭಾಷೆಯು ಎಂಟನೆ ತರಗತಿಯ ವಿದ್ಯಾರ್ಥಿಗಳಿಗೆ ಅರ್ಥಮಾಡಿಕೊಳ್ಳುವ ಮಟ್ಟದಲ್ಲಿರಲಿಲ್ಲವೆಂಬುದೂ ಒಂದು ಆರೋಪ. ಅಂಕೆಗಳು ಕನ್ನಡದಲ್ಲಿದ್ದುದೂ ಇನ್ನೊಂದು ದೋಷ. ಅಂತೂ, ಮಕ್ಕಳೆಲ್ಲರೂ ಕಂಗಾಲಾಗಿ, ಏನು ಮಾಡಬೇಕೆಂದು ತೋರದೆ, ತಮಗೆ ತಿಳಿಯಬಹುದಾಗಿದ್ದ ಕೆಲವಾದರೂ ಲೆಕ್ಕಗಳನ್ನು ಮಾಡಲು ಅಸಾಧ್ಯರಾದುದರಿಂದ, ಅವರಿಗೆ ತಕ್ಕ ಪರಿಹಾರವನ್ನು ಕೊಡಬೇಕು ಎಂಬುದು ಅಂಬೋಣ. ಬೊಂಬಾಯಿ, ಕಲ್ಕತ್ತೆಗಳಂತಹ ಕೆಲವೆಡೆ ಪ್ರಶ್ನಪತ್ರಿಕೆಗಳು ಕಠಿನವಿದ್ದುವೆಂಬ ಕಾರಣಕ್ಕಾಗಿ, ಪರೀಕ್ಷಾರ್ಥಿಗಳು ಪರೀಕ್ಷಾಭವನದಿಂದ ಹೊರಬಂದು ಸತ್ಯಾಗ್ರಹ ಹೂಡುವ ವರ್ತಮಾನಗಳು ಆಗಾಗ ನಮಗೆ ದೊರೆಯುತ್ತವೆ. ಇದುವರೆಗೆ ಪ್ರಾಯಃ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ರೀತಿಯ 'ಪರೀಕ್ಷಾಭವನತ್ಯಾಗ" ನಡೆದಿರಲಿಲ್ಲವೆಂದು ಹೇಳಬಹುದು. ಮುಂದಿನ ವರ್ಷದಿಂದ, ಈ ಒಂದು "ಮುಂದುವರಿದ" ಸಭ್ಯಕರ್ಮವನ್ನೂ ನಡೆಸಿಬಿಟ್ಟರೆ ಎಲ್ಲದರಲ್ಲಿಯೂ, ಮುಖ್ಯವಾಗಿ ವಿದ್ಯಾಕ್ಷೇತ್ರದಲ್ಲಿ ಮುಂದುವರಿದ ದಕ್ಷಿಣ ಕನ್ನಡವು ತತ್ಸಂಬಂಧಿತವಾದ ಯಾವ ವಿಷಯದಲ್ಲಿಯೂ ಮಹಾಮೈಸೂರಲ್ಲಿ ಹಿಂದುಳಿಯದೆ, ಹಿಂದುಳಿದವರ ಪಟ್ಟಿಯಿಂದ ದಕ್ಷಿಣ ಕನ್ನಡಿಗರನ್ನೂ ಕಿತ್ತು ಹಾಕಬಹುದು. ಇದಕ್ಕೆ ತಕ್ಕ ವಾತಾವರಣವನ್ನು ನಿರ್ಮಿಸುವುದು ಆಗತ್ಯವೇ ಅನಗತ್ಯವೇ ಎಂಬುದನ್ನು ವಿವೇಕಿಗಳು ಉತ್ತರಿಸಬೇಕು. ಅಷ್ಟೇ. ಜನರಾಗಿ ಮುಂದುವರಿಯುವುದಕ್ಕೆ ಮೊದಲು ಸರಕಾರವೂ ಎಚ್ಚರವಾಗಬೇಕು.

— ರಾಶಿ

ದಾಂಡೇಲಿ ಮತ್ತು ಯಾದಗಿರಿ

ಎರಡು ಹೊಸ ಶಾಖೆಗಳು ಸಿಂಡಿಕೇಟಿನ ಬೇಂಕಿಂಗ್ ಸೇವೆಯ ಹೆಚ್ಚಳಕ್ಕಾಗಿ

16—4—1959ರಂದು ತೆರೆಯಲ್ಪಡುವುವು.

ಇಲ್ಲಿಗೆ ನಮ್ಮ ಶಾಖೆಗಳ ಸಂಖ್ಯೆಯು 119 ಆಗುವುದು.

— ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಗೋವಿಜಯ

(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ಮಕ್ಕಳ ಮಗ್ಗಿ ಪುಸ್ತಕ

(ನಯೇ ಪೈಸೆ ಕೋಷ್ಟಕ ಸಹಿತ)

ಬೆಲೆ 1ಕ್ಕೆ 0 1 0

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ವಾರ್ಷಿಕ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ

ವರುಷ ೩೮. ವಾರ ೩೨ 23-4-1959 Vol 38 No 32.

ವಿಚಾರ ಮಥನ

ಲಾಮಾ ಪಲಾಯನಕಾರಣ

* *

ಡಲ್ಲೆಸರ ತ್ಯಾಗಪತ್ರ

* *

ರಾಜಾಜಿ ಮೌನತಾಳಿದರೆ?

* *

ರಾಜ್ಯಪಾಲರ ನಿರ್ಗಮನ

೧೯೫೧ರಲ್ಲಿ ಚೀನ ಮತ್ತು ಟಿಬೇಟುಗಳ ನಡುವೆ ಒಂದು ಒಪ್ಪಂದವಾಗಿದ್ದು, ಟಿಬೇಟಿನಕ್ಕೆ ಸಂಪೂರ್ಣ ಆಂತರಿಕ ಸ್ವಾತಂತ್ರ್ಯವನ್ನು ಕೊಡುವ ಭರವಸೆಯು ಕೊಡಲ್ಪಟ್ಟಿತ್ತು. ಆದರೆ, ಚೀನವು ತಾನಿತ್ತ ಭರವಸೆಯನ್ನು ಪೂರ್ಣ ಕಾರ್ಯಕಾರಿಗೊಳಿಸದೆ, ಈ ಒಪ್ಪಂದವನ್ನು ಅನುಸರಿಸಲ್ಲವಾದುದರಿಂದ, ಟಿಬೇಟದಲ್ಲಿ ಕಳೆದ ಮೂರು ನಾಲ್ಕು ವರ್ಷಗಳಿಂದ ಅಲ್ಲಲ್ಲಿ ದಂಗೆಗಳು ಏಳುತ್ತಲೇ ಇದ್ದುವು. ಈ ದಂಗೆಗಳೇ ಇತ್ತೀಚೆಗೆ ವ್ಯಾಪಕರೂಪವನ್ನು ಧರಿಸಿ, ವಿಪ್ಲವವನ್ನುಂಟುಮಾಡಿವೆ. ಚೀನವಾದರೂ ಟಿಬೇಟದಲ್ಲಿ ಭೇದೋಪಾಯವನ್ನು ಮೊದಲಿನಿಂದಲೇ ಕಾರ್ಯಗತಗೊಳಿಸಿರುತ್ತದೆ. ಈ ತಂತ್ರವು ಮುಂದುವರಿಯುತ್ತಲೇ ಇತ್ತು. ಆದರೆ, ಇತ್ತೀಚಿಗಿನ ಚೀನೀಯರ "ದಬ್ಬಾಳಿಕೆ"ಯು ಟಿಬೇಟಿಯನರನ್ನು ರೊಚ್ಚಿಗೇಳಿಸಿದುದರಿಂದಲೂ ಟಿಬೇಟದ ಆಂತರಿಕ ವ್ಯವಹಾರದಲ್ಲಿ ಪ್ರತ್ಯಕ್ಷವಾಗಿ ಕೈಹಾಕತೊಡಗಿದುದರಿಂದಲೂ ಖಂಪಾ ಜನರು ದಂಗೆಯೆದ್ದುದು ಜಗಜ್ಜನಿತ. ಟಿಬೇಟದ ಧರ್ಮಾಧಿಕಾರಿಗಳಾದ ದಲಾಯ್ ಲಾಮಾ ಅವರು ತಮ್ಮ ಸ್ವರಕ್ಷಣೆಗಾಗಿ ಟಿಬೇಟನ್ನು ತೊರೆದು ಭಾರತವನ್ನು ಮರೆ ಹೊಕ್ಕು ಬಂದಿದ್ದಾರೆ ಭಾರತವೂ ಅವರನ್ನು ಸ್ವಾಗತಿಸಿ, ಅವರಿಚ್ಛಿಸುವಷ್ಟು ಕಾಲ ಇಲ್ಲಿ ಉಳಕೊಳ್ಳಲು ತಕ್ಕ ವ್ಯವಸ್ಥೆಯನ್ನು ಮಾಡಲು ನಿರ್ಧರಿಸಿದ್ದಾರೆ ಸದ್ಯ ಚೀನೀಯ ಪ್ರಧಾನಿ ಚೌ ಎನ್ ಲಾಯ್ ಅವರು ಲಾಮಾರನ್ನು ಟಿಬೇಟದ ವಿದ್ರೋಹೀ ಜನರು ತಮ್ಮೊಡನೆ ಒತ್ತಾಯದಿಂದ ಕರೆದುಕೊಂಡು ಭಾರತಕ್ಕೆ ಓಡಿ ಹೋಗಿದ್ದಾರೆ ಎಂಬ ಮಾತನ್ನು ಪುಷ್ಟೀಕರಿಸಿದ್ದಾರೆ. ಆದರೆ, ಈ ಮಾತನ್ನು ದಲಾಯ್ ಲಾಮಾರು ಬಲವತ್ತರವಾಗಿ ಅಲ್ಲಗಳೆದಿದ್ದಾರೆ ಚೀನೀ ಸೇನೆಯು ಟಿಬೇಟನ್ನು ತನ್ನ ಸ್ವಾಧೀನಕ್ಕೆ ತಂದುಕೊಂಡನಂತರ ಅದು ಟಿಬೇಟದ ಆಂತರಿಕ ವ್ಯವಹಾರದಲ್ಲಿಯೂ ಕೈಹಾಕಿದ್ದು, ತನ್ನ ಪೂರ್ಣ ಅಧಿಕಾರವನ್ನು ಚಲಾಯಿಸಿದೆ ಎಂದೂ ಈ ಕಾರಣದಿಂದಾಗಿ ಚೀನಾ ಮತ್ತು ಟಿಬೇಟುಗಳ ನಡುವಣ ಸಂಬಂಧವು ಕೆಟ್ಟು ವಿಷಮಾವಸ್ಥೆಗೆ ಬಂದಿರುವುದರಿಂದಲೇ ತಾನು ಸ್ವೇಚ್ಛೆಯಿಂದಲೇ-ಯಾರ ಬಲಾತ್ಕಾರಕ್ಕೂ ಒಳಗಾಗದೇನೇ ಲಾಸವನ್ನು ಪರಿತ್ಯಜಿಸಿ, ಭಾರತಕ್ಕೆ ಬಂದಿರುವ ಸತ್ಯವನ್ನು ಸ್ಫೋಟಗೊಳಿಸಿದ್ದಾರೆ ಆದರೆ, ಚೀನೀಯ ವಲಯಗಳು ಈ ವಿಷಯವನ್ನು ಒಪ್ಪುತ್ತಿಲ್ಲ ಮಾತ್ರವಲ್ಲದೇ ಶ್ರೀ ಚೌ ಎನ್ ಲಾಯರು ದಲಾಯ್ ಲಾಮಾ ಅವರು ಆದಷ್ಟು ಶೀಘ್ರದಲ್ಲಿಯೇ ಟಿಬೇಟದ "ಬಂಡುಗಾರರ" ಕಪಿಮುಷ್ಟಿಯಿಂದ ಮುಕ್ತರಾಗಿ ಸ್ವದೇಶಕ್ಕೆ ಮರಳುವರೆಂದು ಆಶಿಸಿದ್ದಾರೆ ಆದರೆ, ದಾಲಾಯ್ ಲಾಮಾರು ಮಾತ್ರ ಚೀನೀಯ ಪ್ರಧಾನಿಯ ಆಶೆಯನ್ನು ಟಿಬೇಟಿನ ಆಂತರಿಕ ವ್ಯವಸ್ಥೆಯು ಪರಿಪೂರ್ಣ ಸ್ವತಂತ್ರವಾಗುವ ವರೆಗೆ ಪೂರೈಸಲಾರರೆಂಬುದು ಅವರ ಮಾತುಗಳಿಂದಲೇ ಸ್ಪಷ್ಟವಾಗುವುದು

೦೦ ೧೦

ಪ್ರಪಂಚದ ನಾಲ್ಕು ದೊಡ್ಡ ರಾಷ್ಟ್ರಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಅಮೆರಿಕೆಯ ರಾಜ್ಯಾಂಗ ಕಾರ್ಯದರ್ಶಿಯಾಗಿ ವಿಶ್ವದ ಮೂಲೆಮೂಲೆಯಲ್ಲಿಯೂ ನಾಮಾಂಕಿತರಾದ ಶ್ರೀ ಜಾನ್ ಫಾಸ್ಟರ್ ಡಲ್ಲೆಸರು ತಮ್ಮ ಹುದ್ದೆಗೆ ರಾಜೀನಾಮೆಯನ್ನಿತ್ತಿದ್ದು, ಅದು ಸ್ವೀಕಾರವಾಗಿದೆಯೆಂದು ತಿಳಿದು ಬರುತ್ತದೆ. ಶ್ರೀ ಡಲ್ಲೆಸರು ಅಮೆರಿಕೆ ಮತ್ತು ವಿದೇಶಗಳ ನಡುವೆ ತುಂಬ ವಿಧದಲ್ಲಿ ವ್ಯವಹಾರ ಸಂಬಂಧಗಳನ್ನು ನಿರ್ಮಿಸುವಲ್ಲಿ ಕಾರ್ಯಶೀಲರಾಗಿದ್ದಾರೆ. ಈಗ ಇವರ ರಾಜೀನಾಮೆಯಿಂದಾಗಿ ಅಮೆರಿಕೆಯ ವಿದೇಶ ನೀತಿಯಲ್ಲಿ ಯಾವ ವಿಶೇಷ ಪರಿವರ್ತನೆಯಾಗಲಾರದಾದರೂ, ಇವರ ಸ್ಥಾನ ವಿಶೇಷವನ್ನು ಪೂರ್ತಿಯಾಗಿ ತುಂಬುವ ಅನ್ಯವ್ಯಕ್ತಿ ಇಲ್ಲವೆಂಬುದು ನಿರ್ವಿವಾದ ಶ್ರೀ ಡಲ್ಲೆಸರು ತನ್ನ ಕಾರ್ಯನೀತಿಯಿಂದ ಅಸೀಮ ಲೋಕ ಪ್ರಿಯತೆಯನ್ನೂ ಲೋಕ ಅಪ್ರಿಯತೆಯನ್ನೂ ಗಳಿಸಿದ್ದಾರೆ "ಸ್ವತಂತ್ರ' ವಿಶ್ವಸ್ಥಾಪನ ಮಾಡಲು ಇವರ ಸಹಾಯವು ಅತ್ಯಗತ್ಯವೆಂದೂ ತಿಳಿಯಲ್ಪಟ್ಟಿತ್ತು. ಕೇವಲ ಅಮೆರಿಕೆ ಮಾತ್ರವಲ್ಲ, ಸಾಮಾನ್ಯವಾಗಿ ಪಾಶ್ಚಾತ್ಯ ರಾಷ್ಟ್ರಗಳ ವಿದೇಶನೀತಿಯೂ ಶ್ರೀ ಡಲ್ಲೆಸರಿಂದಲೇ ರೂಪಿಸಲ್ಪಡುತಿತ್ತು ಎಂದರೆ ಅತಿಶಯೋಕ್ತಿಯಲ್ಲ ಪಾಶ್ಚಾತ್ಯ ರಾಷ್ಟ್ರಗಳು ಕಮ್ಯೂನಿಸಂ ವಿರೋಧಿಗಳಾಗಿದ್ದುದರಿಂದ, ಈ ರಾಷ್ಟ್ರಗಳ ವಿದೇಶನೀತಿಯಿಂದಾಗಿ ಕಮ್ಯೂನಿಸ್ಟ ರಾಷ್ಟ್ರಗಳಿಗೆ ಶಿರೋವೇದನೆಯಿತ್ತು ಎಂತಲೇ ಡಲ್ಲೆಸರು ಇವುಗಳಿಗೆ ಅಪ್ರಿಯ ವ್ಯಕ್ತಿಯಾಗಿದ್ದರು ಕೊರಿಯದ ಸಿಗ್ಮನ್ ರೀ ಮತ್ತು ಫ ರ್ಮೋಸಾದ ಚಿಯಾಂಗ್ ಕೈ ಶೇಖರ ಬಲಗೈಯಾಗಿದ್ದವರೇ ಡಲ್ಲೆಸರು! ಕಮ್ಯುನಿಸ್ಟ ಚೀನಕ್ಕೆ ಯುಕ್ತ ರಾಷ್ಟ್ರಸಂಘದಲ್ಲಿ ಪ್ರಾತಿನಿಧ್ಯಕೊಡಬೇಕೆಂದು ಬಹಳ ವರ್ಷಗಳಿಂದ ಪ್ರಯತ್ನ ನಡೆಯುತಿದ್ದರೂ, ಅದು ಇದುವರೆಗೂ ಸಫಲವಾಗದುದರ ಮೂಲಕಾರಣ ಡಲ್ಲೆಸರು! ನಮ್ಮ ಭಾರತದ ವಿದೇಶನೀತಿಯು ಕೂಡಾ ಡಲ್ಲೆಸರಿಗೆ ಸರಿಬರಲಿಲ್ಲ ಎಂತಲೇ ಅವರು ಗೋವಾವು ಪೋರ್ಚುಗಲಿನ ಅಂಗವೆಂದು ಸಾರಿದರು ಕಾಶ್ಮೀರದ ಪ್ರಶ್ನೆಯನ್ನು ಮತ್ತಷ್ಟು ಜಟಿಲವಾಗಿಸುತ್ತ ಪಾಕಿಸ್ತಾನಕ್ಕೆ ಪ್ರತ್ಯಕ್ಷಾಪ್ರತ್ಯಕ್ಷ ಸಹಾಯವೀಯುತಲಿದ್ದರು. ಅಮೆರಿಕೆ-ಪಾಕಿಸ್ತಾನಗಳ ನಡುವೆ ಸೈನಿಕ ಒಪ್ಪಂದವಾಗುವುದಕ್ಕೂ ಸ್ವಯಂ ಡಲ್ಲೆಸರೇ ಮೂಲಕಾರಣ ಹೀಗೆ ವಿದೇಶೀ ಮಂತ್ರಿಗಳಾಗಿ ಶ್ರೀ ಡಲ್ಲೆಸರು ಪ್ರಪಂಚದ ಎಲ್ಲ ರಾಷ್ಟ್ರಗಳ ಕೃಪೆಗೂ ಅಪಕೃಪೆಗೂ ಪಾತ್ರರಾಗಿದ್ದಾರೆ. ಹಗಲು ರಾತ್ರಿಗಳಂತೆ ಇವರನ್ನು ಮೆಚ್ಚುವವರೂ

(ಆನೇ ಪುಟ ನೋಡಿರಿ)



ಅಂತಾರಾಷ್ಟ್ರೀಯ ಭೂಭೌತ ವರ್ಷದಲ್ಲಿ ಸಾಧಿಸಿದ ಸಾಧನೆಗಳಿಗಾಗಿ ಬ್ರಿಟಿಷ ಉತ್ತರ ಧ್ರುವ ಸಂಶೋಧಕ ಸರ್ ವಿವಿನ್ ಫುಟ್ಸ್ (ಎಡ)ನನ್ನು ಬರ್ಲಿನ್ ಭೂಭೌತಿಕ ಸಂಘವು ಸನ್ಮಾನಿಸಿತು

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ- ಮಂಗಳೂರು—3 ಸ್ಥಾಪನೆ - 1931

ಕಾಯಂ ಠೇವಣಾತಿ ಬಡ್ಡಿ ದರ

1	ತಿಂಗಳಿಂದ	5	ತಿಂಗಳ ವರೆಗೆ	4¼%
6	,,	12	,,	4½%
13	,,	24	,,	4¾%

ರೂಪಾಯಿ 10,000/- ದ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ಇತ್ಯಾದಿ ...

ಕಥಾ ವಿಹಾರ

ಸ್ನೇಹಲತೆಯು ಬೆಳೆದು ಬಂದಾಗ

ನೆಚ್ಚಿನ ಗೆಳತಿಯರ ನಡುವೆ ಹುಟ್ಟಿಕೊಂಡ ಸಿಟ್ಟು ಬೆಳೆದು ಬಂದಿತು. ಕೊನೆಗೆ......?

"ನೆಚ್ಚಿನ ಗೆಳತಿ ಕುಸುಮಳಿಗೆ,
ವಂದನೆಗಳು.

ಕ್ಷೇಮ. 'ನಾನು ಕಳುಹಿಸಿಕೊಟ್ಟ ಪುಸ್ತಕವನ್ನು ನೀನು ಹಿಂದೆ ಕಳುಹಿಸಿದುದೇಕೆ? ನಾನು ನಿನ್ನ ಆ ಎರಡು ಆಣೆಗಳನ್ನು ಮರ ದಿನವೇ ನನ್ನ ತಮ್ಮ ಭಾಸ್ಕರನ ಕೈಯಲ್ಲಿ ಕೊಟ್ಟು ಕಳುಹಿಸಿರುತ್ತೇನೆ. ನನ್ನಾಣೆ ಕೊಟ್ಟಿರುತ್ತೇನೆ. ದೇವರಾಣೆ ಕೊಟ್ಟಿರುತ್ತೇನೆ. ಸಿಕ್ಕಿರಬಹುದು. ಈ ಪತ್ರವನ್ನು ಬೇರೆ ಯಾರಿಗೂ ತೋರಿಸಬೇಡ. ಇತಿ, ಸುಂದರಿಯು ಮಾಡುವ ವಂದನೆಗಳು" ಪತ್ರವನ್ನೋದಿ ಮುಗಿಸಿದ ಬಳಿಕ "ಅಬ್ಬಾ, ಎಷ್ಟು ಚೆನ್ನಾಗಿ ಸುಳ್ಳು ಬರೆದಿರುವಳು. ಭಾಸ್ಕರನು ಹಣವನ್ನೇ ಕೊಡಲಿಲ್ಲ. ಸುಳ್ಳು ಸುಳ್ಳೇ ಬರೆದಿರುವಳು" ಎನ್ನುತ್ತ ಕುಸುಮಳು, ಪಕ್ಕದಿಂದ ಸೆಳೆಯುತ್ತಿರುವ ಹುಡುಗಿಯರಿಗೆ ಪತ್ರ ಸಿಗದಂತೆ ಅದನ್ನು ತಕ್ಷಣ ಹರಿದುಬಿಸುಟು, ಉಳಿದ ಹುಡುಗಿಯರಿಗಿಂತ ಮುಂದಾಗಿ ಓಡುತ್ತಾ ತನ್ನ ಕ್ಲಾಸನ್ನು ಸೇರಿಕೊಂಡಳು.

ಕುಸುಮ ಸುಂದರಿಯರಿಬ್ಬರೂ ನೆಚ್ಚಿನ ಗೆಳತಿಯರು. ಇಬ್ಬರೂ ಆರನೇ ವರ್ಗದಲ್ಲಿ ಕಲಿಯುತಿದ್ದರು. ಕಲಿಯುವಿಕೆಯಲ್ಲಿ ಕುಸುಮಳೇ ಮುಂದಾಗಿದ್ದರೂ ಆಟ ಕೂಟಗಳಲ್ಲಿ ಸುಂದರಿಯೇ ಮುಂದು. ಅಂತೇ ಮಾಸ್ತರಿಣಿಯರಲ್ಲೂ ಆಕೆಯೇ ಪ್ರೀತಿ, ಕ್ಲಾಸಿನ ಹುಡುಗಿಯರಿಗೆ ಯಾವ [illegible] ಬೇಕಿದ್ದರೂ, ಯಾವ ಕೆಲಸ [illegible] ಮುಂದಾಗಿ ನಡೆಯು [illegible] ಸುಂದರಿ ಮಾತ್ರ. ಪ್ರತಿಯೊಂದು ಕೆಲಸಗಳಲ್ಲೂ ಆಕೆಯು ಒಳಗೈಯಂತಿದ್ದಳು ಕುಸುಮ. ಇಬ್ಬರಲ್ಲೂ ಪರಸ್ಪರ ಪ್ರೇಮ ಬೆಳೆದುಬಂದಿತ್ತು.

ಹುಡುಗಿಯರಿಗೆ ಹನ್ನೆರಡು, ಹದಿಮೂರು ವರ್ಷವಾದೊಡನೇ ಅವರನ್ನು ಶಾಲೆಯಿಂದ ಬಿಡಿಸಿ ಮನೆಯಲ್ಲಿರಿಸಿಕೊಳ್ಳುವುದು ಹಳ್ಳಿಯ ಮರ್ಯಾದಸ್ಥ ಕುಟುಂಬಗಳ (?) ಒಂದು ಸಂಪ್ರದಾಯ. ಅಂತೇ ಕೆಲದಿನಗಳ ಹಿಂದೆ ಮನೆಯ ಹಿರಿಯರ ಬಂಧನದ ಫಲವಾಗಿ ಸುಂದರಿಯೂ ಶಾಲೆ ಬಿಟ್ಟಿದ್ದಳು. ಶಾಲೆ ಬಿಡುವಂದು ತುಂಬಾ ಕೂಗಿ, ಜತೆಗಾತಿಯರಿಗೆಲ್ಲಾ ಕೊನೆಯ ನಮಸ್ಕಾರಗಳನ್ನು ಸಲ್ಲಿಸಿ, ಹೊರಟು ಬಂದಿದ್ದಳು. ಮರುದಿನವೇ ತನ್ನೆಲ್ಲಾ ಪುಸ್ತಕಗಳನ್ನೂ ತನ್ನ ಗೆಳತಿಯರಿಗೆಂದು ಎರಡನೇ ವರ್ಗದಲ್ಲಿ ಕಲಿಯುತ್ತಿರುವ ಆಕೆಯ ತಮ್ಮ ಭಾಸ್ಕರನ ಮೂಲಕ ಶಾಲೆಗೆ ಕಳುಹಿಸಿಕೊಟ್ಟಿದ್ದಳು. ಅದಾವ ಕಾರಣದಿಂದಲೋ ತನ್ನ ಪಾಲಿಗೆ ಬಂದಿದ್ದ ಹರುಕು ಮುಖಪತ್ರದ ಪುಸ್ತಕವನ್ನು ಕಂಡಾಗ ಮಾತ್ರ ಕುಸುಮಳಿಗೆ ಸುಂದರಿಯ ಮೇಲಿದ್ದ ಪ್ರೇಮವು ಒಮ್ಮಿಂದೊಮ್ಮೆಗೇ ಮಾಯವಾಗಿ ಸಿಟ್ಟು ಉಕ್ಕಿ ಬಂದಿತ್ತು. ಅಂದೇ ಆ ಪುಸ್ತಕವನ್ನು ಹಿಂದೆ ಕಳುಹಿಸಿದ್ದಳು. ಒಟ್ಟಿಗೇ, ಎಂದೋ ಕೊಟ್ಟು ಮರೆತುಬಿಟ್ಟಿದ್ದ ಎರಡಾಣೆಯ ವಸೂಲಿಗೆಂದು ಪತ್ರವೊಂದನ್ನೂ ಬರೆದು ಕಳುಹಿಸಿಕೊಟ್ಟಿದ್ದಳು. ಇಂದು ಸುಂದರಿಯ ಪತ್ರವನ್ನು ಕಂಡೂ ಶಾಂತಿ ದೊರೆಯಲಿಲ್ಲ. ಆಕೆಯ ಮೇಲೆ ಮತ್ಸರವೇ ಹೆಚ್ಚಿತು. ಆಣೆಯ ಆಸೆಯನ್ನು ಬಿಟ್ಟುಬಿಟ್ಟು ಕುಸುಮಳು ಕ್ಲಾಸಿನಲ್ಲಿ ಸುಂದರಿಯ ಕುರಿತಾಗಿ ಏನೇನೋ ಸುಳ್ಳು ಸಮಾಚಾರಗಳನ್ನು ಹರಡಿಸಲು ತೊಡಗಿದಳು— ತನ್ನ ಮನದ ತೃಪ್ತಿಗಾಗಿ, ಮುಂದಿನ ನಾಯಕಿ ಪಟ್ಟಕ್ಕಾಗಿ.

ಹಿರಿಯರಿಗೆಲ್ಲಾ ಊರಲ್ಲಿ ವರ್ಷಕ್ಕೊಮ್ಮೆ ಜಾತ್ರೆಯಿದ್ದರೆ, ಕಿರಿಯರಿಗೆಲ್ಲಾ ಶಾಲೆಯಲ್ಲೊಂದು ವರ್ಧಂತ್ಯುತ್ಸವ. ಆ ಎಳೆಯರ ಅಂದಿನ ಉತ್ಸಾಹ ಹೇಳತೀರದು. ಕುಸುಮಳ ಶಾಲೆಯಲ್ಲೂ ವರ್ಧಂತ್ಯುತ್ಸವದ ಆ ಸುದಿನವು ಬಂದೇಬಿಟ್ಟಿತು. ಸುಂದರಿಯ ನೆನಪೇ ಅಳಿದಿದ್ದ ಕುಸುಮಳಿಗೆ ಇಂದು ಆಕೆಯ ರೂಪವು ಕಣ್ಣ ಮುಂದೆ ಕಟ್ಟಿದಂತಾಯಿತು "ಅಂದು, ಕಳೆದ ವರ್ಷದ ಆ ಮೀರಾಬಾಯಿ ನಾಟಕದಲ್ಲಿ ಆಕೆ ರಾಣನಾಗಿ ನಾನು ಮೀರಾಳಾಗಿ ಎಷ್ಟು ಚೆನ್ನಾಗಿ ಅಭಿನಯಿಸಲಿಲ್ಲ? ಅಭ್ಯಾಸದ ಸಮಯ ಎಷ್ಟು ಬಾರಿ ಜತೆ ಜತೆಯಾಗಿ ಕುಣಿದಾಡಲಿಲ್ಲ? ನಾಟಕದಂದು ಎಷ್ಟು ಜನರಿಂದ ಹೊಗಳಿಸಿ ಕೊಳ್ಳಲಿಲ್ಲ? ಆದರೆ ಇಂದು— ಆಕೆ ಇಲ್ಲದ ದರಿಂದಾಗಿ ನನಗೂ ಪಾತ್ರವಿಲ್ಲದಾಗಿದೆ—" ಈ ಸವಿ ನೆನಪು ಕುಸುಮಳನ್ನು ಕಾಡ ತೊಡಗಿತು. ರಾತ್ರೆ ನಾಟಕದ ಸಮಯ ಕುಸುಮಳ ಕಣ್ಣುಗಳು ಸುಂದರಿಯನ್ನೇ ಹುಡುಕುತಿದ್ದುವು. ಆದರೆ ಸುಂದರಿಯೆಲ್ಲಿ? ಕೊನೆಗೆ ನಿರಾಶಳಾದ ಕುಸುಮಳು ಮನಸ್ಸಿಲ್ಲದೆ, ಪರದೆಯತ್ತ ನೋಡುತ್ತಾ ಒಂದೆಡೆ ಒರಗಿ ಕೊಂಡಳು.

ದಿನಗಳುರುಳುತ್ತಿದ್ದಂತೇ ಕುಸುಮಳಿಗೆ ಸುಂದರಿಯನ್ನು ಕಾಣಬೇಕೆಂಬಾಸೆ ಹೆಚ್ಚ ತೊಡಗಿತು. ಶಾಲೆಗೆ ಬಂದು ತನ್ನನ್ನೊಮ್ಮೆ ಕಾಣಬೇಕೆಂದು ಪತ್ರ ಬರೆದು ಕಳುಹಿಸ ತೊಡಗಿದಳು. ಆದರೆ ಆಕೆಯ ಪ್ರಾರಂಭದ ಪತ್ರದಿಂದಲೇ ಕುಪಿತಳಾಗಿದ್ದ ಸುಂದರಿಯು ಒಂದು ಪತ್ರವನ್ನು ಬರೆಯಲಿಲ್ಲ. ಕುಸುಮಳಿಗೆ ಇದರಿಂದಾಗಿ ಸುಂದರಿಯ ಮೇಲೆ ಪುನಃ ಬೇಸರ ಹುಟ್ಟಿಕೊಂಡಿತು. ಶಾಲೆಯ ಕೊನೆಯ ಕ್ಲಾಸಿನಲ್ಲಿ ಕಲಿಯುತಿದ್ದ ಕುಸುಮಳು ಸುಂದರಿಗೆ ಪತ್ರ ಬರೆಯುವುದನ್ನೇ ಬಿಟ್ಟು ಬಿಟ್ಟಳು.

ಊರ ಜಾತ್ರೆಯು ಪ್ರತಿ ವರ್ಷ ಜರಗುವಂತೆ ಶಾಲಾ ವರ್ಧಂತ್ಯುತ್ಸವವೂ ಪ್ರತಿ ವರ್ಷ ಜರಗುವುದು ವಾಡಿಕೆಯಾಗಿದೆ. ಕುಸುಮಳ ಶಾಲೆಯ ಮರುವರ್ಷದ ವರ್ಧಂತ್ಯುತ್ಸವವೂ ಎಂದಿನಂತೇ ಸಕಾಲದಲ್ಲಿ ಬಂದೇ ಬಿಟ್ಟಿತು. ಈ ವರ್ಷ ಎಲ್ಲಾ ಕಾರ್ಯಕ್ರಮಗಳಲ್ಲೂ ಕುಸುಮಳು ಹುರುಪಿನಿಂದ ಭಾಗ ವಹಿಸುತಿದ್ದಾಳೆ, ಪ್ರಾರ್ಥನೆ, ಸ್ವಾಗತ ಗೀತೆ ಎಲ್ಲಾ ಆವಳ ಪಾಲಿಗೇ. ವರ್ಧಂತ್ಯುತ್ಸವದಂದು ಆಚೀಚೆ ಓಡಾಡುತಿದ್ದಾಗ ಫಕ್ಕನೆ ಸಭೆಯ ಮಧ್ಯದಲ್ಲಿ ಸುಂದರಿಯ ಸುಂದರವದನವನ್ನು ಕಂಡು ಕುಸುಮಳು ಅಲ್ಲೇ ನಿಂತು ಬಿಟ್ಟಳು ಸುಂದರಿಯೂ ಕುಸುಮಳನ್ನು ಕಂಡಳು. ಆದರೆ ಸುಂದರಿಯು ಎದ್ದು ಕುಸುಮಳ ಬಳಿ ಬರಲಿಲ್ಲ. ಕುಸುಮಳಿಗೂ ಒಂದೊಮ್ಮೆ ಸುಂದರಿಯ ಸಮೀಪ ಸರಿಯೋಣವೆಂದು ಕಂಡರೂ ಕಾಲುಗಳು ನಡೆಯಲಿಲ್ಲ. ಒಂದು ಮಿನಿಟು ಹಾಗೆಯೇ ನಿಂತು ಕುಸುಮಳು ಯೋಚನಾಭರಿತಳಾಗಿ ಬೇರೆಡೆಗೆ ನಡೆದಳು.

ವರ್ಷಗಳುರುಳುತಿದ್ದುವು. ಮೊದಲ ಹುಡುಗಿಗಾದರೂ ಇಪ್ಪತ್ತರ ಕರೆಯದೊಳಗೆ ವಿವಾಹ ತೀರಿಸಿ ಬಿಡಬೇಕೆಂಬಾಸೆ ಹುಡುಗಿ ಹೆತ್ತ ತಂದೆತಾಯಿಗಳಲ್ಲಿ ಸಹಜವಾಗಿರುತ್ತದೆ. ಲೋಕ ರೂಢಿಯಂತೆ ಸಕಾಲದಲ್ಲೇ ಕುಸುಮಳ ವಿವಾಹವೂ ನೆರವೇರಿತು. ಕರೆಯಿಲ್ಲದಿದ್ದರೂ ಒಮ್ಮೆ ಮದುವೆಗೆ ಹೋಗೋಣವೆಂದು ನೆನೆದ ಸುಂದರಿಯು ಅದೇನೋ ಯೋಚಿಸಿ ಮದುವೆಗೆ ಹೋಗಿರಲಿಲ್ಲ. ಕೆಲವು ದಿನಗಳಲ್ಲೇ ಕುಸುಮಳು ಗಂಡನ ಮನೆ ಸೇರಿದಳು.

ಮದುವೆಯಾಗಿ ಒಂದು ವರ್ಷದ ತನಕ ಅತ್ತಿತ್ತ ಹೋಗುತ್ತಿರುವುದೇ ನೂತನ ವಧೂವರರ ಮುಖ್ಯ ಕಾರ್ಯಕ್ರಮ. ಕುಸುಮಳು ಊರ ಜಾತ್ರೆಗೆಂದು ತವರು ಮನೆಯನ್ನು ಸೇರಲು ಗಂಡನೊಂದಿಗೆ ಬಸ್ಸು ನಿಲ್ದಾಣಕ್ಕೆ ಬಂದಿದ್ದಳು. ಬಸ್ಸು ಹತ್ತಿ ಕುಳಿತು ಕೊಳ್ಳಲು ಸೀಟಿನ ಬಳಿ ಹೋದಾಗ 'ಶೃಂಗಾರ ರಾಣಿ'ಯಾಗಿ ಕುಳಿತಿದ್ದ ಸುಂದರಿಯನ್ನು ಕಂಡು ಆಶ್ಚರ್ಯ ಚಕಿತಳಾದಳು. ಬಾಯಿಯಿಂದ 'ಸುಂದರೀ' ಎಂಬ ಶಬ್ದವೂ ಹೊರ ಹೊರಟಿತು. 'ಕುಸುಮಾ' ಎನ್ನುತ್ತಾ ಕೈಯಲ್ಲಿ ಹಿಡಿದು ಸಮೀಪ ಸೆಳೆದು ಕೊಂಡಳು ಸುಂದರಿ. ಎರಡು ಮಿನಿಟುಗಳ ತನಕ ಇಬ್ಬರಿಗೂ ಮಾತನಾಡಲಾಗಲಿಲ್ಲ. ನಾಲ್ಕು ಕಣ್ಣುಗಳೂ ನೀರೂರಿದ್ದುವು ನಿಧಾನವಾಗಿ "ನೀನೆಲ್ಲಿಂದ ಬರುತ್ತಿರುವೆ" ಎಂದು ಕುಸುಮಳು ಪ್ರಶ್ನಿಸಿದಳು. "ನಿನ್ನಂತೇ ನಾನೂ ನನ್ನವರ ಮನೆಯಿಂದ ಬರುತಿದ್ದೇನೆ" ಉತ್ತರ ದೊರಕಿತು. "ನಿನಗೆಂದು ಮದುವೆಯಾಯಿತು? ನಾನರಿಯೆನಲ್ಲಾ!" ಆಶ್ಚರ್ಯದಿಂದ ಕುಸುಮಳೆಂದಳು. "ನಿನಗಾದುದನ್ನೂ ನಾನರಿಯೆ ಎಲ್ಲಿ ನಿನ್ನವರ ಊರು?" ತಿಳಿದಿದ್ದ ಸುಂದರಿಯು ಪ್ರಶ್ನಿಸಿದಳು. ಹಲವು ಸಮಯದ ಬಳಿಕ ಪರಸ್ಪರ ಭೇಟಿಯಾದುದರಿಂದಾಗಿ ಕುಸುಮ ಸುಂದರಿಯರು ಮಾತನಾಡುವುದರಲ್ಲೇ ತನ್ಮಯರಾಗಿದ್ದರು. ಬಸ್ಸಿನ ಹೊರಗಿನಿಂದ ಸೋಡಾದವನ "ಸೋಡಾ ಸೋಡಾ" ಎಂಬ ಧ್ವನಿಯು ಕಿವಿಯನ್ನು ಬಡಿದೆಚ್ಚರಿಸುತಿತ್ತು. ಒಡನೇ ಸುಂದರಿಯು ಎರಡು ಸೋಡಾ ಪಡಕೊಂಡು ಕುಸುಮಳಿಗೂ ಒಂದನ್ನು ಕುಡಿಸಿ, ಒಂದು ಕಿತ್ತಳೆಯನ್ನೂ ಕೈಗಿತ್ತು, ಬಳಿಕ ಮೆಲ್ಲನೆ ಕೇಳಿದಳು "ನನ್ನ ಆ ಅಂದಿನ ಎರಡಾಣೆ ಈಗಲಾದರೂ ಸಂದಿತಲ್ಲ?" ಕುಸುಮಳಿಗೆ ತುಂಬಾ ಬೇಸರವಾಗಿತ್ತು. ಸುಂದರಿಯ ಮಡಿಲಲ್ಲಿ ಮುಖವಿರಿಸಿ ಮಲಗಿಕೊಂಡಳು. ಸುಂದರಿಯು ಏನೇನೋ ಸವಿ ನೆನಪುಗಳ ಕುರಿತೆಲ್ಲಾ ಮಾತನಾಡುತ್ತಾ, ಹೊಸ ವಿಚಾರಗಳನ್ನೆಲ್ಲಾ ಕೇಳುತ್ತಾ ಆಕೆಯ ತಲೆಗೂದಲುಗಳನ್ನು ನೇವರಿಸತೊಡಗಿದಳು. ಬಸ್ಸು ಹೊರಟಿತು.

ಬಸ್ಸಿನಿಂದ ಇಳಿದಾಗ ಸಂಜೆಯಾಗಿತ್ತು. ಇಬ್ಬರಿಗೂ ಬೇರೆಬೇರೆ ದಾರಿಯಿಂದಾಗಿ ಮನೆಸೇರಬೇಕಾದುದರಿಂದ ಜಾತ್ರೆಯಂದು ಸಂಧಿಸೋಣವೆಂದು ನಿಶ್ಚೈಸಿ ಬೇಗಬೇಗನೆ ಅಗಲಿಕೊಂಡರು.

ಅದೆಷ್ಟೊ ವರ್ಷಗಳ ಬಳಿಕ ಭೇಟಿಯಾದಾಗ ಮಾತನಾಡಲಿರುವ ವಿಷಯಗಳು ಹಲವಾರು. ಅದೆಲ್ಲ ಒಮ್ಮೆಲೇ ಪೂರ್ತಿಯಾಗದಿದ್ದಾಗ ಮತ್ತೊಮ್ಮೆ ಕಾಣುವ ವರೆಗೂ ಮನಸ್ಸು ಸಮಾಧಾನ ಪಡೆಯದು. ಹೆಚ್ಚಿದ ಆತುರದಿಂದಾಗಿ ಜಾತ್ರೆಯಂದು ಸಂಜೆಯೇ ಸುಂದರಿಯು

(೧೧ನೇ ಪುಟ ನೋಡಿರಿ)

'ಖೀರಾ' ಇವರ ಸ್ಟೀಲ್ ಕ್ಯಾಬಿನೆಟ್‌ಗಳು (ಕಪಾಟುಗಳು)

ನಿಮಗೆ ಒಂದು ಕ್ಯಾಬಿನೆಟ್ ಅಗತ್ಯ. ಕಳ್ಳರ, ಮಳಹುಪ್ಪಟೆಗಳ ಭೀತಿ ಇಲ್ಲದೆ ಬಟ್ಟೆ, ಒಡವೆಗಳನ್ನು ಜೋಪಾನವಾಗಿಡಲು ಆದರ್ಶವಾದುವು. 3 ಸೈಜುಗಳಿವೆ; ಮಿಜೆಟ್, ಪಾಪ್ಯುಲರ್, ಯುಟಿಲಿಟಿ. ಬೇಕಾದಂತೆ ಜೋಡಿಸಬಹುದಾದ ಕಪಾಟುಗಳು ಮತ್ತು ಭದ್ರವಾದ ಬೀಗವುಳ್ಳ ಒಳಕೋಣೆಗಳಿವೆ.

ಅಲ್ಲದೆ
ಸೋಫಾ, ಡೈನಿಂಗ್ ಸೆಟ್, ಆಫೀಸ್ ಫರ್ನಿಚರ್,
ಡೆಸ್ಕ್‌ಗಳು, ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು,
ವಿ. ಕೆ. ರಾಜ್ ಇಂಡಸ್ಟ್ರೀಸ್, ಆಲಿಘರ್ ಇವರ
ಉತ್ತಮ ಬೀಗಗಳು
ಇವೆಲ್ಲ ಸ್ಟಾಕಿವೆ.
ಸ್ಟೈನ್‌ಲೆಸ್ ಪಾತ್ರೆಗಳ ಮೇಲೆ ನಿಮ್ಮ ಹೆಸರನ್ನು ಉಚಿತವಾಗಿ ಕೊರೆದು ಕೊಡಲಾಗುವುದು.
7 ಲಿವರ್‌ಗಳ ಬೀಗ. ಆದರದೇ ಅಲ್ಲದ ಬೇರೆ ಬೀಗದ ಕೈಗಳಿಂದ ತೆಗೆಯಲಸಾಧ್ಯ.
ಶೋ ರೂಮನ್ನು ಸಂದರ್ಶಿಸಿ:
ಶಾಸ್ತ್ರೀ ಅಂಡ್ ಕಂಪೆನಿ
ಹಂಪನಕಟ್ಟೆ — — ಮಂಗಳೂರು

ವಿಜ್ಞಾನ ವಿಸ್ಮಯ

ಕೆಡದ ಬಟ್ಟೆಯನ್ನೂ ತಯಾರಿಸಬಹುದು!

ಹರಿಯದ, ಒದ್ದೆಯಾಗದ, ಉರಿಯದ, ಒಣಗದ ಬಟ್ಟೆಯನ್ನು ತಯಾರಿಸುವ ಪ್ರಯತ್ನ ನಡೆಯುತ್ತಿದೆ.

ಶ್ರೀ ಮದ್ಭಗವದ್ಗೀತೆಯಲ್ಲಿ “ಆತ್ಮವು ಸಾಯುವುದಿಲ್ಲ; ಉರಿಯುವುದಿಲ್ಲ, ಕರಗುವುದಿಲ್ಲ, ಒದ್ದೆಯಾಗುವುದಿಲ್ಲ” ಎಂದು ಶ್ರೀ ಕೃಷ್ಣನು ಹೇಳಿದ್ದಾನೆ. ಇಂದು ವಿಜ್ಞಾನವಾದರೂ ಇಂತಹುದೇ ಅಂದರೆ, ಹರಿಯದ, ಉರಿಯದ, ಒದ್ದೆಯಾಗದ ಬಟ್ಟೆಯನ್ನು ತಯಾರಿಸಲು ಪ್ರಯತ್ನಿಸುತ್ತಿದೆ; ತನ್ನ ಸಾಹಸದಲ್ಲದು ಜಯಶಾಲಿಯೂ ಆಗುತ್ತಿದೆ. ಕೊರಿಯಾ ಕಾಳಗ ನಡೆದಿದ್ದ ಸಂದರ್ಭದಲ್ಲಿ ಅಮೆರಿಕೆಯ ಸೈನಿಕರಿಗೆ ಅವರ ದೇಹವನ್ನು ಸದಾ ಸಮಶೀತೋಷ್ಣವಾಗಿಡಲು ಸಮರ್ಥವಾದ ಮತ್ತು ಶಸ್ತ್ರಾಸ್ತ್ರಗಳ ಘಾತಿ ತಡೆದುಕೊಳ್ಳಬಹುದಾದ ವಿಶೇಷ ರೀತಿಯ ಬಟ್ಟೆಬರೆಗಳನ್ನು ಕೊಡಲಾಗಿತ್ತು. ಎಂದರೆ, ವಸ್ತ್ರದಿಂದ ನಿರ್ಮಿತವಾಗಿದ್ದ ಆ ಅಮೋಘ ಕವಚಗಳನ್ನು ತೊಟ್ಟುಕೊಂಡು ಸೈನಿಕರು ನಿಶ್ಯಂಕೆಯಿಂದ ರಣಭೂಮಿಯಲ್ಲಿ ಪ್ರವೇಶ ಮಾಡಬಹುದಿತ್ತು.

ಅಂಗರಾಜನಾದ ಕರ್ಣನೊಡನೆ ಅಮೋಘವಾದ ಕವಚಕುಂಡಲವಿತ್ತೆಂದೂ, ಇದರ ಮೇಲೆ ಯಾವುದೇ ವಿಧದ ಅಸ್ತ್ರ ಶಸ್ತ್ರಗಳ ಪ್ರಭಾವ ಬೀಳುತಿದ್ದಿಲ್ಲವೆಂದೂ ಕರ್ಣನು ಇದನ್ನು ತೊಟ್ಟುಕೊಂಡಿರುವವರೆಗೆ ಯಾವನೇ ವೀರನಾದರೂ ಪ್ರಬಲತಮವಾದ ಅಸ್ತ್ರಗಳ ಸಹಾಯದಿಂದಲಾದರೂ ಅವನನ್ನು ನೋಯಿಸಲು ಅಸಮರ್ಥನಾಗಿದ್ದನೆಂದೂ, ಇದಕ್ಕಾಗಿಯೇ ತನ್ನ ಪುತ್ರ ವ್ಯಾಮೋಹದಿಂದ ಇಂದ್ರನು ಆತನಲ್ಲಿಗಾಗಮಿಸಿ ಈ ವರಕವಚ ಕುಂಡಲಗಳನ್ನು ಬೇಡಿದನೆಂದೂ ಮಹಾಭಾರತದಲ್ಲಿ ಉಲ್ಲೇಖವಿದೆ. ಪ್ರಾಯಶಃ ಕೋರಿಯಾದಲ್ಲಿ ಅಮೇರಿಕೆಯು ತನ್ನ ಸೈನಿಕರಿಗೆ ಪೂರೈಸಿದ್ದ ಬಟ್ಟೆಯು ಕವಚದಂತಹುದೇ ಅಮೋಘ ಕವಚ ಪ್ರಕರ್ಣನಲ್ಲಿಯೂ ಇದ್ದಿರಬಹುದು.

ಹಳೆಯ ಯುಗಗಳಲ್ಲಿಯೂ ಇಂತಹ ಗುಣಗಳುಳ್ಳ ಬಟ್ಟೆಗಳನ್ನು ನಿರ್ಮಿಸುತಿದ್ದರು. ಈಜಿಪ್ತ ದೇಶವೇ ಇದಕ್ಕೊಂದು ಪ್ರಮಾಣವಾಗಿದೆ. ಪಿರಮಿಡ್‌ನಲ್ಲಿ ಇತ್ತೀಚೆಗೆ ಅಗೆದು ತೆಗೆದ ಹೆಣಗಳನ್ನು ಸುತ್ತಿದ್ದ ಬಟ್ಟೆಗಳು ಸಾಮಾನ್ಯವಾಗಿ ಇದೇ ವರ್ಗಕ್ಕೆ ಸೇರಿದವುಗಳಾಗಿವೆ. ನೂರಾರು ವರ್ಷಗಳ ಕಾಲ ಸರ್ವಭಕ್ಷಕ ಮಣ್ಣಿನ ಪಾಲಾಗಿದ್ದರೂ ಈ ಶವಾವೃತ್ತ ವಸ್ತ್ರಗಳು ಇನ್ನೂ ತಮ್ಮ ಮೂಲ ರೂಪದಲ್ಲಿಯೇ ಇರುತ್ತವೆ. ಶವಗಳ ಮೇಲೆ ಹೈದಿದ್ದ ಒಂದು ವಿಧದ ರಾಸಾಯನಿಕ ಲೇಪನವೇ ಅವನ್ನು ಹೊದಿಸಿದ ಈ ಬಟ್ಟೆಗಳನ್ನು ಇದುವರೆಗೂ ಅವಿಕೃತವಾಗಿ ಇರಗೊಟ್ಟಿದೆ ಎಂದು ತಿಳಿಯಬಹುದು. ವಸ್ತ್ರ ಜೀರ್ಣವಾಗುವುದನ್ನು ತಡೆಗಟ್ಟುವ ಈ ರಾಸಾಯನಿಕ ದ್ರವ್ಯ ಯಾವುದು ಎಂಬ ಬಗ್ಗೆ ಇದುವರೆಗೂ ವಿಜ್ಞಾನಿಗಳಿಗೆ ತಿಳಿದುಬಂದಿಲ್ಲವಾದರೂ ಬೇರೆ ಬೇರೆ ತರದ ದ್ರವ್ಯಗಳ ಸಂಯೋಗದಿಂದ ಅವರು ಈ ಮಾದರಿಯ ಬಟ್ಟೆಗಳನ್ನು ನಿರ್ಮಿಸತೊಡಗಿದ್ದಾರೆ.

ಓಕ್ಸವರ್ಡಿನ ಸಂಶೋಧನ ಪ್ರಯೋಗ ಶಾಲೆಯಲ್ಲಿ ಚೇರ್‌ಲೀನ್ ಎಂಬ ಹೆಸರಿನ ನೂಲು ತಯಾರಿಸಲ್ಪಟ್ಟಿದೆ. ಈ ನೂಲಿನಿಂದ ತಯಾರಿಸಲ್ಪಟ್ಟ ಬಟ್ಟೆಯ ಮೇಲೆ ಅಗ್ನಿ, ಉಷ್ಣ ಮೊದಲಾದ ಯಾವುದರ ಅನಿಷ್ಟ ಪರಿಣಾಮವೂ ಬೀಳುವುದಿಲ್ಲ. ಈ ನೂಲು ಹಲವಾರು ರಾಸಾಯನಿಕ ಪದಾರ್ಥಗಳ ಸಂಯೋಗದಿಂದ ನಿರ್ಮಿತವಾದುದು. ಈ ಬಗೆಯ ನೂಲನ್ನು ಮೊತ್ತಮೊದಲಿಗೆ ಲಂಕಶಯರಿನ ಕೆಲಿಕೊ ಪ್ರಿಂಟರ್ಸ್ ಎಸೋಸಿಯೇಶನ್‌ನಲ್ಲಿ ತಯಾರಿಸಲಾಗಿತ್ತು. ಈ ಕಂಪನಿಯಾದರೆ, ಈ ಬಗೆಯ ನೂಲಿನ ಉಪಯೋಗದ ಸಂಬಂಧದಲ್ಲಿ ಒಂದು ಕೋಟಿ ಪೌಂಡುಗಳಷ್ಟು ವ್ಯಯವನ್ನೂ ಮಾಡಿತ್ತು. ಎಲ್ಲರಿಗಿಂತ ಮೊದಲು ೧೯೫೫ರಲ್ಲಿ ಇಂಗ್ಲೆಂಡಿನ ಮಹಾರಸಾಯನ ಶಾಸ್ತ್ರಜ್ಞನಾದ ಶ್ರೀ ಜೆ. ಆರ್. ಹಿವನ್ ಫೀಲ್ಡ್ ಎಂಬವನು ಇಂತಹ ನೂಲಿನ ತಯಾರಿಯ ಬಗ್ಗೆ ಸಂಶೋಧನೆಗೆ ತೊಡಗಿದ್ದನು. ಎರಡನೆ ಲೋಕಯುದ್ಧಾಂತ್ಯದೊಳಗೆ ಇಂತಹ ನೂಲು ರೂಪುಗೊಂಡಿತ್ತು. ಆದರೆ, ಹಲವಾರು ಅಡೆತಡೆಗಳ ಕಾರಣದಿಂದ, ಕೆಲವು ವರ್ಷಗಳ ನಂತರ ಅದು ಬೆಳಕಿಗೆ ಬಂತು. ಈ ನೂಲಿನಿಂದ ತಯಾರಿಸಲ್ಪಟ್ಟ ಬಟ್ಟೆಯು ಸಮಶೀತೋಷ್ಣ, ಅಗ್ನಿ ಮತ್ತು ಉಷ್ಣನಿರೋಧಕವಾಗಿರುವುದಲ್ಲದೇ ಅಂಟಾಗಿಯೂ ಹಗುರವಾಗಿಯೂ ಇರುವುದು.

ಇದಕ್ಕಿಂತಲೂ ಅದ್ಭುತವಾದ ಶೋಧನೆಯೊಂದನ್ನು ಅಮೆರಿಕನರು ಮಾಡಿದ್ದಾರೆ. ಅಲ್ಯುಮಿನಿಯಂ ಆಕ್ಸೈಡ್ ಮತ್ತು ಸಿಲಿಕೋನ್ ಕಾರ್ಬೈಡ್‌ಗಳ ಸಂಯೋಗದಿಂದ ಇಂತಹ ರೀತಿಯ ಬಟ್ಟೆಗಳು ರೂಪುಗೊಳ್ಳುತ್ತವೆ. ಇದರ ಮೇಲೆ ಸುಮಾರು ೨,೩೦೦ ಡಿಗ್ರಿ ಫೆರನ್‌ಹೈಟ್‌ನವರೆಗಿನ ಉಷ್ಣತೆಯೂ ಯಾವ ಪ್ರಭಾವವನ್ನು ಬೀರಲೂ ಅಸಮರ್ಥವಾಗಿರುವುವು. ಕಬ್ಬಿಣ ಮೊದಲಾದ ಲೋಹಗಳು ೨೭೬೩ ಫಾರೆನ್ ಹೈಟ್ ಡಿಗ್ರಿಗಳಲ್ಲಿ ಕರಗುವುದಾದರೂ ಈ ಮುಲಾಮು ೩೦೦೦ ಡಿಗ್ರಿಗಳಷ್ಟನ್ನು ತಡೆಯಬಲ್ಲದು. ಈ ತಂತುಗಳ ಮೇಲೆ, ತಾಪ, ಶೀತ ಮೊದಲಾದವುಗಳ ಪ್ರಭಾವ ಬೀಳುವುದಿಲ್ಲ. ಹೆಚ್ಚಿನ ಬಟ್ಟೆಗಳು ಉಷ್ಣತೆಯಿಂದಲೇ ಹರಿದು ಹೋಗುತ್ತವೆ. ಸೂರ್ಯನ ತಾಪದ ಕಿರಣಗಳು ಕ್ರಮ ಕ್ರಮೇಣ ಬಟ್ಟೆಯ ನೂಲುಗಳನ್ನು ಸುಟ್ಟುಬಿಡುತ್ತವೆ. ನೂಲು ಗಟ್ಟಿಮುಟ್ಟಾಗಿಲ್ಲವಾದರೆ ಬೇಗನೇ ಹರಿಯುತ್ತವೆ. ಉಣ್ಣೆ ಮತ್ತು ರೇಶ್ಮೆಗಳು ಈ ತಾಪವನ್ನು ಬಹುಕಾಲ ತಾಳಿಕೊಳ್ಳಬಲ್ಲವು. ಈಗ ಕಬ್ಬಿಣಕ್ಕಿಂತಲೂ ಗಟ್ಟಿಮುಟ್ಟಾದ ಬಟ್ಟೆ ಎಷ್ಟುಕಾಲ ಉಳಿಯಬಹುದೆಂದು ಯೋಚಿಸಿರಿ. ಇದರ ನೂಲಿನ ಪ್ರಮಾಣ ೪ ಮೈಕ್ರೋನ್ ಆಗಿದೆ. ನಮ್ಮ ತಲೆ ಕೂದಲಿನ ಪ್ರಮಾಣವು ೧೦೦ ಮೈಕ್ರೋನ್ ಎಂದು ಹೇಳುವಾಗ, ಈ ತಂತುಗಳ ತೋರವೆಷ್ಟು ಎಂಬುದು ಸ್ವಯಂ ವಿದಿತವಾಗುವುದು.

ಇಷ್ಟೊಂದು ವಿಶೇಷತೆಗಳಿಲ್ಲವಾದರೂ ಕೇವಲ ಶೀತ, ತಾಪ ಮತ್ತು ಘಾತುಕ ರಾಸಾಯನಿಕ ದ್ರವ್ಯಗಳಿಂದ ಕೆಡದ ಇನ್ನೊಂದು ವಿಧದ ಬಟ್ಟೆಯು ಇದೆ. ಡಾಯ್ನೆಲ್ ಎಂದಿದನ್ನು ಕರೆಯುತ್ತಾರೆ. ಇದು ಕೋಮಲವಾಗಿಯೂ ಇದ್ದು ನೀರಲ್ಲಿ ನೆರಿಗಟ್ಟುವುದಿಲ್ಲ. ವಿದೇಶೀಯ ಮಾರುಕಟ್ಟೆಗಳಲ್ಲಿ ಇಂತಹ ಬಟ್ಟೆಯು ಸಿಗುತ್ತದೆ.

ನೀರಿನಲ್ಲಿ ಮುಳುಗುವುದರಿಂದ ಅದೃಶ್ಯವಾಗಬಲ್ಲ ಒಂದು ನೂತನ ವಿಧದ ತಂತುಗಳು ತಯಾರಾಗಿವೆ. ಇವನ್ನು ಮಾಂಸ ಮತ್ತು ಹಾಲಿನಿಂದ ತೆಗೆಯುತ್ತಾರೆ. ಒಣಗಿರುವಾಗ ಈ ತಂತುಗಳಿಂದ ರಚಿಸಲ್ಪಟ್ಟ ಬಟ್ಟೆಯು ಗಟ್ಟಿಮುಟ್ಟಾಗಿಯೂ ಆಕ್ಷತವಾಗಿಯೂ ಇರುತ್ತವೆ. ನಾವವನ್ನು ಧರಿಸಬಹುದು; ಬಿಸಾಡಬಹುದು. ಆದರೆ, ನೀರಿಗೆ ಮುಳುಗಿಸಿದಿರೋ ನಿಮ್ಮ ಬಟ್ಟೆಯೆಲ್ಲವೂ ನಾಮಾವಶೇಷವಾಗುವುದು.

ವಸ್ತ್ರ ತಯಾರಿಕೆಯಲ್ಲಿ ಇದೇ ರೀತಿಯ ಸಂಶೋಧನೆಗಳು ನಡೆಯುತ್ತ ಹೋದ ಪಕ್ಷದಲ್ಲಿ ಇನ್ನೊಂದೆರಡು ದಶಕಗಳಲ್ಲಿ ಯಾವ ರೀತಿಯ ಬಟ್ಟೆಗಳು ದೊರೆಯುತ್ತವೆ ಎಂದು ಹೇಳುವಂತಿಲ್ಲ. ಅಲ್ಲದೇ ಒಂದೆರಡು ಶತಮಾನಗಳಲ್ಲಿಯೇ ಅತ್ಯದ್ಭುತವಾದ ಬಟ್ಟೆಗಳನ್ನು ನಾವು ತಯಾರಿಸಿಕೊಳ್ಳಬಹುದು. ಇಂತಹ ವಸ್ತ್ರವನ್ನು ನಾವು ಅಭಿಮಾನಪಟ್ಟುಕೊಂಡು ಪ್ರಶಂಸಿಸಬಹುದು.

> ನೈನಂ ಛಿಂದಂತಿ ಶಸ್ತ್ರಾಣಿ
> ನೈನಂ ದಹತಿ ಪಾವಕಃ
> ನ ಚೈನಂ ಕ್ಲೇದಯನ್ತ್ಯಾಪೋ
> ನ ಶೋಷಯತಿ ಮಾರುತಃ

ಈ ಬಟ್ಟೆಯನ್ನು ಶಸ್ತ್ರಾಸ್ತ್ರಗಳು ಭೇದಿಸಲಾರವು, ಅಗ್ನಿಯು ಉರಿಗೊಳಿಸಲಾರದು; ನೀರು ಒದ್ದೆಯಾಗಿಸಲಾರದು ಮತ್ತು ಗಾಳಿಯು ಒಣಗಿಸಿಬಿಡಲಾರದು.

ಇಂತಹ ಗುಣಗಳುಳ್ಳ ಬಟ್ಟೆ ಒಮ್ಮೆ ಸಿದ್ಧವಾದರೆ, ಆ ವೇಳೆಗೆ ಮಾನವನ ಸಂಶೋಧನೆಯ ಹಂತವೆಲ್ಲಿಗೆ ಎಂಬ ಪ್ರಶ್ನೆಗೆ ವಿಜ್ಞಾನಿಗಳು ಅಷ್ಟರಲ್ಲಿಯೇ ಉತ್ತರ ಹೇಳದಿರಲಾರರು.

— ಗೋರಾ.

ಬಾಳು ಬದುಕು

ಜೀವನ ಎಂದರೇನು?

ರಹಸ್ಯಮಯವಾದ ಈ ಪ್ರಶ್ನೆಗೆ ನೀವು ಉತ್ತರ ಹೇಳ ಬಲ್ಲಿರಾ?

“ಜೀವನ ಎಂದರೇನು?’ ಎಂಬ ಓರ್ವ ಜಿಜ್ಞಾಸುವಿನ ಪ್ರಶ್ನೆಯನ್ನು ಉತ್ತರಿಸುತ್ತ ಮಹಾತ್ಮಾ ಟಾಲ್‌ಸ್ಟಾಯಿಯವರು ಒಂದು ಕಥೆಯನ್ನು ಹೇಳಿದರು.

‘ಒಮ್ಮೆ ಓರ್ವ ಯಾತ್ರಿಕನು ಅರಣ್ಯ ಮಾರ್ಗದಲ್ಲಿ ನಡೆಯುತಿದ್ದನು. ಅಕಸ್ಮಾತ್ತಾಗಿ ಒಂದು ಕಾಡಾನೆಯು ಆವನ ಮೇಲೆರಗಿತು. ಜೀವಹಿಡಿದುಕೊಳ್ಳುವ ಅನ್ಯ ಮಾರ್ಗವನ್ನು ಕಾಣದೇ ಆತನು ಪಕ್ಕದಲ್ಲಿದ್ದ ಬಾವಿಯೊಂದಕ್ಕೆ ಹಾರಿಬಿಟ್ಟನು. ಬಾವಿಯ ನಡುವಲ್ಲಿ ಒಂದು ತೋರವಾದ ಬೀಳಿನ ಮರವಿತ್ತು. ಯಾತ್ರಿಕನು ಅದರ ಬೀಳನ್ನು ಆಸಿಸಿ ಹಿಡಿದು ಜೋಲಾಡತೊಡಗಿದನು.

“ಸ್ವಲ್ಪ ಸಮಯಾನಂತರ ಆತನ ದೃಷ್ಟಿಯು ಬಾವಿಯ ಕೆಳಗೆ ಹರಿಯಿತು. ಅಲ್ಲಿ ಒಂದು ತ್ರಾಣವಿರುವ ಪ್ರಾಣಿಯೊಂದು ಕಂಡುಬಂತು. ಅದಾದರೋ ಸಾಕ್ಷಾತ್ ಮೃತ್ಯುದೇವತೆಯಂತೆಯೇ ಕಾಣಿಸುತಿತ್ತು. ವಿಕರಾಲ ವದನದ ಮೊಸಳೆಯೊಂದು ಆತನನ್ನು ಹಿಂದು ತಿನ್ನುವುದಕ್ಕೆ ಉತ್ಸಾಹಿತವಾಗಿರುತಿತ್ತು. ಭಯದಿಂದ ತತ್ತರಿಸಲ್ಪಟ್ಟ ನಿರುಪಾಯಗೊಂಡ ಪಥಿಕನು ಕಣ್ಣು ಮೇಲೆತ್ತಿ ನೋಡಿದ. ಮರದ ಗೂಡೊಂದರಿಂದ ಜೇನು ಬೊಟುಬೊಟ್ಟಾಗಿ ಸುರಿಯುತಿತ್ತು. ರುಚಿಯಿಂದ ಆಕರ್ಷಿತನಾದ ಅವನನ್ನು ಮಧು ಸೆಳೆಯಿತು. ಅವನು ಜೇನನ್ನು ನೆಕ್ಕುವ ಉದ್ದೇಶದಿಂದ ತನ್ನ ಹೆಸರಿಕೆಯನ್ನು ಮರೆತೇಬಿಟ್ಟನು. ಆವನು ಸೋರುತ್ತಿರುವ ಮಧುವಿನತ್ತ ಸರಿದು ಬಾಯಿ ತೆರೆದುಕೊಂಡು ಜೇನುಹನಿಗಳನ್ನು ಗುಟುಕರಿಸತೊಡಗಿದನು.

‘ಆದರೆ, ಅದೇನು? ಆವನು ಸಾಶ್ಚರ್ಯದಿಂದ ನೋಡಿದನು— ಯಾತ್ರಿಕನು ಹಿಡಿದು ಜೋಲಾಡುತಿದ್ದ ಆ ಬೀಳಲನ್ನು ಒಂದು ಕಪ್ಪು ಮತ್ತೊಂದು ಬಿಳಿ ಇಲಿಗಳು ಕಡಿಯುತಿದ್ದುವು. ಅದರ ಸಮೀಪದಲ್ಲಿಯೇ ಜೇನುಗೂಡಿತ್ತು!”

ಜಿಜ್ಞಾಸುವಿನ ಪ್ರಶ್ನಾಸೂಚಕ ಮುದ್ರೆಯನ್ನು ಕಂಡು ಮಹಾತ್ಮಾ ಟಾಲ್‌ಸ್ಟಾಯಿಯವರು ಹೇಳಿದರು: “ನಿನಗೆ ತಿಳಿಯಲಿಲ್ಲವೆ? ಆ ಆನೆಯು ಯಮನಾಗಿದ್ದನು. ಮೊಸಳೆ ಮೃತ್ಯುವಾಗಿದ್ದನು; ಮಧು ಜೀವನ ರಸವಾಗಿತ್ತು ಮತ್ತು ಬಿಳಿ ಮತ್ತು ಕಪ್ಪು ಇಲಿಗಳು ದಿನ ಮತ್ತು ರಾತ್ರಿಗಳು. ಇವೆಲ್ಲವುಗಳ ಸಮ್ಮಿಳಿತ ಹೆಸರೇ ಜೀವನ ಎಂದಾಗಿದೆ.”

ವೀರಶೈವ ವಚನಗಾರರಲ್ಲಿ ಓರ್ವನಾದ ಸಿಮ್ಮಲಿಗೆಯ ಚೆನ್ನಯ್ಯನ. ಇದೇ

(೧೦ನೇ ಪುಟ ನೋಡಿ)

ಸ್ಥಾಪನೆ: 1906] ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ. 20,00,000/-
ಕ್ಷೇಮನಿಧಿ	—	ರೂ. 14,40,000/-
ಠೇವಣಾತಿಗಳು	—	ರೂ. 7,19,35 000/-
ಸಾಲಗಳು	—	ರೂ. 3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ. 9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ.

The Canara Banking Corporation Ltd.

Estd:- 1906] [H. O. UDIPI (S. India)

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯ ಬಹುದು!

ಗುಪ್ತ ಕಾರಸ್ಥಾನದ ಮಂತ್ರಿ

ತಂದೆ— ಕಿಟ್ಟು, ಶಾಲೆಯಲ್ಲಿ ಇಂದೇಕೋ ಬೊಬ್ಬೆ ಕೇಳಿಸ್ತಾ ಇತ್ತು?

ಕಿಟ್ಟು—ಹುಡುಗರಾರೋ ಗುರುಗಳ ಖುರ್ಚಿಗೆ "ಸೊಣಗಿಕಾಯಿ"ಯನ್ನೊರಸಿದ್ದರಪ್ಪಾ! ಗುರುಗಳು ಕುಳಿತೊಡನೇ "ಸೊಣಗಿ" ಪ್ರತಾಪದಿಂದ ತುರಿಸಿಕೊಳ್ಳತೊಡಗಿದರು. ನಮಗೆಲ್ಲ ಮಧ್ಯಾಹ್ನ ರಜೆಯಾಯ್ತು! ಗುರುಗಳು ತುರಿಸಿಕೊಳ್ತ ಮನೆಗೆ ಹೋದರಪ್ಪಾ!

ತಂದೆ—ಅದ್ಯಾರೊ ಸೊಣಗಿ ಕಾಯಿ ಹಚ್ಚಿದವರು?

ಕಿಟ್ಟು—ಯಾರೊ ನಂಗೊತ್ತಿಲ್ಲಪ್ಪಾ. ನಾನು ಶಾಲೆಯಲ್ಲಿಯ ಪ್ರಧಾನ ಮಂತ್ರಿ! ಗುರುಗಳೇ ನನ್ನನ್ನಾರಿಸಿದವರು.

ತಂದೆ—ಮುಚ್ಚೊ ಬಾಯಿ. ಗುರುಗಳಿಗೇ ನಿನ್ನ ಮೇಲೆ ಸಂಶಯ ಇದೆ.

ಕಿಟ್ಟು—ತಪ್ಪು ತಿಳಿಬೇಡಿ ಅಪ್ಪ! ಗುಪ್ತ ಕಾರಸ್ಥಾನದ ಮಂತ್ರಿ ಹೆಸರೂ ಸಹ "ಕಿಟ್ಟು" ಎಂತಿದೆ. ನಾನು ಮೊದಲೇ ತಿಳಿಸಿದೆ ನನಗೆ ಎರಡು ಮಂತ್ರಿಪದ ನಡೆಸಲು ಕಠಿಣವಾದೀತೆಂದು.

ತಂದೆ—ಮುಚ್ಚೊ ಬಾಯಿ. ಪುಸ್ತಕ ಹಿಡಿದು ಓದು. ಎಲ್ಲಿ ಹೋದರೂ ಮಂತ್ರಿಗಳು—ಪಾರ್ಲಿಮೆಂಟು.

ಸ್ವರ್ಗ ಸುಖ

ಗುರುಗಳು— ಸ್ವರ್ಗಸುಖ ಎಂದರೇನೊ?

ರಂಗ—ಬೊಂಬ್ಬೆ ಮಿಠಾಯಿ ಪೇಪರ ಬಿಟ್ಟು ತಿನ್ನುವಾಗಿನ ಸುಖ ಸಾರ್.

ಗುರು— ನೀ ಹೇಳೋ, ರಾಮು.

ರಾಮು— ತಾಜಾ ಮಸಾಲೆಯ ಇಡ್ಲಿ ದೋಸೆ ತಿನ್ನುವಾಗಿನದು ಸಾರ್.

ಗುರು—ಸೋಮು, ನೀ ಹೇಳೊ.

ಸೋಮು—ಮೊನ್ನೆ ರವಿವಾರದ ಸೂಡಿಯಲ್ಲಿ ಗೌಡರ ಹಿತ್ತಲಿನ ಜಂಬೆಹಣ್ಣಿನ ಸವಿಯೇ ಸ್ವರ್ಗಸುಖ ಸಾರ್.

ಗುರು—ಮುಚ್ಕೊಳೊ. ನಿಲ್ಲು ಬೆಂಚಿನ ಮೇಲೆ. ನೀ ಹೇಳೋ ಕಿಟ್ಟು.

ಕಿಟ್ಟು—ಅದ. ನನಗೆ ತಿಳಿದಿರಲೇಬೇಕು. ಸಾರ್, ಕಜ್ಜಿ ಇದ್ದಾಗ ನನಗೆ ಸ್ವರ್ಗ ಸುಖ ಆಸ್ಸಿತ್ತು. (ಗುರುಗಳು ಕೈಬೆರಳುಗಳ ಮಧ್ಯದಲ್ಲಿ ತಮಗಾದ ಕಜ್ಜಿ ತುರಿಸುತ್ತಲಿದ್ದರು) ಕಜ್ಜಿ ತುರಿಸುವ ಸಮಯದಲ್ಲಿ ದೊರೆಯುವ ಸುಖ ಇನ್ನಾವುದರಲ್ಲಿಯೂ ಇಲ್ಲ ಸಾರ್, ಆದರೆ ನಮ್ಮಪ್ಪ ಸಿಬೆಝೋಲ'ನಿಂದ ನನ್ನ ಖಜ್ಜಿನಾ ತೆಗೆಸಿಬಿಟ್ಟಳು. (ಗುರುಗಳು ಪಲೆ ಕೆಳಹಾಕಲೇಬೇಕಾಯಿತು)

ಗುರುಗಳು—ಆ! ಏನಂದೆ! ಸಿಬೆಝೋಲ್‌ನಿಂದ "ಕಜ್ಜಿ" ಹೋಗುವದೇ!

ಸರಿ ಎಲ್ಲರೂ' ಕೂತುಕೊಳ್ಳಿ—(ಗುರುಗಳಿಗೆ ಕಜ್ಜಿಯ ಬಗ್ಗೆ ಪರಿಹಾರ ದೊರೆಯಿತು.)

—ಸಿರಿಪತಿ

ಇತಿಹಾಸ

ಮಹಾವೀರನ ಹಿರಿಯೂರು ಬಿಹಾರ ರಾಜ್ಯದ ವೈಶಾಲಿ

ವೈಶಾಲಿಯನ್ನು ಸ್ಮರಿಸಿದೊಡನೆಯೆ ಮಹಾವೀರನ ಉದಾತ್ತಾದರ್ಶಗಳು ಕಣ್ಣಮುಂದೆ ಬಂದು ನಿಲ್ಲುತ್ತವೆ.

ಪ್ರಾಚೀನ ಭಾರತದ ಇತಿಹಾಸ ಪರಿಚಯವನ್ನು ತಿಳಿಸಲು ಬಿಹಾರ ರಾಜ್ಯದ ಚರಿತೆಯೂ ಸಾಧನವಾಗಿದೆ. ಭಾರತದ ಅಭ್ಯುತ್ಥಾನವನ್ನರಿಯಬೇಕಾದರೆ ಬಿಹಾರ ರಾಜ್ಯದ ಅಲ್ಪ ಜ್ಞಾನವಾದರೂ ಇರಲೇಬೇಕಾಗಿದೆ. ಸಮ್ಮ ವಿಖ್ಯಾತವೆನಿಸಿದ ಉನ್ನತಿಯ ಕಿರೀಟದಲ್ಲಿ ವೈಶಾಲಿಯೂ ಒಂದು ಅನರ್ಘ್ಯ ಮಣಿ ಎಂಬುದು ನಿರ್ವಿವಾದ. ಈ ಎಳೆಯ ಪಟ್ಟಣವು ಲಿಚ್ಛಾವಿ ಮತ್ತು ವಜ್ಜಿ ರಾಜ್ಯಗಳ ರಾಜಧಾನಿಯಾಗಿದ್ದು, ಪ್ರಜಾಪ್ರಭುತ್ವದ ವಿವಿಧ ಚಟುವಟಿಕೆಗಳ ಕೇಂದ್ರವಾಗಿತ್ತು. ದೇಶದ ಈ ಭಾಗದಲ್ಲಿ ಒಬ್ಬನೇ ಒಬ್ಬ ದೊರೆಯೂ ಆಳದ ಒಂದು ಕಾಲವಿತ್ತು. ಅಲ್ಲದೇ ಏಳು ಸಾವಿರಕ್ಕೂ ಮಿಕ್ಕಿದ ಜನತಾಪ್ರತಿನಿಧಿಗಳು ಆಡಳಿತೆಯನ್ನು ನಿರಾತಂಕವಾಗಿ ಮುನ್ನಡೆಸಿಕೊಂಡು ಹೋದ ಸಮಯವದಾಗಿತ್ತು. ಇಲ್ಲಿನ ಆಡಳಿತೆಯು ಅತ್ಯಂತ ಸಾಮ್ಯವಾಗಿಯೇ ನಡೆಯುತಿದ್ದುದರಿಂದಲೇ ಭಗವಾನ್ ಬುದ್ಧನೂ ಈ ಪ್ರತಿನಿಧಿ ಶಾಸನಕ್ಕೆ ತನ್ನ ಗೌರವವನ್ನು ಸಮರ್ಪಿಸಿದ್ದನು. ವೈಶಾಲಿಯು ಪ್ರಜಾಪ್ರಭುತ್ವಕ್ಕೆ ಅತ್ಯುತ್ತಮವಾದ ಒಂದು ಮಾದರಿಯಾಗಿ ಪರಿಣಮಿಸಿದ್ದ ಕಾಲವದಾಗಿತ್ತು.

ವೈಶಾಲಿಯು ಭಗವನ್ ಮಹಾವೀರನ ಜನ್ಮಸ್ಥಳ. ತಥಾಗತ ಬುದ್ಧನೂ ಈ ಸ್ಥಳಕ್ಕೆ ತುಂಬ ಉಪಕೃತನಾಗಿದ್ದಾನೆ. ಅವನು ವೈಶಾಲಿಯಲ್ಲಿ ಪದೇ ಪದೇ ಸಂಚರಿಸಿ ತನ್ನ ಚರಣ ರಜದಿಂದದನ್ನು ಪವಿತ್ರೀಕರಿಸಿರುವನಲ್ಲದೇ ಅಲ್ಲಿದ್ದ ವಿಧಾನ ಸಭೆಯನ್ನು ದೇವಸಭೆಗೆ ಹೋಲಿಸಿದ್ದಾನೆ. ವೈಶಾಲಿಯಿಂದ ಹೊರಹೊರಟ ಅತ್ಯಮೋಘ ತತ್ವಪ್ರಣಾಳಿಗಳು ಹಾರಾಡುತ್ತ ಸಂಚರಿಸಿ ಭಾರತವನ್ನಷ್ಟೇ ಅಲ್ಲ, ನೆರೆಹೊರೆಯ ರಾಜ್ಯಗಳಿಗೂ ಅವುಗಳ ಸುಗಂಧ ಸೌರಭವನ್ನು ಹರಡಿಸಿವೆ.

ಇಂದು ವೈಶಾಲಿಯಲ್ಲಿದ್ದುಕೊಂಡು ಅದು ೨,೫೦೦ ವರ್ಷಗಳಿಗೆ ಮೊದಲು ಆದರ್ಶ ಪ್ರಜಾರಾಜ್ಯವೊಂದರ ರಾಜಧಾನಿಯಾಗಿತ್ತು ಎಂದು ಯಾರಾದರೂ ಅನ್ನತೊಡಗಿದರೆ, ಅದನ್ನು ನಂಬುವುದಕ್ಕೆ ಸಾಧ್ಯವಾಗದು. ಅಲ್ಲಲ್ಲಿ ದೊರೆಯುವ ಪ್ರಾಚೀನ ಸಾಹಿತ್ಯ ಕೃತಿಗಳಿಂದಲೂ ನೆಲದಡಿಯಲ್ಲಿ ದೊರಕಿರುವ ಶಾಸನಗಳಿಂದಲೂ ಈ ನಗರದ ಗತವೈಭವಗಳು ತಿಳಿಯುತ್ತವೆ. ಅಲ್ಲದೇ ದೊರೆಯಬಹುದಾದ ಇತರ ಹಲವಾರು ಆಧಾರಗಳಿಂದಲೂ ಈ ಸಂಗತಿಯು ಸ್ಫೋಟವಾಗುತ್ತದೆ.

ಒಂದು ಕಾಲದಲ್ಲಿ ಧಾರ್ಮಿಕ ಮತ್ತು ಸಾಹಿತಿಕ ಚಟುವಟಿಕೆಗಳ ಕೇಂದ್ರವಾಗಿದ್ದ ಮಹಾವೀರನ ಹುಟ್ಟೂರಾದ ವೈಶಾಲಿಯು ಹಲವಾರು ಶತಮಾನಗಳ ವರೆಗೆ ಬೆಳೆದು ಬಂದಿರುವುದಾದರೂ ಗತವೈಭವಗಳ ಸವಿ ನೆನಸಾಗಿ ಮಾತ್ರ ಉಳಿದಿದೆ. ಅನೇಕಾನೇಕ ಚಾರಿತ್ರಿಕ ದುರ್ಘಟನೆಗಳು ಸಂಭವಿಸಿದನಂತರ, ಈಗ, ಸುಮಾರು ಎರಡೂವರೆ ಸಾವಿರ ವರ್ಷಗಳ ನಂತರ ಭಾರತವು ಪುನಃ ಪ್ರಜಾಪ್ರಭುತ್ವವಾಗಿ ಮಾರ್ಪಟ್ಟಿದೆ. ಆದುದರಿಂದ, ಲೋಕಪ್ರಭುತ್ವ ಭಾರತೀಯರಿಗೆ ಹೊಸ ಹುರುಪು ೨,೫೦೦ ವರ್ಷಗಳ ಹಿಂದಿನ ವೈಶಾಲಿ ಪ್ರಜಾರಾಜ್ಯದಿಂದಲೇ ಬರಬೇಕು. ಪುರಾತನವಾದ ಇತಿಹಾಸದ ವಿದ್ಯಾರ್ಥಿಗಳು ಈ ಕಾರಣದಿಂದಾಗಿಯೇ ವೈಶಾಲಿಗೆ ಗೌರವಾರ್ಪಣೆಮಾಡಬೇಕು. ಅಲ್ಲದೇ ಜೈನ ಮತ್ತು ಬೌದ್ಧ ಸಂಪ್ರದಾಯಗಳಂತೆ ಮುಂದುವರಿದಿದ್ದ ಆ ತತ್ವ ಪ್ರಣಾಳಿಯನ್ನು ಸಚೇತನಗೊಳಿಸಬೇಕು. ಅಂದಿನ ಜನತೆಯನ್ನು ಸನ್ಮಾರ್ಗದಲ್ಲಿ ಮುಂದುವರಿಸಿದ ಈ ಪ್ರಣಾಳಿಯು ನಮ್ಮ ಇಂದಿನ ಮುನ್ನಡೆಗೂ ಮಾದರಿಯಾಗಬಹುದು.

ವೈಶಾಲಿಯು ಮುಖ್ಯನಗರವಾಗಿ… ಜನತಾರಾಜ್ಯವು ಅತಿ ಪ್ರಭಾವಶಾಲಿಯಾ… ಗಿದ್ದರೂ ವಿಶೇಷ ವಿಸ್ತಾರವಾಗಿರಲಿಲ್ಲ ಅಥವಾ ಅದು ಭಾರತದ ಹೃದ್ದೇಶವ… ಯೂ ಇರಲಿಲ್ಲ. ಆದರೂ ಅದರ ಪ್ರಜಾ… ಪ್ರಭುತ್ವದ ಸಂಪ್ರದಾಯವು ಎಲ್ಲೆಲ್ಲಿಯೂ… ಜನಜನಿತವಾಗಿದ್ದು ಅದರ ಜ್ಞಾನ ಮ… ತ್ತು ಸಂಸ್ಕೃತಿಗಳು ವಿಂಧ್ಯಹಿಮಗಿರಿಗ… ಉನ್ನತಿಯನ್ನೂ ಮೀರಿ ವಿಶ್ವವ್ಯಾಪಿಯಾ… ಗಿವೆ. ತಮ್ಮ ಸಂಚಾರಗಳಿಗೆ ಸುಪ್ರಸಿದ್ಧ… ರಾದ ಬೌದ್ಧ ಮತ್ತು ಜೈನ ಆಚಾರ್ಯ… ರು ವೈಶಾಲಿಯಿಂದ ಹೊರಬಿದ್ದು ದೇಶ… ಎಲ್ಲೆಡೆಯಲ್ಲಿಯೂ ಸಂಚಾರಮಾಡಿ, ತಂ… ಮ್ಮಧರ್ಮಗಳನ್ನು ಪ್ರಚಾರಿಸಿದರು. ಇವ… ಕಾರ್ಯಕ್ಷೇತ್ರವು ಭಾರತದ ಗಡಿಗಳಿಗೇನೆ… ಸೀಮಿತವಾಗಿರದೆ, ಟಿಬೇಟು, ನೇಪಾಳ… ಇರಾನ, ಇಂಡೋನೇಶ್ಯ, ಅಫಘಾನಿಸ್ತಾ… ಮೊದಲಾದ ಹಲವಾರು ಅಸ್ಯಾದ ದೇ… ಗಳಲ್ಲಿ ವಿಶಾಲ ರೀತಿಯಲ್ಲಿ ಇವರ ಧರ್ಮ… ವು ಪ್ರಚಾರಿತವಾಯ್ತು.

ಭಾರತ ಮಾತ್ರವಲ್ಲದೆ ಪ್ರಪಂಚದ … ಲ್ಲ ದೇಶಗಳವರೂ ಮಹಾ ವೀರನು … ಷ್ಟಿಸಿದ ಸಂದೇಶಗಳನ್ನು ಪ್ರಶಂಸಿಸುತ್ತಾ… ರೆ. ಆದ ಕಾರಣದಿಂದ ಆತನ ಪ್ರಾಸಂ… ಕ ಜೀವನವನ್ನು ಕುರಿತು ಎಲ್ಲರೂ ಅ… ಷ್ಟು ಹೆಚ್ಚು ವಿಷಯಗಳನ್ನು ಅರಿತುಕೊ… ಳ್ಳಬೇಕಾಗಿದೆ. ತನ್ನ ವೈಯಕ್ತಿಕ ಮಹ… ತ್ಯಾಗದ ಪರಿಣಾಮವಾಗಿಯೇ ಆತನು … ಹಿಂಸೆಯೆಂಬ ಉದಾತ್ತ ತತ್ವವನ್ನು ಕಂಡ… ಕೊಂಡು ಬೋಧಿಸಿರುವನು. ತಾನು ಅನೇ… ವರ್ಷ ಉಗ್ರವಾದ ತಪಶ್ಚರ್ಯೆಯಲ್ಲಿ … ರತನಾಗಿದ್ದರೂ ಮಹಾವೀರನು ಅನ… ಜೀವಿಗಳ ಸಂತೋಷ ಮತ್ತು ದುಃಖಗ… ಗೆ ಕಾರಣನಾಗಿರಲಿಲ್ಲವೆಂದು ತಿಳಿಯು… ತ್ತದೆ. ಆದರೆ, ಎಲ್ಲರ ಕಡೆಗೂ ಆತ… ಕರುಣಾಕಟಾಕ್ಷವು ಹರಡಿತ್ತು. ಆತ… ಅಮೂಲ್ಯ ಅನುಭವ ಮತ್ತಾತನ ಅಸ… ಧಾರಣ ದೂರಾಲೋಚನೆಗಳ ಸಹಾಯ… ದಿಂದಲೇ ಅವನು ಅಹಿಂಸೆಯೆಂಬುದನ್ನು… ಕಂಡುಕೊಂಡು ಉಪದೇಶಿಸಿರುವನು. ಅ… ಅಹಿಂಸೆ ಎಂಬುದು ಕೇವಲ ತತ್ವಶಾಸ್ತ್ರ… ವಾಗಿರದೆ ವೈಜ್ಞಾನಿಕ ರೀತ್ಯಾ ಅಭ್ಯಸಿಸ…

(೯ನೇ ಪುಟ ನೋಡಿರಿ)

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ. ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

The Moolky Bank, Ltd

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

4 ತಿಂಗಳ ವರೇಗೆ 4%
5 ರಿಂದ 12 ,, 4¼%
13 ,, 24 ,, 4½%
ರೂ. 10,000/- ಮತ್ತು ಮೇಲಣ ಹಣಕ್ಕೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ, ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ವಿಚಿತ್ರ ಸತ್ಯ

ಪ್ರಾಣಿಗಳ ವಾಸಗೃಹ- ಮಾನವ ಶರೀರ

ನಿಮ್ಮ ಶರೀರದೊಳಗೆ ವಿಶಾಲ ಸಮುದ್ರವೊಂದಿದೆ ಎಂಬುದರ ಅರಿವು ನಿಮಗಿದೆಯೆ?

ಭೂಮಿಯನ್ನು ಆವರಿಸಿರುವ ಸಮುದ್ರದ ಕಥೆಯನ್ನು ನಾವು ಬಲ್ಲೆವು. ಆದರೆ, ನಮ್ಮ ಶರೀರದ ಒಳಭಾಗದಲ್ಲೂ ಸಮುದ್ರದಂತೆ ವಿಶಾಲವಾದ ಜಲರಾಶಿಯಿದೆ ಎಂಬುದನ್ನು ಕೇಳಿದರೆ, ನೀವು ಕಣ್ಣು ಬಿಡುವಿರಿ. ಪ್ರಾಯಶಃ ಈ ಸತ್ಯಾಂಶವನ್ನು ಗಮನಿಸಿಯೇ ನಮ್ಮ ಪೂರ್ವಜರಾದ ಮುನಿಗಳು 'ಸಮುದ್ರಾಃ ತಸ್ಯ ನಾಡ್ಯಃ' ಎಂದರೆ, ಅವನ (ಮನುಷ್ಯನ) ನಾಡಿಗಳಲ್ಲಿ ಸಮುದ್ರ ಪ್ರವಹಿಸುತ್ತಿದೆ ಎಂದು ಹೇಳಿದ್ದಾರೆ. ಮಾನವನ ವಿರಾಟ್ ಶಕ್ತಿಗಳನ್ನು ವ್ಯಕ್ತಪಡಿಸುವ ಈ ಘೋಷಣೆಯು ನಿಜವಾಗಿಯೂ ನಮ್ಮ ಶರೀರ ನಿರ್ಮಾಣದ ಒಂದು ಮಹತ್ವಪೂರ್ಣ ಸತ್ಯವನ್ನು ಅಭಿವ್ಯಕ್ತಪಡಿಸುತ್ತದೆ. ಅಲ್ಲದೇ ಇಂದಿನ ವಿಜ್ಞಾನಿಗಳೂ ಮಾನವನ ಶರೀರದಲ್ಲಿ ನೂರಕ್ಕೆ ೭೦ರಷ್ಟು ನೀರಿನಂಶವಿದೆ ಎಂಬುದನ್ನು ಕಂಡುಕೊಂಡಿದ್ದಾರೆ!

ಈ ಜಲವು ಶರೀರ ನಿರ್ಮಾಣಕ ಕೋಶದಲ್ಲಿ ಸಂಗ್ರಹಿತವಾಗಿದ್ದು, ಇದರಿಂದಲೇ ನಮ್ಮ ಶರೀರಗತ ರಕ್ತ ಮತ್ತಿತರ ದ್ರವ (ಶ್ಲೇಷ್ಮ, ಪಿತ್ತ ಆದಿ) ಗಳಿಗೆ ತರಳತೆಯು ದೊರೆಯುತ್ತಿದೆ. ನಮ್ಮ ಮಾಂಸಖಂಡಗಳಲ್ಲಿ ಐದರಲ್ಲಿ ನಾಲ್ಕಂಶ ನೀರಿದೆ. ಒಣಗಿದ ಕಡ್ಡಿಗಳಂತಿರುವ ಎಲುಬುಗಳಲ್ಲೂ ಮೂರರಲ್ಲೊಂದು ಪಾಲಿಗೂ ಮಿಕ್ಕಿದಷ್ಟು ನೀರು ಇದೆ ಎಂದು ವೈಜ್ಞಾನಿಕರ ಅಭಿಪ್ರಾಯವಿದೆ.

ನಮ್ಮ ಶರೀರ ನಿರ್ಮಾಣದ ಕೋಶಗಳಲ್ಲಿ ಬಹು ಪಾಲು ನೀರಿದೆಯಲ್ಲದೇ ಬೇರೆ ಬೇರೆ ರಾಸಾಯನಿಕ ಪದಾರ್ಥಗಳಲ್ಲಿಯೇ ನೀರು ಮಿಶ್ರವಾಗಿದೆ. ಅಲ್ಲದೇ ಈ ನೀರು ಶುದ್ಧ ನೀರಾಗಿರದೆ ಪೊಟೇಸಿಯಂ, ಫಾಸ್ಫೊರಸ್, ಸಾರಜನಕ, ಶರ್ಕರ ಮತ್ತಿತರ ದ್ರವ್ಯಗಳಿಂದ ಕೂಡಿಕೊಂಡಿದೆ.

ಕೋಶದೊಳಗಡೆಯ ನೀರು ಬೇರೆ ಬೇರೆ ಕರಗುವ ಪದಾರ್ಥಗಳ ಮಿಶ್ರಣದಿಂದ ತಯಾರಿಸಲ್ಪಟ್ಟ ಉಪ್ಪುನೀರಾಗಿದೆ. ಇದರಲ್ಲಿ ಸೋಡಿಯಂ, ಕ್ಲೋರೀನ್ ಮೊದಲಾದುವು ಸಮುದ್ರದ ನೀರಿನಂತೆಯೇ ಉಚಿತ ಪ್ರಮಾಣದಲ್ಲಿ ಕರಗಿಕೊಂಡಿವೆ. ಈ ಉಪ್ಪು ನೀರು ಮಾನವನಿಂದ ಹಿಡಿದು ಮೀನು, ಪಕ್ಷಿ, ಆನೆ, ಕೀಟ, ನುಸಿ ಮೊದಲಾದುವುಗಳ ಶರೀರಗಳಲ್ಲಿರುತ್ತದೆ.

ಪ್ರಾಣಿ ಜೀವನದ ಪ್ರಾರಂಭಿಕ ವಿಕಾಸವು ಸಮುದ್ರದಲ್ಲಿಯೇ ವಿಶೇಷವಾಗಿ ಮೊದಲಾಯಿತು ಎಂದು ವೈಜ್ಞಾನಿಕರು ಅಭಿಪ್ರಾಯ ಪಡುತ್ತಾರೆ. ಮೊತ್ತಮೊದಲಿನ ಭೂಮಿಯ ಪ್ರಾಣಿಯು ಸಮುದ್ರದಿಂದ ಹೊರಬಂದು ಅದರ ದಡದಲ್ಲಿ ಬಂದು ನಿಂತಾಗ, ಅದರೊಡನೆಯೇ ಶಾರೀರಿಕ ದ್ರವಗಳ ರೂಪದಲ್ಲಿ ಸಮುದ್ರ ಸ್ವಯಂ ಹೊರಗೆ ಬಂದಿತು. ಪ್ರಕೃತಿಯ ಮೇಲೆ ಪ್ರಾಣಿಯು ಗಳಿಸಿದ ವಿಜಯಗಳಲ್ಲಿ ಇದೇ ಮಹತ್ವಪೂರ್ಣವಾದುದು. ಚೇತನ ಮತ್ತು ಜಡಗಳ ನಡುವೆ ನಡೆಯುತ್ತಿರುವ ನಿರಂತರ ಹೋರಾಟಗಳಲ್ಲಿ ಚೇತನವು ವಿಜಯ ಪಥವನ್ನು ವರಿಸಿದ ಸಂದರ್ಭವೇ ಇದೆನ್ನಬಹುದು.

ಈ ಶರೀರಗತ ಜಲಕಣವು ಯಾವಾಗಲೂ ಕೋಶಗಳಲ್ಲಿ ಮತ್ತು ಅವುಗಳ ಹೊರಗೆ ಪ್ರವಹಿಸುತ್ತ ಇರುವುದು. ಪ್ರಾಣವಿರುವಷ್ಟು ಕಾಲ ಈ ಗತಿಯು ಎಂದಿಗೂ ವಿಮುಖವಾಗುವುದಿಲ್ಲ. ನದಿಯು ಮಣ್ಣಿನ ಬೇರೆ ಬೇರೆ ಕಣಗಳನ್ನೂ ಭೂಮಿಯ ಮೈಲಿಗೆಯನ್ನೂ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಿಕೊಂಡು ಹೋಗುವಂತೆ ಶರೀರದ ಒಳಗಿರುವ ಈ ಜಲಧಾರೆಯೂ ಆಹಾರ, ರಾಸಾಯನಿಕ ಕಣಗಳು ಮತ್ತಿತರ ಪದಾರ್ಥಾದಿಗಳನ್ನು ಒಂದು ಭಾಗದಿಂದ ಬೇರೊಂದು ಭಾಗಕ್ಕೆ ಒಯ್ಯುತ್ತದೆ.

ಮುಖ್ಯತಃ ನಾವು ಈ ನೀರನ್ನು ಬಾಹ್ಯಪ್ರದೇಶದಿಂದಲೇ ನಮ್ಮ ಶರೀರದೊಳಗೆ ತೆಗೆದುಕೊಳ್ಳುತ್ತೇವೆ; ತಿರುಗಿ ಅದನ್ನು ಹೊರಗೆ ಹಾಕುತ್ತೇವೆ. ಈ ಜಲಗ್ರಹಣ ಮತ್ತು ಜಲತ್ಯಾಗದ ಪ್ರತಿಕ್ರಿಯೆಯು ಉಚಿತ ಪ್ರಮಾಣದಲ್ಲಿ ನಡೆಯದೆ ಹೋದರೆ ಆರೋಗ್ಯದ ಮೇಲೆ ಹಾನಿ ತಟ್ಟುವುದೆಂದು ವೈದ್ಯರು ಅಭಿಪ್ರಾಯಪಡುತ್ತಾರೆ.

ಶರೀರದೊಳಗೆ ನಾವು ಸೇವಿಸುವ ನೀರು ಹೆಚ್ಚಾಗಿ ಕುಡಿಯುವುದರ ಮೂಲಕ ಹೋಗುತ್ತದೆ. ಆರೋಗ್ಯವಂತನಾದ ಓರ್ವ ಮಧ್ಯಪ್ರಾಯದವನು ದಿನಾಲೂ ಹನ್ನೆರಡು ಸಾವಿರ ಘನ ಸೆಂಟಿಮೀಟರುಗಳಷ್ಟು ನೀರನ್ನು ಕುಡಿಯುತ್ತಾನೆ. ನಮ್ಮ ಆಹಾರದಿಂದಲೂ ಸುಮಾರು ಒಂದು ಸಾವಿರ ಘನ ಸೆಂಟಿಮೀಟರಿನಷ್ಟು ನೀರು ದೊರೆಯುವುದು. ಉದಾಹರಣೆಗಾಗಿ ಮಾಂಸಖಂಡದಲ್ಲಿ ನೂರಕ್ಕೆ ೭೦ರಷ್ಟು ನೀರು ಇದೆ. ಪಚನಾಂಗಗಳಲ್ಲಿ ಇದಕ್ಕಿಂತಲೂ ಅಧಿಕ ನೀರಿನಂಶವಿರುತ್ತದೆ. ಹೊರಗಿನಿಂದ ಪಡೆಯುವ ಇಷ್ಟು ಪ್ರಮಾಣದ ನೀರು ಮಾತ್ರವಲ್ಲದೇ ನಮ್ಮ ಪಚನ ಕ್ರಿಯೆಯು ನಡೆಯುವಾಗ ಆಗುವ ರಾಸಾಯನಿಕ ಪರಿವರ್ತನೆಗಳಿಂದ ಸುಮಾರು ಮುನ್ನೂರು ಘನ ಸೆಂಟಿಮೀಟರ್ ನೀರು ದೊರೆಯುತ್ತದೆ.

ನಾವು ನಮ್ಮ ಶರೀರದಲ್ಲಿ ಒಳಗೆ ತೆಗೆದುಕೊಳ್ಳುವ ಪ್ರಮಾಣದಲ್ಲಿಯೇ ನೀರನ್ನು ಹೊರಗೆ ಹಾಕದೆ ಹೋದರೆ, ನಮ್ಮ ದೇಹದ ಉಷ್ಣತೆಯನ್ನು ಮಿತವಾಗಿರಿಸಲು ಸಾಧ್ಯವಿಲ್ಲ. ನಾವು ನಿಶ್ವಸಿಸುವಾಗ ಹೊರಗೆ ಬಿಡುವ ಗಾಳಿಯು ಬಿಸಿಯಾಗಿರುವುದಷ್ಟೆ? ಇದರಲ್ಲಿ ಆವಿಯರೂಪದಲ್ಲಿ ಹೊರಗೆ ಹೋಗುವ ನೀರೇ ಒಟ್ಟು ನೀರಿನ ನಾಲ್ಕರಲ್ಲಿ ಒಂದಂಶವಾಗುವುದು! ಬೇಸಗೆಯ ದಿನಗಳಲ್ಲಿ ಈ ಆವಿಯು ನಮಗೆ ಕಾಣದೆ ಹೋದರೂ ಚಳಿಗಾಲದಲ್ಲಿ ಹೊಗೆ ಅಥವಾ ಮಂಜಿನರೂಪದಲ್ಲದು ನಮಗೆ ತೋರುತ್ತದೆ. ನಾವು ಅಧಿಕ ಶ್ರಮಪಟ್ಟಾಗ ಅಥವಾ ಬಾಹ್ಯ ಉಷ್ಣತೆಯು ಅಧಿಕವಾದಾಗ ಬೆವರಿನ ರೂಪದಲ್ಲಿ ನೀರು ಹೊರಗೆ ಹೋಗುತ್ತದೆ. ಬೆವರುತ್ತಿರುವಾಗ ನಾವು ಕೇವಲ ನೀರನ್ನು ಮಾತ್ರ ಹೊರತಳ್ಳುವುದಲ್ಲದೇ ಶರೀರದ ಉಷ್ಣತೆಯನ್ನೂ ಕಳೆದುಕೊಳ್ಳುತ್ತೇವೆ. ಉಳಿದಂಶವು ಮೂತ್ರರೂಪವಾಗಿ ಹೊರಹೋಗುವುದು.

ಬೆವರಿನೊಡನೆ ನಮ್ಮ ಶರೀರಕ್ಕೆ ಆವಶ್ಯಕವಾದ ಉಪ್ಪು ಕೂಡಾ ಹೊರಹೋಗುತ್ತದೆ. ಆದ ಕಾರಣದಿಂದಲೇ ಅತ್ಯಧಿಕವಾಗಿ ಬೆವರುವುದು ಆರೋಗ್ಯದ ದೃಷ್ಟಿಯಿಂದ ಹಾನಿಕಾರಕ ಮತ್ತು ಅದು ಶರೀರ ಕುಗ್ಗುವ ಲಕ್ಷಣವಾಗಿದೆ. ಸೆಖೆ ಕಾಲದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಅತಿಸಾರ, ಸಿಡುಬು ಮೊದಲಾದ ರೋಗಗಳು ಉಪ್ಪಿನ ಅಸಮತೋಲದಿಂದಲೇ ಕಾಣಿಸಿಕೊಳ್ಳುತ್ತವೆ.

ಆದರೆ ಮನುಷ್ಯನಿಗಿಂತ ಇತರ ಪ್ರಾಣಿಗಳ ಪರಿಸ್ಥಿತಿಯು ವಿಪರೀತವಾಗಿದೆ. ಕತ್ತೆ ಮೊದಲಾದ ಪ್ರಾಣಿಗಳು ಬೆವರುವಾಗ ಅವುಗಳ ಬೆವರಲ್ಲಿ ವಿಶುದ್ಧ ಜಲ ಕಾಣಿಸಿಕೊಳ್ಳುವುದರಿಂದ ಅವು ತೀಕ್ಷ್ಣವಾದ ಉಷ್ಣವನ್ನೂ ತಡೆದುಕೊಳ್ಳಬಲ್ಲವು. ಕೆಲವು ಪ್ರಾಣಿಗಳ ಚರ್ಮವು ಅತ್ಯುಷ್ಣವನ್ನೂ ಸಹಿಸುವಂತೆ ರಚಿತವಾಗಿದೆ. ಅವುಗಳಿಗೆ ಬೆವರುವುದು ಕಡಿಮೆ. ಒಳಗೆ ನೀರಿನ ಕೊರತೆಯೂ ಕಡಿಮೆಯಾಗುತ್ತದೆ. ನಾಯಿಗಳಲ್ಲಿ ಬೆವರು ಸುರಿಸುವ ಗ್ರಂಥಿಗಳಿರುವುದಿಲ್ಲವಾದುದರಿಂದ, ಅವು ತಮ್ಮ ಶರೀರದ ನೀರು ಮತ್ತು ಉಷ್ಣವನ್ನು ಶ್ವಾಸಕೋಶಗಳ ಮೂಲಕವೇ ಹೊರತಳ್ಳಬೇಕಾಗುತ್ತದೆ. ಆದುದರಿಂದಲೇ ಸೆಖೆ ಅಧಿಕಾಧಿಕವಾದಾಗ ನಾಯಿಗಳು ವೇಗವಾಗಿ ಉಸಿರು ಬಿಡಲಾರಂಭಿಸುತ್ತವೆ.

ಕೆಲವು ಪ್ರಾಣಿಗಳ ಶರೀರಗಳಲ್ಲಿ ತೃಷಾ ನಿರೋಧ ಶಕ್ತಿಯಿರುವುದರಿಂದ ಅವು ಆವಶ್ಯಕತೆಗಿಂತ ಅಧಿಕ ನೀರನ್ನು ಎಂದೂ ಸೇವಿಸುವುದಿಲ್ಲ. ನಾಯಿಗೆ ನೀವು ಪದೇ ಪದೇ ನೀರು ಕುಡಿಸದೇ ಹೋದರೆ, ಅದಕ್ಕೇನೂ ತೊಂದರೆ ಸಂಭವಿಸದು. ಏಕೆಂದರೆ, ಅದು ತನಗೆ ಬೇಕಾದಷ್ಟು ನೀರನ್ನು ಒಂದೆರಡು ಬಾರಿಯೇ ಸೇವಿಸಿರುತ್ತದೆ. ಶರೀರದ ಒಳಗಿರುವ ಈ ಸಮುದ್ರದ ಕಾರ್ಯಾಟವು ಒಂದು ಬಾರಿ ನಿಂತು ಬಿಟ್ಟರೆ, ಆಗ ಎಲ್ಲ ಕೆಲಸಗಳೂ ಅರ್ಧಾಂಬರ್ಧವಾಗಿ ಉಳಿಯುವುವು ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ. "ಹೃದಯ ರೋಗ"ದಿಂದ ಮಡಿದ ಅನೇಕ ಸಂದರ್ಭಗಳಲ್ಲಿ ಅಧಿಕಾಂಶ ಜಲರಾಶಿಯು ರಕ್ತ ಪ್ರಣಾಳಿಯನ್ನು ಬಿಟ್ಟು ಶರೀರದ ಕೋಶಗಳಲ್ಲಿ ಸೇರಿಕೊಂಡಿದ್ದುದು ಕಂಡುಬಂದಿದೆ. ಇದರಿಂದಾಗಿಯೇ ಹೃದಯಗತಿ ಸ್ಥಗಿತವಾಗುತ್ತದೆ.

ಆಧುನಿಕ ವೈಜ್ಞಾನಿಕರು ದೇಹದ ಒಳಭಾಗದಲ್ಲಿರುವ ಜಲರಾಶಿ ಎಷ್ಟೆಂಬುದನ್ನು ಅಳೆಯುವ ಸಾಧನವೊಂದನ್ನು ಕಂಡು ಹಿಡಿದಿದ್ದಾರೆ. ಇದರಿಂದ ಎಷ್ಟು ನೀರು ಇದೆ; ಇನ್ನೆಷ್ಟು ಬೇಕಾಗಿದೆ ಎಂಬುದನ್ನು ತಿಳಿಯಬಹುದು. ಆದರೆ, ಅದೇನಿದ್ದರೂ ಶರೀರದ ಒಳಭಾಗದಲ್ಲಿರುವ ಈ ವಿಶಾಲ ಜಲರಾಶಿಯ ಕುರಿತಾಗಿ ಇನ್ನೂ ಅಭ್ಯಸಿಸಬೇಕಾದ ವಿಷಯಗಳು ಬಹಳವಾಗಿವೆ.

ಭಾರತೀಯ ಶಾಸ್ತ್ರಗಳಲ್ಲಿ ನೀರನ್ನು ಸೃಷ್ಟಿಯ ಆದಿ ವಸ್ತುವೆಂದು ತಿಳಿಯಲಾಗಿದೆ. ಪೃಥ್ವಿಯ ಎಲ್ಲ ವ್ಯವಸ್ಥೆಯು ನಡೆಯುವುದರಲ್ಲೂ ಅದು ನೀರಿನ ಕಾರಣದಿಂದವೆಂಬುದು ಚಿರಸತ್ಯ. ಆದುದರಿಂದಲೇ ಸಂಸ್ಕೃತದ ಉದ್ದಾಮಕವಿ ಕವಿಕುಲತಿಲಕ ಕಾಳಿದಾಸನು ತನ್ನ ಅತ್ಯುನ್ನತ ನಾಟಕ ಅಭಿಜ್ಞಾನ ಶಾಕುಂತಲದಲ್ಲಿ ಜಲವನ್ನೇ ಶಿವನ ಪ್ರಥಮ ರೂಪವನ್ನಾಗಿ ಗಣಿಸಿ ವಂದಿಸಿದ್ದಾನೆ-"ಯಾ ಸೃಷ್ಟಿಃ ಸ್ರಷ್ಟುರಾದ್ಯಾ ......"

ಈಗಲಾದರೂ ಪ್ರಾಣಿಗಳ ಶರೀರದ ಒಳಗಡೆ ವಿಶಾಲವಾದ ಜಲರಾಶಿಯೊಂದಿದೆ ಎಂದು ನೀವು ನಂಬುವುದು ಅಗತ್ಯ. ಅಲ್ಲದೆ, ಸಾಧ್ಯವೆನಿಸಿದರೆ ಈ ಬಗೆ ನೀವೂ ಸಂಶೋಧನೆಯನ್ನು ನಡೆಸಲು ಪ್ರಯತ್ನ ನಡೆಸಿರಿ.

ದಿ ವಿಜಯಾ ಬೇಂಕ್ ಲಿಮಿಟೆಡ್, ಬ್ರಹ್ಮಾವರ, ದ. ಕ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆಕೊಂಡ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ತ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ, ಅಸಲು ಬಡ್ಡಿಯನ್ನು ಈ ತನಕವೂ ಬಾಕಿ ಮಾಡಿಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳು ಕಾರಣಾಂತರಗಳಿಂದ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 6–5–59ನೇ ಬುಧವಾರ ಅಪರಾಹ್ನ ಘಂಟೆ 3–00ಕ್ಕೆ ಸರಿಯಾಗಿ, ಯಾ ಬೇಂಕಿಗೆ ಯುಕ್ತ ಕಂಡ ಇತರ ಯಾವುವೇ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	31-3-'59ರ ವರೆಗಿನ ಬಡ್ಡಿ ಸೇರಿ ಮೊಬಲಗು
659/56	ಜಿ. ಶೀನ ಶೆಟ್ಟಿ, ಗಿರಿಯಮ್ಮ ಶೆಡ್ತಿಯವರ ಮಗ, ವಾರಂಬಳ್ಳಿ ಗ್ರಾಮದ ಗುಡಬೆಟ್ಟು, ಪೋಸ್ಟು ಬ್ರಹ್ಮಾವರ	Rs=np 273-55
400/57	ಕೆ. ಶಂಕ್ರಯ್ಯ ಆಚಾರಿ, ಕೃಷ್ಣ ಆಚಾರಿಯವರ ಮಗ, ನೀಲಾವರ ಗ್ರಾಮ, ಪೋಸ್ಟು ಕುಂಜಾಲು	166-55
507/57	ಎಚ್. ನಾರಾಯಣ ಶೆಟ್ಟಿ, ಶೀನಪ್ಪ ಶೇರ್ವೆಗಾರರ ಅಳಿಯ, ಹಲ್ಲೂರು ಮೇಲ್ಮನೆ, ವಳ್ಳೂರು ಗ್ರಾಮ, ಪೋಸ್ಟು ತೆಕ್ಕಟ್ಟೆ	65-80
683/57	ಎಚ್. ಸುರೇಂದ್ರ ಶೆಟ್ಟಿ, ಶೀನಪ್ಪ ಹೆಗ್ಡೆಯವರ ಮಗ, ನಂಬ್ರ 34ನೇ ಕುದಿ ಗ್ರಾಮ, ಪೋಸ್ಟು ಕೊಕ್ಕರ್ಣೆ	136-95
892/57	ನಾರಾಯಣ ಶೆಟ್ಟಿ, ಮಹಾಬಲ ಶೆಟ್ರ ಅಳಿಯ, ಹೆರಂಜೆ ಹೊಸಮನೆ, ಹೇರೂರು ಗ್ರಾಮ, ಪೋಸ್ಟು ಕುಂಜಾಲು	32-30
143/58	ಶೇಷ ಶೆಟ್ಟಿ, ಸುಬ್ಬಯ ಶೆಟ್ರ ಅಳಿಯ, ಹೆರಂಜೆ ಬಾಳೆ ಹಿತ್ಲು ಮನೆ, ಹೇರೂರು ಗ್ರಾಮ, ಪೋಸ್ಟು ಕುಂಜಾಲು	37 30
403/58	ಸದಿಯ ಶೆಟ್ಟಿ, ಮಂಜಯ್ಯ ಶೆಟ್ರ ಅಳಿಯ, ಚೇರ್ಕಾಡಿ ಗ್ರಾಮದ ಸೂರಬೆಟ್ಟು, ಪೋಸ್ಟು ಚೇರ್ಕಾಡಿ	20-00

Office of The Vijaya Bank Ltd.
Brahmavar, S. K.
D/ 17—4—'59

B. Bhaskara Shetty,
Agont.

ಪರರೊಡನೆಯೂ ತನ್ನೊಡನೆಯೂ ಸುಳ್ಳನ್ನು ನುಡಿದು ಆತ್ಮವಂಚನೆ ಮಾಡಿಕೊಳ್ಳಬಾರದು. ಮಿಥ್ಯಾ ವ್ಯವಹಾರದಿಂದ ದೂರವಿರಬೇಕು. ನಾವು ಹೋದೆಡೆಯಲ್ಲೆಲ್ಲ ಸತ್ಯವೇ ನಮ್ಮ ಸಂಗಾತಿಯಾಗಿದ್ದರೆ, ಎಂದೆಂದಿಗೂ ಅಂಜುವ ಪ್ರಸಂಗವೊದಗಲಾರದು.

NAVAYUGA

Founder.—

A B SHETTY,

Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೨೩-೪-'೫೯	೩೨

ಅನಿವಾರ್ಯ ಪದನ್ಯಾಸ

ಇತ್ತೀಚೆಗಿನ ಎಲ್ಲ ರಾಷ್ಟ್ರಗಳ ಗಮನವನ್ನೂ ಆಕರ್ಷಿಸಿಕೊಂಡಿರುವ ಬೌದ್ಧಧರ್ಮಗುರುಗಳಾದ ದಲಾಯ್ ಲಾಮಾರು ಕಮ್ಯುನಿಸ್ಟ ಚೀನದ ಮೇಲೆ ಮಹಾಪರಾಧವನ್ನು ಹೊರಿಸಿದ್ದಾರೆ ಒಂದುಕಡೆ ಚೀನವು ದಲಾಯ್ ಲಾಮಾ ಅವರು ಟಿಬೇಟದ ವಿದ್ರೋಹಿಗಳ ಕೈಯೊಳಗೆ ಸಿಕ್ಕಿ ತತ್ಕಾರಣದಿಂದ ಭಾರತಕ್ಕೆ ಓಡಿಹೋಗಿದ್ದಾರೆ ಎಂದೂ ಸ್ವಯಂ ಲಾಮಾ ಅವರಿಗೆ ಇಂತಹ ಯೋಚನೆಯಿರಲಿಲ್ಲವೆಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದು ಪದೇ ಪದೇ ಇದನ್ನೇ ಪುನರುಚ್ಚರಿಸುತ್ತಿದೆ ದಲಾಯ್ ಲಾಮಾರು ಈ ಬಂಡುಗಾರರ ಹಸ್ತದಿಂದ ಪಾರಾಗಿ ಬೇಗನೇ ಟಿಬೇಟಕ್ಕೆ ಮರಳುವರೆಂಬ ಸದಾಶಯವನ್ನೂ ಬಿಂಬಿಸುತ್ತಿದೆ ಪೇಕಿಂಗರೇಡಿಯೋ ಇದೇ ಪಲ್ಲವಿಗೆ ಅಗ್ರಗಣ್ಯ ಸ್ಥಾನವನ್ನಿತ್ತು ಆಗಾಗ ಘೋಷಿಸುವ ಕೆಲಸವನ್ನು ನಿರಾತಂಕವಾಗಿ ಮುಂದುವರಿಸುತ್ತಿದೆ ಆದರೆ, ದಲಾಯ್ ಲಾಮಾರು ಜನತೆಯು ಬಹು ದಿನಗಳಿಂದ ಕತ್ತೆತ್ತಿ ಕಿವಿನಿಮಿರಿಸಿ ಕೇಳಲು ಆತುರವಾಗಿದ್ದ ತಮ್ಮ ಭಾರತ ಪ್ರವೇಶದ ಕಾರಣವನ್ನು ಸವಿವರವಾಗಿ ತೇಜಪುರದಲ್ಲಿ ಬಹಿರಂಗಗೊಳಿಸಿ, ಅದರಲ್ಲಿ ತಾನು ಸ್ವಇಚ್ಛೆಯಿಂದಲೇ ಭಾರತಕ್ಕೆ ಬಂದಿರುವೆನಲ್ಲದೇ ಚೀನೀಯ ಸರಕಾರವೆಂದಂತೆ 'ಬಂಡುಗಾರರ' ಬಲಾತ್ಕಾರಕ್ಕೆ ಒಳಪಟ್ಟಿಲ್ಲವೆಂದಿದ್ದಾರೆ

ದಲಾಯ್ ಲಾಮಾರ ಈ ಹೇಳಿಕೆಯು ಟಿಬೇಟದಲ್ಲಿ ಕಮ್ಯುನಿಸ್ಟ ಚೀನವು ಮಾಡಿದ ನಾನಾರೀತಿಯ "ಕಾರ್ಯಕಲಾಪ"ಗಳನ್ನು ವಿವರಿಸುತ್ತಿದೆ ಚೀನವು ೧೯೫೦ರಲ್ಲಿ ಟಿಬೇಟದ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಲು ಸೇನೆಯನ್ನು ಮುನ್ನುಗ್ಗಿಸಿದಾಗ, ಅದು ಬಲವಾದ ವಿರೋಧವನ್ನು ಎದುರಿಸಬೇಕಾಗಿತ್ತು ಆದರೂ, ತನ್ನ ಮಹತ್ವಾಕಾಂಕ್ಷೆಯನ್ನು ಪೂರ್ಣಗೊಳಿಸಲು ಜಗತ್ತಿನ ಬಹು ರಾಷ್ಟ್ರಗಳ ಅಸಮ್ಮತಿಯಿರುವುದದನ್ನು ಕಂಡುಕೊಂಡ ಕಮ್ಯುನಿಸ್ಟ ಚೀನವೂ ಕೂಡಲೇ ಸಂಧಿಯ ಸೋಗನ್ನು ಹಾಕಿಕೊಂಡಿತು ಟಿಬೇಟಿನ ಧಾರ್ಮಿಕ ಸ್ವಾತಂತ್ರ್ಯವನ್ನು ಒಪ್ಪಿ, ಅದಕ್ಕೆ ಸ್ವಾಯತ್ತಾಧಿಕಾರವಿಲ್ಲವನ್ನೂ ಇತ್ತ ನಾಟಕವಾಡಿ, ವಿದೇಶೀಯ ವ್ಯವಹಾರವನ್ನು ಮಾತ್ರ ತನ್ನಲ್ಲಿಟ್ಟುಕೊಂಡಿತು. ಆದರೆ, ಅಂದಿನಿಂದಲೂ ಕಮ್ಯುನಿಷ್ಟರು ಟಿಬೇಟದ ಆಂತರಿಕ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ಮಾಡುತಿದ್ದು, ಧಾರ್ಮಿಕ ಸ್ವಾತಂತ್ರ್ಯವನ್ನೂ ಅಲ್ಲಗಳೆಯುವ ಪ್ರಸಂಗಗಳು ಉದ್ಭವಿಸಿವೆ ಎಂದು ದಲಾಯ್ ಲಾಮಾ ಹೇಳಿದ್ದಾರೆ. ಅನೇಕಾನೇಕ ಲಾಮಾರನ್ನು ಹಿಂಸಿಸಿರುವುದನ್ನೂ ದಲಾಯ್ ಲಾಮಾರ ಅರಮನೆಯ ಮೇಲೆ ಗುಂಡೆಸೆದಿರುವುದನ್ನೂ ಉಲ್ಲೇಖಿಸಿ, ತನ್ನ ಪ್ರಾಣರಕ್ಷಣೆಗಾಗಿ ತಾನು ಭಾರತದ ಮರೆಹೋಗುವ ಪ್ರಸಂಗವು ಅನಿವಾರ್ಯವಾಗಿ ಒಂದೊದಗಿತು ಎಂದವರು ಅನ್ನಬೇಕಾದರೆ, ಚೀನೀಯ ಕಮ್ಯುನಿಸ್ಟ ಸರಕಾರ ಲಾಮಾರ ಜೀವಾಪಹರಣಮಾಡುವ ಇರಾದೆಯಲ್ಲಿರಲಿಲ್ಲವೆನ್ನಲು ಕಠಿನವೆನಿಸುತ್ತದೆ, ಅಲ್ಲದೇ ದಲಾಯ್ ಲಾಮಾರ ಈ ಭಾರತ ಪ್ರವೇಶ ಕಾರ್ಯಕ್ರಮವು ಸಂಗತವಾಗಿದೆಯೆಂದೇ ಹೇಳಬೇಕು ದಬ್ಬಾಳಿಕೆಯನ್ನೇ ಬಲ್ಲ ಕಮ್ಯುನಿಸ್ಟರ ಈ ಕ್ರೂರಾಚರಣೆಯೇನೂ ಹೊಸತಲ್ಲ, ಏಕೆಂದರೆ, ಕಮ್ಯುನಿಸ್ಟರ ಮೂಲ ಸ್ಥಾನವಾದ ರಶಿಯದಲ್ಲಿ ಕೂಡ ಇಂದು ದೇಶಭಕ್ತ, ನಿಸ್ವಾರ್ಥಿಯಾದವನು ನಾಳೆ ದೇಶದ್ರೋಹಿ ಹಾಗೂ ಸ್ವಾರ್ಥಿಯೆಂಬ ಅಪವಾದಕ್ಕೆ ಗುರಿಯಾಗುತ್ತಿರುವುದು ಹಳಸಿಹೋದ ತಂಗೂಳಾಗಿದೆ. ಅಂತೆಯೇ ಏನಾದರೂ ಮಾಡಿ ಟಿಬೇಟದ ಸ್ವಾತಂತ್ರ್ಯವನ್ನಪಹರಿಸಿ ಅದನ್ನು ಕಬಳಿಸುವ ಅಭಿಲಾಷೆಯುಕ್ತವಾದ ಚೀನೀಯ ಸರಕಾರ, ದಲಾಯ್ ಲಾಮಾರಿದ್ದಂತೆಯೇ ಪಂಚನ್ ಲಾಮಾರನ್ನು ಮನ್ನಿಸಿ ಅವರನ್ನು ದಲಾಯ್ ಲಾಮಾರ ಎದುರಿಗೆ ಎತ್ತಿಕಟ್ಟುವ ಪ್ರಯತ್ನವನ್ನೂ ಮಾಡಿರುವುದು ದಲಾಯ್ ಲಾಮಾರಿಗಸಗಿದ ಅಪಚಾರವೆನ್ನಲೇಬೇಕು ಇಂತಹ ಆಕ್ಷಿಪ್ತ ಅಭದ್ರ ವಾತಾವರಣದಲ್ಲಿ ಬದುಕುವುದು ಯಾವನಿಗೂ ಅಸಾಧ್ಯ ಇಂದು ದಲಾಯ್ ಲಾಮಾರ ಸ್ಥಾನದಲ್ಲಿ ಬೇರೆಯಾರೇ ಇರುವುದಾದರೂ ಅವರೂ ಈ ರೀತಿಯಾಗಿ ಪರ ನೆರೆರಾಷ್ಟ್ರದ ಆಶ್ರಯವನ್ನು ಬೇಡದಿದ್ದರೆ, ಪ್ರಾಣಾಪಾಯವು ಖಂಡಿತವೆನ್ನಬೇಕು ಆದುದರಿಂದಲೇ ದಲಾಯ್ ಲಾಮಾರು ಇಟ್ಟ ಹಜ್ಜೆ ಅನಿವಾರ್ಯವಾಗಿತ್ತು, ಮತ್ತು ನ್ಯಾಯೋಚಿತವಾಗಿತ್ತು.

ಪಂಚೆನ್ ಲಾಮಾರೂ ದಲಾಯ್ ಲಾಮಾರ ಈ ಹೇಳಿಕೆಯನ್ನು ತಿರಸ್ಕರಿಸಿ, ವಿರೋಧಿಸಿ, ಕಮ್ಯುನಿಸ್ಟ ಚೀನೀಯ ಸರಕಾರಕ್ಕೆ ಬೆಂಬಲವನ್ನಿತ್ತಿದ್ದಾರೆ, "ಒಡೆಯನ ಮನೆಯ ಆಳು" ಒಡೆಯನಿಗೆ ಸರಿಯಾಗಿ ಸಾಕ್ಷಿ ಹೇಳದಿರಲಾದೀತೆ? ಹಾಗಾಗಿದೆ ಪಂಚೆನ್ ಲಾಮಾರ ದುಸ್ಥಿತಿ! ಪಂಚನ್ ಲಾಮಾರ ಅವಸ್ಥೆ ಈ ಗತಿಯಾದುದಕ್ಕೆ ಮರುಗಬೇಕಲ್ಲದೇ ಇನ್ನೇನೂ ಹೇಳುವುದಸಾಧ್ಯ. ಚೀನ ಸರಕಾರಕ್ಕೆ ಟಿಬೇಟದಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಉಳಿಸಿಕೊಂಡು ಬರಬೇಕೆಂಬ ಆಶಯವಿದ್ದರೆ, ಇನ್ನಾದರೂ ಹೊತ್ತು ಮಿಂಚಿಹೋಗಿಲ್ಲ. ಸ್ವಯಂ ದಲಾಯ್ ಲಾಮಾರೇ ಈ ಬಗ್ಗೆ ಸಾಕಷ್ಟು, ಸಲಹೆಸೂಚನೆ ಮಾಡಿದ್ದಾರೆ ಈ ಬಗ್ಗೆ ಸಾಕಷ್ಟು ವಿಚಾರವಿನಿಮಯವನ್ನು ದಲಾಯ್ ಲಾಮಾ ಅವರೀಗ ಭಾರತದಲ್ಲಿರುವರಾದರೂ ಚೀನ ಸರಕಾರ ಮಾಡಬಹುದೆಂದು ತೋರುತ್ತದೆ. ಆದರೆ, ತಮ್ಮ ದಬ್ಬಾಳಿಕೆಯ ನೀತಿಯನ್ನು ಬಿಟ್ಟು, ದಲಾಯ್ ಲಾಮಾರ ಮೇಲೆ ವೃಥಾ ಅಲ್ಲಸಲ್ಲದ ಅಸತ್ಯಾರೋಪಗಳನ್ನು ಹೊರಿಸಿ, ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸುವುದಕ್ಕಿಂತ, ಟಿಬೇಟ—ಚೀನಗಳ ನಡುವಣ ೧೯೫೧ರ ಒಪ್ಪಂದಗಳ ಶರ್ತಗಳಂತೆ ನಡೆದುಕೊಂಡರೆ, ಟಿಬೇಟದ ಸ್ಥಿತಿಯು ಹದಕ್ಕೆ ಬರುವುದು. ಜಗತ್ತಿನ ಕಮ್ಯುನಿಸ್ಟೇತರ ರಾಷ್ಟ್ರಗಳೆಲ್ಲವೂ ಈ ಚೀನದ ಅನಪೇಕ್ಷಿತ ಉಪದ್ರವವನ್ನು ಮೆಚ್ಚುವುದಿಲ್ಲವೆಂಬುದು ಈಗಾಗಲೇ ವ್ಯಕ್ತವಾಗಿದೆ ಇದರಿಂದ, ಈ ಬಗ್ಗೆ ಆವಶ್ಯಕ ಪದನ್ಯಾಸವಿಡುವುದು ಅಗತ್ಯವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ ಚೀನದ ಈ ಕೆಣಕಾಟದಿಂದ ಚೀನವೊಂದುಳಿದ ಇತರ ರಾಷ್ಟ್ರಗಳಿಗೆಲ್ಲ ವಿವೇಚನೆಯಾಗಿದೆ. ಆದುದರಿಂದ ಪರಿಸ್ಥಿತಿಯನ್ನು ತಿಳಿಗೊಳಿಸಲು ಕಮ್ಯುನಿಷ್ಟ ಚೀನವೇ ಮುಂದೆಬರಬೇಕು

ಸಂಕ್ಷಿಪ್ತ ಸುದ್ದಿಗಳು

ಶಿಕ್ಷಕರಿಗೆ ಸೌಲಭ್ಯ

ಮೈಸೂರು ವಿಧಾನ ಪರಿಷತ್ತಿನಲ್ಲಿ ಶಿಕ್ಷಕರಿಗೆ ಕೊಡಬೇಕಾಗಿರುವ ವಿವಿಧ ಸೌಲಭ್ಯಗಳ ಕುರಿತಾಗಿ ಚರ್ಚೆಯು ಗಂಭೀರವಾಗಿ ನಡೆಯಿತು ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿರುವ ನಿವೃತ್ತಿ ಪ್ರಾಯಮಿತಿ ಪ್ರೊವಿಡೆಂಟ್ ಫಂಡ, ನಿವೃತ್ತಿವೇತನ ಹಾಗೂ ಜೀವವಿಮೆಗಳ ಬಗ್ಗೆ ಈ ಚರ್ಚೆ ಎದ್ದಿತು ಶಿಕ್ಷಣ ಮಂತ್ರಿ ಅಣ್ಣಾರಾವ್ ಗಣಮುಖಿಯವರಲ್ಲಿ ಶಿಕ್ಷಕರ ಮೇಲೆ ಸಹಾನುಭೂತಿಯಿಲ್ಲವೆಂದ ಶ್ರೀ ಎಂ. ಪಿ ಎಲ್ ಶಾಸ್ತ್ರಿಯವರು ಅಂದುದಕ್ಕೆ, ತಮಗೆ ವೈಯುಕ್ತಿಕವಾಗಿ ತುಂಬ ಸಹಾನುಭೂತಿಯಿರುವುದೆಂದೂ ರಾಜ್ಯ ಪುನರ್ಘಟನಾ ಮಸೂದೆಯಲ್ಲಿ ಕೊಡಲಾದ ಸೌಲಭ್ಯಗಳನ್ನು ಕಿತ್ತುಕೊಳ್ಳಬಾರದಾದುದರಿಂದ ನಿವೃತ್ತಿಪ್ರಾಯದಲ್ಲಿ ಅಂತರವುಳಿದಿರುವುದೆಂದೂ ಉಳಿದ ಸೌಲಭ್ಯಗಳ ಕುರಿತು ಸರಕಾರವು ತೀವ್ರವಾಗಿ ಪರ್ಯಾಲೋಚಿಸುತ್ತಿದ್ದು ತ್ವರಿತಗತಿಯಲ್ಲಿಯೇ ಸಾಧ್ಯವಾದ ನಿರ್ಣಯಗಳನ್ನು ಕೈಗೊಳ್ಳಲಾಗುವುದೆಂದು ಭರವಸೆಯಿತ್ತಿರುವರು

ಸ್ತುತ್ಯೋಪಕ್ರಮ

"ಮಾನಪತ್ರ ಎಂದೊಡನೆ ನಮಗೆಲ್ಲ ಮಂತ್ರಿಗಳ ಪುರಸ್ಕರಣೆಯಾಗುವುದು ಸ್ವಾಭಾವಿಕ. ಏಕೆಂದರೆ, ಮಾನಪತ್ರ ಕೊಡುತ್ತಾರೆ ಎಂಬ ವರ್ತಮಾನ ದೊರೆತೊಡನೆಯೇ ಯಾವ ಮಂತ್ರಿ ಬರುತ್ತಾನೆ ಎಂಬ ಪ್ರಶ್ನೆ ಏಳುತ್ತದೆ ಮಂತ್ರಿ ಮತ್ತು ಮಾನಪತ್ರಗಳ ನಡುವಣ ಸಂಬಂಧ ಬಹಳ ನಿಕಟವಾದುದು. ಆದರೆ, ಮೊನ್ನೆ ಮೊನ್ನೆ ಉಡುಪಿ ನಗರ ಸಭೆಯು ಕನ್ನಡದ ಉದ್ದಾಮ ಸಾಹಿತಿಗಳಲ್ಲಿ ಓರ್ವರಾದ ಶ್ರೀ ಕೋಟ ಶಿವರಾಮ ಕಾರಂತ'ರಿಗೆ ಅವರು ಸಾಹಿತ್ಯ, ಕಲೆ, ಸಂಶೋಧನೆ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಮಾಡಿದ ಸೇವೆಯನ್ನು ಪ್ರಶಂಸಿಸಿ ಒಂದು ಮಾನಪತ್ರವನ್ನಿತ್ತುದು ಶ್ರೀ ಕಾರಂತರೆಂದಂತೆಯೇ ನಗರಸಭೆಯು ಪೂರ್ವ ದಾಖಲೆಗಳನ್ನು ಮೀರಿಸುವಂತೆಯೇ ಇದೆ. ಕೇವಲ ಮಂತ್ರಿಗಳಿಗೆ ಮಾತ್ರ ಮೀಸಲಾಗಿರುವ ಈ ಮಾನಪತ್ರದ ಮರ್ಯಾದೆಯನ್ನು ಉಡುಪಿ ನಗರಸಭೆಯು ಈ ಮೊದಲೇ ಪರ್ಯಾಯವೇರಲಿರುವ ಉಡುಪಿ ಮಠಾಧಿಪತಿಗಳಿಗೂ ಅರ್ಪಿಸಿದ್ದು; ಈಗ, ಸಾಹಿತಿ ಕಲಾಗಾರರಿಗೂ ಈ ಗೌರವ ದೊರೆಯಬಲ್ಲುದೆಂದು ತೋರಿಸಿಕೊಟ್ಟಿದೆ ನಗರಸಭೆಯು ಸ್ಥಳೀಯ ಸಂಸ್ಥೆ ಆದುದರಿಂದ ಸ್ಥಳೀಯ ಆದರ್ಶ ವ್ಯಕ್ತಿಗಳನ್ನೂ ಗೌರವಿಸುವ ಸಂಪ್ರದಾಯವನ್ನು ಇಟ್ಟುಕೊಳ್ಳುವುದು ಉಚಿತವೆಂದೇ ಹೇಳಬೇಕು. ಈ ದೃಷ್ಟಿಯಿಂದ ಉಡುಪಿ ನಗರಸಭೆಯು ಇತರ ನಗರಸಭೆಗಳಿಗೆ ಒಂದು ಉದಾತ್ತಾದರ್ಶವನ್ನು ತೋರಿಸಿಕೊಟ್ಟಿದೆ ಎನ್ನುವುದು ನಿಸ್ಸಂಶಯ.

ಅಭಿವೃದ್ಧಿ ಸೂತ್ರಗಳು

ದೇಶದ ಅಭಿವೃದ್ಧಿ ಸಾಧನೆಯ ಮಾರ್ಗದಲ್ಲಿ ಎಡತಾಕುವ ಸಮಸ್ಯೆಗಳನ್ನು ಬಗೆಹರಿಸಲು ಮೂರು ಸೂತ್ರಗಳನ್ನು ಪ್ರಧಾನಿ ನೆಹರೂ ತಿಳಿಸಿರುತ್ತಾರೆ ವ್ಯವಸಾಯ ಕ್ಷೇತ್ರದಲ್ಲಿ ಸೇವಾ ಸಹಕಾರೀ ಸಂಸ್ಥೆಗಳ ಸ್ಥಾಪನೆ, ಉದ್ದಿಮೆರಂಗಕ್ಕೂ ಸಹಕಾರಿ ಆಂದೋಲನದ ವಿಸ್ತರಣೆ ಮತ್ತು ದೇಶದ ಪ್ರತಿಯೊಂದು ಹಳ್ಳಿಯಲ್ಲಿಯೂ ವಿದ್ಯಾಭ್ಯಾಸದ ಸೌಲಭ್ಯವನ್ನೊದಗಿಸುವ ಸಲುವಾಗಿ ಒಂದೊಂದು ಶಾಲೆಯ ಸ್ಥಾಪನೆ- ಈ ಮೂರು ರಚನಾತ್ಮಕ ಕಾರ್ಯಕ್ರಮ ಕಾರ್ಯಕ್ರಮಗಳಿಂದ ಭಾರತದ ಪುನಾರಚನೆಯು ತೀವ್ರಗತಿಯುಳ್ಳದ್ದಾಗುವುದು ಎಂದವರೆಂದರು.

ಚೀನೀಯರ ಅತಿಕ್ರಮಣ

ಟಿಬೇಟದಿಂದ ಓಡಿಹೋಗುತಿದ್ದ ಕೆಲವು ಖಂಪಾ ಜನರ ಗುಂಪುಗಳನ್ನು ಹಿಂಬಾಲಿಸಿಕೊಂಡು ಹೊರಟ ಚೀನಿ ಸೇನೆಯು ನೇಪಾಳದ ಗಡಿಯನ್ನು ದಾಟಿರುವುದೆಂದೂ, ಈ ಗಡಿಪ್ರದೇಶದಲ್ಲಿ ಚೀನೀ ಸೈನಿಕರು ಗುಂಡ ಹಾರಿಸಿದಾಗ ಓರ್ವ ನೇಪಾಳಿ ನಾಗರಿಕನು ಮೃತನಾಗಿರುವನೆಂದೂ ವರದಿಗಳು ಬಂದಿವೆ ನೆರೆಯ ರಾಷ್ಟ್ರ ಟಿಬೇಟನಲ್ಲಿ ನಡೆದ ಸ್ಥಿತ್ಯಂತರಗಳಿಂದ ನೇಪಾಳಕ್ಕೆ ಕಳವಳವುಂಟಾಗಿರುವುದೆಂದೂ ಅವರೂ ಚೀನದೊಡನಿರುವ ನೇಪಾಳದ ಸಂಬಂಧವು ಯಾವ ರೀತಿಯ ಧಕ್ಕೆಗೂ ಒಳಗಾಗಲಾರದೆಂದೂ ನೇಪಾಳದ ಕಾಂಗ್ರೆಸ್‌ನ ನಾಯಕ ಶ್ರೀ ಬಿ ಪಿ ಕೊಯಿರಾಲಾ ಅಂದಿದ್ದಾರೆ ಇತ್ತೀಚೆಗೆ ನೇಪಾಳದಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ನೇಪಾಳೀ ಕಾಂಗ್ರೆಸ್ ಬಹುಮತವನ್ನು ಪಡೆದಿದ್ದು, ಕೆಲವೇ ದಿನಗಳಲ್ಲಿ ಅದು ಅಧಿಕಾರಗ್ರಹಣಮಾಡಲಿದೆ

ನೆಹರೂ ಮಿತ್ರ ರಾಜಾಜಿ

ಇತ್ತೀಚೆಗೆ ರಾಜಾಜೀ ನೆಹರೂಗಳನ್ನು ಬಲವಾಗಿ ಟೀಕಿಸಲು ಪ್ರಾರಂಭಿಸಿದ್ದಾರಷ್ಟೆ? ಈ ಬಗ್ಗೆ ರಾಜಾಜೀ ತನ್ನ ಅಭಿಪ್ರಾಯವನ್ನು ಪುನಃ ವ್ಯಕ್ತಪಡಿಸಿದ್ದಾರೆ "ನನ್ನ ಭಾಷಣ ಮತ್ತು ಲೇಖನಗಳು ಬಹಳ ತಪ್ಪುಕಲ್ಪನೆಯನ್ನು ಉಂಟುಮಾಡುತ್ತಿರುವುದರಿಂದ ನಾನು ಒಮ್ಮೊಮ್ಮೆ ಸುಮ್ಮನಿರಬಯಸುತ್ತೇನೆ. ಕೆಲವು ಜನಮಿತ್ರರು ಗೊಂದಲಮಾಡುವಂತಹ ವಿವಾದ ಅಥವಾ ಭಿನ್ನಾಭಿಪ್ರಾಯಗಳನ್ನು

ವ್ಯಕ್ತಪಡಿಸದೆ ಕಾಂಗ್ರೆಸ ಮುಂದಾಳುಗಳೊಡನೆ ಸಹಮತರಾಗಬೇಕೆಂದು ವಿನಂತಿಸಿಕೊಂಡಿದ್ದಾರೆ. ಆದರೆ, ನಾನು ಪ್ರಧಾನಿಯವರನ್ನು ಟೀಕಿಸುವುದರಿಂದ ತನಗವರ ಮೇಲೆ ಪ್ರೀತ್ಯಾದರಗಳಿಲ್ಲವೆಂಬರ್ಥವಲ್ಲ. ನೆಹರುರವರ ಮೇಲೆ ನನಗಿರುವ ಪ್ರೇಮವೇ ಅವರು ಮಾಡುವ ತಪ್ಪುಗಳನ್ನು ತಿದ್ದಿಕೊಳ್ಳಲು ಅಸಾಧ್ಯವಾಗುವ ಮೊದಲೇ ಎತ್ತಿತೋರಿಸಲು ಪ್ರೇರೇಪಿಸುತ್ತದೆ. ಇವರಲ್ಲದೇ ಬೇರಾರಾದರೂ ಇಂತ ತಪ್ಪುಗಳನ್ನು ಮಾಡಿದ್ದರೆ, ನಾನು ಒಂದು ಪದವನ್ನೂ ಉಚ್ಚರಿಸದೆ ಮೌನವಾಗಿ ಪರಿಣಾಮವನ್ನು ಮಾತ್ರ ನಿರೀಕ್ಷಿಸುತ್ತಿದ್ದೆ" ಎಂದವರು ಆಡಿದ್ದಾರೆ.

ಪತ್ರಿಕಾ ಸ್ವಾಧೀನತಾಜ್ಞೆ

ಪಾಕಿಸ್ತಾನದ ಭದ್ರತೆ, ವಿದೇಶನೀತಿ ಹಾಗೂ ಸಂರಕ್ಷಣೆಗೆ ಹಾನಿಕಾರಕವಾಗುವ ಯಾವುದೇ ವರದಿಯನ್ನು ಪ್ರಕಟಿಸುವ ಪತ್ರಿಕೆಗಳನ್ನು ಸ್ವಾಧೀನಪಡಿಸಿಕೊಳ್ಳಲು ಅಥವಾ ಮುಚ್ಚಿಬಿಡಲು ಪಾಕ್ ಸೈನಿಕ ಆಡಳಿತೆಯ ಅಧ್ಯಕ್ಷ ಜ| ಆಯೂಬಖಾನರು ಒಂದು ಸುಗ್ರೀವಾಜ್ಞೆಯನ್ನಿತ್ತಿದ್ದಾರೆ. ಈ ಆಜ್ಞೆ ಹೊರಟಿಸಿದ ಕೆಲವೇ ನಿಮಿಷಗಳಲ್ಲಿ ಲಾಹೋರದಲ್ಲಿ ಪ್ರಕಟವಾಗುವ ಪಾಕಿಸ್ತಾನ್ ಟಾಯಿಮ್ಸ್ ಎಂಬ ಆಂಗ್ಲ ಪತ್ರಿಕೆಯನ್ನು ಸರಕಾರವು ವಶಪಡಿಸಿಕೊಂಡಿದೆ. ವಿದೇಶೀಯ ಧನ ಸಹಾಯದಿಂದ ಈ ಪತ್ರಿಕೆಯು ನಡೆಯುತ್ತಿದೆ ಎಂಬ ಆರೋಪವನ್ನು ಪತ್ರಿಕೆಯ ಮೇಲೆ ಹೊರಿಸಲಾಗಿವೆ. ಈ ಪತ್ರಿಕೆಯನ್ನು ವಶಪಡಿಸಿಕೊಳ್ಳುವುದಕ್ಕಾಗಿಯೇ ಈ ಸುಗ್ರೀವಾಜ್ಞೆಯು ಹೊರಟಂತೆ ಕಾಣುತ್ತದೆ. ಪಾಕಿಸ್ತಾನ್ ಜನಕರಾದ ದಿ. ಜಿನ್ನಸಾಹೇಬರು ಈ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಈಗ, ಪ್ರಸಿದ್ಧ ಉರ್ದೂಕವಿ ಶ್ರೀ ಫಯಾಜ ಅಹಮದ ಫಯಾಜರು ಇದರ ಸಂಪಾದಕರಾಗಿದ್ದಾರೆ.

ದಿನಕರ ದೇಸಾಯಿಯವರ ಮೃತ್ಯು

ಮುಂಬಯಿಯ ಮಾಜಿ ಮಂತ್ರಿ ಶ್ರೀ ದಿನಕರ ರಾವ್ ದೇಸಾಯಿ ಅವರು ತನ್ನ ೭೦ನೆಯ ವಯಸ್ಸಿನಲ್ಲಿ ದಿವಂಗತರಾದರು. ಇವರು ದಿ| ಬಿ. ಜಿ. ಖೇರ ಮತ್ತು ಮುರಾರ್ಜಿದೇಸಾಯಿಯವರ ಮಂತ್ರಿಮಂಡಳಿಯಲ್ಲಿ ಅಪರಿಮಿತ ಸೇವೆ ಸಲ್ಲಿಸಿದ್ದರು. ಬೊಂಬಾಯಿಯಲ್ಲಿ ರೇಶನ್ ಪದ್ಧತಿಯಿರುವಾಗ ಆಹಾರ ಪರಿಸ್ಥಿತಿಯನ್ನೆದುರಿಸುವಲ್ಲಿ ಮತ್ತು ಪ್ರಾಥಮಿಕ ವಿದ್ಯಾಪ್ರಚಾರ ಕಾರ್ಯದಲ್ಲಿ ಬಹಳಷ್ಟು ಶ್ರಮಿಸಿರುವರು. ವಿಶ್ವದ ದೊಡ್ಡ ಹಾಲು ಸರಬರಾಯಿ ಕೇಂದ್ರವಾದ ಬೊಂಬಾಯಿಯ ಅರ್ರೆ ಹಾಲಿನ ಕಾಲನಿಯ ಪ್ರಧಾನ ಸಂಸ್ಥಾಪಕರೂ ಇವರಾಗಿದ್ದಾರೆ.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Director of public Instruction, Madras.

ಅಲ್ಲಲ್ಲಿಯ ಸುದ್ದಿ ಸಾರ

ಉಡುಪಿ ನಗರ ಸಭೆಯ: ವರು ತಾ ೧೭ರಂದು ನಾಡಿನ ಶ್ರೇಷ್ಠ ಸಾಹಿತಿಗಳಾದ ಶ್ರೀ ಕೋಟ ಶಿವರಾಮ ಕಾರಂತರನ್ನು ಸನ್ಮಾನಿಸಿ, ಒಂದು ಮಾನಪತ್ರವನ್ನರ್ಪಿಸಿದರು. ಅದಕ್ಕೆ ಶ್ರೀ ಕಾರಂತರು ಉತ್ತರಿಸುತ್ತಾ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯತಕ್ಕವರನ್ನು ಗೌರವಿಸುವುದು ಬದುಕಿನ ದೃಷ್ಟಿಯಿಂದ ಉಪಯೋಗಕರವಾಗಿದೆ. ಯಕ್ಷಗಾನ ಕಲೆಯ ಕುರಿತು ನಾನು ಬರೆದ ಪುಸ್ತಕಕ್ಕೆ ಬಹುಮಾನ ದೊರೆತದ್ದಕ್ಕೆ ಸಂತೋಷ ವ್ಯಕ್ತಪಡಿಸಿದ್ದೀರಿ. ನಾವು ಈ ಕಲೆಯ ಕುರಿತು ಎಷ್ಟೆಷ್ಟು ಆಳವಾಗಿ ಅರಿಯುತ್ತೇವೋ ಅದು ಅಷ್ಟಷ್ಟು ದೊಡ್ಡದಾಗಿ ತೋರುತ್ತದೆ. ಜನತೆ ಅಂಥಾ ಕಲೆಯನ್ನು ಉಳಿಸಿಕೊಂಡರೆ ಅದು ನನಗೆ ಕೊಟ್ಟ ಗೌರವಕ್ಕಿಂತ ಹೆಚ್ಚಿನದಾದೀತು ಎಂದರು. ಶ್ರೀಯುತರು ಮುಂದುವರಿಸುತ್ತಾ ನಾರ್ವೆಯ ಪುರಭವನದ ಮಾದರಿಯನ್ನು ವರ್ಣಿಸಿ, ನಮ್ಮ ದೇಶದಲ್ಲಿನ ನಗರ ಸಭೆಗಳಲ್ಲಿ ಇಂತಹ ಕಲಾ ಸೌಂದರ್ಯವು ಕಾಣದಿರುವುದಕ್ಕಾಗಿ ವಿಷಾದಿಸಿದರು. ಸಭಾರಂಭದಲ್ಲಿ ನಗರ ಸಭಾಪತಿ ಡಾ|. ಕೆ. ಎಲ್. ಪಿತಾಳರು ಮಾನ್ಯ ಅತಿಥಿಗಳನ್ನು ಸ್ವಾಗತಿಸಿ, ಶ್ರೀ ಕಾರಂತರಿಗೆ ಮಾನಪತ್ರವನ್ನರ್ಪಿಸಿದರು. ಮಾನಪತ್ರದಲ್ಲಿ ಕಾರಂತರು ನಾಡಿಗೆ ಮಾಡಿದ ಸೇವೆಯನ್ನು ಪ್ರಶಂಸಿಸಲಾಗಿತ್ತು. ಕೊನೆಯಲ್ಲಿ ನಗರಸಭಾ ಸದಸ್ಯ ಶ್ರೀ ಎ. ಜೆ. ಆಲ್ಮೆಯಿಡಯವರು ಧನ್ಯವಾದವಿತ್ತರು.

ಕೊಡಿಯಾಲಬೈಲು ಸೇವಾ ಸಮಿತಿಯ ಪ್ರಥಮ ಮಹಾ ಸಭೆಯು ತಾ. ೧೪ರಂದು ಕೊಡಿಯಾಲಗುತ್ತಿನಲ್ಲಿ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟರವರ ಅಧ್ಯಕ್ಷತೆಯಲ್ಲಿ ಜರಗಿ ಬರುವ ವರ್ಷಕ್ಕೆ ಶ್ರೀಗಳಾದ ಪ್ರಭಾಕರ ರೈ (ಅಧ್ಯಕ್ಷ) ಜಿ. ಮೊಂತೆರೊ, ಕೆ. ದೂಮಪ್ಪ ಶೆಟ್ಟಿಗಾರ (ಉಪಾಧ್ಯಕ್ಷರು) ಎಂ. ಸಂಜೀವ, ಕೆ. ವಿ. ದೇವಾಡಿಗ (ಜಂಟಿ ಕಾರ್ಯದರ್ಶಿಗಳು) ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿ (ಖಜಾಂಚಿ) ಸುಂದರ ಶೆಟ್ಟಿ, ಸಂಜೀವ ಭಂಡಾರಿ, ಮಹಾಬಲ ಶೆಟ್ಟಿ, ಸೇಸಪ್ಪ ಶೆಟ್ಟಿಗಾರ ಆನಂದ ಶೆಟ್ಟಿ ಇವರನ್ನು ಸದಸ್ಯರನ್ನಾಗಿಯೂ ಆರಿಸಲಾಯಿತು ಕೊನೆಗೆ ಶ್ರೀ ಸಂಜೀವ ಭಂಡಾರಿಯವರು ಧನ್ಯವಾದವಿತ್ತರು.

ಆಗುಂಬೆ ಘಾಟಿ ರಸ್ತೆಯನ್ನು ಎಲ್ಲ ವಾಹನಗಳು ಯಾವಾಗಲೂ ಚಲಿಸುವಂತೆ ಪುನರ್‌ರಚಿಸಬೇಕು; ಅಥವಾ ಬೇರೆ ಕಡೆಯಲ್ಲಿ ಹೊಸ ಮಾರ್ಗವನ್ನು ಮಾಡಿಕೊಡಬೇಕೆನ್ನುವ ಕುರಿತು ದಕ್ಷಿಣ ಕನ್ನಡದ ಎಂ. ಎಲ್. ಎ ಗಳಾದ ಶ್ರೀ ಯು. ಎಸ್. ನಾಯಕ್, ಶ್ರೀ ಜಗಜ್ಜೀವನದಾಸ ಶೆಟ್ಟರು ಲೋಕೋಪಯೋಗಿ(?) ಸಚಿವರಾದ ಶ್ರೀ ಚನ್ನಬಸಪ್ಪನವರನ್ನು ತಾ. ೯ರಂದು ಒತ್ತಾಯಿಸಿದರು. ಇವರ ಪ್ರಯತ್ನದಲ್ಲಿ ಶ್ರೀ ಶ್ರೀನಿವಾಸ ಶೆಟ್ಟಿ, ಎಂ. ಎಲ್. ಎ. ಯವರೂ ಭಾಗವಹಿಸಿದ್ದರು.

ತಾ. ೯ರಂದು ಸಚಿವ ಶ್ರೀ ಚನ್ನಬಸಪ್ಪನವರು ಸೋಮೇಶ್ವರಕ್ಕೆ ಬಂದಾಗ ಹೆಬ್ರಿ-ಸೋಮೇಶ್ವರ ಪಂಚಾಯತಿನ ಉಪಾಧ್ಯಕ್ಷ ಶ್ರೀ ತಿಂಗಳೆ ವಿಶ್ವನಾಥ ಹೆಗ್ಡೆಯವರು ಸಚಿವರಿಗೆ ಒಂದು ಬಿನ್ನವತ್ತಳೆಯನ್ನರ್ಪಿಸಿದರು. ನಂತರ ಸಚಿವರು ಆಗುಂಬೆ ಘಾಟಿಯ ಪರಿಶೀಲನೆ ಮಾಡಿದರು.

ಮಂಗಳೂರಿನಲ್ಲಿ ಕಳೆದೊಂದು ವಾರದಿಂದ ಜರಗುತ್ತಿರುವ 'ಭೂ ಸಮಸ್ಯೆಗಳು ಮತ್ತು ಯೋಜನೆ'ಯ ಕುರಿತಾದ ವಿಚಾರ ಗೋಷ್ಠಿಯು ತಾ. ೧೧ರಂದು ಮುಕ್ತಾಯವಾಯಿತು. ಆ ದಿನ ಶ್ರೀ ಪಿ. ವಾಸುದೇವ ರಾಯರು ಭಾಷಣ ಮಾಡುತ್ತಾ ಮೈಸೂರು ಭೂ ಸುಧಾರಣಾ ಮಸೂದೆ ೧೯೫೮ನ್ನು ರೂಪಿಸುವಾಗ ದಕ್ಷಿಣ ಕನ್ನಡದ ಭೂ ಮಾಲೀಕರಿಗೆ ಅನ್ಯಾಯವಾಗುವಂತೆ ರಚಿಸಿದೆ ಎಂದು ಹೇಳಿದರು. ಶ್ರೀ ಪಿ. ಎ. ಸಾಲ್ಡಾನ್ಹಾರವರು ಮಾತನಾಡುತ್ತಾ, ಎಂದಿನವರೆಗೆ ಜನ ಸಂಖ್ಯೆ ಹೆಚ್ಚುತ್ತಾ ಹೋಗುವುದೋ ಆ ವರೆಗೆ ಪರಿಹಾರ ಅಸಾಧ್ಯವಾದರೂ, ಸದ್ಯದ ಪದ್ಧತಿಯಲ್ಲೇ ಸುಧಾರಣೆ ಮಾಡಬೇಕೆಂದರು. ಶ್ರೀ ಎಂ. ರಾಜೀವರು ಈ ಗೋಷ್ಠಿಯಲ್ಲಿ ಭಾಗವಹಿಸಿದವರೆಲ್ಲರಿಗೂ ಧನ್ಯವಾದವಿತ್ತರು.

ಬ್ರಹ್ಮಾವರ:- ಸ್ಥಳೀಯ ವಿಜಯಾ ಬ್ಯಾಂಕಿನ ಶಾಖೆ ಕರ್ತರಾಗಿದ್ದ ಶ್ರೀ ಯತಿರಾಜ ಹೆಗ್ಡೆಯವರಿಗೆ, ಹೊಸತಾಗಿ ಕೊಳ್ಳೆಗಾಲದಲ್ಲಿ ತೆರೆಯಲಿರುವ ವಿಜಯಾ ಬ್ಯಾಂಕಿನ ಬ್ರಾಂಚಿಗೆ ವರ್ಗವಾಗಿರುವ ನಿಮಿತ್ತ ತಾ 17ರಂದು ಅವರನ್ನು ಬೀಳ್ಕೊಡುವ ಸಮಾರಂಭವು ಬ್ಯಾಂಕಿನ ಏಜಂಟ್ ಶ್ರೀ ಬಿ ಭಾಸ್ಕರ ಸೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಹೆಗ್ಡೆಯವರಿಗೆ ಒಳಿತಾಗಲಿ ಎಂದು ಶ್ರೀ ಎಚ್. ಪ್ರಭಾಕರ ಹೆಗ್ಡೆ, ಬಿ. ಪಿ. ಸೋಮಯಾಜಿ ಬಿ. ಎಲ್ ರಾವ್, ಎಸ್. ಎಸ್. ಮಕ್ಕಾಲಿ ಇವರುಗಳು ಹಾರೈಸಿದರು. ಶ್ರೀ ಚಂದ್ರಶೇಖರ ಸೆಟ್ಟರು ಆಮಂತ್ರಿತರಿಗೆ ವಂದನಾರ್ಪಣೆಯನ್ನಿತ್ತರು.

ಕಡಿಯಾಳಿ ಹಿರಿಯ ಬುನಾದಿ ಶಾಲೆಯಲ್ಲಿ ವಿದ್ಯಾರ್ಥಿ ವೇತನ ಮತ್ತು ಹಾಜರಿ ವೇತನ ವಿತರಣಾ ಸಮಾರಂಭವು ಕಳೆದ ತಾ. 16ರಂದು ಶ್ರೀಮತಿ ಟಿ. ಸುಮಿತ್ರಾ ಆರ್. ಪೈ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ಗುರುರಾಜ ಭಟ್ಟರು ಸ್ವಾಗತ ಕೋರಿದರು. ಶಾಲೆಯ 'ವಿವೇಕಾನಂದ ಸಮಾಜ'ದ ಸದಸ್ಯರು ಶಾಲೆಗೆ ದಾನವಿತ್ತ 'ಲೋಕಮಾನ್ಯ'ರ ಭಾವಚಿತ್ರವನ್ನು ಶ್ರೀ ಹಿ. ಸಂಜೀವ ಕಾಮತರು ಅನಾವರಣಗೈದರು. ಸ್ತ್ರೀ ವಿದ್ಯಾಭ್ಯಾಸದ ಅವಶ್ಯಕತೆ ಕುರಿತು ಭಾಷಣವಾದ ಮೇಲೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ದೇಶದ ಸರ್ವತೋಮುಖ ಅಭಿವೃದ್ಧಿಗೆ ಸ್ತ್ರೀ ವಿದ್ಯಾಭ್ಯಾಸವು ಅತ್ಯಗತ್ಯ ಎಂದು ಹೇಳಿ ಸರಕಾರ ಕಾರವು ಈ ದಿಸೆಯಲ್ಲಿ ಸಂಬಂಧ ಆಸಕ್ತಿ ವಹಿಸಿ ದುಡಿಯುತ್ತಿರುವುದು ಶುಭಸೂಚನೆ ಹಾಗೂ ಶ್ಲಾಘನೀಯ ಎಂದು ಹೇಳಿದರು. ಅಧ್ಯಕ್ಷರು ವೇತನಗಳನ್ನು ವಿತರಣೆ ಮಾಡಿದರು. ಮನರಂಜನೆಯ ಕಾರ್ಯಕ್ರಮಗಳೂ ಜರಗಿದುವು.

ಶಿರ್ವ ಹಿಂದೂ ಹಾಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವ ಮತ್ತು ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ ೪ರಂದು ಶ್ರೀ ವೈ. ಗೋಪಾಲರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಅಣ್ಣಯ್ಯ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯರು ಶಾಲಾ ವರದಿಯೋದಿದರು. ಅಧ್ಯಕ್ಷರ ಭಾಷಣಾನಂತರ ಮನರಂಜನೆಯ ಕಾರ್ಯಕ್ರಮಗಳಾದುವು.

ಅಂಕೋಲೆಯ ಜೈ ಹಿಂದ್ ಹೈಸ್ಕೂಲಿನ ಎ. ಸಿ. ಸಿ. ದಳದ ಪ್ರಗತಿಯನ್ನು ನೋಡಿ ಸಂತೋಷಪಟ್ಟ ಡೆಪ್ಯುಟಿ ಕಮಾಂಡರು ಇನ್ನು ಮುಂದೆ ಈ ದಳವನ್ನು 'ಜ್ಯೂನಿಯರ್ ಎನ್. ಸಿ. ಸಿ. ದಳ'ವೆಂದು ಮಾರ್ಪಡಿಸಬೇಕೆಂದು ಶಾಲೆಗೆ ವಿಶೇಷ ಭರವಸೆ ಕೊಟ್ಟಿರುವರೆಂದು ತಿಳಿಯುತ್ತದೆ.

ತಾ. ೧೦ರಂದು ಮೈಸೂರಿನ ವಿದ್ಯಾಮಂತ್ರಿ ಅಣ್ಣಾರಾವ್ ಗಣಮುಖಿಯವರು ಜೈ ಹಿಂದ್ ಹೈಸ್ಕೂಲಿನ ಕ್ರೀಡಾರಂಗದ 'ಶಂಕುಸ್ಥಾಪನೆ'ಯನ್ನು ಮಾಡಿದರು. ಈ ಹೈಸ್ಕೂಲಿಗೆ ಕ್ರೀಡಾರಂಗ ಕಟ್ಟಿಸಲು ಭಾರತ ಸರಕಾರದ ಶಿಕ್ಷಣ ಖಾತೆಯಿಂದ ೨೫ ಸಾವಿರ ರೂ.ಗಳ ವಿಶೇಷ ಸಹಾಯಧನ ಮಂಜೂರಾಗಿದೆಯೆಂದೂ ಗೊತ್ತಾಗಿದೆ.

ಬೆಳಗಾವದ ಶಹಾಪೂರದಲ್ಲಿ, ಪೋಲಿಯೊ ಅರ್ಧಾಂಗವಾಯು ಆದ ಹುಡುಗರಿಗೆ ನಿಸರ್ಗೋಪಚಾರ ಮಾಡುವ 'ಸುತಾರ ಬಾಯಿ ಪೋಲಿಯೊ ಆಶ್ರಮ'ವು ಸ್ಥಾಪಿತವಾಗಿದೆ.

ವಿವಾಹ— ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟರ ತೃತೀಯ ಪುತ್ರಿ ಚಿ. ಸೌ. ರಮಾಂಬಳನ್ನು-ಬೇಳಿಂಜೆ ಶ್ರೀ ಮೋನಪ್ಪ ಶೆಟ್ಟರ ದ್ವಿತೀಯ ಪುತ್ರ ಚಿ ವಿಠ್ಠಲನಿಗೆ ಕೊಟ್ಟು ಇದೇ ತಾ. 20—4—1959ರಲ್ಲಿ ಉಡುಪಿ ಕಡಿಯಾಳಿ ದೇವಸ್ಥಾನದಲ್ಲಿ ಬಹು ವಿಜೃಂಭಣೆಯಿಂದ ವಿವಾಹವು ನೆರವೇರಿತು.

ಉಡುಪಿ - ಮುನಿಸಿಪಲ್ ಸ್ಕೂಲ್ ಬೀಡಿನ(?) ಮತ್ತು ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ. ೧೬ರಂದು ನಗರ ಸಭಾಪತಿ ಡಾ. ಕೆ. ಎಲ್. ಪಿತಾಳರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮನರಂಜನಾ ಕಾರ್ಯಕ್ರಮಗಳನಂತರ ಧನ್ಯವಾದ ಸಮರ್ಪಣೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಕುಕ್ಕಿಕಟ್ಟೆ— ಬುನಾದಿ ಪ್ರಾಥಮಿಕ ಶಾಲೆಯ ವರ್ಧಂತ್ಯುತ್ಸವವು ತಾ. ೨೦ರಂದು ಉಡುಪಿ ನಗರ ಸಭಾಪತಿ ಡಾ. ಕೆ. ಎಲ್ ಪಿತಾಳರವರ ಹಿರಿತನದಲ್ಲಿ ಜರಗಿತು. ಶ್ರೀ ಕೆ. ನಾರಾಯಣ ಶೆಟ್ಟಿಗಾರರು ಸ್ವಸ್ತಿವಾಚನ ಮಾಡಿದರು. ನಂತರ ಅಧ್ಯಕ್ಷರ ಭಾಷಣವಾದ ಮೇಲೆ ಧನ್ಯವಾದ ಸಮರ್ಪಣೆ, ವಿವಿಧ ವಿನೋದಾವಳಿಯೂ ಆಯಿತು. ಬೆಳಿಗ್ಗೆ ಶ್ರೀ ಹಿ. ಸದಾನಂದ ತಂತ್ರಿ, ಎಮ್. ಎ. ರವರಿಂದ ಧ್ವಜಾರೋಹಣವಾಯಿತು. ಶ್ರೀ ಚಿಟ್ಪಾಡಿ ಪಂಚಿನಮನೆ ಸೀತಾರಾಮ ಶೆಟ್ಟರು ಸಿಹಿ ತಿಂಡಿ ಹಂಚಿದರು.

ಬ್ರಹ್ಮಾವರದ ಕೋಸ್ಮೋಪೊಲಿಟನ್ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ. ೧೦ರಂದು ಉಡುಪಿ ನಗರ ಸಭಾಧ್ಯಕ್ಷ ಡಾ. ಕೆ. ಎಲ್. ಪಿತಾಳರ ಹಿರಿತನದಲ್ಲಿ ಜರಗಿತು. ರೆ| ಫಾ| ಕೆ. ಕೆ. ಕುರಿಯಾಕೋಸ್‌ರವರಿಂದ ಸ್ವಾಗತ ಭಾಷಣವಾದ ತರುವಾಯ ಶಾಲಾ ಮುಖ್ಯೋಪಾಧ್ಯಾಯ ರೆ| ಫಾ| ಕೆ. ಟಿ. ವರ್ಗೀಸ್‌ರವರು ವರದಿಯನ್ನೋದಿದರು. ನಂತರ ಅಧ್ಯಕ್ಷರು ಭಾಷಣ ಮಾಡಿದರು. ಮಕ್ಕಳಿಂದ ಮನರಂಜನೆಯ ಕಾರ್ಯಕ್ರಮಗಳಾದ ತರುವಾಯ ಶ್ರೀ ಉಮೇಶರಾಯರಿಂದ ಧನ್ಯವಾದ ಸಮರ್ಪಣೆಯಾಯಿತು.

ತಾ. ೧೮ರಂದು ಇದೇ ಶಾಲೆಯ ಹಳೇ ವಿದ್ಯಾರ್ಥಿಗಳ ದಿನಾಚರಣೆಯು ಬಾರ್ಕೂರು ನೇಶನಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಪಿ. ಎಸ್. ಭೋಜರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಬಿ ದಯಾನಂದ ಪೈಗಳ ಸ್ವಾಗತ ಭಾಷಣದ ತರುವಾಯ ರೆ| ಫಾ| ಕೆ. ಟಿ. ವರ್ಗೀಸ್‌ರವರು ವರದಿಯನ್ನೋದಿದರು. ಬಹುಮಾನ ವಿತರಣೆಯಾದ ನಂತರ ಅಧ್ಯಕ್ಷರು ಭಾಷಣವಿತ್ತರು. ಹಳೇ ವಿದ್ಯಾರ್ಥಿಗಳಿಂದ ನಾಟಕಗಳು ಅಭಿನಯಿಸಲ್ಪಟ್ಟ ತರುವಾಯ ಕಾರ್ಯದರ್ಶಿಗಳಿಂದ ವಂದನಾರ್ಪಣೆಯಾಯಿತು.

ಆಯುರ್ವೇದ ಸಮ್ಮೇಲನ ಅಖಿಲ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಮಂಡಲದ ೨೩ನೆಯ ಸಮ್ಮೇಲನವು ಬರುವ ಮೇ ತಿಂಗಳ ತಾ. ೧೭, ೧೮ ಮತ್ತು ೧೯ ಈ ಮೂರು ದಿವಸಗಳಲ್ಲಿ ಉಡುಪಿಯಲ್ಲಿ ಜರಗಲಿರುವುದು. ಈ ಸಮ್ಮೇಲನದ ಅಂಗವಾಗಿ ಜರಗಲಿರುವ ಪ್ರದರ್ಶನವು ೨೧ರ ತನಕವೂ ಮುಂದುವರಿಯುವುದು. ಪ್ರಥಮ ದಿನ ಪರಿಷತ್ತಿನ ಮತ್ತು ಪ್ರದರ್ಶನದ ಉದ್ಘಾಟನೆ ಮತ್ತು ವಿವಿಧ ಸಂಭಾಷಾಪರಿಷತ್, ಎರಡನೆಯ ದಿನ ಆಯುರ್ವೇದ ಶೈಕ್ಷಣಿಕ ಸಮ್ಮೇಲನ, ಮೂರನೆ ದಿನ ಆಯುರ್ವೇದೀಯ ಸಿದ್ಧಾಂತ ಪ್ರದರ್ಶನಗಳು ನೆರವೇರುವುವು ಪ್ರತಿನಿಧಿಗಳಿಗೆ ಎಲ್ಲಾ ಅನುಕೂಲತೆಗಳನ್ನು ಒದಗಿಸಿಕೊಡಲಾಗುವುದು. ಹೆಚ್ಚಿನ ಮಾಹಿತಿಯನ್ನು ಪ್ರಧಾನ ಕಾರ್ಯದರ್ಶಿ, ಸ್ವಾಗತ ಸಮಿತಿ ಆಯುರ್ವೇದೀಯ ಸಮ್ಮೇಲನ ಇವರಿಂದ ತಿಳಿಯಬಹುದು.

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಮಕ್ಕಳ ಮಗ್ಗಿ ಪುಸ್ತಕ
(ನಯೇ ಪೈಸೆ ಕೋಷ್ಟಕ ಸಹಿತ)
ಬೆಲೆ 1ಕ್ಕೆ 0 1 0
ನವಯುಗ ಪ್ರೆಸ್, ಉಡುಪಿ.

ಚಂದಾಹಣ ಬಾಕಿ ಇರುವವರು
ದಯಮಾಡಿ ಕಳುಹಿಸಿಕೊಡ
ಬೇಕಾಗಿ ವಿನಂತಿ.

ವಿಚಾರ ಮಥನ

(೧ನೇ ಪುಟದಿಂದ)

ಮೆಚ್ಚಿದವರೂ ಸಮಸಂಖ್ಯೆಯಲ್ಲೇ ಇರುತ್ತಾರೆ. ಆದರೂ, ಶ್ರೀ ಡಲ್ಲೆಸರು ವಿಶ್ವವಿಖ್ಯಾತರಾಗಿದ್ದಾರೆ. ಪ್ರಾಯಃ ಅಮೆರಿಕೆಯ ವಿದೇಶ ಮಂತ್ರಿಯಾಗಿದ್ದು ಇವರಷ್ಟು ಪ್ರಸಿದ್ಧಿಯನ್ನು ಪಡೆದಿರುವ ವ್ಯಕ್ತಿ ಇನ್ನೊಬ್ಬರಿರಲಾರರು. ಶ್ರೀ ಡಲ್ಲೆಸರಿಗೆ ಕುತ್ತಿಗೆಯ ಕೆಳಭಾಗದಲ್ಲಿ ಅರ್ಬುದ ರೋಗವು ಅಂಟಿದ್ದು ಈ ಮೊದಲೇ ಇವರು ಉಪಚಾರ ಪಡೆದಿದ್ದರು. ಆದರೆ, ಸದ ಇದು ಉಲ್ಬಣಾವಸ್ಥೆಗೇರಿದುದರ ಕಾರಣದಿಂದಾಗಿ, ಅವರಿಗೆ ತಮ್ಮ ಕರ್ತವ್ಯವನ್ನು ಮುಂದುವರಿಸಿಕೊಂಡು ಹೋಗಲು ಶಕ್ತಿ ಇಲ್ಲದಂತಾಗಿದೆ; ಎಂತಲೇ ಅನಿವಾರ್ಯವಾಗಿ ತ್ಯಾಗಪತ್ರ ಸಲ್ಲಿಸುವಂತಾಗಿದೆ. ಅಧ್ಯಕ್ಷ ಐಸನ್ ಹಾವರರಾದರೋ ನಿರುಪಾಯರಾಗಿ ಈ ರಾಜೀನಾಮೆಯನ್ನು ಸ್ವೀಕರಿಸಲೇಬೇಕಾಗಿದೆ. ಈ ರೀತಿ ತೆರವಾದ ಸ್ಥಾನಕ್ಕೆ ಶ್ರೀ ಕ್ರಿಶ್ಚನ್ ಹರ್ಟರರು ನೇಮಿತರಾಗುವ ಸಂಭವವಿದೆ. ಐಸನ್ ಹಾವರರು ಇವರ ಹೆಸರನ್ನು ಸಿನೇಟಿಗೆ ನಿರ್ದೇಶಿಸಲಿರುವರು. ಸಿನೇಟಾದರೋ ಈ ನಾಮನಿರ್ದೇಶನವನ್ನೇ ಕಣ್ಣುಮುಚ್ಚಿ ಸ್ವೀಕರಿಸುವುದು ಸಂಭವನೀಯ.

೦೦ ೦೦

ಸ್ವತಂತ್ರ ಭಾರತದ ಸುಪ್ರಸಿದ್ಧ ಮುತ್ಸದ್ದಿಗಳ ಶ್ರೇಣಿಯಲ್ಲಿ ಅಗ್ರೇಸರ ಸ್ಥಾನವನ್ನು ಅಲಂಕರಿಸಬಹುದಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ಈಗೀಗ ರಾಷ್ಟ್ರದ ಸರಕಾರದ ಕಾರ್ಯಕ್ರಮಗಳನ್ನು ಬಲವಾಗಿ ಟೀಕೆಗೆ ಗುರಿಮಾಡಿದ್ದಾರೆ. ಸ್ವಾತಂತ್ರ್ಯ ಸಮರದ ಸೇನಾನಿಯಾಗಿ, ರಾಷ್ಟ್ರಪಿತರ ಅಚ್ಚುಮೆಚ್ಚಿನ ಪುತ್ತಳಿಯಾಗಿ, ಗವರ್ನರ ಜನರಲ್ಲರಾಗಿ, ಕೇಂದ್ರ ಮಂತ್ರಿಯಾಗಿ, ರಾಜ್ಯಪಾಲರಾಗಿ, ರಾಜ್ಯದ ಮುಖ್ಯಮಂತ್ರಿಯಾಗಿ ರಾಷ್ಟ್ರಕ್ಕೆ ಬಹುವಿಧದ ಸೇವೆ ಸಲ್ಲಿಸಿದ ರಾಜಾಜೀಯ ಮೇಲೆಯೂ ಈಗೀಗ ಟೀಕೆಗಳು ಕೇಳಿಬರುತ್ತಿವೆ. ಅವರ ಅಭಿಪ್ರಾಯಗಳು ನಮ್ಮ ರಾಷ್ಟ್ರನಾಯಕರ ತಲೆಕೊರೆಯುವ ಹುಳವಾಗಿ ಪರಿಣಮಿಸಿವೆ. ರಾಜಾಜಿಯವರು ತನಗೆ ಸತ್ಯವೆಂದು ಕಂಡುಬಂದ ವಿಷಯವನ್ನು ನಿರ್ಭೀತರಾಗಿ ಆಡುವ ಸ್ವಭಾವದವರು ಎಂತಲೇ ಅದು ನಮ್ಮ ರಾಷ್ಟ್ರನಾಯಕರಿಗೆ ಪಥ್ಯವಾಗುತ್ತಿಲ್ಲ. ರಾಜಾಜೀಯ ಅಭಿಪ್ರಾಯಗಳು ಮುದಿ ಭ್ರಾಂತಿಯಿಂದ ಕೂಡಿರುವವು ಎಂದೂ ಅವುಗಳಲ್ಲಿ ಹುರುಳಿಲ್ಲವೆಂದೂ ಅವರು ವಾದಿಸುತ್ತಾರೆ. ಆದರೆ, ರಾಷ್ಟ್ರನಾಯಕರಲ್ಲಿ ಸುಪ್ರಸಿದ್ಧರಾದವರಲ್ಲಿ ಹೆಚ್ಚಿನವರು ಮುದುಕರೇ ಆಗಿರುತ್ತಾರೆಂಬುದನ್ನು ಗಮನಿಸುವಾಗ ಈ ಮಾತಿನಲ್ಲಿ ಸತ್ಯಾಂಶವಿಲ್ಲವೆಂಬುದನ್ನು ಒಪ್ಪಲೇ ಬೇಕಾಗುತ್ತದೆ. ಇತ್ತೀಚೆಗೆ ಮದ್ರಾಸದಲ್ಲಿ ರಾಜಾಜಿ ಕಾಂಗ್ರೆಸಿನ ಇತ್ತೀಚೆಗಿನ ಕಾರ್ಯಕ್ರಮಗಳ ಮೇಲೆ ತಮ್ಮ ಬ್ರಹ್ಮಾಸ್ತ್ರವನ್ನೆಸೆದರು. ಕಾಂಗ್ರೆಸನ್ನು ಬ್ರೇಕ್ ಇಲ್ಲದ ಕೇವಲ ಕ್ಸೆಲರೇಟರ್‌ನಿಂದ ತಡೆಯಿಲ್ಲದೆ ಓಡುವ ಮೋಟಾರು ಕಾರಿಗೆ ಹೋಲಿಸಿದರು. ಈ ರೀತಿಯಾಗಿ ತಡೆಯಿಲ್ಲದೆ ಓಡುತ್ತಿರುವ ಸಂದರ್ಭದಲ್ಲಿ ದೇಶದಲ್ಲಿ ಸೈನಿಕ ಆಡಳಿತೆಯೂ ತಲೆದೋರೀತೆಂದು ಬೆದರಿಸಿದರು. ಇದಕ್ಕಾಗಿ ಕಾಂಗ್ರೆಸ್ಸು ಹಿಂದೆ ಮುಂದೆ ನೋಡದೆ ಮುಂದೆ ಮುಂದೆ ಲಂಗು ಲಗಾಮಿಲ್ಲದೆ ಧಾವಿಸುತ್ತಿರುವಾಗ ಕಡಿವಾಣ ಸೆಳೆಯಲು ಸಂಪ್ರದಾಯಿಪಕ್ಷವೊಂದು ಅಗತ್ಯವಿದೆಯೆಂದು ಪ್ರತಿಪಾದಿಸಿ, ತನ್ನ ವಯೋಮಾನದಿಂದಾಗಿ ತನಗದರ ನಾಯಕತನವನ್ನು ವಹಿಸಲಿರುವ ಅಸಹಾಯಕತನವನ್ನು ಪ್ರದರ್ಶಿಸಿದರು. ಆದರೆ, ರಾಜಾಜೀ ಏನೇ ಹೇಳಿದರೂ ಪಂಡಿತ ನೆಹರೂ ಅವರು ಅವನ್ನೆಲ್ಲಾ ಒಂದೇ ಮಾತಿನಲ್ಲಿ ಉತ್ತರಿಸಿದ್ದಾರೆ-ರಾಜಾಜೀಯ ಅಭಿಪ್ರಾಯಗಳಿಗೆ ನಮ್ಮಲ್ಲಿ ಮನ್ನಣೆಯಿದೆ; ಆದರೆ, ನನಗೂ ಅವರಿಗೂ ಅಭಿಪ್ರಾಯ ಭೇದವುಂಟಾದುದರಿಂದಲೇ ನಾವು ಬೇರೆಯಾಗಿದ್ದೇವೆ ಎಂದು! ರಾಜಾಜಿಯವರ ಅಭಿಪ್ರಾಯ ಕಾಂಗ್ರೆಸನ್ನು ಬಗ್ಗುಬಡಿಯ ಬೇಕೆಂದಿರಲಿಲ್ಲ. ಪ್ರಜಾಪ್ರಭುತ್ವದ ಗುರಿ ಮುಟ್ಟಬೇಕಾದರೆ, ಸರಕಾರಿ ಪಕ್ಷಕ್ಕೆ ತನ್ನ ತಪ್ಪನ್ನು ಮನವರಿಕೆ ಮಾಡಿಕೊಡುವ ಪ್ರಬಲವಾದ ಎಡಪಕ್ಷವೊಂದು ಬೇಕು; ಅದು ಪ್ರಜಾಪ್ರಭುತ್ವವಾದಿಯಾಗಿದ್ದು, ಕಾಂಗ್ರೆಸ್‌ನ ಮೂಲತತ್ವಗಳಿಗೆ ಸರಿಯೂದುದಿರಬೇಕು ಎಂದೇ ಇರಬೇಕು. ಸಾಮಾನ್ಯವಾಗಿ, ದೇಶದಲ್ಲಿ ಅಧಿಕ ಆಹಾರೋತ್ಪಾದನೆಯ ಆವಶ್ಯಕತೆ ಹೆಚ್ಚಿರುವಾಗ, ಅದು ಸಹಕಾರಿ ವ್ಯವಸಾಯ ಪದ್ಧತಿ ಮತ್ತು ಭೂಪರಿಮಿತಿ ಹೇರುವುದು—ಮೊದಲಾದುವುಗಳಿಂದ ಸಾಧ್ಯವೆಂದು ನಾಗಪುರ ಕಾಂಗ್ರೆಸ್ಸು ಸಾರಿದಾಗ, ರಾಜಾಜೀ ಅದನ್ನು ಒಪ್ಪುವುದಿಲ್ಲ! ಸದ್ಯದ ಮತಭೇದಗಳಿಗೆ ಇದೇ ಕಾರಣವಷ್ಟೆ? ಹಿರಿಯರ ಮಾತುಗಳನ್ನು ಅಷ್ಟು ಸುಲಭವಾಗಿ ಕಿತ್ತು ಹಾಕುವುದಕ್ಕಿಂತ ದೀರ್ಘಾಲೋಚನಾಂತರವೇ ಒಂದು ನಿರ್ಧಾರಕ್ಕೆ ಬರುವುದು ಒಳ್ಳೆಯದಲ್ಲವೆ? ತನ್ನ ಮಾತುಗಳಿಂದ ಜನತೆಯಲ್ಲಿ ಅತೃಪ್ತ ವಾತಾವರಣ ಹರಡುವುದೆಂಬ ಕಾರಣದಿಂದ ಶ್ರೀ ರಾಜಾಜೀ ಸರಕಾರದ ಮೇಲೆ ಟೀಕಿಸುವುದನ್ನು ನಿಲ್ಲಿಸುವರಂತೆ!

೦೦ ೦೦ ೦೦

ಮೈಸೂರಿನ ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರರು ಮೂರು ತಿಂಗಳ ವಿರಾಮ ಪಡೆದು ವಿದೇಶ ಸಂಚಾರದಲ್ಲಿ ತೊಡಗಿದ್ದಾರೆ. ತಮ್ಮ ಪ್ರವಾಸಸಮಯದಲ್ಲಿ ಅವರು ಅಮೆರಿಕೆ, ಯುರೋಪ ಮತ್ತು ಆಫ್ರಿಕನ್ ರಾಜ್ಯಗಳಿಗೆ ಭೇಟಿಯೀಯಲಿದ್ದಾರೆ. ಅಮೆರಿಕೆಯ ಸುಪ್ರಸಿದ್ಧ ವಿಶ್ವವಿದ್ಯಾಲಯಗಳಲ್ಲಿ ಇವರು ಭಾಷಣಗಳನ್ನು ಮಾಡಲಿರುವರೆಂದೂ ಯೇಲ ವಿಶ್ವವಿದ್ಯಾಲಯದಲ್ಲಿ "ಭಾರತೀಯ ಸೌಂದರ್ಯ ದೃಷ್ಟಿ" ಎಂಬ ವಿಷಯದಲ್ಲೂ ಚಿಕಾಗೋವಿನಲ್ಲಿ 'ಭಗವದ್ಗೀತಾ ಮತ್ತು ಭಾರತೀಯ ಸೌಂದರ್ಯದೃಷ್ಟಿ" ಎಂಬುದರ ಕುರಿತಾಗಿಯೂ ಮಾತಾಡುವರೆಂದೂ ಹ್ಯಾಂಪನ್ ಸಂಸ್ಥೆಯಲ್ಲಿ ಸಂಗೀತದ ಕುರಿತಾಗಿಯೂ ಉಪನ್ಯಾಸ ಮಾಡಲಿರುವರೆಂದೂ ಗೊತ್ತಾಗುತ್ತದೆ. ಅಮೆರಿಕೆಯ ಸುಪ್ರಸಿದ್ಧ ಶಿಕ್ಷಣ ತಜ್ಞರನ್ನೂ ಇವರು ಭೇಟಿಯಾಗುವರಂತೆ. ಭಾರತದಿಂದ ಅಮೆರಿಕೆಯ ಪ್ರವಾಸ ಕೈಗೊಂಡ ಮಹನೀಯರು ಹಲವಿದ್ದಾರೆ. ಆದರೆ, ಶ್ರೀ ಜಯಚಾಮರಾಜರ ಸಂಚಾರವು ವೈಶಿಷ್ಟ್ಯಪೂರ್ಣವಾಗಿದೆ. ಶ್ರೀ ಜಯಚಾಮರಾಜ ಒಡೆಯರರು" ಮಾಜಿ ಮೈಸೂರಿನ" ಮಹಾರಾಜರಾಗಿರುವುದೂ" ಇಂದಿನ ಮೈಸೂರಿನ" ರಾಜ್ಯಪಾಲರಾಗಿರುವುದೂ ಇವುಗಳಲ್ಲಿ ಒಂದು. ಸ್ವಯಂ ವಿದ್ಯಾಪಕ್ಷಪಾತಿಗಳಾದ ಮೈಸೂರು ಅರಸರಲ್ಲಿದ್ದ ಗುಣಗಳು ಇವರಲ್ಲೂ ಮುಂದುವರಿದು ಬಂದಿರುವುದರಿಂದ, "ವಿದ್ಯೆ ಮತ್ತು ಆಧ್ಯಾತ್ಮಿಕತೆ"ಗಳ ಬಗ್ಗೆ ಇವರು ತನ್ನ ವಿದೇಶ ಪ್ರವಾಸ ಕಾಲದಲ್ಲಿ ಕಂಡುಕೊಂಡ ಅನುಭವಗಳನ್ನು ಭಾರತೀಯರಿಗಾಗಿ ತಂದು ಅರ್ಪಿಸದೆ ಇರಲಾರರು. ಶ್ರೀಯುತರ ಪ್ರವಾಸವು ನಿರ್ವಿಘ್ನವಾಗಿ ಫಲಕಾರಿಯಾಗಲಿ ಎಂದೆಲ್ಲರೂ ಹಾರೈಸುವುದು ಸ್ವಾಭಾವಿಕ.

—ರಾಶಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು. ಸಂ. ನ.)

ಮದುವೆ ಸೀರೆ-ಲೇಖಕರು: ಶ್ರೀ ಎಸ್. ಎಲ್. ಸುಬ್ರಹ್ಮಣ್ಯಂ. ಪ್ರಕಾಶಕರು: ಕಿರಿಯರ ಪ್ರಪಂಚ, ಉಡುಪಿ. ಮಾರಾಟಗಾರರು: ನವಭಾರತ ಪುಸ್ತಕ ಭಂಡಾರ, ಉಡುಪಿ ಪುಟಗಳು: ೧೦೦. ಬೆಲೆ: ರೂ. ೧—೦೦

ಶ್ರೀ ಎಸ್. ಎಲ್. ಸುಬ್ರಹ್ಮಣ್ಯಂ ಅವರ ಸ್ವಂತ ಕೃತಿಗಳ ಮತ್ತು ಅನುವಾದಿತ ಕಥೆಗಳ ಸಂಕಲನವಿದಾಗಿದ್ದು, ಒಟ್ಟು ೧೩ ಕಥೆಗಳು ಇಲ್ಲಿವೆ. ಮೊದಲ ಕಥೆ "ಕಣ್ಣೀರು" ನಿಜವಾದ ಸತಿಯ ಸುಂದರ ಚಿತ್ರವನ್ನು ನಮ್ಮ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದೆ. ಹಿಂದಿಯ "ದೊಡ್ಡವರ ಮನೆಯ ಮಗಳು" ಎಂಬ ಕಥೆಯಲ್ಲಿ ಹಿರಿಯ ಮನೆತನದ ಹೆಣ್ಣು ಒಡೆದ ಸಂಸಾರವನ್ನೂ ಯಾವ ರೀತಿಯಲ್ಲಿ ಬೆಸೆಯಬಲ್ಲಳೆಂಬುದನ್ನು ಪ್ರತಿಪಾದಿಸುತ್ತದೆ. ಹಾಗೆಯೇ "ಪಂಚಶರಮೋಕ್ಷರ"ವು ಪಂಚಸ್ಥಾನದ ಮಹತ್ತಿಕೆಯನ್ನು ಪ್ರದರ್ಶಿಸಿದರೆ, "ಮೈನಾ"ವು "ಸೋದರರ ಕಲಹ"ವು ನೆರೆಯ ನೀರಿನಂತೆ ಒಂದು ಗಳಿಗೆ ಇದ್ದು ಮಾಯವಾಗುವುದೆಂಬುದನ್ನು ಸೂಚಿಸುತ್ತದೆ. ಕಲೆಯು ಅಮೋಘ ಮತ್ತು ಅನರ್ಘ್ಯವಾದುದು. ಅದನ್ನು ಪುರಸ್ಕಾರದಿಂದಾಗಲೀ, ಆಜ್ಞೆಯಿಂದಾಗಲೀ ಬೆಳಕಿಗೆ ತರುವುದು ಅಸಾಧ್ಯ. ಶಿಲ್ಪಿ ತನ್ನ ಕಲ್ಪನೆಗೆ ನಿಲುಕಲಾರದುದನ್ನು ಯಾವ ಕಾರಣದಿಂದಲೂ ಕೆತ್ತಲಾರನೆಂಬ ಚಿರ ಸತ್ಯ "ಶಿಲ್ಪಿ" ಕಥೆಯಲ್ಲಿ ಮೂಡಿದೆ. ಸಂಕಲನದ ಈ ಕಥೆಗಳು ಉತ್ತಮವಾಗಿದೆ. ಉಳಿದ ಕಥೆಗಳಲ್ಲಿ "ಪತಿಗೆ ಪತ್ನಿಯ ಪತ್ರ", "ಎಪ್ಪತ್ತೈದು ವರ್ಷದ ಯುವಕ", "ಮನೆ ಅಳಿಯ" "ಮದುವೆ ಸೀರೆ" ಇವು ವಾಚನೀಯವಿವೆ. ಉಳಿದ "ಸೋಲು ಗೆಲವು", "ವಿಧವೆ", "ಗಲಾಟೆಯ ಶ್ಯಾಮರಾಯರು" ಮತ್ತು ಉದರ ವೈರಾಗ್ಯ" ಸಾಮಾನ್ಯವಿವೆ.

ಬೇರೆ ಬೇರೆ ಭಾಷೆಗಳ ಕಥೆಗಳನ್ನು ಅನುವಾದಿಸುವಾಗ ಆ ಕಥೆಗಳು ಮೊದಲೇ ಅನುವಾದಿತವಾಗಿವೆಯೋ ಇಲ್ಲವೇ ಎಂದು ನೋಡಿಕೊಳ್ಳುವುದು ಉತ್ತಮ. ಉದಾಹರಣೆಗಾಗಿ "ಪಂಚಶರಮೋಕ್ಷರ" ಎಂಬುದು ಪ್ರೇಮಚಂದರ ಜನಪ್ರಿಯ ಮತ್ತು ಮರ್ಮಭೇದಕ ಕಥೆಗಳಲ್ಲಿ ಒಂದಾಗಿದ್ದು ಅದು ನಾಲ್ಕಾರು ಕಡೆ ಅನುವಾದವಾಗಿದೆ. ಇದಕ್ಕಿಂತ ಉಳಿದ ಕಥೆಗಳ ಅನುವಾದದತ್ತ ಗಮನವೀಯುವುದು ಸೂಕ್ತವೆನ್ನಬಹುದು.

ಸಂಕಲನದ ಕಥೆಗಳು ವಾಚನೀಯವೂ ಸಮಾಜದ ನೈಜಚಿತ್ರ ವರ್ಣಕವೂ ಆಗಿವೆ. ಒಂದು ಉತ್ತಮವಾದ ಕಥೆಗಳ ಸಂಕಲನವಿದು.

ದಶಮಾನ ಪದ್ಧತಿ—(ಮೆಟ್ರಿಕ್ ಪದ್ಧತಿ)—ತೂಕಗಳು. ಅಳತೆಗಳು. ಪ್ರಕಾಶಕರು: ಭಾರತ ಸರಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗ, ದಿಲ್ಲಿ—೮. ಪುಟಗಳು: ೨೮. ಬೆಲೆ: ೪೫ ನಯೇ ಪೈಸೆ.

ಭಾರತದಲ್ಲಿ ಇತ್ತೀಚೆಗೆ ದಶಮಾನ ಪದ್ಧತಿಯನ್ನು ನಾಣ್ಯಗಳಲ್ಲೂ ತೂಕ ಅಳತೆಗಳಲ್ಲೂ ವ್ಯವಹಾರಕ್ಕೆ ತರಲಾಗಿದ್ದು, ಈ ವಿಷಯದಲ್ಲಿ ಜನಸಾಮಾನ್ಯರಿಗೆ ತಕ್ಕ ಜ್ಞಾನವನ್ನೊದಗಿಸುವ ಸಲುವಾಗಿ ಈ ಪುಸ್ತಿಕೆಯು ಬೆಳಕು ಕಂಡಿದೆ. ದಶಮಾನ ಪದ್ಧತಿಯು ಭಾರತಕ್ಕೇನೂ ನೂತನವಾಗಿರದೆ, ಅದು ಅವ್ಯವಹಾರ್ಯವಾಗಿದ್ದುದರಿಂದಲೇ ಹೊಸತಾಗಿ ಕಂಡಿವೆಯಷ್ಟೆ. ಪ್ರಪಂಚದ ಅತ್ಯಧಿಕ ಸಂಖ್ಯೆಯ ರಾಷ್ಟ್ರಗಳಲ್ಲಿ ಪ್ರಚಲಿತವಿರುವ ಈ ಪದ್ಧತಿಯ ವಿವರಗಳನ್ನು ಸವಿಸ್ತಾರವಾಗಿ, ಸೋದಾಹರಣವಾಗಿ ಇಲ್ಲಿ ವಿವರಿಸಲಾಗಿದೆ. ಅಲ್ಲಲ್ಲಿ ಆವಶ್ಯಕ ಚಿತ್ರಗಳನ್ನೂ ಕೊಟ್ಟುದು ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದೆ. ದಶಮಾನ ಪದ್ಧತಿಯ ಬಗ್ಗೆ ತಿಳಿಯಬಯಸುವವರೆಲ್ಲ ಅವಶ್ಯ ನೋಡಿಕೊಳ್ಳಲೇ ಬೇಕಾದ ಎಳೆ ಹೊತ್ತಗೆ ಇದೆಂದು ಹೇಳಬಹುದು.

—ಗೋರಾ.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ಗೋ ವಿಜಯ

(ಗೋವಿನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ಕನ್ನಡ ಪುಸ್ತಕಗಳಿಗೆ—

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಪತಿತೋದ್ಧರಣ

ಪತಿತೆಯರೂ ಗೌರವದಿಂದ ಬಾಳ್ವೆನಡೆಸ ಬಹುದು.

ವ್ಯಭಿಚಾರ ಮತ್ತು ಸಾಮಾಜಿಕಾಪರಾಧಗಳಿಗೆ ಶಿಕ್ಷೆ ಅನುಭವಿಸಿ ಹೊರಬರುವವರಿಗೆ ಸುಧಾರಣಾ ಪ್ರಯತ್ನ

ಕೆಲವೇ ತಿಂಗಳ ಹಿಂದೆ ಜಾರಿಯಾದ ವೇಶ್ಯಾವೃತ್ತಿ ನಿರೋಧಕ ಕಾನೂನಿನ ಪರಿಣಾಮವಾಗಿ ಸರ್ಕಾರ ಈಗೊಂದು ಮಾನವೀಯ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಈ ಕಾನೂನು ಜಾರಿಗೆ ಬಂದ ಮೇಲೆ ಎಷ್ಟೋ ಜನ ವೇಶ್ಯೆಯರು ತಮಗಿದ್ದ ಜೀವನೋಪಾಯವನ್ನು ಕಳೆದುಕೊಂಡಿದ್ದಾರೆ. ಅವರ ಬದುಕು ಹೇಗೆ ಸಾಗಬೇಕು? ಸಮಾಜದಲ್ಲಿ ಗೌರವಯುತರಾಗಿ ಬಾಳುವುದಕ್ಕೆ ಅವರಿಗೊಂದು ಮಾರ್ಗ ತೋರಿಸಬೇಕಾಗಿದೆ.

ಈ ಸಮಸ್ಯೆಯನ್ನು ಎದುರಿಸಲು ಕೇಂದ್ರ ಸಮಾಜ ಕಲ್ಯಾಣ ಸಂಸ್ಥೆ ಪ್ರಯತ್ನಿಸುತ್ತಿದೆ; ಈ ಸಂಸ್ಥೆ ಹಾಕಿಕೊಂಡಿರುವ ಒಂದು ವಿಶೇಷ ಯೋಜನೆ ತುಂಬಾ ಸಹಕಾರಿಯಾಗಿದೆ. ವೇಶ್ಯಾಗೃಹಗಳಿಂದ ಹೊರಬರುವ ಇಲ್ಲವೆ ಕಾನೂನಿನ ಬಲದಿಂದ ರಕ್ಷಿಸಲ್ಪಡುವ ಮಹಿಳೆಯರಿಗೆ ಮಾತ್ರ ಈ ಯೋಜನೆ ಸಹಾಯಕವೆಂದೂ ಭಾವಿಸಲಾಗದು. ಇನ್ನಿತರ ಅಪರಾಧಗಳಿಗಾಗಿ ಜೈಲುವಾಸವನ್ನು ಅನುಭವಿಸಿ ಹೊರಬರುವ ಮಹಿಳೆಯರು ಮತ್ತು ಪುರುಷರಿಗೂ ಇದು ಸಹಾಯಕ.

ಸುಧಾರಣಾಕೇಂದ್ರಗಳ ಸ್ಥಾಪನೆ

ಇಂತಹ ಜನರಿಗೆ ರಕ್ಷಣೆಕೊಟ್ಟು ಅವರನ್ನು ನೈತಿಕ ಪತನದ ಅಧೋಗತಿಯಿಂದ ಉನ್ನತ ಗತಿಗೆ ತರುವ ಉದ್ದೇಶದಿಂದ ರಾಷ್ಟ್ರದ ಅದ್ಯಂತ ಒಟ್ಟು ೮೦ ಸುಧಾರಣಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು; ಈ ಪೈಕಿ ಕಡೆಯ ಪಕ್ಷ ಮೂವತ್ತು ಗೃಹಗಳಾದರೂ ಮಹಿಳೆಯರಿಗೆ ಮೀಸಲು.

ಈ ಯೋಜನೆ ಜಾರಿಗೆ ಬರಲು ತೊಡಗಿ ಎರಡು ವರ್ಷಗಳಾಗಿವೆ; ಈ ಎರಡು ವರ್ಷಗಳ ಅವಧಿಯಲ್ಲಿ ಅದು ಸಾಧಿಸಿರುವ ಪ್ರಗತಿ ತೃಪ್ತಿಕರ. ಈ ತನಕ ೪೧ ರಾಜ್ಯಮಟ್ಟದ ಸುಧಾರಣಾ ಕೇಂದ್ರಗಳೂ ೧೩೨ ಜಿಲ್ಲಾಮಟ್ಟದ ಆಶ್ರಯ ಗೃಹಗಳೂ ಸ್ಥಾಪಿತವಾಗಿದ್ದು ಈ ಪೈಕಿ ಅನೇಕವು ಈಗಾಗಲೆ ಕಾರ್ಯಾರಂಭ ಮಾಡಿವೆ.

ಈ ಸಂಸ್ಥೆಗಳಲ್ಲಿ ಆಶ್ರಯ ಪಡೆದಿರುವ ಜನರನ್ನು ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಸಬಲರನ್ನಾಗಿ ಮಾಡಿ ಅವರ ಜೀವನದಲ್ಲಿ ಹೊಸ ಬೆಳಕು ಮೂಡುವಂತೆ ಮಾಡುವುದು ಮುಖ್ಯ ಗುರಿಯಾಗಿದೆ.

ಬಂಧನ ಮುಕ್ತರಾಗುವ ಅಪ್ರಿತಸ್ಕರನ್ನು ಮೊದಲು ಜಿಲ್ಲಾಮಟ್ಟದ ಆಶ್ರಯಗೃಹಕ್ಕೆ ಸೇರಿಸಿ ಅಲ್ಲಿಂದ ರಾಜ್ಯಮಟ್ಟದ ಸುಧಾರಣಾ ಕೇಂದ್ರಕ್ಕೆ ಕಳುಹಿಸುವ ಕ್ರಮ ಅನುಸರಿಸಲ್ಪಡುತ್ತದೆ. ಜಿಲ್ಲಾ ಮಟ್ಟದ ಆಶ್ರಯಗೃಹದಲ್ಲಿ ತಾತ್ಕಾಲಿಕ ಹಾಗೂ ಮಧ್ಯವರ್ತಿ ರಕ್ಷಣೆ ಮಾತ್ರ ಲಭಿಸುತ್ತದೆ; ಇಂತಹ ೩೩೦ ಸಂಸ್ಥೆಗಳ ನಿರ್ಮಾಣ ಕಾರ್ಯ ಯೋಜನೆಯ ಗುರಿ.

ವಿಮುಕ್ತ ಅಪರಾಧಿಗಳು ಇಲ್ಲಿ ಕೆಲವು ವಾರಗಳ ಮಟ್ಟಿಗೆ ಮಾತ್ರ ಇರುತ್ತಾರೆ. ಅನಂತರ ಅವರನ್ನು ಸುಧಾರಣಾ ಕೇಂದ್ರಗಳಿಗೆ ಕಳುಹಿಸಲಾಗುತ್ತದೆ ಅಥವಾ ಅವರ ಜೀವನೋಪಾಯಕ್ಕೊಂದು ಮಾರ್ಗ ಒದಗಿಸಲಾಗುತ್ತದೆ. ಒಂದೊಂದು ಸುಧಾರಣಾ ಕೇಂದ್ರದಲ್ಲಿಯೂ ೫೦೦ ಮಂದಿಗೆ ಆಶ್ರಯ ದೊರಕುತ್ತದೆ.

ಆರ್ಥಿಕವಾಗಿ ಸ್ವಾವಲಂಬನ.

ಸುಧಾರಣಾ ಕೇಂದ್ರದಲ್ಲಿ ಅವರ ಜೀವನವನ್ನು ಸುಧಾರಿಸಲು ನಿರ್ದಿಷ್ಟ ಕಾರ್ಯಕ್ರಮವೊಂದಿರುತ್ತದೆ. ಒಂದಲ್ಲ ಒಂದು ಕೈಕಸಬು ಕಲಿಸುವುದುಒಂದುಮುಖ್ಯ ಉದ್ದೇಶವಾದರೆ, ಇದನ್ನು ಕಲಿಸಿದ ನಂತರ ಸುಧಾರಣಾ ಕೇಂದ್ರಕ್ಕೆ ಸಂಬಂಧಿಸಿದ ಕೈಕಸಬುಗಳ ಉದ್ಯೋಗ ಕೇಂದ್ರದಲ್ಲಿ ಜೀವನೋಪಾಯ ಒದಗಿಸಿ ಅವರಿಗೆ ಸಂಪಾದನೆಯ ಮಾರ್ಗ ಸೂಚಿಸಲಾಗುವುದು; ಮತ್ತು ಮುಂದೆ ಸ್ವತಂತ್ರವಾಗಿ ಉದ್ಯೋಗ ನಡೆಸಿಕೊಂಡು ಹೋಗಲೂ ಹಾದಿ ಮಾಡಿಕೊಡಲಾಗುವುದು.

ಹೀಗೆ ಆಶ್ರಯ ಪಡೆಯುವ ಮಹಿಳೆಯರಿಗೆ ಮಕ್ಕಳಿದ್ದರೆ ಅವರು ಸುಧಾರಣಾ ಕೇಂದ್ರದಲ್ಲಿಯೇ ಇರಲು ಅವಕಾಶ ಕಲ್ಪಿಸಿ ಕೊಟ್ಟು ಅವರ ಜೀವನ ಒಳ್ಳೆಯ ಹಾದಿ ತುಳಿಯಲು ಮಾರ್ಗ ಕಲ್ಪಿಸಲಾಗುವುದು.

ಈ ತನಕ ನಾಲ್ಕು ರಾಜ್ಯಗಳಲ್ಲಿ ಸುಧಾರಣಾ ಕೇಂದ್ರಗಳಿಗೆ ಸಂಬಂಧಿಸಿದ ಸಣ್ಣಪುಟ್ಟ ಉದ್ಯೋಗ ಕೇಂದ್ರಗಳ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿದೆ. ಬೇರೆ ಬೇರೆ ರಾಜ್ಯದಲ್ಲಿ ಕೆಲ ಕೆಲವು ಉದ್ಯೋಗ ಕೇಂದ್ರಗಳ ಸ್ಥಾಪನೆ ನಡೆದಿದೆ. ಈ ಉದ್ಯೋಗ ಕೇಂದ್ರಗಳ ಮೇಲ್ವಿಚಾರಣೆಯನ್ನು ಕೇಂದ್ರ ಸರ್ಕಾರದ ವಾಣಿಜ್ಯ ಹಾಗೂ ಕೈಗಾರಿಕಾ ಮಂತ್ರಿ ಶಾಖೆಯ ತಾಂತ್ರಿಕ ಅಧಿಕಾರಿಗಳು ನೋಡಿಕೊಳ್ಳುತ್ತಾರೆ. ಕಾರ್ಯಕಾರಿ ಸಮಿತಿಗಳಲ್ಲಿ ಆಯಾ ರಾಜ್ಯದ ಖಾಸಗಿ ಮಹನೀಯರು ಮತ್ತು ಮಹಿಳೆಯರು ಇರುತ್ತಾರೆ.

ಹಿಂದೆ ವೇಶ್ಯಾವೃತ್ತಿಯಲ್ಲಿದ್ದ ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವುದರ ಜೊತೆಗೆ ಅವರನ್ನು ಸಮಾಜದಲ್ಲಿ ನಿರಾತಂಕವಾಗಿ ಬೆಳೆಯಲು ಅವಕಾಶ ಕಲ್ಪಿಸುವುದೂ ಈ ಸುಧಾರಣಾ ಕೇಂದ್ರಗಳ ಒಂದು ಮುಖ್ಯ ಗುರಿ.

ವ್ಯಭಿಚಾರದ ಅಪರಾಧಿಗಳಿಗೇ ವ್ಯವಸ್ಥೆ

ಸುಧಾರಣಾ ಕೇಂದ್ರಗಳ ಮಾದರಿಯಲ್ಲಿಯೇ ಅಭಯಾಶ್ರಮಗಳ ಸ್ಥಾಪನೆಯೂ ಒಂದು ಮುಖ್ಯ ಕಾರ್ಯಕ್ರಮವಾಗಿದೆ. ವೇಶ್ಯಾವೃತ್ತಿ ಬಿಟ್ಟು ಬರುವ ಮಹಿಳೆಯರಿಗೆ ಈ ಅಭಯಾಶ್ರಮಗಳಲ್ಲಿ ರಕ್ಷಣೆ ದೊರಕುತ್ತದೆ; ಅಲ್ಲದೆ, ಸುಧಾರಣಾ ಕೇಂದ್ರದ ಮಾದರಿಯಲ್ಲಿಯೇ ಇಲ್ಲಿಯೂ ಸಹ ಕೈಕಸಬುಗಳನ್ನು ಕಲಿಯಲು ಅವಕಾಶವಿರುತ್ತದೆ. ಸುಧಾರಣಾ ಕೇಂದ್ರಗಳಿಗೂ ಅಭಯಾಶ್ರಮಗಳಿಗೂ ಇರುವ ವ್ಯತ್ಯಾಸವಾದರೂ ಇಷ್ಟೆ; ಅಭಯಾಶ್ರಮಗಳು ವ್ಯಭಿಚಾರದ ಅಪರಾಧಿಗಳಿಗಾಗಿ ಬರುವವರಿಗೇ ಮೀಸಲು, ಸುಧಾರಣಾ ಕೇಂದ್ರದಲ್ಲಿ ಸಹ ಇವರಿಗೇ ಒಂದು ಪ್ರತ್ಯೇಕ ವಿಭಾಗವಿರ್ಪಟ್ಟು ಇವರನ್ನು ನೋಡಿಕೊಳ್ಳುವ ವ್ಯವಸ್ಥೆ ಸ್ವಲ್ಪಮಟ್ಟಿಗೆ ಬೇರೆಯಾಗಿರಲು ಅವಕಾಶ ಕಲ್ಪಿಸಲಾಗುತ್ತದೆ. ವ್ಯಭಿಚಾರ ಗೃಹಗಳಲ್ಲಿ ತರುಣಿಯರು ನಾನಾರೀತಿಯ ಭೀಕರ ರೋಗಗಳಿಗೆ ಬಲಿಯಾಗಿರಬಹುದಾದ ಕಾರಣ ಇಂತಹ ಪ್ರತ್ಯೇಕ ವ್ಯವಸ್ಥೆ ಅಗತ್ಯವಾಗುತ್ತದೆ ಮತ್ತು ಅವರ ಮಾನಸಿಕ ಪ್ರವೃತ್ತಿಯೇ ಅನ್ಯರೀತಿಯಲ್ಲಿರುವ ಕಾರಣ ಇಂತಹ ಪ್ರತ್ಯೇಕ ವ್ಯವಸ್ಥೆಯ ಅವಶ್ಯಕತೆ ಕಂಡುಬಂದಿದೆ.

ಸುಧಾರಣಾ ಕೇಂದ್ರಗಳ ಸ್ವರೂಪ

ಸುಧಾರಣಾ ಕೇಂದ್ರದ ಗುರಿ ಆಶ್ರಯವನ್ನು ಮುಂದುವರಿಸಿಕೊಂಡು ಹೋಗುವುದಿಲ್ಲ. ಉದಾಹರಣೆಗೆ ಇಲ್ಲಿಗೆ ಬಂದ ಸ್ವಲ್ಪ ಕಾಲದಲ್ಲಿಯೇ ಉದ್ಯೋಗಾವಲಂಬಿಯಾಗಿ ಹಣ ಸಂಪಾದಿಸಲು ತೊಡಗುವ ವ್ಯಕ್ತಿ ತನ್ನ ಸಂಪಾದನೆಯಲ್ಲಿ ಸ್ವಲ್ಪ ಭಾಗವನ್ನು ಸುಧಾರಣಾ ಕೇಂದ್ರಕ್ಕೆ ಒಪ್ಪಿಸಬೇಕಾಗುತ್ತದೆ. ತಿಂಗಳಿಗೆ ೭೫ ರೂಪಾಯಿಗಳನ್ನು ಸಂಪಾದಿಸುವವರು ಮೂರನೆಯ ಒಂದು ಭಾಗವನ್ನೂ ರೂ. ೫೦ ಅಥವಾ ಅದಕ್ಕೂ ಹೆಚ್ಚು ಸಂಪಾದಿಸುವವರು ಅರ್ಧ ಭಾಗವನ್ನೂ ಸುಧಾರಣಾ ಕೇಂದ್ರಕ್ಕೆ ಕೊಡಬೇಕಾಗುತ್ತದೆ.

ಇಂತಹ ಸುಧಾರಣಾ ಕೇಂದ್ರಗಳ ಸ್ಥಾಪನೆ ಕಾರ್ಯ ತೃಪ್ತಿಕರವಾಗಿ ಮುಂದುವರಿಯುತ್ತಿದ್ದು ಈ ವರ್ಷ ಹೆಚ್ಚಿನ ಪ್ರಗತಿ ಸಾಧ್ಯವಾಗುವ ಮತ್ತು ಈ ಯೋಜನೆಯಿಂದ ಹೆಚ್ಚು ಜನರಿಗೆ ಪ್ರಯೋಜನ ದೊರಕುವ ನಿರೀಕ್ಷೆ ಇದೆ.

ಇತಿಹಾಸ

(೪ನೇ ಪುಟದಿಂದ)

ವುದಕ್ಕೆ ಮತ್ತು ಸಂಶೋಧನೆಗೆ ಅರ್ಹವಾಗಿದೆ.

ಮಹಾವೀರನ ಜೀವನದಿಂದ ನಾವು ಇನ್ನೊಂದು ವಿಷಯವನ್ನೂ ತಿಳಿದುಕೊಳ್ಳಬೇಕು, ವಿರೋಧಾವಲೋಕನ ಮತ್ತು ನಿಲುಬಿಂದನ್ನು ಏಕರೂಪಕ್ಕೆ ತಂದುಕೊಳ್ಳುವುದನ್ನು ನಮಗೆ ಮಹಾವೀರನೇ ಬೋಧಿಸಿದ್ದಾನೆ. ಪರರ ವಿಚಾರಗಳನ್ನು ಕರುಣಾಪೂರ್ಣ ದೃಷ್ಟಿಯಿಂದೀಕ್ಷಿಸುವಷ್ಟು ತಾಳ್ಮೆಯಿಂದಲೂ ವಿಶಾಲದೃಷ್ಟಿಯಿಂದಲೂ ನಾವು ಕಂಡುಕೊಂಡಿರಬೇಕು; ಇನ್ನೊಬ್ಬನ ದೃಷ್ಟಿಯು ತಪ್ಪಿ ಹೋಗಿದ್ದರೆ ತಮ್ಮನಿಗದು ಮೆಚ್ಚುಗೆಯೊಗದೆ ಹೋಗುವುದಾದರೂ, ಅವನ್ನು ತನ್ನ ನಿಲುವಿಗೆ ಸರಿಹೊಂದುವಂತೆ ಬೆಳೆಸಿಕೊಂಡು ಬರಬೇಕು. ಭಾರತೀಯ ಜ್ಞಾನ ಮತ್ತು ಧರ್ಮಕ್ಕೆ ಈ ಏಕೀಭವನವು ಮಹಾವೀರನು ಸಲ್ಲಿಸಿದ ಒಂದು ಮಹತ್ತರವೆನಿಸಿದ ದೇಣಿಗೆ. ಈ ಏಕೀಭವನಕ್ಕೆ ನಾವು ಸ್ವಯಂ ಮಹಾವೀರನ ಜೀವನದಿಂದಲೇ ಅನೇಕಾನೇಕ ಉದಾಹರಣೆಗಳನ್ನು ತೆಗೆದುಕೊಡಬಹುದು. ಇಂತಹ ಆದರ್ಶ ತತ್ತ್ವಗಳು ಕೇವಲ ಜೈನತ್ವ ಸೀಮಿತವಾಗಿರದೆ ಸರ್ವ ಗ್ರಹಣೀಯವಿರುತ್ತವೆ ಎಂಬುದನ್ನು ಮರೆಯಬಾರದು.

ಮಹಾವೀರನು ಜೈನ ಧರ್ಮದವನಾದರೂ ಭಾರತೀಯನು. ಎಂತಲೇ ಭಾರತೀಯರ ಕೃತಜ್ಞತಾಭರಿತ ದೃಷ್ಟಿ ಆತನ ಮೇಲೆ ಇದೆ; ಆತನುಪದೇಶಿಸಿದ ಅಹಿಂಸೆ ಭಾರತ ತುಂಬ ಪರಿಣಾಮ ಬೀರುತ್ತಿದೆ.

ಪ್ರಕಟಣೆ

ಉಡುಪಿ ಮುನಿಸಿಪಾಲಿಟಿಯ ಕೊಳದ ಪೇಟೆಯಲ್ಲಿರುವ ನಂಬ್ರ M. H. 9-4-101 ಮನೆಯು ಸಂಪೂರ್ಣವಾಗಿ ನನ್ನ ಮತ್ತು ನನ್ನ ತಮ್ಮ ವೆಂಕಟರಮಣನ ಅಧಿಕಾರದಲ್ಲಿರುತ್ತದೆ. ಈ ಮನೆಯಲ್ಲಿ ಈಗ ಮಾಧವ ನಾಯ್ಕರವರು ಇರುತ್ತಾರೆ. ಇದನ್ನು ಯಾರಿಗೂ ಪರಾಧೀನ ಮಾಡುವ ಹಕ್ಕು ಇಲ್ಲ. ಆ ಮನೆಯನ್ನು ಶೇಷಗಿರಿರವರು ಅಕ್ಕನಿಗೆ ಕೂತುಕೊಳ್ಳಲು ಮಾತ್ರ ಕೊಟ್ಟದ್ದಲ್ಲದೆ ಬೇರೆ ಯಾವ ಅಧಿಕಾರವೂ ಅವರಿಗಿರುವುದಿಲ್ಲ. ಮಾರಾಟ ಮಾಡುವ ಹಕ್ಕೂ ಅವರಿಗಿಲ್ಲ. ಆ ಮನೆಯನ್ನು ಯಾರಾದರೂ ತೆಗೆದುಕೊಂಡರೆ ಅದು ಸಿಂಧು ವಾಗಲಿಕ್ಕಿಲ್ಲ ಎಂತ ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

U. Shivarama,
3-5-992.
NARAYANGUDA.
Hyderabad. AP.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮೂಲಕ ಪಡೆಯಬಹುದು.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಜನ ಜೀವನ

ಈಡನ್ ಉದ್ಯಾನದ ಮೆಸಪೊಟೇಮಿಯನರು

ಚರ್ಮದ ದೋಣಿ, ಚರ್ಮದ ಚೀಲಗಳೇ ಇವರ ವಿಶೇಷತೆಗಳು!

ಮೆಸಪೊಟೇಮಿಯ ಎಂದರೆ ಮಧ್ಯ ಪ್ರದೇಶ. ಈ ರಾಷ್ಟ್ರವು ಟೈಗ್ರಿಸ್ ಮತ್ತು ಯುಫ್ರೆಟಿಸ್ ಎಂಬ ಎರಡು ನದಿಗಳ ಮಧ್ಯೆಯಿರುವುದರಿಂದ ಇದಕ್ಕೆ ಈ ಹೆಸರು ಬಂತು. ನಾಗರೀಕತೆಯ ಮೂಲ ಸ್ಥಾನವು ಇಲ್ಲಿರಬಹುದೆಂದು ಜನರು ಅಂದಾಜು ಮಾಡಿರುವರು. ಈಡನ್ ತೋಟವೆಂದು ಪ್ರಸಿದ್ಧಿ ಹೊಂದಿದ ಸಮೃದ್ಧಿಯಾದ ದೇವವನವು ಈ ದೇಶದಲ್ಲಿಯೇ ಇತ್ತೆಂದು ಜನರ ಊಹನೆಯಾಗಿರುವುದು. ಈಡನ್ ತೋಟವೆಂಬುದು ಸ್ವರ್ಗಸ್ಥಾನದಂತಿದ್ದು ಮಾನವರ ಆದಿ ಸ್ತ್ರೀ ಪುರುಷರಾದ ಆದಾಮ ಮತ್ತು ಈವು ಎಂಬವರು ಸುಮಾರು ೪೦೦೦ ವರುಷಗಳ ಹಿಂದೆ ಇಲ್ಲಿ ಹುಟ್ಟಿ ವಾಸಿಸಿದ್ದರೆಂದು ಕ್ರೈಸ್ತ ಜನರ ಭಾವನೆ. ಇದು ಪುರಾಣ ಕಥೆ. ಯಾಕೆಂದರೆ ಮಾನವರ ಜನ್ಮವು ಇದಕ್ಕೂ ಎಷ್ಟೋ ಮುಂಚೆ ಇದ್ದಿರಬೇಕೆಂದು ಐತಿಹಾಸಕರು ಮತ್ತು ವಿಜ್ಞಾನಿಗಳು ಹೇಳುವರು. ನಮ್ಮ ಹಿಂದೂ ಪುರಾಣದಲ್ಲಿ ಇಂಥಾದ್ದೇ ಒಂದು ವನವಿದೆಯೆಂಬ ನಂಬಿಕೆ ಅದಕ್ಕೆ ನಾವು ಇಂದ್ರನ ನಂದನವನವೆಂದು ಕರೆಯುವೆವು. ಈಗ ಈ ರಾಷ್ಟ್ರದಲ್ಲಿ ಯಾವ ಕಡೆ ಹುಡುಕಿದರೂ ಈಡನ್ ತೋಟವೆಂಬುದು ಕಣ್ಣಿಗೆ ಕಾಣಸಿಗುವುದಿಲ್ಲ. ಮತ್ತು ಆ ರಾಷ್ಟ್ರವನ್ನು ಸ್ವರ್ಗವೊಂದಲ್ಲದೆ ಬೇರಾವುದಾದರೂ ಆಗಬಹುದೆಂದು ಹೇಳಬೇಕು. ಇದೊಂದು ಮಲೆನಾಡಿನ ನಿರ್ಜನ ಪ್ರದೇಶವಾಗಿ ಕಾಣುವುದು. ಆದರೆ ಚರಿತ್ರೆಯಲ್ಲಿ ಇದೊಂದು ನೀರಾವರಿ ಪ್ರದೇಶವಾಗಿ ತುಂಬಾ ಕಾಲುವೆಗಳಿದ್ದು ಫಲವತ್ತಾದ ಭೂಮಿಯಾಗಿತ್ತೆಂದು ತಿಳಿಯುವೆವು. ಬೆಬಿಲೋನಿಯ ಮತ್ತು ಎಸ್ಸೀರಿಯ ನಾಗರೀಕತೆಯ ಮುಖ್ಯ ಠಾಣ್ಯವೆಂದು ತಿಳಿಯಬಹುದು. ಇವೆಲ್ಲಾ ನಾಶವಾಗಿ ಮರಳಿನಿಂದ ಮುಚ್ಚಿ ಹೋಗಿ ಭೂಗತವಾದ್ದರಿಂದ ಅವರ ಭಗ್ನಾವಶೇಷಗಳು ಸಹ ಈಗ ನಮ್ಮ ದೃಷ್ಟಿಗೆ ಗೋಚರಿಸವು. ತುರುಕರು ಈ ರಾಷ್ಟ್ರವನ್ನು ಬರೇ ಬಂಜರು ಭೂಮಿಯಾಗಿ ಮಾಡಿಬಿಟ್ಟರು. ಆದರೆ ಅವರು ಅಲ್ಲಿ ಕಾಲಿಡುವ ಮೊದಲೇ ಇದಕ್ಕೆ ಇಳಿಮುಖವು ಆರಂಭವಾಗಿದೆ ಎಂದು ಹೇಳುವರು.

ಈ ರಾಷ್ಟ್ರದಲ್ಲಿರುವ ಕುರ್ದುಗಳೆಂಬ ಜನರು ಬರೇ ಹೆಸರಿಗೆ ಮಾತ್ರ ಮಹಮ್ಮದೀಯರು. ಇವರೊಳಗೆ ಎರಡು ಜಾತಿಗಳಿವೆ. ಈ ಪೈಕಿ ಸಬೇಕನರು ಎಂಬುದೊಂದು ಜಾತಿ. ಇವರು ನಕ್ಷತ್ರಗಳನ್ನು ಪೂಜಿಸುವರು. ನಿತ್ಯದಲ್ಲೂ ತಾವು ಪ್ರಾರ್ಥನೆ ಮಾಡುವಾಗ ಧ್ರುವ ಮಂಡಲದ ಕಡೆಗೆ ಮುಖ ತಿರುಗಿಸಿ ಪ್ರಾರ್ಥಿಸುವರು. ಧ್ರುವ ಮಂಡಲದ ಆಚೆ ಕಡೆಯಲ್ಲಿ ದೇವರ ವಾಸಸ್ಥಾನವಿರುವುದೆಂಬ ನಂಬಿಕೆಯವರಲ್ಲಿರುವುದು. ಆದಿತ್ಯವಾರವು ಪವಿತ್ರದಿನವೆಂದೆಣಿಸಿರುವರು. ಮತ್ತು ಆ ದಿನವೇ ತಮ್ಮ ರಜಾ ದಿನವೆಂದು ಆಚರಿಸುವರು. ಇವರು ವಾರಕ್ಕೊಂದು ದಿನ ಜ್ಞಾನ ಸ್ನಾನ ಮಾಡುವರು. ಯಾವುದೋ ಒಂದು ಹಬ್ಬದಲ್ಲಿ ರೊಟ್ಟಿ ಮತ್ತು ವೈನು ಉಪಯೋಗಿಸುವುದಾದರೂ ಇವರನ್ನು ಕ್ರೈಸ್ತರೆಂದು ಪರಿಗಣಿಸಲು ಬರುವುದಿಲ್ಲ. ಬೆಪ್ಟಿಸ್ಟ್ ಜೋನ್ ಎಂಬವರಲ್ಲಿ ಇವರಿಗೆ ತುಂಬಾ ಭಕ್ತಿ ಮತ್ತು ವಿಶ್ವಾಸವಿದೆ.

ಕುರ್ದು ಜನರಲ್ಲಿ ಇನ್ನೊಂದು ಜಾತಿಯವರನ್ನು ಎಜಿಡಿಸ್ ಎಂದು ಕರೆಯುವರು. ಇವರು ಭೂತಾದಿಗಳನ್ನು ಆರಾಧಿಸುವವರು. ದೇವರಲ್ಲಿ ಇವರಿಗೆ ಭಕ್ತಿಯಿರುವುದಾದರೂ ಭೂತಗಳು ಬಹು ಬಲಿಷ್ಠವೆಂದು ಭಾವಿಸಿ ಅವುಗಳಿಗೆ ತೃಪ್ತಿಪಡಿಸುವ ಪ್ರಯತ್ನ ಮಾಡುವರು.

ತುರುಕರ ರಾಜ್ಯದ ಮುಂಚಿನ ಕಾಲದಲ್ಲಿ ಧರಿಸುವ ಕೆಂಪು ಟೋಪಿ ಇಲ್ಲಿಯೂ ಧರಿಸುವವರನ್ನು ಕಾಣಬಹುದಾದರೂ ‘ಶಾಫಿಯಾದ’’ ಎಂಬ ಇರಾಕ ಜನರ ಚಿಹ್ನೆಯಾಗಿರುವ ರಾಷ್ಟ್ರೀಯ ತಲೆದುಸ್ತು ಇವರದಾಗಿರುವುದು. ಈ ತಲೆದುಸ್ತು ಹೆಚ್ಚಾಗಿ ಹತ್ತಿಯಿಂದ ತಯಾರಿಸುವದಾಗಿದೆ. ಇದು ಹೆಗಲ ಮೇಲೆ ಜೋತಾಡುವದು ಇದರ ಮೇಲ್ಪದಿಯಲ್ಲಿ ಉಣ್ಣೆಗಳಿರುವವು, ಇದಲ್ಲದೆ ಅರಬ್ಬರನ್ನು ಗುರುತಿಸುವ ಸಿಲುವರಿಗೆಯನ್ನು ಹಾಕುವರು. ಹೆಂಗಸರು ಹೊರಗೆ ಹೋಗುವಾಗ ಒಂದು ಶಾಲನ್ನು ಅಂಗಿಯ ರೀತಿಯಲ್ಲಿ ಧರಿಸುವರು. ಹೆಂಗಸರು ಈಗ ಐರೋಪ್ಯ ಸ್ತ್ರೀಯರ ಉಡುಗೆಯ ಮಾದರಿಯನ್ನು ಅನುಸರಿಸುತ್ತಿರುವದಾದರೂ ಅನಪೇಕ್ಷಿತ ದೃಷ್ಟಿ ತಮ್ಮ ಮೇಲೆ ಬೀಳಬಾರದೆಂದು ಈ ಶಾಲನ್ನು ಹೊರಗೆ ಹೋಗುವಾಗ ತಪ್ಪದೇ ಉಪಯೋಗಿಸುವರು.

ಈ ಜನರು ಮುಂಜಾನೆಯಲ್ಲಿ ಬಹು ಬೇಗ ಏಳುವರು ಮತ್ತು ಮಧ್ಯಾಹ್ನದ ಬಿಸಿಲು ಸಮಯ ಮಲಗಿ ವಿಶ್ರಾಂತಿ ಪಡೆಯುವರು. ಇವರ ಪಾನೀಯವು ಕಾಫಿ, ದಿನಕ್ಕೆ ಅನೇಕ ಸಲ ಕುಡಿಯುವರು. ಈ ಜನರು ತಮ್ಮ ಸಮಯವನ್ನು ಹೆಚ್ಚಾಗಿ ಕಾಫಿ ಹೋಟೆಲುಗಳಲ್ಲೇ ಕಳೆಯುವರು. ಈ ಹೋಟೆಲುಗಳಲ್ಲಿ ಊರ ಜನರು ಯಾವಾಗಲೂ ತುಂಬಿರುವರು. ಇಲ್ಲಿ ಊರ ವರ್ತಮಾನ ಪಟ್ಟಾಂಗ ಸೇವೆ ಪಂಚಾಯ್ತಿಕೆಯಲ್ಲೇ ಸಮಯ ದೂಡುವರು. ಇಲ್ಲಿ ಜನರ ಬಳಕೆ ಸ್ನೇಹ ಸಮಾಚಾರ ವಿಶ್ರಾಂತಿ ಹೊಂದುವದಾಗಿದೆ. ಹೆಂಗಸರು ಮಾತ್ರ ಮನೆಯೊಳಗೆ ತಮ್ಮಷ್ಟಕ್ಕೆಯಿರುವರು.

ಸಬೇಕನ್ ಜಾತಿಯ ಕುದುಗ ಜನರು ಚಿನ್ನಿವಾರ ಕಸಬಿನವರು. ಬಹು ಚತುರದ ಕೆಲಸಮಾಡಿ ಬೆಳ್ಳಿಯ ಮೇಲೆ ಅಂಜನದ ಕಲ್ಲುಗಳನ್ನು ಚಲೋದಾಗಿ ಕೆತ್ತುವರು. ಇವರು ಬೆಲ್ಲಮ್ಮದಿಂಬ ಒಂದು ತರಹದ ಅರಬ್ಬರ ದೋಣಿಯನ್ನು ಪ್ರಾಚೀನ ಕಾಲದಿಂದಲೂ ಉಪಯೋಗಿಸುತ್ತಾ ಬಂದಿರುವರು. ಟೈಗ್ರಿಸ್ ನದಿಯನ್ನು ದಾಟುವರೆ ಅರಬ್ಬರು ಆಡಿನ ಚರ್ಮದ ಚೀಲವನ್ನು ಮಾಡಿ ಗಾಳಿ ತುಂಬಿಸಿ ಬೆಲ್ಲೂನಿನಂತೆ ಮಾಡಿ ನೀರಿನಲ್ಲಿ ಬಿಟ್ಟು ಅದರ ಮೇಲೆ ಕೂತುಕೊಂಡು ಕಾಲಿನಿಂದ ನೀರು ಬಳಿದು ಮುಂದಕ್ಕೆ ಹೋಗುವರು. ಈ ಜನರು ನೀರು ಮಾರಾಟ ಮಾಡುವರೆ ಮತ್ತು ಒಂದು ಕಡೆಯಿಂದ ಇನ್ನೊಂದು ಕಡೆಗೆ ನೀರು ಕೊಂಡು ಹೋಗುವರೆ ಆಡಿನ ಚರ್ಮದ ಚೀಲಗಳನ್ನು ಉಪಯೋಗಿಸುವರು.

ಮೆಸಪೊಟೇಮಿಯ ನದಿಗಳಲ್ಲಿ ಆಚೀಚೆಗೆ ಪಾರಾಗುವರೆ ಅಥವಾ ಸರಕುಗಳನ್ನು ಸಾಗಿಸುವರೆ ಇನ್ನೊಂದು ತರಹದ ದೊಡ್ಡ ದೋಣಿಯನ್ನು ಪುರಾತನ ಕಾಲದಿಂದ ಇವರು ಉಪಯೋಗಿಸುತ್ತಾ ಇದ್ದರು. ಈ ದೋಣಿಗೆ ಗಫಾ ಎಂದು ಹೇಳುವರು ಇದು ಹುಲ್ಲಿನಿಂದ ಮಾಡಲ್ಪಟ್ಟಿದ್ದು ಸುತ್ತಲೂ ಚರ್ಮದಿಂದ ಸುತ್ತಲ್ಪಟ್ಟು ಒಳಗೂ ಹೊರಗೂ ಗಾರೆಯ ಹಾಗೆ ಲೇಪ ಹಚ್ಚಲ್ಪಟ್ಟಿದ್ದು ನೀರು ಒಳಗೆ ಹೋಗದಂತೆ ರಾಳ ಹಚ್ಚಲ್ಪಟ್ಟಿದ್ದು. ಇದು ಬಿಲ್ಲೆಯು ಎಂಬುದಕ್ಕಿಂತ ದೊಡ್ಡದು, ದುಂಡಾಕೃತಿಯಿರುವುದು. ಕತ್ತೆ, ಕುರಿ, ಮನುಷ್ಯರನ್ನು ಮತ್ತು ಹಣ್ಣುಗಳನ್ನು ಒಂದು ಕಡೆಯಿಂದ ಇನ್ನೊಂದೆಡೆಗೆ ಒಯ್ಯಲು ಉಪಯೋಗವಾಗುವದು. ಮಾನವರು ಆದಿಯಲ್ಲಿ ನೀರಿನಲ್ಲಿ ಸಾಗಿಗೆ ಸಂಚರಕ್ಕೆ ಪ್ರಥಮ ಕಂಡುಹಿಡಿದ ರೀತಿಯೇ ಇದೆಂದು ಭಾವಿಸಬೇಕಾಗಿದೆ.

ಅರಬ್ಬಿ ಜನರು ಮರದ ಕೆಲಸದವರು. ಈ ಕೆಲಸದಲ್ಲಿ ಅವರು ತಮ್ಮ ಎರಡೂ ಕೈಗಳನ್ನೂ ಮತ್ತು ಕಾಲುಗಳನ್ನೂ ಉಪಯೋಗಿಸುವರು. ಮರದ ತುಂಡನ್ನು ಆಕಾರಕ್ಕೆ ತರುವರೆ ಕಡಾವು ಮಾಡುವರು. ತುಂಡು ತಿರುಗುವಂತೆ ಮಾಡಿ ಬಿಲ್ಲಾಕೃತಿಯ ಒಂದು ಸಾಧನವನ್ನು ಗರಗಸದ ರೀತಿಯಲ್ಲಿ ಉಪಯೋಗಿಸಿ ಎಡದ ಕಾಲು ಮತ್ತು ಕೈಗಳ ಸಹಾಯಪಡೆದು ಉಳಿಯನ್ನು ಎಡಕಾಲಿನ ಹೆಬ್ಬೆಟ್ಟಿನಿಂದ ಒತ್ತಿ ಎಡಗೈಯಿಂದ ತುಂಡಿಗೆ ಚಾಚಿ ಹಿಡಿದು ಆಕಾರ ತರುವರು.

ಈ ಊರಿನಲ್ಲಿ ಹಜಾಮರು ಬಯಲಲ್ಲಿ ಕೂತು ಕ್ಷೌರ ಮಾಡುವದಾಗಿದೆ. ಒಂದು ಕಡೆಯಲ್ಲಿ ಮುಗಿದಕೂಡಲೇ ಮತ್ತೊಂದು ಕಡೆಗೆ ಹೋಗುವರು. ಕರ್ಜೂರವು ಈ ರಾಷ್ಟ್ರದ ಮುಖ್ಯ ಉತ್ಪತ್ತಿ. ಜನರಿಗೆ ಮಾತ್ರ ಇದನ್ನು ಹೇಗೆ ಶುಚಿತ್ವದಲ್ಲಿಡಬೇಕೆಂಬ ಅರಿವೇ ಇಲ್ಲ. ಕಪಾತದೊಳಗೆ ಕರ್ಜೂರವನ್ನು ಹಾಕಿ ಬರೆ ಕಾಲಿನಿಂದ ಮೆಟ್ಟಿ ಹದಕ್ಕೆ ತರುವರು. ಕರ್ಜೂರದ ರಾಶಿಯ ಮೇಲೆ ನೊಣ ನುಸಿಗಳು ಸಾವಿರಗಟ್ಟಲೆ ಮುತ್ತಿಕೊಂಡರೂ ಅದಕ್ಕೆ ಹೆಚ್ಚಿನ ಗಮನಕೊಡುವದಿಲ್ಲ.

—ಶ್ರೀ ಸಿ.ಎಚ್. ಶೆಟ್ಟಿ, ಬೈಂದೂರು.

ಬಾಳು ಬದುಕು

(೩ನೇ ಪುಟದಿಂದ)

ಬಗೆಯ ಒಂದು ಉದಾಹರಣೆಯನ್ನು ಕೊಟ್ಟಿದ್ದಾನೆ:

“ಬಟ್ಟೆ(ದಾರಿ)ಯಲ್ಲಿ ಹೋಗುತ್ತಿಪ್ಪ ಮನುಜನೊಬ್ಬನು ಹುಲಿ, ಕಾಟುಗಿಚ್ಚು, ರಕ್ಕಸಿ, ಕಾಡಾನೆಗಳು ನಾಲ್ಕು ದಿಕ್ಕಿನಲ್ಲಿಟ್ಟಿ ಬರುತಿರಲು, ಅವಂ ಕಂಡು ಭಯದಿಂದ ಹೋಗಲು ದಿಕ್ಕುತೋರದೆ ಹಾಳು ಬಾವಿಯಂ ಕಂಡು ತಲೆಯೂರೆ ಬೀಳುವಲ್ಲಿ ಹಾವಂ ಕಂಡು ಬೀಳಲಮ್ಮದೆ ಇಲಿ ಕಡಿವ ಬಳ್ಳಿಯಂ ಹಿಡಿದು ನಿಲ್ಲಲು ಜೇನಹುಳು ಮೈನೂರುವಾಗ ಮೂಗಿನ ತುದಿಯಲೊಂದು ಹನಿ ಮಧು ಬಿಂದು ಬೀಳಲಾಗಿ ಆ ಮಧುವಂ ಕಂಡು, ಹಿರಿದಪ್ಪ ದುಃಖವೆಲ್ಲವ ಸೈರಿಸಿ ನಾಲಗೆಯಲ್ಲಿ ಆ ಮಧುವಂ ಸೇವಿಸಂತೆ........”

ಜೀವನವೆಂಬುದು ಮೃತ್ಯುವಿನ ನಡುವಲ್ಲಿಯ ಹರದಾಟವೆಂಬುದರಿಂದ ವ್ಯಕ್ತವಾಗುವುದಿಲ್ಲವೆ? ಯಕ್ಷನೋರ್ವನು “ಪ್ರಪಂಚದಲ್ಲಿ ಅತ್ಯಂತ ಮೂರ್ಖರಾದವರಾರು?” ಎಂದ ಧರ್ಮರಾಯನೊಡನೆ ಪ್ರಶ್ನಿಸಿದಾಗ, ಅವನು “ಎನನಿತ್ಯ ಸಹಸ್ರಾರು ಮಂದಿ ನಮ್ಮ ಕಣ್ಣ ಮುಂದೆ ಸಾಯುತ್ತಿರುವಾಗ, ನಾವು ಮಾತ್ರ ಅಮರರಾಗಿಯೇ ಉಳಿಯುವೆವೆಂದು ನಿಶ್ಚಿಂತೆಯಿಂದ ಇರುವವರು ಮಹಾ ಮೂರ್ಖರು”ಎಂದು ಎಂದಿದ್ದಾನೆಂದು ಮಹಾಭಾರತದಲ್ಲಿ ಉಲ್ಲೇಖವಿದೆ. ಎಂದರೆ, ಮಾನವನು ಹುಟ್ಟಿದ ದಿನದಂದೇ ಸಾಯಲು ಸಮ್ಮತಿಯಿತ್ತೇ ಜನ್ಮವೀಯುತ್ತಾನೆ. ಮೃತ್ಯುವಿನ ದವಡೆಯೆಡೆಯಲ್ಲೇ ನಡೆದು ನಡೆದು ಸಂಗದಲ್ಲಿ ಮುಳುಗೇಳುವಾತ ಹುಲ್ಲುಕಡ್ಡಿಯ ಆಶ್ರಯವನ್ನಾದರೂ ಆಶಿಸುವಂತೆ ತಾತ್ಕಾಲಿಕ ಸುಖದಿಂದಲೇ ಸಂತೃಪ್ತಿ ಹೊಂದುತ್ತಾನೆ. ಇಂತಹ ಹಾಸ್ಯಾಸ್ಪದ ನೋಟವೇ “ಜೀವನ”ವಾಗಿದೆ!

ದಿ| ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎನ್, ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2-00.

ಭಾರತದ ಕರ್ಣ

“ಭಾರತದ ಕರ್ಣನು ದಿ| ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು.”(ಪ್ರೊ| ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನುಡಿಚಿತ್ರ

ಉಕ್ಕಿನ ಮನುಷ್ಯ ಸರದಾರ ಪಟೇಲ

ಉಕ್ಕಿನ ಮನುಷ್ಯರಾದರೂ ಇವರಲ್ಲಿ ಮಾನವತೆಯು ಒಸರಿ ಬರುತಿತ್ತು.

(ಮುಂದುವರಿದುದು)

ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆ

೧೯೩೧ರಲ್ಲಿ ಕರಾಚಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಸರ್ದಾರರು ಅಧ್ಯಕ್ಷರಾಗಿ ಚುನಾಯಿತರಾದರು. ಆ ನಂತರ ಮುಂದಿನ ಎರಡು ದಶಕಗಳ ಕಾಲ ಅವರು ರಾಷ್ಟ್ರದ ಅಗ್ರ ನಾಯಕರ ಪೈಕಿ ಒಬ್ಬರಾಗಿ ಉಳಿದರು. ಮತ್ತು, ಭಾರತದ ಸ್ವಾತಂತ್ರ್ಯ ಸಾಧನೆಗೆ ರೂಪಕೊಟ್ಟ ಶಿಲ್ಪಿಗಳ ಪೈಕಿ ಒಬ್ಬರಾದರು.

ಸರ್ದಾರ್ ಪಟೇಲರ ಇನ್ನೊಂದು ದೊಡ್ಡ ಗುಣವೆಂದರೆ ಅವರು ಕಟ್ಟುನಿಟ್ಟಾಗಿ ಎಷ್ಟು ಮಾತನಾಡಬೇಕಿತ್ತೋ ಅಷ್ಟು ಮಾತ್ರ ಮಾತನಾಡುತ್ತಿದ್ದ ರೀತಿ. ಮಿತಭಾಷಿಯಾದ ಅವರು, ಮಾತನಾಡುತ್ತಿದ್ದುದಕ್ಕಿಂತ ಹೆಚ್ಚಾಗಿ ಯಾವುದನ್ನೂ ಮಾಡಿ ತೋರಿಸುತ್ತಿದ್ದರು. ಭಾಷಣದ ಹುಚ್ಚು ಅವರಿಗಿರಲಿಲ್ಲ. ಒಳ್ಳೆ ವಾಗ್ಮಿಯೆಂದು ಜನ ಪರಿಗಣಿಸುವ ರೀತಿಯ ವಾಗ್ಮಿಗಳಾಗಿರಲಿಲ್ಲ. ಆದರೂ ಅವರು ಮಾತನಾಡಿದರೆಂದರೆ ಜನರ ಮನಸ್ಸಿನ ಮೇಲೆ ಅದರಿಂದ ತುಂಬಾ ಪರಿಣಾಮವಾಗುತ್ತಿತ್ತು. ಯಾವುದನ್ನು ಹೇಳಬೇಕಾದರೂ ಅವರು ಸರಳವಾಗಿ ಮತ್ತು ನೇರವಾಗಿ ಶಬ್ದಜಾಲದ ವ್ಯಾಮೋಹವಿಲ್ಲದೆ ಹೇಳುತ್ತಿದ್ದರು. ಅವರು ನೀಡುತ್ತಿದ್ದ ಉಪಮೆಗಳೂ ಅಷ್ಟೇ ತುಂಬಾ ಒರಟಾಗಿಯೇ ಇರುತ್ತಿದ್ದವು.

'ಭಾರತದ ಉಕ್ಕಿನ ಮನುಷ್ಯ'

ಅವರನ್ನು ಜನ ಭಾರತದ ಉಕ್ಕಿನ ಮನುಷ್ಯ ಎಂದು ಕರೆಯುತ್ತಿದ್ದರು. ಆ ಮಾತು ಅವರಿಗೆ ತುಂಬಾ ಒಪ್ಪುತ್ತಿತ್ತು ಎಂದೂ ಹೇಳಬಹುದು. ಅವರು ಹಾಜರಿದ್ದಾರೆ ಎಂದರೆ ಸಾಕು, ವಾತಾವರಣಕ್ಕೆ ಒಂದು ರೀತಿಯ ಬಿಗಿ ಬರುತ್ತಿತ್ತು; ಅವರ ಅನುಯಾಯಿಗಳಿಗೆ ಎಲ್ಲಿಲ್ಲದ ಧೈರ್ಯ ಮತ್ತು ಆತ್ಮವಿಶ್ವಾಸ ಬರುತ್ತಿತ್ತು; ಸರ್ದಾರರಿಗೆ ಸೋಲೆಂಬುದೇ ಗೊತ್ತಿಲ್ಲ ಎಂಬುದು ಅವರ ದೃಢ ವಿಶ್ವಾಸ. ಮುಖ್ಯ ರಾಜಕೀಯ ಸಮಾಲೋಚನೆಗಳ ಸಮಯದಲ್ಲಿ ಅವರ ಸಮೀಪವರ್ತಿಯಾಗಿ ನಾನವರನ್ನು ಕಂಡಿದ್ದೇನೆ. ಎಂಥ ಜಟಿಲ ಸಮಸ್ಯೆಯನ್ನೂ ಬುದ್ಧಿವಂತಿಕೆಯಿಂದ ಬಹು ಸುಲಭವಾಗಿ ಅವರು ಬಿಡಿಸುತ್ತಿದ್ದರು; ಇಂತಹ ಪ್ರಯತ್ನದಲ್ಲಿ ಅವರು ವಿಫಲರಾದುದಿಲ್ಲ.

ಮಹಾತ್ಮಾ ಗಾಂಧಿ, ಅವರ ರಾಜಕೀಯ ಗುರು ಮತ್ತು ನಾಯಕರು. ಅವರು ಉತ್ತಮ ಗುಣಗಳ ಪೈಕಿ ಒಂದಾದ ಹಾಸ್ಯ ಪ್ರವೃತ್ತಿಯನ್ನು ಪಟೇಲರೂ ಬೆಳೆಸಿಕೊಂಡಿದ್ದರು. ಆದರೆ ಗಾಂಧಿಯವರ ಹಾಸ್ಯಕ್ಕೂ ಪಟೇಲರ ಹಾಸ್ಯಕ್ಕೂ ಒಂದು ವ್ಯತ್ಯಾಸವಿತ್ತು. ಜೀವನವನ್ನು ಈ ಇಬ್ಬರು ಮಹಾನಾಯಕರು ನೋಡುತ್ತಿದ್ದ ಪರಸ್ಪರ ದೃಷ್ಟಿಯೇ ಇದಕ್ಕೆ ಕಾರಣವಾಗಿತ್ತು. ಸರ್ದಾರರು ತಮ್ಮ ಅನುಯಾಯಿಗಳ ಮೇಲೆ ಪ್ರಯೋಗಿಸುತ್ತಿದ್ದ ಹಾಸ್ಯದ ಚಟಾಕಿಗಳನ್ನು "ಅಚ್ಚು ಹಾಕಲು ಯೋಗ್ಯ"ವೆನಿಸಿದ ವರ್ಗಕ್ಕೆ ಸೇರಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಅನಾಪೇಕ್ಷಿತವಾಗಿ ಅವರ ಜೊತೆಗೆ ಮಾತಿಗೆ ಕುಳಿತರೆ ಹೊಟ್ಟೆ ಹುಣ್ಣಾಗುವಷ್ಟು ನಗಬಹುದಿತ್ತು.

ಜನರ ಲೋಪದೋಷಗಳು ಅವರಿಗೆ ಚೆನ್ನಾಗಿ ತಿಳಿದಿದ್ದುವು. ಅವುಗಳನ್ನು ಅವರು ಸಹಾನುಭೂತಿಯಿಂದ ನೋಡುತ್ತಿದ್ದರೂ ಒಂದು ಕಾರ್ಯವನ್ನು ಮಾಡಿ ಮುಗಿಸುವ ಒಂದು ವಿಶಿಷ್ಟ ಕಲೆ ಅವರಿಗೆ ಗೊತ್ತಿತ್ತು. ಯಾವ ಕೆಲಸಕ್ಕೆ ಯಾರು ಯೋಗ್ಯರೆಂಬುದನ್ನು ತಿಳಿದು ಆ ಕೆಲಸವನ್ನು ಅವರಿಗೆ ವಹಿಸಿ—ಅವರನ್ನು ಸಂಪೂರ್ಣ ನಂಬುತ್ತಿದ್ದರು. ಅವರ ಆಯ್ಕೆ ಯಾವಾಗಲೂ ಸರಿಹೋಗುತ್ತಿತ್ತು. ಇದರಿಂದಾಗಿ ಅವರಲ್ಲಿ, ಪ್ರಾಯಶಃ ಇತರ ರಾಜಕಾರಣಿಗಳಿಗೆ ದುರ್ಲಭವಾಗುವಷ್ಟು ಪ್ರಮಾಣದಲ್ಲಿ, ಜನರು ಭಕ್ತಿ ವಿಶ್ವಾಸಗಳನ್ನು ಬೆಳೆಸಿಕೊಳ್ಳುತ್ತಿದ್ದರು. ಸರ್ದಾರರು ತುಂಬಾ ಜವಾಬ್ದಾರಿಗಳ ಮಧ್ಯೆಯೂ ತುಂಬಾ ಬಿಡುವಾಗಿರುವವರಂತೆ ಕಂಡುಬರುತ್ತಿದ್ದರು. ಎಷ್ಟು ಜನರನ್ನಾದರೂ ಕಾಣಲು ಅವರು ಸಿದ್ಧರಿರುತ್ತಿದ್ದರು; ಇಂತಹ ಭೇಟಿಯ ಅವಕಾಶದಿಂದಲೇ ಅವರಿಗೆ ಎಲ್ಲ ವಿಷಯ ತಿಳಿದಿರುತ್ತಿತ್ತು.

ಮಾನವೀಯ ಮೃದುಹೃದಯ

ಎಲ್ಲಕ್ಕಿಂತ ಹೆಚ್ಚಾಗಿ ಅವರ ಇಷ್ಟ ಮಿತ್ರರು ಮತ್ತು ಅನುಯಾಯಿಗಳಿಗೆ ಮೆಚ್ಚುಗೆ ಆಗುತ್ತಿದ್ದುದು ಮುಖ್ಯವಾಗಿ ಅವರ ಮಾನವೀಯ ಸ್ವಭಾವ. ಹೊರಗೆ ಕಾಣುತ್ತಿದ್ದ ಅವರ ಗಡಸು ಸ್ವಭಾವದ ಹಿಂದೆ-ಅವರ ನಿಲುವು ರೋಮನ್ನರ ವ್ಯಕ್ತಿತ್ವವನ್ನು ನೆನಪು ಮಾಡಿಕೊಡುತ್ತಿತ್ತು. ತುಂಬಾ ಮೃದುವಾದ ಹೃದಯ ಮನೆ ಮಾಡಿಕೊಂಡಿತ್ತು. ನನ್ನ ವೈಯಕ್ತಿಕ ಅನುಭವದ ಆಧಾರದ ಮೇಲೆ ಅವರ ಈ ಸ್ವಭಾವಕ್ಕೆ ಅನೇಕ ನಿದರ್ಶನಗಳನ್ನು ನೀಡಬಲ್ಲೆ. ಸಹಸ್ರಾರು ಜನರಿಗೆ ಅವರು ತಂದೆಯೋಪಾದಿಯಲ್ಲಿದ್ದರು. ಅವರ ಕಷ್ಟನಷ್ಟಗಳನ್ನು ಅವರು ತಮ್ಮ ಕಷ್ಟನಷ್ಟಗಳೆಂದೇ ಭಾವಿಸಿ ಕೆಲಸಮಾಡುತ್ತಿದ್ದರು. ಒಬ್ಬರು ತಮಗೆ ಮೆಚ್ಚುಗೆಯಾದರೆ ಸಾಕು, ಅವರು ಅವರ ಸಹಾಯಕ್ಕಾಗಿ ಏನು ಮಾಡಲೂ ಸಿದ್ಧರಿರುತ್ತಿದ್ದರು. ತಮ್ಮ ಕುಟುಂಬಕ್ಕೆ ಸೇರಿದವರನ್ನು ಕಾಣುವಂತೆಯೇ ಅವರನ್ನೂ ಕಾಣುತ್ತಾ ಅವರ ಕುಟುಂಬ ವರ್ಗದ ಸುಖ ದುಃಖಗಳನ್ನು ವಿಚಾರಿಸಿ ಕೊಳ್ಳುತ್ತಿದ್ದರು.

ಇಳಿ ವಯಸ್ಸಿನ ಕಾರಣ ಮೆಟ್ಟಿಲುಗಳನ್ನು ಹತ್ತಲು ಅವರ ಕೈಯಲ್ಲಾಗುತ್ತಿರಲಿಲ್ಲವಾದ ಸಮಯದಲ್ಲೂ ಸಹ ಅವರು ತಮ್ಮ ಇಷ್ಟ ಮಿತ್ರರ ದೇಹಸ್ಥಿತಿ ವಿಚಾರಿಸಿಕೊಂಡು ಬರಲು ಅವರ ಮನೆ ಬಾಗಿಲು ಹತ್ತಿ ಬರುತ್ತಿದ್ದರು. ಮುಂಬಯಿ ನಗರದಲ್ಲಿ ಮಹಡಿ ಮೆಟ್ಟಿಲು ಹತ್ತೇ ಹೋಗಬೇಕಾಗಿದ್ದಿತು. ಹೀಗಿದ್ದೂ ತಮ್ಮ ದೇಹಸ್ಥಿತಿ ಅವರ ಲೆಕ್ಕಕ್ಕೇ ಬರುತ್ತಿರಲಿಲ್ಲ. ತಮ್ಮ ಇಷ್ಟಮಿತ್ರರನ್ನು ನೋಡಿಕೊಂಡು ಬರಬೇಕೆಂಬ ಕರ್ತವ್ಯ ನಿಷ್ಠೆಗಿಂತಲೂ ಹೆಚ್ಚಾಗಿ ಅವರು ತಮ್ಮವರು ಎಂಬ ಅಭಿಮಾನವೇ ಇದಕ್ಕೆ ಪ್ರೇರಕ ಶಕ್ತಿಯಾಗಿದ್ದಿತು.

ಈ ದೊಡ್ಡ ಗುಣದಿಂದಾಗಿ ಅವರ ಅನುಯಾಯಿಗಳು ಯಾವತ್ತೂ ಅವರನ್ನು ಬಿಟ್ಟಿರುತ್ತಿರಲಿಲ್ಲ. ಒಮ್ಮೆ ಇಂತಹ ಬಾಂಧವ್ಯ ಬೆಳೆದರೆ ಸಾಕು, ಯಾರೂ ಅದನ್ನು ಬದಲಿಸಲು ಸಮರ್ಥರಾಗುತ್ತಿರಲಿಲ್ಲ.

ಅವರ ಹಾಸ್ಯ ಪ್ರಿಯತೆ

ಕೊನೆ ಕೊನೆಯಲ್ಲಿ ಹಾಸ್ಯದ ಚಟಾಕಿಗಳನ್ನು ಹಾರಿಸುತ್ತಾ ಕಾಲ ಕಳೆಯಬಹುದಾದಂತಹ ಸಮವಯಸ್ಸಿನ ಗೆಳೆಯರೇ ಅವರ ಪಾಲಿಗೆ ಇಲ್ಲವಾಗಿ ಅವರಿಗೆ ತುಂಬಾ ಕಷ್ಟವಾಗುತ್ತಿತ್ತು. ಆ ಹಾಸ್ಯಕ್ಕೆ ಅವಕಾಶವಿಲ್ಲದೆ ಅವರಿಗೆ ತಿಂದ ಅನ್ನವೇ ಜೀರ್ಣವಾಗುತ್ತಿರಲಿಲ್ಲ ಎಂದು ಜನ ಹೇಳುತ್ತಿದ್ದರು.

ಮುಂಬಯಿ ಮತ್ತು ಅಹಮದಾಬಾದ್ ಇವೆರಡೂ ಕಡೆ ತಮ್ಮ ಹಳೆ ಸ್ನೇಹಿತರನ್ನು ಹರಟೆಗಾಗಿ ಅವರು ಹುಡುಕಿಕೊಂಡು ಹೊರಟು ಬಿಡುತ್ತಿದ್ದರು. ದೇಹಸ್ಥಿತಿ ಸರಿಯಿಲ್ಲದೆ ನರಳುತ್ತಿದ್ದ ಸಮಯದಲ್ಲೂ ಅವರು ಈ ತಮ್ಮ ಹಾಸ್ಯ ಪ್ರವೃತ್ತಿಯಿಂದಾಗಿ ಸಂತೋಷವಾಗಿಯೇ ಇರುತ್ತಿದ್ದರು. ಅವರಂತಹ ಇನ್ನೊಬ್ಬ ವ್ಯಕ್ತಿಯಂತೂ ಸಿಗುವುದು ದುರ್ಲಭ.

(ಸಮಾಪ್ತಿ)

-ಎಸ್. ಕೆ. ಪಾಟೀಲರ ಭಾಷಣದಿಂದ

ಕಥಾ ವಿಹಾರ

(೨ನೇ ಪುಟದಿಂದ)

ಕುಸುಮಳ ಬಳಿಗೆ ಬಂದಿದ್ದಳು. ಕಾಫಿ ಕುಡಿದಾದ ಬಳಿಕ ಇಬ್ಬರೂ ಮನೆಯ ಹಿಂದಿನ ಬಂಡೆಯನ್ನೇರಿದರು. ದಿನಕರನು ಇಳಿಯುತಿದ್ದನು. ತಂಪಾದ ಗಾಳಿ ಬೀಸುತಿತ್ತು. ಈರ್ವರೂ ಬಂಡೆಯ ಮೇಲೆ ಕುಳಿತುಕೊಂಡು ಮಾತನಾಡತೊಡಗಿದರು. ಅದೆಷ್ಟು ಮಾತನಾಡಿದರೋ ತಿಳಿಯದು. ಕೊನೆಗೆ ಗಂಟೆ ಆರಾದಾಗ ಇಬ್ಬರೂ ಕೆಳಗಿಳಿದರು. ಸುಂದರಿಯು ರಾತ್ರಿ ಜಾತ್ರೆಗೆ ಬರುವುದಿಲ್ಲವೆಂದು ತಿಳಿಸಿದುದರಿಂದಾಗಿ ಕುಸುಮಳಿಗೆ ತುಂಬಾ ಬೇಸರವಾಗಿತ್ತು. "ಹಾಗಾದರೆ ಮುಂದಿನ ವರ್ಷ ಇಲ್ಲೇ ಒಟ್ಟು ಸೇರೋಣ" ಬೇಸರದಿಂದ ಕುಸುಮಳೆಂದಳು. ಆಗಲೇ ತಮ್ಮ "ತಮ್ಮ ಹಸುಗೂಸುಗಳ ಸಹಿತ" ಎಂಬುದನ್ನು ವಾಕ್ಯ ಮಧ್ಯದಲ್ಲಿ ಸೇರಿಸಿಕೊಳ್ಳಿರಿ" ಎಂದು ಬೊಬ್ಬಿಡುತ್ತಾ ಕುಸುಮಳ ತಮ್ಮ ಭಾಸ್ಕರನು ಮನೆಯ ಹಿಂದೆ ಓಡಿದನು. ಈರ್ವರು ಗೆಳತಿಯರೂ ಒಬ್ಬರನ್ನೊಬ್ಬರು ನೋಡಿಕೊಂಡರು. ನಗುವು ತಾನಾಗಿಯೇ ಹೊರಚಿಮ್ಮಿತು. ಕೊಂಚ ದೂರದ ತನಕ ಕುಸುಮಳು ಸುಂದರಿಯೊಂದಿಗೆ ಬಂದು "ಸೋದರೀ, ಇನ್ನೆಂದಿಗೂ ನಮ್ಮ ಸ್ನೇಹಲತೆಯು ಬಾಡದಿರಲಿ" ಎಂದು ಆಕೆಯ ಭುಜಗಳನ್ನು ಆಲಿಂಗಿಸಿ ಬೀಳ್ಕೊಟ್ಟಳು. "ಇನ್ನೆಂದಿಗೂ ಹಾಗಾಗದು" ಎನ್ನುತ್ತಾ ಸುಂದರಿಯು ತನ್ನೆರಡು ಕೈಗಳಿಂದಲೂ ಕುಸುಮಳ ಮುಖವನ್ನು ಹಿಡಿದು, ಸವರಿ, ಒಮ್ಮೆ ನಗಾಡಲು ಯತ್ನಿಸಿ, ಬಳಿಕ ತುಂಬಿದ ನಯನಗಳಿಂದ ತಿರತಿರುಗಿ ನೋಡುತ್ತಾ ತನ್ನ ಮನೆಯ ಕಡೆ ನಡೆದಳು. ಅಂತೆ ಬಾಡಿದ ಮುಖದಿಂದ, ತಿರುತಿರುಗಿ ನೋಡುತ್ತಾ ಕುಸುಮಳೂ ಹಿಂತಿರುಗಿದಳು. ಇಬ್ಬರ ಹೃದಯವೂ ತುಂಬಿಬಂದಿತ್ತು.

—ರಾಧಾಕೃಷ್ಣ ಯಳಚಿತ್ತಾಯ

ಅನುಭವಾಮೃತ

ಕೆಂಪು ರಕ್ತದ ಮಹತ್ತಿಕೆ

ಮತದಾನ ಮಾಡುವಾಗ ನಮ್ಮಲ್ಲಿಯ ಕ್ರಮದಂತೆ ಉದ್ದುದ್ದ ಭಾಷಣ ಬಿಗಿದವರು, ಹೆಚ್ಚೆಚ್ಚು ಕರೆ ಕಾಲುವೆ ಕಟ್ಟಿಸುವ ಆಶ್ವಾಸನವೀಯುವವರು—ಇಂಥವರನ್ನು ಆರಿಸಿ ಮತದಾನಮಾಡುವ ವಾಡಿಕೆಯಾಗಿದ್ದು—ಕೆಲವೆಡೆ—ಬಹು ಬಳಗವಂತ ಮುಖಂಡರು ಗುಟ್ಟಿನಲ್ಲಿ ಸಂಚಿ ಬಿಚ್ಚಿ ಆರಿಸಿ ಬರುವದೂ ಇದೆ. ಕೆಲ ಹಳ್ಳಿಗರಂತೂ "ಸರ್ವೇ ಜನಾಃ ಯೇನ ಗತಃ ಸಃ ಪಂಥಾಃ" ಎನ್ನುವಂತೆ ಊರಿನಲ್ಲಿ ಎಲ್ಲರೂ ಯಾವ ಗುರ್ತಿಗೆ ಮತದಾನಮಾಡುವರೆಂಬುದನ್ನು ಪರಿಚಿತರೊಡನೆ ಕೇಳಿಯೋ ಬೇರೆಯವರ ಹೇಳಿಕೆಗೆ ಮರುಳಾಗಿ ಮತದಾನಮಾಡುವದೂ ಇದೆ.

ಮಾನಸಿಂಗನ ಹೆಸರನ್ನು ನೀವು ಕೇಳಿರಬಹುದು. ಅವನ ಅಧಿಕಾರಕ್ಷೇತ್ರದಲ್ಲಿ "ಕೆಂಪು ರಕ್ತಕ್ಕೆ" ಮತದಾನದ ರೂಢಿಯಿತ್ತು! ಅವನು ತನ್ನ ರಕ್ತ ಕೆಂಪೆನ್ನುವ ಬಗ್ಗೆ ಪ್ರಚಾರಕಾರಿಯೊಬ್ಬನಿಗೆ ಬೆರಳು ಕತ್ತರಿಸಿಯೇ ತೋರಿಸಿದನಂತೆ-"ಕೆಂಪು ರಕ್ತ"ವೆಂದರೇನು ಹುರಿಯಾಳು (ಸಮಾಜದ ಬಗ್ಗೆ ಸರ್ವತರದ ತ್ಯಾಗಮಾಡಿ ಸಮಾಜ ಕಲ್ಯಾಣವನ್ನೇ ತನ್ನ ಗುರಿಯಾಗಿ ಇರಿಸಿಕೊಳ್ಳುವವನು! ನಿಜವಾದ ತ್ಯಾಗಿಗೆ ತನ್ನದು, ತಾನು, ತನ್ನ ಜೀವ ಎನ್ನುವ ಆಶೆಯಿರುವದಿಲ್ಲ. ತನ್ನ ಜನ್ಮವೇ ಸಮಾಜಸೇವೆಯೆಂದವನೆಣಿಸಬೇಕು—"ಕೆಂಪು ರಕ್ತ"ದ ಪರೀಕ್ಷೆಗೆ (ತ್ಯಾಗಿಗಳ ಪರೀಕ್ಷೆ) ತಯಾರಿರುವ ಸಮಾಜದ ಹುರಿಯಾಳುಗಳು ಆಧುನಿಕ ಭಾರತದಲ್ಲೆಷ್ಟು ಜನರಿದ್ದಾರೆ? ನಮ್ಮ ಮತದಾನ ಸಮಾಜ ಕಲ್ಯಾಣಕ್ಕಾಗಿ ಶ್ರಮಿಸುವ ತ್ಯಾಗಿಗಳಿಗೇ ಆಗಬೇಕಲ್ಲವೇ?

—ಸಿರಿಪತಿ.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ

ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-

(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA-40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

NAVAYUGA
REGD. NO. M. 3619

UDIPI, THURSDAY
23-4-1959

LICENSE NO. 31
Licensed to Post without Prepayment

ಸಹಕಾರಿ ವ್ಯವಸಾಯ

ಸಹಕಾರಿ ವ್ಯವಸಾಯ ಅವ್ಯವಹರಣೀಯ

ಬೆಂಗಳೂರಿನ ವಿಚಾರಗೋಷ್ಠಿಯಲ್ಲಿ ಪ್ರಮುಖ ನಾಯಕರ ಖಚಿತಾಭಿಪ್ರಾಯ.

ಬೆಂಗಳೂರು ೧೩— ನಾಗಪುರ ಕಾಂಗ್ರೆಸ್ ಗೊತ್ತುವಳಿಯಲ್ಲಿ ಹೇಳಿರುವಂತೆ, ಸಹಕಾರಿ ವ್ಯವಸಾಯ ಪದ್ಧತಿಯನ್ನು ಐಚ್ಛಿಕವಾಗಿ ಜಾರಿಗೆ ತರುವದು ಅಸಾಧ್ಯವೆಂದೂ ಸರಕಾರದ ಹೆಸರಿನಲ್ಲಿ ಕ್ರಮೇಣ ಸಾಮೂಹಿಕ ಪದ್ಧತಿಯನ್ನು ಜಾರಿಗೆ ತರುವ ಪ್ರಯತ್ನ ನಡೆದಿದೆಯೆಂದೂ ಇದರ ಪರಿಣಾಮವಾಗಿ ದೇಶದಲ್ಲಿ ಕಮ್ಯೂನಿಜಂ ಸ್ಥಾಪನೆಗೆ ಪ್ರಚೋದನೆ ಮಾಡಿದಂತಾಗುವದೆಂದೂ ನಿನ್ನೆ ಬೆಳಿಗ್ಗೆ ಬಸವನಗುಡಿಯಲ್ಲಿನ ಗೋಖಲೆ ಇನ್‌ಸ್ಟಿಟ್ಯೂಟಿನಲ್ಲಿ ಭೂ ಸುಧಾರಣೆ ಬಗ್ಗೆ ನಡೆದ ವಿಚಾರ ಗೋಷ್ಠಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಯಿತು.

ಈ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಿದ್ದ ಪ್ರಧಾನ ಶಿರೋಮಣಿ ಎನ್. ಮಾಧವ ರಾವ್, ಸರದಾರ ಲಾಲ್ ಸಿಂಗ್, ಶ್ರೀ ಡಿ. ವಿ. ಗುಂಡಪ್ಪ, ಶ್ರೀ ಕೆ. ಬಿ. ಜಿನರಾಜ ಹೆಗಡೆ ಮೊದಲಾದವರು ಭೂ ಸುಧಾರಣೆಯ ವಿವಿಧ ಅಂಶಗಳ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಾರಂಭದಲ್ಲಿ ಗೋಖಲೆ ಇನ್‌ಸ್ಟಿಟ್ಯೂಟಿನ ಕಾರ್ಯದರ್ಶಿಗಳಾದ ಶ್ರೀ ಡಿ. ವಿ. ಗುಂಡಪ್ಪನವರು ಎಲ್ಲರನ್ನು ಸ್ವಾಗತಿಸುತ್ತ ಭೂ ಸುಧಾರಣೆ ಮತ್ತು ವ್ಯವಸಾಯಾಭಿವೃದ್ಧಿಯನ್ನು ಕುರಿತು, ಪಕ್ಷಾತೀತ ದೃಷ್ಟಿಯಿಂದ ವಿಚಾರ ಮಾಡಿ ಸರಿಯಾದ ಮಾರ್ಗದರ್ಶನ ಮಾಡುವ ಉದ್ದೇಶದಿಂದ ಇಂದಿನ ವಿಚಾರ ಗೋಷ್ಠಿಯನ್ನು ಏರ್ಪಡಿಸಲಾಗಿದೆಯೆಂದು ಹೇಳಿದರು.

ಭೂಸುಧಾರಣೆ ಬಗ್ಗೆ ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಸೂಚಿಸುತ್ತ ಹೆಚ್ಚು ಆಹಾರ ಉತ್ಪತ್ತಿ ಮತ್ತು ಸಾಮಾಜಿಕ ನ್ಯಾಯವನ್ನುಂಟುಮಾಡುವ ಉದ್ದೇಶದಿಂದ ದೇಶದಲ್ಲಿ ಭೂ ಸುಧಾರಣೆ ಅಗತ್ಯವೆಂದು ಹೇಳಲಾಗುತ್ತಿದೆ. ಆಹಾರದ ಉತ್ಪತ್ತಿ ಹೆಚ್ಚಬೇಕೆಂಬ ವಿಷಯದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ, ಆದರೆ ಭೂಸುಧಾರಣೆಯಿಂದ, ಸಾಮಾಜಿಕ ನ್ಯಾಯ ಉಂಟಾಗುವದೇ ಎಂಬ ವಿಷಯದಲ್ಲಿ ಮಾತ್ರ ಒಮ್ಮತವಿರುವದು ಸಾಧ್ಯವಿಲ್ಲ. ಆದ್ದರಿಂದ ಈ ಎರಡೂ ಗುರಿಗಳನ್ನು ಏಕಕಾಲದಲ್ಲಿ ಸಾಧಿಸುವದು ಅಸಾಧ್ಯ. ಆದ್ದರಿಂದ ಇವುಗಳಲ್ಲಿ ಯಾವದನ್ನು ಮೊದಲು ಸಾಧಿಸಬೇಕೆಂಬುದನ್ನು ಸರಕಾರ ನಿರ್ಧರಿಸಬೇಕು. ಆಹಾರದ ಉತ್ಪತ್ತಿ ಹೆಚ್ಚಬೇಕೆಂಬ ಉದ್ದೇಶವಿದ್ದರೆ ಸಾಗುವಳಿಗೆ ಯೋಗ್ಯವಿರುವ ಎಲ್ಲಾ ಭೂಮಿಯನ್ನು ಮೊದಲು ಸಾಗುವಳಿಗೆ ತರಬೇಕು. ಆದರೆ ಕೇವಲ ಜಮೀನುಗಳ ಹಸ್ತಾಂತರ ಮಾಡಿದ ಮಾತ್ರಕ್ಕೆ ದೇಶದಲ್ಲಿ ಉತ್ಪತ್ತಿ ಹೆಚ್ಚುವದಿಲ್ಲ. ಸಾಗುವಳಿ ಮಾಡಲು ಅಸಮರ್ಥರಾದವರಿಗೆ ಜಮೀನುಗಳನ್ನು ಕೊಟ್ಟಾದರೂ ಏನು ಪ್ರಯೋಜನ? ಆದುದರಿಂದ ಸರಕಾರವು ಭೂಸುಧಾರಣೆಯನ್ನು ಜಾರಿಗೆ ತರುವಾಗ ಈ ಎಲ್ಲ ಸಂಗತಿಗಳನ್ನು ಲಕ್ಷ್ಯದಲ್ಲಿಡಬೇಕೆಂದು ಹೇಳಿದರು.

ಬಳಿಕ ಪ್ರಧಾನ ಶಿರೋಮಣಿ ಎನ್. ಮಾಧವರಾಯರ ಅಧ್ಯಕ್ಷ ಭಾಷಣವನ್ನು ಶ್ರೀ ಗುಂಡಪ್ಪನವರು ಓದಿದರು. ತಮ್ಮ ಭಾಷಣದಲ್ಲಿ ಶ್ರೀ ಮಾಧವರಾಯರು ಮೈಸೂರು ರಾಜ್ಯದಲ್ಲಿ ಅನೇಕ ವರ್ಷಗಳಿಂದ ಜಾರಿಯಲ್ಲಿರುವ ಗೇಣಿ ಕಾನೂನುಗಳು ಮತ್ತು ಅವುಗಳಿಂದಾಗುವ ಪರಿಣಾಮ, ಜತ್ತಿ ಸಮಿತಿಯ ವರದಿ ಮತ್ತು ಇತ್ತೀಚಿಗೆ ವಿಧಾನ ಸಭೆಯಲ್ಲಿ ಮಂಡಿಸಲ್ಪಟ್ಟಿರುವ ಮೈಸೂರು ಭೂ ಸುಧಾರಣೆಯ ಮಸೂದೆ ಮೊದಲಾದುವುಗಳನ್ನು ದೀರ್ಘವಾಗಿ ವಿಮರ್ಶಿಸಿದರು. ಗೇಣಿ ಕಾನೂನುಗಳು ಅಗತ್ಯವೆಂದು ಒಪ್ಪಿಕೊಂಡರೂ, ಗೇಣಿಯನ್ನು ರದ್ದು ಮಾಡುವಾಗ ಜಮೀನುಗಳ ಮಾಲೀಕರಿಗೆ, ನ್ಯಾಯವಾಗಿ ಸಲ್ಲಬೇಕಾಗಿರುವ ಹಕ್ಕುಬಾಧ್ಯತೆಗಳನ್ನು ಹತ್ತಿಕ್ಕಬಾರದು. ಸ್ವಂತ ಸಾಗುವಳಿ ಮಾಡಲು ಅಪೇಕ್ಷಿಸುವ ಜಮೀನುದಾರರಿಗೆ ಯಾವದೇ ರೀತಿಯಲ್ಲಿ ಅಡ್ಡಿಯನ್ನುಂಟುಮಾಡಬಾರದೆಂದು ಶ್ರೀ ಮಾಧವ ರಾಯರು ಹೇಳಿದರಲ್ಲದೆ, ಜಮೀನುಗಳನ್ನು ಬಿಟ್ಟು ಕೊಟ್ಟ ಮಾಲೀಕರಿಗೆ ನ್ಯಾಯವಾದ ಪರಿಹಾರವನ್ನು ಕೊಡಬೇಕೆಂದು ತಿಳಿಸಿದರು.

ಸಹಕಾರಿ ವ್ಯವಸಾಯ ಅಸಾಧ್ಯ

ಸಹಕಾರಿ ವ್ಯವಸಾಯ ಪದ್ಧತಿಯ ಬಗ್ಗೆ ಮಾತನಾಡುತ್ತ ಶ್ರೀ ಮಾಧವರಾಯರು, ಈ ವಿಚಾರದಲ್ಲಿ ಒತ್ತಾಯ ಮಾಡುವದಿಲ್ಲವೆಂದೂ, ರೈತರು ತಾವಾಗಿಯೇ ಮುಂದೆ ಬಂದು ಸಹಕಾರಿ ಸಂಘಗಳನ್ನು ಸ್ಥಾಪಿಸಿಕೊಳ್ಳಬಹುದೆಂದೂ ಕಾಂಗ್ರೆಸ್ ಮುಖಂಡರು ಪದೇ ಪದೇ ಹೇಳುತ್ತಿರುವರು. ಮೈಸೂರು ಭೂಸುಧಾರಣೆ ಮಸೂದೆಯಲ್ಲಿ ಸಹ, ಗೇಣಿದಾರರು ಅಥವಾ ಜಮೀನುದಾರರು ತಾವಾಗಿಯೇ ಮುಂದೆ ಬಂದು ಸಂಘಗಳನ್ನು ಕಟ್ಟಿಕೊಳ್ಳಬೇಕೆಂದು ಹೇಳಿದೆ. ಇದನ್ನೆಲ್ಲ ನೋಡಿದರೆ ಸಹಕಾರಿ ವ್ಯವಸಾಯದ ಬಗ್ಗೆ ಯಾರೂ ಒತ್ತಾಯ ಮಾಡಲಾರರೆಂಬ ಭಾವನೆ ಕಂಡು ಬರಬಹುದು. ಆದರೆ ಸಹಕಾರಿ ಪದ್ಧತಿಯಿಂದ ವ್ಯವಸಾಯ ಮಾಡುವವರಿಗೆ ಕೆಲವು ವಿಶೇಷ ರಿಯಾಯಿತಿಗಳನ್ನು ಕೊಡುವುದಾಗಿಯೂ ಸರಕಾರ ಹೇಳಿದೆ. ಒಂದು ಹಳ್ಳಿಯಲ್ಲಿ ಸೊಸೈಟಿಗೆ ಸೇರಿದವರಿಗೆ ಕೆಲವು ರಿಯಾಯಿತಿಗಳನ್ನು ಕೊಟ್ಟು ಬೇರೆಯವರಿಗೆ ಕೊಡದಿದ್ದರೆ ಪಕ್ಷಪಾತವಾಡಿದಂತಾಗುವುದಿಲ್ಲವೆ? ಇದು ರಾಜ್ಯಾಂಗಕ್ಕೆ ವಿರೋಧವಲ್ಲವೆ? ಇದು ಅಪ್ರತ್ಯಕ್ಷ ಒತ್ತಾಯವಲ್ಲವೆ? ಎಂದು ಕೇಳಿದರು.

ಕಮ್ಯೂನಿಜಂ ದಾರಿ

ಸಹಕಾರಿ ಪದ್ಧತಿಯು ಕ್ರಮೇಣ ಕಮ್ಯೂನಿಜಂ ತತ್ವಕ್ಕೆ ದಾರಿ ಮಾಡಿಕೊಡುವದೆಂದೂ ಇದರಿಂದ ದೇಶದಲ್ಲಿ ಅನೇಕ ತೊಡಕುಗಳು ಉಂಟಾಗುವವೆಂದೂ ಶ್ರೀ ಮಾಧವರಾಯರು ಎಚ್ಚರಿಸಿದರು. ಈ ಪದ್ಧತಿ ಭಾರತದಲ್ಲಿ ಹಿಂದೆ ಯಾವಾಗಲೂ ಯಶಸ್ವಿಯಾಗಿಲ್ಲ, ಮುಂದೆ ಆಗುವದೂ ಇಲ್ಲ, ಇಷ್ಟೇ ಅಲ್ಲ, ಪ್ರಪಂಚದ ಬೇರೆ ಯಾವ ದೇಶದಲ್ಲಿಯೂ ಇದು ಯಶಸ್ವಿಯಾಗಿಲ್ಲ ಎಂದು ಹೇಳಿ ಶ್ರೀ ಮಾಧವರಾಯರು, ವ್ಯವಸಾಯದ ಅಭಿವೃದ್ಧಿಗೆ ಸಹಕಾರಿ ಸಂಘಗಳ ಸ್ಥಾಪನೆ ಅಗತ್ಯವಾದರೂ ಬಹಳ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕೆಂದೂ ಅವಸರ ಮಾಡಿದರೆ ಅನಿಷ್ಟ ಪರಿಣಾಮವಾಗುವದೆಂದೂ ಅವರು ಹೇಳಿದರು.

ಸರದಾರ ಲಾಲ್‌ಸಿಂಗ್‌ರ ಎಚ್ಚರಿಕೆ

ಅನಂತರ ಅಖಿಲ ಭಾರತ ಕೃಷಿಕರ ಫೆಡರೇಷನ್ನಿನ ಅಧ್ಯಕ್ಷರಾದ ಸರದಾರ್ ಲಾಲ್ ಸಿಂಗ್‌ರು ಮಾತಾಡಿ, ಸದ್ಯದ ಭೂ ಸುಧಾರಣೆಯ ಕ್ರಮಗಳಿಂದ ದೇಶಕ್ಕೆ ಖಂಡಿತ ಒಳ್ಳೆಯದಾಗುವದಿಲ್ಲವೆಂದೂ ಇವುಗಳ ಪರಿಣಾಮವಾಗಿ ದೇಶದಲ್ಲಿ ಆಹಾರದ ಉತ್ಪತ್ತಿ ಕಡಿಮೆಯಾಗುವದಲ್ಲದೇ ಜನಸಾಮಾನ್ಯರಲ್ಲಿ ಅಸಂತೋಷ ಉಂಟಾಗುವದೆಂದೂ ಎಚ್ಚರಿಸಿದರು.

ಇಂದು ನಮ್ಮ ದೇಶದಲ್ಲಿ ವ್ಯವಸಾಯವು ಕೇವಲ ಬಡವರ ಮತ್ತು ಅಜ್ಞ ಜನರ ಕೈಯಲ್ಲಿದೆ. ಈ ಉದ್ಯಮಕ್ಕೆ ಅಗತ್ಯವಾಗಿ ಬೇಕಾಗುವ ಬಂಡವಾಳವನ್ನು ಒದಗಿಸುವ ಶಕ್ತಿಯಾಗಲೀ ಯೋಗ್ಯತೆಯಾಗಲೀ ಅವರಿಗಿಲ್ಲ ಇಷ್ಟೇ ಅಲ್ಲ, ಆಧುನಿಕ ಪದ್ಧತಿಗಳ ಪರಿಜ್ಞಾನವೂ ಅವರಿಗಿಲ್ಲ. ಈ ಕಾರಣದಿಂದಲೇ ನಾವು ವ್ಯವಸಾಯದಲ್ಲಿ ಬಹಳ ಹಿಂದುಳಿದಿದ್ದೇವೆ. ಪರದೇಶಗಳಲ್ಲಿ ಆಗುವ ಉತ್ಪತ್ತಿಯಲ್ಲಿ ಕಾಲು ಭಾಗದಷ್ಟು ಸಹ ನಮ್ಮಲ್ಲಿ ಆಗುತ್ತಿಲ್ಲ. ಈ ದಸ್ಥಿತಿಯ ನಿವಾರಣೆಯಾಗಲು ಸರಕಾರ ಮೊದಲು ಕಾರ್ಯೋನ್ಮುಖವಾಗಬೇಕು. ಬಂಜರು ಭೂಮಿಯನ್ನು ಸಾಗುವಳಿಗೆ ತರಬೇಕು. ಪ್ರತಿ ಎಕರೆಗೆ ಉತ್ಪತ್ತಿ ಹೆಚ್ಚುವಂತೆ ಪ್ರಯತ್ನಿಸಬೇಕು. ನೀರಾವರಿ ಪ್ರದೇಶಗಳಲ್ಲಿ ಸಾಗುವಳಿಗೆ ಯೋಗ್ಯವಿರುವ ಪ್ರತಿಯೊಂದು ಎಕರೆ ಪ್ರದೇಶವನ್ನು ಉಪಯೋಗಿಸಿಕೊಳ್ಳಬೇಕು ಎಂದು ಹೇಳಿದರು.

ಸಹಕಾರಿ ಪದ್ಧತಿಯ ವ್ಯವಸಾಯವು ಪ್ರಪಂಚದಲ್ಲಿ ಎಲ್ಲಿಯೂ ಯಶಸ್ವಿಯಾಗಿಲ್ಲವೆಂದು ಭಾರತದಲ್ಲಿ ಸಹ ಯಶಸ್ವಿಯಾಗುವ ಲಕ್ಷಣವಿಲ್ಲವೆಂದು ಸರ್ದಾರ್ ಲಾಲ್‌ಸಿಂಗ್‌ರು ಹೇಳಿದರು. ಸಹಕಾರಿ ಪದ್ಧತಿ ಮತ್ತು ಸಾಮೂಹಿಕ ವ್ಯವಸಾಯ ಪದ್ಧತಿಗಳಲ್ಲಿ ಏನೂ ವ್ಯತ್ಯಾಸವಿಲ್ಲ. ಈ ವ್ಯತ್ಯಾಸವನ್ನು ಗಮನಿಸದೆ ಕಾಂಗ್ರೆಸ್ಸಿನವರು ಪ್ರಚಾರ ಮಾಡುತ್ತಿದ್ದಾರೆ. ಸಹಕಾರಿ ವ್ಯವಸಾಯದ ಹೆಸರಿನಲ್ಲಿ ದೇಶವನ್ನು ಕಮ್ಯೂನಿಜಂನ ಕಡೆಗೆ ಒಯ್ಯುತ್ತಿದ್ದಾರೆಂದು ಹೇಳಿದರು.

ಕೊನೆಯಲ್ಲಿ ಅವರು ನ್ಯಾಯವಾದ ಭೂಸುಧಾರಣೆಗಳಿಗೆ ತಾವು ವಿರೋಧಮಾಡುವುದಿಲ್ಲವೆಂದೂ ಗೇಣಿದಾರರ ಹಕ್ಕುಬಾಧ್ಯತೆಗಳನ್ನು ಮನ್ನಿಸುವುದು ವ್ಯವಸಾಯದ ಪದ್ಧತಿಯನ್ನು ಉತ್ತಮಗೊಳಿಸುವುದು, ಬಂಜರು ಭೂಮಿಗಳನ್ನು ಸಾಗುವಳಿಗೆ ತರುವುದು ಇವೇ ಮೊದಲಾದ ಕಾರ್ಯಕ್ರಮಗಳನ್ನು ಸರಕಾರ ಕೈಗೊಂಡರೆ, ತಾವು ಹೃತ್ಪೂರ್ವಕ ಸ್ವಾಗತಮಾಡುವುದಾಗಿಯೂ ಹೇಳಿದರು.

ಮದುವೆಗಳು ಜರಗತಕ್ಕ ಸಮಯವು ಸಮೀಪಿಸಿದೆ;

'ಮದುವೆ ಸೀರೆ'

ಇದೀಗ ಪ್ರಕಟವಾಗಿದೆ!

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಎರಡು ಹೊಸ ಶಾಖೆಗಳು

ಮೈಸೂರು ರಾಜ್ಯದ ಆರ್ಥಿಕ ಪ್ರಗತಿಗೆ ಅನುಕೂಲವಾಗುವಂತೆ
ನಮ್ಮ ಬೇಂಕಿನ ಇನ್ನೆರಡು ಹೊಸ ಶಾಖೆಗಳು
ಎಪ್ರಿಲ್ ೧೬, ೧೯೫೯ರಂದು ತೆರೆಯಲ್ಪಟ್ಟಿರುವುವು.

ಶ್ರೀ ಕೆ. ಎಸ್ ಎನ್. ಐತಾಳ,	ಶ್ರೀ ಎ. ವಾಸುದೇವ ಪ್ರಭು,
ಏಜೆಂಟ್,	ಏಜೆಂಟ್,
ಸಾವರ್ಕರ್ಸ್ ಬಿಲ್ಡಿಂಗ್,	ಸುರಪುರ ಮಲ್ಲಪ್ಪಾಸ್ ಬಿಲ್ಡಿಂಗ್,
ದಾಂಡೇಲಿ	ಯಾದಗಿರಿ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

(ಮೈಸೂರು ರಾಜ್ಯದಲ್ಲಿ ಅತ್ಯಧಿಕ ಶಾಖೆಯುಳ್ಳ ಶೆಡ್ಯೂಲ್ಡ್ ಬೇಂಕ್)

ಡಾ| ಟಿ. ಎಂ. ಎ. ಪೈ,	ಶ್ರೀ ಟಿ. ಎ. ಪೈ,
ಮೆನೇಜಿಂಗ್ ಡೈರೆಕ್ಟರ್.	ಜನರಲ್ ಮೆನೇಜರ್.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ ಪೈಸೆ

ವರುಷ ೩೮. ವಾರ ೩೩. 30-4-1959 Vol. 38. No. 33.

ವಿಚಾರ ಮಥನ

ಒಕ್ಕಲತನ ಕಾಲೇಜು

* *

ಮೈಸೂರೋ ಕರ್ನಾಟಕವೋ

* *

ಮಹತಾಬರ ಸಂಧಾನ

* *

ಚೀನದ ಆಂತರಿಕತೆ

* *

ಮೈಸೂರಿನ ವಿದ್ಯಾಮಂತ್ರಿ ಶ್ರೀ ಅಣ್ಣಾರಾವ್ ಗಣಮುಖಿಯವರು ಶೈಕ್ಷಣಿಕ ಕ್ಷೇತ್ರದಲ್ಲಿ ಇಂದಿರುವ ಅವಶ್ಯಕ ಪ್ರಗತಿ ಪಥ ಯಾವುದು ಎಂಬುವನ್ನು ಮೂಲ್ಕಿ ಸರಕಾರಿ ಪ್ರೌಢ ಶಾಲೆಯಲ್ಲಿ ವಿದ್ಯುದ್ದೀಪಗಳನ್ನು ಬೆಳಗಿಸುವ ಸಮಾರಂಭದಲ್ಲಿ ಚೆನ್ನಾಗಿ ವಿವರಿಸಿದ್ದಾರೆ. ಮೂಲ್ಕಿಯಲ್ಲಿ ಕಾಲೇಜು ಸ್ಥಾಪನೆಯಾಗಬೇಕಾದ ಆವಶ್ಯಕತೆಯನ್ನು ನಿರೂಪಿಸಿದ್ದ ಮಾನಪತ್ರವನ್ನು ಉತ್ತರಿಸುತ್ತ ಅವರು ಇಂದು ಆರ್ಟ್ಸ್ ಕಾಲೇಜುಗಳಿಗಿಂತ ಪೊಲಿಟೆಕ್ನಿಕ್ ಅಥವಾ ಒಕ್ಕಲತನ ಕಾಲೇಜುಗಳ ಆವಶ್ಯಕತೆ ತುಂಬ ಇದೆ ಎಂದು ಹೇಳಿದ್ದಾರೆ. ರಾಜ್ಯದ ವಿವಿಧ ಆರ್ಟ್ಸ್ ಕಾಲೇಜುಗಳಲ್ಲಿ ಈಗ ಸುಮಾರು ಎರಡು ಸಾವಿರಕ್ಕೂ ಮಿಕ್ಕಿರುವಷ್ಟು ಸ್ಥಳಗಳು ವ್ಯರ್ಥವಾಗಿ ಕೊಳೆಯುತ್ತಿರುವಾಗ, ಇನ್ನೂ ಹೊಸ ಕಾಲೇಜುಗಳನ್ನು ಸ್ಥಾಪಿಸುವುದು ಅನಗತ್ಯವೆಂಬುದು ನಿಜವೇ. ಮಂತ್ರಿವರ್ಯರಾಡಿದಂತೆ ವಿದ್ಯಾರ್ಥಿಗಳಿರುವಲ್ಲಿ ಕಾಲೇಜುಗಳಿರುವುದಕ್ಕಿಂತ ಕಾಲೇಜುಗಳಿರುವಲ್ಲಿ ವಿದ್ಯಾರ್ಥಿಗಳು ಹೋಗಿ ಸೇರಿಕೊಳ್ಳುವಂತಾಗುವುದು ತಪ್ಪಿಲ್ಲವಾದರೂ ಈ ಪದ್ಧತಿಯಿಂದ ಸಾಮಾನ್ಯ ಮಧ್ಯಮ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ತುಂಬ ತೊಡಕುಂಟಾಗುವುದೆಂಬುದನ್ನು ಮರೆಯಬಾರದು. ಆದರೂ ಕೇವಲ ಆರ್ಟ್ಸ್ ಕಾಲೇಜುಗಳಿಗಿಂತ ಇಂದು ನಮ್ಮ ರಾಜ್ಯದ ಹಾಗೂ ಭಾರತದ ಪರಿಸ್ಥಿತಿಗೆ ತಾಂತ್ರಿಕ ಮತ್ತು ವೃತ್ತಿಪರ ಕಾಲೇಜುಗಳೇ ತೀರ ಆವಶ್ಯಕವೆಂಬುದನ್ನು ಅಲ್ಲಗಳೆಯುವಂತಿಲ್ಲ. ನಮ್ಮ ಜಿಲ್ಲೆಯಲ್ಲಾದರೋ ಈಗಾಗಲೇ ಸಾಕಷ್ಟು ಸಂಖ್ಯೆಯಲ್ಲಿ ಆರ್ಟ್ಸ್ ಕಾಲೇಜುಗಳಿವೆ; ಪದವೀಧರರಾಗಿ ಉದ್ಯೋಗಗಳನ್ನರಸುತ್ತ ಸುತ್ತುತ್ತಿರುವವರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ; ಆದುದರಿಂದ ಮತ್ತೂ ಮತ್ತೂ ಇಂತಹರ ಸಂಖ್ಯೆಯನ್ನು ಬೆಳೆಯಗೊಡುವುದಕ್ಕಿಂತ ವೃತ್ತಿಪರ ಇಲ್ಲವೇ ತಾಂತ್ರಿಕ ಅಥವಾ ಒಕ್ಕಲತನದ ಕಾಲೇಜನ್ನು ಪ್ರಾರಂಭಿಸುವುದು ಎರಡು ದೃಷ್ಟಿಯಿಂದಲೂ ಕ್ಷೇಮವೆಂದು ಹೇಳಬಹುದು. ಇದಕ್ಕೆ ತುಂಬ ಕಷ್ಟವಿದೆಯೆಂಬುದನ್ನು ಒಪ್ಪಬೇಕು; ಆದರೂ ದೇಶದ, ನಮ್ಮ ಜನತೆಯ ಹಿತದೃಷ್ಟಿಯಿಂದ ಇಂತಹ ಪ್ರಯಾಸಗಳು ಹಿಂದೆ ಮುಂದೆ ನೋಡಬಾರದು. ನಮ್ಮ ಜಿಲ್ಲೆಯಲ್ಲಿ ನ್ಯಾಯಶಾಸ್ತ್ರ, ವೈದ್ಯಕೀಯ ತಾಂತ್ರಿಕ ಸಂಸ್ಕೃತ, ಆಯುರ್ವೇದ ಕಾಲೇಜುಗಳೂ ಪೊಲಿಟೆಕ್ನಿಕ್ ಸಂಸ್ಥೆಯೂ ಈಗಾಗಲೇ ಇವೆ; ಮಂಗಳೂರಲ್ಲಿ ಇನ್ನೊಂದು ಇಂಜಿನಿಯರಿಂಗ್ ಕಾಲೇಜು ಸ್ಥಾಪನೆಯಾಗುವುದರಲ್ಲಿದೆ. ಪರಿಸ್ಥಿತಿ ಹೀಗಿರುವಾಗ, ಮೂಲ್ಕಿಯಲ್ಲಿ ಒಕ್ಕಲತನದ ಕಾಲೇಜನ್ನು ಸ್ಥಾಪಿಸಿದರೆ, ಅದರಿಂದ ಕೃಷಿ ಕ್ಷೇತ್ರಕ್ಕೆ ಉಪಕಾರವೂ ಆಗುತ್ತದೆ, ಜಿಲ್ಲೆಯ ಕಾಲೇಜುಗಳಲ್ಲಿ ವೈವಿಧ್ಯವೂ ಉಂಟಾಗುತ್ತದೆ. ಒಂದು ಕಲ್ಲಿನಿಂದ ಎರಡು ಹಣ್ಣುಗಳನ್ನು ಉದುರಿಸುವ ಈ ಸಾಹಸಕ್ಕೆ ಸರಕಾರದಿಂದಲೂ ಪ್ರೋತ್ಸಾಹ ದೊರೆಯದಿರದು. ಆದುದರಿಂದ ಮಾನ್ಯ ಮಂತ್ರಿವರ್ಯರ ಸೂಚನೆಯತ್ತ ಗಮನ ಹರಿಸುವುದು ಸಂದರ್ಭೋಚಿತವಲ್ಲವೆ?

ಂಂ ಂಂ ಂಂ

ಪುನರ್ಘಟಿತ "ಮೈಸೂರು" ಜನ್ಮತಾಳಿದ ದಿನಕ್ಕೆ ಮೊದಲೇ ರಾಜ್ಯದ ಹೆಸರಿನ ವಿಷಯದಲ್ಲಿ ಭಿನ್ನಾಭಿಪ್ರಾಯವು ಎದ್ದು ಅದು ಇಂದಿಗೂ ಮುಂದುವರಿಯುತ್ತ ಬಂದಿದೆ. ಒಂದು ಚಿಕ್ಕ ರಾಜ್ಯದ ಹೆಸರನ್ನೇ (ಅದರೊಂದಿಗೆ ಸೇರಿದ ಅಥವಾ ಅದೂ ಸೇರಿಕೊಂಡ) ದೊಡ್ಡ ರಾಜ್ಯವೊಂದಕ್ಕೆ ಇಡುವುದು ಸರಿಯಲ್ಲ ಎಂದು ಹೆಚ್ಚಿನವರೆಲ್ಲರೂ ಅಭಿಪ್ರಾಯ ಪಡುತ್ತಾರೆ. ರಾಜ್ಯದ ಹೆಸರನ್ನು ಮೊದಲಿದ್ದಂತೆಯೇ ಇರಗೊಟ್ಟುದರಿಂದ, ಹಳೆಯ ಮೈಸೂರು ವಿಲೀನಗೊಂಡ ಪ್ರದೇಶಗಳು, ಹೊಸ ಮೈಸೂರು — ಎಂಬ ಭೇದ ಭಾವನೆಗಳು ಇನ್ನೂ ಬೆಳೆಯುತ್ತ ಹೋಗುತ್ತಿವೆ. ರಾಜ್ಯದ ಐಕ್ಯಸಾಧನೆಗಾಗಿ ಇಂತಹ ಭೇದ ಕಲ್ಪನೆಯನ್ನು ಮುಂದರಿಸುತ್ತ ಹೋಗುವುದು ಎಂದಿಗೂ ಸಮರ್ಥನೀಯವಾಗಲಾರದು. ಹೊಸ ರಾಜ್ಯೋದಯವಾದ ಮೇಲೆ ಪದೇಪದೇ ರಾಜ್ಯದ ಹೆಸರನ್ನು ಕರ್ನಾಟಕವೆಂದಿಡಬೇಕೆಂದು ಚರ್ಚೆ, ಗೊತ್ತುವಳಿಗಳು ಮುಂದೆ ಬರುತ್ತ ಇವೆ. ಅದಕ್ಕೆ ಬೆಂಬಲವೂ ದೊರೆಯುತ್ತಿದೆ. ಆದರೆ, ಕಾರ್ಯರೂಪದಲ್ಲಿ ಮಾತ್ರ ಅದು ಬರುತ್ತಿಲ್ಲ. ಇದಕ್ಕೆ ಕಾರಣಗಳು ಹಲವಾರಿರಬಹುದು; ಆದರೆ, ಈ ಕಾರಣಗಳಿಂದ ಅಪಚಾರವಾಗದಂತೆ ಮಾತ್ರ ನೋಡಿಕೊಳ್ಳುವುದು ಅವಶ್ಯವಲ್ಲವೆ? ಸರ್ವಸಮ್ಮತವಾದ 'ಕರ್ನಾಟಕ' ಎಂಬ ಹೆಸರನ್ನೇ ರಾಜ್ಯಕ್ಕೆ ಇತ್ತರೆ ಅದರಿಂದ ಒಳ್ಳೆಯ ಕೆಲಸವನ್ನೇ ಮಾಡಿದಂತಾಗುತ್ತದೆ. ಜತೆಗೆ ಈ ಹೆಸರಿನ ವಿಷಯದ ಗೊಂದಲವೂ ದೂರವಾಗುತ್ತದೆ. ಸದ್ಯ ನಮ್ಮ ವಿಧಾನ ಸಭೆಯಲ್ಲಿ ಈ ಬಗ್ಗೆ ಶ್ರೀ ಎಂ ರಾಮಪ್ಪನವರು ಒಂದು ಗೊತ್ತುವಳಿಯನ್ನು ಮಂಡಿಸಿದ್ದಾರೆ ಇದು ಖಾಸಗಿ ಗೊತ್ತುವಳಿಯಾದ ದರಿಂದ ಇದು ಸ್ವೀಕಾರವಾಗುವ ನಿರೀಕ್ಷೆ ಕಡಿಮೆ ಯಾದರೂ, ಈ ಪ್ರಕರಣವನ್ನು ಮುಕ್ತಾಯಗೊಳಿಸಿ,

(೧೨ನೇ ಪುಟ ನೋಡಿರಿ)

ಸಂಯುಕ್ತ ರಾಷ್ಟ್ರಸಂಘದ ಕಾರ್ಯದರ್ಶಿ ಶ್ರೀ ಡಾಗ್ ಹೆಮ್ಮರ್‌ಶೀಲ್ಡರು ಶ್ರೀ ಐಸನ್ ಹಾವರರನ್ನು ಸ್ವಾಗತಿಸುತ್ತಿದ್ದಾರೆ. ಚಿತ್ರದಲ್ಲಿ ಎಡದಿಂದ ಬಲಕ್ಕೆ: ಜಾನ್ ಫಾಸ್ಟರ್ ಡಲ್ಲೆಸ್, ಐಸನ್ ಹಾವರ್, ಡಾಗ್ ಹೆಮ್ಮರ್‌ಶೀಲ್ಡ್ ಮತ್ತು ಹೆನ್ರಿ ಕೆಬಟ್ ಲೋಜ್.

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3. ಸ್ಥಾಪನೆ.- 1931

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ.... ಇತ್ಯಾದಿ ...

ಕಥಾ ವಿಹಾರ

ಬ್ರಹ್ಮನನ್ನು ಸೋಲಿಸಿದ ಮಹಾಧೀರ ಬ್ರಾಹ್ಮಣ

ತನ್ನನ್ನು ಕಾಡುತ್ತಿದ್ದ ವಿಧಾತನನ್ನೇ ಸೆರೆಹಿಡಿದು ಅಮಿತ ಭೋಗಗಳನ್ನು ಆತನು ಪಡೆದನು!

ಬಹಳ ಹಿಂದಿನ ಕಾಲದ ಮಾತಿದು. ಇಂದಿನ ನವನಾಗರಿಕತೆಯಾಗಲಿ, ಬೌದ್ಧಿಕವಾದವಾಗಲಿ ತನ್ನ ಶಕ್ತಿಯನ್ನಿಂದು ಸ್ಥಾಪಿಸಿರಲಿಲ್ಲ. ಆದುದರಿಂದಲೇ ಇಂದು ಈ ಕಥೆ ಕಾಲ್ಪನಿಕವೆಂದು ಸಾಹಿತಿಗಳು ಹೇಳಬಹುದು; ಸಂಪೂರ್ಣ ಸುಳ್ಳು ಎಂದು ನಾಸ್ತಿಕರು ಪ್ರತಿಪಾದಿಸಬಹುದು; ನಂಬುವುದಕ್ಕೆ ಆಧಾರ ಸಾಲದೆಂದು ತಾರ್ಕಿಕರು ತರ್ಕಿಸಬಹುದು; ವೇದಾಂತಿಗಳೂ ಇದು ಹೀಗಾಗುವುದು ಅಸಾಧ್ಯವೆನ್ನುವುದೂ ಅಸಂಭವವಲ್ಲ. ಆದರೂ ಇದೊಂದು ಜಾನಪದ ಕಥೆ. ಬಂಗಾಳದ ಜನರೆಲ್ಲರೂ ಇದನ್ನು ಆಗಾಗ ಹೇಳಕೇಳಿ ಆಡಿಕೊಂಡಿರುತ್ತಾರೆ. ಅಷ್ಟೊಂದು ಜನ ಆ ರೀತಿ ತಿಳಿಯಬೇಕಾದರೆ, ಈ ಕಥೆ ತೀರ ಅಸತ್ಯವೆಂದು ಹೇಳುವುದು ಅಷ್ಟು ಸುಲಭವಲ್ಲ. ನೀವೂ ಇದನ್ನು ಓದಿ ಆ ಮೇಲೆ ಸತ್ಯಾಸತ್ಯಗಳ ವಿಮರ್ಶೆಗೆ ಹೊರಡಿರಿ.

ಒಂದು ಹಳ್ಳಿಯಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಅವನು ಪಾಪ, ಜನ್ಮದಿಂದಲೇ ದರಿದ್ರನಾಗಿದ್ದನು. ಅವನ ತಂದೆತಾಯಂದಿರೂ ಹುಟ್ಟು ದರಿದ್ರರಾಗಿಯೇ ದಿನ ದೂಡಿದ್ದರು. ದರಿದ್ರನಾದ ಕಾರಣದಿಂದ ಈ ಬ್ರಾಹ್ಮಣನು ದಿನವೊಂದಕ್ಕೆ ಒಂದೊಂದು ಊಟವನ್ನು ಮಾತ್ರ ಮಾಡುತ್ತಿದ್ದನು. ಆದರೆ, ಪೂರ್ವ ಜನ್ಮದ ಪಾಪಗಳಿಗೆ ಪ್ರಾಯಶ್ಚಿತ್ತವೋ ಎನ್ನುವಂತೆ ಅವನು ಆ ಊಟವನ್ನಾದರೂ ಸಂಪೂರ್ಣ ಮುಗಿಸುವಂತಿರಲಿಲ್ಲ. ಬಡಿಸಿದ ಆಹಾರವನ್ನು ಉಣ್ಣುತ್ತಿದ್ದಂತೆಯೇ, ಎಲೆಗೆ ಏನೋ ಒಂದು ಕಸದಂತಹ ವಸ್ತುವು ಬೀಳುತ್ತಿದ್ದುದೇ ಇದಕ್ಕೆ ಕಾರಣ. ಇದರಿಂದಾಗಿ ಬ್ರಾಹ್ಮಣನು ಅರ್ಧದಲ್ಲೇ ಊಟವನ್ನು ಬಿಟ್ಟು ಹೊರಬೀಳುತ್ತಿದ್ದನು. ಒಂದು ದಿನವೂ ಹೊಟ್ಟೆ ತುಂಬ ಉಣ್ಣುವ ಯೋಗವನ್ನು ಆತ ಪಡೆದಂತಿರಲಿಲ್ಲ. ಹೀಗೆ ಅರೆ ಹೊಟ್ಟೆಯಲ್ಲಿಯೇ ಅವನು ದಿನಗಳೆಯುತ್ತಿದ್ದನು.

ಊರ ರಾಜನು ಒಂದು ಬಾರಿ ತನ್ನ ಅರಮನೆಯಲ್ಲಿ ಬ್ರಾಹ್ಮಣಸಂತರ್ಪಣೆಯನ್ನು ಏರ್ಪಡಿಸಿದನು. ಊರ ಬ್ರಾಹ್ಮಣರಿಗೆಲ್ಲಾ ಆಮಂತ್ರಣ ಹೋಯಿತು. ಹತ್ತರೊಡನೆ ಹನ್ನೊಂದು ಎಂಬಂತೆ ಈ ಬಡ ಬ್ರಾಹ್ಮಣನಿಗೂ ಆಹ್ವಾನ ದೊರೆಯಿತು. ಈ ದಿನವಾದರೂ ಹೊಟ್ಟೆತುಂಬ ಉಣ್ಣೋಣವೆಂದುಕೊಂಡು ಬ್ರಾಹ್ಮಣನು ಎದ್ದು ಹೊರಟನು. ಆದರೆ, ಬಹಳ ದೂರದಲ್ಲಿದ್ದ ಅರಮನೆಯನ್ನು ಸೇರುವ ಹೊತ್ತಿನಲ್ಲಿ ಮಧ್ಯಾಹ್ನ ಮೀರಿ ಹೋಗಿತ್ತು. ಅರಮನೆಯಲ್ಲಿ ಆಗತಾನೇ ಭೋಜನ ಸಮಾರಂಭವು ಮುಗಿದು ಬ್ರಾಹ್ಮಣರು ಕೈತೊಳೆಯಲು ಎದ್ದು ನಿಂತಿದ್ದರು. ಇದನ್ನು ಕಂಡ ಬ್ರಾಹ್ಮಣನು ನಿರುಪಾಯನಾಗಿ ನಿರಾಶನಾಗಿ ಹಸಿದ ಹೊಟ್ಟೆಯಲ್ಲೇ ಬಂದ ದಾರಿಗೆ ಸುಂಕವಿಲ್ಲವೆಂದುಕೊಂಡು ಹಿಂತೆರಳಲನುವಾದನು. ಆದರೆ, ಅಷ್ಟರಲ್ಲಿಯೇ ಮಹಾರಾಜನು ಅದೇನೋ ಕಾರಣದಿಂದ ಅತ್ತಗಡೆ ಬರುತ್ತಿದ್ದವನು ಬ್ರಾಹ್ಮಣನ ಮುಖ ದರ್ಶನ ಮಾತ್ರದಿಂದಲೇ ಕಾರಣವನ್ನರಿತು, ಸಂತರ್ಪಣೆಗೆ ಬಂದಿರುವ ಒರ್ವನಾದರೂ ಬರಿಯೊಡಲಲ್ಲಿ ತೆರಳಬಾರದೆಂದುಕೊಂಡು, ಆ ಕೂಡಲೇ ತನ್ನ ಸೇವಕರನ್ನು ಕರೆದು ಈತನಿಗೂ ಹೊಟ್ಟೆ ತುಂಬ ಬಡಿಸುವಂತೆ ಆಜ್ಞಾಪಿಸಿದನು.

ಬ್ರಾಹ್ಮಣನು ಆಹಾರವನ್ನು ತುತ್ತಿಸಲು ಮೊದಲು ಮಾಡಿದನು. ರುಚಿ ರುಚಿಯಾದ ಭಕ್ಷ್ಯಭೋಜ್ಯಗಳು ಬಡಿಸಲ್ಪಟ್ಟವು. ಬ್ರಾಹ್ಮಣನ ಅರ್ಧ ಊಟವಾಗುವಷ್ಟರಲ್ಲಿಯೇ ಕೋಣೆಯ ಮಾಡಿನೆಡೆಯಿಂದ ಒಂದು ಮೊಟ್ಟೆಯು ಎಲೆಗೆ ಬಿದ್ದುಬಿಟ್ಟಿತು. ಇದನ್ನು ಕಂಡ ಬ್ರಾಹ್ಮಣ ಖಿನ್ನನಾಗಿ ಜೋಲು ಮೋರೆ ಹಾಕಿಕೊಂಡು ಆಪೋಷಣೆ ಮಾಡಿ ಊಟದಿಂದ ಎದ್ದುಬಿಟ್ಟನು.

ಮಹಾರಾಜನಿಗೆ ಈ ವರ್ತಮಾನವು ತಡವಿಲ್ಲದೆ ದೊರೆಯಿತು. ಸೇವಕರನ್ನು ಮನಸ್ವಿಯಾಗಿ ಬೈದನು. ಆದರೆ ಕಾರ್ಯ ಮಿಂಚಿ ಹೋಗಿತ್ತು. ತನ್ನಲ್ಲಿಗೆ ಆಮಂತ್ರಿತನಾಗಿದ್ದ ವಿಪ್ರನೊಬ್ಬನು ನಿರಾಹಾರನಾಗಿ ಹಿಂತೆರಳುವುದು ಅನ್ಯಾಯವೆಂದೂ ಇದರಿಂದ ತನಗೆ ಪಾಪವೂ ಬ್ರಹ್ಮಶಾಪವೂ ಲಭಿಸುವುದೆಂದೂ ಮನಗಂಡು, ಬ್ರಾಹ್ಮಣನ ಪಾದಗಳಿಗೆ ಅಭಿನಮಿಸಿ, ಮರುದಿನವಾದರೂ ತನ್ನಲ್ಲಿಗೆ ದಯಮಾಡಿಸಿ ಭೋಜನವನ್ನು ಸ್ವೀಕರಿಸುವ ಕೃಪೆಮಾಡಬೇಕೆಂದು ವಿನಂತಿಸಿದನು. ಬ್ರಾಹ್ಮಣನು ಮೊದಮೊದಲು ಈ ಕೇಳಿಕೆಯನ್ನು ತಿರಸ್ಕರಿಸಿದರೂ ರಾಜನ ಅನುರೋಧದಿಂದಾಗಿ ಅನ್ಯತ್ರಗತಿಯಿಲ್ಲದೆ ಒಪ್ಪಿಕೊಳ್ಳಲೇ ಬೇಕಾಯಿತು.

ಮೊದಲ ದಿನದ ಆತಂಕವನ್ನು ತಿಳಿದಿದ್ದ ರಾಜನು ಮರುದಿನ ತಾನೇ ಸ್ವಯಮಾಗಿ ನಿಂತು ಬ್ರಾಹ್ಮಣನನ್ನು ಉಣಿಸತೊಡಗಿದನು. ಬ್ರಾಹ್ಮಣನು ಅರೆಊಟವನ್ನು ಮಾಡಿ ಮುಗಿಸುವಷ್ಟರಲ್ಲಿ ವಿಧಾತನಿಂದ ಇದು ಸಹನೀಯವೆನಿಸಲಿಲ್ಲ. ಆದುದರಿಂದಲೇ ಅವನು ಅಣುರೂಪವನ್ನು ತಾಳಿ ಎಲೆಯಲ್ಲಿ ಬಿದ್ದು ಬ್ರಾಹ್ಮಣನ ಊಟಗೆಡಿಸುವ ಯೋಚನೆಯಿಂದ ಒಂದು ಮರಿಗಪ್ಪೆಯ ರೂಪಧಾರಣೆ ಮಾಡಿ ಎಲೆಯಲ್ಲಿ ಬಿದ್ದು ಬಿಟ್ಟನು. ರಾಜನೇ ತನ್ನನ್ನು ಉಣಿಸಲು ತನ್ನ ಸಂಮುಖದಲ್ಲಿ ಕುಳಿತಿರುವುದನ್ನು ನೆಟ್ಟ ದೃಷ್ಟಿಯಿಂದ ಈಕ್ಷಿಸುತ್ತ ಅಮಿತಾನಂದ ತುಂದಿಲನಾಗಿದ್ದ ಬ್ರಾಹ್ಮಣನು ಇದನ್ನು ಗಮನಿಸಲೇ ಇಲ್ಲ. ಈ ಕಾರಣದಿಂದಲೇ ಅವನು ಬಡಿಸಿರುವುದನ್ನೆಲ್ಲಾ ಸ್ವೇಚ್ಛೆಯಿಂದ ಉಂಡು ತೇಗಿದನು. ಅನ್ನದಲ್ಲಿ ಸೇರಿಕೊಂಡಿದ್ದ ಮಂಡೂಕ ರೂಪಧಾರಿಯಾಗಿದ್ದ ಬ್ರಹ್ಮನೂ ಕೈತುತ್ತಿನ ಮೂಲಕ ನೇರವಾಗಿ ಬ್ರಾಹ್ಮಣನ ಉದರ ಗೃಹದಲ್ಲಿ ಸೇರಿಬಿಟ್ಟನು. ಬ್ರಾಹ್ಮಣನಿಗೂ ತನ್ನ ಜನ್ಮದಲ್ಲಿ ಇಂದಿನದಿನ ವೊಮ್ಮೆಯಾದರೂ ಸರಿಯಾಗಿ ಉಂಡೆನಲ್ಲಾ ಎಂದು ಆತ್ಮಸಂತೋಷದಿಂದ ತನ್ಮಯನಾಗಿ ಹೋದನು. ಎಂತಲೇ ರಾಜನಿಗೆ ಅತೀವ ಆಶೀರ್ವಾದವನ್ನಿತ್ತು ಹರಸುತ್ತ ಹೊರಟು ತನ್ನ ಮನೆಯ ದಾರಿ ಹಿಡಿದನು.

ಬ್ರಾಹ್ಮಣನ ಮನೆಯ ದಾರಿಯಲ್ಲಿ ಒಂದು ಅರಣ್ಯವಿತ್ತು. ಅದಾದರೋ ಘೋರವಾಗಿತ್ತು. ಕಾಡಿನ ಮಧ್ಯದಲ್ಲಿನ ಅಗಲ ಕಿರಿದಾದ ದಾರಿಯಲ್ಲಿ ಬ್ರಾಹ್ಮಣನು ಭಾರವಾದ ಹೊಟ್ಟೆಯನ್ನು ಹೊತ್ತು ಮೆಲ್ಲಮೆಲ್ಲನೇ ನಡೆಯುತ್ತಿರುವಾಗ, ಅವನಿಗೊಂದು ವಿಲಕ್ಷಣ ಧ್ವನಿ ಕೇಳಿಬಂತು. "ಎಲೈ ಬ್ರಾಹ್ಮಣನೆ, ನನಗೆ ಹೋಗಗೊಡು; ನನ್ನನ್ನು ಬಿಟ್ಟುಕೊಡು."

ಒಂದು ಕ್ಷಣ ಬ್ರಾಹ್ಮಣನು ಬೆಂಗಾಗಿ ಬಿಟ್ಟನು; ಜತೆಗೆ ವಿಸ್ಮಿತನೂ ಅವನು ಭಯಭೀತನೂ ಆದನು. ಆದರೂ ಅದನ್ನು ತೋರಗೊಡದೆ ಬ್ರಾಹ್ಮಣನು ಧೈರ್ಯ ತಂದುಕೊಂಡು, "ನೀನು ಯಾರು? ಎಲ್ಲಿಂದ ನೀನು ಮಾತಾಡುತ್ತಿರುವೆ?" ಎಂದು ಪ್ರಶ್ನಿಸಿದನು.

"ನಾನು ಪ್ರಾಣಿಕೋಟಿಗಳ ಅದೃಷ್ಟ ಲೇಖಕನಾದ ಬ್ರಹ್ಮನು. ಸದ್ಯ ನಿನ್ನ ಉದರದೊಳಗೆ ಸಿಕ್ಕಿ ಬಿದ್ದಿರುವೆನು."

ಆದರೆ ಬ್ರಾಹ್ಮಣನಿಗೆ ಈ ಮಾತುಗಳಿಂದ ವಿಶ್ವಾಸವುದಿಸಲಿಲ್ಲ. ಕೊನೆಗೆ ಬ್ರಹ್ಮನು ನಡೆದ ಘಟನೆಯೆಲ್ಲವನ್ನೂ ತಿಳಿಸಿದಾಗ ನಂಬದುಳಿಯಲಾಗಲಿಲ್ಲ. ಎಂತಲೇ ಬ್ರಾಹ್ಮಣನು ಕುಪಿತನಾಗಿ ಹೇಳಿದನು: "ನಿನ್ನನ್ನು ನಾನೆಂದೂ ಹೊರಗೆ ಬಿಡಲಾರೆನು. ನನ್ನ ಜೀವನವನ್ನೇ ಕಷ್ಟಮಯವಾಗಿ ಮಾಡಿದ ಮಹಾಪರಾಧಿಯು ನೀನೇ ಅಲ್ಲವೇ?"

ಬ್ರಹ್ಮನೊಂದು ಬಾರಿ ಹೆದರಿ ಹೋದನು. ಆತನಿಗೆ ಏನು ಮಾಡಬೇಕೆಂದೇ ತಿಳಿಯಲಿಲ್ಲ. ಆದರೂ ನಡುಗುವ ಸ್ವರದಿಂದ ವಿನಂತಿಸಿದನು. "ಬ್ರಾಹ್ಮಣನೆ, ನನ್ನನ್ನು ದಯಮಾಡಿ ಬಿಟ್ಟುಬಿಡು. ಇಲ್ಲಿ ನನ್ನ ಉಸಿರು ಕಟ್ಟುತ್ತಿದೆ. ಇನ್ನು ನಿನಗೆ ಯಾವ ಉಪದ್ರವವನ್ನೂ ಕೊಡಲಾರೆ."

ಆದರೆ, ಬ್ರಾಹ್ಮಣನು ವಿಧಾತನ ಈ ಕೇಳಿಕೆಯನ್ನು ಕೆಳಗಿವಿಕೇಳಿ ಮುಂದುವರಿದನು. ಸ್ವಲ್ಪ ದೂರ ನಡೆದು ತನ್ನ ಮನೆ ಸೇರಿದನು.

ಇದೇ ಹೊತ್ತಿನಲ್ಲಿ ಸ್ವರ್ಗ ಮತ್ತು ಮೃತ್ಯು ಲೋಕದಲ್ಲಿ ಕೋಲಾಹಲವದ್ದಿತು. ಎಲ್ಲೆಲ್ಲೂ ಕ್ಷೋಭೆ ಕಾಣಿಸಿಕೊಂಡಿತು. ತ್ರಾಹಿತ್ರಾಹಿಯೆಂಬ ಧ್ವನಿಯಿಂದ ಆಕಾಶ ಪಾತಾಳಗಳು ಪ್ರತಿಧ್ವನಿತವಾದವು. ವಿಧಾತನಿಲ್ಲದುದರಿಂದ ಪ್ರಕೃತಿಯು ವಿಕೃತಿಯನ್ನು ತಾಳ ತೊಡಗಿತು.

ಕೊನೆಗೆ ದೇವತೆಗಳೆಲ್ಲರೂ ತಮ್ಮ ದಿವ್ಯಜ್ಞಾನದಿಂದ ವಿಧಾತನಿಗೊದಗಿದ ದುರ್ಗತಿಯನ್ನರಿತು ಎಂತಾದರೂ ಮಾಡಿ ಅವನ ಸೆರೆಬಿಡಿಸಬೇಕೆಂದು ನಿರ್ಧಾರಕ್ಕೆ ಬಂದರು. ಆದರೆ ಆ ಬ್ರಾಹ್ಮಣನ ಬಳಿಗೆ ಹೋಗಿ ವಿಷಯ ನಿವೇದಿಸುವ ಧೈರ್ಯ ಯಾವ ದೇವತೆಗೆ ತಾನೇ ಬರಬೇಕು? ಎಲ್ಲರೂ ಪರಸ್ಪರ ಮುಖಾವಲೋಕನ ಮಾಡತೊಡಗಿದರು. ಕೊನೆಗಂತೂ ಗಂಡಸರು ಹೆಂಗಸಿನಿಂದ ಆಕರ್ಷಿತರಾಗುವುದು ಅಧಿಕವೆಂಬುದಾಗಿ ತಿಳಿದು ಲಕ್ಷ್ಮಿಯನ್ನು ಈ ಮಹಾಕಾರ್ಯಕ್ಕೆ ನೇಮಿಸಲಾಯಿತು.

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

4 ತಿಂಗಳ ವರೆಗೆ 4%
5 ರಿಂದ 12 ,, 4¼%
13 ,, 24 ,, 4½%
ರೂ. 10,000/- ಮತ್ತು ಮೇಲಣ ಹಣಕ್ಕೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1939

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು
(ಎಸ್, ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2·00.

ಭಾರತದ ಕರ್ಣ
"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ। ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ
ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No· 465 N/50 date 2-12-1950 of the Director of public Instruction, Madras·

ನುಡಿಚಿತ್ರ

ಅಮೆರಿಕನರು ಕಂಡಂತೆ

ಜಾನ್‌ಫಾಸ್ಟರ್ ಡಲ್ಲೆಸ್

ಶಾಂತಿಯ ಸೇನಾನಿಯಾಗಿ ವಿಶ್ವೋನ್ನತಿಗಾಗಿ ಜೀವಸವೆಸಿದ ಮಹಾ ವ್ಯಕ್ತಿಯಿವರಂತೆ.

ವಿದೇಶಾಂಗ ಕಾರ್ಯದರ್ಶಿಯ ಸ್ಥಾನಕ್ಕೆ ರಾಜಿನಾಮೆ ಇತ್ತಿದ್ದಾರೆಂಬುದಾಗಿ ಅಮೆರಿಕಾಧ್ಯಕ್ಷ ಐಸೆನ್‌ಹೋವರರು ಪ್ರಕಟಪಡಿಸಿದ ಜಾನ್ ಫಾಸ್ಟರ್ ಡಲ್ಲೆಸ್ ಅವರನ್ನು "ಶಾಂತಿಯ ಶ್ರದ್ಧಾಳು" ಎಂಬುದಾಗಿ ಸೂಕ್ತರೀತಿಯಲ್ಲಿ ವರ್ಣಿಸಲಾಗಿದೆ.

ಡಲ್ಲೆಸರು ಐವತ್ತು ವರ್ಷಗಳಿಂದ ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಸಕ್ರಿಯಾತ್ಮಕವಾಗಿ ಭಾಗವಹಿಸಿದ್ದಾರೆ; ೧೯೫೩ ರಿಂದ ೧೯೫೯ರ ವರೆಗೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿಯಾಗಿ ಕೆಲಸಮಾಡಿದ ಅವಧಿಯಲ್ಲಿ ಅಮೆರಿಕದ ವಿದೇಶಾಂಗ ಸಂಬಂಧಗಳ ಚಾಲಕ ಶಕ್ತಿಯಾಗಿದ್ದಾರೆ. ಅಂತರರಾಷ್ಟ್ರೀಯ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಗಳನ್ನು ಕಂಡು ಹಿಡಿಯಲು ಶ್ರಮಿಸಿದ್ದಾರೆ. "ಭಿನ್ನಾಭಿಪ್ರಾಯಗಳನ್ನು ಸಹಿಸುವ ಪ್ರಪಂಚವೇ ಶಾಂತಿಯುತ ಪ್ರಪಂಚ—ಹಿಂಸೆಯಿಂದ ಭಿನ್ನಾಭಿಪ್ರಾಯಗಳನ್ನು ತೊಡೆದು ಹಾಕುವ ಪ್ರಪಂಚ ಶಾಂತಿಯುದಲ್ಲ" ಎಂಬುದಾಗಿ ೧೯೫೦ರಲ್ಲಿ ಪ್ರಕಟವಾದ "ಯುದ್ಧವೋ? ಶಾಂತಿಯೋ?" ಎಂಬ ತಮ್ಮ ಪುಸ್ತಕದಲ್ಲಿ ನುಡಿದಿದ್ದಾರೆ, ಇದು ಅವರ ನಂಬುಗೆಯು ಹೌದು.

ವಿದೇಶಾಂಗ ಕಾರ್ಯದರ್ಶಿಯಾಗಿ ಪ್ರಪಂಚ ಶಾಂತಿಯ ಪರಿಪಾಲನೆಗಾಗಿ ಅವಿಶ್ರಾಂತವಾಗಿ ಶ್ರಮಿಸಿದ್ದಾರೆ. ೧೯೫೬ರಲ್ಲಿ ಕಾಯಿಲೆಯ ದೆಸೆಯಿಂದ ಚಟುವಟಿಕೆಗಳನ್ನು ಪರಿಮಿತಗೊಳಿಸಬೇಕಾದ ಸಂದರ್ಭ ಬರುವ ವರೆಗೂ, ಪ್ರತಿಯೊಂದು ಪ್ರಧಾನ ಅಂತಾರಾಷ್ಟ್ರೀಯ ಅಧಿವೇಶನದಲ್ಲೂ ಅಮೆರಿಕದ ಪ್ರತಿನಿಧಿಯಾಗಿ ದುಡಿದಿದ್ದಾರೆ, ೧೯೫೫ರ ಜುಲೈ ತಿಂಗಳಿನಲ್ಲಿ ಜಿನೀವಾದಲ್ಲಿ ನಡೆದ ಸರಕಾರಗಳ ಮುಖ್ಯರ ಅಧಿವೇಶನದಲ್ಲಿ ಅಮೆರಿಕಾಧ್ಯಕ್ಷ ಐಸೆನ್‌ಹೋವರರಿಗೆ ಪ್ರಧಾನ ಸಲಹೆಗಾರರಾಗಿದ್ದರು. ಮರುವರ್ಷ ಪನಾಮದಲ್ಲಿ ಅಮೆರಿಕದ ಗಣರಾಜ್ಯಗಳ ಅಧ್ಯಕ್ಷರುಗಳ ಸಮಾವೇಶ ನಡೆದಾಗಲೂ, ೧೯೫೭ರ ಡಿಸೆಂಬರಿನಲ್ಲಿ ನ್ಯಾಟೋ ರಾಷ್ಟ್ರಗಳ ಸರಕಾರಗಳ ಮುಖ್ಯರ ಅಧಿವೇಶನ ನಡೆದಾಗಲೂ ಡಲ್ಲೆಸರೇ ಅಮೆರಿಕಾಧ್ಯಕ್ಷರ ಮುಖ್ಯ ಸಲಹೆಗಾರರು. ೧೯೫೮ರ ಜನವರಿ ತಿಂಗಳಲ್ಲಿ ಬಾಗದಾದ್ ಒಪ್ಪಂದಗಳ ಸಭೆ ನಡೆದಾಗ ಅದರಲ್ಲೂ ಡಲ್ಲೆಸ್ ಅಮೆರಿಕದ ವೀಕ್ಷಕರಾಗಿ ಭಾಗವಹಿಸಿದನು.

ಡಲ್ಲೆಸರ ತತ್ವಶ್ರದ್ಧೆ ೧೯೫೬ರ ನವೆಂಬರ್ ೩ನೇ ತಾರೀಕು ವಿಸ್ಮಯಕಾರಕವಾದ ರೀತಿಯಲ್ಲಿ ಸ್ಪಷ್ಟಪಡಿಸಿತು. ಬ್ರಿಟನ್ ಮತ್ತು ಫ್ರಾನ್ಸ್ ಮತ್ತು ಇಸ್ರೇಲ್‌ಗಳು ಈಜಿಪ್ಟಿನ ಮೇಲೆ ಕೈಗೊಂಡ ದಂಡಯಾತ್ರೆಯನ್ನು ಖಂಡಿಸುವ ಸಲುವಾಗಿಯೂ ಮತ್ತು ಯುದ್ಧಸ್ತಂಭನವಾಗಬೇಕೆಂದು ಪ್ರತಿಪಾದಿಸುವ ಸಲುವಾಗಿಯೂ ಅವರು ವಿಶ್ವಸಂಸ್ಥೆಯನ್ನು ಪ್ರವೇಶಿಸಿದರು.

"ಈ ದಿನ ನಾವು ಬಹು ಮುಖ್ಯವಾದ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇವೆ; ಯಾರ ವಿಷಯದಲ್ಲಿ ನಮಗೆ ಬಾಂಧವ್ಯ, ಆಳವಾದ ಸ್ನೇಹ ಮೆಚ್ಚುಗೆ ಮತ್ತು ಗೌರವಗಳಿವೆಯೋ ಅಂತಹ ಮೂರು ರಾಷ್ಟ್ರಗಳ ಕೃತಿಯನ್ನು ಅಮೆರಿಕ ಒಪ್ಪಲಾರದೆಂದು ಹೇಳಬೇಕಾಗಿದೆ. ಈ ರಾಷ್ಟ್ರಗಳ ಪೈಕಿ ಎರಡು ನಮ್ಮ ಬಹು ಹಳೆಯ, ಬಹು ಆಪ್ತರಾದ ಮತ್ತು ಬಹು ವಿಶ್ವಾಸಿಗಳಾದ ಮಿತ್ರರು."

ಈ ಅನ್ಯಾಯವನ್ನು ಅಮೆರಿಕ ಮರೆಮಾಡುವುದಾದರೆ "ಈ ಸಂಸ್ಥೆಯ ಘೋಷಣಾ ಪತ್ರಕ್ಕೆ ಏನು ಬೆಲೆ ಉಳಿದೀತು. ಮತ್ತೆ ಅರಾಜಕತೆಯು ಪ್ರಪಂಚ ತಲೆದೋರೀತು" "ನಮ್ಮ ಸದಸ್ಯರಲ್ಲಿ ಮೂವರು ನಾಲ್ಕನೆಯ ಸದಸ್ಯನ ಮೇಲೆ ಕೈಗೊಂಡಿರುವ ಹಿಂಸಾತ್ಮಕ ಸಶಸ್ತ್ರ ಧಾಳಿಯನ್ನು ವಿಷಮ ಸ್ವರೂಪದ ತಪ್ಪು ಎನ್ನದೆ ವಿಧಿಯಿಲ್ಲ; ಈ ಕ್ರಮ ವಿಶ್ವಸಂಸ್ಥೆಯ ತತ್ವಗಳಿಗೂ ಉದ್ದೇಶಗಳಿಗೂ ಅಸಂಗತವಾದುದು; ಮತ್ತು ಈ ತಪ್ಪು ಮುಂದುವರಿಯುವುದಾದರೆ ನಮ್ಮ ಘೋಷಣೆಯೂ ಮತ್ತು ಈ ಸಂಸ್ಥೆಯೂ ಬಹುವಾಗಿ ದುರ್ಬಲವಾದೀತು" ಎಂದು ಡಲ್ಲೆಸ್ ಸಾರಿದರು.

ಈ ಘಟನೆ ಸಂಭವಿಸಿ ಎರಡು ವರ್ಷಗಳು ಕಳೆದಿರಲಿಲ್ಲ. ಸಹಾಯಬೇಕೆಂಬ ಚರಿತ್ರಾರ್ಹಕರೆ ಲೆಬನಾನಿನಿಂದ ಕೇಳಿಬಂತು. ಆ ಕೇಳಿಕೆಗೆ ಅಮೆರಿಕವಿತ್ತ ಉತ್ತರದ ಸಿಂಹಾವಲೋಕನ ಮಾಡುತ್ತ ಕಳೆದ ಶರತ್ಕಾಲದಲ್ಲಿ ಡಲೆಸ್ ಹೀಗೆಂದರು:

"ತಮಗೆ ಅಪಾಯ ಒದಗಿದೆಯೆಂಬ ಭಾವನೆ ಬಂದಾಗ ಸಹಾಯ ದೊರಕುವುದೆಂಬ ಭರವಸೆ ಚಿಕ್ಕ ರಾಷ್ಟ್ರಗಳಿಗೆ ದೊರಕಬೇಕಾದರೆ ಅಮೆರಿಕದ ಸೇನೆಗಳ ಗಮನ ಮಾತ್ರದಿಂದ...ಸಾಧ್ಯ ಎಂದು ನಾನು ಭಾವಿಸಿದ್ದೇನೆ: ಆ ಮನವಿಗಳನ್ನು ತಿರಸ್ಕರಿಸಿದ್ದರೆ ಪ್ರಪಂಚದ ಮೇಲೆ, ಅದರಲ್ಲೂ ಪ್ರಪಂಚದ ಚಿಕ್ಕ ರಾಷ್ಟ್ರಗಳ ಮೇಲೆ ಭೀಕರ ಪರಿಣಾಮವುಂಟಾಗುತಿತ್ತು."

ನಿತ್ಯ ಬದಲಾವಣೆಯ ಈ ಪ್ರಪಂಚದ ಶಾಂತಿ ಸ್ಥಾಪನೆ ಮಾಡಬಲ್ಲ ಸೂತ್ರವೊಂದನ್ನು ಶೋಧಿಸುವ ಸಲುವಾಗಿ ನಿರಂತರ ಪ್ರಯತ್ನವನ್ನು ನಡೆಸುತ್ತ ಬಂದ ಡಲ್ಲೆಸ್ ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ನಿರಂತರವಾಗಿ ಚರ್ಚಿಸುವ ಸಲುವಾಗಿಯೂ ಮತ್ತು ಉತ್ತಮ ಅರಿವನ್ನೂ ಅಂತಾರಾಷ್ಟ್ರೀಯ ಸೌಹಾರ್ದವನ್ನೂ ಸಾಧಿಸುವ ಸಲುವಾಗಿಯೂ ಪ್ರಪಂಚದ ನಾನಾ ಸರಕಾರಗಳ ಮುಖ್ಯರನ್ನು ಖುದ್ದಾಗಿ ನೋಡುವ ಸಂಪ್ರದಾಯವನ್ನು ಬೆಳೆಸಿದರು. ಈ ರಾಜತಾಂತ್ರಿಕ ಪ್ರವಾಸಗಳ ಕಾಲದಲ್ಲಿ ಇವರು ಸಂಚರಿಸಿದ ಒಟ್ಟು ದೂರ ಅಮೆರಿಕದ ಇತಿಹಾಸದಲ್ಲಿ ಮತ್ತಾವುದೇ ವಿದೇಶಾಂಗ ಕಾರ್ಯದರ್ಶಿ ನಡೆಸಿದ ಪ್ರವಾಸಗಳ ಒಟ್ಟು ದೂರಕ್ಕಿಂತಲೂ ಹೆಚ್ಚು. ಇವರು ಭೇಟಿಇತ್ತ ಅನೇಕ ದೇಶಗಳನ್ನು ಇವರ ಮುಂಚಿನವರು ನೋಡಿಯೇ ಇರಲಿಲ್ಲ. ಈ ಪ್ರವಾಸಗಳ ಕಾಲಗಳಲ್ಲಿ ಸಾಮಾನ್ಯವಾಗಿ ಇವರ ಪತ್ನಿ ಸತಿ ಜೆನೆಟ್ ಅವೆರಿ ಡಲ್ಲೆಸ್ ಇವರ ಜೊತೆಯಲ್ಲಿಯೇ ಹೋಗುತ್ತಿದ್ದರು.

ಡಲ್ಲೆಸರು ಪ್ರಮುಖ ಪಾತ್ರವಹಿಸಿದ ಅನೇಕ ಸಿದ್ಧಿಗಳಲ್ಲಿ ಆಸ್ಟ್ರಿಯನ್ ಸ್ಟೇಟ್ ಒಪ್ಪಂದ, ಪಶ್ಚಿಮ ವಲಯದಲ್ಲಿ ಕಮ್ಯೂನಿಸ್ಟರು ನುಸುಳುವ ವಿರುದ್ಧ ಕಾರಕಾಸ್ ನಿರ್ಣಯದ ರಚನೆ ಮತ್ತು ಅಂಗೀಕಾರ, ೧೯೫೪ರಲ್ಲಿ ಆಗ್ನೇಯ ಏಷ್ಯಾ ಒಪ್ಪಂದ ಸಂಸ್ಥೆಯ ಸೃಷ್ಟಿ, ಮತ್ತು ತಮ್ಮ ತಮ್ಮ ಪ್ರದೇಶಗಳ ಮೇಲೆ ಕಮ್ಯೂನಿಸ್ಟ್ ಆಕ್ರಮಣ ಸಂಭವಿಸದಂತೆ ಬೆದರಿಸುವ ಸಲುವಾಗಿ ೧೯೫೫ರಲ್ಲಾದ ಫಾರ್ಮೋಸಾ ಘೋಷಣೆ ಮತ್ತು ಮಧ್ಯಪ್ರಾಚ್ಯದ ಸಿದ್ಧಾಂತ ಇವು ಕೆಲವು.

ಪ್ರೆಸ್ಬಿಟೇರಿಯನ್ ಪಾದ್ರಿಯೊಬ್ಬರ ಮಗನಾದ ಡಲ್ಲೆಸ್, ವಿದೇಶಾಂಗ ವ್ಯವಹಾರದೊಡನೆ ಸುದೀರ್ಘ ಕಾಲದಿಂದಲೂ ಚಟುವಟಿಕೆಯ ಸಂಬಂಧವುಳ್ಳ ಕುಟುಂಬವೊಂದಕ್ಕೆ ಸೇರಿದವರು. ಇವರ ಅಜ್ಜ ಜಾನ್ ಕ್ಯಾ ಫಾಸ್ಟರ್ ಅವರು ಬೆಂಜಮಿನ್ ಹಾರಿಸನ್‌ರ ಅಮೆರಿಕಾಧ್ಯಕ್ಷತೆಯಲ್ಲಿ ವಿದೇಶಾಂಗ ಕಾರ್ಯದರ್ಶಿಯಾಗಿದ್ದರು. ಇವರ ಚಿಕ್ಕಪ್ಪ ರಾಬರ್ಟ್ ಲ್ಯಾನ್ಸಿಂಗ್ ವುಡ್‌ರೋ ವಿಲ್ಸನರ ಅಧ್ಯಕ್ಷತೆಯ ಕಾಲದಲ್ಲಿ ವಿದೇಶಾಂಗ ಕಾರ್ಯದರ್ಶಿಯಾಗಿದ್ದರು.

ಪ್ರಿನ್ಸ್‌ಟನ್‌ನಲ್ಲಿ ೧೯ ವರ್ಷ ವಯಸ್ಸಿನ ವಿದ್ಯಾರ್ಥಿಯಾಗಿದ್ದಾಗ ಡಲ್ಲೆಸ್ ಅಜ್ಜನ ಜೊತೆ ನೆದರ್‌ಲೆಂಡಿಗೆ ಹೋಗಿ ೧೯೦೭ರ ದ್ವಿತೀಯ ಹೇಗ್ ಶಾಂತಿ ಸಮ್ಮೇಳನದಲ್ಲಿ ಚೀನೀ ನಿಯೋಗದಲ್ಲಿ ಕೆಲಸ ಮಾಡಿದಾಗ, ಮೊತ್ತ ಮೊದಲಬಾರಿಗೆ ಅಂತರಾಷ್ಟ್ರೀಯ ರಂಗದಲ್ಲಿ ಕಾಣಿಸಿಕೊಂಡರು.

ಅಂತರಾಷ್ಟ್ರೀಯ ನ್ಯಾಯವಾದಿಯೆಂಬ ಖ್ಯಾತಿಯನ್ನು ಆಗಲೇ ಗಳಿಸಿಕೊಂಡಿದ್ದ ಡಲ್ಲೆಸ್ ತನ್ನ ೩೦ನೇ ವಯಸ್ಸಿನಲ್ಲಿ, ಪ್ರಪಂಚ ಯುದ್ಧದ ನಂತರ ೧೯೧೯ರಲ್ಲಿ ನಡೆದ ವರ್ಸೇಲ್ಸ್ ಶಾಂತಿ ಸಮ್ಮೇಳನದ ಕಾಲದಲ್ಲಿ ಅಮೆರಿಕಾಧ್ಯಕ್ಷ ಉಡ್ರೋವಿಲ್ಸನ್‌ರ ಐದು ಮಂದಿ ನಿಕಟ ಸಲಹೆಗಾರರಲ್ಲಿ ಒಬ್ಬರಾಗಿದ್ದರು. ಅಮೆರಿಕದ ವಿದೇಶಾಂಗ ರಾಜಕೀಯ ವ್ಯವಹಾರಗಳಿಗೆ ಡಲ್ಲೆಸರು ಹೀಗೆ ಎಷ್ಟೋ ಸಾರೆ ತಮ್ಮ ನ್ಯಾಯವಾದಿತ್ವಕ್ಕೆ ತಾತ್ಕಾಲಿಕ ತಡೆ ಹಾಕಿ ಹೊರ ದೇಶಗಳಿಗೆ ಹೋಗಿ ಬಂದರು.

೧೯೪೫ರಲ್ಲಿ ಸಾನ್‌ಫ್ರಾನ್ಸಿಸ್ಕೋವಿನಲ್ಲಿ ವಿಶ್ವಸಂಸ್ಥೆಯನ್ನು ಸ್ಥಾಪಿಸಲು ನೆರವಾದ ಅಮೆರಿಕದ ನಿಯೋಗದಲ್ಲಿ ಡಲ್ಲೆಸರೂ ಒಬ್ಬ ಸದಸ್ಯರಾಗಿದ್ದರು. ೪೬, ೪೭ ಮತ್ತು ೪೮ನೇ ಸಂವತ್ಸರಗಳಲ್ಲಿ (ಆಗ ಅಮೆರಿಕದ ನಿಯೋಗದ ಆಕ್ಟಿಂಗ್ ಸಭಾಪತಿಯಾಗಿದ್ದರು.) ಮತ್ತು ೫೦ರಲ್ಲಿ ವಿಶ್ವಸಂಸ್ಥೆಯ ಸರ್ವಸದಸ್ಯ ಸಭೆಯಲ್ಲಿ ಪ್ರತಿನಿಧಿಯಾಗಿ ಕೆಲಸ ಮಾಡಿದರು. ೪೫, ೪೭ ಮತ್ತು ೪೯ನೇ ಸಂವತ್ಸರಗಳಲ್ಲಿ ನಡೆದ ವಿದೇಶಾಂಗ ಸಚಿವರುಗಳ ಸಮಾವೇಶದಲ್ಲಿ— ವಿದೇಶಾಂಗ ಕಾರ್ಯದರ್ಶಿಗಳಾದ ಬೈರ್ನೆಸ್ ಮಾರ್ಷಲ್ ಮತ್ತು ಆಚೆಸನ್ ಈ ಮೂವರಿಗೆ ಸಲಹೆಗಾರರಾಗಿದ್ದರು.

೧೯೫೦ರಲ್ಲಿ ಒಂದು ವರ್ಷಕಾಲ ವಿದೇಶಾಂಗ ಸಚಿವ ಶಾಖೆಗೆ ಸಲಹೆಗಾರರಾಗಿ ಕೆಲಸ ಮಾಡಿದ ಮೇಲೆ ಅದೇ ವರ್ಷ ಸಪ್ಟೆಂಬರ್ ತಿಂಗಳಲ್ಲಿ ಸಾನ್‌ಫ್ರಾನ್ಸಿಸ್ಕೋವಿನಲ್ಲಿ ಸಹಿಯಾದ ಜಪಾನ್ ಶಾಂತಿ ಒಪ್ಪಂದದ ಸಂಧಾನಕ್ಕಾಗಿ ಡಲ್ಲೆಸರನ್ನು ವಿಶೇಷ ಪ್ರತಿನಿಧಿಯನ್ನಾಗಿ ರಾಯಭಾರಿ ಮಟ್ಟದ ಹುದ್ದೆಯನ್ನಿತ್ತು ನೇಮಿಸಲಾಯಿತು.

ಕಾನೂನು ಮತ್ತು ರಾಜತಂತ್ರಗಳಿಗೆ ವಿಶೇಷ ಶ್ರದ್ಧೆ ವಹಿಸದಂತೆ, ಅಮೆರಿಕದ ಕ್ರೈಸ್ತ ಚರ್ಚ್ ರಾಷ್ಟ್ರೀಯ ಸಲಹಾ ಸಮಿತಿಯಲ್ಲಿ ಪ್ರೆಸಿಬಿಟೇರಿಯನ್ ಲೇಮನ್ ಆಗಿಯೂ ಕೆಲಸ ಮಾಡಿದರು; ೧೯೪೦ರಲ್ಲಿ ನ್ಯಾಯಯುತವಾದ ಮತ್ತು ಶಾಶ್ವತವಾದ ಶಾಂತಿಗಾಗಿ ಆ ಸಮಿತಿ ಏರ್ಪಡಿಸಿದ ನಿಯೋಗದ ಮುಖ್ಯರಾಗಿ ಆಯ್ಕೆಗೊಂಡರು. ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ಚರ್ಚುಗಳಲ್ಲಿ ಶಾಂತಿ ಚಳುವಳಿಯಲ್ಲಿ ಸೇರಿ ಐದು ವರ್ಷಗಳ ಕಾಲ ಉತ್ಸಾಹವಾಗಿ ಅದರಲ್ಲಿ ಸೇವೆ ಸಲ್ಲಿಸಿದರು. ಆ ಅವಧಿ ತಮ್ಮ ಜೀವಮಾನ ಕಾಲದ ಅತ್ಯುತ್ತಮ ವರ್ಷಗಳು ಎನ್ನುತ್ತಾರೆ ಡಲ್ಲೆಸ್.

"ಯುದ್ಧ ಅನಿವಾರ್ಯವಲ್ಲ, ಆ ಬಗೆಗೆ ಏನಾದರೂ ಮಾಡುವುದು ಸಾಧ್ಯ" ಎಂದು ಡಲೆಸ್ ಒಮ್ಮೆ ಬರೆದರು. ಅವರ ಜೀವನದ ಬಹು ಭಾಗ ಆ ಏನಾದರೂ ಮಾಡುವ ಕಾರ್ಯಕ್ಕೆ ಸಮರ್ಪಿತವಾಗಿದೆಯೆಂಬುದಕ್ಕೆ ಆಧಾರವಿದೆ.

ಸ್ಥಾಪನೆ: 1906] ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ. 20,00,000/-
ಕ್ಷೇಮನಿಧಿ	—	ರೂ. 14,40,000/-
ಠೇವಣಾತಿಗಳು	—	ರೂ. 7,19,35,000/-
ಸಾಲಗಳು	—	ರೂ. 3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ. 9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ.

The Canara Banking Corporation Ltd.

Estd:- 1906] [H. O. UDIPI (S. India)

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಆಹಾರೋತ್ಪಾದನೆ

ಮುಂಗಾರು ಬೆಳೆಯ ಆಂದೋಲನ

ಅಧಿಕ ಆಹಾರೋತ್ಪಾದನೆಗೆ ಕೈಗೊಳ್ಳುವ ವಿವಿಧ ಕಾರ್ಯಕ್ರಮಗಳು

"ನಮ್ಮ ದೇಶದ ಪ್ರಥಮ ಶತ್ರು—ಹಸಿವೆಯನ್ನು ನಾಡಿನಿಂದ ಹೊಡೆದೋಡಿಸದೆ ಹೋದರೆ ನಮ್ಮ ಸ್ವಾತಂತ್ರ್ಯ ನಿರರ್ಥಕವೆನಿಸುವುದು.ಅದಕ್ಕಿರುವ ಮಾರ್ಗ ಒಂದೇ—ಅಧಿಕ ಆಹಾರೋತ್ಪಾದನೆ, ಆ ದಿಶೆಯಲ್ಲಿ ನಾವು ವಿಶ್ವಾಸದಿಂದ, ಧೈರ್ಯದಿಂದ ಕಾರ್ಯಕ್ಕೆ ತೊಡಗಬೇಕು. ಒಂದು ಹಿಡಿಕಾಳು ಬೆಳೆಯುವ ನೆಲದಲ್ಲಿ ಒಂದು ಖಂಡುಗ ಬೆಳೆಯುವಂತೆ, ಒಂದು ಹಸಿರೆಲೆಯ ಸ್ಥಳದಲ್ಲಿ ಸಾವಿರ ಹಸಿರೆಲೆಗಳಾಗುವಂತೆ ಎಲ್ಲ ಬಗೆಯಿಂದ ನಮ್ಮ ರೈತನಿಗೆ ನೆರವಾದರೆ ನಮ್ಮ ಕರ್ತವ್ಯವನ್ನು ನಾವು ಮಾಡಿದಂತಾಗುವುದು".

"ಆಹಾರದ ಕೊರತೆ ಕೇವಲ ಇಂದಿನ ಸಮಸ್ಯೆಯಲ್ಲ. ಅದೊಂದು ಹಳೆಯ ರೋಗ. ಅದು ವಾಸಿಯಾಗದೆ ರಾಷ್ಟ್ರ ಪುರುಷನ ಆರೋಗ್ಯ ಸುಧಾರಿಸಲಾರದು. ಆದರೆ ಈ ರೋಗ ನಿವಾರಣೆಗೆ ಮದ್ದು ಮತ್ತು ಚಿಕಿತ್ಸೆಗಳು ಕೂಡ ಅಷ್ಟೇ ತೀವ್ರತರವೂ ಕಟ್ಟುನಿಟ್ಟಾಗಿಯೂ ಇರಬೇಕಾಗುತ್ತದೆ. ಅಂಥ ಕ್ರಮಕ್ಕೆ ನಾವೀಗ ಸಿದ್ಧರಾಗಬೇಕು."

"ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಿಸುವ ಪ್ರಯತ್ನಗಳು ಕೂಡ ಅನೇಕ ವರ್ಷಗಳಿಂದ ನಡೆಯುತ್ತ ಬಂದಿವೆ. ದ್ವಿತೀಯ ಮಹಾಯುದ್ಧದ ಕಾಲದಲ್ಲಿಯೇ ಆಹಾರ ಧಾನ್ಯಗಳ ಧೋರಣಾ ಸಮಿತಿಯ ಶಿಫಾರಸಿನ ಮೇರೆಗೆ, ೧೯೪೩ರಲ್ಲಿ "ಅಧಿಕ ಆಹಾರ ಬೆಳೆಯಿರಿ" ಆಂದೋಲನ ಪ್ರಾರಂಭವಾಯಿತು. ಸ್ವಾತಂತ್ರ್ಯ ನಂತರದ ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಬೇಸಾಯಕ್ಕೆ ಪ್ರಾಮುಖ್ಯ ನೀಡಿ ಆಹಾರೋತ್ಪಾದನೆ ಹೆಚ್ಚಿಸಲು ಅವ್ಯಾಹತ ಪ್ರಯತ್ನಗಳು ನಡೆಯುತ್ತಲೇ ಇವೆ. ಈ ಪ್ರಯತ್ನಗಳ ಮೂಲಕ ದೇಶದಲ್ಲಿ ಆಹಾರದ ಉತ್ಪಾದನೆ ಖಂಡಿತ ಹೆಚ್ಚಾಗಿದೆ. ಆದರೆ ಬೆಳೆಯುತ್ತಿರುವ ಆಹಾರದ ಬೇಡಿಕೆಗೆ ಉತ್ಪನ್ನದ ಹೆಚ್ಚಳ ಅಷ್ಟೊಂದು ಅನುಗುಣವಾಗಿಲ್ಲ. ಕಳೆದ ಹಿಂಗಾರು ಹಂಗಾಮಿನಲ್ಲಿ ಭತ್ತ, ಜೋಳ, ಗೋಧಿ ಮತ್ತು ಕಡಲೆ ಬೆಳೆಗಳ ಉತ್ಪಾದನೆ ಹೆಚ್ಚಿಸುವ ಉದ್ದೇಶದಿಂದ ಒಂದು ಆಂದೋಲನವನ್ನು ಕೈಗೊಳ್ಳಲಾಗಿತ್ತು, ಅದರ ಫಲಿತಾಂಶಗಳು ತುಂಬ ಉತ್ತೇಜನಕಾರಿಯಾಗಿ ಕಂಡುಬಂದಿವೆ ಅದರಿಂದ ಪ್ರೇರಿತರಾಗಿ ಈಗ ನಮ್ಮ ರಾಜ್ಯದಾದ್ಯಂತ ಮುಂಗಾರು ಬೆಳೆಯ ಆಂದೋಲನವನ್ನು ಪ್ರಾರಂಭಿಸುತ್ತಿದ್ದೇವೆ. ಮುಂಬರುವ ಮುಂಗಾರು ಹಂಗಾಮಿನಲ್ಲಿ, ನಮ್ಮ ರಾಜ್ಯದ ಮೂರು ಅತಿಮುಖ್ಯ ಬೆಳೆಗಳಾದ ಭತ್ತ, ಮುಂಗಾರು ಜೋಳ ಮತ್ತು ರಾಗಿ ಈ ಮೂರು ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಸರ್ವವಿಧದ ಪ್ರಯತ್ನಗಳನ್ನು ಕೈಗೊಳ್ಳಬೇಕಾಗಿದೆ. ಪ್ರತ್ಯಕ್ಷ ಆಹಾರೋತ್ಪಾದನೆ ನಡೆಯುವ ಹೊಲಗಳಲ್ಲಿ ದುಡಿಯುವ ರೈತರಿಗೆ ಹೊಸ ತಂತ್ರ, ಹೊಸ ಮಾರ್ಗಗಳು, ಹೊಸ ಯೋಜನೆಗಳ ಪಂಚಯಮಾಡಿಕೊಡುವ ಕೆಲಸ ವ್ಯವಸಾಯ ಇಲಾಖೆಯವರಿಂದ ಈಗ ಹೆಚ್ಚು ತ್ವರಿತವಾಗಿ ನಡೆಯುವುದು ಅವಶ್ಯ. ರೈತರಲ್ಲಿ ಆಸೆ, ಉತ್ಸಾಹಗಳನ್ನು ಕುದುರಿಸಿ ಅವರನ್ನು ಅಧಿಕ ಆಹಾರೋತ್ಪಾದನೆಗೆ ಪ್ರೇರೇಪಿಸುವುದು ಅತಿ ಮುಖ್ಯವಾಗಿ ಆಗಬೇಕಾದ ಕೆಲಸ. ಈ ಆಂದೋಲನದಲ್ಲಿ ನಾವು ೬ ಲಕ್ಷ ಎಕರೆ ಭತ್ತದ ಕ್ಷೇತ್ರ, ೭ ಲಕ್ಷ ಎಕರೆ ಜೋಳದ ಕ್ಷೇತ್ರ ಮತ್ತು ೫ ಲಕ್ಷ ಎಕರೆ ರಾಗಿಯ ಕ್ಷೇತ್ರವನ್ನೂ ಸುಧಾರಿಸಿದ ವ್ಯವಸಾಯ ಪದ್ಧತಿಯ ಕೆಳಗೆ ತರುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಪ್ರತಿ ಹಳ್ಳಿಗೆ ಕನಿಷ್ಠ ಹತ್ತು ದಿಣ್ಣೀಗೊಬ್ಬರ ಗುಂಡಿಗಳನ್ನು ಸುಧಾರಿಸಿದ ರೀತಿಯಿಂದ ತುಂಬಿ ಒಳ್ಳೆಯ ಗೊಬ್ಬರ ತಯಾರಿಸುವುದು, ಹಿಪ್ಪೆಗೊಬ್ಬರ ತಯಾರಿಕೆಯನ್ನು ಹೆಚ್ಚಿಸುವುದು, ಹಸಿರು ಗೊಬ್ಬರ ಗಿಡಗಳನ್ನು ಬೆಳೆಯಿಸಿ ಅದರ ಪೂರೈಕೆಯನ್ನು ವಿಪುಲಗೊಳಿಸುವುದು, ಪ್ರತಿ ಹಳ್ಳಿಗೂ ಸುಧಾರಿಸಿದ ತಳಿಯ ಬೀಜ ಪೂರೈಸುವುದು, ರೋಗ ರುಜಿನ ಹಾಗೂ ಕ್ರಿಮಿ ಕೀಟಗಳ ಕಾಟವನ್ನು ತಡೆಗಟ್ಟುವುದು ಈ ಮೊದಲಾದ ಕಾರ್ಯಗಳನ್ನು ಆಂದೋಲನದಲ್ಲಿ ಮಹತ್ವದ ಕಾರ್ಯಕ್ರಮಗಳನ್ನಾಗಿ ಇಟ್ಟುಕೊಳ್ಳಲಾಗಿದೆ. ನಾವು ಗುರಿಯಾಗಿಟ್ಟುಕೊಂಡ ಒಟ್ಟು ೧೮ ಲಕ್ಷ ಎಕರೆ ಕ್ಷೇತ್ರದಲ್ಲಿ ಸುಮಾರು ೩ ಲಕ್ಷ ಟನ್ನುಗಳಷ್ಟು ಅಧಿಕ ಆಹಾರ ಉತ್ಪನ್ನವಾಗುವಂತೆ ಬಲವತ್ತರ ಕಾರ್ಯವನ್ನು ನಡೆಸುವುದು ಆಂದೋಲನದ ಅಂತಿಮ ಧ್ಯೇಯವೆನ್ನಬಹುದು.

"ನಮ್ಮ ಮುಂದಿರುವ ಈ ಹೊಣೆ ಅತ್ಯಂತ ಗುರುತರವಾದುದು. ನಮ್ಮಲ್ಲಿಯ ಪ್ರತಿಯೊಬ್ಬ ನಾಗರಿಕರು, ರೈತರು ಹಾಗೂ ಸರಕಾರಿ ಅಧಿಕಾರಿಗಳು ಎಲ್ಲರೂ ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಿದರೇನೇ ಅದು ಯಶಸ್ವಿಯಾಗಿ ಫಲಕಾರಿಯಾಗಬಲ್ಲದು. ವ್ಯವಸಾಯ ಸಂಘ, ಯುವಕ ರೈತ ಸಂಘ, ಭಾರತ ಸೇವಕ ಸಮಾಜ ಮುಂತಾದ ಸಂಘ ಸಂಸ್ಥೆಗಳಿಗಲ್ಲ ವಕ್ಕೂ ಇಲ್ಲಿ ಮಹತ್ವದ ಪಾತ್ರಗಳಿವೆ."

"ಈ ಆಂದೋಲನವು ಯಶಸ್ವಿಯಾಗುವಂತೆ ಮಾಡುವ ಹೊಣೆ ನಮ್ಮಲ್ಲಿ ಪ್ರತಿಯೊಬ್ಬರ ಮೇಲೂ ಇದೆಯೆಂದೂ ನಾನು ಪುನಃ ಅರಿಕೆ ಮಾಡಿಕೊಳ್ಳಬಯಸುತ್ತೇನೆ.

ಸಾಹಿತ್ಯ ಸಮೀಕ್ಷೆ

ನಾರಣಪ್ಪನು ಚಿತ್ರಿಸಿದ ಮಹಾಪಾತ್ರ-ಭೀಮಸೇನ

ಅಪರಿಮಿತ ವೀರನೂ ಅಪಾರ ದಯಾವಂತನೂ ಆಗಿರುವುದರಿಂದಲೇ ಆತ ಮನ ಸೂರೆಗೊಂಡಿದ್ದಾನೆ.

'ಸುಳಿದಲೆಯ ಕೆಮ್ಮೀಸೆಗಳ ಕರ್ಕಶದ ಕೆಂದಳದ ಕೇಸರಿಯ ಕಂಗಳ ಕುಂದರದ ನಚ್ಚವಿಯ'—ನಾರಣಪ್ಪನ ಈ ಭೀಮನ ರೂಪವನ್ನು ನೆನೆದರೆ ಈಗಲೂ ಅನೇಕರಿಗೆ ನಡುಕ ಬರುವುದುಂಟು 'ಕುಮಾರವ್ಯಾಸ' (ನಾರಣಪ್ಪ)ನ ಭಾರತದಲ್ಲಿ ಕಳೆಕಟ್ಟುವ, ವೀರ ಗಾಂಭೀರ್ಯದಿಂದ ಶೋಭಿಸುವ ಪಾತ್ರವೆಂದರೆ ಭೀಮ! ನಾರಣಪ್ಪನ ಲೇಖನಿಯಲ್ಲಿ ಭೀಮ ಪರಾಕ್ರಮಶಾಲಿಯಾಗಿ ಕಂಗೊಳಿಸಿದ್ದಾನೆ, ಆತ್ಮಸ್ಥೈರ್ಯವುಳ್ಳ ಮಾನವಂತನಾಗಿ ವರ್ಣಿಸಲ್ಪಟ್ಟಿದ್ದಾನೆ.

ಭೀಮ ತನ್ನ ಗದೆಯನ್ನು ಹಿಡಿದು ಯುದ್ಧರಂಗಕ್ಕೆ ಕಾಲಿಟ್ಟರೆ ಸಾಕು, ಶತ್ರುಪಡೆಗೆ ಒದಗಿತ್ತು ಪೀಕಲಾಟ! ಅವನ ನಡಿಗೆಯ ಸಮಯದಲ್ಲಿಯೇ ಅದೆಷ್ಟೋ ಆನೆಗಳ, ರಥಗಳು, ಲೆಕ್ಕವಿಲ್ಲದಷ್ಟು ಸೈನಿಕರು ಜಜ್ಜಿ ಹೋಗುತ್ತಿದ್ದರು. ಇನ್ನು ಶೌರ್ಯಪ್ರದರ್ಶನದಲ್ಲೋ ಬಕ, ಹಿಡಿಂಬ, ಕೀಚಕ, ಜರಾ, ಸಂಧ ಮುಂತಾದವರೆಲ್ಲರೂ ತೃಣಸಮಾನ! ತನ್ನ ಮೈಯ ತೀಟೆಯನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ಅವರೊಡನೆ 'ಹೋರಾಟ'ವಾಡಿದ ಅಷ್ಟೆ! ಅಂತೆಯೇ ಆತನಿಗೆ ತನ್ನ ಗದಾದಂಡ, ಬಾಹುಬಲದಲ್ಲಿ ಅಚಲವಾದ ನಂಬಿಕೆ ಕೊನೆಯ ವರೆಗೂ ಭೀಮನ ಆ ನಂಬಿಕೆ ಹುಸಿಯಾಗಲಿಲ್ಲ.

ಭೀಮನ ಯಮ ಧೈರ್ಯವನ್ನು ನೋಡಿ: ಅಶ್ವತ್ಥಾಮನು ಮಹಾ ನಾರಾಯಣಾಸ್ತ್ರವನ್ನು ಪ್ರಯೋಗಿಸಿದಾಗ, ಪಾಂಡವ ಪಡೆಯೆಲ್ಲಾ ಆಯುಧಗಳನ್ನು ಬದಿಗಿಟ್ಟು ಅಸ್ತ್ರಕ್ಕೆ ನಮಿಸಿದರೆ ಕಲಿ ಭೀಮ ಹಾಗೆ ಮಾಡಿಯಾನೆ? ಇಲ್ಲ! ಆತ ಆ ಹೇಡಿತನಕ್ಕೆ ಹೇಸಿ, "ದೇಹ ಕೀರ್ತಿಗಳೊಳಗೆ ನಿಲುವುದು ದೇಹವೋ ಕೀರ್ತಿಯೊ ಮರಾಂತಕ ಬೇಹುದನು ಬೆಸಸಿದೊಡೆ ಮಾಡೆನು........ನೋಡಾ ಸಾಹಸವನಿನ್ನೆನುತ ಮುರಿದನು ಸರಳ ಸಮ್ಮುಖಕೆ"—ಅಬ್ಬಾ ಅವನ ಧೈರ್ಯವೇ! ಅಸ್ತ್ರದ ಮುಂದೆ ಧೈರ್ಯದಿಂದ ಅಚಲನಾಗಿ ನಿಂತಾಗ, ಮೈಗೆಲ್ಲಾ ಜ್ವಾಲೆಗಳು ಮುತ್ತಿ ಅವನು ಮೂರ್ಛಿತನಾಗ ತೊಡಗಿದಾಗ ಕೃಷ್ಣನು ಬಂದು ಅವನ ಆಯುಧಗಳನ್ನು ಕಸಿದು ಅವನನ್ನು ಉಳಿಸಿದನು. ಅದೆಂತಾದರೂ ಇರಲಿ ಅವನ ಪೌರುಷ ನಮ್ಮ ಹೃದಯವನ್ನು ಹೊಕ್ಕು 'ಭಲೆ ಭೀಮಸೇನಾ!' ಎನ್ನಿಸುವುದು. ವ್ಯೂಹ ಮುಖದಲ್ಲಿದ್ದ ದ್ರೋಣರು ತನಗೆ ವಿನಯದಿಂದ ವಂದಿಸಿ ಒಳಗೆ ಹೋಗೆಂದಾಜ್ಞಾಪಿಸಲು "ಈತನೊಡ ನಂಬಿ ನಲಿ ಕಾದಲು ಭೂತನಾಥಂಗರಿ"ದೆಂದು ಅರಿತು ಭೀಮ "ಇದು ನಿಮಗೆ ವಂದನೆಯೆನುತ ನಿಜ ಗದೆಯಲಾತನ ರಥವ ಹುಡಿಗಟ್ಟಿದನು." ಇಲ್ಲಿ ಭೀಮನ ಶೌರ್ಯದ ನಿಜ ಸ್ವರೂಪ ಕಣ್ಣಿಗೆ ಕಟ್ಟುತ್ತದೆ. ಸರೋವರದಲ್ಲಿ ಜೀವದಾಸೆಯಿಂದ ಮುಳುಗಿರುವ ಸುಯೋಧನನು ಉಳಿದ ಪಾಂಡವರೆಲ್ಲರೂ ಎಷ್ಟು ಹಳಿದರೂ ಬರದಿದ್ದಾಗ, ಭೀಮನು ಅವನನ್ನು ಕೆರಳಿಸುವ ಸ್ವಾರಸ್ಯವನ್ನು ಗಮನಿಸಿ. "ಭೀಮನೆನೆ ಧುಗಿಲೆಂಬ ರೋಷದ ತಾಮಸದ ಬೀಳ್ಕೊಟ್ಟೆಲಾ ನಿರ್ನಾಮವಾಯಿತೆ ಬಿರುದು ಪಾಂಡವ ತಿಮಿರ ರವಿಯೆಂಬ! ಭೀಮ ವನದಾವಾಗ್ನಿ ಹೊರವಡು ಭೀಮಭಾಸ್ಕರ ರಾಹು ಹೊರವಡು!"

ಇಲ್ಲಿಯ ವರೆಗೆ ಭೀಮನ ಗುಣದ ಒಂದು ಮುಖವಾಯಿತು. ಇನ್ನೊಂದು ಮುಖವೇ ಆತನ ಸರಳತೆ ನಿಷ್ಕಪಟತೆ, ಹೆಂಗರುಳನ್ನು ತೋರಿಸುತ್ತದೆ. ಆತನಿಗೆ ತನ್ನ ಬಂಧುವರ್ಗದ ಮೇಲೆ ಅಪಾರ ಪ್ರೇಮ. ಅವರಿಗೆ ಸ್ವಲ್ಪ ನೋವಾದರೆ ಅದು ತನಗೆ ನೋವಾದಂತೆ ಭಾವಿಸುವನು. ಅದರಲ್ಲೂ ರಾಜ ಕುವರಿಯಾದ ದ್ರೌಪದಿಯು ಪಡುತ್ತಿದ್ದ ಕಷ್ಟಗಳನ್ನು ಕಂಡು ಅವನ ಹೃದಯವೇ ಕರಗಿ ನೀರಾಗುತ್ತಿತ್ತು! ಕೀಚಕನಿಂದ ಅವಮಾನಿತಳಾದ ದ್ರೌಪದಿ, ತನ್ನ ರಕ್ಷಣೆ ಬೇರಾರಿಂದಲೂ ಅಸಾಧ್ಯವೆಂದು ಬಗೆದು ಭೀಮನ ಮೊರೆ ಹೋಗುತ್ತಾಳೆ ಆತನಲ್ಲಿ ತನ್ನ ದುಃಖವನ್ನು ತೋಡಿಕೊಂಡಾಗ "ಕಂಬನಿದುಂಬಿದನು ಕಡುನೆನೆದುದಂತಃಕರಣ ರೋಷದ ಧೆನತೆ ಹೆಚ್ಚಿತು ಹಗೆಗಳನ್ನು ಹಿಂಡಿದನು ಮನದೊಳಗೆ," ಆಕೆಯ ಅಸಹಾಯಕತೆಯನ್ನು ನೆನೆದು "ಅರಸಿಬಿಡು ಜಾತಿಯನ್ನು ವಿಸ್ತರಿಸಲೇಕೆಮ್ಮಣ್ಣನಾಜ್ಞೆಯ ಗೆರೆಯ ದಾಂಟಿಸೆನು. ಹೋಗೆಂದನಾ ಭೀಮ."

ನಾರಣಪ್ಪನ ಭೀಮನಿಗೆ ಗುರುಹಿರಿಯರಲ್ಲಿ ಅಪಾರವಾದ ಗೌರವವಿದ್ದಿತು. ಒಮ್ಮೆ ಧರ್ಮಜ ತಮ್ಮಂದಿರ ಅಭಿಪ್ರಾಯವನ್ನು ಕೇಳುತ್ತಾ ಬಂದಾಗ, "ಜೀಯ ಬಿನ್ನಹವೆಂದು ದೇಹಚ್ಛಾಯೆಗುಂಟೇ ಬೇರೆ ಚೇಷ್ಟೆ....ಸ್ವಾತಂತ್ರ್ಯವೆವಗಿಲ್ಲವೆಂದನಾ ಭೀಮ" ಎಂತಹ ವಿನಯಶಾಲಿ. ಅಂತೆಯೇ ಶ್ರೀ ಕೃಷ್ಣನನ್ನು ಕಂಡರೆ ಮೇಲ್ಪಟ್ಟದ ಭಕ್ತಿ ಅಂತೂ ನಾರಣಪ್ಪನ 'ಭೀಮ' ಒಂದುಅಣಿ ಮುತ್ತು. ಎಂದೆಂದಿಗೂ ಕನ್ನಡಿಗರನ್ನು ಉಲ್ಲಾಸಗೊಳಿಸುವ,ರೋಮಾಂಚನಗೊಳಿಸುವ ಅವರ,ಹೃದಯದಲ್ಲಿ ವೀರಭಾವನೆಯನ್ನು ಉದ್ರೇಕಿಸುವ ಭೀಮ ಪಾತ್ರವನ್ನು ರಚಿಸಿದ ನಾರಣಪ್ಪನನ್ನು 'ಎರಡನೆ ಬ್ರಹ್ಮ'ನೆಂದು ಕರೆದರೆ ತಪ್ಪಾಗಲಾರದು.

(ಸಾಧಾರ)

—ಎ. ಗಣಪಯ್ಯ ಅಲ್ಸೆ, ಐರೋಡಿ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಜನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮೂಲಕ ಕಳಿಸಲಾಗುವುದು.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೋ, ಉಡುಪಿ.

ಕನ್ನಡ ಪುಸ್ತಕಗಳಿಗೆ—

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಹಾಸ್ಯ ವಿಮರ್ಶೆ

ಸುದೃಢ ಆರೋಗ್ಯಕ್ಕೆ ನಗೆಯೇ ಮೂಲ ಕಾರಣ

ಸಂತೋಷವೇ ಯೌವನ, ಚಿಂತೆಯೇ ಮುಪ್ಪು ಎಂಬ ಗಾದೆ ಮಾತು ಎಂದಿಗೂ ಸುಳ್ಳಲ್ಲ.

"ಪ್ರಪಂಚದ ಗಿಡಮರಗಳ ಹಸುರು ಒಣಗಿ ಹೋದರೂ ಪಕ್ಷಿಗಳ ಕಳರವವು ನಿಂತು ಮೌನ ಆವರಿಸಿದರೂ, ಸೂರ್ಯ ಬಿಂಬವನ್ನು ರಾಹುವು ಗ್ರಹಣ ಮಾಡಿದರೂ ಮಿತ್ರ ಬಾಂಧವರು ಕಂಟಕಾಕೀರ್ಣ ಮಾರ್ಗದಲ್ಲಿಯೇ ನನ್ನನ್ನು ಏಕಾಕಿಯಾಗಿ ಬಿಟ್ಟು ಅಗಲಿದರೂ, ಆಕಾಶವು ನನ್ನ ಮೇಲೆ ಸಿಟ್ಟಿನಿಂದ ನನ್ನ ಅದೃಷ್ಟವೇ ಕೊಚ್ಚಿ ಹೋಗುವಂತೆ ಮಳೆ ಸುರಿಸಿದರೂ, ಹೇ, ಪರಮಾತ್ಮನೇ, ನೀನು ನನ್ನ ತುಟಿಗಳಲ್ಲಿ ಸದಾಕಾಲವೂ ನಗೆಯ ಮಿನುಗುವ ರೇಖೆಯೊಂದನ್ನು ಎಳೆಯುವ ಕೃಪೆ ಮಾಡಬೇಕು."

ಜಪಾನದ ಯಶಸ್ವೀ ಕವಿಯಾದ ಯೋನೆನಾಗೋಚಿಯ ಈ ಪ್ರಾರ್ಥನೆಯು ತುಂಬ ಸಾರಗರ್ಭಿತವಾಗಿದೆ. ಸಂಸಾರದ ಒಂದು ಹಿರಿಯ ಮೂಲಭೂತವಾದ ಸಮಸ್ಯೆಯನ್ನು ಇದರಲ್ಲಿ ಯಥಾರ್ಥಗೊಳಿಸುವ ಪ್ರಯತ್ನ ನಡೆದಿದೆ. ಅಲ್ಲದೇ ಇದರಿಂದ ಜಪಾನೀ ಜಾತಿಯ ಜೀವನ ದರ್ಶನದ ಮೇಲೆಯೂ ಹೊಸ ಪ್ರಕಾಶ ಬೀಳುತ್ತದೆ.

ಜಾಪಾನೀಯರು ನಗುವಾಗ ಗಹಗಹಿಸಿಯೇ ನಗುತ್ತಾರೆ. ಅವರು ನಗುತ್ತಿರುವಾಗ ಎದ್ದ ನಗುವಿನ ಕಿರಣಗಳ ಪ್ರಕಾಶದಿಂದ ಆಸುಪಾಸಿನ ವಾತಾವರಣವೇ ಪ್ರತಿಫಲಿತವಾಗುತ್ತದೆ.

ನೀವೂ ಹೃದಯ ತೆರೆದು ನಗುತ್ತೀರಾ? ಎಲ್ಲ ಕಷ್ಟಗಳನ್ನೂ ಹಿಂದಕ್ಕೆ ಉಳಿಸಿ, ಜೀವನದ ಎಲ್ಲ ಶೂಲೆಗಳನ್ನೂ ಮರೆತು ಬಿಟ್ಟು, ಒಂದು ಕ್ಷಣದ ಮಟ್ಟಿಗಾದರೂ ನೀವು ಬಾಯಿತುಂಬ ನಗಬಲ್ಲಿರಾ?

ಪ್ರಾಯಃ ಈ ಪ್ರಶ್ನೆಯ ಉತ್ತರವನ್ನು ಹೊಂದಿಕೊಂಡೇ ನಿಮ್ಮ ಸಾಮಾನ್ಯ ಮಾನಸಿಕ ಮತ್ತು ಶಾರೀರಿಕ ಆರೋಗ್ಯದ ಬಗ್ಗೆ ತಿಳಿದುಕೊಳ್ಳಬಹುದು. ಹಾಸ್ಯ ಎಂಬುದು ಪ್ರಪಂಚದಲ್ಲಿ ಇತರ ಎಲ್ಲ ವಸ್ತುಗಳಿಗಿಂತ ಅತ್ಯಮೂಲ್ಯವಾದುದು; ಈ ಅಮೂಲ್ಯ ಸಂಪತ್ತನ್ನು ಪಡೆದವನೇ ಸೃಷ್ಟಿಯಲ್ಲಿ ಭಾಗ್ಯಶಾಲಿ ಎನಿಸುತ್ತಾನೆ. ನೀವು ನಿಮ್ಮ ಎಲ್ಲಾ ದುಃಖಗಳು, ಎಲ್ಲಾ ಕಟು ಅನುಭವಗಳು, ಎಲ್ಲಾ ಸಮಸ್ಯೆಗಳನ್ನೂ ಹಾಸ್ಯ ಮಹಾಸಾಗರದಲ್ಲಿ ಮುಳುಗಿಸಿಟ್ಟು ನಿಮ್ಮ ಮನಸ್ಸಿನ ಭಾರವನ್ನು ಹಗುರಮಾಡಿಕೊಳ್ಳಬಹುದು. ನಿಮ್ಮ ಸಮಸ್ಯೆಗಳೆಲ್ಲಾ ಇಷ್ಟರಿಂದಲೇ ಪೂರ್ಣವಾಗುವುದಿಲ್ಲವೆಂಬುದು ಸಹಜವಾದರೂ ಒಂದು ಕ್ಷಣದ ಮಟ್ಟಿಗೆ ಅವೆಲ್ಲವನ್ನೂ ಮರೆತುಬಿಡುವುದರಿಂದ ನೀವು ಮತ್ತೆ ಸುಲಭವಾಗಿ ನಿಮ್ಮ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬಹುದು. ಸಮಸ್ಯಾ ಘನ ಭಾರವು ನಿಮಗೆ ತೀರ ಲಘುವಾಗಿ ಪರಿಣಮಿಸುವುದು. ತನು ಮತ್ತು ಮನಗಳ ಪೋಷಣೆಗೆ ಹಾಸ್ಯವು ಉಪಯುಕ್ತ ಔಷಧಿ ಎಂದು ಸುಪ್ರಸಿದ್ಧ ಡಾಕ್ಟರರೂ ಮನೋವೈಜ್ಞಾನಿಕರೂ ಏಕ ಕಂಠದಿಂದ ಉದ್ಘೋಷಿಸುತ್ತಾರೆ.

ಗ್ರೀವಾಲ್ಡಿಯು ಇಟಲಿಯ ಹಾಸ್ಯರಸ ಲೇಖಕನೆಂದು ಹೆಸರು ಪಡೆದಿದ್ದಾನೆ. ಆತನ ಕೃತಿಗಳನ್ನು ಓದಿದರೆ, ಉದಾಸೀನತೆಯಿಂದ ಕೂಡಿದವನಾದರೂ ಮನಬಿಚ್ಚಿ ನಗತೊಡಗುತ್ತಾನೆ. ಒಂದು ಬಾರಿ ಗ್ರೀವಾಲ್ಡಿಯ ಆರೋಗ್ಯ ಕೆಟ್ಟು ಹೋಯಿತು. ಆಗವನು ಇಟಲಿಯ ಒಂದು ಗ್ರಾಮದಲ್ಲಿ ದಿನಗಳೆಯುತ್ತಿದ್ದನು. ಆರೋಗ್ಯವು ಉತ್ತಮವಾಗುವ ಸಲ್ಲಕ್ಷಣಗಳು ತೋರದಿರಲು ಆತ ಕೊನೆಗೆ ಒಬ್ಬ ಡಾಕ್ಟರರಲ್ಲಿಗೆ ಹೋದನು. ಈ ಡಾಕ್ಟರರಿಗೆ ಗ್ರೀವಾಲ್ಡಿಯ ಕೃತಿ ಪರಿಚಯವಿತ್ತು; ಆದರೂ ಲೇಖಕನನ್ನು ಮಾತ್ರ ಆ ಮೊದಲು ಎಂದೂ ಕಂಡಿರಲಿಲ್ಲ.

ಗ್ರೀವಾಲ್ಡಿಯು ತನ್ನ ಶರೀರದಲ್ಲಿನ ದೋಷಗಳನ್ನು ಹೇಳಿದನು. ಸಾಕಷ್ಟು ಸಮಯ ಪರೀಕ್ಷೆ ನಡೆಸಿ, ಆಲೋಚಿಸಿ ವೈದ್ಯರು ಹೇಳಿದರು: "ನೀವು ಅನಾವಶ್ಯಕವಾದ ಚಿಂತೆಯನ್ನು ಮಾಡುತ್ತಿರುವುದರಿಂದಲೇ ಅನಾರೋಗ್ಯವಿದೆ. ಈಗಲೂ ನೀವು ಉದಾಸರಾಗಿಯೇ ಕಾಣುವಿರಲ್ಲಾ? ನೀವು ನಿರರ್ಥಕವಾಗಿ ಈ ರೀತಿ ದಿನಗಳೆಯುತ್ತಿರುವಿರಿ. ನನ್ನ ತಿಳುವಳಿಕೆಗೆ ಬಂದಂತೆ ನಿಮ್ಮ ರೋಗಕ್ಕೆ ಒಂದೇ ಒಂದು ಔಷಧವಿದೆ. ನೀವು ಪ್ರಸಿದ್ಧ ಹಾಸ್ಯ ಲೇಖಕ ಗ್ರೀವಾಲ್ಡಿಯ ಕೃತಿಗಳನ್ನು ತಪ್ಪದೆ ಓದಿರಿ. ಆಗ ನೀವು ನಗುನಗುತ್ತ ಅನಾಯಾಸೇನ ನಿಮ್ಮ ರೋಗದಿಂದ ಮುಕ್ತರಾಗುವಿರಿ." ಡಾಕ್ಟರರ ಮಾತು ಕೇಳಿ ಗ್ರೀವಾಲ್ಡಿಯು ನಕ್ಕು ಬಿಟ್ಟನು; ಸತ್ಯ ಸಂಗತಿ ತಿಳಿದಾಗ ಡಾಕ್ಟರರ ನಗೆಯೂ ಬೇಲಿ ಹರಿದು ಹರಿಯಿತು.

ನಿಮಗೆ ನಗು ಏತಕ್ಕೆ ಬರುತ್ತದೆ? ಈ ಪ್ರಶ್ನೆಯನ್ನು ಉತ್ತರಿಸುವುದು ಅಷ್ಟು ಸುಲಭವಲ್ಲ. ಪರರ ಅಬಲತೆ ಮತ್ತು ದುರ್ದೆಶೆಗಳನ್ನು ಕಂಡು ನಗು ಬರುತ್ತದೆ ಎಂದು ವಿದ್ವಾಂಸರ ಮತ. ಯಾರಾದರೂ ಮಾರ್ಗದಲ್ಲಿ ನಡೆ ನಡೆಯುತ್ತ ಹೋಗುವಾಗ ಜಾರಿ ಬಿದ್ದರೆ, ಆ ರೀತಿ ಬಿದ್ದವರು ನೀವೇ ಸ್ವತಃ ಅಲ್ಲವಾದುದರಿಂದ ನೀವು ನಗತೊಡಗುತ್ತೀರಿ. ನೀವು ಜಾರಿ ಬೀಳದಷ್ಟು ಎಚ್ಚರಿಕೆ ವಹಿಸಿದ್ದೀರಿ; ಅವರು ನಿಮ್ಮಷ್ಟು ಹೊಂದಿಸಿ ಕೊಂಡುಹೋಗಲು ಅಸಮರ್ಥರಾಗಿದ್ದಾರೆ; ಎಂತಲೇ ಬೀಳುವುದಕ್ಕೆ ಮೂಲ ಕಾರಣವೇ ಅವರ ತಪ್ಪು. ಈ ಕಾರಣದಿಂದಲೇ ನಿಮಗೆ ನಗು ಬಿದ್ದು ಬಿದ್ದು ಬರುತ್ತದೆ. ಇದೇ ರೀತಿಯಲ್ಲಿ ಯಾವನಾದರೂ ಮೂರ್ಖನನ್ನು ಕಂಡರೆ, ನಿಮಗೆ ನಗು ಬಾರದುಳಿಯದು. ನಿಮ್ಮ ಬುದ್ಧಿವಂತಿಕೆಯ ಬಗ್ಗೆ ನಿಮಗರಿವಿಲ್ಲದಂತೆಯೇ ಒಂದು ಅವ್ಯಕ್ತ ಸಂತೋಷ ನಿಮ್ಮ ಮನಸ್ಸಿನಲ್ಲಿರುವುದರಿಂದಲೇ ನೀವು ನಗತೊಡಗುತ್ತೀರಿ.

ಮಾನಸ ಶಾಸ್ತ್ರಜ್ಞರು ಇನ್ನು ಕೆಲವು ನಿರ್ಧಾರಕ್ಕೆ ಬಂದಿದ್ದಾರೆ. ಅವರ ಅಂಬೋಣದಂತೆ ಈ ಪ್ರಸಂಗ ಯಾವಾಗಲೂ ನಡೆಯುವುದಿಲ್ಲ. ಓರ್ವ ಮುದುಕ ಹಾಗೂ ರೋಗಿಷ್ಠನು ಬಾಳೆಹಣ್ಣಿನ ಸಿಪ್ಪೆಯನ್ನು ಮೆಟ್ಟಿ ಜಾರಿ ಬಿದ್ದನೆಂದರೆ, ಆಗ ನಮಗೆ ನಗು ಬರುವುದಿಲ್ಲ. ಆದರೆ ಬಹಳ ಎಚ್ಚರಿಕೆಯಿಂದ ನಡೆಯುವವನು ಬಿದ್ದರೆ ಮಾತ್ರ ನಗು ಬಂದೇ ತೀರುತ್ತದೆ. ಈ ನಗೆಯು ಆತನಲ್ಲಿರುವ ಅಹಂಕಾರದಿಂದ ನಮಗೆ ಬರುತ್ತದೆ ಎನ್ನುತ್ತಾರೆ.

ಪ್ರಖ್ಯಾತ ಮನೋ ವಿಶ್ಲೇಷಕ ಫ್ರಾಯಡನ ಮತಾನುಸಾರ ಓರ್ವ ಅಹಂಕಾರಿ ಮನುಷ್ಯನ ಅಹಂಕಾರವು ವಿರೋಧವೆದುರಿಸುವ ಘಟನೆ ಸಂಭವಿಸಿದಾಗ, ನಮಗಿಂತ ಹಿರಿಯ ಸ್ಥಾನದಲ್ಲಿರುವ ವ್ಯಕ್ತಿ ಕಾರಣಾಂತರಗಳಿಂದ ಜಾರಿ ಬಿದ್ದಾಗ ನಮಗೆ ನಗು ಬರುವುದು ಎನ್ನುತ್ತಾನೆ. ಅವನು ಜಾರಿದಾಗ, ನಮ್ಮ ಮನಸ್ಸು ಅವನನ್ನು ಹೊಡೆಯುತ್ತದೆ; ಅವನ ಹಿಡಿತದಿಂದ ಬಿಡುಗಡೆಹೊಂದಿದ ಮನಸ್ಸು ಸ್ವಾತಂತ್ರ್ಯದಿಂದ ವಿಜಯಗಳಿಸಿ ಹಾಸ್ಯ ಲಹರಿಗಳನ್ನೇಳಿಸುತ್ತದೆ.

ನಗೆ ಏಕೆ ಬರುತ್ತದೆ? ಈ ಪ್ರಶ್ನೆಯು ಆದಿಯಿಂದ ಹಿಡಿದು ಅಂತ್ಯದ ವರೆಗೆ ಮನೋವಿಜ್ಞಾನವೇತ್ತರ ನೀರಸ ಸಂಶೋಧನೆಯ ವಿಷಯವೆನಿಸಿದೆ. ಆದರೂ ನಾವು ನಕ್ಕು ನಮ್ಮ ಮನಸ್ಸಿನ ಭಾರವನ್ನು ಹಗುರ ಮಾಡಿಕೊಳ್ಳುತ್ತೇವೆ ಎಂಬುದಾಗಿ ನಿರ್ವಿವಾದವಾಗಿ ಅನ್ನುತ್ತಾರೆ. ನಮ್ಮೊಳಗಿರುವ ವಿಷಾದ ಮತ್ತು ಅವಸಾದಗಳು ಬಿರುಗಾಳಿಗೆ ಹಾರಿಹೋಗುವ ಹತ್ತಿಯಂತೆ ಹಾರಿ ದೂರವಾಗುತ್ತವೆ ಎನ್ನುತ್ತಾರೆ ಅವರು.

ಆದರೆ, ನಗುವುದು ಇಷ್ಟೊಂದು ಸುಲಭ ಮತ್ತು ಉಪಯೋಗಿ ಕಾರ್ಯವಾದರೂ ನಮ್ಮಲ್ಲಿ ಹೆಚ್ಚಿನವರು ಮನಸ್ಸು ಬಿಟ್ಟು ನಗಲಾರರು. ನಾವು ನಗುವ ಪ್ರಶ್ನೆಯ ಮೇಲೆ ಗಂಭೀರವಾಗಿ ವಿಚಾರಿಸದಿರುವುದೂ ಅತ್ಯಂತ ಸರಳ ಪ್ರಶ್ನೆಯನ್ನು ಬಹಳ ಗಂಭೀರವೆಂದು ತಿಳಿದುಕೊಳ್ಳುವುದೂ ಇದಕ್ಕೆ ಕಾರಣವಾಗಿರಬಹುದು.

ಬಾಯಿ ತೆರೆದು ನಗುವುದು ಅಶಿಷ್ಟತೆಯ ಲಕ್ಷಣವೆನ್ನುವವರು ಹೆಚ್ಚು ಮಂದಿಯಿದ್ದಾರೆ. ನೀವು ಗಟ್ಟಿಯಾಗಿ ನಕ್ಕುಬಿಟ್ಟರೆ, ನಿಮ್ಮ ಪಕ್ಕಗಳಲ್ಲಿರುವ ಜನರು ನಿಮ್ಮನ್ನು ಅಶಿಷ್ಟರೆಂದು ತಿಳಿದುಕೊಂಡಾರು ಎಂಬುದೇ ಇದಕ್ಕೆ ಕಾರಣ. ಅದ ಕಾರಣ ಮುಗುಳು ನಗುವುದೇ ಅವರ ಅಭಿಪ್ರಾಯದಲ್ಲಿ ಉತ್ತಮ, ಶಿಷ್ಟ ಸಂಪ್ರದಾಯ.

ನಮ್ಮ ಜೀವನ ಅಪರಿಮಿತ ಉತ್ತರದಾಯಿತ್ವಗಳಿಂದಲೂ ಜಟಿಲತೆಗಳಿಂದಲೂ ಕೂಡಿ ಹೋಗಿದೆ. ಸಮಸ್ಯೆಗಳಿವೆ, ಚಿಂತೆಗಳಿವೆ ಜೀವನವ್ಯಾಮೋಹವಿದೆ, ಇತರ ವಿವಿಧ ಆಶೆ—ಆಶಂಕೆಗಳಿವೆ. ಅದುದರಿಂದ ನಾವು ನಗದೇ ಹೋದರೆ, ನಮಗೆ ಭಾರವಾಗಿ ಪರಿಣಮಿಸುತ್ತದೆ. ಗಾಂಧೀಜಿಯವರು ನಗೆಗೆ ತುಂಬ ಪ್ರಾಶಸ್ತ್ಯವೀಯುತ್ತಿದ್ದರು. ಒಂದು ಬಾರಿ ಅಮೇರಿಕೆಯ ಸುಪ್ರಸಿದ್ಧ ಪತ್ರಿಕಾಕರ್ತ ಲುಯಿಫಿಶರನು ಗಾಂಧೀಜಿಯವರೊಡನೆ ಕೇಳಿದನು:—"ನೀವು ಜಟಿಲತೆಯ ಸಾಗರದಲ್ಲಿ ಮುಳುಗಿದ್ದರೂ ಸಂತೋಷದಿಂದ ನಕ್ಕುಬಿಡುತ್ತೀರಿ." ಗಾಂಧೀಜಿಯವರಿಗೆ ಈ ಪ್ರಶ್ನೆ ಕೇಳಿದೊಡನೆಯೇ ನಗು ಬಂದಿತು! "ನಗೆಯು ಮನಸ್ಸಿನ ಬಂಧನವನ್ನು ಅತಿ ಸರಳವಾಗಿ ಬಿಡಿಸಬಲ್ಲುದು; ನನ್ನದು ಮಾತ್ರವಲ್ಲ; ನಿನ್ನದು ಕೂಡಾ". ಎಂದರವರು.

ನಗೆಯೆಂಬುದು ವಾಸ್ತವಿಕವಾಗಿಯೂ ಪ್ರಕೃತಿದತ್ತ ಆಶೀರ್ವಾದ. ಹಾಸ್ಯವು ನಮ್ಮ ಆರೋಗ್ಯಕ್ಕೆ ಆವಶ್ಯಕವೆಂದು ವೈದ್ಯರೂ ಅನ್ನುತ್ತಾರೆ ಉಸಿರಾಡಲು ಇದರಿಂದ ಸುಲಭವೆನಿಸುತ್ತದೆ. ನಮ್ಮ ರಕ್ತನಾಳಗಳಲ್ಲಿ ಶುದ್ಧರಕ್ತವೇ ಹರಿಯುತ್ತದೆ; ಶ್ವಾಸಕೋಶ ಬಲಶಾಲಿಯಾಗುತ್ತದೆ; ಎಲ್ಲಕ್ಕಿಂತ ಹೆಚ್ಚಾಗಿ ನಮ್ಮೆಲ್ಲಾ ಆಯಾಸವನ್ನೂ ದೂರೀಕರಿಸಿ ಶರೀರದಲ್ಲಿ ನೂತನೋತ್ಸಾಹವನ್ನು ತುಂಬಿಸುತ್ತದೆ.

ಇಂತಹ ಹಾಸ್ಯಕ್ಕೆ ರಸತ್ವವನ್ನು ನಮ್ಮ ಆಲಂಕಾರಿಕರಿತ್ತು ಗೌರವಿಸಿದ್ದಾರೆ. ಕಾವ್ಯಗಳಲ್ಲಿರಬೇಕಾದ ನವರಸಗಳಲ್ಲಿ ಇದೂ ಪ್ರಧಾನ ಪಾತ್ರವನ್ನು ವಹಿಸುತ್ತದೆ. "ಪ್ರಹಸನ" ಎಂಬ ನಾಟಕ ಭೇದದಲ್ಲಿ ಈ ಹಾಸ್ಯರಸವೇ ಅಗ್ರಸ್ಥಾನವನ್ನು ಪಡೆದಿದೆ ಎಂದರೆ ಇದರ ವ್ಯಾಪ್ತಿಗೆ ಬೇರೆ ನಿದರ್ಶನ ಅನಗತ್ಯವಲ್ಲವೆ?

—ಗೋರಾ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: **ಶ್ರೀ. ಎಸ್. ಗೋಪೀಚಂದ ರಾವ್**, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಮಕ್ಕಳ ಮಗ್ಗಿ ಪುಸ್ತಕ

(ನಯೇ ಪೈಸೆ ಕೋಷ್ಟಕ ಸಹಿತ)

ಬೆಲೆ 1ಕ್ಕೆ 0 1 0

ನವಯುಗ ಪ್ರೆಸ್, ಉಡುಪಿ.

ಸತ್ಯ ಸಂಗತಿಗಳನ್ನು ಬಚ್ಚಿಡಲು ಪ್ರಯತ್ನ ನಡೆಸುವವನು ಒಂದಲ್ಲ ಒಂದು ದಿನ ಬಯಲಿಗೆ ಬಂದೇ ತೀರುತ್ತಾನೆ. ಮಿಥ್ಯಸಾಧನೆಯಿಂದ ಕ್ಷಣಿಕ ಸುಖ ಸಿಗಬಹುದಾದರೂ ಅಂತ್ಯದಲ್ಲಿ ದುಃಖವೇ ಲಭಿಸುವುದು. ಆದುದರಿಂದ ಸತ್ಯದ ಮೇಲೆ ಮುಸುಕೆಳೆಯುವ ಮೂರ್ಖತನ ತೋರಿಸಬಾರದು.

NAVAYUGA

Founder:—

A. B. SHETTY,

Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೨೦-೪-'೫೯	೩೦

ಚೀನಕ್ಕೆ ದ್ವೇಷವೇಕೆ?

ಪಂಚಶೀಲಗಳನ್ನೇ ನೆಮ್ಮಿ, ಅದರಂತೆಯೇ ನಡೆದುಕೊಳ್ಳುತ್ತಿರುವ ಭಾರತದ ಬಗ್ಗೆ ಏಶ್ಯದ ಪ್ರಮುಖ ಮತ್ತು ಅತಿ ಹಿರಿಯ ದೇಶವಾದ ಕಮ್ಯೂನಿಸ್ಟ್ ಚೀನವು ಅಪಪ್ರಚಾರದ ಸುರಿಮಳೆಯನ್ನೇ ಸುರಿಸಿ, ಭಾರತದ ಪಾವಿತ್ರ್ಯಕ್ಕೆ ಮತ್ತು ಕೀರ್ತಿಗೆ ಕಳಂಕ ಹಚ್ಚಿ ಶಾಂತಮಯ ವಾತಾವರಣವನ್ನು ಕೆದಕಿ ಕೆಸರನ್ನುಂಟು ಮಾಡಿದೆ. ಇದರಿಂದ ಭಾರತ–ಚೀನಗಳ ನಡುವೆ ಶತಮಾನಗಳಿಂದ ನಡೆದು ಬಂದಿರುವ ಬಾಂಧವ್ಯವು ಕೆಡುವಂತಾಗಿದೆ. ಆದರೆ, ಈ ರೀತಿ ಒಂದು ಸಂಬಂಧವಿಲ್ಲದ ಪ್ರಶ್ನೆಯೊಂದರಿಂದ ಈ ಬಾಂಧವ್ಯವನ್ನು ಕೆಡಿಸಿಕೊಳ್ಳುವುದು ಉಭಯ ರಾಷ್ಟ್ರಗಳಿಗೂ ಒಳ್ಳೆಯದಲ್ಲವೆಂಬುದು ಸರ್ವವಿದಿತವೇ ಆಗಿದೆ. ಚೀನ ಸರಕಾರವೂ ಅಲ್ಲಿನ ಪತ್ರಿಕೆಗಳೂ ಭಾರತೀಯ ಸರಕಾರದ ಮೇಲೆ ಹೊರಿಸಿದ ಆರೋಪವು ಗಂಭೀರವಾದುದೂ ಮಹಾತ್ವವುಳ್ಳ ಸಿರಿ ಭಾರವಾದುದೂ ಆಗಿರುತ್ತದೆ. ಈ ವಿಷಯದಲ್ಲಿ ನಮ್ಮ ಪ್ರಧಾನಿ ನೆಹರು ಅವರು ಬಹಿರಂಗವಾಗಿ ಹೇಳಿಕೆಯಿತ್ತಿದ್ದು ಅದು ಸ್ವಾಗತಾರ್ಹವಾಗಿದೆ.

ಭಾರತಕ್ಕೆ ಆಗಮಿಸಿದ ದಲಾಯ್ ಲಾಮಾರಿಗೆ ಭಾರತ ಸರಕಾರವು ಆಶ್ರಯವನ್ನು ಯಾವ ರಾಜಕೀಯ ಉದ್ದೇಶದಿಂದಲೂ ಕೊಟ್ಟಿಲ್ಲ. ಲಾಮಾರವರು ಸ್ವೇಚ್ಛೆಯಿಂದಲೇ ಭಾರತಕ್ಕೆ ಬಂದು ಇಲ್ಲಿ ಆಶ್ರಯ ಕೇಳಿದ್ದಾರೆ; ಭಾರತವರ ಕೇಳಿಕೆಯನ್ನು ಮನ್ನಿಸಿ, ಅದಕ್ಕೆ ಆವಶ್ಯಕವಾದ ವ್ಯವಸ್ಥೆಯನ್ನು ಮಾಡಿರುತ್ತದೆ. ಈ ಸತ್ಕಾರದ ನಿಷ್ಕಲ್ಮಶ ಭಾವನೆಯನ್ನು ತಪ್ಪಾಗಿ ತಿಳಿದುಕೊಂಡು ಭಾರತ ಪ್ರೇರಿತರಾಗಿಯೇ ಲಾಮಾ ಇಲ್ಲಿ ಉಳಕೊಂಡಿದ್ದಾರೆ ಎಂದು ದೂರುವುದು ಯೋಗ್ಯವಲ್ಲ. ಲಾಮಾರವರನ್ನು ಭಾರತವು ಯಾವುದೇ ಬಲಾತ್ಕಾರದ ನಡುವೆ ಇಟ್ಟಿಲ್ಲ. ದಲಾಯ್ ಲಾಮಾರು ತಾವು ಬೇಕಾದಲ್ಲಿಗೆ ಬಯಸಿದಾಗ ತೆರಳಬಲ್ಲರು; ಅವರು ಸ್ವತಂತ್ರರಾಗಿದ್ದು, ಬೇಕಾದರೆ, ಚೀನಕ್ಕೋ, ಟಿಬೇಟಿಗೋ ಅಥವಾ ಬೇರೆ ಎಲ್ಲಿಗಾದರೂ ಹೋಗಲು ಸರ್ವ ಸ್ವತಂತ್ರರಿದ್ದಾರೆ. ಹಾಗಿರುವಾಗ, ಚೀನೀಯರು ಲಾಮಾರವರನ್ನು ನಿರ್ಬಂಧದಲ್ಲಿಡಲಾಗಿದೆ ಎಂದರೆ ಅದು ಕೇವಲ ಅಪಚಾರವೇ ಎನ್ನದೆ ಗತ್ಯಂತರವಿಲ್ಲ. ಭಾರತದಲ್ಲಿ ಲಾಮಾರು ಪ್ರವೇಶಿಸಿದನಂತರ ಮೊತ್ತಮೊದಲಿಗೆ ತೇಜಪುರದಲ್ಲಿ ಇತ್ತಿರುವ ಹೇಳಿಕೆಯ ಬಗ್ಗೆಯೂ ಕಮ್ಯೂನಿಸ್ಟ ಚೀನೀಯರು ತಮ್ಮದೇ ಆದ ಬಣ್ಣವನ್ನು ತಮಗನುಕೂಲವಾಗಿ ಹಚ್ಚಿದ್ದಾರೆ. ಭಾರತೀಯರ ನಿರ್ಬಂಧಕ್ಕೊಳಗಾಗಿಯೇ ಲಾಮಾರವರು ಇಂತಹ ಹೇಳಿಕೆ ಇತ್ತಿದ್ದಾರಂತೆ! ಸ್ವತಂತ್ರರೂ ಸ್ವೇಚ್ಛಾನುಗಾಮಿಗಳೂ ಆಗಿರುವ ಲಾಮಾರವರು ಭಾರತಕ್ಕೆ ಬಂದು ತಾನು ಸ್ವೇಚ್ಛೆಯಿಂದಲೇ ಭಾರತಕ್ಕೆ ಬಂದಿರುವೆನೆಂದು ಸ್ವಬುದ್ಧಿಯಿಂದ ಹೇಳಿದರೂ ದುರುದ್ದೇಶಪೂರಿತರಾದ ಕಮ್ಯುನಿಸ್ಟರಿಗೆ ಅದು ಸಹನೀಯವಾಗಲಿಲ್ಲ. ಚೀನದ ಆಂತರಿಕ ಸ್ವಾಯತ್ತತೆಯಲ್ಲಿ ಮಧ್ಯೆ ಪ್ರವೇಶಿಸಿ, ತಾನು ಮೊದಲೇ ಮಾಡಿಕೊಂಡಿದ್ದ ಒಪ್ಪಂದವನ್ನು ವ್ಯವಹಾರಕ್ಕೆ ತರಲಾರದೆ ಚೀನದ ಸ್ವಾತಂತ್ರ್ಯವನ್ನು ಅಪಹರಿಸಲು ಬಯಸಿ ಬಲಾತ್ಕಾರದ ತಮ್ಮ ಸಹಜ ಗುಣವನ್ನು ಚೀನವು ತೋರಿಸಿದಾಗ, ಸ್ವಾತಂತ್ರ್ಯಪ್ರಿಯರಾದ ಲಾಮಾರವರು ತಾನಾಗಿಯೇ ಟಿಬೇಟನ್ನು ಬಿಟ್ಟು ಬಂದಿರುವುದಾಗಿ ತಿಳಿಸಿರುವ ಈ ಹೇಳಿಕೆಯು ಕಮ್ಯುನಿಸ್ಟ ಚೀನದ ನೈಜ ವರ್ಣವನ್ನು ಬಯಲಿಗೆಳೆಯಿತು ಇದರಿಂದ, ಜಗತ್ತಿನ ರಾಷ್ಟ್ರಗಳ ನಡುವೆ ಮೆರೆದಾಡಬೇಕೆಂಬ ಹೇರಾಸೆ ಇಟ್ಟುಕೊಂಡಿದ್ದ ಚೀನದ ಮುಖ ಭಗ್ನವಾಗಲು, ಭಾರತದ ವಿರುದ್ಧ ಕತ್ತಿ ಮಸೆಯಲು ಮೊದಲುಮಾಡಿತು. ತನ್ನ ಕೈಗೊಂಬೆಯಂತಿರುವ ಪಂಚನ್ ಲಾಮಾರ ಮೂಲಕವಾಗಿಯೂ ಈ ಲಾಮಾರ ಹೇಳಿಕೆಯು ಅಸತ್ಯಪೂರ್ಣವೆಂದು ಹೇಳಿಸಿತು. ಅದುವರೆಗೆ ಕಮ್ಯುನಿಸ್ಟ ಚೀನವು ಲಾಮಾರು ಬಂಡುಗಾರರ ಬಲಾತ್ಕಾರದಿಂದ ಟಿಬೇಟನ್ನು ತ್ಯಜಿಸಿದ್ದಾರೆಂದರೆ, ಈಗ "ಭಾರತೀಯ ವಿಸ್ತಾರವಾದಿ"ಗಳ ಒತ್ತಾಯಕ್ಕೆ ಅವರು ಒಳಗಾಗಿದ್ದಾರೆ ಎಂದು ದೂರಿದೆ. ಹೀಗೆ ಪೂರ್ವಾಪರ ಅಸಂಬದ್ಧ ಹೇಳಿಕೆಗಳ ಅರ್ಥವೇ ಆಗುವುದಿಲ್ಲ. ಎಂದರೆ, ತಮ್ಮ ನಿಜಬಣ್ಣವನ್ನು ಬಯಲಿಗೆಳೆದು ಲಾಮಾರ ಮೇಲೆ ಈಗ ತಿರುಗಿಬೀಳುವ ಅವಸರದಲ್ಲಿ ಅವರಿಗೆ ಆಶ್ರಯವಿತ್ತ ಭಾರತ ಮೇಲೆಯೇ ಮುನಿದು ಬಿದ್ದಂತೆ ಕಾಣುತ್ತದೆ. ಭಾರತಕ್ಕೆ ಯಾವುದೇ ರಾಷ್ಟ್ರವನ್ನು ತನ್ನ ಅಂಕಿತದಲ್ಲಿ, ತನ್ನ ದಾಸನಾಗಿ ಇಟ್ಟುಕೊಳ್ಳುವ ಕಲ್ಪನೆಯು ಕನಸಿನಲ್ಲಿಯೂ ಇಲ್ಲದಿರುವಾಗ, ಟಿಬೇಟವನ್ನು ಚೀನದ ಕೈಯಿಂದ ತಪ್ಪಿಸಿ ತನ್ನ ದಾಸನಾಗಿಟ್ಟುಕೊಳ್ಳಲು ಭಾರತದ ವಿಸ್ತಾರವಾದಿಗಳು ಉತ್ಸುಕರಾಗಿದ್ದಾರೆ, ಎನ್ನುವುದು ಅವಿವೇಕದ ಪರಮಾವಧಿಯೇ ಆಗಿದೆ. ಇಂತಹ ಅಲ್ಲಸಲ್ಲದ ಆರೋಪಗಳಿಂದ ಕಮ್ಯುನಿಸ್ಟ್ ರಾಷ್ಟ್ರದ ಇರಾದೆಯಷ್ಟೇ ಪ್ರಕಟಗೊಳ್ಳುವುದಲ್ಲದೇ ಭಾರತದ ಮೇಲೆ ಯಾವ ದುಷ್ಪರಿಣಾಮವು ಕಾಣಿಸಕೊಳ್ಳದು.

ಚೀನಾ—ಭಾರತ ಭಾಯಿ ಭಾಯಿ ಎಂಬ ಈ ಮೊದಲಿನ ಘೋಷಣೆಯು ಈಗ ಹೃತ್ಕುಕ್ಷಿಯಲ್ಲಿ ಪರಿವರ್ತನೆ ಹೊಂದದಂತೆ ನೋಡಿಕೊಳ್ಳಬೇಕು. ಟಿಬೇಟದ ಪ್ರಶ್ನೆಯನ್ನು ಶಾಂತಯುತವಾಗಿ ಬಗೆಹರಿಸಿ ಚೀನವು ಟಿಬೇಟದ ಆಂತರಿಕ ಸ್ವಾಯತ್ತತೆಯನ್ನು ಮನ್ನಿಸುವ ಉದಾರತೆಯನ್ನು ತೋರಿಸಬೇಕು. ತನ್ನ ತಪ್ಪನ್ನು ಪರರ ಮೇಲೆ ಹೊರಿಸುವ ದುರದ್ದೇಶವನ್ನು ಬಿಟ್ಟು, ಸತ್ಯಕ್ಕೆ ಚ್ಯುತಿ ಬರದಂತೆ ನೋಡಿಕೊಳ್ಳಬೇಕು. ತನ್ನ ನಿರಂಕುಶ ಪ್ರಭುತ್ವವನ್ನು ಎಲ್ಲೆಲ್ಲಿಯೂ ಪ್ರದರ್ಶಿಸದೆ ತನ್ನ ಸೀಮೆಯೊಳಗೇನೇ ಬಿಚ್ಚಬೇಕು. ಪ್ರಾಚೀನಕಾಲದಿಂದಲೂ ತನ್ನೊಂದಿಗೆ ಮಧುರ ಸಂಪರ್ಕವನ್ನಿರಿಸಿಕೊಂಡಿದ್ದ ಭಾರತವನ್ನು ಅಪಮಾನಕಾರಕವಾಗಿ ತನ್ನ ಬೇಜವಾಬ್ದಾರಿಯುತ ಟೀಕೆಗಳಿಗೆ ಗುರಿಮಾಡದೆ ತನ್ನ ತಪ್ಪನ್ನು ಒಪ್ಪಿಕೊಂಡು, ಸರಿಯಾಗಿ ನಡೆದುಕೊಳ್ಳಬೇಕು. ಲಾಮಾರವರು ಯಾರನ್ನು ಬೇಕಾದರೂ ಕಾಣುವುದಕ್ಕೂ ಲಾಮಾರು ಎಲ್ಲಿ ಬೇಕಾದಲ್ಲಿ ಹೋಗುವುದಕ್ಕೂ ಸ್ವತಂತ್ರರಿರುವರೆಂದು ೪೦ ಕೋಟಿ ಭಾರತೀಯರ ಪ್ರಧಾನಿ ಘೋಷಿಸಿರುವಾಗ, ಲಾಮಾರಿಗೆ ಇತ್ತಿರುವ ಸೌಲಭ್ಯಗಳಿಂದ ಅವರು ಸೆರೆಯಾಳಿನಂತೆ ಇರುವರೆಂದು ಚೀನಾ ತಿಳಿದುಕೊಂಡರೆ, ತಪ್ಪು ಯಾರದು?

ಶಾಲೆಗಳ ರಜಾದಿನಗಳು

ಮೈಸೂರು ಸರಕಾರವು ರಾಜ್ಯದ ಎಲ್ಲ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಏಕರೀತಿಯ ರಜಾದಿನಗಳನ್ನು ಘೋಷಿಸುವಂತೆ ಆಜ್ಞೆಯಿತ್ತಿದೆ. ಇದರಲ್ಲಿ ಪ್ರಾಥಮಿಕ ಶಾಲೆಗಳಿಗೆ ಸೆಖೆಗಾಲಕ್ಕೆ ಆರು ಸಪ್ತಾಹಗಳ ರಜೆಯು ಕೊಡಲಾಗಿದೆ. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಗೆ ಬರುವ ಎಳೆಯ ಬಡ ಮಕ್ಕಳಿಗೂ ಬೇಸಾಯಗಾರರಿಗೂ ಅನುಕೂಲವಾಗುವಂತೆ ಕಾರು ತಿಂಗಳಲ್ಲಿ ಬೇಸಾಯದ ಸಮಯದಲ್ಲಿ ರಜೆ ಕೊಡುವ ಸಂಪ್ರದಾಯ ಇದುವರೆಗಿತ್ತು. ಆದರೆ, ಈಗಿನ ಹೊಸ ಆಜ್ಞೆಯಿಂದ ಹಳ್ಳಿಗಳ ಮಕ್ಕಳಿಗೆ ದೊರೆಯುತಿದ್ದ ಈ ಸೌಲಭ್ಯವು ತಪ್ಪಿಹೋಯಿತೆಂದು ತಿಳಿಯುತ್ತದೆ. ದಕ್ಷಿಣ ಕನ್ನಡದ ತೀರ ಹಿಂದುಳಿದ ಹಳ್ಳಿಯಲ್ಲೂ ಪ್ರಾಥಮಿಕ ಶಾಲೆಯೊಂದಿರುವುದು ನಿಜ. ಇಂತಹ ಶಾಲೆಗಳಿಗೆ ಒಂದೆರಡು ಮೈಲು ದೂರದಿಂದ ಐದರಿಂದ ಹತ್ತು ವರ್ಷದ ಸಣ್ಣ ಮಕ್ಕಳು ಬರುವರೆಂಬುದೂ ಅಷ್ಟೇ ಸತ್ಯ. ಹಾಗಿರುವಾಗ ಜೂನ್–ಜುಲೈ ತಿಂಗಳ ಜಡಿಮಳೆ ಬಿರುಗಾಳಿ, ಮಿಂಚು ಗುಡುಗುಗಳ ಅದ್ಭುತ ಭಯಾನಕ ವಾತಾವರಣದಲ್ಲಿ ನೆರೆಯ ನೀರಿನಲ್ಲಿ ಪಾಪುಗಳೂ ಇಲ್ಲದ ತೋಡು, ಅಗಲಕಿರಿದಾದ ತೆವರಿ, ನಿರ್ಜನವಾದ ಬೆಟ್ಟ ಮೊದಲಾದುವುಗಳನ್ನು ಹಾದು ಹೋಗುವ ದಾರಿಯಲ್ಲಿ ತಮ್ಮ ಮುದ್ದು ಕೂಸನ್ನು ಯಾವನೇ ಹೆತ್ತವನು ಮನೆಯಿಂದ ಹೊರಗೆ ಕಳಿಸುವ ಕಠೋರ ಮನಸ್ಕನಾಗಲಾರನು. ಆದರೆ, ಇಂದಿನ ಏಕರೂಪತೆಯ ಕಾರಣದಿಂದಾಗಿ ಅಂತಹ ಮಳೆಗಾಲದಲ್ಲಿ ರಜೆಯು ಇಲ್ಲದೆ ಇರುವುದರಿಂದ, ಶಾಲೆಯಲ್ಲಿ — ಮಕ್ಕಳ ಹಾಜರಿಯಂತೂ ತೀರ ಕಡಿಮೆಯೆಂದಿಟ್ಟುಕೊಳ್ಳೋಣ— ಕಲಿಸುವ ಪಾಠಕ್ಕೆ ಈ ಎಳೆಯ ಮಕ್ಕಳು ಎರವಾಗುವುದು ಸ್ವಾಭಾವಿಕವೇ ಆಗಿದ್ದು, ಈ ಗೈರು ಹಾಜರಿಯಿಂದ ಅವರ ಪ್ರಗತಿಗೆ ಹಾನಿಯೊದಗುವುದು ನಿಶ್ಚಯ. ಕೆಲವೊಂದು ದಿನ ಶಾಲೆಯು ನಾಮಮಾತ್ರಕ್ಕೆ ತೆರೆಯಬೇಕಾದ ಸಂದರ್ಭಗಳೂ ಬರಬಹುದು. ಹಿಡಿದ ಮಳೆ ನಾಲ್ಕಾರು ದಿನಗಳ ವರೆಗೂ ಬಿಡದೆ ಸುರಿಯುವಾಗ, ಇನ್ನೇನು ಮಾಡಬೇಕು? ಆರ್ಥಿಕವಾಗಿಯೂ ಹಿಂದುಳಿದಿರುವ ನಮ್ಮ ಜಿಲ್ಲೆಯ ಗ್ರಾಮೀಣ ಪ್ರದೇಶಗಳ ಮಟ್ಟಿಗಾದರೂ ಬೇಸಗೆ ರಜೆಯ ಬದಲು ಮಳೆಗಾಲದ ರಜೆಯನ್ನು ಅವರ ಅಪೇಕ್ಷೆಯಂತೆ ಕೊಡಲು ಶಾಲೆಯ ಆಡಳಿತೆಯವರಿಗೆ ಅಧಿಕಾರವೀಯುವುದು ಅಪೇಕ್ಷಣೀಯವೆಂದು ನಾವು ಸೂಚಿಸಬಯಸುತ್ತೇವೆ. ನಮ್ಮ ಜಿಲ್ಲೆಯ ಮಳೆಗಾಲದ ಸಂಪೂರ್ಣ ಅನುಭವವಿರುವ ವಿವಿಧ ಪರಿಶೀಲನಾಧಿಕಾರಿಗಳೂ ತಮ್ಮ ಮೇಲಧಿಕಾರಿಗಳಿಗೆ ಈ ಸತ್ಯ ಚಿತ್ರವನ್ನು ವಿಶದವಾಗಿ ತಿಳಿಸಿ ಗ್ರಾಮೀಣ ಜನತೆಯ ಮತ್ತು ಎಳೆಪ್ರಾಯದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಒಂದು ಅಲ್ಪ ಬದಲಾವಣೆಯನ್ನು ಮಾಡುವರೆಂದು ಆಶಿಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ಟಿಬೇಟದಲ್ಲಿ ಚೀನೀ ದಬ್ಬಾಳಿಕೆ

ಚೀನೀಯ ಸರಕಾರವು ಟಿಬೇಟದ ಮೇಲೆ ದಬ್ಬಾಳಿಕೆಯನ್ನು ಮಾಡುತ್ತ ಮುಂದುವರಿದಿದೆ. ತಮ್ಮ ಆಂತರಿಕ ಸ್ವಾಯತ್ತತೆಗಾಗಿ ಹೋರಾಡುತ್ತಿರುವ ದೇಶಭಕ್ತ ಟಿಬೇಟಿಯನರನ್ನು ಬಂಡುಗಾರರೆಂದು ಉಲ್ಲೇಖಿಸಿ ಅವರನ್ನು ವಿವಿಧ ಬೆದರಿಕೆಗಳ ಮೂಲಕ ಹೆದರಿಸುವ ಕಾರ್ಯಕ್ರಮ ಯಥಾವತ್ತಾಗಿ ಮುಂದುವರಿಯುತ್ತಿದೆ. "ನಿಮ್ಮ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು ಕೂಡಲೇ ನೀವು ಶರಣುಬನ್ನಿರಿ; ಇಲ್ಲವಾದರೆ, ನಿಮ್ಮನ್ನು ನಿರ್ಮೂಲಗೊಳಿಸಲಾಗುವುದು' ಎಂಬ ಮಾತು ಸೈನ್ಯಶಾಖೆಯ ದೈನಂದಿನದ್ದಾಗಿದೆ. "ಭಾರತಕ್ಕೆ ಓಡಿಹೋದರೆ, ನಿರಾಶರಾಗಬೇಕಾದೀತು; ದಂಗೆಗಾರರನ್ನು ಬಿಟ್ಟುಬಂದವರನ್ನು ಕ್ಷಮಿಸಲಾಗುತ್ತದೆ; ಕೈದಿಗಳನ್ನು ಚೆನ್ನಾಗಿ ನೋಡಿಕೊಳ್ಳಲಾಗುವುದು" ಎಂದು ಮುಂತಾದ, ಬೆದರಿಕೆ, ಆಶೆಗಳ ಮೂಲಕ ಈ ಹೋರಾಟವನ್ನು ಅಡಗಿಸುವ ಪ್ರಯತ್ನ ನಡೆಯುತ್ತಿದೆ. ಇವಕ್ಕೆ ಮರುಳಾಗಿ ಹೋರಾಟಗಾರರು ಮರಳಿ ಬಂದರೆ, ದಂಗೆಯೂ ನಿರ್ಮೂಲವಾದಂತಾಯಿತು; ಆ ಮೇಲೆ ಇಂತಹರಿಗೆ "ದೇಶದ್ರೋಹಿ"ಗಳೆಂಬ ಬಿರುದು ಕೊಟ್ಟು ಗುಂಡಿನೇಟನ್ನೂ ಪುರಸ್ಕಾರವಾಗಿ ಕೊಡಬಹುದೆಂಬುದೇ ಕಮ್ಯುನಿಸ್ಟರ ಒಳಸಂಚು ಇಲ್ಲವೆಂದು ನಂಬಲು ಸಾಕಷ್ಟು ವರದಿಗಳು ಬಂದಿಲ್ಲ.

ಭೂ ಸುಧಾರಣಾ ವಿಧೇಯಕ

ಮೈಸೂರು ವಿಧಾನ ಸಭೆಯ ಹಿಂದಿನ ಅಧಿವೇಶನದಲ್ಲಿ ಮಂಡಿಸಲ್ಪಟ್ಟಿದ್ದ ಭೂಸುಧಾರಣಾ ವಿಧೇಯಕವು ಈ ಬಾರಿಯ ಅಧಿವೇಶನದಲ್ಲಿ ಚರ್ಚಿಸಲ್ಪಡುವ ಸಂಭವವಿಲ್ಲ. (ಪ್ರಕೃತದ ಅಧಿವೇಶನವು ಎಪ್ರಿಲ್ ೨೦ಕ್ಕೆ ಮುಗಿಯುವುದು) ಆದರೆ, ಈ ಮಸೂದೆಯ ಚರ್ಚೆಯು ಬಹುಶಃ ಮೊದಲವಾಗಿ ಜುಲೈ ತಿಂಗಳಲ್ಲಿ ಸುಮಾರು

ಅಲ್ಲಲ್ಲಿಯ ಸುದ್ದಿಗಳು

ಅಂಬಲಪಾಡಿ ಗೀತಾಭವನದಲ್ಲಿ ಸಪ್ತಮ ಪ್ರಮಾಣ ಪತ್ರವಿತರಣೋತ್ಸವ ಮತ್ತು ಶ್ರೀರಾಮನವಮ್ಯುತ್ಸವಗಳು ದಿನಾಂಕ ೧೭ರಂದು ಶ್ರೀ ಪಿ. ಗೋಪಾಲಕೃಷ್ಣ ಭಟ್ಟರ ನೇತೃತ್ವದಲ್ಲಿ ನೆರವೇರಿತು. ಪ್ರಾರಂಭದಲ್ಲಿ ಕಾರ್ಯದರ್ಶಿ ಶ್ರೀ ಎಸ್. ಗೋಪೀಚಂದ ರಾವ್ ಅವರು ಸ್ವಾಗತಿಸುತ್ತ ಭವನದ ಸೂಕ್ಷ್ಮ ಇತಿಹಾಸವನ್ನು ತಿಳಿಸಿದರು. ಮುಂದೆ ಶ್ರೀಗಳಾದ ಎ. ಸುಬ್ರಾಯ ಆಚಾರ್ಯ, ಕೆ. ಎ. ದೇವದಾಸ ಮತ್ತು ಎ. ಕೃಷ್ಣರಾವ್ ಇವರು ರಾಮನ ಮಹಿಮೆಯನ್ನು ವಿವಿಧ ದೃಷ್ಟಿಕೋಣಗಳಿಂದ ತೂಗುತ್ತ ಮಾತಾಡಿದರು. ಅಧ್ಯಕ್ಷರು ಸಂಸ್ಕೃತ ಭಾಷೆಯ ಮಹತ್ವವನ್ನೂ ಪ್ರಾಚೀನತೆಯನ್ನೂ ಸಾಧಾರವಾಗಿ ನಿರೂಪಿಸಿ, ಭಾಷೆಯ ಅಭ್ಯಾಸವು ಅತ್ಯವಶ್ಯವೆಂಬುದಾಗಿಯೂ ಇಂದಿನ ಯುವಕರೂ ಸರಕಾರವೂ ಈ ಬಗ್ಗೆ ಆವಶ್ಯಕ ಹೆಜ್ಜೆಯಿಡಬೇಕೆಂದೂ ಅಭಿಪ್ರಾಯಪಟ್ಟರು. ಭವನದ ಉಪಾಧ್ಯಕ್ಷ ಶ್ರೀ ಕೆ. ಎನ್. ಎನ್. ಉಪಾಧ್ಯಾಯರು ಸಮಾರೋಪ ಭಾಷಣ ಮಾಡುತ್ತ ಧನ್ಯವಾದಗಳನ್ನರ್ಪಿಸಿದರು.

ಪುತ್ತೂರು ಡಿವಿಜನಿನ ರಾಷ್ಟ್ರೀಯ ವಿಸ್ತರಣ ಕ್ಷೇತ್ರ—ಗಳ ಪರವಾಗಿ ಅಧಿಕ ಆಹಾರೋತ್ಪಾದನಾ ಸಮಿತಿಯ ಪತಿಯಿಂದ ಅಸಿಸ್ಟಾಂಟ್ ಕಮೀಶನರ್ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರ ನೇತೃತ್ವದಲ್ಲಿ ನವೀನರೀತಿಯ ತಾಳಮದ್ದಲೆ ಸ್ಪರ್ಧೆಯು ತಾ. ೨೨ರ ಸಂಜೆ ಪುತ್ತೂರು ಕೋರ್ಟು ಮೈದಾನಿನ ಭವ್ಯ ರಂಗಮಂಟಪದಲ್ಲಿ ಶ್ರೀ ಎ. ಭೀಮ ಭಟ್ಟ, ಬಿ.ಎ.ಎಲ್.ಎಲ್.ಬಿ. ಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರಿಂದ ಸ್ವಾಗತ ಭಾಷಣವಾದ ತರುವಾಯ ಶ್ರೀ ಎಂ. ಗಂಗಾಧರರು ಸಂದೇಶ ವಾಚನಮಾಡಿದರು. ಮಾಜಿ ಮಂತ್ರಿ ಶ್ರೀ ಎ. ಬಿ. ಶೆಟ್ಟರು ಈ ಸಮಾರಂಭವನು ಉದ್ಘಾಟಿಸುತ್ತಾ ಅಧಿಕಾಹಾರೋತ್ಪಾದನಾ ವಿಷಯಗಳಲ್ಲಿ ಜರುಗಿಸಲಾಗುವ ಈ ಸಮಾರಂಭವು ಕೃಷಿಕರಲ್ಲಿ ನವಜಾಗೃತಿಯನ್ನುಂಟುಮಾಡಿ ರಾಷ್ಟ್ರಪ್ರಗತಿಗೆ ನೆರವಾಗಲೆಂದು ಹಾರೈಸಿದರು. ಬಳಿಕ ತಾಳಮದ್ದಲೆ ಸ್ಪರ್ಧೆ ನಡೆದು ಮಣಚದ ಬಾಲಕ ಯಕ್ಷಗಾನ ಸಂಘವು ಪ್ರಥಮಸ್ಥಾನಗಳಿಸಿ, ರೋಲಿಂಗ್ ಕಪ್ಪನ್ನು ಪಡೆಯಿತು. ದ್ವಿತೀಯ ಬಹುಮಾನವನ್ನು ಮಾಣಿಯ ಲಲಿತಕಲಾ ಸಂಘಕ್ಕೆ ನೀಡಲಾಯಿತು. ಪ್ರಥಮ ಮತ್ತು ದ್ವಿತೀಯ ಸ್ಥಾನಪಡೆದ ಯಕ್ಷಗಾನ ಕೂಟದ ಸದಸ್ಯರೆಲ್ಲರಿಗೂ ಬೆಳ್ಳಿಯ ಪದಕಗಳನ್ನು ಕೊಡಲಾಯಿತು. ಅಲ್ಲದೆ ಇತರ ತಾಳಮದ್ದಳೆ ಕೂಟಗಳಿಗೆ ಬಹುಮಾನ ಪತ್ರಗಳನ್ನು ಹಂಚಲಾಯಿತು. ಇದರೊಂದಿಗೆ ಉತ್ತಮ ಪ್ರಸಂಗಗಳ ಸ್ಪರ್ಧೆಯನ್ನು ನಡೆಸಲಾಗಿದ್ದು ಅದರಲ್ಲಿ ಶ್ರೀ ಶಿವಶಂಕರ ಶಾಸ್ತ್ರಿಗಳ 'ಜಪಾನೀ ಕೃಷಿ ವಿಜಯ'ವು ಉತ್ತಮ ಸ್ಥಾನ ಗಳಿಸಿ, ಶ್ರೀ ಶಾಸ್ತ್ರಿಗಳಿಗೆ ಚಿನ್ನದ ಪದಕವನ್ನು ಕೊಡಲಾಯಿತು. ಅಧ್ಯಕ್ಷರ ಭಾಷಣದ ನಂತರ ಶ್ರೀ ಪಿ. ಆನಂದರವರಿಂದ ಧನ್ಯವಾದ ಅರ್ಪಿತವಾಗಿ ರಾಷ್ಟ್ರಗೀತೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಕೊಡಗು—ಪಾರಾಣೆಯ ಸರಕಾರಿ ಹಿರಿಯ ಮೂಲ ಶಿಕ್ಷಣ ಶಾಲಾ ಸಮಾಜದ ಆಶ್ರಯದಲ್ಲಿ ಇದೇ ತಾ. ೧೮ರಂದು ವಸಂತ ಸಾಹಿತ್ಯೋತ್ಸವವು ಶ್ರೀ ಬಿ. ಎಸ್. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ಬಳಿಕ ಶ್ರೀ ಶ್ರೀಪತಿರಾವ್ ಫಲಿಮಾರ್ಕರರು ಸ್ವಾಗತ ಭಾಷಣ ಮಾಡಿದರು. ನಂತರ ಶ್ರೀ ಎಂ. ಕೃಷ್ಣರಾಯರಿಂದ ಸ್ವಸ್ತಿ ವಾಚನವಾಯಿತು. ಪ್ರಸಿದ್ಧ ಸಾಹಿತಿ ಶ್ರೀ 'ಭಾರತೀ ಸುತ'ರು 'ನವೀನ ಸಾಹಿತ್ಯ'ದ ಕುರಿತು ಮಾತನಾಡಿದರು. ಕುಮಾರಿ ಪಿ. ಎ. ಕಾವೇರಮ್ಮನವರು ಸಾಹಿತ್ಯ ಕ್ಷೇತ್ರದಲ್ಲಿ ದುಡಿದ ಮಹಿಳೆಯರ ವಿಚಾರವಾಗಿ ಸುರಸವಾಗಿ ಮಾತನಾಡಿದರು. ಶ್ರೀ ಟಿ. ಕೇಶವ ಭಟ್ಟರಿಂದ ಕಾವ್ಯ ವಾಚನವಾದ ಬಳಿಕ ಶ್ರೀ ಎ. ರಾಮಕೃಷ್ಣರಾಯರು 'ಜೀವನ ಮತ್ತು ವಿಜ್ಞಾನ' ಎಂಬ ವಿಷಯದಲ್ಲಿ ವಿಮರ್ಶಾತ್ಮಕವಾಗಿ ಭಾಷಣ ಮಾಡಿದರು. ಭಕ್ತಿ ಭಂಡಾರಿ ಬಸವಣ್ಣನವರ ಚರಿತ್ರೆಯನ್ನು ಶ್ರೀ ಜಿ. ಬಿ. ಲಿಂಗಣ್ಣನವರು ಸಂಕ್ಷಿಪ್ತವಾಗಿ ವಿವರಿಸಿದರು. ನಂತರ ಅಧ್ಯಕ್ಷರು ಭಾಷಣಮಾಡುತ್ತಾ 'ಸಾಹಿತ್ಯವು ಬುದ್ಧಿಗೆ ಆಹಾರವನ್ನೊದಗಿಸುತ್ತದೆ ಆದುದರಿಂದ ಮಾನವನ ಮಾನಸಿಕ ಬೆಳವಣಿಗೆಯಾಗಬೇಕಾದರೆ ಸಾಹಿತ್ಯ ಆಗತ್ಯ' ಎಂದು ವಿವರಿಸಿದರು. ಶ್ರೀ ಬಿ. ಇ. ನಾರಾಯಣ ರಾಯರು ಧನ್ಯವಾದಗಳನ್ನಿತ್ತರು.

ಕುಂದಾಪುರ— ಬೋರ್ಡ್ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. ೧೭ರಂದು ಪ್ರಾರಂಭವಾಗಿ ನಾಲ್ಕು ದಿನಗಳ ಕಾಲ ವೈಭವವಾಗಿ ಜರುಗಿ ತಾ. ೨೦ನೇ ರಾತ್ರಿ ಕೊನೆಗೊಂಡಿತು. ತಾ. ೧೭ರ ಬೆಳಗ್ಗೆ ರಾಷ್ಟ್ರಧ್ವಜಾರೋಹಣವಾದ ನಂತರ ಡಿ| ಮುನ್ಸಿಫ್ ಶ್ರೀ ವೈ. ರವಿರಾಜ್ ರವರು ಕಲೆ-ವೃತ್ತಿ-ಕೈಗಾರಿಕೆಯ ಪ್ರದರ್ಶನವನ್ನು ಉದ್ಘಾಟಿಸಿದರು. ಅಂದು ರಾತ್ರಿ ನಾಟಕ ಪ್ರದರ್ಶನವಿದ್ದಿತು. ತಾ. ೧೮ರ ರಾತ್ರಿ ವಿದ್ಯಾವಂತ ಪದವೀಧರರಿಂದ ಜೋಡಾಟ ಪ್ರದರ್ಶನವಿದ್ದು, ಉಡುಪಿ ನಗರಸಭಾಸದಸ್ಯ ಶ್ರೀ ಎ. ಜಿ. ಆಲ್ವೆಯವರು ಅದರ ಅಧ್ಯಕ್ಷತೆ ವಹಿಸಿದ್ದರು. ತಾ. ೧೯ರಂದು ಬೆಳಗ್ಗೆ ಸಂಘದ ಸಾಮಾನ್ಯ ಸಭೆ ಸೇರಿ, ಸಂಘದ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರುಗಳ ಆಯ್ಕೆ ನಡೆಯಿತು. ಸಂಜೆ ಸಂಘದ ವಾರ್ಷಿಕೋತ್ಸವವು ಉಡುಪಿಯ ಡಾ| ಸುಂದರರಾಮ ಪೈಯವರಿಂದ ಜರಗಿತು. ಸಂಘದ ಅಧ್ಯಕ್ಷ ವೈ. ಮಂಜಯ್ಯ ಶೆಟ್ಟರಿಂದ ಸ್ವಾಗತವಾದನಂತರ ಶಾಲೆಯ ಹಳೆಯ ವಿದ್ಯಾರ್ಥಿ ಎ. ಜಿ. ಆಲ್ವೆಯವರು ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷರ ಭಾಷಣದ ತರುವಾಯ ಹಳೆ ವಿದ್ಯಾರ್ಥಿಗಳಿಂದ ನಾಟಕ ಪ್ರದರ್ಶನವಾಯಿತು. ತಾ. ೨೦ರಂದು ಸರ್ವಪ್ರದರ್ಶನವೂ ಇದ್ದು 'ರುಕ್ಮಿಣಿ ಸ್ವಯಂವರ' ನಾಟಕವು ಉಚಿತವಾಗಿ ಪ್ರದರ್ಶಿಸಲ್ಪಟ್ಟಿತು.

ಈ ನಾಲ್ಕು ದಿನಗಳಲ್ಲೂ ಭಾರತ—ರಷ್ಯಾ ಸಾಂಸ್ಕೃತಿಕ ಸಂಘದವರಿಂದ ಚಲಚ್ಚಿತ್ರ ಪ್ರದರ್ಶನ, ರಾಜಸ್ಥಾನದವರ ಗೊಂಬೆಯೂಟ ಮುಂತಾದ ರಂಜನೀಯ ಕಾರ್ಯಕ್ರಮಗಳಿದ್ದು, ಜನತೆಯನ್ನು ವಿಶೇಷವಾಗಿ ಆಕರ್ಷಿಸಿದ್ದುವು.

ಮೈಸೂರು ಸರ್ಕಾರದ ವಿದ್ಯಾಸಚಿವರಾದ ಶ್ರೀ ಅಣ್ಣಾರಾವ್ ಗಣಮುಖಿ—ಯವರು ತಾ. ೨೫ರಂದು ಮುಲ್ಕಿ ಸರಕಾರಿ ಹೈಸ್ಕೂಲಿನ ವಿದ್ಯುದ್ದೀಪಗಳನ್ನು ಬೆಳಗಿಸುವ ಸಮಾರಂಭದಲ್ಲಿ ಭಾಗವಹಿಸಿದ್ದರು. ಪ್ರಾರ್ಥನೆಯಾದ ಬಳಿಕ ಡಾ| ಎಸ್. ಚೆಂಬಾ, ಎಂ. ಎಲ್. ಸಿ. ಯವರು ಸ್ವಾಗತ ಭಾಷಣಮಾಡಿದರು. ಶ್ರೀ ಎಚ್. ಎ. ಗಡಿಯಾರರು ಶುಭಸಂದೇಶಗಳನ್ನು ಓದಿದರು. ಡಾ| ಎಂ. ರಾಮಪ್ಪ ಕಾಮತರು ಮೂಲ್ಕಿಯ ಲ್ಲೊಂದು ಕಾಲೇಜು ಸ್ಥಾಪನೆಯ ಆವಶ್ಯಕತೆ ಕುರಿತು ಸಚಿವರಿಗೆ ಒಂದು ಮಾನಪತ್ರವನ್ನು ಅರ್ಪಿಸಿದರು.

ಮಾನ್ಯ ಸಚಿವರು ಮಾನಪತ್ರಕ್ಕೆ ಉತ್ತರಿಸುತ್ತಾ ರಾಜ್ಯದಲ್ಲಿ ತಾಂತ್ರಿಕ ಹಾಗೂ ಒಕ್ಕಲುತನದ ಶಿಕ್ಷಣದ ಆಗತ್ಯತೆಯನ್ನು ವಿವರಿಸಿದರು. ಮತ್ತು ಮುಲ್ಕಿಯಲ್ಲಿ ಬರೇ ಆರ್ಟ್ಸ್ ಕಾಲೇಜು ಆರಂಭಿಸುವುದಕ್ಕಿಂತ ತಾಂತ್ರಿಕ ಅಥವಾ ಒಕ್ಕಲುತನದ ಕಾಲೇಜನ್ನು ಆರಂಭಿಸುವುದು ಒಳ್ಳೆಯದೆಂದರು. ಸಭಾಧ್ಯಕ್ಷತೆ ವಹಿಸಿದ್ದ ಮಾಜಿಮಂತ್ರಿ ಶ್ರೀ ಎ. ಬಿ. ಶೆಟ್ಟರು ಭಾಷಣಮಾಡುತ್ತಾ, ಪರಿಸ್ಥಿತಿಗನುಗುಣವಾಗಿ ಶಿಕ್ಷಣವು ಇರಬೇಕಾದುದರ ಆಗತ್ಯತೆಯನ್ನು ವಿವರಿಸಿ, ಈ ಹೈಸ್ಕೂಲು ಒಂದು ವಿವಿಧೋದ್ದೇಶ ಶಾಲೆಯಾಗಲೆಂದು ಆಶಿಸಿದರು. ಕೊನೆಯಲ್ಲಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ವಿಟ್ಠಲ ಶೆಣೈಯವರು ಧನ್ಯವಾದವಿತ್ತರು.

ರಾಜಾಪುರ ಸಾರಸ್ವತ ಸಂಘದ ಮುಂಬಯಿ ಇದರ ಒಂಭತ್ತನೇ ವಾರ್ಷಿಕ ಮಹಾ ಸಭೆಯು ತಾ. ೧೭-೪-೫೯ನೇ ಶುಕ್ರವಾರ ಶ್ರೀ ಕೆ. ಎ. ನಾಯಕ್, ಬಿ. ಎ., ಬಿಕಾಂ. ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಫೇರ್ಬನ್ಸ್ ಹಾಲಿನಲ್ಲಿ ಯಶಸ್ವಿಯಾಗಿ ಜರಗಿತು. ಶ್ರೀ ಡಿ. ಡಿ. ಪ್ರಭುಗಳವರಿಂದ ವರದಿ ವಾಚನವಾದ ಬಳಿಕ ಶ್ರೀ ಎಸ್. ಎಸ್. ನಾಯಕ್‌ರವರು ಸಂಘದ ಲೆಕ್ಕ ಪತ್ರಗಳನ್ನು ಸಭಿಕರ ಮುಂದಿಟ್ಟರು. ಮುಂದಿನ ವರ್ಷದ ವ್ಯವಸ್ಥಾಪಕ ಸಮಿತಿಗೆ ಶ್ರೀ ಕೆ. ಎ. ನಾಯಕ್, ಬಿ. ಎ. ಬಿಕಾಂ. ಇವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎ. ಆರ್. ಕಾಮತರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಡಿ. ಡಿ. ಪ್ರಭು ಮತ್ತು ಶಿವರಾಯ ಡಿ. ನಾಯಕ್‌ರವರನ್ನು ಜತೆ ಕಾರ್ಯದರ್ಶಿಗಳನ್ನಾಗಿಯೂ ಶ್ರೀ ಎಸ್. ಎಸ್. ನಾಯಕ್‌ರವರನ್ನು ಗೌ. ಕೋಶಾಧಿಕಾರಿಗಳನ್ನಾಗಿಯೂ ಮತ್ತು ೧೪ ಮಂದಿಯನ್ನು ಸದಸ್ಯರನ್ನಾಗಿಯೂ ಆರಿಸಲಾಯಿತು. ವಿದ್ಯಾರ್ಥಿ ವೇತನ ಕೊಡುವ ಕ್ರಮಗಳನ್ನು ಚರ್ಚಿಸಿ ಒಂದು ನಿರ್ಧಾರಕ್ಕೆ ಬರಲಾಯಿತು.

ಸಾಗರದಲ್ಲಿ ಜರಗಿದ ಅಖಿಲ ಕರ್ನಾಟಕ ನಾಟಕ ಸ್ಪರ್ಧೆಯಲ್ಲಿ ಪೆರ್ಡೂರು ಕಲಾಮಂಡಳಿಯವರು ಅಭಿನಯಿಸಿದ 'ಶುದ್ಧಿಶುಂಠಿ' ಎಂಬ ನಾಟಕಕ್ಕೆ ತೃತೀಯ ಬಹುಮಾನವು ಸಿಕ್ಕಿರುತ್ತದೆ. ಅಲ್ಲದೆ ಇದೇ ನಾಟಕದಲ್ಲಿ ಶಂಕರನ ಪಾತ್ರ ವಹಿಸಿದ ಶ್ರೀ ಪಿ. ಪಿ. ಕಲ್ಯಾಣಿಯವರಿಗೆ ದಿ ಸದಾಶಿವರಾವ್‌ರವರ ಸ್ಮಾರಕ ಬಹುಮಾನವೂ, ಮತ್ತೊಂದು ಬಹುಮಾನವು ಪದ್ಮಳ ಪಾತ್ರ ವಹಿಸಿದ ಶ್ರೀ ಎಚ್. ಶ್ರೀನಿವಾಸ ರಾಯರಿಗೂ ಸಿಕ್ಕಿರುತ್ತದೆ.

ಕುತ್ಪಾಡಿಯ ಎಸ್. ವಿ. ಎಸ್. ವಿದ್ಯಾವರ್ಧಕ ಸಂಘದ ಆಡಳಿತೆಗೊಳಪಟ್ಟ ಕುತ್ಪಾಡಿ ಏಯಿಡೆಡ್ ಎಲಿಮೆಂಟರಿ ಶಾಲಾ ಹೆತ್ತವರ ದಿನಾಚರಣೆಯು ಇದೇ ತಾ. ೨೪ರಂದು ಕ್ರಿಶ್ಚನ್ ಹೈಸ್ಕೂಲು ಕನ್ನಡ ಪಂಡಿತ ಶ್ರೀ ಕೆ. ವೆಂಕಟಾಚಲ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಸದಾನಂದ ಸೆಟ್ಟರಿಂದ ವರದಿ ವಾಚನ, ಪಂಚಾಯತ್ ಬೋರ್ಡ್ ಉಪಾಧ್ಯಕ್ಷ ಶ್ರೀ ವೆಂಕಟಪ್ರಿಯರಿಂದ ಬಹುಮಾನ ವಿತರಣೆ, ಸಭಿಕರ ಪರವಾಗಿ ಶ್ರೀ ಕೆ. ಭೋಜ ಪೂಜಾರಿಯವರಿಂದ ಭಾಷಣವಾಗಿ, ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲಾ ಶ್ರೇಯೋಭಿವೃದ್ಧಿಗಳನ್ನು ಕೋರಿದರು. ಬಳಿಕ ಶಾಲಾ ಮಕ್ಕಳಿಂದ 'ಲವಕುಶ' ನಾಟಕವು ಅಭಿನಯಿಸಲ್ಪಟ್ಟಿತು.

ಮಲ್ಪೆ:-ಸ್ಥಳೀಯ ಯು. ಬಿ. ಯಂ. ಸಿ. ಹಿರಿಯ ಬುನಾದಿ ಶಾಲಾ ಮಕ್ಕಳ ಪಾಲಕರ ದಿನಾಚರಣೆಯು ತಾ. 24.4.1959ರಲ್ಲಿ ಡಾ. ವಿ. ಕೆ. ಬಲ್ಲಾಳ್-ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಪ್ರಧಾನ ಅಧ್ಯಾಪಕರಾದ ಶ್ರೀ ಜಿ. ಯಸ್. ಕರ್ಕಡರು ಸ್ವಾಗತ ಭಾಷಣಗೈದರು, ಕೊಡವೂರು ಗ್ರಾಮೋದ್ಯೋಗಸ್ಥರಾದ ಶ್ರೀ ಯಮ್. ಮಂಜುನಾಥ ಉಪಾಧ್ಯ, ಇವರು ಸರಕಾರದ ವಿದ್ಯಾ ಇಲಾಖೆಯಿಂದ ಹೆಮ್ಮಕ್ಕಳ ಹಾಜರಿ ಸ್ಕಾಲರ್‌ಶಿಪ್ಪಿನ ರೂಪದಲ್ಲಿ ದೊರೆತ ವಸ್ತ್ರ, ಸ್ಲೇಟು ಪುಸ್ತಕ ವಗೈರೆಗಳನ್ನು ವಿತರಣಮಾಡಿದರು. ಶ್ರೀ ಮಂಜುನಾಥ ಉಪಾಧ್ಯ, ಶ್ರೀ ಡಿ. ಎ. ಆನಂದ, ಮತ್ತು ಶ್ರೀ ಎಚ್. ಮುಕುಂದ ಇವರುಗಳು ಸಮಯೋಚಿತವಾಗಿ ಭಾಷಣಗೈದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹಾಜರಿ ಸ್ಕಾಲರ್ ಶಿಪ್ಪಿನ ಆಗತ್ಯತೆಯನ್ನು ವಿವರಿಸಿದರು. ತದನಂತರ ವಿವಿಧ ವಿನೋದಾವಳಿಗಳಾಗಿ ಸಭೆಯು ಮುಕ್ತಾಯವಾಯಿತು.

ಮೂಲ್ಕಿ—ಸುರತ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿ ಇದೇ ಬರುವ ಮೇ ತಿಂಗಳಲ್ಲಿ ನಡೆಯುವ ಉಪಚುನಾವಣೆಗೆ ಉಮೇದುವಾರರಾಗಿ ಆರು ಜನ ನಾಮಪತ್ರ ಸಲ್ಲಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಪರವಾಗಿ ಶ್ರೀ ಕೆ. ದೂಮಪ್ಪ, ಶ್ರೀ ಎ. ಶ್ರೀಧರ (ಡಮ್ಮಿ) ಮತ್ತು ಶ್ರೀ ಜೆ. ಎ. ಬ್ರಿಟೊ (ಡಮ್ಮಿ) ಇವರೂ, ಪಿ. ಎಸ್. ಪಿ. ಯ ಪರವಾಗಿ ಡಾ| ಐ. ಸಂಜೀವನಾಥ್ ಮತ್ತು ಡಿ. ಮೋಹನ್‌ರಾವ್ (ಡಮ್ಮಿ) ಇವರೂ, ಕಮ್ಯುನಿಸ್ಟ್ ಪಕ್ಷದ ಪರವಾಗಿ ಶ್ರೀ ಎಂ. ಎಚ್. ಕೃಷ್ಣಪ್ಪನವರೂ ನಾಮಪತ್ರ ಸಲ್ಲಿಸಿರುವುದಾಗಿ ತಿಳಿದು ಬರುತ್ತದೆ.

ಕಲ್ಯಾಣಪುರ ಮಿಲಾಗ್ರಿಸ್ ಹೈಸ್ಕೂಲಿನ ಶಾಲಾ ವರ್ಧಂತ್ಯುತ್ಸವ ಮತ್ತು ರಜತ ಮಹೋತ್ಸವವು ತಾ. ೨೦ರಂದು ಶ್ರೀ ಬಿ. ಎಂ. ಕುಡುಬಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೇನೇಜರ್ ದಿ. ವೆರಿ. ರೆ| ಫಾ| ಡಿ. ಜೆ. ಡಿ'ಸೋಜಾರವರಿಂದ ವರದಿ ವಾಚನವಾದ ನಂತರ ಅಧ್ಯಕ್ಷರು ಭಾಷಣ ಮಾಡಿದರು. ಬಳಿಕ ಶಾಲಾ ಮಕ್ಕಳಿಂದ ಮನರಂಜನಾ ಕಾರ್ಯಕ್ರಮಗಳು ಜರಗಿದವು.

ದ. ಕ. ಜಿಲ್ಲಾ ಹಿಂದೂ ಮಹಾಸಭೆಯು ಬೆಂಟಲೆಂಡ ಪೇಟೆಯಲ್ಲಿರುವ ಶ್ರೀ ವೆಂಕಟೇಶ ಆಯುರ್ವೇದ ಭವನದಲ್ಲಿ ಡಾ| ವಿ. ಕೆ. ಪಿ. ವರ್ಮರವರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ನಿರ್ಣಯಗಳು ಅಂಗೀಕೃತವಾದುವು: ೧ ಹಳೇ ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿದ್ದ ಗೋವಧಾ ನಿರೋಧ ಕಾನೂನನ್ನು ಈ ಜಿಲ್ಲೆಯಲ್ಲೂ ಜಾರಿಗೆ ತರಬೇಕು. ೨. ಮಂಗಳೂರು ನಗರ ಸಭೆಯು ಗೋಹತ್ಯೆಯ ಬಗ್ಗೆ ನಿರ್ಣಯಿಸಿದ ಗೊತ್ತುವಳಿಯನ್ನು ಪ್ರತಿಭಟಿಸುತ್ತದೆ. ೩. ಗೋಹತ್ಯಾ ವಿಚಾರದಲ್ಲಿ ರಾಜ್ಯಸರಕಾರವು ಜಿಲ್ಲೆಯ ಸಮಸ್ತ ಜನಗಣನೆಯನ್ನು ಪಡೆಯಬೇಕೆಂಬುದಾಗಿ ಸರ್ಕಾರವನ್ನು ಒತ್ತಾಯಿಸುತ್ತದೆ.

ಹತ್ತು ದಿನಗಳ ವಿಶೇಷ ಅಧಿವೇಶನವನ್ನು ಕರೆಯಲಾಗುವುದೆಂದು ತಿಳಿದುಬಂದಿದೆ. ಈ ಅಧಿವೇಶನದಲ್ಲಿ, ಈ ಮಸೂದೆಯ ಬಗ್ಗೆ ಬೇಕಷ್ಟು ಚರ್ಚೆಯನ್ನು ಮಾಡಿದ ನಂತರ ಮಸೂದೆಯನ್ನು ಪರಿಶೀಲಕ ಸಮಿತಿಗೆ ಒಪ್ಪಿಸಬಹುದು; ಮತ್ತು ಆವಶ್ಯಕವೆನಿಸಿದರೆ, ಮಂಜೂರು ಮಾಡಲೂ ಬಹುದು ಎಂದು ಮುಖ್ಯಮಂತ್ರಿ ಶ್ರೀ ಬಿ. ಡಿ ಜತ್ತಿ ಅವರು ವಿಧಾನ ಸಭೆಯಲ್ಲಿ ಪ್ರಶ್ನೆಯೊಂದನ್ನುತ್ತರಿಸುತ್ತ ತಿಳಿಸಿದ್ದಾರೆ. 'ಭೂಸುಧಾರಣೆ'ಯನ್ನು ಆದಷ್ಟು ಬೇಗನೇ ರಾಜ್ಯದಲ್ಲಿ ವ್ಯವಹಾರಕ್ಕೆ ತರಲು ಸರಕಾರವು ಆತುರದಿಂದಿರುವುದೆಂದೂ ಆದುದರಿಂದ ಅದನ್ನು ಬೇಗನೇ ಚರ್ಚೆಗೆ ಎತ್ತಿಕೊಳ್ಳಲಾಗುವುದೆಂದೂ ಅವರೆಂದರು.

ಚೀನಕ್ಕೆ ಹೊಸ ಅಧ್ಯಕ್ಷರು

ಕಮ್ಯುನಿಷ್ಟ ಪಕ್ಷದ ಮುಖ್ಯ ಪ್ರತಿಪಾದಕರಾದ ಶ್ರೀ ಲಿಯು-ಶಾವೊ-ಚಿ ಅವರು ಕಮ್ಯುನಿಷ್ಟ ಚೀನದ ಅಧ್ಯಕ್ಷರಾಗಿ ಆಯ್ಕೆಹೊಂದಿದ್ದಾರೆ. ಚೀನೀ ಪ್ರಜಾರಾಜ್ಯದ ಸ್ಥಾಪಕರಾದ ಶ್ರೀ ಸನ್—ಯಾತ್ ಸೇನ್‌ನ ಪತ್ನಿ ಮ್ಯಾಡಮ್-ಸೂಂಗ ಚಿಂಗ ಲಿಂಗ ಮತ್ತು ಸುಪ್ರೀಮ ಕೋರ್ಟಿನ ಅಧ್ಯಕ್ಷ ತುಂಗ-ಪಿ-ವೂ ಅವರನ್ನು ರಾಷ್ಟ್ರದ ಉಪಾಧ್ಯಕ್ಷರುಗಳನ್ನಾಗಿ ಆರಿಸಲಾಗಿದೆ. ಹಿಂದಿನ ಅಧ್ಯಕ್ಷ ಮಾವೊತ್ಸೆ ತುಂಗರು ಪಕ್ಷದ ಧೋರಣೆ ಹಾಗೂ ತತ್ವಕ್ಕೆ ಸಂಬಂಧಿಸಿದ ಕಾರ್ಯಗಳಿಗೆ ವಿಶೇಷ ಗಮನಹರಿಸುವ ಉದ್ದೇಶದಿಂದಿರುವರು. ಆದರೆ, ಚೀನಾದ ಪ್ರಧಾನಿತ್ವದಲ್ಲಿ ಮಾತ್ರ ಯಾವ ಬದಲಾವಣೆಯೂ ನಡೆದಿಲ್ಲ. ೧೯೪೯ ರಿಂದ ಕಮ್ಯುನಿಸ್ಟ್ ಚೀನದ ಪ್ರಧಾನರಾದ ಶ್ರೀ ಚೌ ಎನ್ ಲಾಯ್ ಅವರು ಇನ್ನೂ ಕೆಲಕಾಲ ತಮ್ಮ ಹುದ್ದೆಯಲ್ಲಿ ಮುಂದುವರಿಯುವರು.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.)

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್, ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು — ಸಂ. ನ.)

ನೂರು ರೂಪಾಯಿ ನೋಟು— (ಏಕಾಂಕ ನಾಟಕ) ಬರೆದವರು. ಶ್ರೀ ಗೋಪಾಲಕೃಷ್ಣ ಪಿ ನಾಯಕ, ಪ್ರಕಾಶಕರು. ಸಾಹಿತ್ಯ ಭಂಡಾರ, ಹುಬ್ಬಳ್ಳಿ ಪುಟಗಳು: ೩೮ ಬೆಲೆ ರೂ ೦–೫೦

ನೂರು ರೂಪಾಯಿ ನೋಟು ಎಂಬುದು ನಾಟಕದ ಹೆಸರೂ ಹೌದು, ಜತೆಗೆ ನಾಟಕ ತುಂಬ ಬರುವ ಕಥೆಗೆ ಆಧಾರಭೂತವಾದುದೂ ಹೌದು, ಕಥಾ ಸೂತ್ರಧಾರವೂ ಹೌದು ಸುಂದರರಾಯರು ಮೇಜಿನ ಮೇಲಿಟ್ಟಿದ್ದ ನೂರು ರೂಪಾಯಿ ನೋಟೊಂದು ದೃಷ್ಟಿಗೋಚರವಾಗದಿರಲು ಅದು ಕಳವಾಗಿದೆ ಎಂಬ ಭ್ರಾಂತಿಯಿಂದ ಪೋಲೀಸ್ ಇಲಾಖೆಗೆ ದೂರುಕೊಡುತ್ತಾರೆ. ಸಿ ಐ ಡಿ ಬಂದು ತಕ್ಕ ತನಿಕೆ ಮಾಡುತ್ತಾನೆ ಅಷ್ಟರಲ್ಲಿಯೇ ರಾಯರ ಭಾವ ದತ್ತಮೂರ್ತಿ ಬಂದುಬಿಡುತ್ತಾನೆ ಬೇಗವೆಂದರೂ ಘಟನೆ ಆತನ ಕಿವಿದೆರೆಗೆ ಬಡಿಯುತ್ತದೆ ಆತ ಒಂದು ವಿಧದ ಮಂತ್ರ ಮಾಡುವ ಸೋಗನ್ನು ಹಾಕಿ ಕಳ್ಳನನ್ನು ಹಿಡಿಯಲು ಏರ್ಪಾಡು ಮಾಡುತ್ತಾನೆ ಈ ಪರೀಕ್ಷೆಯಲ್ಲಿ ಕೆಲಸದಾಳು ನಾರಾಯಣ ಸಿಕ್ಕಿ ಬೀಳುತ್ತಾನೆ ಆಗ, ಪೋಲೀಸ್ ಶಾಖೆಗೆ ತಿಳಿಸಲು ಫೋನ್ ಡೈರೆಕ್ಟರಿ ಎತ್ತಿ ತೆರೆದಾಗ, ಅದರೊಳಗೆ ನೂರು ರೂಪಾಯಿ ನೋಟು ಕಾಣಿಸುತ್ತದೆ! ರಾಯರ ಮಗ ಮೋಹನ ಹಿಂದಿನ ದಿನ ಯಾರಿಗೋ ಫೋನ್ ಮಾಡಲು ಆ ಡೈರೆಕ್ಟರಿ ತೆರೆದು ಗುರುತಿಗಾಗಿ ನೋಟನ್ನಿಟ್ಟಿದ್ದನಂತೆ! ಅಂತೂ ಕಳೆದು ಹೋದ ನೋಟು ಸಿಕ್ಕಿಬಿಟ್ಟಿತು, ಪ್ರಕರಣ ಅಂತ್ಯಗೊಂಡಿತು

ನಾಟಕದ ಕಥೆಯು ಕುತೂಹಲಜನಕವಾಗಿಯೇ ಮುಂದುವರಿಯುತ್ತದೆ ಪ್ರತಿಕ್ಷಣದಲ್ಲೂ ಮುಂದೇನಾಗುವುದೆಂಬುದನ್ನು ತಿಳಿಯುವ ಕುತೂಹಲವು ನಮ್ಮಲ್ಲಿ ಬೆಳೆಯುತ್ತದೆ ಕಳೆದು ಹೋದುದನ್ನು ಅರಸಿಕೊಂಡು ಹಿಡಿಯುವ ಪಟ್ಟು ತಾಳ್ಮೆಯನ್ನು ವಹಿಸುವುದರಲ್ಲಿ ಕಳ್ಳತನವನ್ನು ತೋರಿ, ಸುಂದರರಾಯರು ಅದು ಕಳವಾಯಿತೆಂದೇ ಬಗೆದು ಎಂದುವರಿದು ಹಲವಾರು ನಿರಪರಾಧಿಗಳಿಗೂ ಅಪರಾಧಿತ್ವವನ್ನು ಆರೋಪಿಸಿದುದು ನಮ್ಮ ಇಂದಿನ ಬಾಳ್ವೆಯಿಂದ ದೂರವಾದ ನೈಜ ಪರಿಸ್ಥಿತಿಯನ್ನು ಪ್ರದರ್ಶಿಸುತ್ತದೆ ಈ ಕಥಾ ... ಹೃದಯಸ್ಪಂದಕರವಾಗಿ ಪರಿಣಮಿಸುತ್ತದೆ ಒರಟುರಾದಿ ನಾರಾಯಣನಿಗೆ ಅಜಾಗರೂಕತೆಯ ಮೋಹನನ ತಪ್ಪು ಕೊನೆಗೆ ... ಪರಿಣಮಿಸಿತೆಂದು ತಿಳಿಯು

ದಕ್ಷಿಣ ಕನ್ನಡ ಜಿಲ್ಲಾ ಸ್ಪೆಶಲ್ ಅಸಿಸ್ಟೆಂಟ್ ಕಮಿಶನರ ಕೋರ್ಟಿನಲ್ಲಿ

O P ನಂಬ್ರ 151/1959

ವಾದಿರ್ ಬ... ಕೃಷ್ಣಭಟ್ರ ಮಗ ಆರೆಪೂರು ಗ್ರಾಮ ಉಡುಪಿ ತಾಲ್ಲೂಕು—ಅರ್ಜಿದಾರ

1 ರಾಮಾಚಾರಿ—ಶೇಷಾಚಾರಿ ಮಗ

2 ಸತ್ಯ ... ನಾರಾಯಣಾಚಾರಿ

ಜಂಡಿ ಉಡುಪಿ ತಾಲ್ಲೂಕು ನಂಬ್ರ 108ನೆ ಕಳ್ತೂರು ಗ್ರಾಮದಲ್ಲಿರುವವರು—ಎದ್ರಿರು

ಎದ್ರಿರು ಅರ್ಜಿದಾರನೊಳಗೆ ಚಾಲಗೇಣಿಗೆ ಅನುಭವಿಸಿಕೊಂಡು ಬರುವ ಆಸ್ತಿ ಸ್ವಾಧೀನತೆ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ್ದ ಅರ್ಜಿಯು ತಾ:5-5-59ಕ್ಕೆ ಸದ್ರಿ ಕೋರ್ಟಿನ ಉಡುಪಿ ಮೊಕ್ಕಾಮಿನಲ್ಲಿ ಇಟ್ಟಿರುತ್ತದೆ. 2ನೇ ಎದ್ರಿಗೆ ನೋಟೀಸನ್ನು ಈ ಮೊದ್ಲೇ ಕೋರ್ಟಿನವರು ಶಿಫಾ ಮಾಡಿರುತ್ತಾರೆ 1ನೇ ಎದ್ರಿಗೆ ಸದ್ರಿ ಅರ್ಜಿಯಲ್ಲಿ ಯೇನಾದರೂ ಆಕ್ಷೇಪಣೆ ಇದ್ದರೆ ಸದ್ರಿಯವರು ತಾ:5-5-59ನೆ ದಿವಸ ಬೆಳಿಗ್ಗೆ 10ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

K L Aithal,
Vakil for petitioner

ಉಡುಪಿ ತಾ 27-4-59

ವಾಗ, ಈ ಹುಡುಗನಿಗೆ ಅಷ್ಟು ಮಂಕೇ? ಎಂದು ಪ್ರಶ್ನಿಸುವಂತಾಗಿದೆ Hugh chesterman ಎಂಬ ನಾಟಕವೊಂದರ ಛಾಯಾನುವಾದವಿದಾಗಿದ್ದರೂ ಕೃತಿ ಸ್ವತಂತ್ರ ಎಂಬಂತೆಯೇ ಇದೆ ಶುದ್ಧ ಸಾಹಿತ್ಯಿಕ ಭಾಷೆಯಲ್ಲಿಯೇ ಓರಣವಾಗಿ ರೂಪಿಸಲ್ಪಟ್ಟಿರುವ ಈ "ಪ್ರಹಸನವು" ಶಾಲೆಕಾಲೇಜುಗಳಲ್ಲಿ ಆಡಿ ತೋರಿಸಲು ಅನುಕೂಲವಾಗಿಯೇ ಇದೆ ರಂಗದ ಪೂರ್ಣ ಅನುಭವದಿಂದ ಬರೆದಿರುವ ಶ್ರೀ ನಾಯಕರ ಕೃತಿಯು ಅಭಿನಯಾರ್ಹವೆಂದು ಬೇರೆ ಹೇಳಬೇಕಾಗಿಲ್ಲ

ನವೋದಯ—ವಿದ್ಯಾದಾಯಿನೀ ಹೈಸ್ಕೂಲ್ ವಿದ್ಯಾರ್ಥಿ ಸರಕಾರದ ಪತ್ರಿಕೆ (೧೦ನೆಯ ವಾರ್ಷಿಕಾಂಕ), ಸುರತ್ಕಲ್

ಬಹುಮುಖ ಪ್ರಗತಿಯತ್ತ ದಿನೇ ದಿನೇ ಧಾವಿಸುತ್ತಿರುವ ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲ್‌ನ ಈ ಪತ್ರಿಕೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ ಎಂದಿನಂತೆಯೇ ಈ ೧೦ನೆಯ ವಾರ್ಷಿಕಾಂಕವು ಕೇವಲ ವಿದ್ಯಾರ್ಥಿಲೋಕಕ್ಕೆ ಮಾತ್ರವಲ್ಲದೇ ವಿಶಾಲ ಜನಸಮುದಾಯಕ್ಕೂ ಉಪಯೋಗಿಯಾದ ಲೇಖನಾದಿಗಳಿಂದ ಪರಿಪೂರ್ಣವಾಗಿದ್ದು ಈಗ ಬಹಿರ್ ಪ್ರಕಾಶಕ್ಕೆ ಬಂದಿದೆ.

ಆರಂಭದಲ್ಲಿರುವ "ಸ್ತವ ಪಂಚಕಂ" ನಮ್ಮ ಸಂಘಟನೆಗೆ, ನಮ್ಮ ಉದ್ಧಾರಕ್ಕೆ ದುಡಿದಿದ್ದು ತಮ್ಮ ಅಸು ನೀಗಿದ ಮಹಾಪುರುಷರನ್ನು ಪುನಃ ಜನಿಸಿ ಬರುವಂತೆ ಬೇಡಿಕೊಳ್ಳುತ್ತದೆ ಇಂತಹ ಹಳಗನ್ನಡ ಛಂದಸ್ಸಿನಲ್ಲಿ ಬರೆಯುವಾಗ, "ಪುನರೀಗ" ಎಂಬ ಪದವನ್ನು ಸಿದ್ಧಿಸಿಕೊಳ್ಳಬಹುದೇ? ಎಂಬ ಸಂದೇಹ ಮಾತ್ರ ಉದ್ಭವಿಸುತ್ತದೆ ಇಂತಹುದೇ ಕೆಲವೊಂದು ದೋಷಗಳು ಒಳಗಡೆಯ ಇತರ ಹಳೆಗನ್ನಡ ಮಾದರಿಯ ಪದ್ಯಗಳಲ್ಲಿ ಕಂಡು ಬರುತ್ತವೆ "ಶಬ್ದ ಶುದ್ಧಿ"ಗೆ ಇಂದಿನ ಹೊಸಗನ್ನಡದಲ್ಲಿ ಸ್ಥಾನವು ಅಷ್ಟೊಂದು ಭದ್ರವಿಲ್ಲವಾದರೂ ಅಂತರ್ರಾಷ್ಟ್ರೀಯ, ಅಂತರ್ರಾಜ್ಯ ಪುನರ್ರಚನೆ ಮೊದಲಾದ ರೂಪಗಳು ಗ್ರಾಹ್ಯವಲ್ಲದಿರುವಾಗ ಪುನರೀಗ, ಮುನ್ಸ್ವಾಗತವು ಮೊದಲಾದುವು ಎಂದಿಗೂ ಗ್ರಾಹ್ಯವೆನಿಸಲಾರದು ಶಾಲೆಯಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡುವಾಗ, ಶಬ್ದ ಶುದ್ಧತೆ, ಭಾಷಾ ಶುದ್ಧತೆಗಳತ್ತಲೂ ಅವರ ಗಮನವನ್ನು ಹರಿಸುವುದು ಅಗತ್ಯ ಆಡುವ ಭಾಷೆಗೂ ಬರೆಯುವ ಭಾಷೆಗೂ ಇರುವ ಅಂತರವನ್ನು ಸ್ಪಷ್ಟವಾಗಿ ತಿಳಿಸಬೇಕಾದುದೂ ಅಪೇಕ್ಷಣೀಯ

ವಿಷಯದ ದೃಷ್ಟಿಯಿಂದ, ಕನ್ನಡ, ಆಂಗ್ಲ ಮತ್ತು ಹಿಂದೀ ಭಾಷೆಗಳಲ್ಲಿ ಮಕ್ಕಳಿಂದ ಬರೆದಿರುವ ಲೇಖನಾದಿಗಳು ಅವರ ಉನ್ನತ ಮಟ್ಟವನ್ನೂ ವಿವಿಧ ವಿಷಯಾಸಕ್ತಿಯನ್ನೂ ನಿರೂಪಿಸುತ್ತವೆ ಲೇಖನಗಳನ್ನು ಅಚ್ಚಿಗೆ ಕೊಡುವ ಮೊದಲು ವಿದ್ವಾಂಸ ಪಂಡಿತರೊಮ್ಮೆ ಅವಲೋಕನಮಾಡುತ್ತಿದ್ದರೆ, ಅಪಶಬ್ದಗಳು ಉಳಿಯುವಂತಿರಲಿಲ್ಲವೆಂದು ತೋರುತ್ತದೆ. ಅಚ್ಚಿನ ದೋಷಗಳೂ ಕೆಲವಿರುವುದರಿಂದ ಹೀಗಾಗಿರಬಹುದು ತಮ್ಮ ಮುಂದಿನ ಸಂಚಿಕೆಗಳು ಸರ್ವಗ್ರಾಹಿಯಾಗಿ ಹೊರಡಿಸುವಂತಾಗಲೆಂದು ಹಾರೈಕೆ

ಪುಷ್ಪಾಂಜಲಿ—ಸರಸ್ವತಿ ವಿದ್ಯಾಲಯ ಹೈಸ್ಕೂಲ್, ಗಂಗೊಳ್ಳಿ, ದ ಕ.

ಈ ಹೈಸ್ಕೂಲಿನ ಮೂರನೆಯ ವಾರ್ಷಿಕ ಸಂಚಿಕೆಯು ಸಣ್ಣದಾಗಿದ್ದರೂ ಕನ್ನಡ, ಆಂಗ್ಲ ಮತ್ತು ಹಿಂದೀ ಭಾಷೆಗಳ ಕೆಲವೊಂದು ಲೇಖನಾದಿಗಳನ್ನು ಹೊತ್ತುತಂದಿದೆ ವಿದ್ಯಾರ್ಥಿಗಳ ಮಟ್ಟಕ್ಕೆ ಅನುಗುಣವಾದ ವಿಷಯಗಳನ್ನು ಆಧರಿಸಿ ಬರೆದ ಕಥೆ, ಕವನ, ಲೇಖನಗಳು ತ್ರಿಭಾಷೆಯಲ್ಲಿ ಇವೆ. ಆದರೂ ಹೈಸ್ಕೂಲ್ ಮಟ್ಟದ ವಿದ್ಯಾರ್ಥಿಗಳು ಸಾಮಾನ್ಯವಾಗಿ ತಾಳಿರುವ ಆಸಕ್ತಿ ಸಾಲದೆಂದೇ ಹೇಳಬೇಕಾಗಿದೆ ಮಕ್ಕಳ ಜೀವನದಲ್ಲಿ ಮಹತ್ತರ ಕ್ರಾಂತಿಯನ್ನುಂಟುಮಾಡುವ ಸಂಕ್ರಾಂತಿ ಕಾಲವೆಂದರೆ ಹೈಸ್ಕೂಲ್ ಶಿಕ್ಷಣಾವಧಿ ಈ ಅವಧಿಯಲ್ಲಿ ಅವರಲ್ಲಿ ಅದಕ್ಕೆ ಮೊದಲು ಅವ್ಯಕ್ತವಾಗಿದ್ದ ವಿಚಾರಧಾರೆಗಳು ಹೊಸ ಹೊಸ ಪರಿಸ್ಥಿತಿಗಳಿಂದ ಉತ್ತೇಜಿತವಾಗಿ ಹೊರಹೊಮ್ಮಲು ಪ್ರಯತ್ನಿಸುತ್ತಿರುತ್ತವೆ ಇಂತಹ ಸಂದರ್ಭದಲ್ಲಿ ಹೊರಬರಲೆಳಸುವ ವಿದ್ಯಾರ್ಥಿಗಳ ವಿಚಾರಧಾರೆಯನ್ನು ಸುಯೋಗ್ಯವಾಗಿ ಹರಿಯುವಂತೆಸಗಿದರೆ, ಅದರಿಂದ ಉತ್ತಮ ಫಲಿತಾಂಶವನ್ನು ನಿರೀಕ್ಷಿಸಬಹುದು. ಲೇಖನವೂ ಒಂದು ಕಲೆ, ಶಕ್ತಿ ಅದು ಎಲ್ಲರಲ್ಲಿಯೂ ಬರಲಾರದಾದರೂ ಇರುವವರಲ್ಲಾದರೂ ಅದನ್ನು ಕೆರಳಿಸುವಂತಾಗಬೇಕು.

— ಗೋರಾ

ಅಮೇರಿಕೆಯ ಕುಶಲ ಕೃಷಿಕನಾದ ಶ್ರೀ ರಾಬರ್ಟ ಕಿಂಗನ ಮನೆ ಮಸ್ತು ದನ ಕಟ್ಟುವ ಪಟ್ಟಿ ಇದನ್ನು ಶುಚಿಯಾಗಿಡಲು ಅವನ ಹೆಂಡತಿ ಮತ್ತಿಬ್ಬರು ಮಕ್ಕಳು ಸಹಾಯವಾಗುತ್ತಾರೆ.

ಈ ಶಬ್ದಗಳ ಅರ್ಥವೇನು?

ಮಲ್ಲಯುದ್ಧವನ್ನು ವರ್ಣಿಸುವ ಸಂದರ್ಭದಲ್ಲಿ ಬರುವ ಕೆಲವು ಮಾತುಗಳನ್ನು ಈ ಕೆಳಗೆ ಕೊಟ್ಟಿವೆ ಇವುಗಳ ಅರ್ಥ ನಮಗೆ ಸ್ಪಷ್ಟವಾಗಿಲ್ಲ.

ಜಟ್ಟಿ ಕಾಳಗ ಕನ್ನಡ ನಾಡಿನಲ್ಲಿ ಈಗಲೂ ವಾಡಿಕೆಯಾಗಿದೆ ಈ ಶಬ್ದಗಳಲ್ಲಿ ಕೆಲವಾದರೂ ಒಂದಲ್ಲ ಒಂದು ಕಡೆ ಬಳಕೆಯಲ್ಲಿದ್ದಾವು ರೂಪಾಂತರ ಹೊಂದಿಯಾದರೂ ಉಳಿದುಕೊಂಡಿದ್ದಾವು ನಮ್ಮ ಗರುಡಿ ಮಸ್ತಾದಿಗಳೂ, ಜಟ್ಟಿಗಳೂ ಈ ಶಬ್ದಗಳ ಅರ್ಥ ನಿರ್ಣಯದಲ್ಲಿ ನೆರವಾದ ರೆಂದು ನಂಬಲಾಗಿದೆ.

ಸರಿಯಾದ ಅರ್ಥ ವಿವರಣೆಗಳನ್ನು ಅರಿತಿರುವವರು ದಯಮಾಡಿಟ್ಟು ಬರೆದು ತಿಳಿಸಬೇಕೆಂದು ಕೋರಿಕೆ

ಎಲ್ ಗುಂಡಪ್ಪ,
ಸಂಪಾದಕ, ಕನ್ನಡ ನಿಘಂಟು

ಶಬ್ದಗಳು —

ಮಲ್ಲಯುದ್ಧದ (೧) ನಾಲ್ಕು ಸ್ಥಾನಗಳು (೨) ಮೂರು ಲಗ್ಗಗಳು. (೩) ಐದು ಡೊಕ್ಕರಗಳು (೪) ಎಂಬತ್ತನಾಲ್ಕು ಭಿನ್ನಣಗಳು (೫) ಹಲವು ತೆರದ ಘಾತಗಳು (೬) ನಿರಿಸು ಮಾಡುವುದು

ಬಿನ್ನಣಗಳಲ್ಲಿ ಕೆಲವು — ೧ ಮಹಗ್ಗಳ ೨. ರಡಕೆ ೩ ಕಕ್ಷವಡ ೪. ಮುಹಡ ೫ ತುಳುಡಿ ೬ ಆಸುವಿಡಿ ೭ ಪಟ್ಟಿ ೮. ಸಂಗುಣ ೯. ಅಳುಂಬಗೆ ೧೦ ಪಸಗೆ ೧೧ ವಸ್ನಿಮುಟ್ಟಿ. ೧೨ ಚಟ್ಟುಸಿರು ೧೩ ಅಣವಟ್ಟಿ ೧೪ ಬಾಹುದಣೆ ೧೫ ಖಮ್ಮರಿ. ೧೬ ಕತ್ತರಿ. ೧೭ ಖೋಡ. ೧೮ ಅಂಕುಶ ೧೯ ಸಸಿಕು

ಇವಲ್ಲದೆ, ೧ ತೋರಹತ್ತ ೨. ಮಾನಸಗೋಳ ಎಂಬ ಡೊಕ್ಕರ ಈ ಶಬ್ದಗಳು ಪ್ರಯೋಗವಾಗಿ ಇವ ರೀತಿ ಇದು.

"ಮಲ್ಲಯುದ್ಧ ಸನ್ನದ್ಧರಾಗಿರ್ವರುಂ
ಕಳಂಬೊಕ್ಕು ನಿರಿಸಗೆಯ್ದು, ಸಖ ಹತಿ ದಶನಹತಿ ಪಾದಘಾತಂ ಮುಷ್ಟಿಘಾತಮೆಂಬ ದೋಷಂಗಳಂ ಪೊರ್ದದ ನಾಲ್ಕುಂ ಸ್ಥಾನದೊಳಂ ಮೂರುಂ ಲಗ್ಗದೊಳಂ ಐದುಂ ಡೊಕ್ಕರದೊಳಂ ಎಣ್ಬತ್ತುನಾಲ್ಕು ಬಿನ್ನಣದೊಳಂ ಪಲತೆರದ ಘಾತಂಗಳೊಳಂ ನೆರೆದು,

ಎಸೆವ ಮಹಗ್ಗಳಂ ರಡಕೆ ಕಕ್ಷವಡಂ
ಮುಹಡಂ ತುಳುಡಿ ನಂ
ದಸುವಿಡಿ ಪಟ್ಟಿ ಸಂಗುಣವಳುಂಬಗೆ
ಪಸಗೆ ವಸ್ನಿಮುಟ್ಟಿ ಚ
ಟ್ಟುಸಿರಣವಟ್ಟಿ ಬಾಹುದಣೆ ಖಮ್ಮರಿ
ಕತ್ತರಿ ಖೋಡಮಂಕುಶಂ
ಸಸಿಕುವೆಸಿಪ್ಪ ಜಟ್ಟಿಗನ ನಚ್ಚಿನ
ಬಿನ್ನಣಮೊಪ್ಪೆ ಕಾದಿದರ್ ||೭೬||
ಮಿಕ್ಕುದು ವಜ್ರಪಾತಮುಮ ನೆಂಬಿನ
ಮುಬ್ಬನಮುದ ತೋರಹ
ತ್ತಕ್ಕೆ ತಗುಳ್ದು ಪತ್ತಿಸುವ ಮಾನಸ
ಗೋಳಮೆ ನಿಪ್ಪ ಡೊಕ್ಕರ
ಕ್ಕಿಕ್ಕಿದ ವಜ್ರಲೇಪಮೆನೆ ಪತ್ತುವ
ಲಗ್ಗೆಗೆ ಮಾರಿಯೊಳ್ ಮಾಗಂ
ಬೊಕ್ಕವೊಲಾಗ ಬೆರ್ಚದನವಂ
ಕುಮರಂಗೆನಸಂ ನಿಯುದ್ಧದೊಳ್ ||೭೭||
(ಚಂದ್ರಪ್ರಭ ಪುರಾಣ ಆಶ್ವಾಸ ೫)

ಇಲ್ಲಿ 'ಆಸುವಿಡಿವಟ್ಟಿ, ಉಸಿರಣೆವಟ್ಟಿ, ಬಾಹು ದಣೆ ಎಂಬಂತೆ ಬೇರರೀತಿಯಾಗಿಯೂ ಪದ ಬಿಡಿಸುವುದಕ್ಕೆ ಅವಕಾಶವಿರುವಂತಿದೆ ಬಲ್ಲವರು ಸರಿಯಾಗಿ ಬಿಡಿಸಿ ವಿವರಿಸಬಹುದು

ಗೋವಿಜಯ

ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ

ರೋಗಿಯ ಆರೈಕೆ

ಮನೋರೋಗ ಚಿಕಿತ್ಸೆಯಲ್ಲಿ ದಾಯಿಯ ಪ್ರಮುಖ ಪಾತ್ರ

ರೋಗಿಯ ಮನಸ್ಸನ್ನು ಅರಿಯದೆ ಹೋದರೆ, ರೋಗವೆಂದಿಗೂ ವಾಸಿಯಾಗದು.

ಸುಖೀ ರಾಜ್ಯಸ್ಥಾಪನೆ ನಮ್ಮ ಗುರಿ. ಇದನ್ನು ನಾವು ಸಾಧಿಸಬೇಕಾದರೆ ಜನರ ಮಾನಸಿಕ ದೌರ್ಬಲ್ಯ ಹಾಗೂ ರೋಗ ರುಜಿನಗಳ ನಿವಾರಣೆ ಅತ್ಯಾವಶ್ಯಕವಾಗುತ್ತದೆ. ಈ ಸಮಸ್ಯೆಯನ್ನು ನಾವು ಎದುರಿಸಲೇ ಬೇಕು. ನಮ್ಮ ದೇಶದಲ್ಲಿ ಪ್ರತಿ ಸಾವಿರ ಜನಕ್ಕೆ ಇಬ್ಬರು, ಒಂದಲ್ಲ ಒಂದು ಮಾನಸಿಕ ರೋಗದಿಂದ ನರಳುತ್ತಿರುವರೆಂದು ಅಂದಾಜಾಗಿದೆ. ಈ ಅಂದಾಜಿನಲ್ಲಿ, ಮಾನಸಿಕ ಲೋಪಗಳಿರುವವರಾಗಲಿ ನರಗಳ ದೌರ್ಬಲ್ಯದಿಂದಾಗಿ ಮೂರ್ಛೆ ಹೋಗುವವರಾಗಲಿ ಸೇರಿರುವುದಿಲ್ಲ.

ಒಳ್ಳೆಯ ಶುಶ್ರೂಷೆ; ಉತ್ತಮ ದಾಯಿ ಕೆಲಸ

ಮಾನಸಿಕ ರೋಗ ರುಜಿನಗಳಿಂದ ನರಳುವವರಿಗೆ ಮಾನಸಿಕ ಸ್ವಾಸ್ಥ್ಯವನ್ನೊದಗಿಸುವ ಸಮಸ್ಯೆ ಸ್ವಲ್ಪ ವಿಚಿತ್ರವಾದುದು. ಅವರಿಗೆ ಮುಖ್ಯವಾಗಿ ಬೇಕಾದುದು ಒಳ್ಳೆಯ ಶುಶ್ರೂಷೆ; ಉತ್ತಮ ದಾಯಿ ಕೆಲಸ. ಈ ಭಾವನೆ ಭಾರತಕ್ಕೆ ಹೊಸದು. ಹುಚ್ಚರ ಆಸ್ಪತ್ರೆಗಳಲ್ಲಿ ಖಾಯಿಲೆ ಇರುವ ರೋಗಿಗಳ ಶುಶ್ರೂಷೆಯನ್ನೇನೊ ದಾಯಿಗಳು ನೋಡಿಕೊಳ್ಳುತ್ತಾರೆ. ಈ ರೋಗಿಗಳ ಬಗ್ಗೆ ಅವರಿಗೆ ಅನುಕಂಪ, ಸಮಾನುಭೂತಿಗಳು ಇರುವುದಿಲ್ಲವೆಂದಲ್ಲ. ಆದರೆ ಅವರು ನಡೆಸುವ ಶುಶ್ರೂಷೆ ಮಾತ್ರ ಯಾಂತ್ರಿಕವಾದುದು; ದೈಹಿಕ ರೋಗ ನಿವಾರಣೆಗೆ ಮಾತ್ರ ಸಂಬಂಧಿಸಿದುದು. ರೋಗಿಯ ಆವಶ್ಯಕತೆಯೇನು, ಆತನಿಗಿರುವ ಯಾವ ಕೊರತೆಯಿಂದ ಮಾನಸಿಕ ರೋಗ ಆತನಿಗೆ ಉಂಟಾಗಿದೆ ಎಂಬುದನ್ನು ಆಳವಾಗಿ ಯೋಚಿಸಿ ಮಾಡುವ ಶುಶ್ರೂಷೆ ದುರ್ಲಭ. ಆಸ್ಪತ್ರೆಯ ಇತರ ಸಿಬ್ಬಂದಿಯೂ ಅಷ್ಟೆ. ಒಂದು ವಿಶಿಷ್ಟ ತರಬೇತಿ ಎಂಬುದು ಅವರಿಗಿಲ್ಲ. ಆಸ್ಪತ್ರೆಯ ವಿಧಿನಿಯಮಗಳು ಮಾತ್ರ ಅವರಿಗೆ ಗೊತ್ತು. ಇಷ್ಟು ಹೊತ್ತಿಗೆ ರೋಗಿಗೆ ಊಟ ಕೊಡಬೇಕು, ಆತ ತಿನ್ನದಿದ್ದರೆ ಬಲವಂತದಿಂದ ತಿನ್ನಿಸಬೇಕು, ಇಂತಹ ಸಾಧಾರಣ ಮಟ್ಟದ ಕೆಲಸಗಳು ಮಾತ್ರ ಅವರಿಗೆ ತಿಳಿದಿರುತ್ತವೆ. ಇದಕ್ಕೂ ಹೆಚ್ಚಿನ ತರಬೇತಿ ಅವರಿಗಿರುವುದಿಲ್ಲ.

ಖಚಿತವಾದ ಚಿಕಿತ್ಸಾ ವಿಧಾನ

ಆದರೆ ಮನೋರೋಗ ಚಿಕಿತ್ಸಾ ವಿಧಾನ ಇಂದು ಸಾಕಷ್ಟು ಮುಂದುವರಿದಿದೆ. ಮಾನಸಿಕ ರೋಗಿಗಳ ಒಂದೊಂದೂ ಪ್ರಭೇದವನ್ನು ಹೆಚ್ಚು ಸ್ಪಷ್ಟವಾಗಿ ತಿಳಿಯುವ ಸಾಧನಗಳು ಇವು ಹಸ್ತಗತವಾಗಿವೆ. ಅಂತೆಯೇ ಮಾನಸಿಕ ರೋಗಗಳ ನಿವಾರಣೆ ವಿಷಯದಲ್ಲಿ ನಾವು ಇಂದು ಹೆಚ್ಚು ಖಚಿತವಾದ ಚಿಕಿತ್ಸಾ ವಿಧಾನಗಳನ್ನು ಹೆಚ್ಚಿನ ವಿಶ್ವಾಸದಿಂದ ಅನುಸರಿಸಬಹುದು; ಅಂತಹ ಚಿಕಿತ್ಸೆ ಮೂಲಕ ಹೆಚ್ಚು ಜನರನ್ನು ಗುಣಮುಖರನ್ನಾಗಿಯೂ ಮಾಡಬಹುದು.

ವಿಶಿಷ್ಟ ದಾಯಿ ಅರ್ಹತೆ

ಈ ಹೊಸ ವಿಧಾನಗಳನ್ನು ಯಶಸ್ವಿಯಾಗಿ ಅನುಸರಿಸಬೇಕಾದರೆ ದಾಯಿ ಅಥವಾ ಶುಶ್ರೂಷೆ ಕೆಲಸ ಮಾಡುವವರಿಗೆ ಚಿಕಿತ್ಸಾ ವಿಧಾನದ ವಿಶಿಷ್ಟ ಪರಿಚಯವಿರಬೇಕು. ಅವುಗಳಿಗನ್ವಯಿಸಿ ಒಂದು ವಿಶಿಷ್ಟ ತರಬೇತಿಯನ್ನೆ ಅವರಿಗೆ ಒದಗಿಸಬೇಕು

ಹುಚ್ಚರ ಆಸ್ಪತ್ರೆಗೆ, ರೋಗಿ ನಿರ್ದಿಷ್ಟ ಕಾರಣವಿಲ್ಲದೆ ಹೋಗಿ ಸೇರುವುದಿಲ್ಲ. ಆ ಕಾರಣವನ್ನು ನಾವು ತಿಳಿದುಕೊಂಡಷ್ಟು ದಾಯಿಗಿರಬೇಕಾದ ವಿಶಿಷ್ಟ ಅರ್ಹತೆಗಳ ಅರಿವು ನಮಗಾಗುತ್ತದೆ.

ಮಾನಸಿಕ ಸ್ವಾಸ್ಥ್ಯವಿಲ್ಲದ ಮನುಷ್ಯನಿಗೆ ಸಮಾಜವೇ ಬೇಡವಾಗಿರುತ್ತದೆ. ಸಮಾಜದಲ್ಲಿ ಪ್ರತಿಯೊಬ್ಬರೂ ಅವನನ್ನು ತಿರಸ್ಕಾರದಿಂದ ನೋಡಿರುತ್ತಾರೆ. ಎಲ್ಲಿಲ್ಲೂ ಅವನ ಪಾಲಿಗೆ ಅಭದ್ರತೆ ಕಂಡುಬರುತ್ತದೆ. ತನ್ನನ್ನು ಎಲ್ಲರೂ ಕೈಬಿಟ್ಟಿರುವುದಾಗಿ ತಾನು ಆಶ್ರಯವೆಂಬುದಿಲ್ಲದೆ ಮುಳುಗುತ್ತಿರುವುದಾಗಿ ಅವನ ಭಾವನೆ. ಈ ಭಾವನೆ ಹೋಗದ ಹೊರತ ಅವನ ಮಾನಸಿಕರೋಗ ನಿವಾರಣೆಯಾಗದು. ಜೀವನದಲ್ಲಿ ಅವನನ್ನು ಮತ್ತೆ ಆಶಾವಾದಿಯನ್ನಾಗಿ ಮಾಡದ ಹೊರತು ಅವನ ಚಿಕಿತ್ಸೆ ಫಲಪ್ರದವಾಗದು.

ರೋಗಿಯ ಭಾವನೆ ಬದಲಿಸುವ ವಾತಾವರಣ

ಅಂತೆಯೇ ಅವನ ಭಾವನೆಗಳನ್ನು ಬದಲಿಸುವಂತಹ ವಾತಾವರಣ ಅತ್ಯಾವಶ್ಯಕವಾಗುತ್ತದೆ. ಪ್ರತಿಯೊಂದು ರೋಗಿಗೂ ಒಂದು ನಿರ್ದಿಷ್ಟ ಪ್ರಾಮುಖ್ಯತೆಯನ್ನು ಕೊಡಬೇಕಾಗುತ್ತದೆ. ಚಿಕಿತ್ಸಾ ಕ್ರಮವನ್ನು ಅನುಸರಿಸುವ ವೈದ್ಯತಂಡದಲ್ಲಿ, ಒಬ್ಬ ಸದಸ್ಯೆಯಾದ ದಾಯಿ, ಅಂತಹ ಒಂದು ಹಿತಕರ ವಾತಾವರಣವನ್ನು ಕಲ್ಪಿಸಲು ತನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ರೋಗಿಯ ಜೊತೆಗೆ ಹೆಚ್ಚುಕಾಲವಿರುವ ಅವಕಾಶವಿರುವ ಆಕೆ ಒಟ್ಟು ಚಿಕಿತ್ಸಾವಿಧಾನದ ಒಂದು ಮುಖ್ಯ ಅಂಗವಾಗಿ ಕೆಲಸಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಸಾಮಾನ್ಯ 'ನರ್ಸ್'ಗೂ ಆಕೆಗೂ ಇರುವ ವ್ಯತ್ಯಾಸ ದೊಡ್ಡದು.

ಒಬ್ಬ ಸಾಮಾನ್ಯ ದಾಯಿಯ ವಿಷಯದಲ್ಲಿ, ಸೇವೆ ಶುಶ್ರೂಷೆಗೆ ಹೆಚ್ಚಿನ ಪ್ರಾಧಾನ್ಯ. ಆದರೆ ಮನೋರೋಗದ ಚಿಕಿತ್ಸೆಯ ಕ್ಷೇತ್ರದಲ್ಲಿನ ದಾಯಿಯ ಕೆಲಸ, ಸೇವೆ ಶುಶ್ರೂಷೆಯಷ್ಟೇ ಅಲ್ಲದೆ ರೋಗಿಯ ವೈಯಕ್ತಿಕ ವಿಚಾರಗಳಲ್ಲಿ ಆಕೆ ಆಸಕ್ತಿ ವಹಿಸಿ, ಆ ಸಂಬಂಧದ ಮಾನಸಿಕ ದೌರ್ಬಲ್ಯಗಳ ನಿವಾರಣೆಗೆ ಒಂದು ಸಹಾಯಕ ಪಾತ್ರ ವಹಿಸಬೇಕಾಗುತ್ತದೆ. ಹೀಗಾಗಿ ದಾಯಿಯ ಮತ್ತು ಚಿಕಿತ್ಸಕ ತಂಡದ ಪಾತ್ರ ಒಂದು ಆತ್ಮೀಯ ಮಟ್ಟದಲ್ಲಿರುತ್ತದೆ.

ದಾಯಿ ವರ್ತಿಸಿಕೊಳ್ಳುವ ರೀತಿ ಇದರಿಂದಾಗಿ ರೋಗಿಯ ಮಾನಸಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಬಹುದು, ಇಲ್ಲ ಕುಂಠಿತಗೊಳಿಸಲೂ ಬಹುದು. ಆಕೆ ರೋಗಿಯನ್ನು ಒಂದೊಂದು ವರ್ಗ ವಿಧಾನಕ್ಕೊಳಪಡಿಸಿ ಆತನ ಚಿಕಿತ್ಸೆಗೆ ಸಹಾಯಕವಾಗಬೇಕಾಗುತ್ತದೆ.

ಮನೋರೋಗ ಚಿಕಿತ್ಸೆಯಲ್ಲಿ ದಾಯಿಯ ಮೊದಲನೆಯ ಕೆಲಸ, ರೋಗಿ ಸರಿಯಾದ ಹೊತ್ತಿಗೆ ಊಟ ಮಾಡುತ್ತಾನೆಯೇ ಇಲ್ಲವೇ, ಸರಿಯಾದ ರೀತಿಯಲ್ಲಿ ಉಡುಪು ಧರಿಸಿಕೊಳ್ಳುತ್ತಾನೆಯೇ ಇಲ್ಲವೇ ಎಂಬುದನ್ನು ನೋಡಿಕೊಳ್ಳುವುದೇ ಆಗಿದೆ. ಅವನು ಅನುಭವಿಸುತ್ತಿರುವ ರೋಗದ ವಿರುದ್ಧ ಆತನನ್ನಷ್ಟೆ ಅಲ್ಲದೆ ಅವನ ಜೊತೆಗಿರುವವರನ್ನು ರಕ್ಷಿಸುವುದು ಅಗತ್ಯವಾಗುತ್ತದೆ. ಇದಕ್ಕಾಗಿ "ಎಲೆಕ್ಟ್ರೋ ಕನ್ವಲ್ಸಿವ್ ಥೆರಪಿ" ಮತ್ತು "ಇನ್ಸುಲಿನ್ ಥೆರಪಿ" ಇತ್ಯಾದಿ ಚಿಕಿತ್ಸಾ ವಿಧಾನಗಳನ್ನು ಪ್ರಯೋಗಿಸಬೇಕಾಗುತ್ತದೆ. ಇವುಗಳನ್ನು ಅನುಸರಿಸುವುದರಿಂದ ರೋಗಿಯ ಜೊತೆಗೆ ದಾಯಿಯ ಸಂಬಂಧ ಉತ್ತಮ ರೀತಿಯಲ್ಲಿ ಬೆಳೆಯಲೂ ಹಾದಿಯಾಗುತ್ತದೆ. ರೋಗಿಯ ಅಂತರ್ಯ ವೇದನೆಗಳನ್ನು ತಿಳಿಯಲು ಇವು ಸಹಾಯಕ.

ರೋಗಿಯ ಸಾಮಾಜಿಕ ಅಗತ್ಯಗಳ ಪೂರೈಕೆ.

ರೋಗಿಯ ಸಾಮಾಜಿಕ ಅಗತ್ಯಗಳನ್ನು ಪೂರೈಸಲೂ ಮನೋರೋಗ ಚಿಕಿತ್ಸಕ ದಾಯಿ ಸಹಾಯಕವಾಗಬೇಕು. ಇದಕ್ಕಾಗಿ ಇತರರ ಜೊತೆಗೆ ಬೆರೆಯಬೇಕಾದ ಅಗತ್ಯ ಕಂಡುಬರುತ್ತದೆ. ಮಾನಸಿಕ ರೋಗಕ್ಕೊಳಗಾಗಿರುವ ರೋಗಿಗೆ ಕೆಲಸ ಬೇಕು, ವಿರಾಮ ಬೇಕು, ಮನರಂಜನೆ ಮತ್ತು ವಿಹಾರಬೇಕು. ಸಾಮಾನ್ಯ ಮನುಷ್ಯನ ಅಗತ್ಯಗಳು ಅವನಿಗೂ ಇರುತ್ತವೆ. ಜೊತೆಯೊಂದಿಗರ ವರ್ಥ್ಯೆ ಅವನಿಗೊಂದು ರೀತಿಯ ರಕ್ಷಣೆ ಸಹ ಬೇಕು. ಇತರರಂತೆ ತಾನು ಬಾಳಬೇಕೆಂಬ ಒಂದು ಆಸಕ್ತಿ ಅವನಲ್ಲಿ ಕೆರಳಬೇಕು. ಇದನ್ನು ಕೆರಳಿಸುವ ಕಾರ್ಯ ಮನೋರೋಗ ಚಿಕಿತ್ಸಕ ದಾಯಿಯ ಒಂದು ಮುಖ್ಯ ಕೆಲಸವಾಗುತ್ತದೆ. ಹೀಗಾಗಿ ಆಕೆ ಅವನೊಂದಿಗೆ ಕೂಡಿ ಕೆಲಸ ಮಾಡುವ ಮತ್ತು ಅವನ ಮನಸ್ಸನ್ನು ತಿದ್ದುವ ಪ್ರಯತ್ನ ನಡೆಸಬೇಕಾಗುತ್ತದೆ.

ಅಂತೆಯೇ ಅವಳ ಮುಖ್ಯವಾದ ಕಾರ್ಯ ಅವನನ್ನು ಚುರುಕಗೊಳಿಸಿ ಕ್ರಿಯಾಶೀಲನನ್ನಾಗಿ ಮಾಡುವುದೇ ಆಗಿದೆ. ಇದಕ್ಕಾಗಿ ಆಕೆ ರೋಗಿಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ಅರಿತು ಅವನ ಚಲನವಲನಗಳನ್ನು ಮತ್ತು ನಿತ್ಯ ಜೀವನ ಕ್ರಮವನ್ನು ರೂಢಿಸಬೇಕಾಗುತ್ತದೆ.

ಮನಶ್ಶಾಸ್ತ್ರದ ಪರಿಜ್ಞಾನ ಅಗತ್ಯ

ಮನೋರೋಗ ಚಿಕಿತ್ಸಕ ದಾಯಿಗೆ ಮನಶ್ಶಾಸ್ತ್ರದ ಪರಿಜ್ಞಾನ ಬೇಕು. ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯವಾಗುವಂತಹ ಪಾತ್ರವನ್ನು ಆಕೆ ನಿರ್ವಹಿಸಬೇಕಾಗುತ್ತದೆ.

ಮನೋರೋಗ ಚಿಕಿತ್ಸಕ ದಾಯಿಗೆ ಪ್ರತಿಯೊಂದು ವಿಷಯವನ್ನು ಸೂಕ್ಷ್ಮವಾಗಿ ಗಮನಿಸಿ ಯಾವ ಯಾವ ಸನ್ನಿವೇಶದಲ್ಲಿ ರೋಗಿ ಯಾವ ರೀತಿ ವರ್ತಿಸಬಹುದು, ಈಗ ಏರ್ಪಟ್ಟಿರುವ ಒಂದು ಸನ್ನಿವೇಶದಿಂದಾಗಿ ಆತ ಮುಂದಿನ ಘಳಿಗೆಯಲ್ಲಿ ಯಾವ ರೀತಿ ವರ್ತಿಸಬಹುದು ಎಂಬುದರ ಪರಿಜ್ಞಾನ ಆಕೆಗೆ ಮುಖ್ಯವಾಗುತ್ತದೆ. ರೋಗಿ ಹೀಗೆಯೇ ವರ್ತಿಸುತ್ತಾನೆಂಬುದನ್ನು ಆಕೆ ಗ್ರಹಿಸಿದ್ದರೆ ಚಿಕಿತ್ಸಕಳ ಸ್ಥಾನದಿಂದ ಯಾವ ರೀತಿ ವರ್ತಿಸಿಕೊಂಡು ಆತನನ್ನು ಸರಿಯಾದ ದಾರಿಗೆ ತರಬಹುದೆಂಬುದನ್ನೂ ಆಕೆ ಯೋಚಿಸಬಹುದು.

ತನ್ನ ಮನಸ್ಸಿನ ಅಭಿಪ್ರಾಯವನ್ನು ವೈದ್ಯ ತಂಡಕ್ಕೆ ತಿಳಿಸಿ ಅವರು ರೋಗದ ಮೂಲ ತಿಳಿದು ಚಿಕಿತ್ಸಾ ವಿಧಾನವನ್ನು ರೂಪಿಸಲು ಆಕೆ ಸಹಾಯಕವಾಗಬಹುದು. ಮನೋರೋಗ ಚಿಕಿತ್ಸಕ, ಮನಶ್ಶಾಸ್ತ್ರಜ್ಞ, ಸಮಾಜ ಸೇವಾ ಕಾರ್ಯಕರ್ತ ಮತ್ತು ದಾಯಿ ಇವಿಷ್ಟು ಜನರ ತಂಡ ಯಶಸ್ವಿಯಾಗಿ ಕೆಲಸ ಮಾಡಿದಾಗಲೇ ರೋಗಿಯ ಯಶಸ್ವೀ ಚಿಕಿತ್ಸೆ ಸಾಧ್ಯ. ಅಂತೆಯೇ ದಾಯಿ ಮನೋರೋಗ ಚಿಕಿತ್ಸಕ ತಂಡದ ಒಬ್ಬ ಮುಖ್ಯ ಸದಸ್ಯೆ.

—ಡಾ। ಟಿ. ಬಸಪ್ಪ ಬೆಂಗಳೂರು

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ವಿಜ್ಞಾನ ವಿಸ್ಮಯ

ಸಿ. ಎಫ್. ಟಿ. ಆರ್. ಮತ್ತದರ ಉದ್ಯಮಗಳು

ವಿದೇಶವಿನಿಮಯದ ಉಳಿತಾಯಕ್ಕೆ ಬಹು ಮುಖ ಸೇವೆ ಸಲ್ಲಿಸುತ್ತಿವೆ.

'ಸೆಂಟ್ರಲ್ ಫ್ರೂಡ್ ಟೆಕ್ನೊಲೊಜಿಕಲ್ ರೀಸರ್ಚ್ ಇನ್ಸ್ಟಿಟ್ಯೂಟ್ ಮೈಸೂರು'-('Central Food Technological Research Institute Mysore')—ಇದು ನಿರ್ವಹಿಸುವ ಕಾರ್ಯ ಶ್ಲಾಘನೀಯವಾಗಿದೆ. ಭಾರತದಲ್ಲಿನ ಹಲವಾರು ಪ್ರಮುಖ ಸಂಸ್ಥೆಗಳಲ್ಲಿ ಇದೂ ಒಂದಾಗಿದೆ. ಆದರೆ ಇದರ ಪಾತ್ರವು ವಿಶಿಷ್ಟವಾಗಿದೆ; ಹಿರಿದಾಗಿದೆ. ಭಾರತದ ಉತ್ಕರ್ಷತೆಗೆ ದುಡಿವ ಸಂಸ್ಥೆಯಿದೆನ್ನಿ! ಗೃಹಕೃತ್ಯಗಳಿಗೆ ಯೋಗ್ಯವಾಗಿರುವ, ಹಾಗೂ ನಮ್ಮ ನಿತ್ಯದ ಉಪಯೋಗಕ್ಕೆ ಬೇಕುವ ಹಲವಾರು ಸಾಮಗ್ರಿಗಳನ್ನು ತಯಾರಿಸಿಕೊಡುವುದೇ ಇದರ ಧ್ಯೇಯ. ಹಲವಾರು ಸಂಶೋಧನೆಗಳನ್ನು ನಡೆಯಿಸಿ ಹಾಲನ್ನು, ಅಕ್ಕಿಯನ್ನು, ಸಕ್ಕರೆಯನ್ನು ಕೃತಕವಾಗಿ ತಯಾರಿಸಿಕೊಡುವ ಯತ್ನ ನಡೆಸಿದ್ದಾರೆ. ಆದುದರಿಂದ ಇದೊಂದು ಸಂಸ್ಥೆ ಯಾವುದು ಅತ್ಯದ್ಭುತ ಸಾಮಗ್ರಿಗಳನ್ನು ತಯಾರಿಸಿಕೊಡುತ್ತದೋ ಅದು.

ಹೀಗೆ, ಹಾಲನ್ನು ಅಕ್ಕಿ ಸಕ್ಕರೆ ಇತ್ಯಾದಿ ವಸ್ತುಗಳನ್ನು ಅವರು ಯಾವ ರೀತಿಯಿಂದ ತಯಾರಿಸಿಕೊಡುತ್ತಾರೆ? ಎಂಬ ವಿಷಯವನ್ನು ಚೆನ್ನಾಗಿ ವಿವೇಚಿಸೋಣ.

ಕೃತಕ ಹಾಲಿನ ಉದ್ಯಮ

ಈ ಉದ್ಯಮವು ಈ ಸಂಸ್ಥೆಯ ಒಂದು ವಿಶೇಷತರದ ಕಾರ್ಯವೆನ್ನಬಹುದು ನಾವು ಹಾಲನ್ನು ಯಾರಿಂದ ಪಡೆಯುತ್ತೇವೆ? ಎಂದು ಪ್ರಶ್ನಿಸಿದಲ್ಲಿ ನೀವು, "ದನದಿಂದ, ಎಮ್ಮೆಯಿಂದ, ಆಡಿನಿಂದ" ಎಂದುತ್ತರ ಕೊಡಬಹುದಲ್ಲವೆ? ಹೌದು; ಸರಿ ನಮಗೆ ಆಡಿನಿಂದಲೂ ದನ ಎಮ್ಮೆಗಳಿಂದಲೂ ಹಾಲು ದೊರೆಯಬಲ್ಲುದು. ಆದರೆ ಗಿಡದಿಂದ (ಕೆಲವು ತರದ) ಹಾಲನ್ನು ತಯಾರು ಮಾಡುತ್ತಾರೆ ಎನ್ನುವಾಗ ನಿಮಗೆ ಆಶ್ಚರ್ಯವಾಗುವುದು ಸಹಜ. ಕೆಲವೆಡೆಗಳಲ್ಲಿ ಸೋಯಾ ಬೀಜದಿಂದಲೂ ಹಾಲನ್ನು ತಯಾರಿಸುತ್ತಾರೆ. ಆದರೆ ಈ ಸಂಸ್ಥೆಯವರು ಹಾಲನ್ನು ತಯಾರಿಸುವುದು ನೆಲಗಡಲೆಯಿಂದ. ಇದು ನಿಜಕ್ಕೂ ಒಂದು ಅದ್ಭುತ ಕಾರ್ಯವಲ್ಲವೆ? ಇದನ್ನು ಕೇಳಿದಾಗ, "ನೆಲಗಡಲೆಯಿಂದಲೆ?" "ಹಾಲೆ?" ಎನ್ನಬಹುದಲ್ಲವೆ ನೀವು? ಆದರೆ ಇದು ಸತ್ಯ.

ಇವರು ನೆಲಗಡಲೆಯಿಂದ ತಯಾರಿಸಿದ ಈ ಕೃತಕ ಹಾಲು ಸ್ವಾಭಾವಿಕ ಹಾಲನ್ನೇ ಹೋಲುತ್ತದೆ. ಬಣ್ಣದಲ್ಲೂ ರುಚಿಯಲ್ಲೂ ಹಾಗೆಯೇ. ದನದ ಹಾಲಿನಂತೆಯೆ ಬಿಳಿಯಾದ ಸ್ವಚ್ಛ ಬಣ್ಣವೂ, ಸಿಹಿ ರುಚಿಯೂ ಇದಕ್ಕಿದೆ. ಸಾಮಾನ್ಯವಾಗಿ ದನದ ಹಾಲಿತ್ಯಾದಿಗಳಲ್ಲಿ ಜೀವಸತ್ವದ ಹೊರತು ಉಳಿದ ಎಲ್ಲಾ ಜೀವಾತುಗಳು ಯೋಗ್ಯ ಪ್ರಮಾಣದಲ್ಲಿ ಒಳಗೊಂಡಿವೆ ಎಂದಾದರೆ ಈ ಕೃತಕ ಹಾಲಿನಲ್ಲೂ ಇದೇ ತೆರನ ಜೀವಾತುಗಳು ಒಳಗೊಂಡಿವೆ. ಮತ್ತೊಂದು ವಿಷಯವೇನೆಂದರೆ- ಈ ಕೃತಕ ಹಾಲು ಇತರ ಸ್ವಾಭಾವಿಕ ಹಾಲಿನಂತೆಯೆ ಕೆನೆಯನ್ನೂ ಮೊಸರನ್ನೂ ಮಜ್ಜಿಗೆಯನ್ನೂ ಕೊಡುತ್ತದೆ ಎಂದ ಮೇಲೆ, ಎಲ್ಲಾ ವಿಷಯಗಳಲ್ಲೂ ಕೃತಕ ಹಾಲು— ಸ್ವಾಭಾವಿಕ ಹಾಲು ಎಂಬ ಸಮಕಾಲಿಕ ಸಮೀಕರಣ ರಚಿಸಿದರೆ ತಪ್ಪೇನಿದೆ? ಹಾಗೆ ಎಲ್ಲಾ ವಿಷಯಗಳಲ್ಲಿ ಕೃತಕವು ಸ್ವಾಭಾವಿಕಕ್ಕೆ ಸಮವಾಗಿರುವುದಾದರೆ ಅದರ ಬೆಲೆಯಲ್ಲಿ ತುಂಬ ವ್ಯತ್ಯಾಸವಿದೆ. ಅದರ ಕ್ರಯ ದನದ ಹಾಲಿನ ಮೂರರಲ್ಲೊಂದಂಶವಾಗಿರುತ್ತದೆ. ದನದ ಹಾಲಿಗೆ ಕುಡ್ತೆಗೆ ೩ ಆಣೆ ಎಂದಿಟ್ಟುಕೊಳ್ಳಿ! ಆಗ ಈ ಹಾಲಿಗೆ ಒಂದೇ ಆಣೆ ನಾವಿತ್ತರಾಯಿತು. ಹಾಗಾದರೆ ಯಾವುದು ಉತ್ತಮ? ಕೃತಕ ಹಾಲೆ? ದನದ ಹಾಲೆ? ಆದುದರಿಂದ ಇನ್ನು ಕೆಲವೇ ಸಮಯದಲ್ಲಿ ಪ್ರತಿ ಭಾರತೀಯನಿಗೆ ಉತ್ತಮ ತರದ ಹಾಲು ಕಮ್ಮಿ ಕ್ರಯದಲ್ಲಿ ದೊರೆಯಬಲ್ಲುದೆಂಬ ಭರವಸೆಯಿದೆ.

ಕೃತಕ ಅಕ್ಕಿ ತಯಾರಿ.

ಅಕ್ಕಿಯೊಂದಿಲ್ಲದೆ ಮಾನವನ ಜೀವನ ಸಾಗದು. ಹಾಗೆಂದು ಉತ್ತರ ಭಾರತೀಯರಿಗೆ ಗೋಧಿಯೇ ಆಹಾರ. ನಾವೆಲ್ಲ ಇಷ್ಟೆಲ್ಲಾ ಹೋರಾಡುತ್ತೇವೆ; ಆಜನ್ಮ ಪರಿಯಂತ ಅದಾವುದೋ ಕೆಲಸದಲ್ಲಿ ನಿರತರಾಗಿರುತ್ತೇವೆ ಅಷ್ಟೆಲ್ಲಾ ಸೆಣಸಾಟವಾದರೂ ಅದೇಕೆ? ಅದೇ, "ಎಲ್ಲಾರು ಮಾಡೋದು ಹೊಟ್ಟೆಗಾಗಿ" ಅದಕ್ಕಾಗಿ ತಾನೇ ಅಂತಹ ಒಂದು ವಸ್ತುವನ್ನು ಕೃತಕವಾಗಿ ತಯಾರಿಸಿ ಬಿಟ್ಟರೆ ಅದೆಷ್ಟೊ ಲಾಭವಿದೆ ಎಂದು ಈ ಸಂಸ್ಥೆ ಮನಗಂಡಿರಬೇಕು. ಆದಕ್ಕಾಗಿ ಅಂತಹ ಒಂದು ವಸ್ತು ವಿಶೇಷವನ್ನು ತಯಾರಿಸಿಕೊಡುತ್ತಿದೆ; ತಕ್ಕ ಹಾಗೆ ಶ್ರಮವಹಿಸುತ್ತದೆ. ಇನ್ನು ಈ ತೆರನ ಅಕ್ಕಿಯು ೧೫% ನೆಲಗಡಲೆ ಹುಡಿಯಿಂದಲೂ ೮೫% ಮರಗೆಣಸಿನ ಬೇರಿನಿಂದ ಹುಟ್ಟಿಸಿದ ಹುಡಿಯಿಂದಲೂ ಕೂಡಿರುತ್ತದೆ. ಇಂತಹ ಒಂದು ಮಿಶ್ರಣವನ್ನು ಮಿಶ್ರಿಸಿ ಅದನ್ನು ವಿಶಿಷ್ಟ ಯಂತ್ರದಲ್ಲಿ ಹಾಕಿ ಅಕ್ಕಿ ಕಾಳುಗಳನ್ನು ತಯಾರಿಸುತ್ತಾರೆ. ಇದು ಸ್ವಾಭಾವಿಕ ಅಕ್ಕಿಯಂತಿದ್ದು ಅದರಂತೆಯೇ ಪೌಷ್ಟಿಕವೂ ಎಂಬುವುದಾಗಿ ಇದುವರೆಗೆ ನಡೆದ ಸಂಶೋಧನೆಗಳು ತಿಳಿಸುತ್ತವೆ. ಇದೂ ಕೃತಕ ಹಾಲಿನಂತೆ ಅತಿ ಕಡಿಮೆ ದರವುಳ್ಳದ್ದೆಂದು ನೀವು ಈಗಾಗಲೇ ಮನವರಿಕೆ ಮಾಡಿಕೊಂಡಿರಬಹುದು. ಆದ್ದರಿಂದ ಇನ್ನು ಈ ಸಂಸ್ಥೆಯು ಇದರ ಬಗ್ಗೆ ಪರಿಶ್ರಮ ನಡೆಸಿದಲ್ಲಿ ನಾವು ತುಂಬ ಸುಖಿಗಳಾಗಬಹುದು.

ಸಕ್ಕರೆಯ ಉದ್ಯೋಗ

ಇನ್ನು ಸಕ್ಕರೆ ತಯಾರಿಯೂ ಈ ಸಂಸ್ಥೆಯ ಒಂದು ಅದ್ಭುತ ಕಾರ್ಯವೆನ್ನಬಹುದು. ಆನೆಕತ್ತಾಳಿ ಎನ್ನುವ ಹೆಸರಿನ ಗಿಡವು ಇವರ ಕೃತಕ ಸಕ್ಕರೆ ತಯಾರಿಗೆ ಉಪಯೋಗಿಸಲ್ಪಡುತ್ತದೆ.

ಆನೆಕತ್ತಾಳಿ ಗಿಡ ಬೇಲಿಯ ಬದಿಯಲ್ಲಿದೆ. ಅವು ಹರಿತವಾದ ದೊರಗಾದ ಉದ್ದವಾದ ಎಲೆಯನ್ನು ಹೊಂದಿವೆ. ಅವುಗಳ ಬಣ್ಣ ಬೂದು ಮಿಶ್ರಿತ ಹಸುರಾಗಿರುತ್ತದೆ. ಅವುಗಳ ಬದಿ ಕಂಟಕದಿಂದ ತುಂಬಿವೆ. ಇವುಗಳ ಕಾಂಡ ಗಂಟುಗಂಟಾಗಿದ್ದು ಈ ಮೂಲವನ್ನು ಈ ಸಂಸ್ಥೆಯ ಆಳುಗಳು ತೆಗೆದುಬಿಡುತ್ತಾರೆ ನಂತರ ಇವುಗಳೆಲ್ಲ ಯಂತ್ರಕ್ಕೆ ಒಡ್ಡಲ್ಪಟ್ಟಾಗ ಇವುಗಳಿಂದ ಒಂದು ತರದ ರಸ ಹೊರಡುತ್ತದೆ. ಅದು ಅಂಟು ಅಂಟಾಗಿಯೂ ಸಿಹಿಯಾಗಿಯೂ ಇರುತ್ತದೆ. ಇದು ಕಲ್ಮಷಭರಿತವಾದ ದೆಸೆಯಿಂದ ಅವರು ಈ ರಸವನ್ನು ಶುದ್ಧೀಕರಣ ಕ್ರಿಯೆಗೆ ಒಳಗುಮಾಡಿ ಸಕ್ಕರೆಯ ಬದಲು ಉಪಯೋಗಿಸುತ್ತಾರೆ. ಆದರೆ ಈ ರಸವು ಸಕ್ಕರೆಯ ಸ್ಪಟಿಕಗಳಾಗಿ ಮಾರ್ಪಾಟಾಗದು. ಆದರೆ ಕಬ್ಬಿನಿಂದ ತೆಗೆದ ರಸವು ಸ್ಪಟಿಕಗಳಾಗಿ ಮಾರ್ಪಾಟಾಗಬಲ್ಲುದು. ಈ ರಸವನ್ನೇ ನಾವು ಸಕ್ಕರೆಯೆಂಬುದಾಗಿ ಉಪಯೋಗಿಸಬಹುದು.

ಒಣಗಿದ ಹಾಲಿನ ತಯಾರಿಕೆ

ಒಣಗಿದ ಹಾಲಿಗೆ ನೀರು ಬೆರೆಸಿ ಹಾಲನ್ನು ಪಡೆಯಬಹುದು. ಈ ಸಂಸ್ಥೆಯವರು ಹಾಲಿನ ತೇವ ತೆಗೆದು ಒಣಗಿದ ಹಾಲನ್ನು ಅಥವಾ ಹಾಲಿನ ಹುಡಿ ತಯಾರಿಸುತ್ತಾರೆ. ಇದರಿಂದ ಉಪಯೋಗವೆಂದರೆ- ನಮಗೆ ಬೇಕಾದ ಅಳತೆಯಷ್ಟೇ ಹಾಲನ್ನು ಪಡೆಯಬಹುದು. ಇದನ್ನು ಕರಡಿಗೆಗಳಲ್ಲಿ ಗಟ್ಟಿಯಾಗಿ ಮುಚ್ಚಿಟ್ಟರೆ ಹಾಳಾಗದು. ಈ ಹುಡಿಗೆ ಗಾಳಿಯ ಸ್ಪರ್ಶವಾದಾಗ ಅದು ಹಾಳಾಗಬಲ್ಲುದೆಂಬ ಕಾರಣವೇ ಹಾಗೆ ಮಾಡಲು ಸಾಧ್ಯವಾಯಿತು. ಇದೇನೂ ಹೊಸತಲ್ಲ; ಸ್ವಾಭಾವಿಕ ಹಾಲನ್ನು ಹೆಚ್ಚು ಸಮಯ ಗಾಳಿಗೆ ತೆರೆದಿಟ್ಟಾಗ ಹುಳಿಯುತ್ತದೆ.

ನಮಗೆ ಬೇಕಾದ ಅಳತೆಯಷ್ಟೆ ಹಾಲನ್ನು ನಾವು ಪಡೆಯಬಹುದೆಂದಾದ ಮೇಲೆ ಯಾವುದೊಂದೂ ಹಾಳಾಗಲೆಡೆಯಿಲ್ಲ. ಈ ಹಾಲು ಮಾತ್ರವಲ್ಲದೇ ಹಣ್ಣು ತರಕಾರಿಗಳೂ ಒಣಗಿಸಲ್ಪಡುತ್ತದೆ. ಅವುಗಳನ್ನು ಸೂರ್ಯನ ಬಿಸಿಲಿಗೆ ಇಲ್ಲವೇ ಕೃತಕ ಉಷ್ಣಕ್ಕೆ ಒಡ್ಡಿದಾಗ ಅವುಗಳಲ್ಲಿನ ತೇವ ಮಾಯವಾಗಿ ಅವು ಒಣಗುತ್ತವೆ. ಅವು ಒಂದು ವೇಳೆ ಆಹಾರಕ್ಕೆ ಬೇಕು ಎಂದಾದಾಗ ಅದಕ್ಕೆ ನೀರು ಬೆರೆಸಿದರಾಯಿತು; ಎಲ್ಲ ಕೆಲಸವಾಯಿತು. ಇದರಿಂದ ನಮಗೆ ಎಷ್ಟು ಉಪಕಾರವಾಗುತ್ತದೆಂ ದು ಈಗ ಕಾಣೆ ಮನಗಂಡಿರಿ ಕಾಸ ಈಗಿನ 'ಫ್ಯಾಶನ್'ನಲ್ಲಿ ತಲ್ಲೀನರಾಗಿರುವ, ಪುರುಷ ವರ್ಗದವರಾರಂಭಿಸುವ ಕೆಲಸಗಳಿಗೆ ತಾವೂ ಮುಂದೊತ್ತುವ ಆಧುನಿಕ ಸ್ತ್ರೀಯರು ಈ ಸಂಸ್ಥೆಯ ಕೆಲಸಕ್ಕೆ ಅದೆಷ್ಟು ಬಾರಿ ಶಿರವಾಗಿಸರೊ ಕಾಣೆ. ಏಕೆಂದರೆ ಈ ಸಂಸ್ಥೆಯು ಸೂಪ್ ಚೂರ್ಣ ತಯಾರಿಸುತ್ತದೆ. ಈ ಹುಡಿಗೆ ಬಿಸಿ ನೀರು ಎರೆದರಾಯಿತು; ಘಮಘಮಿಸುವ, ಚೆನ್ನಾದ, ರುಚಿಯುಕ್ತ ಸೂಪ್ ದೊರೆಯುತ್ತದೆ. ಇದರ ಜತೆಗೆ ಒಂದು ಸೇರು ಅನ್ನವನ್ನುಣ್ಣಬಹುದು. ರಾತ್ರಿ ೧೦ ಘಂಟೆಗೆ ಸಿನಿಮಾದಿಂದ ಬಂದರೂ ಈ ರೀತಿಯ ಪದಾರ್ಥವನ್ನು ಐದೇ ಐದು ನಿಮಿಷದಲ್ಲಿ ಮಾಡಿ ಬಿಡಬಹುದು; ಊಟವನ್ನು ತಯಾರಿಸಬಹುದು, ಕೆಲವೊಮ್ಮೆ ಫಕ್ಕನೆ ಅತಿಥಿಗಳು ಗೃಹ ಪ್ರವೇಶ ಮಾಡುವುದಿದೆ. ಆಗ ಈ ಹುಡಿ ಎಷ್ಟೋ ಆಧಾರವಾಗುತ್ತದೆ. ಚಿಕ್ಕ ಸಮಯದಲ್ಲಿ ಉತ್ತಮ ತರದ ಪದಾರ್ಥವನ್ನು ಈ ಹುಡಿಯಿಂದ ತಯಾರಿಸಬಹುದೆಂದಾದರೆ ಇವರ ಕೃತ್ಯಕ್ಕೆ ಶಿರಬಾಗಬೇಡವೆ?

ಇನ್ನಿತರ ಶೋಧನೆಗಳು

೧. ಹಣ್ಣುಗಳನ್ನು ಕರಡಿಗೆಗಳಲ್ಲಿ ಹಾಕಿ 'ಪ್ಯಾಕಿಂಗ್' ಮಾಡುವುದು

೨. ಬಿದಿರುಗಳ ಚಿಗುರಿಂದ ರುಚಿಯುಕ್ತ ಪದಾರ್ಥ ತಯಾರಿ.

೩. ವ್ಯಾನಿಲ್ಲಾ ಬೀಜದಿಂದ ವ್ಯಾನಿಲ್ಲಾ ಸತ್ವ ತಯಾರಿ.

೪. ಬಲಹೀನರಿಗೆ ವಿಟಾಮಿನ್ ಯುಕ್ತ ಟಾನಿಕ್ ತಯಾರಿ.

೫. ಕೆಲವು ರುಚಿಕರ ಚಟ್ನೀ ತಯಾರಿ ಇತ್ಯಾದಿ, ಇತ್ಯಾದಿ.

ಇವೆಲ್ಲ ನಮ್ಮ ಮೈಸೂರು ಸಂಸ್ಥಾನದಲ್ಲಿನ C. F. T. R ಸಂಸ್ಥೆಯ ತಯಾರಿಕೆಗಳು. ಅಲ್ಲಿ ಜರಗುವ ಕೆಲಸಗಳು ನಮ್ಮ ಲಾಭದ ದೃಷ್ಟಿಯಿಂದ ಆಗಿವೆ. ಆದುದರಿಂದ ಅಲ್ಲಿ ಅವರು ಪಡುವ ಶ್ರಮಕ್ಕೆ ನಾವು ಋಣಿಗಳಾಗಬೇಕು. ಇದು ಪರದೇಶಗಳಿಗೆ ಹೋಗುವ ಹಣವನ್ನು ಭಾರತದಲ್ಲಿಯೇ ಉಳಿಸುತ್ತದೆ—ಇದೇ ಅದರ ಗುರಿ. ಈ ತೆರನ ಸಂಸ್ಥೆಗಳು ಭಾರತದಲ್ಲಿ ಬೆಳೆದು ಭಾರತದ ಉತ್ಕರ್ಷಕ್ಕೆ ಸಹಾಯವಾಗಲೆಂದೇ ಎಲ್ಲರ ಬಯಕೆ.

—ಶ್ರೀ ರಮೇಶ ಪೈ ಕೆ.


ಕುಮಾರಿ ಬಿಲ್ಲೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & CO. (N. J.) CALCUTTA—40
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಕಥಾ ವಿಹಾರ

(೨ನೇ ಪುಟದಿಂದ)

ವಿಷ್ಣುವಿನ ಮನಃಪ್ರಿಯೆ ಲಕ್ಷ್ಮಿಯು ದರಿದ್ರ ಬ್ರಾಹ್ಮಣನ ಮನೆ ಬಾಗಿಲಿಗೆ ಬಂದು ಬಾಗಿಲು ತಟ್ಟಿದಳು. ಬ್ರಾಹ್ಮಣನು ಎದ್ದು ಬಂದು, ಆಕೆಯನ್ನು ಸ್ವಾಗತಿಸಿ, ಮಣೆಯಲ್ಲಿ ಕೂರಿಸಿ, ಆದರ ಸತ್ಕಾರಗಳನ್ನು ಮಾಡಿದಮೇಲೆ ತನ್ನಂತಹ ಬಡವನ ಮನೆಗೆ ಲಕ್ಷ್ಮಿಯು ಯಾವ ಮನೋದ್ದೇಶದಿಂದ ಬಂದಿರುವಳೆಂದು ಪ್ರಶ್ನಿಸಿದನು. ಆಗ ಪ್ರಸನ್ನವದನಳಾಗಿ ಲಕ್ಷ್ಮಿ ಅಂದಳು: "ಎಲೆ, ವಿಪ್ರನೇ, ಮೂರು ಲೋಕಗಳಲ್ಲಿಯೂ ಹಾಹಾಕಾರವೆದ್ದು ಬಿಟ್ಟಿದೆ. ಆದುದರಿಂದ, ಅದನ್ನು ಕೊನೆಗಾಣಿಸುವುದಕ್ಕೋಸ್ಕರ, ನಿನ್ನುದರದಲ್ಲಿ ಬಂಧಿತನಾಗಿರುವ ಸೃಷ್ಟಿಕರ್ತನನ್ನು ಕರೆದೊಯ್ಯಲು ಬಂದಿದ್ದೇನೆ. ನನ್ನ ಮೈದುನನನ್ನು ದಯ ಮಾಡಿ ನನ್ನೊಡನೆ ಕಳಿಸಿಕೊಡು."

ಬ್ರಾಹ್ಮಣನು ತನ್ನ ಪತ್ನಿಯನ್ನು ಕರೆದು ಹೇಳಿದನು: "ಎಲೆ ಬ್ರಾಹ್ಮಣತಿಯೇ, ಮೂಲೆಯಲ್ಲಿ ಬಿದ್ದಿರುವ ಹಿಡಿಸೂಡಿಯನ್ನಿಲ್ಲಿ ತಂದು ಕೊಡು. ಇಲ್ಲಿ ಲಕ್ಷ್ಮೀದೇವಿಯವರು ಬಂದಿದ್ದಾರೆ. ನಾನು ಹುಟ್ಟಿದಂದಿನಿಂದ ಪ್ರಾರಂಭಿಸಿ ಇದುವರೆಗೆ, ನಾನು ಹೊಟ್ಟೆಯ ಪಾಡಿಗಾಗಿ ಮೈಮುರಿಯುತ್ತಿರುವಾಗ ಈಕೆಗೆ ನನ್ನ ನೆನಪಾಗಲಿಲ್ಲ; ಈಗ ವಿಧಾತನನ್ನು ಕರೆದುಕೊಂಡು ಹೋಗಲಿಕ್ಕೆ ಬಂದಿದ್ದಾಳೆ! ಏನು ಧೈರ್ಯ? ನೋಡಿಯೇ ಬಿಡೋಣ, ಒಂದು ಕೈ.'

ಆದರೆ, ಲಕ್ಷ್ಮಿಯು ಬ್ರಾಹ್ಮಣಿತಿಯು ಕಸಬರಿಗೆ ತರುವವರೆಗೆ ಅಲ್ಲಿ ನಿಲ್ಲಲಿಲ್ಲ. ಆಕೆ ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡು ಸ್ವರ್ಗಕ್ಕೆ ಓಡಿಹೋದಳು. ದೇವತೆಗಳಿಗೆ ಪ್ರಥಮ ಚುಂಬನೇ ದಂತ ಭಗ್ನ ಎಂಬಂತಾಯಿತು. ಆದರೆ ಬೇರಾವ ಮಾರ್ಗವೂ ಇರದುದರಿಂದ, ನಿರುಪಾಯರಾಗಿ, ವಿದ್ಯಾಧಿಕಾರಿಣಿಯಾಗಿರುವ ಸರಸ್ವತಿಯನ್ನು ಪುಸಲಾಯಿಸಿ ಅಟ್ಟಿದರು. ಸರಸ್ವತಿ ಸಂಕೋಚಪಟ್ಟುಕೊಂಡೂ ಹಿಂದೆಮುಂದೆ ನೋಡಿಕೊಂಡೂ ಬ್ರಾಹ್ಮಣನ ಹರಕಲು ಗುಡಿಸಲಿಗೆ ಬಂದಳು. ಬ್ರಾಹ್ಮಣನು ಲಕ್ಷ್ಮಿಯಂತೆಯೇ ಈಕೆಗೂ ನಾನಾ ವಿಧದ ಉಪಚಾರವೆಸಗಿದನು. ಆಕೆಯು ತನ್ನಂತಹ ನಿರಕ್ಷರಕುಕ್ಷಿಯ ಬಳಿಗೆ ಬಂದಿರುವ ಗೂಢಾದ್ಗೂಢತರವಾದ ಕಾರಣವನ್ನು ತಿಳಿದೊಡನೆಯೇ ಆವನು ಕೋಪಾವೇಶಸಹಿತನಾದನು. ತನ್ನ ಹೆಂಡತಿಯನ್ನು ಕರೆದು "ಎಲೆ ಬ್ರಾಹ್ಮಣಿತಿಯೇ, ಆ ಕಸಬರಿಕೆಯನ್ನು ತಾ. ಸರಸ್ವತಿ ದೇವಿಯವರು ಅಪರೂಪಕ್ಕೆ ಬಂದಿದ್ದಾರೆ. ನಾನಂದು ಕರಿಯ ಕೋಣನಂತೆ ದಿನ ದೂಡುತ್ತಿರುವಾಗ ಇವರಿಗೆ ನನ್ನ ಸ್ಮರಣೆ ಸೋಕಲಿಲ್ಲ. ಈಗ ಮಾತ್ರ ತಮ್ಮ ಪತಿಯ ಸೆರೆಯನ್ನು ಬಿಡಿಸಲು ದಯಮಾಡಿಸಿದ್ದಾರೆ" ಎಂದನು.

ಸರಸ್ವತಿಯೂ ಗೆಂಪಿತ ಶರೀರೆಯಾಗಿ ತಲೆಯ ಮೇಲೆ ಪಾದಗಳನ್ನಿಟ್ಟುಕೊಂಡು ಓಡಿಹೋದಳು. ಬ್ರಹ್ಮನಿಲ್ಲದಿರುವುದರಿಂದ ಎಲ್ಲ ಕೆಲಸಗಳೂ ನಿಂತು ಹೋಗಿದ್ದುವು. ದೇವತೆಗಳು ವ್ಯಾಕುಲಚಿತ್ತರಾದರು. ಆದರೂ ಬ್ರಾಹ್ಮಣನು ಏನೇ ಆದರೂ ವಿಧಾತನನ್ನು ಬಿಟ್ಟುಬಿಡಲು ಸಿದ್ಧನಿರಲಿಲ್ಲ. ಕೊನೆಗೆ ವಿಶ್ವವೇ ಉರುಳುವುದೆಂಬುದು ತಿಳಿಯಲು ಮಹಾದೇವ ಈಶ್ವರನೇ ಕುಂಟುತ್ತಾ ಬ್ರಾಹ್ಮಣನ ಮನೆಗೆ ಬಂದನು.

ಆ ಬ್ರಾಹ್ಮಣನು ಶೈವೋಪಾಸಕನಾಗಿದ್ದನು. ಸಾಕ್ಷಾತ್ ಪರಮೇಶ್ವರನೇ ತನ್ನ ಬಳಿಗೆ ಬಂದುದರಿಂದ ಬ್ರಾಹ್ಮಣನು ಪರಮ ಸಂತುಷ್ಟನಾದನು. ವಿಧಿವತ್ತಾಗಿ ಶಿವನನ್ನು ಅರ್ಘ್ಯಪಾದ್ಯಾದಿಗಳಿಂದ ಆರಾಧಿಸಿ, ಆವನ ಮುಂದೆ ಬಂದು ಮುಕುಳಿಕರನಾಗಿ, "ಹೇ, ಪ್ರಭೋ, ನಿನ್ನ ಸೇವಕನಿಗೆ ಇಂದು ಆತನ ಜನ್ಮಜನ್ಮಾಂತರದ ತಪಸ್ಸ ಸಿದ್ಧಿಸಿದೆ. ಕೃತಾರ್ಥನಾದೆ..." ಎಂದನು.

ಆಗ ಮಹಾದೇವನು ಆವನ ಮಾತನ್ನು ಅರ್ಧವಲ್ಲಿಯೇ ತಡೆದು ಹೇಳಿದನು: "ಎಲೆ ಬ್ರಾಹ್ಮಣನೇ, ನೀನು ವಿಧಾತನನ್ನು ನಿನ್ನ ಹೊಟ್ಟೆಯೊಳಗೆ ಇರಿಸಿಕೊಂಡು ಬಹಳ ಅನರ್ಥವನ್ನುಂಟುಮಾಡಿರುವೆ! ನೀನು ಆವನನ್ನು ಬಿಟ್ಟುಬಿಡು; ಇಲ್ಲವಾದರೆ ಈ ಪ್ರಪಂಚವು ಇಲ್ಲಿಗೇ ಅಂತ್ಯವಾಗುವುದು."

"ದೇವಾಧಿದೇವ, ಭಕ್ತವರ, ತಮ್ಮ ಆಜ್ಞೆಯು ನನಗೆ ಶಿರಸಾವಾನ್ಯವಿದೆ. ಆದರೆ, ನನ್ನ ಗತಿಯೇನು? ಈ ವಿಧಾತನಿಂದಾಗಿಯೇ ನಾನು ಇದುವರೆಗೂ ದರಿದ್ರನಾಗಿಯೇ ಜೀವಹಿಡಿದು ಬಂದಿದ್ದೇನೆ. ಹಾಗಿರುವಾಗ, ಆವನನ್ನು ಅಷ್ಟು ಸುಲಭದಲ್ಲಿ ನಾನು ಹೇಗೆ ಬಿಟ್ಟು ಬಿಡಲಿ?" ಎಂದು ಬ್ರಾಹ್ಮಣನು ಪ್ರಶ್ನಿಸಿದನು.

ಮಹಾದೇವನು ಮುಗುಳ್ನಗುತ್ತ ಅಂದನು: "ಬ್ರಾಹ್ಮಣನೆ, ನೀನೇ ಗೆದ್ದುಬಿಟ್ಟೆ ಬ್ರಹ್ಮನು ಸೋತು ಹೋದನು. ನೀವು ಇಬ್ಬರೂ ಈಗ ನನ್ನೊಂದಿಗೆ ಸ್ವರ್ಗಕ್ಕೆ ಬನ್ನಿರಿ. ಅಲ್ಲಿ ಎಷ್ಟು ದಿನ ಬೇಕೋ ಅಷ್ಟರ ವರೆಗೆ ಸ್ವರ್ಗ ಸುಖಗಳನ್ನು ಅನುಭವಿಸಿರಿ"

ದೇವಾದಿದೇವನ ವರದಾನವನ್ನು ಪಡೆದು ಬ್ರಾಹ್ಮಣನು ತನ್ನ ಮುಖವನ್ನು ವಿಶಾಲವಾಗಿ ತೆರೆದನು. ಆಗ ಕಪ್ಪೆ ರೂಪದಲ್ಲಿದ್ದ ಬ್ರಹ್ಮನು ಬಾಯಿಯ ಮೂಲಕ ಹೊರಗೆ ಹಾರಿಬಂದು ನಿಜಸ್ವರೂಪವನ್ನು ತೋರಿಸಿಕೊಂಡನು. ಕೊನೆಗೆ, ಬ್ರಹ್ಮಮಹೇಶ್ವರರು ಬ್ರಾಹ್ಮಣ ಮತ್ತಾತನ ಪತ್ನಿಯರೊಡನೆ ಸ್ವರ್ಗವನ್ನು ಸೇರಿದರು. ಬ್ರಾಹ್ಮಣ ದಂಪತಿಗಳಾದರೊ ಅಲ್ಲಿಯ ಥೇಚ್ಛವಾಗಿ ಸುಖಭೋಗಗಳನ್ನು ಅನುಭವಿಸತೊಡಗಿದರು. ಹುಟ್ಟಿನಿಂದ ಬಂದಿದ್ದ ದಾರಿದ್ರ್ಯ ಆವರನ್ನು ಎತ್ತಿ ಕಾಡಲಿಲ್ಲ.

ಮದುವೆಗಳು ಜರಗತಕ್ಕ ಸಮಯವು ಸಮೀಪಿಸಿದೆ;

'ಮದುವೆ ಸೀರೆ'

ಇದೀಗ ಪ್ರಕಟವಾಗಿದೆ!

ಜೀವನದ ಜೀರ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಿಥ್ಯಾಭಿಮಾನ

ಬರವಣಿಗೆಯಿಂದ ವ್ಯಕ್ತಿತ್ವ ನಿರೂಪಣೆ

ಬಾಲಜಾಕರು ತನ್ನ ವ್ಯಕ್ತಿತ್ವ ಬಗ್ಗೆಯೇ ಅಂದುಕೊಂಡ ಭವಿಷ್ಯ!

ಒಬ್ಬರ ಅಕ್ಷರಗಳನ್ನು ಕಂಡೊಡನೆಯೇ ಆವರ ಅದೃಷ್ಟವನ್ನೂ ವ್ಯಕ್ತಿತ್ವವನ್ನೂ ಪಟಪಟನೆ ಹೇಳುವುದು ಬಾಳೆಹಣ್ಣು ನುಂಗಿದಂತೆ ಎನ್ನಬಾರದು. ಆದರೆ ಶ್ರೀಮಾನ್ ಬಾಲಜಾಕರಿಗೇನೋ ಈ ಕಲೆ ಕರತಲಾಮಲಕವಾಗಿತ್ತು. ಆವರು ಪ್ರತಿಯೊಂದು ಬರವಣಿಗೆಯನ್ನೂ ಐದು ನಿಮಿಷ ಪ್ರತೀಕ್ಷಿಸುತ್ತಲೇ ಅದನ್ನು ಲಿಖಿಸಿದವನ ಹಣೆಬರಹವನ್ನು ನಿರರ್ಗಳವಾಗಿ ಆಡುತಿದ್ದರು. ತಾನು ಈ ಕಲೆಯಲ್ಲಿ ಅನ್ಯ ವಿಶೇಷಜ್ಞರಿಂದ ಕೀಳೆನಿಸಿಕೊಳ್ಳಲು ಆವರು ಎಂದೂ ಒಪ್ಪುತ್ತಿರಲಿಲ್ಲ; ಹಾಗೆ ತಿಳಿಯುತ್ತಲೂ ಇರಲಿಲ್ಲ. ತಾನೂ ಈ ಅದ್ಭುತ ನಿರೂಪಣಾ ಕಲೆಯಲ್ಲಿ ಅಪ್ರತಿಮ ಕುಶಲನೆಂದು ಆವರಂತೂ ಧೃಢ ವಿಶ್ವಾಸಪಟ್ಟುಕೊಂಡಿದ್ದರು.

ಒಂದು ಬಾರಿ, ಓರ್ವ ಮಹಿಳೆ ಶ್ರೀಮಾನರಮನೆಯಲ್ಲಿ ಪ್ರವೇಶಿಸಿದಳು. ಆಕೆಯೊಡನೆ ಓರ್ವ ಸಣ್ಣ ಬಾಲಕನೂ ಇದ್ದನು. ಬಾಲಕನ ಪುಟ್ಟ ಕೈಗಳಲ್ಲಿ ಒಂದು ಎಳೆಯ ನೋಟ್ ಬುಕ್ ಕೂಡಾ ಇತ್ತು. ಶ್ರೀಮಾನ್ ಬಾಲಜಾಕರು ಏನೇನನ್ನೋ ಈಕ್ಷಿಸುತಿದ್ದವರು ಸ್ವಲ್ಪ ಸಮಯದ ನಂತರ ಕಣ್ಣೆತ್ತಿದರು. ತಲೆಕೆರೆಯುತ್ತಾ, "ನೀವು ಏನು ಬಂದಿರಿ?" ಎಂದರು.

"ತಾವು ಬರವಣಿಗೆಯನ್ನು ಕಂಡೊಡನೆಯೇ ವ್ಯಕ್ತಿತ್ವವನ್ನು ಹೇಳುವುದರಲ್ಲಿ ಅಗ್ರಗಣ್ಯರಂತೆ."

"ಸರಿ, ಸರಿ, ಈಗ ಏನಾಗಬೇಕು?" ಬಾಲಜಾಕರು ಪ್ರಸನ್ನಮುಖರಾಗಿ ಹೇಳಿದರು.

ಮಹಿಳೆ ಆ ಮಗುವಿನ ಕೈಯಲ್ಲಿದ್ದ ನೋಟು ಬುಕ್ಕನ್ನು ಕಿತ್ತುಕೊಂಡು ಮೇಜಿನ ಮೇಲಿರಿಸಿದಳು. ಶ್ರೀಮಾನರು ಆದರ ರಕ್ತ ಕಣ್ಣುಹಾಯಿಸಿ ಪ್ರಶ್ನಿಸಿದರು — "ಈ ಹುಡುಗ ನಿಮ್ಮ ಮಗನೇ ತಾನೆ?"

"ಅಲ್ಲ, ಇವನಿಗೂ ನನಗೂ ಯಾವ ಸಂಬಂಧವೇ ಇಲ್ಲ."

"ಹಾಗಾದರೆ, ಒಳ್ಳೆಯದಾಯಿತು, ನಾನು ನಿಸ್ಸಂಕೋಚನಾಗಿ ಇರುವುದನ್ನು ಇದ್ದಂತೆಯೇ ಹೇಳಬಹುದು"

"ಹೌದು, ಹೇಗೆ ಇದೆ?"

"ನೋಡಿ ಅಮ್ಮ, ಈ ಬರವಣಿಗೆಯ ಆಧಾರದಿಂದ ನಿಸ್ಸಂದಿಗ್ಧವಾಗಿ ಅನ್ನುವುದಾದರೆ...."

"ಏನು....?"

"....ನಿಸ್ಸಂದಿಗ್ಧವಾಗಿ ಅನ್ನುವುದಾದರೆ, ಇವನು ಕೆಲಸಗಳ್ಳನೂ ಮೂರ್ಖನೂ ಆಗಿದ್ದಾನೆ. ಮಾತ್ರವಲ್ಲದೇ ಈತನು ಜೀವನದಲ್ಲಿ ಒಂದು ದಿನವಾದರೂ ಕೆಲಸಕ್ಕೆ ಬರುವ ವ್ಯಕ್ತಿಯಾಗಲಾರನು."

ಮಹಿಳೆ ಗಹಗಹಿಸಿ ನಕ್ಕು ಹೇಳಿದಳು —"ಮಹಾಶಯರೇ, ಈ ಹುಡುಗನೇನೂ ನನ್ನ ಮಗನಲ್ಲ; ಆದರೆ, ಈ ನೋಟು ಬುಕ್ಕೂ ಆವನದಲ್ಲ. ಅದು ತಮ್ಮದೇ ಆಗಿದೆ. ತಾವು ಎಳೆಯ ಪ್ರಾಯದಲ್ಲಿರುವಾಗ, ಈ ನೋಟು ಬುಕ್ಕನ್ನು ಉಪಯೋಗಿಸಿಕೊಂಡಿದ್ದಿರಿ. ನಿಮ್ಮ ನೌಕರನ ಸ್ನೇಹ ಸಂಪಾದಿಸಿ, ಅದನ್ನು ನಾನು ಪಡೆದುಕೊಂಡಿದ್ದೇನೆ, ಅಷ್ಟೆ. ಈಗ ಏನು ಹೇಳುವಿರಿ?"

ಶ್ರೀಮಾನ್ ಬಾಲಜಾಕರು ಮಿಕಿಮಿಕಿ ನೋಡತೊಡಗಿದರು. ನೋಟು ಬುಕ್ಕನ್ನು ಪುನಃ ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿದರು. ಸರಿಯೇ, ಅದರ ಒಳಗಡೆ ಮೊದಲನೆ ಪುಟದಲ್ಲಿಯೇ ಅಬಾಲಾಕ್ಷರಗಳಲ್ಲಿ ತನ್ನ ಹೆಸರೇ ಬರೆಯಲ್ಪಟ್ಟಿತ್ತು. ಆವರು ಮುಖ ಗಂಟಿಕ್ಕಿ, ತಲೆಕೆಳಗೆ ಹಾಕಿದರು. ಆವರು ಈ ಸ್ಮಶಾನ ಗಂಭೀರ ಮೌನದಿಂದಲೇ ಸೋಲನ್ನೊಪ್ಪಿಕೊಂಡರೆಂಬು ಪ್ರತ್ಯೇಕ ಅನ್ನಬೇಕಾಗಿಲ್ಲ.

ಆದರೆ, ಒಂದು ವಿಷಯ ಮಾತ್ರ ಸತ್ಯ. ಅಂದಿನಿಂದ ಮುಂದವರು ಎಂದೂ ಹಿಂದೆ ಹೇಳಿದಂತೆ ವ್ಯಕ್ತಿತ್ವ ನಿರೂಪಿಸುವ ತಮ್ಮ ಪ್ರಾವೀಣ್ಯವನ್ನು ಪ್ರದರ್ಶಿಸುತ್ತಿರಲಿಲ್ಲ!

In the matter of the Companies Act, 1956

and

In the matter of Sri Laxminarayana Talkies Limited.

NOTICE is hereby given that a meeting of the creditors, under Section 500 of the Companies Act, 1956, will be held at the Registered Office of the Company at Puttappa Shet's Buildings, Coondapoor, S. K. on Saturday the 30th May 1959 at 2 p. m. to transact the following business.

(1) To consider the statement of the position of the Company's affairs together with the list of creditors of the Company and the estimated amount of their claims.

(2) To wind up the Company by the creditor's voluntary winding up and to appoint Sri. K. Padmanabha Shet, Coondapoor, for the said purpose with all the powers enumerated in clause (i) to (iv) of sub-section (2) of Section 457 of the Companies Act, 1956, on a remuneration of Rs, 100/- (one hundred).

By order of the Board.

Coondapoor, 6-4-1959.

(Sd.) K. Hasan Saheb, —Chairman.

NAVAYUGA
REGD. NO. M. 3619

UDIPI, THURSDAY
30-4-1959

LICENSE NO. 31
Licensed to Post without Prepayment

ವಿಚಾರ ಮಥನ

(೧ನೇ ಪುಟದಿಂದ)

ರಾಜ್ಯ ಸಂಘಟನೆಯನ್ನು ಸ್ಥಾಪಿಸುವ ಉದ್ದೇಶದಿಂದ ಕೇಂದ್ರ ಸಂಕಾರಕ್ಕೆ ಈ ಬಗ್ಗೆ ಆವಶ್ಯಕ ಸಿಫಾರಸು ಮಾಡುವ ಕುರಿತು ಲಕ್ಷ್ಯ ಹರಿಸುವುದು ಅಗತ್ಯ. ನಮ್ಮ ಪ್ರತಿನಿಧಿಗಳು ಬಹುಸಂಖ್ಯೆಯ ಜನತೆಯ ಈ ಆಶಯವನ್ನು ಪೂರ್ಣಗೊಳಿಸಬೇಕೆಂದು ವಿನಮ್ರತೆಯೊಡನೆ ವಿನಂತಿಸಿಕೊಂಡರೆ, ಅದು ಅನ್ಯಾಯವೆನಿಸದು.

೦೦ ೦೦ ೦೦

ಬೆಳಣಿಕೆಯಷ್ಟು ಅಲ್ಪಮತದಿಂದ ಡೋಲಾಯಮಾನ ಪರಿಸ್ಥಿತಿಯಲ್ಲಿರುವ ಒಡಿಸ್ಸದ ಸರಕಾರವು ಸಮರ್ಥರೀತಿಯಿಂದ ಆಡಳಿತೆ ನೋಡಿ ಮುಂದುವರಿಸುವುದು ಕಷ್ಟಪ್ರದವಾಗಿ ಪರಿಣಮಿಸಿದೆ. ಇದಕ್ಕಾಗಿಯೇ ಅಲ್ಲಿನ ಕಾಂಗ್ರೆಸ್ ನಾಯಕ ಡಾ|| ಹರಿಕೃಷ್ಣ ಮೆಹತಾಬರು ಗಣತಂತ್ರ ಪರಿಷತ್ತಿನೊಡನೆ ವಿಚಾರ ವಿನಿಮಯ ಮಾಡಿದ್ದಾರೆ. ಗಣತಂತ್ರ ಪರಿಷತ್ತಾದರೂ ಈ ಬಗ್ಗೆ ಆಸ್ಥೆಯನ್ನು ತೋರಿಸಿದೆ. ಗಣತಂತ್ರ ಪರಿಷತ್ತು ಮತ್ತು ಪ್ರ. ಸ. ಪಾ. ಪಕ್ಷಗಳು ಒಮ್ಮತದಿಂದ ೧೯ ಮೊದಲಿನ ಧೋರಣೆಗಳ ಪಟ್ಟಿಗೆ ಒಂದಾಗಿವೆ. ಈಗ, ಗಣತಂತ್ರ ಪರಿಷತ್ತು ಕಾಂಗ್ರೆಸ್ಸಿನೊಡನೆ ಸಹಕರಿಸಬೇಕಾದರೂ ಈ ರೀತಿಯ ಕೆಲವು ಒಪ್ಪಂದಕ್ಕೆ ಬರಲೇ ಬೇಕಾಗಿದೆ.

ಇಲ್ಲಿ ಎದ್ದು ಬರುವ ಪ್ರಶ್ನೆ ಒಡಿಸ್ಸದಲ್ಲಿ ಗಣತಂತ್ರ ಪರಿಷತ್ತಿನೊಡನೆ ಕಾಂಗ್ರೆಸ್ ಸೇರಿಕೊಂಡು ಸಮ್ಮಿಶ್ರ ಸರಕಾರವನ್ನು ಸ್ಥಾಪಿಸಿ ಮುಂದುವರಿಯಬೇಕೇ ಅಥವಾ ತನ್ನ ಈ ಒಂದೆರಡು ಬಹುಮತಗಳ ಬೆಂಬಲವನ್ನೇ ಬಲವಾಗಿ ನೆಮ್ಮಿ ಮುನ್ನಡೆಯಬೇಕೆ? ಎಂಬುದು. ಡಾ| ಮೆಹತಾಬರು ಈ ಅಲ್ಪ ಬಹುಮತದ ದುಷ್ಪರಿಣಾಮವನ್ನು ಕೆಲವು ವಾರಗಳ ಹಿಂದೆ ತಿಳಿದುಕೊಂಡಿದ್ದಾರೆ. ಅಂದಿನಿಂದ ಸಮ್ಮಿಶ್ರ ಸರಕಾರದ ಮಾತು ಎದ್ದುಬರುತ್ತಿರುವುದು ಸಹಜ. ಒಂದು ವೇಳೆ, ಕಾಂಗ್ರೆಸ್ಸು ಏಕಾಕಿಯಾಗಿ ಆಡಳಿತ ನಿರ್ವಹಿಸಲು ಅಸಮರ್ಥವಾದ ಪಕ್ಷದಲ್ಲಿ, ಪ್ರಜಾಪ್ರಭುತ್ವ ಸಂಪ್ರದಾಯದಂತೆ ವಿರೋಧೀ ಪಕ್ಷಗಳಿಗೆ ಅವಕಾಶ ಬಿಟ್ಟುಕೊಡಬಹುದಾದರೂ ಅವುಗಳಿಗೆ ಒಟ್ಟಿನಲ್ಲಿ ಸಮಬಲವೂ ಇಲ್ಲದಿರುವಾಗ ಸರಕಾರ ನಡೆಸುವ ಮಾತು ದೂರದ್ದೇ ಆಗಿದೆ. ಆಗ ಅನಿವಾರ್ಯವಾಗಿ ಅಧ್ಯಕ್ಷರ ಆಳಿಕೆಯನ್ನು ಘೋಷಿಸಲೇ ಬೇಕಾಗುತ್ತದೆ. ಅಲ್ಲಿಗೆ ಪ್ರಜಾಶಕ್ತಿ ಸ್ತಬ್ಧವಾದಂತಾಯಿತು. ಮರುಚುನಾವಣೆ ನಡೆದಾಗಲೂ ಯಾವುದೇ ಪಕ್ಷವು ಸರಕಾರ ರಚಿಸುವಷ್ಟು ಬಹುಮತ ಪಡೆಯುವುದು ಅಸಂಭವ ಎಂತಲೇ ಡಾ| ಮೆಹತಾಬರು ನಿರುಪಾಯರಾಗಿ ಸಮ್ಮಿಶ್ರ ಸರಕಾರವನ್ನು ಸ್ಥಾಪಿಸಲು ಉತ್ಸುಕತೆ ಪ್ರದರ್ಶಿಸುತ್ತಿದ್ದಾರೆನ್ನಬಹುದು. ಇದು ವರೆಗೆ ದೊರೆತ ವರದಿಗಳಂತೆ ಗಣತಂತ್ರ ಪರಿಷತ್ತು ಕೆಲವೊಂದು ಶರ್ತಗಳನ್ನು ಹೊಂದಿಕೊಂಡು ಕಾಂಗ್ರೆಸ್ಸಿನೊಡನೆ ಸಹಕರಿಸುವುದಕ್ಕೆ ಸಮ್ಮತಿಸಿದೆ. ಡಾ| ಮೆಹತಾಬರೂ ಈ ಬಗ್ಗೆ ಸಂಬಂಧಪಟ್ಟವರೊಡನೆ ವಿಚಾರ ವಿನಿಮಯ ಮಾಡಿ ಸಮ್ಮಿಶ್ರ ಸರಕಾರದ ನಾಯಕರಾಗಿ ಆಡಳಿತವನ್ನು ಮುನ್ನಡೆಸುವ ನಿರೀಕ್ಷೆಯಿದೆ. ಆಗ ಸರಕಾರದ ಬಲ ಸಬಲವಾಗುವುದು; ಬಿರುಕು ಬೀಳದೆ ಹೋದರೆ, ವಿರೋಧೀ ಪಕ್ಷಗಳು ನಾಮಮಾತ್ರಕ್ಕಿರುವುವು.

ದಲೈ ಲಾಮಾ ಅವರಿಂದು ಅಂತಾರಾಷ್ಟ್ರೀಯ ಮಹಾವ್ಯಕ್ತಿಯಾಗಿದ್ದಾರೆ. ಭಾರತಕ್ಕೆ ಮಾತ್ರ ಅವರು ಕಿರುಕುಳ ಪ್ರಾಯರಾಗುವರೋ ಎಂಬ ಸಂದೇಹ ಹುಟ್ಟುವಂತಾಗಿದೆ. ಕಮ್ಯುನಿಸ್ಟ ಚೀನವು ಲಾಮಾರವರನ್ನು ಟಿಬೇಟದ ಬಂಡುಗಾರರು ಎಳೆದು ಬಂದಿರುವರೆಂದು ಹೇಳಿದ್ದರೆ, ಈಗ ಆ ಪಲ್ಲವಿಯನ್ನು ಪಲ್ಲಟಿಸಿ, ಈಗ "ಭಾರತದ ಬಂಧನದ ಒಳಗಿದ್ದಾರೆ" ಎಂಬ ಆರೋಪ ಹೊರಿಸತೊಡಗಿದೆ. ಚೀನೀಯ ಪತ್ರಿಕೆಗಳು ಭಾರತವು ದಲಾಯ್ ಲಾಮಾರಿಗೆ ಆಶ್ರಯವಿತ್ತುದನ್ನು ಬಲವಾಗಿ ಖಂಡಿಸುತ್ತ, "ಭಾರತದ ವಿಸ್ತಾರವಾದಿ"ಗಳು ಟಿಬೇಟವನ್ನು ಚೀನದ ಹಿಡಿತದಿಂದ ತಪ್ಪಿಸಿ ತನ್ನದಾಸನನ್ನಾಗಿ ಮಾಡಿಕೊಳ್ಳುವ ಹವಣಿಕೆಯಲ್ಲಿದ್ದಾರೆ ಎಂದು ಗಂಭೀರ ಆರೋಪವನ್ನು ಹೊರಿಸಿವೆ! ಈ ದೃಷ್ಟಿಯಿಂದ ಭಾರತವು ಚೀನದ ಆಂತರಿಕ ವ್ಯವಹಾರದಲ್ಲಿ ಪ್ರತ್ಯಕ್ಷರೂಪದಲ್ಲಿ ಹಸ್ತಕ್ಷೇಪ ಮಾಡಿದೆ ಎಂದೂ ದೂರಲಾಗಿದೆ. ಇಂತಹ ಆರೋಪಗಳನ್ನು ಕೇಳಿ ಸುಮ್ಮನುಳಿಯುವುದು ಭಾರತಕ್ಕೆ ಎಂದಿಗೂ ಅಸಾಧ್ಯ. ಭಾರತವು ಮರೆಹೊಕ್ಕು ಬಂದಿರುವ ಲಾಮಾರಿಗೆ ಆಶ್ರಯ ನೀಡಿದ್ದು, ಲಾಮಾರು ಯಾವಕಾಲಕ್ಕೂ ತಮಗೆ ಬೇಕಾದಲ್ಲಿಗೆ ತೆರಳಲು ಸ್ವತಂತ್ರರಿರುವಾಗ, ಲಾಮಾರನ್ನು ಭಾರತವು ಕಟ್ಟಿಹಾಕಿದೆ ಎಂಬ ಆರೋಪವು ಸಾಮಾನ್ಯಕರದ್ದೆಂದು ಹೇಳುವುದು ಹೇಗೆ? ಈಗ ಲಾಮಾರನ್ನು ಭಾರತವು ತನ್ನಲ್ಲಿಟ್ಟುಕೊಂಡಿದೆ ಎಂದು ಕೇಳಿ, ನಾಳೆ, ಅವರನ್ನು ಬಿಟ್ಟುಕೊಡಬೇಕೆಂದು ಘೋಷಿಸಿ, ಮುಂದೆ ವಿಪತ್ಪ್ರವಕ ಕಾರ್ಯಕ್ರಮವನ್ನು ಕಮ್ಯುನಿಸ್ಟ ಚೀನ ಕೈಗೊಳ್ಳಲಾರದೆಂದು ನಂಬುವುದು ಸಾಧ್ಯವಿಲ್ಲ. ಏಕೆಂದರೆ, ಚೀನೀಯರ ಸ್ವಭಾವವೇ ಆ ರೀತಿಯಾಗಿದೆ. ಟಿಬೇಟದಂತೆಯೇ ಭಾರತವನ್ನೂ ಹಿರಿದಾಗಿ ಕಬಳಿಸುವ ಯೋಜನೆಯನ್ನೂ ಚೀನ ಇಟ್ಟುಕೊಂಡಿಲ್ಲವೆಂದು ಹೇಳುವುದು ಸಾಧ್ಯವೇ? ಪಾಕಿಸ್ತಾನದ ಸೈನಿಕಾಡಳಿತೆಯ ಅಧ್ಯಕ್ಷ ಅಯೂಬ ಖಾನರು ಪರದೇಶೀಯರ ಆಕ್ರಮಣವಾದ ಪಕ್ಷದಲ್ಲಿ ಪಾಕಿಸ್ತಾನ ಮತ್ತು ಭಾರತವೆರಡೂ ಒಮ್ಮುಖದಿಂದ ಅದನ್ನು ಎದುರಿಸಬೇಕು ಎಂದು ಸಾರಿದ ಮಾತಿನ ಸತ್ಯಾಂಶವೂ ಈ ಅವಸರದಲ್ಲಿ ಹೊಳೆಯದಿರದು. ಅಂತೂ ಭಾರತದ ಸಂರಕ್ಷಣಾವಳಿ ಭದ್ರವಿದೆ, ಬಲಿಷ್ಟವಿದೆ ಎಂಬ ಬಹಿರುಲ್ಲೇಖಗಳಿಂದಲೇ ತೃಪ್ತಿಗೊಳ್ಳುವ ಕಾಲ ದೂರವಾಗಿ, ಪ್ರತ್ಯಕ್ಷ ಪ್ರದರ್ಶಿಸುವ ಅವಕಾಶ ಬರುವುದೇ ಎಂಬ ಸಂದೇಹವನ್ನು ಕಮ್ಯುನಿಸ್ಟ ಚೀನ ಭಾರತೀಯರಲ್ಲಿ ಹುಟ್ಟಿಸಿದೆ. ಇದಕ್ಕೆ ತಕ್ಕುದನ್ನು ಮಾಡಲು ನಾವು ಹಿಂದಾಗಬಾರದು.

— ರಾಶಿ.

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯಬಹುದು!

ಕಲಾತ್ಮಕ ವಾಸಗೃಹ

ಅಮೇರಿಕೆಯ ಸುಪ್ರಸಿದ್ಧ ಶಿಲ್ಪಿಯೆನಿಸಿದ ದಿವಂಗತ ಫ್ರಾಂಕ್ ಲೋಯ್ಡ್ ರೈಟನು ಕಲೆಯಲ್ಲಿ ಉನ್ನತ ಆದರ್ಶವಾದಿಯೂ ಜ್ಞಾನಿಯೂ ಆಗಿದ್ದನಲ್ಲದೇ ಉತ್ತಮ ಹಾಸ್ಯಪಟುವೂ ಎನಿಸಿಕೊಂಡಿದ್ದನು.

ಒಂದು ಬಾರಿ ಲೋಯ್ಡ್ ರೈಟನು ತನ್ನ ಸಂಬಂಧಿಕನಾದ ಶ್ರೀ ರಿಚಾರ್ಡ ಲೋಯ್ಡ ಜೋನ್ಸರಲ್ಲಿಗೆ ಆಗಮಿಸಿದಾಗ ಅವರು ತಮ್ಮ ವಾಸಕ್ಕಾಗಿ ಒಂದು ಮನೆಯ ಕರಡು ನಕ್ಷೆಯನ್ನು ರಚಿಸಿ ಕಟ್ಟಿಸಿ ಕೊಡಲು ಕೇಳಿಕೊಂಡರು.

ರೈಟರು ಈ ಕೆಲಸವನ್ನು ಒಪ್ಪಿಕೊಂಡು, ಅವರಿಗಾಗಿ ಒಂದು ಮನೆಯನ್ನು ಕಟ್ಟಿಸಲು ತೊಡಗಿದರು. ಮನೆಯೂ ಕೆಲವು ತಿಂಗಳುಗಳಲ್ಲಿ ಸಂಪೂರ್ಣಗೊಂಡಿತು. ಜೋನ್ಸರು ಈ ನೂತನ ಗೃಹದಲ್ಲಿ ನೆಲಸ ತೊಡಗಿದರು.

ಕೆಲವು ಕಾಲ ಕಳೆಯಿತು. ಇನ್ನೊಂದು ಬಾರಿ ರೈಟರು ತಮ್ಮ ಸಂಬಂಧಿಕನನ್ನು ಭೇಟಿಯಾಗಲು ಹೊಸ ಮನೆಗೆ ಬಂದವರೇ, ಜೋನ್ಸರೊಡನೆ, "ಈ ಹೊಸ ಮನೆಯು ತಮಗೆ ಮೆಚ್ಚುಗೆಯಾಯಿತೆ?" ಎಂದು ಕೇಳಿದರು.

"ಬಹಳ ಸುಂದರವಿದೆ. ನಾನು ಈ ಮನೆಯನ್ನು ತುಂಬ ಮೆಚ್ಚುತ್ತೇನೆ. ಆದರೆ, ಮಳೆಯು ಸುರಿಯ ತೊಡಗಿದಾಗ ಮಾತ್ರ ಇದು ಸೋರುತ್ತದೆ."

ರೈಟ್‌ರು ಗಟ್ಟಿಯಾಗಿ ನಕ್ಕು ಬಿಟ್ಟರು. ಮತ್ತು ಹೇಳಿದರು: "ಏನೆನ್ನುತ್ತೀರಿ ನೀವು? ಮಳೆಗೆ ಸೋರುತ್ತದೆಯೆಂದೆ? ಈ ಮನೆಯು ಕಲಾತ್ಮಕ ನಿಧಾನವಾಗಿದೆ. ಅದನ್ನು ಮಳೆಗೆ ನನೆಯಲು ಬಿಡಬಾರದು!"

೦೦ ೦೦ ೦೦

ಅಪನಾ ಕಾಮ್ ಖುದ್ ಕರೋ

• ಒಂದು ಬಾರಿ, ಅಮೇರಿಕೆಯ ಅಧ್ಯಕ್ಷರಾಗಿದ್ದ ಅಬ್ರಾಹಾಂ ಲಿಂಕರನ್ನು ಒರ್ವ ವ್ಯಕ್ತಿ ಭೇಟಿಯಾಗಲು ಬಂದನು. "ನಾನು ಇನ್ನೊಬ್ಬರ ಗುಲಾಮನಾಗಲಾರೆನು; ಆದುದರಿಂದ ಇನ್ನೊಬ್ಬರ ಒಡೆಯನೂ ಆಗಲಾರೆನು" ಎಂದು ಉದ್ಘೋಷಿಸಿದ್ದ ಮಹಾ ವ್ಯಕ್ತಿ ಶ್ರೀ ಲಿಂಕನ್. ಈಗ ಭೇಟಿಯಾಗಲು ಆಗಮಿಸಿರುವವರು ಲಿಂಕನರ ಪ್ರಾಚೀನ ಪರಿಚಿತರಿದ್ದರು. ಆದುದರಿಂದಲೇ ಯಾವ ಅಡೆತಡೆಯಾಗಲೀ ಸಂಕೋಚವೂ ಇಲ್ಲದೆ ಮನೆಯನ್ನು ಪ್ರವೇಶಿಸಿದರು. ಆ ಸಮಯದಲ್ಲಿ ಲಿಂಕನರು ತಮ್ಮ ಬೂಟುಗಳನ್ನು ಒರಸುತಿದ್ದರು. ಆಗಂತುಕರಿಗೆ ಈ ಸನ್ನಿವೇಶವನ್ನು ಕಂಡು ಆಶ್ಚರ್ಯವಾಯಿತು. ಅವರು ಸಮೀಪದ ಕುರ್ಚಿಯೊಂದನ್ನೆಳೆದು ಕೂತುಕೊಳ್ಳುತ್ತ ಆಡ ತೊಡಗಿದರು: "ಏನಯ್ಯ, ನಿನ್ನ ಬೂಟುಗಳಿಗೆ ನೀನೇ ಪಾಲಿಶ್ ಹಾಕುತ್ತೀಯ?"

ಲಿಂಕನ್ ಮಹಾಶಯ ಈ ಅನಪೇಕ್ಷಿತ ಪ್ರಶ್ನೆಯಿಂದ ಸಿಡಿಮಿಡಿಗೊಳ್ಳಲಿಲ್ಲ. ತನ್ನ ಕೆಲಸವು ಪೂರ್ಣವಾದ ಮೇಲೆ ಮೆಲ್ಲನೆ ಏಳುತ್ತ ಹೇಳಿದರು; "ಹೌದು, ಪ್ರಾಯಃ ತಮಗೆ ಬೇರೆಯವರ ಬೂಟುಗಳಿಗೆ ಪಾಲಿಶ್ ಹಾಕುವುದರಲ್ಲೇ ಆತ್ಮಾನಂದ ದೊರೆಯುವುದು ಅಲ್ಲವೆ?"

ಆಗಂತುಕ ಸಜ್ಜನ ಮೋರೆ ಜೋಲು ಹಾಕಿದರು.

೦೦ ೦೦

ಸಫಲತಾ ಸೂತ್ರ

ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಭಾಷಣವನ್ನು ಕೊಟ್ಟಮೇಲೆ ಅಲ್ಲಿನ ವಿದ್ಯಾರ್ಥಿಗಳೆಲ್ಲರೂ ಒಂದುಸೇರಿ ಶ್ರದ್ಧಾಪೂರ್ವಕವಾಗಿ ಆಯಿನ್ ಸ್ಟೀನರೊಡನೆ ಕೇಳಿದರು: "ಜೀವನದಲ್ಲಿ ಸಾಫಲ್ಯವು ದೊರೆಯುವುದಕ್ಕೆ ಯಾವುದಾದರೂ ಒಂದು ಸರಳ ಸೂತ್ರವನ್ನು ಹೇಳುವಿರಾ?"

ಆಯಿನ್‌ಸ್ಟೀನರು ಮುಗುಳ್ನಗುತ್ತ ಹೇಳತೊಡಗಿದರು: $A = X + Y + Z$. ಎಂದರೆ, A = ಸಫಲತೆ, X = ಕಾರ್ಯನಿಷ್ಠೆ, Y = ಮನೋರಂಜನ, Z = ಮೌನ. ಅಥವಾ ಸಫಲತೆ = ಕಾರ್ಯನಿಷ್ಠೆ + ಮನೋರಂಜನೆ + ಮೌನ."

ವಿದ್ಯಾರ್ಥಿಗಳೆಲ್ಲರೂ ಪ್ರಶ್ನಿಸಿದರು: 'ಮೌನ' ಎಂದರೆ ಅರ್ಥವೇನ?

ಆಯಿನ್‌ಸ್ಟೀನರೆಂದರು: "ನನ್ನ ಕೋಶದಲ್ಲಿ ಮೌನವೆಂದರೆ, ಆವಶ್ಯಕತೆಗಿಂತಲೂ ಕಡಿಮೆ ಆಡುವುದು ಎಂದು ಅರ್ಥ ಬರೆದಿದೆ. ನಾನು ಕಾಯನಿಷ್ಠೆಗಿಂತಲೂ ಹೆಚ್ಚಾಗಿ ಅಮೂಲ್ಯ ಮೌನವನ್ನೇ ಶ್ರೇಷ್ಠವೆಂದು ತಿಳಿಯುತ್ತೇನೆ."

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್
ಸಿಂಡಿಕೇಟ್ ಲಿಮಿಟೆಡ್
ಪ್ರಧಾನ ಕಚೇರಿ: ಮುಕುಂದ ನಿವಾಸ, ಉಡುಪಿ.

ಸಂತೋಷದ ಸುದ್ದಿ
ಮತ್ತೊಂದು ಶಾಖೆ.
(ನಮ್ಮ 120ನೆಯ ಶಾಖೆ)
ವೆಲ್ಲೂರು

ವಿಳಾಸ .... : 416/417 ನ್ಯೂನ್ ಬಜಾರ್,
ವೆಲ್ಲೂರು (ಉತ್ತರ ಆರ್ಕಾಟು ಜಿಲ್ಲಾ)
ಪ್ರಾರಂಭ .... : 29—4—59
ಏಜಂಟ್ .... : ಶ್ರೀ ಕೆ. ಎಮ್. ಎಲ್. ಪೈ.
ಎಲ್ಲಾ ವಿಧದ ಬೇಂಕಿಂಗ್ ಸೇವೆಯನ್ನು ಸ್ವೀಕರಿಸಲಾಗುವುದು.

ಡಾ| ಟಿ. ಎಂ. ಎ. ಪೈ, ಮೆನೇಜಿಂಗ್ ಡೈರೆಕ್ಟರ್.
ಶ್ರೀ ಟಿ. ಎ. ಪೈ, ಬಿ.ಕಾಂ.(ಬೊಂ.) ಜನರಲ್ ಮೆನೇಜರ್.

The Canara Industrial & Banking Syndicate Ltd.
H. O. Mukund Nivas, UDIPI.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ

ವರುಷ ೩೮ ವಾರ ೩೪. 7-5-1959 Vol 38 No 34

ವಿಚಾರ ಮಥನ

ಪ್ರಾದೇಶಿಕ ಭಾಷೆಗೆ ಮನ್ನಣೆ

* *

ಉದ್ಧಾರ ಹೇತು-ಪರಿಶ್ರಮ

* *

ಮಲೆನಾಡ ವಿಶ್ವವಿದ್ಯಾಲಯ

* *

ಶಾಂತಿದೂತ ನಿಕಿಟಾಕ್ರುಶೇವ

* *

ಭಾರತ ಸರಕಾರದ ಅಧಿಕೃತ ಭಾಷೆಯಾಗಿ ಹಿಂದಿಯನ್ನು ಮಾಡಬೇಕು ಎಂಬುವತ್ತ ಕೇಂದ್ರ ಸರಕಾರವು ಒಲವು ತೋರಿಸುತ್ತಿರುವಾಗ, ಆ ಬಗ್ಗೆ ವಿರೋಧವನ್ನು ಸೂಚಿಸುತಿದ್ದಾರೆ, ದಾಕ್ಷಿಣಾತ್ಯರು ಮಾಜಿ ಗವರ್ನರ ಜನರಲ್ಲರ ಗಿರುವ ರಾಜಾಜಿಯವರು ಆಂಗ್ಲ ಭಾಷೆಯೇ ಅಧಿಕೃತವಾಗಿ ಮುಂದುವರಿಯಲಿ ಎಂದು ಪದೇ ಪದೇ ಘೋಷಿಸಿದ್ದಾರೆ. ಮೊನ್ನೆ ಮೊನ್ನೆ ಇವರೂ ಇನ್ನಿತರ ಕೆಲವರೂ ಒಂದು ಸೇರಿ ಇಂಗ್ಲಿಷ್ ಭಾಷೆಯನ್ನೇ ಅಧಿಕೃತ ಭಾಷೆಯಾಗಿ ಮುಂದುವರಿಸಬೇಕೆಂದು ವಿನಂತಿಸಿದ್ದಾರೆ. ಕಾಲೇಜುಗಳಲ್ಲಿ ಪ್ರಾದೇಶಿಕ ಭಾಷೆಗಳನ್ನು ಮಾಧ್ಯಮವಾಗಿ ಸ್ವೀಕರಿಸುವುದರಿಂದ ವಿದ್ಯಾರ್ಥಿಗಳ ಕಾರ್ಯಕ್ಷೇತ್ರವು ಸೀಮಿತವಾಗುವುದು; ಆದುದರಿಂದ ಇಂಗ್ಲಿಷ್ ಮುಂದುವರಿಯಲಿ ಎಂಬ ಇಂಗಿತವನ್ನು ವ್ಯಕ್ತಪಡಿಸುವವರೂ ಕೆಲವರು ಇದ್ದಾರೆ ಪ್ರಾದೇಶಿಕ ಭಾಷೆಗಳಲ್ಲಿ ಅಧ್ಯಯನಕ್ಕೆ ಸಾಕಷ್ಟು ಗ್ರಂಥಗಳು ಸಿದ್ಧವಾಗಿಲ್ಲವಾದುದರಿಂದ, ಅವು ಸಿದ್ಧವಾಗುವವರೆಗಾದರೂ ಆಂಗ್ಲವೇ ಮಾಧ್ಯಮವಾಗಿರಲಿ ಎನ್ನುತ್ತಾರೆ ಇವರು. ಅಂತೆಯೇ ಉತ್ತರಭಾರತದ ಕೆಲವು ಕೋಟಿ ಜನರ ಮಾತೃಭಾಷೆ ಹಿಂದಿಯನ್ನು ಅಧಿಕೃತ ಭಾಷೆಯಾಗಿ ಸ್ವೀಕರಿಸುವುದರಿಂದ ದಕ್ಷಿಣ ಭಾರತೀಯರಿಗೆ ತೊಂದರೆ ಉದ್ಭವಿಸುವುದು ಎಂದು ಹಿಂದೀ ವಿರೋಧಿಗಳ ಅಭಿಪ್ರಾಯ. ಪ್ರಾದೇಶಿಕ ಭಾಷೆಗಳಿಗೇನೇ ಬೆನ್ನೆಲುಬು ಗಟ್ಟಿಯಿಲ್ಲದೆ, ಸೊರಗಿ ಹೋಗುತ್ತಿರುವ ಅವುಗಳಿಗೆ ಯೋಗ್ಯ ಸ್ಥಾನವನ್ನು ಕೊಡುವತ್ತ ಯಾವ ಕಾರ್ಯಕ್ರಮವೂ ಕೈಗೊಳ್ಳಲ್ಪಡದಿರುವ ದಕ್ಷಿಣದ ರಾಜ್ಯಗಳಲ್ಲಿ ಹಿಂದಿಯನ್ನು ಹೇರುವುದೆಂದರೆ, ಅದು ನುಂಗಲಾರದ ತುತ್ತಾಗುವುದು ಎಂಬುದು ಸ್ವಯಂಸಿದ್ಧವೇ. ವತ್ತಾಯದಿಂದ ಹಿಂದಿಯನ್ನು ಹೇರಲಾರೆವು ಎಂಬ ಆಶ್ವಾಸನೆ ಪದೇ ಪದೇ ಬರುತ್ತಿರುವುದಾದರೂ ಈ ಆಶ್ವಾಸನೆಯಿಂದ ಭಯವು ದೂರವಾಗುವಂತಿಲ್ಲ ಅತಿಥಿಯಾಗಿ ಬಂದ ಸೊಸೆಯೇ ಅತ್ತೆಯಂತೆ ಮೆರೆದಾಡತೊಡಗಲಾರಳೆಂದು ವಿಶ್ವಾಸವೆಲ್ಲಿ? ಆದುದರಿಂದಲೇ ಹಿಂದಿಯನ್ನು ಮೊದಲು ಹಿಂದೆ ಹಾಕಿ, ಪ್ರಾದೇಶಿಕ ಭಾಷೆಗಳನ್ನು ಅಭಿವೃದ್ಧಿಗೊಳಿಸುವುದು ಅವಶ್ಯ ರಾಜ್ಯಗಳ ಅಧಿಕೃತ ಭಾಷೆಗಳು ಆಯಾ ಪ್ರದೇಶಿಕ ಭಾಷೆಯಾಗಿ ಪರಿಣಮಿಸುವುದರಿಂದಲೇ ಸಾಮಾನ್ಯ ಜನತೆಗೆ ಉಪಯೋಗ ಕೇಂದ್ರವು ಯಾವುದೇ ಭಾಷೆಯನ್ನು ಅನುಸರಿಸಲಿ, ಅದರಿಂದ ಅಷ್ಟೇನೂ ಹಾನಿಯಾಗಲಾರದು ಈ ಕಾರಣದಿಂದ ರಾಜ್ಯಸರಕಾರಗಳು ತತ್ತ ಪ್ರಾದೇಶಿಕ ಭಾಷೆಗಳನ್ನೇ ರಾಜ್ಯಭಾಷೆಯಾಗಿ ಕೂಡಲೇ ಘೋಷಿಸಲಿ ಮುಂದೆ ಹಿಂದಿಯನ್ನು ರಾಷ್ಟ್ರಭಾಷೆ ಮಾಡಬೇಕೇ ಇಂಗ್ಲಿಷನ್ನೇ ಆ ಸ್ಥಾನದಲ್ಲಿ ಮುಂದುವರಿಸಬೇಕೇ ಎಂಬುದನ್ನು ವಿಚಾರಿಸಬಹುದು

೦೦ ೦೦

ಭಾರತದ ಹಿತಚಿಂತನೆಯನ್ನು ಮಾಡುತ್ತಿರುವ ಭಾರತೀಯರಲ್ಲಿ ಪ್ರಧಾನಿ ನೆಹರೂ ಅಗ್ರಗಣ್ಯ ಸ್ಥಾನವನ್ನು ಪಡೆದಿದ್ದಾರೆ ಎಂತಲೇ ಪ್ರಧಾನಿಯವರನ್ನು ಭಾರತೀಯರೆಲ್ಲರೂ—ಯಾವುದೇ ಪಕ್ಷ ಪಂಗಡದವರಿರಲಿ—ಮೆಚ್ಚುತ್ತಾರೆ ಗಂಗಾನದಿಗೆ ಬಿಹಾರ ರಾಜ್ಯದಲ್ಲಿ ಹಾಕಿದ ಸೇತುವೆಯೊಂದನ್ನು ಉದ್ಘಾಟಿಸುತ್ತ ಶ್ರೀ ನೆಹರೂ ಅವರು ಪರಿಶ್ರಮ ಪಟ್ಟರಾಗುವಂತೆ ಭಾರತೀಯರನ್ನು ವಿನಂತಿಸಿದ್ದಾರೆ ಭಾರತವು ವಿಶ್ವದ ನಕ್ಷೆಯಲ್ಲಿ ಪ್ರಧಾನ ಸ್ಥಾನವನ್ನು ಪಡೆದಿರುವುದಾದರೂ ಜನ. ಆ ನಭಿವೃದ್ಧಿ ದೇಶ ಹೊಂದಬೇಕಾದನ್ನು ಮರೆಯುವಂತಿಲ್ಲ ಸದ್ಯ ಭಾರತವು ಸ್ವತಂತ್ರ್ಯಾನಂತರ ಸ್ವ ಅಭಿವೃದ್ಧಿಗೆ ಯೋಜನೆಗಳನ್ನು ಕಾರ್ಯಗತಮಾಡಿರುವುದಾದರೂ ಅದರ ರಾಷ್ಟ್ರೀಯ ಆದಾಯವು ಹೆಚ್ಚಿರುವುದಾದರೂ ಭಾರತೀಯನೊಬ್ಬನ ಸರಾಸರಿ ಆದಾಯವು ಪ್ರಪಂಚದ ಬೇರೆ ಎಲ್ಲ ದೇಶಗಳವರಿಗಿಂತಲೂ ಕಡಿಮೆಯೆಂದೇ ಹೇಳಬೇಕು. ಇದನ್ನು ಏರಿಸಲು ನಾವು ನಮ್ಮ ಸಂಪತ್ತನ್ನು ಹೆಚ್ಚಿಸಬೇಕು ಪ್ರಕೃತಿದತ್ತವಾದ ಗಳಿಕೆಯನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಳ್ಳುವುದು, ಈಗಿನ ಉತ್ಪತ್ತಿಯನ್ನು ಅಧಿಕಗೊಳಿಸುವುದು ಮತ್ತು ವೆಚ್ಚವನ್ನು ಕಡಿಮೆ ಮಾಡುವುದು— ಇದರಿಂದ ರಾಷ್ಟ್ರದ ಪರಿಸ್ಥಿತಿ ಸುಧಾರಿಸುವುದೆಂದು ಹೇಳಬಹುದು. ರಾಷ್ಟ್ರದಲ್ಲಿನ ಪ್ರತಿಯೊಬ್ಬರೂ ತಾವು ಯಾವುದೇ ಕ್ಷೇತ್ರದಲ್ಲಿ ದುಡಿಯುತ್ತಿರಲಿ, ಅಧಿಕಾಧಿಕವಾಗಿ ಶ್ರಮಪಡಬೇಕು, ತನ್ಮೂಲಕ ದೇಶೋದ್ಧಾರ ಕಾರ್ಯದಲ್ಲಿ ಸಹಕಾರ ನೀಡಬೇಕು ಎಂದು ಪ್ರಧಾನಿ ಕರೆಯಿತ್ತುದು ನ್ಯಾಯೋಚಿತವಾಗಿದೆ ಚಿಕ್ಕ ಪುಟ್ಟ ಕಾರಣಗಳಿಂದ ಹರತಾಳವೇ ಮೊದಲಾದ ಕಠೋರ ಕಾರ್ಯಕ್ರಮಗಳನ್ನು ಕೈಗೊಳ್ಳುವುದರಿಂದ ರಾಷ್ಟ್ರದ ಆದಾಯಕ್ಕೇನೇ ಕಡಿತ ಬೀಳುವುದೆಂಬುದನ್ನು ಈ ಸಂದರ್ಭದಲ್ಲಿ ನೆನಪರಿಕೆ ಮಾಡಿಕೊಳ್ಳಬಹುದು ಅದುದರಿಂದ, ಆ

(೧೨ನೇ ಪುಟ ನೋಡಿರಿ)



ಅಮೆರಿಕೆಯ ವಾಯುದಳವು ೩ನೆಯ ಪಯೊನೀರನ್ನು ಹಾರಿಸಲು ಸಿದ್ಧತೆಗಳನ್ನು ನಡೆಸುತ್ತಿದೆ.

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ – ಮಂಗಳೂರು—3
ಸ್ಥಾಪನೆ – 1931

ಕಾಯಂ ರೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪಾಯಿ 10,000/- ವ, ಹೆಚ್ಚಿನ ರೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ .ಇತ್ಯಾದಿ ...

ಕಥಾವಿಹಾರ

ತಾಯ ಮೊಲೆಯ ಹಾಲಿನ ಋಣ

ಮಲತಾಯಿಯ ಮಾತಿಗೆ ಮುನಿದು ರಾವಲ ಮನೆಬಿಟ್ಟು ಮುಂದುವರಿದ ಆ ಮೇಲೆ...?

ರಾವಲನು ಭಾರವಾದ ಹೆಜ್ಜೆಗಳನ್ನಿಡುತ್ತ ಕಾಲೇಜಿನಿಂದ ಹೊರಬರುತ್ತಿದ್ದ. ಇಂದು ತಂದೆಯವರಿಗೆ ಮೋರೆ ತೋರಿಸುವದು ಹೇಗೆ! ಮಲತಾಯಿಯಿಂದ ಯಾವಾವ ಬಿರುನುಡಿಗಳನ್ನು ಆಡಿಸಿಕೊಳ್ಳಬೇಕಾದೀತು! ಮುಂತಾದ ವಿಚಾರಗಳು ಅವನ ತಲೆಯಲ್ಲಿ ತಿರುಗುತ್ತಿದ್ದವು. ಮಲತಾಯಿಯ ನೆನಪು ಬಂದೊಡನೇ ಅವನು ಥರ್ರನೆ ನಡುಗುತ್ತಿದ್ದ!

ರಾವಲನು ೫ ವರ್ಷದವನಿದ್ದಾಗಲೇ ತಾಯಿ ತೀರಿಕೊಂಡಿದ್ದಳು. ಅಂದವನ ಪ್ರಲಾಪವು ಹೇಳತೀರದು. ತಂದೆಯ ಬಗ್ಗೆ ಪ್ರೇಮಕ್ಕಿಂತ ಭಯವೇ ಹೆಚ್ಚು ಮನೆಮಾಡಿಕೊಂಡಿತ್ತು! ಮಲತಾಯಿಯ ಆಗಮನ ಇನ್ನೂ ಭಯಕ್ಕೆ ಕಾರಣವಾಗಿತ್ತು! ಕಳೆದ ೧೫ ವರ್ಷಗಳಿಂದ ಮಲತಾಯಿಯ ಬಿರುನುಡಿಗಳು ಒಂದರ ಹಿಂದೊಂದು ಅವನ ನೆನಪಿಗೆ ಬರತೊಡಗಿದವು! ತನ್ನ ತಾಯಿಯ ನೆನಪು ಮೂಡಿ ಹಣೆಬರಹವನ್ನು ಹಳಿಯತೊಡಗಿದ!

ಇಂದವನು ಬಿ. ಎ. ಪರೀಕ್ಷೆಯಲ್ಲಿ ಫೇಲ ಆಗಿದ್ದ. ಮನೆಯಲ್ಲಿರುವಿಕೆಯು ಆವನಿಗೆ ಮನಸ್ಸಿಲ್ಲದಿದ್ದುದೂ, ಚಿಕ್ಕತಾಯಿಯ ಬಿರುನುಡಿಗಳೂ, ಶಾರೀರಿಕ ಅಸ್ವಸ್ಥತೆಯೂ ಅವನ ಪಾಠಕ್ಕೆ ತೊಂದರೆಯಾಗಿದ್ದವು! ಬಡದೇಹವನ್ನು ಹೊತ್ತು ಮನೆ ಸೇರುವಾಗಲೇ ಕೈಯಲ್ಲಿ "ನವಭಾರತ ಟೈಮ್ಸ" ಹಿಡಿದು ಅವನ ದಾರಿಯನ್ನೇ ನೋಡುತ್ತಿದ್ದ ಬಲದೇವಸಿಂಗರು, ಗದರಿಸುತ್ತ "ಅಂತೂ ಬಂದೆಯಾ, ಎರಡು ವರ್ಷಗಳನ್ನು ಹಾಳುಮಾಡಿಕೊಂಡೆ, ನೀನು ಪಾಸುಮಾಡಬಹುದೆಂದು ನಾನು ತಿಳಿದಿದ್ದೆ. ಇದೇನೇನು ನೀನು ಓದಿದ್ದು! ಕಲಿತಿದ್ದು. ನಿನಗೆ ಎಳ್ಳಷ್ಟು ಬುದ್ಧಿ ಇಲ್ಲ! ಈ ಮನೆಯ ಆಸ್ತಿಪಾಸ್ತಿ ವ್ಯವಸ್ಥೆ ತಮ್ಮ ತಂಗಿಯರ ಓದು, ಮನೆಯ ಪರಿಪಾಟುಗಳೆಲ್ಲ ನಿನ್ನ ಬುದ್ಧಿವಂತಿಕೆಯನ್ನವಲಂಬಿಸಿದೆ" ಅನ್ನುತ್ತಿರುವಾಗಲೇ ಒಳಗಿನಿಂದ ಸಿಡಿದುಬಂದ ಆನೂಬಾಯಿಯವರು, "ನಾನು ನಿಮಗೆ, ಮೊದಲೇ ಹೇಳಿದ್ದೆ, ರಾವಲ ಪಾಸುಮಾಡಲು ಶಕ್ಯವಿಲ್ಲ. ಆದೇನು ಓದುಟವೇ!? ಸಿನೇಮಾ, ಚಹಾ ಕುಡಿಯುವದು, ಹರಟೆ ಹೊಡೆಯುವದು ಆಚೆ ಈಚೆಯವರಲ್ಲಿ ಜಗಳ-ಟವಾಡುವದು, ತಮ್ಮ ತಂಗಿಯರಿಗೆ ಉಪದ್ರವ ಕೊಡುವದು ಇಂಥಹುದರಲ್ಲಿಯೇ ಅವನ ಆಯುಷ್ಯ ಕಳೆದಿದೆ! ಪಾಪ! ಅವನೇನು ಮಾಡಿಯಾನು. ಅದೆಲ್ಲ ಅವನ ತಾಯಿಯ ಹಾಲಿನ ಋಣ" ಎನ್ನುತ್ತಾ ಖುರ್ಚಿಯಲ್ಲಿ ಮಂಡಿಸಿದರು. ಮಾತು ಪ್ರತಿಪಕ್ಷಕ್ಕೆ ಹೋಗುತ್ತಿರುವದನ್ನು ಕೇಳುತ್ತಿದ್ದ ರಾವಲನು ಉತ್ತರಿಸಲು ಮೂಕನಾಗಿ ಚಿತ್ರಭಿತ್ತಿಯಲ್ಲಿ ಮನೋವೇದನೆಯನ್ನನುಭವಿಸುತ್ತಿದ್ದ. ಮರ್ಮಾಹತವಾದ ಮಾತುಗಳ ಇಂಗಿತವನ್ನರಿತ ಬಲದೇವಸಿಂಗರು ಪತ್ನಿಯನ್ನುದ್ದೇಶಿಸಿ "ನೀನು ಒಳಹೋಗು, ನಿನ್ನ ಕೆಲಸ ನೋಡು. ಅವನ ವಿಚಾರ ತೆಗೆದುಕೊಳ್ಳಲು ನಾನಿದ್ದೇನೆ. ಹೋಗಪ್ಪಾ ಊಟಮಾಡು," ಎನ್ನುತ್ತಾ ಪೈಜಾಮ ಹಾಕಿ ಕಚೇರಿಯತ್ತ ಸಾಗಿದರು.

ರಾವಲನು ತನ್ನ ಕೋಣೆಸೇರಿ ಮಂಚದ ಮೇಲೆ ಉಕ್ಕರಿಸಿದ! ಮಲತಾಯಿಯ "ತಾಯಿಯ ಹಾಲಿನ ಋಣ" ಎನ್ನುವ ಶಬ್ದವು ಶೂಲದಂತೆ ಆವನ ಮರ್ಮವನ್ನು ಭೇದಿಸುತ್ತಿತ್ತು! ಅತ್ತು ಅತ್ತೂ ಕಣ್ಣು ಕೆಂಪಗಾಗಿದ್ದವು! ಮಲತಾಯಿಯು ಅವನನ್ನು ಊಟಕ್ಕೂ ಕರೆಯಲಿಲ್ಲ! ಹೊಟ್ಟೆ ಚುರು ಚುರು ಎನ್ನುವದರ ನೆನಪು ಸಹ ಆತನು ಮರೆತಿದ್ದ! ರೂಮಿನಿಂದ ಹೊರಗೆ ಇಣಕಿದ ಮನೆಯಲ್ಲಿ ಯಾರ ಸಪ್ಪಳವೂ ಇರಲಿಲ್ಲ! ಮಲತಾಯಿ ತನ್ನ ಮಕ್ಕಳೊಡನೆ ನೆರಮನೆಗೆ ಹೋಗಿದ್ದುದು ತಿಳಿದು ಬಂದೊಡನೆ, ರಾವಲನು ತನ್ನ ರೂಮಿಗೆ ತಿರುಗಿದ! ಅವನಿಗೀಗ ಮನದಲ್ಲಿ ಅನ್ಯ ಕಂಪವಿದ್ದಿಲ್ಲ! ಅವನು ಗಂಭೀರನಾಗಿದ್ದ. ಮನದಲ್ಲೇನೊ ದೃಢನಿರ್ಧಾರ ಮಾಡಿದ್ದ. ಕಿಸೆಯಲ್ಲಿ ನೋಡಿದ ಇದ್ದುದು ಕೇವಲ ೧೦ ರೂಪಾಯಿ ಮಾತ್ರ. ತಂದೆಯವರ ಕೋಟಿನ ಕಿಸೆಯಲ್ಲಿಯ ಪೆಟ್ಟಿಗೆಯ ಕೀಲಿ ತೆಗೆದು. ನೂರು ರೂಪಾಯಿಯ ನೋಟೊಂದನ್ನು ಕಿಸೆಗೆ ತುರುಕಿ ತಿರುಗಿ ಮೊದಲಿದ್ದಂತೆ ಪೆಟ್ಟಿಗೆ ಭದ್ರಪಡಿಸಿ ಮನೆಯಿಂದ ಹೊರಬಂದ! ಬಾಗಿಲು ಅಡ್ಡಮಾಡಿ ಬೀದಿಗಿಳಿದ.

ಹೋಶಿಯಾರಪುರ ರೇಲ್ವೆನಿಲ್ದಾಣದಲ್ಲಿ ಟಿಕೇಟ ಪಡೆಯಲು ಕಷ್ಟವಾಗಲಿಲ್ಲ. ದಿಲ್ಲಿಯ ತನಕ ಟಿಕೆಟ್ ತೆಗೆದು ಟ್ರೇನಿಗಾಗಿ ಕಾಯ್ದು ಕುಳಿತ. ೧೫ ನಿಮಿಷ ಟ್ರೇನು ಬರಲು ವಿಳಂಬವೆಂದರಿತು, ಕಾರ್ಡೊಂದರಲ್ಲಿ ತಂದೆಯವರಿಗೆ ಪತ್ರ ಬರೆದ:—

— ಪೂಜ್ಯ ತಂದೆಯವರಿಗೆ,

ತಮ್ಮಿಂದ ಕ್ಷಮಾಯಾಚನೆ ಮಾಡುತ್ತಿದ್ದೇನೆ. ಮನೆಯಲ್ಲಿ ನನ್ನ ಇರುವಿಕೆ ಸಾಧ್ಯವಿಲ್ಲ. ತಮ್ಮ ಪೆಟ್ಟಿಗೆಯಲ್ಲಿಯ ೨೦೦೦ ರೂಪಾಯಿಗಳಲ್ಲಿ ನೂರು ರೂಪಾಯಿಯ ನೋಟೊಂದನ್ನು ತೆಗೆದಿದ್ದೇನೆ. ನಾನು ದೂರ ಹೊರಟಿದ್ದೇನೆ ನನ್ನನ್ನು ಹುಡುಕುವ ಸಾಹಸ ಮಾಡಬೇಡಿರಿ.

ತಮ್ಮ ರಾವಲ.

ಗಾಡಿ ಹೊರಟಿತು! ರಾವಲನಿಗೀಗ ಮುಂದಿನ ಚಿಂತೆ! "ಎಲ್ಲಿಗೆ ಹೋಗುವದು? ಏನು ಮಾಡುವದು! ಕೈಯಲ್ಲಿಯ ಹಣ ಎಷ್ಟು ದಿನ ಬರಬಹುದು! ತಂದೆಯವರು ನೊಂದುಕೊಂಡಿರಬಹುದೇ?" –ಹಸ್ತದ್ಯ ಇನ್ನು ಮಲತಾಯಿಯ ಕಾಟವಿಲ್ಲ! ಸ್ವತಂತ್ರನಾದೆ! ಎಲ್ಲಿಯಾದರೂ ನೌಕರಿ ಹುಡುಕುವದು ಯಾ ಹೊಟೆಲ್ ಕೆಲಸವನ್ನಾದರೂ ಮಾಡುವದು! ಎಂದು ಮುಂತಾಗಿ ಯೋಚಿಸುತ್ತ ಹೊರಟಿತ್ತು ಅವನ ಮನಸ್ಸು! ಗಾಡಿ ಸಾಗುತಿತ್ತು!

ದಿಲ್ಲಿಗೆ ಬಂದ ರಾವಲನು ಅತ್ತಿತ್ತ ಸುಳಿದಾಡಿದ ಕೈಯಲ್ಲಿಯ ದುಡ್ಡು ನೀರಾಗುತ್ತಲೇ ಇತ್ತೇ ಹೊರತು ಉತ್ಪನ್ನವಿಲ್ಲ! ಬಿ. ಎ. ತನಕ ಓದಿದರೇನಾಯಿತು? ಇಂದಿನ ದಿನದಲ್ಲಿ ನೌಕರಿಯೇನು ಕಟ್ಟಿಟ್ಟ ಗಂಟೇ? ಎಲ್ಲಿ ಹೋದರೂ ಜಾಗ ಸಿಗುವದಿಲ್ಲ! ದಿಲ್ಲಿಯ ದೊಡ್ಡ ದೊಡ್ಡ ಕಚೇರಿಗಳೆಲ್ಲೆಲ್ಲ "No Vacacy" ಬೋರ್ಡ್—ತಗಲಿತ್ತು! ನೋಡ ನೋಡುತ್ತಾ ೫೫ ರೂಪಾಯಿಗಳ ಹೊರತು ಎಲ್ಲ ಹಣವೂ ನೀರಾಗಿ ಬಿಟ್ಟಿತ್ತು! ನಾಲ್ಕೇ ದಿನಗಳಲ್ಲಿ ಶಹರವಾಸದನುಭವವಾಗಿತ್ತು ರಾವಲನಿಗೆ! ಕಲಿತೂ ನಿಷ್ಪ್ರಯೋಜನ! ಹೋಟೆಲ್ಲುಗಳಲ್ಲಿ ಒಂದೆ ಡಾಲ್ ಕೇಳವ ಅಲ್ಲಿಯು ಅದೇ "ನನ್ನ ಊರಾವುದು. ಇಲ್ಲಿಯರ ಪರಿಚಯವಿದೆ? ಅಪರಿಚಿತರಿಗೆ ನಮ್ಮಲ್ಲಿ ಸ್ಥಳವಿಲ್ಲ! ಅಬ್ಬ–ಮುಂದಿನ ಗತಿಯೇನು! ಇಷ್ಟು ಅಲ್ಲದೆ ತಂದೆಯವರೇನಾದರೂ ನನ್ನನ್ನು ಹಿಡಿದು ತರಲು ಪೋಲೀಸು ಖಾತೆಗೆ ನನ್ನ ಫೋಟೋ ಕೊಟ್ಟಿದ್ದರೆ! ಪೋಲೀಸರು ನನ್ನನ್ನು ಹಿಡಿದು ತಿರುಗಿ ತಂದೆಯವರಿಗೊಪ್ಪಿಸಿದರೆ! ಆ ಮಲತಾಯಿಯ ಉಪದ್ರವ ಇನ್ನೂ ಅನುಭೋಗಿಸುವದೇ! ತನ್ನ ಜೀವನ— ಈ ಹೊಟ್ಟೆಗಾಗಿ ಎಂತೆಂತಹ ಯಾತನೆ—ಮನುಷ್ಯನಿಗೆ ವಿಶಾಲ ವಿಶ್ವದಲ್ಲಿ ಸ್ವತಂತ್ರನಾಗಿ ಬಾಳುವ ಹಕ್ಕೇ ಇಲ್ಲವೇ! ಎಂದು ಮುಂತಾಗಿ ಆಲೋಚಿಸುತ್ತಾ ದಿಲ್ಲಿಯ "ನೆಹರೂ ಪಾರ್ಕ"ನಲ್ಲಿದ್ದ ಬೆಂಚಿನ ಮೇಲೆ ಕುಳಿದಿದ್ದ ರಾವಲನಿಗೆ ತನ್ನ ಮೊದಲನೇ ಕರ್ತವ್ಯದ ಕಡೆ ಗಮನವೀಯ ಬೇಕಾಯ್ತು! ಎಷ್ಟೇ ತೊಂದರೆಯಾದರೂ ಅವನು ತಿರುಗಿ ಊರು ಸೇರುವದಿಲ್ಲವೆಂದು ದೃಢ ನಿರ್ಧಾರ ಮಾಡಿದ.

"ಸೀಖ" ಜನರು ಕೂದಲು ಕತ್ತರಿಸುವದು ಧಾರ್ಮಿಕವಾಗಿ ನಿಷಿದ್ಧವೆಂದು ತಿಳಿಯುವರು ರಾವಲನು ತನ್ನ ಗುರುತು ಇತರರಿಗೆ ತಿಳಿಯಲವಕಾಶವಿಲ್ಲದಂತೆ ತನ್ನ ಉದ್ದನ್ನ ತಲೆಕೂದಲನ್ನೂ ದಾಡಿಯನ್ನೂ ತೆಗೆಯಿಸಿದ, ತನ್ನ ಈಗಿನ ರೂಪದಿಂದ ಯಾರೂ ಗುರ್ತಿಸಲು ಶಕ್ಯವಿಲ್ಲವೆಂದು ಆತ್ಮಾಶ್ವಾಸನೇನೋ ಆಯಿತು. ಆಂತೆಯೇ ಅವನು ದಿಲ್ಲಿಯತನಕ ತಾನು ಟಿಕೆಟ್ ತೆಗೆದಿದ್ದು ತಿಳಿದು ತಂದೆಯವರು ಇಲ್ಲಿಗೆ ಯಾರನ್ನಾದರೂ ಕಳಿಸಿದರೆ! ಅಥವಾ ಇಲ್ಲಿ ಪೋಲಿಸರೇನಾದರೂ ತನ್ನ ನಿಜಪರಿಸ್ಥಿತಿ ತಿಳಿದ ಹಿಡಿದರೆ ಎಂದು ಮುಂತಾಗಿ ಯೋಚಿಸಿ—ಅದೇ ದಿನ ರಾತ್ರಿ ದೆಹಲಿಯಿಂದ ಬನಾರಸಿಗೆ ಪ್ರಯಾಣಬೆಳೆಸಿದ— ಮನುಷ್ಯನ ನಿರ್ಧಾರವು ಅವನನ್ನು ಎಂತೆಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಧೈರ್ಯದಿಂದ ಮುನ್ನುಗ್ಗಲು ಸಹಾಯಕಾರಿಯಾಗುವದು.

ಬನಾರಸಿಗೆ ಬಂದಾಗ ರಾವಲನ ಕೈಯಲ್ಲಿದ್ದದು ಕೇವಲ ೧೭ ರುಪಾಯಿಗಳು ಮಾತ್ರ! ಇದೀಗ ರಾವಲನಿಗೆ—ಇನ್ನೂ ಹೆಚ್ಚಿನ ಚಿಂತೆಯಾಗಿತ್ತು! ಮನುಷ್ಯನಿಗೆ ಎಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿಯೂ ಕೈತುಂಬ ಹಣವಿದ್ದರೆ –ಸುಮಾರು ಅರ್ಧ ಆಪತ್ತು ದೂರವಾದೀತೆಂಬ ಬರವಸೆಯಾಗುವದು. ಹಣವೂ ಇಲ್ಲ! ಪರಿಚಯಸ್ಥರೂ ಇಲ್ಲ! ಅದೂ ಅಲ್ಲದೆ ಹೊಟ್ಟೆಗೂ ಇಲ್ಲ ಎಂಬ ಪರಿಸ್ಥಿತಿಯಲ್ಲಿ ಎಂತಹವನಾದರೂ ಕೈಕಾಲು ಬಿಡುವದೇ ಸರಿ!–ಇಂದಂತೂ ರಾವಲನಿಗೆ ನಿದ್ದೆಯೂ ಬರುವಂತಿರಲಿಲ್ಲ! ಮೈಮೇಲಿನ ಅರಿವೆಯೆಲ್ಲ ಕೊಳಕಾಗಿತ್ತು. ಕಾಶಿಯ ವಿಶ್ವನಾಥ ದೇವಾಲಯದ ಮುಂದುಗಡೆಯ ತೀರ್ಥದಲ್ಲಿ ಒಂದಾಣೆ ಸಾಬೂನು ಪ್ರಯೋಗಿಸಿ ಮೈತೊಳೆದು ವಿಶ್ವನಾಥನಿಗೆ ನಮಸ್ಕರಿಸಿ ಹೊರಬಂದ ದೇ

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಹಣಕ್ಕೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1939

ರಾಮತೀರ್ಥ ಬ್ರಾಹ್ಮೀ ತೈಲ

ಶೈಲ್ ನಂ ೧] [ಮೆಡಿಕೇಟೆಡ್ಸ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ವ್ಯಕ್ತಿ ಪರಿಚಯ

ಶಾಂತಿಯ ಪವನದೂತ
ವಿ. ಕೆ. ಕೃಷ್ಣಮೆನನ್

ಕಾಶ್ಮೀರವು ಭಾರತದೊಡನೆ ಸಂಪೂರ್ಣ ಸೇರಿಕೊಳ್ಳದೆ ವಿವಾಹವಾಗಲಾರರಂತೆ!

"ಕಾಶ್ಮೀರವು ಸಂಪೂರ್ಣ ಭಾರತದ್ದಾಗದ ಹೊರತು ವಿವಾಹವಾಗಲಾರೆನು" ಎಂದು ಭೀಷ್ಮ ಪ್ರತಿಜ್ಞೆಯನ್ನು ಮಾಡಿದವರು! ಸಂಯುಕ್ತ ರಾಷ್ಟ್ರ ಸಂಘದ ಜನರಲ್ ಅಸೆಂಬ್ಲಿಯಲ್ಲಿಯ ಸದಸ್ಯರಲ್ಲಿ ಎಲ್ಲರಿಗಿಂತಲೂ ಅತಿ ತೇಜಸ್ವಿ ಹಾಗೂ ಪ್ರಮುಖರೆಂದರೆ ಭಾರತದ ನಿಯೋಜಿತ ಸದಸ್ಯರಾದ "ವೆಂಗಾಲಿಲ್ ಕೃಷ್ಣನ್ ಕೃಷ್ಣ ಮೆನನ್ (ವಿ. ಕೇ. ಕೇ. ಮೆನನ್)" ರು. ಅಮೇರಿಕೆಯ "ನ್ಯೂಯಾರ್ಕ" ಎಂಬ ಪ್ರಮುಖ ವೃತ್ತ ಪತ್ರಿಕೆಯಿಂದಲೂ ಹೊಗಳಲ್ಪಡುವ ಶ್ರೀ ವಿ. ಕೆ. ಕೃಷ್ಣ ಮೆನನ್‌ರು, ಸುಪ್ರಸಿದ್ಧ ಆಂಗ್ಲ ಇತಿಹಾಸ ತಜ್ಞರಾದ "ಗಶ್‌ಬ್ರೂಕ್ ವಿಲಿಯಮ್ಸನ್"ರ ದೃಷ್ಟಿ ಕೋನದಲ್ಲಿ ಕೂಡ ಬಿದ್ದು, ಪ್ರಪಂಚದ ಕೇವಲ ಹತ್ತು ಶ್ರೇಷ್ಠ ರಾಜನೀತಿಜ್ಞರಲ್ಲಿ ಇವರೊಬ್ಬರಾಗಿರುವರೆಂದು ಕರೆಯಿಸಿಕೊಂಡಿದ್ದಾರೆ.

ಗತಿಸಿದ ಭಾರತದ ಸಾರ್ವತ್ರಿಕ ಮಹಾ ಚುನಾವಣೆಯಲ್ಲಿ ಶ್ರೀ ಮೆನನ್ನರು ಮುಂಬೈ ಮತದಾರ ಸಂಘದಿಂದ ಲೋಕಸಭಾ ಸದಸ್ಯತ್ವದ ಸಲುವಾಗಿ ಕೊಂಗ್ರೆಸ್ ನಿಯೋಜಿತ ಹುರಿಯಾಳಾಗಿ ನಿಂತುಕೊಂಡಾಗ ಅವರ ವಿಷಯವಾಗಿ ಸ್ವತಂತ್ರ ಭಾರತದ ಪ್ರ-ಪ್ರಥಮ ಹಾಗೂ ಕೊನೆಯ ಮಾಜಿ ಗವರ್ನರ್ ಜನರಲ್‌ರೂ, ಮದ್ರಾಸ ರಾಜ್ಯದ (ತಮಿಳುನಾಡು) ಮಾಜಿ ಮುಖ್ಯ ಮಂತ್ರಿಗಳೂ, ಗಣರಾಜ್ಯ ಭಾರತದ ಶ್ರೇಷ್ಠ ಮುತ್ಸದ್ದಿಗಳೂ ಆದ ಚಕ್ರವರ್ತಿ ಶ್ರೀ ರಾಜಗೋಪಾಲಾಚಾರಿಯವರು, ಶ್ರೀ ಪಂಡಿತ ಜವಾಹರಲಾಲ ನೆಹರೂರವರು ಈ ಚುನಾವಣೆಯಲ್ಲಿ ವಿಜಯಿಗಳಾಗುವದು ಎಷ್ಟು ಮಹತ್ವಪೂರ್ಣವೋ, ಹಾಗು ಎಷ್ಟು ಆವಶ್ಯಕತೆ ಉಳ್ಳದ್ದೋ? ಅಷ್ಟೇ ಮಹತ್ವದಿಂದ ವಿಜಯಿಗಳಾಗುವದು ಶ್ರೀ ಮೆನನ್ನರದು" ಎಂದು ಹೇಳಿರುವರು. ಅಂದ ಮೇಲೆ ಭಾರತದಲ್ಲಿ ಮೆನನ್ನರ ಪ್ರತಿಭೆಯಾವರೂ ಎಷ್ಟಿರಬೇಕು?

ಕೊನೆಗೆ ಚುನಾವಣೆಯಲ್ಲಿ ಶ್ರೀ ಮೆನನ್‌ರು, ಪ್ರತಿಸ್ಪರ್ಧಿಯಾಗಿ ಪ್ರಜಾ ಸಮಾಜವಾದಿ ಪಕ್ಷದ ಹುರಿಯಾಳಾದ ಶ್ರೀ ಪೀಟರ್ ಆಲ್ವಾರೀಸ್‌ರನ್ನು ಚುನಾವಣೆ ರಂಗದಲ್ಲಿ ಸಾವಿರಾರು ಮತಗಳಿಂದ ಸೋಲಿಸಿ ಅಪೂರ್ವ ವಿಜಯವನ್ನು ಸಂಪಾದಿಸಿದರು. ಈ ಯಶಸ್ವಿಗೆ ಅವರ ವ್ಯಕ್ತಿತ್ವ, ವಾಕ್‌ಚಾತುರ್ಯ, ಬುದ್ಧಿ ಚಾಪಲ್ಯ, ರಾಜಕೀಯಜ್ಞಾನ ಮತ್ತು ಅವರ ಗಹನ ವಿಚಾರ ಸರಣಿಗಳಲ್ಲದೇ ಮುಂಬೈ ರಾಜ್ಯದ ಜನತೆಯಲ್ಲಿ ಶ್ರೀ ಮೆನನ್ನರಲ್ಲಿದ್ದ ಅಪಾರ ಪ್ರೇಮ ಭಕ್ತಿಯೇ ಮೂಲಾಧಾರ.

ದಕ್ಷಿಣ ಹಿಂದುಸ್ತಾನದ ಪಶ್ಚಿಮ ಕಡಲ ದಂಡೆಯಲ್ಲಿ ತೆಂಗುಗಳ ಬೀಡಾದ, ಉತ್ತರ ಮಲಬಾರದ ಕಾಲಿಕತ್ತ (ಕಲ್ಲಿಕೋಟೆ)ದಲ್ಲಿರುವ ಒಂದು ಮಳೆಯಾಳಿ ಜನಾಂಗದ ಮಧ್ಯಮ ವರ್ಗದ ಕುಟುಂಬದಲ್ಲಿ ಸನ್ ೧೮೯೭ನೆಯ ಮೇ ತಿಂಗಳ ಮೂರರಂದು ಮೆನನ್ನರ ಜನ್ಮವಾಯಿತು. ಪರಮಾತ್ಮನು, ಯುದ್ಧ—ಕಲಹ ಮತ್ತು ಅಣುಶಕ್ತಿಗಳ ಈ ವಿಜ್ಞಾನ ಯುಗದಲ್ಲಿ ಸಿಲುಕಿದ ಪ್ರಪಂಚಕ್ಕೆ "ಶಾಂತಿ-ಅಹಿಂಸೆ"ಗಳ ತತ್ವ ಸಾರಲಿಕ್ಕೆ ಬ್ರಹ್ಮಚಾರಿಯ ರೂಪದಲ್ಲಿ ಈ ಶಾಂತಿಯ ಪವನ ದೂತನನ್ನು ನಿರ್ಮಿಸಿದನು! ಇಂದು ಇವರು ನಿಜವಾಗಿಯೂ ಒಂದು ಅವತಾರದಂತೆ ವರ್ತಿಸುವದರಿಂದ ಇದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಕೃಷ್ಣ ಮೆನನ್‌ರ ಸಾರ್ವಜನಿಕ ಜೀವನ ಯಾವ ಪ್ರಕಾರ ವಿಷಮವಾಗಿರುವದೋ, ಅಷ್ಟೇ ವ್ಯಕ್ತಿ ಜೀವನವೂ ಸರಳ ಹಾಗೂ ನಿಷ್ಪ್ರಪಂಚವಾಗಿದ್ದಿರುತ್ತದೆ! ಅವರು ಒಳ್ಳೇ ಮೇಧಾವಿಗಳೂ ಹೌದೂ; ಉತ್ತಮ ವಕೀಲರೂ ಹೌದು! ಇಂಗ್ಲೆಂಡಿನಲ್ಲಿ ತಮ್ಮ ಆಯುಷ್ಯದ ೧೫ ವರ್ಷಗಳಿಗಿಂತಲೂ ಅಧಿಕವಾಗಿ ದೀರ್ಘ ಅವಧಿಯ ವರೆಗೆ ಮೇಧಾವಿ ಬ್ಯಾರಿಸ್ಟರಾಗಿ ಉಳಿದರು. ತಮ್ಮ ಮಾತೃ ಭಾಷೆಯಾದ 'ಮಳೆಯಾಳಿ'ಗಿಂತಲೂ ಅತ್ಯುತ್ತಮವಾಗಿ ಇಂಗ್ಲಿಷ ಬಲ್ಲವರಾಗಿರುವರು. ಮಳೆಯಾಳಿಯು ಅವರ ಹುಟ್ಟು ಭಾಷೆಯಾದರೂ ಅವರಿಗೆ ಅದರಲ್ಲಿ ಸ್ಪಷ್ಟವಾಗಿ ಮಾತಾಡಲೂ, ಬರೆಯಲೂ—ಓದಲೂ ಬರುವದು ಬಲು ದುಸ್ತರ. ಆದರೆ ಇಂಗ್ಲೀಷ ಹಿಂದೀ ಈ ಎರಡು ಭಾಷೆಗಳಲ್ಲಿ ಅವರು ತುಂಬಾ ಸಳಗಿದವರಾಗಿದ್ದಾರೆ. ಮೆನನ್ನರ ಈ ಜೀವನವನ್ನು ಕಂಡು ಅದೆಷ್ಟೋ ದೇಶ-ವಿದೇಶಿ ಜನರು ಅವರ ಜೀವನ "ರಹಸ್ಯ-ಪೂರ್ಣ"ವಾದದ್ದು ಎಂದು ಹೇಳಿರುವರು! ಹೇಳುತ್ತಾರೆ!! ಹೇಳುತ್ತಲಿರುವರು!!! ಆದರೆ ಈ ವಿಷಯವಾಗಿ ಮೆನನ್ನರ ಹೇಳಿಕೆಯೇನಂದರೆ—

"ಯಾವದೇ ತರಹದ ರಹಸ್ಯ ನನ್ನಲ್ಲಿ ಇಲ್ಲವೇ ಇಲ್ಲ; ಎನ್ನುವದೇ ನನ್ನ ಜೀವನದಲ್ಲಿರುವ ಏಕ ಮಾತ್ರ ರಹಸ್ಯ".

ಇಂದು ಮೆನನ್ನರಿಗೆ ಅರವತ್ತೆರಡು ವರ್ಷಗಳು ಪೂರ್ಣ ತುಂಬಲಿಕ್ಕೆ ೬೩ ಹೊಸ್ತಿಲಲ್ಲಿ ತಮ್ಮ ಹೆಜ್ಜೆ ಇಡಲು ಪ್ರಾರಂಭಿಸಿದ್ದಾರೆ. ಇನ್ನೂ ತನಕ ಅವಿವಾಹಿತರಾಗಿರುವ ಶ್ರೀ ಮೆನನ್ನರು ಪೂರ್ಣ ಶಾಕಾಹಾರಿಗಳಾಗಿದ್ದಾರೆ ಅವರ ವಿವಾಹಕ್ಕೆ ರಾಜಕಾರಣದ ವಿಷಯವೇ ಮೂಲ ವಿಘ್ನ. ಅದೇನಂದರೆ-"ಕಾಶ್ಮೀರವು, ಸ್ವತಂತ್ರ ಭಾರತದ ಸಂಪೂರ್ಣ ಅಂಗವಾಗುವ ತನಕ ತಾನು ಅವಿವಾಹಿತನಾಗಿಯೇ ಬ್ರಹ್ಮಚಾರೀ ರೂಪದಲ್ಲಿರುವೆನು. ಅದರ-ಜೊತೆಗೆ ಮಾಂಸವನ್ನು ಮುಟ್ಟಲಾರೆನು, ಶಾಕಾಹಾರಿಯಾಗಿಯೇ ಜೀವಿಸುವೆನು. ಇದೇ ನನ್ನ ಭೀಷ್ಮ ಪ್ರತಿಜ್ಞೆ" ಎಂದು ಹೇಳಿದ್ದಾರಂತೆ! ದ್ವಾಪರಯುಗದ ಭೀಷ್ಮ ಪ್ರತಿಜ್ಞೆಗಿಂತಲೂ, ಒಂದು ಗುಂಜಿ ಹೆಚ್ಚು ಭಾರವಿರುವ ಈ ಪ್ರತಿಜ್ಞೆಯನ್ನು ಈ ಕಲಿಯುಗದ ಭೀಷ್ಮರಾದ ಮೆನನ್ನರು ಮಾಡಿರುವದು ಒಂದು ಸೋಜಿಗವೇ ಸರಿ! ಆದರೆ ಆ ಭೀಷ್ಮನು ಧರ್ಮದ ಸಲುವಾಗಿ ಪ್ರತಿಜ್ಞೆ ಮಾಡಿದರೆ; ಇವನು ರಾಜಕಾರಣದ ಸಲುವಾಗಿ ಪಣತೊಟ್ಟಂತಾಯಿತು.

ಇಂದು ಮೆನನ್ನರು ೬೩ ವರ್ಷದ ಪ್ರಾಯಕ್ಕೆ ಬಂದರೂ ಬೀಡಿ-ಸಿಗರೇಟು ಹಾಗೂ ಸರಾಯಿ ಇತ್ಯಾದಿ ಮಾದಕಪೇಯಗಳನ್ನು ಎಂದೂ ಸೇವಿಸಲಾರರು. ಇದು ಕೆಲವರಿಗೆ ಗೊತ್ತಿರಬಹುದು. ಲೇಖಕ ಜೇಮ್ಸ ಕೇಮರಾನ್‌ರ ಶಬ್ದದಲ್ಲಿ ಹೇಳುವದಾದರೆ "ಬಹುಶಃ ಒಮ್ಮೊಮ್ಮೆ ತಿನ್ನುವದೂ, ಊಟಮಾಡುವದೂ ಸಹ ಇಲ್ಲ"ವಾಗಿರುವದಂತೆ. ಇದನ್ನು ಅರಿತವರು ಅತಿ ವಿರಲ! ಅವರು ಮಾದಕಪೇಯ ಸೇವಿಸಲಾರರು ಎಂಬುದು ನಿಜ. ಆದರೆ ಅದಕ್ಕೆ ಚಹ (Tea) ಮಾತ್ರ ಅಪವಾದವಾಗಿರುವದು. "ಒಮ್ಮೊಮ್ಮೆ ಅವರು ಕೇವಲ ಚಹದ ಮೇಲೆಯೇ ಬಹುದಿನಗಳ ತನಕ ಜೀವಿಸುವರು. ಚಹವು ಅವರಿಗೊಂದು ಪ್ರಿಯವಸ್ತುವಾಗಿದೆ. ಅಂತೆಯೇ ಒಂದು ಮುಖ್ಯ ಆಹಾರವೂ ಕೂಡ ಆಗಿರುವದ.! ಮೆನನ್ನರು ದಿನಂಪ್ರತಿ ೩೦ ೪೦ ಕಪ್ಪು ಚಹ ಕುಡಿಯುತ್ತಾರಂತೆ. ಅಷ್ಟು ಬಟ್ಟಲು ಚಹ ಸೇವಿಸುವದು ಅವರಿಗೆ ಸಾಧಾರಣವಾದದ್ದು" ಎಂದು ಕೃಷ್ಣಮೆನನ್‌ರೊಡನೆ ವಾಸಿಸುವರು ಹೇಳುತ್ತಾರೆ.

ಶ್ರೀ ವ್ಹಿ. ಕೆ. ಕೃಷ್ಣಮೆನನ್‌ರು ಬ್ರಿಟನ್ನದಲ್ಲಿ ಭಾರತದ ಪ್ರಥಮ ಹಾಯ್ ಕಮಿಶನರ್ (ವಿದೇಶ ರಾಯಭಾರಿ) ಆಗಿ ಹೋದರು. ಆದರೆ ಈ ಶ್ರೇಷ್ಠ ಪದವಿಗೇರಿದರೂ ಕೂಡ ಅವರ ಜೀವನದಲ್ಲಿ ಕಿಂಚಿತ್ ಪ್ರಮಾಣದಲ್ಲಿ ಪರಿವರ್ತನೆಯಾಗಲಿಲ್ಲ. ಆ ಪದನಿಯುಗೋಸ್ಕರ ಅವರು ಏನೂ ವೇತನವನ್ನು ಸಹ ಸ್ವೀಕರಿಸಲಿಲ್ಲ. ಆದರೆ ಮಾತ್ರ ಕೆಲವೊಮ್ಮೆ ದಿವಸದ ೧೮ ತಾಸುಗಳ ತನಕ ತಮ್ಮ ಕಾರ್ಯಕ್ಷೇತ್ರದಲ್ಲಿ ನಿರತರಾಗುತ್ತಿದ್ದರು. ಈ ರೀತಿ ಕೆಲಸಮಾಡಿ ಹಣ ತೆಗೆದುಕೊಳ್ಳದೇ ಇರುವವರು ಯಾರಿದ್ದಾರೆ? ಆ ರೀತಿ ಅವರು ಮಾಡಲಿಕ್ಕೆ ಕಾರಣವೇನು? ಒಂದೇ ಒಂದು ಕಾರಣ. ರಾಷ್ಟ್ರದ ಅಭಿಮಾನ-ಅದರ ಸೇವೆ

ಕಳೆದ ಒಂದೆರಡು ವರ್ಷಗಳ ಹಿಂದೆ ಜನೇವರಿ ಮತ್ತು ಫೇಬ್ರುವರಿ ತಿಂಗಳಲ್ಲಿ ಕೂಡಿದ "ಸುರಕ್ಷಾ—ಪರಿಷದ" (ಸಂರಕ್ಷಣ—ಪರಿಷತ್ತು)"ದಲ್ಲಿ ಕಾಶ್ಮೀರ ವಿಷಯದ ಪ್ರಶ್ನೆಯ ಮೇಲೆ ಭಾರತೀಯ ಪ್ರವಕ್ತಾರರೂಪದಲ್ಲಿ ಅತ್ಯುತ್ತಮ ಮಹಾಕಾರ್ಯ ಮಾಡಿದಾಗಲೇ ಅವರ ದೇಶಭಕ್ತಿ ಹಾಗೂ ಅವರ ಸ್ತುತಿಮಾಡುವ ಯೋಗ್ಯತೆಯ ಪರೀಕ್ಷೆ ನಡೆಯಿತು! ಕಾಶ್ಮೀರಸಂಬಂಧವಾಗಿ ಮೆನನ್‌ರ ಘೋಷಣೆಯು, ಭಾರತದ ಘೋಷಣೆಯಾಗಿತ್ತು. ಅಕಸ್ಮಾತ ಒಂದುವೇಳೆ "ಸುರಕ್ಷಾ—ಪರಿಷತ್ತಿ"ನ ಸಭ್ಯರು ಮೆನನ್‌ರ ದೀರ್ಘ ಭಾಷಣದ ತರುವಾಯವೂ ಸಹ ಭಾರತದ ದೃಷ್ಟಿಕೋನವು ಯೋಗ್ಯರೀತಿಯಲ್ಲಿ ನಿರೀಕ್ಷಿಸಿದ್ದಿಲ್ಲ, ಆದರಲ್ಲಿ ಎಳ್ಳಷ್ಟೂ ತಪ್ಪು ಮೆನನ್ನರದಿದ್ದಿಲ್ಲ. ತಮ್ಮ ಭಾಷಣದ ಮೂಲಕ ಇಟ್ಟ ಕೆಲವು ಕಾನೂನುಗಳನ್ನು ಸುರಕ್ಷಾ ಪರಿಷತ್ತಿನ ಮಧ್ಯಸ್ಥರಾದ ಶ್ರೀ ಜಾರಿಂಗರು ತಮ್ಮ ಪ್ರತಿವೇದನೆಯಲ್ಲಿ ಸಮರ್ಥಿಸಿದಾಗಲೇ ಮೆನನ್‌ರ ವಿಷಯವಿದ್ದಿತ್ತು.

ಶ್ರೀ ಕೃಷ್ಣಮೆನನ್‌ರು ಇಂದು ಭಾರತದ ಸಂರಕ್ಷಣಾ ಮಂತ್ರಿಗಳಾಗಿರುವರು. ಈ ಸ್ಥಾನದಲ್ಲಿದ್ದರೂ ಪ್ರಧಾನಮಂತ್ರಿಗಳಾದ ನೆಹರೂರವರ ವಿದೇಶ ಖಾತೆಯ ವಿಷಯದಲ್ಲಿ ಅವರು ಸಂಯುಕ್ತ ರಾಷ್ಟ್ರ ಸಂಘದ ನ್ಯೂಯಾರ್ಕದ ಕಾರ್ಯಾಲಯದಲ್ಲಿ ಅವಿರತ ಪ್ರಯತ್ನಪಟ್ಟು ಕಾದಾಡುವರು! ಇಂಗ್ಲೆಂಡಿನ ಮಾಜಿ ಪ್ರಧಾನಿ ಹಾಗೂ ಇಂಗ್ಲೀಷ ಮುತ್ಸದ್ದಿಯಾದ ಸರ್ ವಿನಸ್ಟನ ಚರ್ಚಿಲರ ತಂದೆಯು, ತನ್ನ ಹುಡುಗನು (ಚರ್ಚಿಲ್) "ಬುದ್ಧಿಹೀನ" ಎಂದು ತಿಳಿದು ಅವನನ್ನು ಸೈನ್ಯ ಖಾತೆಯಲ್ಲಿ ಕಳಿಸಿದರು. ಆದರೆ ಇಂದಿನ ಪ್ರಸಂಗದಲ್ಲಿ ಸೈನ್ಯದಕೂಡ ಸಂಬಂಧವನ್ನಿಡಲು ಶರೀರದ ಹೊರತು ತೀಕ್ಷ್ಣವಾದ ಮೆದುಳನ್ನು ಉಪಯೋಗಿಸಬೇಕಾಗುತ್ತದೆ. ೬೩ ವರ್ಷ ಪ್ರಾಯದ ಶ್ರೀ ಕೃಷ್ಣಮೆನನ್ನರ ಬುದ್ಧಿವೃತ್ತಿಯ ಮೇಲೆ ಯಾರು ಸಂದೇಹಪಡಬಲ್ಲರು? ಆದರೂ ಸಹ ಅವರು ಅಶ್ವತ್ಥಾಮನಂತೆ ಗೋಚರಿಸುವ ಶರೀರವು, ದೃಢವಾಗಿಯೂ, ತೀಕ್ಷ್ಣವಾಗಿಯೂ ಇರುವದು. ಸುರಕ್ಷಾ—ಪರಿಷತ್ತಿನಲ್ಲಿ ಕಾಶ್ಮೀರ ಸಂಬಂಧವಾಗಿ ಅದೆಷ್ಟು ತಿಳುವಳಿಕೆ ಇದೆಯೆಂಬುದು ಪ್ರಕಟವಾಗುತ್ತದೆ. ಆಗಲೇ ಅವರು ಗಿಲಿಗಿಟದಲ್ಲಿ ಜೆಟ್ ಪ್ಲೇನ್‌ನ 'ಸನ್ಜೇ'ದ ಉದ್ವಕತೆಯ ಪ್ರಶ್ನೆಯ ಮೇಲೆ ದೆಂಬಿಯ ರಾಷ್ಟ್ರ ಪಾಕಿಸ್ತಾನದ ಏಳನೇ ಪ್ರಧಾನ ಮಂತ್ರಿ (ಮಾಜಿ) ಸರ್ ಮಲಿಕ್ ಫಿರೋಜ ಖಾನ್ ನೂನರಿಗೆ "ಬಾಯಲ್ಲಿ ಹಾಕಿ ಕೈಬೆರಳು ಕಚ್ಚುವಂತೆ" ಚಕಿತಗೊಳಿಸಿದ್ದಾರೆ. ಮೆನನ್ನರು ಭಾರತೀಯ ಸೈನ್ಯದ ಶ್ರೇಷ್ಠ ಮುಂದಾಳಾಗಿರುವರು. ಹಾಗೂ ಅವರ ಅಸಾಧಾರಣವಾದ ಯೋಗ್ಯತೆಯ ಮೇಲೆ ಅವರಿಗೆ ವಿಶ್ವಾಸವಿದೆ

"ಈ ದೃಷ್ಟಿಯಿಂದ ಹಾಗೂ ಅಂತಾರಾಷ್ಟ್ರೀಯ ಕಾರಣಗಳ ತಿಳುವಳಿಕೆಯ ಮೂಲಕ ಭಾರತೀಯ ಸೈನ್ಯವನ್ನು ಅನೇಕ ಭಿನ್ನ ಭಿನ್ನ ರೀತಿಯಿಂದ ವಿಕಸಿತಗೊಳಿಸುವರಲ್ಲದೇ, ಪ್ರಪಂಚದಲ್ಲಿಯೇ ಪ್ರಬಲ ಸೇನೆ ಮಾಡುವರು" ಎಂಬುದರಲ್ಲಿ ಸ್ವಲ್ಪವೂ ಸಂದೇಹಪಡಬೇಕಾಗಿಲ್ಲ!"

—ರಾಮಕೃಷ್ಣ ಎ. ಶೈ. ಅಂಕೋಲಾ



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ, ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಆತ್ಮವಿಶ್ವಾಸ

ನಿಮ್ಮ ಮೇಲೆ ನಿಮಗೆ ನಂಬುಗೆ ಇದೆಯೇ?

ಇಲ್ಲವಾದರೆ, ಎಲ್ಲಕ್ಕಿಂತ ಮೊದಲು ಅದನ್ನು ಗಳಿಸಿಕೊಂಡಿರಿ; ಇದರಿಂದಲೇ ಶ್ರೇಯಸ್ಸು.

ಸ್ವರ್ಗಲೋಕದಲ್ಲಿ ಸುಖಾಸೀನನಾಗಿದ್ದ ಬ್ರಹ್ಮನು ಒಂದು ಬಾರಿ ತಲ್ಲಣಗೊಂಡು ಮರ್ತ್ಯಲೋಕದತ್ತ ತೆರಳಿದನು. ಅಲ್ಲಿ ಆವನೊಂದು ಗ್ರಾಮದ ಕಡೆ ನಡೆದನು. ಸಮೀಪದಲ್ಲಿಯೇ ಇದ್ದ ಒಬ್ಬ ರೈತನನ್ನು ಕಂಡು ಬ್ರಹ್ಮನು ಸ್ತಬ್ಧನಾದನು. ಆ ರೈತನು ಕೈಯಲ್ಲಿ ಒಂದು ಹಾರೆಯನ್ನು ಹಿಡಿದುಕೊಂಡು ಪರ್ವತವೊಂದನ್ನು ಕಡಿಯುತಿದ್ದನು. ಆ ಬೆಟ್ಟವನ್ನು ಕಡಿಕಡಿದು ನೆಲಸಮ ಮಾಡಬೇಕು ಎಂಬುದೇ ಆತನ ಅಪೇಕ್ಷೆಯಾಗಿತ್ತು. ಅತ್ತಿತ್ತ ತನ್ನ ದೃಷ್ಟಿಹರಿಸದೆ ಆತನು ಏಕಾಗ್ರತೆಯಿಂದ ತನ್ನ ಕಾರ್ಯದಲ್ಲೇ ನಿಮಗ್ನನಾಗಿದ್ದನು.

ಬ್ರಹ್ಮನಿಗೆ ಈ ರೈತನ ಹುಚ್ಚು ಕೆಲಸವನ್ನು ಕಂಡು ನಗು ತಡೆಯಲಿಲ್ಲ. ಜತೆಗೆ ಉಂಟಾದ ಆಶ್ಚರ್ಯವೂ ಕಡಿಮೆ ಎನ್ನುವಂತಿಲ್ಲ. ಆವನು ರೈತನ ಬಳಿಗೆ ತೆರಳಿ, ಆತನ ಅಭಿಲಾಷೆಯಾದರೂ ಏನು ಎಂದು ವಿಚಾರಿಸಿದನು.

ಬ್ರಹ್ಮನನ್ನು ಈಕ್ಷಿಸುತ್ತ ಕೃಷಿಕನುತ್ತರಿಸಿದನು—"ನಾನು ಈ ಪರ್ವತವನ್ನು ಇಲ್ಲಿಂದ ಕಿತ್ತು ಎಸೆಯಬಯಸುತ್ತೇನೆ. ಇದರ ದೆಸೆಯಿಂದಾಗಿ ನನ್ನ ಗದ್ದೆಗಳಿಗೆ ನೀರೇ ಸುರಿಯುವುದಿಲ್ಲ. ನಾನು ಇದನ್ನು ಆ ಮೂಲವಾಗಿ ಕಡಿದು ನೆಲಸಮ ಮಾಡುವ ದೃಢ ಸಂಕಲ್ಪ ಮಾಡಿರುತ್ತೇನೆ."

ಬ್ರಹ್ಮನು ನಗು ತಡೆಯಲಾರದೆ ಹೇಳಿದನು— "ಅಯ್ಯೋ, ಮೂರ್ಖ!, ಹುಚ್ಚರಂತೆ ಏಕೆ ಮಾತನ್ನಾಡುತ್ತಿರುವೆ? ಈ ಪರ್ವತವನ್ನು ನೀನು ಕಡಿದು ಕಿತ್ತೆಸೆಯಬಲ್ಲೆಯ?"

"ಯಾಕಾಗಲಾರೆ!" ಎಂದು ರೈತನು ಒಂದು ಕ್ಷಣ ಬ್ರಹ್ಮನತ್ತ ನೋಡುತ್ತ ಆಶ್ಚರ್ಯಪೂರಿತ ನಯನನಾದನು. ತಿರುಗಿ ತನ್ನ ಕೆಲಸದಲ್ಲೇ ತತ್ಪರನಾಗಿ ಮುಂದುವರಿದನು.

ವಿಧಾತನು ವ್ಯಂಗ್ಯಹಾಸವನ್ನು ಬೀರುತ್ತ ಅಲ್ಲಿಂದ ಪಯಣ ಬೆಳೆಸಿದನು. ಒಂದಲ್ಪದೂರ ನಡೆದುದೇ ತಡ, ಯಾರೋ ಆತನನ್ನು ದಾರಿ ಮಧ್ಯದಲ್ಲಿ ತಡೆದಂತಾಯಿತು. ಬ್ರಹ್ಮನು ತಿರುಗಿ ನೋಡಿದಾಗ ಸ್ವಯಂ ಪರ್ವತರಾಜನೇ ಆವನನ್ನು ತಡೆದಿದ್ದನು.

ಪರ್ವತರಾಜ ಕೈಮುಗಿದು ಪ್ರಾರ್ಥಿಸಿಕೊಂಡನು —"ಪರಮಾತ್ಮ, ನನಗೆ ಬೇರೆಲ್ಲಿಯಾದರೂ ಕೂತುಕೊಳ್ಳಲು ತಕ್ಕ ಸ್ಥಳವನ್ನು ಒದಗಿಸಿಕೊಡಿರಿ."

"ಯಾಕೆ? ಏನಾಯಿತು? ಬ್ರಹ್ಮನು ಆಶ್ಚರ್ಯಚಕಿತನಾಗಿ ಪ್ರಶ್ನಿಸಿದನು.

"ಈ ರೈತನು ನನ್ನನ್ನು ಕಿತ್ತೆಸೆಯುತ್ತಾನೆ!

ಬ್ರಹ್ಮನು ತಲೆದೂಗುತ್ತ ಕೇಳಿದನು—"ನಿನಗೇನೂ ಹುಚ್ಚುಗಿಚ್ಚು ತಾಗಿಲ್ಲವಷ್ಟೆ?"

ಪರ್ವತ ರಾಜನು ನಮ್ರತಾಪೂರ್ವಕವಾಗಿ ಹೇಳತೊಡಗಿದನು — "ಇಲ್ಲ ಮಹಾಪ್ರಭು! ನಾನು ನಿಜವಾದುದನ್ನೇ ಅನ್ನುತಿದ್ದೇನೆ. ನಾನು ಇಲ್ಲಿರುವವರೆಗೆ ತನ್ನ ಗದ್ದೆಗಳಿಗೆ ನೀರು ದೊರೆಯಲಾರದೆಂದೂ ತತ್ಕಾರಣದಿಂದ ನನ್ನನ್ನು ಕಡಿದೆಸೆಯಬೇಕೆಂದೂ ಈ ರೈತ ನಿರ್ಧರಿಸಿದ್ದಾನೆ. ಆವನಿಗೆ ತನ್ನ ಶಕ್ತಿಯಲ್ಲಿ ವಿಶ್ವಾಸವಿದೆ, ಪ್ರಭೂ ಆತ್ಮವಿಶ್ವಾಸದ ಬಲವೆಷ್ಟು ಎಂಬುದು ನಿಮಗೆ ಗೊತ್ತೇ ಇರಬೇಕು. ಈ ಕೆಲಸ ಆವನ ಸಂತಾನ ಪಾರಂಪರ್ಯವಾಗಿ ಮುನ್ನಡೆಯುವುದು. ಇವನು, ಇವನ ಮಗ, ಮೊಮ್ಮಗ, ಮರಿಮಗ ಹೀಗೆ ಒಬ್ಬನಲ್ಲ ಇನ್ನೊಬ್ಬನ ಕಾಲದಲ್ಲಿ ನಾನು ನಾಶವಾಗಿಯೇ ತೀರುತ್ತೇನೆ; ಇದು ಖಂಡಿತ."

ಪರ್ವತರಾಜನ ಕೇಳಿಕೆಯನ್ನು ವಿಧಾತನು ಪೂರ್ಣಮಾಡಿದನೋ ಇಲ್ಲವೋ ಈ ವಿಷಯ ಇಲ್ಲಿ ಅಪ್ರಾಸಂಗಿಕ. ಆತ್ಮವಿಶ್ವಾಸದ ಮಹತ್ವಮಾತ್ರ ಇಲ್ಲಿ ಗ್ರಹಣೀಯವಾದುದು ಮೇಲೆ ಉಲ್ಲೇಖಿಸಿದುದು ಒಂದು ಚೀನೀಯ ಜಾನಪದ ಕಥೆ. ಇದನ್ನು ಅನೇಕಾನೇಕ ವರ್ಷಗಳಿಂದ ಇವನ್ನು ಚೀನೀಯರು ಹೇಳುತ್ತ ಬರುತ್ತಿದ್ದಾರೆ.

ಜೀವನವು ಸಫಲವಾಗ ಬೇಕಾದರೆ, ಆತ್ಮವಿಶ್ವಾಸವಿರುವುದು ಆವಶ್ಯಕ. ತನ್ನಲ್ಲಿಯೇ ತನಗೆ ವಿಶ್ವಾಸವಿಲ್ಲದ ಮಾನವನು ಪ್ರಾಪಂಚಿಕ ಜೀವನದಲ್ಲಿ ಬರುವ ಎಡರು ತೊಡರುಗಳನ್ನು ಹೇಗೆ ಎದುರಿಸಬಲ್ಲನು? ಆತ್ಮವಿಶ್ವಾಸವು ಆವಶ್ಯವಾಗಿರುವುದಾದರೂ ಅದಿರುವ ವ್ಯಕ್ತಿಗಳ ಸಂಖ್ಯೆ ಮಾತ್ರ ಅತ್ಯಲ್ಪ. "ಅಯ್ಯೋ, ನಾನೂ ಹಾಗೆ ಮಾಡಬಹುದಿತ್ತು" ಎನ್ನುವ ಅನೇಕ ಜನರನ್ನು ನಾವು ದಿನನಿತ್ಯ ಕಾಣುತ್ತೇವೆ.

ಇಂತಹ ಜನರು ಯಾವಾಗಲೂ ಇದೇ ಮಾದರಿಯಾಗಿ ಗೊಣಗಿಕೊಳ್ಳುತ್ತಾರೆಯಷ್ಟೆ, ಆದರೆ ಅವರಿಂದ ಯಾವುದೇ ಒಂದು ಕಾರ್ಯವೂ ಸಿದ್ಧಿಯಾಗದು. ಅವರಿಗೆ ಆತ್ಮವಿಶ್ವಾಸವಿಲ್ಲದಿರುವುದೇ ಅವರ ಅಪಜಯದ ಮೂಲ ಕಾರಣವಾಗಿದೆ. ಆದುದರಿಂದ "ನಾನೂ ಹಾಗೆ ಮಾಡಬಹುದಿತ್ತು" ಎಂಬುದರ ಸ್ಥಾನವನ್ನು "ನಾನೂ ಹಾಗೆ ಮಾಡುತ್ತೇನೆ" ಎಂಬುದಕ್ಕಿತ್ತರೆ, ಅದು ಶ್ರೇಯಸ್ಕರವಾದುದು. 'ಮಾಡಬಹುದು" ಎಂಬ ಭಾವನೆಯು ಮಾನವನಲ್ಲಿ ಯಾವಾಗಲೂ ಇರಬಾರದು; ಎಲ್ಲ ಕೆಲಸಗಳನ್ನೂ ಮಾಡುವ ಶಕ್ತಿ ನನ್ನಲ್ಲಿ ಅಡಕವಾಗಿದೆ; ಆದರಿಂದ ನಾನು ಈ ಕೆಲಸವನ್ನೂ ಸುಲಭವಲ್ಲಿಯೇ ಮಾಡುತ್ತೇನೆ" ಎಂಬುವುದೇ ಆತ್ಮವಿಶ್ವಾಸದ ಮೊದಲ ಹಂತವಾಗಿದೆ.

ಇಂದಿಗೆ ಹಲವಾರು ವರ್ಷ ಹಿಂದಿನ ಮಾತಿದು. ಯೂರೋಪಿನಲ್ಲೆಲ್ಲಾ ಒಂದು ಸಮಯ ನೆಪೋಲಿಯನನ ಗೊಂದಲವಿತ್ತು. ಪ್ರತಿಸ್ಥಳದಲ್ಲಿಯೂ ತನ್ನ ವಿಜಯ ಪತಾಕೆಯನ್ನು ಹಾರಿಸುತ್ತ ಆವನು ಇಟೆಲಿಯ ಮೇಲೆ ಪ್ರಭುತ್ವ ಸ್ಥಾಪಿಸಲು ಬಂದನು. ಆದರೆ, ಅರ್ಧದಾರಿಯಲ್ಲಿಯೇ ಆಲ್ಪ್ಸ ಪರ್ವತವು ತನ್ನ ಉನ್ನತ ಶಿಖರಗಳಿಂದ ಎದುರು ನಿಂತಿತ್ತು! ಆ ಸಮಯದವರೆಗೆ ಯಾರೊಬ್ಬನೂ ಈ ಪರ್ವತವನ್ನು ಏರಿ ದಾಟುವುದರಲ್ಲಿ ಸಮರ್ಥನಾಗಿರಲಿಲ್ಲ.

ಆಲ್ಪ್ಸ ಪರ್ವತವನ್ನು ದಾಟದೆ ಇಟಲಿಯನ್ನು ವಶಪಡಿಸುವುದು ಅಸಂಭವವಾಗಿತ್ತು. ನೆಪೋಲಿಯನ್ ಈ ಪರ್ವತವನ್ನು ಪಾರುಮಾಡುವ ಆಜ್ಞೆಯಿತ್ತನು. ಸೈನಿಕರೆಲ್ಲರೂ ಆತನನ್ನೇ ನೋಡತೊಡಗಿದರು. ಕೆಲವು ಅಧಿಕಾರಿಗಳು ನೆಪೋಲಿಯನನನ್ನು ಸಮಾಧಾನಪಡಿಸಿದರೂ ಅದರಿಂದ ಆಜ್ಞೆ ಪರಿವರ್ತನೆಹೊಂದಲಿಲ್ಲ. ನೆಪೋಲಿಯನನು ತನ್ನ ಕುದುರೆಯನ್ನೇ ಎಲ್ಲರಿಗಿಂತ ಮುಂದೆ ಕೊಂಡೊಯ್ಯತೊಡಗಿದನು. ನಾಯಕನೇ ಮುಂದುವರಿದುದನ್ನು ಕಂಡು ಇತರರೂ ತಾವು ಅಸಂಭವವೆಂದು ತಿಳಿದಿದ್ದರೂ ಆತನನ್ನು ಹಿಂಬಾಲಿಸಲೇ ಬೇಕಾಯಿತು. ಇದರಿಂದ ನೆಪೋಲಿಯನನು ಜಯಗಳಿಸಿದನು. ಆಲ್ಪ್ಸ ತನ್ನ ಸೋಲೊಪ್ಪಿಕೊಂಡಿತು; ಇಟೆಲಿಯೂ ಆತನ ವಶವಾಯಿತು. ತನ್ನ ಈ ರೀತಿಯ ಆತ್ಮವಿಶ್ವಾಸದ ಬಲದಿಂದಲೇ ನೆಪೋಲಿಯನ್ ಆಗಾಗ ಅನ್ನುತಿದ್ದನು—"ಪ್ರಪಂಚದಲ್ಲಿ ಯಾವುದೇ ಕೆಲಸವು ಅಸಂಭವವಲ್ಲ" ಎಂದು.

ನಿಜವಾಗಿಯೂ ಮಾನವನ ಜೀವನದಲ್ಲಿ ಅಸಂಭವವೆಂಬ ಕೆಲಸವೇ ಇಲ್ಲ. ಆದರೆ, ಜಯಶೀಲನಾಗಬೇಕಾದರೆ ಮಾತ್ರ ಆತ್ಮವಿಶ್ವಾಸದ ಭಾವನೆಯು ಇರಬೇಕು ಜೀವನದ ಹಲವಾರು ಪರೀಕ್ಷೆಗಳಲ್ಲಿ ನಿರಾಶನಾಗುತ್ತ ಬಂದರೂ ಇದರಿಂದ ಧೃತಿಗೆಡಬಾರದು. ಯೋಗ ವಾಸಿಷ್ಠವೆಂಬ ಗ್ರಂಥದಲ್ಲಿ ವಾಲ್ಮೀಕಿಯು ಕರ್ಮದ ಅದ್ಭುತ ಶಕ್ತಿಯ ಬಹಳ ಪ್ರೇರಕ ವ್ಯಾಖ್ಯೆಯನ್ನು ಮಾಡಿದ್ದಾನೆ. ಇದರನ್ವಯ ಕರ್ಮವೇ ಕೀರ್ತಿ, ಶ್ರೇಯಸ್ಸು ಮತ್ತು ಸಿದ್ಧಿಗಳ ಆವಾಸಸ್ಥಾನವಾಗಿದೆ. ಕರ್ಮಕ್ಷೇತ್ರಗಳಲ್ಲಿಯೇ ಬಹುವಿಧದ ಯಶಸೌರಭ ಪುಷ್ಪಗಳು ಅರಳುತ್ತವೆ. ಸಿದ್ಧಿ ಶ್ರೀಫಲ ವಿಕಾಸಹೊಂದುತ್ತವೆ. ಸಾಂಸಾರಿಕ ಸಿದ್ಧಿಗಳೊಡನೆ ಆಧ್ಯಾತ್ಮಿಕ ಸಿದ್ಧಿಗಳು ಕೂಡ ಕರ್ಮದಿಂದಲೇ ಸಫಲವಾಗುತ್ತವೆ. ಕರ್ಮಕ್ಷೇತ್ರದಲ್ಲಿ ತನ್ನ ಇರಾದೆಯ ಬೀಜವನ್ನು ಬಿತ್ತುವೆನೆಂಬ ನಿಶ್ಚಯ ಮಾತ್ರ ಮಾನವನಲ್ಲಿರಬೇಕು. ತನ್ನ ಮನಸ್ಸಿನಲ್ಲಿ ನಿಶ್ಚಯ ಮಾಡಿ ಆ ಇರಾದೆಯು ಪೂರ್ಣಗೊಳ್ಳುವುದೆಂದು ಪ್ರತೀಕ್ಷಿಸುತ್ತ ಕುಳಿತರೆ ಮಾತ್ರ ಜೀವಾಂತ್ಯದ ವರೆಗೂ ನಿರೀಕ್ಷೆಯಲ್ಲಿಯೇ ಕೊಳೆಯಬೇಕಾಗುವುದು. ಜೀವನ ಸಂಘರ್ಷದಲ್ಲಿ ಒದಗುವ ಅಸಫಲತೆಗಳಿಂದ ನಿರಾಶರಾಗದೆ ಒಂದು ನೂತನ ಪ್ರೇರಣೆಯೊಡನೆ ಗುರಿಯ ತನಕ ನಡೆಯುವ ಪ್ರಯತ್ನ ಮಾಡುವುದರಿಂದಲೇ ಆತ್ಮವಿಶ್ವಾಸದ ಭಾವನೆಯು ಜಾಗ್ರತಗೊಳ್ಳುತ್ತವೆ. ಇದೇ ಆತ್ಮವಿಶ್ವಾಸಪಥದ ದ್ವಿತೀಯ ಪದವಿನ್ಯಾಸವೆನ್ನಬಹುದು.

೧೯೪೨ರ ಘಟನೆಯಿದು. ಆಗಸ್ಟ ೮–೯ರ ಸತ್ಯಾಗ್ರಹವು ದೇಶವಿಡಿ ಗೊಂದಲವೆಬ್ಬಿಸಿತ್ತು. ಗಾಂಧೀಜಿಯವರ "ಭಾರತವಿಂದ ತೊಲಗಿರಿ" ಎಂಬ ಗೊತ್ತುವಳಿಯನ್ನು ಎಲ್ಲ ನೇತಾರರೂ ಆದರ ಭಾವದಿಂದ ಮಾನ್ಯ ಮಾಡಿದ್ದರು. ಗಾಂಧೀಜಿಯವರೊಡನೆ ಇತರ ನಾಯಕರೂ "ಭಾರತವೆಂದೂ ವಿಭಾಜಿತವಾಗಲಾರದೆಂದು' ಸ್ಪಷ್ಟ ಪಡಿಸಿದ್ದರು. "ಅಖಂಡ ಭಾರತವು ಅಖಂಡವಾಗಿಯೇ ಉಳಿಯುವುದು" ಎಂದು ಲಕ್ಷಾಂತರ ಕಂಠಗಳು ಪ್ರತಿಧ್ವನಿಗೊಟ್ಟಿದ್ದುವು. ಆದರೆ, "ಭಾರತದ ಸ್ವಾತಂತ್ರ್ಯ ಪ್ರಾಪ್ತಿಗೆ ಪಾಕಿಸ್ತಾನದ ಕೇಳಿಕೆಯು ಸ್ವೀಕಾರವಾಗಲೇ ಬೇಕು" ಎಂಬ ಒಂದು ಸ್ವರ ಮಾತ್ರವಿತ್ತು. ಈ ಧ್ವನಿಯು ಗಾಂಧೀಜಿಯವರ ಸತ್ಯಾಗ್ರಹದ ಗೊತ್ತುವಳಿಯನ್ನು ವಿರೋಧಿಸಿತ್ತು. ಗಾಂಧೀಜಿಯವರಿಗಾದರೂ ತಮ್ಮ ವಿಶ್ವಾಸಿ ಅನುಯಾಯಿಯೊಬ್ಬನಿಂದ ಹಲವಾರು ಸಂಕಷ್ಟಗಳು ಮುಂದೆಬಂದುವು.

ಚಕ್ರವರ್ತಿ ರಾಜಗೋಪಾಲಾಚಾರಿಯವರ ಧ್ವನಿಯೇ ಇದಾಗಿತ್ತು. ಯಾರ ಮೇಲೆಯೂ ಈ ಮಾತು ಪರಿಣಾಮ ಬೀರಲಿಲ್ಲ. ಹಲವರು ಭಾರತ ಸ್ವಾತಂತ್ರ್ಯದ ವಿರೋಧಿ ಎಂದೂ ಅವರನ್ನು ಕರೆದರು. ಪಂಡಿತ ನೆಹರೂ ಅವರುಕೂಡ, "ರಾಜಾಜಿಯವರ ಭಾಷಣಗಳಿಂದ ನಮಗೆ ಕೆಡುಕಾಗುತ್ತದೆ" ಎಂದರು. "ಅವರು ನಾವು ಮುಂದಿಟ್ಟ ಹೆಜ್ಜೆಗಳನ್ನು ತಡೆಯಲು ಬಯಸುತ್ತಾರೆ" ಎಂದು ಆರೋಪ ಹೊರಿಸಿದ್ದರು.

ಜನರಾದರೂ ರಾಜಾಜಿ ಭಾಷಣಮಾಡುತ್ತಿರುವವೇಳೆ ಕಲ್ಲುಗಳನ್ನೋ ಮೊಟ್ಟೆಗಳನ್ನೋ ಎಸೆಯತೊಡಗಿದರು. ಕೆಲವೊಮ್ಮೆ ಅವರ ಅಭಿಪ್ರಾಯವನ್ನು ಬದಲಿಸುವ ಪ್ರಯತ್ನ ನಡೆಸಿದರು. ಆದರೆ, ರಾಜಾಜಿ ತನ್ನ ವಿಶ್ವಾಸವನ್ನೇ ನೆಚ್ಚಿ ಹಿಡಿದಿದ್ದರು. ತಾನು ಹೇಳಿದುದು ತಪ್ಪು ಎಂದವರಿಗೆ ಯಾವ ಕಾಲಕ್ಕೂ ತಿಳಿಯಲಿಲ್ಲ.

ಆಗಸ್ಟ ೪೭ರಲ್ಲಿ ಅವರ ಈ ವಿಶ್ವಾಸವು ಪ್ರಾಮಾಣಿತವಾಯ್ತು. ಕಾಂಗ್ರೆಸ್ಸು ಭಾರತ ವಿಭಜನೆಗೆ ಸಮ್ಮತಿಯೀಯಲೇ

(೮ನೇ ಪುಟ ನೋಡಿರಿ)

ಸ್ಥಾಪನೆ: 1906] ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ. 20,00,000/-
ಕ್ಷೇಮನಿಧಿ	—	ರೂ 14,40,000/-
ಠೇವಣಾತಿಗಳು	—	ರೂ. 7,19,35,000/-
ಸಾಲಗಳು	—	ರೂ. 3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ. 9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ.

The Canara Banking Corporation Ltd.

Estd:- 1906] [H. O. UDIPI (S. India)

ಪ್ರಾಕೃತಿಕ ಸೌಂದರ್ಯ

ಪ್ರೇಕ್ಷಕರನ್ನು ಮಂತ್ರಮುಗ್ಧರಾಗಿಸುವ ಪಹಲಗಾಮ

ನಾಲ್ಕೂ ನಿಟ್ಟಿನಲ್ಲಿ ಪರ್ವತಾಚ್ಛಾದಿತವಾದ ಪ್ರಕೃತಿ ಸೌಂದರ್ಯದ ತವರ್ಮನೆ ಇದು.

ಕಾಶ್ಮೀರವನ್ನು ಪ್ರಪಂಚದ ಸ್ವರ್ಗವೆನ್ನುವವರಿಗೇನೂ ಕಡಿಮೆಯಿಲ್ಲ. ಪ್ರಾಕೃತಿಕ ಸೌಂದರ್ಯಬಲದಿಂದಲೇ ಇದು ಅಗ್ರಗಣ್ಯ ಸ್ಥಾನವನ್ನು ಪಡೆದಿರುವುದೆಂಬುದರಲ್ಲೂ ಭಿನ್ನಾಭಿಪ್ರಾಯವಿಲ್ಲ. ನಾಲ್ಕೂ ಕಡೆ ಹಚ್ಚಹಸುರಾದ ಮರಗಿಡಗಳಿಂದ ಸುಶೋಭಿತವಾದ ಅನೇಕಾನೇಕ ಪರ್ವತಶ್ರೇಣಿಗಳು ಇಲ್ಲಿವೆ. ಇವುಗಳ ನಡುವೆ ನೀಲವರ್ಣದ ಪರ್ವತನದಿಗಳೂ ಮತ್ತು ಹಿಮಾಚ್ಛಾದಿತ ಶಿಖರಗಳಿಂದ ಹರಿದು ಬಂದ ಕಲಕಲನಾದದ ನದಿಗಳೂ ಅವಿರತವಾಗಿ ಪ್ರವಹಿಸುತ್ತಿರುತ್ತವೆ. ಸಮುದ್ರತಟದಿಂದ ೭,೨೦೦ ಅಡಿ ಎತ್ತರವಿರುವ "ಪಹಲಗಾಮ" ಎಂಬುದು ಹಿಮಾಲಯದಿಂದ ಹರಿದು ಬರುತ್ತಿರುವ ಲಿದರ್ ನದಿ ದಂಡೆಯಲ್ಲಿರುವ ಒಂದು ಪ್ರಕೃತಿ ಸೌಂದರ್ಯಪೂರಿತ ಗ್ರಾಮವಾಗಿದೆ. ಕಾಶ್ಮೀರದ ರಾಜಧಾನಿ ಶ್ರೀನಗರದಿಂದ ಈಶಾನ್ಯಕ್ಕೆ ಸುಮಾರು ಅರುವತ್ತು ಮೈಲು ದೂರದಲ್ಲಿ ಈ ಪ್ರದೇಶವಿದೆ.

ಪಹಲಗಾಮಕ್ಕೆ ಬಂದು ನೀವು ಸುತ್ತಲೂ ದೃಷ್ಟಿ ಹರಿಸಿದರೆ, ನಿಮಗೆ ಗೋಚರಿಸುವುದು ಹಸುರು ಬಣ್ಣ ಮಾತ್ರ. ಚೀದಿ ಮತ್ತು ದೇವದಾರದ ಗಗನ ಚುಂಬಿಸುವಂತಿರುವ ಮರಗಳು ನಿಮ್ಮನ್ನು ಮುಗ್ಧಗೊಳಿಸುವುವು. ಈ ಗಾಟಿಯ ಉದ್ದಗಲಗಳು ಸಾಮಾನ್ಯ ಎರಡು ಮೈಲಿಗಳಿರಬಹುದು. ಇಲ್ಲಿಲಿದರ ನದಿಯು ಮೂರು ಕವಲುಗಳಾಗಿ ವಿಭಕ್ತವಾಗಿದ್ದು, ಪ್ರತಿ ಧಾರೆಯೂ ಸಾಕಷ್ಟು ಅಗಲವಾಗಿಯೇ ಇರುವುದು. ಕಡು ನೀಲವರ್ಣದ ಇದರ ನೀರು ನಯನಾಭಿರಾಮವಾಗಿರುತ್ತದೆ. ನೀರಾದರೂ ನಿರ್ಮಲವಾಗಿದ್ದು, ಅಡಿಯಲ್ಲಿರುವ ಕಲ್ಲುಗಳೂ ಸುಸ್ಪಷ್ಟವಾಗಿ ಗೋಚರಿಸುತ್ತವೆ. ಈ ನದಿಯಲ್ಲಿ ಟ್ರಾಉಟ್ ಎಂಬ ಅತಿ ಸಣ್ಣ ಆಕಾರದ ಮೀನುಗಳು ಹೇರಳವಾಗಿ ದೊರೆಯುತ್ತವೆ. ಇವುಗಳು ಪ್ರಮಾಣದಲ್ಲಿ ಕಿರಿಯವಾದರೂ ರುಚಿಯಲ್ಲಿ ಹಿರಿಯದಾಗಿವೆ.

ನದಿಯ ಒಂದು ತಟದಿಂದ ಇನ್ನೊಂದು ದಡವನ್ನು ಸೇರುವ ಸಲುವಾಗಿ ಅಲ್ಲಲ್ಲಿ ಮರದ ಸೇತುಗಳನ್ನು ಕಟ್ಟಿದ್ದಾರೆ. ಇವುಗಳಲ್ಲಿ ನಡೆಯುತ್ತ ಹೋಗುವಾಗ, ಅಡಿಭಾಗದಲ್ಲಿ ನದಿಯ ನೀರು ಚಿಕ್ಕ ದೊಡ್ಡ ಬಂಡೆಕಲ್ಲುಗಳಿಗೆ ಬಡಿದು, ಅಪ್ಪಳಿಸಲ್ಪಟ್ಟು, ನೊರೆಯಿಂದ ತುಂಬಿ ಹರಿಯುವ ಬಿಳಿ ತೆರೆ ಸಹಿತವಾದ ನದಿಯನ್ನು ಕಾಣುವಾಗ, ಶಿವನು ತಾಂಡವ ನೃತ್ಯ ಪ್ರದರ್ಶನಮಾಡುತ್ತಿರುವಂತ ಭಾವನೆಯುದಯಿಸುತ್ತದೆ.

ನದಿಯ ಕಿನಾರೆಗಳಲ್ಲಿ ಮೃದುತಮವಾದ ಹುಲ್ಲುಗಾವಲಿದೆ ಇದರಿಂದಾಗಿ ಇಲ್ಲಿ ಬಿಡಾರಮಾಡಲು ಯಾವ ಆತಂಕವೂ ಇರಲಾರದು. ಇಲ್ಲಿಗೆ ಬಂದು ಪ್ರಕೃತಿಯ ಉದ್ಯಾನದಲ್ಲಿ ಆನಂದದಿಂದ ದಿನಗಳೆಯಲು ಬಯಸದವರು ವಿರಳ. ವಿದ್ಯುತ್ತಿನ ವ್ಯವಸ್ಥೆಯೂ ಇಲ್ಲಿ ಸುಲಭದಲ್ಲಿ ದೊರೆಯುತ್ತದೆ. ಯಾರಾದರೂ ಇಲ್ಲಿ ಬಂದು ತಮ್ಮ ಬಿಡಾರ ಊರಿದರೆ, ದಿನವೊಂದಕ್ಕೆ ೫೦ ನಯೆ-ಪೈಸೆಯಷ್ಟು ಕರವನ್ನು ಸರಕಾರಕ್ಕೆ ಕೊಡಬೇಕು. ಮಾಸಿಕ ಕರವು ಸುಮಾರು ೧೮ ರಿಂದ ೨೦ ರೂಪಾಯಿಯವರೆಗಿರುವುದು. ಪಹಲಗಾಮದಲ್ಲಿ ಆಧುನಿಕ ಮಾದರಿಯ ಅರ್ಧ ಮೈಲುದ್ದದ ಮಾರ್ಗವಿದ್ದು ಇದರಲ್ಲೇ ಮಾರುಕಟ್ಟೆ, ಅಂಚೆ ತಂತಿಕಛೇರಿ, ಔಷಧಾಲಯ ಮತ್ತು ಎಂಟು—ಹತ್ತು ಉತ್ತಮ ಹೋಟೆಲುಗಳಿರುತ್ತವೆ.

ಪಹಲಗಾಮದಲ್ಲಿ ಒಂದು ಕ್ಲಬ್ ಇದೆ. ಇಲ್ಲಿ ದಿನನಿತ್ಯ ಏನಾದರೂ ನಡೆಯುತ್ತಿರುತ್ತದೆ. ಈ ಕ್ಲಬ್ ಒಂದು ವಿಧದಿಂದ ಪಹಲಗಾಮದ ಸಾಂಸ್ಕೃತಿಕ ಕೇಂದ್ರವೂ ಹೌದು. ಯಾತ್ರಿಕರ ವಿಶ್ರಾಂತಿಗಾಗಿ ವರ್ಣ ವಿವರ್ಣದ ಹೂಗಳ ಮೂರು ನಾಲ್ಕು ಉದ್ಯಾನಗಳೂ ಇರುತ್ತವೆ ಇವುಗಳು ಒಂದಕ್ಕಿಂತ ಇನ್ನೊಂದು ಶೋಭಾಯಮಾನವಾಗಿದೆ.

ಇಲ್ಲಿ ಸ್ಥಾಯಿಗೃಹಗಳು ಇರುವುದಿಲ್ಲ. ಮಾರ್ಕೆಟನ್ನು ಬಿಟ್ಟರೆ, ನಾಲ್ಕಾರು ಸರಕಾರಿ ಭವನಗಳಿವೆ. ಪಹಲಗಾಮದಿಂದ ಒಂದು ಮೈಲು ದೂರದಲ್ಲಿ ಕುದುರೆ ಸವಾರರ ಒಂದು ಊರು ಇದೆ. ಇಲ್ಲಿ ಐವತ್ತರಷ್ಟು ಮನೆಗಳಿವೆ. ಭಾರತದ ಇತರೆಡೆಯ ಜನರಂತೆಯೇ ಇಲ್ಲಿನವರೂ ಬಡವರು. ಪ್ರಾಕೃತಿಕ ಸೌಂದರ್ಯದ ನಡುವಲ್ಲಿದ್ದು, ಅದರ ಸಗ್ಗಸುಖವನ್ನು ಅನುಭವಿಸುವವೆಂದರೆ, ಅಲ್ಲಿನವರನ್ನು ದೇವರು ಬಡತನದಿಂದ ದುಃಖಕ್ಕೀಡುಮಾಡಿದ್ದಾನೆ!

ಚಂದನವಾಡಿ ಎಂಬುದು ಪ್ರಕೃತಿಮಾತೆಯು ಪ್ರಕೃತಿ ಪ್ರೇಮಿಯನ್ನು ತನ್ನೆರಡು ಕೈಗಳಿಂದ ಸ್ವಾಗತಿಸುವ ಒಂದು ಸುಶೋಭನ ಸ್ಥಳ. ಪಹಲಗಾಮದಿಂದ ಏಳು ಮೈಲು ದೂರದಲ್ಲಿರುವ ಈ ಸ್ಥಳವನ್ನು ನಾಲ್ಕು ಕಡೆಗಳಿಂದಲೂ ಪರ್ವತಗಳು ಆವರಿಸಿಕೊಂಡಿವೆ. ಅರಣ್ಯದ ವಿವಿಧ ವರ್ಣದ ಪುಷ್ಪರಾಜಿಗಳು ಇದರ ಸೌಂದರ್ಯವನ್ನು ದ್ವಿಗುಣಿಸಿವೆ. ಇಲ್ಲಿ ಲಿದರ್ ನದಿಯು ಬಹಳ ವೇಗವಾಗಿ ಹರಿಯುತ್ತದೆ. ಅಲ್ಲದೆ ಶೇಷನಾಗವೆಂಬ ಹೆಸರಿನ ಇನ್ನೊಂದು ನದಿಯೂ ಇಲ್ಲಿದೆ. ಕೆಲವರು ಈ ಎರಡನೆಯ ನದಿಯನ್ನು ನೀಲಗಂಗೆ ಎನ್ನುವುದೂ ಉಂಟು. ಸುಮಾರು ೪೦೦ ಗಜ ಉದ್ದದ ಒಂದು ಹಿಮಸೇತುವೆ ಇಲ್ಲಿದ್ದು ಇದನ್ನು ನೋಡುವಾಗಲೇ ಎಲ್ಲರೂ ವಿಸ್ಮಯ ಚಕಿತರಾಗುವರು. ಇದರಡಿ ಶೇಷನಾಗ ಪ್ರವಾಹವು ಕಲಕಲ ನಾದದೊಡನೆ ಹರಿಯುತ್ತದೆ; ನೂರಾರು ಕಲ್ಲುಗಳಿಗೆ ಹೊಡೆದು ಹರಿಯುವ ನದಿಧಾರೆಯ ನಿನಾದ ಶ್ರವಣಯೋಗ್ಯವಾಗಿದೆ. ಸ್ವರ್ಗಲೋಕದಲ್ಲಿ ಬಾರಿಸುವ ಒಮ್ಮೇಳಕ್ಕೆ ಸರಿಯಾಗಿ ನಾವು ಕುಣಿಯಲಾರಂಭಿಸುತ್ತೇವೆ. ಈ ಹಿಮ ಸೇತುವಿನಲ್ಲಿ ನಿಂತು ನಾಲ್ಕೂ ಸುತ್ತಿಗೆ ತನ್ನ ದೃಷ್ಟಿ ಹರಿಸಿದರೆ, ಆಗ ಪ್ರಕೃತಿ ಸೌಂದರ್ಯದಿಂದ ಮಂತ್ರಮುಗ್ಧನಾಗಿ ತನ್ನನ್ನೇ ತಾನು ಮರೆಯುವಂತಾಗುತ್ತದೆ. ಪಹಲಗಾಮದ ಸಂದರ್ಶಕರು ಪ್ರತಿ ರವಿವಾರ ಇಲ್ಲಿಗೂ ಬರುತ್ತಾರೆ. ಇದೇ ಮಾರ್ಗವಾಗಿ ಶೇಷನಾಗ ಮತ್ತು ದೇವತೆಗಳ ಕ್ರೀಡಾಸ್ಥಳ ಪಂಚತರಣಿಯಿಂದಾಗಿ ಅಮರನಾಥದ ದಿವ್ಯ ಕಂದರಗಳತ್ತ ಹೋಗಬಹುದು.

ಪಹಲಗಾಮದಿಂದ ಒಂದು ರಸ್ತೆಯು ಹಿಮದ ಪರ್ವತಗಾಣವಾದ ಗ್ಲೆಶಿಯರಕ್ಕೆ ಹೋಗುತ್ತದೆ. ಈ ದಾರಿಯು ನಿಜವಾಗಿಯೂ ಪ್ರಕೃತಿಯ ಅನೇಕ ಮನಮೋಹಕ ದೃಶ್ಯಗಳಿಂದ ತುಂಬಿಕೊಂಡಿದೆ. ಇಂತಹ ನೈಸರ್ಗಿಕ ಸೌಂದರ್ಯವನ್ನು ಲೇಖನಿಯಿಂದ ಬರೆಯುವುದು ಸಾಧ್ಯವಿಲ್ಲ. ಅಲ್ಲದೇ ಕುಶಲ ಚಿತ್ರಕಾರನ ಭಾವನೆಗಿಂತಲೂ ಅಧಿಕ ಸುಂದರವಿದೆ ಎಂದು ಮಾತ್ರ ಹೇಳಬಹುದು; ಅಷ್ಟೆ.

ಬಂಟರ ಯಾನೆ ನಾಡವರ ಸಂಘದ

ಮಹಾಸಭೆ ಮತ್ತು ಸುವರ್ಣೋತ್ಸವ

ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ

ತಾ. 11-5-'59 ಮತ್ತು 12-5-'59ರಲ್ಲಿ ಜರಗುವುದು.

ಕಾರ್ಯಕ್ರಮ

11—5—1959 ಸೋಮವಾರ

ಅಪರಾಹ್ನ ಗಂಟೆ 3-00 ಕೃಷಿ, ಕೋಳಿ ಸಾಕಣೆ, ಆರೋಗ್ಯಕ್ಕೆ ಸಂಬಂಧಪಟ್ಟ ವಿಷಯಗಳು ಮತ್ತು ಸಮಾಜದ ಸ್ತ್ರೀಯರಿಂದ ಏರ್ಪಡಿಸಿದ ಕಲೆ, ಇತ್ಯಾದಿ ಪ್ರದರ್ಶನದ ಉದ್ಘಾಟನೆ

" 4-00 **ಸಂಘದ ವಾರ್ಷಿಕ ಮಹಾಸಭೆ.**

ಅಧ್ಯಕ್ಷರು:-ಶ್ರೀ। ಬಿ ಜಗಜ್ಜೀವನದಾಸ್ ಶೆಟ್ರು, *M. L. A.*

" 6-00 ವಿವಿಧ ವಿನೋದಾವಳಿಗಳು.

12 5—1959 ಮಂಗಳವಾರ

ಪ್ರಾತಃಕಾಲ ಗಂಟೆ 8-00 ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನಕ್ಕೆ ಸಂದರ್ಶನ.

" 10-00 ತೈಲಚಿತ್ರಗಳ ಅನಾವರಣ.

ಅಪರಾಹ್ನ ಗಂಟೆ 3-00 ಕೃಷಿ, ಯಕ್ಷಗಾನ, ಮತ್ತಿತರ ಕಲೆಗಳಲ್ಲಿ ಪ್ರವೀಣತೆ ಪಡೆದವರಿಗೆ ಮೆಡಲ್ ಮತ್ತು ಯೋಗ್ಯತಾಪತ್ರಗಳ ವಿತರಣೆ.

" 4-00 **ಸುವರ್ಣೋತ್ಸವ ಮಹಾಸಭೆ.**

" 5-30 ಮನರಂಜನೆಯ ಕಾರ್ಯಕ್ರಮ:—

ಸಂಘದ ಮಹಿಳಾ ಸದಸ್ಯರಿಂದ.

ಯಕ್ಷಗಾನ ಕಲಾವರ್ಧಕ ಸಂಘ, ಕುಂದಾಪುರ—ಇವರು "ವೀರಮಣಿ ಕಾಳಗ" ಎಂಬ ಪ್ರಸಂಗವನ್ನು ಅಭಿನಯಿಸುವರು.

ವಿಡಂಬನೆ

ನಾಗರಿಕ ಪ್ರಪಂಚ

ಸಾಹಿತಿ

ಪ್ರಖ್ಯಾತ ಲೇಖಕರ ಬರಹಗಳ ನೋಡಿ
ಅಲ್ಲಲ್ಲಿ ಒಂದೊಂದು ವಾಕ್ಯಗಳ ಕದ್ದು
ಲೇಖನವ ಬರೆದರಪ್ಪುದು ಸರ್ವಮಾನ್ಯ!
ಸಾಹಿತ್ಯಲೋಕದಲಿ ಹಾಕುಸೀ ತಾಣ್ಯ!

ರಾಜಕಾರಣಿ

ಓಟುಕೊಳ್ಳುವ ಕಾಲದಲ್ಲಿ ನಯವಾಗಿ
ಜನರಿಂಗೆ ಬಗೆಬಗೆಯ ಭರವಸೆಯ
ಕೊಟ್ಟು
'ಎಮ್ಮೆಲ್ಲೆ' ಆದೊಡನೆ ಎಲ್ಲವಂ ಮರೆತು
ಕಾರಿನಲಿ ತಿರುಗುತಿತೆ, ಜನಮಾತ್ರ
ಜೇಸ್ತು!

ಮಂತ್ರಿ

ಸಭೆ ಸಮಾರಂಭವಾ 'ಹಿರಿತನ'ವ
ವಹಿಸಿ,
ಮೇಣ್ ಶಂಕುಸ್ಥಾಪನೆಯನೂ ಸಾಂಗ
ಗೊಳಿಸಿ;
ಅಚ್ಚುದ ಭಾಷಣವ ಬೇಗದಲಿ ಒದರಿ
ಸಂಚಾರಗೈಯುವರು ಹಾ! 'ಜನರಹ
ಣದಿ!'

—ಎ. ಗಣಪಯ್ಯ ಅಲ್ಸೆ, ಐರೋಡಿ.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ಪ್ರಕಟಣೆ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 618/55 R. E. P.70/59

ವಾಮನನಾಯ್ಕ-ಅರ್ಜಿದಾರ
ಮತ್ತು
ಅನಂತಕೃಷ್ಣ ನಾಯ್ಕ ಕೂಡಾ-ಯದ್ರಿರು
ಇವರೊಳಗೆ-

1. ಅನಂತಕೃಷ್ಣ ನಾಯ್ಕ. 3 ಹರಿಯಪ್ಪ ನಾಯ್ಕ-ಕೃಷ್ಣನಾಯ್ಕನ ಮಗ.

ಉಡುಪಿ ತಾಲೂಕು ಆಲೆವೂರು ಗ್ರಾಮದ ಯದ್ರಿರಿಗೆ ತಿಳಿಸುವದೇನಂದ್ರೆ-

ಮೇಲ್ಕಂಡ ಡಿಕ್ರಿಯಲ್ಲಿ ಯಾಕೆ ಅಮಲಜಾರಿ ನಡಿಸಕೂಡದು-ಯಂಬ ಕುರಿತು ಅರ್ಜಿದಾರನು ದಾಖ್ಲು ಮಾಡಿದ ಅಮಲಜಾರಿ ತಾರೀಕು 10-6-1959ಕ್ಕೆ ಯಿಡೋಣಾಗಿ ಯದೆಂತ ಯಿದೂ ಘೂರ್ಲ್ಕ ಸದ್ರಿ ಯದ್ರಿರಿಗೆ ತಿಳಿಸೋಣಾಗಿಯದೆ.

N. V. Kamath.
Advocate for Petitioner.

ಉಡುಪಿ-9-5-59

ತಾಯಿಯು ಮಕ್ಕಳ ಆರೋಗ್ಯವನ್ನು ನೋಡಿಕೊಂಡು ಅವರ ಸೇವೆಯನ್ನು ಮಾಡುತ್ತಿರುವಂತೆಯೇ, ಮಕ್ಕಳೂ ತಮ್ಮ ತಾಯಿಯನ್ನು ಪ್ರೀತಿಪೂರ್ವಕವಾಗಿ ಆದರಿಸಿ ಅವಳ ಸೇವೆಯಲ್ಲಿ ತೊಡಗಬೇಕು. ಜನ್ಮಭೂಮಿಯೂ ಜನ್ಮದಾತೆಗೆ ಸಮಾನವಲ್ಲವೆ?

NAVAYUGA

Founder:—

A. B. SHETTY,

Former Minister for Public Health Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೭-೫-'೫೯	೩೪

ರೈತ ಜನರ ಉದ್ಧಾರ

ಯಾವುದೇ ದೇಶದಲ್ಲಾಗಲೀ ರೈತನೇ ದೇಶವಾಸಿಗಳ ಅನ್ನದಾತನೆನ್ನುವುದು ತಪ್ಪಾಗಲಾರದು; ಅಲ್ಲದೇ ಭಾರತದ ಮಟ್ಟಿಗೆ ಇದು ನೂರಕ್ಕೆ ನೂರು ಪಾಲೂ ಸತ್ಯ. ನಮ್ಮ ದೇಶದ ಜನಸಂಖ್ಯೆಯಲ್ಲಿ ನೂರಕ್ಕೆ ೮೦ರಷ್ಟು ಜನರು ಕೃಷಿಕ್ಷೇತ್ರವನ್ನೇ ತಮ್ಮ ಜೀವನ ನಿರ್ವಾಹಕ್ಕೆ ಹೊಂದಿಸಿಕೊಂಡಿದ್ದಾರೆ. ಹಾಗಿರುವಾಗ ದೇಶದ ಸುಭಿಕ್ಷೆ ಎಂದರೆ, ಕೃಷಿಕ ಜನರ ಸುಭಿಕ್ಷೆ ಎಂದೇ ಅರ್ಥವಾಗುವುದು. ಈ ನೂರಕ್ಕೆ ೮೦ರಷ್ಟು ಜನರು ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯೇ ಆಗಲಿ ಕೃಷಿಯನ್ನು ಮಾಡಿಯೇ ತಮ್ಮ ಹೊಟ್ಟೆಯ ಹಸಿವನ್ನು ಹಿಂಗಿಸಿಕೊಳ್ಳಬೇಕಾಗುವುದು. ಇದರಿಂದಾಗಿಯೇ ನಮ್ಮ ದೇಶದ ರೈತರು ಉಳಿದ ದೇಶದವರಿಗಿಂತ ಹೀನಾವಸ್ಥೆಯಲ್ಲಿದ್ದಾರೆ. ಜಡತನದ ಕಾರಣದಿಂದ ಅವರಿಗೆ ಆಧುನಿಕ ತಂತ್ರವಿಧಾನವನ್ನು ಅಳವಡಿಸಿಕೊಂಡು ಹೋಗುವುದು ಅಸಾಧ್ಯವೆನಿಸುತ್ತದೆ. ತಮ್ಮ ಅಜ್ಞಾನದಿಂದಾಗಿ, 'ಸುಧಾರಣೆ' ಎಂದೊಡನೆಯೇ ಅಂಜಿಬಿಡುತ್ತಾರೆ. ಹಾಗಾಗಿ ರೈತರ ದುಃಸ್ಥಿತಿಯು ವರ್ಣಿಸಲು ಅಸಾಧ್ಯವಾಗಿದೆ.

ದೇಶದ ಬೆನ್ನೆಲುಬಿಗೆ ಸಮನಾದ ಈ ರೈತ ಸಮಾಜವನ್ನು ಉನ್ನತಗೊಳಿಸಲು, ತಮ್ಮ ಪ್ರವೃತ್ತಿಯಲ್ಲಿ ಅವರಿಗೆ ರಕ್ಷಣೆ, ಭದ್ರತೆಗಳು ಸಿಗುವಂತಾಗಲು, ಅಲ್ಲದೇ ಅವರು ಸಾಗುವಳಿ ಮಾಡುವ ಭೂಮಿಗಳ ಒಡೆಯರು ಮಾಡಬಹುದಾದ ಸುಲಿಗೆಗಳಿಂದ ತಪ್ಪಿಸಿಕೊಳ್ಳಲು ಸರಕಾರವು ಪ್ರಯತ್ನ ನಡೆಸಿದೆ; ಅವುಗಳ ಪ್ರಯೋಜನ ಪಡೆದುಕೊಳ್ಳುವುದು ರೈತಜನರ ಕರ್ತವ್ಯವೇ ಎಂದು ಹೇಳಬಹುದು. ಆದರೆ, ಇಂದು ನಮ್ಮ ರೈತ ಜನರ ನಾಯಕತನವನ್ನು ಯಾರು ಮಾಡುತಿದ್ದಾರೆ? ಅಕ್ಷರಾಭ್ಯಾಸವಿಲ್ಲದ ನಮ್ಮ ದೇಶದ ಹೆಚ್ಚಿನ ಜನರು ನಾಲ್ಕಕ್ಷರ ಬಲ್ಲವನನ್ನು ಹಿಂಬಾಲಿಸಿಕೊಂಡು ತೆರಳುವುದೂ ಸ್ವಾಭಾವಿಕವೇ. ರೈತ ಜನರಿಗೆ ಮಾರ್ಗದರ್ಶನ ಮಾಡಬೇಕಾದ ಕೆಲವು ರೈತ ಸಂಘಗಳು ಕೇವಲ ಕಾನೂನಿನ ಆಸರೆಯನ್ನಷ್ಟೆ ಅವರಿಗೆ ಒದಗಿಸಿಕೊಡುತ್ತವೆ ಹೊರತು, ನಿಜವಾಗಿಯೂ ರೈತನ ಹಿತ ಯಾವುದರಿಂದ ಸಾಧ್ಯವೋ ಅವುಗಳಿಂದ ಹಿತ ದೊರಕಿಸಲು ಬಯಸುವುದಿಲ್ಲ ಎಂಬುದು ಸುವಿದಿತ. ಕೆಲವು ರಾಜಕೀಯ ಪಕ್ಷಗಳ ಅಡಿಯಲ್ಲಿ ಈ ರೈತ ಜನರು ಒಂದುಸೇರಿ, ತಮ್ಮ ಮಹತ್ತ್ವವಾದ ಉದ್ದೇಶ ಮತ್ತು ಕರ್ತವ್ಯಗಳನ್ನು ಮರೆತು ಬಿಡುವಂತಾಗಿದೆ. ಉದಾಹರಣೆಗಾಗಿ, ಒಬ್ಬ ಒಕ್ಕಲು ಧನಿಗೆ ನ್ಯಾಯವಾಗಿ ಸಲ್ಲಿಸಬೇಕಾದ ಗೇಣಿಯನ್ನು ಕೊಡದೆ ಇರಲು ಹೇಳಿಕೊಟ್ಟು, "ನಮ್ಮ ಪಕ್ಷಕ್ಕೆ ಇಷ್ಟು ಕೊಡು; ನಿನಗೆ ಸಂಪೂರ್ಣ ಗೇಣಿಯನ್ನೇ ಮಾಫಿ ಮಾಡಿಸುತ್ತೇನೆ. ಈಗಿನ ಕಾನೂನಿನಂತೆ ಗೇಣಿ ಧನಿಗೆ ಕೊಡಬೇಕಾಗಿಲ್ಲ" ಎಂಬ ರೀತಿಯ ದುರ್ಬೋಧನೆಗಳನ್ನು ಇತ್ತು, ಧನಿಯು ದಾವೆ ಮಾಡಿಸಿದಾಗ, ವ್ಯವಹಾರಕ್ಕಾಗಿ ಮತ್ತಷ್ಟು ಆತನಿಂದ ಸುಲಿದುಕೊಳ್ಳುತ್ತಾರೆ. ಅತ್ತ ಗೇಣಿಯನ್ನೂ ಕೊಡದಿರುವುದು ಸಾಧ್ಯವೆ? ಅಂತೂ ಸೋಲಾದ ನಂತರ, "ನೀನು ಹಾಗೆ ಹೇಳಿದುದು ಸರಿಯಾಗಲಿಲ್ಲ; ಹೀಗೆ ಅನ್ನಬಾರದಿತ್ತು; ಮುಂದಿನ ಸಾರಿ ನೋಡೋಣ" ಎನ್ನುತ್ತಾರೆ! ಹೀಗೆ ಇದು ಒಂದು ಮಾದರಿಯ ರೈತ ಸಂಘಗಳ ಉಪದೇಶವಾದರೆ, ಮತ್ತೊಂದು ಕಡೆಯಿಂದಲೂ ಒದಗುವ ದುಷ್ಪರಿಣಾಮ ಇದಕ್ಕಿಂತ ಕಡಿಮೆಯೆನಿಸಲಾರದು. ಹಾಗಾಗಿ ಇಂದು ನಮ್ಮ ದೇಶದ ರೈತರು ರಾಜಕೀಯ ಗಾಣಕ್ಕೆ ಸಿಕ್ಕಿಕೊಂಡಿರುವುದರಿಂದಲೇ ಅವನ ಶ್ರೇಯಸ್ಸು ಕಡಿಮೆಯಾಗುತ್ತದೆ. ರೈತ ಜನರಿಗೆ ತಮ್ಮ ಉದ್ಧಾರವಾಗಬೇಕೆಂಬ ಭಾವನೆಯಿರುವುದು ನ್ಯಾಯವೇ. ಸರಕಾರವು ಒದಗಿಸಿಕೊಟ್ಟ ಸೌಲಭ್ಯಗಳ ಕಾಯದೆ ಕಾನೂನುಗಳ ಲಾಭಗಳನ್ನು ಪಡೆಯುವುದು ಅವಶ್ಯಕವೇ. ಆದರೆ, ಇದಕ್ಕಾಗಿ ಅವರು ನ್ಯಾಯವನ್ನು ಬುಡಮೇಲುಗೊಳಿಸುವುದು ಸಾಧಕವೆನಿಸಲಾರದು. ಇದರಿಂದ ರೈತ ಜನರಲ್ಲಿ ಆತ್ಮವಿಶ್ವಾಸ, ನಿಸ್ವಾರ್ಥ ಬುದ್ಧಿ, ನೈತಿಕ ಸ್ಥಿತಿಗತಿಗಳು ಕುಂದಿರುವುದರಿಂದಲೇ ಅವರು ಸುಲಭದಲ್ಲಿ ಇತರರ ಕೈಗೊಂಬೆಯಾಗಿ ಹೋಗುತ್ತಾರೆ ಎಂಬುದು ತಿಳಿಯುತ್ತದೆ.

ರೈತ ಜನರು ಮುಖ್ಯವಾಗಿ ಆತ್ಮವಿಶ್ವಾಸಿಗಳಾಗಬೇಕು; ಸ್ವಭಾವತಃ ಪರಿಶ್ರಮಪಟುವಾದವನಲ್ಲಿ ಆತ್ಮವಿಶ್ವಾಸವು ತಾನೇತಾನಾಗಿ ಮೂಡಿಕೊಂಡಿರುತ್ತದೆ. ಆತ್ಮವಂಚನೆಯಿಂದ ದೂರವಿದ್ದು, ತನ್ನ ಪ್ರತಿ ಆಚರಣೆಯೂ ತನಗಾದರೂ ಸರಿಬರುವಂತಾಗಬೇಕು; ರಾಜಕಾರಣದ ಗುಂಗಿನಲ್ಲಿ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುವವರ ಮಾತಿಗೆ ಮರುಳಾಗಲೇ ಬಾರದು. ತನ್ನದಲ್ಲದುದನ್ನು ತಿನ್ನುವ ಬುದ್ಧಿಯಾದರೂ ಯಾರಲ್ಲಿಯೂ ಇರಬಾರದು. ರೈತನು ಮೈಮುರಿದು ದುಡಿಮೆ ಸಂಪಾದಿಸುತ್ತಾನೆ; ಆತನ ದುಡಿತಕ್ಕೆ ತಕ್ಕ ಪ್ರತಿಫಲದೊರೆಯುವುದು ಅಗತ್ಯವೆಂಬುದು ನ್ಯಾಯವೇ. ಆದರೆ, ಭೂಮಿಯ ಒಡೆಯನೊಬ್ಬನಿದ್ದರೆ, ಅವನಿಗೆ ಟೊಪ್ಪಿ ಹಾಕುವುದು, ಪರರಿಗೆ ವಂಚನೆ ಮಾಡುವುದು ಇದು ಸರಿಯೆಂದು ಹೇಳುವುದು ದಾರ್ಷ್ಟ್ಯದ ಮಾತಾದೀತು. ನೈತಿಕ ಮಟ್ಟವು ಕುಂದಿದ ದಿನದಿಂದಲೇ ರೈತ ಜನರು ವಾಮಮಾರ್ಗದಲ್ಲಿ ಹರಿಯತೊಡಗಿದ್ದಾರೆ. ಇದರಿಂದಾಗಿಯೇ ಅವರು ಇಂದು ತುಂಬ ನಿಕೃಷ್ಟಾವಸ್ಥೆಯಲ್ಲಿ ತೊಳಲಾಡುತ್ತಿರುತ್ತಾರೆ. ಆದುದರಿಂದ ಅವರು ಇಂದು ನೀತಿ–ಅನೀತಿಗಳ ತಾರತಮ್ಯವನ್ನರಿತು, ನೀತಿಯ ಸತ್ ಪಂಥವನ್ನು ಅವಲಂಬಿಸಿದರೆ, ಉದ್ಧರಿತರಾಗುವುದು ನಿಸ್ಸಂಶಯ. ಮುಂದಿನ ನಾಗರಿಕರನ್ನು ರೂಪಿಸುವ ಅಧ್ಯಾಪಕರು ಯಾವ ರಾಜಕೀಯ ಪಕ್ಷದಲ್ಲಿಯೂ ಸೇರಿಕೊಂಡಿರಬಾರದೆಂಬುದು ಮಾನ್ಯವಾಗಿರುವಂತೆಯೇ ದೇಶವಾಸಿಗಳ ಅನ್ನದಾತನಾದ ರೈತನೂ ಪಕ್ಷಾತೀತನಾಗುವುದು ಅಪೇಕ್ಷಣೀಯ. ಯಾವ ರಾಜಕಾರಣದ ಬಲೆಗೂ ಬೀಳದೆ ತ್ರಿಕಾಲಾಬಾಧಿತ ಸತ್ಯಗಳನ್ನೇ ಆಧರಿಸಿ ಇಂತಹ ರೈತರ ಸಂಘಗಳು ಹುಟ್ಟಿಕೊಂಡು ರೈತರ ಉದ್ಧಾರ ಹೇತುವಾಗುವುದು ಅವಶ್ಯವೆಂದು ಹೇಳಬಹುದು. ಮೈಸೂರಲ್ಲಿ ನಡೆದ ಯುವಜನ ರೈತ ಸಂಘದ ರಾಷ್ಟ್ರೀಯ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಡಾ| ಪಂಜಾಬರಾವ್ ದೇಶಮುಖರು ಈ ಬಗ್ಗೆ ಸದಭಿಪ್ರಾಯಪಡಿಸಿರುವುದು ಭಾವಿ ಭವಿಷ್ಯದ ಮುನ್ ಸೂಚನೆ ಎಂದು ಭಾವಿಸುತ್ತೇವೆ. ಈ ಸೂಚನೆಗಳನ್ನು ನಮ್ಮ ರೈತರು ಕಾರ್ಯಗತಗೊಳಿಸುವರೆ?

ನೀತಿ ಮತ್ತು ಕಾನೂನು

ಗಂಡು ಮಕ್ಕಳು ೨೧ ವರ್ಷಗಳಿಗಿಂತ ಮೊದಲು ಮತ್ತು ಹೆಣ್ಣು ಮಕ್ಕಳು ೧೮ ವರ್ಷಗಳಿಗಿಂತ ಪೂರ್ವದಲ್ಲಿ ವಿವಾಹವಾದರೆ, ಅವರಿಗೆ ಕಾರಾಗೃಹ ಶಿಕ್ಷೆಯೂ ಯಬೇಕು; ಮೂರಕ್ಕಿಂತ ಹೆಚ್ಚು ಮಕ್ಕಳನ್ನು ಪಡೆಯುವವರನ್ನು ಶಿಕ್ಷೆಗೆ ಗುರಿಪಡಿಸಬೇಕು ಎಂಬ ವಿಧೇಯಕ ಇತ್ತೀಚೆಗೆ ಲೋಕಸಭೆಯ ಮುಂದೆ ಬಂದು ಮತದಾನದ ಸಮಯದಲ್ಲಿ ಬಿದ್ದುಹೋಯಿತು! ಜನಸಂಖ್ಯೆಯ ಮೇಲೆ ನಿಯಂತ್ರಣ ಹೇರಲು ಅನುಕೂಲವಾದ ಕಾನೂನು ಇದಾದರೂ ಇದಕ್ಕಿಂತಲೂ ಪ್ರಗತಿಪರವಾದ ಕಾನೂನನ್ನು ಮಾಡುವುದು ಸೂಕ್ತವಲ್ಲವೆ? "ಗಂಡಸರು ೩೫ ಮತ್ತು ೪೫ ವರ್ಷಗಳ ನಡುವೆ ಮತ್ತು ಹೆಂಗಸರು ೩೦ ಮತ್ತು ೪೦ರ ನಡುವೆ ಮಾತ್ರ ರಮಿಸಿ ಎರಡಕ್ಕಿಂತ ಹೆಚ್ಚು ಮಕ್ಕಳಾಗದಂತೆ ನೋಡಿಕೊಳ್ಳಬೇಕು. ಇದಕ್ಕೆ ತಪ್ಪಿದವರಿಗೆ ತಲೆದಂಡ" ಎಂದು ವಿಧೇಯಕವಿರುತ್ತಿದ್ದರೆ, ಈ ಕಾನೂನಿನ ಪರಿಣಾಮ ತುಂಬ ಒಳ್ಳೆಯದಿತ್ತು. ಅಂತೆಯೇ ಇನ್ನೊಂದು ಮಹಾಸಮಸ್ಯೆಯಾದ ನಿರುದ್ಯೋಗ ಸಮಸ್ಯೆಯ ದೂರೀಕರಣಕ್ಕಾಗಿ, ಹೆಂಗಸರು ೨೦ ವರ್ಷಗಳಿಗೆ ಮೊದಲು ಗಂಡಸರು ೨೫ ವರ್ಷಗಳಿಗೆ ಮೊದಲು ಕೆಲಸಕ್ಕೆ ಸೇರಿಕೊಳ್ಳುವುದು ಕಾನೂನಿನಂತೆ ಬಾಹ್ಯ. ಹಾಗೆಯೇ ೪೫ ವರ್ಷಕ್ಕೇನೇ ಎಲ್ಲರೂ ನಿವೃತ್ತರಾಗಬೇಕು ಎಂದು ಕಾನೂನು ಮಾಡಿದರೆ, ಹೊಸಹೊಸ ಮುಖಗಳಿಗೆ ಉದ್ಯೋಗ ಲಭಿಸುವುದಿಲ್ಲವೆ? ಹೀಗೆ ಮಾಡಿದರೆ, ಯಾವಾಗಲೂ ಹಲವಾರು ಸ್ಥಾನಗಳು ತುಂಬದೇ ಉಳಿದಾವು. ಕಾನೂನು ಮಾಡುವುದು ಕಷ್ಟವಲ್ಲ; ಆದರೆ, ಅದನ್ನು ವ್ಯವಹಾರಕ್ಕೆ ತರುವುದು ಮಾತ್ರ ಸುಲಭವಲ್ಲ. "ಮದ್ಯಪಾನ ನಿರೋಧ"ದ ಒಂದು ಕಾನೂನನ್ನು ಮಾಡಿಯೇ ಅದನ್ನು ಬಿಗಿಗೊಳಿಸಲು ತ್ರಾಸ ಪಡುತ್ತಿರುವಾಗ, ಇಂತಹ ಕಾಯಿದೆಗಳನ್ನು ಮಾಡಿಯೇನು ಪ್ರಯೋಜನ? ಮನುಷ್ಯನು ನೈತಿಕವಾಗಿ ಉತ್ಥಾನಪಥವಡರಿದಾಗಲೇ ಇವುಗಳು ಕಾನೂನಿನ ಸಹಾಯವಿಲ್ಲದೇನೇ ಕಾರ್ಯಗತವಾಗುವುವು. 'ಜನನ ನಿಯಂತ್ರಣ'ವನ್ನು ಬಲಾತ್ಕಾರದಿಂದ ಹೇರಿದರೆ ಪರಿಣಾಮ ಅನರ್ಥಕಾರಿಯಾಗಬಹುದು; ಮನವೊಲಿಸಿಯೇ ಮಾಡಬೇಕೆಂದು ಸಾಧಿಸುವವರು ಈ ಕಾಲದಲ್ಲೂ ಇದ್ದಾರೆ; ಆದುದರಿಂದಲೇ ಮರುಳ ಅರಸನ ಕಾರುಭಾರು ಮುಂದುವರಿಯಲಿಲ್ಲ.

ಸಂಕ್ಷಿಪ್ತ ಸುದ್ದಿಗಳು

ಸಾಧುಗಳ ಕರ್ತವ್ಯ

ಗ್ರಾಮೀಣ ಪ್ರದೇಶದ ಸ್ಥಿತಿಗತಿ ಸುಧಾರಣೆ, ಲಂಚನಿರ್ಮೂಲನ ಮತ್ತು ಶೈಕ್ಷಣಿಕ ವಿಕಾಸ—ಈ ತ್ರಿವಿಧ ಕಾರ್ಯಕ್ರಮಗಳ ಹೊಣೆಯನ್ನು ಸಾಧುಗಳು ಹೊರಬೇಕೆಂದು ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು ಕರೆಯಿತ್ತರು. ನಮ್ಮ ದೇಶದಲ್ಲಿ ಅನಾದಿಯಿಂದಲೂ ಮಠಮಂದಿರಗಳು ವಿದ್ಯಾಪ್ರಸಾರಕ ಸಂಸ್ಥೆಗಳಾಗಿದ್ದುವು. ಜನತೆಯಲ್ಲಿ ಗೌರವವನ್ನು ಉಳಿಸಿಕೊಂಡು ಬಂದವರೆಂದರೆ, ಸಾಧುಗಳು ಮಾತ್ರ. ಹಳ್ಳಿಗಳಲ್ಲಿನ ಅಜ್ಞಜನರನ್ನು ಸರಿಯಾದ ಉಪದೇಶಗಳ ಮೂಲಕ ಎತ್ತರಿಸಬಲ್ಲ ಶಕ್ತಿ ಇರುವುದಾದರೆ, ಅದು ಸಾಧುಗಳಲ್ಲಿ ಮಾತ್ರ. ಈ ಕಾರಣದಿಂದಲೇ ದೇಶದಲ್ಲಿರುವ ಬೇರೆ ಬೇರೆ ಸಾಧುಸನ್ಯಾಸಿಗಳಿಂದಲೇ ಈ ಮೂರು ಕಾರ್ಯಗಳು ನಡೆಯುವುದು ಸಾಧ್ಯ. ಅಲ್ಲದೇ ಇವು ಕಾರ್ಯಗತವಾಗಬೇಕಾದರೆ, ಆಗ ಭಾರತದ ಸಂಪೂರ್ಣ ಚಿತ್ರವೇ ಬದಲಾಗುವುದು. ಆದುದರಿಂದ, ಭಾರತದ ಉದ್ಧಾರಕಾರ್ಯದಲ್ಲಿ ಸಾಧು-ಸನ್ಯಾಸಿಗಳು; ಮಠಸಂಸ್ಥಾನಗಳ ಹೊಣೆಗಾರಿಕೆ ಹೆಚ್ಚು—ಎಂದವರ ಅಭಿಪ್ರಾಯ.

ಘಟನಾತ್ಮಕ ಸರಕಾರ

ಪಾಕಿಸ್ತಾನದಲ್ಲಿ ಘಟನಾತ್ಮಕ ಸರಕಾರ ಸ್ಥಾಪನೆಯಾಗಬೇಕು ಎಂಬುದಾಗಿ ಕರಾಚಿಯ ವಕೀಲ ಸಂಘದ ಅಧ್ಯಕ್ಷ ಶ್ರೀ ಜೆ. ಎಚ್. ಲಾರಿಯವರು ಟೀಕಿಸಿದ್ದಾರೆ. ಸಂವಿಧಾನವಿಲ್ಲದ ದೇಶವೆಂದರೆ, ಹುಟ್ಟು ಇಲ್ಲದ ನೌಕೆಯಂತೆ. ಅದು ಎತ್ತ ಬೇಕಾದರೂ ಹೋಗಬಹುದು. ನಾವಿಕನು ಶಕ್ತಿಶಾಲಿಯಾಗಿರಬಹುದಾದರೂ ನಾವೆ ಮಾತ್ರ ಗಾಳಿ ಬಂದತ್ತ ಹಾರಿಹೋಗುವುದು. ನಿಜವಾದ ಪ್ರಾತಿನಿಧಿಕ ಸರಕಾರವು ಮಾತ್ರ ದೇಶಕ್ಕೆ ಸ್ಥೈರ್ಯವನ್ನು ತಂದುಕೊಡಬಲ್ಲುದು. ರಾಷ್ಟ್ರಕ್ಕೆ ಗೌರವವೂ ಇದರಿಂದ ದೊರೆಯುವುದು. ನಮ್ಮ ಭವ್ಯಭವಿತವ್ಯದ ಸಾಧನೆಗಾಗಿ ಪ್ರಾತಿನಿಧಿಕ ಸರಕಾರವು ಅಗತ್ಯವೆಂದು ಜನರಲ್ ಆಯೂಬಖಾನರೇ ಹೇಳಿರುವಾಗ, ಈಗ ಮಾತ್ರ ಅವರು ವಿಲಂಬಮಾಡುವುದೇಕೆ? ಎಂದವರು ಪ್ರಶ್ನಿಸಿದ್ದಾರೆ.

ಲಾಮಾ ಹಿಂತಿರುಗಿದರೆ...?

ಈಗ ಭಾರತದಲ್ಲಿ ವಿಶ್ರಾಂತಿ ಪಡೆದುಕೊಳ್ಳುತ್ತಿರುವ ಟಿಬೇಟದ ಪ್ರಧಾನ ಧರ್ಮಾಧಿಕಾರಿ ದಲಾಯ್ ಲಾಮಾ ಅವರು ಲಾಸಾಕ್ಕೆ ಮರಳಿದರೆ, ಅದರಿಂದ ಸಂಬಂಧಿಸಿದವರೆಲ್ಲರಿಗೂ ತುಂಬ ಕ್ಷೇಮ ಎಂದು ಪ್ರಧಾನಿ ನೆಹರೂ ಅಭಿಪ್ರಾಯಪಟ್ಟಿದ್ದಾರೆ. ನೇಪಾಳೀ ಪತ್ರಿಕಾ ಪ್ರತಿನಿಧಿಗಳೊಡನೆ ಮಾತಾಡುತಿದ್ದ ಅವರು ದಲಾಯ್ ಲಾಮಾರು ಎಲ್ಲಿ ಬೇಕಾದರೂ ಹೋಗಿ ವಾಸಿಸಲು ಸ್ವತಂತ್ರರಿದ್ದಾ

ಅಲ್ಲಲ್ಲಿಯ ಸುದ್ದಿಸಾರ

ಹಿರಿಯಡ್ಕದಲ್ಲಿ ಧರ್ಮ ಮತ್ತು ಸಾಹಿತ್ಯ ಸಮ್ಮೇಲನ—ಹಿರಿಯಡ್ಕ ಶ್ರೀ ವೀರಭದ್ರ ದೇವಾಲಯದಲ್ಲಿ ತಾ. 23-4-59 ರಂದು ಧ್ವಜಾರೋಹಣವಾಗಿ ವಾಡಿಕೆಯ ಉತ್ಸವಗಳೊಂದಿಗೆ ತಾ. 26-4-59ರಲ್ಲಿ ರಥೋತ್ಸವವು ವಿಜೃಂಭಣೆಯಿಂದ ಜರಗಿತು. ಈ ವರ್ಷ ವಿಶೇಷ ಕಾರ್ಯಕ್ರಮವಾಗಿ ಮೂರು ದಿನ "ಧರ್ಮ ಮತ್ತು ಸಾಹಿತ್ಯ ಸಮ್ಮೇಲನ" ನಡೆಯಿತು —

ತಾ. 24ರಲ್ಲು ಶ್ರೀ ಪೇಜಾವರ ಸೀತಾರಾಮ ಆಚಾರ್ಯರ ಅಧ್ಯಕ್ಷತೆಯಲ್ಲಿ ಸಮ್ಮೇಲನ ಆರಂಭವಾದೊಡನೆ ಮೆನೇಜಿಂಗ್ ಟ್ರಸ್ಟಿ ಶ್ರೀ ಎ. ಜಗಂಜೀವ ಆಳ್ವರು ಸ್ವಾಗತ ಭಾಷಣ ಮಾಡಿದರು. ಶ್ರೀ ಶೀರೂರು ಮಠಾಧೀಶರಾದ ಶ್ರೀ ಶ್ರೀ ಲಕ್ಷ್ಮೀಂದ್ರತೀರ್ಥ ಶ್ರೀಪಾದಂಗಳವರು ಉದ್ಘಾಟಿಸಿದ ನಂತರ, ಶ್ರೀ ಬನ್ನಂಜೆ ಅನಂತಕೃಷ್ಣ ಉಪಾಧ್ಯಾಯ ವಿದ್ವಾನ್, ನ್ಯಾಯ ಮತ್ತು ವೇದಾಂತ ಶಿರೋಮಣಿಯವರು "ಧರ್ಮ ಮತ್ತು ಜೀವನ" ವಿಚಾರವಾಗಿ ಭಾಷಣ ಮಾಡಿದರು. ಶ್ರೀ ಮಂಜುನಾಥ ಭಂಡಾರಿಯವರ ಕಾವ್ಯ ವಾಚನದ ತರುವಾಯ ಅಧ್ಯಕ್ಷರ ವಿಚಾರ ಪೂರಿತ ಭಾಷಣವಾಯಿತು.

ತಾ. 25ರಲ್ಲು ಶ್ರೀಪತಿ ಆಚಾರ್ಯ ಸಾಹಿತ್ಯ ಶಿರೋಮಣಿಯವರ ಅಧ್ಯಕ್ಷತೆಯಲ್ಲಿ ಸಭೆ ಆರಂಭವಾಯ್ತು. ಶ್ರೀ ಸೇವ ನಮಿರಾಜ ಮಲ್ಲ ಎಡ್ವೊಕೇಟ್, ಇವರು "ಸಾಹಿತ್ಯದ ಪೋಷಕರು" ಎಂಬ ವಿಷಯವಾಗಿಯೂ, ಶ್ರೀ ಕೆ ಗುರುರಾಜ ಭಟ್ಟ M. A. B. T. ಯವರು—"ಸಾಹಿತ್ಯ ಮತ್ತು ಜನ ಜೀವನ" ಎಂಬ ವಿಷಯವಾಗಿಯೂ ಭಾಷಣ ಮಾಡಿದರು—ಜನಾಬ್ ಬಿ. ಎಂ. ಇದಿನಬ್ಬ ಮಂಗಳೂರು ಇವರು ಆಧುನಿಕ ಕಾವ್ಯ ವಾಚನ ಮಾಡಿದರು. ಅಧ್ಯಕ್ಷರು ವಿಚಾರ ಪ್ರಚೋದಕ ಭಾಷಣವಿತ್ತರು.

ತಾ. 26ರಲ್ಲು ಶ್ರೀ ಶ್ರೀ ಆದಿದೇವಾನಂದಜೀಯವರ ಅಧ್ಯಕ್ಷತೆಯಲ್ಲಿ ಸಭಾರಂಭವಾಯಿತು—ಶ್ರೀ ಬನ್ನಂಜೆ ಗೋವಿಂದಾಚಾರ್ಯರು "ನವೀಕೃತ ಸಾಹಿತ್ಯ ಮತ್ತು ಧರ್ಮ" ಎಂಬ ವಿಚಾರವಾಗಿಯೂ ಶ್ರೀ ನರಸಿಂಹ ಆಚಾರ್ಯರು "ಭಕ್ತಿ ಮತ್ತು ಜೀವನ"ವೆಂಬ ವಿಚಾರವಾಗಿಯೂ ಉಪನ್ಯಾಸ ಮಾಡಿದರು-ಅಧ್ಯಕ್ಷರು ಉದ್ಬೋಧಕ ಭಾಷಣ ಮಾಡಿದ ನಂತರ ಕಾರ್ಯದರ್ಶಿಯವರು ಧನ್ಯವಾದ ಸಮರ್ಪಿಸಿದರು. ನೆರೆದ ಶ್ರೋತೃವೃಂದವು ದೇವಾಲಯಗಳಲ್ಲಿ ಪೂಜೋತ್ಸವಗಳೊಂದಿಗೆ ಧರ್ಮ ಮತ್ತು ಜ್ಞಾನ ಪ್ರಸಾರದ ಇಂತಹ ಕಾರ್ಯಕ್ರಮಗಳಿರುವುದು ಅಗತ್ಯವೆಂದೂ ಇದು ಪ್ರತಿ ವರ್ಷವೂ ಜರಗಿಸಲ್ಪಡಬೇಕೆಂದೂ ಆಶಿಸಿತು ಪ್ರತಿ ಒಂದು ದೇವಾಲಯದಲ್ಲೂ ಇಂಥಾ ಕಾರ್ಯಕ್ರಮಗಳು ನೆರವೇರುವಂತಾಗಲೆಂದು ಹಾರೈಸುತ್ತೇವೆ.

ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿ—ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆ, ಮದ್ರಾಸು ಇವರು ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿಯನ್ನು ಸಂಬದ್ಧ ಸಂಸ್ಥೆಯಾಗಿ ಪರಿಗಣಿಸಿದುವರಲ್ಲದೆ ಅದಕ್ಕೆ ಪರೀಕ್ಷಾ ವಿಭಾಗದ ಪ್ರಾತಿನಿಧಿತ್ವವನ್ನು ಸಹ ಕೊಟ್ಟಿರುವರು. ಇದರ ನಿಯಮದಂತೆ ಇನ್ನು ಮುಂದೆ ಉಡುಪಿ ಕೇಂದ್ರದಲ್ಲಿ ಕುಳಿತುಕೊಳ್ಳುವ ಎಲ್ಲ ಹಿಂದೀ ಪರೀಕ್ಷಾರ್ಥಿಗಳ ಆವೇದನ ಪತ್ರಗಳನ್ನು ನಿರ್ದಿಷ್ಟ ತಾರೀಕಿನ ಒಳಗೆ ನಿಶ್ಚಿತ ಶುಲ್ಕದೊಂದಿಗೆ ಉಡುಪಿ ಚಿತ್ತರಂಜನ ಭವನದಲ್ಲಿರುವ ಸಮಿತಿಯ ಕಾರ್ಯಾಲಯದಲ್ಲಿ ಕೇಂದ್ರದ ಪ್ರತಿನಿಧಿಯವರೊಡನೆ ಕಡ್ಡಾಯವಾಗಿ ಕೊಡಬೇಕಾದುದನ್ನು ಸಮಿತಿಯ ಗೌರವ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಉಡುಪಿಯಲ್ಲಿ ಮಲೇರಿಯ ನಿರೋಧ ಕೇಂದ್ರದ ಉದ್ಘಾಟನೆಯು

ಕಪ್ಪೆಟ್ಟು ಮಂಜುನಾಥ ಬಿಲ್ಡಿಂಗಿನಲ್ಲಿ ತಾ. ೨೯ರಂದು ಶ್ರೀಮತಿ ಆಶಾ ಕೆ. ಆರ್. ಕೆ. ಭಟ್ಟರಿಂದ ನೆರವೇರಿಸಲ್ಪಟ್ಟಿತು. ಉಡುಪಿ ಯೂನಿಟಿನ ಆಫೀಸರ್ ಶ್ರೀ ವಿ. ಬಿ. ಕೃಷ್ಣಾಚಾರ್ಯರು ಸ್ವಾಗತಿಸುತ್ತಾ ಮಲೇರಿಯಾ ನಿರ್ಮೂಲನದ ತಮ್ಮ ಉದ್ದೇಶವನ್ನು ವಿವರಿಸಿ ಇದಕ್ಕೆ ಸಾರ್ವಜನಿಕರು ನೆರವು ನೀಡಬೇಕೆಂದು ವಿನಂತಿಸಿಕೊಂಡರು. ಸಭಾಧ್ಯಕ್ಷತೆ ವಹಿಸಿದ್ದ ಡಾ| ವಿ. ಎಲ್. ಪಂಡಿತರು ಮಲೇರಿಯಾದ ಪೂರ್ವೇತಿಹಾಸವನ್ನೂ ಅದರ ನಿವಾರಣೋಪಾಯವನ್ನೂ ವಿವರಿಸಿದರು. ನಂತರ ವಿ. ಬಿ. ಕೃಷ್ಣಾಚಾರ್ಯರು ಧನ್ಯವಾದವಿತ್ತರು.

ಮಹಾಸಭೆ—ಉಡುಪಿಯ ಏನ್. ಜಿ. ಪ್ಲೋ ಅಸೋಸಿಯೇಶನಿನ ಮಹಾಸಭೆಯು ಅಸೋಸಿಯೇಶನಿನ ಅಧ್ಯಕ್ಷ ಶ್ರೀ ಕೆ. ಬಿ. ವೆಂಕಟಕೃಷ್ಣನವರ ಅಧ್ಯಕ್ಷತೆಯಲ್ಲಿ ತಾ ೨೫ರಂದು ಜರಗಿತು ಅಸೋಸಿಯೇಶನಿಗೆ ಸ್ವಂತ ಕಟ್ಟಡವಾಗಬೇಕೆಂಬ ಗೊತ್ತುವಳಿ ಸ್ವೀಕರಿಸಿದ ನಂತರ ಮುಂದಿನ ವರ್ಷಕ್ಕೆ, ಶ್ರೀ ಟಿ. ಸಿ. ಷೆಲ್‌ಮೊರ್ ಅಧ್ಯಕ್ಷ, ಶ್ರೀ ಕೆ. ಬಿ. ವೆಂಕಟಕೃಷ್ಣ ಉಪಾಧ್ಯಕ್ಷ, ಶ್ರೀ ಎಚ್. ಎಸ್. ಕೆದಲಾಯ ಕಾರ್ಯದರ್ಶಿ ಮತ್ತು ಖಜಾಂಚಿ, ಶ್ರೀ ಎಚ್. ನಾರಾಯಣ ಸಹಕಾರ್ಯದರ್ಶಿ ಮತ್ತು ಇನ್ನೂ ಹತ್ತು ಜನ ಸದಸ್ಯರಿರುವ ಆಫೀಸು ವರ್ಗವನ್ನು ಆರಿಸಲಾಯಿತು.

ಡಾ| ಪೈಯರಿಗೆ ಸತ್ಕಾರ:-ಉಡುಪಿಯ ಜನರಲ್ ಇನ್ವೆಸ್ಟ್‌ಮೆಂಟ್ ಕಮರ್ಶಿಯಲ್ ಕೋಪರೇಶನ್ ಮೊದಲಾದ ಸಂಸ್ಥೆಗಳ ಪರವಾಗಿ ಡಾ| ಮಾಧವ ಪೈಗಳನ್ನು ಅವರ ಜನ್ಮದಿನದಂದು ಅಭಿನಂದಿಸಲು ಹಾಗೂ ನಗರಾಧ್ಯಕ್ಷರಾಗಿ ಆಯ್ಕೆಯಾದ ಡಾ| ಕೆ. ಎಲ್. ಐತಾಳರನ್ನು ಗೌರವಿಸಲು ತಾ 30ರಂದು ಮುಕುಂದ ನಿವಾಸದಲ್ಲಿ ಡಾ| ಯು. ಮುಕುಂದ ರಾಮಪೈಗಳ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರ ಕೂಟವನ್ನೇರ್ಪಡಿಸಲಾಗಿತ್ತು. ಪ್ರಾರಂಭದಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರು ಅತಿಥಿಗಳನ್ನು ಸ್ವಾಗತಿಸಿದರು. ಹೊನ್ನಾವರದ ಹಿರಿಯ ವಕೀಲ್ ಶ್ರೀ ಎಚ್. ಎಲ್. ಪ್ರಭು ಮತ್ತು ನಗರ ಸಭಾಸದಸ್ಯ ಶ್ರೀ ಎ. ಜೆ. ಅಲ್ಸೆಯವರು ಮುಖ್ಯ ಅತಿಥಿಗಳಾಗಿ ಗುಣಕಥನ ಮಾಡಿ ಅವರಿಗೆ ಶುಭಾಶಯಗಳನ್ನು ಕೋರಿದ ನಂತರ ಶ್ರೀ ಟಿ. ರಮೇಶ ಪೈಗಳು ಸಂದೇಶವನ್ನು ಓದಿದರು.

ಡಾ| ಮಾಧವ ಪೈಗಳು ತಮ್ಮ ಉತ್ತರದಲ್ಲಿ ಉಡುಪಿಯ ಕೀರ್ತಿಗೆ ಇಲ್ಲಿರುವ ಮಹಾಸಂಸ್ಥೆಗಳು ಹಾಗೂ ವಿದ್ಯಾಸಂಸ್ಥೆಗಳೇ ಕಾರಣವೆಂದು ವಿವರಿಸಿದರು. ಡಾ| ಐತಾಳರು ತಮ್ಮ ಉತ್ತರದಲ್ಲಿ ತನ್ನ ಪಾಲಿನ ಪ್ರಾಮಾಣಿಕ ಸೇವೆಯ ಆಶ್ವಾಸನೆಯನ್ನು ನೀಡಿದರು. ಅಧ್ಯಕ್ಷ ಸ್ಥಾನದಿಂದ ಡಾ| ಸುಂದರರಾಮಪೈಗಳು ಮಾತನಾಡುತ್ತ ಡಾ| ಮಾಧವ ಪೈಗಳ ಹಾಗೂ ಡಾ| ಐತಾಳರ ಆದರ್ಶಗುಣಗಳನ್ನು ವರ್ಣಿಸಿದರು. ಕೊನೆಯಲ್ಲಿ ಶ್ರೀ ಟಿ. ರಮೇಶಪೈಗಳಿಂದ ಧನ್ಯವಾದವಾಯಿತು.

ಮೂಡುಬಿದ್ರೆ ಪಂಚ್ಯಾತ್ ಮತ್ತು ಸಮಾಜಮಂದಿರದ ವಿದ್ಯುದ್ದೀಪಗಳ ಉದ್ಘಾಟನೆಯು ಜಿಲ್ಲಾಧಿಕಾರಿ ಶ್ರೀ ವೈ. ಸಿ. ಹೊಂಬಾಳಯ್ಯನವರಿಂದ ನೆರವೇರಿತು. ಶ್ರೀ ಟಿ. ಎ. ಪೈಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಮುನಿರಾಜ ಅಜ್ರಿಯವರಿಂದ ಸ್ವಾಗತವಾದ ನಂತರ ಶ್ರೀ ಹೊಂಬಾಳಯ್ಯನವರು ಸಮಯೋಚಿತ ಭಾಷಣವಿತ್ತರು. ಶ್ರೀ ಟಿ. ಎ. ಪೈಯವರು ಭಾಷಣ ಮಾಡುತ್ತಾ ವಿದ್ಯುತ್ತಿನ ಉಪಯೋಗದಿಂದ ಹೆಚ್ಚು ಬೆಳೆ ಬೆಳೆಸುವಂತಾಗಲೆಂದು ಹೇಳಿದರು. ಕೊನೆಯಲ್ಲಿ ಶ್ರೀ ಜಿ. ವಿ. ಪೈಯವರು ಧನ್ಯವಾದವಿತ್ತರು.

ವಿಜಯಾ ಬ್ಯಾಂಕಿನ ಮೂರು ಹೊಸ ಶಾಖೆಗಳು—ಕೊಳ್ಳೆಗಾಲ ಶಾಖೆಯ ಪ್ರಾರಂಭೋತ್ಸವವು ವಿಧಾನ ಪರಿಷತ್ತಿನ ಸದಸ್ಯ ಶ್ರೀ ಬಿ. ಚಿಕ್ಕಣ್ಣ ಸ್ವಾಮಿಯವರಿಂದ ತಾ. 27-4-59ರಂದು ನೆರವೇರಿತು ವಿಧಾನ ಸಭಾಸದಸ್ಯ ಶ್ರೀ ಜಿ. ವೆಂಕಟೇ ಗೌಡರು ಅಧ್ಯಕ್ಷತೆ ವಹಿಸಿದ್ದರು. ಬ್ಯಾಂಕಿನ ಚೇರ್‌ಮನ್ ಶ್ರೀ ಕೆ. ಸುಂದರರಾಮ ಶೆಟ್ಟರಿಂದ ಸ್ವಾಗತವಾದ ನಂತರ ಶ್ರೀ ಚಿಕ್ಕಣ್ಣ ಸ್ವಾಮಿಯವರು, ಇಲ್ಲಿನ ರೇಶ್ಮೆ ಕೈಗಾರಿಕೆಯವರಿಗೆ ಬ್ಯಾಂಕು ಹೆಚ್ಚಿನ ಪ್ರಯೋಜನಕಾರಿಯಾಗಲೆಂದು ಹಾರೈಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬ್ಯಾಂಕಿನ ಬಗ್ಗೆ ಮೆಚ್ಚುಗೆ ಸೂಚಿಸಿದರು. ಬ್ಯಾಂಕಿನ ಕಾರ್ಯದರ್ಶಿ ಶ್ರೀ ಸಿ. ಜಯರಾಮ ಶೆಟ್ಟರು ಧನ್ಯವಾದವಿತ್ತರು.

ಚಾಮರಾಜ ನಗರ ಶಾಖೆಯ ಆರಂಭೋತ್ಸವವು ತಾ 26-4-59ರಲ್ಲಿ ಅಲ್ಲಿನ ಪುರಸಭಾಧ್ಯಕ್ಷ ಜನಾಬ್ ಅನ್ವಾರ್ ಖಾಷಾರವರಿಂದ ನೆರವೇರಿತು. ಶ್ರೀ ಬಿ. ಎಸ್. ವೆಂಕಟನಾಗಪ್ಪ ಸೆಟ್ಟರು ಅಧ್ಯಕ್ಷತೆ ವಹಿಸಿದ್ದರು. ಬ್ಯಾಂಕಿನ ಚೇರ್ಮನ್ ಶ್ರೀ ಕೆ ಸುಂದರರಾಮ ಶೆಟ್ಟರಿಂದ ಸ್ವಾಗತವಾದನಂತರ ಸಮಯೋಚಿತ ಭಾಷಣಗಳಾದುವು. ಕಾರ್ಯದರ್ಶಿ ಶ್ರೀ ಜಯರಾಮ ಶೆಟ್ಟರಿಂದ ಧನ್ಯವಾದವಾಯಿತು.

ನಂಜನಗೂಡು ಶಾಖೆಯು ತಾ 25-4-59 ರಲ್ಲಿ ಎಡ್ವಕೇಟ್ ಶ್ರೀ ಎನ್. ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯ ಮಾಜಿ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರಿಂದ ಉದ್ಘಾಟಿಸಲ್ಪಟ್ಟಿತು.

ಕಾರವಾರ—ಬಂದರಿನ ಪ್ರಶ್ನೆಯನ್ನು ರಾಷ್ಟ್ರೀಯ ನೌಕಾ ಮಂಡಳದಲ್ಲಿ ತಾವು ಖಂಡಿತವಾಗಿಯೂ ಎತ್ತುವುದಾಗಿಯೂ ಅದು ತೃತೀಯ ಯೋಜನೆಯಲ್ಲಿ ಈಡೇರಬಹುದೆಂದೂ ಮಂಡಲದ ಸದಸ್ಯರೂ, 'ಕೆನರಾವೆಲ್‌ಫೇರ್ ಟ್ರಸ್ಟಿ'ನ ಅಧ್ಯಕ್ಷರೂ ಆದ ಶ್ರೀ ದಿನಕರ ದೇಸಾಯಿಯವರು ಒಂದು ಪತ್ರಿಕಾ ಸಂದರ್ಶನದಲ್ಲಿ ನುಡಿದಿರುವರು.

ಅಂಕೋಲಾದ ಎಸ್. ಟಿ. ಬಸ್ ಸ್ಟೇಂಡಿನಲ್ಲಿ ಇತ್ತೀಚೆಗೆ, ಅಬಕಾರಿ ಇನ್‌ಸ್ಪೆಕ್ಟರ್ ಶ್ರೀ ಎಸ್. ಬಿ. ಕುಲಕರ್ಣಿಯವರು ೫೬ ತೊಲ ಕಳ್ಳ ಸಾಗಾಟದ ಬಂಗಾರವನ್ನು ವಶಪಡಿಸಿಕೊಂಡಿರುವರು. ಅಪಾದಿತರು ಬಂಧಿಸಲ್ಪಟ್ಟಿದ್ದು, ಮುಂದಿನ ತನಿಖೆ ನಡೆಯುತ್ತಿದೆ.

ಮಂಗಳೂರಿನ ನಗರಸಭೆಯವರು ಕಳೆದ ತಾ ೨೯ರಂದು ಇಲ್ಲಿಯ ಹೊಸ ಬಿಶೋಪರಾದ ರ್ಯಾ. ರೆ. ಡಾ| ಆರ್. ಡಿಮೆಲ್ಲೊ ಮತ್ತು ಮೈಸೂರಿನ ಸಹಾಯಕ ಬಿಶೋಪರಾದ ರ್ಯಾ. ರೆ. ಡಾ| ಎ. ವಿ. ಡಿಸೋಜರವರಿಗೆ ಮಾನಪತ್ರಗಳನ್ನರ್ಪಿಸಿದರು. ರ್ಯಾ. ರೆ. ಡಾ| ಆರ್. ಡಿಮೆಲ್ಲೊರವರು ಮಾನಪತ್ರಕ್ಕೆ ಉತ್ತರಿಸುತ್ತಾ ಸಾಮಾಜಿಕ ಕ್ಷೇತ್ರದಲ್ಲಿ ಪ್ರತಿಯೊಬ್ಬರೂ ತಮ್ಮ ಜಾತಿಮತಗಳನ್ನು ಗಣಿಸದೆ ಪರಸ್ಪರ ಸಹಕಾರದಿಂದ ದುಡಿಯಬೇಕೆಂದರು. ನಂತರ ರ್ಯಾ. ರೆ. ಡಾ| ಎ. ವಿ. ಡಿಸೋಜರು ತಮಗಿತ್ತ ಮಾನಪತ್ರಕ್ಕೆ ಉತ್ತರಿಸುತ್ತಾ ಮಂಗಳೂರಿನ ನಗರಸಭೆಯ ಹಲವು ಉತ್ತಮ ಕಾರ್ಯಗಳನ್ನು ಪ್ರಶಂಸಿಸಿದರು.

ಸಹಕಾರಿಗಳ ಸಭೆ—ಮಂಗಳೂರಿನ ಕೊ-ಒಪರೇಟಿವ್ ಯೂನಿಯನಿಗೊಳಪಟ್ಟ ಸಹಕಾರಿ ಸಂಘಗಳ ಪ್ರತಿನಿಧಿಗಳ ಸಭೆಯೊಂದು ಕಳೆದ ತಾ ೨೭ರಂದು ಎಸ್. ಕೆ. ಸಿ. ಸಿ. ಬೇಂಕಿನ ಸಭಾಭವನದಲ್ಲಿ ಶ್ರೀ ಎಂ. ರಾಮಕೃಷ್ಣರವರ ಹಿರಿತನದಲ್ಲಿ ಜರಗಿತು. ಶ್ರೀ ಮೊಳಹಳ್ಳಿ ಶಿವರಾಯರು ಭಾಷಣಮಾಡುತ್ತಾ ರೈತರಿಗೆ ಆಗತ್ಯವಾದ ಭತ್ತಗೊಬ್ಬರಗಳನ್ನು ಸಾಲರೂಪವಾಗಿ ನೀಡಿ, ನಂತರ ಆ ಸಾಲವನ್ನು ಭತ್ತದ ರೂಪದಲ್ಲೇ ಹಿಂದಕ್ಕೆ ಪಡೆಯಬಹುದೆಂದರು. ತರುವಾಯ ಶ್ರೀ ಕೆ. ವಿಶ್ವನಾಥ ಕಾಮತರು ಧನ್ಯವಾದವಿತ್ತರು.

ಬಂಟರಯಾನೆ ನಾಡವರ ಸಂಘ. ಇದರ ಮಹಾ ಸಭೆಯು ಇದೇ ತಾ. 11ಕ್ಕೆ ಶ್ರೀ ಜಗಜ್ಜೀವನದಾಸ ಶೆಟ್ಟಿ ಎಂ. ಎಲ್. ಎ ರವರ ಅಧ್ಯಕ್ಷತೆಯಲ್ಲಿಯೂ, ಸುವರ್ಣೋತ್ಸವದ ಮಹಾ ಸಭೆಯು ತಾ 12ರಲ್ಲಿ ಜಸ್ಟೀಸ್ ಕೆ. ಯಸ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿಯೂ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಲಿರುವುವು ಎರಡೂ ದಿನ ಸಂಜೆ ಮನರಂಜನೆಯ ಕಾರ್ಯಕ್ರಮಗಳೂ ಇವೆ.

ಲ್ಯಾಬ್ರೇರಿಯನ್‌ಗಳ ವಿಚಾರಗೋಷ್ಠಿ:—ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಆಥಾರಿಟಿಯ ಆಶ್ರಯದಲ್ಲಿ ವಿಜಯಾ ಬ್ಯಾಂಕ್ ಬಿಲ್ಡಿಂಗಿನಲ್ಲಿ ಜರಗಿದ ಲ್ಯಾಬ್ರೇರಿಯನ್‌ಗಳ ವಿಚಾರಗೋಷ್ಠಿಯೊಂದು ಶ್ರೀ ಎ. ಬಿ. ಶೆಟ್ಟರಿಂದ ಉದ್ಘಾಟಿಸಲ್ಪಟ್ಟಿತು. ಪ್ರಾರಂಭದಲ್ಲಿ ಶ್ರೀ ಕೆ. ಜಿ. ಶಾನುಭಾಗ್‌ರವರಿಂದ ಸ್ವಾಗತವಾದನಂತರ ಶ್ರೀ ಎಂ. ಎಸ್. ಏಕಾಂಬರ ರಾಯರು ಜಿಲ್ಲೆಯಲ್ಲಿ ಲೈಬ್ರೆರಿ ಚಳುವಳಿ ಸಾಧಿಸಿದ ಪ್ರಗತಿಯನ್ನು ವಿವರಿಸಿದರು. ನಂತರ ಶ್ರೀ ಎ. ಬಿ. ಶೆಟ್ಟರು ಮಾತನಾಡುತ್ತಾ ವಿದ್ಯಾವಂತರು ಪುಸ್ತಕಗಳನ್ನು ಅವಿದ್ಯಾವಂತರಿಗೆ ಓದಿಹೇಳಿ ಅವರ ಅಜ್ಞಾನವನ್ನು ಹೋಗಲಾಡಿಸಬಹುದೆಂದು ಹೇಳಿದರು. ಕೊನೆಯಲ್ಲಿ ಶ್ರೀ ಕೆ. ಜಿ. ಶಾನುಭಾಗ್‌ರವರು ಧನ್ಯವಾದವಿತ್ತರು.

ಮಧ್ಯವರ್ತಿ ಬಂದರ ಅಭಿವೃದ್ಧಿ ಸಮಿತಿಯವರ ದ. ಕ. ಜಿಲ್ಲೆಯ ಸಂಚಾರ—ಕೇಂದ್ರ ಸರ್ಕಾರದ ಅಭಿವೃದ್ಧಿ ಸಲಹೆಗಾರರೂ ಸಾರಿಗೆ ಖಾತೆಯ ಜತೆ ಕಾರ್ಯದರ್ಶಿಯವರೂ ಆದ ಶ್ರೀ ಎಚ್. ಸಿ. ಮಾತ್ರಾನಿಯವರ ನೇತೃತ್ವದಲ್ಲಿ, ಕೇಂದ್ರ ಸರ್ಕಾರವು ರಚಿಸಿದ ೧೪ ಮಂದಿಯ ಮಧ್ಯವರ್ತಿ ಬಂದರ ಅಭಿವೃದ್ಧಿ ಸಮಿತಿಯವರು ತಾ. ೨ರಂದು ಮಂಗಳೂರನ್ನೂ ತಾ. ೩ರಂದು ಮಲ್ಪೆಯನ್ನೂ ಸಂದರ್ಶಿಸಿ, ಪರಿಶೀಲನೆ ಮಾಡಿ ಹಿಂದಿರುಗಿದರು.

ಸುರತ್ಕಲ್. ಮುಕ್ಕ ಮಿತ್ರ ಪಟ್ಟಣ ಗಂಗಯ ಸ್ಮಾರಕ ಫಂಡಿನ ವಾರ್ಷಿಕೋತ್ಸವವು ತಾ. ೩ರಂದು ಶ್ರೀ ಬಿ. ಕೆ. ಮೊಕಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು.

ಪಡುಕಳತ್ತೂರು—ಜೂನಿಯರ್ ಎಲಿಮೆಂಟರಿ ಶಾಲೆಯಲ್ಲಿ ತಾ ೪ರಂದು ಕಳತ್ತೂರು ಗ್ರಾಮಾಧಿಕಾರಿಗಳಾದ ಶ್ರೀ. ಕೆ. ನಾರಾಯಣ ಸೆಟ್ಟರ ಅಧ್ಯಕ್ಷತೆಯಲ್ಲಿ ಸರಕಾರದವರು ಹುಡುಗಿಯರ ವಿದ್ಯಾಭ್ಯಾಸದ ಪ್ರೋತ್ಸಾಹಕ್ಕಾಗಿ ಇತ್ತ ಉಚಿತ ಉಡುಗೆ ತೊಡಿಗೆಗಳನ್ನು ವಿತರಣೆಗೈಯ್ಯಲಾಯಿತು. ಶ್ರೀ ಕೆ. ಪಿ. ಯಮ್. ಐತಾಳರು ವಿಷಯ ನಿರೂಪಣೆ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸರಕಾರದ ಯೋಜನೆಯ ಉದ್ದೇಶವನ್ನು ವಿವರಿಸಿದರು. ಕೊನೆಗೆ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಶೇಷಪ್ಪಯ್ಯನವರು ಧನ್ಯವಾದವನ್ನಿತ್ತರು.

ಸರಿಯಾದ ಮಾರ್ಗ

ಮೈಸೂರು ಸರಕಾರವು ಮುಂದಿನ ವರ್ಷದಿಂದ ಕನ್ನಡ ಗ್ರಂಥಕರ್ತರಿಂದ ಪುಸ್ತಕಗಳನ್ನು ಆಹ್ವಾನಿಸಿ ಅವುಗಳಲ್ಲಿ ಉತ್ತಮವೆಂದು ಕಂಡುಬಂದ ಗ್ರಂಥಗಳನ್ನು ಬಹುಮಾನಾರ್ಹವೆಂದು ಆರಿಸುವ ಪದ್ಧತಿಯು ಚೆನ್ನಾಗಿರುತ್ತದೆ ಎಂಬ ಅಭಿಪ್ರಾಯಕ್ಕೆ ಬಂದಿದೆ. ಸದ್ಯ, ಈ ವರ್ಷದ ಯೋಜನೆಯ ಬಗ್ಗೆ ಬಹುಮಾನಿತರಿಂದಲೂ ಉಳಿದವರಿಂದಲೂ ಬಂದ ಟೀಕೆಗಳಿಂದ ಮತ್ತು ಕಲಿತ ಪಾಠದಿಂದ ಈ ಹೊಸ ಪದ್ಧತಿಯನ್ನು ಅನುಸರಿಸುವುದು ಉಚಿತವೆಂದು ಮನಗಂಡಿರುವುದು.

ಶಾಸನ ಸಭಾಸದಸ್ಯಗೃಹ

ತಿರುವನಂತಪುರದಲ್ಲಿ ಶಾಸನಸಭಾ ಸದಸ್ಯರಿಗೆ ಹೊಸತಾಗಿ ಕಟ್ಟಿಸಿದ ವಸತಿ ಗೃಹವನ್ನು ವಿಧಾನಸಭಾಧ್ಯಕ್ಷ ಶ್ರೀ ಆರ್. ಶಂಕರನಾರಾಯಣ ತಂಪಿ ಅವರು ಉದ್ಘಾಟಿಸಿದರು. ಈ ಹೊಸ ಗೃಹದಲ್ಲಿ ೫೨ ಕೋಣೆಗಳಿದ್ದು, ಒಂದು ವಾಚನಾಲಯವೂ, ವಿಶ್ರಾಂತಿಗೃಹವೂ ಮತ್ತೆರಡು ಸಭಾಗೃಹಗಳೂ ಇರುತ್ತವೆ. ಈ ಕಟ್ಟಡದ ವೆಚ್ಚ ಏಳು ಲಕ್ಷ ರೂಪಾಯಿಗಳು!

ರೆ; ಬೇಕಾದರೆ ಟಿಬೇಟಕ್ಕೂ ಹಿಂತಿರುಗಬಹುದು; ಇದರಿಂದ ಕ್ಷೇಮವಾಗುವುದು ಎಂದರು.

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳುಹಿಸಬೇಕು. ಸಂ. ನ.)

ನಮನ—(ಕವಿತಾ ಸಂಕಲನ) ಬರೆದವರು: ಶ್ರೀ ಅಂಬಿಕಾತನಯ ದತ್ತ. ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ. ಪುಟಗಳು: ೧೦೦ ಬೆಲೆ: ರೂ. ೧-೫೦

ಭಾರತದ ಸಾಹಿತ್ಯ ಅಕಾಡೆಮಿಯವರ ಬಹುಮಾನವನ್ನು ಪಡೆದ 'ಅರಳು ಮರಳು'ವೆಂಬ ಐದು ಕವಿತಾ ಸಂಕಲನ ಗುಚ್ಛದ ಪ್ರಕಟಣಾನಂತರ, ಬೇಂದ್ರೆಯವರ ಈ "ನಮನ"ವು ಬೆಳಕು ಕಂಡಿದ್ದು, ಇದೂ ಮೈಸೂರು ಸರಕಾರದ ಸಾಹಿತ್ಯ ಪಾರಿತೋಷಕವನ್ನು ಗಳಿಸಿದೆ. ಈ ಸಂಕಲನದಲ್ಲಿ ಹಿಂದೆಯೇ ಬರೆದು ಬೆಳಕು ಕಾಣದ ಮತ್ತು ಬೆಳಕುಕಂಡಿದ್ದರೂ ಯಾವುದೇ ಸಂಗ್ರಹದಲ್ಲಿ ಸೇರಿಕೊಂಡಿರದ, ಆಗಾಗ ಆಕಾಶವಾಣಿಯ ಮೂಲಕ ಬಿತ್ತರಗೊಂಡ ಮತ್ತು ಕೆಲವು ಹೊಚ್ಚ ಹೊಸತಾದ ಕವನಗಳು ಸಂಗ್ರಹದ ರೂಪದಲ್ಲಿ ರಸಿಕರಿಗೆ ರಸಾಯನವನ್ನೊದಗಿಸಿವೆ.

ಕವಿ ಹೃದಯ ಅನಾದಿಯಿಂದಲೂ ಅನಂತ ರೂಪಿಯಾಗಿ ಪ್ರವಹಿಸುತ್ತ ಬಂದಿದೆ. ಅದು ಕಂಡುದೇನು ಎಂದು ರಸಾಸ್ವಾದನ ಪ್ರಿಯ ರಸಿಕನಿಗಷ್ಟೆ ತಿಳಿದೀತು. ಕವಿ ವ್ಯಂಗ್ಯವಾಗಿ, ವಕ್ರವಾಗಿ, ಪರ್ಯಾಯವಾಗಿ, ಭಾವನಾಮಯವಾಗಿ ತನ್ನ ಮನೀಷೆಗಳನ್ನು ಪದಗಳ ಮೂಲಕ ನಿರೂಪಿಸುತ್ತಾನೆ. ಕುಶಲ ಮತಿ ರಸಿಕರು ಅವನ್ನು ಕಂಡುಕೊಂಡು ಆನಂದವಿಭೋರರಾಗುತ್ತಾರೆ.

ಬೇಂದ್ರೆಯವರ ಕವಿತೆಗಳಲ್ಲಿ ಇರುವ ತಮ್ಮದೇ ಆದ ಒಂದು ಮೆರಗು, ಮೋಡಿ, ಮತ್ತು ಬಿನ್ನಾಣಗಳು ಇಲ್ಲಿಯೂ ದೃಗ್ಗೋಚರವಾಗುತ್ತದೆ. ಈ ಸಂಕಲನದಲ್ಲಿ ವಿವಿಧ ರುಚಿಭೇದಗಳಿಗೆ ಸಂಬಂಧಪಟ್ಟ ಒಟ್ಟು ೫೦ ಕವನಗಳಿವೆ. ಪ್ರತಿಯೊಂದೂ ರಸ, ಭಾವ, ಅರ್ಥಯುಕ್ತವಾಗಿವೆ.

ಗ್ರಂಥಾಂತ್ಯದಲ್ಲಿ ಪುಸ್ತಕದಲ್ಲಿನ ಪದ್ಯಗಳ ಮೊದಲ ಚರಣಗಳ ಅಕಾರಾದಿ ಪಟ್ಟಿಯನ್ನು ಕೊಟ್ಟಿರುವುದಲ್ಲದೇ, ಅಂತರ್ಗತ ಕವಿತೆಗಳ ಸಂದರ್ಭವನ್ನೂ ಚುಟುಕಿನಲ್ಲಿ ಹೇಳಿರುವುದು ವಾಚಕರಿಗೆ ಉಪಯುಕ್ತವಿವೆ. ಈ ಕೃತಿಗೆ ಸರಕಾರವು ಬಹುಮಾನವನ್ನಿತ್ತು ಗೌರವಿಸಿದೆಯೆನ್ನುವಾಗ ಹೆಚ್ಚು ವಿಚಾರ ಅನಗತ್ಯ.

ನಮ್ಮ ಮನಸ್ಸು—ಬರೆದವರು: ಶ್ರೀಮತಿ ಕೆ. ವಾರಿಜಾ ಉಡುಪ. ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಪುಟಗಳು. ೪೩. ಬೆಲೆ: ರೂ. ೦-೬೦

ಭಾರತ ಸರಕಾರದ ವಿದ್ಯಾ ಇಲಾಖೆಯವರು ಏರ್ಪಡಿಸಿದ್ದ ಜನಪ್ರಿಯ ಸಾಹಿತ್ಯ ಪ್ರೋತ್ಸಾಹಕ ಯೋಜನೆಯಂತೆ ೧೯೫೮ ರ ಸ್ಪರ್ಧೆಯಲ್ಲಿ ಉತ್ತಮ ಕನ್ನಡ ಪುಸ್ತಕವೆಂಬು, ಅನಂತರ ಇದೇ ಯೋಜನೆಯಂತೆ ಭಾರತದ ಇತರ ಭಾಷೆಗಳ ಪುಸ್ತಕಗಳೊಡನೆ ನಡೆದ ಸ್ಪರ್ಧೆಯಲ್ಲಿ ಅತ್ಯುತ್ತಮವೆಂದು ಅಖಿಲ ಭಾರತ ಬಹುಮಾನವನ್ನು ಈ ಹೊತ್ತಗೆ ಗಳಿಸಿದೆ ಎನ್ನುವಾಗ ಇದರ ಮಹತ್ತಿಕೆಯನ್ನು ಅರಿತುಕೊಳ್ಳಬಹುದು.

ಮಾನವನು ಮಾನವನಾಗಿ ಬಾಳಬೇಕಾದರೆ, ಅವನ ಮನಸ್ಸು ಒಂದು ರೀತಿಯ ಸಮತೋಲದಲ್ಲಿರಬೇಕಾಗುತ್ತದೆ. ಎಂತಲೇ ನಮ್ಮ ಮನಸ್ಸಿನ ಬಗೆ ನಾವು ಆದೆಷ್ಟು ತಿಳಿದುಕೊಂಡರೂ ಸಾಲದು. ಮನುಷ್ಯನ ಮನಸ್ಸು ರೂಪಗೊಂಡಂತೆ ಮುಂದೆ ಆತನ ಜೀವನ ವಿಧಾನವೂ ರೂಪಧಾರಣೆ ಮಾಡುತ್ತದೆ. ಆದುದರಿಂದಲೇ ನಾವು ಮನಶ್ಶಾಸ್ತ್ರದತ್ತ ಗಮನ ಹರಿಸಬೇಕು. ಮನಶ್ಶಾಸ್ತ್ರವು ಪ್ರಾಚೀನ ಭಾರತದಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದಿದ್ದು, ಮುಂದೆ ಇತರ ಶಾಸ್ತ್ರಗಳಂತೆಯೇ ಅಧೋಗತಿ ಹೊಂದಿತ್ತು. ಆಗ, ಪಾಶ್ಚಾತ್ಯ ರಾಷ್ಟ್ರಗಳು ಉಳಿದ ವಿಷಯಗಳಂತೆಯೇ ಇದನ್ನೂ ಬೆಳೆಸಿಕೊಂಡು ಬಂದವು. ಇಂದಿಗೆ ನಮ್ಮ ಭಾರತೀಯ ಭಾಷೆಗಳಲ್ಲಿ ಇರುವ ಮನಶ್ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳು ತೀರ ಅಲ್ಪವೆನ್ನಬೇಕು. ಅಲ್ಲದೇ ಕನ್ನಡದಲ್ಲಿ ಇಲ್ಲವೇ ಇಲ್ಲ ಎನ್ನಬಹುದು. ಇಂತಹ ಪರಿಸ್ಥಿತಿಯಲ್ಲಿ ಶ್ರೀಮತಿ ಉಡುಪ ಅವರು "ನಮ್ಮ ಮನಸ್ಸ"ನ್ನು ಆಳವಾಗಿ ಅಭ್ಯಸಿಸಿ ಬರೆಸಿರುವುದು ಮುಂದಿನವರಿಗೆ ಮಾರ್ಗದರ್ಶನವಾಗಲೆಂದು ಹಾರೈಸುತ್ತೇವೆ.

ಈ ಪುಟ್ಟ ಪುಸ್ತಕದಲ್ಲಿ ನಮ್ಮ ಮನಸ್ಸಿನ ಬಗ್ಗೆ ನಾವೇಕೆ ತಿಳಿದುಕೊಳ್ಳಬೇಕು ಎಂಬುದನ್ನು ಮೊದಲಾಗಿ ಹೇಳಿ, ಮುಂದೆ ಮನಸ್ಸಿನ ರೂಪರೇಷೆಯನ್ನಿಡಲಾಗಿದೆ. ಅಲ್ಲದೇ ಮಕ್ಕಳು, ಹುಡುಗರು ಮತ್ತು ವಯಸ್ಕರು. ಇವರ ಮನಸ್ಸು ಯಾವರೀತಿಯಲ್ಲಿರುತ್ತದೆ? ಅಂತಹ ಮನಸ್ಸಿನಲ್ಲಿ ಕಳಂಕವನ್ನು ಎರೆಚದಂತೆ ಯಾವ ಕಾರ್ಯಕ್ರಮವನ್ನು ನಾವು ಕೈಗೊಳ್ಳಬೇಕು ಎಂದಿತ್ಯಾದಿ ವಿಷಯಗಳನ್ನು ಸುಲಭ ಬೋಧವಾಗಿ ವಿವರಿಸಲಾಗಿದೆ. ಕನ್ನಡಿಗರೆಲ್ಲರೂ ಈ ಪುಸ್ತಕದಿಂದ ಆವರವರ ಮನಸ್ಸಿನ ಸೂಕ್ಷ್ಮ ಪರಿಚಯವನ್ನು ಮಾಡಿಕೊಳ್ಳುವುದಲ್ಲದೇ ನಿಷ್ಕಲ್ಮಷ ಮನಸ್ಸಿನಿಂದ ಕೂಡಿ ನಿಶ್ಚಿಂತರಾಗಿ ಬಾಳುವಂತಾಗಲೆಂದು ಬಯಸುತ್ತೇವೆ.

ಪುಸ್ತಕಕ್ಕೆ ಉಪಯೋಗಿಸಿದ ದೊಡ್ಡ ಅಚ್ಚುಗಳು ಒಳಗಡೆಯ ಚಿತ್ರಗಳು ಹಾಗೂ ಸರಳ ಶೈಲಿಯೂ ಇದರ ಉಪಯುಕ್ತತೆಯನ್ನು ಮತ್ತಷ್ಟು ಹೆಚ್ಚಿಸಿದ್ದು, ಹೊಸತಾಗಿ ಅಕ್ಷರ ಕಲಿಯುವ ವಯಸ್ಕರಿಗೂ ಪ್ರಯೋಜನಕಾರಿಯಾಗಿ ಪರಿಣಮಿಸಿದೆಯೆನ್ನಬಹುದು.

ರಾಜಾಪುರ ಸಾರಸ್ವತ ಸಂಘ, ಮುಂಬಯಿ—

ರಾಜಾಪುರ ಸಾರಸ್ವತ ಸಮಾಜದಲ್ಲಿ ವಿದ್ಯೆ, ಸಹಕಾರ ಬುದ್ಧಿ ಮೊದಲಾದವುಗಳ ಪ್ರಚಾರಕ್ಕಾಗಿ ೧೯೫೦ನೆ ಇಸವಿಯಲ್ಲಿ ಮುಂಬಯಿಯಲ್ಲಿ ಹುಟ್ಟಿಕೊಂಡ ಈ ಸಂಘದ ಒಂಬತ್ತನೆ ವಾರ್ಷಿಕ ವರದಿಯನ್ನು ಸ್ವಾಗತಿಸುತ್ತೇವೆ. ವಾಚನಾಲಯ, ಸಹಕಾರಿ ಕ್ರೆಡಿಟ್ ಸೊಸಾಯಿಟಿಗಳನ್ನು ಸ್ಥಾಪಿಸಿ ತನ್ಮೂಲಕ ಮತ್ತು ವಿದ್ಯಾರ್ಥಿಗಳಿಗೆ ಸಹಾಯಧನ ನೀಡುವ ಮೂಲಕ ಸ್ವಸಮಾಜಕ್ಕೆ ಸೇವೆಯನ್ನು ಸಲ್ಲಿಸುತ್ತಿರುವ ಈ ಸಂಘವನ್ನು ಬೆಂಬಲಿಸುವುದು ಆ ಸಮಾಜದ ಬಂಧುಗಳ ಕರ್ತವ್ಯವಾಗಿದೆ.

ಗಂಗೆಯ ಸ್ಮಾರಕ ಫಂಡು, ಮುಂಬಯಿ—

ಈ ಫಂಡಿನ ೧೯೫೮ನೆ ವರ್ಷಕ್ಕೆ ಸಂಬಂಧಿಸಿದ ಹದಿನಾರನೆ ವಾರ್ಷಿಕ ವರದಿಯು ನಮ್ಮ ಕೈಸೇರಿದೆ. ರಾತ್ರಿ ಶಾಲೆಯ ಮೂಲಕ ಧರ್ಮಾರ್ಥ ವಿದ್ಯಾಪ್ರಚಾರ, ಗ್ರಾಮ ಜನರ ಹಿತಾರ್ಥ ಸಾರ್ವಜನಿಕ ವಾಚನಾಲಯ ಮತ್ತು ಭಗವದ್ಭಕ್ತಿಯ ಪ್ರೇರಕವಾಗಿ ಶ್ರೀ ರಾಮ ಭಜನಾ ಮಂಡಳಿ ಮೊದಲಾದ ಉದ್ದೇಶಗಳನ್ನಿಟ್ಟು ದುಡಿಯುವ ಸಂಘವು ಉತ್ಕರ್ಷ ಸಾಧಿಸುವಂತೆ ಮಾಡುವುದು ಅಗತ್ಯ. ಸಂಘದ ಧ್ಯೇಯಗಳು ಆದರ್ಶವಿದ್ದು ಇಂದಿನ ದಿನಗಳಿಗೆ ಅವಶ್ಯವಾದುವುಗಳಾಗಿವೆ. ಸಂಘವು ದಿನೇ ದಿನೇ ಬೆಳೆದುಬರುವುದೂ ಅದಕ್ಕಾಗಿ ಸಹಾಯ ನೀಡುವುದೂ ಪ್ರಯೋಜನಕರವಾಗಿದೆ.

— ಗೋರಾ

ಆತ್ಮವಿಶ್ವಾಸ

(೪ನೇ ಪುಟದಿಂದ)

ಬೇಕಾಯಿತು. ಆತ್ಮವಿಶ್ವಾಸ ರಾಜಕಾರಣಿಗಳಿಂದಲೇ ದೇಶದ ಮನುಷ್ಯರು ದೂರವಾಗಬಲ್ಲನೆಂಬುದು. ಇದರಿಂದ ತಿಳಿಯುತ್ತದೆ.

ಹಿಂದಿಯ ಸರ್ವಶ್ರೇಷ್ಠ ಕವಿ ಶ್ರೀ ನಿರಾಲರವರು ಮೊದಲೊಮ್ಮೆ ಒಂದು ಕವಿತೆಯನ್ನು ಬರೆದು ಸಂಪಾದಕರಿಗೆ ಕಳಿಸಿದಾಗ, ಅದು ಹಿಂದೆ ಮರಳಿಬಂತಂತೆ. ಆದರೆ ನಿರಾಲರು ಆತ್ಮವಿಶ್ವಾಸದಿಂದಲೇ ಲೇಖನಿಯನ್ನು ಹಿಡಿದು, ಈಗ ಸುಪ್ರಸಿದ್ಧ ಕವಿಯೆನಿಸಿದ್ದಾರೆ. ಹಾಗೆಯೇ ಗಟ್ಟಿ ದೇಹದವರಾಗಿದ್ದು ಈಗ ಲಕ್ಷಾಧಿಪತಿಯಾಗಿರುವ ಅಮೇರಿಕೆಯ ಶ್ರೀ ಕಾರ್ನೆಗಿಯವರ ಆತ್ಮವಿಶ್ವಾಸವೂ ರೋಮಾಂಚಕಾರಿಯೆನಿಸಿದೆ. ಕನ್ನಡದ ಕವಿಗಳೆಲ್ಲರೂ ಆರಂಭದಲ್ಲಿಯೇ ತಮ್ಮ ಪ್ರತಿಭೆಯನ್ನು, ಬೇರೆಯವರು ಕಾವ್ಯವನ್ನು ಹೊರಗೆಳೆದುಕೊಂಡಿದ್ದಾರೆ. ಇದು 'ಆತ್ಮ ಪ್ರಶಂಸೆ' ಎನ್ನುವವರು ಇರಬಹುದಾದರೂ ಅದು "ಆತ್ಮ ವಿಶ್ವಾಸ ಪ್ರಶಂಸೆ" ಎಂಬುದಾಗಿ ಹೇಳಬಹುದು.

ಆಂಗ್ಲ ಭಾಷೆಯ ಶ್ರೇಷ್ಠ ಕವಿ ಶೇಕ್ಸ್‌ಪಿಯರನು "ಜೀವನ ಯಾತ್ರೆಯೆಂಬುದು ನರಮಂಗಳದವರಿಗಾಗಿ ಮಾತ್ರ; ಹೇಡಿಗಳಿಗಲ್ಲ" ಎಂದಿದ್ದಾನೆ. ಹಾಗಿರುವಾಗ, ನಾವು ನಮ್ಮ ಆತ್ಮದ ಮೇಲೆ ವಿಶ್ವಾಸವಿಟ್ಟುಕೊಂಡು ಕಾರ್ಯಕ್ಷೇತ್ರಕ್ಕೆ ಕಾಲಿರಿಸಿದರೆ, ನಮ್ಮ ಅಭಿಲಾಷೆಗಳನ್ನು ಪೂರ್ಣವಾಡಿಕೊಳ್ಳುವುದು ಸಾಧ್ಯ. ಆದುದರಿಂದ "ಆತ್ಮ ವಿಶ್ವಾಸವೇ ಸಫಲಕಾರಿ"ವೆಂಬುದು ಚಿರಸತ್ಯವಲ್ಲವೇ?

—ಗೋರಾ.

ದಿ ವಿಜಯ ಬೇಂಕ್ ಲಿಮಿಟೆಡ್ ಪುತ್ತೂರು.

ಏಲಂ ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ: ಈ ಕೆಳಗೆ ಹೆಸರು ಕಾಣಿಸಿದ ಕಳುವಾರುಗಳು ಈ ಬೇಂಕಿನ ಚೇರ್ಕಿನಿಂದ ಚಿನ್ನಾಭರಣ ಅಡವಿನಲ್ಲಿ ಸಾಲಪಡಕೊಂಡು ದೀರ್ಘ ಕಾಲದಿಂದ ಅಸಲು ಬಡ್ಡಿಯನ್ನು ಬಾಕಿಮಾಡಿಕೊಂಡಿರುವುದರಿಂದಲೂ ಸದ್ರಿಯವರಿಗೆ ರಿಜಿಸ್ಟ್ರಿ ನಿರಿ ನೋಟೀಸು ಕೊಟ್ಟರೂ ಅಡವಿಟ್ಟ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದಲೂ ಸದ್ರಿ ನಗಗಳನ್ನು ತಾ 23—5—1959ನೇ ಶನಿವಾರ ಅಪರಾಹ್ನ ಘಂಟೆ 12—30ಕ್ಕೆ ಯಾ ತದನಂತರ ಬೇಂಕಿಗೆ ಯುಕ್ತಕಂಡ ದಿವಸ ಬೇಂಕಿನ ಆಫೀಸಿನಲ್ಲಿ ಬಹಿರಂಗ ಏಲಂ ಮಾಡಲ್ಪಡದೀತು, ತಿಳಿದಿರಲಿ.

ಲೋನು ನಂಬ್ರ	ಸಾಲಗಾರನ ವಿಳಾಸ	ಮೊಬಲಗು ರೂ. ನ.ಪೈ.
763/56	ಕೆ. ಮಮ್ಮದ್, ಹಾಜಿ ಉಮ್ಮರ್ ಬ್ಯಾರಿಗಳ ಮಗ ಕುರಿಂಗಭಂಡಸಾಲೆ ಮನೆ, ಕೊೖಲಗ್ರಾಮ, ಪೋಸ್ಟು, ಕೊೖಯಲ ಕೆಟಲ್ ಫಾರ್ಮ್, ದ. ಕ.	182 . 27
749/57	ಬಾವ ಬ್ಯಾರಿ, ಕುಂಞಾಲಿ ಬ್ಯಾರಿಗಳ ಮಗ, ಕುಕ್ಕಾಜೆ ಮನೆ ಪಡುಮನ್ನೂರು ಗ್ರಾಮ, ಪೋಸ್ಟು ನೆಟ್ಟಣಿಗೆ ಮುಡ್ನೂರು ದ. ಕ.	27 . 44
1193/57	ಶೇಸಪ್ಪ ಟೈಲರ್, ಪುತ್ತೂರು ಇಗರ್ಜಿ ಬಳಿ, ಪೋಸ್ಟು ಪುತ್ತೂರು, ದ. ಕ.	82 . 69
1255/57	ಕುಂಞ ಬ್ಯಾರಿ, ಅಬ್ರಾಮ್ ಬ್ಯಾರಿಗಳ ಮಗ, ಹಂಡೆಸಾಗು ಮನೆ, ಕೆದಂಬಾಡಿ ಗ್ರಾಮ, ಪೋಸ್ಟು, ಕೆದಂಬಾಡಿ	9 . 97
1338/57	ಎಮ್. ಶ್ರೀಪತಿ ರಾವ್, ಶಂಕರ ನಾರಾಯಣ ಬಲ್ಯಾಯರ ಮಗ, ಮೈನ್ ರೋಡ್ ಪುತ್ತೂರು, ಪೋಸ್ಟು ಪುತ್ತೂರು	19 . 62
1490/57	ಆಲಿ ಹಮ್ಮದ್ ಬ್ಯಾರಿ, ಹಾಜಿ ಬ್ಯಾರಿಗಳ ಮಗ, ಪರ್ಲಡ್ಕ ಮನೆ, ಆರ್ಯಾಪು ಗ್ರಾಮ, ಪೋಸ್ಟು ಆರ್ಯಾಪು, ದ. ಕ.	16 . 97
1592/57	ಶ್ಯಾನುಭಾಗ ಎಸ್. ಎಲ್. ಪಾರ್ತಿವೇಶ್ವರ ಶರ್ಮ, ಚಾರ್ಮಾಡಿ ತರ್ಪು, ಪೋಸ್ಟು ನೆರಿಯಾ ದ. ಕ.	127 . 70
1724/57	ಮಮ್ಮದೆ ಬ್ಯಾರಿ, ಅಬ್ಬುಬಕ್ಕರ್ ಬ್ಯಾರಿಗಳ ಮಗ, ಕಾಯರ್ ಮೊಗರು ಕಂಪ ಮನೆ, ನರಿಮೊಗರು ಗ್ರಾಮ, ಪೋಸ್ಟು ನರಿಮೊಗರು, ದ. ಕ.	47 . 79
1875/57	ಬಿ. ಶಂಕರನಾರಾಯಣ ಒಕ್ಕನ್ನಾಯ, ಬಿ. ಸುಬ್ರಾಯ ಒಕ್ಕನ್ನಾಯರ ಮಗ, ಬೊಳಿಂಬಲ ಮನೆ, ಪಾಣಾಜೆ ಗ್ರಾಮ, ಪೋಸ್ಟು ಪಾಣಾಜೆ ದ. ಕ.	198 . 33
1876/57	—do—	85 . 60
1894/57	ಕಿಟ್ಟಣ್ಣ ರೈ, ಕೊರಗಪ್ಪ ರೈಗಳ ಅಳಿಯ, ಮಡಲ ಮನೆ, ಮುಡ್ನೂರು ಗ್ರಾಮ, ಪೋಸ್ಟು ಕಾವು ದ. ಕ.	139 . 39
1897/57	ಮಹಾಬಲ ಐತಾಳ, ಪರಮೇಶ್ವರ ಐತಾಳರ ಮಗ, ಕೊತ್ತಳಿಗೆ ಮನೆ, ಕೋಡಿಂಬಾಡಿ ಗ್ರಾಮ, ಪೋಸ್ಟು ಪುತ್ತೂರು	44 . 67
1898/57	—do—	61 . 45
1929/57	ಹೂವಪ್ಪ ಆಚಾರಿ, ಅಣ್ಣಪ್ಪ ಆಚಾರಿಗಳ ಮಗ, ಕೋರ್ಟು ರಸ್ತೆ ಪುತ್ತೂರು, ಪೋಸ್ಟು ಪುತ್ತೂರು.	35 . 23
1968/57	ದೂಜ ಸೋಜ, ಗಾಬ್ರು ಸೋಜರ ಮಗ, ಪದವು ಮನೆ, ಬಲ್ನಾಡು ಗ್ರಾಮ, ಪೋಸ್ಟು ಬಲ್ನಾಡು, ದ. ಕ.	147 . 39
46/58	ದೇರಣ್ಣ ರೈ, ತಿಮ್ಮಪ್ಪ ರೈಗಳ ಅಳಿಯ, ಕುರಿಯ ಮನೆ, ಚಾಲ್ನಾರು ಗ್ರಾಮ, ಪೋಸ್ಟು ಚಾಲ್ನೂರು	17 . 22
249/58	ಆದುಂಞ ಬ್ಯಾರಿ, ಮೊಯಿದು ಕುಂಞ ಬ್ಯಾರಿಗಳ ಮಗ, ಎಣ್ಣೆಗದ್ದೆ ಮನೆ, ಪಾಣಾಜೆ ಗ್ರಾಮ, ಪೋಸ್ಟು ಪಾಣಾಜೆ	215 . 62
352/58	ಎಮ್. ಜತ್ತಪ್ಪ ರೈ, ಎಮ್. ಶಾಂತಪ್ಪ ರೈಗಳ ಮೊಮ್ಮಗ ಮುಂಡಾಲ ಮನೆ, ಕೆದಂಬಾಡಿ ಗ್ರಾಮ, ಪೋಸ್ಟು, ಕೆದಂಬಾಡಿ	449 . 75
115/58	ಎನ್. ಕೃಷ್ಣಪ್ಪ ಪಕೀರ ಪೂಜಾರಿಗಳ ಅಳಿಯ, ಕರ್ನಡ್ಕ ಮನೆ, ಕೆಮ್ಮಿಂಜೆ ಗ್ರಾಮ, ಪೋಸ್ಟು ಆರ್ಯಾಪು	72 . 13
616/58	ಎನ್. ಶೇಸಪ್ಪ ರೈ, ರಾಮಣ್ಣ ರೈಗಳ ಅಳಿಯ ಕೊರುಂಬಡ್ಕ ಮನೆ, ಕೊಳ್ತಿಗೆ ಗ್ರಾಮ, ಪೋಸ್ಟು ಪೆರ್ಲಂಪಾಡಿ	43 . 26
631/58	ಎಮ್. ನಾರಾಯಣ, ತಿಮ್ಮಪ್ಪನ ಮಗ, ಕುರುತ್ತಲಾಜೆ ಮನೆ, ಕೊಕ್ಕಡ ಗ್ರಾಮ, ಪೋಸ್ಟು ಕೊಕ್ಕಡ	114 . 20

ಪುತ್ತೂರು, 1—5—1959.

K. Kochanna Rai.
Agent Puttur.

ಯೋಜನೆಗೆ ಹಣ

ಸಾಲ ಎತ್ತದೆಯೇ ಯೋಜನೆಗೆ ಹಣಪೂರೈಕೆಯಾಗಬಹುದು!

ಸರಕಾರವು ಮಾತ್ರ ಕೆಲವು ಸೂಚನೆಗಳತ್ತ ಗಮನ ಹರಿಸಬೇಕು.

ಭಾರತದ ಪ್ರತಿಯೊಬ್ಬ ಉದ್ಯೋಗಿ ನಾಗರಿಕನೂ ತನ್ನ ಪ್ರತಿ ಹತ್ತು ದಿನಗಳ ಸಂಪಾದನೆಯಲ್ಲಿ ಒಂದು ದಿನದ ಸಂಪಾದನೆಯನ್ನು ಸರ್ಕಾರಕ್ಕೆ ಒಪ್ಪಿಸಿಬಿಡುತ್ತಾನೆ. ಪ್ರತಿ ತಿಂಗಳ ಆದಿ ಭಾಗದ ತರುವಾಯ ಪ್ರತಿ ಎಂಟು ದಿನಗಳ ಪೈಕಿ ಐದರಿಂದ ಏಳು ದಿನಗಳ ದುಡಿಮೆಯನ್ನು, ಸರ್ಕಾರಕ್ಕೆ ಹಣ ಒಪ್ಪಿಸಲೆಂದೇ, ನಿರ್ವಹಿಸುವ ಸ್ತ್ರೀಪುರುಷರೂ ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ತಿಂಗಳಿಗೆ ಮೂರು ಲಕ್ಷ ರೂ.ಗಳ ನಿವ್ವಳ ಆದಾಯ ಬರುತ್ತದೆ ಎಂದಿಟ್ಟುಕೊಂಡರೆ ಎಲ್ಲಾ ತೆರಿಗೆಗಳನ್ನು ಕೊಟ್ಟು ಕೊನೆಗೆ ಅವರಿಗೆ ಉಳಿಯುವ ಆದಾಯ ೭೫,೦೦೦ ರೂ.ಗಳು ಮಾತ್ರ. ಈ ಆದಾಯದ ಮನುಷ್ಯ ತಾನು ಸಂಪಾದನೆಗಾಗಿ ದುಡಿಯುವ ನಾಲ್ಕು ದಿನಗಳ ಪೈಕಿ ಮೂರು ದಿನಗಳ ಸಂಪಾದನೆಯನ್ನು ಸರ್ಕಾರಕ್ಕೆ ಒಪ್ಪಿಸುತ್ತಾನೆ. ಹೀಗಾಗಿ ಅವನಿಗೆ ಮತ್ತು ಅವನ ಮಡದಿ ಮಕ್ಕಳಿಗೆ ಕೊನೆಗೆ ಕೈಗುಳಿಯುವುದು ನಾಲ್ಕು ದಿನಗಳಿಗೆ ಒಂದು ದಿನದ ಸಂಪಾದನೆ ಮಾತ್ರ! ಸಮಾಜವಾದಿ ಸಮಾಜ ವ್ಯವಸ್ಥೆಯ ಸ್ಥಾಪನೆ ದೃಷ್ಟಿಯಿಂದ ಈ ಪ್ರಶ್ನೆಯನ್ನು ನಾವು ನೋಡಬೇಕಾಗುತ್ತದೆಯಲ್ಲದೆ ಅದೇ ಒಂದು ಆಧಾರದ ಮೇಲೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಆಯವ್ಯಯದ ಅಂದಾಜನ್ನು ರೂಪಿಸಬೇಕಾಗುತ್ತದೆ.

ಒಂದು ಮಹತ್ವದ ವರ್ಷ

ಕಳೆದ ಎರಡು ವರ್ಷಗಳ ಅನುಭವದಿಂದ ಹೇಳುವುದಾದರೆ ೧೯೫೯-೬೦ನೆಯ ವರ್ಷ ಹಲವು ದೃಷ್ಟಿಯಿಂದ ಒಂದು ಮಹತ್ವದ ವರ್ಷವಾಗುತ್ತದೆ.

ಪ್ರಥಮ ಪಂಚವಾರ್ಷಿಕ ಯೋಜನೆಯ ಮೊದಲನೆ ನಾಲ್ಕು ವರ್ಷ ಜನತೆ ಎಷ್ಟು ಉಳಿಸಲು ಸಾಧ್ಯವಿತ್ತೋ ಅಷ್ಟನ್ನೂ ಯೋಜನೆಯ ವೆಚ್ಚಕ್ಕೆ ಉಪಯೋಗಿಸಿಕೊಳ್ಳಲಾಯಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಮೊದಲನೆಯ ಮೂರು ವರ್ಷಗಳಲ್ಲಿ ಉಳಿಸಲು ಹಣದ ರೂಪದಲ್ಲಿ ಏನು ದ್ರವ್ಯವಿತ್ತು ಅದೂ ಬಹುಮಟ್ಟಿಗೆ ವಿನಿಯೋಗವಾಗಿ ಹೋಗಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಹಣದ ಅಭಾವ ವಿಶೇಷವಾಗಿರುವುದು ಸ್ವಾಭಾವಿಕ. ಹೀಗಿರುವಾಗ ಕೊರತೆಯ ದ್ರವ್ಯ ವ್ಯವಸ್ಥೆಯನ್ನೇ ಮುಂದುವರಿಸಿಕೊಂಡು ಹೋಗುವುದರಿಂದ ಪದಾರ್ಥಗಳ ಬೆಲೆ ಮೇಲೆ ಅದು ಪರಿಣಾಮವಾಗದೆ ಇರದು. ನಾವು ಸ್ವಲ್ಪ ಮುಂಜಾಗರೂಕತೆ ತಪ್ಪಿದರೂ ಬೆಲೆಗಳಲ್ಲಿ ತುಂಬಾ ಏರುಪೇರುಗಳಾಗುವುವು.

ಕಳೆದ ಎರಡು ವರ್ಷಗಳಲ್ಲಿ ೭೭೬ ಕೋಟಿ ರೂ.ಗಳ ಕೊರತೆಯ ದ್ರವ್ಯ ವ್ಯವಸ್ಥೆ ಜಾರಿಗೆ ತಂದಿರುವುದರ ಪರಿಣಾಮವಾಗಿ ಬೆಲೆಗಳ ಪ್ರಮಾಣ ನೂರಕ್ಕೆ ೭-೩ರಷ್ಟು ಹೆಚ್ಚಿದೆ. ೧೯೫೯-೬೦ರಲ್ಲಿ ಇದೇ ಪ್ರಮಾಣದ ಅಥವಾ ಇದಕ್ಕೂ ಕಡಿಮೆ ಪ್ರಮಾಣದ ಕೊರತೆ ಬಜೆಟ್ ಬಗ್ಗೆ ನಾವು ಅಷ್ಟಾಗಿ ಕಾತರಗೊಳ್ಳಬೇಕಾಗಿಲ್ಲ. ಇದಕ್ಕೆ ಕಾರಣ ಇಷ್ಟೆ. ವಾಸ್ತವವಾಗಿ ನೋಡಿದರೆ ಕಳೆದ ಎರಡು ವರ್ಷಗಳಲ್ಲಿ ಕೊರತೆಯ ದ್ರವ್ಯ ಪೂರೈಕೆ ವ್ಯವಸ್ಥೆ ಇಲ್ಲವೆಂದೇ ಹೇಳಬಹುದು. ೫೭—೫೮ರಲ್ಲಿ ೪೯೮ ಕೋಟಿ ರೂಗಳ ಬಜೆಟ್ ಕೊರತೆಯನ್ನು ದ್ರವ್ಯಸ್ಥಿತಿಯಿಂದ ೨೯೪ ಕೋಟಿ ರೂಗಳನ್ನು ತುಂಬುವುದರ ಮೂಲಕವೂ ೧೫೩ ಕೋಟಿ ರೂಗಳನ್ನು ವಿದೇಶಿ ನೆರವಿನ ಮೂಲಕವೂ (ಇದರಲ್ಲಿ ಭಾರತದಲ್ಲಿ ತೊಡಗಿಸಿರುವ ಖಾಸಗಿ ಬಂಡವಾಳ ಸಹ ಸೇರಿದೆ) ಪಡೆಯುವುದರ ಮೂಲಕ ಪೂರೈಸಿಕೊಳ್ಳಲಾಗಿದೆ. ೧೯೫೮—೫೯ರಲ್ಲಿ ೨೭೮ ಕೋಟಿ ರೂಗಳ ಬಜೆಟ್ ಕೊರತೆಯನ್ನು ವಿದೇಶಿ ನೆರವಿನ ಮೂಲಕವೇ ಬಹುಮಟ್ಟಿಗೆ ತುಂಬಿಕೊಳ್ಳಲಾಯಿತು. ದ್ರವ್ಯಸ್ಥಿತಿಯಿಂದ ಪೂರೈಸಿದುದು ೪೭ ಕೋಟಿ ರೂಗಳು ಮಾತ್ರ. ಕೃತಕ ವಿಧಾನಗಳ ಮೂಲಕ ಹಣದುಬ್ಬರಕ್ಕೆ ಅವಕಾಶ ಕೊಡಲಿಲ್ಲ. ಇದು ಗಮನಾರ್ಹ.

ಈ ವರ್ಷದಲ್ಲಿ ಯೋಜನೆಯ ವೆಚ್ಚ

ಈ ವರ್ಷ ಯೋಜನೆ ವೆಚ್ಚದ ಅಂದಾಜು ೧೧೭೧ ಕೋಟಿ ರೂಗಳು. ಈ ಪೈಕಿ ವಿದೇಶಿ ನೆರವಿನ ಮೂಲಕ ೩೩೭ ಕೋಟಿ ರೂಗಳು ಲಭ್ಯವಾಗುತ್ತವೆಯೆಂದಿಟ್ಟುಕೊಳ್ಳೋಣ. ಕಳೆದ ಎರಡು ಮೂರು ವರ್ಷಗಳಲ್ಲಿ ಸಾಧ್ಯವಾಗಿರುವ ಉಳಿತಾಯದ ಅಂದಾಜಿನಂತೆಯೇ ಈಸಲವೂ ೪೮೪ ಕೋಟಿ ರೂಗಳಷ್ಟು ಹಣ ಉಳಿಯುತ್ತದೆಯೆಂದು ಇಟ್ಟುಕೊಂಡರೂ ೩೫೦ ಕೋಟಿ ರೂಗಳಷ್ಟು ಕೊರತೆ ಬೀಳುತ್ತದೆ. ಇದನ್ನು ತುಂಬಲು ಸಾಲ ಎತ್ತುವುದು ಎಂದಾದರೆ ಅದರಿಂದ ನಮ್ಮ ಆರ್ಥಿಕ ವ್ಯವಸ್ಥೆ ಮೇಲೆ ದುಷ್ಪರಿಣಾಮಗಳೇ ಆಗುತ್ತವೆ. ಸಾಲ ಎತ್ತುವುದರ ಪರಿಣಾಮವಾಗಿ ೧೯೫೯—೬೦ರ ಬಜೆಟ್ ಸಮಾಜವಾದಕ್ಕೆ ಹೆಚ್ಚು ವ್ಯತಿರಿಕ್ತವಾಗುತ್ತದೆ. ಹಣದುಬ್ಬರ ಹೆಚ್ಚಿಸುವ ಯಾವುದೇ ಕ್ರಮ ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸಿಗೊಳಿಸುವುದಕ್ಕೆ ಸಹಕಾರಿಯಲ್ಲ. ಕಾರಣ ಇಷ್ಟೆ. ಹಣದುಬ್ಬರ ಹೆಚ್ಚಿದ ಹಾಗೆಲ್ಲ ನಮ್ಮ ಆರ್ಥಿಕ ವ್ಯವಸ್ಥೆಯ ಆಧಾರ ಸ್ತಂಭಗಳಂತಿರುವ ಕೆಲವು ವರ್ಗಗಳ ಆದಾಯ ತಾನೇ ತಾನಾಗ ಹೆಚ್ಚುತ್ತದೆ. ಸಾಮಾನುಗಳ ಬೆಲೆ ಹೆಚ್ಚುವುದರಿಂದ ವ್ಯಾಪಾರಿಗಳಿಗೂ ಕಾರ್ಖಾನೆ ಮಾಲೀಕರಿಗೂ ಹೆಚ್ಚಿನ ಆದಾಯ ಬರುತ್ತದೆ. ಇದನ್ನು ತೆರುವವರಾರೆಂದರೆ ಮಧ್ಯಮ ವರ್ಗದವರು, ಕಾರ್ಮಿಕರು ಮತ್ತು ಬಡವರು. ಹಣದುಬ್ಬರದ ಮೊದಲನೆ ಪರಿಣಾಮ ಬೆಲೆಗಳ ಏರಿಕೆ. ಇದಕ್ಕೆ ತಕ್ಕಂತೆ ನಿರ್ದಿಷ್ಟ ಆದಾಯದವರ, ಮಧ್ಯಮ ವರ್ಗದವರ ಮತ್ತು ಬಡಬಗ್ಗರ ಆದಾಯ ಮಾತ್ರ ಹೆಚ್ಚುವುದಿಲ್ಲ. ಬದಲಿಗೆ ಅವರ ಜೀವನ ಹೆಚ್ಚು ದುಸ್ತರವಾಗುತ್ತದೆ.

ಹಣದುಬ್ಬರದ ಸಮಸ್ಯೆ

ರಾಷ್ಟ್ರೀಯ ಉತ್ಪನ್ನ ಪ್ರಮಾಣಕ್ಕೆ ಹೊಂದಿಕೊಂಡು ಅದಕ್ಕನುಗುಣವಾಗಿ ಹಣದುಬ್ಬರ ಹೆಚ್ಚು ಕಡಿಮೆ ಆಗುತ್ತಿದ್ದರೆ ಸರಿಯಾದೀತು. ಹಾಗಿಲ್ಲದೆ ಹಣದ ಉಬ್ಬರವಷ್ಟೇ ಪ್ರಧಾನವಾದರೆ ಮತ್ತು ದುಷ್ಪರಿಣಾಮಗಳನ್ನು ತಡೆಗಟ್ಟುವಂತಹ ಸಮರ್ಥ ಆರ್ಥಿಕ ನೀತಿಗೆ ಅವಕಾಶವಿಲ್ಲದಿದ್ದರೆ ನಾಡಿನ ಆರ್ಥಿಕ ಉನ್ನತಿ ಸಾಧ್ಯವಾಗದೆ ಹೋಗುತ್ತದೆ.

ನಮಗಿರುವುದು ಎರಡೇ ದಾರಿ, ಜನರನ್ನು ಹೆಚ್ಚು ಹೆಚ್ಚು ಮಿತವ್ಯಯಿಗಳನ್ನಾಗಿ ಮಾಡಿ ಉಳಿತಾಯದ ಉತ್ತಮ ಚಟವನ್ನು ಅವರು ಬೆಳೆಸಿಕೊಳ್ಳುವಂತೆ ಮಾಡುವುದು ಒಂದು ದಾರಿ, ಇಲ್ಲ, ವಿದೇಶಿ ಸಹಾಯಕ್ಕೆ ಹೆಚ್ಚು ಹೆಚ್ಚು ಕೈಯೊಡ್ಡುವುದು. ವಿದೇಶಿ ಸಹಾಯ ನಮಗೆ ಅಗತ್ಯವಿರುವಷ್ಟು ಸಿಗಲಿಲ್ಲವೆಂದರೆ ನಮ್ಮ ಬಜೆಟ ಅಂದಾಜು ಏರುಪೇರಾಗುತ್ತದೆ ಹೆಚ್ಚಿನ ಕಾರ್ಯ ಅಸಾಧ್ಯವಾಗದೆ ಹೋಗುತ್ತದೆ.

ವೆಚ್ಚ ಸರಿದೂಗಿಸುವ ಕ್ರಮಗಳು

ಕೆಲವು ಪ್ರಬಲ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಮಾತ್ರ ನಾವು ಯೋಜನೆಯ ವೆಚ್ಚವನ್ನು ಕಡಿಮೆ ಮಾಡಿಕೊಳ್ಳದೆ ಆರ್ಥಿಕ ಭದ್ರತೆ ಕಾಪಾಡಲು ಸಾಧ್ಯವಾದೀತು.

ಮೊತ್ತ ಮೊದಲನೆಯದಾಗಿ, ತೆರಿಗೆ ತಪ್ಪಿಸಿಕೊಳ್ಳುವ ದುಷ್ಟಚಟ ತಪ್ಪಿಸಲು ಉಗ್ರ ಕ್ರಮ ಕೈಗೊಳ್ಳಬೇಕು. ಈ ಕಾರ್ಯದಲ್ಲಿ ನಾವು ಸಫಲರಾದೆವೆಂದರೆ ಸದ್ಯದ ತೆರಿಗೆ ಪ್ರಮಾಣದಲ್ಲೇ ೨೦೦ರಿಂದ ೩೦೦ ಕೋಟಿ ರೂ. ಗಳ ತನಕ ನಾವು ಹೆಚ್ಚು ಹಣ ಒದಗಿಸಲು ಸಾಧ್ಯವಾಗುತ್ತದೆ. ವ್ಯಕ್ತಿಗಳ ಆದಾಯದ ಮೇಲೆ ಹಾಕುತ್ತಿರುವ ತೆರಿಗೆ ಪ್ರಮಾಣ ೧೯೫೧-೫೨ರಿಂದ ಸುಮಾರು ೧೪೫ ಕೋಟಿ ರೂ. ಗಳಷ್ಟಕ್ಕೇ ನಿಂತಿವೆ. ಈ ಮಧ್ಯೆ ರಾಷ್ಟ್ರೀಯ ಆದಾಯ ನೂರಕ್ಕೆ ೨೨ರಷ್ಟು ಹೆಚ್ಚಿದರೂ ಅದೇ ತೆರಿಗೆ ಪ್ರಮಾಣವಿದೆಯೆಂದರೆ ಎಷ್ಟೋ ಜನ ತೆರಿಗೆಗಳಿಂದ ಹಲವು ತಪ್ಪಿಸಿಕೊಳ್ಳುತ್ತಿದ್ದಾರೆ ಎಂಬುದು ಸ್ಪಷ್ಟ.

ಎರಡನೆಯದಾಗಿ ನಾವಿಂದು ಆಯಾತ ಲೈಸೆನ್ಸುಗಳನ್ನು ಮುಫತ್ತಾಗಿ ಒದಗಿಸುತ್ತಿದ್ದೇವೆ. ಈ ಲೈಸೆನ್ಸುಗಳನ್ನು ಎಷ್ಟು ಜನ ಅಧಿಕ ಲಾಭಕ್ಕೆ ಮಾರಿಕೊಳ್ಳುತ್ತಿಲ್ಲ? ಈ ಒಂದು ಬಾಬಿನಿಂದಲೇ ಅಂತಿಮ ಕೊರತೆಯನ್ನು ತುಂಬಿಕೊಳ್ಳಬಹುದೇನೋ!

ಮೂರನೆಯದಾಗಿ ರಕ್ಷಣಾ ಬಾಬಿನಲ್ಲಿ ವೆಚ್ಚವನ್ನು ನೂರಕ್ಕೆ ೧೦—೧೫ರಷ್ಟು ಕಡಿಮೆ ಮಾಡಿಕೊಂಡರೆ (ವೆಚ್ಚ ಅನವಶ್ಯವಾಗಿ ಹೆಚ್ಚು ಎಂಬುದು ಕೆಲವರ ಅಭಿಪ್ರಾಯ) ಆ ಮೂಲಕವೂ ೧೯೫೯-೬೦ರಲ್ಲಿ ೫೦ರಿಂದ ೬೮ ಕೋಟಿ ರೂ. ಗಳವರೆಗೆ ಉಳಿತಾಯ ಮಾಡಬಹುದು.

ನಾಲ್ಕನೆಯದಾಗಿ ರೂಪಾಯಿಯ ವಿನಿಮಯ ಮೌಲ್ಯವನ್ನು ಪುನರ್ವಿಮರ್ಶಿಸುವುದರ ಮೂಲಕ ನಿರ್ಯಾತದ ಮೇಲಿರುವ ತೆರಿಗೆಗಳನ್ನು ಕಡಿಮೆ ಮಾಡಬಹುದಲ್ಲದೆ ಕೆಲವು ಪದಾರ್ಥಗಳ ನಿರ್ಯಾತದ ಮೇಲೆ ತೆರಿಗೆಯನ್ನು ಹೆಚ್ಚಿಸಲೂಬಹುದು. ಇದರ ಪರಿಣಾಮವಾಗಿ ಆಯಾತ ತೆರಿಗೆಯಿಂದ ಬರುವ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು.

ಐದನೆಯದಾಗಿ, ಗಿರಣಿ ಮನೆಗಳ ನೌಕರರು ಮತ್ತು ರೈತರು ಹೆಚ್ಚು ಕಾಲ ದುಡಿದು ರಾಷ್ಟ್ರದ ಉತ್ಪನ್ನ ಪ್ರಮಾಣ ಹೆಚ್ಚುವಂತೆ ಮಾಡಲು ಪ್ರೇರೇಪಿಸಬಹುದು. ಹೆಚ್ಚಿನ ಉತ್ಪನ್ನ ಹೆಚ್ಚಿನ ಆದಾಯ ನೀಡುತ್ತವೆ. ಹೆಚ್ಚಿನ ಆದಾಯ ಸಾಧ್ಯವಾದರೆ ಹೆಚ್ಚಿನ ಉಳಿತಾಯ ಸಾಧ್ಯವಾಗುತ್ತದೆ. ಇದು ಸ್ವಾಭಾವಿಕ.

ಆರನೆಯದಾಗಿ, ಸರ್ಕಾರ ಚಿನ್ನವನ್ನು ಹೊರ ದೇಶಗಳಿಂದ ಆಯಾತ ಮಾಡಿಕೊಂಡು ಮಾರುವುದರ ಮೂಲಕ ಈಗಿನ ಬೆಲೆ ಪ್ರಮಾಣದಲ್ಲಿ ವರ್ಷಕ್ಕೆ ೧೮ರಿಂದ ೨೦ ಕೋಟಿ ರೂ. ಗಳಷ್ಟು ಪ್ರಮಾಣದ ಆದಾಯ ಒದಗಿಸಬಹುದು.

ಕೊನೆಯದಾಗಿ, ಸೋಮಾರಿ ಜನರಲ್ಲಿ ಒಂದಿಷ್ಟು ಉತ್ಸಾಹ ತುಂಬಿ ಅವರು ಶ್ರಮದಾನಕ್ಕೆ ಮುಂದೆ ಬರುವಂತೆ ಮಾಡುವುದರ ಮೂಲಕವೂ ರಜೆಯ ಸಮಯದಲ್ಲಿ ವಿದ್ಯಾರ್ಥಿಗಳು ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ಸಿದ್ಧರಾಗಿ ನಿಲ್ಲುವಂತೆ ಮಾಡುವುದರ ಮೂಲಕವೂ ರಾಷ್ಟ್ರದ ಉತ್ಪನ್ನ ಪ್ರಮಾಣವನ್ನು ಹೆಚ್ಚಿಸಬಹುದಾಗಿದೆ, ಹಣವನ್ನೂ ಉಳಿತಾಯ ಮಾಡಬಹುದಾಗಿದೆ.

ಸಹಕಾರಿ ಬೇಸಾಯದ ಸಮಸ್ಯೆಗಳು

ವ್ಯಾಪಾರ ವಹಿವಾಟುಗಳನ್ನು ಸರ್ಕಾರವೇ ವಹಿಸಿಕೊಂಡು ನಡೆಸುವುದರ ಮೂಲಕ ರಾಷ್ಟ್ರೀಯ ಉತ್ಪನ್ನ ಪ್ರಮಾಣ ಹೆಚ್ಚುವುದಿಲ್ಲ. ಇದರಿಂದ ಜನರಲ್ಲಿ ಉಳಿತಾಯದ ಮನೋಭಾವ ಸಹ ಬೆಳೆಯುವುದಿಲ್ಲ. ಹೆಚ್ಚೆಂದರೆ ಖಾಸಗಿ ಕ್ಷೇತ್ರದಲ್ಲಿ ಏನು ಉಳಿತಾಯ ಸಾಧ್ಯವಿತ್ತು ಅಷ್ಟು ಸರ್ಕಾರಕ್ಕೆ ದಕ್ಕಬಹುದು. ಸಹಕಾರಿ ಬೇಸಾಯ ಪದ್ಧತಿ ಬಗ್ಗೂ ಇದೇ ಮಾತು ಅನ್ವಯಿಸುತ್ತದೆ ಎಂದು ಹೇಳಬಹುದು. ಅದರಿಂದ ತುರ್ತಿನಲ್ಲಿ ಯಾವುದೇ ಫಲ ದೊರಕದು. ಕಾರಣ, ಸಣ್ಣ ಪುಟ್ಟ ಹಿಡುವಳಿಗಳನ್ನು ಕೂಡಿಸಿ ಅವುಗಳನ್ನು ಒಂದು ಮಾಡುವುದು, ಆ ಮೇಲೆ ಆಧುನಿಕ ಬೇಸಾಯ ವಿಧಾನಗಳನ್ನು ಅನುಸರಿಸಿ ಬೇಸಾಯ ಮಾಡಿಸುವುದು, ಇದಕ್ಕೆ ಬೇಕಾಗುವ ಹಣಕಾಸಿನ ಸೌಲಭ್ಯ ಪೂರೈಸುವದು— ಇವೆಲ್ಲಾ ಅಷ್ಟು ಸುಲಭ ಸಾಧ್ಯವಾದ ಕೆಲಸಗಳಲ್ಲ. ಇವುಗಳು ಯಶಸ್ವಿಯಾಗಬೇಕಾದರೆ ಬಹಳ ಕಾಲ ಕಾಯಬೇಕಾಗುತ್ತದೆ.

—ಶ್ರೀ ಬಿ. ಆರ್. ಶೆಟ್ಟಿ.

('ಯೋಜನಾ'ದ ಕೃಪೆಯಿಂದ)

ಶ್ರೀ ಎಸ್. ಎಸ್. ಕಲ್ಲೆಯವರ ಪ್ರಾಚೀನ ತುಳುನಾಡಿನ ೨ನೇ ಭಾಗ

"ಹೆಗಡೇರ ತುಳುನಾಡು"

ಈ ಗ್ರಂಥಕ್ಕೆ ಶ್ರೀ ಡಾ! ಎ. ಬಿ. ಸಾಲೆತ್ತೂರು M A; P. H D ಲಂಡನ್ ಇವರ ಮುನ್ನುಡಿಯೊಡನೆ ಪ್ರಕಟವಾಗುವ ೫ ಅಧ್ಯಾಯಗಳ ೩೦೦ ಪುಟಗಳಿಗೂ ಮಿಕ್ಕಿದ ೩೫ ವರ್ಷಗಳ ಸಂಶೋಧನೆಯ ಗ್ರಂಥ. ಇದರಲ್ಲಿ ಕ್ರಿಸ್ತಪೂರ್ವದಿಂದ ಕ್ರಿ. ಶ. ೧೫೦೦ರ ವರೆಗಿನ ತುಳು ಜನರ ಮತ್ತು ಕನ್ನಡ ನಾಡವರ ಇತಿಹಾಸವೂ ಅವರವರ ಜಾತಿ, ಕಟ್ಟುಕಟ್ಟಳೆ ರೀತಿ ರಿವಾಜುಗಳೂ ಅವುಗಳನ್ನು ಆಚರಿಸುವ ವಿಧಿ ವಿಧಾನಗಳೂ-ತುಳುನಾಡಿಗೆ ಬೇರೆ ಬೇರೆ ಕಡೆಗಳಿಂದ ಬಂದು ನೆಲಸಿದ ಬ್ರಾಹ್ಮಣರು ಕ್ಷತ್ರಿಯರು ವೈಶ್ಯರು ಇನ್ನಿತರರು ಬಂದ ಕಾರಣಗಳೂ ಮತ್ತು ಅವರು ತುಳುನಾಡಿನಲ್ಲಿ ಆರಾಧಿಸುವ ದೇವಸ್ಥಾನ ಮಾಡು ಬಸ್ತಿ ಗುಡಿಗೋಪುರಗಳೂ ಅವರ ಇತಿಹಾಸವೂ-ತುಳುನಾಡಿನ ಎಲ್ಲಾ ಜಾತಿಯವರ ಪರಂಪರೆಯನ್ನು ತಿಳಿಯಕೊಳ್ಳಬೇಕಾದರೆ ಈ ಗ್ರಂಥಕ್ಕೆ ಆರ್ಡರು ಮಾಡಿರಿ. ೧ನೇ ಆವೃತ್ತಿ ೫೦೦ ಪ್ರತಿಗಳು ಮಾತ್ರ ಪ್ರಕಟವಾಗುವುದರಿಂದ, ನಿಮ್ಮ ಪ್ರತಿಗಳನ್ನು ಕಾದಿರಿ. ಪುಸ್ತಕದ ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ.

ಅಮುಣಿಂಜೆ ಗುತ್ತು ಎನ್. ಎ. ಶೀನಪ್ಪ ಹೆಗಡೆ

ತುಳುನಾಡು, P. O. ಪೊಳಲಿ. ದ. ಕನ್ನಡ.

ಸೃಷ್ಟಿ ಸೌಂದರ್ಯ

ಪ್ರವಾಸಿಗರ ಸ್ವರ್ಗ- ಹವಾಯಿ ದ್ವೀಪಗಳು

ಕಳೆದ ಕೆಲ ಶತಮಾನಗಳಿಂದ ಬಹುಮುಖ ಪ್ರಗತಿಗಳಿಸಿದೆ!

ಕಳೆದ ಶತಮಾನದಲ್ಲಿ ಪುಷ್ಪೋದ್ಯಾನಗಳ ಮತ್ತು ಸುವರ್ಣ ರೇಖಿತ ಸಮುದ್ರ ದಂಡೆಗಳ ಬೀಡಾಗಿದ್ದ ಹವಾಯಿ ದ್ವೀಪಗಳನ್ನು ಇಂದು ಕೈಗಾರಿಕೆಗಳ ಮತ್ತು ಸಮುದ್ರ ಸಾಗಾಣಿಕೆಗಳ ನೆಲೆವೀಡನ್ನಾಗಿ ಪರಿವರ್ತಿಸಲಾಗಿದೆ. ಒಂದು ರೀತಿಯಲ್ಲಿ "ಶಾಂತ ಸಾಗರದ ಹಾದಿ ಕೇಂದ್ರ"ವೆಂಬ ಅದರ ಹೆಸರು ಸಾರ್ಥಕವೆನಿಸಿದೆ.

ಅಮೆರಿಕದ ಈ ಪ್ರದೇಶ ಸಂಸ್ಥಾನ ಸ್ಥಾನಕ್ಕೆ ಏರುತ್ತಿರುವಂತೆ, ಹೊಸ ಹೊಸ ನಿರ್ಮಾಣಗಳು ಏಳುತ್ತಿವೆ. ಕೈಗಾರಿಕೆಯ ಉತ್ಕರ್ಷ ಕಂಡುಬರುತ್ತಿದೆ. ಸಾಗರೋತ್ತರ ವ್ಯಾಪಾರ ವಿಸ್ತರಿಸುತ್ತಿದೆ. ಈ ದ್ವೀಪದ ಆದಾಯದಲ್ಲಿ ಮುಖ್ಯ ಭಾಗ ಪ್ರವಾಸಿಗರಿಂದ ಲಭಿಸುತ್ತಿದ್ದು, ನೇತ್ರಾನಂದಕರ ದೃಶ್ಯಾವಳಿಗಳಿಂದ ಅತ್ಯಂತ ಆಕರ್ಷಕವಾದ ಪ್ರದೇಶವಾಗಿದೆ. ಉಷ್ಣವಲಯದ ಸೌಂದರ್ಯದಿಂದಲೂ ಹಿತಕರವಾದ ವಾತಾವರಣದಿಂದಲೂ ಚಿತ್ತಾಪಹರಣಕ್ಕೆ ಒಳಗಾದ ಅನೇಕ ಮಂದಿ ವಿಹಾರಾರ್ಥಿಗಳು, ಹವಾಯಿ ದ್ವೀಪಗಳಲ್ಲೇ ಬೀಡು ಬಿಟ್ಟು, ಅದರ ಅರ್ಥವ್ಯವಸ್ಥೆಯ ವಿಸ್ತರಣದಲ್ಲಿ ಭಾಗವಹಿಸುತ್ತಿದ್ದಾರೆ.

ತಮ್ಮದೇ ನೃತ್ಯಗಳಿಂದಲೂ ಮೃದು ಸಂಗೀತದಿಂದಲೂ ಕೂಡಿದ ಸ್ನೇಹಪರ ಜನರ ನಿವಾಸವಾಗಿದ್ದು ಸಂಪರ್ಕ ದೂರವಾಗಿದ್ದ ಈ ದ್ವೀಪಗಳು, ಅನೇಕ ಮಾನವ ಕುಲಗಳು ಹಿತವಾಗಿ ಬೆರತು ಕೆಲಸ ಮಾಡುವ ಒಂದು ಪ್ರದೇಶವಾಗಿ ಹೇಗೆ ಪರಿವರ್ತಿತವಾಗಿದೆ ಎಂಬುದು ಸಮಾಜದ ಅಭಿವೃದ್ಧಿ ಹಾಗೂ ಪ್ರಪಂಚ ಭ್ರಾತೃತ್ವದ ಒಂದು ರೋಮಾಂಚಕ ಉದಾಹರಣೆಯಾಗಿದೆ.

ಪ್ರಪಂಚದ ಇನ್ನಾವ ಎಡೆಯಲ್ಲೂ ಇಷ್ಟೊಂದು ವಿವಿಧ ಕುಲಗಳವರು ಇಷ್ಟೊಂದು ಯಶಸ್ವಿಯಾಗಿ ಅಲ್ಪಾವಧಿಯಲ್ಲಿ ಬೆರೆತಿಲ್ಲ ಎಂಬುದು ಸಮಾಜ ವಿಜ್ಞಾನಿಗಳ ಅಭಿಪ್ರಾಯ.

ಹವಾಯಿಯ ಮೂಲನಿವಾಸಿಗಳು ಮಲಯಗಾರ ಪಾಲಿನೇಷಿಯನ್ನರ ಸಂತಾನ. ೧೭೭೮ರಲ್ಲಿ ಇಂಗ್ಲಿಷ್ ಪ್ರಪಂಚ ಶೋಧಕ ಕ್ಯಾಪ್ಟನ್ ಜೇಮ್ಸ್ ಕುಕ್ ಇಲ್ಲಿ ಇಳಿವುದಕ್ಕೆ ಶತ ಶತಮಾನ ಮುಂಚೆಯೇ ಇಲ್ಲಿಗೆ ಬಂದ ಜನ, ಇವರು. ಮೊದಮೊದಲಲ್ಲಿ ಪಾಲಿನೇಷಿಯದ ಮುಖ್ಯರು ಇಲ್ಲಿಯ ದೊಡ್ಡ ದ್ವೀಪಗಳಲ್ಲಿ ಸ್ವತಂತ್ರ ರಾಜ್ಯಗಳನ್ನು ಸ್ಥಾಪಿಸಿದರು. ಆನಂತರ ೧೭೯೫ರಲ್ಲಿ ಹವಾಯಿ ದ್ವೀಪದ ಕಾಮೇಹಮೇಹ ಎಂಬ ಯೋಧರಾಜನೊಬ್ಬ ತನ್ನ ಪರಮಾಧಿಕಾರದ ಪ್ರತಿಷ್ಠಾಪನೆಗಾಗಿ ಉಳಿದ ಬಹುಪಾಲು ದ್ವೀಪಗಳನ್ನು ಗೆದ್ದು, ರಾಜಪ್ರಭುತ್ವವನ್ನು ಸ್ಥಾಪಿಸಿದ.

೧೮೨೦ರಲ್ಲಿ ಕ್ರೈಸ್ತ ಪ್ರಚಾರಕರು ಇಲ್ಲಿಗೆ ಬಂದು ಅಮೆರಿಕದ ಸಂಯುಕ್ತ ಸಂಸ್ಥಾನಗಳ ಈಶಾನ್ಯದಲ್ಲಿ ತಾವು ಸ್ಥಾಪಿಸಿದ ನ್ಯೂ ಇಂಗ್ಲೆಂಡಿನ ಸಮಾಜ ವ್ಯವಸ್ಥೆಯಂತಹ ಸಾಂಸ್ಕೃತಿಕ ಜೀವನ ಮಾದರಿಯನ್ನೇ ಇಲ್ಲೂ ಸ್ಥಾಪಿಸಿದರು. ೧೮೩೫ರಲ್ಲಿ ದೊಡ್ಡ ಪ್ರಮಾಣದಲ್ಲಿ ಕಬ್ಬಿನ ವ್ಯವಸಾಯ ಆರಂಭವಾಯಿತು. ವ್ಯವಸಾಯದಲ್ಲಿ ದುಡಿಯಲು ಹೆಚ್ಚು ಹೆಚ್ಚಾಗಿ ಕೆಲಸಗಾರರು ಬೇಕಾಯಿತು. ಪೂರ್ವದ ಮತ್ತು ಪಶ್ಚಿಮದ ದೇಶಗಳಿಂದ ದೊಡ್ಡ ಪ್ರಮಾಣದಲ್ಲಿ ವಲಸೆಗಾರರು ಇಲ್ಲಿಗೆ ಆಕರ್ಷಿತರಾದರು. ಸುಸಂಘಟಿತವಾದ ಜನಸ್ತೋಮದ ರಚನೆಯಲ್ಲಿ ಅವರೆಲ್ಲ ಒಗ್ಗೂಡಿದರು. ಅವರ ಪ್ರಯತ್ನಗಳ ಫಲವಾಗಿ ತೋಟಗಳು ಬೆಳೆದವು. ತತ್ಫಲವಾಗಿ ಈಗ ಈ ದ್ವೀಪಗಳಲ್ಲಿ ವರ್ಷವೊಂದಕ್ಕೆ ದಶಲಕ್ಷಗಳ್ಳ ಹೆಚ್ಚು ಕಚ್ಚಾ ಸಕ್ಕರೆ ಉತ್ಪತ್ತಿಯಾಗುತ್ತಿದೆ.

ಹವಾಯಿಯ ಅರ್ಥ ವ್ಯವಸ್ಥೆಯಲ್ಲಿ ಮುಖ್ಯ ಸ್ಥಾನ ಪಡೆಯುವ ಅನಾನಸ್ ಕೈಗಾರಿಕೆ ಅನೇಕ ಮಂದಿ ವಲಸೆಗಾರರನ್ನು ಆಕರ್ಷಿಸಿತು. ಪ್ರಕೃತ ಪ್ರಪಂಚದ ಅನಾನಸ್ ಉತ್ಪತ್ತಿಯ ಮುಕ್ಕಾಲು ಭಾಗ ಇಲ್ಲಿಯದು. ೧೮೯೨ರಲ್ಲಿ ಮೊಟ್ಟ ಮೊದಲ ಬಾರಿಗೆ ಡಬ್ಬಿಗೆ ತುಂಬಿ ಮಾರುವ ಫಲವಾಗಿ ಅನಾನಸ್ ಗಿಡಗಳನ್ನು ಒಹಾವು ದ್ವೀಪಗಳಲ್ಲಿ ನೆಡಲಾಯಿತು. ಮೊಟ್ಟಮೊದಲು ಅನಾನಸ್ ತುಂಬಿದ ಡಬ್ಬಿ ಮೂರು ವರ್ಷಗಳ ನಂತರ ಸಿದ್ಧವಾಯಿತು.

೧೮೯೪ರಲ್ಲಿ ಸ್ಥಾಪಿತವಾದ ಹವಾಯಿ ಗಣರಾಜ್ಯದ ಕೋರಿಕೆಯಂತೆ ಈ ದ್ವೀಪಗಳನ್ನು ೧೮೯೮ರಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಳ್ಳಲಾಯಿತು. ಎರಡು ವರ್ಷಗಳ ನಂತರ ಈ ದ್ವೀಪಗಳು ಅಮೆರಿಕದ ಅಂಗಭಾಗವಾಗಿ ಮಾರ್ಪಟ್ಟು ಅವುಗಳ ಜನ ಸಂಯುಕ್ತ ಸಂಸ್ಥಾನಗಳ ಪ್ರಜೆಗಳಾದರು. ಸಾನ್ ಫ್ರಾನ್ಸಿಸ್ಕೊ ನಗರಕ್ಕೆ ೨೦೦೦ ನೌಕಾ ಮೈಲಿಗಳ ದೂರದಲ್ಲಿರುವ ಹವಾಯಿ ದ್ವೀಪಗಳು ಇತ್ತೀಚಿನ ವರ್ಷಗಳಲ್ಲಿ ವಿಮಾನ ಯಾನ ಬೆಳವಣಿಗೆಯ ಫಲವಾಗಿ ಅಮೆರಿಕದ ಮೂಲಭೂಮಿಗೆ ಹೆಚ್ಚು ಸಮೀಪವಾಗಿದೆ.

ತತ್ಫಲವಾಗಿ ಸಾಮಾನ್ಯವಾಗಿ ರಾಜಧಾನಿ ಹೊನೊಲುಲುವಿನಲ್ಲಿ ಜೀವನ ವಿಧಾನದ ಸಾಂಸ್ಕೃತಿಕ ಲಕ್ಷಣಗಳು ಬಹುಮಟ್ಟಿಗೆ ಅಮೆರಿಕದ ಇತರ ಅನೇಕ ನಗರಗಳನ್ನೇ ಹೋಲುತ್ತವೆ.

೧೯ನೇ ಶತಮಾನದ ಮಧ್ಯಭಾಗದಲ್ಲಿ ತೋಟಗಾರಿಕೆಯ ಯುಗ ಆರಂಭವಾದೊಡನೆಯೇ ಕಾರ್ಮಿಕರು ಬೇಕೆಂಬ ಕೇಳಿಕೆಗೆ ಉತ್ತರವಾಗಿ ಜಪಾನ್, ಫಿಲಿಪೈನ್ ದ್ವೀಪಸ್ತೋಮ, ಚೀಣ, ಪೋರ್ಚುಗಲ್, ಕೊರಿಯ, ಪೋರ್ಟೊರೀಕೋ, ಸ್ಪೈನ್ ಜರ್ಮನಿ, ಪೆಸಿಫಿಕ ದ್ವೀಪಗಳು ಮತ್ತು ರಷ್ಯಗಳಿಂದ ಜನರು ಬರತೊಡಗಿದರು. ಪ್ರಜಾಸತ್ತೆಯ ಪ್ರಭಾವವೂ ನಿಕಟ ಜೀವನವೂ ಕುಲಗಳ ಮತ್ತು ಮತಗಳ ಅಡ್ಡಗೋಡೆಗಳನ್ನು ನಿವಾರಿಸಿದರೂ, ಕೆಲವು ತಂಡಗಳು ತಮ್ಮ ಪೂರ್ವಜರಿಗೆ ಪ್ರಿಯವೆನಿಸಿದ್ದ ಅನೇಕ ಕಟ್ಟಳೆಗಳನ್ನೂ ಸಾಂಪ್ರದಾಯಿಕವಾದ ಆಚಾರಗಳನ್ನೂ ಉಳಿಸಿಕೊಂಡಿವೆ. ಹವಾಯಿಯ ಪ್ರತಿಯೊಂದು ಸಮಾಜದಲ್ಲೂ ಕ್ರೈಸ್ತ ಚರ್ಚುಗಳೂ ಬೌದ್ಧ ಮತ್ತು ಶಿಂಟೊ ದೇವಾಲಯಗಳು ಅಕ್ಕಪಕ್ಕಗಳಲ್ಲಿ ನಿಂತಿವೆ. ವರ್ಷಂ ಪ್ರತಿ ಜಪಾನೀಯ ಚೆರ್ರಿ ಬ್ಲಾಸಂ ಸಮಾರಂಭದಲ್ಲೂ, ಚೀಣಿಯರ ನಾರ್ಸಿಸಸ್ ಸಮಾರಂಭದಲ್ಲೂ ಎಲ್ಲಾ ಕುಲಗಳ ಸಹಸ್ರಾರು ಜನರು ಭಾಗವಹಿಸುತ್ತಾರೆ.

ನೌಕಾನೆಲೆ ಪರ್ಲ್ ಹಾರ್ಬರ್ ಮತ್ತು ಅನೇಕ ವೈಮಾನಿಕ ಕ್ಷೇತ್ರಗಳನ್ನು ಹೊಂದಿ ಶಾಂತ ಸಾಗರದಲ್ಲಿ ಅಮೆರಿಕದ ಪ್ರಮುಖ ರಕ್ಷಣಾನೆಲೆಯಾಗಿರುವ ಹವಾಯಿಯಲ್ಲಿ ಸೈನಿಕರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಪೆಸಫಿಕ್ ನೌಕಾ ಸಮುದಾಯದ ಆಡಳಿತದ ಮತ್ತು ಸರಬರಾಜಿನ ಮುಖ್ಯ ಕೇಂದ್ರ ಪರ್ಲ್ ಹಾರ್ಬರಿನಲ್ಲಿದೆ. ಪೆಸಫಿಕ್ ಸಾಗರವನ್ನು ದಾಟಿ ಹಾರುವ ವಿಮಾನಗಳು ಈ ದ್ವೀಪಗಳನ್ನು ನಿಲುಗಡೆಯ ಒಂದು ಸ್ಥಳವನ್ನಾಗಿ ಬಳಸಿಕೊಳ್ಳುತ್ತವೆ.

ಹವಾಯಿಯ ವ್ಯಾಪಾರ ಇಂದು ಉನ್ನತ ಮಟ್ಟದಲ್ಲಿ ಇರುವುದಕ್ಕೆ ತಜ್ಞರು ಅನೇಕ ಕಾರಣಗಳನ್ನು ಕೊಡುತ್ತಾರೆ. ಪೂರ್ವ ಪಶ್ಚಿಮಗಳನ್ನು ಸೇರಿಸುವ ಕೊಂಡಿಯಂತೆ ಈ ದ್ವೀಪಗಳು ಪೆಸಫಿಕ್ ಸಾಗರದ ಮಧ್ಯದಲ್ಲಿ ಇರುವುದರ ಜೊತೆಗೆ, ಇಲ್ಲಿಯ ಜನತೆಯ ಶ್ರಮ ಸಹಿಷ್ಣುತೆಯ ಗುಣಗಳೂ ಮತ್ತು ಅವರ ಕುಲ ವೈವಿಧ್ಯತೆಗಳು ಈ ಅಭಿವೃದ್ಧಿಗೆ ಬಹುಮಟ್ಟಿಗೆ ಕಾರಣವಾಗಿವೆ ಎಂದು ತಜ್ಞರು ನಂಬಿದ್ದಾರೆ.

ಮತ್ತೊಂದು ಕಾರಣ ವರ್ಷದುದ್ದಕ್ಕೂ ಇವರು ಹಿತಕರವಾದ ಸಮಶೀತೋಷ್ಣವಾದ ಹವಾಗುಣ, ತತ್ಪರಿಣಾಮವಾಗಿ ಹವಾಯಿ ವಾಸಕ್ಕೆ ಉತ್ತಮ ಪ್ರದೇಶವಾಗಿದೆಯಲ್ಲದೆ ಫಲವತ್ತಾದ ಪ್ರದೇಶವಾಗಿಗಿದೆ. ಬೇಸಿಗೆಯಲ್ಲೂ, ಚಳಿಗಾಲದಲ್ಲೂ ಅನಾನಸ್ ಮತ್ತು ಸಕ್ಕರೆಯ ತೋಟಗಳಲ್ಲಿ ಕೆಲಸ ನಡೆಯುತ್ತದೆ. ಸಮುದ್ರದಲ್ಲಿ ಮೀನು ಹಿಡಿಯುವುದಕ್ಕೆ ವರ್ಷವೆಲ್ಲ ಅನುಕೂಲವಿದೆ ಈ ದ್ವೀಪಗಳು ಸಾಗರದ ಮಧ್ಯ ಪ್ರದೇಶದಲ್ಲಿ ಇರುವುದರಿಂದ ವ್ಯಾಪಾರಕ್ಕೂ ಅನುಕೂಲವಿದೆ.

ವರ್ಷವೊಂದಕ್ಕೆ ಸಾವಿರ ಹಡಗುಗಳು ಹೊನಲೊಲು ಬಂದರನ್ನು ಮುಟ್ಟುತ್ತವೆ, ಇವು ದ್ವೀಪಗಳಿಗೆ ಬೇಕಾದ ಆಹಾರ ವಸ್ತುಗಳನ್ನು ಮತ್ತು ಇತರ ಸರಬರಾಜುಗಳನ್ನು ಹೊತ್ತು ತರುವ ಜೊತೆಗೆ, ಈ ದ್ವೀಪಗಳ ಉತ್ಪತ್ತಿಗಳನ್ನು ಕೊಂಡೊಯ್ಯುತ್ತವೆ. ಹವಾಯಿಯಲ್ಲಿ ವಿಮಾನ ಸಂಚಾರವೂ ಅಧಿಕ.

ಒಮ್ಮೆ ಅಮೂಲ್ಯವಾದ ಖನಿಜಗಳಾವುವೂ ಈ ದ್ವೀಪಗಳಲ್ಲಿ ಇಲ್ಲವೆಂದು ಭಾವಿಸಲಾಗಿತ್ತು. ಆದರೆ ಇತ್ತೀಚಿಗೆ ಟೈಟೇನಿಯಂ ಮತ್ತು ಬಾಕ್ಸೈಟ್‌ಗಳನ್ನು ಪತ್ತೆ ಮಾಡಲಾಗಿದೆ. ಸಿಲಿಕೇಟ್ ಹೆಚ್ಚಾಗಿರುವ ಲಾವಾಬೂದಿ ಮತ್ತು ಕಲ್ಲುಗಳಿಂದ ಮನೆಗಳನ್ನು ನಿರ್ಮಿಸಲಾಗುತ್ತದೆ. ಹವಾಯಿಯಲ್ಲಿ ಮರಮಟ್ಟುಗಳು ಯಥೇಚ್ಛ. ಉಷ್ಣವಲಯದ ಗಟ್ಟಿ ಮರಗಳೂ; ಯೂಕಲಿಪ್ಟಸ್, ರೆಡ ವುಡ್ ಇಂತಹ ಮೃದುವಾದ ಕಟ್ಟಡ ನಿರ್ಮಾಣದ ಮರಗಳೂ ದೊರಕುತ್ತವೆ.

ಅನೇಕ ವರ್ಷಗಳ ಪರ್ಯಂತರ ಚಟುವಟಿಕೆಗಳೆಲ್ಲ ಕೆಲವೇ ಕುಟುಂಬಗಳ ಕೈಯಲ್ಲಿದ್ದವು. ಅವರು ಈಗಲೂ, ವಿಶೇಷತಃ ಅನನಾಸ್ ಮತ್ತು ಸಕ್ಕರೆ ಉ

(೧೫ನೇ ಪುಟ ನೋಡಿರಿ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನಸಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಅತ್ಯುಪಯುಕ್ತವಾದ ಕೈಗನ್ನಡಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಒಂದೂವರೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಥಾ ವಿಹಾರ

(೨ನೇ ಪುಟದಿಂದ

ನಾಲಯದ ಉನ್ನತ ಗೋಪುರವು ಅವನ ಕಂಗಳಿಗೆ ತೋರುತ್ತಿದೆ. ದೇಗುಲದ ಮುಂಭಾಗದಲ್ಲಿ ಹಲವಾರು ಭಿಕ್ಷುಕರು ಹಗಲು ರಾತ್ರಿ "ಅಪ್ಪ ಅಮ್ಮ ಒಂದಾಣೆ ಕೊಡಿ" ಎನ್ನುತ್ತಾ ಬೇಡಿ ಹೊಟ್ಟೆ ಹೊರೆಕೊಳ್ಳುತ್ತಿದ್ದಾರೆ. ಆದರೆ ತನಗೆ..."ಬೇಡಿದರೂ ಹೊಟ್ಟೆಗೆ ನೀಡುವವರಿಲ್ಲ. ಕೈಕಾಲು ಸರಿಯಿದ್ದು ಸಭ್ಯ ನಾಗರಿಕನಂತಿರುವವನಿಗಾರು ಭಿಕ್ಷೆಯನ್ನು ನೀಡುವರು? "ದುಡಿದುಣ್ಣಪ್ಪಾ" ಎನ್ನುವರಲ್ಲವೇ! ಭಗವಂತನು ಇತರ ಭಿಕ್ಷುಕರಂತೆ ತನಗೂ ಅವಯವಗಳಲ್ಲಿ ಊನತೆಯನ್ನಾದರೂ ಕೊಡಬಾರದಾಗಿತ್ತೆ! ಎಂದು ಮುಂತಾಗಿ ಆಲೋಚಿಸುತ್ತಾ ಮುಂದೆ ಸಾಗಿದ. ಅವನ ಕಾಲುಗಳು ತನ್ನ ಕೆಲಸ ನಡೆಸಿದ್ದಂತೆ ಮಿದುಳು ನೂರಾರು ಯೋಚನೆಯ ತಾಕಲಾಟದಲ್ಲಿ ಓಡಾಡುತ್ತಿತ್ತು! ತಾನೆಲ್ಲಿ ನಡೆಯುತ್ತಿರುವೆನೆಂಬುದವನಿಗೆ ತಿಳಿಯದು. ಬನಾರಸದ ಪ್ರಮುಖ ರಸ್ತೆಯಲ್ಲಿ ಕಿಕ್ಕಿರಿದ ಜನಗಳ ಓಡಾಟ, ಕಾರು, ಮೋಟರು, ರಿಕ್ಷಾ, ಟಾಂಗಾಗಳೂ ಅತ್ತಿತ್ತ ಸಾಗುತ್ತಿದ್ದವು. ರಾವಲನಿಗೆ ಇದೊಂದೂ ಕಂಡೂ ಕಾಣದಂತೆನಿಸುತ್ತಿತ್ತು! ಮುಂದೆ ಮುಂದೆ ಸಾಗುತ್ತಿದ್ದ. ಮುಂದೆ ಬರುತ್ತಿರುವ ಕಾರೊಂದು ಅಡ್ಡ ಹಾಯ್ದಿತು! ಚೀತ್ಕಾರವು ಕೇಳಿ ಬಂತು—ರಾವಲನು ರಸ್ತೆಯ ಪಕ್ಕದ ಗಟಾರಿಯತ್ತ ಬಿದ್ದಿದ್ದ! ಕಾರು ನಿಂತಿತು. ಅದರಿಂದೊಬ್ಬ ವ್ಯಕ್ತಿ ತ್ವರಿತದಿಂದ ಹೊರ ಬಿದ್ದು ಬಂದ! ಈ ವ್ಯಕ್ತಿಯನ್ನು ಬನಾರಸದಲ್ಲಿ ಎಲ್ಲರೂ ಬಲ್ಲರು. ಅವರ ಹೆಸರು ವೃಜಸೇನಗುಪ್ತ. ಬನಾರಸದ ದೊಡ್ಡ ಧನಿಕರಲ್ಲೊಬ್ಬರಾಗಿದ್ದರು. ರಾವಲನ ಕಾಲಿಗೆ ಪೆಟ್ಟು ತಗಲಿ ಮೊದಲೇ ಮಾನಸಿಕ ಕ್ಲೇಶದಿಂದ ಬಳಲಿದ ಅವನು ಮೂರ್ಛೆ ಹೊಂದಿ ಬಿದ್ದಿದ್ದ. ವೃಜಸೇನಗುಪ್ತರು ರಾವಲನನ್ನು ತಮ್ಮ ಕಾರಿನಲ್ಲಿ ಕೂಡ್ರಿಸಿಕೊಂಡು "ವೆಲ್ಲೆಸ್ಲಿ ಆಸ್ಪತ್ರೆಗೆ" ಸಾಗಿಸಿದರು. ಅಲ್ಲಿ ಅವನ ಕಾಲಿಗೆ ಪಟ್ಟಿ ಕಟ್ಟಲ್ಪಟ್ಟಿತು!

ರಾವಲನು ಎಚ್ಚರ ಹೊಂದಲು ಒಂದು ಘಂಟೆ ಬೇಕಾಯಿತು! ತನ್ನ ಸಮೀಪ ನಿಂತ ಹೊಸ ಜನ, ಡಾಕ್ಟರರು, ಕಾಲಿಗೆ ಕಟ್ಟಿದ ಪಟ್ಟಿ-ಇವುಗಳಿಂದ ತನ್ನ ನಿಜಪರಿಸ್ಥಿತಿಯನ್ನರಿಯಲವನಿಗೆ ವಿಳಂಬವಾಗಲಿಲ್ಲ! ಮುಂದೆ ನಿಂತ ೩೫—೩೬ ವರ್ಷ ವಯಸ್ಕ ವ್ಯಕ್ತಿಯ ಕಾರಿನ ಅಪಘಾತದಿಂದಲೇ ತನಗಿಂತಹ ಅವಸ್ಥೆಯಾಯಿತೆಂದವನು ತಿಳಿದ! ಈಗವನಿಗೆ ತನ್ನ ಹಸಿವು ತಲೆದೋರಿತು. ಅದೇ ಪರಿಸ್ಥಿತಿಯಲ್ಲಿ "ನನಗೆ ಹಸಿವಾಗುತ್ತದೆ; ದಯಮಾಡಿ ಊಟ ತರಿಸಿ" ಎನ್ನುತ್ತಾ ತನ್ನ ಜೇಬಿನಿಂದ ೫ ರೂಪಾಯಿ ನೋಟೊಂದನ್ನು ಹೊರ ಚಾಚಿದ!

ವೃಜಸೇನಗುಪ್ತರು "ಇರಲಪ್ಪಾ ಈಗಲೇ ಊಟ ಬರುತ್ತಿದೆ. ಹಣದ ಆವಶ್ಯಕತೆಯಿಲ್ಲ" ಎನ್ನುತ್ತಾ ಹೊರಗಡೆ ಹೋಗಿ ಊಟ ತರಲು ತಿಳಿಸಿ ಬಂದರು.

ರಾವಲನ ಊಟ ಮುಗಿಸಿದ ನಂತರ ವೃಜಸೇನಗುಪ್ತರು ಅವನನ್ನುದ್ದೇಶಿಸಿ "ಈಗ ನೋವು ಹೇಗಿದೆಯಪ್ಪಾ! ನಮ್ಮ ಡ್ರೈವರನ ಅಜಾಗರೂಕತೆಯಿಂದ ಇಷ್ಟು ಅನರ್ಥವಾಯಿತು!" ಎನ್ನುತ್ತಲೇ ರಾವಲನು "ಪಾಪ, ಅವನೇನು ಮಾಡಿಯಾನು" ರಾಯರೇ, ತಪ್ಪು ನನ್ನದು. ಯಾವ ಯಾವ ವೇಳೆಗೆ ಏನೇನು ನಡೆಯಬೇಕೆಂದುದಿದೆಯೋ ಅವು ನಡೆದೇ ತೀರುವವು. ಅಪಘಾತದಲ್ಲಿ ಪ್ರಾಣವೇ ಹೋಗಿದ್ದರೂ ಏನಾಗುತ್ತಿತ್ತು! ನನ್ನ ಬಗ್ಗೆ ಅಳುವವರಾದರೂ ಯಾರಿದ್ದಾರೇ? ಹಾಗೆ ನೋಡಿದರೆ ಇದಕ್ಕಿಂತ ಸಾವೇ ಉತ್ತಮವಾಗಿತ್ತು! ನನ್ನ ಜೀವನದಲ್ಲಿ ಒಂದು ಗುರಿಯಿಲ್ಲ, ಬಿ. ಎ ವರೆಗೆ ಓದಿದ್ದೂ ನಿಷ್ಪ್ರಯೋಜನವಾದಂತಾಗಿದೆ! ಇದೊಂದು ದುರ್ದಶಾಕಾಲ' ಎನ್ನುತ್ತಲೇ ಅವನ ಕಂಗಳಲ್ಲಿ ನೀರು ತೊಟಕಿಕ್ಕಿದವು.

ವೃಜಸೇನರು, ರಾವಲನ ವಾಕ್ಚಾತುರ್ಯ—ವಿನಮ್ರತೆ, ಮುಗ್ಧಮನ, ದೃಢನಿರ್ಧಾರವನ್ನು ತಿಳಿದು ಆಶ್ಚರ್ಯ ಚಕಿತರಾದರು. ಅಂತೆಯೇ "ನಿನ್ನ ಊರಾವುದಪ್ಪಾ ನಿನ್ನ ಪರಿಸ್ಥಿತಿಯೇನು? ಎಂದು ಪ್ರಶ್ನಿಸಿದರು ರಾವಲನು ಗಂಭೀರನಾಗಿ "ಅದನ್ನು ತಿಳಿದಾದರೂ ತಾವು ಏನು ಮಾಡುವಿರಿ—ನಾನೊಬ್ಬ ದಿಕ್ಕಿಲ್ಲದವ—ನನ್ನವಳಾಗಿ ಕೊನೆಯುಳಿದ್ದ ತಾಯಿಯನ್ನೂ ಕಳೆದು ಕೊಂಡಿದ್ದೇನೆ" ಎಂದ. ಗುಪ್ತರು "ಹೆದರಬೇಡಪ್ಪ ಜೀವನದಲ್ಲಿ ಧೈರ್ಯಗೆಡ ಕೂಡದು. ನನ್ನಿಂದ ಸಾಧ್ಯವಾದ ಸಹಾಯ ನಿನಗೆ ದೊರೆತೀತು." ಎನ್ನುವಷ್ಟರಲ್ಲಿ - ರಾವಲನು ಅವರ ಕೈಗಳನ್ನು ಹಿಡಿದುಕೊಂಡ. ಕೃತಜ್ಞತೆಯ ಕಂಬನಿಗಳನ್ನು ದಿಂಬಿನಲ್ಲಿ ಸುರಿಸಿದ್ದ! ಅಂದೇ ಸಾಯಂಕಾಲ ರಾವಲನು ಗುಪ್ತರ ಮನೆ ಸೇರಿದ!

ವೃಜಸೇನ ಗುಪ್ತರ ಮನೆಯಲ್ಲಿದ್ದವರೆಂದರೆ ಗುಪ್ತರ ಹೆಂಡತಿ, ಅವರ ಮಗಳು ಸುನಂದಾ ಹಾಗೂ ಇನ್ನಿತರ ಆಳು ಕಾಳುಗಳು. ಗುಪ್ತರಿಗೆ ಪುತ್ರಸಂತಾನವಿರಲಿಲ್ಲ. ಸುನಂದೆ ಮೆಟ್ರಿಕ್ ಓದುತ್ತಿದ್ದಳು. ಕೆಲದಿನ ಅಪರಿಚಿತರ ಮನೆಯಲ್ಲಿ ರಾವಲನಿಗೆ ತ್ರಾಸಾಗಿ ಕಂಡರೂ ಹೊಂದಿಕೊಂಡು ಹೋಗುವ ಅವನ ಸ್ವಭಾವದಿಂದಾಗಿ ದಿನಗಳೆದಂತೆ ಕಷ್ಟದ ದಿನಗಳನ್ನು ಮರೆಯತೊಡಗಿದ. ಇದಕ್ಕೆ ಕಾರಣ ಕರುಣಾಮೂರ್ತಿಯಾದ ಶ್ರೀಮತಿ ಗುಪ್ತಾರವರು. ತಾಯಿತಂದೆಯಿಲ್ಲದ ಮಗುವೆಂದು ತಿಳಿದು ರಾವಲನನ್ನು ತಮ್ಮ ಮಗನೆಂದೇ ಭಾವಿಸಿದ್ದರು. ಅವನೊಬ್ಬ ಬ್ರಾಹ್ಮಣನೆಂತ ತಿಳಿದ ಮೇಲಂತೂ ರಾವಲನಿಗೆ ಮನೆಯಲ್ಲಿ ಇನ್ನೂ ಹೆಚ್ಚಿನ ಸ್ವಾತಂತ್ರ್ಯ ದೊರಕಿತ್ತು!

ತನಗೆ ತಾಯಿಯೊಬ್ಬಳಿದ್ದಳೆಂತಲೂ, ಇದ್ದ ಆಸ್ತಿ ಮಾರಿ ತನಗೆ ಶಿಕ್ಷಣಕೊಡಿಸಿ ಬಿ. ಎ. ಮುಗಿಸುವಷ್ಟರಲ್ಲಿ ಕಳೆದವರ್ಷ ಕಾಯಿಲೆಯಿಂದ ತೀರಿದಳೆಂತಲೂ ಸುಸ್ಪಷ್ಟ ಪೋಣಿಸಿ ತನ್ನ ನಿಜ ವಿಚಾರ ತಿಳಿಸಿದ್ದ ರಾವಲ....ಅಲ್ಲದೆ—ತನ್ನ ೧೦ನೇ ವಯಸ್ಸಿನಲ್ಲಿಯೇ ತಂದೆ ರೈಲು ಅಪಘಾತದಲ್ಲಿ ಸಿಕ್ಕು ಮರಣ ಹೊಂದಿದ ವಿಷಯವನ್ನೂ ತಿಳಿಸಿದ್ದ.

ಮನೆಯಲ್ಲಿಯ ಇನ್ನೊಂದು ಜೀವಿಯು ಅವನ ಮುಗ್ಧ ಮನವನ್ನೆಳೆಯಿತ್ತು! ಸುನಂದೆಯು ಮೊದಮೊದಲು ರಾವಲನತ್ತ ಸುಳಿದಾಡಲು ಹಿಂಜರಿಯುತ್ತಿದ್ದು, ಅನಂತರ ಅವನ ಜಾಣ್ಮೆ ರೂಪಗಳಿಗೆ ಅವನ ಕುಶಲತೆಗೆ ಮನಸೋತು ಒಲುಮೆಗೊಂಡು ಪ್ರೀತಿಸಿ ಈಗೀಗ ಪ್ರೇಮಿಸಲು ಒಳಗೊಳಗೇ ತನಗರಿಯದಂತೆ ಅವನವಳಾಗಿದ್ದಳು. ರಾವಲನ ಪರಿಸ್ಥಿತಿಯೂ ಅಂತೆಯೇ ಆಗಿದ್ದರೂ ಅವನು ಸುನಂದೆಯನ್ನು ತನಗೆಟುಕದ ವಸ್ತುವೆಂದೇ ತಿಳಿದು ಕಾಣುತ್ತಿದ್ದ! ಸುನಂದೆ ನಿರ್ಧಾರಗೊಂಡಿದ್ದಳು-ರಾವಲ ಈ ವಿಷಯದಲ್ಲಿ ಕೊರಗುತ್ತಿದ್ದ! ರಾವಲನ ಕಾಲು ಗುಣ ಹೊಂದಲು ಒಂದು ತಿಂಗಳು ಹಿಡಿಯಿತು.

ಋಣದ ಕೂಳು ತಿಂದು ನಿರುದ್ಯೋಗದಿಂದ ಇರುವದು ಅವನಿಗೆ ಇಷ್ಟವಿರಲಿಲ್ಲ ಅಂತೆಯೇ ಅವನು ಅಂದು ವೃಜಸೇನ ಗುಪ್ತರೊಡನೆ "ನನಗೇನಾದರೂ ಕೆಲಸ ಕೊಡಿಸಿದರೊಳಿತು. ಇಲ್ಲವಾದಲ್ಲಿ ಆಯುಷ್ಯ ಹಾಳುಮಾಡಿ ತಮಗೆ ಭಾರವಾಗಿ ಇರಲು ನನ್ನ ಮನಸ್ಸು ಒಡಂಬಡುವದಿಲ್ಲ" ಎಂದ. ಗುಪ್ತರು ನಗುತ್ತಾ "ನೀನೀಗ ದುಡಿಯಬೇಕಾದ ಅವಶ್ಯಕತೆ ಯೇನಪ್ಪಾ? ಅವಶ್ಯವಿದ್ದಲ್ಲಿ ನೋಡಿದರಾಯಿತು!" ಎಂದರು ಆದರೆ ರಾವಲನು ತನ್ನ ನಿರ್ಧಾರ ಬಿಡಲಿಲ್ಲ ಅಂತ್ಯದಲ್ಲಿ ರಾವಲನಿಗೆ ತಮ್ಮ "ಸಿಟಿ ಕೊಂಟ್ರ್ಯಾಕ್ಟ" ವಿಭಾಗದ ಜವಾಬ್ದಾರಿ ಹೊರಿಸಿ, ಅದರ ಕೊಡಕೊಳ್ಳುವ ವ್ಯವಹಾರ, ಲೆಕ್ಕಪತ್ರ ಆಗುಹೋಗುಗಳನ್ನು ಅವನಿಗೆ ರಾವಲನಿಗೆ ಒಪ್ಪಿಸಿದರು. "ಕಂಟ್ರ್ಯಾಕ್ಟ" ವ್ಯವಹಾರದ ಮಾಹಿತಿ ತಿಳಿದು ಕಾರ್ಯನಿರ್ವಹಿಸಲು ಚತುರನಾದ ರಾವಲನಿಗೆ ತ್ರಾಸದಾಯಕವೆನಿಸಲಿಲ್ಲ! ವರ್ಷವೊಂದರಲ್ಲಿಯೇ ರಾವಲನು ತನ್ನ ಕರ್ತೃತ್ವಶಕ್ತಿಯಿಂದ ವೃಜಸೇನರ ಬಲಗೈಯಾಗಿ ಶ್ರೀಮತಿ ಗುಪ್ತರ ಅಕ್ಕರತೆಯನ್ನು ಪಡೆದು, ಸುನಂದೆಯ ಮನೋವಲ್ಲಭನಾಗಿ ಮೆರೆಯತೊಡಗಿದ.

(ಮುಂದುವರಿಯುವುದು)

—ಸಿರಿಪತಿ.

ಅಮೇರಿಕೆಯ ಕುಶಲ ಬೇಸಾಯಗಾರ ರಾಬರ್ಟ್ ಕಿಂಗ್‌ನ ವ್ಯವಸಾಯಕ್ಷೇತ್ರದ ದೃಶ್ಯವೊಂದು

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ಸ



NAVAYUGA
REGD. NO. M. 3619

UDIPI, THURSDAY
7-5-1959

LICENSE NO. 31
Licensed to Post without Prepayment

ಸೃಷ್ಟಿ ಸೌಂದರ್ಯ

(೧ನೇ ಪುಟದಿಂದ)

ದ್ಯಮಗಳನ್ನು ನಡೆಸುತ್ತಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಅನೇಕ ಸಣ್ಣ ಸಂಸ್ಥೆಗಳನ್ನು ಬೇರೆ ಬೇರೆ ಕುಲಗಳವರು ಸ್ಥಾಪಿಸಿ ನಡೆಸುತ್ತಿದ್ದಾರೆ.

ಇಂದಿನ ಅಭಿವೃದ್ಧಿ ಚಟುವಟಿಕೆಯಲ್ಲಿ ಭಾಗವಹಿಸುತ್ತಿರುವವರಲ್ಲಿ ಒಬ್ಬರು ಹೆನ್ರಿ ಜೇ ಕೈಸರ್, ಅಮೆರಿಕದ ಪ್ರಖ್ಯಾತ ಕೈಗಾರಿಕೋದ್ಯಮಿಯಾದ ಅವರು ವಿಹಾರಾರ್ಥವಾಗಿ ಹವಾಯಿಗೆ ಹೋದವರು, ಅದನ್ನೇ ತನ್ನ ಬೀಡನ್ನಾಗಿ ಮಾಡಿಕೊಳ್ಳುವ ನಿರ್ಧಾರ ಮಾಡಿದರು. ಹವಾಯಿಯ ಮಾದರಿ ಹಳ್ಳಿಯೊಂದನ್ನು ವಾಸಕ್ಕಾಗಿಯೂ ವಿಹಾರ ಕೇಂದ್ರವಾಗಿಯೂ ಇವರು ನಿರ್ಮಿಸಿದ್ದಾರೆ. ಈ ಹಳ್ಳಿ ಪೂರ್ಣವಾದಾಗ ಅದರಲ್ಲಿ ೮೦೦೦ ಮಂದಿ ಇರುವರು.

ಹವಾಯಿ ಹೊಸ ಹೊಸ ಕೈಗಾರಿಕೆಗಳನ್ನು ಹುಡುಕುತ್ತಿದೆ. ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಈಗ ಭಾರಿ ಸಾಗಾಣಿಕೆ ವೆಚ್ಚವನ್ನು ತೆತ್ತು, ಬಹು ನಿಧಾನವಾಗಿ ಅಮೆರಿಕದ ಭೂಖಂಡದಿಂದ ಪಡೆಯಬೇಕಾಗಿರುವ ವಸ್ತುಗಳನ್ನು ಇಲ್ಲಿಯೇ ತಯಾರಿಸಬಲ್ಲ ಸಣ್ಣ ಕಾರ್ಖಾನೆಗಳಿಗೆ ಹವಾಯಿ ಆದ್ಯತೆಯನ್ನು ನೀಡಿದೆ. ಇದಕ್ಕೆ ಒಂದು ಉದಾಹರಣೆ ಎಂದರೆ ಉಡುಪಿನ ಕೈಗಾರಿಕೆ; ಕ್ರೀಡಾ ಉಡುಪುಗಳಿಗೆ ಪಾಲಿನೇಷಿಯ ಮಾದರಿಯ ವಿನ್ಯಾಸಗಳಿಗೆ ಆದ್ಯ ಗಮನ ಕೊಡಲಾಗಿದೆ. ಅಮೆರಿಕ ಭೂಖಂಡದ ಸಂಸ್ಥೆಯೊಂದು ಇಲ್ಲಿ ತೈಲ ಶುದ್ಧೀಕರಣ ಯಂತ್ರಸ್ತೋಮವೊಂದನ್ನು ನಿರ್ಮಿಸುತ್ತಿದೆ.

ಹೊಸ ವ್ಯಾಪಾರಗಳನ್ನು, ಬಂಡವಾಳವನ್ನು ಅರಿಸುತ್ತಿರುವ ಹವಾಯಿಯ ವಾಣಿಜ್ಯ ಸಂಘದ ವರ್ತಕ ಮಂಡಳಿಯವರು ಹವಾಯಿಯನ್ನು ಕುರಿತು ದ್ವಿಮುಖಿ ಚಿತ್ರವನ್ನು ನೀಡಿದ್ದಾರೆ. ಹವಾಯಿ ವಿರಾಮದ ಭೂಮಿ, ಯಥಾರ್ಥವಾದ "ಉಷ್ಣವಲಯದ ಸ್ವರ್ಗ—ಇದು ಇವರು ಚಿತ್ರಿಸುವ ಒಂದು ಮುಖ; ಈ ದ್ವೀಪಗಳು ಸಂಪೂರ್ಣವಾಗಿ ಅಮೆರಿಕದ ಸಮಾಜ; ಇಲ್ಲಿ ಆಧುನಿಕ ಸೌಕರ್ಯಗಳಿವೆ, ಆಧುನಿಕ ವ್ಯಾಪಾರದ ವಿಧಾನಗಳು ಬಳಕೆಯಲ್ಲಿವೆ; ಹವಾಯಿ ಸಂಸ್ಥಾನ ಸ್ಥಾನಕ್ಕೆ ಎಷ್ಟು ಶೀಘ್ರಗತಿಯಿಂದ ಸಾಗುತ್ತಿದೆಯೋ ಅಷ್ಟೇ ಬೇಗನೆ ಆಧುನಿಕ ಸೌಕರ್ಯಗಳೂ ಮತ್ತು ವ್ಯಾಪಾರ ವಿಧಾನಗಳು ಬೆಳೆಯುತ್ತಿವೆ—ಇದು ಅವರು ಚಿತ್ರಿಸುವ ಎರಡನೆಯ ಮುಖ.

ಗೋವಿಜಯ

(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ವಿಚಾರ ಮಥನ

(೧ನೇ ಪುಟದಿಂದ)

ಗಾಧ ಪರಿಶ್ರಮದಿಂದಲೇ ನಾವು ಸದೃಢ ಭಾರತವನ್ನು ಕಟ್ಟಬಲ್ಲೆವು; ನಾವುಗಳಿಸಿದ ರಾಜಕೀಯ ಸ್ವಾತಂತ್ರ್ಯದೊಡನೆ ಆರ್ಥಿಕ ಸ್ವಾತಂತ್ರ್ಯವೂ ಲಭಿಸಬೇಕಾದರೆ, ನಾವು ನಮ್ಮ ಪ್ರಧಾನಿಯವರ ವಿನಂತಿಯನ್ನು ಕಾರ್ಯಗತಗೊಳಿಸಬೇಕು.

೦ ೦

ಮೈಸೂರು ವಿಧಾನ ಮಂಡಳದ ಮಲೆನಾಡು ಜಿಲ್ಲೆಗಳ ಸದಸ್ಯರು ಸಭೆಸೇರಿ, ಮಲೆನಾಡು ಜಿಲ್ಲೆಗಳಿಗೊಂದು ಪ್ರತ್ಯೇಕ ವಿಶ್ವವಿದ್ಯಾಲಯವನ್ನು ರಚಿಸುವ ಸೂಚನೆಯನ್ನು ಪರ್ಯಾಲೋಚಿಸಿದರು. ಈ ಸಂದರ್ಭದಲ್ಲಿ ಶ್ರೀ ಎ. ಬಿ. ಸೆಟ್ಟಿ ಇವರು ಅಂಕೆಸಂಖ್ಯೆಗಳ ಸಹಾಯದಿಂದ ಈ ಜಿಲ್ಲೆಗಳಿಗೊಂದು ಪ್ರತ್ಯೇಕ ವಿಶ್ವವಿದ್ಯಾಲಯವು ಆವಶ್ಯವೆಂದು ಮನಗಾಣಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ೧೩ ಕಾಲೇಜುಗಳು ಇದ್ದು, ಅವುಗಳೆಲ್ಲವೂ ವೈವಿಧ್ಯಪೂರ್ಣವಿರುತ್ತವೆ. ಸದ್ಯದಲ್ಲಿಯೇ ಒಕ್ಕಲುತನದ ಕಾಲೇಜೂ ಸ್ಥಾಪನೆಯಾಗುವುದೆಂದು ವರ್ತಮಾನವೂ ಅಲ್ಲಲ್ಲಿ ಕೇಳಬರುತ್ತದೆ. ಉಳಿದ ಉತ್ತರ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಒಂದೊಂದು ಕಾಲೇಜು ಮಾತ್ರವಿದೆ. ವಿಶ್ವವಿದ್ಯಾಲಯದ ಸಹಾಯಧನ ಆಯೋಗದವರಾದರೂ ಸಣ್ಣ ಸಣ್ಣ ವಿಶ್ವವಿದ್ಯಾಲಯಗಳು ಇರುವುದು ಅಪೇಕ್ಷಣೀಯವೆಂದು ಅಭಿಪ್ರಾಯಿಸಿರುತ್ತಾರೆ. ಸದ್ಯ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಐವತ್ತಕ್ಕಿಂತಲೂ ಹೆಚ್ಚಿನ ಕಾಲೇಜುಗಳು ಸೇರ್ಪಡೆಯಾಗಿದ್ದು ಈ ಸಂಖ್ಯೆ ೭೦ಕ್ಕೆ ಏರುವುದರಲ್ಲಿದೆ. ಅಲ್ಲದೇ ಮಲೆನಾಡಿನ ಕಾಲೇಜುಗಳು ರಾಜ್ಯದ ಎರಡು ವಿಶ್ವವಿದ್ಯಾಲಯಗಳಲ್ಲಿ ಹಂಚಲ್ಪಟ್ಟಿವೆ. ಆದದರಿಂದ ಮಲೆನಾಡಿನ ಅಭಿವೃದ್ಧಿಗಾಗಿ ಮತ್ತು ರಾಜ್ಯದ ಉನ್ನತಿಗಾಗಿ ಮಲೆನಾಡಿನ ಜಿಲ್ಲೆಗಳಿಗೆ ಪ್ರತ್ಯೇಕವಾದ ಒಂದು ವಿಶ್ವವಿದ್ಯಾಲಯವಿರುವುದು ಅಗತ್ಯವೆಂದು ಶ್ರೀ ಶೆಟ್ಟರು ತಿಳಿಸಿದ್ದಾರೆ. ಈ ಕೇಳಿಕೆಯು ನ್ಯಾಯವಾದುದೇ. ಬೇರೆ ಬೇರೆ ಮಂತ್ರಿಗಳು ದಕ್ಷಿಣಕನ್ನಡಕ್ಕೆ ಭೇಟಿಯಿತ್ತಾಗ ಈ ಕೇಳಿಕೆಯನ್ನೂ ಅವರ ಮುಂದೆ ಇರಿಸಲಾಗಿದೆ. ಸದ್ಯ ಈ ಪ್ರತ್ಯೇಕ ವಿಶ್ವವಿದ್ಯಾಲಯ ಯೋಜನೆಯ ವಿವರಗಳನ್ನು ತಯಾರಿಸಿ ಸರಕಾರದ ಮುಂದಿಡಲು ನೇಮಿಸಲ್ಪಟ್ಟ ಸಮಿತಿಯು ತಕ್ಕ ಅಂಕೆ ಸಂಖ್ಯೆಗಳೊಡನೆ ತನ್ನ ನ್ಯಾಯವಾದ ಕೇಳಿಕೆಯನ್ನು ಬಲಪಡಿಸಿ ಸರಕಾರಕ್ಕೆ ಯೋಜನೆಯನ್ನು ಒಪ್ಪಿಸುವುದು ಅಗತ್ಯವಿದೆ. ಮಲೆನಾಡು ಒಂದಾಗಿ ಬಾಳುವಂತಾಗಲು ಮತ್ತು ಮಲೆನಾಡಿನ ಬೇರೆ ಬೇರೆ ಜಿಲ್ಲೆಗಳು ಹೊಂದಿಕೊಂಡಿರುವಂತಾಗಲು ಮಲೆನಾಡಿನ ಅಭಿವೃದ್ಧಿಗಾಗಿ ಈ ರೀತಿಯ ಪುಟ್ಟ ವಿಶ್ವವಿದ್ಯಾಲಯವು ಸಹಾಯಕಾರಿಯಾಗುವುದರಲ್ಲಿ ಸಂದೇಹವಿಲ್ಲ. ಸರಕಾರವಾದರೂ ಈ ಜಿಲ್ಲೆಗಳ ನ್ಯಾಯೋಚಿತ ಬೇಡಿಕೆಯನ್ನು ಮನ್ನಿಸಲು ಹಿಂದೆಮುಂದೆ ನೋಡಬಾರದು.

೦ ೦

ಸೋವಿಯತ್ ಸುದ್ದಿ ಸಂಸ್ಥೆ ಸೋವಿಯತ್ ರಶ್ಯದ ಪ್ರಧಾನಿ ಶ್ರೀ ನಿಕಿಟಾ ಕ್ರುಶ್ಚೇವರಿಗೆ ಲೆನಿನ್ ಶಾಂತಿ ಪಾರಿತೋಷಕವನ್ನು ಈಯಲಾಗಿದೆ ಎಂದು ವರದಿ ಮಾಡಿದೆ. "ಕ್ರುಶ್ಚೇವರು ರಶಿಯದ ಸಾರ್ವಜನಿಕ ಹಾಗೂ ರಾಷ್ಟ್ರೀಯ ಪುರುಷರಾಗಿದ್ದು ಶಾಂತಿಗಾಗಿ ಅವರು ನಡೆಸುವ ಚಟುವಟಿಕೆಗಳಿಂದ ರಶಿಯದ ಸಮಾಜವಾದೀ ರಾಷ್ಟ್ರ ಮತ್ತು ಕಮ್ಯುನಿಷ್ಟ ಪಕ್ಷಗಳ ಶಾಂತಿಪ್ರಿಯ ಧೋರಣೆಗೆ ಮೂರ್ತಸ್ವರೂಪವಿತ್ತಿದ್ದಾರೆ" ಎಂದು ಅದು ಈ ವರದಿಯಲ್ಲಿ ಕ್ರುಶ್ಚೇವ ಪ್ರಶಂಸೆ ಮಾಡಿರುತ್ತದೆ. ಜಾಗತಿಕ ಶಾಂತಿಗಾಗಿ ದುಡಿದ ಹಿರಿಯರಲ್ಲಿ ಕ್ರುಶ್ಚೇವರಿಗೆ ಲೆನಿನ್ ಪಾರಿತೋಷಕ ಸಮಿತಿಯು ಬಹುಮಾನ ಘೋಷಿಸುವುದು ಅನ್ಯಾಯವೇನಲ್ಲ. ರಶ್ಯನರಿಗೆ ಕ್ರುಶ್ಚೇವರೂ ಅಮೆರಿಕನರಿಗೆ ಐಸನಹಾವರರೂ ಭಾರತೀಯರಿಗೆ ಪಂಡಿತ ನೆಹರೂ ಅವರೂ ಶಾಂತಿದೂತರಾಗಿ ಪರಿಣಮಿಸಿದರೆ, ಅದರಲ್ಲಿ ತಪ್ಪೇನಿದೆ? ನಮ್ಮ ಬೆನ್ನನ್ನು ಬೇರೆಯಾರಾದರೂ ತಟ್ಟಲು ಮುಂದೆ ಬಾರದೆ ಹೋದರೆ, ತಾನಾದರೂ ತಟ್ಟಿಕೊಂಡು ತೃಪ್ತಿಪಟ್ಟುಕೊಳ್ಳಬೇಕಷ್ಟೆ? ಅಲ್ಲದೇ ಕ್ರುಶ್ಚೇವರು ಇನ್ನೂ ಒಂದು ಮಹತ್ವದ ಸೇವೆಯನ್ನು ಶಾಂತಿಗಾಗಿ ಮಾಡಿದ್ದಾರೆ. ತನ್ನಲ್ಲಿ ಹೈಡ್ರೋಜನ್ ಬಾಂಬಿಗಿಂತಲೂ ವಿಪರೀತ ಪರಿಣಾಮಮಾಡಬಲ್ಲ ವಿನಾಶಕಾರಿ ಅಸ್ತ್ರಗಳಿವೆ ಎಂದು ಘೋಷಿಸಿದ್ದರೂ ಇದುವರೆಗೂ ಅವುಗಳ ಪ್ರಯೋಗವನ್ನು ಮಾಡಿತೋರಿಸಿಲ್ಲ. ಒಂದು ವೇಳೆ, ಮಾಡಿದ್ದರೆ ಪ್ರಪಂಚವೇ ಭಸ್ಮೀಭೂತವಾಗಿ ಹೋಗುತ್ತಿತ್ತೋ ಏನೋ. ಇಂತಹ ಅನೋಘ ಸೇವೆ ಸಲ್ಲಿಸಿದ ಕ್ರುಶ್ಚೇವರಿಗೆ ಶಾಂತಿ ಬಹುಮಾನ ದೊರೆಯುವುದು ನ್ಯಾಯೋಚಿತವಲ್ಲವೆ? ಅಂತೆಯೇ ಕಮ್ಯುನಿಸ್ಟ ಬಣಗಳಲ್ಲಿ ಚೀನಕ್ಕೆ ಶಾಂತಿಪಾರಿತೋಷಕವನ್ನು ನೀಡುವ ಘೋಷಣೆಯನ್ನೂ ನಾವು ನಿರೀಕ್ಷಿಸಿದರೆ, ಅದು ಅತಿಶಯವೆನಿಸದಲ್ಲವೆ?

—ರಾಶಿ.



ಅಮೆರಿಕೆಯು ತಾನು ತಯಾರಿಸಿದ ಮೂರನೆಯ ಪಯೊನೀರನ್ನು ಹಾರಿಸಿತು.

ನಮ್ಮ ಹೊಲ

ಅತಿ ಪ್ರಾಚೀನ ಕಾಲದಿಂದಲೂ "ಓ ಬೇಲೆ......"ಕೇಳಿದ ನಮ್ಮ ಭತ್ತದ ಗದ್ದೆಗಳಲ್ಲಿ ಇಂದು ಆಧುನಿಕತೆಯ ಸ್ವರವು ಹೊರಸೂಸುತ್ತಿದೆ. ಜಪಾನಿ ಪದ್ಧತಿ, ಸಿಂಧ್ರಿಗೊಬ್ಬರ, ಪಂಚವಾರ್ಷಿಕ ಯೋಜನೆ—ಇವುಗಳ ಹಿನ್ನೆಲೆಯಲ್ಲಿ ಹೊಸ ಆರ್ಥಿಕ ಕಲ್ಪನೆಯೂ ಸೇರಿಕೊಂಡಿದೆ. ಕಷ್ಟದ ಹೊರೆಯನ್ನು ಹಗುರಗೊಳಿಸಿ, ಗ್ರಾಮ ಜೀವನದ ಸವಿಯನ್ನು ಹೆಚ್ಚಿಸಲು "ಸಿಂಡಿಕೇಟ್" ತನ್ನ ಬೇಂಕಿಂಗ್ ಸೇವೆಯನ್ನು ನೀಡುವುದು; ಜೀವನದ ಮಟ್ಟವನ್ನು ಉತ್ತಮಗೊಳಿಸಲು ಯತ್ನಿಸುವುದು–ತನ್ನ ಗ್ರಾಮೀಣ ಶಾಖೆಗಳ ಮೂಲಕ **ದಕ್ಷಿಣ ಕನ್ನಡ ಜಿಲ್ಲೆಯ ಉದ್ದಗಲಗಳಲ್ಲಿ**.......

ಮುಖ್ಯ ಶಾಖೆಗಳು: ಮಂಗಳೂರು-ಹಂಪನ ಕಟ್ಟೆ; ಮಂಗಳೂರು-ಬಂದರ; ಉಡುಪಿ-ರಥಬೀದಿ; ಉಡುಪಿ-ಲೋಕಲ್ ಆಫೀಸ್; ಕಾರ್ಕಳ; ಕುಂದಾಪುರ; ಬ್ರಹ್ಮಾವರ.

ಗ್ರಾಮೀಣ ಶಾಖೆಗಳು: ಕಡೆಕಾರ್, ಕಾಪು, ಕಿನ್ನಿಗೋಳಿ, ಕೆಮ್ಮಣ್ಣು, ಗುರುಪುರ, ಗಂಗೊಳ್ಳಿ, ನಿಟ್ಟೆ, ಫಲಿಮಾರು, ಪಾಣೆಮಂಗಳೂರು, ಪುತ್ತೂರು, ಪೆರ್ಡೂರು, ಬಸ್ರೂರು, ಬಾರ್ಕೂರು, ಬೆಳ್ತಂಗಡಿ, ಬೈಲೂರು, ಬೈಂದೂರು, ಮಣಿಪಾಲ, ಮಲ್ಪೆ, ಮೂಡುಬಿದ್ರಿ, ಮೂಲ್ಕಿ, ಸಾಲಿಗ್ರಾಮ, ಶಂಕರನಾರಾಯಣ, ಹೆಬ್ರಿ.

ತುಂಬಿದ ಕಣಜ ನಾಡಿನ ಬಯಕೆ

ಸಿಂಡಿಕೇಟ್ ಬೇಂಕ್ ಗ್ರಾಮದ ಗೆಳೆಯ.

ಡಾ| ಟಿ. ಎಂ. ಎ. ಪೈ, ಮೆನೇಜಿಂಗ್ ಡೈರೆಕ್ಟರ್.

ಶ್ರೀ ಟಿ. ಎ. ಪೈ, ಜನರಲ್ ಮೆನೇಜರ್.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ., ಉಡುಪಿ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ.

ವರುಷ ೩೮. ವಾರ ೩೫ 14-5-1959 Vol. 38 No. 35.

ವಿಚಾರ ಮಥನ

ಭಾರತಕ್ಕೆ ಸಹಾಯ ಹಸ್ತ

* *

ಪಾಕಿಸ್ತಾನದ ಪಿಕಲಾಟ

* *

ಸಿಂಹಳದಲ್ಲಿ ವಿವಂಚನೆ

* *

ಕಮ್ಯುನಿಸ್ಟ ವಿರೋಧ

* *

ಕ್ರುಶ್ಚೇವರ ಭವಿಷ್ಯವಾಣಿ

* *

ಭಾರತವು ತನ್ನ ಅಭಿವೃದ್ಧಿಗೋಸ್ಕರ ಕೈಕೊಂಡಿರುವ ಯೋಜನೆಗಳಿಗಾಗಿ ತನ್ನ ಆರ್ಥಿಕ ಸ್ಥಿತಿಯನ್ನು ಉನ್ನತೀಕರಿಸಬೇಕಾದರೆ, ಅದಕ್ಕೆ ಬಾಹ್ಯರೂಪಗಳಿಂದ ಪ್ರತಿವರ್ಷವೂ ಒಂದು ಅರಬ ಡಾಲರ್‌ಗಳ ಆವಶ್ಯಕತೆಯಿರುವುದು ಎಂದು ಶ್ರೀ ಏವೆರಲ್ ಹ್ಯಾರಿಮನರು ಅಭಿಪ್ರಾಯಪಟ್ಟಿದ್ದಾರೆ ಶ್ರೀ ಹ್ಯಾರಿಮನರು ಬ್ರಿಟನ್ ಮತ್ತು ರಶ್ಯಗಳಲ್ಲಿ ಅಮೆರಿಕೆಯ ರಾಯಭಾರಿಯಾಗಿದ್ದರಲ್ಲದೇ ನ್ಯೂಯಾರ್ಕಿನ ಮಾಜಿ ಗವರ್ನರರಾಗಿದ್ದಾರೆ. ಅವರು ರಾಷ್ಟ್ರಾಧ್ಯಕ್ಷರ ಮುಂದಿನ ವರ್ಷದ ವಿದೇಶ ಸಹಾಯದ ಕಾರ್ಯಕ್ರಮದ ಕುರಿತು ಮಾತಾಡುತ್ತ ಭಾರತದ ಆವಶ್ಯಕತೆಯನ್ನು ಎತ್ತಿ ಆಡಿದ್ದಾರೆ. ಅಲ್ಲದೇ ಭಾರತಕ್ಕೆ ಬೇಕಾಗುವ ಈ ಸಹಾಯವೆಲ್ಲವನ್ನೂ ಅಮೆರಿಕೆಯೇ ಕೊಡಬೇಕೆಂದು ತಾನು ಹೇಳುವುದಿಲ್ಲವೆಂದೂ ನುಡಿದಿದ್ದಾರೆ ಪಾಕಿಸ್ತಾನಕ್ಕೆ ಅಮೆರಿಕೆಯು ಇತ್ತಿರುವ ಸೈನಿಕ ಸಹಾಯದಿಂದ ಭಾರತವು ಚಿಂತಾಕ್ರಾಂತವಾಗಿದೆಎಂದು ತಿಳಿಸಿ,ಅವರು ಭಾರತ ಮತ್ತು ಪಾಕಿಸ್ತಾನಗಳೆರಡರ ಸಖ್ಯವೂ ನಮಗೆ ಬೇಕೆಂದು ಪ್ರತಿಪಾದಿಸಿದರು.

ಶ್ರೀ ಹ್ಯಾರಿಮನರು ಆಡಿದ ಮಾತುಗಳು ವಾಸ್ತವಿಕವೇ ಆಗಿವೆ. ಭಾರತವು ತನಗೆ ಬೇಕಾದ ಸಹಾಯವೆಲ್ಲವನ್ನೂ ಒಂದೇ ರಾಷ್ಟ್ರದಿಂದ ನಿರೀಕ್ಷಿಸುವುದು ಪ್ರಮಾದವಾದೀತು. ಆದರೂ ಅಮೆರಿಕೆಯು ತನ್ನ ಕೈಲಾದಷ್ಟು ನೆರವನ್ನು ನೀಡಬೇಕೆಂದು ಶ್ರೀ ಹ್ಯಾರಿಮನರ ಅವ್ಯಕ್ತಾಭಿಪ್ರಾಯವಿರಬಹುದು ಅಂತೆಯೇ ಪಾಕಿಸ್ತಾನಕ್ಕೆ ಸೈನಿಕ ಸಹಾಯವಿತ್ತುದನ್ನು ಪ್ರತ್ಯಕ್ಷವಾಗಿಯಲ್ಲವಾದರೂ ಪರೋಕ್ಷವಾಗಿ ಖಂಡಿಸಿದ್ದಾರೆಂದು ತಿಳಿಯಲು ಎಡೆಯಿದೆ.

ಭಾರತದಿಂದ ವಿಭಜನೆ ಹೊಂದಿ ಬೇರ್ಪಟ್ಟ ಪಾಕಿಸ್ತಾನವು ಭಾರತದ ಮೇಲೆ ಪದೇ ಪದೇ ಅಪಪ್ರಚಾರದ ಮಾಲೆಯನ್ನೇ ಮುಂದಿಡುತ್ತ ಬಂದಿದೆ. ಇದೀಗ, ಪಾಕಿಸ್ತಾನದ ಆರ್ಥಿಕ ಮಂತ್ರಿಶಾಖೆಯ ವಕ್ತಾರನೊಬ್ಬರು ಭಾರತವು ಪಾಕಿಸ್ತಾನಕ್ಕೆ ೧೮೦ ಕೋಟಿ ರೂಪಾಯಿಗಳ ವಿಭಜನಾ ಸಾಲವನ್ನು ಕೊಡಬೇಕಾಗಿದೆ ಎಂದಿದ್ದು ಈ ಹೇಳಿಕೆಯು ಭಾರತೀಯರಲ್ಲಿ ಅಚ್ಚರಿಯನ್ನುಂಟುಮಾಡಿದೆ ಈ ಪ್ರಶ್ನೆಯ ಮೇಲೆ ಬೆಳಕು ಚೆಲ್ಲಿದಾಗ, ಭಾರತೀಯ ಆರ್ಥಿಕ ಮಂತ್ರಿ ಶ್ರೀ ಮೊರಾರ್ಜಿ ದೇಸಾಯಿ ಅವರು "ಪಾಕಿಸ್ತಾನವೇ ಭಾರತಕ್ಕೆ ಮುನ್ನೂರು ಕೋಟಿಗಳಷ್ಟು ರೂಪಾಯಿಯನ್ನು ತೆರಬೇಕಾಗಿದೆ ಎಂದು ಬಹು ಹಿಂದೆಯೇ ಲೆಕ್ಕ ಹಾಕಲಾಗಿದೆ ಈಗ ಎದ್ದಿರುವ ಈ ವಿವಾದವು ಹಕ್ಕು ಮತ್ತು ಪ್ರತಿ ಹಕ್ಕುಗಳಿಗೆ ಸಂಬಂಧಿಸಿರುವುದರಿಂದ ಸರಕಾರಿ ಮಟ್ಟದ ಮಾತುಕತೆ ನಡೆದು ನಿಗದಿಯಾಗುವ ಅವಶ್ಯವಿದೆ" ಎಂದಿದ್ದಾರೆ ಅಲ್ಲದೇ ಈ ಸಲುವಾಗಿ, ಶ್ರೀ ದೇಸಾಯಿಯವರು ಪಾಕ್. ಅರ್ಥ ಮಂತ್ರಿಯವರನ್ನು ಚರ್ಚೆಯ ಸಲುವಾಗಿ ಆಮಂತ್ರಿಸಲು ಸಿದ್ಧರಿದ್ದಾರೆ ಈ ಹಿಂದೆಯೂ ಆ ಕಾಲದ ಅರ್ಥ ಮಂತ್ರಿಗಳೂ ಇಂತಹ ಆಮಂತ್ರಣವಿತ್ತಿದ್ದರೂ, ವಿಷಯವು ಮಾತ್ರ ಕೂಲಂಕಷವಾಗಿ ಚರ್ಚಿಸಲ್ಪಟ್ಟಿಲ್ಲವೆನ್ನುವಾಗ, ಈ ಬಾರಿಯ ಗತಿಯೇನಾದೀತೆಂದು ಹೇಳ ಬರುವುದಿಲ್ಲ.



ವೆನ್‌ಗಾರ್ಡ್ ಉಪಗ್ರಹದಲ್ಲಿ ಅಮೆರಿಕೆಯು ಪರೀಕ್ಷಾಗೋಲವೊಂದನ್ನು ಇರಿಸಿತ್ತು.

ಪಾಕಿಸ್ತಾನವು ಭಾರತದ ಕಡೆಗೆ ಕಣ್ಣಿನಿಂದ ನೋಡುತ್ತಿರುವುದು, ಜಗಜ್ಜನಿತ ವಿಚಾರವೇ ಆಗಿದೆ ಆಗಾಗ ನಿರುಪಾಯವಾಗಿ ಬಣ್ಣದ ನುಡಿಗಳನ್ನಾಡ ಬಯಸುತ್ತದಾದರೂ ಅದರ ನಾಯಕರು ಕೆಲವೊಮ್ಮೆ ಬೇಜವಾಬ್ದಾರಿಯುತವಾಗಿ ಆಡುತ್ತಿರುತ್ತಾರೆ ಪ್ರಕೃತ ಆರ್ಥಿಕ ಶಾಖೆಯ ವಕ್ತಾರನ ಹೇಳಿಕೆಯೂ ಇದಕ್ಕೊಂದು ಉತ್ತಮ ಮಾದರಿಯಾಗಿದೆ ಶ್ರೀ ದೇಸಾಯಿ ಅವರು ಈ ವಿಷಯದಲ್ಲಿ ಇನ್ನೂ ವಿಲಂಬವಮಾಡದೇ ಸರಕಾರಿ ಮಟ್ಟದಲ್ಲಿ ಮಾತುಕತೆಯನ್ನು ನಡೆಸಿ, ಸಲ್ಲಬೇಕಾದ ಇಲ್ಲವೇ ಸಲ್ಲಿಸಬೇಕಾದ ಮೊತ್ತಗಳನ್ನು ನಿಶ್ಚಯಿಸುವುದು ಅವಶ್ಯ.

೦೦ ೦೦

ಪ್ರಜಾಪ್ರಭುತ್ವವಾದಿ ರಾಷ್ಟ್ರದಲ್ಲಿ ಆಳುವ ಪಕ್ಷದೊಳಗೇನೇ ಭಿನ್ನಾಭಿಪ್ರಾಯವು ಒಂದು ಬಿರುಗಾಳಿಯೇಳುವುದುಂಟು, ಅಂತೆಯೇ ಸಿಂಹಳದ ಪ್ರಧಾನಿ ಶ್ರೀ ಸೊಲೊಮನ್ ಭಂಡಾರ ನಾಯಿಕೆಯವರೂ ಒಂದು ಬಿಕ್ಕಟ್ಟನ್ನು ಈಗ ಎದುರಿಸಬೇಕಾಗಿದೆ ಭಂಡಾರ ನಾಯಿಕೆಯವರ ಮಂತ್ರಿಮಂಡಳಿಯಲ್ಲಿ ಶ್ರೀ ಫಿಲಿಪ್ ಗುಣವರ್ಧನೆಯವರು ಆಹಾರ ಶಾಖೆಯ ಮಂತ್ರಿಯಾಗಿರುವರು ಇವರು ಮಾರ್ಕ್ಸ್‌ವಾದಿಗಳಾಗಿರುವರೆಂದೂ ರಾಷ್ಟ್ರವನ್ನು ಕಮ್ಯುನಿಜಂ ಪಥದತ್ತ ಒಯ್ಯಲು ಹವಣಿಸುತ್ತಿರುವರೆಂದು ಕಿಂವದಂತಿಯು ಹರಡಿ, ಇದೀಗ ಬಲರೂಪವನ್ನು ತಾಳಿವೆ ಯನ್ನಬೇಕು ಶ್ರೀ ಗುಣವರ್ಧನೆಯವರನ್ನು ಬಹಿಷ್ಕರಿಸುವ ವರೆಗೆ ಬಲಪಕ್ಷೀಯರು ಹೋರಾಡಲು ನಿರ್ಧರಿಸಿದ್ದಾರೆ

ಶ್ರೀ ಗುಣವರ್ಧನೆಯವರು ಸಹಕಾರಿ ಬೆಳವಣಿಗೆಯ ಬೇಂಕು ಸ್ಥಾಪನೆಯ ಕುರಿತು ಆಡಿದ ಮಾತುಗಳನ್ನು ಬಲಪಕ್ಷೀಯರು ವಿಪರ್ಯಾಸ ಕಟ್ಟಿಕೊಂಡು ಈ ಆರೋಪವನ್ನು ಹೊರಿಸಿದ್ದಾರೆ ಎನ್ನಲಾಗಿದೆ. ಅಲ್ಲದೇ ತಾನು ಮಾರ್ಕ್ಸಿಸ್ಟ್ ಬೇಂಕ್ ಅಥವಾ ಕಮ್ಯುನಿಸ್ಟ ಬೇಂಕಿನ ಸಲಹೆಯೊಡ್ಡಿದೆ ರಾಷ್ಟ್ರದ ಬಡಜನತೆಗೆ ಅವರ ವ್ಯವಸಾಯ, ಉದ್ಯಮ, ವ್ಯಾಪಾರಾದಿಗಳನ್ನು ಬಲಪಡಿಸುವುದಕ್ಕೆ ಆವಶ್ಯಕ

(ಆನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ – ಮಂಗಳೂರು—3. ಸ್ಥಾಪನೆ – 1931

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ	5 ತಿಂಗಳ ವರೆಗೆ	4¼%
6 ,,	12 ,,	4½%
13 ,,	24 ,,	4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ..ಇತ್ಯಾದಿ...

ಕಥಾ ವಿಹಾರ

ರಾವಲನ ಬಾಳಿನಲ್ಲಿ ಎರಡನೆಯ ಜೀವ

ನಿರ್ಗತಿಕ ರಾವಲನಿಗೆ ಗುಪ್ತರ ಆಶ್ರಯ ದೊರಕಿತು. ಆದರೆ ಮುಂದೆ........?

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಇತ್ತ ಹೋಶಿಯಾರಪುರದಲ್ಲಿ, ರಾವಲನ ಪತ್ರವನ್ನು ಪಡೆದ ಬಲದೇವ ಸಿಂಗರು ಅವನ ಬಗ್ಗೆ, ಬಸ್‌ಸ್ಟೆಂಡ್ ರೇಲ್ವೆ ಸ್ಟೇಶನ್ ಎಲ್ಲಾ ಹುಡುಕಿದರು! ವರ್ತಮಾನ ಪತ್ರದಲ್ಲಿ ಅವನ ಫೋಟೊ ಇಟ್ಟು, ರಾವಲನೊಡನೆ ಕ್ಷಮೆಯಾಚಿಸಿ ತಿರುಗಿ ಬರಬೇಕೆಂದು ಅಚ್ಚುಮಾಡಿದ್ದರಲ್ಲದೆ ಯಾರಾದರೂ ಅವನನ್ನು ಕರೆತಂದರೆ ಯೋಗ್ಯ ಬಹುಮಾನ ಕೊಡುವೆನೆಂದೂ ತಿಳಿಸಿದ್ದರು. ತಿಂಗಳಾದರೂ ಎಲ್ಲಿಯೂ ದೊರೆಯದಿದ್ದನ್ನು ತಿಳಿದವರು ಮಗನ ಚಿಂತೆಯಲ್ಲಿ ಹಾಸಿಗೆ ಹಿಡಿದರು! ಅನೂಬಾಯಿಯವರಿಗೂ "ರಾವಲನ ಇಲ್ಲದಿರುವಿಕೆ"ಯಿಂದ ಇಷ್ಟು ಅನರ್ಥವಾಗಬಹುದೆಂದು ತಿಳಿದಿರಲಿಲ್ಲ. ಅವರಿಗೆ ಮನೆಯ ಸಣ್ಣ ಪುಟ್ಟ ಕೆಲಸ ಮಕ್ಕಳಾಡಿಸುವದು, ಇವೆಲ್ಲವನ್ನೂ ಸ್ವತಃ ಮಾಡಬೇಕಾಗಿ ಬಂತು. ಮಕ್ಕಳಿಬ್ಬರಿಗೆ "ಇನ್‌ಫ್ಲುಯೆಂಝಾ" ಪ್ರಾರಂಭವಾಯಿತು. ಪತಿದೇವರು ಹಿರೇ ಮಗನ ಚಿಂತೆಯಲ್ಲಿ ಮನೆಗೆ ಬಂದರೂ ಆಯಿತು ಇಲ್ಲವೆ ಎಲ್ಲೆಲ್ಲಿಯಾದರೂ ತಿರುಗುತ್ತಿದ್ದರು. ಮನೆಯ ವ್ಯವಹಾರವೆಲ್ಲ ನಿರ್ಲಕ್ಷ್ಯತನದಿಂದ ನಡೆಯತೊಡಗಿತು. ಪತಿದೇವರೂ ಇಬ್ಬರು ಹುಡುಗರೂ ಹಾಸಿಗೆ ಹಿಡಿದ್ದದ್ದನ್ನು ನೋಡಿ ಅನೂಬಾಯಿಯವರ ಕೈಕಾಲೇ ಹೋದಂತಾಯಿತು.

ವರ್ಷವೊಂದರಲ್ಲಿಯೇ ಮನೆಯಲ್ಲಿ ಖರ್ಚು ಬೆಳೆದು ಆದಾಯವಿಲ್ಲದೆ ಕೆಲ ಜಮೀನು ಕೈಬಿಟ್ಟವು, ಇದ್ದ ರಕಮು ಸಹ ಔಷಧ ಉಪಜೀವಕ್ಕೆ ಖರ್ಚು ಆಯಿತು. ಇದೀಗ ಇದ್ದುದು ಹಳೆಯ ಎರಡು ಕಟ್ಟಡಗಳು. ಅವುಗಳ ಬಾಡಿಗೆ ೬೦ ರೂಪ್ಯಾಗಳಿಂದ ಎಲ್ಲ ಖರ್ಚು ಸಾಗಬೇಕು. ಕಾರಣ ಬಲದೇವಸಿಂಗರು ಪ್ರೈವ್ಹೇಟ ನೌಕರಿಯೊಂದನ್ನು ಹಿಡಿದು ತನ್ನ ಕುಟುಂಬ ಪೋಷಣೆ ಮಾಡಬೇಕಾಯಿತು. ಬೇರೆ ಉಪಾಯವಿರಲಿಲ್ಲ! ಹೋಶಿಯಾರಪುರದ "ರೇಲ್ವೆ" ಬ್ರಿಜ್—ಕಟ್ಟುವ ಕೆಲಸದ ಮ್ಯಾನೇಜರರಲ್ಲಿ ಗುಮಾಸ್ತೆ ಕೆಲಸಕ್ಕೆ ಸೇರಿದರು.

ರಾವಲನ ಶ್ರಮ ನಿರ್ವಂಚನಾ ಕಾರ್ಯದ ಫಲವಾಗಿ "ಸಿಟಿ ಕೊಂಟ್ರಾಕ್ಟ"ನಲ್ಲಿ ಒಂದೇ ವರ್ಷದಲ್ಲಿ ೩ ಲಕ್ಷ ರೂಪ್ಯಾಗಳಿಗೆ ಮಿಕ್ಕಿ ಲಾಭವಾಗಿತ್ತು! ರಾವಲನಿಗೆ ತಿಂಗಳೊಂದಕ್ಕೆ ೨೦೦ ರೂಪ್ಯಾ ವೇತನವನ್ನು ವೃಜಸೇನ ಗುಪ್ತರು ನಿರ್ದಿಷ್ಟಪಡಿಸಿದ್ದರು. ಆದರೆ ಪ್ರತಿ ತಿಂಗಳ ಹಣವನ್ನು ರಾವಲನಿಗೆ ಕೊಡಲು ಹೋದಾಗ ಅವನು ಅದು ತಮ್ಮಲ್ಲಿಯೇ ಇರಲೆಂತಲೂ ಆವಶ್ಯವಿದ್ದಾಗ ಕೇಳಿ ತೆಗೆದುಕೊಳ್ಳುವೆನೆಂತಲೂ ತಿಳಿಸಿದ. ಅಂತೆಯೇ ಅವನ ರಕಮನ್ನು ಪ್ರತ್ಯೇಕವಾಗಿ ಅವನ ಹೆಸರಿನಲ್ಲೇ "ಬೇಂಕ"ನಲ್ಲಿಟ್ಟಿದ್ದರು.

ಸುನಂದೆಯು ತನ್ನ ಮೆಟ್ರಿಕ್ ಮುಗಿಸಿ ಕಾಲೇಜಿಗೆ ಹೋಗುತ್ತಿದ್ದಳು. ದಿನದಂತೆ ಬೆಳೆದು ಬಂದ ಮೈತ್ರಿ ರಾವಲನೊಡನೆ ವಿಹಾರ, ಚಿತ್ರ ನೋಡುವದು ಒಂದೇ ಕಾರಿನಲ್ಲಿ ಒಟ್ಟಿಗೆ ಸಂಚರಿಸುವದು ಮೊದಲಾದ ಕಾರ್ಯಕ್ರಮಗಳಿಂದ ಮೊದಲ್ಗೊಂಡು ಪ್ರತಿದಿನಾ ಇಬ್ಬರೂ ಸೇರಿ ಹರಟೆ ಹೊಡೆಯುವದೊಂದು "ಮೋಜೇ" ಅವರಿಗಾಗಿತ್ತು! ಮೊದಮೊದಲು ಹುಡುಗರೆಂದು ಕ್ಷಮಾಗುಣದಿಂದ ನೋಡುತ್ತಿದ್ದ—ಶ್ರೀ ಹಾಗೂ ಶ್ರೀಮತಿ ಗುಪ್ತರಿಗೆ ನಿಜ ಪರಿಸ್ಥಿತಿಯನ್ನರಿಯಲು ತಡವಾಗಲಿಲ್ಲ!

ಅಂದು ರಾವಲನು ತನ್ನ ಕೆಲಸ ತೀರಿಸಿ ನಿಯಮಿತ ವೇಳೆಗಿಂತ ಮೊದಲೇ ೧೦ ಘಂಟೆಗೇ ಮನೆಗೆ ಬಂದಿದ್ದ. ರಾವಲನು ಕಚೇರಿಗೆ ಹೋಗಿರುವನೆಂದು ತಿಳಿದು ವೃಜಸೇನರು ತಮ್ಮ ಪತ್ನಿಯೊಂದಿಗೆ ಮಗಳ ವಿಚಾರ ಮಾತನಾಡುತ್ತಿದ್ದರು. ರಾವಲನು ಇದನ್ನೆಲ್ಲ ಕೇಳಿದ. ಅವನ ಎದೆಯಿಂದ ನಿಟ್ಟುಸಿರೊಂದು ಹೊರಬಿತ್ತು! ಸುನಂದೆಯ ಬಗ್ಗೆ ಅವನ ಮನ ಕರಗಿತ್ತು! ಅದು ಕಣ್ಣೀರಲ್ಲಿ ಮುಕ್ತಾಯವಾದೊಡನೆಯೇ ಅಲ್ಲಿಯೇ ಮೇಜಿನ ಮೇಲಿದ್ದ ಕಾಗದದಲ್ಲಿ ಅದೇನೋ ಬರೆದು ಮನೆಯಿಂದ ಹೊರಬಿದ್ದವನೇ ಅದೆತ್ತಲೋ ಮಾಯವಾದ! ಅವನು ಮನೆಯಿಂದ ಹೊರಬಿದ್ದುದನ್ನು ನೋಡಿದವಳು ಅವರ ಮನೆಯ ಊಳಿಗದವಳು. ಬಾಗಿಲಕ್ಕೆ ಕೀಲಿ ಹಾಕದೆ ಹೋಗಿದ್ದನ್ನು ತಿಳಿದು, ತಾನೇ ಬಾಗಿಲಿಗೆ ಕೀಲಿಹಾಕಿ ಬೀಗದ ಕೈ ಕೊಡಲು ಅಮ್ಮನವರನ್ನು ಅರಸುತ್ತ ಹೊರಟಳು.

ಸಾಯಂಕಾಲದ ತನಕ ರಾವಲನು ಹಿಂದಿರುಗಲಿಲ್ಲ. ಸುನಂದಾ ೫ ಘಂಟೆಗೆ ಕೋಲೇಜ ಬಿಟ್ಟವಳೇ ರಾವಲನಿಗಾಗಿ ದಾರಿ ಕಾಯುತ್ತ ಮನೆಗೆ ಬಂದಳು. "walk"ಗೆ ಹೋಗುವ ವೇಳೆಗೆ ರಾವಲ ದಿನಾ ಕಚೇರಿಯಿಂದ ತಿರುಗುತ್ತಿದ್ದ! ಕಚೇರಿಯಿಂದ ಬಂದ ಗುಮಾಸ್ತನೊಬ್ಬನು ರಾವಲಿಂದು ಕಚೇರಿಗೆ ಬರಲಿಲ್ಲ ಎಂದ. ಅಷ್ಟರಲ್ಲಿ ಊಳಿಗದವಳು ಬಂದು "ಸಣ್ಣ ರಾಯರಿಂದು ರೂಮಿಗೆ ಕೀಲಿ ಹಾಕದೆ ಬೆಳಗಿನ ೧೧ ಘಂಟೆಗೇ ಹೋಗಿದ್ದಾರೆ. ರೂಮಿಗೆ ನಾನೇ ಕೀಲಿ ಹಾಕಿದೆ. ಇಗೊಳ್ಳಿ ಕೀಲಿ" ಎನ್ನುತ್ತಾ ಕೀಲಿಯನ್ನು ಕೊಟ್ಟಳು. ಇಷ್ಟರಲ್ಲಿ ಶ್ರೀಮತಿ ಗುಪ್ತಾರವರೂ ಬಂದರು. ಅವರಿಗಿದ್ದೆಲ್ಲ ಕೇಳಿ "ನೀನು ಓದಿ ಕೊಂಡಿರಮ್ಮಾ ಅವನೇನು ಬಂದೇ ಬರುತ್ತಾನೆ. ಏನೋ ಕೆಲಸವಿರಬಹುದು" ಎಂದರು. ಸುನಂದೆ ತನ್ನ ರೂಮಿನತ್ತ ತೆರಳಿ ಕಾಫಿ ಕುಡಿದು ಬಂದು ತಿರುಗಿ ರಾವಲನ ಬರುವಿಕೆಯ ಬಗ್ಗೆ ತಳಮಳಿಸುತ್ತಾ ಕುಳಿತಳು.

ರಾತ್ರಿ ೮ ಘಂಟೆಗೆ ಮನೆಗೆ ಮರಳಿದ ವೃಜಸೇನರಿಗೆ ರಾವಲನಿಂದು ಬರಲಿಲ್ಲವೆಂಬುದನ್ನು ತಿಳಿದೊಡನೆ ವಜ್ರಾಘಾತವಾದಂತಾಯಿತು! ಅದೂ ೧೧ ಘಂಟೆಗೆ ಅವನು ರೂಮು ಬಿಟ್ಟಿದ್ದಾನೆಂದಾಗ ಇನ್ನೂ ಅಧಿಕ ಮನೋವೇದನೆಯಾಯಿತು. ವೃಜಸೇನರು ತಮ್ಮ ಮಾತುಕತೆ ನಡೆದ ವೇಳೆ ಅವನು ಇಲ್ಲೇ ಇದ್ದನೆಂದು ಊಹಿಸಿದರು. ಅದರ ಪರಿಣಾಮವೇ ಅವನು ಬಾರದಿರಲು ಕಾರಣವೆಂದು ಗ್ರಹಿಸಿದವರೇ— "ಅವನ ರೂಮಿನ ಬೀಗದ ಕೈಯಲ್ಲಿದೆ?" ಎಂದು ಅರಚುತ್ತಾ ಸುನಂದೆಯಿಂದ ಬೀಗದ ಕೈ ತೆಗೆದು ರೂಮನ್ನು ಪ್ರವೇಶಿಸಿದರು.

ರಾವಲನ ರೂಮು ಎಂದಿನಂತೆ ಇತ್ತು! ಅವನ ಬಟ್ಟೆಬರೆಗಳು ಕುರ್ಚಿ ಟೇಬಲ್ ಗೋಡೆಗೆ ತಗಲಿ ಹಾಕಿದ್ದ—ದೇವತೆಗಳ ಫೋಟೊ ಇವೆಲ್ಲ ಅಲ್ಲಾಡದಂತಿದ್ದವು. ವೃಜಸೇನರೂ ಸುನಂದೆಯು ಅವನ ಟೇಬಲ್ಲಿನ ಮೇಲಿದ್ದ ಕಾಗದವನ್ನು ನೋಡಿದರು. ಸುನಂದೆಯೇ ಅದನ್ನು ತೆಗೆದು ಹಿಡಿದು ಓದಿದಳು—

ಪೂಜ್ಯ ಗುಪ್ತರಿಗೆ........

ಕಳೆದ ಒಂದು ವರ್ಷ ೪ ತಿಂಗಳು ತಾವು ತಬ್ಬಲಿಯಾದ ನನ್ನನ್ನು ಸಾಕಿದಿರಿ. ಆ ಋಣವನ್ನು ನಾನು ತೀರಿಸಲಾರದವನಾಗಿದ್ದೇನೆ. ನನ್ನ ಇರುವಿಕೆಯಿಂದ ತಮ್ಮ ಕುಟುಂಬಕ್ಕೆ—ಕಳಂಕ ಬಂದೀತೆಂದು ತಾವೆಣಿಸಿದಾಗ ತಮಗೆಷ್ಟು ಖೇದವಾಗಿರಬಹುದೋ ತಮ್ಮನ್ನಗಲುವಾಗ ನನಗೂ ಅಷ್ಟೇ ಬೇಸರವಾಗಿದೆ. ತಮ್ಮ ಗ್ರಹಿಕೆ ಸರಿಯಾಗಿದೆ. "ನಾನು ಸುನಂದೆಯನ್ನು ಪ್ರೇಮಿಸಿದ್ದೆ" ತಮ್ಮಲ್ಲಿ ಈ ವಿಷಯ ಒಪ್ಪಿಕೊಳ್ಳಲೇಬೇಕು. ತಾವು ತಿಳಿದಂತೆ ಧನಿಕರಾದ ತಮ್ಮ ಮಗಳಿಗೆ ಯಃಕಶ್ಚಿತನಾದ ನಾನು ಸಮ ಜೋಡಿಯಲ್ಲ. ತಾಯಿಯಂತೆ ಒಂದೂಕಾಲು ವರ್ಷ ನನ್ನನ್ನು ಕಾರುಣ್ಯದಿಂದ ನೋಡಿದ ಶ್ರೀಮತಿ ಗುಪ್ತಾರವರಿಗೆ ಬಾಲಕನ ವಂದನೆ ತಿಳಿಸಿರಿ.

ನಾನು ತಮ್ಮೆಲ್ಲರಿಂದ ಬಹುದೂರನಾಗಲು ಯತ್ನಿಸಿದ್ದೇನೆ. ನನ್ನನ್ನು ಹುಡುಕಿಸುವ ಅವಶ್ಯಕತೆಯಿಲ್ಲ! ನನ್ನ ಲೆಕ್ಕದಲ್ಲಿ ಬೇಂಕಿನಲ್ಲಿದ್ದ ಹಣ 3200ರ ಪೈಕಿ 20 ರೂಪ್ಯಾ ನನ್ನ ದಾರಿಖರ್ಚಿಗೆ ತೆಗೆದುಕೊಂಡು ಉಳಿದವನ್ನು ನಿಮ್ಮ ಹೆಸರಿನಲ್ಲೇ—"Nominate" ಮಾಡಿಬಂದಿದ್ದೇನೆ.— ....ನನ್ನ....ಇಲ್ಲ...ನಿಮ್ಮ ಸುನಂದೆಗೆ ನನ್ನಗಲುವಿಕೆಯಿಂದ ಏನೂ ಬೇಸರವಾಗದಂತೆ ನೋಡಿಕೊಳ್ಳಿರಿ....ಅವಳ ಮೃದು ಮನಕ್ಕೆ ನನ್ನಗಲುವಿಕೆಯ ಆಘಾತವನ್ನು ತಡೆದುಕೊಂಡು ಹೋಗುವ ಧೈರ್ಯವನ್ನು ದೇವರು ಕೊಡಲೆಂದು ನಾನು ಹಾರೈಸುತ್ತೇನೆ.

ನನ್ನಿಂದ ಇನ್ನೊಂದು ತಪ್ಪಾಗಿದೆ! ಅನ್ನವಿತ್ತ ನಿಮ್ಮಲ್ಲಿ ನಾನು ತಿಳಿಸಲೇಬೇಕು. ನಾನು ಶೀಖ ಜಾತಿಯವ. ನನ್ನೂರು ಹೋಶಿಯಾರಪುರ. ಮಲತಾಯಿಯ ಉಪದ್ರವದಿಂದಾಗಿ ನಾನು ಊರೂರನ್ನಲೆದು ದೈವಲೀಲೆಯಿಂದ ನಿಮ್ಮ ಆಶ್ರಯದಲ್ಲಿದ್ದೆ. ನನ್ನ ತಂದೆಯವರೂ ಇದ್ದಾರೆ. ಅವರ ಹೆಸರು ಬಲದೇವಸಿಂಗ. ಮನೆತನದಿಂದ ದೊಡ್ಡ ರಕ್ತದಲ್ಲಿ ಹೋಶಿಯಾರಪುರದಲ್ಲಿ ಹೆಸರಾದ ಜಮೀನುದಾರರ ಮನೆತನದಲ್ಲಿ ಹುಟ್ಟಿದ್ದೇನೆ. ವಿಧಿಲೀಲೆ—ಯಾರದ್ದಲ್ಲ!—ತಾವು ನನ್ನ ತಪ್ಪನ್ನು ಕ್ಷಮಿಸುವಿರಾಗಿ ನಂಬುತ್ತೇನೆ... ಸುನಂದೆ

(೧೧ನೇ ಪುಟ ನೋಡಿರಿ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು. ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಕೈಗನ್ನಡಿ.

ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಒಂದೂವರೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶುದ್ಧ ಹರಟೆ

ನೀವು ಸುಳ್ಳನ್ನು ಆಡಲು ಬಲ್ಲಿರಾ?

ಇಲ್ಲವಾದರೆ, ಅವಶ್ಯ ಕಲಿತುಕೊಳ್ಳಿ. ಉಪಯೋಗಿ ಕಲೆಗಳಲ್ಲಿ ಇದೂ ಒಂದೆಂಬುದನ್ನು ನೀವು ಕಂಡಿರುವಿರಿ.

'ನೀವು ಯಾವಾಗಲೂ ಸತ್ಯವನ್ನೇ ಹೇಳುವಿರಾ?' ಎಂದು ಪ್ರಶ್ನಿಸಿದರೆ, ಅದಕ್ಕೆ ಉತ್ತರಿಸುವುದು ಸ್ವಲ್ಪ ಕಠಿಣವೆನಿಸೀತು. ಕಾರಣವಿಷ್ಟೇ: ಮನುಷ್ಯನು ತನ್ನ ಬಾಳಿನಲ್ಲಿ ಯಾವುದಾದರೊಂದು ಸಂದರ್ಭದಲ್ಲಿ ಸುಳ್ಳನ್ನು ಹೇಳಲೇ ಬೇಕಾಗುತ್ತದೆ. ಕೊನೆಗೆ ಅಪ್ರಯುಕ್ತವಾಗಿಯಾದರೂ ಸುಳ್ಳನ್ನು ನುಡಿದು ಬಿಡುತ್ತಾನೆ. ಕಡು ಸತ್ಯವಂತನಾದ ಧರ್ಮರಾಯನು ಸಹಾ ಸುಳ್ಳನ್ನು ಹೇಳಲಿಲ್ಲವೆ? ಅವನು 'ಅಶ್ವತ್ಥಾಮನು ಸತ್ತ' ಎಂದು ಆನೆಯನ್ನು ಸಂಭೋದಿಸಿ ಹೇಳಿದರೆ ಅದು ದ್ರೋಣನಿಗೆ 'ಅಶ್ವತ್ಥಾಮನೆಂಬ ತನ್ನ ಸುತನು ಸತ್ತ'ನೆಂಬ ಸುಳ್ಳು ಭಾವನೆಯನ್ನು ಹುಟ್ಟಿಸಲಿಲ್ಲವೆ? ಧರ್ಮವೇ ಮೂರ್ತಿವೆತ್ತಾಗಿ ನೆಲಸಿರುವ ಅಂಥಾ ಕಾಲದಲ್ಲೇ ಸುಳ್ಳು ಹೇಳಲ್ಪಟ್ಟಿತೆಂದ ಮೇಲೆ ಅದೂ ಭಗವಂತನಾದ ಶ್ರೀ ಕೃಷ್ಣನಿಂದಲೇ ಆ ಸುಳ್ಳಿಗೆ ಪ್ರೋತ್ಸಾಹ ದೊರೆತಿತೆಂದ ಮೇಲೆ ಈ ಕಲಿಯುಗದಲ್ಲಿ ಅದರ ಪ್ರಾಬಲ್ಯ ಹೆಚ್ಚಿರುವುದರಲ್ಲಿ ಆಶ್ಚರ್ಯವೇನಿದೆ? ಶ್ರೀ ಕೃಷ್ಣನೇ ಅನೇಕ ವೇಳೆ ಸುಳ್ಳು ಹೇಳಿರುವನೆಂದು ಪುರಾಣದಲ್ಲಿ ಸಹಾ ಉಲ್ಲೇಖವಿದೆ. ಇನ್ನುಳಿದ ವಿಷಯದಲ್ಲಿ ಬೇರೆ ಹೇಳುವುದೇನಿದೆ?

ಈಗಿನ ಕಾಲದಲ್ಲಿ ಮಂತ್ರಿ ಮುಂತಾದ ದೊಡ್ಡ ಅಧಿಕಾರಿಗಳಿಂದ ಹಿಡಿದು ಜವಾನ ಮುಂತಾದ ಕೆಳಮಟ್ಟದ ನೌಕರನವರೆಗೂ ಸುಳ್ಳೇ ವ್ಯವಹರಣೀಯವಾಗಿದೆ. ಮಂತ್ರಿಗಳಂತೂ ದಿನ ಬೆಳಗಾದರೆ ಸಭೆ ಸಮಾರಂಭಗಳ ಅಧ್ಯಕ್ಷತೆ ವಹಿಸಿ ಜನರಿಗೆ 'ನಿಮ್ಮ ಬೇಡಿಕೆಗಳನ್ನು ನಡೆಸಿಕೊಡಲಾಗುವುದು' ಎಂಬ ಹಸಿ ಸುಳ್ಳನ್ನು ಬಾಯುಪಚಾರ ಮಾಡಿದಂತೆ ಹೇಳುತ್ತಾರೆ. ಆ ಬೇಡಿಕೆಗಳ ಮಾತಂತೂ ಇರಲಿ, ತಮಗೆ ಸನ್ಮಾನ ಮಾಡಿದ ಊರಿನ ಹೆಸರು ಸಹಾ ನೆನಪಿರುವುದಿಲ್ಲ ಕೆಲವು ಸಲ! ಇನ್ನು ಸಾಧಾರಣಮಟ್ಟದ ಅಧಿಕಾರಿಗಳ ವಿಚಾರ. ನಾವು ಯಾವುದಾದರೂ ವಿಷಯವಾಗಿ ಒಂದು ಆಫೀಸಿಗೆ ಅರ್ಜಿ ಹಾಕಿದರೆ, ವರ್ಷಾನುಗಟ್ಟಲೆಯಾದರೂ ಅರ್ಜಿಗೆ ಮಾರುತ್ತರ ಸಹಾ ಬರುವುದಿಲ್ಲ. ಕೊನೆಗೆ ಗತ್ಯಂತರವಿಲ್ಲದೆ ಆ ಆಫೀಸಿಗೇ ಹೋಗಿ ವಿಚಾರಿಸಿದಾಗ, 'ನಿಮ್ಮ ಅರ್ಜಿಯೇ ಬಂದಿಲ್ಲ'ವೆಂಬ ಪಲ್ಲವಿಯನ್ನು ನುಡಿಯುತ್ತಾರೆ. ಆದರೆ (ನಾವು ಬುದ್ಧಿವಂತರಾದರೆ) ಅವರ ಕೈಯನ್ನು ಬಿಸಿಮಾಡಿದಾಗ ಯಾವುದೋ ಫೈಲಿನ ಮೂಲೆಯಲ್ಲಿ ಹುದುಗಿಕೊಂಡಿರುವ ನಮ್ಮ ಅರ್ಜಿಯನ್ನು ಹುಡುಕಿತೆಗೆದು ಅದಕ್ಕೆ ಗಮನಕೊಡುತ್ತಾರೆ.

ಸಾಮಾನ್ಯ ಜನತೆಯ ವಿಚಾರವಾಗಿ ಹೇಳುವುದಾದರೆ ಸುಳ್ಳು ನೀರುಕುಡಿದಷ್ಟು ಸುಲಭವಾಗಿ ಅವರ ನಿತ್ಯ ವ್ಯವಹಾರದಲ್ಲಿ ಹರಿಯುತ್ತಿರುತ್ತದೆ ಎನ್ನಬಹುದು. ಮನೆಮಾಲಿಕ ಬಾಡಿಗೆ ವಸೂಲಿಗೆ ಬಂದಾಗ ತಾನು ಒಳಗೆ ಇದ್ದರೂ ಕೂಡ ಹೆಂಡತಿಯ ಹತ್ತಿರ 'ಅವರಿಲ್ಲ' ಎಂದು ಹೇಳುವಂತೆ ಸೂಚಿಸುವುದು ಸುಳ್ಳಲ್ಲವೆ? ಈ ಚಾಳಿ ದೊಡ್ಡವರಿಂದ ಮಕ್ಕಳಿಗೆ ಸಹವಾಸ ದೋಷದಿಂದಾಗಿ ಕಲಿಸಲ್ಪಡುತ್ತಿದೆಯೆಂದರೆ ಆಶ್ಚರ್ಯವೆನಿಸದು. ಮನೆಯಲ್ಲಿ ಹಿರಿಯರೇ ಸುಳ್ಳನ್ನು ಪದೇ ಪದೇ ಹೇಳುತ್ತಿರುವಾಗ ಕಿರಿಯರು ಮಾತ್ರ ಸುಮ್ಮನಿರುವುದು ಸಾಧ್ಯವೇ? ಅವರೂ ತಮ್ಮ ಸ್ನೇಹಿತರೊಡನೆ ಸುಳ್ಳು ಹೇಳಲು ಶುರುಮಾಡುತ್ತಾರೆ. ಒಮ್ಮೆ ಒಬ್ಬ ದೊಡ್ಡ ಮನುಷ್ಯರ ಮಗ ಶಾಲೆಗೆ ಹೋಗಲು ಮನಸ್ಸಿಲ್ಲದೇ ಶಾಲೆಗೆ ಹೀಗೆಂದು ಫೋನ್ ಮಾಡಿದನಂತೆ: 'ಹಲೋ ನಮಸ್ಕಾರ ಹೇಳ್ತಾರೆ, ಮೋಹನನು ಈ ದಿನ ಶಾಲೆಗೆ ಬರುವುದಿಲ್ಲವಂತೆ,' ಪಾಪ, ಅವನು ಸುಳ್ಳು ಹೇಳುವುದರಲ್ಲಿ ಅನನುಭವಿಕನಿರಬೇಕು! ಸ್ತ್ರೀಯರಿಗಂತೂ ಸುಳ್ಳನ್ನುವುದು ಕರತಲಾಮಲಕವಾಗಿ ಬಂದಿದೆಯೆನ್ನಬಹುದು. ಅವರ ನಿತ್ಯ ಹರಟೆಯಲ್ಲಿ ಸುಳ್ಳೇ ಪ್ರಧಾನ ಪಾತ್ರ ವಹಿಸುವುದು. ಮನೆಯಲ್ಲಿ ಕಾಫಿ ಪುಡಿಯಿದ್ದರೂ ಸಹಾ ಪಕ್ಕದ ಮನೆಗೆ ಹೋಗಿ, 'ನೋಡಿ ಕಮಲಮ್ಮನೋರೆ, ನಮ್ಮ ಮನೆಯಲ್ಲಿ ಕಾಫಿ ಪುಡಿ ಖರ್ಚಾಗಿದೆ, ಆದ್ದರಿಂದ ಒಂದು ಚಮಚ ಕಾಫಿಪುಡಿ ಕೊಡುತ್ತೀರಾ, ನಾಳೆ ನಮ್ಮೆಜಮಾನರು ತಂದಾಗ ವಾಪಸುಕೊಡುತ್ತೇನೆ' ಎಂದು ಸಾಲ ಕೇಳಿ ಕಾಫಿಪುಡಿ ಪಡೆಯುವ ಹೆಂಗಸಿಗೆ ಆ 'ನಾಳೆ'ಯೆಂಬುದು ಬರುವುದು—ಒಂದು ವರ್ಷದ ನಂತರವೇ ಇರಬೇಕು. ತನಗೆ ಜ್ವರಬರದಿದ್ದರೂ ಜ್ವರ ಬಂದಿದೆಯೆಂದು ನಟಿಸಿ ಗಂಡನ ಕೈಲಿ ಅಡಿಗೆ ಮಾಡಿಸಿ ಉಣ್ಣುವ ಹೆಂಗಸರು ಎಷ್ಟು ಮಂದಿ ಇಲ್ಲ, ಯೋಚಿಸಿನೋಡಿ.

ವ್ಯಾಪಾರಕ್ಷೇತ್ರದಲ್ಲಂತೂ ಸುಳ್ಳು ಪ್ರಧಾನ ಪಾತ್ರವಹಿಸಿದೆಯೆನ್ನಬೇಕು. ಅದಿಲ್ಲದೇ ಅವರ ವ್ಯಾಪಾರ ಸಾಗುವುದಿಲ್ಲ. ಬಿಸಿ ಇಡ್ಲಿಯೆಂದು ನಿನ್ನೆಮಾಡಿದ ಇಡ್ಲಿ ಕೊಡುವ ಹೋಟೆಲುಗಳೂ, ಬಣ್ಣಹೋಗದ ಬಟ್ಟೆಗಳೆಂದು ನೀರಿಗೆ ಹಾಕಿದಕೂಡಲೇ ಬಣ್ಣಬಿಡುವ ಬಟ್ಟೆಗಳನ್ನು ಕೊಡುವ ಜವಳಿ ಅಂಗಡಿಗಳೂ ನಮ್ಮ ಪೇಟೆಯಲ್ಲಿ ಎಷ್ಟಿಲ್ಲ ಹೇಳಿ! ಹಳೇ ಸಿಹಿತಿಂಡಿಯನ್ನೆಲ್ಲ ಸೇರಿಸಿ ಹೊಸನಮೂನೆಯ ಸಿಹಿ ತಿಂಡಿ ಮಾಡಿಕೊಟ್ಟಾಗ ಅದನ್ನು ತಿನ್ನುವ ನಾವೆಷ್ಟು ಮೂರ್ಖರಾಗಿರಬೇಕು? ಅದನ್ನೇ ಬಾಯಿಚಪ್ಪರಿಸಿ ತಿಂದು ಹೋಟೆಲಿನವನ ಹಣತೆತ್ತು ಹೊರಬಂದು ಸ್ನೇಹಿತರಲ್ಲಿ ಹೊಗಳುತ್ತೇವಲ್ಲದೇ ನಿಜಸ್ಥಿತಿಯನ್ನು ತಿಳಿಯಲು ಬಯಸುವುದಿಲ್ಲ. ಇದು ನಿಜವಾಗಿಯೂ ನಮ್ಮ ಮನೋದೌರ್ಬಲ್ಯವೆನ್ನಬೇಕು. ಪುಸ್ತಕದ ಅಂಗಡಿಯವನು 'ಈ ಕಾದಂಬರಿಯಂಥಾ ಕಾದಂಬರಿ ಈ ವರೆಗೂ ಪ್ರಕಟವಾಗಿಲ್ಲ'ವೆಂದು ಹೊಗಳಿದಾಗ ಒಂದೂವರೆ ರೂಪಾಯಿ ತೆತ್ತು ಆ ಪುಸ್ತಕವನ್ನು ಕೊಂಡಾಗ ಅದರಲ್ಲಿರುವುದು ಬರಿಯ ಜೊಳ್ಳೇ ಆಗಿದ್ದರೆ ಪುಸ್ತಕದ ಅಂಗಡಿಯವನನ್ನು ದೂರಬೇಕೇ ಅಥವಾ ಕಾದಂಬರಿಕಾರನನ್ನು ದೂರಬೇಕೆ? ನನ್ನ ಅಭಿಪ್ರಾಯದಲ್ಲಿ ಯಾವುದೂ ಬೇಡ, ಪುಸ್ತಕದ ಅಂಗಡಿಯವನು ಹೇಳಿದ 'ಸುಳ್ಳ'ನ್ನು ಹೊಗಳಬೇಕು! ಆ ಸುಳ್ಳಿನ ಪ್ರಭಾವದಿಂದಲೇ ಅಲ್ಲವೇ ನಾವು ಆ ಜೊಳ್ಳು ಕಾದಂಬರಿಯನ್ನು ತೆಗೆದು ಕೊಂಡದ್ದು!

ಕೊನೆಯದಾಗಿ ಯಾರಾದರೂ "ಇಷ್ಟೆಲ್ಲಾ ಬರೆದ ನೀನು ಮಹಾ ಸತ್ಯವಂತನೋ?" ಎಂಬ ಪ್ರಶ್ನೆಯನ್ನು ಮಾತ್ರ ಹಾಕಬೇಡಿ! ಯಾಕೆಂದರೆ ಎಲ್ಲರಂತೆ ನಾನೂ ನರಮನುಷ್ಯನೇ ನೋಡಿ!

—ಎ. ಗಣಪಯ್ಯ ಅಲ್ಸೆ, ಐರೋಡಿ.

ಆರೋಗ್ಯ ಭಾಗ್ಯ

ಆರೋಗ್ಯವಂತರಾಗಲು ನೀವು ಬಯಸುತ್ತೀರಾ?

ನಿಶ್ಚಯವೂ ಸೂರ್ಯನ ಕೋಮಲ ಕಿರಣಗಳಿಗೆ ಮೈಯೊಡ್ಡುವುದರಿಂದ ಮಾತ್ರ ಇದು ಸಾಧ್ಯ.

ಭಾರತೀಯನೊಬ್ಬನು ಸ್ವಿಜರ್‌ಲೇಂಡಿನ ಹೋಟೆಲೊಂದರಲ್ಲಿ ಉಳಕೊಂಡಿದ್ದನು. ಕೆಲದಿನಗಳಲ್ಲಿಯೇ ಅವನ ಕೋಣೆಯ ಪಕ್ಕದಲ್ಲಿ ಫ್ರಾನ್ಸಿನ ಒಂದು ಕುಟುಂಬವೂ ಬಿಡಾರ ಮಾಡಿತು. ಈ ಕುಟುಂಬದ ಮಗಳೊಬ್ಬಳಿಗೆ ಎಲುಬುಗಳ ಕ್ಷಯವು ತಗಲಿದ್ದು ಆಕೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಳು, ಅವರ ಇನ್ನೊಬ್ಬ ಆರೇಳು ವರ್ಷದ ಹುಡುಗಿಯು ಈತನೊಡನೆ ಹೊಕ್ಕು ಬಳಕೆಯನ್ನು ಬೆಳೆಸತೊಡಗಿದಳು. ಒಂದು ದಿನ ಅವಳು ಅವನ ಮೈಚರ್ಮವನ್ನು ನವರುತ್ತ ಕೇಳಿದಳು: "ನಿಮ್ಮ ಚರ್ಮ ಎಷ್ಟು ಸುಂದರವಾಗಿದೆ? ನೀವು ಯಾವ ಮುಲಾಮು ಅಥವಾ ಲೋಶನನ್ನು ಬಳಸಿಕೊಳ್ಳುತ್ತೀರಿ?"

ಆಕೆಯ ಪ್ರಶ್ನೆ ಕೇಳಿ ಭಾರತೀಯನಿಗೆ ನಗು ಬಂತು. "ಲೋಶನ್ ಅಥವಾ ಮುಲಾಮು ಏಕೆ? ನನ್ನ ಚರ್ಮದ ಗುಣವೇ ಹಾಗಿದೆ" ಎಂದನವನು. ಈ ಮಾತಿನಲ್ಲಿ ಆಕೆಗೆ ವಿಶ್ವಾಸ ಹುಟ್ಟಲಾರದು. ಆಕೆ ಆತನ ಕೈಚರ್ಮವನ್ನು ತಿಕ್ಕಿ ನೋಡಿ, ನಿರಾಶಳಾದಳು.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸೂರ್ಯನ ತಾಪ ಕಡಿಮೆ. ಅವರು ಬಿಸಿಲು ಎಂದರೆ ಜೀವಬಿಡುತ್ತಾರೆ. ಬಿಸಿಲಿಲ್ಲದುದರಿಂದಲೇ ಅಲ್ಲಿನವರ ಚರ್ಮವು ಹಳದಿಯೋ ಅಥವಾ ಇನ್ನಾವ ಕೆಟ್ಟ ಬಣ್ಣವನ್ನೋ ಹೊಂದಿರುತ್ತದೆ. ಇದರಿಂದಾಗಿಯೇ ಅವರಲ್ಲಿ ಚರ್ಮರೋಗವು ಹೆಚ್ಚು ಮತ್ತು ಈ ರೋಗ ಅನುವಂಶಿಕ ಅಥವಾ ಪರಂಪರಾಗತವಾಗಿರುತ್ತದೆ. ಈ ಜನರು ಬಿಸಿಲನ್ನು ಕಾಣಲು ತವಕಪಡುತ್ತಾರೆ; ಬಿಸಿಲಸ್ನಾನ ಮಾಡುತ್ತಾರೆ ಎಂದರೆ, ಉಷ್ಣವಲಯದ ಜನರು ನಂಬಲಾರರು. ರಜಾದಿನಗಳಲ್ಲಿ ಅವರು ಸೂರ್ಯನ ಬಿಸಿಲಿನ ಲಾಭಪಡೆಯಲು ತಹತಹಿಸುತ್ತಿರುವುದು ಖಚಿತ.

ಮಿತಿಯಲ್ಲಿ ಬಿಸಿಲು ಚರ್ಮಕ್ಕೆ ಬಡಿಯುವುದು ಆರೋಗ್ಯದೃಷ್ಟಿಯಿಂದ ಅವಶ್ಯಕ. ಬಿಸಿಲಿನ ಕೋಮಲ ಸ್ಪರ್ಶದಿಂದ ಬಲ, ಸ್ಫೂರ್ತಿ ಮತ್ತು ಕೆಂಬಣ್ಣಗಳು ಬರುತ್ತವೆ. ಇಂತಹರಿಗೆ ಬೇಗನೆ ಯಾವ ರೋಗವೂ ಬರುವುದಿಲ್ಲ. ಪ್ರಾಚೀನ ಕಾಲದ ಯುನಾನಿಗಳು ಕಪಾಲದ ಎಲುಬುಗಳಿಗೆ ಬಿಸಿಲು ತಾಗುವಂತೆ ಮೋಟಾದ ಕೂದಲಿರಿಸಿಕೊಳ್ಳುತ್ತಿದ್ದರೆಂದೂ ಸಾಮ್ರಾಟ ಜೂಲಿಯಸನಿಗೆ ಸಬಲ ಶರೀರಿಯಾಗಲು ಸೂರ್ಯನ ಬಿಸಿಲಿನ ಸ್ನಾನ ಅಗತ್ಯವೆಂದು ವೈದ್ಯ ಸಲಹೆಯಿತ್ತನೆಂದೂ ತಿಳಿಯುತ್ತದೆ. ಇದಕ್ಕಾಗಿಯೇ ದೊಡ್ಡ ದೊಡ್ಡ ಮನೆಗಳ ಮೇಲೆ ಸೂರ್ಯ ಕಿರಣಸ್ನಾನಕ್ಕೆ ಯೋಗ್ಯ ಏರ್ಪಾಡಿದ್ದುವೆಂದೂ ಉಲ್ಲೇಖವಿದೆ.

ಸೂರ್ಯನ ಕಿರಣಗಳಲ್ಲಿ ಒಂದು ವಿಧದ ಜೀವಶಕ್ತಿ ಇದೆ. ಇವು ನಮ್ಮ ಶರೀರದ ಮೇಲೆ ಬೀಳುವಾಗ ಈ ಶಕ್ತಿಯೂ ಅಂತರ್ಮುಖವಾಗಿ ಹೋಗಿ, ಚರ್ಮ, ರಕ್ತ, ಎಲುಬು ಮತ್ತು ಮಾಂಸಗಳನ್ನು ಉತ್ತಮ ರೀತಿಯಲ್ಲಿ ಕಾರ್ಯಪ್ರವೃತ್ತರಾಗುವಂತೆ ಮಾಡುತ್ತವೆ

ಚರ್ಮವು ಶರೀರದ ಬಾಹ್ಯ ಆವರಣ ಮಾತ್ರವಲ್ಲದೇ ಶರೀರದ ಅಂತಸ್ಥಗ್ರಂಥಿಗಳು, ಸ್ನಾಯುಗಳಿಗೆ ರಕ್ಷಕವೂ ಹೌದು. ಶರೀರದಲ್ಲಿ ಯಾವಾಗಲೂ ಶಾಖ ಪ್ರಸ್ತುತವಾಗಿರುವುದು. ಈ ಶಾಖದಿಂದಾಗಿಯೇ ನಾವು ಕೆಲಸ ಮಾಡುತ್ತೇವೆ. ಶಾಖವನ್ನು ಮಿತಿಯಲ್ಲಿರಿಸಲು ಉಷ್ಣ ಪ್ರದೇಶದ ಜನರು ತಣ್ಣಗಿನ ಸ್ಥಳಗಳಿಗೂ ತಣ್ಣಗಿನ ಸ್ಥಳಗಳವರು ಉಷ್ಣದೆಡೆಗೂ ಬರುತ್ತಿರುತ್ತಾರೆ. ನಮ್ಮ ಮೈಯ ಚರ್ಮವು ಸ

(೧೦ನೇ ಪುಟ ನೋಡಿ)

ಸ್ಥಾಪನೆ; 1906] ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ. 20,00,000/-
ಕ್ಷೇಮನಿಧಿ	—	ರೂ 14,40,000/-
ಠೇವಣಾತಿಗಳು	—	ರೂ. 7,19,35,000/-
ಸಾಲಗಳು	—	ರೂ. 3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ. 9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ.

The Canara Banking Corporation Ltd.

Estd:- 1906] [H. O. UDIPI (S. India)

ನೋವುಗಳ ಅತ್ಯುತ್ತಮ ಸಂಹಾರಿಣಿ.



ಅಮೃತಾಂಜನ

ಶಿಲ್ಪ ಕಲೆ

ಹಳೆ ಚಾಂದೇರಿಯ ಅನರ್ಘ್ಯ ಶಿಲ್ಪಕಲೆ

ಒಂಭತ್ತನೆಯ ಶತಮಾನದ ಈ ಜೈನ ಶಿಲ್ಪವು ಸರ್ವ ಜನ ಮನಹಾರಿಯಾಗಿದೆ.

ಬೂಢೀ ಚಾಂದೇರಿ(ಹಳೆ ಚಂದೇರಿ)ಯು ಮಧ್ಯ ಪ್ರದೇಶದ ಗುನಾ ಜಿಲ್ಲೆಯ ಚಂದೇರಿಯಿಂದ ಹನ್ನೊಂದು ಮೈಲು ವಾಯುವ್ಯಕ್ಕಿದೆ. ಚಂದೇರಿ—ಶಿವಪುರಿಗಳ ನಡುವಿನ ರಸ್ತೆಯ ಆರನೆಯ ಮೈಲು ಕಲ್ಲಿನ ಹತ್ತಿರ ಒಂದು ಕಾಲು ದಾರಿಯು ಹಳೆ ಚಾಂದೇರಿಗೆ ಹೋಗುತ್ತದೆ. ಬೆಟ್ಟ ಕಾಡುಗಳ ನಡುವೆ ಇದು ಮುಂದುವರಿಯುತ್ತದೆ. ಸುತ್ತು ಮುತ್ತಲೂ ದಟ್ಟವಾದ ಅರಣ್ಯಗಳು ತುಂಬಿವೆ. ಪ್ರಾಕೃತಿಕದೃಶ್ಯವು ಮನೋರಂಜಕವೂ ಆಗಿದೆ.

ಪೌರಾಣಿಕ ಕಥೆಗಳಿಂದ ಈ ಬೂಢೀ ಚಾಂದೇರಿಯು ಚೇದಿ ರಾಜ್ಯದ ರಾಜಧಾನಿಯಾಗಿತ್ತು ಎಂದು ತಿಳಿದು ಬಂದಿದೆ. ಇದರ ಹೆಸರು ಮೊದಲು ಚಾಂದೇರಿಯೆಂದೇ ಇತ್ತು. ಹತ್ತನೆಯ ಶತಮಾನದಲ್ಲಿ ಇದು ಸ್ವತಂತ್ರವಾಗಿಯೇ ಇತ್ತು. ಆ ಸಮಯದಲ್ಲಿ ಅಲ್ಲಿ ಪ್ರತಿಹಾರ ವಂಶದ ಅರಸರು ರಾಜ್ಯಭಾರ ಮಾಡುತಿದ್ದರು. ಈ ವಂಶದ ಏಳನೆಯ ಅರಸನಾದ ಕೀರ್ತಿಪಾಲನು ಈಗಿನ ಚಾಂದೇರಿಯನ್ನು ಕಟ್ಟಿಸಿ ಅದನ್ನು ರಾಜಧಾನಿಯಾಗಿ ಮಾಡಿಕೊಂಡನು. ಚಾಂದೇರಿಯ ಕೋಟೆಯ ಶಿಲಾಲೇಖವೊಂದರಲ್ಲಿ ಪ್ರತಿಹಾರಿವಂಶದ ಹದಿಮೂರು ಅರಸರ ನಾಮಾವಳಿಯಿದೆ. ಈ ಶಿಲಾಲೇಖವು ಈಗ ಗ್ವಾಲಿಯಾರದ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ.

ಈಗ, ಇಲ್ಲಿ ನಾಲ್ಕು ಪ್ರಾಚೀನ ಜೈನ ಮಂದಿರಗಳು, ಒಂದು ಮಾನಸ್ತಂಭ ಹಾಗೂ ಒಂದು ಸಂಗ್ರಹಾಲಯವಿವೆ. ಈ ಮಂದಿರಗಳ ಜೀರ್ಣೋದ್ಧಾರವಾಗಿರುವುದರಿಂದ, ಪ್ರಾಚೀನ ಕಲಾತ್ಮಕತೆಯು ನಷ್ಟವಾಗಿದೆ. ಕೇವಲ ಒಂದೇ ದೇವಾಲಯವು ಪ್ರಾಚೀನ ರೂಪದಲ್ಲಿದೆ. ವಾಸ್ತುಕಲೆಯ ದೃಷ್ಟಿಯಿಂದ ಈ ಮಂದಿರವು ಬಹಳ ಮಹತ್ವಪೂರ್ಣವಾಗಿದೆ. ಇದರ ಪ್ರವೇಶದ್ವಾರವು ಬಹಳ ಸುಂದರ ಕಲಾಪೂರ್ಣವಾಗಿದೆ. ಇದೇ ಹೆಬ್ಬಾಗಿಲಿನ ಮೇಲೆ ನವಗ್ರಹಗಳ ಮೂರ್ತಿಗಳಿವೆ. ಇತರ ಎಲ್ಲ ದೇವಾಲಯಗಳ ಬಾಗಿಲುಗಳೂ ಇದೇ ರೀತಿಯಲ್ಲಿ ಅಲಂಕರಿಸಲ್ಪಟ್ಟಿವೆ. ಎಲ್ಲ ದೇವಾಲಯಗಳ ಮಾಡಗಳೂ ಒಂದೇ ರೀತಿಯ ಕಲ್ಲುಗಳಿಂದ ನಿರ್ಮಿತವಾಗಿವೆ. ನೂರಾರು ಮಣ ಭಾರವುಳ್ಳ ಈ ಕಲ್ಲುಗಳು ಅಷ್ಟೆತ್ತರಕ್ಕೆ ಹೇಗೆ ಎತ್ತಲ್ಪಟ್ಟುವು ಎಂಬುದನ್ನು ಯೋಚಿಸಿದರೆ ನಮಗೆ ಆಶ್ಚರ್ಯವಾಗುತ್ತದೆ. ಪ್ರಸಿದ್ಧ ಜರ್ಮನ್ ವಿದ್ವಾಂಸರಾದ ಡಾ| ಕ್ಲಾಸ್‌ಬ್ರೂನ್‌ರು ಇಲ್ಲಿ ಸುಮಾರು ಒಂದು ತಿಂಗಳಷ್ಟು ಕಾಲ ಉಳಿದುಕೊಂಡು ಆಕ್ಕಪಕ್ಕದ ಕಾಡುಗಳಲ್ಲಿ ತಿರುಗಾಡಿ ಪ್ರಾಚೀನ ಜೈನ ಮಂದಿರದ ಅವಶೇಷಗಳನ್ನು ಹುಡುಕಿ ತೆಗೆದರು. ಇನ್ನೂ ಇಲ್ಲಿ ಸಂಶೋಧನೆಗಳನ್ನು ನಡೆಸಿದ ಪಕ್ಷದಲ್ಲಿ ಮತ್ತೆ ಹಲವಾರು ಅವಶೇಷಗಳು ದೊರೆಯಬಹುದು ಎಂದವರು ಹೇಳಿದ್ದಾರೆ.

ಮೂರ್ತಿಕಲೆಯ ದೃಷ್ಟಿಯಿಂದ ಈ ಕ್ಷೇತ್ರವು ಬಹು ಮಹತ್ವದ್ದಾಗಿದೆ. ಇಲ್ಲಿನ ಮೂರ್ತಿಕಲೆಯು ಬಹಳ ಪರಿಷ್ಕೃತ ಮತ್ತು ಪರಿಮಾರ್ಜಿತ ರೂಪದಲ್ಲಿದೆ. ಇದುವರೆಗೆ ನೂರಾರು ಮೂರ್ತಿಗಳು ಭೂಗರ್ಭದಿಂದ ಹೊರಬಂದಿವೆ; ಅಲ್ಲದೇ ನಾವಿರಾರು ಮೂರ್ತಿಗಳು ಇನ್ನೂ ಭೂಮಿಯಲ್ಲೇ ಅಡಗಿರಬಹುದು. ಇವುಗಳಲ್ಲಿ ಎಲ್ಲ ಮೂರ್ತಿಗಳೂ ಕಲಾದೃಷ್ಟಿಯಿಂದ ಹೀನವಾಗಿಲ್ಲ. ಅಂಗಕದ, ಗಾಂಭೀರ್ಯ ಮತ್ತು ಅಭಿವ್ಯಕ್ತಿ ಎಲ್ಲವುಗಳಲ್ಲೂ ಇವುಗಳು ಸರ್ವಶ್ರೇಷ್ಠವಾಗಿವೆ. ವೈರಾಗ್ಯಭಾವದ ಸಫಲ ಚಿತ್ರಣಮಾಡಿ ಕಲಾಕಾರನು ಪಾಷಾಣದಲ್ಲಿ ಪ್ರಾಣ ಸಂಚಾರವಾಗುವಂತೆ ಸಗಿದ್ದಾನೆ. ಕಲಾದೃಷ್ಟಿಯಿಂದ ಇವುಗಳು ಒಂದನ್ನೊಂದು ಸ್ಪರ್ಧಿಸುತ್ತಿವೆ. ಇವುಗಳಲ್ಲಿ ಯಾವುದ ಅಧಿಕ ಸುಂದರವೆನ್ನುವುದು ಕಷ್ಟ. ಕಿವಿ, ಮೂಗುಗಳ ಕೆತ್ತನೆಯೂ ಆಶ್ಚರ್ಯಕಾರಕವೂ ಹೃದಯಂಗಮವೂ ಆಗಿದೆ.

ತೀರ್ಥಂಕರರ ಹಲವಾರು ಮೂರ್ತಿಗಳು ಇಲ್ಲಿವೆ. ಪದ್ಮಾಸನ ಹಾಕಿರುವಂತೆ ಮತ್ತು ನಿಂತಿರುವಂತೆ—ಎರಡೂ ಪ್ರಕಾರದ ವಿಗ್ರಹಗಳಿವೆ. ಪದ್ಮಾಸನ ಪ್ರತಿಮೆಗಳ ಕೆಳಗಡೆ ಇರುವ ಕೆತ್ತನೆಯೂ ಕಲಾಪೂರ್ಣವಾಗಿವೆ. ಪ್ರತಿ ಮೂರ್ತಿಯ ಹಿಂಭಾಗದ ಶಿರೋಪಾರ್ಶ್ವದಲ್ಲಿ ಅಲಂಕೃತ ಪ್ರಭಾಮಂಡಳವಿದೆ.

ಈ ಮೂರ್ತಿಗಳ ನಿರ್ಮಾಣ ಕಾಲ ಸುಮಾರು ಒಂಭತ್ತು ಮತ್ತು ಹತ್ತನೆ

(೯ನೇ ಪುಟ ನೋಡಿರಿ)

ಗ್ರಾಮಾರೋಗ್ಯಕ್ಕೆ ಪ್ರಾಥಮಿಕ ಪ್ರಯತ್ನ

ಕಲ್ಕತ್ತೆಯ ಸಮೀಪದ ಗ್ರಾಮೀಣ ಆರೋಗ್ಯ ಕೇಂದ್ರದ ತರಬೇತಿದಾರನು ಪಶ್ಚಿಮಬಂಗಾಳದ ಗ್ರಾಮಸ್ಥರಿಂದ ಮಧುರ ಸ್ವಾಗತವನ್ನು ಪಡೆಯುತ್ತಾನೆ. ಏಕೆಂದರೆ, ತರಬೇತಿದಾರನು ಭಾಷಣ ಬಿಗಿಯುವುದಕ್ಕಾಗಿ ಬಂದಿರದೆ, ಗ್ರಾಮೀಣ ಜನತೆಯ ಆರೋಗ್ಯದ ಸಮಸ್ಯೆಗಳನ್ನು ಅರಿತುಕೊಳ್ಳುವ ಸಲುವಾಗಿ ಆಗಮಿಸಿರುತ್ತಾನೆ.

ರಾಷ್ಟ್ರದ ತೀರ ಮೂಲೆಯಲ್ಲಿ ದಿನಗಳೆಯುತ್ತಿರುವ ಜನರಿಗೂ ಆವಶ್ಯಕ ಪ್ರಾಥಮಿಕ ವೈದ್ಯಕೀಯ ಸೌಲಭ್ಯವನ್ನು ನೀಡುವ ಆವಶ್ಯಕತೆ ವಿಪುಲವಾಗಿದೆ. ಇದಕ್ಕಾಗಿ "ರಾಷ್ಟ್ರೀಯ ಆರೋಗ್ಯಾಭಿವೃದ್ಧಿ ಕಾರ್ಯಕ್ರಮ"ದಂತೆ ಸ್ಥಾಪಿಸುವ ವಿವಿಧೋದ್ದೇಶ ಗ್ರಾಮೀಣ ಆರೋಗ್ಯ ಕೇಂದ್ರಗಳಲ್ಲಿ ದುಡಿಯಲು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಂಚರಿಸುತ್ತ ಜೀವಿಸಲು ಉತ್ಸುಕರಾಗಿರುವ ಯುವಕರು ಮತ್ತು ಯುವತಿಯರು ಆವಶ್ಯರಾಗಿದ್ದಾರೆ. ಮೊದಲನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಸುಮಾರು ಐನೂರು ಪ್ರಾಥಮಿಕ ಆರೋಗ್ಯಕೇಂದ್ರಗಳನ್ನು ವಿಶಾಲ ಭಾರತದ ಬೇರೆ ಬೇರೆ ಗ್ರಾಮಗಳಲ್ಲಿ ಸ್ಥಾಪಿಸಲಾಗಿದೆ. ಈಗ ಕೈಗೊಳ್ಳುತ್ತಿರುವ ದ್ವಿತೀಯ ಯೋಜನಾವಧಿಯಲ್ಲಿ ಇಂತಹ ಕೇಂದ್ರಗಳನ್ನು ಮೂರು ಸಾವಿರಕ್ಕೆ ಹೆಚ್ಚಿಸಬೇಕೆಂಬ ಗುರಿಯು ಇದೆ.

ನಗರ ಪ್ರದೇಶಗಳಲ್ಲಿ ಸರಕಾರಿ ವೈದ್ಯಶಾಲೆಗಳು ಆರೋಗ್ಯ ಸಂಬಂಧವಾಗಿ ಜನತೆಗೆ ನೆರವೀಯುತ್ತವೆ. ಗ್ರಾಮೀಣ ಪ್ರದೇಶಗಳಿಗೆ ಈ ಸೌಕರ್ಯವು ನಗರಗಳಿಗಿಂತಲೂ ಆವಶ್ಯವಾಗಿದೆ. ಗ್ರಾಮಸ್ಥರು ತಮ್ಮ ಅಜ್ಞಾನದ ಕಾರಣದಿಂದಾಗಿ ಆರೋಗ್ಯದ ಕಡೆಗೆ ಸರಿಯಾದ ಗಮನವನ್ನು ಹರಿಸುವುದಿಲ್ಲ. ಆದುದರಿಂದ, ಹಳ್ಳಿಗರಿಗೆ, ತಮ್ಮ ಭಾಗ್ಯವಾದ ಆರೋಗ್ಯವನ್ನು ಯಾವ ರೀತಿ ಕಾಪಾಡಿಕೊಳ್ಳಬೇಕು ಎಂಬುದನ್ನು ಮೊದಲಾಗಿ ತಿಳಿಸಿ, ಆಯಾ ಪ್ರದೇಶಗಳಲ್ಲಿ ಪ್ರಚಲಿತವಿರುವ ರೋಗಗಳು ಬಾರದಿರುವಂತೆಯೂ ಬಂದವನು ದೂರೀಕರಿಸುವಂತೆಯೂ ವ್ಯವಸ್ಥೆಯಾಗಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಈ ದಿಸೆಯಲ್ಲಿ ನಡೆಯುವ ಪ್ರಾಥಮಿಕ ಪ್ರಯತ್ನ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: **ಶ್ರೀ. ಎಸ್. ಗೋಪೀಚಂದ ರಾವ್**, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಗೋ ವಿಜಯ

(ಗೋವಿನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ಸಂಕಷ್ಟ ವಿಮೋಚನೆ

ಮಹಾಮಾಯೆ ಸದಾ ನಮ್ಮ ಬೆನ್ನ ಹಿಂದೆ ಇರುವಳು

ಪ್ರಪಂಚದ ಕಷ್ಟಗಳನ್ನು ಸ್ವಯಂ ಅನುಭವಿಸಿ ಜನರ ದುಃಖ ದೂರೀಕರಿಸಲು ಆಕೆ ವೈಕುಂಠವನ್ನು ಬಿಟ್ಟು ಭೂಮಿಗೆ ಬಂದಿದ್ದಾಳೆ.

ಸೃಷ್ಟಿಯ ಆದಿಕಾಲದ ಮಾತಿದು. ಕರುಣಾಮಯಿಯಾದ ಮಹಾ ಮಾಯೆ ಒಂದು ದಿನ ಮಹಾ ವಿಷ್ಣುವಿನೊಡನೆ ಕೇಳಿದಳು:

“ಪ್ರಾಣನಾಥ, ಮರ್ತ್ಯ ಲೋಕದಿಂದ ದುಃಖ ಮತ್ತು ಸಂತಾಪಗಳ ಈ ರೀತಿಯ ಚೀತ್ಕಾರ ಮತ್ತು ಬಿಕ್ಕುಳಿಕೆಗಳು ನಿರಂತರವಾಗಿ ಏಕೆ ಕೇಳಿಸುತ್ತಿವೆ? ಮಾನವನು ಇಷ್ಟೊಂದು ದುಃಖವನ್ನು ಅನುಭವಿಸುವುದಾದರೂ ಏತಕ್ಕಾಗಿ? ಅವನಿಗೆ ಇವೆಲ್ಲವೂ ನಿಮ್ಮ ಲೀಲೆ ಎಂದೂ ನೀವಾಡುವ ಮಾಯೆಯ ಆಟವೆಂದೂ ಗೊತ್ತಿದೆಯೆ?”

ಮಹಾ ವಿಷ್ಣುವಿನ ಮುಖ ಮಂಡಲದಲ್ಲಿ ಮಂದಸ್ಮಿತದ ರೇಖೆಗಳು ಮೂಡಿದುವು. ಪ್ರೇಮಭರಿತ ನೇತ್ರಗಳಿಂದ ಆತ ಹೇಳಿದನು: “ಪ್ರಿಯೇ, ನಿನ್ನ ಪ್ರಶ್ನೆಯಿಂದ ನಾನು ಆಶ್ಚರ್ಯಚಕಿತನಾಗಿದ್ದೇನೆ. ನಾನಾದರೂ ಈ ಎಲ್ಲವನ್ನೂ ನೀನು ಇಷ್ಟರಲ್ಲಿಯೇ ತಿಳಿದುಕೊಂಡಿರುವೆ ಎಂದು ತಿಳಿದಿದ್ದೆನು.”

“ಇಲ್ಲ ಸ್ವಾಮಿ, ಈ ವಿಷಯವೇ ನನ್ನ ಮನಸ್ಸಿನಲ್ಲಿ ಇದು ವರೆಗೆ ಉದಯಿಸಲಿಲ್ಲ. ಇವೆಲ್ಲವೂ ತಮ್ಮ ಲೀಲೆಯೆಂದು ತಿಳಿದಿದ್ದ ಬುದ್ಧಿವಂತರು ಏಕೆ ಶೋಕಿಸುತ್ತಿರುತ್ತಾರೆಂದು ನನಗರಿವಾಗಲರಿದಾಗಿದೆ. ಋಷಿಮುನಿಗಳೆಲ್ಲರೂ ಇದನ್ನು ಮಾನವರಿಗೆ ಸ್ಪಷ್ಟ ಪಡಿಸಿಲ್ಲವೆ? ಉಪನಿಷತ್ ವಾಣಿಗಳಲ್ಲಿ ಈ ಪ್ರಸಂಗಗಳನ್ನು ಮಾರ್ಮಿಕವಾಗಿ ವರ್ಣಿಸಲಾಗಿದೆ. ವೇದಗಳಲ್ಲಿ ಕೂಡ ಈ ಪ್ರಪಂಚವನ್ನು ಕ್ಷೀರ ಸಾಗರವೆಂದು ತಿಳಿಯಲಾಗಿದೆ. ಹಾಗಿದ್ದರೂ, ಎಲೆನಾಥ, ಪ್ರಪಂಚವತ್ತಣಿಂದ ಏತರಿಂದಾಗಿ ನಿರಂತರವಾಗಿ ದುಃಖ ಮತ್ತು ಶೋಕ ಪೂರಿತ ಆರ್ತನಾದಗಳು ಕೇಳಿ ಬರುತ್ತಿವೆ?”

ಮಹಾ ಮಾಯೆಯ ಈ ದಯಾರ್ದ್ರ ಉದ್ಗಾರಗಳನ್ನು ಕೇಳಿ ಮಹಾ ವಿಷ್ಣುವು ಒಂದು ಕ್ಷಣ ಮೌನನಾದನು. ಮಹಾ ಮಾಯೆಯು ಈ ಬಗ್ಗೆ ಚಿಂತಿಸುವುದು ಅವನಿಗೆ ಸರಿಬರಲಿಲ್ಲ.

“ಮಹಾ ಮಾಯೆ, ನಾವೀಗ ಒಂದು ಕೆಲಸ ಮಾಡುವ ದೇವತೆಗಳ ಮತ್ತು ಋಷಿಗಳ ಬೇಡಿಕೆಯಂತೆ ನಾನು ಕೆಲವು ಕಾಲ ಪ್ರಪಂಚ ಪ್ರವಾಸವನ್ನು ಕೈಗೊಳ್ಳಲು ಹೋಗಲಿದ್ದೇನೆ. ಆಗ, ನೀನೂ ನನ್ನೊಡನೆ ಬಂದರೆ ಒಳ್ಳೆಯದು. ಅಲ್ಲಿ ನೀನೇ ಪ್ರಾಪಂಚಿಕ ರಹಸ್ಯವನ್ನು ಪ್ರತ್ಯಕ್ಷವಾಗಿ ಕಂಡುಕೊಳ್ಳಬಹುದು. ಕ್ಷೀರ ಸಾಗರದ ಈ ವೈಭವನ್ನು ತ್ಯಜಿಸಿ ನನ್ನೊಡನೆ ಪೃಥ್ವೀ ಪ್ರದಕ್ಷಿಣೆಗೆ ಬರಲು ಸಿದ್ಧಳಾಗಿರುವೆಯಾ?”

ಮುಂಜಾನೆಯ ಕಮಲದಂತೆ ಮಹಾ ಮಾಯೆಯ ಮುಖ ಅರಳಿತು. “ನಾಥ, ಇಲ್ಲಿ ಕೇಳ ಬೇಕಾದುದೇನಿದೆ? ನಿಮ್ಮ ಸಂತೋಷವೇ ನನ್ನ ಧರ್ಮ ಮತ್ತು ಪರಮ ಸುಖವಾಗಿದೆ” ಎಂದಳು.

೦೦ ೦೦

ಮರ್ತ್ಯಲೋಕದಲ್ಲಿ ರಾಜ ಜನಕನು ದಿವ್ಯ ಯಜ್ಞಕ್ಕಾಗಿ ಬಲಿಕ್ಷೇತ್ರವನ್ನು ಸಿದ್ಧಗೊಳಿಸುತಿದ್ದನು. ತಾನೇ ನೇಗಿಲಿನಿಂದ ಉಳುತಿದ್ದನು. ಹಿಂದಿನ ಕಾಲದಲ್ಲಿ ರಾಜರೂ ಬೀಜ ಬಿತ್ತುವ ಕೆಲಸ ಮಾಡುತಿದ್ದರು. ರಾಜಜನಕನ ಅನುಭವಿಕ ಕರಗಳಿಂದ ಉಳುಮೆಯು ಉತ್ತಮ ರೀತಿಯಲ್ಲಾಯಿತು. ತತ್‌ಕ್ಷಣ ಜನಕನು ವಿಸ್ಮಿತನಾಗಿ ನಿಂತುಬಿಟ್ಟನು; ಎತ್ತುಗಳ ನಡಿಗೆಯೂ ನಿಂತಿತು. ಉತ್ತ ದಾರಿಯಲ್ಲಿ ಸೌಂದರ್ಯಮಯವಾದ ಒಂದು ಕೂಸು ಇತ್ತು! ಜನಕನ ಆನಂದಕ್ಕೆ ಪಾರವೇ ಇರಲಿಲ್ಲ. ಈ ಅಲೌಕಿಕ ಬಾಲೆಯನ್ನು ತೊಡೆಗೇರಿಸಿಕೊಂಡನು.

ಹರ್ಷಪುಲಕಿತಗಾತ್ರನಾಗಿ ಜನಕನು ತನ್ನ ಪತ್ನಿಯಬಳಿಗೆ ಅದನ್ನು ಒಯ್ದು, ಅಲ್ಲಿ, “ಪೃಥ್ವೀಮಾತೆಯು ನಮ್ಮ ಮೇಲೆ ಈ ರೀತಿಯಾಗಿ ದಯೆದೋರಿದಳೆ”ಂದು ಹೇಳಿದನು. ಶುಕ್ಲಪಕ್ಷದ ಚಂದ್ರನಂತೆ ಮಗಳು ತನ್ನ ರೂಪ, ಗುಣ ಮತ್ತು ಸೌಂದರ್ಯಗಳಿಂದ ದಿನೇದಿನೇ ಬೆಳೆದಳು. ಆಕೆಯನ್ನು ಜಾನಕಿ ಎಂದೂ ಇನ್ನುಳಿದವರು ಸೀತೆಯೆಂದೂ ಕರೆದರು.

ಅದೇ ಸಮಯದಲ್ಲಿ ಸೂರ್ಯವಂಶದ ದಶರಥನು ಪುತ್ರಕಾಮೇಷ್ಟಿ ಯಜ್ಞವನ್ನು ಮಾಡಿದ್ದನು. ಅದರಲ್ಲಿ ದೊರೆತ ಪುತ್ರ ಪ್ರಾಪ್ತಿಯ ಪಾಯಸವನ್ನು ತನ್ನ ರಾಣಿಯರಿಗೆ ಹಂಚಿಕೊಟ್ಟನು. ಕಾಲಕ್ರಮದಲ್ಲಿ ರಾಣಿಯರೆಲ್ಲರೂ ಸುಂದರ ಮತ್ತು ಭಾಗ್ಯವಂತರಾದ ಪುತ್ರರನ್ನು ಪಡೆದರು. ಕೌಸಲ್ಯೆಗೆ ರಾಮಚಂದ್ರನೂ ಕೈಕೆಯಿಗೆ ಭರತನೂ ಸುಮಿತ್ರೆಗೆ ಲಕ್ಷ್ಮಣ ಶತ್ರುಘ್ನರೂ ಹುಟ್ಟಿದರು.

ಮುಂದಿನ ರಾಮಾಯಣದ ಕಥೆಯೆಲ್ಲಾ ವಿದಿತವೇ ಆಗಿದೆ. ಆದಿಕವಿ ವಾಲ್ಮೀಕಿಯಿಂದ ಹಿಡಿದು ನವ್ಯಕವಿ ಕುವೆಂಪುವರೆಗೆ ಅನೇಕಾನೇಕ ಜನರು ಅದನ್ನು ವರ್ಣಿಸಿದ್ದಾರೆ. ಸೀತೆಯ ವಿವಾಹ ರಾಮಚಂದ್ರನೊಡನಾಯಿತು. ಮಹಾ ಮಾಯೆಯು ಮೃತ್ಯು ಲೋಕದ ಸುಖ ದುಃಖಗಳನ್ನು ಅನುಭವಿಸಲು ಸ್ವಯಂ ಗೃಹಸ್ಥಾಶ್ರಮವನ್ನು ಸ್ವೀಕರಿಸಿದಳು.

ಸೀತೆಯ ಚರಿತ್ರೆ ಅಧಿಕ ಸಂಘರ್ಷಮಯವಾಗಿದೆ. ಜೀವನದ ಕಹಿ ವಿಷವನ್ನು ಸೀತೆಯೇ ಹೆಚ್ಚಾಗಿ ಕುಡಿದಿದ್ದಾಳೆ, ರಾಮನಿಗಿಂತ. ಲೌಕಿಕ ಜೀವನದ ಕಠೋರತನು ತಪಸ್ಸಿನಿಂದ ಎತ್ತಿ ಬಂದ ಮೂರ್ತಿ ಸೀತೆ. ಸೀತೆಯು ಪುಸ್ತಕಗಳನ್ನು ಓದಿ, ಸ್ವರ್ಗದ ಕಿಟಕಿಯಿಂದ ನೋಡಿ ಜೀವನದ ಸುಖ ದುಃಖಗಳ ಅರ್ಥ ಮಾಡಿಕೊಳ್ಳಲಿಲ್ಲ. ಸಂಘರ್ಷಣೆಯ ಅಗ್ನಿಯಲ್ಲಿ ಸ್ವಯಂ ಬಲಿಯಾಗಿ ಅರಿತುಕೊಂಡಿದ್ದಾಳೆ. ವನವಾಸದ ಕಷ್ಟ, ಪತಿವಿಯೋಗ, ರಾವಣನಲ್ಲಿ ಸತಿ, ಅಗ್ನಿ ಪರೀಕ್ಷೆ, ಮರ್ಮ ಭೇದಕ ಕಲಂಕ ಮತ್ತು ರಾಮನಿಂದ ಪರಿತ್ಯಾಗ—ಮಾನವ ಜೀವನದಲ್ಲಿ ಇಷ್ಟೊಂದು ದುಃಖಗಳನ್ನು ಸಹಿಸಿದ ಸ್ತ್ರೀ ಬೇರೆ ಯಾರಿರುವರು?

ರಾವಣನನ್ನು ಕೊಂದು ನಂತರ ರಾಮನ ಬಳಿಗೆ ವಿಭೀಷಣನು ಸೀತೆಯನ್ನು ಕರೆತಂದನು. ಸೀತೆಯ ಮುಖ ನಿಸ್ತೇಜವಾಗಿತ್ತು. ರಾಮನು ಪ್ರೇಮಪೂರ್ಣ ಮಂದಸ್ಮಿತದೊಡನೆ ಆಕೆಯನ್ನು ಸ್ವಾಗತಿಸಲಿಲ್ಲ. ‘ಜನಕನ ಮಗಳೇ, ನಿನ್ನ ಪಾತಿವ್ರತ್ಯವು ಈಗ ಸಿದ್ಧವಾಗಬೇಕು’ ಎಂದನ ಆತ. ಸೀತೆಯ ಮೇಲೆ ಸಿಡಿಲೆರಗಿದಂತಾಯಿತು. ಕೂಡಲೇ ಸೀತೆಯ ರೂಪದಲ್ಲಿ ಇದನ್ನು ಕೇಳಿದ ಮಹಾಮಾಯೆಯು ಅಂದುಕೊಂಡಳು: ‘ಓ ದುಃಖದ ಮೂಲ ಅರ್ಥ ಇಷ್ಟೊಂದು ಗೂಢವಾಗಿಯೂ ಅಸಹ್ಯವಾಗಿಯೂ ಇದೆ.’

ಸೀತೆಯು ಅಗ್ನಿಪರೀಕ್ಷೆಯಲ್ಲಿ ಅಪ್ಪಟ ಬಂಗಾರದಂತೆ ಹೊರಬಂದಳು. ಆಕೆಯ ದುಃಖಶೃಂಖಲೆ ಮುಗಿಯಲಿಲ್ಲ. ಆಕೆಯ ಮೇಲೆ ಸಂದೇಹ ಪ್ರಸಾರವಾಯಿತು. ‘ಕಾಗೆಯ ಗೂಡಿನಿಂದ ಹದ್ದು ಎದ್ದು ಬರುವುದೆ?’ ಎಂಬ ಮಾತು ಆಕೆಯ ಎದೆಯನ್ನು ಸೀಳಿಹೋಯಿತು. ‘ಮಿಥ್ಯೆ, ಅಸತ್ಯ ವಾದ ಮತ್ತು ಭ್ರಾಂತಿ— ಇವರಿಗೆ ಏಕೆ ಕಷ್ಟವನ್ನು ಕೊಡುತ್ತವೆ?’—ಈ ಪ್ರಶ್ನೆಗೆ ಮಹಾಮಾಯೆ ಉತ್ತರವನ್ನು ಕಂಡುಕೊಂಡಳು. ಗರ್ಭಿಣಿಯಾದ ಸೀತೆಯು ಏಕಾಕಿಯಾಗಿ ಹೊರಟುಹೋದಳು. ರಾಜನಿಗಾದರೂ ತನ್ನ ಮರ್ಯಾದೆಯನ್ನು ಉಳಿಸಿಕೊಳ್ಳಬೇಕಾಗಿತ್ತು. ತನ್ನ ಕರ್ತವ್ಯ ಪಾರಾಯಣತೆಯಲ್ಲಿ ಪತ್ನಿಯಾದರೂ ಏಕೆ ಭಾದೆಯಾಗಬೇಕು?

ಅರಣ್ಯದಲ್ಲಿ ಚಕ್ರವರ್ತಿಯ ಮಕ್ಕಳನ್ನು ಹೆತ್ತು ಕ್ಷತ್ರಿಯೋತ್ತಮ ವಿಧಾನದಲ್ಲಿ ಪಾಲಿಸಿದಳು. ಜೀವನದ, ನಾರೀತ್ವದ ಮರ್ಯಾದೆಯು ಇನ್ನೂ ಬೆಲೆಯನ್ನು ಬೇಡುತ್ತಿರುವುದನ್ನು ಕಂಡು, ಆಕೆಯು ತನ್ನ ಜನ್ಮದಂತೆ ಭೂಮಾತೆಯ ತೊಡೆಯಲ್ಲಿ ತನ್ನ ಜೀವನಲೀಲೆಯನ್ನು ಸಮರ್ಪಿಸಿದಳು.

೦ ೦

ಬ್ರಿಟಿಷ ರಾಜಕುಮಾರಿ ಮಾರ್ಗರೆಟ್

ಅವತಾರ ಅವಧಿ ಮುಗಿದ ಮೇಲೆ ಮಹಾವಿಷ್ಣು ಮತ್ತು ಮಹಾಮಾಯೆಯರು ಪುನಃ ಕ್ಷೀರಸಾಗರ ಸೇರಿದರು. ಶೇಷತಲ್ಪದಲ್ಲಿ ವಿಶ್ರಮಿಸುತ್ತಿರುವ ವಿಷ್ಣುವನ್ನು ಕುರಿತು ಮಹಾಮಾಯೆ ಹೇಳತೊಡಗಿದಳು:

“ಪ್ರಭು, ನಾನೀಗ ದುಃಖಾನುಭವಗಳಿಸಿದ್ದೇನೆ. ಮಾಯೆಯ ಶಕ್ತಿಯ ಪರಿಚಯ ನನಗಾಗಿದೆ. ಮಾಯೆಯು ದೇವತೆಗಳನ್ನೂ ಕಟ್ಟುತ್ತಿರುವಾಗ, ಉಳಿದ ಮಾನವರ ಪಾಡೇನು? ತಮ್ಮ ಮಾಯೆಯು ಅವರಿಗೆಷ್ಟು ಸಂತಾಪ ಕೊಡುತ್ತದೆ? ನನ್ನಿಂದಿದನ್ನು ಸಹಿಸಲಾಗುವುದಿಲ್ಲ. ಅವರ ಕಣ್ಣೀರು ಮತ್ತು ದುಃಖಗಳು ನನ್ನ ಹೃದಯವನ್ನು ಚೂರು ಚೂರು ಮಾಡಿವೆ. ಆದುದರಿಂದ, ನಾನು ಈಗ ನನ್ನ ಪ್ರೀತಿಯ ಮಕ್ಕಳ ಉದ್ಧಾರಕ್ಕಾಗಿ ನಿಮ್ಮ ಈ ವೈಭವ ಪೂರ್ಣ ವೈಕುಂಠವನ್ನು ತ್ಯಜಿಸ ಹೊರಟಿದ್ದೇನೆ.”

ಮಹಾ ಮಾಯೆಯು ವೈಕುಂಠವನ್ನು ಬಿಟ್ಟಳು. ಲಕ್ಷ್ಮಿ, ಶ್ರೀ, ಗೌರಿ, ಶಕ್ತಿ, ಪಾರ್ವತಿ, ದುರ್ಗೆ, ಕಾಳಿ ಮೊದಲಾದ ಹಲವಾರು ರೂಪಗಳಲ್ಲಿ ಮಹಾ ಮಾಯೆ ಈ ಪ್ರಪಂಚಕ್ಕೆ ಬಂದಿದ್ದಾಳೆ. ಮಾನವರ ದುಃಖ ಮತ್ತು ವ್ಯಾಧಿಗಳನ್ನು ದೂರ ಮಾಡಿದ್ದಾಳೆ. ಮಾನವರ ದುಃಖದ ಪರಿಚಯ ಆಕೆಗಿದೆ. ಕಷ್ಟದಲ್ಲಿರುವ ಮಾನವರ ಬೆನ್ನ ಹಿಂದೆಯೇ ಮಹಾ ಮಾಯೆಯು ಬರುತ್ತಾಳೆ. ಎಂತಲೇ ನಾವು ಸಂಕಟ ಬಂದಾಗ ಹೆದರುವ ಅಗತ್ಯವಿಲ್ಲ. ಶುದ್ಧ ಮತ್ತು ಶ್ರದ್ಧಾಯುಕ್ತ ಹೃದಯದಿಂದ ಕರುಣಾಮಯಿ ಮಹಾ ಮಾಯೆಯ ಪ್ರಾರ್ಥನೆ ಮಾಡಿದರೆ ಸಾಕು, ನಮ್ಮ ಕಷ್ಟಗಳೆಲ್ಲಾ ದೂರವಾಗುತ್ತವೆ. ಜನರ ದುಃಖ ದೂರಮಾಡಲು ಮಹಾ ಮಾಯೆಯು ವೈಕುಂಠ ಸುಖವನ್ನೂ ಬಿಟ್ಟು ಬಂದಿರುವಳಲ್ಲವೆ?

‘ನಚಿಕೇತ’ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ, ಉಡುಪಿ.

‘ನವಯುಗ’ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಎಲ್ಲರೂ ಸಚ್ಚರಿತ್ರರಾಗಲು ಬಯಸುತ್ತಾರೆ; ಆದರೆ, ಅದು ಸಂಪತ್ತಿನಿಂದ ಮಾತ್ರ ಸಾಧ್ಯವೆಂದು ತಪ್ಪು ತಿಳಿದುಕೊಳ್ಳುತ್ತಾರೆ. ನಿಜವಾಗಿಯೂ ಸಚ್ಚರಿತ್ರೆಯು ಸದಾಚಾರದಿಂದ ಪ್ರಾಪ್ತಿಯಾಗುವುದಲ್ಲದೆ ಸಂಪತ್ತಿನಿಂದಲ್ಲ.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಸಂಚಿಕೆ	ವಾರ
೩೮	೧೪-೫-'೫೯	೩೫

ಕಾಂಗ್ರೆಸ್ ಅಧಿವೇಶನ

ನವದೆಹಲಿಯಲ್ಲಿ ಸೇರಿದ ಎರಡು ದಿವಸದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಯಶಸ್ವಿಯಾಗಿ ಮುಕ್ತಾಯಗೊಂಡಿತು. ಎ. ಐ. ಸಿ. ಸಿ. ಅಧಿವೇಶನಗಳು ಜರಗಿ ಕಾಂಗ್ರೆಸ್ ಸರಕಾರದ ಧ್ಯೇಯಧೋರಣೆಗಳ ಬಗ್ಗೆ ವ್ಯಾಪಕ ರೀತಿಯ ಚರ್ಚೆ ನಡೆಸಿ ಮುಂದಿನವನ್ನು ರೂಪಿಸುವ ಕಾರ್ಯಕ್ರಮವು ನಡೆಯುವುದು ಸಂಪ್ರದಾಯ. ಮುಖ್ಯವಾಗಿ, ಇಂತಹ ಆಲೋಚಕ ವಿಷಯಗಳನ್ನು ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ವೆಂಬುದಾಗಿ ಎರಡು ವಿಭಾಗಗಳನ್ನು ಮಾಡಬಹುದು. ಈ ಬಾರಿ ಅಂತಾರಾಷ್ಟ್ರೀಯ ವಿಚಾರಗಳಿಗಿಂತಲೂ ರಾಷ್ಟ್ರೀಯ ವಿಚಾರಗಳೇ ಬಾಹುಲ್ಯ ಪಡೆದಿವೆಯಾದರೂ ಅವೇನೂ ಹೊಸ ಸಂಗತಿಗಳಲ್ಲವೆಂದೇ ಹೇಳಬೇಕು. ಅಂತಾರಾಷ್ಟ್ರೀಯ ಸಂಬಂಧದಲ್ಲಿ ಟಿಬೇಟಿನ ಪರಿಸ್ಥಿತಿ ಮತ್ತು ಭಾರತ ಮತ್ತು ಪಾಕಿಸ್ತಾನಗಳ ಸೀಮಾ ಪ್ರದೇಶದಲ್ಲಿ ಆದ ಗುಂಡಾಗಳ ಸುರಿಮಳೆಗಳಲ್ಲಿ ಟಿಬೇಟಿನ ಸ್ಥಿತಿಗತಿ ಮಾತ್ರ ಈ ಬಾರಿಯ ಹೊಸ ವಿಷಯವಾಗಿದೆ. ಇನ್ನು ರಾಷ್ಟ್ರೀಯ ವಿಷಯಗಳಲ್ಲಿ ಮುಖ್ಯವಾದ ಕಾಂಗ್ರೆಸ್‌ನ ಐಕ್ಯ, ಅಧಿಕ ಆಹಾರೋತ್ಪಾದನೆ, ಸಹಕಾರಿ ಪದ್ಧತಿ— ಇವು ನೂತನ ಸಂಗತಿಗಳಾಗಿರದೆ ಹಳೆಯವೇ ಆಗಿವೆ. "ಅಧಿಕ ಆಹಾರ ಬೆಳೆಸಿರಿ" ಚಳವಳಿ ಪ್ರಾರಂಭವಾದ ದಿನದಿಂದ ಇಂದಿಗೂ ಉತ್ಪಾದನೆ ಅಧಿಕವಾಗುವ ಆವಶ್ಯಕತೆಯನ್ನು ಪದೇ ಪದೇ ಪ್ರತಿಬಿಂಬಿಸುತ್ತ ಬರುವುದು ವಾಡಿಕೆಯಾಗಿಯೇ ಪರಿಣಮಿಸಿದೆ ಎನ್ನಬೇಕು. ಸಹಕಾರಿ ಪದ್ಧತಿಯನ್ನು ಕಾಂಗ್ರೆಸ್ ಈ ಮೊದಲೇ ಸ್ವೀಕರಿಸಿದ್ದು ನಾಗಪುರ ಗೊತ್ತುವಳಿಯು ಕಾರ್ಯಾಚರಣೆ ಬರುವುದರಲ್ಲಿ ಎಳ್ಳಷ್ಟೂ ವಿಳಂಬವಾಗಲಾರದು ಎಂಬ ಘೋಷಣೆ ಹೊರಬಿದ್ದಿದೆ. ನಾಗಪುರ ಗೊತ್ತುವಳಿಯು ಮುಖ್ಯಾಂಗ ಸಹಕಾರಿ ವ್ಯವಸಾಯ ಮತ್ತು ಭೂಸುಧಾರಣೆಗಳು ಅಂದಿನಿಂದಲೂ ನಮ್ಮ ಕಾಂಗ್ರೆಸ್ ಪರಿಷ್ಕಾರ ಭಾಷಣದ ಒಂದಂಗವಾಗಿಯೇ ಪರಿಣಮಿಸಿವೆ. ಅಲ್ಲದೆ ಈ ನಿರ್ಧಾರವು ಅಚಲವಾಗಿಯೇ ಇದೆ ಎಂಬುದು ಈ ಮೊದಲೇ ಗೊತ್ತಾಗಿದೆ. ತ್ವರಿತಗತಿಯಲ್ಲಿ ಅದು ಕಾರ್ಯಾಚರಣೆಗೆ ಬರುವುದೆಂಬುದೂ ನಿತ್ಯದ ಮಾತೇ ಆಗಿದೆ ಎನ್ನಬಹುದು.

ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿಯವರು ಭಾಷಣ ಮಾಡುತ್ತ ಕೇರಳದ ಬಗ್ಗೆ ತಮ್ಮ ವಿಮರ್ಶನೆಯನ್ನು ವ್ಯಕ್ತಪಡಿಸಿರುವರು. ಅಲ್ಲಿ ಕಮ್ಯುನಿಸ್ಟ್ ಸರಕಾರವು ಮಿಥ್ಯಾ ಘೋಷಣೆಗಳನ್ನು ಮಾಡಿ ಅಲ್ಲಿನ ಜನತೆಯನ್ನು ತಪ್ಪು ದಾರಿಗೆಳೆಯುತ್ತಿದೆ ಎಂಬ ಆರೋಪವನ್ನು ಅವರು ಹೊರಿಸಿದ್ದಾರೆ. 'ಕಾಂಗ್ರೆಸಿಗೆ ಯಾವುದೇ ರಾಜ್ಯದಲ್ಲಿ ಯಾವ ವಿಧದ ಗಲಾಟೆ ಅಥವಾ ಕ್ಷೋಭೆಗಳಿರುವುದು ಬೇಕಾಗಿಲ್ಲ; ಆದರೂ ಕೇರಳದಲ್ಲಿ ಕಮ್ಯೂನಿಸ್ಟ ಆಡಳಿತೆಯಿಂದ ಎಷ್ಟು ಹಾನಿಯಾದೆ ಎಂಬುದನ್ನು ಜನತೆಗೆ ಮನಗಾಣಿಸಬೇಕಾಗಿದೆ' ಎಂದು ಹೇಳಿ, ಕೇರಳದಲ್ಲಿರುವ ಜಾತೀಯ ಶಕ್ತಿಗಳನ್ನು ಕಮ್ಯುನಿಸ್ಟರು ತಮ್ಮ ಪಕ್ಷಕ್ಕಾಗಿ ದುರುಪಯೋಗಿಸಿಕೊಳ್ಳುತ್ತಾರೆಂದು ಆರೋಪಿಸಿರುವರು. ಸಾಮಾನ್ಯತಃ ಕೇರಳದ ಪರಿಸ್ಥಿತಿಯನ್ನು ಬಾಹ್ಯರೂಪದಿಂದ ನೋಡುವಾಗಲೇ ಇದು ವಿದಿತವಾಗಿದೆ. ಅಲ್ಲದೇ ಹಿಂದಿನ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್. ಡೇಬಾರರು ಇದೇ ಮಾದರಿಯ ಕಟು ಅನುಭವದ ಮಾತುಗಳನ್ನು ಆಡಿರುತ್ತಾರೆ. ಈಗಿನ ಅಧ್ಯಕ್ಷೆಯರೂ ಸದ್ಯ ಅದೇ ರೀತಿಯ ಉದ್ಗಾರವನ್ನು ಮುಂದುವರಿಸಿದ್ದಾರೆ— ತಮ್ಮ ಪ್ರವಾಸದ ಅನುಭವಬಲದಿಂದ.

ಇನ್ನು ಕಾಂಗ್ರೆಸ್ಸಿನ ಸಂಘಟನೆಯ ಮಾತು ಪ್ರಶ್ನೆಯು ಮುಂದೆ ಬರುತ್ತದೆ. ಜನಸಾಮಾನ್ಯರಿಂದ ದೂರ ಸರಿಯುತ್ತಿದ್ದು ಜನತೆಯ ಸಂಪರ್ಕವನ್ನು ಕಡಿದುಕೊಳ್ಳುತ್ತಿರುವ ಕಾಂಗ್ರೆಸ್ಸನ್ನು ಬಲಪಡಿಸಲು, ಜನರೆಲ್ಲರೊಡನೆ ನಿಕಟವಾದ ಸಂಬಂಧವನ್ನಿಟ್ಟುಕೊಳ್ಳುವ ಮಹೋದ್ದೇಶದಿಂದ ಮಂಡಳ ಕಾಂಗ್ರೆಸ್ ಸಮಿತಿಗಳು ರಚಿತವಾದುವು. ಆದರೆ, ಇದರಿಂದ ಅಭೀಪ್ಸಿತ ಫಲ ಪೂರ್ತಿ ದೊರೆತಂತೆ ಕಂಡುಬರುತ್ತಿಲ್ಲ. ಇಂದು ಕಾಂಗ್ರೆಸ್ ಬಲಯುಕ್ತವಾದ ಪಕ್ಷವಾಗಿ ಉಳಿದಿರುವುದಾದರೆ, ಅದು ನೆಹರೂ ಒಬ್ಬರಿಂದ; ನೆಹರೂ ಕಾಂಗ್ರೆಸ್ಸಿನಲ್ಲಿ ಇಲ್ಲವೆಂದಾದರೆ, ಕಾಂಗ್ರೆಸ್ಸೂ ಇಲ್ಲ—ಎಂಬುದಾಗಿ ಆಡುವ ಕೆಲವು ದುರಾಲೋಚಕರೂ ಇದ್ದಾರೆ. ಆದರೆ, ಈ ಮಾತನ್ನು ಒರೆಗೆ ಹಚ್ಚುವ ಆವಶ್ಯಕತೆಯಿಲ್ಲ; ನೆಹರೂ ಮೇಲಿನ ಅಭಿಮಾನದ ಮಟ್ಟಿಗೆ ಮಾತ್ರ ಈ ಮಾತನ್ನು ಗಣಿಸಬಹುದು; ಅಷ್ಟೆ. ಕಾಂಗ್ರೆಸ್ಸು ಇಂದಿನ ತನ್ನ ಧ್ಯೇಯ ಧೋರಣೆಗಳಿಗೆ ಸರಿಯಾಗಿ ವ್ಯಾಪಕವಾದ ಘಟನೆಯಾಗಬೇಕೆಂಬ ಶ್ರೀ ಹನುಮಂತಯ್ಯನವರ ಗೊತ್ತುವಳಿಯು ಆ ಘಟನೆಯ ರೂಪರೇಷೆಗಳ ಬೇಡಿಕೆಯಿಂದ ಹಿಂತೆಗೆಯಲ್ಪಟ್ಟಿತು. ಪ್ರಧಾನಿಯವರು ಇನ್ನೊಂದು ಅವಧಿಗೆ ಅಧಿಕಾರ ಸ್ವೀಕರಿಸುವುದಿಲ್ಲವೆಂದು ಸಾರಬೇಕೆಂಬ ಪಂಜಾಬದ ಶ್ರೀ ಅಬ್ದುಲ ಘನಿ ದಾರರ ಗೊತ್ತುವಳಿಗೆ ಅನುಮೋದಕರೇ ಇಲ್ಲದೆ ಹೋದರಂತೆ! ಒಡಿಸ್ಸದಲ್ಲಿ ಸಮ್ಮಿಶ್ರ ಸರಕಾರದ ಮಾತು ಎ. ಐ. ಸಿ. ಸಿ. ಯಲ್ಲಿ ಚರ್ಚಿಸಲ್ಪಟ್ಟು, ಅದಕ್ಕೆ ಶ್ರೀ ಮುರಾರಜಿಯವರ ಸಮರ್ಥನೆಯೂ ದೊರಕಿದೆ. ಆದುದರಿಂದ, ಇದು ಕಾರ್ಯಗತವಾಗುವ ಸಂಭವವೂ ಹೆಚ್ಚೆಂದು ಹೇಳಬಹುದು.

ಕಾಂಗ್ರೆಸ್ಸು ಜನತೆಯ ಬೆಂಬಲವನ್ನು ಕಳೆದುಕೊಳ್ಳುತ್ತಿದೆ ಎಂಬುದು ಪ್ರಚಲಿತ ಪರಿಸ್ಥಿತಿಗಳಿಂದಲೇ ವೇದ್ಯವಾಗಿದೆ. ಕೆಲವರು ಕಾರಣಾಂತರಗಳಿಂದ ಕಾಂಗ್ರೆಸ್ಸಿನ ಈಗಿನ ತತ್ವ ಪ್ರಣಾಳಿಯ ಬಗ್ಗೆ ಒಲವನ್ನು ವ್ಯಕ್ತಪಡಿಸದೆ, ಅದನ್ನು ದ್ವೇಷಿಸಬಹುದು. ಆದರೆ, ಹಿಂದೆ ಸ್ವಾತಂತ್ರ್ಯ ಪ್ರಾಪ್ತಿಯೇ ಪ್ರಧಾನ ಧ್ಯೇಯವಾಗಿದ್ದರೆ, ಇಂದು ಸಮೃದ್ಧ ಭಾರತವನ್ನು ನಿರ್ಮಿಸುವುದು— ಸಮಾಜವಾದಿ ಮಾದರಿಯ ಸಮಾಜವುಳ್ಳ ಕಲ್ಯಾಣ ರಾಷ್ಟ್ರದ ರಚನೆ—ಕಾಂಗ್ರೆಸ್ಸಿನ ಗುರಿಯಾಗಿದೆ. ಬಹುಜನರಿಗೆ ಉಪಕಾರವಾಗುವಂತೆ ಕೆಲವರಿಗೆ 'ಅನ್ಯಾಯ' ಮಾಡಬೇಕಾಗಿಬಂದರೂ ಅದು ಕ್ಷಮ್ಯವೇ ಎನ್ನಬೇಕಾಗುತ್ತದೆ. ಇಂದಿನ ಯುಗದ ಭರತವಾಕ್ಯ "ಇರು, ಇರಗೊಡು" ಎಂಬುದೆಂಬುದನ್ನು ಯಾರೂ ಮರೆಯಬಾರದು. ಕಾಂಗ್ರೆಸ್ಸಾದರೂ ತನ್ನ ಬಲ ಸಂವರ್ಧನೆಯೊಡನೆ ರಾಷ್ಟ್ರದ ಅಭಿವೃದ್ಧಿಯನ್ನೂ ತನ್ನ ಮುಖ್ಯ ಗುರಿಯನ್ನಾಗಿಟ್ಟುಕೊಂಡೇ ಮುನ್ನಡೆಯುವುದು ಅಗತ್ಯ. ಚುನಾವಣೆಯಲ್ಲಿ ಗೆಲ್ಲುವುದೇ ಕಾಂಗ್ರೆಸ್ಸಿನ ಧ್ಯೇಯವಾಗಿರುವುದಿಲ್ಲ; ಇನ್ನು ಮುಂದಕ್ಕೂ ಇರಬಾರದು. ದೇಶದ ಉತ್ಥಾನಕ್ಕಾಗಿ ಸೂಕ್ತ ದಿಸೆಯಲ್ಲಿ ಮುಂದುವರಿಯುವುದು ಕಾಂಗ್ರೆಸ್ಸಿನ ಕರ್ತವ್ಯ.

ಬಣ್ಣವೇಕೆ ಬದಲಾಯಿತು?

"ಚೀನ"ದ ಏಜಂಟರಂತೆ ಭಾರತದಲ್ಲುಳಿದುಕೊಂಡು ಟಿಬೇಟದಲ್ಲಿ ಚೀನ ಮಾಡಿದ ಆಚರಣೆಯನ್ನು ಸಮರ್ಥಿಸಿ, ಚೀನವು ಭಾರತದ ಮೇಲೆ ಮಾಡಿದ ಆಪಾದನೆಯೆಲ್ಲವನ್ನೂ ಬೆಂಬಲಿಸಿ, ಭಾರತೀಯರೆಲ್ಲರ ಅಸಹ್ಯಪಡೆಗೆ ಪಾತ್ರವಾದ ಕಮ್ಯುನಿಸ್ಟ್ ಪಕ್ಷ ಈಗ ಈ ದಿಸೆಯಲ್ಲಿ ಕೊಂಚ ಹಿಂಜರಿದಂತೆ ಕಾಣುತ್ತದೆ. ದೇಶದ್ರೋಹಿಗಳ ಈ ಪಕ್ಷವನ್ನು ಏಕೆ ಬಹಿಷ್ಕರಿಸಬಾರದು ಎಂಬ ಪ್ರಶ್ನೆಯು ಅಲ್ಲಲ್ಲಿ ಗೊಣಗಲ್ಪಡುತ್ತಿದ್ದುದು ಕೇಳಿ ಬಂದಿದೆ. ಹಾಗಿರುವಾಗ ಕಮ್ಯುನಿಸ್ಟರ ನೀತಿಯಲ್ಲಿ ಪರಿವರ್ತನೆಯಾಗಲು ಕಾರಣವೇನು ಎಂಬುದು ಇನ್ನೂ ಸಾಕಷ್ಟು ತಿಳಿದು ಬಂದಿಲ್ಲ. ಟಿಬೇಟದ ವರೆಗೆ ಈಗಾಗಲೇ ಕಾಲಿರಿಸಿರುವ ಕಮ್ಯುನಿಸ್ಟರ ಮುಂದಿನ ಹೆಜ್ಜೆ ಭಾರತದಲ್ಲಿ ಎಂಬ ಶಂಕೆಗೆ ಟಿಬೇಟದ ಸ್ಥಿತಿ ಕಾರಣವಾಗಿದೆ. ಹಾಗೆ ಮಾಡಲು ಚೀನೀಯರಿಗೆ ಭಾರತೀಯ ಕಮ್ಯುನಿಸ್ಟರ ಸ್ನೇಹ ಮಾತ್ರವಲ್ಲದೇ ಅವರೊಳಗೆ ವ್ಯವಹಾರ ಹೊಕ್ಕು ಬಳಕೆಗಳೂ ನಡೆಯುವುದು ಅಗತ್ಯ. ಅದಕ್ಕಾಗಿಯೇ ಟಿಬೇಟದ ಮೂಲಭೂತ ಪ್ರಶ್ನೆಯನ್ನು ಬಿಟ್ಟು, ಚೀನ ಭಾರತಗಳ ನಡುವಿನ ಸಂಬಂಧವನ್ನು ಇನ್ನೂ ಉತ್ತಮವಾಗಿ ಬಲಪಡಿಸುವುದನ್ನು ನೀತಿಯಾಗಿ ಮಾಡಿಕೊಂಡ ಕಮ್ಯುನಿಸ್ಟರಿಂದ ಭಾರತದ ಸ್ವಾಯತ್ತತೆಗೆ ಭಂಗ ಬರಲಾರದೆಂದು ಹೇಳುವುದು ಸಾಧ್ಯವಿಲ್ಲ. ಸದ್ಯ ತಮ್ಮ ಧೋರಣೆಯ ಬದಲಾವಣೆಗೆ ಚೀನೀಯರ ಆದೇಶವೇನಾದರೂ ಬಂತೆ ಎಂಬುದು ಶುದ್ಧ ಕುಹಕವಾದೀತು!

ಸಂಕ್ಷಿಪ್ತ ಸುದ್ದಿಗಳು

ಬರ್ಲಿನ್ ಪ್ರಶ್ನೆ

ಬರ್ಲಿನ್ ಪ್ರಶ್ನೆಯ ಬಗ್ಗೆ ಚರ್ಚಿಸಲು ಪಾಶ್ಚಾತ್ಯ ಮತ್ತು ಪೌರ್ವಾತ್ಯ ರಾಷ್ಟ್ರಗಳ ವಿದೇಶ ಮಂತ್ರಿಗಳ ಪರಿಷತ್ತು ಜಿನೇವಾದಲ್ಲಿ ಪ್ರಾರಂಭವಾಗಿದೆ. ಯುಕ್ತರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಡಾಗ್ ಹೆಮ್ಮರ ಶೀಲ್ಡರೂ ಇದರಲ್ಲಿ ಭಾಗವಹಿಸಿದ್ದಾರೆ. ಮೊದಲಿಗೆ ಈ ಪರಿಷತ್ತಿನಲ್ಲಿ ಭಾಗವಹಿಸುತ್ತಿರುವ ಪೂರ್ವ ಮತ್ತು ಪಶ್ಚಿಮ ಜರ್ಮನಿಗಳ ನಿಯೋಗಗಳ ಸ್ಥಾನಮಾನಗಳ ಕುರಿತು ವಿವಾದವೆದ್ದು, ಪರಿಷತ್ತು ಮುಂದುವರಿಯುವ ಸಂಭವವು ಕಾಣಿಸಿಕೊಂಡರೂ ಕೊನೆಗೆ ಉಭಯತರರ ನಡುವೆಯೂ ಒಂದು ರೀತಿಯ ಒಡಂಬಡಿಕೆಯಾಗಿ ಪರಿಷತ್ತು ಪ್ರಾರಂಭವಾಗಿದೆ. ಇದರ ಫಲಶ್ರುತಿಯೇನೆಂದು ಮಾತ್ರ ಕಾದು ನೋಡಬೇಕಾಗಿದೆ.

ಡಲ್ಲೆಸರ ಅನಾರೋಗ್ಯ

ಅಮೆರಿಕೆಯ ಮಾಜಿ ರಾಜ್ಯಾಂಗ ಕಾರ್ಯದರ್ಶಿ ಶ್ರೀ ಜಾನ್ ಫಾಸ್ಟರ ಡಲ್ಲೆಸರು ಇತ್ತೀಚೆಗೆ ತೀವ್ರ ಅಶಕ್ತರಾಗಿದ್ದಾರೆ. ಆದುದರಿಂದ, ಅವರ ದೇಹಸ್ಥಿತಿಯ ಬಗ್ಗೆ ಎಲ್ಲಿಲ್ಲದ ವಿಮರ್ಶನೆಯು ಕಾಣಿಸಿಕೊಂಡಿದೆ. ಈ ಮೊದಲು ಕ್ಯಾನ್ಸರ ರೋಗದಿಂದ ವರು ನರಳುತ್ತಿದ್ದರೂ ಈಗ ಕುರುವಿನ ಮೇಲೆ ಬೊಕ್ಕೆ ಎದ್ದಂತೆ ನ್ಯೂಮೋನಿಯಕ್ಕೂ ಗುರಿಯಾಗಿರುವರೆಂದು ತಿಳಿದು ಬಂದಿದೆ. ಈ ಸಂಬಂಧದಲ್ಲಿ ಗೃಹಶಾಖೆಯೊಂದು ಪ್ರಕಟಣೆಯನ್ನು ಹೊರಡಿಸಿ, ನ್ಯೂಮೋನಿಯಾಕ್ಕೆ ಕೈಗೊಂಡ ಉಪಚಾರವು ಸಫಲವಾಗಿರುವುದಾದರೂ ಅವರು ಅಶಕ್ತರಾಗಿದ್ದಾರೆಂದು ಹೇಳಿದೆ. ಈ ಅಶಕ್ತಿಯ ಪರಿಣಾಮವಾಗಿ ಏನಾದರೂ ಕೆಡುಕು ಸಂಭವಿಸುವುದಿಲ್ಲವೆಂದು ಹೇಳುವುದು ಸಾಧ್ಯವೆ?

ಯುಕ್ತರಾಷ್ಟ್ರಕ್ಕೆ ಟಿಬೇಟ ಪ್ರಶ್ನೆ

ಪಂಜಾಬದ ಪ್ರ. ಸ. ಪಾ. ಪಕ್ಷವು ಕರೆದಿದ್ದ ಸರ್ವಪಕ್ಷ ಸಮ್ಮೇಳನವು ಟಿಬೇಟ ಪ್ರಶ್ನೆಯ ಬಗ್ಗೆ ಒಂದು ಗೊತ್ತುವಳಿಯನ್ನು ಸ್ವೀಕರಿಸಿ, ಈ ಪ್ರಶ್ನೆಯನ್ನು ಯುಕ್ತರಾಷ್ಟ್ರಸಂಘಕ್ಕೆ ಒಯ್ಯಬೇಕೆಂದು ಭಾರತ ಸರಕಾರವನ್ನು ಕೇಳಿಕೊಂಡಿದೆ. ತಮ್ಮ ಹಿತಸಾಧನೆಗೆ ದುಡಿಯುವ ಸ್ವಾತಂತ್ರ್ಯಪ್ರೇಮಿಗಳಿಗೆ ಈ ಟಿಬೇಟ ಘಟನೆಯೊಂದು ಗಂಭೀರವಾದ ಎಚ್ಚರಿಕೆಯನ್ನು ಕೊಟ್ಟಿದೆ ಎಂದೂ ಇನ್ನೊಂದು ಗೊತ್ತುವಳಿಯು ಹೇಳಿದೆ.

ದೇಶಪ್ರೇಮ ಪ್ರದರ್ಶನ

ಭಾರತದ ಕಮ್ಯುನಿಸ್ಟರು ಟಿಬೇಟ ಪ್ರಶ್ನೆಯ ಬಗ್ಗೆ ತಳೆದ ಧೋರಣೆಯು ಕಟುಟೀಕೆಗೆ ಗುರಿಯಾದುದರಿಂದಲೋ ಅಥವಾ ಇನ್ನೇನು ಕಾರಣದಿಂದಲೋ ತಮ್ಮ ಧೋರಣೆಯ ಬಣ್ಣ ಬದಲಿಸುವ ನಿರ್ಧಾರ ಮಾಡಲು ಮುಂದೆ ಬಂದಿದ್ದಾರೆ. ಭಾರತದ ಬಗ್ಗೆ ಚೀನೀಯರ ಆರೋಪಗಳನ್ನು ಸಮರ್ಥಿಸುವುದನ್ನು ಮಾತ್ರ ಬಿಟ್ಟುಕೊಟ್ಟು, ಚೀನ-ಭಾರತಗಳ ಸಂಬಂಧ ಮಾತ್ರ ಬಲವಾಗಿ ಉಳಿಯುವಂತೆ ನೋಡಿಕೊಳ್ಳುವುದು ಎಂಬ ಧೋರಣೆಯನ್ನು ಅವರು ಸ್ವೀಕರಿಸಲಿರುವರಂತೆ! ಭಾರತೀಯರಾಗಿದ್ದು ಭಾರತವನ್ನು ಸಮರ್ಥಿಸುವ ಬುದ್ಧಿ ಇಲ್ಲವೆ ಹೋದರೂ ಆ ಬಗ್ಗೆ ತಾ

ಅಲ್ಲಲ್ಲಿಯ ಸುದ್ದಿ ಸಾರ

ದ. ಕ. ಜಿಲ್ಲೆಯಲ್ಲಿ ಕಾಮಗಾರಿ ಸಚಿವರ ಸಂಚಾರ:-ಅರಣ್ಯ, ಜಲ, ಭೂ ಸಂಪತ್ತಿನಿಂದ ತುಳುಕಾಡುತ್ತಿರುವ ಮಲೆನಾಡು ಇಂದು ಸಾರಿಗೆ ಸೌಕರ್ಯವಿಲ್ಲದೆ ಹಿಂದುಳಿದ ಕಾರಣ ಆ ಪ್ರದೇಶಗಳಿಗೆ ಸಾರಿಗೆ ಸೌಕರ್ಯವನ್ನು ಒದಗಿಸುವುದು ಅಗತ್ಯವಾಗಿದೆ. ಇದನ್ನು ಮನಗಂಡು ಸರ್ಕಾರ ಮಲೆನಾಡಿನ ಅಭಿವೃದ್ಧಿಗಾಗಿ ವಿಶೇಷ ಬೋರ್ಡೊಂದನ್ನು ರಚಿಸಿ ಕಾರ್ಯಾರಂಭ ಮಾಡುತ್ತಿದೆ ಎಂಬುದಾಗಿ ತಾ೮ನುತ್ತು ೯ರಂದು ಪುತ್ತೂರು ತಾಲೂಕಿನ ಮಲೆನಾಡು ಪ್ರದೇಶದಲ್ಲಿನ ಒಂಬತ್ತು ಸಂಕಗಳ ಶಂಕುಸ್ಥಾಪನೆ ಮಾಡುತ್ತಾ ಮೈಸೂರಿನ ಕಾಮಗಾರಿ ಸಚಿವರಾದ ಶ್ರೀ ಎಚ್. ಎಂ. ಚನ್ನಬಸಪ್ಪನವರು ಹೇಳಿದರು.

ಮಾನ್ಯ ಸಚಿವರು ತಾ೯ರಂದು ಬೆಳಿಗ್ಗೆ ಕಡಬ, ಪಂಜ ರಸ್ತೆಯಲ್ಲಿನ ಪುಳಿಕುಕ್ಕು ಸಂಕದ ಶಂಕುಸ್ಥಾಪನೆ ಮಾಡಿದರು. ಶ್ರೀ ಡಿ. ರತ್ನವರ್ಮ ಹೆಗ್ಗಡೆ ಎಂ. ಎಲ್. ಎ. ಯವರು ಅಧ್ಯಕ್ಷತೆ ವಹಿಸಿದ್ದರು. ಸುಪರಿಂಟೆಂಡಿಂಗ್ ಇಂಜನಿಯರ್ ಶ್ರೀ ಡಾ| ಎ. ಎಸ್. ಅಡ್ಯೆಯವರು ಸ್ವಾಗತ ಭಾಷಣ ಮಾಡುತ್ತಾ ಈ ಸಂಕವನ್ನು ಕಟ್ಟಿಸಲು ೩.೫ಲಕ್ಷ ರೂ ಅಂದಾಜು ಮಾಡಲಾಗಿದೆಯೆಂದರು. ಶ್ರೀ ವೆಂಕಟರಮಣ ಗೌಡ ಎಂ. ಎಲ್. ಎಯವರು ಧನ್ಯವಾದವಿತ್ತರು.

ದರ್ಬೆ ಸುಬ್ರಹ್ಮಣ್ಯ ರಸ್ತೆಯಲ್ಲಿನ ಪಂಜ ಹೊಸ ಸಂಕಕ್ಕೆ ಶಂಕುಸ್ಥಾಪನೆ ಮಾಡುತ್ತಾ ಮಾನ್ಯ ಸಚಿವರು, 'ಗ್ರಾಮದ ಮುಖಂಡತ್ವ ಬೆಳೆದರೆ ಮಾತ್ರ ದೇಶದ ಪ್ರಗತಿಯೂ ಸುಲಭವಾಗುವುದು' ಎಂದು ಹೇಳಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಮತಿ ಪುಷ್ಪಾ ಜಿ. ರೈಯವರು ವಹಿಸಿದ್ದರು. ಡಾ| ಎ. ಎಸ್. ಅಡ್ಯೆಯವರು ಸ್ವಾಗತ ಭಾಷಣಮಾಡುತ್ತಾ ಈ ಸಂಕಕ್ಕೆ ೬೭,೦೦೦ರೂ ಅಂದಾಜುಮಾಡಲಾಗಿದೆಯೆಂದರು. ಕೆ. ವಿ. ಗೌಡ ಎಂ. ಎಲ್. ಎ. ಯವರು ಧನ್ಯವಾದವಿತ್ತರು.

ಆರಿಯಡ್ಕ ಸಿಟ್ಟೆ ಕಲ್ಲ ಕಟ್ಟ ರಸ್ತೆಯಲ್ಲಿರುವ ಬೆಳ್ಳಾರೆಯಲ್ಲಿನ ಗೌರಿಹೊಳೆ ಸಂಕಕ್ಕೆ ಶ್ರೀ ಚನ್ನಬಸಪ್ಪನವರು ಶಂಕುಸ್ಥಾಪನೆ ಮಾಡುತ್ತಾ ಸರಕಾರದ ವಿಷಯದಲ್ಲಿ ಪ್ರಜೆಗಳು ಸದಭಿಪ್ರಾಯಪಡಬೇಕೆಂದರು. ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಮಂಜಯ್ಯ ಹೆಗ್ಗಡೆಯವರು ಅಧ್ಯಕ್ಷತೆ ವಹಿಸಿದ್ದರು. ಡಾ| ಎ. ಎಸ್. ಅಡ್ಯೆಯವರು ಸ್ವಾಗತ ಭಾಷಣ ಮಾಡುತ್ತಾ ಈ ಸಂಕಕ್ಕೆ ಮೂವತ್ತೇಳು ಸಾವಿರ ರೂ. ಗಳನ್ನು ಅಂದಾಜು ಮಾಡಲಾಗಿದೆಯೆಂದರು. ಶ್ರೀ ಕೆ. ವಿ. ಗೌಡ. ಎಂ. ಎಲ್. ಎ. ಯವರು ಧನ್ಯವಾದವಿತ್ತರು.

ದರ್ಬೆ ಸುಬ್ರಹ್ಮಣ್ಯ ರಸ್ತೆಯಲ್ಲಿನ ಸರ್ವೆ ಸಂಕಕ್ಕೆ ಶಂಕುಸ್ಥಾಪನೆ ಮಾಡುತ್ತಾ ಮಾನ್ಯ ಸಚಿವರು ಈ ಸಂಕದ ರಚನೆಯಿಂದ ಮಲೆನಾಡಿನ ಸಾರಿಗೆ ಸಂಪರ್ಕ ಉತ್ತಮವಾಗಲೆಂದು ಹಾರೈಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರು ಅಧ್ಯಕ್ಷತೆ ವಹಿಸಿದ್ದರು ಡಾ| ಅಡ್ಯೆಯವರು ತಮ್ಮ ಸ್ವಾಗತ ಭಾಷಣದಲ್ಲಿ ಈ ಸಂಕಕ್ಕೆ ೭೫,೨೦೦ ರೂ ವೆಚ್ಚದ ಅಂದಾಜು ಮಾಡಲಾಗಿದೆಯೆಂದರು. ಶ್ರೀ ಸಂಕಪ್ಪನವರು ಧನ್ಯವಾದವಿತ್ತರು.

ನಂತರ ಸಚಿವರು ಪುತ್ತೂರು—ಉಪ್ಪಿನಂಗಡಿ ರಸ್ತೆಯಲ್ಲಿನ ನೇತ್ರಾವತಿ ಹೊಳೆಗೆ ಕಟ್ಟಲಿರುವ ಸಂಕದ ಶಂಕುಸ್ಥಾಪನೆ ಮಾಡಿದರು. ಶ್ರೀ ಬಿ. ವೈಕುಂಠ ಬಾಳಿಗ, ಎಂ. ಎಲ್. ಎ. ಯವರು ಅಧ್ಯಕ್ಷತೆ ವಹಿಸಿದ್ದರು ಡಾ| ಅಡ್ಯೆಯವರು ತಮ್ಮ ಸ್ವಾಗತ ಭಾಷಣದಲ್ಲಿ ಈ ಸೇತುವೆಗೆ ಸುಮಾರು ೧೧ ಲಕ್ಷ ರೂ. ವೆಚ್ಚವಾಗಬಹುದೆಂದರು. ಶ್ರೀ ಕೆ. ವಿ. ಗೌಡ, ಎಂ. ಎಲ್. ಎ. ಯವರು ಧನ್ಯವಾದವಿತ್ತರು

ತಾ. ೯ರಂದು ಬೆಳಿಗ್ಗೆ ಜಾಲ್ಸೂರು ಸುಬ್ರಹ್ಮಣ್ಯ ರಸ್ತೆಯಲ್ಲಿ ಕಂಡಡ್ಕ ಸಂಕಕ್ಕೆ ಶಂಕುಸ್ಥಾಪನೆ ಮಾಡುತ್ತಾ ಶ್ರೀ ಚನ್ನಬಸಪ್ಪನವರು ಅಭಿವೃದ್ಧಿ ಕಾರ್ಯದಲ್ಲಿ ಜನತೆಯೂ ಪಾತ್ರ ವಹಿಸಬೇಕೆಂದು ಹೇಳಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎ. ಪಿ. ಸುಬ್ಬಯ್ಯನವರು ವಹಿಸಿದ್ದರು. ಮೈಸೂರಿನ ಚೀಫ್ ಇಂಜನಿಯರ್ ಶ್ರೀ ಜಿ. ಎಸ್. ಗಣಪತಿಯವರು ಸ್ವಾಗತಿಸುತ್ತ ಈ ಸಂಕಕ್ಕೆ ೬೫ ಸಾವಿರ ರೂ. ಅಂದಾಜು ಮಾಡಲಾಗಿದೆಯೆಂದರು. ಡಾ| ಎ. ಎಸ್. ಅಡ್ಯೆಯವರು ಧನ್ಯವಾದವಿತ್ತರು.

ಜಾಲ್ಸೂರು ಸುಬ್ರಹ್ಮಣ್ಯ ರಸ್ತೆಯಲ್ಲಿ ಕಲ್ಲಾಜೆಯೆಂಬಲ್ಲಿ ರೂ. ೨.೨ ಲಕ್ಷ ವೆಚ್ಚದಲ್ಲಿ ಕಟ್ಟಲಿರುವ ಸಂಕಕ್ಕೆ ಶಂಕುಸ್ಥಾಪನೆ ಮಾಡುತ್ತಾ ಮಾನ್ಯ ಸಚಿವರು ಸರ್ಕಾರದ ಕಾರ್ಯದಲ್ಲಿ ಜನತೆಯೂ ಸಹಕರಿಸಬೇಕೆಂದರು. ಶ್ರೀ ಕೆ. ಮಲ್ಲಪ್ಪ ಎಂ. ಎಲ್. ಎ. ಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಜಿ. ಎಸ್. ಗಣಪತಿಯವರು ಸ್ವಾಗತಿಸಿದ್ದರು. ಡಾ| ಎ. ಎಸ್. ಅಡ್ಯೆಯವರು ಧನ್ಯವಾದವಿತ್ತರು.

ಮಧ್ಯಾಹ್ನಾನಂತರ ಸುಬ್ರಹ್ಮಣ್ಯಕ್ಕಾಗಮಿಸಿದ ಸಚಿವರು, ದರ್ಬೆ ಸುಬ್ರಹ್ಮಣ್ಯ ರಸ್ತೆಯಲ್ಲಿನ ಯೆಣಕಲ್ ಸಂಕಕ್ಕೆ ಶಂಕುಸ್ಥಾಪನೆ ಮಾಡಿದರು. ಶ್ರೀ ಪಿ. ಸುಬ್ಬಯ್ಯ ನಾಯ್ಕ ಎಂ. ಎಲ್. ಎ. ಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಜಿ. ಎಸ್. ಗಣಪತಿಯವರು ಸ್ವಾಗತಿಸುತ್ತಾ ಯೆಣಕಲ್ ಸಂಕದ ಅಂದಾಜು ವೆಚ್ಚವು ೧.೦೩ಲಕ್ಷವಾಗುವುದೆಂದರು. ಶ್ರೀ ರಾಮಪ್ಪಗೌಡರು ಧನ್ಯವಾದವಿತ್ತರು.

ನಂತರ ಸಚಿವರು ಕುಳುಕುಂದ-ಸುಬ್ರಹ್ಮಣ್ಯ ರಸ್ತೆಯಲ್ಲಿ ಕುಮಾರಧಾರಿ ನದಿಗೆ ಕಟ್ಟಿಸಲಿರುವ ಮುಳುಗು ಸಂಕವೊಂದಕ್ಕೆ ಶಂಕುಸ್ಥಾಪನೆ ಮಾಡಿದರು. ಶ್ರೀ ಓ ಎಸ್. ಬೋರಣ್ಣ ಗೌಡ ಎಂ. ಎಲ್. ಎ. ಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಜಿ. ಎಸ್. ಗಣಪತಿಯವರು ತಮ್ಮ ಸ್ವಾಗತದಲ್ಲಿ ಈ ಸಂಕಕ್ಕೆ ಸುಮಾರು ೨ಲಕ್ಷ ರೂ. ಅಂದಾಜಾಗಿದೆಯೆಂದರು. ಶ್ರೀ ಕೆ. ಪಿ. ಗೌಡ ಎಂ. ಎಲ್. ಎ. ಯವರು ಧನ್ಯವಾದವಿತ್ತರು.

ತರುವಾಯ ಮಾನ್ಯ ಸಚಿವ ಶ್ರೀ ಚನ್ನಬಸಪ್ಪನವರು ಸವಣೂರಿಗೆ ತೆರಳಿ ಅಲ್ಲಿ ರಾ. ವಿ. ಯೋಜನೆಯ ಆಶ್ರಯದಲ್ಲಿ ಜರಗಲಿರುವ ಮೂರು ದಿನಗಳ ರೈತ ಮುಂದಾಳುಗಳ ತರಬೇತಿ ಶಿಬಿರವನ್ನು ಉದ್ಘಾಟಿಸಿದರು. ಆ ಸಂದರ್ಭದಲ್ಲಿ ಮಾತನಾಡುತ್ತಾ ವಿದ್ಯಾವಂತರಾದವರು ಕೃಷಿಕ್ಷೇತ್ರದಲ್ಲಿ ದುಡಿಯುವುದಕ್ಕೆ ಮುಂದಾಗಬೇಕು ಎಂದರು. ಶ್ರೀಯುತರು ಮುಂದುವರಿಸುತ್ತಾ ರೈತ ಮುಂದಾಳಾಗತಕ್ಕವರಿಗೆ ಈ ಶಿಬಿರದಲ್ಲಿ ಸರಿಯಾದ ಮಾರ್ಗದರ್ಶನ ದೊರೆಯಲೆಂದು ಹಾರೈಸಿದರು.

ತಾ ೧೦ರಂದು ಮಾನ್ಯ ಸಚಿವರು ಮಂಗಳೂರು ಲೇಡಿ ಗೋಷನ್ ಆಸ್ಪತ್ರೆಯ ಹೊಸ ವಿಸ್ತರಣಾ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿದರು. ಅಧ್ಯಕ್ಷತೆ ವಹಿಸಿದ್ದ ಮಾಜಿಮಂತ್ರಿ ಶ್ರೀ ಎ. ಬಿ. ಶೆಟ್ಟರು ತಮ್ಮ ಭಾಷಣದಲ್ಲಿ ಆಸ್ಪತ್ರೆಗಳು ರೋಗ ತಡೆಗಟ್ಟುವ ಕಡೆಗಿನ ಪ್ರಚಾರ ಕೇಂದ್ರಗಳಾಗಿರಬೇಕೆಂಬುದಾಗಿ ಹೇಳಿದರು. ಉದ್ಘಾಟನಾ ಭಾಷಣ ಮಾಡುತ್ತಾ ಶ್ರೀ ಚನ್ನಬಸಪ್ಪನವರು ಆಸ್ಪತ್ರೆಯ ಡಾಕ್ಟರರು ಉತ್ತಮವಾದ ಮತ್ತು ಆಧುನಿಕ ಉಪಕರಣಗಳನ್ನು ಅಳವಡಿಸುವುದರಿಂದ ಮಾತ್ರ ಸೇವೆ ಉತ್ತಮವಾಗಲಾರದು ಎಂದರು. ಆರಂಭದಲ್ಲಿ ಡಾ| ಎ. ಎಸ್. ಅಡ್ಯೆಯವರು ಸ್ವಾಗತ ಭಾಷಣ ಮಾಡಿದರು. ಕೊನೆಯಲ್ಲಿ ಶ್ರೀ ತಿಮ್ಮಪ್ಪ ಶೆಟ್ಟರು ಧನ್ಯವಾದವಿತ್ತರು.

ಉಡುಪಿ ಮುನಿಸಿಪಲ್ ಕೆಲಸಗಾರರ ಸಂಘದ ೫ನೇ ವಾರ್ಷಿಕ ಮಹಾ ಸಭೆಯು ತಾ. ೮ರಂದು ಶಿರಿಬೀಡಿನಲ್ಲಿ ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ ಎ. ಶಾಂತಾರಾಮ ಪೈಯವರ ಅಧ್ಯಕ್ಷತೆಯಲ್ಲಿ ಜರಗಿ, ಗತ ವರ್ಷದ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಜೂರು ಮಾಡಿ, ಆಡಳಿತ ಕಮಿಟಿಯನ್ನು ಚುನಾಯಿಸಲಾಯಿತು.

ಉದ್ಯಾವರ—ಹಿಂದೂ ಶಾಲೆಯ ವರ್ಧಂತಿಯು ತಾ. ೮ರಂದು ಶ್ರೀ ಟಿ. ಎ. ಪೈಗಳ ಹಿರಿತನದಲ್ಲಿ ನಡೆಯಿತು. ಸ್ವಾಗತ ಭಾಷಣವಾದ ಬಳಿಕ ಮುಖ್ಯೋಪಾಧ್ಯಾಯ ಶ್ರೀಯು. ಗೋವಿಂದ ಮಯ್ಯರು ವರದಿ ವಾಚನ ಮಾಡಿದರು. ಶ್ರೀಮತಿ ಪ್ರೇಮಾ ಎ. ಪೈಯವರಿಂದ ಬಹುಮಾನ ವಿತರಣೆಯಾದ ಬಳಿಕ ಅಧ್ಯಕ್ಷರ ಭಾಷಣವಾಯಿತು. ಧನ್ಯವಾದ ಸಮರ್ಪಣೆಯಾದ ತರುವಾಯ ಶಾಲಾ ಮಕ್ಕಳಿಂದ ಮನರಂಜನಾ ಕಾರ್ಯಕ್ರಮಗಳಾದುವು. ಬೆಳಿಗ್ಗೆ ಶ್ರೀ ಕೃಷ್ಣಪ್ಪ ಸಾಹುಕಾರರು ಧ್ವಜಾರೋಹಣ ಗೈದರು. ಶ್ರೀ ಆರ್. ಎಸ್. ಕಿಣಿಯವರು ಸಿಹಿತಿಂಡಿ ಹಂಚಿದರು.

ಕೊರಂಗ್ರಪಾಡಿ—ಪಂಚಾಯ್ತ್ ಬೋರ್ಡಿನ ಮತ್ತು ಸಮಾಜ ಮಂದಿರದ ಹೊಸ ಕಟ್ಟಡದ ಉದ್ಘಾಟನೆಯು ಉಡುಪಿ ನಗರ ಸಭಾಧ್ಯಕ್ಷ ಡಾ| ಕೆ. ಎಲ್. ಐತಾಳರಿಂದ ಇತ್ತೀಚೆಗೆ ನೆರವೇರಿಸಲ್ಪಟ್ಟಿತು. ಪಂಚಾಯ್ತ್ ಬೋರ್ಡಿನ ಅಧ್ಯಕ್ಷ ಶ್ರೀ ಕೆ. ಬಾಲಕೃಷ್ಣ ಶೆಟ್ಟರು ವರದಿ ವಾಚನ ಮತ್ತು ಶುಭಸಂದೇಶಗಳನ್ನು ಓದಿದರು. ಸಭಿಕರ ಮತ್ತು ಅಧ್ಯಕ್ಷರ ಭಾಷಣವಾದ ನಂತರ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಇಲ್ಲಿಯ ಪಂಚಾಯ್ತುಬೋರ್ಡ್ ಚುನಾವಣೆಯು ನಡೆದು ಶ್ರೀಗಳಾದ ಕೆ. ಬಾಲಕೃಷ್ಣ ಶೆಟ್ಟರು ಅಧ್ಯಕ್ಷರಾಗಿಯೂ ಕೆ. ಮಹಾಬಲ ಶೆಟ್ಟಿ, ವಿನ್ಸೆಂಟ್ ಕಾರ್ಡೋಜ, ಯನಿಲ್ ಕರ್ಕಡ, ತಿಮ್ಮಪ್ಪಶೆಟ್ಟಿ, ಅಂತಯ್ಯ ಪೂಜಾರಿ ತೋನ್ಸ—ಇವರು ಸದಸ್ಯರಾಗಿಯೂ ಚುನಾಯಿತರಾದರು.

ಬಂದರ ಪರಿಶೀಲನಾ ಸಮಿತಿ:-ಕೇಂದ್ರ ಸರ್ಕಾರದ ಮಧ್ಯವರ್ತಿ ಬಂದರ ಪರಿಶೀಲನಾ ಸಮಿತಿಯು ಶ್ರೀ ಎಚ್. ಪಿ. ಮತ್ರಾನಿಯವರ ನೇತೃತ್ವದಲ್ಲಿ ತಾ ೩ರಂದು ಮಲ್ಪೆಯನ್ನು ಸಂದರ್ಶಿಸಿದಾಗ ಶ್ರೀಗಳಾದ ಯು. ಎಸ್. ನಾಯಕ್, ಟಿ. ಎ. ಪೈ, ಕೆ. ಕೆ. ಪೈ ಮುಂತಾದವರು ಸಮಿತಿಯವರನ್ನು ಸ್ವಾಗತಿಸಿ ಬಂದರ ಅಭಿವೃದ್ಧಿಯ ಕುರಿತು ವಿಚಾರವಿನಿಮಯ ನಡೆಸಿದರು. ಮಣಿಪಾಲದಲ್ಲಿ ಈ ಸಮಿತಿಯವರನ್ನು ಡಾ| ಟಿ. ಮಾಧವಪೈಗಳು ಸತ್ಕರಿಸಿದರು. ಡಾ| ಕೆ. ಎಲ್. ಐತಾಳರು ಮಲ್ಪೆಯ ಅರ್ಹತೆ ಕುರಿತಾದ ಒಂದು ಸೂಚಿಪತ್ರವನ್ನು ಸಮರ್ಪಿಸಿದರು ಶ್ರೀ ಮತ್ರಾನಿಯವರು ಈ ಕುರಿತು ಪರಿಶೀಲನೆ ನಡೆಸುವುದಾಗಿ ಹೇಳಿದರು.

ಕೆಂಜೂರು—ವಿಶ್ವೇಶ್ವರ ಪ್ರೌಢ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವವು ತಾ೬ರಂದು ಶ್ರೀ ಕೆ. ಸಂಜೀವ ಭಟ್ಟರವರ ಹಿರಿತನದಲ್ಲಿ ಜರಗಿತು. ಶ್ರೀ ಕೆಂಜೂರು ಮಹಾಬಲಶೆಟ್ಟರು ನಿಯೋಜಿತ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣಾ ನಂತರ ಮನರಂಜನಾ ಕಾರ್ಯಕ್ರಮದೊಂದಿಗೆ ಸಭಾಂತ್ಯವಾಯಿತು.

ಮೀನುಗಾರರ ಪರಿಷತ್ತು:-ಮಹಾ ಮೈಸೂರು ಮೀನುಗಾರರ ಪರಿಷತ್ತಿನ ದ್ವಿತೀಯ ಅಧಿವೇಶನವು ಇದೇ ತಾ ೧೫, ೧೬, ೧೭ ರಂದು ಕಾರವಾರದಲ್ಲಿ ಜರಗಲಿರುವುದು. ಮೀನುಗಾರಿಕಾ ಪ್ರದರ್ಶನವನ್ನು ಮೈಸೂರು ಆರ್ಥಿಕ ಮತ್ತು ಯೋಜನಾ ಉಪಮಂತ್ರಿ ಶ್ರೀ ಜಿ. ಎಸ್. ಶಂಷುದ್ದೀನ್‌ರವರು ತಾ ೧೬ರಂದು ಉದ್ಘಾಟಿಸುವರು. ಪರಿಷತ್ತಿನ ಉದ್ಘಾಟನೆಯು ಅದೇ ದಿನ ಮೈಸೂರು ಮೀನುಗಾರಿಕಾ ಮಂತ್ರಿ ಶ್ರೀ ಕೆ. ಎಫ್. ಪಾಟೀಲರಿಂದ ಶ್ರೀ ಜೋಕಿಂ ಆಳ್ವರ ಅಧ್ಯಕ್ಷತೆಯಲ್ಲಿ ನೆರವೇರುವುದು. ಬಹಿರಂಗ ಅಧಿವೇಶನದ ಅಧ್ಯಕ್ಷತೆಯನ್ನು ಕೇಂದ್ರ ಉಪಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ವಹಿಸುವರು. ಈ ಅಧಿವೇಶನದಲ್ಲಿ ಕೇಂದ್ರ ಹಾಗೂ ರಾಜ್ಯಸರ್ಕಾರಗಳ ಗಣ್ಯ ವರಿಷ್ಠರು ಭಾಗವಹಿಸುವರೆಂದು ತಿಳಿದು ಬರುತ್ತದೆ.

ಬಂಟರಯಾನೆ ನಾಡವರ ಸಂಘದ ಸುವರ್ಣೋತ್ಸವ-ಬಂಟರಯಾನೆ ನಾಡವರ ಸಂಘದ ಸುವರ್ಣೋತ್ಸವವು ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ತಾ ೧೧ರಂದು, ಕೃಷಿ, ಕೋಳಿಸಾಕಣೆ, ಸಮಾಜದ ಸ್ತ್ರೀಯರಿಂದ ಏರ್ಪಡಿಸಿದ ಕಲೆ, ಗೃಹಾಲಂಕಾರ, ಮಾದರಿ ಪಾಕಶಾಲೆ ಇತ್ಯಾದಿ ಪ್ರದರ್ಶನಗಳ ಉದ್ಘಾಟನೆಯೊಂದಿಗೆ ಪ್ರಾರಂಭವಾಯಿತು. ಸಂಜೆ, ಸಂಘದ ವಾರ್ಷಿಕ ಮಹಾಸಭೆಯು ಶ್ರೀ ಬಿ. ಜಗಜ್ಜೀವನದಾಸ್‌ಶೆಟ್ಟಿ ಎಂ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಶಂಕರ ಆಳ್ವರ ಸ್ವಾಗತ, ಶ್ರೀ ಕೆ. ಸುಂದರರಾಮ ಶೆಟ್ಟರ ವರದಿವಾಚನ, ಶ್ರೀ ಎಚ್. ದಾಸಣ್ಣ ಆಳ್ವರ ಬಡವಿದ್ಯಾರ್ಥಿ ಫಂಡಿನ ವರದಿವಾಚನಾನಂತರ ಮುಂದಿನ ವರ್ಷದ ಅಧಿಕಾರಿವರ್ಗವನ್ನು ಆರಿಸಲಾಯಿತು. ವಿವಿಧ ವಿನೋದಾವಳಿಗಳೊಂದಿಗೆ ಅಂದಿನ ಕಾರ್ಯಕ್ರಮಮುಕ್ತಾಯವಾಯಿತು.

ತಾ೧೨ ರಂದು ಸಂಘದ ಸುವರ್ಣೋತ್ಸವ ಮಹಾಸಭೆಯು ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಕೆ. ಎಸ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ, ಶ್ರೀ ವಕೀಲ್ ಕೆ. ವೆಂಕಪ್ಪ ಶೆಟ್ಟರ ಉದ್ಘಾಟನೆಯೊಂದಿಗೆ ಪ್ರಾರಂಭವಾಯಿತು. ಆರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಕೆ. ಟಿ. ಆಳ್ವರ ಸ್ವಾಗತವಾದನಂತರ ಶ್ರೀ ಎ. ಶಂಕರ ಆಳ್ವರು ಅತಿಥಿಗಳ ಪರಿಚಯ ಭಾಷಣ ಮಾಡಿದರು. ಬಳಿಕ ಕೃಷಿ, ಯಕ್ಷಗಾನ ಸಂಗೀತ ಸಾಹಿತ್ಯ ರಚನಾದಿ ಕಲೆಗಳಲ್ಲಿ ಹೆಸರ್ಗೊಂಡ ಸಮಾಜದ ವ್ಯಕ್ತಿಗಳಿಗೆ ಅಧ್ಯಕ್ಷರ ಹಸ್ತದಿಂದ ಪದಕ ಹಾಗೂ ಯೋಗ್ಯತಾಪತ್ರಗಳನ್ನು ಹಂಚಲಾಯಿತು. ಉದ್ಘಾಟಕರಾದ ಶ್ರೀ ಕೆ. ವೆಂಕಪ್ಪ ಶೆಟ್ಟರು ತಮ್ಮ ಉದ್ಘಾಟನಾ ಭಾಷಣದಲ್ಲಿ ಒಕ್ಕಲು ಮಸೂದೆ ನಮ್ಮ ಸಮಾಜದ ಜನರ ಜೀವನವನ್ನು ಶೋಷಿಸುವ ಸಾಧನವಾಗಿರುವುದರಿಂದ ಸಮಾಜದ ಮುಂದಾಳುಗಳು ಇದನ್ನು ಸರ್ಕಾರದ ಗಮನಕ್ಕೆ ತರಬೇಕು' ಎಂದರು. ಶ್ರೀ ಬಿ. ಲಕ್ಕಪ್ಪ ರೈಗಳು ಸ್ತುತಿ ವಾಚನ ಮಾಡುತ್ತಾ ಮೈಸೂರು ಸರ್ಕಾರದ ಭೂಸುಧಾರಣಾ ಧೋರಣೆಯನ್ನು ಬಲವಾಗಿ ಖಂಡಿಸಿ, ಪಾಳುಬಿದ್ದ ಸರಕಾರಿ, ಭೂಮಿಯನ್ನು ಸಹಕಾರಿ ಬೇಸಾಯಕ್ಕೊಳಪಡಿಸಬೇಕೆಂದರು. ಜಸ್ಟೀಸ್ ಶ್ರೀ ಕೆ. ಸದಾನಂದ ಹೆಗ್ಡೆಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ವಿದ್ಯಾಭ್ಯಾಸ ಪಡೆದ ಜನರು ತಮ್ಮ ಕಾರ್ಯಕ್ಷೇತ್ರವನ್ನು ವ್ಯಾಪಾರ, ವಾಣಿಜ್ಯ ಕ್ಷೇತ್ರಗಳಿಗೆ ವಿಸ್ತರಿಸಿಕೊಳ್ಳಬೇಕೆಂದರು. ಕೊನೆಯಲ್ಲಿ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರು ಧನ್ಯವಾದವಿತ್ತರು. ಬೆಳಿಗ್ಗೆ ಸಂಘಕ್ಕೆ ಹೆಚ್ಚಿನ ಧನಸಹಾಯವನ್ನು ಇತ್ತವರ ಭಾವ ಚಿತ್ರಗಳನ್ನು ಶ್ರೀ ಕೆ. ಎಸ್. ಹೆಗ್ಡೆಯವರು ಅನಾವರಣ ಮಾಡಿದ್ದರು. ಮನರಂಜನೆಯ ಕಾರ್ಯಕ್ರಮಗಳ ಅಂಗವಾಗಿ ಶ್ರೀಮತಿ ಅನಸೂಯ ಬಿ. ಶೆಟ್ಟಿಯವರಿಂದ ಸಂಗೀತ, ಯಕ್ಷಗಾನ ಕಲಾವರ್ಧಕ ಸಂಘ, ಕುಂದಾಪುರ ಇವರ 'ವೀರಮಣಿ ಕಾಳಗ'ವೆಂಬ ಯಕ್ಷಗಾನ ಪ್ರಸಂಗ ಮುಂತಾದ ಕಾರ್ಯಕ್ರಮಗಳ ನಂತರ ಸಮಾರಂಭ ಮುಕ್ತಾಯಗೊಂಡಿತು.

ಕರ್ನಾಟಕ ಪ್ರಾದೇಶಿಕ ಆಯುರ್ವೇದ ಮಂಡಳಿನ ೨ನೆಯ ಆಯುರ್ವೇದ ಸಮ್ಮೇಳನವು ಉಡುಪಿ ಸಂಸ್ಕೃತ ಕಾಲೇಜಿನ ಸಭಾಂಗಣದಲ್ಲಿ ದಿನಾಂಕ ೧೭, ೧೮ ಮತ್ತು ೧೯ರಂದು ಜರಗಲಿರುವುದು. ಈ ಸಮ್ಮೇಳನವನ್ನು ಆರೋಗ್ಯ ಮಂತ್ರಿ ಡಾ| ಕೆ. ಕೆ. ಹೆಗ್ಡೆಯವರು ಉದ್ಘಾಟಿಸುವರು. ವಸ್ತು ಪ್ರದರ್ಶನವನ್ನು ಅದಮಾರು ಮಠದ ಶ್ರೀ ಪಾದಂಗಳವರು ಉದ್ಘಾಟಿಸುವರು.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ.

ನವಾದರೂ ತಾಳಿದರೆಂದು ತೃಪ್ತಿಪಟ್ಟುಕೊಳ್ಳಬಹುದೆ?

ಕೇರಳದ ಶಿಕ್ಷಣ ಕಾಯಿದೆ

ಕೇರಳದಲ್ಲಿ ಶಿಕ್ಷಣ ಕಾಯಿದೆಯನ್ನು ವ್ಯವಹಾರಗೊಳಿಸುವುದರಿಂದ ಆಗುವ ತೊಂದರೆಗಳಿಂದಾಗಿ ಮುಂದಿನ ಶಿಕ್ಷಣ ವರ್ಷದಿಂದ ತಮ್ಮ ಆಡಳಿತೆಯ ಶಾಲೆಗಳನ್ನು ಮುಚ್ಚುವುದಾಗಿ ಕೆಲವು ಕಥೋಲಿಕ ಸಂಘ ಸಂಸ್ಥೆಗಳು ನಿರ್ಧರಿಸಿರುವುದಾಗಿ ತಿಳಿದು ಬಂದಿದೆ. ಮುಖ್ಯ ಮಂತ್ರಿ ಶ್ರೀ ನಂಬೂದರಿಪಾದರು ಈ ಕಾಯಿದೆಯನ್ನು ಅಥವಾ ಅದರ ನಿಯಮಗಳನ್ನು ಹಿಂತೆಗೆಯುವ ಪ್ರಶ್ನೆಯಿಲ್ಲವೆಂದೂ ಇದರಿಂದ ಆಗಬಹುದಾದ ತೊಂದರೆಗಳ ಕುರಿತು ಆಲೋಚಿಸಲು ತಾನು ಸಿದ್ಧನಿರುವುದಾಗಿಯೂ ಆಯಾ ಮೆನೇಜ್‌ಮೆಂಟಿಗೆ ಬರೆದಿರುತ್ತಾರೆ. ಆದರೆ, ಈ ಮಾತುಕತೆಗಳು ನಿಷ್ಪ್ರಯೋಜಕವಿರುವುದರಿಂದ ಅವರು ಮುಖ್ಯ ಮಂತ್ರಿಯವರ ಈ ಕೊಡುಗೆಯನ್ನು ತಿರಸ್ಕರಿಸುವ ಸಂಭವವಿದೆ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು. ಸಂ. ನ.)

ಶ್ರೀ ಪದ್ಮಪಾದಾಚಾರ್ಯ ವಿರಚಿತ ಪಂಚಪಾದಿಕಾ ಮತ್ತು ಇದರ ಮೇಲಿನ ವ್ಯಾಖ್ಯಾನ ಹಾಗೂ ಪ್ರತಿವ್ಯಾಖ್ಯಾನಗಳು:— (ಸಂಸ್ಕೃತ) ಸಂಪಾದಕರು: ಶಾಸ್ತ್ರರತ್ನಾಕರ ಪ್ರೊ|ಲಗಮ್ ಶ್ರೀ ಎಸ್. ಶ್ರೀರಾಮಶಾಸ್ತ್ರಿ ಮತ್ತು ಶ್ರೀ ಎಸ್. ಆರ್. ಕೃಷ್ಣಮೂರ್ತಿಶಾಸ್ತ್ರಿ, ಪ್ರಕಾಶಕರು: ಮದ್ರಾಸ ಸರಕಾರದ ಪ್ರಾಚ್ಯ ಹಸ್ತಪ್ರತಿಗಳ ಭಂಡಾರ, ಮದ್ರಾಸು. ಪುಟಗಳು: xx+೧೩೬+ 28+೪೯೭+೭೯೨. ಬೆಲೆ: ರೂ. ೨೮-೭೫.

ಶ್ರೀ ಶಂಕರ ಭಗವತ್ಪಾದರ ಬ್ರಹ್ಮಸೂತ್ರ ಭಾಷ್ಯದ ಮೇಲಿನ 'ಪಂಚಪಾದಿಕಾ'ವೆಂಬ ಈ ಪ್ರಖ್ಯಾತ ವ್ಯಾಖ್ಯಾನವು 'ಸನಂದನ' ಎಂಬ ಹೆಸರನ್ನೂ ಪಡೆದಿದೆ. ಶ್ರೀ ಪದ್ಮನಾಭಾಚಾರ್ಯಕೃತ 'ಪಂಚಪಾದಿಕಾ'ದ ಮೇಲೆ ಆತನಂತೆಯೇ ವಿದ್ವಾಂಸನಾದ ಪ್ರಕಾಶಾತ್ಮನು "ಪಂಚಪಾದಿಕಾ ವಿವರಣಮ್" ಎಂಬ ವ್ಯಾಖ್ಯಾನವನ್ನೂ ಬರೆದಿದ್ದಾನೆ. ಅದ್ವೈತ ಸಂಪ್ರದಾಯದಲ್ಲಿಯೇ ಭಾಮತಿ ಪ್ರಸ್ಥಾನ ಮತ್ತು ವಿವರಣ ಪ್ರಸ್ಥಾನ ಎಂಬೆರಡು ವರ್ಗಗಳಿದ್ದು ಈ ಗ್ರಂಥವು ವಿವರಣ ಪ್ರಸ್ಥಾನದ ತಿಳುವಳಿಕೆಗೆ ಸಹಾಯಕವೆನಿಸಿದೆ. 'ಪಂಚಪಾದಿಕಾ' ಮೂಲಗ್ರಂಥಕ್ಕೆ ಆತ್ಮಸ್ವರೂಪನ 'ಪ್ರಬೋಧ ಪರಿಶೋಧಿನೀ' ಮತ್ತು ವಿಜ್ಞಾನಾತ್ಮನ 'ತಾತ್ಪರ್ಯ ಬೋಧಿನೀ' ಎಂಬೆರಡು ವ್ಯಾಖ್ಯಾನಗಳೂ, 'ಪಂಚಪಾದಿಕಾ ವಿವರಣಂ'ಗೆ ಚಿತ್ಸುಖಾಚಾರ್ಯನ 'ತಾತ್ಪರ್ಯ ದೀಪಿಕಾ' ಮತ್ತು ನೃಸಿಂಹಾಶ್ರಮನ 'ಭಾವಪ್ರಕಾಶಿಕಾ' ಎಂಬೆರಡು ವ್ಯಾಖ್ಯಾನಗಳೂ ಇದ್ದು ಈ ಗ್ರಂಥದಲ್ಲಿ ಅವೆಲ್ಲವೂ ಸಂಯುಕ್ತವಾಗಿ ಬೆಳಕುಕಂಡಿವೆ.

ಈ 'ಪ್ರಕಾಶನ'ದಲ್ಲಿ ಎರಡು ಗ್ರಂಥಭಾಗಗಳಿದ್ದು ಪಂಚಪಾದಿಕಾ ಮತ್ತದರ ಎರಡು ವ್ಯಾಖ್ಯಾನಗಳು ಮೊದಲನೆಯ ಭಾಗದಲ್ಲಿಯೂ ಪಂಚಪಾದಿಕಾ ವಿವರಣಂ ಮತ್ತದರ ಎರಡು ವ್ಯಾಖ್ಯಾನಗಳು ಎರಡನೆದರಲ್ಲಿಯೂ ಸೇರಿವೆ. 'ಪಂಚಪಾದಿಕಾ' ಎಂಬ ಹೆಸರಿನಿಂದ ಪದ್ಮಪಾದಾಚಾರ್ಯನು ಶ್ರೀ ಭಾಷ್ಯದ ಐದು ಪಾದಗಳಿಗೆ ಮಾತ್ರ ವ್ಯಾಖ್ಯಾನವನ್ನು ಬರೆದಿರುವನೆಂದು ತಿಳಿಯಬಹುದಾದರೂ ಆತನು ಸಂಪೂರ್ಣ ಭಾಷ್ಯದ ಮೇಲೆಯೂ ವ್ಯಾಖ್ಯಾನ ಬರೆದಿರುವನೆಂಬುದಕ್ಕೆ ಆಂಶಿಕ ಆಧಾರಗಳಿವೆ.

ವಿವರಣಕಾರನಾದ ಪ್ರಕಾಶಾತ್ಮನು ಕಟು ಶ್ರುತಿಯ ವರೆಗಿನ ಐದು ಪಾದಗಳಿಗೆ ಮಾತ್ರ ವಿವರಣೆಯನ್ನು ಬರೆದಿರುವನಲ್ಲದೇ 'ಶಾರೀರಿಕ ನ್ಯಾಯಸಂಗ್ರಹ'ವೆಂಬ ಗ್ರಂಥದಲ್ಲಿ ಅದ್ವೈತ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಸಂಗ್ರಹಿಸಿರುತ್ತಾನೆ. ಪಂಚಪಾದಿಕಾ ಮತ್ತದರ ವಿವರಣೆಗಳಲ್ಲಿ ಮುಖ್ಯವಾಗಿ ಅನಾದಿ-ಭಾವ ರೂಪ— ಮೂಲವಿದ್ಯೆ, ಬ್ರಹ್ಮಸ್ವಳೇ— ಅನಿರ್ವಚನೀಯ— ಪದಾರ್ಥೋತ್ಪತ್ತಿ, ಜ್ಞಾನಾಧ್ಯಾಸಾರ್ಥಾಧ್ಯಾಸಾತ್ಮಕವೆಂಬೆರಡು ಅಧ್ಯಾಸಗಳು, ಅವಿದ್ಯೆ ಮತ್ತು ಅಂತ:ಕರಣಗಳ ವಿಚಾರವಾಗಿ ವಿಮರ್ಶೆಗಳು ನಡೆದಿವೆ. ಶ್ರೀ ಶಂಕರ ಭಗವತ್ಪಾದರ ಅಭಿಪ್ರಾಯವೇ ಈ ರೀತಿಯಾಗಿತ್ತೆಂದು ಈ ಗ್ರಂಥಕರ್ತನೂ ಇತರ ಅದ್ವೈತ ಸಿದ್ಧಾಂತಿಗಳೂ ಒಪ್ಪುತ್ತಾರೆ. ನಾಗೇಶ ಭಟ್ಟನಂತಹ ವೈಯಾಕರಣಿಗಳು ಈ ವಿಷಯದಲ್ಲಿ ಭಿನ್ನಾಭಿಪ್ರಾಯವನ್ನು ತಾಳಿದ್ದರೂ ಅದಷ್ಟು ಸಮಂಜಸನೆನಿಸುವುದಿಲ್ಲ.

ಶ್ರೀ ಶಂಕರ ಭಗವತ್ಪಾದರ ಕಾಲಾನಂತರ ಅದ್ವೈತ ಪ್ರಣಾಳಿಯು ವಾಚಸ್ಪತಿ ಮಿತ್ರನ ಭಾಮತಿ ಮತ್ತು ಪ್ರಕಾಶಾತ್ಮನ ವಿವರಣ ಎಂಬ ಎರಡು ಕವಲುಗಳಾಗಿ ಹರಿದಿದೆ. ಈ ಎರಡು ಕವಲುಗಳಲ್ಲಿ ಕೆಲವು ಅಂತರಗಳಿವೆ. ಉದಾಹರಣೆಗೆ, ನಿತ್ಯಕರ್ಮಾಚರಣೆಯು ಜ್ಞಾನಾಭಿವೃದ್ಧಿಯನ್ನುಂಟು ಮಾಡುವುದೆಂದು ಭಾಮತಿ ಹೇಳಿದರೆ, ಜ್ಞಾನಕ್ಕೋಸ್ಕರವೇ ನಿತ್ಯಕರ್ಮಾಚರಣೆ ಎಂದು ವಿವರಣೆ ಸೂಚಿಸುತ್ತದೆ. ಇಂತಹ ಹಲವಾರು ಅಭಿಪ್ರಾಯಭೇದಗಳು ಈ ಪುಸ್ತಕದ ಸಂಸ್ಕೃತ ಮುನ್ನುಡಿಯಲ್ಲಿ ಸವಿವರವಾಗಿ ನಿರೂಪಿಸಲ್ಪಟ್ಟಿವೆ.

ಆಧುನಿಕ ನಾಗೇಶ ಭಟ್ಟ ಮುಂತಾದವರ ಅಭಿಪ್ರಾಯವನ್ನು ಒಪ್ಪುವ ಕೆಲವರು ಅನಾದಿ ಭಾವರೂಪವಾದ ಅಜ್ಞಾನ ಮತ್ತು ಅಧ್ಯಾಸದಲ್ಲಿ ಅನಿರ್ವಚನೀಯ ಪದಾರ್ಥೋತ್ಪತ್ತಿ ಇತ್ಯಾದಿ ಪ್ರಮೇಯಗಳನ್ನು ಶ್ರೀ ಶಂಕರಾಚಾರ್ಯರು ಒಪ್ಪಿದಂತೆ ತೋರುವುದಿಲ್ಲವೆಂಬುದನ್ನು ಪ್ರತಿಪಾದಿಸುವಾಗ, ಶ್ರೀ ಆಚಾರ್ಯರ ಪ್ರಮುಖ ಶಿಷ್ಯರಲ್ಲಿ ಒಬ್ಬನಾದ ಪದ್ಮಪಾದಾಚಾರ್ಯನು ತನ್ನ ಆಚಾರ್ಯರ ಅಭಿಪ್ರಾಯವನ್ನು ಹೇಗೆ ನಿರೂಪಿಸಿರುವನೆಂಬ ಕುತೂಹಲವು ಕೆರಳುವವರಿಗೆ ಈ ಮೂಲ ಹಾಗೂ ಅದರ ವಿವರಣೆ ಮತ್ತು ವ್ಯಾಖ್ಯಾನಗಳು ಅಭ್ಯಸನೀಯವಾಗಿವೆ. ಅದ್ವೈತ ವಿದ್ವಾಂಸರೂ ಅದ್ವೈತ ದರ್ಶನದ ವಿದ್ಯಾರ್ಥಿಗಳೂ ಮಾತ್ರವಲ್ಲದೇ ಅದ್ವೈತದ ಬಗ್ಗೆ ಅಭ್ಯಾಸ ಮಾಡಬಯಸುವವರೆಲ್ಲರಿಗೂ ಈ ಬೃಹದ್ಗ್ರಂಥವು ಉಪಯೋಗಕಾರಿಯಾಗಿದೆ.

ಶ್ರೀ ಶಂಕರ ಭಾಷ್ಯದ ವ್ಯಾಖ್ಯಾನ ಪಂಚಪಾದಿಕೆ ಮಾತ್ರವಲ್ಲದೇ ಅದರ ಮೇಲಿನ ವ್ಯಾಖ್ಯಾನಮಾಲೆಗಳನ್ನೂ ಒಟ್ಟು ಸೇರಿಸಿ, ಒಂದೇ ಗ್ರಂಥವಾಗಿ ಪ್ರಕಟಿಸಿರುವುದರಿಂದಾಗಿ ತುಂಬ ಉಪಕಾರವಾಗಿದೆ. ಏಕೆಂದರೆ, ಈ ವಿವರಣಾ ಶಂಭದ ಗ್ರಂಥಗಳು ಹೆಚ್ಚಾಗಿ ಬೆಳಕು ಕಂಡಿಲ್ಲ. ಆದುದರಿಂದಲೇ ವೇದಾಂತಪ್ರಿಯರಿಗೆ ಮದ್ರಾಸ ಸರಕಾರದ ಪ್ರಾಚ್ಯ ಹಸ್ತಪ್ರತಿಗಳ ಭಂಡಾರದವರು ಮೃಷ್ಟಾನ್ನ ಭೋಜನವನ್ನೇ ಬಡಿಸಿದಂತಾಗಿದೆ.

ಗ್ರಂಥಾದಿಯಲ್ಲಿ ಸಂಪಾದಕರಲ್ಲೊಬ್ಬರಾದ ಶ್ರೀ ಶ್ರೀರಾಮಶಾಸ್ತ್ರಿಗಳು ತಮ್ಮ ವಿದ್ವತ್ಪೂರ್ಣ ಭಾಷೆಯಲ್ಲಿ ೧೩೬ ಪುಟಗಳ ದೀರ್ಘ ಮುನ್ನುಡಿಯನ್ನು ಬರೆದು ಈ ಹಿರಿಯ ಪುಸ್ತಕದ ವಾಚನ ಮತ್ತು ಅಭ್ಯಾಸಕ್ಕೆ ತಕ್ಕ ಪೂರ್ವಸಿದ್ಧತೆಯನ್ನು ಮಾಡಿಕೊಟ್ಟಿದ್ದಾರೆ. ಇದರಿಂದ, ಗ್ರಂಥದ ಮತ್ತು ಪಂಥದ ಸ್ಥೂಲವೃತ್ತದ ಅರಿವೂ ವಾಚಕನಿಗಾಗುತ್ತದೆ. ಒಟ್ಟು ೧೩೦೦ಕ್ಕೂ ಮಿಕ್ಕಿರುವ ಪುಟಗಳಿಂದ ಕೂಡಿದ ವಾದ ಖಂಡನ ಮತ್ತು ಮಂಡನರೂಪದ ವೇದಾಂತ ಗ್ರಂಥದ ವಾಚನಕ್ಕೂ ಅಭ್ಯಾಸಕ್ಕೂ ದೀರ್ಘ ಸಹನಾಶಕ್ತಿಯೂ ಪರಿಶ್ರಮಪಟುತ್ವವೂ ಅವಶ್ಯವಿವೆ. ನಮ್ಮ ವೇದಾಂತ ವಿದ್ಯಾರ್ಥಿಗಳು ಮಾತ್ರವಲ್ಲದೇ ಜ್ಞಾನವರ್ಧನೇಚ್ಛುಕರು ಅವಶ್ಯವಾಗಿ ಇದನ್ನು ಮನನಮಾಡಿ, ಸಂಪ್ರದಾಯದ ಬೆಳವಣಿಗೆಗೆ ಸಹಾಯಕರಾಗಬೇಕು.

ಇಂತಹ ಅಮೂಲ್ಯ ಹಾಗೂ ಅನರ್ಘ್ಯ ಮತ್ತು ಬೃಹತ್ ಗ್ರಂಥದ ಸಂಪಾದಕನ ಕಾರ್ಯದ ಗುರುತರ ಭಾರವನ್ನು ಹೊತ್ತ ಶಾಸ್ತ್ರದ್ವಯರೂ ಪ್ರಧಾನ ಸಂಪಾದಕರಾದ ಶ್ರೀ ಚಂದ್ರಶೇಖರನರೂ ಪ್ರಕಾಶಕರೂ ವಿದ್ವಜ್ಜನರ ಮತ್ತು ಅಭ್ಯಾಸೇಚ್ಛುಕರ ಕೃತಜ್ಞತೆಗೆ ಪಾತ್ರರಾಗಿದ್ದಾರೆ ಮದ್ರಾಸ ನಗರದ ಈ ಪುಸ್ತಕ ಭಂಡಾರವು ಇದೇ ರೀತಿಯಲ್ಲಿ ಬೆಳಕು ಕಾಣಬೇಕಾದ ಇತರ ಗ್ರಂಥಗಳನ್ನೂ ಪ್ರಕಾಶಪಡಿ



ನಾಲ್ಕು ಸಿಲಿಂಡರುಗಳುಳ್ಳ ಬ್ರಿಟಿಷ ಡೀಸೆಲ್ ಎಂಜಿನ್ ವೇಗವನ್ನು ಹೆಚ್ಚಿಸುತ್ತದೆ, ಹಣವನ್ನುಳಿಸುತ್ತದೆ.

ವಿಚಾರ ಮಥನ

(೧ನೇ ಪುಟದಿಂದ)

ವಾದ ಅನುಕೂಲತೆಗಳನ್ನು ಒದಗಿಸುವ ಸಹಕಾರಿ ಮಾದರಿಯ ಬೇಂಕುಗಳು ಸ್ಥಾಪನೆಯಾಗಬೇಕೆಂದು ಹೇಳಿರುವುದಾಗಿ ಶ್ರೀ ಗುಣವರ್ಧನೆ ಸ್ಪಷ್ಟೀಕರಿಸಿದ್ದಾರೆ. ಆದರೂ ಇದರಿಂದ ಸ್ಥಿತಿಯು ಶಾಂತವಾದಂತೆ ತೋರುವುದಿಲ್ಲ. ಹೀಗಾಗಿ ಸದ್ಯ ಪ್ರಧಾನಿ ಭಂಡಾರನಾಯಕೆಯವರು ಮಂತ್ರಿ ಮಂಡಳಿಯಲ್ಲಿನ ಬಿಕ್ಕಟ್ಟನ್ನು ಯಾವ ರೀತಿಯಲ್ಲಿ ಬಿಡಿಸುವರು ಎಂದು ಕುತೂಹಲದಿಂದ ನೋಡಬೇಕಾಗಿ ಬಂದಿದೆ.

೦೦ ೦೦

ಅತ್ಯಲ್ಪ ಬಹುಮತದಿಂದ ದ್ವಿತೀಯ ಚುನಾವಣಾನಂತರ ಭಾರತದ ರಾಜ್ಯಗಳೆರಡರ ಸರಕಾರಗಳಲ್ಲಿ ಒಡಿಸ್ಸದ ಕಾಂಗ್ರೆಸ್ಸು ಗಣತಂತ್ರ ಪರಿಷತ್ತಿನ ಸಖ್ಯವನ್ನು ಹಚ್ಚುತ್ತ ಮುಂದುವರಿದಿರುವಾಗ, ಕೇರಳದ ಕಮ್ಯುನಿಸ್ಟರೂ ಬಲವಾದ ವಿರೋಧವನ್ನು ಎದುರಿಸಬೇಕಾಗಿ ಬಂದಿದೆ. ಮುಖ್ಯ ಮಂತ್ರಿ ಶ್ರೀ ನಂಬೂದರಿಪಾದರು ಕಳೆದೆರಡು ವರ್ಷಗಳಿಂದ ಎಡತಾಗಿದ ಅಡೆತಡೆಗಳನ್ನು ಎದುರಿಸಿ, ಜಯಭೇರಿಯನ್ನು ಬಾರಿಸಿರುವುದು ಪ್ರಶಂಸನೀಯವಾದರೂ ಕೇರಳದಿಂದ ಆಗಾಗ ಬರುತ್ತಿರುವ ವರದಿಗಳಿಂದ ಕಮ್ಯುನಿಸ್ಟ್ ಸರಕಾರದ ಆಡಳಿತೆಯಿಂದ ಕೇರಳೀಯರು ಬೇಸತ್ತಿದ್ದಾರೆ ಎಂದು ತಿಳಿಯುತ್ತದೆ. ಈ ಹೇಳಿಕೆಯನ್ನು ಸಂಪೂರ್ಣ ಅಲ್ಲಗಳೆಯುವುದು ಸಾಧ್ಯವಿಲ್ಲ. ಪ್ರಾಯಃ ಕೇರಳದ ಸರಕಾರವು ಎದುರಿಸಬೇಕಾದಷ್ಟು ವಿರೋಧವನ್ನು ವಿಧಾನಸಭೆಯಲ್ಲಿ ಮತ್ತಾವ ರಾಜ್ಯ ಸರಕಾರವೂ ಎದುರಿಸುವುದಿಲ್ಲ ಎನ್ನಬಹುದು. ಎಂತಲೇ ಸರಕಾರವು ತನ್ನ ತಪ್ಪುಗಳನ್ನು ವಿರೋಧಿಪಕ್ಷಗಳ ಮೈಮೇಲೆ ಜಾಡಿಸುವ ಪ್ರಯತ್ನವನ್ನೂ ಮಾಡಿದೆ. ಆದರೆ, ಈಗ, ಕಮ್ಯುನಿಸ್ಟರ ಎದುರಾಗಿ ಬೇರೆ ಬೇರೆ ವಿರೋಧ ಪಕ್ಷಗಳು ಒಂದಾಗಿ ಬಲವಾದ ಸಂಯುಕ್ತರಂಗವೊಂದನ್ನು ನಿರ್ಮಿಸಿ, ಕಮ್ಯುನಿಸ್ಟರ ಉಚ್ಚಾಟನೆಯನ್ನು ಮಾಡಲು ನಿರ್ಧರಿಸಿದಂತಿದೆ. ಸದ್ಯದಲ್ಲಿಯೇ ಕೇರಳದಲ್ಲಿ ಪಂಚಾಯತ ಚುನಾವಣೆಗಳು ನಡೆಯಲಿದ್ದು, ಈ ಚುನಾವಣೆಯ ಫಲಿತಾಂಶವು ಮುಂದಿನ ಚುನಾವಣೆಯ ಭವಿಷ್ಯವನ್ನು ಹೇಳುತ್ತದೆ ಎನ್ನಲಾಗಿದೆ.

ಅಂತೂ ನಂಬೂದರಿಪಾದರು ಎಂದಿನಂತೆ ಈ ಬಾರಿ ತೀರ ನಿಶ್ಚಿಂತೆಯಿಂದಿರುವುದು ಸಾಧ್ಯವಿಲ್ಲ. ಈ ವಿರೋಧವನ್ನು ಅವರು ಹೇಗೆ ಎದುರಿಸುತ್ತಾರೆ, ಎದುರಾಟದಲ್ಲಿ ಅವರ ಪಾಲಿಗೆ ದೊರೆವ ಫಲ ಯಾವುದು ಎಂಬುದನ್ನು ಭವಿಷ್ಯ ಹೇಳುವಂತಿಲ್ಲ!

೦೦ ೦೦

ಎರಡು ಜಾಗತಿಕ ಯುದ್ಧಗಳ ಭೀಕರ ಪರಿಣಾಮಗಳನ್ನು ಕಂಡಿರುವ ಈ ಶತಮಾನದ ಜನರು ಯುದ್ಧವನ್ನು ಬಯಲಾರರೆಂಬುದು ಸತ್ಯವಿರುವಂತೆಯೇ ಈ ಶತಮಾನದಲ್ಲಿ ಎರಡು ಮಹಾ ಸಂಗ್ರಾಮಗಳು ಪೂರ್ತಿಯಾಗಿದ್ದುದರಿಂದ "ಎರಡಾದುದು ಮೂರಾಗುವುದು" ಎಂಬ ಹಿರಿಯರ ಅಂಬೋಣದಂತೆ ಇನ್ನೊಂದು ಯುದ್ಧವಾಗುವುದು ಖಂಡಿತವಾದರೆ, ಆಗ ಏನಾಗುವುದೆಂದು ರಶ್ಯದ ಪ್ರಧಾನಿ ಶ್ರೀ ನಿಕಿಟಾ ಕ್ರುಶ್ಚೇವರ ಭವಿಷ್ಯವಾಣಿ ಹೀಗೆ ಹೇಳುತ್ತದೆ: "ಪಾಶ್ಚಾತ್ಯ ರಾಷ್ಟ್ರಗಳು ಸಂಪೂರ್ಣ ನಾಶವಾಗಿ ಹೋಗುತ್ತವೆ; ನಮಗೂ ಹಾನಿಯಿರುವುದಾದರೂ ನಮಗೆ ನಷ್ಟ ಸಂಭವಿಸುವುದರೊಳಗೆ ಆವಿದ ಪಾಶ್ಚಾತ್ಯ ರಾಷ್ಟ್ರಗಳು ಜಗತ್ತಿನಲ್ಲಿ ನಾಮಾವಶೇಷವಾಗುತ್ತವೆ!"

ಶ್ರೀ ಕ್ರುಶ್ಚೇವರು ತಮಗೂ ಹಾನಿಯೊದಗುವುದೆಂಬುದನ್ನಾದರೂ ತಿಳಿದುಕೊಂಡಿರುವುದು ಅವರಲ್ಲಿ ವಿವೇಕವಿದೆಯೆಂಬುದನ್ನು ತೋರಿಸುತ್ತದೆ. ಆದರೆ, ಮೂರನೆಯ ಜಾಗತಿಕ ಸಂಗ್ರಾಮವು ನಡೆದ ಪಕ್ಷದಲ್ಲಿ ಕೇವಲ ಪಾಶ್ಚಾತ್ಯ ರಾಷ್ಟ್ರಗಳು ಮಾತ್ರವಲ್ಲದೇ ಜಗತ್ತಿನಲ್ಲಿರುವ ಎಲ್ಲವೂ ನಷ್ಟವಾಗುವುವೆಂದು ಇನ್ನು ಕೆಲವರು ಹೇಳುತ್ತಾರೆ. ಅಮೆರಿಕೆಯವರೂ ತಮ್ಮನ್ನುಳಿದು ಇತರರೆಲ್ಲರೂ ನೆಲಕಚ್ಚುವರೆಂದೂ ಹೇಳಿಕೆಯನ್ನು ಸದ್ಯದಲ್ಲಿಯೇ ಘೋಷಿಸಲು ಪೂರ್ವಸಿದ್ಧತೆ ನಡೆಸುತ್ತಿರಬಹುದು. ಆಗ, ಯಾರ ವಾಹಿನಿಯಲ್ಲಿ ವಿಶ್ವಾಸವಿಡಬೇಕು ಎಂಬ ಸಮಸ್ಯೆಗೆ ಸೂಕ್ತ ಪರಿಹಾರವನ್ನು ಕೂಡಲೇ ಅರಸಲು 'ತರ್ಕ'ಕ್ಕಿಂತ ಯುದ್ಧದ ಕಿಡಿ ಹಾರಿಸುವುದೇ ನ್ಯಾಯಪಥವೆಂದು ತಿಳಿಯಬೇಕೆ?

— ರಾಜಿ.



ಶ್ರೀ ಡಂಕನ್ ಸಂಡಿಸ್.

ಸುವ ಜೊತೆಗಾರಿಕೆಯನ್ನು ತೋರಲು ಹಿಂಜರಿಯಲಾರರೆಂದು ನಂಬುತ್ತೇವೆ.

— ಗೋರಾ.

ಜೀವನ ಪರಿಚಯು

ಮೇಧಾವಿ ಸೇವಕ
ಶ್ರೀ ಕೆ. ಭಾಷ್ಯಮ್

ಅಪರಿಮಿತ ರಾಷ್ಟ್ರಭಕ್ತಿಗೂ ಅನಂತ ಪರಿಶ್ರಮಶೀಲತೆಗೂ ಇವರು ಹೆಸರಾಗಿದ್ದಾರೆ.

ಯಶಸ್ವೀ ವಕೀಲರೂ ಆದರ್ಶ ಕಾಂಗ್ರೆಸಿಗರೂ ಭೂತಪೂರ್ವ ಮಂತ್ರಿಗಳೂ ಉದಾತ್ತ ದೇಶಭಕ್ತರೂ ಆಗಿರುವ ಮದ್ರಾಸದ ಶ್ರೀ ಕೆ. ಭಾಷ್ಯಮ್ ಏಪ್ರಿಲ್ ೩೦ರಂದು ತಮ್ಮ ೭೨ನೆಯ ವಯಸ್ಸಿನಲ್ಲಿ ಪರಂಧಾಮವನ್ನೈದಿರಿದರು.

ಶ್ರೀ ಭಾಷ್ಯಮ್ ೧೮೭೭ರ ಸಪ್ಟಂಬರ ಮಾಸದಲ್ಲಿ ಬೆಂಗಳೂರಲ್ಲಿ ಜನಿಸಿದರು. ಕುಂಭಕೋಣಮ್‌ನ ನಗರ ಪ್ರೌಢಶಾಲೆಯಲ್ಲಿ ತಮ್ಮ ಪ್ರಾರಂಭಿಕ ವಿದ್ಯಾಭ್ಯಾಸವನ್ನು ಗಡಿಮುಟ್ಟಿಸಿದರು. ಮುಂದೆ ಕುಂಭಕೋಣಮ್‌ನ ಸರಕಾರಿ ಕಲಾಶಾಲೆಯಲ್ಲಿ ಅಧ್ಯಯನವನ್ನು ಮುಂದುವರಿಸಿ ಮದ್ರಾಸಿನ ಪ್ರೆಸಿಡೆನ್ಸಿ ಶಾಲೆಯಿಂದ ಪದವೀಧರರಾಗಿ ಹೊರಬಂದರು. ಕ್ರಮೇಣ ತಮ್ಮ ಮಾವ ಶ್ರೀ ವಿ. ಸಿ. ದೇಶಿಕಾಚಾರ್ಯರ ಕಛೇರಿಯಲ್ಲಿ ಅವರಿಗೆ ಸಹಾಯಕರಾಗಿ ಸೇರಿಕೊಂಡರು. ತದನಂತರ ಶ್ರೀಗಳಾದ ವಿ. ವಿ ಶ್ರೀನಿವಾಸ ಐಯಂಗಾರ ಮತ್ತು ಎಸ್. ಶ್ರೀನಿವಾಸ ಐಯಂಗಾರರೊಡನೆ ಸೇರಿಕೊಂಡರು.

ಪ್ರಾರಂಭಿಕ ದಿನಗಳಿಂದಲೂ ಶ್ರೀ ಭಾಷ್ಯಂ ಅವರಲ್ಲಿ ಉಜ್ವಲ ರಾಷ್ಟ್ರಪ್ರೇಮವು ಅಂಕುರಿಸಿತ್ತು. ಅವರು ಹೋಂ ರೂಲ್ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರಲ್ಲದೇ ೧೯೧೭ರಲ್ಲಿ ಬೆಸೆಂಟ್ ರಾಷ್ಟ್ರೀಯ ಕಲಾಶಾಲೆಯಲ್ಲಿ ಪ್ರಾಧ್ಯಾಪಕರಾಗಿ ದುಡಿದರು. ಅವರು ಕಾಂಗ್ರೆಸ್ ಪಕ್ಷವನ್ನು ಸೇರಿದರು. ೧೯೨೭ರ ಕಾಂಗ್ರೆಸ್ ಅಧಿವೇಶನದ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು. ಕಾಂಗ್ರೆಸ್ ಕೈಗೊಂಡ ಎಲ್ಲ ಚಳವಳಿಗಳಲ್ಲೂ ಇವರು ಭಾಗವಹಿಸಿದರು. ವಿದೇಶೀ ಬಟ್ಟೆಗಳ ಬಹಿಷ್ಕಾರವನ್ನು ಪ್ರಚಾರಗೊಳಿಸಿದರು. ಈ ಸಂದರ್ಭದಲ್ಲಿ ಜಾರ್ಜ್ ಟೌನ್‌ನ ಲಾಠಿ ಚಾರ್ಜಿಗೂ ಇವರು ಗುರಿಯೂ ಗಿದ್ದರು. ೧೯೪೦ರಲ್ಲಿ ವೈಯಕ್ತಿಕ ಸತ್ಯಾಗ್ರಹವನ್ನು ಕಾಂಗ್ರೆಸ್ ಮುಂದಿಟ್ಟಾಗ ಇವರೂ ಭಾಗವಹಿಸಿದುದರಿಂದ ಜೇಲಿಗೆ ಅಟ್ಟಲ್ಪಟ್ಟರು. ಇವೆಲ್ಲವುಗಳಿಂದಾಗಿ ಶ್ರೀ ಭಾಷ್ಯಂ ತಮ್ಮ ವಕೀಲಿಯವೃತ್ತಿಗೆ ಅನೇಕಬಾರಿ ರಜೆಯನ್ನು ಇತ್ತಿದ್ದರು. ತಮ್ಮ ವೈಯಕ್ತಿಕ ಹಿತಾಕಾಂಕ್ಷೆಗಿಂತ ರಾಷ್ಟ್ರ ಹಿತಾಕಾಂಕ್ಷೆಯೇ ಹಿರಿದು ಎಂದು ಭಾವಿಸಿದ ಮಹಾ ರಾಷ್ಟ್ರಭಕ್ತ ಭಾಷ್ಯಂ ಎಂದು ಬೇರೆ ಹೇಳಬೇಕಾಗಿಲ್ಲ.

೧೯೩೩ರಲ್ಲಿ ಮದ್ರಾಸ್ ಕಾರ್ಪೋರೇಶನ್‌ನ ಸದಸ್ಯರಾಗಿ, ೩೪ರಲ್ಲಿ ಕಾಂಗ್ರೆಸ್ ಮುನಿಸಿಪಲ್ ಪಕ್ಷದ ನಾಯಕರಾಗಿ, ನಗರ ಸಭೆಯ ಆರ್ಥಿಕ ಸಮಿತಿಯ ಅಧ್ಯಕ್ಷರಾಗಿ, ಸೇವೆಸಲ್ಲಿಸಿದ್ದಾರೆ. ೧೯೩೪ರಲ್ಲಿ ಮದ್ರಾಸ ವಿಧಾನ ಸಭೆಯ ಸದಸ್ಯರಾಗಿ ಆರಿಸಲ್ಪಟ್ಟಿದ್ದರು. ೧೯೩೭ರಲ್ಲಿ ವಿಶ್ವವಿದ್ಯಾಲಯ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಗೊಂಡು, ಪ್ರಕಾಶಂ ಮಂತ್ರಿ ಮಂಡಳಿಯಲ್ಲಿ ನ್ಯಾಯಾಂಗ ಮಂತ್ರಿಯಾಗಿ ಸೇವೆ ಸಲ್ಲಿಸಿದರು.

ಪೂನಾದ ರಾಷ್ಟ್ರೀಯ ಪ್ರಯೋಗ ಶಾಲೆಯಲ್ಲಿನ ಮಾರ್ಗದರ್ಶಕ ವಿಭಾಗ (ಬಲಪಕ್ಕ) ಮತ್ತು ಹೊಸತಾಗಿ ಜೋಡಿಸಲಾದ ಭಟ್ಟಿ ಇಳಿಸುವ ವಿಭಾಗ (ಎಡಪಕ್ಕ)

ನ್ಯಾಯಾಂಗ ಮಂತ್ರಿಯಾಗಿದ್ದಾಗ, ಶ್ರೀ ಭಾಷ್ಯಂ ಅವರು ನ್ಯಾಯಾಂಗ ಮತ್ತು ಕಾರ್ಯಾಂಗಗಳ ಬೇರ್ಪಡೆಗೆ ಮೂಲ ಹೊಣೆಗಾರರಾಗಿದ್ದರು. ೧೯೪೭ರಲ್ಲಿ ಅವರು ಪದವೀಧರರ ಕ್ಷೇತ್ರದಿಂದ ಪ್ರಧಾನ ಮಂಡಳದ ಸದಸ್ಯರಾಗಿ ಆರಿಸಲ್ಪಟ್ಟಿದ್ದು, ಅಂದಿನಿಂದಲೂ ಸರಕಾರವು ರಚಿಸುವ ವಿವಿಧ ಸಮಿತಿಗಳ ಸದಸ್ಯರಾಗಿ ದುಡಿದಿದ್ದಾರೆ. ಮದ್ರಾಸ ಮತ್ತು ಅಣ್ಣಾಮಲೈ ವಿಶ್ವವಿದ್ಯಾಲಯಗಳ ಸಿಂಡಿಕೇಟಿನ ಸದಸ್ಯರಾಗಿ, ಮದ್ರಾಸ ವಕೀಲ ಸಂಘದ ಕಾರ್ಯದರ್ಶಿ ಮತ್ತು ಅಧ್ಯಕ್ಷರಾಗಿ, ಕೆಲಸಮಾಡಿ ಎಲ್ಲ ಕ್ಷೇತ್ರಗಳಲ್ಲಿಯೂ ವಿಖ್ಯಾತರಾಗಿದ್ದಾರೆ.

ಸಮಾಜ ಉದ್ಧಾರಕ ಮತ್ತು ಸಾಮಾಜಿಕ ಸಂಘಸಂಸ್ಥೆಗಳಲ್ಲೂ ಶ್ರೀ ಭಾಷ್ಯಮರ ಕೈ ಹರಿಯದಿರಲಿಲ್ಲ. ಮಹಾಜನ ಸಭೆ, ಸಿವಿಲ್ ಲಿಬರ್ಟೀಸ್ ಯೂನಿಯನ್‌ಗಳ ಅಧ್ಯಕ್ಷರಾಗಿದ್ದರು. ಸಹಕಾರಿ ಚಳವಳಿಯಲ್ಲಿ ಇವರಿಗೆ ಅತೀವ ಆಸಕ್ತಿ. ಮದ್ರಾಸ್ ಸಹಕಾರಿ ಬೇಂಕಿನ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ ದಕ್ಷತೆಯಿಂದ ಹಲವಾರು ವರ್ಷ ಕಾರ್ಯ ನಿರ್ವಹಿಸಿದರು. ಸಹಕಾರಿ ಸಮಿತಿಯ ಸದಸ್ಯರಾಗಿಯೂ ಸಹಕಾರಿ ವಿಮಾ ಕಂಪೆನಿ ಮತ್ತು ಭೂ ಅಡವಿನ ಬೇಂಕುಗಳ ಕಾರ್ಯಕಾರೀ ಮಂಡಳಿಯ ಸದಸ್ಯರಾಗಿಯೂ ಕೆಲಸಮಾಡಿದರು. ನಗೋಶಿಯೇಬಲ್ ಇನ್ಸ್ಟ್ರುಮೆಂಟ್ಸ್ ಆಕ್ಟಿನ ಮೇಲೆ ಒಂದು ವ್ಯಾಖ್ಯಾನವನ್ನೂ ಇವರು ಬರೆದಿದ್ದು ಇದುವರೆಗೆ ಈ ಪುಸ್ತಕವು ೧೩ ಮುದ್ರಣಗಳನ್ನು ಕಂಡಿದೆ. ಈ ವ್ಯಾಖ್ಯಾನವು ಇಂದಿಗೂ ಭಾರತದಲ್ಲಿ ಅಧಿಕಾರಿಕವೆನಿಸಿಕೊಂಡಿದೆ.

ಶ್ರೀ ಭಾಷ್ಯಮ್ ಹರಿಜನೋದ್ಧಾರದಲ್ಲಿ ತೀವ್ರಾಸಕ್ತಿ ತಾಳಿದ್ದರು. ವಕೀಲರ ಪಕ್ಷವನ್ನು ಇವರು ಕಡೆಗಣಿಸುತ್ತಿರಲಿಲ್ಲ. ನ್ಯಾಯಾಧೀಶರ ನೇಮಕ ಮಾಡುವಾಗ ವಕೀಲ ಸಂಘದ ಸದಸ್ಯರಿಂದಲೇ ಆಯ್ಕೆ ನಡೆಯಬೇಕೆಂದವರು ವಾದಿಸುತ್ತಿದ್ದರು. "ಲಾ ವೀಕ್ಲಿ" ಎಂಬ ನ್ಯಾಯವಿಷಯಕ ವಾರಪತ್ರಿಕೆಯ ಸಂಪಾದಕರಾಗಿ ಬಹು ದೀರ್ಘಕಾಲ ಇವರು ಕೆಲಸಮಾಡಿದ್ದಾರೆ. ಅಲ್ಲದೇ ಮೈಲಾಪುರ ಕ್ಲಬ್ಬಿನ ಅಧ್ಯಕ್ಷರಾಗಿಯೂ ಇದ್ದರು.

ಕಳೆದ ಐದು ಯಾ ಆರು ವರ್ಷಗಳಿಂದ ಶ್ರೀ ವೇದಾಂತ ದೇಶಿಕ ಮತ್ತು ಇತರ ವಿಶಿಷ್ಟಾದ್ವೈತ ಧಾರ್ಮಿಕ ಗುರುಗಳ ಗ್ರಂಥಗಳ ಬಗ್ಗೆ ಸಂಶೋಧನೆಯ ಕೆಲಸವನ್ನು ಕೈಗೊಂಡಿದ್ದರು. ಈ ಅವಧಿಯಲ್ಲಿ ಅವರು ಇವುಗಳಲ್ಲಿ ಕೆಲವು ಸಂಸ್ಕೃತ ಕೃತಿಗಳ ಅನುವಾದವನ್ನೂ ಮಾಡಿರುತ್ತಾರೆ.

ಹೀಗೆ ಜೀವನದ ಬಹುಮುಖಗಳಲ್ಲಿ ತಮ್ಮ ಪಾಲಿನ ಸೇವೆಯನ್ನು ಶಕ್ತ್ಯನುಸಾರಗೈದು ವಿಷ್ಣುಪದವನ್ನು ಸೇರಿದ ಶ್ರೀ ಭಾಷ್ಯಂ ಅವರ ಆತ್ಮಕ್ಕೆ ಶಾಂತಿಯಿರಲೆಂದು ಬಾಷ್ಪಲೋಚನರಾಗಿ ಜನತೆ ಬಯಸುವುದರಲ್ಲಿ ಅತಿಶಯವೇನೂ ಇರುವುದಿಲ್ಲವಷ್ಟೆ?

ದಿ। ಕಿಲ್ಲೆಯವರ ನೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್, ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2-00.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ...... ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ। ಎಂ.ಆರ್. ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಶಿಲ್ಪ ಕಲೆ

(೪ನೇ ಪುಟದಿಂದ)

ಯ ಶತಮಾನಗಳು. ಇದುವರೆಗೆ ಇಲ್ಲಿ ಮೂರು ಶಿಲಾಲೇಖಗಳು ಸಿಕ್ಕಿರುವುದಾದರೂ ಅವುಗಳಲ್ಲಿ ಸಂವತ್ಸರದ ಉಲ್ಲೇಖವೇ ಇಲ್ಲ. ಈ ವಿಗ್ರಹಗಳ ನಿರ್ಮಾತನು ಯಾರು ಎಂಬುದೂ ಗೊತ್ತಾಗುವುದಿಲ್ಲ. ಒಂದು ಶಿಲಾಲೇಖದ ಪ್ರಶಸ್ತಿಯಲ್ಲಿ ಆಚಾರ್ಯ ಶುಭಕೀರ್ತಿ ಮತ್ತು ತನ ಶಿಷ್ಯ ಶುಭನಂದಿ ಇವರ ಹೆಸರು ದೃಗ್ಗೋಚರವಾಗುತ್ತದೆ. ಆಚಾರ್ಯ ಶುಭಕೀರ್ತಿಯ ಹೆಸರು ಚಾಂದೇರಿಯ ಆಸುಪಾಸುಗಳ ಅನೇಕ ಶಿಲಾಲೇಖಗಳಲ್ಲಿಯೂ ತೋರಿಬರುತ್ತವೆ. ಅವನು ಕ್ರಿ. ಶ. ೧೦ನೆಯ ಶತಮಾನದಲ್ಲಿದ್ದನೆಂಬುದು ಈ ಶಾಸನಗಳಿಂದ ತಿಳಿಯುತ್ತದೆ. ಈ ಮೂರ್ತಿಗಳಲ್ಲಾದರೋ ಮಧ್ಯಕಾಲೀನ ಮೂರ್ತಿಕಲೆಯ ಕೆಲವೊಂದು ವಿಶೇಷತೆಗಳೂ ತೋರಿಬರುತ್ತವೆ.

ಡಾ। ಬ್ರೂನ್ ಅವರ ಅಭಿಪ್ರಾಯದಂತೆ ಚಾಂದೇರಿಯ ಶಿಲ್ಪಕಲೆ ಖಜುರಾಹ, ದೇವಗಢ ಮೊದಲಾದೆಡೆಯ ಸಮಕಾಲೀನ ಕಲೆಗಿಂತ ಉನ್ನತವೂ ಪರಿಷ್ಕೃತವೂ ಆಗಿರುತ್ತವೆ. ಈ ಕಲೆಯನ್ನು ಪುನರುತ್ಥಾನಗೊಳಿಸಿದರೆ, ಆಗ ಕಲೇತಿಹಾಸದಲ್ಲಿ ಒಂದು ಹೊಸ ಪುಟವನ್ನು ಸೇರಿಸಿದಂತಾಗುವುದೆಂಬುದು ನಿರ್ವಿವಾದ.

ಕಲಾಕ್ಷೇತ್ರದಲ್ಲಿ ಹೊಸ ಹೊಸ ಕಲಾಕರ್ಮಗಳನ್ನು ರೂಪಿಸುವುದಲ್ಲದೇ ನಮ್ಮ ಹಳೆಯ ಕಲಾಪ್ರತೀಕಗಳನ್ನೂ ರಕ್ಷಿಸಿಕೊಂಡು ಬರಬೇಕಾದುದು ಅವಶ್ಯವಾಗಿದೆ. ಈ ದೃಷ್ಟಿಯಿಂದ ಹಳೆಯ ಚಾಂದೇರಿಯ ಕಲಾಕೃತಿಗಳನ್ನು ಕೆಟ್ಟು ಹೋಗದಂತೆ ಉಳಿಸಿಕೊಳ್ಳುವುದು ಅಗತ್ಯ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಆರೋಗ್ಯ ಭಾಗ್ಯ

(೩ನೇ ಪುಟದಿಂದ)

ರ್ಯನ ಕಿರಣ ತಾಪವನ್ನು ಒಂದು ಮಿತಿಗೊಳಿಸಿ, ಶರೀರದೊಳಗೆ ಅಟ್ಟುತ್ತದೆ. ಚರ್ಮದಲ್ಲಿ ಇಂತಹ ಗುಣವಿಲ್ಲವಾಗಿದ್ದರೆ, ಉಷ್ಣ ಪ್ರದೇಶದ ಜನರು ಎಂದೋ ಸುಟ್ಟು ಭಸ್ಮೀಭೂತರಾಗಿ ಹೋಗುತ್ತಿದ್ದರು. ಆದುದರಿಂದ ಪರಿಮಿತವಾಗಿ ಬಿಸಿಲನ್ನು ಸೇವಿಸುವುದರಿಂದ, ಚರ್ಮದ ಸ್ವಾಭಾವಿಕ ಜೀವಶಕ್ತಿಯು ಹೆಚ್ಚುತ್ತದೆ; ಅದಕ್ಕೆ ಸ್ಫೂರ್ತಿಯನ್ನೂ ಸ್ಥಿತಿಸ್ಥಾಪಕತೆಯನ್ನೂ ಒದಗಿಸುತ್ತದೆ. ಇದರಿಂದ ಅದು ಹೊಸ ಜೀವವನ್ನು ಹೊಂದಿ ಬಾಹ್ಯ ಅಪಾಯಗಳಿಂದ ಶರೀರವನ್ನು ರಕ್ಷಿಸುವುದಲ್ಲದೇ ಪರಿಮಿತ ತಾಪವನ್ನು ಒಳ ಹರಿಯಿಸಿ ಶರೀರದ ಎಲ್ಲ ನರಮಂಡಲಗಳನ್ನೂ ಕ್ರಿಯಾಶೀಲವಾಗಿ ಮಾಡುತ್ತದೆ.

ಸೂರ್ಯರಶ್ಮಿಯ ಶಕ್ತಿಯು ರಕ್ತದ ಬಿಳಿ ಮತ್ತು ಕೆಂಪು ಕಣಗಳನ್ನು ಬೆಳೆಸುತ್ತದೆ. ಸ್ವಾಭಾವಿಕ ನಿರೋಧ ಶಕ್ತಿಯನ್ನೂ ಕೀಟಾಣು ನಾಶಕ ಶಕ್ತಿಯನ್ನೂ ಹೆಚ್ಚಿಸುತ್ತದೆ. ಧಮನಿಗಳು ಉಬ್ಬುವುದರಿಂದ ರಕ್ತ ಪರಿಚಲನೆಯು ತೀವ್ರವಾಗುತ್ತದೆ. ಕ್ಷೀಣವಾದ ಮಾಂಸಖಂಡಗಳನ್ನೂ ಸೂರ್ಯರಶ್ಮಿಯು ಬಲಿಷ್ಠಗೊಳಿಸುತ್ತದೆ. ದೀರ್ಘಕಾಲದ ರೋಗಗಳಿಂದ ನರಳುವವರಿಗೆ ಈ ತಾಪ ಸೇವನೆಯು ಉತ್ತಮ ಪರಿಣಾಮ ನೀಡಿದೆ ಎಂದು ತಿಳಿದುಬಂದಿದೆ.

ಮಾನವ ಶರೀರದಲ್ಲಿ ಸುಮಾರು ೨೦೦ ಎಲುಬುಗಳಿವೆ. ಇವುಗಳಿಂದಲೇ ನಾವು ಕೆಲಸಮಾಡಬಲ್ಲೆವು. ಕೇಲ್ಸಿಯಂ ಎಲುಬುಗಳ ಬೆಳವಣಿಗೆಗೆ ಆವಶ್ಯವಾದ ಧಾತು. ಕೇಲ್ಸಿಯಂ ಮತ್ತು ಫಾಸ್ಫರಸ್‌ಗಳು ಶರೀರದ ವೃದ್ಧಿಗೆ ಅಗತ್ಯ. ಇವುಗಳು, ನಾವು ಸೇವಿಸುವ ಪದಾರ್ಥಗಳಲ್ಲಿ ಡಿ ಜೀವಸತ್ವವಿಲ್ಲದೆ ಹೋದರೆ, ನಿರರ್ಥಕವಾಗುವುವು. ನಾವು ಸೇವಿಸುವ ಆಹಾರ ವಸ್ತು ಸೂರ್ಯ ರಶ್ಮಿಗಳಲ್ಲಿಯೇ ಈ ಜೀವಾತುವಿದೆ. ಆಹಾರದಲ್ಲಿ ಇದರ ಕೊರತೆಯಿದ್ದವರು ಸೂರ್ಯನಿಂದಲೇ ಇದನ್ನು ಪಡೆಯಬೇಕು. ಆದುದರಿಂದ ಸೂರ್ಯರಶ್ಮಿಯಿಲ್ಲದೆ ಬದುಕುವುದೆಂದರೆ ಎಲುಬುಗಳಲ್ಲಿ ಬಲವಿಲ್ಲದ ಅಶಕ್ತನಾಗಿ ಬಾಳುವುದು ಎಂದರ್ಥ.

ಶರೀರದ ಸಂಚಾಲಕ ಅಂಗಗಳು ದಿನದ ೨೪ ತಾಸೂ ತಂತಮ್ಮ ಕೆಲಸ ಮಾಡುತ್ತಿರುತ್ತವೆ. ಇವುಗಳಲ್ಲಿ ಲೋಪತೋರಿದೊಡನೇ ಮಾನವ ಅನಾರೋಗ್ಯಕ್ಕೆ ತುತ್ತಾಗುತ್ತಾನೆ. ಮಾನವನು ನಿರ್ಬಲನಾದಲ್ಲಿ ಅವನಲ್ಲಿ ರೋಗನಿರೋಧಶಕ್ತಿ ಕಡಿಮೆಯಾಗುವುದಲ್ಲದೇ ಅವನು ಬೇಗನೇ ರೋಗಗಳಿಗೆ ತುತ್ತಾಗಬಹುದು. ದೇಹಶಾಸ್ತ್ರಜ್ಞರೆನ್ನುವಂತೆ ಸೂರ್ಯ ರಶ್ಮಿ ತಾಗದಿರುವ ಶರೀರಗಳು ಅಬಲವಾಗುತ್ತವೆ. 'ಬಿಸಿಲೂಟ'ವೂ ಒಂದು ಆರೋಗ್ಯ ಸೂತ್ರಕ್ಕನುಸಾರವಾಗಿಯೇ ಏರ್ಪಡಿಸಿದುದಾಗಿದೆ.

ಸಂತಾನೋತ್ಪತ್ತಿಯಲ್ಲಿಯೂ ಬಿಸಿಲಿನ ಬೆಲೆ ಅಪರಿಮಿತ. ಧ್ರುವ ಪ್ರದೇಶದ ಸ್ತ್ರೀಯರಲ್ಲಿ, ಸೂರ್ಯನು ತೋರದೆ ಇದ್ದಾಗ ಗರ್ಭಧಾರಣ ಶಕ್ತಿಯು ಹ್ರಾಸಗೊಂಡು, ಸೂರ್ಯನು ತೋರುತ್ತಿರುವಾಗ ಅಧಿಕವಾಗುತ್ತದೆ ಎಂದೂ ವಿಜ್ಞರನ್ನುತ್ತಾರೆ. ಹಂಸ, ಕೋಳಿ ಮೊದಲಾದುವು ಸದಾ ಉಷ್ಣಕ್ಕೆ ಮೈಯೊಡ್ಡಿ ನಿಲ್ಲುವುದರಿಂದಲೇ ಇವು ಅಧಿಕ ಸಂಖ್ಯೆಯಲ್ಲಿ ಮೊಟ್ಟೆಗಳನ್ನಿಡುವುವೆಂದೂ ದನ, ಎಮ್ಮೆ ಮೊದಲಾದ ಪ್ರಾಣಿಗಳು ಉಷ್ಣ ಮಾಸದಲ್ಲಿಯೇ ಹೆಚ್ಚು ಹಾಲು ಕೊಡುವುವೆಂದೂ ಪರಿಶೀಲನೆಗಳಿಂದ ತಿಳಿದು ಬಂದಿದೆ.

ಉಷ್ಣ ಪ್ರದೇಶದ ದೇಶಗಳ ಜನ ಸಂಖ್ಯೆಯೂ ಹೆಚ್ಚುವಂತಾಗಲು ಈ ಸೂರ್ಯರಶ್ಮಿಯೇ ಕಾರಣವೆಂದು ಪ್ರತ್ಯೇಕ ಹೇಳುವ ಆವಶ್ಯಕವಿಲ್ಲವಷ್ಟೆ? ಸದಾ ಕಾಲವೂ ನಾವು ಸವರುವ ನಮ್ಮ ಚರ್ಮವು ಮಾಡುವ ಕಾರುಭಾರು ಏನು ಸಾಮಾನ್ಯವಾದುದೆ?

ವಿಚಿತ್ರ ಸತ್ಯ

ಓದಿ ತಿಳಿದರೆ ಅಚ್ಚರಿ ಪಡುವಿರಿ!

ಉನ್ನತ ದೇಶ ಟಿಬೇಟದ ಕೆಲವು ಮನೋರಂಜಕ ಆಚರಣೆಗಳು!

ಎರಡು ವರ್ಷಗಳಿಗೆ ಮೊದಲು ಲಂಡನಿನಲ್ಲಿ ಒಂದು ಗ್ರಂಥ ಪ್ರಕಟವಾಯಿತು. ಇದರ ಹೆಸರು "ದಿ ಥರ್ಡ್ ಐ" (ಮೂರನೆಯ ಕಣ್ಣು) ಎಂದು. ಟಿಬೇಟದ ಓರ್ವ ಲಾಮಾರು ಈ ಪುಸ್ತಕವನ್ನು ಬರೆದಿದ್ದಾರೆ. ಲಾಪ್ ಸೈಂಗ್ ರಮ್ಪಾ ಎಂಬುದಾಗಿ ಇವರನ್ನು ಕರೆಯುತ್ತಾರೆ. ಈ ಹೊತ್ತಿಗೆಯು ಅವರ ಆತ್ಮಕಥೆಯಾಗಿದೆ. ಇದನ್ನು ಓದುವಾಗ ಪುಸ್ತಕವು ನಿಜವಾಗಿಯೂ ಮನೋರಂಜಕವಿದೆ ಎಂದು ಗೊತ್ತಾಗುವುದು. ಈ ಕಾರಣದಿಂದಲೇ ಈ ಪುಸ್ತಕವು ಒಂದೇ ವರ್ಷದಲ್ಲಿ ಆರು ಸಂಸ್ಕರಣಗಳನ್ನು ಕಂಡಿತು!

ಈ ಪುಸ್ತಕದಿಂದ ಕೆಲವು ಮನೋರಂಜಕ ಸತ್ಯಾಂಶಗಳನ್ನು ಉದ್ಧರಿಸಬಹುದು. ಇವನ್ನು ಓದಿ, ನೀವೂ ಟಿಬೇಟದ ಬಗ್ಗೆ ವಿಶೇಷ ವಿಷಯಗಳನ್ನು ತಿಳಿದುಕೊಳ್ಳುವಂತಾಗುವುದು.

ಟಿಬೇಟದಲ್ಲಿ ಹಗಲು ನಿದ್ರೆ ಮಾಡುವ ಅಭ್ಯಾಸವೇ ಇಲ್ಲ. ಏಕೆಂದರೆ ದಿವಾನಿದ್ರೆಗೈಯುವವರನ್ನು ರಾಕ್ಷಸರು ಕೊಂಡೊಯ್ಯುವರೆಂಬ ನಂಬುಗೆ ಅವರದು! ಅದುದರಿಂದಲೇ ಆರೋಗ್ಯವಂತ ಟಿಬೇಟಿಯನರು ಹಗಲು ನಿದ್ರಿಸುವುದೇ ಇಲ್ಲ. ರೋಗಿಗಳನ್ನಾದರೂ ಹಗಲು ನಿದ್ದೆ ಮಾಡಗೊಡುವುದಿಲ್ಲ. ಇಷ್ಟೇ ಅಲ್ಲದೇ ತನ್ನ ಕೊನೆಯ ಉಸಿರನ್ನೆಳೆಯುವ ಸಿದ್ಧತೆಯಲ್ಲಿರುವವನನ್ನಾದರೂ ಹಗಲು ಎಚ್ಚರವಾಗಿರುವಂತೆ ನೋಡಿಕೊಳ್ಳಲಾಗುತ್ತದೆ!

ಶಾಲೆಗಳಲ್ಲಿ ವಿದ್ಯಾರ್ಥಿಗಳು ಅಧ್ಯಾಪಕರಿಗೆ ಬೆನ್ನು ಹಾಕಿ ಕೂತುಕೊಳ್ಳುತ್ತಾರೆ. ವಿದ್ಯಾರ್ಥಿಗಳಿಗೆ ತಿಳಿಯದಂತೆಯೇ ವಿದ್ಯಾರ್ಥಿಗಳನ್ನೂ ಅವರು ಮಾಡುವ ಕೆಲಸವನ್ನೂ ಅಧ್ಯಾಪಕರು ನೋಡಲು ಈ ಪದ್ಧತಿಯು ಉಪಯುಕ್ತವೆಂದು ತಿಳಿಯಲಾಗುತ್ತದೆ. ಟಿಬೇಟದಲ್ಲಿ ಪರೀಕ್ಷೆ ಕೊಡುವುದೂ ಒಂದು ಆಶ್ಚರ್ಯದ ಕೆಲಸ. ಒಂದು ಪರೀಕ್ಷೆಯು ಸುಮಾರು ೧೪ ತಾಸುಗಳ ವರೆಗೆ ನಡೆಯುತ್ತದೆ. ವಿದ್ಯಾರ್ಥಿಯು ಮೇಲ್ಗಡೆ ಮಾಡಿಲ್ಲದ ಒಂದು ಚಿಕ್ಕ ಕೋಣೆಯಲ್ಲಿ ಇದಕ್ಕಾಗಿ ಕೂತುಕೊಳ್ಳಬೇಕಾಗುತ್ತದೆ. ಈ ೧೪ ತಾಸುಗಳ ಕಾಲ ಅತ್ತ ಅತ್ತ ಚಲಿಸಬಾರದು. ಆದರೆ, ಆತನಿಗೆ ಈ ಸಮಯದಲ್ಲೂ ಚಹಾ ಕುಡಿಯುವ ಸೌಲಭ್ಯ ಪರಿಪೂರ್ಣವಾಗಿದೆ. ಆತನು ಈ ಅವಧಿಯಲ್ಲಿ ಎಷ್ಟು ಬಾರಿ ಬಯಸುತ್ತಾನೆಯೋ ಅಷ್ಟು ಸಲವೂ ಆತನಿಗೆ ಮೇಲ್ಗಡೆಯಿಂದ ಅದನ್ನು ಒದಗಿಸಲಾಗುವುದು!

ಟಿಬೇಟಿನ ಬಾಲಕನ ಭವಿಷ್ಯ ಅವನನ್ನು ಅಥವಾ ಆತನ ತಂದೆತಾಯಿಯರನ್ನು ಹೊಂದಿಕೊಂಡಿರುವುದಿಲ್ಲ. ಆದರೆ, ಜ್ಯೋತಿಷಿಗಳೇ ಅವನ ಭವಿಷ್ಯವನ್ನು ರೂಪಿಸಬಲ್ಲರು. ಬಾಲಕನು ಏಳು ಅಥವಾ ಎಂಟು ವರ್ಷದವನಾಗುವಾಗ, ಆ ಕುಟುಂಬದ ಜ್ಯೋತಿಷಿಯು ಬಂದು, ಒಂದು ವಿಶೇಷ ಸಮಾರಂಭದಲ್ಲಿ ಈ ಹುಡುಗನನ್ನು ಏನು ಮಾಡಬೇಕು? ಯಾವ ಕ್ಷೇತ್ರವನ್ನು ಆತನಿಗಾಗಿ ಆರಿಸಬೇಕು ಎಂದು ಆದೇಶವೀಯುತ್ತಾನೆ; ಮಾತಾಪಿತರೂ ಬಾಲಕನೂ ತಮ್ಮ ಕೌಟುಂಬಿಕ ಜ್ಯೋತಿಷಿಯ ಹೇಳಿಕೆಯನ್ನು ಶಿರಸಾವಹಿಸುತ್ತಾರೆ.

ಟಿಬೇಟದಲ್ಲಿ ಶವಗಳನ್ನು ಸುಡುವುದೂ ಇಲ್ಲ; ಹೂಳುವುದೂ ಇಲ್ಲ. ಮತ್ತೇನು ಮಾಡುತ್ತಾರೆ? ಸತ್ತ ಹೆಣವನ್ನು ಒಂದು ಬಿಳಿ ಒಟ್ಟೆಯಲ್ಲಿ ಸುತ್ತಿ ಗೋಲಾಕಾರವಾಗಿಸುತ್ತಾರೆ. ಆ ನಂತರ ಅಂತಿಮ ಸಂಸ್ಕಾರ ಮಾಡುವ ಜನರು ಈ ಹೆಣವನ್ನು ಒಂದು ಕುದುರೆಯ ಮೇಲೆ ಹೇರಿ ಒಂದು ಎತ್ತರವಾದ ಪರ್ವತಕ್ಕೆ ಒಯ್ಯುತ್ತಾರೆ. ಅಲ್ಲಿ ಈ ಶವವನ್ನು ಒಂದು ಶಿಲಾತಳದಲ್ಲಿಟ್ಟು, ಅದನ್ನು ತುಂಡುತುಂಡಾಗಿಸುತ್ತಾರೆ. ಅದನ್ನು ತಮ್ಮ ಕೈಯಲ್ಲಿಯೇ ಹಿಡಿದುಕೊಂಡು ಪಕ್ಷಿಗಳಿಗೆ ತಿನ್ನಿಸುತ್ತಾರೆ.

ನೀವಿದನ್ನು ನಂಬುವಿರಾ?

(ಸಂಗ್ರಹೀತ)

ಅಮೇರಿಕೆಯ ಕುಶಲ ವ್ಯವಸಾಯಗಾರ ರಾಬರ್ಟ್ ಕಿಂಗ್‌ನ ಕಿರಿಯ ಮಗ ಪಾಲೆಯು ತನ್ನ ಪ್ರೀತಿಯ ಬಸವನನ್ನು ಆಡಿಸುತ್ತಿದ್ದಾನೆ. ಈ ಬಸವವು ಹಲವಾರು ಬಹುಮಾನಗಳನ್ನು ಸಂಪಾದಿಸಿರುತ್ತದೆ.

ನಾವು ಬೆಳೆದು ಬರಬೇಕಾದರೆ—
- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆ ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No 466 N/50 date 2-12-1950 of the Director of public Instruction, Madras·

ಭಾವ ಕಥೆಗಳು

ದೇವತೆಗಳು ಎಂದು ಹುಟ್ಟಿದರು?

ಜಗತ್ತಿನ ಆದಿಯಲ್ಲಿ ಮಂದಿರಗಳಿದ್ದಿಲ್ಲ, ದೇವತೆಗಳಿಗೆ ಅಸ್ತಿತ್ವವಿದ್ದಿಲ್ಲ. ಭಯದ ಲವಲೇಶವೂ ಅವರನ್ನು ಸೋಂಕಿರಲಿಲ್ಲ!

ಜನರು ಶಾಂತಿಪ್ರಿಯರಾಗಿದ್ದರು, ಸತ್ಯವಂತರಾಗಿದ್ದರು ಮತ್ತು ವೀರಾತ್ಮರಾಗಿದ್ದರು.

ಆದರೆ ಅವರಲ್ಲೊಬ್ಬನು ಅತಿ ಚತುರನಾಗಿದ್ದನು. ಇನ್ನೊಬ್ಬನು ಮೂರ್ಖನಾಗಿದ್ದನು. ಆ ಚತುರನು ತುಂಬಾ ಸೋಮಾರಿಯಾಗಿದ್ದನು. ಆದರೆ ಮೂರ್ಖನ ಬಾಹುಗಳಲ್ಲಿ ಅಗಾಧ ಶಕ್ತಿ ತುಂಬಿತ್ತು. ಅವನ ಭುಜಗಳಲ್ಲಿ ಕಿಕಾರಿಯಾಡುವ ಮತ್ತು ನೆಲವನ್ನಗೆಯುವ ಅನುಪಮ ಶಕ್ತಿಯಡಗಿತ್ತು.

ಒಂದು ರಾತ್ರಿಯ ಗಂಭೀರ ಅಂಧಕಾರದಲ್ಲಿ ಅವರೀರ್ವರ ಭೆಟ್ಟಿಯಾಯ್ತು.

ನದಿಯ ದಡದಲ್ಲಿದ್ದ ಮಂದಿರವೊಂದರಲ್ಲಿ ಹಲವಾರು ದೇವತೆಗಳು ವಾಸಿಸಿದ್ದರು. ಮಾನವರಿಗಿರದ ಒಂದು ಅನುಪಮ ಶಕ್ತಿಯು ದೇವತೆಗಳಲ್ಲಿತ್ತು.

ಹಿಂದಿನ ರಾತ್ರಿಯ ಅಂಧಕಾರದಲ್ಲಿ ಭೇಟಿಯಾಗಿದ್ದ ಅವರೀರ್ವರೂ, ಮರುದಿವಸ ಮಧ್ಯಾಹ್ನದ ಸಮಯದಲ್ಲಿ ಮಂದಿರದಲ್ಲಿ ಪುನಃ ಭೆಟ್ಟಿಯಾದರು.

ಅವರಲ್ಲಿ ಒಬ್ಬನು ತಾನು ಕಷ್ಟಪಟ್ಟು ಬೆಳೆಸಿದ ಹೂ ಹಣ್ಣುಗಳನ್ನೂ, ತಾನು ಸ್ವತಃ ತಯಾರಿಸಿದ ಮಿಠಾಯಿಯನ್ನೂ ಭಯಪಡುತ್ತಾ ದೇವತೆಗಳ ಮುಂದಿಟ್ಟು ನಮಸ್ಕರಿಸಿ ಹಾಗೆಯೇ ಹೊರಟು ಹೋದನು.

ಎರಡನೆಯವನು ಮುಗುಳ್ನಗುತ್ತಾ ಮುಂದೆ ಹೋಗಿ ದೇವತೆಗಳಿಗೆ ನಮಸ್ಕರಿಸಿ, ಅಲ್ಲಿ ಮೊದಲನೆಯವನಿಟ್ಟಿದ್ದ ಹಣ್ಣು ಮತ್ತು ಮಿಠಾಯಿಗಳನ್ನು ತಿಂದು ತೇಗಿ ಅಲ್ಲಿಯೇ ಕೈಕಾಲು ಪಸರಿಸಿ ನಿದ್ದೆ ಹೋದನು.

(ಸುದರ್ಶನರ ಝುರೋಕ್‌ನಿಂದ)

—ಶ್ರೀ ಎಸ್. ಎಂ. ಶೆಟ್ಟಿ,
ಶಿಮುಂಜೆಪರಾರಿ.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1939

ಕಥಾ ವಿಹಾರ

(೨ನೇ ಪುಟದಿಂದ)

ಯ ಯೋಗ್ಯ ವ್ಯಕ್ತಿಯನ್ನು ಪಡೆದುದನ್ನು ನೋಡಬೇಕೆಂದಾಶೆಯಿದೆ....ಅವಳ ಮನಕ್ಕೆ ನೋವಾಗದಿರಲಿ.

ತಮ್ಮ
ರಾವಲ.

ಓದುತ್ತ ಓದುತ್ತ ಸುನಂದೆಯು ತಲೆ ತಿರುಗಿ ಕತ್ತಲೆಬಂದಂತಾಗಿ ಅಲ್ಲಿಯೇ ಕುಸಿದು ಬಿದ್ದಳು. ಕಾರೊಂದು ಡಾಕ್ಟರರನ್ನು ಕರೆತರಲು ಹೊರಟಿತು. ಶ್ರೀಪತಿ ಗುಪ್ತರವರು ಹೀಗಾದೀತೆಂದು ತಿಳಿಯಲಿಲ್ಲ. ಪತ್ರವನ್ನು ಓದಿ ಒಬ್ಬೊಬ್ಬರಿಗೆ ಒಂದೊಂದು ತರದ ವೇದನೆಯಾಯಿತು. ಮಗಳ ಪರಿಸ್ಥಿತಿ ನೋಡಿ ಗುಪ್ತರವರು ಗಾಬರಿಗೊಂಡರು. ರಾವಲನ ನಿಷ್ಕಲ್ಮಷ ಮನಕ್ಕೆ ಅವರ ಮನ ಮರುಗಿತು. ತಲೆಗೆ ನೀರು ಸವರಿದನಂತರ—ಸುನಂದೆಗೆ ಪ್ರಜ್ಞೆಯೇನೋ ಬಂತು. ಆದರವಳು ಯಾರೊಡನೆಯೂ ಮಾತಾಡಲಾರದವಳಾದಳು. ಅವಳ ತಲೆತುಂಬ ಯೋಜನೆಗಳು ತುಂಬಿದ್ದವು. ಕಣ್ಣೀರು ಸುರಿಯುತ್ತಿತ್ತು! ಡಾಕ್ಟರರು ನಾಡಿ ನೋಡಿ—“ಅವಳಿಗೆ ಸಂಪೂರ್ಣ ಆರಾಮು ‘ಬೇಕು” ಎಂದೆನ್ನುತ್ತಾ ತೆರಳಿದರು ಅಂದು ರಾತ್ರಿ ಯಾರಿಗೂ ಊಟ ಬೇಕಾಗಿರಲಿಲ್ಲ. ಮರುದಿನ ಮುಂಜಾನೆ ಸುನಂದೆಯನ್ನು ಬಲವಂತಮಾಡಿ ಎಬ್ಬಿಸಿ ಕಾಫಿ ನೀಡಿದ್ದಾಯಿತು. ರಾತ್ರಿಯೆಲ್ಲ ಅವಳಿಗೆ ನಿದ್ದೆಯಿಲ್ಲದಿದ್ದುದು ಅವಳ ಕೆಂಪಾದ ಕಣ್ಣುಗಳಿಂದಲೇ ತಿಳಿಯುತ್ತಿತ್ತು: ಇದ್ದ ಒಬ್ಬಳೇ ಮಗಳಿಗೆ ಇಂತಹ ವೇದನೆಯಾಗುತ್ತಿರುವದನ್ನು ನೋಡಲು ಪ್ರಜಸೇನರಿಗಾಗಲಿಲ್ಲ. ಅವರು “ನೀನೇನೂ ಮನಕ್ಕೆ ಹಚ್ಚಿಕೊಳ್ಳಬೇಡಮ್ಮ, ನಾನೀಗಲೇ ಹೊರಟು ಅವನನ್ನು ಕರೆತರುವೆ” ಎಂದೆನ್ನುತ್ತಾ ಅವನ ಫೋಟೊ ಒಂದನ್ನು ಕಿಸೆಗೆ ಹಾಕಿ—ಪತ್ನಿಯವರಿಗೆ ತಾನು ಬರಲು ಒಂದೆರಡು ದಿನ ಹಿಡಿದೀತೆಂದು ಹೊರಟರು.

ದಾರಿಯಲ್ಲಿ ಅವರಿಗೆ ಯೋಚನೆ—ರಾವಲನನ್ನು ಹುಡುಕುವದು ದುರ್ಲಭ ಪೋಲೀಸರಿಗೆ ತಿಳಿಸಿದರೆ, ಯಾ ಪೇಪರಿನಲ್ಲಿ ಮುದ್ರಿಸಿದರೆ ಅವನು ಇನ್ನೇನಾದರೂ ಅವಾಂತರ ಮಾಡಿಕೊಂಡರೆ? ಏನೇ ಇರಲಿ. ಅವನು ತನ್ನ ತಂದೆಯ ಬಳಿಗೇ ಹೋಗಿರಬೇಕು. ಅಲ್ಲಿಯೇ ಹೋಗಿ ವಿಚಾರಿಸಿದರೆ ಸರಿ” ಎನ್ನುತ್ತಾ—ಕೋಶಿಯಾರ ಪುರದತ್ತ ತೆರಳಿದರು—ಅವರಿಗೆ ದಾರಿಯುದ್ದಕ್ಕೂ ಒಂದೇ ಚಿಂತೆ— “ಎಷ್ಟೇ ಧನಿಕ ಹುಡುಗನಾದರೂ ರಾವಲನಂತ ಗುಣಾಢ್ಯ ದೊರೆಯಬಹುದೇ? ಹಣಕ್ಕಿಂತ ಮರ್ಯಾದೆಯೇ ಹೆಚ್ಚಿನದೆಂದು ತಿಳಿದ ಅವನು ತನ್ನ ಜೀವನಕ್ಕಿಂತ ಸುನಂದೆಯನ್ನು ಅದೆಷ್ಟು ಹೆಚ್ಚಿನವಳೆಂದು ತಿಳಿದಿದ್ದಾನೆ! ೩೦೦೦ ರೂಪಾಯಿಗಳನ್ನು ಬಿಟ್ಟು, ಖರ್ಚಿಗೆ ಬೇಕಾದ ೨೦೦ ರೂಪಾಯಿಗಳನ್ನಷ್ಟೆ ಒಯ್ದಿದ್ದಾನೆ! ಎಂತಹ ಪ್ರಾಮಾಣಿಕ! ನಾನ್ಯಾಕೆ ಹೇಳುವವರ ಮಾತಿಗೆ ಬೆಲೆಕೊಟ್ಟೆ— ನಿನ್ನೆ ಅವನನ್ನು ತೆಗಳಿದೆ. ಅವನ ಏಳ್ಗೆಗೆ ಕಲ್ಲು ಹಾಕಲು ಇನ್ನಿತರ ಕೊಂಟ್ರಾಕ್ಟರ ಜನರು ನನ್ನಲ್ಲಿ ಅವನ ವಿರುದ್ಧ ಚಾಡಿ ಹೇಳಿದರಲ್ಲದೆ? ನಿಜವಾಗಿ ಅವನು ಒಬ್ಬ ಯೋಗ್ಯ ವ್ಯಕ್ತಿ ಇದರಲ್ಲಿ ಸಂಶೇಹವಿಲ್ಲ! ಇರಲಿ. ಅವನು ದೊರೆತೊಡನೆ ಅವನಲ್ಲಿ ಕ್ಷಮೆ ಕೇಳಿಯಾದರೂ ತಿರುಗಿ ಕರೆತಂದು ಸುನಂದೆಗೊಪ್ಪಿಸುವದು” ಎಂದಾಲೋಚಿಸುತ್ತ ಹೋಶಿಯಾರಪುರ ಸೇರಿದರು.

ಬಲದೇವ ಸಿಂಗರು ಆಗತಾನೇ ಮನೆಗೆ ಬಂದಿದ್ದರು. ಮನೆಯ ಮುಂದೊಂದು ಕಾರು ನಿಂತಿತು. ಒಳಗಿನಿಂದ ಮಹಾಶಯರೊಬ್ಬರು “ಸ್ವಾಮಿ, ತಾವೇ ಬಲದೇವಸಿಂಗ ಎಂಬವರೇ?” ಎಂದರು. “ಹೌದು, ತಾವೆಲ್ಲಿಂದ ಬಂದಿದ್ದೀರಿ? ಒಳಗೆ ಬನ್ನಿ’ ಎನ್ನುತ್ತಾ ಆಗಂತುಕರನ್ನು ಒಳಗೆ ಕರೆದೊಯ್ದರು.

ಮಗನ ಗುಣವನ್ನರಿತವರಿಗೆ ತಂದೆಯ ಗುಣವನ್ನು ಅವರ ಮಾತಿನಲ್ಲಿಯೇ ಅರಿಯಲು ತಡವಾಗಲಿಲ್ಲ! ನಿಯಮದಂತೆ ಕಾಫಿಯು ಬಂದಕೂಡಲೇ—ಕಾಫಿ ಸೇವಿಸುತ್ತಾ “ತಾವು ಯಾವೂರಿನವರು, ನನ್ನಲ್ಲಿ ಯಾವ ಕಾರ್ಯನಿಮಿತ್ತದಿಂದ ಬರೋಣಾಯಿತು?” ಎಂದು ಕೇಳಿದರು.

ವೃಜಸೇನರು ಕಿಸೆಯಲ್ಲಿದ್ದ ಫೋಟೊ ತೆಗೆದು “ಈ ವ್ಯಕ್ತಿ ಯಾರು ಗೊತ್ತಿದೆಯೇ?” ಎಂದರು. ಅದೆ ಈಚೆ ತಿರುಗಿಸಿ-ಗುರುತಿಸಲಾಗದೆ “ಇಲ್ಲ, ಯಾಕೆ? ನಿಮ್ಮವರಾರಾದರೂ ಓಡಿಹೋಗಿರುವರೇ?” ಎಂದು ವಿಚಾರಿಸಿದರು.

ವೃಜಸೇನರು “ಇನ್ನೊಮ್ಮೆ ನೋಡಿ.... ಇವನಿಗೆ ನಿಮ್ಮವರಂತೆ ದಾಡಿ—ಹಾಗೂ ತಲೆಕೂದಲಿಲ್ಲ....” ಎಂದರು. ಬಲದೇವ ಸಿಂಗರಿಗೆ ಒಮ್ಮೆಲೆ ತಮ್ಮ ರಾವಲನ ನೆನಪಾಯಿತು. “ನನ್ನ ಮಗುವೊಬ್ಬನು 1½ ವರ್ಷಗಳ ಹಿಂದೆ ನನ್ನನ್ನು ಒಂಟಿಯಾಗಿ ಬಿಟ್ಟು ಇಲ್ಲಿಂದ ಓಡಿದ್ದ! ನಾನೆಷ್ಟು ಶ್ರಮ ವಹಿಸಿದರೂ ಅವನನ್ನು ಪತ್ತೆಹಚ್ಚಲಾಗಲಿಲ್ಲ. ನನ್ನ ದುರದೃಷ್ಟ! ಹೆಂಗಸರ ನಾಲಿಗೆ ಯಾವಾಗಲೂ ಉದ್ದ....ಅವೇನೋ ಕೆಟ್ಟ ಗಳಿಗೆ ಆಡಿದ ಮಾತು ಅವನ ಮನಕ್ಕೆ ನಾಟಿರಬೇಕು. ಅವನು ಊರನ್ನೇ ಬಿಡುವನೆಂದೆಣಿಸಿರಲಿಲ್ಲ” ಎಂದೆನ್ನುತ್ತಾ ಕಣ್ಣೀರು ಬಿಡಲೇ ಪ್ರಾರಂಭಿಸಿದರು. “ಇವನೇ ಇವನೇ ನಿಮ್ಮ ರಾವಲ” ನಿಮಗೆಷ್ಟು ಬೇಸರವಾಗಿದೆಯೋ ಅಷ್ಟೇ ನನಗೂ ಆಗಿದೆ” ಎನ್ನುತ್ತಾ ಕಿಸೆಯಲ್ಲಿಂದ ಇನ್ನೊಂದು ಕಾಗದವನ್ನು ವೃಜಸೇನರು ತೆಗೆದಿತ್ತರು.

ಬಲದೇವಸಿಂಗರಿಗೆ ಆ ಕಾಗದವನ್ನೋದುತ್ತಾ ಹೋದಂತೆ ಮನದಲ್ಲಿ ದುಃಖ ಉಕ್ಕಳಿಸತೊಡಗಿತು. ಅವರು ವೃಜಸೇನರನ್ನು ಉದ್ದೇಶಿಸಿ “ದಯಮಾಡಿ ನನ್ನ ಮಗುವಿಗೆ ಏನೂ ಮಾಡಬೇಡಿರಿ. ಅವನಿಗೆ ಕೊಡುವ ಶಿಕ್ಷೆ ನನಗೆ ಕೊಡಿರಿ.” ಎನ್ನುತ್ತಾ ಮೋರೆ ಮುಚ್ಚಿಕೊಂಡರು.

ವೃಜಸೇನರು “ಶಿಕ್ಷೆಯೆಲ್ಲಿಯದಪ್ಪಾ! ಅವನು ನಿಮ್ಮಲ್ಲಿ ಬಂದುಸೇರಿದ್ದರೆ ದಯಮಾಡಿ ನನ್ನೊಡನೆ ಕಳಿಸಿ. ನನ್ನ ಮಗಳನ್ನುಳುಹಿಕೊಡಿ. ಒಬ್ಬಳೇ ಮಗಳು. ಅವನ ಹೊರತು ಇರಲಾರಳು.” ಎಂದೆನ್ನುತ್ತಾ ಅಂಗಲಾಚಿದರು.

ಬಲದೇವಸಿಂಗರು “ಅವನಿಲ್ಲೆಲ್ಲೂ ಬಂದಿಲ್ಲ! ನಾನವನನ್ನು ನೋಡಿದ್ದು ನಿಮ್ಮ ಕೈಯಲ್ಲಿಯ ಫೋಟೋವಿನಲ್ಲಿ! ನೀವವನನ್ನು ಹುಡುಕ್ಕೊಂಡು ಬಂದಿದ್ದಾದರೆ ಎಲ್ಲಿಗೆ ಹೋದನೋ ಏನೋ—ನನಗೆ ಮಗುವಿನ ಫೋಟೊ ಸಿಕ್ಕಿತೇ ಹೊರತು ಅವನನ್ನು ನೋಡಿಲ್ಲ! ಅವನೊಬ್ಬ ದೃಢ ನಿರ್ಧಾರ ಮಾಡುವವನು! ಇನ್ನೆಲ್ಲಿ ಹೋದನೋ” ತಿಳಿಯದು’. ಎಂದರು.

ಬಂದ ಕೆಲಸ ನಿಷ್ಪ್ರಯೋಜನವಾಯಿತೆಂದು ತಿಳಿದರೂ ತಾನು ರಾವಲನನ್ನು ಹುಡುಕಿಸುವೆನೆಂದು ತಿಳಿಸಿ ವೃಜಸೇನರು ಊರಿಗೆ ಮರಳಿದರು. ಇದನ್ನೆಲ್ಲ ನೋಡಿದ ಆಸರಾಬಾಯಿಯವರಿಗೂ ಅಳು ತಡೆಯಲಾಗಲಿಲ್ಲ....ತನ್ನ ಕಾರಣದಿಂದಾಗಿ ಎಲ್ಲಿಲ್ಲದ ಗೋಳೆಂದು ಅವಳು ತಲೆ ತುರಿಸಿಕೊಳ್ಳ ತೊಡಗಿದಳು—ವೃಜಸೇನರು ಇಳಿಮುಖದಲ್ಲಿ ಗಲ್ಲವನ್ನು ಕಾಣಿಸಿಕೊಳ್ಳುತ್ತಾ ಮನೆ ಸೇರಿದರು! ಸುನಂದೆಯ ಕೊರಗು ಹೆಚ್ಚಾಯಿತೇ ವಿನಃ ಅವಳಲ್ಲಿ ಮರೆವಿನ ವಿಸ್ಮಯವೇ ಶಕ್ಯವಿಲ್ಲವಾಗಿತ್ತು. ರಾವಲನದೇ ನೆನಪಿನಿಂದ ಅವಳು ಊಟಪಾಟದ ಕಡೆ ಗಮನವೀಯುತ್ತಿರಲಿಲ್ಲ! ಅವಳು ಕೋಲೇಜಿಗೆ ಹೋದರೆ ಹೋದಳು-ಇಲ್ಲವಾದಲ್ಲಿ ಮನೆ ಗೆಳತಿಯರನ್ನು ಕಾಣುವದಿಲ್ಲ. ಮನೆಯ ಹೊರಗೆ ತಿರುಗಾಟವಿಲ್ಲ. ತಿಂಗಳೊಂದಾದರೂ ರಾವಲನ ಪತ್ತೆಯೇ ಇಲ್ಲ!

—ಸಿರಿಪತಿ.

(ಮುಂದುವರಿಯುವುದು).

ಕುಮಾರಿ ಚಿಲ್ಲಿಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & CO. (N. J.) CALCUTTA—40
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಮದುವೆಗಳು ಜರಗತಕ್ಕ ಸಮಯವು ಸಮೀಪಿಸಿದೆ;
‘ಮದುವೆ ಸೀರೆ’
ಇದೀಗ ಪ್ರಕಟವಾಗಿದೆ!
ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಾಡುವ ಕೆಲಸ

ನೀವು ಉದ್ಯೋಗ ಅರಸುತ್ತ ತಿರುಗುತ್ತಿರುವಿರಾ?

ಹಾಗಾದರೆ, ನಿಮ್ಮ ಅಭಿರುಚಿ ಮತ್ತು ಶಕ್ತಿಗೆ ಒಪ್ಪುವ ಕೆಲಸವನ್ನೇ ಅರಿಸಿಕೊಳ್ಳಿರಿ.

ಆಹಾರ ಸಮಸ್ಯೆಯನ್ನು ಹೋಗಲಾಡಿಸಲು ಮಾನವನು ಒಂದಲ್ಲ ಒಂದು ವ್ಯವಸಾಯವನ್ನು ಅವಶ್ಯ ಕೈಗೊಳ್ಳಬೇಕು. ಯಾವುದೇ ಉದ್ಯೋಗವನ್ನು ಮಾಡದೆ ಕೈಕಟ್ಟಿ ಕುಳಿತವನು ತನ್ನ ಉದರದೇವನನ್ನು ಹೇಗೆ ತೃಪ್ತಿಪಡಿಸಿಯಾನು? ಅವನಿಗೆ ಯಾರು ಅನ್ನ ನೀಡುವರು? ಆದುದರಿಂದ ಜೀವನದಲ್ಲಿ ವ್ಯವಸಾಯವನ್ನಾರಿಸುವ ಆವಶ್ಯಕತೆ ತುಂಬ ಇದೆ. ಯಾರೇ ಆಗಲೀ ಒಂದು ಉದ್ಯೋಗವಿಲ್ಲದೆ ಬದುಕಲಾರನು.

ಈಗೀಗ ವ್ಯವಸಾಯವನ್ನು ಆರಿಸುವ ಪ್ರಶ್ನೆ ಜಟಿಲವಾಗುತ್ತ ಬಂದಿದೆ. ಮಾನವನು ಸಂಪಾದನೆ ಮಾಡುವ ಉದ್ಯೋಗಗಳು ಲಭಿಸುವುದೂ ಕಠಿಣವಾಗಿದೆ. ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಪ್ರಪಂಚದಲ್ಲಿ ಯಂತ್ರಗಳ ಬಳಕೆ ಹೆಚ್ಚಿದುದೇ ಇದಕ್ಕೆ ಕಾರಣವೆನ್ನುತ್ತಾರೆ ಕೆಲವರು; ಜನಸಂಖ್ಯೆ ವಿಪರೀತವಾದುದು ಎಂಬುದು ಇನ್ನು ಕೆಲವರ ಅಭಿಪ್ರಾಯ. ಯಂತ್ರಬಾಹುಳ್ಯದಿಂದ ಅದೆಷ್ಟು ಜನರ ಹೊಟ್ಟೆಗೆ ಪೆಟ್ಟು ಬಿತ್ತು ಎಂದು ಹೇಳಬರುವಂತಿಲ್ಲ. ಅಂತೂ ನಮ್ಮ ದೇಶದಲ್ಲಿ ಇಂದು ಹಲವು ಲಕ್ಷ ಜನರು ಕೈಕಟ್ಟಿಕೊಂಡಿರುತ್ತಾರೆ ಎಂಬುದು ಸತ್ಯ. ಇವರು ವ್ಯವಸಾಯವನ್ನು ಅರಸುತ್ತ ಸುತ್ತುತ್ತಿರೆ; ಆದರೆ, ಅವರಿಗೆ ಉದ್ಯೋಗ ದೊರೆಯುವುದಿಲ್ಲ. ಹಾಗಿರುವಾಗ ಇಂತಹ ದುರ್ಭಾಗ್ಯಶಾಲಿಗಳು ಎಲ್ಲಿಗೆ ಹೋಗಬೇಕು? ಏನು ಮಾಡಬೇಕು?

ಹಿಂದಿನ ಕಾಲದಲ್ಲಿ ಈ ಸ್ಥಿತಿಯಿರಲಿಲ್ಲ. ಯಾರೇ ಆಗಲಿ ಉದ್ಯೋಗ ಹುಡುಕುವ ಸಂದರ್ಭವೇ ಬರುತ್ತಿರಲಿಲ್ಲ. ತಂತಮ್ಮ ಶಕ್ತಿ ಮತ್ತು ರುಚಿಗಳಿಗನುಸಾರವಾಗಿ ಒಗ್ಗುವ ವ್ಯವಸಾಯಗಳನ್ನು ಎಲ್ಲರೂ ಆರಿಸುತ್ತಿದ್ದರು. ಕೆಲವರು ಕೃಷಿ, ಇನ್ನು ಕೆಲವರು ವ್ಯಾಪಾರ, ಮತ್ತೆ ಕೆಲವರು ಕೈಕೆಲಸ, ಬೇರೆ ಕೆಲವರು ಕೂಲಿಕೆಲಸ ಮಾಡಿಕೊಂಡು ತಂತಮ್ಮ ಸಂಸಾರವನ್ನು ಉಣಿಸುತ್ತಿದ್ದರು. ಯಂತ್ರಗಳು ಪ್ರಚಾರದಲ್ಲಿಲ್ಲದ ಕಾರಣ ಎಲ್ಲರಿಗೂ ಉದ್ಯೋಗ ದೊರೆಯಬಹುದಾಗಿತ್ತು. ಈಗ ಒಂದು ಯಂತ್ರವೇ ನೂರಾರು ಜನರು ಮಾಡುವ ಕೆಲಸವನ್ನು ಮಾಡಿಬಿಟ್ಟು ಅವರೆಲ್ಲರೂ ನಿರುದ್ಯೋಗಿಗಳಾಗುವಂತೆ ಮಾಡಿದೆ.

ಇದರಿಂದಾಗಿ ಇಂದು ಉದ್ಯೋಗಾವಕಾಶಗಳು ಕಡಿಮೆಯಾಗಿವೆ ಎನ್ನಬಹುದು; ಅಲ್ಲದೇ ಹೆಚ್ಚಿನ ಜನರು ತಮಗೆ ಉಚಿತವಾದ ಉದ್ಯೋಗವನ್ನು ಆರಿಸುವುದಿಲ್ಲವೆನ್ನಲೇ ಬೇಕಾಗಿದೆ. ತಮಗೆ ತೀರ ಅನುಪಯುಕ್ತವಾದ ವ್ಯವಸಾಯವನ್ನು ಕೆಲವರು ಪರಿಸ್ಥಿತಿವಶರಾಗಿ ಚುನಾಯಿಸುವರೆನ್ನಬಹುದು. ಇನ್ನು ಕೆಲವರು ಯಾವುದೇ ವಿಚಾರವಿಲ್ಲದೇನೇ ಯಾವುದಾದರೊಂದು ವ್ಯವಸಾಯಕ್ಕೆ ಅಂಟಿಕೊಳ್ಳುವರು. ಆದರೆ, ಇಂತಹ ಎರಡೂ ಸಂದರ್ಭಗಳಲ್ಲಿ ಜೀವನವು ದುಃಖಮಯವಾಗುವುದೆಂಬುದು ಸುವಿದಿತವಿದೆ. ಪ್ರತಿಯೊಬ್ಬನೂ ತನಗೆ ಅನುಕೂಲವಾದ, ತನ್ನ ಶಕ್ತಿಗೆ ಒಗ್ಗುವ ಉದ್ಯೋಗವೊಂದನ್ನು ಆರಿಸಿದರೆ, ಕಾರ್ಯವೂ ಯೋಗ್ಯ ರೀತಿಯಲ್ಲಿ ನಡೆಯುತ್ತದೆ; ಕರ್ಮಚಾರಿಯೂ ಶಾಂತಮಯನಾಗಿರಬಲ್ಲನು.

ರವೀಂದ್ರನಾಥ ಟಾಗೋರರು ಕವಿಯಾಗಿ ದೇಶವಿದೇಶಗಳಲ್ಲಿ ಯಶಸ್ಸುಗಳಿಸಿದರು. ವಿಶ್ವಕವಿ ಎಂಬ ಬಿರುದು ಸಂಪಾದಿಸಿದರು. ಅವರ ಜೀವನವೂ ಶಾಂತಮಯವಾಗಿಯೇ ಸಾಗಿತ್ತು. ಸಿ. ವಿ. ರಾಮನರು ವಿಜ್ಞಾನದ ಪ್ರಾಧ್ಯಾಪಕರಾಗಿ ಅದೆಷ್ಟು ಕೀರ್ತಿಭಾಜನರಾಗಿಲಿಲ್ಲ? ಅವರಿಗೆ ಈ ವ್ಯವಸಾಯದಿಂದ ಅಪರಿಮಿತಾನಂದ ದೊರೆಯುತಿತ್ತು. ಆರ್ಥಿಕವಾಗಿಯೂ ಈ ಮಹನೀಯರಿಬ್ಬರೂ ದಿಕ್ಕುಗೆಡಬೇಕಾದ ಪ್ರಸಂಗ ಬಂದಿರಲಿಲ್ಲ. ನೋಬಲ್ ಪಾರಿತೋಷಕ ವಿಜೇತರಾಗಿ ವಿಶ್ವಖ್ಯಾತರಾಗಿದ್ದಾರೆ. ಕೆ. ಸಿ. ಡೇ ಮತ್ತು ಸೈಗಲರು ಸಂಗೀತವನ್ನು ತಮ್ಮ ವ್ಯವಸಾಯವನ್ನಾಗಿ ಮಾಡಿಕೊಂಡಿದ್ದಾರೆ. ಸಿನೆಮಾ ಸಂಗೀತ ಪ್ರಿಯರೆಲ್ಲರಿಗೂ ಇವರು ಸುಪರಿಚಿತರಿದ್ದಾರೆ. ಇದರಿಂದಾಗಿ ನಾವೂ ನಮಗೆ ಅಭಿರುಚಿಯಿರುವ ಮತ್ತು ಶಕ್ತವಾದ ಉದ್ಯೋಗವನ್ನೇ ಕೈಗೊಳ್ಳಬೇಡವೆ?

ನಮ್ಮ ವ್ಯವಸಾಯವನ್ನು ನಿಶ್ಚಯಿಸುವಾಗ ಗಮನಿಸಬೇಕಾದ ಆವಶ್ಯಕ ವಿಷಯಗಳು ಕೆಲವಿವೆ. ಇವುಗಳಲ್ಲಿ ಮೊದಲನೆಯ ಸ್ಥಾನ ಅಭಿರುಚಿಯು ಪಡೆಯುತ್ತದೆ. ನಮಗೆ ವಾಸ್ತವಿಕವಾಗಿ ಯಾವ ಉದ್ಯೋಗದ ಮೇಲೆ ಅಭಿರುಚಿಯಿದೆಯೋ ಅದನ್ನು ಎಷ್ಟು ಕಷ್ಟಬಂದರೂ ಹೆದರದೆ ಆರಿಸಲೇಬೇಕು. ಮನವೊಪ್ಪುವ ಕೆಲಸ ಮಾಡುವುದರಿಂದ ಕಠಿನತೆಯೂ ಸರಲವಾಗುತ್ತದೆ; ಮನಸ್ಸೂ ನೆಮ್ಮದಿ ತಾಳುತ್ತಿದೆ; ಮತ್ತು ಜೀವನದಲ್ಲಿ ಶಾಂತಿ ಲಭಿಸುತ್ತಿದೆ. ಅಧ್ಯಾಪನ ಕಲೆಯತ್ತ ನಿಮ್ಮ ಒಲವು ಇರುವುದಾದರೆ ಮಾತ್ರ ನೀವು ಅಧ್ಯಾಪಕರಾಗಬೇಕು; ಜನ್ಮತಃ ಅಧ್ಯಾಪಕರೆಂದರೆ ಇವರೇ. ಇವರ ಮುಖದಿಂದ ಪಾಠಕಲಿತ ವಿದ್ಯಾರ್ಥಿಗಳಲ್ಲದೇ ಅಧ್ಯಾಪಕರೂ ದೇಶಕ್ಕೆ ಕೀರ್ತಿತರಬಲ್ಲರು. ಒಲ್ಲದ ಹೆಂಡತಿಯನ್ನು ಕಟ್ಟಿಕೊಂಡು ಏನು ಸುಖಪಡೆಯಬಹುದು? ಇದೇ ರೀತಿಯಲ್ಲಿ ಉಳಿದ ಉದ್ಯೋಗಗಳೂ.

ಅಭಿರುಚಿಯಲ್ಲದೇ ಶಾರೀರಿಕ ಮತ್ತು ಮಾನಸಿಕ ಶಕ್ತಿಗಳೂ ಈ ಕಾರ್ಯದಲ್ಲಿ ಅವಶ್ಯ ಮುಂದೆಬರುತ್ತವೆ. ಶರೀರದಲ್ಲಿ ದುರ್ಬಲನಿರುವವನು ಪರಿಶ್ರಮದ ಕೆಲಸವನ್ನು ಆರಿಸಬಾರದು; ಅವನು ಸಾಮಾನು ಹೊರುವ ಕಾರ್ಯವನ್ನು ಕೈಗೊಳ್ಳಲೇಬಾರದು. ಅಂತೆಯೇ ಬುದ್ಧಿಯು ಕುಶಾಗ್ರವಿಲ್ಲವಾದರೆ, ಅಥವಾ ಮೆದುಳು ಸರಿಯಾಗಿ ಕೆಲಸಮಾಡದೆ ಹೋದರೆ, ತೀವ್ರಬುದ್ಧಿಯು ಅವಶ್ಯವಾಗುವ ವ್ಯವಸಾಯಗಳನ್ನು ಆರಿಸಲೇಬಾರದು. ಉದಾಹರಣೆಗಾಗಿ ಮಾನಸಿಕ ಶಕ್ತಿಹೀನರು ಅಧ್ಯಾಪನದ ಉದ್ಯೋಗವನ್ನು ಅವಲಂಬಿಸಲೇ ಬಾರದು.

ಉತ್ತಮ ರೀತಿಯಲ್ಲಿ ಕರ್ತವ್ಯ ಪೂರೈಸುವುದರಿಂದ ನೈತಿಕೋತ್ಥಾನವು ಆಗುವುದು. ಒಂದು ವ್ಯವಸಾಯವು ಆರ್ಥಿಕವಾಗಿ ಲಾಭಕರವಾಗಿದ್ದರೂ ಅದರಿಂದ ನೈತಿಕ ಪತನವಾಗುವುದಾದರೆ ಅಥವಾ ಚರಿತ್ರಕ್ಕೆ ಕಲಂಕ ತಟ್ಟುವುದಾದರೆ ಅದಕ್ಕೆ ದೂರದಲ್ಲಿಯೇ ಶರಣು ಹೊಡೆಯುವುದು ಶ್ರೇಯಸ್ಕರ. ಸದಾಚಾರವು ಜೀವನದ ಸುವರ್ಣ ಕಲಶ; ಸದಾಚಾರವೇ ಜೀವನದ ಸಾರ. ಏನು ಹೋದರೂ ಇದನ್ನು ನಾವು ಕಳೆದುಕೊಳ್ಳಬಾರದು. ಆದುದರಿಂದಲೇ ಕಳ್ಳತನ, ಸುಲಿಗೆ, ಜೂಜಾಟ, ವೇಶ್ಯಾವೃತ್ತಿ ಮೊದಲಾದ ದುಷ್ಕರ್ಮಗಳಿಂದ ಲಾಭದ ಭ್ರಾಂತಿಯುಂಟಾಗುವುದಾದರೂ ಸಚ್ಚರಿತ್ರದ ರಕ್ಷಣೆಗಾಗಿ ಇವುಗಳತ್ತ ಗಮನ ಹರಿಸಲಾರದು.

ಈ ಕೆಲಸದಲ್ಲಿ ತಾಯ್ತಂದೆಯರ ಕರ್ತವ್ಯವೂ ಒಂದಿದೆ. ತಮ್ಮ ಮಕ್ಕಳ ಆಸಕ್ತಿ ಮತ್ತು ಶಕ್ತಿಗಳನ್ನು ದಿನನಿತ್ಯ ಕಾಣುತ್ತಿರುವ ಅವರು ಅವರಿಗೆ ಸೂಕ್ತವಾದ ಉದ್ಯೋಗ ಯಾವುದೆಂದು ಗೊತ್ತುಹಚ್ಚಿ ಅವುಗಳಲ್ಲಿಯೇ ಅವರಿಗೆ ತರಬೇತಿಯೀಯಬೇಕು. ನಮ್ಮ ದೇಶದಲ್ಲಿ ಈ ರೀತಿಯ ಸಂದರ್ಭವೇ ಇರುವುದಿಲ್ಲ! ಎಲ್ಲರಿಗೂ ಒಂದೇ ರೀತಿಯ ಶಿಕ್ಷಣ ದೊರೆಯುತ್ತದೆ; ಮುಂದೆ ಆಸಕ್ತಿಯಿಲ್ಲದೆ ಹೋದರೂ ಶಕ್ತಿಹೀನನಾದರೂ ಯಾವುದಾದರೂ ಒಂದು ವ್ಯವಸಾಯಕ್ಕೆ ಬೇಡವೆಂದರೂ ಅಂಟಿಕೊಳ್ಳಲೇಬೇಕಾಗಿದೆ. ಎಲ್ಲರ ಮನಸ್ಸೂ ಶಕ್ತಿಯೂ ಏಕಪ್ರಕಾರವಿಲ್ಲದುದರಿಂದ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗುತ್ತಾರೆ. ನಿರಾಶಾಯುಕ್ತರಾಗಿ ಕೆಲವರು ಆತ್ಮಹತ್ಯೆ ಮಾಡಿಕೊಳ್ಳುವುದೂ ಇದೆ. ಓದುವುದರಲ್ಲಿಯೇ ಎಲ್ಲ ವಿದ್ಯಾರ್ಥಿಗಳಿಗೂ ಆಸಕ್ತಿ ಇದೆ ಎಂದು ಹೇಳುವುದು ಸಾಧ್ಯವೆ? ಅಶಿಕ್ಷಿತನಾಗಿದ್ದೂ ವ್ಯವಸಾಯ ಮಾಡುವುದು ಸಾಧ್ಯವಿಲ್ಲವೆ? ಇಂದಿನ ವಿದ್ಯಾಭ್ಯಾಸ ಪ್ರಣಾಲಿಯು ವ್ಯವಸಾಯ ಸಂಬಂಧಿ ಜ್ಞಾನವನ್ನು ಏನು ಈಯುತ್ತದೆ? ಕೆಲವರು ಬಹು ಪ್ರಯತ್ನಪಟ್ಟರೂ ಕಲಿಯಲಾರದವರಿದ್ದಾರೆ. ಇಂತಹರಲ್ಲಿ ಉತ್ತಮ ಚಿತ್ರಕಾರರು, ಪತ್ರಿಕಾಕರ್ತರು, ಸಂಗೀತಜ್ಞರು, ಕವಿಗಳು ಆದವರಿದ್ದಾರೆ. ಸ್ವಯಂ ಟಾಗೋರರೇ ಹೆಚ್ಚು ವಿದ್ಯಾಭ್ಯಾಸ ಕಲಿಯಲಿಲ್ಲ!

ಇದರಿಂದ ಒಂದು ವಿಷಯ ವ್ಯಕ್ತವಾಗುತ್ತದೆ. ನಮ್ಮ ಇಂದಿನ ಶಿಕ್ಷಣ ಪ್ರಣಾಳಿಯಿಂದ ವಿದ್ಯಾರ್ಥಿಯ ಮನೋಭೀಷ್ಟವು ಸಿದ್ಧಿಸುವುದಿಲ್ಲ. ಅಭಿಲಾಷೆಯು ಪೂರ್ಣವಾಗದೆ ಹೋದರೆ, ಆಸಕ್ತಿ ರಹಿತ ವ್ಯವಸಾಯಕ್ಕೆ ಮರೆಹೋಗ ಬೇಕಾಗುತ್ತದೆ. ಇದರಿಂದ ಸ್ವಯಂ ಕೆಲಸ ಮಾಡುವವನಿಗೆ ಶಾಂತಿದೂರ; ಮಾಡಿಸುವವನಿಗೆ ಫಲ ಅಪೂರ್ಣ. ಉಭಯತರಿಗೂ ನಷ್ಟ! ಇರ್ವರಿಗೂ ಚಿಂತೆ!

ಈ ಕೊರತೆ ದೂರವಾಗಿ ಸಮರ್ಥರೀತಿಯಲ್ಲಿ ವ್ಯವಸಾಯಗಳು ನಡೆಯಬೇಕಾದರೆ ವ್ಯಕ್ತಿಗಳ ಅಭಿರುಚಿ, ಶಕ್ತಿಗಳಿಗೆ ಹೊಂದಿಕೊಳ್ಳುವ ಶಿಕ್ಷಣಬೇಕು; ಶಿಕ್ಷಣಕ್ಷೇತ್ರದಲ್ಲಿ ಸಮಾನತೆ ಎಂದರೆ, ವಿಶಾಲ ಅರಣ್ಯದಲ್ಲಿ ಸಮಾನತೆಯನ್ನು ಅರಸಿದಂತೆ!

—ಗೋರಾ.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಮ್ಮ ಹೊಲ

ಅತಿ ಪ್ರಾಚೀನ ಕಾಲದಿಂದಲೂ "ಓ ಬೇಲೆ......."ಕೇಳಿದ ನಮ್ಮ ಭತ್ತದ ಗದ್ದೆಗಳಲ್ಲಿ ಇಂದು ಆಧುನಿಕತೆಯ ಸ್ವರವು ಹೊರಸೂಸುತ್ತಿದೆ ಜಪಾನಿ ಪದ್ಧತಿ, ಸಿಂಧ್ರಿಗೊಬ್ಬರ, ಪಂಚವಾರ್ಷಿಕ ಯೋಜನೆ—ಇವುಗಳ ಹಿನ್ನೆಲೆಯಲ್ಲಿ ಹೊಸ ಆರ್ಥಿಕ ಕಲ್ಪನೆಯೂ ಸೇರಿಕೊಂಡಿದೆ. ಕಷ್ಟದ ಹೊರೆಯನ್ನು ಹಗುರಗೊಳಿಸಿ, ಗ್ರಾಮ ಜೀವನದ ಸವಿಯನ್ನು ಹೆಚ್ಚಿಸಲು "ಸಿಂಡಿಕೇಟ್" ತನ್ನ ಬೇಂಕಿಂಗ್ ಸೇವೆಯನ್ನು ನೀಡುವುದು; ಜೀವನದ ಮಟ್ಟವನ್ನು ಉತ್ತಮಗೊಳಿಸಲು ಯತ್ನಿಸುವುದು—ತನ್ನ ಗ್ರಾಮೀಣ ಶಾಖೆಗಳ ಮೂಲಕ **ದಕ್ಷಿಣ ಕನ್ನಡ ಜಿಲ್ಲೆಯ ಉದ್ದಗಲಗಳಲ್ಲಿ.......**

ಮುಖ್ಯ ಶಾಖೆಗಳು: ಮಂಗಳೂರು-ಹಂಪನ ಕಟ್ಟೆ; ಮಂಗಳೂರು-ಬಂದರ; ಉಡುಪಿ-ರಥಬೀದಿ; ಉಡುಪಿ-ಲೋಕಲ್ ಆಫೀಸ್; ಕಾರ್ಕಳ; ಕುಂದಾಪುರ; ಬ್ರಹ್ಮಾವರ.

ಗ್ರಾಮೀಣ ಶಾಖೆಗಳು: ಕಡೆಕಾರ್, ಕಾಪು, ಕಿನ್ನಿಗೋಳಿ, ಕೆಮ್ಮಣ್ಣು, ಗುರುಪುರ, ಗಂಗೊಳ್ಳಿ, ನಿಟ್ಟೆ, ಫಲಿಮಾರು, ಪಾಣೆಮಂಗಳೂರು, ಪುತ್ತೂರು, ಪೆರ್ಡೂರು, ಬಸ್ರೂರು, ಬಾರ್ಕೂರು, ಬೆಳ್ತಂಗಡಿ, ಬೈಲೂರು, ಬೈಂದೂರು, ಮಣಿಪಾಲ, ಮುಲ್ಕಿ, ಮೂಡುಬಿದ್ರಿ, ಮುಲ್ಕಿ, ಸಾಲಿಗ್ರಾಮ, ಶಂಕರನಾರಾಯಣ, ಹೆಬ್ರಿ.

ತುಂಬಿದ ಕಣಜ ನಾಡಿನ ಬಯಕೆ
ಸಿಂಡಿಕೇಟ್ ಬೇಂಕ್ ಗ್ರಾಮದ ಗೆಳೆಯ.

ಡಾ| ಟಿ. ಎಂ. ಎ. ಪೈ,
ಮೇನೇಜಿಂಗ್ ಡೈರೆಕ್ಟರ್.

ಶ್ರೀ ಟಿ. ಎ. ಪೈ,
ಜನರಲ್ ಮೇನೇಜರ್.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ., ಉಡುಪಿ.

ಮಕ್ಕಳ ಮಗ್ಗಿ ಪುಸ್ತಕ

(ನಯೇ ಪೈಸೆ ಕೋಷ್ಟಕ ಸಹಿತ)

ಬೆಲೆ 1ಕ್ಕೆ 0 1 0

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ. 13 ನ.ಪೈಸೆ.

ವರುಷ ೩೮ ವಾರ ೩೬ 21-5-1959 Vol. 38 No. 36.

ವಿಚಾರ ಮಥನ

ಚೀನದ ನಿರಪರಾಧಿತನ

* *

ಕೇರಳದಲ್ಲಿ ಅಶಾಂತ ಸ್ಥಿತಿ

* *

ಹಿಂದುಳಿದ "ಮೈಸೂರು"

* *

ಟಿಬೇಟಿನ ಮೇಲೆ ಚೀನವು ಮಾಡಿದ ಹಸ್ತಕ್ಷೇಪವು ಎಲ್ಲರ ಟೀಕೆಗೆ ಗುರಿಯಾಗುತ್ತಿರುವಂತೆಯೇ ಚೀನೀಯ ಪ್ರಧಾನಿ ಶ್ರೀ ಚೌ. ಎಲ್. ಲಾಯ್ ಅವರು ತಮ್ಮ ನಿಸ್ಸಹಾಯಕತನವನ್ನು ವ್ಯಕ್ತಪಡಿಸತೊಡಗಿದ್ದಾರೆ ಟಿಬೇಟದಲ್ಲಿ ಪ್ರಚಲಿತವಿರುವ ಬೌದ್ಧಶಾಸನವನ್ನು ಸಮಾಪ್ತಗೊಳಿಸಿ ಅಲ್ಲಿ ಸಾಮ್ಯವಾದವನ್ನು ಪ್ರಸ್ಥಾಪಿತಗೊಳಿಸುವುದು ತಮ್ಮ ಉದ್ದೇಶವಲ್ಲವೆಂದೂ ಕೇವಲ ಭೂಸ್ವಾಮಿತ್ವದ ಪ್ರಶ್ನೆ ಮಾತ್ರ ತನ್ನದೆಂದೂ ಅವರು ವಿಶ್ವ ಬೌದ್ಧ ಸಂಘದ ಅಧ್ಯಕ್ಷ ಶ್ರೀ ಜಿ ಪಿ ಮಲಾಲ ಶೇಖರರೊಡನೆ ವಿಚಾರ ವಿನಿಮಯ ಮಾಡುತ್ತಿದ್ದ ಸಂದರ್ಭದಲ್ಲಿ ಆಡಿರುತ್ತಾರೆ ಟಿಬೇಟದಲ್ಲಿನಡೆದ ಅಶಾಂತ ಪರಿಸ್ಥಿತಿಯಿಂದಾಗಿ ಅನೇಕ ಲಾಮಾರು ಚೀನೀ ಸೈನಿಕರ ಮೂಲಕ ಮರಣಗೊಂಡರೆಂಬುದು ನಿಜ ಹೆಚ್ಚಿನ ಲಾಮಾರು ಸೈನಿಕರೂ ಆಗಿದ್ದುದರಿಂದ ವಿದ್ರೋಹದಲ್ಲಿ ಭಾಗವಹಿಸಿ ಸತ್ತರು ಎಂದೂ ಅವರು ಒಪ್ಪಿಕೊಂಡರು. ಅಲ್ಲದೇ ದಲ್ಯಾ ಲಾಮಾರ ಮಹಲನ್ನು ತೋಪುಗಳಿಂದ ಹೊಡೆಯುವ ಪ್ರಸಂಗವೇ ನಡೆದಿರಲಿಲ್ಲ; ಚೀನೀಯ ಸೈನಿಕರಿಗೆ ಈ ಬಗ್ಗೆ ಆದೇಶವನ್ನು ನೀಡಲಾಗಿತ್ತು; ಆದರೆ ಹೆಚ್ಚಿನ ಜನರು ಟಿಬೇಟದಿಂದ ಓಡಿಹೋಗಲು ಪ್ರಯತ್ನಿಸಿದರು ಎಂದು ಪ್ರಧಾನಿ ಲಾಯ್ ಹೇಳಿದರು. ಟಿಬೇಟು ನೂರಾರು ವರ್ಷಗಳಿಂದ ಭಾರತ ಮತ್ತು ಚೀನಗಳ ನಡುವಿನ ಸಂಪರ್ಕ ಮಾಧ್ಯಮವಾಗಿರುವುದರಿಂದ, ಈಗ ಟಿಬೇಟದಲ್ಲಿ ಒದಗಿರುವ ಈ ಪರಿಸ್ಥಿತಿಯಿಂದ ಭಾರತಕ್ಕೆ ವಿಮಂಚನೆಯುಂಟಾಗುವುದು ಸ್ವಾಭಾವಿಕವಾಗಿದೆ ಎಂದವರು ಅಭಿಪ್ರಾಯಪಟ್ಟಿದ್ದಾರೆ.

ಭಾರತದ ಬಗ್ಗೆ ಸಾಕಷ್ಟು ಅಪಚಾರದ ಸುರಿಮಳೆಯನ್ನು ಸುರಿಸಿದ ಬಳಿಕ ಈಗ, ತಮ್ಮ ನಿರಪರಾಧಿತ್ವದ ಮುಖವಾಡವನ್ನು ಶ್ರೀ ಲಾಯ್ ಪ್ರದರ್ಶಿಸುತ್ತಿರುವಂತೆ ತೋರುತ್ತದೆ. ತಪ್ಪುಮಾಡಿದವನಿಗಿಂತಲೂ ತಪ್ಪು ತಿಳಿದುಕೊಳ್ಳುವವನಿಂದ ಒದಗಬಹುದಾದ ಅಪಾಯಗಳು ಹೆಚ್ಚು. ಅಂತೆಯೇ ಸದ್ಯ ಚೌ ಎನ್. ಲಾಯ್ ಮೊದಲು ಬೆಂಕಿ ಹಚ್ಚಿ ಈಗ ಅದನ್ನು ಆರಿಸಲು ಪ್ರಯತ್ನ ಮಾಡುತ್ತಿರುವಂತೆ ತೋರುವುದಿಲ್ಲವೆ? ಭಾರತವು ವಿಮಂಚನವು ವ್ಯಕ್ತಪಡಿಸುವುದು ಸ್ವಾಭಾವಿಕವೆಂಬ ಉದ್ಗಾರ ಅವರ ಮುಖದಿಂದ ಬಂದುದು ಭಾರತೀಯ ಸುದೈವದಿಂದ ಎನ್ನಬೇಕೆ?

o o

ಸರ್ವೋದಯ ಕಾರ್ಯಕರ್ತರಾದ ಶ್ರೀ ಜಯಪ್ರಕಾಶ ನಾರಾಯಣರು ಕೇರಳದಲ್ಲಿ ಸುಮಾರು ೧೫ ದಿನಗಳ ಕಾಲ ಸಂಚರಿಸಿ ಅಲ್ಲಿನ ಪರಿಸ್ಥಿತಿಯ ಬಗ್ಗೆ ಕಳವಳವನ್ನು ವ್ಯಕ್ತಪಡಿಸಿದ್ದಾರೆ ಸರಕಾರದ ಮತ್ತು ತದ್ವಿರೋಧಿ ಶಕ್ತಿಗಳ ಬಲಾಬಲಗಳ ಕುರಿತಾಗಿ ಮಾತುಕತೆಗಳು ಸರ್ವವ್ಯಾಪಿಯಾಗಿವೆ; ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ತಮ್ಮ ಸಂಕಷ್ಟಗಳನ್ನು ಪರಿಹರಿಸಿಕೊಳ್ಳಲು ಎಲ್ಲ ರೀತಿಯ ಶಾಂತಿಯುತಮಾರ್ಗಗಳು ಮುಕ್ತವಾಗಿರುವಾಗ, ಮಾತಿನಲ್ಲಾಗಲೀ ಕೃತಿಯಲ್ಲಾಗಲೀ ಹಿಂಸಾಚಾರಕ್ಕಿಳಿಯುವುದು ಆತ್ಮಹತ್ಯೆ ಮತ್ತು ಘಾತುಕ ಮಾರ್ಗವಾಗಿ ಪರಿಣಮಿಸೀತು ಎಂದವರು ಕೇರಳ ಸರಕಾರವನ್ನು ಎಚ್ಚರಿಸಿದ್ದಾರೆ,ಅಲ್ಲಿ ನಡೆಯುವ ಕೇರಳ ಶಿಕ್ಷಣ ಸಂಬಂಧಿ ಶಾಸನ ವಿರೋಧವನ್ನು ಸರಕಾರವನ್ನು ವಿರೋಧಿಸಲು ನಡೆಸುವ ಕುತಂತ್ರವೆಂದು ಸರಕಾರವು ತಿಳಿದುಕೊಳ್ಳುವುದು ಮಹಾಪರಾಧವಾಗುವುದೆಂದವರು

ಆದರೆ, ಶ್ರೀ ನಂಬೂದರಿ ಪಾದರು ಈ ಆರೋಪಗಳನ್ನು ಅಲ್ಲಗಳೆದು ಸರ್ವೋದಯ ಕಾರ್ಯಕರ್ತರಾದ ಶ್ರೀ ಜಯಪ್ರಕಾಶರು ಸಾಮ್ಯವಾದ ವಿರೋಧದಿಂದಾಗಿ ಪಕ್ಷಪಾತ ಮನೋಭಾವನೆಯನ್ನು ಹೊರಗೆಡಹಿದ್ದಾರೆಂದು ಹೇಳಿದ್ದಾರೆ 'ಕೇರಳದಲ್ಲಿ ಕಮ್ಯೂನಿಸ್ಟ ಪಕ್ಷವು ಏನು ಮಾಡುತ್ತಿದೆ, ಎಂದು ಅವರು ಪ್ರಜಾಸಮಾಜವಾದಿ ಪಕ್ಷದ ನಾಯಕರಾಗಿದ್ದು ಹೇಳಬಹುದಿತ್ತಲ್ಲದೆ, ಸರ್ವೋದಯ ನೇತಾರರಾಗಿ ಆಡಬಾರದಿತ್ತು. ಅವರು ಪ್ರಸಮಾ ಪಕ್ಷದ ಮೇಲಿನ ಪಕ್ಷಪಾತದಿಂದ ಈ ರೀತಿ ಆಡಿರುವುದು ಶೋಭನೀಯವಲ್ಲ' ಎಂದು ಶ್ರೀ ನಂಬೂದರಿ ಪಾದರು ಅಭಿಪ್ರಾಯಪಟ್ಟರು.

ಸಿಡ್ಲ ಲ್ಸಿವಲ್ಸ್ ಫೌಂಡೇಷನ್ ಭವನದಲ್ಲಿ ರಾಜಕುಮಾರಿ ಮಾರ್ಗರೆಟರು ದೋಸೆ ಕತ್ತರಿಸುವ ಸಮಾರಂಭವನ್ನು ನೆರವೇರಿಸುತ್ತಿದ್ದಾರೆ.

ಇಲ್ಲಿ, ಜಯಪ್ರಕಾಶರು ಯಾವ ಪಕ್ಷಕ್ಕೆ ಸೇರಿರಲಿ, ಸೇರದೇ ಇರಲಿ, ಅವರು ಕೇರಳದ ಬಗ್ಗೆ ಆಡಿದ ಮಾತುಗಳು ನಿರಾಧಾರವೆಂದು ಹೇಳುವಂತಿಲ್ಲ, ಕೇರಳದಲ್ಲಿನ ಜನತೆಯ ಅತೃಪ್ತಿ, ಅಸಮಾಧಾನ ಮತ್ತು ಅಶಾಂತಿಗಳು ದಿನೇ ದಿನೇ ಪ್ರಬಲಿಸುತ್ತಿರುವುದು ಸತ್ಯವೆಂಬುದು ನಿರ್ವಿವಾದ ಅದರ ಮೇಲೆ, ಇದೀಗ ಉಲ್ಬಣಾವಸ್ಥೆಗೇರುತ್ತಿರುವ ವಿದ್ಯಾ ಮಸೂದೆಯ ಗೊಂದಲದಿಂದ ಕೇರಳೀಯರಲ್ಲಿ ಇವು ಮತ್ತಷ್ಟು ಹೆಚ್ಚುವುದೆಂಬುದು ನಿಜ ಕೇರಳದ ಕೆಲವು ಕ್ರಿಶ್ಚಿಯನ್ ಸಂಸ್ಥೆಗಳು ತಮ್ಮ ಆಡಳಿತದಲ್ಲಿರುವ ಶಾಲೆಗಳನ್ನು ವಿರಾಮಕಾಲಾವಧಿಯನಂತರ ಪುನಃ ತೆರೆಯಬೇಕಾದರೆ, ವಿದ್ಯಾ ಶಾಸನದ ಕೆಲವೊಂದು ನಿಯಮಗಳನ್ನು ಬದಲಾಯಿಸಬೇಕು ಎಂದು ಘೋಷಿಸಿವೆ.

oo oo

ಮೈಸೂರು ಸರಕಾರವು ರಾಜ್ಯದ ಹಿಂದುಳಿದ ವರ್ಗಗಳ ಹೊಸ ಯಾದಿಯನ್ನು ಇದೀಗ ಬಹಿರಂಗಗೊಳಿಸಿದೆ. ರಾಜ್ಯದಲ್ಲಿಯ ಸರಕಾರಿ ನೌಕರಿಗಳಿಗೆ ನೇರವಾಗಿ ಭರ್ತಿ ಮಾಡಿಕೊಳ್ಳುವಾಗ ಹಿಂದುಳಿದ ವರ್ಗಗಳಿಗೆ ನೂರಕ್ಕೆ ೫೦ರಷ್ಟು, ಪರಿಶಿಷ್ಟ ವರ್ಗಗಳಿಗೆ ೧೫ರಷ್ಟು ಮತ್ತು ಪರಿಶಿಷ್ಟ ಜನಾಂಗಗಳಿಗೆ ೩ರಷ್ಟು ಸ್ಥಳಗಳನ್ನು

(೧೨ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ -
ಮಂಗಳೂರು—3

ಸ್ಥಾಪನೆ:-
1931

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:

ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು,
ಮಡಿಕೇರಿ, ಇತ್ಯಾದಿ ...ಇತ್ಯಾದಿ ...

ಕಥಾ ವಿಹಾರ

ಪಿತ ಪುತ್ರ ಸಂಯೋಗ ಸುಸಮಾರಂಭ

ರಾವಲನು ಸನ್ಯಾಸ ಸ್ವೀಕರಿಸಬೇಕೆಂದಿದ್ದ; ಆದರೆ ಅವನ ಹಣೆಯಲ್ಲದು ಬರೆದಿರಲಿಲ್ಲ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬನಾರಸದಿಂದ ಹೊರಟ ರಾವಲನು ಫರ್ಸ್ಟ್ ಕಾಲ್ನು (ಬನಾರಸದಿಂದ ೧೩೦ ಮೈಲು) ಬಸ್ಸಿನಿಂದ ಹೊರಟು ಅಲ್ಲಿಂದ ಮುಂದೆ ರೈಲಿನಲ್ಲಿ ಕುಳಿತು—ಸುರವಾಘಾಟದ ತನಕ (೯೬ ಮೈಲು) ಮುಂದರಿದು ಮೈಲೊಂದೆರಡು ನಡೆದು ಅಂಬು ತೀರ್ಥಕ್ಕೆ ಹೊರಟ ಅವನಿಗೀಗ ಜೀವನದಲ್ಲಿ ಜಿಗುಪ್ಸೆಯುಂಟಾಗಿತ್ತು!! ತಂದೆಯ ಮೇಲೆ ಶ್ರದ್ಧಾಭಕ್ತಿಯಿದ್ದರೂ—ಮಲತಾಯಿಗೆ ಅಂಜಿ—ಅವನು ತಂದೆಯನ್ನು ಕಳಕೊಂಡಿದ್ದ! ಊರ ಬಿಟ್ಟರೂ ವೃಜಸೇನ ಗುಪ್ತರು, ಶ್ರೀಮತಿ ಗುಪ್ತರು ಹಾಗೂ ತನ್ನ ಜೀವನದ ...ಸವ್ಯ ಉತ್ಸಾಹ—ಆಶೆಯನ್ನು ಹುಟ್ಟಿಸಿದ ಅವರ ಪುತ್ರಿ ಇವರಿಂದಾಗಿ ಕ್ಷಣಿಕವಾಗಿ ದೊರೆತ ಆಸರೆಯೂ ಇದೀಗ ದೂರವಾಗಿತ್ತು! ಮನುಷ್ಯನು ಎಂತಹ ದುರ್ಧರ ಗಂಡಾಂತರ ಪರಿಸ್ಥಿತಿಯಲ್ಲಿಯೂ ತನ್ನ ಪ್ರೇಮಿಕೆಯೊಡನೆ ಎದೆಗುಂದದೆ ಮುನ್ನುಗ್ಗುವನು. ಆದರೆ ಯುವಕನಾದ ರಾವಲನ ನಿಷ್ಕಲ್ಮಷ ಪ್ರೇಮಿಕೆ ಸನಂದೆ..ತನ್ನವಳಾಗಲಾರಳೆಂದು ತಿಳಿದೊಡನೆ ಅವನಿಗೆ ಜೀವನದಲ್ಲಿ ನಿರಾಸೆಯುಂಟಾಯಿತು! ಅವನು ಯಾವಲ್ಲಿಗೆ ಹೋಗುವವೆಂದು ಗೊತ್ತು ಗುರಿಯಿಲ್ಲದೆ ಹೊರಟಿದ್ದ.

ಸುರವಾಘಾಟವನ್ನು ತಲ್ಪಿ ತಿಂಡಿತೀರ್ಥ ಸೇವಿಸಿದ ನಂತರ "ಇಲ್ಲಿ ನೋಡತಕ್ಕ ಸ್ಥಳವ್ಯಾವುದಾವರೂ ಇದೆಯೋ" ಎಂದು ಆ ಊರಲ್ಲಿ ಕೇಳಿದ. ಮೈಲೊಂದೆರಡರಲ್ಲಿ ಪ್ರಸಿದ್ಧವಾದ ಅಂಬುತೀರ್ಥವಿದೆಯೆಂತಲೂ ಅಲ್ಲಿಯ ಶ್ರೀರಾಮ ದೇವಾಲಯ ನಿಸರ್ಗ ಮಧ್ಯದಲ್ಲಿ ಸುಶೋಭಿಸುವದೆಂತಲೂ, ಅಲ್ಲಿಯೊಬ್ಬ ಸನ್ಯಾಸಿಗಳು ತಮ್ಮ ಮನಕ್ಕೊಪ್ಪಿದವರನ್ನು ಮಾತ್ರ ಶಿಷ್ಯರನ್ನಾಗಿ ಮಾಡಿ ಕೊಳ್ಳುವರೆಂತಲೂ ತಿಳಿದು ಅಲ್ಲಿಗೆ ಹೊರಟ.

ರಾವಲನು ಬನಾರಸ್ ಬಿಟ್ಟಂದಿನಿಂದ ದಾಡಿ ತೆಗೆದಿದ್ದಿಲ್ಲ. ಇಂಚುದ್ದ ದಾಡಿ ಬೆಳೆದಿದ್ದವು. ಅವನ ಮೈಕಟ್ಟು ಅವನ ತಾರುಣ್ಯವನ್ನು ತೋರುತ್ತಿತ್ತು. ನೋಡುವವರಿಗೆ ಅವನೊಬ್ಬ ವಿಚಿತ್ರ ವ್ಯಕ್ತಿಯಾಗಿ ಕಾಣುತ್ತಿದ್ದ. ಆಶ್ರಮದಲ್ಲಿ ಸಾಧುವರ್ಯರು ಕುಳಿತಿದ್ದರು. ೬ ಜನ ಶಿಷ್ಯರೂ ಇದ್ದರು. ರಾಮಕೃಷ್ಣ ಪರಮಹಂಸರ ಶಿಷ್ಯರಲ್ಲೊಬ್ಬರಾದ—ಗುರುವರ್ಯರಿಗೆ ರಾವಲನನ್ನು ನೋಡಿದೊಡನೆಯೇ ಅವನ ನಿಜ ಪರಿಸ್ಥಿತಿ ಅರಿಯಲು ತಡವಾಗಲಿಲ್ಲ. ರಾವಲನು ಹೊರಗೇ ನಿಂತಿದ್ದ! ಗುರುಗಳು ಅಲ್ಲಿಂದಲೇ "ಬಾರಪ್ಪಾ ಒಳಗೆ ಬಾ! ಪಾಪ, ಬಹುದೂರ ಪಂಜಾಬಿನಿಂದ ಬಂದಿದ್ದೀಯೆ! ಇಷ್ಟರಲ್ಲಿಯೇ ನೀನು ಹೆದರಿದೆ. ಜೀವನದಲ್ಲಿ, ನೀನು ಮಾಡಬೇಕಾದ್ದು ಬಹಳವಿದೆ ನಿನ್ನೊಬ್ಬನ ಬಗ್ಗೆ ಅಲ್ಲಿ ಎಷ್ಟು ಅತ್ತಗಳು ಕೊರಗುತ್ತಿವೆ' ನಿನಗೇನು ಗೊತ್ತು! ಸರಿ ಈಗಂತೂ ಆಶ್ರಮದಲ್ಲಿ ಬಂದಿರುವೆ. ಇನ್ನು ಹದಿನೈದನೇ ದಿನ ನಾನೇ ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಬೇಕಾಯಿತು!" ಎಂದರು. ರಾವಲನಿಗೂ ಉಳಿದ ಶಿಷ್ಯರಿಗೂ ಇದೇನು ಎಂದು ಆಶ್ಚರ್ಯವಾಯಿತು. ರಾವಲನು ಅವರ ಕಾಲು ಮುಟ್ಟಿ ನಮಸ್ಕರಿಸಿ "ನನ್ನಿಂದೇನಾದರೂ ತಪ್ಪಿದ್ದರೆ ಕ್ಷಮಿಸಿ ನನ್ನ ಕಾರ್ಯವನ್ನು ತಿಳಿಸಿ" ಎಂದ ಅವನ ಮಾತಿನಲ್ಲಿ ವಿನಯ ದುಃಖಗಳೆರಡೂ ತುಂಬಿತ್ತು. "ನಿನ್ನಂಥ ಕಲಿತವ—ತಪ್ಪೇಕೆ—ಎಂಥವನೇ ಆದರೂ ನಿನ್ನಂತೆಯೇ ಮಾಡಬೇಕಾದ್ದು, ಆದರಲ್ಲಿ ನಿನ್ನ ತಪ್ಪೇನೂ ಇಲ್ಲ. ನೀನು ದುಡುಕಬಾರದಾಗಿತ್ತು. ಕಣ್ಣೀರನ್ನಾದರೂ ತಣಿಸಿ ಕುಡಿಯಬೇಕಪ್ಪ! ಆಗಲಿ. ನನಗೂ ಒಮ್ಮೆ "ವಿಶ್ವನಾಥನ" ದರ್ಶನ ಮಾಡಬೇಕೆಂದಾಶೆಯಾಗಿದ" ಎಂದರು.

ರಾವಲನು ಅವರ ಸೇವೆಯಲ್ಲಿ ತನ್ನ ಜೀವನ ಕಳೆಯಲು ಬಂದಿದ್ದ! ಆದರೆ ತ್ರಿಕಾಲಜ್ಞಾನಿ ಗುರುಗಳು ಪೂರ್ವ ಪರಿಚಿತರಂತೆ—ಅವನ ಗುಟ್ಟನ್ನು ತಿಳಿಸಿದ್ದಾರೆ. ಅವನಿಗೆ ಅವರು ಪ್ರತ್ಯಕ್ಷ ದೇವರಂತೆ ಕಂಡರು! ಮುಂದಿನ ಹದಿನೈದು ದಿವಸ ಕಳೆಯಿತು. ಹದಿನೈದನೇ ದಿವಸವೇ ಗುರುಗಳು "ಕಾಶಿ"ಗೆ ತೆರಳುವವೆಂದು ಬೊಬೆ ಹೇ ಆಲೋಚಿಸಿದಂತೆ! ಸನ್ನಾಹವಾಡಿದರು! ಎಲ್ಲರೂ ಹೊರಟರೂ ರಾವಲನು ಹೊರಡುವ ಆಲೋಚನೆಯಲ್ಲಿಯೇ ಇರಲಿಲ್ಲ. ಗುರುಗಳು ಅವನನ್ನು "ಏನಪ್ಪಾ ರಾವಲ, ನೀನೇ ಹೊರಡದಿದ್ದರೆ ಹೇಗೆ? ನಿನ್ನ ಬಗ್ಗೇ ನಾನು ಪ್ರವಾಸ ಕೈಕೊಂಡಿರುವದು. ನೀನು ಹೊರಡಲೇಬೇಕು' ಇದು ನನ್ನಾಜ್ಞೆ!" ಎಂದರು. ಅವರ ಮಾತಿನಲ್ಲಿ ಗಾಂಭೀರ್ಯವಿತ್ತು 'ನಾವು ಈಗಲೇ ಹೊರಡಬೇಕು' ಎಂದರು. ರಾವಲನಿಗೆ ಏನು ಹೇಳುವದೆಂದು ತಿಳಿಯದೆ ಮಂತ್ರಮುಗ್ಧನಾಗಿ "ತಮ್ಮ ಕೇವಲ ಮಾತಿಗೇ ಬರುವೆ, ದಯಮಾಡಿ ಆಜ್ಞೆಯನ್ನೀಡಬೇಡಿ—ನನ್ನನ್ನು ಅಷ್ಟು ದಯೆಯಿಂದ ನೋಡಿ, ತಮ್ಮ ಸೇವೆಯಲ್ಲಿ ಈ ಜೀವ ಸವೆಯಲು ಅವಕಾಶ ಕೊಡಿ" ಎಂದೆನ್ನುತ್ತಾ ಎದ್ದು ನಿಂತು 'ಇದೋ ಸಿದ್ಧ' ಎಂದ. ಗುರುಗಳು ಅವನ ಮೈಮೇಲೆ ಕೈದಡವಿ "ಮಗೂ—ನೀನು ಇನ್ನೂ ಅರಿಯದವ, ನಿನಗೆಲ್ಲ ಹೇಳುವೆ ನಡೆ" ಎನ್ನುತ್ತಾ ಕಾಶಿಗೆ ಪ್ರಯಾಣ ಬೆಳೆಸಿದರು!

ಅದೇ ವಿಶ್ವನಾಥ ದೇವಾಲಯ—ಅಂದು ತಾನು ನಿರ್ಗತಿಕನಾಗಿ ನಿಂತಿದ್ದ. ಇಂದು ಗುರುಗಳ ಶಿಷ್ಯನಾಗಿ ವಿಶ್ವನಾಥನ ಮುಂದೆ ನಿಂತಿದ್ದೇನೆ—ವಿಶ್ವನಾಥನು ಎಲ್ಲವನ್ನೂ ಮುಗುಳುನಗೆಯಿಂದ ನೋಡುತ್ತಿದ್ದಾನೆ—ಅದೋ ಗುರುಗಳು ಬಂದಿರುವ ಸುದ್ದಿ ವೃಜಸೇನ ಗುಪ್ತರಿಗೆ ತಿಳಿದಿದೆ. ಅವರೂ ಸಹ ಗುರು ಕಾಣಿಕೆ ಹಿಡಿದು ಬಂದಿದ್ದಾರೆ. ಗುರುಗಳ ಬಗ್ಗೆ ಪ್ರತ್ಯೇಕ ಬೀಡಾರದ ವ್ಯವಸ್ಥೆಯಾಗಿದೆ ಅವರ ಖರ್ಚೆಲ್ಲ ವೃಜಸೇನ ಗುಪ್ತರೇ ವಹಿಸಿಕೊಂಡಿದ್ದಾರೆ.

ವೃಜಸೇನ ಗುಪ್ತರು ಗುರುಗಳಿಗೆ ಕಾಣಿಕೆ ಒಪ್ಪಿಸಿದರು. ಗುರುಗಳಿಗೂ ಅವರ ಶಿಷ್ಯವೃಂದಕ್ಕೂ ನಮಸ್ಕರಿಸುತ್ತಾ ಬಂದರು. ಕೊನೆಯ ಶಿಷ್ಯ ರಾವಲನನ್ನೂ ವೃಜಸೇನರನ್ನೂ ಗುರುಗಳು ನೋಡುತ್ತಿದ್ದರು. ವೃಜಸೇನರಿಗೆ-ರಾವಲನ ಪರಿಚಯ ದೊರೆಯಲು ಸಾಧ್ಯವಿದ್ದಿಲ್ಲ ಆದರೆ ರಾವಲ. ಅವನು ತನಗೆ ಊಟವಿಕ್ಕಿದ ಸ್ವಾಮಿಯನ್ನು ಮರೆಯುವದು ಹೇಗೆ? ಅವನ ಕಂಗಳಲ್ಲಿ ನೀರು ತುಂಬಿದ್ದವು. ಒಂದು ದಿನ ವೃಜಸೇನರಿಗೆ ಅವನು ಕಂಡನಂತೆ ಕಾಲು ಹಿಡಿದಿದ್ದ ..ಇಂದು ಗುರುಗಳ ಶಿಷ್ಯನೆಂದು ತಿಳಿದು....ಅವನ ಕಾಷಾಯ ವಸ್ತ್ರ...ದಾಡಿಗಳ ಮರೆಯಲ್ಲಿ ನಿಜ ತಿಳಿಯಲಾರದೆ ವೃಜಸೇನರು ಅವನಿಗ ಬಾಗುವುದರಲ್ಲಿದ್ದಾರೆ. ..ಮನ ಅಳುಕಿದ ರಾವಲನು ಹಿಂದಕ್ಕೆ ಸರಿದು ಹೋಗಿ ಗುರುಗಳ ಬಳಿ ಕುಳಿತ!—ವೃಜಸೇನರು ಕೊನೆಯ ಶಿಷ್ಯನಿಗೆ ನಮಸ್ಕಾರವನ್ನರ್ಪಿಸಲಾರದೆ ಹೋದರು.

ಗುರುಗಳು ವಿಷಯವನ್ನರಿತು—"ಗುಪ್ತಾಜೀ ನಿಮ್ಮ ಮನವೇಕೋ ಕುಂದಿದೆ ವ್ಯವಹಾರದಲ್ಲಿ ಯಾವ ಲೋಪದೋಷದ ... ರಲು ಶಕ್ಯವಿಲ್ಲ! ಮಗಳ ಮದುವೆಯ ಚಿಂತೆಯೆಂದು ತೋರುತ್ತದೆಯಲ್ಲವೇ" ಎಂದರು. ರಾವಲನು ಈ ವಿಷಯ ಕಿವಿಯಲ್ಲಿ ಕೇಳಲಾರದೆ, ಬೀಡಾರದೊಳ ಹೊಕ್ಕು ಕಿವಿ ಮುಚ್ಚಿ—ಯೋಚನೆಯಲ್ಲಿ ತೊಡಗಿದ ಹೇಗಾದರೂ ಗುರುಗಳು ಇಲ್ಲಿಂದ

(೧೧ನೇ ಪುಟ ನೋಡಿರಿ)

ಪರಿದಾಬಾದದ ಲಾಟೀನು ಕಾರಖಾನೆಯಲ್ಲಿ ಗೃಹಮಂತ್ರಿ ಗೋವಿಂದ ವಲ್ಲಭ ಪಂತ್

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ರೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1920

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತನೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ವಿಕ್ರಮ ಯುಗ

ಇದು ಕಲಿಯುಗವಲ್ಲ, ವಿಕ್ರಮಯುಗವಾಗಿದೆ!

ಎಲ್ಲರೂ ಕರ್ಮಯುಗವೆನ್ನುವರಾದರೂ ಕರ್ಮದಲ್ಲೂ ವಿಕ್ರಮವನ್ನೇ ಬಯಸುತ್ತಾರೆ!

ಇಂದಿನ ಯುಗಕ್ಕೆ ವಿಜ್ಞಾನ ಇಲ್ಲವೇ ಆಧುನಿಕ ಇತ್ಯಾದಿ ಯುಗವೆಂದು ಕರೆಯುವದಕ್ಕಿಂತಲೂ "ವಿಕ್ರಮ" ಯುಗವೆಂದು ಹೇಳಿದರೆ ಅತಿಶಯೋಕ್ತಿವೆನಿಸಲಾರದು! ಇತ್ತೀಚೆಗೆ ವಿಜ್ಞಾನದ ಬಲದ ಮೇಲೆ ಮಾನವನು ನಿಸರ್ಗದ ಮೇಲೆ ಅಧಿಕಾಧಿಕ ವಿಜಯಗಳನ್ನು ಸಂಪಾದಿಸುತ್ತ ನಡೆದಿದ್ದಾನೆ. ಅದರ ಜೊತೆಗೆ ಹೊಸ—ನವ "ವಿಕ್ರಮ"ಗಳನ್ನು ಪ್ರಪಂಚದಲ್ಲಿ ಪ್ರಸ್ಥಾಪಿಸ ತೊಡಗಿದ್ದಾನೆ. ಆದರೆ ಮಾನವನ ಈ ವಿಕ್ರಮ—ಲಾಲಸೆಯು ಕೇವಲ ವಿಜ್ಞಾನ ಪೂರ್ತಿಯ ಮರ್ಯಾದಿತವಲ್ಲ. ಜೀವನದ ಅನ್ಯ ಕ್ಷೇತ್ರಗಳಲ್ಲಿ ವ ಸಹಜವಾದ ಸಂಗತಿಗಳಲ್ಲಿಯೂ ವಿಕ್ರಮ ಹೊಂದುವ, ವೀರ ವ್ಯಕ್ತಿಗಳು ಮುಂದೆ ಬರಹತ್ತಿರುವರು ಆ ನಿ ರಂ ತ ರ ಸ್ಯಾಯ್ಕಲ್ ನಡೆಸುವ ವಿಕ್ರಮ, ಅನೇಕ ಮೈಲುಗಳ ತನಕ ಈಜಾಡುತ್ತ ಚಲಿಸುವ ವಿಕ್ರಮ, ಕ್ರಿಕೆಟ ಆಟದಲ್ಲಿ ಎಲ್ಲರಿಗಿಂತ ಅಧಿಕ ಓಟಗಳನ್ನು ತೆಗೆಯುವ ವಿಕ್ರಮ, ಪರ್ವತ—ಶಿಖರಗಳನ್ನೇರುವ ವಿಕ್ರಮ; ಹೆಚ್ಚೇನು? ಎಲ್ಲರಕ್ಕಿಂತಲೂ ಹೆಚ್ಚು ಲಾಡು ಜಿಲೇಬಿ, ಮೈಸೂರುಪಾಕ ಇತ್ಯಾದಿ ತಿನ್ನುವ ಜೀನಸುಗಳನ್ನು ಭಕ್ಷಿಸುವ ಘಟೋತ್ಕಜನ ವಿಕ್ರಮ ಹೀಗೆ ಭಿನ್ನಭಿನ್ನ ವಿಕ್ರಮ. ಪ್ರಕಾರಗಳು ಇಂದು ನಮ್ಮ ದೃಷ್ಟಿಗೆ ಗೋಚರವಾಗುತ್ತವೆ! ಅದರಲ್ಲಿ ಈಗ ಎರಡು—ಮೂರು ಅಭಿನವ ಸತ್ಯ ವಿಕ್ರಮಗಳು ಬೆಳಕಿಗೆ ಬಂದಿವೆ. ಅವುಗಳ ಸುದ್ದಿ ಇಷ್ಟರಲ್ಲಿಯೇ ಹಬ್ಬಿರುವದು.

ಅವುಗಳಲ್ಲಿ ಒಂದು ಸೋಜಿಗಪಡೆಯುವಂಥ ವಿಕ್ರಮವು ಕಳೆದ ಕೆಲವು ತಿಂಗಳ ಹಿಂದೆ ಅಮೇರಿಕೆಯಲ್ಲಿ ಘಟಿಸಿತು. ಅಮೇರಿಕೆಯ ಹೆಸರಾಂತ ಪಟ್ಟಣವಾದ ನ್ಯೂಯಾರ್ಕದಲ್ಲಿಯ 'ಪೀಟರ್ ಟ್ರಿಪ್' ಎಂಬ ಹೆಸರಿನ ೩೨ ವಯಸ್ಸಿನ ಗೃಹಸ್ಥನು ಸತತ ೨೦೦ ತಾಸು ಜಾಗ್ರಣವಾಗಿ ಇರುವ ನೂತನ ವಿಕ್ರಮದಲ್ಲಿ ಪಾರಂಗತನಾಗಿರುವನು. ಅವನ ಈ ಅದ್ಭುತ ವಿಕ್ರಮವನ್ನು ಸ್ವಂತ ಕಣ್ಣಿನಿಂದ ನೋಡಲು ಪ್ರತಿನಿತ್ಯ ನೂರಾರು ಜನರು ಹಗಲಿರುಳು ಅನ್ನದೇ ರಾತ್ರಿಯ ನಿದ್ದೆಯನ್ನೂ ಕೂಡ ಪತ್ಕರಿಸಿ ಪೀಟರ್ ಟ್ರಿಪನ ಮನೆಗೆ ತಂಡ—ತಂಡವಾಗಿ ಹೋಗುತ್ತಿದ್ದರು! ಅನೇಕ ವೈದ್ಯಕೀಯ ಸಂಶೋಧಕರಿಗ ಈ ಹೆ ಮ ವಿಕ್ರಮವು ಕೇವಲ ಕೌತುಕಾಸ್ಪದವಷ್ಟೇ ಅಲ್ಲ, ಅಭ್ಯಾಸನೀಯವೂ ಆಗಿತ್ತು! ಅದನ್ನು ಕಣ್ಣಾರೆ ನೋಡಿದ ಒಬ್ಬ ಸಂಶೋಧಕರು—"ಜಗತ್ತಿನ ಇತಿಹಾಸದಲ್ಲಿ ಪೀಟರ್ ಟ್ರಿಪ್ ಇವನೇ ಎಲ್ಲರಗಿಂತಲೂ ಹೆಚ್ಚುಕಾಲ ಜಾಗ್ರತನಾಗಿದ್ದು "ಜಾಗ್ರತೆ ಬಹಾದ್ದೂರ" ಎಂದೆನಿಸಿಕೊಂಡಿರುತ್ತಾನೆ ಎಂದು ಉದ್ಧರಿಸಿರುವರು! ಸಂಶೋಧಕರು ಟ್ರಿಪನಿಗೆ ಈ ಗೌರವ ಅನುಚಿತ ಎಂದು ಯಾರು ದೃಢವಾಗಿ ಹೇಳಬಲ್ಲರು? ಸತತ ಎಂಟು ಹಗಲು, ಎಂಟು ಇರುಳು (ರಾತ್ರಿ) ಹಾಗೂ ಎಂಟು ತಾಸು ಕಣ್ಣಿಗೆ ಕಣ್ಣು ಹತ್ತಿಕ್ಕದೇ ಜಾಗ್ರತವಾಗಿರುವದು, ಇದೇನು ಒಂದು ಸಾಮಾನ್ಯ ಸಾಹಸದ ವಿಷಯ ಅಲ್ಲ? ಅಖಂಡ ಜಾಗ್ರತೆಯ ಈ ವಿಕ್ರಮದಿಂದ ಸ್ಫೂರ್ತಿ ಹೊಂದಿ, ಒಬ್ಬಾನೊಬ್ಬ ಮಹತ್ವಾಕಾಂಕ್ಷಿ ಪುರುಷನಿಗೆ ಸತತ ೨೦೦ ತಾಸು ಗಾಢವಾಗಿ ನಿದ್ರಾರೂಢನಾಗಿರುವ ಕುಂಭಕರ್ಣ ವಿಕ್ರಮ ಸ್ಥಾಪಿಸಬೇಕೆಂಬ ಹಿರಿಯಾಸೆ ತೋರಿದರೆ, ಅದು ಇಂದಿನ "ವಿಕ್ರಮ ಯುಗಕ್ಕೆ" ಯಥಾರ್ಥವೇ ಸೈ!

ಇನ್ನೊಂದು ಆಶ್ಚರ್ಯ ಹೊಂದುವಂಥ, ಬಾಲಿಕೆಯ ತಾಳ್ಮೆಯುಕ್ತ ಸಾಹಸವು ಇದೇ ವರ್ಷದ ಫೇಬ್ರುವರಿ ತಿಂಗಳಲ್ಲಿ ಆಯಿತು. ಇಂಡಿಯಾನಾ ದೇಶದ "ಮೆರುಯಿ ರೋಜಬರ್ಗ" ಎಂಬ ೧೭ ವರ್ಷದ ಬಾಲಿಕೆಯು ೭೧ ಅಡಿ ಎತ್ತರದ ಧ್ವಜಸ್ತಂಭದ ತುದಿಯಲ್ಲಿ ಚಿಕ್ಕದಾದ ಪೆಟ್ಟಿಗೆಯಲ್ಲಿಯೇ ೧೬೯ ದಿನಗಳ ವರೆಗೆ ಕುಳಿತು ಕಾಲಹರಣ ಮಾಡಿ ನವ ವಿಕ್ರಮವನ್ನು ಸ್ಥಾಪಿಸಿದ್ದಾಳೆ. ಇಂಥ ಸಾಹಸದ ವಿಕ್ರಮವನ್ನು ಪಡೆಯಲು ಪುರುಷರಂತೆ ಸ್ತ್ರೀಯರೂ ಕೂಡ ಮುಂದೆ ಬರಹತ್ತಿದ್ದಾರೆ ಎಂದು ಈ ಜೀವಂತ ನಿದರ್ಶನದಿಂದ ತಿಳಿದು ಬರುತ್ತದೆ. ಅವಳು ಅಷ್ಟು ದಿವಸ ಅಲ್ಲಿಯೇ ಕುಳಿತು ಸುಖವನ್ನು ಕಳೆದಳು. ಅದೆಷ್ಟು ಧೀರ ಬಾಲಿಕೆ ಅವಳು ಆಗಿರಬೇಕು?

ಇಂದು ವಿವಾಹವನ್ನು ಮಾಡಿಕೊಳ್ಳುವದರಲ್ಲಿಯೂ ಹೊಸ ವಿಕ್ರಮಗಳನ್ನು ಹೊಂದುವರು. ಈ ಮದುವೆಯಲ್ಲಿ ವಿಕ್ರಮ ಸ್ಥಾಪಿಸಿದ ಒಂದು ಘಟನೆಯು ಕಳೆದ ಮಾರ್ಚ ತಿಂಗಳಲ್ಲಿ ನಮ್ಮ ಹಿಂದೂದೇಶದೊಳಗೆ ಉದ್ಭವಿಸಿತು. ಮುಂಬೈ ನಗರದಲ್ಲಿ ೩೦—೩೫ ವರ್ಷದ ತರುಣನೊಬ್ಬನು "ತಾನು ಭಾರತ ಸರಕಾರದ ನೌಕರಿಯಲ್ಲಿಯ ದೊಡ್ಡ ಅಧಿಕಾರಿ ಎಂದು ಹೇಳುತ್ತ ಕೇವಲ ವರದಕ್ಷಿಣೆಯಗೋಸ್ಕರ ಆರು ಸಲ ವಿವಿಧ ಪಟ್ಟಣಗಳ ಬೇರೆ—ಬೇರೆ ಕನ್ಯೆಯರನ್ನು ವಂಚಿಸಿ ಮದುವೆಯಾದನು! ಕೊನೆಗೆ ಪುನಃ ತನ್ನ ಹಿರಿಬಯಕೆಗೆ ಬಲಿಬಿದ್ದು, ಮುಂಬೈಯ ಉಪನಗರವೊಂದರಲ್ಲಿ ಏಳನೇ ಸಲ ವಿವಾಹವಾಗಲು ಪ್ರಯತ್ನ ನಡೆಸುತ್ತಿರುವಾಗ ಒಮ್ಮೆಲೇ ಸಂಶಯದಿಂದ ಅಲ್ಲಿಯೇ ಪೋಲಿಸರಿಂದ ಬಂಧಿಸಲ್ಪಟ್ಟನು!

ಈ ರೀತಿ ವಿವಾಹವಾಗುವದರಲ್ಲಿಯೂ ವಿಕ್ರಮಗಳನ್ನು ಸ್ಥಾಪಿಸಲಿಕ್ಕೆ ತೊಡಗಿದ್ದಾರೆ. ಅಂದಮೇಲೆ ಇಂದಿನ ಯುಗ "ವಿಕ್ರಮ ಯುಗ"ವೆಂದು ಧಾರಾಳವಾಗಿ ಹೇಳಬಹುದು!

ಇದೇ ಎಪ್ರಿಲ್ ತಿಂಗಳಲ್ಲಿ ಒಂದು ವಿಮಾನವು ಹಳೆಯ ವಿಕ್ರಮ ಒಂದನ್ನು ಮುರಿದು, ಹೊಸ ಜಾಗತಿಕ ವಿಕ್ರಮ ಸ್ಥಾಪಿಸಿದೆಯೆಂದು ಪತ್ರಿಕೆಗಳಲ್ಲಿ ಅಧಿಕೃತವಾಗಿ ಪ್ರಕಟಿಸಿದ್ದಾರೆ. ಅದೆಂದರೆ—ಅಮೇರಿಕೆಯ ವಾಯುಪಡೆಗೆ ಸೇರಿದ ಆರ್. ಎಫ್. ೧೦೧ ವ್ಹೂಡೂ ನಿರೀಕ್ಷಕ ವಿಮಾನ ಒಂದು ಎಪ್ರಿಲ್ ೧೬, ೧೯೫೯ನೇ ದಿನದಂದು ತಾಸಿಗೆ ೮೧೬ ಮೈಲು ಅತಿ ವೇಗದಿಂದ ಉಡ್ಡಾಣಮಾಡಿ, ವೇಗದ ವಿಮಾನೋಡ್ಡಾಣದಲ್ಲಿ ನೂತನ ಜಾಗತಿಕ ವಿಕ್ರಮ ಸ್ಥಾಪಿಸಿರುವದು. ಇದಕ್ಕೂ ಪೂರ್ವದಲ್ಲಿ ತಾಸಿಗೆ ೭೫೫ ಮೈಲು ವೇಗದ ವಿಕ್ರಮವನ್ನೂ ಅಮೇರಿಕೆಯ ನೌಕಾಪಡೆಯ ಕ್ರೈಟರ ವಿಮಾನವು ಸ್ಥಾಪಿಸಿತ್ತು. ಆದರೆ ಅದೇ ರಾಷ್ಟ್ರದ ವಾಯುಪಡೆಯ ವಿಮಾನವು ಇಂದು ೮೧೬ ಮೈಲುಗಳಿಂದ ಹಳೆಯ ವಿಕ್ರಮವನ್ನು ಮುರಿದು ಪ್ರಪಂಚದಲ್ಲಿಯೇ ಪ್ರಸಿದ್ಧಿಯನ್ನು ಹೊಂದಿರುವದು.

ಹೀಗೆ ಪ್ರಪಂಚಾದ್ಯಂತ ದಿನ ದಿನಕ್ಕೆ ಅನೇಕ ವಿಕ್ರಮಗಳು ಸ್ಥಾಪಿತವಾಗುತ್ತವೆ. ಹಾಗೆಯೇ ಅದೆಷ್ಟೋ ಹಿಂದಿನ ವಿಕ್ರಮಗಳನ್ನು ಮುರಿಯುವದು ನಡೆಯುತ್ತಲಿದೆ. ಯಾಕೆ? ಇದು "ವಿಕ್ರಮ ಯುಗ"ವೆಂದು! ಹೋದಲ್ಲಿ—ಬಂದಲ್ಲಿ, ಕೂತಲ್ಲಿ—ಎದ್ದಲ್ಲಿ, ಕೇಳಿದಲ್ಲಿ—ಕಂಡಲ್ಲಿ ಎಲ್ಲೆಡೆಯಲ್ಲಿಯೂ 'ವಿಕ್ರಮ'ದ ಸುದ್ದಿಯೇ ಹೊರತು ಬೇರೆ ಸಂಗತಿಗಳು ತಿಳಿಯುಬರುವದು ದುಸ್ತರ. ಅದರ ಬಗ್ಗೆ ಪತ್ರಿಕೆಗಳಲ್ಲಿಯಂತೂ ದಿನಕ್ಕೊಂದರಂತೆ ವಿಕ್ರಮದ ಸುದ್ದಿಗಳಿರಲೇಬೇಕು. ಇವೆಲ್ಲವೂ ಈ 'ವಿಕ್ರಮ ಯುಗ'ದ ಪ್ರಭಾವವೇ ಸರಿ.

ಜಾಗ್ರತೆಯ ಅತ್ಯುಚ್ಚ ವಿಕ್ರಮ ಹೊಂದುವ ಮೊದಲಿನ "ಬಹಾದ್ದೂರ" ನ್ಯೂಯಾರ್ಕಿನ ಪೀಟರ್ ಟ್ರಿಪ" ಇವನೇ ಸೈ! ಇದರಲ್ಲಿ ಎಳ್ಳಷ್ಟೂ ಶಂಕೆಯಿಲ್ಲ! ಆದರೆ ಜಾಗ್ರಣೆಮಾಡಿ ವಿಕ್ರಮಹೊಂದುವ, ಅಥವಾ ವಿಕ್ರಮಗೋಸ್ಕರ ಜಾಗ್ರಣೆ ಮಾಡುವ ಬಹಾದ್ದೂರರು ಕೂಡ ಅನೇಕರು ಲಭಿಸುತ್ತಾರೆ. ಯಾವನೊಬ್ಬ ಪರೀಕ್ಷೆಯಲ್ಲಿ ಉತ್ತಮ ಶ್ರೇಯಸ್ಸುಹೊಂದಿ ವಿಕ್ರಮ ಸ್ಥಗಿತಗೊಳಿಸಲು ಜಾಗ್ರಣದ ಹಿಂದೆ ಜಾಗ್ರಣೆಮಾಡುತ್ತಾನೆ. ಒರ್ವ ವಿಕ್ರಮಶಾಲಿ ಪ್ರೇಮಿಕನು ಪ್ರೇಯಸಿ ಪ್ರೇಮಕ್ಕಾಗಿ ಹಾತೊರೆದು ಜಾಗ್ರಣಮಾಡುವನು. ಪ್ರೇಮ ಹಾಗೂ ಜಾಗ್ರಣಕ್ಕೆ ಅತಿ ಘನಿಷ್ಟ ಸಂಬಂಧವಿದೆ. ಅದಕ್ಕಾಗಿ ಜಾಗ್ರಣೆಯಲ್ಲಿ ವಿರಲನಾದವನು ಪ್ರೇಮದಲ್ಲಿಯೂ ಸಹ ಕಡಿಮೆ! "ಲಾಗೇನಾ ಡೋಳ್ಯಾತೀ ಡೋಳಾ" ಮತ್ತು "ಮುಜೇ ನಿಂದನ ಆತೀಕ್ಯಾಕರೂಂ?" ಇತ್ಯಾದಿ ಉದ್ಗಾರಗಳು ಪ್ರೇಮದ ಬೇನೆಯಿಂದ ಆವರಿಸಿದ ಲೈಲಾ (ಪ್ರೇಯಸಿ)—

(೧೦ನೇ ಪುಟ ನೋಡಿರಿ)

ಆಫ್ರಿಕೆಯ ಜಾಂಜಿಬಾರದಲ್ಲಿ ಕಳ್ಳಿಹಣ್ಣಿಗಾಗಿ ಸಂಶೋಧನೆ ನಡೆಸುತ್ತಿದ್ದಾರೆ,

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಸ್ಥಾಪನೆ: 1906] ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ. 20,00,000/-
ಕ್ಷೇಮನಿಧಿ	—	ರೂ. 14,40,000/-
ಠೇವಣಾತಿಗಳು	—	ರೂ. 7,19,35,000/-
ಸಾಲಗಳು	—	ರೂ. 3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ. 9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ.

The Canara Banking Corporation Ltd.

Estd:- 1906] [H. O. UDIPI (S. India)

ಜೀವನ ಪರಿಚಯ

ಆಧ್ಯಾತ್ಮವನ್ನು ನೆಮ್ಮಿ ಬಾಳಿದ ಅಕ್ಕ ಮಹಾದೇವಿ

ಲೌಕಿಕಕ್ಕೆ ಕಟ್ಟುಬಿದ್ದರೂ ಅದರಿಂದ ಬಿಡುಗಡೆ ಹೊಂದಿ ಶಿವನಲ್ಲಿ ಐಕ್ಯಳಾದ ವೀರಶೈವೆ.

ಕನ್ನಡ ಸಾಹಿತ್ಯದಲ್ಲಿ ಕವಿಗಳಿಗೇನೂ ಕೊರತೆಯಿಲ್ಲದಿದ್ದರೂ ಕಬ್ಬಿಗಿತಿಯರ ಸಂಖ್ಯೆ ಅವರಷ್ಟಿಲ್ಲ. ಸ್ತ್ರೀಯರಿಗೆ ಕವಿತಾಶಕ್ತಿಯ ಪರಿಚಯವಿಲ್ಲ ಎಂದು ಹೇಳುವುದು ದಾಷ್ಟ್ರ್ಯದ ಮಾತಾದೀತು. ಅಕ್ಕ ಮಹಾದೇವಿಯಾದರೂ ಜನಸಾಮಾನ್ಯರ ಕೈಗೆ ಸಾಹಿತ್ಯ ಹರಿಯತೊಡಗಿದಾಗ ವಚನಗಳನ್ನು ರಚಿಸಿ ಕನ್ನಡ ಸಾಹಿತ್ಯದಲ್ಲಿ ಕವಿಗಳಷ್ಟೇ ಕೀರ್ತಿಯನ್ನು ಗಳಿಸಿದ ಕಬ್ಬಿಗಿತಿ.

ಲೌಕಿಕ ಜೀವನ

ಶಿವಭಕ್ತ—ಶಿವಭಕ್ತೆಯರಾದ ಸುಮತಿ-ನಿರ್ಮಲರೆಂಬ ಶೈವದಂಪತಿಗಳಿಗೆ, ಅವ ಅವರ ಅಸೀಮವಾದ ಶಿವೋಪಾಸನೆಯ ಫಲವಾಗಿ ಅಕ್ಕ ಜನಿಸಿದಳು. ಹುಟ್ಟುವಾಗಲೇ ಸೌಂದರ್ಯಸಾಗರವನ್ನು ಕೊಳ್ಳೆಹೊಡೆದು ತಂದ ಅಕ್ಕ ಬೆಳೆದು ಯುವತಿಯಾದಂತೆಲ್ಲಾ ಪುಟವಿಟ್ಟ ಚಿನ್ನದಂತೆ ಮಿರುಗುತ್ತಿದ್ದಳು. ಅಕ್ಕನು ಜನಿಸಿದ ಉಡುತಡಿ ಎಂಬ ಊರನ್ನು ಕೌಶಿಕನೆಂಬ ದೊರೆಯು ಆಳುತ್ತಿದ್ದನು. ಈತನು ವೀರಶೈವನಲ್ಲವೆಂದು ಅನೇಕ ಕವಿಗಳ ಅಭಿಮತ. ಈತನು ಒಂದು ದಿವಸ ರಾಜವೀಥಿಯಲ್ಲಿ ಮೆರವಣಿಗೆಯಲ್ಲಿ ಬರುತ್ತಿದ್ದಾಗ ಅಕ್ಕನನ್ನು ನೋಡಿದನು. ನೋಡಿದೊಡನೆಯೇ ಆಕೆಯನ್ನು ವರಿಸಬೇಕೆಂಬ ಆಶೆ ಅವನ ಮನಸವನ್ನು ಹೊಕ್ಕಿತು. ಅರಮನೆಗೆ ಹೋದೊಡನೆಯೆ ಅಕ್ಕನ ಮಾತಾಪಿತರೊಡನೆ ಸಂಧಾನಕ್ಕೆ ಆರಂಭಿಸಿದನು. ಸಂಧಾನಕ್ಕೆ ಬಂದ ಮಂತ್ರಿಗಳು ಅಕ್ಕನ ತಂದೆತಾಯಿರನ್ನು ಬೆದರಿಸಿ, 'ಕೂಸಕೊಡದಿರ್ದೊಡೀಗಳ್ ಕೊಲಲ್ ಬೆಸಸಿದಂ' ಎಂದರು. ಭಯದಿಂದ ನಡುಗಿದ ಅಕ್ಕನ ತಂದೆತಾಯಿಯರು ಅಕ್ಕನನ್ನು ಪರಿಪರಿ ವಿಧದಿಂದ ಈ ಮದುವೆಗೆ ಒಪ್ಪಿಸಲು ಯತ್ನಿಸಿದರು. ತನ್ನ ಹೃನ್ಮಂದಿರದಲ್ಲಿ ಚನ್ನಮಲ್ಲಿಕಾರ್ಜುನನನ್ನು ಆರಾಧಿಸುತ್ತಿದ್ದ ಅಕ್ಕನು ಈ 'ಭವಿ'ಯನ್ನು ವರಿಸುವುದು ಯುಕ್ತವೆ? ಕೊನೆಗೆ ಅಕ್ಕನು ತನ್ನಿಂದ ತನ್ನ ಮಾತಾಪಿತರು ದಂಡನೆಗೆ ಗುರಿಯಾಗುವುದು ಯುಕ್ತವಲ್ಲವೆಂದು ಬಗೆದು ಕೌಶಿಕನ ಮಂತ್ರಿಗಳೊಡನೆ, "ನಿಮ್ಮ ಅರಸನನ್ನು ಮದುವೆಯಾಗಲು ಒಪ್ಪಿಗೆಯಿದೆ. ಆದರೆ ಮದುವೆಯಾದ ಮೇಲೆ ನಿಮ್ಮ ದೊರೆ ನನ್ನ ಶಿವಾಚಾರಗಳಿಗೆ ಅಡ್ಡಿ ತಂದರೆ ನಾನು ಅವನನ್ನು ತ್ಯಜಿಸಿ ಹೊರಟು ಹೋಗುವೆನು" ಎಂಬ ನಿಬಂಧನೆ ಹಾಕಿದಳು.

ಕೌಶಿಕನು ಅಕ್ಕನನ್ನು ಮದುವೆಯಾಗುವ ಸಂತೋಷ ಸಂಭ್ರಮದಲ್ಲಿ ಅವಳ ಶರ್ತವನ್ನು ಅಷ್ಟಾಗಿ ಗಮನಿಸದೆ ಅವನ್ನು ಒಪ್ಪಿ ಮದುವೆಗೆ ಸಿದ್ಧನಾದನು. ಅಂತೂ ಅಕ್ಕ ಕೌಶಿಕನೊಡನೆ ಲಗ್ನವಾಗಿ,

ತೆರಣಿಯಹುಳು ತನ್ನ ಸ್ನೇಹದಲ್ಲಿ
ಮನೆಯಮಾಡಿ
ತನ್ನ ನೂಲು ತನ್ನ ಸುತ್ತಿ ಸಾವತೆರನಂತೆ
ಮನಬಂದುದ ಬಯಸಿ ಬೇವುತ್ತಿದ್ದೇನೆ ಅಯ್ಯ!
ಎನ್ನ ಮನದ ದುರಾಶೆಯ ನಿವಾರಿಸಿ
ನಿಮ್ಮತ್ತ ತೋರಾ
ಚನ್ನಮಲ್ಲಿಕಾರ್ಜುನಾ!

—ಎಂದು ಶಿವನಲ್ಲಿ ತನ್ನ ದುಃಖವನ್ನು ತೋಡಿಕೊಳ್ಳುತ್ತಾ ಅರಮನೆಯನ್ನು ಸೇರಿದಳು.

'ಮಾಯದ ಮದ, ಕಾಯದ ಕತ್ತಲೆ, ಜೀವದ ಜಂಜಡ'ಗಳ ಈ ಪ್ರಪಂಚದಲ್ಲಿ ಅಕ್ಕ ಬಿದ್ದು ದಿಕ್ಕು ತೋಚದಂತಾಗಿ ಶಿವನನ್ನು ಕುರಿತು ಹಲುಬಿದಳು:

"ಬೆಂದ ಒಡಲಹೊರೆವುದಕ್ಕೆ ನಾನಾರೆ
ಚನ್ನಮಲ್ಲಿಕಾರ್ಜುನಯ್ಯ!
ಕೊಲ್ಲು ಕಾಯು, ನಿನ್ನ ಧರ್ಮ!"

ಅಂತೂ ಅಕ್ಕ ತನ್ನ 'ಮನವೆಂಬ ಮರ್ಕಟವ' ಬಲುಕಷ್ಟದಿಂದ ಬಿಗಿಹಿಡಿದು, ಸದಾಕಾಲ ಶಿವಧ್ಯಾನದಲ್ಲಿ ಲೀನಳಾಗತೊಡಗಿದಳು. ಇದು ಕಾಮುಕನಾದ ಕೌಶಿಕನಿಗೆ ಸರಿಬೀಳದೆ ಅಕ್ಕನ ಆಧ್ಯಾತ್ಮಿಕ ಮನೋಭಾವವನ್ನು ಕೆಡಿಸಿ, ಶೃಂಗಾರ ರಸವನ್ನು ಆಕೆಯಲ್ಲಿ ತುಂಬಬೇಕೆಂದು ಬಗೆಬಗೆಯ ಪ್ರಯತ್ನ ಮಾಡಿದನು. ಆದರೆ ಅಕ್ಕ ಆತನ ಪ್ರಯತ್ನಗಳಿಗ ಮಣಿಯಲಿಲ್ಲ. ಬದಲಾಗಿ, 'ಎನ್ನ ಸುತ್ತಿದ ಪ್ರಪಂಚವ ಬಿಡಿಸಯ್ಯ!" ಎಂದು ಚನ್ನಮಲ್ಲಿಕಾರ್ಜುನನಲ್ಲಿ ಭಕ್ತಿಯಿಂದ ಮೊರೆಯಿಟ್ಟಳು.

ಅಕ್ಕ ಮಹಾದೇವಿ ಅಷ್ಟಕ್ಕೇ ಸುಮ್ಮನಿರದೆ ತನ್ನ ಆಧ್ಯಾತ್ಮಿಕ ಜೀವನವನ್ನು ಇನ್ನೂ ಪ್ರಖರಗೊಳಿಸಲು ಜಂಗಮಾರಾಧನೆಯನ್ನು ಕೈಗೊಂಡಳು. ಸರಿ. ದೇಶವಿದೇಶಗಳಿಂದ ಜಂಗಮರ ಪಡೆ ಉಡುತಡಿಗೆ ಧಾವಿಸತೊಡಗಿತು. ಅಕ್ಕನೇ ಇವರೆಲ್ಲರ ಆದರಾತಿಥ್ಯಗಳನ್ನು ಬಹು ಆಸಕ್ತಿ, ಭಕ್ತಿಯಿಂದ ಮಾಡುತ್ತಿದ್ದಳು. ಆಶರಣರ ಜೊತೆಗೆ ಶಿವನನ್ನು ಪರಿಪರಿಯಿಂದ ಪೂಜಿಸುವಳು. ಅಕ್ಕನ ಈ ಶಿವಾಚಾರವು 'ಭವಿ'ಯಾದ ಕೌಶಿಕನಿಗೆ ಸಹಿಸದೆ, ಬೋನಿನಲ್ಲಿ ಬಿದ್ದ ಹುಲಿಯಂತೆ ಮನದಲ್ಲೇ ಕುದಿಯುತ್ತಿದ್ದನು. ಕೊನೆಗೂ ಅಕ್ಕ ಕೌಶಿಕನನ್ನು ತ್ಯಜಿಸಿಯೇ ಹೋದಳು. ಕೌಶಿಕನು ಒಮ್ಮೆ ಪೂಜಾಸಿರತಳಾದ ಅಕ್ಕನನ್ನು ಕಾಮುಕ ಭಾವದಿಂದ ಕೆಣಕಿದಾಗ, ಆತನನ್ನು 'ಕೊಟ್ಟ ವಚನವ ನೀನುಳಿಸಿಕೊಳಲಿಲ್ಲ'ವೆಂದು ಹೇಳಿ ತ್ಯಜಿಸಿ ಹೋದಳು.

ಆಧ್ಯಾತ್ಮಿಕ ಜೀವನ

ಕೌಶಿಕನ ಅರಮನೆಯನ್ನು ತ್ಯಜಿಸಿದ ಅಕ್ಕ ಪ್ರಾಪಂಚಿಕ ಆಸೆಗಳೆಲ್ಲವನ್ನು ಬಿಟ್ಟು ಬಿಟ್ಟಳು. 'ಚನ್ನಮಲ್ಲಿಕಾರ್ಜುನನಂಗೆ ಜಗವೆಲ್ಲ ಕಣ್ಣಾಗಿರಲು ಮುಚ್ಚು ಮರೆಸುವುದೇ!' ಎಂದು ಉಡಿಗೆತೊಡಿಗೆಯನ್ನು ಸಹಾ ಪರಿತ್ಯಜಿಸಿದಳು!

ಹಸಿವಾದೊಡೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆಹಳ್ಳ ಬಾವಿ
ಗಳುಂಟು
ಶಯನಕ್ಕೆ ಪಾಳುದೇಗುಲಗಳುಂಟು
ಚನ್ನಮಲ್ಲಿಕಾರ್ಜುನಯ್ಯಾ!
ಆತ್ಮ ಸಂಗಾತಕ್ಕೆ ನೀನೆನಗುಂಟು!

—ಎಂದು ಊಟ ವಸತಿಗಳ ಹಂಬಲವನ್ನು ತೊರೆದಳು. ತನ್ನ ಸಾಧನೆ ಆತ್ಮಾನುಸಂಧಾನಗಳಿಂದ ರಾಗಭೋಗಾದಿಗಳನ್ನು ಗೆದ್ದು ಯೋಗದ ಮಾರ್ಗವನ್ನು ಹಿಡಿದಳು. ಅಕ್ಕನಲ್ಲಿದ್ದ ವೈರಾಗ್ಯ ಸ್ವಭಾವ ವೈರಾಗ್ಯ. ಮನಸ್ಸಿನಲ್ಲಿ ಮೊದಲಿನಿಂದಲೂ ಸುಪ್ತವಾಗಿದ್ದ ವೈರಾಗ್ಯ ಯಾವುದೋ ಒಂದು ಸಂದರ್ಭದಲ್ಲಿ ಸ್ಫೂರ್ತಿಗೊಂಡು ಪ್ರಾಪಂಚಿಕ ಆಶೆ—ಆಮಿಷಗಳನ್ನು ಗೆಲ್ಲುವ ಸ್ವಭಾವ ಜನ್ಯ ವೈರಾಗ್ಯವೇ ಅಕ್ಕನಲ್ಲಿದ್ದುದು. ಮುಂದೆ ಅಕ್ಕ ತನ್ನ ನಲ್ಲ—ಚನ್ನಮಲ್ಲಿಕಾರ್ಜುನನನ್ನು ಅರಸಿಕೊಂಡು ಬಗೆಬಗೆಯಾಗಿ ವಿಲಾಪಿಸುವಳು.

"ಹಗಲು ನಾಲ್ಕುಜಾವ ನಿಮ್ಮ
ಕಳವಳದಲಿದ್ದೆ, ನೋಡಯ್ಯ
ಇರುಳು ನಾಲ್ಕುಜಾವ ನಿಮ್ಮ ವಿಕಳಾವಸ್ಥೆಯಲ್ಲಿರ್ದೆ, ನೋಡಯ್ಯ
ಇರುಳು—ಹಗಲು ನಿಮ್ಮ ಕಳವಳ
ದಲ್ಲಿ ಮರೆದೊರಗಿದೆನಯ್ಯ
ಚನ್ನಮಲ್ಲಿಕಾರ್ಜುನಾ, ನಿಮ್ಮೊಲುಮೆ
ನಟ್ಟು ಹಸಿವು,ತೃಷೆ,ನಿದ್ರೆಯ ಮರೆತೆನ."

—ಎಂದು ಪ್ರಲಾಪಿಸಿದ್ದಾಳೆ.

ಅನಂತರ ಅಕ್ಕ ಕಲ್ಯಾಣ ಪಟ್ಟಣಕ್ಕೆ ತೆರಳಿದಳು. ಅಲ್ಲಿ ಬಸವ, ಅಲ್ಲಮ, ಸಿದ್ಧರಾಮಾದಿಶರಣರ ಸಂಗದಿಂದ ಅನೇಕ ವಿಷಯಗಳನ್ನೂ ಮಹತ್ವದ ಸಂಗತಿಗಳನ್ನೂ ಅರಿತಳು. ಅದರಲ್ಲೂ ಬಸವನನ್ನು 'ಗುರು' ಎಂದು ಭಾವಿಸಿ, ಅವನ ಸಹವಾಸದಲ್ಲಿ ಭಕ್ತಿಯ ಸಾಂಪ್ರದಾಯವನ್ನು ಅರಿತು ಧನ್ಯಳಾದಳು. ತನಗೆ ತೋರಿದ ಸಂದೇಹವನ್ನು 'ಅನುಭವ ಮಂಟಪ'ದಲ್ಲಿ ಹೇಳಿ ಅದಕ್ಕೆ ತಕ್ಕ ಉತ್ತರವನ್ನು ಪಡೆದುಕೊಳ್ಳುವಳು. ಹೀಗೆ ಅಕ್ಕ ಇವರ ಸಹವಾಸದಲ್ಲಿ 'ತನ್ನಲ್ಲಿಯೇ ಪರಮಾತ್ಮನು ನೆಲಸಿಹ'ನೆಂದು ಅರಿತುಕೊಂಡಳು. ಅಂತೆಯೇ

ನೆಲದ ಮರೆಯ ನಿಧಾನದಂತೆ
ಫಲದ ಮರೆಯ ರುಚಿಯಂತೆ
ಶಿಲೆಯ ಮರೆಯ ಹೇಮದಂತೆ
ತಿಲದಮರೆಯ ತೈಲದಂತೆ
ಭಾವದ ಮರೆಯ ಬ್ರಹ್ಮವಾಗಿಪ್ಪ
ಚನ್ನಮಲ್ಲಿಕಾರ್ಜುನನ ನಿಲವನಾರು
ಅರಿಯಬಾರದು

—ಎಂದಿದ್ದಾಳೆ. ಕಲ್ಯಾಣದಲ್ಲಿ ತನ್ನ ಹೃದಯ ಸಂಸ್ಕಾರವನ್ನು ಪಡೆದ ಅಕ್ಕ ತರುವಾಯ ಶ್ರೀ ಶೈಲಕ್ಕೆ ಹೊರ

(೯ನೇ ಪುಟ ನೋಡಿರಿ)

ಹಂಗೇರಿಯನರು ಇಂಗ್ಲಿಷನ್ನು ಕಲಿಯುತ್ತಿದ್ದಾರೆ.

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್, ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2-00.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ। ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಧರ್ಮದ ಮೂಲ

ಅಹಿಂಸೆಯೇ ಸರ್ವ ಧರ್ಮಗಳಿಗೆ ಮೂಲ

ವಿಶ್ವಶಾಂತಿಗೆ ಅಹಿಂಸೆಯೊಂದೇ ಕಾರಕ; ಎಂತಲೇ ಅಹಿಂಸಾ ಪರಮೋಧರ್ಮ.

ಪ್ರಚಲಿತ ಪ್ರಪಂಚದಲ್ಲಿ ಹಿಂಸೆಯು ತನ್ನ ಪ್ರಖಂಡ ಸಾಮ್ರಾಜ್ಯವನ್ನು ಸ್ಥಾಪಿಸಿದೆ ಎಂಬುದು ನಿರ್ವಿವಾದ. ಒಂದು ರಾಷ್ಟ್ರವು ಇನ್ನೊಂದನ್ನು, ಒಂದು ಜಾತಿ ಮತ್ತೊಂದನ್ನು, ಒಬ್ಬ ಮಾನವನು ಇನ್ನೊಬ್ಬ ಮನುಷ್ಯನನ್ನು ಹರಿದು ತಿನ್ನಲು ತಹತಹಪಡುತ್ತಿರುವುದನ್ನು ನಾವು ನಮ್ಮ ನಾಲ್ಕು ಸುತ್ತೂ ನೋಡಬಹುದು. ಇಟೇಲಿಯನರು ಅಬಿಸೀನಿಯಾದಲ್ಲಿ, ಜಾಪಾನೀಯರು ಚೀನದಲ್ಲಿ ಹತ್ತು-ಹನ್ನೈದು ವರ್ಷಗಳ ಹಿಂದೆ ಎಷ್ಟು ಜನರನ್ನು ಕೊಂದರು! ದ್ವಿತೀಯ ಲೋಕ ಯುದ್ಧದ ಅವಸರದಲ್ಲಿ ಅದೆಷ್ಟು ಪ್ರಖಂಡ ಹತ್ಯಾಕಾಂಡವು ನಡೆಯಿತು! ಇತ್ತೀಚೆಗೆ ಹಂಗೇರಿಯಲ್ಲಿ ರಶ್ಯವೂ ಟಿಬೇಟದಲ್ಲಿ ಚೀನವೂ ಮಾಡಿದ ಕಾರುಬಾರು ಅಲ್ಲಿವೆನ್ನುವುದು ಸಾಧ್ಯವೆ? ಶ್ರೀಮಂತರು ಶ್ರಮಜೀವಿಗಳ, ಮಾಲೀಕರು ಕರ್ಮಜೀವಿಗಳ ಚರ್ಮ ಸುಲಿಯುತ್ತಿರುವುದು ನಮ್ಮ ಕಣ್ಣಿಗೆ ಕಟ್ಟುತ್ತಿದೆ. ಪಶು ಪಕ್ಷಿಗಳ ವಧೆಯಾದರೂ ಇಂದು ಸಾಮಾನ್ಯತರವಾದ ಮಾತೇ ಆಗಿಬಿಟ್ಟಿದೆ; ಮಾಂಸಾಹಾರಿ ವ್ಯಕ್ತಿಗಳು ತಮ್ಮ ಉದರಪೂರ್ತಿಗಾಗಿ ಅದೆಷ್ಟೋ ಪಶು ಪಕ್ಷಿಗಳ ಹತ್ಯೆಗೆ ನಿತ್ಯ ಕಾರಣರಾಗುತ್ತಾರೆ. ಧಾನ್ಯಗಳು, ಹಾಲು, ಕಂದ ಮೂಲಗಳು, ಫಲಗಳ ಯಥೇಚ್ಛವಾಗಿದ್ದರೂ ಅವನ್ನು ಬಿಟ್ಟು ಪ್ರಾಣಿಗಳ ಪ್ರಾಣಾಪಹರಣ ಮಾಡುವ ಈ ನರರೂಪಿ ಹಿಂಸ್ರ ಪಶುಗಳಿಗೆ ಧಿಕ್ಕಾರವಿರಲಿ ಎನ್ನುವವರೂ ಇಂದು ಇಲ್ಲದಿಲ್ಲ. ಆದರೆ, ಅವರ ಈ ಧಿಕ್ಕಾರ ಅರಣ್ಯರೋದನವಾಗಿ ಮಾತ್ರ ಪರಿಣಮಿಸುತ್ತಿದೆ! ಇಂದಿನ ಯುಗ ಕಲಿಯುಗವೂ ಅಲ್ಲ; ಕರ್ಮಯುಗವೂ ಅಲ್ಲ; ಹಿಂಸಕ ಯುಗವಾಗಿದೆ. ಆದುದರಿಂದಲೇ ಬಹಳ ದೊಡ್ಡ ಘಾತಕ ಯಂತ್ರಗಳು ಸಿದ್ಧವಾಗಿ ಕ್ಷಣಮಾತ್ರದಲ್ಲಿ ಸಹಸ್ರಾರು ಪ್ರಾಣಗಳನ್ನು ಅಪಹರಿಸಲು ಬಾಯಿ ತೆರೆದುಕೊಂಡಿರುತ್ತವೆ. ಇಂತಹ ಭೀಕರ ವಾತಾವರಣದಲ್ಲಿ ಅಹಿಂಸೆಯ ಮಾತೆತ್ತುವುದೆಂದರೆ, ಕೋಣನ ಮುಂದೆ ಕಿನ್ನರಿ ಬಾರಿಸುವುದಕ್ಕಿಂತಲೂ ಮೂರ್ಖತನವಲ್ಲವೆ?

ಇಂದು ಯಾರೊಬ್ಬರೂ ಅಹಿಂಸಾದೇವಿಯ ಪೂಜಾರಿಯಾಗಿ ಉಳಿದಿಲ್ಲ, ಆದರೆ, ಇದರಿಂದ ಅಹಿಂಸೆಯ ಮಹತ್ವ ಅಥವಾ ಗೌರವವು ಕುಂದಿದೆಯೆ? "ಅಹಿಂಸಾ ಪರಮೋ ಧರ್ಮಃ" ಎಂಬುದು ತ್ರೈಕಾಲಿಕ ಸತ್ಯ. ಪ್ರಪಂಚದಲ್ಲಿ ಇದುವರೆಗೆ ಹಲವಾರು ಧರ್ಮಗಳು ಹುಟ್ಟಿ ಬೆಳೆದು ಬಂದಿವೆ. ಆದರೆ, ಇವೆಲ್ಲವುಗಳಲ್ಲಿಯೂ ಅಹಿಂಸೆಗೆ ಅಗ್ರಗಣ್ಯ ಸ್ಥಾನವನ್ನೇ ಅವುಗಳ ಸಂಸ್ಥಾಪಕರು ಇತ್ತಿರುತ್ತಾರೆ ಎಂಬುದನ್ನು ಅವಶ್ಯ ಗಮನಿಸಬೇಕು. ಕ್ರೈಸ್ತ ಧರ್ಮ, ಬೌದ್ಧ ಧರ್ಮ, ಜೈನ ಧರ್ಮ ಅಥವಾ ವೈದಿಕ ಧರ್ಮವೇ ಇರಲಿ, ಎಲ್ಲವೂ ದಯಾಮೂಲ ಧರ್ಮಗಳೇ ಆಗಿವೆ; ಆದುದರಿಂದಲೇ ಬಸವೇಶ್ವರನು ಕಂಠೋಕ್ತವಾಗಿ "ದಯವಿಲ್ಲದ ಧರ್ಮವಾವುದಯ್ಯಾ? ದಯವೇ ಧರ್ಮದ ಮೂಲವಯ್ಯಾ" ಎಂದು ಸಾರಿದ್ದಾನೆ. ಧರ್ಮದ ಆದಾವ ಅಂಗವೇ ಇರಲಿ; ಅವೆಲ್ಲವೂ ಅಹಿಂಸೆಗೆ ಸಮಾನವಾದ ಸ್ಥಾನವನ್ನು ಪಡೆದಿಲ್ಲವೆಂಬುದು ಸುವೇದ್ಯ. ಪರಮಾತ್ಮನು ಎಲ್ಲ ಜೀವರಾಶಿಯನ್ನೂ ಸೃಷ್ಟಿಸಿದ ಹಾಗೆ, ಅವುಗಳ ಜೀವಕ್ಕೆ ವೇದನೆಯನ್ನು ಕೊಡಲು ಮತ್ತು ಅವುಗಳ ಜೀವಾಪಹಾರ ಮಾಡಲು ನಮಗೆ ಅಧಿಕಾರವೆಲ್ಲಿಯದು? ಆದುದರಿಂದ, ಜೀವಹಿಂಸೆ ಮಾಡುವುದು ಪರಮಾತ್ಮ ದ್ರೋಹಕ್ಕೆ ಸಮ. ನಮಗೆ ಯಾವ ಪ್ರಕಾರದ ಕಷ್ಟವನ್ನಾಗಲೀ ಹಾನಿಯನ್ನಾಗಲಿ ಒದಗಿಸದ ನಿಷ್ಪಾಪಿ ಪ್ರಾಣಿಗಳನ್ನು ನಿಷ್ಕರುಣೆಯಿಂದ ಕೊಲ್ಲುವುದು ಮಾನವತೆಯ ದೃಷ್ಟಿಯಿಂದಲೂ ಅಸಹನೀಯವಾದುದು. ಹಿಂಸೆಗೆ ಸರಿಸಮಾನವಾದ ಘೋರ ಪಾಪವು ಬೇರೆ ಯಾವುದೂ ಇರಲಾರದು.

ಆತ್ಮೋತ್ಥಾನದ ಉತ್ತಮ ಸಾಧನ — ಅಹಿಂಸೆ. ಮಾನವನು ಅಹಿಂಸಾವ್ರತವನ್ನು ಪರಿಪಾಲಿಸಿಕೊಂಡು ಬಂದರೆ ಆತನು ಉನ್ನತಿಯ ಪಥದತ್ತ ಪಾದಾರ್ಪಣೆ ಮಾಡುತ್ತಿರುವನೆಂದೇ ಅರ್ಥ. ಪರಮಾತ್ಮನು ಸೃಜಿಸಿದ ಜೀವಕೋಟಿಗಳನ್ನು ಪ್ರೀತಿಸುವುದೇ ಆತನನ್ನು ಆರಾಧಿಸುವ ಉತ್ತಮೋತ್ತಮ ವಿಧಾನ. ಪರಮಾತ್ಮನ ಅಸ್ತಿತ್ವವಿಲ್ಲದಿರುವ ಎಡೆಯಿಲ್ಲವೆಂಬುದು ನಿಜವಾದರೆ, ಅಖಂಡ ವಿಶ್ವವನ್ನೂ ಪ್ರೇಮದಿಂದ ಕಾಣುವುದೇ ಪರಮಾತ್ಮೋಪಾಸನೆ. ಇಂತಹ "ವಸುಧೈವ ಕುಟುಂಬಕಂ" ಆಗಿರುವವನನ್ನು ಪರಮಾತ್ಮನೂ ಪ್ರೀತಿಸುತ್ತಾನೆ; ಆತನ ಆತ್ಮೋತ್ಸರ್ಗವಾಗುವಂತೆ ಸಗುತ್ತಾನೆ.

ಅಹಿಂಸೆಯಿಂದ ಪಶು ಪಕ್ಷಿ ಸಮಾಜಕ್ಕೆ ಲಾಭವಾಗುವುದಲ್ಲದೇ ಮಾನವನಿಗೆ ಇದರಿಂದ ಆಗುವ ಕಲ್ಯಾಣವೂ ಅಲ್ಪವಲ್ಲ. ಅಹಿಂಸಾವಾದಿ ಮನುಷ್ಯನಿಂದಲೇ ಸಮಾಜದಲ್ಲಿ ಶಾಂತಿಸ್ಥಾಪಿತವಾಗುವುದು, ಇಂತಹನು ಸಮಾಜದಲ್ಲಿ ಕಾಣಿಸಿಕೊಳ್ಳುವ ಪಾರಸ್ಪರಿಕ ದ್ವೇಷ, ಈರ್ಷ್ಯೆ, ಹೊಡೆದಾಟ, ಬಡಿದಾಟ — ಮೊದಲಾದುವನ್ನು ತಡೆಹಿಡಿದು ಶಾಂತಿಸ್ಥಾಪಿಸಬಲ್ಲನು ಇವನ ಸಂಪರ್ಕದಲ್ಲಿ ಸುಳಿಯುವವರೂ ಇವನಿಂದ ಪ್ರಭಾವಿತರಾಗಿ ಸುಧಾರಿಸತೊಡಗುತ್ತಾರೆ. "ಒಳ್ಳಿದರ ಒಡನಿರ್ದ ಕಳ್ಳನೊಳ್ಳಿದನಕ್ಕು" ಅಲ್ಲವೆ? ಓರ್ವ ಹಿಂಸಾವಾದಿಯೊಡನೆ ಸಂಬಂಧ ಬೆಳೆಸಿದರೆ, ಎಲ್ಲರೂ ಹಿಂಸಾವಾದಿಗಳಾಗಿಯೇ ಮಾರ್ಪಡುತ್ತಾರೆ. "ಒಳ್ಳಿದನು ಕಳ್ಳನೊಡಸೇರೆ ಆವ ಶುದ್ಧ ಕಳ್ಳನೇ ಅಕ್ಕು." ಆದುದರಿಂದ ಅಹಿಂಸಾವಾದಿಯು ಉದಿಸಿದ ಸಮಾಜವು ಅಹಿಂಸೆಯನ್ನೇ ನೆಮ್ಮಿ ಕಲ್ಯಾಣ ಹೊಂದುವುದು,

ಜೀವನದಲ್ಲಿ ಸುಖ ಶಾಂತಿ ಪ್ರಾಪ್ತಿಯಾಗಲು ಅಹಿಂಸಾಪಾಲನೆಯೇ ತಾರಕ. ಅಹಿಂಸಾವಾದಿಗೆ ವಿಶ್ವದಲ್ಲಿ ಒಬ್ಬನೂ ಶತ್ರುವಿರಲಾರನು; ಅವನು ಯಾರೊಡನೆಯೂ ಕಾದಾಡಲಾರನು; ಒಂದು ವೇಳೆ ಪರರು ಅವನನ್ನು ಹಿಂಸಿಸಿದರೂ ಆತನು ಶಾಂತಮನಸ್ಕನಾಗಿ ಅದನ್ನು ಸಹಿಸಿಕೊಳ್ಳುವನು ಆತನಲ್ಲಿ ಪ್ರತಿಹಿಂಸೆಯ ಭಾವನೆಯು ಎಂದೂ ಮೂಡಿಕೊಳ್ಳದು. ಸಹನಾಶಕ್ತಿಯಿಂದಾಗಿ ಆತನ ಜೀವನವು ಸುಖಮಯವಾಗಿ ಪರಿಣಮಿಸುವುದು.

ಪ್ರಪಂಚದಲ್ಲಿ ಅನೇಕ ಅಹಿಂಸಾವಾದಿಗಳು ಅವತರಿಸಿದ್ದು, ಅವರೆಲ್ಲರ ಯಶೋಕೌಮುದಿಯು ಸರ್ವವ್ಯಾಪಿಯಾಗಿದೆ. "ನಿಮ್ಮ ಬಲದಕೆನ್ನೆಗೆ ಹೊಡೆದರೆ, ಅವನಿಗೆ ಎಡದ ಕೆನ್ನೆಯನ್ನೂ ತೋರಿಸಿರಿ" ಎಂದ ಯೇಸುಕ್ರಿಸ್ತ. ಇದು ಸಹನಾಶಕ್ತಿಯ ಸಿದ್ಧಾಂತವಲ್ಲವೆ? ಯಜ್ಞ ಯಾಗಗಳ ಹೆಸರಿನಲ್ಲಿ ಪಶುಪ್ರಾಣಿಗಳನ್ನು ಬಲಿಯೊಯ್ಯುವುದನ್ನು ವಿರೋಧಿಸಿ ನಾಸ್ತಿಕ ಸಂಪ್ರದಾಯಿಯೆಂದು ಕೀರ್ತಿಗಳಿಸಿದ ಗೌತಮ ಬುದ್ಧನ ಪ್ರಾಣಿದಯೆ ಕಡಿಮೆಯೆ? ಮಹಾವೀರನು ದಯಾಮೂಲ ಧರ್ಮ ಜೈನ ಧರ್ಮಸಂಸ್ಥಾಪಕನು. ನೀರನ್ನೂ ಸೋದಿಸಿ ಕುಡಿಯುವುದು; ದೀಪ ಹಚ್ಚದೆ ಇರುವುದು, ಬಾಯಿಗೆ ಬಟ್ಟೆ ಕಟ್ಟಿಕೊಂಡಿರುವುದು ಅವಶ್ಯವೆಂದು ಈತ ಪರಿಗಣಿಸಿದನು. ನಮ್ಮ ಕಾಲದವರಾದರೂ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಅಹಿಂಸೆಯ ಪರಮ ಪೂಜಾರಿಯಾಗಿದ್ದರು. ಅಹಿಂಸಾ ಶಸ್ತ್ರದಿಂದಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಫಲತೆ ಪಡೆದರು. ಅದುವರೆಗೆ ಅಹಿಂಸಾತ್ಮಕ ಯುದ್ಧವೆಲ್ಲಿಯೂ ನಡೆದಿರಲಿಲ್ಲ. ವಿಶ್ವಶಾಂತಿಗೆ ಅಹಿಂಸೆಯೊಂದೇ ಸಾಧನವೆನ್ನುತಿದ್ದರವರು.

ಜೀವನದಲ್ಲಿ ಅಹಿಂಸೆಯ ಮಹತ್ವ ಪರ್ಯಾಪ್ತವಾಗಿದೆ. ಅಹಿಂಸಾಚರಣೆಯಿಂದ ವ್ಯಕ್ತಿ ಮಾತ್ರವಲ್ಲದೇ ಸಮಾಜವೂ ಮಂಗಲಮಯವಾಗುತ್ತದೆ. ವಿಶ್ವ ಮೈತ್ರಿ ಸ್ಥಾಪನೆಗಿದು ಅತ್ಯಂತಾವಶ್ಯಕ. ಎಲ್ಲ ಜೀವಗಳೊಡನೆಯೂ ಮಧುರ ಪ್ರೇಮದಿಂದ ವರ್ತಿಸುವುದರಲ್ಲಿಯೇ ನಮ್ಮ ಮಾನವತೆಯ ಗುಟ್ಟು ಅಡಗಿದೆ. ಆದುದರಿಂದಲೇ ಜೀವನದಲ್ಲಿ ಅಹಿಂಸಾ ಪರಿಪಾಲನೆಯನ್ನು ಮಾಡುವವನು ಆದರ್ಶ ಪುರುಷನಾಗುವನು.

— ಗೋರಾ.

ಅಮೇರಿಕೆಯ ರಾಜ್ಯಾಂಗ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸಿ— ಜಿನೀವಾದಲ್ಲಿ ಇತ್ತೀಚೆಗೆ ಸೇರಿದ ಪೂರ್ವ-ಪಶ್ಚಿಮ ರಾಷ್ಟ್ರಗಳ ವಿದೇಶೀ ಮಂತ್ರಿಗಳ ಸಮ್ಮೇಳನದ ಅಧ್ಯಕ್ಷಸ್ಥಾನ ವಹಿಸಿದ್ದ ಶ್ರೀ ಕ್ರಿಶ್ಚಿಯನ್ ಹರ್ಟರ್

ಮದುವೆಗಳು ಜರಗತಕ್ಕ ಸಮಯವು ಸಮೀಪಿಸಿದೆ;

'ಮದುವೆ ಸೀರೆ'

ಇದೀಗ ಪ್ರಕಟವಾಗಿದೆ!

ಜೀವನದ ಬೇರೆ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

CANARA BANK
JUBILEE EDUCATION FUND
LOAN SCHOLARSHIPS

Under the arrangement with the Canara Bank Jubilee Education Fund, the Canara Bank grants loans to students of outstanding merit who need financial assistance to prosecute higher technical education. Depending on their needs, loans upto Rs. 1000/- per year are granted.

For prescribed application form, apply to the Secretary, Canara Bank Jubilee Education Fund, 110-112 Silver Jubilee Park Road, Bangalore-2, with Re. 1/- by M. O.

Application should reach the Fund by 30th June.

Selection will be finalised by July end and loans will be granted by the

CANARA BANK LIMITED
(Estd: 1906)

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Director of public Instruction, Madras.

ಸತ್ಯದಿಂದ ಚರಿತ್ರದಲ್ಲಿ ಬಲವು ಮೂಡುತ್ತದೆ; ವಿಶ್ವಾಸ ಬೆಳೆಯುತ್ತದೆ; ಕಠೋರತಮ ಹೃದಯದಲ್ಲಿಯೂ ಕೋಮಲತೆ ಮತ್ತು ದಯೆಗಳು ಸಂಚರಿಸ ತೊಡಗುತ್ತವೆ. ಆದುದರಿಂದ ಸತ್ಯವನ್ನು ಯಾವ ಸಮಯದಲ್ಲೂ ಬಿಡಬಾರದು.

NAVAYUGA

Founder:—

A. B. SHETTY,

Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೨೧-೫-'೫೯	೩೬

ಕೇರಳದಲ್ಲಿ....

ಶ್ರೀ ಜಯಪ್ರಕಾಶನಾರಾಯಣರು ಪಕ್ಷ ಸಂಗಡಗಳಿಗೆ ಬಲಿಬೀಳದ ಸರ್ವೋದಯ ನಾಯಕರು. ಅವರು ಇತ್ತೀಚೆಗೆ ಕೆಂಪು ಕೇರಳದಲ್ಲಿ ಸಂಚಾರವನ್ನು ಕೈಗೊಂಡಿದ್ದು, ಕೇರಳದ ನಿಜಸ್ಥಿತಿಯನ್ನು ಕಣ್ಣಾರೆ ಕಂಡು ಅದು ಎತ್ತ ಸಾಗಿದೆ ಎಂದು ಸುಸ್ಪಷ್ಟಪಡಿಸಿದ್ದಾರೆ. ಕೇರಳದ ಕಮ್ಯುನಿಸ್ಟ್ ಸರಕಾರವು ರಾಜ್ಯದ ಪ್ರಜೆಗಳ ಹಾಲಹಣಾಲೆಗಳಿಗೆ ಈಯುವುದಕ್ಕಿಂತ ಗುರುತರವಾಗಿ ತನ್ನ ಪಕ್ಷದ ಅಭಿವೃದ್ಧಿ ಮತ್ತು ಬಲಸಂವರ್ಧನೆಯತ್ತ ಗಮನವೀಯುತ್ತಿದ್ದು ಪ್ರಜಾಪ್ರಭುತ್ವದ ಅಣಕವೇ ಅಲ್ಲಿ ನಡೆದಿದೆ. ಕಮ್ಯುನಿಸ್ಟನಲ್ಲದವನಿಗೆ ಕೇರಳದಲ್ಲಿ ಇರುವುದೇ ತ್ರಾಸವಾಗಿದೆ; ಏಕೆಂದರೆ, ಕಮ್ಯುನಿಸ್ಟ್ ವಿರೋಧಿಗಳನ್ನು ಹತ್ತಿಕ್ಕುವುದಕ್ಕೆ ಕಮ್ಯುನಿಸ್ಟ ಸರಕಾರ ಕಂಕಣಬದ್ಧವಾಗಿರುವಂತೆ ಗೋಚರಿಸುತ್ತದೆ ಎಂದು ಮುಂತಾಗಿ ಶ್ರೀ ಜಯಪ್ರಕಾಶರು ಅಭಿಪ್ರಾಯಪಟ್ಟಿದ್ದಾರೆ. ಆದರೆ, ವಿಶಾಲ ಭಾರತದ ಸಣ್ಣ ರಾಜ್ಯ ಕೇರಳದ ಮುಖ್ಯ ಮಂತ್ರಿ ಶ್ರೀ ನಂಬೂದರಿಪಾದರು ಇಂತಹ ಪಕ್ಷಾತೀತ ಸರ್ವೋದಯ ನಾಯಕರ ಮಾತುಗಳನ್ನು ಪಕ್ಷಪಾತಪೂರ್ಣವೆಂಬುದಾಗಿ ಉಲ್ಲೇಖಿಸಿರುವುದರಿಂದ ಕಮ್ಯೂನಿಸ್ಟರ ಬಣ್ಣವೇ ಬಯಲಾಯಿತು. ತಾನು ಯಾವ ಪಕ್ಷಕ್ಕೂ ಅಂಟಿಕೊಂಡಿರುವುದಕ್ಕೆ ಇಷ್ಟಪಡದೆ, ಜನರೆಲ್ಲರ ಹಿತ ಬಯಸಿ ಸರ್ವೋದಯದ ಪಥವನ್ನು ಸ್ವೀಕಾರ ಮಾಡಿದ ಶ್ರೀ ಜಯಪ್ರಕಾಶರ ಅಭಿಪ್ರಾಯದಲ್ಲಿ ಪಕ್ಷಪಾತವನ್ನು ಕಂಡುಕೊಂಡ ನಂಬೂದರಿಪಾದರು ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಗಾಂಧಿಯವರ ಅಭಿಪ್ರಾಯವನ್ನು ಖಂಡಿಸಿರುವುದರಲ್ಲಿ ವಿಶೇಷವೇನೂ ಇಲ್ಲ. ಕೇರಳವನ್ನು ಸಂದರ್ಶಿಸಿ, ಅಲ್ಲಿನ ನೈಜ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಅದನ್ನು ಹೊರಗೆಡಹಿದ ಕಮ್ಯುನಿಸ್ಟೇತರ ವ್ಯಕ್ತಿಗಳೆಲ್ಲರೂ ವಿಮಂಚನೆಯನ್ನು ವ್ಯಕ್ತಪಡಿಸಿರುವಾಗ, ಕೇವಲ ಕಮ್ಯುನಿಸ್ಟರು ಮಾತ್ರ ಅಲ್ಲಿನ ಸ್ಥಿತಿಯನ್ನು ಪ್ರಶಂಸಿಸಿದರೆ, ಅದರಲ್ಲಿ ಪೊಳ್ಳು ಜಳ್ಳುಗಳು ಇಲ್ಲವೆಂದು ತಿಳಿಯುವಷ್ಟು ಜನತೆ ಮೂಢವಾಗಿರದು. ಎಂತಲೇ ಶ್ರೀ ನಂಬೂದರಿಪಾದರು ಕೇರಳದ ಸ್ಥಿತಿಯನ್ನು ಕಂಡು ಚಿಂತೆ ವ್ಯಕ್ತಪಡಿಸಿದವರೆಲ್ಲರ ಅಭಿಪ್ರಾಯವನ್ನು ವಿರೋಧಿಸುವುದೊಂದೇ ತನ್ನ ಪಕ್ಷದ ಸಂವರ್ಧನೆಗೆ ಸಹಾಯಕವೆಂದು ತಿಳಿದುಕೊಂಡಿದ್ದರೆ, ರಾಜ್ಯದ ಹಾಗೂ ರಾಷ್ಟ್ರದ ಹಿತದೃಷ್ಟಿಯಿಂದ ಇದು ಸರ್ವಥಾ ಮಹಾಪರಾಧವಾಗುವುದು ಎಂಬುದು ಸುವೇದ್ಯ.

ಈ ರೀತಿಯಾಗಿ ಬೇರೆಯವರ ಅಭಿಪ್ರಾಯಗಳನ್ನು ಹತ್ತಿಕ್ಕಲುಬಯಸಿ,ತಮಗನುಕೂಲವಾಗುವಂತೆ ವಾತಾವರಣವನ್ನು ನಿರ್ಮಿಸಿ ತಮ್ಮ ಬೇಳೆಯನ್ನು ಬೇಯಿಸುವ ಹಂಚಿಕೆಯ ಕಮ್ಯುನಿಸ್ಟರನ್ನು ಈಗ ಬಲವಾದ ವಿರೋಧವು ಕಾಡುತ್ತಿದೆ. ಕಮ್ಯುನಿಸ್ಟ್ ಆಡಳಿತೆಯಿಂದ ಜನತೆಗೆ ಕ್ಷೇಮವಿಲ್ಲ ಎಂಬುದನ್ನು ಜನತೆಯು ಕಂಡುಕೊಂಡಿರುವುದರಿಂದಲೇ ಎಲ್ಲ ವಿರೋಧಿಪಕ್ಷಗಳ ನೇತೃತ್ವದಲ್ಲಿ 'ಚಳವಳ'ವು ಸಂಘಟಿಸಲ್ಪಡುತ್ತಿದೆ. ಇದನ್ನು ಎದುರಿಸಲು ಕಮ್ಯುನಿಸ್ಟರು ತಮ್ಮ ಶಕ್ತಿಯೆಲ್ಲವನ್ನೂ ಕೇಂದ್ರೀಕರಿಸುವಲ್ಲಿಯೇ ನಿರತರಾಗಿದ್ದಾರೆ. ಅದರೊಂದಿಗೆ, ಸದ್ಯದ ಬೇಸಿಗೆ ಕಾಲದ ಬಿಡುವು ಮುಗಿದನಂತರ ತಮ್ಮ ಆಡಳಿತೆಯಲ್ಲಿರುವ ಶಾಲೆಗಳನ್ನು ತೆರೆಯದಿರಲು ಹೆಚ್ಚಿನ ಖಾಸಗಿ ಸಂಸ್ಥೆಗಳು ನಿರ್ಧರಿಸಿರುವುದರಿಂದ, ಇದೊಂದೂ ವಿವಂಚನಾತ್ಮಕ ಸಮಸ್ಯೆಯಾಗಿ ಪರಿಣಮಿಸಿದೆ. ಕೇರಳ ವಿಧಾನಸಭೆಯು ಬಹು ಪ್ರಯಾಸದಿಂದ ಮಂಜೂರು ಮಾಡಿ ರಾಷ್ಟ್ರಾಧ್ಯಕ್ಷರ ಅನುಮತಿಯನ್ನೂ ಕಷ್ಟದಿಂದ ಗಳಿಸಿ ಕಾನೂನು ಮಾಡಿಕೊಂಡಿರುವ ವಿದ್ಯಾನ್ವಯದ ಕೆಲವೊಂದು ನಿಯಮಗಳನ್ನಾದರೂ ರದ್ದುಗೊಳಿಸದೆ ಹೋದರೆ, ತಾವು ಶಾಲೆಗಳನ್ನು ತೆರೆಯುವುದಿಲ್ಲ ಎನ್ನುವವರ ಮಾತು ಅರ್ಥವಾಗುತ್ತಿಲ್ಲ, ಶ್ರೀ ನಂಬೂದರಿಯವರಿಗೆ. ಜನತೆಯಿಂದ ಸಾಮೂಹಿಕವಾಗಿ ಈ ಕಾಯದೆಯು ರೂಪುಗೊಳ್ಳುತ್ತಿರುವಾಗಲೇ ವಿರೋಧವು ಬಂದಿದ್ದರೂ ತಾಂತ್ರಿಕ ಬಲದಿಂದ ಅದೀಗ ಕಾಯದೆಯಾಗಿ ಪರಿಣಮಿಸಿದರೂ ಅದನ್ನು ವ್ಯವಹಾರಕ್ಕೆ ತರುವಲ್ಲಿ ಇಷ್ಟೊಂದು ಕಠಿನತೆಯೊದಗೀತು ಎಂದು ಕೇರಳ ಸರಕಾರ ಆಗ ಮನಗಂಡಿರಲಾರದು. ಸರಕಾರ ಮಾಡಿದುದು ಜನತೆಗೆ ಮೆಚ್ಚುಗೆಯಾಗಲಿ, ಆಗದೆ ಉಳಿಯಲಿ, ನಾವು ಕಾಯದೆ ಮಾಡಿಯೇ ಬಿಡುತ್ತೇವೆ – ಜನ ಆಗ ಕಣ್ಣುಮುಚ್ಚಿ ಒಪ್ಪಿಯೇ ಒಪ್ಪುತ್ತದೆ ಎಂದು ತಪ್ಪುತಿಳಿದರೆ, ಜನತೆ ಅಷ್ಟು ನಿಷ್ಕ್ರಿಯವಲ್ಲ ಎನ್ನಲೇಬೇಕಾಗುತ್ತದೆ. ಈ ಸಂಗತಿಯಲ್ಲಿ ಅಡಗಿರುವ ಗಂಭೀರ ಸತ್ಯವನ್ನು ಸ್ವಯಂ ನಂಬೂದರಿ ಪಾದರೇ ಕಂಡುಕೊಂಡಿದ್ದು, ಪ್ರಧಾನಮಂತ್ರಿ ನೆಹರು ಅವರಿಗೆ ಈ ಬಿಕ್ಕಟ್ಟಿನ ಪ್ರಸಂಗವನ್ನು ಉಸುರಿ, ಅವರ ಸಲಹೆ ಪಡೆಯಲು ನವದೆಹಲಿಗೆ ವಿಜಯಯಾತ್ರೆ ಹೊರಟಿದ್ದಾರೆ; ಆದರೆ, ರಾಜ್ಯಕ್ಕೆ ಸಂಬಂಧಪಟ್ಟ ವಿದ್ಯಾವಿಷಯದ ಬಗ್ಗೆ ಪ್ರಧಾನಿ ಏನಾದರೂ ಪರಿಹಾರವನ್ನು ಸೂಚಿಸುವರೆ? ಎಂಬುದು ಸಂದಿಗ್ಧವಾಗಿಯೇ ಇದೆ. ಕೇರಳ ಸರಕಾರವು "ಜನಾಪ್ರಿಯ"ವಾಗಿರುವುದಕ್ಕೆ ಈ ಮೊದಲೇ ಹಲವು ಪ್ರಸಂಗಗಳಿದ್ದು, ಇದೂ ಅವುಗಳ ಸಾಲಿಗೆ ಸೇರಿರುವುದು ಎಂಬುದು ಸತ್ಯ.

ಸಂಕ್ಷಿಪ್ತ ಸುದ್ದಿಗಳು

ಕಾಗದದ ಕಾರಖಾನೆ

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಸಂಸ್ಥಾಪಿಸಲ್ಪಟ್ಟ ಪಶ್ಚಿಮ ಕರಾವಳಿ ಕಾಗದ ಕಾರಖಾನೆಯನ್ನು ಕೇಂದ್ರೀಯ ಆರ್ಥಿಕ ಮಂತ್ರಿ ಶ್ರೀ ಮುರಾರಜಿ ದೇಸಾಯಿಯವರು ಉದ್ಘಾಟಿಸಿದರು. ಈ ಕಾರಖಾನೆಯಲ್ಲಿ ಪ್ರತಿ ವರ್ಷ ಹದಿನೆಂಟು ಸಾವಿರ ಟನ್ ಕಾಗದವು ತಯಾರಾಗುವುದು. ಇದನ್ನು ಕಟ್ಟಲು ಐದು ಕೋಟಿ ರೂಪಾಯಿಗಳು ಕರ್ಚಾಗಿರುತ್ತವೆ. ಕರಾವಳಿಯಲ್ಲಿ ಕಾಗದ ತಯಾರಿಕೆಗೆ ಆವಶ್ಯಕವಾದ ಕಚ್ಚಾ ಪದಾರ್ಥಗಳು ಹೇರಳವಾಗಿರುವುದರಿಂದ ಇನ್ನೂ ಅಧಿಕ ಸಂಖ್ಯೆಯಲ್ಲಿ ಕಾಗದದ ಕಾರಖಾನೆಗಳನ್ನು ಸ್ಥಾಪಿಸುವ ಅನುಕೂಲತೆಗಳಿವೆ.

ವೃತ್ತಿ ಮತ್ತು ತಾಂತ್ರಿಕ ಸಂಸ್ಥೆಗಳಲ್ಲಿ

ಮೈಸೂರು ಸರಕಾರವು ರಾಜ್ಯದಲ್ಲಿ ಹಿಂದುಳಿದವರ ವರ್ಗ ಮತ್ತು ಜಾತಿಗಳ ಯಾದಿಯನ್ನು ಈ ಮೊದಲೇ ಪ್ರಕಟಿಸಿದ್ದು ಸರಕಾರಿ ನೌಕರಿಯನ್ನು ಯಾವ ರೀತಿ ಹಂಚುವುದಾಗಿ ನಿರ್ಧರಿಸಿದ್ದು, ಈಗ ತಾಂತ್ರಿಕ ಮತ್ತು ವೃತ್ತಿಪರ ಕಾಲೇಜುಗಳಿಗೆ ಪ್ರವೇಶ ನೀಡುವ ಸಂಬಂಧದ ನಿರ್ಧಾರವನ್ನೂ ಬಯಲಿಗೆ ತಂದಿದೆ. ಇದರನ್ವಯ ಸೇಕಡಾ ೨೦ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೂ ಸೇಕಡಾ ೪೫ರಷ್ಟು ಹಿಂದುಳಿದ ಜಾತಿಯವರಿಗೂ ಉಳಿದ ಸೇಕಡಾ ೩೫ನ್ನು ಯೋಗ್ಯತೆಯ ಮೂಲಕ ಪಡೆಯುವವರಿಗೂ ಮೀಸಲಿಡಲಾಗುವುದು. ಮುಂದುವರಿದವರಿಗೆ ಇಂತಿಷ್ಟು ಪ್ರತಿಶತವೆಂಬ ನಿರ್ಧಾರ ಮಾತ್ರ ಆಗಿಲ್ಲ.

ಎಂ. ಪಿ. ಸಿ. ಸಿ. ಅಧಿವೇಶನ

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯು ಬಳ್ಳಾರಿಯಲ್ಲಿ ಸೇರಿ, ಸಹಕಾರಿ ಒಕ್ಕಲುತನ ಪದ್ಧತಿಯನ್ನು ಅನುಕರಿಸಲು ಪ್ರೋತ್ಸಾಹ ನೀಡುವ ನಾಗಪುರ ಕಾಂಗ್ರೆಸ್ ಗೊತ್ತುವಳಿಯನ್ನು ಸಮರ್ಥಿಸಿತು. ಇದಕ್ಕೋಸ್ಕರ ಸೇವಾ ಸಹಕಾರಿ ಸಂಘಗಳನ್ನು ಸ್ಥಾಪಿಸಬೇಕೆಂದೂ ಒಪ್ಪಲಾಯಿತು. ಮಂಡಲ ಕಾಂಗ್ರೆಸ್ ಸಮಿತಿಗಳಲ್ಲಿ ನವೋತ್ಸಾಹವನ್ನು ತುಂಬಿಸಬೇಕು. ಎಂ. ಪಿ. ಸಿ. ಸಿ. ಯನ್ನೇ ಸದ್ಯವೇ ಬೆಂಗಳೂರಲ್ಲಿ ನಡೆಯಲಿರುವ ಕಾಂಗ್ರೆಸ್‌ನ ೬೫ನೆ ಸಮ್ಮೇಳನದ ಸ್ವಾಗತ ಸಮಿತಿಯನ್ನಾಗಿ ಮಾರ್ಪಡಿಸಬೇಕೆಂಬ ಅಧಿಕೃತ ಗೊತ್ತುವಳಿಯನ್ನು ಸ್ವೀಕರಿಸಲಾಯಿತು. ೬೫ನೆ ಕಾಂಗ್ರೆಸ್ ಅಧಿವೇಶನಕ್ಕೆ ೨೫—೩೦ ಲಕ್ಷ ವೆಚ್ಚವಾಗಬಹುದೆಂದು ತಿಳಿಯುತ್ತದೆ.

ಒಡಿಸ್ಸದಲ್ಲಿ ಸಮ್ಮಿಶ್ರ ಸರಕಾರ

ಒಡಿಸ್ಸ ಸಂಸ್ಥಾನದ ನಾಯಕ ಡಾ| ಹರೆಕೃಷ್ಣ ಮೆಹತಾಬರ ಸಲಹೆಯಂತೆ ಅಲ್ಲಿ ಸಮ್ಮಿಶ್ರ ಸರಕಾರ ಸ್ಥಾಪಿಸಲು ಕಾಂಗ್ರೆಸ್ಸು ಒಪ್ಪಿಗೆಯಿತ್ತುದರಿಂದ, ಕಾಂಗ್ರೆಸ್—ಗಣತಂತ್ರ ಪರಿಷತ್ತುಗಳ ಸಮ್ಮಿಶ್ರ ಸರಕಾರವು ಸ್ಥಾಪನೆಯಾಗುವುದು. ಈ ಉಭಯಪಕ್ಷಗಳನಡುವೆ ಸರಕಾರದ ಸಾಮಾನ್ಯ ಧೋರಣೆಯ ಬಗ್ಗೆ ಒಪ್ಪಂದವಾಗಿರುವುದು. ಆದರೆ, ಎರಡೂ ಪಕ್ಷಗಳಿಗೆ ಸರಕಾರದಲ್ಲಿ ಸಮಾನ ಪ್ರಾತಿನಿಧ್ಯವಿರಬೇಕೆಂದೂ ನಿಶ್ಚಿತವಾಗಿದೆ. ಇದರನ್ವಯ ಡಾ| ಮೆಹತಾಬರು ಮುಖ್ಯ ಮಂತ್ರಿಯಾಗಿದ್ದು, ಎರಡೂ ಪಕ್ಷಗಳನ್ನು ಪ್ರತಿನಿಧೀಕರಿಸುವ ಒಬ್ಬೊಬ್ಬನನ್ನು ಮಂತ್ರಿಯಾಗಿ ನೇಮಿಸುವರೆಂದು ತಿಳಿಯುತ್ತದೆ. ಹೀಗಾದಲ್ಲಿ ಕೇವಲ ಮೂರೇ ಸದಸ್ಯರಿರುವ ಮಂತ್ರಿ ಸಂಪುಟವು ರಾಜ್ಯದ ಆಡಳಿತೆಯನ್ನು ನಿರ್ವಹಿಸುವುದು. ಕ್ರಮೇಣ ಆರು ಪಾರ್ಲಿಮೆಂಟರಿ ಕಾರ್ಯದರ್ಶಿಗಳನ್ನೂ ಆರಿಸಲಾಗುವುದೆಂದು ಡಾ| ಮೆಹತಾಬರು ಹೇಳಿದ್ದಾರೆ.

ಮಾತುಕತೆಯಲ್ಲಿ ಬಿಕ್ಕಟ್ಟು

ಬರ್ಲಿನ್ ಸಮಸ್ಯೆಯ ಬಗ್ಗೆ ಮಾತುಕತೆಯು ಪಾಶ್ಚಾತ್ಯ ರಾಷ್ಟ್ರ ಹಾಗೂ ರಶ್ಯಗಳ ನಡುವೆ ಮುಂದುವರಿಯುತ್ತಿದ್ದಂತೆ ಜರ್ಮನಿಯ ಏಕೀಕರಣ ಹಾಗೂ ಸಂಬದ್ಧ ಪ್ರಶ್ನೆಗಳಿಂದ ಇದನ್ನು ಬೇರ್ಪಡಿಸಲು ರಶ್ಯ ಯೋಜಿಸಿದರೆ, ಪಾಶ್ಚಾತ್ಯರು ಇದನ್ನು ಒಪ್ಪುವುದಿಲ್ಲ. ಆದುದರಿಂದ ಸದ್ಯದ ಈ ಸಮ್ಮೇಲನವು ನಿಷ್ಫಲವಾಗುವ ಶಂಕೆಯು ಕಾಣಿಸಿಕೊಂಡಿದೆ.

ಅಣ್ವಸ್ತ್ರ ಸ್ಫೋಟ ಸಂಧಾನ

ಅಂತರಿಕ್ಷದಲ್ಲಿ ನಡೆಸುವ ಅಣ್ವಸ್ತ್ರ ಸ್ಫೋಟ ಪ್ರಯೋಗ ಶೋಧಕಾರ್ಯದ ಬಗ್ಗೆ ಚಿಕ್ಕ ತಾಂತ್ರಿಕ ಚರ್ಚೆ ನಡೆಸಬೇಕೆಂದು ಪಶ್ಚಿಮ ರಾಷ್ಟ್ರಗಳು ಮಾಡಿದ ಸೂಚನೆಗೆ ರಶ್ಯದ ಪ್ರಧಾನಿ ಶ್ರೀ ನಿಕಿಟಾ ಕ್ರುಶ್ಚೇವರು ತಮ್ಮ ಒಪ್ಪಿಗೆಯನ್ನು ಸೂಚಿಸಿ ಅವುಗಳಿಗೆ ಪತ್ರ ಬರೆದಿರುವರೆಂದು ತಿಳಿಯುತ್ತದೆ.

ಆಯುರ್ವೇದ ಸಮ್ಮೇಳನ

೨೨ನೆ ಕರ್ನಾಟಕ ಆಯುರ್ವೇದ ಸಮ್ಮೇಳನವು ಉಡುಪಿ ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಕಾಲೇಜಿನಲ್ಲಿ ಇದೇ ತಾ. ೧೭, ೧೮ ಮತ್ತು ೧೯ರಂದು ಸೇರಿ, ಗೊತ್ತುಪಡಿಸಿದ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ಮುಗಿಸಿತು. ಸಮ್ಮೇಳನದ ಉದ್ಘಾಟಕರಾದ ಆರೋಗ್ಯ ಮಂತ್ರಿ ಡಾ| ಕೆ. ಕೆ. ಹೆಗ್ಡೆ, ವಸ್ತುಪ್ರದರ್ಶನದ ಉದ್ಘಾಟಕರಾದ ಶ್ರೀ ವಿಬುಧೇಶತೀರ್ಥ ಶ್ರೀಪಾದಂಗಳವರು ಮತ್ತು ಅಧ್ಯಕ್ಷ ಶ್ರೀ ವೈ ಪಾರ್ಥನಾರಾಯಣ ಪಂಡಿತರು ಆಯುರ್ವೇದದ ಮಹತ್ತಿಕೆಯನ್ನು ಸುಸ್ಪಷ್ಟವಾಗಿಯೇ ನಿರೂಪಿಸಿದ್ದಾರೆ. ಬಡ ಜನರ ದೇಶವಾದ ಭಾರತದಲ್ಲಿ ಬೆಲೆಯಲ್ಲಿ ಸುಲಭವಾಗಿರುವ ವೈದ್ಯದ ಆವಶ್ಯಕತೆ ಇದೆ. ಆಯುರ್ವೇದವು ಆಲೋಪಥಿಯು ಭಾರತಕ್ಕೆ ಬರುವುದಕ್ಕೆ ಸಾವಿರಾರು ವರ್ಷಗಳ ಮೊದಲಿನಿಂದಲೂ ಯೋಗ್ಯ ಚಿಕಿತ್ಸೆಯನ್ನು ಒದಗಿಸುತ್ತ ಬಂದಿದೆ. ಶಲ್ಯ ಚಿಕಿತ್ಸೆ (ಒಪರೇಶನ್)ಯೂ ಇದರಲ್ಲಿದ್ದು ಅಹಿಂಸೆಯತ್ತ ಭಾರತೀಯರ ಆಸಕ್ತಿ ಬೆಳೆಯುತ್ತ ಬಂದ ಕ್ರಿ. ಪೂ. ೬-೫ನೇ ಶತಮಾನಗಳಿಂದ ನಷ್ಟವಾಯಿತು. ಇಂದು ಆಯುರ್ವೇದದ ಉತ್ಥಾನಕ್ಕೆ ಸಂಶೋಧನೆ, ಆಧುನಿಕ ವೈದ್ಯ ಮತ್ತು ಪ್ರಾಚೀನ ವೈದ್ಯ ಪದ್ಧತಿಗಳ ಯೋಗ್ಯ ಸಂಯೋಜನೆ, ವ್ಯವಸ್ಥಿತವಾದ ಅಭ್ಯಾಸ ಪ್ರಣಾಳಿಗಳು ತುಂಬ ನೆರವಾಗುವುವು. ಸರಕಾರವು ಆಯುರ್ವೇದವನ್ನು ಬಲಪಡಿಸಲು ಆವಶ್ಯಕವಾದ ಕಾರ್ಯಕ್ರಮಗಳನ್ನು ಕೈಗೊಳ್ಳುವ ಆವಶ್ಯಕತೆ ಎದ್ದುತೋರುತ್ತದೆ.

ಅಲ್ಲಲ್ಲಿಯ ಸುದ್ದಿ ಸಾರ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರಿ ಪ್ರಗತಿ— ದ. ಕ. ಜಿಲ್ಲೆಯ ತನ್ನ ೬ ನಗಳ ಸಂಚಾರಾವಧಿಯಲ್ಲಿ ೧೧ ಸಂಕಗಳಿಗೆ ಂಕುಸ್ಥಾಪನೆ ಮಾಡಿ, ತಾ. ೧೪ರಂದು ತಮ್ಮ ವಾಸವನ್ನು ಕೊನೆಗೊಳಿಸುತ್ತಾ ಮೈಸೂರು ರ್ಕಾರದ ಕಾಮಗಾರಿ ಸಚಿವರಾದ ಶ್ರೀ ಚ್. ಎಂ. ಚನ್ನಬಸಪ್ಪನವರು, ದ. ಕ. ಜಿ ಸಾರಿಗೆ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿಯ ವಿವರಿಸುತ್ತಾ, ದ. ಕ. ಜಿಲ್ಲೆಯಲ್ಲಿ ಸದಾ ಲ ಹರಿಯುವ ನದಿಗಳಿದ್ದರೂ ಸಹ ಅವು ಳ ನೀರು ಅನಾವಶ್ಯ ವ್ಯಯವಾಗುವುದನ್ನು ರ್ಕಾರ ಮನಗಂಡು ಜಿಲ್ಲೆಯಲ್ಲಿ ಚಿಕ್ಕ ನೀ ವರಿ ಯೋಜನೆಗಳನ್ನು ಕೈಗೊಂಡಿದೆಯೆಂ ದರು. ಶ್ರೀಯುತರು ಮುಂದುವರಿಸುತ್ತಾ ಮ ಲೆನಾಡು ಪ್ರದೇಶದ ರಸ್ತೆಗಳ ದುಃಸ್ಥಿತಿಯ ನ್ನು ವಿವರಿಸಿ, ಅವುಗಳ ಊರ್ಜಿತ ಕೆಲಸಕ್ಕೆ ಸರ್ಕಾರ ವಿಶೇಷ ಗಮನ ಕೊಡುವುದೆಂದರು. ಪಶ್ಚಿಮ ಕರಾವಳಿ ರಸ್ತೆಯ ಅಭಿವೃದ್ಧಿ ಕಾರ್ಯ ಕ್ರಮವನ್ನು ಹೊರಪಡಿಸುತ್ತಾ ಈ ರಸ್ತೆಗಳ ದಾರಿಯಲ್ಲಿರುವ ಅನೇಕ ಹೊಳೆಗಳ ಸಂಕಗ ಳು ಈಗಾಗಲೆ ಮುಗಿದಿವೆ. ಇನ್ನೂ ಅನೇಕ ಸಂಕಗಳ ಕೆಲಸ ಪ್ರಾರಂಭವಾಗಿವೆ ಎಂದರು. ತಮ್ಮ ಜಿಲ್ಲಾ ಸಂಚಾರದಲ್ಲಿ ಜನರಿತ್ತ ಬೇಡಿಕೆ ಗಳ ಪೈಕಿ, ಬಸ್ರೂರು, ಬಾರ್ಕೂರು, ಮುಚ್ಚೂ ರು, ಸೀತಾನದಿ, ವಂಡ್ಸೆ, ಪಂಜತ್ತೂರುಗಳಲ್ಲಿ ಸಂಕಗಳನ್ನೂ, ಅರಸಿನಮಕ್ಕಿಯಲ್ಲೊಂದು ಮೋರಿಯನ್ನೂ ಬೇಗ ಕಟ್ಟಿಸಲಾಗುವುದೆಂದರು ಮೀನುಗಾರಿಗೆ ವಿಷಯವಾಗಿ ಹೇಳುತ್ತಾ ಸ ರ್ಕಾರ ಮೀನು ಹಿಡಿಯುವ ವಿಧಾನವನ್ನು ಅ ಭಿವೃದ್ಧಿ ಪಡಿಸುವುದರಿಂದ ಹಿಡಿದು ಅದರ ಮಾರಾಟಕ್ಕೆ ಉತ್ತಮ ಸಾಗಾಟದ ವ್ಯವಸ್ಥೆ ಒದಗಿಸುವಲ್ಲಿಯ ವರೆಗಿನ ಎಲ್ಲಾ ಸಹಾಯ ವನ್ನು ಮಾಡುವುದೆಂದರು. ತಮ್ಮ ವಿವರಣೆ ಯನ್ನು ಮುಕ್ತಾಯಗೊಳಿಸುತ್ತಾ ದ. ಕ. ಜಿ ಲ್ಲೆಯ ಜನ ಸಮ್ಮಲ್ಲಿಯ ಬುದ್ಧಿ, ಪ್ರಕೃತಿ, ಹಾಗೂ ಜನ ಸಂಪತ್ತನ್ನು ಸದುಪಯೋಗ ಪಡಿಸಿಕೊಳ್ಳುವರೆಂದು ಆಶಿಸಿದರು.

ಜತ್ತಿಯವರ ಚುನಾವಣಾ ಪ್ರಚಾರ— ಮೈಸೂರಿನ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ತಾ ೧೪ರಂದು ಮುಲ್ಕಿ—ಸುರತ್ಕಲ್ ಮತದಾರ ಕ್ಷೇತ್ರದ ಬಜ್ಪೆ, ಕಟೀಲು, ಪಣಂಬೂರು, ಸುರತ್ಕಲ್, ಹಳೆ ಯಂಗಡಿ, ಮುಲ್ಕಿ, ಹೆಜಮಾಡಿಗಳಲ್ಲಿ ಜರಗಿದ ಸಾರ್ವಜನಿಕ ಸಭೆಗಳಲ್ಲಿ ಕಾಂಗ್ರೆಸ್ಸಿನ ಚುನಾವಣಾ ಪ್ರಚಾರ ಭಾಷಣವಾಡುತ್ತಾ, ಗ್ರಾಮೀಣ ಜನತೆ ಸ್ವರಾಜ್ಯದ ನಿಜಸಾಫಲ್ಯವನ್ನು ಪಡೆ ಯಬೇಕಾದರೆ ಪ್ರತಿ ಗ್ರಾಮದಲ್ಲೂ ಗ್ರಾಮ ಪಂಚಾಯತು, ಹಾಗೂ ಸಹಕಾರಿ ಸಂಘಗಳು ಅವಶ್ಯವಾಗಿರಬೇಕೆಂದರು. ಸರಕಾರವು, ರೈತ ನಿಗೆ ಬೇಸಾಯದ ಅಭಿವೃದ್ಧಿ ವಿಷಯದಲ್ಲಿ ಸ ಹಾಯಮಾಡಲು ಸಹಕಾರಿ ಸಂಘಗಳನ್ನು ಪ್ರ ತಿ ಗ್ರಾಮದಲ್ಲೂ ಸ್ಥಾಪಿಸಲು ನಿರ್ಧರಿಸಿದೆ ಯೆಂದರು. ಮೈಸೂರು ಭೂಸುಧಾರಣಾ ಮ ಸೂದೆಯಲ್ಲಿ, ಇಲ್ಲಿನ ಅಳಿಯಸಂತಾನಿಗರಿಗೆ ತೊಂದರೆಯಾಗದಂತೆ ಸೂಕ್ತ ಬದಲಾವಣೆ ಮಾಡಲಾಗುವುದೆಂದು ಶ್ರೀ ಜತ್ತಿಯವರು ಆ ಶ್ವಾಸನೆಯಿತ್ತರು. ಸ್ವಾತಂತ್ರ್ಯ ಹೋರಾಟದ ಲ್ಲಿ ಹಾಗೂ ಸ್ವಾತಂತ್ರ್ಯಗಳಿಸಿದನಂತರ ಕಾಂ ಗ್ರೆಸ್ ಪಕ್ಷ ಸಾಧಿಸಿದ ಅನೇಕ ಕಾರ್ಯಗಳ ನ್ನವರು ವಿವರಿಸಿ, ಜನತೆ ಕಾಂಗ್ರೆಸ್‌ಪಕ್ಷಕ್ಕೇ ತಮ್ಮ ಸಹಕಾರವಿತ್ತು ಪ್ರೋತ್ಸಾಹಿಸಬೇಕೆಂ ದು ವಿನಂತಿಸಿಕೊಂಡರು. ಶ್ರೀಗಳಾದ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ; ಬಾಲಕೃಷ್ಣರಾವ್, ಎಂ. ಎಲ್. ಸಿ; ಡಾ| ನಾಗಪ್ಪಾಳ್ವ ಎಂ. ಎಲ್. ಎ. ಕಾಂಗ್ರೆಸ್ ಸ್ಪರ್ಧಿ ಶ್ರೀ ದೂಮಪ್ಪ ಮೊದಲಾದವರು ಸಭಾ ಭಾಷಣವಿತ್ತು ಕಾಂಗ್ರೆಸ್ಸಿಗೆ ಬೆಂಬಲವೀಯಬೇಕೆಂದು ಜನತೆ ಯನ್ನು ಕೇಳಿಕೊಂಡರು.

ಮಂಗಳೂರಿನಲ್ಲಿ ಮಂತ್ರಿ ಡಾ| ಕೆ. ಕೆ. ಹೆಗ್ಡೆ— ಮೈಸೂರು ಸರಕಾರದ ಆರೋಗ್ಯ ಸಚಿವರಾದ ಡಾ| ಕೆ. ಕೆ. ಹೆಗ್ಡೆಯವರು ತಾ ೧೬ರಂದು ಸ್ಥಳೀಯ ವೆನ್‌ಲೋಕ್ ಆಸ್ಪತ್ರೆಯಲ್ಲಿ ಜರಗಿದ ಕುಟುಂಬ ಯೋಜನೆಯ ಕುರಿತಾದ ಸಭೆಯೊಂದರಲ್ಲಿ ಮಾತನಾಡುತ್ತಾ ದಿನೇ ದಿನೇ ಹೆಚ್ಚುತ್ತಿರುವ ಜನಸಂಖ್ಯೆಯ ನ್ನು ಮಿತಗೊಳಿಸಿ, ದೇಶದಲ್ಲಿ ಯೋಜನೆಗಳು ಯಶಸ್ವಿಯಾಗುವಂತೆ ಮಾಡಲು ಸಾರ್ವಜನಿಕರು ಕುಟುಂಬಯೋಜನಾ ಕಾರ್ಯಕ್ರಮದಲ್ಲಿ ಸ ಹಕಾರ ನೀಡಬೇಕು ಎಂದರು. ಜಿಲ್ಲಾ ವೈದ್ಯಾ ಧಿಕಾರಿ ಡಾ| ಎ. ತಿಮ್ಮಪ್ಪಯ್ಯನವರು ದ. ಕ. ಜಿಲ್ಲೆಯಲ್ಲಿ ಕುಟುಂಬಯೋಜನಾ ಕಾರ್ಯಕ್ರಮದಲ್ಲಾದ ಪ್ರಗತಿಯನ್ನು ವಿವರಿಸಿದರು ಆ ರಂಭದಲ್ಲಿ ಕಾರ್ಯದರ್ಶಿ ಡಾ| ಬಾಲಪ್ಪ ಶೆಟ್ಟ ರು ಸ್ವಾಗತಿಸಿದರು. ಸಮಿತಿಯ ಅಧ್ಯಕ್ಷ ಶ್ರೀ ಎ. ಬಿ. ಶೆಟ್ಟರು ಕುಟುಂಬಯೋಜನೆಯ ಅ ವಶ್ಯಕತೆಯನ್ನು ವಿವರಿಸಿದರು. ನಂತರ ಮಾ ನ್ಯ ಸಚಿವರು ಉಡುಪಿಗೆ ತೆರಳಿದರು.

ಮಣಿಪಾಲದಲ್ಲಿ ಕಾಮಗಾರಿ ಸಚಿವರು— ಮೈಸೂರಿನ ಕಾಮಗಾರಿ ಸಚಿವ ಶ್ರೀ ಎಚ್. ಎಂ. ಚನ್ನಬಸಪ್ಪನವರು ತಾ ೧೨ ರಂದು ಮಣಿಪಾಲದಲ್ಲಿ ಉಡುಪಿ ರೋಟರಿ ಕ್ಲಬ್ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ ಡಾ| ಮಾಧವ ಪೈಗಳ ನಿಸ್ವಾರ್ಥ ಬುದ್ಧಿಯ ಸೇವೆಯನ್ನು ಪ್ರಶಂಸಿಸಿ, ಇಂತಹ ಮಹನೀಯರ ಆದರ್ಶದಂತೆ ಪ್ರತಿಯೊಬ್ಬನೂ ತನ್ನ ಕಾರ್ಯ ಕ್ಷೇತ್ರವನ್ನು ಸೇವಾಕಾಂಕ್ಷಿ ಮನೋಭಾವ ದಿಂದ ವಿಸ್ತರಿಸಿದಲ್ಲಿ ದೇಶವು ತನ್ನ ಗುರಿಯ ನ್ನು ಸಾಧಿಸೀತು ಎಂದರು. ಆರಂಭದಲ್ಲಿ ಡಾ| ಮಾಧವ ಪೈಗಳು ಮಂತ್ರಿಗಳನ್ನು ಸ್ವಾಗತಿಸು ತ್ತಾ ಶ್ರೀ ಚನ್ನ ಬಸಪ್ಪನವರು ಈ ಹಿಂದೆ ದ. ಕ. ಜಿಲ್ಲೆಗೆ ವಿದ್ಯುತ್ ಸರಬರಾಯಿ ಮಾ ಡಲು ನೀಡಿದ ಉಪಕಾರವನ್ನು ಸ್ಮರಿಸಿದರು. ಕೊನೆಯಲ್ಲಿ ಶ್ರೀ ಕೆ. ಆರ್. ಕೆ ಭಟ್ಟರು ಧನ್ಯವಾದ ಸಮರ್ಪಿಸಿದರು.

ಸಮಾಜ ಮಂದಿರದ ಉದ್ಘಾಟನೆ— ಸಚೀಪ ಪಡುವಿನಲ್ಲಿ ಕಟ್ಟಿಸಲಾದ ಸ ಮಾಜ ಮಂದಿರದ ಉದ್ಘಾಟನೆಯು ತಾ ೧೧ ರಂದು ಶ್ರೀ ವೈ. ಸಿ. ಹೊಂಭಾಳಯ್ಯನವರಿಂ ದ, ಶ್ರೀ ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಅನಂದ ರೈಯವರ ಸ್ವಾಗತ, ಉದ್ಘಾಟಕರ ಭಾಷಣ, ಶ್ರೀ ಪಿ. ನಾರಾಯಣ ನ್ಯಾಕರಿಂದ ಮಹಾತ್ಮಗಾಂಧಿಯವರ ಭಾ ವ ಚಿತ್ರದ ಅನಾವರಣದ ನಂತರ ಶ್ರೀ ಉ ಪೇಂದ್ರ ನಾಯಕರು ಭಾಷಣವಿತ್ತರು. ಶ್ರೀ ಯು. ಸಿ. ನಾರಾಯಣ ನ್ಯಾಕರ ಧನ್ಯವಾದ ಹಾಗೂ ಮನರಂಜನೆಯ ಕಾರ್ಯಕ್ರಮದೊಂದಿ ಗೆ ಸಭೆ ಮುಕ್ತಾಯವಾಯಿತು.

ಕರ್ನಾಟಕ ಪ್ರಾದೇಶಿಕ ಆಯುರ್ವೇದ ಮಂಡಳದ ಉದ್ಘಾಟನೆ— ಉಡುಪಿಯ ಸಂಸ್ಕೃತ ಕಾಲೇಜಿನ ಕಲಾ ಮಂ ಟಪದಲ್ಲಿ ಕರ್ನಾಟಕ ಪ್ರಾದೇಶಿಕ ಆಯು ರ್ವೇದ ಮಂಡಳದ ೨೨ನೇ ಸಮ್ಮೇಳನವು ತಾ. ೧೭ರಂದು ಮೈಸೂರಿನ ಆರೋಗ್ಯ ಸಚಿವ ಡಾ| ಕೆ. ಕೆ. ಹೆಗ್ಡೆಯವರಿಂದ ಉದ್ಘಾಟಿಸ ಲ್ಪಟ್ಟಿತು. ಶ್ರೀಯುತರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಆಯುರ್ವೇದ ಶಿಕ್ಷಣ ಸಂಸ್ಥೆಗ ಳನ್ನು ಪ್ರಾರಂಭಿಸಲು ಮುಂದೆ ಬರುವ ಹೊಸ ಸಂಸ್ಥೆಗಳನ್ನು ರಾಜ್ಯ ಸರ್ಕಾರವು ಪ್ರೋತ್ಸಾ ಹಿಸುತ್ತದೆಯೆಂದು ಹೇಳಿ, ರಾಜ್ಯದಲ್ಲಿರುವ ನಾನಾ ಆಯುರ್ವೇದ ಸಂಸ್ಥೆಗಳಿಗೆ ಬೇಕಾದ ಔಷಧಗಳನ್ನು ಒದಗಿಸುವುದಕ್ಕಾಗಿ ಸರ್ಕಾರ ದವರು ಒಂದು ಕೇಂದ್ರ ಔಷಧಾಲಯವನ್ನು ಹಾಗೂ ಒಂದು ಮೂಲಿಕಾಗಾರವನ್ನು ಪ್ರಾ ರಂಭಿಸಿದ್ದಾರೆ ಎಂದು ತಿಳಿಸಿದರು. ಶ್ರೀಯು ತರು ಮುಂದುವರಿಸುತ್ತಾ ಮೈಸೂರು ರಾಜ್ಯ ಕ್ಕೊಂದು ಆಯುರ್ವೇದ ಸಂಶೋಧಕ ಮಂ ಡಲಿಯ ರಚನೆಗಾಗಿ ಸರ್ಕಾರ ಪರ್ಯಾಲೋಚಿ ಸುತ್ತಿದೆಯೆಂದರು. ಈ ಸಂದರ್ಭದಲ್ಲಿ ಸಚಿವ ರು ಶ್ರೀ ಎಸ್. ಎಲ್. ನಾರಾಯಣ ಭಟ್ಟ ರಿಂದ ಸಂಪಾದಿತವಾದ 'ಅಮೃತ' ಸ್ಮಾರಕ ಸಂಪುಟವನ್ನು ಉದ್ಘಾಟಿಸಿದರು.

ಸಮ್ಮೇಳನದ ಸ್ವಾಗತಾಧ್ಯಕ್ಷರಾದ ಶ್ರೀ ರತ್ನವರ್ಮ ಹೆಗ್ಗಡೆ, ಎಂ. ಎಲ್. ಎ. ಯವ ರು ತಮ್ಮ ಸ್ವಾಗತ ಭಾಷಣದಲ್ಲಿ ಆಯುರ್ವೇ ದತಜ್ಞರು ಸಂಘಟನೆಯಿಂದ ದುಡಿಯಬೇಕೆಂದ ರು. ವಸ್ತು ಪ್ರದರ್ಶನದ ಉದ್ಘಾಟನೆಯನ್ನು ಶ್ರೀ ಅದಮಾರು ಮಠದ ವಿಭುದೇಶ ತೀರ್ಥ ಶ್ರೀ ಪಾದಂಗಳವರು ನೆರವೇರಿಸಿದರು. ಈ ಸಮ್ಮೇ ಳನದ ಅಧ್ಯಕ್ಷತೆ ವಹಿಸಿದ್ದ ಶ್ರೀ ವೈ. ಪಾ ರ್ಥನಾರಾಯಣ ಪಂಡಿತರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಆಯುರ್ವೇದದ ವಿಷಯದಲ್ಲಿ ಪಭುತ್ವದವರು ತೋರಿಸುತ್ತಿರುವ ಅನಾದರ ಣೆಯನ್ನು ಕಟುವಾಗಿ ಟೀಕಿಸಿ, ಆಯುರ್ವೇ ದವನ್ನು ಪುನಃ ರಾಷ್ಟ್ರೀಯ ಚಿಕಿತ್ಸಾಪದ್ಧತಿ ಯನ್ನಾಗಿಯೂ, ರಾಜ್ಯಪೋಷಿತ ವೈದ್ಯವ ನ್ನಾಗಿಯೂ ಮಾಡಬೇಕಾದರೆ ವೈದ್ಯರು ಹೊ ಣೆಯಿಂದ ವರ್ತಿಸಬೇಕೆಂದರು. ಶುಭಸಂದೇಶ ಗಳನ್ನು ಶ್ರೀ ಬೈಲೂರು ವಾಸುದೇವರಾಯ ರು ಓದಿದರು. ಕೊನೆಯಲ್ಲಿ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಧನ್ಯವಾದ ಸಮರ್ಪಿಸಿದರು. ಮುಂಜಾನೆ ಶ್ರೀ ಯು. ಎಸ್. ನಾಯಕ್, ಎಂ. ಎಲ್. ಎ.ರವರು ಧ್ವಜಾರೋಹಣ ಮಾಡಿದ್ದರು.

ಅಪರಾಹ್ನ ನಡೆದ ವಿವಿಧ ಸಂಭಾಷಾ ಪರಿ ಷತ್ತಿನಲ್ಲಿ ಅನೇಕ ಆಯುರ್ವೇದ ವಿದ್ವಾಂಸರು ಭಾಗವಹಿಸಿದ್ದರು.

ತಾ ೧೮ನೇ ಸೋಮವಾರ ಆಯುರ್ವೇದ ಅಧ್ಯಾಪಕರ ಸಮ್ಮೇಳನವೂ, ತಾ ೧೯ನೇ ಮಂಗಳವಾರ ಪ್ರತ್ಯಕ್ಷ ಪ್ರದರ್ಶನಗಳು, ಮ ಹಾ ಸಮ್ಮೇಳನ ಮುಂತಾದ ಕಾರ್ಯಕ್ರಮಗ ಳೂ ನಡೆದು ಸಮ್ಮೇಳನ ಮುಗಿಯಿತು. ಈ ಮೂರು ದಿನಗಳಲ್ಲೂ ರಾತ್ರಿ ಮನರಂಜನಾ ಕಾರ್ಯಕ್ರಮಗಳನ್ನೇರ್ಪಡಿಸಲಾಗಿತ್ತು.

ಜಾನುವಾರು ಆಸ್ಪತ್ರೆಯ ಕಟ್ಟಡದ ಉದ್ಘಾಟನೆ— ಸಾರ್ವಜನಿಕ ಸಹಾಯ ದಿಂದಲೂ ಸಮಾಜವಿಕಾಸ ಯೋಜನೆಯ ನೆ ರವಿನಿಂದಲೂ ಉಡುಪಿ ಬೈಲೂರಲ್ಲಿ ಕಟ್ಟಿಸ ಲಾದ ಜಾನುವಾರು ಆಸ್ಪತ್ರೆಯ ಉದ್ಘಾಟನೆ ಯನ್ನು ತಾ. ೧೮ರಂದು ಮೈಸೂರು ಸರಕಾರದ ಪಶುಪಾಲನಾ ಇಲಾಖೆಯ ಡೈರೆಕ್ಟರ್ ಡಾ| ಕೆ. ಎಸ್. ಶೆಟ್ಟರು ನೆರವೇರಿಸಿದರು. ಅದ ಮಾರು ಮಠದ ಶ್ರೀ ವಿಬುಧೇಶತೀರ್ಥ ಶ್ರೀ ಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಆ ರಂಭದಲ್ಲಿ ಶ್ರೀ ಬೈಲೂರು ವಾಸುದೇವರಾಯ ರು ಸ್ವಾಗತಿಸಿದರು. ಕೊನೆಯಲ್ಲಿ ಡಾ| ಪಿ. ಜಿ. ಆಚಾರ್ಯರು ಧನ್ಯವಾದ ಸಮರ್ಪಿಸಿದರು.

ಕ್ಲಬ್ ಡೇ— ಸ್ಥಳೀಯ ಜೀವವಿಮಾ ಕಾರ್ಪೊರೇಶನ್‌ನ ಕೆಲಸಗಾರರ ಕ್ಲಬ್ಬಿನ ದಿನಾ ಚರಣೆಯು ದಿ. ೧೬ರಂದು ಡಾ| ಯು. ಸುಂದ ರ ರಾಮ ಪೈ ಅವರ ಹಿರಿತನದಲ್ಲಿ ನಡೆಯಿತು. ಕ್ಲಬ್ಬಿನ ಅಧ್ಯಕ್ಷ ಶ್ರೀ ಇ. ಯು. ಜಾಕೋಬ ರು ಸ್ವಾಗತ ಭಾಷಣಮಾಡಿದರು. ಡಿವಿಜನಲ್ ಮೆನೇಜರ್ ಶ್ರೀ ಕೆ. ಆರ್. ಕೆ. ಭಟ್ಟರೂ ಸಮಯೋಚಿತವಾಗಿ ಮಾತಾಡಿದರು. ವಿವಿಧ ವಿನೋದಾವಳಿಗಳೂ ನಾಟಕ ಪ್ರದರ್ಶನವೂ ನಡೆದುವು.

ಮಂತ್ರಿ ಡಾ| ಕೆ. ಕೆ. ಹೆಗ್ಡೆಯವರು ತಾ. ೧೬ರ ಮಧ್ಯಾಹ್ನ ಹೆಬ್ರಿ, ಸೋಮೇಶ್ವರ, ಬಿದ್ಕಲ್‌ಕಟ್ಟೆ, ಕುಂದಾಪುರಕ್ಕೆ ತೆರಳಿ, ಅಲ್ಲಿ ಯ ಕಾರ್ಯಕ್ರಮಗಳನ್ನು ಮುಗಿಸಿ ಹಿಂದೆ ಬರುವಾಗ ಸ್ವಲ್ಪ ಅಸೌಖ್ಯಗೊಂಡುದರಿಂದ ಮರುದಿನದ ಕಾರ್ಯಕ್ರಮಗಳನ್ನು ರದ್ದುಗೊ ಳಿಸಿದರು. ಈಗ ಗುಣಹೊಂದಿ ಮಂಗಳೂರಿಗೆ ತೆರಳಿರುವರು.

ಬಾಳೆಕುದುರಲ್ಲಿ ಶ್ರೀ ಶಂಕರ ಜಯಂತಿ— ದ. ಕ. ಜಿಲ್ಲಾ ಶ್ರೀ ಬಾಳೇಕು ದುರು ಶಂಕರ ಜಯಂತೀ ಸಭೆಯ ೧೩ನೇ ವಾರ್ಷಿಕ ಅಧಿವೇಶನ, ಜಯಂತೀ ಮಹೋ ತ್ಸವಗಳು ಶ್ರೀ ಬಾಳೇಕುದುರು ಮಠದಲ್ಲಿ ತಾ. ೧೨ ಮತ್ತು ೧೩ ರಂದು ವೈಭವ ದಿಂದ ನಡೆದವು. ಸಭೆಯ ಸಂಸ್ಥಾಪಕ ಸ್ಥಾಯೀ ಅಧ್ಯಕ್ಷರಾದ ಶ್ರೀ ಬಾಳೇಕುದು ರು ಶ್ರೀ ಮಠಾಧೀಶ ಶ್ರೀ ಶ್ರೀ ಆನಂದಾಶ್ರ ಮ ಸ್ವಾಮಿಗಳವರು ಈ ಸಮಾರಂಭದ ಅಧ್ಯ ಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಅನೇ ಕ ವಿದ್ವಜ್ಜನರಿಂದ ಉಪನ್ಯಾಸಾದಿ ಕಾರ್ಯಕ್ರ ಮಗಳೂ, ಹರಿಕಥಾಪ್ರವಚನವೂ ನಡೆದು ಶ್ರೀ ಶ್ರೀಗಳವರ ಮಂತ್ರಾಕ್ಷತೆ ವಿತರಣೆ ಯೊಂದಿಗೆ ಸಮಾರಂಭ ಮುಗಿಯಿತು.

ಆರೋಗ್ಯ ಸಚಿವರ ಪುತ್ತೂರು ಭೇಟಿ— ಮೈಸೂರಿನ ಆರೋಗ್ಯ ಸಚಿವ ಡಾ| ಕೆ. ಕೆ. ಹೆಗ್ಡೆಯವರು ತಾ. ೧೨ರಂದು ಆಸ್ಪತ್ರೆಗೆ ಸಂದರ್ಶನವಿತ್ತಾಗ ಜಿಲ್ಲಾ ವೈದ್ಯಾ ಧಿಕಾರಿ ಡಾ| ತಿಮ್ಮಪ್ಪಯ್ಯ ಮತ್ತು ಆಸ್ಪತ್ರೆ ಯ ವೈದ್ಯಾಧಿಕಾರಿಣಿ ಡಾ| ಸುಂದರಿ ಬ್ಯಾಯ ವರು ಸ್ವಾಗತಿಸಿದರು. ಸಚಿವರು ಆ ಸಂದ ರ್ಭದಲ್ಲಿ ಮಾತನಾಡುತ್ತಾ ಈ ಆಸ್ಪತ್ರೆಗೆ ಎಕ್ಸ್-ರೇ ವಿಭಾಗ ಮಂಜೂರು ಮಾಡಿರುವು ದಾಗಿಯೂ, ಆಸ್ಪತ್ರೆಯ ವಿಸ್ತರಣೆಗೆ ಕೂಡ ಮಂಜೂರಾತಿ ಇತ್ತಿರುವುದಾಗಿಯೂ ತಿಳಿ ಸಿದರು.

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. 25/59.

ಹಿರಿಯಡ್ಕ ಶ್ರೀ ವೀರಭದ್ರದೇವರ ದೇವಸ್ಥಾನ-ಅವರ ಟ್ರಸ್ಟಿಗಳು ಎ. ಜಗನ್‌ಜೀವ ಆಳ್ವ ಕೂಡಾ 3 ಜನರು—ವಾದಿರು.

ಮತ್ತು

ಯೋಜನಗಂಧಿ ಹೆಗಡ್ತಿ ಕೂಡಾ-ಪ್ರತಿವಾದಿರು ಇವರೊಳಗೆ

ಸದ್ರಿ ದಾವೆಯ 1ನೇ ಪ್ರತಿವಾದಿಳು ಯೋಜನಗಂಧಿ ಹೆಗಡ್ತಿ, 3ನೇ ಪ್ರತಿವಾದಿ ಶಂಕರ ಹೆಗ್ಡೆ-ರಾಮಕ್ಕ ಹೆಗಡ್ತಿರ ಮಕ್ಕಳು-ಉಡ್ಪಿ ತಾಲ್ಕು ಅತ್ರಾಡಿ ಗ್ರಾಮದಲ್ಲಿರುವವರು-ಇವರಿಗೆ ತಿಳಿಯಪಡಿಸುವುದೇನೆಂದರೆ:-

ವಾದಿ ದೇವರ ಭಂಡಾರಕ್ಕೆ ಪ್ರತಿವಾದಿರಿಂದ ಕಳೆದ ಮನ್ಮಥ ಸಂ|ರದ ಆದಿ ಲಾಗ್ಯಾತು ಹೇಮಲಂಬಿ ಸಂ|ರದ ಅಂತ್ಯದ ವರೇಗೆ ಬರತಕ್ಕ ಕೊಡುವಳೆ ಬಾಕಿ ವಸೂಲು ಕುರಿತು ವಾದಿರು ಮಾಡಿದ ಮೇಲಿನ ದಾವೆಯು ತಾ. 4-6-59ಕ್ಕೆ ಸದ್ರಿ ಪ್ರತಿವಾದಿರ ವ್ಯಾಜ್ಯದ ಸಮ್ಮನ್ಸ್ ಬಗ್ಗೆ ಇದೋಣಾಗಿಯದೆ. ಸದ್ರಿ ದಾವೆಯಲ್ಲಿ ಉದಾಹರಿಸುವುದಿದ್ದರೆ ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು.

Y. C. S. Hegde,
Advocate for Plff.

ಉಡ್ಪಿ ತಾ. 16-5-59.

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಕಲ್ಯಾಣಪುರ ದ. ಕ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡಕೊಂಡು, ಕ್ಲಪ್ತ ವಾಯಿದೆಗೆ ಅಸಲು, ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ತ್ರ ನೋಟೀಸು ಕೊಟ್ಟಲ್ಲಿ ಸಹಾ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರಿಗೆ ವ ಸದ್ರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವ ದೇನೆಂದರೆ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ತಿಂಗಳ ತಾರೀಕು 23-5 59ರ ಒಳಗೆ ಬಿಡಿಸದಿದ್ದಲ್ಲಿ ತಾರೀಕು 29-5-59ರಲ್ಲಿ ಬೆಳಗ್ಗೆ ಗಂಟೆ 11ಕ್ಕೆ ಯಾ ನಮಗೆ ಯುಕ್ತ ಕಂಡ ಇತರ ತಾರೀಕಿನಲ್ಲಿ ಪುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
32/1685	ಟಿ. ಕೃಷ್ಣಪ್ಪ ಸೆಟ್ಟಿ, ಚಂದಯ್ಯ ಸೆಟ್ರ ಅಳಿಯ, ಮೂಡು ತೋನ್ಸೆ, ಜನ್ನಿಮನೆ, ಕಲ್ಯಾಣಪುರ P. O.	60 . 00
33/167	ಕೆ. ಅನಂತಪ್ರಾಯ ಬಾಳಿಗ, ವಾಸುದೇವ ಬಾಳಿಗರ ಮಗ, ಕಲ್ಯಾಣಪುರ, ಕಲ್ಯಾಣಪುರ P. O.	100 . 00
33/331	Do.	50 . 00
34/548	ಕರಿಯ ಬೆಲ್ಚಡ, ಮಂಜಯ್ಯ ಬೆಲ್ಚಡರ ಮಗ, ಮೂಡು ಕುದ್ರು, ಕಲ್ಯಾಣಪುರ P. O.	70 . 00

Kallianpur, 19-5-1959.

S. REBELLO,
Agent.

ನಿರುದ್ಯೋಗ ಸಮಸ್ಯೆ

ಭಾರತವನ್ನೆದುರಿಸುವ ಬೃಹತ್ ಸಮಸ್ಯೆ

ಪರಿಹಾರಕ್ಕೆ ಕೈಗೊಳ್ಳುವ ಕ್ರಮಗಳು ಏನೇನೂ ಸಾಲದಾಗಿವೆ

ಉದ್ಯೋಗ ಸಮಸ್ಯೆ ಇದೀಗ ಇಂದಿನ ಪ್ರಮುಖ ಸಮಸ್ಯೆಗಳಲ್ಲಿ ಒಂದಾಗಿದೆ. ಎಲ್ಲೆಲ್ಲೂ ಈ ಸಮಸ್ಯೆಯ ವಿಷಯವಾಗಿ ವಿಶೇಷ ರೀತಿಯ ಚರ್ಚೆ ನಡೆಯುತ್ತಿದೆ ಹಲವಾರು ವೇದಿಕೆಗಳಿಂದ ಈ ಬಗ್ಗೆ ದೊಡ್ಡ ದೊಡ್ಡ ಭಾಷಣಗಳು ನಡೆಯುತ್ತಿವೆ ಪಾರ್ಲಿಮೆಂಟಿನಲ್ಲಿ, ಶಾಸನ ಸಭೆಗಳಲ್ಲಿ, ಕಾರ್ಮಿಕ ಸಭೆ ಸಮ್ಮೇಳನಗಳಲ್ಲಿ, ಮಾಲಿಕರುಗಳ ಸಭೆ ಸಮ್ಮೇಳನಗಳಲ್ಲಿ—ಹೀಗೆ ಹಲವಾರು ಕ್ಷೇತ್ರಗಳಲ್ಲಿ ಉದ್ಯೋಗ ಸಮಸ್ಯೆಯ ವಿಷಯವಾದ ಚರ್ಚೆ ಆಗಾಗ ನಡೆಯುತ್ತಲೇ ಇರುತ್ತದೆ

ಇದು ನಾವಿಂದು ಎದುರಿಸಬೇಕಾಗಿರುವ ಮುಖ್ಯ ಮಾನವೀಯ ಸಮಸ್ಯೆಯೆಂದೇ ಹೇಳಬಹುದು. ಜನಸಂಖ್ಯೆ ಬೆಳೆಯುತ್ತಿರುವುದರ ಪರಿಣಾಮವಾಗಿಯಂತೂ ಈ ಸಮಸ್ಯೆಯ ಪರಿಹಾರ ಅನಿವಾರ್ಯವಾಗಿದ ಮುಂದಿನ ನಮ್ಮೆಲ್ಲಾ ಯೋಜನೆಗಳನ್ನು ತಯಾರಿಸುವಾಗ ಈ ಪ್ರಶ್ನೆಯ ಕಡೆಗೆ ನಾವು ಮುಖ್ಯವಾಗಿ ಗಮನವನ್ನು ಹರಿಸಬೇಕಾಗುತ್ತದೆ.

ಸಮಸ್ಯೆಯ ಹಲವು ಮುಖಗಳು

ಈ ಸಮಸ್ಯೆಗೆ ಹಲವು ಮುಖಗಳಿವೆ ಆದರೆ ಈ ಸಮಸ್ಯೆಯ ಮುಖ್ಯ ಸ್ವರೂಪವನ್ನು ತಿಳಿಯುವ ದೃಷ್ಟಿಯಿಂದ ದ್ವಿತೀಯ ಪಂಚವಾರ್ಷಿಕ ಯೋಜನೆಯ ಹಿನ್ನೆಲೆಯಲ್ಲಿ ಈ ಸಮಸ್ಯೆ ಯಾವರೀತಿ ಎದುರಿಸಲ್ಪಟ್ಟಿದೆ ಎಂಬುದನ್ನು ನಾವು ತಿಳಿಯುವುದು ಆವಶ್ಯಕವಾಗಿದೆ

ಸಮಸ್ಯೆ ತುಂಬಾ ಜಟಿಲ ಮತ್ತು ವಿಶೇಷ ವ್ಯಾಪ್ತಿಯುಳ್ಳದ್ದು ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದರೆ ಖಚಿತವಾಗಿ ಎಷ್ಟು ಎಂದು ಸೂಚಿಸುವಂತಹ ಅಂಕಿ ಅಂಶಗಳು ಮಾತ್ರ ನಮ್ಮಲ್ಲಿ ಸಾಕಷ್ಟಿಲ್ಲ. ಆದರೆ ಇದೂ ನಿಜ. ಆ ಅಂಕಿ ಅಂಶಗಳನ್ನು ಸಂಗ್ರಹಿಸಿ ನಾವು ಮಾಡಬಹುದಾದರೂ ಏನು? ಏಕೆಂದರೆ, ನಾವು ಅಂಕಿ ಅಂಶಗಳ ಆಧಾರದ ಮೇಲೆ ಸಾಧಿಸಬೇಕಾಗಿ ಬರುವ ಕಾರ್ಯವ್ಯಾಪ್ತಿ ನಮ್ಮ ಶಕ್ತಿಗೆ ಮೀರುತ್ತದೆ ಪರಿಸ್ಥಿತಿ ಹದಗೆಡದಂತೆ ನಾವು ನೋಡಿಕೊಂಡರೆ ಸಾಕು, ಅದೇ ಒಂದು ದೊಡ್ಡ ಸಾಧನೆ ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ನಮ್ಮ ದೇಶ ಮಾನ್ಯಮಾಡಿದಾಗ ಕೊಡಲಾದ ಭರವಸೆಯಾದರೂ ಇಷ್ಟೆ

ಹಾಗಾದರೆ ನಾವು ಸಾಧಿಸಿರುವ ಕಾರ್ಯವಾದರೂ ಏನು, ಎಂಬ ಪ್ರಶ್ನೆ ಬರುತ್ತದೆ ಈ ಪ್ರಶ್ನೆಗೆ ನಾವು ಒದಗಿಸಬಹುದಾದ ಉತ್ತರ ಸರಿ ಉಚಿತವಲ್ಲ ಒಂದು ಒಟ್ಟು ಅಂದಾಜಿನ ರೂಪದಲ್ಲಿ ಮಾತ್ರ ನಾವು ಉತ್ತರ ಕೊಡಬಹುದು ೪,೮೦೦ ಕೋಟಿ ವೆಚ್ಚದ ಯೋಜನೆ ಸುಮಾರು ೧೦೦ ಲಕ್ಷ ಮಂದಿಗೆ ಉದ್ಯೋಗಗಳನ್ನು ಒದಗಿಸುತ್ತದೆಯೆಂಬ ನಿರೀಕ್ಷೆ ನಮಗಿತ್ತು ಇಷ್ಟು ಜನರಿಗೆ ಉದ್ಯೋಗ ಒದಗಿಸಿದರೂ ಸಹ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯುತ್ತದೆ ಯೆಂಬುದರ ಅರಿವು ನಮಗಾಗದಿರಲಿಲ್ಲ. ಆದರೆ ನಮ್ಮ ಅಭಿಪ್ರಾಯಗಳನ್ನು ಸ್ವಲ್ಪಮಟ್ಟಿಗೆ ತಿದ್ದುಪಡಿ ಮಾಡಿಕೊಳ್ಳಬೇಕಾದ ಆಗತ್ಯ ಸೂಚಿಸುವ ಕೆಲವು ಅಂಕಿ ಅಂಶಗಳು ಯೋಜನೆಯನ್ನು ರೂಪಿಸುವ ಹೊತ್ತಿಗೆ ಮನದಟ್ಟಾದುವು.

ಸಮಸ್ಯೆ ತುಂಬಾ ಜಟಿಲವಾಯಿತು.

ಯೋಜನೆಗೆ ಆಂತರಿಕವಾಗಿ ಹಣ ಒದಗಿಸುವ ಸಮಸ್ಯೆಗಳು ಒಂದುಕಡೆ ಅಯಶಸ್ವಿಯಾಗುತ್ತಿದ್ದವು. ಇನ್ನೊಂದು ಕಡೆ ಬೆಲೆಗಳು ಏರುತ್ತಲಿತ್ತು ಮತ್ತು ಈ ಸಮಸ್ಯೆಗಳ ಜೊತೆಗೆ ವಿದೇಶಿ ವಿನಿಮಯ ಸಮಸ್ಯೆ ಕೈಕಟ್ಟುವಂತಾಗಿತ್ತು ಇವುಗಳ ಪರಿಣಾಮವಾಗಿ ಉದ್ಯೋಗ ಸಮಸ್ಯೆ ಇನ್ನಷ್ಟು ಜಟಿಲವಾಗುವ ಸೂಚನೆಗಳೇ ಹೆಚ್ಚು ಹೆಚ್ಚಾಗಿ ಕಂಡುಬಂದುವು. ಇಂತಹ ಪರಿಸ್ಥಿತಿಯಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿರುವುದು ಕಂಡುಬಂದಿತು ಜೀವಂತ ರಿಜಿಸ್ಟರ್‌ಗಳಲ್ಲಿ ಕಂಡುಬಂದ ದಾಖಲೆ ಪ್ರಕಾರ ನಿರುದ್ಯೋಗ ಸಮಸ್ಯೆ ಅಳೆಯಲು ಇದೊಂದೇ ಮುಖ್ಯ ದಾಖಲೆ ೧೯೫೮ರಲ್ಲಿ ಉದ್ಯೋಗಾಕಾಂಕ್ಷಿ ನಿರುದ್ಯೋಗಿಗಳ ಸಂಖ್ಯೆ ಎರಡು ಲಕ್ಷಗಳಿಗೂ ಹೆಚ್ಚಿತ್ತು

ಈ ಮಧ್ಯೆ ಯೋಜನೆಯ ವೆಚ್ಚವನ್ನು ೪,೮೦೦ ಕೋಟಿ ರೂ ಗಳಿಂದ ೪,೫೦೦ ಕೋಟಿ ರೂ.ಗಳಿಗೆ ಇಳಿಸಬೇಕಾಗಿ ಬಂತು ಮೊದಲ ಅಂದಾಜಿಗನುಗುಣವಾಗಿ ಬಂಡವಾಳ ಹಾಕಿದರೂ ಬೆಲೆಗಳು ಹೆಚ್ಚಿರುವುದರ ಪರಿಣಾಮವಾಗಿ ೧೦ ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗಾವಕಾಶಗಳು ತಪ್ಪುತ್ತವೆಯೆಂಬುದು ಸ್ಪಷ್ಟವಾಯಿತು ಬೇಸಾಯೇತರ ಕ್ಷೇತ್ರದಲ್ಲಿ ಮೊದಲು ಅಂದಾಜಾದ ಪ್ರಕಾರ ೮೦ ಲಕ್ಷ ಜನರಿಗೆ ಉದ್ಯೋಗ ಒದಗಿಸಲು ಅವಕಾಶವಾಗುತ್ತದೆಯೆಂದಿದ್ದರು ಆ ಅಂದಾಜು, ೬೫ ಲಕ್ಷಕ್ಕಿಳಿಯಬೇಕಾಯಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಮೊದಲ ಮೂರು ವರ್ಷಗಳಲ್ಲಿ ೩೦ ಲಕ್ಷ ಜನಕ್ಕೆ ಮಾತ್ರ ಉದ್ಯೋಗಗಳನ್ನು ಒದಗಿಸಲು ಸಾಧ್ಯವಾಗಿದೆ. ಇನ್ನುಳಿದ ಎರಡು ವರ್ಷಗಳ ಅವಧಿಯಲ್ಲಿ ಗುರಿ ಮುಟ್ಟಲು ಎಷ್ಟು ಪ್ರಯತ್ನಿಸಬೇಕಾಗುತ್ತದೆಯೆಂಬುದನ್ನು ಊಹಿಸಬಹುದು.

ಹಿಂದಿನ ಅನುಭವ

ಹಾಗಾದರೆ ಭವಿಷ್ಯದಲ್ಲಿ ಈ ಕಾರ್ಯ ಎಷ್ಟು ಮಾತ್ರ ಸಾಧ್ಯ? ಹಿಂದಿನ ಅನುಭವದಿಂದ ಹೇಳುವುದಾದರೆ ಪ್ರಥಮ ಪಂಚವಾರ್ಷಿಕ ಯೋಜನೆಯ ಕಡೆಯ ವರ್ಷಗಳ ಅವಧಿಯಲ್ಲಿ ಉದ್ಯೋಗಾವಕಾಶಗಳು ಒಮ್ಮಿಂದೊಮ್ಮೆಲೆ ಸಾಧ್ಯವಾದುವು. ಯೋಜನೆಯ ಅಗತ್ಯಗಳಿಗನುಗುಣವಾಗಿ ದೊಡ್ಡ ದೊಡ್ಡ ಕೈಗಾರಿಕಾ ಯಂತ್ರೋಪಕರಣಗಳು ನಮ್ಮ ದೇಶಕ್ಕೆ ಈಗಾಗಲೆ ಆಗಮಿಸಿವೆಯಾದ ಕಾರಣ ಕಾರ್ಖಾನೆಗಳ ಸ್ಥಾಪನೆ ಸಾಧ್ಯವಾದ ಹಾಗೆಲ್ಲ ನಮ್ಮ ಮುಂದಿರುವ ಕಾಲಾವಧಿಯಲ್ಲಿ ಹೆಚ್ಚು ಜನರಿಗೆ ಉದ್ಯೋಗಾವಕಾಶಗಳು ಲಭಿಸುವ ಸೂಚನೆಗಳಿವೆ.

ಎಂಜಿನಿಯರ್ಸ್, ಡಾಕ್ಟರ್ಸ್ ಮತ್ತು ನರ್ಸಸ್, ಟರ್ನರ್ಸ್, ಫಿಟ್ಟರ್ಸ್, ಮೊಟಾರ್ ಮೆಕಾನಿಕ್ಸ್ ಇವರುಗಳ ಅವಶ್ಯಕತೆ ವಿಶೇಷವಾಗಿದೆ

ಮೂರನೆಯ ಯೋಜನೆ ತಯಾರಿಸುವಾಗ ಇಂತಹ ತಂತ್ರಜ್ಞರ ಹಾಗೂ ಪರಿಣತರ ಆವಶ್ಯಕತೆಯನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ತಯಾರಿಸಬೇಕಾಗುತ್ತದೆ ಮತ್ತು ಈ ದೃಷ್ಟಿಯಿಂದ ನಮ್ಮ ಶಿಕ್ಷಣ ಕ್ರಮದಲ್ಲೇ ಮುಖ್ಯ ಬದಲಾವಣೆಗಳು ಅಪೇಕ್ಷಣೀಯವಾಗುತ್ತವೆ ಸರ್ಕಾರ ಈ ಎರಡೂ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡಿರುವುದು ಸಂತಸದ ವಿಷಯ

—ಶ್ರೀ ಬಿ. ಎನ್. ದಾತಾರ
(ಯೋಜನೆಯ ಕೃಪೆಯಿಂದ).

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು ಸಂ. ನ)

ನಮ್ಮ ದೇಶದ ಯೋಜನೆಗಳು ಲೇಖಕರು ಪ್ರಿ ರಾ ಯ ಧಾರವಾಡಕರ ಪ್ರಕಾಶಕರು ಮ ಗೋವಿಂದರಾಯರು ಸಾಹಿತ್ಯ ಭಂಡಾರ, ಹುಬ್ಬಳ್ಳಿ ಪುಟಗಳು ೮೭ ಬೆಲೆ ೧ ೫೦

ಸ್ವಾತಂತ್ರ್ಯ ಪ್ರಾಪ್ತಿ ನಂತರ ತನ್ನ ಅಭಿವೃದ್ಧಿಗಾಗಿ, ತನ್ನ ಸಂಪತ್ತನ್ನು ಉನ್ನತೀಕರಿಸುವ ಸಲುವಾಗಿ, ತನ್ನವರ ಅಜ್ಞಾನಾದಿಗಳ ದೂರೀಕರಣಕ್ಕಾಗಿ, ದೇಶದ ಸಮಸ್ತ ಜನತೆಯ ಉದ್ಧಾರಕ್ಕಾಗಿ ಭಾರತವು ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿಕೊಂಡು, ಅವನ್ನು ಬಹು ಪ್ರಯಾಸದಿಂದ ಕಾರ್ಯಾನ್ವಿತಗೊಳಿಸುತ್ತಿರುವುದು ಸುವಿದಿತವಾದರೂ ಯೋಜನೆಯ ಬಗ್ಗೆ ಆಸಕ್ತಿವಹಿಸುವ ನಾಗರಿಕರ ಸಂಖ್ಯೆಯು ವಿರಳ ಇಂತಹ ಜನರಿಗೆ ಯೋಜನೆಯ ಮೂಲೋದ್ದೇಶಗಳನ್ನು ವಿವರಿಸಿ, ಸರಿಯಾದ ಮಾರ್ಗದರ್ಶನದಿಂದ ತಮ್ಮ ಶ್ರೇಯೋಪಥವನ್ನು ತಲಪುವದರಲ್ಲಿ ಆಸಕ್ತರಾಗುವಂತೆ ಸಿಗುವ ಈ ಗ್ರಂಥವು ಉಪಯುಕ್ತವಾಗಿದೆ

ಕನ್ನಡ ಭಾಷೆಯಲ್ಲಿ ಕೇವಲ ಸರಕಾರಿ ವಲಯಗಳಿಂದ ಯೋಜನೆಯ ಬಗ್ಗೆ ಲಿಖಿಸಲ್ಪಟ್ಟ ಸಣ್ಣ ಕೆಲವು ಪುಸ್ತಕಗಳನ್ನು ಬಿಟ್ಟರೆ, ಖಾಸಗಿಯಾಗಿ ಅವುಗಳ ಬಗ್ಗೆ ಜ್ಞಾನದಾಯಕವಾದ ಗ್ರಂಥಗಳು ಇಲ್ಲವೆಂದೇ ಹೇಳಬೇಕು ಇಂತಹುದರಲ್ಲಿ ಪ್ರಿನ್ಸಿಪಲ್ ಧಾರವಾಡಕರರು ಯೋಜನೆಯನ್ನು ಕುರಿತಾದ ಬೃಹತ್ಗ್ರಂಥಗಳನ್ನೂ ಪತ್ರಿಕೆಗಳನ್ನೂ ಅವ್ಯಾಹತವಾಗಿ ಅಧ್ಯಯನ ನಡೆಸಿ, ವಿಷಯಗಳನ್ನು ಕ್ರೋಢೀಕರಿಸಿ ಅವುಗಳ ಸಾರವನ್ನು ಕನ್ನಡಿಗರೆಲ್ಲರಿಗೂ ಒಪ್ಪಿಸುವ ಸಾಹಸವನ್ನು ಮಾಡಿದ್ದಾರೆ ಪ್ರಸ್ತುತ ಲೇಖಕರು ಬೇರೆ ಬೇರೆ ಪತ್ರಿಕೆಗಳಲ್ಲಿ ಕಾಲಕಾಲದಲ್ಲಿ ಬರೆದ ಲೇಖನಗಳ ಸಂಗ್ರಹ ರೂಪವಿದು

ಯೋಜನೆಯ ಸ್ಥೂಲಪರಿಚಯವನ್ನು ಮೊದಲಾಗಿ ವಿವರಿಸಿ, ಯೋಜನೆಗಳನ್ನು ಕೈಗೊಳ್ಳುವಾಗ ಒಡಮೂಡುವ ಸಮಸ್ಯೆಗಳು ವಿಶೇಷವಾಗಿ ಧನ ಸಂಚಯಾದಿ ಚಿಂತಾತ್ಮಕ ಪ್ರಶ್ನೆಗಳನ್ನೂ ಅವುಗಳ ಪರಿಹಾರವನ್ನೂ ತಿಳಿಸುತ್ತ ಯೋಜನೆಯು ಯಶಸ್ವಿಯಾಗುವ ಬಗೆ ಜನತೆಯ ಪಾತ್ರವನ್ನು ವಿವರಿಸಲಾಗಿದೆ ಪ್ರಮಾಣದಲ್ಲಿ ಗ್ರಂಥವು ಕಿರಿಯದೆನಿಸಬಹುದಾದರೂ ಅನಾವಶ್ಯಕ ವಿವರಣೆಗಳು ಗ್ರಂಥವಾದ್ಯಂತ ಕಂಡುಬರುವುದಿಲ್ಲ ಪುಸ್ತಕದಲ್ಲಿ ಯೋಜನೆಯ ಯಶಸ್ಸನ್ನು ಪ್ರತಿಬಿಂಬಿಸುವ ಕೆಲವಾರು ಚಿತ್ರಗಳನ್ನೂ ಕೊಟ್ಟಿರುವುದು ಉಪಯುಕ್ತವಿದೆ ಕನ್ನಡಿಗರೆಲ್ಲರೂ ಈ ಗ್ರಂಥದ ಉಪಯೋಗವನ್ನು ಮಾಡಿಕೊಳ್ಳುವುದು ಅವಶ್ಯ

ಶ್ರೀ ಶಂಕರ ಜಯಂತಿ ಸಭ

ಹಂಗಾರಕಟ್ಟೆ—ಕಳೆದ ೧೨ ವರ್ಷಗಳಿಂದ ನಡೆಯುಕೊಂಡು ಬರುತ್ತಿರುವ ಹಂಗಾರಕಟ್ಟೆ, ಬಾಳಕುದುರು ಶ್ರೀಮಠದ ಶ್ರೀಶಂಕರ ಜಯಂತಿ ಸಭೆಯ ದ್ವಾದಶ ಅಧಿವೇಶನದ ಸಂಕ್ಷಿಪ್ತ ವರದಿಯು ಹಸ್ತಗತವಾಗಿದೆ ಧಾರ್ಮಿಕ ಭಾವನೆಯು ಬಿಲಗೊಳ್ಳುತ್ತಿರುವ ಸದ್ಯದ ಅವಸರದಲ್ಲಿ ಜನತೆಯಲ್ಲಿ ನೈತಿಕ ಬಲಸಂವರ್ಧನೆ, ಆತ್ಮಶಕ್ತಿವರ್ಧನೆಗಳು ಅವಶ್ಯವಾಗಿದ್ದು ಅವಕ್ಕೆ ಧಾರ್ಮಿಕ ಜ್ಞಾನವು ಮೂಲ ಹೇತುವಾಗಿರುವುದು ಇದಕ್ಕಾಗಿ ಶ್ರೀ ಶಂಕರಾಚಾರ್ಯರು ಪ್ರತಿಪಾದಿಸಿದ ಅದ್ವೈತ ತತ್ವವನ್ನೂ ಧರ್ಮಾಸಕ್ತಿಯನ್ನೂ ಎಳೆ ಕಾಲದಲ್ಲೆ ಪ್ರಚಾರ ಮಾಡುವ ಸದುದ್ದೇಶ ಪ್ರೇರಿತವಾಗಿರುವ ಶ್ರೀ ಸಭೆಯ ಕಾರ್ಯಕ್ರಮಗಳು ಸ್ತುತ್ಯವಿವೆ "Little drops of water make the mighty ocean"—ಎಂಬಂತೆ ಇಂತಹ ಹಲವಾರು ಧಾರ್ಮಿಕ ಸಂಸ್ಥೆಗಳು ಸುರಿಸುವ ಧರ್ಮ ಜಲಬಿಂದುಗಳಿಂದಲೇ ವಿಶ್ವವು ಧರ್ಮಪೂರ್ಣ ಘಟವಾದೀತು.

—ಗೋರಾ

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು
- ನಮ್ಮ ಬದುಕು ಸರಳವಾಗಿರಬೇಕು

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು **ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ**, ದ ಭಾ **ನವಭಾರತ ಪುಸ್ತಕ ಭಂಡಾರ, ಉಡುಪಿ** ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಗೋವಿಜಯ

(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಆವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ

ಮಕ್ಕಳ ಮಗ್ಗಿ ಪುಸ್ತಕ

(ನಯೇ ಪೈಸೆ ಕೋಷ್ಟಕ ಸಹಿತ)

ಬೆಲೆ 1ಕ್ಕೆ 0 1 0

ನವಯುಗ ಪ್ರೆಸ್, ಉಡುಪಿ

ಜೀವನ ಪರಿಚಯ

(೪ನೇ ಪುಟದಿಂದ)

ರಾತ್ರಿ ಶಿ— ತನ್ನ ನಲ್ಲನನ್ನು ಏಕಾಂತ ನಾಗಿ ಕಾಣಲು!

ಜೀವನ್ಮುಕ್ತಿ

ಶ್ರೀ ಶೈಲದ ವನಸಂಪತ್ತನ್ನು ನೋಡಿ ತಣಿದು ಇದೇ ಶಿವನ ವಾಸಕ್ಕೆ ಯೋಗ್ಯ ಸ್ಥಳವೆಂದುಕೊಂಡಳು. ಸೃಷ್ಟಿ ಸೌಂದರ್ಯದ ರಸಾವೇಶದಲ್ಲಿ ಲೀನಳಾದಳು. ಕಣ್ಣಿಗೆ ಕಾಣಿಸಿದ ಶ್ರೀಗಿರಿಯನ್ನು ನೋಡಿ

'ವನವೆಲ್ಲ ಕಲ್ಪತರು, ಗಿಡವೆಲ್ಲ ಮರು
ಜೀವಣಿ
ಶಿಲೆಗಳೆಲ್ಲ ಪರುಷ, ನೆಲವೆಲ್ಲ ಅವಿಮುಕ್ತ
ಕ್ಷೇತ್ರ
ಜಲವೆಲ್ಲ ನಿರ್ಜರಾಮೃತ, ಮೃಗವೆಲ್ಲ
ಪುರುಷಮೃಗ
ಎಡಹುವ ಹರಳುಗಳೆಲ್ಲ ಚಿಂತಾಮಣಿ'

—ಎಂದು ಅದನ್ನು ವರ್ಣಿಸಿದಳು.

ಶ್ರೀ ಗಿರಿಯನ್ನು ಹತ್ತಿ 'ಬೆರಸುವರೆ ಬೇಗತೋರಾ, ಹೊರಹಾಕದಿರಯ್ಯಾ! ನಿಮ್ಮಲ್ಲಿಸಲೆಸಂದತೊತ್ತಾನು" ಎಂದು ಪ್ರಾರ್ಥಿಸಿದಳು. ಅದು ಸಾರ್ಥಕವಾಯಿತು. ಜಗಜ್ಜ್ಯೋತಿಯಲ್ಲಿ ಅಕ್ಕನ ಆತ್ಮ ಬೆರತುಹೋಯಿತು. ಅಕ್ಕ ಶ್ರೀ ಶೈಲದ ಚನ್ನನ "ಮಹಾದೇವಿ"ಯಾದಳು, ಕನ್ನಡ ನಾಡಿನ ಜನತೆಗೆ ಅಭಿಮಾನದ 'ಅಕ್ಕ'ನಾದಳು. ಮುಂದಿನ ಪೀಳಿಗೆಯ ಕಬ್ಬಿಗಿತಿಯರಿಗೆ "ಮಾರ್ಗದರ್ಶಕ"ಳಾದಳು.

ಅಕ್ಕನ ವಚನಗಳ ಮಹತ್ತು

ಅಕ್ಕನ ಜೀವನವೇ ಕಾವ್ಯ. ಅವಳ ವಾಣಿಯಂತೂ ಮಹಾಕಾವ್ಯ. ರಸನೀತಿಗಳ ಸೇರುವಿಕೆಗೆ ಅನುಭಾವವೂ, ಭಕ್ತಿಯ ಭಾವವೂ ಸೇರಿ ಉಂಟಾದ ವಚನಗಳು—ಅಕ್ಕ ಮಹಾದೇವಿಯದು. ಈಕೆಯ ವಚನಗಳಲ್ಲಿ ಉಪಮೆಗಳು ಮತ್ತು ದೃಷ್ಟಾಂತಾಲಂಕಾರಗಳು ಸಮರಸವಾಗಿ ಬೆರತಿವೆ. 'ಬೆಟ್ಟದ ಮೇಲೊಂದು ಮನೆಯ ಮಾಡಿ, ಮೃಗಂಗಳಿಗಂಜಿತರೆಂತಯ್ಯ!' ಹೇಗಿವೆ ಈ ದೃಷ್ಟಾಂತ?

'ಚಂದನವ ಕಡಿದು ಕೊರೆದು ತೇದೊಡೆ ನೊಂದೆನೆಂದು ಕಂಪಬಿಟ್ಟಿತ್ತೆ?' 'ಹಾಲ ಹಿಡಿದು ಬೆಣ್ಣೆಯನರಸಲುಂಟೆ?" ಇವೇ ಮೊದಲಾದ ಉದಾಹರಣೆಗಳಿಂದ ಅವುಗಳ ಮಹತ್ತು ಅರಿವಾಗುವುದು.

ಕೆಲವು ಕಡೆ ಅಕ್ಕನ ವಚನ ಹಾಡಿನಂತೆ ನಿರರ್ಗಳವಾಗಿ ಹರಿದಿದೆ. ಕೆಲವು ಕಡೆ ಗಂಭೀರವಾಗಿ ಹರಿದಿದೆ.

'ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ,
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ,
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ,
ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ"

—ಎಂದು ಮಾಯೆಯನ್ನು ವರ್ಣಿಸುವುದು ಆಕೆಯ ಕವಿತಾಶಕ್ತಿಗೆ ದ್ಯೋತಕವಾಗಿದೆ. ಅಂತೂ ಅಕ್ಕನ ವಚನಗಳು ನಮ್ಮ ಕನ್ನಡ ನಾಡಿನ ಅಮೂಲ್ಯರತ್ನವೆಂದು ಹೇಳಬಹುದು.

(ಸಂಗ್ರಹ)

—ಎ. ಗಣಪಯ್ಯ ಆಳ್ವ, ಐರೋಡಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಸುಶಿಕ್ಷಿತ ಸಮಾಜ ನಿರ್ಮಾಣ ಸಂಸ್ಥೆ—ಗೋಟಲ್.

"ಗೋಟಲ್" ಎಂಬುದು ಮಧ್ಯಪ್ರದೇಶದ ಬಸ್ತಾರ ಜಿಲ್ಲೆಯಲ್ಲಿ ವಾಸವಾಗಿರುವ ಮುರಿಯವಂಶದ ಮಕ್ಕಳ ಶಯನಾಗಾರವಾಗಿದೆ. ಹಳ್ಳಿಯ ದಾರಿಯೊಂದರ ಪಕ್ಕದಲ್ಲಿ ಇದನ್ನು ಕಟ್ಟಲಾಗಿದ್ದು ಗೋಡೆಗಳ ಸುತ್ತಲೂ ಜಗಲಿಯಾಗಿ ಬಿದಿರುಗಳನ್ನು ನೆಡಲಾಗಿದೆ. ಈ ಗೃಹದಲ್ಲಿ ಒಂದು ದೊಡ್ಡ ತೊಟ್ಟಿಯಿದ್ದು ನೆಲಕ್ಕೆ ಆವೆಮಣ್ಣನ್ನು ಬಳಿಯಲಾಗಿದೆ. ಆಸುಪಾಸಿನ ಸ್ಥಳವು ಆಟದ ಬಯಲಾಗಿಯೂ ನರ್ತನದ ರಂಗಭೂಮಿಯಾಗಿಯೂ ಉಪಯೋಗಕ್ಕೆ ಬರುತ್ತದೆ.

ಈ ಗೋಟಲ್‌ಗಳಲ್ಲಿ ಊಟವಾದನಂತರ ಸಾಮಾನ್ಯ ೧೦ ವರ್ಷಕ್ಕೆ ಮೇಲ್ಪಟ್ಟ ಅವಿವಾಹಿತ ಹುಡುಗ—ಹುಡುಗಿಯರು ನೃತ್ಯ, ಆಟ ಮತ್ತು ಕಥೆ ಹೇಳುವುದು ಮೊದಲಾದುವುಗಳಿಗಾಗಿ ಒಂದು ಸೇರುತ್ತಾರೆ. ಇಲ್ಲಿಗೆ ಬರುವ ಹುಡುಗರಿಗೆ "ಚೇಲಿಕ್" ಎಂದೂ ಹುಡುಗಿಯರಿಗೆ "ಮೋತಿಯಾರಿ" ಎಂದೂ ಹೇಳುತ್ತಾರೆ. ಒಬ್ಬ ಪ್ರಾಯಕ್ಕೆ ಬಂದ ಹುಡುಗನು ಗೋಟಲಿನ ವ್ಯವಸ್ಥಾಪಕ ನಾಗುತ್ತಾನೆ. ಈತನು ಈಳಸು ನಾಗರಿಕನಲ್ಲಿನ ನಿಯಮಗಳನ್ನು ಪಾಲಿಸುವಂತೆ ನೋಡಿಕೊಳ್ಳುತ್ತಾನೆ. ಕೆಲಸ ಮಾಡಲು, ಇತರ ಗ್ರಾಮಗಳ ಸಂದರ್ಶನೆಗೆ ಹೊರಟಾಗ, ಅವರಲ್ಲಿ ಶಿಸ್ತನ್ನು ಕಾಪಾಡುತ್ತಾನೆ.

ಮುರಿಯಾ ಗ್ರಾಮಗಳಲ್ಲಿನ ಯುವ ಜನಾಂಗವನ್ನು ತರಬೇತಿಗೊಳಿಸಲು ಮತ್ತು ಅವರಿಗೆ ವಿದ್ಯಾಭ್ಯಾಸವೊದಗಿಸಲು ಗೋಟಲ್ ಅತ್ಯಮೂಲ್ಯ ಸಂಸ್ಥೆಯಾಗಿದೆ. ಸಾಮಾಜಿಕ ಸಂಗಠನೆ, ವಾಂಶಿಕ ಪದ್ಧತಿಗಳು, ಕೃಷಿಯ ಅಭ್ಯಾಸಗಳನ್ನು ಅವರಿಗೆ ಕಲಿಸಿ, ಸಮಾಜದ ಸದಸ್ಯರಾಗುವಂತೆ ಇದು ಅವರನ್ನು ಪ್ರೇರೇಪಿಸುತ್ತದೆ. ಇಲ್ಲಿನವರು ತಮ್ಮಲ್ಲಿ ಸಹಕಾರ ಭಾವನೆಯಿಂದ ಇದ್ದು ಗ್ರಾಮದಲ್ಲಿ ಕಟ್ಟುವ ಮನೆ ಕೆಲಸದಲ್ಲಿ, ಮಾಡು ಹೊದಿಸುವಲ್ಲಿ, ಗೋಡೆ ಇಡುವುದರಲ್ಲಿ ಅಥವಾ ಹೊಸಮನೆಗಳನ್ನು ಕಟ್ಟುವಲ್ಲಿ ಅಂಗವಿಕಲರಾದವರಿಗೂ ಆರ್ಥಿಕವಾಗಿ ಹಿಂದುಳಿದವರಿಗೂ ಶ್ರಮದಾನವನ್ನು ಮಾಡುತ್ತಾರೆ. ಗ್ರಾಮದ ಹಬ್ಬದ ದಿವಸ ಅಥವಾ ಇತರ ಸಮಾರಂಭಗಳ ಸಮಯ ಅವರು ನರ್ತಿಸುತ್ತಾರೆ; ಭೋಜನ ಸಮಾರಂಭಗಳಿಗೆ ಉರುವಲನ್ನೂ ಎಲೆಗಳನ್ನೂ ಸಂಗ್ರಹಿಸುತ್ತಾರೆ.

ಸಮಾಜ ವಿಕಾಸಯೋಜನೆಯನ್ನಯ ಕಟ್ಟಿಸಿದ ಈ ಗೋಟಲ್ ಸಂಸ್ಥೆಯು ಸಾಮಾನ್ಯ ಚಟುವಟಿಕೆಗಳಲ್ಲಿ ಮಾತ್ರವಲ್ಲದೇ ಉತ್ತಮ ಕೃಷಿವಿಧಾನ ಮತ್ತು ಪ್ರಾಥಮಿಕ ಆರೋಗ್ಯದ ಬಗ್ಗೆ ಮುರಿಯಾ ವಂಶಜರಿಗೆ ವಿಶೇಷ ಜ್ಞಾನವನ್ನು ಒದಗಿಸುತ್ತದೆ.

ಮೇಲಿನ ಚಿತ್ರದಲ್ಲಿ ಇಂತಹ ಗೋಟಲದ ಮಕ್ಕಳು ಒಂದು ಭೋಜನಕೂಟಕ್ಕೆ ಎಲೆಯದೊನ್ನೆಗಳನ್ನು ತಯಾರಿಸುತ್ತಿರುವುದನ್ನು ಕಾಣಬಹುದು.

ವಿನೋದ ವಿಹಾರ

ಓದುವಿರಾದರೆ ನಕ್ಕುನಲಿಯಬಹುದು!

ಆದರ್ಶ ವಿದ್ಯಾರ್ಥಿ

ಒರ್ವ ಅಧ್ಯಾಪಕನು ತರಗತಿಯಲ್ಲಿ ಕಣ್ಣುಗಳ ಸಂಬಂಧವಾದ ಪಾಠವನ್ನು ವಿವರಿಸುತ್ತಿರುವಾಗ ಸಂದರ್ಭವಶದಿಂದ ಹೇಳಿದನು: "ನಾನು ಈಗ ಕುರುಡನಾಗಿರುತ್ತಿದ್ದರೆ......."

ಅರ್ಧದಲ್ಲಿಯೇ ಒಬ್ಬ ವಿದ್ಯಾರ್ಥಿ ಪೂರ್ತಿ ಮಾಡಿದನು—"ನನಗೆ ತರಗತಿಯಿಂದ ತಪ್ಪಿಸಿಕೊಳ್ಳಲು ಸುಲಭವಾಗುತಿತ್ತು!"

ಸರಿಯಾದ ಕಾರಣ

ಅಧ್ಯಾಪಕ—ಸತೀಶ, ಉಳಿದ ದಿನಗಳಲ್ಲಿ ನಕ್ಷತ್ರಗಳು ಅಗಣಿತವಾಗಿ ಗೋಚರಿಸುವುವಾದರೂ ಹುಣ್ಣಿಮೆಯ ದಿನದಂದು ಅವು ಅಷ್ಟೊಂದು ಸಂಖ್ಯೆಯಲ್ಲಿ ಏಕೆ ತೋರಿ ಬರುವುದಿಲ್ಲ?

ಸತೀಶ—ಹುಣ್ಣಿಮೆಯ ದಿನ ಎಲ್ಲ ನಕ್ಷತ್ರಗಳ ಮನೆಗಳಲ್ಲಿ ಸತ್ಯನಾರಾಯಣ ವ್ರತಾಚರಣೆ ಇರಬೇಕು. ಅವುಗಳೆಲ್ಲ ಅಲ್ಲಿಯೇ ಬೆಳಗುತ್ತಿರಬಹುದು.

ಯಾರು ಹುಚ್ಚ?

ಮದನ ತಂದೆಯ ಬಳಿಗೆ ಬಂದು ಹೇಳಿದ—ಅಪ್ಪಾ, ನಾನಿಂದು ನೂರು ಮಣ ಭಾರವುಳ್ಳ ಒಂದು ಇಲಿಯು ಆಕಾಶದಲ್ಲಿ ಹರಿದಾಡಿಕೊಂಡು ಬಂದು ಬೆಕ್ಕನ್ನು ತಿಂದಂತೆ ಕನಸು ಕಂಡೆನು.

ತಂದೆ—ಏನು ಬೊಗಳುತ್ತೀಯಾ ಹುಚ್ಚಾ, ನಾನು ಒಂದು ಮೀನು ಆನೆಯನ್ನು ನುಂಗಿದ ಕನಸು ಕಂಡಿದ್ದೇನೆ.

ಮದನ—ಹ್ಹಾಂ........!


ಕುಮಾರಿ ಬಿಲ್ಲೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & Co. (N. J.) CALCUTTA-40
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ವಿಕ್ರಮ ಯುಗ

(೩ನೇ ಪುಟದಿಂದ)

ಮಜನು (ಪ್ರಿಯಕರ) ಇವರಿಬ್ಬರ ಮುಖದಿಂದ ಸಂಪ್ರ್ಯನೇಕೆ ಮೇಲಿಂದ ಮೇಲೆ ಹೊರಬರುತ್ತವೆ? ಎಂದಾದರೂ ವಿರಹದಿಂದ ನಿದ್ರೆ ಬಾರದೇ ಜಾಗ್ರಣವಾದರೆ, ಮತ್ತೊಮ್ಮೆ ಮಿಲನ—ಮಾಧುರಿಯ ಬಾಹುಪಾಶದಲ್ಲಿ ರಾತ್ರಿಯಲ್ಲಿ ಕಳೆದದ್ದರಿಂದ ಜಾಗ್ರಣ! ಆದರೆ ಸಮಾಪ್ತಿಗೆ ಜಾಗ್ರಣವೇ ಪ್ರೇಮ ವ್ಯವಹಾರದಲ್ಲಿಯ ಉಪೂತ್ತಮ ಸಾಧಾರಣ ವಿಭಾಜಕವಾಗಿರುತ್ತದೆ. ಪ್ರೇಮ ಪ್ರಕರಣದಿಂದ ಹಿಡಿದು ರಾಜಕಾರಣದಲ್ಲಿಯ ಕೃಷ್ಣನ ಕಪಟ ಕಾರಸ್ಥಾನಗಳ ತನಕ, ಅನಂಗರಂಗಗಳಿಂದ ಸಂಗೀತ ನಾಟ್ಯ ಇತ್ಯಾದಿ ರಸರಂಗಗಳ ತನಕ, ಹಾಗೂ ಪ್ರಜಾಸತ್ತಾತ್ಮಕ ದಿನದ ಝಗ—ಝಗಿಸುವ ವಿದ್ಯುದ್ದೀಪಗಳ ಬೆಳಕಿನಿಂದ ಅಂಧಕಾರದಲ್ಲಿಯ-"ಪವೋಲಕಿ ಚತುರಾಯ" ತನಕ ಅನೇಕ ಸಣ್ಣ-ದೊಡ್ಡ ಸಂಗತಿಗಳ ಆಧಾರವೆಂದರೆ ರಾತ್ರಿಯ ಜಾಗ್ರಣವೇ ಆಗಿರುವದು. ಜಾಗ್ರಣೆಯಲ್ಲಿ ಸೋತವನು ಈ ಎಲ್ಲ ವಿಷಯಗಳಲ್ಲಿಯೂ ಸೋತನೆಂದು ತಿಳಿಯುವದು ಖಂಡಿತ. ಅಂತೆಯೇ ಒಂದು ತರಹದಲ್ಲಿ ಅನೇಕ ಅನೇಕ ವಿಕ್ರಮಗಳ ಮೂಲವೆಂದರೆ ಜಾಗ್ರಣದ ವಿಕ್ರಮವಾಗಿದೆ, ಎಂದು ನಿಸ್ಸಂದೇಹವಾಗಿ ಅಭಿಪ್ರಾಯಪಡಬಹುದು. ದೊಡ್ಡ-ದೊಡ್ಡ ವ್ಯಕ್ತಿಗಳ ಚರಿತ್ರೆಯನ್ನು ನೋಡಿದರೆ, ಅವರು ತಮ್ಮ ಧ್ಯೇಯ ಸಾಧನೆಗಾಗಿ ರಾತ್ರಿಯನ್ನು ದಿವಸವನ್ನಾಗಿ ಮಾರ್ಪಡಿಸುತ್ತಿರುವರೆಂದು ಕಂಡುಬರುತ್ತದೆ. ಒಂದು ಗೀತಾ ವಚನದಲ್ಲಿ ಕಿಂಚಿತ್ ಬದಲಾವಣೆ ಇಲ್ಲವೇ ತಿದ್ದುಪಡಿ ಮಾಡಿ ಹೀಗೆಯೂ ಹೇಳಲು ಬರುವದು—"ಯಾನಿಶಾ ಸರ್ವ ಭೂತಾನಾಂ, ತಸ್ಯಾಂ ಜಾಗರ್ತಿ "ವಿಕ್ರಮಿ"! ಯಾವ ನಿದ್ರಿಕನು ಘೋರಕೆ ಹೊಡೆಯುತ್ತ ಮಲಗುತ್ತಾನೋ ಆತನ ಭಾಗ್ಯವಾದರೂ ನಿದ್ರಿಸುತ್ತದೆ! ಅಖಂಡ ಜಾಗರೂಕತೆಯ ಪಾಠ ಕಲಿಸುವ ಈ ಜಾಗ್ರಣವೇ "ವಿಕ್ರಮಶೀಲ ವೈಭವ"ದ ಮೂಲಾಧಾರವೆಂದು ತಿಳಿಯಬೇಕು.

ಅರ್ಥಾತ್ ಇಂಥ ವಿಕ್ರಮೋಚ್ಛ ಜಾಗ್ರಣೆಯಲ್ಲಿ ಹಾಗೂ "ಸೀಟರ್ ಟ್ರಿಪ್"ನ ಜಾಗ್ರಣೆಯಲ್ಲಿ ಒಂದು ಮೂಲಭೂತ ಬದಲಾವಣೆ ನಿಜವಾಗಿಯೂ ಇರುವದು. ಅದು ಜಾಗ್ರತೆಯ ಸಲುವಾಗಿಯೇ ಜಾಗ್ರಣವಾದರೆ, ವಿಕ್ರಮೋಚ್ಛ ಪುರುಷರ ಜಾಗ್ರಣೆಯು ವಿಶಿಷ್ಟ ಸಾಧ್ಯತೆಯ ಸಲುವಾಗಿ ಇರುತ್ತದೆ. ಅಂದಮೇಲೆ ಜಾಗ್ರಣೆಯೂ ಸಹ ಇಂದು ವಿಕ್ರಮ ಸ್ಥಾಪಿಸಿತು.

ಇವಕೆಲ್ಲ ಮೂಲಾಧಾರವೆಂದರೆ ಇಂದಿನ ಈ 'ವಿಕ್ರಮ ಯುಗ'ವೇ ತಳಪಾಯವಾಗಿದೆ. ಆದ್ದರಿಂದ ಇಂದಿನ ಯುಗವನ್ನು "ವಿಕ್ರಮ ಯುಗ"ವೆಂದು ಕರೆದರೆ ತಪ್ಪಾಗಲಾರದು! ಅದಕ್ಕೋಸ್ಕರ ಸಧ್ಯ ರೂಢಿಯಲ್ಲಿರುವ "ಕಲಿಯುಗ" ಮುಗಿದು ಈ "ವಿಕ್ರಮಯುಗ"ವು ವಿಶ್ವದಾದ್ಯಂತ ಆರಂಭವಾಗುತ್ತಲಿರುವದು.

—ರಾಮಕೃಷ್ಣ ಎ. ಶೈ, ಅಂಕೋಲಾ.

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಸ್ಥಳ ಪರಿಚಯ

ಕರ್ನಾಟಕ ವಿದ್ಯುತ್ಕೇಂದ್ರ ಶಿವ ಸಮುದ್ರಮ್

ಪ್ರಾಕೃತಿಕ ಸೌಂದರ್ಯಯುಕ್ತವಾದ ಈ ಪ್ರದೇಶವು ನಾಡಿನ ಪ್ರಗತಿಗೆ ಉಪಕಾರಿಯಲ್ಲವೆ?

ಮೂರು ಅರಂಗಮ್‌ಗಳಲ್ಲಿ ಮಧ್ಯರಂಗಮ್ ಎಂದು ಪುರಾಣಗಳಲ್ಲಿ ಶಿವಸಮುದ್ರಂ ಅನ್ನು ವರ್ಣಿಸಲಾಗಿದೆ. ಮೈಸೂರು ಮತ್ತು ಮದ್ರಾಸ ರಾಜ್ಯಗಳ ತನ್ನ ದೀರ್ಘವಾದ ಪ್ರವಾಹದಲ್ಲಿ ಕಾವೇರಿ ನದಿಯು ಮೂರು ಕಡೆಗಳಲ್ಲಿ ಕವಲಾಗಿ ಒಡೆದು ಮೂರು ಬಾರಿ ಒಗ್ಗೂಡುತ್ತದೆ. ಈ ವಿಭಾಜಿತ ಮತ್ತು ಸಮಾಗಮ ಸ್ಥಾನಗಳ ನಡುವೆ ಮೂರು ಮಹಾದ್ವೀಪಗಳಿರುತ್ತವೆ. ಈ ದ್ವೀಪಗಳಲ್ಲಿ ಒಂದೊಂದರಲ್ಲಿಯೂ ಒಂದೊಂದು ವೈಷ್ಣವ ದೇವಾಲಯವಿದ್ದು ಒಂದೊಂದೂ ಅರಂಗಮ್ ಎಂಬ ಹೆಸರನ್ನು ಪಡೆದಿದೆ. ಮೈಸೂರಿನ ಸಮೀಪವಿರುವ ಶ್ರೀರಂಗಪಟ್ಟಣವು ಆದಿರಂಗಂ ಎಂದೂ ಶಿವಸಮುದ್ರವು ಮಧ್ಯರಂಗಂ ಎಂದೂ ತಿರುಚಿರಪಳ್ಳಿಯ ಬಳಿಯ ಶ್ರೀರಂಗಂ ಅಂತ್ಯರಂಗಂ ಎಂದೂ ವಿಖ್ಯಾತವಾಗಿದೆ.

ಶಿವಸಮುದ್ರಂ ಬೆಂಗಳೂರಿನಿಂದ ಸುಮಾರು ೭೦ ಮೈಲಿ ದೂರವಿದ್ದು ಮೋಟಾರು ಮಾರ್ಗದಿಂದ ಜೋಡಿಸಲ್ಪಟ್ಟಿದೆ. ಬೆಟ್ಟಗಳ ಸಾಲು ಮತ್ತು ಕಣಿವೆಗಳಲ್ಲಿ ಹಚ್ಚಹಸುರಾದ ಕಾಡುಗಳು ಬೆಳೆದಿದ್ದು ಈ ಪ್ರದೇಶವು ಪ್ರಕೃತಿಯ ಸ್ವಾಭಾವಿಕ ಆದರೂ ಮನಮೋಹಕವಾದ ದೃಶ್ಯಗಳಿಂದ ಕೂಡಿಕೊಂಡಿದೆ. ಶಿವ ಸಮುದ್ರಂ ಅನ್ನು ನಾವು ಸಮೀಪಿಸುವಾಗ ಜೋಗಿನ ಭಯಂಕರ ಗರ್ಜನೆಯು ನಮ್ಮ ಕಿವಿತೆರೆಗಳನ್ನು ಒಡೆಯುವಂತೆ ಕೇಳಿಸಿ, ಪ್ರಕೃತಿಯ ಮೌನ ಸಾಮ್ರಾಜ್ಯವನ್ನು ಭೇದಿಸುತ್ತದೆ. ಅಲ್ಲಿಯೇ ಅಲ್ಲಿಯೇ ಸಮಕೋನಾಕೃತಿಯ ತಿರುವಿನಲ್ಲಿಯೇ ದೈತ್ಯಾಕಾರದ ಶಿವ ಸಮುದ್ರಂ ಜಲಪಾತವನ್ನು ಕಂಡು ನಾವು ಆಶ್ಚರ್ಯಚಕಿತಗಾತ್ರರಾಗುತ್ತೇವೆ.

ಶಿವ ಸಮುದ್ರಂ ಜೋಗವು ಗಗನ ಚುಕ್ಕಿ ಮತ್ತು ಬರಚುಕ್ಕಿ ಎಂಬೆರಡು ಕವಲುಗಳಾಗಿ ಸುಮಾರು ೩ನ್ನೂರು ಅಡಿ ಎತ್ತರದಿಂದ ಉರುಳುತ್ತದೆ. ಉತ್ತರದ ಗಗನ ಚುಕ್ಕಿ (ದಿವ್ಯ ತುಷಾರ)ಯು ಪ್ರಪಾತ ರೂಪದಿಂದ ಪಾತಾಳಕ್ಕಿಳಿಯುತ್ತದೆ. ಇದನ್ನು ನೋಡುವಾಗ ಪ್ರಕೃತಿಯಲ್ಲಿ ಅಡಗಿದ ಭಯಂಕರತೆಯು ಹೃದಯಾಕರ್ಷಣೆಯ ಅರಿವಾಗುವುದು. ಎರಡನೆಯದಾದ ಬರಚುಕ್ಕಿಯು (ಘನ ತುಷಾರ) ಮೊದಲನೆಯದಕ್ಕೆ ಪ್ರತಿಕೂಲವಾಗಿ ಕೆಳಗಿರುವ ಹೊಗೆಯಿಂದಾಚ್ಛಾದಿತವಾದ ಮಡುವಿನತ್ತ ಧಾವಿಸುತ್ತದೆ. ಇದರ ಸೌಂದರ್ಯ ಇನ್ನೂ ಹೆಚ್ಚು. ಬರಚುಕ್ಕಿಯಲ್ಲಿ ಹರಿಯುವ ನೀರಿನ ಪ್ರಮಾಣವೂ ಅಧಿಕವಾಗಿದೆ.

೧೯೦೨ರಲ್ಲಿ ಒಂದು ಜಲವಿದ್ಯುತ್ ಕೇಂದ್ರವು ಇಲ್ಲಿ ಸ್ಥಾಪಿಸಲ್ಪಟ್ಟಿತು. ಶಿವಸಮುದ್ರಂ ವಿದ್ಯುತ್ಕೇಂದ್ರದಲ್ಲಿನ ನೌಕರರ ವಾಸಕ್ಕಾಗಿ "ಶಿವಸಮುದ್ರಂ ಭೂಶಿರ" ಎಂಬ ಒಂದು ಉತ್ತಮವಾದ ವಸಾಹತನ್ನು ಮೈಸೂರು ಸರಕಾರವು ಕಟ್ಟಿಸಿದೆ. ಶಿವಸಮುದ್ರಂನ ನಿಕಟದಲ್ಲಿ 'ಶಿಂಶ' ಎಂಬ ಇನ್ನೊಂದು ಕಡೆಯಲ್ಲಿಯೂ ಜಲವಿದ್ಯುತ್ಕೇಂದ್ರವಿದೆ.

ತನ್ನ ಆಕರ್ಷಣವಾದ ಸೌಂದರ್ಯದಿಂದಾಗಿಯೇ ಈ ದ್ವೀಪದ ಕಥೆ[illegible]ಗಳನ್ನು ಧೈರ್ಯಸಾಹಸಗಳನ್ನು ಅನುಭವಿಸಬೇಕಾಗಿ ಬಂದಿದೆ. ೧೪೫೦ರಲ್ಲಿ ಉಮ್ಮತ್ತೂರಿನ ಒಡೆಯರು ಈ ರಾಜ್ಯದ ಅಧಿಪತಿಗಳಾಗಿದ್ದರು. ಚಾಮರಾಜ ನಗರ ತಾಲೂಕಿನ ಉಮ್ಮತ್ತೂರು ಎಂಬಲ್ಲಿ ಈ ವಂಶಜರ ಮೂಲವು ಇರುವುದೆಂದು ತಿಳಿದು ಬರುವುದರಿಂದ, ವಾಸ್ತವಿಕವಾಗಿ ಇವರು ಉಮ್ಮತ್ತೂರಿನಲ್ಲಿ ರಾಜಧಾನಿಕಟ್ಟಿದ್ದರೂ ಇದೇ ಹೆಸರಿನಿಂದ ಪ್ರಸಿದ್ಧಿಪಡೆದಿದ್ದಾರೆ. ಇವರ ಅರಮನೆಗಳೂ ಕೋಟೆ ಕೊತ್ತಳಗಳೂ ಶಿವಸಮುದ್ರಂ ದ್ವೀಪದಲ್ಲಿದ್ದುವು. ನೈಸರ್ಗಿಕ ರಕ್ಷಣಾಸ್ಥಿತಿಯಿಂದ ಕೂಡಿರುವುದರಿಂದ ಪ್ರಾಯಶಃ ಅವರು ಇದನ್ನು ತಮ್ಮ ಪ್ರಧಾನ ನಗರವೆಂದು ಮಾಡಿಕೊಂಡಿರಬಹುದು. ೧೬ನೆಯ ಶತಮಾನದಿಯಲ್ಲಿ ಸುಪ್ರಸಿದ್ಧ ಗಂಗರಾಜನು ಈ ವಂಶದ ಕೊನೆಯ ಪ್ರತಿನಿಧಿಯು. ಶಿವಸಮುದ್ರಂ ಅನ್ನು ಬಲಪಡಿಸಿ, ತಾನು ಸ್ವತಂತ್ರನೆಂದು ಘೋಷಿಸಿದನು. ಆಗ ವಿಜಯನಗರದಲ್ಲಿ ಕೃಷ್ಣದೇವರಾಯನು ಅಧಿಕಾರಾರೂಢನಾಗಿದ್ದನು. ಈ ಗಂಗನ ದಂಗೆಯನ್ನು ಪಂಥಾಹ್ವಾನವೆಂದು ಬಗೆದು ಶ್ರೀ ಕೃಷ್ಣದೇವರಾಯನು ತಾನೇ ತನ್ನ ಅಪರಿಮಿತ ಸೈನ್ಯದೊಡನೆ ಬಂದು ದಾಳಿಮಾಡಿ ೧೫೧೦ರಲ್ಲಿ ಶಿವ ಸಮುದ್ರಂ ಅನ್ನು ವಶಪಡಿಸಿಕೊಂಡನು. ಮುಂದೆ ಸ್ಥಳೀಯ ನಾಯಕರೊಡನೆ ಆದ ವಿವಿಧ ಕದನಗಳಲ್ಲಿ ಸುಂದರವಾದ ಕೋಟೆ, ನಗರ ನಷ್ಟ ಸೇತುವೆ ಮೊದಲಾದುವು ಮಣ್ಣುಪಾಲಾದುವು.

೧೮೩೧ರಲ್ಲಿ ಆಗ ಮೈಸೂರಲ್ಲಿ ರೆಸಿಡೆಂಟನ ಸ್ಥಳೀಯ ಕಾರ್ಯದರ್ಶಿಯಾಗಿದ್ದ ಶ್ರೀ ರಾಮಸ್ವಾಮಿ ಮೊದಲಿಯಾರರಿಗೆ ಈ ದ್ವೀಪವು ಜಹಗೀರಾಗಿ ಕೊಡಲ್ಪಟ್ಟಿತು. ಈ ಜಹಗೀರುದಾರರು ಕಾವೇರಿಯ ಇಕ್ಕಡೆಗಳನ್ನೂ ದ್ವೀಪಕ್ಕೆ ಸಂಬಂಧಿಸಲು ಎರಡು ಸೇತುವೆಯನ್ನು ಕಟ್ಟಿಸಿದರು.

ಈ ದ್ವೀಪದಲ್ಲಿ ಈಗ ಎರಡು ದೊಡ್ಡ ದೇವಾಲಯಗಳಿರುತ್ತವೆ. ಒಂದರ ಗೋಪುರಗಳು ಬಹಳ ಎತ್ತರವಾಗಿದ್ದು ಸೂರ್ಯನ ಬೆಳಕನ್ನು ಕತ್ತೆತ್ತಿ ನೋಡುವಂತಿರುತ್ತವೆ. ಮೂರು ಮೈಲುದ್ದದ ದ್ವೀಪದ ಹಸುರು ಕಾಡುಗಳೆಲ್ಲವೂ ಈ ಗೋಪುರದ ತುದಿಗೆ ಕಾಣಿಸುತ್ತವೆ. ಈ ಎರಡು ದೇವಾಲಯಗಳಲ್ಲಿ ಒಂದು ಶ್ರೀ ಸೋಮೇಶ್ವರನದು. ಈ ದೇವರನ್ನು ಉಮ್ಮತ್ತೂರು ಮನೆತನದ ಅರಸರು ತಮ್ಮ ಕುಲದೇವರೆಂದು ಪೂಜಿಸುತಿದ್ದರು. ಇನ್ನೊಂದು ಮಂದಿರವು ಶ್ರೀ ವಿಷ್ಣುವಿನದ್ದಾಗಿದ್ದು ಮಧ್ಯರಂಗನಾಥ ಎಂಬ ಕೀರ್ತಿಗೆ ಭಾಜನವಾಗಿದೆ.

ಹೀಗೆ ಸೃಷ್ಟಿ ಸೌಂದರ್ಯಕ್ಕೂ ಇತಿಹಾಸಕ್ಕೂ ಪಾವಿತ್ರ್ಯಕ್ಕೂ ಆಧುನಿಕ ಪ್ರಗತಿ ಸಾಧನಕ್ಕೂ ಹೆಸರು ವಾಸಿಯಾದ ಶಿವ ಸಮುದ್ರಂ ಮೈಸೂರು ರಾಜ್ಯಕ್ಕೆ ಶಿವ (ಮಂಗಳ)ವನ್ನುಂಟು ಮಾಡುವ ಸಮುದ್ರವೇ ಆಗಿದೆ ಎನ್ನಬಹುದಲ್ಲವೆ?

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಅತ್ಯುಪಯುಕ್ತವಾದ ಕೈಗನ್ನಡಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ
ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಒಂದೂವರೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ
ಉಡುಪಿ.

ಕಥಾ ವಿಹಾರ

(೨ನೇ ಪುಟದಿಂದ)

ಕೊರಡುವ ತನಕ ತಡೆದುಕೊಳ್ಳಲೇ ಬೇಕು! ಇಲ್ಲವೆ— ಇಂದೇ ಗುರುಗಳನ್ನು ಬಿಟ್ಟು ಎಲ್ಲಿಯಾದರೂ ಓಡಿ ಹೋಗುವದು. ಎಲ್ಲಿಗೆ?— ಗುರುಗಳು ಎಲ್ಲರಂತಲ್ಲ! ನಾನೆಲ್ಲಿ ಇದ್ದರೂ ತಿಳಿಯಬಲ್ಲರು! ಅಯ್ಯೊ ಇದೆಂತಹ ಪರಿಸ್ಥಿತಿ ಎನ್ನುತ್ತಾ— ತಲೆ ಹಿಡಿದು ಕುಳಿತು ಬಿಟ್ಟ—

ಇತ್ತ ವೃಜಸೇನರು ತಮ್ಮ ಮಗಳ ಚಿಂತೆ— ರಾವಲನ ಪಲಾಯನ— ಅವನ ತಂದೆ— ಮಲತಾಯಿಯರ ಚಿಂತೆ- ಎಲ್ಲವನ್ನೂ ವಿಶದವಾಗಿ ತಿಳಿಸಿ- ಗುರುಗಳಲ್ಲಿ ಭಕ್ತಿಯಿಂದ ಮಗಳ ಬಗ್ಗೆ ಏನು ಮಾಡುವದೆಂದು ನಮ್ರರಾಗಿ ತಮ್ಮ ಚಿಂತೆಯನ್ನು ಅವರಲ್ಲಿ ವಿನಂತಿಸಿದರು.

ಜಾತಿಯಿಂದ ವೃಜಸೇನ ಗುಪ್ತರೂ "ಸಿಖ"ರಾಗಿದ್ದು, ತಮ್ಮ ಹೆಸರನ್ನು "ಗುಪ್ತ" ಎಂದು ಬದಲಾಯಿಸಿ ಕೊಂಡಿದ್ದರು, ಗುರುಗಳಲ್ಲಿ ಅವರಿಗೆ ತುಂಬಾ ಶ್ರದ್ಧೆ ಇತ್ತು! ಅಂತೆಯೇ ಗುರುಗಳಾದರೂ ಸ್ವರ್ಣಕ್ಷೇತ್ರ ವಿಶ್ವನಾಥನ ದರ್ಶನಕ್ಕೆ ಬಂದಾಗ ವೃಜಸೇನರಿಗೆ ಭೆಟ್ಟಿಯಿತ್ತು ಅವರ ಆದರಾತಿಥ್ಯ ಪಡೆದು ಕಾಣಿಕೆ ಸ್ವೀಕರಿಸಿ ಹೋಗುವ ವಾಡಿಕೆ.

ತ್ರಿಕಾಲಜ್ಞಾನಿ ಗುರುಗಳು "ವೃಜಸೇನರೇ, ಹಾಗಾದರೆ, ಇದೇ ಪಕ್ಷದಲ್ಲಿ ತಮ್ಮ ಮಗಳ ಲಗ್ನದ ವ್ಯವಸ್ಥೆಯಾಗಲಿ. ಲಗ್ನದ ನಂತರವೇ ನಾವು ಇಲ್ಲಿಂದ ತಿರುಗುತ್ತೇವೆ" ಎಂದರು.

ವೃಜಸೇನರಿಗೆ ಖೇದಾಶ್ಚರ್ಯಗಳಾದುವು. ರಾವಲನಿಲ್ಲದೆ ಲಗ್ನವಾಗಲು ಸುನಂದೆ ಒಪ್ಪುವಳೇ........ಗುರುಗಳೇನೆನ್ನುತ್ತಿದ್ದಾರೆ— ಚಿಂತಿಸುತ್ತಾ "ಸ್ವಾಮಿ, ಇಂದಿನ ಹೆಣ್ಣು ಮಕ್ಕಳು! ಅದರಲ್ಲಿಯೂ ಒಬ್ಬಳೇ ಮಗಳು ತಾನೆಣಿಸಿದ ವ್ಯಕ್ತಿಯ ಹೊರತು ಇನ್ನೊಬ್ಬರೊಡನೆ ಸೌಖ್ಯದಿಂದಿರಬಹುದೇ?........ಅವಳಿಗನುರೂಪ ವರ ರಾವಲನ ಹೊರ್ತು ಇನ್ನಾರೂ ಇಲ್ಲ" ಎಂದರು.

ಗುರುಗಳು ಮುಗುಳುನಗುತ್ತಾ "ರಾವಲನನ್ನು ಕರೆತಂದು ನಿಮ್ಮಲ್ಲಿ ಸೇರಿಸುವ ಭಾರ ನನ್ನದು. ಲಗ್ನದ ವ್ಯವಸ್ಥೆ ಇಂದಿಗೆ ನಾಲ್ಕನೇ ದಿನದಲ್ಲಿಯೇ ಆಗಲಿ" ಎಂದರು.

ಗುರುಗಳ ಮನವನ್ನರಿಯಲಾಗದೇ 'ಹೂ'ಗುಟ್ಟಿ ವೃಜಸೇನರು ಮನೆಗೆ ತೆರಳಿದರು. ಗುರುಗಳ ಮೇಲೆ ದೃಢ ವಿಶ್ವಾಸವಿಟ್ಟು ಲಗ್ನದ ತಯಾರಿ ನಡೆಸತೊಡಗಿದರು.

ಗುರುಗಳು ರಾವಲನನ್ನು ಸಮೀಪಿಸಿ— "ರಾವಲ — ನೀನು ನನ್ನ ಮಾತನ್ನಾಲಿಸುವೆಯಾ?"

ರಾವಲ: "ಅದೇನು ಗುರುಗಳೇ ಹಾಗೆ ಕೇಳುವಿರಿ? ತಮ್ಮ ಈ ಶರೀರವೇ ತಮ್ಮ ಆಜ್ಞಾಪಾಲನೆಗೆ ಸಿದ್ಧವಿದೆ."

ಗುರುಗಳು: "ಕರ್ಮಯೋಗವೆಂದರೆ ಅತಿ ಹೆಚ್ಚಿನದು. ನೀನು ವಿರಕ್ತನಾಗಿ ಇರುವುದಕ್ಕಿಂತ ನಿನ್ನ ಕೊರಗಿನಲ್ಲಿರುವವರ ಮನಸ್ಸನ್ನು ತೃಪ್ತಿಗೊಳಿಸಿದರೇ ದೇವರು ಮೆಚ್ಚುವನು."

ರಾವಲ: ಅರ್ಥವಾಗಲಿಲ್ಲ! ತಮ್ಮಾಜ್ಞೆಯೇನೆಂದು ಕೇಳಲೇ?"

ಗುರುಗಳು: 'ನೀನು ಖಾವಿಯನ್ನೆಲ್ಲ ತೆಗೆದು ನಿನ್ನ ಕಾಷಾಯ ವಸ್ತ್ರ ತೆಗೆದು ನಾಗರಿಕನಾಗಬೇಕು. ನಿನ್ನ ಬಗ್ಗೆ ಕೊರಗುತ್ತಿರುವ ಹೆಣ್ಣನ್ನು ಕೈಹಿಡಿದು ಬಾಳಬೇಕು."

ಒಂದು ಹೆಣ್ಣಿನ ರಕ್ಷಣೆಯ ಬಗ್ಗೆ ನೀನು ನಿನ್ನ ನಿರ್ಧಾರ ಬದಲಿಸಲೇ ಬೇಕು. ಅವರೆಲ್ಲರೂ ಪಶ್ಚಾತ್ತಾಪಗೊಂಡಿದ್ದಾರೆ ಅದಕ್ಕಿಂತ ಹೆಚ್ಚಿನ ಪ್ರಾಯಶ್ಚಿತ್ತವಿಲ್ಲ!"

ರಾವಲನು ತಲೆಯ ಮೇಲೆ ಕೈಯಿಟ್ಟು ಕುಳಿತು— ಬಿಟ್ಟ! ಯಾವದರಿಂದ ದೂರವಾಗಲು ಅವನು ಹವಣಿಸಿದ್ದನೋ ಅದು ಅವನನ್ನು ಸುತ್ತುಗಟ್ಟಿ ಬಂದಿತ್ತು! ಅವನು ಗಂಭೀರನಾಗಿದ! ಕೆಲ ನಿಮಿಷ ಗುರುಗಳು ಹೇಳುವದು ಸತ್ಯವೇ ಎಂದು ಅವನಿಗೆ— ಶಂಕೆಯಾಯಿತು. 'ತಮ್ಮಾಜ್ಞೆ' ಯೆನ್ನುತ್ತ ಅವನು ಎದ್ದು ನಿಂತ!

ಅಂದೇ ರಾವಲನು ಜೋಗಿ ವೇಷವನ್ನು— ತ್ಯಜಿಸಿದ! ಅವನಿಗೆ ಗುರುಗಳ ಆಶ್ರಮದಿಂದ ಹೊರಬಿದ್ದು ಜನರನ್ನು ಕಾಣುವದೂ ಕಠಿಣವಾಗಿತ್ತು! ಅಂದೇ ಸಾಯಂಕಾಲ ವೃಜಸೇನರು ಬಂದಲ್ಲಿ ಅವರಲ್ಲಿ— ವಿಷಯವನ್ನು ವಿವರಿಸಿ ಕ್ಷಮೆ ಬೇಡುವದೆಂದು ತಿಳಿದು ಆ ಬಗ್ಗೆ ದಾರಿ ಕಾಯ ತೊಡಗಿದ! ಆದರೆ ಇಂದು ಬಂದವರು ಶ್ರೀಮತಿ ಗುಪ್ತಾಜಿಯವರಾಗಿದ್ದರು! ದೂರದಿಂದ ಅವರು ಬರುತ್ತಿರುವದನ್ನು ಸುನಂದೆಯೂ ಅವರೊಡನಿರುವದನ್ನೂ ತಿಳಿದು ಕೂಡಲೇ ರಾವಲನು ಗುರುಗಳನ್ನು ಸಮೀಪಿಸಿ ತಮ್ಮ ಆಕ್ಷೇಪವಿಲ್ಲದಿದ್ದರೆ ನಾನೂ ಶ್ರೀಮತಿ ಗುಪ್ತಾರವರೊಡನೆ— ಮಾತಾಡಿ ಬರುವೆ ಎನ್ನುತ್ತಾ ತಲೆ ತಗ್ಗಿಸಿ ನಿಂತ— ಗುರುಗಳು "ಆಗಲಪ್ಪಾ! ಹೋಗು" ಎಂದರು. ಹೊರಬಂದ ರಾವಲನು ಓಡಿ ಒಂದು ಶ್ರೀಮತಿ ಗುಪ್ತರವರನ್ನು ವಂದಿಸಿದ. ಸುನಂದೆಗಂತೂ ಆನಂದಾಶ್ಚರ್ಯಗಳ ಜೊತೆಗೆ ತನ್ನ ಭಾವೀ ಪತಿಯನ್ನು ಕಂಡು ಲಜ್ಜೆಯೂ ಉಂಟಾಗಿತ್ತು!

ಸುನಂದೆಯತ್ತ ತಿರುಗಿದ ರಾವಲನು ತನ್ನ ತಪ್ಪನ್ನು ಕಂಗಳಲ್ಲಿಯೇ ಕ್ಷಮಿಸುವಂತೆ ಹೇಳಿ ಅವಳೆರಡೂ ಕೈಹಿಡಿದುಕೊಂಡಿದ್ದ— ಸ್ವಚ್ಛ ಪ್ರೇಮ ಭಾವನೆಯಲ್ಲಿ ಒಂದುಗೂಡಿದ ದೃಷ್ಟಿಯಲ್ಲಿದೆಷ್ಟು ನಿಮಿಷ ಮಾಧುಕತೆಗಳಿದ್ದವೊ ಇಬ್ಬರಿಗೂ ಅರಿವಿದ್ದಿಲ್ಲ! ಆಚೆ— ಗುರುಗಳು ನೋಡುತ್ತಿದ್ದರು— ಇತ್ತ ಗೇಟಿನಲ್ಲಿ ಅದೇ ತಾನೇ ಬಂದ ವೃಜಸೇನರು ಸಹ— ಮಂತ್ರಮುಗ್ಧರಾಗಿ ತೆರೆದ ಕಂಗಳಿಂದ ಭಾವೀ- ದಂಪತಿಗಳನ್ನು ಸಾನಂದಾಶ್ರುಗಳಿಂದ ನೋಡುತ್ತಲೇ ಇದ್ದರು. ಶ್ರೀಮತಿ ಗುಪ್ತಾರವರು ಸಹ ನಿಂತೇ ಇದ್ದರು.

ಗುರುಗಳು ಸಮಯವನ್ನರಿತು "ಮಗೂ ರಾವಲ, ಅತಿಥಿಗಳು ನಿಂತೇ ಇದ್ದಾರೆ. ಒಳಗೆ ಕರೆದು ತಾ" ಎಂದೆನ್ನುತ್ತಲೇ ತಮ್ಮಿರವನ್ನರಿತ ರಾವಲ ಸುನಂದೆಯರಿಬ್ಬರಿಗೂ ನಾಚಿಕೆಯಾಗಿತ್ತು.

ಗುರುಗಳಿಚ್ಛೆಯಂತೆ ಲಗ್ನ ವ್ಯವಸ್ಥೆಯಾಯಿತು. ತನ್ನ ತಂದೆಯವರಿಗೆ ಬರಲು ಟೆಲಿಗ್ರಾಮು ಕಳಿಸಿದ. ಬಲದೇವಸಿಂಗರು ಆನುಬಾಯಿಯವರೊಡನೆ ಲಗ್ನಕ್ಕೆ ಬಂದರು. ಮಗನ ಕಷ್ಟದನುಭವವನ್ನೂ ಕೇಳಿ ತಂದೆಯ ಮನ ಕರಗಿತಾದರೂ ಮಗನ ಅಂದಿನ ಸಮಿಂತ್ಯ, ಯೋಗ್ಯರೊಡನೆ ಅವನ ಸಂಬಂಧ ಇವೆಲ್ಲವೂ ಬಲದೇವಸಿಂಗರನ್ನು ಆನಂದಗೊಳಿಸಿದವು. ಆನೂಬಾಯಿಯವರು, ರಾವಲನೊಡನೆ ತನ್ನ ತಪ್ಪನ್ನು ಕ್ಷಮಿಸುವಂತೆ ಕೇಳಿಕೊಂಡಳು. ರಾವಲನು ಎಲ್ಲರನ್ನು ವಿನೀತಭಾವದಿಂದ ಸಂತೈಸಿದ! ಎಲ್ಲರೂ ಗುರುಗಳನ್ನೂ ಆನಂತ ಶಿಷ್ಯರನ್ನೂ ವಂದಿಸಿ ಬೀಳ್ಕೊಟ್ಟರು.

ಗುರುಗಳನ್ನು ಬೀಳ್ಕೊಡುವಾಗ ರಾವಲನಿಗೆ ದುಃಖವುಮ್ಮಳಿಸಿತ್ತು! ವರ್ಷಕ್ಕೊಮ್ಮೆ ಭೆಟ್ಟಿ ಈಯುವೆನೆಂಬ ಭರವಸೆಯ ಮೇಲೆ ಗುರುಗಳು ಹೊರಟರು. ಸುನಂದೆ ಅತ್ತೆಮಾವಂದಿರ ಮಮತೆ ಪಡೆಯಲು, ಅವಳ ಸೌಜನ್ಯವೇ ಕಾರಣವಾಗಿತ್ತು. ರಾವಲನು ತನ್ನ ೩೦೦೦ ರೂಪಾಯಿ ಗಳಿಕೆಯನ್ನು ತಂದೆಯವರ ಕೈಯಲ್ಲಿಡುತ್ತಾ ಇನ್ನು ತಾವು ಬೇರೆ ನೌಕರಿ ಮಾಡಕೂಡದೆಂದು ವಿನಂತಿಸಿದ. ವೃಜಸೇನರ ಇಚ್ಛೆಯಂತೆ ರಾವಲನು ಅವರ ಮನೆಯಲ್ಲಿಯೇ ಅವರ ಮನೆ ಅಳಿಯನಾಗಿ ಅವರ ಕೊಂಟ್ರಾಕ್ಟರ ಲೇವಾದೇವಿಯ ಜವಾಬುದಾರಿ ವಹಿಸಿಕೊಂಡು ಬನಾರಸಿನಲ್ಲೇ ಇರುವದೆಂದು ನಿರ್ಣಯವಾಯಿತು. ಬಲದೇವಸಿಂಗರು ವೃಜಸೇನರ ಮಾತಿಗೆ ವಿರುದ್ಧವಾಗಲಾರದಂತಾಗಿ ತಮ್ಮ ಒಪ್ಪಿಗೆಯನ್ನಿತ್ತರು. ಎಲ್ಲಿಯಾದರೂ ಮಗನು ಸಂತೋಷಾರೋಗ್ಯದಿಂದಿದ್ದರೆ ಸರಿ— ಎಂದವರೆಣಿಸಿದರು. ರಾವಲನು ತಮ್ಮಂದಿರ ಶಿಕ್ಷಣ ಖರ್ಚಿಗೆ ಪ್ರತಿ ತಿಂಗಳ ೧೦೦ ರೂಪಾಯಿ ಕಳಿಸುವೆನೆಂದ ಮೇಲಂತೂ ಆನುಬಾಯಿಯವರಿಗೆ ಆನಂದಭಾಷ್ಪವಾಯಿತು. ಅವರು ತನ್ನ ತಪ್ಪಿನ ಬಗ್ಗೆ ಪಶ್ಚಾತ್ತಾಪಗೊಂಡಿದ್ದರು. ಅವರು "ಅಪ್ಪಾ, ರಾವಲ, ಆರು ತಿಂಗಳಿಗೊಮ್ಮೆಯಾದರೂ ಹೋಶಿಯಾರಪುರಕ್ಕೆ ಬರುತ್ತಿರಪ್ಪಾ" ಎಂದರು. ರಾವಲನು "ಆಗಲಮ್ಮಾ! ಮುಂದಿನ ಗುರು ಪಾಡ್ಯಕ್ಕೆ ಸುನಂದೆಯನ್ನು ಕರಕೊಂಡು ಬರುವೆ" ಎಂದ. ಬಲದೇವಸಿಂಗರೂ ಆನುಬಾಯಿಯವರೂ ಊರಿಗೆ ಮರಳಿದರು.

ರಾವಲನು ತನ್ನ ಮನೆಯಿಂದ ಹೊರಟ ನಂತರ ವಿಷಯವನ್ನೆಲ್ಲಾ ಆಲೋಚಿಸಿ ಎಲ್ಲಾ 'ದೈವಲೀಲೆ' ಎನ್ನುತ್ತಾ ಸುನಂದೆಯೊಡನೆ ತನ್ನ ಕತೆಯನ್ನೆಲ್ಲ ತಿಳಿಸಿದ. ಸುನಂದೆಗೆ ಅವನ ಮುಂಚಿನ ಕಷ್ಟದ ವಿರಕ್ತ ಜೀವನ ಆಶ್ಚರ್ಯವಾಗಿತ್ತು! ಅವನ ದೃಢಸಂಧಾರ........ಅಬ್ಬ! ಸುನಂದೆ ಕೇಳಿದಳು........ಇನ್ನಾದರೂ ಊರು ಬಿಟ್ಟು ಓಡುವದಿಲ್ಲವಷ್ಟೆ? ಎನ್ನುತ್ತಾ ಅವನ ಕಾಲು ಹಿಡಿದಳು.

— ಸಿರಿಪತಿ.



ಎಳೆಯ ಪ್ರಾಯದವರಿಗೆ ಪ್ರಯಾಣಮಾಡಲು ಯೋಗ್ಯವಾದ ಬರ್ಮಿಂಗೇಮ ಬೈಸಿಕಲ್ಲುಗಳು. ಇವುಗಳಲ್ಲಿ ಹಾನಿಯಾಗುವುದು ಕಡಿಮೆ.

TRADE SR MARK
REGD.
ನಾಡಿನ ಜನಪ್ರಿಯ
ಎಸ್. ಆರ್.
ಬೀಡಿಗಳು
S. R. BEEDI WORKS, UDIPI, S. K.

NAVAYUGA
REGD. NO. M. 3619

UDIPI, THURSDAY
21-5-1959

LICENSE NO: 31
Licensed to Post without Prepayment

ಕಲಾಕ್ಷೇತ್ರ

ವಿಶ್ವ ವಿಖ್ಯಾತವಾದ ಕೋನಾರ್ಕ ದೇವಾಲಯ

ನಷ್ಟಗೊಳ್ಳುತ್ತಿರುವ ಇದನ್ನು ಸಂರಕ್ಷಿಸುವ ಕಾರ್ಯ ನಿರಂತರವಾಗಿ ಸಾಗುತ್ತಿದೆ.

ವಿಶ್ವವಿಖ್ಯಾತ ಕೋನಾರ್ಕ್ ದೇವಾಲಯಕ್ಕೆ, ಕಳೆದ ಎರಡು ವರ್ಷಗಳಿಂದ ಭಾರತ ಸರ್ಕಾರದ, ಪ್ರಾಚ್ಯ ವಸ್ತು ಸಂಶೋಧನ ವಿಭಾಗದವರು ವಿಶೇಷ ಗಮನ ವಿತ್ತಿರುವರು. ಈ ದೇವಾಲಯದ ಮುಖ್ಯ ಸಂರಕ್ಷಕರೇ ಇವರು.

ಬಂಗಾಳ ಕೊಲ್ಲಿಗೆ ಕೆಲವು ಮೈಲಿಗಳ ದೂರದಲ್ಲಿ ಭುವನೇಶ್ವರಕ್ಕೆ ಆಗ್ನೇಯಕ್ಕೆ ೩೧ ಮೈಲಿಗಳ ದೂರದಲ್ಲಿಯೂ ಪುರಿಗೆ ಈಶಾನ್ಯದಲ್ಲಿ ೧೮ ಮೈಲಿಗಳ ದೂರದಲ್ಲಿಯೂ ಇರುವ ಕೋನಾರ್ಕ್‌ನಲ್ಲಿ ಈ ಬೃಹತ್ ಪ್ರಮಾಣದ ದೇವಾಲಯವಿರುವುದು.

ಈ ದೇವಾಲಯ ಸೂರ್ಯದೇವಸ್ಥಾನ. ಇದು ೨೪ ಚಕ್ರಗಳುಳ್ಳ ೭ ಕುದುರೆಗಳಿಂದ ಎಳೆಯಲ್ಪಡುವ ರಥದ ರೀತಿಯಲ್ಲಿ ನಿರ್ಮಾಣಗೊಂಡಿದೆ. ಕೋನಾರ್ಕ ಎಂದರೆ "ಕೋನದಲ್ಲಿರುವ ಸೂರ್ಯ" ಎಂಬ ಈ ಸ್ಥಳದ ಹೆಸರು ಇದನ್ನು ಸ್ಪಷ್ಟಪಡಿಸುತ್ತದೆ.

ಈ ದೇವಾಲಯವು ಒರಿಸ್ಸಾ ವಾಸ್ತು ಶಿಲ್ಪ ಶೈಲಿಗೆ ಒಂದು ನಿದರ್ಶನವಾಗಿರುವುದು. ಇದರಂತೆ ಭುವನೇಶ್ವರದಲ್ಲಿರುವ ಲಿಂಗರಾಜ ಮತ್ತು ಇತರ ದೇವಾಲಯಗಳು ಒರಿಸ್ಸಾವಾಸ್ತು ಶಿಲ್ಪ ಕಲೆಗೆ ಮಾದರಿಗಳಾಗಿವೆ. ಅಕ್ಬರನ ಆಸ್ಥಾನದಲ್ಲಿದ್ದ ಇತಿಹಾಸ ಶಾಸ್ತ್ರಜ್ಞ ಅಬುಲ್ ಫಜಲ್ ಈ ದೇವಾಲಯವನ್ನು: "ಸುಲಭ ತೃಪ್ತರಲ್ಲದ ವಾಸ್ತು ಶಿಲ್ಪಕಲಾ ಪರಿಣತರೂ ಈ ದೇವಾಲಯವನ್ನು ನೋಡಿದಾಗ ದಿಗ್ಭ್ರಮೆಗೊಳ್ಳದಿರಲಾರರು" ಎಂದು ವರ್ಣಿಸಿರುವನು. ದೇವಾಲಯವನ್ನು ಈಗಿನ ಭಗ್ನಾವಸ್ಥೆಯಲ್ಲಿ ಪ್ರೇಕ್ಷಕರು ನೋಡಿದಾಗಲೂ ಅಬುಲ್ ಫಜಲ್‌ನ ಅಭಿಪ್ರಾಯಕ್ಕೆ ಪೂರ್ಣ ಮನ್ನಣೆಯನ್ನೀಯುವರು.

ಈ ದೇವಾಲಯವನ್ನು ೧೩ನೆಯ ಶತಮಾನದಲ್ಲಿ ಒರಿಸ್ಸಾದ ಗಂಗವಂಶದ ದೊರೆಗಳು ಕಟ್ಟಿಸಿದರು. ಕೋನಾರ್ಕಿಗೆ ಅನೇಕ ಮೈಲಿಗಳ ದೂರದಲ್ಲಿ ಎಲ್ಲಿಯೂ ಸಿಗದಂತಹ ಬೃಹತ್ ಪ್ರಮಾಣದ ಕಲ್ಲಿನಲ್ಲಿ ಈ ಕೆಲಸವನ್ನು ಮಾಡಲು ಕೆಲಸಗಾರರು ಅದ್ಭುತ ಸಾಹಸಿಗಳಿರಬೇಕು. ಭಾರತದಲ್ಲೇ ಅತ್ಯಂತ ಎತ್ತರವಾದ ಸ್ಮಾರಕವಿದೆನ್ನಬಹುದು. ಗರ್ಭಗುಡಿಯ ಮುಂದಿರುವ ತೋರಣದ ಎತ್ತರವನ್ನು ಗಣನೆಗೆ ತೆಗೆದು ಕೊಂಡು ಅಂದಾಜು ಮಾಡಿದರೆ, ಈ ದೇವಾಲಯದ ಎತ್ತರವು ೨೦೦ ಅಡಿಗಳಿಗೂ ಮಿಕ್ಕಿವುದೆಂದು ವ್ಯಕ್ತವಾಗುತ್ತದೆ. ಅರ್ಥಾತ್, ಭಾರತದಲ್ಲಿರುವ ಎಲ್ಲಾ ದೇವಸ್ಥಾನಗಳ ಎತ್ತರಕ್ಕಿಂತಲೂ ಇದು ಎತ್ತರವಾಗಿರುವುದು. ಈ ದೇವಾಲಯದ ಒಂದೊಂದು ಭಾಗದ ಆಕಾರವೂ ಲೆಕ್ಕಾಚಾರವಾಗಿ ಬೃಹತ್ ಪ್ರಮಾಣದಲ್ಲಿಯೇ ಇರುವುದು. ಉದಾಹರಣೆಗೆ: ನವಗ್ರಹಗಳನ್ನು ಚಿತ್ರಿಸಿರುವ ಶಿಲೆಯ ವೇದಿಕೆಯು ೧೯ ಅಡಿ ೯ ಅಂಗುಲ ಉದ್ದವೂ ೪ ಅಡಿ ಎತ್ತರವೂ ೩ ಅಡಿ ೯ ಅಂಗುಲ ಆಳವೂ ಉಳ್ಳಶಿಲೆಯಾಗಿರುವುದು.

ದೌರ್ಭಾಗ್ಯವಶಾತ್, ಈ ದೇವಾಲಯದ ಶಿಖರವು ಯಾವುದೋ ಸಮಯದಲ್ಲಿ ಬಿದ್ದುಹೋಗಿದೆ. ೧೮೩೭ರಲ್ಲಿ ಫರ್ಗೂಸನ್‌ರವರು ಅಲ್ಲಿಗೆ ಆಗಮಿಸಿದಾಗ ಈ ಶಿಖರದ ಒಂದು ಖಂಡ ಅಲ್ಲಿ ನಿಂತಿತ್ತು. ಆದರೆ, ಅನಂತರ ೫೦ ವರ್ಷಗಳ ಅವಧಿಯಲ್ಲಿ ಅದೂ ಯಾವುದೋ ಸಮಯದಲ್ಲಿ ಕೆಳಗೆ ಬಿದ್ದು ನಷ್ಟಹೊಂದಿರುವುದು. ಈ ಶಿಖರವು ಕೆಳಗೆ ಬಿದ್ದುದರ ಪರಿಣಾಮವಾಗಿ ದೇವಾಲಯದ ಸುತ್ತಲೂ ಕುಸಿದ ಗೋಡೆ ಮಣ್ಣು ಆವರಿಸಿರುವುದು. ಇದರ ಜೊತೆಗೆ, ಸಮುದ್ರದ ಕಡೆಯಿಂದ ಬೀಸಿಬಂದ ಮರಳು ಈ ದೇವಾಲಯವನ್ನು ಬಹು ಎತ್ತರದ ವರೆಗೆ ಆವರಿಸಿರುವುದು.

ದೇವಾಲಯದ ಸಂರಕ್ಷಣೆ

ಕೋನಾರ್ಕ್ ದೇವಾಲಯದ ಸಂರಕ್ಷಣೆ ಹಾಗೂ ಮೇಲ್ವಿಚಾರಣೆಯನ್ನು ಈ ಶತಮಾನದ ಮೊದಲನೆಯ ದಶಕದಲ್ಲಿ ಆರಂಭಿಸಲಾಯಿತು. ಆಗ ಈ ಕಾರ್ಯವು ಅಷ್ಟು ಸುಲಭಸಾಧ್ಯವಾಗಿರಲಿಲ್ಲ. ಶಿಖರವು ಉರುಳಿ ಬಿದ್ದನಂತರ, ಜರ್ಜರಿತಗೊಂಡ ಭಾಗಗಳನ್ನೆಲ್ಲಾ ದುರುಸ್ತುಗೊಳಿಸಬೇಕಾಗಿತ್ತು. ತೋರಣದ ಕಲ್ಲುಗಳು ಕೆಳಗೆ ಬೀಳುತ್ತಿದ್ದುವು. ಅವುಗಳನ್ನು ಯಥಾಸ್ಥಾನದಲ್ಲಿ ನಿಲ್ಲಿಸಬೇಕಾಯಿತು. ದೇವಾಲಯದ ಇತರ ಭಾಗಗಳೂ ಭಗ್ನಗೊಳ್ಳುತ್ತಿದ್ದುದನ್ನೂ ತಡೆಯಬೇಕಾಗಿತ್ತು. ಇವೆಲ್ಲದರ ಜೊತೆಗೆ, ಮರಳು ಮತ್ತು ಕುಸಿದ ಗೋಡೆಗಳ ಮಣ್ಣಿನ ಆಕ್ರಮಣವನ್ನು ನಿಲ್ಲಿಸಬೇಕಾಗಿತ್ತು.

ಈ ಕಠಿಣತಮ ಕಾರ್ಯ ಪ್ರಾಚ್ಯ ವಸ್ತು ಶೋಧನ ವಿಭಾಗದವರು ಬಹು ಯಶಸ್ವಿಯಾಗಿ ನಿರ್ವಹಿಸಿದರು. ಪ್ರಾಚ್ಯ ವಸ್ತು ಶೋಧನ ವಿಭಾಗದ ಕೆಲಸಗಾರರು ಈ ದೇವಾಲಯದ ಮೂಲಭೂತ ಶೈಲಿಗೆ ಕುಂದು ಬರದಂತೆ ಸರ್ವಾಂಗೀಣ ದುರಸ್ತಿಗಾಗಿ ಶ್ರಮಿಸಿದರು.

೧೯೫೦ರಲ್ಲಿ ಭಾರತ ಸರ್ಕಾರದವರು ಈ ದೇವಾಲಯದ ಸಂರಕ್ಷಣೆಯ ವಿಷಯವಾಗಿ ಸಲಹೆ ನೀಡಲು ಪರಿಣತರ ಸಮಿತಿಯೊಂದನ್ನು ನೇಮಿಸಿದರು. ಈ ಸಮಿತಿಯಲ್ಲಿ ಪ್ರಾಚ್ಯ ಶೋಧನೆ, ಎಂಜಿನಿಯರಿಂಗ್. ಕಲೆ, ಭೂಗರ್ಭ, ರಾಸಾಯನಿಕ ಇವೇ ಮೊದಲಾದ ವಿಷಯಗಳಲ್ಲಿ ತಜ್ಞರಾದವರಿದ್ದರು. ಮಳೆಯ ನೀರು ಈ ದೇವಾಲಯಕ್ಕೆ ಯಾವ ರೀತಿಯ ಹಾನಿಯನ್ನೂ ಮಾಡದಿರುವಂತೆ ಕೈಗೊಳ್ಳಬೇಕಾದ ಕ್ರಮಗಳನ್ನೂ ಇದಲ್ಲದೆ, ದೇವಾಲಯದ ನಾಲ್ಕೂ ಕಡೆಗಳಲ್ಲಿ ತುಂಬಿಕೊಂಡಿರುವ ಮರಳನ್ನು ಸಾಗಿಸುವ ಹಾಗೂ ಶಿಲ್ಪಕೃತಿಗಳನ್ನೂ ರಾಸಾಯನಿಕ ವಸ್ತುಗಳಿಂದ ಸಂರಕ್ಷಿಸುವ ಕ್ರಮಗಳನ್ನೂ ಈ ಸಮಿತಿಯು ಸಲಹೆ ಮಾಡಿತು.

ಈ ಸಮಿತಿಯ ಶಿಫಾರಸುಗಳನ್ನು ತ್ವರಿತಗತಿಯಲ್ಲಿ ಕಾರ್ಯರೂಪಕ್ಕೆ ತರಲಾಯಿತು. ಅಲ್ಲಿ ದೇವಾಲಯದ ನಾಲ್ಕೂ ಕಡೆ ತುಂಬಿಕೊಂಡಿದ್ದ ಮರಳು ಹಾಗೂ ಅನಗತ್ಯ ಮಣ್ಣು ಎಲ್ಲವನ್ನೂ ತೆಗೆಯಲಾಯಿತು. ಅದರ ಫಲವಾಗಿ ದೇವಾಲಯದ ಕೆಳಗಿನ ಇದುವರೆಗೂ ಅವ್ಯಕ್ತವಾಗಿದ್ದ, ಅನೇಕ ಭಾಗಗಳು ವ್ಯಕ್ತಗೊಂಡವು. ಈ ರೀತಿ ವ್ಯಕ್ತಗೊಂಡ ಭಾಗಗಳಲ್ಲಿ ಪ್ರವೇಶದ್ವಾರವೂ ಇರುವುದು. ಈ ದೇವಾಲಯದ ಕಟ್ಟಡದಲ್ಲಿ ಎಲ್ಲೆಲ್ಲಿ ಬಿರುಕು ಅಥವಾ ಕಂಡಿಗಳು ಬಿಟ್ಟುಕೊಂಡಿದ್ದವೋ ಅಲ್ಲೆಲ್ಲಾ ಅವುಗಳನ್ನು ಮುಚ್ಚಲಾಯಿತು. ಇದರಿಂದಾಗಿ, ಕಟ್ಟಡದೊಳಕ್ಕೆ ನೀರಿಳಿಯುವುದು ನಿಂತಿತು. ಸಮುದ್ರದ ಕಡೆಯಿಂದ ಬರುವ ಲವಣಾಂಶ ಮಿಶ್ರವಾದ ಗಾಳಿಯನ್ನು ತಡೆಯಲು ದೇವಾಲಯದ ಸುತ್ತಲೂ ದಟ್ಟವಾಗಿ ಸರ್ವೇ ಮರಗಳನ್ನು ಬೆಳೆಸಲಾಗಿದೆ.

ದೇವಾಲಯದ ಹೊರ ಭಾಗದಲ್ಲಿರುವ ಸುಂದರವಾದ ಶಿಲಾಕೃತಿಗಳನ್ನು ಶುದ್ಧಗೊಳಿಸಿ, ರಾಸಾಯನಿಕ ವಸ್ತುಗಳನ್ನು ಲೇಪಿಸುವ ಕಾರ್ಯವನ್ನು ಶೀಘ್ರದಲ್ಲಿಯೇ ಕೈಗೊಳ್ಳಲಾಗುವುದು. ಸರ್ಕಾರದವರು ಅಲ್ಲೊಂದು ವಸ್ತು ಸಂಗ್ರಹಾಲಯ ಸ್ಥಾಪಿಸಲೂ ಅನುಮತಿ ನೀಡಿರುವರು. ಈ ವಸ್ತು ಸಂಗ್ರಹಾಲಯದಲ್ಲಿ ಅಲ್ಲಿನ ಎಲ್ಲಾ ಭಗ್ನಮೂರ್ತಿಗಳನ್ನೂ ಇಡಲಾಗುವುದು.

ವಿಚಾರ ಮಥನ

(೧ನೇ ಪುಟದಿಂದ)

ಕಾಯ್ದಿಡಬೇಕೆಂದೂ ಉಳಿದ ಸ್ಥಳಗಳಿಗೆ, ಎಂದರೆ ನೂರಕ್ಕೆ ಇಪ್ಪತ್ತೈದರಷ್ಟು, ಯೋಗ್ಯತೆಯನ್ನೇ ತಳಹದಿಯನ್ನಾಗಿ ಗ್ರಹಿಸಬೇಕೆಂದೂ ಮೈಸೂರು ರಾಜ್ಯ ಸರಕಾರವು ನಿರ್ಧರಿಸಿದೆ. ಈ ಪ್ರಮಾಣವು ನಾನ್ ಗಜೆಟೆಡ್ ಹುದ್ದೆಗಳಿಂದ ಗಜೆಟೆಡ್ ಹುದ್ದೆಗಳಿಗೆ ಮಾಡಲಾಗುವ ಬಡತಿಗೂ ಅನ್ವಯಿಸುವುದು. ಹಿಂದೆ ಬೇರೆ ಬೇರೆ ರಾಜ್ಯಗಳಲ್ಲಿ ಹಂಚಿ ಹೋದ ವಿವಿಧ ಭಾಗಗಳಲ್ಲಿ ವ್ಯವಹಾರದಲ್ಲಿದ್ದ ಹಿಂದುಳಿದವರ ಯಾದಿಗಳನ್ನು ಸಮೀಕರಿಸಿ, ಈಗ ಹೊರಡಿಸಿದ ಹೊಸ ಯಾದಿಯಲ್ಲಿ ಜಂಗಮರು ಮತ್ತು ಕುಡು ಒಕ್ಕಲರನ್ನೊಳಗೊಂಡ ಲಿಂಗಾಯತರನ್ನೂ ಭಂಟ, ರೆಡ್ಡಿ, ಕುಂಚಿಟಿಗರನ್ನೊಳಗೊಂಡ ಒಕ್ಕಲಿಗರನ್ನೂ ಸೇರಿಸಲಾಗಿದೆ.

ಮೈಸೂರಿನ ಜಾತೀಯತೆಯು ನಿಜವಾಗಿಯೂ ಪ್ರಶಂಸಾರ್ಹವಾದುದು. ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಕಟವಾಗುವ ಜಾತೀಯತೆಯ ಬಗ್ಗೆ "ಹಿಂದೂ" ದೈನಿಕದ ಒಬ್ಬ ವಾಚಕರು ಬರೆಯುತ್ತ "ವಿದ್ಯಾರ್ಥಿಯ ಹಿಂದುಳಿದಿರುವಿಕೆ"ಯ ಬುನಾದಿಯ ಮೇಲೆಯೇ ಈ ವಿಶ್ವವಿದ್ಯಾಲಯದಲ್ಲಿ ನೇಮಕಗಳು ನಡೆಯುತ್ತವೆ. ಪ್ರಥಮ ಶ್ರೇಣಿಗಿಟ್ಟಿಸಿದ ಮುಂದುವರಿದ ವಿದ್ಯಾರ್ಥಿಗಿಂತ ತೃತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಹಿಂದುಳಿದವನಿಗೆ ಅವಕಾಶ ತೆರವು." ಎಂದಿದ್ದಾರೆ. ನಮ್ಮ ನಾಯಕರು ಜಾತ್ಯತೀತ ಸಮಾಜರಚನೆಯ ನಿರ್ಮಾಣಕಾರ್ಯದ ಕುರಿತು ಆಡತೊಡಗಿರುವಂತೆಯೇ ವಿದ್ಯಾರ್ಥಿಗಳಲ್ಲಿ ಜಾತೀಯ ಭಾವನೆಯನ್ನು ಸದಾ ಜಾಗ್ರತಗೊಳಿಸುವ ಮಹಾ ಕಾರ್ಯವನ್ನೂ ನಡೆಸುತಿದ್ದಾರೆ. ಇದರಿಂದಾಗಿಯೇ ಮೈಸೂರು ವಿಶ್ವವಿದ್ಯಾಲಯ 'ಹಿಂದುಳಿದ ವಿಶ್ವವಿದ್ಯಾಲಯ'ವಾಗಿಯೂ ಮೈಸೂರು ರಾಜ್ಯವು "ಹಿಂದುಳಿದ ರಾಜ್ಯ"ವಾಗಿಯೂ ಬೆಳೆದು ಬರುತ್ತಿವೆ ಎಂಬುದು ಸುವಿದಿತ. ಧಕ್ಷತೆ, ಪರಿಪೂರ್ಣತೆಯ ಸುವ್ಯವಸ್ಥಿತ ಸಮಾಜ ರಚನೆಗೆ ಈ ರೀತಿಯ ಕೋಮುವಾರು ಭಾವನೆಯಿಂದ ಅದೆಷ್ಟು ಸಹಾಯವಾದೀತು ಎಂಬುದು ಸ್ವಯಂವೇದ್ಯ.

— ರಾಶಿ

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಇರುವೆಗಳು ಮಾತನಾಡಿಕೊಂಡವು.......

ಕಂಪಾದ ಮಾರುತವು ಬೀಸತೊಡಗಿತು. ಮೋಡಗಳು ಮುಗಿಲ ತೇರಲ್ಲಿ ಪಯಣಕ್ಕೆ ತೊಡಗಿದುವು. ಅಲ್ಲೊಂದು ಮಿಂಚು; ಇಲ್ಲೊಂದು ಗುಡುಗು. ಸೆಕೆಯಿಂದ ಬೆಂದ ಪ್ರಕೃತಿಯು ಮಳೆಗೆ ಬಾಯ್ಬಿಟ್ಟು ಬಾನಕಡೆ ನೋಡತೊಡಗಿತು. ಆಗ ಇರುವೆಗಳ ಸಾಲೊಂದು........

"ಸದ್ಯವೇ ಮಳೆ ಸುರಿಯಲಿದೆ. ಜಗತ್ತು ಸಸ್ಯ ಶ್ಯಾಮಲವಾಗಿ ಮೆರೆಯಲಿದೆ. ಕೃಷಿಕ ನೊಗ ನೇಗಿಲ ಸೇವೆಗೆ ಹೊರಡಲಿದ್ದಾನೆ. ನಾವೂ ನಮ್ಮ ಆಶ್ರಯವನ್ನು ಸೇರೋಣ. ಸೆಕೆಗಾಲದಲ್ಲಿ ಸಂಗ್ರಹಿಸಿದ ತುಣುಕುಗಳು ನಮ್ಮ ಅವಶ್ಯಕತೆಗೆ ಸಾಕಾಗುವಷ್ಟಿರುವುದರಿಂದ ನಾವೂ ಸಂತೋಷದಿಂದ ಮಳೆರಾಯನನ್ನು ಸ್ವಾಗತಿಸೋಣ...."

....ಸಾಲು ಮುಂದೆ ಮುಂದೆ ಸಾಗುತಿತ್ತು ಕೇವಣಾತಿಯ ಸಂಪತ್ತಿನ ಆನಂದದಿಂದ ಕೂಡಿಕೊಂಡು.

'ಕೇವಣಾತಿಯ ಶ್ರೇಷ್ಠತೆ'ಯನ್ನು ಇರುವೆಗಳೂ ಮಾತನಾಡಿಕೊಂಡವು.

● ಪಿಗ್ಮಿ, ● ಕ್ಯುಮಲೇಟಿವ್, ● ಲಕ್ಷ್ಮೀಕ್ಯಾಶ್ ಸರ್ಟಿಫಿಕೇಟ್,
ಇತ್ಯಾದಿ ಯೋಜನೆಗಳ ಕುರಿತು ನಾವೂ ನೀವೂ ಮಾತನಾಡೋಣ.

ಸಿಂಡಿಕೇಟ್ ಬೇಂಕ್

THE CANARA INDUSTRIAL & BANKING
SYNDICATE LTD.
H. O. UDIPI.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ.

ವರುಷ ೩೮. ವಾರ ೩೭. 28-5-1959 Vol. 38. No. 37.

ವಿಚಾರ ಮಥನ

ಮುಂಗಾರು ಚಳವಳಿ

* *

ಕೇರಳದಲ್ಲಿ ಶಾಲೆ ಮುಚ್ಚುವ ಚಳವಳ

* *

ಬ್ರಿಟನಿನ ಮಧ್ಯಸ್ಥಿಕೆ

* *

ಬರುವ ಮುಂಗಾರು ಮಳೆಯ ಕಾಲಕ್ಕೆ ರಾಜ್ಯದಾದ್ಯಂತವಾಗಿ ಮೈಸೂರು ಸರಕಾರವು ಆಹಾರ ಧಾನ್ಯಗಳನ್ನು ಹೆಚ್ಚಿಸುವ ದೃಷ್ಟಿಯಿಂದ 'ಮುಂಗಾರು ಚಳವಳಿ'ವನ್ನು ಸಂಘಟಿಸುವುದೆಂಬುದಾಗಿ ತಿಳಿದುಬಂದಿದೆ. ಕಳೆದ ಹಿಂಗಾರು ಬೆಳೆಯ ಕಾಲಕ್ಕೆ ನಡೆಸಿದ 'ಹಿಂಗಾರು ಚಳವಳಿ'ಯ ಯಶಸ್ಸೆ ಇದಕ್ಕೂ ಕಾರಣ ಎಂದು ಹೇಳಲಾಗಿದೆ. ಮುಂಗಾರು ಚಳವಳಿಯ ಯಶಸ್ಸು ಹಾಗೂ ವ್ಯಾಪ್ತಿಗಾಗಿ ಸರಕಾರವು ಹಲವು ವಿಧದ ಕಾರ್ಯಕ್ರಮಗಳನ್ನು ಸಿದ್ಧಪಡಿಸಿದ್ದು ಈ ಬಗ್ಗೆ ೪.೪೮,೮೧,೧೦೦ ರೂ.ಗಳನ್ನು ಮಂಜೂರು ಮಾಡಲಾಗಿದೆ.

ಕೃಷಿಯಲ್ಲಿ ವಿವಿಧ ಸುಧಾರಣಾ ಪದ್ಧತಿಗಳು, ಸುಧಾರಿತ ಗೊಬ್ಬರ, ಬೀಜಗಳ ಬಳಕೆಗಳ ಪ್ರಚಾರದ ಮೂಲಕ ಈ ಪದ್ಧತಿಗಳನ್ನು ಅನುಸರಿಸುವಂತೆ ನೋಡಿಕೊಳ್ಳಲಾಗುವುದು. ಈ ವರೆಗೆ ಶಿಫಾರಸು ಮಾಡಿದ ಎಲ್ಲಾ ಪದ್ಧತಿಗಳನ್ನು ಕ್ರೋಢೀಕರಿಸಿ ಎಲ್ಲಾ ಧಾನ್ಯಗಳನ್ನು ಬೆಳೆಸುವ ಸುಧಾರಿತ ಪದ್ಧತಿಯೊಂದನ್ನು ರೂಪಿಸಲಾಗುವುದು.

ಚಳುವಳಿಯ ಕಾಲ ಅತಿ ಹೆಚ್ಚು ಉತ್ಪಾದನೆ ಮಾಡಿದ ಒಕ್ಕಲಿಗರಿಗೂ, ಅತ್ಯಂತ ಹೆಚ್ಚು ಪ್ರದೇಶದಲ್ಲಿ ಸುಧಾರಿಸಿದ ಪದ್ಧತಿಯನ್ನು ಅನುಸರಿಸಿದ ಗ್ರಾಮಗಳಿಗೂ ಬಹುಮಾನ ಹಂಚುವ ವ್ಯವಸ್ಥೆ ಇದೆ. ತಾಲೂಕು ಮಟ್ಟ, ಜಿಲ್ಲಾ ಮಟ್ಟ ಹಾಗೂ ರಾಜ್ಯ ಮಟ್ಟಗಳಲ್ಲಿ ಬಹುಮಾನಗಳನ್ನು ಪ್ರತ್ಯೇಕವಾಗಿ ಕೊಡಲಾಗುವುದು.

ಆಹಾರಾಭಾವದ ಈ ದಿನಗಳಲ್ಲಿ ಈ ಬಗೆಯ ಚಳವಳಿಯ ಆವಶ್ಯಕತೆ ತುಂಬಾ ಇದೆ. ರಾಜ್ಯದ ಬೆಳೆಗಳಲ್ಲಿ ಮುಂಗಾರು ಬೆಳೆಯೇ ಪ್ರಾಮುಖ್ಯನಾದುದರಿಂದ ಈ ಚಳುವಳಿ ರಾಜ್ಯದ ಆಹಾರ ಪರಿಸ್ಥಿತಿಯ ಸುಧಾರಣೆಗೆ ನೆರವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಈ ಬಗ್ಗೆ ಕೈಕೊಳ್ಳಲಾಗುವ ಕಾರ್ಯಗಳು ಸುಸೂತ್ರವಾಗಿ ನಡೆಯುವಂತೆ, ಸಾಕಷ್ಟು ಪ್ರಚಾರವಾಗುವಂತೆ ನೋಡಬೇಕಾದುದು ಅನಿವಾರ್ಯ.

ಕೇರಳ ಶಿಕ್ಷಣ ಮಸೂದೆಯನ್ನು ಪ್ರತಿಭಟಿಸುವ ಉದ್ದೇಶದಿಂದ ಬರುವ ಶಾಲಾ ವರ್ಷದಿಂದ ತಮ್ಮ ಶಾಲೆಗಳನ್ನು ಪುನಃ ತೆರೆಯುವುದಿಲ್ಲವೆಂಬುದಾಗಿ ಕೇರಳದ ಖಾಸಗಿ ಮೆನೇಜರುಗಳು ಸರಕಾರಕ್ಕೆ ಬೆದರಿಕೆ ಹಾಕಿರುತ್ತಾರೆ. ಶಾಲೆಗಳನ್ನು ಮುಚ್ಚುವುದರಿಂದ ಶಿಕ್ಷಣ ಕ್ಷೇತ್ರದಲ್ಲಿ ಆಗಬಹುದಾದ ಗೊಂದಲಗಳನ್ನು ಅನುಲಕ್ಷಿಸಿಯೇ ಅವರು ಈ ಬೆದರಿಕೆ ಹಾಕಿರುವರೋ ತಿಳಿಯದು. ಕೇರಳದ ಮುಖ್ಯಮಂತ್ರಿ ನಂಬೂದರಿ ಪಾಡರು ಖಾಸಗಿ ಶಾಲಾ ಮೆನೇಜರರ ಈ ಚಳವಳವನ್ನು ಸರಕಾರವು ಎದುರಿಸಿಯೇ ತೀರುವುದು ಎಂದಿರುವರಲ್ಲದೆ ಈ ಬಗ್ಗೆ ಸರಕಾರವು ತನ್ನ ಸಂಪೂರ್ಣ ಶಕ್ತಿಯನ್ನು ಉಪಯೋಗಿಸಬೇಕಾಗುವ ಪರಿಸ್ಥಿತಿಯೊಂದು ಬಂದೊದಗುವುದೆಂದಿರುವರು.

ಆಂಗ್ಲೊ ಇಂಡಿಯನ್ ಎಸೋಸಿಯೇಶನಿನ ಅಧ್ಯಕ್ಷ ಮಿ॥ ಫ್ರೇಂಕ್ ಅಂತೋನಿಯವರು ಶಿಕ್ಷಣವನ್ನು ಸಂಪೂರ್ಣವಾಗಿ ಸರಕಾರದ ನಿಯಂತ್ರಣಕ್ಕೊಳಪಡಿಸುವುದೇ ಕೇರಳ ಶಿಕ್ಷಣ ಕಾಯದೆಯ ಉದ್ದೇಶವಲ್ಲದೆ ಅಧ್ಯಾಪಕರ ಕಷ್ಟ ಪರಿಹಾರವಲ್ಲ ಎಂದಿರುವರು. ಕೇರಳದ ಅಧ್ಯಾಪಕರ ಹಲವು ಎಸೋಸಿಯೇಶನುಗಳು ತಮ್ಮ ಸಹಾನುಭೂತಿ, ಸಹಕಾರಗಳನ್ನು ಸರಕಾರದ ಕಡೆ ತೋರಿಸುತ್ತಿರುವುವಲ್ಲದೆ ಮುಂದೆ ಬಂದೊದಗಬಹುದಾದ ಪರಿಸ್ಥಿತಿಯನ್ನೆದುರಿಸಲು ತಾವು ಸಿದ್ಧರಿರುವುದಾಗಿ ಸಾರಿವೆ. ಮಾತ್ರವಲ್ಲ ಮೆನೇಜುಮೆಂಟುಗಳು ತಮ್ಮ ಈ ನಿರ್ಣಯವನ್ನು

ಬ್ರಿಟಿಷ್ ಸಂಚಾರಿ ಉದ್ಯೋಗ ವಿನಿಮಯ ಕೇಂದ್ರದ ದೃಶ್ಯವೊಂದು.

ಹಿಂದೆಗೆದು ಕೊಳ್ಳಬೇಕೆಂದು ಕೇಳಿಕೊಂಡಿವೆ. ಕೇರಳದ ಶಿಕ್ಷಣ ಮಂತ್ರಿ ಮುಂಡಸ್ಸೇರಿಯವರು ಖಾಸಗಿ ಶಾಲೆಗಳನ್ನು ಮುಚ್ಚುವುದಾದರೆ ಆದರ ಬದಲು ಹೊಸ ಶಾಲೆಗಳನ್ನು ತೆರೆಯಲು ಖಾಸಗಿ ವ್ಯಕ್ತಿಗಳೇ ಮುಂದೆ ಬರುತ್ತಿದ್ದಾರೆ ಎಂದಿರುವರು.

ಅಂತೂ, ಮುಂದಿನ ಶಿಕ್ಷಣ ವರ್ಷದಲ್ಲಿ ಕೇರಳದಲ್ಲಿ ಮಹತ್ತರದ ಬದಲಾವಣೆಯಾಗಲಿವೆ. ಖಾಸಗಿ ಶಾಲೆಗಳನ್ನು ಮುಚ್ಚಬೇಕೆಂಬ ಚಳವಳಿಯೊಡನೆ ಕಾಂಗ್ರೆಸು ಪಾರ್ಟಿಯು ಸಹಕರಿಸಕೂಡದೆಂದು ಕಾಂಗ್ರೆಸ್ ಅಧ್ಯಕ್ಷೆ ಇಂದಿರಾ ಗಾಂಧಿಯವರು ಕೇರಳ ಕಾಂಗ್ರೆಸಿಗರಿಗೆ ಸಲಹೆ ಇತ್ತಿರುವಾಗ ಈ ಬಗೆಯ ಚಳುವಳಿಯು ಕಾಲೋಚಿತವಲ್ಲ ಎಂದು ಹೇಳಲಡ್ಡಿಯಿಲ್ಲ. ಕೇರಳದ ಶಿಕ್ಷಣ ಮಸೂದೆಯ ವಿರುದ್ಧದ ಚಳವಳಕ್ಕೆ ಕಾಂಗ್ರೆಸಿನ ಸಹಾನುಭೂತಿ ಇದೆ. ಹಾಗಿರುವಾಗ ಖಾಸಗಿ ಶಾಲಾ ಮೆನೇಜರರುಗಳು ಮುಂದೇನು ಮಾಡುವರೊ ನಿರೀಕ್ಷಿಸಬೇಕು.

ಭಾರತ, ಪೋರ್ಚುಗಲುಗಳೊಳಗಣ ಗೋವಾ ಸಮಸ್ಯೆಯು ಶಾಂತ ರೀತಿಯಿಂದ ತೀರ್ಮಾನವಾಗಬೇಕೆನ್ನುವ ಮಂಗೊಂದು ಆಶಾಕಿರಣ ಬೆಳಗಿದೆ. ಇಕ್ಕಡೆಯವರೂ ಇಚ್ಛಿಸುವುದಾದರೆ ಈ ಸಂಬಂಧದ ಸಮಸ್ಯೆಯನ್ನು ಪರಿಹರಿಸುವ ಕಾರ್ಯದಲ್ಲಿ ಮಧ್ಯಸ್ಥಿಕೆ ವಹಿಸಲು ಬ್ರಿಟನು ಸಿದ್ಧವಿದೆಯೆಂದು ಪ್ರಧಾನಿ ಮೆಕ್ಮಿಲನರು ಲೇಬರ್ ಪಕ್ಷದ ಮಿ. ಅಂತೊನಿ ಡಬ್ಲ್ಯು ಬಿರ್ಟರಿಗೆ ತಿಳಿಸಿರುವುದಾಗಿ ತಿಳಿದುಬಂದಿದೆ. ಈ ಹೇಳಿಕೆಯು ಗೋವಾಸಮಸ್ಯೆಯ ಪರಿಹಾರಕಾರ್ಯದಲ್ಲಿ ತುಂಬಾ ಆಶಾದಾಯಕವಾಗಿದೆ. ಭಾರತವಂತೂ ಗೋವಾಸಮಸ್ಯೆಯನ್ನು ಶಾಂತಿ ಸಮಾಧಾನಗಳ ಮೂಲಕವೇ ಬಗೆಹರಿಸಲು ಆತುರವಾಗಿದೆ; ಅದಕ್ಕಾಗಿ ಪ್ರಯತ್ನಿಸುತ್ತಿದೆ. ಆದರೆ ಪೋರ್ಚುಗಲ್ ಸರಕಾರ ಈ ಕುರಿತು ಏನು ಮಾಡುವುದೆಂಬುದೇ ಊಹಿಸಲಸಾಧ್ಯವಾದ ಸಂಗತಿಯಾಗಿದೆ. ಈ ಸಂದರ್ಭದ ಸದುಪಯೋಗವನ್ನು ಪೋರ್ಚುಗಲ್ ಮಾಡಿಕೊಂಡು ಗೋವೆಗೆ ಸ್ವಯಂ ನಿರ್ಧಾರದ ಹಕ್ಕನ್ನು ಕೊಡುವ ವಿಚಾರ ಮಾಡುವುದು ಸೂಕ್ತ. ಬ್ರಿಟನಿನ ಈ ಮಧ್ಯಸ್ಥಿಕೆಯನ್ನು ಭಾರತವು ಸ್ವಾಗತಿಸದೆ ಉಳಿಯಲಾರದು. ಆದರೆ ಪೋರ್ಚುಗಲ್ ಏನು ಮಾಡುವುದೋ? ಅಂತೂ ಗೋವಾಸಮಸ್ಯೆಯ ಪರಿಹಾರಕ್ಕೆ ದಿನಗಳು ಹೆಚ್ಚು ಇರಲಾರವೆಂದು ಆಶಿಸಬಹುದೇನೋ?

ದಿ ವಿಜಯ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3. ಸ್ಥಾಪನೆ:- 1931.

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ.... ಇತ್ಯಾದಿ....

ಕಥಾ ವಿಹಾರ

ಶಾಲಿನಿಯು ಗಳಿಸಿದ ಅಪೂರ್ವ ವಿಜಯ

ನಿರುಪಾಯಳಾಗಿ ತನ್ನ ಹೇರಾಸೆಯನ್ನು ತೊರೆದ ಶಾಲಿನಿ, ತೊರೆತುಂಬಿದಾಗ ಆಸೆಗೆ ಆಸರೆಯನ್ನೂ ಪಡೆದುಕೊಂಡಳು!

ನೇ ತಿಂಗಳ ಪ್ರಥಮವಾರ. ಸಂಜೆಯೇ ಆಕಾಶದಲ್ಲಿ ಮೋಡಗಳು ಕವಿಯ ತೊಡಗಿದ್ದುವು. ಸ್ವಲ್ಪ ಸಮಯದಲ್ಲಿಯೇ ಗುಡುಗು, ಮಿಂಚುಗಳ ಕೋಲಾಹಲದೊಂದಿಗೆ ಮಳೆಯು ಸುರಿಯತೊಡಗಿತ್ತು. ಮಲೆನಾಡ ಮೂಲೆಯಲ್ಲಿದ್ದು, ಸುತ್ತಲೂ ಕಾಡುಗುಡ್ಡಗಳಿಂದ ಆವರಿಸಲ್ಪಟ್ಟಿದ್ದ ಆ ಊರ ಜನರು ಸೂರ್ಯನು ಅಸ್ತಮಿಸಿದನೆಂದೇ ಭ್ರಮಿಸಿದ್ದರು. ಸುಮಾರು ಎರಡು ಗಂಟೆಗಳ ಬಳಿಕ ಮಳೆಯು ಬಿಟ್ಟಾಗ ನಿಜವಾಗಿಯೂ ಕತ್ತಲೆಯು ಆವರಿಸಿತ್ತು. ಆದರೂ ಆಗಾಗ ಮಿಂಚುತಿದ್ದ ಮಿಂಚು ಮಲೆನಾಡ ಕಾಡುಗಳ ಪರಿಮಾಣವನ್ನು ತೋರಿಸಿಕೊಡುತ್ತಲಿತ್ತು.

'ಎಷ್ಟು ಕಾಡುಗಳಪ್ಪಾ ಈ ಊರಲ್ಲಿ' ಕಿಟಕಿಯ ಬದಿಯ ಬೆಂಚಿನಲ್ಲಿ ಓದುತ್ತಾ ಕುಳಿತಿದ್ದ ಶಾಲಿನಿಯು ಕತ್ತೆತ್ತಿ ಹೊರಗಿಣುಕುತ್ತಾ ಯೋಚಿಸಿದಳು. ಎಲ್ಲೆಲ್ಲೂ ಅಂಧಕಾರ. ಆದರೂ ಮಿಂಚುತ್ತಿರುವ ಮಿಂಚು ಊರನ್ನೇ ಬೆಳಗಿಸುತ್ತಿದೆ. ಹೊಲಗಳಲ್ಲೆಲ್ಲಾ ನೀರು ತುಂಬಿಹೋಗಿದೆ. ಕಪ್ಪೆಗಳ ಗಾನ, ಎಲೆಗಳು ಅಲ್ಲಾಡುವ ಧ್ವನಿ, ತಂಪಾದ ಗಾಳಿಯ ಸ್ಪರ್ಶ—ಹೃದಯಕ್ಕೆ ಒಂದುರೀತಿಯ ಆನಂದವನ್ನು ಕೊಡುತ್ತವೆ. ಆದರೆ ಕಾಣುತ್ತಿರುವ ಆ ಕಾಡುಗಳು, ಅಲ್ಲಿರುವ ಆ ಭಯಾನಕ ಮೃಗಗಳು, ಆ ಮಲೇರಿಯಾ ನುಸಿಗಳು—ನೆನಸಿದಾಗ ಮೈ ಜುಂ—ಎನ್ನುತ್ತದೆ. ಯಾರಿಗೆ ಬೇಕಿತ್ತು ಈ ಊರ ವಾಸ?

ಒಮ್ಮೆಲೇ ಶಾಲಿನಿಯ ಮುಖವು ಕಂದಿತು. ಮನಸ್ಸು ಬೇಸರದಿಂದ ತುಂಬಿತು. ಕೈಯಲ್ಲಿ ಹಿಡಿದುಕೊಂಡಿದ್ದ ಪುಸ್ತಕವು ಜಾರಿ ಮಡಿಲಲ್ಲಿ ಬಿದ್ದುಕೊಂಡಿತು. ಸುಂದರವಾದ ನಯನಗಳಿಂದ ಅಶ್ರುಧಾರೆಯು ಹರಿದು, ಬಿಳಿದಾದ ವದನವನ್ನು ತೊಯ್ದು, ಪುಸ್ತಕದ ಮೇಲೆ ಬೊಟ್ಟಿಕ್ಕತೊಡಗಿತು. ಕೈಯಿಂದ ಮೆಲ್ಲನೆ ಸೆರಗನ್ನೆಳೆದು ಕಣ್ಣಿಗೆ ಒತ್ತಿ ಹಿಡಿದುಕೊಂಡಳು. ಯೋಚನೆಯ ತೊರೆಯು ಹರಿಯತೊಡಗಿತು. ಪೂರ್ವ ಘಟನೆಗಳು ಒಂದೊಂದಾಗಿ ಸ್ಮರಣೆಗೆ ಬಂದು ಬಾಧಿಸತೊಡಗಿದುವು.

ಹೌದು, ಆಕೆಯು ಈ ನಾಡನ್ನು ಎಂದೂ ಬಯಸಿರಲಿಲ್ಲ. ಏಕೆ, ಸ್ವಪ್ನದಲ್ಲಿಯೂ ನೆನಸಿರಲಿಲ್ಲ. ಆದರೆ ಅದೇಕೋ 'ಬ್ರಹ್ಮ ಬರೆದ ಬರಹ' ಎಂಬಂತೆ ಈ ಊರನ್ನು ಸೇರಬೇಕಾಯಿತು. ಶಾಲಿನಿಯ ಜನ್ಮ ಜಿಲ್ಲೆಯ ಮುಖ್ಯ ನಗರದಲ್ಲಿ, ಕುಲೀನ ಮನೆತನವೊಂದರಲ್ಲಿ ಆಗಿತ್ತು. ತಂದೆ ತಾಯಿಯರ ಅಕ್ಕರೆಯ, ಹಿರಿಯಮಗಳಾಗಿ ಬೆಳೆದಿದ್ದಳು. ಸಮೀಪದ ಹುಡುಗಿಯರ ಹೈಸ್ಕೂಲಿನಲ್ಲಿ ಕಲಿಯುತಿದ್ದಳು. ರೂಪದಲ್ಲಿ ಕ್ಲಾಸಿನ ಹುಡುಗಿಯರಿಗೆಲ್ಲಾ 'ರಾಣಿ' ಯಂತಾಗಿ ಮೆರೆಯುತಿದ್ದರೆ, ಕಲಿಯುವಿಕೆಯಲ್ಲಿ ಅಧ್ಯಾಪಕರುಗಳ ಮೆಚ್ಚಿನವಳಾಗಿದ್ದಳು. ಬಡ ನೌಕರನೊಬ್ಬನ ಮಗಳಾಗಿದ್ದರೂ ಶೃಂಗಾರ ಸಾಧನಗಳಿಗೆ ಕೊರತೆಯಿರಲಿಲ್ಲ. ಜೀವನದಲ್ಲಿ ಸುಖವೇ ಅವಳ ಪಾಲಿನದಾಗಿತ್ತು.

ಆದರೆ ವಿಧಿಯ ಲೀಲೆಯನ್ನು ಬಲ್ಲವರಾರು? ಆಫೀಸಿನಿಂದ ಮರಳುತಿದ್ದ ಆಕೆಯ ತಂದೆಯವರು ದಾರಿಯಲ್ಲಿ ನಡೆದು ಬರುತಿದ್ದಾಗ ಒಮ್ಮೆಲೇ ಹೃದಯಕ್ರಿಯೆ ನಿಂತು ವಿಧಿವಶರಾದರು—ಬಡ ಕುಟುಂಬದ ಮೇಲೆ ದುಃಖ, ಕಷ್ಟಗಳ ಪರ್ವತಗಳೇ ಜರಿದು ಬಿದ್ದುವು. ಜೀವನದ ಆಧಾರಸ್ತಂಭವೇ ಕಳಚಿ ಬಿತ್ತು. ಆದರೂ ಇನ್ಶ್ಯೂರೆನ್ಸಲ್ಲಿ ದೊರೆತ ಹಣದಿಂದ ಜೀವನ ನೌಕೆಯು ಅಲ್ಲಾಡುತ್ತಾ ಅಲ್ಲಾಡುತ್ತಾ ಸಾಗ ತೊಡಗಿತು. ೫ನೇ ಫೋರ್ಮಿನಲ್ಲಿ ಕಲಿಯುತಿದ್ದ ಮಗಳ ವಿದ್ಯಾಭ್ಯಾಸಕ್ಕೆ ತಡೆ ಬರಬಾರದೆಂದು ತಾಯಿ ಲಕ್ಷ್ಮಿಯು ತುಂಬಾ ಪ್ರಯತ್ನ ಪಡತೊಡಗಿದಳು. ಮನೆಯ ಎಲ್ಲಾ ಖರ್ಚುಗಳನ್ನು ಆದಷ್ಟು ಕಡಿಮೆ ಮಾಡಿ ಮಗಳ ವಿದ್ಯಾಭ್ಯಾಸಕ್ಕೆ ನೆರವಾದಳು.

ಎಳೆಂಟು ತಿಂಗಳುಗಳು ಕಳೆದುವು. ಶಾಲಿನಿಯ ಪರೀಕ್ಷೆಗೆ ಕೆಲವೇ ದಿನಗಳು ಉಳಿದಿವೆ ಆಗಲೇ ಆಕೆಯ ಸೋದರ ಮಾವನವರು ಆಕೆಯ ವಿವಾಹವನ್ನು ನಿಶ್ಚಯಿಸಿದರು. ತಾಯಿಯೂ ಒಪ್ಪಿದಳು. ಶಾಲಿನಿಗೂ 'ಹೂಂ' ಎನ್ನಲೇಬೇಕಾಯಿತು.

ಶಾಲಿನಿಯು ಮನಸ್ಸಿಟ್ಟು ಕಲಿಯುತಿದ್ದಳು. ವಿದ್ಯೆಯಲ್ಲಿ ತುಂಬಾ ಪ್ರೇಮವಿತ್ತು. ಆದರೆ ಆಕೆ ತನ್ನ, ಮನೆಯ ಪರಿಸ್ಥಿತಿಯನ್ನು ಚೆನ್ನಾಗಿ ಅರಿತಿದ್ದಳು. ಮಾವ ನಿಶ್ಚೈಸಿದ ವರ, ಮಲೆನಾಡ ಮೂಲೆಯವರು, ವಿದ್ಯಾವಂತರಲ್ಲದವರು, ಆದರೂ ಧನಿಕರಾಗಿದ್ದರು. ಸುಂದರ ಪುರುಷರಾಗಿದ್ದರು. ಈ ಮದುವೆಯಿಂದ ತಮ್ಮ ಪರಿಸ್ಥಿತಿಯು ಸುಧಾರಿಸಲು ಸಾಧ್ಯವಿದೆ. ವಿದ್ಯೆ ಇಲ್ಲದಿದ್ದರೂ, ಅವರ ಹೃದಯವೇಕೆ ಕೋಮಲವಿರಬಾರದು? ಅಂತಿದ್ದರೆ ತನ್ನ ಸುಖ ಸೌಕರ್ಯಗಳಿಗೇನು ಕಡಿಮೆ? ವಿದ್ಯೆ ಕಲಿಯಲು ತೊಂದರೆಯೆಂದು ಅಸಮ್ಮತಿಸಿದರೆ ಮತ್ತೆ ಯಾರು, ಯಾವಾಗ ಬರುವರೋ ಏನೋ?—ಅದೂ ತಮ್ಮ ಪರಿಸ್ಥಿತಿಯಲ್ಲಿ—ಎಂದು ಯೋಚಿಸಿ ಆಕೆ ತನ್ನ ಸಮ್ಮತಿಯನ್ನಿತ್ತಳು. ವಿದ್ಯಾಪ್ರೇಮವನ್ನು ಧನದಾಸೆಯು, ವಿವಾಹದ ಉತ್ಸುಕತೆಯೊಡನೆ ಕೂಡಿ ಹಾಳುಗೆಡಹಿತು. ವಿವಾಹವೂ ನೆರವೇರಿತು. ಶಾಲೆ ಬಿಟ್ಟು ಗಂಡನ ಮನೆ ಸೇರಿದುದೂ ಆಯಿತು.

ಮಾರ್ಗದಿಂದ ಮೂರು ಮೈಲುಗಳಷ್ಟು ನಡೆದು ಗಂಡನ ಮನೆ ಸೇರಿದಾಗಲೇ ಶಾಲಿನಿಗೆ ಆ ಊರ ಸಾಮಾನ್ಯ ಪರಿಚಯವಾಗಿತ್ತು. ಕೆಲದಿನಗಳನ್ನು ಕಳೆದಾಗ ಪೂರ್ಣಪರಿಚಯವಾಯಿತು. ಜನಸಂದಣಿಯು ಬಹಳ ಕಡಿಮೆಯಿರುವ, ಕಾಡುಗುಡ್ಡ ಹಾಗೂ ತೋಟಗಳಿಂದಲೇ ತುಂಬಿದ್ದ ಆ ಊರ ಜೀವನ ಆಕೆಗೆ ಬೇಸರವನ್ನೇ ತಂದೊಡ್ಡಿತು. 'ಪೇಟೆಯಲ್ಲಾಗಿದ್ದರೆ ಕಲಿಯುವಿಕೆಯನ್ನಾದರೂ ಮುಂದುವರಿಸಬಹುದಿತ್ತು' ಎಂಬ ಯೋಚನೆ ಬೇರೂರಿಕೊಂಡಿತು. ಒಂದೆರಡು ತಿಂಗಳುಗಳು ಕಳೆದೊಡನೇ ಗಂಡನೊಡನೆ ವಿನಂತಿಸತೊಡಗಿದಳು, ತನ್ನೂರಿಗೇ (ನಗರಕ್ಕೆ) ಹೋಗೋಣವೆಂದು. ಆತನು ಆ ವಿಷಯವನ್ನು ಸಾವಧಾನವಾಗಿ ಯೋಚಿಸೋಣವೆಂದು ಮುಂದೂಡತೊಡಗಿದ್ದನು. ಆದರೆ ಇಂದೇಕೋ ತುಂಬಾ ಬೇಸರ ಹೊಂದಿದ ಶಾಲಿನಿಯು ಮನತುಂಬಾ ಗಂಡನೊಂದಿಗೆ ಮಾತಾಡಿಸಬೇಕೆಂದು ನಿಶ್ಚಯಿಸಿಕೊಂಡಳು.

ಮಳೆಬಿಟ್ಟ ಬಳಿಕ ಕೊಂಚ ಆಡ್ಡಾಡೋಣವೆಂದು ಹೊರಹೊರಟಿದ್ದ ಶೇಖರನು ಗಂಟೆ ಒಂಭತ್ತರ ಸಮಯ ತಿರುಗಿ ಬಂದಾಗ, ಶಾಲಿನಿಯ ಬಾಡಿದ ಮುಖವನ್ನು ಕಂಡು ಒಮ್ಮೆ ಆತನಿಗೆ ಆಶ್ಚರ್ಯವಾಯಿತು. ಆದರೆ ಕೂಡಲೇ ಆಕೆಯ ಸ್ವಭಾವವನ್ನರಿತಿದ್ದ ಆತನ ಊಹೆಗೆ ವಿಷಯವು ನಿಲುಕದಿರಲಿಲ್ಲ. ಆದರೆ ಆತನನ್ನು ಕಂಡೊಡನೇ ನಕ್ಕು, ಊಟದ ಏರ್ಪಾಡುಗಳನ್ನು ಮಾಡತೊಡಗಿದ ಆಕೆಯನ್ನು ಕಂಡಾಗ ಪುನಃ ಆತನಿಗೆ ಆಶ್ಚರ್ಯವಾಯಿತು.

ಶೇಖರನು ಶಾಲಿನಿಯನ್ನು ಚೆನ್ನಾಗಿ ಅರಿತಿದ್ದನು. ಆಕೆಗೆ ತನ್ನ ಊರು, ವಾತಾವರಣ ಹಿಡಿಸುವುದಿಲ್ಲವೆಂದು ತಿಳಿದು ತುಂಬಾ ಬೇಸರಗೊಂಡಿದ್ದನು. ಅತ ಭಾವಿಸಿದ್ದಂತೆ ಆಕೆಯನ್ನು ಹಳ್ಳಿಯ ವಾತಾವರಣಕ್ಕೆ ಸರಿಯಾಗಿ ಹೊಂದಿಸಿಕೊಳ್ಳುವುದರಲ್ಲಿ ತಾನು ಅಸಮರ್ಥನಾದುದಕ್ಕಾಗಿ ಚಿಂತಿಸುತಿದ್ದನು. ಆಕೆಯ ಇಚ್ಛೆಯಂತೆ ಹಳ್ಳಿಯನ್ನು ಬಿಟ್ಟು, ಪೇಟೆವಾಸವನ್ನು ಕೈಗೊಳ್ಳುವುದೂ ಆತನಿಗೆ ಸರಿಯೆನಿಸುತ್ತಿಲ್ಲ. ಆದರೆ ಆಕೆಯ ಆ ನಗುಮುಖವನ್ನು ಕಂಡಾಗ, ಆ ನಯನುಡಿಗಳನ್ನು ಕೇಳಿದಾಗ, ಆ ಕೋಮಲ ಹೃದಯದ ಆ[illegible]ಯಾದ ಪ್ರೀತಿಯನ್ನು ಗಮನಿಸಿದಾಗ ಆಕೆಯ ಮಾತಿನ ವಿರುದ್ಧ ನಡೆಯಲು ಮನವೊಪ್ಪುತ್ತಿರಲಿಲ್ಲ. ಇತ್ತ ಕೆರೆ, ಅತ್ತ ಹೊಳೆ ಎಂಬಂತಾಗಿತ್ತು ಶೇಖರ[illegible] ಪಾಡು—

ಊಟ ತೀರಿಸಿ ಸತಿಪತಿಯರಿಬ್ಬರೂ ಶಯ್ಯಾಗೃಹವನ್ನು ಸೇರಿದರು. ಶಾಲಿನಿಯು ಗಂಡನ ಸಮೀಪ ಕುಳಿತುಕೊಂಡ[illegible] ವಿನಯದಿಂದ ತನ್ನ ಮನದಿಚ್ಛೆಯನ್ನು ನಿವೇದಿಸಿಕೊಂಡಳು. ಸ್ವಲ್ಪಸಮಯದ[illegible]ನಕ ಬಿರುಸಾದ ಚರ್ಚೆ ನಡೆಯಿತು. ಕೊ[illegible]ನೆಗೆ "ಶಾಲೀ, ನೀನು ಹೇಳುವುದೆಲ್ಲಾ ಸರಿ. ಆದರೆ ಇಲ್ಲೇ ಹುಟ್ಟಿಬೆಳೆದ ನಮ[illegible]ಗೆಲ್ಲಾ ಈ ಊರ ಜೀವನ ಒಗ್ಗಬಹುದೇ! ಅದೂ ಅಲ್ಲದೆ ಈ ಕಾಲದಲ್ಲಿ ಈ ತೋಟ[illegible] ಕೃಷಿ, ಮನೆ ಎಲ್ಲಾ ಬಿಟ್ಟು ಪೇಟೆ ಸೇ[illegible]ದರೆ ಜನರೇನೆಂದಾರು? ಇದರಿಂದ ಆದಾ[illegible]ಯವೂ ಕಡಿಮೆಯಾಗುವುದು. ಖರ್ಚೂ ಜಾಸ್ತಿ. ಅಲ್ಲದೆ ಕೃಷಿಯನ್ನೆಲ್ಲಾ ಬಿಟ್ಟು ಪೇಟೆಸೇರುವುದರಲ್ಲಿ ಏನು ಆದರ್ಶತೆಯಿ[illegible]ದೆ?"—ಎಂದು ತನ್ನ ವಾದವನ್ನು ಸಮ[illegible]ರ್ಥಿಸುತ್ತಾ ಶೇಖರನೆಂದ.

"ಆದರ್ಶತೆಯ ಮಾತುಬಿಡಿ, ನಿಮ[illegible]

(೧೧ನೇ ಪುಟ ನೋಡಿರಿ)

ಸಿಲೋನಿನ ಆಯರ್‌ಕ್ರಾಫ್ಟ್ ಇಂಜಿನಿಯರ್ ಶ್ರೀ ಈಟನ್ ರಾಜಕುಮಾರ.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

The Moolky Bank, Ltd.

MULKi.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ, ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1919

ಕಾವ್ಯ ಪ್ರಯೋಜನ

ಕಾವ್ಯಾಭ್ಯಾಸವನ್ನು ಏಕೆ ಮಾಡಬೇಕು?

ಸಹಜವಾಗಿ ಉದ್ಭವಿಸುವ ಈ ಪ್ರಶ್ನೆಗೆ ಸಮರ್ಪಕ ಉತ್ತರ ಇಲ್ಲಿದೆ.

"ಕಾವ್ಯ" ಪದ ಯಥಾರ್ಥ ಪರಿಭಾಷೆ ಯೀಯುವುದು ಕಠಿನವಾಗಿದೆ; ಏಕೆಂದರೆ ಮಹಾ ಆಚಾರ್ಯರಲ್ಲಿಯೂ ಈ ಸಂಬಂಧದಲ್ಲಿ ಮತಭೇದವಿರುತ್ತದೆ. ಆದರೂ ಕಾವ್ಯದ ಉದಯವು ಮಾನವ ಹೃದಯದಲ್ಲಿ ಆಗುತ್ತದೆ; ಮಾನವನ ಹೃದಯವನ್ನು ಅದು ಪ್ರಭಾವಿತವಾಗಿಸಿ ಆನಂದವನ್ನುಂಟುಮಾಡುತ್ತದೆ ಎಂದು ಹೇಳಬಹುದು. ಕಾವ್ಯವೆಂದರೇನು? ಎಂಬುದಕ್ಕೆ ಸೃಷ್ಟಿಯೊಡನೆ ಭಾವಾತ್ಮಕ ಸಂಬಂಧವನ್ನಿರಿಸಿಕೊಂಡಿರುವ ಮಾನವನ ಅನುಭವಗಳ ಆನಂದಪ್ರದಾಯಿನೀಸುಂದರ ಶಬ್ದರೂಪವಾದ ಅಭಿವ್ಯಕ್ತಿಯೇ ಕಾವ್ಯ ಎಂದುತ್ತರಿಸಬಹುದು. ಕಾವ್ಯವು ಭಾವಪ್ರಧಾನವಾದುದು, ಅಲ್ಪದಲ್ಲಿ ಬೃಹತ್ತನ್ನು ವ್ಯಂಜಿತಗೊಳಿಸುವುದೇ ಕಾವ್ಯದ ಬಾಹ್ಯ ಲಕ್ಷಣವಾಗಿದೆ.

ಕವಿತೆ ಮತ್ತು ಮಾನವ ಜೀವನಗಳ ಸಂಬಂಧವಿಶೇಷವಾಗಿದೆ. ಏಕೆಂದರೆ, ಕಾವ್ಯದ ದೃಷ್ಟಿಕೋಣವೇ ಮಾನವೀಯವಾಗಿದೆ. ಮನುಷ್ಯನೊಡನೆ ಭಾವಾತ್ಮಕ ಸಂಬಂಧವಿರಿಸಿಕೊಂಡಿರುವ ಅನುಭವಗಳೇ ಕಾವ್ಯಗಳಲ್ಲಿ ವರ್ಣಿತವಾಗುತ್ತವೆ. ವಿಜ್ಞಾನ ಮತ್ತು ಕಾವ್ಯಗಳ ನಡುವಣ ಭೇದವು ತಿಳಿದರೆ, ಈ ವಿಷಯವು ಸುಸ್ಪಷ್ಟವಾಗುತ್ತದೆ. ನೋಡುವ ವಸ್ತುವನ್ನು ಇದ್ದಕ್ಕಿದ್ದಂತೆ ನಿರೂಪಿಸುವುದು ವಿಜ್ಞಾನ. ಅದಕ್ಕೆ ಸುಂದರ, ಅಸುಂದರವೆಂಬ ಭೇದ ಭಾವನೆ ಇಲ್ಲ. ನೀರು ಆಮ್ಲಜನಕ ಮತ್ತು ಜಲಜನಕಗಳಿಂದ ಉಂಟಾಗುತ್ತದೆ—ಅದಕ್ಕೆ ಇದರಿಂದ ಹರ್ಷ ಯಾ ವಿಷಾದವಾಗುವುದಿಲ್ಲ. ಹೂವಿನಲ್ಲಿ ಇಷ್ಟು ದಳಗಳಿವೆ, ಇಷ್ಟು ತಂತುಗಳಿವೆ; ಅದು ಅಂಗಾರ ಮತ್ತು ಜಲಜನಕದಿಂದ ನಿರ್ಮಿತವಾಗಿದೆ ಎಂದು ವಿಜ್ಞಾನ ಹೇಳಬಹುದು. ಆದರೆ, ಕವಿಯು ಹೂವನ್ನು ಕೇವಲ ಕಣ್ಣಿನಿಂದ ನೋಡುವುದಲ್ಲ; ಹೃದಯದಿಂದ ಈಕ್ಷಿಸುತ್ತಾನೆ. ಅದನ್ನು ಕಾಣುವಾಗ ಕವಿಯ ಹೃದಯದಲ್ಲಿ ಆಗುವ ಪ್ರಭಾವವನ್ನು ಆತ ಹೇಳುತ್ತಾನೆ. ಆತ ಹೂವಿನಲ್ಲಿ ಸೌಂದರ್ಯವನ್ನು ಕಾಣುತ್ತಾನೆ. ಅವನಿಗದು ಹಸನ್ಮುಖಿಯಂತೆ ನಗುತ್ತಿರುವಂತೆ ಗೋಚರಿಸುತ್ತದೆ. ಪ್ರಕೃತಿ ದೇವಿಯ ಪ್ರಸನ್ನತೆಯುದ್ಯೋತಕದಂತೆ ಭಾಸವಾಗುತ್ತದೆ. ತನ್ನ ಪ್ರಿಯತಮನಾದ ಭಗವಂತನ ಪ್ರೇಮ ಸಂದೇಶವಾಹಕನೆಂಬ ಭಾವನೆ ಉದ್ಭವಿಸುತ್ತದೆ. ಎಲೆಗಳ ಮಧ್ಯದಲ್ಲಿ ಮುಗಿದಿರುವ ಮೊಗ್ಗೆ ಮಂದಾನಿಲನೊಡನೆ ಪ್ರೇಮಾಲಾಪ ಮಾಡುತ್ತಿರುವಂತೆ ಹೊಳೆಯುತ್ತದೆ.

ಕವಿಯು ಅಖಂಡ ಸೃಷ್ಟಿಯನ್ನು ಮಾನವೀಯ ರೂಪದಲ್ಲಿ ನೋಡುತ್ತಾನೆ; ಅದರಲ್ಲಿ ಮಾನವೀಯ ಭಾವಗಳನ್ನು ಆರೋಪಿಸಿ ತನ್ನ ಸಹಾನುಭೂತಿಯ ಕ್ಷೇತ್ರವನ್ನು ವಿಸ್ತರಿಸುತ್ತಾನೆ. ವಿಜ್ಞಾನವು ವಸ್ತುವಿನ ಸತ್ಯಾಂಶವನ್ನು ಹೇಳುತ್ತದೆ; ಕವಿಯು ತನ್ನ ಹೃದಯದಲ್ಲಿ ಮೂಡಿರುವ ಪ್ರಭಾವವನ್ನು ಉತ್ತಮ ವಿಧಾನದಲ್ಲಿ ಹೇಳುತ್ತಾನೆ. ಮನುಷ್ಯನೂ ಭೌತಿಕ ತತ್ವಗಳ ಸಂಘಾತವೆಂದೂ ಭೌತಿಕ ನಿಯಮಗಳಿಂದ ನಿಯಂತ್ರಿತನೆಂದೂ ವಿಜ್ಞಾನಿ ತಿಳಿಯುತ್ತಾನೆ; ಆದರೆ, ಕವಿಯು ಮನುಷ್ಯನನ್ನು ಪರಮಾತ್ಮನ ಅಂಶವೆಂದು, ಅತನಲ್ಲಿ ಜಾಗ್ರತಭಾವನೆಯಿದೆ ಎಂದು, ತನ್ನ ಕರ್ತವ್ಯವನ್ನರಿತವನೆಂದು ಹೇಳುತ್ತಾನೆ. ಕವಿಯ ದೃಷ್ಟಿಯಲ್ಲಿ ಮನುಷ್ಯ ಸ್ವತಂತ್ರನು; ಆತನ ಆತ್ಮವು ಭೌತಿಕ ನಿಯಮಬಾಹಿರ; ಆತನ ಭಾವ ಪ್ರವಾಹ ಸ್ವಚ್ಛಂದ. ಮಾನವನು ಸ್ವಯಂ ಸುಂದರ, ಅಲ್ಲದೇ ಸೌಂದರ್ಯೋತ್ಪಾದಕನೂ ಹೌದು.

ಇದರಿಂದ, ವಿಜ್ಞಾನಿಯು ಮನುಷ್ಯನೂ ಪ್ರಕೃತಿಯ ಅಂಗವೆಂದು ಹೇಳುತ್ತಾನೆಂದೂ ಕವಿಯು ಪ್ರಕೃತಿಯೂ ಮಾನವೀಯ ರೂಪಧಾರಣೆ ಮಾಡುತ್ತದೆಂದು ತಿಳಿಯುತ್ತಾನೆಂದೂ ಪ್ರಕಟವಾಯಿತು. ವಿಜ್ಞಾನಿಯೂ ಪ್ರಕೃತಿಯನ್ನು ಮಾನವನ ಹಿತಕ್ಕೋಸ್ಕರ ಉಪಯೋಗಿಸುವನಾದರೂ ಅವನ ದೃಷ್ಟಿಯಲ್ಲಿ ಪ್ರಕೃತಿಯೇ ಪ್ರಾಧಾನ್ಯ ಪಡೆಯುತ್ತದೆ. ಮಾನವನನ್ನು ಪ್ರಾಕೃತಿಕ ನಿಯಮಗಳಿಂದ ಬಂಧಿಸಿಡಲು ಪ್ರಯತ್ನಿಸುತ್ತಾನೆ; ಮಾನವನನ್ನು ಪ್ರಾಕೃತಿಕ ದೃಷ್ಟಿಕೋಣದಿಂದ ನೋಡುತ್ತಾನೆ. ಇದಕ್ಕೆ ವಿರೋಧವಾಗಿ ಪ್ರಕೃತಿಯನ್ನೂ ಕವಿಯು ಮಾನವೀಯ ದೃಷ್ಟಿಕೋಣದಿಂದ ನೋಡುತ್ತಾನೆ; ಎಂತಲೇ ಮಾನವ ಜೀವನಕ್ಕೂ ಕಾವ್ಯಕ್ಕೂ ನಿಕಟವಾದ ಸಂಬಂಧವಿದೆ.

ಇಷ್ಟೇ ಅಲ್ಲದೇ ಕಾವ್ಯ ಮತ್ತು ಮಾನವ ಜೀವನಗಳ ನಡುವೆ ಇನ್ನು ಹಲವು ಪ್ರಕಾರದ ಸಂಬಂಧವಿದೆ. ಕಾವ್ಯವು ಆನಂದವನ್ನುಂಟು ಮಾಡುತ್ತದೆ; ಆನಂದವೇ ಮಾನವನ ಮುಖ್ಯ ಗುರಿಯಾಗಿದೆ. ಕಾವ್ಯಾನಂದವನ್ನು 'ಬ್ರಹ್ಮಾನಂದ ಸಹೋದರ' ಎನ್ನುತ್ತಾರೆ. ಮಾನವನು ಜೀವನ ಸಂಘರ್ಷಗಳ ನಡುವೆ ಸಿಕ್ಕಿ ಬೀಳುವಾಗ, ಕಾವ್ಯವೇ ಅವನನ್ನು ಸಮಾಧಾನ ಪಡಿಸಿ ಶಾಂತಿಮನಸ್ಕನನ್ನಾಗಿಸುತ್ತದೆ. ಕಾವ್ಯವೇ ಮಾನವನ ಸಹಾನುಭೂತಿಯನ್ನು ವಿಸ್ತರಿಸುತ್ತದೆ; ಅವನನ್ನು ಸಂಕುಚಿ ಪ್ರಪಂಚದಿಂದ ವಿಶ್ವಕ್ಕೆ ಎಳೆಯುತ್ತಿರುತ್ತದೆ. ಸಮಭಾವದಿಂದಾಗಿ ಅವನು ವಿಶ್ವದ ಎಲ್ಲವನ್ನೂ ಒಂದೇ ಕುಟುಂಬವೆಂದು ತಿಳಿಯುತ್ತಾನೆ; ಉತ್ತಮ ಸಾಹಿತಿಯಲ್ಲಿ ಭೇದಭಾವನೆಗಳಿಗೆ ಅಸ್ಪದವಿಲ್ಲ; ಕಾಲಿದಾಸನನ್ನು ನೋಡುವಂತೆಯೇ ಆತ ಶೇಕ್ಸ್‌ಪಿಯರನನ್ನೂ ಸಂಪನ್ನನನ್ನು ದೃಷ್ಟಿಸುತ್ತಾನೆ. 'ಟೆಂಪೆಸ್ಟ್'ನ ಏಕಾಂತವಾಸಿನಿ ನಾಯಿಕೆ ಮಿರಂಡಳಂತೆಯೇ ತಪೋವನ ವಿಹಾರಿಣಿ ಶಕುಂತಲೆಯು ಮತ್ತು ದ್ವಾರಕೆಯ ಅತಃಪುರದಲ್ಲಿ ವಿಹರಿಸುತ್ತಿದ್ದ ದ್ರೌಪದಿಯ ಸೌಂದರ್ಯವನ್ನು ನೋಡುತ್ತಾನೆ. ದೇಶ ಮತ್ತು ಜಾತೀಯ ಭೇದಗಳು ಇಂದು ಕೊಂಚವಾದರೂ ದೂರವಾಗಿರುವುದಾದರೆ, ಅದಕ್ಕೆ ಸಾಹಿತ್ಯವೂ ತನ್ನ ಪಾಲಿನ ಸೇವೆ ಸಲ್ಲಿಸಿದೆ ಎನ್ನಬೇಕು. ಕವಿ ರವೀಂದ್ರನಾಥ ಟಾಗೋರರ ವಿಶ್ವಭಾರತಿಯು ಈ ಗುರಿಯನ್ನಿಟ್ಟುಕೊಂಡೇ ಕೆಲಸ ಮಾಡುತ್ತಿದೆ.

ಮಾನವ ಹೃದಯವನ್ನು ವಿಸ್ತೃತಗೊಳಿಸುವುದೇ ಕಾವ್ಯದ ಪ್ರಧಾನ ಗುಣವಾಗಿದೆ. ಅಖಂಡ ಪ್ರಪಂಚದಲ್ಲಿ ಮತ್ತು ಸರ್ವಕಾಲದಲ್ಲಿ ಮಾನವ ಹೃದಯದ ಸಮಸ್ಯೆಗಳು ಏಕರೂಪವಾಗಿರುತ್ತವೆ. ಆದುದರಿಂದ ಕಾವ್ಯವರ್ಣನೆಯು ದೇಶಕಾಲ ವೈಶಿಷ್ಟ್ಯಗಳಿಂದ ದೂರವಿರುತ್ತದೆ. ಶಕುಂತಳೆಯು ಪತಿಗೃಹಕ್ಕೆ ತೆರಳುವ ದೃಶ್ಯವು ಪ್ರತಿಯೊಂದು ಮನೆಯಲ್ಲೂ ವಧು ಪತಿಗೃಹಗಮನಮಾಡುವಾಗ ನಡೆಯುವ ನೋಟವೇ ಆಗಿದೆ. ಮಾಲತಿ ಮತ್ತು ಮಾಧವರ ಪ್ರೇಮ ಮಾಲತೀಮಾಧವರ ಪ್ರೇಮ ಮಾತ್ರ ಆಗಿರದೆ ಆ ಸ್ಥಿತಿಯಲ್ಲಿದ್ದ ಪ್ರೇಮಿ ಮತ್ತು ಪ್ರೇಯಸಿಯರದ್ದೂ ಆಗಿದೆ.

ಕಾವ್ಯದ ಗುಣಗಳಿಂದ ವ್ಯವಹಾರ ಕುಶಲತೆಯೂ ಬೆಳೆಯುತ್ತದೆ. ಕಾವ್ಯಗಳಲ್ಲಿ ಮಾನವನ ಅನುಭವಗಳು ಘನೀಭೂತವಾಗಿ ಚಿರಸ್ಥಾಯಿಯಾಗುಳಿಯುತ್ತವೆ. ಬೇರೆಯವರ ಸಫಲತೆ ಮತ್ತು ಅಸಫಲತೆಗಳಿಂದ ನಾವೂ ಲಾಭ ಪಡೆಯಬಹುದು. ಮಾನವ ವರ್ಗದ ಸಾಮೂಹಿಕ 'ಸ್ಮೃತಿ'ಯೇ ಕಾವ್ಯ. ವ್ಯಕ್ತಿಗತ ಜೀವನದಲ್ಲಿ

(೧೦ನೇ ಪುಟ ನೋಡಿರಿ)



ತರುಣೋತ್ಸಾಹಿಗಳಿಗೆ ಸ್ಪರ್ಧೆಗಳಲ್ಲಿ ಭಾಗವಹಿಸಲು ಅನುಕೂಲವಾದ ಆಧುನಿಕ ಮೋಟಾರು ಕಾರು.

ದ. ಕ. ಜಿಲ್ಲಾ ಸ್ಪೆಶಲ್ ಅಸಿಸ್ಟಂಟ್ ಕಮಿಶನರ ಕೋರ್ಟಿನಲ್ಲಿ

(Tenancy)

O. P. No. 284/1959

B. ಗೋಪಾಲಕೃಷ್ಣ ತಂತ್ರಿ-ಅರ್ಜಿದಾರ

ಶಿವಣ್ಣ ಶೆಟ್ಟಿ ಕಾರ್ಕಳ ನಗಿಕೆರೆ ಚಿನ್ನಯ್ಯ ಶೆಟ್ರ ಅಳಿಯ ಕಾರ್ಕಳ ತಾಲ್ಲೂಕು ಯೆರ್ಲಪಾಡಿ ಗ್ರಾಮದಲ್ಲಿರುವವ—ಎದ್ರಿ.

ಕೋರ್ಟು ಹುಕುಂ ಪ್ರಕಾರ ಎದ್ರಿಗೆ ಯಾ ಮೂಲ್ಕ ತಿಳಿಸುವದೇನೆಂದ್ರೆ—

ಎದ್ರಿಯು ಮೇಲೆ ಗೇಣಿ ಬಾಕಿ ಆದ ಕಾರಣ ಅರ್ಜಿದಾರನು ಆಸ್ತಿ ಸ್ವಾಧೀನತೆ ಬಗ್ಗೆ ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾ. 5-6-1959ರಲ್ಲಿ ಕಾರ್ಕಳ ಕೇಂಪಿನಲ್ಲಿ ಎದ್ರಿಯ ಹಾಜರಾತಿ ಬಗ್ಗೆ ಯಿಟ್ಟದೆ. ಆದ್ರಿಂದ ಸದ್ರಿ ಅರ್ಜಿ ಕುರಿತು ಎದ್ರಿಯ ಆಕ್ಷೇಪಯಿದ್ದರೆ ಸದ್ರಿ ತಾ 5-6-1959ನೇ ದಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟಿನ ಕಾರ್ಕಳ ಕೇಂಪಿನಲ್ಲಿ ಹಾಜರಾಗಿ ಹೇಳಿಕೊಳ್ಳತಕ್ಕದ್ದು.

H. K. Gopalkrishna Rao,
Vakil for petr.

Karkala, 19-5-59.

ಸ್ಥಾಪನೆ: 1906] ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ. 20,00,000/-
ಕ್ಷೇಮನಿಧಿ	—	ರೂ. 14,40,000/-
ಠೇವಣಾತಿಗಳು	—	ರೂ. 7,19,35,000/-
ಸಾಲಗಳು	—	ರೂ. 3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ. 9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ.

The Canara Banking Corporation Ltd.

Estd:- 1906] [H. O. UDIPI (S. India)

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ವಿಚಿತ್ರ ಸತ್ಯ

ಇಲ್ಲಿ ನಾರಿಯರ ಹೆಸರೆತ್ತುವುದೂ ಪಾಪ!

ಏಜಿಯನ್ ಸಮುದ್ರದ ಎಥಾಸ್ ದೇಶದ ವಿಚಿತ್ರ ನಿರುತ್ಸಾಹೀ ಜೀವನ.

ಪೌರಾಣಿಕ ಕಥೆಗಳಲ್ಲಿ ಸ್ತ್ರೀಯರ ರಾಜ್ಯ ಇಲ್ಲವೇ ಪುರುಷರ ರಾಜ್ಯಗಳು ಇದ್ದುದು ನಮಗೆ ಕಂಡುಬರುತ್ತದೆ. ಎಂದರೆ, ಇಂತಹ ದೇಶಗಳಲ್ಲಿ ಆ ವಿಶಿಷ್ಟ ಲಿಂಗದ ವ್ಯಕ್ತಿಗಳು ಮಾತ್ರ ಇರುತ್ತಾರೆ; ಮಹಾಭಾರತದ ಕಾಲದಲ್ಲಿ ಪ್ರಮೀಳೆಯ ರಾಜ್ಯವಿರಲಿಲ್ಲವೆ? ಹಾಗೆ ಆದರೆ ಈ ಇಪ್ಪತ್ತನೆಯ ಶತಮಾನದ ಅತ್ಯಾಧುನಿಕ ಕಾಲದಲ್ಲಿ ಕೇವಲ ಪುರುಷರದ್ದೇ ಒಂದು ದೇಶವಿದೆ—ಇಲ್ಲಿ ಜನರು ಮಾತ್ರ ಅಲ್ಲ, ಪಶುಪಕ್ಷಿಗಳೂ ಪುರುಷಗಳೇ—ಎಂದರೆ ನೀವು ಆಶ್ಚರ್ಯಚಕಿತರಾಗುವುದಿಲ್ಲವೆ? ಆದರೆ, ಇದು ನಿಜ. ಇಲ್ಲಿ ಪುರುಷರಿದ್ದಾರೆ; ಸ್ತ್ರೀಯರ ಹೆಸರೇ ಇಲ್ಲ; ದನ, ಎತ್ತುಗಳಿವೆ; ಆದರೆ, ಎತ್ತು ಕೋಣಗಳು ನಾಮಮಾತ್ರಕ್ಕೂ ಇಲ್ಲ; ಗಂಡು ಕುದುರೆಗಳಿವೆ; ಹೆಣ್ಣು ಕುದುರೆಗಳಿಲ್ಲ! ಹೀಗೆಯೇ.

ಇಂತಹ ವಿಲಕ್ಷಣ ದೇಶವೆಂದರೆ, ಏಜಿಯನ್ ಸಮುದ್ರದ ಒಂದು ದ್ವೀಪ. ಇದು ಸುಮಾರು ೩೦ ಮೈಲು ಉದ್ದವೂ ಏಳೂವರೆ ಮೈಲು ಅಗಲವೂ ಇದೆ. ಇದರ ಹೆಸರು 'ಮೌಂಟ್ ಎಥಾಸ್' ಎಂದು. ವಾಸ್ತವಿಕವಾಗಿ ಇದು ಒಂದು ದೇಶದ ಒಳಗಿರುವ ದೇಶವಾದರೂ ಇದರ ಮೇಲೆ ಯೂನಾನ್ ದೇಶವು ಅಧಿಕಾರ ಸ್ಥಾಪಿಸಲಿಲ್ಲ. ಎಥಾಸ್‌ನಲ್ಲಿ ಇಂದಿನ ಪ್ರಪಂಚದ ಸರಕಾರಗಳಿಗಿಂತ ಸಾವಿರಾರು ವರ್ಷ ಹಿಂದಿನದರಂತಿರುವ ತನ್ನದೇ ಆದ ಸರಕಾರವೊಂದಿದೆ. ಇದಕ್ಕೆ ತನ್ನದೇ ಪೋಲೀಸು ದಳ ಮತ್ತು ಸೈನ್ಯ ಪಡೆಗಳಿವೆ; ಆದರೆ, ಇವುಗಳ ಏಕಮಾತ್ರ ಕೆಲಸವೆಂದರೆ, ಸ್ತ್ರೀ ಪ್ರವೇಶ ನಿಷೇಧ!

ಪ್ರಕೃತಿ ಇಲ್ಲವೇ ಪರಮೇಶ್ವರರು ಇಲ್ಲಿ ಸ್ತ್ರೀ ನಿಷೇಧ ಮಾಡಿಲ್ಲವಾದರೂ ಅವರ ಭಕ್ತರು ಮಾತ್ರ ಈ ಕಾನೂನನ್ನು ಮಾಡಿದ್ದಾರೆ. ಕ್ರಿಶ್ಚಿಯನ್ ಸಂಪ್ರದಾಯದ ಒರ್ವ ಸಾಧು ಇಲ್ಲಿ ಆಳುತ್ತಿದ್ದಾನೆ; ಸುಮಾರು ಆರು ಸಾವಿರ ನಿವಾಸಿಗಳೂ ಇದ್ದಾರೆ. ಜಟಾಜೂಟ ಧಾರಿಗಳಾದ ಉದ್ದುದ್ದವಾದ ನಿಲುವಂಗಿ ಧರಿಸಿದ ಸಾಧುಗಳು ಇಲ್ಲಿನ ಗ್ರಾಮಗಳಲ್ಲಿ, ಉದ್ಯಾನ ಉಪವನಗಳಲ್ಲಿ, ದುರ್ಗಮ ಪರ್ವತ ಮಾರ್ಗಗಳಲ್ಲಿ— ಎಲ್ಲೆಲ್ಲಿಯೂ ಕಾಣಸಿಗುತ್ತಾರೆ; ಆದರೆ ಸಂಪೂರ್ಣ ನಿವಾರ್ಕ್ಕಗಳು; ಹಾಸ-ಉಲ್ಲಾಸ ಶೂನ್ಯರು!

೬,೩೫೦ ಅಡಿ ಎತ್ತರದ ಎಥಾಸ್ ಪರ್ವತದ ಪ್ರದೇಶದಲ್ಲಿರುವ ಈ ದೇಶ ಸುಮಾರು ಒಂದು ಸಾವಿರ ವರ್ಷ ಹಳೆಯದು. ಹತ್ತನೆಯ ಶತಮಾನದಲ್ಲಿ ಕ್ರಿಶ್ಚಿಯನ್ ಪಾದ್ರಿಗಳು ಇಲ್ಲಿ ಬಿಡಾರ ಹಾಕಿ ಹಲವಾರು ಮಠಗಳನ್ನು ಕಟ್ಟಿಸಿದರು. ಈಗ ಇಲ್ಲಿ ಇಂತಹ ಇಪ್ಪತ್ತು ಮಠಗಳಿವೆ. ಪ್ರತಿ ಮಠಕ್ಕೂ ಒಬ್ಬೊಬ್ಬ ಮಠಾಧೀಶನಿರುತ್ತಾನೆ; ಒಂದು ವೇಳೆ ಇಲ್ಲದೆ ಹೋದರೆ ಕೆಲವು ಜನ ನಿರೀಕ್ಷಕರ ಮಂಡಳಿ ಇರುತ್ತದೆ. ಪ್ರತಿ ಮಠದಿಂದಲೂ ಕಳುಹಿಸಲ್ಪಟ್ಟ ಒಬ್ಬೊಬ್ಬ ಪ್ರತಿನಿಧಿಯಿಂದ ಕೂಡಿದ ಒಂದು ಮಂಡಳಿಯಿಂದ ಇಡೀ ದೇಶದ ವ್ಯವಸ್ಥೆ ನಡೆಯುತ್ತದೆ. ಆರಿಸಲ್ಪಟ್ಟ ಮುಖ್ಯ ಸಾಧು ಮಂಡಳಿಯ ನಾಯಕನಾಗುತ್ತಾನೆ.

ಈಗ ಒಂದು ಸಾವಿರ ವರ್ಷಗಳಿಂದ ಈ ವಿಧಾನ ಮಂಡಳವು ಕಠೋರತಮ ನಿಯಮೋಪನಿಯಮಗಳನ್ನು ಮಾಡಿರುವುದರಿಂದ ಇಲ್ಲಿ ಸ್ತ್ರೀಯೋನಿಯ ಪ್ರವೇಶಕ್ಕೇನೇ ತಡೆ ಬಿದ್ದಿದೆ. ಇಲ್ಲಿನ ನಿವಾಸಿಗಳಾದ ಸಾಧುಗಳಿಗೆ ಸಂಯಮದಿಂದಲೇ ಜೀವಿಸಬೇಕೆಂಬ ಕಟ್ಟಾಜ್ಞೆ ಇರುವುದು ಮಾತ್ರವಲ್ಲದೇ ಸ್ತ್ರೀ ನಾಮದ ಸ್ಮರಣೆಯೂ ಅವರ ಪಾಲಿಗೆ ಘೋರ ಪಾಪವಾಗಿದೆ.

ಈ ಒಂದು ಸಾವಿರ ವರ್ಷಗಳಲ್ಲಿ ನೂರಾರು ಯುದ್ಧಗಳು ಘಟಿಸಿ ಹಲವಾರು ರಾಜ್ಯಗಳು ಉತ್ಥಾನ—ಪತನಕ್ಕೆ ಗುರಿಬಿದ್ದಿದ್ದರೂ ಈ "ಎಥಸ್" ಯಾವುದೇ ರೀತಿಯ ಪರಿವರ್ತನೆಗೂ ಈಡಾಗಲಿಲ್ಲವೆಂಬುದೂ ಆಶ್ಚರ್ಯಕರವಾದ ಸಂಗತಿಯೇ ಸರಿ.

ಕ್ರಿ. ಶ. ೯೦೦ರಲ್ಲಿ ಆಗ ಬಿಜನತಿಯಮ್ ಎಂದು ಕರೆಯುತ್ತಿದ್ದ ಈಗಿನ ಇಸ್ತಾಂಬೂಲಿನಲ್ಲಿ ಪರಮ ಧಾರ್ಮಿಕರ ಸಂಸ್ಥೆ ಹೆಚ್ಚಿತ್ತು. ಆದರೂ ಇಲ್ಲಿನ ವಾತಾವರಣ ತಮ್ಮ ಧ್ಯೇಯ ಸಾಧನೆಗೆ ಸರಿಬರಲಿಲ್ಲ. ಆದುದರಿಂದ ಅವರು ಎಥಾಸ್ ದ್ವೀಪಕ್ಕೆ ಹೋಗಿ ನೆಲೆನಿಂತರು. ಪರ್ವತ ಪ್ರದೇಶಗಳಿಗೆ ತೆರಳಿ ಅಲ್ಲಿ ಮಠಗಳನ್ನು ಕಟ್ಟಿಸಿದರು. ಎಂಟು ಪ್ಪರಿಗೆಯ ಮಠವೂ ಇಲ್ಲಿದೆ. ಎರಡು ಮೈಲುದ್ದದ ಗೋಡೆಯಿರುವ ಮಠವೊಂದಿಲ್ಲಿದೆ. ಈ ಮಠಗಳೆಲ್ಲವೂ ೯೦೦ರಿಂದ ೧೧೦೦ರ ನಡುವೆ ರಚಿತವಾದುವು. ಧಾರ್ಮಿಕ ವೃತ್ತಿಯಿಂದ ಪ್ರೇರಿತರಾಗಿಯೇ ಈ ಪಾದ್ರಿಗಳು ಸ್ವಂತ ಹಸ್ತಗಳಿಂದಲೇ ಇವೆಲ್ಲವನ್ನೂ ಕಟ್ಟಿದರು.

ಆದರೂ ಈ ಮಠಗಳು ಬಹಳ ಶ್ರೀಮಂತವಾಗಿವೆ. ಆ ಕಾಲದ ಬೈಜೇಂತಿಯನ್ ಶಾಸಕರು ತಮ್ಮಿಂದ ಪರಾಜಿತವಾದ ದೇಶಗಳನ್ನು ಕೊಳ್ಳೆಹೊಡೆದು ಗಳಿಸಿದ ಧನ, ಕನಕವಸ್ತುಗಳಲ್ಲಿ ಅಧಿಕಾಂಶವು ಈ ಮಠಗಳಲ್ಲಿಯೇ ಇವೆ. ಚಿನ್ನದಲ್ಲಿ ಕೋದ ರತ್ನಗಳ ಮಾಲೆಗಳು ಇಲ್ಲಿ ನೇತಾಡುತ್ತಿವೆ.

ಈ ಮಠಗಳಲ್ಲಿ ನಾಲ್ಕೈದನೆಯ ಶತಮಾನದ ಕಾಲದ ಬೈಬಲ್ ಸಂಬಂಧಿ ಗ್ರಂಥಗಳ ಬಹುಮೂಲ್ಯ ಹಸ್ತಲಿಖಿತ ಸಾಹಿತ್ಯಗಳು ಸಂಗ್ರಹಿತವಾಗಿವೆ. ಎಥಾಸನ್ನು ಸಂದರ್ಶಿಸಿ ಬಂದವರು ಇಲ್ಲಿ ಮುತ್ತು ರತ್ನಗಳ ರಾಶಿಗಳು ದೃಗ್ಗೋಚರವಾಗುತ್ತಿವೆಯೆಂದೂ ನೂರಾರು ವರ್ಷಗಳಿಂದ ಇವು ಇಲ್ಲಿ ಕೊಳೆಯುತ್ತಿವೆ ಎಂದೂ ಹೇಳುತ್ತಾರೆ.

ಹಣ ಕಂಡರೆ ಹೆಣವೂ ಬಾಯಿ ಬಿಡುವುದು ನಿಜವಷ್ಟೆ? ಹಾಗಿರುವಾಗ, ಎಥಾಸ್ ಆದರೂ ಹೇಗೆ ಆಕರ್ಷಿತವಾಗದುಳಿದೀತು? ಹದಿನಾಲ್ಕನೆಯ ಶತಮಾನದಲ್ಲಿ ದರೋಡೆಕೋರರು ಒಂದು ಬಲವಾದ ಆಕ್ರಮಣ ಮಾಡಿದರು; ಆದರೆ, ಕೆಲವರನ್ನು ಕೊಂದು, ಇನ್ನು ಕೆಲವರನ್ನು ಹೆದರಿಸಿ ಓಡಿಸಲಾಯಿತು. ಮೊದಲನೆಯ ಮಹಾ ಯುದ್ಧದ ಕಾಲದಲ್ಲಿಯೂ ಜರ್ಮನಿಯ ಒಂದು ಸೇನಾದಳವು ಇಲ್ಲಿನ ಧನ ಅಪಹರಿಸಲು ಬಂದಿತ್ತು. ಆದರೆ, ಈ ದಳದ ಪ್ರತಿಯೊಬ್ಬ ಸಿಪಾಯಿಯೂ ತನ್ನ ಪ್ರಾಣವನ್ನು ಕಳೆದುಕೊಳ್ಳಬೇಕಾಯಿತು. ಯೂನಾನಿ ಸರಕಾರವು ಈ ವಿಷಯದಲ್ಲಿ ಪರಿಶೀಲನೆ ನಡೆಸಲು ಒಂದು ಸಮಿತಿಯನ್ನು ನೇಮಿಸಿತು; ಪರಂತು, ಸಾಧುಗಳ. ಈ ಸಮಿತಿಯ ಮುಂದೆ ಮೌನವ್ರತಧಾರಣೆ ಮಾಡಿದರು.

ಯೂನಾನ್ ಸರಕಾರದ 'ವೀಸಾ ಪತ್ರ'ವನ್ನು ದೊರಕಿಸಿಕೊಂಡರೆ, ಈ ವಿಚಿತ್ರ ದೇಶವನ್ನು ಪ್ರವೇಶಿಸಬಹುದು. ಆದರೆ, ಸ್ತ್ರೀಯರೆಂದೇನು, ಸ್ತ್ರೀಯರ ಚಿತ್ರಗಳು ಕೂಡ ಈ ಪ್ರದೇಶದ ಸೀಮೆಯನ್ನು ದಾಟಲಾರವು! ಗಡಿಪ್ರದೇಶದಲ್ಲಿ ಯಾತ್ರಿಕರನ್ನು ಸೂಕ್ಷ್ಮವಾಗಿ ಪರಿಶೋಧನೆ ನಡೆಸುತ್ತಾರೆ.

ಸೀಮೆಯನ್ನು ದಾಟಿದೊಡನೆಯೇ ಯಾತ್ರಿಕರು ನೇರವಾಗಿ ಎಥಸ್‌ನ ರಾಜಧಾನಿ 'ಕೇರೇಸ್'ಗೆ ತೆರಳುತ್ತಾರೆ. ಇಲ್ಲಿಂದ ವಿವಿಧ ಮಠಗಳಿಗೆ ಹೋಗುವ ವ್ಯವಸ್ಥೆಯಿದೆ. ಕರ್ಯೆಸದಲ್ಲಿ ರಸ್ತೆಗಳಿವೆ, ಅಂಗಡಿಗಳಿವೆ, ಗಾಡಿಗಳೂ ಕುದುರೆಗಳೂ ಇವೆ. ಕೆಲಸಮಯಾನಂತರ ಈ ದ್ವೀಪದ ಅಸ್ವಸ್ಥಮಯ ವಾತಾವರಣವನ್ನು ಕಂಡು ಪ್ರೇಕ್ಷಕರು ಅವಾಕ್ಕಾಗುತ್ತಾರೆ. ಇಲ್ಲಿ ಎಲ್ಲೆಡೆಯಲ್ಲೂ ನಿರುತ್ಸಾಹವು ಆತನಿಗೆ ಗೋಚರಿಸುವುದರಿಂದ, ಇದಕ್ಕೆ ಕಾರಣವೇನೆಂದು ಆತ ಚಿಂತಿಸತೊಡಗುತ್ತಾನೆ; ಕೊನೆಗೆ ನಾರಿಯರ ಅಭಾವವೇ ಮೂಲ ಕಾರಣವೆಂದು ಕಂಡುಹಿಡಿಯುತ್ತಾನೆ. ಎಲ್ಲಿ ನೋಡಿದರೂ ಅದೇ ರಾಗವಿಹೀನ ಜಟಾಜೂಟಧಾರಿಗಳಾದ ಸನ್ಯಾಸಿಗಳೇ— ಆದುದರಿಂದಲೇ ಈ ದೇಶ ಅಪ್ರಾಕೃತಿಕವಾಗಿ ತೋರುತ್ತದೆ.

ಕೆಲಸ, ಊಟ, ನಿದ್ದೆಗಳಿಗೆ ಕಳೆದುಳಿದ ಸಮಯವನ್ನು ಇಲ್ಲಿ ಧ್ಯಾನ, ಭಜನೆ, ಚಿಂತನೆಗಳಲ್ಲಿಯೇ ಕಳೆಯಲಾಗುತ್ತದೆ. ದೀರ್ಘವಾದ ಧಾರ್ಮಿಕ ಕ್ರಿಯೆಗಳು ಇಲ್ಲಿನ ದೈನಿಕ ಕರ್ಮಗಳು. ಆಟ, ಓಟ, ಆಮೋದ ಪ್ರಮೋದವೆಂಬ ಹೆಸರಿನ ವಸ್ತುವೆಂಬುದಿಲ್ಲಿಲ್ಲ. ಜೀವನದ ವಾಸ್ತವಿಕತೆಯು ದೂರವಿಟ್ಟು ಈ ಸನ್ಯಾಸಿಗಳು ನಿಜವಾಗಿಯೂ "ಪರಲೋಕ"ದಲ್ಲಿಯೇ ನೆಲಸಿದ್ದಾರೆ. ಅವರು ಜೀವಿತರಾಗಿದ್ದಾರೆ; ಆದರೆ ಜೀವ ಮಾತ್ರ ಅವರಲ್ಲಿದ್ದಂತೆ ಗೋಚರಿಸುವುದಿಲ್ಲ. ಆ ಆರೋಗ್ಯವಂತ ಯೌವನಮಯ ಶರೀರದ ಶ್ರೀಮಂತರು ಈ ಯುಗದಲ್ಲಿಯೂ ಕಠೋರ ವ್ರತಪಾಲಕರಾಗಿ ಹೀಗೆ ಜೀವಿಸಲು ಶಕ್ತರಾದರು ಎಂಬುದೂ ವಿಸ್ಮಯ ಕಾರಣವಾಗಿರುವುದಿಲ್ಲ. ಏಕೆಂದರೆ, ಅವರಲ್ಲಿ ಸ್ನಾನ ಮಾಡುವ ಪದ್ಧತಿಯೂ ಇಲ್ಲ; ಅದೇಕೆ ಗೊತ್ತೆ? ತಮ್ಮ ನಗ್ನ ಶರೀರವನ್ನು ಕಂಡೇ ಚಿತ್ತ ವಿಚಲಿತವಾಗಬಾರದು ತಾನೆ? ದೀಕ್ಷಿತರಾದಂದಿನಿಂದ ಮರಣದ ವರೆಗೆ ಸದಾ ಅವರು ಬಟ್ಟೆಗಳನ್ನು ಸಂಪೂರ್ಣ ತೊಟ್ಟುಕೊಂಡೇ ಇರುತ್ತಾರೆ.

ಎಥೇಸ್‌ನ ಈ ಕುತೂಹಲಮಯ ಚಿತ್ರವನ್ನು ಕಂಡಾಗ ಅಲ್ಲಿನ ಆಶ್ಚರ್ಯಕರ ಜೀವನವನ್ನು ಕಣ್ಣಾರೆ ಕಾಣುವ ಕುತೂಹಲ ಕೆರಳಿದರೂ ಒಂದು ಬಾರಿ ಅಲ್ಲಿಗೆ ಹೋದೆವೆಂದರೆ ಜೀವನವನ್ನು ರಸಮಯವಾಗಿ ಕಳೆಯುವ ನಾವು ಅಲ್ಲಿನ ಆ ಸ್ಮಶಾನ ಗಾಂಭೀರ್ಯವನ್ನು ಕಂಡು ನೀರಸ ಜೀವನಕ್ಕೆ ರೋಸಿ ಹೋಗಿ ತತ್ಕ್ಷಣ ಮರಳಿಯೇ ಬಿಡುತ್ತೇವೆ.

ಇಂದಿನ ದಿನದಲ್ಲಿಯೂ ಇಂತಹ 'ವಿಚಿತ್ರ ಪ್ರಾಣಿ'ಗಳ ದೇಶವೊಂದಿದೆ; ಎಂದರೆ, ಅದು ವಿಚಿತ್ರ ಸತ್ಯವಾಗಿದೆ.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್, ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2.00.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ| ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6 - 0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12 –0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಿಚಾರ ವರ್ಷ

ಸಾಹಿತ್ಯದ ದುರದೃಷ್ಟವೆ?

ಸರಕಾರವು ಸಾಹಿತ್ಯಕೃತಿಗಳಿಗೆ ಪುರಸ್ಕಾರ ಕೊಡುವಾಗ ಯೋಗ್ಯ ಮಾರ್ಗವನ್ನು ಅನುಸರಿಸಬೇಕು.

ಕನ್ನಡ ಸಾಹಿತ್ಯದ ಉತ್ತಮ ಗ್ರಂಥಗಳಿಗೆ ಸಂಭಾವನೆ ಕೊಡುವ ಏರ್ಪಾಡು ಮಾಡಿದ ಸರಕಾರದ ಸ್ತುತ್ಯೋಪಕ್ರಮದಲ್ಲಿ ಉಂಟಾದ ಗೊಂದಲವನ್ನು ನೋಡಿ ಯಾರಿಗೂ ವ್ಯಸನವಾಗದಿರದು. ಈ ವಿಷಯವಾಗಿ ಹಲವರ, ಮುಖ್ಯವಾಗಿ ಖತಿಗೊಂಡ ಗ್ರಂಥಕರ್ತರ, ಟೀಕೆಗಳು ಪ್ರಕಟವಾಗಿವೆ. ಬಹುಮಾನ ನಿರ್ಣಾಯಕ ಸಮಿತಿಯ ಸದಸ್ಯರೊಬ್ಬರ ಪ್ರಕಟನೆ ಹೊರಟಿದೆ. ಹಲವು ಎದೆಗಳು ನೊಂದಿವೆ. ಹಲವರ ಬುದ್ಧಿ ತರ್ಕ ಸರಣಿಯನ್ನು ದಾಟಿ ಕೇವಲ ವೈಯಕ್ತಿಕ ಟೀಕಾ ನಿಂದೆಗಳ ಕಡೆಗೆ ಜಾರಿರುವಂತೆಯೂ ಭಾಸವಾಗುತ್ತದೆ. ಇದು ಕನ್ನಡ ಸಾಹಿತ್ಯದ ದುರದೃಷ್ಟ ಎಂದರೆ ತಪ್ಪಲ್ಲ. ಮೊತ್ತಮೊದಲು ಸಮಿತಿಯ ನಿರ್ಣಯವನ್ನು ಉಗ್ರವಾಗಿ ಪ್ರತಿಭಟಿಸಿದವರು, ತಮ್ಮ ಯೋಗ್ಯತೆಗೆ ತಕ್ಕ ಪುರಸ್ಕಾರ ದೊರೆಯಲಿಲ್ಲವೆಂದು ಬಹುಮಾನವನ್ನು ತಿರಸ್ಕರಿಸಿದ ಗ್ರಂಥಕರ್ತರು. ಇವರಾದರೂ ತೂಕದ ಮಾತುಗಳನ್ನಾಡಿದರೆಂದು ಹೇಳಬರುವುದಿಲ್ಲ. ಪರೀಕ್ಷೆಗಳಲ್ಲಿ ಉತ್ತೀರ್ಣರಾಗದ, ಅಥವಾ ಆಗಬೇಕಾದಂತೆ ಆಗದ, ನಿರಾಶ ವಿದ್ಯಾರ್ಥಿಗಳ ಬಿಡುಮಾತಿನ ಸಂಪ್ರದಾಯವನ್ನನುಸರಿಸಿ ಮಾನ್ಯ ಲೇಖಕರು ಆಡುವಾಗ, ಸಭ್ಯತೆಯ ಕೊಲೆಯಾಗುತ್ತದೆ. ಆದಾಗಿದೆ. ತಮಗಾದ "ಅಗೌರವ"ದಿಂದ ಕಂಗೆಟ್ಟ ಗ್ರಂಥಕರ್ತರು ಮೌನ ತಾಳುತ್ತಿದ್ದರೆ, ಘನತೆ ಹೆಚ್ಚುತ್ತಿತ್ತು. ಅವರು ಈ ಗೊಂದಲ ಕದನ (Skirmish)ದಲ್ಲಿ ಭಾಗವಹಿಸಿದುದು ಶೋಚನೀಯ. ಅದೇ ವೇಳೆಯಲ್ಲಿ—ನಾಣ್ಯದ ಇನ್ನೊಂದು ಬದಿಯನ್ನು ನೋಡುವಾಗ, ಕಂಡುಬರುವ ಚಿತ್ರವು ಅಷ್ಟು ಸುಂದರವಾಗಿ ತೋರುವುದಿಲ್ಲ. ಸಮಿತಿಯ ಸದಸ್ಯರೊಬ್ಬರು, ಇದರ ಮೇಲೆ ಬೀರಿದ ಬೆಳಕಿನಿಂದ, ಚಿತ್ರದ ಶೋಭೆ ಹೆಚ್ಚುವಂತಿಲ್ಲ.

ಒಟ್ಟು ನಲುವತ್ತೈದು ಬಹುಮಾನಗಳಿದ್ದುವು. ಅವುಗಳಲ್ಲಿ ನಾಲ್ಕು ಮಾತ್ರ ಸಮಿತಿಯ ಸದಸ್ಯರಿಗೆ ಸಂದಿದೆ; ಇದು ಪ್ರಮಾಣಚ್ಯುತವೆ? ಟೀಕೆ ಮಾಡುವ ಯಾರಿಗಿಂತಲೂ ಸಮಿತಿಯ ಸದಸ್ಯರು ಕಡಿಮೆಯಿಲ್ಲ— ತಮ್ಮ ವಿವೇಕಕ್ಕೆ ಸರಿಯಾಗಿ ಅವರು ತೀರ್ಮಾನಿಸಿದರು; ತಮ್ಮ ಗ್ರಂಥಗಳ ಬಹುಮಾನವನ್ನು ತಾವೇ ನಿರ್ಣಯಿಸಲಿಲ್ಲ. ಅವರದನ್ನು ಸದಸ್ಯರೊಳಗೆ ಇತರರು ನಿರ್ಣಯಿಸಿದರು; ಆ ನಿರ್ಣಯದಲ್ಲಿ ಚೋದನೆ ಏನೂ ಇರಲಿಲ್ಲ. ಸಮಿತಿಯ ಪರವಾಗಿ, ಅದು ಮಾಡಿದ ನಿರ್ಣಯಗಳ ಸಮರ್ಥನೆಗಾಗಿ ಈ ಪ್ರತಿಪಾದನೆ ಬಂದಿದೆ. ಇದರ ಸತ್ಯತೆಯನ್ನು ನಾವು ಅಲ್ಲಗಳೆಯಬೇಕಾಗಿಲ್ಲ.

ಆದರೆ 'ಮಾಡಬೇಕಾದ್ದನ್ನು ನನಗೆ ತಿಳಿದಂತೆ, ಪ್ರಾಮಾಣಿಕವಾಗಿ, ನಿಷ್ಪಕ್ಷಪಾತವಾಗಿ, ಎದುರಿಗಿದ್ದ ಎಲ್ಲ ಪುಸ್ತಕಗಳ ಯೋಗ್ಯತಾಧಾರದ ಮೇಲೆ ಮಾಡಿತು" ಎನ್ನುವ ಖ್ಯಾತಿಯುಳ್ಳ ಸಮಿತಿಯು ತಾನು ಸಂಪೂರ್ಣ ಯೋಗ್ಯತೆಯೊಂದನ್ನೆ ಅವಲಂಬಿಸಿರಲಿಲ್ಲ— ಎನ್ನುವುದು ಇನ್ನೊಂದು ವಾಕ್ಯದಿಂದ ಸ್ಪಷ್ಟವಾಗುತ್ತಿದೆ. "ಯೋಗ್ಯತೆಯಂತೆಯೆ ನಿಷ್ಠುರವಾಗಿ ಎಲ್ಲ ನಿರ್ಣಯವಾಗಿದ್ದಿದ್ದರೆ ೫-೬ ವಿಭಾಗಗಳಲ್ಲಿ ಮೊದಲ ಸ್ಥಾನ ದೊರೆಯುತ್ತಿರಲಿಲ್ಲ; ಎಂಟು ಒಂಬತ್ತು ಸಾವಿರ ರೂಪಾಯಿ ಸರಕಾರಕ್ಕೆ ಉಳಿಯುತ್ತಿತ್ತು." ಈ ಎರಡು ವಾಕ್ಯಗಳ ಪರಸ್ಪರ ವಿಸಂವಾದವನ್ನು ಗಮನಿಸದೆ ಇರಬಹುದೆ? ಮೊದಲ ಸ್ಥಾನ ದೊರೆಯದವುಗಳಿಗೆ ಆ ಸ್ಥಾನವನ್ನು ಕೊಟ್ಟದೇಕೆ? ಎಂಟೊಂಬತ್ತು ಸಾವಿರ ಸರಕಾರಕ್ಕೇಕೆ ಉಳಿಯಬಾರದಾಗಿತ್ತು? ಐದಾರು ವಿಭಾಗಗಳಲ್ಲಿ ಅಯೋಗ್ಯವೆನಿಸಿದ ಗ್ರಂಥಗಳಿಗೆ ಪ್ರಥಮ ಸ್ಥಾನ ಬಂದುದು ನಿಜವಾದರೆ, ಇತರ ಸ್ಥಾನಗಳಲ್ಲಿಯೂ ಹಾಗೆ ಆಗಿದ್ದಿರಲಾರದೆ? "ಯಾವ ಪುಸ್ತಕಗಳನ್ನೂ ತರಿಸದೆ ಯೋಗ್ಯತಾ ನಿರ್ಣಯ ಮಾಡಬಲ್ಲವೆಂನ್ನು' ಒಳಕೊಂಡ ಸಮಿತಿಯು, ಪುಸ್ತಕಗಳನ್ನು ತರಿಸಿಯೇ ನಿರ್ಣಯ ಮಾಡಿತೆಂಬುದು ಸಮಿತಿಯ ಸದಸ್ಯರ ಸೌಜನ್ಯಕ್ಕೆ ಸಾಕ್ಷಿ. ಮೂರು ದಿನಗಳಲ್ಲಿ ಕೈಗೆ ಸಿಕ್ಕಿದುದನ್ನೆಲ್ಲ [ಒಟ್ಟು ೫೦೦—೧೦೦೦] ತರಿಸಿಕೊಳ್ಳಲಾಯಿತಂತೆ; ಎದುರಿಗಿದ್ದ ಎಲ್ಲ ಪುಸ್ತಕಗಳ ಯೋಗ್ಯತೆಯನ್ನು ನಿರ್ಣಯಿಸಲಾಯಿತಂತೆ! ಕೈಗೆ ಸಿಕ್ಕದವುಗಳನ್ನು ತೆಗೆದುಕೊಂಡಾಗ ಯೋಗ್ಯ ಪುಸ್ತಕಗಳಲ್ಲಿ ಕೆಲವು ಎದುರಿಗೆ ಬಾರದಿದ್ದಿರಬೇಕು.... ಹೀಗೆ ಬಾರದುದರಿಂದ ಅನ್ಯಾಯವಾಗಿದೆ ಎನ್ನುವ ಟೀಕೆಗೆ ಈ ವಾಕ್ಯಗಳಲ್ಲಿ ಬಲ ದೊರೆಯುತ್ತದೆ.

ಲೇಖಕರಿಗೆ ಪ್ರೋತ್ಸಾಹ ಕೊಡುವ ದೃಷ್ಟಿ—ಯೋಗ್ಯತಾ ದೃಷ್ಟಿ.... ಎರಡನ್ನೂ ಹೊಂದಿಸಿಕೊಂಡು ಸಮಿತಿಯ ಸದಸ್ಯರು ವರ್ತಿಸಿರಬೇಕೆಂಬುದು ಸ್ಪಷ್ಟ. ಹೀಗೆ ವ್ಯವಹರಿಸಿದುದು ತಪ್ಪು. ಸರಕಾರವು ಕೊಡುವ ಬಹುಮಾನವನ್ನು ಯೋಗ್ಯತಾ ಪುರಸ್ಕಾರ ಎಂದು ಭಾವಿಸುವುದು ಜನರ ಅಭ್ಯಾಸವಾಗಿದೆ. ಸಮಿತಿಯವರೇ ಹೇಳುವಂತೆ ಅಯೋಗ್ಯ ಗ್ರಂಥಕ್ಕೆ ಮೊದಲ ಬಹುಮಾನ ದೊರೆತಿರುವಾಗ, ಬಹುಮಾನ ದೊರೆತ ಯೋಗ್ಯ ಗ್ರಂಥಗಳ ವಿಷಯವಾಗಿಯೂ, ದೊರೆಯದ ಗ್ರಂಥಗಳ ವಿಷಯವಾಗಿಯೂ ಟೀಕೆಗಳು ಎದ್ದರೆ ಟೀಕಾಕರ್ತರನ್ನು ಮಾತ್ರ ದೂರಿ ಫಲವಿಲ್ಲ. "ನಮ್ಮೆಣಿಕೆಯಲ್ಲಿ ನಮ್ಮ ಪ್ರಿಯರ ಸಾವಿರ ಕಂಠಗಳಲ್ಲಿ ನಾವು ಸರ್ವೋತ್ತಮರಿರಬಹುದು. ಸಾಹಿತ್ಯದ ದೃಷ್ಟಿಯಿಂದ ಅಧಿಕೃತರಾದವರು ಅದನ್ನು ಒಪ್ಪಲಾರದಾದರೆ ಮಾಡುವುದೇನು?" ಎನ್ನುವ ಪ್ರಶ್ನೆ ಎಷ್ಟು ಸಹಜವೋ ಅಷ್ಟೇ ಈ "ಅಧಿಕೃತ"ರಾದ ವ್ಯಕ್ತಿಗಳು 'ಸಾಹಿತ್ಯ ದೃಷ್ಟಿ'ಯೊಂದರಿಂದಲೆ ಪರೀಕ್ಷಿಸದೆ, ಇತರ ಎಂದರೆ ಪ್ರೋತ್ಸಾಹನೆ ಇತ್ಯಾದಿ ದೃಷ್ಟಿಗಳಿಂದಲೂ ಪರೀಕ್ಷಿಸಿದರೆ ಮಾಡುವುದೇನು? ಎನ್ನುವುದೂ ಸಹಜವಾಗಿದೆ. ಯೋಗ್ಯತೆಯನ್ನು ನಿರ್ಣಯಿಸುವ, ಕಲ್ಲು ತಕ್ಕಡಿ ಯಾವುದೂ, ಇಲ್ಲ ಎನ್ನುವಂತೆ ನಿರ್ಣಯದ ಯೋಗ್ಯತೆಯಲ್ಲಿ ಮತಭೇದವಿರಬಹುದೆಂಬುದೂ ಒಪ್ಪತಕ್ಕ ಮಾತು. ಆದರೆ ಸಮಿತಿಯ ಸದಸ್ಯರು, ಒಟ್ಟಾಗಿ ಬಹುಮತದಿಂದ ಮಾಡಿದ ನಿರ್ಣಯದಲ್ಲಿ ಪರೋಕ್ಷವಾಗಿಯಾದರೂ ತಮ್ಮ ಗ್ರಂಥಕ್ಕೆ ತಾವು ಬಹುಮಾನ ಕೊಡುವಂತೆ ಭಾಸವಾಗುವುದಕ್ಕೆ ಕಾರಣವಾದ ಸಂಗತಿಗಳ ಬಗ್ಗೆ ನಾವು ವಿಷಾದಿಸುತ್ತೇವೆ. ಇಂತಹ ಸಂದರ್ಭವನ್ನು ಸಂಭಾವಿತ ಸದಸ್ಯರು ಸುಲಭವಾಗಿ ತಪ್ಪಿಸಿಕೊಳ್ಳಬಹುದಾಗಿತ್ತು. ನ್ಯಾಯವನ್ನು ಆಚರಿಸಲೂ ಬೇಕು; ಆಚರಿಸಿದಂತೆ ಸ್ಪಷ್ಟವಾಗಿ ಗೋಚರಿಸಲೂ ಬೇಕು; ಎನ್ನುವುದು ಪ್ರಾಚೀನ ವ್ಯವಹಾರ ಸೂತ್ರ. ಐದು ಸಾವಿರ ಬಹುಮಾನ ಪ್ರಶ್ನೆ ಕೇಂದ್ರ ಸರಕಾರದ ನಿರ್ಣಯದಲ್ಲಿ ಸಹ, ತಮ್ಮ ಗ್ರಂಥಕ್ಕೆ ತಾವು ಮತ ಕೊಡುವ ಸಂಪ್ರದಾಯವಿದ್ದರೆ, ಅದನ್ನು ತಿದ್ದಬೇಕು; ಅಲ್ಲದೆ ಅದನ್ನೆ ಅನುಸರಿಸಬೇಕು; ಎಂದು ಸಿದ್ಧಾಂತವಾಗುವುದಿಲ್ಲ. ಇಂದು ನಾವು ರಾಜಕೀಯ ಪ್ರಧಾನ್ಯವುಳ್ಳ ಯುಗದಲ್ಲಿದ್ದೇವೆ; ಇದನ್ನು ಸ್ಮರಿಸಿಕೊಂಡರೆ, ಹಲವು ದುರಾರೋಪಣೆಗಳಿಂದ ಬಾಹಿರರಾಗಬಹುದು. ಹೃದಯಗಳು ಕದಡದಷ್ಟು ನಮ್ಮ ಜೀವನಕ್ಕೆ ಲಾಭವಾಗುತ್ತದೆ. ಕದಡದೆ ಇರಬೇಕಾದರೆ, ಕಾರ್ಯಾಗ್ರೇಸರರು ಒಂದು ಬಗೆಯ ಕರ್ಮಯೋಗವನ್ನೆ ಆಚರಿಸಬೇಕು. ಸಮಿತಿಯ ಸದಸ್ಯರಾಗಿದ್ದು ಸಂಭಾವನೆ ಪಡೆದವರು ಸರ್ವಥಾ ಯೋಗ್ಯರೆ, ಯೋಗ್ಯರೆ ಆಗಿದ್ದು ತಮ್ಮನ್ನು ಬಹುಮಾನಿತರ ಪಟ್ಟಿಯಿಂದ ಹೊರಗಿರಿಸಿಕೊಂಡಿದ್ದರೆ, ಅಥವಾ, ತಮಗೆ ಸಹಜವಾಗಿ ಸಲಬಹುದಾದ ಗೌರವದ ಪರೀಕ್ಷಣವು ಆಗಬಹುದೆಂಬ ನಿರೀಕ್ಷಣದಿಂದ, ಸಮಿತಿಯಿಂದ ಹೊರಗಾಗಿರಲು ಅಪೇಕ್ಷಿಸಿದ್ದರೆ, ಉತ್ತಮವಾದ ಉದಾಹರಣವನ್ನು ಸ್ಥಾಪಿಸಿದಂತಾಗುತ್ತಿತ್ತು. ಹೀಗಾಗಲಿಲ್ಲ. ಇದನ್ನು ತಿಳಿದುಕೊಂಡರೆ, ಪರಿಸ್ಥಿತಿಯ ಸರಿಯಾದ ಜ್ಞಾನವಾದೀತು. ಇಂತಹ ಹೃದಯ ಸಂಕ್ಲೇಶಗಳಿಗೆ ಎಡೆ ದೊರೆಯದಂತೆ ಮುಂದಿನ ಸಮಿತಿಗಳ ರಚನೆಯಾಗಬೇಕು; ಸಮಿತಿಗಳ ನಿರ್ಣಯಗಳಾಗಬೇಕು; ಎಂದು ಅಪೇಕ್ಷಿಸಿದರೆ ತಪ್ಪಾದೀತೆ?

—ಕಡೆಂಗೋಡ್ಲು ಶಂಕರ ಭಟ್ಟ.



ಬ್ರಿಟನಿನ ಅತಿದೊಡ್ಡ ಹೆಲಿಕಾಪ್ಟರ್ "ಸ್ಪೈರಿ ರೊಟೊಡೈನ್"

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಅತ್ಯುಪಯುಕ್ತವಾದ ಕೈಗನ್ನಡಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಒಂದೂವರೆ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಅರಮನೆ ಹಾಳಾದರೆ ಅದು ಹಾಳು ಮನೆಯಾಗುತ್ತದೆ. ಆದರೆ ದೇವಾಲಯ ಬಿದ್ದರೆ ಅದು ಮತ್ತೂ ದೇವಾಲಯವೇ ಅನಿಸುತ್ತದೆ. ಜೀವನವು ಅರಮನೆಯಾಗಿರಬಾರದು ಅದು ದೇವಾಲಯವಾಗಿರಬೇಕು.

NAVAYUGA

Founder:—

A. B. SHETTY,

Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೨೭-೫-'೫೯	೩೮

ಯೋಗ್ಯತೆಯ ಬೆಲೆ

ಮೈಸೂರು ಸರಕಾರವು ಇದೀಗ ರಾಜ್ಯದ ಹಿಂದುಳಿದ ವರ್ಗಗಳ ಹೊಸ ಯಾದಿಯನ್ನು ಬಹಿರಂಗಗೊಳಿಸಿ ಪುನಃ ರಾಜ್ಯದಲ್ಲಿ ಯೋಗ್ಯತೆಯ ಬಗ್ಗೆ ಇರುವ ತನ್ನ ಅನಾದರವನ್ನು ವ್ಯಕ್ತಗೊಳಿಸಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಸರಕಾರಿ ಸ್ಥಾನಗಳ ನೇಮಕ ಹಾಗೂ ಗಜೆಟೆಡ್ ಮತ್ತು ನೋನ್ ಗಜೆಟೆಡ್ ಹುದ್ದೆಗಳಿಗೆ ಭಡತಿ ಕೊಡುವಾಗ ನೂರರಲ್ಲಿ ಎಪ್ಪತ್ತೈದರಷ್ಟು ಸ್ಥಾನಗಳನ್ನು ಹಿಂದುಳಿದವರಿಗೆ ಕಾಯ್ದಿರಿಸಬೇಕೆಂದು ಆಜ್ಞೆ ಹೊರಡಿಸಿದೆ. ಈ ಆಜ್ಞೆಯ ಮೆಸೆಯಿಂದ ಮೈಸೂರು ಸರಕಾರವು ಕಳೆದ ಬಾರಿಯ ತನ್ನ ತಪ್ಪನ್ನು ಪುನರುಚ್ಚರಿಸಿದೆ.

ಭಾರತದ ರಾಜ್ಯ ಘಟನೆಯಲ್ಲಿ ಬ್ರಿಟಿಶರ ಆಡಳಿತದಲ್ಲಿ ತೀರಾ ಕಡೆಗಣಿಸಲ್ಪಟ್ಟಿದ್ದ ವರ್ಗಗಳ ಜನರ ಏಳಿಗೆ ಹಾಗೂ ಅಭಿವೃದ್ಧಿಯ ದೃಷ್ಟಿಯಿಂದ ಅವರಿಗೆ ಶಿಕ್ಷಣ ಸೌಲಭ್ಯ ಹಾಗೂ ಉದ್ಯೋಗ ಪೂರೈಕೆಯನ್ನು ಒದಗಿಸುವ ಬಗ್ಗೆ ಕೆಲ ಕಾಲದ ತನಕ ವಿಶೇಷ ರಿಯಾಯತಿಯನ್ನೊದಗಿಸಬೇಕೆಂಬ ಉಲ್ಲೇಖವಿರುವುದಾದರೂ ಈ ಪದ್ಧತಿ ಇನ್ನು ಕೂಡಾ ಮುಂದರಿದುಕೊಂಡು ಬರುವುದು ಹಿತಕಾರಿಯಲ್ಲ ಎಂದು ದೇಶದ ತಜ್ಞರು ಅಭಿಪ್ರಾಯಪಟ್ಟಿರುವರು. ಸ್ವಾತಂತ್ರ್ಯ ದೊರೆತು ಹನ್ನೊಂದು ವರ್ಷಗಳು ಕಳೆದ ಬಳಿಕವೂ ಇನ್ನೂ ಆ ಪದ್ಧತಿಯು ಬೆಳೆದುಬರುತ್ತಿರುವುದು ದೇಶದ ಹಿತದೃಷ್ಟಿಯಿಂದ ಶುಭಸೂಚನೆಯಲ್ಲ.

ಹಿಂದುಳಿಯುವಿಕೆಯು ಜಾತಿಯನ್ನು ಅವಲಂಬಿಸದೆ, ಆರ್ಥಿಕ ಪರಿಸ್ಥಿತಿಯನ್ನಾಧರಿಸಿರುತ್ತದೆಯೆಂಬ ಅಭಿಪ್ರಾಯ ಇಂದು ದೇಶದ ಎಲ್ಲೆಡೆಗಳಲ್ಲೂ ಬಲವಾಗಿ ಬೇರೂರುತ್ತಿದೆ. ಮುಂಬಯಿ ಸರಕಾರವು ಆರ್ಥಿಕ ಪರಿಸ್ಥಿತಿಯ ತಳಹದಿಯ ಮೇಲೆ ಹಿಂದುಳಿಯುವಿಕೆಯನ್ನು ನಿರ್ಧರಿಸಿ, ಶಿಕ್ಷಣ ಸೌಕರ್ಯಗಳನ್ನೀಯುತ್ತಿದೆ. ಈ ಧೋರಣೆ ನಿಜಕ್ಕೂ ಶ್ಲಾಘನೀಯ ಹಾಗೂ ಅನುಕರಣೀಯ. ಮದ್ರಾಸು ಸರಕಾರವು ಕೂಡಾ ಇದೇ ತತ್ವವನ್ನು ಅಂಗೀಕರಿಸುವುದರ ಕುರಿತು ಪರ್ಯಾಲೋಚಿಸುತ್ತಿದೆ ಎಂಬುದು ಶುಭಸೂಚಕ. ಇತ್ತೀಚೆಗೆ ದಿಲ್ಲಿಯಲ್ಲಿ ಸೇರಿದ ಪ್ರಾಂತ್ಯ ಮುಖ್ಯಮಂತ್ರಿಗಳ ಸಭೆಯಲ್ಲಿ ಕೂಡಾ ಈ ವಿಷಯವು ಚರ್ಚಿಸಲ್ಪಟ್ಟು ಆರ್ಥಿಕ ತಳಹದಿಯ ಮೇಲೆ ಹಿಂದುಳಿಯುವಿಕೆಯನ್ನು ನಿರ್ಧರಿಸುವುದು ಉಚಿತವೆಂಬ ಅಭಿಪ್ರಾಯವು ವ್ಯಕ್ತಪಡಿಸಲ್ಪಟ್ಟಿದೆ ಎನ್ನುವಾಗ ನಮ್ಮ ಮೈಸೂರು ಸರಕಾರವು ಈ ಮಾತುಗಳನ್ನು ಗಮನಕ್ಕೆ ತೆಗೆದುಕೊಳ್ಳದಿರುವುದು ಶೋಚನೀಯ.

ಒಬ್ಬ ಯೋಗ್ಯತೆಯಿದ್ದವನು ಕೇವಲ 'ಬ್ರಾಹ್ಮಣ' ಜಾತಿಯಲ್ಲಿ ಹುಟ್ಟಿದನೆಂಬ ಅಪರಾಧಕ್ಕಾಗಿ ಅವನ ಯೋಗ್ಯತೆಯು ಕಡೆಗಣಿಸಲ್ಪಡುವುದಾದರೆ ಇದು ನಾಡಿನ ದೌರ್ಬಲ್ಯದ ಚಿಹ್ನೆಯಲ್ಲದೆ ಬೇರೇನಲ್ಲ. ಮೈಸೂರಿನಲ್ಲಿ ಯೋಗ್ಯತೆಗೆ ಇರುವ ಅವಕಾಶ ಕೇವಲ ನಾಲ್ಕನೆಯ ಒಂದಂಶ ಮಾತ್ರ ಎನ್ನುವಾಗ ರಾಜ್ಯದ ಪ್ರಗತಿಯನ್ನು ನಾವು ನಿರೀಕ್ಷಿಸುವುದು ಸೂಕ್ತವಾಗಲಾರದು. ಕಳೆದ ಬಾರಿಯ ಇದೇ ಮಾದರಿಯ ಆಜ್ಞೆಯು ಹೈಕೋರ್ಟಿನಲ್ಲಿ ಸಿಂಧುವೆಂದು ಪರಿಗಣಿಸಲ್ಪಡದಿರುವಾಗ ಮತ್ತೂ ಪುನಃ ಹಿಂದಿನ ಅನುಭವದ ಹಿನ್ನೆಲೆಯಲ್ಲಿ ಮಾಡಿದ ತಪ್ಪನ್ನೇ ಮಾಡಿರುವುದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿದೆ.

ಜಾತ್ಯತೀತ ಸಮಾಜ ರಚನೆಯೇ ಭಾರತದ ಗುರಿಯಾಗಿರುವಾಗ ಮೈಸೂರು ಸರಕಾರದ ಆಜ್ಞೆಯು ಜಾತೀಯತೆಯ ತಳಹದಿಯ ಮೇಲೆಯೇ ಭದ್ರವಾಗಿ ನಿಂತಿದೆಯೆಂದರೆ ಇದು 'ಹೇಳುವುದು ಶಾಸ್ತ್ರ ಇಕ್ಕುವುದು ಗಾಳ' ಎಂಬಂತಾಗಿದೆ. ಹಿಂದುಳಿದವರನ್ನು ಮುಂದೆ ತರುವ ವಿಧಾನವೇನೋ ಸ್ವಾಗತಾರ್ಹವೆನಿಸಬಹುದಾದರೂ ಹಿಂದುಳಿದವರನ್ನು ನಿರ್ಣಯಿಸುವ ಮಾನದಂಡವು ಸ್ವಾಗತಾರ್ಹವೆನಿಸಿಲ್ಲ.

ಇಡಿಯ ಜಗತ್ತೇ ತ್ವರಿತಗತಿಯಿಂದ ಮುನ್ನುಗ್ಗುತ್ತಿರುವ ಇಂದಿನ ದಿನಗಳಲ್ಲಿ ಮೈಸೂರು ಸರಕಾರವು ತನ್ನ ಪ್ರಾಚೀನ ಪುರಾತನ ಪದ್ಧತಿಗೇ ಅಂಟಿಕೊಂಡಿರುವುದನ್ನು ಕಂಡಾಗ ನಾಡಿನ ಹಿತಚಿಂತಕರಿಗೆ ತುಸು ಚಿಂತೆಯಾಗಿದೆ. ಮೈಸೂರು ಸರಕಾರ ತನ್ನ ಈ ಧೋರಣೆಯನ್ನು ಪುನರ್ವಿಮರ್ಶಿಸಿ ಸೂಕ್ತ ಬದಲಾವಣೆ ಕೈಕೊಳ್ಳುವುದು ಶ್ರೇಯಸ್ಕರ. ಯೋಗ್ಯತೆಗೆ ಪ್ರಾಶಸ್ತ್ಯ ಈಯುವ ಧೋರಣೆಗೆ ಎಲ್ಲೆಡೆಗಳಲ್ಲೂ ಸ್ವಾಗತವಿರುವಾಗ ನಮ್ಮ ಸರಕಾರವೂ ಅದೇ ಧೋರಣೆಯನ್ನು ಅನುಸರಿಸುವುದೆಂದು ಹಾರೈಸುವುದು ಕಾಲೋಚಿತವಾಗಿದೆ.

ಕಣ್ಮರೆಯಾದ ಡಲ್ಲೆಸ್

ಅಮೇರಿಕದ ಮಾಜಿ ರಾಜ್ಯಾಂಗ ಕಾರ್ಯದರ್ಶಿ ಮಿ|| ಜೋನ್ ಫೋಸ್ಟರ್ ಡಲ್ಲೆಸರ ನಿಧನವು ಅಮೇರಿಕಕ್ಕೆ ಮಾತ್ರವಲ್ಲ ಜಗತ್ತಿಗೇನೇ ಒಂದು ದೊಡ್ಡ ನಷ್ಟವೆಂದರೆ ಅದು ಹೆಚ್ಚೇನಲ್ಲ. ತನ್ನ ಅಸಾಧಾರಣ ಚಾಣಾಕ್ಷತೆ, ಧೈರ್ಯ, ಸ್ಥೈರ್ಯ, ದೂರದೃಷ್ಟಿ, ವ್ಯವಹಾರ ಜ್ಞಾನ ಮತ್ತು ಕಾರ್ಯನಿಷ್ಠೆಯಿಂದ ಅವರು ಜಗತ್ತಿನ ರಾಜಕಾರಣದಲ್ಲಿ ಒಬ್ಬ ದಕ್ಷ ರಾಜಕಾರಣಿಯೆಂದು ಹೆಸರು ಪಡೆದಿದ್ದರು. ಕಮ್ಯುನಿಸ್ಟೇತರ ರಾಷ್ಟ್ರಗಳೆಲ್ಲ ಡಲ್ಲೆಸರ ನಿಧನಕ್ಕಾಗಿ ಸಂತಾಪಪಡುವುದರಲ್ಲಿ ಆಶ್ಚರ್ಯವೇನಿಲ್ಲ.

ಭಾರತದ ಕುರಿತು ಡಲ್ಲೆಸರಿಗೆ ಉತ್ತಮ ಅಭಿಪ್ರಾಯವಿರಲಿಲ್ಲ ಎಂಬ ಭಾವನೆ ಭಾರತದಲ್ಲಿರಬಹುದಾದರೂ ಅವರು ಭಾರತದ ಹಿತ ಹಾರೈಸಿದವರೆಂದರೆ ತಪ್ಪೇನಲ್ಲ. ಭಾರತಕ್ಕೆ ಆರ್ಥಿಕ ಸಹಾಯ ನೀಡುವುದರಲ್ಲಿ ಅವರು ಅತ್ಯನುಕೂಲ ಧೋರಣೆಯನ್ನು ವಹಿಸಿದ್ದರಲ್ಲದೆ ಆ ಬಗ್ಗೆ ತುಂಬ ಪ್ರಯತ್ನಿಸಿದ್ದರು. ಕಮ್ಯುನಿಸಮ್ಮಿನಿಂದ ರಾಷ್ಟ್ರಗಳನ್ನು ದೂರಗೊಳಿಸುವುದರ ಬಗ್ಗೆ ಅವರು ಅಪರಿಮಿತ ಪರಿಶ್ರಮ ವಹಿಸಿದ್ದರು.

ಭಾರತದ ಪಾಳೆಯಾತೀತ, ತಟಸ್ಥ ವಿದೇಶಿ ಧೋರಣೆಯನ್ನು ಡಲ್ಲೆಸರು ಮೆಚ್ಚಲಿಲ್ಲ ಮಾತ್ರವಲ್ಲ ಹಲವಾರು ಅಂತರಾಷ್ಟ್ರೀಯ ವಿದ್ಯಮಾನಗಳಲ್ಲಿ ಭಾರತದ ಬಗ್ಗೆ ವಿರೋಧಾಭಿಪ್ರಾಯವನ್ನು ಅವರು ವ್ಯಕ್ತಪಡಿಸಿರುವುದು ಭಾರತದಲ್ಲಿ ಅವರು ಅಪ್ರಿಯರಾಗಲು ಕಾರಣವೆನಿಸಿದೆ. ಭಾರತದ ತೀವ್ರ ಖಂಡನೆಗೊಳಪಟ್ಟ 'ಸೀಟೋ' 'ಬಗ್ದಾದ್' ಒಪ್ಪಂದಗಳ ಪ್ರೋತ್ಸಾಹಿತ್ವವು ಡಲ್ಲೆಸರದಾಗಿತ್ತು. 'ಗೋವೆಯು ಪೋರ್ಚುಗಲಿನ ಒಂದು ಭಾಗ" ಎಂದು ಅವರು ಪೋರ್ಚುಗೀಸ್ ವಿದೇಶ ಮಂತ್ರಿಯೊಂದಿಗೆ ಹೊರಡಿಸಿದ ಜತೆ ಹೇಳಿಕೆಯು ಭಾರತೀಯರು ಅವರ ಬಗ್ಗೆ ಅನಾದರ ವ್ಯಕ್ತಪಡಿಸುವಂತೆ ಮಾಡಿತು.

ಆದರೂ ಡಲ್ಲೆಸರು ಒಬ್ಬ ಮುತ್ಸದ್ದಿ, ರಾಜಕಾರಣಿ ಎಂದು ಗೌರವಿಸಲೇ ಬೇಕಾಗಿದೆ. ಅಮೇರಿಕೆಯ ವಿದೇಶ ಧೋರಣೆ ಡಲ್ಲೆಸರನ್ನು ಎಷ್ಟರ ಮಟ್ಟಿಗೆ ಅವಲಂಬಿಸಿತ್ತೆಂದರೆ ಅವರು ರಾಜ್ಯಾಂಗ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತರಾದರೂ ಐಸನ್ ಹಾವರರು ಅವರ ಅಪ್ರತಿಮ ಯೋಗ್ಯತೆಯ ಪ್ರಯೋಜನವನ್ನು ಕೊನೆಕಾಲದ ವರೆಗೂ ವಿಶೇಷ ಸಲಹೆಗಾರರನ್ನಾಗಿ ನೇಮಿಸಿ ಪಡಕೊಂಡಿದ್ದರು. ಭಾರತ ಸರಕಾರವು ಡಲ್ಲೆಸರ ನಿಧನದ ಬಗ್ಗೆ ತನ್ನ ವಿಷಾದವನ್ನು ಸೂಚಿಸುವುದರ ಮೂಲಕ ಯೋಗ್ಯತೆ ಹಾಗೂ ಪ್ರತಿಭೆಗೆ ಗೌರವವಿತ್ತಿದೆ ಎಂಬುದು ಸ್ವಾಗತಾರ್ಹ.

ಸಂಕ್ಷಿಪ್ತ ಸುದ್ದಿಗಳು

ತಟಸ್ಥ ರಾಷ್ಟ್ರನಾಯಕರ ಸಭೆ

ತಟಸ್ಥ ರಾಷ್ಟ್ರನಾಯಕರ ಸಭೆ ಜರಗಿಸುವ ಬಗ್ಗೆ ಭಾರತದ ಪ್ರಧಾನಿ ಶ್ರೀ ನೆಹರೂರವರು ಅನುಕೂಲಾಭಿಪ್ರಾಯವುಳ್ಳವರಾಗಿಲ್ಲವೆಂಬ ವರದಿಯ ಬಳಿಕ ಈ ಕುರಿತಾಗಿ ತೀವ್ರ ಪ್ರಯತ್ನಗಳು ನಡೆಯುತ್ತಿವೆ ಎಂದು ತಿಳಿದುಬಂದಿದೆ. ಈಜಿಪ್ತಿನ ಅಧ್ಯಕ್ಷ ನಸ್ಸೇರರು ನೆಹರೂರವರ ಸಮ್ಮುಖದಲ್ಲಿಯೇ ಮಾತುಕತೆ ನಡೆಸುವುದರಿಂದ ನೆಹರೂರವರು ಇದಕ್ಕೆ ಸಮ್ಮತಿಸಬಹುದೆಂದು ನಸ್ಸೇರರು ಅಭಿಪ್ರಾಯಪಡುತ್ತಿರುವರೆಂದು ಹೇಳಲಾಗಿದೆ. ನಸ್ಸೇರರು ಸದ್ಯದಲ್ಲಿಯೇ ಭಾರತಕ್ಕೆ ಭೇಟಿ ಕೊಡಬಹುದೆಂದು ನಿರೀಕ್ಷಿಸಲಾಗಿದೆ.

ಡಲ್ಲೆಸರ ನಿಧನ

ಅಮೇರಿಕದ ಮಾಜಿ ರಾಜ್ಯಾಂಗ ಕಾರ್ಯದರ್ಶಿ ಮಿ| ಜೋನ್ ಫೋಸ್ಟರ್ ಡಲ್ಲೆಸರು ತಾ. ೨೪ರಂದು ವಾಶಿಂಗ್ಟನ್ನಿನಲ್ಲಿಯ ತಮ್ಮ ನಿವಾಸದಲ್ಲಿ ಪೂರ್ವಾಹ್ನ ೭-೪೯ ಗಂಟೆಗೆ ನಿಧನರಾದರೆಂದು ಅಮೇರಿಕದ ರಾಜ್ಯಖಾತೆಯು ಪ್ರಕಟಿಸಿದೆ. ಮರಣದ ಕಾಲ ಅವರಿಗೆ ೭೧ ವರ್ಷ ವಯಸ್ಸಾಗಿತ್ತು. ತಾ. ೨೭ನೇ ಬುಧವಾರ ದಿನ ಮರಣೋತ್ತರಕ್ರಿಯೆಗಳುನಡೆಯುವುವು.

ಓಡಿಸಾದ ಮಂತ್ರಿ ಮಂಡಲ

ಓಡಿಸಾ ರಾಜ್ಯದ ಕಾಂಗ್ರೆಸ್-ಗಣತಂತ್ರ ಪರಿಷತ್ ಸಮ್ಮಿಶ್ರ ಮಂತ್ರಿ ಮಂಡಲವು ತಾ. ೨೨ರಂದು ಕಟ್ಟಕಿನ ರಾಜಭವನದಲ್ಲಿ ಪ್ರತಿಜ್ಞೆ ಸ್ವೀಕರಿಸಿತು. ಡಾ|| ಹರೆಕೃಷ್ಣ ಮೆಹತಾಬರನ್ನೊಳಗೊಂಡು ಮಂತ್ರಿ ಮಂಡಲದಲ್ಲಿ ಬರೀ ಮೂರು ಜನ ಸದಸ್ಯರಿರುವರು. ಗಣತಂತ್ರ ಪರಿಷತ್ ಧುರೀಣ ಶ್ರೀ| ಆರ್. ಎನ್. ಸಿಂಗದೇವ್ ಮತ್ತು ಮಾಜಿ ಮಂತ್ರಿಯಾಗಿದ್ದ ಶ್ರೀ ರಾಧಾನಾಥರಥರು ಈ ಮಂತ್ರಿ ಮಂಡಲದಲ್ಲಿರುವರು. ಭಾರತದ ರಾಜ್ಯ ಮಂತ್ರಿ ಮಂಡಲಗಳಲ್ಲಿ ಅತೀ ಕಡಿಮೆ ಸದಸ್ಯರ ಮಂತ್ರಿ ಮಂಡಲವು ಇದೇ ಆಗಿದೆ.

ಕೇಂದ್ರ ವೇತನ ಆಯೋಗದ ವರದಿ

ಕೇಂದ್ರ ಸರಕಾರಿ ನೌಕರರ ವೇತನ, ಭತ್ತೆ, ಹಾಗೂ ಸೇವಾ ಸ್ಥಿತಿಯ ಪ್ರಶ್ನೆಗಳನ್ನು ವಿಚಾರಿಸಲು ನೇಮಕಗೊಂಡ ದ್ವಿತೀಯ ವೇತನ ಆಯೋಗವು ಜೂನ್ ತಿಂಗಳ ಅಂತ್ಯದೊಳಗಾಗಿ ತನ್ನ ವರದಿಯೊಪ್ಪಿಸುವುದೆಂದು ತಿಳಿದಿದೆ. ಈ ಸಮಿತಿಯು ಈ ವರೆಗೆ ಬಂದ ನಾಲ್ಕು ಸಾವಿರಕ್ಕೂ ಮಿಕ್ಕಿದ ಮನವಿಗಳನ್ನು ತನ್ನ ಪ್ರಶ್ನಾವಳಿಗೆ ಬಂದ ಉತ್ತರಗಳನ್ನು ಪರಿಶೀಲಿಸಿದೆಯಲ್ಲದೆ; ನೌಕರ ಸಂಘಗಳ ಹಾಗೂ ಮಂತ್ರಿ ಶಾಖೆಗಳೊಡನೆ ವಿಚಾರವಿನಿಮಯ ನಡೆಸಿದೆ.

ಕೇರಳದ ಕುರಿತು ಇಂದಿರಾ ಗಾಂಧಿ

ಕಾಂಗ್ರೆಸಿನ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿಯವರು ಕೇರಳ ಸರಕಾರವು ಪ್ರಜಾಪ್ರಭುತ್ವ ರೀತಿಯಲ್ಲಿ ಕಾರ್ಯವೆಸಗುತ್ತಿಲ್ಲವೆಂದೂ, ಅಲ್ಲಿ ಪ್ರಜಾಪ್ರಭುತ್ವದ ವಾತಾವರಣವಿಲ್ಲವೆಂದು ತನಗೆ ಭಾವನೆಯುಂಟಾಯಿತೆಂದೂ ಅವರು ತನ್ನ ಕೇರಳ ಸಂಚಾರದ ಅನುಭವಗಳನ್ನು ತಿಳಿಸುತ್ತಾ ಹೇಳಿದರು.

ಹರಿಜನ ಸಪ್ತಾಹ ಆರಂಭ

ಮೈಸೂರು ರಾಜ್ಯದ ಎಲ್ಲೆಡೆಗಳಲ್ಲೂ ತಾ. ೨೨ರಂದು ಹರಿಜನ ಶಿಕ್ಷಣ ಸಪ್ತಾಹವು ಉದ್ಘಾಟಿಸಲ್ಪಟ್ಟಿತ್ತು. ಈ ಸಪ್ತಾಹದ ಅವಧಿಯಲ್ಲಿ ಮೈಸೂರು ಸರಕಾರವು ಶಾಲೆಗೆ ಹೋಗುವ ಹರಿಜನ ಮಕ್ಕಳ

ಚಂದಾದಾರರಲ್ಲಿ ವಿನಂತಿ

ನಾವು ಈ ಮೊದಲು ಹಲವಾರು ಸಲ ಮಾಡಿಕೊಂಡ ವಿನಂತಿಯಂತೆ ಚಂದಾಹಣವನ್ನು ಪಾವತಿ ಮಾಡಿದ ಚಂದಾದಾರರಿಗೆ ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತೇವೆ. ಇನ್ನೂ ಚಂದಾಹಣವನ್ನು ಕಳುಹಿಸಿ ಕೊಡದ ಚಂದಾದಾರರು ದಯಮಾಡಿ ಈಗಲಾದರೂ ಹೃತ್ಪೂರ್ವಕ ಕಳುಹಿಸಿಕೊಡುವಂತೆ ತಿಳಿಸಿ ವಿನಂತಿಸುತ್ತೇವೆ. ಅಂತೂ ಸಕಾಲದಲ್ಲಿ ತಲುಪದಿದ್ದರೆ ನಾವು ಅನಿವಾರ್ಯವಾಗಿ ತಾ೩.೦-೫೯ರ ಸಂಚಿಕೆಯನ್ನು ವಿ.ಪಿ. ಮೂಲಕ ಕಳುಹಿಸಬೇಕಾಗುತ್ತದೆ. ದಯಮಾಡಿ ಅದನ್ನಾದರೂ ಸ್ವೀಕರಿಸಿ ಸಹಕರಿಸುವಂತೆ ವಿನಂತಿಸುತ್ತೇವೆ.

— ಮೆನೇಜರ್.

ಅಲ್ಲಲ್ಲಿಯ ಸುದ್ದಿಸಾರ

ದಂತ ವೈದ್ಯರಿಗೆ ಸನ್ಮಾನ—ಉಡುಪಿಯಲ್ಲಿ ಇದೇ ತಾ. ೧೩ರಿಂದ ಜರಗಿದ ಅ. ಭ. ಆಯುರ್ವೇದ ಮಹಾ ಸಮ್ಮೇಲನದಲ್ಲಿ ದಂತ ವೈದ್ಯ ಶ್ರೀ ಬ. ಕ. ರಾಮಣ್ಣವರ, „ದಂತ ಚಿಕಿತ್ಸಾ ಪ್ರವೀಣ" ಬೈಲ ಹೊಂಗಲ ಇವರಿಂದ ಉಚಿತ ದಂತ ಚಿಕಿತ್ಸಾ ಶಿಬಿರವನ್ನೇರ್ಪಡಿಸಲಾಗಿದ್ದು, ಅದನ್ನು ಯಶಸ್ವಿ ರೀತಿಯಿಂದ ಸಾಗಿಸಿದ್ದಕ್ಕಾಗಿ ಇವರಿಗೆ ಸುವರ್ಣ ಪದಕ, ಮತ್ತು ಪ್ರಶಸ್ತಿ ಪತ್ರಿಕೆ ಕೊಟ್ಟು ಗೌರವಿಸಲಾಯಿತು.

ಉಡುಪಿ ರೋಟರಿ ಕ್ಲಬ್ಬಿನ ವತಿಯಿಂದ ಏರ್ಪಡಿಸಲಾದ ಕ್ಷಯ ರೋಗ ಉಪಶಮನಾ ಯೋಜನೆಯ ಕಾರ್ಯಾರಂಭವು ತಾ. ೧೩ರಂದು ಮಣಿಪಾಲದಲ್ಲಿ ಡಾ| ತಿಮ್ಮಪ್ಪಯ್ಯನವರಿಂದ ನೆರವೇರಿತು. ರೋಟರಿ ಅಧ್ಯಕ್ಷ ಡಾ| ಟಿ. ಮಾಧವ ಪೈಗಳು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಪಿ. ಶ್ರೀಪತಿ ಆಚಾರ್ಯರಿಂದ ಸಮಯೋಚಿತ ಭಾಷಣವಾದ ನಂತರ ಶ್ರೀ ಟಿ. ರಮೇಶ ಪೈಗಳು ಧನ್ಯವಾದವಿತ್ತರು.

ಮಂಗಳೂರು ಪುರಸಭೆ—ಮಂಗಳೂರು ಪುರಸಭೆಯಲ್ಲಿ ತಾ. ೨೦ರಂದು ಆರೋಗ್ಯ ಸಚಿವ ಡಾ| ಕೆ. ಕೆ. ಹೆಗ್ಡೆಯವರು ದಿವಂಗತರಾದ ಡಾ| ವಿಠಲ ಶೆಟ್ಟಿ ಮತ್ತು ಬಿ. ವೆಂಕಟ್ರಾಯ ಬಾಳಿಗರ ಭಾವಚಿತ್ರಗಳನ್ನು ಅನಾವರಣ ಮಾಡಿದರು. ಆ ಸಂದರ್ಭದಲ್ಲಿ ಪುರಸಭಾಧ್ಯಕ್ಷ ಶ್ರೀ ಮಣೇಲ್ ಶ್ರೀನಿವಾಸ ನಾಯಕರು ಸಚಿವರಿಗೆ ಒಂದು ಮಾನಪತ್ರವಿತ್ತರು. ಸಚಿವರು ಮಾನಪತ್ರಕ್ಕೆ ಉತ್ತರಿಸುತ್ತಾ ಬೇಡಿಕೆಗಳನ್ನು ಪರ್ಯಾಲೋಚಿಸುವುದಾಗಿ ಹೇಳಿದರು.

ಮಂಗಳೂರಿನಲ್ಲಿ ಗೋಪಿಕೃಷ್ಣರ ನೃತ್ಯ ಪ್ರದರ್ಶನ—ಸ್ಥಳೀಯ ಸ್ವಾಮಿ ಹರಿದಾಸ ಸಂಗೀತ ಸಭೆಯ ಆಶ್ರಯದಲ್ಲಿ ಭಾರತದ ಪ್ರಸಿದ್ಧ ನೃತ್ಯಪಟು ಶ್ರೀ ಗೋಪಿಕೃಷ್ಣರಿಂದ ಕಥಕ್ ನೃತ್ಯ ಪ್ರದರ್ಶನವು ಇಲ್ಲಿಯ ಕೆನರಾ ಹೈಸ್ಕೂಲಿನ ಕಲಾಮಂದಿರದಲ್ಲಿ ತಾ. ೧೭ ಮತ್ತು ೧೮ರಂದು ಜರಗಿತು. ಶ್ರೀಯುತರು ತಮ್ಮ ನೃತ್ಯ ಪ್ರದರ್ಶನದಲ್ಲಿ ಕಥಕ ಸಂಪ್ರದಾಯದ ಅಮೋಘ ಕಲಾಗಾರಿಕೆಯನ್ನು ತೋರಿಸಿದರು. ಪ್ರಸಿದ್ಧ ವಿದ್ವಾಂಸರಿಂದ ಏರ್ಪಡಿಸಿದ ಹಿಮ್ಮೇಳವೂ ಆಕರ್ಷಣೀಯವಾಗಿತ್ತು. ನೃತ್ಯ ಕಾರ್ಯಕ್ರಮದ ಮಧ್ಯದಲ್ಲಿ ಸಂಗೀತ ಸಭೆಯವರು ಈ ಕಲಾವಿದರನ್ನು ಹಾರಾದಿಗಳಿಂದ ಗೌರವಿಸಿ, ಮಾನಪತ್ರವನ್ನು ಅರ್ಪಿಸಿದರು.

ಪಡುಕಳತ್ತೂರು—ಹಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ತಾ. ೧೬ನೇ ಶನಿವಾರ ಶ್ರೀ ವೈ. ಗೋಪಾಲರವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಶ್ರೀ ಕೆ. ಪಿ. ಕೃಷ್ಣಯ್ಯನವರ ಸ್ವಾಗತ, ವರದಿವಾಚನ, ಸ್ವಸ್ತಿವಾಚನ, ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣ ಧನ್ಯವಾದ ಸಮರ್ಪಣೆ, ವಿವಿಧ ವಿನೋದಾವಳಿ, ರಾಷ್ಟ್ರಗೀತೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು. ಬೆಳಿಗ್ಗೆ ಡಾ| ಯು. ಕೆ. ಆಚಾರ್‌ರವರ ಧ್ವಜವಂದನೆ, ಶ್ರೀ ಡಿ. ಪಿ. ಪ್ರಭುಗಳ ಸಿಹಿತಿಂಡಿ ಹಂಚೋಣ, ಮತ್ತು ಛದ್ಮವೇಶ ಸ್ಪರ್ಧೆಗಳು ನಡೆದಿದ್ದುವು.

ಅಂಕೋಲಾ—ಹಿಂದ ವಾಚನ ಮಂದಿರದ ವಾರ್ಷಿಕ ಸಾಧಾರಣಾ ಸಭೆಯು ಶ್ರೀ ಪಿ. ಡಿ. ಕಾಮತರ ಅಧ್ಯಕ್ಷತೆಯಲ್ಲಿ ತಾ. ೧೨ರಂದು ವಾಚನ ಮಂದಿರದಲ್ಲಿ ಜರಗಿತು. ವರದಿವಾಚನ ಮುಂತಾದ ಅನೇಕ ಕಾರ್ಯಕ್ರಮಗಳಾದ ನಂತರ ನೂತನ ಕಾರ್ಯಕಾರಿ ಮಂಡಳವನ್ನು ಆರಿಸಲಾಯಿತು.

ಕಟಪಾಡಿ—ಸ್ಥಳೀಯ ಶ್ರೀ ಕಾಳಿಕಾಂಬಾ ವಿಶ್ವಕರ್ಮೇಶ್ವರ ದೇವಾಲಯದಲ್ಲಿ ಶ್ರೀ ವಿರಾಟ್ ಪೋತಲೂರು ಜಗದ್ಗುರು ಶ್ರೀ ವೀರ ಬ್ರಹ್ಮೇಂದ್ರ ಸ್ವಾಮಿಗಳವರ ಪುಣ್ಯದಿನಾಚರಣೆಯು ಸ್ಥಳೀಯ ಸೇವಾದಳದವರಿಂದ ಶ್ರೀ ಡಿ. ವಿ. ಸುಬ್ಬಾಚಾರ್ಯರ ಅಧ್ಯಕ್ಷತೆಯಲ್ಲಿ ತಾ. ೧೭ರಂದು ಜರಗಿತು. ಜಗದ್ಗುರುಗಳ ಭಾವಚಿತ್ರದ ಅನಾವರಣವಾದ ನಂತರ ಸಭಾಧ್ಯಕ್ಷರನ್ನು ಶ್ರೀ ಯು. ಕೃಷ್ಣಾಚಾರ್ಯರು ಪುಷ್ಪಹಾರ ಹಾಕಿ ಗೌರವಿಸಿದರು. ಶ್ರೀ ಯು. ಬಿ. ಭಾಸ್ಕರಾಚಾರ್ಯ ಮತ್ತು ಅಧ್ಯಕ್ಷರ ಭಾಷಣವಾದ ತರುವಾಯ ಶ್ರೀ ಕಾಳಿಕಾಂಬಾ ವಿಶ್ವಕರ್ಮೇಶ್ವರ ದೇವರ ವಸಂತೋತ್ಸವ ಶ್ರೀ ಜಗದ್ಗುರು ಪೂಜೆಯೊಂದಿಗೆ ಸಭೆ ಮುಗಿಯಿತು.

ಉ. ಕ. ಜಿಲ್ಲಾ ಹರಿಜನ ಪರಿಷತ್ತು—ಶಿರಸಿಯ [illegible] ಮಲೇಕಲ್ಲ ಪ್ರಾರ್ಥಮಿಕ ಶಾಲೆಯಲ್ಲಿ ಉ. ಕ. ಜಿಲ್ಲಾ ಹರಿಜನ ಪರಿಷತ್ತು ತಾ. ೧೧ರಂದು ಸಮಾಜ ಕಲ್ಯಾಣ ಮಂತ್ರಿ ಶ್ರೀ ಎಸ್. ರಾಚಯ್ಯನವರ ಅಧ್ಯಕ್ಷತೆಯಲ್ಲಿ, ಗೃಹ ಶಾಖಾ ಉಪಮಂತ್ರಿ ಶ್ರೀ ಬಿ. ಬಸವ ಲಿಂಗಪ್ಪನವರ ಉದ್ಘಾಟನೆಯೊಂದಿಗೆ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಶ್ರೀ ಎಸ್. ಎಂ. ಕ್ಯಾಕಿಣಿ, ಬಿ. ಎ. ಎಲ್. ಎಲ್. ಬಿ.ಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ರಾಚಯ್ಯನವರು ತಮ್ಮ ಭಾಷಣದಲ್ಲಿ ಸಿರ್ಸಿಯಲ್ಲಿ ಹರಿಜನ ಮಹಿಳಾ ಹಾಸ್ಟೆಲ್ ತೆರೆಯುವುದಕ್ಕೆ ಮಂಜೂರಿಯಿತ್ತಿದ್ದಾಗಿ ಹೇಳಿದರು. ಈ ಪರಿಷತ್ತಿಗೆ ಅನೇಕ ಹಿರಿಯ ಅಧಿಕಾರಿಗಳೂ, ಕಾಂಗ್ರೆಸ್ ಧುರೀಣರೂ ಆಗಮಿಸಿದ್ದರು.

ಉ. ಕ. ಜಿಲ್ಲಾ ಸಿದ್ದಿ ಸೇವಾ ಸಂಘದ ಪ್ರಥಮ ವಾರ್ಷಿಕ ಸಭೆಯು ಇತ್ತೀಚೆಗೆ ಅಂಕೋಲಾ ತಾಲೂಕಿನ ರಾಮನ ಗುಳಿಯಲ್ಲಿ ಶ್ರೀ ಹುಲಿಯಾ ಸುಬ್ಬ ಸಿದ್ದಿಯವರ ಹಿರಿತನದಲ್ಲಿ ಜರಗಿತು. ಶ್ರೀ ರಾಮಚಂದ್ರ ಭಟ್ಟರು ಗತವರ್ಷದ ಆಯವ್ಯಯದ ಪಟ್ಟಿಯನ್ನೂ ವರದಿಯನ್ನು ಸಭೆಗೆ ಒಪ್ಪಿಸಿದರು. ನಂತರ ಕಾರ್ಯಕಾರಿ ಮಂಡಳಿಯ ಆಯ್ಕೆ, ಸಲಹಾಸಮಿತಿಯ ಆಯ್ಕೆಯಾಯಿತು.

ನವಮೈಸೂರಿನ ವಿಧಾನಸಭಾಸದಸ್ಯರಾದ ಹಾಗೂ ಪ್ರ. ಸ. ಪಾ ಪಕ್ಷದ ಮುಂದಾಳುಗಳಾದ ಶ್ರೀ ಪಿ. ಶ್ರೀನಿವಾಸ ಶೆಟ್ಟಿಯವರು ಕಳೆದ ೩ನೇ ದಿನಾಂಕದಿಂದ ೯ರ ವರೆಗೆ ಉ.ಕ. ಜಿಲ್ಲಾ ಸಂಚಾರ ಕೈಗೊಂಡು ಭಟ್ಕಳ, ಹೊನ್ನಾವರ, ಕುಮಟಾಗಳಿಗೆ ಭೇಟಿಯಿತ್ತು ಆಯಾ ಊರುಗಳ ಪ್ರಸಪಾ ಪಕ್ಷದ ಧುರೀಣರ ಜತೆಗೆ ವಿಚಾರವಿನಿಮಯ ನಡೆಸಿ, ಸಾರ್ವಜನಿಕ ಭಾಷಣವಿತ್ತು, ಕೊನೆಯದಾಗಿ ಅಂಕೋಲಾಕ್ಕೆ ಸಂದರ್ಶನವಿತ್ತರು. ಆ ಸಂದರ್ಭದಲ್ಲಿ ಶ್ರೀಯುತರು ಇಲ್ಲಿಯ 'ಝೆಂಡಾಕಟ್ಟೆ'ಯಲ್ಲಿ ಉಜ್ವಲ ಭಾಷಣವಿತ್ತರು. ಶ್ರೀಯುತರ ಜತೆಗೆ ಶ್ರೀ ಜನಾರ್ಧನ ಹಂದೆ ಹಾಗೂ ಶ್ರೀ ಎಸ್. ಜಿ ಭಟ್ಟರೂ ಇದ್ದರು.

ಅಂಕೋಲಾ ಗ್ರಾಮಪಂಚಾಯತಿಯು ತನ್ನ ನ್ಯಾಯಪಂಚಾಯತಿಗೆ ಶ್ರೀ ವೆಂಕಟರಮಣ ಶಾಂಭಟ್ಟರನ್ನೂ, ಶಾಲಾಸಮಿತಿಗೆ ಶ್ರೀ ಆರ್. ಕೆ. ನಾಯ್ಕರನ್ನೂ ಅಧ್ಯಕ್ಷರನ್ನಾಗಿ ಆರಿಸಲಾಯಿತು. ಮತ್ತು 'ವಾರಂಟ್ ಆಧಿಕಾರಿಗಳ' ಹುದ್ದೆಗೆ ಶ್ರೀ ಪಿ. ಡಿ. ಕಾಮತ ಶ್ರೀ ಹೊನ್ನಪ್ಪನಾಯ್ಕ, ಶ್ರೀಮತಿ ವಿದ್ಯಾ ಆರ್ ನಾರ್ವೇಕರ ಇವರನ್ನೂ ನೇಮಿಸಲಾಯಿತು.

ಶ್ರೀ ಶಂಕರ ಜಯಂತಿ—ದ. ಕ. ಜಿಲ್ಲಾ ಹಿಂದೂ ಮಹಾಸಭಾದ ವತಿಯಿಂದ ತಾ ೧೩ರಂದು ಶ್ರೀ ಶಂಕರ ಜಯಂತಿಯು ಮಂಗಳೂರು ಪಂಟಲೆಂಡ ಪೇಟೆಯಲ್ಲಿರುವ ಶ್ರೀ ವೆಂಕಟೇಶ ಭವನದಲ್ಲಿ ಡಾ| ಎಂ. ಎಸ್ ಎ. ಶರ್ಮರ ಹಿರಿತನದಲ್ಲಿ ಜರಗಿತು. ಡಾ| ಎ. ಕೆ. ಪಿ. ಶರ್ಮರ ಸ್ವಾಗತವಾದನಂತರ ಅಧ್ಯಕ್ಷರ ಭಾಷಣವಾಯಿತು. ಡಾ| ಎ. ಕೆ. ಪಿ. ಶರ್ಮ ಮತ್ತು ಶ್ರೀ ಶೇಟ್ ವಾಮನ ರಾಮರೂ ಸಹಾ ಭಾಷಣವಿತ್ತರು. ಪೂಜಾ ಪ್ರಸಾದ ವಿತರಣೆ, ಧನ್ಯವಾದದೊಂದಿಗೆ ಸಭೆ ಮುಗಿಯಿತು.

ವಾರ್ಷಿಕೋತ್ಸವ—ಉಡುಪಿಯ 'ಪ್ರೊಗ್ರೆಸಿವ್ ಕಮರ್ಶಿಯಲ್ ಅಂಡ್ ಟೆಕ್ನಿಕಲ್ ಇನ್ಸ್ಟಿಟ್ಯೂಟ್'ನ ವಾರ್ಷಿಕೋತ್ಸವವು ತಾ ೧೮ರಂದು ಶ್ರೀ ಟೆವಲಿನ್ ರೇಗೋರವರ ಅಧ್ಯಕ್ಷತೆಯಲ್ಲಿ ಕ್ರಿಶ್ಚಿಯನ್ ಹೈಸ್ಕೂಲು ವಠಾರದಲ್ಲಿ ಜರಗಿತು. ಸಿ. ಬಿ. ಸಂಜೀವರಾವ್ ಧ್ವಜಾರೋಹಣ ಮಾಡಿದರು. ಶ್ರೀ ಬಿ. ಅಪ್ಪಾಜಿ ರಾಯರು ಸ್ವಾಗತಿಸಿ, ವರದಿವಾಚನ ಗೈದರು ಶ್ರೀ ಜಿ. ರಮೇಶ ರಾವ್‌ರವರಿಂದ ಸ್ವಸ್ತಿವಾಚನ, ಶ್ರೀ ಎ. ಕೃಷ್ಣರಾವ್, ಶ್ರೀ ಎ. ಜೆ. ಆಲ್ವೇರ ಸಮಯೋಚಿತ ಭಾಷಣವಾಯಿತು.

ಸುರತ್ಕಲ್ ಉಪಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರಿ ಶ್ರೀ ದೂಮಪ್ಪನವರ ಆಯ್ಕೆ-ಮುಲ್ಕಿ-ಸುರತ್ಕಲ್ ಚುನಾವಣಾ ಕ್ಷೇತ್ರದಿಂದ ತಾ.೨೪ರಂದು ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರ ಶ್ರೀ ಕೆ. ದೂಮಪ್ಪನವರು ತನ್ನ ಪ್ರತಿಸ್ಪರ್ಧಿ ಪ್ರ. ಸ. ಪಾ ಪಕ್ಷದ ಉಮೇದುವಾರಿಯನ್ನು ೧೩೬೭ ಬಹುಮತದಿಂದ ಸೋಲಿಸಿ, ವಿಜಯಗಳಿಸಿದ್ದಾರೆ. ಶ್ರೀ ಬಿ. ಆರ್. ಕರ್ಕೇರರ ನಿಧನದಿಂದ ತೆರವಾದ ಈ ಸ್ಥಾನಕ್ಕೆ ಆರಿಸಲ್ಪಟ್ಟ ಶ್ರೀ ಕೆ. ದೂಮಪ್ಪನವರು ಕೆಲ ಕಾಲದ ಹಿಂದೆ ಅಸಿಸ್ಟಾಂಟ್ ಡೈರೆಕ್ಟರ್ ಆಫ್ ಫಿಶರೀಸ್ ಹುದ್ದೆಯಿಂದ ನಿವೃತ್ತರಾಗಿದ್ದರು. ಈ ಆಯ್ಕೆಯಿಂದ ದ. ಕ. ಜಿಲ್ಲೆಯ ಒಟ್ಟು ೧೪ ಸದಸ್ಯರ ಪೈಕಿ ಕಾಂಗ್ರೆಸು ತನ್ನ ೧೨ ಸ್ಥಾನಗಳನ್ನು ಉಳಿಸಿಕೊಂಡಂತಾಯಿತು. ಉಪಚುನಾವಣೆಯಲ್ಲಿ ಶ್ರೀ ಕೆ. ದೂಮಪ್ಪ (ಕಾಂಗ್ರೆಸ್) ನವರಿಗೆ ೧೧,೦೧೯ ಮತಗಳೂ, ಡಾ| ಸಂಜೀವನಾಥ್ (ಪಿ. ಎಸ್. ಪಿ) ರವರಿಗೆ ೮೬೫೨ ಮತಗಳೂ, ಎಂ. ಎಚ್. ಕೃಷ್ಣಪ್ಪ (ಕಮ್ಯೂನಿಸ್ಟ್) ನವರಿಗೆ ೪೧೨೮ ಮತಗಳೂ ದೊರಕಿ ಕಾಂಗ್ರೆಸ್ಸಿನ ಕಡೆಯಿಂದ ಶ್ರೀ ಕೆ. ದೂಮಪ್ಪನವರು ಆಯ್ಕೆಗೊಂಡರು.

ಕೋಣಿಕೇಂದ್ರದ ಗ್ರಾಮಸೇವಕರ ಶಿಬಿರ—ಕುಂದಾಪುರ ಗ್ರಾಮಸೇವಕರ ಕೇಂದ್ರಕ್ಕೆ ಸೇರಿದ ಕುಂದಾಪುರ ವಡೇರ ಹೋಬಳಿ, ಕೋಣಿ, ಹಂಗ್ಲೂರು ರೈತ ಮುಂದಾಳುಗಳ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವು ಶ್ರೀ ಯಂ. ಎಂ. ಹೆಗ್ಡೇರ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ಎಸ್. ಪರಮೇಶ್ವರಯ್ಯನವರಿಂದ ತಾ ೧೬ರಂದು ಕೋಣಿ ಬೋ. ಹಾ. ಎ.ಶಾಲೆಯಲ್ಲಿ ನೆರವೇರಿತು.

ತಾ ೧೭ರಂದು ಮಾನ್ಯ ಆರೋಗ್ಯ ಸಚಿವ ಶ್ರೀ ಕೆ. ಕೆ. ಹೆಗ್ಡೆಯವರು ಸಂದರ್ಶನವಿತ್ತಾಗ ಶ್ರೀ ವೆಂಕಟ್ರಮಣ ಕಾರಂತರು ಮಂತ್ರಿಗಳನ್ನು ಸ್ವಾಗತಿಸಿದರು. ಸಚಿವರು ಜಾನುವಾರು ಪ್ರದರ್ಶನದಲ್ಲಿ ಬಹುಮಾನಿತರಿಗೆ ಬಹುಮಾನವಿತ್ತರು. ಶ್ರೀ ಎಂ. ಎಂ. ಹೆಗ್ಡೇರು ಧನ್ಯವಾದವಿತ್ತರು. ರಾತ್ರಿ ಮನರಂಜನಾ ಕಾರ್ಯಕ್ರಮ ಜರಗಿತು.

ಶ್ರೀ ಶಿವರಾಮ ಕಾರಂತರಿಗೆ ಮಾನಪತ್ರ ಸಮರ್ಪಣೆ—ಬ್ರಹ್ಮಾವರದ ಕರ್ನಾಟಕ ಸಂಘದವರು ಸ್ವೀಡನ್ ಕಲಾ ಸಂಸ್ಥೆ ಹಾಗೂ ರಾಜ್ಯ ಸರಕಾರಗಳಿಂದ ಬಹುಮಾನಿತರಾದ ಶ್ರೀ ಶಿವರಾಮ ಕಾರಂತರನ್ನು ಅಭಿನಂದಿಸಿ ಗೌರವಿಸುವ ಸಲುವಾಗಿ ಇದೇ ತಾ. ೩ರಂದು ಸ್ಥಳೀಯ ಶ್ರೀ ವೆಂಕಟ್ರಮಣ ದೇವಾಲಯದ ಉಪ್ಪರಿಗೆಯಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಒಂದು ಸಮಾರಂಭ ವನ್ನೇರ್ಪಡಿಸಿದ್ದರು ಪ್ರಾರ್ಥನೆಯಾದ ಮೇಲೆ ಕಾರ್ಯದರ್ಶಿ ಶ್ರೀ ಬೈಕಾಡಿ ವೆಂಕಟಕೃಷ್ಣರಾಯರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಕು. ಶಿ. ಹರಿದಾಸ ಭಟ್ಟರು ಕಾರಂತರನ್ನು ಕುರಿತು ಪ್ರಶಂಸಾತ್ಮಕವಾಗಿ ಮಾತನಾಡಿದರು ಸಂಘದ ಅಧ್ಯಕ್ಷ ಶ್ರೀ ಬಿ. ಬಿ. ಮಾಧವರಾಯರು ಓದಿದ ಮಾನಪತ್ರವನ್ನು ಶ್ರೀ ಟಿ. ಎ. ಪೈಗಳು ಶ್ರೀ ಕಾರಂತರಿಗೆ ಅರ್ಪಿಸುತ್ತಾ ಕಾರಂತರು „ದೇಶಕ್ಕೆ ಬೆಳಕು ನೀಡಿದ ವ್ಯಕ್ತಿ" ಎಂದರು. ಶ್ರೀ ಕಾರಂತರು ಮಾನಪತ್ರಕ್ಕೆ ಉತ್ತರಿಸುತ್ತಾ ಸಾಹಿತ್ಯ ಕ್ಷೇತ್ರಗಳಲ್ಲಿ ನನ್ನ ಒಲವು ತಿರುಗಿದ್ದರಿಂದ ನಾನು ಆ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದೇನೆ. ಇದಕ್ಕಾಗಿ ನನ್ನನ್ನು ಪ್ರಶಂಸಿಸುವುದು ಅನಾವಶ್ಯಕವೆಂದರು. ಕಾರ್ಯದರ್ಶಿಯವರು ವಂದನಾರ್ಪಣ ಮಾಡಿದರು

ಉಡುಪಿ ತಾಲೂಕು ದಲಿತ ವರ್ಗದವರ ವಿಚಾರ ವಿನಿಮಯ ಗೋಷ್ಠಿಯೊಂದು ತಾ ೨೪ರಂದು ಉಡುಪಿ ಬೋರ್ಡ್ ಹೈಸ್ಕೂಲ್ ವಠಾರದಲ್ಲಿ ಶ್ರೀ ವೈ. ಸಿ. ಹೊಂಬಾಳಯ್ಯನವರಿಂದ ಉದ್ಘಾಟಿಸಲ್ಪಟ್ಟಿತು. ಡಾ| ಟಿ. ಎಂ. ಎ. ಪೈಗಳು ಅಧ್ಯಕ್ಷತೆ ವಹಿಸಿದ್ದರು.

ಗೆ ರೂ. ೩ ಲಕ್ಷ ಬೆಲೆಯ ಸ್ಲೇಟು ಮ ಪುಸ್ತಕಗಳನ್ನು ಒದಗಿಸುವುದು, ಹರಿಜನರಲ್ಲಿ ಶಿಕ್ಷಣ ಪ್ರಸಾರವನ್ನು ಮಾಡುವುದೇ ಈ ಸಪ್ತಾಹದ ಉದ್ದೇಶವಾಗಿದೆ.

ಚಿಕ್ಕ ಉದ್ದಿಮೆಗಳು

ಮೈಸೂರು ರಾಜ್ಯದಲ್ಲಿ ಚಿಕ್ಕ ಪುಟ್ಟ ಉದ್ದಿಮೆಗಳನ್ನು ಸ್ಥಾಪಿಸಲು ತುಂಬಾ ಅನುಕೂಲತೆಗಳಿವೆ. ;ಆದುದರಿಂದ ಉದ್ದಿಮೆದಾರರು ಮತ್ತು ಸರಕಾರ ಇನ್ನು ಮುಂದೆ ಚಿಕ್ಕ ಪುಟ್ಟ ಉದ್ದಿಮೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಈಯಬೇಕು ಮತ್ತು ಈ ದಿಸೆಯಲ್ಲಿ ಕೇಂದ್ರ ಸರಕಾರ ತನ್ನ ತುಂಬು ಸಹಾಯ ನೀಡುವುದೆಂದು ಕೇಂದ್ರ ವಾಣಿಜ್ಯೋದ್ಯಮ ಮಂತ್ರಿ ಶ್ರೀ ಲಾಲ್‌ಬಹಾದೂರ್ ಶಾಸ್ತ್ರಿಯವರು ಬೆಂಗಳೂರಿನಲ್ಲಿ ಮೈಸೂರು ವಾಣಿಜ್ಯ ಸಂಘದವರಿತ್ತ ಮನವಿಗೆ ಉತ್ತರಿಸುತ್ತಾ ಹೇಳಿದ್ದಾರೆ.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಜಮಾವಣೆ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಜಮಾವಣೆ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

ಭಾವ ಕಥೆ

ಅವರಿಬ್ಬರು ಪಂಡಿತರಾಗಿದ್ದರು

* * *

ಒಂದು ದಿವಸ ದೇವಾಲಯದ ಮೆಟ್ಟಲಲ್ಲಿ ಪಂಡಿತರೀರ್ವರು ಭೆಟ್ಟಿಯಾದರು.

'ಜೀವನವು ಎಶ್ವದಷ್ಟೇ ವಿಶಾಲವಾಗಿದೆ' ಎಂದ ಮೊದಲನೆಯವ.

'ಜೀವನವು ಕಮಲದ ದಳದ ಮೇಲಿರುವ ಹನಿಯಷ್ಟೇ ಕಿಂಚಿತ್ ಆಗಿದೆ!' ಎಂದುತ್ತರವಿತ್ತ ಎರಡನೆಯವ.

ಇವರೀರ್ವರ ಮಾತನ್ನೂ ಕೇಳಿದವರು 'ಇವರಷ್ಟು ದೊಡ್ಡವರು!' ಎಂದರು.

೦೦ ೦೦

ಮಂದಿರದೊಳಗೆ ಹೋಗಿ ದೇವರಿಗೆ ನಮಸ್ಕರಿಸಿ ಹಿಂದೆ ಬರುತ್ತಿರುವಾಗ ಪುನಃ ಅವರೀರ್ವರು ಭೆಟ್ಟಿಯಾದರು.

'ಮನಸ್ಸು ಭೂಮಿಯ ಮೇಲೆ ಹಬ್ಬಿರುವ ಆಕಾಶದಷ್ಟು ದೊಡ್ಡದು!' ಎಂದ ಮೊದಲನೆಯವ.

'ಮನಸ್ಸು ಸೂಜಿಯ ಮೊನೆಯಷ್ಟು ಚಿಕ್ಕದು!' ಎಂದುತ್ತರ ವಿತ್ತ ಎರಡನೆಯವ.

'ಇವರೆಷ್ಟು ಆಳವಾದ ಜ್ಞಾನವುಳ್ಳವರು!' ಎಂದರು ಕೇಳಿದವರು.

೦೦ ೦೦

ಅಷ್ಟರಲ್ಲಿ ಮಂದಿರದ ಹಿರಿಯ ಪೂಜಾರಿಯು ಹೊರಗೆ ಬಂದು—ನಾನು ಮುದುಕನಾದೆ. ಆದುದರಿಂದ ದೇವರ ಪೂಜೆಗಾಗಿ ಇಬ್ಬರು ಪೂಜಾರಿ (ಬ್ರಾಹ್ಮಣ)ಗಳು ಬೇಕು. ಆದರೆ ಅವರಲ್ಲಿ ಒಬ್ಬನು ಜೀವನವನ್ನು ತಿಳಿದವನೂ, ಇನ್ನೊಬ್ಬನು ಮನವನ್ನು ಅಳೆದವನೂ ಆಗಬೇಕು ಎಂದನು.

ಅದೇ ಸಮಯದಲ್ಲಿ ಆ ಇಬ್ಬರು ಪಂಡಿತರೂ ಜನರ ಗುಂಪಿನಲ್ಲಿ ಮಾಯವಾದರು.

'ಇವರೆಷ್ಟು ವಿನಯ ಶೀಲರು!' ಎಂದು ನುಡಿದರು ನೋಡಿದವರು.

೦೦ ೦೦

ಸ್ವಲ್ಪ ಸಮಯಾ ನಂತರ ಆ ಪಂಡಿತರೀರ್ವರೂ ನಗರದ ಹೊರಗಿರುವ ಚಾಕದಲ್ಲಿ ಪುನಃ ಭೇಟಿಯಾದರು.

'ನಾವು ಜನರನ್ನು ಹೇಗೆ ಮೂರ್ಖರನ್ನಾಗಿ ಮಾಡಿದೆವು?' ಎಂದ ಮೊದಲನೆಯವ.

'ಮೂರ್ಖರೆಂದು ನಾವು ನಮ್ಮನ್ನು ಹೇಗೆ ಸುಂದರವಾಗಿ ಸಿದ್ಧ ಮಾಡಿ ಕೊಂಡೆವು!' ಎಂದುತ್ತರವಿತ್ತ ಎರಡನೆಯವ.

'ಇವರೆಷ್ಟು ವಿನೋದ ಪ್ರಿಯರು!' ಎಂದರು ಶ್ರೋತೃಗಳು.

(ಶ್ರೀ ಸುದರ್ಶನರ 'ಝರೋಕೆ'ಯಿಂದ)

—ಎಸ್. ಎಂ ಶೆಟ್ಟಿ,
ಶಿಮುಂಜೆ ಪರಾರಿ.

ಅಂಧಶ್ರದ್ಧೆ

ನಾಗರ ಹಾವಿನ ನಾಲಗೆ ಇಬ್ಭಾಗವಾಯಿತು ಹೇಗೆ?

ಇದಕ್ಕೆ ಸಂಬಂಧಿಸಿದ ಒಂದು ಜಾನಪದ ಕಥೆ ಇಲ್ಲಿದೆ.

ನಾವೆಲ್ಲರೂ ಕಂಡಿರುವ ನಾಗರಹಾವಿನ ನಾಲಗೆ ಇಬ್ಭಾಗವಾದುದು ಹೇಗೆಂದು ನಿಮಗೆ ಗೊತ್ತೇ? ಇಲ್ಲವಾದರೆ, ಕೇಳಿರಿ.

ಅದೆಷ್ಟೋ ವರ್ಷಗಳ ಪೂರ್ವದಲ್ಲಿ ಸುರರು ಮತ್ತು ಅಸುರರು ಸ್ನೇಹಬಲದಿಂದ "ಸಮುದ್ರ ಮಂಥನ" ಮಾಡಬೇಕೆಂದು ನಿಶ್ಚಯಿಸಿದರು. ಸಮುದ್ರ ಮಂಥನ ಮಾಡುವದೇನು ಸಾಮಾನ್ಯ ಕೆಲಸವೇ? ಅದೊಂದು ಸಾಹಸದ ಕೆಲಸ! ಮಂಥನ ಮಾಡಲಿಕ್ಕೆ ಉದ್ದ ಹಾಗೂ ಗಟ್ಟಿ ಬಳ್ಳಿಗಳು ಬೇಕಾದವು. ಅಂಥವುಗಳನ್ನು ಹುಡುಕಿತರಲು ಒಂದು ದಿಕ್ಕಿಗೆ ದೇವತೆಗಳು ಹೋದರೆ, ಇನ್ನೊಂದು ಬದಿಗೆ ರಾಕ್ಷಸರು ಹೊರಟರು!

ಎಷ್ಟು ಪ್ರಯತ್ನಪಟ್ಟರೂ ಅವರಿಗೆ ಯೋಗ್ಯವಾದಂಥ ಬಳ್ಳಿಗಳು ಸಿಗಲಾರದೇ ಉಭಯತಂಡದವರು ಮೇರು ಪರ್ವತದಲ್ಲಿ ಒಂದೆಡೆಯಲ್ಲಿ ಭೆಟ್ಟಿಯಾದರು. ಅವರವರು ತಮಗಾದ ಕಷ್ಟ—ಕಾರ್ಪಣ್ಯಗಳನ್ನು ಹೇಳತೊಡಗಿದರು. ಎರಡೂ ತಂಡಗಳು ನಿರಾಶೆಯಿಂದ ಅತ್ತಿತ್ತ ಹುಡುಕಾಡುತ್ತ ಉಳಿದರು.

ಈ ನಿರಾಶೆಯ ವಾರ್ತೆಯನ್ನು ಅಲ್ಲಿಯೇ ಮರೆಯಾಗಿ ಕೇಳುತ್ತಲಿದ್ದ "ರಪ" ಮತ್ತು "ವಾಸುಕಿ" ಎಂಬ ಹೆಸರಿನ ನಾಗರ ಹಾವು ದಂಪತಿಗಳು, ಭಯಭೀತರಾಗಿ ಒಮ್ಮೆಲೇ ಅವಸರದಿಂದ ಪಕ್ಕದ ತನ್ನ ವಾಸ್ತವ್ಯದ ಬಿಲವನ್ನು ಸೇರಿಕೊಳ್ಳುತ್ತಿರುವಾಗ; ಸುರ-ಅಸುರರ ಸೂಕ್ಷ್ಮದೃಷ್ಟಿಯು ಆ ನಿರಪರಾಧಿ ದಂಪತಿಗಳಮೇಲೆ ಹೊರಳಿತು!

ತಕ್ಷಣವೇ ಅವೆರಡೂ ಸರ್ಪದಂಪತಿಗಳನ್ನು ಹಿಡಿದು, ಬಳ್ಳಿಗಳೆಂದು ಭಾವಿಸಿ ಒಂದನ್ನು ದೇವತೆಗಳಿಗೆ ಕೊಟ್ಟು, ಇನ್ನೊಂದನ್ನು ತಾವು (ರಾಕ್ಷಸರು) ತೆಗೆದುಕೊಂಡು "ಸಮುದ್ರ ಮಂಥನ" ಮಾಡಿದರು. ಆಗ ಸಮುದ್ರವು ಅಲ್ಲೋಲ ಕಲ್ಲೋಲವಾಗಿ, ಬಹುಸಮಯದನಂತರ ಅದರೊಳಗಿಂದ ಹದಿನಾಲ್ಕು ಹೊಳಪು ರತ್ನಗಳು ಹೊರಬಂದವು. ಅವುಗಳಿಂದ 'ಅಮೃತ'ದ ಜೊತೆಗೆ "ವಿಷ"ವೂ ಹೊರ ಚಿಮ್ಮಿತು!

ಇದನ್ನು ಕಂಡು, ಎಲ್ಲರೂ ತಮ-ತಮಗೆ ಬಯಕೆ ಇದ್ದಂಥ ರತ್ನಗಳನ್ನು ಆರಿಸಿ ತೆಗೆದುಕೊಂಡರು. ಆದರೆ ವಿಷವನ್ನು ತೆಗೆದುಕೊಳ್ಳಲು ಯಾರೂ ಮುಂದಾಗಿ ಬರಲಿಲ್ಲ. ಆಗ—ಅಲ್ಲಿಯೇ ನೋಡುತ್ತ ನಿಂತುಕೊಂಡ ಭಗವಾನ ಶ್ರೀ ಶಂಕರನು ಮುಂದೆ ಬಂದು ಹೊರ ಚಿಮ್ಮಿದ 'ವಿಷ ಪ್ರಾಶನ" ಮಾಡಿ ತನ್ನ ಕಂಠ (ಗಂಟಲು) ದೊಳಗೆ ಸಂಗ್ರಹಿಸಿ ಇಟ್ಟುಕೊಂಡನು!

ಈ ವಿಷ ಪ್ರಭಾವದಿಂದ ಭಗವಾನ ಶಂಕರನ ಕಂಠವು ನೀಲಿ-ಕಪ್ಪು (ಶ್ಯಾಮ) ವರ್ಣದ್ದು ಆಯಿತು! ಅಂದಿನಿಂದಲೇ ಶ್ರೀ ಶಂಕರನಿಗೆ "ನೀಲ ಕಂಠ" ಎಂಬ ಹೊಸ ಹೆಸರು ಪ್ರಾಪ್ತವಾಯಿತು! ಯಾವಾಗಲೂ ನಾಗರ ಹಾವು ವಿಷ ಸಂಗ್ರಹಿಸಿದ ಕಂಠಕ್ಕೆ ಸುತ್ತಿಕೊಂಡು ಇರುವದನ್ನು ಚಿತ್ರಪಟ ಇತ್ಯಾದಿಗಳಲ್ಲಿ ಕಂಡಿರಬಹುದು. ಅದು ಯಾಕೆ? ಎಂಬುದನ್ನು ಅರಿತವರು ವಿರಲ. ವಿಷ ತುಂಬಿದ ಶ್ರೀ ನೀಲಕಂಠನ (ಈಶ್ವರ) ಕಂಠವು ಒಮ್ಮೆಲೇ ವಿಷದ ಒತ್ತಡದಿಂದ ಪ್ರಸರಣವಾಗಿ ಸಂಗ್ರಹಿಸಿಟ್ಟ ವಿಷವು ಹೊರ ಚೆಲ್ಲುವ ಸಂಭವ ಇರುವದೆಂದು ಉಲ್ಲೇಖಿಸಬಹುದು.

ಅಂದು ಭಗವಾನ ಶಂಕರನು "ವಿಷ ಪ್ರಾಶನ" ಮಾಡುತ್ತಿರುವಾಗ ಅಲ್ಲಿಯ ಸ್ವಲ್ಪ ವಿಷವು ಕೆಳಗಿರುವ ಪೃಥ್ವಿಯ ಮೇಲಿನ ತೃಣ-ಹುಲ್ಲುಗಳ ಮೇಲೆ ಬಿದ್ದಿತು. ಆ ವಿಷವು ಯಾವ—ಯಾವ ವನಸ್ಪತಿಗಳ ಮೇಲೆ ಬಿದ್ದಿದೆಯೋ ಅವೆಲ್ಲವೂ ವಿಷದ ವನಸ್ಪತಿಗಳಾಗಿಯೂ ಮತ್ತು ಅವನ್ನು ತಿಂದಿದ್ದ ಪ್ರಾಣಿಗಳ, ವಿಷಾರಿ ಪ್ರಾಣಿಗಳಾಗಿ ಮಾರ್ಪಟ್ಟವು! ಅವುಗಳಂತೆ ನಾಗರ ಹಾವೂ ಆ ಹುಲ್ಲಿನ ಮೇಲೆ ಬಿದ್ದ ವಿಷದ ಹನಿಗಳನ್ನು ತನ್ನ ನಾಲಿಗೆಯಿಂದ ನೆಕ್ಕಿತು! ಆಗ ಹುಲ್ಲಿನ ಒಂದು ಬದಿಗೆ ಇರುವ ಚಿಕ್ಕ-ಚಿಕ್ಕ ಹರಿತವಾದ ಮುಳ್ಳುಗಳ ಮೂಲಕ ಆದರ ಮೃದು ನಾಲಿಗೆಯು ತುದಿಯಲ್ಲಿ ದ್ವಿಭಾಗವಾಯಿತು! ಹಾಗೂ ನಾಗರ ಹಾವೂ ಸಹ ವಿಷಾರಿ ಪ್ರಾಣಿಯಾಗಿ ಪರಿಣಮಿಸಿತು! ಅಂದಿನಿಂದ ಹಾಗೆ ಆದ ಆದರ ದುಃಖದಾಯಕ ಸ್ಥಿತಿಯಿಂದ ಮುಂದೆ ಅದ ನಾಗರ ಹಾವಿನ ಪೀಳಿಗೆಯು ಸಹ ಪೂರ್ವಜರ ಸ್ಥಿತಿಯನ್ನೇ ಅನುಭವಿಸಬೇಕಾಯಿತು. ಇಂದಿನ ವರೆಗೂ ಅದೇ ದುಃಖದಾಯಕ ಪರಿಸ್ಥಿತಿಯನ್ನು ಸೈರಿಸುತ್ತ ಬಂದಿರುವದು. ಈಗ ನೋಡಿ ನಾಗರ ಹಾವಿನ ನಾಲಿಗೆಯು ತುದಿಯಲ್ಲಿ ಇಬ್ಭಾಗವಾದದ್ದು ಕಂಡು ಬರುವದು. ಆದರೆ ಅದನ್ನು ಕಣ್ಣಾರೆ ನೋಡಬೇಕೆಂಬ ಆತುರತೆಯು ನಿಜವಾಗಿದ್ದರೆ ನಿಮ್ಮೂರಿನಲ್ಲಿ ಬಂದ ಹಾವಾಡಿಗರ, ಜಾದುಗಾರರ ಹತ್ತಿರ ಇದ್ದ ನಾಗರ ಹಾವು (ಸರ್ಪ)ಗಳನ್ನು ತಪ್ಪದೇ ನೋಡಿ, ಆಶೆಯನ್ನು ಪೂರೈಸಿ ಕೊಳ್ಳಿರಿ!

—ರಾಮಕೃಷ್ಣ ಎ. ಪೈ, ಅಂಕೋಲಾ.



ಬ್ರಿಟನ್ನಿನಲ್ಲಿ ತಯಾರಾದ ಹೊಸ ವಿಧದ ಉಳುಮೆಯ ಟ್ರಾಕ್ಟರು.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು. ಸಂ. ನ.)

ಆಯ್ದ ಮುತ್ತುಗಳು— (ಹಳ್ಳಿಯ ನೀತಿ ಮುಕ್ತಕಗಳು) ಸಂಗ್ರಹಕಾರರು: ಕ. ರಾ. ಕೃ. ಪ್ರಕಾಶಕರು: ಕಾವ್ಯೋದಯ ಪ್ರಕಾಶನ, ಸರಸ್ವತಿಪುರಂ, ಮೈಸೂರು. ಪುಟಗಳು: ೩೦. ಬೆಲೆ: ಸಾದಾಪ್ರತಿ: ರೂ.೦.೫೦, ಉತ್ತಮ: ರೂ. ೦.೭೫; ಕ್ಯಾಲಿಕೊ: ರೂ. ೨.೦೦.

ಶ್ರೀ ಪಿ. ಆರ್. ತಿಪ್ಪೇಸ್ವಾಮಿ ಅವರ ಕಲಾಕೃತಿಯ ಮುಖಚಿತ್ರದೊಡನೆ ಜಾನಪದ ಗೀತೆಗಳಲ್ಲಿ ಎದ್ದು ಕಾಣುವ ನೀತಿಯಿಂದಡಕವಾದ ನೂರು ಬಿಡುಪದಗಳ ಸಂಗ್ರಹವೇ "ಆಯ್ದ ಮುತ್ತುಗಳು". ಜಾನಪದ ಸಾಹಿತ್ಯದಲ್ಲಿಯೂ ಕಾವ್ಯತ್ವವನ್ನು ಹೊಂದಲು ಅರ್ಹವಾದ ಕೃತಿಗಳಿವೆ. ಕನ್ನಡ ಸಾರಸ್ವತ ಸಮಾಜಕ್ಕೆ ಇಂತಹ ಅನರ್ಘ ಮುಕ್ತಾಫಲಗಳ ರುಚಿಯನ್ನು ಆಸ್ವಾದಿಸಲು ಅನುಕೂಲವಾಗುವಂತೆ ನಿರಂತರ ಪರಿಶ್ರಮಶೀಲರಾಗಿರುವ ಕ. ರಾ. ಕೃ. ಅವರು ತಮ್ಮ ಜನಪದ ಸಂಕಲನದ ಜನೆಯ ಪ್ರಕಟಣೆಯನ್ನು ಕೈಗೊಂಡಿದ್ದಾರೆ.

"ಮುತ್ತು" ಎಂದರೆ, ವ್ಯಾವಹಾರಿಕವಾಗಿ ವಾಚ್ಯಾರ್ಥವೊಂದಿದ್ದರೆ, ನ್ಯಾಯವಾಗಿಯೂ ಈ ಶಬ್ದದ ಅರ್ಥ ಅರ್ಥವತ್ತಾಗಿದೆ. "ನುಡಿದರೆ ಮುತ್ತು ಸುರಿಯಬೇಕು" ಎಂಬಲ್ಲಿ ಈ ಲಾಕ್ಷಣಿಕ ಇಲ್ಲವೇ ವ್ಯಂಜಕಾರ್ಥವು ಹುಟ್ಟುತ್ತದೆ. "ನುಡಿಮುತ್ತು" ಎಂಬುದು ಮನಸ್ಸಿನ ಮೇಲೆ ಅತುಳ ಪರಿಣಾಮ ಮಾಡುತ್ತವೆ; ಎಂತಲೇ ನಮ್ಮ ಶಾಸ್ತ್ರಸಿದ್ಧ ಕಾವ್ಯಗಳಲ್ಲಿ ಇಂತಹ ಅನೇಕಾನೇಕ ಗಾದೆಗಳು ಅನುಭವಕ್ಕೆ ಬರುತ್ತವೆ. ಅಂತೆಯೇ ಜನಸಾಮಾನ್ಯರ ಸಾಹಿತ್ಯವಾದ ಜನಪದ ಗೀತೆಗಳಲ್ಲಿಯೂ ಅಮೃತೋಪಮವಾದ ನೀತಿಯುಕ್ತ ಮುಕ್ತಾಫಲಗಳು ದೊರೆಯುತ್ತವೆ; ಅವನ್ನು ಸಂಗ್ರಹಿಸುವ ಕೆಲಸ ಇಲ್ಲಿ ನಡೆದಿದೆ. ಇಂತಹ ನೀತಿ, ಉಪದೇಶ ಮತ್ತು ಶಿಕ್ಷಣದ ಮಾತುಗಳು ನಮ್ಮ ಗ್ರಾಮೀಣ ಜನತೆಗೂ ಪರಿಚಿತವಿದ್ದು, ಅವರ ಅನುಭವಾಮೃತದಿಂದ ಮಥಿಸಿ ಅವಶ್ಯಕತಾನುಸಾರ ಸಂದರ್ಭವರಿತು ಹೊರಹೊಮ್ಮುತಿದ್ದುವು ಎಂದಾಗ, ಹಿಂದಿನ ಕಾಲದಲ್ಲಿದ್ದ ಧರ್ಮಜ್ಞತೆಯು ಅರಿವಾಗುವುದು.

"ಅಪುತ್ರಸ್ಯ ಗತಿರ್ನಾಸ್ತಿ" ಎಂದು ಬ್ರಾಹ್ಮಣರು ಹೇಳಿದರೆ, "ಹಂತೀಲಿ ಉಣ್ಣೋ ಮಗರಾಯನಿಲ್ಲದ ಮೇಲೆ ಸಾವಿರೊನ್ನಿದ್ದು (ಸಾವಿರ ಹೊನ್ನು ಇದ್ದು) ಫಲವೇನು?" ಎಂದು ಗ್ರಾಮೀಣ ಜನತೆ ಕೇಳುತ್ತದೆ. ಪತಿಗೃಹಕ್ಕೆ ತೆರಳುವ ವಧುವಿಗೆ ಕೊಡುವ ಉಪದೇಶವಿದು:

ನೆರೆಮನೆ ಸಿರಿದೇವಿ ನೀನಾಗಿ ಮಗಳೆ
ಮನೆಯೊಳಗೆ ಬೇದ ಬಗೆಬೇಡ !
ಎಲೆ ಮಗಳೆ
ತುಂಬಿದ ಮನೆಯ ಒಡಿಬೇಡ ||

ವಧುವಿನ ಹೆತ್ತವರು ತಮ್ಮ ಮಗಳಿಗೆ "ತುಂಬಿದ ಮನೆಯ ಒಡಿಬೇಡ" ಎಂಬುದಕ್ಕಿಂತ ಹೆಚ್ಚಿನ ಉಪದೇಶವೇನನ್ನು ಕೊಟ್ಟಾರು?

ದೈವಭಕ್ತಿಯ ಮಹಿಮೆ ಇದು:
ದೇವಾರ ನೆನೆದಾರೆ ಸಾವಿಷ್ಟು ನಮಗಿಲ್ಲಾ
ಸರ್ಪ ಕಚ್ಚಿದರೂ ವಿಷವಿಲ್ಲಾ | ಸರ್ಪನ
ಹೆಡೆಯ ದಾಟಿದರೂ ಬಯವಿಲ್ಲಾ ||

ಸಂಸಾರದಲ್ಲಿ ನವೆದ ತಂದೆ ತನ್ನ ಪುತ್ರರಿಗೆ ಮಾಡಿಡುವ ಆಸ್ತಿಯ ವಿವರವನ್ನು ಕೇಳಿ:

ಅಟ್ಟದಿಗೆ ಅಳಿಯನಿಗೆ ಕಟ್ಟದಕ್ಕಿ
ನಂಟನಿಗೆ
ಪೆಟ್ಟಿಗೆಯ ಸೀರೆ ಮಗಳೀಗೆ | ನಾಳೆ
ಬರುವ
ಪತ್ರಾದ ಸಾಲ ಮಗನೀಗೆ ||

ಸ್ತ್ರೀಯು ತನ್ನ ಪತಿಯನ್ನೇ ಆರಾಧಿಸಬೇಕು, ಪರ ಪುರುಷನ ಮೋಹಕ್ಕೆ ಬಲಿ ಬೀಳಬಾರದು:

ಬೇಲಿ ಮೇಲಿನ ಹೂವು ಬೆಳ್ಳಗಿದ್ದರೇನು
ಹುಲ್ಲಿಗೂವಿನಂತ ಮನೆಗಂಡ | ಬಿಟ್ಟು
ಅನ್ಯ ಪುರುಷನ ಒಲಿ ಬೇಡ ||

ಸತೀತ್ವದ ಮೂಲವೇ ಇದಲ್ಲವೆ?

ಇದೇ ರೀತಿಯಲ್ಲಿ "ನೀ ಬಡಗೀನ ಬಾರಿ ತರಬೇಡ" ಎಂದು ತಂಗಿ ಅಣ್ಣನಿಗೆ ಹೇಳುವ "ನ್ಯಾಯ ಕಟ್ಟೇಲಿ ನಿಲ ಬೇಡ" ಎನ್ನುವ, ಉಪದೇಶ ಇಂದಿನ ದಿನಕ್ಕೂ ಹಳೆಯದಾಗಿಲ್ಲವಷ್ಟೇ ಅಂತೆಯೇ ಸಂಸಾರದಲ್ಲಿ ನೊಂದ ನಾರಿ ಹೇಳುತ್ತಾಳೆ:

ಹೆಣ್ಣಾಗಿ ಹುಟ್ಟೋಕಿಂತ ಮಣ್ಣಾಗಿ ಹುಟ್ಟಿದರೆ
ಮಣ್ಣಿನ ಮೇಲೊಂದು ಮರವಾಗಿ ಹುಟ್ಟಿದ್ರೆ
ನಾ ದಾರಿಗಾರರಿಗೆ ನೆರಳಾದೆ" ಎಂದು!

"ಹೆಣ್ಣು ಹೆರಬೇಡ ಹುಟ್ಟು ಬಂಜೆಯಾಗಿ ಬೇಡ. ಬೇಡಿಕೊಳ್ಳ ಗಂಡು ಮಗದೀರ;" "ಹತ್ತೆಂಟು ಹೆಣ್ಣು ಮಕ್ಕಳಾಸೆ ಧನಿಕನಿಗೆ," "ಹೆಂಡರಿಗೆ ಸಲಿಗೆ ಕೊಡಬೇಡ;" ಅತ್ತೇರ್ಗೆ ಹೇಗೆ ಮಾಡಿದರೂ ಹಿತವಿಲ್ಲ;" "ರಂಬೇರ ಸಂಗ ಮಾಡಿದರೆ ತಲೆಯೊರವು" ಎಂಬಿತ್ಯಾದಿ ಉಲ್ಲೇಖಗಳು ಇಂದಿಗೂ ಜನರ ಬಾಯಲ್ಲಿ ಕೇಳಿ ಬರುತ್ತವೆ. ಒಡಹುಟ್ಟಿದವರ ಸಹೋದರ ಪ್ರೇಮ ಹೇಗೆ ಎಂದರೆ:

ಮೂಗುತಿ ಮುರಿದಾರೆ ಮುರಿದು ಮಾಡಿಸಬ
ಬಹುದು
ಮುಡದಿ ಸತ್ತಾರೆ ತರಬಹುದು|ಅಣ್ಣಯ್ಯ
ಒಡಹುಟ್ಟಿದವರೆಲ್ಲಿಂದ ತರುತೀಯ?

ಇಂತಹ ಆದರ್ಶತತ್ವಗಳು ಜನಪದಗೀತೆಗಳಲ್ಲಿ ಅಡಕವಾಗಿರುವುದರಿಂದಲೇ,

ಅನನು ಭವದ ಕೃತಿಯ ನೂರು ಬರೆಸಬ
ಹುದು
ಅನುಭವದನ್ಮೃತಧಾರೆಯ ಹರಿಸುವ
ಜನಪದಗೀತೆಯೆಲ್ಲಿಂದ ತರುತೀಯ?

—ಗೋರಾ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಬಹುದು.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ಮಾರಾಟಗಾರರು: ನವಭಾರತ ಬುಕ್ ಡಿಪೋ, ಉಡುಪಿ.

ಮಾತೃ ಮಹಿಮೆ

"ಮಾತೃ ದೇವೋಭವ" ಈ ಮಾತು ಏತಕ್ಕೆ?

ಅರೆಗಳಿಗೆ ಬಿಡುವಿಲ್ಲದೆ ದುಡಿಯುವ ತಾಯಿ ಪ್ರತ್ಯಕ್ಷ ದೇವತೆಯಲ್ಲವೆ?

ತಾಯಿಗಿಂತ ಹೆಚ್ಚಿನ ಬಂಧುವಿಲ್ಲವೆಂದೂ, ಮಾತೃದೇವೋಭವವೆಂದೂ ತಾಯಿಯ ವಿಷಯವಾಗಿ ತುಂಬಾ ಮಹತ್ವದ ಮಾತುಗಳಿವೆ. ನಾನು ಅದಾವುದನ್ನೂ ಲಕ್ಷ್ಯಮಾಡುತ್ತಿರಲಿಲ್ಲ. ನಮ್ಮ ಮನೆಯಲ್ಲಿ ದುಡಿಯುವವಳಾಗಿರುವ ತಾಯಿಯೆಂಬ ಈ ಹೆಂಗುಸಿನಲ್ಲಿ ಹಾಗೇನು ಮಹತ್ವವಿದ್ದೀತು? ಅವಳೇನೂ ಹೆಚ್ಚು ವಿದ್ಯೆ ಕಲಿತವಳಲ್ಲ; ತಂದೆಯ ಹಾಗೆ ದೊಡ್ಡ ಉದ್ಯೋಗ ಮಾಡುವವಳಲ್ಲ. ಯಾರೊಬ್ಬರ ಲಕ್ಷ್ಯವನ್ನಾದರೂ ಎಳೆದುಕೊಳ್ಳುವಂತಹ ಸಮಾಜದ ಉದ್ಧಾರ, ಮಹಿಳಾಸೇವೆ ಗ್ರಾಮದೊಳಿಗ, ಗ್ರಂಥರಚನೆ ಹೀಗೆ ಇನ್ನೂ ಎಷ್ಟೋ ಹೆಂಗುಸರು ಮಾಡಿ ಕೀರ್ತಿ ಗಳಿಸುವ ಕಾರ್ಯಗಳಿವೆಯಲ್ಲ, ಅಂತಹುದೊಂದರಲ್ಲಿ ಕೂಡಾ ನನ್ನ ತಾಯಿಗೆ ಸಂಬಂಧವಿಲ್ಲ. ಬರಿ ಸಾಧು ಪ್ರಾಣಿಯವಳು. ಇವಳನ್ನು ಪೀಡಿಸಿ ಕಾಡಿಸುವುದೆಂದರೆ ನಮಗೊಂದು ಆಟ. ಈಗೇನೋ ನಾನು ಸ್ವಲ್ಪ ದೊಡ್ಡವನಾಗಿದ್ದೇನೆ. ಮೊದಲಿನಂತೆ ತಾಯಿಯನ್ನು ಪೀಡಿಸುವುದಿಲ್ಲವಾದರೂ ಪೀಡಿಸಬೇಕೆಂದು ಮನಸ್ಸಿನೊಳಗೇನೋ ಇದ್ದೇ ಇದೆ.

ಒಂದು ದಿನ ನನಗೆ ಸ್ವಲ್ಪ ಜ್ವರ ಬಂದಿತ್ತು. ಶಾಲೆಗೆ ಹೋಗದೆ ಮನೆಯಲ್ಲೇ ಮಲಗಿಕೊಂಡಿದ್ದೆ. ಬೆಳಗ್ಗಿನಿಂದ ರಾತ್ರಿಯ ವರೆಗೂ ತಾಯಿಯನ್ನು ನೋಡುವುದೇ ನನಗೊಂದು ಕೆಲಸ.

ಶಬ್ದವಿಲ್ಲದೆ ಎಲ್ಲರೂ ನೆಮ್ಮದಿಯಿಂದ ಉಸಿರು ಬಿಡುತ್ತ ನಿದ್ರೆಯಲ್ಲಿ ಮುಳುಗಿ ಹೋಗಿದ್ದಾರೆ. ಉಷಃಕಾಲದ ನಾಲ್ಕು ಗಂಟೆ ಹೊತ್ತು ಕೋಳಿ ಕೂಗಿತ್ತು. ತಾಯಿ ಅಂಗಳಕ್ಕಿಳಿದು ಬೆಳ್ಳಿ ನೋಡಿ ಬಂದಳು. ಅಡಿಗೆ ಮನೆ ಬೆಳಗಿತು. ಎಲ್ಲರಿಗಿಂತ ಮುಂಚೆ ಅವಳ ಕೆಲಸ ಪ್ರಾರಂಭವಾಗುತ್ತದೆ. ಮುಖ ತೊಳೆದು ಬೆಂಕಿ ಹಚ್ಚಿ ಕಾಫಿ ಟಿಫಿನು ತಯಾರಿಸುತ್ತಾಳೆ. ಬಚ್ಚಲೊಲೆಯಲ್ಲಿ ಬಿಸಿ ನೀರು ಕಾಯಿಸಿ 'ಮಕ್ಕಳನ್ನು' ಎಬ್ಬಿಸುತ್ತಾಳೆ. ಆಗಿಂದಲೇ ಪ್ರಾರಂಭವಾಗುತ್ತದೆ ಅವುಗಳ ತುಂಟುತನ. ಇಬ್ಬರು ಅಣ್ಣ, ಇಬ್ಬರು ತಂಗಿ, ಈ ನಾಲ್ವರೂ ಒಂದೇ ಬಾರಿಗೆ ಹತ್ತು ಚಾಕರಿಗಳನ್ನು ತಾಯಿಯಿಂದ ಮಾಡಿಸುತ್ತಾರೆ. ಮಾಡಿಸುವುದೇನು? ಅವಳೇ ಮಾಡಬೇಕಾಗುತ್ತದೆ. ಇದರೆಡೆಯಲ್ಲಿ ಅಪ್ಪ ಏಳುವುದನ್ನು ನೋಡಿ ಅವರ ಸೇವೆಗೂ ಅವಳು ಹಾಜರಾಗಬೇಕು. ಬೆಳಗ್ಗಿನ ಹತ್ತರ ಬಗೆಯ ಅವಳ ಕಾರ್ಯಕ್ರಮವೆಂಬುದೊಂದು ಅದ್ಭುತ ಯಂತ್ರದ ಹಾಗೆ. ಸ್ವಲ್ಪವೂ ಸಿಟ್ಟು ಬರುವುದಿಲ್ಲ. ಬದಲಾಗಿ ಪ್ರಸನ್ನತೆಯಿಂದಲೇ ಕಾಣಿಸುತ್ತಾಳೆ. ಅತ್ತಕಡೆ ಸಂಗೀತ ಅಭ್ಯಾಸ ಮಾಡುವ ದೊಡ್ಡವಳಿಗೆ ಅಪಸ್ವರ ಬಂದಲ್ಲಿ ಚುಚ್ಚಿಕೊಟ್ಟು ಸರಿ ಮಾಡುತ್ತಾಳೆ. ಇತ್ತ ಕಡೆ ಮಕ್ಕಳ ಕಾಫೀ ಗಲಾಟೆ. ಮನೆ ತುಂಬಾ ಉಪ್ಪಿಟ್ಟು ಚೆಲ್ಲುವ ರಂಪ. ಬೇದಿಯಲ್ಲಿ ತರಕಾರಿಯವಳ ಕೂಗು ಕೇಳಿಸುವಾಗ ಅತ್ತಕಡೆ ಓಡಬೇಕು. ಅವಳೊಂದಿಗೆ ವ್ಯಾಪಾರ. ಅಮ್ಮಮ್ಮ! ಒಂದೆ? ಎರಡೆ? ಹುಡುಗರಿಗೆ ಶಾಲೆಯ ಅವಸರ! ಅಪ್ಪನಿಗೆ ಆಫೀಸು ಹೊತ್ತು. ಒಬ್ಬಳಿಗೆ ತಲೆ ಬಾಚಬೇಕು. ಒಬ್ಬನಿಗೆ ಅಂಗಿಹಾಕಬೇಕು. ಇನ್ನೊಬ್ಬನಿಗೆ ಇನ್ನೊಂದು ಮಾಡಬೇಕು.

ದಿನಾ ಬೆಳಗ್ಗೆ ಆರು ಗಂಟೆಯಿಂದ ಹತ್ತು ಗಂಟೆಯ ವರೆಗೂ ತಾಯಿಯ ಕೈಕಾಲುಗಳು ಕೈಕಾಲುಗಳಲ್ಲ; ಯಂತ್ರ! ಹತ್ತು ಗಂಟೆಯ ಹೊತ್ತಿಗೆ ಮನೆ ಒಮ್ಮಿಂದೊಮ್ಮೆ ಖಾಲಿಯಾದ ಹಾಗೆ ಆಗುತ್ತದೆ. ಕೋಣೆ ತುಂಬಾ ಲೋಟಾ ತಟ್ಟೆಗಳು ಚೆಲ್ಲಾಡಿರುತ್ತವೆ. ಮೂಲೆಗೊಂದೊಂದು ಬಟ್ಟೆಗಳು. ಮಕ್ಕಳೆಲ್ಲಾ ಶಾಲೆಗೆ; ಅಪ್ಪ ಆಫೀಸಿಗೆ. ರೈಲು ಹೊರಟು ಹೋದ ಮೇಲೆ ಕಾಣಿಸುವ ಪ್ಲಾಟ್‌ಫಾರಂನ ಹಾಗೆ.

ಮನೆ ಒಮ್ಮೆಗೆ ನಿಶ್ಶಬ್ದವಾದಾಗ ತಾಯಿ ನೆಮ್ಮದಿಯಾಗಿ ಮನೆಯ ಕಸ ಗುಡಿಸುವುದು, ಒರೆಸುವುದು, ಬಟ್ಟೆ ಒಗೆಯುವುದು, ಪಾತ್ರೆ ಬೆಳಗುವುದು ಎಲ್ಲಾ ಮಾಡಿ ಸ್ನಾನ ತೀರಿಸಿ ದೇವರ ಪ್ರಾರ್ಥನೆ ಮಾಡುತ್ತಾಳೆ. ಹರಿದ ಬಟ್ಟೆಗಳನ್ನು ಹೊಲಿಯುತ್ತಾಳೆ.

ಹನ್ನೆರಡು ಗಂಟೆಯ ಹೊತ್ತಿಗೆ ತಲೆಯಲ್ಲಿ ಬುಟ್ಟಿ ಹೊತ್ತುಕೊಂಡು ಕೆಲಸದವಳು ಬರುತ್ತಾಳೆ. ತಾಯಿ ಊಟ ತುಂಬಿದ ಟಿಫಿನ್ ಕ್ಯಾರಿಯರನ್ನೆತ್ತಿ ಅವಳ ಬುಟ್ಟಿಯೊಳಗಿಡುತ್ತಾಳೆ. ಅದು ಅಪ್ಪನಿಗೆ ಊಟ. ಅವಳು ಬುಟ್ಟಿ ಹೊತ್ತುಕೊಂಡು ಹೋದಮೇಲೆ ತಾಯಿ ಬಡಿಸಿಕೊಂಡು ತನ್ನ ಊಟ ಮಾಡಿಕೊಳ್ಳುತ್ತಾಳೆ. ಎಲ್ಲಾ ಆದ ಮೇಲೆ ಆ ದಿನದ ವಾರ್ತಾಪತ್ರಿಕೆ, ಇತರ ಪತ್ರಿಕೆಗಳನ್ನು ನೋಡುತ್ತಾ ಒಂದು ಸಣ್ಣ ನಿದ್ರೆ ಮಾಡುವುದೂ ಉಂಟು; ಅದೇ ಸಮಯಕ್ಕೆ ಹಳೇ ವಸ್ತ್ರ ವಿನಿಮಯಿಸಿಕೊಳ್ಳುವವನೋ, ಮತ್ತಾವನೋ ಬೀದಿ ವ್ಯಾಪಾರಿಯೋ ಬಂದನೆಂದರೆ ಅವರಲ್ಲೇ ಅಷ್ಟು ಸಮಯ ಹೋಗಿಬಿಡುತ್ತದೆ.

ನಾಲ್ಕು ಗಂಟೆಗೆ ಲಗುಗೆಲಸ ಪುನಃ ಪ್ರಾರಂಭವಾಗುತ್ತದೆ. ನಾಲ್ಕೂವರೆ ಗಂಟೆಗೆ ಹುಡುಗರು ಶಾಲೆಯಿಂದ ಬರುತ್ತಾರೆ. ಮಣ್ಣುಮಸಿ ಹಚ್ಚಿಕೊಂಡು ಬಂದ ಅವರ ಅಂಗಿ ಬಟ್ಟೆಗಳನ್ನು ತಾಯಿ ಮಾರ್ಪಡಿಸುತ್ತಾಳೆ. ಕೈಕಾಲು ತೊಳೆಸಿ ಶುಭ್ರಪಡಿಸಿ ಬೇರೆ ದುಸ್ತು ತೊಡಿಸುತ್ತಾಳೆ. ಅವರು ಹೇಳುವ ದೂರುಫಿರ್ಯಾದುಗಳನ್ನು ಕೇಳುತ್ತಾಳೆ, ಸಮಾಧಾನ ಹೇಳುತ್ತಾಳೆ. ಅವರಿಗೆ ತಿಂಡಿಕಾಫಿ ಕೊಟ್ಟು ಆಡಲಿಕ್ಕೆ ಕಳುಹಿಸುತ್ತಾಳೆ. ಅನಂತರ ತಾಯಿಯ ಸ್ವಂತ ಶೃಂಗಾರ ಪ್ರಾರಂಭವಾಗುತ್ತದೆ. ಒಳ್ಳೆಯ ಸೀರೆ ಉಟ್ಟು ತಲೆಬಾಚಿ ಹೂ ಮುಡಿದುಕೊಂಡು ಅಪ್ಪ ಆಫೀಸಿನಿಂದ ಬರುವ ಸಮಯಕ್ಕೆ ಆಕರ್ಷಣೀಯಳಾಗಿಯೂ ಉಲ್ಲಾಸವಾಗಿಯೂ ಕಾಣಿಸುತ್ತಾಳೆ.

ಅಪ್ಪ ಕಾಫಿ ಟಿಫಿನು ತೆಗೆದುಕೊಳ್ಳುವಾಗಲೇ ಅವರೊಡನೆ ಹೇಳಬೇಕಾದ ವಿಷಯಗಳನ್ನು ಹೇಳುತ್ತಾಳೆ. ಅವರು ಹೂ ಹೂಗುಟ್ಟುತ್ತ ಮಳ್ಳ ಮೇಲೆ ಕೂತ ಹಾಗೆ ಕೂತು ಸಮಯ ಸಿಕ್ಕಿದ ಕೂಡಲೇ ಡ್ರೆಸ್ಸು ಹಾಕಿಕೊಂಡು ಕ್ಲಬ್ಬಿಗೋ ಮತ್ತೆಲ್ಲಿಗೋ ಹೋಗಿ ಬಿಡುತ್ತಾರೆ.

ಆ ಮೇಲೆ ನೆರೆಕರೆಯ ತಾಯಿಯ ಸ್ನೇಹಿತೆಯರು ಬರುತ್ತಾರೆ. ಅವರೊಡನೆ ಇಷ್ಟಾಗೋಷ್ಠಿ ನಡೆಸುವಾಗ ಹೊತ್ತು ಹೋಗುವುದೇ ಗೊತ್ತಾಗುವುದಿಲ್ಲ ತಾಯಿಗೆ.

ಕತ್ತಲಾದಾಗ ತಂಗಿಗೆ ಸಂಗೀತ ಪಾಠದ ಮಾಸ್ತರು ಬರುತ್ತಾರೆ ತಮ್ಮನಿಗೆ ಪಾಠಹೇಳಲು ಉಪಾಧ್ಯಾಯರು ಬರುತ್ತಾರೆ. ಪುಟ್ಟ ತಮ್ಮ ಒಂದು ಮೂಲೆಯಲ್ಲಿ ಕುಳಿತು ಗಟ್ಟಿಯಾಗಿ ಓದುತ್ತಿರುತ್ತಾನೆ. ತಾಯಿ ಆಗಾಗ ಶಬ್ದಮಾಡುತ್ತ ಅವರ ಶಬ್ದಾತಿರೇಕತೆಯನ್ನು ಅಡಗಿಸುತ್ತಾಳೆ. ಈ ನಡುವೆ ರಾತ್ರಿಯ ಅಡಿಗೆ ಯಾವ ಮಾಯೆಯಿಂದಲೋ ಅವಳು ಮಾಡಿ ಮುಗಿಸಿರುತ್ತಾಳೆ.

ರಾತ್ರಿ ಊಟದ ಸಮಯದಲ್ಲಿ ಹುಡುಗರು ಉಪಾಧ್ಯಾಯರನ್ನೋ ಬೇರೆ ಹುಡುಗರನ್ನೋ ಹಾಸ್ಯಮಾಡುವಾಗ, ತಮ್ಮನ್ನೇ ತಾವು ಹೊಗಳಿಕೊಳ್ಳುವಾಗ ಅವರಿಗೆ ಬುದ್ಧಿವಾದ ಹೇಳುತ್ತಾ ಊಟಮಾಡಿಸುತ್ತಾಳೆ. ಆ ಮೇಲೆ ತಂದೆಯ ಸವಾರಿ ಚಿತ್ತೈಸುತ್ತದೆ. ಮತ್ತೆ ಹೆಚ್ಚು ಕಿಂಚಿತ್ತಿಲ್ಲವೆ ಕೆಲಸವೆಲ್ಲಾ ಬೇಗಬೇಗನೇ ಮುಗಿಯುತ್ತೆ. ಮಕ್ಕಳಿಗೆ ಚಾಪೆ ಹಾಕಿ ಯಾವುದೋ ಒಂದೆರಡು ಕಥೆಯಿಂದ ಅವರನ್ನು ನಗಿಸುತ್ತಾ ನಿದ್ರಿಸಿಬಿಡುತ್ತಾಳೆ. ಕಡೆಗೂ ಅಡಿಗೇಮನೇಕೆಲಸ ಒಂದಿಷ್ಟು ಬಾಕಿ ಉಳಿದಿರುತ್ತೆ. ಒಲೆ ಸಾರಿಸಿ ಶುದ್ಧಿಮಾಡಿ ಮಲಗಲಿಕ್ಕೆ ಬರುವಾಗ ಹತ್ತು ಹೊಡೆಯುತ್ತದೆ. ತಂದೆ ಏನೋ ಓದುತ್ತಾ ಕುಳಿತಿರುತ್ತಾರೆ. ಮತ್ತೆ ತಂದೆ ತಾಯಿಯೊಡನೆ ಅದೂ ಇದೂ ಮಾತಾಡುತ್ತಾ ಇರುವಾಗ ತಾಯಿ ಹೂಂ ಹೂಂ ಅನ್ನುತ್ತಾ ನಿದ್ರೆಮಾಡಿಬಿಡುತ್ತಾಳೆ.

ಬೆಳಗ್ಗಿನಿಂದ ರಾತ್ರಿಯ ವರೆಗೆ ಒಬ್ಬಳು ತಾಯಿಯ ದಿನಚರಿ ಸಾಧಾರಣವಾಗಿ ಹೀಗೆಯೇ ಇರುತ್ತದೆಂಬುದನ್ನು ನೆನೆಯುವಾಗ, ಈ ಬಗೆಯ ನಿಸ್ವಾರ್ಥ ಜೀವನದ ತಾಯಿಯನ್ನು ಏನೆಂದು ಭಾವಿಸಬೇಕು? ಅವಳಿಗೆ ಹೇಗೆ ಕೃತಜ್ಞತೆ ಸಲಿಸಬೇಕು?

—ಎಂ. ರಂಗ ರಾವ್, ಮದ್ರಾಸು.



ನೆಲ ಮತ್ತು ಜಲಗಳ ವ್ಯವಹಾರದ ಸಂದರ್ಭದಲ್ಲಿ ವಾಟರ್ ಪ್ರೂಫ್ ಸೆಂಚೂರಿಯನ್ ಟೇಂಕ್ ಸಮುದ್ರದಲ್ಲಿ ನಿಂತಿರುವುದನ್ನು ಇಲ್ಲಿ ಕಾಣಬಹುದು.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಕಾವ್ಯ ಪ್ರಯೋಜನ

(೪ನೇ ಪುಟದಿಂದ)

ಸ್ಮೃತಿಯು ಮಾಡುವ ಕಾರ್ಯವನ್ನೇ ಸಮಾಜ ಜೀವನದಲ್ಲಿ ಕಾವ್ಯ ಮಾಡುತ್ತದೆ. ಪ್ರಾಚೀನರ ಸ್ಮೃತಿಗಳನ್ನು ಸ್ಮರಿಸಿ ಕಾವ್ಯಗಳು ನಮ್ಮ ಹೃದಯದಲ್ಲಿ ಉತ್ಸಾಹವನ್ನೂ ಕರ್ಮಣ್ಯವನ್ನೂ ಹರಿಸುತ್ತವೆ; ನಮ್ಮಲ್ಲಿ ಆತ್ಮ ಗೌರವ ಮತ್ತು ಸ್ವಾಭಿಮಾನಗಳನ್ನು ಹುಟ್ಟಿಸುತ್ತವೆ. ಕಾವ್ಯಗಳಲ್ಲಿ ನಮಗೆ ಬೇರೆ ಬೇರೆ ದೇಶಗಳ ಬೇರೆ ಬೇರೆ ಕಾಲಗಳ ವ್ಯವಹಾರಗಳ ಜ್ಞಾನವು ಲಭಿಸುತ್ತದೆ; ಇದರಿಂದ ನಮ್ಮ ಪರಸ್ಪರ ವ್ಯವಹಾರದಲ್ಲಿ ಸಹಾಯವಾಗುತ್ತದೆ. ವ್ಯಕ್ತಿಗತ ಜೀವನದಲ್ಲಿ ಗಳಿಸಲಾರದ ಅನುಭವಗಳನ್ನು ಮಾನವನು ನಾಟಕ ಮತ್ತು ಕಾದಂಬರಿಗಳಿಂದ ಪಡೆಯಬಲ್ಲನು. ಮಾನವ ವರ್ಗದ ಮನೋವಿಜ್ಞಾನವನ್ನು ಆತ ಅರಿತುಕೊಳ್ಳಲು ತೊಡಗುತ್ತಾನೆ; ಇದರಲ್ಲಿ ಅವನು ಸಾಮಾನ್ಯವಾಗಿ ಸಫಲತೆಯನ್ನೂ ಪಡೆಯುತ್ತಾನೆ.

ಕಾವ್ಯಗಳಿಂದ ನಮ್ಮ ಭಾವನೆಗಳು ಶುದ್ಧವಾಗುತ್ತವೆ; ಪುಷ್ಟಿಯಾಗುತ್ತವೆ. ನಮ್ಮ ಭಾವನಾ ಶಕ್ತಿಗೆ ಏನಾದರೂ ಸಾಮಗ್ರಿ ದೊರೆಯದೆ ಹೋದರೆ, ಅದು ಹ್ರಾಸಗೊಳ್ಳುತ್ತದೆ. ಪ್ರತಿಯೊಂದು ಇಂದ್ರಿಯ ಮತ್ತು ಶಕ್ತಿಗೆ ಸಾಕಷ್ಟು ವ್ಯಾಯಾಮವು ಬೇಕು. ಕಾವ್ಯದಿಂದ ನಮ್ಮ ಮನಸ್ಸಿಗೆ ಸುಲಭವಾದ ಒಂದು ವ್ಯಾಯಾಮ ದೊರೆಯುತ್ತದೆ. ವಾಸ್ತವಿಕ ದುಃಖಗಳನ್ನು ಅನುಭವಿಸದೆಯೇ ನಾವು ಅನುಭವಿಸುವ ದುಃಖದಿಂದ ನಮ್ಮ ಮನಸ್ಸು ಪವಿತ್ರವಾಗುತ್ತದೆ. ನಮ್ಮ ವ್ಯಕ್ತಿಗತ ಅನುಭವಗಳಲ್ಲಿ ಎಲ್ಲ ಪ್ರಕಾರದ ಭಾವಗಳೂ ಪುಷ್ಟಿಗೊಳ್ಳುವ ಸಂದರ್ಭಗಳು ಬಾರದೆ ಇರುವುದೂ ಉಂಟು. ಆದರೆ, ಕಾವ್ಯದಲ್ಲಿ ಇವೆಲ್ಲವೂ ಇರುವುವು. ಕಾವ್ಯ ಪಠನದಿಂದ ಬಾಹ್ಯ ವ್ಯಂಜಕಗಳ ಜ್ಞಾನವೂ ದೊರೆಯುವುದು. ಸಿಟ್ಟು ಬಂದಾಗ ಹಣೆ ಸರಿಗಟ್ಟುವುದು, ಕಣ್ಣುಗಳು ಕೆಂಪಾಗುವುವು, ಕೈಗಳು ನಡುಗುವುವು, ಭುಜಗಳು ಮೇಲೇಳುವುವು ಎಂದು ನಾವು ಅರಿತಿದ್ದೇವೆ. ಈ ಚಿಹ್ನೆಗಳನ್ನು ಕಂಡು, ಮಾನವ ಹೃದಯದ ಆಂತರಿಕ ಭಾವಗಳನ್ನು ನಾವು ಅರಿಯಬಲ್ಲೆವು. ಆಕಾರ ಪರಿವರ್ತನೆಗಳಿಂದ ಮಾನವೀಯ ಭಾವಗಳನ್ನು ನಾವು ಅರಿತುಕೊಳ್ಳಬಲ್ಲೆವು. ಇಷ್ಟೇ ಅಲ್ಲದೆ ನಮಗೆ ಶುದ್ಧ ಪದ ಪ್ರಯೋಗಗಳ ಅರಿವೂ ಆಗುವುದು. ಯಾವ ಸಂದರ್ಭದಲ್ಲಿ ಎಂತಹ ಪದಗಳನ್ನು ಬಳಸಬೇಕೆಂದು ನಾವು ತಿಳಿದುಕೊಳ್ಳುವೆವು. ವ್ಯಂಗ್ಯ, ಹಾಸ್ಯಾದಿಗಳಿಂದ ಯಾವಾಗ ನಮ್ಮ ಕೆಲಸ ಪೂರೈಸಬೇಕು ಯಾವಾಗ ಗಾಂಭೀರ್ಯವನ್ನುಪಯೋಗಿಸಬೇಕು ಎಂಬಿತ್ಯಾದಿಗಳು ನಮಗೆ ಗೊತ್ತಾಗುವುವು.

ನಮ್ಮ ಭಾವಗಳನ್ನು ಸ್ಪಷ್ಟವಾಗಿ ಪ್ರಕಟಪಡಿಸದಿರುವುದರಿಂದ ಅಥವಾ ಪರರ ಭಾವಗಳನ್ನು ಸರಿಯಾಗಿ ತಿಳಿದುಕೊಳ್ಳುವುದರಿಂದಲೇ ಸಮಾಜದಲ್ಲಿ ಗಲಭೆ ಜಗಳಗಳು ಉದ್ಭವಿಸಿವೆ. ಕಾವ್ಯಾನುಶೀಲನದಿಂದ ಇವೆರಡೂ ಸುಲಭವಾಗುತ್ತವೆ. ಓರ್ವ ಮಿತ್ರನ ಭ್ರಮೆಯನ್ನು ದೂರ ಮಾಡುವುದೆಂದರೆ, ಸುಲಭವಲ್ಲ; ಮಾತಿನ ಏರುಪೇರುಗಳಿಂದಲೇ ಹಲವಾರು ಪಂಚಾಯತಿಗಳು ನಿರರ್ಥಕವಾಗುತ್ತವೆ. ಕಾವ್ಯಾಭ್ಯಾಸ ಮಾಡಿದವನು ಶಬ್ದಗಳ ಶಕ್ತಿಯನ್ನು ತಿಳಿದಿರುತ್ತಾನೆ; ಯಾವ ಅರ್ಥವನ್ನು ಯಾವ ಪದಗಳಿಂದ ಸೂಚಿಸಬಹುದೆಂದೂ ಆತ ಅರಿತಿರುತ್ತಾನೆ. ಆತನಿಗೆ ಮಾನವ ಹೃದಯದ ಅರಿವು ಇರುವುದರಿಂದ ಪರರ ಮಾತುಗಳನ್ನೂ ಉತ್ತಮ ರೀತಿಯಲ್ಲಿ ಆತ ಅರ್ಥವಿಸಿಕೊಳ್ಳಬಲ್ಲನು. ತನ್ನನ್ನು ಇನ್ನೊಬ್ಬನ ಸ್ಥಾನದಲ್ಲಿಟ್ಟುಕೊಳ್ಳುವಷ್ಟು ಸೌಜನ್ಯವು ಆತನಲ್ಲಿ ಮೂಡುವುದು. ಆತನ ದೃಷ್ಟಿಕೋಣವು ವಿಶಾಲವಾಗಿರುವುದರಿಂದ ಒಂದು ವಸ್ತುವನ್ನು ಬಹುದೃಷ್ಟಿಯಿಂದೀಕ್ಷಿಸಬಹುದೆಂಬ ಸತ್ಯವನ್ನಾತನು ಕಂಡುಕೊಂಡಿರುತ್ತಾನೆ.

ಆದುದರಿಂದ ಕಾವ್ಯಾಭ್ಯಾಸವು ಜೀವನವನ್ನು ಸಫಲ, ಸಾಮ್ಯಮಯ ಮತ್ತು ಸರಲವಾಗಿಸಲು ಸಹಾಯಕವಾಗುತ್ತದೆ. ಅದು ನಿರುದ್ಯೋಗಿಯನ್ನೂ ಸುಮ್ಮನಿರಬಿಡುವುದಿಲ್ಲ; ಅವನಿಗೂ ಆನಂದವನ್ನೊದಗಿಸಿ ಮಾನವ ಜಾತಿಯು ಕಡೆಗಿರುವ ತಿರಸ್ಕಾರವನ್ನು ಕಡಿಮೆಯಾಗಿಸುತ್ತದೆ.

ಸಂಸ್ಕೃತಿ ಪ್ರಸಾರ

ಅಮೇರಿಕೆಯಲ್ಲಿ ಮೈಸೂರ ರಾಜ್ಯಪಾಲರು

ವಿವಿದೆಡೆಗಳಲ್ಲಿ ಭಾರತೀಯ ಸಂಸ್ಕೃತಿ ನೀತಿಗಳ ಬಗ್ಗೆ ಉಪನ್ಯಾಸಗಳು

ಮೈಸೂರಿನ ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರ್ ಅವರು ಅಮೇರಿಕೆಯ ಸಂಯುಕ್ತ ರಾಷ್ಟ್ರಗಳಲ್ಲಿ ಉಪನ್ಯಾಸ ಸಂಚಾರವನ್ನು ಕೈಗೊಂಡಿದ್ದು, ಅಲ್ಲಿನ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಮತ್ತು ಬೇರೆ ಬೇರೆ ಸಂಘ ಸಂಸ್ಥೆಗಳಲ್ಲಿ ತಮ್ಮ ಭಾಷಣಗಳನ್ನು ಮಾಡಿದ್ದಾರೆ. ಮಧ್ಯ ಪಶ್ಚಿಮದ ಸಭೆಯೊಂದರಲ್ಲಿ ಮಾನ್ಯ ರಾಜ್ಯಪಾಲರು ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಭಾರತದ ಪಾತ್ರವನ್ನು ಕುರಿತು ಮಾತನಾಡುತ್ತ ಭಾರತದ ತಾಟಸ್ಥ್ಯ ನೀತಿಯು ಬಗ್ಗೆ ಅದು ನಿಷ್ಕಲ ತಾಟಸ್ಥ್ಯವಲ್ಲ; ಪ್ರಪಂಚದ ಬಿಕ್ಕಟ್ಟುಗಳಿಗೆ ನೈತಿಕ ಪರಿಹಾರವನ್ನು ಕಂಡುಹಿಡಿಯಲೆಳಸುವ ಕ್ರಿಯಾತ್ಮಕ ಚೈತನ್ಯಪೂರ್ಣ ಪ್ರಯತ್ನವನ್ನು ಭಾರತವು ಮಾಡುತ್ತಿದೆ ಎಂದು ಹೇಳಿದರು. ಇದರಿಂದ, ಭಾರತದ ವಿದೇಶ ನೀತಿಯ ಬಗ್ಗೆ ಕ್ಷ ಕಿರಣ ಬೀಳುವಂತಾಗಿದೆ.

ಏಶ್ಯವು ಬಹಳ ದೊಡ್ಡದಾದ ಭೂಖಂಡವಾಗಿದ್ದು, ಅದರಲ್ಲಿ ಅನೇಕಾನೇಕ ಜನಾಂಗಗಳು ಬಾಳಿವೆ; ಅಳಿದು ಹೋಗಿವೆ ಪುನಃ ತಲೆಯೆತ್ತುತ್ತಿವೆ. ಈ ಜನಾಂಗಗಳ ರೀತಿ, ನಡೆ, ಆಚರಣೆಗಳಲ್ಲಿ ಮಾತ್ರ ಭಿನ್ನತೆಯಿರುವುದಲ್ಲದೇ ಅವರ ಸಂಸ್ಕೃತಿಯಲ್ಲೂ ವೈವಿಧ್ಯಗಳಿವೆ. ಆದುದರಿಂದ ಅಮೆರಿಕನ್ನರು ಏಶಿಯನ್ನರನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕೆ ಏಶಿಯನ್ ಜನಾಂಗಗಳ ಸಂಸ್ಕೃತಿಗಳ ನಿಕಟವಾದ ಅಧ್ಯಯನವನ್ನು ಕೈಗೊಳ್ಳಬೇಕು ಎಂದವರು ಕೇಳಿಕೊಂಡು, ಈ ರೀತಿಯ ಜ್ಞಾನವು ಆರ್ಥಿಕ ಸಹಾಯಕ್ಕಿಂತಲೂ ಅತಿ ಮೂಲ್ಯವಾದುದು ಎಂದು ಮಿನಿಸೋಟಾ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ಮಾಡುತ್ತ ಅಮೆರಿಕನ್ನರನು ವಿನಂತಿಸಿದರು.

“ವಿಶ್ವಶಾಂತಿಯ ವಿಷಯದಲ್ಲಿ ಭಾರತದ ದೃಷ್ಟಿಯು ಕ್ರಿಯಾತ್ಮಕವಾದ ಶಾಂತಿಯ ಅನ್ವೇಷಣೆಗೆ ಸುಸಂಗತವಾಗಿದೆ. ಪ್ರತಿ ಸಮಸ್ಯೆಯು ತಲೆದೋರಿದಾಗ, ಭಾರತವು ಭೀತಿ ಮತ್ತು ಪೂರ್ವದೂಷಣೆಗಳಿಂದ ದೂರವಾದ ಸುಯೋಗ್ಯವಾದ ವಿಧಾನದಲ್ಲಿ ಅಂತಹ ಸಮಸ್ಯೆಗಳಿಗೆ ಉತ್ತರವನ್ನು ನಿರ್ಧರಿಸುತ್ತದೆ. ಆದುದರಿಂದಲೇ ಭಾರತವು ವಿಶ್ವಶಾಂತಿಯ ವೃಕ್ಷಕ್ಕೆ ಕೊಡುವ ಪ್ರತಿಬಿಂದು ಜಲವೂ ಸದ್ವಿನಿಯೋಗವಾಗುತ್ತದೆ. ಈ ದೂರ ದೃಷ್ಟಿಯು ಭಾರತದ ಅಮೋಘ ತತ್ವಶಾಸ್ತ್ರ, ಧರ್ಮ ಹಾಗೂ ನೀತಿಗಳಿಂದಾದ ಸಹಜ ಬೆಳವಣಿಗೆ. ಇಂತಹ ಶಾಂತಿ ಮಂತ್ರವು ಭಾರತದ ಹೊಸ ಸಂಶೋಧನೆಯಲ್ಲ; ಕ್ರಿಸ್ತಪೂರ್ವ ಆರನೆಯ ಶತಮಾನದಲ್ಲಿ ವಿಶ್ವವಿಖ್ಯಾತ ಬೌದ್ಧ ಧರ್ಮ ಸಂಸ್ಥಾಪಕ ಗೌತಮ ಬುದ್ಧನು ಅವತರಿಸಿದ ಕಾಲದಿಂದಲೂ ಭಾರತವು ಶಾಂತಿ ಮಂತ್ರವನ್ನು ಪಠಿಸತೊಡಗಿದೆ. ಗೌತಮನು ಬೋಧಿಸಿದ ಮೂಲ ತತ್ತ್ವಗಳಲ್ಲಿ ಅಹಿಂಸಾ ತತ್ತ್ವವು ಅತ್ಯಮೂಲ್ಯವಾದುದು.

“ಗಾಂಧೀಜಿಯವರು ಅಹಿಂಸಾ ತತ್ತ್ವಗಳಿಗೂ ಉದ್ದೇಶ ಮತ್ತು ಸಾಧನೆಗಳ ಪರಿಶುದ್ಧತೆಗೆ ಬದ್ಧರಾಗಿರಬೇಕೆಂದು ಒತ್ತಾಯಪಡಿಸಿದರು. ಭಾರತಕ್ಕೆ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟ ವಿಧಾನವು “ನಭೂತೋ ನಭವಿಷ್ಯತಿ” ಎಂಬ ರೀತಿಯದು. ಉದ್ದೇಶಪೂರ್ವಕವಾಗಿ ರಕ್ತಪಾತವನ್ನು ತ್ಯಜಿಸಿದ, ಎಲ್ಲ ಬಗೆಯ ದ್ವೇಷದಿಂದಲೂ ಮುಕ್ತವಾದ ವಿಶಿಷ್ಟ ಕ್ರಾಂತಿಯೊಂದನ್ನು ಗಾಂಧೀಜಿ ನಡೆಸಿ, ಅದರಲ್ಲಿ ಅವರು ಕೃತಕೃತ್ಯರಾದರು. ಈ ಕಾರಣದಿಂದಲೇ ಭಾರತಕ್ಕೆ ಶಾಂತಿ, ಅಹಿಂಸೆಗಳ ಮೇಲೆ ವಿಶಿಷ್ಟವಾದ ಗೌರವಾದರಗಳಿವೆ—”ಎಂದು ಭಾರತದ ಬಗ್ಗೆ ಶ್ರೀ ಜಯಚಾಮರಾಜ ಒಡೆಯರ್ ತಮ್ಮ ಭಾಷಣಗಳಲ್ಲಿ ಉಲ್ಲೇಖಿಸಿರುವರು.

ಕಾವ್ಯಾಭ್ಯಾಸವು ನಿರಾಪತ್ತಿಜನಕ ವ್ಯಸನವಾಗಿದೆ. ಅದು ಮಾನವನ ಜೀವನವನ್ನೂ ಜೀವನಯೋಗ್ಯವಾಗಿ ಮಾಡುತ್ತದೆ. ಆದುದರಿಂದಲೇ ಬಲ್ಲವರು ಹೀಗೆ ಹೇಳುತ್ತಾರೆ:

ಕಾವ್ಯಶಾಸ್ತ್ರ ವಿನೋದೇನ ಕಾಲೋ
ಗಚ್ಛತಿ ಧೀಮತಾಂ
ವ್ಯಸನೇನ ಚ ಮೂರ್ಖಾಣಾಂ ನಿದ್ರಯಾ
ಕಲಹೇನವಾ।

[ಕಾವ್ಯ ಶಾಸ್ತ್ರಾದಿ ವಿನೋದಗಳಿಂದ ಜ್ಞಾನಿಗಳು ತಮ್ಮ ಸಮಯವನ್ನು ತೆಗೆಯುತ್ತಾರೆ; ಮೂರ್ಖರು ದುರ್ವ್ಯಸನ, ನಿದ್ರೆ, ಕಲಹ ಮೊದಲಾದುವುಗಳಲ್ಲಿ ನಿರತರಾಗಿದ್ದು ಸಮಯವನ್ನು ವ್ಯರ್ಥವಾಗಿ ಕಳೆಯುತ್ತಾರೆ.]

— ಗೋರಾ.

ನೋಟೀಸು.

ಕುಂದಾಪುರ ಪಂಚಾಯ್ತ ಬೋರ್ಡು ಕೋರ್ಟಿನಲ್ಲಿ

O. S. No. 97/1958.

ಸಲಾಫ ನರಸಿಂಹ ಸೆರೆಗಾರ-ವಾದಿ.

ನರಸಿಂಹ ಸೆಟ್ಟಿ-ಪ್ರತಿವಾದಿ.

ಉಡುಪಿ ತಾಲ್ಲೂಕು ಹಾಲಾಡಿ ಗ್ರಾಮದಲ್ಲಿರುವ ಸುಬಂಣ ಸೆಟ್ರ ಅಳಿಯ ಪ್ರತಿವಾದಿ ನರಸಿಂಹ ಸೆಟ್ರೀಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ಮೇಲ್ಕಂಡ ದಾವೆಯಲ್ಲಿ ಪ್ರತಿವಾದಿಯು ವಾದಿಗೆ ತಾರೀಕು 27-12-1956ರಲ್ಲು ರೂಪಾಯಿ 30-0-0 ಮುವತ್ತಕ್ಕೆ ಬರೆದು ಕೊಟ್ಟಿದ್ದ ಆಂಡ ನೋಟಿನ ಬಾಬ್ತು ಅಸಲು ಬಡ್ಡಿ ಮೊಬಲಗು ರೂ34-9-0ಕ್ಕೆ ಸದ್ರಿ ಕೋರ್ಟಿನಲ್ಲಿ ನಿಮ್ಮ ಮೇಲೆ ದಾಕಲು ಮಾಡಿದ ದಾವೆಯು ತಾ. 3-6-1959ಕ್ಕೆ ಇಡೋಣಾಗಿಯದೆ. ಈ ಬಾಬಿನಲ್ಲಿ ಆಕ್ಷೇಪಗಳೇನಾದರೂ ಇದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಸ ಮಧ್ಯಾಹ್ನ 2½ ಗಂಟೆ ಸಮಯದಲ್ಲಿ ಹಾಜರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ನಂಬ್ರವು ತನ್ನಿಯಂತ ತೀರ್ಮಾನಿಸಲ್ಪಡಲಾದೀತು. ಎಂತ ಈ ಮೂಲಕ ತಿಳಿಯಪಡಿಸೋಣಾಗಿಯದೆ.

ಕೆ. ಗಣಪತಿ ಸೇಟ್.

ಪ್ರೆಸಿಡೆಂಟ್, ಪಂಚಾಯ್ತ ಬೋರ್ಡ ಕುಂದಾಪುರ. ಮೊಕ್ಕಾಂ ಕುಂದಾಪುರ, ತಾ13-5-1959

Approved by the Text Book Committee of Madras, for non-detailed study in higher Forms (vide Page 7, Fort St George Gazette, Part I—B dated 4—5...955)

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು ೧೫೮ ಬೆಲೆ: ರೂ. ೧ : ೨೫

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು

(ಡಾ. ಕೆ. ಎಲ್. ಐತಾಳ, ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಥಾ ವಿಹಾರ

(೨ನೇ ಪುಟದಿಂದ)

ರಿಗೂ ಪೇಟೆಯ ಜೀವನ ಖಂಡಿತ ಹಿಡಿಸುವುದು ನೋಡಿ. ಮುಂದಿನ ಮಕ್ಕಳಿಗೆಲ್ಲ ಹೆಚ್ಚಿನ ಶಿಕ್ಷಣ ದೊರಕಬೇಕಾದರೆ ಪೇಟೆ ಸೇರಲೇಬೇಕಾಗುವುದು. ಅಂತಿರುವಾಗ ಈಗಲೇ ಹೋದರೆ ನಷ್ಟವೇನು? ಚಿಕ್ಕದಾದೊಂದು ವ್ಯಾಪಾರವನ್ನೂ ನಡೆಸಿದರೆ ಆದಾಯವೂ ಹೆಚ್ಚುವುದು" ಎಂದು ಹೇಳಿ, ಏನು ಉತ್ತರ ಬರುವುದೆಂದು ಪತಿಯ ಮುಖವನ್ನೇ ಪ್ರತೀಕ್ಷಿಸತೊಡಗಿದಳು ಶಾಲಿನಿ.

ಆಕೆಯ ಮುಖವನ್ನೇ ನೋಡುತಿದ್ದ ಶೇಖರನಿಂದ ಇನ್ನು ಹೆಚ್ಚು ವಾದಿಸಲಾಗಲಿಲ್ಲ. ಆಕೆಯ ಸೌಂದರ್ಯಕ್ಕೆ, ವಿನಯಕ್ಕೆ ಮನಸೋತ ಶೇಖರ ಪೇಟೆ ಸೇರುವ ನಿಶ್ಚಯವನ್ನು ಮಾಡುತ್ತಾ ಹೇಳಿದ "ಪ್ರಿಯೇ, ನೀನಂದಂತೇ ನಗರಕ್ಕೇ ಹೋಗೋಣ. ಆದರೆ ನಾನು ಕೇಳುವ ಒಂದು ಕೆಲಸವನ್ನು ನೀನು ಖಂಡಿತ ಮಾಡುವೆಯಾ?"

"ಖಂಡಿತವಾಗಿಯೂ ಮಾಡುವೆನು." ಧೈರ್ಯದಿಂದ ಶಾಲಿನಿಯೆಂದಳು.

"ನೀನು ಕಳೆದವರ್ಷ ೫ನೆ ಫೋರ್ಮಿನಲ್ಲಿ ಉತ್ತೀರ್ಣಳಾಗಿರುವೆಯಷ್ಟೆ?" ಪತ್ನಿಯು ೬ನೆ ಫೋರ್ಮಿನ ತನಕ ಕಲಿತಿದ್ದರೆ ತನಗೊಂದು ಹೆಮ್ಮೆ ಎಂದು ತಿಳಿದಿದ್ದ ಶೇಖರನು ಪ್ರಶ್ನಿಸಿದ.

ಶಾಲಿನಿಗೆ ಯಾಕೆ ಕೇಳಿದನೆಂದೇ ತಿಳಿಯಲಿಲ್ಲ. ಗಡಿಬಿಡಿಯಿಂದ ಕೇಳಿದಳು "ಹೌದು, ಯಾಕೆ ಕೇಳಿದಿರಿ?"

"ಈ ವರ್ಷ ಮುಂದಿನ ಕ್ಲಾಸಿಗೆ ಸೇರಲೇಬೇಕು" ಆಕೆಯ ಕೋಮಲವಾದ ಕೈಗಳನ್ನು ಮೆಲ್ಲನೆ ಅದುಮುತ್ತಾ ಶೇಖರನೆಂದ.

ಶಾಲಿನಿಗೆ ಇಷ್ಟುಬೇಗ ತನ್ನಿಷ್ಟ ಈ ರೀತಿಯಾಗಿ ಕೈಗೂಡುವುದೆಂದು ತಿಳಿದೇ ಇರಲಿಲ್ಲ. ಸಂತಸದಿಂದ ಒಮ್ಮೆಲೇ ತನ್ನೆರಡು ಕೈಗಳಿಂದಲೂ ಆತನ ಭುಜಗಳನ್ನು ಒತ್ತಿಹಿಡಿಯುತ್ತಾ ಮುಖವರಳಿಸಿ ಕೇಳಿದಳು "ನಿಜವಾಗಿಯೂ ಶಾಲೆಗೆ ಸೇರಿಸುವಿರಾ?— ಅತ್ತೆಯವರು ಇದಕ್ಕೊಪ್ಪುವರೇ?"

'ನಿನಗೇಕೆ ಅದರ ಗೊಡವೆ? ಅದೆಲ್ಲಾ ಮಾಡುವವನು ನಾನಲ್ಲವೆ? ನಿನಗೆ ಕಲಿಯುವ ಕೆಲಸ ಮಾತ್ರ" ಶೇಖರನೆಂದ.

ಶಾಲಿನಿಗೆ ಆನಂದಭರದಲ್ಲಿ ಏನೆನ್ನಬೇಕೆಂದೇ ತಿಳಿಯಲಿಲ್ಲ. ಒಮ್ಮೆಲೇ ಮಗುವಿನಂತೆ ಶೇಖರನ ಮೇಲೆ ಬಿದ್ದು ತಬ್ಬಿಕೊಂಡಳು.

○○ ○○ ○○

ನಾಲ್ಕು ತಿಂಗಳುಗಳು ಕಳೆದಿವೆ. ಶೇಖರನು ಪೇಟೆಯ ಸಮೀಪ ಚಿಕ್ಕ ಹೊತ್ತಿಲೊಂದನ್ನು ಪಡಕೊಂಡಿದ್ದಾನೆ. ಪೇಟೆಯಲ್ಲಿ ಚಿಕ್ಕದಾದೊಂದು ಅಂಗಡಿಯನ್ನೂ ತೆರೆದಿದ್ದಾನೆ. ಶಾಲಿನಿಯು ಮೊದಲಿನ ಹೈಸ್ಕೂಲಿನಲ್ಲಿಯೇ VI ಫೋರ್ಮಿನಲ್ಲಿ ಕಲಿಯುತಿದ್ದಾಳೆ. ಬಿಡುವಿನ ಸಮಯದಲ್ಲಿ ಅತ್ತೆಯ ಕೆಲಸಗಳಲ್ಲಿ ನೆರವಾಗುತಿದ್ದಾಳೆ. ಗಂಡನ ವ್ಯವಹಾರಗಳಲ್ಲಿ, ಲೆಕ್ಕಪತ್ರಗಳಲ್ಲಿ ಸಹಕರಿಸುತಿದ್ದಾಳೆ. ಆತನಿಗೆ ಬೇಸರವಾಗದಂತೆ ಸದೈವ ಯತ್ನಿಸುತಿದ್ದಾಳೆ. ಆಕೆಯ ಸಂತೋಷವೇ ಶೇಖರನ ಜೀವನದ ಬೆಳಕಾಗಿದೆ.

—ರಾಧಾಕೃಷ್ಣ ಯಳಚಿತ್ತಾಯ,
ವಿಶಾರದ.

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯ ಬಹುದು!

ಕಿವಿಯ ಬಳಿಯಲ್ಲೇ ಪ್ರಾರ್ಥನೆ

ಒಬ್ಬಾಕೆ ನೀಗ್ರೋ ಜನಾಂಗದ ಕಪ್ಪು ಹುಡುಗಿಯ ತಾಯಿ ಒಬ್ಬ ಶ್ರೀಮಂತ ಆಂಗ್ಲೇಯರಲ್ಲಿ ಚಾಕರಿ ಮಾಡಿಕೊಂಡಿದ್ದಳು. ಒಂದು ದಿನ ಆ ಆಂಗ್ಲೇಯನ ಹತ್ತು ವರ್ಷದ ಕುಮಾರ ಈ ಒಂಭತ್ತು ವರ್ಷದ ನೀಗ್ರೋ ಬಾಲಿಕೆಯೊಡನೆ ಪ್ರಶ್ನಿಸಿದನು: "ನಿನಗೆ ಪ್ರಾರ್ಥನೆ ಮಾಡಲು ತಿಳಿದಿದೆಯೆ?"

ಹುಡುಗಿಯು ದೃಢವಿಶ್ವಾಸದಿಂದ ತಲೆದೂಗುತ್ತ ಹೇಳಿದಳು: ಮತ್ತೆ? ನಮಗಂತೂ ಪ್ರಾರ್ಥನೆ ಮಾಡದೆ ರಾತ್ರೆ ನಿದ್ದೆಯೇ ಬರಲಾರದು."

ಆಂಗ್ಲೇಯ ಬಾಲಕನು ಪುನಃ ಕೇಳಿದನು: "ಆದರೆ, ನಿಮ್ಮ ಪ್ರಾರ್ಥನೆಯನ್ನು ದೇವರು ಬಿಳಿಯರಾದ ನಮ್ಮ ಪ್ರಾರ್ಥನೆಯನ್ನು ಕೇಳುವಷ್ಟು ಶೀಘ್ರವಾಗಿ ಕೇಳುತ್ತಾನೆಯೆ?"

ಹುಡುಗಿಗೆ ಈ ಪ್ರಶ್ನೆಯೇ ಅರ್ಥವಾದಂತೆನಿಸಲಿಲ್ಲ. ಆವಳು ಒಂದು ಕ್ಷಣ ಅತ್ತಿತ್ತ ನೋಡಿ ಬಳಿಕ ಮೌನವನ್ನು ಭೇದಿಸಿ ಉತ್ತರಿಸಿದಳು: "ನಾವು ನೇರಾಗಿ ಪರಮಾತ್ಮನ ಕಿವಿಯಲ್ಲೇ ಪ್ರಾರ್ಥನೆ ಮಾಡುತ್ತೇವೆ; ಕಣ್ಣಿನಲ್ಲಿ ಅಲ್ಲ!"

ಮೆಚ್ಚುಗೆಯಾದ ಉಪನ್ಯಾಸ

ಸುಪ್ರಸಿದ್ಧ ಲೇಖಕರಾದ ಶ್ರೀ ಮಾರ್ಕ್ ಟ್ವೇನರು ವಿನೋದಪಟುವಾಗಿದ್ದರು, ಆದರೆ, ಇವರ ಒಬ್ಬ ಮಿತ್ರ ಇವರಿಗಿಂತಲೂ ವಿನೋದಪ್ರಿಯರಾಗಿದ್ದರು. ಒಂದು ದಿನ, ಒಂದು ಸಭೆಯಲ್ಲಿ ಉಪನ್ಯಾಸ ಮಾಡಲು ಈ ಇರ್ವರು ಮಿತ್ರರೂ ಆಮಂತ್ರಿಸಲ್ಪಟ್ಟರು. ತನ್ನ ಸರದಿ ಬಂದಾಗ ಶ್ರೀ ಟ್ವೇನರು ತಮ್ಮ ವಿನೋದಪೂರ್ಣ ಭಾಷಣದಲ್ಲಿ ಒಂದೆರಡು ತಾಸುಗಳ ವರೆಗೆ ಭಾಷಣ ಬಿಗಿದರು. ಜನರೆಲ್ಲರೂ ಇವರ ಉಪನ್ಯಾಸದಿಂದ ಚಕಿತರಾದಂತೆ ಕಂಡಿತು. ಇವರ ನಂತರ ಅವರ ಮಿತ್ರರ ಪಾಳಿ ಬಂದಿತ್ತು. ಇವರು ಎದ್ದು ನಿಂತು ಒಂದು ಕ್ಷಣ ಅನಂತ ಸಭಾ ಸದರತ್ತ ದೃಷ್ಟಿ ಹರಿಸಿದರು: ಮತ್ತು ಗಂಭೀರವಾಗಿ ಭಾಷಣ ಮಾಡತೊಡಗಿದರ: "ಮಹಾಶಯರೇ, ನಾವು ಸಭೆಗೆ ಬರುವುದಕ್ಕೆ ಮೊದಲು ಇಲ್ಲಿ ನನ್ನ ಭಾಷಣವನ್ನು ಮಿತ್ರರಾದ ಟ್ವೇನರೂ ಅವರ ಭಾಷಣವನ್ನು ನಾನೂ ಮಾಡಬೇಕೆಂದು ನಿರ್ಧರಿಸಿಕೊಂಡು ಬಂದಿದ್ದೆವು. ಅದರಂತೆ ಈಗಾಗಲೇ ನನ್ನ ಮಿತ್ರರು ನನ್ನ ಭಾಷಣವನ್ನು ಮಾಡಿ ಮುಗಿಸಿದ್ದಾರೆ ಈಗ ಅವರ ಭಾಷಣವನ್ನು ನಾನು ಮಾಡಬೇಕಾಗಿ ಬಂದಿದೆ. ಆದರೆ, ದುರ್ದೈವ ವಶದಿಂದ ಅವರ ಭಾಷಣದ ಹಸ್ತಪ್ರತಿಯನ್ನು ನಾನು ಎಲ್ಲಿಯೋ ಕಳೆದುಕೊಂಡಿದ್ದೇನೆ. ಆದುದರಿಂದ ನಾನು ಏನೊಂದನ್ನು ಆಡಲೂ ಈಗ ಅಸಮರ್ಥನೆಂದು ಹೇಳಿ ನನ್ನ ಸ್ಥಾನವನ್ನು ಸೇರುತ್ತೇನೆ."

ಜನಸಂದಣಿಯಿಂದ ಕೈಚಪ್ಪಾಳೆಯ ಭೋರೀರವವು ಕೇಳತೊಡಗಿತು. ಅವರಿಗೆ ಶ್ರೀ ಟ್ವೇನರ ಮಾತುಗಳಿಗಿಂತಲೂ ಅವರ ಮಿತ್ರರ ಉಪನ್ಯಾಸವೇ ಮೆಚ್ಚುಗೆಯಾದಂತೆ ಭಾಸವಾಯಿತು!

ಬಟ್ಟಿಗಳಿಗೆ ಔತಣ

ವಿಖ್ಯಾತ ನಾಟ್ಯಕಾರ ಬರ್ನಾರ್ಡ ಶಾರಿಗೆ ಒಂದು ಬಾರಿ ಒಬ್ಬ ಮಹಿಳೆಯ ಮನೆಯಲ್ಲಿ ಒಂದು ರಾತ್ರಿಯ ಭೋಜನಕೂಟಕ್ಕೆ ಆಮಂತ್ರಣ ಬಂದಿತು. ಶಾರಿಗೆ ಅಂದು ಎಲ್ಲಿಗೋ ಹೋಗಬೇಕಾಗಿತ್ತು, ಹಿಂದಿರುಗಿ ಬರುವಾಗ ತುಂಬ ತಡವಾಗುವ ಸಂಭವವಿದ್ದುದರಿಂದ, ಅವರು ಕ್ಷಮೆ ಬೇಡಿದರು. ಆದರೆ, ಮಹಿಳೆ ಬಿಡದೆ, ಎಷ್ಟು ತಡವಾದರೂ ತೊಂದರೆಯಿಲ್ಲ; ನೀವು ಪೇಟೆಯಿಂದ ಹಿಂತಿರುಗಿದೊಡನೆಯೇ ನಮ್ಮಲ್ಲಿಗೇನೇ ಬಂದು ಬಿಡಿರಿ" ಎಂದು ಆಗ್ರಹಪಡಿಸಿದಳು.

ಶಾ ಏನೂ ಮಾಡಲಾರದೆ ತನ್ನ ಕೆಲಸ ಮುಗಿದ ನಂತರ ನೇರಾಗಿ ಮಹಿಳೆಯ ಮನೆ ಸೇರಿದರು. ಮಹಿಳೆ ಅವರನ್ನು ಸ್ವಾಗತಿಸುತ್ತ ಅವರ ಬಟ್ಟೆಗಳತ್ತ ದೃಷ್ಟಿ ಹಾಯಿಸಿ ಹೇಳಿದಳು: ತಾವು ಸಂಜೆಯ ತೊಡುಗೆಗಳನ್ನು ತೊಟ್ಟುಕೊಳ್ಳದೇನೇ ಇಲ್ಲಿ ಬಂದುದು ನಾಚಿಕೆಯ ವಿಷಯ" ಎಂದಳು.

ಶಾರು ತನ್ನ ತಪ್ಪಿಗಾಗಿ ಕ್ಷಮೆ ಬೇಡಿ ಹೊರ ಬಂದರು. ಹತ್ತು ಮಿನಿಟುಗಳಲ್ಲಿ ಅವರು ಸಂಧ್ಯಾಕಾಲದ ಬಟ್ಟೆ ತೊಟ್ಟು ಪುನಃ ಅಲ್ಲಿ ಕಾಣಿಸಿಕೊಂಡಾಗ ಮಹಿಳೆಯ ಆನಂದಕ್ಕೆ ಮಿತಿಯೇ ಇರಲಿಲ್ಲ. ಶಾ ಎಲ್ಲರಂತೆಯೇ ತಾನೂ ಒಂದು ಕುರ್ಚಿಯಲ್ಲಿ ಕುಳಿತರು. ಮೇಜಿನ ಮೇಲಿದ್ದ ಐಯಿಸ್ಕ್ರೀಮಿನ ಲೋಟೆಯನ್ನು ಎತ್ತಿ ಚಮಚದಿಂದ ಎಲ್ಲರೂ ಹೀರುತಿದ್ದರೆ, ಶಾರವರು ಚಮಚದಿಂದ ತಮ್ಮ ಬಟ್ಟೆಯ ಮೇಲೆ ಎರಚಲಾರಂಭಿಸಿದರು.

ಶಾರವರ ಈ ಕೆಲಸದ ಅರ್ಥ ಯಾರ ಮನಸ್ಸಿಗೂ ಬರಲಿಲ್ಲ. ಅವರೆಲ್ಲರೂ ಶಾರನ್ನೇ ನೆಟ್ಟ ನೋಟಗಳಿಂದ ನೋಡತೊಡಗಿದರು. ಆಗ ಶಾ ಹೇಳತೊಡಗಿದರು: "ನನ್ನ ಪ್ರೀತಿಯ ಬಟ್ಟೆಗಳೆ, ಸತ್ಯ ಹೇಳುವುದಾದರೆ, ಈ ಆಮಂತ್ರಣ ನನಗಲ್ಲ; ನಿಮಗೆ. ಆದುದರಿಂದ, ಈ ಐಯಿಸ್ಕ್ರೀಮನ್ನು ನಿಮಗೇನೇ ಕುಡಿಸುತಿದ್ದೇನೆ; ತಿನ್ನಿರಿ, ತಿನ್ನಿರಿ."

ಇಷ್ಟು ಹೇಳುತ್ತಲೇ ಅವರು ತನ್ನನ್ನು ಆಮಂತ್ರಿಸಿದ ಮಹಿಳೆಯನ್ನು ನಮಸ್ಕರಿಸುತ್ತ ಪೇಟೆಗೆ ಹೊರಬಂದರು.

ಯೋಗ್ಯ ಪರಿಹಾರ

ಶಾಲೆಗೆ ತೆರಳುವ ಸತೀಶ ತನ್ನ ತಾಯಿಯ ಬಳಿಗೆ ಬಂದು ಹಠಹಿಡಿದು ಹೇಳತೊಡಗಿದ: "ಅಮ್ಮಾ, ನನಗೆ ಶಾಲಾ ಸಂಬಳವನ್ನು ಇಂದೇ ತೆರಬೇಕು; ಇಲ್ಲವಾದರೆ, ಅಧ್ಯಾಪಕರು ದಿನವಿಡಿ ಬಿಸಿಲಿನಲ್ಲಿ ನಿಲ್ಲಿಸುವರು."

ತಾಯಿ ಯಾವ ಚಿಂತೆಯನ್ನೂ ತೋರಿಸದೇನೇ ಉತ್ತರಿಸಿದಳು: "ಚಿಂತೆಯಿಲ್ಲ; ನಿಲ್ಲಿಸಲಿ ಅದಕ್ಕೇನಂತೆ! ನಿನಗೆ ನಾಸಿಂದು ಕೊಡೆ ತೆಗೆದುಕೊಂಡು ಹೋಗಲು ನೆನಪು ಮಾಡುತ್ತೇನೆ, ಏನೂ."

ಬಾಲದ ಬಾಯಿ ಎಲ್ಲಿದೆ?

ನಾಯಿ ಬಾಲವನ್ನು ಹಿಡಿಯಲು ಪ್ರಯತ್ನಿಸುತಿದ್ದ ತನ್ನ ಕಿರಿಯ ಮಗುವನ್ನು ತಾಯಿ ತಡೆದು ಹೇಳಿದಳು: "ಮಗೂ, ನಾಯಿಯ ಬಾಲ ಹಿಡಿಯ ಬೇಡ; ಕಡೆಗೆ ಅದು ಕಚ್ಚಿ ಬಿಟ್ಟೀತು!"

"ಅಮ್ಮಾ, ಬಾಲದ ಬಾಯಿ ಎಲ್ಲಿದೆ?" ಮಗು ಮುಗ್ಧವಾಗಿಯೇ ಕೇಳಿ ಬಿಟ್ಟಿತು!



ತಾಸಿಗೆ ೧೫೦೦ ಮೈಲು ದೂರವೋಡಬಲ್ಲ ಆಕಾಶಗಾಮಿ ಜೆಟನ್ನು ತಯಾರಿಸಲು ಅಮೆರಿಕೆಯು ಮಾದರಿ ತಯಾರಿಸಿ ಕಾರ್ಯೋನ್ಮುಖವಾಗಿದೆ.


ಕುಮಾರಿ ಬಿಲ್ಲೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & Co. (N. J.) CALCUTTA—40
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

NAVAYUGA
REGD. NO. M. 3619

UDIPI, THURSDAY
28--5--1959

LICENSE NO. 31
Licensed to Post without Prepayment

ರಾಮನಾಮ

“ರಾಮ”ಎಂದರೆ ಯಾರೆಂದು ತಿಳಿದಿದ್ದೀರಿ?

ಅವನು ಬರಿಯ ರಾಮನಲ್ಲ, ಸೀತಾಪತಿಯೂ ದಾಶರಥಿಯೂ ಅಲ್ಲ; ಅನಾದಿಯೂ ಅನಂತನೂ ಅಭವನೂ ಆಗಿದ್ದಾನೆ.

ಮಹಾತ್ಮಾ ಗಾಂಧಿಯವರು ಹಿಂದೂ ಧರ್ಮವನ್ನು ಉದ್ದೇಶಿಸುತ್ತ, “ಅದೊಂದು ಇತಿಮಿತಿಯಿಲ್ಲದ, ಅತ್ಯಮೂಲ್ಯ ಬೆಲೆವುಳ್ಳಂತಹ ರತ್ನವಿಶೇಷಗಳನ್ನು ಹೊಂದಿರುವ ಬೃಹತ್ ಸಾಗರವೇ ಅನ್ನಬಹುದು. ನೀವು ಎಷ್ಟು ಆಳಕ್ಕೆ ಆ ಹಿಂದೂ ಧರ್ಮ ಸಾಗರದಲ್ಲಿ ಮುಳುಗುತ್ತೀರೋ ಅಷ್ಟೇ ಹೆಚ್ಚು ರತ್ನಸಮುದಾಯಗಳನ್ನು ಪಡೆಯಬಲ್ಲಿರಿ. ತಿಳಿಯಲೆಳಸಿದಷ್ಟು ವಿಷಯ ವಿಶೇಷದಿಂದ ಅದು ಆಲಿಪ್ತವಾಗಿದೆ” ಎನ್ನುತ್ತಾರೆ. ಅದರರ್ಥ ಇಷ್ಟೇ. ಹಿಂದೂ ಧರ್ಮವೆಂದರೆ ಮೊಗೆದಷ್ಟು ಬತ್ತದ ರತ್ನಪೂರ್ಣ ಸಾಗರ. ಆಗ ಅದೇ ಅರ್ಥ ಅರ್ಥವಿಕಲ್ಪಡುತ್ತದೆ. ನಂತರ ಬಾಪೂಜೀಯವರು ಹಿಂದೂ ಧರ್ಮದ ಒಂದು ವಿಶಿಷ್ಟ ಆಚಾರವನ್ನು ವಿವರಿಸುತ್ತ “ಹಿಂದೂ ಧರ್ಮದ ಒಂದು ವಿಶೇಷ ತೆರನ ಆಚಾರವೆಂದರೆ ಆ ಧರ್ಮದಲ್ಲಿ ಪರಮಾತ್ಮನು ಅನೇಕ ಹೆಸರುಗಳಿಂದ ಕರೆಯಲ್ಪಡುತ್ತಾನೆ.” ರಾಮ, ಕೃಷ್ಣ, ಗಣಪತಿ, ಮುಕುಂದ, ಶ್ರೀನಿವಾಸ, ರಘುನಾಥ ಇ. ಇ. ನಮ್ಮ ಧರ್ಮದಲ್ಲಿನ ದೇವರುಗಳಲ್ಲವೆ? ಆದರೆ ಈ ತೆರನ ವೇಶಪರ ಮತದಲ್ಲಿ ಕಾಣಲೆಡೆಯಿದೆಯೆ? “ರಾಮ, ಕೃಷ್ಣ ಇತ್ಯಾದಿ ದೇವರುಗಳು ಮಾನವರೂಪದಲ್ಲಿ ಅವತಾರ ಹೊಂದಿದರು. ಆದರೂ ಅವರನ್ನು ದೇವರೆಂದು ಹಿಂದುಗಳ ನಂಬಿಕೆ ಹೇಳುತ್ತದೆ. ರಾಮನು ದಶರಥನ ಮಾನಸಪುತ್ರನಾಗಿ, ಹುಟ್ಟಿದನೆಂದು ಕತೆ ಹೇಳುತ್ತದೆ. ಇದು ಎಲ್ಲರಿಗೂ ಗೊತ್ತು. ಇವರುಗಳನ್ನು ಭಕ್ತಿಪೂರ್ವಕವಾಗಿ ಆರಾಧಿಸಿ ಹಿಂದುಗಳು ಮುಕ್ತಿಯನ್ನು ಪಡೆಯಬಲ್ಲರು. ಇದೇ ರೀತಿಯಲ್ಲಿ ಕೃಷ್ಣಪರಮಾತ್ಮನನ್ನೂ ಆರಾಧಿಸಬಹುದು ಅಲ್ಲೂ ಮುಕ್ತಿ ಸಿಗದಿಲ್ಲ.

ಪರಮಾತ್ಮನಿಗೆ ಅದೆಷ್ಟೊ ನಾಮಾವಳಿಗಳಿರಲಿ, ನಾನು ಆ ಎಲ್ಲಾ ಹೆಸರುಗಳು ಒಂದೇ ಎಂದು ತಿಳಿಯುತ್ತೇನೆ. ಏಕೆಂದರೆ ಆ ಹೆಸರುಗಳು ಸಂಕೇತಾರ್ಥವಾಗಿ ಇಡಲ್ಪಟ್ಟಿವೆ. ದೇವರು ಒಬ್ಬನೆ.” ಎಂದು ಗಾಂಧೀಜಿಯವರು ಕೆಲವು ಸಂತರ ಅಭಿಪ್ರಾಯವನ್ನು ಮನ್ನಿಸುತ್ತಾರೆ.

“ಆದ್ದರಿಂದ, ನನ್ನ ದೃಷ್ಟಿಕೋಣಕ್ಕೆ ಸೀತಾಪತಿಯೂ ದಾಶರಥಿಯೂ ಎನಿಸಿದ ಶ್ರೀರಾಮಚಂದ್ರನೂ, ಅವನ ಹೆಸರೂ ನಮ್ಮ ಹೃದಯದಲ್ಲಿ ಕೆತ್ತಲ್ಪಟ್ಟೀತು ಎಂದಾದರೆ ಅದರಿಂದ ನಮ್ಮ ಶಾರೀರಿಕ ಹಾಗೂ ಮಾನಸಿಕ ರೋಗ ನಿವಾರಣೆಯಾಗುವುದರಲ್ಲಿ ಸಂದೇಹವಂತೂ ನನಗೆ ಕಾಣಲಾರದು.

I laugh within myself when someone objects that Rama or the chanting of Ramanama is only for hindus; how musslims can take part in it? ಎಂದೂ ಸಂತ ಕಬೀರರ ಆಲೋಚನೆಯನ್ನೇ ಹೇಳುತ್ತಾರೆ ಗಾಂಧೀಜಿ. ಅದರ ಭಾವ, “ರಾಮ ರಹೀಮರು ಒಂದೆ” ಎಂದು. ನನಗೇಕೊ ನಗು ಬರುತ್ತಿದೆ. ರಾಮ ನಾಮವು ಅಥವಾ ನನ್ನ ರಾಮನು ಹಿಂದುಗಳಿಗಾಗಿ ಮಾತ್ರ ಎಂದಾದರೆ ಉಳಿದ ಮುಸ್ಲಿಂ, ಇನ್ನಿತರ ಜನಾಂಗದವರು ಅದರಲ್ಲಿ ಹೇಗೆ ಭಾಗವಹಿಸಬಲ್ಲರು? ಹಾಗಾಗಲು ಅವರಿಗೆ ಎಡೆ ಕಲ್ಪಿಸಿಕೊಡಬೇಕು. ಎಂದಾದ ಮೇಲೆ ರಾಮನೂ ಒಂದೇ ಯೇಸುವೂ, ಅಲ್ಲಾನು ಒಂದೇ. ಒಂದೇ ಸೃಷ್ಟಿಯಲ್ಲಿ ಸಹಸ್ರಾರು ದೇವಾವಳಿ ಇರುವುದೆಂತು ಸಾಧ್ಯ? ಎಲ್ಲಾದರೂ ಹಿಂದೂಗಳಿಗೊಬ್ಬ ದೇವರು, ಇವರಿಗೊಬ್ಬ ದೇವರು, ಅವರಿಗೊಬ್ಬ ದೇವರು ಎಂದು ಜಾತಿಭೇದವಿದೆಯೆ?

ಇಲ್ಲ, ಅಲ್ಲಿ ಒಬ್ಬನೇ ಒಬ್ಬ ದೇವರಿದ್ದಾನೆ ಅವನನ್ನು ರಾಮನೆಂತಲೂ ಇಲ್ಲವೇ ರಹೀಮನೆಂತಲೂ ಕರೆಯಬಹುದು. ಆದರೆ ಅವನು ಸರ್ವಾಂತರ್ಯಾಮಿಯೂ ಆಗಿದ್ದಾನೆ ಎಂಬುವುದು ನಿರ್ವಿವಾದ ಅವನನ್ನು ರಾಮನೆಂತಲೂ ರಹೀಮನೆಂತಲೂ ಕರೆಯುತ್ತೇವೆ. ಆದರೆ ಹೆಚ್ಚಾಗಿ ನಾವು ನಮಗೆ ಪರಿಚಯ, ಭಕ್ತಿ ಸದ್ಭಾವವಿರುವವರ ಹೆಸರನ್ನೆ ಚೆನ್ನಾಗಿ ಮನದಲ್ಲಿಟ್ಟುಕೊಳ್ಳುತ್ತೇವೆ. ಕೆಲವರು ರಾಮಭಕ್ತರಾದರೂ ಕೆಲವರು ಕೃಷ್ಣ ಭಕ್ತರು. ಹಾಗೆ ರಾಮ ನಾಮವು ಖುದನ ಅಥವಾ ದೇವರ ಮಗದೊಂದು ಹೆಸರು. ನಾನು ಮೊದಲಾಗಿ ನನ್ನ ಮಹಮ್ಮದೀಯ ಅಣ್ಣತಮ್ಮಂದಿರುಗಳಿಗೆ ತಿಳಿಯಲೆಳಸುವ ವಿಷಯವೆನೆಂದರೆ, ಹಿಂದುಗಳ ದೇವರಾದ ರಾಮನನ್ನು ತಮ್ಮ ದೇವರೆಂದೇ ಭಾವಿಸದಲ್ಲಿ ಅದರಿಂದ ಅವರಿಗೇನು ನಷ್ಟವಿಲ್ಲವಾದರೂ ಅದರಿಂದ ಜಾತ್ಯಾತೀತ ಭಾವ ಮುರಿಯಲ್ಪಡುತ್ತದೆ. ಇದೇ ರೀತಿಯ ಭಾವನೆ ಫಾರ್ಸಿಗಳಲ್ಲ, ಕ್ರಿಶ್ಚಿಯನರಲ್ಲಿ ಹಾಗೂ ಜಗತ್ತಿನ ಇತರ ಜನಾಂಗದವರಲ್ಲಿ ಬೇರೂರಿದಲ್ಲಿ ಭಾರತವು ಧನ್ಯ. ಆದರಿಂದ ನನಗೇಕೊ ತುಂಬ ಸಂತೋಷವಾಗುತ್ತದೆ ಎಂದು ನಾನು ಬಿಚ್ಚುಮನದಿಂದ ಕಂಠೋಕ್ತವಾಗಿ ತಿಳಿಯಲೆಳಸುವೆ. ನನಗಂತೂ ಜಾತ್ಯಾತೀತ ಭಾವನೆ ತಿಲಮಾತ್ರವೂ ಇಲ್ಲ. ಬೇರೆ ಬೇರೆ ಜಾತಿಯವರು ಒಂದೇ ಮರದ ಬೇರೆ ಬೇರೆ ಎಲೆಗಳು ಎಂದು ನಾನು ಖಂಡಿತವಾಗಿ ಹೇಳಬಲ್ಲೆ. ನಾವೆಲ್ಲರೂ ಒಂದೇ ತಾಯಿ ಮಕ್ಕಳು. ಆದ್ದರಿಂದ ನಮಗೆ ಇರುವ ದೇವರು ಒಬ್ಬನೇ ಹೊರತು ತಿಳಕೊಳ್ಳಬೇಕು ಮತ್ತು ನಮ್ಮ ದೇವರಿಗೆ ಆ ದೇವರಿಗಿಂತ ವಿಶೇಷ ಶಕ್ತಿ, ಸಾಮರ್ಥ್ಯವಿದೆ ಎಂದು ತಿಳಿಯುವುದು ತಪ್ಪು!.

ನನ್ನ ರಾಮ, ನನ್ನ ನೆಚ್ಚಿನ ಪರಮಾತ್ಮ, ನನ್ನ ಪ್ರಾರ್ಥನೆಯ ರಾಮನಾಮದ ಮೂಲಪುರುಷ ರಾಮನು ಬರಿಯ ಪುರಾಣ ಪುರುಷನಲ್ಲ, ಅಯೋಧ್ಯಾಧೀಶನಲ್ಲ, ಸೀತೆಯ ಕೇವಲ ಪತಿಯೂ ಅಲ್ಲ ದಶರಥಪುತ್ರನೂ ಅಲ್ಲವೆನ್ನಿ! ಆತನ ಶಕ್ತಿ ಅಪಾರವಾದುದು. ಆತನಿಗೆ ಆದ್ಯಂತ್ಯವಿಲ್ಲ, ಆತನು ಅನಂತನು. ಆತನಿಗೆ ಹುಟ್ಟಿಲ್ಲ ಸಾವಿಲ್ಲ, ಆತನು ಅಭವನು. ಆತನು ದ್ವಿತೀಯನು. ಇದೇ ರೀತಿಯಲ್ಲಿ ಖುದನು ಸಹ ಏಸುವೂ ಸಹ. ಎಂದು ನನ್ನ ಮಟ್ಟಿಗೆ ತಿಳಿದುಕೊಳ್ಳುತ್ತೇನೆ.

Him alone I worship, His aid alone I seek and so should you. He belongs equally to all ನಾನು ಅವನನ್ನೇ ಹುಡುಕುತ್ತೇನೆ, ಸದಾ ಅವನನ್ನೇ ಪೂಜಿಸುತ್ತೇವೆ. ನನ್ನಂತೆಯೆ ನೀವೂ ಹಾಗೆ, ಮಾಡತಕ್ಕದು ನಿಮಗದರಿಂದ ಹಾನಿಯೇನೂ ಇಲ್ಲ. ಆ ರಾಮನು ಎಲ್ಲರಿಗೂ ಒಬ್ಬನೆ.

ಆದ್ದರಿಂದ ನನಗೇಕೊ ಬೇಸರವಾಗುತ್ತದೆ. ಆದೇಕೆ ಒಬ್ಬ ಮಹಮ್ಮದೀಯನು ಆ ನನ್ನ ರಾಮನ ಹೆಸರನ್ನು ಎತ್ತಿದ ಕೂಡಲೇ ಸಿಡಿಮಿಡಿಗೊಳ್ಳುವನೇ ಹೊರತು ಅವನನ್ನು ಪೂಜಿಸಲು ಮೊದಲಾಗಲಾರನು? ಇದರರ್ಥವೇನು? ಕಾರಣವೊಂದೂ ತಿಳಿಯದು.

ಅವನನ್ನು ದೇವರೆಂದು ತಿಳಿದು ಚೆನ್ನಾಗಿ ಕುಣಿಯಿರಿ. ಅವನ ನಾಮಸ್ಮರಣೆಯನ್ನು ದಿನನಿತ್ಯವೆಂಬಂತೆ ಗೈಯ್ಯಲು ಅನುವಾಗಿರಿ. ಜಗತ್ತಿನಲ್ಲಿ ಎಷ್ಟು ಜನರಿದ್ದಾರೆ? ಎಂದು ಕೇಳಿದರೆ ಏನು ಉತ್ತರಗೊಡುವಿ? “ಲೆಕ್ಕವಿಲ್ಲದಷ್ಟು” ಎನ್ನುವಿ. ಅದೇ ರೀತಿಯಲ್ಲಿ ಅಂದರೆ ಜಗತ್ತಿನ ಅಸಂಖ್ಯಾತ ಜನರ ಸಂಖ್ಯೆಯಷ್ಟೆ ಅವನಿಗೆ ಹೆಸರುಗಳಿವೆ ಅವನಿಗೆ ಮಹಿಮೆಯಿದೆ. ಎಂದು ನಾನು ಹೇಳಿದಾಗ ನೀವು ಅವನ ಹೆಸರಿನಬೆಲೆ ಮಹಿಮೆಯ ಅರಿವನ್ನೂ ತುಲನೆಮಾಡಬಹುದು. He is one without second (ಅವನು ಅದ್ವಿತೀಯ ಮಹಾಮಹಿಮನಾಗಿದ್ದಾನೆ). ಅವನು ದೊಡ್ಡವನಾಗಿದ್ದಾನೆ; ಅವನಿಗಿಂತ ದೊಡ್ಡವರಿಲ್ಲ ಅವನು ಲೋಕಕ್ಕೆ ತಂದೆ; ಅವನಿಗೆ ತಂದೆ? ಆದುದರಿಂದ ಅವನ ಶಕ್ತಿ ತಿಳಿದಂತಾಯಿತು. ಈಗ ಅವನು ಹೇಗಿರುವನು ಎಂಬ ವಿಚಾರ. ಅವನಿಗೆ ಸಮಯ ಶೂನ್ಯತೆಯಿದೆ, ನಿರಾಕಾರವಿದೆ; ಬಣ್ಣವಿಲ್ಲ! ಅಂತಹ ವ್ಯಕ್ತಿಯಾತನು. ಕಷ್ಟ ಕಾಲದಲ್ಲಿ ಸರ್ವರನ್ನು ಸಲಹುತ್ತಾನೆ.

ಅಂತಹ ಪುರುಷನೆಂದರೆ ‘ನನ್ನ ರಾಮ’’ ಅವನೇ ನನ್ನ ಸರ್ವಸ್ವ. ಅವನೇ ನನಗೆ ಒಡೆಯ ಒಡತಿ, ತಾಯಿತಂದೆ ಎಲ್ಲವೂ. ನನ್ನ ಯಜಮಾನನೂ ಹೌದು.

ಅಂತಹ ಗಾಂಧೀಜಿಯ ಅಮೃತ ವಾಕ್ಯವಿದ್ದೂ, ಈಗ ಇಂಡಿಯದಲ್ಲಿ ಈ ತೆರನ ಜಾತ್ಯಾತೀತ ಭಾವವಿದ್ದುದು ಶೋಚನೀಯ. ಅದರಿಂದ ರಾಷ್ಟ್ರದ ಅಭ್ಯುದಯಕ್ಕೆ ಕಿಂಚಿತ್ ಎಡೆಯಿಲ್ಲ. ಇಂತಹ ಒಂದು ತೆರನ ಲೇಖದಿಂದ ಸ್ಫೂರ್ತಿ ಹೊಂದಿದ ನಾಲ್ವ ಭಾರತೀಯರು ತಕ್ಷಣ ಜಾತ್ಯಾತೀತಭಾವ ಕಳಕೊಳ್ಳಲಿ, ಹಾಗೆ ರಾಷ್ಟ್ರವು ಬೆಳೆದು ನಿಮಗೆ ನಮಗೆ ನಿತ್ಯಸುಖ ದೊರೆಯಲೆಂದು ನಾನು ಬಹಳವಾಗಿ ಬಯಸುತ್ತೇನೆ.

(ಭವನ್ಸ್ ಜರ್ನಲಿನಿಂದ)

—ರಮೇಶ ಎ ಪೈ, ಉಡುಪಿ.



ಸಮುದ್ರದಲ್ಲಿ ಜೀವರಕ್ಷಣೆಯ ಬಗ್ಗೆ ವಿಶೇಷ ರೀತಿಯ ನಾವೆಯೊಂದನ್ನು ಬ್ರಿಟನ್ ತಯಾರಿಸಿದೆ.

ಇರುವೆಗಳು ಮಾತನಾಡಿಕೊಂಡವು.......

ತಂಪಾದ ಮಾರುತವು ಬೀಸತೊಡಗಿತು. ಮೋಡಗಳು ಮುಗಿಲ ತೀರದಲ್ಲಿ ಪಯಣಕ್ಕೆ ತೊಡಗಿದುವು. ಅಲ್ಲೊಂದು ಮಿಂಚು; ಇಲ್ಲೊಂದು ಗುಡುಗು. ಸೆಕೆಯಿಂದ ಬೆಂದ ಪ್ರಕೃತಿಯು ಮಳೆಗೆ ಬಾಯ್ಬಿಟ್ಟು ಬಾನಕಡೆ ನೋಡತೊಡಗಿತು. ಆಗ ಇರುವೆಗಳ ಸಾಲೊಂದು.........

“ಸದ್ಯವೇ ಮಳೆ ಸುರಿಯಲಿದೆ. ಜಗತ್ತು ಸಸ್ಯ ಶ್ಯಾಮಲವಾಗಿ ಮೆರೆಯಲಿದೆ. ರೈತನೊಗ ನೇಗಿಲ ಸೇವೆಗೆ ಹೊರಡಲಿದ್ದಾನೆ. ನಾವೂ ನಮ್ಮ ಆಶ್ರಯವನ್ನು ಸೇರೋಣ. ಸೆಕೆಗಾಲದಲ್ಲಿ ಸಂಗ್ರಹಿಸಿದ ತುಣುಕುಗಳು ನಮ್ಮ ಆವಶ್ಯಕತೆಗೆ ಸಾಕಾಗುವಷ್ಟಿರುವುದರಿಂದ ನಾವೂ ಸಂತೋಷದಿಂದ ಮಳೆರಾಯನನ್ನು ಸ್ವಾಗತಿಸೋಣ,...”

....ಸಾಲು ಮುಂದೆ ಮುಂದೆ ಸಾಗುತ್ತಿತ್ತು ಸೇವಣಾತಿಯ ಸಂಪತ್ತಿನ ಆನಂದದಿಂದ ಕೂಡಿಕೊಂಡು.

“ಸೇವಣಾತಿಯ ಶ್ರೇಷ್ಠತೆ”ಯನ್ನು ಇರುವೆಗಳೂ ಮಾತನಾಡಿಕೊಂಡವು.

● ಪಿಗ್ಮಿ, ● ಕ್ಯುಮುಲೇಟಿವ್, ● ಲಕ್ಷ್ಮೀ ಕ್ಯಾಶ್ ಸರ್ಟಿಫಿಕೇಟ್,

ಇತ್ಯಾದಿ ಯೋಜನೆಗಳ ಕುರಿತು ನಾವೂ ನೀವೂ ಮಾತನಾಡೋಣ.

ಸಿಂಡಿಕೇಟ್ ಬೇಂಕ್

THE CANARA INDUSTRIAL & BANKING SYNDICATE LTD.
H. O. UDIPI.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ.

ವರುಷ ೩೮. ವಾರ ೩೮. 4-6-1959 Vol. 38. No. 38.

ವಿಚಾರ ಮಥನ

ಜಾತಿಯಲ್ಲಿ ಯೋಗ್ಯತೆಯೆ?

o o

ಭಾರತದಿಂದ ಆಕ್ರಮಣವೆ?

o o

ಸೆಂಗೋತಿಗಳು ಅಂತರಿಕ್ಷಕ್ಕೆ!

ವಿಶ್ವವಿದ್ಯಾಲಯ ಸಹಾಯಧನ ಆಯೋಗದ ಅಧ್ಯಕ್ಷರಾಗಿರುವ ಡಾ॥ ಸಿ.ಡಿ. ದೇಶಮುಖರು ದಕ್ಷಿಣ ಭಾರತದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಯೋಗ್ಯತೆಯನ್ನು ಅನುಸರಿಸದೆ ಜಾತೀಯ ಪದ್ಧತಿಯನ್ನೇ ಪ್ರವೇಶಕ್ಕೆ ಮೂಲಾಧಾರವಾಗಿಟ್ಟುಕೊಂಡಿರುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ವೈದ್ಯಕೀಯವೇ ಮೊದಲಾದ ಅತಿ ಪ್ರಮುಖವೆನಿಸಿದ ಕಾಲೇಜುಗಳಿಗೆ ಕೂಡ ಕೇವಲ ಉತ್ತೀರ್ಣರಾಗಲು ಸಾಕಾಗುವಷ್ಟು ಅಂಕಗಳನ್ನು ಪಡೆದವನಿಗೂ ಅಲ್ಲಿ ಸ್ಥಾನವನ್ನು ಕಲ್ಪಿಸಲಾಗುವುದು ಸರಿಯಲ್ಲ ಎಂದವರು ಹೇಳಿದ್ದಾರೆ.

ಈ ಜಾತೀಯ ತಳಹದಿಯಲ್ಲಿ ಈಯುವ "ಪ್ರವೇಶ" ಕ್ರಮದ ದುಷ್ಪರಿಣಾಮವನ್ನು ಪ್ರತಿಬಿಂಬಿಸುತ್ತ ಅವರು ಒಬ್ಬ ಸಾಮಾನ್ಯ ವಿದ್ಯಾರ್ಥಿ ನಿಯಮಿತ ಅವಧಿಯಲ್ಲಿಯೇ ತನ್ನ ಶಿಕ್ಷಣವನ್ನು ಮುಗಿಸುತ್ತಿರುವಾಗ, ಹೀಗೆ ಕಡಿಮೆ ಅರ್ಹತೆಯಿರುವವನು ಅದರ ಇಮ್ಮಡಿಯಷ್ಟು ಸಮಯ ಕಳೆಯುವುದು ಉಂಟು ಎಂದು ಶ್ರೀ ದೇಶಮುಖರ ಅಭಿಪ್ರಾಯವಾಗಿದೆ ಮಾತ್ರವಲ್ಲ ಈ ಮಾತುಗಳು ಅನುಭವದಿಂದ ಬಂದವುಗಳು. ಕೇವಲ "ಹಿಂದುಳಿದವರು" ಎಂಬ ಒಂದೇ ಒಂದು ಮಾನದಿಂದ ಉಳಿದು ಉತ್ತೀರ್ಣರಾದ ಎಲ್ಲರಿಗೂ ವೈದ್ಯಕೀಯ, ತಾಂತ್ರಿಕವೇ ಮೊದಲಾದ ದೇಶಕ್ಕೆ ಅತ್ಯಮೂಲ್ಯ ಸೇವೆಯನ್ನು ಸಲ್ಲಿಸುವವರನ್ನು ತಯಾರಿಸುವ ವಿದ್ಯಾಲಯಗಳಿಗೆ ತುಂಬಿಸಿಬಿಟ್ಟರೆ, ಅಲ್ಲಿಯೂ ಅವರು ತೇರ್ಗಡೆಹೊಂದಲು ಸಾಕಾಗುವಷ್ಟು ಅಂಕಗಳನ್ನು ಗಳಿಸಿ ಪದವಿ ಪಡೆದು, ತಮ್ಮ ಕೆಲಸದಲ್ಲಿ ತೊಡಗುತ್ತಾರೆ. ಆದರೆ, ಅವರ ಜ್ಞಾನವು ಕಡಿಮೆಯಾದುದರಿಂದ ಅವರ ಕೆಲಸವು ಜನಕ್ಕೆ ತೃಪ್ತಿಕರವಾಗಿ ನಡೆಯುತ್ತಿಲ್ಲವೆಂಬುದು ನಿಶ್ಚಯ. ಆದುದರಿಂದ ಯೋಗ್ಯತೆಯನ್ನೇ ಆಳೆದು ವಿಶ್ವವಿದ್ಯಾಲಯಗಳಿಗೆ ಪ್ರವೇಶ ನೀಡುವ ಕ್ರಮವು ಅತಿ ಉದಾತ್ತವಾದುದು ಮತ್ತು ಅನುಕರಣೀಯವಾದುದು. ಶ್ರೀ ದೇಶಮುಖರೇ ಹೇಳುವಂತೆ ಹಿಂದುಳಿದ ವರ್ಗಗಳವರಿಗೂ ಪ್ರಾಶಸ್ತ್ಯವೀಯಬೇಕು. ಆದರೂ ಅವರಿಗೆ ಉಳಿದವರಿಗಿಂತ ವಿಪರೀತವಾದ ಸೌಲಭ್ಯ ನೀಡದೆ ಮಿತವಾದುದನ್ನೆ ಕೊಡಬೇಕು. ಸಾಮಾನ್ಯರಿಗೆ ನೂರಕ್ಕೆ ೬೦ರಂತೆ ಅಂಕಗಳು ದೊರೆಯಬೇಕೆಂಬ ನಿಯಮವಿದ್ದರೆ, ಹಿಂದುಳಿದವರಿಗೆ ನೂರಕ್ಕೆ ೫೦ರಷ್ಟಾದರೂ ಸಿಗಬೇಕು— ಎಂಬ ಮತವು ಗ್ರಾಹ್ಯವಾದುದು. ಇದಕ್ಕಿಂತಲೂ ನಿಮ್ನ ಯೋಗ್ಯತೆಯವರು ಸುಸೂತ್ರವಾಗಿ ತಮ್ಮ ಶಿಕ್ಷಣವನ್ನು ಮುಗಿಸುವುದೂ ಮುಗಿಸಿದರೂ ಯಶಸ್ವಿಯಾಗಿ ತಮ್ಮ ಕಾರ್ಯದಲ್ಲಿ ನಿರತರಾಗುವುದೂ ಅಸಂಭವ ಎಂತಲೇ ದಕ್ಷಿಣದ ರಾಜ್ಯವಾದ ಮೈಸೂರು ತನ್ನ ರೂಢಿಯನ್ನು ಇನ್ನಾದರೂ ತಿದ್ದಿಕೊಳ್ಳುವುದು ರಾಷ್ಟ್ರಹಿತದೃಷ್ಟಿಯಿಂದ ಯೋಗ್ಯವಲ್ಲವೆ?

o o

ಭಾರತವು ಪಂಚಶೀಲಗಳನ್ನು ಅನುಸರಿಸಿ ಮುಂದುವರಿಯುತ್ತಿರುವುದಾದರೂ ನಮ್ಮ ನೆರೆಹೊರೆಯ ಕೆಲವು ರಾಷ್ಟ್ರಗಳಿಗೆ ಭಾರತದ ಆಕ್ರಮಣ ಭೀತಿಯು ಮೊಳೆದೋರಿದೆಯಂತೆ ಹೀಗೆ ಭಯಭೀತವಾದ ರಾಷ್ಟ್ರಗಳಲ್ಲಿ ಪಾಕಿಸ್ತಾನ ಮತ್ತು ಸಿಂಹಳಗಳು ಮುಖ್ಯವಾಗಿವೆ. ಪಾಕಿಸ್ತಾನವು ತನಗೆ ಭಾರತದ ಆಕ್ರಮಣದ ಬೆದರಿಕೆಯಿರುವುದೆಂದು ತಾನೇ ಪ್ರಚಾರ ಮಾಡುತ್ತಿರುವುದಲ್ಲದೇ ಅದನ್ನು ಎದುರಿಸಲು ಬೇಕಾಗುವಷ್ಟು ಬಲವನ್ನೂ ಸಂವರ್ಧಿಸಿಕೊಳ್ಳುತ್ತಿದೆ. ಆದರೆ, ತಾನೇ ಭಾರತವನ್ನು ಆಕ್ರಮಿಸುವ ಸಾಹಸವನ್ನು ಕೆಲವಟ್ಟಿಗೆ ತೋರಿಸುತ್ತಿದೆ ಎನ್ನಬಹುದು. ಈ ರೀತಿ ಭಾರತವನ್ನು ಉದ್ರೇಕಗೊಳಿಸಿ, ಅದುವೇ ತನ್ನ ಮೇಲೆ ಏರಿಬರುವಂತಾದರೆ, ತಾನು ನಿರಪರಾಧಿ ಆಕ್ರಮಿತ ರಾಷ್ಟ್ರವಾಗುವೆನೆಂಬ ಧೈರ್ಯವದಕ್ಕೆ. ಆದರೂ ಭಾರತವು ಪಾಕಿಸ್ತಾನವು ಎಸಗಿದ ವಿದ್ರೋಹಗಳೆಲ್ಲವನ್ನೂ ಸೌಮ್ಯ ವಿಧಾನದಿಂದಲೇ ಪ್ರತಿಭಟಿಸುತ್ತ ಬಂದು ಪಾಕ್ ಅತ್ಯಾಶೆಯನ್ನು ನೆಲಸಮ ಮಾಡುತ್ತಿದೆ. ಭಾರತದ ಕೆನ್‌ಬೆರಾ ವಿಮಾನವನ್ನು ಕೆಡಹಿದ ಅಮಾನವೀಯ ಕೃತ್ಯ ಹಲವಾರು ಭಾರಿ ಒಪ್ಪಂದವಾದರೂ ಪದೇ ಪದೇ ಸೀಮಾ ಪ್ರದೇಶದಲ್ಲಿ ಎಬ್ಬಿಸುತ್ತಿರುವ ಕಿರುಕುಳ ಕಾಶ್ಮೀರದ ಪ್ರಶ್ನೆ, ಕಾಲುವೆನೀರ ತಂಟೆಯೇ ಮೊದಲಾದುವನ್ನು ಮತ್ತಷ್ಟು ಪ್ರಬಲಗೊಳಿಸಿ, ಪಾಕಿಸ್ತಾನವು ಭಾರತದ ಸತ್ವ ಪರೀಕ್ಷೆ ನಡೆಸುವಂತಿದೆ. ಹಾಗಿರುವಾಗ ಆಕ್ರಮಣದ ಭೀತಿ ಯಾರಿಗೆ?

ಪಾಕಿಸ್ತಾನದ ಸನ್ನಿವೇಶವೊಂದಾದರೆ ಸಿಂಹಳದ ಸ್ಥಿತಿ ಬೇರೊಂದು. ದಕ್ಷಿಣದಲ್ಲಿ ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ಪ್ರಭಾವ ಬೀರಿದ "ದ್ರಾವಿಡ ಕಜಗಂ" ಸಿಂಹಳವನ್ನೂ (ತಮಿಳು ನಾಡಿನ) ಭಾರತದ ಅಂಗವೆಂದು ಹೇಳುತ್ತ ಬಂದಿರುವುದರಿಂದಲೇ ಸಿಂಹಳೀಯರಲ್ಲಿ ಭಾರತದ ಆಕ್ರಮಣದ ಭೀತಿಯು ಹುಟ್ಟಿಕೊಂಡಿದೆ. ಆದರೆ, ಈ "ಕಜಗಂ" ಪಕ್ಷವು ಸದ್ಯ ಮದ್ರಾಸ ಕಾರ್ಪರೇಶನ್‌ನಲ್ಲಿ ಬಹುಮತವನ್ನು ಪಡೆದಿದ್ದರೂ ಯಾವ ರಾಜ್ಯದಲ್ಲಿಯೇ ಆಗಲೀ ಅದಕ್ಕೆ ಮಹತ್ವವಿಲ್ಲ. ಪ್ರತ್ಯಕ್ಷವಾಗಿ ರಾಷ್ಟ್ರ ಧ್ವಜ ರಾಷ್ಟ್ರ ಚಿತ್ರ,

[೧೦ನೇ ಪುಟ ನೋಡಿರಿ)



ಅಮೆರಿಕೆಯ ಸೈನಿಕ ಶಾಖೆಯು ಜುಪಿಟರ್ ಕ್ಷಿಪಣಿಯ ಶಂಕುವನ್ನು ನಿಲ್ಲಿಸುತ್ತಿದೆ.

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3. ಸ್ಥಾಪನೆ:- 1931.

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ	5 ತಿಂಗಳ ವರೆಗೆ		4¼%
6 ,,	12	,,	4½%
13 ,,	24	,,	4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು, ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ ...

ಕಥಾ ವಿಹಾರ

ಕರ್ತವ್ಯ ಪಾಲನೆ

ಸ್ವಾಮಿಗಾಗಿ ಪ್ರಾಣ ಅರ್ಪಿಸಿದಳು ಸ್ವಾಮಿನಿಷ್ಠೆ ಗೌರಿ.

ನವಂಬರ ತಿಂಗಳ ಮೊದಲವಾರವದು. ಭೋರೆಂದು ಸುರಿಯುವ ಮಳೆ ಕಡಿಮೆಯಾಗಿತ್ತು. ವಾರದಲ್ಲಿ ಒಂದೋ ಎರಡೋ ಸಾರಿ ಮಾತ್ರ ಬಂದು ಹೋಗುತಿತ್ತು. ಅದೂ ತೀರಾ ಕೆಲವು ಗಂಟೆ ಮಾತ್ರ. ಆಗಸವು ನಿರ್ಮಲವಾಗಿ, ಚಂಗದಿರನು ಬೆಳ್ಳಗ ಹೊಳೆ ಹೊಳೆಯುತ್ತಿದ್ದನು—ಸಂಜೆಯ ವರೆಗೂ. ಜನರಲ್ಲಿ ಜಡತ್ವವು ತೊಲಗಿ ಹೋಗಿ ನವಚೇತನವು ತುಂಬಿ ತುಳುಕುತ್ತಿತ್ತು. ಎಲ್ಲೆಲ್ಲೂ ಮಾನವರು ಕಾರ್ಯಗಳಲ್ಲಿ ಮಗ್ನರಾಗಿದ್ದರು. ಮೂಕ ಪ್ರಾಣಿಗಳಿಗೆ ಸಂಚರಿಸಲು ಉತ್ಸಾಹ ಇಮ್ಮಡಿಸಿತ್ತು. ಪಕ್ಷಿಸಂಕುಲಗಳು ತಮ್ಮ ಗಾನ ಮಾಧುರ್ಯದಿಂದ ನೊಂದ ಜೀವಿಗಳಿಗೆ ಆನಂದವನ್ನುಂಟು ಮಾಡುತ್ತಿದ್ದುವು.

ನದಿಗಳಲ್ಲಿನ್ನು ಜಲಪ್ರವಾಹ ತುಂಬಿ ಹರಿಯುತ್ತಿತ್ತು. ಆದರೂ ಮೊದಲಿನ ರಾಕ್ಷಸಾರ್ಭಟೆ ಈಗ ಇಲ್ಲ. ಪ್ರಶಾಂತವಾಗಿ ಮುಂದುವರಿಯುತ್ತಿತ್ತು. ಸಮುದ್ರ ರಾಜನೆಡೆಗೆ ಸಂತಸದಿಂದ.

ರಾತ್ರಿ ಗಂಟೆ ಹತ್ತರ ಸಮಯ. ಹುಣ್ಣಿಮೆಯ ದಿನವಾದ್ದರಿಂದ ಬೆಳದಿಂಗಳು ಚೆಲುವಾಗಿ ಹರಡಿದೆ. ರಾತ್ರಿಯಾದ್ದರಿಂದ ಗಲಭೆ, ಗಡಿಬಿಡಿಗಳು ಕಡಿಮೆಯಾಗಿ, ನಿಶ್ಶಬ್ದದಿಂದ ಕೂಡಿದ ವಾತಾವರಣ. ಆಗೊಮ್ಮೆ, ಈಗೊಮ್ಮೆ ಕಾಡಿನಿಂದ ಕೇಳಿಸುವ ನರಿ, ಗೂಗೆಗಳ ಸದ್ದು—ಕೂಗು; ವಿಕಾರವಾದ ಇನ್ನೇನೇನೋ ಸ್ವರಗಳ ಹೊರತು ಬೇರೇನೂ ಕೇಳಿಸುವುದಿಲ್ಲ.

ಆದರೂ, ಮಲೆನಾಡಿನಲ್ಲಿ ಹರಿಯುವ—ಅದೂ ಅರಣ್ಯದ ಮಧ್ಯೆ—ಆ ನದಿಯಲ್ಲಿ ಜನರು ಪರಸ್ಪರ ಮಾತಾಡಿಕೊಳ್ಳುವುದು ಕೇಳಿಸುತ್ತಿದೆ. ನೀರಿನಲ್ಲಿ ಉದ್ದವಾದ 'ತೆಪ್ಪ'ವೊಂದರಲ್ಲಿ ಕುಳಿತಿದ್ದಾರವರು. ಏನೋ ಮಾತುಕತೆ ಎಡೆಬಿಡದೆ ಸಾಗಿದೆ. ಆಗಾಗ ನಗು, ಹರ್ಷೋದ್ಗಾರಗಳು ಕೇಳುತ್ತಿವೆ;—ನಿಧಾನವಾಗಿ ಮೇಲಿಂದ ಕೆಳಕ್ಕೆ ಸಾಗುತ್ತಿದೆ—ಅದು.

ಹೌದು; ಅದೊಂದು ಉದ್ದನೆಯ ಮರ. ದೇವಸ್ಥಾನದ ಎದುರಿನ 'ಕೊಡಿಮರ'ಕ್ಕಾಗಿ ಅದನ್ನು ದೂರದಿಂದ ಸಾಗಿಸಿಕೊಂಡು ಬರುತ್ತಿದ್ದಾರೆ. ಇನ್ನೂ ಹತ್ತೆಂಟು ಮೈಲು ಸಾಗಬೇಕಿದೆ; ಅದರೊಂದಿಗೇ ತೆಪ್ಪವೊಂದರಲ್ಲಿ ಜನರು ಕುಳಿತಿದ್ದಾರೆ. ಭಾರಿ ಒಂದು ದೇವಸ್ಥಾನ ಕಟ್ಟಿಸಲ್ಪಡುತ್ತಿದೆ. ಅಲ್ಲಿ ಯೋಗ್ಯವಾದ ಮರ ಸಿಕ್ಕಿಲ್ಲವಾದ್ದರಿಂದ ದೂರದಿಂದ ತರಬೇಕಾಗಿ ಬಂದಿದೆ.

ನಿಧಾನವಾಗಿ—ಎಡರು ತೊಡರುಗಳನ್ನು ತಪ್ಪಿಸಿಕೊಂಡು ಸಾಗಿಸುತ್ತಿದ್ದಾರದನ್ನು. ಬೆಳದಿಂಗಳಿನ ರಾತ್ರಿ ಸಾಗಿಸಲು ಒಳ್ಳೆಯದೆಂದು ಆ ದಿನವನ್ನು ಆರಿಸಿಕೊಂಡಿದ್ದಾರೆ.

ನದಿ ಇಳಿಜಾರಾಗಿ ಹರಿಯುವಲ್ಲಿ ವೇಗದಿಂದ—ಕುಲುಕಿಕೊಂಡು—ಸಮತಟ್ಟಾದಲ್ಲಿ ನಿಧಾನವಾಗಿ, ಮರ—ದೇವಸ್ಥಾನದ ಎದುರು ಪಾರ್ಶ್ವಕ್ಕಿರುವ ಆ ಮರದ ನಿವ್ಮ—ಸಾಗುತ್ತಿದೆ.

ಅದೇ ರೀತಿ ಮತ್ತೊಂದು ಗಂಟೆ ಮುನ್ನಡೆಯಿತು! ಅಷ್ಟರಲ್ಲಿ ಥಕ್ಕನೇ ಗಾಳಿ ಬೀಸಲು ಪ್ರಾರಂಭಿಸಿತು. ಮೋಡಗಳು ಸೇರ ತೊಡಗಿದವು. ಮಳೆ ಬರುವ ಮುನ್ಸೂಚನೆ ಕಂಡು ಬಂತು. ಹಾಗೇ ತುಂತುರಾಗಿ ಹನಿಗಳು ಬೀಳ ತೊಡಗಿದವು. ಚಂದ್ರದೇವನು ಒಮ್ಮೊಮ್ಮೆ ಮೋಡ ರಾಜನ ಮರೆಯನ್ನು ಸೇರಿ ತನ್ನ ಪ್ರಭೆಯನ್ನು ಕುಂಠಿಸುತಿದ್ದನು.

ಮೆಲ್ಲ ಬೀಸುತಿದ್ದ ಗಾಳಿ ಜೋರಾಯಿತು. ಮಳೆಯೂ ಸರಿಯಾಗಿ ಸುರಿಯಲು ಪ್ರಾರಂಭಿಸಿತು.

ಮರ ಕುಲುಕುತ್ತಾ ವೇಗದಿಂದ ಹೋಗುತಿತ್ತು!

ಅದರ ವೇಗ ಹೆಚ್ಚಿತು—ಒಮ್ಮಿಂದೊಮ್ಮೆಯೇ.

ಜನರ ಹತೋಟಿ ತಪ್ಪಿ ಬಿಟ್ಟಿತು. ಮರ ಮುಂದಕ್ಕೆ — ಕೇವಲ ನಾಲ್ಕು ಮಾರು ಮುಂದಕ್ಕೆ ಹೋಗಿ ನಿಂತು ಬಿಟ್ಟಂತೆ ಕಂಡಿತು ಹಿಂದೆ ಇರುವವರಿಗೆ!

ಹತ್ತಿರಕ್ಕೆ ಸರಿದರು. ಆದರೆ ಅವರು ಕುಳಿತ ಆ 'ತೆಪ್ಪ' ತಿರುಗಲು ಪ್ರಾರಂಭಿಸಿತು. ಆಗ ಒಬ್ಬನು ಹೇಳಿದನು—

"ಜಾಗ್ರತೆ, ನಾವೆಲ್ಲ ಈಗ ಇಲ್ಲಿಂದ ಹಾರಿ ಈಜಿಯಾದರೂ ದಡ ಸೇರಬೇಕು. ಇಲ್ಲಿ ಒಂದು ಭಾರಿ 'ಸುಳಿ'ಯಿದೆ. ಈ ರಾತ್ರಿ ಇನ್ನೇನು ಮಾಡಲು ಸಾಧ್ಯವಿಲ್ಲ. ಜೀವದ ಆಸೆಯಿದ್ದರೆ ಧುಮುಕಿರಿ"—ಅಂದವನೇ ಹಾರಿ ಬಿಟ್ಟನು. ಉಳಿದವರೂ ಅವನನ್ನನುಸರಿಸಿದರು.

ನಿಜ. ಅದು ಅಗಾಧ ಆಳದ ಸ್ಥಳವಾಗಿತ್ತು. ಆ ಸುಳಿಯಲ್ಲಿ ಮರದ ದಿಮ್ಮಿ ಮುಳುಗಿ ಹೋಗಿತ್ತು. ಯಾವುದಕ್ಕು ಬೆಳಗ್ಗೆ ಯೋಚಿಸೋಣವೆಂದು ದಡದಲ್ಲೇ ರಾತ್ರಿ ಕಳೆದರು.

೦೦ ೦೦

ಬೆಳಕು ಹರಿಯಿತು. ಏನು ಮಾಡುವುದೆಂದು ಒಬ್ಬನು ಊರಿಗೆ ಓಡಿದನು ಉಳಿದವರು ಅಲ್ಲೇ ಮೀನಮೇಷ ಎಣಿಸುತ್ತಾ ಕುಳಿತರು........

ಜನ ಸೇರಿತು. ಮರ ಮಾತ್ರ ಕದಲುತ್ತಿರಲಿಲ್ಲ. ನೆಟ್ಟಗೆ ನಿಲ್ಲಿಸಿದಂತಿತ್ತು. ಏನಾದುದೆಂದು ನೋಡಲು ಕೆಲವರು ಮುಳುಗಿದರು. ಆದರೆ ಆಳ ಬಹಳವಿದ್ದುದರಿಂದ ಸಾಧ್ಯವಾಗಲಿಲ್ಲ. ದೇವಸ್ಥಾನದ ಅಧಿಕಾರಿಗೆ ಚಿಂತೆ ಹಿಡಿಯಿತು.



ಕೊಲಂಬೊ ಯೋಜನೆಯಂತೆ ಬ್ರಿಟನ್ನಿನಲ್ಲಿ ತರಬೇತಿ ಪಡೆಯುತ್ತಿರುವ ಬರ್ಮಾದ ಶ್ರೀಯು. ಕ್ಯೊ ಅವರು ಜಲವಿದ್ಯುತ್ ಕೇಂದ್ರದಲ್ಲಿ.

ಕಡೆಗೆ ಆನೆಗಳನ್ನು ಮುಳುಗಿಸಿ, ಸರಪಳಿಯನ್ನು ಮರದ ತುದಿಗೆ ಸಿಕ್ಕಿಸಿ ಮೇಲೆಳೆಯುವುದೆಂದು ನಿರ್ಣಯಿಸಿದರು.

ಅಂತೆಯೇ ಆನೆಗಳು ಬಂದುವು. ಮೂರು ಆನೆಗಳೂ ಮುಳುಗಲಾರದೆ ಮರಳಿದವು. ಇಲ್ಲಿ ಏನೋ ವಿಶೇಷತೆಯಿದೆ ಎಂದು ಊಹಿಸಲಾರಂಭಿಸಿದರು.

ಕಟ್ಟಕಡೆಗೆ ಕೆರೆಯೂರು ಎಂಬಲ್ಲಿಂದ ಒಂದು ಪ್ರಖ್ಯಾತಿಪಟ್ಟ ಆನೆಯನ್ನು ಕರೆತರಲಾಯಿತು. ಅದು ಹೆಣ್ಣಾನೆ. ಅಲ್ಲದೆ ಅದಕ್ಕೆ ಒಂದೇ ಕಣ್ಣು ಕಾಣುತಿತ್ತು ಮಾತ್ರ. ಅದರ ಹೆಸರು ಗೌರಿ.

ಅದರ ಯಜಮಾನನೂ ಬಂದಿದ್ದನು.

ಮಾವುತನು ಸರಪಳಿ ಕೊಟ್ಟು ಮುಳುಗ ಹೇಳಿದನು. ಆನೆ ಮುಳುಗಿತು. ಕೆಲವೇ ಮಿನಿಟುಗಳಲ್ಲಿ ಮೇಲಕ್ಕೆ ಬಂದು ಸಾಧ್ಯವಿಲ್ಲವೆಂದು ತಲೆಯಾಡಿಸಿತು.

"ಗೌರಿ; ನಮ್ಮ ಮರ್ಯಾದೆ ಉಳಿಸುವುದಿಲ್ಲವೆ! ಹುಂ, ಮುಳುಗು"—ಯಜಮಾನ ಆಜ್ಞೆಯಿತ್ತನು.

ಗೌರಿ ಮುಳುಗಿದಳು

ಅರ್ಧ ತಾಸಿನಲ್ಲಿ ಮೇಲಕ್ಕೆ ಬಂತು—"ಜಯಗೊಂಡೆ" ಎಂದು ಹೇಳುವಂತೆ ಗೆಲುವಿಂದ.

ಆದರೆ........

ಅದರ ಮೈಯ್ಯಲ್ಲಿ ಬಾಸುಂಡೆಗಳಿದ್ದುವು. ರಕ್ತ ಸುರಿಯುತಿತ್ತು. ಅಯ್ಯೋ ಪಾಪ! ಅಂದರು ನೆರೆದವರು. ಉಳಿದ ಆನೆಗಳು ಮರವನ್ನೆಳೆದು ಮೇಲೆ ಹಾಕಿದುವು.

ಗೌರಿ ಏನೂ ಆಹಾರ ತೆಗೆದುಕೊಂಡಿರಲಿಲ್ಲ. ಒಡನೆಯೇ ಮನೆ ಸೇರಬೇಕೆಂದು ಸನ್ನೆ ಮಾಡಿತು.

ತನ್ನೂರು ಸೇರಿದ ಆನೆ ಅದರ ಯಜಮಾನನ ಮನೆಯೆದುರಿಗೆ ತುಳಸಿ ಕಟ್ಟೆಗೆ ಮೂರು ಸುತ್ತು ಬಂದು ಶಿರವನ್ನು ಮನೆಯ ಮೆಟ್ಟುಗಲ್ಲಿನ ಮೇಲಿಟ್ಟಿತು! ಏನು ಆಶ್ಚರ್ಯ! ಅದರ ಪ್ರಾಣಶಕ್ತಿ ಅನಂತ ವಿಶ್ವದಲ್ಲಿ ಲೀನವಾಗಿತ್ತು!

ಆ ಮರ ಮುಳುಗಿದಲ್ಲಿ ಒಂದು ಪುರಾತನ ದೇವಾಲಯವಿದ್ದು, ದೇವಾಲಯದ ಕಗ್ಗಲ್ಲಿನ ಬುಡದಲ್ಲಿ ಮರದ ತುದಿ ಸಿಕ್ಕಿಕೊಂಡಿತ್ತು. ಆ ಆನೆಗಳು ಅಲ್ಲಿಗೆ ತಲಪುವಾಗ ಅಲ್ಲಿಯ ಗಣಗಳು ಸರಿಯಾಗಿ ಹೊಡೆಯುತ್ತಿದ್ದುವು. ಯಜಮಾನನ ಮಾತಿಗಾಗಿ ಮುಳುಗಿ ಕಾರ್ಯಸಾಧಿಸಿದ ಗೌರಿಗೆ ಚೆನ್ನಾಗಿ ಗಣಗಳು ಹೊಡೆದುವು. ಆ ಹೊಡೆತವೇ ಅದರ ಮೈಯ್ಯಲ್ಲಿ ಎದ್ದ ಬಾಸುಂಡೆಗಳು!

ಊರಿಗೆ ಊರೇ ಆನೆಯ ಮರಣಕ್ಕಾಗಿ—ಅದರ ಸ್ವಾಮಿ ಭಕ್ತಿಗಾಗಿ—ಕಣ್ಣೀರು ಸುರಿಸಿತು.

"ಗೌರಿ, ನನ್ನ ಮಾತಿನ ಪಾಲನೆಗಾಗಿ ಪ್ರಾಣವನ್ನರ್ಪಿಸಿ ಬಿಟ್ಟೆಯಾ! ನೀನೇ ಧನ್ಯೆ; ದೇವಾಲಯಕ್ಕೋಸುಗ ಪ್ರಾಣದಾನ ಮಾಡಿದ ನಿನ್ನೆಡೆಯಲ್ಲಿ ನಾವೆಲ್ಲಾ ಎಷ್ಟರವರು?"—ಎಂದು ಅದನ್ನು ಅತಿಯಾಗಿ ಪ್ರೀತಿಸುತಿದ್ದ ಯಜಮಾನನು ವ್ಯಾಕುಲದಿಂದ ಮಮ್ಮಲ ಮರುಗಿದನು.

ಎಷ್ಟು ಮರುಗಿದರೇನು? ಪ್ರಾಣದಾನ ಮಾಡಿದ ಆ ಪ್ರಾಣಿಯ ಪ್ರಾಣವು ಅಷ್ಟರಲ್ಲೇ ಪರಮಾತ್ಮನಲ್ಲಿ ಐಕ್ಯಗೊಂಡಿತ್ತು.

ಎಲ್ಲಿ ಆನೆಯು ಪ್ರಾಣಬಿಟ್ಟಿತೋ—ಅಲ್ಲಿ ಒಂದು ಸುಂದರವಾದ ಆನೆಯ ವಿಗ್ರಹವನ್ನು ಅದರ ನೆನಪಿಗಾಗಿ ಆ ಊರಿನವರೆಲ್ಲರೂ ಸೇರಿ ಸ್ಥಾಪಿಸಿದರು. ಹಾಗೂ ತಮ್ಮ ಕೃತಜ್ಞತೆಯನ್ನು ಆ ರೀತಿಯಲ್ಲಿ ಅರ್ಪಿಸಿದರು.

— ಶ್ರೀ ಕೀ. ವ. ಕೇಶವ,
ದೇಲಂಪಾಡಿ.

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

ಕ್ರೀಡಾಪ್ರಪಂಚ

ರಾಷ್ಟ್ರದ ಪ್ರಸಿದ್ಧ ಕ್ರಿಕೆಟಪಟು!

ಶ್ರೀ ದತ್ತಾಜಿ ಗಾಯಕವಾಡ

ಇಂಗ್ಲೆಂಡದಲ್ಲಿ ಸಂಚಾರ ಕೈಕೊಂಡ ಭಾರತದ ಪ್ರಥಮ ತರುಣ—ಕ್ರಿಕೆಟಪಟುಗಳ ಹೊಸ ಕೆಪ್ಟನ್ನರಾಗಿ ತೆರಳಿದ್ದಾರೆ!

ಬಡೋದೆಯ ಪ್ರಮುಖ ಕ್ರಿಕೆಟಪಟು ದತ್ತಾಜಿ ಕೇ. ಗಾಯಕವಾಡ ಇವರ ನಾಯಕತ್ವದಲ್ಲಿ ಭಾರತೀಯ ಪ್ರಥಮ ತರುಣ ಕ್ರಿಕೆಟಪಟುಗಳ ಸಂಘ ಇದೇ ಎಪ್ರಿಲ್ ೧೬ರಂದು ಇಂಗ್ಲೆಂಡಿನಲ್ಲಿ ಸಂಚರಿಸಲು ತೆರಳಿತು. ಕಳೆದ ನಾಲ್ಕು ಸಲ ಭಾರತದ ಕ್ರಿಕೆಟ ಸಂಘ ಇಂಗ್ಲೆಂಡಿನಲ್ಲಿ ಹೋಗಿ ಹಿಂತಿರುಗಿರುವುದು. ಅವೆಲ್ಲವುಗಳಿಗಿಂತ ಈಗ ೫ನೇ ಸಲ ಹೊರಟ ತಂಡವು, ಅತಿ ತರುಣ ಕ್ರಿಕೆಟ ಪಟುಗಳಿಂದ ಕೂಡಿರುವದು. ಈ ರೀತಿ ತರುಣ ಕ್ರಿಕೆಟ ಪಟುಗಳ ಸಂಘ ಇಂಗ್ಲೆಂಡಿಗೆ ಹೋಗುವದು ಇದೇ ಪ್ರಥಮವಾಗಿದೆ.

ಸದ್ಯ ವೆಸ್ಟ ಇಂಡೀಜ ಸಂಘವು ಭಾರತದಲ್ಲಿ ಕೈಕೊಂಡ ಸಂಚಾರದ ವೇಳೆಯು ಭಾರತ ಕ್ರಿಕೆಟ ಸಂಘದ ಕರ್ಣಧಾರ (Captain)ನ ಸ್ಥಾನದ ವಿಷಯದಲ್ಲಿ ವಿವಿಧ ಪ್ರಯೋಗಗಳನ್ನು ಮಾಡಿ ನಿಷ್ಫಲವಾದ ಬಳಿಕ; ಕೊನೆಗೆ ಇಂಗ್ಲೆಂಡಕ್ಕೆ ಪ್ರಯಾಣ ಮಾಡುವದಗೋಸ್ಕರ ಶ್ರೀ ದತ್ತಾಜಿ ಕೇ. ಗಾಯಕವಾಡರನ್ನು ಭಾರತ ಪ್ರಥಮ ತರುಣ ಕ್ರಿಕೆಟ ಪಟುಗಳ ತಂಡದ ನಾಯಕರೆಂದು ಆರಿಸಿದರು. ಈ ನಿವಡುಣಿಕೆಯು ಅನಪೇಕ್ಷಿತವಾದರೂ, ಈಗ ಪ್ರಾಪ್ತವಾದ ಪರಿಸ್ಥಿತಿಗೆ ಯೋಗ್ಯವಾಗಿರುವದು. ದೇಶ-ವಿದೇಶದಲ್ಲಿ ಪ್ರಸಿದ್ಧ ಕ್ರಿಕೆಟಪಟು ಎಂದು ಎನಿಸಿಕೊಂಡ ಶ್ರೀ ವಿಜಯ ಹಜಾರೆಯವರ ಪರಂಪರೆಯಲ್ಲಿ ಬಾಳಿ-ಬದುಕಿದ ಈ ಕ್ರಿಕೆಟ ಪಟು ರಣಜಿ ಟ್ರಾಫಿ ಸಂದ್ಯಗಳಲ್ಲಿ ಬಡೋದೆ ಕ್ರಿಕೆಟ ಸಂಘದ ಯಶಸ್ವೀ ಕಪ್ತಾನರೆಂದು ಅಗಣಿತ ಕೀರ್ತಿಯನ್ನು ಗಳಿಸಿರುವರು! ಇಷ್ಟು ಕೀರ್ತಿ ಗಳಿಸಿ ನಾಯಕತನದ ಅನುಭವ ಇದ್ದರೂ, ಭಾರತದ ನವ ಕಪ್ತಾನರೆಂದು ಅವರು ಇಂಗ್ಲೆಂಡಿಗೆ ಪ್ರಥಮವಾಗಿ ಹೋಗಿರುವರು. ತರುಣ ಸಂಘದ ಕ್ರಿಕೆಟ ಪಟುಗಳ ಸಹಕಾರದಿಂದ ಆಕಸ್ಮಿಕವಾಗಿ ಬಿದ್ದ ಈ ಗುರುತರದ ಹೊಣೆಗಾರಿಕೆಯನ್ನು ಶ್ರೀಯುತರು ತುಂಬಾ ಯಶಸ್ವೀ ರೀತಿಯಲ್ಲಿ ಪಾರಂಗತರಾಗುವರೆಂಬ ಅಪೇಕ್ಷೆಯು ದೇಶದೇಶದ ಕ್ರಿಕೆಟ ಪ್ರೇಮಿಗಳಿಗೆ ಇರುವದು.

ಶ್ರೀ ದತ್ತಾಜಿ ಗಾಯಕವಾಡರು ಬಡೋದೆಯ ಆಗರ್ಭ ಶ್ರೀಮಂತ ರಾಜಮನೆತನದಲ್ಲಿ—ಸನ್ ೧೯೨೮ನೇ ಅಕ್ಟೋಬರ ೨೭ ಸೋಮವಾರರಂದು ಜನ್ಮತಾಳಿದರು. ಇವರು ತಮ್ಮ ಪ್ರಾಥಮಿಕ ಅಭ್ಯಾಸವನ್ನು ಬಡೋದೆಯ ಪ್ರಾೃಮರಿ ಸ್ಕೂಲಿನಲ್ಲಿ ಮುಗಿಸಿ, ಅಲ್ಲಿಯ ಹೈಸ್ಕೂಲಿನಲ್ಲಿ ಹೋಗಿ ಮಾಧ್ಯಮಿಕ ಶಿಕ್ಷಣವನ್ನು ಹೊಂದಿದರು. ತರುವಾಯ ಹೆಚ್ಚಿನ ವಿದ್ಯಾಭ್ಯಾಸವನ್ನು ಕಲಿಯುವ ಅಪೇಕ್ಷೆ ತುಂಬಾ ಇದ್ದದ್ದರಿಂದ ಬಡೋದೆಯ ಕಾಲೇಜಿನಲ್ಲಿ ಪ್ರವೇಶಿಸಿದರು. ಅಲ್ಲಿ ಕೆಲವೇ ವರ್ಷಗಳಲ್ಲಿ ತಮ್ಮ ಅಮೋಘ ಬುದ್ಧಿ ಚಾತುರ್ಯದಿಂದ ಬಡೋದೆಯ ವಿದ್ಯಾಪೀಠದ ಪದವೀಧರರಾದರು. ಚಿಕ್ಕಂದಿನಿಂದಲೇ ಇವರಿಗೆ ಕ್ರಿಕೆಟ ಆಟದಲ್ಲಿ ಅಪಾರ ಆಸಕ್ತಿ ಇದ್ದ ಮೂಲಕ ತಮ್ಮ ವಯಸ್ಸಿನ ೧೨ನೇ ವರ್ಷಕ್ಕೆ ಕ್ರಿಕೆಟ ಕ್ಷೇತ್ರದಲ್ಲಿ ಅಡಿಯನ್ನಿರಿಸಿದರು! ಅಂದಿನಿಂದಲೇ ಕ್ರಿಕೆಟ ಆಟವನ್ನು ಆಡಲು ಪ್ರಾರಂಭಿಸಿದರು. ಅವರು ಮೊಟ್ಟ ಮೊದಲು ತಮ್ಮ ಊರಾದ ಬಡೋದೆಯ ಯುವರಾಜ ಸಂಘದ ಪರಿಯಿಂದ ಆಡಿದರು. ಹೀಗೆ ತಮ್ಮ ಸ್ವಬುದ್ಧಿಯಿಂದಲೇ ಆಡುತ್ತಿರುವಾಗ ಗಾಯಕವಾಡರಿಗೆ, ಪ್ರಖ್ಯಾತ ಭಾರತೀಯ ಕ್ರಿಕೆಟಪಟು ಶ್ರೀ ಸಿ. ಎಸ್. ನಾಯುಡುರವರ ಪರಿಚಯವಾಯಿತು. ಈ ತಾತ್ಕಾಲಿಕ ಪರಿಚಯವು ಕೆಲವೇ ದಿನಗಳಲ್ಲಿ ನಿಕಟ ಸಂಬಂಧವಾಗಿ ಪರಿಣಮಿಸಿತು. ನಾಯುಡುರವರ ಕೈಕೆಳಗೆ ಕ್ರಿಕೇಟಿನ ಪಾಠ ಕಲಿಯುವ ಸಂಧಿ ಶ್ರೀಯುತರಿಗೆ ಆಕಸ್ಮಾತ ದೊರಕಿತು! ಶ್ರೀ ಗಾಯಕವಾಡರು, "ತಮಗೆ ಸಿ. ಎಸ್. ನಾಯ್ಡುರವರೇ ಕ್ರಿಕೇಟಿನ ಶ್ರೀ ಗಣೇಶಾಯ ನಮಃ ಹಾಕಿ ಕೊಟ್ಟರೆಂದು ಮನಸ್ಪೂರ್ವಕವಾಗಿಯೂ ಕೃತಜ್ಞತಾಪೂರ್ವಕವಾಗಿ ಕಳವಳಿಯಿಂದ ಹೇಳುತ್ತಾರೆ. ಸಿ. ಎಸ್. ನಾಯ್ಡುರವರ ಶಿಕ್ಷಣದ ಪರಿಣಾಮವೆಂದರೆ, ಕ್ರಿಕೆಟ ಕ್ಷೇತ್ರದಲ್ಲಿ ದತ್ತಾಜಿಯವರ ಅವಿರತ ಪ್ರಗತಿಯಾಗ ತೊಡಗಿತು. ವಯಸ್ಸಿನ ೧೫ನೇ ವರ್ಷಕ್ಕೆ ತಾವು ಕಲಿತ ಶಾಲೆಯ ಪರಿಯಿಂದ ಒಂದು ಕ್ರಿಕೆಟ ಆಟದಲ್ಲಿ ಭಾಗವಹಿಸಿ, ಸತತ ೧೯೯—ಓಟಗಳನ್ನು ತೆಗೆದರು. ಅಂದೇ ಸಿ. ಎಸ್. ನಾಯ್ಡುರವರು ದತ್ತಾಜಿಯವರಿಗೆ ಕ್ರಿಕೆಟ ಆಟದ ವಿವಿಧ ಪ್ರಕಾರಗಳಲ್ಲಿ "ಲೆಗ್ ಬ್ರೆಕ್ (Leg Break)" ಮತ್ತು "ಗುಗಲೀ (Gogaly)' ಚಂಡೆಸೆಯಲು—(Bowling) ಕಲಿಸಿದರು.

ಮುಂದೆ ಬಡೋದೆಯ ವಿದ್ಯಾಪೀಠ ಸ್ಥಾಪನೆಯಾದ ತರುವಾಯ ದತ್ತಾಗಾಯಕವಾಡರು ಬಡೋದೆಯ ವಿದ್ಯಾಪೀಠದ ಸಂಘದ ಕಡೆಯಿಂದ ಆಡ ತೊಡಗಿದರು. ಇವರು ಸತತ ಎರಡುವರೆ ವರ್ಷಗಳ ತನಕ ಬಡೋದೆ ವಿದ್ಯಾಪೀಠ ಕ್ರಿಕೆಟ ಸಂಘದ ನಾಯಕರಾಗಿ ಉಳಿದರು—ಸನ್ ೧೯೫೧-೫೨ರಲ್ಲಿ ಮುಂಬೈ ವಿದ್ಯಾಪೀಠದ ವಿರುದ್ಧ ಆಟವಾಡಿ ೨೦೨ ಓಟಗಳನ್ನು (Runs) ತೆಗೆದರು. ತದಾಚಿತ್ ಇವರ ಸ್ಪೇಕ್ಷಣೀಯ ಕ್ರಿಕೆಟ ಆಟವನ್ನು ನೋಡಿಯೇ ಸನ್ ೧೯೫೨ರಲ್ಲಿ ಶ್ರೀ ವಿಜಯ ಹಜಾರೆಯವರ ಕೆಪ್ಟನ್ನತ್ವದಲ್ಲಿ ಇಂಗ್ಲೆಂಡಿಗೆ ತೆರಳಿದ ಭಾರತೀಯ ಕ್ರಿಕೆಟ ತಂಡದಲ್ಲಿ ಸೇರಿಸಿಕೊಳ್ಳಲಾಯಿತು. ಈ ವಿದೇಶಿ ಸಂಚಾರದಲ್ಲಿ ಅವರು ಅಲ್ಲಿ ಆಡಿದ ಕ್ರಿಕೆಟ ಆಟಗಳಲ್ಲಿ ಹೊಳೆಯಲಿಲ್ಲ. ಮೊದಲನೇ ಪಂದ್ಯದಲ್ಲಿ ಆಡಿ ಅವರು ಕೇವಲ ೯ ವ ೦ ಹೀಗೆ ಓಟಗಳನ್ನು ತೆಗೆದರು. ಆದರೆ ಆ ಪ್ರಯಾಣದಲ್ಲಿಯೇ ಗಾಯಕವಾಡರು ಇಲ್‌ಕರ್ಡದಲ್ಲಿ ಇಸೆಕ್ಸ ವಿರುದ್ಧ ಆಟ ಆಡಿ ೮೩ ಓಟಗಳನು ತೆಗೆದು ತಮ್ಮ ಆಟದ ಚಾತುರ್ಯವನ್ನು ಪ್ರದರ್ಶಿಸಿದರು!

ಇದಾದ ನಂತರ ಅದೇ ವರ್ಷ ಭಾರತದಲ್ಲಿ ಬಂದ ಪಾಕಿಸ್ತಾನ ಕ್ರಿಕೆಟ ತಂಡದ ವಿರುದ್ಧ ದತ್ತಾಜಿಯವರಿಗೆ ಆಡಲು ಅವಕಾಶ ದೊರಕಿತು. ಅವರು ಲಖನೌ ಮತ್ತು ಕಲಕತ್ತಾದಲ್ಲಿ ನಡೆದ "ನಿರ್ಣಾಯಕ ಪಂದ್ಯ (Test Match)"ಗಳಲ್ಲಿ ಆಟವಾಡಿದರು. ಪಾಕಿಸ್ತಾನದ ತರುವಾಯ ವೆಸ್ಟ ಇಂಡೀಜ (West Indies)ಕ್ಕೆ ಶ್ರೀ ಹಜಾರೆಯವರ ನೇತೃತ್ವದಲ್ಲಿ ಹೋದ ಭಾರತೀಯ ಕ್ರಿಕೆಟ ತಂಡದ ಜೊತೆಗೆ ಹೋಗುವ ಸುಸಂಧಿಯು ಅವರಿಗೆ ಲಭಿಸಿತು! ಅಲ್ಲಿಯ ಪ್ರಥಮ ಆಟದಲ್ಲಿ ಗಾಯಕವಾಡರು ಒಳ್ಳೇ ರೀತಿಯಲ್ಲಿ ಆಡಿದರು. ಆದರೆ ಎರಡನೇ ನಿರ್ಣಾಯಕ ಪಂದ್ಯದಲ್ಲಿ ಅವರ ಹೆಗಲಿಗೆ ಬಲವಾದ ನೋವಾದ್ದರಿಂದ, ಡಾಕ್ಟರರ ಹೇಳಿಕೆಯ ಮೇರೆಗೆ ಕೆಲಕಾಲ ವಿಶ್ರಾಂತಿಯನ್ನು ತೆಗೆದುಕೊಂಡರು. ಅಲ್ಲಿ ನಡೆದ ಇನ್ನುಳಿದ ಯಾವದೇ ಕ್ರಿಕೆಟ ಪಂದ್ಯಗಳಲ್ಲಿ ಭಾಗವಹಿಸಲಿಲ್ಲ ಅವರು. ಅಷ್ಟೇ ಅಲ್ಲ ವೆಸ್ಟ ಇಂಡೀಜದ ಸಂಪೂರ್ಣ ಪ್ರಯಾಣದಲ್ಲಿ ಅವರು ಪುನಃ ಆಡಲು ಸಮರ್ಥರಾಗಲಿಲ್ಲ!

ರಣಜೀ ಟ್ರಾಫೀ ಆಟಗಳಲ್ಲಿ ಶ್ರೀ ದತ್ತಾಜಿ ಕೇ. ಗಾಯಕವಾಡರು ಉಲ್ಲೇಖನೀಯ ಯಶ ಹೊಂದಿರುವರು. ಹಾಗೂ ಈ ಪಂದ್ಯಗಳಲ್ಲಿ ಬ್ಯಾಟಿಂಗ (Bating) ದ ವಿಷಯದಲ್ಲಿ ಅವರು ಮಾಡಿದ ಕಾಮಗಿರಿಯು ಸರ್ವಶ್ರುತವಾಗಿದೆ! ಸನ್ ೧೯೪೭-೪೮ರಲ್ಲಿ ಅವರು ಕಾಟಿವಾಡ ವಿರುದ್ಧ ರಣಜೀ ಟ್ರಾಫೀ ಆಟದಲ್ಲಿ ಆಡಿ, ಪ್ರಥಮ ದರ್ಜೆಯ ಕ್ರಿಕೆಟ್ ಕ್ಷೇತ್ರದಲ್ಲಿ ಪಾದಾರ್ಪಣ ಮಾಡಿರುವರು. ಹಾಗೂ ಅಂದಿನಿಂದ ಗಾಯಕವಾಡರು ಬಡೋದೆಯ ಕ್ರಿಕೆಟ ಸಂಘದಿಂದ ನಿಯಮಿತ ಆಡುತ್ತ ಬಂದಿರುವರು. ರಣಜೀ ಟ್ರಾಫಿ ಆಟದಲ್ಲಿ ಅವರು ಸನ್ ೧೯೪೭-೪೮ರಿಂದ ಸನ್ ೧೯೫೭-೫೮ರ ಕೊನೆಯ ವರೆಗೆ ೧೮೩೩ ಓಟಗಳನ್ನು (ಸರಾಸರಿ—೪೦.೭೭) ಸಂಪಾದಿಸಿದ್ದಾರೆ! ಹಾಗೂ ಮೊನ್ನೆಯ ಹಂಗಾಮಿನಲ್ಲಿ ೫೪೭ ಓಟಗಳನ್ನು (ಸರಾಸರಿ—೬೮.೦೮) ತೆಗೆದರು. ರಣಜಿ ಟ್ರಾಫೀ ಪಂದ್ಯಗಳಲ್ಲಿ ಈ ತನಕ ಗಾಯಕವಾಡರು, ಒಟ್ಟು ೧೦ ಶತಕಗಳನ್ನು ಗಳಿಸಿರುವರು! ಸದ್ಯ ಗಾಯಕವಾಡರು ಬಡೋದೆಯ ಸಂಘದ ಕರ್ಣಧಾರರಾಗಿಯೇ ಇರುವರು!

ಶ್ರೀ ಗಾಯಕವಾಡರು ಒಂದಾನುವೇಳೆ ವಿಜಯ ಮರ್ಚಂಟ, ವಿಜಯ ಹಜಾರೆ, ಲಾಲಾ ಅಮರನಾಥ, ವಿನೂ ಮಂಕಡ ಇವರಂಥ ನಾಮಾಂಕಿತ ಜಾಗತಿಕ ಆಟಗಾರರ ಮಾಲಿಕೆಯಲ್ಲಿ ಬಾರದಿದ್ದರೂ, ಒತ್ತಟ್ಟಿಗೆ ಅವರು ಒಬ್ಬ ಒಳ್ಳೇ ಕ್ರಿಕೆಟಪಟುಗಳೆಂದು ಹೆಸರು ಪಡೆದಿದ್ದಾರೆ! ಇವರ ಭವಿತವ್ಯವು ಉಜ್ವಲವಿದೆ! ಗಾಯಕವಾಡರು ಒಬ್ಬ ಉತ್ತಮ ಆಟಗಾರ (Batsman)ರೆಂದು ಹೇಳಿ ತುಂಬಾ ಕೀರ್ತಿಯನ್ನು ಗಳಿಸಿದ್ದಾರೆ. ಈ ವಿಷಯದಲ್ಲಿ ಶ್ರೀ ವಿಜಯ ಹಜಾರೆಯವರೊಡನೆ ಇವರ ತುಲನೆ ಮಾಡಬಹುದು. ಆದರೆ ಗಾಯಕವಾಡರ ಆಟದಲ್ಲಿ ಚಾತುರ್ಯ ಇದ್ದಂತೆ ನಿಧಾನತವೂ, ಜಾಣಕ್ಷತನವೂ ಕೂಡಿಕೊಂಡಿರ್ವರು. ಅವರು ಬಹು ಜಾಣ್ಮೆಯಿಂದ ಕ್ರಿಕೆಟ ಆಟವನ್ನು ಆಡಲು ಸಮರ್ಥರಿದ್ದಾರೆ. ಈ ವರೆಗೆ ದತ್ತಾಜಿಯವರು ಇಂಗ್ಲೆಂಡ, ವೆಸ್ಟಇಂಡೀಜ ಹಾಗೂ ಪಾಕಿಸ್ತಾನ ಈ ವಿದೇಶಿ ಸಂಘಗಳ ವಿರುದ್ಧ ಆಟವಾಡಿ ತಮ್ಮ ಕೌಶಲ್ಯವನ್ನು ದೇಶ-ವಿದೇಶಗಳಲ್ಲಿ ಪ್ರಕಟಿಸಿರುವರು! ಇತ್ತರಲ್ಲಿಯೇ ಮುಕ್ತಾಯಗೊಂಡ ವೆಸ್ಟಇಂಡೀಜ ಕ್ರಿಕೆಟ ಸಂಘದ ವಿರುದ್ಧ ದಿಲ್ಲಿಯಲ್ಲಿ ನಡೆದ ಕೊನೆಯ ನಿರ್ಣಾಯಕ ಪಂದ್ಯದಲ್ಲಿ ಆಡುವಾಗ ಅವರು ೫೭ ಓಟುಗಳನ್ನು ತೆಗೆದರು, ಆದರೆ ಅದು ಆವೇಳೆಗೆ ಬಹುಉಪಕಾರಿಯಾಗಿ ಪರಿಣಮಿಸಿತು. ಹಾಗೂ ಅವರ ಆಟವು ಅತಿ ಶೈಲಿಯುಕ್ತವಾಗಿತ್ತು. ಆ ಆಟದಲ್ಲಿ ಅವರ ಅನುಕ್ರಮತೆ, ಹಾಗೂ ಕ್ಷೇತ್ರ

(೧೦ನೇ ಪುಟ ನೋಡಿರಿ)

ಸ್ಥಾಪನೆ: 1906] ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ. 20,00,000/-
ಕ್ಷೇಮನಿಧಿ	—	ರೂ. 14,40,000/-
ಠೇವಣಾತಿಗಳು	—	ರೂ. 7,19,35,000/-
ಸಾಲಗಳು	—	ರೂ. 3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ. 9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ.

The Canara Banking Corporation Ltd.

Estd:- 1906] [H. O. UDIPI (S. India)

ನೋವುಗಳ ಅತ್ಯುತ್ತಮ ಸಂಹಾರಿಣಿ.



ವಿಜ್ಞಾನ ವಿಸ್ಮಯ

ಅತ್ಯಮೂಲ್ಯವಾದ ಲೋಹ-ರೇಡಿಯಂ

ಸದಾಕಾಲವೂ ಶಾಖಬಿಡುವ ಈ ಲೋಹ ಅನೇಕಾನೇಕ ಚಿಕಿತ್ಸೆಗಳಿಗೆ ನೆರವಾಗುತ್ತಿದೆ.

ಜಗತ್ತು ದುಂಡಗಾಗಿದೆ, ತಕ್ಕಂತೆಯೆ ಚೋದ್ಯವೂ ಆಗಿದೆ. ಇಂತಹ ಒಂದು ಜಗದಲ್ಲಿ ಯಾವ್ಯಾವ ವಿಜ್ಞಾನ ವಿಸ್ಮಯಗಳು ನಡೆಯುತ್ತಿಲ್ಲ? ಇದು ನಿಜಕ್ಕೂ ಸ್ಪುಟ್ನಿಕ್ ಯುಗವೆನ್ನಬೇಕು. ಇಂದು ಆಕಾಶದಲ್ಲಿ ಹಾರಾಡುವ ಏರ್ಪಾಡಿದೆ, ಆದರೆ ಹಿಂದೆ? ಅದರ ಅವಸ್ಥೆಯ ಚಿತ್ರಣವನ್ನು ಮನಸ್ಸಿನಲ್ಲಿ ಮಾಡಿದಾಗಲಂತೂ ಮೈ ಒಮ್ಮೆಲೇ ಜುಮ್ಮೆನಿಸುತ್ತದೆ. ಇಂದು ಆಹಾರ ಸಂಶೋಧನಾ ಕೇಂದ್ರ ಮೈಸೂರ್-ರವರು ತೌಡಿನಿಂದ ಎಣ್ಣೆ ತೆಗೆಯುತ್ತಾರೆ ಎಂಬುದು ವಿಜ್ಞಾನದ ಅಭಿವೃದ್ಧಿ ಸೂಚಿಸಲಾರದೆ? ಜಗತ್ತಿನಲ್ಲಿ ಅಮೇರಿಕಾ, ರಶ್ಯಾಗಳಂತೆ ಯುರೋಪೂ ವಿಜ್ಞಾನ ಕ್ಷೇತ್ರದಲ್ಲಿ ಮುಂದುವರಿದಿದೆ. ಅಲ್ಲಿ ದಿನಗಳೆದಂತೆ ವಿಜ್ಞಾನದುನ್ನತಿಯಾಗುತ್ತಲಿದೆ. ಹೇಗೆ ಹೇಗೆ ಮಾನವನ ಜ್ಞಾನಬುದ್ಧಿ ಅಭಿವೃದ್ಧಿಗೊಳ್ಳುವುದೋ ಅದೇ ರೀತಿಯಲ್ಲಿ ಅವನಲ್ಲಿ ಹುದುಗಿರುವ ಶೋಧಕ ಬುದ್ಧಿಯೂ ವಿಕಾಸಗೊಳ್ಳುವುದರಲ್ಲಿ ದೋಷವೇ ಇಲ್ಲ, ಇದೆಯೆ?

ಈ ಯುರೋಪಿಯನರು ಒಂದು ಅತ್ಯಂತ ಅಮೂಲ್ಯ ಧಾತುವಿನ ಶೋಧನೆ ನಡೆಸಿ ಯಶಸ್ವಿಗೊಂಡಿದ್ದಾರೆ. ಯೂರೋಪ್ ಖಂಡದ ಭೂಪಟದಲ್ಲಿ ಫ್ರಾನ್ಸ್ ಗುರುತಿಸಿರಿ. ಅಲ್ಲಿ ಅನೇಕ ಮಂದಿ ವಿಜ್ಞಾನದಲ್ಲಿ ಮುಂದುವರಿದವರಿರುತ್ತಾರೆ, ಅವರ ಪೈಕಿ ಕ್ಯೂರಿ ವಿಜ್ಞಾನಿಯು ನಾಮಾಂಕಿತನು. ಅವನೂ ಅವನ ಪತ್ನಿಯೂ ಕೂಡಿ ಒಂದು ಶೋಧನೆ ನಡೆಸಿ ಈ ಧಾತುವನ್ನು ಕಂಡುಹಿಡಿದರು.ಒಂದೇಸಮನೆ ಇದರಿಂದ ಬೆಳಕು ಹೊರಕೊಮ್ಮುತ್ತದೆ. ಅದೇ 'ರೇಡಿಯಂ'. ಇದರ ಪತ್ತೆ ಫ್ರಾನ್ಸಿನಲ್ಲಿ ಮೊತ್ತಮೊದಲಾದುದೇ ತಡ ವಿಜ್ಞಾನ ಜಗತ್ತಿನಲ್ಲಿ ಕೋಲಾಹಲವೆದ್ದಿತು. ಅದೇನು; ಅದರ ಕತೆಯೇನು?ಎಂದು.ಎಲ್ಲವಿಜ್ಞಾನಿಗಳಿಗೂ ವಿಸ್ಮಯ, ಆಶ್ಚರ್ಯ. ಅದರ ವಿಚಿತ್ರ ಹಾಗೂ ವಿಶಿಷ್ಟ ಲಕ್ಷಣಗಳು ವಿಜ್ಞಾನಿಗಳನ್ನು ಆಶ್ಚರ್ಯ ಸಮುದ್ರದಲ್ಲಿ ತೇಲಿಸಿತು. ಅದು ಸ್ವಾಭಾವಿಕ.ಅವರು ಬಗೆ ಬಗೆಯಿಂದ ಅದರ ಪರೀಕ್ಷೆ ನಡೆಸಿದರು ಈಗಲೂ ವಿಜ್ಞಾನಿಗಳು ನಡೆಸುತ್ತಲಿದ್ದಾರೆ; ಅಭಿವೃದ್ಧಿಗಳಿಸುತ್ತಲಿದ್ದಾರೆ.

ರೇಡಿಯಂ ನಿಜಕ್ಕೂ ಅಮೂಲ್ಯ ಧಾತು, ಇಲ್ಲದಿದ್ದರೆ ಹಾಗೆ ವಿಜ್ಞಾನಿಗಳು ಅದನ್ನು ಕಂಡು, ಅದರ ಲಕ್ಷಣವೀಕ್ಷಿಸಿ ಅಚ್ಚರಿ ಪಡುವ ಸಂಭವವಿರಲಿಲ್ಲ. ಇದು 'ಪಿಚ್ ಬ್ಲೆಂಡ್' ಹೆಸರಿನ ಖನಿಜ ವಸ್ತುವಿನಿಂದ ಸಿಗುವುದು. ಆದರೆ ಹಾಗೆ ಅದನ್ನು ಸಂಪಾದಿಸುವ ಕಾರ್ಯವೇನೂ ಅವಲಕ್ಕಿ ಜಗಿದಂತಿಲ್ಲ. ಅದು ಬಹಳ ತಲೆನೋವು ತರುವಂತಹದು. ಅದರ ಸಂಪಾದನೆಗೆ ತುಂಬ ಬೆವರು ಸುರಿಸಬೇಕು, ಜತೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ಹಣವನ್ನು ವ್ಯಯಿಸುವ ವ್ಯವಧಾನವೂ ಬೇಕು. ಇರಲಿ, ಇಷ್ಟೊಂದು ಶ್ರಮ ವಹಿಸುತ್ತೇವೆಂದರೂ ಅದೆಷ್ಟು ಸಿಗಬಲ್ಲುದು? ಅದೇನು ಬೃಹತ್ ಪ್ರಮಾಣದಲ್ಲಿ ಸಿಗಲಾರದು ಸ್ವಲ್ಪ ಪ್ರಮಾಣದಲ್ಲಿ ಸಿಗಬಹುದಾದರೂ ಅದರ ಬೆಲೆ ಕೇಳಿದಿರಾ? ಒಂದು ಚಿಕ್ಕ ಕಾಳು ರೇಡಿಯಮ್ಮಿನ ಬೆಲೆ ಐದು ಸಾವಿರ ರೂಪಾಯಿಗಳ ತನಕವೂ ಇದೆಯೆಂದು ತಿಳಿಯಲಾಗಿದೆ. ಅಷ್ಟೊಂದು ಚಿಕ್ಕ ಕಾಳು ಹತ್ತು ಸಾವಿರ ರೂಪಾಯಿಯ ಪ್ರಯೋಜನ ನಮಗೀಯ ಬಲ್ಲುದು. ಅಷ್ಟೊಂದು ಸಾಧ್ಯತೆ ಅದಕ್ಕಿದೆ. ಆದುದರಿಂದಲೇ ಅದೊಂದು ಅಮೂಲ್ಯ ಧಾತು.

ರೇಡಿಯಂನ ಒಂದು ವಿಶಿಷ್ಟ ಗುಣವೆಂದರೆ—ಸದಾ ಉಷ್ಣತೆಯನ್ನು ಹೊರಬಿಟ್ಟು ಕೊಡುವುದು. ಅದೆಂದೂ ಕಮ್ಮಿಯಾಗಲಾರದು. ಅಂತೂ ಇದರ ಉಷ್ಣತೆಯು ಇದರ ಬಳಿಯ ಇತರ ಪದಾರ್ಥಗಳಿಗಿಂತ ಎಷ್ಟೋ ಹೆಚ್ಚು. ವೈದ್ಯರು ಉಷ್ಣತೆ ಕಮ್ಮಿಯಾಗಲು ಜ್ವರದ ದಿನ ಮಂಜುಗಡ್ಡೆ ತಲೆಯ ಮೇಲಿಡುತ್ತಾರೆ ಎಂಬುವುದನ್ನು ನಾಲ್ಕಾರು ಡಿಗ್ರಿ ಜ್ವರ ಕಾಣಿಸಿಕೊಂಡ ವ್ಯಕ್ತಿಗಳು ತಿಳಿದಿದ್ದಾರೆ. ಇಲ್ಲಿ ಈ ರೇಡಿಯಂ ಅನ್ನು ಮಂಜಿನಲ್ಲಿ ಹಾಕಿದರೂ ಅದರ ಉಷ್ಣತೆ ನಷ್ಟವಾಗುವುದಿಲ್ಲ, ಬದಲಿಗೆ ಮಂಜುಗಡ್ಡೆಯೇ ಕರಗಿ ನೀರಾಗುತ್ತದೆ.

ಇನ್ನು ಅದರ ಲಕ್ಷಣ ವಿಶೇಷಗಳನ್ನು ವೀಕ್ಷಿಸಿ ಹೇಳುವುದಿದ್ದರೆ, ಅದರ ಲಕ್ಷಣಗಳು ನಮ್ಮ ಮನೋವಾರಿಧಿಯಲ್ಲಿ ಆಶ್ಚರ್ಯದ ತೆರೆಗಳನ್ನು ಏಳಿಸಬಲ್ಲವು. ಇದರ ಇನ್ನೊಂದು ಮುಖ್ಯ ಗುಣವೆಂದರೆ (ಎಲ್ಲವೂ ಮುಖ್ಯವೇ ಎನ್ನಿ!) ಅದನ್ನೆಷ್ಟು ತಣ್ಣಗೆ ಮಾಡುತ್ತಾರೋ ಅಷ್ಟೇ ಉಷ್ಣತೆ ಅದರಿಂದ ಹೊರಡುತ್ತದೆ. ಅದರ ಬಗ್ಗೆ ಒಂದು ಗಮನಾರ್ಹ ವಿಷಯವೇನೆಂದರೆ ಅದು ಹೊಸತಿದ್ದಷ್ಟೂ ಅದರಲ್ಲಿ ಉಷ್ಣತೆಯ ಗಾತ್ರ ಕಮ್ಮಿ; ವಿರುದ್ಧವಾಗಿ ಹೇಳುವುದಾಗಿದ್ದರೆ ಅದು ಹಳತಾಗಿ ಬಂದಷ್ಟು ಅದರಲ್ಲಿನ ಉಷ್ಣತೆಯ ಗಾತ್ರ ಹೆಚ್ಚಾಗುವುದು. ಆದುದರಿಂದಲೇ, 'ಓಲ್ಡ್ ಈಸ್ ಗೋಲ್ಡ್' ಎನ್ನುವುದು ಸರಿ.

(೯ನೇ ಪುಟ ನೋಡಿರಿ)

ಅಂಡಮಾನದಲ್ಲಿ ಪುನರ್ನಿವೇಶನ

ಭಾರತದ ಕೇಂದ್ರೀಯಸರಕಾರದ ನೇರವಾದ ಆಡಳಿತೆಯಲ್ಲಿರುವ ಅಂಡಮಾನ ದ್ವೀಪಗಳಲ್ಲೊಂದರಲ್ಲಿ ಹೊಸತಾಗಿ ನೆಲಸ ಬಯಸುವವರಿಗೆ ಅವಕಾಶವನ್ನು ಕಲ್ಪಿಸಿ ಕೊಡಲಾಗಿದೆ ಇಂತಹ ಅವಕಾಶವನ್ನು ಬಂಗಾಳದ ಒಂದು ಕುಟುಂಬವು ಅಲ್ಲಿನ ನಿರ್ಜನವಾದ ಅರಣ್ಯಯುಕ್ತವಾದ ಭೂಮಿಯನ್ನು ಕೃಷಿಯೋಗ್ಯವಾಗಿ ಮಾಡಿಕೊಳ್ಳುವುದರಲ್ಲಿ ಆಸಕ್ತವಾಗಿದೆ.

ಅಂಡಮಾನ ಮತ್ತು ನಿಕೋಬಾರ ದ್ವೀಪಗಳು ಅರಣ್ಯಗಳಿಂದ ತುಂಬಿದ್ದು ಕಡಿಮೆ ಜನಸಂಖ್ಯೆಯುಳ್ಳದಾಗಿವೆ. ಹೀಗೆ ಈ ದ್ವೀಪಗಳು ಆರ್ಥಿಕ ಮತ್ತು ಔದ್ಯಮಿಕ ಅಭಿವೃದ್ಧಿಯನ್ನು ಹೊಂದುವಂತೆ ಮಾಡಲು ಭಾರತದ ಬೇರೆ ಬೇರೆ ಕಡೆಗಳಿಂದ ಹಲವಾರು ಕುಟುಂಬಗಳನ್ನು ತಂದು ಅವರು ಇಲ್ಲಿನ ಬಂಜರು ಭೂಮಿಯನ್ನು ಹಸನು ಮಾಡುವಂತೆ ನೋಡುವುದು ಅಗತ್ಯ. ಹೀಗೆ ಕೃಷಿ, ಉದ್ಯಮಗಳನ್ನು ಕೈಗೊಳ್ಳುವುದರಿಂದ ಈ ದ್ವೀಪಗಳ ಆರ್ಥಿಕೋತ್ಥಾನವು ಸಾಧ್ಯವಾಗಿದೆ. ಇದರಿಂದ ಪ್ರಾಕೃತಿಕ ಸಂಪತ್ತೂ ಯೋಗ್ಯ ರೀತಿಯಲ್ಲಿ ಬಳಕೆಯಾಗುವಂತಾಗುವುದು.

ಭಾರತ ಸರಕಾರವು ಈ ದ್ವೀಪ ಸಮುದಾಯವನ್ನು ಅಭಿವೃದ್ಧಿಗೊಳಿಸುವ ಕ್ಷಿಪ್ರತರ ಭೂವಸಾಹತೀಕರಣ ಯೋಜನೆಯೊಂದನ್ನು ೧೯೫೨ರಲ್ಲಿ ಕೈಗೊಂಡಿದೆ. ಇದರನ್ವಯವಾಗಿ ದ್ವಿತೀಯ ಪಂಚವಾರ್ಷಿಕ ಯೋಜನೆಯು ಮುಕ್ತಾಯಗೊಳ್ಳುವಾಗ ೩,೫೦೦ ಕುಟುಂಬಗಳು ಇಲ್ಲಿ ಬಂದು ನೆಲಸುವವು. ಈ ಕುಟುಂಬಗಳಿಂದಾಗಿ ಸುಮಾರು ೧೧,೫೦೦ ಎಕ್ರೆಗಳಷ್ಟು ಘೋರಾರಣ್ಯಭರಿತ ಭೂಮಿಯು ನಿವಾಸಯೋಗ್ಯವಾಗಿ ಪರಿಣಮಿಸುವುದು.

ಮೇಲಿನ ಚಿತ್ರದಲ್ಲಿ ಬಂಗಾಳದಿಂದ ವಲಸೆ ಬಂದ ಕುಟುಂಬವು ನೆಲಸಮ ಮಾಡುವುದರಲ್ಲಿ ತತ್ಪರವಾಗಿರುವುದನ್ನು ಕಾಣಬಹುದು.

ಶ್ರೀ ಎನ್. ಎಸ್. ಕಿಲ್ಲೆಯವರ ಪ್ರಾಚೀನ ತುಳುನಾಡಿನ ೨ನೇ ಭಾಗ

"ಹೆಗಡೇರ ತುಳುನಾಡು"

ಈ ಗ್ರಂಥಕ್ಕೆ ಶ್ರೀ ಡಾ। ಎ. ಬಿ. ಸಾಲೆತ್ತೂರು M. A; Ph. D. ಲಂಡನ್ ಇವರ ಮುನ್ನುಡಿಯೊಡನೆ ಪ್ರಕಟವಾಗುವ ೪ ಅಧ್ಯಾಯಗಳ ೩೦೦ಪುಟಗಳಿಗೂ ಮಿಕ್ಕಿದ ೩೫ವರ್ಷಗಳ ಸಂಶೋಧನೆಯ ಗ್ರಂಥ.ಇದರಲ್ಲಿ ಕ್ರಿಸ್ತಪೂರ್ವದಿಂದ ಕ್ರಿ. ಶ. ೧೫೦೦ರ ವರೆಗಿನ ತುಳು ಜನರ ಮತ್ತು ಕನ್ನಡ ನಾಡವರ ಇತಿಹಾಸವೂ ಅವರವರ ಜಾತಿ, ಕಟ್ಟುಕಟ್ಟಳೆ ರೀತಿ ರಿವಾಜುಗಳೂ ಅವುಗಳನ್ನು ಆಚರಿಸುವ ವಿಧಿ ವಿಧಾನಗಳೂ-ತುಳುನಾಡಿಗೆ ಬೇರೆ ಬೇರೆ ಕಡೆಗಳಿಂದ ಬಂದು ನೆಲಸಿದ ಬ್ರಾಹ್ಮಣರು ಕ್ಷತ್ರಿಯರು ವೈಶ್ಯರು ಇನ್ನಿತರರು ಬಂದ ಕಾರಣಗಳೂ ಮತ್ತು ಅವರು ತುಳುನಾಡಿನಲ್ಲಿ ಆರಾಧಿಸುವ ದೇವಸ್ಥಾನ ಮಾಡು ಬಸ್ತಿ ಗುಡಿಗೋಪುರಗಳೂ ಅದರ ಇತಿಹಾಸವೂ-ತುಳುನಾಡಿನ ಎಲ್ಲಾ ಜಾತಿಯವರ ಪರಂಪರೆಯನ್ನು ತಿಳಿಸುಕೊಳ್ಳಬೇಕಾದರೆ ಈ ಗ್ರಂಥಕ್ಕೆ ಆರ್ಡರು ಮಾಡಿರಿ. ೧ನೇ ಆವೃತ್ತಿ ೫೦೦ ಪ್ರತಿಗಳು ಮಾತ್ರ ಪ್ರಕಟವಾಗುವುದರಿಂದ, ನಿಮ್ಮ ಪ್ರತಿಗಳನ್ನು ಕಾದಿಡಿರಿ. ಪುಸ್ತಕದ ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ.

ಅಮುಣಂಜೆ ಗುತ್ತು ಎನ್. ಎ. ಶೀನಪ್ಪ ಹೆಗಡೆ,
ತುಳುನಾಡು, P. O. ಪೊಳಲಿ. ದ. ಕನ್ನಡ.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಸಮಾಜ ದರ್ಶನ

ವಿಶ್ವದ ಸಮಾಜ ಬೆಳೆದು ಬಂದ ಬಗೆ

ಪ್ರಪಂಚದ ಬೇರೆ ಬೇರೆ ವಿಚಾರವಾದಿಗಳ ಅಂಕುಡೊಂಕಾದ ಸ್ವಭಾವಗಳು.

ಸೊಕ್ರೆಟೀಸರನ್ನು ಯುನಾನ್‌ನ ಪ್ರಥಮ ದಾರ್ಶನಿಕರೆಂದು ಗೌರವಿಸುತ್ತಾರೆ. ಅವರು ದಾರ್ಶನಿಕರೆಂಬ ಬಿರುದಿಗೆ ಪಾತ್ರರಾಗಿದ್ದರೂ ತನಗೆ ಏನೂ ತಿಳಿದಿಲ್ಲವೆಂಬ ಒಂದೇ ಒಂದು ವಿಚಾರವನ್ನು ತಾನು ಅರಿತಿರುವೆನೆಂದವರು ಹೇಳುತ್ತಿದ್ದರು. ಜ್ಞಾನವೇದಿಕೆಗೆ ಪ್ರಥಮ ಆಹುತಿಯಾಗಿ ಹೋದ ಮಹಾಜ್ಞಾನಿ ಸಾಕ್ರೆಟೀಸರನ್ನು ಯುನಾನಿ ಸರಕಾರವು ವಿಷಪಾನ ಮಾಡಿಸಿ ಮೃತ್ಯುವನ್ನಪ್ಪುವಂತೆಸಗಿತು. ನಾವೂ ನೀವೂ ಹಾಲು ಕುಡಿಯುವಷ್ಟು ಸರಳತೆ ಮತ್ತು ಉತ್ಸಾಹಸಹಿತವಾಗಿ ಅವರು ಆ ಕಠೋರ ವಿಷವನ್ನೂ ಕುಡಿದುಬಿಟ್ಟಿದ್ದರು. ಜೇಲರನು ಸಾಕ್ರೆಟೀಸರಿಗೆ ವಿಷಪಾನದ ದಂಡನೆಯೊಯ್ಯಲಾಯಿತೆಂದು ಘೋಷಿಸಿದೊಡನೆಯೇ ಆತನೇ ಸ್ವಯಂ ಅಶ್ರುಧಾರಾವರ್ಷವನ್ನು ಸುರಿಸಿದನೆಂದೂ ಈ ಘೋಷಣೆಯನ್ನುಉಚ್ಚರಿಸುವಾಗ ಆತನ ಸೆರೆಕಟ್ಟೆ ಬಂದಿತ್ತೆಂದೂ ಓರ್ವ ನಿರಪರಾಧಿಯ ಹತ್ಯಾಕಾಂಡವು ನಡೆಯುತ್ತಿರುವುದಕ್ಕೆ ಪದೇ ಪದೇ ಕ್ಷಮಾಯಾಚನೆ ಮಾಡಿದನೆಂದೂ ಸಾಕ್ರೆಟೀಸನ ಶಿಷ್ಯ ಮಹಾ ತತ್ವಜ್ಞಾನಿ ಪ್ಲೇಟೊ ಬರೆದಿದ್ದಾನೆ. ಆಗ ಕೊನೆಗೆ ಮಹಾತ್ಮನಾದ ಸಾಕ್ರೆಟೀಸನು ಹೇಳಿದನಂತೆ—"ಮಿತ್ರ, ನಾನು ನಿನ್ನ ಮಾನಸಿಕ ಔದಾರ್ಯಕ್ಕೆ ಚಿರಋಣಿಯಾಗಿದ್ದೇನೆ. ಆದರೆ, ನಿನ್ನ ಮಾತುಗಳಲ್ಲಿ ಏನು ಹುದುಗಿಕೊಂಡಿದೆಯೋ ಆ ವಿಚಾರವನ್ನು ಮಾತ್ರ ಎಂದಿಗೂ ಒಪ್ಪಲಾರೆ."

ಹಠಯೋಗಿ ಡಾಯೊಸಿಸ್‌ರವರ ಕಥೆಯೂ ಬಹಳ ಮನೋರಂಜಕವಾಗಿದೆ. ಅವರೊಂದು ಗುಡಿಸಲಿನಲ್ಲಿ ವಾಸಿಸುತ್ತಿದ್ದರಂತೆ. ಇದಕ್ಕೆ ತೆರೆಯುವ ಮತ್ತು ಮುಚ್ಚುವ ವ್ಯವಸ್ಥೆಯಿರುವ ಮಾಡೊಂದಿತ್ತಂತೆ. ಮಳೆ ಸುರಿಯುತ್ತಿರುವಾಗ ಅಥವಾ ಬಿಸಿಲು ಕಾಯುತ್ತಿರುವಾಗ ಇವರು ಈ ಮಾಡನ್ನು ತೆರೆಯುತ್ತಿದ್ದರಂತೆ. ಯೂನಾನಿನ "ಸಿನಿಕ" ವಿಚಾರ ಪಂಥದ ಈ ತತ್ವಜ್ಞ ಪ್ರವರ್ತಕರೊಡನೆ ಸಿಕಂದರ ಮಹಾರಾಜನು ಒಂದು ಬಾರಿ ಮಾಡಿದ ಮಾತುಕತೆಯು ಇಂದಿಗೂ ಸ್ಮರಣೀಯವಾಗಿದೆ.

ಸಿಕಂದರನು ತನ್ನ ದಿಗ್ವಿಜಯವನ್ನು ಮಾಡಿ ಹಿಂತಿರುಗಿದನಂತರ ಒಮ್ಮೆ ಈ ಮಹಾಯೋಗಿಯನ್ನು ಸನ್ಮಾನಿಸಲು ಬಯಸಿದನು. ಅದಕ್ಕಾಗಿ ಒಂದು ದಿನ ಆತ ಡಾಯೊಸಿಸ್‌ರ ಬಳಿ ಬಂದು ಅವರ ಗುಡಿಸಲಿನ ಬಳಿ ನಿಂತುಕೊಂಡನು. ಈ ಸಮಯದಲ್ಲಿ ಡಾಯೊಸಿಸರು, ಬಿಸಿಲಸ್ನಾನ ಮಾಡುತ್ತಿದ್ದರು. ಸಿಕಂದರನು ಅಲ್ಲಿಯೇ ನಿಂತಿರುವುದರಿಂದ ಅವರ ಕಾರ್ಯಕ್ಕೆ ತಡೆಯು ತಲೆದೋರಿತು. ಸಿಕಂದರನು ಕೈಮುಗಿದು ಕೇಳಿಕೊಂಡನು—"ನಾನು ತಮಗೆ ಯಾವ ಸೇವೆಯನ್ನು ಸಲ್ಲಿಸಲಿ?"

ಡಾಯೊಸಿಸರು ತತ್‌ಕ್ಷಣ ಉತ್ತರಿಸಿದರು—"ನೀನು ಇಲ್ಲಿಂದ ತೊಲಗಿ ಒಂದು ಮೂಲೆಯಲ್ಲಿ ನಿಲ್ಲು!"

ರೋಮಿನ ಸ್ಥಿತಪ್ರಜ್ಞರಾದ ಸೇನೇಕಾ ಯಾವಾಗಲೂ ಹೇಳುತ್ತಿದ್ದರು—"ನಿನ್ನೊಡನೆ ಇರುವ ವಸ್ತುಗಳು ನಿನಗೆ ಅಪರ್ಯಾಪ್ತವಾಗಿರುವುವೆಂದು ನೀನು ತಿಳಿಯುವುದಾದರೆ, ಸಮಸ್ತ ವಿಶ್ವವೇ ನಿನ್ನ ಆಧಿಪತ್ಯದಲ್ಲಿ ಉಳಿದರೂ ನೀನು ಆಗಲೂ ವಿಕ್ಷಿಪ್ತನಾಗಿಯೇ ಇರುತ್ತಿ."

ಇತಿಹಾಸ ಪ್ರಸಿದ್ಧ ರೋಮ ಸಮಾಜವು ದಾಸ ಮತ್ತು ಸ್ವಾಮಿ ಎಂಬೆರಡು ವಿಭಾಗಗಳಲ್ಲಿ ಹಂಚಿಹೋಗಿತ್ತು. ಎಲ್ಲರಿಂದಲೂ ತಿರಸ್ಕೃತವಾದ ದಾಸ ಸಮಾಜದಲ್ಲಿಯೂ ಎಪಿಕ್ಟೆಟಸ್ ಎಂಬ ಒಬ್ಬ ಪರಮ ವಂದನೀಯ ದಾರ್ಶನಿಕರು ಇದ್ದರು. ದಾಸರ ಅದೃಷ್ಟದಲ್ಲಿ ಯಾವಾಗಲೂ ಕ್ರೂರ ಅತ್ಯಾಚಾರವೇ ಬರೆಯಲ್ಪಡುತಿತ್ತು. ಎಪಿಕ್ಟೆಟಸರ ಒಡೆಯರಾದರೂ ನಿರ್ದಯತೆಯ ಅವತಾರಿಯಾಗಿದ್ದರು. ಆದರೆ, ತತ್ವಜ್ಞಾನಿ ಎಪಿಕ್ಟೆಟಸರು ಜನಕ ಮಹಾರಾಜನಂತೆ "ಸುಖೇ ದುಃಖೇ ಸಮೇಕೃತ್ವಾ" ಎಂಬ ಸಿದ್ಧಾಂತದಲ್ಲಿ ಆಸ್ಥೆಯುಳ್ಳವರಾಗಿದ್ದರು. ಒಂದು ದಿನ ವಿನೋದಕ್ಕಾಗಿ ಇವರ ಒಡೆಯನು ಅವರ ಕಾಲುಗಳನ್ನು ಮೆಟ್ಟಲು ತೊಡಗಿದನು. ಆಗ ಎಪಿಕ್ಟೆಟಸರು ಪ್ರಸನ್ನ ಭಾವದಿಂದ ಹೇಳತೊಡಗಿದರು—"ನೀವು ಇದೇ ರೀತಿ ತುಳಿಯುತ್ತ ನಡೆಯುವುದಾದರೆ ನನ್ನ ಪಾದವನ್ನೇ ಕಡಿದು ಹಾಕುವಿರಿ." ಆದರೆ, ಆ ಕ್ರೂರ ಕರ್ಮಸ್ವಾಮಿಯು ಮುಂದಕ್ಕೂ ಕಾಲನ್ನು ಹೊಡೆಯುತ್ತಲೇ ಇದ್ದನು. ಕೊನೆಗೆ ಅವರ ಪಾದವೇ ತೂತಾಗಿ ಹೋಯಿತು. ಆಗ ತನ್ನ ತೂತಾದ ಪಾದವನ್ನು ನೋಡುತ್ತ ಎಪಿಕ್ಟೆಟಸರು ಹೇಳಿದರು-"ನೋಡಿರಿ, ತಾವು ನನ್ನ ಪಾದವನ್ನು ಕಡಿದು ಹಾಕುವಿರೆಂದು ನಾನು ಹೇಳಿದ್ದೆನಲ್ಲಾ?"

ಹದಿನಾರನೆಯ ಶತಮಾನದಲ್ಲಿ ಜೀವಿಸಿದ್ದ ಫ್ರೆಂಚ ಬೇಕನ್‌ರು ಈಗಿನ ಬೌದ್ಧಿಕ— ವೈಜ್ಞಾನಿಕ ಯುಗದ ಒಬ್ಬ ಸೂತ್ರಧಾರನಾಗಿ ನಮ್ಮ ಮುಂದೆ ಬಂದಿದ್ದರು. ಅವರು ವೈಜ್ಞಾನಿಕ ತರ್ಕಪದ್ಧತಿ–ಇಂಡಕ್ಷನ್ ಲಾಜಿಕ್—ಯನ್ನು ಉದ್ಘಾಟಿಸಿದರು. ಅಲ್ಲದೇ "ನ್ಯೂ ಎಟ್ಲಾಂಟಿಸ್" ಅನ್ನು ಬರೆದು ಒಂದು ವಿಜ್ಞಾನ ಪ್ರಧಾನವಾದ ಭಾವೀ ಸಮಾಜದ ಚಿತ್ರವನ್ನು ನಮ್ಮ ಮುಂದಿರಿಸಿದ್ದರು. ಬ್ರಿಟನ್ನು ಇವರಿಗೆ ನ್ಯಾಯಾಧೀಶ ಪದವಿಯನ್ನು ಇತ್ತಿತ್ತು; ಆಗ ಅಲ್ಲಿನ ಕ್ರಮದಂತೆ ನ್ಯಾಯಾಧೀಶರು ಜನತೆಯ ಉಡುಗೊರೆಯನ್ನೂ ಸ್ವೀಕರಿಸುತ್ತಿದ್ದರು. ಅವರ ವ್ಯಯವು ಆಯಕ್ಕಿಂತ ಮೂರು ಪಾಲುಗಳಷ್ಟು ಮುಂದುವರಿಯುತ್ತಿದ್ದುದರಿಂದ ಅವರು ಹಾಗೆ ಬಹುಮಾನಗಳನ್ನು ಸ್ವೀಕರಿಸುವುದೂ ಅಗತ್ಯವಿತ್ತು. ಪರಂಪರೆಯನ್ನು ತಾನು ಅನುಸರಿಸುತ್ತಿರುವುದಾದರೂ ಇದು ತನ್ನನ್ನು ಕೆಳವರ್ಗಕ್ಕೆ ದೂಡುವುದೆಂದವರು ತಿಳಿದಿದ್ದರು. ಏಕೆಂದರೆ, ಚೂರಿಯ ಅಲಗಿನಂತೆ ಹರಿತವಾದ ಅವರ ಮಾತುಗಳಿಂದ ಅವರಿಗೆ ಅನೇಕಾನೇಕ ಶತ್ರುಗಳೂ ಉತ್ಪನ್ನರಾಗಿದ್ದರು. ಇದರಿಂದ, ತಾನು ಬದುಕುವುದೇ ಕಷ್ಟಸಾಧ್ಯವಾಗಿ ಪರಿಣಮಿಸಿದಾಗ,ಅವರು ರಾಜನೊಡನೆ ಕ್ಷಮಾಯಾಚನೆ ಮಾಡಿದರು. ಆದರೆ, ಲೋಕಸಭೆಯು ಬೇಕನರಿಗೆ ವಿರೋಧವಾಗಿತ್ತು. ಆದುದರಿಂದ "ರಾಜಕೈದಿ"ಯಾಗಿ ಬೇಕನರನ್ನು ಹಿಡಿದು ತರಲು 'ಟಾವರ್' ಕಳಿಸಲಾಯಿತು. ಎರಡು ದಿನಗಳ ಸೆರೆಮನೆಯ ವಾಸವನ್ನು ಅನುಭವಿಸಿದ ನಂತರ ಬೇಕನರನ್ನು ಮುಕ್ತರನ್ನಾಗಿ ಮಾಡಲಾಯಿತು. ಅವರ ಪಿತ್ತ ದಂಡವನ್ನು ಸ್ವಯಂ ರಾಜನೇ ಸ್ವಾಧೀನಪಡಿಸಿಕೊಂಡನು.

ಆ ಮೇಲೆ ಸೇಲಿಸ್‌ಬರಿಯು ಈ ರೀತಿ ಬರೆದಿದ್ದಾನೆ— ಈ ಕಾಲಗತಿಯನ್ನು ಏನೆಂದು ಹೇಳಲಿ? ಲಕ್ಷಾಂತರ ಮೌಲ್ಯದ ವಿದ್ಯೆಯನ್ನು ದಾನಮಾಡುವ ಬೇಕನನ ಖರ್ಚು ಕೂಡ ಜನರನ್ನು ಸಮಾಧಾನಪಡಿಸಲಿಲ್ಲ. ಆ "ಟಾವರ್" ಧನ್ಯವಾಯಿತು; ಇಂಗ್ಲೆಂಡಿನ ಪಾರ್ಲಿಮೆಂಟು ಮಾತ್ರ ಧಿಕ್ಕಾರಕ್ಕೆ ಪಾತ್ರವಾಯಿತು!"

(ವಿವಿಧ ಮೂಲಗಳಿಂದ)

— ಗೋರಾ.

Mahatma Gandhi Memorial College: Udipi

(South Kanara)

(Affiliated to Mysore University)

The College re-opens on 22—6—1959 and offers the following courses of instruction:

I Pre-University Course (One Year)

In Science, Arts and Commerce:

Part I English

Part II Any one of the following languages: Kannada, Hindi or Sanskrit.

Part III One of the following combinations:
(i) Mathematics, Physics, Chemistry
(ii) Biology, Physics, Chemistry
(iii) Economics, History, Logic
(iv) Economics, History, Commerce

Part IV Social Science for groups (i) and (ii) and General Science for groups (iii) and (iv)

II Three-Year Degree Courses (Ist Year)

(1) B. A. and B. Sc. Degree:

Part I English

Part II Any one of the following languages: Kannada, Hindi or Sanskrit

Part III One of the following combinations:

		Major	Minor
B. A. Degree	(i)	Economics, History	Political Science
	(ii)	Economics, English	Political Science
B. Sc. Degree	(i)	Mathematics, Physics	Statistics
	(ii)	Physics, Chemistry	Mathematics
	(iii)	Chemistry, Zoology	Botany

Part IV General Science for B. A. Degree and Social Science for B. Sc. Degree

(2) B. Com. Degree:

Part I English, Business Correspondence and Precis writing

Part II Kannada or Hindi

Part III Economic Geography, Modern Economic Development, Statistics and Scientific Method.

Part IV Business Organisation, Secretarial Practice, Mercantile Law, Economic Analysis, Economic Problems and Policy, Advanced Accounting with Advanced Banking and Banking Law as Special subject.

Applications for admission to P. U. C. will be received upto 7—6—1959.

Regarding admission to the first year of the 3-year degree Courses, applications must be made within 10 days of the publication of the P. U. C. results.

Residential facilities available for men and women students in seperate hostels at moderate rates.

Students seeking admission to the College and the Hostels should apply early for Prospectus and application forms.

H. Sunder Rao,
Principal.

ಗೋವಿಜಯ

(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಅಪರಾಜಿತ ಶತ್ರುವು, ಬೆಂಕಿ ಉರಿಸದ ಬೆಂಕಿ ಕಡ್ಡಿಯಂತೆ ಉರಿದುಕೊಳ್ಳದೆ ಸಂದರ್ಭವನ್ನು ಕಾದು, ಅವಕಾಶ ಒದಗಿದಾಗ ಉರಿದು ಸುಲಭದಲ್ಲಿ ವ್ಯಕ್ತಿಯನ್ನು ಕಬಳಿಸಿ ಬಿಡುತ್ತಾನೆ. ಆದುದರಿಂದ ಇಂತಹರನ್ನು ಸಂಪೂರ್ಣನಾಶ ಮಾಡುವುದು ಆವಶ್ಯಕವಾದುದು.

NAVAYUGA

Founder:—

A. B. SHETTY,

Former Minister for Public Health

Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೪-೬-'೬೯	೩೮

ಕಾಂಗ್ರೆಸ್‌ನ ಪಾವಿತ್ರ್ಯ

ಭಾರತದ ಸ್ವಾತಂತ್ರ್ಯ ಹೋರಾಟದ ನಾಯಕತ್ವವನ್ನು ವಹಿಸಿ ಅದನ್ನು ಸುಯೋಗ್ಯ ರೀತಿಯಲ್ಲಿ ಪೂರೈಸಿ ಪಾರತಂತ್ರ್ಯದ ಸಂಕಲೆಯಿಂದ ಭಾರತವನ್ನು ಮುಕ್ತವಾಗಿಸಿದ ಕೀರ್ತಿ ಭಾರತೀಯ ಕಾಂಗ್ರೆಸಿಗೆ ಸಲ್ಲಬೇಕೆಂಬುದು ನಿಜ; ಅಲ್ಲದೇ ಈ ಬಗ್ಗೆ ಪ್ರತಿಯೊಬ್ಬ ಭಾರತೀಯನೂ ಕಾಂಗ್ರೆಸ್ಸಿಗೆ ಕೃತಜ್ಞನಾಗಬೇಕಾದುದೂ ಆವಶ್ಯವೇ. ಆದರೆ, ಕಾಂಗ್ರೆಸ್ ಪಕ್ಷದ ದೃಷ್ಟಿಯಿಂದ ಸ್ವಾತಂತ್ರ್ಯವನ್ನು ಗಳಿಸಿದೊಡನೆಯೇ ಅದರ ಕರ್ತವ್ಯ ಮುಗಿದಂತಾಗಲಿಲ್ಲ; ಅದು ಜನತೆಯ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿ ಅದರ ಗೌರವಾದರಗಳಿಗೆ ಪಾತ್ರವಾಗಿ ರಾಷ್ಟ್ರಕ್ಕೆ ಗಳಿಸಿಕೊಟ್ಟ ಸ್ವಾತಂತ್ರ್ಯದ ಸತ್ಫಲಗಳನ್ನು ಪ್ರಜಾಜನರೆಲ್ಲರಿಗೂ ಉಣಿಸುವಂತಾಗಬೇಕು; ಈ ದಿಸೆಯಲ್ಲಿ ಕಾಂಗ್ರೆಸ್ಸು ಕಾರ್ಯಪ್ರವೃತ್ತವಾಗಬೇಕು. ಇದಕ್ಕಾಗಿ ಕಾಂಗ್ರೆಸಿಗರೆಲ್ಲರೂ ಒಂದಾಗಿ ಸುಯೋಗ್ಯವಾದ ರೀತಿಯಲ್ಲಿ ಸಂಸ್ಥೆಯ ಹಿತದೃಷ್ಟಿಯಿಂದ ನಡೆದುಕೊಳ್ಳುವುದು ಅವಶ್ಯವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಹಿಂದೆ ಕಾಂಗ್ರೆಸಿಗರೆಲ್ಲರೂ ಒಮ್ಮತದೊಳೇಕ ಪಂಥವನ್ನು ಹಿಡಿದು ಸಾಗಿ ತಮ್ಮ ಹೋರಾಟದಲ್ಲಿ ಯಶಸ್ಸು ಗಳಿಸಿದರು. ಆದರೆ, ಆ ಕಾಲದ ಒಮ್ಮತ ಸ್ವಾತಂತ್ರ್ಯ ಪ್ರಾಪ್ತಿಯಾದ ನಂತರ ಮಾತ್ರ ಉಳಿಯಲಿಲ್ಲ ಎಂಬುದು ಸುವಿದಿತವಿದೆ. ಕಾಂಗ್ರೆಸ್ ಸಂಸ್ಥೆಯ ಕೈಗೆ ಅಧಿಕಾರ ಸೂತ್ರವು ಬಂದಂದಿನಿಂದ ಕಾಂಗ್ರೆಸಿಗರಲ್ಲಿ ಅಧಿಕಾರಲಾಲಸೆಯು ಮೊಳೆದೋರತೊಡಗಿದುದರಿಂದಲೇ ಪಕ್ಷದ ಅಂತಃಸತ್ವ ಕುಂದಿರುವುದಲ್ಲದೇ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಸಂಸ್ಥೆಯೊಳಗೆ ಅಂತಃಕಲಹವು ತಲೆದೋರುತ್ತಿರುವುದು ದೃಷ್ಟಿಗೋಚರವಾಗುತ್ತಿದೆ. "ಉಚ್ಚ ಮಟ್ಟದಲ್ಲಿರುವ" ಪ್ರತಿಯೊಬ್ಬ ಕಾಂಗ್ರೆಸಿಗನೂ ಅಧಿಕಾರದ ಅತ್ಯಾಕಾಂಕ್ಷೆಯಿಂದ ಕೂಡಿದವನಾಗಿದ್ದು ಒಂದಲ್ಲ ಒಂದು ಪದವಿಯನ್ನು ಗಳಿಸಿ ತನ್ನ ವೈಯಕ್ತಿಕ ಹಿತವನ್ನು ಸಾಧಿಸಬಯಸುತ್ತಿರುವುದೂ ಅಧಿಕಾರದಲ್ಲಿರುವವನು ಮತ್ತೂ ಅದಕ್ಕೆ ಅಂಟಿಕುಳಿತುಕೊಳ್ಳಲು ಹವಣಿಸುತ್ತಿರುವುದೂ ಹೊಸ ವಿಷಯಗಳಾಗಿಲ್ಲ. ಹೀಗೆಯೇ ಕಾಂಗ್ರೆಸಿಗರಲ್ಲಿ ಮೊದಲಿದ್ದ ಆತ್ಮ ಸಂಶುದ್ಧತೆ, ಪವಿತ್ರತೆ ಹಾಗೂ ಸೇವಾತತ್ಪರತೆಗಳು ದೂರವಾಗಿ ಸ್ವಾರ್ಥಸಾಧನೆಯು ಅವುಗಳ ಸ್ಥಳವನ್ನು ಆಕ್ರಮಿಸಿದೆ ಎಂಬುದು ನಿಜವಾಗಿಯೂ ಸತ್ಯ. ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡರೆ ಲಾಭಗಳಿಸಬಹುದು ಎಂಬ ಅಭಿಪ್ರಾಯದಿಂದ ಕೂಡಿ, ಪಕ್ಷದೊಳಗೆ ಹೊಕ್ಕು ತಮ್ಮ ಬೊಕ್ಕಸ ತುಂಬಿಸಿಕೊಂಡಿರುವ ಕೆಲವು "ಮಹಾಜನ"ರೂ ಇದ್ದಾರೆ. ಆದರೆ, ಕಾಂಗ್ರೆಸ್ಸಿನಂತಹ ಪೂಜನೀಯ ಸಂಸ್ಥೆಯೊಳಗೆ ಇಂತಹ ಸ್ವಾರ್ಥಿಗಳು ಸೇರಿಕೊಂಡು ಪಕ್ಷದ ಗರಿಮೆಗೆ ಕಲಂಕವನ್ನು ಹಚ್ಚಿ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುವುದಕ್ಕೆ ಪಕ್ಷದಲ್ಲಿ ಎಂದೆಂದಿಗೂ ಅವಕಾಶವಿರಬಾರದು. ಕಾಂಗ್ರೆಸ್ಸು ಆದರ್ಶ ಪ್ರಜಾಪ್ರಭುತ್ವವಾದಿ ಪಕ್ಷವಾಗಿದೆ, ಅದರಲ್ಲಿ ತುಂಬಿ ಹೋದ ದುರ್ಜನರು ಸನ್ಮಾರ್ಗ ನಿರತರಾಗುವಂತೆ ಮಾಡುವುದು ಇಲ್ಲವೇ ಅವರು ಪಕ್ಷವನ್ನು ತೊಲಗಿ ಹೋಗುವಂತೆ ನೋಡುವುದು ಇಂದು ಆವಶ್ಯವಾಗಿದೆ. ಮೊದಲನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಎಲ್ಲ ರಾಜ್ಯಗಳಲ್ಲಿಯೂ ಕೇಂದ್ರದಲ್ಲಿಯೂ ಕಾಂಗ್ರೆಸ್ ಬಹುಮತವನ್ನು ಗಳಿಸಿದೆ; ದ್ವಿತೀಯ ಬಾರಿ ಕೇರಳವೊಂದನ್ನು ಕಳೆದುಕೊಂಡಿತು; ಇತ್ತೀಚೆಗೆ ಒಡಿಸ್ಸಾದಲ್ಲಿ ಸಮ್ಮಿಶ್ರ ಸರಕಾರವನ್ನು ಕಾಂಗ್ರೆಸ್ ಸ್ಥಾಪಿಸಿಕೊಳ್ಳಬೇಕಾಯಿತು. ಉಳಿದ ಕೆಲವು ರಾಜ್ಯಗಳಲ್ಲಿಯಾದರೂ ಪಕ್ಷವು ಬಹುಮತ ಪಡೆದಿದ್ದರೂ ಅಂತಃಕಲಹ ತಪ್ಪಿದ ದಿನವಿಲ್ಲವೆನ್ನಬಹುದು. ವಿಧಾನ ಸಭೆಯ ನೂರಿನ್ನೂರು ಕಾಂಗ್ರೆಸ್ ಸದಸ್ಯರಲ್ಲಿಯೇ ನಾಲ್ಕಾರು ಬಣಗಳಿರುವುದಾದರೆ, ಇತರ ಬಣಗಳನ್ನು ನೆಲಸಮ ಮಾಡುವುದೇ ಇನ್ನೊಂದು ಬಣದ ಧ್ಯೇಯವಾಗಿರುವುದಾದರೆ, ಅವುಗಳೆಲ್ಲವಕ್ಕೂ "ಕಾಂಗ್ರೆಸ್" ಎಂಬ ಸಮಾನ ನಾಮಧೇಯವೇತಕ್ಕೆ? ತಮ್ಮ ತಮ್ಮೊಳಗೆ ಕಚ್ಚಾಡಿಕೊಳ್ಳುವ ಪಕ್ಷದ ಆಡಳಿತೆಯಿಂದ ಜನತೆಗೆ ಯಾವ ಉತ್ತಮ ಪ್ರಯೋಜನವು ದೊರಕೀತು? ಇದೇ ರೀತಿಯಲ್ಲಿ ಪರಸ್ಪರ ಕಚ್ಚಾಟಗಳಿಂದ ಕಾಂಗ್ರೆಸ್ಸಾದರೂ ಹೇಗೆ ಏಳಿಗೆಯಾದೀತು? ಆದುದರಿಂದ ಕಾಂಗ್ರೆಸ್ ಪಕ್ಷವು ಏಕಮನಸ್ಕವಾಗಿ ಯಾವ ವೈಮನಸ್ಯದಿಂದಲೂ ಪ್ರಭಾವಿತವಾಗದೆ ಬೆಳೆದು ಬರುವುದು ಅವಶ್ಯ. ಕಾಂಗ್ರೆಸಿಗನು ತನ್ನ ಪಕ್ಷ ಅಥವಾ ಪಕ್ಷದ ಸರಕಾರವು ಮಾಡಿದುದನ್ನೆಲ್ಲಾ ಸರಿಯೆಂದು ಮೌನ ಸಮ್ಮತಿಯೀಯುವುದರಿಂದಲೇ ತೃಪ್ತನಾಗದೆ ಅವುಗಳಿಗೆ ಸರಿಯಾದ ಮಾರ್ಗದರ್ಶನವೀಯುವುದು ಅಥವಾ ತಪ್ಪು ಮಾಡಿದಾಗ ತಿದ್ದಿಕೊಳ್ಳಲು ಸಲಹೆ ನೀಡುವುದು ಆಗತ್ಯ. ಕಾಂಗ್ರೆಸಿಗನ ಕರ್ತವ್ಯಗಳಲ್ಲಿ ಇದೂ ಒಂದು ಎಂಬುದು ನಿರ್ವಿವಾದ.

ಭಾರತವು ಸಂಪದ್ಭರಿತವಾಗಬೇಕಾದರೆ, ಕಾಂಗ್ರೆಸ್ ಬಲ ಸಂವರ್ಧನೆಯಾಗಬೇಕು. ಇದಕ್ಕಾಗಿ ಕಾಂಗ್ರೆಸ್‌ನಿಂದ ದುಷ್ಟಶಕ್ತಿಗಳ ನಿರ್ಮೂಲೋಚ್ಚಾಟನೆಯಾಗಬೇಕು. ಪ್ರತಿಯೊಬ್ಬ ಕಾಂಗ್ರೆಸಿಗನೂ ಸರಳ ಹಾಗೂ ಆದರ್ಶ ಜೀವನವನ್ನು ಬಾಳಿ ಕಾಂಗ್ರೆಸ್, ಗಳಿಸಿದ ಕೀರ್ತಿ ಪತಾ

ಸಂಕ್ಷಿಪ್ತ ಸುದ್ದಿಗಳು

ಪಟೇಲರು ನಿರ್ದೋಷಿಯಾದರು

"ಮುಂಧ್ರಾ ಪ್ರಕರಣ"ದ ಬಗ್ಗೆ ಕೇಂದ್ರ ಸರಕಾರವು ಈ ವ್ಯವಹಾರದಲ್ಲಿ ಕೇಂದ್ರದ ಹಿಂದಿನ ಹಣಕಾಸಿನ ಮುಖ್ಯ ಕಾರ್ಯದರ್ಶಿ ಶ್ರೀ ಎಚ್. ಎಂ. ಪಟೇಲರ ಮೇಲೆ ಹೊರಿಸಲಾದ ಆರೋಪಗಳನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿದೆ. ಜೀವ ವಿಮಾ ಕಾರ್ಪೊರೇಶನಿನ ಅಧ್ಯಕ್ಷರಾದ ಶ್ರೀ ಜಿ. ಆರ್. ಕಾಮತರ ಮೇಲೆ ಕ್ರಮ ಕೈಗೊಳ್ಳಬೇಕೆಂದೂ ಕಾರ್ಪೊರೇಶನಿನ ಮೆನೇಜಿಂಗ ಡೈರೆಕ್ಟರರಾಗಿದ್ದ ಶ್ರೀ ಎಲ್. ಎಸ್. ವೈದ್ಯನಾಥನ್‌ರ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದನ್ನು ಜೀವವಿಮಾ ಕಾರ್ಪೊರೇಶನೇ ನಿರ್ಧರಿಸಬೇಕು ಎಂದೂ ಈ ಪ್ರಕಟಣೆಯಲ್ಲಿ ಹೇಳಿದೆ.

ಶ್ರೀ ಪಟೇಲರು ತನ್ನ ಅಧಿಕಾರವನ್ನು ದುರುಪಯೋಗಪಡಿಸಿರುವರೆಂದೂ ತನ್ನ ಕರ್ತವ್ಯದಲ್ಲಿ ಅಲಕ್ಷ್ಯ ತೋರಿಸಿರುವರೆಂದೂ ವಿವಿಯನ್ ಬೋಸ ಸಮಿತಿಯು ಅವರ ಮೇಲೆ ಆರೋಪ ಹೊರಿಸಿದ್ದರೂ ಪಬ್ಲಿಕ್‌ಸರ್ವಿಸ್ ಕಮಿಶನ್ ತನ್ನ ವರದಿಯಲ್ಲಿ ಅವರ ದೋಷಗಳು ಸಿದ್ಧವಾಗಿಲ್ಲದಿರುವುದರಿಂದ, ಅವರನ್ನು ಮುಕ್ತಗೊಳಿಸಬೇಕೆಂದು ಬಹುಮತದಿಂದ ಹೇಳಿದೆ. ಹಿಂದಿನ ಅರ್ಥಮಂತ್ರಿ ಟಿ. ಟಿ. ಕೆ. ಯವರ ಮೇಲೆ ಕೇವಲ ಘಟನಾತ್ಮಕ ಹೊಣೆಗಾರಿಕೆಯಿರುವುದಾದುದರಿಂದ ಅವರು ಈ ಮೊದಲೇ ತಮ್ಮ ಹುದ್ದೆಗೆ ರಾಜಿನಾಮೆಯಿತ್ತಿದ್ದಾರೆ.

... ಕೆಯನ್ನು ಹಾರಿಸಬೇಕು. ಇದಕ್ಕಾಗಿ ಹುಬ್ಬಳ್ಳಿಯಲ್ಲಿ ಇತ್ತೀಚೆಗೆ ಶ್ರೀ ನಿಜಲಿಂಗಪ್ಪನವರು ಮಾಡಿದ ಸಲಹೆ ಸ್ವಾಗತಾರ್ಹವಾದುದು. ಸಂಸ್ಥೆಗೆ ಕಳಂಕ ತರುವವರು ತಮ್ಮ ನಡೆನುಡಿಗಳನ್ನು ತಿದ್ದಿಕೊಳ್ಳಬೇಕು; ಇಲ್ಲವೇ ಕಾಂಗ್ರೆಸಿನಿಂದ ಕೂಡಲೇ ಹೊರಬೀಳಬೇಕು" ಎಂದ ಶ್ರೀ ನಿಜಲಿಂಗಪ್ಪನವರ ಮಾತುಗಳತ್ತ ಕಿಡಿಗೇಡಿ ಕಾಂಗ್ರೆಸಿಗರು ಗಮನಹರಿಸಿದರೆ, ಕಾಂಗ್ರೆಸ್ ತನ್ನ ಪೂರ್ವದ ಪರಂಪರೆಯನ್ನು ಕಾಯ್ದುಕೊಳ್ಳಲು ಸಹಾಯಕವಾಗುವುದು.

ನೇಪಾಳದ ಹೊಸ ಸರಕಾರ

ಹಿಮಾಲಯದ ತಪ್ಪಲಲ್ಲಿರುವ ನೇಪಾಳದ ಅರಸರಾದ ಮಹೇಂದ್ರರು ಕೆಲವು ಮಾಸಗಳಿಗೆ ಮೊದಲು ಪ್ರಜಾಪ್ರಭುತ್ವ ಮಾದರಿಯ ಆಡಳಿತೆಯನ್ನು ಘೋಷಿಸಿದಂತೆ ಸಾರ್ವತ್ರಿಕ ಚುನಾವಣೆಗಳು ನಡೆದು "ನೇಪಾಳ ಕಾಂಗ್ರೆಸ್" ಬಹುಮತವನ್ನು ಗಳಿಸಿದೆ. ಅದರ ನಾಯಕ ಶ್ರೀ ಬಿ. ಪಿ. ಕೊಯಿರಾಲರು ಪ್ರಧಾನಿಯಾಗಿ ಪ್ರಮಾಣ ಸ್ವೀಕರಿಸಿದ್ದಾರೆ. ಈ ಸಂದರ್ಭದಲ್ಲಿ ಪ್ರಧಾನಿಯವರು ತಮ್ಮ ಸರಕಾರದ ನಿಲುವೆಯನ್ನು ಸುಸ್ಪಷ್ಟವಾಗಿ ಬಹಿರಂಗಪಡಿಸಿರುವುದು ಯುಕ್ತವೇ ಆಗಿದೆ. ನೇಪಾಳ ಮತ್ತು ಭಾರತಗಳ ಸಂಬಂಧ ಪುರಾತನ ಕಾಲದ್ದಾಗಿದ್ದು ಅದು ಬೇರ್ಪಡುವಂತಹುದಾಗಿಲ್ಲ. ಈ ಸಂಬಂಧವು ಇನ್ನೂ ಗಾಢವಾಗುವಂತೆ ನೋಡಿಕೊಳ್ಳಲಾಗುವುದು. ಭಾರತದಂತೆಯೇ ನೇಪಾಳವು ಯಾವುದೇ ಸೈನಿಕ ಪಂಗಡಗಳೊಡನೆ ಸೇರಿಕೊಳ್ಳುವುದಿಲ್ಲ. ಭಾರತದಂತೆಯೇ ಅಂತಾರಾಷ್ಟ್ರೀಯ ಧೋರಣೆಯಲ್ಲಿ ತಾಟಸ್ಥ್ಯವನ್ನು ತೋರಿಸುತ್ತೇವೆ" ಎಂದು ಶ್ರೀ ಕೊಯಿರಾಲರು ಹೇಳಿದ್ದಾರೆ. ಪ್ರಧಾನಿ ಕೊಯಿರಾಲರು ಭಾರತದಿಂದ ಪ್ರಭಾವಿತರಾಗಿರುವರೆಂಬುದು ಇದರಿಂದ ಗೊತ್ತಾಗುವುದು. ನೇಪಾಳದ ಜನತೆಯಲ್ಲಿ ಅನಕ್ಷರಸ್ಥರೂ ರೋಗಗ್ರಸ್ತರೂ ತುಂಬಿ ಹೋಗಿರುವರು. ಭಾರತದಂತೆಯೇ ದರಿದ್ರರೂ ಇಲ್ಲಿರುವರು. ಅರಸು ಮಹೇಂದ್ರರು ಯುಗವಾಣಿಗೆ ಕಿವಿಗೊಟ್ಟು, ತಾವಾಗಿಯೇ ಮುಂದೆ ಬಂದು ಪ್ರಜಾಪ್ರಭುತ್ವ ಮಾದರಿಗೆ ಬುನಾದಿ ಹಾಕಿದಂತೆಯೇ ಈ ಪ್ರಥಮ ಚುನಾಯಿತ ಪ್ರಧಾನಿ ಕೊಯಿರಾಲರು ನೇಪಾಳೀಯರ ಆವಶ್ಯಕತೆಗಳನ್ನೂ ಕೊರತೆಗಳನ್ನೂ ನಿಜವಾಗಿ ಕಂಡುಕೊಂಡು ಅವನ್ನು ಒದಗಿಸುವುದರಲ್ಲಿ ಯಶಸ್ಸು ಗಳಿಸಿದರೆ, ಅದು ಪ್ರಜಾಪ್ರಭುತ್ವದ ಯಶಸ್ಸೆಂದು ಹೇಳಬಹುದು.

ಆಹಾರ ಮತ್ತು ಶಿಕ್ಷಣಗಳು

ಅಖಿಲಭಾರತೀಯ ಕಾಂಗ್ರೆಸ್ ಯೋಜನಾ ಉಪಸಮಿತಿಯು ಉದಕಮಂಡಳದಲ್ಲಿ ಆರುದಿನಗಳ ವಿಚಾರಗೋಷ್ಠಿಯನ್ನು ಏರ್ಪಡಿಸಿತ್ತು. ಇದರಲ್ಲಿ ಮಾತಾಡುತ್ತ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿಯವರು ಆವಡಿ ಮತ್ತು ನಾಗಪುರಗಳಲ್ಲಿ ಕೂಡಿದ ಕಾಂಗ್ರೆಸ್ಸು ದೇಶವು ಮುಂದುವರಿಯುವುದಕ್ಕೆ ಚಾಲನೆಯಿತ್ತು ಸಮಾಜವಾದದ ಮಾರ್ಗವನ್ನು ಅನುಗಮಿಸುವಂತಾಯಿತು. ಅಂತೆಯೇ ನಾವು ಜನತೆಯಿಂದ ತ್ಯಾಗವನ್ನು ಬಯಸಿದಾಗ, ನಾವೂ ಅದಕ್ಕೆ ಪ್ರತಿಯಾಗಿ ಏನಾದರೂ ಕೊಡಬೇಕು. ಯೋಗ್ಯವಾದ ಬೆಲೆಗೆ ಸಾಕಷ್ಟು ಆಹಾರ ಮತ್ತು ಶಿಕ್ಷಣ ದೊರೆಯುವ ಬಗ್ಗೆ ಜನತೆಗೆ ಭರವಸೆ ನೀಡಬೇಕು ಎಂದರು.

ಮಾಜಿ ಅಧ್ಯಕ್ಷ ಶ್ರೀ ಯು. ಎನ್. ಢೇಬರರು ಮಾತನಾಡುತ್ತ ಯೋಜನೆಗಳನ್ನು ರೂಪಿಸುವಾಗ ಮಾತ್ರವಲ್ಲದೇ ಅವುಗಳನ್ನು ಕಾರ್ಯಗತಗೊಳಿಸುವಾಗಲೂ ಜನತೆಯ ಬೆಂಬಲವಿಲ್ಲದೇ ಹೋದರೆ, ಅಂತಹ ಯೋಜನೆಗಳಿಗೆ ಪ್ರಜಾಪ್ರಭುತ್ವದ ಯೋಜನೆಗಳು ಎಂದು ಹೇಳಲಾರೆವು. ಆದುದರಿಂದ ಜನತೆಯ ಸಂಪೂರ್ಣ ಸಹಕಾರವನ್ನು ನಾವು ಪಡೆಯುವಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಡಾಲ್ಮಿಯಾರಿಗೆ ದಂಡನೆ

ಭಾರತ ವಿಮಾ ಕಂಪೆನಿಗೆ ೨.೮೫ ಕೋಟಿ ರೂಪಾಯಿಗಳ ಮೋಸ ಮಾಡಿದ ಆರೋಪವು ಪ್ರಮುಖ ಉದ್ದಿಮೆದಾರರಾದ ಶ್ರೀ ರಾಮಕೃಷ್ಣ ಡಾಲ್ಮಿಯಾರ ಮೇಲೆ ಸಿದ್ಧವಾಯಿತು. ಶ್ರೀ ಡಾಲ್ಮಿಯಾರು ಈ ವಿಮಾಕಂಪೆನಿಯ ಮಾಜಿ

ಚಂದಾದಾರರಲ್ಲಿ ವಿನಂತಿ

ನಾವು ಈ ಮೊದಲು ಹಲವಾರು ಸಲ ಮಾಡಿಕೊಂಡ ವಿನಂತಿಯಂತೆ ಚಂದಾಹಣವನ್ನು ಪಾವತಿ ಮಾಡಿದ ಚಂದಾದಾರರಿಗೆ ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತೇವೆ. ಇನ್ನೂ ಚಂದಾಹಣವನ್ನು ಕಳುಹಿಸಿ ಕೊಡದ ಚಂದಾದಾರರು ದಯಮಾಡಿ ಈಗಲಾದರೂ ಹೃತ್ಪೂರ್ವಕ ಕಳುಹಿಸಿಕೊಡುವಂತೆ ತಿರುಗಿ ಬಿನ್ನಹಿಸುತ್ತೇವೆ. ಅಂತೂ ಸಕಾಲದಲ್ಲಿ ಹಣ ಬಾರದಿದ್ದರೆ ನಾವು ಅನಿವಾರ್ಯವಾಗಿ ಕಳಿಸುವ ವಿ. ಪಿ. ಯನ್ನಾದರೂ ದಯಮಾಡಿ ಸ್ವೀಕರಿಸಿ ಸಹಕರಿಸುವಂತೆ ವಿನಂತಿಸುತ್ತೇವೆ.

—ಮೆನೇಜರ್

ಅಧ್ಯಕ್ಷರೂ ಮುಖ್ಯಾಧಿಕಾರಿಯೂ ಆಗಿರುವುದರಿಂದಲೇ ಇಷ್ಟೊಂದು ಮೌಲ್ಯವನ್ನು ಮೋಸ ಮಾಡಲು ಅವರು ಶಕ್ತರಾಗಿದ್ದರು. ಈ ಪ್ರಕರಣದಲ್ಲಿ ಇತ್ತ ತೀರ್ಪಿನಲ್ಲಿ ಡಿಪ್ಯು ಜಿಲ್ಲಾ ಹಾಗೂ ಸೆಶ್ಯನ್ಸ್ ನ್ಯಾಯಾಧೀಶರು ಶ್ರೀ ಡಾಲ್ಮಿಯಾರವರ ಮೇಲಿನ ಆರೋಪವನ್ನು ವಿಚಾರಿಸಿ ತೀರ್ಪು ಈಯುವಾಗ ಹಲವಾರು ಸಂಗತಿಗಳನ್ನು ಗಮನಿಸಬೇಕಾಯಿತೆಂದೂ ಕೊನೆಗೆ ಆರೋಪವು ಸಿದ್ಧವಾಗಿರುವುದೆಂದೂ ಹೇಳಿದರಲ್ಲದೇ ಹಣವನ್ನು ಮೋಸಮಾಡಿದ ಹಾಗೂ ಒಳಸಂಚುನಡೆಸಿದ ಆರೋಪಗಳಿಗಾಗಿ ಅವರು ಎರಡೆರಡು ವರ್ಷ ಸಾದಾ ಶಿಕ್ಷೆಯನ್ನು ವಿಧಿಸಿದರು. ಈ ಎರಡೂ ಶಿಕ್ಷೆಗಳನ್ನು ಶ್ರೀ ಡಾಲ್ಮಿಯಾ ಅವರು ಏಕಕಾಲದಲ್ಲಿ ಅನುಭವಿಸಬೇಕೆಂದೂ ಹೇಳಿ, ಅವರನ್ನು ಬ ವರ್ಗದ ಬಂಧಿಖಾನೆಯಲ್ಲಿಡಬೇಕೆಂದು ಆಜ್ಞೆಯಿತ್ತಿರುವರು.

ಅಂಕೆ ಸಂಖ್ಯೆಗಳು

ಸಂಯುಕ್ತ ರಾಷ್ಟ್ರ ಸಂಸ್ಥೆಯು ತಯಾರಿಸಿದ ಅಂಕೆ ಸಂಖ್ಯೆಗಳಂತೆ ಜಗತ್ತಿನ ಜನಸಂಖ್ಯೆಯು ನಿಮಿಷವೊಂದಕ್ಕೆ ೮೭ರಂತೆ ಹೆಚ್ಚುತ್ತಿದೆ. ಬ್ರಹ್ಮಚಾರಿಗಳಿಗಿಂತಲೂ ವಿವಾಹಿತರ ಆಯುರ್ಮಾನವು ಹೆಚ್ಚಿದೆ, ವೈವಾಹಿಕ ಜೀವನದ ಅವಧಿಯು ಬೆಳೆದಿದ್ದು ವಿಧವೆಯರ ಹಾಗೂ ಬಾಲಕರ ಸಮಸ್ಯೆ ದೂರವಾಗುತ್ತ ಬರುತ್ತಿದೆ. ಕನ್ನಿಕೆಯರ ಸರಾಸರಿ ವಿವಾಹ ಪ್ರಾಯ ೨೪; ವರನ ಸರಾಸರಿ ಪ್ರಾಯ ೨೭ ಎಂದೂ ಈ ಅಂಕೆಸಂಖ್ಯೆಗಳಿಂದ ಗೊತ್ತಾಗುತ್ತದೆ. ನಾರ್ವೆಯ ಪುರುಷರ ಸರಾಸರಿ ಆಯುಷ್ಯವು ೭೧ ಮತ್ತು ಸ್ತ್ರೀಯರದು ೭೪ ಆಗಿರುವಾಗ ಭಾರತೀಯರ ಸರಾಸರಿ ಆಯುಷ್ಯ ೩೨ ವರ್ಷಗಳೆಂದು ತಿಳಿಯುತ್ತದೆ. ಜಗತ್ತಿನ ಜನ ಸಂಖ್ಯೆ ೨೪೦ ಕೋಟಿಯಿರುವಾಗ, ಭಾರತ, ಚೀನ, ರಶಿಯ ಮತ್ತು ಅಮೆರಿಕೆಗಳಲ್ಲಿ ಒಟ್ಟು ಇದರ ಅರ್ಧದಷ್ಟು ಜನರಿದ್ದಾರೆ.

ಸರಕಾರದ ರಾಜಿನಾಮೆಯಿಲ್ಲ

ಸದ್ಯ ಕೇರಳದಲ್ಲಿ ನಡೆಯುತ್ತಿರುವ ವಿದ್ಯಾಸಂಸ್ಥೆಯ ಮಸೂದೆಯ ಬಗ್ಗೆ ಹಾಗೂ ಸರಕಾರದ ವಿರೋಧವಾದ ಚಳವಳವನ್ನು ಹತ್ತಿಕ್ಕಲಾಗುವುದಲ್ಲದೆ, ಸರಕಾರವು ರಾಜಿನಾಮೆಯೀಯುವುದಿಲ್ಲವೆಂದು ಕೇರಳದ ಮುಖ್ಯಮಂತ್ರಿ ನಂಬೂದರಿ ಪಾದರು ಹೇಳಿದರು. ಕೆಲವು ಪತ್ರಿಕೆಗಳಲ್ಲಿ ರಾಜಿನಾಮೆಯೀಯುವುದೆಂಬ ವಿಷಯವು ಪ್ರಕಟವಾಗಿದ್ದು, ಅದು ನಿರಾಧಾರವಾಗಿರುವುದು ಎಂದವರು ತಿಳಿಸಿದ್ದಾರೆ.

ಕೃತಜ್ಞತೆ

ತಾ. 28-5-59ರಂದು ನನ್ನ ತೃತೀಯ ಪುತ್ರಿ ಕುಮಾರಿ ಶಾರದಳನ್ನು ಶ್ರೀ. ಕೆಂಜಾರು ತಮ್ಮಯ್ಯ ಶೆಟ್ರ ಪ್ರಥಮ ಪುತ್ರ ಶ್ರೀ. ಸೀತಾರಾಮನು ಉಡುಪಿ ಶ್ರೀ. ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದ ಸುಸಂದರ್ಭದಲ್ಲಿ ಶುಭಾಶಯಗಳೊಂದಿಗೆ ಉಚಿತ ಉಡುಗೊರೆಗಳನ್ನಿತ್ತು ವಧೂವರರನ್ನು ಹರಸಿದ ಬಂಧು ಭಗಿನಿಯರಿಗೂ ಇಷ್ಟಮಿತ್ರರಿಗೂ ನನ್ನ ಹಾರ್ದಿಕ ಕೃತಜ್ಞತೆಗಳನ್ನು ಈ ಮೂಲಕ ಸಮರ್ಪಿಸುತ್ತೇನೆ.

ಕುಕ್ಕಾಲು ಗಣಪಯ್ಯ ಶೆಟ್ಟಿ.

ಅಲ್ಲಲ್ಲಿಯ ಸುದ್ದಿ ಸಾರ

ದ. ಕ. ಜಿಲ್ಲಾ ಬೋರ್ಡ್ ಸದಸ್ಯರ ಅಧಿಕಾರಾವಧಿಯ ಮುಂದುವರಿಯುವಿಕೆ—೧೯೫೯ನೇ ಮೇ ೩೧ರಂದು ಮುಕ್ತಾಯಗೊಳ್ಳಲಿದ್ದ ದ. ಕ. ಜಿಲ್ಲಾ ಬೋರ್ಡ್ ಸದಸ್ಯರ ಅಧಿಕಾರಾವಧಿಯನ್ನು ೧೯೬೦ನೇ ಮೇ ೩೧ರವರೆಗೆ ಮುಂದುವರಿಸಲಾಗಿದೆಯೆಂದು ಸರಕಾರಿ ಪ್ರಕಟಣೆಯೊಂದು ತಿಳಿಸಿದೆ. ಶಾಸನಸಭೆಯಲ್ಲಿ ಜಿಲ್ಲಾ ಬೋರ್ಡುಗಳ ರದ್ದಿಯಾತಿಗೆ ಮಂಜೂರಾಗಿದ್ದು ಅದನ್ನು ಅಧ್ಯಕ್ಷರ ಅನುಮತಿಗಾಗಿ ಕಾದಿರಿಸಲಾಗಿರುವುದರಿಂದಲೇ ಈ ಬದಲಾವಣೆ ಆದದ್ದೆಂದು ಬಲ್ಲವೃತ್ತಗಳಿಂದ ತಿಳಿದುಬಂದಿದೆ.

ಸಮಾರೋಪ ಸಮಾರಂಭ-ಕೋಣಿ ಬೋ. ಹಾ. ಎ. ಶಾಲೆಯಲ್ಲಿ ರೈತ ಮುಂದಾಳುಗಳ ತರಬೇತಿ ಶಿಬಿರದ ಸಮಾಪ್ತಿ ಸಮಾರಂಭವು ಇತ್ತೀಚೆಗೆ ಶ್ರೀ ನೈ. ಮಂಜಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ಕೆ. ನರಸಿಂಹ ಐತಾಳರಿಂದ ವರದಿ ವಾಚನವಾದ ತರುವಾಯ ಶ್ರೀ ಕೆ. ಅಣ್ಣಪ್ಪ ಕಾರಂತ್, ಶ್ರೀ ಕೆ. ನಾಗಪ್ಪಹೆಬ್ಬಾರ ಮುಂತಾದವರು ಮಾತನಾಡಿದರು. ಬಹುಮಾನ ಹಾಗೂ ಪ್ರಶಸ್ತಿ ಪತ್ರ ವಿತರಣೆಯನಂತರ ಅಧ್ಯಕ್ಷರು ಉದ್ಬೋಧಕ ಭಾಷಣವಿತ್ತರು.

ಗಿರಿಜನ ವಿದ್ಯಾರ್ಥಿ ಭವನಗಳು-ಸುಳ್ಯ ಮತ್ತು ಪುತ್ತೂರುಗಳಲ್ಲಿ ಇದೇ ಜೂನ್ ತಿಂಗಳಿನಿಂದ ಬೇರೆ ಬೇರೆ ಎರಡು ವಿದ್ಯಾರ್ಥಿ ಭವನಗಳನ್ನು ತೆರೆಯಲಾಗುವುದೆಂದೂ, ಏಸೇ ದರ್ಜೆ ಮತ್ತು ಅದಕ್ಕೆ ಮೇಲ್ಪಟ್ಟ ಪರಿಜನ ವಿದ್ಯಾರ್ಥಿಗಳೆಲ್ಲರೂ ಈ ವಿದ್ಯಾರ್ಥಿಭವನಕ್ಕೆ ಸೇರಲು ಅರ್ಹರಾಗಿರುವರೆಂದೂ, ಅವರಿಗೆ ಊಟ ವಸತಿ ಹಾಗೂ ಶಾಲಾ ಫೀಸುಗಳು ಮಾಫಿಯಾಗಿದ್ದು ಸೇರಲಿಚ್ಛಿಸುವವರು ಅರ್ಜಿಗಳನ್ನು ಪುತ್ತೂರು ತಾಲೂಕು ತಹಸಿಲ್ದಾರರಿಗೆ ಬರಕೊಳ್ಳಬೇಕಾಗಿದೆಯೆಂದೂ ಸುಳ್ಯದ ವಿಧಾನ ಸಭಾಸದಸ್ಯ ಶ್ರೀ ಎಸ್. ಸುಬ್ಬಯ್ಯನಾಯ್ಕರು ತಿಳಿಸುತ್ತಾರೆ.

ಉಡುಪಿ ತಾಲೂಕು ದಲಿತ ವರ್ಗದ ಸೆಮಿನಾರ್ ಕಳೆದ ತಾ. 31ರಲ್ಲು ಉಡುಪಿ ತಾಲೂಕು ದಲಿತ ವರ್ಗದ ಸೆಮಿನಾರ್, ಉಡುಪಿ ಬೋರ್ಡು ಹೈಸ್ಕೂಲ್ ವಠಾರದಲ್ಲಿ ಜರಗಿತು. ಬೆಳಿಗ್ಗೆ 10 ಗಂಟೆಗೆ ಸೆಮಿನಾರ್ ಉದ್ಘಾಟನೆಯನ್ನು ಡೆಪ್ಯುಟಿ ಕಮಿಶನರ್ ವೈ. ಸಿ. ಹೊಂಬಾಳಯ್ಯನವರು ನೆರವೇರಿಸಿದರು. ಸ್ವತಂತ್ರಭಾರತದಲ್ಲಿ ದಲಿತ ವರ್ಗದ ಉದ್ಧಾರವೇ ಭಾರತದ ಸಂಸ್ಕೃತಿ. ಅವರ ಸಂತೋಷವೇ ಭಾರತದ ಭಾಗ್ಯ ಎಂಬ ವಿಷಯದ ಕುರಿತು ಸಾಧಾರಣ 2 ಸಾವಿರಕ್ಕೂ ಮಿಕ್ಕಿ ಕೂಡಿದ ದಲಿತವರ್ಗದ ಜನಸಂದಣಿಯನ್ನುದ್ದೇಶಿಸಿ ಭಾಷಣ ಮಾಡಿದರು. ಅಧ್ಯಕ್ಷಸ್ಥಾನವನ್ನು ಡಾ| ಸುಂದರ್ ರಾಮ ಪೈ ಇವರು ವಹಿಸಿದ್ದರು. ಸ್ವಾಗತ ಭಾಷಣವನ್ನು ಉಡುಪಿ ತಾಲೂಕು ತಹಶಿಲ್ದಾರ್ ಕೆ. ಕೊರಗಪ್ಪ ಇವರು ಮಾಡಿದರು. ಬೆಳಿಗ್ಗೆ ಧ್ವಜವಂದನಾ ಕಾರ್ಯಕ್ರಮವು ತಹಶೀಲ್ದಾರರ ಹಸ್ತದಿಂದ ನೆರವೇರಿಸಲ್ಪಟ್ಟಿತ್ತು. ದಲಿತವರ್ಗದ ಪುರಮೆರವಣಿಗೆಯೂ ನಡೆದಿತ್ತು.

ಮಧ್ಯಾಹ್ನ ಒಂದು ಗಂಟೆಯಿಂದ ಐದೂವರೆ ಗಂಟೆಯವರೆಗೆ ದಲಿತವರ್ಗದ ಸಾಮಾಜಿಕ, ಸಾಂಸ್ಕೃತಿಕ, ಔದ್ಯೋಗಿಕ, ಆರ್ಥಿಕ ಮತ್ತು ವಿದ್ಯಾಭ್ಯಾಸದ ಕುರಿತ ವಿಚಾರ ವಿನಿಮಯ ಗೋಷ್ಠಿಯು ಶ್ರೀ ಮುಕುಂದರಾವ್ ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸುಸಂದರ್ಭದಲ್ಲಿ ಅಧ್ಯಕ್ಷರ ಆರಿಸುವಿಕೆಯು ದಲಿತವರ್ಗದ ಕಾರ್ಯದರ್ಶಿ ಉಡುಪಿ ತಾಲೂಕು ಶಿರಸ್ತಾರ ಕೆ. ಚೆನ್ನಪ್ಪನವರಿಂದ ನಡೆಯಿತು. ಶ್ರೀ ಯು. ಚಂದ್ರ. ಯು. ರಾಮಚಂದ್ರ, ಕೆ. ತನಿಯ, ಕೆ. ಶ್ಯಾಮು, ಬಿ. ಗೋವಿಂದ, ಕೆ. ಶಾಂತಾರಾಮ, ಕೆ. ಚನ್ನಪ್ಪ ಮುಂತಾದವರು ಸಂದರ್ಭೋಚಿತವಾಗಿ ಮಾತನಾಡಿದರು. ವಿದ್ಯಾಪ್ರಸಾರದ ಕುರಿತು ಶ್ರೀ ಬಿ. ಯಂ. ಕುಡುಬಿ, ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರು ಇವರು ಮಾತನಾಡಿದರು.

ಸಾಯಂಕಾಲ ಮುಕ್ತಾಯ ಸಮಾರಂಭವು ಡಾ| ಟಿ. ಯಮ್. ಎ. ಪೈ, ರಿಜಿಸ್ಟ್ರಾರ್ ಜನರಲ್ ಎಜುಕೇಶನ್ ಎಕಡಮಿ ಮಣಿಪಾಲ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎ. ಜೆ. ಅಲ್ಸೆ ಮುಂತಾದವರು ಹರಿಜನರ ಪುರೋಭಿವೃದ್ಧಿಯ ಕುರಿತು ಸೂಕ್ತ ಸಲಹೆಯನ್ನಿತ್ತರು. ಅಧ್ಯಕ್ಷರು ಮಾತನಾಡುತ್ತಾ ದಲಿತವರ್ಗದವರು ತಮ್ಮ ಹಕ್ಕು ಬಾಧ್ಯತೆಯನ್ನು ಅರಿತು ತಮ್ಮ ಪ್ರಗತಿಯನ್ನು ಸಾಧಿಸಿಕೊಳ್ಳಲು ತಾವೇ ಮುಂದೆಬರಬೇಕೆಂದು ದಲಿತ ವರ್ಗದವರಿಗೆ ಆಹ್ವಾನವಿತ್ತರು. ಶ್ರೀ ಚಂದ್ರನವರು ಧನ್ಯವಾದ ಸಮರ್ಪಿಸಿದರು.

ರಾತ್ರಿ ಉಡುಪಿ ಕಸ್ತೂರಿಕಲಾ ಮಂಡಳಿಯವರಿಂದ "ಕಲ್ಲಿನಕ್ಲ ಕಲ್ಪ" ಎಂಬ ಹಾಸ್ಯಮಯ ಸಂಗೀತ ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು.

ಉಡುಪಿ ನಗರ ಸಭೆ—ಯ ಉಪಾಧ್ಯಕ್ಷರಾಗಿ ಸ್ವಲ್ಪ ಸಮಯದ ಹಿಂದೆ ರಾಜಿನಾಮೆ ಸಲ್ಲಿಸಿದ್ದ ಶ್ರೀ ಪಿ. ರಂಗನಾಥ ಶೆಣೈಯವರೇ ತಾ 1ರಲ್ಲಿ ನಗರ ಸಭಾಪತಿ ಡಾ| ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿದ ವಿಶೇಷ ಸಭೆಯಲ್ಲಿ ಸರ್ವಾನುಮತದಿಂದ ತಿರುಗಿ ಚುನಾಯಿಸಲ್ಪಟ್ಟಿರುವರು. ಇವರನ್ನು ಅಭಿನಂದಿಸಿ ಡಾ. ಕೆ. ಎಲ್. ಐತಾಳ್, ಎನ್. ಸೀತಾರಾಮ ಕಾಮತ್ ಮೊದಲಾದವರ ಭಾಷಣಗಳಾದುವು.

ಉಡುಪಿಯ ಮೋಡರ್ನ್ ಸ್ಕೂಲ್ ಆಫ್ ಕಾಮರ್ಸಿನ ಶಾಲಾ ವರ್ಧಂತಿಯು ಕಳೆದ ತಾ. 30ನೇ ಸಂಜೆ ವರದೇಂದ್ರ ಕಲಾ ಮಂದಿರದಲ್ಲಿ ಹಿಂದಿನ ನಗರ ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಹೆಡ್ಮಾಸ್ತರ ಶ್ರೀ ಟಿ. ಎ. ವಾಸುದೇವನ್‌ರು ವರದಿಯನ್ನೋದಿದರು. ಶ್ರೀ ಕು ಶಿರ್ದ್ ಆಹಮ್ಮದರು ಸ್ವಾಗತ ಮಾಡಿದರು. ಶ್ರೀ ಬಿ. ಆರ್. ಉಡುಪರು ಉತ್ತರಿಸಿದರು. ಶ್ರೀ ಟಿ. ಎನ್. ಕೇಳು ನಂಬಿಯಾರರು ಬಹುಮಾನ ವಿತರಣೆಗೈದರು. ಅಧ್ಯಕ್ಷರ ಭಾಷಣವಾದ ಮೇಲೆ ನಾಟಕಾಭಿನಯವಾಯಿತು.

ನಂದಿಕೂರು-ಬೋರ್ಡು ಹಾ. ಎ. ಶಾಲೆಯ ವಾರ್ಷಿಕೋತ್ಸವವು ಕಳೆದ ತಾ. 28ರಲ್ಲಿ ಅದಮಾರು ಮಠದ ಶ್ರೀ ಶ್ರೀ ವಿಬುಧೇಶತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ನೆರವೇರಿತು. ಡಾ| ಟಿ. ಎನ್. ಕೆ. ನಂಬಿಯಾರರು ರಂಗಮಂಟಪದ ಉದ್ಘಾಟನೆ ಮಾಡಿದರು. ಹೆಡ್ಮಾಸ್ತರ ಶ್ರೀ ಎ. ನಾಗಪ್ಪ ಸೆಟ್ಟರು ವರದಿಯನ್ನೋದಿದರು. ಆಸ್ತೆ ಪಟೇಲ್ ಶ್ರೀ ಎ. ದೊಡ್ಡಣ್ಣ ಸೆಟ್ಟರು ಬಹುಮಾನ ಹಂಚಿದರು. ಸಭಿಕರ ಮತ್ತು ಅಧ್ಯಕ್ಷರ ಭಾಷಣವಾದ ಮೇಲೆ ವಿವಿಧ ವಿನೋದಾವಳಿಗಳಾದುವು.

ಮಂಗಳೂರಿನ-ಕುದ್ಮುಲ್ ರಂಗರಾವ್ ಸ್ಮಾರಕ ಸಮಾಜ ಮಂದಿರದಲ್ಲಿ ಕಳೆದ ತಾ. 24ರಲ್ಲಿ ಶ್ರೀ ಮಂಜಪ್ಪ ಉಳ್ಳಾಲ್ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಹರಿಜನ ವಿದ್ಯಾಭಿವೃದ್ಧಿ ಸಪ್ತಾಹವನ್ನಾಚರಿಸಲಾಯಿತು. ಶ್ರೀ ಕೆ. ಸೀತಾರಾಮ ಸದಕನ್ಯಾಯ ಇವರು ತೀರಾ ಹಿಂದುಳಿದ ಹಳ್ಳಿಗಳಲ್ಲಿ ಹರಿಜನ ಮಕ್ಕಳಿಗೆ ವಿದ್ಯಾಭ್ಯಾಸ ಸೌಕರ್ಯವನ್ನು ಕಲ್ಪಿಸುವ ಅವಶ್ಯಕತೆಗಳನ್ನು ವಿವರಿಸಿದರು. ಆ ಬಗ್ಗೆ ರಚನಾತ್ಮಕ ಕಾರ್ಯಕ್ರಮಗಳನ್ನು ಹೇಗೆ ತೆಗೆದುಕೊಳ್ಳಬಹುದೆಂಬುದನ್ನು ವಿವರಿಸಿದರು. ಬಳಿಕ ಶ್ರೀಗಳಾದ ಕಾಂತಪ್ಪ, ಸುಂದರ, ಪೂವಪ್ಪ, ರಮಾನಂದ ಮೊದಲಾದವರು ಮಾತನಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಸವಣೂರು—ಸ್ಥಳೀಯ ಪಂಚಾಯತಿನ ಸಾಮಾನ್ಯ ಸಭೆಯೊಂದು ಕಳೆದ ತಾ 24ರಲ್ಲಿ ಶ್ರೀ ಸವಣೂರುಗುತ್ತು ವೆಂಕಪ್ಪ ರೈಗಳ ಅಧ್ಯಕ್ಷತೆಯಲ್ಲಿ ಜರಗಿ ಕಳೆದ ವರ್ಷದ ಆಡಳಿತ ವರದಿಯನ್ನು ಮಂಜೂರುಮಾಡಿತಲ್ಲದೆ ಜಿಲ್ಲಾ ಬೋರ್ಡಿನಿಂದ ನಡಿಸಲ್ಪಡುತ್ತಿರುವ ಮೊಗರು ಏಕೋಪಾಧ್ಯಾಯ ಬೋರ್ಡು ಶಾಲಾ ಕಟ್ಟಡಕ್ಕೆ ಕೈಲಾದ ಧನಸಹಾಯ ಕೊಡಲು ನಿರ್ಣಯಿಸಿತು.

ಸಿಡಿಲು ಬಡಿದು ಮರಣ-ಇತ್ತೀಚೆಗೆ ವಿಶೇಷ ಸಿಡಿಲು ಬಂದಿದ್ದು ಅದರ ಬಡಿತದಿಂದ ಉಧಿಯಾವರದಲ್ಲಿ ಮತ್ತು ಅದಿಉಡುಪಿಯಲ್ಲಿ ಎರಡು ಮರಣಗಳುಂಟಾಗಿವೆ. ಅಲ್ಲದೆ ಉಡುಪಿ ಸಮೀಪದ ಬೈಲೂರು ದೇವಸ್ಥಾನದ ಶಿಖರಕ್ಕೆ ಸಹ ಸಿಡಿಲು ಬಿದ್ದು ಹಾನಿಯಾಗಿರುತ್ತದೆ.

ಶ್ರೀ ನಟರಾಜ ದೇವಾಲಯ-ನೃತ್ಯ-ನಾಟಕ-ಸಂಗೀತಾದಿ ಲಲಿತಕಲೆಗಳಿಗೆ ಅಧಿದೇವತೆಯಾದ ಶ್ರೀ ನಟರಾಜ ಸ್ವಾಮಿಯ ಮಂದಿರವನ್ನು ಧಾರವಾಡ ಜಿಲ್ಲೆಯ ಹಂಸಭಾವಿಯ 'ಗುರುಕುಲ'ದಲ್ಲಿ ಸ್ಥಾಪಿಸಬೇಕೆಂದು, ನಾಟಕಾಲಂಕಾರ, ಅಭಿನಯಕೇಸರಿ ಶ್ರೀ ಗರುಡ ಸದಾಶಿವರಾಯರು ಈ ದೇವಸ್ಥಾನದ ಅಡಿಗಲ್ಲನ್ನಿಟ್ಟರು. ಜಮಖಂಡಿ ಶ್ರೀ ಗಜಾನನ ನಾಟಕ ಮಂಡಲಿಯವರು, ಗೋಕಾಕ ಶ್ರೀ ಶಾರದಾ ಸಂಗೀತ ನಾಟಕ ಮಂಡಲಿಯವರು ಮೈಸೂರು ಕನ್ನಡ ಥೇಟರ್ಸ್‌ರವರು, ಮಂಗಳೂರಿನ ಶ್ರೀ ಸರ್ವಮಂಗಳ ನಾಟಕ ಸಭೆಯವರು ಬೆನಿಫಿಟ್ ನಾಟಕಗಳ ಮೂಲಕ ನಿಧಿ ಸಂಗ್ರಹಕ್ಕೆ ನೆರವಾಗಿದ್ದಾರೆ. ಬೆಂಗಳೂರಿನ ಗುಬ್ಬಿ ಥಿಯೇಟರಿನಲ್ಲಿ ೧೯೫೭ರ ಡಿಸೆಂಬರ್ ೨೦, ೨೧ ಮತ್ತು ೨೨ ಈ ಮೂರು ದಿನ ಮತ್ತು ಮೈಸೂರಿನಲ್ಲಿ ೧೯೫೮ರ ಫೆಬ್ರುವರಿ ೨೧, ೨೩ ಮತ್ತು ೨೪ ಈ ಮೂರು ದಿನ ನಿಧಿಸಂಗ್ರಹದ ಉದ್ದೇಶದಿಂದ ಸ್ಥಳೀಯ ಕಲಾವಿದರುಗಳ ನೆರವಿನಿಂದ ಶ್ರೀ ನಟರಾಜ ನಾಟ್ಯೋತ್ಸವವನ್ನು ಜರುಗಿಸಲಾಯಿತು. ಮೈಸೂರಿನ ಸುಪ್ರಸಿದ್ಧ ಶಿಲ್ಪಿಗಳಾದ ಶ್ರೀ ಬಿ. ಬಸವಣ್ಣನವರು ಶ್ರೀ ನಟರಾಜ ಸ್ವಾಮಿಯ ವಿಗ್ರಹವನ್ನು ಸಿದ್ಧಗೊಳಿಸಿದ್ದಾರೆ. ನಾಟಕರತ್ನ ಶ್ರೀ ಜಿ. ಎಚ್. ವೀರಣ್ಣನವರು ವಿಗ್ರಹದ ವೆಚ್ಚವನ್ನು ವಹಿಸಿಕೊಂಡಿದ್ದಾರೆ. ಗರ್ಭಗುಡಿಯ ಗೋಪುರದ ಮೇಲೆ ಇಡುವ ಕಳಸ ಸಿದ್ಧವಾಗಿದ್ದು ಆ ವೆಚ್ಚವನ್ನು ಮದ್ರಾಸಿನ 'ಸರಳಾ ಚಿತ್ರ'ದ ಒಡೆಯರಾದ ಶ್ರೀ ಅಮರನಾಥ್ ಅವರು ವಹಿಸಿಕೊಂಡಿದ್ದಾರೆ. ಬಸರೂರಿನ ಭಕ್ತರು ದೇವಾಲಯದ ದ್ವಾರಗಳನ್ನು ಮಾಡಿಸಿಕೊಡುವ ವಾಗ್ದಾನ ಮಾಡಿದ್ದಾರೆ. ಕಟ್ಟಡದ ನಿರ್ಮಾಣಕಾರ್ಯ ತ್ವರಿತ ಗತಿಯಿಂದ ಮುಂದುವರಿದಿದೆ. ಕರ್ನಾಟಕದ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರ್ ಅವರು ತಮ್ಮ ಪರದೇಶ ಪ್ರವಾಸದನಂತರ 'ಗುರುಕುಲ'ಕ್ಕೆ ದಯಮಾಡಿಸುವುದಾಗಿ ಅಪ್ಪಣೆ ಕೊಡಿಸಿದ್ದಾರೆ. ಅಷ್ಟರಲ್ಲಿ ದೇವಾಲಯದ ಕಟ್ಟಡದ ಕಾರ್ಯ ಪೂರೈಸಿ ಶ್ರೀ ಮನ್ಮಹಾರಾಜರವರ ದಿವ್ಯಸಮ್ಮುಖದಲ್ಲಿಯೇ ಶ್ರೀ ನಟರಾಜ ಸ್ವಾಮಿಯ ವಿಗ್ರಹದ ಪ್ರತಿಷ್ಠಾಪನಾ ಮಹೋತ್ಸವವನ್ನು ಜರುಗಿಸುವ ಏರ್ಪಾಟು ಮಾಡಿದೆ. ದೇವಸ್ಥಾನ ನಿರ್ಮಾಣಕ್ಕೆ ಸುಮಾರು ೩೦ ಸಾವಿರ ರೂಪಾಯಿಗಳ ವೆಚ್ಚ ತಗಲಬಹುದೆಂದು ಅಂದಾಜು ಮಾಡಲಾಗಿದೆ. ಈ ಮಹಾಕಾರ್ಯದಲ್ಲಿ ಸಕಲರೂ ಸಹಕರಿಸಿ ದೇವಸ್ಥಾನದ ನಿರ್ಮಾಣಕಾರ್ಯದಲ್ಲಿ ನೆರವಾಗಿ ಪುಣ್ಯಭಾಗಿಗಳಾಗಿ 'ನಾಟ್ಯಭಾರತಿ'ಯ ಸಂಸ್ಥಾಪಕ ಶ್ರೀ ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸರು ಪ್ರಾರ್ಥಿಸುತ್ತಾರೆ.

ಮೈಸೂರಿನ ವಿದ್ಯಾಮಂತ್ರಿ ಅಣ್ಣಾರಾವ್ ಗಣಮುಖಿಯವರು ಇದೇ ತಾ. 5ನೇ ರಾತ್ರಿ ಧರ್ಮಸ್ಥಳಕ್ಕೆ ಬಂದು ಮರುದಿನ ಬೆಳಿಗ್ಗೆ ಬೆಳ್ತಂಗಡಿ ಹೈಸ್ಕೂಲಿನ ಮಧ್ಯಾಹ್ನ ಹೆಬ್ರಿ ಹೈಸ್ಕೂಲಿನ ಕಟ್ಟಡಗಳ ಪ್ರಾರಂಭೋತ್ಸವವನ್ನು ನೆರವೇರಿಸಲಿರುವರು, ತಾ. 7ನೇ ಬೆಳಿಗ್ಗೆ ಮಂಗಳೂರಿನ ಕದ್ರಿ ಬಂಗ್ಲೆಯಲ್ಲಿ ಭೇಟಿಯಿತ್ತು ಲೋಕಲ್ ಲೈಬ್ರೇರಿ ಆಥಾರಿಟಿ, ಸ್ತ್ರೀಯರ ಸರಕಾರಿ ಸೆಕೆಂಡರಿ ಮತ್ತು ತರಬೇತಿ ಶಾಲೆ, ಬೇಸಿಕ್ ತರಬೇತಿ ಶಾಲೆ, ಬಿಸೆಂಟ್ ಗರ್ಲ್ಸ್ ಹೈ ಸ್ಕೂಲುಗಳನ್ನು ಸಂದರ್ಶಿಸಿ ಮಧ್ಯಾಹ್ನ ಮಡಿಕೇರಿಗೆ ತೆರಳುವರು.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ

ವಿಚಾರಿಸಿರಿ—

ನವಭಾರತ ಪುಸ್ತಕ ಭಂಡಾರ,

ಉಡುಪಿ.

ವಿಚಾರ ವರ್ಷ

ಭವ್ಯ ಭಾರತ ನಿರ್ಮಾಣಕ್ಕೆ ಕಾಂಗ್ರೆಸ್ಸೊಂದೇ ತಾರಕ

ಸನಾತನ ಧರ್ಮ ಮತ್ತು ಸಂಸ್ಕೃತಿ ಹಾಗೂ ಆಧುನಿಕ ವಿಚಾರಧಾರೆಗಳ ತ್ರಿವೇಣೀ ಸಂಗಮ-ಕಾಂಗ್ರೆಸ್

ಸರ್ವ ರಾಷ್ಟ್ರಗಳಿಂದಲೂ ಶ್ಲಾಘಿಸಲ್ಪಡುವ ನಮ್ಮ ಭಾರತ ದೇಶವು ಉನ್ನತಿಯ ತುತ್ತ ತುದಿಯನ್ನೇರಬೇಕಾದರೆ ಪಂಡಿತ್ ನೆಹರೂರಂತಹ ಚಿಕ್ಕ ಹಿರಿಯ ಮುಂದಾಳುಗಳು ತೋರಿಸಿದ ಮಾರ್ಗದಲ್ಲಿ ನಾವು ನಡೆಯಬೇಕು. ಮತಭೇದವಿಲ್ಲದೆ ಉಜ್ವಲ ರಾಷ್ಟ್ರೀಯ ಭಾವ ಸ್ಫೂರ್ತಿಯಿಂದ ದೇಶದ ಉನ್ನತಿಗಾಗಿ ದುಡಿಯಲು ನೆರವಾಗುವುದೇ ಕಾಂಗ್ರೆಸಿನ ಮುಖ್ಯ ಉದ್ದೇಶ, ಪ್ರಜಾ ಪ್ರಭುತ್ವ ಮತ್ತು ಸಮಾಜವಾದ ಇವುಗಳನ್ನು ಶಾಂತಿಯುತವಾಗಿ ಸಾಧಿಸುವುದೇ ಕಾಂಗ್ರೆಸಿನ ಮುಖ್ಯ ಧ್ಯೇಯವಾಗಿದೆ.

ಮಹಾತ್ಮಾ ಗಾಂಧೀಜಿಯವರು ಫಲಕಾರಿಯಾಗುವಂಥ ಸತ್ಯ, ಶಾಂತಿ, ಪ್ರೇಮದ ಬೀಜವನ್ನು ಬಿತ್ತಿ, ಸ್ವಾತಂತ್ರ್ಯ ಸಾಧಿಸಿ ಬೆಳಗಿಸಿದ ಜ್ಯೋತಿಯನ್ನು ಎತ್ತಿ ಹಿಡಿದು ನಮಗೆ ದಾರಿಯನ್ನು ತೋರಿಸಿರುತ್ತಾರೆ. ಅವರು ತೋರಿಸಿದ ಮಾರ್ಗದಂತೆ ಕಾಂಗ್ರೆಸ್ ಕಾರ್ಯಕರ್ತರು ನಡೆಯುವುದು ಆದ್ಯ ಕರ್ತವ್ಯ. ಪರಕೀಯರನ್ನು ನಮ್ಮ ದೇಶದಿಂದ ಹೊರಗೋಡಿಸಲು ನಾವು ಅದೆಷ್ಟು ಕಷ್ಟಪಡಬೇಕಾಯಿತು! ಅದಕ್ಕಾಗಿ ಸಾವಿರಗಟ್ಟಲೆ ಜನರ ಬಲಿದಾನವಾಯಿತು. ಕಾರಾಗೃಹವಾಸವೇ ಮೊದಲಾದ ಅನೇಕ ಕಷ್ಟಗಳಿಗೆ ಒಳಗಾದ ನಮ್ಮ ಹಿರಿಯ ನಾಯಕರ ಮುಂದಾಳ್ತನದಿಂದ. ಭಾರತಕ್ಕೆ ಸ್ವಾತಂತ್ರ್ಯ ದೊರಕಿತು. ನಮ್ಮ ಭಾರತದ ಪ್ರಗತಿಯನ್ನು ನಾವು ಧಾರ್ಮಿಕ ಹಾಗೂ ನೈತಿಕವಾದ ತಳಹದಿಯ ಮೇಲೆ ಸಾಧಿಸಬೇಕಾಗಿದೆ. ಅದಕ್ಕಾಗಿ ಈ ಸ್ವಾತಂತ್ರ್ಯವನ್ನು ಚಿರಕಾಲ ಉಳಿಯುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ

ಕಾಂಗ್ರೆಸ್ ಸಂಸ್ಥೆಯು ಪವಿತ್ರ ಅಸ್ತಿವಾರದ ಮೇಲೆ ಕಟ್ಟಿದ ಪರಿಶುದ್ಧ ಸಂಸ್ಥೆ. ಪ್ರಜಾ ಪ್ರಭುತ್ವದಲ್ಲಿ ನಿಷ್ಠೆಯುಳ್ಳ ಸರ್ವ ಶಕ್ತವಾದ, ಜನಪ್ರಿಯವಾದ ಪಕ್ಷವಿದು. ಕಾಂಗ್ರೆಸು ಭಾರತೀಯರ ಸ್ಫೂರ್ತಿಯ ನೆಲೆಯಾಗಿದೆ. ಇದರ ಉಳಿಯುವಿಕೆಗಾಗಿ, ಯಶಸ್ಸಿಗಾಗಿ ಸಾವಿರಾರು ಜನರ ಬಲಿದಾನವಾಗಿದೆ. ಭಾರತದ ಕೋಟಿ ಹೃದಯದ ಮಿಡಿತವೇ ಕಾಂಗ್ರೆಸಿನ ಜೀವಾಳವಾಗಿದೆ. ಇಂಥ ಪಕ್ಷದಲ್ಲಿ ಸ್ವಾರ್ಥಸಾಧನೆಗಾಗಿ ಗುಂಪುಕಟ್ಟಿಕೊಂಡು, ಪಕ್ಷದೊಳಗೆ ಇದ್ದುಕೊಂಡು ಪಕ್ಷವನ್ನೇ ವಿರೋಧಿಸುವುದು ಪುರುಷಾರ್ಥವಲ್ಲ. ಕೇವಲ ಟೀಕಿಸುವುದಕ್ಕಾಗಿಯೇ ನಾವಿರುವುದಲ್ಲ. ಅಂಥ ಜಟಿಲ ವಿಷಯಗಳು ಬಂದಲ್ಲಿ ಅದನ್ನು ವಿಚಾರಿಸಿ, ಪರಿಶೀಲಿಸಿ ಕಾರ್ಯವನ್ನು ಮುಂದುವರಿಸಬೇಕು. ಕಾಂಗ್ರೆಸಿನ ಧ್ಯೇಯವನ್ನು ಅಮೇರಿಕದಂತಹ ಪ್ರಜಾಪ್ರಭುತ್ವ ರಾಷ್ಟ್ರವಾಗಲೀ, ರಷ್ಯಾದಂತಹ ಸಮತಾ ರಾಷ್ಟ್ರಗಳಾಗಲೀ ಅಲ್ಲಗಳೆಯಲಾರವು. ಕಾರಣ ಕಾಂಗ್ರೆಸು ಭಾರತ ದೇಶದ ಜನರ ಸನಾತನ ಧರ್ಮದ ಮೇಲೂ, ಜನಜೀವನ, ಸಂಸ್ಕೃತಿಯ ಮೇಲೂ ತನ್ನ ಧ್ಯೇಯ ಧೋರಣೆಯನ್ನು ರೂಪಿಸಿಕೊಂಡಿದೆ, ರಾಜಕೀಯ ವಿಚಾರದಲ್ಲಿ ಬೇರೆಯವರ ಮುಖ ನೋಡಬೇಕಾಗಿಲ್ಲ. ಅದು ಜೀವಂತ ಸಂಸ್ಕೃತಿಯುಳ್ಳ ರಾಷ್ಟ್ರ.

ಹೊಸದಾಗಿ ಅಸ್ತಿತ್ವಕ್ಕೆ ಬಂದ ನಮ್ಮ ಪ್ರಜಾತಂತ್ರದ ಬೆಳವಣಿಗೆಯಲ್ಲಿ ದೇಶದಾದ್ಯಂತ ಹೊಸ ಹುರುಪನ್ನು ಜನರ ಜಡತ್ವದ ಮೇಲೆ ರಾಮಬಾಣದಂತೆ ಪ್ರಯೋಗಿಸಿ ಹಲವಾರು ಯೋಜನೆಗಳನ್ನು ಮಾಡಿದೆ. ಅನೇಕ ವರ್ಷ ಕಾಂಗ್ರೆಸ್ ಸಂಸ್ಥೆ ಪ್ರತಿಪಾದಿಸುತ್ತಾ ಬಂದಿರುವ ತತ್ವ ಇದೀಗ ಸಮಾಜವಾದಿ ಸ್ವರೂಪದ ಸಮಾಜರಚನೆಗೆ ದಾರಿಮಾಡುತ್ತಿದೆ. ಕಾಂಗ್ರೆಸ್ ಸರಕಾರವು ಮಾಡುತ್ತಿರುವ ಶಾಸನಗಳು ಈ ದಾರಿಯ ಮೈಲುಗಲ್ಲುಗಳು. ಕಾಂಗ್ರೆಸ್ ಕಾರ್ಯಕರ್ತರು ಸೇವಾ ಮನೋಭಾವನೆಯಿಂದ ಪ್ರೀತಿಯನ್ನು ಹೆಚ್ಚಿಸಿ ಪಕ್ಷದ ಧ್ಯೇಯ-ಧೋರಣೆಗಳಿಗನುಗುಣವಾಗಿ ತಮ್ಮ ಅನುನಿತ್ಯದ ನಡೆನುಡಿಗಳನ್ನು ರೂಪಿಸಿಕೊಳ್ಳಬೇಕು. ಆಗ ಸಂಸ್ಥೆಯ ಬಗ್ಗೆ ಜನರ ಪ್ರೇಮವು ತಾನೇ ತಾನಾಗಿ ಹೆಚ್ಚುವುದು. ಈ ಪರಿವರ್ತನೆ ವ್ಯರ್ಥವಾಗದಂತೆ ಜನರು ತಮ್ಮ ಬುದ್ಧಿ ಶಕ್ತಿಯನ್ನು ಬೆಳೆಸಿಕೊಂಡರೆ ಮಾತ್ರ ಅವರಿಂದ ಸಂಸ್ಥೆಗೆ ಮತ್ತು ದೇಶಕ್ಕೆ ಪ್ರಯೋಜನವಾದೀತು. ಜಗತ್ತಿನ ಎಲ್ಲಾ ಜನರಿಂದಲೂ, ಹಾಗೂ ಎಲ್ಲಾ ರಾಷ್ಟ್ರಗಳಿಂದಲೂ ಶಾಂತಿಯ ರಾಜ್ಯ ಎಂಬ ಕೀರ್ತಿಯನ್ನು ಭಾರತವು ಗಳಿಸಿದೆ. ಅಂತಹ ಗೌರವವನ್ನು ಒದಗಿಸಿದ ನಮ್ಮ ನಾಯಕರಿಗೆ ಹಾಗೂ ಕಾಂಗ್ರೆಸ್ ಸಂಸ್ಥೆಗೆ ನಮ್ಮ ದೇಶದ ಜನರು ಕೃತಜ್ಞರಾಗಿರಬೇಕಲ್ಲದೆ ಸಂಸ್ಥೆಯ ಕೀರ್ತಿ ಗೌರವವನ್ನು ಹೆಚ್ಚಿಸುವುದು ನಮ್ಮೆಲ್ಲರ ಕರ್ತವ್ಯ.

ಕಾಂಗ್ರೆಸಿನ ಬಗ್ಗೆ ಜನರಲ್ಲಿ ತಪ್ಪು ಭಾವನೆಗಳು ಇದ್ದಲ್ಲಿ ಅದಕ್ಕೆ ಯೋಗ್ಯ ರೀತಿಯ ಸಮಾಧಾನ ಕೊಟ್ಟು ಅವರ ಮನಸ್ಸಿನಿಂದ ಆ ಭಾವನೆಯನ್ನು ದೂರ ಮಾಡಿ ಇತರರನ್ನು ಪಕ್ಷದ ನಿಷ್ಠಾವಂತ ಭಕ್ತರನ್ನಾಗಿ ಮಾಡಿ, ಜನತೆಯ ಐಕ್ಯ-ಸುಭದ್ರತೆಗಳನ್ನು ಕಾಪಾಡಿಕೊಂಡು ಜನತೆಯ ಹಿತಪ್ರಗತಿಗಳಿಗಾಗಿ ಅವಶ್ಯವಿದ್ದ ಮಹತ್ಕಾರ್ಯಗಳನ್ನು ಕೈಕೊಳ್ಳುವಂತಹ ಸಮರ್ಥವಾದ ಸುಸಂಘಟಿತ ಸಂಸ್ಥೆಯಾಗಿ, ಜನತೆಯ ಪ್ರಗತಿಗಾಗಿ ಮತ್ತು ವಿಶ್ವಶಾಂತಿಗಾಗಿ ಎಡೆಬಿಡದೆ ದುಡಿಯುವ ದೃಢ ಸಂಕಲ್ಪವನ್ನಿಟ್ಟುಕೊಂಡು ಕೆಲಸ ಮಾಡಿದರೇನೇ ದೇಶದ ಕಲ್ಯಾಣವಾದೀತು. ಶಿಸ್ತಿನಿಂದ, ಪ್ರೀತಿ ಸೌಹಾರ್ದತೆಯಿಂದ ನಾಡನ್ನು ಉದ್ಧರಿಸಿ, ದೇಶವನ್ನು ಸಮೃದ್ಧಿಯಿಂದ ತುಂಬಿ ಉನ್ನತಿಗೆ ತರುವುದೇ ಕಾಂಗ್ರೆಸಿನ ಹೆಗ್ಗುರಿ ಮತ್ತು ಆದರ್ಶ.

ಜನರೆಲ್ಲರೂ ಕಾಂಗ್ರೆಸಿಗೇ ತಮ್ಮ ಬೆಂಬಲ ಕೊಟ್ಟು ಭವ್ಯಭಾರತ ನಿರ್ಮಾಣಕ್ಕೆ ನೆರವಾಗಲಿ. ಕಾಂಗ್ರೆಸಿನ ಬೆಂಬಲವೇ ನಮ್ಮ ದಿನನಿತ್ಯದ ಉಸಿರಾಗಲಿ.

ಜೈ ಹಿಂದ್!

—ಎ. ರಾಘವ ಭಂಡಾರಿ.
ಮಂಗಳೂರು.

ಭಾವ ಕಥೆ

ಸಂತಾನ ಯಾರಿಗೆ ಸತ್ತದು ಯಾಕೆ?

ಒಂದು ದಿವಸ ಸುಪ್ರಭಾತದ ಸಮಯದಲ್ಲಿ ಒಂದು ಮನೆಯಲ್ಲಿ ಒಂದು ಮಗುವು ಜನ್ಮತಾಳಿತು. ರಾತ್ರಿ ಆ ಮನೆಯ ದ್ವಾರಕ್ಕೆ ಇಬ್ಬರು ದೇವತೆಗಳು ಆಗಮಿಸಿದರು.

ಮೊದಲನೆಯ ದೇವತೆಯು ಎರಡನೆಯದರೊಡನೆ —ನನ್ನ "ಅಭಿಪ್ರಾಯದಂತೆ, ಈ ಮಗುವಿನ ತಂದೆ ಇನ್ನು ಸತ್ತಂತೆಯೇ ಸರಿ! ಏಕೆಂದರೆ ಈ ಮಗು ದೊಡ್ಡದಾಗುತ್ತಾ ದೊಡ್ಡದಾಗುತ್ತಾ ತನ್ನ ತಂದೆಯನ್ನೇ ಕೊಲ್ಲುತ್ತದೆ" ಎಂದಿತು.

ಕೂಡಲೇ ಎರಡನೇ ದೇವತೆಯು— "ನನ್ನ ಅಭಿಪ್ರಾಯದಂತೆ, ಈ ಮನುಷ್ಯನು ಈ ಮಗುವಿನಿಂದಲೇ ನಿಜವಾದ ಮಾನವತ್ವ ಪಡೆಯುತ್ತಾನೆ. ಈ ಮಗುವೇ ಅವನನ್ನು ಅಮರನನ್ನಾಗಿಸುತ್ತದೆ.!" ಎಂದಿತು.

"ನೀನು ತಪ್ಪುತ್ತಿರುವಿ, ಈ ಮಗುವು ತನ್ನ ತಾಯಿಯನ್ನು ತನ್ನ ತಂದೆಯಿಂದ ಬೇರ್ಪಡಿಸಿ ಅಶಾಂತಿಯನ್ನೆಬ್ಬಿಸುತ್ತದೆ!' ಎಂದು ಅಂದಿತು ಮೊದಲಿನೆಯದು

ಇದು ಬರೇ ನಿನ್ನ ಕಲ್ಪನೆ. ಈ ಮಗು ತನ್ನ ತಾಯಿಯ ಹೃದಯವನ್ನು ಶಾಂತಮಾಡುತ್ತದೆ; ಅಲ್ಲದೆ ಅವಳ ಹೃದಯವನ್ನು ಪ್ರೀತಿಯ ಝರಿಯನ್ನಾಗಿ ಈ ಮಗುವೇ ಮಾರ್ಪಡಿಸುತ್ತದೆ!" ಎಂದಂದಿತು ಎರಡನೆಯ ದೇವತೆ.

ತತ್‌ಕ್ಷಣವೇ ಎರಡನೆಯದನ್ನು ಖಂಡಿಸುತ್ತಾ ಮೊದಲನೆಯ ದೇವತೆಯು— "ಈ ಮಗುವು ತನ್ನ ತಂದೆಯ ಯೌವನವನ್ನು ತಿಂದು ತಾನು ಯೌವನ ಪಡೆಯುತ್ತಾನೆ. ಮುದುಕತನವನ್ನು ತಿಂದು ಮುದುಕನಾಗುತ್ತಾನೆ. ತನ್ನ ತಂದೆಯ ಬೆವರಿನ ಐಶ್ವರ್ಯದಿಂದ ಜೀವನದಲ್ಲಿ ಮೋಜು ಮಾಡುತ್ತಾನೆ." ಎಂದಿತು.

ಮೊದಲನೆಯದನ್ನು ಶಾಂತಮಾಡುತ್ತಾ ಎರಡನೆಯ ದೇವತೆಯು —"ಅಲ್ಲ, ಅಲ್ಲ! ಈ ಮಗು ತನ್ನ ತಂದೆಯ ಯೌವನಕ್ಕೆ ಬಾಲ್ಯವನ್ನೂ; ಮುದುಕತನಕ್ಕೆ ಯೌವನವನ್ನೂ ಈಯುತ್ತಾನೆ! ತನ್ನ ತಂದೆಯ ಮರಣದನಂತರವೂ ಈ ಮಗು ತನ್ನ ರೋಮ ರೋಮಗಳಲ್ಲಿ ಅವನನ್ನು ಜೀವಂತವಿಡಲು ಪ್ರಯತ್ನಿಸುತ್ತದೆ." ಎಂದನು.

ದೇವತೆಗಳೀರ್ವರೂ ಹಿಂತಿರುಗಲನುವಾದರು; ಕೂಡಲೇ ಮೊದಲನೆಯ ದೇವತೆಯು—'ದೇವರು ಯಾವ ಮನುಷ್ಯನ ಮೇಲೆ ಸಿಟ್ಟಾಗುತ್ತಾನೋ ಅವರಿಗೆ ಪುತ್ರರನ್ನೀಯುತ್ತಾನೆ ಎಂಬುದನ್ನು ನೆನಪಿಡು." ಎಂದುಸಿರಿತು.

"ಅಲ್ಲ ಸಖಾ! ದೇವರು ಯಾವ ಮನುಷ್ಯನ ಮೇಲೆ ಅತಿ ಸಂತೋಷಗೊಳ್ಳುತ್ತಾನೋ, ಅವನಿಗೇ 'ಸಂತಾನ'ವೀಯುತ್ತಾನೆ" ಎಂದುತ್ತರವಿತ್ತಿತು, ಎರಡನೆಯ ದೇವತೆ.

ಕೋಟ್ಯಾಂತರ ವರ್ಷಗಳು ಕಳೆದುವು ಆದರೆ ಆಕಾಶದ ಅಮರ ದೇವತೆಗಳ ವಾದಗಳ ಇದುವರೆಗೂ ಕೊನೆಗೊಂಡಿಲ್ಲ!!

(ಸುದರ್ಶನರ ಝರೋಕಾನಿಂದ)

—ಎಸ್. ಎಂ. ಶೆಟ್ಟಿ,
ಶಿವಮುಂಜೆಪರಾರಿ

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು

ಮೆನೇಜರ್, ನವಯುಗ, ಉಡುಪಿ.

ಮಕ್ಕಳ ಮಗ್ಗಿ ಪುಸ್ತಕ
(ನಯೇ ಪೈಸೆ ಕೋಷ್ಟಕ ಸಹಿತ)
ಬೆಲೆ 1ಕ್ಕೆ 0 1 0
ನವಯುಗ ಪ್ರೆಸ್, ಉಡುಪಿ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!
ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—
ಶ್ರೀ ಕೆ. ಹೊನ್ನಯ್ಯ ಶೆಟ್ಟರ
ಮುಗುಳು
ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.
ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ
ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ
ಈಗ ೧೨ನೇ ಮುದ್ರಣವನ್ನು ಕಂಡಿದೆ-
ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,
ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦ ೬ ೦ (ಟ. ಖರ್ಚು ಬೇರೆ).
ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುಮಾರಿ ಬಿಲ್ಲೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ
ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ
ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & CO. (N. J.) CALCUTTA—40
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಭಾರತ ದರ್ಶನ

ಸ್ಥಾಪತ್ಯಕಲಾಗಾರ- ಮಾಳವದ ಮಾಂಡವಗಡ

ಇಲ್ಲಿಗೆ ಬಂದ ಪ್ರವಾಸಿ ಆನಂದಸಾಗರದಲ್ಲಿ ತನ್ಮಯನಾಗಿಯೇ ಮರಳುತ್ತಾನೆ.

ಭಾರತ ವರ್ಷದ ಮಧ್ಯಸ್ಥಿತ ಸಸ್ಯಶ್ಯಾಮಲ ಮಾಳವ ಭೂಮಿ ಪ್ರಪಂಚದ ಅತ್ಯಂತ ಸಂಪನ್ನ ಪ್ರದೇಶಗಳಲ್ಲಿ ಒಂದಾಗಿರುವುದರಿಂದ ಅದನ್ನು ಅಧೀನಗೊಳಿಸಲೋಸುಗ ಹಲವಾರು ನೃಪತಿಯರು ಸದಾ ಪ್ರಯತ್ನಶೀಲರಾಗಿದ್ದರು. ಇಂತಹ ವೀರ ಪುರುಷರ ಗುಣಗಾನದಿಂದ ಇತಿಹಾಸದ ಪುಟಗಳು ತುಂಬಿ ಹೋಗಿರುತ್ತವೆ. ಮಾಳವದ ಪ್ರಸಿದ್ಧ ದುರ್ಗಗಳಲ್ಲಿ ಮತ್ತು ವಿಖ್ಯಾತ ಕಲಾತ್ಮಕ ಸ್ಥಾನಗಳಲ್ಲಿ ಮಾಂಡವಗಡದ ಹೆಸರು ಉಲ್ಲೇಖನೀಯವಾಗಿದೆ. ಈ ಕೋಟೆಯು ಕ್ರಿಸ್ತ ಶಕ ೬ನೆಯ ಶತಮಾನದಲ್ಲಿ ಚಾಳುಕ್ಯ ಯಶೋಧರ್ಮನ್‌ನ ಕಾಲದಲ್ಲಿ ಸಮೃದ್ಧಶಾಲಿಯಾಗಿತ್ತು. ಪರಮಾರ ವಂಶದ ರಾಜನಾದ ಜಯದೇವಸಿಂಹನ ಓರ್ವ ಜೈನ ಮಂತ್ರಿಯು ಇಲ್ಲಿ ಸುಮಾರು ೩೦೦ ದೇವಾಲಯಗಳನ್ನು ಕಟ್ಟಿಸಿದನೆಂದು ಹೇಳುತ್ತಾರೆ.

ಒಂದು ಕಾಲದಲ್ಲಿ ಭಾರತೀಯ ಸ್ಥಾಪತ್ಯ ಕಲೆಯ ಅನುಪಮ ಕೇಂದ್ರವಾಗಿ ಮಾಂಡವಗಡವು ವಿರಾಜಿಸಿದ್ದು, ಮುಸ್ಲಿಮರ ಆಡಳಿತಾವಧಿಯಲ್ಲಿ ಒಂದು ಬಾರಿ ಇದು ಧ್ವಸ್ತಗೊಂಡರೂ ಪುನಃ ನವೀನ ರೂಪದ ಕಲೆಗೆ ಆಶ್ರಯ ಸ್ಥಾನವಾಗಿತ್ತು. ಇಂಡೋರದಿಂದ ಸುಮಾರು ೬೦ ಮೈಲು ದೂರದಲ್ಲಿರುವ ಈ ಹಳೆಯ ನಗರದಲ್ಲಿ ಇಂದು ಪಠಾಣೀಯರ ಸ್ಥಾಪತ್ಯಕಲೆಯ ಕುರುಹುಗಳು ಗೋಚರಿಸುತ್ತವೆ. ಮಾಳವದ ಪರಮಾರ ಅರಸರಿಂದ ಖಿಲ್ಜಿ ಕುಲದ ರಾಜರು ಮಾಂಡವಗಡವನ್ನು ಗೆದ್ದುಕೊಂಡರು. ಆ ಮೇಲೆ ೧೩೦೮ರಿಂದ ೧೪೦೧ರ ವರೆಗೆ ಇಲ್ಲಿ ಒಂದಕ್ಕಿಂತ ಇನ್ನೊಂದು ಸುಂದರವಾಗಿರುವ ಹಲವಾರು ಭವನಗಳನ್ನು ಇವರು ನಿರ್ಮಿಸಿದರು. ದಿಲಾವರ ಖಾನನು ತಾನು ಸ್ವತಂತ್ರ ಶಾಸಕನೆಂದು ಘೋಷಿಸಿದಂದಿನಿಂದ ಮಾಂಡವ 'ಶಾದಿಯಾಬಾದ್' ಅಥವಾ ಆನಂದ ನಗರಿ ಎಂಬ ಹೆಸರಿನಲ್ಲಿ ಪ್ರಖ್ಯಾತವಾಯಿತು. ಈ ಕಾಲದಲ್ಲಿಯೇ ಇಲ್ಲಿನ ಪ್ರಾಚೀನ ದುರ್ಗಗಳನ್ನು ಸುದೃಢಗೊಳಿಸುವುದರೊಡನೆ ಸುಂದರವಾದ ಅಶರ್ಫೀ ಮಹಲ್, ಜಾಮಿ ಮಸೀದಿ, ಹುಶಂಗಶಾಹನ ಘೋರಿ, ವಿಶಾಲ ಜಹಾಜ ಮಹಲ್ ಮೊದಲಾದ ಅದ್ವಿತೀಯ ಭವನಗಳು ನಿರ್ಮಾಣಗೊಂಡುವು. ಗಯಾಸುದ್ದೀನ ಖಿಲ್ಜಿಯು ಈ ಆನಂದನಗರಿಯಲ್ಲಿ ತನ್ನ ಐಶ್ವರ್ಯ ಮತ್ತು ಸುಖದ ಸಮಸ್ತ ಸಾಧನಗಳಲ್ಲಿ ತಲ್ಲೀನನಾಗಿದ್ದುದಲ್ಲದೆ ತನ್ನ ವಶದಲ್ಲಿದ್ದ ಸುಮಾರು ೧೫ ಸಾವಿರ ಸುಂದರ ರಮಣಿಯರನ್ನು ಒಂದೆಡೆ ಸೇರಿಸಿ ಅವರಿಗೋಸ್ಕರ ವಿಶಾಲ ಸುಂದರ ಭವನಗಳನ್ನೂ ಅದ್ವಿತೀಯ ಸುಂದರ ಸ್ನಾನಾಗಾರಗಳನ್ನೂ ನಿರ್ಮಿಸಿದ್ದನೆಂದೂ ಇದರಿಂದಾಗಿ ನಿಜವಾಗಿಯೂ ಶಾದಿಯಾಬಾದವನ್ನು ಆನಂದದ ನಗರಿಯನ್ನಾಗಿಸಿದ್ದನೆಂದೂ ಹೇಳುತ್ತಾರೆ. ೧೫೩೪ರಲ್ಲಿ ಮೊಗಲರ ಹುಮಾಯೂನನು ಮಾಂಡವಗಡದ ಮೇಲೆ ಏರಿ ಹೋಗಿ ಅದನ್ನು ವಶಪಡಿಸಿಕೊಂಡರೂ ಹಿಂತಿರುಗಿದೊಡನೆಯೇ ಮಲ್ಲೂ ಖಾನನು ಶಾಸನಸ್ವತಂತ್ರನಾಗಿ ಇದ್ದು ಕೊನೆತನಕ ಕೊನೆಗೆ ೧೫೪೨ರಲ್ಲಿ ಶೇರಶಹ ಸೂರಿಯು ಆತನನ್ನು ಸೋಲಿಸಿ ಶುಜಾನ ಖಾನನನ್ನು ಮಾಲವದ ಆಡಳಿತಾಧಿಕಾರಿಯಾಗಿ ನೇಮಿಸಿದನು. ಶುಜಾನ ಖಾನನು ಮೃತ್ಯುವಶನಾದ ಮೇಲೆ ಆತನ ಪುತ್ರನಾದ ಬಾಜ ಬಹಾದುರನು ಮಾಲವದ ಗದ್ದುಗೆಯನ್ನು ಏರಿದನು. ಸಂಗೀತ ಪ್ರೇಮಿಯಾದ ಬಾಜ ಬಹಾದೂರನು ಸಂಗೀತಜ್ಞೆಯೂ ರೂಪವತಿಯೂ ಪ್ರಖ್ಯಾತ ಸುಂದರಿಯೂ ಆದ ರೂಪಮತಿ ಎಂಬ ಕನ್ನಿಕೆಯೊಡನೆ ಮದುವೆಯಾದನು. ಈ ಕನ್ನಿಕೆಯ ಶಿರೋವೇದನೆಯನ್ನುಂಟು ಮಾಡುವ ಕಥೆಗಳು ಇಂದಿಗೂ ಮಾಲವದ ಜಾನಪದ ಗೀತೆಗಳಲ್ಲಿ ತಮ್ಮ ಮುದ್ರೆಯನ್ನು ಒತ್ತಿಕೊಂಡಿರುವುದು ಗೋಚರವಾಗುತ್ತದೆ. ಈ ಸಮಯದಲ್ಲಿಯೇ ಮಾಂಡವಗಡದ ಪ್ರಸಿದ್ಧ ರೇವಾಕುಂಡ, ಬಾಜ ಬಹಾದುರನ ಮಹಲು ಮತ್ತು ರೂಪಮತಿಯ ಏಕಾಂತ ಗೃಹಾದಿಗಳು ನಿರ್ಮಾಣಗೊಂಡುವು.

ಮುಗಲ ಬಾದಶಹರಲ್ಲಿ ಎಲ್ಲರೂ ತನ್ನ ಶಾಸನಕಾಲದಲ್ಲಿ ಕೆಲವು ದಿನಗಳನ್ನಾದರೂ ಇಲ್ಲಿ ಕಳೆದಿದ್ದಾರೆ. ಜಹಾಂಗೀರ ಬಾದಶಹನು ತನ್ನ ಮನದನ್ನೆಯಾದ ನೂರ್ ಜಹಾನಳೊಡನೆ ಕೆಲವಾರು ತಿಂಗಳುಗಳ ಕಾಲ ಇಲ್ಲಿಗೆ ಬಂದು ರಮಿಸಿದ್ದನಂತೆ.

ಭಾರತದಲ್ಲಿ ಮೊಗಲರು ಪತನಗೊಳ್ಳುತಿದ್ದಂತೆಯೇ ಮಾಂಡವಗಡದ ಪ್ರಾಧಾನ್ಯವೂ ಶಿಥಿಲಗೊಳ್ಳುತ್ತ ಬಂದಿತು. ಮರಾಠರು ಈ ಕೋಟೆಯನ್ನು ಸ್ವಾಧೀನಪಡಿಸಿಕೊಂಡರೂ ಅವರು ಅದನ್ನು ಸುಧಾರಿಸುವ ಯೋಚನೆಯನ್ನು ಮಾಡಲಿಲ್ಲ. ಮಾತ್ರವಲ್ಲದೆ ಈ ಕೋಟೆಗೆ ಮಹತ್ವವನ್ನೂ ಕೊಡಲಿಲ್ಲ. ಆದುದರಿಂದಲೇ ದಿನಗಳೆದಂತೆ ಆನಂದ ನಗರಿಯು ಕ್ಷೀಣಿಸುತ್ತ ಬಂದಿತು. ಆಂಗ್ಲೇಯರ ಕಾಲದಲ್ಲಿದ್ದ ಪ್ರತಿಯೋರ್ವ ವೈಸರಾಯಿಯೂ ಈ ಕೋಟೆಯ ಸೌಂದರ್ಯಾಸ್ವಾದನೆಗಾಗಿ ಬರುತಿದ್ದನಾದರೂ ಇಲ್ಲಿನ ಸ್ಥಾಪತ್ಯ ಕಲೆಯ ಸಂರಕ್ಷಣೆಗಾಗಲೀ ಹಿಂದಿನ ಕಟ್ಟಡಗಳ ಸುಧಾರಣೆಗಾಗಲೀ ಯಾವ ಮಹತ್ವವನ್ನೂ ಕೊಡಲಿಲ್ಲ.

ಈಗ, ಭಾರತವು ಸ್ವತಂತ್ರವಾದ ಮೇಲೆ ಮಾಂಡವಗಡಕ್ಕೆ ರಾಷ್ಟ್ರೀಯ ಸಂರಕ್ಷಣೆಯು ದೊರಕಿದೆ. ಇಲ್ಲಿನ ಎಲ್ಲ ಮಂದಿರಗಳೂ ಸುಧಾರಣೆಗೊಳ್ಳುತ್ತ ನಡೆದಿವೆ. ತಬೇಲಾಮಹಲ್ ಎಂಬ ಹೆಸರಿನ ಒಂದು ಮಹಲು ಈಗ ಒಂದು ವಿಶ್ರಾಂತಿಗೃಹದ ರೂಪವನ್ನು ತಳೆದಿದೆ. ಇಲ್ಲಿ ಓರ್ವ ಪ್ರವಾಸಿಯು ಸರ್ವವಿಧದ ಸೌಲಭ್ಯ ಸುಖವನ್ನು ಪಡೆಯುವಂತಾಗಿದೆ. ವಾಸ್ತವವಾಗಿ ಶಾದಿಯಾಬಾದಕ್ಕೆ ಆಗಮಿಸಿದ ಎಲ್ಲ ಯಾತ್ರಿಕರೂ ರೂಪಮತಿಯ ಅನುಪಮ ಸೌಂದರ್ಯ ಸಂಗೀತ ಮತ್ತು ಪ್ರೇಮಗೀತೆಗಳನ್ನು ಹಾಡುತ್ತಾಡುತ್ತ "ಶಾದ"ರಾಗಿಯೇ ಹಿಂತಿರುಗುತ್ತಾರೆಂದು ಹೇಳಬಹುದು.

ಅಮೇರಿಕೆಯ ರಾಜ್ಯಾಂಗ ಶಾಖೆಯ ವಿಶೇಷಕಾರ್ಯದರ್ಶಿ ಶ್ರೀ ವಿಲ್ಲಿಯಮ್ ಎವರ್. ಪೋಲಿಡೇ.

ವಿಜ್ಞಾನ ವಿಸ್ಮಯ

(೪ನೇ ಪುಟದಿಂದ)

ರೇಡಿಯಂ ಸ್ವಯಂ ಪ್ರಕಾಶವಾನ ಪದಾರ್ಥ. ಕತ್ತಲೆಯಲ್ಲಿ ಇದರ ಕಣವೊಂದನ್ನು ಇಟ್ಟಾಗಲೂ ಬೆಳಕು ಪ್ರತಿಬಿಂಬಿಸುತ್ತದೆ. ಈ ಬೆಳಕಿನ ಸಹಾಯದಿಂದ ಚಿಕ್ಕ ಚಿಕ್ಕ ಅಕ್ಷರವುಳ್ಳ ಪುಸ್ತಕ ಓದಲು ಸಾಧ್ಯವಿದೆ. ಕತ್ತಲೆಯೊಳಗೆ ಕುರುಡನೊಬ್ಬನನ್ನು ಪ್ರವೇಶಿಸ ಹೇಳಿ ಅವನ ಕಣ್ಣೆದುರು ಇದರ ತುಂಡೊಂದನ್ನು ಹಿಡಿದಾಗ, ಆತನಿಗೆ ಈ ಪ್ರಕಾಶದ ಅರಿವಾಗುತ್ತದೆ. ಅಥವಾ ಹಗಲಲ್ಲಾದರೆ ಇದರ ತುಂಡೊಂದನ್ನು ಬಟ್ಟೆಯಲ್ಲಿ ಸುತ್ತಿದರೆ ಸಾಕು (ಬಟ್ಟೆ ಕಪ್ಪಿರಬೇಕು).

ಚಿಕಿತ್ಸಾ-ಶಾಸ್ತ್ರದುನ್ನತಿಯಿದರಿಂದಲೂ ಸಾಧ್ಯವಿದೆ ಎನ್ನುತ್ತಾರೆ ವಿಜ್ಞಾನಿಗಳು. ಕೆಲವಮಟ್ಟಿಗೆ ಹಾಗಾಗಿದೆ, ಇನ್ನೂ ಧಾರಾಳ ಆಗುವ ಸಂಭವವಿಲ್ಲದಿಲ್ಲ. ಇದರಿಂದ ರೋಗಾಣುಗಳ ಸರ್ವನಾಶವಾಗುವುದೆಂದು ಸಂಶೋಧನೆಗಳು ತಿಳಿಸುತ್ತವೆ. ಹಾಗಾದರೆ ರೋಗಗಳಿಗಿದು ರಾಮಬಾಣವಾಗಬಹುದು. ಜನ್ಮಾರಭ್ಯ ಅಂಧನಿಗೆ ಇದರಿಂದ ಚಿಕಿತ್ಸೆ ನಡೆಸುತ್ತಾರಂತೆ, ಅದರಿಂದ ಅವನಿಗೆ ಹೊಸದೃಷ್ಟಿ ಬರುವ ಯೋಚನೆಯಿದೆ.— ಇದರ ಬಗ್ಗೆ ತಕ್ಕ ಶ್ರಮ ವಿಜ್ಞಾನ ಕ್ಷೇತ್ರದಲ್ಲಿ ವ್ಯಯವಾಗಿದೆ, ಸ್ವಲ್ಪಮಟ್ಟಿಗೆ ಸಫಲತೆಯ ಹಾದಿಯೂ ತೋರುತ್ತಿದೆ. ಎಷ್ಟೋ ಮಂದಿ ಕುರುಡ ಬಾಲಕರು ಇದರ ಸಹಾಯದಿಂದ ಈಗ ಓದ-ಬರೆಯ ಹತ್ತಿದ್ದಾರೆ. ಎಂಬುವುದು ನಿಜಕ್ಕೂ ಆಶ್ಚರ್ಯ! ಮಹದಾಶ್ಚರ್ಯ! ಇನ್ನು ಕೆಲವೇ ದಿನಗಳಲ್ಲಿ ಇದರ ಬಗ್ಗೆ ಶೋಧವಾಗಿ ಬಲಹೀನರನ್ನು 'ಶ್ಯಾಂಡೊ' ಮಾಡಿಬಿಡುವ ಚಿಕಿತ್ಸೆ ಶುರುವಾಗಲೆಂದು ಧ್ವನಿ ಕೇಳುತ್ತಿದೆ. ಹಾಗಾದರೆ ನಮ್ಮಂತಹ ಬಲಹೀನರ ಭಾಗ್ಯೋದಯವಾದಂತೆಯೆ ಸರಿ. ಹಾಗಾಗಲೆಂಬೇ ನಮ್ಮ ನಿಮ್ಮ ಬಯಕೆ. (ಸಾಧಾರ)

—ಶ್ರೀ ರಮೇಶ ಪೈ, ಕೆ. ಉಡುಪಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು. ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಕೈಗನ್ನಡಿ.

ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿವೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಒಂದೂವರೆ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಬಲಿದಾನ

ಜನಹಿತಕ್ಕಾಗಿ ಬಲಿದಾನ ಮಾಡಿದ ಲೇಜಿಯರ್

ಅರಸಿನ ಮಂಡಿಗೆಗೆ ಔಷಧಿ ಪ್ರಯೋಗ ಮಾಡಲು ಆತ್ಮಾರ್ಪಣೆ ಮಾಡಿದನಿವನು.

'ಅರಸಿನ ಮಂಡಿಗೆ'ಯೊಂದು ಎಂತಹ ರೋಗವೆಂದರೆ—ಅದರ ಹೆಸರನ್ನು ಕೇಳಿ ದಾಕ್ಷಣವೇ ಜನರೆಲ್ಲಾ ನಡುಗುತ್ತಿದ್ದರು. ಕೆಲವು ದಿನಗಳ ಮೊದಲು ಈ ರೋಗವು ಹೇಗೆ ಉಂಟಾಗುತ್ತದೆ ಮತ್ತು ಅದಕ್ಕೆ ಪರಿಹಾರವೇನೆಂಬುದು ಯಾರಿಗೂ ತಿಳಿದಿರಲಿಲ್ಲ. ಆದರೆ ಡಾಕ್ಟರ್ ಲೇಜಿಯರನ ಅಪೂರ್ವ ಆತ್ಮ ತ್ಯಾಗದಿಂದ ಈ ಭಯಂಕರ ರೋಗದ ಕಾರಣ ತಿಳಿದು ಬಂತು.

ಆ ಕಾಲದಲ್ಲಿ ಅಮೇರಿಕದ ಕ್ಯೂಬಾದ ಹಳ್ಳಿಗಳು ಈ ಅರಸಿನ ಮುಂಡಿಗೆಯ ತಾಣವಾಗಿದ್ದುವು. ಆ ರೋಗದಿಂದಾಗಿ ಇಡೀ ಹಳ್ಳಿಗಳು ನಾಶವಾಗ ಹತ್ತಿದುವು. ಇದರಿಂದ ಬಿಡುಗಡೆ ಹೊಂದುವುದು ಹೇಗೆಂಬುದು ಜನರಿಗೊಂದು ದೊಡ್ಡ ಸಮಸ್ಯೆಯಾಗಿತ್ತು. ಅಮೇರಿಕದ ಸರಕಾರ ಈ ಈ ವಿಷಯವಾಗಿ ತುಂಬಾ ಚಿಂತಿಸಿತು. ಅವರು ಇದರ ಪರಿಶೋಧನೆಗಾಗಿ ಒಂದು ಸಮಿತಿಯನ್ನು ನೇಮಿಸಿದರು. ಡಾಕ್ಟರ್ ಲೇಜಿಯರ್ ಮತ್ತು ಆತನ ಮೂವರು ಮಿತ್ರರು ಆ ಸಮಿತಿಯಲ್ಲಿದ್ದವರು.

ಅವರೆಲ್ಲರೂ ಹವಾನಾ ನಗರಕ್ಕೆ ಬಂದಿಳಿದರು. ಸಂಶೋಧನೆ ನಡೆಸುತ್ತಾ ಈ ರೋಗವು ಒಂದು ರೀತಿಯ ಸೊಳ್ಳೆಯ ಕಡಿತದಿಂದುಂಟಾಗುವುದೆಂಬುದನ್ನು ಕಂಡುಕೊಂಡರು. ಒಬ್ಬ ರೋಗಿಗೆ ಕಡಿದು ಅನಂತರ ಇನ್ನೊಬ್ಬನಿಗೆ ಕಡಿಯುವುದರಿಂದ ಆತನಲ್ಲಿ ಆ ರೋಗ ಹರಡುತ್ತದೆಂದೂ ತಿಳಿದು ಬಂತು. ಅನಂತರ ಅವರೆಲ್ಲರೂ ಒಂದು ಸೊಳ್ಳೆಯನ್ನು ಸಾಕಿ ಒಬ್ಬ ನಿರೋಗಿಗೆ ಅದರಿಂದ ಕಡಿಸಿ ನೋಡುವುದೆಂದು ಯೋಚಿಸಿದರು. ನಾಲ್ವರೂ ಡಾಕ್ಟರರೂ ಕ್ರಮವಾಗಿ ಒಬ್ಬೊಬ್ಬರೇ ಈ ಪ್ರಯೋಗ ನಡೆಸಿಕೊಳ್ಳುವುದೆಂದು ನಿಶ್ಚಯಿಸಿದರು.

ಎಲ್ಲರಿಗೂ ಮೊದಲು ಲೇಜಿಯರನೇ ಈ ಪ್ರಯೋಗಕ್ಕಾಗಿ ಮುಂದಾದನು. ಅವನ ಮೇಲೆ, ಮೊದಲೇ ನಾಲ್ಕೈದು ಜನ ರೋಗಿಗಳಿಗೆ ಕಡಿದ ಸೊಳ್ಳೆಯನ್ನು ಬಿಡಲಾಯಿತು. ಇದಾದ ಮೂರನೇ ದಿನವೇ ಲೇಜಿಯರನಿಗೆ ಜ್ವರ ಪ್ರಾರಂಭವಾಯಿತು. ಜ್ವರ ಬಹಳ ವೇಗವಾಗಿ ಹೆಚ್ಚುತ್ತಾ ಹೋಯಿತು; ಕೊನೆಗೆ ಆತ ಉಳಿಯುವ ಆಸೆಯೂ ಇಲ್ಲವಾಯಿತು. ಆಗ ಆತ ತನ್ನ ಸಂಗಾತಿಗಳನ್ನು ಹತ್ತಿರ ಕರೆದು ಆ ಸೊಳ್ಳೆಯ ಕಡಿತದ ವಿಚಾರವಾಗಿ ಯಾವ ಯಾವ ವಿಷಯಗಳನ್ನು ಬರೆದಿಟ್ಟಿದ್ದನೋ ಅವನ್ನೆಲ್ಲಾ ಅವರಿಗೆ ಒಪ್ಪಿಸಿದ. ಆ ರೋಗದಿಂದ ಆತ ಯಾವಯಾವ ಲಕ್ಷಣಗಳನ್ನು ಹೊಂದಿದನೆಂಬುದನ್ನೂ ವಿವರಿಸಿದ. ಅವನು ತನ್ನ ಚಿಕ್ಕ ದೊಡ್ಡ ಅನುಭವಗಳನ್ನು ಹೇಳುತ್ತಿದ್ದಂತೆ ಅವರು ಅದನ್ನೆಲ್ಲಾ ಬರೆದುಕೊಳ್ಳುತ್ತಿದ್ದರು. ಅನಂತರ ಸ್ವಲ್ಪ ಸ್ವಲ್ಪವಾಗಿ ಆತನ ಆರೋಗ್ಯ ಬಹಳವಾಗಿ ಕೆಡುತ್ತಾ ಹೋಯಿತು ಮತ್ತು ಸ್ವರವೂ ಬಹಳ ಕ್ಷೀಣವಾಯಿತು. ಅಂತ್ಯದಲ್ಲಿ ನಾಲ್ಕನೇ ದಿನ ಲೇಜಿಯರ್ ತನ್ನ ಪತ್ನಿ ಮತ್ತು ಎರಡು ಚಿಕ್ಕ ಬಾಲಕರನ್ನು ಬಿಟ್ಟು ವಿಜ್ಞಾನಕ್ಕಾಗಿ ಆತ್ಮಾರ್ಪಣೆಗೈದನು!

ಡಾಕ್ಟರ ಲೇಜಿಯರನ ಬಲಿದಾನದಿಂದ ಅರಸಿನ ಮಂಡಿಗೆ ರೋಗವು ಸೊಳ್ಳೆಯ ಕಡಿತದಿಂದುಂಟಾಗುವುದೆಂಬುದು ಖಂಡಿತವಾಯಿತು. ಆಗ ಆ ಪ್ರಯೋಗವನ್ನು ಮತ್ತೂ ಮುಂದುವರಿಸುವ ಅವಶ್ಯವಿತ್ತು. ಹವಾನಾ ನಗರದಿಂದ ಸ್ವಲ್ಪ ದೂರದ ಹಳ್ಳಿಯೊಂದರಲ್ಲಿ "ಲೇಜಿಯರ್ ಪ್ರಯೋಗಶಾಲಾ" ಎಂಬ ಸಂಸ್ಥೆಯೊಂದು ಸ್ಥಾಪಿತವಾಯಿತು. ಅಲ್ಲಿ ಎರಡು ಕೋಣೆಗಳನ್ನು ತಯಾರಿಸಿದರು. ಒಂದರಲ್ಲಿ ಅರಸಿನ ಮಂಡಿಗೆಯ ವಿಷಪೂರಿತ ಸೊಳ್ಳೆಗಳನ್ನಿರಿಸಿದರು. ಇನ್ನೊಂದರಲ್ಲಿ ಏನನ್ನೂ ಇಡಲಿಲ್ಲ.

ಡಾಕ್ಟರರುಗಳು 'ಬಲಿದಾನಗೈಯಲು ತಯಾರಿದ್ದ ಯುವಕರು ಬೇಕಾಗಿರುವರೆ'ಂದು ಘೋಷಿಸಿದರು. ಕೆಲವರು ನವಯುವಕರು ತಮ್ಮ ಹೆಸರು ಸೂಚಿಸಿದರು. ಪ್ರಯೋಗ ಶಾಲೆಯಲ್ಲಿ ಕೆಲವರನ್ನು ಸೊಳ್ಳೆಗಳಿಂದ ಕಡಿಸಿದರು; ಅವರು ಎರಡು ಮೂರು ದಿನಗಳಲ್ಲಿಯೇ ತೀರಿ ಹೋದರು ಕೆಲವರಿಗೆ ಆ ರೋಗದಿಂದ ಸತ್ತವರ ಬಟ್ಟೆ-ಬರೆಗಳನ್ನು ಕೊಟ್ಟರೂ ಅವರಿಗೆ ಆ ರೋಗವೇ ತಗಲಲಿಲ್ಲ.

ಇಂತಹ ಹಾಗೂ ಇನ್ನಿತರ ಪ್ರಯೋಗಗಳಿಂದ ಈ ರೋಗವು ಕೆಲವು ಸೊಳ್ಳೆಗಳ ಕಡಿತದಿಂದಲೇ ಬರುವುವೆಂಬುದನ್ನು ಕಂಡು ಹಿಡಿದರು. ಸರಿ—ಸೊಳ್ಳೆಗಳನ್ನು ನಾಶಗೊಳಿಸಿ ಆ ರೋಗದಿಂದ ಬಚಾಯಿಸಬಹುದು. ಅಂದಿನಿಂದ ಎಲ್ಲೆಲ್ಲಿ ಅರಸಿನ ಮುಂಡಿಗೆಯ ಜ್ವರ ಉಂಟಾಯಿತೋ ಅಲ್ಲೆಲ್ಲಾ ಡಾಕ್ಟರ್ ಲೇಜಿಯರ್, ಮತ್ತಾತನ ಮಿತ್ರರ ಪ್ರಯೋಗಗಳ ಪ್ರಯೋಜನ ಹೊಂದ ತೊಡಗಿದರು.

ಡಾಕ್ಟರ ಲೇಜಿಯರ್ ಮತ್ತು ಆತನ ಸಂಗಾತಿಗಳು ಧನ್ಯರು!

(ಹಿಂದಿಯಿಂದ)

—"ಜನ್ನ", ಮರವಂತೆ.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ಕ್ರೀಡಾಪ್ರಪಂಚ

(೩ನೇ ಪುಟದಿಂದ)

ರಕ್ಷಣೆ (Fielding)ಗಳಸುಲಭವಾದ ಸಂಗವುವಿತ್ತು.

ಅರ್ಥಾತ್ ಬ್ಯಾಟ್ಸಮೆನ್ನ(Bats-man ರೆಂದೂ ಗಾಯಕವಾಡರು ಪ್ರಸಿದ್ಧಿ ಪಡೆದರೂ— ಅದಕ್ಕಿಂತಲೂ ಅಧಿಕವಾಗಿ ಒಬ್ಬ ಉತ್ಕೃಷ್ಟ ಕ್ಷೇತ್ರರಕ್ಷ ಎಂದು ಅವರು ಅತ್ಯಧಿಕ ಖ್ಯಾತಿ ಪಡೆದಿದ್ದಾರೆ! ಕ್ಷೇತ್ರರಕ್ಷಣೆಯಲ್ಲಿ ಇವರ ಕೈ ತುಂಬಾ ಪಳಗಿದೆ. ಅಂತೆಯೇ ಅವರು ಅಷ್ಟು ಪ್ರೇಕ್ಷಣೀಯವಾಗಿ ಕ್ಷೇತ್ರರಕ್ಷಣೆಯನ್ನು ಮಾಡುತ್ತಾರೆ. ಒಮ್ಮೊಮ್ಮೆ ಕ್ರಿಕೆಟ ಕ್ಷೇತ್ರದಲ್ಲಿ ಲೆಗ್ ಬ್ರೇಕ್ ಬೌಲರ್ (Leg Break Bowler)ನೆಂದೂ ಉಪಯೋಗವಾಗುತ್ತದೆ. ಚೆಂಡು ಎಲ್ಲಿ ಬರುವುದೆಂದು ತಪ್ಪದೇ ತಿಳಿದು, ಅದನ್ನು ಹೊಡೆಯುವುದರಲ್ಲಿ ಹೇಗೆ ತಮ್ಮ ಕೌಶಲ್ಯವನ್ನು ಪ್ರಕಟಿಸುತ್ತಾರೋ, ಹಾಗೆಯೇ ಆ ಚೆಂಡನ್ನು ತಪ್ಪು ಒಗೆಯುವುದರಲ್ಲಿ ಸಹ ಅವರು ಚಾಣಾಕ್ಷ್ಯವನ್ನು ತೋರಿಸುವರು! ಭಾರತದ ಕ್ರೀಡಾರಂಗ ಕ್ಷೇತ್ರರಕ್ಷಣೆಯು ಕೆಳಸುಟ್ಟವಲ್ಲಿಗುವಾಗ, ಶ್ರೀ ಗಾಯಕವಾಡರು ಕ್ಷೇತ್ರರಕ್ಷಣೆ ಮಾಡುವುದರಲ್ಲಿ ಎದ್ದುಕಾಣುತ್ತಾರೆ. ಸಿ. ಎಸ್. ನಾಯ್ಡುರವರಂಥ ಕ್ಷೇತ್ರರಕ್ಷಣೆ, ನಮ್ಮಕಡೆ ಈಗಿನ ಮಟ್ಟಿಗೆ ಯಾರೂ ಮಾಡುವುದಿಲ್ಲ. ಆದರೆ ಶ್ರೀ ಗಾಯಕವಾಡರು ಮಾತ್ರ ಈ ಮಾತಿಗೆ ಅಪವಾದವಾಗಿದ್ದಾರೆ. ವೆಸ್ಟ ಇಂಡೀಜಕ್ಕೆ ತೆರಳಿದ ಸಂಘದಲ್ಲಿ ಭಾರತೀಯರ ಕ್ಷೇತ್ರರಕ್ಷಣೆಯು ಉಚ್ಚ ಮಟ್ಟದ್ದಾಗಿತ್ತು. ಆದರೆ ಅದರಲ್ಲಿಯೂ ಗಾಯಕವಾಡ, ಗಡಕರಿ ಮತ್ತು ಉಮ್ರಿಗಾರ ಇವರು ಕ್ಷೇತ್ರರಕ್ಷಣೆಯ ಪರಕಾಷ್ಟ ಮಾಡಿದರು! ಈ ಮೂವರು ಕ್ರಿಕೆಟ ಪಟುಗಳು ಕೂಡಿ ಆಫ್ (Of Saide)ಕ್ಕೆ ಬೆದರಿಕೆಯನ್ನು ಎಬ್ಬಿಸಿದರು. ಆಟಗಳಲ್ಲಿ ಚಪ್ಪಾಳೆ ದೊರಕಿಸುವ ಅನೇಕ ಆಟಗಾರರಿದ್ದಾರೆ; ಆದರೆ ಉತ್ತಮ ಕ್ಷೇತ್ರರಕ್ಷಣೆಯ ಬಗ್ಗೆ ಚಪ್ಪಾಳೆ ದೊರಕಿಸುವ ಕ್ರಿಡಾಪಟುಗಳಲ್ಲಿ ಶ್ರೀ ಗಾಯಕವಾಡರ ಗಣನೆಯಾಗುತ್ತದೆ.

ಶ್ರೀ ದತ್ತಾಜೀ ಗಾಯಕವಾಡರು ಬಡೋದೆ ಸಂಘದ ಕರ್ಣಧಾರಿಗಳಾಟದ್ದರಿಂದ ಅವರಿಗೆ ನಾಯಕತ್ವದ ಗಡುತರದ ಹೊಣೆಗಾರಿಕೆಯ ಜವಾಬದಾರಿಕೆಯ ಬಗ್ಗೆ ತುಂಬಾ ಅನುಭವವಿರುವದು. ಆದರೆ ಬಡೋದೆಯ ಮಾನದಿಂದ ಅವರ ಮೇಲೆ ಹೊರಸಿದ ದೊಡ್ಡ ಹೊಣೆಗಾರಿಕೆಯು ಅಧಿಕ ವ್ಯಾಪಕ ಮತ್ತು ವಿಚಿತ್ರವಾಗಿದೆ.

ಕೆಪ್ಟನ್ನ ಪದಕ್ಕೆ ಆಯ್ಕೆ ಹೊಂದಿದ ಮೇಲೆ ಅವರು ತೆಗೆದ ಉದ್ಗಾರಗಳು ಅವರ ಉದಾರವಾದ ಸ್ವಭಾವಕ್ಕೆ ಸಹಜವಾದದ್ದಿರುತ್ತದೆ. ತಮ್ಮ ಮೇಲಿನ ಈ ಜವಾಬದಾರಿಯನ್ನು ತಾವು ಸಹಪಾಠಿಗಳ ಸಹಕಾರದ ಬಲದ ಮೇಲೆ ಪಾರು ಮಾಡುವರೆಂಬ ಆಶಾವಾದವು ಗಾಯವಾಡರು ವ್ಯಕ್ತಪಡಿಸಿದ್ದಾರೆ. ಹಾಗೂ ಪ್ರತಿಯೊಬ್ಬರೊಡನೆ ಕೂಡಿ ನಡೆಯುವ ವೃತ್ತಿಯಿಂದಾಗಿ ಶ್ರೀಯುತರಿಗೆ ಅವರ ಸಹ ಕ್ರಿಕೆಟ ಪಟುಗಳ ಒಳ್ಳೇ ಸಹಕಾರ ದೊರೆಯುವದೆಂಬುದರಲ್ಲಿ ಸ್ವಲ್ಪವೂ ಶಂಕೆಯಿಲ್ಲ. ಇದೇ ಬರುವ ಜೂನ್ ತಿಂಗಳ ನಾಲ್ಕನೇ ತಾರೀಕಿನಿಂದ ಇಂಗ್ಲೆಂಡಿನ, ಟ್ರೆಂಟಬ್ರಿಜ್ (Trent Bridge) ಕ್ರೀಡಾಂಗಣದಲ್ಲಿ ಪ್ರಥಮ ನಿರ್ಣಾಯಕ ಪಂದ್ಯ (First Test Match)ವು ಹೊಸ ಕೆಪ್ಟನ್ನರಾದ ಶ್ರೀ ದತ್ತಾಜಿ ಕೇ. ಗಾಯಕವಾಡರ ನೇತೃತ್ವದಿಂದ ಪ್ರಾರಂಭವಾಗುವದು. ಆಯುಷ್ಯದ ೩೧ ವರ್ಷಗಳಲ್ಲಿ ಅರ್ಧಕ್ಕಿಂತ ಹೆಚ್ಚು ವರ್ಷಗಳಾದ ೧೮ ವರ್ಷಗಳನು ಕೇವಲ ಕ್ರಿಕೆಟ ಆಟದಲ್ಲಿ ಕಳೆದು ಅದರಲ್ಲಿ ಪರಿಪೂರ್ಣ ಪಳಗಿದವರಾದ ಶ್ರೀ ಗಾಯಕವಾಡರು ಉತ್ತಮ ಔಟ ಫೀಲ್ಡ (Outfield), ಬ್ಯಾಟ್ಸಮನ್ನ (Bats-man) ಲೆಗ್ ಬ್ರೇಕ್ ಬೌಲರ (Leg Break Bowler) ಹಾಗೂGoogly Bowler ರಾಗಿರುವರು. ಇದು ವರೆಗೆ ಎಂಟು ನಿರ್ಣಾಯಕ ಪಂದ್ಯಗಳಲ್ಲಿ ಭಾಗವಹಿಸಿ, ಅನೇಕ ವರ್ಷಗಳಿಂದ ಬಡೋದೇ ಕ್ರಿಕೆಟ ಸಂಘದ ಕರ್ಣಧಾರರಾಗಿ ಸೇವೆಗೈದ ಈ ನುರಿತ ಕ್ರಿಕೆಟಪಟುಗಳು ಇಂದು ಇಂಗ್ಲೆಂಡಿಗೆ ಹೋದ ಭಾರತದ ಪ್ರಥಮ ತರುಣ ಕ್ರಿಕೆಟ ಪಟುಗಳ ಹೊಸ ನಾಯಕರಾಗಿ ಹೋಗಿರುವರು. ಅಲ್ಲಿ ಅವರು ತಮ್ಮ ವಿರುದ್ಧ ಆಟಗಾರರೊಂದಿಗೆ ಪ್ರೇಮ ಸೌಹಾರ್ದದಿಂದ ಕ್ರಿಕೆಟ ಪಂದ್ಯಗಳನ್ನಾಡಿ, ತಮ್ಮ ಆರು ತಿಂಗಳ ಸಂಚಾರವನ್ನು ಫಲದಾಯಕಗೊಳಿಸಿ ಭಾರತ ಕ್ರಿಕೆಟ ತಂಡದ ಚುಕ್ಕಾಣಿಯನ್ನು ಸರಿಯಾಗಿ ನಿರ್ವಹಿಸಿಕೊಂಡು, ಪರರಾಷ್ಟ್ರದಲ್ಲಿ ಹೊಸ ವಿಕ್ರಮ ಸ್ಥಾಪಿಸಿ—ಜಯಶೀಲರಾಗಿ ಬರಲೆಂದು ನಮ್ಮ ಹೃತ್ಪೂರ್ವಕ ಹಾರೈಕೆಗಳು.

—ರಾಮಕೃಷ್ಣ ಅನಂತ ಪೈ,
ಅಂಕೋಲಾ.

Approved by the Text Book Committee of Madras, for non-detailed study in higher Forms (vide Page 7, Fort St George Gazette, Part I—B dated 4—5...1955)

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು ೧೩೮ ಬೆಲೆ: ರೂ. ೧ : ೨೫

ನವಭಾರತ ಪುಸ್ತಕ ಭಂಡಾರ, ಉಡುಪಿ.

ಜೀವನ ಪರಿಚಯ

ಮಹರ್ಷಿ ಅರವಿಂದ ಘೋಷ್

ಮಾನವನ ಆತ್ಮೋನ್ನತಿಯ ಸಂದೇಶ ಸಾರಿದ ಯೋಗಿ.

ಇವರ ಪರಿಚಯವೇನು ತೀರ ಹೊಸತಲ್ಲ. ಹಿಂದೆ ಬಾಚಿರುವ ನೀಳ ಕೇಶಧಾಮ, ಸುಪುಷ್ಟವಾಗಿ ಬೆಳೆದಿರುವ ಗಡ್ಡ ಸ್ಮಶ್ರುರಾಶಿ, ಶಾಂತಿಯುತ ಕಣ್ಣು; ಶಾಂತಿಯುತ, ಮುಖಚರ್ಯೆ! ಕಂದರದಲ್ಲಿ ಜಪಮಾಲೆ—ಇತ್ಯಾದಿ ಯೋಗಿರಾಜ ಶ್ರೀ ಅರವಿಂದ ಘೋಷರ ಚಿತ್ರಣವೆನ್ನಬೇಕು. ಶ್ರೀಗಳವರು ಬಂಗಾಲದ ಒಂದು ಪಟ್ಟಣದಲ್ಲಿ ಜನ್ಮತಾಳಿ ಬಂದವರು. ಜನ್ಮತಳೆದ ಇಸ್ವಿಯೆಂದರೆ 1872 ಆಗೋಸ್ತು ಹದಿನೈದು.

ತಂದೆ—ಕೃಷ್ಣಧನರು. ತಾಯಿಯೋ—ಸ್ವರ್ಣಲತಾ ದೇವಿಯವರು. ತಂದೆಯವರಂತೂ ಪಾಶ್ಚಿಮಾತ್ಯರ ನಡೆನುಡಿ, ರೀತಿನೀತಿ, ಹಾವಭಾವ, ಗುಣಶೀಲ, ಶಿಥಿಪರ್ವ, ಆಚಾರ ವಿಚಾರಗಳಿಗೆ ಮಾರು ಹೋಗಿದ್ದರು. ತಮ್ಮ ಮಗನು ಅದೇ ರೀತಿಯನ್ನು ಅನುಸರಿಸಿ ಹೋಗಬೇಕೆಂದು ತತ್ವವೀಯುವವರೂ.

ವಿದ್ಯಾಭ್ಯಾಸ, ಪಿತನ ಮರಣ

ಬಾಲ್ಯಾವಸ್ಥೆಯಲ್ಲಿ ಇವರ ವಿದ್ಯಾಭ್ಯಾಸವು ತಂದೆಯವರ ಅನುಮತಿಯ ಮೇರೆಗೆ ಆಂಗ್ಲ ಪಾಠಶಾಲೆಯಲ್ಲಾಯಿತು. ಮುಂದೆ ಅರವಿಂದರಿಗೆ 7 ವರುಷ ದುಂಬಲು ಅವರ ಮುಂದಿನ ಶ್ರೇಷ್ಠತರಗತಿಯ ವಿದ್ಯಾಭ್ಯಾಸಕ್ಕಾಗಿ ಅವರೂ, ಅವರ ತಂದೆ ತಾಯಂದಿರೂ ವಿಲಾಯತಿಗೆ ಪ್ರಯಾಣ ಬೆಳೆಸಿದರು. ಅಲ್ಲೊಂದು ಚಿರಪರಿಚಿತ ಆಂಗ್ಲ ಕುಟುಂಬವಿತ್ತು. ತಂದೆ ತಾಯಿಗಳು ತಮ್ಮ ಮಾನಸ ಪುತ್ರನನ್ನು ಅಲ್ಲಿ ಬಿಟ್ಟು ಬಂಗಾಳಕ್ಕೆ ವಾಪಾಸು ಹಿಂದಿರುಗಿದರು. ಅಲ್ಲಿ ಅರವಿಂದರ ವಿದ್ಯೆ ವಿಘ್ನ—ವಿಡ್ಡೂರವಿಲ್ಲದೆ ಸುಸೂತ್ರವಾಗಿ ಮುಂದುವರಿಯಿತು. ವಿಲಾಯತಿನಲ್ಲಿ ಅರವಿಂದರು ಇಂಗ್ಲೀಷ್, ಹಾಗೂ ಲ್ಯಾಟಿನ್ ಭಾಷೆಯ ಸಾಕಷ್ಟು ಪರಿಚಯಮಾಡಿಕೊಂಡರು. ಮುಂದೆ ಅದರ ಕಲಿಯುವಿಕೆ ಮುಗಿದನಂತರ ಅವರು ಗ್ರೀಕ್ ಹಾಗೂ ಫ್ರೆಂಚ್ ಸಾಹಿತ್ಯದ ಆಳವಾದ ಅಧ್ಯಯನಕ್ಕೆ ಅಡಿಯಿಟ್ಟರು. ಅವರ ಕಲಿಯುವಿಕೆಯು ಉತ್ತಮವಾಗಿತ್ತು ಎನ್ನುವುದಕ್ಕೆ ಅವರು ರಚಿಸಿದ (ಇಂಗ್ಲೀಷಿನಲ್ಲಿ) ಪ್ರಭಾವಶಾಲಿ ಕವಿತೆಗಳೆ ಸಾಕ್ಷಿ! ಮುಂದೆ ಬಾಲ್ಯದ ಸವಿನೆನಪುಗಳು ಮರೆಯಾಗಿ ತಾರುಣ್ಯವು ವೈದೋರಲು ಅರವಿಂದರು 1. C. S. ಪರೀಕ್ಷೆಗೆ ಕೂತರು. ಆಗ ಅವರ ಪ್ರಾಯ ಪೂರ್ಣ ಹದಿನೆಂಟು. ಈ ಪರೀಕ್ಷೆಯು ಅವರ ಗೌರವಾದರಗಳನ್ನು ಇಮ್ಮಡಿಸಿತು. ಅಂದರೆ ಅವರು ಈ ಪರೀಕ್ಷೆಯಲ್ಲಿ ಉತ್ತಮವಾಗಿ ಅಂಕಗಳಿಸಿದರು. ಎಲ್ಲ ಸರಿ! ಆದರೆ 1893 ರಂದು ಅವರ ವಿದ್ಯಾಭ್ಯಾಸ ಮುಗಿದು ಅವರು ಬಂಗಾಲಕ್ಕೆ ಹಿಂದಿರುಗುವಾಗ (ಜತೆಗೆ ಅಣ್ಣಂದಿರೂ ಇದ್ದರು.) ಅವರಿದ್ದ ಹಡಗು ಮುಳುಗಿಹೋಯಿತೆಂಬ ಯಾವುದೋ ಸುಳ್ಳು ವಾರ್ತೆ ಪಿತಾಜಿ ಕೃಷ್ಣಧನರಿಗೆ ತಲುಪಿತು. "ಮುಳುಗಿತೆ?" ಎಂದು ಎಲ್ಲೂ ಸಹೋದ್ಯೋಗಿಗಳು ಗೊಂಡರು. ಕೃಷ್ಣಧನರು ಹೃದಯಸ್ತಂಭನದಿಂದ ಮೃತ್ಯುವಶರಾದರು. ಅದೊಂದು ವಿಷಾದನೀಯ ಸಂಗೀತವೇ ಆಯಿತು ಅರವಿಂದರ ಪಾಲಿಗೆ.

ಮುಂದಿನ ಕೆಲಸ

ಆದರೆ ವಾರ್ತೆ ಶುದ್ಧ ಸುಳ್ಳಾಗಿತ್ತು! ಅರವಿಂದ ಇತ್ಯಾದಿಯವರು ಸುರಕ್ಷಿತವಾಗಿ ತಲುಪಿದರು—ನಂತರದ ವಾರ್ತೆ. ಇಲ್ಲಿಗೆ ಆಗಮಿಸಿ (ಬಂಗಾಳಕ್ಕೆ) ಅರವಿಂದರು ಬರೋಡಾ ನೃಪನಲ್ಲಿ 'ಪ್ರೈವೇಟ್ ಸೆಕ್ರೆಟರಿ' 'Private Secretary'ಯಾಗಿ ಕೆಲಸಮಾಡ ತೊಡಗಿದರು. ಆದರೆ ಆ ಕಸಬು ಅರವಿಂದರಿಗೆ ಇಷ್ಟವೆನಿಸಲಿಲ್ಲವೋ ಏನೋ? ಒಂದೇ ಒಂದು ವರ್ಷದ ನಂತರ ಆ ಸೆಕ್ರೆಟರೀ ಕೆಲಸಕ್ಕೆ ತಿಲಾಂಜಲಿಯನ್ನಿತ್ತು ಬರೋಡಾ ಕಾಲೇಜಿನ ಪ್ರೊಫೆಸರರಾದರು. ಅದೂ ಬಿಟ್ಟು ಮುಂದೆ ಅದೇ ಕಾಲೇಜಿನ 'ವೈಸ್ ಪ್ರಿನ್ಸಿಪಾಲ'ರಾಗಿ ಕೆಲಸಮಾಡತೊಡಗಿದರು ಆಗಲೇ ಅವರು ಭಾರತೀಯ ಭಾಷೆಗಳನ್ನು ಕಲಿಯುವ ಅಭ್ಯಾಸಕ್ಕೆ ಮನಮಾಡಿದ್ದು. ಅಷ್ಟರತನಕ ಅವರಿಗೆ ಭಾರತೀಯ ಭಾಷೆಗಳೇ ಗೊತ್ತಿಲ್ಲ. ಏಕೆಂದರೆ ಅವರ ವಿದ್ಯಾಭ್ಯಾಸವು ವಿಲಾಯತಿನಲ್ಲಾದುದು ಗೊತ್ತಿದೆ. ಇಲ್ಲಿ ಅವರು ಬಂಗಾಳಿಭಾಷೆ, ಸಂಸ್ಕೃತ, ಗುಜರಾಥಿ, ಮರಾಠಿ-ಭಾಷೆಗಳನ್ನು ಕಲಿತರು.—ಇದು ಅವರ ಕುಶಾಗ್ರಮತಿತ್ವಕ್ಕೆ ಚೊಕ್ಕ ಉದಾಹರಣೆ. ಹಾಗಾದರೆ ಅವರಿಗೆ ಭಾರತೀಯ ಭಾಷೆ(ಬಂಗಾಳಿ, ಸಂಸ್ಕೃತ, ಗುಜರಾಥಿ ಮರಾಠಿ), ಫ್ರಾನ್ಸಿನಭಾಷೆ, ಗ್ರೀಕಭಾಷೆ, ಆಂಗ್ಲಭಾಷೆ, ಲ್ಯಾಟಿನಭಾಷೆ, ಗೊತ್ತಿತ್ತು ಎಂದು ತಿಳಿದ ಹಾಗಾಯಿತು. ಭಾರತೀಯ ಭಾಷೆಗಳನ್ನು ಕಲಿತುದಷ್ಟೇ ಅಲ್ಲ, ಅವುಗಳ ವಿದ್ವಾನ್ ಅವರಾದುದು ಅವರ ವಿದ್ಯಾಚತುರತೆ ಎನ್ನಬೇಕಲ್ಲವೆ? ಭಾರತೀಯ ಭಾಷೆಗಳ ಅಧ್ಯಯನದನಂತರ ಅವರ ಮನಸ್ಸು ಭಾರತೀಯತೆಯಲ್ಲಿ ತನ್ಮಯವಾಗತೊಡಗಿತು. ನಂತರವೇ ಅವರ ವಿವಾಹ ಸಮಾರಂಭವಾದುದು. ಮೃಣಾಲಿನಿ ಎನ್ನುವ ವಧು ಅರವಿಂದರಂತಹ ವರನಿಗೆ ದೊರೆಯಿತು. ಇಂಥ ಮಹಾನುಭಾವರ ಕೈ ಹಿಡಿದಾಕೆ ನಿಜಕ್ಕೂ ಧನ್ಯೆ?

ವಿವಾಹದನಂತರ........?

ವಿವಾಹವೇನೊ ಆಯಿತು ನಿಜ. ಆದರೆ ಮುಂದೆ ಅವರ ಮನಸ್ಸು ಸಂಪೂರ್ಣ ಯೋಗ ದಿಶೆಯತ್ತ ಹರಿಯಿತು. ಅಂದಿನಿಂದ ಮಹಾ ಮಹಾ ಪುರುಷರ ಜೀವನ ಚರಿತ್ರೆಗಳನ್ನು ಓದತೊಡಗಿದರು.

ಈ ಪೈಕಿ ಶ್ರೀ ರಾಮಕೃಷ್ಣ ಪರಮಹಂಸ, ವಿವೇಕಾನಂದರ ಜೀವನ ಚರಿತ್ರೆಗಳೇ ಅವರಿಂದ ತುಂಬುಮೆಚ್ಚುಗೆ ಗಳಿಸಲ್ಪಟ್ಟವು. ಅಂತಹವರ ಕತೆ ಚರಿತೆಗಳು ಅವರ ಮನಸ್ಸಿನಲ್ಲಿ ತುಂಬ ಪ್ರಭಾವ ಬೀರಿದ್ದವು. ಅಂದಿನಿಂದ ಸರಳಜೀವನವು ಅವರ ಜೀವನದ ಒಂದು ವಿಶಿಷ್ಟ ಸಂಪ್ರದಾಯವಾಗಿಹೋಯಿತು.

ಇತ್ತ ದೇಶದಲ್ಲಿ ಸ್ವಾತಂತ್ರ್ಯಂದೋಲನದ ಕುಡಿ ಚಿಗುರಲಾರಂಭವಾಯಿತು. ಭಾರತೀಯರ ಪರಾಧೀನತೆಯನ್ನು ಕಂಡು ಅವರ ಹೃದಯ ಪೂರ್ಣ ದ್ರವಿಸಿತು. ಭಾರತೀಯರು ಪಾರತಂತ್ರ್ಯವೆಂಬ ಮಡುವಲ್ಲಿ ಬಿದ್ದು ತೊಳಲುತ್ತಿರುವ ಹೇಯ ದೃಶ್ಯವನ್ನು ಅವರಿಂದ ನೋಡಲಾಗಲಿಲ್ಲ, ಅವರು ಉದ್ರೇಕಗೊಂಡರು. ಉತ್ತರವಾಗಿ ಚಿತ್ರ ವಿಚಿತ್ರ ಲೇಖಗಳನ್ನು ಬರೆದರು, ಅವು ಪ್ರಭಾವಪೂರಿತವಾಗಿದ್ದವು. ಜನತೆಯವರಿಂದ ಜಾಗೃತಹೊಂದಿ ಒಂದಾಗುವಂತಾಯಿತು. ಅರವಿಂದರ ಭಾರತೀಯ ರಾಜನೈತಿಕ ವಿಚಾರಗಳು ಆಂಗ್ಲರ (ಸರಕಾರದ) ಕಣ್ಣೆಗಣ್ಣೋಟಕ್ಕೆ ಬಲಿಯಾದವು.

ಕಾರಾಗೃಹವಾಸ, ಪುದುಚೇರಿ ಪಯಣ

ಇದರಿಂದ ಅರವಿಂದರಿಗೆ ಕಾರಾಗೃಹವಾಸ ಪ್ರಾಪ್ತವಾಯಿತು. ಆದರೂ ಇದು ಅವರ ಯೋಗದ ಸಾಧನೆಗೆ ಸಹಕಾರವಿತ್ತಿತು. ಅಲ್ಲಿ ಅವರ ಮನಸ್ಸು ರಾಜಕೀಯರಂಗದಿಂದ ಕಾಲ್ತೆಗೆಯಿತು. ಆತ್ಮೋನ್ನತಿಗಾಗಿ ದುಡಿಯಬಯಸಿದರು. ಸ್ವಲ್ಪ ಸಮಯದಲ್ಲಿ ಅವರ ಬಿಡುಗಡೆಯಾಗಲು ಅಲ್ಲಿಂದ ಅವರು ಪುದುಚೇರಿಗೆ ತೆರಳಿದರು ಅಲ್ಲಿ ಜಗತ್ತಿನ ಕರ್ತವ್ಯ ವ್ಯವಹಾರದಿಂದ ಬಹಿರ್ಮುಖರಾಗಿ ಆತ್ಮದ ಶೋಧನೆ ಮಾಡಲಾರಂಭಿಸಿದರು. ಅಷ್ಟರಲ್ಲಿ ಅವರ ಪ್ರಸಿದ್ಧಿ ಸುತ್ತುಮುತ್ತಲೆಲ್ಲ ಹರಡಿತು. ಅಲ್ಲಿ ಪುದುಚೇರಿಗೆ ತೆರಳಿದಾಗ ಅವರನ್ನು ನೋಡಬಂದ ಜನರೆಷ್ಟು? ತಮಿಳುನಾಡಿನ ರಾಷ್ಟ್ರೀಯ ಕವಿವರ್ಯ ಸುಬ್ರಹ್ಮಣ್ಯ ಭಾರತಿಯವರೂ, ರಾಷ್ಟ್ರಸೇವಕ ನ. ವೆ. ಸು. ಅಯ್ಯರ್ ಇವರೂ ಅರವಿಂದರ ಭೆಟ್ಟಿಮಾಡಿದ್ದರು ಎನ್ನುವಲ್ಲಿಗೆ ಅರವಿಂದರ ಗೌರವಾದರಗಳನ್ನು ನಾವು ತುಲನೆಮಾಡಬಹುದು. ದಿನಗಳೆಗಂತೆ ಅವರ ದರ್ಶನಕ್ಕೆ ಬರುವ ಜನ ಅಪರಿಮಿತವಾಯಿತು. ಇದಕ್ಕಾಗಿ ದರ್ಶನಕ್ಕೆಂದು ಬಂದ ಜನರಿಗಾಗಿಯೇ ಒಂದು ಆಶ್ರಮರಚಿತವಾಯಿತು. ಇದರ ರಕ್ಷಣಾಡಳಿತೆಯನ್ನು ಓರ್ವ ಫ್ರಾನ್ಸಿನ ಮಹಿಳೆ ನಡೆಸುತ್ತ ಬಂದಿರುವರು. ಆಶ್ರಮಿಗರಿಗೆ ಇವರೆಂದರೆ ಪ್ರಾಣ. ಅವರನ್ನು 'ಮದರ್' ಇಲ್ಲವೇ 'ಮಾ'ಎಂದು ಕರೆಯುವುದೂ ಉಂಟಂತೆ.

ದೇಹಾಂತವೂ ವಿಚಾರಪರಿಪ್ಲುತ ಸಂದೇಶವೂ

ಇನ್ನು 1950 ದಶಂಬರ ಐದರಂದು ಅವರ ದೇಹಾಂತವಾದುದು ವಿಷಾದಕರ. ಅವರು ರೋಗದಿಂದ ನರಳುತ್ತಿದ್ದುದೇ ಅದಕ್ಕೆ ಕಾರಣ. ಹಾಗಾದರೂ ಅವರ ವಿಚಾರ ಪರಿಪ್ಲುತವಾದ ಸಂದೇಶದ ಸಾರಾಂಶವನ್ನು ಗ್ರಹಿಸೋಣ—

"ಜಗತ್ತಿನಲ್ಲಿ ಯಾವುದು ದುಃಖವಿದೆಯೊ ಅದನ್ನು ದೂರೀಕರಿಸಲು ಒಂದೇ ಒಂದು ಉಪಾಯವಿದೆ, ಅದೆಂದರೆ ಮಾನವನ ಆತ್ಮದ ಉನ್ನತಿ ಮಾಡುವುದು. ಅವಿಶ್ರಾಂತ ಸಾಧನೆಯಿಂದ ಆತ್ಮದ ಉನ್ನತಿಯಾಗಬಹುದು. ಇದರಿಂದ ದಿವ್ಯಜ್ಞಾನವೂ ಪ್ರಾಪ್ತವಾಗುತ್ತದೆ. ದಿವ್ಯಜ್ಞಾನದ ದೆಸೆಯಿಂದ ಲೋಕ—ಕಲ್ಯಾಣವಾಗಬಲ್ಲುದು".

ಈ ರೀತಿಯಿಂದ ಅರವಿಂದರು ಲೋಕಕಲ್ಯಾಣಕ್ಕೂ ಆತ್ಮೋನ್ನತಿಗೂ ದಿವ್ಯಜ್ಞಾನ ಪ್ರಾಪ್ತಿಗೂ ದಾರಿತೋರಿಸಿಕೊಟ್ಟಿದ್ದಾರೆ. ಆ ದಾರಿ ತುಳಿಯುತ್ತ ಬಂದಲ್ಲಿ ಯಾವತರದ ದುಃಖವೂ ನಮಗೀ ಜೀವನದಲ್ಲಿ ಉಂಟಾಗಲಾರದೆಂಬುವುದರಲ್ಲಿ ಸಂಶಯವು ತಿಲಮಾತ್ರವೂ ಇಲ್ಲ!

(ಸಂಗ್ರಹಿತ)

—ಶ್ರೀ ರಮೇಶ ಪೈ, ಕೆ.

ಮದುವೆಗಳು ಜರಗತಕ್ಕ
ಸಮಯವು ಸಮೀಪಿಸಿದೆ;

'ಮದುವೆ ಸೀರೆ'
ಇದೀಗ ಪ್ರಕಟವಾಗಿದೆ!

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.
ರೂ, 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಆಧ್ಯಾತ್ಮಿಕ ವಿಚಾರ

ಸುಖದ ಮೂಲ ಎಲ್ಲಿ ಇದು ನಿಮಗೆ ಗೊತ್ತೆ?

ಸುಖ ಹೆಣ್ಣು, ಹೊನ್ನು ಮತ್ತು ಮಣ್ಣುಗಳಲ್ಲಿಲ್ಲ; ಅದು ಸಂತೃಪ್ತಿಯಲ್ಲೇ ಅಡಗಿದೆ.

ಪ್ರಪಂಚದಲ್ಲಿ ಮನುಷ್ಯನು ಬಾಳುವುದು ಕೇವಲ ಸುಖಕ್ಕಾಗಿ. ಹುಟ್ಟಿದಂದಿನಿಂದ ಸಾಯುವವರೆಗೂ ಆತನ ಏಕಮಾತ್ರ ಗುರಿಯಾಗಿರುವುದು ಕ್ಷಣಿಕವಾದ 'ಸುಖ'! ಆತನ ಈ ನೇರಪಥದಲ್ಲಿ ದುಃಖ ಅಡ್ಡಬಂದರೆ ಮಾತ್ರ 'ಸಂಸಾರದಲ್ಲಿ ಸುಖವಿಲ್ಲಪ್ಪ!' ಎಂದು ವಿಷಾದಿಸುವನು. ಸುಖವನ್ನು ಹುಡುಕುವ ಭರದಲ್ಲಿ ಕೃತಕವಾದ ಭೋಗೋಪಯೋಗಿಸಾಧನಗಳೆಲ್ಲವನ್ನೂ ಸುಖವೆಂದೇ ತಿಳಿದುಕೊಳ್ಳುತ್ತಾನೆ. ಆತನು ಯಾವುದನ್ನು 'ಸುಖ'ವೆಂದು ತಿಳಿದುಕೊಳ್ಳುತ್ತಾನೋ ಅದು ಕೊನೆಗೆ ದುಃಖಕರವಾಗಿ ಪರಿಣಮಿಸಲಿರುವುದೆಂದು ಆಗ ಆತ ಅರಿಯುವುದಿಲ್ಲ. ಆ ಅಮಲಿನಲ್ಲಿ ಬಿದ್ದು ಮೊದಲಿನ ಉತ್ಸಾಹ ಆರಿದ ನೇಲೆಯೇ 'ಛೆ! ನಾನು ಈ ಕೃತಕವಾದ ಸುಖಕ್ಕೆ ಬಲಿಬಿದ್ದದು ಮೂರ್ಖತನವಾಯಿತು. ಇದು ನಿಜವಾಗಿಯೂ ದುಃಖದ ಕೂಪ' ಎಂದೆನ್ನುತ್ತಾನೆ. ಇಂದಿನ ಮಾನವನು ಮೂರು ವಸ್ತುಗಳನ್ನು ಸುಖಸಾಧನಗಳೆಂದು ಭಾವಿಸಿದ್ದಾನೆ. ಅವುಗಳೇ ಹೆಣ್ಣು, ಹೊನ್ನು, ಮಣ್ಣು ಎಂಬ ಮಾಯೆಯ ಕಿಡಿಗಳು; ದುಃಖದ ಕೂಪಗಳು!

ಹೆಣ್ಣು

ಹೆಣ್ಣು ಕೇವಲ ತನ್ನ ದೈಹಿಕ ಸುಖಕ್ಕಾಗಿ ಸೃಷ್ಟಿಸಲ್ಪಟ್ಟವಳು ಎಂದು ಭಾವಿಸಿದ ಮಾನವನು ತನ್ನ ಯೌವನದ ಭರದಲ್ಲಿ ಅವಳಲ್ಲಿ ಮಾನವೀಯತೆಯನ್ನು ಕಾಣುವುದಿಲ್ಲ. ಭೋಗದ ರಭಸದಲ್ಲಿ ಮುಳುಗಿ ತತ್ಫಲವಾಗಿ 'ಅಪ್ಪಾ' ಎಂದು ಕರೆಯುವ ಕೂಸು ಜನಿಸಿದಾಗಲೇ ಶುರುವಾಗುತ್ತದೆ—ಆತನ ದುಃಖ ಪರಂಪರೆ! ಅಂತ್ಯದಲ್ಲಿ 'ಸಾಕಪ್ಪಾ ಸಂಸಾರ!' ಎನ್ನುವ ಗತಿಗೆ ಮುಟ್ಟುತ್ತದೆ. ಪ್ರಾರಂಭದಲ್ಲಿಯೇ ತಾಳ್ಮೆಯಿಂದ, ಶಾಂತಿಯಿಂದ, ಹೆಣ್ಣಿನಲ್ಲಿ ಮಾನವೀಯತೆಯನ್ನು ಕಂಡು ಬಾಳಿನ ಸಮರದಲ್ಲಿ ಕಾಲಿಟ್ಟಿದ್ದಿದ್ದರೆ ಆತನು ಬೇಗ ದುಃಖದ ಬಲೆಗೆ ವಶವಾಗುತ್ತಿರಲಿಲ್ಲ.

ಹೊನ್ನು

'ಧನವೇ ಸರ್ವಸ್ವ' ವೆನ್ನುವವರಿದ್ದಾರೆ ಜಗತ್ತಿನಲ್ಲಿ. ಅಂತೆಯೇ ಧನವೇ ದುಃಖದ ಮೂಲವೆನ್ನುವವರೂ ಇದ್ದಾರೆ. ಹಾಗಾದರೆ ಯಾರ ತತ್ತ್ವ ಸರಿ? ಸೂಕ್ಷ್ಮವಾಗಿ ವಿಮರ್ಶಿಸಿದರೆ ಎರಡನೆಯವರ ತತ್ತ್ವವೇ ಸರಿಯೆನಿಸುವುದು. ಕೇವಲ ಧನಕ್ಕಾಗಿ ಅಸಂಖ್ಯಾತ ಅನ್ಯಾಯಗಳನ್ನೆಸಗಿ ಕೊನೆಗೆ ಕಷ್ಟಕ್ಕೀಡಾಗುವ ಬದಲು ಜೀವನವಷ್ಟನ್ನೇ ಗಳಿಸಿ ಶಾಂತಿಯಿಂದ ಜೀವಿಸುವುದು ಸೂಕ್ತವಲ್ಲವೆ? ಕೇವಲ ಅತಿ ಆಸೆಯಿಂದ ದುಃಖಕ್ಕೀಡಾಗುವುದಕ್ಕಿಂತ ಈ ತಾತ್ತ್ವಿಕ ಮಾರ್ಗವೇ ಉತ್ತಮವೆನ್ನಬಹುದು. ಆದರೆ ವಿಶ್ವದ ಬಹುಸಂಖ್ಯಾತರು ಈ ಸಾತ್ತ್ವಿಕ ಮಾರ್ಗವನ್ನನುಸರಿಸದೆ ವಾಮಮಾರ್ಗದಿಂದ ಧನಾರ್ಜನೆಗಳಿಸಿ, ಕೊನೆಗೆ ಆತ್ಮಶಾಂತಿ ದೊರಕದೆ ಆಜೀವ ಪರ್ಯಂತ ಕೊರಗುವವರ ಸಂಖ್ಯೆಯೇ ಅಧಿಕವಾಗಿದೆ.

ಮಣ್ಣು

ಒಂದು ತುಂಡು ಭೂಮಿಗಾಗಿ ವ್ಯಾಜ್ಯ ಹೂಡುವವರನ್ನು ನಮ್ಮ ಹಳ್ಳಿಗಳಲ್ಲಿ ಯಥೇಷ್ಟವಾಗಿ ಕಾಣಬಹುದು. ಮಣ್ಣಿನ ಗೀಳುಹಿಡಿದರೆ ಮನುಷ್ಯನು ರಾಕ್ಷಸನಾಗುತ್ತಾನೆಯೆಂಬ ಒಂದು ಮಾತು ಇಲ್ಲಿ ಅನ್ವಯಿಸುತ್ತದೆ. ಹಾಗೆ ಅನ್ಯಾಯದಿಂದ ಗಳಿಸಿದ ಭೂಮಿಯನ್ನು ತಾವೂ ಸಾಗುವಳಿಮಾಡದೆ ಅನ್ಯರಿಗೂ ಬಿಡದೆ ಪಾಳುಗೆಡವುದು ಸಹಾ ಇತ್ತೀಚೆಗೆ ಒಂದು ಸಂಪ್ರದಾಯವೆನಿಸಿದೆ. ತನ್ನ ಮತ್ತು ತನ್ನ ಕುಟುಂಬದ ಪೋಷಣೆಗೆ ಸಾಕಾಗುವಷ್ಟು ಭೂಮಿಯನ್ನೇ ಚೆನ್ನಾಗಿ ವೃದ್ಧಿಸಿ, ಹೊನ್ನುಬೆಳೆಯುವ ಬದಲು ಈ ರೀತಿಯ ಅತ್ಯಾಶೆಗೆ ಗುರಿಯಾಗಿ, 'ಹೆಚ್ಚು ಭೂಮಿಯನ್ನುಗಿಟ್ಟಿಸಿಕೊಂಡರೆ ಸುಖವಾಗಿರಬಹುದು' ಎಂಬ ಭ್ರಾಮಕದ ಅಮಲಿಗೆ ಬಲಿಯಾಗಿ, ಜನರು ದುಃಖವನ್ನು ತಮ್ಮ ಕಾಲ ಬುಡಕ್ಕೇ ತಂದು ಕೊಳ್ಳುತ್ತಿದ್ದಾರೆ.

ನಿಜವಾದ ಸುಖ ಯಾವುದು?

ಹಾಗಾದರೆ ಸುಖದ ಮೂಲವಾವುದು? ಎಲ್ಲವನ್ನು ತ್ಯಜಿಸಿ, ಸನ್ಯಾಸಿಯಾಗುವುದು ಸುಖವೆ? ಎಂದು ಕೇಳಬಹುದು. 'ಆತ್ಮತೃಪ್ತಿಯೇ ಸುಖ', 'ತನಗಿಷ್ಟೇ ಸಾಕು. ಹೆಚ್ಚಿಗೆ ಬೇಡ, ಉಳಿದದ್ದು ಪರರಿಗೆ ಹೋಗಲಿ, ಅವರು ಉಣ್ಣಲಿ' ಎಂದು ಭಾವಿಸಿ ಕರ್ಮದಲ್ಲಿ ನಿರತನಾಗಿರುವುದೇ ನಿಜವಾದ ಸುಖ. ಅದು ಹೊರಗಿನಿಂದ ಸಿಗುವ ಕೃತಕ ಸುಖವಲ್ಲ. ಒಳಗಿನಿಂದ ಆತ್ಮದ ಬೆಳಕಿನಲ್ಲಿ ಹುಡುಕಿಕೊಂಡು ಹೋದರೆ ಮಾತ್ರ ಸಿಗುವ ಪರಮ ಸುಖ. ಕ್ಷಣಿಕವಲ್ಲ. ಶಾಶ್ವತ, ಅಮರವಾದುದು. 'ಹಾಸಿಗೆ ಯಿದ್ದಷ್ಟೇ ಕಾಲು ಚಾಚು' ಎಂಬಂತೆ ಸಿಕ್ಕಿದ್ದಷ್ಟರಲ್ಲೇ ತೃಪ್ತಿಯಾಗಿ, ಬೇರೆ ಇತರ ಹವ್ಯಾಸಕ್ಕೆ ಹೋಗದೆ ಕರ್ಮದಲ್ಲಿ ತೊಡಗುವ ಮಾನವನು ತನ್ನ ಜನ್ಮ ಸಾಫಲ್ಯಮಾಡಿಕೊಳ್ಳುತ್ತಾನೆ. ಆತ್ಮ ಶಾಂತಿಯಿಂದ ಹಸನ್ಮುಖಿ ಯಾಗಿರುತ್ತಾನೆ. ಇದೇ ಸುಖದ ಮೂಲ.

—ಎ. ಗಣಪಯ್ಯ ಅಲ್ಸೆ, ಐರೋಡಿ.

ವಿಚಾರ ಮಥನ

(೧ನೇ ಪುಟದಿಂದ)

ರಾಷ್ಟ್ರ ಘಟನೆ ಮೊದಲಾದುವನ್ನೇ ಸುಟ್ಟುರಿಸುವ ಮೂರ್ಖತನದಿಂದ ಕೂಡಿದ ಈ ಒಂದು ಕಜಗಂ "ರಾಷ್ಟ್ರ ದ್ರೋಹಿ" ಎನಿಸಿರುವಾಗ, ಸಿಂಹಳಕ್ಕೂ ಬೆದರಿಕೆ ಹಾಕಿದರೆ ಅದಕ್ಕಾಗಿ ಚಿಂತಿಸಬೇಕಾಗಿಲ್ಲ; "ಕಜಗಂ" ವ್ಯಾಪ್ತಿಗೂ ಒಂದು ಮಿತಿ ಇಲ್ಲದಂತಾದೀತೆ?

೦೦ ೦೦ ೦೦

ಮಾನವನು ಮೂಲತಃ ಮಂಗನಾಗಿದ್ದು ಆ ಮೇಲೆ ಮುಂದುವರಿದು ತನ್ನ ರೂಪವನ್ನು ಪಡೆದನೆಂದು ಡಾರ್ವಿನನ ವಿಕಾಸವಾದವು ಹೇಳುತ್ತದೆ. ಇದರಿಂದಾಗಿ ಮಾನವನಿಗಿಂತ ಮಂಗಗಳೇ ಇಂದಿಗೂ ಪ್ರಾಧಾನ್ಯ ಪಡೆಯುತ್ತಿರುವುದು ತಪ್ಪೆಂದು ಹೇಳುವಂತಿಲ್ಲ. ಅಮೆರಿಕೆಯು ಜ್ಯೂಪಿಟರ್‌ಕ್ಷಿಪಣಿಯಲ್ಲಿ ಎರಡು ಜೀವಂತ ಮಂಗಗಳನ್ನಿಟ್ಟು ಅಂತರಿಕ್ಷಕ್ಕೆ ಹಾರಿಸಿತು; ಅಲ್ಲದೇ ಸುಮಾರು ೧೫ ಮಿನಿಟುಗಳ ಕಾಲದಲ್ಲಿ ೧,೫೦೦ ಮೈಲುಗಳ ಪ್ರವಾಸವನ್ನು ಮುಗಿಸಿದನಂತರ ಅಂತ್ಲಾಂತಿಕ ಸಾಗರದಲ್ಲಿ ಸುಕ್ಷೇಮವಾಗಿ ಮಂಗಗಳನ್ನು ಇಳಿಸಲಾಯಿತೆಂದು ವರದಿಯಾಗಿದೆ. ಅಂತರಿಕ್ಷ ಪ್ರಯಾಣ ಮಾಡುವ ತಹತಹದಲ್ಲಿಯೇ ಮಾನವನು ಚಿಂತಾಮಗ್ನನಾಗಿರುತ್ತಿದ್ದಂತೆಯೇ ಈ ಮಂಗಗಳು ಮಾತ್ರ ವಿಜಯಭೇರಿಯನ್ನು ಬಾರಿಸಿಯೇ ಬಿಟ್ಟುವು. ರಷ್ಯವು ಈ ಮೊದಲೇ ಲೈಕ ವೆಂಬ ನಾಯನ್ನು ಅಂತರಿಕ್ಷ ಪ್ರವಾಸದಲ್ಲಿ ತೊಡಗಿಸಿದರೂ ಲೈಕದ ಪರಿಸ್ಥಿತಿ ಲಾಯಕಾಗಿ ಪರಿಣಮಿಸಲಿಲ್ಲ. ಆದುದರಿಂದ, ಅದರ ಸಾಹಸ ನಿಷ್ಫಲವಾದಾಗಿ ಸದ್ಯದ ಅಮೆರಿಕೆಯ ಮಂಗಗಳು ಯಶಸ್ವಿಯಾಗಿ ಮರಳಿದುದರಿಂದ ಈ ಮಂಗಗಳ ಕೀರ್ತಿ ಅವುಗಳಂತೆಯೇ ಗಗನಾಂತರಿಕ್ಷಕ್ಕೇರುವಂತಾಗಿದೆ. ಇನ್ನೂ ಒಂದು ವೈಶಿಷ್ಟ್ಯವೆಂದರೆ, ಈ ಎರಡೂ ಕೋತಿಗಳು ಹೆಣ್ಣುಗಳಂತೆ! ಪ್ರಪಂಚದಲ್ಲಿ ಗಂಡಸಿನ ಗೌರವಾದರಗಳು ಯಂತ್ರ ಕಟ್ಟಿ ಕ್ಷಿಪಣಿಯಂತೆ ಭೂಮಿಯಲ್ಲಿ ಉರುಳುತ್ತಿರುವಾಗ ಸ್ತ್ರೀ ಪ್ರಾಧಾನ್ಯದ ಇಂದಿನ ದಿನಗಳಲ್ಲಿ ಈ "ಹೆಣ್ಣು"ಗಳೇ ವಿಜಯಪತಾಕಾಧಾರಿಗಳಾದುದೂ ಒಂದು ಶುಭಲಕ್ಷಣ. ನಮ್ಮ ಮಹಿಳೆಯರಿಗೆ ಇದೊಂದು ಅಭಿಮಾನಾಸ್ಪದಸಂಗತಿಯಲ್ಲವೆ? ಎಂತಲೇ ಪ್ರಕೃತದ ಸಾಹಸದಿಂದ ವಿಶ್ವಕ್ಕೆ ಮೂರು ಪ್ರಯೋಜನಗಳು ಒದಗುವಂತಾದುವು. ಮೊದಲನೆಯದಾಗಿ ಡಾರ್ವಿನನ ವಿಕಾಸವಾದಕ್ಕೆ ದ್ರಾವಿಡ ಪ್ರಾಣಾಯಾಮವಾದರೂ ಪುಷ್ಟಿಕಾರಿಯಾದ ಇನ್ನೊಂದು ಪ್ರಮಾಣ ದೊರೆಯಿತು; ಎರಡನೆಯದಾಗಿ ನಮ್ಮ ಮಹಿಳಾ ಸಮಾಜಗಳಲ್ಲಿ ಮಹಿಳಾಮಣಿಯರಿಗೆ ಕೆಲವಾರು ಸಮಯದವರೆಗೆ ಮಹಿಳಾ ಮಹತ್ತ್ವಿಕೆಯ ಕುರಿತು ಭಾಷಣ ಬಿಗಿಯಲು ಆಧಾರ ದೊರೆಯಿತು ಮತ್ತು ಕೊನೆಯದಾಗಿ ಮಾನವನು ಬಯಸುತ್ತಿರುವ ಕ್ಷೇಮಕರ ಅಂತರಿಕ್ಷ ಗಮನವನ್ನು ಮಾಡುವುದರಲ್ಲಿ ಆತನಿಗೆ ಒಂದು ಹೊಸ ಬಗೆಯ ಉತ್ಸಾಹ ಮತ್ತು ಧೈರ್ಯ ಹಾಗೂ ಆಸೆಗಳು ಲಭಿಸುವಂತಾದುವಲ್ಲವೆ?

— ರಾಶಿ.

ಪ್ರಕಟಣೆ

ಉಡುಪಿ ರೆಂಟ್ (ತಹಶಿಲ್ದಾರ) ಕೋರ್ಟಿನಲ್ಲಿ

O. P. No. 22/1959

ಯು. ನರಸಿಂಹಾಚಾರ್ಯ—ಅರ್ಜಿದಾರ

ಮತ್ತು

1. ರಾಮಚಂದ್ರನಾಯ್ಕ, 2. ಗೋಪಾಲ ನಾಯ್ಕ—ಕೊರ್ಗಯ್ಯನಾಯ್ಕನ ಮಕ್ಕಳು. ಉಡುಪಿ ತಾಲೂಕು ಹಿರೆಬೆಟ್ಟು ಗ್ರಾಮ—ಎದ್ರಿರು.

ಇವರೊಳಗೆ—

ಸದ್ರಿ ಯದ್ರಿರಿಗೆ ಯೀ ಮೂಲಕ ತಿಳಿಸುವದೇನೆಂದ್ರೆ—

ಅರ್ಜಿದಾರನ ಒಳಗೆ ಯದ್ರಿರು ಚಾಲಗೇಣಿಗೆ ಅನುಭವಿಸುವ ಆಸ್ತಿಯ ನ್ಯಾಯಗೇಣಿ ನಿರ್ಣಯಿಸುವ ಬಗ್ಗೆ ಅರ್ಜಿದಾರನು ದಾಖಲ್ಮಾಡಿದ—ಮೇಲ್ಕಂಡ ಅರ್ಜಿಯಲ್ಲಿ ಯದ್ರಿರ—ಆಖೈರಿ ನೋಟೀಸು ಬಗ್ಗೆ ತಾ. 12-6-1959ಕ್ಕೆ ಯಿಡೋಣಾಗಿಯದೆಂತ—ಯದ್ರಿರಿಗೆ ಯೀ ಮೂಲ್ಕ ತಿಳಿಸೋಣಾಗಿಯದೆ.—

U. Ramakrishna Achar,
Advocate for Petitioner.

ಉಡುಪಿ—28-5-1959.

ಆಂಧ್ರ ರಾಜ್ಯದ ನೆಲ್ಲೂರು

ದಿನಾಂಕ ೨೫ನೇ ಮೇ ೧೯೫೯ರಿಂದ
ಆಂಧ್ರ ರಾಜ್ಯದ ನೆಲ್ಲೂರಿನಲ್ಲಿ
(289 ಸ್ಟೋನ್ ಹೌಸ್ ಪೇಟೆ)
ಸಿಂಡಿಕೇಟಿನ 121 ನೇ ಶಾಖೆಯು
ತೆರೆಯಲ್ಪಟ್ಟು, ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರವನ್ನೂ ಕೈಗೊಳ್ಳಲಾಗುವುದು.
ಶ್ರೀ ಕೆ. ಹರಿರಾಮಕೃಷ್ಣರಾಯರು
ಈ ಶಾಖೆಯ ಏಜಂಟರಾಗಿ ಕಾರ್ಯನಿರ್ವಹಿಸುವರು.

ಇದು ಸಿಂಡಿಕೇಟ್ ಬೇಂಕಿನ 121ನೇ ಶಾಖೆ.

THE CANARA INDUSTRIAL & BANKING SYNDICATE LTD., UDIPI.

ಪ್ರಕಟಣೆ

ಮಂಗಳೂರು ಸ್ಪೆಶಲ್ ಅಸಿಸ್ಟಾಂಟ್ ಕಮಿಷನರ ಕೋರ್ಟ್.

O. P. No. 272/59

T. ಲಕ್ಷ್ಮೀನಾರಾಯಣ ಪೈ—ಅರ್ಜಿದಾರ

ಮತ್ತು

1. ಪದ್ದುಹೆಂಗ್ಸು, 2. ಅಣ್ಣಪ್ಪ, 3. ಮೀನ. ಕಾಯಹೆಂಗ್ಸಿನ ಮಕ್ಕಳು, ಉಡುಪಿ ತಾಲೂಕು ಶಿವಳ್ಳಿ ಗ್ರಾಮದಲ್ಲಿರುವವರು—ಎದ್ರಿರು.

ಆಸ್ತಿ ಸ್ವಾಧೀನತೆಯ ಬಗ್ಗೆ ಅರ್ಜಿದಾರನು ಮಾಡಿರುವ ಸದ್ರಿ ಅರ್ಜಿಯು ಮೇಲ್ಕಂಡ ಕೋರ್ಟಿನ ಉಡುಪಿ ಕೇಂಪಿನಲ್ಲಿ ತಾ:15-6-59ಕ್ಕೆ 11ಘಂಟೆಗೆ 1, 2ನೇ ಎದ್ರಿರ ಹಾಜರಿ ಬಗ್ಗೆ ಇಟ್ಟಿರುತ್ತದೆ. ತಪ್ಪಿದ್ರೆ ಗೈರು ಹಾಜರಿಯಲ್ಲಿ ತೀರ್ಮಾನವಾಗುವದು ತಿಳಿದಿರುವದು.

ವಿ. ಆರ್. ಕಿದಿಯೂರು,
ಅರ್ಜಿದಾರರ ಎಡ್ವೋಕೇಟ್.

ಉಡುಪಿ, ತಾ 28-5-59.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Director of public Instruction, Madras.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ. 13 ನ.ಪೈಸೆ.

ವರುಷ ೩೮ ವಾರ ೩೯. 11-6-1959 Vol. 38. No. 39.

ವಿಚಾರ ಮಥನ

ಸ್ವತಂತ್ರ ಪಕ್ಷಸ್ಥಾಪನೆ

* *

ಕಮ್ಯುನಿಸ್ಟ ಪ್ರಜಾಪ್ರಭುತ್ವ

* *

ಬಂಡವಳದ ಮೇಲೆ ಬಡ್ಡಿ

* *

ಮೂರ್ಖರು ತಮ್ಮ ಮೂರ್ಖತನದಿಂದಾಗಿ ಪರಸ್ಪರ ಕಚ್ಚಾಡುವರಾದರೆ, ಬುದ್ಧಿವಂತರು ತಮ್ಮ ಬುದ್ಧಿವಂತಿಕೆಯ ಪ್ರದರ್ಶನಕ್ಕಾಗಿ ಕೈಯೆತ್ತುವುದೂ ಇದೆ. ನಾಯಿ ನಾಯಿಯನ್ನು ಕಂಡರೆ ಗುರುಗುಟ್ಟುತ್ತದೆ ಎಂಬ ಗಾದೆ ಮಾತು ಇದಕ್ಕೂ ಅನ್ವಯಿಸುತ್ತದೆ. ಅಲ್ಲದೇ ಇತ್ತೀಚೆಗೆ ಸುರುವಾದ ರಾಜಕಾರಣಿ—ರಾಜಕಾರಣಿಗಳ ವಾಗ್ವಿವಾದವೂ ಇದೇ ಮಾದರಿಯ ಒಂದು ಕುತೂಹಲಕಾರಕ ಪ್ರಸಂಗವಾಗಿಯೇ ಇದೆ ಎಂದು ಹೇಳಬೇಕು.

ಈ ಪ್ರಸಂಗಕ್ಕೆ ಮೂಲಹೇತು ಸಹಕಾರಿ ಕೃಷಿಪದ್ಧತಿ ವಾಗ್ವಿವಾದಕ್ಕೆ ಸೊಂಟಕಟ್ಟಿದ ಮಹಾ ರಾಜಕಾರಣಿಗಳಾದರೂ ಚಿಲ್ಲ ಪಲ್ಲರೆಯವರಲ್ಲ. ಬೆಂಬಲಿಗರಾಗಿ ೪೦ ಕೋಟಿ ಭಾರತೀಯರ ಪ್ರತೀಕವಾದ ದೇಶದಾದ್ಯಂತ ಮಾತ್ರವಲ್ಲದೇ ವಿಶ್ವದ ಮೂಲೆ ಮೂಲೆಯಲ್ಲಿಯೂ ಸುವಿಖ್ಯಾತರಾದ ಭಾರತ ರತ್ನ ಪಂಡಿತ ಜವಾಹರಲಾಲ ನೆಹರೂ ನಿಂತಿದ್ದರೆ, ಅದನ್ನು ವಿರೋಧಿಸುವವರ ಯೋಗ್ಯತೆಯೂ ಕಡಿಮೆಯೆಂದು ಹೇಳಲಾಗದು. ನೆಹರೂ ಜನಪ್ರಿಯರಾಗಿರುವರು; ಜತೆಗೆ ರಾಜಾಜಿ ಅಪ್ರಿಯರೂ ಆಗಿದ್ದಾರೆಂದು ಕೆಲವರಾದರೂ ಹೇಳಬೇಕಾದರೆ, ಅವರೂ ಜನತೆಗೆ ಚಿರಪರಿಚಿತರೆಂಬುದರಲ್ಲಿ ವಿವಾದವಿಲ್ಲ. ನೆಹರೂ ಭಾರತದ ಪ್ರಧಾನಿಯಾದರೆ, ರಾಜಾಜಿ ಅನಕ್ಕೂ ಒಂದು ತೂಕ ಏರಿದ ಗವರ್ನರ ಜನರಲ ಪದವಿಯಿಂದ ನಿವೃತ್ತರಾದರು. ಇಬ್ಬರೂ ರಾಷ್ಟ್ರಪಿತ ಗಾಂಧೀಜಿಯವರ ಪ್ರಿಯ ಶಿಷ್ಯರು; ಅವರಿಂದಲೇ ಸೇವಾವ್ರತವನ್ನು ಸ್ವೀಕರಿಸಿ, ಎಳ್ಳನಿತು ದೋಷವಿಲ್ಲದೆ, ಅದರಲ್ಲಿಯೇ ನಿರತರಾಗಿರುವವರು. ಇಬ್ಬರಲ್ಲೂ ಪರಸ್ಪರ ವೈಮನಸ್ಯ ತಿಲಾಂಶದಷ್ಟೂ ಇರದೆ, ಒಬ್ಬರು ಇನ್ನೊಬ್ಬರನ್ನು ಗೌರವದೃಷ್ಟಿಯಿಂದ ಕಾಣುತ್ತಿದ್ದೇವೆಂದು ಹೇಳುತ್ತಾರೆ. ನೆಹರೂ ತಪ್ಪು ದಾರಿಯಲ್ಲಿ ನಡೆಯುತ್ತಿರುವುದರಿಂದ ಅವರ ಮೇಲಿನ ಪ್ರೀತಿಯು ಅವರನ್ನು ಎಚ್ಚರಿಸುವಂತೆ ನನ್ನನ್ನು ಪ್ರೇರೇಪಿಸುತ್ತದೆ ಎಂದು ರಾಜಾಜಿ ಹೇಳಿದರೆ, ರಾಜಾಜಿ ಅವರ ಮಾತಿನಲ್ಲಿ ನನಗೆ ಗೌರವವಿದೆ, ಈ ಮಾತು (ಸಹಕಾರಿ ಒಕ್ಕಲುತನಕ್ಕೆ ವಿರೋಧ ಸೂಚಕ) ಬೇರೆಯವರ ಬಾಯಿಂದ ಹೊರಬಿದ್ದಿದ್ದರೆ, ನಾನೇನೂ ವಿಚಾರಿಸುತ್ತಿರಲಿಲ್ಲ. ಆದರೆ, ಅದು ರಾಜಾಜಿಯಂತಹ ಗಣ್ಯ ಮುತ್ಸದ್ದಿಯ ಮುಖದಿಂದ ಹೊರಬಿದ್ದುದರಿಂದಾಗಿ ನಾನದನ್ನು ಗಂಭೀರವಾಗಿ ಪರಿಶೀಲಿಸುತ್ತೇನೆ. ಆದರೂ ಈ ವಿಷಯದಲ್ಲಿ ಅವರ ಮತವನ್ನು ಒಪ್ಪುವುದು ಕಷ್ಟ ಸಾಧ್ಯ ಎಂದು ನೆಹರೂ ಹೇಳುತ್ತಾರೆ.

ಹೀಗೆಯೇ ಕನ್ಸರವೇಟಿವ್ ಪಕ್ಷವೊಂದನ್ನು ಇಂದಿನ ಸರಕಾರದ ಅಬದ್ಧ ಪದನ್ಯಾಸಗಳನ್ನು ತಡೆಗಟ್ಟುವುದಕ್ಕಾಗಿ ಕಟ್ಟಬೇಕೆಂದು ಜನತೆಗ ಕರೆಗೊಟ್ಟು, ತನ್ನ ವೃದ್ಧಾಪ್ಯದ ಕಾರಣದಿಂದ ಅದರ ನಾಯಕತ್ವವನ್ನು ಸ್ವೀಕರಿಸಲು ರಾಜಾಜಿ ಹಿಂಜರಿದಿದ್ದರು. ಆದರೆ, ಪ್ರಧಾನಿ ನೆಹರೂ "ಕನ್ಸರವೇಟಿವ್" ಎಂಬ ಶಬ್ದವನ್ನು ಒಪ್ಪುವುದಿಲ್ಲವೆಂದು ಹೇಳಿದ್ದಾರೆ. ಇದೇ ಮಾದರಿಯ ವಾದವಿವಾದಗಳಿಗೆ ಮೊದಮೊದಲು ರಂಗಸ್ಥಾನವಿಲ್ಲದಿದ್ದರೂ ಜೂನೆ ತಿಂಗಳ ೫ನೇ ದಿನಾಂಕದಂದು ಅಧಿಕಾರಾರೂಢ ಪಕ್ಷಕ್ಕೆ ನೂತನ ಪ್ರತಿ ಪಕ್ಷವೊಂದನ್ನು ಕಟ್ಟುವ ಘೋಷಣೆಯು ಮದ್ರಾಸಿನಲ್ಲಿ ಹೊರಬಿತ್ತು. ಯದ್ಯಪಿ, ಈ ಘೋಷಣೆಗೆ ಪೂರ್ವರೂಪವಾಗಿ ಸುಮಾರು ಎರಡು ತಿಂಗಳುಗಳಿಂದ ಸಿದ್ಧತೆಗಳು ನಡೆದಿರುವುದಾದರೂ ಈ ಯೋಜನೆಯು ಇಷ್ಟೊಂದು ಯಶಸ್ವಿಯಾಗಿ ನಡೆಯುವುದೆಂದು ಯಾರೂ ತಿಳಿದಿರಲಾರರು.

ರಾಜಾಜಿಯವರೇ ಈ ಪಕ್ಷದ ನಾಯಕತ್ವವನ್ನು ವಹಿಸಿದ್ದಾರೆ. ಈ ಪಕ್ಷಕ್ಕೆ ಮೂಲದಲ್ಲಿ "ಕನ್ಸರವೇಟಿವ್" (ಸಂಪ್ರದಾಯವಾದಿ) ಎಂಬ ಹೆಸರಿಡಬೇಕಾಗಿದ್ದರೂ, ಜನತೆಯ ಬಯಕೆಯಂತೆ ಅದನ್ನು ಸ್ವತಂತ್ರ ಪಕ್ಷವೆಂದು ಕರೆಯುವ ನಿರ್ಧಾರ ಮಾಡಿದ್ದಾರೆ. ದೇಶದ ಜೀವನ, ಪರಂಪರೆಗಳಲ್ಲಿರುವ ಒಳ್ಳೆಯದೆಲ್ಲವನ್ನೂ ಉಳಿಸಿಕೊಳ್ಳಲು ಹೋರಾಡುವುದೇ ಈ ಪಕ್ಷದ ಮುಖ್ಯ ಧ್ಯೇಯವಾಗಿರುವುದು. ಅಲ್ಲದೇ ಎಲ್ಲಕ್ಕಿಂತ ಮೊದಲಿಗೆ ಸಾಮೂಹಿಕ ಬೇಸಾಯವೇ ಇದಕ್ಕೆ ಪ್ರಥಮಾಹುತಿಯಾಗುವುದು. "ಸದ್ಯ ಅಧಿಕಾರಾರೂಢವಾಗಿರುವ ಸಂವಿಧಾನ ವಿರೋಧಿ ಪಕ್ಷವನ್ನು ವಿರೋಧಿಸಿ ಗಣತಂತ್ರದಲ್ಲಿ ಮಂಜೂರಾದ ಸಂವಿಧಾನಕ್ಕೆ ಸರಿಯಾಗಿ ಈ ಹೊಸ ಪಕ್ಷವು ನಡೆದುಕೊಳ್ಳುವುದು.

ದೇಶದ ಮಹಾಮೇಧಾವಿ ದ್ವಯರ ಹಾಗೂ ಅತ್ಯುದಾತ್ತ ಸೇವಕರ ಈ ಅಭಿಪ್ರಾಯ ಘರ್ಷಣೆಯಿಂದ ಹುಟ್ಟಿದ ಕಿಡಿಯು ಎಂತಹ ವಾತಾವರಣವನ್ನು ನಿರ್ಮಿಸುವುದೆಂದು ನೋಡಲು ಎಲ್ಲರೂ ಆತುರಚಿತ್ತರಾಗಿರುವರು.

೦೦ ೦೦

ಭಾರತದ ಚಿಕ್ಕ ರಾಜ್ಯ ಕೇರಳದಲ್ಲಿ ವಿದ್ಯಾಸಂಬಂಧಿ ಮಸೂದೆಯು ಗರ್ಭದಾನದಿಂದ ಆರಂಭಿಸಿ ಪ್ರಸವಕಾಲದವರೆಗೂ ನಾನಾ ಕಷ್ಟ ಸಂಕಷ್ಟಗಳನ್ನೇ ಅನುಭವಿಸುತ್ತ ಬಂದಿದೆಯಲ್ಲದೆ ಇದೀಗ ಮತ್ತಷ್ಟು ಅಪ್ರಸನ್ನವಾಗುವಂತೆ ಪರಿಸ್ಥಿತಿ ಮುಂದುವರಿದಿದೆ. ಕೇರಳದ ಅದ್ಯಂತ ನಡೆಯುವ "ಸರಕಾರ ವಿರೋಧಿ ಚಳುವಳಿ"ಯ ಮೂಲ ಹೇತು ಈ ಶಿಕ್ಷಣ ಮಸೂದೆಯಾಗಿದೆ. ರಾಜ್ಯದ ಬಹುಸಂಖ್ಯೆಯ ಖಾಸಗಿ ಆಡಳಿತೆಯವರು ಮೆಚ್ಚದಂತಹ ಮಸೂದೆಯನ್ನು ಅವರಮೇಲೆ ಹೇರುವ ಹಠಮಾರಿತನದಿಂದ ರಾಜ್ಯದ ಆಂತರಿಕ ಪರಿಸ್ಥಿತಿಯು ವಿಕೋಪಕ್ಕೆ ಹೋಗುತ್ತಿರುವುದು ಎಲ್ಲರಿಗೂ ತಿಳಿದಿರುವ ಅಂಶವೇ ಆಗಿದೆ. "ಜನತೆಯಲ್ಲಿ ಈ ಶಾಸನದಿಂದ ಅತೃಪ್ತಿಯುಂಟಾಗಿದ್ದರೆ, ಅಸಮಾಧಾನಗಳು ತಲೆದೋರಿದ್ದರೆ, ಅದಕ್ಕೆ ಕಾರಣವೇನೆಂಬುದನ್ನು

(೧೨ನೇ ಪುಟ ನೋಡಿರಿ)



ಅತ್ಯಧಿಕ ವೇಗದಲ್ಲಿ ಚಲಿಸಬಲ್ಲ ಬ್ರಿಟನ್ನಿನ ಬೋಂಬರ್ ವಿಮಾನ.

ದಿ ವಿಜಯ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ – ಮಂಗಳೂರು—3

ಸ್ಥಾಪನೆ– 1931.

ಕಾಯಂ ರೇವಣಾತಿ ಬಡ್ಡಿ ದರ

1 ತಿಂಗಳಿಂದ	5	ತಿಂಗಳ ವರೆಗೆ	4¼%
6 ,,	12	,,	4½%
13 ,,	24	,,	4¾%

ರೂಪಾಯಿ 10,000/- ವ, ಹೆಚ್ಚಿನ ರೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:

ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ...ಇತ್ಯಾದಿ ...

ಕಥಾವಿಹಾರ

ಕೀರ್ತಿಯ ಲೋಭದಿಂದ ಅನಪೇಕ್ಷಣೀಯ ಕರ್ಮ

ಕೋನಾರ್ಕದ ಸೂರ್ಯದೇವಾಲಯವನ್ನು ನಿರ್ಮಿಸಿದ ಶಿಲ್ಪಿಯೊಬ್ಬನ ಕರುಣ ಕಥೆ.

ಕಳಿಂಗ ರಾಜ್ಯದ ರಾಜಬೀದಿಯಲ್ಲಿ ರಾಜಭಟನೊರ್ವ ರಾಜಾ ನರಸಿಂಹ ವರ್ಮನ ಘೋಷಣೆಯನ್ನು ಡಂಗುರ ಹೊಡೆದು ಸಾರುತ್ತಿದ್ದ—

"ರಾಜಾಧಿರಾಜ ರಾಜಾ ನರಸಿಂಹ ವರ್ಮರು ಕಳಿಂಗ ರಾಜ್ಯದ ಕೋಣಾರ್ಕವೆಂಬಲ್ಲಿ ಜಗತ್ತಿನಲ್ಲೇ ಅಪೂರ್ವನೆನಿಸುವಂತಹ 'ಸೂರ್ಯ ಮಂದಿರ'ವೊಂದನ್ನು ಕಟ್ಟಿಸಲು ಯೋಚಿಸಿದ್ದಾರೆ. ಈ ದೇವಾಲಯವನ್ನು ರಾಜರ ಇಚ್ಛೆಯಂತೆ ಸಮರ್ಪಕವಾಗಿ ಮತ್ತು ಸಕಾಲದೊಳಗೆ ಕಟ್ಟುವ ಶಿಲ್ಪಿಗಳಿಗೆ ಒಂದು ಲಕ್ಷ ವರಹ ಮತ್ತು ಒಂದು ಉತ್ತಮ ಜಹಗೀರು ಬಹುಮಾನವಾಗಿ ಕೊಡಲ್ಪಡುವುವು ಆದರೆ ದೇವಾಲಯವನ್ನು ಹದಿನಾರು ವರುಷದ ಅವಧಿಯೊಳಗೆ ನಿರ್ಮಿಸಲು ತಪ್ಪಿದಲ್ಲಿ ತಲೆದಂಡ ಕೊಡಬೇಕಾಗುವುದು. ಈ ಶರ್ತಗಳಿಗೊಪ್ಪುವ ಶಿಲ್ಪಿಗಳು ರಾಜಸ್ಥಾನದಲ್ಲಿ ಹಾಜರಾಗಬಹುದು"

ಘೋಷಣೆ ಕೇಳಿದ ಸಹಸ್ರಾರು ಮಂದಿ ಶಿಲ್ಪಿಗಳು ತಲೆಕೊಡಹಿ ಹೊರಟು ಹೋದರು. ಅವರಾರಿಗೂ ದೇವಾಲಯ ಕಟ್ಟುವುದು ಅಸಾಧ್ಯವಿರಲಿಲ್ಲ. ಆದರೆ ರಾಜಾ ನರಸಿಂಹ ವರ್ಮನ ರಾಜಾಜ್ಞೆಗೆ ಹುಸಿಯಿಲ್ಲ—'ಅವಧಿಯೊಳಗೆ ನಿರ್ಮಿಸಲು ತಪ್ಪಿದರೆ ತಲೆದಂಡ! ಆ ಶರ್ತಕ್ಕೇ ಅವರು ಹೆದರಿದರು. ಆದರೂ ಅವರಲ್ಲಿ ಒಬ್ಬನೇ ಒಬ್ಬ ಪ್ರಖ್ಯಾತ ಶಿಲ್ಪಿ—'ಶಿವೇಯಿ ಸಾಂತರಾ' ರಾಜಸ್ಥಾನದಲ್ಲಿ ಹಾಜರಾದ. 'ತನ್ನ ನಿಬಂಧನೆಗಳಿಗೆ ಹೆದರಿ ಯಾವನೂ ಈ ಕೆಲಸಕ್ಕೆ ಬಾರದಿದ್ದರೆ .' ಎಂದು ಚಿಂತಿಸುತ್ತಿದ್ದ ರಾಜನಿಗೂ ಒಮ್ಮೆ ನೆಮ್ಮದಿಯಾಯಿತು. ಶಿಲ್ಪಿಯನ್ನು ನೋಡುತ್ತಲೇ ಆತನೂ ಸಾಮಾನ್ಯನಲ್ಲವೆಂದು ತಿಳಿದ. ಕೂಡಲೇ ರಾಜ, ಮಂದಿರದ ಕಟ್ಟೋಣದ ಬಗ್ಗೆ ಶಿಲ್ಪಿಗೆ ಸರಿಯಾದ ತಿಳುವಳಿಕೆ ಕೊಟ್ಟು ಆತನ ಸಹಾಯಕ್ಕೆ ಒಂದು ಸಾವಿರದ ಇನ್ನೂರು ಮಂದಿ ಸಾಮಾನ್ಯ ಶಿಲ್ಪಿಗಳನ್ನೂ, ಬೇಕಷ್ಟು ಧನವನ್ನೂ ಒದಗಿಸಿದ ಮರುದಿನವೇ ಸುಮುಹೂರ್ತದಲ್ಲಿ ಕೋಣಾರ್ಕದ ಸಮುದ್ರ ತಟದಲ್ಲಿ ರಾಜಪುರೋಹಿತರಿಂದ ಸೂರ್ಯಮಂದಿರದ ಅಸ್ತಿವಾರ ಹಾಕಲ್ಪಟ್ಟಿತು.

೦೦ ೦೦

ಹದಿನಾರು ವರುಷಗಳು ಬೆರಳೆಣಿಕೆಯಂತೆ ಕಳೆದು ಹೋದುವು. ಕೋಣಾರ್ಕದಲ್ಲಿ ರಾಜಾ ನರಸಿಂಹವರ್ಮ ಕಟ್ಟಿಸುತ್ತಿದ್ದ ಸೂರ್ಯಮಂದಿರ ಕಂಗೊಳಿಸ ತೊಡಗಿತ್ತು. ಜಗತ್ತಿನ ನಾಲ್ದೆಸೆಗಳಿಂದಲೂ ಜನರು ತಂಡೋಪತಂಡವಾಗಿ ಬಂದು ಅದನ್ನು ನೋಡಿ ಮೋಹಿತರಾಗಿ ಹಿಂತೆರಳುತ್ತಿದ್ದರು. ಅದರ ಶಿಲ್ಪಕಲೆಗೆ ಜಗತ್ತಿನಲ್ಲೆಲ್ಲಿಯೂ ಸಾಮ್ಯವಿರಲಿಲ್ಲ ಸೂರ್ಯಮಂದಿರವು ಒಂದು ರಥದಾಕೃತಿಯಲ್ಲಿ ಬರೇ ಕಪ್ಪು ಶಿಲೆಯಿಂದ ಕಟ್ಟಲ್ಪಟ್ಟಿತ್ತು. ಅದರ ಒಂದು ಬದಿಯಲ್ಲಿ ರಾಮಾಯಣದ ಕಥಾ ಚಿತ್ರವೂ, ಇನ್ನೊಂದೆಡೆಯಲ್ಲಿ ಮಹಾಭಾರತದ ಕಥಾಚಿತ್ರವೂ ಸುಂದರವಾಗಿ ಕೆತ್ತಲ್ಪಟ್ಟಿದ್ದುವು ಮೂರ್ತಿಗಳ ಕೆತ್ತನೆ, ಗೋಡೆಗಳ ಮೇಲಿನ ನೃತ್ಯಗಳ ಭಾವ-ಭಂಗಿಯ ಶಿಲ್ಪಗಳು ವಿಶೇಷ ಆಕರ್ಷಕವಾಗಿದ್ದುವು ಮಂದಿರದ ಒಳಗಡೆ ಸೂರ್ಯದೇವರ ಮೂರ್ತಿ, ರಥ ಮತ್ತು ರಥಕ್ಕೆ ಕಟ್ಟಿದ ಏಳು ಕುದುರೆಗಳ ಕೆತ್ತನೆ ಹೃದಯಂಗಮವಾಗಿತ್ತು. ದೇವಾಲಯದ ಪ್ರತಿಯೊಂದು ಕುಸುರು ಕೆಲಸವೂ ಕಲಾತ್ಮಕವಾಗಿ, ಕೆತ್ತಿದ ಶಿಲ್ಪಿಯ ಹೆಸರನ್ನು ಬಾರಿಬಾರಿಗೂ ನೆನಸುವಂತಿತ್ತು. ಇಷ್ಟೆಲ್ಲಕ್ಕೂ ಕಾರಣನಾದ ನರಸಿಂಹವರ್ಮನ ಹೆಸರು ಅಷ್ಟರಲ್ಲೇ ಜಗಜ್ಜನಿತವಾಗಿತ್ತು. ರಾಜ ಹೆಮ್ಮೆಯಿಂದ ಹಿಗ್ಗಿಹೋಗಿದ್ದ. ತನ್ನ ಮನದಿಚ್ಛೆಯಂತೆ ಕೆಲಸ ನಿರ್ವಹಿಸುತ್ತಿದ್ದ ಶಿಲ್ಪಿಯನ್ನು ಹೊಗಳುತ್ತಿದ್ದ.

ಮಂದಿರದ ಕೆಲಸವೆಲ್ಲಾ ಮುಗಿದಿತ್ತು, ಇನ್ನುಳಿದುದು ಕೊನೆಯದಾದ ಕಲಶದ ಕೆತ್ತನೆಯೊಂದೇ ಅದಕ್ಕೆ ಸರಿಯಾಗಿ ರಾಜ ವಿಧಿಸಿದ ಅವಧಿಯಲ್ಲಿ ಉಳಿದುದೂ ಬರೇ ಎಂಟುದಿನ ಮಾತ್ರ ಆದೇನು ಮಾಯೆ?- ಇಷ್ಟೆಲ್ಲವನ್ನು ನಿರ್ಮಿಸಿದ ಶಿಲ್ಪಿಗೆ ಅದೊಂದು ಕಠಿಣವಾಗದು. ಮೊದಲು ಹಾಗೆ ತೋರಿದರೂ, ಕೆಲಸಕ್ಕಿಳಿದಾಗ ಮಾತ್ರ ಶಿಲ್ಪಿ ತಳಮಳಿಸಿದ. ಒಂದೆಡೆ ಚೇಣನ್ನಿಟ್ಟು ಸುತ್ತಿಗೆಯಿಂದ ಬಡಿಯುವಷ್ಟರಲ್ಲಿ ಕಲಶದ ಉರುಟಾಕಾರ ಮುಕ್ಕಾಗುತ್ತಿತ್ತು ಆತ ಹಗಲಿನಲ್ಲಿ ಹಸಿದು ರಾತ್ರಿ ನಿದ್ದೆಬಿಟ್ಟು ಶ್ರಮಿಸಿದ, ಆದರೆ ಫಲಿತಾಂಶ ಬೇರಾಗಲೇ ಇಲ್ಲ. ಏಳುದಿನ ಕ್ಷಣದಂತೆ ಉರುಳಿತು. ಶಿಲ್ಪಿ ಚಿಂತಾಮಗ್ನನಾಗಿ ತಲೆಯ ಮೇಲೆ ಕೈ ಹೊತ್ತು ಕುಳಿತ ಹದಿನಾರು ವರುಷಗಳ ತನಕ ಊರುಬಿಟ್ಟು ಬಂದು ಅಲ್ಲಿ ನೆಲಸಿ, ಬೆವರಿಳಿಸಿ ಕಟ್ಟಿದ ದೇವಾಲಯದ ಕೆಲಸವನ್ನು ಪೂರ್ತಿಗೊಳಿಸಲಾರದೇ, ರಾಜಾಜ್ಞೆಗೆ ತಲೆವಾಗಿ ತಲೆದಂಡ ತೆರಬೇಕಾಯಿತೆಂದು ಆತ ಮರುಗಿದ. "ತಾನು ಹದಿನಾರು ವರುಷ ರಾಜನ ಉಪ್ಪಿಂದು ಬದುಕಿಯೂ, ಕರ್ತವ್ಯಪೂರ್ಣಗೊಳಿಸದೇ ಸಾಯಬೇಕಾಯಿತಲ್ಲಾ. ಇನ್ನೇನು—ನಾಳೆ ಬೆಳಗಾದೊಡನೆಯೇ ಕಲಶ ಪೂರ್ತಿಯಾಗದುದನ್ನು ನೋಡಿ, ರಾಜ ತಾನು ಹಿಂದೆ ಮಾಡಿದ ಆಜ್ಞೆಯಂತೆ ತನಗೆ ಮರಣದಂಡನೆಯನ್ನೀಯಲು ಭಟರಿಗಾಜ್ಞಾಪಿಸುವ—ನಾಳೆ ಬೆಳಕು ಹರಿಯುವಾಗಲೇ ನಾನೀ ಪ್ರಪಂಚದಿಂದ ಬಹುದೂರ ಹೋಗಿರುವೆ—ಇದು ಖಂಡಿತ"

ಶಿಲ್ಪಿ ಶಿವೇಯಿ ಕಡಲ ತೀರದ ಕಲ್ಲೊಂದರ ಮೇಲೆ ಕುಳಿತು ತಾನು ಮತ್ತು ತನ್ನ ಸಹಸ್ರಾರು ಸಹೋದ್ಯೋಗಿಗಳು ಬೆವರಿಳಿಸಿ, ಶಿಲೆಗಲ್ಲನ್ನು ಕಡಿದು ನಿರ್ಮಿಸಿದ್ದ ಮಂದಿರವನ್ನೇ ನಿರುಕಿಸುತ್ತ—ಚಿಂತಿಸುತ್ತಿದ್ದ. ಅಷ್ಟರಲ್ಲಿ ಹಿಂದಿನಿಂದ ಬಂದು ಯಾರೋ ಆತನ ಮೈ ಮುಟ್ಟಿದರು. ಬೆಚ್ಚಿಬಿದ್ದ ಶಿವೇಯಿ ಹಿಂತಿರುಗಿ ನೋಡಿದ—ಓರ್ವ ಹದಿನಾರು ವರುಷದ ಬಾಲಕ ಮುಗುಳು ನಗುತ್ತಾ ನಿಂತಿದ್ದ. ಶಿಲ್ಪಿ ಹಿಂತಿರುಗುತ್ತಲೇ ಬಾಲಕ ಆತನಿಗೆ ಸಾಷ್ಟಾಂಗ ಪ್ರಣಾಮ ಮಾಡಿ ನುಡಿದ- "ಸ್ವಾಮಿ ತಾವಾರೆಂದು ನನಗೆ ತಿಳಿದಿದೆ. ತಮ್ಮ ಶಿಲ್ಪಕಲೆಯ ಮಹಾತ್ಮೆಯನ್ನೂ ಕೇಳಿಬಲ್ಲೆ. ನೀವೀಗ ಯಾವ ಸಂಕಷ್ಟದಲ್ಲಿ ಬಿದ್ದಿರುವಿರೆಂಬುದೂ ನನಗೆ ಗೊತ್ತಿದೆ ಇಷ್ಟು ಚಿಕ್ಕ ವಿಷಯಕ್ಕಾಗಿ ಮಹಾನ್ ಶಿಲ್ಪಿಗಳಾದ ತಾವು ಹೀಗೆ ಚಿಂತಿಸುತ್ತಿರುವುದು ಆಶ್ಚರ್ಯ ನಿಮ್ಮ ಚಿಂತೆಗೆ ನಾನು ಪರಿಹಾರ ನೀಡಬಲ್ಲೆ. ಆದರೆ 'ನಾನು ಬಾಲಕ—ನನ್ನಿಂದೇನಾದೀತೆಂದು ಮಾತ್ರ ಭಾವಿಸಬೇಡಿ. ಬನ್ನಿ ಹೋಗೋಣ—ಮಂದಿರದತ್ತ"

ಬಾಲಕ, ಶಿವೇಯಿಯ ಕೈಹಿಡಿದು ಕರೆದೊಯ್ದ. ಆತ ಕನಸು ಕಾಣುತ್ತಿದ್ದವನಂತೆ, ಮಂತ್ರ ಮುಗ್ಧನಂತೆ ಅಲ್ಲಿಂದೆದ್ದು ಹುಡುಗನೊಡನೆ ಹೊರಟ. ಹುಡುಗ ಮಂದಿರ ಹೊಕ್ಕು ತನಗೆ ಬೇಕಾದ ಸಲಕರಣೆಗಳನ್ನೊದಗಿಸಿಕೊಂಡು ಅಗಾಧಕಲ್ಲೊಂದನ್ನು ಕೆತ್ತುವುದರಲ್ಲಿ ತಲ್ಲೀನನಾದ ರಾತ್ರಿಯ ಚಂದಿರನ ಬೆಳಕಿನಲ್ಲೂ ಕೆಲಸಸಾಗಿತು. ಬೆಳಕು ಹರಿಯುವ ಮುನ್ನ ಕಲಶ ಸರ್ವಾಂಗ ಸುಂದರವಾಗಿ ನಿರ್ಮಾಣವಾಗಿತ್ತು! ಶಿಲ್ಪಿಗೆ ಆಶ್ಚರ್ಯವಾಯಿತು—ಬರೇ ಹದಿನಾರು ವರುಷದ ಬಾಲಕ ಒಂದೇ ರಾತ್ರಿಯಲ್ಲಿ ಕಡೆದ ಆ ಕಲಶದಲ್ಲಿ ತನ್ನ ಶಿಲ್ಪಕಲಾಚತುರತೆಯನ್ನೂ ಮೀರಿಸುವ ಕಲೆಯಿತ್ತು. ತನ್ನ ಪ್ರಾಣವನ್ನುಳಿಸಿದನೆಂದು ಆ ಬಾಲಕನನ್ನಪ್ಪಿ ಮುದ್ದಾಡಿದ. ಆದರೆ ಬಾಲಕ ಕೂಡಲೇ ಶಿಲ್ಪಿಯನ್ನೆಚ್ಚರಿಸಿದ. 'ಬೆಳಗಾಗುವುದರೊಳಗೆ ಕಲಶ ಮಂದಿರದ ಗೋಪುರದ ಮೇಲಿರಬೇಕು' ಅಲ್ಲಿಗೆ ಮಂದಿರದ ಕೆಲಸ ಮುಕ್ತಾಯವಾದಂತೆ ಶಿವೇಯಿ ಕೂಡಲೇ ಆಳುಗಳನ್ನು ಕರೆಸಿ ರಾಟೆಯ ಮೂಲಕ ಆ ಕಲಶವನ್ನು ಗೋಪುರದ ಮೇಲಕ್ಕೇರಿಸಿದ. ಬೆಳಗಾದೊಡನೇ ಶಿವೇಯಿಯ ತಲೆ ದೇಹದಿಂದ ಬೇರ್ಪಟ್ಟು ರಾಜ್ಯದ ಕೀರ್ತಿಶಾಲಿ ಶಿಲ್ಪಿಯೊಬ್ಬನ ಪರ್ಯವಸಾನವಾಗುವುದೆಂದು ದುಃಖಿಸುತ್ತಿದ್ದ ಆತನ ಸಹೋದ್ಯೋಗಿಗಳೂ ಪ್ರಜೆಗಳೂ ಮಂದಿರ ಪೂರ್ತಿಯಾದುದನ್ನು ಕಂಡು ಆನಂದಬಾಷ್ಪ ಸುರಿಸಿದರು. ಇದಕ್ಕೆ ಕಾರಣವಾದ ಆ ಬಾಲಕನನ್ನು ಜನರು ಹಾಡಿ ಹೊಗಳಿದರು. ರಾಜ—ಯೋಗ್ಯ ಸಮ್ಮಾನವಿತ್ತು ಸತ್ಕರಿಸಿದ ತಾನು ಮೊದಲೇ ಘೋಷಿಸಿದಂತೆ ಶಿಲ್ಪಿಗೆ ಜಹಗೀರನ್ನೂ, ಧನವನ್ನೂ ಕೊಟ್ಟು ಕಳುಹಿದ

೦೦ ೦೦ ೦೦

ಶಿಲ್ಪಿ 'ಶಿವೇಯಿ ಸಾಂತರ' ಬಾಲಕನನ್ನು ತನ್ನೊಂದಿಗೆ ಕರೆದುಕೊಂಡು ತನ್ನ ಮನೆಯತ್ತ ಹೊರಟ. ಹದಿನಾರು ವರ್ಷಗಳಿಂದ ಒಮ್ಮೆಯೂ ಮನೆಯತ್ತ ನೋಡಿರಲಿಲ್ಲ. ಪತ್ನಿಯನ್ನು ಕಂಡಿರಲಿಲ್ಲ ಅವಳನ್ನು ನೋಡುವ ತವಕದಿಂದ ಹೊರಟ ಆತನಷ್ಟೇ ವೇಗವಾಗಿ ಆತನೊಟ್ಟಿಗಿದ್ದ ಬಾಲಕನೂ ಹೆಜ್ಜೆಯಿಡುತ್ತಿದ್ದ

ಕುಮಾರು ಅರ್ಧದಾರಿ ಸಾಗಿರಬಹುದು ಅವರಿಬ್ಬರೂ ಒಂದೇ ಒಂದು ಶಬ್ದವೆತ್ತದೇ ದಾರಿ ನಡೆಯುತ್ತಿದ್ದರು ಆ ಏಕಾಂತತೆಯಲ್ಲಿ ಶಿವೇಯಿ ಏನನ್ನೋ ಯೋಚಿಸುತ್ತಿದ್ದ. ಆ ಏಕಾಂತದ ಯೋಚನೆಯ ಫಲಿತಾಂಶವಾಗಿ ಒಂದರೆಕ್ಷಣ ಆತ ಕೀರ್ತಿಯ ಲೋಭಕ್ಕೆ ಬಲಿಯಾದ, ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಅಸಾಧಾರಣ ಶಿಲ್ಪ ನಿರ್ಮಿಸಿದ ಆ ಬಾಲಕನ ಭವಿಷ್ಯವನ್ನು ಆತ ನೆನೆದಾಗ ಒಂದು ವಿಲಕ್ಷಣ ಅಸೂಯೆ ಆತನನ್ನಾವರಿಸಿತು. ಒಂದೇ ಒಂದು ಕ್ಷಣ ಶಿಲ್ಪಿಯ ಸೊಂಟದಲ್ಲಿದ್ದ ಕತ್ತಿ ಬಾಲಕನ ಕೊರಳೇರಿಯಿತು! ಕತ್ತಿನಿಂದ ಚಿಮ್ಮಿದ ರಕ್ತದ ಸೆಲೆ ಶಿಲ್ಪಿಯನ್ನು ತೃಪ್ತಿಗೊಳಿಸಿತು ಆತ ಭರದಿಂದ ಮುನ್ನಡೆದ.

ಶಿವೇಯಿ ಮನೆಯಲ್ಲಿ ಕಾಲಿಡುತ್ತಿದ್ದಂತೆಯೇ, ಆತನ ಪತ್ನಿ ಸಂತೋಷದಿಂದ ಸ್ವಾಗತಿಸಿದಳು ಮತ್ತು ತನ್ನ ಗಂಡನ ಎಡಬಲ ನೋಡಿ ಕೇಳಿದಳು—

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—
1ರಿಂದ 4 ತಿಂಗಳ ವರೆಗೆ 4¼%
5 ,, 12 ,, 4½%
13 ,, 24 ,, 4¾%
ರೂ 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ 2½%
ಚಾಲ್ತಿ ಲೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1920

Approved by the Text Book Committee of Madras, for non-detailed study in higher Forms (vide Page 7, Fort St George Gazette, Part I—B dated 4—5. 1955)
ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ
ಬದುಕು ಬಂಗಾರ
(ಬರೆದವರು: ಕುಮಾರಸ್ವಾಮಿ)
ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.
ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.
ಪುಟಗಳು ೧೫೮ ಬೆಲೆ ರೂ. ೧ . ೨೫
ನವಭಾರತ ಪುಸ್ತಕ ಭಂಡಾರ, ಉಡುಪಿ.

ಶುದ್ಧ ಹರಟೆ

ಅಯ್ಯೋ ಪಾಪ! ನಾಲ್ಕೂ ಹೆಣ್ಣೇ?

ರಾಮಣ್ಣನವರು ಗಂಡು ಬಯಸಿದರು, ಅವರಿಗೆ ಹೆಣ್ಣೇ ಜನಿಸಿತು; ಇದಕ್ಕೆ ಯಾರು ಹೊಣೆ?

"ನಿಮಗೆಷ್ಟು ಮಕ್ಕಳಯ್ಯಾ?" ಎಂದು ರಾಮಣ್ಣನವರನ್ನು ಯಾರಾದರೂ ಕೇಳಿದರೆ, ಅವರನ್ನು ಆಗಲೇ ನುಂಗಿ ಬಿಡಬೇಕೆನ್ನುವಷ್ಟು ಸಿಟ್ಟು—ರಾಮಣ್ಣನ ಹೊಟ್ಟೆಯಲ್ಲಿ ಹುಟ್ಟಿ ತಳಮಳಗೊಂಡು ಅಲ್ಲೇ ಮೃತ್ಯುವನ್ನಪ್ಪುತಿತ್ತು. ಹೀಗೆ ಯಾರಾದರೂ ಕೇಳಿದರೆ, ತನ್ನನ್ನು ಅಣಕಿಸಲೆಂದೇ ಈ ಪ್ರಶ್ನೆ ಊರವರ ನಾಲಗೆಯಲ್ಲಿ ತಾಂಡವವಾಡುತ್ತಿರಬೇಕೆಂದು ಅವರು ತಮ್ಮ ಸ್ವಂತ ಅನುಭವದಿಂದ ತಿಳಿದುಕೊಂಡಿದ್ದರು. ಪಾಪ!—ಯಾವ ವಿಷಘಳಿಗೆಯಲ್ಲಿ ಅವರು ಮದುವೆಯ ಕಾಲ ವರದಕ್ಷಿಣೆಗೆ ಕೈಕೊಟ್ಟದ್ದರೋ? ಗೊತ್ತಿಲ್ಲ! ಇದೀಗ ಈ ನಾಲ್ಕು ಮರಿದೇವತೆಗಳನ್ನು ಮೀಸೆ ಹೊತ್ತ ಗಂಡು ಮಕ್ಕಳ ಎದೆಯ ಮೇಲೆ ಹೊತ್ತು ಹಾಕಬೇಕಿದ್ದರೆ ರಾಮಣ್ಣನವರು ಪಡೆದ ವರದಕ್ಷಿಣೆಯ ಹತ್ತು ಪಾಲನ್ನು ಕೊಡಲು—ಯುದ್ಧಕ್ಕೆ ತಯಾರಾಗಿರುವ ಸೋಲ್ಜರನಂತೆ ಸಿದ್ಧನಾಗಿರಬೇಕಾಗಿತ್ತು—ತಾನು ಪಡೆದ ವರದಕ್ಷಿಣೆಯ ಋಣ ಪರಿಹಾರಕ್ಕಾಗಿಯೇ ಈ ಹೆಮ್ಮಕ್ಕಳು ತನ್ನ ಹೆಂಡತಿಯ ಗರ್ಭದಿಂದ ಹೊರ ಬಂದವೋ? ಎಂಬ ಅರಿವು ರಾಮಣ್ಣನ ಮಂದ ಬುದ್ಧಿಯ ಚುರುಕುತಲೆಗೆ ಒಮ್ಮೊಮ್ಮೆ ಹೊಳೆಯದೆ ಇರುತ್ತಿರಲಿಲ್ಲ! ಅಲ್ಲಾ, ಅವರೂ ನಾಲ್ಕು ಮಂದಿ ಹೆಮ್ಮಕ್ಕಳಿಗೆ ಜನ್ಮವಿತ್ತ ವಿಧಾತರಲ್ಲವೇ? ಪಾಪ! ರಾಮಣ್ಣನವರ ಈ ಪರಿಯ ದುಃಖವನ್ನು ಕಂಡು ಮರುಗದ ಮನುಷ್ಯರ ಹೊಟ್ಟೆಯಲ್ಲಿ ಕರುಳೇ ಇಲ್ಲವೆಂದರೆ ಹೆಚ್ಚಾದೀತೇ? ಅಂಥವರ ಹೃದಯವನ್ನು ಪೂರಾ ಗೆದ್ದಲು ಹಿಡಿದಿರಬೇಕೆಂದೇ ಕಲ್ಪಿಸಿಕೊಂಡರೆ ತಪ್ಪಾದೀತೇ?

ಹುಟ್ಟಿಸಿದ ಪುಣ್ಯಕಾರ್ಯದಲ್ಲಿ ಸಮಭಾಗ—ಅಲ್ಲ ಎಲ್ಲಾ ಪಾಲೂ ಅವರದೇ ಆಗಿತ್ತು. ಆದರೂ ನಾಲ್ಕು ಬಾರಿಯೂ ಹೆಣ್ಣನ್ನೇ ಹೆತ್ತ ಅವರ ಪತ್ನಿ ಲಕ್ಷ್ಮಿಯನ್ನು "ಮಹಾ ಪಾಪಿಷ್ಠೆ ನೀನು ಒಂದಾದರೂ ಗಂಡು ಹೆರುವ ಭಾಗ್ಯ ನಿನ್ನ ಹೊಟ್ಟೆಗಿದೆಯೇ?" ಎಂದು ಸಂಸಾರದ ತಾಪತ್ರಯ ಹೆಚ್ಚಾದಾಗ ತಾತ್ಸಾರವಾಗಿ ನುಡಿದಿದ್ದರು. ಮದುವೆಯಾಗುವ ಮೊದಲು ಹೆಣ್ಣುಜಾತಿಯನ್ನು ಕಂಡಾಗ ರಾಮಣ್ಣನ ಮನಸ್ಸು ಮರಬಿಟ್ಟ ಮಂಗನ ಅವತಾರವನ್ನು ತಾಳುತಿತ್ತು. ಅವರ ನಿಷ್ಕಲ್ಮಶವಾದ ಹೃದಯವು ಹೆಣ್ಣಿನ ಬಗ್ಗೆ ಸದಾ ಕಾಲವೂ ಆದರಾಭಿಮಾನದ ಸ್ವಾಗತವನ್ನು ಬಯಸುತಿತ್ತು. ದಾರಿ ನಡೆವಾಗ ಹೆಮ್ಮಕ್ಕಳ ನೆರಳು ಕಣ್ಣಿಗೆ ಎದುರಾಗಿ ಸೋಂಕಿದರೆ ಸರಿ!—ಹುಬ್ಬು ಹಾರಿಸಿ ಕಣ್ಣು ಮಿಟಕಿಸಿ ತೆರೆದ ರೆಪ್ಪೆಯನ್ನು ಮುಚ್ಚದೆ ನೋಡುವ ಭರದಲ್ಲಿ ಕಾಲು ಜಾರಿ—ಕಲ್ಲು ಎಡವಿ ಬಿದ್ದು ಆ ಮೇಲೆ ನಿಧಾನವಾಗಿ ಎದ್ದು ಬಾಯಿ ಚಪ್ಪರಿಸುತ್ತಿದ್ದರು. ಇಂಥಾ ಸಂದರ್ಭದಲ್ಲಿ ಒಮ್ಮೊಮ್ಮೆ ಅವರು ತೆರೆದಿಟ್ಟ ಬಾಯಿ ಮುಚ್ಚುವುದರೊಳಗೆ ನೂರಾರು ನೊಣಗಳು ಅವರ ಹೊಟ್ಟೆಯೊಳಗೆ ಅಪ್ಪಣೆವಿನಹ ಪ್ರವೇಶಮಾಡಿದ್ದುಂಟು? ಆಗ ತನ್ನ ಹುಚ್ಚು ಮನಸ್ಸು ತರುಣಿಯರನ್ನು ಕಂಡು ಎಷ್ಟು ಮೆಚ್ಚುತಿತ್ತೋ? ಈಗ ತನಗೆ ಹುಟ್ಟಿದ ಹೆಮ್ಮಕ್ಕಳನ್ನು ನೋಡಿ ಅವರು ಅಷ್ಟೇ ತುಚ್ಛೀಕರಿಸುತ್ತಿದ್ದರು!

ಮದುವೆಯ ಮೊದಲಲ್ಲಿ ತನಗೆಷ್ಟು ಮಕ್ಕಳು ಬೇಕು?—ಎಷ್ಟು ಹುಟ್ಟಿದರೆ ಸಾಕು? ಎಂಬುವನ್ನು ಚೆನ್ನಾಗಿ ಯೋಚಿಸಿ ಒಂದು ನಿರ್ಧಾರಕ್ಕೆ ಬಂದಿದ್ದರು.

"ಒಂದು ಗಂಡು, ಒಂದು ಹೆಣ್ಣು, ಇಷ್ಟೇ ಸಾಕು ಅಲ್ಲವೇ ಲಕ್ಷ್ಮಿ?" ಎಂದು ತಮ್ಮ ಏಕಾಂತವಾಸದಲ್ಲಿ ಹೇಳಿದಾಗ ಲಕ್ಷ್ಮಮ್ಮ ಹೆಣ್ಣು ಸಹಜವಾದ ನಾಚಿಕೆಯಿಂದ ತಲೆ ಬಾಗಿ—

"ಅವೆಲ್ಲಾ ನಿಮ್ಮಿಚ್ಛೆಯೇ!.." ಎಂದು ಮುಖ ತಿರುಗಿಸಿದ್ದಳು.

"ಹುಂ! ಏನಂದೆ? ನಿಮ್ಮಿಚ್ಛೆಯಲ್ಲದೆ ಮತ್ತೇನು? ಅದಕ್ಕೆಲ್ಲಾ ನಾನು ಎಂದೋ ಬಜೆಟ್ ತಯಾರಿಸಿಟ್ಟಿದ್ದೇನೆ. ಮಕ್ಕಳು ಹೆಚ್ಚಾದರೆ ತಾಪತ್ರಯವೂ ಹೆಚ್ಚು. ನಮಗೆ ಎರಡೇ ಸಾಕು. ಬಾಡುಕಿದರ ಅವೇ ನಮಗೆ ಹೂರಲಾರದ ಸುಖವನ್ನು ಕೊಡಲಾರವೇ?" ಎಂದು ಹೆಣ್ಣಿನ ಮೊದಲ ಸಂಪರ್ಕದಲ್ಲಿ ಭಾವಜೀವಿಯಾಗಿದ್ದು ಎಲ್ಲವೂ ತನ್ನಿಚ್ಛೆಯಂತೆ ನೆರವೇರುವುದೆಂಬ ಧೈರ್ಯದಿಂದ ಮಾತಾಡಿದ್ದರು. ಆದರೆ ಇಂದಿಗೆ ಒಂದಲ್ಲ—ಎರಡಲ್ಲ—ಮೂರಲ್ಲ! ನಾಲ್ಕು ಮಕ್ಕಳಿಗೆ ಜನ್ಮಕೊಡುವ ಸಾಹಸದಲ್ಲಿ ಹಿಂದಿನ ತನ್ನ ನಿರ್ಧಾರವನ್ನು ಮರೆತುಬಿಡಬೇಕಾಯ್ತು!

ಹಲವು ಬಾರಿ ತನ್ನ ಪತಿಯನ್ನು ಅಣಕಿಸಲೆಂದೇ ಲಕ್ಷ್ಮಮ್ಮ ಹಿಂದಿನ ಮಾತನ್ನೆತ್ತಿ ಮೆಲುಕಾಡುತ್ತಿದ್ದಳು.

"ಎರಡೇ ಮಕ್ಕಳು ಸಾಕೆಂದು ನಿರ್ಧಾರವಾಗಿ ನುಡಿದವರು-ಈಗ ಹೊರಗೆ ಸುಖವಾಗಿ ಮಲಗ್ಕೊಳ್ಳೀ ಅಂದ್ರೆ ಬುಸುಗುಟ್ಟುತ್ತಿರಲ್ಲ?" ಎಂದು ನಗೆಯಾಡುತ್ತಿದ್ದರು.

ರಾಮಣ್ಣನವರು—ಎರಡೇ ಸಾಕೆಂದು ಲೆಕ್ಕ ಹಾಕಿದ್ದೇನೋ ನಿಜ. ಅವರೆಣಿಸಿದಂತೆ ಒಂದು ಗಂಡು ಒಂದು ಹೆಣ್ಣು ಹುಟ್ಟಿದ್ದರೆ ಹೇಗಾದರೂ ದಂಬುಕಟ್ಟಿ ಮುಂದಿನ ಕಾರ್ಯಕ್ಕೆ ಬ್ರೇಕ್ ಹಾಕುತ್ತಿದ್ದರೋ ಏನೊ? ಆದರೆ ಅವರ ಇಚ್ಛೆಗೆ ವಿರುದ್ಧವಾಗಿ ಮೊದಲು ಹುಟ್ಟಿದ್ದೇ ಹೆಣ್ಣು ಎಂದು ತಿಳಿದಾಗ ಅವರು ಭಲದಂಕಮಲ್ಲರಾದರು—ಹಟ ಇನ್ನೂ ಹೆಚ್ಚಾಯಿತು. ಹಾಗಾಗಿ ಇನ್ನೊಂದಾದರೂ ಗಂಡು ಹುಟ್ಟುವುದೋ ನೋಡೋಣವೆಂಬ ಆಸೆ ಅವರಲ್ಲಿ ಬಲವಾಗಿ ಬೇರೂರಿತು. ಇಲ್ಲ!—ಲಕ್ಷ್ಮಮ್ಮ ಎರಡನೇ ಬಾರಿಯೂ ಹೆಣ್ಣೇ ಹೆತ್ತರು, ಎಂಬ ಸುದ್ದಿಯ ಪತ್ರವನ್ನು ಓದಿದಾಗ, ಅವರು ವಿಶ್ವಾಮಿತ್ರನಿಗಿಂತಲೂ ಒಂದು ಬಣ್ಣ ಹೆಚ್ಚಾದ ವೈರಾಗ್ಯವನ್ನೂ ತಾಳಿದರು. ಒಮ್ಮೆಗೆ ಎಲ್ಲವನ್ನೂ ಬಿಟ್ಟು ಸನ್ಯಾಸಿಯಾಗಿ ಊರಹತ್ತಿರದ ಕಾಡನ್ನು ಸುತ್ತಿ ಬರೋಣವೆಂಬ ಮನಸ್ಸೂ ಅವರಿಗಾಯಿತು. ಆದರೂ ಕೊನೆಗೊಂದು ತೀರ್ಮಾನಕ್ಕೆ ಬಂದು—ಇನ್ನೊಂದು ಛಾನ್ಸ್ ನೋಡಿಬಿಡೋಣವೆಂದು ಸುಮ್ಮನಾದರು. ಎರಡು ಹೆಣ್ಣಾದರೇನು? ಮೂರನೆಯದಾದರೂ ಗಂಡಾಗಿ ಹುಟ್ಟಬಾರದೇಕೆ? ಇನ್ನೊಂದು ಬಾರಿ ಯತ್ನಿಸಿ ನೋಡೋಣವೆಂದು ಕರ್ತವ್ಯಶೀಲರಾದ ರಾಮಣ್ಣನವರು ಒಂದು ನಿರ್ಧಾರಕ್ಕೆ ಬಂದರು. ಈ ನಿರ್ಧಾರಕ್ಕೆ ಸರಿಯಾಗಿ ಹೆಂಡತಿಯ ಹೆರಿಗೆಯಾಗಿ ತಿಂಗಳೊಂದು ಪೂರಾ ಮುಗಿಯುವತನಕ ದಿನ ಲೆಕ್ಕಮಾಡುತ್ತಾ ಇದ್ದು ಮರದಿನವೇ ತವರುಮನೆಯಿಂದ ಲಕ್ಷ್ಮಮ್ಮನನ್ನು ಕರೆಸಿಕೊಂಡು ಕಾರ್ಯನಿರತರಾದರು.

ಅಲ್ಲಾ— ದೇವರಿಗೂ ರಾಮಣ್ಣನ ಮೇಲೆ ಏನು ಹಗೆಯೋ? ಏನೊ? ರಾಮಣ್ಣನಂತೆ ದೇವರೂ ಹಟವಾದಿ. ಇಲ್ಲವಾದರೆ ಏಕನಿಷ್ಠೆಯಿಂದ ಇಷ್ಟು ಪ್ರಯತ್ನಿಸುವಾಗ ಒಂದು ಗಂಡುಮಗುವನ್ನಾದರೂ ಕೊಡುವ ಉದಾರತೆ ಅವನಿಗೂ ಬರಬೇಡವೇ?

ರಾಮಣ್ಣನೂ ಜಟ್ಟಿ', ದೇವನಾಗಲೀ ದಿಂಡನಾಗಲೀ ಯಾರೊಬ್ಬರ ಸಹಾಯದಿಂದ ತನಗೆ ಗಂಡು ಹುಟ್ಟುವುದೇ ಬೇಡ; ತನ್ನಿಂದಾಗಿಯೇ ಒಂದು ಗಂಡು ಕೂಸಿಗೆ ಜನ್ಮಕೊಡಲು ಯಾಕಾಗಲಾರದು ನೋಡೋಣ. ಎಸೆದ ಹತ್ತು ಕಲ್ಲಿನಲ್ಲಿ ಒಂದೂ ಗುರಿಮುಟ್ಟದೇಕೆ? ಎಂದು ಅವರ ತರ್ಕ. ದೇವರು ದಿಂಡರಿಗೆ ಹರಕೆ, ಹಣ್ಣುಕಾಯಿ-ಯೊಪ್ಪಿಸಿ ಮಗು ಹುಟ್ಟಬೇಕೆಂದು ಬೇಡಿಕೊಂಡರೆ ತನ್ನ ಪುರುಷತ್ವದ ಗೌರವಕ್ಕೆ ದೊಡ್ಡ ಕೊರತೆಯೆಂದೇ ಅವರ ತೀರ್ಮಾನ. ಹಾಗಾಗಿ ಈ ವಿಚಾರದಲ್ಲಿ ದೇವರಿಗೆ ಮೊರೆಯಿಡುವ ಗೋಜಿಗೆ ಅವರು ಹೋಗಲಿಲ್ಲ!

ಈ ಹಟಸಾಧನೆಯಲ್ಲಿರುವಾಗಲೇ ಅವರ ಎರಡನೇ ಹೆಣ್ಣುಕೂಸಿಗೆ ತಿಂಗಳು ಆರು ತುಂಬುವುದರೊಳಗೆ ಲಕ್ಷ್ಮಮ್ಮನ ಗರ್ಭಕ್ಕೆ ಮೂರುತಿಂಗಳಾಯ್ತು!

ಇನ್ನೇನು ಕೆಲವೇ ತಿಂಗಳಲ್ಲಿ ಗಂಡುಮಗುವಿನ ತಂದೆಯಾಗುವೆನೆಂಬ ನಿಶ್ಚಯದಿಂದ ಮನಸ್ಸಿನಲ್ಲೇ ಮಂಡಿಗೆ ತಿನ್ನುತ್ತಾ ಆಸೆಯ ಉಗುಳನ್ನು ನುಂಗಿಕೊಂಡರು.

ದಿನಕಳೆದು—ತಿಂಗಳು ಮುಗಿದು—ಲಕ್ಷ್ಮಮ್ಮ ತವರುಮನೆ ಸೇರಿಯೂ ಆಯ್ತು!

ರಾಯರಿಗೆ ಹೆತ್ತ ಸುದ್ದಿಯನ್ನು ಕೇಳುವ ತವಕದಲ್ಲಿ ಅನ್ನವೂ ಸರಿಯಾಗಿ ಸೇರುತ್ತಿರಲಿಲ್ಲ. ಅವರ ಉಬ್ಬಿದ ಹೊಟ್ಟೆ ಕೆಲವೇ ದಿನಗಳಲ್ಲಿ ಚಟ್ಟೆಯಾಗಿಹೋಯಿತು!

ಎರಡಕ್ಕೆ ಮೂರು!. ಎಂಬುದು ಸಂಪ್ರದಾಯವಷ್ಟ! ಹಾಗೆಯೇ ಲಕ್ಷ್ಮಮ್ಮ ಮೂರನೇ ಹೆಣ್ಣು ಶಿಶುವಿಗೆ ಜನ್ಮವಿತ್ತು ಹೊತ್ತ ಭಾರವನ್ನು ಇಳಿಸಿ, 'ಸಾಕಪ್ಪಾ! ಪುಣ್ಯಾತ್ಮನ ಉಪಕಾರ—" ವೆಂದು ಪ್ರಸೂತಿ ವೈರಾಗ್ಯದಿಂದ ಗೊಣಗುಟ್ಟಿದರು. ಈ ಬಾರಿಯೂ ಹೆಣ್ಣೆ! ಎಂಬುದನ್ನು ಕೇಳಿದ ರಾಮಣ್ಣನ ಮೂಗು ಒಂದು ಘಳಿಗೆ ತಟಸ್ಥವಾಯಿತು! ಉಸಿರು ಕಟ್ಟಿದಂತಾಯ್ತು! ಮಾತ ಶಬ್ದಶಬ್ದಕ್ಕೂ ಎಡವಿಬೀಳುತಿತ್ತು!

ಅರೆ!—ಇದೇಕೆ ಹೀಗಾಯ್ತು?— ಏನೋ ತನ್ನ ಲೆಕ್ಕಾಚಾರದಲ್ಲಿ ಹೆಚ್ಚುಕಡಿಮೆಯಾಗಿರಬೇಕು. ಎಂದೆಣಿಸಿಕೊಂಡು ಸಮಾಧಾನವಾಗಿ ಯೋಚಿಸಿದರು.

'ಎರಡಕ್ಕೆ ಮೂರು ಆಗಿಯೇ ತೀರುತ್ತೆ ಎಂಬೊಂದು ಮೋಷ ಹೇಗೂ ಹೋದ ಹಾಗಾಯ್ತು. ಇನ್ನಾವ ಅಡೆತಡೆಗಳಿಗೂ ಎಡೆಯಿಲ್ಲ. ನಾಲ್ಕನೆಯದು ಖಂಡಿತ ಗಂಡೇ ಹುಟ್ಟುತ್ತೆ. ಇದನ್ನು ಅತಿ ಸುಲಭವೆಂದು ಬಿಡಬಾರದು. ಶಾಸ್ತ್ರ, ವಿಧಿ, ನಿಯಮಗಳಿಂದ ನಾಲ್ಕನೆಯ ಗಂಡು ಮಗುವಿಗಾಗಿ ತಾನೊಂದು ಯೋಜನೆಯನ್ನೇ ಸಿ

(೧೦ನೇ ಪುಟ ನೋಡಿರಿ)

ಸ್ಥಾಪನೆ 1906] ಪ್ರಧಾನ ಕಚೇರಿ ಉಡುಪಿ (ದ ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1953ರಂದು)

ತೆತ್ತ ಬಂಡವಾಳ	—	ರೂ	20,00,000/-
ಕ್ಷೇಮನಿಧಿ	—	ರೂ	14,40,000/-
ಠೇವಣಾತಿಗಳು	—	ರೂ	7,19,35 000/-
ಸಾಲಗಳು	—	ರೂ	3 95,40,000/
ಒಟ್ಟು ಚಲಾವಣಾ ಬಂಡವಾಳ	—	ರೂ	9,18,94,000/

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ

The Canara Banking Corporation Ltd.

Estd - 1906] [H O UDIPI (S India)

ಮದುವೆಗಳು ಜರಗತಕ್ಕ ಸಮಯವು ಸಮೀಪಿಸಿದೆ,

'ಮದುವೆ ಸೀರೆ'

ಇದೀಗ ಪ್ರಕಟವಾಗಿದೆ!

ಜೀವನದ ಚೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ

ಬೆಲೆ ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಪ್ಪಿನ ಕಥೆ

ನಮ್ಮೆಲ್ಲರಿಗೂ ಬೇಕಾದ ಉಪ್ಪು

ಅದರ ಬಗ್ಗೆ ಕೈಗೊಂಡ ವಿವಿಧ ಸಂಶೋಧನೆ ಮತ್ತು ಫಲಶ್ರುತಿ

ಉಪ್ಪು ಮಾನವ ಕೋಟಿಗೆ ಅತ್ಯಗತ್ಯವಾದ ವಸ್ತುವಾಗಿದೆ. ಈ ಕಾರಣದಿಂದಾಗಿ ಮಾನವನ ಸಾಮಾಜಿಕ ಜೀವನ ಹಾಗೂ ಸಾರ್ವಜನಿಕ ಕಟ್ಟಳೆಗಳಲ್ಲಿ ಉಪ್ಪು ಬಹು ಮುಖ್ಯ ಸಂಬಂಧ ಪಡೆದಿರುತ್ತದೆ. ಇತಿಹಾಸದಲ್ಲಿ, ಉಪ್ಪು ವಿಪ್ಲವಗಳಿಗೆ ಕಾರಣವಾಗಿದೆ, ವಾಣಿಜ್ಯ ಕ್ಷೇತ್ರದಲ್ಲಿ ಉಪ್ಪು ನಾಣ್ಯವನ್ನಾಗಿ ಬಳಸಲಾಗಿದೆ. ರೋಂ ನಗರದಲ್ಲಿ ಸೈನಿಕರಿಗೆ ಅವರ ವೇತನಗಳನ್ನು ಉಪ್ಪಿನ ರೂಪದಲ್ಲಿ ಪಾವತಿ ಮಾಡಲಾಗುತ್ತಿತ್ತು. 'ಸ್ಯಾಲರಿ' (ವೇತನ) ಎಂಬ ಪದದ ಉತ್ಪತ್ತಿ ರೋಮ ನಗರದ ಭಾಷೆಯಲ್ಲಿ 'ಸ್ಯಾಲರಿಯಂ' ಎಂಬ ಶಬ್ದದಿಂದ ಬಂದಿರುತ್ತದೆ. 'ಸ್ಯಾಲರಿಯಂ" ಎಂದರೆ 'ಉಪ್ಪು-ಹಣ" ಎಂದು ಅರ್ಥ.

ಆಧುನಿಕ ಕಾಲದಲ್ಲಿ ಉಪ್ಪನ್ನು ಅನೇಕ ವಿಧವಾಗಿ ಬಳಸಲಾಗುತ್ತಿದೆ. ಇದು ಕೈಗಾರಿಕೆಗಳಲ್ಲಿ ಮೂಲಕಚ್ಚಾ ವಸ್ತುವಾಗಿ ಉಪಯೋಗವಾಗುತ್ತದೆ. ಉಪ್ಪನ್ನು ಸೋಡಿಯಂ ಕ್ಲೋರೈಡ್ ಎಂದು ರಸಾಯನ ಶಾಸ್ತ್ರಜ್ಞರು ಕರೆಯುತ್ತಾರೆ. ವಿಶ್ವದಲ್ಲಿ ಉತ್ಪಾದನೆಯಾಗುವ ಉಪ್ಪಿನಲ್ಲಿ ಅಧಿಕ ಪ್ರಮಾಣವು ಕೈಗಾರಿಕೆಗಳಲ್ಲಿಯೇ ಉಪಯೋಗವಾಗುತ್ತಿದೆ, ಸೋಡಿಯಂ ಕಾರ್ಬೋನೇಟ್, ಕಾಸ್ಟಿಕ್ ಸೋಡಾ (ಸೋಡಿಯಂ ಹೈಡ್ರಾಕ್ಸೈಡ್) ಕ್ಲೋರೀನ್, ಹೈಡ್ರೋಕ್ಲೋರಿಕ್ ಆಮ್ಲ ಮತ್ತು ಸೋಡಿಯಂ ಸಲ್ಫೇಟ್‌ಗಳಂತಹ ಭಾರಿ ರಾಸಾಯನಿಕ ವಸ್ತುಗಳ ತಯಾರಿಕೆಯಲ್ಲಿ ಉಪ್ಪಿನ ಉಪಯೋಗವಿದ್ದೇ ಇದೆ. ಅಲ್ಲದೆ ಸಾಬೂನು, ಎಣ್ಣೆ, ವರ್ಣ ವಸ್ತುಗಳು, ಚರ್ಮ, ವಸ್ತ್ರಗಳು, ಕಾಗದ, ಗಾಜು, ಕುಂಭಕಲಾ ವಸ್ತುಗಳು, ಲೋಹ ವಿಜ್ಞಾನ, ಮತ್ತು ಶೀತಕ ಯಂತ್ರಗಳ ಉದ್ಯಮಗಳಲ್ಲಿ ಉಪ್ಪನ್ನು ಹೇರಳ ಪ್ರಮಾಣದಲ್ಲಿ ಉಪಯೋಗಿಸಲಾಗುತ್ತಿದೆ. ೬೨ ಮುಖ್ಯ ಕೈಗಾರಿಕೆಗಳಲ್ಲಿ ಪರಿಶುದ್ಧವಾದ ಉಪ್ಪಿನ ಆಗತ್ಯವಿದೆ.

ಕೈಗಾರಿಕೆಯಲ್ಲಿ ಉಪ್ಪಿನ ಆಗತ್ಯತೆ ಅತಿ ಹೆಚ್ಚಾಗಿರುವುದರಿಂದ, ಅದರ ಉತ್ಪಾದನೆ ಮತ್ತು ಬಳಕೆಯನ್ನು ಗಂಧಕಾಮ್ಲ ಮತ್ತು ಉಕ್ಕಿನೊಂದಿಗೆ ರಾಷ್ಟ್ರದ ಉನ್ನತಿಯ ಸೂಚಿಯನ್ನಾಗಿ ಪರಿಗಣಿಸಲಾಗುತ್ತಿದೆ. ೧೯೫೩ರಲ್ಲಿ ಭಾರತದಲ್ಲಿ ತಲಾ ಒಬ್ಬೊಬ್ಬ ವ್ಯಕ್ತಿ ೧೪ ರಾತಲುಗಳಷ್ಟು ಉಪ್ಪನ್ನು ಸೇವಿಸಿದ್ದಾನೆ. ಆದರೆ ಇಡೀ ಜಗತ್ತಿನಲ್ಲಿ ತಲಾ ಒಬ್ಬೊಬ್ಬ ವ್ಯಕ್ತಿ ಸುಮಾರು ೪೦ ರಾತಲುಗಳ ಉಪ್ಪನ್ನು ಸೇವಿಸಿರುವನು. ಅದೇ ವರ್ಷ ವಿಶ್ವದಲ್ಲಿ ಒಟ್ಟು ೫೬೦ ಲಕ್ಷ ಟನ್ನುಗಳಷ್ಟು ಉಪ್ಪಿನ ಉತ್ಪಾದನೆಯಾಗಿದೆ. ಆಗ ಭಾರತದಲ್ಲಿ ೩೧ ಲಕ್ಷ ಟನ್ನುಗಳಷ್ಟು ಉಪ್ಪಿನ ಉತ್ಪಾದನೆಯಾಗಿತ್ತು.

ಹಿಂದೆ ಅಧಿಕಾರಿ ವರ್ಗದವರು ಉಪ್ಪಿನ ಉದ್ಯಮವನ್ನು ಆದಾಯದ ಮುಖ್ಯ ಮೂಲಬಾಬನ್ನಾಗಿ ಪರಿಗಣಿಸಿದ್ದರು. ಸುಂಕ ವಸೂಲಿಯ ಬಗ್ಗೆ ನಿಯಮಗಳು ಕಟ್ಟುನಿಟ್ಟಾಗಿ ಆಚರಣೆಗೆ ತರಲಾಗುತ್ತಿತ್ತೇ ವಿನಹ ಉತ್ಪಾದನೆಯಾದ ಉಪ್ಪಿನ ಗುಣಾಂಶದ ಕಡೆ ಹೆಚ್ಚು ಗಮನ ಹರಿಸಿರಲಿಲ್ಲ. ಅಲ್ಲದೆ ಉತ್ಪಾದನೆಯಾದ ಉಪ್ಪಿನ ಪ್ರಮಾಣವು ನಮ್ಮ ಆಗತ್ಯತೆಗಳಿಗೆ ಸಾಲದಾಗಿತ್ತು.

ಈ ಕಾರಣದಿಂದಾಗಿ ನಮಗೆ ಆಗತ್ಯವಾದ ಉಪ್ಪನ್ನು ಪ್ರತಿ ವರ್ಷವೂ ಹೊರದೇಶಗಳಿಂದ ಆಯಾತ ಮಾಡಿಕೊಳ್ಳುವುದು ಅನಿವಾರ್ಯವಾಯಿತು. ೧೯೫೦ರ ವರೆಗೆ ಪ್ರತಿ ವರ್ಷವೂ ಕೆಲವು ಲಕ್ಷ ಟನ್ನುಗಳಷ್ಟು ಉಪ್ಪನ್ನು ಆಯಾತ ಮಾಡಿಕೊಳ್ಳಲಾಗುತ್ತಿತ್ತು.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ತರುಣದಲ್ಲಿಯೇ ಸರ್ಕಾರದವರು ಉಪ್ಪಿನ ಉದ್ಯಮದ ಬಗ್ಗೆ ಹೊಂದಿದ್ದ ತಮ್ಮ ನಿಲುವನ್ನು ಬದಲಾಯಿಸಿದರು. ಅನತಿ ಕಾಲದಲ್ಲಿಯೇ ಭಾರತದ ಉಪ್ಪಿನ ಉದ್ಯಮವು ತನಗೆ ಸಲ್ಲಬೇಕಾದ ಯೋಗ್ಯ ಸ್ಥಾನಮಾನಗಳನ್ನು ಪಡೆದುಕೊಂಡಿತು.

ಉಪ್ಪು ಮತ್ತು ಅದರ ಉಪ ಉತ್ಪನ್ನಗಳು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವ ಬಗ್ಗೆ ಸಂಶೋಧನೆ ನಡೆಸುವುದು ಆಗತ್ಯವೆಂದು ಕಂಡುಬಂದಿತು. ಈ ಆಗತ್ಯತೆಯನ್ನು ಪೂರೈಸುವುದಕ್ಕಾಗಿ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತಿನವರು ೧೯೫೪ರ ಏಪ್ರಿಲ್‌ನಲ್ಲಿ ಭಾವನಗರದಲ್ಲಿ ಕೇಂದ್ರ ಲವಣ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿದರು.

ಈ ಸಂಸ್ಥೆಯು ಮನೆಗಳಲ್ಲಿ ಹಾಗೂ ಕೈಗಾರಿಕೆಗಳಲ್ಲಿ ಬಳಸುವ ಉಪ್ಪಿನ ಗುಣಾಂಶದ ಬಗ್ಗೆ ಪ್ರತಿಮಾನಗಳನ್ನು ವಿಧಿಸುವುದು, ಉಪ್ಪು ಮತ್ತು ಅದರ ಉಪ ಉತ್ಪನ್ನಗಳ ಗುಣಾಂಶಗಳ ನಿರ್ಧಾರ ಸಂಬಂಧವಾದ ಪರೀಕ್ಷೆಗಳನ್ನು ಸುಧಾರಿಸುವುದು, ವಿವಿಧ ಉಪ ಉತ್ಪನ್ನಗಳನ್ನು ವಾಣಿಜ್ಯ ಪ್ರಮಾಣದಲ್ಲಿ ಉಪಯೋಗಿಸುವ ಸಾಧ್ಯತೆಗಳನ್ನು ಪರಿಶೀಲಿಸುವುದು ಈ ಮುಂತಾದವುಗಳ ಬಗ್ಗೆ ಸಂಶೋಧನಾ ಕಾರ್ಯ ನಡೆಸಿದೆ.

ಭಾರತದಲ್ಲಿ ನೂರಕ್ಕೆ ೭೦ರಷ್ಟು ಪ್ರಮಾಣದ ಉಪ್ಪನ್ನು ಸಮುದ್ರದಿಂದ ಪಡೆಯಲಾಗುತ್ತಿದೆ. ಉಪ್ಪನ್ನು ಪಡೆದ ನಂತರ ಉಪಯೋಗಾರ್ಹವಲ್ಲವೆಂದು ತ್ಯಜಿಸುವ ಮೂಲದ್ರವದಲ್ಲಿ ಮೆಗ್ನೇಸಿಯಂ ಮತ್ತು ಪೊಟಾಸಿಯಂ ಕ್ಷಾರಗಳಿರುವುವು. ಈ ಮೂಲದ್ರವದಲ್ಲಿ ಮಾತ್ರ ಬ್ರೋಮಿನ್ ದೊರೆಯುತ್ತದೆ.

ಕೇಂದ್ರ ಕ್ಷಾರ ಸಂಶೋಧನಾ ಸಂಸ್ಥೆಯಲ್ಲಿ ನಡೆಸಿದ ಪರಿಶೀಲನೆಗಳ ಫಲಸ್ವರೂಪವಾಗಿ ಪೊಟಾಸಿಯಂ ಕ್ಲೋರೈಡ್, ಮೆಗ್ನೀಸಿಯಂ ಸಲ್ಫೇಟ್, ಮೆಗ್ನೀಸಿಯಂ ಕ್ಲೋರೈಡ್ ಮತ್ತು ಬ್ರೋಮಿನ್‌ಗಳನ್ನು ಪಡೆದುಕೊಳ್ಳಲು ಸುಲಭ ವಿಧಾನಗಳನ್ನು ರೂಪಿಸಲು ಸಾಧ್ಯವಾಗಿದೆ.

ದೇಶದಲ್ಲಿ ಉತ್ಪಾದನೆಯಾಗುವ ಒಟ್ಟು ಉಪ್ಪಿನ ಪ್ರಮಾಣದಲ್ಲಿ ನೂರಕ್ಕೆ ಸುಮಾರು ೩೦ರಷ್ಟನ್ನು ರಾಜಸ್ಥಾನದ ಸಾಂಭರ್‌ನಲ್ಲಿರುವ ಪ್ರಾಚೀನ ಸರೋವರದಿಂದ ಪಡೆಯಲಾಗುತ್ತಿದೆ. ಉಪ್ಪಿನ ಹರಳನ್ನು ತೆಗೆದ ನಂತರ ನಿಲ್ಲುವ ದ್ರವದಲ್ಲಿ ಎರಡು ಅಮೂಲ್ಯ ರಾಸಾಯನಿಕ ವಸ್ತುಗಳಾದ ಸೋಡಿಯಂ ಸಲ್ಫೇಟ್ ಮತ್ತು ಸೋಡಿಯಂ ಕಾರ್ಬೋನೇಟ್ ಇವು ದೊರೆಯುತ್ತವೆ. ಸಾಂಭರ್‌ನಲ್ಲಿ ಈ ದ್ರವದಿಂದ ಈ ಎರಡು ರಾಸಾಯನಿಕ ವಸ್ತುಗಳನ್ನು ಪಡೆಯುವುದು ಕಷ್ಟಸಾಧ್ಯವಾಗಿ ಪರಿಣಮಿಸಿದೆ. ಈ ಬಗ್ಗೆ ಭಾರತ ಸರ್ಕಾರದವರು ನಾನಾ ತಜ್ಞರು ಮತ್ತು ಸಮಿತಿಗಳೊಂದಿಗೆ ಸಮಾಲೋಚನೆ ನಡೆಸಿದ್ದಾರೆ. ಸಂಶೋಧನಾ ಸಂಸ್ಥೆಯಲ್ಲಿರುವ ವಿಜ್ಞಾನಿಗಳು ಈ ತೊಂದರೆಗಳನ್ನು ನಿವಾರಿಸಿ ಈ ಎರಡು ರಾಸಾಯನಿಕ ವಸ್ತುಗಳನ್ನು ಪಡೆಯುವ ಬಗ್ಗೆ ಸೂಕ್ತವಾದ ವಿಧಾನವೊಂದನ್ನು ಕಂಡುಹಿಡಿದಿದ್ದಾರೆ.

ಉಪ್ಪಿನ ಮಾದರಿಗಳನ್ನು ವಿಶ್ಲೇಷಣೆ ನಡೆಸುವ ಸುಲಭ ವಿಧಾನವೊಂದನ್ನು ಸಂಸ್ಥೆಯಲ್ಲಿ ರೂಪಿಸಲಾಗಿದೆ.

ಈ ಮಾರುಕಟ್ಟೆಯಲ್ಲಿ ದೊರೆಯುವ ಊಟಕ್ಕೆ ಉಪಯೋಗಿಸುವ ಉಪ್ಪು ಉತ್ಕೃಷ್ಟವಾದುದಲ್ಲ. ಸಂಶೋಧನಾ ಸಂಸ್ಥೆಯಲ್ಲಿ ತಯಾರಿಸಿರುವ ಉಪ್ಪು ಮೃದುವಾಗಿರುವುದಲ್ಲದೆ ಗೋಲಾಕೃತಿಯಲ್ಲಿರುವುದು.

ಈ ಉಪ್ಪು ತೇವದ ಬೆಸೆಯಿಂದಾಗಿ ಕರಗಿ ನಷ್ಟವಾಗುವುದಿಲ್ಲ. ಮೆಗ್ನಸಿಯಂ ಸಂಯುಕ್ತ ವಸ್ತುಗಳು ಕೈಗಾರಿಕೆಯಲ್ಲಿ ನಾನಾ ರೀತಿಯಲ್ಲಿ ಉಪಯೋಗವಾಗುತ್ತಿವೆ. ಈ ಸಂಶೋಧನಾ ಸಂಸ್ಥೆಯಲ್ಲಿ ನಡೆಸಿರುವ ವಿಚಾರಣೆಗಳ ಫಲಸ್ವರೂಪವಾಗಿ (೧) ಮರದ ಹೊಟ್ಟು, ಮರಳು, ಮರಳುಗಲ್ಲು, ಕಲ್ನಾರಿನ ಪುಡಿ ಮತ್ತು ವರ್ಣ ವಸ್ತುಗಳು ಇವುಗಳನ್ನು ಮಿಶ್ರಮಾಡಿದ ಸಿಮೆಂಟ್ ಹೆಂಚುಗಳು ಮತ್ತು (೨) ಔಷಧ ವಸ್ತುಗಳು, ರಬ್ಬರ್, ಕಾಗದ ಮತ್ತಿತರ ಕೈಗಾರಿಕೆಗಳಿಗೆ ಆಗತ್ಯವಾದ ಉತ್ಕೃಷ್ಟ ದರ್ಜೆಯ ಮೆಗ್ನಿಸಿಯಂ ಕಾರ್ಬೋನೇಟ್ ಇವುಗಳ ತಯಾರಿಕೆಯ ವಿಧಾನಗಳನ್ನು ರೂಪಿಸಲು ಸಾಧ್ಯವಾಗಿದೆ.

ಈ ಸಂಸ್ಥೆಯಲ್ಲಿ ನಡೆಸಿರುವ ಸಂಶೋಧನೆಗಳ ಫಲಿತಾಂಶವಾಗಿ ಮನುಷ್ಯರು ಮತ್ತು ಪಶುಪ್ರಾಣಿಗಳ ಪೋಷಣೆಗೆ ಆಗತ್ಯವಾಗುವ ಪರಿಶುದ್ಧವಾದ ಉಪ್ಪನ್ನು ತಯಾರಿಸುವ ವಿಧಾನವನ್ನು ರೂಪಿಸಲು ಸಾಧ್ಯವಾಗಿದೆ.

ಈ ಸಂಸ್ಥೆಯ ಸಂಶೋಧನಾ ಕಾರ್ಯಕ್ರಮವನ್ನು ತಯಾರಕರು ಮತ್ತು ಗ್ರಾಹಕರೊಂದಿಗೆ ಸಮಾಲೋಚನೆ ನಡೆಸಿ ರೂಪಿಸಲಾಗುತ್ತಿದೆ. ಉಪ್ಪಿನ ಉದ್ಯಮದ ಉಜ್ವಲ ಭವಿತವ್ಯದಲ್ಲಿ ಈ ಸಂಸ್ಥೆ ಮಹತ್ವಪೂರ್ಣ ಪಾತ್ರ ವಹಿಸಲಿದೆ. ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ಉಪ್ಪಿನ ಉದ್ಯಮವು ತನ್ನದೇ ಆದ ಒಂದು ವಿಶಿಷ್ಟ ಸ್ಥಾನಗಳಿಸಲು ಈ ಸಂಶೋಧನಾ ಸಂಸ್ಥೆ ಮಾರ್ಗದರ್ಶಕವಾಗಿ ಅಸಾಧಾರಣ ಕಾರ್ಯ ನಿರ್ವಹಿಸುತ್ತಿದೆ.

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ ನೋಡಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾದಾ ಪ್ರತಿ 1:50. ಉತ್ತಮ ಪ್ರತಿ 2:0.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತವೆ.

ನವಜಾಗೃತಿ

ಸ್ವಾಯತ್ತಾಧಿಕಾರ ಪಡೆದ ಉತ್ತರ ನೈಜೀರಿಯಾ

ಬ್ರಿಟಿಷ ವಸಾಹತುವಾದ ಕೊನೆಗೊಳ್ಳುತ್ತ ಬರುತ್ತಿರುವುದು ಸಂತೋಷವಲ್ಲವೆ?

ಏಶ್ಯಾ ಮತ್ತು ಆಫ್ರಿಕಾ ಖಂಡಗಳ ಬೇರೆ ಬೇರೆ ದೇಶಗಳು ಪಾಶ್ಚಾತ್ಯರ ಆಕ್ರಮಣಕ್ಕೆ ಈಡಾಗಿ, ಇಲ್ಲಿ ವಿಪರೀತ ಶೋಷಣೆ ನಡೆದಿದೆಯಾದರೂ, ಎಲ್ಲಾ ಸಮಯ ಏಕರೀತಿಯಾಗಿರದೆಂಬಂತೆ, ಈಗ ಈ ಪರಿಸ್ಥಿತಿಯು ಪರಿವರ್ತನೆಗೊಳ್ಳುತ್ತ ನಡೆದಿದೆ. ಏಶ್ಯಾದಲ್ಲಿ ಈಗಾಗಲೇ ನವಯುಗ ದಿನೇಶನು ಪ್ರಕಾಶ ಬೀರತೊಡಗಿರುವನು. ಅಲ್ಲದೇ ಆಫ್ರಿಕದಲ್ಲೂ ದಿನೇ ದಿನೇ ಜನಜಾಗೃತಿಯಾಗುತ್ತಿದೆ. ಇದರ ಫಲವಾಗಿಯೇ ಅನ್ಯರ ದಾಸ್ಯದಲ್ಲಿ ಕೊಳೆಯುತ್ತಿರುವ ಆಫ್ರಿಕನ್ ದೇಶಗಳು ಸ್ವಾತಂತ್ರ್ಯದೆಡೆಗೆ ಧಾವಿಸುತ್ತಿವೆ. ಘಾನಾದ ಸ್ವಾತಂತ್ರ್ಯವು ಈ ವಿಷಯ ಸಮರ್ಥನೆಗೆ ಉಲ್ಲೇಖನೀಯ ಪ್ರಮಾಣವಾಗಿದೆ.

ಆಫ್ರಿಕದ ಪಶ್ಚಿಮದಲ್ಲಿ ನೈಜೀರಿಯಾ ಎಂಬ ವಿಶಾಲವಾದ ದೇಶವಿದೆ. ಆಂಗ್ಲೇಯರ ಈಗಿರುವ ವಸಾಹತುಗಳಲ್ಲಿ ಇದು ಅತಿವಿಸ್ತಾರವಾದುದು. ಸದ್ಯ ಈ ನೈಜೇರಿಯಾವು ದಕ್ಷಿಣ, ಪೂರ್ವ ಮತ್ತು ಉತ್ತರವೆಂಬ ಮೂರು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ.

ದಕ್ಷಿಣ ನೈಜೀರಿಯಾ

ಈ ಭಾಗದಲ್ಲಿ ಇಲೋರಿನ್, ಕಬ್ಬಾ, ನಾಯಿಜ್ ಮತ್ತು ಬೇನೂ ಎಂಬ ಮುಖ್ಯ ಪ್ರದೇಶಗಳು ಸೇರಿಕೊಂಡಿವೆ. ಇಲ್ಲಿ ಅರಣ್ಯಗಳು ವಿಪರೀತವಿರುವ ಕಾರಣ ಮೋಪು ಧಾರಾಳವಾಗಿ ದೊರೆಯುತ್ತದೆ. ಈ ಪ್ರದೇಶದ ಜನಸಂಖ್ಯೆ ೬೬ ಲಕ್ಷವೆಂದು ಹೇಳಲಾಗುತ್ತದೆ. ವಿಸ್ತೀರ್ಣವು ೧೯,೫೪೧ ಚದರ ಮೈಲುಗಳು. ಇಬಾಡಾನ್ ಎಂಬುದು ಈ ವಿಭಾಗದ ರಾಜಧಾನಿ. ಕಾಡು ಪ್ರದೇಶದಲ್ಲಿ ಜನರು ನೆಲಸಿ, ಕಾಡುತ್ಪತ್ತಿಗಳನ್ನು ಪಡೆಯುತ್ತಾರೆ.

ಪೂರ್ವ ಭಾಗ

ಈ ಭಾಗದ ಜನಸಂಖ್ಯೆ ೭೮ ಲಕ್ಷವಿದ್ದು ಕ್ಷೇತ್ರ ಫಲವು ೨೯,೪೪೪ ವರ್ಗ ಮೈಲುಗಳಾಗಿವೆ. ಇದು ವಿಶಾಲವಾಗಿರುವುದಾದರೂ ಜನವಾಸಕ್ಕೆ ಸಾಕಷ್ಟು ಅನುಕೂಲತೆಗಳು ದೊರೆಯುವುದಿಲ್ಲವಾದುದರಿಂದ ಜನಸಂಖ್ಯೆಯು ಕಡಿಮೆಯಾಗಿದೆ. ಈ ವಿಭಾಗದ ರಾಜಧಾನಿ ಇನ್ಯಗ್ ಆಗಿರುತ್ತದೆ.

ಉತ್ತರ ನೈಜೀರಿಯಾ

ನೈಜೀರಿಯಾದ ಉತ್ತರ ಭಾಗವು ಅತ್ಯಂತ ವೈವಿಧ್ಯ ಪೂರ್ಣವಾಗಿದೆ. ಗ್ರೀಷ್ಮ ಋತುವಿನ ಕಾಲದಲ್ಲಿ ಈ ಪ್ರದೇಶವು ಸಾಮಾನ್ಯವಾಗಿ ಮರುಭೂಮಿಯಂತೆ ದೃಗ್ಗೋಚರವಾಗುತ್ತದೆ. ಆದರೆ, ವರ್ಷಾಕಾಲದಲ್ಲಿ ಅಧಿಕಾಂಶ ಭೂಮಿಯು ನೀರಿನಿಂದ ತುಂಬಿ ಹೋಗಿ ನೆರೆಯಲ್ಲಿ ಮುಳುಗಿಕೊಂಡಿರುತ್ತವೆ. ಈ ಸಂದರ್ಭದಲ್ಲಿ ರೈತರು ಅಲ್ಪ ಸ್ವಲ್ಪ ಕೃಷಿಯನ್ನು ಮಾಡುತ್ತಾರೆ. ಇಲ್ಲಿ ಪಶುಗಳು ಹೇರಳವಾಗಿವೆ. ಸುಮಾರು ೫೦ ಲಕ್ಷ ದನ, ಕುರಿ, ಆಡುಗಳು ಈ ಕ್ಷೇತ್ರದಲ್ಲಿ ತಿರುಗಾಡುತ್ತಿರುತ್ತವೆ. ಇದರಿಂದಾಗಿಯೇ ಇಲ್ಲಿಂದ ವಿದೇಶಗಳಿಗೆ ಬೇಕಷ್ಟು ಚರ್ಮವು ನಿರ್ಯಾತಗೊಳಿಸಲ್ಪಡುತ್ತದೆ. ಮೊರಕ್ಕೊವಿನ ಪ್ರಸಿದ್ಧ ಚರ್ಮವಾದರೂ ಉತ್ತರ ನೈಜೀರಿಯಾದ ಪಶುಗಳ ಚರ್ಮದಿಂದಲೇ ಸಿದ್ಧವಾಗುತ್ತದೆ.

ನೈಜೀರಿಯಾದ ಹೃದಯ

ನಿಜವಾಗಿಯೂ ನೈಜೀರಿಯಾದ ಈ ಉತ್ತರ ಭಾಗವುಮುಖ್ಯಭಾಗವಾಗಿದೆ—ಏಕೆಂದರೆ,ಅದರ ಹೃದಯವಾಗಿದೆ, ಇಡಿ ನೈಜೀರಿಯಾದ ಮುಕ್ಕಾಲು ಪಾಲು ಭೂಮಿ ಈ ಪ್ರದೇಶದಲ್ಲಿ ಅಡಕವಾಗಿದೆ. ನೈಜೀರಿಯಾವು ೩,೭೩ ಸಾವಿರ ವರ್ಗಮೈಲುಗಳಷ್ಟು ವಿಸ್ತಾರವಾಗಿದ್ದರೆ, ಕೇವಲ ಉತ್ತರ ನೈಜೀರಿಯಾವೇ ೨೮೧ ಸಾವಿರ ವರ್ಗಮೈಲು ವಿಶಾಲವಿದೆ. ಇಷ್ಟೇ ಅಲ್ಲ ನೈಜೀರಿಯಾದ ಒಟ್ಟು ಜನಸಂಖ್ಯೆ ೩೪೦ ಲಕ್ಷವಿದ್ದರೆ, ಇದರಲ್ಲಿ ೧೭೦ ಲಕ್ಷ ಜನರು ಇಲ್ಲಿಯೇ ಇರುತ್ತಾರೆ. ಈ ಪ್ರದೇಶಕ್ಕೆ ಇದುವರೆಗೂ ಸ್ವಾಯತ್ತತೆಯು ಕನಸಿನ ಮಾತೇ ಆಗಿತ್ತು.

ಸ್ವಾತಂತ್ರ್ಯ ಸಂಗ್ರಾಮ

ನೈಜೀರಿಯಾವು ಮೂರು ಭಾಗಗಳಾಗಿ ವಿಂಗಡಿತವಾಗಿದ್ದರೂ, ನೈಜೀರಿಯಾದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಕ್ಕೆ ಆಂಗ್ಲ ಶಾಸಕರು ಉಳಿದೆಡೆಗಳಂತೆಯೇ ತಲೆತಗ್ಗಿಸಬೇಕಾಯಿತು. ನೈಜೀರಿಯಕ್ಕೆ ಅದರ ಎಲ್ಲ ಭಾಗಗಳೂ ಒಂದು ಸೇರಿರುವಂತಹ ಫೆಡರಲ್ ಪದ್ಧತಿಯ ರಾಜ್ಯವು ಸ್ಥಾಪಿತವಾಯಿತು. ಆದರೆ, ಪಶ್ಚಿಮ ಮತ್ತು ಪೂರ್ವ ನೈಜೀರಿಯಾಗಳಿಗೆ ಆಂಗ್ಲೇಯರು ೧೯೫೭ರಲ್ಲಿ ಸ್ವಾಯತ್ತ ಆಡಳಿತೆಯನ್ನು ದಯಪಾಲಿಸಿದ್ದರು. ಈ ರಾಜ್ಯಗಳ ವಿಧಾನನಿರ್ಮಾಣಕರ್ತರ ಪರಿಷತ್ತು ೧೯೫೮ರಲ್ಲಿ ಲಂಡನ್ ನಗರದಲ್ಲಿ ಸೇರಿದಾಗ, ಉತ್ತರ ನೈಜೀರಿಯಾವು ಸ್ವಾಯತ್ತ ಶಾಸನದ ಬೇಡಿಕೆಯನ್ನು ಮುಂದಿಟ್ಟಿತು. ಆಗ, ೧೯೫೯ರಲ್ಲಿ ಇದರ ಬೇಡಿಕೆಯನ್ನು ಪೂರ್ಣಮಾಡುವುದೆಂದು ಒಪ್ಪಿಕೊಳ್ಳಲಾಗಿತ್ತು.

ಸ್ವಾಯತ್ತ ಅಧಿಕಾರ

ಬಹಳಷ್ಟು ದೀರ್ಘಕಾಲದ ಹೋರಾಟದ ಪರಿಣಾಮವಾಗಿ ತನ್ನ ಇತರ ಭಾಗಗಳಂತೆಯೇ ಈಗ ಉತ್ತರ ನೈಜೀರಿಯಕ್ಕೂ ಸ್ವಾತಂತ್ರ್ಯದ ವಾತಾವರಣದಲ್ಲಿ ಉಸಿರಾಡುವ ಅವಕಾಶ ಬಂದೊದಗಿದೆ. ಆಂಗ್ಲೇಯರು ಇದಕ್ಕೆ ಮಾರ್ಚ ೧೫ರಂದು ಸ್ವಾಯತ್ತಾಧಿಕಾರವನ್ನು ಕೊಟ್ಟಿದ್ದರೂ, ಅದರ ಸಮಾರೋಹವು ಮಾತ್ರ ಎರಡು ತಿಂಗಳ ನಂತರ, ಇತ್ತೀಚೆಗೆ ನಡೆಯಿತು. ನೈಜೀರಿಯಾದ ಬಹು ಸಂಖ್ಯೆಯ ಜನರು ಇಸ್ಲಾಮ ಧರ್ಮಾನುಯಾಯಿಗಳಾದುದರಿಂದ ಆ ಸಮಯವು ಅವರೆಲ್ಲರಿಗೂ ರಂಜಾನ್ ಉಪವಾಸದ ದಿನಗಳಾಗಿದ್ದುದರಿಂದ ಸಮಾರೋಹವನ್ನು ಸ್ಥಗಿತಗೊಳಿಸಲಾಗಿತ್ತು.

ಪಾರಸ್ಪರಿಕ ಸದ್ಭಾವನೆಗಳಿಗೆ ನೈಜೀರಿಯಾದ ಈ ಸ್ವಾಯತ್ತ ಶಾಸನ ಸಮಾರೋಹಕ್ಕೆ ಇಂಗ್ಲೆಂಡಿನ ಮಹಾರಾಣಿ ಎಲಿಜಬೆಥರ ಪ್ರತಿನಿಧಿಯಾಗಿ ಗ್ಲಾಸೆಸ್ಟರ್‌ನ ಡ್ಯೂಕರು ಸಪತ್ನೀಕರಾಗಿ ಉತ್ತರ ನೈಜೀರಿಯಾದ ರಾಜಧಾನಿ ಕಡೂನಾಕ್ಕೆ ಆಗಮಿಸಿದರು. ಬ್ರಿಟಿಷ ಸರಕಾರದ ಘೋಷಣೆಯಂತೆ, ಈ ದಂಪತಿಗಳು ಇಲ್ಲಿ ಹತ್ತು ದಿನಗಳ ಕಾಲ ಉಳಿದರು.

ಕೊಲಂಬೊ ಯೋಜನೆಯಂತೆ ಬ್ರಿಟನ್ನಿನಲ್ಲಿ ತರಬೇತಿ ಪಡೆಯುವ ಭಾರತದ ವಿದ್ಯಾರ್ಥಿ

ಸ್ವತಂತ್ರ ವಾತಾವರಣ

ಹೀಗೆ ಉತ್ತರ ನೈಜೀರಿಯಾಕ್ಕೆ ಸ್ವಾಸ್ವಾಯತ್ತಾಧಿಕಾರವು ದೊರೆತುದುದರಿಂದ ನೈಜೀರಿಯಾದ ಎಲ್ಲ ಭಾಗಗಳೂ ಸ್ವತಂತ್ರ ವಾಯುವಿನಲ್ಲಿ ಸಂಚರಿಸುವಂತಾಯಿತು. ಸ್ವತಂತ್ರ ಸರಕಾರ ಸ್ಥಾಪನೆಯ ಮೊದಲ ಹಂತ ಪೂರ್ಣವಾದಂತಾಯಿತು. ಇನ್ನು ಸಂಪೂರ್ಣ ಸ್ವಾತಂತ್ರ್ಯ ಮಾತ್ರ ದೊರೆಯುವುದು ಉಳಿದಿದೆ. ಪಂಚಶೀಲಗಳಲ್ಲಿ ಆಸ್ಥೆಯನ್ನು ಇಟ್ಟಿರುವ ಭಾರತವು ವಸಾಹತುವಾದದ ಕಟ್ಟಾ ವಿರೋಧಿಯಾಗಿರುವುದರಿಂದ ನೈಜೀರಿಯಾದ ಇಂದಿನ ಸ್ಥಿತಿಯಿಂದಾಗಿ ಪ್ರಸನ್ನಗೊಂಡಿದೆ. ಅಲ್ಲದೆ ಇದಕ್ಕೆ ಸಂಪೂರ್ಣ ಸ್ವಾತಂತ್ರ್ಯ ಶೀಘ್ರವೇ ಲಭಿಸಲೆಂದು ಹಾರೈಸುತ್ತದೆ. ೧೯೬೦ನೆ ಅಕ್ಟೋಬರ ೧ರಂದು ಈ ಸ್ವಾತಂತ್ರ್ಯವನ್ನೂ ನೀಡಲು ಆಂಗ್ಲ ಸರಕಾರ ನಿರ್ಧರಿಸಿದೆ. ಆ ದಿನ, ಬ್ರಿಟಿಷ ಮಹಾರಾಣಿಯವರ ತಂಗಿ ರಾಜಕುಮಾರಿ ಮಾರ್ಗರೆಟರು ನೈಜೀರಿಯಾಕ್ಕೆ ತೆರಳಿ, ನೈಜೀರಿಯಾದ ಸ್ವಾತಂತ್ರ್ಯವನ್ನು ಘೋಷಿಸಿ, ಅಧಿಕಾರವನ್ನು ಹಸ್ತಾಂತರಗೊಳಿಸಲಿರುವರು.

ಶುಭಕಾಮನೆ

ನೈಜೀರಿಯವು ಸ್ವಾತಂತ್ರ್ಯ ಗಳಿಸಿದ ಕೆಲವೇ ಸಮಯದಲ್ಲಿ ಅದು ಸ್ವತಂತ್ರ ದೇಶದ ಪ್ರಗತಿಯಲ್ಲಿ ಮಹತ್ವಪೂರ್ಣಹೆಜ್ಜೆಯನ್ನು ಇಡುವುದೆಂದು ಆಶಿಸಬಹುದು. ಅಲ್ಲದೇ ನೈಜೀರಿಯಾದ ಸ್ವಾತಂತ್ರ್ಯದೊಡನೆ ಬ್ರಿಟಿಷ ವಸಾಹತುವಾದದ ವಿರುದ್ಧ ಏಳುವ ಕೂಗಿಗೂ ಒಂದು ಮಿತಿ ತಲೆದೋರುವುದು. ಭಾರತೀಯರು ನೈಜೀರಿಯಾನಗೆ ಇನ್ನೂ ಸಮೀಪ ಬರುವರು, ಎರಡೂ ದೇಶಗಳ ಸಾಂಸ್ಕೃತಿಕ ಮತ್ತು ಆರ್ಥಿಕ ಸಂಬಂಧವು ಮತ್ತಷ್ಟು ದೃಢವಾಗುವುದು ಎಂದು ಆಶಿಸಿದರೆ, ಅದರಲ್ಲಿ ತಪ್ಪಿಲ್ಲ.

—ಗೋರಾ.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

JUST PUBLISHED!
A NEW BOOK WITHIN THE REACH OF EVERYBODY
"LETTER WRITING MADE EASY"
(75 EVERY DAY LETTERS)
Written by An Experienced Teacher.
Useful to one and all, the teacher, the student and the layman.
Price: Rs. 1=25. (Postage extra)
If Rs. 1=50 is sent by M. O. one copy will be sent by Bookpost.
Copies can be had from the ublishers:
Navayuga Enterprise Ltd.
Navayuga Press,
Udipi.
and also from:
M/s Indian Industrials & Agencies, Mangalore-1.
M/s Navabharat Book Depot, Udipi.

ಮಕ್ಕಳ ಮಗ್ಗಿ ಪುಸ್ತಕ
(ನಯೇ ಪೈಸೆ ಕೋಷ್ಟಕ ಸಹಿತ)
ಬೆಲೆ ೧ಕ್ಕೆ 0 1 0
ನವಯುಗ ಪ್ರೆಸ್, ಉಡುಪಿ.

ಮದಿರಾಲಯದ ಸಾಹುಕಾರ ಉತ್ಕೃಷ್ಟವಾದ ಹಸುವಿನ ಹಾಲನ್ನು ಪಾತ್ರೆಯಲ್ಲಿ ತುಂಬಿಕೊಂಡು ದಾರಿನಡೆಯುತಿದ್ದರೂ, ಆತನು ಮದಿರೆಯನ್ನೇ ಹೊತ್ತುಕೊಳ್ಳುತ್ತಿರುವನೆಂದು ಜನರು ಹೇಳುತ್ತಾರೆ; ಏಕೆಂದರೆ ಅವನೊಡನೆ ಹಾಲಿರುವುದಕ್ಕಿಂತ ಮದಿರೆ ಇರುವ ಸಂಭವವೇ ಹೆಚ್ಚಲ್ಲವೆ?

NAVAYUGA

Founder:—

A. B. SHETTY,

Former Minister for Public Health

Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೧೧-೬-'೫೯	೨೪

ಅಸಹಕಾರ ಆಂದೋಲನ

ಕೇರಳದ ಕೆಂಪು ಸರಕಾರದ ನಾನಾ ಕೃತಿಗಳು ಪ್ರಜಾಪ್ರಭುತ್ವವನ್ನು ಅಲಗಿನ ಬಾಯಿಗೆ ತುತ್ತಾಗಿಸಿ, ಯಾವುದೇ ವಿಧಾನದಿಂದ ತಮ್ಮ ಪಕ್ಷದ ಹಿತವನ್ನು ಕಾಪಾಡಿಕೊಳ್ಳಲು ಹೇಸಲಾರದು ಎಂಬುದನ್ನು ಇತ್ತೀಚಿಗಿನ ಅಲ್ಲಿನ ವಿದ್ಯಮಾನಗಳು ಸಾರಿಹೇಳುತ್ತಿವೆ. ಕಮ್ಯುನಿಸ್ಟರು ಇಲ್ಲಿ ಅಧಿಕಾರ ಸ್ವೀಕರಿಸುವ ವೇಳೆ ತಾವು ಪ್ರಜಾಪ್ರಭುತ್ವವನ್ನು ಮನ್ನಿಸಿ ಅದರಂತೆಯೇ ನಡೆಯುವೆವೆಂದು ಹೇಳಿದ್ದರೂ ಅವರ ಆ ವಿಶ್ವಾಸ ಪ್ರದರ್ಶನವು ಕೇವಲ ತೋರಿಕೆಗೆ ಮಾತ್ರವಾಗಿದ್ದು, ಕಾರ್ಯತಃ ಅವೆಲ್ಲವನ್ನೂ ಹತ್ತಿಕ್ಕಿ ತಮ್ಮ ಪಕ್ಷವನ್ನು ಬಲಪಡಿಸುವ ಕಾರ್ಯಕ್ರಮಗಳೇ ಅಲ್ಲಿ ಒಳಗೂ ಹೊರಗೂ ನಡೆಯುತ್ತಿವೆ ಎಂದು ಈ ಎರಡು ವರ್ಷಗಳಿಂದ ಅನುಭವಕ್ಕೆ ಬರುತ್ತದೆ. ಇದರಿಂದಾಗಿ ಪ್ರಜಾಪ್ರಭುತ್ವಪ್ರೇಮಿಗಳು ವಿವಂಚನೆಗೆ ಈಡಾಗುವುದೂ, ಈ ಕಾರಣದಿಂದ ಅಲ್ಲಿ ಕಮ್ಯುನಿಸ್ಟ ಸರಕಾರದ ವಿರುದ್ಧ ಅಸಹಕಾರ ಆಂದೋಲನ ನಡೆಸುವುದೂ ಸ್ವಾಭಾವಿಕವೇ ಆಗಿದೆ ಎನ್ನಬೇಕು.

ಕೇವಲ ನೂರಕ್ಕೆ ಮೂವತ್ತೈದರಷ್ಟು ಮತಗಳನ್ನು ಸಾರ್ವತ್ರಿಕ ಚುನಾವಣೆಯಲ್ಲಿ ಪಡೆದು, ಮೂರು ಸ್ಥಾನಗಳ ಬಹುಮತವನ್ನು ಗಳಿಸಿದ ಕಮ್ಯುನಿಸ್ಟರು ಕೇರಳೀಯರಿಗೆ ವಿಧವಿಧದ ಆಶೆ ಆಕಾಂಕ್ಷೆಗಳನ್ನು ತೋರಿಸಿ ಅಧಿಕಾರದ ಗದ್ದುಗೆಯನ್ನೇರಿದ್ದರು. ಆ ಮೊದಲು ಸರಕಾರ ಸ್ಥಾಪಿಸಿದ್ದ ಕಾಂಗ್ರೆಸ್ ಮತ್ತು ಪ್ರ. ಸ. ವಾ. ಪಕ್ಷಗಳು ಕಮ್ಯುನಿಸ್ಟರೆನ್ನುವಂತೆ, ಜನಹಿತವನ್ನು ಮಾಡದೇ ಹೋಗಿರಬಹುದಾದರೂ, ಇದೀಗ ಕೇರಳದ ಲೋಕತಂತ್ರಪ್ರಿಯರು ಕಮ್ಯುನಿಸ್ಟರಿಗಿಂತ ಅವೇ ವಾಸಿ ಎಂಬಲ್ಲಿವರೆಗೆ ಬಂದುಮುಟ್ಟಿದ್ದಾರೆ ಎಂದರೆ, ಕಮ್ಯುನಿಸ್ಟ ಸರಕಾರ ಜನಹಿತವನ್ನು ಎಷ್ಟರಮಟ್ಟಿಗೆ ಸಾಧಿಸಿದೆ ಅಥವಾ ಸಾಧಿಸಿಲ್ಲ ಎಂಬುದು ಅಭಿವ್ಯಕ್ತವಾಗುವುದು. ಕಮ್ಯುನಿಸ್ಟ ಸರಕಾರ ರಾಜ್ಯದ ಜನತೆಯನ್ನು ತನ್ನ ಬಲೆಗೆ ಬೀಳಿಸುವ ಶತಪ್ರಯತ್ನ ನಡೆಸುತ್ತಿದೆ; ಪ್ರಜಾಪ್ರಭುತ್ವವನ್ನು ಹತ್ತಿಕ್ಕಿ ರಶ್ಯದಿಂದ ಎರವಲು ತಂದ ಧೋರಣೆ ಹಾಗೂ ಆಡಳಿತ ವಿಧಾನಗಳಿಂದ ಜನತೆಯ ಮೇಲೆ ಒತ್ತಾಯವನ್ನು ಹೇರಲು ಬಯಸುತ್ತಿದೆ ಎಂಬುದಕ್ಕೆ ಇತ್ತೀಚಿಗಿನ ನಿದರ್ಶನಗಳೇ ಪರ್ಯಾಪ್ತವಿವೆ. ಹೀಗಾಗಿ ರಾಜ್ಯವನ್ನು ವಿದೇಶೀಯ ಪ್ರೇರಿತ ಪಕ್ಷದ ನಿಲುವೆಯತ್ತ ಕೊಂಡೊಯ್ದು, ರಾಷ್ಟ್ರೀಯತೆಯನ್ನು ಆಹ್ವಾನಿಸುವಂತಹ ಕಮ್ಯುನಿಸ್ಟ ಸರಕಾರವನ್ನು ವಿರೋಧಿಸುವ ಸಲುವಾಗಿ ಅಲ್ಲಿನ ವಿರೋಧೀ ಪಕ್ಷಗಳು ಒಂದಾಗಿ ಕೇರಳ ವಿಮೋಚನಾ ದಿನಾಚರಣೆಯನ್ನು ಜೂನ ೧೨ನೆ ದಿನಾಂಕದಂದು ಆಚರಿಸಿ ಸರಕಾರದ ವಿರುದ್ಧ ಅಸಹಕಾರ ಆಂದೋಲನವನ್ನು ನಡೆಸಲು ಮುಂದಾಗಿವೆ. ಕೇರಳದ ಮುಖ್ಯಮಂತ್ರಿ ಶ್ರೀ ನಂಬೂದರಿಪಾದರು ಈ ಬಗ್ಗೆ ಹಾಗೂ ಇಲ್ಲಿನ ಖಾಸಗಿ ಶಾಲೆಗಳ ವ್ಯವಸ್ಥಾಪಕರು ತಮ್ಮ ಶಾಲೆಗಳನ್ನು ಮುಚ್ಚುವ ಕೃತ್ಯದ ಬಗ್ಗೆ ಮತ್ತು ಕೇರಳದಲ್ಲಿ ಉಂಟಾದ ಪರಿಸ್ಥಿತಿಯ ಕುರಿತಾಗಿ ಪ್ರಧಾನಿ ನೆಹರುರವರೊಡನೆಯೂ ವಿಚಾರ ವಿನಿಮಯ ಮಾಡಿರುವರು. ಆದರೆ, ಮುಂದಕ್ಕೆ ನೆಹರೂ, ಶಾಂತ ರೀತಿಯ ಅಸಹಕಾರ ಆಂದೋಲನ ನಡೆಸಲು ತನ್ನ ಅಭ್ಯಂತರವಿಲ್ಲವೆಂಬುದಾಗಿ ಅಭಿಪ್ರಾಯಪಟ್ಟುದರಿಂದ, ಶ್ರೀ ನಂಬೂದರಿಯವರು ಶ್ರೀ ನೆಹರೂರ ಮೇಲೆಯೇ ಉರಿದು ಬಿದ್ದಿದ್ದಾರೆ. ಫೆಡರಲ್ ಮಾದರಿಯ ಭಾರತೀಯ ಸಂವಿಧಾನಕ್ಕನುಸಾರವಾಗಿ, ಒಂದು ರಾಜ್ಯದ ಪರಿಸ್ಥಿತಿಯು "ತೀರ ಗಂಭೀರ"ವಾಗಿದ್ದು, ಅದನ್ನು ಶಮಾಧಾನಕ್ಕೆ ತರಲು ರಾಜ್ಯ ಸರಕಾರವು ಅಸಮರ್ಥವೆಂದು ಕೇಂದ್ರಕ್ಕೆ ಮನವರಿಕೆಯಾದರೆ, ಅದುವೇ ಅಂತಹ ರಾಜ್ಯದಲ್ಲಿ ಅಂತರ್ಪ್ರವೇಶಿಸಬಹುದು. ಕೇರಳದ ಕೆಂಪು ಸರಕಾರದ ಉದ್ದೇಶಪೂರಿತ ವಿಚಾರ, ಕೃತಿಗಳು ಜನತೆಯಲ್ಲಿ ಸರಕಾರದ ಬಗ್ಗೆ ಜಗುಪ್ಸೆಯನ್ನೂ ಅವಿಶ್ವಾಸವನ್ನೂ ಹುಟ್ಟಿಸಿದೆ ಎಂದು ಪಂ. ನೆಹರೂ ಅವರು ಮಾತುಕತೆಯ ವೇಳೆ ನಂಬೂದರಿಪಾದರೊಡನೆ ಆಕ್ಷೇಪಣೆ ಸೂಚಿಸಿದರೆಂದೂ ಗೊತ್ತಾಗಿದೆ. ನಂಬೂದರಿಯವರು ನೆಹರೂರವರೊಡನೆ ಮಾತನಾಡಿದ ಕೆಲಸಮಯದಲ್ಲಿ ಸೌಮ್ಯ ಮನೋವೃತ್ತಿಯವರಾಗಿ ಉಳಿದರೂ ತಿರುವನಂತಪುರಕ್ಕೆ ಮರಳಿದ ಮೇಲೆ, ಕಮ್ಯುನಿಸ್ಟ ಸರಕಾರದ ಮುಖ್ಯ ಮಂತ್ರಿಗಳಾಗಿಯೇ ಪರಿವರ್ತನೆಗೊಂಡು ತಮ್ಮ ಮಾಮೂಲಿನ ಧೋರಣೆ ಹಾಗೂ ವಿಧಾನಗಳನ್ನು ಮುಂದುವರಿಸಿಕೊಂಡು ಹೋದರಲ್ಲದೆ, ಪ್ರಧಾನಿಯವರಿತ್ತ ಸಲಹೆಗಳನ್ನು ಕಡೆಗಣಿಸಿರುವುದರಿಂದಲೇ "ಅಲ್ಲಿಯ ಪರಿಸ್ಥಿತಿಯನ್ನು ಹೆಚ್ಚು ಲಕ್ಷ್ಯಗೊಟ್ಟು ಗಮನವೀಯಲಾಗುತ್ತಿದೆ" ಎಂದು ತಿಳಿಯುತ್ತದೆ. ಅವಶ್ಯಕಂಡರೆ, ಪ್ರಧಾನಿಯವರು ಈ ಮಾಸಾಂತ್ಯದಲ್ಲಿಯೇ ಕೇರಳಕ್ಕೆ ಭೇಟಿಯನ್ನೂ ಕೊಡಬಹುದು. ಪೋಲೀಸ ರಾಜ್ಯವಾಗಿರುವ ಕೇರಳದಲ್ಲಿರುವ "ಗಂಭೀರ ಪರಿಸ್ಥಿತಿ"ಯು ಕೈಮೀರಿ ಕೇಂದ್ರ ಸರಕಾರವು ಹಸ್ತಕ್ಷೇಪ ಮಾಡಲೇಬೇಕಾದ ಸಂದರ್ಭ ಒದಗಿದರೆ, ಆಗ ಮಾತ್ರ ಕೇಂದ್ರ ಸರಕಾರವು ಸುಮ್ಮನುಳಿಯಲಾರದು ಎಂದು ನೆಹರೂ ಹೇಳಿದ್ದಾರೆ. ಕಳೆದ ಚುನಾವಣೆಯಲ್ಲಿ ಕಮ್ಯುನಿಸ್ಟರು ಬಹುಮತ ಗಳಿಸಿದರು; ಆಗಲೇ ಇವರು ಸರಕಾರ ರಚಿಸದಂತೆ ಆದೇಶವೀಯಲು ಕೇಂದ್ರ ಸರಕಾರಕ್ಕೆ ಹಲವಾರು ಮನವಿಗಳು ಹೋಗಿದ್ದುವು. ಆದರೆ, ಸಂವಿಧಾನದನ್ವಯ ನಡೆದ ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷವು ಸರಕಾರ ಸ್ಥಾಪಿಸುವುದರಲ್ಲಿ ಯಾವ ಅನ್ಯಾಯವೂ ಇಲ್ಲವಾದುದರಿಂದಲೇ ಪ್ರಧಾನಿ ನೆಹರೂ ಕಮ್ಯೂನಿಸ್ಟರಿಗೆ ಸರಕಾರ ರಚಿಸುವ ಅವಕಾಶ ಕೊಟ್ಟರು. ಆದರೆ, ಕಮ್ಯುನಿಸ್ಟರು ಮಾತ್ರ, ತಮಗೆ ದೊರೆತ ಅಧಿಕಾರವನ್ನು ಸಾಕಷ್ಟು ದುರುಪಯೋಗಪಡಿಸಿಕೊಂಡಿರುವುದರಿಂದಲೇ ಅಲ್ಲಿ ಈಗ ಇಂತಹ ಕ್ಷೋಭೆಯೇಳುವುದಕ್ಕೆ ಕಾರಣವಾಗಿದೆ.

ವಿದೇಶನಿಷ್ಠವಾದ ಪಕ್ಷವೊಂದು ರಾಷ್ಟ್ರದ ಸಂವಿಧಾನಕ್ಕೆ ಮನ್ನಣೆಯಿತ್ತು ರಾಷ್ಟ್ರಪ್ರೇಮ ಪೂರಿತವಾಗಿ ಕೆಲಸ ಮಾಡುವುದು ಎಂದಿಗೂ ಅಸಾಧ್ಯ. ಕಮ್ಯುನಿಸ್ಟರ ಪ್ರತಿ ಧ್ಯೇಯ ಧೋರಣೆಗಳೂ ಶಸ್ತ್ರಪ್ರಣಾಳಿಗಳೂ ರಶ್ಯದಿಂದಲೋ ಚೀನಾದಿಂದಲೋ ಅಥವಾ ಮತ್ತಾವ ಕಮ್ಯುನಿಸ್ಟ ರಾಷ್ಟ್ರದಿಂದಲೋ ಎರವಲು ತಂದಂಥವುಗಳು. ಅವರಿಗೆ ಉತ್ಸಾಹ, ಸ್ಫೂರ್ತಿ ಬರಬೇಕು ವಿದೇಶಗಳಿಂದ. ರಾಷ್ಟ್ರದ ಉತ್ಸವಗಳನ್ನು ಬಿಟ್ಟು ರಶ್ಯನ್ ಕ್ರಾಂತಿ ದಿನಾಚರಣೆಯೇ ಮೊದಲಾದುವುಗಳಿಗೆ ಅಧಿಕ ಪ್ರಾಶಸ್ತ್ಯವೀಯುವ ಭಾರತೀಯ ಕಮ್ಯುನಿಸ್ಟರಿಗೆ ಅದೆಷ್ಟು ರಾಷ್ಟ್ರಭಕ್ತಿ ಇದ್ದೀತು ಎಂದು ಊಹಿಸಿಯೇ ತಿಳಿದುಕೊಳ್ಳಬಹುದು. ಕೆಲವೊಂದು ಉಪಯುಕ್ತ ಕಾಯದೆ ಕಾನೂನುಗಳನ್ನು ಕೇರಳ ಸರಕಾರ ಮಾಡಿರಬಹುದಾದರೂ ಅವುಗಳನ್ನೂ ತಮ್ಮ ಪಕ್ಷದ ಹಿತಸಾಧನೆಗಾಗಿಯೇ ಮಾಡಿದೆ ಎಂಬುದು ಪರಿಶೀಲನೆಯಿಂದ ತಿಳಿಯಬಹುದು. ಸದ್ಯ ಅಲ್ಲಿ ನಡೆಯಲಿರುವ ಅಹಿಂಸಾತ್ಮಕ ಅಸಹಕಾರ ಆಂದೋಲನದ ಯಶಸ್ಸು ಪ್ರಜಾಸತ್ತೆಯ ಯಶಸ್ಸು; ಮತ್ತು ದೇಶದ್ರೋಹಿ ಕಮ್ಯುನಿಸ್ಟರಿಗೆ ಮುಟ್ಟುಗೋಲು ಹಾಕಿಸುವುದರಲ್ಲಿ ಪಡೆಯುವ ವಿಜಯದ ಪ್ರಥಮ ಸೋಪಾನ ಎಂದು ಲೋಕತಂತ್ರ ಪ್ರಿಯರು ಅಂದುಕೊಳ್ಳುವುದಾದರೆ, ಅದನ್ನು ಅಲ್ಲವೆನ್ನುವುದು ದಾಷ್ಟ್ಯವಾದೀತು.

ರಾಜಾಜೀ ಸ್ವತಂತ್ರ ಪಕ್ಷ

ಪ್ರಾಮಾಣಿಕವಾದ ಮತ್ತು ರಚನಾತ್ಮಕವಾದ ಟೀಕೆಗಳಿಗೆ ಪ್ರಜಾಪ್ರಭುತ್ವದಲ್ಲಿ ಮನ್ನಣೆಯಿದೆ. ಅಧಿಕಾರಾರೂಢ ಪಕ್ಷವು ತನ್ನ ಧ್ಯೇಯಗಳಿಗನುಸಾರವಾಗಿ ದೇಶವನ್ನು ಮುನ್ನಡೆಸುತ್ತಿರುವಾಗ, ದೇಶನಿಷ್ಠರೇ ಅವುಗಳಲ್ಲಿರುವ ಕುಂದುಕೊರತೆ ಹಾಗೂ ಲೋಪದೋಷಗಳನ್ನು ಎತ್ತಿ ತೋರಿಸುವುದರಿಂದ, ರಾಷ್ಟ್ರ ಕಲ್ಯಾಣವಾಗುವುದು. ಇದಕ್ಕಾಗಿಯೇ ಪ್ರಜಾಪ್ರಭುತ್ವ ಸರಕಾರಿ ಪಕ್ಷಕ್ಕೆ ಆದೇ ಮಾದರಿಯ ವಿರೋಧ ಪಕ್ಷಗಳಿರುವುದೂ ಆವಶ್ಯಕವೇ ಆಗಿದೆ. ನಮ್ಮ ದೇಶದಲ್ಲಿ ಅಧಿಕಾರಾರೂಢವಾಗಿರುವ ಕಾಂಗ್ರೆಸ್ಸು ಇದೀಗ ಯೋಜಿಸಿರುವ 'ಸಹಕಾರಿ ವ್ಯವಸಾಯ ಪದ್ಧತಿ'ಯಿಂದ ಅಸಮಾಧಾನ ತಳೆದ ಕೆಲವು ಮೇಧಾವಿ ರಾಷ್ಟ್ರವಾದಿಗಳು ಒಂದುಸೇರಿ "ಸ್ವತಂತ್ರ ಪಕ್ಷ" ಒಂದನ್ನು ಸ್ಥಾಪಿಸಿದ್ದಾರೆ; ಸದ್ಯದ ಸರಕಾರವು ಸಂವಿಧಾನಕ್ಕೆ ವಿರೋಧವಾಗಿ ನಡೆಯುತ್ತಿರುವುದರಿಂದ ಸಂವಿಧಾನ ನಿಷ್ಠವಾದ ಸರಕಾರ ಸ್ಥಾಪನೆಯನ್ನೇ ಮೂಲ ಧ್ಯೇಯವಾಗಿಟ್ಟುಕೊಂಡು ಇದು ಚಕ್ರವರ್ತಿ ರಾಜಗೋಪಾಲಾಚಾರಿಯವರ ನೇತೃತ್ವ

ಸಂಕ್ಷಿಪ್ತ ಸುದ್ದಿಗಳು

ಯುವ ಜನಾಂಗಕ್ಕೆ ಕರೆ

ದೇಶದ ಯುವಕ ಯುವತಿಯರು ಅತ್ಯಧಿಕ ಸಂಖ್ಯೆಯಲ್ಲಿ ಎನ್. ಸಿ. ಸಿ. ಗೆ ಸೇರಬೇಕು, ಇದರಿಂದ ಸಂರಕ್ಷಣೆ, ಶಸ್ತ್ರಾಸ್ತ್ರಗಳಬಳಕೆ ಗೊತ್ತಿದ್ದ ಮತ್ತು ಶಿಸ್ತಿನಿಂದ ಕೂಡಿದ ಜನರಒಂದು ದೊಡ್ಡಪಡೆಯನ್ನೇ ದೇಶದಲ್ಲಿ ನಿರ್ಮಿಸುವುದು ಸಾಧ್ಯ. ಸೈನ್ಯಪಡೆಗಳಲ್ಲಿ ತಾಂತ್ರಿಕ ತಜ್ಞರ ಕೊರತೆಯುಂಟಾಗಿರುವುದರಿಂದ ಎಂಜಿನಿಯರಿಂಗ್, ಮೆಡಿಕಲ್ ಮುಂತಾದ ತಾಂತ್ರಿಕ ಕಾಲೇಜುಗಳಲ್ಲಿ, ಎನ್. ಸಿ. ಸಿ. ಅಧಿಕಾರಿಗಳ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು ಸರಕಾರ ನಿಶ್ಚಯಿಸಿರುತ್ತದೆ ಎಂದು ಭಾರತದ ಸಂರಕ್ಷಣಾ ಮಂತ್ರಿ ಶ್ರೀ ಕೃಷ್ಣ ಮೆನನ್ ಯುವಕ ಯುವತಿಯರನ್ನು ವಿನಂತಿಸಿಕೊಂಡಿದ್ದಾರೆ.

ಸಮರ್ಥ ನಾಯಕ ಬೇಕು.

ಗಾಂಧೀಜಿಯವರು ಮೃತ್ಯುವಶರಾದ ನಂತರ, ಭಾರತವನ್ನು ಪ್ರಗತಿಪಥದಲ್ಲಿ ಮುನ್ನಡೆಸಿಕೊಂಡುಹೋಗುವ ನಾಯಕರ ಅಭಾವ ಭಾರತಕ್ಕಿದೆ; ಗಾಂಧೀಜಿಯವರ ತತ್ವಗಳ ಆಚರಣೆಯ ಹೆಸರಿನಲ್ಲಿ ಇಂದು ಅವುಗಳ ಉಲ್ಲಂಘನೆಯೇ ಮಿತಿಮೀರುತ್ತಿರುವುದು. ಗಾಂಧೀಜಿಯವರ ತತ್ವಗಳು ಕೇವಲ ಭಾರತಕ್ಕೆ ಮಾತ್ರವಲ್ಲ, ಇಡೀ ಜಗತ್ತಿಗೆ ಮಾರ್ಗದರ್ಶನ ಮಾಡುವಂತಹವುಗಳಾಗಿವೆ. ಆದರೆ, ಭಾರತವು ಮಾತ್ರ ಅವುಗಳನ್ನು ಕ್ರಮೇಣ ಮರೆತು ಮುಂದೆ ಸಾಗುತ್ತಿದೆ ಭಾರತದಲ್ಲಿ ಜಾತೀಯ ಗಲಭೆಗಳು ಆಗುವ ತನಕ ಅದು ಪ್ರಗತಿ ಹೊಂದಲಾರದು ಎಂದು ಶ್ರೀ ಜೆ. ಬಿ. ಕೃಪಲಾನಿ ಒಂದು ಸಭೆಯಲ್ಲಿ ಮಾತನಾಡುತ್ತ ಅಭಿಪ್ರಾಯಪಟ್ಟರು.

ಹೊಸ ಪಕ್ಷದಿಂದ ಸಮಸ್ಯೆ ಬಗೆ ಹರಿಯದು

ರಾಜಾಜಿಯವರು ಮದ್ರಾಸದಲ್ಲಿ "ಸ್ವತಂತ್ರ ಪಕ್ಷ" ಎಂಬ ವಿರೋಧಿ ಪಕ್ಷವನ್ನು ಈಗಿನ ಸರಕಾರದ ಸಂವಿಧಾನ ವಿರುದ್ಧವಾದ ಕಾರ್ಯಗಳನ್ನು ಎದುರಿಸಲು ಕಟ್ಟಿಕೊಂಡರೆ, ಇತ್ತ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಶ್ರೀ ಯು. ಎನ್. ಧೇಬಾರರು ಹೊಸ ಪಕ್ಷಗಳ ಸ್ಥಾಪನೆಯಿಂದ ದೇಶದ ಸಮಸ್ಯೆ ಬಗೆಹರಿ ಮ

ದಲ್ಲಿ ಸ್ಥಾಪನೆಯಾಗಿದೆ. ಹೊಸ ಪಕ್ಷದಲ್ಲಿ ಪ್ರೊ॥ ರಂಗ, ಮಿನೂ ಮಸಾನಿ ಮೊದಲಾದ ಸುವಿಖ್ಯಾತ, ದೇಶಭಕ್ತರೂ ಸೇರಿಕೊಂಡಿರುತ್ತಾರೆ. ಕಾಂಗ್ರೆಸ್ಸು ಇತ್ತೀಚೆಗೆ ವಹಿಸಿದ ಧೋರಣೆಗಳಿಂದ ಅತೃಪ್ತರಾದ ಕಾಂಗ್ರೆಸಿಗರು ಈ ಪಕ್ಷವನ್ನು ಸೇರುವ ಸಂಭವವಿದ್ದು, ಇದೂ ಸಾಕಷ್ಟು ಶಕ್ತಿಶಾಲಿಯಾಗುವುದು ಖಂಡಿತ. "ಕಾಂಗ್ರೆಸ್ಸಿನ ತತ್ವಗಳನ್ನೊಪ್ಪದವರು ಕಾಂಗ್ರೆಸ್ಸಿನಿಂದ ದೂರ ಹೋಗಬಹುದು" ಎಂಬ ಕಾಂಗ್ರೆಸ್ ಶ್ರೇಷ್ಠ ನಾಯಕರ ಹೇಳಿಕೆಯಿಂದಾಗಿಯೂ ಈ ಪಕ್ಷಕ್ಕೆ ಬಲಬರುವುದು ಸಾಧ್ಯ. 'ಮೇಧಾವಿ'ಗಳ ಈ ಸ್ವತಂತ್ರ ಪಕ್ಷ ಸ್ಥಾಪನೆಯೇನೋ ಸುಲಭದಲ್ಲಾಯಿತು; ಅವರ ಕಾರ್ಯಭಾರ ಹೇಗೆ ಎಂದು ಎಲ್ಲರೂ ಕಿವಿ ನಿಮಿರಿಸಿ ಕಣ್ಣರಳಿಸಿ ಕುಳಿತಿದ್ದಾರೆ.

ಅಲ್ಲಲ್ಲಿಯ ಸುದ್ದಿ ಸಾರ

ಶ್ರೀ ವಿ. ಎಸ್. ಕುಡ್ವರ ಷಷ್ಟ್ಯಬ್ಧಿ ಪೂರ್ತಿ—ಸಿ. ಪಿ. ಸಿ. ಕಂಪೆನಿಯ ಮೆನೆಜಿಂಗ್ ಡೈರೆಕ್ಟರರೂ, ಕೆನರಾ ವರ್ಕ್ಸ್‌ಶಾಪ್ಸ್ ಮೊದಲಾದ ಕಂಪೆನಿಗಳ ಸ್ಥಾಪಕರೂ, ಪತ್ರಿಕೋದ್ಯಮಿಯೂ ಆದ ಶ್ರೀ ವಿ. ಎಸ್. ಕುಡ್ವರ ಷಷ್ಟ್ಯಬ್ಧಿಪೂರ್ತಿ ಸಮಾರಂಭವು ಮಂಗಳೂರಿನಲ್ಲಿ ಸಿ. ಪಿ. ಸಿ. ವಠಾರದಲ್ಲಿ ತಾ. 8ರಲ್ಲಿ ಮಾಜಿ ಮಂತ್ರಿ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಕೆ. ನಾರಾಯಣ ನಾಯ್ಕರು ಸ್ವಾಗತಿಸಿದ ಮೇಲೆ, ಸಿ. ಪಿ. ಸಿ.ಯ ಜನರಲ್ ಮೆನೇಜರ್ ಶ್ರೀ ಕೆ. ಎಸ್. ಭಂಡಾರ್‌ಕರರು ಸನ್ಮಾನ ಪತ್ರವನ್ನು ಅರ್ಪಿಸಿದರು. ಉಡುಪಿಯ ನಗರಸಭಾಧ್ಯಕ್ಷ ಡಾ| ಕೆ. ಎಲ್. ಐತಾಳರು ತನ್ನ ನಗರ ಸಭೆಯ ಪರವಾಗಿ ಪುಷ್ಪಹಾರ ಅರ್ಪಿಸಿದರು. ಶ್ರೀಗಳಾದ ಎಸ್. ನರಸಪ್ಪಯ್ಯ ಎಮ್. ಎಲ್. ಸಿ., ಕೆ. ಸೂರ್ಯನಾರಾಯಣ ಅಡಿಗ, ಡಾ| ಟಿ. ಮಾಧವ ಪೈ ಮೊದಲಾದವರು ಶ್ರೀ ಕುಡ್ವರು ಬೇರೆ ಬೇರೆ ರಂಗಗಳಲ್ಲಿ ಸಾಧಿಸಿದ ಕೆಲಸಗಳನ್ನು ಕೊಂಡಾಡಿ ಅಭಿನಂದಿಸಿದರು.

ಶ್ರೀ ಜಿ. ಸೋಮ ಶೇಖರ ರಾಯರು ಶ್ರೀ ಕುಡ್ವರ ತೈಲ ಚಿತ್ರವನ್ನು ಅನಾವರಣ ಮಾಡಿ ಅವರ ಕಾರ್ಯದಕ್ಷತೆಯನ್ನು ವಿವರಿಸಿದರು. ಶ್ರೀ ವಿ. ಎಸ್. ಕುಡ್ವರು ಭಾಷಣ ಮಾಡಿ ಕೃತಜ್ಞತೆಯನ್ನು ಸೂಚಿಸಿದರು. ಅಧ್ಯಕ್ಷ ಶ್ರೀ ಎ. ಬಿ. ಶೆಟ್ಟರು ಶ್ರೀ ಕುಡ್ವರ ಕಾರ್ಯಚತುರತೆ, ದೂರ ದೃಷ್ಟಿ ಮೊದಲಾದುವನ್ನು ಪ್ರಶಂಸಿಸಿ ಯಶ ಕೋರಿದರು.

ರಾತ್ರಿ ಶ್ರೀ ವಿ. ಎಸ್. ಕುಡ್ವರು ಭೋಜ ಸಮಾರಂಭವೊಂದನ್ನು ಏರ್ಪಡಿಸಿದ್ದರು.

ಲಾರದು ಎಂದಿದ್ದಾರೆ. ಅಲ್ಲದೇ ನಿವೃತ್ತ ಗವರ್ನರ ಜನರಲ್ಲರ ಪಕ್ಷವನ್ನು ಟೀಕಿಸಿದ್ದಾರೆ. ದೇಶದ ಆಹಾರ ಧಾನ್ಯದ ಉತ್ಪತ್ತಿಯನ್ನು ಹೆಚ್ಚಿಸಲು ಸಹಕಾರಿ ಬೇಸಾಯದ ಚಳುವಳಿಯನ್ನು ಬೆಂಬಲಿಸುವಂತೆ ಅವರು ಕೇಳಿಕೊಂಡಿದ್ದಾರೆ.

ವರ್ಣದ್ವೇಷ ದೂರವಾಗಲಿ

ದಕ್ಷಿಣ ಆಫ್ರಿಗದಲ್ಲಿ ಅವಿರತವಾಗಿ ಬೆಳೆದು ಬರುತ್ತಿರುವ ವರ್ಣಭೇದವು ೧೦ ವರ್ಷಗಳೊಳಗೆ ನಿವಾರಣೆಯಾಗದೆ ಹೋದರೆ, ದೇವು ಛಿನವಿಚ್ಛಿನ್ನವಾಗಬಹುದು ಎಂದು ಡರ್ಬನಿನ ಆರ್ಚ್ ಬಿಷಪರು ಅಲ್ಲಿನ ಪಾರ್ಲಿಮೆಂಟರಿ ಚರ್ಚಾಮಂಡಗದಲ್ಲಿ ತಿಳಿಸಿದರು. ಇದೇ ಭೇದಭಾವನೆಯು ಬೆಳೆದು ಮುಂದುವರಿದರೆ, ಮೊದಲೆಗೆ ಚಿಕ್ಕ ಪುಟ್ಟ ಬಂಡಾಯಗಳೆದ್ದು, ಸಮಾಜವು ಶಿಥಿಲಗೊಂಡು ಕೊನೆಗೆ ಹಿಂಸಾತ್ಮಕವಾಗಿ ಪರಿಣಮಿಸುವುದು. ಈ ವರ್ಣದ್ವೇಷವನ್ನು ಮಾಡುವುದರಿಂದ, ದಕ್ಷಿಣ ಆಫ್ರಿಕವು ವಿಶ್ವದ ಇತರ ರಾಷ್ಟ್ರಗಳ ಬೆಂಬಲವನ್ನು ಕಳೆದುಕೊಳ್ಳುವುದಲ್ಲದೇ ಆರ್ಥಿಕ ಬಹಿಷ್ಕಾರಕ್ಕೂ ಗುರಿಯಾಗಬಹುದು ಎಂದವರು ಎಚ್ಚರಿಸಿದರು.

ತುಂಗಭದ್ರೆಯ ನೀರು

ಆಂಧ್ರ ಮತ್ತು ಮೈಸೂರು ರಾಜ್ಯಗಳ ಪ್ರತಿನಿಧಿಗಳು ತುಂಗಭದ್ರಾ ಅಣೆಕಟ್ಟಿನ ಮೇಲಿನ ಹತೋಟಿ ಮತ್ತು ನೀರಿನ ಉಪಯೋಗದ ಕುರಿತಾಗಿ ಮಾತುಕತೆ ನಡೆಸಿದರು. ಆದರೆ, ಅಂತ್ಯದಲ್ಲಿ ಕೆಲವೊಂದು ಭಿನ್ನಾಭಿಪ್ರಾಯಗಳು ತಲೆದೋರಿದುದರಿಂದ ಯಾವುದೇ ನಿರ್ಧಾರವಾಗದೆ ಮಾತುಕತೆಗಳು ಮುಕ್ತಾಯವಾದುವು.

ಬರ್ಲಿನ್ ಸಮಸ್ಯೆ ಪರಿಹಾರವಾದೀತು

ಬರ್ಲಿನ ಸಮಸ್ಯೆಯ ಬಗ್ಗೆ ಒಂದು ನಿಶ್ಚಯಕ್ಕೆ ಬರಲು ಸೇರಿದ ವಿದೇಶಮಂತ್ರಿಗಳ ಪರಿಷತ್ತು ಕಳೆದ ಒಂದು ತಿಂಗಳಿಂದಲೂ ನಡೆಯುತ್ತ ಬಂದಿದೆ. ಪ್ರಾರಂಭದಲ್ಲಿ ಸಮಸ್ಯೆ ಬಗೆಹರಿಯುವ ಬಗ್ಗೆ ಸಂಶಯವು ಉದ್ಭವಿಸಿದ್ದರೂ ಈಗ ಮಾತುಕತೆಗಳು ಅನುಕೂಲವಾಗಿಯೇ ಮುಂದುವರಿಯುತ್ತಿದೆ. ಚತುರ್ ರಾಷ್ಟ್ರಗಳು ಬಯಸುವುದಾದರೆ, ಈ ಜಿನೇವಾ ಮಾತುಕತೆಗಳು ಯೋಗ್ಯ ಫಲ ನೀಡುವಂತೆ ಮಾಡಬಹುದು.

ಬರ್ಮಾದಲ್ಲಿ ಹೊಸ ಚುನಾವಣೆ

ಬರ್ಮಾದ ಸೈನಿಕ ಸರಕಾರದ ಪ್ರಧಾನಿ ಜ| ನೇವಿನ್ನರು ೧೯೬೦ರ ಜೂನದಲ್ಲಿ ಅಲ್ಲಿ ಸಾರ್ವತ್ರಿಕ ಚುನಾವಣೆಯನ್ನು ನಡೆಸಲಾಗುವುದೆಂದು ಈ ಮೊದಲು ಹೇಳಿದ್ದರು. ಆದರೆ, ಇತ್ತೀಚೆಗೆ ಬರ್ಮಾದ ಪರಿಸ್ಥಿತಿಯು ಸುಧಾರಿಸುತ್ತ ಬಂದಿರುವುದರಿಂದ ಈ ಚುನಾವಣೆಗಳು ಎರಡು ತಿಂಗಳು ಮೊದಲೇ ನಡೆಯುವುವೆಂದು ಹೇಳಿದ್ದಾರೆ.

ಉಳಿಯಾರಗೋಳಿ— ಕಳೆದ ತಾ. 29ರಂದು ಕೈಪಂಜಾಲು ಬೋರ್ಡು ಶಾಲಾ ವಠಾರದಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. ನೂತನವಾಗಿ ರಚನೆಯಾದ ಯುವಕ ಕಾಂಗ್ರೆಸ್ಸನ್ನು ಶ್ರೀ ಎಫ್. ಎಕ್ಸ್. ಡಿ. ಪಿಂಟೊ, ಎಂ. ಎಲ್. ಎ. ಅವರು ಉದ್ಘಾಟಿಸಿದರು. ಶ್ರೀಮತಿ ಪ್ರೇಮಾ ಎ. ಪೈಯವರು ಮೊಗವೀರ ಮಹಿಳಾ ಸಂಘದ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ ಎ. ಜೆ. ಅಲ್ಸೆ, ಶ್ರೀಮತಿ ಚೆನ್ನಮ್ಮ, ಟಿ. ವಿ. ರಾವ್, ಡಾ| ನಳಿನಾಕ್ಷಿ ಶೆಟ್ಟಿ, ಗಣೇಶರಾವ್, ಮತ್ತು ಅಧ್ಯಕ್ಷರು ಭಾಷಣವಿತ್ತ ಮೇಲೆ ಶ್ರೀ ಎಂ. ರಾಮಚಂದ್ರ ರಾಯರು ಆಭಾರ ಸೂಚಿಸಿದರು.

ಮಂಗಳೂರಲ್ಲಿ ಕೇರಳ ಶಿಕ್ಷಣ ಮಸೂದೆಗೆ ವಿಶೇಧ ಸೂಚನೆ—ಇದೇ ತಾ. 7ರಲ್ಲಿ ಡೋನ್ ಬಾಸ್ಕೊ ಹಾಲಿನಲ್ಲಿ ಡಿ. ಜೊ. ಪ್ರೆಸಿಡೆಂಟ್ ಶ್ರೀ ಬಿ. ಮಂಜಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಕೇರಳ ಶಿಕ್ಷಣ ಮಸೂದೆಯನ್ನು ವಿರೋಧಿಸಲು ಸಾರ್ವಜನಿಕ ಸಭೆಯೊಂದು ಜರಗಿತು. ಶ್ರೀಗಳಾದ ಶ್ರೀ ಬಾಲಕೃಷ್ಣ ರಾವ್ ಎಂ. ಎಲ್. ಸಿ., ಯು. ಕಣ್ಣಪ್ಪ, ಅಲ್ಬರ್ಟ್ ಸಿಕ್ವೇರ, ಪ್ರೊ| ಸಿ. ಎ. ಸಲ್ದಾನ್ಹ, ಮುಂತಾದವರು ಕೇರಳ ಶಿಕ್ಷಣ ಮಸೂದೆಯನ್ನು ಪ್ರತಿಭಟಿಸಿ ಭಾಷಣಮಾಡಿದರು. ಅಧ್ಯಕ್ಷರೂ ವಿರೋಧ ಸೂಚಿಸಿ ಭಾಷಣವಿತ್ತ ಮೇಲೆ ಶ್ರೀ ಡಬ್ಲ್ಯು. ಎ. ಡಿಸೋಜರು ಕೃತಜ್ಞತೆಯನ್ನರ್ಪಿಸಿದರು.

ಅಂಬರ ಚರಖ ವಿತರಣಾ ಸಮಾರಂಭ—ಅಜ್ರಿಪರ ಅಂಬರ ಚರಖ ಪರಿಶ್ರಮಾಲಯದ ಚರಖ ವಿತರಣಾ ಕಾರ್ಯಕ್ರಮವು ತಾ. 4ರಲ್ಲಿ ಅಜ್ರಿ ಪಂಚಾಯತಿ ಅಧ್ಯಕ್ಷ ಶ್ರೀ ಮುತ್ತಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಂಬರ ಚರಖ ಶಿಕ್ಷಕರಾದ ಶ್ರೀ ಆರ್. ಎಮ್. ರಾಜೀವ ಶೆಟ್ಟರು ಕೆಲವು ಸಲಹೆಗಳನಿತ್ತರು. ಸಭಿಕರ ಭಾಷಣವಾದ ಮೇಲೆ ಅಧ್ಯಕ್ಷರು ಚರಕಗಳನ್ನು ಹಂಚಿ ಭಾಷಣವಿತ್ತರು.

ಮಂಗಳೂರಲ್ಲಿ ಶ್ರೀ ಜಯಪ್ರಕಾಶ್ ನಾರಾಯಣ್—ಇದೇ ತಾ. 8ರಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಭಾ ಸದನದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಸರ್ವೋದಯ ಮುಂದಾಳುಗಳಾದ ಶ್ರೀ ಜಯಪ್ರಕಾಶ್ ನಾರಾಯಣರು ಭಾಷಣ ಮಾಡುತ್ತಾ ಸರ್ವೋದಯ ತತ್ವವನ್ನು ಅನುಸರಿಸಿ ಗ್ರಾಮ ಜೀವನದ ಪ್ರಗತಿಯೊಂದಿಗೆ ದೇಶದ ಉನ್ನತಿಯನ್ನು ಸುಗಮಗೊಳಿಸಬೇಕು. ಜನರು ಸರ್ವೋದಯ ತತ್ವವನ್ನೇ ಅನುಸರಿಸಿ ಅದರಂತೆ ಕಾರ್ಯವೆಸಗಬೇಕು ಎಂದು ಮುಂತಾಗಿ ಹೇಳಿ ಸರ್ವೋದಯ ತತ್ವವನ್ನು ವಿವರಿಸಿದರು.

ಆರಂಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು. ಸ್ವಾಗತ ಭಾಷಣ ಮಾಡಿ ಶ್ರೀ ಜಯಪ್ರಕಾಶರು ದೇಶಕ್ಕೆ ಮಾಡಿದ ಸೇವೆಯನ್ನು ವಿವರಿಸಿದರು. ಮಧ್ಯಾಹ್ನ ಕೆನರಾ ಚೇಂಬರ್ ಆಫ್ ಕಾಮರ್ಸ್‌ನ ಸಭಾ ಸದನದಲ್ಲಿ ಸಂಪತ್ತಿದಾನಿಗಳನ್ನು ಉದ್ದೇಶಿಸಿಯೂ, ರಾತ್ರಿ ಜಿಲ್ಲಾ ಬೋರ್ಡ್ ಸಭಾ ಭವನದಲ್ಲಿ ಭೂದಾನ ಕಾರ್ಯಕರ್ತರನ್ನು ಉದ್ದೇಶಿಸಿಯೂ ಭಾಷಣವಿತ್ತರು.

ಹೈಸ್ಕೂಲು ಕಟ್ಟಡಗಳ ಉದ್ಘಾಟನೆ—ಮೈಸೂರಿನ ವಿದ್ಯಾಮಂತ್ರಿ ಶ್ರೀ ಅಣ್ಣಾ ರಾವ್ ಗಣಮುಖಿಯವರು ಇದೇ ತಾ. 6ರಲ್ಲಿ ಬೆಳ್ಮಣ್ಣು ಬೋರ್ಡ್ ಹೈಸ್ಕೂಲಿನ ಕಟ್ಟಡದ ಉದ್ಘಾಟನೆಯನ್ನು ಅದಮಾರು ಮಠದ ಶ್ರೀ ಪಾದಂಗಳರವರ ಅಧ್ಯಕ್ಷತೆಯಲ್ಲಿಯೂ ಹೆಬ್ರಿ ಹೈಸ್ಕೂಲು ಕಟ್ಟಡದ ಉದ್ಘಾಟನೆಯನ್ನು ಶ್ರೀ ಕೆ. ಪಿ. ಮುಕುಂದ ಪ್ರಭುಗಳ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಅಲ್ಲದೆ ಹೆಬ್ರಿಯಲ್ಲಿ ವಿದ್ಯಾರ್ಥಿ ಭವನದ ಶಂಕುಸ್ಥಾಪನೆಯನ್ನೂ ರಾತ್ರಿ ಪಳಿಮಾರಿನಲ್ಲಿ ಹೊಸತಾಗಿ ಪ್ರಾರಂಭವಾಗುವ ಬೋರ್ಡ್ ಹೈಸ್ಕೂಲಿನ ಪ್ರಾರಂಭೋತ್ಸವವನ್ನೂ ನೆರವೇರಿಸಿದರು.

ಮಂಗಳೂರಿನಲ್ಲಿ ವಿದ್ಯಾ ಸಚಿವರು
ಇದೇ ತಾ. 7ರಲ್ಲಿ ವಿದ್ಯಾಮಂತ್ರಿ ಅಣ್ಣಾರಾವ್ ಗಣಮುಖಿಯವರು ಬೆಸೆಂಟ್ ಹೈಸ್ಕೂಲಿಗೆ ಸಂದರ್ಶನಕೊಟ್ಟು ಸ್ತ್ರೀ ವಿದ್ಯಾಭ್ಯಾಸಕ್ಕೆ ಸರಕಾರ ಕೊಡುತ್ತಿರುವ ಮಹತ್ವವನ್ನು ವಿವರಿಸಿದರು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ರಾಧಾ, ಎಲ್. ರಾಯರು ವಂದನೆಗಳನು ಅರ್ಪಿಸಿದರು.

ಶ್ರೀ ಎಮ್. ಎಸ್. ಪೀತಾಂಬರ ರಾಯರ್‍ನ್ನು ಲೋಕಲ್ ಲೈಬ್ರೆರಿ ಅಥೋರಿಟಿಯ ಪರವಾದ ಕೆಲವೊಂದು ಕೇಳಿಕೆಗಳನ್ನು ಅಲ್ಲಿಯೇ ವಿವರಿಸಿ ಹೇಳಿದರು. ಮಧ್ಯಾಹ್ನ ಗಿಲ್ಡಿನ ಕಡೆಯಿಂದ ಒಪ್ಪಿಸಲಾದ ಮನವಿಯಲ್ಲಿ ಕೆಲವನ್ನು ಚರ್ಚಿಸಿ ಉಳಿದುವನ್ನು ಹಿಂದಿನಿಂದ ಪರಿಶೀಲನೆ ಮಾಡುವುದಾಗಿ ಹೇಳಿದರು.

ಉಡುಪಿ ರೋಟರಿ ಕ್ಲಬ್ಬಿನ ಸಭೆಯು—ಇದೇ ತಾ. 2ರಲ್ಲಿ ಡಾ| ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಬಿಜಾಪುರ ವಿಜಯಾ ಕಾಲೇಜಿನ ಪ್ರೊಫೆಸರ್ ಶ್ರೀ ಟಿ. ದೂಬೆಸರು 'ಲೋಕಶಾಂತಿಯ ಮಹತ್ವ ಮತ್ತು ಸಾಧನೆಯ ದಾರಿ' ಈ ಕುರಿತು ಭಾಷಣವಿತ್ತರು. ಅಧ್ಯಕ್ಷರ ಭಾಷಣವಾದ ಮೇಲೆ, ಶ್ರೀ ಟಿ. ರಮೇಶ ಪೈಗಳವರು ವಂದನಾರ್ಪಣೆ ಮಾಡಿದರು.

ಕಾರ್ಕಳ—ಇಲ್ಲಿಯ ಸಹಕಾರ ಸಂಘದ ಅಧ್ಯಕ್ಷರಾಗಿದ್ದ ದಿವಂಗತ ಡಾ. ಎನ್. ಎಮ್. ಅಡ್ಯಂತಾಯರ ತೈಲಚಿತ್ರವನ್ನು ಇದೇ ತಾ. 7ರಲ್ಲಿ ಸಹಕಾರ ಸಂಘದಲ್ಲಿ ಎಸ್. ವಿ. ಟಿ. ಗರ್ಲ್ಸ್ ಹೈಸ್ಕೂಲಿನಲ್ಲಿ ಶ್ರೀ ಜಿ. ಕೆ. ಶ್ರೀನಿವಾಸ ಅಯ್ಯಂಗಾರ್ ಇವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಪ್ರಿನ್ಸಿಪಾಲ್ ಡಿ. ಮುನ್ಸಿಫ್ ಶ್ರೀ ಎಚ್. ಲಕ್ಷ್ಮಣ ಸಾಲಿಯಾನರು ಅನಾವರಣಮಾಡಿದರು.

ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ—ಬೆಳಗಾಂ ಶಾಖೆಯ ಬೆಳ್ಳಿ ಹಬ್ಬವು ಕಳೆದ ತಾ. 28ರಲ್ಲಿ ಶ್ರೀ ಪಂಕರ ರಾವ್ ಕಿರ್ಲೋಸ್ಕರರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಡಾ| ಟಿ. ಎಂ. ಎ. ಪೈಗಳ ತೈಲ ಚಿತ್ರವನ್ನು ಪ್ರೊ| ಟಿ. ರುಬೆನ್ ಅವರು ಅನಾವರಣಗೈದರು.

ಕವಿತಾ ವಿತಾನ

ಜೀವದ ಗೆಳೆಯನಿಗೆ–

ಸೌಂದರ್ಯ ಸರಳತೆಯ ಸಂದೋಹ ಸುವಿ
ಸಜ್ಜನರ ಮಂಡಲೇಶ [ಚಾರಿ
ಸೌಹಾರ್ದ ಸ್ಥಿರಜೆಯ ಸೌರಭದ ಚಿತ್ರರಿಪ
ರನ್ನ ಸೌಗಂಧ ಕೋಶ

ಗಾಢಾಂಧಕಾರ ಮುಂದಾಗಿ ಕಂಗೆಟ್ಟಾಗ
ರವಿಯಾಗಿ ಮೂಡಿ ಬಂದೆ
ದುರ್ಬುದ್ಧಿ ದುರ್ವ್ಯಸನ ಸಂಪರ್ಕ ಹೆಚ್ಚೆ
ಬರಸಿಡಿಲಾಗಿ ಎಲ್ಲಕೊಂದೆ.

ಬೇಗುದಿಯ ಬೇಗೆ ಗಾಢಾಂಕುರವು ಬಾಡು
ನಿನ್ನಿಂದ ವರ್ಷಧಾರೆ [ತಿರೆ
ಬಾಳ ಸುಳಿತೊರೆಯಲ್ಲಿ ಮುಳುಗೇಳುತಿರುವಾಗೆ
ನಿಲ್ಲೆ ಮೇಲೆದ್ದ ಪಾರೆ!

ಮುನಿದೇನೊ ನುಡಿದಾಗ ಮೌನದುತ್ತರದಿಂದ
ಮನಕರಗೆ ನೀನೊರೆಯುವೆ
'ನಗಮೇಘತಾಡನಕೆ ವರ್ಷಣವು ಹೊರತಲ್ಲಿ-
ಚಿತ್ರಬಾನಿಲ್ಲ ಉರಿಯೆ'!

ನಿನ್ನಂತರಂಗ ದಾಳಕೆ ಹೊಕ್ಕು ಕಂಡಿಹೆನು
ತವನಿರ್ವಿಕಾರವನ್ನು
ಭಿನ್ನತೆಯ ಬೀಜ ಬಿತ್ತಲು ಬಗೆದ ಶಕ್ತಿಗಳು
ನಿರ್ವೀರ್ಯವಾದುದನ್ನು

ಬಾಲ್ಯದಿಂದೀತನಕ ಬೇರ್ಪಡದ ಗೆಳೆತನವು
ಹುಸಿ ಬೆಸುಗೆ ಬಂಧವಲ್ಲ
ಆವುದೇ ಸಂದಿಗ್ಧ ಸಂಕಷ್ಟ ಸಮಯದಲು
ನಾವು ಬೇರ್ಪಟ್ಟುದಿಲ್ಲ

ದುಶ್ಶಕ್ತಿಯಾಘಾತದಿಂದೆರಳ ಮುರಿದಾಗ
ವಿಕೃತಿಯ ರೂಪವೆರಡು!
ನಿರ್ದಿಷ್ಟ ಆಕಾರ ಪಡೆಯಲಸದಳವಾಗಿ
ಹೋಳುಗಳ ಬಾಳು ಬರಡು!

ವಿಚ್ಛಿನ್ನವಾಗಬೆಂದೆದೆತಟ್ಟಿ ಹೇಳುವೆನು
ಮಲಿನತೆಯ ಕೂಟವಲ್ಲ
ಆ ಸುಪ್ತ ಶಕ್ತಿ ಕೈಯಾಟಕ್ಕೆ ಒಡೆವಷ್ಟು
ಲೋಪ ದೌರ್ಬಲ್ಯವಿಲ್ಲ

ಜೀವನವೊಳೆನ್ನ ಬಲ್ಲವನೊಬ್ಬನಿದ್ದರದು
ನಿನ್ನ ಹೊರತನ್ಯರಲ್ಲ!
ಹೂವನರಳಿಸಬಲ್ಲ-ಜಾತವೇದದಿ, ನಿನ್ನನುಳಿ
ದಾವ ಜೀವರಿಲ್ಲ!

–ಶ್ರೀ ಕೋಡು, ಭೋಜ ಶೆಟ್ಟಿ,
ಮುಂಬೈ.

ಶ್ರೀ ದೂಮಪ್ಪ ಎಂ. ಎಲ್. ಎ. ಇವರಿಗೆ ಸತ್ಕಾರ ಕೂಟ ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘ ಇವರುಉಚ್ಚಿಲದಲ್ಲಿ ತಾ. 9–6.59ರಲ್ಲು ಕಳೆದ ಉಪಚುನಾವಣೆಯಲ್ಲಿ ಮೈಸೂರು ವಿಧಾನಸಭೆಗೆ ಸುರತ್ಕಲ್ ಮತದಾರ ಕ್ಷೇತ್ರದಿಂದ ಗೆದ್ದು ಬಂದ ಕಾಂಗ್ರೆಸ್ ಹುರಿಯಾಳು ಶ್ರೀ ದೂಮಪ್ಪ ಇವರ ಗೌರವಾರ್ಥ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಟಿ. ಎ. ಪೈ ಉಡುಪಿ ಇವರು ವಹಿಸಿದ್ದರು. ಶ್ರೀಗಳಾದ ಯು. ಕೃಷ್ಣಪ್ಪ ನರೇಂದ್ರ ಮೆಂಡನ್, ಸಂಜೀವ ಪುತ್ರನ್ ಕದಿಕೆ ವೀರಪ್ಪ ಸಾಲ್ಯಾನ್ ಮತ್ತು ಶ್ರೀನಿವಾಸ ಕೋಟ್ಯಾನ್ ಇವರುಗಳು ಸಂದರ್ಭೋಚಿತ ಭಾಷಣವನ್ನಿತ್ತರು.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ–

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦-೬-೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಜ್ಞಾನ ವಿಸ್ಮಯ

ಬೇಸಿಗೆಯಲ್ಲಿ ಮೊಟ್ಟೆ ಕೆಡದು

ಭಾರತದಲ್ಲಿ ಇದು ವರೆಗೆ ಬೇಸಿಗೆ ಕಾಲದಲ್ಲಿ ಹಣ್ಣು ತರಕಾರಿ, ಮೊಟ್ಟೆಗಳಂತಹ ಆಹಾರ ವಸ್ತುಗಳು ಬಹುಬೇಗ ಕೆಟ್ಟು ಹೋಗಿ, ಲಕ್ಷಾಂತರ ರೂಪಾಯಿಗಳ ನಷ್ಟ ಸಂಭವಿಸಿರುವುದು.

ಆದ್ದರಿಂದ ವಿಜ್ಞಾನಿಗಳು ಆಹಾರ ವಸ್ತುಗಳನ್ನು ಕೆಡದಂತೆ ಇಡುವುದಕ್ಕೆ ಅಗತ್ಯವಾದ ತಾಂತ್ರಿಕ ವಿಧಾನಗಳನ್ನು ಕಂಡು ಹಿಡಿಯುವ ಸಮಸ್ಯೆಯ ಕಡೆಗೆ ಗಮನ ಹರಿಸಿದರು. ಶೈತ್ಯಕಗಳಲ್ಲಿ ಆಹಾರ ವಸ್ತುಗಳನ್ನು ಇಡುವುದು ಇವೇ ಮೊದಲಾದ ವಿಧಾನಗಳನ್ನು ಈಗ ಕೈಗಾರಿಕಾ ಕೇಂದ್ರಗಳಲ್ಲಿ ಹಾಗೂ ಗೃಹಗಳಲ್ಲಿ ಅನುಸರಿಸಲಾಗುತ್ತಿದೆ. ಕಳೆದ ಕೆಲವು ವರ್ಷಗಳಲ್ಲಿ ಭಾರತದಲ್ಲಿ ಗಮನಾರ್ಹ ಪ್ರಮಾಣದಲ್ಲಿ ಶೈತ್ಯಕಗಳ ಹಾಗೂ ಆಹಾರ ವಸ್ತುಗಳನ್ನು ಕೆಡದಂತೆ ಇಡುವ ಕೈಗಾರಿಕೆಗಳ ಬೆಳವಣಿಗೆಯಾಗಿದೆ.

ಇಝತ್‌ನಗರದಲ್ಲಿರುವ ಭಾರತದ ಪಶುಪ್ರಾಣಿ ಸಂರಕ್ಷಣಾ ಕೇಂದ್ರದ ಕೋಳಿಗಳ ಪಾಲನಾ ಸಂಬಂಧ ಸಂಶೋಧನಾ ವಿಭಾಗದವರು, ಮೊಟ್ಟೆಗಳನ್ನು ಬೇಸಿಗೆಯ ಕಾಲದಲ್ಲಿ ಕೆಡದಂತೆ ಇಡುವ ವಿಧಾನವನ್ನು ಕಂಡು ಹಿಡಿದಿರುವರು. ಈ ವಿಧಾನಕ್ಕೆ 'ಥರ್ಮೋ ಸ್ಟೆಬಿಲೈಸೇಷನ್' ಎಂಬ ಹೆಸರಿದ್ದರೂ ಈ ವಿಧಾನವು ತುಂಬಾ ಸರಳವಾಗಿರುವುದು. ಅದರ ಪ್ರಕಾರ ಬಿಸಿ ನೀರಿನಲ್ಲಿ ಅಂದರೆ ೫೪. ೫ ಡಿಗ್ರಿ ಸೆಂಗ್ರೇಡ್ ಉಷ್ಣಾಂಶದಲ್ಲಿರುವ ನೀರಿನಲ್ಲಿ ಮೊಟ್ಟೆಗಳನ್ನು ೫೦ ಸೆಕೆಂಡುಗಳ ಕಾಲ ಮುಳುಗಿಸಬೇಕು. ಇದಕ್ಕೆ ಮೊಟ್ಟೆಗಳು ತುಂಬಾ ಹಳೆಯವಾಗಲಿ, ತುಂಬಾ ಹೊಸವಾಗಲಿ ಇರಬಾರದು. ಉತ್ತಮ ಗುಣಾಂಶದ ಮೊಟ್ಟೆಗಳನ್ನು ಮಾತ್ರ ಉಪಯೋಗಿಸಬೇಕು.

ಈ ಮೊಟ್ಟೆಗಳನ್ನು ೨೦೦—೩೫೦ ಮೊಟ್ಟೆಗಳು ಹಿಡಿಸುವ ತಂತಿಯ ಬುಟ್ಟಿಗಳಲ್ಲಿ ಮೊದಲು ಇಡಬಾಗುವುದು. ಈ ಬುಟ್ಟಿಗಳನ್ನು ೫೪.೫ ಡಿಗ್ರಿ ಸೆಂಟಿ ಗ್ರೇಡ್ ಉಷ್ಣಾಂಶವಿರುವ ನೀರಿನಲ್ಲಿ ಮುಳುಗಿಸಬೇಕು. ಅನಂತರ ಅವನ್ನು ತಣ್ಣಗೆ ಮಾಡಬೇಕು.

ಈ ವಿಧಾನಕ್ಕೊಳಪಡಿಸಿದ ಮೊಟ್ಟೆಗಳನ್ನು ಉತ್ತರ ಭಾರತದಲ್ಲಿ ಬೇಸಿಗೆ ಕಾಲದಲ್ಲಿಯೂ ೧೦ ದಿನಗಳಕಾಲ ಕೆಡದಂತೆ ಇಡಬಹುದು. ಈ ವಿಧಾನವು ಸರಳವಾಗಿರುವುದು. ಭಾರತದ ಗ್ರಾಮಗಳಲ್ಲಿಯೂ ಈ ವಿಧಾನವನ್ನು ಸುಲಭವಾಗಿ ಅನುಸರಿಸಬಹುದು.

oo oo

'ಎ' ಅನ್ನಾಂಗದ ಉತ್ಪಾದನೆ

ಮುಂಬೈನಲ್ಲಿ ಇತ್ತೀಚೆಗೆ 'ಎ' ಅನ್ನಾಂಗವನ್ನು (ಜೀವಾತು) ಉತ್ಪಾದಿಸುವ ಯಂತ್ರಾಗಾರಗಳನ್ನು ಸ್ಥಾಪಿಸಲಾಗಿದೆ. 'ಎ' ಅನ್ನಾಂಗವನ್ನು ಉತ್ಪಾದಿಸುವ ರಾಷ್ಟ್ರಗಳಲ್ಲಿ ಭಾರತವು ಆರನೆಯ ಸ್ಥಾನವನ್ನು ಗಳಿಸಿರುವುದು. ಈ ಯಂತ್ರಾಗಾರಗಳು ೧೫ ದಶ ಲಕ್ಷ ಮೆಗಾ ಯೂನಿಟ್‌ಗಳಷ್ಟು 'ಎ' ಅನ್ನಾಂಗವನ್ನು ತಯಾರಿಸುವುವು. ಭಾರತದಲ್ಲಿ ಈ ಅನ್ನಾಂಗದ ಆಗತ್ಯವನ್ನು ಇದು ಪೂರೈಸುವುದು.

ಭಾರತದಲ್ಲಿ ಸಾರ್ವಜನಿಕಆರೋಗ್ಯ ಕಾರ್ಯಕ್ರಮದಲ್ಲಿ 'ಎ' ಅನ್ನಾಂಗದ ಉತ್ಪಾದನೆಯ ಕಾರ್ಯವು ಅತ್ಯಂತ ಮಹತ್ತರವಾಗುತ್ತದೆ. ಪ್ರೋಟೀನ್‌ಗಳನ್ನು ಬಿಟ್ಟರೆ, 'ಎ' ಅನ್ನಾಂಗದ ಕೊರತೆಯೇ ಭಾರತದಲ್ಲಿ ಬಹಳವಾಗಿ ಹರಡಿರುವುದು. 'ಎ' ಅನ್ನಾಂಗವನ್ನು ಅಗತ್ಯ ಪ್ರಮಾಣಗಳಲ್ಲಿ ಉತ್ಪಾದಿಸುವುದರಿಂದ ಜನತೆಯ ಪೌಷ್ಟಿಕಾಂಶದ ಮಟ್ಟವು ಸುಧಾರಿಸುವುದು.

'ಎ' ಅನ್ನಾಂಗವನ್ನು, ಮಕ್ಕಳು ಮತ್ತು ಅಶಕ್ತರಿಗೆ ಕೊಡುವ ಆಹಾರ ವಸ್ತುಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತಿದೆ. ವನಸ್ಪತಿ, ಬೆಣ್ಣೆ, ಹಾಲು, ಬ್ರೆಡ್ ಮುಂತಾದ ವಸ್ತುಗಳಲ್ಲಿ ಪೌಷ್ಟಿಕಾಂಶವನ್ನು ಹೆಚ್ಚುಮಾಡಲೂ ಇದನ್ನು ಬಳಸಲಾಗುವುದು.

oo oo

ಅಕ್ಕಿಗೆ ಬದಲು ಟೋಪಿಯೋಕ

ಮೈಸೂರು. ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯಲ್ಲಿ ಟೋಪಿಯೋಕ ಮಕರೋನಿಯನ್ನು ಉತ್ಪಾದಿಸುವ ಸಲುವಾಗಿ, ಪ್ರಾಯೋಗಿಕ ಯಂತ್ರವೊಂದನ್ನು ಸ್ಥಾಪಿಸಲಾಗಿದೆ. ಈಗ್ಗೆ ಕೆಲವು ವರ್ಷಗಳ ಹಿಂದೆ, ಈ ಸಂಸ್ಥೆಯು ಅಕ್ಕಿ ಮತ್ತು ಗೋಧಿಯ ಬದಲು, ಉಪಯೋಗಿಸುವಂತಹ ಪೌಷ್ಟಿಕ ಆಹಾರ ವಸ್ತುಗಳ ಬಗೆಗೆ ಕ್ರಮಬದ್ಧ ಸಮೀಕ್ಷೆ ನಡೆಸಿತು. ಇದಕ್ಕಾಗಿ ತಿರುವನಂತಪುರದಲ್ಲಿ ವಿಜ್ಞಾನಿಗಳ ತಂಡವೊಂದು ಕೆಲಸಮಾಡಿ ನೂರಕ್ಕೆ ೭೫ರಷ್ಟು ಟೋಪಿಯೋಕಾ ಹಿಟ್ಟು ಮತ್ತು ನೂರಕ್ಕೆ ೧೫ರಷ್ಟು ಕಡಲೆಕಾಯಿ ಹಿಟ್ಟನ್ನು ಸೇರಿಸಿ ಕೃತಕ ಧಾನ್ಯವೊಂದನ್ನು ಉತ್ಪಾದಿಸಿತು. ಈ ಧಾನ್ಯವು ನೋಡಲು ಅಕ್ಕಿಯಂತೆಯೇ ಕಾಣುವ ವಿಷಯಕ್ಕೆ ಗಮನವೀಯಲಾಗಿತ್ತು. ಮೈಸೂರಿನ, ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯು ಇದರಲ್ಲಿ ಯಶಸ್ಸುಗಳಿಸಿ, ಈ ಧಾನ್ಯವನ್ನು ವಾಣಿಜ್ಯ ಪ್ರಮಾಣದಲ್ಲಿ ತಯಾರಿಸುವ ಪ್ರಾಯೋಗಿಕ ಯಂತ್ರವನ್ನು ಸ್ಥಾಪಿಸಿದೆ.

oo oo

ಚಿರ್ ಮರದಿಂದ ಕಾಗದ

ಡೆಹರಾಡೂನಿನ ವನ್ಯ ಸಂಶೋಧನಾ ಸಂಸ್ಥೆಯು ಚಿರ್ ಎಂಬ ಮರದಿಂದ ಕಾಗದವನ್ನು ತಯಾರಿಸಬಹುದೆಂದು ಪ್ರಯೋಗಗಳಿಂದ ಸಿದ್ಧಮಾಡಿತೋರಿಸಿದೆ.

ವಿಚಿತ್ರ ಸತ್ಯ

ಜಪಾನದ ರಾಜಧಾನಿ– ಟೋಕಿಯೋ ನಗರ.

ವರ್ಷಂಪ್ರತಿ ಎರಡು ಲಕ್ಷ ಜನಸಂಖ್ಯೆ ಏರುತ್ತಿರುವ ವಿಲಕ್ಷಣ ನಗರವಿದು!

ಜಪಾನದ ರಾಜಧಾನಿ ಟೋಕಿಯೋ ನಗರವು ಏಶ್ಯಾ ಭೂಖಂಡದಲ್ಲಿಯೇ ಅತಿ ದೊಡ್ಡದು ಮಾತ್ರವಲ್ಲದೇ ಸಂಮೃದ್ಧಿಶೀಲವಾದ ನಗರವೂ ಆಗಿರುತ್ತದೆ, ಸುಮಾರು ೨೮೦ ಚದರ ಮೈಲು ವಿಸ್ತೀರ್ಣದಲ್ಲಿ ಹರಡಿರುವ ಈ ನಗರದ ಜನಸಂಖ್ಯೆ ಸುಮಾರು ೮೦ ಲಕ್ಷಕ್ಕೆ ಸಮೀಪವಿದೆ. ಕಳೆದ ಹತ್ತು ವರ್ಷಗಳಲ್ಲಿ ನಡೆದ ಪರಿಶೀಲನೆಯಿಂದ ಈ ನಗರದ ಜನಸಂಖ್ಯೆಯು ಪ್ರತಿವರ್ಷ ಎರಡು ಲಕ್ಷದಷ್ಟು ಹೆಚ್ಚುವುದೆಂದು ತಿಳಿದುಬಂದಿದೆ. ಈಗ ಇಲ್ಲಿ ನೆಲಸಿರುವ ೮೦ ಲಕ್ಷ ಜನರಲ್ಲಿ ಸುಮಾರು ಎರಡು ಲಕ್ಷ ಜನರಿಗೆ ನಿವಾಸ ಸ್ಥಾನವೆಂಬುದೇ ಇಲ್ಲ ಎಂದರೆ ನೀವು ಆಶ್ಚರ್ಯಪಡಬಹುದು.

ಟೋಕಿಯೋವಿನಲ್ಲಿ ೨೮ ವಿಶ್ವವಿದ್ಯಾಲಯಗಳಿವೆ. ಇವುಗಳಲ್ಲಿ ಒಟ್ಟು ಐದೂ ಮುಕ್ಕಾಲು ಲಕ್ಷ ವಿದ್ಯಾರ್ಥಿಗಳು ಅಭ್ಯಾಸ ನಡೆಸುತ್ತಿದ್ದಾರೆ. ನಗರದ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಟ್ಟಣೆ ಅತ್ಯಧಿಕವಾಗಿರುವುದರಿಂದ ಇಲ್ಲಿ ದಿನದಲ್ಲಿ ಮೂರು ಪಾಳಿಗಳನ್ನು ಮಾಡಿ ಶಾಲೆಗಳನ್ನು ನಡೆಸಲಾಗುತ್ತಿದೆ. ನಗರದ ನಿವಾಸಿಗಳಲ್ಲಿ ಒಟ್ಟು ಎರಡೂವರೆ ಲಕ್ಷ ಮೋಟಾರುಕಾರುಗಳೂ ೧ ಲಕ್ಷದ ೩೨ ಸಾವಿರ ಮೋಟಾರು ಸ್ಕೂಟರ್‌ಗಳೂ ಇವೆ. ಪ್ರತಿ ಮೂರು ಮನೆಗಳಿಗೆ ಒಂದೊಂದು ಟೆಲಿಫೋನ್ ಸೆಟ್ಟು ಇವೆ. ಅಲ್ಲದೇ ಪ್ರತಿ ಮೂರು ಕುಟುಂಬಗಳಿಗೊಂದರಂತೆ ಬಟ್ಟೆ ಒಗೆಯುವ ಒಂದು ಯಂತ್ರವಿದೆ.

ಮೇಲೆ ಹೇಳಿದಂತೆ ಮೋಟಾರುಕಾರು ಮತ್ತು ಸ್ಕೂಟರ್‌ಗಳಲ್ಲದೇ ನಗರವಾಸಿಗಳ ಸಂಚಾರ ಸೌಕರ್ಯಕ್ಕಾಗಿ ೪,೬೨೨ ಬಸ್ಸುಗಳು, ೧,೪೦೪ ಟೇಕ್ಸಿಗಳು, ೪೯ ಟ್ರಾಲಿ ಬಸ್ಸುಗಳು ಮತ್ತು ೨೭ ರೇಲು ಮಾರ್ಗಗಳಿವೆ.

ಪಾಶ್ಚಾತ್ಯ ಸಂಸ್ಕೃತಿಯು ತನ್ನ ಪ್ರಭಾವವನ್ನು ಬೀರಿದ ಏಶ್ಯದ ನಗರಗಳಲ್ಲಿ ಹಾಂಗ್‌ಕಾಂಗ್ ಪ್ರಥಮ ಸ್ಥಾನವನ್ನು ಗಳಿಸಿದರೆ, ಟೋಕಿಯೊ ದ್ವಿತೀಯಸ್ಥಾನವನ್ನು ಪಡೆದಿದೆ. ಅಮೆರಿಕೆಯ ಐಶ್ವರ್ಯಪೂರ್ಣ ಜೀವನವು ತನ್ನ ಬಲವಾದ ಮುದ್ರೆಯನ್ನು ಟೋಕಿಯೊನಗರದ ಮೇಲೆ ಒತ್ತಿರುತ್ತದೆ. ಇದರಿಂದಾಗಿಯೇ ಜನತೆಯ ಮನೋರಂಜನೆಗೆ ಇಲ್ಲಿ ವಿಶೇಷ ಗಮನವನ್ನು ಈಯಲಾಗುತ್ತಿದೆ. ನಗರದಲ್ಲಿ ಮದಿರಾಲಯಗಳು, ರೆಸ್ಟೋರೆಂಟ್‌ಗಳು ಮತ್ತು ನೈಟ್ ಕ್ಲಬ್‌ಗಳು ಐವತ್ತು ಸಾವಿರಕ್ಕೂ ಮಿಕ್ಕಿವೆ. ಇವಲ್ಲದೇ ಸುಮಾರು ನಾಲ್ಕು ಸಾವಿರ ಮನೋರಂಜನಾ ಕ್ಷೇತ್ರಗಳೂ ಇವೆ; ಇವುಗಳಲ್ಲಿ ೭೭೬ ಸಿನೆಮಾಥಿಯೇಟರ್‌ಗಳು!

ಟೋಕಿಯೋ ನಗರದಲ್ಲಿರುವ ಉನ್ನತ ಮಟ್ಟದ ಹೋಟೇಲುಗಳ ಸಂಖ್ಯೆ ೩೦. ಇನ್ನು ಪ್ರವಾಸಿಗಳಿಗಾಗಿ ಜಾಪಾನೀ ಮಾದರಿಯ ೩,೭೫೪ "ಸರಾಯ"ಗಳೂ ಇವೆ.

ಇಂತಹ ವಿಲಕ್ಷಣವಾದ ನಗರ ಜಪಾನಿನ ರಾಜಧಾನಿ ಟೋಕಿಯೊ!

ಹಿಮಾಲಯದ ಹೊರವಲಯಗಳಲ್ಲಿ ಈ ಮರವು ಯಥೇಚ್ಛವಾಗಿ ಬೆಳೆಯುವುದು. ಈ ಮರವನ್ನು ಈಗ ರೈಲು ಕಂಬಿಗಳ ಕೆಳಗೆ ಅಡ್ಡಲಾಗಿ ಹಾಕುವ ಮರಗಳಿಗಾಗಿ ಉಪಯೋಗಿಸಲಾಗುತ್ತಿದೆ. ಈ ಅಡ್ಡ ಮರಗಳನ್ನು ತಯಾರಿಸುವಾಗ, ಉಳಿಯುವ ಅನುಪಯುಕ್ತ ಚೂರುಗಳನ್ನು ಕಾಗದದ ತಯಾರಿಕೆಗೆ ಉಪಯೋಗಿಸಬಹುದು. ಈ ಮರದ ಪಲ್ಪ್‌ನಿಂದ ತಯಾರಾದ ಕಾಗದದ ಬಗೆಗೆ ಅನೇಕ ಪ್ರಯೋಗಗಳನ್ನು ನಡೆಸಲಾಯಿತು. ಈ ಪಲ್ಪ್‌ನಿಂದ ತಯಾರಾದ ಕಾಗದವು ಉತ್ತಮ ಗುಣಾಂಶವುಳ್ಳದ್ದೂ ಹೊಳಪುಳ್ಳದ್ದೂ ಆಗಿರುವುದೆಂದು ಈ ಪ್ರಯೋಗಗಳಿಂದ ವ್ಯಕ್ತಪಟ್ಟಿರುವುದು.

oo oo

ಸುಲಭದಲ್ಲಿ ಇಡ್ಲಿ

ಮೈಸೂರಿನ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯು ಸುಧಾರಿಸಿದ ರೀತಿಯಲ್ಲಿ ಇಡ್ಲಿಯನ್ನು ತಯಾರಿಸುವ ವಿಧಾನವನ್ನು ಕಂಡುಹಿಡಿದಿದೆ.

ಹೊಸ ವಿಧಾನದ ಪ್ರಕಾರ, ನುಣ್ಣಗೆ ಪುಡಿಮಾಡಿದ ಉದ್ದಿನ ಹಿಟ್ಟನ್ನು ನೀರಿನಲ್ಲಿ ಕಲಸಿ ೬—೮ ಗಂಟೆ ಇಡಬೇಕು. ಅದನ್ನು ಅಕ್ಕಿಯ ದಪ್ಪರವೆಯೊಂದಿಗೆ ಬೆರೆಸಬೇಕು. ಈ ಮಿಶ್ರಣವನ್ನು, ಮತ್ತಷ್ಟು ನೀರು ಬೆರೆಸಿ, ೧೨ ಗಂಟೆಗಳ ಕಾಲ ಇಡಬೇಕು. ಈ ಹಿಟ್ಟಿನಿಂದ ತಯಾರಿಸಿದ ಇಡ್ಲಿಯು ಮೃದುವಾಗಿರುವುದು.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಗೋ ವಿಜಯ

(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ಸೇವಾ ಸಮಾಜ

ರೆಡ್‌ಕ್ರಾಸ್ ಸಂಸ್ಥೆ ಮತ್ತು ಅಂಬುಲೆನ್ಸ್ ಸಮಿತಿ

ರಣರಂಗದವರ ದುಸ್ಥಿತಿಯನ್ನು ಸುಧಾರಿಸಲು ರಣರಂಗದಲ್ಲಿಯೇ ಜನ್ಮವೆತ್ತಿದ ಸಂಸ್ಥೆಗಳು

ಪ್ರಪಂಚದ ಉಳಿದ ೮೩ ರಾಷ್ಟ್ರಗಳಂತೆಯೇ ಭಾರತವೂ ಜೂನ್ ಮಾಹೆಯ ಎಂಟನೆಯ ದಿನಾಂಕದಂದು ರೆಡ್ ಕ್ರಾಸ್‌ನ ಶತಮಾನೋತ್ಸವವನ್ನು ಆಚರಿಸಿತು. ಈ ಆಚರಣೆಯು ಜೂನ್ ಕೊನೆಯವಾರದವರೆಗೂ ಮುಂದುವರಿಯುವುದು. ಜೂನ್ ೮ನೆಯ ತಾರೀಕು ರೆಡ್ ಕ್ರಾಸ್ ಸಂಸ್ಥೆಯ ಮೂಲ ಯೋಜಕರಾದ ಶ್ರೀ ಹೆನ್ರಿ ಡುನಂಟರ ಜನ್ಮದಿನವಾದುದರಿಂದ ಆ ದಿನದಂದೇ ಈ ಉತ್ಸವವು ಪ್ರಾರಂಭವಾಯಿತು. ಈ ಸಂಸ್ಥೆಯು ಕಳೆದ ನೂರು ವರ್ಷಗಳಲ್ಲಿ ಮಾನವನ ಕ್ರೂರಾಚರಣೆಗೆ ಬಲಿಬಿದ್ದ ಅನಂತ ಪ್ರಾಣಗಳ ಸೇವೆಯನ್ನು ಮಾಡಿರುತ್ತದೆ ಎಂಬುದನ್ನು ಗಮನಿಸಿದರೆ, ಈ ಸಂಘದ ಧ್ಯೇಯಗಳಲ್ಲಿ ಹುದುಗಿರುವ ಆದರ್ಶಗಳ ಅರಿವು ನಮಗಾಗುವುದು.

ಅದು ಕ್ರಿಸ್ತಾಬ್ದ ೧೮೫೯ ಆಗಿತ್ತು. ಇಟಲಿಯ ಸಾಲ್ಫೋರಿನೊ ರಣರಂಗದ ನಡುವೆಯೇ ಈ ಕೆಂಪು ಕ್ರೂಜೆಯ (ರೆಡ್ ಕ್ರಾಸ್) ಸಂಘದ ಯೋಜನೆಯು ಬೆಳಕಿಗೆ ಬಂತು. ಸ್ವಿಜರ್ಲೆಂಡಿನ ಸಂಚಾರಿ ವ್ಯಾಪಾರಿಗಳಾದ ಶ್ರೀ ಹೆನ್ರಿ ಡುನಂಟರು ಉತ್ತರ ಇಟಲಿಯಲ್ಲಿ ತಿರುಗಾಡುತ್ತ ಇಲ್ಲಿ ಕಾಣಿಸಿಕೊಂಡರು. ನಿರ್ಲಕ್ಷಿಸಲ್ಪಟ್ಟ ಸಾವಿರಾರು ಗಾಯಗೊಂಡವರನ್ನೂ ಸಾವಿನ ದವಡೆಯಲ್ಲಿ ನರಳುತ್ತಿರುವ ಸೈನಿಕರನ್ನೂ ಮಾನವೀಯದೃಷ್ಟಿಯಿಂದ ಕಂಡ ಇವರು ಅಕ್ಕಪಕ್ಕದ ಹಳ್ಳಿಗಳಿಂದ ಸ್ವಯಂ ಸೇವಕರನ್ನು ಒಟ್ಟುಗೂಡಿಸಿ ಅವರ ನರಳಾಟವನ್ನು ದೂರೀಕರಿಸುವ ಪ್ರಯತ್ನ ನಡೆಸಿದರು. ತಮ್ಮ "ಅನ್ ಸವೊನೀರ್ ಡಿ ಸಾಲ್ಫೊರಿನೊ" ಎಂಬ ಪುಸ್ತಕದಲ್ಲಿಯೂ ಮುಂದಿನ ಅಸಂಖ್ಯಾತ ಸಂದರ್ಶನಗಳಲ್ಲಿಯೂ ಶ್ರೀ ಹೆನ್ರಿ ಡುನಂಟರು "ಯುದ್ಧವಾಗುವ ಸಂದರ್ಭದಲ್ಲಿ ಗಾಯಗೊಂಡವರಿಗೆ ಸೇವೆಯನ್ನು ರಾಷ್ಟ್ರವೈವಿಧ್ಯವಿಲ್ಲದೆ ಎಲ್ಲರಿಗೂ ಸಲ್ಲಿಸುವ" ರಾಷ್ಟ್ರೀಯ ಸ್ವಯಂಸೇವಕ ಸಮಿತಿಗಳು ಇರಬೇಕು ಎಂದು ಪ್ರತಿಪಾದಿಸಿರುವರು.

ಶ್ರೀ ಹೆನ್ರಿ ಡುನಂಟರು ಕಂಡುಕೊಂಡ ಈ ದರ್ಶನದ ಸತ್ಯತೆಯನ್ನು ಕೆಲವೇ ವರ್ಷಗಳಲ್ಲಿ ಎಲ್ಲರೂ ಕಂಡುಕೊಂಡರು. ಅಂತಾರಾಷ್ಟ್ರೀಯ ರೆಡ್‌ಕ್ರಾಸ್ ಸಮಿತಿಯು ೧೮೬೩ರಲ್ಲಿ ಸ್ಥಾಪಿಸಲ್ಪಟ್ಟಿತು. ಒಂದೇ ವರ್ಷದೊಳಗೆ ೧೪ ರಾಜ್ಯಗಳು ಮೊದಲನೆಯ ಜಿನೇವಾ ಸಮಾವೇಶನದಲ್ಲಿ ಯುದ್ಧಕ್ಷೇತ್ರದಲ್ಲಿ ಗಾಯಗೊಂಡ ಸೇನೆಗಳ ಸ್ಥಿತಿಯನ್ನು ಸುಧಾರಿಸುವ ನಿರ್ಧಾರಪ್ರಂದಕ್ಕೆ ಸಹಿಮಾಡಿದುವು. ಮೊತ್ತಮೊದಲಿಗೆ ರಾಷ್ಟ್ರೀಯ ರೆಡ್‌ಕ್ರಾಸ್ ಸಂಘಗಳು ೧೮೬೪ರಲ್ಲಿ ಬೆಲ್ಜಿಯಂ, ಫ್ರಾನ್ಸ್, ಇಟಲಿ, ಸ್ಪೈಯಿನ್ ಮತ್ತಿತರ ಅನೇಕ ಜರ್ಮನ್ ರಾಜ್ಯಗಳಲ್ಲಿ ಸ್ಥಾಪಿಸಲ್ಪಟ್ಟುವು.

ತದನಂತರ ಅನೇಕ ಇತರ ರಾಷ್ಟ್ರಗಳೂ ಈ ತತ್ವದರ್ಶನವನ್ನು ಒಪ್ಪಿಕೊಂಡುವು. ರಣರಂಗದಲ್ಲಿ ಗಾಯಗೊಂಡವರ ಆರೈಕೆ, ಯುದ್ಧಪಡೆಯ ರೋಗಿಷ್ಠ ಹಾಗೂ ಅಪಾಯಗ್ರಸ್ತ ಸೈನಿಕರ ರಕ್ಷಣೆ, ಯುದ್ಧ ಕೈದಿಗಳ ಸುಭದ್ರತೆ, ಯುದ್ಧ ನಡೆಯುವ ಸಂದರ್ಭದಲ್ಲಿ ನಾಗರಿಕರ ಕ್ಷೇಮಚಿಂತನೆ—ಇತ್ಯಾದಿ ಕಾರ್ಯಗಳು ಈ ಸಂಘದ ಮೂಲಕ ನಡೆಯತೊಡಗಿದುವು. ಜಿನೇವಾ ಸಮಾಧಿವೇಶನವಿಲ್ಲದಿರುತಿದ್ದರೆ, ಇವಾವುವೂ ದೂರದ ಮಾತೇ ಆಗುತಿದ್ದುವು.

ಈಗ ಕೇವಲ ಯುದ್ಧಕಾಲದಲ್ಲಿ ಅಲ್ಲದೇ ಶಾಂತಿಕಾಲದಲ್ಲಿಯೂ ರೆಡ್ ಕ್ರಾಸ್ ಸಂಸ್ಥೆಯು ಮಾನವೀಯ ಸೇವೆಯನ್ನು ಸಲ್ಲಿಸುತ್ತದೆ. ಇದರಲ್ಲಿ ಈಗ ಸುಮಾರು ೧೦ ಕೋಟಿಗಳಷ್ಟು ಸದಸ್ಯರು—ಇವರಲ್ಲಿ ಗಂಡಸರು, ಹೆಂಗಸರು ಮತ್ತು ಮಕ್ಕಳು, ವಿವಿಧ ಕುಲ, ಭಿನ್ನಭಿನ್ನ ಮತ ಮತ್ತು ಬೇರೆಬೇರೆ ತತ್ವಗಳಿಗೆ ಸೇರಿದವರು ಇರುತ್ತಾರೆ—ಈ ದುಃಖಪೀಡಿತರಿಗೆ ಮಾನವೀಯ ಸೇವೆ ಸಲ್ಲಿಸುವ ಮಹಾ ಇಚ್ಛೆಯಿಂದ ಒಗ್ಗೂಡಿರುತ್ತಾರೆ. ಈಗ ೮೪ ರಾಷ್ಟ್ರಗಳಲ್ಲಿರುವ ರೆಡ್ ಕ್ರಾಸ್ ಸಂಘವನ್ನು ಲೀಗ್ ಆಫ್ ರೆಡ್ ಕ್ರಾಸ್ ಸೊಸಾಯಿಟೀಸ್ ಎಂಬ ಸಂಸ್ಥೆಯು ತನ್ನ ಮಾರ್ಗದರ್ಶನದಲ್ಲಿ ಮುನ್ನಡೆಸುತ್ತಿದೆ. ಈ ಮುಖ್ಯ ಸಂಸ್ಥೆಯ ಪ್ರಧಾನ ಕಾರ್ಯಾಲಯವು ಜಿನೇವದಲ್ಲಿದೆ.

ಭಾರತದಲ್ಲಿ ಪ್ರಥಮ ಲೋಕ ಸಮರಾವಧಿಯಲ್ಲಿ ಬ್ರಿಟಿಷ್ ರೆಡ್ ಕ್ರಾಸ್ ಸೊಸಾಯಿಟಿಯು ಮತ್ತು ಸೈಂಟ್ ಜಾನ್ಸ್ ವಾರ್ ಕಮಿಟಿಗಳ ಭಾರತೀಯ ಶಾಖೆಯು ಪ್ರಾರಂಭವಾದಂದಿನಿಂದ ಇವು ಕಾರ್ಯನಿರತವಾಗಿರುವುವು. ಭಾರತೀಯ ಶಾಸನ ಪ್ರಣಾಳಿಯಲ್ಲಿ ಒಂದು ಕಾಯಿದೆಯನ್ನು ಮಾಡಿ ೧೯೨೦ರಲ್ಲಿ ಭಾರತೀಯ ಕೆಂಪು ಕ್ರೂಜೆಯ ಸಂಘವನ್ನು ಸ್ಥಾಪಿಸಲಾಯಿತು.

ಬಾಣಂತಿಯರ ಮತ್ತು ಮಕ್ಕಳ ಪ್ರಗತಿ ಕಾರ್ಯದಲ್ಲಿ ಭಾರತೀಯ ಕೆಂಪು ಕ್ರೂಜೆಯ ಸಂಘವು ಬಹಳ ಕೆಲಸ ಮಾಡಿರುತ್ತದೆ. ಸದ್ಯ ರಾಷ್ಟ್ರದಲ್ಲಿರುವ ಬಾಣಂತಿಯರ ಮತ್ತು ಮಕ್ಕಳ ಸ್ಥಿತಿವರ್ಧಕ ಕೇಂದ್ರಗಳಲ್ಲಿ ನೂರಕ್ಕೆ ಇಪ್ಪತ್ತೈದರಷ್ಟು ಈ ಕೆಂಪು ಕ್ರೂಜೆಯ ಸಂಘದಿಂದ ನಡೆಸಲ್ಪಡುತ್ತವೆ. ಅಥವಾ ಇದಕ್ಕೆ ಸೇರ್ಪಡೆಗೊಂಡಿರುತ್ತವೆ. ಅಶಕ್ತ ನಿವೃತ್ತ ಸೇವಕರಿಗಾಗಿ ಖ್ಯಾತವಾದ ಒಂದು ಗೃಹವನ್ನೂ ಇದು ನಡೆಸಿಕೊಂಡು ಬರುತ್ತಿದೆ. ಇದರ ಅಂಬುಲೆನ್ಸ್ ವಿಭಾಗವು—ಇದನ್ನು ಸೈಂಟ್ ಜಾನ್ಸ್ ಅಂಬುಲೆನ್ಸ್ ಎಸೋಸಿಯೇಶನ್ ಎಂದು ಕರೆಯುತ್ತಾರೆ—ಸುಮಾರು ೩೦ ಲಕ್ಷಗಳಷ್ಟು ಜನರನ್ನು ಪ್ರಥಮ ಚಿಕಿತ್ಸೆಯೇ ಮೊದಲಾದ ವಿಷಯಗಳಲ್ಲಿ ತರಬೇತಿಮಾಡಿರುತ್ತದೆ. ಇದಕ್ಕೆ ಒಂದು ಲಕ್ಷಕ್ಕೂ ಮಿಕ್ಕಿದ ಸದಸ್ಯರು ಇರುವರು. ಅಲ್ಲದೇ ಜೂನಿಯರ್ ರೆಡ್‌ಕ್ರಾಸ್‌ಗೆ ಇಪ್ಪತ್ತು ಲಕ್ಷ ಸದಸ್ಯರಿರುತ್ತಾರೆ.

೧೯೫೭ರ ಅಕ್ಟೋಬರ—ನವಂಬರಗಳಲ್ಲಿ ನವದೆಹಲಿಯಲ್ಲಿ ೧೯ನೆಯ ಅಂತಾರಾಷ್ಟ್ರೀಯ ರೆಡ್‌ಕ್ರಾಸ್ ಸಮ್ಮೇಳನವು ನಡೆದಿದ್ದಿತು. ಆ ಸಮ್ಮೇಳನದಲ್ಲಿ ಭಾರತವು ಸ್ವಾಗತೀಕರಿಸುವ ರಾಷ್ಟ್ರವಾಗಿತ್ತು.

ಹೀಗೆ, ಜನತೆಗೆ ನಿಸ್ವಾರ್ಥದೃಷ್ಟಿಯಿಂದ ವಿವಿಧ ಮುಖಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಈ ರೆಡ್‌ಕ್ರಾಸ್ ಸಂಸ್ಥೆಯು ತನ್ನ ನೂರು ವರ್ಷಗಳನ್ನು ಸಾರ್ಥಕಗೊಳಿಸಿದಂತೆಯೇ ಮುಂದಿನ ಅನಂತ ವರ್ಷಗಳನ್ನೂ ಜನಸೇವೆಗಾಗಿಯೇ ಮೀಸಲಿಡುವುದು. ಇಂತಹ ನಿಸ್ವಾರ್ಥೀ ಸಂಸ್ಥೆಯು ಜನತೆಯ ಗೌರವಾದರಾಭಿಮಾನಗಳಿಗೆ ಪಾತ್ರವಾಗಿದೆಯೆಂಬುದು ನಿಸ್ಸಂದಿಗ್ಧ.

ಬುದ್ಧನ ಕಾಲದ ಅವಶೇಷಗಳು



ಕ್ರಿ. ಪೂ. ೫೦೦ರಿಂದ ೨೦೦ರ ನಡುವಿನ ಗಟ್ಟಿಮುಟ್ಟಾದ ಹಳ್ಳಿಯ ರಸ್ತೆಯೊಂದನ್ನು ಮೊದಲನೆಯ ಚಿತ್ರದಲ್ಲಿ, ಸಿಪ್ರ ನದಿಯ ಕೆಸರು ತುಂಬಿದ ಮೇಲ್ಭಾಗದಲ್ಲಿ ಮರದ ದಿಂಬಿಗಳನ್ನು ಹಾಕಿರುವುದನ್ನು ಎರಡನೆಯದರಲ್ಲಿ ಮತ್ತು ಆನೆಮಣ್ಣು ಸವರಿದ ಕಾಲುವೆಯೊಂದನ್ನು ಮೂರನೆಯದರಲ್ಲಿ ಕಾಣಬಹುದು.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No· 466 N/50 date 2-12-1950 of the Director of public Instruction, Madras·

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್, ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ· 2·00·

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ...... ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು·"(ಪ್ರೊ। ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

ಶುದ್ಧ ಹರಟೆ

(೩ನೇ ಪುಟದಿಂದ)

ದ್ಧ ಪಡಿಸಿಕೊಂಡರು- ರತಿ ರಹಸ್ಯವನ್ನೋದಿ—ಗರ್ಭದಾನಕ್ಕೆ ಯಾವ ವಾರ, ಯಾವ ತಿಥಿಯಲ್ಲಿ, ಯಾವ ಘಳಿಗೆಯಲ್ಲಿ ಸತಿ ಪತಿಯರು ಅನುರಾಗಯುಕ್ತರಾಗಿ ಒಂದಾದರೆ ಗಂಡು ಹುಟ್ಟುವುದೆಂಬುದನ್ನೆಲ್ಲಾ ಓದಿ ಬ್ರಾಯಃಪಾತ ಕಲಿತರು. ಈ ಬಾರಿಯಾದರೂ ಒಂದು ಗಂಡು ಮಗುವನ್ನು ತನ್ನ ಹೆಂಡ್ತಿಯ ಹೊಟ್ಟೆಯಿಂದ ಹೊರಬರಿಸಿ ಅವಳ ಬಾಯಿಯಿಂದಲೇ 'ಶಹಭಾಸ್' ಅನ್ನಿಸಿಕೊಂಡು ಮೀಸೆ ಹೊತ್ತ ಗಂಡಿಗೆ ತಾನೂ ಕಡಿಮೆಯಲ್ಲವೆಂಬುದನ್ನು ತೋರಿಸಿಕೊಡಬೇಕು" ಎಂದೆಲ್ಲಾ ಎಣಿಸಿ, ಗುಣಿಸಿಕೊಂಡಿದ್ದಂತೆಯೇ ಆ ಬಾರಿಯ ತಿಂಗಳೂ ಕಳೆಯಿತು.

ಸರಿ, ಎಂದಿನಂತೆ ಈ ಬಾರಿಯೂ ತಿಂಗಳು ಮುಗಿದ ಮರುದಿನವೇ ರಾಮಣ್ಣನವರು ಹೆಂಡ್ತಿಗೆ ಸುಸ್ವಾಗತವನ್ನು ಬಯಸಿ ತವರುಮನೆಯಿಂದ ಕರೆಸಿಕೊಂಡರು; ಮುಂದಿನ ಯೋಜನೆಯ ಕಾರ್ಯಾರಂಭವು ಆ ದಿನದ ಶುಭ ಮುಹೂರ್ತದಲ್ಲೇ ನೆರವೇರಿತು. ಅವರು ಹಿಂದೆ ಯೋಚಿಸಿದ ದಿನ, ವಾರ, ತಿಥಿ ಎಲ್ಲಾ ಪಂಚಾಂಗದೊಳಗೇ ಉಳಿಯಿತು. ಲಕ್ಷ್ಮಮ್ಮ ಆ ದಿನವೂ ಪತಿಯನ್ನು ಆಣಕಿಸದೆ ಇರಲಿಲ್ಲ;

"ಸಾಕು, ಇನ್ನಾದರೂ ನಿಮ್ಮ ಡೊಂಬರಾಟವನ್ನು ನಿಲ್ಲಿಸಿಬಿಡಿ. ಮೂರು ಹೆಣ್ಣು ಸಾಲದೆಂದು ಇನ್ನೂ ಈ ಸಾಧನೆಯೇ? ಎಲ್ಲವೂ ತಾನೇ, ಎಲ್ಲವೂ ತನ್ನಿಂದಲೇ ಎಂದು ಜಂಭಕೊಚ್ಚಿಕೊಂಡಿರಿ. ಮೊದಲಿಗೇ ಗಂಡು ಹುಟ್ಟಿಸದಿದ್ದರೆ ನಾನು ನಾನೇ ಅಲ್ಲ" ಎಂದಿರಲ್ಲ?-ಒಂದಲ್ಲ, ಎರಡಲ್ಲ ಮೂರನೇ ಆಚ್ಚಿನಲ್ಲಾದರೂ ಒಂದು ಗಂಡು ರೂಪವನ್ನು ಚಿತ್ರಿಸಲು ನಿಮ್ಮಿಂದಾಗಲಿಲ್ಲ. ಮದುವೆಯ ಮರುದಿನ ಅಷ್ಟೇ ಸಾಕು, ಇಷ್ಟೇ ಬೇಕು ಅಂತ ಏನೇನೋ ಮಂತ್ರ ಹಾಡಿದ್ದಿರಿ! ಆಗುವುದು ಹೋಗುವುದು ಎಲ್ಲಾ ಧೈವೇಚ್ಛೆಯೆಂದರೆ ನಿಮಗೊಂದೂ ಅರ್ಥವಾಗೋದಿಲ್ಲ—" ಎಂದು ಲಕ್ಷ್ಮಮ್ಮ ಹೇಳಿದರು.

"'ಛೆ' ಛೆ' ಹಾಗೇನಿಲ್ಲ ಲಕ್ಷ್ಮಿ, ಈ ಬಾರಿ ನೋಡು. ನೀನು ಗಂಡು ಹೆರದೆ ಹೋದ್ರೆ ನಾನು ರಾಮಣ್ಣನೇ ಅಲ್ಲ! ನನ್ನ ಹೆಸರನ್ನೇ ಬದಲಾಯಿಸಿ ಬಿಡು-"ಎಂದು ಮೀಸೆಯ ಮೇಲೊಮ್ಮೆ ಕೈಯಾಡಿಸಿದರು.

"ಹೆಸರು ಬದಲಿಸಿದರೇನು? ವ್ಯಕ್ತಿ ನೀವೇ ತಾನೆ? ನಿಮ್ಮ ಈ ಹಟದಲ್ಲಿ ನಾನು ವರುಷಕ್ಕೊಂದು ಹೆರುವ ಯಂತ್ರವಾಗಿ ಬಿಟ್ಟೆ!" ಎಂದರು ಒಳನಗೆಬೀರಿ.

'ಛೆ! ಹಾಗಲ್ಲ ಲಕ್ಷ್ಮೀ, ಈ ಬಾರಿಯೂ ನೀನು ಹೆಣ್ಣೆ ಹೆತ್ತರೆ ಎಲ್ಲವೂ ಧೈವೇಚ್ಛೆ ಎಂದು ನಾನು ಬಾಯ್ಬಿಡುವೆ ನೋಡು!...." ಎಂದು ರಾಮಣ್ಣ ಆಶಾವಾದಿಯಾಗಿ ಹೇಳುತ್ತಿದ್ದರು.

"ಹೆತ್ತವರಿಗೆ ಹೆಗ್ಗಣ ಮುದ್ದಂತೆ" ಆದರೆ ರಾಮಣ್ಣನಿಗೆ ಹುಟ್ಟಿದ ಹೆಮ್ಮಕ್ಕಳ ಮೇಲೆ ಇಷ್ಟು ತಿರಸ್ಕಾರ ಭಾವವೇಕೆ? ಗಂಡು ಹೆತ್ತು ಸಾವಿರ ಸಾವಿರ ಲೆಕ್ಕದಲ್ಲಿ ವರದಕ್ಷಿಣೆಗಿಟ್ಟಿಸಿದ ತಂದೆತಾಯಿಂದಿರಿಗೆ ಇದರ ಗುಟ್ಟು ಬಹುಸುಲಭವಾಗಿ ತಿಳಿದೀತು!

ಹಾಗೆ—ಈ ಹಿಂದೆ ಹುಟ್ಟಿದ ಮೂರು ಹೆಣ್ಣು ದೆವ್ವಗಳಿಗೆ ತಾನು ಕೊಡಬೇಕಾದ ವರದಕ್ಷಿಣೆಯ ದಂಡವನ್ನು ಒಂದು ಗಂಡನ್ನಾದರೂ ಪಡೆದು ವಜಾ ಮಾಡಿಬಿಡೋಣವೆಂದು ರಾಮಣ್ಣನ ಒಳಬಯಕೆ. ಆದರೆ ನಡೆದ ಕಥೆಮಾತ್ರ ಪೂರಾ ವಿರುದ್ಧ. ಹಿಂದಿನ ಜನ್ಮದಲ್ಲಿ, ಗಂಡು ಹೆತ್ತವರ ಋಣವನ್ನು ಪೂರಾ ಉಳಿತಾಯಮಾಡಿಕೊಂಡೇ ಇವರು ಇಲ್ಲಿ ಜನ್ಮಕ್ಕೆ ಬಂದಿರಬೇಕು, ಅದರ ಸಂದಾಯಕ್ಕಾಗಿ ಹೆಣ್ಣು ಹುಟ್ಟಲೇಬೇಕಲ್ಲವೇ? ಆಳಿಯನೆಂಬ ಹತ್ತನೇ ಗ್ರಹವು ಕೊಡುವ ಪೀಡೆಯನ್ನೂ ಅನುಭವಿಸುವ ಯೋಗ, ರಾಮಣ್ಣನ ಜನ್ಮನಕ್ಷತ್ರದಲ್ಲೇ ಅಂಟಿಕೊಂಡಿತ್ತು. ಗಾಳಿತುಂಬುವ ಚೆಂಡು ಚಣಚಣಕ್ಕೂ ಉಬ್ಬುವಂತೆ ರಾಮಣ್ಣನ ಚಿಂತೆ ದಿನದಿನಕ್ಕೆ ಉದ್ದಗಲಕ್ಕೂ ಬೆಳೆಯುತಿತ್ತು! ಈ ಚಿಂತೆ—ಯೋಚನೆಗಳ ಮಧ್ಯದಲ್ಲೇ ಲಕ್ಷ್ಮಮ್ಮನ ನಾಲ್ಕನೆಯ ಗರ್ಭಕ್ಕೆ ತಿಂಗಳು ಒಂಭತ್ತು ತುಂಬಿತು! ಹೇಗೂ ಒಂದು ಶುಭ ಮುಹೂರ್ತದಲ್ಲಿ ಅವರು ನಾಲ್ಕನೆಯ ಹೆಣ್ಣು ಕೂಸಿಗೆ ಭೂಲೋಕದ ದಾರಿಯನ್ನು ತೋರಿಸಿ ಕಳುಹಿಸಿಕೊಟ್ಟರು.

ಈ ಕಹಿಸುದ್ದಿಯನ್ನು ಕೇಳಿದ ರಾಮಣ್ಣನ ಎದೆ ಎರಡು ಹೋಳಾಗುವುದರಲ್ಲಿತ್ತು. ಅವರ ಮನಸ್ಸಿನಲ್ಲಿ ಚಿಂತೆಯ ಸುಳಿಗಾಳಿ ಎದ್ದು, ಆಶಾವಾದದ ತುಂಡು ಯೋಚನೆಗಳನ್ನೆಲ್ಲಾ ಎಬ್ಬಿಸಿಕೊಂಡು ಹೋಯ್ತು!

ಅಯ್ಯೋ! ಒಂದಲ್ಲವಾದರೆ ಇನ್ನೊಂದು—ಇನ್ನೊಂದಿಲ್ಲವಾದರೆ ಮತ್ತೊಂದು, ಹೀಗೆ ಸೆಂಚುರಿ ನೋಡಿಯೇ ನಾಲ್ಕು ಹೆಣ್ಣುಮಕ್ಕಳಿಗೂ ತಂದೆಯಾಗಿರುವ ಪಾಪಿ ನಾನಲ್ಲವೆ? ಈ ಪಾಪಿಯಾದ ಮಹಾತ್ಮನಿಗೆ ಒಂದಾದರೂ ಗಂಡುಮಗುವನ್ನೆತ್ತಿ ಆಡಿಸುವ ಭಾಗ್ಯ ಬರಬೇಡವೇ? ಈಗಿನ ಕಾಲದಲ್ಲಿ ಹೆಣ್ಣು ಹೆತ್ತವರಿಗೆ ಒಂದಿಷ್ಟಾದರೂ 'ಭರಂ' ಇದೆಯೇ? ಎಂದು ಆ ಸಮಯ ಮರುಗಿದ್ದರೂ; - ಹೆಂಡ್ತಿಯ ಹೆರಿಗೆ ಮುಗಿದು ತಿಂಗಳುಕಳೆದ ಮರುದಿನವೇ ಶಯ್ಯಾಗ್ರಹಕ್ಕೆ ನುಗ್ಗಿ—, "ನನ್ನ ಚಾಪೆಗೂ ಒಂದಿಷ್ಟು ಸ್ಥಳವನ್ನು ಕೊಟ್ಟು ಸಹಕರಿಸು—" ಎಂದು ದೀನರಾಗಿ ಬೇಡಿಕೊಂಡರು ರಾಮಣ್ಣ. ಆ ದಿನ ಹೇಗೂ ಕಳೆಯಿತೆನ್ನಿ! ಬೆಳಗಾದಕೂಡಲೇ ರಾಮಣ್ಣನ ಚಿಂತೆಗೆ ಯಾವ ಅಡ್ಡಿಯೂ ಬಾರದಂತೆ ವಿಶ್ವೇಶ್ವರನ ಪ್ರಾರ್ಥನೆಯೂ ಯಿತು!—ಮುಂದಿನದು ಗಂಡೋ?—ಹೆಣ್ಣೋ?

—ಶ್ರೀ ಕೆ. ಜೆ. ಶೆಟ್ಟಿ, ಕಡಂದಲೆ.



ವಿಭಾಜಿತ ಜರ್ಮನಿಯ ಒಂದು ನಕ್ಷೆ. ಪೂರ್ವ ಜರ್ಮನಿಯಲ್ಲಿರುವ ಬರ್ಲಿನ್ ನಗರದ ವಿಭಜನೆಯನ್ನೂ ಎಡ ಪಕ್ಕದ ಮೇಲ್ಗಡೆಯ ಚಿತ್ರದಲ್ಲಿ ಕಾಣಬಹುದು. ಎರಡರಲ್ಲೂ ಕಪ್ಪು ಚುಕ್ಕಿಗಳಿಂದ ಗುರುತಿಸಿರುವ ಭಾಗಗಳು ಕಮ್ಯುನಿಸ್ಟ ನಿಯಂತ್ರಣದಲ್ಲಿವೆ.

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯ ಬಹುದು!

ಉಪಾಧ್ಯಾಯ— ಲೋ, ಸುಬ್ಬ! ವಿಧುರನ್ಯಾರೊ?

ಸುಬ್ಬ— ವಿಧವೆಯ ಗಂಡ ಸಾರ್....

° °

ತಂದೆ— ಸುಬ್ಬ ಯಾರಿಗೆ ಆ ಕಾರ್ಡ್ ಬರಿತಾರೋದು?

ಸುಬ್ಬ—ಪತ್ರಿಕಾ ಎಡಿಟರ್‌ಗಳಿಗೆ...

ತಂದೆ— ಏನೆಂದೊ?

ಸುಬ್ಬ— ನೆಹ್ರೂ ನಿನ್ನೆ ಮಸ್ಸೂರಿಯಲ್ಲಿ ದಲೈ ಲಾಮಾರನ್ನು ಭೇಟಿಯಾದರಂತೆ. ನಾನೂ ನಿನ್ನೆ ಥೋಮಸ್‌ನ್ನೂ ಎಷ್ಟಾರನ್ನು ಭೆಟ್ಟಿಮಾಡಿದ್ದೇನೆ ಆದರೆ ನನ್ನ ಹೆಸರವೇಕೆ ಪ್ರಿಂಟಾಗಿಲ್ಲೆಂದು....

° °

ತಂದೆ—ಅದೇನೊ ಬರೀತಿರೋದು?

ಸುಬ್ಬ— ಅಪ್ಪ, ಬರ್ರ್ಯೋದಲ್ಲ, ಚಿತ್ರಿಸುವುದು

ತಂದೆ— ಯಾರನ್ನೊ?

ಸುಬ್ಬ— ಶ್ರೀ ನೆಹ್ರೂರವರನ್ನು

ತಂದೆ— ಅಯ್ಯೋ ಆದರ ಸುರೂಪ, ಅದು ಥೇಟ್ ಕ್ರುಶ್ಚೇವ್ ಆಗಿದೆ. ಮಗೂ, ನಾವೆಲ್ಲ ನೆಹ್ರೂ ಬಿಡಿಸಿದ್ರೆ ಕ್ರುಶ್ಚೇವ್, ಗಾಂಧಿ, ಪಟೇಲ್ ಆಗುತ್ತೆ ಹೊರತು ನೆಹ್ರೂ ಆಗದು.

ಸುಬ್ಬ- ಹಾಗಾದರೆ ಕ್ರುಶ್ಚೇವ್ ಬಿಡಿಸಿದರೆ?

ತಂದೆ— "............"(?(

° °

ಉಪಾಧ್ಯಾಯ.... ಏಕೋ ಇಷ್ಟು ಹೊತ್ತು?

ಸುಬ್ಬ - (ತಲೆತುರಿಸಿ) ಸ್ವಲ್ಪ ಅರ್ಜೆಂಟ್ ಕೆಲ್ಸ ಇತ್ತೂ—

ಉಪಾ... ಅದೇನೊ ಅರ್ಜೆಂಟು?

ಸು — ಅದೇ ನನ್ನ ತಾಯಿಗೂ ತಂದೆಗೂ ಜಗಳವಾಗಿ ತಂದೆ ಅಡುಗೆ ಕೆಲ್ಸ ವಹಿಸಿಕೊಂಡ್ರು. ತಲೆ ಬಿಸಿಯೇರಿ ಕೊಫಿಗೆ ಸಕ್ರೇ ಹಾಕೋ ಬದ್ಲು ಗಡಬಿಡಿಲಿ ಉಪ್ಪು ಬೆರೆಸಿ, ವಾಂತಿ ಮಾಡಿ ಔಷಧಕ್ಕೆ ನನ್ನ ಕಳುಹಿಸಿದ್ರು. ಶಾಪಿಂದ ಬರುವಾಗ ತಡವಾಯ್ತು....—

° °

ಸುಬ್ಬ (ಶಾಪಿನವನೊಡನೆ).. ಏನ್ರಿ, ಫಾವರಿಟ್ ಕಂಪೆನಿ ಮಾಲ್ಟಗೆ ಪೌಂಡಿಗೆಷ್ಟು ಸ್ವಾಮಿ?

ಅಂಗಡಿಯವ— ನಾಲ್ವತ್ತು ತೊಲೆ ಸಾರ್.

ಸುಬ್ಬ (ಕೋಪದಿಂದ) "........." ಮುಂದುವರಿದ.

°° °°

ಇನ್ಸ್‌ಪೆಕ್ಟರ್ — ಆಣೆಗಾರು ಬಾಳೆಯಾದರೆ ಮೂರಾಣೆಗೆಷ್ಟು?

ಎಪ್ಪಾರ್—ಹದಿನೆಂಟು ಸಾರ್.

ಇನ್ಸ್‌ಪೆಕ್ಟರ್ —ಗೂಡ್.......

ಸುಬ್ಬ (ಎದ್ದು) — ಹತ್ತೊಂಬತ್ತು ಸಾರ್.......

ಇನ್ಸ್‌ಪೆಕ್ಟರ್—ಬೆಪ್ಪೇ! ಹೇಗದು?

ಸುಬ್ಬ — ನಾಯಿನ್ಸೈನಾದ ಲೆಕ್ಕದ ಪ್ರಕಾರ ಸ....ಸ....

ಸ...ರ್........

ಇನ್ಸ್‌ಪೆಕ್ಟರ್— '......." (???)

—ರಮೇಶ ಪೈ, ಕೆ. ಉಡುಪಿ.



NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ಜಿನೇವಾ ಸಮ್ಮೇಳನ

ಪಾಶ್ಚಾತ್ಯರ ಕಾರಸ್ಥಾನದ ಪೂರ್ವಾಪರ ಸನ್ನಿವೇಶ

ಜರ್ಮನಿಯ ಏಕೀಕರಣದ ಬಗ್ಗೆ ತೀವ್ರ ಅಸಮಾಧಾನ ಏಕೆ?

ಇತ್ತೀಚೆಗೆ ಸೇರಿದ ಜಿನೇವಾ ಸಮ್ಮೇಳನವು ಮುಖ್ಯವಾಗಿ ಜರ್ಮನಿಯ ಸಮಸ್ಯೆ ಮತ್ತು ಯುರೋಪಿನ ಭದ್ರತೆಯ ಕುರಿತಾಗಿ ಚರ್ಚೆ ನಡೆಸಿತು. ಈ ಪ್ರಶ್ನೆಗಳ ನಡುವೆ ನಿಶ್ಶಸ್ತ್ರೀಕರಣದ ವಿಷಯವೂ ಸೇರಿಕೊಂಡಿತ್ತು. ನಿಶ್ಶಸ್ತ್ರೀಕರಣವೆಂದರೆ, ಪ್ರಧಾನವಾಗಿ ಅಣು ಮತ್ತು ಜಲಜನಕ ಬಾಂಬುಗಳ ಪರೀಕ್ಷೆ ಅಥವಾ ಪ್ರಯೋಗಗಳನ್ನು ತಡೆ ಹಿಡಿಯುವುದು ಮತ್ತು ಅವುಗಳ ಭಯಂಕರ ಪರಿಣಾಮಗಳಿಂದ ಜನತೆಯನ್ನು ಉಳಿಸುವುದೇ ಆಗಿದೆ. ಈ ಸಮಸ್ಯೆಗಳ ಮೂಲ ಕಾರಣವನ್ನು ಅರಿಯಬೇಕಾದರೆ, ದ್ವಿತೀಯ ಲೋಕ ಯುದ್ಧಾಂತ್ಯದಲ್ಲಿ ಮೋಸ್ಕೋ, ಟೆಹರಾನ, ಕ್ವಿಬೆಕ್ ಮತ್ತು ಪೋಟ್ಸ್ಡಮ್‌ಗಳಲ್ಲಿ ಸೇರಿದ್ದ ಮಿತ್ರ ರಾಷ್ಟ್ರಗಳ ನಾಯಕರ ಸಮ್ಮೇಳನದ ಕಡೆಗೂ ಗಮನ ಹರಿಸುವುದು ಅವಶ್ಯಕವಾಗಿದೆ. ಈ ಸಮ್ಮೇಳನಗಳಲ್ಲಿ ಬರ್ಲಿನ್ ಮತ್ತು ಜರ್ಮನಿಗಳು ಪರಾಜಿತವಾದ ಮೇಲೆ ಅವನ್ನು ಸಂಪೂರ್ಣ ಶಕ್ತಿವಿಹೀನವಾಗಿ ಮಾಡುವ ಯೋಜನೆಗಳು ತಯಾರಿಸಲ್ಪಟ್ಟವು. ೧೯೪೩ರಲ್ಲಿ ಮೊಸ್ಕೊವಿನಲ್ಲಿ ನಡೆದ ಸಮ್ಮೇಳನದಲ್ಲಿ ಮೊತ್ತಮೊದಲಿಗೆ ಈ ಯೋಜನೆಗಳನ್ನು ಪ್ರಕಟಗೊಳಿಸಲಾಯಿತು. ಅಮೇರಿಕೆ ಮತ್ತು ಇಂಗ್ಲೆಂಡುಗಳು ಇದರ ಪ್ರಧಾನ ಪುರಸ್ಕರ್ತರಾಗಿದ್ದವು. ತೆಹರಾನಿನಲ್ಲಿ ಅಮೇರಿಕೆಯು ಮುಂದಿಸಿದ್ದ ಒಂದು ಗೊತ್ತುವಳಿಯನ್ನು ಬ್ರಿಟನಿನ ಪ್ರಧಾನಿ ಚರ್ಚಿಲರು ಬಲವಾಗಿ ಸಮರ್ಥಿಸಿದರು. ಇದರಲ್ಲಿ ಜರ್ಮನಿಯನ್ನು ಐದು ತುಂಡುಗಳಾಗಿ ಒಡೆಯಬೇಕೆಂದು ಹೇಳಲಾಗಿತ್ತು. ೧೯೪೪ರ ಸಪ್ಟಂಬರ ೧೬ರಂದು ಕ್ವಿಬೆಕ್‌ನಲ್ಲಿ ಆಂಗ್ಲೊ-ಅಮೇರಿಕನ್ ಮಾತುಕತೆಗಳು ನಡೆದಿದ್ದು ಇದರಲ್ಲಿಯೂ ಜರ್ಮನಿಯು ಸದಾ ಕೃಷಿಕರ ದೇಶವಾಗಿಯೇ ಉಳಿಯಬೇಕೆಂಬ ಏಕದೃಷ್ಟಿಯಿಂದ ಸೈನಿಕ ಹಾಗೂ ಔದ್ಯೋಗಿಕ ದೃಷ್ಟಿಗಳಿಂದ ಅದನ್ನು ಮೆಟ್ಟಿಹಾಕುವ ಪ್ರಯತ್ನ ನಡೆಯಿತು. ಈ ಎಲ್ಲಾ ಪ್ರಯತ್ನಗಳ ಮೂಲೋದ್ದೇಶ ಒಂದೇ ಆಗಿತ್ತು: ಜರ್ಮನಿಯು ಮುಂದೆ ಎಂದಿಗೂ ತಲೆಯೆತ್ತಬಾರದು; ಅಲ್ಲದೇ ಸದಾ ಪಾಶ್ಚಾತ್ಯ ರಾಷ್ಟ್ರಗಳ ಕೈಗೊಂಬೆಯಾಗಿಯೇ ಉಳಿಯಬೇಕು.

ಎರಡನೆ ಲೋಕ ಯುದ್ಧದಲ್ಲಿ ಮೊದಲಿಗೆ ರಶ್ಯವು ಜರ್ಮನಿಗೆ ನೆರವಿತ್ತಿತು. ಆದರೆ, ಮುಂದೆ ಕಾರಣಾಂತರದಿಂದ ಜರ್ಮನಿಯನ್ನು ವಿರೋಧಿಸ ತೊಡಗಿತು. ಆದರೂ ಪಾಶ್ಚಾತ್ಯರ ಹೆದರಿಕೆಯೆಂಬುದಿರಲಿಲ್ಲ. ಜರ್ಮನಿಯು ರಶ್ಯದ ಮೇಲೆ ಅತಿ ಶೀಘ್ರ ಮತ್ತು ಬಲದೊಡನೆ ಏರಿಹೋಗುವಾಗ ಪಾಶ್ಚಾತ್ಯ ರಾಷ್ಟ್ರಗಳು, ರಶ್ಯದ ಅಂತಿಮಕಾಲ ಸಮೀಪಿಸಿತೆಂದು ಒಳಗೊಳಗೇನೇ ಆನಂದಿಸುತಿದ್ದುವು. ಆದರೆ ರಣರಂಗದ ಪರಿಸ್ಥಿತಿ ವಿಪರೀತವಾದಾಗ ಮಾತ್ರ ರಶ್ಯದ ಮೇಲೆ ಅವರ ದೃಷ್ಟಿ ಇನ್ನೂ ಕಠೋರವಾಯಿತು. ಇದಕ್ಕಾಗಿ, ಪೊಟಸ್ಡಮ್‌ನ ಮಾತುಕತೆಗಳಲ್ಲಿ ಜರ್ಮನಿಯು ಪುನಃ ಯುರೋಪಿನ ಶಾಂತಿ ಮತ್ತು ಭದ್ರತೆಗೆ ಅಪಾಯ ತರುವಂತಾಗಬಾರದು; ಮತ್ತು ಜರ್ಮನಿಯಲ್ಲಿ ಇನ್ನು ಮುಂದೆ ಎಂದೆಂದಿಗೂ ಸರ್ವಾಧಿಕಾರತನವು ರೂಪುಗೊಳ್ಳದಂತಹ ಆಡಳಿತೆಯನ್ನು ತರಬೇಕು–ಎಂಬುದರ ಉಲ್ಲೇಖವೂ ಆಗಿತ್ತು. ಈ ಶರ್ತಗಳ ಮೇಲೆ ಜರ್ಮನಿಯೊಡನೆ ಸಂಧಿಮಾಡುವ ನಿಶ್ಚಯವೂ ಆಯಿತು. ಈ ಸಂದರ್ಭದಲ್ಲಿಯೂ ಪಾಶ್ಚಾತ್ಯ ರಾಷ್ಟ್ರಗಳು "ಬಾಯಿಯಲ್ಲಿ ರಾಮ ಜಪ ಮಾಡುತ್ತ ಬಗಲಿನಲ್ಲಿ ಕತ್ತಿಯನ್ನು ಅಡಗಿಸಿಕೊಂಡಿರುವ" ನೀತಿಯನ್ನೇ ರಶ್ಯದ ಕಡೆಗೆ ಅನುಸರಿಸಿದುವು. ೧೯೪೫ರಲ್ಲಿಯೇ ಪಾಶ್ಚಾತ್ಯ ರಾಷ್ಟ್ರಗಳು ಜರ್ಮನಿಯ ಬೇರೆ ಬೇರೆ ಕ್ಷೇತ್ರಗಳಲ್ಲಿ ಸರಕಾರ ನಡೆಸಲು ತೊಡಗಿದುವು. ಮತ್ತು ಅವುಗಳು ಒಂದಾಗುವ ಸಂದರ್ಭವನ್ನೇ ಒದಗಿಸಬಾರದೆಂದೂ ಒಪ್ಪಿಕೊಂಡುವು.

ಜರ್ಮನಿಯ ಏಕೀಕರಣದ ಧ್ವನಿಗಳೆಲ್ಲವನ್ನೂ ಗಾಳಿಗೆ ತೂರಿಬಿಡುವ ಹವ್ಯಾಸ ನಡೆಯಿತು. ಪಶ್ಚಿಮ ಜರ್ಮನಿ ಅಥವಾ ಫೆಡರಲ್ ಜರ್ಮನ್ ರಿಪಬ್ಲಿಕ್ ಅನ್ನು ಉಳಿದ ಜರ್ಮನಿಯಿಂದ ಪ್ರತ್ಯೇಕಿಸಿ ಔದ್ಯೋಗಿಕ, ಆರ್ಥಿಕ ಮತ್ತು ರಾಜಕೀಯ ದೃಷ್ಟಿಗಳಿಂದ ಉನ್ನತವನ್ನಾಗಿ ಮಾಡಿ, ಅದನ್ನು "ನಾಟೊ" ರಾಷ್ಟ್ರಗಳಲ್ಲಿ ಸೇರಿಸಿ ಅದಕ್ಕೆ ಶಸ್ತ್ರಾಸ್ತ್ರ, ರಾಕೆಟ್, ಅಣ್ವಾಯುಧ, ಜಲಜನಕ ಬಾಂಬು ಮೊದಲಾದುವುಗಳನ್ನು ಎರವಲು ಕೊಡಲಾಯಿತು. ಇದರಿಂದಾಗಿ, ಪಶ್ಚಿಮ ಜರ್ಮನಿಯಲ್ಲಿ ಸೈನಿಕವಾದ, ನಾಜೀವಾದ ಹಾಗೂ ರಶ್ಯದ ವಿರುದ್ಧ ಭಾವನೆ ಪ್ರಬಲವಾಗಿ ಹೆಚ್ಚಿದೆ.

ನಿನ್ನೆ ಮೊನ್ನೆಯ ವರೆಗೆ ನಾಜಿ ಪಕ್ಷದಲ್ಲಿ ಸೇರಿಕೊಂಡಿದ್ದವರಲ್ಲಿಯೇ ಸೇಕಡಾ ೭೦ರಷ್ಟು ನ್ಯಾಯಾಧೀಶರೂ ಎಪ್ಪತ್ತರಷ್ಟು ವಕೀಲರೂ ಅಮೇರಿಕೆಯ ಕ್ಷೇತ್ರದಲ್ಲಿರುವರು. ಸೈನಿಕರನ್ನು ಭರ್ತಿ ಮಾಡುವಾಗ ಹಿಂದಿನ ನಾಜಿಗಳಿಗೆ ವಿಶೇಷ ಸವಲತ್ತುಗಳನ್ನು ಕೊಡಲಾಗುತ್ತದೆ. ಈಗಾಗಲೇ ಇಂತಹ ಸೈನಿಕರ ಸಂಖ್ಯೆ ಮೂರು ಲಕ್ಷವಿದೆ. ಔದ್ಯೋಗೀಕರಣದ ದೃಷ್ಟಿಯಿಂದ ಪಶ್ಚಿಮ ಜರ್ಮನಿಯು ಇಂಗ್ಲೆಂಡ್ ಮತ್ತು ಫ್ರಾನ್ಸಗಳನ್ನು ಹಿಂದೆ ಹಾಕಿದೆ. ಆರ್ಥಿಕ ಹಾಗೂ ರಾಜಕೀಯ ದೃಷ್ಟಿಗಳಲ್ಲಿಯೂ ಅದು ಎಲ್ಲ ಯುರೋಪೀಯ ದೇಶಗಳನ್ನು ಹಿಂದಕ್ಕೆ ಹಾಕುವುದಕ್ಕೆ ಪ್ರಯತ್ನ ನಡೆಸುತ್ತದೆ. ಯುರೋಪಿನ ಇದ್ದಲಿನ ಪೇಟೆಯಲ್ಲಿ ತ್ವರಿತಗತಿಯಲ್ಲಿ ಇದು ತನ್ನ ಸ್ಥಾನವನ್ನು ಬಲಪಡಿಸಿದೆ. ಅಲ್ಲದೇ ಏಶ್ಯದ ಪೇಟೆಗಳಿಗೂ ಪಾದಾರ್ಪಣೆ ಮಾಡಲು ಮೊದಲುಮಾಡಿದೆ. ಭಾರತಕ್ಕೆ ಆರ್ಥಿಕ ಸಹಾಯನೀಯುವ ನೆವದಲ್ಲಿ ಅದು ಇಂಗ್ಲೆಂಡಿನ ಮೂಗು ಮುರಿಯುತ್ತಿದೆ. ಇದರಿಂದಾಗಿ ಕೇವಲ ಯುರೋಪು ಮಾತ್ರವಲ್ಲ, ಅಖಂಡ ವಿಶ್ವದ ಶಾಂತಿಗೆ ಈ ಪಶ್ಚಿಮ ಜರ್ಮನಿಯು ಒಂದು ಉಪದ್ರವಿಯಾಗಿ ಎದ್ದುನಿಂತಿದೆ.

೧೯೫೨ರಲ್ಲಿ ಸೋವಿಯತ ರಶ್ಯವು ಮೊತ್ತಮೊದಲಿಗೆ ಜರ್ಮನಿಯ ಏಕೀಕರಣದ ಯೋಜನೆಯನ್ನು ಮುಂದೆ ತಂದಿತು. ಜರ್ಮನಿಯ ಗಡಿಯನ್ನು ನಿಶ್ಚಯಮಾಡಬೇಕು; ಅದರ ಸೈನ್ಯಬಲವನ್ನು ನಿಯಮಿತಗೊಳಿಸಬೇಕು; ಅಲ್ಲದೇ ಅದನ್ನು ಎಲ್ಲ ವಿಧದ ಸೈನಿಕ ಒಪ್ಪಂದಗಳಿಂದ ಬೇರೆಯಾಗಿಡಬೇಕು: ಎಂದಿದರಲ್ಲಿ ಹೇಳಲಾಗಿತ್ತು. ಆದರೆ, ಆಗ ಈ ಕಡೆಗೆ ಯಾವ ಗಮನವನ್ನೂ ಕೊಡಲಾಗಲಿಲ್ಲ. ೧೯೫೫ರಲ್ಲಿ ಚಾನ್ಸಲರ್ ಎಡೆನೋವರು ರಶ್ಯದ ಪ್ರವಾಸಕ್ಕೆ ಹೋದಾಗ, ಅವರು ರಶ್ಯದ ವಿಚಾರವನ್ನು ಸಮರ್ಥಿಸುತ್ತ "ಜರ್ಮನಿಯ ವಿಭಜನೆ ಸರ್ವಥಾ ಅಸ್ವಾಭಾವಿಕವಾಗಿದೆ. ದೈವೀಯ ಮತ್ತು ಮಾನವೀಯ ದೃಷ್ಟಿಗಳಿಂದಲೂ ಇದು ಮಹಾ ಅನ್ಯಾಯವಾಗಿದೆ" ಎಂದು ಹೇಳಿದರಲ್ಲದೇ ಆ ಸಮಯದಲ್ಲಿ ಪುನಃ ಅದನ್ನು ನೆನಪಿಗೆ ತರುವಂತೆ ಹೇಳಿದರು. ಇತಿಹಾಸವು ಯಾರನ್ನೂ ಕ್ಷಮಿಸುವುದಿಲ್ಲ. ಸ್ವತಃ ಚಾನ್ಸಲರರ ಈ ಮರವಿನ ಬಗ್ಗೆ ಖೇದವನ್ನು ಪ್ರಕಟಿಸುವವರ ಸಂಖ್ಯೆಯೂ ಇಂದು ಪಶ್ಚಿಮ ಜರ್ಮನಿಯಲ್ಲಿ ಕಡಿಮೆಯಾಗಿಲ್ಲ. ಕಳೆದ ನವಂಬರ ೨೭ರಲ್ಲಿ ರಶ್ಯವು ಒಂದು ಘೋಷಣೆಯನ್ನು ಹೊರಡಿಸಿ, ಆರು ತಿಂಗಳುಗಳಲ್ಲಿ ಜರ್ಮನಿಯ ಸಮಸ್ಯೆಯ ಪರಿಹಾರವನ್ನು ಕಂಡುಹಿಡಿಯದೆ ಹೋದರೆ, ತನ್ನ ಅಧೀನದಲ್ಲಿರುವ ಪೂರ್ವ ಜರ್ಮನಿಯನ್ನು ಸಂಪೂರ್ಣ ಸ್ವತಂತ್ರ ಮಾಡುವುದಕ್ಕಾಗಿ ತನ್ನ ಸೇನೆಯನ್ನು ಅಲ್ಲಿಂದ ಹಿಂತೆಗೆಯಲಾಗುವುದೆಂದು ಹೇಳಿತು. ರಶ್ಯದ ಈ ಎಚ್ಚರಿಕೆಯಿಂದಾಗಿಯೇ ಜಿನೇವ ಸಮ್ಮೇಳನವು ಸೇರುವಂತಾಯಿತೆಂದು ಹೇಳಬಹುದು.

ಯುರೋಪಿನಲ್ಲಿ ಮಾತ್ರವಲ್ಲ, ವಿಶ್ವದಲ್ಲಿಯೇ ಪರಿಸ್ಥಿತಿಗಳು ಅತ್ಯಂತ ತೀವ್ರವಾಗಿ ಬದಲಾಗುತ್ತಿರುವುವು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಪರಿಸ್ಥಿತಿಯನ್ನು ಕಂಡು ಕಣ್ಣುಮುಚ್ಚಿಕೊಂಡಿರುವುದು ಎಂದೆಂದಿಗೂ ಅಶಕ್ಯ: ಪೋಲೆಂಡ್, ಜೆಕೋಸ್ಲೋವಾಕಿಯಾ, ಯುಗೋಸ್ಲಾವಿಯಾ ಹಾಗೂ ಇನ್ನಿತರ ಸಣ್ಣಪುಟ್ಟ ರಾಷ್ಟ್ರಗಳು ತಮ್ಮ ಹಿತರಕ್ಷಣೆಗಾಗಿ ಸಚೇತನವಾಗುತ್ತಿವೆ. ಅವನ್ನು ಜಿನೇವಾ ಸಮ್ಮೇಳನದಲ್ಲಿ ಸೇರಿಸಿಕೊಳ್ಳಲಾಗಲಿಲ್ಲ. ಪಶ್ಚಿಮ ಮತ್ತು ಪೂರ್ವ ಜರ್ಮನಿಗಳಿಗೆ ಪ್ರಾತಿನಿಧಿತ್ವ ಕೊಟ್ಟಾಗ ಈ ರಾಷ್ಟ್ರಗಳಿಗೂ ಪ್ರತಿನಿಧಿತ್ವ ಈಯಬೇಕೆಂದು ಹೇಳಲಾಯಿತು. ಹೀಗೆ ಚಿಕ್ಕ ರಾಷ್ಟ್ರಗಳಲ್ಲಿ ಉದ್ಭವಿಸಿದ ಈ ಜಾಗೃತಿಯನ್ನು ಈಗ ಶಮನಗೊಳಿಸಬಹುದಾದರೂ ಅದನ್ನು ಬಹುಕಾಲ ತಡೆಹಿಡಿಯುವುದು ಅಸಾಧ್ಯವೇ ಆಗಿದೆ.

(ಮುಂದುವರಿಯುವುದು.)

ಕಥಾ ವಿಹಾರ

(೭ನೇ ಪುಟದಿಂದ)

"ಧರ್ಮರಾಜನೆಲ್ಲಿ?"

"ಧರ್ಮರಾಜ....? ಹಾಗೆಂದರಾರು?" ಶಿಲ್ಪಿ ಪ್ರಶ್ನಿಸಿದ.

"ಓ—ಅಷ್ಟು ಬೇಗ ಮರೆತು ಬಿಟ್ಟಿರೇನು? ನೀವು ಇಲ್ಲಿಂದ ಹೊರಡುವಾಗ ನಾನು ತುಂಬಿದ ಗರ್ಭಿಣಿಯಾಗಿದ್ದಿಲ್ಲವೇ? ಅದರ ಫಲವೇ—ಆತ—ಹದಿನೈದು ದಿನಗಳ ಹಿಂದೆಯೇ ಅವನು ನಿಮ್ಮನ್ನು ಹುಡುಕಲು ಎಷ್ಟು ಬೇಡವೆಂದರೂ ಕೇಳದೇ ಹೊರಟುಹೋದ. ಅದೋ—ಅಲ್ಲಿ ನೋಡಿ—ಆತ ಈಗಾಗಲೇ ನಿರ್ಮಿಸಿದ ಕೆಲವು ಶಿಲ್ಪ ಕೃತಿಗಳು—ಇಷ್ಟರಲ್ಲೇ ನಿಮ್ಮನ್ನೂ ಮೀರಿಸುವ ಪ್ರತಿಭೆ ತೋರಿದ್ದಾನೆ. ಇನ್ನು ಕೆಲವೇ ವರ್ಷಗಳಲ್ಲಿ ನಮ್ಮ ಧರ್ಮರಾಜ ಜಗತ್ಪ್ರಸಿದ್ಧ ಶಿಲ್ಪಿಯಾಗುವುದರಲ್ಲಿ ಸಂದೇಹವಿಲ್ಲ... ಅವನು ಕಳಿಂಗದಲ್ಲಿ ನಿಮಗೆ ಸಿಗಲಿಲ್ಲವೇನು?"

"...."—ಶಿಲ್ಪಿಯ ತಲೆಸುತ್ತಿ ಬಂತು. ಇದುರಿನಲ್ಲಿ ಆತನ ಬಾಲಕ ನಿರ್ಮಿಸಿದ್ದ ಕಲಾಕೃತಿಗಳು ಆತನನ್ನೇ ದಿಟ್ಟಿಸಿ ಗಹಗಹಿಸಿ ನಗುತ್ತಿದ್ದಂತೆ ಭಾಸವಾಯಿತವನಿಗೆ. 'ಅದೇ ಕೈಚಳಕ—ಅದೇ ನಾವೀನ್ಯತೆ—ಸೂರ್ಯ ಮಂದಿರದ ಕಲಶದ ಕೆಲಸವೂ, ಇವೂ ಒಬ್ಬನೇ ಶಿಲ್ಪಿಯ ಕೃತಿಗಳು. ಸಂದೇಹವೇ ಇಲ್ಲ—ನೀನೇ ನಿನ್ನ ಮಗನನ್ನೇ ಲೋಭದಿಂದ ಕೊಲೆಗೈದವ!' ಇದೆಂತಹ ವಿಪರ್ಯಾಸ! ನಿನೇಯ ಹುಚ್ಚನಂತೆ ಮನೆಯಿಂದ ಹೊರಬಿದ್ದು ಓಡತೊಡಗಿದ ಅವನ ಪತ್ನಿ ಏನೊಂದನೂ ತಿಳಿಯದೇ ಆತನನ್ನು ಹಿಂಬಾಲಿಸಿದಳು....

ತನ್ನ ಮುದ್ದಿನ ಮಗನ ಹೆಣ ಈಗಾಗಲೇ ರಣಹದ್ದುಗಳಿಂದಾವೃತವಾಗಿರಬಹುದೆಂಬ ಸತ್ಯಸಂಗತಿ ಅರಿಯದೇ ಪತಿಯನ್ನು ಹಿಂಬಾಲಿಸಿ ಆಕೆ ಓಡತೊಡಗಿದಳು.

(ಆಧಾರದಿಂದ)

—ಜನ್ನ, ಮರವಂತೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. No. 594/56

R. E. P. No. 803/58

ಪಾವುಲು ಫೆರ್ನಾಂಡಿಸ್-ಅರ್ಜಿದಾರ

ಮತ್ತು

ಕೆ. ಗೋಪಾಲಕೃಷ್ಣ ನ್ಯಾಕ-ಯೆದ್ರಿ,

ಯವರೊಳಗೆ

ಯೆದ್ರಿ ಕೆ. ಗೋಪಾಲಕೃಷ್ಣ ನ್ಯಾಕ-ಕೊಂಡಾಡಿ ರಾಮಚಂದ್ರ ನ್ಯಾಕರಮಗ, ಹೆರಗ ಗ್ರಾಮದ ಪಕರ್ಳ.

ಮೇಲ್ಕಂಡ ಅಮಲ್ಜಾರಿಯಲ್ಲಿ ಯೆದ್ರಿಗೆ ಆ ಗತಕ್ಕ ಯಿಸ್ತಿಹಾರು ನೋಟೀಸು ತಾ. 19-6-59ಕ್ಕೆ ಯಿಟ್ಟಿರುವದ್ರಿಂದ ಅದಿವ್ಸ ಸದ್ರಿ ಯೆದ್ರಿಯು ತನ್ನ ಆಕ್ಷೇಪ ಹೇಳುವದನ್ನು ಸದ್ರಿ ಕೋರ್ಟು ಮುಂದೆ ಹಾಜರ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

P. Padmanaabha Rao,
Vakil for Petitioner.

Udipi, Date 4-6-1959.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA-40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ವಿಚಾರ ಮಂಥನ

(೧ನೇ ಪುಟದಿಂದ)

ಕಂಡುಕೊಂಡು ಅದನ್ನು ಬಗೆಹರಿಸಿಕೊಳ್ಳುವುದು ಸರಕಾರದ ಕರ್ತವ್ಯ. ದೇಶದ ಯಾವುದೇ ಕಡೆಯಲ್ಲಿ ಏಳದಂತಹ ವಿರೋಧವು ಕೇರಳದಲ್ಲಿ ಕಾಣಿಸಿಕೊಳ್ಳಬೇಕಾದರೆ, ಅದಕ್ಕೆ ಸರಕಾರದ ಬಗ್ಗೆ ಜನತೆಯಲ್ಲಿ ಮೂಡಿರುವ ಅಸಮಾಧಾನವೇ ಕಾರಣವೆಂದು ಹೇಳಬೇಕಾಗಿಲ್ಲ. ಜನತೆಯು ತನ್ನ ಅಭಿಪ್ರಾಯವನ್ನು ಶಾಂತಯುತವಾಗಿ ತಿಳಿಸಲು ಪ್ರಜಾಪ್ರಭುತ್ವದಲ್ಲಿ ಆಸ್ಪದವಿದೆ; ಇದೀಗ ಕೇರಳದಲ್ಲಿ ನಡೆಯುವುತ್ತಿರುವುದೂ ಇದೇ ಮಾದರಿಯ ಒಂದು "ಸತ್ಯಾಗ್ರಹ."

ಆದರೆ, ಜನ ಸೇರಿದಲ್ಲಿ ಶಾಂತಿ ಉಳಿಯುವುದೆಂದು ದೃಢವಾಗಿ ನಂಬಬಾರದು. ಅಲ್ಲಿ ಜನತೆಯನ್ನು ಉದ್ರೇಕಿಸುವ ಹಲವಾರು ಘಟನೆಗಳು ನಡೆಯಬಲ್ಲವು. ಆಗ ಶಾಂತಿ ಅಹಿಂಸೆಯ ಬದಲು ಅಶಾಂತಿ ಹಿಂಸೆಗಳೂ ತಲೆದೋರುವ ಸಂಭವವಿಲ್ಲದಿಲ್ಲ. ಅದುದರಿಂದಲೇ ಪ್ರಧಾನಿ ನೆಹರೂ ಶಾಂತಯುತವಾದ ಪ್ರಜಾಪ್ರಭುತ್ವ ವಿಧಾನಗಳಿಂದ ಈ ಸತ್ಯಾಗ್ರಹ ನಡೆಯುವುದೆಂದು ಹಾರೈಸಿದ್ದಾರೆ- "ವ್ಯಾಪಕಾರ್ಥದಲ್ಲಿ ಶಾಂತ ವಿಧಾನವೆಂದರೆ, ಹಿಂಸೆಯ ಕುರಿತಾದ ಮಾತು ಕೂಡಾ ನಡೆಯಬಾರದು. ಕೇರಳದ ಸರಕಾರ ವಿರೋಧೀ ಚಳವಳಗಾರರು ಇದನ್ನು ಮರೆಯದಿರಲಿ."

ಪ್ರಧಾನಿ ನೆಹರೂರವರ ಮೇಲಿನ ಮಾತುಗಳನ್ನು ಅಪಾರ್ಥ ಮಾಡಿಕೊಂಡು ಮುಖ್ಯ ಮಂತ್ರಿ ನಂಬೂದರಿ ಪಾದರು ಈ ಸತ್ಯಾಗ್ರಹಕ್ಕೆ ಅವರು ಬೆಂಬಲ ನೀಡಿರುವರೆಂದು ವಿಷಾದ ವ್ಯಕ್ತಪಡಿಸಿರುವರು. ಪಂಡಿತ ನೆಹರೂ "ಬೆಂಬಲ ನೀಡದೆ ಹೋಗುತಿದ್ದರೆ", ಈ ಸತ್ಯಾಗ್ರಹ ನಡೆಯಬಾರದು ಎಂದವರು ಯೋಚಿಸಿರಲೂ ಬಹುದು. ಆದರೆ, ಸತ್ಯಾಗ್ರಹ ನಡೆಯುವುದು ರಾಜ್ಯಸರಕಾರದ ವಿರುದ್ಧ—ಆ ರಾಜ್ಯಸರಕಾರವು ಸ್ವೀಕರಿಸಿದ ಒಂದು ಶಾಸನವನ್ನು ಮುಂದಿಟ್ಟುಕೊಂಡು, ಆ ರಾಜ್ಯದವರೇ ನಡೆಸುವ ಚಳವಳ. ಇದು ಸಂಪೂರ್ಣ ರಾಜ್ಯಕ್ಕೆ ಸಂಬಂಧಿಸಿದ ವಿಚಾರವೆಂಬುದು ಸುವೇದ್ಯ. ರಾಜ್ಯದ ಜನರೇ ತಮ್ಮ ವಿರೋಧವನ್ನು ವ್ಯಕ್ತಪಡಿಸಲು ಉತ್ಸುಕರಾಗಿರುವಾಗ ಪ್ರಧಾನಿಗಳಿಗಾದರೂ ಅದನ್ನು ತಡೆಹಿಡಿಯುವ ಅಧಿಕಾರ ಪ್ರಜಾಪ್ರಭುತ್ವದಲ್ಲಿ ಎಲ್ಲಿಂದ ಬರಬೇಕು? ಆದರೂ ಪ್ರಜಾಪ್ರಭುತ್ವದ ಮೂಲಭೂತ ಶಾಂತ ವಿಧಾನಗಳಿಗೆ ಸರಿಯಾಗಿ ಅವರು ತಮ್ಮ ಕಾರ್ಯ ಮುಂದುವರಿಸಲೆಂದುದು ಬೆಂಬಲವಲ್ಲ; ಸನ್ಮಾರ್ಗದರ್ಶನ ಮಾತ್ರ. ರಾಷ್ಟ್ರದ ಹಿತದೃಷ್ಟಿಯಿಂದ ಈ ಮಾರ್ಗದರ್ಶನ ಆವಶ್ಯ.

ಕೇರಳದ ಪರಿಸ್ಥಿತಿ ಕುತೂಹಲಜನಕವಾಗುತ್ತ ನಡೆದಿದೆ. ತಾವು ಮೂಕತೆಗೆ ಸಿದ್ಧರಿಲ್ಲವೆಂದೂ, ತಮಗೆ ಧಕ್ಕೆತರುವ ಶಿಕ್ಷಣ ಮಸೂದೆಯ ಉಪನಿಯಮಗಳನ್ನು ಕಿತ್ತುಹಾಕುವುದಾದರೆ ಮಾತ್ರ ತಾವು ವಿಚಾರ ವಿಮರ್ಶನಕ್ಕೆ ಬರುವೆವೆಂದೂ ಹೆಚ್ಚಿನ ಖಾಸಗಿ ಆಡಳಿತೆದಾರರು ಹೇಳುತ್ತಾರೆ. ಆದರೆ, ಅದಕ್ಕೆ ಮುಖ್ಯಮಂತ್ರಿಗಳು ಎಂದಿಗೂ ಸಿದ್ಧರಿಲ್ಲ. ಹೀಗಾಗಿ ಈಗಾಗಲೇ ಶಾಲೆ ಪ್ರಾರಂಭಿಸಲು ಮುಂದುವರಿಸಿದ ದಿನ ಜೂನ್ ೧೫ ಎಂಬುದು ಮತ್ತೂ ಮುಂದೂಡಲ್ಪಡುವುದು ಬಹು ಸಂಭವನೀಯ ಮಾತ್ರವಲ್ಲದೆ, ಸರಕಾರ—ಜನ ವಿರೋಧದ ಪರಿಣಾಮವೂ ಕುತೂಹಲಕಾರಕವೆನ್ನಬಹುದು. ಎಂತಲೇ ಅಖಿಲ ಭಾರತೀಯರ ದೃಷ್ಟಿ ಈಗೀಗ ಕೇರಳದ ವಾರ್ತೆಗಳಲ್ಲಿಯೇ ಕೇಂದ್ರೀಕೃತವಾಗತೊಡಗಿದೆ. ಶಿಕ್ಷಣ ಕಾಯಿದೆ ಮಾತ್ರವಲ್ಲದೇ ಈಗ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಶಸ್ತ್ರಪರವಾನಿಗೆಗಳನ್ನೂ ರದ್ದುಪಡಿಸಿದ ಸರಕಾರದ ಕೃತ್ಯದಿಂದ ವಿರೋಧಿ ಪಕ್ಷಗಳು ರೊಚ್ಚಿಗೆದ್ದಂತಿವೆ. ಕೆದರಿಸಿದ ಸಿಂಹಗಳ ಆಕ್ರೋಶವನ್ನು ಕೇಳಿಯೂ ಕೇರಳ ಸರಕಾರ ಜನತೆಯ ಅಪೇಕ್ಷೆಗಳನ್ನು ಹತ್ತಿಕ್ಕಿ ತಾವು ಮೌನ ತಾಳಿಕೊಂಡಿರುವುದು ಕಮ್ಯೂನಿಸ್ಟ ಪ್ರಜಾಪ್ರಭುತ್ವದ ಸಲ್ಲಕ್ಷಣವೆ?

೦೦ ೦೦

ಭಾರತದ ಆರ್ಥಿಕ ಮಂತ್ರಿ ಶ್ರೀ ಮುರಾರ್ಜಿ ದೇಸಾಯಿ ಅವರು ರಾಷ್ಟ್ರವು ಅಭಿವೃದ್ಧಿ ಹೊಂದಿದಂತೆ ತೆರಿಗೆಯೂ ಹೆಚ್ಚಬೇಕಾಗುತ್ತದೆ ಎಂದು ಬೆಂಗಳೂರಿನಲ್ಲಿ ಆಡಿದರು. ತೃತೀಯ ಯೋಜನೆಯನ್ನು ಕಾರ್ಯಾನ್ವಿತಗೊಳಿಸುವ ಸಲುವಾಗಿ ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳಷ್ಟು ಹೊಸ ತೆರಿಗೆಯನ್ನು ಹೊರಿಸಲಾಗುವುದೆಂದು ವ್ಯಾಪಾರೀ ವಲಯಗಳಲ್ಲಿ ಕಳವಳವಿದೆ ಎಂದು ತಿಳಿಯುತ್ತದೆ. ಪ್ರಥಮ ಮತ್ತು ದ್ವಿತೀಯ ಯೋಜನೆಗಳಿಂದ ರಾಷ್ಟ್ರದ ವಿವಿಧೆಡೆಗಳಲ್ಲಿ ವಿವಿಧ ಯೋಜನೆಗಳಲ್ಲಿ ವೆಚ್ಚವಾದ ಮತ್ತು ಆಗುತ್ತಿರುವ ಏಳು ಸಾವಿರ ಕೋಟಿ ರೂಪಾಯಿಗಳಿಗೆ ವರ್ಷವೊಂದಕ್ಕೆ ನಾಲ್ಕು ನೂರು ಕೋಟಿಯಷ್ಟು ಬಡ್ಡಿ ಬರುವುದೆಂದರೆ. ಸುಮಾರು ಸೇಕಡಾ ಆರರ ಸಲೆಯಂತೆ ಬಡ್ಡಿ ದರವಾಯಿತು. ತಮಗೂ ತಾವು ತೊಡಗಿಸಿದ ಬಂಡವಾಳಕ್ಕೆ ಸರಕಾರವು ಇದೇ ದರದ ಬಡ್ಡಿಯನ್ನು ಈಯುವುದಾದರೆ, ಬೆಂಗಳೂರಿನ ಮಾತ್ರವಲ್ಲ, ದೇಶದ ಹೆಚ್ಚಿನ ವ್ಯಾಪಾರಿಗಳೆಲ್ಲರೂ ತಮ್ಮ ಉದ್ಯಮವನ್ನು ಸರಕಾರದ ಕೈಗೆ ಒಪ್ಪಿಸಿ, ತಾವು ನಿಶ್ಚಿಂತೆಯಿಂದ ಆರಾಮವಾಗಿ ದಿನಗಳೆದೇವು ಎಂದು ಕನಸುಕಂಡು ಅಂತಹ ದಿನ ಬೇಗನೆ ಬರಲಿ ಎಂದು ಹಾರೈಸುತ್ತಿರಬಹುದೆ?

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

ಭಾವಕಥೆ

ಹಾಗಿದ್ದರೂ ಆಗದು; ಹೀಗಿದ್ದರೂ ಸೇರದು.

ಒಂದು ದಿನ ಕೆರೆಯದಡದಲ್ಲಿ ಇಬ್ಬರು ಸಖಿಯರು ಒಟ್ಟಾದರು. ತಮ್ಮ ತಮ್ಮ ಪತಿಯಬಗ್ಗೆ ಅವರು ಮಾತಾಡುತ್ತಿದ್ದರು.

ಮೊದಲನೆಯವಳು- "ನನ್ನ ಪತಿಯು ಇಡೀ ದಿವಸ ಮಾತಾಡುತ್ತಾ, ನಗುತ್ತಾ ಇರುತ್ತಾನೆ, ಈ ಗದ್ದಲದಿಂದಂತೂ ನನ್ನ ತಲೆ ಜಡ್ಡು ಹಿಡಿದು ಹೋಗಿದೆ". ಎಂದಳು.

ಎರಡನೆಯವಳು—"ನನ್ನ ಪತಿಯು ಯಾವಾಗಲೂ ಗಂಭೀರನಾಗಿರುತ್ತಾನೆ. ಏನೊಂದು ಮಾತನ್ನೂ ಆಡುವುದಿಲ್ಲ, ಅವನ ಈ ಅತಿ ಮೌನದಿಂದ ನನಗಂತೂ ತುಂಬಾ ಬೇಸರವಾಗತೊಡಗಿದೆ." ಎಂದು ನುಡಿದಳು.

ಆಕಾಶದ ದೇವತೆಗಳಿಗೆ ಈ ರೀತಿಯ ಮಾತುಕೇಳಿ ಅವರೀರ್ವರ ಮೇಲೂ ದಯೆಯುಂಟಾಯ್ತು. ಅವರು ಗೆಳತಿಯರೀರ್ವರ ಪತಿಯರ ಮನೋಸ್ಥಿತಿಯನ್ನು ಪರಸ್ಪರ ವಿನಿಮಯವಾಗುವಂತೆ ಮಾಡಿದರು.

೦ ೦

ಕೆಲವು ದಿವಸದ ನಂತರ ಅದೇ ಸಖಿಯರೀರ್ವರೂ ಪುನಃ ಅದೇ ಕೆರೆಯ ದಡದಲ್ಲಿ ಭೆಟ್ಟಿಯಾದರು. ಹಾಗೂ, ತಮ್ಮ ತಮ್ಮ ಸತಿಗಳ ಗುಣ ಸ್ವಭಾವವನ್ನು ಚರ್ಚಿಸ ತೊಡಗಿದರು.

ಮೊದಲನೆಯವಳು-"ನನ್ನ ಪತಿಯು ಹಿಂದೆ ಯಾವಾಗಲೂ ಮಾತಾಡುತ್ತಿದ್ದರು, ನಗುತ್ತಿದ್ದರು ಹಾಗೂ ಸಂತೋಷವಾಗಿರುತ್ತಿದ್ದರು ಆದರೆ ಇತ್ತೀಚೆಗೆ ಅವರಿಗೇನಾಗಿದೆಯೋ ಏನೋ! ಅವರು ಯಾವಾಗಲೂ ಮೌನವಾಗಿ, ಗಂಭೀರವಾಗಿರುತ್ತಾರೆ. ಅವರ ಗಂಭೀರತೆಯನ್ನು ಕಂಡು ನನಗೆ ಅತೀವ ಬೇಸರವಾಗುತ್ತದೆ." ಎಂದು ವೇದನಾಪೂರ್ಣಳಾಗಿ ನುಡಿದಳು.

ಎರಡನೆಯವಳು — "ನನ್ನ ಪತಿ ಹಿಂದೆ ಮೌನವಾಗಿ ಗಂಭೀರವಾಗಿ ಮನೆಯಲ್ಲಿರುತ್ತಿದ್ದರು, ಮನೆಯಲ್ಲಿ ಶಾಂತಿಯಿರುತ್ತಿತ್ತು. ಆದರೆ ಇತ್ತೀಚೆಗೆ ಅವರಿಗೇನಾಗಿದೆಯೋ ದೇವರಿಗೇ ಗೊತ್ತು. ಇಡೀ ದಿವಸ ಮಾತಾಡುತ್ತಾ, ನಗುತ್ತಾ ಇರುತ್ತಾರೆ. ನನ್ನ ತಲೆಯಂತೂ ಜಡ್ಡು ಹಿಡಿದು ಹೋಗಿದೆ" ಎಂದು ಬೇಸರದಿಂದ ಅಂದಳು.

(ಸುದರ್ಶನರ ಝರೋಕ್‌ನಿಂದ)

—ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆ ಪರಾರಿ.

ಅಮೆರಿಕೆಯ ಹೊಸ ರಾಜ್ಯಾಂಗ ಕಾರ್ಯದರ್ಶಿ ಶ್ರೀ ಕ್ರಿಶ್ಚಿಯನ್ ಎ. ಹರ್ಟರ್

ಪ್ರಕಟಣೆ

ಉಡುಪಿ ತಾಲೂಕು ಕಾಪು ಪಡುಗ್ರಾಮದ ತೊಟ್ಟಂಯೆಂಬಲ್ಲಿರುವ ಚಂದು ಬೆಳ್ಚಡರ ಹೆಂಡತಿ ಕರ್ತಮ ಬೆಳ್ಚೆಡ್ತಿ 1 ಸದ್ರಿಯವರ ಮಕ್ಕಳು ಸೇಸು ಬೆಳ್ಚಡ 1 ರಾಮಪ್ಪ ಬೆಳ್ಚಡ 1 ಮುತ್ತಪ್ಪ ಬೆಳ್ಚಡ 1 ಸಹಾ ಈ ಮೂಲಕ ಪ್ರಕಟ ಪಡಿಸುವದೇನಂದ್ರೆ:-

ನಮ್ಮ ಪೈಕಿ 1ನೇಯವರ ಗಂಡ ಮಿಕ್ಕವರ ತಂದೆಯೂ ಆದ ಸುಮಾರು ೮೫(ಎಂಭತ್ತೈದು)ವರುಷ ಪ್ರಾಯದ ಚಂದು ಬೆಳ್ಚಡರು ಇತ್ತಲಾಗಿ ಸರಿಯಾದ ಬುದ್ಧಿ ಸ್ವಾಸ್ತ್ಯತೆಯಿಲ್ಲದವರೂ, ಅಶಕ್ತಿವುಳ್ಳವರೂ ಬೇರೆಯವರ ಹೇಳಿಕೆಯಂತೆ ನರ್ತಿಸುವವರೂ ಆಗಿರುತ್ತಾರೆ. ಅವರ ಕೊಡುವಿಕೆಯಿಂದ ನಾವು ಚಾಲಗೇಣಿಗೆ ಒಟ್ಟಾಗಿ ಅನುಭವಿಸುವ ಬಾಬ್ತು ಸದ್ರಿ ಉಡುಪಿ ತಾಲ್ಲೂಕು ಕಾಪು ಪಡುಗ್ರಾಮದ ಸ.ನಂಬ್ರ 11/12 & 15ನೇ ಸ್ಥಳಗಳ ಧನಿಗಳಾದ ಸದ್ರಿ ಕಾಪು ಪಡುಗ್ರಾಮದ ಪುಟ್ಟ ಹೆಂಗ್ಸಿನ ಮಗ ಕೊಕ್ರಮಾರಕಾಲ ಮತ್ತು ತೋಮರ ಮರಕಾಲರ ಮಗ ಶಾಂಭರ ಕರ್ಕೇರರೆಂಬವರು ಸದ್ರಿ ಚಂದು ಬೆಳ್ಚಡರನ್ನು ದುರ್ಭೋಧಿಸಿ ನುಂಕುಮಾಡಿ ಚಪ್ಪಾಯಿಸಿಕೊಂಡು ಹೋಗಿರುತ್ತಾರೆ. ಸದ್ರಿ ಚಾಲಗೇಣಿ ಆಸ್ತಿಯನ್ನು ಸೋಡಾ ಚೀಟು ಮಾಡಿಕೊಳ್ಳುವ ಉದ್ದೇಶದಿಂದಯಿದ್ದಾರೆಂತ ನಹ ತಿಳಿದು ಬರುತ್ತದೆ. ಹಾಗೆ ಯಾರಾದರೂ ಮೋಸದಿಂದ ನಮ್ಮ ತಿಳುವಳಿಕೆ ಇಲ್ಲದೆ ಸೋಡಾ ಚೀಟು ಮುಂತಾದ ಯಾವ ದಾಖಲೆಯನ್ನಾದರೂ ಮಾಡಿಸಿ ಕೊಂಡಲ್ಲಿ ಅದು ನಮ್ಮನ್ನು ನಮ್ಮ ಕುಟುಂಬದವರನ್ನೂ ಬದ್ಧೀಕರಿಸ ತಕ್ಕದಲ್ಲ-ವೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸುತ್ತೇವೆ. ಈ ಕುರಿತು ಉಡುಪಿ ತಾಲೂಕು ತಹಶಿಲ್ದಾರರವರಲ್ಲಿಯೂ ಅಲಾಹಿದ ಅರ್ಜಿ ಕೂಡ ಮಾಡಿ ಕೊಂಡಿರುತ್ತೇವೆ.

○ ಈ ಎಡಹೆಬ್ಬೆಟ್ಟಿನ ಗುರುತು ಕರ್ತಮ ಬೆಳ್ಚೆಡ್ತಿ ರುಜು.

ಸೇಸು ಬೆಳ್ಚಡ,

ರಾಮಪ್ಪ ಬೆಳ್ಚಡ.

ಮುತ್ತಪ್ಪ ಬೆಳ್ಚಡ.

ಕಾಪು. ತಾರೀಕು. 6—6—59.

ವಿದ್ಯಾರ್ಥಿಗಳೂ ರಕ್ಷಕರೂ
ದಯವಿಟ್ಟು ವಿಚಾರಿಸಿರಿ

ವಿದ್ಯಾರ್ಥಿಗಳ ಸೇವಿಂಗ್ಸ್ ಬೇಂಕ್ ಖಾತೆ
ಯಲ್ಲಿರುವ ವಿಶೇಷ ಸೌಕರ್ಯಗಳಿಗಾಗಿ
ದಯಮಾಡಿ ವಿಚಾರಿಸಿರಿ.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್
ಸಿಂಡಿಕೇಟ್ ಲಿಮಿಟೆಡ್.

THE CANARA INDUSTRIAL & BANKING
SYNDICATE LIMITED.

Edited, Printed & Published by K. H. Shetty, at the Navayuga Press, Udipi, S. India,

ನವಯುಗ

ವಾ. ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ

ವರುಷ ೩೮. ವಾರ ೪೦. 18-6-1959 Vol. 38. No. 40.

ವಿಚಾರ ಮಥನ

ತೃತೀಯ ಯೋಜನೆಯ ಮೊತ್ತ

* *

ಅನಭಿವೃದ್ಧ ನೇಪಾಳ

* *

ಸಮಸ್ಯೆಗೆ ಪರಿಹಾರ ಬೇಡ

* *

ಉದಕ ಮಂಡಲದಲ್ಲಿ ಸೇರಿದ ತೃತೀಯ ಪಂಚವಾರ್ಷಿಕ ಯೋಜನೆಯ ವಿಚಾರಗೋಷ್ಠಿಯು ಯಶಸ್ವಿಯಾಗಿ ಅಂತ್ಯವಾಗಿದೆ. ಇಲ್ಲಿ ತೃತೀಯ ಯೋಜನೆಯ ಬಗ್ಗೆ ಯಾವುದೇ ನಿರ್ಧಾರವಾಗಿಲ್ಲವಾದರೂ ಆ ಬಗ್ಗೆ ಸುದೀರ್ಘವಾದ ಚರ್ಚೆಯು ಮಾತ್ರ ನಡೆಯಿತು. ಭಾರತದ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಎರಡೂವರೆ ಸಾವಿರ ಕೋಟಿ ವೆಚ್ಚವಾಗಿದ್ದು, ದ್ವಿತೀಯ ಯೋಜನೆಯ ಅಂತ್ಯದಲ್ಲಿನ ವೆಚ್ಚವು ಸುಮಾರು ನಾಲ್ಕೂವರೆ ಸಾವಿರ ಕೋಟಿಯಾಗುವುದು. ಅಲ್ಲದೇ ತೃತೀಯ ಯೋಜನೆಯ ಬಗ್ಗೆ ಆಗುವ ವೆಚ್ಚವು ಸುಮಾರು ೧೧ ಸಾವಿರ ಕೋಟಿಯಾಗುವ ನಿರೀಕ್ಷೆಯಿದೆ. ಅಂತೂ ೧೦ ಸಾವಿರ ಕೋಟಿಗಳಿಗೆ ಎಂದಿಗೂ ಕಡಿಮೆಯಾಗಲಾರದು ಎಂಬುದು ಒಪ್ಪಿಬಂದ ಸಂಗತಿ.

ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನೇ ಆಮೂಲಾಗ್ರವಾಗಿ ಪೂರ್ಣಗೊಳಿಸಬೇಕಾದರೇನೇ ಬಹು ಪ್ರಯಾಸಪಡಬೇಕಾಗಿ ಬಂದ ಭಾರತವು ಈ ೧೦-೧೧ ಸಾವಿರ ಕೋಟಿ ರೂಪಾಯಿಗಳನ್ನು ಎಲ್ಲಿಂದ ಸಂಗ್ರಹಿಸಬಹುದು ಎಂಬುದೇ ಬಹಳ ಗಂಭೀರವಾದ ಮತ್ತು ಯೋಚನೆಯನ್ನೂ ವಿವಂಚನೆಯನ್ನೂ ಉಂಟುಮಾಡುವ ಪ್ರಶ್ನೆಯೆಂಬುದು ನಿರ್ವಿವಾದ. ಸಾಮಾನ್ಯವಾಗಿ ಒಂದು ಸಾವಿರ ಕೋಟಿಗಳಷ್ಟು ವಿದೇಶಗಳಿಂದ ಸಹಾಯ ದೊರೆಯಬಹುದು; ಆದರೂ ಸುಮಾರು ಎರಡು ಸಾವಿರ ಕೋಟಿಗಳಷ್ಟು ಹೊಸ ತೆರಿಗೆಗಳನ್ನು ಹೊರಿಸಿಯೇ ಸಂಗ್ರಹಿಸಬೇಕಾಗಿ ಬಂದಿದೆ. ಈ ಮಾತನ್ನು ಇತ್ತೀಚೆಗೆ ಬೆಂಗಳೂರಿಗೆ ಆಗಮಿಸಿದ ಕೇಂದ್ರ ಆರ್ಥಿಕ ಮಂತ್ರಿಗಳೂ ಪುಷ್ಟೀಕರಿಸಿದ್ದಾರೆ. ಆದರೆ, ಭಾರತದಲ್ಲಿ ಇನ್ನೂ ತೆರಿಗೆ ಹೊರಿಸುವ ಪರಿಸ್ಥಿತಿ ಇದೆಯೇ ಎಂಬುದು ಚರ್ಚಾಸ್ಪದ ವಿಷಯವಾಗಿದೆ.

ತೃತೀಯ ಪಂಚವಾರ್ಷಿಕ ಯೋಜನೆಯ ಅಂತಿಮ ರೂಪರೇಷೆ ಯಾವುದು ಎಂದಿನ್ನೂ ಸ್ಪಷ್ಟವಾಗಿಲ್ಲ ಆದರೂ ಇದಕ್ಕಾಗಿ ಬೇಕಾದ ಹಣವನ್ನು ಯಾವ ರೀತಿಯ ಕರಗಳಿಂದ ಸಂಗ್ರಹಿಸಬೇಕು? ಪ್ರತ್ಯಕ್ಷ ಕರಗಳಿಂದಾದರೂ ಇದಕ್ಕೆ ಬೇಕಾದಷ್ಟು ಹಣವನ್ನ ಪಡೆಯುವುದು ತೀರ ದುಷ್ಕರವಾಗಿದೆ ಈಗಿನ ಕರಾಕರಣ ಪದ್ಧತಿಯೇ ಅತ್ಯುನ್ನತ ಸೀಮೆಯನ್ನು ಮುಮುಟ್ಟಿದೆ ಎಂದೇ ಎಲ್ಲರೂ ಹೇಳುತ್ತಾರೆ. ಇದನ್ನು ಇನ್ನೂ ಏರಿಸುವುದು ಸಾಧ್ಯವೆನ್ನುವವರು ವಿರಳವೆಂದೇ ಅನ್ನಬಹುದು. ದೊಡ್ಡ ಉದ್ಯೋಗಗಳ ಮೇಲೆ ತೆರಿಗೆಗಳನ್ನು ಏರಿಸಿದರೆ, ದೇಶದ ಉದ್ಯೋಗಗಳ ಪ್ರಗತಿಯ ಮೇಲೆ ದೊಡ್ಡ ಧಕ್ಕೆಯು ತಗಲುವುದು ಖಂಡಿತ. ಇನ್ನು ಅಪ್ರತ್ಯಕ್ಷ ಕರದ ವಿಚಾರ,

ಅಪ್ರತ್ಯಕ್ಷ ಕರವನ್ನು ಯಾವುದರ ಮೇಲೆ ಹೊರಿಸಬೇಕು? ವಸ್ತುಗಳ ಬಳಕೆದಾರರ ಮೇಲೆಯೇ? ಹಾಗಾದರೆ, ಈ ಕರಗಳನ್ನು ದೇಶದ ನಿಮ್ನ ಮತ್ತು ಮಧ್ಯಮ ವರ್ಗದ ಜನತೆಯೇ ತೆರಬೇಕಾಗುವುದಲ್ಲವೆ? ಇಂತಹ ಜನತೆಯು ಒಟ್ಟು ಜನಸಂಖ್ಯೆಯ ಶೇಕಡಾ ೭೦ರಷ್ಟಿದೆ ಎಂಬುದನ್ನು ಮರೆಯಬಲ್ಲೆವೆ? ಇದರಿಂದಾಗಿ ಅಪ್ರಸನ್ನ ಜನತೆ ಎದುರು ನಿಲ್ಲಲಾರದೆ? ಆದುದರಿಂದ, ಇದರ ಪರಿಣಾಮವಾಗಿಯೇ ರಾಜಕೀಯ ದುಷ್ಪರಿಣಾಮಗಳು ತಲೆದೋರದಿರಲಾರವು. ಸಹಕಾರಿ ಒಕ್ಕಲುತನದಿಂದಾಗಿ ಸರಕಾರಕ್ಕೆ ಯಾವ ವಿಧದ ಕರಗಳು ದೊರೆಯಬಲ್ಲವು ಎಂದೂ ಹೇಳಬರುವಂತಿಲ್ಲ. ಭೂಮಿಯಿಂದ ಅಧಿಕೋತ್ಪತ್ತಿಯು ದೊರೆಯುವುದರಿಂದ ಉತ್ಪಾದನೆ ಎಷ್ಟಾದೀತೆಂಬುದೂ ತಿಳಿಯಬಾರದ. ತೃತೀಯ ಯೋಜನಾವಧಿಯಲ್ಲಿ ಸಹಕಾರಿ ಪದ್ಧತಿಯೊದರೂ ವ್ಯಾವಹಾರಿಕ್ಕೆ ಬಂದರೆ, ಅದು ಬಾಲ್ಯಾವಸ್ಥೆಯಲ್ಲಿ ಇದ್ದೀತೇ ಹೊರತು ಅದರಿಂದ ಬೇಕಷ್ಟು ಪರಿಣಾಮ ಲಭಿಸುವುದು ಸಾಧ್ಯವಿಲ್ಲ.

ವಸ್ತುತಃ ಅಪ್ರತ್ಯಕ್ಷ ಕರಗಳಿಗೂ ಒಂದು ಮಿತಿ ಇದೆ ಇಂತಹ ಕರವನ್ನು ಬಟ್ಟೆಯ ಮೇಲೆ ಹೇರಿದುದರಿಂದ ಈ ಉದ್ಯೋಗದಲ್ಲಿ ಸಂಕಟವು ಉತ್ಪನ್ನವಾಗಿ ಹಲವಾರು ಗಿರಣಿಗಳು ಬಾಗಿಲು ಹಾಕಿದುದರಿಂದ ಸಾವಿರಾರು ಕರ್ಮಚಾರಿಗಳು ನಿರುದ್ಯೋಗಿಗಳಾಗಿದ್ದಾರೆ. ಆದುದರಿಂದ ಈ ವಿಧಾನದಿಂದಲೂ ಹಣಸಂಪಾದನೆ ಮಾಡುವುದು ಪ್ರಯಾಸವಾಗಿದೆ.

ಇನ್ನುಳಿದುದು ಕೊರತೆ ಧನದ ವಿನಿಯೋಗ. ಉತ್ಪಾದನೆಯು ಬೇಡಿಕೆಗಿಂತ ಕಡಿಮೆಯಿರುವಾಗ, ಕೊರತೆಧನ ವಿನಿಯೋಗವು ಲಾಭಕ್ಕೆ ಬದಲು ಹಾನಿಯನ್ನೇ ಉಂಟುಮಾಡುತ್ತದೆ ಎಂದು ತಿಳಿದುಬಂದಿದೆ ಈಗಾಗಲೇ ದೇಶದಲ್ಲಿ ಹಣದುಬ್ಬರವು ಇದ್ದು, ಇನ್ನೂ ಕೊರತೆ ಧನದ ವ್ಯವಸ್ಥೆಯು ಮುಂದುವರಿದರೆ, ಪರಿಸ್ಥಿತಿಯು ಮತ್ತಷ್ಟು ಕೆಟ್ಟು ಹೋಗುವುದು.

ವಿದೇಶೀಯ ಸಹಾಯದ ಕುರಿತು ಹೇಳುವಾಗ, ಅಮೆರಿಕೆ ಹಾಗೂ ಇನ್ನಿತರ ಕೆಲವು ದೇಶಗಳಿಂದ ಈ ವರೆಗಿನ ಮೊತ್ತಕ್ಕಿಂತ ಹೆಚ್ಚಿನ ಮೊಬಲಗು ಬರುವ ಭರವಸೆಯಿದೆ. ಆದರೆ, ಸೈದ್ಧಾಂತಿಕ ಕಾರ್ಯಕ್ರಮಗಳಲ್ಲಿ ತಮ್ಮ ಭಂಡವಳನ್ನು ವಿನಿಯೋಗಿಸಲು ಅಮೆರಿಕೆಯು ಬಯಸದೆ ವಿಕಾಸ ಕಾರ್ಯಗಳಲ್ಲಿ ಮಾತ್ರ ತೊಡಗಿಸ ಬಯಸುತ್ತದೆ ಎಂದು ವಿಶ್ವಸನೀಯವಾಗಿ ತಿಳಿದಿದೆ.

ಆದುದರಿಂದ "ಯೋಜನೆ"ಯ ರೂಪರೇಷೆಯನ್ನು ತಯಾರಿಸುವಾಗ ಭಾರಿ

(೧೨ನೇ ಪುಟ ನೋಡಿರಿ)

ಅಮೇರಿಕಾದ ಅಧ್ಯಕ್ಷ ಶ್ರೀ ಐಸೆನ್‌ಹೋವರರು ಕಾರ್ಯಮಗ್ನರಾಗಿದ್ದಾರೆ

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3. ಸ್ಥಾಪನೆ.- 1931.

ಕಾಯಂ ಠೇವಣಾತಿ ಬಡ್ಡಿ ದರ

1	ತಿಂಗಳಿಂದ	5	ತಿಂಗಳ ವರೆಗೆ	4¼%
6	,,	12	,,	4½%
13	,,	24	,,	4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ ...

ಕಥಾವಿಹಾರ

ಹೆಣ್ಣಿನ ಹೃದಯ ಅರಿಯದ ಗಂಡು

ರಮೇಶ ನೀಲಳನ್ನು ಪ್ರೇಮಿಸಿದ್ದ; ಅಗಲಿದ್ದ; ಆದರೆ, ಇನ್ನೊಮ್ಮೆ ಆಕೆಯ ಭೇಟಿಯಾದಾಗ......!

ಜಮೀನ್ದಾರ ರಾಮರಾಯರಿಗೆ ಮೂವರು ಮಕ್ಕಳು. ರಾಮರಾಯರು ವೃದ್ಧಾಪ್ಯವನ್ನು ಸಮೀಪಿಸುತ್ತಿದ್ದುದರಿಂದ ಹಿರಿಯವನಾದ ನಾಗರಾಜ ಮನೆವಾರ್ತೆ—ಜಮೀನಿನ ವ್ಯವಹಾರದಲ್ಲಿ ನಿರತನಾಗಬೇಕಾಯಿತು. ಇಂಟರ್‌ಮೀಡಿಯೇಟ್‌ವರೆಗೆ ಓದಿ ನಾಪಾಸಾಗಿ 'ಇನ್ನು ಈ ಹಾಳು ಓದು ಸಾಕು' ಎಂಬ ಭಾವನೆ ಉದಿಸುವ ಕಾಲಕ್ಕೆ ಸರಿಯಾಗಿ 'ನಾನು ಮುದುಕನಾದೆ; ಇನ್ನು ಮನೆವಾರು ನೀನು ನೋಡಿಕೊ' ಎಂದು ಹೇಳಿದ ತಂದೆಯ ಮಾತು ಅಪ್ಯಾಯಮಾನವಾಯಿತು.

ಎರಡನೆಯ ಮಗ ರಘುರಾಮ ವಕೀಲನಾದ. ಅವನ ಬುದ್ಧಿಯೂ ಚುರುಕು. ನಡತೆಯೂ ಚುರುಕು. ಸ್ವಲ್ಪ ಆದರ್ಶವಾದಿ ರಘುರಾಮ. ಅವನ ಮನೋಗುಣಕ್ಕೆ ತಕ್ಕಂತೆ ಅವನು ವಕೀಲನಾದುದರಿಂದ 'ತನ್ನ ವಕೀಲಿ ವೃತ್ತಿ" ಚಲೋದಾಗಿ ಸಾಗಬಹುದೆಂಬುದರಲ್ಲಿ ಅವನಿಗೆ ಸಂದೇಹವಿರಲಿಲ್ಲ.

ಕಿರಿಯವ ರಮೇಶ ಇನ್ನೂ ಕಾಲೇಜಿಗೆ ಹಣ ತೆರುತ್ತಿರುವ ಬುದ್ಧಿಶಾಲಿ ಎನ್ನುವುದಕ್ಕಿಂತ ಬುದ್ಧಿ ವ್ಯಯಶಾಲಿ ಎನ್ನಬಹುದು. ಹರೆಯದ ರಮೇಶ ವಿಲಾಸ ಜೀವನಕ್ಕೆ ಮಾರುಹೋಗಿದ್ದ. ಅದಕ್ಕೆ ಎರವಾಗಿದ್ದ. ಹಣ–ಯೌವನ-ಕಾಲೇಜಿನ 'ಮಧುರ ವಾತಾವರಣ'ಗಳ ಸಂಗಮವಾದಾಗ ವಿಲಾಸಕ್ಕೇನು ಕಡಿಮೆ? ಮನೆಗಿಂತ ದೂರದ ನಗರದಲ್ಲಿ ಅದೂ ವಿದ್ಯಾರ್ಥಿಯಾಗಿ ರಮೇಶ ಸುಖಿಯಾಗಿ ಜೀವಿಸುತ್ತಿದ್ದ. ರಾಮರಾಯರೂ ಹಣದ ವಿಷಯದಲ್ಲಿ ಕೈಗಿಡ್ಡ ಮಾಡಿಕೊಳ್ಳುವವರಲ್ಲ.

ಕಾಲೇಜಿಗೆ ಸೇರಿದ ಮೊದಲ ವರ್ಷ ನೀರಿನಿಂದ ಹೊರಬಿದ್ದ ಮೀನಿನಂತಿದ್ದವನು ಮರುವರ್ಷವೇ ಮೀನುಗಾರನಾದ. ಮೀನುಗಳನ್ನು ಬಲೆಗೆ ಹಾಕಿಕೊಳ್ಳುವುದರಲ್ಲಿ ಆತ ನಿಸ್ಸೀಮನೆಂದಲ್ಲ; ಆದರೆ ಹಿಂದುಳಿದವನಲ್ಲ. ಶೀಟಾದ, ವಯೋಮಾನಕ್ಕೆ ತಕ್ಕ ಸುಂದರ ಮೈಕಟ್ಟು, ಬಿಳಿ ಚರ್ಮ, ಹೆಣ್ಣಿನ ಮುಖ, ಕುಣಿದಾಡುವ ಕಣ್ಣುಗಳು, ಮುಗುಳು ನಗು ಸದಾ ಪಸರಿಸಿದ ತುಟಿಗಳು ಇದಕ್ಕೆ ತಕ್ಕುದಾಗಿದ್ದುವು. ಆದರೆ ಮೂರು ವರ್ಷದ ವರೆಗೂ ಅವನು ಅನುಭವಿ ಎನಿಸಿರಲಿಲ್ಲ. ವಿಲಾಸ ಹೊಲಸಾಗಿರಲಿಲ್ಲ. ಅರೆನಿದ್ದೆಯ ಕನಸಿನಂತಿತ್ತು. ಕೈಯಲ್ಲೂ ಹಿಡಿದು ಅಂದ ಚಂದ ನೋಡುತ್ತಿರುವಾಗಲೇ ಕೆಲವು ಮೀನುಗಳು ಜಾರಿಹೋಗುತ್ತಿದ್ದುವು. ಮತ್ತೆ ಕೆಲವು 'ಹೀಗೇ ಸಾಕು' ಎನ್ನುತ್ತಿದ್ದುವು. ಕೆಲವು ಯಾವುದೋ ಕಾರಣದಿಂದ ಹೆದರಿ ಕುಪ್ಪಳಿಸಿಬಿಡುತ್ತಿದ್ದುವು. ಕೆಲವನ್ನು ಹೆದರಿ ಈತನೇ ಬಿಡುತ್ತಿದ್ದ.

ಮೂರನೇ ವರ್ಷದಲ್ಲಿ ರಮೇಶನಿಗೆ ನೀಲಾಳ ಪರಿಚಯವಾಯಿತು. ಎಲ್ಲಿ, ಹೇಗೆ ಎಂಬುದೆಲ್ಲಾ ಪ್ರೇಮದ ವಿಷಯದಲ್ಲಿ ದಾಖಲು ಮಾಡಿಕೊಳ್ಳುವ ವಿಷಯಗಳಲ್ಲ. ಅವರ ಪ್ರೇಮಕ್ಕೆ ಮೊದಲ ಕಾರಣ ಆಕರ್ಷಣೆ. ನೀಲಾ ಪೇಟೆಯಲ್ಲಿ ಬೆಳೆದವಳು. ಆದರೆ ಅವಳು ಸುಂದರಿಯಾಗಿದ್ದರೂ 'ಬೆಡಗುಗಾತಿ' ಎನಿಸಿರಲಿಲ್ಲ. ದುಂಡಗಿದ್ದರೂ ತೆಳ್ಳಗಾಗಿ ಕಾಣುವ ಶರೀರ, 'ಬಹಳ ವರ್ಷ ಸುಂದರವಾಗಿ ಬಾಳಿಯೇನು' ಎನ್ನುವಂತಿತ್ತು. ಹದಿನೆಂಟರ ಸುಗ್ಗಿ; ಬಣ್ಣವೇರಿದ ಮೈ, ನಗುವಿನೊಂದಿಗೆ ಕಂಪೊಗೆವ ಮುಖ, ರಸಲಿಪ್ತವಾದಂತಿದ್ದ ತುಟಿಗಳು, ತುಂಬುತ್ತಲಿರ್ಪ್ಪವ, ಇನ್ನೂ ತುಂಬಲಿರುವ ಎದೆ, ದುಂಡಗಿನ ಎಳೆ ಶರೀರ, ಬಳುಕಿ ಬಳುಕದೆ ನಡೆವ ನಡೆ........ ಬಣ್ಣನೆಗಿಂತ ಪ್ರೇಮಿಯ ಕಣ್ಣಿಗೆ ಕಂಡ ಹೆಣ್ಣೇ ಸುಂದರಿ! ಆಟ ಪಾಟಗಳಲ್ಲಿ, ಕೂಟ ವಿನೋದಗಳಲ್ಲಿ ಜತೆಯಾಗಿ, ಒಂದಾಗಿ ನಲಿದು, ಬಾಳಿದರು ನೀಲಾ–ರಮೇಶರು. ಅವರ ಭಾವೀ ಜೀವನ ಸುಂದರ ಕನಸಾಗಿತ್ತು. ನಡೆವ ಬಾಳು ಮಧುರವಾಗಿತ್ತು. ಅಂತೂ ನೀಲಾ—ರಮೇಶರು ಗೆಳೆತನದ ಸುಂದರ ಸಂತದಲ್ಲಿ ನಲಿದು, ರಮಿಸಿ ಪ್ರೇಮಗೀತೆ ಹಾಡಿದರು.

ಇದರ ಹಿನ್ನೆಲೆ ವಿಚಿತ್ರವಾಗಿತ್ತು. ನೀಲಾ ರಮೇಶನನ್ನು ನಂಬಿದ್ದಳು. ಅವನೇ ತನ್ನ ಭಾವೀ ಜೀವನದ ಪ್ರಿಯತಮನೆಂದು ಭಾವಿಸಿದ್ದಳು. ಇವನನ್ನು ಬಿಟ್ಟು ತನ್ನ ಬಾಳಿನಲ್ಲಿ ಬೇರೊಬ್ಬನನ್ನು ಇನ್ನು ನೆಚ್ಚಲಾರೆನೆಂದು ದೃಢಪಡಿಸಿದ್ದಳು. ಅವಳ ಒಲವಿನ ಸೆಲೆ ಆಳವಾಗಿತ್ತು.

ಆದರೆ ರಮೇಶನ ಪ್ರೇಮವು ಅಷ್ಟು ಗಾಢವಾಗಿರಲಿಲ್ಲ. ಅವನು ನೀಲಾಳ ರೂಪಕ್ಕೆ ಮಾರುಹೋಗಿದ್ದ. ಅವಳನ್ನು ಪ್ರೇಮಿಸಿದ. ಅವಳ ಜೊತೆಯಿಂದ ದೊರೆವ ಆನಂದವನ್ನು ಬಲ್ಲ. ಅದಕ್ಕಿಂತ ಮುಂದೇನೆಂದು ಯೋಚಿಸುವಷ್ಟು ಸಂತೋಷಾಧಿಕ್ಯದೆಡೆಯಲ್ಲಿ ಸಾಧ್ಯತೆಯಿದೆಯೆ? ನೀಲಾ ಅವನನ್ನು ಪ್ರೀತಿಸಿದ್ದರಿಂದ, 'ತನಗೆ ಅನುಕೂಲೆಯಾಗಿರುವಳೆಂ'ದು ರಮೇಶ ಭಾವಿಸುವಂತಾದುದರಿಂದ, 'ತನ್ನನ್ನು ಪ್ರೀತಿಸುತ್ತಿದ್ದಾನೆ' ಎಂಬ ಭಾವನೆ ನೀಲಾಳಲ್ಲಿ ಉಂಟಾಯಿತು. ಹಾಗಾಗಿ ಅವರ ಮನ, ಹೃದಯ ಬೆರೆಯಿತು. ಹಾಗೇ ಬೆಸೆಯಿತು.

ವಯೋಗುಣದ ಚೆಲ್ಲಾಟ, ಹುಚ್ಚಾಟವಾಯಿತು. ದಿನೇ ದಿನೇ ನೀಲಾ ಕಳೆಯೇರಿದ ಸಂಪಿಗೆಯಾದಳು. ಮೊದಮೊದಲು ತಾನೇನಾಗುತ್ತಿದ್ದೇನೆಂದು ಅರಿಯದ ನೀಲಾ 'ತಾನು ಗರ್ಭಿಣಿಯಾಗುತ್ತಿದ್ದೇನೆ' ಎಂದರಿತು ತತ್ತರಿಸಿ ಹೋದಳು. ಅವಳ ಹೃದಯ ಮುಂದೆಬರಬಹುದಾದ ಭೀಕರ ಪರಿಸ್ಥಿತಿಯ ಕಲ್ಪನೆಯ ಭೀತಿಯಲ್ಲಿ ತಪಿಸಿತು. ನೀಲಾ ಏನಾಗಿದ್ದಾಳೆ ಎಂಬುದನ್ನು ಸೂಕ್ಷ್ಮವಾಗಿ ಅರಿತ ರಮೇಶ, ಕೇದಿಗೆಯ ವನದಲ್ಲಿ ಹಾವನ್ನು ಕಂಡ ಹೂವಾಡಿಗನಂತೆ ಹಿಂದಕ್ಕೆ ನೆಗೆದ. ಅವನ ದರ್ಶನವು ಕೂಡಾ ನೀಲಾಳಿಗೆ ದುರ್ಲಭವಾಗತೊಡಗಿತು. "ತನ್ನ ಪ್ರೇಮನಿಧಿ ಬತ್ತಿಹೋಯಿತು. ನಾನು ನಂಬಿದೆ. ಅವನು ನಂಬಲಿಲ್ಲ. ಅವನೂ ನಂಬಿರುವನೆಂದು ನಂಬಿ ಕೆಟ್ಟುಹೋದೆ" ಎಂದು ಬೆಂದು ಹೋದಳು ನೀಲಾ.

ತಾಯಿ ಮಗಳ ಸ್ಥಿತಿಯನ್ನು ನೋಡಿದಳು. ನೋಡಿ ಕುದಿದಳು; ಮರುಗಿದಳು! ಮಿಡ್‌ವೈಫ್ ಆಗಿ ಈತನಕ ಬಾಳಿದ ತನ್ನ ಬಾಳಿನಲ್ಲಿ ಇಂತಹ ಎಷ್ಟೋ ದುರ್ದೈವೀ ಪ್ರಸಂಗಗಳನ್ನು ಕಂಡಿದ್ದಳು ಆಕೆ. ಆದರೆ ಇಂದು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳೇ ಹೀಗಾದಳಲ್ಲಾ' ಎಂದು ನೊಂದಳು ರಾಜಮ್ಮ. ಆದರೆ ಮಗಳನ್ನು ನೋಯಿಸಲಿಲ್ಲ. ಒಳಗಿನ ಗುಟ್ಟು ಹೊರಬೀಳುವ ಮೊದಲೇ ಮಗಳನ್ನು ಕಾಲೇಜು ಬಿಡಿಸಿದಳು. ಹದಿನೈದು ದಿನ ಹಾಸಿಗೆಯ ಸಹವಾಸ ಮಾಡಿ ಹದಿನಾರಕ್ಕೆ ಸ್ವಸ್ಥಳಾಗುವಂತೆ ಮಾಡಿದಳು ನೀಲಾಳ ತಾಯಿ! ಆದರೆ ರಾಜಮ್ಮನ ಹೃದಯಕ್ಕೆ ಎಂತಹ ಆಪಘಾತವಾಗಿದೆ, ಅವಳ ಕಣ್ಣು ಎಷ್ಟು ಕಂಬನಿ ಸುರಿಸಿದೆ, 'ತಾಯಿ' ಯಾದ ತಾನು ಒಂದು ಶಿಶುವಿನ ಮೂಲವನ್ನು ಇಲ್ಲದಾಗಿಸಬೇಕಾಗಿದ್ದರೆ ಅವಳ ಹೃದಯವೆಷ್ಟು ಹಿಂಡಿ ಹೋಗಿದೆ ಎಂದು ಅವಳೊಬ್ಬಳೇ ಬಲ್ಲಳು. ಆದರೆ ಅವಳ ಧೈರ್ಯ, ಜೀವನದಲ್ಲಿ ಇರುವ ಕೆಚ್ಚೇ ಅವಳ ಶಕ್ತಿಯಾಗಿತ್ತು. ಪತಿ ಪರಲೋಕ ವಾಸಿಯಾದಾಗ ಇದ್ದವಳು ಒಬ್ಬಳೇ ಮಗಳು ನೀಲಾ. ಹೇಳಿಕೊಳ್ಳುವ ಮಟ್ಟಿನ ಸಂಬಂಧಿಕರೂ ಇರಲಿಲ್ಲ. ತನಗೂ ಮಿಡ್‌ವೈಫ್ ಎಂಬೊಂದು ಉದ್ಯೋಗವಿದ್ದುದರಿಂದ, ಧೈರ್ಯವೆಂಬುದೊಂದು ನೆರವಾಗಿದ್ದುದರಿಂದ ರಾಜಮ್ಮ ಜೀವಿಸಿದಳು. ಮಗಳನ್ನು ಓದಿಸಿದಳು. "ಮಗಳಿಗೆ ಬಿ. ಎ. ಯಾದರೂ ಮಾಡಿಸಬೇಕೆಂದಿದ್ದೆ. ಆದರೆ........ಹುಂ ಅಂತು ಹೇಗಾಗಬೇಕೆಂದಿದೆಯೋ ಹಾಗೆಯೇ ಆಗಲಿ" ಎಂದು ಕೊಂಡಳು ರಾಜಮ್ಮ.

ದಯಾರ್ದ್ರ ಹೃದಯದ ಆಸ್ಪತ್ರೆಯ ಡಾಕ್ಟರ್ ರಮಾನಂದರು ರಾಜಮ್ಮನ ಗೋಳಿನ ಕತೆ ಕೇಳಿದರು. ರಾಜಮ್ಮನ ಮೇಲೆ, ಅಪಾರ ಕರುಣೆ ಮತ್ತು ನಂಬುಗೆಯಿತ್ತು ಅವರಿಗೆ. ತನ್ನ 'ಡಾಕ್ಟರ ಜೀವನ'ದಲ್ಲಿ ಅವಳಷ್ಟು ಸುಸೂತ್ರವಾಗಿ, ಎ[illegible]ಗಾರಿಕೆ ಮತ್ತು ನೀತಿಯಿಂದ ಕೆಲಸ ಮಾಡಿಕೊಂಡು ಬಂದ ಮಿಡ್‌ವೈಫನ್ನವರು ನೋಡಿರಲಿಲ್ಲ.

ಅವರ ಪ್ರಯತ್ನದ ಫಲವಾಗಿ ಅದೇ ಶ್ರೀಪುರ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಖಾಲಿಯಾದ ಕ್ಲಾರ್ಕ್ ಸ್ಥಾನಕ್ಕೆ ನೀಲಾ ಕ್ಲಾರ್ಕ್ ಆಗಿ ನೇಮಕಗೊಂಡಳು. ಅಂತೂ ಹುಟ್ಟು ಕೈಬಿಟ್ಟು ಹೋಗಿ ದೋಣಿ ಅತ್ತಿತ್ತ ಒಮ್ಮೆ ಒಲೆದಾಡಿದರೂ ನೀರಿನ ತೇಲಿಬಂದ ಕೋಲಿನ ಬಲದಿಂದ ಮೋ[illegible] ಮುಂದೆ ಸಾಗಿತು.

ರಘುರಾಮರಾವ್ ತನ್ನ 'ಕೋರ್ಸ್' ಮುಗಿಸಿ, ಕೋರ್ಟಿಗೆ ಹೋಗಿ ಬರುವ ಕೆಲಸಕ್ಕಾರಂಭಿಸಿದ. ದುಂಡು ಮುಂಡಾದ ಕೆಂಪಗೆ ಹೊಳೆಯುವ ದೇಹದ ಎಳೆ ತರುಣ ರಘುರಾಮ, ಕಾಲೇಜು ವಿದ್ಯಾರ್ಥಿಯಂತೆ ಕಾಣುತ್ತಿದ್ದನೇ ಹೊರತು ವಕೀಲನಂತೆ ಕಾಣುತ್ತಿರಲಿಲ್ಲ. ಅವನ ಸುವರ್ಣ ಸುಪುಷ್ಟ ಆಕಾರವೂ, ಆದರ್ಶ ವ್ಯಕ್ತಿತ್ವವೂ, ಅವನ 'ಲೋಜಿಕಲ್' ಬುದ್ಧಿಯೂ ಅವನಿಗೆ ಉತ್ತಮ ಭವಿಷ್ಯವಿದೆಯೆಂದು ಸೂಚಿಸುತ್ತಿದ್ದುವು.

ಈ ಕಾಲಕ್ಕೆ ಸರಿಯಾಗಿ 'ಇನ್ನು ಎರಡನೇ ಮಗನ ಮದುವೆ ನೆರವೇರಿಸೋಣ'ವೆಂದು, ರಘುರಾಮನ ತಂದೆ-ತಾಯಿಗಳು ವಧುವಿನ ಶೋಧನೆಗಾರಂಭಿಸಿದರು. ವಧುಗಳ ಪಟ್ಟಿ ಸಿದ್ಧವಾಗ ತೊಡಗಿತ್ತು. ಇಂತಹ ವರನಿಗೆ ವಧುವಿಗೆ ಕೊರತೆಯೆ?

ಆದರೆ ರಘುರಾಮ 'ಇನ್ನೆರಡು ವರ್ಷ ಕಳೆಯಲಿ' ಎಂಬ ಭಾವನೆಯನ್ನು ತಳೆದು, ತಂದೆತಾಯಿಗಳ ಸನ್ನಾಹಕ್ಕೆ ನಿರಾಕರಣೆ ತೋರಿಸಿದ. ವಿದ್ಯಾವಂತ, ವಯೋವಂತನಾದ ತನಗೆ ವಿವಾಹ ಆಗಿಕೊಳ್ಳಲು ಸಾಧ್ಯವಿರುವಾಗ 'ಮಗನಿಗೆ ಮದುವೆ ಮಾಡೋಣ' ಎಂದು ಹೊರಟ ಹಳ್ಳಿಯಲ್ಲಿ ಬೆಳೆದ ತಂದೆ-ತಾಯಿಗಳ ಹಳೆ ಭಾವನೆಗೆ ರಘುರಾಮ ನಕ್ಕು ಬಿಟ್ಟ.

ಮೊದಮೊದಲು ಸುಮ್ಮನೆ ಕೋರ್ಟಿನಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದ ರಘುರಾಮ

(೧೧ನೇ ಪುಟ ನೋಡಿರಿ)

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

೧ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1920

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಜಿನೇವಾ ಸಮ್ಮೇಳನ

ಪಾಶ್ಚಾತ್ಯರ ನೀತಿ ಒಡೆದು ಆಳುವುದಲ್ಲವೆ?

ಈ ನೀತಿಯಿಂದ ಜರ್ಮನಿಯ ಪ್ರಶ್ನೆ ಬಗೆಹರಿಯುವುದು ಸಾಧ್ಯವಿಲ್ಲ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಮೂರೂವರೆ ವರ್ಷಗಳಿಗೆ ಮೊದಲು, ಎಂದರೆ ನವೆಂಬರ ೧೬, ೧೯೫೫ರಂದು ಮೂರು ವಾರಗಳ ವರೆಗೆ ನಡೆದ ಚರ್ಚೆಯ ನಂತರ, ಆ ಸಮ್ಮೇಳನದ ಅಸಫಲತೆಯನ್ನು ಘೋಷಿಸಿ ಸಮ್ಮೇಲನವನ್ನು ಸ್ಥಗಿತಗೊಳಿಸಲಾಯಿತು. ಈ ಬಾರಿಯ ಸಮ್ಮೇಳನದಲ್ಲಿ ನಾಲ್ಕೂ ರಾಷ್ಟ್ರಗಳ ವಿದೇಶ ಮಂತ್ರಿಗಳೆಲ್ಲರೂ ಉಪಸ್ಥಿತರಿದ್ದುದರಿಂದ ಇದು ಅಸಫಲವಾಗುವ ಲಕ್ಷಣಗಳು ಕಡಿಮೆಯಿದ್ದರೂ ನಾಲ್ವರೂ ವಿದೇಶ ಮಂತ್ರಿಗಳು ಹೊಸಬರಾಗಿದ್ದರೂ ಅವರ ಸರಕಾರದಲ್ಲಿ ಹೇಳುವಂತಹ ಯಾವುದೇ ಬದಲಾವಣೆಯು ನಡೆಯದೆ ಇದ್ದುದರಿಂದಾಗಿ ಏನಾಗಬಹುದೆಂದು ಹೇಳುವುದು ಅಸಾಧ್ಯವಾಗಿದೆ. ೧೯೫೫ರ ಸಮ್ಮೇಳನದಲ್ಲಿ ಡಲ್ಲೆಸ್, ಮೊಲೊಟೋವ್, ಹೆರಾಲ್ಡ್ ಮೆಕಮಿಲನ್ ಮತ್ತು ಪಿನೆಯುವರು ವಿದೇಶಮಂತ್ರಿಗಳಾಗಿ ಭಾಗವಹಿಸಿದ್ದರೆ, ಈಗ, ಹರ್ಟರ್, ಗ್ರೊಮಿಕೊ, ಸೆಲ್ವಿನ್ ಲಾಯ್ಡ್ ಮತ್ತು ಕಾಂವೆಡಿಮೋರ್ವಿಲೆಯವರು ಏಕತ್ರಿತರಾಗಿದ್ದಾರೆ. ಸರಕಾರಗಳಲ್ಲಿ ಯಾವುದೇ ಪರಿವರ್ತನೆಯು ಆಗದೆ ಅವುಗಳ ನಾಯಕರಲ್ಲುಂಟಾದ ಪರಿವರ್ತನೆಯ ಪರಿಣಾಮವು ಸಮ್ಮೇಳನದ ಮೇಲೆ ಬೀಳುವುದು ಸ್ವಾಭಾವಿಕವಾಗಿದೆ. ೧೯೫೫ರಲ್ಲಿದ್ದ ಐಸನ್ ಹಾವರ್ ೧೯೫೯ರಲ್ಲಿ ಬೇಕಷ್ಟು ಬದಲಾಗಿದ್ದಾರೆ. ಕ್ರುಶ್ಚೇವರಂತೂ ೧೯೫೫ರಲ್ಲಿದ್ದಂತೆ ಇಂದಿಲ್ಲ. ಅವರು ಇಂದು ಅಧಿಕ ಶಕ್ತಿಸಂಪನ್ನರೂ ಸ್ವತಂತ್ರರೂ ಆಗಿದ್ದಾರೆ. ಮೆಕಮಿಲನರಾದರೂ ತಮ್ಮ ಹಿಂದಿನ ಮುಖ್ಯ ಮಂತ್ರಿಯವರಿಗಿಂತ ಅಧಿಕ ಉದಾರಿಗಳೂ ಸ್ಪಷ್ಟವಾದಿಗಳೂ ಇರುತ್ತಾರೆ. ಡಿಗಾಲೆಯವರು ನಿಸ್ಸಂದೇಹವಾಗಿ ಅಧಿಕ ಪ್ರತಿಕ್ರಿಯಾವಾದಿಗಳಾಗಬಹುದು; ಮತ್ತು ಅವರತಡೆ ಸಾಕಷ್ಟು ಕಠೋರವಾಗುವ ಸಂಭವವಿದೆ. ಪ್ಯಾರಿಸ್ ಮತ್ತು ಬಾನ್‌ಗಳಲ್ಲಿ ಇದಕ್ಕೆ ಮೊದಲು ನಡೆದ ಸಂಧಾನ ಮಾತುಕತೆಗಳೂ ಈ ಹೇಳಿಕೆಯನ್ನೇ ಬಲಪಡಿಸುತ್ತವೆ. ಈ ಎಲ್ಲಾ ಪರಿವರ್ತನೆಗಳ ಪ್ರಭಾವ ಯಾವ ರೀತಿಯಾಗಿ ಸಮ್ಮೇಳನದ ಮೇಲೆ ಬೀಳುವುದೆಂದು ನೋಡಬೇಕಾಗಿದೆ.

ಜಿನೇವಾ ಸಮ್ಮೇಳನದಲ್ಲಿ ಭಾಗವಹಿಸಿದ ಚತುರ್ ಮಹಾರಾಷ್ಟ್ರಗಳ ನಾಯಕರ ಹೊಣೆಗಾರಿಕೆ ಈಗ ಅತ್ಯಧಿಕವಾಗಿದೆ. ವಿಶ್ವದಲ್ಲಿ ಶಾಂತಿಸ್ಥಾಪನೆ ಮಾಡುವ ಮಹಾ ಪ್ರಶ್ನೆಯನ್ನು ಅವರು ನಿರ್ಲಕ್ಷಿಸುವಂತಿಲ್ಲ. ಆದರೆ, ಈ ಬಗ್ಗೆ ಪ್ರಯತ್ನ ನಡೆಸುವುದು ಬೇರೆ ಮಾತು. ಬೇರೆ ಬೇರೆ ದೇಶಗಳು ವಿಶ್ವಶಾಂತಿಯ ಬಗ್ಗೆ ಎಷ್ಟರಮಟ್ಟಿಗೆ ಪ್ರಯತ್ನಶೀಲವಾಗುವವು ಎಂಬುದು ಪ್ರಕೃತದ ಸಮ್ಮೇಳನದಲ್ಲಿ ಸುಸ್ಪಷ್ಟವಾಗುವುದು. ಈವರೆಗಿನ ಮಾತುಕತೆಗಳಿಂದ ಯೋಗ್ಯ ಪರಿಣಾಮವು ಹೊರಬೀಳುವುದೆಂದು ತಿಳಿಯಬಹುದಾದರೂ, ಪೂರ್ವ ಮತ್ತು ಪಶ್ಚಿಮಗಳ ನಡುವಿದ್ದ ಭೇದಭಾವನೆಯು ಮಾತ್ರ ಕಡಿಮೆಯಾದಂತೆ ತೋರುವುದಿಲ್ಲ. ೧೯೫೫ರ ನಂತರ ೫೫ರಲ್ಲಿದ್ದ ಪರಿಸ್ಥಿತಿಯೇ ಈಗ ೫೯ರಲ್ಲಿಯೂ ಉಳಿದಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಸಮ್ಮೇಳನವು ಸಫಲವಾಗುವುದನ್ನು ಕಾಣಲಾರದವರೂ ಹಿಂದುಗಡೆಯಿಂದ ಅದರ ಅಸಫಲತೆಗೆ ಪ್ರಯತ್ನಿಸುತಿದ್ದಾರೆ. ಈ ಕಾರಣದಿಂದಾಗಿ ಸಮ್ಮೇಳನವು ಸೇರಿದ ಮೂಲೋದ್ದೇಶವು ಎಷ್ಟರ ಮಟ್ಟಿಗೆ ಸಾರ್ಥಕವಾಗುವುದೆಂದು ಹೇಳುವುದಸಾಧ್ಯ. ಸದ್ಯದ ವಿದೇಶಮಂತ್ರಿ ಪರಿಷತ್ತು ಸೇರಿರುವುದಾದರೂ, ಮುಂದೆ ಕೂಡಲಿರುವ ಶಿಖರ ಸಮ್ಮೇಳನಕ್ಕೆ ಅನುಕೂಲ ವಾತಾವರಣವನ್ನು ನಿರ್ಮಿಸಬೇಕು ಮತ್ತು ಪರಸ್ಪರ ಮಾತುಕತೆಗಳಿಗೆ ಅಧಿಕಾಧಿಕ ಅನುಕೂಲತೆಗಳನ್ನೊದಗಿಸಬೇಕು ಎಂಬ ಮಹೇಚ್ಛೆಯಿಂದ ಎಂಬುದನ್ನು ಮರೆಯಬಾರದು. ಆದರೆ, ಹೀಗಾಗಬೇಕಾದರೆ, ದೀರ್ಘ ಚರ್ಚೆ, ಅಸೀಮ ಧೈರ್ಯ ಮತ್ತು ಗಹನವಾದ ಸದ್ಭಾವನೆಗಳು ಅವಶ್ಯ. ಈ ಸಮ್ಮೇಳನದಲ್ಲಿ ಭಾಗವಹಿಸುವವರಲ್ಲಿ ಎಲ್ಲ ವಿಧದ ಸದ್ಗುಣಗಳು ಇವೆಯೋ ಇಲ್ಲವೋ ಎಂಬುದು ತಿಳಿದಿಲ್ಲವಾದರೂ ಅವಶ್ಯಕ ಗಾಂಭೀರ್ಯದ ಅಭಾವವಂತೂ ಇಲ್ಲ. ಈ ಸಮ್ಮೇಳನದಲ್ಲಿ ಚತುರ್ಮಹಾರಾಷ್ಟ್ರಗಳ ವಿದೇಶ ಮಂತ್ರಿಗಳು ಮಾತ್ರವಲ್ಲದೇ ರಶ್ಯದ ಆಗ್ರಹದಿಂದಾಗಿ ಪೂರ್ವ ಮತ್ತು ಪಶ್ಚಿಮ ಜರ್ಮನಿಗಳ ಪ್ರತಿನಿಧಿಗಳೂ ಭಾಗವಹಿಸಿದ್ದಾರೆ. ಸಮ್ಮೇಳನವು ಸಂಯುಕ್ತ ಜರ್ಮನಿಯೊಡನೆ ಶಾಂತಿ ಒಪ್ಪಂದ ಮಾಡುವ ಸಂಬಂಧದಲ್ಲಿ ಗಂಭೀರ ವಿಚಾರ ಮಾಡಬೇಕು—ಎಂಬ ಸಾರವುಳ್ಳ ಯೋಜನೆಯೊಂದನ್ನು ರಶ್ಯವು ಮುಂದೆ ತಂದಿದೆ. ಇದರಿಂದ ಯುರೋಪದಲ್ಲಿ ಶಾಂತಿ ಸ್ಥಾಪನೆಯಾಗುವುದು ನಿಶ್ಚಯ. ಅಮೆರಿಕೆಯ ವಿದೇಶ ಮಂತ್ರಿ ಶ್ರೀ ಕ್ರಿಶ್ಚಿಯನ್ ಹರ್ಟರರು, ಪಾಶ್ಚಾತ್ಯ ರಾಷ್ಟ್ರಗಳ ಪರವಾಗಿ ಸೂಚನೆಯನ್ನೂ ಮಂಡಿಸಿದರು. ವಸ್ತುತಃ ಇದನ್ನು ಐಸನ್ ಹಾವರ್ ಎಡೆನೋರ್ ಯೋಜನೆಯೆಂದೇ ಹೇಳಬೇಕು. ಆದರೆ, ಇದರಿಂದಾಗಿ ಸಂಯುಕ್ತ ಜರ್ಮನಿಯ ನಿರ್ಮಾಣ ಮತ್ತು ಅದರೊಡನೆ ಶಾಂತಿಸಂಬಂಧ ಒಪ್ಪಂದಗಳಾಗುವ ಸಂಭವ ಮಾತ್ರ ಬಹು ದೂರವಾಗುವಂತೆ ಗೋಚರಿಸುತ್ತದೆ. ಈ ಯೋಜನೆಯಲ್ಲಿ ಶಾಂತಿಸಂಧಿಯನ್ನು ಗೌಣವಾಗಿ ತಿಳಿದುಕೊಳ್ಳಲಾಗಿದೆ. ಪಶ್ಚಿಮ ಜರ್ಮನಿಯಲ್ಲಿ ನಿಶ್ಶಸ್ತ್ರೀಕರಣವಾಗುವ ಯಾವುದೇ ಒಂದು ರಾಷ್ಟ್ರದ ಗೊಂಬೆಯಾಗಿರುವುದನ್ನು ತಪ್ಪಿಸುವ ಮತ್ತು 'ನ್ಯಾಟೊ" ಸದಸ್ಯತನದ ಸಂಕಲೆಗಳಿಂದ ಅದನ್ನು ಮುಕ್ತಗೊಳಿಸುವತನಕ ಶಾಂತಿಯ ಬಗ್ಗೆ ಯಾವ ಭರವಸೆಯೂ ದೊರೆಯಲಾರದು. ಹೀಗೆ ಎರಡೂ ಪಕ್ಷಗಳ ಯೋಜನೆಗಳು ಮುಂದಕ್ಕೆ ಬಂದು, ಅವು ಗಂಭೀರ ಚರ್ಚೆಗೆ ಆಸ್ಪದನೀಡಿವೆ.

ರಶ್ಯದ ಪ್ರಧಾನಿ ಶ್ರೀ ಕ್ರುಶ್ಚೇವರು ಪದೇ ಪದೇ ಪಾಶ್ಚಾತ್ಯ ರಾಷ್ಟ್ರಗಳಿಗೆ ಅಭಯದಾನ ನೀಡಿದ್ದಾರೆ; ಬರ್ಲಿನ್ ನಗರ ಅಥವಾ ಜರ್ಮನಿಯ ಯಾವುದೇ ಭಾಗವನ್ನು ತನ್ನ ಸ್ವಾರ್ಥ ಸಾಧನನಕ್ಕಾಗಿ ಮಾಡದಿರುವ ವಚನವನ್ನೂ ಇತ್ತಿದ್ದಾರೆ. ೧೯೫೮ನೇ ನವಂಬರ ೨೭ರಂದು ಅವರು ಅಮೇರಿಕೆಗೆ ಬರೆದಿದ್ದ ಪತ್ರದಲ್ಲಿಯೂ ಇವೇ ಆಶ್ವಾಸನವನ್ನಿತ್ತಿರುವರು. ಇಡಿ ಬರ್ಲಿನ್ ನಗರಕ್ಕೆ ಅಂತಾರಾಷ್ಟ್ರೀಯ ನಗರದ ರೂಪನ್ನಿತ್ತು ಅಲ್ಲಿ ಸ್ವತಂತ್ರ ಸೇನೆಯನ್ನಿಡಲು, ಪಶ್ಚಿಮ ಜರ್ಮನಿಗೂ ಸ್ವತಂತ್ರ ವಿಕಾಸವಾಗುವ ಅವಸರವನ್ನೊದಗಿಸಲು ಅವರು ಸಿದ್ಧರಿದ್ದರು. ಆದರೆ, ಯಾರಿಗೂ ಅದನ್ನು ತನ್ನ ಹಸ್ತಕನಂತೆ ಮಾಡಿಕೊಳ್ಳುವ ಸಂದರ್ಭ ದೊರೆಯಬಾರದು ಎಂದಿದ್ದರವರು. ಬರ್ಲಿನ್ ನಗರ ಮತ್ತು ಸಮಸ್ತ ಜರ್ಮನಿಯು ಒಂದಾಗುವ ಸಂದರ್ಭ ದೊರೆಯಬೇಕೆಂದು ರಶ್ಯ ಹೇಳಿತ್ತು. ೧೯೪೫ರಲ್ಲಿನ ತಾತ್ಕಾಲಿಕ ಸ್ಥಿತಿಗತಿಗಳಿಂದಾಗಿ ಸಮಾಜಿಕವಾಗಿ ಬರ್ಲಿನ್ ನಗರ ಮತ್ತು ಜರ್ಮನಿ ರಾಷ್ಟ್ರವು ವಿಭಾಜಿತವಾಗಿದ್ದು, ಕಳೆದ ೧೪ ವರ್ಷಗಳಲ್ಲಿ ಕಠಿನ ಗೊಂಬೆಯಂತಾಗಿದೆ; ಎಲ್ಲೆಡೆಯೂ ಸ್ವಾರ್ಥವು ತುಂಬಿ ತುಳುಕಾಡಿರುವುದರಿಂದ ಅದನ್ನು ತ್ಯಜಿಸಲು ಯಾರೂ ಸಿದ್ಧರಿಲ್ಲ. ಯಾವುದೇ ರಾಷ್ಟ್ರದ ಪ್ರಶ್ನೆಯನ್ನು ಪಾಶ್ಚಾತ್ಯ ರಾಷ್ಟ್ರಗಳಲ್ಲಿಗೆ ಪರಿಹಾರಕ್ಕೆ ಕೊಂಡೊಯ್ದರೆ, ವಿಭಜನೆಯ ಸೂತ್ರ ಹೊರತು ಅನ್ಯ ಪರಿಹಾರ ಮಾರ್ಗ ಅವರಲಿಲ್ಲ. ಯಾವುದೇ ಒಡೆದುಹೋದ ರಾಷ್ಟ್ರವನ್ನವರು ಒಂದುಗೂಡಿಸಿದ ಘಟನೆ ಇದುವರೆಗೆ ನಡೆದಂತಿಲ್ಲ. ಐರ್‌ಲೆಂಡಿನಿಂದ ಅಲ್ಸ್ಟರವನ್ನು ಪ್ರತ್ಯೇಕಿಸಿದರು; ತುರ್ಕಿಯಿಂದ ಒಟ್ಟೊಮನ್ ಸಾಮ್ರಾಜ್ಯ ಚೂರುಚೂರಾಯಿತು, ಭಾರತದಿಂದ ಸಿಂಹಳ, ಬರ್ಮಾ, ಪಾಕಿಸ್ತಾನಗಳು ಬೇರೆಯಾದುವು, ಕಾಶ್ಮೀರವನ್ನೂ ಒಡೆಯಲು ಹಂಚಿಕೆ ನಡೆಸುತ್ತಿದ್ದ; ಕೊರಿಯಾ ಎರಡಾಯಿತು; ವಿಯತನಾಮ ಮೂರಾಯಿತು; ಮಲಯ ಸಂಘಟನೆ ಎರಡು ತುಂಡುಗಳಾಗಿಯಿತು; ಈಗುಪ್ತದಿಂದ ಸುಡಾನನ್ನು, ಚೀನದಿಂದ ಫಾರ್ಮೋಜವನ್ನು ಬೇರ್ಪಡಿಸಿ ಸ್ವತಂತ್ರ ರಾಷ್ಟ್ರಗಳೆಂದು ಸಾರಲಾಯಿತು. ೧೯೪೫ರ ಮೊದಲಲ್ಲಿ ಈ ಬಗ್ಗೆ ನಡೆದ ಪ್ರಯತ್ನಗಳಾದರೂ ಅವರ ಈ ನೀತಿಯ ದೆಸೆಯಿಂದಾಗಿಯೇ ಅಪೂರ್ಣವಾಗಿ ಉಳಿದಿತ್ತು. ಪೋಲೇಂಡ್, ಜೆಕೊಸ್ಲೊವಾಕಿಯಾ ಅಥವಾ ಯುಗೋಸ್ಲಾವಿಯಾಗಳಿಂದಾಗಿ ಫ್ರಾನ್ಸಿಕ್ಕೆ ಹಿಟ್ಲರನ ಜರ್ಮನಿಯ ಭಯಕ್ಕಿಂತಲೂ ಭಯಂಕರವಾದ ಹೆದರಿಕೆಯಾಗಿದೆ. ಆದುದರಿಂದ ಫ್ರಾನ್ಸು ಈ ಏಕೀಕರಣ ತತ್ವವನ್ನು ಕನಸಿನಲ್ಲಿಯೂ ಒಪ್ಪಲಾರದು. ಇಂಗ್ಲೆಂಡ್ ಮತ್ತು ಅಮೆರಿಕಗಳಿಗೂ ಹೆದರಿಕೆ ಕಡಿಮೆಯಿಲ್ಲ. ನಾಟೋದ ಹೆಸರಿನಲ್ಲಿ ತನ್ನ ಸೇನೆಯನ್ನು ಯುರೋಪದಲ್ಲಿರಿಸಲು ಜರ್ಮನಿಯು ಅದಕ್ಕೆ ಬೇಕಾಗಿದೆ. ಈಗ ಅಲ್ಲಿಂದ ತಾನು ಕಾಲ್ತೆಗೆಯುವುದು ಹೇಗೆ ಎಂಬುದೇ ಅಮೆರಿಕೆಯು ಬಿಡಿಸಲಾರದ ಒಗಟಾಗಿದೆ.

ಪಶ್ಚಿಮ ಜರ್ಮನಿಯಲ್ಲಿ ರಶ್ಯದ ಪ್ರಭಾವ ಆಳವಾಗಿ ಬಿದ್ದಿರುವುದನ್ನು ಕಂಡೇ ಪಾಶ್ಚಾತ್ಯ ರಾಷ್ಟ್ರಗಳ ಎದೆ ಬಲವಾಗಿ ಬಡಿದಾಡುತ್ತಿದೆ. ಸಂಯುಕ್ತ ಬರ್ಲಿನ್ ಸಹಿತ ಸಂಯುಕ್ತ ಜರ್ಮನಿಯ ಮೇಲೆ ಪೂರ್ವ ಜರ್ಮನಿ ಅಥವಾ ಹಿಟ್ಲರನ ಪ್ರಶ್ಯವು ಇನ್ನೊಂದು ಬಾರಿ ಆಕ್ರಮಣ ಮಾಡಬಾರದು; ಮತ್ತಿದರಿಂದ ಇಡಿ ಜರ್ಮನಿಯು ರಶ್ಯದ ಪ್ರಭಾವಕ್ಕೆ ಒಳಗಾಗಬಾರದು ಎಂದಿವು ಬಯಸುತ್ತವೆ. ಯುರೋಪಕ್ಕೇನೇ ಇದು ಮಹಾ ವಿಪತ್ತು. ಆದುದರಿಂದಲೇ ಈ ಸಮ್ಮೇಳನದಲ್ಲಿಯೂ ಪಾಶ್ಚಾತ್ಯರು ಸಂಯುಕ್ತ ಜರ್ಮನಿ ಅಥವಾ ಸಂಯುಕ್ತ ಬರ್ಲಿನ್‌ನ ಬಗ್ಗೆ ಅನುಕೂಲಾಭಿಪ್ರಾಯ ಹೊರಡಿಸುವುದಿಲ್ಲ; ಎಂತಲೇ ಶಿಖರ ಸಮ್ಮೇಳನ ಸೇರಲು ಮೂರೂವರೆ ವರ್ಷಗಳಿಗೆ ಮೊದಲು ಇದ್ದ ತೊಂದರೆಗಳೇ ಇಂದಿಗೂ ಎದ್ದು ತೋರುತ್ತಿವೆ. ಆದುದರಿಂದಲೇ ಈ ಸಮಸ್ಯೆ ಪರಿಹಾರವಾಗುವುದು ಅಷ್ಟರಲ್ಲಿಯೇ ಇದೆಯೆಂದು ಹೇಳಬಹುದು.

ಆದರೂ ಈ ಸಮಸ್ಯೆಗೆ ಒಂದಲ್ಲ ಒಂದು ವಿಧದ ಪರಿಹಾರವನ್ನು ಒದಗಿಸುವ ಉದ್ದೇಶದಿಂದ ಸೇರಿದ ಈ ವಿದೇಶ ಮಂತ್ರಿ ಪರಿಷತ್ತು ಏನಾದರೂ ಹೊಸ ಪರಿಹಾರವನ್ನು ಕಂಡುಹಿಡಿಯುವುದೂ ಅಸಂಭವವಲ್ಲ. ಆದರೆ, ಇದೆಷ್ಟು ಫಲದಾಯಕವೆಂದು ಈಗ ಹೇಳುವಂತಿಲ್ಲ.

(ಸಮಾಪ್ತ)

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನ.

PHONE 203



ESTD 1926

FOUNDATION STONE

Engraved

MARBLE TABLETS

(GOLD FILLED & LEAD FILLED)

Crown RUBBER STAMP CO.

BALMATTA ROAD, MANGALORE.

ಸ್ಥಾಪನೆ: 1906] ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ. 20,00,000/-
ಕ್ಷೇಮನಿಧಿ	—	ರೂ. 14,40,000/-
ಠೇವಣಾತಿಗಳು	—	ರೂ. 7,19,35,000/-
ಸಾಲಗಳು	—	ರೂ. 3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ. 9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ.

The Canara Banking Corporation Ltd.

Estd:- 1906] [H. O. UDIPI (S. India)

ಸೌಮ್ಯಶೀಲ ಸಮಾಜ

ನೀವೂ ಸೌಮ್ಯಶೀಲ ರಾಗಿರ ಬಯಸುತ್ತೀರಾ?

ಹಾಗಾದರೆ, ಆಂಗ್ಲೇಯರಿಂದ ಅದರ ಗುಟ್ಟನ್ನು ಅರಿತುಕೊಳ್ಳಿರಿ.

ತಮ್ಮ ಜೀವನದಲ್ಲಿ ಎರಡೆರಡು ಮಹಾ ಯುದ್ಧಗಳನ್ನು ಕಾಣಬೇಕಾದ ಯುರೋಪಿನ ನಿವಾಸಿಗಳ ಮಧ್ಯೆ ಉಳಿದುಕೊಂಡು ನನಗೆ ಯುದ್ಧದ ಎರಡೂ ಮುಖಗಳನ್ನು ಕಾಣುವ ಸಂದರ್ಭ ದೊರಕಿದೆ. ಇಷ್ಟೇ ಅಲ್ಲ, ಒಬ್ಬರಿನ್ನೊಬ್ಬರನ್ನು ತಿವಿಯಲು ಎದುರೆದುರು ನಿಂತುಕೊಂಡಿದ್ದ ವಿರೋಧೀಪಕ್ಷಗಳ ಜನತೆಯನ್ನು ಅತಿ ನಿಕಟದಲ್ಲಿ ನಾನು ಕಂಡಿದ್ದೇನೆ.

ದ್ವಿತೀಯ ಲೋಕಯುದ್ಧದ ಕಿಡಿಗೆದರಿದ ದಿನವೇ ನನಗೆ ಎರಡೂ ಪ್ರತಿಪಕ್ಷಗಳ ಅಂತರವು ತಿಳಿಯಿತು. ಮೊದಲನೆಯ ಮಹಾಯುದ್ಧದ ವೇಳೆ ನಮ್ಮ ದೇಶವು ಆಸ್ಟ್ರಿಯಾದಲ್ಲಿತ್ತು. ಯುದ್ಧದ ಸುದ್ದಿಯನ್ನು ಕೇಳಿದೊಡನೆಯೇ ನಮ್ಮಲ್ಲಿದ್ದ ಧೈರ್ಯ ಹಾರಿಹೋಗಿ ಒಂದು ವಿಧದ ಗುಂಗು ನಮ್ಮನ್ನಾವರಿಸಿದಂತಾಯಿತು. ಎಲ್ಲರೂ ಹೊರಗಡೆಯೇ ನೋಡುತಿದ್ದರು. ಯುದ್ಧದ ಚರ್ಚೆಗಳನ್ನು ನಾವು ಪುಸ್ತಕಗಳಲ್ಲಿ ಓದಿದ್ದೇವೆ. ಆದರೂ ಸಭ್ಯರೆಂದು ಕರೆಸಿಕೊಳ್ಳುವವರ ಕಾಲವಾದ ಈ ೨೦ನೆಯ ಶತಮಾನದ ಜನರು ಯುದ್ಧಕ್ಕೆಳಿಯುವುದು ಅಸಂಭವದ ಮಾತೆಂದು ನಾವು ತಿಳಿದಿದ್ದೆವು. ಆದರೂ ಅಕಸ್ಮಾತ್ತಾಗಿ ಬಾಗಿಲೆದುರು ಬಂದು ನಿಂತುದನ್ನು ಕಂಡು ನಾವು ಉತ್ತೇಜಿತರಾದೆವು.

ನಮ್ಮೆಲ್ಲಾ ಕಲ್ಪನೆಗಳು ಮತ್ತು ತರಂಗಗಳು ಮಕ್ಕಳಂತೆ ಕುತೂಹಲದಲ್ಲಿ ಪರಿವರ್ತನೆ ಹೊಂದಿದುವು; ನಾವೆಲ್ಲರೂ ಒಂದು ಅದ್ಭುತ ಪ್ರಪಂಚದಲ್ಲಿಯೇ ಇರುತ್ತೇವೆ ಎಂದು ತಿಳಿದುಕೊಂಡೇ ನಾವು ನಮ್ಮ ವ್ಯವಹಾರಗಳನ್ನು ಮುಂದುವರಿಸಿದೆವು. ಜನರು ತಮ್ಮ ಮನೆಮಾರುಗಳನ್ನು ಬಿಟ್ಟುಬಿಟ್ಟರು; ಎಲ್ಲೆಲ್ಲಿಯೂ ಉತ್ಸುಕ ಮತ್ತು ಉತ್ಸಾಹಿ ಜನರು ಕಂಡು ಬಂದರು. ಕೆಲವು ಕಡೆ ಮೆರವಣಿಗೆ ಹೊರಡುತ್ತಿತ್ತು; ಇನ್ನು ಕೆಲವೆಡೆ ಸೈನಿಕ ಸಂಗೀತ ಕೇಳಿ ಬರುತಿತ್ತು. ಈ ಎಲ್ಲಾ ಉತ್ಸಾಹ ಏತಕ್ಕೆ ಮತ್ತು ಯಾರಿಗೋಸ್ಕರ ಹಾಗೂ ಈಗ ಪ್ರಪಂಚದ ಭವಿಷ್ಯ ಏನಿದೆ ಎಂಬುದಾವುದನ್ನೂ ಯೋಚಿಸದೆ, ಎಲ್ಲ ಯುವಕರೂ ಸೇನೆಯಲ್ಲಿ ಭರತಿಯಾಗಬಯಸುತಿದ್ದರು. ಸಾಹಸೀ ಜೀವನವನ್ನು ಯುವಕರು ಮೆಚ್ಚುವಂತೆ ಕಂಡು ಬರುತಿತ್ತು. ಸ್ವಲ್ಪವಾದರೂ ತಡವಾಗಿ ಸುಸಂದರ್ಭವು ಕೈಯಿಂದ ಜಾರಿ ಹೋಗಬಾರದು ಎಂದೆಲ್ಲರೂ ಬಯಸುವಂತಿದ್ದರು. ಎಲ್ಲರೂ ಬೇಕಷ್ಟು ಮಾತಾಡಿ, ತಮ್ಮ ಹೃದಯದ ಭಾರವನ್ನು ಕಡಿಮೆ ಮಾಡಬಯಸುತಿದ್ದರು. ಪರಸ್ಪರ ಗುರುತೂ ಇಲ್ಲದಿರುವವರು ಕೂಡ ಒಬ್ಬರಿನ್ನೊಬ್ಬರಿಗೆ ರಸ್ತೆ ಮಧ್ಯದಲ್ಲಿ ಭಾಷಣ ಕೇಳಿಸತೊಡಗಿದರು. ಆಫೀಸುಗಳಲ್ಲಿನ ಕೆಲಸಗಾರರ ಮನಸ್ಸು ತಮ್ಮ ಕರ್ತವ್ಯದಲ್ಲಿರಲಿಲ್ಲ; ವ್ಯಾಪಾರದಲ್ಲಿ ಯಾರಿಗೂ ಉತ್ಸಾಹವೇ ತೋರಿ ಬರುತ್ತಿರಲಿಲ್ಲ. ವಿಯನ್ನಾದಲ್ಲಿ ರೆಸ್ಟೋರೆಂಟ್ ಮತ್ತು ಹೋಟಲುಗಳು ಸಾಕಷ್ಟು ರಾತ್ರಿಯ ವರೆಗೆ ತೆರೆಯಲ್ಪಡುತಿದ್ದುವು. ಇಲ್ಲಿಯೂ ಬಿಚ್ಚು ಬಿಚ್ಚಾಗಾದ ಚರ್ಚೆಗಳು, ಭಾಷಣಗಳು ನಡೆಯುತಿದ್ದುವು. ಇವೆಲ್ಲವುಗಳಿಂದ ಎಲ್ಲರೂ ಯುದ್ಧವಿಶಾರದರೂ ಅರ್ಥಶಾಸ್ತ್ರಿಗಳೂ ಭವಿಷ್ಯ ವಕ್ತೃಗಳೂ ಆಗಿದ್ದರೆಂದು ತಿಳಿದುಕೊಳ್ಳುವಂತಿತ್ತು.

೧೯೧೪ರಲ್ಲಿನ ವಿಯನ್ನಾದ ಈ ಚಿತ್ರ ನನ್ನ ಮನಪಟಲದಲ್ಲಿ ಆಳವಾಗಿ ನೆಲೆಯೂರಿದೆ. ೧೯೩೯ರಲ್ಲಿ ಎರಡನೆ ಮಹಾಯುದ್ಧ ಸ್ಫೋಟಗೊಂಡಾಗ; ನಾನು ಇಂಗ್ಲೆಂಡಿನಲ್ಲಿದ್ದೆ. ಆಗ ನಾನು ಕಂಡ ದೃಶ್ಯ ಮತ್ತು ವಿಯನ್ನಾದ ದೃಶ್ಯಗಳು ಸಮತೆಯಲ್ಲಿ ಭಿನ್ನವಾಗಿದ್ದರೂ ಅದರಂತೆಯೇ ಇದೂ ಮರೆಯುವಂತಹುದಲ್ಲ. ಈ ಬಾರಿ ಯುದ್ಧ ಆಕಸ್ಮಿಕವಾಗಿ ಒದಗಿದುದಲ್ಲ. ಜರ್ಮನಿಯಲ್ಲಿ ಹಿಟ್ಲರನು ಅಧಿಕಾರಕ್ಕೆ ಬಂದನಂತರ ಯೂರೋಪಿನ ಎಲ್ಲ ದೇಶಗಳೂ ಯುದ್ಧವು ಸಮೀಪಗತವಾಗುತ್ತಿದೆ ಎಂದುಕೊಂಡಿದ್ದರು ಏಕೆಂದರೆ, ಮೊದಲಿನ ಮಹಾಯುದ್ಧದ ಮೂಲಕಾರಣವನ್ನು ಎಲ್ಲರೂ ಬಲ್ಲವರೇ ಇದ್ದರು. ಈ ಯುದ್ಧವನ್ನು ತಡೆಯಲು ಪ್ರಯತ್ನವನ್ನೂ ನಡೆಸಿದ್ದರು. ಆದರೆ, ಅನುಭವ ಮತ್ತು ನಿರೀಕ್ಷಣೆಯನಂತರ ಎಲ್ಲರೂ ಅದರ ಸ್ವರೂಪವನ್ನೂ ಕಂಡುಕೊಂಡಿದ್ದರು. ಯುದ್ಧದಲ್ಲಿ ಯಾರಿಗೂ ಆಕರ್ಷಣೆಯಿರಲಿಲ್ಲ; ಭ್ರಮೆಯೂ ಇರಲಿಲ್ಲ. ಅದು ಒಂದು "ಸೈತಾನ" ಎಂದೆಲ್ಲರೂ ಅರಿತಿದ್ದರು. ವಿಜ್ಞಾನದ ಸಹಾಯದಿಂದ ನೂರಾರು ಜನರನ್ನು ಒಂದೇ ಬಾರಿಗೆ ಹತ್ಯೆಗೆಯ್ಯುವ ಕರ್ಮವೆಂದು ತಿಳಿದಿದ್ದರು. ಎಲ್ಲರ ಹೃದಯದಲ್ಲಿಯೂ ಹೆದರಿಕೆಯಿತ್ತು. ತಮ್ಮ ದೇಶಕ್ಕೆ ಮಾತ್ರವಲ್ಲ ಅಖಂಡ ವಿಶ್ವಕ್ಕೇನೇ ಇದು ಅಂಥಕರವೆಂದವರು ತಿಳಿದಿದ್ದರು. ಆದರೆ, ಅನ್ಯ ಗತಿಯಿಲ್ಲದಕಾರಣದಿಂದ ಅವರೆಲ್ಲರೂ ಯುದ್ಧವನ್ನು ಒಪ್ಪಲೇ ಬೇಕಾಗಿ ಬಂತು.

ಯುರೋಪು ಯುದ್ಧವನ್ನು ಅನಾಸಕ್ತಿಯಿಂದ ಸ್ವೀಕರಿಸುವುದೆಂದು ತಿಳಿದಿದ್ದರೂ ಇಂಗ್ಲೆಂಡು ನಮ್ಮನ್ನು ರೋಮಾಂಚಿತಗೊಳಿಸಿತು. ಯುದ್ಧಕ್ಕೆ ಮೊದಲಿನ ಕೆಲವು ವರ್ಷಗಳ ಅನುಭವಗಳಿಗಿಂತಲೂ ಹೆಚ್ಚಾಗಿ ನನಗೆಯುದ್ಧದ ಸಮಯದಲ್ಲಿ ಆಂಗ್ಲೇಯರನ್ನು ಅರಿತುಕೊಳ್ಳುವ ಅವಕಾಶ ದೊರೆಯಿತು.

ಮೊತ್ತಮೊದಲಿಗೆ ಮುಂಜಾನೆ ಯಾವುದೋ ಒಂದು ಕೆಲಸದ ನೆವನದಿಂದ ಒಂದು ಸರಕಾರಿ ಆಫೀಸಿಗೆ ಹೋಗಬೇಕಾಗಿತ್ತು. ನಾನು ಒಳಗಡೆ ಹೋದೆ, ಅಷ್ಟರಲ್ಲಿಯೇ ಮುಂದಿನಿಂದ ಒಬ್ಬ ಅಧಿಕಾರಿ ಬಾಗಿಲ ತೆರೆದು ಒಳಬಂದು ಒಳಗಿನ ಅಧಿಕಾರಿಯೊಡನೆ ಹೇಳ ತೊಡಗಿದ: ಜರ್ಮನಿಯು ಪೋಲೆಂಡಿನ ಮೇಲೆ ಆಕ್ರಮಣ ಮಾಡಿತು. ಈಗ ಯುದ್ಧ ಶುರುವಾಯಿತು. ನಾನೀಗಲೇ ಹೋಗಬೇಕಾದೀತು!" ಈ ಮಾತು ಕೇಳಿ ಇತ್ತ ನನ್ನೆದೆ ಬಡೆದಾಡ ತೊಡಗಿತು. (ಹೋಗಲು ನನ

(೯ನೇ ಪುಟ ನೋಡಿರಿ)



ಚಂದ್ರನಲ್ಲಿ ಇಳಿಯಲು ಮತ್ತು ಅಲ್ಲಿಂದ ಭೂಮಿಗೆ ಮರಳಲು ಅನುಕೂಲವಾದ ನೌಕೆಯ ಮಾದರಿ ನಕ್ಷೆಯೊಂದನ್ನು ಅಮೆರಿಕೆಯು ತಯಾರಿಸಿದೆ.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ. ನೋಡಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.
ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.
ಹೊಸ ಮುದ್ರಣ—ಸಾದಾ ಪ್ರತಿ 1:50. ಉತ್ತಮ ಪ್ರತಿ 2:0.
ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.
ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತವೆ.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Director of public Instruction, Madras.

ಮಹಿಳಾ ಪ್ರಪಂಚ

ಇಸ್ರಾಯೇಲದ ಸ್ತ್ರೀಯರು ರಾಜಕಾರಣ ಪಟುಗಳು!

ಈ ಪ್ರಜಾರಾಜ್ಯದ ವಿದೇಶ ಮಂತ್ರಿಣಿ ಒಬ್ಬಳೆ ಸ್ತ್ರೀ ಎಂಬುದು ಬಹು ಸೋಜಿಗ!

ನಮ್ಮ ಭಾರತವು ಪ್ರಜಾರಾಜ್ಯವಾದಂದಿನಿಂದ ರಾಜ್ಯಪಾಲ (ಗವರ್ನರ್), ಮಂತ್ರಿ, ಪರದೇಶದಲ್ಲಿಯ ರಾಯಭಾರಿ (ಹ್ಯಾಕಮಿಶನರ್), ವಿವಿಧ ರಾಜಕೀಯ ಪಕ್ಷಗಳ ಅಧ್ಯಕ್ಷ, ಉಪಾಧ್ಯಕ್ಷ ಅಷ್ಟೇ ಅಲ್ಲದೇ ಹೈಕೋರ್ಟಿನ ನ್ಯಾಯಾಧೀಶ! ಮತ್ತೇನು? ಅಂಚೆ ಇಲಾಖೆಯ ಪೋಸ್ಟಮನ್ ಇತ್ಯಾದಿ ಮಹತ್ವದ ಸ್ಥಳಗಳನ್ನು ಪುರುಷರಿಗೆ ಪ್ರತಿಸ್ಪರ್ಧಿಗಳಾಗಿ ಆಕ್ರಮಿಸಿಕೊಂಡಿರುವದನ್ನು ನಾವು ದಿನಂಪ್ರತಿ ಕಿವಿಯಿಂದ ಕೇಳುತ್ತೇವೆ, ಕಣ್ಣಿನಿಂದ ನೋಡುತ್ತೇವೆ! ಈ ರೀತಿ ಸ್ತ್ರೀಯರಿಗೆ ಪ್ರಾಧಾನ್ಯ ಕೊಡುವ ಈ ನಮ್ಮ ಸ್ವತಂತ್ರ ಭಾರತವು ಸಮಗ್ರ ಏಶಿಯಾ ಖಂಡದಲ್ಲಿಯೇ ಪ್ರಥಮ ಸ್ಥಾನವನ್ನು ಪಡೆದಿರುವದು. ಆದರೆ ಇಂದು ಮಾತ್ರ ಅನೇಕ ಪಾಶ್ಚಾತ್ಯ ಹಾಗೂ ಪೌರ್ವಾತ್ಯ ರಾಷ್ಟ್ರಗಳಲ್ಲಿಯೂ ಸ್ತ್ರೀ ಜಾತಿಯವರು ರಾಜಕೀಯ ಕ್ಷೇತ್ರದಲ್ಲಿ ಧುಮುಕಿ ಪ್ರಮುಖ ಕಾರ್ಯಗಳಲ್ಲಿ ಪಾರಂಗತರಾಗಿರುವರು!

ಇದಕ್ಕನುಗುಣವಾಗಿ ನಮ್ಮ ಸಮೀಪದ ಚಿಕ್ಕ ಸ್ವತಂತ್ರ ರಾಷ್ಟ್ರವಾದ ಇಸ್ರಾಯಿಲ್ ವೂ ಒಂದಾಗಿರುವದು. ಅಲ್ಲಿಯ ಸ್ತ್ರೀಯರು ಇಂದು ಬೆಳಕಿಗೆ ಬಂದು ಉನ್ನತ ಹುದ್ದೆಗಳನ್ನು ಪಡೆಯಲು, ಪುರುಷರೊಂದಿಗೆ ಕಾದಾಡುವ ವಾರ್ತೆಯನ್ನು ನಾವು ಕೇಳುತ್ತೇವೆ.

ಸಮಾನ ಹಕ್ಕು— ಇಂದು ಇಸ್ರಾಯಿಲ್‌ವು ವಿದೇಶ ಮಂತ್ರಿಯ ಸ್ಥಳದ ಮೇಲೆ ಓರ್ವ ಮಹಿಳೆಯನ್ನು ನೇಮಿಸಲ್ಪಟ್ಟಿರುವದು. ಶ್ರೀಮತಿ ಗೋಲ್ಡಾ ಮೇಯರ್‌ಳೇ ಆ ಸ್ಥಾನ ಏರಿದ್ದು ಬೇರೆ ಸ್ತ್ರೀಯರಲ್ಲ. ಇಸ್ರಾಯಿಲ್ ಪ್ರಸಿದ್ಧಿಯಿಂದ ಈ ಸ್ತ್ರೀಯು ಜಗತ್ತಿನಲ್ಲಿಯೇ ಬಹು ಪ್ರಖ್ಯಾತಳಾಗಿದ್ದಾಳೆ. ಅಷ್ಟೇ ಅಲ್ಲ, ಅಲ್ಪಾವಧಿಯಲ್ಲಿಯೇ ರಾಜಕಾರಣದಲ್ಲಿ ಬಿದ್ದು ಅಗಣಿತ ಕೀರ್ತಿಯನ್ನೂ ಸಂಪಾದಿಸಿಕೊಂಡಿರುವಳು. ಅಂತೂ ಶ್ರೀಮತಿ ಗೋಲ್ಡಾ ಮೇಯರ್‌ಳು ದೇಶ-ವಿದೇಶದ ಕೆಲವೇ ಮಹಿಳೆಯರ ಮಾಲಿಕೆಯಲ್ಲಿ ಸೇರಿರುವಳು! ಶ್ರೀಮತಿ ಗೋಲ್ಡಾಳೆಂದರೆ ಆಧುನಿಕ ಇಸ್ರಾಯಿಲ್ ಸ್ತ್ರೀಯರ ಒಂದು ಪ್ರತೀಕವೆಂದು ನಾವು-ನೀವು ಹೇಳಿದರೆ ತಪ್ಪಾಗಲಾರದು!

ಕಾರಣ? ಇಂದು ಅಲ್ಲಿಯ ಸ್ತ್ರೀಯರು ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ಒಂದೊಂದು ಮೈಲುಗಲ್ಲು ಇಡುತ್ತ ಬಂದಿರುವರು. ಭಿನ್ನ ಭಿನ್ನ ವ್ಯವಸಾಯೋದ್ಯೋಗಗಳಲ್ಲಿ ಇತ್ತೀಚೆಗೆ ಪ್ರಚಂಡ ರೀತಿಯಿಂದ ಸೇರಿ, ಒಂದು ಕ್ರಾಂತಿಯನ್ನೇ ಉದ್ಭವಿಸಿರುವರು! ಮತ್ತು ಪುರುಷರೊಂದಿಗೆ ಸಮಾನರಾಗಿ ಕಾರ್ಯ ಮಾಡುವರು.

ಶಿಕ್ಷಣ— ಸನ್ ೧೯೪೮ರಲ್ಲಿ ಸಮ್ಮತವಾದ ಹೊಸ ರಾಜ್ಯ ಘಟನೆಯನ್ವಯ "ರಾಷ್ಟ್ರದ ಎಲ್ಲ ಸಾಮಾಜಿಕ, ಆರ್ಥಿಕ ಹಾಗೂ ಕಾಯದೆ-ಕಾನೂನಿನ ವಿಷಯಗಳಲ್ಲಿ ಸ್ತ್ರೀಯರಿಗೆ ಪುರುಷರಂತೆ 'ಸಮಾನ ಹಕ್ಕು' ಮಾನ್ಯ ಮಾಡಲಾಗುವದು" ಎಂದು ಅವರಿಗೆ ಸರಕಾರದಿಂದ ಒಂದು ಅಭಿವಚನ ದೊರಕಿರುವದು.

ಆದಕಾರಣ ಇಸ್ರಾಯಿಲ್‌ದಲ್ಲಿ ಹುಡುಗರಂತೆ ಹುಡುಗಿಯರಿಗೂ ಪ್ರಜಾಸರಕಾರದಿಂದ ಉಚಿತವಾದ ಶಕ್ತಿ ಶಿಕ್ಷಣ ದೊರಕುತ್ತದೆ. ಇದರಿಂದ ಉಳಿದ ಬಡಜನರಿಗೆ ಬಹುದೊಡ್ಡ ಉಪಕಾರವೇ ಮಾಡಿದಂತಾಗಿರುವದು. ಅಲ್ಲಿದ್ದ ಅರಬ ಸ್ತ್ರೀಯರಿಗೂ ಈ ಸವಲತ್ತಿನ ಸದುಪಯೋಗವು ದೊರಕುತ್ತದೆ. ಕೇವಲ ಶಿಕ್ಷಣದಲ್ಲಿ ಮಾತ್ರ ಪುರುಷರಂತೆ ಸಮಾನ ಹಕ್ಕು ಸಿಗದೇ, ಕೊನೆಗೆ ಯಾವದಾದರೊಂದು ನೌಕರಿಯಲ್ಲಿ ಸೇರಿದರೂ ಅಲ್ಲಿ ಕೊಡುವ ವೇತನದಲ್ಲಿ ಸ್ತ್ರೀ-ಪುರುಷರೆಂಬ ಎಳ್ಳಷ್ಟೂ ಭೇದ-ಭಾವವಿರುವದಿಲ್ಲ. ಗಂಡಸರು ಯಾವ ಪ್ರಕಾರ ಹಣವನ್ನು ಅಳೆಯುವರೋ, ಅದೇ ರೀತಿಯಲ್ಲಿ ಹೆಂಗಸರೂ ವೇತನದ ಹಣವನ್ನು ಅಳೆದು ಸಂಪಾದಿಸಿಕೊಳ್ಳುವರು. ಅಂತೂ ಇಸ್ರಾಯಿಲ್ ಸರಕಾರವು ಸ್ತ್ರೀಯರಿಗೆ ಅನೇಕ ವಿಧದಿಂದ ಸರಿಸಮಾನ ಹಕ್ಕುಗಳನ್ನು ನೀಡುತ್ತ ಬಂದಿರುವದು ರಾಷ್ಟ್ರದ ಏಳ್ಗೆಯ ದೃಷ್ಟಿಯಿಂದ ಅತೀ ಮಹತ್ವದ ಕಾರ್ಯವಾಗಿದೆ.

ಸೈನಿಕ ವಿದ್ಯೆ—ಇಸ್ರಾಯಿಲ್‌ದಲ್ಲಿ ಸ್ತ್ರೀಯರಿಗೆ ಎರಡು ವರ್ಷ ಕಡ್ಡಾಯ ಸೈನಿಕ ಶಿಕ್ಷಣವನ್ನು ಕೊಡಬೇಕೆಂದು ನಿರ್ಣಯಿಸಿರುವರು. ಈ ಮೊದಲು ಕೇವಲ ಯುವಕರಿಗೆ ಕೊಡುವ ಏರ್ಪಾಡು ಇದ್ದದ್ದು, ಇಂದು ಅವರ ಜೊತೆಗೆ ಯುವತಿಯರೂ ಆ ಶಿಕ್ಷಣ ಪಡೆಯಲು ಸಮರ್ಥರಾಗಬೇಕೆಂದು ಅಲ್ಲಿಯ ಜನತಾ ಸರಕಾರವು ಹೊಸ ಕಾನೂನನ್ನು ಮಾಡಿದೆ. ಕೇವಲ ವಿವಾಹಿತ ಮತ್ತು ಗರ್ಭಿಣಿ ಸ್ತ್ರೀಯರಿಗೆ ಈ ನಿಯಮವು ಅನ್ವಯಿಸುವದಿಲ್ಲ. ಈ ಸೈನಿಕ ಶಿಕ್ಷಣವನ್ನು ಪಡೆಯುವ ಪಕ್ವವಾದ ಕಾಲವೆಂದರೆ ವಯಸ್ಸಿನ ೧೮ರಿಂದ ೨೦ ವರ್ಷದೊಳಗಿರುವದು.

ಕಾಯದೆಗನುಸಾರವಾಗಿ ದ್ವಿಭಾರ್ಯಾ (ದ್ವೀಪತ್ನಿ) ಪದ್ಧತಿ—ರದ್ದು ಮಾಡಲಾಗಿದೆ. ಮತ್ತು ಹುಡುಗಿಯರ ವಿವಾಹ ವಯಸ್ಸು ಅತಿ ಕಡಿಮೆಯೆಂದರೆ, ೧೮ ವರ್ಷವೆಂದು ಸರ್ವಾನುಮತದಿಂದ ನಿರ್ಣಯಿಸಲಾಗಿರುವದು.

ಪೋಷಾಕ—ಆ ರಾಷ್ಟ್ರದ ಒಂದು ವಿಶೇಷ ಸಂಗತಿಯೆಂದರೆ, ಅಲ್ಲಿಯ "ಮಹಿಳಾ ಮಂಡಲ"ಗಳು ತರುಣಿಯರಿಗೆ, ಸಾಮಾಜಿಕ, ಕೌಟುಂಬಿಕ ಹಾಗೂ ಧಾರ್ಮಿಕ ಜೀವನದ ವಿಷಯದಲ್ಲಿ ಶಿಕ್ಷಣ ಮತ್ತು ಮಾರ್ಗದರ್ಶನ ನೀಡುವ ಮಹತ್ಕಾರ್ಯವನ್ನು ಮಾಡುತ್ತವೆ! ಇಸ್ರಾಯಿಲ್ ಸ್ತ್ರೀಯರಿಗೆ ಸ್ವತಃ ತಮ್ಮ ರಾಷ್ಟ್ರೀಯ ಪೋಷಾಕವಿಲ್ಲ! ಇದೊಂದು ಅಲ್ಲಿಯ ದುರ್ದೈವದ ಸಂಗತಿಯಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಪೋಷಾಕಿನ ಬಗ್ಗೆ ಅಲ್ಲಿಯ ಅಧಿಕಾರಾರೂಢ ಸರಕಾರವಾದರೂ ವಿಶೇಷ ಪ್ರಯತ್ನವನ್ನು ಈ ತನಕ ಮಾಡಲು ಮುಂದಾಗಿ ಬರಲಿಲ್ಲ. ಅಲ್ಲಿಯ ಸ್ತ್ರೀಯರ ಪೋಷಾಕವೆಂದರೆ ಸಂಪೂರ್ಣವಾಗಿ ಪಾಶ್ಚಿಮಾತ್ಯರ ವೇಷ-ಭೂಷಣವಾಗಿದೆ. ಆದಕಾರಣ ಅಲ್ಲಿಯ ಸ್ತ್ರೀಯರು ತಮ್ಮ ಉಡುಪಿನಲ್ಲಿ ಪರಾಧೀನರಾಗಿ ಇನ್ನೂ ತನಕ ಉಳಿದಿರುವದು, ಯಾರಿಗಾದರೂ ಆಕಸ್ಮಿಕ ಆಶ್ಚರ್ಯವಾಗುವದು ಸ್ವಾಭಾವಿಕವೇ ಸರಿ! ಇದು ಪ್ರಜಾಪ್ರಭುತ್ವದ ದೃಷ್ಟಿಯಿಂದ ಸೂಕ್ಷ್ಮವಾಗಿ ನೋಡಿದರೆ, ಒಂದು ಅತಿ ದೊಡ್ಡ ಕುಂದು-ಕೊರತೆಯೆಂದು ಧಾರಾಳವಾಗಿ ಹೇಳಬಹುದು.

— ಶ್ರೀ ರಾಮಕೃಷ್ಣ ಎ. ಪೈ,
ಅಂಕೋಲಾ.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O.S.62/1957. R.E.P.910/58

ಯಿನಾಸ ರಬೇಲೊ—ಅರ್ಜಿದಾರ,

ಮತ್ತು

1. ಸರಸು ಶೆಡ್ತಿ, 2. ಸುಬ್ಬಯ್ಯ ಶೆಟ್ಟಿ, 3. ಮುದ್ದಣ್ಣ ಶೆಟ್ಟಿ—ಯೆದ್ರಿರು.

ಯಿವರೊಳಗೆ

3ನೇಯೆದ್ರಿ:-ಮುದ್ದಣ್ಣ ಶೆಟ್ಟಿ—ಅಂತಮ್ಮ ಶೆಡ್ತಿ ಮಗ,-ಮೂಡುತೋನ್ಸೆ ಗ್ರಾಮದದಬ್ಬೆಟ್ಟಿನಲ್ಲಿರುವನ, ಯಿವರೀಗೆ ಯೀ ಮೂಲ್ಕ ತಿಳಿಯಪಡಿಸುವದೇನಂದ್ರೆ:-

ಮೇಲ್ಕಂಡ ಅಮಲ್‌ಜ್ಯಾರಿಯಲ್ಲಿ ಅಮಲ್‌ಜ್ಯಾರಿಗೆ ಕಾರಣವಾದ ಡಿಕ್ರಿಯಲ್ಲಿ ಜವಾಬದಾರಿಯಿರುವ ಸ್ಥಿರಾಸ್ತಿಗಳ ಮಾರಾಟದ ಕುರಿತು ಅರ್ಜಿದಾರನು ಹಾಜರು ಪಡ್ಸಿದ ಯಿಸ್ತಿಹಾರು ಕುರಿತು 3ನೇಯೆದ್ರಿಗೆ ಆಗತಕ್ಕ ಸದ್ರಿ ಯೇಲಂ ಯಿಸ್ತ್ಯಾರು-ಶರ್ತಗಳನ್ನು ನಿರ್ಣಯಿಸುವಕ್ಕೆ ನೊಟೀಸು ಬಗ್ಗೆ ತಾ. 2-7-59ಕ್ಕೆ ಯಿಟ್ಟಿರುತ್ತದೆಂತಲೂ, ಅಕ್ಷೇಪ ಹೇಳುವಂಥಾದ್ದು ಯಿದ್ರೆ ಸದ್ರಿ ದಿವ್ಸ ಕೋರ್ಟು ಮುಂದೆ ಹಾಜ್ರಾಗಿ ಸದ್ರಿ ದಿವಸ 10ಗಟಿವಳಗೆ ಜ್ಯಾಹೀರು ಪಡಿಸದಿದ್ದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂತ ಈ ಮೂಲ್ಕ ತಿಳಿಸೋಣಾಗುತ್ತದೆ.

A. J. Rebello,
Advocate for Petitioner.
Udipi, Dated 13-6-59.

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್, ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.

(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2-00.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ। ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)

ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.

(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಫಲ ಜೀವನ

ಆಚಾರ್ಯ ಪ್ರಫುಲ್ಲ ಚಂದ್ರ-ಭಾರತೀಯ ಆದರ್ಶಜ್ಯೋತಿ

ಇವರು ವೈಜ್ಞಾನಿಕರಾಗಿದ್ದರೂ ಅಸೀಮ ದೇಶಭಕ್ತರಾಗಿದ್ದರು

ಆಚಾರ್ಯ ಪ್ರಫುಲ್ಲಚಂದ್ರ ರೋಯರು, ಭಾರತವು ಹೆಮ್ಮೆಪಡುವಂತಹ ಓರ್ವ ಮಹಾನ್ ವ್ಯಕ್ತಿಗಳು. ಜಗತ್ತು ಅವರನ್ನು ಒಬ್ಬ ಶ್ರೇಷ್ಠ ವೈಜ್ಞಾನಿಕನೆಂದು ಗೌರವಿಸುತ್ತಿದೆಯಾದರೆ ಭಾರತೀಯರಿಗೆ ಅವರು ಶಿಕ್ಷಣ ಸಂಬಂಧದಲ್ಲಿ ಹಾಗೂ ರಾಷ್ಟ್ರೀಯ ಉದ್ಯೋಗದಲ್ಲಿ ಸಲ್ಲಿಸಿದ ಸೇವೆಯ ಉತ್ತಮ ಪರಿಚಯವೂ ಇವೆ. ಭಾರತೀಯರ ರಸಾಯನ ಶಾಸ್ತ್ರಜ್ಞಾನವನ್ನು ಅವರು 'ಬೆಂಗಾಲ್ ಕೆಮಿಕಲ್ ವರ್ಕ್ಸ್' ಸಂಸ್ಥೆಯ ಮೂಲಕ ಜಗತ್ತಿನಲ್ಲಿ ಬೆಳಗಿಸಿದರು.

ಆಚಾರ್ಯ ರೋಯರು ೧೮೬೧ನೇ ಇಸವಿಯಲ್ಲಿ ಬಂಗಾಲದ ಖುಲಾನಾ ಜಿಲ್ಲೆಯ ಒಂದು ಹಳ್ಳಿಯಲ್ಲಿ ಜನ್ಮವೆತ್ತಿದರು. ಹಳ್ಳಿಯಲ್ಲಿ ಪ್ರಾರಂಭಿಕ ಶಿಕ್ಷಣ ಮುಗಿಸಿ, ತಮ್ಮ ಒಂಭತ್ತನೆ ವರ್ಷದ ಪ್ರಾಯದಲ್ಲಿ ಓದಲು ಕಲಕತ್ತೆಗೆ ಬಂದರು. ಹದಿನೈದನೇ ಹರೆಯದಲ್ಲಿ ಅವರು ಎಂಟ್ರೆನ್ಸ್ ಪರೀಕ್ಷೆ ಮುಗಿಸಿ ಪ್ರೆಸಿಡೆನ್ಸಿ ಕಾಲೇಜು ಸೇರಿದರು. ಕಾಲೇಜು ಸೇರುವ ಮೊದಲೇ ಬಾಲಕ ರೋಯರು ಲೆಟಿನ್, ಫ್ರೆಂಚ್ ಮತ್ತು ಸಂಸ್ಕೃತ ಕಲಿತಿದ್ದರು. ಕಾಲೇಜಿನಲ್ಲಿ ರಸಾಯನ ಶಾಸ್ತ್ರವು ಅವರ ಪ್ರೀತಿಯ ವಿಷಯವಾಗಿತ್ತು. ಕಲಕತ್ತೆಯಲ್ಲಿ ಅವರು ತಮ್ಮ ಮಿತ್ರರೊಡಗೂಡಿ ಒಂದು ಪ್ರಯೋಗಶಾಲೆಯನ್ನು ತೆರೆದು, ವಿರಾಮದ ಸಮಯದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡತೊಡಗಿದರು. ಕಲಿಯುವಿಕೆಯಲ್ಲಿ ಪ್ರಫುಲ್ಲಚಂದ್ರರ ಅಸಾಧಾರಣ ಪ್ರತಿಭೆಯನ್ನು ಗುರುತಿಸಿದ ಅವರ ಮಿತ್ರರು ಅವರನ್ನು ಉಚ್ಚ ಶಿಕ್ಷಣಕ್ಕೋಸುಗ ಸ್ಕಾಟ್‌ಲೆಂಡಿಗೆ ಕಳುಹಿದರು. ೧೮೮೨ನೇ ವರುಷ ಪ್ರಾಯದಲ್ಲಿ ಅವರು ಸ್ಕಾಟ್ಲೆಂಡಿಗೆ ಹೋದರು. ೧೮೮೭ನೇ ಇಸವಿಯಲ್ಲಿ ಅವರು 'ಎಡಿನ್‌ಬರೋ ವಿಶ್ವವಿದ್ಯಾನಿಲಯ'ದ 'ಡಾಕ್ಟರ್ ಆಫ್ ಸಾಯನ್ಸ್'

(೬ನೇ ಪುಟ ನೋಡಿರಿ)

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

NAVAYUGA
Founder:—
A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೧೮-೬-'೫೯	೪೦

ಸುದೃಢ ಸ್ನೇಹಸಂಬಂಧ

ಚೀನದ ಕಮ್ಯುನಿಸ್ಟ ಸರಕಾರ ಟಿಬೇಟಿನಲ್ಲಿ ನಡೆಸಿದ ಹಸ್ತಕ್ಷೇಪ ಮತ್ತು ನೇಪಾಳದಲ್ಲಿ ರಚಿತವಾದ ಪ್ರಜಾಪ್ರಭುತ್ವ ಮಾದರಿಯ ಸರಕಾರಗಳ ಪರಿಣಾಮವನ್ನು ಭಾರತ ಹಾಗೂ ಅದರ ನೆರೆಹೊರೆಯ ರಾಷ್ಟ್ರಗಳು ಅನುಭವಿಸುತ್ತಿರುವಾಗ, ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ ನೆಹರು ಅವರ ನೇಪಾಲ ಸಂದರ್ಶನಕ್ಕೆ ಅತೀವ ಮಹತ್ವವಿದೆ ಎನ್ನಬೇಕು. ಟಿಬೇಟ ಮತ್ತು ಭಾರತಗಳ ನಡುವಿರುವ ಈ ಗುಡ್ಡಕಾಡುಗಳ ಅಗಲ ಕಿರಿದಾದ ದೇಶವು ಅನಭಿವೃದ್ಧ ರಾಷ್ಟ್ರಗಳ ಸಾಲಿಗೆ ಸೇರುವುದಾದರೂ ಅದರ ಪ್ರಾಧಾನ್ಯವನ್ನು ಅಲ್ಲಗಳೆಯುವಂತಿಲ್ಲ. ಪೇಕಿಂಗ ಸರಕಾರವು 'ಬೃಹತ್ ಚೀನಾ'ದ ನಕಾಶೆಯಲ್ಲಿ ಭಾರತದ ಕೆಲವೊಂದು ಭಾಗಗಳನ್ನು ಮಾತ್ರವಲ್ಲದೇ ನೇಪಾಳದ ಅಂಶವನ್ನೂ ಸೇರಿಸಿರುವುದೆಂದು ತಿಳಿಯುವಾಗ, ಕಮ್ಯುನಿಸ್ಟರ ಧಾಳಿಯು ಟಬೇಟದಲ್ಲಿ 'ಸಂಪೂರ್ಣ ಯಶಸ್ವಿ'ಯೆನಿಸಿತೆಂದರೆ, ಮುಂದಿನ ಆಹುತಿ ನೇಪಾಲ—ಭಾರತ—ಪಾಕಿಸ್ತಾನಗಳೇ ಎಂಬುದರಲ್ಲಿ ಅನ್ಯೋಕ್ತಿಯಿಲ್ಲ. ನೇಪಾಳದ ಅರಸು ಮಹೇಂದ್ರರಾದರೂ ಜನತೆಯ ಅಂತರ್ಯವನ್ನೇ ಅರಿತುಕೊಂಡು ಪ್ರಜಾಪ್ರಭುತ್ವ ಮಾದರಿಯ ಸರಕಾರವನ್ನು ಘೋಷಿಸುವುದಕ್ಕೂ ದೂರದಲ್ಲಿಯಾದರೂ ಇದರ ಸಂಬಂಧವಿರಬಹುದು. ಆದುದರಿಂದ ಇಂದಿನ ಸಂಧಿಗ್ದ ಪರಿಸ್ಥಿತಿಯಲ್ಲಿ ಭಾರತ—ನೇಪಾಳಗಳೆರಡು ರಾಷ್ಟ್ರಗಳ ಹಿತದೃಷ್ಟಿಯಿಂದ, ಇವೆರಡರಲ್ಲಿಯೂ ಕಮ್ಯುನಿಜಮನ್ನು ದೂರವಿರಿಸುವ ಮಹೋದ್ದೇಶದಿಂದ ಈ ರಾಷ್ಟ್ರಗಳ ನಡುವಣ ಸಂಬಂಧವು ಹಾಲು ನೀರಿನಂತೆ ಬೆರೆತುಕೊಂಡಿರುವುದು ಆವಶ್ಯವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಭಾರತ—ನೇಪಾಳಗಳ ಮಧುರ ಬಾಂಧವ್ಯವು ಇಂದು ನಿನ್ನೆಯದಲ್ಲ. ಸ್ವಾಭಾವಿಕವಾಗಿಯೇ ಈ ಮೈತ್ರೀ ವೃಕ್ಷ ಬೆಳೆದುಬಂದಿದೆ. ನೇಪಾಳ-ಭಾರತಗಳಲ್ಲಿ ಸಮಯ ಸಮಯದಲ್ಲಿ ಸ್ಥಾಪಿತವಾದ ಸರಕಾರಗಳಾದರೂ ಈ ವೃಕ್ಷಕ್ಕೆ ನೀರೆರೆಯುತ್ತ ಬರುತ್ತಿವೆ. ಇದು ಮುಂದಕ್ಕಾದರೂ ಈ ಸ್ನೇಹಲತೆಯು ಹೂತು ಫಲಭರಿತವಾದರೇನೇ ಎರಡೂ ರಾಷ್ಟ್ರಗಳ ಪ್ರಗತಿ ಸಾಧ್ಯವಾಗಿದೆ. ಪ್ರಧಾನಿ ನೆಹರು ಮತ್ತು ನೇಪಾಳೀ ಪ್ರಧಾನಿ ಶ್ರೀ ಕೊಯಿರಾಲಾರವರು ಒಂದು ಸಂಯುಕ್ತ ಪ್ರಕಟಣೆಯನ್ನು ಹೊರಡಿಸಿ, ವಿಶ್ವಶಾಂತಿಯ ದೃಷ್ಟಿಯಿಂದ ಜರ್ಮನಿ ಸಮಸ್ಯೆಯು ಬೇಗನೇ ಬಗೆಹರಿಯಬೇಕೆಂದು ಆಶಿಸಿದರು. ಜರ್ಮನಿಯಂತಹ ಸಮಸ್ಯೆಗಳು ಇಂದು ಅಷ್ಟೊಂದು ಕೆಡುಕಾಗಿ ತೋರುತ್ತಿಲ್ಲವಾದರೂ ವಿಶ್ವಸಂಗ್ರಾಮದ ಕಿಡಿ ಸಿಡಿಯಲು ಇದೊಂದೇ ಸಾಕು. ಒಂದು ವೇಳೆ ಈ ಕಿಡಿಯು ಜ್ವಲಿಸಿತೆಂದರೆ, ಪ್ರಪಂಚವ್ಯಾಪಿಯಾಗುವುದಲ್ಲದೇ ಅಭಿವೃದ್ಧ—ಅನಭಿವೃದ್ಧವೆಂಬ ಭೇದಭಾವವಿಲ್ಲದೇ ಎಲ್ಲಾ ದೇಶಗಳ ಮೇಲಿಯೂ ಅದರ ಪ್ರಭಾವ ಮತ್ತು ಪರಿಣಾಮಗಳು ಬೀಳುವುದು ಸಹಜವೇ. ಆದುದರಿಂದ ವಿಶ್ವಶಾಂತಿಯನ್ನು ಬಯಸಿ ಸದಾಶಯ ವ್ಯಕ್ತಪಡಿಸಿರುವುದು ಎರಡೂ ಸರಕಾರದ ಅಂತರಿಕಾಶಯವನ್ನು ಪ್ರತಿಬಿಂಬಿಸಿದಂತಾಗಿದೆ. ನೇಪಾಳವು ಭಾರತದ ನೆರೆಯ ಭಾರತಕ್ಕಿಂತ ನಿಮ್ನ ಪಥದಲ್ಲಿರುವ ಎಳೆಯ ದೇಶವಾದರೂ ಉಭಯ ಸರಕಾರಗಳ ನಡುವೆ ಹಲವಾರು ಕ್ಷೇತ್ರಗಳಲ್ಲಾಗಿರುವ ಒಪ್ಪಂದಗಳಿಗನುಸಾರವಾಗಿ ದಿನೇ ದಿನೇ ಈ ಸಂಬಂಧವು ಬೆಳೆಯುತ್ತ ಬರುತ್ತಿದೆ. ಸಾರಿಗೆ ಸಂಪರ್ಕ ಹಾಗೂ ನೀರಾವರಿ, ವ್ಯಾಪಾರ ಕ್ಷೇತ್ರಗಳಲ್ಲಿ ಇದು ಮತ್ತೂ ಮುಂದುವರಿದಿದೆ ಎಂಬುದು ಜಗಜ್ಜನಿತ. ಇದು ವರೆಗಿನಂತೆಯೇ ಭಾರತವು ಮುಂದಕ್ಕೂ ಇದೇ ರೀತಿಯ ಸಹಾಯ ಹಸ್ತವನ್ನೀಯುವುದಕ್ಕೂ ನೇಪಾಳವು ಅದನ್ನು ಸ್ವೀಕರಿಸುವುದಕ್ಕೂ ಸಿದ್ಧವಿವೆ; ಎಂತಲೇ ನೇಪಾಳವು ಭಾರತದ ಅತಿ ನಿಕಟವಾದ ದೇಶ—ಅಭಿಪ್ರಾಯ ಮತ್ತು ಸಾಮೀಪ್ಯವೆರಡರಲ್ಲೂ.

ಇದೇ ರೀತಿಯ ಏಕಾಭಿಪ್ರಾಯದಿಂದ ಕೂಡಿದ್ದರೆ ಮಾತ್ರ ಮುಂದಕ್ಕೆ ಒದಗಬಹುದಾದ ಗಂಡಾಂತರ ಸನ್ನಿವೇಶದಲ್ಲಿ ಉಳಿಯಬಹುದು. ಭಾರತ—ನೇಪಾಳಗಳ ಸಂಬಂಧ ಸುದೃಢವಾದಷ್ಟು ಉಭಯ ರಾಷ್ಟ್ರಗಳ ಶಕ್ತಿ ವರ್ಧಿಸಿದಂತೆ ಎನ್ನಬಹುದು. ಈ ದಿಸೆಯಲ್ಲಿ ಭಾರತೀಯ ಪ್ರಧಾನಿಯವರ ಪ್ರಕೃತದ ಸಂದರ್ಶನವು ಪರಿಣಾಮಕಾರಿಯೂ ಮಹತ್ವಪೂರ್ಣವೂ ಆಗಿದೆ; ಅಂತೆಯೇ ನೇಪಾಳೀ ಪ್ರಧಾನರು ಸದ್ಯವೇ ಭಾರತ ಸಂದರ್ಶಣೆ ಮಾಡಲಿರುವುದರಿಂದ ಈ ಸಂದರ್ಶನದಿಂದಾಗುವ ಪರಿಣಾಮ ಸ್ಪಾದಿಷ್ಟವಾಗುವುದು. ನೇಪಾಳವು ಪಂಚಶೀಲವನ್ನೊಪ್ಪಿದ ರಾಷ್ಟ್ರವಲ್ಲವಾದರೂ ಅದಕ್ಕೆ ವಿರೋಧಿಯಲ್ಲ. ಎಂತಲೇ ದೇಶ ಸ್ನೇಹಲತೆ ಬೆಳೆದುಬರುವುದು ಇಕ್ಕಡೆಯವರಿಗೂ ಒಳಿತು. ಈ ದಿಸೆಯಲ್ಲಿಯೇ ಮುನ್ನಡೆಯುವ ಹೊಣೆಗಾರಿಕೆಯನ್ನು ಇರ್ವರೂ ಮರೆಯಬಾರದು.

ಜಾತೀಯವಾದಿಗಳು ಯಾರು?

ಬಾಯಿಯಲ್ಲಿ ರಾಮನಾಮವನ್ನು ಜಪಿಸಿ ಬಗಲಲ್ಲಿ ಚೂರಿ ಅಡಗಿಸಿಟ್ಟು ಬೆನ್ನ ಹಿಂದಿನಿಂದ ಇರಿಯುವವರು ಭಾರತದಲ್ಲಿ ಕಡಮೆ ಸಂಖ್ಯೆಯಲ್ಲಿರಲಾರರು. ಪ್ರಜಾಪ್ರಭುತ್ವದಲ್ಲಿನ ಪ್ರಮುಖ ರಾಜಕೀಯ ಪಕ್ಷಗಳಿಂದ ಹಿಡಿದು ತೀರ ಅನಾಗರಿಕರ ವರೆಗೂ ಈ ಹವ್ಯಾಸವಿರುವುದು ಕಂಡು ಬರುತ್ತದೆ. ಕೇರಳದಲ್ಲಿನ ಕಮ್ಯುನಿಸ್ಟ ಪ್ರಜಾಪ್ರಭುತ್ವ ನೀತಿ, ಮದ್ರಾಸದ 'ನಾಯ್ಕರರ ಪಕ್ಷ'ಕ್ಕೆ ವಿರೋಧ, ಭಾರತ ಸರಕಾರದ ಅಧಿಕ ಆಹಾರೋತ್ಪಾದನಾ ಚಳವಳ ಮೊದಲಾದುವುಗಳೊಂದಿಗೆ ಮೈಸೂರಿನ ಕಮ್ಯುನಲ್ ಜಿ. ಓ. ಕೂಡ ಸೇರಿಕೊಂಡಿದೆ. ದೇಶದಲ್ಲಿ ಜಾತೀಯತೆಯನ್ನು ಅಳಿಸಿ, ನಿಜವಾಗಿಯೂ ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಹಿಂದುಳಿದವರಿಗೆ ಸುಯೋಗ್ಯ ಅವಕಾಶವನ್ನು ಒದಗಿಸಿ ಕೊಡುವರೆ ಕೇಂದ್ರ ಸರಕಾರವು ಬಯಸುವಾಗ "ಕನ್ನಮ ನುದಿಸಿದ" ಕರ್ನಾಟಕ—ಅಲ್ಲ, ಮೈಸೂರು—ಕಪಿ ಚೇಷ್ಟೆಯನ್ನು ತೋರಿಸುತ್ತ, ೧೬೫ಕ್ಕೂ ಮಿಕ್ಕಿದ ಜಾತಿಗಳನ್ನು ಆರಿಸಿ ಹಿಂದುಳಿದವರೆಂದು ಘೋಷಿಸಿದೆ. ಕಳೆದ ವರ್ಷ, ವೃತ್ತಿಪರ ಕಾಲೇಜುಗಳಿಗೆ ಪ್ರವೇಶ ನೀಡುವ ಸಂದರ್ಭದಲ್ಲಿ "ಬ್ರಾಹ್ಮಣರು ಮಾತ್ರ ಮುಂದುವರಿದವರು" ಎಂದು ಪ್ರಕಟಿಸಿ ಜಾತೀಯತೆಯನ್ನು ಕೆರಳಿಸಿದ್ದರೆ, ಈಗ ಪರ್ಯಾಯವಾಗಿ ಅವರನ್ನುಳಿದ ಪರೆಲ್ಲರೂ ಹಿಂದುಳಿದವರೆಂದು ಹೇಳಿದಂತಾಗಿದೆ; ಎಂದರೆ, ಸೋದರ ಅಲ್ಲ, ತಾಯಿಯ ಮಗ ಎಂಬಂತೆ. ಈ ರೀತಿಯಾಗಿ ಯೋಗ್ಯತೆಗೆ ಸ್ವಲ್ಪವಾದರೂ ಬೆಲೆಯೀಯದೆ ಜಾತೀಯತೆಯನ್ನು ದೂರವಿರಿಸಿರಿ; ಜಾತೀಯತೆಯಿಂದ ಹಾನಿಯಿದೆ ಎಂದು ಘೋಷಿಸುವವರೇ ಜಾತೀಯತೆಯನ್ನು ಹೆಚ್ಚಿಸುವುದಲ್ಲದೆ, ರಾಜ್ಯದ ನೇಕಡಾ ೭೫ಕ್ಕಿಂತಲೂ ಹೆಚ್ಚಿನ ಜನರು ಹಿಂದುಳಿದವರೆಂದು ಹೇಳಿಕೊಂಡು, ಸತ್ಯಸ್ಥಿತಿಯನ್ನು ಅಡಗಿಸಿ ವಂಚಿಸುತ್ತಿರುವುದು ಯಾವ ನ್ಯಾಯವೆಂದು ತಿಳಿಯುವುದಿಲ್ಲ. ಆರ್ಥಿಕ ಪರಿಸ್ಥಿತಿಯನ್ನು ಆಧಾರವಾಗಿಟ್ಟು ಇಂತಹ ವಿಭಾಗ ಮಾಡಬೇಕಲ್ಲದೆ ಜಾತಿಯ ತಳಹದಿಯಿಂದಲ್ಲವೆಂದು ಯಾವರೀತಿಯಲ್ಲಿ ತಿಳಿಹೇಳಿದರೂ ಹನುಮನ ನಾಡಿಗೆ ತಿಳಿಯದಿರುವುದು ಶೋಚನೀಯ. ಕಾಡು ಪ್ರಾಣಿಗಳು ಮಾನವನನ್ನು ಹಿಂಸಿಸುವವಾದರೂ, ಅವು ಹಿಂದುಗಡೆಯಿಂದ ಹಾಗೆ ಮಾಡುವುದಿಲ್ಲ. ಆದರೆ, ಮನುಷ್ಯನು ಮಾತ್ರ ಹಿಂದಿನಿಂದಲೇ ಚೂರಿಹಾಕಿ ಬಿಡುತ್ತಾನೆ! ಮೈಸೂರು ಸರಕಾರದ ಈ ಜೀವೋವಿಗೆ ಜೀವವಿತ್ತುದರಿಂದ ರಾಜ್ಯಕ್ಕೆ ಜೀವವೇ ಇಲ್ಲ ಎಂಬುದನ್ನು ಸಾರಿ ಹೇಳಿದಂತಲ್ಲವೆ?

ಸಂಕ್ಷಿಪ್ತ ಸುದ್ದಿಗಳು

ಕೇರಳದಲ್ಲಿ ಗೋಳಿಬಾರು

ಕೇರಳದಲ್ಲಿ ಅಸಹಕಾರ ಆಂದೋಲನವು ದಿನಾಂಕ ೧೨ರಂದು ಪ್ರಾರಂಭವಾಗಿದ್ದು ದಿನೇದಿನೇ ಕ್ಷೋಭೆಯನ್ನುಂಟು ಮಾಡುತ್ತಿದೆ. ತಿರುವನಂತಪುರದಲ್ಲಿ ಗೋಳಿಬಾರುಗಳು ನಡೆದು ಕೆಲವಾರು ಮರಣಗಳುಂಟಾಗಿರುವುವಲ್ಲದೇ ಅನೇಕರಿಗೆ ಗಾಯಗಳಾಗಿವೆ. ಈ ಬಗ್ಗೆ ಆಂದೋಲನಕಾರರು ಮತ್ತು ಸರಕಾರಗಳೊಡನೆ ಪರಸ್ಪರ ಆರೋಪ ಪ್ರತ್ಯಾರೋಪಗಳು ಹೊರಿಸಲ್ಪಟ್ಟಿವೆ. ಅಲ್ಲಲ್ಲಿನ ಪೆಟ್ರೋಲ್ ಬಂಕುಗಳನ್ನು ರಕ್ಷಿಸುವ ಹೊಣೆಯನ್ನು ಮಿಲಿಟರಿ ಸೇನೆಯು ಮಾಡುತ್ತಿದೆ. ಶಾಲೆಯು ತೆರೆಯಬೇಕೆಂದು ನಿಶ್ಚಿತವಾದ ದಿನ ಕೆಲವು ಶಾಲೆಗಳು ತೆರೆಯಲ್ಪಟ್ಟರೂ ನಾಯರ ಸೊಸಾಯಿಟಿ ಮತ್ತು ಕ್ರಿಶ್ಚಿಯನ್ ಆಡಳಿತೆಯಲ್ಲಿರುವ ಶಾಲೆಗಳು ತೆರೆಯಲಿಲ್ಲ. ಆದರೂ ಶಾಲೆಗಳನ್ನು ತೆರೆಯುವ ದಿನವನ್ನು ಸರಕಾರವು ಮುಂದುವರಿಸಿದೆ. ಸರಕಾರವು ರಾಜಿನಾಮೆ ಕೊಡಬೇಕೆಂದು ಆಂದೋಲನಗಾರರು ಘೋಷಿಸಿದರೆ, ಕಮ್ಯುನಿಸ್ಟರು ಇದನ್ನು ಒಪ್ಪುವುದಕ್ಕೆ ಸಿದ್ಧರಿಲ್ಲ. ಶ್ರೀ ಯು. ಎನ್. ದೇಭಾರ ಸಾದಿಕ್ ಅಲಿ ಮೊದಲಾದ ಕಾಂಗ್ರೆಸ್ ಮುಖಂಡರು ಈಗಾಗಲೇ ಕೇರಳಕ್ಕೆ ಭೆಟ್ಟಿಯೀಯುತ್ತಿದ್ದಾರೆ. ಪ್ರಧಾನಿಯವರೂ ಸದ್ಯವೇ ಆಗಮಿಸುವ ನಿರೀಕ್ಷೆಯಿದೆ.

ಸೌಹಾರ್ದಮಯ ಭೇಟಿ

ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಸಿಂಹಳಕ್ಕೆ ಸೌಹಾರ್ದಮಯ ಭೇಟಿಯನ್ನೀಯಲು ತೆರಳಿರುತ್ತಾರೆ. ದಾರಿಯಲ್ಲಿ ಅವರು ಬೆಂಗಳೂರಲ್ಲಿ ತಂಗಿ ಅಲ್ಲಿ ಬೆಂಗಳೂರು ಮೆಡಿಕಲ್ ಕಾಲೇಜಿನ ವಾಚನಾಲಯದ ಶಂಕುಸ್ಥಾಪನೆ ಮಾಡಿದರು. ಡಾಕ್ಟರರ ಹೊಣೆಗಾರಿಕೆಯನ್ನು ತಿಳಿಸುತ್ತ ಅವರು ಹಿಂದಿನ ಮತ್ತು ಇಂದಿನ ವೈದ್ಯಕೀಯ ವಿಭಾಗಗಳನ್ನು ವಿವರಿಸಿ, ದೇಶದ ಎಲ್ಲ ನಾಗರಿಕರಿಗೂ ವೈದ್ಯಕೀಯ ಸೌಲಭ್ಯವನ್ನು ಒದಗಿಸುವ ಆವಶ್ಯಕತೆಗಳನ್ನು ಒತ್ತಿ ಹೇಳಿದರು. ಸಿಂಹಳದಲ್ಲಿ ರಾಷ್ಟ್ರಪತಿಗಳು ಆರು ದಿನಗಳ ಕಾಲ ಉಳಿಯುವರು.

ಚೀನಿ ಸರಕಾರ ಮಣಿಯಬಹುದು

ಟಿಬೇಟಿನ ಸಮಸ್ಯೆಯಲ್ಲಿ ಮುಂದೆ ಇಡಬಹುದಾದ ಹೆಜ್ಜೆ ಯಾವುದೆಂಬುದನ್ನು ದಲಾಯಿಲಾಮರೇ ನಿರ್ಧರಿಸಬೇಕು. ದಲಾಯಿಲಾಮರ ವಿಚಾರವನ್ನು ತಿಳಿದ ಪಕ್ಷದಲ್ಲಿ ನಾವೂ ಸಾಕಷ್ಟು ಟಿಬೇಟಕ್ಕೆ ಮತ್ತು ಅಲ್ಲಿನ ಜನತೆಗೆ ಪರಮಾವಧಿ ಸಹಕಾರ ನೀಡುವುದು ಸಾಧ್ಯ ಎಂದು ಸರ್ವೋದಯ ಧುರೀಣ ಶ್ರೀ ಜಯಪ್ರಕಾಶರು ತಿಳಿಸಿದ್ದಾರೆ. ಭಾರತದ ಪ್ರಧಾನಿಯವರು ಟಿಬೇಟದ ಮೇಲೆ ಚೀನಾದ ಪ್ರಭುತ್ವವಿರುವುದನ್ನು ಒಪ್ಪಿ ದೊಡ್ಡ ತಪ್ಪು ಮಾಡಿರುವರೆಂದು ಹೇಳಿ, ಕಮ್ಯುನಿಸ್ಟ ಚೀನ ತನಗೆ ಪ್ರತಿಯಾಗಿ ಏಳುತ್ತಿರುವ ಜಾಗತಿಕ ಅಭಿಪ್ರಾಯದೆದುರು ಮಣಿಯುವುದೆಂದು ಹಾರೈಸಿದರು.

ನಾಣ್ಯಗಳನ್ನು ಹಿಂದೆಗೆಯಲಾಗುವುದು

ಹಳದ ಬಣ್ಣದ ಒಂದಾಣೆ ಮತ್ತು ಅರ್ಧಾಣೆಯ ನಾಣ್ಯಗಳನ್ನು ೧೯೬೦ನೇ ಜನವರಿ ೧ರಿಂದ ಚಲಾವಣೆಯಿಂದ ಹಿಂತೆಗೆದುಕೊಳ್ಳಲು ನಿರ್ಧರಿಸಲಾಗಿದೆ. ಆದರೂ ೧೯೬೦ರ ಜೂನ್ ೩೦ರ ವರೆಗೆ ರಿಸರ್ವ ಬೇಂಕ್, ಸರಕಾರಿ ವ್ಯವಹಾರಗಳನ್ನು ನಡೆಸುತ್ತಿರುವ ಬ್ಯೇಂಕ್‍ಗಳು, ಸರಕಾರಿ ಟ್ರೆಜರಿ ಮತ್ತು ಸಬ್ ಟ್ರೆಜರಿಗಳಲ್ಲಿ ಸ್ವೀಕರಿಸಲಾಗುವುದು.

ರಾಜಧಾನಿಯ ಸ್ಥಾನಾಂತರ

ಪಾಕಿಸ್ತಾನವು ತನ್ನ ರಾಜಧಾನಿಯನ್ನು ಕರಾಚಿಯಿಂದ ಪಟವಾರ ತಪ್ಪಲ ಪ್ರದೇಶಕ್ಕೆ ಒಯ್ಯುವುದಾಗಿ ನಿರ್ಧರಿಸಿದೆ. ರಾಜ್ಯಸರಕಾರ ಮತ್ತು ಕೇಂದ್ರ ಸರಕಾರವೆರಡರ ರಾಜಧಾನಿಯೂ ಒಂದೆಡೆಯಿರುವುದಕ್ಕಿಂತ ಬೇರೆ ಬೇರೆಡೆಯಲ್ಲಿರುವುದು ಯೋಗ್ಯವೆಂದದು ತಿಳಿದಿದೆ. ಸದ್ಯ ನೂತನ ರಾಜಧಾನಿಯಾಗಲಿರುವ ಪಟವಾರ ತಪ್ಪಲ ಪ್ರದೇಶವು ರಾವಲಪಿಂಡಿ ಮತ್ತು ಮುರ್ರೀಗಳ ನಡುವಿರುವುದು.

ಡಾ|| ಎಂ. ಸಿ. ಮೋದಿ

ಕರ್ನಾಟಕದ ಸುಪ್ರಸಿದ್ಧ ನೇತ್ರ ಚಿಕಿತ್ಸಕರಾದ ಡಾ|| ಎಂ. ಸಿ. ಮೋದಿಯವರು ನ್ಯೂಯಾರ್ಕದ ರೋಟರಿ ಅಂತಾರಾಷ್ಟ್ರೀಯ ಪರಿಷತ್ತಿನಲ್ಲಿ ಭಾಗವಹಿಸುತಿದ್ದು, ಅನಂತರ, ಅವರು ಅಮೆರಿಕಾ, ಯುರೋಪ, ರಶ್ಯಗಳಲ್ಲಿಯ ಸುಪ್ರಸಿದ್ಧ ನೇತ್ರ ಚಿಕಿತ್ಸಾಲಯಗಳನ್ನು ನೋಡಿಕೊಂಡು ಅಗಸ್ಟ ತಿಂಗಳಲ್ಲಿ ಮಾತೃಭೂಮಿಗೆ ಮರಳಲಿರುವರು.

ಅಲ್ಲಲ್ಲಿಯ ಸುದ್ದಿಸಾರ

ಬಡ ಮಕ್ಕಳಿಗೆ ಪುಸ್ತಕ ದಾನ–ಇದೇ ತಾ. 10ರಂದು ಮಂಗಳೂರು ಮೂರನೇ ಮಂಡಲ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರು ಪ್ರಥಮದಲ್ಲಿ ದೇಶಭಕ್ತ ಕಾರ್ನಾಡ್ ಸದಾಶಿವ ರಾವ್ ಮತ್ತು ಶ್ರೀ ಎನ್. ಎಸ್. ಕಿಲ್ಲೆಯವರುಗಳ ಭಾವ ಚಿತ್ರಗಳನ್ನು ಅನಾವರಣ ಗೈದರು. ಬಳಿಕ ಶ್ರೀಯುತರ ಅಧ್ಯಕ್ಷತೆಯಲ್ಲಿ 66 ಬಡ ಮಕ್ಕಳಿಗೆ ಪುಸ್ತಕಗಳನ್ನು ಹಂಚಲಾಯಿತು. ಅಧ್ಯಕ್ಷರು ಕಿಲ್ಲೆಯವರ ಮತ್ತು ಸದಾಶಿವರಾಯರ ಜೀವನದ ಹಾಗೂ ಅವರು ಕಾಂಗ್ರೆಸಿಗರಾಗಿ ದುಡಿದ ವಿಷಯದಲ್ಲಿ ಭಾಷಣವನ್ನಿತ್ತರು. ಆರಂಭದಲ್ಲಿ ಮಂಡಲದ ಅಧ್ಯಕ್ಷ ಪಿ. ಅಚ್ಯುತ ಪ್ರಭುಗಳು ಸ್ವಾಗತಿಸಿದರು. ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು.

ಪುಸ್ತಕ ಸಮರ್ಪಣಾ ಸಮಾರಂಭ—ಎಕೆಡೆಮಿ ಆಫ್ ಜನರಲ್ ಎಜುಕೇಶನಿಗೆ ಸುಮಾರು 9 ಟನ್ ಪುಸ್ತಕಗಳನ್ನು ಅಮೇರಿಕದ ಹೇರ್ರಿಪ್ಲಿಸನರು ಸಂಗ್ರಹಿಸಿ ಕಳುಹಿಸಿರುವರಷ್ಟೆ! ಅವು ಮಣಿಪಾಲಕ್ಕೆ ಬಂದಿದ್ದು ಅವನ್ನು ತಾ. 7ರಲ್ಲಿ ಮದರಾಸಿನಲ್ಲಿರುವ ಅಮೇರಿಕದ ವಿದೇಶಾಂಗ ಕಚೇರಿಯ ಅಧಿಕಾರಿ ಮಿ. ವಾಲ್ಟರ್ ಡೇವಿಡ್ಸನ್ ಕೆನ್ನಿ ಅವರು ಎಕೆಡೆಮಿಗೆ ಒಪ್ಪಿಸುವ ಸಮಾರಂಭವು ಜರಗಿತು. ಮಿ. ಕೆನ್ನಿಯವರು ಮಾತನಾಡುತ್ತಾ ಈ ಉತ್ತಮ ಪುಸ್ತಕಗಳ ಮೂಲಕ ಅಮೇರಿಕ ಮತ್ತು ಭಾರತದೊಳಗಿನ ಸದಭಿಪ್ರಾಯ ಹೆಚ್ಚಾಗಲೆಂದರು. ಡಾ। ಮಾಧವ ಪೈಗಳು ಪುಸ್ತಕಗಳನ್ನು ಸ್ವೀಕರಿಸಿ ಧನ್ಯವಾದಗಳನ್ನಿತ್ತು, ಸಹಕಾರೀ ಕ್ಷೇತ್ರದಲ್ಲಿ ಬೆಳೆದು ಬರುತ್ತಿರುವ ಇಲ್ಲಿಯ ವಿದ್ಯಾ ಸಂಸ್ಥೆಗಳ ಚಟುವಟಿಕೆಗಳಿಗೆ ಮನಸೋಲಿದು ಅತಿ ದೂರದ ವ್ಯಕ್ತಿಯೊಬ್ಬರು ಇಷ್ಟು ಗ್ರಂಥಗಳನ್ನು ಒಟ್ಟುಗೂಡಿಸಿ ದಾನ ಕೊಟ್ಟುದುದರಿಂದ ಉಂಟಾದ ಸದಭಿಪ್ರಾಯಗಳನ್ನು ವಿವರಿಸಿದರು.

ರೋಟರಿ ಕ್ಲಬ್ ಸಭೆ—ಉಡುಪಿ ರೋಟರಿ ಕ್ಲಬ್ಬಿನ ಸಭೆಯು ಇದೇ ತಾ. 9ರಲ್ಲಿ ಡಾ। ಸುಂದರರಾಮ್ ಪೈಗಳವರ ಅಧ್ಯಕ್ಷತೆಯಲ್ಲಿ ಮಣಿಪಾಲದಲ್ಲಿ ಜರಗಿದಾಗ ಡಾ। ಪಿ. ರಾಘವೇಂದ್ರ ನಾಯ್ಕರು ಔಷಧೋಪಚಾರದಲ್ಲಿ ಹಾಸ್ಯದ ಸ್ಥಾನದ ಕುರಿತು ಹಾಸ್ಯಪರ ಭಾಷಣ ಮಾಡಿದರು. ಅಧ್ಯಕ್ಷ ಭಾಷಣವಾದ ವೇಳೆ ಡಾ। ಕೆ. ಮೋಹನ್‌ದಾಸ್ ಪೈಗಳು ಧನ್ಯವಾದಗಳನ್ನಿತ್ತರು.

ಮಣಿಪಾಲಕ್ಕೆ ಜಯಪ್ರಕಾಶನಾರಾಯಣರ ಸಂದರ್ಶನ—ಮಂಗಳೂರಿಗೆ ಆಗಮಿಸಿದ್ದ ಶ್ರೀ ಜಯಪ್ರಕಾಶ್ ನಾರಾಯಣರು ತಾ. 10ನೇ ಬೆಳಿಗ್ಗೆ ಮಣಿಪಾಲಕ್ಕೂ ಭೇಟಿ ಇತ್ತರು. ಜೆ. ಪಿ. ದಂಪತಿಗಳನ್ನು ಶ್ರೀ ಪಿ. ರಮೇಶ್ ಪೈಗಳು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕೋಲೇಜುಗಳಿಗೆ ಕರೆದೊಯ್ದು ಅವುಗಳ ಜನ್ಮ ಮತ್ತು ಬೆಳವಣಿಗೆಗಳನ್ನು ವಿವರಿಸಿದರು. ಜೆ. ಪಿ. ಯವರು ಡಾ। ಮಾಧವ ಪೈಗಳ ಖಾಸಗೀ ಪ್ರಯತ್ನವನ್ನೂ ದೂರ ದೃಷ್ಟಿಯನ್ನೂ ಮೆಚ್ಚಿ ದೇಶದ ಇತರ ಕಡೆಗಳಿಗೂ ಇವು ಅನುಕರಣೀಯವೆಂದರು.

ನ್ಯಾಯ ಬೆಲೆಯ ಅಂಗಡಿ ತೆರೆಯುವಿಕೆ–ತಾ. 9-6-59ರಂದು ಮೈಸೂರು ಸರಕಾರದ ಆಹಾರ ಖಾತೆಯ ಡೈರೆಕ್ಟರ್ ಶ್ರೀ ಚಂದ್ರರುದ್ರಯ್ಯನವರು ಮತ್ತು ಅಸಿಸ್ಟಾಂಟ್ ಡೈರೆಕ್ಟರ್ ಶ್ರೀ ರಾಮರಾವ್ ಇವರುಗಳು ಮಂಗಳೂರು ಕದ್ರಿ ಬಂಗ್ಲೆಯಲ್ಲಿ ಮೊಕ್ಕಾಂ ಮಾಡಿದ್ದರು. ಆಗ ಅವರೊಡನೆ ಜಿಲ್ಲೆಯಲ್ಲಿ ಅಕ್ಕಿಯ ಬೆಲೆಯು ಏರುತ್ತಿರುವುದರಿಂದ ನ್ಯಾಯ ಬೆಲೆಯ ಅಂಗಡಿಗಳನ್ನು ಕೂಡಲೇ ತೆರೆಯುವಂತೆ ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ, ಮೂರನೇ ಮಂಡಲ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಪಿ. ಅಚ್ಯುತ ಪ್ರಭು ಜಿಲ್ಲಾ ಬೋರ್ಡ್ ಸದಸ್ಯ ಶ್ರೀ ಎ. ನಾರಾಯಣ ಹೆಗ್ಡೆ ಮೊದಲಾದವರೂ ನೂತನ ಜಿಲ್ಲಾಧಿಕಾರಿ ಶ್ರೀ ಸಿ. ಜೆ. ಪದ್ಮನಾಭನವರೂ ಕೇಳಿಕೊಂಡರು. ಜಿಲ್ಲೆಯಾದ್ಯಂತ 50 ನ್ಯಾಯ ಬೆಲೆಯ ಅಂಗಡಿಯನ್ನು ಈ ಕೆಳಗಿನ ಸ್ಥಳಗಳಲ್ಲಿ ಬರುವ ವಾರದೊಳಗೆ ತೆರೆಯುವಂತೆ ಆಶ್ವಾಸನೆ ಕೊಟ್ಟಿರುವರು. ಮಂಗಳೂರು 10, ಉಡುಪಿ 5, ಪುತ್ತೂರು 2, ಬಂಟ್ವಾಳ 1, ಸುರತ್ಕಲ್ 1, ಪಣಂಬೂರು 1. ಇಷ್ಟನ್ನು ಕೂಡಲೇ ತೆರೆಯುವುದಾಗಿ ತಿಳಿಸಿದರು.

ಸ್ವಾಗತ ಸತ್ಕಾರ—ಇದೇ ತಾ. 9ರಲ್ಲಿ ಜರ್ಮನಿಯಿಂದ ತರಬೇತುಹೊಂದಿ ಹಿಂದಿರುಗಿಬಂದ ಸಿಂಡಿಕೇಟ್ ಬೇಂಕಿನ ಡಿವಿಜನಲ್ ಮೆನೇಜರ್ ಶ್ರೀ ಎಚ್. ವಿ. ಕಾಮತರನ್ನು ಸ್ವಾಗತಿಸುವ ಸಮಾರಂಭವು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಅದೇ ಸಂಧರ್ಭದಲ್ಲಿ ಹೈದರಾಬಾದಿನ ಎಡ್ಮಿನಿಸ್ಟ್ರೇಟಿವ್ ಸ್ಟಾಫ್ ಟ್ರೈನಿಂಗ್ ಕಾಲೇಜಿಗೆ ತರಬೇತಿಗಾಗಿ ತೆರಳಲಿರುವ ಮುಖ್ಯ ಎಕೌಂಟೆಂಟ್ ಶ್ರೀ ಎಚ್. ಎನ್. ಪೈಗಳಿಗೆ ವಿದಾಯ ನೀಡಲಾಯಿತು. ಶ್ರೀ ಟಿ. ಎ. ಪೈಗಳು ಸಂಧರ್ಭೋಚಿತವಾಗಿ ಮಾತನಾಡುತ್ತಾ ಬೇಂಕಿಂಗ್ ವ್ಯವಹಾರ ಕ್ಷೇತ್ರದಲ್ಲಿ ಈಗ ಉಂಟಾಗಿರುವ ಕ್ಷಿಪ್ರ ಬದಲಾವಣೆಗನುಗುಣವಾಗಿ ಉತ್ತಮ ಸೇವೆ ಸಲ್ಲಿಸಬೇಕಾದರೆ ಬೇಂಕಿನ ಸಿಬಂದಿಯವರೂ ತಮ್ಮ ಯೋಗ್ಯತೆಯನ್ನು ಬೆಳಸಿಕೊಳ್ಳುವುದು ಅಗತ್ಯವೆಂದರು. ಶ್ರೀ ಎಚ್. ಎನ್. ರಾಯರೂ, ಶ್ರೀ ಎ. ಕೃಷ್ಣರಾಯರೂ ಮುಖ್ಯ ಅತಿಥಿಗಳ ಗುಣವೈಶಿಷ್ಟ್ಯಗಳನ್ನು ಶ್ಲಾಘಿಸಿ ಮಾತನಾಡಿದರು. ಮುಖ್ಯ ಅತಿಥಿಗಳು ಉತ್ತರವಿತ್ತು ತಮಗಿತ್ತ ಸತ್ಕಾರಕ್ಕಾಗಿ ಪ್ರತ್ಯಪ್ರತ್ಯೇಕವಾಗಿ ಉಪಕಾರ ಸ್ಮರಣೆ ಮಾಡಿದರು. ಸಿಂಡಿಕೇಟಿನ ಮೆನೇಜಿಂಗ್ ಡೈರೆಕ್ಟರ್ ಡಾ। ಮಾಧವ ಪೈಗಳು ತರಬೇತಿಯು ಮಾನವನ ಸಂಪೂರ್ಣ ವ್ಯಕ್ತಿತ್ವಕ್ಕೆ ಕಾರಣವಾಗುವುದೆಂದು ಅತಿಥಿಗಳನ್ನು ಆಶೀರ್ವದಿಸಿದರು. ಡೆಪ್ಯುಟಿ ಜನರಲ್ ಮೆನೇಜರ್ ಶ್ರೀ ಕೆ. ಕೆ. ಪೈಗಳವರು ಆಭಾರ ಸೂಚಿಸಿದರು.

ಯಕ್ಷಗಾನ ಬಯಲಾಟ – ತಾ. 12—5—1959ರ ರಾತ್ರೆ ಮಂಗಳೂರು ರಾಮಕೃಷ್ಣ ವಿದ್ಯಾರ್ಥಿ ಭವನದ ವಠಾರದಲ್ಲಿ ಬಂಟರ ಯಾನೆ ನಾಡವರ ಸಂಘದ ಸುವರ್ಣೋತ್ಸವದ ಕಾರ್ಯಕ್ರಮದ ಅಂಗವಾಗಿ ಕುಂದಾಪುರ ಯಕ್ಷಗಾನ ಕಲಾವರ್ಧಕ ಸಂಘದವರು ಪ್ರದರ್ಶಿಸಿದ 'ವೀರಮಣಿ ಕಾಳಗ' ವೆಂಬ ಯಕ್ಷಗಾನ ಬಯಲಾಟವು ತುಂಬಾ ಪ್ರೇಕ್ಷಣೀಯವಾಗಿತ್ತು. ವಕೀಲರು, ಅಧ್ಯಾಪಕರು ಮೊದಲಾದ ವಿದ್ಯಾವಂತ ತರಬೇತಿ ಕಲಾವಿದರು ಕುಶಲ ಕಲಾವಿದರ ಮಟ್ಟಕ್ಕೆ ಕಡಿಮೆಯಾಗದಂತೆ ಬಯಲಾಟ ಪ್ರದರ್ಶನವಿತ್ತಿದ್ದರು. ಜಾನಪದ ಕಲೆಯಾದ ಯಕ್ಷಗಾನದಲ್ಲಿ ದೃಶ್ಯಾಂಗವಾದ ಈ ಬಯಲಾಟದಲ್ಲಿ ಇಲ್ಲಿಯ ವರೆಗೆ ಜನಸಾಮಾನ್ಯರೇ ದುಡಿಯುತ್ತಿದ್ದು, ಈಗ ವಿದ್ಯಾವಂತರು ಸಹ ಈ ಅಂಗದಲ್ಲಿ ದುಡಿಯುತ್ತಿರುವುದರಿಂದ ಯಕ್ಷಗಾನ ಕಲೆಯ ಪ್ರಸಾರಕ್ಕೆ ಯೋಗ್ಯ ರಂಗ ತೆರವಾದಂತಾಗಿದೆ. ವಿದ್ಯಾವಂತರು ಜನಸಾಮಾನ್ಯರ (ಜಾನಪದ) ಕಲೆಯಾದ ಯಕ್ಷಗಾನದಲ್ಲಿ ಭಾಗವಹಿಸುವುದು ತಮ್ಮ ಪ್ರತಿಷ್ಠೆಗೆ ಕುಂದು ಎಂಬ ಜಾಡಜಂಭದ ಅಭಿಪ್ರಾಯಕ್ಕೆ ಬಲಿಬಿದ್ದವರಿಗೆ ಕುಂದಾಪುರದ ಪದವೀಧರ ವಿದ್ಯಾವಂತರು ಯೋಗ್ಯ ಮಾರ್ಗದರ್ಶನವನ್ನಿತ್ತಿದ್ದಾರೆ.

ಮೇಲಿನ ಸಂಘದವರು ಪ್ರದರ್ಶಿಸಿದ ವೀರಮಣಿ ಕಾಳಗದಲ್ಲಿಯ ಎಲ್ಲಾ ಪಾತ್ರಗಳು ಉತ್ತಮವಾಗಿದ್ದುವು. ವೈ. ಚಂದ್ರಶೇಖರ ಸೆಟ್ಟಿ, ವಿದ್ಯಾರ್ಥಿ, ಇವರ ತಾರಾವಳಿ ಪಾತ್ರ ಮತ್ತು ಎಮ್. ಎಮ್. ಹೆಗ್ಡೆ, ಎಡ್ವಕೇಟ್, ಕುಂದಾಪುರ ಇವರ ಪುಷ್ಕಳನ ಪಾತ್ರ ಎತ್ತಿ ಹೇಳುವಂತವುಗಳಾಗಿವೆ. ಹಾಡುಗಾರಿಕೆ ಸುಶ್ರಾವ್ಯವಾಗಿ ಉತ್ತಮ ಮಟ್ಟದಲ್ಲಿತ್ತು. ಯಕ್ಷಗಾನ ಕಲಾ ಸರಸ್ವತಿಯು ಈ ತರಬೇತಿ ಕಲಾವಿದರಿಗೆ ತನ್ನ ವರದ ಹಸ್ತದಿಂದ ಹರಸಲೆಂದು "ಬಿ ಕೆ. ಹೆ." ಇವರು ಹಾರೈಸುತ್ತಾರೆ.

ವಿವಾಹ ಸಮಾರಂಭ—ಶ್ರೀ ಎಂ. ದೇಜಪ್ಪ ಶೆಟ್ಟರ ಪುತ್ರಿ ಸೌ। ಸರೋಜಿನಿಯನ್ನು ಶ್ರೀ ಮುದ್ದಣ್ಣ ಶೆಟ್ಟಿ ಉಡುಪಿ ಕರ್ ಇವರ ಪುತ್ರ ಶ್ರೀ ಸದಾಶಿವ ಶೆಟ್ಟಿ ಉಡುಪಿ ಕರ್ ಇವರೂ ಶ್ರೀ ಮುದ್ದಣ್ಣ ಶೆಟ್ಟಿ ಉಡುಪಿಕರ್ ಇವರ ಪುತ್ರಿ ಸೌ। ಪ್ರಮೀಳಳನ್ನು ಶ್ರೀ ಕೆ. ರಾಮಚಂದ್ರ ಶೆಟ್ರ ಪುತ್ರ ಶ್ರೀ ಭುಜಂಗ ಶೆಟ್ಟರೂ ತಾ 31—5—59ರಲ್ಲಿ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದರು.

ಕಾರ್ಕಳ— ಸ್ಥಳೀಯ ಸರ್ಕಾರಿ ಆಸ್ಪತ್ರೆಯ ಮುಖ್ಯ ಡಾಕ್ಟರರಾಗಿದ್ದು ಆಸ್ಪತ್ರೆಯ ಇತ್ತೀಚೆಗಿನ ಅಭಿವೃದ್ಧಿಗೆ ಕಾರಣರಾದ ಡಾ। ಎಮ್. ಎಸ್. ಶೆಟ್ಟರು ಮಂಗಳೂರು ಹೆಡ್ ಕ್ವಾರ್ಟರ್ಸ್ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿರುವರು. ಇವರ ಸ್ಥಾನಕ್ಕೆ ಪುತ್ತೂರಿನ ಡಾ। ವೈ. ಎನ್. ಶೆಟ್ಟರು ವರ್ಗವಾಗಿ ಬಂದಿರುವರು. ತಾ. 11ರಂದು ಆಸ್ಪತ್ರೆ ನೌಕರ ಸಂಘದ ಕಡೆಯಿಂದ ಇವರನ್ನು ಸತ್ಕರಿಸಲು ಸಮಾರಂಭವನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಹಲವರು ಡಾಕ್ಟರರ ಗುಣಕಥನ ಮಾಡಿದರು.

ತಾ. 14ರಂದು ಡಾ। ಎಂ. ಎಸ್ ಶೆಟ್ಟರಿಗೆ ಪ್ರಿನ್ಸಿಪಲ್ ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ಲಕ್ಷ್ಮಣ ಸಾಲಿಯಾನರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ವಿದಾಯ ಸಮಾರಂಭವು ನಡೆಯಿತು. ಹಲವರು ಡಾ। ಶೆಟ್ಟರು ಆಸ್ಪತ್ರೆಯ ಅಭಿವೃದ್ಧಿಗಾಗಿ ಮಾಡಿದ ಸಫಲ ಪ್ರಯತ್ನಗಳನ್ನು ಶ್ಲಾಘಿಸಿ ಅವರ ಜನಪ್ರಿಯತೆಯನ್ನು ಕೊಂಡಾಡಿದರು ಮತ್ತು ಅವರ ಸ್ಥಾನಕ್ಕೆ ಬಂದ ಡಾ। ವೈ. ಎನ್. ಶೆಟ್ಟರಿಗೆ ಹೃತ್ಪೂರ್ವಕ ಸ್ವಾಗತ ಕೋರಿದರು ಡಾ. ಎಮ್. ಎಸ್. ಶೆಟ್ಟರು ಇಲ್ಲಿಯ ಆಸ್ಪತ್ರೆಗೆ ಇನ್ನೂ ಅಗತ್ಯ ಕೆಲಸಗಳೇನೆಂಬುದನ್ನು ಸೂಚಿಸಿ ಕೃತಜ್ಞತೆಯನ್ನರ್ಪಿಸಿದರು. ಅಧ್ಯಕ್ಷರ ಭಾಷಣವಾದ ಮೇಲೆ ಶ್ರೀ ಕೆ. ಪಿ. ಮುಕುಂದ ಪ್ರಭುಗಳು ಧನ್ಯವಾದಗಳನ್ನಿತ್ತರು.

ಕಾರಂತರ ವಿಜ್ಞಾನ ಪ್ರಪಂಚಕ್ಕೆ ಪ್ರೋತ್ಸಾಹ— ಶ್ರೀ ಶಿವರಾಮ ಕಾರಂತರು ಇತ್ತೀಚೆಗೆ ಪ್ರಕಟಿಸಿರುವ ವಿಜ್ಞಾನ ಪ್ರಪಂಚ ಎಂಬ ವಸ್ತು ಕೋಶಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಅಂಕೋಲದ ಕೆನರಾ ವೆಲ್‌ಫೇರ್ ಟ್ರಸ್ಟಿನವರು ಆದರ ಒಂದೊಂದು ಪ್ರತಿಯನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಪ್ರತಿಯೊಂದು ಹೈಸ್ಕೂಲಿಗೂ ಉಚಿತವಾಗಿ ಹಂಚಲಿರುವರು ಎಂದು ತಿಳಿದು ಬರುತ್ತದೆ. ಈ ಜಿಲ್ಲೆಯಲ್ಲಿ ಸುಮಾರು 35 ಹೈಸ್ಕೂಲುಗಳು ಇರುತ್ತವೆ.

ಮೋಟಾರು ಕೆಲಸಗಾರರ ವಾರ್ಷಿಕ ಮಹಾ ಸಭೆ—ದ. ಕ. ಜಿಲ್ಲಾ ಆಟೋಮೋಬೈಲ್ ಮತ್ತು ಎಂಜಿನಿಯರಿಂಗ್ ಕೆಲಸಗಾರರ ಸಂಘದ ವಾರ್ಷಿಕ ಮಹಾ ಸಭೆಯು ತಾ 14-6-59ರಂದು ಶ್ರೀ ಎ. ಶಾಂತಾರಾಮ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ, ಶ್ರೀ ಡೇವಿಡ್ ಕರ್ಕಡರು ಒಪ್ಪಿಸಿದ ಗತ ವರ್ಷದ ವರದಿ ಮಂಜೂರಾಯಿತು.

ಮೋಟಾರು ಕೆಲಸಗಾರರ ಪ್ರಾಮುಖ್ಯವಾದ ಕೇಳಿಕೆಯ ಕುರಿತೂ ಟ್ರಾನ್ಸ್ ಪೋರ್ಟ್ ಅಧಿಕಾರಿಗಳಿಂದ ಆಗುತ್ತಿರುವ ಅನಾವಶ್ಯಕ ತೊಂದರೆಗಳನ್ನು ನಿಲ್ಲಿಸುವಂತೆ ಸರಕಾರ ಕ್ರಮತೆಗೆದುಕೊಳ್ಳಬೇಕನ್ನುವ, ಸೇರಿಗೆ 0-7-0 ದರದಲ್ಲಿ ಒಳ್ಳೇ ಅಕ್ಕಿಯನ್ನು ರಿಲೀಫ್ ಸ್ಟೋರುಗಳ ಮೂಲಕ ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಒದಗಿಸಬೇಕೆನ್ನುವ ಸರಕಾರೀ ಆಸ್ಪತ್ರೆಗೆ ಔಷಧಗಳ ಸರಬರಾಜು ಮಾಡಿ ಅವು ಧರ್ಮಾರ್ಥ ಸಿಗುವಂತೆ ಕೂಡಲೇ ಗಮನವೀಯಬೇಕಾಗಿ ಸರಕಾರದ ಆರೋಗ್ಯ ಇಲಾಖೆಯನ್ನು ಕೇಳಿಕೊಳ್ಳುವ ಇತ್ಯಾದಿ ನಿರ್ಣಯಗಳು ಮಂಜೂರಾದುವು.

ಶ್ರೀ ಕಿದಿಯೂರು ಲಕ್ಷ್ಮೀನಾರಾಯಣ ರಾಯರ ನಿಧನ—ಉಡುಪಿಯ ಪ್ರಮುಖ ವಕೀಲರುಗಳಲ್ಲೊಬ್ಬರೂ ಉಡುಪಿ ಸಂಸ್ಕೃತ ಕಾಲೇಜು ಆಡಳಿತ ಮಂಡಳಿಯ ಮಾಜಿ ಅಧ್ಯಕ್ಷರೂ ಆಗಿದ್ದ ಶ್ರೀ ಕಿದಿಯೂರು ಲಕ್ಷ್ಮೀನಾರಾಯಣರಾಯರು ಇದೇ ತಾ14ರಂದು ದಿವಂಗತರಾದರು. ಇವರು ಬಹುದಿನಗಳಿಂದ ಅನಾರೋಗ್ಯದಿಂದಿದ್ದರೆಂದು ತಿಳಿದುಬರುತ್ತದೆ. ಇವರ ನಿಧನದ ಬಗ್ಗೆ ಸಂಸ್ಕೃತ ಕಾಲೇಜಿನಲ್ಲಿ ತಾ. 15ರಲ್ಲಿ ಸಭೆ ಜರಗಿ ಸಂತಾಪ ಸೂಚಿಸಲಾಯಿತು.

ಬೈಂದೂರು-ಫ್ರೆಂಡ್ಸ್ ಯೂನಿಯನ್ನ ಆಶ್ರಯದಲ್ಲಿ ತಾ 1—6—1959ರಂದು ಒಂದು ಕಮರ್ಶಿಯಲ್ ಇನ್ಸ್ಟಿಟ್ಯೂಟ್ ತೆರೆಯಲ್ಪಟ್ಟಿದೆ. ಈ ಕ್ಷೇತ್ರದಲ್ಲಿರುವ ವಿದ್ಯಾವಂತ ನಿರುದ್ಯೋಗಿಗಳಿಗೆ, ಉದ್ಯೋಗಸ್ಥರಿಗೆ, ಕಮರ್ಶಿಯಲ್ ಶಿಕ್ಷಣ ಒದಗಿಸುವುದೇ ಇದರ ಉದ್ದೇಶವಾಗಿದೆ.

ಅಂಕೋಲದಲ್ಲಿ ಮೈಸೂರು ಮಂತ್ರಿಗಳು—ಕಂದಾಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪ, ಹಾಗೂ ಹಣಕಾಸಿನ ಉಪಮಂತ್ರಿ ಶ್ರೀ ಜೆ. ಎಚ್. ಶಮಸುದ್ದೀನ್ ಅವರು ಹಾವೇರಿ, ಶಿರ್ಶಿ, ಯಲ್ಲಾಪುರ, ಕಾರವಾರ ಮೊದಲಾದ ಸ್ಥಳಗಳಿಗೆ ಭೇಟಿಕೊಟ್ಟು ತಾ. 12ರಂದು ಅಂಕೋಲಕ್ಕೆ ಸಂದರ್ಶನವಿತ್ತರು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. 66/59.

ಕಂಮಣ್ಣಯಾನೆ ವೆಂಕಟ್ರಮಣ ಭಟ್ಟ-ವಾದಿ.

ಮತ್ತು

ಚಿಕ್ಕ ಸೆಡ್ತಿ ಕೂಡಾ 33ಜನರು-ಪ್ರತಿವಾದಿರು

ಇವರೊಳಗೆ

ಸದ್ರಿ ದಾವೆಯ ಪ್ರತಿವಾದಿರು2. ರಾಮಣ್ಣ ಸೆಟ್ಟಿ-ಮೂಣ್ಯಪ್ಪ ಸೆಡ್ತಿ ಮಗ. 5. ಮುದ್ದು ಸೆಟ್ಟಿ-ಬಾಗಿ ಸೆಡ್ತಿರ ಮಗ. 7. ಸಂಕಿ ಸೆಡ್ತಿ, 8. ಅಣ್ಣಯ್ಯ ಸೆಟ್ಟಿ. 9. ಗಿರಿಜ ಸೆಡ್ತಿ, 11. ಕಮಲ ಸೆಡ್ತಿ ನಂದು ಸೆಡ್ತಿರ ಮಕ್ಕಳು. 10. ಕೊರಗ ಸೆಟ್ಟಿ-ಚಿಕ್ಕಸೆಡ್ತಿ ಮಗ 12. ಗೋಂದು ಸೆಟ್ಟಿ. 13. ಭೋಜ ಸೆಟ್ಟಿ-ಸೀತು ಸೆಡ್ತಿ ಮಗಂದಿರು. 20. ಎಚ್ಚು ಸೆಡ್ತಿ. 21. ವಿಠಲಸೆಟ್ಟಿ. 22. ಜಲಜ ಸೆಡ್ತಿ. 23. ಸಂಜೀವ ಸೆಟ್ಟಿ. ಮತ್ತು 34 ರಾಜುಸೆಟ್ಟಿ-ಸಂಕಿ ಸೆಡ್ತಿರ ಮಕ್ಕಳು. ಉಡ್ಪಿ ತಾಲ್ಲೂಕು ಕೊರಂಗ್ರಪಾಡಿ ಗ್ರಾಮದ ಕೆಮ್ತೂರಲ್ಲಿರುವವರು. ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:–

ತಾ.1.5.1943ರಲ್ಲು ವಾದಿಗೆ ಪ್ರತಿವಾದಿರು ವಗೈರೆರು ರೂ500/-ಕ್ಕೆ ಬಕ್ಸಿ ಕೊಟ್ಟ ಈಡು ದಸ್ತಾವೇಜಿನ ಅಸಲು ಐವೇಜು ಮತ್ತು ಬಡ್ಡಿ ವಗೈರೆಗೆ ವಾದಿರು ದಾಖಲ್ಲು ಮಾಡಿದ ಮೇಲಿನ ದಾವೆಯು ತಾ7-7-59ಕ್ಕೆ ಎಂದು ವ್ಯಾಜ್ಯದ ಸಂಮನ್ಸ್ ಬಗ್ಗೆ ಯಿಟ್ಟಿರುವುದರಿಂದ ಸದ್ರಿ ದಾವೆಯಲ್ಲಿ ನಿಮ್ಮ ಕಡೆಯಿಂದ ಉದಾಹರಿಸುವುದಿದ್ದರೆ ಸದ್ರಿ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಎಕ್ಸ್ ಪಾರ್ಟಿ ಮಾಡಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು.

P. R. Shenoy,
Advocate for Plaintiff.

ಉಡ್ಪಿ, ತಾ8-6-59.

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. No. 26/59.

1. Mrs ಕಲಾವತಿ-V. ತಿಮ್ಮಯ್ಯ ಶೆಟ್ರ ವಿಧವೆ. 2. ಸುನಿಲ್ ಕುಮಾರ್, 3. ಬೇಬಿ—1ನೇ ಅರ್ಜಿದಾರಳ ಮ್ಯಾನರ ಮಕ್ಕಳು. ತಾ ಸರಗೋಡು ತಾಲ್ಕು ಎನಮಕಜೆ ಗ್ರಾಮ. 4. ಅಕ್ಕಯ್ಯ ಹೆಗ್ಗಡ್ತಿ B. ಶ್ಯಾಮ ರಾಯ ಶೆಟ್ರ ಹೆಂಡ್ತಿ—ಶಿವಳ್ಳಿ ಗ್ರಾಮದ ಮಣಿಪಾಲದಲ್ಲಿರುವವಳು. —ಅರ್ಜಿದಾರರು.

ಯೆದ್ರಿರು—ಇಲ್ಲಾ.

1ನೇ ಅರ್ಜಿದಾರಳ ಗಂಡ-2-3ನೇ ಅರ್ಜಿದಾರರ ತಂದೆ ಮತ್ತು 4ನೇ ಅರ್ಜಿದಾರಳ ಮಗ ಹಾಲಿ ಮೃತ್ತಪಟ್ಟಿರುವ V. ತಿಮ್ಮ ಶೆಟ್ರೀಗೆ ಲೈಫ್ ಇನ್‌ಶ್ಯೂರೆನ್ಸ್ ಕೋರ್ಪರೇಶನ್ ಲಿಮಿಟೆಡ್—ಯೂನಿಟ್ ಉಡ್ಪಿ ಇದರಿಂದ ನಂಬ್ರ 21943ನೇ ಪೋಲಿಸಿಯ ಬಾಬ್ತು ಬರತಕ್ಕ ರೂ. 3055 - 50ನ್ನು ಪಡೆಯುವರೇ ಎಲ್ಲಾ ಅರ್ಜಿದಾರರ ಬಗ್ಗೆ 1ನೇ ಆರ್ಜಿದಾರಳ ಹೆಸರಲ್ಲಿ ಸಕ್ಸೇಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯು ತಾ. 4-7-59ಕ್ಕೆ ತನ್ನಿಗೆ ಇಟ್ಟಿರುವುದರಿಂದ ಆಕ್ಷೇಪ ಹೇಳತಕ್ಕವರು ಇನ್ರೆ ಸದ್ರಿ ದಿವಸ ಹಗಲು 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಜ್ಯಾಹೀರುಪಡಿಸದಿದ್ದಲ್ಲಿ ಅವರ ಗೈರು ಹಾಜ್ರಿಯಲ್ಲಿ ಸದ್ರಿ ಅರ್ಜಿ ಫಡಿಚಾ ಮಾಡಲಾಗುತ್ತದೆ ಎಂಬ ಸಂಗ್ತಿ ಈ ಮೂಲಕ ಯಾವತ್ತು ಜನರೀಗೆ ತಿಳಿಸೋಣಾಗುತ್ತದೆ

B. Jagannatha Hegde,
Advocate for Petitioners.
Udipi, 9—6—1959.

ಸಫಲ ಜೀವನ

(೫ನೇ ಪುಟದಿಂದ)

ಪದವಿ ಪಡೆದರು. ಆರು ತಿಂಗಳ ತನಕ ಯುರೋಪದಲ್ಲಿ ಪ್ರವಾಸಗೈದು, ಅನಂತರ ಸ್ವದೇಶಕ್ಕೆ ಹಿಂತಿರುಗಿ ಬಂದರು.

ಸ್ವದೇಶಕ್ಕೆ ಮರಳಿದ ಬಳಿಕ ಪ್ರಫುಲ್ಲ ಚಂದ್ರ ರೋಯರಿಗೆ ತಮ್ಮ ರಾಸಾಯನಿಕ ಪ್ರಯೋಗಗಳನ್ನು ಮತ್ತೂ ಮುಂದುವರಿಸುವ ಇಚ್ಛೆಯುಂಟಾಯಿತು. ಅದಕ್ಕೋಸುಗವಾಗಿಯೇ ಅವರು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಅತಿ ಕಡಿಮೆ ವೇತನ ಪಡೆದು ಸಹಾಯಕ ಅಧ್ಯಾಪಕರ ಕೆಲಸವನ್ನು ಸ್ವೀಕರಿಸಿದರು. ತಮ್ಮ ಇಚ್ಛೆಯಂತೆಯೇ ಅವರು ೧೮೯೬ರಲ್ಲಿ ಪ್ರಯೋಗಶಾಲೆಯಲ್ಲಿ ಪಾದರಸದ ಒಂದು ಮಹತ್ವಪೂರ್ಣ ಯೌಗಿಕ (Mercurous nitrite) ವನ್ನು ಕಂಡುಹಿಡಿದರು. ಈ ಹೊಸ ಸಂಶೋಧನೆಯ ಪರಿಣಾಮವಾಗಿ ಆಚಾರ್ಯ ಪ್ರಫುಲ್ಲಚಂದ್ರರ ಹೆಸರು ತುಂಬಾ ಪ್ರಸಿದ್ಧವಾಯಿತು. ಶೀಘ್ರದಲ್ಲಿಯೇ ಅವರು ಮತ್ತೂ ಕೆಲವು ಯೌಗಿಕಗಳನ್ನು ಸಂಶೋಧಿಸಿದರು.

ಕಾಲೇಜಿನಲ್ಲಿ ಆಚಾರ್ಯ ರೋಯರು ವಿದ್ಯಾರ್ಥಿಗಳಿಗೆ ರುಚಿಸುವ ರೀತಿಯಲ್ಲಿ ಕಲಿಸುತ್ತಿದ್ದರು; ಕೆಲವು ವೈಜ್ಞಾನಿಕ ಸಮಸ್ಯೆಗಳನ್ನು ಬಹಳ ಸರಳರೀತಿಯಲ್ಲಿ ಬಿಡಿಸಿ ತಿಳಿಸುತ್ತಿದ್ದರು. ಎಡೆಬಿಡದೆ ೩೦ ವರ್ಷಗಳ ತನಕ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಶಿಕ್ಷಕರ ಕೆಲಸಗೈದು ಅವರು ಪೆನ್ಶನ್ ಪಡೆದರು.

ಆಚಾರ್ಯ ರೋಯರು ಕಾಲೇಜಿನಲ್ಲಿ ಕೆಲಸ ಪಡೆದ ಕೆಲವು ವರುಷಗಳ ಅನಂತರ ವೇತನವಿಲ್ಲದೇ ದುಡಿಯತೊಡಗಿದರು. ಆದರೆ ವಿಶ್ವವಿದ್ಯಾಲಯವು ಅವರ ವೇತನವನ್ನು ಶೇಖರಿಸಿಟ್ಟಿತು. ಹೀಗೆ ಈ ಹಣವು ಎರಡೂವರೆ ಲಕ್ಷದ ತನಕ ಮುಟ್ಟಿತು. ಆಚಾರ್ಯರು ಈ ಸಂಪೂರ್ಣ ಮೊತ್ತವನ್ನು ರಸಾಯನ ಶಾಸ್ತ್ರದಲ್ಲಿ ಸಂಶೋಧನೆ ನಡೆಸುವ ವಿದ್ಯಾರ್ಥಿಗಳಿಗೆ 'ವಿದ್ಯಾರ್ಥಿವೇತನ'ದ ರೂಪದಲ್ಲಿ ಕೊಡಿಸಿದರು.

ರಾಸಾಯನಿಕ ದ್ರವ್ಯದ ಬಗ್ಗೆ ಭಾರತದ ಲಕ್ಷಗಟ್ಟಲೆ ಹಣ ವಿದೇಶಕ್ಕೆ ಹೋಗುತ್ತಿರುವುದನ್ನು ನೋಡಿದ ದೇಶಭಕ್ತ ರೋಯರಿಗೆ ತುಂಬಾ ದುಃಖವಾಯಿತು. ಆದ್ದರಿಂದ ಅವರು 'ಬೆಂಗಾಲ್ ಕೆಮಿಕಲ್ ವರ್ಕ್ಸ್' ಸಂಸ್ಥೆಯ ಸ್ಥಾಪನೆಗೈದರು. ಇಲ್ಲಿ ಹಲವು ಮಹತ್ವದ ರಾಸಾಯನಿಕ ವಸ್ತು ತಯಾರಾಗುತ್ತಿದೆ. ಈ ಸಂಸ್ಥೆಯು ಇಂದು ಏಶ್ಯಾದಲ್ಲಿಯೇ ಬಹು ದೊಡ್ಡ ರಾಸಾಯನಿಕ ದ್ರವ್ಯ ತಯಾರಿಯ ಸಂಸ್ಥೆಯೆನಿಸಿದೆ. ಈ ಸಂಸ್ಥೆಯು ಸಂಪತ್ತು ಎಂದು ಬೆಳೆಯಿತೋ, ಅಂದೇ ಅದನ್ನು ರಾಷ್ಟ್ರಕ್ಕೆ ಒಪ್ಪಿಸಿದರು. ಪ್ರಫುಲ್ಲ ಚಂದ್ರರ ಮಹತ್ವಪೂರ್ಣ ಕಾರ್ಯಗಳಲ್ಲಿ 'ಇಂಡಿಯನ್ ಸ್ಕೂಲ್ ಆಫ್ ಕೆಮಿಸ್ಟ್ರಿ' ಮತ್ತು 'ಇಂಡಿಯನ್ ಕೆಮಿಕಲ್ ಸೊಸೈಟಿ'—ಈ ಎರಡರ ಸ್ಥಾಪನೆಯೂ ಸೇರಿವೆ.

ಆಚಾರ್ಯರು ವೈಜ್ಞಾನಿಕರಲ್ಲದೇ ದೊಡ್ಡ ದೇಶಭಕ್ತರೂ ಆಗಿದ್ದರು. ಮಹಾತ್ಮ ಗಾಂಧೀಜಿಯವರ ಉಪದೇಶದ ಮೇರೆಗೆ ಖಾದಿವ್ರತ ಕೈಕೊಂಡದ್ದಲ್ಲದೇ ತಾವು ಯಾವಾಗಲೂ ಖಾದಿ ಬಟ್ಟೆಯನ್ನೇ ಧರಿಸುತ್ತಿದ್ದರು. ಮತ್ತು ಪ್ರತಿದಿನ ಚರಕದಿಂದ ನೂಲುತ್ತಿದ್ದರು. ನೆರೆ ಮತ್ತು ಬರಗಾಲದ ಸಮಯದಲ್ಲಿ ಅವರು ಮನೆಮನೆ ತಿರುಗಿ 'ಚಂದಾ' ಒಟ್ಟುಗೂಡಿಸುತ್ತಿದ್ದರು. ಒಮ್ಮೆ ಅವರು ಹೀಗೆ ಸಹಾಯ ಬೇಡಲು ಹೋದಾಗ ಒಬ್ಬ ಮನೆ ಕಾಯುವವನು ಭಿಕಾರಿಯೆಂದು ತಿಳಿದು ಹೊರದಬ್ಬಿದ್ದನಂತೆ.

ಆಚಾರ್ಯ ಪ್ರಫುಲ್ಲ ಚಂದ್ರ ರೋಯರು ತಮ್ಮ ಸಂಪೂರ್ಣ ಜೀವನವನ್ನು ಬ್ರಹ್ಮಚಾರಿಯಾಗಿದ್ದುಕೊಂಡೇ ಕಳೆದಿದ್ದರು. ಅವರ ಜೀವನವು ತ್ಯಾಗ, ತಪಸ್ಸು, ಮತ್ತು ಉದಾರತೆಯಿಂದ ತುಂಬಿತ್ತು. ಅವರು ೮೨ ವರ್ಷಗಳ ಸಫಲ ಜೀವನವನ್ನು ಬಾಳಿ ೧೯೪೪ನೇ ಜೂನ್ ೧೬ರಂದು ಅವರು ಮೃತ್ಯುವಶರಾದರು.

(ಹಿಂದಿಯಿಂದ)

"ಜನ್ನ", ಮರವಂತೆ.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 72/1959.

B. ಚಂದಪ್ಪಯಿಂದ್ರ—ವಾದಿ.

ಮತ್ತು

ಶಿವದೇವಿ ಸಹಾ—ಪ್ರತಿವಾದಿರು.

ಯಿವರೊಳಗೆ

ಸದ್ರಿ ದಾವೆಯ ೫ನೇ ಪ್ರತಿವಾದಿಳು:-ಶ್ರೀಮತಿ ಮೆಸ್ಸಿಲೋಬೊ ಬ್ರ್ಯಾ. ಫ್ರಾನ್ಸಿಸ್ ಸಾವೇರ್ ಲೋಬರ ಮಗಳು. ಮಂಗಳೂರು ಶಹಾರ್ ಲೋವರ್ ಬೆಂದೂರ್ ಎಂಬಲ್ಲಿರುವವಳು. ಯಿವರಿಗೆ ಕೋರ್ಟು ಹುಕುಂ ಪ್ರಕಾರ ಯಿಾ ಮೂಲ್ಕ ತಿಳಿಸುವದೇನೆಂದ್ರೆ—

ವಾದಿಗೆ ಬರಾ ಸಲುವಳಿಕೆ ಬಾಕಿ ಬಗ್ಗೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದ್ರಿ ದಾವೆಯು ತಾ. 13.7.1959ಕ್ಕೆ ನಿಮಗೆ ದಾವಾ ಸಂಮನ್ಸ ಬಗ್ಗೆ ಯಿಟ್ಟಿರುವದ್ರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಯಿದ್ದಲ್ಲಿ ಸದ್ರಿ ದಿನ ಬೆಳಿಗ್ಯೆ 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು.

H. K. Gopalkrishna Rau.
Vakil for Plaintiff.

Karkala, 12-6-1959.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ ವಿಚಾರಿಸಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯ ಬಹುದು!

ಯಾರು ಬುದ್ಧಿವಂತರು?

ಶಾಲೆಯನ್ನು ಪರಿಶೀಲನಾಧಿಕಾರಿಗಳು ಸಂದರ್ಶಿಸಿದರು. ಅದೇ ತಾನೇ ಹೊಸತಾಗಿ ಶಾಲೆಯಲ್ಲಿ ಸೇರಿಕೊಂಡ ಅಧ್ಯಾಪಕರಿಗೆ ಉತ್ತಮ "ರಿಮಾರ್ಕ್" ಬರೆಸಿಕೊಳ್ಳಬೇಕೆಂಬ ಉತ್ಸಾಹವೂ ತುಳುಕಾಡುತಿತ್ತು. ಅವರ ವರ್ಗಕ್ಕೆ ಅಧಿಕಾರಿಗಳೂ ಬಂದು, ಕೆಲವು ಪ್ರಶ್ನೆ ಕೇಳುವಂತೆ ಆಜ್ಞಾಪಿಸಿದರು. ಪಾಠ ಇಂಗ್ಲಿಷ್ ಆಗಿತ್ತು. ಅಧ್ಯಾಪಕರು ಆಜ್ಞೆಯನ್ನು ಶಿರಸಾ ವಹಿಸಿ ಒಬ್ಬ ವಿದ್ಯಾರ್ಥಿಯೊಡನೆ ಕೇಳಿದರು:

"ವ್ಹಾಟ್ ಈಸ್ ಯುವರ್ ನೇಮ್?"

ವಿದ್ಯಾರ್ಥಿ ಥಟ್ಟನೆ ಎದ್ದು ನಿಂತು ಹೇಳಿದ: "ಸೂರ್ಯಪ್ರಕಾಶ.'

ಆಗ ಪರಿಶೀಲನಾಧಿಕಾರಿಗಳು ಕೇಳಿದರು: "ಇಂಗ್ಲಿಷ್‌ನಲ್ಲಿ ಹೇಳು ನೋಡುವ........"

ಹುಡುಗ ಒಂದು ಕ್ಷಣ ಅತ್ತಿತ್ತ ನೋಡಿ ಧೈರ್ಯತಂದುಕೊಂಡು ಹೇಳಿದ—"ಮೈ ನೇಮ್ ಈಸ್ ಸನ್ ಲೈಟ್!"

ಎಲ್ಲರೂ ಮುಖಮುಖ ನೋಡಿಕೊಂಡರು!

೦ ೦

ಕಾರಣ ತಿಳಿದಾಗ

ದೇವಾಲಯದ ಎದುರು ಭಜನಾ ಸಪ್ತಾಹ ನಡೆಯುತಿತ್ತು. ಪ್ರಾಂಗಣದ ಎತ್ತರವಾದ ವೇದಿಕೆಯಲ್ಲಿ ಹತ್ತುಹದಿನೈದು ಜನರು "ಜಯ ಜಯ ರಾಮ್" ಎಂಬ ಪಲ್ಲವಿಯನ್ನೇ ಉತ್ಸಾಹ ಮತ್ತು ಭಕ್ತಿ ಪುರಸ್ಸರವಾಗಿ ಹಾಡುತಿದ್ದರು. ಹಿಂದೆ ಮುಂದೆ ನೆರೆದಿದ್ದ ಸಹಸ್ರ ಸಂಖ್ಯೆಯ ಜನರು ಅವನ್ನೇ ಘಟ್ಟಿಯಾಗಿ ಪ್ರತಿಧ್ವನಿಸುವಂತೆ ಉಚ್ಚರಿಸುತಿದ್ದರು.

ಆದರೆ, ಒಬ್ಬಾಕೆ ವಿಧವೆ ಮಾತ್ರ "ರಾಮನಾಮ"ದ ಬದಲು "ಜಯ ಜಯ ಗೋಪಾಲ್" ಎನ್ನುತಿದ್ದಳು. ರಾಯರು ಬಹುಹೊತ್ತಿನವರೆಗೆ ಆಕೆಯನ್ನೇ ಪರೀಕ್ಷಿಸಿದರು. ಎಲ್ಲ ಜನರೂ ಜಯ ಜಯ ರಾಮ ಎನ್ನುವಾಗ ಈಕೆಯೊಬ್ಬಾಕೆ ಮಾತ್ರ ಅದನ್ನು ಹೇಳದೆ ಗೋಪಾಲನ ನಾಮವನ್ನೇಕೆ ಉಚ್ಚರಿಸುತ್ತಾಳೆ ಎಂಬುದು ಅವರಿಗೆ ಹೊಳೆಯದಾಯಿತು. ಮೆಲ್ಲನೆ ಆಕೆಯ ಕಿವಿಯಲ್ಲಿ ಕೇಳಿದರು: "ಏನಮ್ಮ, ನಾವೆಲ್ಲ ರಾಮ ರಾಮ ಎನ್ನುವಾಗ ನೀನಾದರೊ ಗೋಪಾಲ ಎಂದು ಭಜನೆಯ ರಸಕ್ಕೆ ಹುಳಿ ಹಿಂಡುತ್ತಿಯೂ? ನಿನಗೆ ರಾಮನಿಗಿಂತಲೂ ಗೋಪಾಲ ಎಂಬ ಹೆಸರೇ ಮೆಚ್ಚುಗೆಯಾಯಿತೇ?'

ಪಾಪ, ಆಕೆ ಜೋಲು ಮೋರೆ ಹಾಕಿ ಉತ್ತರಿಸಿದಳು—"ಇಲ್ಲರಿ, ಆದರೆ ಅದು ನನ್ನ ದಿವಂಗತರಾದ ಪತಿದೇವರ ಹೆಸರಾದುದರಿಂದ ಉಚ್ಚರಿಸಲಾರೆ, ಅಷ್ಟೆ."

ರಾಯರು ತಮ್ಮ ಅವಿವೇಕಕ್ಕೆ ನೊಂದುಕೊಂಡರು.

೦ ೦

ಮೇಧಾಶಕ್ತಿಯ ಪರಾಕಾಷ್ಠೆ

ಮೂರು ಜನ ಗ್ರಾಮಸ್ಥರು ದೆಹಲಿಯನ್ನು ಸಂದರ್ಶಿಸಿದರು. ಅಲ್ಲಿದ್ದ ಕುತುಬ್ ಮಿನಾರವನ್ನು ಕಂಡು ಅವರಿಗೆ ಆಶ್ಚರ್ಯದಲ್ಲಿ ಆಶ್ಚರ್ಯವಾಯಿತು. ಅದರಲ್ಲೂ ಅಷ್ಟು ಎತ್ತರದ ಮಿನಾರವನ್ನು ಹೇಗೆ ನೆಟ್ಟಗೆ ನಿಲ್ಲಿಸಿದರೆಂದೇ ಅವರಿಗೆ ಹೊಳೆಯಲಿಲ್ಲ. ಬಹಳ ದೀರ್ಘಕಾಲ ಆಲೋಚನೆ ಮಾಡಿ, ತನ್ನ ಮೇಧಾಶಕ್ತಿಗೆ ತಾನೇ ಮೆಚ್ಚಿ ಮೊದಲನೆಯವ ಹೇಳಿದ: ನಮ್ಮ ಪೂರ್ವಜರು ದೀರ್ಘದೇಹಿಗಳಾಗಿದ್ದರಂತೆ. ಪ್ರಾಯಃ ಈ ಮಿನಾರವನ್ನು ಕಟ್ಟಿದ ಮಹನೀಯನೂ ಇದರಷ್ಟು ಎತ್ತರವಿದ್ದನೆಂದು ತೋರುತ್ತದೆ. ಅಂತಲೇ ಇದನ್ನು ಇಷ್ಟೊಂದು ಸೌಂದರ್ಯಯುಕ್ತವಾಗಿ ಕಟ್ಟುವುದು ಅವನಿಗೆ ಸಾಧ್ಯವಾಯಿತು.

ಆಗ ಎರಡನೆಯವನು ತನ್ನ ಸ್ನೇಹಿತನ ಮಾತನ್ನು ಒಪ್ಪುವಷ್ಟು ಮೂರ್ಖನಾಗಿರಲಿಲ್ಲ. ಅವನೂ ಆಲೋಚಿಸಿ ಗೋಣೇರಿಸಿ ಹೇಳಿದನು: ಎಂತಹ ಮೂರ್ಖನಾಗಿದ್ದಿಯಾ? ಯಾವ ಕಾಲದಲ್ಲಾದರೂ ಇಷ್ಟೆತ್ತರದ ಆಳಿರುವುದು ಸಾಧ್ಯವಿಲ್ಲ. ಇದನ್ನು ಮೊದಲು ನೆಲದಲ್ಲಿ ಉದ್ದಕ್ಕೆ ಕಟ್ಟಿ ಆ ಮೇಲೆ ಹಗ್ಗ ರಾಟೆಗಳ ಸಹಾಯದಿಂದ ನೆಟ್ಟಗೆ ನಿಲ್ಲಿಸಿದರು.

ಇದನ್ನು ಕೇಳಿದ ಮೂರನೆಯ ಬುದ್ಧಿವಂತ ಸುಮ್ಮನಿದ್ದಾನೆ? ಅವನು ತನ್ನ ಸಖದ್ವಯರ ಅಂಬೋಣವನ್ನು ಅಲ್ಲಗಳೆದು ಅವರಿಗೆ ಮೂರ್ಖ ಶಿರೋಮಣಿ ಪದವಿಯನ್ನಿತ್ತು ತಾನು ಮೇಧಾವಿಯೆನಿಸುವಂತೆ ಸರಿಯಾದ ಕಾರಣ ಕಂಡು ಹುಡಕಿದ: ನೋಡಿ, ನಿಮಗಿಬ್ಬರಿಗೂ ಬುದ್ಧಿಯಿಲ್ಲ. ಅದಕ್ಕೆಂದೇ ನೀವು ದಿಲ್ಲಿಗೆ ಬರಲು ಅಯೋಗ್ಯರು ಎಂದು ಮೊದಲೇ ನಿಮ್ಮಿಬ್ಬರನ್ನೂ ಎಚ್ಚರಿಸಿದ್ದೆ. ಆದರೆ, ನೀವು ಕೇಳಬೇಕಲ್ಲಾ. ಆಗಲಿ, ಈ ಮಿನಾರವನ್ನು ನಿಲ್ಲಿಸಿದುದು ಹೇಗೆಂದು ಗೊತ್ತೆ? ಕೇಳಿ, ಮೊದಲು ಈ ಮಿನಾರದಷ್ಟು ಆಳದ ಬಾವಿಯನ್ನು ತೋಡಿದರು. ಅದರಲ್ಲಿ ಮಿನಾರವನ್ನು ಕಟ್ಟಿದರು. ಕೊನೆಗೆ ಬಾವಿಯನ್ನು ಮುಚ್ಚಿಬಿಟ್ಟರು. ಆಗ ಮಿನಾರ ತಾನಾಗಿಯೇ ಭೂಮಿಯಿಂದ ಮೇಲಕ್ಕೆ ಎದ್ದು ನಿಂತಿತು! ಗೊತ್ತಾಯಿತೆ? ಬುದ್ಧಿಯಿದ್ದ ಮನುಷ್ಯ ಎಲ್ಲಿಯೂ ಯಾವ ಕೆಲಸವನ್ನೂ ಮಾಡಬಲ್ಲನಲ್ಲವೆ?

Approved by the Text Book Committee of Madras, for non-detailed study in higher Forms (vide Page 7, Fort St George Gazette, Part I—B dated 4—5...1955)

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು ೧೫೮ ಬೆಲೆ: ರೂ. ೧ : ೨೫

ನವಯುಗ ಪ್ರೆಸ್, ಉಡುಪಿ ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೌಮ್ಯಶೀಲ ಸಮಾಜ

(೪ನೇ ಪುಟ ನೋಡಿರಿ)

ಗೆ ಎಳ್ಳಷ್ಟೂ ನಾಚಿಗೆಯಿಲ್ಲ, ಎನ್ನಿ) ನನ್ನ ಕೈಕಾಲುಗಳು ನಡುಗುತ್ತಿರುವಂತೆ ಅನುಭವವಾಯಿತು. ಇಲ್ಲಿ ಈ ಅಧಿಕಾರಿಗಳ ಧೈರ್ಯದಿಂದಲೇ ತಮ್ಮ ಕೆಲಸಗಳನು ಮಾಡುತಿದ್ದಾರೆ. ಇವರು ಅದಕ್ಕೆ ಮಹತ್ವ ವೀಯುವುದಿಲ್ಲವೆ ಎಂದು ನಾನು ಅಂದುಕೊಂಡೆ.

ನನ್ನ ಕೆಲಸ ಪೂರ್ಣವಾದಮೇಲೆ ನಮ್ಮ ಡೇರೆಗೆ ಮರಳಲು ರಸ್ತೆಯಲ್ಲಿ ನಡೆಯುತಿದ್ದೆ. ಆಗ ನನಗೆ ಮತ್ತೂ ಆಶ್ಚರ್ಯವಾಯಿತು- ಯಾರೊಬ್ಬನೂ ವೇಗವಾಗಿ ನಡೆಯುತ್ತಲೇ ಇರಲಿಲ್ಲ! ಎಲ್ಲರೂ ಶಾಂತರಾಗಿ ತೋರುತಿದ್ದರು.

ಏನನ್ನೂ ಉತ್ಸಾಹದಿಂದ ನೋಡುತ್ತಲೂ ಇರಲಿಲ್ಲ, ಅವರಲ್ಲಿ ಉತ್ಸಾಹವಿದ್ದಂತೆಯೂ ಕಾಣಿಸಲಿಲ್ಲ. ತಮ್ಮ ತಮ್ಮ ಕೆಲಸಗಳಲ್ಲಿ ಎಲ್ಲರೂ ತೊಡಗಿದ್ದರು. "ಬ್ಲೇಕ್ ಅವುಟ್" ಮೊದಲಾದ ಕುರುಹುಗಳಿಲ್ಲದಿರುತಿದ್ದರೆ, ಈ ದೇಶೀಯ ಜನರು ತಮ್ಮ ಇತಿಹಾಸದಲ್ಲಿ ಬಹಳ ದೊಡ್ಡ ಯುದ್ಧಕ್ಕೆ ಸಿಕ್ಕಿಕೊಂಡಿದ್ದಾರೆಂದೂ ತಿಳಿಯುವಂತಿರಲಿಲ್ಲ.

ಅಂಗ್ಲೇಯರನ್ನು ಹೊರತಾದ ನಮಗೆ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮೌನವಾಗಿರುವುದು ಅಸಂಭವ. ನಾವು ತೀವ್ರವಾಗಿಯೇ ಉತ್ತೇಜಿತರಾಗುತ್ತೇವೆ. ಧೈರ್ಯ ಬಿಟ್ಟು ಬಿಡುತ್ತೇವೆ. ಈ ಕಾರಣದಿಂದ ಆಂಗ್ಲೇಯರ ಈ ವಿಧದ ಧೀರಗಂಭೀರ ವೃತ್ತಿಯು ನಮಗೊಂದು ಸಮಸ್ಯೆಯಾಗಿತ್ತು. ಇಲ್ಲಿನ ಮಕ್ಕಳಿಗೆ ಎಳೆತನದಿಂದಲೇ ತಮ್ಮ ಭಾವನೆಗಳನ್ನು ಅಡಗಿಸಿಡುವ ಬಗ್ಗೆ ತರಬೇತಿಯನ್ನು ಈಯಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ಆದರೆ, ನನಗೆ ಈ ವಿಷಯವು ಕಷ್ಟವೆಂದು ಹೊಳೆಯುತ್ತದೆ. ಪ್ರಕೃತಿಯೊಡನೆ ನೇರಾದ ಸಂಬಂಧವಿರುವ ಆಂಗ್ಲೇಯರ ಮೇಲೆಯೂ ತನ್ನ ಗಾಂಭೀರ್ಯ ಮತ್ತು ಶಾಂತಿಯ ಪ್ರಭಾವವನ್ನು ಬೀರದುಳಿಯಲಾರದು. ಆಂಗ್ಲೇಯರಿಗೆ ತಮ್ಮ ಮನೆಯು ಪ್ರೀತಿಯದಾಗಿದೆ ಎಂದು ಹೇಳುವ ಪರಂಪರೆಯು ರೂಢಿಯಲ್ಲಿದೆ. ನನ್ನ ಜ್ಞಾಪಕವೂ ಅದೇ ಆಗಿತ್ತು. ಆದರೂ ಅವರಿಗೆ ತಮ್ಮ ಮನೆಗಿಂತಲೂ ತಮ್ಮ ಉದ್ಯಾನವೇ ಅಧಿಕ ಪ್ರಿಯತಮವಾಗಿದೆ. ೩೦-೫೦ ಸಾವಿರ ಉದ್ಯಾನಗಳು ಇಂಗ್ಲೆಂಡಿನಲ್ಲಿವೆಯಂತೆ. ಇಲ್ಲಿ ಒಂದು ಬಂಗಲೆಯ ಎದುರು ಒಂದು ಚಿಕ್ಕದಾದ ತೋಟವು ಅವಶ್ಯವಿರುವುದು.

ಒಬ್ಬ ಆಂಗ್ಲೇಯನು ದೊಡ್ಡ ಆಫೀಸರನಿರಲಿ, ವ್ಯಾಪಾರಿಯಾಗಿರಲಿ, ಪಾದರಿ, ಕ್ಲಾರ್ಕನೇ ಇರಲಿ, ಮುಂಜಾನೆ ಮತ್ತು ಸಂಜೆ ಉದ್ಯಾನಕ್ಕೆ ಹೋಗುತ್ತಾನೆ. ಅಲ್ಲಿ ಮಣ್ಣು ಅಗೆಯುತ್ತಾನೆ, ಗಿಡ ನೆಡುತ್ತಾನೆ, ಹೂಗಿಡಗಳ ರಕ್ಷಣೆ ಮಾಡುತ್ತಾನೆ. ಈ ತೋಟಗಾರಿಕೆಯಲ್ಲಿ ಯಾವ ಸ್ಪರ್ಧೆಯೂ ಇರುವುದಿಲ್ಲ; ಆದರೂ ಎಲ್ಲ ಆಂಗ್ಲೇಯರೂ ಇದರಲ್ಲಿ ತೊಡಗುತ್ತಾರೆ. ಇಲ್ಲಿ ಎಲ್ಲರೂ ತಮ್ಮ ಉಚ್ಚ ನೀಚ ಭಾವನೆಯನ್ನು ಮರೆತುಬಿಡುತ್ತಾರೆ.

ನನ್ನ ಮನಸ್ಸಿಗೆ ಹೂ ಫಲಗಳು ಮತ್ತು ಗಿಡಗಳೊಡನೆ ಪ್ರಕೃತಿಯು ಈ ಸನಾತನ ತತ್ವಗಳೊಡನೆ ನಿತ್ಯ ಒಂದರ್ಧ ಘಂಟೆಯನ್ನು ಕಳೆಯುವುದು ಮತ್ತು ತಮ್ಮ ವ್ಯಾಪಾರಾದಿಗಳ 'ಸ್ಪಪ್ಪವಿರಾಮವೀಯುವುದು ಆಂಗ್ಲೇಯರನ್ನು ಶಾಂತ ಮತ್ತು ಧೀರಗಂಭೀರರನ್ನಾಗಿ ಮಾಡುತ್ತದೆ ಎಂದು ತೋರುತ್ತದೆ. ಪ್ರಕೃತಿಯ ಪಾಠವೇ ಇದು. ಪರಿವರ್ತನೆ ಹೊಂದುತ್ತಿರುವ ಈ ಪ್ರಪಂಚದಲ್ಲಿ ಆಂಗ್ಲೇಯರಿಗೆ ನಿತ್ಯ ಜಗತ್ತಿನಲ್ಲಿರುವ ಸೌಂದರ್ಯವು ಯುದ್ಧ, ವ್ಯಾಪಾರ ಅಥವಾ ರಾಜನೀತಿಗಳಲ್ಲಿಲ್ಲ. ಅವುಗಳಿಂದಲೂ ಬಹಳ ದೂರದಲ್ಲಿದೆ ಎಂಬುದರ ಅರಿವಿದೆ. ಆದುದರಿಂದಲೇ ಅವರು ಪ್ರಕೃತಿಯಿಂದ ಕಲಿತ ಪಾಠದಿಂದಾಗಿ ಸದಾ ಸೌಮ್ಯಶೀಲರಾಗಿರುತ್ತಾರೆ.

ನಾವೂ ಸೌಮ್ಯಶೀಲರಾಗಲು ಪ್ರಯತ್ನಿಸಬಾರದೆ?

(ಸ್ಟಿಫನ್ ಸ್ಪೆಂಗರರ ಲೇಖನದಿಂದ ಸಂಗ್ರಹಿತ)

ಹಿಂದುಳಿದವರಿಗೆ ಉನ್ನತ ಜೀವನ ಸೌಕರ್ಯ

ಭಾರತೀಯ ಪ್ರಜಾಜನರಲ್ಲಿ ವಿಶೇಷ ರಕ್ಷಣೆ ಮತ್ತು ಹಿತಾಸಕ್ತಿಗಳನ್ನು ಬಯಸುವ ಮತ್ತು ಅಭಿವೃದ್ಧಿ ಹೊಂದಬೇಕಾದ ಕೆಲವೊಂದು ಪಂಗಡಗಳಿರುತ್ತವೆ ಎಂಬುದನ್ನು ನಮ್ಮ ಸಂವಿಧಾನ ನಿರ್ಮಾತೃಗಳು ಕಂಡುಕೊಂಡು ಅದರ ಸಂಪೂರ್ಣ ಹೊಣೆಯನ್ನು ರಾಜ್ಯಸರಕಾರಗಳಿಗೆ ಒಪ್ಪಿಸಿದ್ದಾರೆ. ಹಿಂದುಳಿದ ಜಾತಿ ಮತ್ತು ಪಂಗಡಗಳು, ಭೂತಪೂರ್ವ ಅಪರಾಧೀ ಕುಲದವರು ಮತ್ತು ಇತರ ಹಿಂದುಳಿದ ವರ್ಗಗಳ ಹಿತಾಸಕ್ತಿ ಅವಶ್ಯವಾಗಿದೆ. ಇಂತಹರ ಸಂಖ್ಯೆ ಸುಮಾರು ೮ ಕೋಟಿಗೂ ಮಿಕ್ಕಿರುವುದು.

ಅಸ್ಪೃಶ್ಯತೆಯ ನಿವಾರಣೆಯು ಮಹಾತ್ಮಾಗಾಂಧಿಯವರಿಗೆ ಅತಿ ಪ್ರಿಯವಾದುದು. ಈ ಮಹಾ ಸಾಮಾಜಿಕ ಅನ್ಯಾಯವನ್ನು ತಡೆಗಟ್ಟಲು ಎರಡು ಮಾರ್ಗಗಳಲ್ಲಿ ಪ್ರಯತ್ನ ನಡೆಯುತ್ತಿದೆ. ಕಡೆಗಣಿಸಲ್ಪಟ್ಟ ವರ್ಗಗಳ ಸಾಮಾಜಿಕ ಅಸಮರ್ಥತೆಯ ಬಗ್ಗೆ ಕಾನೂನುಗಳನ್ನೂ ಎಲ್ಲ ರಾಜ್ಯಗಳಲ್ಲೂ ವ್ಯವಹಾರಕ್ಕೆ ತರಲಾಗಿದೆ. ಇದರೊಡನೆ ಹರಿಜನ ಸೇವಕ ಸಂಘ, ಭಾರತೀಯ ಹಿಂದುಳಿದ ವರ್ಗಗಳ ಸಂಘವೇ ಮೊದಲಾದ ಸಾಮಾಜಿಕ ಸಂಸ್ಥೆಗಳ ಸಹಾಯವನ್ನೂ ಪಡೆದು ಈ ಅಸ್ಪೃಶ್ಯತಾ ದೂರೀಕರಣಕ್ಕೆ ವಾತಾವರಣವನ್ನು ಸುಯೋಗ್ಯಗೊಳಿಸಲಾಗುತ್ತಿದೆ.

ಇವುಗಳಲ್ಲದೇ "ಹಿಂದುಳಿದವರನ್ನು" ಆರ್ಥಿಕವಾಗಿಯೂ ಮುಂದೆ ತರುವ ಪ್ರಯತ್ನಗಳು ನಡೆಯುತ್ತಿವೆ. ಕೆಲವು ರಾಜ್ಯಗಳಲ್ಲಿ ವಸಾಹತುಗಳನ್ನೂ ಸ್ಥಾಪಿಸಲಾಗಿದೆ; ಮಾತ್ರವಲ್ಲದೇ ಕೃಷಿಯಲ್ಲಿ ಅಥವಾ ಇನ್ನಿತರ ಉದ್ಯೋಗಗಳಲ್ಲಿ ತೊಡಗಿರುವುದಕ್ಕೆ ಅನುಕೂಲತೆಗಳನ್ನು ಒದಗಿಸಲಾಗಿದೆ. ಈ ವರ್ಗಗಳಿಗೆ ಸೇರಿದ ಮಕ್ಕಳಿಗಾಗಿ ಶಾಲೆಗಳನ್ನು ತೆರೆಯಲಾಗಿದೆ; ಶಿಷ್ಯ ವೃತ್ತಿಗಳನ್ನು ಸುಲಭದಲ್ಲಿ ಕೊಡಮಾಡಲಾಗಿದೆ; ಧರ್ಮಾರ್ಥ ಶಿಕ್ಷಣ ಪಡೆಯುವ ಸೌಲಭ್ಯವನ್ನೂ ಒದಗಿಸಲಾಗಿದೆ. ಈ ರೀತಿಯ ಸೌಕರ್ಯಗಳನ್ನು ಸುಮಾರು ೫೦ ಸಾವಿರ ವಿದ್ಯಾರ್ಥಿಗಳು ಈಗ ಪಡೆಯುತಿದ್ದಾರೆ.

ಶುಚಿಯಾದ ಬಾವಿ ಮತ್ತು ಮನೆಗಳನ್ನು ಹಿದಗಿಸಿ ಹಿಂದುಳಿದವರು ಆರೋಗ್ಯವಂತವಾದ ವಾತಾವರಣದಲ್ಲಿ ವಾಸಿಸುವ ಸೌಕರ್ಯವನ್ನೂ ಕಲ್ಪಿಸಿಕೊಡಲಾಗಿದೆ. ಈ ರೀತಿಯಾಗಿ ಹಿಂದುಳಿದ ವರ್ಗಗಳನ್ನು ಉನ್ನತಗೊಳಿಸುವುದಕ್ಕಾಗಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ೧೧ ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಮೇಲಿನ ಚಿತ್ರಗಳಲ್ಲಿ ಈ ಹಿಂದುಳಿದವರ 'ಉನ್ನತ ಜೀವನ'ದ ಕುರಿತಾದ ಮೂರು ದೃಶ್ಯಗಳನ್ನು ವೀಕ್ಷಿಸಬಹುದು.

ಮೊದಲನೆಯ ದೃಶ್ಯ: ಒರಿಸ್ಸದ ಒಂದು ಜನಪದ ಸಂಗೀತಗಾರ ಮತ್ತು ನರ್ತಕರ ಪಂಗಡ. ದೇಶದ ಅಮೂಲ್ಯ ಸಾಂಸ್ಕೃತಿಕ ಪರಂಪರೆಯಾದ ಈ ಕಲೆಯ ಮಾದರಿಯನ್ನು ಕೆಡದಂತೆ ರಕ್ಷಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ.

ಎರಡನೆಯ ದೃಶ್ಯ: ರಾಜಸ್ಥಾನದಲ್ಲಿ ನಿರ್ಮಿಸಲ್ಪಟ್ಟ ಸಮಾಜದ ಬಾವಿಯೊಂದರಿಂದ ಹರಿಜನ ಸ್ತ್ರೀಯೋರ್ವಳು ನೀರು ಸೆಳೆದುಕೊಂಡು ಹೋಗುತಿದ್ದಾಳೆ ಈ ಬಾವಿಗಳು ಗ್ರಾಮದಿಂದ ಅಸ್ಪೃಶ್ಯತೆಯನ್ನು ಸ್ವಾಯುವೇವ ದೂರಾಗಲು ನೆರವಾಗಬಲ್ಲವು.

ಮೂರನೆಯ ದೃಶ್ಯ: ಪಶ್ಚಿಮ ಬಂಗಾಳದ ಹಳ್ಳಿಯೊಂದರ ನಾರಿಯೊಬ್ಬಳು ಓದಲು ಮತ್ತು ಬರೆಯಲು ಅಭ್ಯಾಸ ನಡೆಸುತಿದ್ದಾಳೆ. ಸಮಾಜಾಭಿವೃದ್ಧಿ ಪ್ರದೇಶಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾಭ್ಯಾಸದ ಬಗ್ಗೆ ತೀವ್ರಾಸಕ್ತಿಯನ್ನು ತೋರಿಸಲಾಗುತ್ತಿದೆ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.
ಕಥಾ ಕೌಮುದಿ
(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ,
ಬೆಲೆ: ರೂ. ೧—೮—೦ (1=50)
ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಅಭಿವೃದ್ಧಿ ಪಥ

ಭಾರತೀಯ ಟೆಲಿಫೋನ್ ಕಾರಖಾನೆಯ ಕಾರ್ಯ ಸಾಧನೆ

ನಿಮ್ಮ ಮೇಜಿನ ಮೇಲಿರುವ ೫೦೦ ಭಾಗಗಳಿರುವ ಟೆಲಿಫೋನ್ ಇಲ್ಲಿ ನಿರ್ಮಾಣಗೊಳ್ಳುತ್ತದೆ.

೦ ೦

ಟ್ರಿಂಗ್ ಟ್ರಿಂಗ್....

ಒಮ್ಮೆಲೆ ನಿಮ್ಮ ಮೇಜಿನ ಮೇಲೆ ಶೋಭಿಸುತ್ತ ಅಗೋಚರ ವ್ಯಕ್ತಿಯು ನಿಮ್ಮೊಂದಿಗೆ ಮಾತನಾಡಲಪೇಕ್ಷಿಸುತ್ತಿರುವರೆಂಬುದನ್ನು ಸೂಚಿಸುತ್ತಿರುವ ಟೆಲಿಫೋನ್ ಯಂತ್ರವು ಭಾರತದಲ್ಲಿಯೇ ತಯಾರಾಗಿರಬಹುದು. ಈ ಯಂತ್ರಗಳನ್ನು ಬೆಂಗಳೂರು ನಗರಕ್ಕೆ ಅನತಿದೂರದಲ್ಲಿರುವ ದೂರವಾಣಿ ನಗರದ ಭಾರತೀಯ ಟೆಲಿಫೋನ್ ಕಾರ್ಖಾನೆ ತಯಾರಿಸುತ್ತಿದೆ. ಈ ಕಾರ್ಖಾನೆಯಿಂದ ಪ್ರತಿ ಎರಡು ನಿಮಿಷಗಳಿಗೊಮ್ಮೆ ಒಂದು ಟೆಲಿಫೋನ್ ಯಂತ್ರ ತಯಾರಾಗಿ ಹೊರಬರುತ್ತಿದೆ. ಈ ರೀತಿಯ ತ್ವರಿತ ರೀತಿಯ ತಯಾರಿಕೆಯಿಂದಾಗಿ ನಾವು ಟೆಲಿಫೋನ್‌ಗಳ ವಿಚಾರದಲ್ಲಿ ಸ್ವಪಂಪೂರ್ಣತೆ ಗಳಿಸಿದ್ದೇವೆ. ಜೊತೆಗೆ ವರ್ಷಕ್ಕೆ ಸುಮಾರು ೨.೫ ಕೋಟಿ ರೂ. ಗಳಷ್ಟು ವಿದೇಶೀ ವಿನಿಮಯ ಹಣವನ್ನು ಉಳಿಸಲು ನಮಗೆ ಸಾಧ್ಯವಾಗುತ್ತಿದೆ.

ಈ ಕಾರ್ಖಾನೆ ಕಾರ್ಯಾಚರಣೆಗೆ ತೊಡಗಿ ಹತ್ತು ವರ್ಷಗಳು ಸಂದವು. ಈ ಒಂದು ದಶಕದಲ್ಲಿ ಭಾರತೀಯ ಟೆಲಿಫೋನ್ ಕಾರ್ಖಾನೆಯು ಸುಮಾರು ನಾಲ್ಕು ಲಕ್ಷ ಟೆಲಿಫೋನ್‌ಗಳನ್ನು ತಯಾರಿಸಿವೆಯೆಂದು ಅಂದಾಜು ಮಾಡಲಾಗಿದೆ. ಜೊತೆಗೆ ಈ ಕಾರ್ಖಾನೆ ಟೆಲಿಕಮ್ಯೂನಿಕೇಷನ್ ಉಪಕರಣಗಳನ್ನೂ ತಯಾರಿಸುತ್ತಿದೆ.

ಪ್ರಾರಂಭ

ಭಾರತ ಸರ್ಕಾರದವರು ೧೯೪೮ರ ಮೇ ತಿಂಗಳಲ್ಲಿ ಬ್ರಿಟನ್ನಿನ ಲಿವರ್‌ಪೂಲ್ ನಗರದಲ್ಲಿರುವ ಆಟೋಮ್ಯಾಟಿಕ್ ಟೆಲಿಫೋನ್ ಎಂಡ್ ಇಲೆಕ್ಟ್ರಿಕ್ ಕಂಪೆನಿಯೊಂದಿಗೆ ೧೫ ವರ್ಷಗಳ ಅವಧಿಯ ಒಪ್ಪಂದ ಮಾಡಿಕೊಂಡಿತು. ಈ ಒಪ್ಪಂದ ಪ್ರಕಾರ ಲಿವರ್‌ಪೂಲಿನ ಕಾರ್ಖಾನೆಯು ತನ್ನ ಪೇಟೆಂಟ್ ಹಕ್ಕುಗಳು, ತಯಾರಿಕೆಗೆ ಸಂಬಂಧಿಸಿದ ದತ್ತಾಂಶಗಳು ಮತ್ತು ತಯಾರಿಕಾ ವಿಧಾನ ಇವುಗಳನ್ನು ತಿಳಿಸಬೇಕಾಗಿದೆ. ಈ ಒಪ್ಪಂದ ಕೈಗೊಂಡನಂತರ ಕಾರ್ಖಾನೆಗಾಗಿ ಭವ್ಯ ಕಟ್ಟಡಗಳ ನಿರ್ಮಾಣ ಪ್ರಾರಂಭವಾಯಿತು.

ಪ್ರಾರಂಭದಲ್ಲಿ ಮಿಲಿಟರಿ ಮಾದರಿಯ 'ಹ್ಯಾಂಗರ್'ಗಳಲ್ಲಿ ಟೆಲಿಫೋನ್ ಕಾರ್ಖಾನೆಯ ಕೆಲಸ ಆರಂಭವಾಯಿತು, ೧೯೫೦ರ ಮಾರ್ಚ್ ತಿಂಗಳ ಕೊನೆಯವರೆಗೆ, ಬ್ರಿಟನ್ನಿನಿಂದ ಆಯಾತವಾದ ಭಾಗಗಳನ್ನು ಜೋಡಿಸಿ ೧೫,೦೦೦ ಟೆಲಿಫೋನ್‌ಗಳನ್ನು ತಯಾರಿಸಲಾಯಿತು. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಖಾನೆಯ ಉತ್ಪಾದನಾ ಗತಿ ಚುರುಕುಗೊಂಡಿತು. ಆಗ ವೇಳೆಗೆ ಭಾರತೀಯ ಟೆಲಿಫೋನ್ ಕಾರ್ಖಾನೆಯ ಬಂಡವಾಳವು ೪ ಕೋಟಿ ರೂ. ಗಳಿಗೆ ಹೆಚ್ಚಿತು. ಈ ಪೈಕಿ ನೂರಕ್ಕೆ ೯೦ರಷ್ಟನ್ನು ಕೇಂದ್ರ ಸರ್ಕಾರವೇ ಪಡೆದಿತ್ತು.

ನಾನಾ ವಿಭಾಗಗಳು

ಟೆಲಿಫೋನ್ ಕಾರ್ಖಾನೆಯಲ್ಲಿ ಹಲವಾರು ವಿಭಾಗಗಳಿವೆ. ಪೂರ್ಣಪಾಂಡಿತ್ಯ ಪಡೆದಿರುವ ಎಂಜನಿಯರ್‌ಗಳಿಂದ ಕೂಡಿದ "ಎಂಜಿನಿಯರಿಂಗ್ ವಿಭಾಗ"ವು ಟೆಲಿಫೋನ್ ಯಂತ್ರದ ತಯಾರಿಕೆಗೆ ಆಗತ್ಯವಾಗುವ ವಸ್ತುಗಳು ಮತ್ತು ಉಪಕರಣಗಳ ತಪಸೀಲು ಪಟ್ಟಿಯನ್ನು ಸಿದ್ಧಗೊಳಿಸುವುದು.

"ಉತ್ಪಾದನಾ ಯೋಜನಾ ವಿಭಾಗ"ವು ಸಲಕರಣೆಗಳು ಮತ್ತು ಉಪಕರಣಗಳ ತಯಾರಿಕೆಗೆ ಆಗತ್ಯವಾಗುವ ಕಚ್ಚಾ ಪದಾರ್ಥಗಳ ಆವಶ್ಯಕತೆಯನ್ನು ತಿಳಿಸುವುದಲ್ಲದೆ ಇವುಗಳ ಮೇಲೆ ಹತೋಟಿಯನ್ನಿಡುವುದು. ಈ ವಿಭಾಗದವರು ಎಷ್ಟು ಬೇಕೆಂದು ತಿಳಿಸಿದ ಮೇಲೆ "ಸರಕುಗಳನ್ನು ಕೊಳ್ಳುವ ವಿಭಾಗ"ವು ಕಚ್ಚಾ ಪದಾರ್ಥಗಳನ್ನು ತರಿಸುವುದು.

ವಿಧಾನ ವಿಭಾಗ ಟೆಲಿಫೋನ್‌ಗಳ ತಯಾರಿಕೆ ಹೇಗೆ ನಡೆಯಬೇಕೆಂಬುದನ್ನು ನಿರ್ಣಯಿಸುತ್ತದೆ. ಸೂಕ್ತವಾದ ಸಾಧನಗಳು, ಜಿಗ್‌ಗಳು ಮುಂತಾದವನ್ನು ಯಾವ ರೀತಿಯಲ್ಲಿ ವ್ಯವಸ್ಥೆಗೊಳಿಸಬೇಕೆಂಬುದನ್ನು ತಿಳಿಸುತ್ತದೆ. ಈ ಕಾರ್ಖಾನೆಯು ಅತ್ಯಂತ ಸೂಕ್ಷ್ಮವಾದ ಹಾಗೂ ನಿಷ್ಕೃಷ್ಟತೆಯಿಂದ ಕೂಡಿದ ಉಪಕರಣಗಳನ್ನು ಬಳಸುತ್ತದೆ. ಉದಾಹರಣೆಗೆ ಇಲ್ಲಿ ಉಪಯೋಗಿಸುವ ಜಿಗ್ ಬೋರರ್ ಯಂತ್ರಗಳು .0001 ಮಿಲಿಮೀಟರ್‌ನಷ್ಟು ಕರಾರುವಾಕ್ಕಾಗಿರುತ್ತದೆ.

ಕಚ್ಚಾ ಪದಾರ್ಥಗಳು, ನಕ್ಷೆಗಳು, ಸಾಧನಗಳು ಮತ್ತಿತರ ದತ್ತಾಂಶಗಳು ಇವುಗಳು ಲಭ್ಯವಾದೊಡನೆ, 'ಮೆಷೀನ್' ವಿಭಾಗ ಟೆಲಿಫೋನ್‌ಗಳ ಉತ್ಪಾದನೆ ಕಾರ್ಯವನ್ನು ತೆಗೆದುಕೊಳ್ಳಲು ಸಾಧ್ಯವಾಗುವುದು. 'ಮೆಷೀನ್ ಷಾಪ್'ಗಳಲ್ಲಿ ೧೫೦ ಟನ್ನುಗಳ ಭಾರತದ 'ಪ್ರೆಸ್' ಯಂತ್ರಗಳಿಂದ ಹಿಡಿದು ಹುರಿಸುತ್ತುವ ಯಂತ್ರಗಳವರೆಗೆ ಸುಮಾರು ೧,೨೦೦ ಯಂತ್ರಗಳಿರುವುವು.

ಸಾಧಾರಣವಾಗಿ ಮೆಷೀನ್ ಶಾಪ್‌ಗಳಿಂದ ಹೊರಬರುವ ಭಾಗಗಳಿಗೆ ಬಣ್ಣ ಅಥವಾ ಯಾವುದಾದರೊಂದು ಲೋಹವನ್ನು ಲೇಪಿಸುವರು. ಕಬ್ಬಿಣದ ಸಾಮಾನುಗಳಿಗೆ ತುಕ್ಕು ಹಿಡಿಯದಂತೆ ಅವುಗಳಿಗೆ ಬಣ್ಣ ಬಳಿಯಲಾಗುವುದು.

"ಪ್ಲೇಟಿಂಗ್ ವಿಭಾಗ"ದಲ್ಲಿ ವಿವಿಧ ಉಪಕರಣಗಳಿಗೆ ಕ್ರೋಮಿಯಂ, ಕಾಡ್ಮಿಯಂ, ನಿಕಲ್, ಸತವು ಮತ್ತು ತಾಮ್ರದ ಲೇಪನ ಕೊಡಲಾಗುವುದು. 'ಪ್ಲೇಟಿಂಗ್' ವಿಭಾಗದಿಂದ ಈ ಉಪಕರಣಗಳು 'ಫಿನಿಷಿಂಗ್' ವಿಭಾಗಕ್ಕೂ ಆನಂತರ ಜೋಡಣಾ ವಿಭಾಗಕ್ಕೂ ಬರುವುವು. ಜೋಡಣಾ ವಿಭಾಗದಲ್ಲಿ ಈ ಉಪಕರಣಗಳು ಒಂದು ವಾಹಕ ಪಟ್ಟಿಯ ಮೇಲೆ ಕಳುಹಿಸಲ್ಪಡುವುವು. ಅವುಗಳನ್ನು ಕುಶಲರಾದ ಕೆಲಸಗಾರರು ಜೋಡಿಸುತ್ತಾ ಬರುವರು. ಪ್ರತಿ ಎರಡು ನಿಮಿಷಗಳಿಗೊಮ್ಮೆ ಪೂರ್ಣಗೊಂಡ ಟೆಲಿಫೋನ್ ಯಂತ್ರ ಈ ವಿಭಾಗದಿಂದ ಹೊರಬರುವುದು.

೫೦೦ ಭಾಗಗಳು

ನಿಮ್ಮ ಮೇಜಿನ ಮೇಲಿರುವ ಟೆಲಿಫೋನ್ ಯಂತ್ರ ನೋಡಲು ಅತಿ ಸರಳವಾಗಿದ್ದಂತೆ ಕಾಣುವುದು. ಆದರೆ ಹೊರಭಾಗನೋಡಿ ಮೋಸಹೋಗುವ ಪ್ರಮೇಯವಿಲ್ಲ. ಪ್ರತಿಯೊಂದು ಟೆಲಿಫೋನ್ ಯಂತ್ರದಲ್ಲಿಯೂ ೫೦೦ ಭಾಗಗಳಿವೆ. 'ಡಯಲ್'ನಲ್ಲಿಯೇ ೧೨೦ ಭಾಗಗಳಿವೆ.

ಬೆಂಗಳೂರಿನಲ್ಲಿರುವ ಟೆಲಿಫೋನ್ ಕಾರ್ಖಾನೆ ಎಲ್ಲೋ ಕೇವಲ ಕೆಲವೇ ಭಾಗಗಳ ಹೊರತಾಗಿ ಉಳಿದ ಎಲ್ಲ ಭಾಗಗಳನ್ನು ತಯಾರಿಸುತ್ತಿದೆ. ಅಷ್ಟೆ ಅಲ್ಲ, ಸುಲಭವಾಗಿ ಒಯ್ಯಲು ಸಾಧ್ಯವಾಗುವಂತಹ ಟೆಲಿಫೋನಿನಿಂದ ಹಿಡಿದು ರೈಲ್ವೆಗಳಲ್ಲಿ ಬಳಸುವ ಕ್ಲಿಷ್ಟಕರವಾದ ಸಲಕರಣೆಗಳವರೆಗೆ ಎಲ್ಲ ರೀತಿಯ ಟೆಲಿಫೋನ್ ಯಂತ್ರಗಳನ್ನು ತಯಾರಿಸುತ್ತಿದೆ.

ಇಷ್ಟೇ ಅಲ್ಲ, ಈ ಕಾರ್ಖಾನೆ ಆಟೊಮಾಟಿಕ್ ಟೆಲಿಫೋನ್ ಎಕ್ಸ್‌ಚೇಂಜ್‌ಗಳನ್ನು ಸಹ ತಯಾರಿಸುತ್ತಿದೆ. ಪ್ರತಿಯೊಂದು 'ರ್ಯಾಕ್' ಮೈಲಿ ಮೈಲಿಗಳ ಉದ್ದದ ತಂತಿಗಳನ್ನೊಳಗೊಂಡಿರುವುದು. ಈ ತಂತಿಗಳಿಗೆ ಸುಮಾರು ೫೦ ಸಹಸ್ರ ಸ್ಥಳಗಳಲ್ಲಿ ಬೆಸುಗೆ ಹಾಕಿರಲಾಗುವುದು.

ಗ್ರಾಮಾಂತರ ಪ್ರದೇಶಗಳಿಗೆ ಟೆಲಿಫೋನ್‌ಗಳು

ಈ ಕಾರ್ಖಾನೆ ಗ್ರಾಮಾಂತರ ಪ್ರದೇಶಗಳಿಗಾಗಿ ಸುಲಭ ಬೆಲೆಯ ಆಟೊಮಾಟಿಕ್ ಟೆಲಿಫೋನ್ ಎಕ್ಸ್‌ಚೇಂಜ್‌ಗಳನ್ನು ರೂಪಿಸಿದೆ.

ಈ ಎಕ್ಸ್‌ಚೇಂಜ್ ಯಂತ್ರಗಳು ೧೦, ೧೫ ಮತ್ತು ೫೦ ಲೈನುಗಳನ್ನೊಳಗೊಂಡಿರುವುವು. ಈ ಯಂತ್ರಗಳನ್ನು ಅತಿ ಸಮೀಪದ ಟ್ರಂಕ್ ಅಥವಾ ಮ್ಯಾನ್ಯುಯಲ್ ಎಕ್ಸ್‌ಚೇಂಜಿನೊಂದಿಗೆ ಜೋಡಿಸಲಾಗುವುದು. ಚಿಕ್ಕಪುಟ್ಟ ಊರುಗಳ ಆಗತ್ಯತೆಗಳನ್ನು ಪೂರೈಸುವುದಕ್ಕಾಗಿ ಕಾರ್ಖಾನೆ ೧೦೦ರಿಂದ ೬೦೦ ಲೈನುಗಳನ್ನೊಳಗೊಂಡ ಎಕ್ಸ್‌ಚೇಂಜ್‌ಗಳನ್ನು ತಯಾರಿಸುತ್ತಿದೆ.

ಈ ಕಾರ್ಖಾನೆ ಕ್ಯಾರಿಯರ್ ಟೆಲಿಫೋನ್ ವ್ಯವಸ್ಥೆ, ಟೆಲಿಫೋನ್ ರಿಪೀಟರ್‌ಗಳು ಮುಂತಾದವನ್ನು ಸಹ ತಯಾರಿಸುತ್ತಿದೆ.

ಇಂದು ಭಾರತೀಯ ಟೆಲಿಫೋನ್ ಕಾರ್ಖಾನೆ ಹೊಸ ಹೊಸ ಉಪಕರಣಗಳನ್ನು ಅಭಿವೃದ್ಧಿ ಪಡಿಸುವ ವಿಚಾರದಲ್ಲಿ ಹೆಚ್ಚು ಲಕ್ಷ್ಯ ಹರಿಸಿದೆ. ಒಳದೇಶದ ಆಗತ್ಯತೆಗಳನ್ನು ಪೂರೈಸಿದ ನಂತರ ಪರದೇಶಗಳಲ್ಲಿ ಈ ಕಾರ್ಖಾನೆಯಲ್ಲಿ ತಯಾರಾದ ಟೆಲಿಫೋನ್‌ಗಳು ಮತ್ತಿತರ ಸಂಪರ್ಕಸಾಧನ ವಸ್ತುಗಳಿಗೆ ಮಾರುಕಟ್ಟೆ ಕಲ್ಪಿಸುವ ಸಾಧ್ಯತೆಯನ್ನು ಪರಿಶೋಧಿಸುತ್ತಿದೆ.

ಅಮೇರಿಕೆಯ ಉಪಾಧ್ಯಕ್ಷ ಶ್ರೀ ನಿಕ್ಸನರು ಮೂವತ್ತು ವರ್ಷದ ಪ್ರಥಮ ನೀಗ್ರೋ ಆಟಗಾರ್ತಿ ಕುಮಾರಿ ಗಿಬ್ಸನರಿಗೆ ಪಾರಿತೋಷಕವೀಯುತ್ತಿದ್ದಾರೆ.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA-40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಮದುವೆಗಳು ಜರಗತಕ್ಕ ಸಮಯವು ಸಮೀಪಿಸಿದೆ;

'ಮದುವೆ ಸೀರೆ'

ಇದೀಗ ಪ್ರಕಟವಾಗಿದೆ!

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಕಥಾ ವಿಹಾರ

(೨ನೇ ಪುಟದಿಂದ)

ನ ಕಣ್ಣುಗಳು ನೀಲಾಳ ಕಡೆಗೆ ತಿರುಗಿದುವು. ರಘುರಾಮನನ್ನೂ ಕಂಡಳು ನೀಲಾ. ಅವನ ಚಂಚಲ ನೋಟವನ್ನು ಕಂಡಳೊಮ್ಮೆ, ಅವನ ಮುಗುಳ್ನಗು ಮುಖ ಕಂಡಿತೊಮ್ಮೆ. ಅವನ ನೆಟ್ಟ ನೋಟದ ಬಿಸಿಯನ್ನನುಭವಿಸಿದಳೊಮ್ಮೆ. ಅವನ ಆಕರ್ಷಕ ವ್ಯಕ್ತಿತ್ವದೊಡನೆ ರಮೇಶನ ಸುಂದರ ಶರೀರವನ್ನು ಹೋಲಿಸಿದಳು ನೀಲಾ. "ತನ್ನ ಬಾಳಿನಲ್ಲಿ ಇಂಥವನೇ ಒಬ್ಬ ಚೆಲುವ ಬಂದು ನನ್ನನ್ನು ಘಾಸಿಗೈದ. ನಂಬಬಾರದು ಯಾರನ್ನೂ" ಎಂದು ಮುಖ ತಿರುವಿದಳು ನೀಲಾ.

ಈಗ ಸ್ವಲ್ಪ ಬಡವಾಗಿದ್ದರೂ ಅಳಿಯಲಾರದ ಸೌಂದರ್ಯದ ನಿಧಿ ನೀಲಾ ರಘುರಾಮನ ಮನಸೆಳೆದಳು. ಗಂಭೀರವಾಗಿ ಕೆಲಸ ಮುಗಿಸಿ ಹೊರಬೀಳುತ್ತಿದ್ದ ನೀಲಾ ರಘುರಾಮನಲ್ಲಿ 'ಹೌದು ಯೋಗ್ಯಳು' ಎಂಬ ಭಾವನೆಗೆಡೆಮಾಡಿತು. ವ್ಯರ್ಥ ಪೀಡಿಸುವುದಕ್ಕಾಗಲಿ, ಅನೈತಿಕ ಕ್ಷಣಿಕ ತಪ್ಪಿಗಾಗಲಿ, ಒಂದು ಹೆಣ್ಣಿನ ಬಾಳನ್ನು ಹಾಳುಗೆಡವುದಕ್ಕಾಗಲಿ ರಘುರಾಮ ಮುಂದರಿದವನಲ್ಲ. ಮುಂದರಿಯಲಾರ. "ಯೋಗ್ಯಳಾದರೆ ಸರಿ. ಯಾರನ್ನೂ ಮದುವೆಯಾಗುತ್ತೇನೆ, ಈ ಸಿರಿವಂತ ಕನ್ಯೆಗಳೇ ಬೇಕೆಂದಿಲ್ಲ" ಎಂಬುದು ಅವನ ಆದರ್ಶವಾದ! ತಂದೆತಾಯಿಗಳ ಕಣ್ಣೀರಿಗಾಗಲಿ ಅವರ ಹಿಡಿ ಹಿಡಿ ಶಾಪಕ್ಕಾಗಲಿ, ಬಗ್ಗದ ಮನಸ್ಸು ಆತನದು.

ರಘುರಾಮ ನೀಲಾಳ ನೆಲೆಯನ್ನು ಪತ್ತೆಹಚ್ಚಿದ ಗವರ್ನ್‌ಮೆಂಟ್ ಹಾಸ್ಪಿಟಲ್‌ನ ಮಿಡ್‌ವೈಫ್ ರಾಜಮ್ಮನ ಮಗಳೆಂದು ತಿಳಿಯಿತು. ತನ್ನ ಮಿತ್ರರಾದ ಡಾಕ್ಟರ್ ರಮಾನಂದರನ್ನು ಭೇಟಿಯಾದ. ವಿಷಯವನ್ನು ನಿಸ್ಸಂಕೋಚದಿಂದ ತಿಳಿಸಿದ. ರಮಾನಂದರು ಈ ಎಳೆ ತರುಣನ ಆದರ್ಶದ ಮುಂದೆ, ಅವನ ಮನೆ, ತಂದೆ-ತಾಯಿ, ಮುಂದೊದಗುವ ಅನಾಹುತ, ಈ ಒಲವು ಕ್ಷಣಿಕವಾಗಿರಬಹುದು ಎಂದೆಲ್ಲಾ ವಿವರಿಸಿದರು. "ಹೆಣ್ಣನ್ನು ಕಾಣದವನೇನಲ್ಲ ನಾನು. ಕ್ಷಣಿಕ ಒಲವಿಗೂ ಈ ಒಲವಿಗೂ ವ್ಯತ್ಯಾಸವಿದೆಯೆಂದು ನನ್ನ ಭಾವನೆ" ಎಂದ ರಘುರಾಮ.

ರಮಾನಂದರು ರಾಜಮ್ಮನೊಡನೆ ಭೇಟಿ ಮಾಡಿಸಿದರು ಅವಳು ಆಶ್ಚರ್ಯಭರಿತಳಾದಳು. ರಮಾನಂದರ ಮಾತುಗಳೇ ಅವಳ ಬಾಯಿಂದ ಮತ್ತೊಮ್ಮೆ ಬಂದುವು. ಆದರೆ ರಘುರಾಮನದು ಒಂದೇ ಉತ್ತರ: "ನಿಮಗೆ ಒಪ್ಪಿಗೆ, ನಂಬುಗೆ ಇದೆಯೇ ಹೇಳಿ. ನನ್ನೆದುರು ಬಂದುದನ್ನು ನಾನು ಎದುರಿಸಿಕೊಳ್ಳುತ್ತೇನೆ ಎಂದು.

ತನ್ನ ಮಗಳಿಗಿನ್ನು ವರನನ್ನು ಸಂಪಾದಿಸುವುದು ಎಷ್ಟು ಕಷ್ಟವೆಂದು ಗೊತ್ತಿದ್ದ ರಾಜಮ್ಮ ಇಂತಹ ಸನ್ಮಾನವಂತ, ಶ್ರೀಮಂತ, ವಿದ್ಯಾವಂತ, ಭವ್ಯ ಭವಿಷ್ಯವುಳ್ಳವನು ದೊರೆತನೆಂದು ಸಂತೋಷಪಡಬೇಕಾದುದೇ ಆದರೂ 'ಇವನ ಹಿರಿತನಕ್ಕೆ ತಕ್ಕವಳಲ್ಲ ನೀಲಾ" ಎಂದವಳ ಮನಸ್ಸು ನುಡಿಯುತ್ತಿತ್ತು.

ರಾಜಮ್ಮ ಮಗಳಲ್ಲಿ ಪ್ರಸ್ತಾಪಿಸಿದಳು ನೀಲಾ ಸಮ್ಮತಿಸಲಿಲ್ಲ. ತನ್ನ ಪೂರ್ವಚರಿತ್ರೆಯ ನೆನಪು ಅವಳ ಮನವನ್ನು ನಡುಗಿಸಿತು. 'ಇವನೆಂಥವನೋ' ಎಂದು ಹೃದಯ ಶಂಕಿಸಿತು; ಕಂಪಿಸಿತು! ಆದರೆ ತಾಯಿ ಮತ್ತು ಡಾಕ್ಟರ್ ರಮಾನಂದರು ಹೇಳಿದ ಸಂಗತಿಗಳು ಅವಳಲ್ಲಿ ನಂಬುಗೆ, ಧೈರ್ಯಗಳನ್ನು ಹುಟ್ಟಿಸಲು ಶಕ್ತವಾದುವು. "ಇಂತಹ ಸಂದರ್ಭ ಹೋದರೆ ತನಗಾಗಿ ತನ್ನ ವಿವಾಹಕ್ಕಾಗಿ ತನ್ನ ತಾಯಿ ಪಡಬೇಕಾದ ಕಷ್ಟದ ಅಪಾರ ಸ್ವರೂಪವನ್ನು ಸ್ಮರಿಸಿ ಕಡೆಗೊಮ್ಮೆ ನೀಲಾ ಒಪ್ಪಿದಳು.

ರಘುರಾಮನನ್ನು ಮನೆಗೆ ಆಮಂತ್ರಿಸಿ, ರಾಜಮ್ಮ ತನ್ನ ಬಾಯಾರ ಮಗಳ ಪೂರ್ವಚರಿತ್ರೆಯನ್ನು ತಿಳಿಸಿದಳು. ಒಮ್ಮೆ ರೋಮಾಂಚನವಾಯ್ತು ಅವನಿಗೆ. ಆದರೆ ಮರುಕ್ಷಣವೇ ನಕ್ಕು ಬಿಟ್ಟ. "ಜೀವನದಲ್ಲಿ ಏನಿದೆ? ಘಟನೆಗೂ ಘಟನೆಗೂ ಸಂಬಂಧವಿಲ್ಲ. ನಮ್ಮಿಬ್ಬರ ಬಾಳು ಸುಗಮವಾದೀತು; ಆಗುವುದು ಎಂಬ ಧೈರ್ಯ ನನಗಿದೆ" ಎಂದ ಆತ.

ಕಾನೂನು ಪ್ರಕಾರ ನೀಲಾ–ರಘುರಾಮರ ವಿವಾಹ ನಡೆದುಹೋಯಿತು. ವಕೀಲಿ ವೃತ್ತಿ ಆರಂಭಿಸಲು ರಘುರಾಮ ಮದರಾಸಿಗೆ ಹೋದ. ಆದರೆ ಈ ಮದುವೆಯ ಪರಿಣಾಮ!........

ರಘುರಾಮನ ತಾಯಿ ತಾವು ಸಾಯುವವರೆಗೂ ಮಗನ ಮುಖ ನೋಡಲಾರೆನೆಂದು ಪ್ರತಿಜ್ಞೆ ಮಾಡಿದರು. ತಂದೆ ಸಿಟ್ಟುಗೊಂಡು, ಶಾಂತರಾಗಿ, ದುಃಖಿಸಿದರು 'ಪ್ರೀತಿಯ ಅಣ್ಣನನ್ನಾದರೂ ನೋಡಿ ಬರುತ್ತೇನೆ'. ಎಂದು ಹೇಳಿದ ರಮೇಶನಿಗೆ ಹೋಗಲಾರದಂತೆ ತಾಯಿ ಭಯಂಕರ ಆಣೆಮಾಡಿದರು. "ರಘುರಾಮ ಯಾವುದೋ ಹೆಣ್ಣನ್ನು 'ರಿಜಿಸ್ಟರ್ ಮದುವೆ' ಯಾದ" ಎಂದಷ್ಟೇ ಎಲ್ಲರೂ ಬಲ್ಲರು ಹೊರತು ಅದಕ್ಕಿಂತ ಹೆಚ್ಚು ಯಾರೂ ಅರಿಯರು.

ಇದೇ ಚಿಂತೆಯಿಂದ ಪೀಡಿತರಾಗಿ ಹಾಸಿಗೆ ಹಿಡಿದು, ಒಂದೇ ವರ್ಷದಲ್ಲಿ ತಾಯಿ ಮೃತರಾದರು. ರಘುರಾಮ ಸುದ್ದಿ ಕೇಳಿ ಧಾವಿಸಿದ್ದ. ಆದರೆ ತಾಯಿ ಮಗನೊಡನೆ ಮಾತನಾಡದೆಯೇ ಪ್ರಾಣ ಬಿಟ್ಟರು. ನೊಂದ ಮನದಿಂದ, ತನ್ನನ್ನೇ ಅವ್ಯಕ್ತ ವಾತ್ಸಲ್ಯದಿಂದ ನೋಡುತ್ತಿದ್ದ ತಂದೆ ತಮ್ಮ, ಅಣ್ಣಂದಿರನ್ನು ಬಿಟ್ಟು ರಘುರಾಮ ಮದರಾಸಿಗೆ ಶೂನ್ಯ ಮನಸ್ಕನಾಗಿ ಹೊರಟುಹೋದ.

೦೦ ೦೦

ರಮೇಶ ಎಂ. ಎ. ಮುಗಿಸಿದ. ರಜೆ ಬಂತು. ಮುಂದೇನೆಂದು ನಿರ್ಧರಿಸುವ ದೀರ್ಘರಜೆ! "ಅಣ್ಣನನ್ನು ನೋಡದೆ ಕಾಲವಾಯಿತು. 'ಮುಂದೇನು' ಎಂಬ ಪ್ರಶ್ನೆಗೆ ಅಣ್ಣನೂ ಉತ್ತರಿಸಬಹುದು' ಎಂದು ಯೋಚಿಸಿ ಮದರಾಸಿಗೆ ಹೊರಟ.

ಸಂಜೆಯ ಹೊತ್ತು. ಕಾರಿನ ಡ್ರೈವರ್ ಅಲ್ಪಸಂಶಯ ಪರಿಚಯದಿಂದ ರಮೇಶನನ್ನು ರಘುರಾಮನ ಮನೆಯ ಬೀದಿಯಲ್ಲಿಳಿಸಿ ದಾರಿ ತೋರಿಸಿ ಹೊರಟುಹೋದ. ಹತ್ತಿರದಲ್ಲೇ ಜೋಡು ಕಾಣಿಸಿತು. ಭವ್ಯಕಾರದ ಮನೆ. ಯಾರೋ ಇಬ್ಬರು ಮನೆಯಿಂದ ಹೊರ ಬರುತ್ತಿದ್ದರು. ಯಾರೋ ಕಕ್ಷಿಗಾರರಿರಬೇಕು ಎಂದು ಕೊಳ್ಳುತ್ತ ರಮೇಶ ಮನೆಯನ್ನು ಪ್ರವೇಶಿಸಿದ. ತುಂಬಾ ಬದಲಾಯಿಸಿ ಹೋಗಿರುವ ಅಣ್ಣತಮ್ಮಂದಿರು ಪರಿಸ್ಥಿತಿ ಗುರುತಿಸಲಾರದೆ ಹೋದರು. ಕೂಡಲೇ ರಘುರಾಮ. "ರಮೇಶ!" ಎಂದು ಉದ್ಗರಿಸಿ ತಮ್ಮನನ್ನಪ್ಪಿಕೊಂಡ. ಹಿಡಿಸಲಾರದಷ್ಟು ಸಂತೋಷವಾಗಿತ್ತು ಅವನಿಗೆ! ಬಹಳ ದೂರದಿಂದ, ತನ್ನೂರು ಮನೆಯಿಂದ ಬಂದ ತನ್ನ ಪ್ರೀತಿಯ ತಮ್ಮನನ್ನು ನೋಡಿ ಸಂತೋಷದಿಂದ ಅವನ ಹೃದಯ ತುಂಬಿ ಬಂತು. ತಮ್ಮನನ್ನು ಕುಳ್ಳಿರಿಸಿ, ಒಳಹೋಗಿ ಹೆಂಡತಿಯೊಡನೆ "ನಿನ್ನ ಭಾವ, ನನ್ನ ತಮ್ಮ ಬಂದಿದ್ದಾನೆ. ಚಲೋದಾಗಿ ಕಾಫಿ ಸಿದ್ಧಪಡಿಸು" ಎಂದು ಸೂಚಿಸಿ ಬಂದ. ಊರು, ಮನೆ, ಸ್ಥಿತಿಗತಿ, ವಿದ್ಯಾಭ್ಯಾಸ, ಪರೀಕ್ಷೆ ಎಂದೆಲ್ಲಾ ಮಾತನಾಡಲು ಆರಂಭಿಸಿದರು ಅಣ್ಣತಮ್ಮಂದಿರು. ತನ್ನನ್ನು ಮಾತ್ರವೇ ಹೊರತು ತನ್ನ ಮನೆಯವರನ್ನು ನೋಡದ ತನ್ನ ಪತ್ನಿಗೆ ತನ್ನ ತಮ್ಮನ ಪರಿಚಯ ಮಾಡಿಸಬೇಕು. ತನ್ನ ಕುಟುಂಬ, ಅಣ್ಣತಮ್ಮಂದಿರ ಕುರಿತು ಇದುವರೆಗೆ ಅವಳಿಗೆ ಹೇಳಿರಲಿಲ್ಲ ಈಗ ಹೇಳಬೇಕು" ಎಂದು ಯೋಚಿಸುತ್ತಿದ್ದ ರಘುರಾಮ.

ನೀಲಾ ತಟ್ಟೆಯನ್ನು ಹಿಡಿದುಕೊಂಡು ಸಹಜವಾದ ನಗು ಮುಖದಿಂದ ಒಳಪ್ರವೇಶಿಸಿದಳು. ತನ್ನ ಗಂಡನೊಂದಿಗೆ ಕುಳಿತ ತನ್ನ ಪತಿಯ ತಮ್ಮನ ಕಡೆಗೆ ನೋಡಿದಳು ನೀಲಾ. ಶಿಲಾ ಮೂರ್ತಿಯಂತೆ ನಿಂತಲ್ಲೇ ಮರವಟ್ಟು ನೋಡಿದಳು. ರಮೇಶನೂ ನೋಡಿದ "ಹೌದು. ಅವಳೇ...ಅವಳೇ ನೀಲಾ!"

ಕೈಯಿಂದ ತಟ್ಟೆ ಜಾರಿ ಟಪ್ಪೆಂದು ಕೆಳಬಿತ್ತು. ಕಪ್ ಸಾಸರ್‌ಗಳು ಹುಡಿ ಹುಡಿಯಾಗಿ ಹಾರಿದುವು. ನೀಲಾ ಕುಸಿದು ಕೆಳಬಿದ್ದಳು. ರಘುರಾಮ ಗಾಬರಿಯಾಗಿ ಹತ್ತಿರ ಬಂದು ನೋಡಿದ, ನೀಲಾಳಿಗೆ ಮೂರ್ಛೆ ತಪ್ಪಿತ್ತು!

ರಮೇಶ ಕಲ್ಲಿನಂತೆ ಕುಳಿತಿದ್ದ. ಆದರೆ ಆದರೆ ಕಣ್ಣೆದುರು ಮೂರ್ಛೆ ತಪ್ಪಿಬಿದ್ದ ನೀಲಾಳ ಆರೈಕೆ ಅನಿವಾರ್ಯವಾಗಿತ್ತು. ಅಣ್ಣತಮ್ಮಂದಿರು ನೀಲಾಳನ್ನೆತ್ತಿ ಹಾಸಿಗೆಯಲ್ಲೊರಗಿಸಿದರು. ಸ್ವಲ್ಪ ಹೊತ್ತು ಗಾಳಿ ನೀರುಗಳ ಸೇಚನೆಯಾದೊಡನೆ ನೀಲಾ ಕಣ್ದೆರೆದಳು.

ರಮೇಶನ ಹೃದಯದಲ್ಲಿ ಏನಾಗುತ್ತಿತ್ತೆಂದು ಹೇಳಲು ಸಾಧ್ಯವಿರಲಿಲ್ಲ. ಮನಸ್ಸು ಮಂಜಾಗಿ ಹೋಗಿತ್ತು. "ತಾನು ಹಿಸುಕಿ ಎಸೆದ ಹೆಣ್ಣು ತನ್ನಣ್ಣನ ಕೈಹಿಡಿದಿದ್ದಾಳೆ. ತಾನು ದ್ರೋಹಿ....ವಂಚಕ... ಮಾನವ ಪಶು...ಅರಿಯದ ಹೆಣ್ಣನ್ನು ಘಾಸಿಗೊಳಿಸಿದ ಪಾತಕಿ!" ಎಂಬ ಕೂಗು ಕೇಳುತ್ತಿತ್ತು!

ನೀಲಾ ಕಣ್ದೆರೆದಳು. ತೆರೆದ ಕಣ್ಣಿಗೆ ಕಂಡುದು ರಮೇಶನ ಮುಖ. ಕಿಟ್ಟನೆ ತಿರುಗಿ ಟಪ್ಪೆಂದು ಹಾಸಿಗೆಯಿಂದ ಜಿಗಿದು ಓಡಿ ಹೋದಳು ನೀಲಾ. ತನ್ನ ಕೋಣೆಗೆ ಹೋಗಿ ದಢಾರನೆ ಬಾಗಿಲು ಹಾಕಿಕೊಂಡಳು.

ಅಣ್ಣ ತಮ್ಮಂದಿರು ದಿಕ್ಕೆಟ್ಟ ಅನಾಥರಂತಾದರು. ರಘುರಾಮ ದಿಗ್ಭ್ರಾಂತಿ ಹೊಂದಿದ.

"ಅಣ್ಣಾ, ಅಳಿಸಲಾರದ ಅಪರಾಧ ನನ್ನಿಂದಾಗಿದೆ. ದೈವದ ಆಟ ವಿಚಿತ್ರ! ನಾನಿನ್ನು ಇಲ್ಲಿ ನಿಲ್ಲಲಾರೆ. ನಾನು ಹೋಗುತ್ತೇನೆ' ಎಂದು ಅಣ್ಣನ ಕಾಲು ಹಿಡಿದು ನಮಸ್ಕರಿಸಿ ಹೊರಟ ರಮೇಶ.

ರಘುರಾಮನ ಮನಸ್ಸಿನ ಹಿನ್ನೆಲೆಯಲ್ಲಿ ಹಿಂದಿನ ದೃಶ್ಯ ಕಾಣಿಸಿತು. ಏನೋ ಮಿಂಚಿತು. "ಹೌದು....ಹೌದು....ಕತೆ ....ರಾಜಮ್ಮ ಹೇಳಿದ ಕತೆ....ಹಾಗೆಯೇ ....ಖಂಡಿತ!"

ಹೊರಟು ಹೋಗುತ್ತಿರುವ ತಮ್ಮನ ಕೈಹಿಡಿದುಕೊಂಡ. 'ರಮೇಶ, ನಾನು ಬಲ್ಲೆ. ಎಲ್ಲವೂ ನನಗರಿವಾಗಿದೆ; ತಡೆ!" ಎಂದ. ಅಣ್ಣನ ಮುಖವನ್ನೂ ನೋಡದೆ "ಇಲ್ಲ ಅಣ್ಣಾ ನಾನು ನಿಲ್ಲಲಾರೆ' ಎಂದು ಕೈಕೊಸರಿಕೊಂಡ ರಮೇಶ ದುಃಖ, ಪಶ್ಚಾತ್ತಾಪಗಳಿಂದ ಅವನ ದಗ್ಧ ಹೃದಯ ಬಿರಿಯುವಂತಿತ್ತು,

ಅತ್ತ ಒಳಗೆ ನೀಲಾ ಏನು ಮಾಡುತ್ತಿರುವಳೋ, ಎಲ್ಲಿ ಪ್ರಾಣಕ್ಕೆ ಎರವನ್ನು ತಂದುಕೊಳ್ಳುವಳೋ ಎಂದು ಕಾತುರದಿಂದ ಧಾವಿಸುತ್ತಿರುವಾಗ ತಮ್ಮ ಇತ್ತ ಹೊರಧಾವಿಸುತ್ತಿದ್ದಾನೆ! ಏನು ಮಾಡಲೂ ತೋಚದೆ ಅವನೆಂದ "ರಮೇಶಾ, ನೀನೂ ಹೋಗು. ನೀಲಾ ಕೂಡಾ ನನ್ನನ್ನು ತೊರೆಯಲಿ. ನಾನೊಬ್ಬನೇ ಉಳಿಯುವಂತಾಗಬೇಕೆ? ಹಾಗಿದ್ದರೆ ನಾನೇ ಹೊರಡುವೆ" ಎಂದು ರಘುರಾಮ ಉಪ್ಪೇ

NAVAYUGA
REGD. NO. M. 3619

UDIPI, THURSDAY
18—6—1959

LICENSE NO. 31
Licensed to Post without Prepayment

ಗದಿಂದ ಮುಂದಡಿಯಿಟ್ಟ. ರಮೇಶನ ಮನಸ್ಸು ರಬ್ಬರ್ ಚೆಂಡಿನಂತೆ ನೆಗೆಯಿತು. ಹೌದು, ಮೂರು ಜೀವಗಳೂ ಬಲಿಯಾಗಬೇಕಾದೀತು! ತನಗಾಗಿ ತನ್ನಣ್ಣ ಮತ್ತು ನೀಲಾ ಘಾಸಿಗೊಳ್ಳಬೇಕೆ?" ಎಂದು ಚಿಂತಿಸಿ, ರಮೇಶ ಸರಕ್ಕನೆ ತಿರುಗಿ ಒಳಗೋಡಿದ ಬಾಗಿಲಿಗೆಷ್ಟು ಬಡಿದರೂ ಉತ್ತರವಿಲ್ಲ.

ಕಾತರ ಮಿತಿಮೀರಿತು. ರಮೇಶನ ಮೊದಲ ಒದೆತಕ್ಕೆ ಬಾಗಿಲು ನಡುಗಿತು. ಇನ್ನೊಮ್ಮೆ ಒದೆದ, ಬಾಗಿಲು ಬಿರಿಯಿತು. ರಘುರಾಮನ ಒದೆತಕ್ಕೆ ಬಾಗಿಲು ಸರ್ರನೆ ತೆರೆದು ಗೋಡೆಗೆ ಟಪ್ಪೆಂದು ಬಡಿದುಕೊಂಡಿತು. ಸೀರೆಯ ಕುಣಿಕೆಯಲ್ಲಿ ಕೊರಳೊಡ್ಡಿ ಛಾವಣಿಯಲ್ಲಿ ತೂಗುವ ನೀಲಾಳ ಶರೀರ ಗೋಚರಿಸಿತು!

ರಮೇಶ ಛಂಗನೆ ಮೇಜಿನ ಮೇಲೆ ಹಾರಿದ. ಸುದೈವವಶಾತ್ ಕವಾಟಿನ ಮೇಲಿಟ್ಟ ಚೂರಿಯಿಂದ ಸರಕ್ಕನೆ ಸೀರೆಯನ್ನು ಕೊಯ್ದುಬಿಟ್ಟ.

ಹೃದಯದ ಬಡಿತ ನಿಂತಿರಲಿಲ್ಲ! ಆಶಾಕಿರಣ ಗೋಚರಿಸಿತು! ಫೋನ್ ಮಾಡಿದರು. ಡಾಕ್ಟರರು ಬಂದರು. ಒಂದು ಗಂಟೆಯ ಸತತ ಪರಿಶ್ರಮದ ಬಳಿಕ ನೀಲಾಳ ಹೃದಯ ಶಕ್ತಿಯುತವಾಯಿತು.

ನೀಲಾ ಸ್ವಸ್ಥಳಾಗಬೇಕಾದರೆ ಹತ್ತು ದಿನ ಬೇಕಾಯಿತು! ರಘುರಾಮನ ಕಟ್ಟಪ್ಪಣೆಯ ಮೇರೆಗೆ ರಮೇಶ ಉಳಿದ. ಅವನೆಲ್ಲಿಗೂ ಹೋಗದಂತೆ ಅಣ್ಣನೇ ತಮ್ಮನನ್ನು ನೋಡಿಕೊಂಡ. ನೀಲಾಳ ಹಾಸಿಗೆಯ ಬಳಿ ಹೋದರೆ ನೆನಪು ಮರುಕಳಿಸಬಹುದೆಂದು ರಮೇಶ ದೂರದಲ್ಲೇ ಉಳಿದ.

ರಘುರಾಮ ಬೋಧನೆಯಿಂದ ತಮ್ಮನ ಮನೋದ್ವೇಗವನ್ನು ಕಡಿಮೆ ಮಾಡಿದ. ಅವನ ಹೃದಯಕ್ಕೆ ಶಾಂತಿಯ ಧಾರೆಯೆರೆದ. "ತಾರುಣ್ಯದಲ್ಲಿ ನಡೆದ ಒಂದು ವಿಪರೀತ ಘಟನೆ. ಆದರೆ ಇಂದದನ್ನು ಮರೆತು ಜೀವಿಸಬೇಕು. ಇಲ್ಲದಿದ್ದರೆ ರಮೇಶ, ನಿನ್ನ ಜೀವನ, ನನ್ನ ಜೀವನ, ನೀಲಾಳ ಜೀವನ ಒಡೆದುಹೋಗಬೇಕಾದೀತು. ನಮಗೆ ದೇಹ ಮುಖ್ಯವಲ್ಲ; ಹೃದಯ ಮುಖ್ಯ" ಎಂದ.

ನೀಲಾಳಿಗಾದ ಮಾನಸಿಕ ಆಘಾತವು ಹಾಗೆಯೇ ಉಳಿದು, ಬೆಳೆದರೆ ಹುಚ್ಚೇ ಹಿಡಿಯುವ ಸಂಭವವಿತ್ತು. ಅವಳ ಮನಸ್ಸನ್ನು ತಿರುಗಿ ಸ್ಥಿರಗೊಳಿಸಲು ರಘುರಾಮ ಶತಪ್ರಯತ್ನ ಮಾಡಿದ. "ನೀಲಾ, ಅವನು ನನ್ನ ತಮ್ಮ. ಜೀವನದ ಮೊದಲಲ್ಲಿ ಏನೋ ದುರ್ಘಟನೆ ನಡೆದುಹೋಯಿತು. ಇದರಲ್ಲಿ ನಿನ್ನ ತಪ್ಪೂ ಇದೆ. ನಾವು ಮೂವರನ್ನೂ ಒಂದುಗೂಡಿಸಿದ ದೈವದ ಲೀಲೆಯೂ ವಿಚಿತ್ರವೇ" ಎಂದ. "ರಮೇಶನಿಂದು ಪರಿಶುದ್ಧನಾಗಿದ್ದಾನೆ. ಎಂದೋ ಅವನ. ಪ್ರಾಣಹತ್ಯೆ ಮಾಡಿಕೊಳ್ಳುತ್ತಿದ್ದ. ನನ್ನ ಕಾವಲಿಂದಾಗಿ ಉಳಿದುಕೊಂಡಿದ್ದಾನೆ. ನೀನು ಹೋದರೆ ಅವನು ಉಳಿಯುವುದಿಲ್ಲ ನೀಲಾ, ಮತ್ತೆ ನಾನು ಬಾಳಬೇಕೆ?" ಎಂದ.

ನೀಲಾ ಹಾಸಿಗೆಯಿಂದೆದ್ದ ದಿನ, ರಮೇಶ ನೀಲಾಳ ಬಳಿ ಬಂದ. ಹತ್ತೇ ದಿನದಲ್ಲಿ ಕಡ್ಡಿಯಂತಾದ ರಮೇಶನನ್ನು ನೋಡಿದಳು ನೀಲಾ. "ಅಕ್ಕ" ಎಂದು ಅತ್ತಿಗೆಯ ಕಾಲಬಳಿ ಕುಳಿತು ಗಳಗಳನೆ ಅತ್ತುಬಿಟ್ಟ. ನೀಲಾಳ ಕಣ್ಣಲ್ಲಿ ಧಾರಾಕಾರವಾಗಿ ನೀರು ಹರಿಯಲಾರಂಭಿಸಿತು. ನೀಲಾ ರಮೇಶನ ತಲೆ ನೇವರಿಸಿ "ಮರೆಯೋಣ ರಮೇಶ. ಮರೆಯಬೇಕು. ಇದು ಬಾಳು!" ಎಂದಳು.

"ಹೆಣ್ಣಿನ ಹೃದಯದಲ್ಲಿ ನಡೆದ ಪರಿವರ್ತನೆಯ ಪವಾಡ ಇದು!" ಎಂದು ಯೋಚಿಸುತ್ತಾ ನೀಲಾ—ರಮೇಶರನ್ನು ನೋಡಿ ರಘುರಾಮ ಕಣ್ಣೊರಸಿಕೊಂಡ.

**—ಕೂಡ್ಲು ತಿಮ್ಮಪ್ಪ ಗಟ್ಟಿ,
ಪೆರಡಾಲ.**

ವಿಚಾರ ಮಂಥನ

(೧ನೇ ಪುಟದಿಂದ)

ಆಲೋಚನೆ ಮಾಡಬೇಕಾಗಿ ಬಂದಿದೆ. ದೇಶದಲ್ಲಿ ಉಪಲಬ್ಧವಿರುವ ಸಾಧನಗಳಿಂದ ಒದಗಬಹುದಾದ ಮೊತ್ತವನ್ನೂ, ನಿಶ್ಚಯವಾಗಿ ಒದಗಬಹುದಾದ ಸಹಾಯದ ಬಂಡವಳವನ್ನೂ ಬಳಸಿಕೊಳ್ಳುವಂತೆ ಎಚ್ಚರಿಕೆ ವಹಿಸುವುದು ಅಗತ್ಯ. ಅದುದರಿಂದ, ಸಣ್ಣ ಪುಟ್ಟ ಉದ್ಯೋಗಗಳಿಗೆ ಪ್ರೋತ್ಸಾಹವಿತ್ತು ತನ್ಮೂಲಕ ದೇಶದೊಳಗೇನೇ ಬಂಡವಾಳವು ತಯಾರಾಗುವಂತೆ ಮಾಡುವ ಯೋಜನೆಗಳು ಆವಶ್ಯವೆಂದು ಹೇಳಬೇಕು.

ಯಾವುದೇ ಒಂದು ವಿಕಾಸಯೋಜನೆಯು ಸಫಲವಾಗಬೇಕಾದರೆ, ಸರ್ವ ಪ್ರಥಮವಾಗಿ, ಬಂಡವಳ, ಪ್ರಶಿಕ್ಷಿತ ಜನಶಕ್ತಿ ಹಾಗೂ ಯಥೇಷ್ಟ ಕಚ್ಚಾ ವಸ್ತುಗಳು ಆವಶ್ಯ. ಆದುದರಿಂದ ಭಾರತವಾದರೂ ಇರುವ ಈ ಮೂರು ಕೊರತೆಗಳನ್ನು ತೀವ್ರವಾಗಿ ಬಗೆಹರಿಸುವುದರಿಂದಲೇ ಆದರ ಯೋಜನೆಗಳು ಯಶಸ್ವಿಯಾಗುತ್ತವೆ. ಮಹಾತ್ವಾಕಾಂಕ್ಷೆಯಿಂದಷ್ಟೆ ಯೋಜನೆಗಳು ಪೂರ್ತಿ ಸಫಲವಾಗುವುವೆಂದು ಹೇಳುವುದು ದಾರ್ಷ್ಟ್ಯವಲ್ಲವೆ?

೦೦ ೦೦

ಭಾರತದ ಪ್ರಧಾನಮಂತ್ರಿ ಪಂಡಿತ ಜವಾಹರಲಾಲರು ನೇಪಾಲದ ಸಂದರ್ಶನವನ್ನು ಮುಕ್ತಾಯಗೊಳಿಸಿ ಸ್ವದೇಶಕ್ಕೆ ಮರಳಿದ್ದಾರೆ. ನೇಪಾಲವು ಪ್ರಜಾಪ್ರಭುತ್ವ ಮಾದರಿಯ ಶಾಸನಕ್ಕೆ ಒಳಗಾದನಂತರ ಅವರು ಭೇಟಿಯೀಯುತ್ತಿರುವುದು ಇದೇ ಮೊದಲು. ಅವರಿಗೆ ನೇಪಾಲೀ ಜನತೆಯಿಂದ ಪ್ರೇಮಾದರ ಪೂರ್ವಕವಾದ ಸ್ವಾಗತವು ದೊರೆಯಿತು.

ನೇಪಾಲ—ಭಾರತಗಳ ನಡುವಣ ಸಂಬಂಧ ಅಚಲವಾದುದು. ನೇಪಾಳವಾದರೂ ಭಾರತದ ಸಹಾಯದಿಂದಲೇ ಅಭಿವೃದ್ಧಿ ಪಥದತ್ತ ಮುನ್ನಡೆಯುತ್ತಿದೆ. ಅಲ್ಲಿ ಸಂದರ್ಶನವಿತ್ತ ಪ್ರಧಾನಿಯವರು ನೇಪಾಲ—ಭಾರತಗಳ ನಡುವೆ ಇರುವ ಪ್ರಾಚೀನ ಸಂಬಂಧಗಳನ್ನಲ್ಲದೇ ಆಧುನಿಕ ಯುಗದ ವಿಚಾರಶೀಲತೆಯ ಸಂಬಂಧವನ್ನೂ ವಿವರಿಸಿ, ಅನಭಿವೃದ್ಧ ದೇಶವಾದ ನೇಪಾಲವು ಸಂಪನ್ನವಾಗಬೇಕಾದರೆ, ಯಾವ ವಿಧಾನಗಳನ್ನು ಅಳವಡಿಸಬೇಕೆಂದು ಸ್ವಾನುಭವದ ನುಡಿಗಳನ್ನಾಡಿದರು. ಜಗತ್ತು ಇಂದು ಬಂಡವಳಶಾಹಿ ಸಾಮ್ಯವಾದಿ, ಸಮಾಜವಾದಿ ಮುಂತಾಗಿ ವಿಭಾಜಿತವಾಗದೆ ಅಭಿವೃದ್ಧಿ ಪ್ರದೇಶ ಮತ್ತು ಅನಭಿವೃದ್ಧ ಪ್ರದೇಶಗಳೆಂದು ದ್ವಿಭಾಗವಾಗಿದೆ. ಆದರೆ, ಇವೆಲ್ಲವನ್ನೂ ಕೇವಲ ಆಡುವುದರಿಂದ ಮಾತ್ರ ಪ್ರಯೋಜನವಿಲ್ಲ; ರಾಷ್ಟ್ರದ ಜನತೆಯೆಲ್ಲರೂ ಒಂದು ಸೇರಿ ಪರಿಶ್ರಮ ಪೂರ್ವಕ ದುಡಿದರೆ ಮಾತ್ರ ಅನಭಿವೃದ್ಧ ದೇಶಗಳೂ ಅಭಿವೃದ್ಧಿ ಹೊಂದುವುದು ಸಾಧ್ಯವೆಂದು ಅವರು ಹೇಳಿ, ಭಾರತವೂ ಆ ದಿಸೆಯಲ್ಲಿ ಪ್ರಯತ್ನ ನಡೆಸಿ ಸ್ವಲ್ಪ ಮಟ್ಟಿಗೆ ಸಫಲವಾಗಿದೆ ಎಂಬುದನ್ನು ತಿಳಿಸಿದರು.

ಭಾರತದಲ್ಲಿಯೂ ಶ್ರೀ ನೆಹರೂ ಇದೇ ಪಲ್ಲವಿಯನ್ನು ಹಾಡುತ್ತ ಇರುತ್ತಾರೆ. ಆರಾಮ್ ಹಾರಾಮ್ ಹೈ ಎಂದು ಘೋಷಿಸಿ, ಸಂಮೃದ್ಧ ಭಾರತವನ್ನು ಕಟ್ಟಲು ಮುಂದೆಬರಲು ಹೇಳುತ್ತಾರೆ; ತಾನೂ ಮುಂದೆ ನಡೆಯುತ್ತಾರೆ ಪಂಡಿತ ನೆಹರೂರವರಂತಹ ಮಾನವತಾ ಪ್ರೇಮಿ, ನೇಪಾಳೀಯರಿಗೆ ಸರಿಯಾದ ಉಪದೇಶವನ್ನೇ ಇತ್ತಿದ್ದಾರೆ. ಆದರ ಲಾಭವನ್ನು ಅಲ್ಲಿನ ಹೊಸ ಪ್ರಜಾಪ್ರಭುತ್ವ ಮಾದರಿಯ ಸರಕಾರ ಪಡೆಯಲು ಹಿಂದುಮುಂದು ನೋಡಲಾರದು.

೦೦ ೦೦

ಬರ್ಲಿನ್ ಸಮಸ್ಯೆಯ ಬಗ್ಗೆ ಚತುರ್ಮಹಾರಾಷ್ಟ್ರಗಳ ನಡುವೆ ನಡೆಯುತ್ತಿರುವ ಮಾತುಕತೆಗಳು ಆರಂಭ ಶೂರತನದಲ್ಲಿಯೇ ಮುಂದುವರಿದು, ಇದೀಗ ವಿರಸದಲ್ಲಿ ಕೊನೆಗೊಳ್ಳುವ ಲಕ್ಷಣಗಳು ದೃಗ್ಗೋಚರವಾಗುತ್ತಿವೆ. ಸಮಸ್ಯೆಯನ್ನು ಬಗೆಹರಿಸಬೇಕೆಂಬ ಇರಾದೆಯು ಪ್ರಾಯಃ ನಾಲ್ಕು ರಾಷ್ಟ್ರಗಳ ನಾಯಕರಲ್ಲಿಯೂ ಇರಲೇ ಇಲ್ಲ ಎಂದು ಈಗ ಊಹನೆ ಮಾಡಿದರೂ ಅದು ತಪ್ಪಾಗಲಾರದು. ಒಂದು ವರ್ಷದೊಳಗೆ ಈ ಪ್ರಶ್ನೆಯು ಬಗೆಹರಿಯದುಳಿದರೆ, ತಾನು ತನ್ನ ಭಾಗದ ಜರ್ಮನಿಯಿಂದ ಕಾಲ್ತೆಗೆಯುವುದಾಗಿ ಎಚ್ಚರಿಕೆ ರಷ್ಯ ಕೊಟ್ಟಿದೆಯಷ್ಟೆ? ಎಂದರೆ, 'ಪಶ್ಚಿಮ ಜರ್ಮನಿ'ಯನ್ನು ಸ್ವತಂತ್ರ ರಾಷ್ಟ್ರವೆಂದು ಮನ್ನಿಸಿದಂತಾಗುವುದು. ಆಗ ಅಮೆರಿಕೆಯ ಗತಿ?

ಅದಕ್ಕಾಗಿಯೇ ತೃತೀಯ ಲೋಕಯುದ್ಧ ಮೊದಲಾಗಬೇಕೆ? ಆಯಿತೆಂದೇ ಹೇಳೋಣ, ಆಗ ಪ್ರಧಾನಿ ನೆಹರೂರವರೆನ್ನುವಂತೆ, "ನಾಲ್ಕನೆಯ ಲೋಕ ಯುದ್ಧ" (ಇದೂ ಭಾರೀ ಭಾವಿ)ದ ವೇಳೆ ಬಿಲ್ಲುಬಾಣಗಳನ್ನೇ ಹಿಡಿದುಕೊಂಡು ಯುದ್ಧ ಮಾಡಬೇಕಾಗಿ ಬಂದರೆ, ನಾಗರಿಕತೆ, ಅಭಿವೃದ್ಧಿ, ವಿಜ್ಞಾನಗಳ ಮಾನವೆಲ್ಲಿ ಉಳಿಯಿತು? ಅದಕ್ಕಾಗಿಯೇ ಈ ಸಮಸ್ಯೆಗಳು ತೀವ್ರವಾಗಿ ಪರ್ಯವಸಾನಗೊಳ್ಳದೆ ಮುಂದುವರಿಯುತ್ತ ಹೋದರೆ, ಪ್ರಪಂಚದ ನಾಗರಿಕತೆ ಉಳಿದೀತು. ಪ್ರಾಯಃ ಇಂತಹ ಸಭ್ಯತಾ ರಕ್ಷಣೆಗೆ ಭಾರತ—ಪಾಕಿಸ್ತಾನಗಳೂ ಸೊಂಟಕಟ್ಟಿ, ಗಡಿಕಾಲುವೆ ನೀರುಗಳ ಬಗ್ಗೆ ಇನ್ನೂ ವಿಚಾರ ವಿಮರ್ಶೆ ನಡೆಸಿ, ಪರಸ್ಪರ ಖಂಡನೆ ಮಂಡನೆ ಮಧ್ಯಸ್ಥಿಕೆ, ಸರಸ—ವಿರಸ, ಹೆದರಿಕೆ—ಬೆದರಿಕೆಗಳ ಮಾಲೆಗಳನ್ನು ಪೋಣಿಸುತ್ತಿದ್ದು ಶಾಂತಿ—ಸೌಹಾರ್ದಮಯ ಪರಿಹಾರದ ಮಾರ್ಗದಲ್ಲಿಯೇ ಮುನ್ನಡೆಯುತ್ತಿವೆಯಲ್ಲವೆ?



ಬೆಲ್ಜಿಯಮಿನಲ್ಲಿ ಒಂದು ಕೆರೆಯ ಎದುರು ಕಟ್ಟಿಸಿದ ಭವ್ಯ ಭವನವೊಂದು. ಜಾಗತಿಕ ಪ್ರದರ್ಶನ, ಜಲರಲ್ಲಿ ಇಲ್ಲಿ ಅಮೆರಿಕೆಯು ತನ್ನ ಪ್ರದರ್ಶಿಕೆಗಳನ್ನು ಇಟ್ಟಿತ್ತು.

ವಿದ್ಯಾರ್ಥಿಗಳಿಗೆ

ವಿಶೇಷ ಸೌಲಭ್ಯ

ವಿದ್ಯಾರ್ಥಿಗಳ ಸೇವಿಂಗ್ಸ್ ಖಾತೆಯಲ್ಲಿ ಉಳಿತಾಯದ ಪಾಠವಿದೆ. ಮಾತ್ರವಲ್ಲದೆ ನಮ್ಮ ಶಾಖೆಯಿಂದ ಧರ್ಮಾರ್ಥವಾಗಿ ಹಣ ಪಾವತಿ ಮಾಡುವ ಅವಕಾಶ ಕಲ್ಪಿಸಿಕೊಡಲಾಗಿದೆ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ಸಿಂಡಿಕೇಟ್ ಬೇಂಕಿನ ಶಾಖೆಗೆ ಬನ್ನಿರಿ ಅಥವಾ ಬರೆಯಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ

ವರುಷ ೩೮. ವಾರ ೪೧ 25-6-1959 Vol. 38. No. 41.

ವಿಚಾರ ಮಥನ

ರಾಜಾಜಿಯವರಿಗೆ ಬೆಂಬಲ

* *

ನ್ಯಾಯಾಲಯಗಳ ವಿಮರ್ಶೆ

* *

ಇನ್ನೂ ವಿಲಂಬ ಬೇಕೆ?

* *

ಭಾರತದ ರಾಷ್ಟ್ರಪತಿ ಡಾ| ರಾಜೇಂದ್ರ ಪ್ರಸಾದರೂ ಸಹಕಾರೀ ವ್ಯವಸಾಯದ ಬಗ್ಗೆ ತಾನು ತಳೆದಿರುವ ಭಾವನೆಯನ್ನೇ ತಳೆದಿರುವರೆಂದು ಸ್ವತಂತ್ರ ಪಕ್ಷದ ನಾಯಕ ಚಕ್ರವರ್ತಿ ರಾಜಗೋಪಾಲಾಚಾರಿಯವರು ಮದ್ರಾಸದ ಒಂದು ಸಾರ್ವಜನಿಕ ಸಭೆಯಲ್ಲಿ ಘೋಷಿಸಿದ್ದಾರೆ ಮತ್ತು ತನ್ನ ಸ್ವತಂತ್ರ ಪಕ್ಷಕ್ಕೆ ವಿಶಾಲ ಕ್ಷೇತ್ರವೂ ಇದೆ ಎಂದವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ನವದೆಹಲಿಯ ಪತ್ರಿಕೆಯೊಂದು ರಾಷ್ಟ್ರಪತಿ ಮತ್ತು ಪ್ರಧಾನಿಯವರ ನಡುವೆ ನಡೆಯಿತೆಂದು ಹೇಳಲಾದ ಪತ್ರವ್ಯವಹಾರವನ್ನು ಪ್ರಕಟಿಸಿರುವುದನ್ನೂ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು. ರಾಷ್ಟ್ರಪತಿಯವರು ಪ್ರಧಾನಿಯವರಿಗೆ ಬರೆದರೆಂದು ಹೇಳಲಾದ ಪತ್ರದಲ್ಲಿ, "ಭೂವಿತರಣೆ, ಸಹಕಾರಿ ಕೃಷಿ ಇವುಗಳ ಬಗ್ಗೆ ಕಾಯಿದೆಯನ್ನು ರಚಿಸುವಾಗ, ವಿಶೇಷ ಎಚ್ಚರಿಕೆಯನ್ನು ವಹಿಸಬೇಕು; ಆ ಕಾರಣದಿಂದ ಧಾನ್ಯೋತ್ಪಾದನೆ ಕಡಿಮೆಯಾಗದಂತೆ ನೋಡಿಕೊಳ್ಳಬೇಕು" ಎಂದು ತಿಳಿಸಿರುವರು. ಈ ಮಾತುಗಳಿಂದ, ಸದ್ಯ ಕೇಂದ್ರ ಸರಕಾರವು ನಿರ್ಧರಿಸುವ ಸಹಕಾರಿ ಒಕ್ಕಲತನವನ್ನು ವ್ಯವಹಾರಕ್ಕೆ ತಂದರೆ, ಆಗರಿಂದ ಆಹಾರ ಧಾನ್ಯಗಳ ಉತ್ಪಾದನೆಯು ತಗ್ಗುವುದು; ಆ ಕಾರಣದಿಂದ ಸಹಕಾರಿ ಒಕ್ಕಲತನಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿರುವರೆಂದ ರಾಜಾಜಿ ತಿಳಿದುಕೊಂಡಿದ್ದಾರೆ. ಸಹಕಾರಿ ಕೃಷಿ ಪದ್ಧತಿಯನ್ನು ಅನುಸರಿಸುವುದರಿಂದ ಉತ್ಪಾದನೆಯು ಅಧಿಕವಾಗುವುದೆಂದು ಸರಕಾರಿ ಪಕ್ಷ—ಕಾಂಗ್ರೆಸ್ ತಿಳಿದಿರುವಾಗ, ರಾಷ್ಟ್ರಪತಿಯವರು ಯಾವ ಅಭಿಪ್ರಾಯದಿಂದ ಈ ರೀತಿ ಬರೆದರೆಂದು ನಿರ್ದಿಷ್ಟವಾಗಿ ಹೇಳ ಬರುವಂತಿಲ್ಲ. ರಾಜಾಜಿಯವರು ತಮ್ಮ ಪಕ್ಷವನ್ನು ಸಮರ್ಥಿಸುವ ದೃಷ್ಟಿಯಿಂದ ಸಹಕಾರಿ ವ್ಯವಸಾಯಕ್ಕೆ ವಿರೋಧವಾದ ಅಭಿಪ್ರಾಯವನ್ನು ಈ ಮಾತುಗಳಿಗೆ ಕಟ್ಟಿಕೊಂಡರೆ, ಕಾಂಗ್ರೆಸ್ ತನಗೆ ಅನುಕೂಲವಾಗುವಂತೆಯೂ ಇದನ್ನು ಅರ್ಥವಿಸಿಕೊಳ್ಳಬಹುದು. ಭೂಸುಧಾರಣೆಯಂತಹ ಮಹತ್ವದ ಕಾಯಿದೆ ರಚಿಸುವಾಗ ವಿಶೇಷ ಲಕ್ಷ್ಯವನ್ನು ವಹಿಸಿ ಎಚ್ಚರವಾಗುವುದು ಮಾತ್ರ ಅವಶ್ಯ ಎಂದು ತಿಳಿಯಬಹುದು

ಂ ಂ

ಅಮೆರಿಕೆಯ ಕಾಂಗ್ರೆಸ್‌ನಲ್ಲಿ ಪಾಕಿಸ್ತಾನಕ್ಕೆ ಅಮೆರಿಕೆಯು ಇತ್ತ ಶಸ್ತ್ರಾಸ್ತ್ರ ಪೂರೈಕೆಯ ಸಂಬಂಧದಲ್ಲಿ ವಿವಾದವು ಎದ್ದಂತೆ ಕಂಡುಬರುತ್ತದೆ ಸಿನೇಟರ್ ಅಲ್ಬರ್ಟ್ ಗೋರೆಯವರು ಈ ವಿಷಯದಲ್ಲಿ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸುತ್ತ ಒಂದೆಡೆ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸಲು ಮತ್ತು ಇನ್ನೊಂದೆಡೆ ಭಾರತಕ್ಕೆ ಸಹಾಯಧನ ನೀಡಲು ಅಮೆರಿಕೆಯೇ ವೆಚ್ಚಮಾಡಬೇಕಾಗಿ ಬರುತ್ತದೆ ಅಮೆರಿಕೆಯು ಇತ್ತಿರುವ ಸಹಾಯವನ್ನು ಪಾಕಿಸ್ತಾನವು ತನ್ನಿಚ್ಛೆಯಂತೆ ವಿನಿಯೋಗಿಸುತ್ತ ಇದೆ, ಇದು ಸರಿಯಲ್ಲ ಎಂದು ಆರೋಪಿಸಿದ್ದಾರೆ. ಇದೇ ಸಭೆಯಲ್ಲಿ ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆಯ ನಾಲ್ಕನೆಯ ವರ್ಷದ ವೆಚ್ಚಕ್ಕಾಗಿ ಅಮೆರಿಕೆಯು ೩೦ ಕೋಟಿ ಡಾಲರುಗಳನ್ನೂ ಸಹಾಯವೆಂದು ಮಂಜೂರು ಮಾಡಿದೆ

ಭಾರತವು ತನ್ನ ದೇಶದ ಆಂತರಿಕ ಸಂಪತ್ತನ್ನು ಹೆಚ್ಚಿಸಿ, ಅಭಿವೃದ್ಧಿಪಥ ಭ್ರಮಣಾರ್ಥವಾಗಿ ಅಮೆರಿಕೆಯಿಂದ ಸಹಾಯ ಬಯಸಿದರೆ, ಪಾಕಿಸ್ತಾನವು ಚೀನಾ, ರಶ್ಯಗಳ ಅಂಜಿಕೆಯನ್ನು ಮುಂದೆ ಮಾಡಿ ಭಾರತದ ವಿರುದ್ಧವೇ ಶಸ್ತ್ರಾಸ್ತ್ರಗಳನ್ನು ಎತ್ತುವ ಯೋಜನೆಯಲ್ಲಿ ಮಗ್ನವಾಗಿದೆ ಎಂಬ ವಿಷಯವನ್ನು ಶ್ರೀ ಗೋರೆಯವರೂ ಮರೆಯಲಿಲ್ಲ ಈ ಬಗ್ಗೆ ಅವರು ತಮ್ಮ ವಿವಂಚನೆಯನ್ನೂ ವ್ಯಕ್ತಪಡಿಸಿದ್ದಾರೆ ಪಾಕಿಸ್ತಾನಕ್ಕೆ ಕಮ್ಯುನಿಸ್ಟರ ಆಕ್ರಮಣವನ್ನು ತಡೆಗಟ್ಟಲು ಸಹಾಯವಾಗುವಂತೆ ಅಮೆರಿಕೆಯು ನೆರವನ್ನಿತ್ತರೂ, ಆ ಶಸ್ತ್ರಾಸ್ತ್ರಗಳನ್ನು ಬಳಸುವವರು ಪಾಕಿಸ್ತಾನಿಗಳೇ ಹೊರತು ಅಮೆರಿಕೆಯಲ್ಲ. ಹೀಗೆ ಒಂದೆಡೆ ಭಾರತದ ಅಭಿವೃದ್ಧಿಯನ್ನು ಹಾರೈಸಿ, ಅದಕ್ಕೆ ಮುಕ್ತಹಸ್ತದಿಂದ ವಿವಿಧ ಸಹಾಯವನ್ನು ನೀಡುತ್ತಿರುವಂತೆಯೇ ಭಾರತದ ಬಗ್ಗೆ ವಿಪರೀತ ಧೋರಣೆಯನ್ನು ತಳೆದು, ಕರುಬುತ್ತಿರುವ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸುವುದೆಂದರೆ, ತೀರ ವಿರೋಧಾಭಾಸವೆಂಬುದು ಈಗಾಗಲೇ ಬೆಳಕಿಗೆ ಬಂದಿದೆ. ಪಾಕಿಸ್ತಾನೀ ನಾಯಕರಾದರೂ, ಅಮೆರಿಕೆಯ ಸೈನಿಕ ಸಹಾಯವನ್ನು ಭಾರತದ ಮೇಲೆ ಪ್ರಯೋಗಿಸಲೂ ಸಾಧ್ಯವೆಂದು ಬಾಯಿಯಲ್ಲಿ ಅಂದುಕೊಳ್ಳುತ್ತಿರುವುದಲ್ಲದೇ ಗಡಿ ಪ್ರದೇಶದಲ್ಲಿ ಅಲ್ಪ ಸ್ವಲ್ಪ ಪ್ರತ್ಯಕ್ಷೀಕರಿಸುತ್ತಲೂ ಇದ್ದಾರೆ ಹಾಗಿರುವಾಗ, ನ್ಯಾಯಾನ್ಯಾಯಗಳ ವಿಮರ್ಶೆ ಮಾಡುವುದು ಅವಶ್ಯವಲ್ಲವೆ?

ಂಂ ಂಂ

ಮೈಸೂರು ಸರಕಾರವು ತಯಾರಿಸಿ ಪ್ರಕಟಿಸಿದ 'ಹಿಂದುಳಿದ ವರ್ಗ'ಗಳ ಯಾದಿಯ ಬಗ್ಗೆ ವಿಚಾರವಾದಿಗಳಿಂದ ಪ್ರಬಲವಾದ ಅಸಮಾಧಾನವು ವ್ಯಕ್ತಪಟ್ಟಿರುವುದು ಸುವಿದಿತ ಕರ್ನಾಟಕದ ಹಲವಾರು ಪತ್ರಿಕೆಗಳೂ ಲೇಖಕರೂ, ಬುದ್ಧಿ

(ಆನೇ ಪುಟ ನೋಡಿರಿ)



ಅಕಾಶಗಮನಮಾಡಿ ಭೂಮಿಗವತರಿಸುವಾಗ ಸುಟ್ಟುಹೋಗದಂತೆ ನೋಡಿಕೊಳ್ಳಲು ರಾಕೆಟಿನ ಶಂಕುವೊಂದನ್ನು ವಿಜ್ಞಾನಿಯೋರ್ವನು ಪರಿಶೀಲಿಸುತಿದ್ದಾನೆ.

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ – ಮಂಗಳೂರು—3. ಸ್ಥಾಪನೆ – 1931

ಕಾಯಂ ಠೇವಣಾತಿ ಬಡ್ಡಿ ದರ

1	ತಿಂಗಳಿಂದ	5	ತಿಂಗಳ ವರೆಗೆ	4¼%
6	,,	12	,,	4½%
13	,,	24	,,	4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ . ಇತ್ಯಾದಿ ...

ಕಥಾವಿಹಾರ

ಮುಂಗಾರಿನ ಮುಗಿಲಡಿಯಲ್ಲಿ

ನಮ್ಮ ಯೋಜನೆಗಳಿಂದ ಇವರಿಗೆಂತು ಸಹಾಯ ದೊರೆತೀತು?

ಸ್ಸೊಽಽ, ಅಬ್ಬಾ ಏನು ಸೆಕೆ!

ಸಂಜೆಯಾಗುತ್ತಾ ಬಂತು. ಆದರಿನ್ನೂ ಸಂಜೆಯ ತಂಗಾಳಿಯಿಲ್ಲ. ಇನ್ನೂ ಬೇಗೆ! ಸಹಿಸಲಾರದ ಉರಿ!

ಆದರೆ....ಇಂದೇನೋ ಮುಗಿಲು ಮುಸುಕುತ್ತಿದೆ. ಮಳೆ ಬರುವುದೋ ಏನೋ! ಸಣ್ಣಗೆ ಮಿಂಚೆಸೆಯುತ್ತಲೂ ಇದೆ. ಹೌದೋ ಅಲ್ಲವೋ ಎಂಬಂತೆ ಗುಡುಗು ಕೂಡಾ ಕೇಳಿಸುತ್ತಿದೆ.

ಹೌದು, ಮುಂಗಾರ ಮುಗಿಲು! ಮುಂದಿನ ಜಡಿ ಮಳೆಯ ಮುನ್ನೋಟ! ಆ: ಒಂದೊಂದೇ ಹನಿ ಬೀಳುತ್ತಿದೆ. ಅಬ್ಬಾ, ಇನ್ನಾದರೂ ಚನ್ನಾಗಿ ಮಳೆ ಬಂದಿದ್ದರೆ!...."

ಹೆಗಲಲ್ಲಿ ಚಿಕ್ಕದೊಂದು ಗಂಟನ್ನು ತೂಗಾಡಿಸುತ್ತಾ ಪೇಟೆಯಿಂದ ಮನೆಯ ಕಡೆಗೆ ಹೊರಟಿದ್ದಾನೆ, ರಾಮಯ್ಯ. ಒಂದೂವರೆ ಸೇರು ಅಕ್ಕಿ. ಒಂದಿಷ್ಟು ಮೆಣಸು, ಬೆಲ್ಲ....ಎಲ್ಲಾ ಇದೆ ಆ ಗಂಟಿನಲ್ಲಿ!

ಸಂಜೆಯ ವರೆಗೆ ಶಂಕರರಾಯರ ತೋಟದಲ್ಲಿ ದುಡಿತ. "ಸಿಕ್ಕುವ ಒಂದೂ ಕಾಲು ರೂಪಾಯಿಯಲ್ಲಿ ಒಂಬತ್ತು ಜೀವಿಗಳ ಹೊಟ್ಟೆ ತುಂಬ ಬೇಕು. ಒಂದೂವರೆ ಸೇರು ಅಕ್ಕಿ, ಒಂದಿಷ್ಟು ಮೇಲು ಸಾಮಾನು........ಅಲ್ಲಿಂದಲ್ಲಿಗೆ ಸರಿಯಾಗುವಂತೆಯೂ ಇಲ್ಲ.

ಆದರೆಡೆಯಲ್ಲಿ ಚಿಕ್ಕ ಮಗುವಿಗೆ ನಿನ್ನೆಯಿಂದ ರಕ್ತಭೇದಿ. ಬೆಳಿಗ್ಗೆ ತಾನೇ ಒಂದೂವರೆ ರೂಪಾಯಿಯ ಕೆಂಪು ನೀರು ತಂದು ಕೊಟ್ಟಾಗಿದೆ.

ಆವಳೊಬ್ಬಳಿಗೆ ಎರಡು ದಿನ ಏನಾದರೂ ಕೆಲಸಕ್ಕೆ ಹೋದರೆ ಮತ್ತೆ ಎಂಟು ದಿನ ಚಾಪೆಯೇ ಗತಿ! ಆ ವೈಕ್ಕೈ ನೆಳಿತ, ಹೊಟ್ಟೆ ನೋವು ಅವಳ ಜನ್ಮಕ್ಕಂಟಿದ ಬೇನೆ, ಆದರೂ ಅದು ವಿಕಮವಾದಾಗ ಮದ್ದು ತರದಿದ್ದರೆ ಹೇಗೆ?

ಸಂಬಳವಾದರೂ ಹೆಚ್ಚು ಸಿಕ್ಕೀತೇನೋ ಎಂದರೆ ಈಗ ಸಿಕ್ಕುತ್ತಿರುವುದೇ ಹೆಚ್ಚು! ಇಷ್ಟು ಸಿಕ್ಕುವುದಕ್ಕಾಗಿಯೇ ತನ್ನ ಧನಿ ರಾಮರಾಯರಿಗೆ ತನ್ನ ಮೇಲೆ ಸಿಟ್ಟು ಬೇರೆ! ಅವರ ತೋಟಕ್ಕೆ ಕೆಲಸಕ್ಕೆ ಹೋಗಬೇಕೆಂದು ಅವರ ಒತ್ತಾಯ. ಆದರೆ ಅವರು ಕೊಡುವುದು ಒಂದು ರೂಪಾಯಿ. ಇಲ್ಲದಿದ್ದರೆ ಎರಡು ಸೇರು ಭತ್ತ ಮತ್ತು ಎಂಟಾಣೆ. ಈ ಒಂದೂ ಕಾಲೇ ಎಲ್ಲಿಗೂ ಮುಟ್ಟುವುದಿಲ್ಲ. ಮತ್ತೆ ಒಂದು ರೂಪಾಯಿ ಎಲ್ಲಿಗೆ ಸಾಕಾದೀತು?"

ಮಳೆ ಸ್ವಲ್ಪ ಜೋರಾಗಿ ಬರಲಾರಂಭಿಸಿತು. ರಾಮಯ್ಯ ತನ್ನ ಬಗಲಲ್ಲಿದ್ದ ಕೊಡೆ ಬಿಡಿಸಿದ. ಕೊಡೆಯ ಮಧ್ಯದಲ್ಲಿ ವೃತ್ತಾಕಾರದ ತೂತು!

"ಹುಂ. ಕೊಡೆಯೂ ತೂತು! ಹೌದು. ನನ್ನ ಬಾಳೇ ತೂತಾಗಿರುವಾಗ ಈ ಕೊಡೆಯ ತೂತೇನು ದೊಡ್ಡದು? ಕೊಡೆ....ಇಬ್ಬರು ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಮಳೆಗಾಲ ಬಂತು. "ಅಪ್ಪಾ ಕೊಡೆ!" ಎನ್ನುತ್ತಾರೆ. ಹೆಂಡತಿ ಮಕ್ಕಳ ಮೈಮೇಲೆ ಯಾವಾಗಲೂ ಚಿಂದಿಯೇ. ಅವರಿಗೆ ಈ ಸಲ ಹಬ್ಬಕ್ಕೆ ಕೂಡಾ ಬಟ್ಟೆ ತೆಗೆಯಲಾಗಲಿಲ್ಲ. ಇನ್ನು, ಕೊಡೆ ಹಾಗಿರಲಿ; ಮಕ್ಕಳಿಗೆ ಗೊರಬೆಯನ್ನಾದರೂ ಮಾಡಿಸದಿದ್ದರೆ ಹೇಗೆ?

ಶಾಲೆಗೆ ಹೋಗುತ್ತಾರೆ! ಅವರಿಗಿನ್ನು ಪುಸ್ತಕಬೇಕು! ಅಂಗಿಬಟ್ಟೆ ಇಲ್ಲ! ಹನ್ನೆರಡಾಣೆಯ ಹೊಲಿದಿಟ್ಟ ಅಂಗಿಯನ್ನಾದರೂ ತರದೆ ನಿರ್ವಾಹವಿಲ್ಲ. ಥುತ್! ಯಾಕೆ ಈ ಶಾಲೆ? ಎಂಟನೆ ಕ್ಲಾಸು ಕಲಿಸಲೂ ನನ್ನಿಂದ ಮುಟ್ಟುವುದಿಲ್ಲ.

ಸಂಕಣ್ಣನಿಗೆ ಕಲಿಸಿದೆ. ಶಾಲೆ ಅಂತಿರಲಿ; ಹೊಟ್ಟೆಗೂ ಗತಿಯಿಲ್ಲದಂತಾಗುವಾಗ ಏನು ದಾರಿ? ಈಗ ಹೋಟೆಲಿನಲ್ಲಿ ನಿಂತಿದ್ದಾನೆ. ಪುಸ್ತಕ ಹಿಡಿಯುವ ಕೈಯಲ್ಲಿ ಗ್ಲಾಸು ತೊಳೆಯುತ್ತಿದ್ದಾನೆ! ಪಾಪ, ಹುಡುಗನಿಗೆ ತುಂಬಾ ಆಸೆಯಿತ್ತು.

ಶಿವಪ್ಪ ಅಲ್ಲಿ ಇಲ್ಲಿ ತಿರುಗಾಡುತ್ತಿದ್ದ. ತಂದೆಗೆ ಸಂಕಷ್ಟ ದ್ರೋಹ ಕೊಟ್ಟನೇ ಹೊರತು, ಒಂದಿನಿತೂ ಉಪಕಾರ ಮಾಡಲಿಲ್ಲ. ಕಡೆಗೆ ಊರು ಬಿಟ್ಟು ಓಡಿ ಹೋದ. ಎಲ್ಲಿದ್ದಾನೋ, ಏನು ಮಾಡುತ್ತಿದ್ದಾನೋ ದೇವರೇ ಬಲ್ಲ. ಎಲ್ಲಾದರೂ ಹೋಟೆಲಲ್ಲೋ ಅಂಗಡಿಯಲ್ಲೋ ಇರಬಹುದು.

ಈ ವರ್ಷವಾದರೂ ಕಮಲೆಯ ಮದುವೆ ಮಾಡಬೇಕೆಂದಿದ್ದೆ; ಅಲ್ಲಿ ವರೆಗೂ ದೇವರು ಮುಟ್ಟಿಸಲಿಲ್ಲ. ಬರುವ ವರ್ಷವಾದರೂ ಅದೊಂದಾಗದಿದ್ದರೆ, ಮಾನ... ಮರ್ಯಾದೆ....ಎಲ್ಲವೂ ಬೀದಿಪಾಲು!"

"ಸೊಽಽ ಅಬ್ಬಾ, ಸ್ವಲ್ಪ ತಂಪಾಯಿತು!" ಮುಂಗತ್ತಲು ಮಳೆ ಮತ್ತೂ ಸ್ವಲ್ಪ ಚೆನ್ನಾಗಿ ಬರಲಾರಂಭಿಸಿತು! ಕೊಡೆಯ ತೂತಿನಿಂದ ನೀರು ರಾಮಯ್ಯನ ನೆತ್ತಿಯ ಮೇಲೆ ಹನಿಸುತ್ತಿತ್ತು. ತಲೆಗೆ ಸ್ವಲ್ಪ ಹಿತ, ಸುಖಾನುಭವಾದಂತಾಯಿತು ಅವನಿಗೆ.

"ಹುಂ. ಅವಳಿಗೆ ಈಗಾಗಲೇ ಏಳು ತಿಂಗಳು! ನಡು ಮಳೆಗಾಲದಲ್ಲಿ ಕುಡಿಯಲು 'ತೆಳಿ'ಯಿಲ್ಲದಾಗ ಹೆರುತ್ತಾಳೆ. ಏನು ದಾರಿ?

ಮಳೆ ಬರುತ್ತಿದೆ. ದೇವರ ದಯದಿಂದ ಒಂದು ಮುಡಿ ಗದ್ದೆಯಿದೆ. ಅದನ್ನು ಸಾಗುಳಿ ಮಾಡಬೇಕು. ಕಟ್ಟಿನ ಬೀಜವನ್ನು ಗತಿಯಿಲ್ಲದೆ ಎಂದೋ ಉಂಡಾಗಿದೆ! ನೇಗಿಲು ಕಳೆದ ಬಾರಿಯೇ ತುಂಡಾಗಿದೆ. ಮುಣ್ಯಕ್ಕೆ ಎತ್ತುಗಳಾದರೂ ಹಾಗೇ ಇದ್ದಾವೆ. ಸಾಲ ಮಾಡಿಯಾದರೂ ಬೇಸಾಯ ಮಾಡಬೇಕು. ಹಾಗಿದ್ದರೆ ಮಾತ್ರ ಈ ದರಿದ್ರ ನಾರಾಯಣನ ಕುಟುಂಬಕ್ಕೆ, ಈ ಮಕ್ಕಳ ಹೊಟ್ಟೆಗೆ ಎರಡು ತಿಂಗಳ ಮಟ್ಟಿಗಾದರೂ ಸರಿಯಾಗಿ ಗಂಜಿಯುಣ್ಣುವ ಭಾಗ್ಯ ಇದ್ದೀತು!

ಧನಿಯ ಆಳು ಇಷ್ಟರಲ್ಲೇ ಏಳೆಂಟು ಬಾರಿ ಬಂದು ಹೋಗಿದ್ದಾನೆ; ಗೇಣಿ! ಅದನ್ನೊಪ್ಪಿಸುವುದೆಂತೋ ಒಂದೂ ತಿಳಿಯುವುದಿಲ್ಲ! ಏನುಪಾಯ? ಬರುವ ವರ್ಷ ಕೊಡುತ್ತೇನೆಂದು, ಹೋಗಿ ಹೇಳಿ ಕಾಲನ್ನಾದರೂ ಹಿಡಿಯಬೇಕು. ಒಪ್ಪುವರೋ ಇಲ್ಲವೋ? ಒಪ್ಪಿದರೆ....ಬರುವ ವರ್ಷ.... ಎರಡು ಹೊರೆ! ಒಪ್ಪದಿದ್ದರೆ....

ಅಣ್ಣನ ಮಗನ ಮದುವೆಯ ಹೇಳಿಕೆ ನಿನ್ನೆ ಬಂದಿದೆ. ಇನ್ನಿರುವುದು ಎಂಟೇ ದಿನ! ಹೋಗದೆ ನಿರ್ವಾಹವಿಲ್ಲ. ಮಕ್ಕಳೆಲ್ಲಾ ಕಿರುಚಿಯಾವು. ಅವಳಿಗೂ ಉಟ್ಟದ್ದಲ್ಲದೆ ಬೇರೆ ಬಟ್ಟೆಯಿಲ್ಲ.

ಒಟ್ಟಿನಲ್ಲಿ ಐವತ್ತು ರೂಪಾಯಿಯಾದರೂ ಬೇಕು! ಇಪ್ಪತ್ತೈದಾದರೂ ಇಲ್ಲದೆ ಸಾಧ್ಯವೇ ಇಲ್ಲ. ಈ ವೇಷದಿಂದ ಹೋದರೆ ಸ್ವಲ್ಪ ಹಣವಂತನಾದ ಅಣ್ಣ ಅಸಹ್ಯಪಟ್ಟುಕೊಂಡಾನು! ಬಂದವರು ನಕ್ಕಾರು! ನಾನು, ಅವಳು ಮತ್ತು ಚಿಕ್ಕ ಮಗು ಇಷ್ಟು ಮಂದಿ ಹೋದರೆ ಸಾಕು! ಉಳಿದವರನ್ನು, ಈ ಬತ್ತಲೆ, ಅರೆಬತ್ತಲೆ ಜೀವಿಗಳನ್ನು ಹೊರಡಿಸಬೇಕಾದರೆ...."

"ಅಕ್ಕಿಯೇನೋ ಒಂದೂವರೆ ಸೇರು ತಂದಿದ್ದೇನೆ. ಆದರೆ ಉಣ್ಣಲು ಗತಿಯಿಲ್ಲ. ಇದ್ದ ಮೂರು—ನಾಲ್ಕು ಮರಗಳಲ್ಲಿ ಬಿಟ್ಟ ಹತ್ತು—ಹನ್ನೆರಡು 'ಗುಜ್ಜೆ'ಗಳಿವೆ. ಈ ಮಕ್ಕಳನ್ನು ನೋಡಿಯೇ ಅವುಗಳ ಕೃಪಾಶಯ ಇಂಗಿಹೋಗಿರಬೇಕು! ಅನ್ನವಿಲ್ಲದಾಗ ಅದನ್ನಾದರೂ ಬೇಯಿಸಬಹುದಿತ್ತು! ಅದೂ ಈಗಾಗಲೇ ಸವೆಯುತ್ತಾ ಬಂದಿವೆ.

ಈ ವರ್ಷ ಊರಿಗೇ ದೊಡ್ಡ ಮಾರಿ! ಇಲ್ಲದಿದ್ದರೆ ವರ್ಷಕ್ಕೆ ಒಂದೆರಡು ಮುಡಿಯಷ್ಟಾದರೂ ಗೇರು ಬೀಜ ಸಿಕ್ಕುತ್ತಿತ್ತು. ಅದೂ ಈ ವರ್ಷ ಇಲ್ಲ. ಮೋಡಕವಿದು, ಮಂಜು ಸುರಿದು, ಹೂವಿನ ಗೊಂಚಲು ಗೊಂಚಲೇ ಸುಟ್ಟು ಕಮರಿಹೋಯಿತು.

ವರ್ಷಕ್ಕೊಮ್ಮೆ ಮನೆಯ ಖರ್ಚಿಗೆ ತಕ್ಕ ತೆಂಗಿನಕಾಯಿ ಸಿಕ್ಕುತಿತ್ತು, ಆ ಒಣಕಲು ನಾಲ್ಕು ಮರಗಳಲ್ಲಿ. ಈ ವರ್ಷ ಅದೂ ಇಲ್ಲ. ಎಳನೀರನ್ನೂ ಅರೆದಾಯಿತು. ಈಗ ಬರಿಮೆ ಣಸು ಅರೆದು ಹಾಕುವುದು. ಅದಕ್ಕೂ ಕೆಲವೊಮ್ಮೆ ತತ್ವಾರ.

"ಛ್ಛಿ, ಯಾರದು ನಗುತ್ತಿರುವುದು? ಹೌದು, ಇದು ಅಯ್ಯಪ್ಪನ ಮನೆ! ತುಂಬಾ ಜನ ಕೂಡಿದ್ದಾರೆ. ಕುಡಿಯುತ್ತಿದ್ದಾರೆ, ನಗುತ್ತಿದ್ದಾರೆ; ಮತ್ತೂ ಕುಡಿಯುತ್ತಿದ್ದಾರೆ!

ನನಗೂ ಹೋಗ ಬೇಕೆನಿಸುತ್ತಿದೆ. ಆದರೆ ಕಿಸೆಯಲ್ಲಿ ಕಾಸಿಲ್ಲ. ಅಯ್ಯಪ್ಪ ಕೇಳಿದರೆ ಸಾಲವೂ ಕೊಟ್ಟಾನು. ಆದರೆ....ಮನೆಯಲ್ಲಿ...ಮಕ್ಕಳು....ಹೆಂಡತಿ....ಹಸಿವು ....ಬೇಡ, ಬೇಡ! ಈ ಹಾಳು ಯೋಚನೆ ಬೇಡ! ಹಣವಿದ್ದರೆ, ಎಲ್ಲಾ ಸರಿಯಾಗಿದ್ದರೆ ಎಂದಾದರೊಂದು ದಿನ; ಅಷ್ಟೇ ಸಾಕು!

ಓ, ಚಿಮಿಣಿಯ ಬೆಳಕು ಕಾಣಿಸುತ್ತಿದೆ! ಅಂತೂ ನನ್ನ ಮನೆಗೆ, ಅಲ್ಲಲ್ಲ ಗುಡಿಸಲಿಗೆ ಮುಟ್ಟಿದೆ!"

ಮಿಂಚೊಮ್ಮೆ ಮಿಂಚಿತು! ಅದರೊಂದಿಗೆ ರಾಮಯ್ಯನ ಗುಡಿಸಲು, ಅಂಗಳ, ಹಿತ್ತಿಲು ಎಲ್ಲಾ ಒಮ್ಮೆ ಬೆಳಗಿತು!

"ಹುಂ. ಮಾಡೆಲ್ಲಾ ಹದ್ದು ಮರಳಿದೆ. ಇದಕ್ಕಿನ್ನು ಹುಲ್ಲು ಹಾಕಿಸಬೇಕು! ಹುಲ್ಲಿಗೂ ಚಿನ್ನದ ಬೆಲೆ! ಮಳೆಬೇರೆ ಬರುತ್ತಿದೆ. ಮನೆಯೊಳಗಿದ್ದವರೆಲ್ಲಾ ಮಳೆಯಲ್ಲಿ ಮಿಂಯಲೇ ಬೇಕು. ಮನೆ ಹೀಗಾಗಲೇ ಬೇಕು.

ಆ ಹಟ್ಟಿಯೋ ಅದೂ ಹಾಗೇ! ಪಾಪ, ಎತ್ತುಗಳು ಮೊದಲೇ ಬಡಕಲಾಗಿವೆ. ನಡುಗುತ್ತಾ ನಿಲ್ಲುತ್ತವೆ. ನಮಗೂ ಅವಕ್ಕೂ ಏನು ವ್ಯತ್ಯಾಸ....ಅಂತೂ ಈ ಮನೆ ಮತ್ತು ಹಟ್ಟಿಯನ್ನೊಮ್ಮೆ ಮುಚ್ಚಿಸುವುದು ಹೇಗೋ ತಿಳಿಯದಾಗಿದೆ. ಈ ಹುಲ್ಲಿನ ಕ್ರಯ...ಜನ...ಸಂಬಳ........ ತ್ಸೊಽಽ!

ಈ ವರ್ಷ ಭೂತಕ್ಕೂ ಕೋಲ ಕೊಟ್ಟಿಲ್ಲ ದಿನಾ ಅದಕ್ಕೇ ಹೇಳುತ್ತಾಳೆ ಅವಳು! ಉಡಲು ಬಟ್ಟೆಯಿಲ್ಲ, ಕೊತ್ತಂಬರಿ ನೋಡಲೇ ಇಲ್ಲ. ಮೆಣಸಿಲ್ಲ, ಉಪ್ಪಿಲ್ಲ... ಮಕ್ಕಳಿಗೆ ಮಲಗಲು ಚಾಪೆ ಇಲ್ಲ........ ಥೂ, ಥೂ ಆ ಪಟ್ಟಿ ಬ್ರಹ್ಮಾಂಡವನ್ನೇ ತುಂಬೀತು. ಅದು ಹೋಗಲಿ. ಮಗುವಿಗೆ ರಕ್ತ ಭೇದಿಯಾದರೆ ಭೂತದ್ದೇ ಉಪದ್ರವವಂತೆ! ಹೇಗೂ ಧನಿಯ 'ಒತ್ತೆ ಕೋಲ'ದ ಮರತಿಗೆ ಇದ್ದೇ ಇದೆ! ಅದಕ್ಕೇ ಕೈ ಮುಗಿದು ನಾಲ್ಕಾಣೆ ಹೆಚ್ಚು ಸೇರಿಸಿ ಕೊಟ್ಟು ಬಿಡುವುದು!"

ರಾಮಯ್ಯ ಮನೆ ಮುಟ್ಟಿದ. ಗಂಟನ್ನೊಂದು ಬದಿಯಲ್ಲಿಟ್ಟು ಹಾಗೇ ಗೋಡೆಗೊರಗಿ ಕುಳಿತ. "ಅಪ್ಪಾ, ಅಪ್ಪಾ" ಎಂದು ಮಕ್ಕಳೆಲ್ಲಾ ಬಂದು ಮುತ್ತಿದುವು. ಕಿಸೆಯಲ್ಲಿದ್ದ 'ಖಾರದ ಕಡ್ಡಿ'ಯ ಕಟ್ಟನ್ನು ಬಿಚ್ಚಿ ಮಕ್ಕಳಿಗೆಲ್ಲಾ ಹಂಚಿದ. ಕಮಲೆ ಬಂದು 'ಗಂಟ'ನ್ನೆತ್ತಿಕೊಂಡು ಹೋದಳು. ಹೆಂಡತಿ ಒಳಗೇನೋ ಮಸಾಲೆ ಅರೆಯುತ್ತಿದ್ದಾಳೆ!

ಹಾಗೇ ಗೋಡೆಗೊರಗಿ ಭಾರವಾದ ಹೃದಯದಿಂದ ಕುಳಿತ ರಾಮಯ್ಯ ವೇದನಾಭರಿತ ಹೃದಯದಿಂದ, ವಿಚಿತ್ರ ಹರ್ಷದಿಂದ ಕೊನೆಯಿಲ್ಲದ ಯೋಚನೆಯೊಡನೆ ಸಣ್ಣನೆ ಒಮ್ಮೆ ನಕ್ಕ. ಅಲ್ಲ, ಅದು ತಾನಾಗಿ ಬಂತು. ಸುಖ—ದುಃಖ, ನಲಿವು—ನೋವು, ಸಿಹಿ—ಕಹಿಗಳ ಸಮಸ್ತಾನುಭವವು ಪ್ರತಿಬಿಂಬಿಸಿತು ಆ ನಸುನಗೆಯಲ್ಲಿ!

—ಕೊಡ್ಲ ತಿಮ್ಮಪ್ಪ ಗೆಟ್ಟಿ, ಪೆರಡಾಲ.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಫಲಪರಿಚಯ

ರಾಷ್ಟ್ರೀಯ ಫಲ ಮಾವಿನ ಹಣ್ಣು!

ಹಣ್ಣು ಸವಿಯದವರಾರಿರದಿದ್ದರೂ ಅದರ ಬಗ್ಗೆ ತಿಳಿದವರು ಮಾತ್ರ ಕಡಿಮೆ!

ಶ್ರೀ. ಮಿರ್ಜಾಗಾಲಿಬರೊಡನೆ ಯಾರೋ ಒಬ್ಬರು ಪ್ರಶ್ನಿಸಿದರಂತೆ—ಮಿರ್ಜಾಗಾಲಿಬರೆ, ಮಾವಿನ ವೈಶಿಷ್ಟ್ಯವೇನು?

ಆಗ ಮಿರ್ಜಾ ಉತ್ತರಿಸಿದರು—ಮಾವಿನಲ್ಲಿ ಕೇವಲ ಎರಡೇ ವೈಶಿಷ್ಟ್ಯಗಳಿವೆ. ಸ್ವಾದ ಅಥವಾ ರುಚಿ ಒಂದನೆಯದು ಮತ್ತು ಧಾರಾಳತನ ಎರಡನೆಯದು.

ನೀವು ಯಾವನೇ ಒಬ್ಬ ವ್ಯಕ್ತಿಯೊಡನೆ, ತಮ್ಮಾ, ಭಾರತದಲ್ಲಿ ಸರ್ವೋತ್ತಮವಾದ ಮಾವು ಎಲ್ಲಿ ಬೆಳೆಯುತ್ತದೆ ಎಂದು ಕೇಳಿರಿ. ಆಗ ಆತ ನಿಮಗೆ ಮಂದಸ್ಮಿತನಾಗಿ ತಕ್ಷಣ ಉತ್ತರಿಸುತ್ತಾನೆ—ನನ್ನ ಪ್ರಾಂತದಲ್ಲಿ ಎಂದು!

ಮಾವು ಪ್ರಾಂತೀಯತೆಯ ಕಾರಣದಿಂದ ಹಲವಾರು ಹೆಸರುಗಳನ್ನೂ ವಿಧಗಳನ್ನೂ ಪಡೆದಿರಬಹುದು. ಆದರೆ, ಅದು ಜನರೆಲ್ಲರ ಪ್ರೀತ್ಯಾದರಗಳಿಗೆ ಪಾತ್ರವಾಗಿದೆ ಎಂಬುದು ನಿಸ್ಸಂದೇಹ. ಪ್ರಾಯಃ ಮಾವಿನ ಹಣ್ಣಿನಷ್ಟು ಜನಪ್ರಿಯವಾದ ಫಲ ಬೇರೊಂದಿರಲಾರದು. ಬೊಂಬಾಯಿಯವರಿಗೆ ಎಲಫೆಂಜಾ ಪ್ರಿಯವಾದರೆ, ಉತ್ತರ ಪ್ರದೇಶದವರಿಗೆ ದುಸಹರಿ ಮತ್ತು ಲಂಗಯಿಗಳೆದುರು ಬೇರಾವುದೂ ಕಾಣಲಾರದು. ಹೈದರಾಬಾದಿಯರಿಗೆ ಬೇನಿಷಾ ಎಂದರೆ ಸರ್ವ ಶ್ರೇಷ್ಠ ಆಮ್ರವಾಗಿದೆ. ದಕ್ಷಿಣ ಭಾರತದ ಕರ್ನಾಟಕ, ಆಂಧ್ರ, ಮದ್ರಾಸು ಮತ್ತು ಕೇರಳಗಳಲ್ಲಿ ಮಲ್‌ಗೋವಾ ಮತ್ತು ಮುಂಡಪ್ಪ (ಮುಂಡು) ಮಾವುಗಳೆದುರು ಬಾದಾಮಿ ಹಾಗೂ ರಸಪುರಿಗಳೂ ನೀರಸವಾಗಿ ಪರಿಣಮಿಸುವುವು.

ಮಾವಿನ ಸಂಬಂಧವಲ್ಲಿ ಅನೇಕ ಜನಪದ ಗೀತೆಗಳು ಹುಟ್ಟಿಕೊಂಡಿವೆ; ನೂರಾರು ಕಥೆಗಳೂ ಕಟ್ಟಲ್ಪಟ್ಟಿವೆ. ಭಾರತೀಯ ಸಾಹಿತ್ಯದಲ್ಲಿ ಸುಮಾರು ಮೂರು ಸಾವಿರ ವರ್ಷಗಳಿಂದ ಈ ಆಮ್ರಫಲದ ಉಲ್ಲೇಖಗಳು ಲಭಿಸುತ್ತವೆ. ಪ್ರಾಚೀನ ಭಾರತೀಯ ಕಾವ್ಯಗಳಲ್ಲಿ ಮಾವು—ಅದರ ಹೂ, ಹಣ್ಣುಗಳ ಉಲ್ಲೇಖ ಅತ್ಯವಶ್ಯವಾಗಿ ಬರುತಿತ್ತು. ಮನ್ಮಥನ ಪಂಚಪುಷ್ಪ ಬಾಣಗಳಲ್ಲಿ ಆಮ್ರವೂ ಒಂದು. ಇದರಿಂದಲೇ ಆತ ಕಾಮಿಜನ ಹೃದಯವನ್ನು ಭೇದಿಸಲು ಶಕ್ತನಾಗುತ್ತಾನೆ. ಆದುದರಿಂದಲೇ ಭಾರತದ ರಾಷ್ಟ್ರೀಯ ಫಲವೆಂದರೆ, ಮಾವು ಎಂದು ಕಂಠೋಕ್ತವಾಗಿ ಹೇಳಬಹುದು. ಈ ಕಾರಣದಿಂದಲೇ ಕಲ್ಕತ್ತೆಯಲ್ಲಿ ಮೊನ್ನೆ ಮೊನ್ನೆ ಮಾವಿನ ಹಣ್ಣುಗಳ ಪ್ರದರ್ಶನವೊಂದೂ ಏರ್ಪಟ್ಟಿತ್ತು.

ಕೆಲವರು ಮಾವು ನಮ್ಮ ದೇಶದಲ್ಲಿಯೇ ಜನಿಸಿದ ಫಲವಲ್ಲವೆನ್ನುತ್ತಾರೆ ಇವರ ಅಭಿಪ್ರಾಯದಂತೆ ಇದು ಮೊತ್ತಮೊದಲು ಮಲಯಾದಿಂದ ಭಾರತಕ್ಕೆ ಬಂದಿತು. ಈ ಮಾತಿನ ಸತ್ಯಾಸತ್ಯತೆಯನ್ನು ಶೋಧಿಸುವುದು ಅಷ್ಟು ಸುಲಭವಲ್ಲ. ಆದರೂ ಗ್ರೀಕ ಚಕ್ರವರ್ತಿ ಸಿಕಂದರನು ಭಾರತದ ಮೇಲೆ ಆಕ್ರಮಣ ನಡೆಸಲು ಬಂದ ಸಮಯದಲ್ಲಿ ಭಾರತದ ಮಾವಿನ ಹೆಸರು ವಿಶ್ವವಿಖ್ಯಾತವಾಗಿತ್ತು ಎಂಬುದು ನಿಸ್ಸಂದಿಗ್ಧ.

ಮಾವಿನಲ್ಲಿ ಅಡಕವಾಗಿರುವ ವಸ್ತುಗಳಲ್ಲಿ ಬಹುಭಾಗ, ಎಂದರೆ, ನೂರಕ್ಕೆ ೮೬ರಷ್ಟು ನೀರಿದ್ದರೂ, ಸಸಾರಜನಕ, ಖನಿಜ ಲವಣಗಳು, ಜೀವಾತುಗಳು (ಮುಖ್ಯವಾಗಿ ಎ ಮತ್ತು ಸಿ) ಗಣನೀಯ ಪ್ರಮಾಣದಲ್ಲಿವೆ. ಸೇಬು ಹಣ್ಣಿನಲ್ಲಿರುವುದಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಸಿ ಜೀವಾತು ಮಾವಿನಲ್ಲಿದೆ.

ಪ್ರಕೃತಿಯ ಅಕ್ಷಯ ಪಾತ್ರೆಯಲ್ಲಿ ಅತ್ಯಂತ ಪ್ರಶಸ್ತ ಸ್ಥಾನ ಪಡೆಯಲು ಮಾವಿಗೆ ಈ ಗುಣವೂ ನೆರವಾಗಿದೆ. ಮಾವು "ಹಣ್ಣುಗಳ ರಾಜ" ಎಂಬ ಬಿರುದನ್ನೂ ಪಡೆದಿದೆ. ತಿನ್ನುವುದಕ್ಕೆ ಇದು ರುಚಿಯಾಗಿರುವುದಲ್ಲದೇ ಆಯಾಸ ಪರಿಹಾರಕವೂ ಆಗಿದೆ.

ಮಾವಿನ ಕಾಯಿಯ ಉಪ್ಪಿನ ಕಾಯಿಯನ್ನು ಸವಿಯದೆ ಇರುವ ಭಾರತೀಯರು ಯಾರೂ ಇರಲಾರರು. ಮೆಣಸು ಹಾಕಿ ಕಾಯಿ ಚಟ್ನಿ ಕಡಿದರೆ ರುಚಿಗೆಟ್ಟ ನಾಲಗೆಯಾದರೂ ಚಪ್ಪರಿಸಿಬಿಟ್ಟೀತು. ಇನ್ನು ಮಾವಿನಹಣ್ಣುಗಳನ್ನು ತಿಂದೇ ಕಾಲ ಹರಣಮಾಡುವವರೂ ಗ್ರಾಮೀಣ ಪ್ರದೇಶಗಳಲ್ಲಿ ಇಲ್ಲವೆನ್ನುವಂತಿಲ್ಲ. ಸಾಮಾನ್ಯತಃ ವೈಶಾಖಕಾಲದಲ್ಲಿ ಮಾವು ಪ್ರಮುಖ ವ್ಯಾಪಾರೀ ವಸ್ತುಗಳಲ್ಲಿ ಒಂದಾಗಿದೆ. ಮಾವಿನ ಹಣ್ಣಿನ ರಸತೆಗೆದು ಚಾಪೆಯಲ್ಲಿ ಹಾಕಿ ಬಣಗಿಸಿ ಮಾಡುವ 'ಮಾಂಬಳ' ಅಥವಾ "ಮಾವಿನ ಹಪ್ಪಳ" ಮಳೆಗಾಲದಲ್ಲಿ ತಿನ್ನುವುದಕ್ಕೆ ರುಚಿಕರವಾಗಿದೆ. ಸೆಖೆಗಾಲದ ರಸಾಯನ—ಎಲ್ಲರಿಗೂ ತಿಳಿದುದೇ ಪ್ರಪಂಚದ ರುಚಿಕರ ಹಣ್ಣುಗಳಲ್ಲಿ ಒಂದಾಗಿದೆ ಮಾವು!

ಭಾರತದ ಮಟ್ಟಿಗೆ ಮಾವು ಒಂದು ಪ್ರಧಾನ ವ್ಯಾಪಾರೀ ಬೆಳೆ. ಸುಮಾರು ೧೫ ಲಕ್ಷ ಎಕರೆಗಳಲ್ಲಿ ಈಗ ಸುಧಾರಿತ ರೀತಿಯ ಮಾವು ಬೆಳೆಯುತ್ತದೆ. ಒಂದು ಕಾಲದಲ್ಲಿ ಮೊದಮೊದಲು ಗುಡ್ಡ ಕಾಡುಗಳಲ್ಲಿ ಯಾರ ದೃಷ್ಟಿಗೂ ಗೋಚರವಾಗದೆ ಬೆಳೆದುಕೊಂಡಿದ್ದ ಮಾವು ಈಗ ಜನರಿಗೆ ಅಚ್ಚುಮೆಚ್ಚಿನದ್ದಾಗಿದೆ. ಹಣ್ಣುಹಂಪಲುಗಳು ಬೆಳೆಯುವ ಪ್ರದೇಶಗಳ ಸೇ.೬೦ ರಷ್ಟರಲ್ಲಿ ಮಾವೇ ಬೆಳೆಯುತ್ತಿದೆ. ಕನ್ಯಾಕುಮಾರಿಯಿಂದ ಹಿಮಾಲಯ, ಪಂಜಾಬಿನಿಂದ ಅಸ್ಸಾಮುಗಳವರೆಗೆ ಮಾವು ಬೆಳೆಯದ ಎಡೆಯೆಂಬುದಿಲ್ಲ. ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿಯೂ ಮಾವಿನಗಿಡ ಇಲ್ಲವೇ ಮರಗಳಿರವುವು.

ಮಾವು ಕೇವಲ ಕೆಲವೇ ತಿಂಗಳುಗಳಲ್ಲಿ ದೊರೆಯುವುದರಿಂದ ಅದನ್ನು ವರ್ಷದವರೆಗೆ ಕೆಡದಂತೆ ಇಡಲಾಗುವುದು. ಮೇಲೆ ಸೂಚಿಸಿದ ಉಪ್ಪಿನಕಾಯಿ, ನೀರಲ್ಲಿ ಹಾಕಿಡುವುದು ಮತ್ತು ಮಾಂಬಳಗಳ ರೂಪದಲ್ಲಿಯಲ್ಲದೇ ಹಣ್ಣುಗಳನ್ನು ಕೆಡದಂತೆ ಜೋಪಾಸನೆಮಾಡುವ ವೈಜ್ಞಾನಿಕ ವಿಧಾನಗಳೂ ಇಂದು ವ್ಯವಹಾರಕ್ಕೆ ಬಂದಿವೆ. ಇಂತಹ ಕೈಗಾರಿಕೆಯ ಬೆಳವಣಿಗೆಗಾಗಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ೧೦೫ ಲಕ್ಷ ರೂಪಾಯಿಗಳನ್ನು ಮೀಸಲಿಡಲಾಗಿದೆ.

ಭಾರತದಲ್ಲಿ ೧೯೫೪—೫೬ರಲ್ಲಿ ೨೩ ಸಾವಿರ ಟನ್ನುಗಳಷ್ಟು ಮಾವು ಶೇಖರಿಸಲ್ಪಟ್ಟಿದೆ. ಇದು ೬೦—೬೧ರಲ್ಲಿ ೫೦ ಸಾವಿರ ಟನ್ನುಗಳಿಗೇರಬಹುದು. ಭಾರತದ ವಿದೇಶ ವಿನಿಮಯದ ಕ್ಷೇತ್ರದಲ್ಲಿಯೂ ಮಾವು ತನ್ನ ಪ್ರಭಾವವನ್ನು ಬೀರದುಳಿಯಲಿಲ್ಲ. ಭಾರತದಲ್ಲಿ ಅತ್ಯುತ್ತಮ ಜಾತಿಯ ಮಾವಿನ ಬೆಳೆಗೆ ಅನುಕೂಲವಿದ್ದು, ಹಣ್ಣುಗಳನ್ನು ಹಲವು ರೀತಿಯಾಗಿ ಬಳಸಲು ಸಾಧ್ಯವಿದೆ. ಮಾವಿನ ಬೆಳೆಯನ್ನು ವ್ಯಾಪಾರೀ ದೃಷ್ಟಿಯಿಂದ ರೂಢಿಸಿಕೊಳ್ಳುವುದಕ್ಕೂ ಸಾಧ್ಯವಿದೆ.

ಭಾರತದಲ್ಲಿ ಮಾವು ಬಹುಕಾಲದಿಂದಿದ್ದರೂ ಅದಕ್ಕೆ ಕಸಿ ಕಟ್ಟುವ ವಿಧಾನವನ್ನು ನಾವು ಪೋರ್ಚುಗೀಸರಿಂದ ಕಲಿತೆವೆಂದು ಹೇಳುತ್ತಾರೆ. ಈಗ ಹೀಗೆ ಕಸಿ ಕಟ್ಟುವುದರಿಂದ ನೂರಾರು ಬಗೆಯ ಮಾವು ಉಪಲಬ್ಧವಿದೆ. ನಮ್ಮ ದೇಶದಿಂದ ನಿರ್ಯಾತಗೊಳ್ಳುವ ಮಾವು ವಿದೇಶಗಳಲ್ಲಿ ಉಪಾಹಾರದ ವೇಳೆ ಅಲ್ಲಿನವರಿಂದ ಪ್ರಾಯಶಃ ಮಾಡಲ್ಪಡುತ್ತದೆ.

ನಮ್ಮ ಮಾವಿನ ಬಗ್ಗೆ ನಿಮಗಿದು ತಿಳಿದಿದೆಯೆ?

ನಿಮ್ಮ ಜೀವ ವಿಮಾ ಪಾಲಿಸಿ

೧ ಪಾಲಿಸಿಯ ಶರತ್ತುಗಳನ್ನು ಧ್ಯಾನಪೂರ್ವಕವಾಗಿ ಓದಿರಿ

೨ ಪ್ರೀಮಿಯಮ್ ಕೊಡುವ ತಾರೀಖುಗಳನ್ನು ಬರೆದಿಟ್ಟುಕೊಳ್ಳಿರಿ.

ಪ್ರಾಯದ ರುಜುವಾತು (ಪ್ರಮಾಣ) ಒಪ್ಪಿಸುವುದು. ನೋಮಿನೇಶನ್ (ಹಕ್ಕುದಾರನನ್ನು ನೇಮಿಸುವುದು) ಅಥವಾ ಅಸೈನ್‌ಮೆಂಟ್ (ಹಕ್ಕನ್ನು ಮತ್ತೊಬ್ಬರಿಗೆ ಬರೆದು ಕೊಡುವುದು) ಇತ್ಯಾದಿ ಮಾಡತಕ್ಕ ಎಲ್ಲ ಕೆಲಸಗಳನ್ನು ಈ ಮೊದಲೇ ಮಾಡಿರದಿದ್ದರೆ ಅವುಗಳನ್ನು ಕೂಡಲೇ ಪೂರ್ತಿಗೊಳಿಸಿರಿ

ನಿಮ್ಮ ಪಾಲಿಸಿಯನ್ನೂ ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನೂ ಸುರಕ್ಷಿತವಾಗಿಟ್ಟುಕೊಳ್ಳಿರಿ

ಈ ವಿಷಯಗಳಲ್ಲಿ ನಿಮಗೇನಾದರೂ ಸಲಹೆ ಬೇಕಾದರೆ ನಿಮ್ಮ ಎಲ್.ಐ.ಸಿ. ಏಜಂಟರನ್ನು ಅಥವಾ ಫೀಲ್ಡ್ ಆಫೀಸರರನ್ನು ವಿಚಾರಿಸಿರಿ

ಲೈಫ್ ಇನ್‌ಷೂರನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ

LIC/A5-8 KAN

ಸದ್ಭಾವನೆ

ಅಮೆರಿಕನರು ಕಂಡಂತೆ ಭಾರತದ ಮಹಾರಾಜರು

ಹಿಂದೂ-ಅಮೆರಿಕಗಳ ನಡುವೆ ಸಾಂಸ್ಕೃತಿಕ ವಿನಿಮಯವಾಗಲಿ.

ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರ್ ಅವರು ಏಳು ವಾರಗಳ ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ಸಂದರ್ಶನವನ್ನು ಮುಗಿಸಿ ಲಂಡನಿಗೆ ತೆರಳಿದ್ದಾರೆ. ತಮ್ಮ ಅಮೇರಿಕೆಯ ಸೌಹಾರ್ದಮಯ ಭೇಟಿಯಲ್ಲಿ ಸುಮಾರು ೧೧ ಸಾವಿರ ಮೈಲುಗಳಷ್ಟು ದೂರ ಇವರು ಪ್ರಯಾಣಿಸಿರುವರು. ಅನೇಕ ವಿಶ್ವವಿದ್ಯಾಲಯಗಳಲ್ಲಿ ಮಾತ್ರವಲ್ಲದೇ ಸಾರ್ವಜನಿಕ ಸಭೆಗಳಲ್ಲಿಯೂ ಇವರು ಅನೇಕ ಉಪನ್ಯಾಸಗಳನ್ನು ಮಾಡಿದರು.

ಶ್ರೀ ಜಯಚಾಮರಾಜ ಒಡೆಯರರ ಈ ಸಂದರ್ಶನವು ಖಾಸಗಿಯಾಗಿದೆ. ಹಲವಾರು ವಿಶ್ವವಿದ್ಯಾಲಯ ಮತ್ತು ಸಾರ್ವಜನಿಕ ಸಂಘಸಂಸ್ಥೆಗಳು ಮಾನ್ಯ ರಾಜ್ಯಪಾಲರನ್ನು ಅತಿಥಿಗಳನ್ನಾಗಿ ಸ್ವಾಗತಿಸಿ ಸತ್ಕರಿಸಿದುವು. ಶ್ರೀಯುತರು ಹಲವಾರು ಸಂದರ್ಭಗಳಲ್ಲಿ ಭಾಷಣಗಳನ್ನು ಮಾಡಿದ್ದಾರೆ. 'ವಿಶ್ವದಲ್ಲಿ ಭಾರತದ ಸ್ಥಾನಮಾನ' ಎಂಬ ಒಂದು ವಿಷಯವನ್ನುಳಿದು ಉಳಿದೆಲ್ಲ ಅವರ ಭಾಷಣಗಳು ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದವಾಗಿದ್ದುವು.

(೧೦ನೇ ಪುಟ ನೋಡಿರಿ)

ನಮ್ಮ ನದಿಗಳು

ಭಾರತೀಯರ ಪುಣ್ಯದಾತೆ ಪರಮ ಪುನೀತೆ—ಗಂಗಾ

ದೇಶವು ಸಂಪತ್ಸಮೃದ್ಧವಾಗಬೇಕಾದರೆ, ನದೀನದಗಳು ಅವಶ್ಯವಲ್ಲವೆ?

ಪರಮ ಪುನೀತೆಯಾದ ಗಂಗೆ ತ್ರಿಪಥಗಾ (ಮೂರು ಪಥಗಳಲ್ಲಿ ಸಂಚರಿಸುವವಳು) ಆಗಿದ್ದಾಳೆ. ಆಕೆ ಸ್ವರ್ಗ, ಮರ್ತ್ಯ ಮತ್ತು ಪಾತಾಳ— ಮೂರು ಲೋಕ—ಗಳಲ್ಲಿ ಹರಿಯುತ್ತಾಳೆ. ಈ ದೃಷ್ಟಿಯಿಂದ ಈಕೆ ದೇವ, ಮಾನವ ಮತ್ತು ಉರಗರೆಲ್ಲರ ಜೀವನ ಮರಣಗಳೊಡನೆ ಸಂಬಂಧ ಬೆಳೆಸಿಕೊಂಡಿದ್ದಾಳೆ.

ಭೂತಳದಲ್ಲಿ ಗಂಗೆಯು ಅವತಾರವಾಗುವವರೆಗೆ ಮನುಷ್ಯಲೋಕದ ಜೀವನವು ಶೂನ್ಯವಾಗಿತ್ತು; ಈ ಶೂನ್ಯ ಜೀವನದಲ್ಲಿ ನವಜೀವನದ ಸಂಚಾರವು ಗಂಗೆಯ ಉದ್ಭವದಿಂದಲೇ ಆಯಿತು; ಗಂಗೆಯು ತನ್ನ ಅನ್ಯ ಸೋದರಿಯರೊಡನೆ ಈ ಭೂಮಿಯಲ್ಲಿ ಆನಂದಪೂರ್ವಕವಾಗಿ ಸಂಚರಿಸತೊಡಗಿದಂದಿನಿಂದ ಭೂತಳವೂ ಸ್ವರ್ಗವಾಗಿ ಹೋಯಿತು.

ಭೂಮಿಯಲ್ಲಿ ಗಂಗೆಯು ಅವತರಿಸಿದ ಶುಭ ಮುಹೂರ್ತವನ್ನು ಭಾಗೀರಥೀ ಜನ್ಮದಿನವೆಂದು ಜ್ಯೇಷ್ಠ ಶುಕ್ಲ ದಶಮಿಯ ದಿನ ಪ್ರತಿವರ್ಷ ಭಾರತೀಯರಾದ ನಾವು ಆಚರಿಸುತ್ತೇವೆ. ಉತ್ತರ ಭಾರತೀಯರು ಗಂಗೆಯಲ್ಲಿ ಈ ದಿನ ಸ್ನಾನಮಾಡುವುದೂ ಇದೆ. ಗಂಗೆಯಿಂದ ದೂರವಿರುವ ಭಾರತೀಯರೆಲ್ಲರೂ ತಮ್ಮ ಸಮೀಪದ ನದಿಗಳಲ್ಲಿಯೋ ಕೆರೆಗಳಲ್ಲಿಯೋ ಅದನ್ನೇ ಗಂಗೆ ಎಂದುಕೊಂಡು ಅದರಲ್ಲಿ ಸ್ನಾನಮಾಡಿ ಗಂಗೆಯನ್ನು ನಮಿಸುತ್ತಾರೆ.

ಭಾರತೀಯ ನಾಗರಿಕತೆ ಮತ್ತು ಸಂಸ್ಕೃತಿಗಳ ಮೇಲೆ ಗಂಗೆಯ ಪ್ರಭಾವ ಅತಿಯಾಗಿದೆ. ಹರಿದ್ವಾರ, ಕಾಶಿ ಮತ್ತು ಪ್ರಯಾಗಗಳೆಂಬ ಪ್ರಧಾನ ನಗರಗಳು ಇದರ ತಟದಲ್ಲಿವೆ. ಉತ್ತರ ಪ್ರದೇಶದ ಜನಜೀವನದಲ್ಲಿ ಗಂಗೆಯು ಬೀರಿದ ಆರ್ಥಿಕ ಕೃಷಾದೃಷ್ಟಿ ವಿಶೇಷವಾಗಿದೆ.

ಸಂಚಾರಾನುಕೂಲತೆಗಳಿಲ್ಲದ ಕಾಲದಲ್ಲಿ ನದೀಕಿನಾರೆಗಳಲ್ಲಿ ಪ್ರಸಿದ್ಧ ನಗರಗಳನ್ನು ಭಾರತೀಯರು ಕಟ್ಟಿದರು. ಭಾರತದ ರಾಜಧಾನಿ ಡಿಲ್ಲಿ. ಸುಪ್ರಸಿದ್ಧ ವಿದ್ಯಾಕೇಂದ್ರ ವಾರಣಾಸಿಗಳೂ ನದೀತಟದಲ್ಲಿವೆ. ದೇಶದಲ್ಲಿ ಸಂಚಾರ, ಆಹಾರೋತ್ಪಾದನೆ ಮೊದಲಾದ ಎಲ್ಲವುಗಳಿಗೂ ಈ ನದಿಗಳು ಉಪಯೋಗಿಯಾಗುತ್ತವೆ. ಇದರಿಂದಾಗಿಯೇ ಭಾರತೀಯ ಸಂಸ್ಕೃತಿ ಸರಿತಾ—ಸಂಸ್ಕೃತಿಯಾಗಿದೆ. ಇದರ ಸ್ವರೂಪವನ್ನು ನಾವು ಎಲ್ಲೆಲ್ಲಿಯೂ ಕಾಣುತ್ತೇವೆ.

ವೈದಿಕ ಕಾಲದ ಮಂತ್ರಗಳಲ್ಲಿ "ಗಂಗಾ ಯಮುನಾ"ಗಳ ಹೆಸರು ಮಾತ್ರ ಬರುತ್ತಿದ್ದರೆ, ಮುಂದೆ ಧಾರ್ಮಿಕ ಕೃತ್ಯಗಳ ಸಂದರ್ಭದಲ್ಲಿ "ಗಂಗೇಚ ಯಮುನೇ ಚೈವ ಗೋದಾವರೀ ಸರಸ್ವತೀ । ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂಕುರು" ಎಂದು ಹೇಳಲಾಗುತ್ತಿದೆ.

ಈ ಪ್ರಾರ್ಥನೆಯಲ್ಲಿ ಗಂಗಾ ಮಾತ್ರ ಅಲ್ಲ, ಯಮುನಾ, ಗೋದಾವರಿ, ಸರಸ್ವತಿ, ನರ್ಮದಾ, ಸಿಂಧು, ಕಾವೇರಿ ಮೊದಲಾದ ಎಲ್ಲ ನದಿಗಳೂ ನಮ್ಮ ಕಲ್ಯಾಣಕ್ಕಾಗಿ ಈ ಭೂಮಿಯಲ್ಲಿ ಪ್ರವಹಿಸುತ್ತಿವೆ ಎಂಬ ಆಶಯ ವ್ಯಕ್ತವಾಗಿದೆ. ಈ ಪುಟ್ಟ ಶ್ಲೋಕದಲ್ಲಿ ಭಾರತದ ಏಕತೆಯ ಸೂತ್ರ ಅಡಗಿದೆ. ಯಾವುದೇ ಮಂಗಲಮಯ ಸಂಸ್ಕಾರವಾಗುವಾಗ, ಎಲ್ಲ ನದಿಗಳ ನೀರನ್ನು ಮಿಶ್ರ ಮಾಡಿ ಅದರಲ್ಲಿ ಸ್ನಾನ ಮಾಡಿಸುವ ಕ್ರಮವು ಇಂದಿಗೂ ಕೆಲವೆಡೆಗಳಲ್ಲಿವೆ. ವಿವಾಹದ ಸಂದರ್ಭದಲ್ಲಿ ವಿವಾಹದ ಮಂಗಲ ಕಾಮನೆಗಳನ್ನು ಬಯಸುವಾಗ "ಕುರ್ವಂತು ವೋ ಮಂಗಲಮ್" ಎಂಬ ಶ್ಲೋಕವನ್ನು ಪಠಿಸಿ ಭಾರತದ ಎಲ್ಲ ನದಿಗಳನ್ನೂ ಸ್ಮರಿಸಲಾಗುತ್ತಿದೆ. ಈ ನದಿಗಳಿಂದಲೇ ಭಾರತ ಭೂಮಿಯು ಸುಜಲೆಯೂ ಸುಫಲೆಯೂ ಸಸ್ಯಶ್ಯಾಮಲೆಯೂ ಆಗಿರುವುದಲ್ಲವೆ?

ಗಂಗಾನದಿಯನ್ನು ನೋಡಿ ಸ್ನಾನ ಮಾಡುವುದು ಪುಣ್ಯವೆಂದು ಉತ್ತರದವರು ತಿಳಿದರೆ, ಮಧ್ಯ ಪ್ರದೇಶದ ನಿವಾಸಿಗಳು ನರ್ಮದಾನದಿಯನ್ನೇ ಭಕ್ತಿಭಾವದಿಂದ ಆರಾಧಿಸುತ್ತಾರೆ. ಕರ್ನಾಟಕದವರು ಕಾವೇರಿಯನ್ನು ಪೂಜಿಸುತ್ತಾರೆ. ನಮ್ಮ ಸಂಸ್ಕೃತಿ ಎಂದರೆ, ಇದೇ. ಇದನ್ನೇ ಸರಿತಾ ಸಂಸ್ಕೃತಿ ಎನ್ನುವುದು. ಈ ಸಂಸ್ಕೃತಿಯ ಉಪಾಸಕರು ರಾಜರೂ ಪಂಡಿತರೂ ಕವಿಗಳೂ ಆಗಿದ್ದಾರೆ. ವಾಲ್ಮೀಕಿ, ಕಾಲಿದಾಸ, ಭಾರವಿ ಮತ್ತು ಭವಭೂತಿ ಮೊದಲಾದ ಎಲ್ಲ ಕವಿಗಳೂ ಗಂಗಾನದಿಯ ಗೌರವಾದಿಗಳನ್ನು ವರ್ಣಿಸುವಾಗಲೇ ಅನ್ಯ ನದಿಗಳ ಕಡೆಗೂ ಸದಾಶಯವನ್ನೂ ಶ್ರದ್ಧೆಯನ್ನೂ ವ್ಯಕ್ತಪಡಿಸಿದ್ದಾರೆ.

ಭಾರತೀಯ ಜನ ಜೀವನವನ್ನು ಸಮೃದ್ಧಗೊಳಿಸುವ ಈ ನದಿಗಳು ಭಾರತೀಯ ಸಂಸ್ಕೃತಿಯ ಪ್ರತೀಕಗಳಾಗಿವೆ. ನೀರಾವರಿ, ವಿದ್ಯುತ್ ಮೊದಲಾದುವುಗಳ ದೃಷ್ಟಿಯಿಂದ ನವಭಾರತದ ನವತೀರ್ಥಗಳೂ ಆಗಿವೆ.

ಗಂಗೋತ್ರಿಯಿಂದ ಗಂಗಾಸಾಗರದವರೆಗೆ ಕೋಟಿಕೋಟಿ ಭಾರತೀಯರು ಸ್ನಾನಮಾಡಿ ಸುಖಪಡೆಯುವಂತೆಯೇ ಗಂಗಾ, ಗೋದಾವರಿ ಮೊದಲಾದ ನದಿಗಳು ನೀರಾವರಿಗೂ ವಿದ್ಯುತ್ತಿಗೂ ಉಪಯುಕ್ತವಾಗಿವೆ. ಆದುದರಿಂದಲೇ ನದಿಗಳು ಆಧುನಿಕ ಭಾರತದ ತೀರ್ಥಗಳು. ಆದಿಕಾಲದಲ್ಲಿ ಯಾತಾಯಾತ; ಪ್ರಯಾಣಾದಿಗಳಿಗೂ ವ್ಯಾಪಾರಕ್ಕೂ ನದಿಗಳೇ ಮಾರ್ಗಗಳಾಗಿದ್ದುವು; ಇಂದಿಗೂ ಸ್ವಲ್ಪ ಮಟ್ಟಿಗಾದರೂ ಅವು ಉಪಯೋಗಿಯಾಗಿವೆ. ನದಿಗಳೇ ಇಲ್ಲದ ನಗರವಾಗಲೀ ಊರಾಗಲೀ ಅಷ್ಟು ರಮಣೀಯವಾಗಿ ಕಾಣಿಸುವುದಿಲ್ಲ.

ಗಂಗಾನದಿಗಿರುವ ಗೌರವ ಅನ್ಯನದಿಗಳಿಗಿಲ್ಲ. ಅರ್ಜುನನಿಗೆ ಗೀತೋಪದೇಶ ಮಾಡುವಾಗ, ಶ್ರೀ ಕೃಷ್ಣ, "ನದಿಗಳಲ್ಲಿ ಸರ್ವ ಶ್ರೇಷ್ಠಳಾದ ಗಂಗೆ ನಾನು" ಎಂದಿದ್ದಾನೆ. ಗಂಗಾವತರಣದ ಕಥೆ ಯಾವರೂ ಜಗಜ್ಜನಿತವಿದೆ. ಸಗರನ ಅಶ್ವಮೇಧದ ಕುದುರೆಯನ್ನು ಇಂದ್ರನು ಕದ್ದು ಕಪಿಲ ಋಷಿಯ ಆಶ್ರಮದಲ್ಲಿಟ್ಟನಂತೆ. ಕುದುರೆಯರಸುತ್ತ ಸಗರನ ಮಕ್ಕಳು ಆ ಆಶ್ರಮಕ್ಕೆ ಹೋಗಿ ಕುದುರೆಯನ್ನು ಕಂಡು ಋಷಿಯನ್ನು ನಿಂದಿಸಿದರಂತೆ ಅವರ ಕೋಲಾಹಲದಿಂದ ಋಷಿಯ ತಪೋಭಂಗವಾಗಿ, ಅವರನ್ನು ತನ್ನ ಕೋಪದಿಂದ ಭಸ್ಮೀ ಭೂತರಾಗಿಸಿದನಂತೆ.

ಸಗರನ ವಂಶಸ್ಥರು ತಮ್ಮ ಪೂರ್ವಜರ ಆತ್ಮ ಶಾಂತಿಗಾಗಿ ಘೋರ ತಪಸ್ಸಗೈದರಂತೆ. ಅದರ ಪ್ರಭಾವದಿಂದಲೇ ಭಗೀರಥನು ಗಂಗೆಯನ್ನು ಭೂಮಿಗೆ ತರಲು ಸಮರ್ಥನಾದನಂತೆ. ಗಂಗೆಯ ಪ್ರಬಲ ವೇಗವನ್ನು ತಡೆಯಲು ಶಂಕರನ ನೆರವು ಪಡೆಯಲಾಯಿತಂತೆ. ಶಿವನು ತನ್ನ ಜಟೆಯಲ್ಲಾಕೆಯನ್ನು ಧರಿಸಿದನಂತೆ. ಗಂಗೆ ಭೂಮಿಯಲ್ಲಿ ಪ್ರವಹಿಸತೊಡಗಿದಾಗ, ಭಗೀರಥ ಆನಂದ ತನ್ಮಯನಾಗಿದ್ದರೂ ಕೊಂಚ ದೂರ ಹರಿಯುವಷ್ಟರಲ್ಲಿ ಪ್ರವಾಹ ನಿಂತಿತಂತೆ. ಕಾರಣ ಕೇಳಿದಾಗ, "ಸಪ್ತರ್ಷಿಗಳ ಆಶ್ರಮವಿಲ್ಲದೆ ನಾನು ಹರಿಯುವಾಗ ಯಾರೊಬ್ಬರ ಆಶ್ರಮವನ್ನಾದರೂ ನಾನು ಸ್ಪರ್ಶಿಸಿದ್ದರೆ, ನನಗೆ ಶಾಪವೀಯುವರು" ಎಂದಳು ಗಂಗೆ ದುಃಖದಿಂದ. ಆಗ, ಅಶರೀರವಾಣಿಯೊಂದು ಕೇಳಿತು:— "ಎಲೇ ಗಂಗೆಯೇ, ನೀನು ಏಳು ಕವಲುಗಳಾಗಿ ಹರಿದು ಎಲ್ಲ ಋಷ್ಯಾಶ್ರ

(೯ನೇ ಪುಟ ನೋಡಿರಿ)



ಅತ್ಯಧಿಕ ವೇಗದಿಂದ ಸಂಚರಿಸಬಲ್ಲ ಅಮೆರಿಕೆಯ ಅಣುಶಕ್ತಿ ಚಾಲಿತ ಸಬ್‌ಮೆರಿನ್—ಸ್ಕಿಪ್‌ಜಾಕ್.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಸ್ಮಾಲ ನಂಬ್ರ 99/1959

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡ್ಪಿ-ವಾದಿ

ಮತ್ತು

ಯು. ಗಣಪತಿ ಕಾಮತ್ ಕೂಡಾ—ಪ್ರತಿವಾದಿರು

1ನೇ ಪ್ರತಿವಾದಿ-ಯು. ಗಣಪತಿ ಕಾಮತ್-ಯು. ವೆಂಕಟ್ರಾಯ ಕಾಮತರ ಮಗ-ಬಡಗಬೆಟ್ಟು ಗ್ರಾಮದ ಕುಕ್ಕಿಕಟ್ಟೆ.

ಪ್ರತಿವಾದಿರು ವಾದಿಗೆ ತಾರೀಕು 29-3-56 ರಲ್ಲಿ ರೂಪಾಯಿ 200/-ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಾಕಿ ವ ಬಡ್ಡಿ ಕೂಡಾ ರೂಪಾಯಿ 110-66ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಸದರಿ ದಾವೆಯು ತಾರೀಕು 9-7-1959ಕ್ಕೆ ತನ್ನ ಬಗ್ಗೆ ಮುಂದೂಡಲಾಗಿಯದೆ. ಆ ದಿವಸ ಸದರಿ 1ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಹರಿಸದೆಯಿದ್ರೆ ಆತನ ಗೈರ್ ಹಾಜರಿಯಿಂದ ಸದರಿ ದಾವೆಯು ತೀರ್ಮಾನಿಸಲ್ಪಡುವದೆಂದು ಈ ಮೂಲಕ 1ನೇ ಪ್ರತಿವಾದಿಗೆ ತಿಳಿಸಲಾಗಿಯದೆ.

M. Damoder Kamath,
Advocate for Plff.

ಉಡುಪಿ, ತಾ. 16-6-59.

ಸ್ಥಾಪನೆ: 1906] ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ. 20,00,000/-
ಕ್ಷೇಮನಿಧಿ	—	ರೂ 14,40,000/-
ಠೇವಣಾತಿಗಳು	—	ರೂ. 7,19,35,000/-
ಸಾಲಗಳು	—	ರೂ. 3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ. 9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ.

The Canara Banking Corporation Ltd.

Estd:- 1906] [H. O. UDIPI (S. India)

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಕನ್ನಡದ ಮೇಲ್ಮೆ

ಕನ್ನಡದ ಸಮೀಕರಣ ಮತ್ತು ಪ್ರಾಮಾಣೀಕರಣ ಆಗಲಿ.

ವಿಶ್ವವಿದ್ಯಾಲಯದ ಮೇಲಿರುವ ಅಭಿಮಾನದಿಂದಲೇ ಜನತೆಯ ಪ್ರಗತಿ ಸಾಧ್ಯ.

ಕನ್ನಡ ಭಾಷೆಯು ಭಾರತದ ಅತ್ಯಂತ ಪುರಾತನ ಭಾಷೆಗಳಲ್ಲಿ ಒಂದಾಗಿರುತ್ತದೆ. ಈ ಬಗ್ಗೆ ಇತಿಹಾಸದಲ್ಲಿ ದಾಖಲೆಗಳಿರುತ್ತವೆ. ಕ್ರಿಸ್ತಶಕ ೫೦೦ರಲ್ಲಿಯ ಗ್ರೀಕ ನಾಟಕವೊಂದರಲ್ಲಿ ಕನ್ನಡದ ಶಬ್ದಗಳಿದ್ದವೆಂದು ಕೇಳಿದ್ದೇನೆ. ಕ್ರಿಸ್ತಶಕ ೯೫೦ರ ಸುಮಾರಿಗೆ ಕವಿರಾಜ ಮಾರ್ಗವೆಂಬ ಶ್ರೇಷ್ಠ ಗ್ರಂಥವೊಂದು ಬರೆಯಲ್ಪಟ್ಟಿರುತ್ತದೆ. ಕವಿಗಳು ಇದ್ದರೆ ಮಾತ್ರ ಕವಿರಾಜರು ಇರುವರು. ಯಾವುದೇ ಭಾಷೆಯು ಬಲಯುತವಾದಾಗ ಮಾತ್ರ ಕವಿಗಳು ಹುಟ್ಟುತ್ತಾರೆ. ಇದನ್ನೆಲ್ಲ ನೋಡಿದರೆ ಕನ್ನಡ ಭಾಷೆಯು ಮೊದಲೇ ಊರ್ಜಿತದಲ್ಲಿತ್ತೆಂದು ಅರ್ಥವಾಗುತ್ತದೆ.

ಕನ್ನಡದಲ್ಲಿ ಉಜ್ವಲ ಸಾಹಿತ್ಯವಿದ್ದರೂ ಅದು ಪರಿಪಕ್ವವಾದ ಭಾಷೆಯಾಗಿದ್ದರೂ ಕಳೆದ ೪೦೦ ವರ್ಷಗಳಲ್ಲಿ ಈ ಭಾಷೆಯ ವಿಕಾಸಕ್ಕೆ ಅವಕಾಶವೇ ಇದ್ದಿಲ್ಲ. ೧೯ನೆ ಶತಮಾನವು ಕಪ್ಪುಯುಗವೆಂದು ಹೆಸರಾದುದರಿಂದ ಹೀಗಾಗುವುದು ಸ್ವಾಭಾವಿಕ. ಆದರೆ, ಒಂದು ಸೋಜಿಗದ ಸಂಗತಿಯೇನೆಂದರೆ, ಕನ್ನಡ ಭಾಷೆಯು ಪ್ರಚಲಿತವಿರುವ ನಾಡಿನಲ್ಲಿ ಸ್ಥಾಪಿತವಾದ ಮೊದಲನೆ ಶಾಲೆಯು ಕನ್ನಡ ಶಾಲೆಯಲ್ಲ. ಮತ್ತು ಈ ಶಾಲೆಗೆ ನೇಮಿತರಾದ ಅಧ್ಯಾಪಕರೂ ಕನ್ನಡಿಗರಲ್ಲ ಎಂದು ನಿಮ್ಮ (ಕರ್ನಾಟಕ ವಿಶ್ವವಿದ್ಯಾಲಯದ) ಗ್ರಂಥಾಲಯದ ಭಂಡಾರಿ ಶ್ರೀ ದೇಶಪಾಂಡೆಯವರು ಬರೆದ ಪುಸ್ತಕವೊಂದರಿಂದ ತಿಳಿದುಬರುತ್ತದೆ.

ಕರ್ನಾಟಕದಲ್ಲಿ ಮೊದಲನೆ ಕಾಲೇಜು ಬಹಳ ತಡವಾಗಿ, ಎಂದರೆ, ೧೯೧೯ರಲ್ಲಿ ತಲೆಯೆತ್ತಿತು. ೩೦ ವರ್ಷಗಳ ನಂತರ ಕರ್ನಾಟಕ ವಿಶ್ವವಿದ್ಯಾಲಯವು ಅಸ್ತಿತ್ವದಲ್ಲಿ ಬಂದಿದೆ.

ಈಗ ಕನ್ನಡ ಭಾಷೆಯ ವೈಶಿಷ್ಟ್ಯ ಹಾಗೂ ಸತ್ವಗಳು ಮೈದಾಳಿ ನಿಂತಿವೆ. ಕನ್ನಡದ ವಿಕಾಸಕ್ಕೆ ಅವಕಾಶ ದೊರೆತಿರುತ್ತವೆ. ಭಾಷಾವಾರು ರಾಜ್ಯಗಳ ರಚನೆಯಲ್ಲಿ ನಂಬಿಗೆಯಿರುವವರಲ್ಲಿ ನಾನೂ ಒಬ್ಬ. ಹೊಸ ವಿಚಾರಗಳಿಗೆ ಪರಸ್ಪರ ವಿಚಾರವಿನಿಮಯಕ್ಕೆ ಒಂದೇ ಭಾಷೆ ಅತ್ಯವಶ್ಯ. ಈಗ ನಿಮ್ಮ ಭಾಷೆಯು ಸಮೀಕರಣ ಮತ್ತು ಪ್ರಮಾಣೀಕರಣವಾಗಬೇಕಾಗಿದೆ. ಇದು ಯಶಸ್ವಿಯಾದರೆ, ಕನ್ನಡಿಗರಾದ ನೀವು ಪ್ರಗತಿ ಪಥದಲ್ಲಿ ಕಾಲಿಟ್ಟು ದೇಶದಲ್ಲಿಯ ಸಾಮಾಜಿಕ, ರಾಜಕೀಯ ಮೊದಲಾದ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರವನ್ನು ವಹಿಸಲು ಸಮರ್ಥರಾಗುತ್ತೀರಿ. ಆದರೆ, ಒಂದು ವಿಷಯವನ್ನು ಮಾತ್ರ ನೀವು ಮರೆಯಬಾರದು. ನಿಮ್ಮ ವಿಶ್ವವಿದ್ಯಾಲಯದ ಬಗ್ಗೆ ನಿಮಗೆ ಅಭಿಮಾನವಿರಬೇಕು. ಅದರ ಅಭಿವೃದ್ಧಿಯಲ್ಲಿಯೇ ನಿಮ್ಮ ಹಿತವಿದೆ. ನಿಮ್ಮ ಮಕ್ಕಳಿಗೆ ಯೋಗ್ಯ ಶಿಕ್ಷಕರನ್ನು ವಿಶ್ವವಿದ್ಯಾಲಯವೇ ನೀಡುವುದು. ಆದುದರಿಂದ ಅದರ ಸ್ಥಾನವು ಅತ್ಯಂತ ಮಹತ್ವದ್ದಿದೆ.

(ಡಾ| ಸಿ. ಡಿ. ದೇಶಮುಖರ ಕರ್ನಾಟಕ ವಿಶ್ವವಿದ್ಯಾಲಯದ ನೂತನ ಕಟ್ಟಡದ ಉದ್ಘಾಟನಾ ಭಾಷಣದಿಂದ)

ವಿಮಾ ವ್ಯವಹಾರ

ಜೀವವಿಮಾ ಕಾರ್ಪರೇಶನ್ ಲಾಭಾಂಶವನ್ನು ಘೋಷಿಸುವುದು.

ಪ್ರಥಮ ಮೌಲ್ಯ ನಿರ್ಣಯದಲ್ಲಿ ವ್ಯತ್ಯಸ್ತ ಲಾಭಾಂಶ ವಿಧಾನವನ್ನು ಅನುಸರಿಸಲಾಗಿದೆ.

ಜೀವವಿಮಾ ಕಾರ್ಪೊರೇಶನು ೩೧-೧೨-೫೭ರಂದು ಚಲಾವಣೆಯಲ್ಲಿದ್ದ ಪಾಲಿಸಿಗಳ ಮೇಲೆ ಈಗ ತಾನೇ ಲಾಭಾಂಶವನ್ನು ಹಂಚಲಿದೆ. ಕಾರ್ಪರೇಶನಿನ ಸಾಲ ಮೂಲಗಳ ಮೌಲ್ಯ ನಿರ್ಣಯವು ಪ್ರಪ್ರಥಮ ಬಾರಿಗೆ ಆಗಿ ರೂ. ೩೩—೦೪ ಕೋಟಿ ರೂಪಾಯಿಗಳ ಲಾಭವು ದೊರೆತಿದೆ, ಆದಾಯ ತೆರಿಗೆಯ ಸಲುವಾಗಿ ಹಣವನ್ನು ತೆಗೆದಿರಿಸಿದ ಮೇಲೆ, ರೂ. ೨೭—೫೭ ಕೋಟಿಯಷ್ಟನ್ನು ತನ್ನ ಪಾಲಿಸಿದಾರರಿಗೆ ಲಾಭಾಂಶವನ್ನಾಗಿ ಹಂಚುವುದಕ್ಕೆ ಸಾಮಾನ್ಯತಃ ನಿರ್ಧಾರಕ್ಕೆ ಬರಲಾಗಿದೆ. ಉಳಿದ ೧.೪೫ ಕೋಟಿ ರೂಪಾಯಿಗಳನ್ನು ಜೀವವಿಮಾ ಕಾರ್ಪೊರೇಶನ್ ವಿಧೇಯಕದಂತೆ ಸರಕಾರಕ್ಕೆ ಕೊಡಲಾಗುವುದು.

ಬೇರೆ ಬೇರೆ ಕಂಪೆನಿಗಳ ಪಾಲಿಸಿದಾರರಿಗೆ ಸಮುಚಿತವಾದ ರೀತಿಯಲ್ಲಿ ಲಾಭಾಂಶವು ದೊರೆಯಬೇಕೆಂಬ ಇರಾದೆಯಿಂದ ಈ ಮೌಲ್ಯ ನಿರ್ಣಯದಲ್ಲಿ ವ್ಯತ್ಯಸ್ತ ಲಾಭಾಂಶ ಹಂಚುವ ವಿಧಾನವನ್ನು ಕಾರ್ಪರೇಶನ್ ಅನುಸರಿಸಿದೆ. ಕಾರ್ಪೊರೇಶನ್ ತಾನು ಇತ್ತ ಪಾಲಿಸಿ ಮತ್ತು ತಾನು ವಿಭಿನ್ನ ಕಂಪೆನಿಗಳಿಂದ ವಶಪಡಿಸಿಕೊಂಡ ಪಾಲಿಸಿಗಳನ್ನು ಈ ವಿಧಾನದಂತೆ ಆರು ಪಂಗಡಗಳಾಗಿ ವಿಂಗಡಿಸಿದೆ. ವಿಶೇಷ ವರ್ಗದಲ್ಲಿ ಹೆಚ್ಚಿನ ವಿದೇಶೀಯ ಕಂಪೆನಿಗಳು ಮತ್ತು ಬಲವಾದ ಆರ್ಥಿಕ ಸ್ಥಿತಿಯಲ್ಲಿದ್ದ ಕಂಪೆನಿಗಳು ಸೇರಿವೆ. ಈ ವರ್ಗದಲ್ಲಿ ಬರುವ ಓರಿಯಂಟಲ್ ಇತ್ಯಾದಿ ೧೫ ಕಂಪೆನಿಗಳ ಪಾಲಿಸಿದಾರರಿಗೆ ಪ್ರತಿ ಸಾವಿರ ರೂಪಾಯಿಗಳಿಗೆ ಪ್ರತಿ ವರ್ಷಕ್ಕೆ ಉಂಬಳಿ ವಿಮೆಗೆ ರೂ. ೧೬.೮೦ ಮತ್ತು ಜೀವಾವಧಿ ವಿಮೆಗೆ ರೂ. ೨೧ರಂತೆ ಬೋನಸ್ ಹಂಚಲಾಗಿದೆ.

ಮೊದಲನೆಯ ಪಂಗಡದ ಕಂಪೆನಿಗಳ ಪಾಲಿಸಿದಾರರಿಗೆ (ಜೀವಾವಧಿ) ರೂ. ೧೬.೫೦ ಮತ್ತು (ಉಂಬಳಿ) ೧೪ರಂತೆ ಲಾಭಾಂಶ ದೊರೆಯುವುದು. ಕೆನರಾ ಮ್ಯೂಚುವಲ್ ಮೊದಲಾದ ೩೧ ಕಂಪೆನಿಗಳ ಪಾಲಿಸಿದಾರರಿಗೆ ಈ ಲಾಭಾಂಶವು ಲಭಿಸುವುದು.

ಬಾಂಬೆ ಲ್ಯಾಫ್ ಮೊದಲಾದ ೩೫ ಕಂಪೆನಿಗಳಿಂದ ಕೂಡಿದ ಎರಡನೆಯ ಪಂಗಡದ ಕಂಪೆನಿಗಳ ಪಾಲಿಸಿದಾರರಿಗೆ ರೂ. ೧೨ ಮತ್ತು ರೂ. ೧೧-೨೦ರಂತೆ ಜೀವಾವಧಿ ಮತ್ತು ಉಂಬಳಿ ವಿಮಾ ಪಾಲಿಸಿಗಳಿಗೆ ಲಾಭಾಂಶ ದೊರೆಯುವುದು. ಪಾಪ್ಯುಲರ್ ಮೊದಲಾದ ೩೭ ಕಂಪೆನಿಗಳು ಮೂರನೆಯ ವರ್ಗಕ್ಕೆ ಸೇರಿದ್ದು, ಇವುಗಳ ಪಾಲಿಸಿದಾರರಿಗೆ ಜೀವಾವಧಿ ಮತ್ತು ಉಂಬಳಿ ವಿಮಾ ಪತ್ರಗಳಿಗೆ ಪ್ರತಿ ಸಾವಿರಕ್ಕೆ ಒಂದು ವರ್ಷಕ್ಕೆ ರೂ. ೧೦-೫೦ ಮತ್ತು ರೂ. ೮-೪೦ರಂತೆ ಲಾಭಾಂಶ ಸಿಗುವುದಾದರೆ, ನೆಪ್ಚ್ಯೂನ್ ಮುಂತಾದ ನಾಲ್ಕನೆಯ ವರ್ಗದ ೫೬ ಕಂಪೆನಿಗಳವರಿಗೆ ಜೀವಾವಧಿ ವಿಮಾ ಪತ್ರಗಳಿಗೆ ಸಾವಿರಕ್ಕೆ ಒಂದು ವರ್ಷಕ್ಕೆ ರೂ. ೭ ಮತ್ತು ಉಂಬಳಿ ವಿಮಾ ಪತ್ರಕ್ಕೆ ರೂ. ೫.೬೦ರಂತೆ ಬೋನಸ್ ದೊರೆಯುತ್ತದೆ.

೯೯ ಕಂಪೆನಿಗಳನ್ನೊಳಗೊಂಡ ೫ನೇ ವರ್ಗದ ಕಂಪೆನಿಗಳ ಪಾಲಿಸಿದಾರರಿಗೆ ಯಾವ ತರದ ಬೋನಸ್ಸೂ ದೊರೆಯುವುದಿಲ್ಲ. ಇದಕ್ಕೆ ಅವುಗಳ ಆರ್ಥಿಕ ಸ್ಥಿತಿಯು ಶಿಥಿಲಾವಸ್ಥೆಯಲ್ಲಿದ್ದುದೇ ಕಾರಣವಾಗಿದೆ. ಈಸ್ಟ್ ಎಂಡ್ ವೆಸ್ಟ್, ಯುನೈಟೆಡ್ ಕರ್ನಾಟಕ, ಮೊದಲಾದುವು ಈ ಗುಂಪಿಗೆ ಸೇರಿವೆ.

೧೯-೧-೫೬ (ಜೀವವಿಮಾ ವ್ಯವಹಾರವು ರಾಷ್ಟ್ರೀಕರಣವಾದ ದಿನ)ದಿಂದ ಬೇರೆ ಬೇರೆ ಕಂಪೆನಿಗಳು ಕೊಟ್ಟ ಪಾಲಿಸಿಗಳ ಮೇಲೆ ಆಯಾ ಕಂಪೆನಿಗಳು ನಿರ್ವಹಿಸುತಿದ್ದ ವಿಧಾನಗಳಂತೆಯೇ ಬೇರೆ ಬೇರೆ ಪದ್ಧತಿಗಳನ್ನು ಅನುಸರಿಸಲಾಗುವುದು.

ವ್ಯತ್ಯಸ್ತ ಲಾಭಾಂಶ ವಿಧಾನವು ಅಂತಿಮ ಘಟ್ಟವನ್ನು ಮುಟ್ಟಿ, ಸರಕಾರದಿಂದ ಮಾನ್ಯವಾದೊಡನೆಯೇ ಲಾಭ ಸಹಿತವಾದ ಎಲ್ಲ ಪಾಲಿಸಿಗಳ ಮೇಲೂ ಉಪರೋಕ್ತ ದರದಲ್ಲಿ ಲಾಭಾಂಶವನ್ನು ಸೇರಿಸಲಾಗುವುದು. ಈಗ ಆದ ನಿರ್ಣಯಕ್ಕಿಂತ ಅಂತಿಮ ನಿರ್ಣಯದಲ್ಲಿ ಯಾವ ವಿಶೇಷ ಬದಲಾವಣೆಯೂ ಆಗುವ ನಿರೀಕ್ಷೆ ಇಲ್ಲ.

೬೭ ಅನ್ಯಾನ್ಯ ಕಂಪೆನಿಗಳು ಘೋಷಿಸಿದ್ದ ಲಾಭಾಂಶ ದರಗಳಿಗಿಂತ ಆ ಕಂಪೆನಿಗಳ ಪಾಲಿಸಿಗಳಿಗೆ ಈಗ ಘೋಷಿಸಲಾದ ಲಾಭಾಂಶ ದರವು ಹೆಚ್ಚಿರುವುದೆಂದೂ ೭೫ ಕಂಪೆನಿಗಳ ಪಾಲಿಸಿಗಳಿಗೆ ಕಡಿಮೆಯಾಗಿರುವುದೆಂದೂ ೮೭ ಕಂಪೆನಿಗಳ ಲಾಭಾಂಶ ದರದಲ್ಲಿ ಅಂತರವಿಲ್ಲವೆಂದೂ ೧೪ ಕಂಪೆನಿಗಳಲ್ಲಿ ಕೆಲವೊಂದು ಅಕ್ರಮಗಳಿದ್ದುದರಿಂದ ತುಲನೆಯೇ ಇರುವುದಿಲ್ಲವೆಂದೂ ಹೇಳಲಾಗಿದೆ. ಅಲ್ಲದೆ, ಒಟ್ಟು ವಿಮಾ ಪತ್ರಗಳಲ್ಲಿ ಶೇಕಡಾ ೮೧ರಷ್ಟು ವಿಶೇಷ ಅಥವಾ ಮೊದಲನೆಯ ವರ್ಗಗಳಲ್ಲಿಯೇ ಬರುವುದೆಂದೂ ತಿಳಿದುಬಂದಿದೆ.

ಬೇರೆ ಬೇರೆ ವಿಮಾ ಕಂಪೆನಿಗಳನ್ನು ರಾಷ್ಟ್ರೀಕರಣ ಮಾಡುವಾಗ, ಅರ್ಥಿಕ ಮಂತ್ರಿಗಳು ಆಯಾ ಕಂಪೆನಿಗಳ ಆರ್ಥಿಕ ಸ್ಥಿತಿಯನ್ನು ಅನುಸರಿಸಿಯೇ ಅವುಗಳ ಪಾಲಿಸಿದಾರರಿಗೆ ವ್ಯತ್ಯಸ್ತ ಲಾಭಾಂಶ ವಿಧಾನದ ಮೂಲಕ ನ್ಯಾಯವೊದಗಿಸಿಕೊಡುವ ಭರವಸೆಯನ್ನು ಇತ್ತುದರಿಂದ ಸದ್ಯ ಈ ರೀತಿಯ ವಿಧಾನವನ್ನು ಅನುಸರಿಸಲಾಗಿದೆ. ಜೀವವಿಮಾ ಕಾರ್ಪರೇಶನು ಸಾಕಷ್ಟು ಲಾಭವನ್ನು ಪಡೆದುದರಿಂದ ಈ ಲಾಭಾಂಶವನ್ನು ಹಂಚುವುದು ಸಾಧ್ಯವಾಯಿತು. ಕೇಂದ್ರ ಸರಕಾರದೊಡನೆ ಸಮಾಲೋಚಿಸಿ, ಕಾರ್ಪರೇಶನು ತನ್ನ ಅಂತಿಮ ನಿರ್ಣಯವನ್ನು ಕೈಗೊಳ್ಳುವುದು.

ಜೀವವಿಮಾ ಕಾರ್ಪೊರೇಶನಿನ ಮೆನೇಜಿಂಗ ಡೈರೆಕ್ಟರರಾದ ಶ್ರೀ ಎ. ರಾಜಗೋಪಾಲನ್ನರು, ತನ್ನ ಆರ್ಥಿಕ ಸ್ಥಿತಿಗತಿಗಳನ್ನು ಕಂಡುಕೊಳ್ಳುವುದಕ್ಕೆ ಮಧ್ಯಕಾಲೀನ ಮೌಲ್ಯ ನಿರ್ಣಯವನ್ನು ಕಾರ್ಪೊರೇಶನ್ ಮಾಡಬಹುದು, ಸದ್ಯ ಎರಡು ವರ್ಷಗಳಿಗೊಮ್ಮೆ ಮಾತ್ರ ಮೌಲ್ಯ ನಿರ್ಣಯ ನಡೆಯುವುದು ಎಂದು ಹೇಳಿದ್ದಾರೆ.

ಈಗ ಮೌಲ್ಯ ನಿರ್ಣಯಕ್ಕೆ ಒಳಗಾದ ಪಾಲಿಸಿಗಳು ೨೪೫ ವಿಭಿನ್ನ ಕಂಪೆನಿಗಳ ಮತ್ತು ೧-೯-೫೬ರಿಂದ ಕಾರ್ಪೊರೇಶನ್ ಇತ್ತ ಪಾಲಿಸಿಗಳಲ್ಲಿ ೩೧-೧೨-೫೭ರಂದು ವ್ಯವಹಾರದಲ್ಲಿದ್ದವುಗಳೆಂದು ಹೇಳಿ, ಇಂತಹ ಪಾಲಿಸಿಗಳು ಒಟ್ಟು ಮೌಲ್ಯ ಲಾಭಾಂಶ ಸಹಿತ ರೂ. ೧೪,೭೨,೮೧,೩೧,೬೮೪ಗಳ ೫೬,೮೩,೪೧೪ ಪಾಲಿಸಿಗಳು ಮತ್ತು ವಾರ್ಷಿಕ ರೂ. ೭೨,೮೦,೧೨೦ರ ೧೧,೫೩೯ ಅನ್ಯುಟಿಗಳು ಸೇರಿವೆ ಎಂದು ಶ್ರೀ ರಾಜಗೋಪಾಲನ್ನರು ಹೇಳಿದರು.

ಜೀವವಿಮಾ ಕಾರ್ಪರೇಶನ್‌ನ ಈ ಮೌಲ್ಯ ನಿರ್ಣಯದಲ್ಲಿ ಯೋಗ್ಯ ಲಾಭಾಂಶವು ಪಾಲಿಸಿದಾರರಿಗೆ ದೊರಕಿದೆ ಯೆನ್ನಬಹುದು. ಆದರೆ ಮೆನೇಜಿಂಗ್ ಡೈರೆಕ್ಟರರೇ ಹೇಳುವಂತೆ ೭೫ ಕಂಪೆನಿಗಳ ಪಾಲಿಸಿದಾರರಿಗೆ ರಾಷ್ಟ್ರೀಕರಣದಿಂದ ಲಾಭಾಂಶ ಕಡಿಮೆ ದೊರೆತಿರುವುದು ನಿಜವಾದರೂ, ನಿರಾಶೆಗೆ ಮಾತ್ರ ಎಡೆಯಿಲ್ಲ ಎಂದು ಹೇಳಬಹುದು. ಸದ್ಯ ಮುಂದಿನ ಮೌಲ್ಯ ನಿರ್ಣಯದಲ್ಲಿನ ಫಲಿತಾಂಶ ಯಾವರೀತಿ ಪ್ರಕಟವಾಗುವುದೆಂಬುದನ್ನೇ ಹೊಂದಿಕೊಂಡು, ರಾಷ್ಟ್ರೀಕರಣದ ಯಶಸ್ಸು ಅಡಗಿದೆ ಎಂದು ಹೇಳಬಹುದು.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.
ಕಥಾ ಕೌಮುದಿ
(ಹದಿನೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1 = 50)
ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ಸಿಮ್ಯೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ವಿದ್ಯಾರ್ಥಿಗಳಿಗೆ ಉಪಯುಕ್ತವಾದ
ಭಾರದ್ವಾಜ ಡಿಕ್ಷನೆರಿ
ಇಂಗ್ಲಿಷ್ ಕನ್ನಡ ಶಬ್ದಕೋಷ
ದೊರೆಯುತ್ತದೆ
ನವಭಾರತ ಬುಕ್ ಡಿಪ್ಪೊ, ಉಡುಪಿ
ನವಯುಗ ಪ್ರೆಸ್, ಉಡುಪಿ.

ಅಲುಗಿಸುವ ಇಂಧನಗಳು ಬೆಂಕಿಯಿಂದ ಪ್ರಜ್ವಲಿಸುತ್ತವೆ; ದಂಡಾದಿಗಳಿಂದ ಹೊಡೆಯಲ್ಪಟ್ಟ ಸರ್ಪವು ತತ್‌ಕ್ಷಣವೇ ಹೆಡೆಯರಳಿಸುತ್ತದೆ; ಸಾಮಾನ್ಯವಾಗಿ ಪ್ರತಿಪ್ರಾಣಿಯೂ ಕೆಣಕಿದರೆ ಮಾತ್ರ ತನ್ನ ಸಹಜವಾದ ಗುಣವನ್ನು ಪಡೆಯುತ್ತದೆಯಲ್ಲವೆ?

NAVAYUGA

Founder:—

A. B. SHETTY,

Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೨೫-೬-'೫೯	೪೧

ಸಮಸ್ಯೆಗೆ ಪರಿಹಾರ

ಅಖಂಡ ಭಾರತದ ಮಾತ್ರವಲ್ಲ, ವಿಶ್ವದ ಹೆಚ್ಚಿನ ದೇಶಗಳ ಗಮನವೂ ಇಂದು ಭಾರತದ ಒಂದು ಅತ್ಯಂತ ಕಿರಿಯ ರಾಜ್ಯ ಕೇರಳದಲ್ಲಿ ಕೇಂದ್ರೀಕೃತವಾಗಿದೆ. ಆಕಾರದಲ್ಲಿ ಕಿರಿಯದಾದರೂ ಅದು ಬಹಳ ಚಟುವಟಿಕೆಗಳಿಂದ ಕೂಡಿದೆ ಎಂಬುದು ವಿಶ್ವಜನಿತವಾದ ವಿಚಾರ. ಭಾರತದ ಲೋಕತಂತ್ರದಡಿಯಲ್ಲಿರುವ ರಾಜ್ಯ ಸರಕಾರದ ಕಾರ್ಯಕ್ರಮ ಹಾಗೂ ಆಡಳಿತೆಯ ದುಷ್ಪರಿಣಾಮಗಳಿಂದ ರೋಸಿ ಹೋಗಿದ್ದ ಕೇರಳೀಯರು ಅಲ್ಲಿನ ಕಮ್ಯುನಿಸ್ಟ ಸರಕಾರಕ್ಕೆ ವಿರುದ್ಧವಾಗಿ ತಮ್ಮ ಅಸಹಕಾರ ಆಂದೋಲನವನ್ನೇ ಬಲಪಡಿಸಿ ಮುನ್ನಡೆಸುತ್ತಿರುವರು. ಕಳೆದ ೧೦ ದಿನಗಳಲ್ಲಿ ಈ ಅಹಿಂಸಾರೂಪವಾದ ಆಂದೋಲನದಲ್ಲಿ ಅಲ್ಪಸ್ವಲ್ಪ ಹಿಂಸಾಚರಣೆಯೂ ಕಾಣಿಸಿಕೊಂಡರೂ ಚಳವಳವು ಜಯಪ್ರದವಾಗಿಯೇ ಮುಂದುವರೆದುದನ್ನು ಕಾಣುವಾಗ, ಕೇರಳೀಯರಲ್ಲಿ ಸರಕಾರದ ವಿರುದ್ಧ ಇರುವ ಭಾವನೆಗಳು ಸುವ್ಯಕ್ತವಾಗುತ್ತವೆ.

ಕೇರಳ ಸರಕಾರವು ಈ ಆಂದೋಲನಕ್ಕೆ ಜಾತೀಯ ರೂಪವನ್ನು ಕೊಡಲು ಪ್ರಯತ್ನಿಸಿದೆ; ಆದರೆ, ಸರ್ವೋದಯ ನಾಯಕ ಶ್ರೀ ಜಯಪ್ರಕಾಶ ನಾರಾಯಣರೆನ್ನುವಂತೆ ಇಲ್ಲಿ ನಡೆಯುತ್ತಿರುವ ಅಸಹಕಾರ ಆಂದೋಲನಕ್ಕೆ ಜಾತೀಯ ರೂಪವನ್ನೀಯುವುದು ಸಾಧ್ಯವಿಲ್ಲ. ಏಕೆಂದರೆ, ಈ ಆಂದೋಲನದಲ್ಲಿ ಕೇವಲ ಒಂದೇ ಅಥವಾ ಎರಡೇ ಜಾತಿಗಳವರು ಒಟ್ಟು ಸೇರಿರದೆ ವಿವಿಧ ಜಾತಿಗಳ ಜನರು ಕಲೆತಿದ್ದಾರೆ. ತಮ್ಮ ನಿರಪರಾಧಿತನವನ್ನು ಪ್ರದರ್ಶಿಸುವ ಅಭಿಪ್ರಾಯದಿಂದಲೇ ಕೇರಳ ಸರಕಾರವು ಜಾತೀಯವೆಂದು ಹೇಳಲು ತೊಡಗಿದೆಯಲ್ಲದೆ ಮತ್ತೇನು? ಪ್ರಜಾಪ್ರಭುತ್ವವನ್ನೇ ಅಲ್ಲಗಳೆದು ಕಮ್ಯುನಿಸ್ಟರು ತಮ್ಮ ನಿರಂಕುಶ ಶಾಸನವನ್ನೇ ಮೊದಲುಮಾಡಿರುವಾಗ ಪ್ರಜಾಪ್ರಭುತ್ವವಾದಿಗಳಾದರೂ ಅದನ್ನು ಉರುಳಿಸಲು ಪ್ರಜಾತಂತ್ರಕ್ಕೆ ಅನುಕೂಲವಾದ ವಿಧಾನವನ್ನೇ ಅನುಸರಿಸಿದರೆ, ಅದರಲ್ಲಿ ತಪ್ಪಿದೆ ಎನ್ನುವುದು ಸರಿಯಲ್ಲ. ಕಮ್ಯುನಿಸ್ಟರನ್ನು ಕೇರಳದ ಗದ್ದುಗೆಗೆ ಏರಿಸಿದ ಜನಮತವಾಗಲೀ ಕಳೆದ ಚುನಾವಣೆಯಲ್ಲಿ ವಿಶೇಷವೇನಿಲ್ಲ. ವಿನಂಚನಾತ್ಮಕ ಸ್ಥಿತಿಯಲ್ಲಿರುವ ಕೇರಳವನ್ನು ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ, ಶ್ರೀ ಯು. ಎನ್. ದೇಭಾರರು ಸಂದರ್ಶಿಸಿ, ತಮ್ಮ ಅಭಿಪ್ರಾಯವನ್ನು ಬೆಳಕಿಗೆ ಹಿಡಿದಿದ್ದಾರೆ. ಕೇರಳದಲ್ಲಿ ಶಾಂತ ವಾತಾವರಣವಿಲ್ಲ; ಅಲ್ಲಿನ ಪಕ್ಷ ಸಂಸ್ಥೆಗಳು ಸರಕಾರವು ರಾಜಿನಾಮೆಯೀಯ ಬೇಕೆಂದು ಕೇಳಿಕೊಂಡಿದೆ. ಕೇವಲ ರಾಜಕೀಯ ಪಕ್ಷಗಳು ಮಾತ್ರವಲ್ಲ, ಸ್ಥಾನೀಯ ಸಂಸ್ಥೆಗಳೂ ವಕೀಲರ ಸಂಘಗಳೂ ಈ ಕೇಳಿಕೆಯನ್ನು ಬೆಂಬಲಿಸಿವೆ. ಕೇರಳದ ಜನತೆಯಲ್ಲಿ ಅಧಿಕ ಸಂಖ್ಯಾಕ ಜನರು ಕಮ್ಯುನಿಸ್ಟರ ಅಧಿಕಾರದಿಂದ ಬೇಸತ್ತಿರುವರೆಂದು ಇಷ್ಟರಲ್ಲಿಯೇ ವ್ಯಕ್ತಪಟ್ಟಿದೆ. ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಸಾದಿಕ ಆಲಿಯವರೂ ಇಲ್ಲಿನ ಅಭ್ಯಾಸ ನಡೆಸಿದ್ದಾರೆ. ಸದ್ಯ ಪ್ರಧಾನಿ ನೆಹರೂ ಅವರೂ ಸಂದರ್ಶಿಸಿ, ಅಲ್ಲಿನ ನಿಜಸ್ಥಿತಿಯನ್ನು ಕಣ್ಣಾರೆ ಕಂಡು ಹೋಗಿದ್ದಾರೆ, ರಾಜ್ಯದ ಶಾಂತಿಯ ಬಗ್ಗೆ ಕಮ್ಯುನಿಸ್ಟರು ಕೊಡುವ ಹೇಳಿಕೆಗಳು ತೀರ ನಿರಾಧಾರವಾದುವೆಂದು ತಿಳಿದು ಬಂದಿದೆ. ಅಶಾಂತಿಯು ಹೊಗೆಯಾಡುತ್ತಿರುವ ಕೇರಳದಲ್ಲಿ ಶಾಂತಿ ಸ್ಥಾಪನೆಯು ತೀವ್ರವಾಗಿ ಆಗದೆ ಹೋದರೆ, ಪರಿಸ್ಥಿತಿ ವಿಕೋಪಕ್ಕೆ ಹೋಗಬಹುದೆಂಬುದು ಸುಸ್ಪಷ್ಟ.

ವಿವಾದ ಹಾಗೂ ಆಂದೋಲನಕ್ಕೆ ಕಾರಣವಾದ ಮೂಲ ಸಮಸ್ಯೆಗಳ ಬಗ್ಗೆ ನಿಷ್ಕಲ್ಮಷ ಮನಸ್ಸಿನಿಂದ ಇಕ್ಕಡೆಯವರೂ ವಿಚಾರವಿನಿಮಯ ನಡೆಸಿ ಒಂದು ನ್ಯಾಯೋಚಿತವಾದ ಒಪ್ಪಂದಕ್ಕೆ ಬರುವುದರಿಂದ ಸಮಸ್ಯೆ ಪರಿಹಾರವಾಗಬಹುದಿತ್ತು. ಆದರೆ, ಕಮ್ಯುನಿಸ್ಟ ಸರಕಾರವು ಈ ದಿಸೆಯಲ್ಲಿ ತುಸು ಬಿಟ್ಟತನವನ್ನೇ ತೋರಿಸಿ ವಿಚಾರವಿನಿಮಯಕ್ಕೆ ಸಿದ್ಧವಾಗಿದ್ದರೂ ತನ್ನ ನಿರ್ಧಾರ ಮಾತ್ರ ಅಚಲ ಎಂಬ ಹಠವಾದವನ್ನೇ ಹಿಡಿದುದರಿಂದ ಈ ಮಾರ್ಗವು ಎಂದೆಂದಿಗೂ ಪರಿಣಾಮಕಾರಿಯೆಂದೂ ಆಗದು. ಇನ್ನು ಸರಕಾರವೇ ಜನಾಭಿಪ್ರಾಯಕ್ಕೆ ಮಣಿದು, ರಾಜಿನಾಮೆಯನ್ನು ಈಯ ಬಹುದು. ಆದರೆ, ಸಿಕ್ಕಿದ ಅವಕಾಶವನ್ನು ಸಾಧ್ಯವಾದಷ್ಟು ಹೆಚ್ಚು ಕಾಲ ಬೆಳೆಸಿಕೊಳ್ಳುವ ಲವಲವಿಕೆಯ ಮೂಲಕ ಅದಂತೂ ದೂರದ ಮಾತೇ ಸರಿ. ಹಾಗಾದಾಗ ಕೊನೆಯದಾಗಿ, ರಾಜ್ಯದಲ್ಲಿ ಗಂಡಾಂತರ ಪರಿಸ್ಥಿತಿಯನ್ನು ಸಾರಿ, ಅಲ್ಲಿ ತನ್ನ ಆಡಳಿತೆಯನ್ನು ಅಧ್ಯಕ್ಷರು ಜಾರಿಗೊಳಿಸುವುದು ಒಂದೇ ನಿಜವಾಗಿ ಉಳಿದಿರುವ ಮಾರ್ಗ. ಕೇರಳದಲ್ಲಿ 'ಇಷ್ಟೊಂದು ಆಂದೋಲನಕ್ಕೆ ಮಾರ್ಗವನ್ನು ಹಾಕಿಕೊಟ್ಟ ಘಟನೆಗಳು ನಡೆಯುವಾಗ ರಾಜ್ಯಪಾಲರಾದರೂ ಮೌನವಾಗಿ ಕುಳಿತಿದ್ದುದೇಕೆಂದು ಅರ್ಥವಾಗಿಲ್ಲ. ಪ್ರತ್ಯಕ್ಷವಾಗಿ ಸ್ಥಿತಿಗತಿಗಳ ಅಧ್ಯಯನವನ್ನು ಪ್ರಧಾನಿ ನೆಹರೂ ನಡೆಸಿದ್ದಾರೆ. ಪರಿಸ್ಥಿತಿಯನ್ನು ಹತೋಟಿಯಲ್ಲಿಡಲು ರಾಷ್ಟ್ರಾಧ್ಯಕ್ಷರ ಆಳಿಕೆಯನ್ನು ಘೋಷಿಸಿ ಪುನಃ ಚುನಾವಣೆ ನಡೆಸುವುದೇ ಈ ಸಮಸ್ಯೆಗೆ ಉಳಿದಿರುವ ಪರಿಹಾರವೆಂದು ತೋರುತ್ತದೆ. ಏಕೆಂದರೆ; ಜನಾಭಿಪ್ರಾಯಕ್ಕೆ ತಿಲಾಂಜಲಿಯಿತ್ತು ದಪ್ಪೊಂದು ಮಾನ್ಯತೆಯೊಯದೆ ತಮ್ಮ ನಿರಂಕುಶ ಪೋಲೀಸ ಪ್ರಭುತ್ವವನ್ನು ಕಮ್ಯುನಿಸ್ಟರು ಇದುವರೆಗೆ ನಡೆಸಿಕೊಂಡು ಬಂದಿರುವಂತೆಯೇ ಈಗಲೂ ಇನ್ನು ಮುಂದಕ್ಕೂ ಮುನ್ನಡೆಸಲು ತಪ್ಪುವುದುಂಟೆ?

ಸಂಕ್ಷಿಪ್ತ ಸುದ್ದಿಗಳು

ಆಶೆಯ ತುಣುಕು

ಬರ್ಲಿನ್ ನಗರದ ಮತ್ತು ಜರ್ಮನಿಯ ಭವಿತವ್ಯವನ್ನು ಕುರಿತಾಗಿ ಚರ್ಚಿಸಲು ಸೇರಿದ್ದ ಚತೂರಾಷ್ಟ್ರ ಸಮ್ಮೇಳನವು ಯಾವುದೇ ನಿರ್ಧಾರವಿಲ್ಲದೆ ಜುಲೈ ೧೩ರವರೆಗೆ ಮುಂದುವರಿದಿದೆ. ಇಷ್ಟರವರೆಗೆ ನಡೆದ ಮಾತುಕತೆಗಳಲ್ಲಿ ಬೇರಾವ ಪ್ರಯೋಜನ ದೊರೆಯದಿದ್ದರೂ ಇಕ್ಕಡೆಯವರು ಒಪ್ಪದಿರುವ ವಿಷಯಗಳಾವುವೆಂದು ಬಹಿರಂಗಪಟ್ಟುದರಿಂದ ಮತ್ತು ಮುಕ್ತಾಯದವೇಳೆ ಒಪ್ಪಂದಕ್ಕೆ ಸಹಕಾರಿಯಾಗಬಹುದೆಂದು ತಿಳಿಯಲಾದ ಸಂಗತಿಗಳೆಲ್ಲವನ್ನೂ ತಿಳಿಸಿರುವುದರಿಂದ ಇನ್ನು ಮುಂದಾದರೂ ಮಾತುಕತೆಗಳನ್ನು ಮುಂದುವರಿಸಿ ಒಂದು ಒಪ್ಪಂದಕ್ಕೆ ಬರುವ ಆಶೆಯ ತುಣುಕೊಂದು ಮಾತ್ರ ಉಳಿದಿದೆ. ಆದರೆ, ಇದನ್ನು ಈಡೇರಿಸಲು ಚತೂರಾಷ್ಟ್ರಗಳು ಸಿದ್ಧವಿರಬೇಕಷ್ಟೆ?

ಸಿಂಹಳ ಯಾತ್ರೆ

ರಾಷ್ಟ್ರಪತಿ ಡಾ। ರಾಜೇಂದ್ರ ಪ್ರಸಾದರು ನೆರೆಯ ದಕ್ಷಿಣದ ದ್ವೀಪ ರಾಷ್ಟ್ರ ಸಿಂಹಳವನ್ನು ಸಂದರ್ಶಿಸಿ ಮರಳಿದ್ದಾರೆ. ಕೇವಲ ಸದ್ಭಾವನೆಯಿಂದ ಕೂಡಿದ ಈ ಯಾತ್ರೆಯು ಸದ್ಭಾವನೆಗಳನ್ನು ಬೆಳೆಸುವುದರೊಡನೆ ಇನ್ನೂ ಕೆಲವು ಉಭಯ ರಾಷ್ಟ್ರಗಳ ವ್ಯವಹಾರಗಳ ಕುರಿತಾಗಿಯೂ ವಿಚಾರವಿನಿಮಯ ನಡೆಸಲು ಅವಕಾಶವೊದಗಿಸಿದೆ. ಅತಿಥಿ ಸತ್ಕಾರದಲ್ಲಿ ಭಾರತೀಯರಂತೆಯೇ ನಿಸ್ಸೀಮರಾದ ಸಿಂಹಳೀಯರು ಏಶ್ಯಾದ ಅತಿವಿಶಾಲ ಪ್ರಜಾರಾಜ್ಯದ ಅಧಿಪತಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಆದರೋಪಚಾರಗಳಿಂದ ಉಪಚರಿಸಿದರು. ಸಿಂಹಳೀಯರು ಅನುಸರಿಸುವ ಬೌದ್ಧ ಮತವು ಭಾರತದಲ್ಲಿಯೇ ಜನ್ಮಕ್ಕೆ ಬಂದುದು; ಮತ್ತು ಇಲ್ಲಿಯೇ ಮಹಾಯಾನ ಮತ್ತು ಹೀನಯಾನವೆಂಬ ಇದ್ದಾರಿಯಲ್ಲಿ ನಡೆದುದು. ಈಗ ಹೆಚ್ಚಿನೆಡೆಯಲ್ಲಿ ದೃಷ್ಟಿಗೋಚರವಾಗುತ್ತಿರುವ ಮಹಾಯಾನ ಬೌದ್ಧ ಧರ್ಮವು ಹಿಂದೂ ಧರ್ಮದ ಶಾಖೆಯಾಗಿಯೇ ಪರಿಣಮಿಸಿರುವುದು. ಇವುಗಳ ನಡುವೆ ಆಚರಣೆಯಲ್ಲಾಗಲೀ ಆಂತರಿಕವಾಗಿಯಾಗಲೀ ಹೇಳಿಕೊಳ್ಳುವಷ್ಟು ಅಂತರವಿಲ್ಲ ಒಂದು ಕಾಲದಲ್ಲಿ ಭಾರತದ ಅಂಗವಾಗಿಯೇ ಒಗ್ಗೂಡಿರುವ ಸಿಂಹಳವೀಗ ಬೇರೆಯೇ ಪ್ರಜಾರಾಜ್ಯವಾದರೂ, 'ದ್ರಾವಿಡ ಕಜಗಂ' ನಂತಹ ಪಕ್ಷೀಯರು ಸಿಂಹಳವನ್ನು ಗೆದ್ದುಕೊಳ್ಳುವೆವೆಂದು ಘೋಷಿಸಿದರೂ, ಭಾರತವು ತನ್ನ ಹಳೆಯ ಗೆಳೆಯನೊಡನೆ ಮಧುರ ಭಾವದಿಂದಿರ ಬಯಸುತ್ತದೆ. ಸದ್ಯದ ರಾಷ್ಟ್ರಪತಿಗಳ ಸಂದರ್ಶನವು ಉಭಯತರ ನಡುವಿರುವ ಪ್ರಶ್ನೆ ಮುಖ್ಯವಾಗಿ, ಸಿಂಹಳದಲ್ಲಿ ನೆಲಸಿರುವ ಭಾರತೀಯರ ಪ್ರಶ್ನೆಯನ್ನು ಯಾರಿಗೂ ಹಾನಿ ತಗಲದಂತೆ ಉತ್ತರಿಸಲು ಸಹಾಯಕವಾದೀತು. ಅಲ್ಲದೇ ಎರಡೂ ರಾಷ್ಟ್ರಗಳ ನಡುವೆ ಸಂದೇಹಗಳು ದೂರವಾಗಿ ತಿಳುವಳಿಕೆಗಳು ಹೆಚ್ಚಿ, ಸ್ನೇಹಬಂಧವು ಮತ್ತಷ್ಟು ಬಿಗಿಯಾಗುವಂತೆ ಈ ಯಾತ್ರೆಯು ಪ್ರೇರೇಪಿಸುವುದೆಂದು ಹೇಳಬಹುದು.

ರಾಷ್ಟ್ರಾಧ್ಯಕ್ಷರ ಆಳಿಕೆ

"ಕಮ್ಯುನಿಸ್ಟ ಸರಕಾರವು ಅಧಿಕಾರಕ್ಕೆ ಬಂದೊಡನೆ ಅತ್ಯಂತ ಗಂಭೀರ ಅಪರಾಧಗಳಿಗಾಗಿ ಶಿಕ್ಷೆ ಅನುಭವಿಸುತ್ತಿದ್ದ ಕೈದಿಗಳನ್ನೆಲ್ಲಾ ಸೆರೆಯಿಂದ ಮುಕ್ತ ಮಾಡುವುದರೊಂದಿಗೆ ತನ್ನ ಆಡಳಿತೆ ಪ್ರಾರಂಭಿಸಿದೆ. ಇಂದು ರಾಜ್ಯದಲ್ಲಿ ಕಾಯದೆ ಸುವ್ಯವಸ್ಥೆ ಪರಿಸ್ಥಿತಿಯು ತೀರ ಹದಗೆಟ್ಟಿದೆ ಎಲ್ಲ ಜನರನ್ನೂ ಸರಿಯಾಗಿ ನಡೆಸಿಕೊಂಡು ಹೋಗಬೇಕೆಂಬ ಸಂವಿಧಾನದ ನಿಯಮವನ್ನು ಪಾಲಿಸುವ ಪ್ರತಿಜ್ಞೆ ಸ್ವೀಕರಿಸಿದ್ದ ಕಮ್ಯುನಿಸ್ಟ ಸರಕಾರವು ಈಗ ಜನತೆಯಲ್ಲಿ ಒಡಕನ್ನುಂಟುಮಾಡಿ ತನ್ನ ಪ್ರತಿಜ್ಞೆಯನ್ನು ಪಾಲಿಸುವಲ್ಲಿ ತಪ್ಪಿದೆ. ಆದುದರಿಂದ ಕೇರಳದಲ್ಲಿ ರಾಷ್ಟ್ರಪತಿಗಳ ಆಳಿಕೆಯು ಘೋಷಿಸಲ್ಪಡಲಿ" ಎಂದು ಮಾಜಿ ಅಡ್ವೊಕೇಟ ಜನರಲ್ ಶ್ರೀ ಕುಟ್ಟಿ ಕೃಷ್ಣ ಮೆನನ್ ಮೊದಲಾದವರೊಂದು ಪ್ರಕಟಣೆ ಹೊರಡಿಸಿದ್ದಾರೆ.

ಅಗ್ಗದರದ ಅಂಗಡಿಗಳು

ರಾಜ್ಯದಲ್ಲಿ ಅಕ್ಕಿಯ ದರವು ಏರುತ್ತಿರುವುದನ್ನು ತಡೆಗಟ್ಟಿ ಅದನ್ನು ಸ್ಥಿಮಿತದಲ್ಲಿರಿಸಲು ಅಗ್ಗದರದಲ್ಲಿ ತಾನು ಸಂಗ್ರಹಿಸಿದ ಅಕ್ಕಿಯನ್ನು ಮಾರುವ ವ್ಯವಸ್ಥೆಯನ್ನು ಮೈಸೂರು ಸರಕಾರ ಮಾಡಲು ತೊಡಗಿದೆ. ಸರಕಾರವು ಈ ವರ್ಷ ಐದು ಲಕ್ಷ ಪಲ್ಲ ಭತ್ತವನ್ನು ಸಂಗ್ರಹಿಸಿದೆ. ಬೇರೆಬೇರೆ ಜಿಲ್ಲೆಗಳಿಗೆ ಬೇಕಾಗುವ ನ್ಯಾಯ ದರದ ಅಂಗಡಿಗಳ ಸಂಖ್ಯೆ ಮತ್ತು ತೆರೆಯುವ ಸ್ಥಳಗಳನ್ನು ತಿಳಿಸಲು ಡೆಪ್ಯುಟಿ ಕಮಿಶನರರಿಗೆ ಕೇಳಿಕೊಳ್ಳಲಾಗಿದೆ. ರಾಜ್ಯದಲ್ಲಿ ಸುಮಾರು ೪೦೦ ಅಗ್ಗದರದಲ್ಲಿ ಧಾನ್ಯವು ಮಾರಾಟವಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರಿ ಸಂಘಗಳು ವ್ಯವಸ್ಥೆಯಿಂದ ಈ ಸಮಸ್ಯೆಯನ್ನು ನಿವಾರಿಸುತ್ತಿವೆ,

ಪಾಕಿಸ್ತಾನಕ್ಕೆ ಪ್ರತಿಭಟನೆ

ಅಸ್ಸಾಮು—ಪೂರ್ವ ಪಾಕಿಸ್ತಾನಗಳ ಗಡಿಯ ಪಥಾರಿಯಾ ಪ್ರದೇಶದಲ್ಲಿ ಪುನಃ ಗುಂಡಿನ ಧಾಳಿಯನ್ನು ಪಾಕ್ ಸೈನಿಕರು ಮಾಡಿದ ವರದಿಗಳು ಬಂದಿವೆ. ಜೂನ್ ೧೧ರಿಂದ ಪ್ರಾರಂಭವಾದ ಈ ಗುಂಡೆಸೆತಗಳು ಮತ್ತೂ ಮುಂದುವರಿದಿದ್ದು, ಈ ಘಟನೆಯ ಬಗ್ಗೆ ಪಾಕಿಸ್ತಾನಕ್ಕೆ ಭಾರತದ ಪ್ರತಿಭಟನಾ ಪತ್ರವು ಹೋಗಿರುತ್ತದೆ

ಮೇಯರರ ಸ್ಥಾನಮಾನ

ಮೇಯರರುಗಳಿಗೆ ಹೆಚ್ಚಿನ ಅಧಿಕಾರ, ಕಾರ್ಯಕಾರಿ ಅಧಿಕಾರಿಗಳ ಮೇಲೆ ಪರಿಣಾಮಕಾರಿ ನಿಯಂತ್ರಣ ಮತ್ತು ಪರೀಕ್ಷಣ ಕೈಗೊಳ್ಳಲು ಚುನಾಯಿತ ಪ್ರತಿನಿಧಿಗಳಿಗೆ ಅಧಿಕಾರ ಕೊಡುವಂತೆ ಕಾರ್ಪೋರೇಶನ್ ಕಾಯದೆಯನ್ನು ತಿದ್ದುಪಡಿಮಾಡಬೇಕೆಂದು ಉದಕ ಮಂಡಲದಲ್ಲಿ ಸೇರಿದ್ದ ಅಖಿಲ ಭಾರತ ಮೇಯರುಗಳ ಸಮ್ಮೇಳನವು ಸರಕಾರವನ್ನು ಕೇಳಿಕೊಂಡಿದೆ. ದಿಲ್ಲಿಯಲ್ಲಿ ಪ್ರಧಾನಿಯ ನಂತರದ, ರಾಜ್ಯ ಕೇಂದ್ರಗಳಲ್ಲಿ ಮುಖ್ಯ ಮಂತ್ರಿಯ ನಂತರದ ಸ್ಥಾನಮಾನಗಳು ಮೇಯರರಿಗಿರಬೇಕೆಂದೂ ಅದು ಅಭಿಪ್ರಾಯಕ್ಕೆ ಬಂದಿದೆ.

ಟಿಬೇಟ ಸಮಸ್ಯೆ

ಟಿಬೇಟ ಪ್ರಶ್ನೆಯ ಪರಿಹಾರಕ್ಕಾಗಿ ಭಾರತದ ಪ್ರಧಾನ ಮಂತ್ರಿ, ನೆಹರು ಮ

ತ್ತು ಚೀನೀಯ ಪ್ರಧಾನಿ ಶ್ರೀ ಚೌ ಎನ್. ಲಾಯ್ ಅವರು ಪರಸ್ಪರ ಬೆಟ್ಟಿನಡೆಸಿ ಶಾಂತಿಯುತವಾದ ರೀತಿಯಲ್ಲಿ ಪರಿಹಾರ ಮಾರ್ಗವನ್ನು ಕಂಡುಹಿಡಿಯುವುದು ತನಗೆ ಸಮ್ಮತವೆಂದು ದಲೈಲಾಮಾ ಹೇಳಿದ್ದಾರೆ. ತಾನು ಅನಿಯಮಿತ ಅವಧಿಯ ವರೆಗೆ ಭಾರತದಲ್ಲಿ ಉಳಿಯಲು ಬಯಸುತ್ತಿಲ್ಲವೆಂದೂ, ಆದರೆ, ಮುಂದಿನ ಬಗ್ಗೆ ನಾನೇನೂ ಈಗಾಗಲೇ ನಿರ್ಧರಿಸಿಲ್ಲವೆಂದೂ ಅವರು ಹೇಳಿದ್ದಾರೆ.

ಕಂಬನಿ

ಹಿಂದೂ ಪತ್ರಿಕೆಯ ಸಂಪಾದಕರ ನಿಧನ

ಮದ್ರಾಸಿನ "ಹಿಂದೂ" ಇಂಗ್ಲಿಷ್ ದೈನಿಕ ಪತ್ರಿಕೆಯ ಸಂಪಾದಕ-ವ್ಯವಸ್ಥಾಪಕರಾದ ಶ್ರೀ ಕಸ್ತೂರಿ ಶ್ರೀನಿವಾಸನ್ನರು ದಿನಾಂಕ ೨೨ರಂದು ಮುಂಜಾನೆ ತಾಸು ೨.೫೫ಕ್ಕೆ ನಿಧನ ಹೊಂದಿದರು. ದಿವಂಗತರು ಮೃತ್ಯುವನ್ನಪ್ಪುವಾಗ ಅವರಿಗೆ ೭೨ ವರ್ಷ ಪ್ರಾಯವಾಗಿತ್ತು.

ಹಿಂದೂ ಪತ್ರಿಕೆಯ ಮಾಲಿಕರು ಹಾಗೂ ಸಂಪಾದಕರಾಗಿದ್ದ ಶ್ರೀ ಎಸ್. ಕಸ್ತೂರಿ ರಂಗ ಐಯ್ಯಂಗಾರರ ಪ್ರಥಮ ಪುತ್ರರಾದ ಶ್ರೀ ಕಸ್ತೂರಿ ಶ್ರೀನಿವಾಸನ್ನರು ೧೮೮೭ರಲ್ಲಿ ಜನಿಸಿದರು. ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಿಂದ ಪದವಿಯನ್ನು ಪಡೆದನಂತರ ಹಿಂದೂ ಪತ್ರಿಕೆಯಲ್ಲಿ ವ್ಯವಸ್ಥಾಪಕರಾಗಿ ಇವರು ಸೇರಿಕೊಂಡರು. ೧೯೩೪ರಲ್ಲಿ ಅವರ ತಂದೆಯವರು ದಿವಂಗತರಾದುದರಿಂದ, ಅದರ ಮೇಲೆ ಪತ್ರಿಕೆಯ ಸಂಪಾದಕರೂ ಆದರು. ತಮ್ಮ ಸಂಪಾದಕತ್ವದ ೨೫ ವರ್ಷಗಳ ಕಾಲದಲ್ಲಿ ಅವರು ಭಾರತೀಯ ಪತ್ರಿಕೋದ್ಯಮದ ಬೆಳವಣಿಗೆ ಹಾಗೂ ಸಂಘಟನೆಯಲ್ಲಿ ಪ್ರಮುಖ ಪಾತ್ರವಹಿಸಿದರು. ಇದರಿಂದಾಗಿಯೇ ಅವರು ಹಲವಾರು ಪದವಿಗಳಲ್ಲಿ ಮೆರೆದಾಡಿದರು. ೧೯೪೮ರಲ್ಲಿ ಪಿ. ಟಿ. ಐ. ಸ್ಥಾಪನೆಗೊಂಡಾಗ, ಅದರ ಪ್ರಥಮ ಅಧ್ಯಕ್ಷರಾಗಿಯೂ ಮೂರು ವರ್ಷ ದುಡಿದಿರುವರು.

ಪತ್ರಿಕಾ ಪ್ರಪಂಚಕ್ಕೆ ಅವರು ಸಲ್ಲಿಸಿದ ಸೇವೆಗಾಗಿ, ಭಾರತ ಸರಕಾರವು "ಪದ್ಮಭೂಷಣ" ಪ್ರಶಸ್ತಿಯನ್ನು ಇತ್ತು ಅವರನ್ನು ೧೯೫೮ರಲ್ಲಿ ಗೌರವಿಸಿತು. ದಿವಂಗತರ ಬಂಧುಮಿತ್ರರ ಶೋಕ ವರ್ಗಕ್ಕೆ ನಮ್ಮ ಕಂಬನಿಯನ್ನೂ ಮಿಲೀಕರಿಸಿ, ದಿವಂಗತರ ಆತ್ಮಕ್ಕೆ ಶಾಂತಿ ದೊರೆಯಲೆಂದು ಪ್ರಾರ್ಥಿಸುತ್ತೇವೆ.

ದಕ್ಷಿಣ ಕನ್ನಡ ಜಿಲ್ಲಾ ಸ್ಪೆಶಲ್ ಅಸಿಸ್ಟೆಂಟ್ ಕಮಿಶನರ ಕೋರ್ಟಿನಲ್ಲಿ

O. P. 390/59.

ಸೂರಪ್ಪ ಸೆಟ್ಟಿ ದಾರಮ್ಮ ಸೆಡ್ತಿ ರ ಮಗ. ಉಡ್ಪಿ ತಾಲ್ಲೂ ಉಳಿಯಾರಗೋಳಿ ಗ್ರಾಮದಲ್ಲಿರುವವ—ಅರ್ಜಿದಾರ.

1. ರಾಘವೇಂದ್ರ ರಾವ್—ಪದ್ಮನಾಭಯ್ಯನವರ ಮಗ. C/o ದತ್ತ ಸೈನಾತ ಆಶ್ರಮ—ಚನ್ನಪಟ್ಣ—ಮೈಸೂರು.

2. ಯಶೋಧಮ್ಮ—ರಾಘವೇಂದ್ರ ರಾಯರ ಹೆಂಡ್ತಿ ಉಡ್ಪಿ ತಾಲ್ಲೂ ನಂಬ್ರ 76ನೇ ಬಡಗುಬೆಟ್ಟು ಗ್ರಾಮದ ಬೈಲೂರಿನಲ್ಲಿರುವವರು.—ಎದ್ರಿರು.

ಅರ್ಜಿದಾರರಿಂದ 1ನೇ ಎದ್ರಿಗೆ ವಿರುದ್ಧ ಸಂ|ರಕ್ಷ ಸಲ್ಲತಕ್ಕ ಗೇಣಿಯನ್ನು ಸದ್ರಿ ಕೋರ್ಟಿನಲ್ಲಿ ಡಿಪೊಜಿಟು ಮಾಡಿ ದಾಖಲ್ಲು ಮಾಡಿರುವ ಅರ್ಜಿಯು ತಾ.30-6-59ಕ್ಕೆ ತನ್ಖಿಗೆ ಇಟ್ಟಿದೆ. ಸದ್ರಿ ಕೋರ್ಟಿನಲ್ಲಿ ತಾ.30-6-59ನೇ ಬೆಳಗ್ಗೆ 11ಗಂಟೆಗೆ ಉಡ್ಪಿ ಮೊಕ್ಕಾಮಿನಲ್ಲಿ 1ನೆ ಎದ್ರಿಯು ಹಾಜರಾಗತಕ್ಕದ್ದು. ಅದಕ್ಕೆ ತಪ್ಪಿದ್ರೆ ಅವರನ್ನು exparte ಮಾಡಿ ತೀರ್ಮಾನಮಾಡಲಾದೀತು.

K. L. Aithal,
Vakil for Petitioner.

ಉಡ್ಪಿ, 20-6-59.

ಅಲ್ಲಲ್ಲಿಯ ಸುದ್ದಿಸಾರ

ಉಡುಪಿ ಲಾ, ಕಾಲೋಜಿನ ಪರಿಕ್ಷಾ ಫಲಿತಾಂಶ — ಮೊದಲ ಎಲ್. ಎಲ್. ಬಿ. ಯಲ್ಲಿ 85% ಎರಡನೆಯ ಎಲ್. ಎಲ್. ಬಿ. ಯಲ್ಲಿ 91% ಪ್ರಿಲೀಗಲಿನಲ್ಲಿ 87% ಪಾಸಾಗಿರುವರು. ಎರಡನೇ ಎಲ್. ಎಲ್. ಬಿ. ಯಲ್ಲಿ ಮಿಸ್. ಲೋರಾ ಡಿಸೋಜಾರವರು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಮೊದಲ ಸ್ಥಾನಗಳಿಸಿದ್ದಾರೆ. ಶ್ರೀಮತಿ ಪತ್ನ ಲಾರಾವ್, ಮಿಸ್. ಮುರಿಯಲ್ ಜೋಶಿವ ಎಂಬ ಇಬ್ಬರು ಸ್ತ್ರೀಯರೂ ಡಿಗ್ರಿ ಪಡೆದಿರುತ್ತಾರೆ.

ಸಾಲಿಗ್ರಾಮ — ಇಲ್ಲಿಯ ಶ್ರೀ ವಾಣೀ ವಿಲಾಸಿನೀ ಸಂಸ್ಕೃತ ಪಾಠಶಾಲೆಯಲ್ಲಿ ಕಳೆದ 33ವರ್ಷಗಳಿಂದಲೂ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ವೇ. ಕೆ. ಶ್ರೀನಿವಾಸ ಉಪಾಧ್ಯಾಯ, ಶಿರೋಮಣಿ ಮತ್ತು ವಿದ್ವಾನ್ ಇವರನ್ನು ಬೀಳ್ಕೊಡುವ ಸಮಾರಂಭವು ಸದರಿ ಶಾಲೆಯಲ್ಲಿ ಇದೇ ತಾ. 14ರಂದು ಶ್ರೀ ಎಮ್. ಮಾದಪ್ಪ ಉರಾಳ ಅಡ್ವಕೇಟ್ ಕುಂದಾಪುರ ಇವರ ಅಧ್ಯಕ್ಷತೆಯಲ್ಲಿ ಜರಗಿತು. ನೆರೆದ ಸಭಿಕರು ಉಪಾಧ್ಯಾಯರ ಗುಣಗಾನ ಮಾಡಿದ ನಂತರ ಅಧ್ಯಕ್ಷರು ಮಾನಪತ್ರವನ್ನಿತ್ತು ಪಟ್ಟೆ ಬಟ್ಟೆಗಳನ್ನು ಹೊದಿಸಿ ಬೆಳ್ಳಿಯ ತಟ್ಟೆಯಲ್ಲಿ ಶಾಲಾ ಸಂಸ್ಥೆಯವರು ಮತ್ತು ಮಹಾಜನರಿತ್ತ ನಿಧಿಯನ್ನು ಸಮರ್ಪಿಸಿದರು. ಕೊನೆಯಲ್ಲಿ ಅಧ್ಯಕ್ಷರು ಮುಖ್ಯೋಪಾಧ್ಯಾಯರ ಸೇವೆಯನ್ನು ಪ್ರಶಂಸಿಸಿದರು. ನಂತರ ನೆರೆದ ಸಭಿಕರಿಗೆ ಸಿಹಿತಿಂಡಿ ಹಂಚಿ ಸಭೆಯು ಮುಗಿಯಿತು. ಸದ್ಯ ಶ್ರೀ ಪಿ. ಲಕ್ಷ್ಮೀನಾರಾಯಣ ಅಡಿಗ, ವಿದ್ವಾನ್ ಇವರು ಮುಖ್ಯ ಅಧ್ಯಾಪಕತನ ವಹಿಸಿರುವರಾಗಿ ತಿಳಿದುಬರುತ್ತದೆ.

ಆದಮಾರು — ಸ್ಥಳೀಯ ಅಭಿವೃದ್ಧಿ ಯೋಜನೆ ಹಾಗೂ ಸಾರ್ವಜನಿಕ ಸಹಾಯದಿಂದ ನಿರ್ಮಿಸಲ್ಪಟ್ಟ ಪ್ರಾಥಮಿಕ ಶಾಲಾ ವಿಹಾರ ಮಂದಿರದ ಉದ್ಘಾಟನೆಯು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ ಹೆಗ್ಡೆಯವರಿಂದ ಅದಮಾರು ಮಠಾಧೀಶರಾದ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನೆರವೇರಿಸಲ್ಪಟ್ಟಿತು.

ಯುವಕ ಕಾಂಗ್ರೆಸ್ ಸಭೆ ಮಂಗಳೂರು ಯುವಕ ಕಾಂಗ್ರೆಸ್ಸಿನ ಸಭೆಯೊಂದು ಜಿಲ್ಲಾ ಕಾಂಗ್ರೆಸ್ ಆಫೀಸಿನಲ್ಲಿ ತಾ. 21ರಲ್ಲಿ ಶ್ರೀ ಸೀತಾರಾಮ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. "ಕೇರಳದಲ್ಲಿ ಅರಾಜಕತೆ" ಎಂಬ ಕುರಿತು ಶ್ರೀ ಜಯಾನಂದ ದೇವಡಿಗ ಮೊದಲಾದವರು ಮಾತನಾಡಿದರು.

ಅಂಕೋಲಾ — ಇದೇ ಎಪ್ರಿಲ್ ತಿಂಗಳಲ್ಲಿ ಮುಂಬೈ ಕರ್ನಾಟಕದಲ್ಲಿ ಜರುಗಿದ ಎಸ್. ಎಸ್. ಸಿ. ಪರೀಕ್ಷೆಯಲ್ಲಿ ಅಂಕೋಲಾದ ಜೈಹಿಂದ ಹೈಸ್ಕೂಲಿನ ಫಲಿತಾಂಶವು ಅತ್ಯುತ್ತಮವಾಗಿದ್ದು, ಈ ಹೈಸ್ಕೂಲಿನಿಂದ ಕುಳಿತ ಒಟ್ಟು ೫೭ ವಿದ್ಯಾರ್ಥಿಗಳಲ್ಲಿ ೫೪ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶಾಲೆಯ ಪರಿಣಾಮವು ಈ ಸಲ ನೂರಕ್ಕೆ ೯೫ರಂತೆ ಆಗಿರುವದು. ತೇರ್ಗಡೆಹೊಂದಿದ ವಿದ್ಯಾರ್ಥಿಗಳಲ್ಲಿ ಕುಮಾರ ಮಧುಕರ ಎಂ. ಪೈ ಈತನು ನೂರಕ್ಕೆ ೮೦.೭೫ರಷ್ಟು ಗುಣಗಳನ್ನು ಪಡೆದು, ಈ ವರ್ಷವೇ ನೂತನವಾಗಿ ಆರಂಭವಾದ ಅಂಕೋಲಾ ಕೇಂದ್ರಕ್ಕೆ ಪ್ರಥಮ ಸ್ಥಾನವನ್ನೂ ಇಡೀ ಮುಂಬೈ ಕರ್ನಾಟಕಕ್ಕೆ ೧೩ನೇ ಸ್ಥಾನವನ್ನೂ ಆಕ್ರಮಿಸಿಕೊಂಡು ಕಲಿತ ಶಾಲೆಯಾದ ಜೈಹಿಂದ ಹೈಸ್ಕೂಲಿಗೆ ತುಂಬಾ ಕೀರ್ತಿಯನ್ನು ತಂದುಕೊಟ್ಟಿರುವನು.

ಮಹಾಸಭೆ — ತಾ. 21-6-59ರಲ್ಲಿ ಉಡುಪಿ ಗುಂಡಿಬೈಲು ಪ್ರದೇಶ ಬೀಡಿ ಮಜೂರರ ಮಹಾಸಭೆಯು ಶ್ರೀ ಗುರುವ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರಗಿ ಅಕ್ಕಿ ಹಾಗು ಇತರೆ ಸಾಮಗ್ರಿಗಳ ಬೆಲೆ ಕಡಿಮೆಯಾಗಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ಬೀಡಿ ಮಜೂರರ ಕನಿಷ್ಠ ಕೂಲಿ ಕೂಡಲೇ ನಿರ್ಧರಿಸಬೇಕೆಂದು ಒತ್ತಾಯ ಪಡಿಸುವ ಠರಾವುಗಳಾದುವು.

ಶ್ರೀ. ವಿ. ಎಸ್. ಕುಡ್ವರಿಗೆ ಮಾನಪತ್ರ — ಜಿಲ್ಲೆಯ ಪ್ರಸಿದ್ಧ ಮೋಟಾರು ಸಾರಿಗೆ ಮತ್ತು ಕೈಗಾರಿಕೋದ್ಯಮಿಗಳೂ ಪತ್ರಿಕೋದ್ಯಮಿಗಳೂ ಆದ ಶ್ರೀ ವಿ. ಎಸ್. ಕುಡ್ವರಿಗೆ ಅವರ ಷಷ್ಟ್ಯಬ್ಧಿ ಪೂರ್ತಿಯ ಸಲುವಾಗಿ ಇದೇ ತಾ. 18ರಲ್ಲಿ ಉಡುಪಿ ನಗರ ಸಭೆಯವರು ಮಹಾತ್ಮಾ ಗಾಂಧಿ ಬೇಸಿಕ್ ಎಲಿಮೆಂಟರಿ ಶಾಲೆಯಲ್ಲಿ ಮಾನಪತ್ರವಿತ್ತು ಗೌರವಿಸಿದರು. ಪುರ ಸಭೆಯ ಅಧ್ಯಕ್ಷ ಡಾ! ಕೆ. ಎಲ್. ಐತಾಳರು ಸ್ವಾಗತಿಸಿ ಮಾನಪತ್ರವನ್ನು ಒಪ್ಪಿಸಿದರು. ಶ್ರೀ ಕುಡ್ವರು ತನಗಿತ್ತ ಸಾದರ ಸತ್ಕಾರಕ್ಕಾಗಿ ಕೃತಜ್ಞತೆಯನ್ನು ಸೂಚಿಸಿ ಮಾತನಾಡುತ್ತಾ ನಮ್ಮ ಜಿಲ್ಲೆಯ ಬೇರೆ ಬೇರೆ ಕ್ಷೇತ್ರಗಳಲ್ಲಿ ದೇಶೀ ಖ್ಯಾತ ಕೆಲಸಗಳನ್ನು ಮಾಡಿರುವುದೆಂದೂ ಕೆನರಾ ಸ್ಪಿನ್ನಿಂಗು ಮಿಲ್ಲಿನ ಹೆಸರುವಾಸಿಯಾಗಿರುವುದೆಂದೂ ನಾಗಪುರದಲ್ಲಿ ಅಂಥ ಇನ್ನೊಂದು ಕಾರ್ಖಾನೆಯನ್ನು ತೆರೆಯಲಾಗುವುದೆಂದೂ ನನಗಿಂತ ಹೆಚ್ಚಾಗಿ ಎಕೆಡಮಿಯ ಕಡೆಯಿಂದ ಡಾ। ಮಾಧವ ಪೈಗಳು ವಿದ್ಯಾರಂಗದಲ್ಲಿ ಅಭೂತಪೂರ್ವವೂ ರಾಷ್ಟ್ರ ಪ್ರಸಿದ್ಧವೂ ಆದ ಕೆಲಸಗಳನ್ನು ಮಾಡಿರುವರೆಂದೂ ಹೇಳಿದರು. ಸಭಾಂತ್ಯದಲ್ಲಿ ನಗರಸಭಾಸದಸ್ಯ, ಶ್ರೀ ಆರ್. ಆರ್. ಕಾಂಜೂರರು ಧನ್ಯವಾದಗಳನ್ನು ಅರ್ಪಿಸಿದರು.

ಗೌಡ ಸಾರಸ್ವತ ಸಮಾಜದ ಮಾನಪತ್ರ — ಉಡುಪಿ ನಗರ ಸಭೆಯ ಮಾನಪತ್ರ ಸಮರ್ಪಣಾ ಸಮಾರಂಭ ನೆರವೇರಿದ ಬಳಿಕ ಉಡುಪಿ ಗೌಡ ಸಾರಸ್ವತ ಸಮಾಜದ ಪತಿಯಿಂದ ವರದೇಂದ್ರ ಕಲಾ ಮಂದಿರದಲ್ಲಿ ಶ್ರೀ ಕುಡ್ವರಿಗೆ ಮಾನಪತ್ರಾರ್ಪಣೆ ಮಾಡಿ ಗೌರವಿಸಲಾಯಿತು. ಡಾ! ಸಿ. ಆರ್ ನಾಯ್ಕರು ಕಾವೇರಿ ನದಿಯ ಉಪಮೆಯಿತ್ತು ಸ್ವಾಗತಿಸಿ ಮಾನಪತ್ರವನ್ನು ಒಪ್ಪಿಸಿದರು. ಡಾ| ಸುಂದರರಾಮ ಪೈ, ಶ್ರೀ ಎಂ. ಡಿ. ಕಾಮತ್, ಡಾ| ಕೆ. ಜೆ. ಕಿಣಿ ಮೊದಲಾದವರು ಶ್ರೀ ಕುಡ್ವರ ಗುಣಕಥನ ಮಾಡಿ ಭಾಷಣವಿತ್ತರು.

ಎಕೆಡೆಮಿಯಲ್ಲಿ ಭೋಜನ ಸತ್ಕಾರ — ಎಕೆಡೆಮಿ ಆಫ್ ಜನರಲ್ ಎಡ್ಯುಕೇಶನ ಪತಿಯಿಂದ ತಾ. 18ನೇ ರಾತ್ರಿ ಶ್ರೀ ವಿ. ಯಸ್. ಕುಡುವರಿಗೆ ಮಣಿಪಾಲದಲ್ಲಿ ಭೋಜನ ಸತ್ಕಾರವಿತ್ತು ಗೌರವಿಸಲಾಯಿತು. ಡಾ| ಮಾಧವ ಪೈಗಳು ಸ್ವಾಗತ ಭಾಷಣ ಮಾಡಿ ಶ್ರೀ ಕುಡುವರು ಎಂ. ಜಿ. ಎಮ್. ಕಾಲೇಜಿನ ಸ್ಥಾಪನೆಗೆ ಮಾಡಿದ ಸಹಕಾರವನ್ನು ಸ್ಮರಿಸಿದರು. ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈ ಆರೂರು ಲಕ್ಷ್ಮೀನಾರಾಯಣರಾವ್, ಪ್ರಿನ್ಸಿಪಾಲ್ ಸುಂದರರಾವ್, ಶ್ರೀ ಟಿ. ಎ. ಪೈ ಮೊದಲಾದವರು ಸಂದರ್ಭೋಚಿತವಾಗಿ ಮಾತನಾಡಿದ ಮೇಲೆ ಶ್ರೀ ಕುಡುವರು ಉತ್ತರವಿತ್ತು ಕೃತಜ್ಞತೆಯನ್ನು ಸೂಚಿಸಿದರು. ಶ್ರೀ. ಪಿ. ಶ್ರೀಪತಿ ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರಾರಂಭಾಧಿವೇಶನವು — ತಾ. 15ರಲ್ಲಿ ಮಣಿಪಾಲದಲ್ಲಿ ನೆರವೇರಿದಾಗ ಶ್ರೀ. ಟಿ. ರಮೇಶ ಪೈಗಳು ಈ ವರ್ಷ ಪ್ರವೇಶ ದೊರೆತ ನೂರು ಮಂದಿ ವಿದ್ಯಾರ್ಥಿಗಳನ್ನು ಸ್ವಾಗತಿಸಿದರು. ಡಾ| ಟಿ. ಮಾಧವ ಪೈಗಳು ವಿದ್ಯಾರ್ಥಿಗಳಿಗೆ ಹಿತಸೂಚನೆಗಳನ್ನಿತ್ತರು. ಪ್ರಿನ್ಸಿಪಾಲ್ ಡಾ| ಕೊಪ್ಪೀಕರರು ಕಾಲೇಜಿನ ಸ್ಥಾಪಕ ಡಾ। ಮಾಧವ ಪೈಗಳು ಯುವಕರಿಗೆ ಮಾಡಿದ ಸಹಾಯವನ್ನು ಪ್ರಸ್ತಾಪಿಸಿದರು.

ಡಾ| ವಿ. ಎಲ್. ಪಂಡಿತರ ಆಯ್ಕೆ ಉಡುಪಿ ನಗರ ಸಭೆಯ ಹೆಲ್ತ್ ಆಫೀಸರ್ ಡಾ| ವಿ. ಎಲ್. ಪಂಡಿತರು ಮನಿಲಾದ ಫಿಲಿಪ್ಪೈನ್ ವಿಶ್ವವಿದ್ಯಾಲಯದ ಜನಾರೋಗ್ಯ ಸಂಸ್ಥೆಯಲ್ಲಿ ವಿಶೇಷಾಧ್ಯಯನ ಪಡೆಯುವ ಬಗ್ಗೆ ಆರಿಸಲ್ಪಟ್ಟಿರುವರೆಂದು ಕೇಳಿ ಬರುತ್ತದೆ.

ತಿದ್ದುಪಡಿ

ಈ ಸಂಚಿಕೆಯ ಮೊದಲನೆಯ ಪುಟದ "ವಿಚಾರ ಮಥನ" ಎಂಬ ಪ್ರಧಾನ ಶೀರ್ಷಿಕೆಯಡಿಯ ಎರಡನೆಯ ಉಪಶೀರ್ಷಿಕೆಯನ್ನು "ನ್ಯಾಯಾನ್ಯಾಯಗಳ ವಿಮರ್ಶೆ" ಎಂದು ತಿದ್ದಿ ಓದಿಕೊಳ್ಳಬೇಕು.

—ಸಂ. ನ.

ಕೃತಜ್ಞತೆ

ನನ್ನ ಪುತ್ರ ಡಾ। ರಾಮಕೃಷ್ಣ ಹೆಗ್ಡೆಯು ನನ್ನ ಸೊಸೆ ಮ, ಶ್ರೀ ಹಿಲಿಯಾಣ ಮಹಾಬಲ ಹೆಗ್ಡೆಯವರ ಪುತ್ರಿ, ಚಿ। ಸೌ। ಸುನೀತಿಯನ್ನು ತಾ. 16-6-59ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದ ಸುಸಂದರ್ಭದಲ್ಲಿ ತಾವೆಲ್ಲರೂ ಬಂಧುಮಿತ್ರರೊಡಗೂಡಿ ಬಂದು ಶುಭಾಶಯಗಳೊಂದಿಗೆ ಉಚಿತ ಉಡುಗೊರೆಗಳನ್ನಿತ್ತು ವಧೂವರರನ್ನು ಹರಸಿ ಸಹಕರಿಸಿದ್ದಕ್ಕೆ ನಾನು ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ. ಪ್ರತ್ಯೇಕಪ್ರತ್ಯೇಕವಾಗಿ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುವುದು ಅಸಾಧ್ಯವಾದ್ದರಿಂದ ಈ ಮೂಲಕ ನನ್ನ ಹೃತ್ಪೂರ್ವಕ ಆಭಾರವನ್ನು ಸೂಚಿಸುತ್ತೇನೆ.

ಬೇಳಂಜೆ ವಿಟ್ಠಲ ಹೆಗ್ಡೆ.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.)

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾಸಂಕಲನ

ಅಮೇರಿಕದ ಆರು ಕತೆಗಳು

ಅಮೇರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. ೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ವಿಚಾರ ಮಥನ

(೧ನೇ ಪುಟದಿಂದ)

ವಾದಿಗಳೂ ಯೋಗ್ಯ ಪ್ರತಿಕ್ರಿಯೆಯನ್ನು ಸಕಾಲದಲ್ಲಿ ತೋರಿಸಿರುವುದರಿಂದಲೇ ಸದ್ಯ, ಮೈಸೂರು ಸರಕಾರ ಈ ಬಗ್ಗೆ ತಳೆದಿರುವ ಧೋರಣೆಯನ್ನು ಬದಲಾಯಿಸಲಿದೆ ಎಂದು ತಿಳಿದುಬಂದಿದೆ. ಈಗ ಕೈಗೊಂಡಿರುವ ಯೋಜನೆಯು ಕೇವಲ ತಾತ್ಕಾಲಿಕವೆಂದೂ ಹೇಳಲಾಗುತ್ತಿದೆ. ಹಿಂದುಳಿದವರೆಂದು ನಿರ್ಧರಿಸುವಾಗ ಯಾವ ಮಾನದಿಂದ ಅಳೆಯಬೇಕೆಂಬುದೂ ಪ್ರಶ್ನೆಯಾಗಿ ಉಳಿದಿದೆ. ಈಗಿನ ಪದ್ಧತಿಯಂತೆ "ಜಾತಿ"ಯನ್ನೇ ಆಧಾರವಾಗಿಟ್ಟುಕೊಳ್ಳಬೇಕೇ ಅಥವಾ ಆರ್ಥಿಕಸ್ಥಿತಿ ಇಲ್ಲವೇ ಮತ್ತೇನನ್ನಾದರೂ ಮೂಲವಾಗಿಟ್ಟುಕೊಳ್ಳಬೇಕೇ ಎಂದು ಮುಂತಾಗಿ ಯೋಚಿಸಿ ಕಾಲೇಜುಗಳಲ್ಲಿ ಪ್ರವೇಶ ನೀಡುವಾಗ, ಸರಕಾರಿ ನೌಕರಿಗಳನ್ನು ಭರ್ತಿ ಮಾಡುವಾಗ ಯಾವ ಕ್ರಮವನ್ನು ಅನುಸರಿಸಬೇಕೆಂದು ತಿಳಿಸಲು ಒಂದು ಸಮಿತಿಯನ್ನು ರಾಜ್ಯ ಸರಕಾರವು ನೇಮಿಸಲಿದೆ ಎಂದು ತಿಳಿಯುತ್ತದೆ. ಇದು ಸತ್ಯವಾದರೆ ನಮ್ಮ "ಹಿಂದುಳಿದವರ" ಮುಂದರಿದ ಮೈಸೂರು ಸರಕಾರಕ್ಕೆ ಸ್ವಲ್ಪ ಹಿಂದುಮುಂದಾಗಿಯಾದರೂ ತನ್ನ ತಪ್ಪಿನ ಬಗ್ಗೆ ತಿಳುವಳಿಕೆ ಮೂಡಿದುದಕ್ಕೆ ಅದನ್ನು ಅಭಿನಂದಿಸಲೇಬೇಕು. ಜಾತ್ಯತೀತ ಪ್ರಜಾರಾಜ್ಯದಲ್ಲಿ ಜಾತಿಗಳನ್ನೇ ಮುಖ್ಯಾಧಾರವಾಗಿಟ್ಟು ಹಿಂದುಳಿದವರನ್ನು ನಿರ್ಧರಿಸುವುದು ಅಸಮಂಜಸವೆಂಬುದಕ್ಕೆ ಪ್ರತ್ಯಕ್ಷ ನಿದರ್ಶನಗಳೇ ಸಾಕು. ಇಂದಿನ ಆರ್ಥಿಕ ಜೀವನದಲ್ಲಿ ಆರ್ಥಿಕ ಸ್ಥಿತಿಗತಿಗಳನ್ನೇ ಮಾನವಾಗಿಟ್ಟುಕೊಂಡು ಹಿಂದುಳಿದವರಾರೆಂದು ಗೊತ್ತುಪಡಿಸಬೇಕು. ಈ ಬಗ್ಗೆ ಮದ್ರಾಸು ಸರಕಾರವೂ ತನ್ನ ಅನುಕೂಲಾಭಿಪ್ರಾಯವನ್ನು ಕೇಂದ್ರ ಸರಕಾರಕ್ಕೆ ತಿಳಿಸಿದೆ. ಅಂತೆಯೇ ಈ ಆರ್ಥಿಕವಾಗಿ ಹಿಂದುಳಿದವರು ಮಾತ್ರ ಸರಕಾರದ ಆಶ್ರಯವನ್ನು ಪಡೆಯುವುದಕ್ಕೆ ಅರ್ಹರು. ಹೀಗೆ ಈ ಮಾನದಂಡದಿಂದ ಅಳೆಯುವಾಗ, ಹರಿಜನರು — ಗಿರಿಜನರು ಮುಂತಾದವರೂ ಈ ಸಾಲಿನಲ್ಲಿ ಬರುವುದು ಖಂಡಿತ. ಸಾರ್ವಜನಿಕ ನೌಕರಿಗಳನ್ನು ಹಂಚುವಾಗ ಮತ್ತು ಕಾಲೇಜುಗಳಲ್ಲಿ ಸ್ಥಾನಗಳನ್ನು ಕಾಯ್ದಿರಿಸುವಾಗ ಮಾತ್ರ ಯೋಗ್ಯತೆಯನ್ನು ಅಲ್ಲಗಳೆಯುವಂತಿಲ್ಲ. ವೈದ್ಯಕೀಯವೇ ಮೊದಲಾದ ವೃತ್ತಿಪರ ಕಾಲೇಜುಗಳಲ್ಲಿ ಹಿಂದುಳಿದವರಿಗೆ ದೊರೆಯಬೇಕಾದ ಮಾರ್ಕುಗಳನ್ನು ಇತರರಿಗಿಂತ ಹೆಚ್ಚೆಂದರೆ ಸೇಕಡಾ ೧೦ರಷ್ಟು ಕಡಿಮೆ ಮಾಡಬಹುದು ಎಂಬ ವಿಶ್ವವಿದ್ಯಾಲಯ ಸಹಾಯಧನಾಯೋಗಾಧ್ಯಕ್ಷ ಡಾ। ದೇಶಮುಖರ ಮಾತುಗಳನ್ನು ನೆನಪಿಗೆ ತಂದುಕೊಳ್ಳಬೇಕು. ಇದರೊಂದಿಗೆ, ಸರಕಾರದ ಕಾರ್ಯಕಲಾಪಗಳು ತ್ವರಿತಗತಿಯಲ್ಲಿ ನಡೆದು ಜನತೆಗೆ ಯೋಗ್ಯ ಸೇವೆಯು ದೊರೆಯುವಂತಾಗಬೇಕಾದರೆ, ಸರಕಾರಿ ನೌಕರಿಗೆ ಭರ್ತಿಮಾಡುವಾಗ, ಯೋಗ್ಯತೆಯನ್ನು ಮೂಲ ಮಾನದಂಡವಾಗಿಟ್ಟುಕೊಳ್ಳಬೇಕಲ್ಲವೆ? ಅದು ಮುಂದಿನ ವಿಚಾರ. ಸದ್ಯ, ಆರ್ಥಿಕ ತಳಹದಿಯಲ್ಲಿ "ಹಿಂದುಳಿದ" ಮತ್ತು "ಮುಂದುವರಿದ" ವರ್ಗಗಳ ವಿಂಗಡಣೆಯಾಗುವುದು ಅಗತ್ಯವೆಂದು ರಾಜ್ಯ ಸರಕಾರ ತನ್ನ ಅಭಿಪ್ರಾಯವನ್ನು ಕೇಂದ್ರಕ್ಕೆ ತಿಳಿಸಲು ಇನ್ನೂ ವಿಳಂಬ ಮಾಡದಿರಲಿ.

—ರಾಶಿ.

ಹಾರ್ಮೋನಿಯಮ್ ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ. ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೋ, ಉಡುಪಿ.

ಬಂಟರ ಯಾನೆ ನಾಡವರ ಸಂಘದ ಜುಬಿಲಿ ಕಮಿಟಿಯವರ ವಿಜ್ಞಾಪನೆ

ಸ್ತ್ರೀಯರ ವಿದ್ಯಾಭ್ಯಾಸವನ್ನು ಮುಂದುವರಿಸುವ ಆವಶ್ಯಕತೆ

ರಾಷ್ಟ್ರದ ಹಾಗೂ ಸಮಾಜದ ಪ್ರಗತಿಯನ್ನು ಸಾಧಿಸುವ ಕಾರ್ಯದಲ್ಲಿ ಮಹಿಳೆಯರು ಮಹತ್ವದ ಪಾತ್ರವನ್ನು ವಹಿಸಬಲ್ಲರು. ಉತ್ತಮವಾದ ವಿದ್ಯಾಭ್ಯಾಸವು ಇದಕ್ಕೆ ಅಗತ್ಯವಾಗಿದೆ. ಭಾರತವು ಸ್ವಾತಂತ್ರ್ಯ ಪಡೆದಂದಿನಿಂದ ವಿದ್ಯಾಭ್ಯಾಸದ ಕ್ಷೇತ್ರವನ್ನು ವಿಸ್ತರಿಸಲಾಗುತ್ತಿದೆಯಲ್ಲದೆ ಶಿಕ್ಷಣ ಕ್ರಮವನ್ನು ಸಹ ಪುನರ್ವ್ಯವಸ್ಥೆಗೊಳಿಸುತ್ತಿದ್ದಾರೆ. ಕೆಲವು ತಲೆಮಾರುಗಳ ಹಿಂದೆ ಪ್ರಾಥಮಿಕ ವಿದ್ಯಾಭ್ಯಾಸವು ಎಲ್ಲಾ ಬಾಲಕ ಬಾಲಕಿಯರಿಗೂ ಅಗತ್ಯವೆಂಬ ಭಾವನೆ ಇದ್ದಂತೆ ಈಗ ಸೆಕೆಂಡರಿ ವಿದ್ಯಾಭ್ಯಾಸದ ಆತುರವು ವಿಸ್ತಾರವಾಗಿ ಹಬ್ಬಿರುತ್ತದೆ.

ಪೇಟೆ ಪಟ್ಟಣಗಳಲ್ಲಿರುವ ನಮ್ಮ ಸಮಾಜದ ಹೆಣ್ಣು ಮಕ್ಕಳು ಕೆಲವರು ಈಚೀಚೆಗೆ ಉಚ್ಚ ಶಿಕ್ಷಣವನ್ನು ಪಡೆದು ಪದವೀಧರರಾಗುತ್ತಿರುವದು ನಮಗೆ ಅಭಿಮಾನದ ಸಂಗತಿ. ಹಳ್ಳಿಗಳ ಮಟ್ಟಿಗೆ ಸೆಕೆಂಡರಿ ವಿದ್ಯಾಭ್ಯಾಸ ಕೂಡ ಪಡೆಯುವ ಹುಡುಗಿಯರ ಸಂಖ್ಯೆ ಕಡಿಮೆಯಾಗಿದೆ.

ಹುಡುಗಿಯರ ಬಗ್ಗೆ ಸ್ಥಾಪಿಸಿರುವ ಸೆಕೆಂಡರಿ ಶಾಲೆಗಳು ಸಾಕಷ್ಟು ಇರುವದಿಲ್ಲ. ನಮ್ಮ ಜಿಲ್ಲೆಯಲ್ಲಿ ವಿದ್ಯೆಯು ಬಹಳ ಪ್ರಗತಿ ಹೊಂದಿ ಸುಮಾರು 82 ಹೈಸ್ಕೂಲುಗಳು ಸ್ಥಾಪಿಸಲ್ಪಟ್ಟಿದ್ದರೂ ಹೆಣ್ಣು ಮಕ್ಕಳ ಬಗ್ಗೆ ಸ್ಥಾಪಿಸಿರುವ ಅಂತಹ ಶಾಲೆಗಳು 18 ಮಾತ್ರ ಇವೆ. ಈ ವರೇಗೆ ಹಿಂದುಳಿದಿರುವ ಸ್ತ್ರೀಯರ ವಿದ್ಯಾಭ್ಯಾಸ ಇನ್ನು ಮುಂದೆ ಅಭಿವೃದ್ಧಿ ಹೊಂದುವಂತೆ ಅವರಿಗೆ ಶಿಕ್ಷಣ ಸೌಕರ್ಯಗಳನ್ನು ಹೆಚ್ಚಿಸುವ ಪ್ರಯತ್ನವನ್ನು ಸರಕಾರವು ಇತ್ತೀಚೆಗೆ ಕೈಗೊಂಡಿರುತ್ತದೆ.

ಸ್ತ್ರೀಯರು ಪುರುಷರಂತೆ ಆಧುನಿಕ ಮನೋಭಾವನೆವುಳ್ಳವರಾಗಿ ಕುಟುಂಬ ಜೀವನಕ್ಕೆ ಮತ್ತು ಸಮಾಜಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಈಗಿನ ಪರಿಸ್ಥಿತಿಗಳಿಗನುಸಾರವಾಗಿ ನಡೆಯಬೇಕು. ಸುಶಿಕ್ಷಿತರಾದ ಮಹಿಳೆಯರು ತಮ್ಮ ಗೃಹಜೀವನ ಮತ್ತು ಮಕ್ಕಳ ಮೇಲೆ ಬೀರುವ ಪ್ರಭಾವ ಸಮಾಜದ ದೃಷ್ಟಿಯಿಂದ ಕೂಡಾ ಬಹಳ ಮುಖ್ಯವಾಗಿದೆ. ಸ್ತ್ರೀಯರು ತಮ್ಮ ಕರ್ತವ್ಯಗಳನ್ನು ಸೂಕ್ಷ್ಮಮತಿಯಿಂದ ನಿರ್ವಹಿಸಲು ಸಹಾಯವಾಗುವಂತೆ ಪ್ರಪಂಚದ ಮತ್ತು ಅದರ ವಿಚಾರಗಳ ಪರಿಚಯವನ್ನು ತಿಳಿಯುವುದಕ್ಕಾಗಿ ವರ್ತಮಾನ ಪತ್ರಿಕೆಗಳನ್ನು ಮತ್ತು ಉತ್ತಮ ಗ್ರಂಥಗಳನ್ನು ಓದಲು ಶಕ್ತರಿರಬೇಕು. ಮತ್ತು ಆದರಿಂದಾಗಿ ಸಂತೋಷದಾಯಕವಾದ ಹಾಗೂ ವಿಶಾಲತೆಯ ಜೀವನವನ್ನು ನಡೆಸಿಕೊಂಡು ಬರುವಂತಾಗಬೇಕು. ಭಾವೀ ತಾಯಂದಿರಿಗೆ ಒಳ್ಳೆ ತರದ ಶಿಕ್ಷಣ ಕೊಟ್ಟಲ್ಲಿ ಅದು ಅವರ ಮಕ್ಕಳ ಆರೈಕೆ ಮತ್ತು ಪಾಲನೆಗಳು ಉತ್ತಮವಾಗುವುದರಲ್ಲಿ ಪರಿಣಾಮ ಹೊಂದುವುದು. ಮಗುವಿನ ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆ ಮತ್ತು ಮುಂದಿನ ನಡತೆಯ ಅಡಿಗಟ್ಟನ್ನು ರೂಪಿಸುವುದರಲ್ಲಿ ಬಾಲ್ಯ ಪ್ರಾಯದ ಪ್ರಥಮ ವರ್ಷಗಳ ಲಾಲನೆಯು ಪಂಚಾಂಗವೇ ನೊರ್ಡ್ಡ ವಿಷಯವಾಗಿದೆ. ಮಗು ಶಾಲೆಗೆ ಹೋಗುವ ಪ್ರಾಯಕ್ಕೆ ಮೊದಲು ಮತ್ತು ಶಾಲೆಗೆ ಹೋಗಿ ಕೆಲಕಾಲದ ವರೆಗೆ ಅದರ ಆಟಪಾಟಗಳ ಮೇಲ್ವಿಚಾರ ಒಳ್ಳೆ ಬುದ್ಧಿಮತಿಯಾದ ಸುಶಿಕ್ಷಿತ ಮಾತೆಯಿಂದ ಸಾರ್ಥಕವಾಗಿ ಆಗಬೇಕಾಗಿದೆ. ಪಾಶ್ಚಾತ್ಯ ಸಮಾಜಗಳಲ್ಲಿ ವಿದ್ಯಾವಂತ ಮತ್ತು ವಿಚಾರಶೀಲರಾದ ಪತಿಪತ್ನಿಯರು ಮಿತ ಸಂತತಿಯುಳ್ಳವರಾಗಿ ದಾಂಪತ್ಯ ಸುಖವನ್ನೂ ಮಕ್ಕಳ ಹಿತರಕ್ಷಣೆಯನ್ನೂ ಕಾಪಾಡಿಕೊಂಡು ದೇಶದ ಪ್ರಗತಿಗೆ ಅನುಕೂಲರಾಗಿ ವರ್ತಿಸುತ್ತಾರೆ.

ತಮ್ಮ ಸ್ವಂತ ಕುಟುಂಬಕ್ಕೆ ಮತ್ತು ಸಮಾಜಕ್ಕೆ ಸರಿಯಾದ ಕರ್ತವ್ಯವನ್ನು ಮಾಡಲು ಶಕ್ತರಾಗಲು ನಮ್ಮ ತರುಣಿಯರು ಸೆಕೆಂಡರಿ (ಹೈಸ್ಕೂಲಿನ ಮೇಲಿನ ತರಗತಿಯ ವರೇಗಿನ) ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸಬೇಕು. ಹುಡುಗಿಯರ ಹೈಸ್ಕೂಲು ಕ್ಲಾಸುಗಳಲ್ಲಿ ಇನ್ನು ಮುಂದೆ ಗೃಹಕೃತ್ಯ ಯಾ ಸಂಸಾರ ನಿರ್ವಹಣಕ್ಕೆ ಅನುಕೂಲವಾದ ತರಬೇತಿ, ಮಕ್ಕಳ ಆರೋಗ್ಯ ಹಾಗೂ ಅವರಿಗೆ ಪ್ರಾರಂಭದ ವಿದ್ಯಾಭ್ಯಾಸ, ಹೊಲಿಗೆ, ಸಂಗೀತ, ಚಿತ್ರಕಲೆ ಮೊದಲಾದ ಸ್ತ್ರೀಯರಿಗೆ ಉಪಯುಕ್ತವಾದ ಶಿಕ್ಷಣಕ್ಕೆ ಹೆಚ್ಚಗೆ ಅನುಕೂಲ ಒದಗಿಸುವರು. ವಿದ್ಯಾವಂತರಾದ ಯುವಕರು ಇನ್ನು ಮುಂದೆ ತಮಗ ಸರಿಯಾದ ಸಂಗಾತಿಗಳಾಗ ಬಹುದಾದ ವಿದ್ಯಾವತಿ ತರುಣಿಯರನ್ನೇ ವಿವಾಹವಾಗುವುದರಲ್ಲಿ ಹೆಚ್ಚು ಆಸಕ್ತರಾಗುವರು.

ಸೆಕೆಂಡರಿ ವಿದ್ಯಾಭ್ಯಾಸ

ನಮ್ಮ ಜಿಲ್ಲೆಯಲ್ಲಿರುವ 18 ಹುಡುಗಿಯರ ಹೈಸ್ಕೂಲುಗಳಲ್ಲಿ ಹತ್ತು ಹೈಸ್ಕೂಲುಗಳು ಮಂಗಳೂರಲ್ಲಿವೆ. ಮಂಗಳೂರು ಪಟ್ಟಣವು ಸ್ತ್ರೀಯರ ವಿದ್ಯಾಸಂಸ್ಥೆಗಳಿಗೆ, ಕೂಟ ಮಂಡಳಿಗಳಿಗೆ ಮತ್ತು ಸಾಮಾಜಿಕ ಸೇವಾ ಚಟುವಟಿಕೆಗಳಿಗೆ ಹೆಸರಾದುದು. ಪ್ರೌಢ ಶಿಕ್ಷಣಕ್ಕೆ ಯೋಗ್ಯತೆ ಯಾ ಅನುಕೂಲತೆ ಇರುವ ಹುಡುಗಿಯರಿಗೆ ಮಂಗಳೂರು ಪಟ್ಟಣದಲ್ಲಿ ತುಂಬಾ ಸೌಕರ್ಯಗಳಿದ್ದು ಆ ಮೂಲಕ, ಉಪಾಧ್ಯಾಯ, ಡಾಕ್ಟರ್ ಮೊದಲಾದ ಉದ್ಯೋಗಗಳಲ್ಲಿ ಸೇರಿಕೊಳ್ಳಲು ಎಡೆ ದೊರೆಯುವುದು. ಹೈಸ್ಕೂಲುಗಳ ವರೆಗೆ ಕಲಿತು ವಿದ್ಯಾಭ್ಯಾಸವನ್ನು ಪೂರೈಸಿದ ಹುಡುಗಿಯರು ಸ್ವತಂತ್ರ ಜೀವನವನ್ನು ಸಾಗಿಸಲು ಸೆಕೆಂಡರಿ ತರಗತಿಯ ಉಪಾಧ್ಯಾಯರ ತರಬೇತಿ ಅಥವಾ ದಾದಿಯರ (Nurses) ತರಬೇತಿಯನ್ನು ಪಡೆಯಬಹುದು.

ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನ

ನಮ್ಮ ತರುಣಿಯರು ಮಂಗಳೂರಿಗೆ ಬಂದು ಈ ಭವನದಲ್ಲಿ ನಿವಾಸಿಗಳಾಗಿ ಉತ್ತಮ ರೀತಿಯ ಹೈಸ್ಕೂಲು ಯಾ ಕೊಲೇಜ್ ಶಿಕ್ಷಣ ಪಡೆಯಲಿಕ್ಕೆ ಇಲ್ಲಿ ಬಹಳ ಅನುಕೂಲತೆಗಳು ಇವೆ. ಸೆಕೆಂಡರಿ ವಿದ್ಯಾಭ್ಯಾಸ ತೀರಿಸಿ ಶಾಲೆ ಬಿಟ್ಟವರು ಕೂಡಾ ಇಲ್ಲಿ ಬಂದು ಭವನದಲ್ಲಿದ್ದು ಅವರ ಜೀವನದಲ್ಲಿ ಮುಂದೆ ಉಪಯೋಗವಾಗುವಂತಹ ಹೋಮ್ ಸಾಯನ್ಸ್ (ಗೃಹಕೃತ್ಯಕ್ಕೆ ಸಂಬಂಧಿಸಿದ ವಿಷಯ) ಮಕ್ಕಳ ಆರೈಕೆ, ಲಲಿತ ಕಲೆಗಳು ಇತ್ಯಾದಿ ಸ್ತ್ರೀಯರಿಗೆ ಉಪಯುಕ್ತವಾದ ತರಬೇತಿಯನ್ನು ಪಡೆಯಲು ಬೇಕಾದ ಸೌಕರ್ಯಗಳು ಇಲ್ಲಿ ದೊರೆಯಬಹುದು.

ವಿದ್ಯಾರ್ಥಿ ವೇತನ

ಜುಬಿಲಿ ಫಂಡಿಗೆ ಧನ ಸಹಾಯವಿತ್ತ ಕೆಲವರು ತಮ್ಮ ವಂತಿಗೆಯನ್ನು ಶಾಶ್ವತವಾಗಿ ಡಿಪೋಜಿಟ್ ಇಟ್ಟು ಅದರ ವರ್ಷಾವಧಿ ಬಡ್ಡಿಯನ್ನು ಸ್ತ್ರೀ ವಿದ್ಯಾರ್ಥಿನಿಗಳಿಗೆ ವೇತನವಾಗಿ ಕೊಡಬೇಕೆಂದು ಅಪೇಕ್ಷಿಸಿರುತ್ತಾರೆ. ಸಂಘದ ಬಡ ವಿದ್ಯಾರ್ಥಿ ಫಂಡಿಗೆ ಮೊದಲಿನ ವರ್ಷಗಳಲ್ಲಿ ನಡೆಯುತ್ತಿದ್ದಂತೆ ಇನ್ನು ಮುಂದೆ ಲಗ್ನ ಯಾ ಇತರ ಶುಭಕಾರ್ಯಗಳ ಸಂದರ್ಭಗಳಲ್ಲಿ ಧನ ಸಹಾಯ ಪಡೆದರೆ ಈ ಉದ್ದೇಶವು ಸಾರ್ಥಕವಾಗುವುದು. ಸಮಾಜದ ಬಂಧುಗಳು ನಮ್ಮ ವಿದ್ಯಾರ್ಥಿ ವೇತನ ಫಂಡನ್ನು ಬಲಪಡಿಸಿ ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹಿಸುವುದು ಮುಂದಿನ ಏಳಿಗೆಗೆ ಅತೀ ಆವಶ್ಯವಾಗಿದೆ. ಸ್ತ್ರೀಯರ ಆತ್ಮಶಕ್ತಿಯು ವಿಕಾಸವಾಗಿ ಗೃಹಜೀವನ ಸುಧಾರಣೆ ಹೊಂದಿ ಸಮಾಜದ ಚಟುವಟಿಕೆಗಳಲ್ಲಿ ಹಾಗೂ ನೂತನ ರಾಷ್ಟ್ರದ ವಿವಿಧ ಕ್ಷೇತ್ರಗಳಲ್ಲಿ ಅದು ಬಹುಮುಖವಾಗಿ ಪ್ರಜ್ವಲಿಸುವಂತೆ ಎಲ್ಲರೂ ಶ್ರಮಿಸಬೇಕಾಗಿ ವಿಜ್ಞಾಪಿಸುತ್ತೇವೆ.

ಶಾಂಭವಿ ಆರ್. ಪೂಂಜ,
ಕೆ. ಟಿ. ಆಳ್ವ,
ಎ. ಬಿ. ಶೆಟ್ಟಿ,
ಜುಬಿಲಿ ಕಮಿಟಿಯ ಪರವಾಗಿ.

ಮಂಗಳೂರು, 10-6-1959.

ಕವಿತಾವಿತಾನ

ನೈದಿಲೆ

ಕತ್ತಲೊಡತಿಯು ಆಳೆ ಮುಟ್ಟು ನೀರವ ಪಸರಿ
ಆಗೆ ಜಗ ನಿಸ್ತೇಜ ಚೈತನ್ಯಹೀನ
ಅಲ್ಲಿಯೂ ಕೊಳದಲ್ಲಿ ನೈರಶ್ಯ ನಿಶೆಯಲ್ಲಿ
ಬಿಂಕದಿಂದೊಲಗಟ್ಟುತಿಹೆ ನೈದಿಲೆ

ನಡು ನೀರಿನಾಳದಿಂದುಗಿದು ಬಿನ್ನಗೆ ಬಿರಿದು
ಬಾಳ ಬಂಗಾರ ರಥದಲಿ ನಡೆಸಿಹೆ
ಕೋಟಿಮನ ಒಲಿಸುವಾಕಾಂಕ್ಷೆ ಸಂಕಲೆಯಿಂದ

ಎಲ್ಲ ಬಿಗಿದಿರೆ ನೀನು ಹೊರತಾಗಿಹೆ
ಜೊನ್ನೆಯಲಿ ನಲವುಕ್ಕಿ ಹೌಹಾರಿ ಹರಿಯುತಿರೆ

ನಿನ್ನನನುಸರಿಸಿ ಜಲ ಮೇಲೇರಿರೆ!
ಏನಂದಿ ನಟ್ಟಿರುಳ ಜಾಗರಣೆ ಒಂಟಿತನ
ತಂಗದಿರನನ್ನೊಲಿಸಿ ಕೊಳ್ಳಲೆಂದ?
ಹುಟ್ಟಿ ಸೌಗಂಧ ಸೌರಭ ಚೆಲ್ಲಿ ದಿನದಲ್ಲಿ
ಒಂದ ಮಿಗಿಸುವದೊಂದು ಕೋಟಿ ಜಾತಿ
ಬೆಳಗಿನಲಿ ಬೆಳಗುತಿಹ ಲಕ್ಷದೀಪಗಳಿಂದ
ಕತ್ತಲಲಿ ಬಿತ್ತರಿಪ ಸೊಡರು ಲೇಸು
ಗೊಂದಲದಿಪರಿಗೊಡದೆ ಒಂದು ದಿನದೀ ಬಾಳ

ಜಗದಾಳ ಚಿಂತನೆಯ ಮಾಲ್ಪೆ ಏನು?
ಈ ಶಾಂತ ಏಕಾಂತ ಸೊಗಸು ಜೀವನವೆಂದು
ಮುಖದಿ ಮೂಡಿಪೆ ಕರೆವೆ ವಿನುತೆ ಎಂದು
ಮಾಧುರ್ಯ ಮುಖಕಾಣೆ ಸುಪ್ತ ಪಾಠದಿ ಬಿಗಿದು

ಕಲ್ಪನೆಯ ಕನಸುಗಳ ಲೋಕಕೆಳೆವೆ!
ಊಹೆ ಬಾನಿಗೆ ಜಿಗಿಸಿ ಭಾವ ಜಾಲಕೆ ಹೊಗಿಸಿ
ಬಾಳ ಸುಖದುಃಖಗಳ ಮರೆಸಿ ಬಿಡುವೆ!

—ಕೋಡು ಭೋಜ ಶೆಟ್ಟಿ,
ಮುಂಬಯಿ.

NOTICE

In the Court of the Subordinate Judge of South Kanara.

(II Additional)

O. S. No. 8/1959

Between:

Nemiraja Chowta and others—Plaintiff

and

Dejamma and others—Defendant

To

3rd defendant—Dhyana Kuma[illegible] son of Rathi Devi, residing a[illegible] Hirni House in Arlva villag[illegible] Belthangady Taluk, Post Koila.

Please take notice that th[illegible] plaintiffs have filed the abov[illegible] suit against you, for redemptio[illegible] of the plaint usufructuary mor[illegible]gage dated 15—12—1929 an[illegible] for delivery of possession of th[illegible] plaint A schedule properties [illegible] the plaintiffs, and the aforesa[illegible] suit now stands posted [illegible] 30—6—1959 for hearing. Shou[illegible] you fail to appear on that d[illegible] before this Court at 11 A. [illegible] either in person or through [illegible] lawyer the suit will be heard [illegible] your absence.

(By Order)

G. Somashekar Rao,
Advocate for plainti[illegible]

Mangalore, 17—6—1959.

ನಮ್ಮ ನದಿಗಳು

(೪ನೇ ಪುಟದಿಂದ)

ಮಗಳ ಪಕ್ಕಕ್ಕೆ ಹೋಗಿ ಗಂಗಾದ್ವಾರದಲ್ಲಿ ಒಂದು ಸೇರು" ಎಂದು.

ಇಂದು ಸಪ್ತಸರೋವರವೆಂಬ ಹೆಸರಿನಿಂದ ಪ್ರಸಿದ್ಧವಿರುವ ಸ್ಥಳದಲ್ಲಿಯೇ ಸಪ್ತರ್ಷಿಗಳ ಆಶ್ರಮವಿತ್ತೆಂದು ಹೇಳುತ್ತಾರೆ. ಆದರೆ, ಕಾಲಕ್ರಮದಲ್ಲಿ ಈ ಆಶ್ರಮಗಳೆಲ್ಲ ನಷ್ಟವಾಗಿ ಹೋಗಿವೆ. ಈ ಸಪ್ತಸರೋವರದಲ್ಲಿ ಕೆಲವು ವರ್ಷಗಳಿಗೆ ಮೊದಲು ಸನಾತನ ಧರ್ಮ ಪ್ರತಿನಿಧಿಸಭಾದ ಅಧ್ಯಕ್ಷ ಶ್ರೀ ಗೋಸ್ವಾಮಿ ಗಣೇಶದತ್ತರು ಪುನಃ ಪ್ರಾಣ ಪ್ರತಿಷ್ಠೆ ಮಾಡಿದ್ದಾರೆ. ಗಂಗೆಯು ಅಲ್ಲಿಂದ ಹರಿದ್ವಾರದತ್ತ ಹರಿದು, ಮುಂದೆ, ಮೀರತ್, ಬುಲಂದ ಶಹರ, ಮೊದಲಾದ ಜಿಲ್ಲೆಗಳಿಗಾಗಿ ಪಯಣಿಸಿದಳು. ಕಾನಪುರ, ಮಿರ್ಜಾಪುರ, ಚುನಾರ, ಸೋರೋ ಮೊದಲಾದ ಅನೇಕ ನಗರಗಳು ಗಂಗೆಯ ತಟದಲ್ಲಿಯೇ ಇವೆ.

ಗಂಗೆಯ ಕಥೆಯನ್ನು ಎಷ್ಟೂ ವರ್ಣಿಸಬಹುದು. ಆರ್ಯರು ಮಾತ್ರವಲ್ಲದೇ ಆಕೆಯನ್ನು ಆಂಗ್ಲೇಯರು, ಮುಸಲ್ಮಾನರು ಎಲ್ಲರೂ ಸಮ್ಮಾನಿಸಿದ್ದಾರೆ. ಲಾಹೋರದಲ್ಲಿರುವಾಗ ಹರಿದ್ವಾರದಿಂದಲೂ ಆಗ್ರೆಯಲ್ಲಿರುವಾಗ ಸೋರೋಯಿಂದಲೂ ಅಕ್ಬರ ಗಂಗಾ ಜಲ ತರಿಸಿ ಕುಡಿಯುತಿದ್ದನಂತೆ. ಗಂಗಾ ಜಲವನ್ನು ಊರಿಂದೂರಿಗೆ ಕಳಿಸುವುದೂ ಇದೆ. ನೆಂಟರಿಷ್ಟರು ಬಂದರೆ, 'ಗಂಗೋದಕ ಬೇಕೆ?"; ಎಂದು ಉಪಚರಿಸುತ್ತಾರೆ. "ಗಂಗಾಮೃತ" ಎಂಬ ಪದದಿಂದಲೇ ಗಂಗೆಯ ನೀರು ಅಮೃತ ಸಮಾನವೆಂಬ ಕಲ್ಪನೆ ನಮ್ಮ ಜನತೆಯಲ್ಲಿ ಮೂಡಿ ಬಂದಿದೆ ಎಂದು ತಿಳಿಯಲಾರಿವೆ?

ಸಂಕ್ಷೇಪವಾಗಿ ಗಂಗೆಯ ಮಹಿಮೆಯನ್ನು ಹೀಗೆ ಹೇಳಬಹುದು—

ಅಪಿ ಪ್ರಾಜ್ಯಂ ರಾಜ್ಯಂ ತೃಣಮಿವ
ಪರಿತ್ಯಜ್ಯ ಸಹಸಾ ವಿಲೋಲದ್ವಾನೀ
ರಂತವ ಜನನಿ ತೀರಂ ಶ್ರಿತವತಾಂ
ಸುಧಾತ್ ಸ್ವದೀಯಃ ಸಲಿಲ ಭರ
ಮಾತೃಪ್ತಿಪಿಬತಾಂ ಜನಾನಾಮಾ
ನಂದಃ ಪರಿಹಸತಿ ನಿರ್ವಾಣ ಪದ
ವೀಂ ||

(ತುಪ್ಪ. ರಾಜ್ಯ ಮೊದಲಾದುವು ದೊರೆತರೂ ಅವುಗಳನ್ನು ಹುಲ್ಲುಕಡ್ಡಿಗಳೆಂದು ತ್ಯಜಿಸಿ ನಿನ್ನಲ್ಲಿ ಪ್ರವಹಿಸುವ ಅಮೃತ ಸಮನೀರನ್ನು ಜನರು ಕುಡಿದರೆ, ಸಾವನ್ನೂ ವ್ಯಂಗ್ಯವಾಗಿ ಕಂಡು ಆನಂದತನ್ಮಯರಾಗುತ್ತಾರೆ.)

ನಮ್ಮ ಭಾರತ

ತೀರ ಹಿಂದುಳಿದವರ ಉದ್ಧಾರಮಾರ್ಗ ಯಾವುದು?

ನಿಧಾನವಾಗಿ ಸೋಪಾನೋಪಾದಿಯಾಗಿ ಅವರನ್ನು ಸುಸಂಸ್ಕೃತಗೊಳಿಸಬೇಕು.

ಮೂರು ಅಥವಾ ನಾಲ್ಕು ವರ್ಷಗಳಿಗೆ ಮೊದಲು ಪೂರ್ವದ ಹಿಂದುಳಿದ ಪ್ರದೇಶದ ಲೋಕಸಭಾ ಸದಸ್ಯರೊಬ್ಬರು ಲೋಕಸಭಾ ಸದನದಲ್ಲಿ ಅವಮಾನಿತರಾದುದನ್ನು ನಮ್ಮಲ್ಲಿ ಹೆಚ್ಚಿನವರು ಮರೆತಿರಲಾರೆವು. ಹತ್ತು ದಿನಗಳ ವರೆಗೆ ಅವರ ಕಾರ್ಯದರ್ಶಿ ಅವರಿಗೆ ಹಣ, ವಸತಿ, ಪಚ್ಚೇಸು, ಆಹಾರವನ್ನು ಕೂಡ ಒದಗಿಸಿರಲಿಲ್ಲ. ಪ್ರಧಾನ ಮಂತ್ರಿಗಳು ಕೂಡಲೇ ಅವರನ್ನು ತಮ್ಮೆಡೆಗೆ ಕರೆದುಕೊಂಡು ಹೋಗಿ, ಎಲ್ಲ ವಿಧದ ಅನುಕೂಲತೆಗಳನ್ನು ಒದಗಿಸಿದರು. ಆದರೆ, ಲೋಕಸಭಾ ಸದಸ್ಯರ ಹೃದಯ ಮತ್ತು ಗೌರವಕ್ಕಾದ ವೇದನೆಯು ಅತೀವವಾಗಿತ್ತು. ಅವರ ಮೂಲಸ್ಥಳದಲ್ಲಿ ಅವರೊಬ್ಬ ನಾಯಕರಾಗಿದ್ದಾರೆ. ತನ್ನ ಸಮಾಜದಿಂದ ಗೌರವವನ್ನೂ ಪಡೆಯುತ್ತಾರೆ. ತನ್ನ ಜನರ ಪ್ರತಿನಿಧಿಯಾಗಿ ರಾಜಧಾನಿಗೆ ಅವರು ಬಂದು, ಇಲ್ಲಿ ತಿರಸ್ಕಾರ; ಭಾಷಾಭಿನ್ನತೆ, ಸಾಂಸ್ಕೃತಿಕ ಮತ್ತು ಬೌದ್ಧಿಕ ವೇದನೆಗಳನ್ನು ಅನುಭವಿಸುವುದರಿಂದ ದುಃಖವಾಗದೆ ಉಳಿದೀತೆ?

ಇನ್ನೊಬ್ಬ ಬುಡಕಟ್ಟಿನ ನಾಯಕರೊಮ್ಮೆ ಪ್ರಜಾಪ್ರಭುತ್ವ ದಿನಾಚರಣೆಗೆಂದು ದೆಹಲಿಗೆ ಆಗಮಿಸಿದರು, ಅವರು ಬರುವಾಗ, ನೆಹರೂರವರಿಗೆ ಈಗ ಅತಿ ಪ್ರಿಯವಾಗಿರುವ ಎರಡು "ಪಂಡ"ಗಳ ಜೋಡಿಯನ್ನೂ ಕರೆದು ತಂದಿದ್ದರು. ಆವರು ಸರಕಾರಿ ಅಧಿಕಾರಿಗಳು ಮತ್ತು ಲೋಕಸಭಾ ಸದಸ್ಯರಿಗಾಗಿರುವ ವಸತಿಗೃಹದಲ್ಲಿ ಉಳಕೊಂಡರು. ಅವರ ಅದೃಷ್ಟ ಅಷ್ಟು ಒಳ್ಳೆಯದಿರಲಿಲ್ಲ. ಜನರು ಕೋಣೆಯಲ್ಲಿ ಆ "ಪಂಡ"ರನ್ನು ನೋಡಲು ಗುಂಪು ಸೇರಿದರಾದರೂ ಅವರಿಗೆ ಏನಾದರೂ ಬೇಕಾದೀತೆಂದು ತಿಳಿಯಲಿಲ್ಲ. ಈ ಮಹಾನುಭಾವರಿಗೆ ಭೋಜನ ಶಾಲೆ ಯೆಲ್ಲಿದೆ ಎಂದೂ ತಿಳಿದಿರಲಿಲ್ಲ; ಯಾರೊಬ್ಬರೂ ಅದನ್ನು ಹೇಳಲೂ ಇಲ್ಲ. ಈ ಘಟನೆಗಳು ರಾಷ್ಟ್ರ ಕಲ್ಯಾಣ ಮಾಡುವುದು ಸಾಧ್ಯವೆ?

ನಮ್ಮ ಮತ್ತು ನಮ್ಮ ಆದಿ ಕುಲಗಳ ಬಗ್ಗೆ ಸತ್ಯಚಿಂತನೆ ಮಾಡುವ ಕಾಲ ಸನ್ನಿಹಿತವಾಗಿದೆ. ಆದಿಕುಲಜರಿಗೆ ಯಾವುದು ಉತ್ತಮ? ನಾವು ಅವರನ್ನು ಆಡಳಿತ ವಿಧಾನದಲ್ಲಿ ಮಾತ್ರವಲ್ಲ, ಸಾಂಸ್ಕೃತಿಕ ರೀತಿಯಲ್ಲೂ ಹೇಗೆ ಸಮೀಪ ತರುವುದು ಸಾಧ್ಯ? ಈ ಪ್ರಶ್ನೆಗಳನ್ನು ಹಾಕಿಕೊಂಡು ವೇರಿಯರ್ ಇಲ್ವಿನ್ನರು ತಮ್ಮ ತತ್ವಗಳಲ್ಲಿ ಉತ್ತರಿಸಿರುವರು.

ಒರಿಸ್ಸ ಮತ್ತು ಮಧ್ಯಪ್ರದೇಶಗಳ ಬುಡಕಟ್ಟಿನ 'ನೇಫ" ಜನಾಂಗದವರೊಡನೆ ಇದ್ದು ಹಲವಾರು ವರ್ಷ ಅನುಭವಪಡೆದಿರುವುದರಿಂದ ಶ್ರೀ ವೇರಿಯರ್ ಇಲ್ವಿನ್ನರು ಅವರ ಮೇಲೆ ಕರುಣೆಯನ್ನೂ ತೋರಿಸಬಲ್ಲರು ಮತ್ತು ಅವರನ್ನು ತಿಳಿದುಕೊಳ್ಳಬಲ್ಲರು. ಸಮಸ್ಯೆಯೆಂದರೆ ಇದೇ: ಅವರೆಲ್ಲರು ಭಾರತದಲ್ಲಿ ಮಾತ್ರವಲ್ಲ ಜಗತ್ತಿನಲ್ಲೆಲ್ಲಾ ಹೀಗೆಯೇ ಇರುತ್ತಾರೆ. ಆದರೆ, ಇಲ್ವಿನ್ನರು ಸಂಶೋಧಕರಾಗಿ ಅವರಲ್ಲಿ ಹೋಗುವುದಿಲ್ಲ. ಸಹಭಾರತೀಯರಂತೆ ಅವರಲ್ಲಿಗೆ ತೆರಳುತ್ತಾರೆ; ಅವರ ಜೀವನ, ಪದ್ಧತಿ, ಮೃತಸಂಸ್ಕಾರ ಮತ್ತು ನಂಬಿಗೆ ಮೊದಲಾದುವನ್ನು ತಿಳಿದುಕೊಳ್ಳುವ ಲವಲವಿಕೆಯಿಂದ ಅವರು ನೇಫಾರನ್ನು ಮಾತಾಡಿಸುತ್ತಾರೆ

ಈಶಾನ್ಯ ಗಡಿ ಪ್ರದೇಶವನ್ನು ಭಾರತೀಯ ಗಡಿ ರಕ್ಷಣಾ ಶಾಸನ ಸೇವೆಯಲ್ಲಿ ೧೯೫೬ರಲ್ಲಿ ಸೇರ್ಪಡೆಗೊಳಿಸಿದ್ದುದರಿಂದ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ೮.೫ ಕೋಟಿ ರೂಪಾಯಿಗಳನ್ನು ಗಡಿಪ್ರದೇಶಗಳ ಅಭಿವೃದ್ಧಿಗಾಗಿ ಮೀಸಲಾಗಿಟ್ಟಿರುವುದರಿಂದ, ಈ ಪ್ರದೇಶದ ಅಭಿವೃದ್ಧಿಯು ಗಮನಿಸಲ್ಪಟ್ಟಿದೆ ಎನ್ನಬಹುದು.

ಉತ್ತಮ ಸಾರಿಗೆ ಸಂಪರ್ಕ, ಉಸ್ತಾಹಾರ, ಉತ್ತಮ ಆರೋಗ್ಯ ರಕ್ಷಣೆಗಳು ಈ ಪ್ರದೇಶಗಳಿಗೆ ಬೇಕು. ಇವನ್ನು ನಾವು ಒದಗಿಸುವಾಗಲೇ ಅಲ್ಲಿರುವ ಬುಡಕಟ್ಟಿದವರೊಡನೆ ನಿಕಟ ಸಂಬಂಧವನ್ನೂ ಬೆಳೆಸುತ್ತೇನೆ. ಅವರೊಡನೆ ವ್ಯವಹರಿಸುವಾಗ, ನಾವು ನಮ್ಮನ್ನು ಹೇಗೆ ತಿಳಿದುಕೊಳ್ಳುತ್ತೇವೆ? ನಾವು ಕಲಿತ ಇಂಗ್ಲಿಷ್ ಮಾಧ್ಯಮವನ್ನು ಬಳಸಿ, ಅವರಿಗಿಂತ ಉತ್ತಮರು ನಾವೆಂದು ತಿಳಿದುಕೊಳ್ಳುತ್ತೇವೆಯೆ? ಇಲ್ವಿನ್ನರು, ಅಭಿವೃದ್ಧಿಯು ಕ್ರಮೇಣ ಆಗಬೇಕೆನ್ನುತ್ತಾರೆ. ನಾವು ಬಯಸಿದಂತೆ ಅವರನ್ನು ಒಂದೇ ನಿಮಿಷದಲ್ಲಿ ತಮ್ಮ ಅಭಿಪ್ರಾಯವನ್ನು ಸ್ವೀಕರಿಸುವಂತೆ ಮಾಡುವುದು ಸಾಧ್ಯವಿಲ್ಲ. ಸಾಮಾನ್ಯತಃ ಒಂದು ಆಸ್ಪತ್ರೆ ಆಯಿತು ಎನ್ನಿ. ಅಲ್ಲಿ ಉದ್ಘಾಟನೆಯ ದಿನ ಗ್ರಾಮ ಪುರೋಹಿತರು ಬಂದು, ಸಂಸ್ಕಾರಾದಿಗಳನ್ನು ಮಾಡಿ ರಕ್ಷಣೆ ಹಾಗೂ ಆಶೀರ್ವಾದಗಳ ಭರವಸೆಯನ್ನಿತ್ತರೆಂದರೆ ಅಲ್ಲಿನವರೆಲ್ಲರಿಗೂ ವಿಶ್ವಾಸ ಹುಟ್ಟುವುದು. ಅದು ಹೊರತು, ಅನನುಭವದ ಆಡಳಿತಾಧಿಕಾರಿಗಳು, ಉದ್ದನೆಯ ಭಾಷಣವನ್ನು ಬಿಗಿದರೆ, ಅಷ್ಟರಿಂದಲೇ ಅವರು ಕಂಗಾಲಾಗಿ ಹೋಗುತ್ತಾರೆ. ನಿಧಾನವಾಗಿ ಅವರನ್ನು ನಮ್ಮ ತತ್ವಗಳತ್ತ ಆಕರ್ಷಿಸುವ ಕೆಲಸ ನಡೆಯಬೇಕು; ಇದಲ್ಲದೇ ಈಗಿನ ಅಪಕ್ವ ವಿಧಾನದಂತೆ ಅವಸರ ಮಾಡಿದರೆ, ಕೆಲಸವೆಲ್ಲ ಕೆಟ್ಟು ಹೋದ ಹಾಗೆ.

ಈ ವಿಷಯದಲ್ಲಿ ಶ್ರೀ ವೇರಿಯರ್ ಇಲ್ವಿನ್ನರ ತತ್ವವು ವಾಸ್ತವಿಕವಾಗಿದೆ. ಹರಿಜನರನ್ನೂ ಗಿರಿಜನರನ್ನೂ ಉದ್ಧರಿಸುವ ಉತ್ಕಟೇಚ್ಛೆಯಿಂದ ಕೂಡಿದ ಸರಕಾರಗಳು ಇದನ್ನು ಅವಶ್ಯ ಗಮನಿಸಬೇಕು.

— ಯೋಜನಾ.

ಪ್ರಕಟಣೆ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 68/1959.

ದಿ, ಉಡುಪಿ ಮುನ್ಸಿಪಾಲಿಟಿ–ವಾದಿ.

ಮತ್ತು

ಕೊಡಂಚ ಗೋಪಾಲಕೃಷ್ಣರಾವ್–ಶ್ರೀನಿವಾಸಕೊಡಂಚರ ಮಗ. ಉಡುಪಿ ತಾಲೂಕು No. 76ನೆ ಬಡಗುಬೆಟ್ಟು ಗ್ರಾಮದ ಬೈಲೂರು—ಪ್ರತಿವಾದಿ,

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನಂದ್ರೆ—

ವಾದಿ ಮುನ್ಸಿಪಾಲಿಟಿಗೆ ಬರತಕ್ಕ ಪ್ರೊಫೆಶನ್ Tax ಬಗ್ಗೆ ದಾಖಲು ಮಾಡಿದ ಮೇಲ್ಕಂಡ ದಾವೆಯಲ್ಲಿ ಪ್ರತಿವಾದಿಯು ಅಪ್ಪೆರು ನೋಟೀಸು ಬಗ್ಗೆ ತಾ. 8-7-1959ಕ್ಕೆ ಇಡೋಣಾಗಿಯದೆಂತ ಈ ಮೂಲಕ ಸದ್ರಿ ಪ್ರತಿವಾದಿಗೆ ತಿಳಿಸೋಣಾಗುತ್ತದೆ.

N. V. Kamath,
Advocate for Plaintiff.

ಉಡುಪಿ-17-6-59.

ದಿ| ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್, ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2-00.

ಭಾರತದ ಕರ್ಣ

"ಭಾರತದ ಕರ್ಣನು ದಿ| ಕಿಲ್ಲೆಯವರಿಗೆ ಒಲಿದಿದ್ದ...... ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ| ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

NOTICE

In the court of the Subordinate Judge of South Kanara.

O. S. No. 35/1959.

Between:

Narsi Bai......Plaintiff.

and

Achmu Shedthi & others.. Defendants.

To

Defendants—

2. Kamalu Shedthi, 5. Jalaja Shedthi—children of Achmu Shedthi

7. Sugunavathi, d/o Seetha Shedthi.

8. Umavathi, 9. Devaki—children of 2nd defendant.

All are residing in Hejmadi village, Mangalore Taluk.

Take notice that the plaintiff has filed the above suit to recover the amount due to her under the mortage deed executed by you and others, and the said suit is posted to 9—7—1959 for your appearance. If you fail to appear on that date at 11 O'clock either in person or through lawyer, the suit will be heard exparte

(By order of Court)

M. S. Kamath,
Advocate for Plaintiff.

Mangalore, 18-6-1959.

ಸದ್ಭಾವನೆ

(೩ನೇ ಪುಟದಿಂದ)

ಮಾನ್ಯ ರಾಜ್ಯಪಾಲರ ಈ ಸಂದರ್ಶನವು ಅಮೆರಿಕನರೆಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಅಮೆರಿಕನ್ನರು ತಮ್ಮ ಕೃತೀ ಮತ್ತು ಸಾಧನೆಗಳು ಸರಿಯೋ ತಪ್ಪೋ ಎಂಬುದನ್ನು ಅರಸುವುದಕ್ಕೆ ಅಮೆರಿಕನ್ನರು ಬಯಸುತ್ತಾರೆ. ಅಮೆರಿಕನ್ನರ ಈ ತೆರದ ಜೀವನವು ತನ್ನನ್ನು ವಿಶೇಷವಾಗಿ ಆಕರ್ಷಿಸಿದೆ ಎನ್ನುತ್ತಾರೆ ರಾಜ್ಯಪಾಲರು. ಅಮೆರಿಕನ್ನರು ಭಾರತದ ಕಡೆಗೆ ಹೆಚ್ಚಾಗಿ ಆಸಕ್ತಿಯನ್ನು ತೋರಿಸುತ್ತಿರುವರು. ಎರಡೂ ದೇಶಗಳ ನಾಯಕರೇ ಅಲ್ಲದೇ ಉಳಿದ ಪ್ರಜಾಜನರೂ ಪ್ರಯತ್ನಿಸಿ ಒಂದಾಗುವುದಾದರೆ, ಇಂಡೊ—ಅಮೆರಿಕನ್ ಮೈತ್ರೀ ಸಂಘದ ಸ್ಥಾಪನೆಗೆ ಬುನಾದಿಯನ್ನು ಹಾಕುವುದು ಸಾಧ್ಯ ಎಂದವರು ಅಭಿಪ್ರಾಯಪಟ್ಟು, ಈ ಎರಡೂ ದೇಶಗಳ ನಡುವೆ ತತ್ವವೇತ್ತರು, ವಿದ್ಯಾತಜ್ಞರು, ಲೇಖಕರು ಮತ್ತು ಧಾರ್ಮಿಕ ನಾಯಕರು — ಮೊದಲಾದವರ ಮೂಲಕ ಅಧಿಕಾಧಿಕ ಸಾಂಸ್ಕೃತಿಕ ವಿನಿಮಯವನ್ನು ಮಾಡಿಕೊಳ್ಳಬೇಕು ಎಂದವರು ಸೂಚಿಸಿದರು.

ಶ್ರೀ ಜಯಚಾಮರಾಜರನ್ನು ಎದುರ್ಗೊಂಡ ಅಮೆರಿಕನರೆಲ್ಲರೂ ಅವರಿಂದ ಆಕರ್ಷಿತರಾಗಿದ್ದಾರೆ. ಅಮೆರಿಕನರ ಮನಃಪಟಲದಲ್ಲಿ ಅವರ ಬಗ್ಗೆ ಸದ್ಭಾವನೆಯು ಮೂಡಿಬಿಟ್ಟಿದೆ. ಅವರೊಬ್ಬ "ಅಸಾಮಾನ್ಯ ವ್ಯಕ್ತಿ" ಎಂದು ಅಮೆರಿಕನರ ವಾದ. ಏಕೆಂದರೆ, ಅಮೆರಿಕನರು ತಿಳಿದಿರುವಂತೆ, "ಮಹಾರಾಜರು" ಎಂದರೆ, ಕುದುರೆ, ಮೋಟಾರು ಕಾರು ಮತ್ತು ಸ್ತ್ರೀ —ಈ ಮೂರರಲ್ಲಿ ಮಾತ್ರ ಆಸಕ್ತಿತೋರಿಸುವವರು. ಆದರೆ, ಅವರು ಈಗ ಕಂಡ "ಮಹಾರಾಜ"ರು ಇವೆಲ್ಲವುಗಳನ್ನೂ ಬಿಟ್ಟು, ತತ್ವ ಶಾಸ್ತ್ರ, ಸಂಸ್ಕೃತಿ, ಧರ್ಮ ಮೊದಲಾದ ಕ್ಲಿಷ್ಟ ವಿಷಯಗಳ ಮೇಲೆ ಗಂಭೀರ ಮತ್ತು ಅಭ್ಯಾಸಪೂರ್ಣವಾದ ಉಪನ್ಯಾಸಗಳನ್ನಿತ್ತು ಅಮೆರಿಕನ್ನರಿಗೆ ದಂಗುಬಡಿಸಿಬಿಟ್ಟಿದ್ದಾರೆ. ಎಲ್ಲವುಗಳಿಗಿಂತ ಅಮೆರಿಕನರಿಗೆ ಆಶ್ಚರ್ಯ ಹಾಗೂ ಸಂತೋಷವೆನಿಸಿದುದು ಈ ನಡೆವಳಿಕೆಯಿಂದ.

ಈಗ ಲಂಡನ್ನಿನಲ್ಲಿ ಇಳಿದ ಶ್ರೀ ಜಯಚಾಮರಾಜರು ಯುರೋಪದಲ್ಲಿ ಕೆಲವು ದಿನ ತಂಗಲಿರುವರು. ಜರ್ಮನಿಯಲ್ಲಿ ನಡೆಯುವ "ಸಂಗೀತ ಪರ್ವ"ದಲ್ಲಿ ಉಪಸ್ಥಿತರಾಗಲು ಅವರು ಯೋಜಿಸಿರುವರು. ಆಮೇಲೆ ಕೆನಿಯಾಕ್ಕೆ ಅವರು ತೆರಳುವರು. ಕೆನಿಯಾವು ಒಂದು ಆಫ್ರಿಕನ್ ರಾಷ್ಟ್ರ. ಸಾಮಾನ್ಯವಾಗಿ ಕೆನಿಯೊದಂತಹ ಆಫ್ರಿಕನ್ ರಾಷ್ಟ್ರಗಳು ಪರದೇಶೀಯರ ಮನಸ್ಸನ್ನು ಸೆಳೆಯುವುದು ಕಷ್ಟ. ಅದರಲ್ಲಿಯೂ ಅನಧಿಕಾರಿಕ ಸಂದರ್ಶನಗಳು ನಡೆಯುವುದೇ ಇಲ್ಲ ಎನ್ನಬಹುದು. ಈ ಬಗ್ಗೆ ಓರ್ವನು ಪ್ರಶ್ನಿಸಿದಾಗ ಮಾನ್ಯ ರಾಜ್ಯಪಾಲರು ಉತ್ತರಿಸಿದರು: "ನನಗೆ ಆಫ್ರಿಕದ ಘಟನೆಗಳಲ್ಲಿ ಆಸಕ್ತಿ ಇದೆ. ಆ ಭೂಖಂಡದಲ್ಲಿ ನಡೆಯುವ ಪ್ರತಿಯೊಂದು ಘಟನೆಯೂ ಪ್ರಪಂಚದ ಭವಿಷ್ಯದಲ್ಲಿ ಬಹಳಷ್ಟು ಪರಿಣಾಮವನ್ನು ಬೀರುವುದು."

ರಾಜ್ಯಪಾಲ ಶ್ರೀ ಜಯಚಾಮರಾಜರು ತಮ್ಮ ಸಂಚಾರ ಕಾರ್ಯಕ್ರಮಗಳನ್ನು ಮುಕ್ತಾಯಗೊಳಿಸಿ ಜುಲೈ ೧೨ರಂದು ಭಾರತವನ್ನು ತಲಪಲಿರುವರು. ಮಾನ್ಯ ರಾಜ್ಯಪಾಲರ ಸಂದರ್ಶನದಿಂದಾಗಿ ವಿದೇಶಗಳಲ್ಲಿ ಭಾರತದ ಉನ್ನತ ಕುಲದವರ ಬಗ್ಗೆ ಹರಡಿದ್ದ ಅಸಂಭವ ಕಲ್ಪನೆಯು ದೂರವಾಗಿ ಅವರ ಮೇಲೆ ಮತ್ತು ಭಾರತೀಯ ಸಂಸ್ಕೃತಿ ಧರ್ಮ ಮತ್ತು ತತ್ವಶಾಸ್ತ್ರಗಳ ಬಗ್ಗೆ ಸದ್ಭಾವನೆಗಳು ಕಾಣಿಸಿಕೊಳ್ಳುವಂತೆಯು ತೆಂದೂ ಉಭಯ ರಾಷ್ಟ್ರಗಳ ಬೆಳವಣಿಗೆಗೆ ಇದು ಸಹಕಾರಿಯಾಗುವುದೆಂದೂ ಹೇಳಬಹುದು. "ಮಹಾರಾಜ"ರಲ್ಲಿ ಕುದುರೆ ಜೂಜು, ಮೋಟಾರು ಕಾರು ಮತ್ತು ಸ್ತ್ರೀಯರಲ್ಲಿ ಆಸಕ್ತಿ ಇರುವವರು ಮಾತ್ರವಲ್ಲ, ವಿಜ್ಞರಾದವರೂ ಇದ್ದಾರೆ ಎಂದು ಅಮೆರಿಕನರು ತಿಳಿಯಂತಾಯಿತು.

ಭಾರತದ ಕೈಮಗ್ಗಗಳಿಗೆ ನೂತನ ಚೇತನ

ಭಾರತದಲ್ಲಿ ಕೈಮಗ್ಗಗಳ ಜನ್ಮಕಾಲವು ಪ್ರಾಗೈತಿಹಾಸಿಕ ಕಾಲಕ್ಕೆ ಸೇರಿದೆ. ಇತಿಹಾಸಾವಧಿಯಲ್ಲಿ ಹಲವಾರು ಘಟ್ಟಗಳನ್ನಿದು ಕಂಡಿದೆ. ಅದು ಎದುರಿಸಬೇಕಾದವರನ್ನು ಎದುರಿಸಿ ಇದುವರೆಗೂ ತನ್ನ ಅಸ್ತಿತ್ವವನ್ನು ತೋರ್ಪಡಿಸುತ್ತಿರುವುದೇ ಅದರ ಶಕ್ತಿ ಮತ್ತು ಬೆಲೆಗಳನ್ನು ವ್ಯಕ್ತಪಡಿಸುತ್ತದೆ.

ಭಾರತದ ಕೈಮಗ್ಗ ಉದ್ದಿಮೆಯು ಜನತೆಯ ಮತ್ತು ಸರಕಾರದ ಆಸರೆಯನ್ನು ಪಡೆದಿದೆ. ಕಳೆದ ಐದು ವರ್ಷಗಳಲ್ಲಿ ಸಾಲ ಅಥವಾ ಸಹಾಯಧನಗಳ ರೂಪದಲ್ಲಿ ಸರಕಾರವು ೩೫ ಕೋಟಿ ರೂಪಾಯಿಗಳನ್ನು ಈ ಉದ್ದಿಮೆಗಾರರಿಗೆ ಕೊಟ್ಟಿದೆ. ಉತ್ಪಾದನಾ ಭಾಗಗಳನ್ನು ಅಭಿವೃದ್ಧಿಗೊಳಿಸುವುದು, ಮಾರುಕಟ್ಟೆಗಳನ್ನು ಕಂಡುಹಿಡಿಯುವುದು ಮೊದಲಾದ ಕಾರ್ಯಕ್ರಮಗಳಿಂದ ಕೈಮಗ್ಗಗಳ ಉದ್ದಿಮೆಯು ಸದ್ಯದ ಕೊರತೆಯನ್ನು ಹೋಗಲಾಡಿಸಿದೆ ಎನ್ನಬಹುದು.

ರಿಸರ್ವ ಬೇಂಕಿನ ಸಹಾಯದಿಂದ ಇತರ ಲಿಮಿಟೆಡ್ ಬೇಂಕಿಂಗ್ ಕಂಪೆನಿಗಳಿಂದ ಈ ಉದ್ದಿಮೆದಾರರಿಗೆ ಆವಶ್ಯಕ ಸಾಲವನ್ನು ಒದಗಿಸುವ ವ್ಯವಸ್ಥೆಯನ್ನೂ ಕೈಗೊಳ್ಳಲಾಗಿದೆ. ಭಾರತನ ಉದ್ದಗಲಗಳಲ್ಲಿರುವ ೯,೬೦೦ ಸಹಕಾರಿ ಸಂಘಗಳ ಕೈಕೆಳಗೆ ಸುಮಾರು ೧೩ ಲಕ್ಷ ಕೈಮಗ್ಗಗಳಿವೆ. ಇದರಿಂದಾಗಿಯೇ ೧೯೫೧ರಲ್ಲಿ ೧,೩೦೦ ಮಿಲಿಯ ಗಜ ಕೈಮಗ್ಗ ಬಟ್ಟೆಯು ತಯಾರಾಗಿದ್ದರೆ, ೧೯೫೮ರಲ್ಲಿ ಅದು ೧,೫೫೦ ಮಿಲಿಯ ಗಜಗಳಿಗೇರಿದೆ. ಸದ್ಯ ಸುಮಾರು ಏಳು ಮಿಲಿಯ ಜನರು ಕೈಮಗ್ಗಗಳಲ್ಲಿ ನೇಯುತ್ತಿರುವರು.

ಈ ಉದ್ದಿಮೆಯನ್ನು ಭದ್ರವಾದ ಆರ್ಥಿಕ ತಳಹದಿಯಲ್ಲಿ ಮುನ್ನಡೆಸುವ ಬಯಕೆಯಿಂದ ಅಖಿಲ ಭಾರತ ಕೈಮಗ್ಗಗಳ ಮಹಾ ಮಂಡಳವು ರಾಜ್ಯ ಸರಕಾರಗಳ ಸಹಾಯದಿಂದ ಅನೇಕಾನೇಕ ಯೋಜನೆಗಳನ್ನು ರೂಪಿಸಿದೆ. ರಂಗೋಲೆ, ನಿಲಕರಣೆ, ಯಾಂತ್ರಿಕ ಭಾಗಗಳು, ತಾಂತ್ರಿಕ ವಿಧಾನಗಳಲ್ಲಿ ಸುಧಾರಣೆಗಳು ಕೈಮಗ್ಗಕ್ಕೂ ಅದರ ಬಟ್ಟೆಗೂ ತುಂಬ ನೆರವಾಗುವವು.

ಈ ಚಿತ್ರವು ಭಾರತದ ಕೈಮಗ್ಗದ ಉದ್ದಿಮೆಯ ನೈಜ ಚಿತ್ರವನ್ನು ನಮಗೆ ಕಾಣಿಸಲು ಸಮರ್ಥವಾಗಿವೆ ಎನ್ನಬಹುದು.

೧ನೆಯ ಚಿತ್ರ: ರಾಜಸ್ಥಾನದ ಭಿಲಾರ ಸಮಾಜ ವಿಕಾಸ ಕ್ಷೇತ್ರದಲ್ಲಿ ಅಂಬರ ಚರಕಾದಲ್ಲಿ ಆಡುತ್ತಿರುವ ಮಹಿಳೆಯರು.

೨ನೆಯ ಚಿತ್ರ: ಜನ್ಮತಃ ನೇಯ್ಗೆಯವರಾದ ಅಸಾಮದ ಕಾರೊವಂಶದ ಗೃಹಿಣಿಯೊರ್ವಳು ಕೈಮಗ್ಗದಲ್ಲಿ ನೇಯುತ್ತಿದ್ದಾಳೆ.

೩ನೆಯ ಚಿತ್ರ—ಪೆವಿಲಿಯನ್ ಒಂದರಲ್ಲಿಟ್ಟ ಕೈಮಗ್ಗ ಬಟ್ಟೆಯ ಪ್ರದರ್ಶಿಕೆಯೊಂದು.

೪ನೆಯ ಚಿತ್ರ-ರಜಪೂತ ನಾರಿಯೊರ್ವಳು ಮನೆ ಪರದೆಯನ್ನು ಸರಿಮಾಡುತ್ತಾಳೆ, ಈ ಪರದೆಗಳಿಗೆ ಕೈಮಗ್ಗದ ಬಟ್ಟೆಗಳೇ ಉತ್ಕೃಷ್ಟವೆಂದಾಕೆ ಅರಿತಿದ್ದಾಳೆ.

೫ನೆಯ ಚಿತ್ರ—ದಕ್ಷಿಣ ಭಾರತದ ಕೈಮಗ್ಗದ ಚಾಕುಳಿ ಬಟ್ಟೆಯನ್ನುಟ್ಟ ಸ್ತ್ರೀ. ಈ ಬಟ್ಟೆ ತನಗೆ ಸರಿಯಾಗಿ ಒಪ್ಪುತ್ತದೆ ಎಂದಾಕೆ ಸಂತೋಷಪಡುತ್ತಿದ್ದಾಳೆ.

ಸದ್ಭಾವನೆ

(೪ನೇ ಪುಟದಿಂದ)

ಮಾನ್ಯ ರಾಜ್ಯಪಾಲರ ಈ ಸಂದರ್ಶನವು ಅಮೆರಿಕನರೆಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಅಮೆರಿಕನ್ನರು ತಮ್ಮ ಕೃತೀ ಮತ್ತು ಸಾಧನೆಗಳು ಸರಿಯೋ ತಪ್ಪೋ ಎಂಬುದನ್ನು ಅರಸುವುದಕ್ಕೆ ಅಮೆರಿಕನ್ನರು ಬಯಸುತ್ತಾರೆ. ಅಮೆರಿಕನ್ನರ ಈ ತೆರದ ಜೀವನವು ತನ್ನನ್ನು ವಿಶೇಷವಾಗಿ ಆಕರ್ಷಿಸಿದೆ ಎನ್ನುತ್ತಾರೆ ರಾಜ್ಯಪಾಲರು. ಅಮೆರಿಕನ್ನರು ಭಾರತದ ಕಡೆಗೆ ಹೆಚ್ಚಾಗಿ ಆಸಕ್ತಿಯನ್ನು ತೋರಿಸುತ್ತಿರುವರು. ಎರಡೂ ದೇಶಗಳ ನಾಯಕರೇ ಅಲ್ಲದೇ ಉಳಿದ ಪ್ರಜಾಜನರೂ ಪ್ರಯತ್ನಿಸಿ ಒಂದಾಗುವುದಾದರೆ, ಇಂಡೊ—ಅಮೆರಿಕನ್ ಮೈತ್ರೀ ಸಂಘದ ಸ್ಥಾಪನೆಗೆ ಬುನಾದಿಯನ್ನು ಹಾಕುವುದು ಸಾಧ್ಯ ಎಂದವರು ಅಭಿಪ್ರಾಯಪಟ್ಟು, ಈ ಎರಡೂ ದೇಶಗಳ ನಡುವೆ ತತ್ವವೇತ್ತರು, ವಿದ್ಯಾತಜ್ಞರು, ಲೇಖಕರು ಮತ್ತು ಧಾರ್ಮಿಕ ನಾಯಕರು — ಮೊದಲಾದವರ ಮೂಲಕ ಅಧಿಕಾಧಿಕ ಸಾಂಸ್ಕೃತಿಕ ವಿನಿಮಯವನ್ನು ಮಾಡಿಕೊಳ್ಳಬೇಕು ಎಂದವರು ಸೂಚಿಸಿದರು.

ಶ್ರೀ ಜಯಚಾಮರಾಜರನ್ನು ಎದುರ್ಗೊಂಡ ಅಮೆರಿಕನರೆಲ್ಲರೂ ಅವರಿಂದ ಆಕರ್ಷಿತರಾಗಿದ್ದಾರೆ. ಅಮೆರಿಕನರ ಮನಃಪಟಲದಲ್ಲಿ ಅವರ ಬಗ್ಗೆ ಸದ್ಭಾವನೆಯು ಮೂಡಿಬಿಟ್ಟಿದೆ. ಅವರೊಬ್ಬ “ಅಸಾಮಾನ್ಯ ವ್ಯಕ್ತಿ” ಎಂದು ಅಮೆರಿಕನರ ವಾದ. ಏಕೆಂದರೆ, ಅಮೆರಿಕನರು ತಿಳಿದಿರುವಂತೆ, “ಮಹಾರಾಜರು” ಎಂದರೆ, ಕುದುರೆ, ಮೋಟಾರು ಕಾರು ಮತ್ತು ಸ್ತ್ರೀ —ಈ ಮೂರರಲ್ಲಿ ಮಾತ್ರ ಆಸಕ್ತಿ ತೋರಿಸುವವರು. ಆದರೆ, ಅವರು ಈಗ ಕಂಡ “ಮಹಾರಾಜ”ರು ಇವೆಲ್ಲವುಗಳನ್ನೂ ಬಿಟ್ಟು, ತತ್ವ ಶಾಸ್ತ್ರ, ಸಂಸ್ಕೃತಿ, ಧರ್ಮ ಮೊದಲಾದ ಕ್ಲಿಷ್ಟ ವಿಷಯಗಳ ಮೇಲೆ ಗಂಭೀರ ಮತ್ತು ಅಭ್ಯಾಸಪೂರ್ಣವಾದ ಉಪನ್ಯಾಸಗಳನ್ನಿತ್ತು ಅಮೆರಿಕನ್ನರಿಗೆ ದಂಗುಬಡಿಸಿಬಿಟ್ಟಿದ್ದಾರೆ. ಎಲ್ಲವುಗಳಿಗಿಂತ ಅಮೆರಿಕನರಿಗೆ ಆಶ್ಚರ್ಯ ಹಾಗೂ ಸಂತೋಷವೆನಿಸಿದುದು ಈ ನಡೆವಳಿಕೆಯಿಂದ.

ಈಗ ಲಂಡನ್ನಿನಲ್ಲಿ ಇಳಿದ ಶ್ರೀ ಜಯಚಾಮರಾಜರು ಯುರೋಪದಲ್ಲಿ ಕೆಲವು ದಿನ ತಂಗಲಿರುವರು. ಜರ್ಮನಿಯಲ್ಲಿ ನಡೆಯುವ “ಸಂಗೀತ ಪರ್ವ”ದಲ್ಲಿ ಉಪಸ್ಥಿತರಾಗಲು ಅವರು ಯೋಜಿಸಿರುವರು. ಆಮೇಲೆ ಕೆನಿಯಾಕ್ಕೆ ಅವರು ತೆರಳುವರು. ಕೆನಿಯಾವು ಒಂದು ಆಫ್ರಿಕನ್ ರಾಷ್ಟ್ರ. ಸಾಮಾನ್ಯವಾಗಿ ಕೆನಿಯಾದಂತಹ ಆಫ್ರಿಕನ್ ರಾಷ್ಟ್ರಗಳು ಪರದೇಶೀಯರ ಮನಸ್ಸನ್ನು ಸೆಳೆಯುವುದು ಕಷ್ಟ. ಆದರಲ್ಲಿಯೂ ಅನಧಿಕಾರಿಕ ಸಂದರ್ಶನಗಳು ನಡೆಯುವುದೇ ಇಲ್ಲ ಎನ್ನಬಹುದು. ಈ ಬಗ್ಗೆ ಓರ್ವನು ಪ್ರಶ್ನಿಸಿದಾಗ ಮಾನ್ಯ ರಾಜ್ಯಪಾಲರು ಉತ್ತರಿಸಿದರು: “ನನಗೆ ಆಫ್ರಿಕದ ಘಟನೆಗಳಲ್ಲಿ ಆಸಕ್ತಿ ಇದೆ. ಆ ಭೂಖಂಡದಲ್ಲಿ ನಡೆಯುವ ಪ್ರತಿಯೊಂದು ಘಟನೆಯೂ ಪ್ರಪಂಚದ ಭವಿಷ್ಯದಲ್ಲಿ ಬಹಳಷ್ಟು ಪರಿಣಾಮವನ್ನು ಬೀರುವುದು.”

ರಾಜ್ಯಪಾಲ ಶ್ರೀ ಜಯಚಾಮರಾಜರು ತಮ್ಮ ಸಂಚಾರ ಕಾರ್ಯಕ್ರಮಗಳನ್ನು ಮುಕ್ತಾಯಗೊಳಿಸಿ ಜುಲೈ ೧೨ರಂದು ಭಾರತವನ್ನು ತಲಪಲಿರುವರು. ಮಾನ್ಯ ರಾಜ್ಯಪಾಲರ ಸಂದರ್ಶನದಿಂದಾಗಿ ವಿದೇಶಗಳಲ್ಲಿ ಭಾರತದ ಉನ್ನತ ಕುಲದವರ ಬಗ್ಗೆ ಹರಡಿದ್ದ ಅಸಾಧು ಕಲ್ಪನೆಯು ದೂರವಾಗಿ ಅವರ ಮೇಲೆ ಮತ್ತು ಭಾರತೀಯ ಸಂಸ್ಕೃತಿ ಧರ್ಮ ಮತ್ತು ತತ್ವಶಾಸ್ತ್ರಗಳ ಬಗ್ಗೆ ಸದ್ಭಾವನೆಗಳು ಕಾಣಿಸಿಕೊಳ್ಳುವಂತೆಯೂ ತೆಂದೂ ಉಭಯ ರಾಷ್ಟ್ರಗಳ ಬೆಳವಣಿಗೆಗೆ ಇದು ಸಹಕಾರಿಯಾಗುವುದೆಂದೂ ಹೇಳಬಹುದು. “ಮಹಾರಾಜ”ರಲ್ಲಿ ಕುದುರೆ ಜೂಜು, ಮೋಟಾರು ಕಾರು ಮತ್ತು ಸ್ತ್ರೀಯರಲ್ಲಿ ಆಸಕ್ತಿ ಇರುವದು ಮಾತ್ರವಲ್ಲ, ವಿಜ್ಞರಾದವರೂ ಇದ್ದಾರೆ ಎಂದು ಅಮೆರಿಕನರು ತಿಳಿವಂತಾಯಿತು

ಭಾರತದ ಕೈಮಗ್ಗಗಳಿಗೆ ನೂತನ ಚೇತನ

ಭಾರತದಲ್ಲಿ ಕೈಮಗ್ಗಗಳ ಜನ್ಮಕಾಲವು ಪ್ರಾಗೈತಿಹಾಸಿಕ ಕಾಲಕ್ಕೆ ಸೇರಿದೆ. ಇತಿಹಾಸಾವಧಿಯಲ್ಲಿ ಹಲವಾರು ಘಟ್ಟಗಳನ್ನಿದು ಕಂಡಿದೆ. ಅದು ಎದುರಿಸಬೇಕಾದವರನ್ನು ಎದುರಿಸಿ ಇದುವರೆಗೂ ತನ್ನ ಅಸ್ತಿತ್ವವನ್ನು ತೋರ್ಪಡಿಸುತ್ತಿರುವುದೇ ಅದರ ಶಕ್ತಿ ಮತ್ತು ಬೆಲೆಗಳನ್ನು ವ್ಯಕ್ತಪಡಿಸುತ್ತದೆ.

ಭಾರತದ ಕೈಮಗ್ಗ ಉದ್ದಿಮೆಯ ಜನತೆಯ ಮತ್ತು ಸರಕಾರದ ಸಹಾಯವನ್ನು ಪಡೆದಿದೆ. ಕಳೆದ ಐದು ವರ್ಷಗಳಲ್ಲಿ ಸಾಲ ಅಥವಾ ಸಹಾಯಧನಗಳ ರೂಪದಲ್ಲಿ ಸರಕಾರವು ೨೫ ಕೋಟಿ ರೂಪಾಯಿಗಳನ್ನು ಈ ಉದ್ದಿಮೆಗಾರರಿಗೆ ಕೊಟ್ಟಿದೆ. ಉತ್ಪಾದನಾ ಭಾಗಗಳನ್ನು ಅಭಿವೃದ್ಧಿಗೊಳಿಸುವುದು, ಮಾರುಕಟ್ಟೆಗಳನ್ನು ಕಂಡುಹಿಡಿಯುವುದು ಮೊದಲಾದ ಕಾರ್ಯಕ್ರಮಗಳಿಂದ ಕೈಮಗ್ಗಗಳ ಉದ್ದಿಮೆಯು ಸದ್ಯದ ಕೊರತೆಯನ್ನು ಹೋಗಲಾಡಿಸಿದೆ ಎನ್ನಬಹುದು.

ರಿಸರ್ವ ಬೇಂಕಿನ ಸಹಾಯದಿಂದ ಇತರ ಲಿಮಿಟೆಡ್ ಬೇಂಕಿಂಗ್ ಕಂಪೆನಿಗಳಿಂದ ಈ ಉದ್ದಿಮೆದಾರರಿಗೆ ಆವಶ್ಯಕ ಸಾಲವನ್ನು ಒದಗಿಸುವ ವ್ಯವಸ್ಥೆಯನ್ನೂ ಕೈಗೊಳ್ಳಲಾಗಿದೆ. ಭಾರತದ ಉದ್ದಗಲಗಳಲ್ಲಿರುವ ೯,೬೦೦ ಸಹಕಾರಿ ಸಂಘಗಳ ಕೈಕೆಳಗೆ ಸುಮಾರು ೧೨ ಲಕ್ಷ ಕೈಮಗ್ಗಗಳಿವೆ. ಇದರಿಂದಾಗಿಯೇ ೧೯೫೧ರಲ್ಲಿ ೧,೩೦೦ ಮಿಲಿಯ ಗಜ ಕೈಮಗ್ಗ ಬಟ್ಟೆಯು ತಯಾರಾಗಿದ್ದರೆ, ೧೯೫೭ರಲ್ಲಿ ಅದು ೧,೭೫೦ ಮಿಲಿಯ ಗಜಗಳಿಗೇರಿದೆ. ಸದ್ಯ ಸುಮಾರು ಏಳು ಮಿಲಿಯ ಜನರು ಕೈಮಗ್ಗಗಳಲ್ಲಿ ನೇಯುತ್ತಿರುವರು.

ಈ ಉದ್ದಿಮೆಯನ್ನು ಭದ್ರವಾದ ಆರ್ಥಿಕ ತಳಹದಿಯಲ್ಲಿ ಮುನ್ನಡೆಸುವ ಬಯಕೆಯಿಂದ ಅಖಿಲ ಭಾರತ ಕೈಮಗ್ಗಗಳ ಮಹಾ ಮಂಡಳಿವು ರಾಜ್ಯ ಸರಕಾರಗಳ ಸಹಾಯದಿಂದ ಅನೇಕಾನೇಕ ಯೋಜನೆಗಳನ್ನು ರೂಪಿಸಿವೆ. ರಂಗೋಲಿ, ನಿಲಕರಣೆ, ಯಾಂತ್ರಿಕ ಭಾಗಗಳು, ತಾಂತ್ರಿಕ ವಿಧಾನಗಳಲ್ಲಿ ಸುಧಾರಣೆಗಳು ಕೈಮಗ್ಗಕ್ಕೂ ಅದರ ಬಟ್ಟೆಗೂ ತುಂಬ ನೆರವಾಗುವುವು.

ಈ ಚಿತ್ರವು ಭಾರತದ ಕೈಮಗ್ಗದ ಉದ್ದಿಮೆಯ ನೈಜ ಚಿತ್ರವನ್ನು ನಮಗೆ ಕಾಣಿಸಲು ಸಮರ್ಥವಾಗಿವೆ ಎನ್ನಬಹುದು.

೧ನೆಯ ಚಿತ್ರ: ರಾಜಸ್ಥಾನದ ಭಿಲಾರ ಸಮಾಜ ವಿಕಾಸ ಕ್ಷೇತ್ರದಲ್ಲಿ ಅಂಬರ ಚರಕಾದಲ್ಲಿ ಆಡುತ್ತಿರುವ ಮಹಿಳೆಯರು.

೨ನೆಯ ಚಿತ್ರ: ಜನ್ಮತಃ ನೇಯ್ಗೆಯವರಾದ ಅಸಾಮದ ಕಾರೊವಂಶದ ಗೃಹಿಣಿಯೊರ್ವಳು ಕೈಮಗ್ಗದಲ್ಲಿ ನೇಯುತ್ತಿದ್ದಾಳೆ.

೩ನೆಯ ಚಿತ್ರ— ಪೆವಿಲಿಯನ್ ಒಂದರಲ್ಲಿಟ್ಟ ಕೈಮಗ್ಗ ಬಟ್ಟೆಯ ಪ್ರದರ್ಶಿಕೆಯೊಂದು.

೪ನೆಯ ಚಿತ್ರ-ರಜಪೂತ ನಾರಿಯೋರ್ವಳು ಮನೆ ಪರದೆಯನ್ನು ಸರಿಮಾಡುತ್ತಾಳೆ, ಈ ಪರದೆಗಳಿಗೆ ಕೈಮಗ್ಗದ ಬಟ್ಟೆಗಳೇ ಉತ್ಕೃಷ್ಟವೆಂದಾಕೆ ಅರಿತಿದ್ದಾಳೆ.

೫ನೆಯ ಚಿತ್ರ —ದಕ್ಷಿಣ ಭಾರತದ ಕೈಮಗ್ಗದ ಚಾಕುಳಿ ಬಟ್ಟೆಯನ್ನುಟ್ಟ ಸ್ತ್ರೀ. ಈ ಬಟ್ಟೆ ತನಗೆ ಸರಿಯಾಗಿ ಒಪ್ಪುತ್ತದೆ ಎಂದಾಕೆ ಸಂತೋಷಪಡುತ್ತಿದ್ದಾಳೆ.

ಅನುಭವಾಮೃತ

ಕಳ್ಳರನ್ನು ಹಿಡಿದ ಮಹಾ ಸಾಹಸ!

ಜನತೆಯ ಅಂಬೋಣದಿಂದಲೇ ನಾವು ಹೆದರಿ ಹೋಗಿದ್ದೆವು.

ಅಂದು ಆದಿತ್ಯವಾರ; ಶಾಲೆಗೆ ರಜೆಯೆಂದೊಡನೆ ಸುಮ್ಮಗೆ ಹೋಟೆಲಿನಲ್ಲಿ ಕುಳ್ಳಿರುವುದು ನಮ್ಮಿಬ್ಬರಿಗೂ ಸೇರದು. ಮಧ್ಯಾಹ್ನ ಮೂರುಗಂಟೆಗೇ ಅಂದಿನ ನಮ್ಮ ವಿಹಾರಕ್ಕೆ ಯೋಗ್ಯವಾಗಬಹುದಾದ ಸ್ಥಳಗಳ ಆಯ್ಕೆ ನಡೆಯಿತು. ಎಲ್ಲವೂ ನಿರಾಕರಿಸಲ್ಪಟ್ಟ ನಂತರ ಕೊನೆಯದಾಗಿ ನಾನೊಂದು ಸೂಚಿಸಿದೆ. ಅದು ತಿರೂರಿನ ಶಾಂತಾಶ್ರಮ. ಅದಕ್ಕೆ ಸುಬ್ರಾಯನ ಅನುಮೋದನೆಯೂ ದೊರೆಯಿತು. ಏನೇನೋ ಕೇಳಿ ನಮ್ಮ ಹೋಟೆಲಿನ ಕಾರಂತರಿಂದ ಸಂಜೆಯ ಕಾಫಿ ಗಿಟ್ಟಿಸಿ ಹೊರಡುವುದೆಂದರೆ ಸಾಧಾರಣ ಐದು ಗಂಟೆಯೂ ಆಯಿತು; ಇನ್ನು ಸೂರ್ಯಾಸ್ತಮಯಕ್ಕೆ ಹೆಚ್ಚು ಹೊತ್ತಿಲ್ಲವೆಂದು ಬೇಗಬೇಗ ಹೆಜ್ಜೆ ಹಾಕತೊಡಗಿದೆವು.

ಶಾಂತಾಶ್ರಮವಿರುವುದು ಬೈಂದೂರಿನಿಂದ ಎರಡೂವರೆ ಮೈಲು ದೂರದಲ್ಲಿ. ಹಿಂದೆ. ಈಗ ಆ ಆಶ್ರಮವಿದ್ದಲ್ಲಿ ಭಯಂಕರ ಕಾಡು ಬೆಳೆದಿತ್ತು. ಒಬ್ಬ ಸಾಧುಗಳು ಆ ಸ್ಥಳವನ್ನು ಹುಡುಕಿ ಅಲ್ಲಿಯ ಕಾಡನ್ನು ಕಡಿದು ನಾಡನ್ನಾಗಿ ಪರಿವರ್ತಿಸಿದರು. ಅದು 'ವೆಲ್ಲೋಡಿ ಪುರ' ವೆಂದೂ ಹೆಸರುಗೊಂಡಿತ್ತು. ಆದರೆ ಹತ್ತು ವರ್ಷಗಳ ಹಿಂದೆ ಆ ಸಾಧುಗಳು ಎಲ್ಲಿಗೋ ಹೋದವರು ಮರಳಲೇ ಇಲ್ಲ. ಅದರನಂತರ ಆ ಆಶ್ರಮವು ಹೀನಾವಸ್ಥೆಗಿಳಿಯಿತು. ಒಮ್ಮೆ ಅಲ್ಲಿ ಕಳ್ಳರು ರಾತ್ರಿಯ ಹೊತ್ತು ಅಡಗಿಕೊಂಡಿದ್ದು, ದಾರಿಹೋಕರನ್ನು ಅಟಕಾಯಿಸಿ, ಹೆದರಿಸಿ ಅವರನ್ನು ದೋಚುತ್ತಿದ್ದರಂತೆ. ಅದರನಂತರ ಆ ದಾರಿಯಾಗಿ ಕತ್ತಲೆಯಾದ ಮೇಲೆ ಬಸ್ಸೊಂದಲ್ಲದೇ ಜನರು ಕಾಲ್ನಡಿಗೆಯಾಗಿ ನಡೆಯುತ್ತಿದ್ದಿಲ್ಲ. ಅದು ಕಳ್ಳರ ವಾಸಸ್ಥಾನವಾಗಿಯೇ ಉಳಿಯಿತೆಂದು ಜನರು ನಂಬಿದರು. ಆ ಕಳ್ಳರನ್ನು ಹಿಡಿಯಲು ಊರಜನರೂ, ಪೋಲೀಸರೂ ಮಾಡಿದ ಪ್ರಯತ್ನ ನಿಷ್ಫಲವಾಗಿಯೇ ಉಳಿದಿತ್ತು.

ಅಲ್ಲಿ ಸಂಜೆ ಏಳುಗಂಟೆಯ ತನಕ ಕಳ್ಳರ ಸುಳಿವೇ ಇರುವುದಿಲ್ಲ. ಆದುದರಿಂದ, ಜಡೂ ಸುಬ್ರಾಯನ ಧೈರ್ಯದ ಮೇಲೆ ನಾನು ಹೊರಟ್ಟಿದ್ದೆ. ಒತ್ತಿನೆಣೆ ಬೆಟ್ಟವನ್ನೇರಿ ಕೆಳಗಿಳಿದು ಹಾಗೇ ಸ್ವಲ್ಪ ಮುನ್ನಡೆದಾಗ, ನಿಂತೂ ನಿಲ್ಲಲಾಗದ ಸ್ಥಿತಿಯಲ್ಲಿ ಜೋಳಿಗೆ ತನ್ನ ಮಾಡಿನ ಹಂಚುಗಳನ್ನೆಲ್ಲಾ ಹತಿರದ ಊರ ಮಹನೀಯರಿಗೆ ತಲೆಯೆತ್ತಿ ದಾನಮಾಡಿದ ಶಾಂತಾಶ್ರಮವು ಆರುಗಂಟೆಯ ಕೆಂಪು ಬಿಸಿಲಿಗೆ ಹೊಳೆಯುತ್ತ ನಿಂತಿರುವುದು ಕಾಣುತ್ತಿತ್ತು. ಇನ್ನೇನು, ಆಶ್ರಮವು ನಮ್ಮಿಂದ ಒಂದು ಫರ್ಲಾಂಗು ದೂರದಲ್ಲಿದೆಯೆನ್ನುವಾಗ ನನ್ನ ಮಿತ್ರ-ಸುಬ್ರಾಯ ನನ್ನನ್ನು ತಡೆದು ನಿಲ್ಲಿಸಿ ತಾನೂ ನಿಂತು ಆಶ್ರಮದತ್ತ ಸೂಕ್ಷ್ಮವಾಗಿ ನೋಡತೊಡಗಿದ. ನಾನು ಏನೂ ತಿಳಿಯದೇ ಆತನ ಮುಖವನ್ನೇ ನೋಡುತ್ತಿದ್ದೆ. ಆತನ ಮುಖದಲ್ಲಿ ಹೆದರಿಕೆಯ ಛಾಯೆ ಎದ್ದುತೋರುತ್ತಿತ್ತು. ಸುಬ್ರಾಯ ನನ್ನತ್ತ ತಿರುಗಿ ಆಶ್ರಮದತ್ತ ಕೈತೋರಿಸಿದ. ನಾನು ನೋಡಿದೆ: ಆಶ್ರಮದ ಮುಂಬದಿಯ ಎರಡು ಕಿಟಕಿಗಳಿಂದ ಕಪ್ಪಗಿದ್ದ ಮನುಷ್ಯರ ಮುಖ ಮತ್ತು ಭುಜಗಳು ಮಾತ್ರ ಕಂಡುಬಂದುವು. ನನಗೆ ಒಮ್ಮೆಲೇ ಹೆದರಿಕೆಯಾಗಿ ಎದೆ ಹೊಡೆದುಕೊಳ್ಳಹತ್ತಿತು. ಊರಜನರು ವರ್ಣಿಸಿದಂತೆ ಅವರ ಮುಖಗಳು ಮಸಿಯಂತೆಯೇ ಕಪ್ಪಗಾಗಿದ್ದ ಕಾರಣ ಅವರು ಕಳ್ಳರೆನ್ನುವುದರಲ್ಲಿ ಸಂಶಯವೇನೂ ಉಳಿಯಲಿಲ್ಲ. ನಾವು ನೋಡುತ್ತಿದ್ದಂತೆಯೇ ಅವರು ಒಂದೇ ಕಿಟಿಕಿಯ ಹತ್ತಿರ ನಿಂತು ಏನೇನೋ ಮಾತನಾಡತೊಡಗಿದರು. ಇನ್ನಲ್ಲಿ ನಿಂತರೆ ಕೆಲಸ ಕೆಡುವುದೆಂದು ನಾವಿಬ್ಬರೂ ಅಲ್ಲಿಂದ ಕಾಲ್ತೆಗೆದೆವು. ನಾನು ಹಿಂತಿರುಗಿ ಸಹ ನೋಡದೇ ಒಂದೇ ಸಮನೆ ಉಸಿರುಕಟ್ಟಿ ಓಟಕಿತ್ತೆ. ಸುಬ್ರಾಯ ಮಾತ್ರ ನಡುನಡುವೆ ಹಿಂತಿರುಗಿ ನೋಡುತ್ತಿದ್ದ. ಅಂತೂ, ಓಡಿ ಓಡಿ, ಗಂಟೆ ಏಳರ ಸುಮಾರಿಗೆ ಬೈಂದೂರಿಗೆ ಬಂದು ಮುಟ್ಟಿದೆವು. ಇನ್ನು ನಮ್ಮ ಜೀವವುಳಿಯಿತೆಂದುಕೊಂಡು ಹೋಟೆಲ್ ಹೊಕ್ಕೆವು. ರಜಾದಿನಗಳಲ್ಲಿ ಎಂಟೂವರೆಯ ಕಡಿಮೆ ಹೋಟೆಲಿಗೆಬಾರದ ನಾವು ಅಷ್ಟುಬೇಗ ಬಂದುದರಿಂದಲೂ, ನಾವು ಬೆದುತ್ತಿರುವ ಮೇಲುಸಿರಿನಿಂದಲೂ, ಏನೋ ಘಟನೆ ನಡೆಯಿತೆಂಬುದನ್ನು ಸೂಕ್ಷ್ಮದರ್ಶಿ ಕಾರಂತರು ಅರಿತು ನಮ್ಮನ್ನು ಕೇಳಿದರು. ನಾವು ಪ್ರಯಾಸದಿಂದ ಉಸಿರು ಹತ್ತಿಕ್ಕಿ ನಾವು ಕಂಡ ಚೋರರ ಕಥೆ ಹೇಳಿದೆವು. ಕಥೆ ಕೇಳಿದ ಕಾರಂತರಿಗೆ ಸ್ಫೂರ್ತಿ ಬಂದಂತಾಯಿತು. ಕೂಡಲೇ ಅವರು ಅಚೀಚೆ ಓಡಿ ಹತ್ತು ಜನರನ್ನು ಒಟ್ಟುಗೂಡಿಸಿ ಕರೆತಂದರು. ಅವರೆಲ್ಲರೂ ಕೈಯಲ್ಲಿ ವಿಧವಿಧವ ಆಯುಧಗಳನ್ನು ಧರಿಸಿದ್ದರು. ನಮ್ಮ ಕಾರಂತರು ಒಂದು ದೊಣ್ಣೆಯನ್ನು ಹೆಗಲಿಗೇರಿಸಿ, ಒಂದು ಕೈಯಲ್ಲಿ ಲಾಟೀನು ಹಿಡಿದು, ಗುಂಪಿನ ನಾಯಕತ್ವ ವಹಿಸಿ ಮುನ್ನಡೆದರು. ಅವರೊಡನೆ ನನ್ನನ್ನೂ ಎಳೆಯುತ್ತಾ ಸುಬ್ರಾಯನೂ ಹೊರಟ. ನಾನು ಬರುವುದಿಲ್ಲವೆಂದರೂ ಕೇಳಲಿಲ್ಲ. ಕೊನೆಗೆ ಹೆದರಿ ಹೆದರಿ ಗುಂಪಿನ ಮಧ್ಯದಲ್ಲಿ ನಾನು ಸಾಗಹತ್ತಿದೆ. ನಮ್ಮ ಗುಂಪು ಚೋರಗ್ರಹಣದ ಸಮುದ್ದೇಶವನ್ನು ಮುಂದಿಟ್ಟುಕೊಂಡು ಶಾಂತಾಶ್ರಮಕ್ಕಭಿಮುಖವಾಯಿತು.

ಹಲವಾರು ದಿನಗಳಿಂದ ಅವರನ್ನು ಹಿಡಿಯಲು ಕೀರ್ತಿಗಳಿಸಬೇಕೆಂದುಕೊಂಡಿದ್ದ ಈ ಜನರಿಗೆ ಇಂದು ಹೊಸ ಹುರುಪು ಬಂದಂತಿತ್ತು; ಅಷ್ಟು ಹುರುಪು! ತಾವು ಹಿಂದೆಲ್ಲೋ ಗೈದ ಸಾಹಸ ಕೃತ್ಯಗಳ ವರ್ಣನೆ ಮಾಡುತ್ತಾ ಕಾರಂತರು ಮುನ್ನಡೆಯುತ್ತಿದ್ದರು. ಉಳಿದವರು ಕಳ್ಳರು ತಮ್ಮ ಕೈಗೆ ಸಿಕ್ಕಿದೊಡನೆಯೇ ತಾವು ಮಾಡುವುದೇನೆಂಬುದನ್ನು ವಿವರಿಸುತ್ತಿದ್ದರು. ಆದರೆ ಕಾರಂತರು ಕಳ್ಳರಿಗೆ ಸಿಕ್ಷೆ ಒಪ್ಪಿ ಹೊಡೆಯಬಾರದೆಂದೂ, ಅವರು ತಮ್ಮ ಕೈಗೆ ಸಿಗುವ ಮಟ್ಟಿಗೆ ಸ್ವಲ್ಪ ಪೆಟ್ಟುಮಾತ್ರ, ಕೊನೆಗೆ ಎಲ್ಲರೂ ಕೂಡಿ ಹಿಡಿದು, ಪೋಲೀಸರಿಗೊಪ್ಪಿಸಿ, ತಮ್ಮ ಹೆಸರು ಸೇರಿಸಿಕೊಳ್ಳಬೇಕೆಂದು ಆವರು ತಮ್ಮ ಅನುಯಾಯಿಗಳಿಗೆ ಆಜ್ಞೆಯಿತ್ತರು. ವಿಷಯಕ್ಕೆ ಉಪ್ಪುಖಾರ ಹಚ್ಚಿ ಪತ್ರಿಕೆಗೆ ಕೊಡುವ ಕೆಲಸ ನಮ್ಮಿರ್ವರ ಪಾಲಿಗೆ ಬಿತ್ತು!

ಆಶ್ರಮ ಹತ್ತಿರ ಬಂತೆಂದೊಡನೇ ಕಾರಂತರು ಲಾಟೀನಿನ ದೀಪನಂದಿಸಿ, ಸದ್ದು ಮಾಡದೇ ನಡೆಯ ತಕ್ಕುದೆಂದು ಕಟ್ಟಪ್ಪಣೆಯಿತ್ತರು. ನಾನು ಮೊದಲಿನಂತೆ ಜನರ ಮಧ್ಯದಲ್ಲಿ ಅಚೀಚೆ ನೋಡಿ ಹೆಜ್ಜೆಯಿಡುತ್ತಿದ್ದೆ. ಆಶ್ರಮಕ್ಕಿರುವುದು ಒಂದೇ ಬಾಗಿಲಾಗಿರುವುದರಿಂದ ಎಲ್ಲರೂ ಒಮ್ಮೆಲೇ ಹೊಕ್ಕು ಕಳ್ಳರನ್ನು ಮುತ್ತುವುದೆಂದು ಸರ್ವಾನುಮತದಿಂದ ಮುಂಜೂರಾಯಿತು. ಎಲ್ಲರೂ ಉಸಿರು ಬಿಗಿ ಹಿಡಿದು ಆಶ್ರಮದ ಗೋಡೆಗೆ ತಾಗಿಕೊಂಡು ನಿಂತರು. ಒಳಗೇನೋ ಚಿಕ್ಕ ಸದ್ದಾಯಿತು. ಕಳ್ಳರಂತೂ ಒಳಗಿರುವರೆಂಬುದು ಖಾತ್ರಿಯಾಯಿತು. ಇನ್ನು ಒಳ ಹೊಕ್ಕುವುದೊಂದೇ ಉಳಿದುದು. ಇದ್ದವರಲ್ಲಿ ಅತೀ ಧೈರ್ಯದಂದರಾದ, ನಮ್ಮ ಅನ್ನದಾತ ಕಾರಂತರು ಒಮ್ಮೆಲೇ ಒಳ ನುಗ್ಗಿದರು. ಅವರೊಡನೆ ನಾವೆಲ್ಲರೂ ಹೊಕ್ಕೆವು. ಆಗ ಕಳ್ಳರು ತಬ್ಬಿಬ್ಬಾಗಿ ಅತ್ತಿತ್ತ ಓಡತೊಡಗಿದರು. ಅಷ್ಟರಲ್ಲಿಯೇ ಕಾರಂತರ ದೊಣ್ಣೆ ಕಳ್ಳನೊಬ್ಬನ ಮಂಡೆಗೆ ಬಿತ್ತು. ಅವನು ಚೀರುತ್ತಾ ಕೆಳಗುರುಳಿದ. ಇನ್ನೊಬ್ಬ ಅತ್ತಿತ್ತ ಹಾರಿ ನಮ್ಮವರ ಮಧ್ಯದಲ್ಲಿ ನುಸುಳಿ ಹೊರಹಾರಿ ಓಡಿಬಿಟ್ಟ. ಆತನನ್ನು ಬೆನ್ನಟ್ಟುವುದು ಆ ಕಾಡಿನಲ್ಲಿ ಅಸಾಧ್ಯವಾದುದರಿಂದ ಸಿಕ್ಕಿದವನನ್ನು ಹೊರಗೆ ತೆಗೆದುಕೊಂಡರು. ನಾನು ಹೆದರಿ ಎಲ್ಲರಿಗೂ ಹಿಂದೆ ನಿಂತಿದ್ದೆ. ಮತ್ತೆ ಯಾರಾದರೂ ಕಳ್ಳರು ಒಳಗೆ ಉಳಿದಿರುವರೋ ನೋಡಲು ಕಾರಂತರು ಬೆಂಕಿಕಡ್ಡಿ ಗೀರಿದರು. ಆಗ ಉಂಟಾದ ಚಿಕ್ಕ ಬೆಳಕಿನಲ್ಲಿ ನರಳುತ್ತಾ ಬಿದ್ದಿದ್ದ ಕಳ್ಳನೆಡೆಗೆ ನೋಡಿ ಎಲ್ಲರೂ ಗಾಬರಿಗೊಂಡರು. ಕಾರಂತರು ಲಾಟೀನು ಹಚ್ಚಿ ಸರಿಯಾಗಿ ನೋಡಿದರು. ಒಮ್ಮೆಲೇ ಎಲ್ಲರೂ ನಗ ಹತ್ತಿದರು, ನನಗೇನೂ ಅರ್ಥವಾಗಲಿಲ್ಲ. ಜನರನ್ನು ಸ್ವಲ್ಪ ಬದಿಗೊತ್ತಿಕೊಂಡು ಮುಂದೆ ಬಂದು ನೋಡಿದೆ. ನನಗೂ ಆಶ್ಚರ್ಯವಾಯಿತು, ಅಲ್ಲಿ ಬಿದ್ದಿದ್ದುದು ಮನುಷ್ಯ ಶರೀರವಾಗಿರಲಿಲ್ಲ; ಅದೊಂದು ಕಪ್ಪು ಮುಸುಡಿನ ಮಂಗ! ನಾನೂ ನಕ್ಕೆ. ನಾವೂ, ಸುಬ್ರಾ ಹೊಟ್ಟೆಹುಣ್ಣಾಗುವಂತೆ ನಕ್ಕೆವು. ಕಾರಂತರಿಗೆ ನಮ್ಮ ಮೇಲೇ ಸಿಟ್ಟು ಬಂದಿತು. ಕೊನೆಗೆ ಅವರೂ ನಗ ಹತ್ತಿದರು.

ಕಾರಂತರೊಂದಿಗೆ ಎಲ್ಲರೂ ನಗುತ್ತಲೇ ಊರು ಸೇರಿದೆವು. ಕಾರಂತರು ಹಿಂತಿರುಗಿ ಬರುವಾಗಲೂ, ತಾವೂ ಆ ಕಳ್ಳನನ್ನು ಹೊಡೆಯಲು ಉಪಯೋಗಿಸಿದ ಚಮತ್ಕಾರದ ರೀತಿಯಾಗಿಯೇ ಮಾತನಾಡುತ್ತಿದ್ದರು. ಕಳ್ಳ ಅಡಗಿಕೊಂಡಿದ್ದಾನೆಂದು ಭಾವಿಸಿ ಅವರು ಸಿಟ್ಟು ಹೊಡೆದಿದ್ದರಂತೆ.

ಹಲವಾರು ದಿನಗಳ ವರೆಗೆ ಕಾರಂತರು ಸುಮ್ಮನೆ ಕುಳಿತಲ್ಲಿಯೇ ಏನನ್ನೋ ನೆನೆದು ನಗುತ್ತಿದ್ದರು ಅವರಿಗೆ ಈ 'ಚೋರಗ್ರಹಣ'ದ ನೆನಪಾಗುತಿತ್ತೋ ಏನೋ! ಕೊನೆಗೂ ನಮ್ಮ ಪಾಲಿಗೆ ಬಿದ್ದ ಕೆಲಸವನ್ನು 'ನವಯುಗ'ದ ಮೂಲಕ ನಾನು ಪೂರೈಸಿಗೊಳಿಸಿಯೇಬಿಟ್ಟೆ.

"ಜನ್ನ", ಮರವಂತೆ.

ಜಿನೇವ ಸಮ್ಮೇಳನದಲ್ಲಿ ಭಾಗವಹಿಸಿದ ಬ್ರಿಟಿಷ ವಿದೇಶ ಮಂತ್ರಿ ಶ್ರೀ ಸೆಲ್ವಿನ್ ಲ್ಯಾಡ್

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4⅜%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ, ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929



ಕುಮಾರಿ ಚಿತ್ರಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

NAVAYUGA
REGD. NO. M. 3619

UDIPI, THURSDAY
25-6-1959

LICENSE NO. 31
Licensed to Post without Prepayment

ತೃತೀಯ ಯೋಜನೆ

ಉತ್ಸಾಹ ಆಶೆ ಆಕಾಂಕ್ಷೆಗಳಿಂದ ಕೆಲಸ ನಡೆಯದು

ಸಂಪನ್ಮೂಲಗಳನ್ನು ಕಂಡುಕೊಂಡು ಯೋಜನೆಯ ರೂಪಗಳನ್ನು ರೂಪಿಸಬೇಕು.

ದ್ವಿತೀಯ ಪಂಚವಾರ್ಷಿಕ ಯೋಜನೆ ಇದೀಗ ನಾಲ್ಕನೆಯ ವರ್ಷದಲ್ಲಿರುವಾಗ ಸರ್ಕಾರ ಮತ್ತು ಜನತೆ ಅದರ ಬಗ್ಗೆ ತೀವ್ರವಾಗಿ ಯೋಚಿಸ ತೊಡಗಿದ್ದಾರೆ. ಹೀಗೆ ಪರ್ಯಾಲೋಚಿಸುವಾಗ ಅದರ ಪರಿಣಾಮವಾಗಿ ಒಂದು ಸ್ಪಷ್ಟವಾದ, ನಿಖರವಾದ ಹಾಗೂ ವಿಚಾರಗೊಂದಲಕ್ಕವಕಾಶವಿಲ್ಲದ ನಿರ್ದಿಷ್ಟ ಧೋರಣೆ ರೂಪುಗೊಳ್ಳಬೇಕಾಗುವುದು ಅತ್ಯಾವಶ್ಯಕ. ಆ ಧೋರಣೆ ಮೂಲತಃ ವಾಸ್ತವವಾದಿಯಾಗಬೇಕು. ಮೊದಲನೆ ಎರಡು ಯೋಜನೆಗಳ ಮಟ್ಟಿಗೆ ಹೇಳುವುದಾದರೆ ವಾಸ್ತವಾಂಶಗಳನ್ನು ಕುರಿತು ಸಿದ್ಧಾಂತದ ಬೆನ್ನು ಹತ್ತುವ ಒಂದು ಮಹಾಪರಾಧ ನಡೆದು ಹೋಯಿತು. ಅಂತೆಯೇ ನಾನು ಸಿದ್ಧಾಂತದ ಪ್ರಶ್ನೆಯನ್ನು ಬದಿಗಿಟ್ಟು ಕೇವಲ ವಾಸ್ತವಾಂಶಗಳನ್ನು ಆಧಾರವಾಗಿಟ್ಟುಕೊಂಡು ಪ್ರಯೋಗ ಸಾಧ್ಯವಾಗುವಂತಹ ಒಂದು ವಾಸ್ತವವಾದಿ ದೃಷ್ಟಿಯಿಂದ ಈ ಕೆಳಗಿನ ಅಭಿಪ್ರಾಯಗಳನ್ನು ಮುಂದಿಡ ಬಯಸುತ್ತೇನೆ. ನನ್ನ ಅಭಿಪ್ರಾಯಗಳು ಕಹಿಯಾಗಬಹುದು; ಆದರೆ ವಾಸ್ತವಾಂಶಗಳನ್ನು ಅರಿಯಲು, ದೇಶಯಾವುದನ್ನು ಮಾಡಬಲ್ಲದು ಅಥವಾ ಮಾಡಲಾರದು ಎಂಬುದನ್ನು ಸ್ಪಷ್ಟವಾಗಿ ತಿಳಿಯಲು ಅವು ಸಹಾಯವಾಗುತ್ತವೆಯೆಂದು ಭಾವಿಸುತ್ತೇನೆ.

ಭಾರತದ ಜನ ಬಡವರು; ಆದರೆ ದೇಶ ಮಾತ್ರ ಸಂಪದ್ಭರಿತವಾಗಿದೆ. ತಾರುಣ್ಯಾವಸ್ಥೆಯಲ್ಲಿರುವ ಪ್ರಜಾಪ್ರಭುತ್ವದಲ್ಲಿ ಜನ ಕ್ರಾಂತಿಕಾರಕ ರೀತಿಯಲ್ಲಿ ನಾಡಿನ ಆರ್ಥಿಕ ಪ್ರಗತಿಯನ್ನು ನಿರೀಕ್ಷಿಸುವುದು ಸ್ವಾಭಾವಿಕ. ಅಂತಹ ನಿರೀಕ್ಷೆ ನ್ಯಾಯವಾಗಿಯೂ ಸಮಂಜಸವಾಗಿಯೂ ಇದೆ. ಇದು ಅಪೇಕ್ಷಣೀಯವೂ ಹೌದು. ಜನ ಕೋಟಿಯ ಅಗತ್ಯಗಳು ವಿವಿಧ ರೂಪದಲ್ಲಿರುತ್ತವೆಯಲ್ಲದೆ, ತುರ್ತಿನ ರೂಪದ್ದಾಗಿಯೂ ಇರುತ್ತದೆ. ಮೊದಲನೆಯ ಎರಡು ಪಂಚವಾರ್ಷಿಕ ಯೋಜನೆಗಳ ಹಿಂದಿರುವ ಮನೋಭಾವವಾದರೂ ಇದೇ ಆಗಿದೆ. ರಾಷ್ಟ್ರೀಯ ವರಮಾನವನ್ನು ಸೇ. ೫೦ ರಷ್ಟು ಹೆಚ್ಚಿಸಬೇಕೆನ್ನುವುದು, ಉದ್ಯೋಗಾವಕಾಶಗಳನ್ನು ೨೦-೩೦ ಲಕ್ಷ ಮಂದಿಗಾದರೂ ಹೆಚ್ಚಿಗೆ ಲಭಿಸುವಂತೆ ಮಾಡಬೇಕೆನ್ನುವುದು, ಉಕ್ಕಿನ ಉತ್ಪಾದನೆಯಲ್ಲಿ ೬೦ ಲಕ್ಷ ಟನ್ನುಗಳಷ್ಟಿನ ಗುರಿಸಾಧಿಸಬೇಕೆನ್ನುವುದು—ಇವೆಲ್ಲ ಅಂತಹ ಒಂದು ಮನೋಭಾವದ ನಿದರ್ಶನಗಳೇ ಆಗಿವೆ.

ದೇಶದ ಅಗತ್ಯಗಳು ಮತ್ತು ಹೆಚ್ಚುತ್ತಿರುವ ಜನಸಂಖ್ಯೆ ದೃಷ್ಟಿಯಿಂದ ಈ ಆಸೆ ಆಕಾಂಕ್ಷೆಗಳು ಗಗನ ಕುಸುಮಗಳಲ್ಲವೆಂದೂ ಭಾವಿಸಬಹುದು. ಆದರೆ ಒಂದು ಮಾತು. ಆಸೆ ಆಕಾಂಕ್ಷೆಗಳಷ್ಟೆ ಯಾವ ಯೋಜನೆಯನ್ನೇ ಆಗಲಿ ಯಶಸ್ವೀಗೊಳಿಸಲಾರವು. ಯೋಜನೆ ಯಶಸ್ವಿಯಾಗಲು ಆಸೆ ಆಕಾಂಕ್ಷೆಗಳ ಜೊತೆಗೆ ಸಂಪತ್ಸಾಧನಗಳೂ ಮುಖ್ಯವಾಗುತ್ತವೆ. ನೈಸರ್ಗಿಕ ಸೌಲಭ್ಯಗಳ ಜೊತೆಗೆ ಹಣಕಾಸಿನ ಸೌಲಭ್ಯಬೇಕು, ಮತ್ತು ಕ್ರಿಯಾಶಕ್ತಿಬೇಕು. ಅದು ಹೀಗೆ: ಒಬ್ಬನಿಗೆ ಅಂಗಿಗಳು ಅತ್ಯಾವಶ್ಯಕವಾಗಿ ಬೇಕಿರಬಹುದು; ಆದರೆ ಅವನಲ್ಲಿರುವ ಬಟ್ಟೆಯ ಸಹಾಯದಿಂದ ಒಂದೇ ಒಂದು ಅಂಗಿ ಹೊಂದಲು ಸಾಧ್ಯವಾದೀತು. ಅದ್ಭುತ ಸಾಧನೆಗಳಲ್ಲಿನ ಆಸಕ್ತಿ ಅಥವಾ ಅವುಗಳನ್ನು ಸಾಧಿಸಬೇಕೆಂಬ ಉತ್ಸಾಹವಷ್ಟೇ ಆಸೆ ಆಕಾಂಕ್ಷೆಗಳನ್ನು ಯಶಸ್ವೀಗೊಳಿಸಲಾರದು. ಸಮಾಜದ ಸ್ಥಿತಿಗತಿಗಳು ಮತ್ತು ಶಕ್ತಿ ಸಾಮರ್ಥ್ಯಗಳು ಅದನ್ನು ಮುಖ್ಯವಾಗಿ ನಿರ್ಧರಿಸುತ್ತವೆ. ರಾಷ್ಟ್ರೀಯ ವರಮಾನದಲ್ಲಿ ಎಷ್ಟು ಭಾಗವನ್ನು ಯಶಸ್ವಿಯಾಗಲು ಉಳಿಸಲು ಸಾಧ್ಯ ಮತ್ತು ಅಭಿವೃದ್ಧಿ ಕಾರ್ಯಗಳ ಮೇಲೆ ಬಂಡವಾಳದ ರೂಪದಲ್ಲಿ ವಿನಿಯೋಗಿಸಲು ಸಾಧ್ಯ ಎಂಬುದನ್ನು ಅವಲಂಬಿಸಿ ಇದು ನಿರ್ಧಾರವಾಗಬೇಕು. ಹೀಗೆ ವಾಸ್ತವಾಂಶಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಯೋಜನೆಯನ್ನು ತಯಾರಿಸುವುದರಿಂದ ಅದು ಅಯಶಸ್ವಿಯಾದೀತು; ಕಡೆಯ ಪಕ್ಷ ಅನೇಕ ಅಡಚಣೆಗಳನ್ನಾದರೂ ಎದುರಿಸಬೇಕಾದೀತು.

ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸಲು ಬೇಕಾದ ಹಣವನ್ನು ಆಂತರಿಕವಾಗಿ ಮತ್ತು ವಿದೇಶಗಳಿಂದ ಪೂರೈಸುವುದು ದುಸ್ತರವಾದುದಕ್ಕೆ ಕಾರಣ ಬಹು ಮಟ್ಟಿಗೆ ಯೋಚಕರಿಗೆ ಇದ್ದ ವಿಪರೀತ ಆಶಾವಾದವೇ ಎಂದೂ ಹೇಳಬಹುದು. ಈ ನಿರೀಕ್ಷೆಯಲ್ಲಿ ಎಲ್ಲೋ ತಪ್ಪು ನಡೆದು ಹೋಯಿತು. ಕೆಲವು ಅನಿರೀಕ್ಷಿತ ಕಾರಣಗಳೂ ಇದರ ಹಿಂದಿರಬಹುದು. ಆದರೆ ನಡೆದು ಹೋದ ಮಹಾ ಲೋಪ ಮಾತ್ರ ತಪ್ಪು ಅಂದಾಜಿಗೆ ಸಂಬಂಧಿಸಿದ್ದು. ನಮ್ಮ ಶಕ್ತಿ ಸಾಮರ್ಥ್ಯಗಳ ಸರಿಯಾದ ಕಲ್ಪನೆ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ.

ಎಷ್ಟು ಪ್ರಮಾಣದಲ್ಲಿ ಹಣ ಎತ್ತಲು ಸಾಧ್ಯವೆಂಬುದರ ಸ್ಪಷ್ಟ ಅರಿವು ಇಲ್ಲದೆಯೇ ದ್ವಿತೀಯ ಯೋಜನೆಯ ವೆಚ್ಚದ ಅಂದಾಜು ಹಾಕಲಾಯಿತು. ಸಾರ್ವತ್ರಿಕ ಕ್ಷೇತ್ರಕ್ಕಂತೂ ಈ ಮಾತು ಹೆಚ್ಚು ಅನ್ವಯಿಸುತ್ತದೆ. ಈ ರೀತಿಯ ವಾಸ್ತವವಾದಿಯಲ್ಲದ ಅಂದಾಜಿನ ಪರಿಣಾಮವಾಗಿ ಉದ್ಭವಿಸಿದ ಸಮಸ್ಯೆಗಳನ್ನು ಎದುರಿಸುವ ಸಲುವಾಗಿ ಯೋಜನೆಯ ವೆಚ್ಚವನ್ನು ಕೊನೆಗೆ ೪,೮೦೦ ಕೋಟಿಯಿಂದ ೪,೫೦೦ ಕೋಟಿಗೆ ಮಿತಿಗೊಳಿಸಬೇಕಾಯಿತು. ಈ ಪೈಕಿ ಬಹ್ವಂಶ ಅನಿರೀಕ್ಷಿತ ವಿದೇಶಿ ನೆರವು ಹಾಗೂ ಸಾಲಗಳ ರೂಪದಲ್ಲಿ ಒದಗಬಂದಿದೆ ಎಂಬುದನ್ನೂ ಗಮನಿಸಬೇಕು ಅದೇ ಈ ಯೋಜನೆಯನ್ನು ನಮ್ಮ ಸಾಮರ್ಥ್ಯಕ್ಕೆ ಹೊಂದಿಕೊಳ್ಳುವಂತೆ ರೂಪಿಸಿದ್ದರೆ ನಮ್ಮ ತೊಂದರೆಗಳು ತುಂಬಾ ಕಡಿಮೆಯಾಗುತ್ತಿದ್ದುವು. ಗುರಿಗಳು ಕಡಿಮೆ ಪ್ರಮಾಣದ್ದಾಗುತ್ತಿದ್ದರೂ ಅದು ಒಂದು ಹೆಚ್ಚು ವಾಸ್ತವವಾದಿ ಯೋಜನೆಯಾಗುತ್ತಿತ್ತು.

ವಿದೇಶಿ ನೆರವು

ದ್ವಿತೀಯ ಯೋಜನೆ ಸಮಯದಲ್ಲಿ ಅನುಭವಕ್ಕೆ ಬಂದ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ಮೂರನೆಯ ಯೋಜನೆಯನ್ನು ರೂಪಿಸಬೇಕಾದುದು ಹೆಚ್ಚು ಸಮಂಜಸವಾಗುತ್ತದೆಯೆಂದೇ ಆಸೆ ಆಕಾಂಕ್ಷೆಗಳ ಆಧಾರದ ಮೇಲೆ ಅದನ್ನು ರೂಪಿಸದೆ ವಾಸ್ತವಾಂಶಗಳ ಆಧಾರದ ಮೇಲೆ ಅದನ್ನು ರೂಪಿಸಬೇಕಾಗುತ್ತವೆ. ಈ ದೃಷ್ಟಿಯಿಂದ ಕೆಲವು ಸಲಹೆಗಳನ್ನು ಈ ಕೆಳಗೆ ಮಂಡಿಸಲಾಗಿದೆ.

ಯೋಜಕರು ಇದಕ್ಕಾಗಿ ವಾಸ್ತವಾಂಶಗಳ ಆಧಾರದ ಮೇಲೆ ತಮ್ಮ ಅಂದಾಜನ್ನು ತಯಾರಿಸಬೇಕು. ಸ್ವಲ್ಪ ಮಟ್ಟಿಗೆ ಸಂಪ್ರದಾಯ ಶರಣರೂ ಆಗಬೇಕು. ತೆರಿಗೆ ವಿಧಿಸುವ ಮೂಲಕ, ಸಾಲ ಎತ್ತುವ ಮತ್ತಿತರ ವಿಧಾನಗಳ ಮೂಲಕ ಮತ್ತು ವಿದೇಶಿ ನೆರವು ಎಷ್ಟುಮಟ್ಟಿಗೆ ತೊಂದರೆ ಇಲ್ಲದೆ ಹೊರತರಬಹುದು ಎಂಬ ಸರಿಯಾದ ಒಂದು ಅಂದಾಜಿನ ಮೇಲೆ ಒಂದು ಸ್ಪಷ್ಟ ಚಿತ್ರ ಕಲ್ಪಿಸಿಕೊಳ್ಳಬೇಕಾಗುತ್ತದೆ.

ಆಂತರಿಕ ಮಾರ್ಗಗಳಾಗಲಿ ಬಾಹ್ಯ ದೇಶಗಳ ನೆರವಿನಿಂದ ಹಣ ಎತ್ತುವ ಮಾರ್ಗಗಳೇ ಆಗಲಿ ಖಚಿತವಾಗಿ ಹೀಗೆಯೇ ಇರುತ್ತವೆ ಎಂದು ಹೇಳುವುದು ಕಷ್ಟವಾಗುತ್ತದೆ ನಿಜ. ಹೆಚ್ಚಿಗೆ ತೆರಿಗೆ ವಿಧಿಸುವುದು, ತೆರಿಗೆ ಕಡ್ಡಾಯವಾಗಿ ವಸೂಲಾಗುವಂತೆ ನೋಡಿಕೊಳ್ಳುವುದು. ವೆಚ್ಚದ ಬಾಬುಗಳಲ್ಲಿ ಮಿತವ್ಯಯ ಸಾಧಿಸುವುದು, ಸಾರ್ವಜನಿಕ ಕೈಗಾರಿಕಾ ಸಂಸ್ಥೆಗಳನ್ನು ಹೆಚ್ಚು ದಕ್ಷತೆಯಿಂದ ಅವುಗಳನ್ನು ಲಾಭದಾಯಕ ಉದ್ಯಮಗಳನ್ನಾಗಿ ಮಾಡುವುದು, ಸಣ್ಣ ಉಳಿತಾಯ ಯೋಜನೆಗಳನ್ನು ಹೆಚ್ಚು ಯಶಸ್ವೀಗೊಳಿಸಿ ಹಣ ಸಂಗ್ರಹಿಸುವುದು, ಸಕಾಲದಲ್ಲಿ ಸಾರ್ವಜನಿಕ ಸಾಲ ಎತ್ತುವುದು—ಇತ್ಯಾದಿ ವಿಧಾನಗಳ ಮೂಲಕ ಆಂತರಿಕವಾಗಿ ಎತ್ತಬಹುದಾದ ಹಣದ ಪ್ರಮಾಣವನ್ನು ನಿಜಕ್ಕೂ ಹೆಚ್ಚಿಸಿಕೊಳ್ಳಬಹುದು.

ಹೀಗೆ ಹಣ ಎತ್ತುವ ಯೋಜನೆಗಳನ್ನು ನಿರೂಪಿಸುವುದು ಮತ್ತು ಅವುಗಳ ಕಾರ್ಯವಿಧಾನಗಳನ್ನು ನಿರ್ಧರಿಸುವುದರಿಂದ ಎಷ್ಟು ಹಣ ಎತ್ತಲು ಸಾಧ್ಯವಾಗಬಹುದು ಎಂಬ ಒಂದು ಸ್ಪಷ್ಟ ಕಲ್ಪನೆ ದೊರಕುತ್ತದೆ. ಅದೇ ರೀತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಅನುಸರಿಸಿರುವ ಕಾರ್ಯವಿಧಾನದಂತೆ ಎಷ್ಟು ಮಟ್ಟಿಗೆ ಹೊರದೇಶಗಳಿಂದ ಹಣವೆತ್ತಲು ಸಾಧ್ಯವೆಂಬುದನ್ನು ತಿಳಿಯಲು ಮಿತ್ರರಾಷ್ಟ್ರಗಳನ್ನು ಮತ್ತು ಹಣ ಒದಗಿಸುವ ಸಂಘ ಸಂಸ್ಥೆಗಳನ್ನು ಕೇಳಿ ಖಚಿತವಾಗಿ ದೊರಕಬಹುದಾದ ಹಣ ಸೌಕರ್ಯದ ಅಂದಾಜನ್ನು ಹಾಕಬಹುದು. ಇದರಿಂದ ಯೋಜನೆಯ ಅಸ್ತಿಭಾರದ ಅಂದಾಜು ಸ್ಪಷ್ಟವಾಗುತ್ತದೆ ಎಂದು ಹೇಳಬಹುದು. ಯೋಜನೆಗಳಲ್ಲಿ ಈ ಅಂದಾಜು ನಡೆದಿಲ್ಲವೆಂದಲ್ಲ. ಆದರೆ ಈ ಅಂದಾಜಿಗೆ ಕೊಡಬೇಕಾದ ಪ್ರಾಧಾನ್ಯ ಕೊಟ್ಟು ಅದರ ಆಧಾರದ ಮೇಲೆ ಯೋಜನೆಯನ್ನು ತಯಾರಿಸುವುದನ್ನು ಬಿಟ್ಟು ಜನರ ಆಶೋತ್ತರಗಳಿಗೇ ಹೆಚ್ಚು ಪ್ರಾಧಾನ್ಯ ಕೊಟ್ಟು ಅವುಗಳಿಗನುಗುಣವಾಗಿ ಯೋಜನೆಯನ್ನು ವಿಸ್ತರಿಸುತ್ತಾ ಹೋದ ಪರಿಣಾಮವಾಗಿ ಎಲ್ಲಿಲ್ಲದ ತೊಂದರೆಗಳು ಉದ್ಭವಿಸಿದವು. ಅಂತೆಯೇ ಸಂಪನ್ಮೂಲ ಹಾಗೂ ಸಂಪತ್ಸಾಧನಗಳು ಹಾಗೂ ಅವುಗಳನ್ನು ರೂಢಿಸಿಕೊಳ್ಳಲು ಇರುವ ಸಾಧ್ಯತೆಗೆ ಹೆಚ್ಚಿನ ಪ್ರಾಧಾನ್ಯ ಕೊಟ್ಟು ಯೋಜನೆ ತಯಾರಿಸುವುದು ಅತ್ಯಾವಶ್ಯಕವಾಗಿದೆ.

ಇದರ ಪರಿಣಾಮ ಹೀಗಾಗುತ್ತದೆ. ಹಾಸಿಗೆ ಇದ್ದಷ್ಟು ಕಾಲುಚಾಚು ಎನ್ನುವಂತೆ ನಮ್ಮ ಸಂಪತ್ಸಾಧನಗಳ ಮಟ್ಟಕ್ಕನುಗುಣವಾಗಿ ಜನರ ಆಶೋತ್ತರಗಳನ್ನೂ ಸೀಮಿತಗೊಳಿಸಬೇಕಾಗುತ್ತದೆ. ಹೀಗೆ ಗುರಿಗಳನ್ನು ಸಂಕುಚಿತಗೊಳಿಸುವುದು ನಿರಾಶಾದಾಯಕವಾಗುತ್ತದೆ. ಆದರೂ ಮುಂದೆ ಯೋಜನಾವಧಿಯ ಮಧ್ಯೆ ತೊಂದರೆಗಳಿಗೆ ಸಿಕ್ಕಿ ನರಳುವುದಕ್ಕಿಂತ ಹೀಗೆ ಮೊದಲೇ ನಿರಾಶೆಗೊಂಡು ಯೋಜನೆ ತಯಾರಿಸುವುದೇ ಮೇಲು. ಹೀಗೆ, ಮಾಡುವುದರಿಂದ ಇನ್ನೊಂದು ರೀತಿಯ ಅನುಕೂಲವೂ ಇದೆ. ಸಂಪತ್ಸಾಧನಗಳ ಅಂದಾಜನ್ನು ತುಂಬಾ ಹಿಡಿದು ಹಿಡಿದು ಮಾಡುವುದರಿಂದ ಯೋಜನೆಯ ಗುರಿಗಳನ್ನು ಸಂಪತ್ಸಾಧನಗಳು ಲಭ್ಯವಾದ ಹಾಗೆಲ್ಲ ಹಿಗ್ಗಿಸಿಕೊಂಡು ಹೋಗಿ ಪ್ರಗತಿಪರವಾದ ಒಂದು ಮುನ್ನಡೆಯನ್ನು ಗಮನಿಸಬಹುದು.

(ಮುಂದುವರಿಯುವುದು)

ಡಾ| ಎಂ. ಎಚ್. ಗೋಪಾಲ್
ಮದ್ರಾಸು ವಿಶ್ವವಿದ್ಯಾಲಯ.

ವಿದ್ಯಾರ್ಥಿಗಳಿಗೆ

ವಿಶೇಷ ಸೌಲಭ್ಯ

ವಿದ್ಯಾರ್ಥಿಗಳ ಸೇವಿಂಗ್ಸ್ ಖಾತೆಯಲ್ಲಿ ಉಳಿತಾಯದ ಪಾಠವಿದೆ. ಮಾತ್ರವಲ್ಲದೆ ನಮ್ಮ ಶಾಖೆಯಿಂದ ಧರ್ಮಾರ್ಥವಾಗಿ ಹಣ ಪಾವತಿ ಮಾಡುವ ಅವಕಾಶ ಕಲ್ಪಿಸಿಕೊಡಲಾಗಿದೆ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ಸಿಂಡಿಕೇಟ್ ಬೇಂಕಿನ ಶಾಖೆಗೆ ಬನ್ನಿರಿ ಅಥವಾ ಬರೆಯಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾ ರೂ. 5·75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ

ವರುಷ ೩೮. ವಾರ ೪೨. 2-7-1959 Vol. 38. No. 42.

ವಿಚಾರ ಮಥನ

ಅಮೆರಿಕೆಯ ಸ್ವಾತಂತ್ರ್ಯದಿನ

* *

ನಿರರ್ಥಕ ಸಂದರ್ಶನ

* *

ಬೇಕಾದಂತೆ ಹೇಳಲಿಲ್ಲ!

* *

ಪರಿಹಾರ ಮಾರ್ಗ

* *

ಜುಲೈ ೪ ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ಸ್ವಾತಂತ್ರ್ಯದಿನ. ಕಳೆದ ವರ್ಷ, ಈ ವೇಳೆಗೆ ಸಂಯುಕ್ತ ಸಂಸ್ಥಾನಗಳಲ್ಲಿ ೪೮ ರಾಜ್ಯಗಳು ಸೇರಿಕೊಂಡಿದ್ದರೆ, ಈ ವರ್ಷ ಆ ಸಂಖ್ಯೆ ೫೦ಕ್ಕೆ ಏರುವುದು. ಹೊಸತಾಗಿ ಸೇರುವ ರಾಜ್ಯ ಅಲಾಸ್ಕಾವಾಗಿದೆ. ಅಮೆರಿಕೆಯ ರಾಷ್ಟ್ರಧ್ವಜದಲ್ಲಿ ಅದರಲ್ಲಿ ಅಡಕವಾಗಿರುವ ರಾಜ್ಯಗಳ ಸಂಖ್ಯೆಯಷ್ಟು ನಕ್ಷತ್ರಗಳಿವೆ. ಈಗ, ನೀಲಿವರ್ಣದ ಧ್ವಜದಲ್ಲಿ ೪೯ ಬಿಳಿ ನಕ್ಷತ್ರಗಳಿವೆ. ಇವುಗಳಲ್ಲಿ ೧೩ ಕೆಂಪು ಮತ್ತು ಬಿಳಿ ಬಣ್ಣಗಳಲ್ಲಿದ್ದು ಇವು ೧೭೮೭ರಲ್ಲಿ ಅಮೆರಿಕೆಯ ಸಂಯುಕ್ತ ಸಂಸ್ಥಾನಗಳು ಸ್ಥಾಪನೆಯಾದಾಗ ಅದರೊಡನೆ ಸೇರಿದ್ದ ವಸಾಹತುಗಳನ್ನು ಪ್ರತಿಬಿಂಬಿಸುವುವು.

ಸಂಯುಕ್ತ ಸಂಸ್ಥಾನಗಳೊಂದಿಗೆ ನ್ಯೂಮೆಕ್ಸಿಕೊವು ೪೭ನೆಯ ರಾಜ್ಯವಾಗಿ ೬-೧-೧೯೧೨ರಲ್ಲಿ, ಅರಿಜೋನವು ೪೮ನೆಯ ರಾಜ್ಯವಾಗಿ ೧೪-೨-೧೯೧೨ರಲ್ಲಿ ಸೇರಿದ್ದುವು. ಈಗ ೪೭ ವರ್ಷಗಳ ನಂತರ ಅಲಾಸ್ಕವು ೪೯ನೆಯ ರಾಜ್ಯವಾಗಿ ಸೇರಿದೆ.

ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲಿ ಸಂಪತ್ತಿನಲ್ಲಿಯೂ ಬಲದಲ್ಲಿಯೂ ಪ್ರಥಮಸ್ಥಾನವನ್ನು ಗಳಿಸಿರುವ ಅಮೆರಿಕೆಯ ಸಂಯುಕ್ತ ಸಂಸ್ಥಾನಗಳು ಸಂಪತ್ಸಮೃದ್ಧವಾಗಿವೆ ಎಂಬುದು ನಿರ್ವಿವಾದ. ವಿಶ್ವದಲ್ಲಿ ನಡೆಯುವ ಪ್ರತಿಯೊಂದು ಘಟನೆಯಲ್ಲಿಯೂ ಅದು ತನ್ನ ಪ್ರಭಾವವನ್ನು ಬೀರುವುದು ದೃಗ್ಗೋಚರವಾಗುತ್ತದೆ. ಬಂಡವಶಾಹಿ ಎಂದು ರಶ್ಯವು ಅದನ್ನು ಕರೆದರೂ ಅದು ಕಮ್ಯುನಿಜಂ ಅನ್ನು ಬಲವಾಗಿ ವಿರೋಧಿಸುವುದಾದರೂ ಈ ಮಹಾರಾಷ್ಟ್ರಗಳೆರಡು ವಿಶ್ವ ಶಾಂತಿಯ ಸ್ಥಾಪನೆಗೆ ತಮ್ಮ ತಮ್ಮ ಸೂಚನೆಗಳನ್ನು ಮುಂದಿಡುವುದು ಮತ್ತು ಈ ಕಾರಣದಿಂದಲೇ ಶಾಂತಿ ಭಂಗದ ಬೆದರಿಕೆ ಹರಡಿಸುವುದು ಸಾಮಾನ್ಯವಾಗಿ ಪರಿಣಮಿಸಿದೆ. ಅನಭಿವೃದ್ಧ ರಾಷ್ಟ್ರಗಳ ಅಭಿವೃದ್ಧಿಗಾಗಿ ಅಮೆರಿಕೆಯು ಸಾಕಷ್ಟು ಸಹಾಯವನ್ನು ನೀಡುತ್ತಿದೆ. ಇಂದು ಪ್ರಪಂಚವನ್ನು ಉಳಿಸಲೂ ಅಳಿಸಲು ಸುಸಮರ್ಥವಾದ ರಾಷ್ಟ್ರಗಳಲ್ಲಿ ಅಮೆರಿಕೆಯೂ ಒಂದು. ಅದರ ೧೮೩ನೆಯ ಸ್ವಾತಂತ್ರ್ಯ ದಿನಾಚರಣೆಯ ದಿನವಾದ ಜುಲೈ ೪ರಂದು ರಾಷ್ಟ್ರಕ್ಕೆ ಶುಭಕಾಮನೆಯನ್ನು ಸಲ್ಲಿಸುವುದಲ್ಲದೇ ಸ್ವತಂತ್ರ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆ ಮತ್ತು ವಸಾಹತುವಾದ ನಿರ್ಮೂಲನೆ ಹಾಗೂ ವಿಶ್ವಕಲ್ಯಾಣ ಸಾಧನೆಗಳಿಗೆ ಶಕ್ತಿಮೀರಿ ದುಡಿಯುವಂತಾಗಲೆಂದು ಬಯಸಿದರೆ, ತಪ್ಪಿಲ್ಲ.

○○ ○○

ಪ್ರಧಾನಿ ನೆಹರೂ ಕೇರಳವನ್ನು ಶ್ರೀ ನಂಬೂದರಿಪಾದರ ಆಮಂತ್ರಣವನ್ನು ಸ್ವೀಕರಿಸಿ, ಸಂಚರಿಸಿ, ನಂಬೂದರಿಯವರ ಆಕಾಂಕ್ಷೆಯ ಲತೆಗೆ ಬಿಸಿನೀರನ್ನೇ ಸುರಿದಿದ್ದಾರೆ ಎನ್ನಬಹುದು. ಪ್ರಧಾನಿಯವರು ಕೇರಳಕ್ಕೆ ಬಂದು ಕಾಂಗ್ರೆಸಿಗರಿಗೆ ತಾವು ಹೂಡಿರುವ ಚಳವಳಿ ಅಥವಾ ಆಂದೋಲನವನ್ನು ಹಿಂತೆಗೆದುಕೊಳ್ಳುವಂತೆ ಕೇಳಿಕೊಂಡಾರು; ಆಗ ತಾವು ಗೆದ್ದಂತೆಯೇ ಎಂದು ಅವರು ಊಹಿಸಿದ್ದರೆ, ಆ ಊಹೆ ಈಗ ಸಂಪೂರ್ಣ ಬುಡ ಮೇಲಾಗಿದೆ. ನೆಹರೂ ಅವರು ಕೇರಳವನ್ನು ಸಂದರ್ಶಿಸಿದರೇನೋ ನಿಜ, ಅಲ್ಲಿನ ಸರಕಾರೀ ನಾಯಕರೊಡನೆ, ರಾಜ್ಯಪಾಲರೊಡನೆ, ಕಾಂಗ್ರೆಸಿಗರೊಡನೆ ಮಾತುಕತೆ ನಡೆಸಿದ್ದೂ ಹೌದು. ಆದರೆ, ಚಳವಳಿಯನ್ನು ಹಿಂತೆಗೆದುಕೊಳ್ಳಬೇಕೆಂದವರು ಎಲ್ಲಿಯೂ ಹೇಳಲಿಲ್ಲ, ಅಥವಾ ರಾಜ್ಯ ಸರಕಾರ ರಾಜಿನಾಮೆಯನ್ನೀಯಬೇಕೆಂದೂ ಅಭಿಪ್ರಾಯಪಡಲಿಲ್ಲ.

ರಾಜ್ಯದ ಹೆಚ್ಚಿನ ಜನರಲ್ಲಿ ಅಶಾಂತಿ, ಅಭದ್ರತೆಯ ಭಾವನೆ ಹರಡಿದೆ ಎಂಬುದಕ್ಕೆ ಈ ಆಂದೋಲನವೇ ಸಾಕ್ಷಿ. ತಾವು ಜನತೆಯ ವಿಶ್ವಾಸವನ್ನು ಕಳೆದುಕೊಂಡಿಲ್ಲವೆಂದು ಕಮ್ಯುನಿಸ್ಟರು ಹೇಳುವುದಾದರೆ, ಸರಕಾರವು ಪುನಃ ಚುನಾವಣೆಯನ್ನು ನಡೆಸಿ, ವಸ್ತುಸ್ಥಿತಿಯನ್ನು ಪ್ರತ್ಯಕ್ಷೀಕರಿಸಿ ತೋರಿಸಬಹುದು. ಇದು ರಾಜ್ಯ ಸರಕಾರ ಹಾಕಿಕೊಡಬೇಕಾದ ಸತ್ಸಂಪ್ರದಾಯವಷ್ಟೇ ಹೊರತು, ಕೇಂದ್ರ ಸರಕಾರವು ಸದ್ಯ ಅಲ್ಲಿನ ಆಡಳಿತೆಯಲ್ಲಿ ಕೈ ಹಾಕಲಾರದು ಎಂದಿರುವರು, ಪ್ರಧಾನಿ ನೆಹರೂ. ಅದರೊಡನೆಯೇ, ಪಿಕೆಟಿಂಗ್ ನಡೆಸುವುದು, ಆಂದೋಲನದಲ್ಲಿ ವಿದ್ಯಾರ್ಥಿಗಳು ಸೇರುವುದನ್ನು ವಿರೋಧಿಸಿದ್ದಾರೆ. ರಾಜ್ಯಸರಕಾರಕ್ಕೆ ಕೆಲವಾರು ಸಲಹೆಗಳನ್ನೂ ಇತ್ತಿದ್ದಾರೆ. ಅತ್ಯಧಿಕ ವಿರೋಧವನ್ನೆಬ್ಬಿಸುವ ವಿದ್ಯಾಮಸೂದೆಯ ೧೧ನೆ ಅನುಚ್ಛೇದವನ್ನು (ಉಪಾಧ್ಯಾಯರ ನೇಮಕಗಳು ಕುರಿತಾಗಿದೆ) ಅಮಾನತುಗೊಳಿಸಲೂ ಸರಕಾರವು ಸಮ್ಮತಿಸಿದೆ ಎಂದೂ ತಿಳಿದುಬಂದಿದೆ ಅಲ್ಲದೆ ಇನ್ನೂ ಕೆಲವು ಅನುಚ್ಛೇದಗಳನ್ನು ಹಿಂತೆಗೆಯಲೂ ಇಲ್ಲವೇ ಅಮಾನತುಗೊಳಿಸಲೂ ಸಿದ್ಧವಿದೆ. ಇದೇ ಕೆಲಸವನ್ನು ಈ ಮೊದಲೇ ಕಾರ್ಯರೂಪದಲ್ಲಿ ತರುತ್ತಿದ್ದರೆ, ಪರಿಸ್ಥಿತಿ ಇಷ್ಟೊಂದು ವಿಕೋಪಕ್ಕೆ ಹೋಗುತ್ತಿರಲಿಲ್ಲವೇನೋ ಎಂಬ ಊಹೆಗೂ ಇಂದು ಅವಕಾಶ ದೊರೆತಿದೆ. ವಿರೋಧಿಪಕ್ಷಗಳು ತಮ್ಮ ಮೇಲೆ ಹೊರಿಸಿದ ಅಪವಾದಗಳನ್ನು ನಿರಾಧಾರಗಳೆಂದು ತೋರಿಸಿಕೊಡುವುದು, ಎರಡೂ ಕಡೆಯ ಪ್ರತಿನಿಧಿಗಳು ಒಂದುಸೇರಿ ಸಮಸ್ಯೆಯನ್ನು ಚರ್ಚಿಸಿ ಸಮಾಧಾನದಿಂದ ಅದನ್ನು ಬಗೆಹರಿಸುವುದು; ಇದು ಅಸಾಧ್ಯವಾದರೆ, ಪ್ರಧಾನಿಯವರಿಗೆ ಪ್ರಶ್ನೆಯನ್ನೊಪ್ಪಿಸಿ, ಅವರು ನಿರ್ಧರಿಸಿದಂತೆ ಮಾಡುವುದು ಎಂಬಿತ್ಯಾದಿ ಸಲಹೆಗಳು ಶ್ರೀ ನಂಬೂದರಿ ಪಾದರಿಗೆ ದೊರೆತಿವೆ. ಶ್ರೀ ನಂಬೂದರಿಯವರಿದಕ್ಕೆ ಒಪ್ಪಿದ್ದಾರೆಂದು ತಿಳಿದು ಬಂದಿದೆ.

ಆದರೆ, ಸರಕಾರಿ ವಿರೋಧಿಗಳು ನಂಬೂದರಿಯವರ ಮಾತಿನಲ್ಲಿ ವಿಶ್ವಾಸ ವ್ಯಕ್ತಪಡಿಸದೆ, ನಮ್ಮ ಹೋರಾಟವನ್ನು

(೬ನೇ ಪುಟ ನೋಡಿರಿ)



ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ರಾಷ್ಟ್ರಧ್ವಜ

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:– ಮಂಗಳೂರು—3. ಸ್ಥಾಪನೆ:– 1931.

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ	5 ತಿಂಗಳ ವರೆಗೆ		4¼%
6	,, 12	,,	4½%
13	,, 24	,,	4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು,
ಮಡಿಕೇರಿ, ಇತ್ಯಾದಿ....ಇತ್ಯಾದಿ ...

ಕಥಾ ವಿಹಾರ

ಕಾಲ ಮಿಂಚಿ ಹೋಗಿತ್ತು ವಿಧಿಯು ಕೈವಾಡ ತೋರಿತ್ತು!

ಅಲಕ್ಷ್ಯದಿಂದುಂಟಾದ ಪ್ರಮಾದವೊಂದರಿಂದ ಒಂದು ಕುಟುಂಬವೇ ನಿರ್ಗತಿಕವಾಯಿತು!

ಅಂದು ಶ್ರೀಧರನ ಬಿ. ಎಸ್‌ಸಿ. ಪರೀಕ್ಷೆಯ ಫಲಿತಾಂಶವು ಪ್ರಕಟವಾಗುವ ದಿನ. ಹಲ ಸಮಯದ ಪರಿಶ್ರಮಕ್ಕೆ ಯೋಗ್ಯ ಪ್ರತಿಫಲವು ದೊರೆಯುವ ದಿನ! ಆ ದಿವಸ ಏಳುವಾಗಲೇ ಆತನಲ್ಲಿ ಅಪೂರ್ವವಾದ ಉಲ್ಲಾಸವಿತ್ತು! ತನ್ನ ಫಲಿತಾಂಶವನ್ನು ತಿಳಿದುಕೊಳ್ಳುವ ಆತುರವು ಅತಿಯಾಗಿತ್ತು! ತಾನು ಮಾತ್ರವಲ್ಲದೆ ತನ್ನ ಮನೆಯವರೆಲ್ಲರೂ ಅಷ್ಟೇ ಕುತೂಹಲದಿಂದ ಅದನ್ನು ನಿರೀಕ್ಷಿಸುತ್ತಿರುವರೆಂಬುದನ್ನು ಅವನರಿತಿದ್ದ. ಆದುದರಿಂದ ಶ್ರೀಧರನು ಮನೆ ಬಿಟ್ಟು ಹೊರಟಾಗಲೇ 'ಪ್ರಥಮ ವರ್ಗದಲ್ಲಿ-ತೇರ್ಗಡೆ ಹೊಂದುವವನಾಗು' ಎಂದು ಎಲ್ಲರೂ ಮನಸಾರೆ ಹರಸಿದರು.

ಪರೀಕ್ಷೆಯಲ್ಲಿ ತಾನು ನಿಸ್ಸಂದೇಹವಾಗಿಯೂ ವಿಜಯಿಯಾಗುವೆನೆಂದು ಶ್ರೀಧರನಿಗೆ ಖಚಿತವಾಗಿ ತಿಳಿದಿತ್ತು. ಅವನು ಕಾಲೇಜಿನಲ್ಲಿಯೇ 'ಮೇಧಾವಿ ವಿದ್ಯಾರ್ಥಿ'ಯೆಂದು ಅನ್ನಿಸಿಕೊಂಡಿದ್ದ. ಬಿ. ಎಸ್‌ಸಿ. ವರ್ಗದಲ್ಲಿ ಎಲ್ಲ ವಿಷಯಗಳಲ್ಲೂ ಶ್ರೀಧರನೇ ಮುಂದು. ಪ್ರೊಫೆಸರುಗಳ ಪ್ರೀತಿಗೂ ಪಾತ್ರನಾಗಿದ್ದ. ಅಲ್ಲದೆ ಪ್ರಿನ್ಸಿಪಾಲರ ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗಿದ್ದ. ಇವನ ಕೀರ್ತಿ ಕಾಲೇಜಿನಲ್ಲಿ ಸಾಕಷ್ಟು ಪಸರಿಸಿತ್ತು. ಸರಸ್ವತಿ ದೇವಿಯೇ ಇವನಿಗೆ ಒಲಿದಿದ್ದಳೆಂದು ಎಲ್ಲರ ಭಾವನೆಯಾಗಿತ್ತು. ಈ ಮೊದಲು ಕಾಲೇಜಿನಲ್ಲಿ ಜರಗಿದ ಪ್ರತಿ ಪರೀಕ್ಷೆಯಲ್ಲಿಯೂ ಮೊದಲ ದರ್ಜೆಯಲ್ಲಿಯೇ ತೇರ್ಗಡೆಹೊಂದುತ್ತಿದ್ದುದರಿಂದ ತನ್ನ ಫಲಿತಾಂಶದ ಕುರಿತು ಶ್ರೀಧರನಿಗೆ ಶಂಕೆಯೇ ಇದ್ದಿರಲಿಲ್ಲ.

ತಮ್ಮ ಮಗನು 'ಕಾಲೇಜಿನ ಕಣ್ಮಣಿ'ಯಾಗಿ ಮೆರೆಯುತ್ತಿರುವುದರ ಬಗ್ಗೆ ಶ್ರೀಧರನ ತಂದೆ ರಾಮಯ್ಯ ಹೆಗ್ಡೆಯವರಿಗೂ ತುಂಬಾ ಅಭಿಮಾನವಿತ್ತು. ತಮ್ಮ ವಂಶದಲ್ಲಿಯೇ ಶ್ರೀಧರನಷ್ಟು ಜಾಣ್ಮೆ ತೋರಿಸಿದವರಿಲ್ಲವೆಂದೇ ಅವರ ಎಣಿಕೆ. ಆದರೆ ಹೆಗ್ಡೆಯವರು ಶ್ರೀಮಂತರಾಗಿರಲಿಲ್ಲ! ಚಿಕ್ಕಂದಿನಿಂದಲೂ ಬಡತನದ ಬೇಗುದಿಗೆ ಸಿಲುಕಿ ಬಳಲಿ ಬೆಂಡಾದವರು! ಬಹಳ ಕಷ್ಟಪಟ್ಟು ಮಗನಿಗೆ ಕಲಿಸಿದ್ದರು. ಭವಿತವ್ಯವು ಮಗನಿಂದಾಗಿ ಸುಖಪ್ರದವಾಗಿ ಪರಿಣಮಿಸಬಹುದೆಂದು ಬಯಸಿದ್ದರು. ಈ ಸಲ ಮಗನ ಫಲಿತಾಂಶ ಹೊರಬಿದ್ದ ಕೂಡಲೇ ಅವನಿಗೆ ಒಳ್ಳೆಯ ನೌಕರಿಯು ದೊರೆಯಬಹುದೆಂಬ ವಿಶ್ವಾಸವು ಅವರಲ್ಲಿ ನೆಲಸಿತ್ತು. ಅವರ ಈ ವಿಶ್ವಾಸವನ್ನು ಬಲಪಡಿಸುವ ಉದ್ದೇಶದಿಂದಲೋ ಏನೋ? ಅದೇ ಊರಿನ ಹೆಸರಾಂತ ಉಕ್ಕಿನ ಕಾರ್ಖಾನೆಯೊಂದು, ಶ್ರೀಧರನ ಪ್ರತಿಭೆಯನ್ನರಿತು, ಅವನಿಗೆ ತಮ್ಮ ಕಾರ್ಖಾನೆಯಲ್ಲಿ ನೌಕರಿಯನ್ನೀಯುವ ವಾಗ್ದಾನವನ್ನೂ ಮಾಡಿದ್ದಿತು. ಅದಲ್ಲದೆ ಶ್ರೀಧರನು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರೆ, ತಮ್ಮ ಖರ್ಚಿನಲ್ಲಿಯೇ ವಿದೇಶ ವ್ಯಾಸಂಗಕ್ಕಾಗಿ ಕಳುಹಿಸಲೂ ಸಿದ್ಧರಾಗಿದ್ದರು. ಈ ಭರವಸೆಯಿಂದ ರಾಮಯ್ಯ ಹೆಗ್ಡೆಯವರು ಬಯಸಿದುದು ಅತಿಶಯವೇನೂ ಅಲ್ಲ. ಶ್ರೀಧರನಿಗೆ ಉಜ್ವಲ ಭವಿಷ್ಯವಿತ್ತು! ಅಭಿವೃದ್ಧಿಯ ಮೆಟ್ಟಿಲನ್ನೇರುವ ಯೋಗವಿತ್ತು!

ಫಲಿತಾಂಶವು ಪ್ರಕಟಗೊಳ್ಳುವ ಪತ್ರಿಕಾಲಯದ ಎದುರು ವಿದ್ಯಾರ್ಥಿಗಳ ಸಂದಣಿ ನೆರೆದಿತ್ತು. ನುಗ್ಗಾಟವೂ ಆರಂಭವಾಗಿತ್ತು! ಆದರೆ ಪತ್ರಿಕೆಯು ಅಚ್ಚಾಗಿ ಹೊರಬರಲು ಇನ್ನೂ ಸಮಯವಿತ್ತು. ಶ್ರೀಧರನೂ ಅಲ್ಲಿಗೆ ಬಂದು ಒಂದು ಕಡೆಯಲ್ಲಿ ನಿಂತುಕೊಂಡ. ತನ್ನ ಭವಿಷ್ಯ ಜೀವನದ ಅಸ್ಪಷ್ಟ ಚಿತ್ರಗಳು ಅವನ ಸ್ಮೃತಿ ಪಟಲದಲ್ಲಿ ಮೂಡ ತೊಡಗಿದುವು! ಅಲ್ಲದೆ ತನ್ನ ವಿದ್ಯಾಭ್ಯಾಸಕ್ಕಾಗಿ ಅನವರತವೂ ಹೆಣಗಾಡಿದ ತನ್ನ ತೀರ್ಥರೂಪರ ಉದಾರ ಹೃದಯದ ಅರಿವು ಅವನಿಗಾಗ ತೊಡಗಿತು. ಕೆಲವು ವರ್ಷಗಳ ಹಿಂದಿನ ಘಟನೆಗಳನ್ನು ಸ್ಮರಿಸ ತೊಡಗಿದನು.

೦೦ ೦೦

ಸಾಧಾರಣ ನಾಲ್ಕು ವರ್ಷಗಳ ಹಿಂದಿನ ಸಂಗತಿ: ಅದೇ ತಾನೇ ಶ್ರೀಧರನ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶ ಪ್ರಕಟವಾಗಿತ್ತು. ನಿರೀಕ್ಷಿಸಿದಂತೆ ಅವನು ತನ್ನ ಹೈಸ್ಕೂಲಿನಲ್ಲೇ ಮೊದಲನೆಯವನಾಗಿ ತೇರ್ಗಡೆಹೊಂದಿದ್ದ. ಆದರೆ ಈ ಸಂತಸದ ಸಂಗಡ ಸಂತಾಪವೂ ಅವನಲ್ಲಿತ್ತು. ಮುಂದೆ ಕಲಿಯುವ ತನ್ನ ಹಿರಿದಾಸೆಯು ಕಮರಿ ಹೋಗಬಹುದೆಂದು ಚಿಂತಿಸುತ್ತಿದ್ದನು. ಶ್ರೀಧರನಿಗೆ ಇನ್ನು ಕಲಿಸುವುದು ತನ್ನಿಂದ ಸಾಧ್ಯವಿಲ್ಲವೆಂದು ಆತನ ತಂದೆಯು ನುಡಿದುದೇ ಇದಕ್ಕೆ ಕಾರಣವಾಗಿತ್ತು.

ತನ್ನ ಹೆಬ್ಬಯಕೆಯ ಪ್ರಭಾವದಿಂದ ಶ್ರೀಧರನು ಇನ್ನೊಮ್ಮೆ ತಂದೆಯೊಡನೆ ಈ ವಿಷಯವಾಗಿ ಪ್ರಸ್ತಾಪಿಸಿದ್ದ. ತನ್ನ ಮನೋರಥವನ್ನು ನೆರವೇರಿಸಿಕೊಳ್ಳಬೇಕೆಂದು ದೀನ ವದನನಾಗಿ ಬೇಡಿಕೊಂಡಿದ್ದ. ಮಗನ ಮನೋವೃತ್ತಿಯನ್ನರಿತ ಹೆಗ್ಡೆಯವರು ಒಂದು ಕ್ಷಣಕಾಲ ಯೋಚಿಸಿದ್ದರು. ಸಂಸಾರವನ್ನು ಗೌರವಯುಕ್ತವಾಗಿ ಸಾಗಿಸಿಕೊಂಡು ಹೋಗುವುದೇ ಅವರಿಗೆ ಬಹು ತ್ರಾಸದಾಯಕವಾಗಿತ್ತು. ಅವರ ಮನಸ್ಸಿನಲ್ಲಿ ತುಮುಲ ಕದನವಾರಂಭವಾಯಿತು. ಏನು ಮಾಡಬೇಕೆಂದು ಅವರಿಗೆ ತೋಚಲಿಲ್ಲ! ಅಂತೂ ಕೊನೆಗೆ ಒಂದು ದೃಢ ನಿರ್ಧಾರಕ್ಕೆ ಬಂದು ಶ್ರೀಧರನಿಗೆ ಸಮಾಧಾನದ ಮಾತುಗಳನ್ನರುಹಿದ್ದರು. ಅವನ ಮುಂದಿನ ವಿದ್ಯೆಯ ವೆಚ್ಚದ ಹೊರೆಯನ್ನು ಹೊರಲು ಸಿದ್ಧರಾದರು! ಆಗಲೇ ಶ್ರೀಧರನೊಮ್ಮೆ ತಂದೆಯನ್ನು ಕೃತಜ್ಞತಾಭಾವನೆಯಿಂದ ಕಂಡಿದ್ದ. ಆಗ ಅವರು ಬರೇ ಮಾನವರಾಗಿ ಕಾಣಲಿಲ್ಲ. 'ತನ್ನ ಪಾಲಿನ ದೇವತೆ'ಯಂತೆ ಶೋಭಿಸಿದ್ದರು!

ಆ ಬಳಿಕ ಶ್ರೀಧರನ ಓದು ಮುಂದುವರಿಯಿತು. ಮಗನ ಉನ್ನತಿಯನ್ನು ಕಂಡು ರಾಮಯ್ಯ ಹೆಗ್ಡೆಯವರ ಉತ್ಸಾಹ ಬೆಳೆಯುತ್ತಿತ್ತು! ಪ್ರತಿ ವರ್ಷವೂ ಅವನು ಮೊದಲನೆಯ ವರ್ಗದಲ್ಲೇ ತೇರ್ಗಡೆ ಹೊಂದುತ್ತಿದ್ದನು. ಈ ವೆಚ್ಚಕ್ಕಾಗಿ ಹೆಗ್ಡೆಯವರು ಸಾಲವನ್ನೂ ಮಾಡಬೇಕಾಯಿತು! ಹೊಟ್ಟೆ ಬಟ್ಟೆಯ ಖರ್ಚನ್ನು ಮಿತಿಗೊಳಿಸಿದರು. ಈ ಮಿತವ್ಯಯದ ವಿಷಯದಲ್ಲಿ ಅವರ ಪತ್ನಿಯೂ ಅವರೊಡನೆ ಸಹಕರಿಸಿದರು. ಹೀಗೆ ನಾಲ್ಕು ವರ್ಷಗಳ ಅವಧಿಯಲ್ಲಿ ತುಂಬಾ ಕಷ್ಟಪಟ್ಟಿದ್ದರು. ಮುಂದೆ ತಮ್ಮ ಮಗನಿಂದ ತಮ್ಮ ಅಭ್ಯುದಯವಾಗುವ ಬಯಕೆಯು ಅವರದಾಗಿತ್ತು!

೦ ೦ ೦ ೦

ಈ ಗತ ಸ್ಮರಣೆಯ ಸಮಾಧಿಯಲ್ಲೇ ಮಗ್ನನಾಗಿದ್ದ ಶ್ರೀಧರನಿಗೆ ಪತ್ರಿಕೆಗಳು ಅಚ್ಚಾಗಿ ಹೊರಬಂದುದು ತಿಳಿಯಲೇ ಇಲ್ಲ. ವಿದ್ಯಾರ್ಥಿಗಳ ಗುಲ್ಲು ಕೇಳಿದಾಗಲೇ ತಾನು ಎಲ್ಲಿರುವೆನೆಂದು ಅವನಿಗೆ ಗೊತ್ತಾಯಿತು. ಕೂಡಲೇ ಕಷ್ಟಪಟ್ಟು ತಾನೂ ಒಂದು ಪತ್ರಿಕೆಯನ್ನು ಪಡಕೊಂಡ. ಅದರಲ್ಲಿ ಒಂದು ಇಡಿ ಪುಟವನ್ನೆ ಆವರಿಸಿದ್ದ ನಂಬರುಗಳ ಕಡೆಗೆ ತನ್ನ ದೃಷ್ಟಿ ಹಾಯಿಸಿದ ಎದೆಯ ಬಡಿತ ತೀವ್ರವಾಗುತ್ತಿತ್ತು! ಪ್ರಥಮ ವರ್ಗದಲ್ಲೆಲ್ಲೂ ಅವನ ನಂಬರ್ ಕಾಣಲಿಲ್ಲ! ಅವನು ಆಶ್ಚರ್ಯಪಡುತ್ತಾ ದ್ವಿತೀಯ ಶ್ರೇಣಿಯಲ್ಲಿ ಹುಡುಕಿದ! ಇಲ್ಲ; ಅಲ್ಲಿಯೂ ಆ ನಂಬರ್ ಲೋಪವಾಗಿತ್ತು! ಯಾಂತ್ರಿಕವಾಗಿ ಅವನ ದೃಷ್ಟಿಯು ತೃತೀಯ ವರ್ಗದ ಕಡೆಗೆ ಹೊರಳಿತು. ಅಲ್ಲಿಯೂ ಗೋಚರಿಸಲಿಲ್ಲ! 'ಹಾ! ಇದೇನು? ತನ್ನ ನಂಬರ್ ಇಲ್ಲ? ತಾನು ತೇರ್ಗಡೆ ಹೊಂದಿಲ್ಲ" ಎಂದು ಶ್ರೀಧರನು ಬಹಳವಾಗಿ ಕಳವಳಿಸಿದ. ಇನ್ನೊಮ್ಮೆ ಆಮೂಲಾಗ್ರವಾಗಿ ಪರೀಕ್ಷಿಸಿದರೂ ಅದೇ ಪರಿಣಾಮ! ಆ ನಂಬರ್ ಇಲ್ಲವೇ ಇಲ್ಲ!

'ತಾನು ತೇರ್ಗಡೆಯಾಗಿಲ್ಲ'

ಶ್ರೀಧರನಿಗೆ ಬವಳಿ ಬಂದಂತಾಯಿತು! ಕಣ್ಣು ಮಂಜಾಗತೊಡಗಿತು! ತಲೆ ತಿರುಗತೊಡಗಿತು! ಘೋರ ಗಾಢಾಂಧಕಾರವೇ ಆವರಿಸಿದಂತೆ ಅವನಿಗೆ ಭಾಸವಾಯಿತು! ಜಗತ್ತೇ ನಿರಾಶಾಮಯವಾಗಿ ತೋರಿತು! ಮುಖವು ತೇಜೋಹೀನವಾಯಿತು. ಒಂದು ಕ್ಷಣವೂ ಅಲ್ಲಿ ನಿಲ್ಲದೆ ಕಾಲ್ತೆಗೆದ.

'ತನ್ನ ಬಾಳೇ ನಿರರ್ಥಕ'ವೆಂದು ಭಾವಿಸುತ್ತಾ ಶ್ರೀಧರ ಎಲ್ಲಿಗೋ ಹೊರಟ. ದುಃಖ ನಿರಾಶೆಗಳೆರಡೂ ಅವನಲ್ಲಿ ತುಂಬಿತ್ತು. ಅನೇಕ ಯೋಚನಾತರಂಗಗಳು ಉದ್ಭವಿಸಿದುವು. ತನ್ನ ತಂದೆಯ ಚಿತ್ರವು ಕಣ್ಣ ಮುಂದೆ ಸುಳಿದಂತಾಯಿತು. 'ನನ್ನ ತಂದೆ—ಅಲ್ಲಲ್ಲ, ತನ್ನ ವಿದ್ಯೆಗಾಗಿ ತಮ್ಮ ಬಾಳನ್ನೇ ಮುಡಿಪಾಗಿಟ್ಟ ಪ್ರತ್ಯಕ್ಷ ದೇವತೆ—ತನಗಾಗಿ ಅದೆಷ್ಟು ಕಷ್ಟಪಟ್ಟರು? ಅವರಿಗೆ ತನ್ನಿಂದ ಏನು ಸುಖ ದೊರೆಯಿತು? ಅವರು ಬಯಸಿದಂತೆ ನಾನು ತೇರ್ಗಡೆಯಾಗಲಿಲ್ಲ. ಅವರಿಗೆ ನನ್ನ ಈ ಮೋರೆಯನ್ನು ಹೇಗೆ ತೋರಿಸಲಿ? ಈ ಅಪಮಾನವನ್ನು ಹೇಗೆ ಸೈರಿಸಲಿ? ನನ್ನ ವಿದ್ಯೆಯ ವೆಚ್ಚವನ್ನು ವಹಿಸಿಕೊಂಡ ಇವರು ಒಂದು ದಿನವೂ ಬೇಸರವನ್ನು ತೋರ್ಪಡಿಸಲಿಲ್ಲ. ಹಾಯ್! ತನ್ನ ಬಗ್ಗೆ ಎಷ್ಟು ಬಯಕೆಗಳನ್ನು ಇಟ್ಟುಕೊಂಡಿದ್ದರು? ಅವೆಲ್ಲಾ ಬರಿದಾಗಬೇಕಾಯಿತೇ? ಈ ರೀತಿಯಾಗಿ ದಾರಿಯುದ್ದಕ್ಕೂ ನೆನೆಯುತ್ತಾ ಮುಂದೆ ಸಾಗುತ್ತಿದ್ದನು.

ಮನೆಯಲ್ಲಿ ತನ್ನ ಕಿರಿಯ ಸಹೋದರಿಯು ತನ್ನ ಮುಂದಿರಿಸಿದ್ದ ಮುಗ್ಧ ಬೇಡಿಕೆಯ ನೆನಪು ಆದ ಮೇಲಂತೂ ಶ್ರೀಧರನ ಹೃದಯ ತುಂಬಿ ಬಂತು. ಕಣ್ಣುಗಳು ಅಶ್ರುಪೂರಿತವಾದುವು. ತನ್ನ ಗೆಳತಿಯರಲ್ಲಿ ಕೆಲವರು ರೇಶ್ಮೆಯ ಉಡುಪು ಧರಿಸಿ ಶಾಲೆಗೆ ಬರುತ್ತಿರುವುದನ್ನು ನಿತ್ಯ

(೧೧ನೇ ಪುಟ ನೋಡಿರಿ)

ಸ್ಥಾಪನೆ: 1906] ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ. 20,00,000/-
ಕ್ಷೇಮನಿಧಿ	—	ರೂ. 14,40,000/-
ಠೇವಣಾತಿಗಳು	—	ರೂ. 7,19,35,000/-
ಸಾಲಗಳು	—	ರೂ. 3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ. 9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ.

The Canara Banking Corporation Ltd.

Estd:- 1906] [H. O. UDIPI (S. India)

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಕೃಷ್ಣನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ. ರೂ. 2-50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ನಮ್ಮ ನದಿಗಳು

ನದಿಗಳಲ್ಲಿ ಅಧಿಕ ನೀರು ಹರಿದು, ಸಮುದ್ರ ಸೇರುತ್ತದೆ!

ಈ ನೀರನ್ನು ಸದುಪಯೋಗಪಡಿಸುವ ಅವಕಾಶ ಧಾರಾಳವಿದೆ.

ನಮ್ಮ ಭಾರತದಲ್ಲಿ ಅನೇಕ ದೊಡ್ಡ ದೊಡ್ಡ ನದಿಗಳಿವೆ. ಇವುಗಳಲ್ಲಿ ವರ್ಷದ ಎಲ್ಲ ಕಾಲಗಳಲ್ಲಿಯೂ ನೀರು ಹರಿಯುತ್ತಿರುತ್ತವೆ.

ಈ ನದಿಗಳಲ್ಲಿ ಒಟ್ಟು ಸುಮಾರು ೧೩೭ ಕೋಟಿ ಎಕ್ರೆ ಅಡಿಗಳಷ್ಟು ನೀರು ಪ್ರತಿ ವರ್ಷ ಹರಿಯುತ್ತವೆ. ಇದರಲ್ಲಿ ಸಾಮಾನ್ಯತಃ ೭೧೯ ಎಕ್ರೆ ಅಡಿ ನೀರು ನೀರಾವರಿಗೆ ಹಾಗೂ ಜಲವಿದ್ಯುತ್ತಿನ ಬಗ್ಗೆ ಉಪಯೋಗಿಸಲ್ಪಡುತ್ತವೆ. ಎಕ್ರೆ ಅಡಿ ಎಂದರೇನೆಂದು ನೀವು ಯೋಚಿಸಬಹುದು. ಒಂದು ಎಕ್ರೆ ಅಡಿ ನೀರು ಎಂದರೆ, ಒಂದು ಎಕ್ರೆ ಭೂಮಿಯಲ್ಲಿ (ಒಂದು ಎಕ್ರೆ=೪೮೪೦ ಚದರ ಗಜ) ಒಂದು ಅಡಿ ಎತ್ತರದಷ್ಟು ನೀರು ನಿಂತರೆ ಎಷ್ಟಾಗುವುದೋ ಅಷ್ಟು ನೀರು. ಪ್ರಮುಖ ನದಿಗಳಲ್ಲಿ ಪ್ರತಿ ವರ್ಷ ಹರಿಯುವ ನೀರಿನ ಪರಿಮಾಣ ಮತ್ತು ಈಗ ಅವುಗಳ ಮೂಲಕ ಉಪಯೋಗಿಸುವ ನೀರು ಈ ರೀತಿಯಿದೆ.

ಸಿಂಧೂ

ಸಿಂಧೂನದಿ ಸದ್ಯ ಭಾರತ ಮತ್ತು ಪಾಕಿಸ್ತಾನವೆರಡು ದೇಶಗಳಲ್ಲೂ ಹರಿಯುತ್ತದೆ. ಇದರಲ್ಲಿ ಪ್ರತಿ ವರ್ಷ ೧೭ ಕೋಟಿ ಎಕ್ರೆ ಅಡಿನೀರು ಹರಿಯುತ್ತದೆ. ಈ ನೀರಿನಲ್ಲಿ ೮೦ ಲಕ್ಷ ಎಕ್ರೆ ಅಡಿ ನೀರು ಉಪಯೋಗಿಸಲ್ಪಡುತ್ತದೆ. ಬಾಕ್ರಾ ನಂಗಲ್ ಅಣೆಕಟ್ಟು ಪೂರ್ತಿಯಾದಮೇಲೆ ಇನ್ನಷ್ಟು ನೀರು ಉಪಯೋಗಕ್ಕೆ ಬೀಳಬಹುದು.

ಬ್ರಹ್ಮಪುತ್ರ

ವರ್ಷಂಪ್ರತಿ ೩೦ ಕೋಟಿ ಎಕ್ರೆ ಅಡಿ ನೀರು ಹರಿಯುವ ನದಿಯಿದು. ಈ ನದಿಯು ಅತ್ಯಧಿಕ ಮಳೆಯು ಸುರಿಯುವ ಬೆಟ್ಟಕಾಡುಗಳಲ್ಲಿಯೇ ಪ್ರವಹಿಸುತ್ತಿರುವುದರಿಂದ, ಇದರ ನೀರು ಯಾವುದಕ್ಕೂ ಉಪಯೋಗವಾಗದೆ ವ್ಯರ್ಥವಾಗಿ ಸಮುದ್ರಕ್ಕೆ ಹರಿಯುತ್ತದೆ.

ಗಂಗಾ

ಗಂಗಾನದಿ ಮತ್ತದರ ಹಲವಾರು ಉಪನದಿಗಳಲ್ಲಿ ೪೦ ಕೋಟಿ ಎಕ್ರೆ ಅಡಿ ನೀರು ಹರಿಯುವುದು. ಇದರಲ್ಲಿ ಗಂಗಾ, ಯಮುನಾ ಮತ್ತು ಶಾರದಾ ಕಾಲುವೆಗಳ ಮೂಲಕ ಅತ್ಯಲ್ಪ ನೀರು ಮಾತ್ರ ಉಪಯೋಗವಾಗುತ್ತಿದೆ. ಈಗ ನಡೆಯುತ್ತಿರುವ ದಾಮೋದರ ನದಿ ಯೋಜನೆಯು ಪೂರ್ಣವಾದ ವೇಳೆ ಸಾಮಾನ್ಯತಃ ೨೦ ಲಕ್ಷ ಎಕ್ರೆ ಅಡಿಗಳಷ್ಟು ನೀರು ಹೆಚ್ಚಿಗೆ ಉಪಯೋಗಿಸಲ್ಪಡುವುದೆಂದು ಅಂದಾಜು ಮಾಡಲಾಗಿದೆ.

ಗೋದಾವರಿ

ಎಂಟೂವರೆ ಕೋಟಿ ಎಕ್ರೆ ಅಡಿಗಳಷ್ಟು ನೀರು ಹರಿಯುವ ದಕ್ಷಿಣ ಭಾರತದ ಈ ನದಿಯ ನೀರಿನಲ್ಲಿ ಸೇಕಡಾ ೧೪ರಷ್ಟನ್ನು ನೀರಾವರಿ ಕೆಲಸಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ. ಪ್ರಾಯಃ ಅತ್ಯಧಿಕ ಉಪಯುಕ್ತತೆಯನ್ನು ಪಡೆಯುವ ನದಿಗಳಲ್ಲಿ ಇದೂ ಒಂದಾಗಿದೆ.

ಮಹಾನದಿ

ಮಹಾನದಿಯಲ್ಲಿ ಏಳೂವರೆ ಕೋಟಿ ಎಕ್ರೆ ಅಡಿ ನೀರು ವರ್ಷಂಪ್ರತಿ ಹರಿದು ಸಮುದ್ರ ಸಂಗಮವಾಗುತ್ತದೆ. ಆದರೆ, ಇದರಿಂದ ಸದ್ಯ ನೀರಾವರಿಗೆ ಬಳಸಿಕೊಳ್ಳುವ ನೀರು ಅತ್ಯಲ್ಪ. ಈಗ ಇದಕ್ಕೆ ಹಿರಾಕುಡ್ ಅಣೆಕಟ್ಟನ್ನು ಕಟ್ಟುತ್ತಲಿದ್ದು, ಇದು ಪೂರ್ಣವಾದ ಮೇಲೆ ೧೯೦ ಲಕ್ಷ ಎಕ್ರೆ ಅಡಿ ನೀರು ಉಪಯೋಗಕ್ಕೆ ಬೀಳುವುದು.

ಕೃಷ್ಣಾ

ಈ ನದಿಯಲ್ಲಿ ವರ್ಷ ವರ್ಷವೂ ಕೇವಲ ೬ ಕೋಟಿ ಎಕ್ರೆ ಅಡಿ ನೀರು ಹರಿಯುವುದಾದರೂ ಇದರಲ್ಲಿ ೧೮ ಪ್ರತಿ ಶತದಷ್ಟು ನೀರಾವರಿಯ ಮೂಲಕ ಉಪಯೋಗಿಸಲ್ಪಡುತ್ತದೆ, ತುಂಗಭದ್ರ ಯೋಜನೆಯ ದೆಸೆಯಿಂದ ಇನ್ನೂ ೬೦ ಲಕ್ಷ ಅಡಿ ನೀರು ಕೆಲಸಕ್ಕೆ ಬರುವುದು.

ಕಾವೇರಿ

ಈ ನದಿಯಲ್ಲಿ ಹರಿಯುವ ನೀರು ೧೨೦ ಲಕ್ಷ ಎಕ್ರೆ ಅಡಿಗಳಷ್ಟೇ ಆದರೂ ಇದರಲ್ಲಿ ಸೇಕಡಾ ೬೦ರಷ್ಟು ನೀರು ಉಪಯೋಗವಾಗುತ್ತಿದೆ. ಭಾರತದ ದೊಡ್ಡ ನದಿಗಳಲ್ಲೆಲ್ಲಾ ಇದರಷ್ಟು ಕಡಿಮೆ ನೀರು ಹರಿಯುವ ಮತ್ತು ಇಷ್ಟು ಹೆಚ್ಚಾಗಿ ಉಪಯೋಗಿಯಾಗುವ ದೊಡ್ಡ ನದಿಯು ಬೇರೊಂದಿಲ್ಲ.

ನರ್ಮದಾ ಮತ್ತು ತಪತಿ

ನರ್ಮದೆಯಲ್ಲಿ ೩೨೦ ಲಕ್ಷ ಮತ್ತು ತಪತಿಯಲ್ಲಿ ೭೦ ಲಕ್ಷ ಅಡಿಗಳಷ್ಟು ನೀರು ಹರಿಯುತ್ತದೆ. ಆದರೆ, ಇವೆರಡರಿಂದಲೂ ಸಮುಚಿತ ಲಾಭ ಮಾತ್ರ ದೊರೆಯುತ್ತಿಲ್ಲ.

ಇದರಿಂದ ನಮ್ಮ ನದಿಗಳಲ್ಲಿ ಹರಿಯುವ ನೀರಿನಲ್ಲಿ ನೀರಾವರಿಗಾಗಿಯೋ, ವಿದ್ಯುದುತ್ಪಾದನೆಗಾಗಿಯೋ ಬಳಸಲ್ಪಡುವ ನೀರು ಅತಿ ಕಡಿಮೆಯೆಂದೂ ವ್ಯರ್ಥವಾಗಿ ಸಮುದ್ರಕ್ಕೆ ಹರಿದು ಹೋಗುವ ನೀರೇ ಅತ್ಯಧಿಕವೆಂದೂ ತಿಳಿಯುತ್ತದೆ. ನದಿಗಳ ನೀರಿನಿಂದ ನಮಗೆ ಲಾಭಗಳಿಸುವುದು ಸಾಧ್ಯವಿರುವಾಗ, ನಾವು ಅದನ್ನು ಸದುಪಯೋಗಪಡಿಸುವುದು ಅವಶ್ಯವಲ್ಲವೆ?

(ಸಂಗ್ರಹಿತ)

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 107/1959.

ಉಡುಪಿ ಶ್ರೀ ಕೃಷ್ಣದೇವರು—ವಾದಿರು,

ಮತ್ತು

ವಿಠಲನ್ಯಾಕ—ಪ್ರತಿವಾದಿ.

ಯಿವರೊಳಗೆ

ಪ್ರತಿವಾದಿ ವಿಠಲನ್ಯಾಕ—ಕಾಪಾಡಿ ನಾಗಪ್ಪ ನ್ಯಾಕರ ಮಗ. ಉಡುಪಿ ತಾಲ್ಲೂಕು ಶಿರೂರು ಗ್ರಾಮದ ಪಾಲಿಕಂಡಿಗೆಯಲ್ಲಿರುವವ—

ಮೇಲ್ಕಂಡ ವ್ಯಾಜ್ಯದಲ್ಲಿ ಸದ್ರಿ ಪ್ರತಿವಾದಿಗೆ ಆಗತಕ್ಕ ವ್ಯಾಜ್ಯದ ನೋಟೀಸು ತಾ. 10-7-1959ಕ್ಕೆ ಯಿಟ್ಟಿರುವದ್ರಿಂದ ಆ ದಿವಸ ಸದ್ರಿ ಪ್ರತಿವಾದಿಯು ತನ್ನ ಆಕ್ಷೇಪ ಹೇಳುವದನ್ನು ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao,
Vakil for Plaintiff.

Udipi Date, 24-6-1959.

ವಿಚಿತ್ರ ನಿಸರ್ಗ

ನಾಗರ ಹಾವಿನ ಕರುಣಾಪೂರ್ಣ ಹಾಸ!

ನಾವು ನೀವು ಕಾಣುವ ನಿಸರ್ಗದಲ್ಲಿ ಇಂತಹ ಅದೆಷ್ಟು ಜನರಿಲ್ಲ?

ಆಸೀಮ ಹಸನ್ಮುಖಿ ಯುವಕನಾಗಿದ್ದನವನು. ನನ್ನೊಡನೆ ಅವನ ಮೈತ್ರಿಯಾದಾಗ ಅವನೆಂದನು—"ಪಾರ್ಶ್ವ ಗಾಯಕನಾಗುವ ಇಚ್ಛೆಯಿಂದ ನಾನಿಲ್ಲಿ ಬಂದಿದ್ದೇನೆ; ನನಗೆ ಶ್ರೀ....ಅವರು ತಮ್ಮ ಫಿಲ್ಮಿನಲ್ಲಿ ಕೆಲಸವೀಯುವ ವಿಶ್ವಾಸ ತೋರಿಸಿರುವರೆಂದು ತಿಳಿದು, ನೀನು ಸಂತುಷ್ಟನಾಗದಿರಲಾರೆ."

ನಿಜವಾಗಿಯೂ ಸಂತೋಷವಾಯಿತು. ಅವನು ಇಂಪಾಗಿ ಹಾಡುತ್ತಲೂ ಇದ್ದ. ಆತನಿಗೆ ವಚನವಿತ್ತವನೆಂದು ಹೇಳಲಾದ ವ್ಯಕ್ತಿಯೂ ನನ್ನ ಪರಿಚಿತನಿದ್ದ—ಅವನೂ ಉತ್ತಮ ವ್ಯಕ್ತಿಯಾಗಿದ್ದ. ಕಲಾ ಪ್ರೇಮಿಯೂ ಹೌದು; ಕಲಾ ಕುಶಲಿಯೂ ಹೌದು. ಅವನ ಫಿಲ್ಮು ಶೀಘ್ರದಲ್ಲಿಯೇ ಆರಂಭವಾಗುವುದರಲ್ಲಿತ್ತು.

ಈ ಯುವಕ—ಅವನ ಹೆಸರು ಮಧುಕರ—"ಅತ" ನನ್ನು ನೋಡಲು ನಿತ್ಯ ಅವನ ಮನೆಗೆ ಹೋಗುತ್ತಿದ್ದ. ಆದರೆ, ತಿಂಗಳು ಉರುಳುತ್ತ ಹೋಯಿತು. ಶ್ರೀ....ಅವರ ಫಿಲ್ಮು ಕಾರಣಾಂತರಗಳಿಂದ ಪ್ರಾರಂಭವಾಗಲಿಲ್ಲ. ಮಧುಕರನ ಸ್ಥಿತಿ ಚಿಂತಾಜನಕವಾಗುತ್ತ ಬಂತು. ಕೈಯಕಾಸೆಲ್ಲ ಕರಗಿತ್ತು. ನಾನು ಅವನನ್ನು ಸಮಜಾಯಿಸಿದೆ—ತಮ್ಮಾ, ಏನಾದರೂ ಕೆಲಸ ಅರಸು. ಈ ಕೆಲಸ ದೊರೆತಾಗ ಅದನ್ನು ಬಿಡಬಹುದು ಎಂದು. ಆದರೆ, ಅವನಿಗೆ ಪಾರ್ಶ್ವಗಾಯಕನೇ ಆಗ ಬೇಕಾಗಿತ್ತು!

ಕೆಲ ದಿನಗಳ ನಂತರ ನಾನು ಕಾರ್ಯನಿಮಿತ್ತ ಮದ್ರಾಸಿಗೆ ತೆರಳಿದೆ. ಎರಡು ತಿಂಗಳು ಕಳೆದ ಮೇಲೆ ಹಿಂತಿರುಗಿ ಬಂದಾಗ, ಸ್ನೇಹಿತರು ಒಂದು ಕೆಟ್ಟ ಸುದ್ದಿಯನ್ನು ತಿಳಿಸಿದರು—ಕೆಲವೇ ದಿನ ಪೂರ್ವದಲ್ಲಿ ಮಧುಕರನು ಮೃತ್ಯು ಮುಖನಾದನು ಎಂದು. ಆತ ಅತ್ಯಂತ ನಿಸ್ಸಹಾಯಾವಸ್ಥೆಯಲ್ಲಿ ಸತ್ತಿದ್ದನಂತೆ. ಸಾಯುವುದಕ್ಕೆ ಎರಡು ದಿನ ಮೊದಲೂ ಆತ ಶ್ರೀ ....ಅವರನ್ನು ಭೇಟಿಯಾಗಲು ಆರು ಮೈಲು ದೂರ ನಡೆದು ಹೋಗಿದ್ದನಂತೆ. ನನಗೆ ಬಹಳ ವ್ಯಸನವಾಯಿತು.

ಆದರೆ, ಅದರ ಉಪಸಂಹಾರ ಮಾತ್ರ ಬಾಕಿಯುಳಿದಿತ್ತು. ಒಂದು ದಿನ ನಾನು ಶ್ರೀ .... ಅವರನ್ನು ನೋಡಲು ಹೋದೆ. ಅವರಿಗೆ ಮಧುಕರನ ಶೋಚನೀಯ ಮೃತ್ಯುವಿನ ಸೂಚನೆಯನ್ನೂ ಇತ್ತೆ. ಆದರೆ, ದುಃಖ ಪ್ರದರ್ಶನದ ಬದಲು ಅವರು ಸಂತೋಷದ ನಿಟ್ಟುಸಿರನ್ನು ಬಿಟ್ಟರು!—"ಓ, ಒಳ್ಳೆಯದಾಯಿತು. ನಾನೇನೋ ಒಂದು ಬಾರಿ ಅವನಿಗೆ ಕೆಲಸ ಕೊಡುವ ಎಂದು ಹೇಳಿದ್ದೇ ತಡ, ಅವನು ನನ್ನ ಬೆನ್ನೇ ಬಿಡಲಿಲ್ಲ! ಅವನೊಬ್ಬ ವಿಚಿತ್ರ ಹುಚ್ಚ!

ಅವರ ಆಂತರಿಕ ದಾನವತ್ವ ಪ್ರಕಟವಾಗಿತ್ತು. ಅದನ್ನು ಕಾಣುತ್ತಲೇ ನನ್ನಲ್ಲಿ ತಿರಸ್ಕಾರ ಹುಟ್ಟಿಕೊಂಡಿತ್ತು! ನಾನು ನೇರಾಗಿ ಹೊರ ಬಂದುಬಿಟ್ಟೆ. ನಾನು ಅನೇಕಾನೇಕ ವ್ಯಕ್ತಿಗಳನ್ನು ನೋಡಿದ್ದೇನೆ; ಆದರೆ, ಇಂತಹ ನಾಗರ ಹಾವಿನ ಪರಿಚಯವಾದುದು ನನಗೆ ಅದೇ ಮೊದಲ ಬಾರಿಯಾಗಿತ್ತು!

ಸಮಾಜದಲ್ಲಿ ನಾಗರಹಾವಿನ ನಗೆಯಿಂದ ಅದೆಷ್ಟು ಹಾನಿಯಾಗುವುದೆಂದು ಈ ಘಟನೆಯಿಂದ ತಿಳಿಯಬಹುದಲ್ಲವೆ?

—ಗೋರಾ

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೪.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

ಕಲ್ಪವೃಕ್ಷ

ಆಧುನಿಕ ಕಲ್ಪವೃಕ್ಷ-ರಸಾಯನ ಶಾಸ್ತ್ರ

ಮಾನವ ಜೀವನದ ಎಲ್ಲೆಡೆಯಲ್ಲೂ ಪ್ರವೇಶ ಮಾಡಿರುವ ರಸಾಯನ ಶಾಸ್ತ್ರ.

ಇಂದಿನ ಕಾಲದ ಜನರ ವಿಶ್ವಾಸ ಹೇಗಿದೆಯೋ ಹೇಳಬರುವುದಿಲ್ಲ; ಆದರೆ, ಹಿಂದಿನ ಕಾಲದ ಜನರಿಗೆ ಸ್ವರ್ಗಲೋಕದಲ್ಲಿ ಒಂದು ಕಲ್ಪವೃಕ್ಷವಿದೆ; ನಾವೇನು ಆದರೊಡನೆ ಬೇಡುತ್ತೇವೋ ಅದನ್ನದು ನಮಗೀಯುತ್ತದೆ ಎಂಬ ಮಾತಿನಲ್ಲಿ ಅಗಾಧ ವಿಶ್ವಾಸವಿತ್ತು. ಈ ವಿಶ್ವಾಸ ಎಷ್ಟರ ಮಟ್ಟಿಗೆ ಸತ್ಯ ಎಂಬುದು ತಿಳಿದಿಲ್ಲ. ಆದರೆ, ಆಧುನಿಕ ಕಾಲದಲ್ಲಿ ರಸಾಯನ ಶಾಸ್ತ್ರವು ಈ ಕಲ್ಪವೃಕ್ಷಕ್ಕಿಂತ ಯಾವ ರೀತಿಯಲ್ಲಿಯೂ ಕಡಿಮೆಯಲ್ಲ ಎಂಬ ಮಾತು ಮಾತ್ರ ನೂರು ನಯೇಪೈಸೆಯಷ್ಟು ಸತ್ಯ. ಮೊನ್ನೆ ಮೊನ್ನೆಯ ವರೆಗೆ ಕಲ್ಪನೆಗೂ ನಿಲುಕದ ಅನೇಕಾನೇಕ ವಿಷಯಗಳನ್ನು ರಸಾಯನ ಶಾಸ್ತ್ರದ ಸಹಾಯದಿಂದ ನಾವು ತಿಳಿದುಕೊಳ್ಳುವುದು ಸಾಧ್ಯವಾಗಿದೆ.

ಎರಡು ವರ್ಷಗಳ ಕೆಳಗಿನ ವರೆಗೂ ಅತ್ಯಂತ ವೇಗವಾಗಿ ಹಾರಾಡುವ ವಿಮಾನದಲ್ಲಿ ಪ್ರಯಾಣಿಸುವುದಾದರೂ ದಿಲ್ಲಿಯಿಂದ ಮಾಸ್ಕೋವಿಗೆ ತೆರಳಲು ಮೂರು ದಿನಗಳು ತಗಲುತಿದ್ದುವು. ಆದರೆ ಇಂದು ನೀವು ಅದೇ ಯಾತ್ರೆಯನ್ನು ಕೇವಲ ಎಂಟೇ ಗಂಟೆಗಳಲ್ಲಿ ಮುಗಿಸಬಲ್ಲಿರಿ. ಮುಂಜಾನೆ ೮ ಗಂಟೆಗೆ ನೀವು ಉಪಾಹಾರ ತೀರಿಸಿ ಟೀ—ಯೂ ೧೦೪ ಮಾದರಿಯ ವಿಮಾನದಲ್ಲಿ ಸವಾರಿ ಮಾಡಿ ಪಾಲಂ ವಿಮಾನ ನಿಲ್ದಾಣದಿಂದ ಹೊರಟರೆ, ಸಂಜೆಯ ಕಾಫಿಯನ್ನು ಮಾಸ್ಕೋ ವಿಮಾನ ನಿಲ್ದಾಣದ ಉಪಾಹಾರ ಮಂದಿರದಲ್ಲಿ ಸ್ವೀಕರಿಸಬಹುದು!

ಯಾತಾಯಾತದ ಸಾಧನಗಳಿಗೂ ರಸಾಯನ ಶಾಸ್ತ್ರಕ್ಕೂ ಯಾವ ಸಂಬಂಧವಿದೆ ಎಂದು ನೀವು ಕೇಳಬಹುದು. ಈ ಸಾಧನಗಳಾದರೋ ಯಂತ್ರವಿದ್ಯೆ ಮತ್ತು ಭೌತಿಕ ವಿಜ್ಞಾನದ ವಿಕಾಸದ ಪರಿಣಾಮವಾಗಿದೆ ಎಂದು ನೀವು ಹೇಳುವುದಾದರೆ, ರಸಾಯನ ಶಾಸ್ತ್ರದ ಪ್ರಭಾವ ಬೀಳದೆ ಇರುವ ವಿಜ್ಞಾನದ ಭಾಗ ಯಾವುದೊಂದೂ ಇಲ್ಲ ಎಂದು ಉತ್ತರಿಸಲೇ ಬೇಕಾಗಿದೆ.

ಟೀ—ಯೂ ೧೦೪ ಮಾದರಿಯ ವಿಮಾನವನ್ನೇ ತೆಗೆದುಕೊಳ್ಳಿರಿ. ಇದರ ಮತ್ತು ಅಂತಹ ವಿಮಾನಗಳ ಹಲವಾರು ಅಂಗಗಳು ಪ್ಲೇಸ್ಟಿಕ್ ಮತ್ತು ರಬ್ಬರುಗಳಿಂದ ಸಿದ್ಧವಾಗುತ್ತವೆ. ವಿಮಾನ ಚಲಿಸಲು ಬೇಕಾಗುವ ಪೆಟ್ರೋಲ್ ಕೂಡಾ ರಾಸಾಯನಿಕ ಪ್ರಕ್ರಿಯೆಗಳಿಂದಲೇ ಶುದ್ಧವಾಗುತ್ತವೆ ತಾನೆ? ವಿಮಾನದ ಶರೀರ ಎಲ್ಯೂಮಿನಿಯಂ ಲೋಹದಿಂದ ಮಾಡಲ್ಪಡುತ್ತದೆ. ಈ ಲೋಹವನ್ನು ತಯಾರಿಸಲು ರಾಸಾಯನಿಕ ಶಾಸ್ತ್ರ ಬೇಡವೆ?

ರಸಾಯನ ಶಾಸ್ತ್ರವನ್ನು ಲೋಹವಿದ್ಯೆಯ ಅಣ್ಣ ಎಂದು ಕರೆಯಬಹುದು. ಕಚ್ಚಾ ಲೋಹಗಳನ್ನು ಮೊದಲಿಗೆ ಕರಗಿಸುವಲ್ಲಿಂದ ರಸಾಯನ ಶಾಸ್ತ್ರವು ತನ್ನ ಕೈಗುಣ ತೋರಿಸಲು ಮೊದಲು ಮಾಡುತ್ತದೆ. ಉದಾಹರಣೆಗಾಗಿ, ಕರಗುವ ಸಮಯದಲ್ಲಿ ಕಚ್ಚಾ ಲೋಹದಲ್ಲಿ ಆಮ್ಲಜನಕ ಪ್ರವೇಶಿಸುವಂತೆ ಮಾಡುವ ರಾಸಾಯನಿಕ ಕ್ರಿಯೆ ಲೋಹವಿದ್ಯೆಯಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿದೆ. ಹೀಗೆ ಪ್ರತಿಯೊಂದೆಡೆಯಲ್ಲಿಯೂ ರಸಾಯನ ಶಾಸ್ತ್ರವು ತನ್ನ ಪ್ರಭಾವವನ್ನು ಬೀರಿದೆ. ಮೊದಮೊದಲು ಈ ಎಲ್ಲ ಕೆಲಸಗಳು ಭೌತಿಕ ಕ್ರಿಯೆಗಳ ಮೂಲಕ ಆಗುತಿದ್ದುವು. ಇದಕ್ಕೆ ತುಂಬ ಕೆಲಸಗಾರರು ಬೇಕಾಗುತಿದ್ದರು. ಆದರೆ, ಈಗ, ರಾಸಾಯನಿಕ ಪ್ರಕ್ರಿಯೆಗಳು ವ್ಯವಹಾರಕ್ಕೆ ಬಂದನಂತರ, ಸುಮಾರು ೨೦೦ ಜನರು ಮಾಡಬಹುದಾಗಿದ್ದ ಕೆಲಸವನ್ನು ಕೇವಲ ೧೫-೨೦ ಜನರೇ ಸುಲಭದಲ್ಲಿ ಮುಗಿಸಿಬಿಡುತ್ತಾರೆ.

ಕೃಷಿಯೇ ಮೊದಲಾದ ಪ್ರಾಚೀನ ಕಾಲದ ವಿದ್ಯೆಗಳಿಗೂ ಇಂದು ರಸಾಯನ ಶಾಸ್ತ್ರದ ಸಹಾಯ ಆಗತ್ಯವೆಂದು ಕಂಡುಬಂದಿದೆ, ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಉತ್ಪಾದನೆ ಅಧಿಕವಾಗುವುದೆಂದು ಹೇಳಲಾಗುತ್ತದೆ. ಗದ್ದೆಗಳಲ್ಲಿ ರೋಗಾಣುಗಳ ನಾಶಕ್ಕಾಗಿಯೂ ಅನೇಕ ರಾಸಾಯನಿಕ ಪದಾರ್ಥಗಳು ಉಪಯೋಗವಾಗುತ್ತಿವೆ. ರಾಸಾಯನಿಕ ಔಷಧಿಗಳಿಂದಲೇ ಮಿಡಿತೆಗಳ ಹಾವಳಿ ಕಡಿಮೆಯಾಗುತ್ತದೆ ಪಾಶ್ಚಾತ್ಯ ದೇಶಗಳಲ್ಲಿ ನೀರಾವರಿಯು ಕೂಡ ರಾಸಾಯನಿಕ ವಿಧಾನಗಳಲ್ಲಿಯೇ ನಡೆಯುತ್ತಿದೆ. ರಾಸಾಯನಿಕ ದ್ರವ್ಯಗಳನ್ನು ವಾಯು ವಿಮಾನಗಳ ಮೂಲಕ ಚೆಲ್ಲಿಸಿ ಹುಲ್ಲು ಮುಳ್ಳುಗಳನ್ನು ನಾಶ ಮಾಡುತ್ತಾರೆ; ಒಂದು ದಿನದಲ್ಲಿ ಒಂದು ವಿಮಾನ ೨೦ ಸಾವಿರ ಎಕ್ರೆ ಭೂಭಾಗಕ್ಕೆ ಈ ರೀತಿಯ ಮಳೆ ಸುರಿಸಬಲ್ಲುದು.

ರಸಾಯನ ಶಾಸ್ತ್ರ ಮತ್ತು ಚಿಕಿತ್ಸಾ ಶಾಸ್ತ್ರಗಳ ಸಂಬಂಧ ಪ್ರಾಚೀನವಾದುದು. ಮೊದಮೊದಲು ವೈದ್ಯ ಶಾಸ್ತ್ರವು ರಸಾಯನ ಶಾಸ್ತ್ರದ ಬೆಳವಣಿಗೆಗೆ ಬೇಕಷ್ಟು ಪ್ರೋತ್ಸಾಹವನ್ನು ಕೊಟ್ಟಿತು. ಈ ಋಣವನ್ನಾದರೋ ರಸಾಯನ ಶಾಸ್ತ್ರವು ಸಂದಾಯಗೊಳಿಸುತ್ತ ಬಂದಿದೆ. ಸಲ್ಫೋನಮೈಟ್ ಮತ್ತು ಪೆನ್ಸಿಲಿನ್ ಮೊದಲಾದ ಆಂಟಿಬಾಯಟಿಕ್ ವರ್ಗದ ಔಷಧಿಗಳ ತಯಾರಿಕೆಯಲ್ಲಿ ರಸಾಯನ ಶಾಸ್ತ್ರದ ಕೈ ಸಾಕಷ್ಟಿದೆ. ಪೆನ್ಸಿಲಿನ್ ಮತ್ತು ಬಿ ಜೀವಸತ್ವ ೧೨ರ ರಚನಾ ತತ್ವದ ಶೋಧನೆ ಎಲ್ಲಕ್ಕಿಂತ ಮೊದಲು ರಸಾಯನ ಶಾಸ್ತ್ರಕ್ಕೆ ಲಭಿಸಿತ್ತು.

ಇಂದು ರಸಾಯನ ಶಾಸ್ತ್ರವು ಪ್ಲೇಸ್ಟಿಕ್ ಮೊದಲಾದ ಕೃತ್ರಿಮ ವಸ್ತುಗಳನ್ನು ನಿರ್ಮಾಣಮಾಡಿದೆ. ಪ್ರಾಕೃತಿಕ ಪದಾರ್ಥಗಳು ಕಡಿಮೆಯಾಗಿರುವುದರಿಂದ ಮೊದಮೊದಲು ಇದು ಉಪಯೋಗಕ್ಕೆ ಬಂತು. ಆದರೆ, ಈ ಪದಾರ್ಥಗಳಿಗೆ ತಮ್ಮದೇ ಆದ ಕೆಲವು ವಿಶಿಷ್ಟ ಗುಣಗಳಿವೆ. ಇದರಿಂದಾಗಿ ಅವು ಕೆಲಸಗಳಲ್ಲಿ ತುಂಬ ಉಪಯೋಗಕ್ಕೆ ಬರುತ್ತವೆ. ಯಾಂತ್ರಿಕ ಮತ್ತು ಪ್ರಾಕೃತಿಕ ಉಷ್ಣತೆಯನ್ನು ತಡೆದುಕೊಳ್ಳುವ ಶಕ್ತಿ, ವಿದ್ಯುತ್ತನ್ನು ಸೆರೆಹಿಡಿಯುವ ಸಾಮರ್ಥ್ಯ ಪರಮಾಣು ವಿಕಿರಣದಿಂದ ಅಪ್ರಭಾವಿತವಾಗುಳಿಯುವ ಶಕ್ತಿ ಮೊದಲಾದ ಗುಣಗಳಿರುವುದರಿಂದ, ಈ ಪದಾರ್ಥಗಳು ಪರಮಾಣು ಶಕ್ತಿ ಮತ್ತು ರೇಡಿಯೋ ಇಲೆಕ್ಟ್ರಾನಿಕ್‌ಗಳ ಯಂತ್ರಗಳಲ್ಲಿಯೂ ಉಪಯೋಗವಾಗುತ್ತವೆ. ಇವುಗಳ ಸಹಾಯದಿಂದಲೇ ಮಾನವನಿರ್ಮಿತ ಉಪಗ್ರಹವನ್ನು ಅಂತರಿಕ್ಷಕ್ಕೆ ಹಾರಿಸಲಾಯಿತು. ಅಲ್ಲದೇ ಮಾನವನ ಲೋಕಾಂತರ ಸಂಚಾರದ ಕನಸು ಕೂಡ ಈ ರಸಾಯನ ಶಾಸ್ತ್ರದ ಸಹಾಯದಿಂದ ನನಸಾಗುವ ನಿರೀಕ್ಷೆಯೂ ಇದೆ.

ಇಂದು ರಸಾಯನ ಶಾಸ್ತ್ರವು(ಹೈಮಲೆಕ್ಯೂಲರ್ ಕಂಪೌಂಡ್) ಆಣವಿಕ ವಿಶ್ರ ತತ್ವಗಳ ವಿಕಾಸದ ಬಗ್ಗೆ ವಿಶೇಷ ಮಹತ್ವವೀಯುತ್ತಿದೆ. ರಶ್ಯವು ಈ ದಿಸೆಯಲ್ಲಿ ಬಹಳಷ್ಟು ಕೆಲಸ ಸಾಧಿಸಿದೆ. ಈ ಹೊಸ ಪದಾರ್ಥಗಳು ವಿದ್ಯುದಪಚಾಲಕಗಳ ಹೊಂದಾಣಿಕೆಯಿಂದ ಕೂಡಿರುತ್ತವೆ. ಇದರಿಂದಾಗಿ, ಯಂತ್ರಗಳ ಆಕಾರವನ್ನು ಹೆಚ್ಚಿಸದೇನೇ ಶಕ್ತಿಯನ್ನು ಅಧಿಕಗೊಳಿಸುವುದು ಸಾಧ್ಯವಾಗಿದೆ.

ಈ ಹೊಸ ಮಿಶ್ರ ಪದಾರ್ಥಗಳು ಕೇವಲ ವೈಜ್ಞಾನಿಕರಿಗೆ ಮಾತ್ರ ಪ್ರಯೋಜನಕಾರಿಗಳೆಂದು ತಿಳಿಯಬಾರದು. ಜೀವನದ ಪ್ರತಿ ಕ್ಷೇತ್ರದಲ್ಲಿ, ಮನೆಮನೆಯಲ್ಲಿ ಪ್ಲಾಸ್ಟಿಕ್ ಇಂದು ಪ್ರವೇಶ ಮಾಡಿದೆ. ಕಟ್ಟಡಗಳ ಗೋಡೆಗಳಲ್ಲಿ ಮರದ ಬದಲಿಗೆ ಕಿಟಕಿ ಬಾಗಿಲುಗಳಿಗೆ ಉಪಯೋಗಿಸುತ್ತಾರೆ. ಇದರಿಂದ ಆಕರ್ಷಕ ಆಸನ ಸಾಮಗ್ರಿಗಳನ್ನು ತಯಾರಿಸಬಹುದು; ಇದರ ಪಾತ್ರೆಗಳೂ ಬಹಳ ಸುಲಭ ಬೆಲೆಯಲ್ಲಿ ಸಿಗುತ್ತವೆ; ಮತ್ತು ಸುಲಭದಲ್ಲಿ ನಿರ್ಮಲಗೊಳಿಸಲಾಗುತ್ತವೆ. ಕಳ್ಳನು ಒಯ್ದರೂ ಇದರಿಂದೇನು ಹೆಚ್ಚು ನಷ್ಟವಾಗುವಂತಿಲ್ಲ.

ಮುದ್ರಣಾಲಯಗಳಿಗೆ ಪ್ಲಾಸ್ಟಿಕ್ ಆಗಮನದಿಂದ ತುಂಬ ಪ್ರಯೋಜನವಿದೆ. ಇದರಿಂದ ಅಕ್ಷರಗಳ

(೯ನೇ ಪುಟ ನೋಡಿರಿ)



ಏಳು ಅಡಿ ಉದ್ದದ ಈ ಪ್ಲಾಸ್ಟಿಕ್ ದೋಣಿಯು ಇಬ್ಬರನ್ನು ನದಿ ದಾಟಿಸಬಲ್ಲುದು.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. ೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA—40
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ಶಿಕ್ಷಣ ಕ್ಷೇತ್ರ

ಪರೀಕ್ಷಾ ಪದ್ಧತಿಯಲ್ಲಿ ಆಮೂಲ ಪರಿವರ್ತನೆ ಬೇಕು

ಭಕ್ತಿ, ಆದರ, ಸಹನೆಗಳನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ಕಲಿಸಬೇಕು.

○ ○

ಉದ್ಘಾಟಕರ ಭಾಷಣ

"ನಾನು ಶಿಕ್ಷಣದ ದಾರಿಯನ್ನು ಹಿಡಿದು ನನ್ನ ಜೀವನ ಪ್ರಾರಂಭಿಸಿದರೂ ಮುಂದೆ ಅದು ಬೇರೆ ದಾರಿ ಹಿಡಿಯಿತು ಆದರೆ ಇಂದಿಗೂ ನಾನು ಶಿಕ್ಷಣದಲ್ಲಿ ಆಸ್ಥೆ ವಹಿಸುತ್ತೇನೆ. ಶಿಕ್ಷಣ ಒಂದು ಜಡವಾದ ಶಕ್ತಿಯಲ್ಲ. ಚೇತನಾಪೂರ್ಣವಾದ ಪ್ರಗತಿ. ಮಹಾಯುದ್ಧದ ಮಧ್ಯದಲ್ಲಿ ಕೂಡ ಬ್ರಿಟಿಶರು ಶಿಕ್ಷಣ ಪದ್ಧತಿಯನ್ನು ಸುಧಾರಿಸಲು ಒಂದು ಸಮಿತಿಯನ್ನು ನಿಯಮಿಸಿದರು. ಇಂದು ಅಮೇರಿಕೆಗೆ ತನ್ನ ಶಿಕ್ಷಣ ಪದ್ಧತಿಯ ಬಗ್ಗೆ ತೃಪ್ತಿಯಿಲ್ಲ. ಅದು ರಶಿಯದೆಡೆ ನೋಡುತ್ತಿದೆ. ಈ ಸಮಸ್ಯೆಯನ್ನು ಅನೇಕ ಪತ್ರಿಕೆಗಳಲ್ಲಿಂದು ಚರ್ಚಿಸುತ್ತಿರುವುದನ್ನ ನಾನು ಕಾಣುತ್ತೇವೆ.

ಕೆಲ ವಿಷಯಗಳಲ್ಲಿ ಭಾರತವು ಮುಂದಿದೆಯಾದರೂ ಕೆಲ ವಿಷಯಗಳಲ್ಲಿ ಅದು ಅರ್ಧ ಶತಮಾನದಷ್ಟು ಹಿಂದೆ ಇದೆ. ಕೇವಲ ಹನ್ನೊಂದು ವರುಷಗಳಲ್ಲಿ ಆದ ಬದಲಾವಣೆಯು ಇತಿಹಾಸಜ್ಞರಿಗೆ ಅಚ್ಚರಿಯನ್ನುಂಟು ಮಾಡುವಂತಹದಿದೆ ನಮಗೆ ಸ್ವಾತಂತ್ರ್ಯ ದೊರೆತದ್ದು ಇಬ್ಭಾಗದ ಒಂದು ಮರೆಯದ ನೋವಿನಿಂದ, ಆದರೆ ನಮ್ಮ ಸಂವಿಧಾನ ಸಿದ್ಧವಾಯಿತು. ಮಹಾರಾಜರು ಇಲ್ಲದಾದರು. ನಮ್ಮ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗಳು ವೇಗದಿಂದ ಬದಲಾಗುತ್ತ ನಡೆದಿವೆ.

ಇಂದು ರಾಷ್ಟ್ರಪತಿಗಳಿಂದ ಮೊದಲು ಮಾಡಿಕೊಂಡು ವಿದ್ಯಾಖಾತೆಯ ಚಪರಾಸಿಯ ವರೆಗೂ ನಮ್ಮ ಶಿಕ್ಷಣದಲ್ಲಿ ಬದಲಾವಣೆಯಾಗಬೇಕೆನ್ನುತ್ತಿದ್ದಾರೆ. ಯಾಕೆ? ಇದನ್ನು ನಾವು ಯಶಸ್ವಿಯಾಗಿ ಬದಲು ಮಾಡಲು ಶಕ್ತರಾಗಿಲ್ಲ. ಇಂದು ಕಲಿತ ಜನ ಕೆಲಸವಿಲ್ಲದೆಯೇ ಅಡ್ಡಾಡುತ್ತಿದ್ದಾರೆ. ಸುದ್ದಿ ಬರೆಯುವ ಕೆಲಸಕ್ಕಾಗಿ ಭೂಗರ್ಭ ಶಾಸ್ತ್ರಜ್ಞ, ಪದಾರ್ಥವಿಜ್ಞಾನ ಮುಂತಾದವರಿಂದ ಹೇರಳ ಅರ್ಜಿಗಳು ಬರುತ್ತಿವೆಯೆಂದರೇನು? ತರುಣ ವಿದ್ಯಾರ್ಥಿಗಳು ಆಯಾ ವಿಷಯದಲ್ಲಿ ಪದವಿಗಳನ್ನು ಪಡೆಯಲು ೮—೧೦ ವರುಷಗಳಾದರೂ ಪರಿಶ್ರಮಿಸಿರುತ್ತಾರೆ. ತಂದೆ ತಾಯಿಗಳು ಹಣ ವೆಚ್ಚ ಮಾಡಿರುತ್ತಾರೆ. ಕೆಲಸಕ್ಕೆ ಯೋಗ್ಯ ಮಾರ್ಗ ದೊರೆಯದಿದ್ದರೆ ಒಂದು ಬಗೆಯ ಉದಾಸೀನತೆ ಉದ್ಭವಿಸುತ್ತದೆ. ಈ ರೀತಿಯ ಶಿಕ್ಷಣ ಮಟ್ಟದಿಂದ ನಮ್ಮಲ್ಲಿ ಕುಶಲತೆಯು ಕಡಿಮೆಯಾಗಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯು ಮುಗಿಯುವದರೊಳಗಾಗಿ ನಿರಕ್ಷರಿಗಳನ್ನು ಇಲ್ಲದಂತೆ ಮಾಡುವ ಘೋಷಣೆಯಿದೆ ಆದರೆ ಇದಕ್ಕಿಂತ ಮಹತ್ವದ್ದೆಂದರೆ ನೈತಿಕ ಶಿಕ್ಷಣ, ಜೀವನದ ಆದರ್ಶ ಹಾಗೂ ಕೆಲಸದಲ್ಲಿಯ ಕುಶಲತೆ

ಸುದೈವದಿಂದ ನಮ್ಮ ಪರಂಪರೆಯು ಬಹಳೇ ಉಜ್ವಲವಾಗಿದೆ. ನಾವಿಂದು ಶಿಕ್ಷಣದಲ್ಲಿ ಉಳಿದ ಯಾವ ದೇಶದವರೂ ಆಗಬೇಕಾಗಿಲ್ಲ. ನಾವು ಭಾರತೀಯರಾಗಿರೋಣ. ನಮ್ಮನ್ನು ನಾವು ಅರಿಯೋಣ ನಮ್ಮ ದೇಶಕ್ಕೆ ಯೋಗ್ಯವಾದ ಶಿಕ್ಷಣ ನಮಗೆ ಬೇಕು ಹಿಂದೆ ಶಾರೀರಿಕ ಶಿಕ್ಷಣಕ್ಕೆ ಬ್ರಿಟಿಷರು ಮಹತ್ವ ಕೊಟ್ಟಿರಲಿಲ್ಲ. ಅವರಿಗೆ ಕೇವಲ ಕಾರಕೂನರು ಬೇಕಾಗಿದ್ದರು ಲಲಿತ ಕಲೆಗಳ ಮಹತ್ವ ನಾವಿಂದು ಅರಿಯಬೇಕಾಗಿದೆ. ಲಲಿತ ಕಲೆಯು ಭಾವನಾತ್ಮಕವಾದ ಸಂಸ್ಕೃತಿ ಕೊಡುತ್ತದೆ. ನಮ್ಮ ಸಂಸ್ಕೃತಿಯು ಐದು ಸಾವಿರ ವರುಷದ್ದು. ಇಜಿಪ್ತ, ರೋಮನ್, ಗ್ರೀಕ ಸಂಸ್ಕೃತಿಗಳು ಹಿಂದೆ ಇದ್ದವು. ಇಂದು ಇಲ್ಲ ಆದರೆ ಭಾರತೀಯ ಸಂಸ್ಕೃತಿ ಇಂದಿಗೂ ಕೆಲವೆಡೆ ಜೀವಂತವಾಗಿರುವದನ್ನು ಕಾಣಬಹುದಾಗಿದೆಯೆಂದು ವಿಲ್ ಡೂರಂಟರು ಬರೆದಿದ್ದಾರೆ. ಆದ್ದರಿಂದ ನಾವು ಮುಂದೆ ಸಾಗುವಾಗ ನಮ್ಮ ಹಿಂದಿನ ಸಂಸ್ಕೃತಿಯ ಮೇಲೆ ಒಂದು ಹಿಡಿತವನ್ನು ಸಾಧಿಸಬೇಕಾಗುವದು.

ಇಂದು ವಿಶ್ವದ ತಾರ್ಕಿಕರು ವಿಜ್ಞಾನದಿಂದ ಆಗುವ ವಿಧ್ವಂಸಕ ವ್ಯಾಪಾರದ ಬಗ್ಗೆ ವಿಚಾರಿಸುತ್ತಿದ್ದಾರೆ ಇದು ಒಬ್ಬ ಮನುಷ್ಯನ ಅಥವಾ ಗುಂಪಿನ ಸ್ವಾರ್ಥದಿಂದಲೋ ದೋಷದಿಂದಲೋ ಪರಿಣಮಿಸಬಹುದು ಆದರೆ ಶಿಕ್ಷಣದ ಈ ವಿಶಾಲ ಕ್ಷೇತ್ರವು ಒಳ್ಳೆಯ ರೀತಿಯಿಂದ ಮಾರ್ಗದರ್ಶಿತವಾಗಬೇಕೆಂಬುವದರ ಬಗ್ಗೆ ನಾವಿಂದು ತಿಳಿಯಬೇಕಾಗಿದೆ. ಮಾಧ್ಯಮಿಕ ಶಿಕ್ಷಕರ ಸಮಸ್ಯೆಗಳೂ ಶಿಕ್ಷಣದ ಸಮಸ್ಯೆಗಳಲ್ಲಿಯೇ ಸಮಾವೇಶವಾಗುವವು".

ಅಧ್ಯಕ್ಷರ ಭಾಷಣ

ಈ ರೀತಿಯ ಸಮ್ಮೇಲನವನ್ನು ಕರೆದು ಶಿಕ್ಷಕರ ಅತಿಮಹತ್ವದ ಸಮಸ್ಯೆಗಳನ್ನು ಚರ್ಚಿಸುವಿರೆಂದು ನನಗೆ ಅತ್ಯಂತ ಆನಂದವಾಗುತ್ತದೆ ಇಂದು ದೇಶದಲ್ಲಿ ನಡೆದ ರಾಜಕೀಯ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ನಡೆದ ತೀವ್ರ ಬದಲಾವಣೆಗಳು ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಪ್ರಭಾವವನ್ನು ಬೀರದೆಯೆ ಇಲ್ಲ ಶಿಕ್ಷಕರ ಮಟ್ಟವನ್ನು ಎತ್ತರಿಸಿ ಸಮಾಜಕ್ಕೆ ಅದರಿಂದ ಹೆಚ್ಚಿನ ಲಾಭವಾಗುವಂತೆ ಮಾಡಲು ಪ್ರಯತ್ನಿಸುವದು ನನಗೆ ಬಹಳ ಇಷ್ಟವಾದದ್ದು. ಯೋಜನೆಯ ಎಂಟು ವರುಷಗಳು ಕಳೆದರೂ ಸಾವಿರಗಟ್ಟಲೆ ವಿದ್ಯಾವಂತರು ಅಸಂತುಷ್ಟರಾಗಿ ಕೆಲಸವಿಲ್ಲದೆಯೆ ಅಲೆಯುತ್ತಿದ್ದರೂ ಯಾವುದೇ ಬಗೆಯ ಯೋಗ್ಯವಾದ ಕೆಲಸ ಈ ದಿಶೆಯಲ್ಲಿ ಆಗಿಲ್ಲ. ನಿರಕ್ಷರಿಗಳನ್ನು ಸುಧಾರಿಸುವದೂ ಬಹಳಷ್ಟು ಆಗಿಲ್ಲ ಶಿಶು ಸಂಗೋಪನೆಯ ಶಾಲೆ, ಹಾಗೂ ಕಿಂಡರ ಗಾರ್ಟನ್ ಶಾಲೆಗಳನ್ನು ತೆರೆಯುವದು ಹೆಚ್ಚಾಗಿ ಕಂಡುಬರುತ್ತಿಲ್ಲ ನಾವು ಸಡಿಲಾದ ಒಂದು ತಳಹದಿಯ ಮೇಲೆ ಭವ್ಯ ಮಂದಿರವನ್ನು ಕಟ್ಟಲು ಹೊರಟಂತಿವೆ ನಮ್ಮ ಗುರಿಯು ಶಿಕ್ಷಣದ ವಿಶಾಲತೆಯ ಕಡೆಗಿರಬೇಕು ಕೇವಲ ಬೌದ್ಧಿಕವಾದ ತಾಂತ್ರಿಕ ಶಿಕ್ಷಣದ ಕುಶಲತೆಗಿಂತ—ಸಂಸ್ಕಾರ, ಮತ್ತು ಹೊಸ ಮಾನವೀಯತೆಯಿಂದ ಕೂಡಿದ ಶಿಕ್ಷಣವು ಬೇಕು. ವಿದ್ಯಾರ್ಥಿಯ ಕಲಾತ್ಮಕ, ಹಾಗೂ ಆಧ್ಯಾತ್ಮಿಕ ಅಭೀಪ್ಸೆಯನ್ನು ಪೂರ್ತಿಗೊಳಿಸುವಂತಹದಿರಬೇಕು. ಇನ್ನು ಮುಂದೆ ಬರುವ ಶಿಕ್ಷಣ ಮುಖ್ಯತಃ ನಮ್ಮ ವಿದ್ಯಾರ್ಥಿಗಳಿಗೆ ಕೆಲಸವನ್ನೊದಗಿಸುವಂತಹದು ಇರಬೇಕು ಎಂಬುದು ನನ್ನ ಮತ.

ಅಜ್ಞಾನ ಹಾಗೂ ನಿರಕ್ಷರತೆಗಳು ಒಳ್ಳೆಯ ಸರಕಾರಕ್ಕೆ ಕೊರತೆಗಳು. ನಿರಕ್ಷರಿಯು ತನ್ನ ಮತವನ್ನು ಜಾಣ ರೀತಿಯಿಂದ ಕೊಡಲಾರ ನಮ್ಮ ಸಂವಿಧಾನದಲ್ಲಿದ್ದ ನಿರ್ದೇಶಕ ತತ್ವಗಳಲ್ಲಿ ಹದಿನಾಲ್ಕು ವರುಷಗಳ ವರೆಗೆ ಕಡ್ಡಾಯದ ಹಾಗೂ ಉಚಿತ ಶಿಕ್ಷಣ ಕೊಡಬೇಕೆಂವಿದೆ.

ಶಾರೀರಿಕ ಶಿಕ್ಷಣವು ಬಹಳೇ ಆವಶ್ಯವಾಗಿದೆ. ಸದೃಢವಾದ ದೇಹ ಸದೃಢವು ಮನಸ್ಸನ್ನು ನಿರ್ಮಿಸುತ್ತವೆ. ಶಿಕ್ಷಕರು ಶಾರೀರಿಕ ಶಿಕ್ಷಣದಲ್ಲಿ ಹೆಚ್ಚು ಆಸ್ಥೆವಹಿಸಿ ಮತ್ತೆ ಜೀವಕಳೆ ತಂಬುವರೆಂದು ಭಾವಿಸುವೆ.

(೬ನೇ ಪುಟ ನೋಡಿರಿ)



ಅಮೇರಿಕದ ಸಂಯುಕ್ತ ಸಂಸ್ಥಾನ ಮತ್ತು ಕೆನಡಾಗಳ ಮೇರೆಯಲ್ಲಿ ಹರಿಯುವ ನದಿ ಸ್ಯಂಟ್ ಲಾರೆನ್ಸ್. ಚಿತ್ರದಲ್ಲಿ ಕೆಳಗಡೆ ಕಾಣುವುದು ನ್ಯೂಯಾರ್ಕ ಕಂಪನಿ; ಮೇಲುಗಡೆ ಕಾಣುವುದು ಅಂಟೋರಿಯೋ ಕಂಪನಿ.

ಉಡ್ಪಿ ಡಿ ಮು. ಕೋರ್ಟಿನಲ್ಲಿ

O S. 37/1958, R I A 202/1959

ಸರಾಫ್ ನಾರಾಯಣ ಭಟ್ಟ- ಅರ್ಜಿದಾರ,
—(ವಾದಿ)

ಮತ್ತು

1 ವಾಸುದೇವಾಚಾರ್ಯ—ಕೇಶವಾಚಾರ್ಯರ ಮಗ—ಹಾಲಿ ಧಾರವಾಡ ಟೌನ್‌ನಲ್ಲಿರುವವ, 2. ಶ್ರೀ ಭಂಡಾರಿಕೇರಿ ಮಠದ ಜನರಲ್ ಏಜಂಟ್—M. ನಾರಾಯಣಾಚಾರ್ಯ—ವೆಂಕಟ್ರಮಣ ಉಪಾಧ್ಯರ ಮಗ ಉಡ್ಪಿ ಕಸಬಾ— (2 ಮತ್ತು 3ನೇ ಪ್ರತಿವಾದಿರು) 2 & 3 ಎದ್ರಿರು—

ಇವರೊಳಗೆ

ಸದರಿ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ಮೇಲ್ಕಂಡ ದಾವೆಯಲ್ಲಿ ತಾ 24-7-53 ರಲ್ಲಿ ಕೊಡೋಣಾದ ಪ್ರಿಲಿಮಿನರಿ ಡಿಕ್ರಿ ವಿಧಿ ಪ್ರಕಾರ ಬಹ ಬಾಕಿ ಹಣವನ್ನು ಪ್ರಿಲಿಮಿನರಿ ಡಿಕ್ರಿ ಆಸ್ತಿಯ ಮಾರಾಟದಿಂದ ಪಡಿಯುವರೆ ಫೈನಲ್ ಡಿಕ್ರಿ ಅಪೇಕ್ಷಿಸಿ ಅರ್ಜಿದಾರನು ದಾಖಲು ಮಾಡಿದ ಅರ್ಜಿಯು ತಾರೀಕು 3-7-59ಕ್ಕೆ ಇಟ್ಟಿರುವದ್ರಿಂದ ಆ ಕುರಿತು ಆಕ್ಷೇಪವಿದ್ದರೆ ಆ ದಿನ್ನ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು.

K. Ramakrishna Rao,
Vakil for Petitioner

Udipi, Dated 25-6-1959

ದಿ| ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎನ್, ಎಸ್ ಕಿಲ್ಲೆ ಮತ್ತು ಎನ್. ಎ ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ ಆಕರ್ಷಕ ರಕ್ಷಾಪತ್ರ ಬೆಲೆ: ರೂ. 2 00.

ಭಾರತದ ಕರ್ಣ

"ಭಾರತದ ಕರ್ಣನು ದಿ| ಕಿಲ್ಲೆಯವರಿಗೆ ಒಲಿದಿದ್ದ .....ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ| ಎಂ ಆರ್. ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ ಉಡುಪಿ

ನೀರು ಒಡೆದರೆ, ತತ್‌ಕ್ಷಣ ತಾನಾಗಿಯೇ ಕೂಡುತ್ತದೆ; ಸೀರೆ ಹರಿದರೆ, ಸಿಂಪಿಗನಿಂದ ಕೂಡಲೇ ಕೂಡಿಸಿ ಹೊಲಿಸಬಹುದು; ಆದರೆ, ಮನಸ್ಸು ಒಡೆದರೆ ಇಲ್ಲವೇ ಹರಿದರೆ, ಅದನ್ನು ಸೇರಿಸುವುದು ಸಾಧ್ಯವೆ?

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೨-೭-'೫೯	೪೨

ಆಹಾರ ಧಾನ್ಯಗಳ ಬೆಲೆ

ನಾಗರಿಕರು ನೆಮ್ಮದಿಯಿಂದ ಬದುಕುವಂತಾಗಬೇಕಾದರೆ, ಅವರ ಸಂಪಾದನೆ ಮಾತ್ರ ಪರ್ಯಾಪ್ತವಾಗಿದ್ದರೆ ಸಾಲದು, ಜೀವನೋಪಯೋಗಕ್ಕೆ ಅವಶ್ಯಕವಾದ ಪದಾರ್ಥಗಳೂ ಲಭ್ಯವಿರಬೇಕೆನ್ನುವುದು ಜಗನ್ಮಾನ್ಯವಾದ ತತ್ವವಾಗಿದೆ. ಭಾರತದಂತಹ ದೀನರ ದೇಶದಲ್ಲಿ ತಮ್ಮ ದೈನಂದಿನ ವ್ಯವಹಾರವನ್ನೂ ಸುಗಮವಾಗಿ ಸಾಗಿಸುವ ಶಕ್ತಿಯುಳ್ಳ ಕುಟುಂಬಗಳಿರುವುದು ಕಡಿಮೆ ಎಂಬುದು ಸುವೇದ್ಯವೇ. ಭಾರತೀಯನೊಬ್ಬನ ಸರಾಸರಿ ಆದಾಯವನ್ನು ರೂಪಾಯಿಗಟ್ಟಲೆಯಲ್ಲಿ ಗಣಿಸಿ ನೋಡಿದರೂ, ಆ ಮೊಬಲಗಿನಲ್ಲಿ ಆತ ಮರ್ಯಾದೆಯ ಜೀವನವನ್ನು ನಡೆಸುವುದು ಸಾಧ್ಯವಿಲ್ಲವೆಂಬುದನ್ನು ಯಾರಾದರೂ ಹೇಳಬಹುದು. ಆಡಂಬರ, ವೈಭವ ಅಥವಾ ಅನಾವಶ್ಯಕವಾದ ಪದಾರ್ಥಗಳನ್ನು ದೂರವಿಟ್ಟಾದರೂ ತನ್ನ ಆದಾಯವನ್ನು ಅವಶ್ಯ ಬೇಕಾದುದಕ್ಕೆ ಮಾತ್ರ ವೆಚ್ಚಮಾಡುವ ಮಿತವ್ಯಯಿಯಾದರೂ ವರ್ಷದ ಕೆಲವೊಂದು ಸಮಯ ತಬ್ಬಿಬ್ಬಾಗುವುದು ಸ್ವಾಭಾವಿಕವಾಗಿದೆ.

ಸರಕಾರವು ಅನೇಕ ತರದ ಕರಗಳನ್ನು ಹಾಕಿರುವುದರಿಂದಲೋ, ಏರಿಸಿರುವುದರಿಂದಲೋ ಹಲವಾರು ಪದಾರ್ಥಗಳ ಬೆಲೆಯು ದಿನದಿಂದ ದಿನಕ್ಕೆ ಏರುತ್ತ ಹೋಗುತ್ತದೆ. ವ್ಯಾಪಾರಿಗಳ ಮೇಲೆ ಹಾಕಲಾಗುವ ತೆರಿಗೆಯನ್ನೂ ಜನಸಾಮಾನ್ಯರೇ ವಹಿಸಿಕೊಳ್ಳುವುದು ಸಂಪ್ರದಾಯವಾಗಿ ಬಂದಿದೆ. ಸರಕಾರವೇನೋ ಪತ್ರಿಕೆಗಳಲ್ಲಿ "ಸಕ್ಕರೆಗೆ ಹೆಚ್ಚು ಬೆಲೆ ಕೊಡಬೇಕಾಗಿಲ್ಲ" ಎಂದು ಜಾಹೀರಾತು ಇತ್ತರೂ ಗಿರಾಕಿಗಳು ಮಾತ್ರ ಹೆಚ್ಚು ಬೆಲೆ ಕೊಡದೆ ತಮಗೆ ಬೇಕಾದ ಸಕ್ಕರೆಯನ್ನು ಅಂಗಡಿಯವರಿಂದ ಪಡೆಯುವಂತಿಲ್ಲ. ಹಾಗೆಯೇ ಜನತೆಯ ದಿನನಿತ್ಯದ ಉಪಯೋಗಕ್ಕೆ ಬೇಕಾದ ಪದಾರ್ಥಗಳೆಲ್ಲವೂ ಮಳೆಗಾಲ ಬಂತೆಂದರೆ, ಏರಿದ ಬೆಲೆಯನ್ನು ಹೊಂದುತ್ತವೆ. ಮುಡಿಯೊಂದಕ್ಕೆ ೧೬-೧೭ ರೂಪಾಯಿಯಲ್ಲಿ ಆರು ತಿಂಗಳ ಹಿಂದೆ ಅಕ್ಕಿಯು ದೊರೆಯುತ್ತಿದ್ದರೆ, ಇಂದು ಈ ಬೆಲೆಯು ರೂ. ೨೫-೨೬ರ ಮಟ್ಟವನ್ನೂ ಮೀರಿದೆ. ಇಷ್ಟೊಂದು ಅಧಿಕ ಬೆಲೆಯನ್ನು ತೆತ್ತು ಅಕ್ಕಿಯನ್ನು ಮಾತ್ರ ಕೊಂಡರೆ ಸಾಲದು, ಅದಕ್ಕೆ ಬೇಕಾದ ಮೇಲು ಸಾಮಗ್ರಿಗಳನ್ನೂ ಕೊಂಡುಕೊಳ್ಳಬೇಕು; ಆಗ, ಅವುಗಳ ಬೆಲೆಯೂ ಇದೇ ರೀತಿ ಏರುತ್ತಿರುವುದು ಗೋಚರವಾಗುತ್ತದೆ. ಹೀಗೆಯೇ ಜನತೆಯು ಅಧಿಕ ಬೆಲೆಯನ್ನು ತೆತ್ತೇ ತಮ್ಮ ನಿರ್ವಾಹಕ್ಕೆ ಅತ್ಯಗತ್ಯವಾದ ವಸ್ತುಗಳನ್ನು ಕೊಳ್ಳಬೇಕಾಗುತ್ತದೆ. ಇದರಿಂದ ಮಧ್ಯಮ ಹಾಗೂ ನಿಮ್ನ ವರ್ಗದ ಜನತೆಯು ಈಗಾಗಲೇ ಕಂಗಾಲಾಗಿರುವುದು ಎಲ್ಲೆಲ್ಲಿಯೂ ಕಂಡುಬರುತ್ತಿದೆ.

ಜನತೆಗೆ ಆಹಾರಧಾನ್ಯಾದಿಗಳನ್ನು ಪೂರೈಸಿಕೊಡುವ ಹೊಣೆಗಾರಿಕೆಯನ್ನು ಹೊತ್ತ ಸರಕಾರವು, ಅವರಿಗವನ್ನು ಯೋಗ್ಯ ಬೆಲೆಯಲ್ಲಿಯೇ ದೊರೆಯುವ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಕೈಗೆ ನಿಲುಕದ ಬೆಲೆಯು ಮಾರುಕಟ್ಟೆಯಲ್ಲಿ ಉಳಿದರೆ, ಅದರಿಂದ ಸಂಕಟ ಪಡುವ ಕುಟುಂಬಗಳ ಸಂಖ್ಯೆ ಅತ್ಯಧಿಕವಾಗುವುದು. ಭಾರತದ ಆರ್ಥಿಕ ಮಟ್ಟವು ಉನ್ನತಗೊಳ್ಳುತ್ತ ಇದೆ; ಸರಾಸರಿ ಆದಾಯ, ರಾಷ್ಟ್ರೀಯ ಆದಾಯಗಳು ಏರಿವೆ ಎಂದು ಮುಂತಾಗಿ ಅಂಕೆಸಂಖ್ಯೆಗಳು ಹೇಳುತ್ತವೆ; ಆದರೆ, ದಿನೇದಿನೇ ಮಧ್ಯಮ ಹಾಗೂ ನಿಮ್ನ ವರ್ಗಗಳ ಜನಸಂಖ್ಯೆ ಹೆಚ್ಚುತ್ತ ಹೋಗುತ್ತಿರುವುದನ್ನು ಸುಳ್ಳೆನ್ನಬರುವಂತಿಲ್ಲ. ಆಹಾರಧಾನ್ಯಗಳ ಉತ್ಪಾದನೆ ೧೯೫೭ — ೫೮ಕ್ಕಿಂತ ೫೮ — ೫೯ರಲ್ಲಿ ಹೆಚ್ಚಿದೆ; ಎಂದು ಸರಕಾರಿ ವರದಿಗಳು ಸಾರುತ್ತವಾದರೂ, ಉತ್ಪಾದನೆ ಹೆಚ್ಚಿದಾಗ ತಾನಾಗಿಯೇ ಇಳಿಮುಖವಾಗಬೇಕಾಗಿದ್ದ ಅವುಗಳ ಬೆಲೆಯು ಮೇಲ್ಮುಖವಾಗಿಯೇ ಹೋಗುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ. ರಾಷ್ಟ್ರದ ಅಭಿವೃದ್ಧಿ ಎಂದರೆ, ಈ ಪದಾರ್ಥಗಳ ಬೆಲೆಯೆ? ಎಂಬ ಸಂದೇಹವೂ ಸಾಮಾನ್ಯ ಅವಿದ್ಯಾವಂತರಲ್ಲಿ ಮೂಡುವಂತಾಗಿದೆ. ಅಂಕೆ ಸಂಖ್ಯೆಗಳನ್ನು ಮಾತ್ರ ನೆಮ್ಮಿ ಕುಳಿತರೆ, ಸತ್ಯಸಂಗತಿ ಬಹಿರಂಗವಾಗುವಂತಿಲ್ಲ; ಅದಕ್ಕೆ ಪ್ರತ್ಯಕ್ಷ ದರ್ಶನವೇ ಅಗತ್ಯ. ಜನಹಿತವನ್ನು ಬಯಸುವ ಸರಕಾರವು ಜನತೆಯ ಆರ್ಥಿಕ ಪರಿಸ್ಥಿತಿಯನ್ನು ತಿಳಿದಿದ್ದೂ ಆಹಾರ ಧಾನ್ಯಗಳ ಬೆಲೆಯಲ್ಲಿ ಹೆಚ್ಚಳವಾಗುತ್ತಿರುವುದನ್ನು ಕಾಣುತ್ತ ಸುಮ್ಮನುಳಿಯುವುದು ಸಮಂಜಸವಲ್ಲ.

ರಾಜ್ಯದ ಬೇರೆಬೇರೆಡೆಯಲ್ಲಿ "ನ್ಯಾಯ ದರ"ದಲ್ಲಿ ಆಹಾರ ಧಾನ್ಯವನ್ನು ಪೂರೈಸುವ ವ್ಯವಸ್ಥೆಯನ್ನೂ ಸವ್ಯ ಮಾಡಲಾಗಿದೆ. ಆದರೆ, ಇಂತಹ ಅಂಗಡಿಗಳಲ್ಲಿ ಮಾರುಕಟ್ಟೆಯ ದರಕ್ಕಿಂತ ಕಡಿಮೆ ದರದಲ್ಲಿ ಅವನ್ನು ಒದಗಿಸುವುದಾದರೂ, ಸರಕಾರವು ಆಹಾರ ಧಾನ್ಯಗಳನ್ನು ಉಳ್ಳವರಿಂದ ಸಂಗ್ರಹಿಸಿದಾಗ ತೆತ್ತ ಬೆಲೆ ಮತ್ತು ಈಗ ಮಾರುವ ಬೆಲೆಯ ನಡುವೆ ಮಹದಂತರವಿದೆ ಎಂಬುದು ಸುವಿದಿತ. ಸರಕಾರವು ಜನಹಿತಕ್ಕಾಗಿ ಕಾರ್ಯ ಮಾಡಬೇಕೇ ಹೊರತು, ಲಾಭ ಗಳಿಸುವ ವ್ಯಾಪಾರಕ್ಕಲ್ಲ. ಅದರಲ್ಲೂ ಆಹಾರಧಾನ್ಯಗಳಂತಹ ಮುಖ್ಯ ವಿಷಯಗಳಲ್ಲಿಯೂ ಪ್ರತ್ಯಕ್ಷ ಲಾಭ ಗಳಿಸುತ್ತ ಬಾಯಲ್ಲಿ ಮಾತ್ರ ನಷ್ಟವಾಗುವುದೆಂದು ಹೇಳುವುದು ನ್ಯಾಯವೆನ್ನಬರುವಂತಿಲ್ಲ. ವ್ಯಾಪಾರಿಯಾದರೂ ತಾನು ಮಾಡಿದ ಕೆಲಸಕ್ಕೆ ಒಂದು ಪರಿಮಿತಿಯಲ್ಲಿ ಲಾಭವಿಟ್ಟು ವ್ಯಾಪಾರ ಮಾಡುತ್ತಾನೆ. ಜನಸೇವೆಯ ಸೋಗನ್ನು ಹಾಕಿ ಸರಕಾರ ಲಾಭಗಳಿಸುವುದು ಸರಿಯಲ್ಲವೆಂದೇ ತೋರುತ್ತದೆ. ಮಾತ್ರವಲ್ಲದೇ, ಈಗ ಒದಗಿಸಲಾದ ನ್ಯಾಯ ದರದಲ್ಲಿ ಆಹಾರಧಾನ್ಯಗಳನ್ನು ವಿತರಣೆ ಮಾಡುವ ಅಂಗಡಿಗಳ ಸಂಖ್ಯೆ ಸಾಕಾದೀತೆ? ಎರಡು ಕೋಟಿ ಕನ್ನಡಿಗರಲ್ಲಿ ಶೇಕಡಾ ೫೦ರಷ್ಟಾದರೂ ದಟ್ಟ ದರಿದ್ರರೆಂಬುದನ್ನು ಒಪ್ಪುವುದಾದರೆ, ಅವರಿಗೆ ಆಹಾರಧಾನ್ಯ ಪೂರೈಸಲು ಸುಮಾರು ಒಂದು ಸಾವಿರ ಅಂಗಡಿಗಳು ಸಾಕೆ? ಈ ವಿಚಾರವನ್ನೂ ಆಲೋಚಿಸಬೇಕು. ವ್ಯಾಪಾರಿ ಗಳಿಸುವ ಲಾಭಕ್ಕೆ, ಜನತೆ ಮಾಡುವ ಸಂಪಾದನೆಗೆ ಪ್ರತ್ಯಕ್ಷ ಪ್ರತ್ಯಕ್ಷ ವಿಧಾನಗಳಿಂದ ಸರಕಾರವು (ಅದರೊಡನೆ ದೈವವೂ) ಮಿತಿಯನ್ನು ಒಂದಲ್ಲ ಹಲವು ಮಾರ್ಗಗಳಿಂದ ಹೇರಿರುವಾಗ, ಅವರ ಉಪಯೋಗಕ್ಕೆ ಬೇಕಾದ ವಸ್ತುಗಳ ಬೆಲೆಯೂ ಏರದಂತೆ ತಡೆಗಟ್ಟಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳುವುದು ಜನತಾ ಸರಕಾರದ ಪ್ರಮುಖ ಕರ್ತವ್ಯಗಳಲ್ಲಿ ಒಂದಾಗಿರುವುದಿಲ್ಲವೆ? ಆದುದರಿಂದ ರಾಜ್ಯ ಸರಕಾರವು ಇನ್ನಾದರೂ ಕಣ್ಣು ತೆರೆದು, ರಾಜ್ಯದ ಮೂಲೆಮೂಲೆಯಲ್ಲಿಯೂ ಆವಶ್ಯಕ ಪದಾರ್ಥಗಳ, ಮುಖ್ಯವಾಗಿ ಆಹಾರ ಧಾನ್ಯಗಳ, ಬೆಲೆಯಲ್ಲಿ ಏರಿಕೆಯಾಗದಂತೆ ತಡೆಗಟ್ಟುವತ್ತ ಗಮನಹರಿಸುವುದು, ಆವಶ್ಯ.

ಆಡಳಿತ ಶುದ್ಧೀಕರಣ

ಪಾಕಿಸ್ತಾನದಲ್ಲಿ ಶಾಸನ ಪ್ರಣಾಳಿಯಲ್ಲಿ ಶುದ್ಧೀಕರಣದ ಪ್ರಯತ್ನವೊಂದು ನಡೆದು, ಅಧ್ಯಕ್ಷ ಮೇ|ಜ| ಅಯೂಬಖಾನರ ಆದೇಶದಂತೆ ಹಲವಾರು ವರಿಷ್ಠಾಧಿಕಾರಿಗಳನ್ನು ಅವರ ಸ್ಥಾನದಿಂದ ಕಿತ್ತುಹಾಕಲಾಯಿತು, ನಿವೃತ್ತಗೊಳಿಸಲಾಯಿತು; ಅಥವಾ ಹಿಂಬಡತಿ ಮೊದಲಾಯಿತೆಂದು ವರದಿಬಂದಿದೆ. ಈ ಪದಚ್ಯುತ ಅಧಿಕಾರಿಗಳ ಮೇಲೆ, ಮುಖ್ಯವಾಗಿ, ದುರ್ನಡತೆ, ಲಂಚಂಗೊಳಿತನ ಹಾಗೂ ಅಸಾಮರ್ಥ್ಯದ ಅಪಾದನೆಗಳಲ್ಲಿ ಒಂದು, ಎರಡು ಯಾ ಮೂರನ್ನೂ ಹೊರಿಸಲಾಗಿದೆ ಎಂದು ಗೊತ್ತಾಗಿದೆ. ಸರ್ವೋಚ್ಚ ಅಧಿಕಾರಿಯ ಇಚ್ಛೆಯಂತೆ ದುರ್ನಡತೆ, ಲಂಚಗೊಳಿ ಮತ್ತು ಅಸಾಮರ್ಥ್ಯ ಶಬ್ದಗಳ ಅರ್ಥಗಳು ಬದಲಾಗುವುದು ನಮ್ಮಲ್ಲಿ ಕಂಡುಬರುವುದಿಲ್ಲವೆ? ಮಂತ್ರಿಗಳು ಬರುವಾಗ ಹಾರತುರಾಯಿ ಒಪ್ಪಿಸುವಬದಲಿಗೆ ಬರೀ ಹಾರವನ್ನು ಒಪ್ಪಿಸಿದರೆ, ಅದು ದುರ್ನಡತೆಯಾಗುವುದು ಸಾಧ್ಯವಲ್ಲವೆ? "ಲಂಚ"ವೆಂದು ಕೆಲವರು ಕರೆಯುವುದನ್ನೇ ಇನ್ನು ಕೆಲವರು "ಕೃತಜ್ಞತೆ" ಎಂದು ತಿಳಿದು ಅದನ್ನು ಸ್ವೀಕರಿಸಿದರೆ, ಅದು ಅನ್ಯಾಯವಾಗುವುದೂ, ಆಶ್ಚರ್ಯವಲ್ಲ. ಇನ್ನು "ಅಸಾಮರ್ಥ್ಯ"ವೆಂಬುದರ ಅರ್ಥ ನಮ್ಮ ರಾಜ್ಯ ಸರಕಾರದಲ್ಲಿ ತೀರ ವಿಚಿತ್ರವಿದೆ. ಸಾಮರ್ಥ್ಯ ಮತ್ತು ಜಾತಿಗಳ ಮೈತ್ರಿ ನಮ್ಮಲ್ಲಿರುವಷ್ಟು ಗಾಢವಾಗಿ ಎಲ್ಲಿಯೂ ಇರಲಾರದು. ಎಂತಲೇ ನಮ್ಮ ರಾಜ್ಯದಲ್ಲಿ ಈ ತತ್ವಗಳಡಿಯಲ್ಲಿ ಆಡಳಿತ ಶುದ್ಧೀಕರಣ ಮಾಡುವ ಸಾಹಸ ಕಾರ್ಯರೂಪದಲ್ಲಿ ಬಂದರೆ, ಆಗ ಅದರ ಸ್ವಾರಸ್ಯ ನೋಡಿ ದಣಿಯುವಂತಾಗಲಾರದು ತಾನೆ?

ಸಂಕ್ಷಿಪ್ತ ಸುದ್ದಿಗಳು

ಚುನಾವಣೆಯೇ ಪರಿಹಾರ

ಕೇರಳವನ್ನು ಸಂದರ್ಶಿಸಿದ ನಂತರ ಪ್ರಧಾನಿ ನೆಹರುರವರು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿಗೆ ತನ್ನ ಅನುಭವಗಳನ್ನೂ ಕೇರಳದ ಪರಿಸ್ಥಿತಿಯನ್ನೂ ವಿವರಿಸಿದರು. ಅಲ್ಲಿನ ಪರಿಸ್ಥಿತಿಯನ್ನು ಅಭ್ಯಸಿಸಲು ಹೊರಟಿದ್ದ ಶ್ರೀಗಳಾದ ಯು. ಎನ್. ದೇಬಾರ ಮತ್ತು ಸಾದಿಕ ಆಲಿಯವರೂ ಹೇಳಿಕೆಯಿತ್ತರು. ಪಾರ್ಲಿಮೆಂಟರಿ ಬೋರ್ಡು ಈ ಹೇಳಿಕೆಗಳನ್ನೂ ಇತರ ವರದಿಗಳನ್ನೂ ಸಾಮೂಲಾಗ್ರವಾಗಿ ಪರಿಶೀಲಿಸಿ, ಅಲ್ಲಿನ ಗಂಭೀರ ಮತ್ತು ವಿವಂಚನಾತ್ಮಕ ಪರಿಸ್ಥಿತಿಯು ದೂರ ತೊಲಗುವಂತಾಗಲು ಚುನಾವಣೆಯೇ ಪರಿಹಾರವೆಂದು ಅಭಿಪ್ರಾಯ ವ್ಯಕ್ತಗೊಳಿಸಿದೆ.

ಕೊಡುಗೆ ತಿರಸ್ಕೃತವಾಯಿತು

ಪ್ರಧಾನಿ ನೆಹರೂರವರ ಸೂಚನೆಯಂತೆ ಕೇರಳದ ಮುಖ್ಯ ಮಂತ್ರಿ ಶ್ರೀ ನಂಬೂದರಿಪಾದರು 'ವಿದ್ಯಾ ಮಸೂದೆಯ ಕುರಿತು ವಿಚಾರವಿನಿಮಯ ನಡೆಸಲು ಮತ್ತು ಆವಶ್ಯಕವೆಂದು ಕಂಡುಬಂದರೆ, ಶಾಸನದ ಕೆಲವೊಂದು ಅನುಚ್ಛೇದಗಳನ್ನು ಅಮಾನತುಗೊಳಿಸಲು ಸಿದ್ಧರಿರುವರಾಗಿ ಸಾರಿ, ವಿರೋಧಿಗಳನ್ನು ಆಮಂತ್ರಿಸಿದರೆ, ಈ ಆಮಂತ್ರಣವನ್ನು ಬಿಷೋಪರೂ ಮತ್ತಿತರೂ ಇದು ಪಶುಗಳಿಗೆ ಹಿಂಡಿಯಾಸೆ ತೋರಿಸಿದಂತೆ ಎಂದು ತಿರಸ್ಕರಿಸಿದ್ದಾರೆ. ಮತ್ತು ಕೇರಳ ವಿಮೋಚನಾ ಸಮಿತಿಯು ತನ್ನ ಚಳವಳವನ್ನು ಮತ್ತಷ್ಟು ಬಿಗಿಗೊಳಿಸಿದೆ.

ವಾಮಮಾರ್ಗವೆ?

ಈ ನಡುವೆ ಕೇರಳ ವಿಮೋಚನಾ ಚಳವಳದ ನಾಯಕ ಮನ್ನತ್ ಪದ್ಮನಾಭನರ ಮೇಲೆ ಅವರ ೮೩ರ ಈ ವಯಸ್ಸಿನಲ್ಲಿಯೂ ಹಿಂಸಾಕೃತ್ಯಗಳಿಗೆ ಜನತೆಯನ್ನು ಪ್ರೋತ್ಸಾಹಿಸುತಿದ್ದಾರೆ ಎಂಬ ಗಂಭೀರ ಆರೋಪವನ್ನು ಹೊರಿಸಿ, ತಿರುವನಂತಪುರದ ನ್ಯಾಯಾಲಯವೊಂದರಲ್ಲಿ ಮೊಕದ್ದಮೆಯನ್ನು ಕೇರಳದ ಪೋಲೀಸರು ದಾಖಲುಮಾಡಿದ್ದಾರೆ. ಈ ಕೃತ್ಯದಲ್ಲಿಯೂ ಕಮ್ಯುನಿಸ್ಟ್ ಪಕ್ಷದ ಅಥವಾ ಸರಕಾರದ ಕೈವಾಡವಿದೆಯೇ ಇಲ್ಲವೇ ಎಂದು ಇದುವರೆಗೆ ಸ್ಪಷ್ಟವಾಗಿ ತಿಳಿದು ಬಂದಿಲ್ಲ.

ರಾಜಿನಾಮೆ ಕೊಡಬೇಕು

ಕೇರಳ ಸರಕಾರವು ರಾಜಿನಾಮೆ ಕೊಡಬೇಕು; ಅವರ ಪೊಳ್ಳು ಆಶ್ವಾಸನೆಗಳಿಗೆ ಬಲಿಬೀಳದೆ ಸರಕಾರ ಅಧಿಕಾರದಿಂದ ಚ್ಯುತವಾಗುವತನಕ ಚಳವಳ ಮುಂದುವರಿಸಬೇಕು ಎಂದು ಕಮ್ಯುನಿಸ್ಟೇತರ ಪಕ್ಷಗಳೆಲ್ಲಾ ಸಾಮಾನ್ಯವಾಗಿ ಒಪ್ಪಿವೆ. ಘಟನಾತ್ಮಕವಾಗಿ ಸ್ಥಾಪಿತವಾದ ಸರಕಾರದವಿರುದ್ಧ ಚಳುವಳಿಹೂಡುವಾಗ ಹಿಂದೆ ಮುಂದೆ ನೋಡಬೇಕಾದರೂ ಕೇರಳದ ಪರಿಸ್ಥಿತಿಯಿಂದಾಗಿ ಇದಲ್ಲದೆ ಅನ್ಯ ಮಾರ್ಗವಿಲ್ಲ ಎಂದು ಪ್ರ. ಸ. ಮಾ. ಪಕ್ಷವು ಹೇಳಿದೆ.

ನಾವು ಸದಾ ಸಿದ್ಧ, ನೀವು?

ರಶಿಯವು ಅಣ್ವಸ್ತ್ರ ಪ್ರಯೋಗವನ್ನು ನಿರ್ಬಂಧಿಸುವ ಒಪ್ಪಂದವೊಂದಕ್ಕೆ ಕೂಡಲೇ ಅಂಕಿತ ಹಾಕಲು ಸಿದ್ಧವಿರುವುದೆಂದೂ ಆದರೆ, ಬ್ರಿಟನ್ ಮತ್ತು ಅಮೆರಿಕೆಗಳು ಕೂಡ ಇದೇ ರೀತಿ ಮಾಡಲು ಒ

ಪ್ಪಿಕೊಳ್ಳುವುದು ಅವಶ್ಯವೆಂದೂ ನಿಕಿಟಾ ಕ್ರುಶ್ಚೇವ್ ಒಂದು ಪತ್ರದಲ್ಲಿ ಹೇಳಿದ್ದಾರೆ. ಈಗಿಂದೀಗಲೇ ಈ ಪ್ರಯೋಗಗಳನ್ನು ನಿಲ್ಲಿಸುವುದಾದರೂ ತಾನು ಸಿದ್ಧ ಎಂದೂ ಅವರಲ್ಲಿ ನಿರೂಪಿಸಿದ್ದಾರೆ. ಈ ಪತ್ರವನ್ನು ಯುರೋಪಿನ ಅಣ್ವಸ್ತ್ರ ವಿರೋಧಿ ಮಹಾಮಂಡಲದ ಸಭೆಯೊಂದಕ್ಕೆ ಒಪ್ಪಿಸಲಾಗಿದೆ

ಯುಕ್ತರಾಷ್ಟ್ರ ಸಂಸ್ಥೆಗೆ?

ಟಿಬೇಟಿನ ಸಮಸ್ಯೆಯನ್ನು ಸರಿಯಾಗಿ ಅಭ್ಯಸಿಸಿದ ಶ್ರೀ ಜಯಪ್ರಕಾಶನಾರಾಯಣರು ಆ ಪ್ರಶ್ನೆಯನ್ನು ಯುಕ್ತರಾಷ್ಟ್ರ ಸಂಸ್ಥೆಗೆ ಒಯ್ಯುವ ಸಾಧ್ಯಾಸಾಧ್ಯತೆಗಳನ್ನು ಯೋಚಿಸ ತೊಡಗಿದ್ದಾರೆ. ಇದಕ್ಕಾಗಿ ಅವರು ಆಫ್ರೇಶ್ಯಾ ರಾಷ್ಟ್ರಗಳ ಬೆಂಬಲವನ್ನು ಗಳಿಸುವ ಪ್ರಯತ್ನವನ್ನು ನಡೆಸಿದ್ದಾರೆ. ಬೇರೆ ಬೇರೆ ರಾಷ್ಟ್ರಗಳ ಪ್ರತಿನಿಧಿಗಳನ್ನು ಕಂಡು ಅವರ ವಿಚಾರಧಾರೆಯನ್ನು ಅರಿತಿದ್ದಾರೆ. ಈ ಫಲಿತಾಂಶವನ್ನು ಅವರು ಪ್ರಧಾನಿ ನೆಹರೂ ಅವರಿಗೆ ತಿಳಿಸಿರುವರೆಂದೂ ಹೇಳಲಾಗಿದೆ.

ರಚನಾತ್ಮಕ ಕಾರ್ಯಕರ್ತರು ಬೇಕು

ರಾಷ್ಟ್ರದ ಅಭಿವೃದ್ಧಿಯಾಗ ಬೇಕಾದರೆ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳಬಲ್ಲ ಕಾರ್ಯಕರ್ತರು ಬೇಕು. ಪ್ರಜಾಪ್ರಭುತ್ವವು ಭಾರತಕ್ಕೆ ಹೊಸತಾದುದರಿಂದ, ದೇಶದಲ್ಲಿ ಏನೇನು ಕಾರ್ಯಸಾಧನೆ ಆಗಿದೆ; ಇನ್ನು ಏನೇನು ಆಗಬೇಕಾಗಿದೆ ಎಂಬುದನ್ನು ಆಲೋಚಿಸುವ ಶಕ್ತಿ ನಮ್ಮ ಜನತೆಯಲ್ಲಿಲ್ಲವಾದುದರಿಂದ ಈ ಕಾರ್ಯಕರ್ತರು ಮೊದಲು ಅಂತಹ ಶಕ್ತಿಯನ್ನು ತಂದುಕೊಡಬೇಕು. ಕೇವಲ ಖಾದಿ ಕಾರ್ಯಕರ್ತರು, ಹರಿಜನ ಸೇವಕರು ಮತ್ತು ಯುವಕ ಸಂಸ್ಥೆಗಳವರು ಮೊದಲಾದವರಿಂದಲೇ ದೇಶದ ಅಭ್ಯುದಯ ಸಾಧನೆಯಾಗುವುದಿಲ್ಲ. ಎಲ್ಲ ಕಾರ್ಯಕ್ರಮಗಳೂ ಸಮವಾಯಗೊಂಡು ಮುನ್ನಡೆದರೆ ಮಾತ್ರ ಭಾರತ ಪ್ರಗತಿ ಹೊಂದುವುದು ಎಂದು ಎಂ. ಪಿ. ಸಿ. ಯ ರಚನಾತ್ಮಕ ಕಾರ್ಯಮಂಡಲಿಯ ಸಭೆಯೊಂದರಲ್ಲಿ ಶ್ರೀ ಸಿದ್ದಲಿಂಗಪ್ಪನವರು ಅಭಿಪ್ರಾಯಪಟ್ಟರು.

ಮಿಲಿಟರಿ ಮೋಟಾರು ವಾಹನ

ದೇಶದಲ್ಲಿ ತಯಾರಾದ ಮೊದಲನೆಯ ಮಿಲಿಟರಿ ಮೋಟಾರು ವಾಹನ (ಟ್ರಕ್) "ಶಕ್ತಿಮಾನ್" ಜಬಾಲ್‌ಪುರದ ಬಂದೂಕು ಕಾರ್ಖಾನೆಯಿಂದ ಹೊರಬಂದಿತು. ಆ ಸಂಬಂಧದಲ್ಲಿ ಪ್ರಧಾನ ಮಂತ್ರಿ, ಶ್ರೀ ನೆಹರೂ ಅವರು ಮಿಲಿಟರಿ ಮೋಟಾರು ವಾಹನಗಳನ್ನು ತಯಾರಿಸುವ ಸಂಬಂಧವಾದ ಹೊಸ ಯೋಜನೆಯನ್ನು ಉದ್ಘಾಟಿಸಿದರು. ರಕ್ಷಣಾ ಮಂತ್ರಿಖಾತೆಗೆ ಸೇರಿದ ಯುದ್ಧೋಪಕರಣ ಕಾರ್ಖಾನೆಗಳು "ಎಂ. ಎ. ಎನ್." ಎಂಬ ಒಂದು ಜರ್ಮನಿಯ ಸಂಸ್ಥೆಯ ಸಹಕಾರದೊಂದಿಗೆ ಮಿಲಿಟರಿ ಮೋಟಾರು ವಾಹನಗಳನ್ನು ತಯಾರಿಸಲಿವೆ.

ಅಲ್ಲಲ್ಲಿಯ ಸುದ್ದಿಸಾರ

ಜಿಲ್ಲಾ ಕಾಂಗ್ರೆಸ್ ಪ್ರಚಾರಕರಾಗಿ ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟರು ನೇಮಿಸಲ್ಪಟ್ಟಿರುವರೆಂದು ತಿಳಿದು ಬರುತ್ತದೆ.

ಶ್ರೀ ದೂಮಪ್ಪನವರಿಗೆ ಸತ್ಕಾರ- ಕಳೆದ ಉಪಚುನಾವಣೆಯಲ್ಲಿ ಮೈಸೂರು ವಿಧಾನ ಸಭೆಗೆ ಆರಿಸಲ್ಪಟ್ಟ ಶ್ರೀ ದೂಮಪ್ಪನವರನ್ನು ಸತ್ಕರಿಸುವರೆ ಹೆಜಮಾಡಿ ಕೋಡಿ ಫಿಶರೀಸ್ ಶಾಲಾ ಮಂದಿರದಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಸಮಾರಂಭವೊಂದು ನೆರವೇರಿತು. ಸಭಿಕರಲ್ಲಿ ಹಲವರು ಮಾತನಾಡಿ ಹಲವು ಸಲಹೆ ಸೂಚನೆಗಳನ್ನಿತ್ತರು. ಅಧ್ಯಕ್ಷ ಶ್ರೀ ಪೈಗಳು ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳನ್ನು ವಿವರಿಸಿ ಆರಿಸಿ ಬಂದ ಪ್ರತಿನಿಧಿಗಳಿಗೆ ಸಂಪೂರ್ಣ ಸಹಕಾರ ನೀಡಬೇಕೆಂದರು.

ಸಹಕಾರ ಮಂತ್ರಿಗಳ ಸಭೆ

ರಾಜ್ಯಗಳ ಸಹಕಾರ ಮಂತ್ರಿಗಳ ಸಭೆಯು ಮೈಸೂರಿನಲ್ಲಿ ಜೂಲೈ ೨೮ ಮತ್ತು ೨೯ರಂದು ಸಮಾವೇಶಗೊಳ್ಳುವುದು.

ಭಾರತ ಸರ್ಕಾರದ ಸಾಮುದಾಯಿಕ ಅಭಿವೃದ್ಧಿ ಮತ್ತು ಸಹಕಾರ ಮಂತ್ರಿಖಾತೆಯವರು ಈ ಸಭೆಯನ್ನು ಕರೆದಿರುವರು. ಎರಡು ದಿನ ನಡೆಯುವ ಈ ಸಭೆಯಲ್ಲಿ ಸಹಕಾರ ಸಂಸ್ಥೆಗಳ ಆಡಳಿತ ಮತ್ತು ರಚನೆಗೆ ಕುರಿತಾದ ವಿಷಯಗಳನ್ನು ಪರ್ಯಾಲೋಚಿಸಲಾಗುವುದು. ಭಾರತ ಸರ್ಕಾರದವರು ಅಂಗೀಕರಿಸಿರುವ ಕಾರ್ಯನೀತಿಯ ಪರಿಣಾಮವಾಗಿ ಸಹಕಾರ ಸಂಸ್ಥೆಗಳ ಕಾರ್ಯಕ್ರಮವು ಹೆಚ್ಚುವುದರಿಂದ ಅವುಗಳ ಆಡಳಿತ ಹಾಗೂ ರಚನೆಯ ವಿಷಯವನ್ನು ಪರಿಶೀಲಿಸುವುದು ಈಗ ಅಗತ್ಯವಾಗಿರುವುದು.

ಭಾರತ ಸರ್ಕಾರದ ಸಾಮುದಾಯಿಕ ಅಭಿವೃದ್ಧಿ ಮತ್ತು ಸಹಕಾರ ಖಾತೆಯ ಮಂತ್ರಿಗಳಾದ ಶ್ರೀ ಎಸ್. ಕೆ. ಡೇರವರು ಈ ಸಮ್ಮೇಳನದ ಅಧ್ಯಕ್ಷತೆ ವಹಿಸುವರು.

ಇದಕ್ಕೆ ಮೊದಲು ಜೂಲೈ ೨೬, ೨೭ರ ವರೆಗೆ ಮೈಸೂರಿನಲ್ಲಿ ಸಾಮುದಾಯಿಕ ಅಭಿವೃದ್ಧಿಯ ಬಗೆಗೆ ವಾರ್ಷಿಕ ಸಮ್ಮೇಳನವು ಶ್ರೀ ವಿ. ಟಿ. ಕೃಷ್ಣಮಾಚಾರಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಗಂಧಕದ ನಿಕ್ಷೇಪಗಳು

ಭಾರತದ ಕೆಲವು ಭಾಗಗಳಲ್ಲಿ ಗಂಧಕದ ನಿಕ್ಷೇಪಗಳು ಇರುವುವೆಂದು ಇತ್ತೀಚಿನ ಸಮೀಕ್ಷೆಗಳಿಂದ ವ್ಯಕ್ತಪಟ್ಟಿರುವುದು. ಇದರಿಂದ ಉತ್ತೇಜಿತರಾದ, ಭಾರತದ ಭೂಗರ್ಭ ಸಮೀಕ್ಷೆ ಇಲಾಖೆಯು ಮೂಲಭೂತ ಲೋಹಶಾಸ್ತ್ರ ವಿಭಾಗದವರು, ಬಿಹಾರ, ಮತ್ತು ಮೈಸೂರು ರಾಜ್ಯಗಳಲ್ಲಿ ವಿವರವಾದ ಸಮೀಕ್ಷೆಯನ್ನು ನಡೆಸಲು ನಿರ್ಧರಿಸಿರುವರು.

ತಾಮ್ರ, ಸತು ಮತ್ತು ಸೀಸಗಳಂತಹ ಮೂಲಭೂತ ಲೋಹಗಳ ವರ್ಗಗಳಿಗೆ ಗಂಧಕವು ಸೇರಿರದಿದ್ದರೂ ದೇಶದ ಔದ್ಯೋಗೀಕರಣದಲ್ಲಿ ಗಂಧಕಕ್ಕಿರುವ ಮಹತ್ತರ ಪಾತ್ರವನ್ನು ಗಮನದಲ್ಲಿಟ್ಟುಕೊಂಡು, ಗಂಧಕದ ಗಣಿ ಅನ್ವೇಷಣೆಯಲ್ಲಿ ಆಸಕ್ತಿ ತಾಳಲಾಗಿದೆ.

ದಿಲ್ಲಿಯ ಅಮೇರಿಕನ್ ಟೆಕ್ನಿಕಲ್ ಕೋಅಪರೇಟಿವ್ ಮಿಶನಿನ-ಹಂಗಾಮಿ ಡೈರೆಕ್ಟರ್ ಡಾ| ಜಾನ್ಸನ್ ಮತ್ತು ಮಿಸೆಸ್ ಜಾನ್ಸನ್ನರು ಕಳೆದ ತಾ. 25ರಂದು ಮಣಿಪಾಲಕ್ಕೆ ಸಂದರ್ಶನವಿತ್ತಾಗ, ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವತಿಯಿಂದ ಡಾ| ಸುಂದರರಾಮ ಪೈಗಳ ಅಧ್ಯಕ್ಷತೆಯಲ್ಲಿ ಉಪಾಹಾರವಿತ್ತು ಸತ್ಕರಿಸಲಾಯಿತು. ಶ್ರೀ ಟಿ. ರಮೇಶ ಪೈಗಳು ಸ್ವಾಗತಮಾತುಗಳನ್ನಾಡಿದರು. ಡಾ| ಜಾನ್ಸನ್ನರು ಚಟುವಟಿಕೆಗಳಿಗಾಗಿ ಸಂತೋಷ ಸೂಚಿಸಿ ಉತ್ತರವಿತ್ತರು. ಅಧ್ಯಕ್ಷರು ಸಂದರ್ಭೋಚಿತ ಭಾಷಣವಿತ್ತರು.

ಅದಮಾರು-ಇತ್ತೀಚೆಗೆ ಇಲ್ಲಿಯ ಬೋರ್ಡ್ ಹೈಸ್ಕೂಲಿನಲ್ಲಿ ಶ್ರೀ ಅದಮಾರು ಮಠದ ಶ್ರೀ ವಿಬುಧೇಶತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ವಾರ್ಷಿಕ ದಿನಾಚರಣೆಯ ಸಭೆಯು ನೆರವೇರಿತು. ಶ್ರೀಗಳಾದ ಗೋಪಾಲಕೃಷ್ಣ, ಮಧ್ವರಾಯ ಭಟ್ ಹಯವದನ ಮೊದಲಾದವರು ಸಂದರ್ಭೋಚಿತ ಭಾಷಣವಿತ್ತರು. ಅಧ್ಯಕ್ಷರ ಭಾಷಣವಾದ ಮೇಲೆ ಶಾಲಾ ಪ್ರಧಾನಾಧ್ಯಾಪಕರು ಆಭಾರ ಮನ್ನಿಸಿದರು.

ಮೂಡುಬೆಳ್ಳೆ—ಸೈಂಟ್ ಲೋರೆನ್ಸ್ ಹೈಸ್ಕೂಲ್ ಎಂಬ ಪ್ರೌಢ ಪಾಠಶಾಲೆಯು ತಾ. 23ರಲ್ಲಿ ಮಂಗಳೂರು ಬಿಶೋಪರವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಎಫ್. ಎಕ್ಸ್. ಡಿ. ಪಿಂಟೊ ಎಂ. ಎಲ್. ಎ. ಅವರು ಸಮಾರಂಭದ ಅಧ್ಯಕ್ಷತೆವಹಿಸಿದ್ದರು. ಹೈಸ್ಕೂಲಿನ ಕರೆಸ್ಪೋಂಡೆಂಟ್ ರೆ| ಫಾ| ಎ. ಎಫ್. ಡಿ'ಸೋಜ ಅವರು ಸ್ವಾಗತ ಭಾಷಣ ಮಾಡಿ ವರದಿಯನ್ನು ಸಭೆಯ ಮುಂದಿಟ್ಟರು. ರೆ| ಫಾ| ಟಿ. ಲೋಬೊರವರು ಸಂದೇಶಗಳನ್ನು ಓದಿದ ಮೇಲೆ, ಶ್ರೀಗಳಾದ ಎಲ್. ಮೆಂಡೋನ್ಸ್, ಕೆ. ಗೋಪಾಲಕೃಷ್ಣ ಬಲ್ಲಾಳ, ಎಂ. ಗೋವಿಂದ ಶೆಟ್ಟಿ ಮೊದಲಾದವರು ಹೈಸ್ಕೂಲಿನ ಆವಶ್ಯಕತೆ ಹಾಗೂ ಜನತಾ ಸಹಕಾರದ ಕುರಿತು ಮಾತನಾಡಿದರು. ಅಧ್ಯಕ್ಷ ಭಾಷಣವಾದ ಮೇಲೆ ಬಿಶೋಪರು ಕೆಲವು ಹಿತಸೂಚನೆಗಳನ್ನಿತ್ತು ಶಾಲೆಯನ್ನು ಉದ್ಘಾಟಿಸಿದರು. ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ ಡೇನಿಸ್ ಸಿಲ್ವ ವಂದನೆಗಳನ್ನರ್ಪಿಸಿದರು.

ಮಂಡಲ ಕಾಂಗ್ರೆಸ್ಸಿನ ಸಭೆ—ಕಳೆದ ತಾ. 26ರಲ್ಲಿ ಜಪ್ಪು 5ನೇ ಮಂಡಲ ಕಾಂಗ್ರೆಸ್ಸಿನ ಆಡಳಿತೆ ಸಮಿತಿಯ ಮತ್ತು ಸದಸ್ಯರ ಸಭೆಯೊಂದು ಶ್ರೀ ಜೆ. ಬಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಜಿಲ್ಲೆಯಿಂದ ಅಕ್ಕಿ ಹೊರಗೆ ಹೋಗದಂತೆ ತಡೆಗಟ್ಟಬೇಕೆನ್ನುವ ಹಾಗೂ ವಾರ್ಡುಗಳಲ್ಲಿ ನ್ಯಾಯಬೆಲೆಯ ಅಂಗಡಿಗಳನ್ನು ಅಧಿಕ ಸಂಖ್ಯೆಯಲ್ಲಿ ತೆರೆಯಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಉಡುಪಿ ಎಂ. ಜಿ. ಎಮ್. ಕಾಲೇಜಿನ ಫಲಿತಾಂಶ—ಉಡುಪಿ ಎಂ. ಜಿ. ಎಂ. ಕಾಲೇಜಿನಿಂದ ಇದೇ ಮಾರ್ಚಿಯಲ್ಲಿ ಜರಗಿದ ಬಿ. ಎ. ಡಿಗ್ರಿ ಪರೀಕ್ಷೆಯಲ್ಲಿ I ಪಾರ್ಟಿನಲ್ಲಿ 43ರಲ್ಲಿ 36 ಮಂದಿ (83.7%) II ಪಾರ್ಟ-ಕನ್ನಡದಲ್ಲಿ 31ರಲ್ಲಿ 29 ಮಂದಿ (93.5%) ಹಿಂದಿಯಲ್ಲಿ 11ರಲ್ಲಿ 11 ಮಂದಿ (100%) III ಪಾರ್ಟನಲ್ಲಿ 40ರಲ್ಲಿ 37 ಮಂದಿ (92.5%) ಪಾಸಾಗಿರುವರು. ಇದರಲ್ಲಿ I ಪಾರ್ಟನಲ್ಲಿ II ಕ್ಲಾಸ್ ಒಂದು, II ಪಾರ್ಟನಲ್ಲಿ I ಕ್ಲಾಸ್ ಒಂದು II ಕ್ಲಾಸ್ 2, III ಕ್ಲಾಸ್ 26, ಹಿಂದಿಯಲ್ಲಿ II ಕ್ಲಾಸ್ 5, III ಕ್ಲಾಸ್ 6, III ಪಾರ್ಟನಲ್ಲಿ II ಕ್ಲಾಸ್ ಒಂದು. III ಕ್ಲಾಸ್ 36 ಮಂದಿ ಇರುತ್ತಾರೆ.

ಬಿ. ಕಾಂ. ಡಿಗ್ರಿ ಪರೀಕ್ಷೆಯಲ್ಲಿ II ಪಾರ್ಟ. ಕನ್ನಡದಲ್ಲಿ 5ರಲ್ಲಿ 5 ಮಂದಿ (100%). ಹಿಂದಿಯಲ್ಲಿ 27ರಲ್ಲಿ 24 ಮಂದಿ (88.9%) III ಪಾರ್ಟನಲ್ಲಿ 32ರಲ್ಲಿ 30ಮಂದಿ (93.7%) ಪಾಸಾಗಿದ್ದಾರೆ. III ಪಾರ್ಟನಲ್ಲಿ I ಕ್ಲಾಸ್. ಒಂದು, II ಕ್ಲಾಸ್ 6, III ಕ್ಲಾಸ್ 23 ಮಂದಿ ಇರುತ್ತಾರೆ.

ಶ್ರೀ ಯು. ವಿಷ್ಣು ಆಚಾರ್ಯರು ಬಿ. ಕಾಂ. ನಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾದವರಲ್ಲಿ ನಮ್ಮ ಜಿಲ್ಲೆಯಲ್ಲಿಯೇ ಪ್ರಪ್ರಥಮರಾಗಿದ್ದಾರೆ.

ಎಕೆಡೆಮಿಯ ಮಹಾಸಭೆ—ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನಿನ ಮಹಾಸಭೆಯು ಕಳೆದ ತಾ. 30ರಂದು ಶ್ರೀ ಕೆ. ಪಿ. ಮುಕುಂದ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಎಕೆಡೆಮಿಯ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಗಳು ಎಕೆಡೆಮಿಯ ವಿದ್ಯಾಸಂಸ್ಥೆಗಳ ಮತ್ತು ಚಟುವಟಿಕೆಗಳ ವರದಿಯನ್ನು ಓದಿ ಹೇಳಿದರು.

ಶ್ರೀ ಟಿ. ರಮೇಶ್ ಪೈಗಳು ಎಕೆಡೆಮಿಯ ಆಯವ್ಯಯವನ್ನು ಓದಿ ಹೇಳಿದರು. ಸುಪ್ರೀಮ್ ಗವರ್ನಿಂಗ್ ಬೋರ್ಡಿಗೆ ಒಂದು ಬದಲಾವಣೆಯೊಂದಿಗೆ ಮೊದಲಿನ ಸದಸ್ಯರೇ ಪುನಃ ಆಯ್ಕೆಪಟ್ಟರು. (ಶ್ರೀಮತಿ ಭಾರತಿಯವರ ಬದಲಿಗೆ, ಶ್ರೀಮತಿ ಆಶಾ ಕೆ. ಆರ್. ಕೆ. ಭಟ್ಟರು ಚುನಾಯಿತರಾದರು.) ಆ ಬಳಿಕ ಮುಂಬಯಿಯ ವಿದ್ಯಾಮಂತ್ರಿ ದಿನಕರ ದೇಸಾಯಿ, ಹಿಂದೂ ಪತ್ರಿಕೆಯ ಪ್ರಧಾನ ಸಂಪಾದಕ ಶ್ರೀ ಕಸ್ತೂರಿ ಶ್ರೀನಿವಾಸನ್ ಇವರ ನಿಧನದ ಬಗ್ಗೆ ಶ್ರೀ ಆರ್. ಫೆರ್ನಾಂಡೀಸರು ಸಭೆಯ ಮುಂದಿಟ್ಟ ದುಃಖಸೂಚಕ ನಿರ್ಣಯಗಳು ಮಂಜೂರಾದವು. ಎಕೆಡೆಮಿಯ ಅಧ್ಯಕ್ಷ ಶ್ರೀ ವಿ. ಎಸ್. ಕುಡ್ವ ಮತ್ತು ಎಕೆಡೆಮಿಯ ಸಂಸ್ಥೆಗಳಿಗೆ ಸಹಾಯಕರಾಗಿದ್ದ ಶ್ರೀ ಕೆ. ಸೀತಾರಾಮ ರಾವ್ ಇವರ ಷಷ್ಟ್ಯಬ್ದಿಪೂರ್ತಿಗಾಗಿ ಅಭಿನಂದಿಸುವ ಶ್ರೀ ಪಿ. ಶ್ರೀಪತಿ ಆಚಾರ್ಯರ ಮತ್ತು ಡಾ| ಸುಂದರರಾಮ ಪೈಗಳ ನಿರ್ಣಯಗಳು ಪಾಸಾದವು. ರಿಜಿಸ್ಟ್ರಾರ್ ಪೈಗಳು ಮುಂದೆ ಕೈಗೊಳ್ಳಬಹುದಾದ ಚಟುವಟಿಕೆಗಳ ರೂಪರೇಷೆಗಳನ್ನು ವಿವರಿಸಿದ ಮೇಲೆ ಅಧ್ಯಕ್ಷ ಶ್ರೀ ಪ್ರಭುಗಳ ಸಮಾರೋಪ ಭಾಷಣವಾಯ್ತು. ಶ್ರೀ ಎಚ್. ಎನ್. ರಾಯರು ಧನ್ಯವಾದಗಳನ್ನಿತ್ತರು.

ಮಲೆನಾಡು ಅಭಿವೃದ್ಧಿ ಸಾಧಕ ಸಮಿತಿಯ ಅಧ್ಯಕ್ಷ ಶ್ರೀ ಬದ್ರಿನಾರಾಯಣ ಎಂ. ಎಲ್. ಎ. ಅವರು ಇತ್ತೀಚೆಗೆ ದ. ಕ. ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿ ಸಂಚರಿಸಿ ಬೆಳ್ತಂಗಡಿ, ಬಂಟವಾಳ, ಉಪ್ಪಿನಂಗಡಿ, ಪುತ್ತೂರು ಮೊದಲಾದ ಪ್ರಮುಖ ಕಡೆಗಳಿಂದ ಆಯಾ ಪ್ರದೇಶದ ಕಷ್ಟಸಂಕಷ್ಟಗಳನ್ನು ತಿಳಿದುಕೊಂಡು ಅವುಗಳಿಗೆ ತಕ್ಕ ಪರಿಹಾರ ಮಾರ್ಗ ಸೂಚಿಸಿದರು.

ಹಿಂದೀ ಪರೀಕ್ಷೆಗಳು—ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ ಮುಂದಿನ ಪರೀಕ್ಷೆಗಳು ಸಪ್ತಂಬರ ೫, ೬ ಮತ್ತು ೭ರಂದು ಜರಗಲಿರುವವು. ಇದರ ಪ್ರವೇಶ, ಉತ್ತಮ ಮತ್ತು ರತ್ನ ಪರೀಕ್ಷೆಗಳನ್ನು ಮೈಸೂರು ಸರಕಾರ ಮಾತ್ರವಲ್ಲದೇ ಕೇಂದ್ರ ಸರಕಾರದ ಹಿಂದೀ ಸಲಹಾಮಂಡಳಿಯೂ ಮಂಜೂರು ಮಾಡಿರುತ್ತದೆ. ಇದರಂತೆ, ಹಿಂದೀ ರತ್ನವು ಬಿ. ಎ. ಡಿಗ್ರಿಗೂ ಉತ್ತಮವು ಇಂಟರ್‌ಗೂ ಪ್ರವೇಶವೂ ಮೆಟ್ರಿಕ್ ಲೇವಲಿಗೂ ಸಮಕಕ್ಷೆಯದ್ದಾಗಿದೆ. ಮುಂದಿನ ಪರೀಕ್ಷೆಗಳಿಗೆ ಉಡುಪಿ ಕೇಂದ್ರದಲ್ಲಿ ಕೂತುಕೊಳ್ಳಬಯಸುವವರು ತಾ. 10ರ ಒಳಗೆ ತಮ್ಮ ಆವೇದನಾ ಪತ್ರಗಳನ್ನು ನಿರ್ದಿಷ್ಟ ಶುಲ್ಕದೊಡನೆ ಕಾರ್ಯದರ್ಶಿ, ಹಿಂದೀಪ್ರಚಾರ ಪರಿಷತ್ತು, ಸಂತೆಕಟ್ಟೆ, ಉಡುಪಿ ಈ ವಿಳಾಸಕ್ಕೆ ಒಪ್ಪಿಸಬೇಕಾಗಿದೆ.

1960ನೇ ವರ್ಷದ E. S. L. C.
ಕನ್ನಡ ಪಠ್ಯದ ಟಿಪ್ಪಣಿ
ಅಚ್ಚಿನಲ್ಲಿದೆ ಬೇಗನೇ ಪ್ರಕಟವಾಗುವುದು
ಬೆಲೆ: 0—14—0
ಸಾಮಾಜಿಕ ಅಧ್ಯಯನ ಕೈಪಿಡಿ
(V ಮತ್ತು VI ಫೋರ್ಮುಗಳಿಗೆ ಉಪಯುಕ್ತವಿದೆ)
ಬೆಲೆ: ಎರಡು ರೂಪಾಯಿಗಳು
ಅಪೇಕ್ಷಕರು ಪತ್ರ ವ್ಯವಹಾರ ನಡೆಸುವುದು
ಡಿ. ವಿ. ಹೊಳ್ಳ, ಪ್ರಕಾಶಕ, ಕುಂದಾಪುರ

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ
ಭಾವಾರ್ಚನೆ
ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.
ಆಕರ್ಷಕ ಮುಖಪತ್ರ. ಬಿಳಿ ಕಾಗದ.
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.
ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ಮಾರಾಟಗಾರರು: ನವಭಾರತ ಬುಕ್ ಡಿಪ್ಪೊ, ಉಡುಪಿ.

ಜನಮತ

ದಿವಂಗತ ಸದಿಯ ಸಾಹುಕಾರ ಸ್ಮಾರಕ ದೀಪಸ್ತಂಭ

ವಿಜಯ ನಗರ ಸಾಮ್ರಾಜ್ಯದ ನೌಕಾ ಪಡೆಯಿಂದ ತನ್ನ ಮಹಾರಾಷ್ಟ್ರ ನೌಕೆಗೋಸ್ಕರ ಕರೆತಂದ "ಶ್ರೀ ಶಿವಾಜಿ" ಮಹಾರಾಜರ ಕಾಲದಿಂದ ಮುಂಬೈ ಪ್ರಾಂತ್ಯದಲ್ಲಿ ನೆಲೆಯೂರಿದ ಮೊಗವೀರರು ಭಟ್ಕಳದಿಂದ ಮಂಜೇಶ್ವರದ ವರೆಗಿನ 3 ಹೋಬಳಿಯನ್ನು ಸ್ಥಾಪಿಸಿ ತಮ್ಮ ಕುಲದೇವಿಯ ಆರಾಧನೆಗೋಸ್ಕರ ಏರ್ಪಡಿಸಿದ "ವಿಗ್ರಹ" ಲಕ್ಷ್ಮಿಯ ಆಕಾರ ಬಂದದ್ದನ್ನು "ಮುಂಬಾಯಿ ಮಹಾಲಕ್ಷ್ಮೀ ದೇವಸ್ಥಾನಕ್ಕೆ" ಒಪ್ಪಿಸಿ ಅಲ್ಲಿಯೂ ಪೂಜೆ ನಡೆಸುವ ವಾಡಿಕೆ ಇದೆ. ಅನಂತರ ನಿರ್ಮಿಸಿದ ಮೂರ್ತಿಯೊಟ್ಟಿಗೆ ಊರಿಗೆ ಬಂದಿರುವ ಕದ್ರೆ ಶುಕ್ರ ಗುರಿಕಾರರ ಮೊಕ್ತೇಸರಿಕೆಯಲ್ಲಿದ್ದ ಹೋಬಳಿಯವರು 1923ರ ಸರ್ವೇ ರಿಪೋರ್ಟಿನಲ್ಲಿ ಕಾಣಿಸಿರುವ ಸುಮಾರು 600ಎಕ್ರೆ ಮುಪ್ಪಾಡಿ ಆಸ್ತಿಯನ್ನು ಕ್ರಯಕ್ಕೆ ಪಡಕೊಂಡು ಗುರುಪಟ್ಟಕ್ಕೇರುವವರಿಗೆ ಮಾತ್ರ ಗೇಣಿ ವಸೂಲಿಯ ಅಧಿಕಾರ ಕೊಟ್ಟು ಇತರ ಯಾವ ಮೊಕ್ತೇಸರರಿಗೂ ಅಧಿಕಾರ ಇಡದೆ ಸರ್ವಹಕ್ಕನ್ನು ತಾವೇ ಇಟ್ಟುಕೊಂಡು 1897ರಲ್ಲು ಬ್ರಹ್ಮಾವರದಲ್ಲಿ ರಿಜಿಸ್ಟ್ರಿ ಸಿಸಿ ಧರ್ಮಸಾಧನೆಯಿಂದ ಬೆಣ್ಣೆಕುದ್ರು ದೇವಸ್ಥಾನದ ವಿನಿಯೋಗ ನಡೆಸಬೇಕೆಂದು ಬಿಟ್ಟು ಕೊಟ್ಟಿರುತ್ತಾರೆ. ಈ ತನ್ಮಧ್ಯೆ ಬ್ರಿಟೀಷರು ಉಪ್ಪಿಗೆ ಸುಂಕ ಹೇರಿಸಿದಾಗ 1892ರಲ್ಲಿ ಮುಂಬೈಯಲ್ಲಿರುತ್ತಿದ್ದ 1141ಜನರು ಸುಮಾರು 6ಸಾವಿರ ರೂಪಾಯಿ ಖರ್ಚು ಮಾಡಿ "ಇಂಗ್ಲಾಂಡಿನ ಕೋಮನ್ಸ್ ಸಭೆ" ತನಕ ವ್ಯವಹರಿಸಿದ ಫಲದಿಂದ ಕರ್ನಾಟಕದಲ್ಲಿ "ಮೀನಿನ ಯಾರ್ಡ್" (Fish curring yard) ಅಸ್ತಿತ್ವಕ್ಕೆ ಬಂತು. 1986ರಲ್ಲಿ ಮುಂಬೈಗೆ ಬಂದಿರುವ ದಿವಂಗತರುಗಳಾದ ಉದಿಯಾವರ ಸದಿಯ ಸಾಹುಕಾರರ ಮತ್ತು ಮಲ್ಪೆ ಸೋಮ ಸಾಹುಕಾರರ ಮುಖೇನ ಆಸ್ತಿ ತೆಗಿಯಲು 15ಸಾವಿರ ರೂಪಾಯಿ ಕಳುಹಿಸಿರುವರು. ಪ್ರಕೃತ ಕಾಲು ಲಕ್ಷಕ್ಕೂ ಸಿಕ್ಕದ 14 ಎಕ್ರೆ ಜಾಗೆಯನ್ನು ತನ್ನ ಖರೀದಿ ಕ್ರಯ 3500ಕ್ಕೇನೇ ಹೋಬಳಿಗೆ ಬಿಟ್ಟು ಕೊಟ್ಟು ಹಾಗೆಯೇ ತನ್ನ ಕೈಯಿಂದ 6ಸಾವಿರ ರೂಪಾಯಿ ಹಾಕಿ ರಿಂಪ್ಲಿಪಟ್ಟ ಬಲೆಯವರಿಂದಲೂ ವಸೂಲಿ ಗೈದ ಐವೇಜುಗಳಿಂದ ಉಚ್ಚಿಲದಲ್ಲಿ ಶ್ರೀ ಮಹಾಲಕ್ಷ್ಮೀ ದೇವಸ್ಥಾನ ಪ್ರತಿಷ್ಠಿಸಿದ ನಂತರ ಇದರ ವಿನಿಯೋಗ ನಡಿಯಲು 60ಮುಡಿ ಹುಟ್ಟುವಳಿ ಬರುವ ಆಸ್ತಿಯನ್ನು ತಾನೂ 14ಸಾವಿರದ ಆಸ್ತಿಯನ್ನು ತನ್ನ 14ಪಟ್ಟ ಉದಿಯಾವರ ಮೊಗವೀರ ಸಭೆಯವರಿಂದಲೂ "ಧರ್ಮಸಾಧನೆ" ಮಾಡಿದ ಸಮಾಜೋದ್ಧಾರಕರಾದ ಉದಿಯಾವರ ಸದಿಯ ಸಾಹುಕಾರರ ಚಿರಸ್ಮರಣಾರ್ಥಕ್ಕಾಗಿ ಆಳ ಸಮುದ್ರಕ್ಕೂ ತೋರುವ "ಚಂದ್ರ ಪ್ರಕಾಶದ" (Mercury Light) ದೀಪಸ್ತಂಭವನ್ನು ದೇವಸ್ಥಾನದ ಮುಂದುಗಡೆ ನಿಲ್ಲಿಸಿ ಕೆಳಗೆ ಮಾರ್ಗ ಪ್ರಯಾಣಿಕರಿಗೂ ಹಾಗೂ ಗೋವುಗಳಿಗೂ ಕುಡಿಯುವ ನೀರಿನ ಟಾಂಕಿ ಕಟ್ಟಿಸಬೇಕೆಂದೂ ಹಾಗೆಯೇ ದೇವಸ್ಥಾನದ ಬಡ ಭಾಗದಲ್ಲಿರುವ ಮುದರಂಗಡಿ ಮಾರ್ಗದಿಂದ ಬೆಳ್ಮಣ್ಣು, ಕಾರ್ಕಳಕ್ಕಾಗಿ ಒಳನಾಡಿಗೆ ಮೀನು ಸಾಗಾಟಕ್ಕೂ ನಾಡ ಸಮುದ್ರಯಾನದಿಂದ ಬರುವ ಯಾತ್ರಿಕರಿಗೂ ಸುಗಮವಾಗಲು ಸಂಬಂಧಪಟ್ಟವರಿಗೆ ವಿನಂತಿಸಿ ಸಮುದ್ರ ಕಿನಾರೆಗೆ ರಸ್ತೆ ಮಾಮಾಡಿಸಬೇಕೆಂದೂ ಬಹು ಜನರ ಅಪೇಕ್ಷೆ ಇರುತ್ತದೆ.

ಮುಲ್ಕಿ ಮಡೇರ ಬೆಟ್ಟು ರಾಮ ಚಂದ್ರ ಕುಂದರ್.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No· 466 N/50 date 2-12-1950 of the Director of public Instruction, Madras·

ವಿಚಾರ ಮಥನ

(೧ನೇ ಪುಟದಿಂದ)

ಮತ್ತೂ ಮುಂದುವರಿಸುವ ಇರಾದೆಯನ್ನೇ ಪ್ರಕಟಮಾಡಿದ್ದಾರೆ. ನಂಬೂದರಿಯವರು ವಿಚಾರವಿನಿಮಯಕ್ಕೆ ಸಿದ್ಧರಿದ್ದರೂ, ಆಂದೋಲನಕಾರರು ಅದರ ಬಗ್ಗೆ ಸಹಮತರಾಗಿಲ್ಲ. ತಾವು ಹೂಡಿರುವ ಆಂದೋಲನವನ್ನು ಆಶೆ ತೋರಿಸಿ ಒಮ್ಮೆ ಮುರಿದರೆ, ಮತ್ತೆ ತಾವು ಗೆದ್ದಂತೆಯೇ ಎಂದು ಕಮ್ಯುನಿಸ್ಟರು ಭಾವಿಸಿದ್ದಾರೆ—ಎಂಬ ಅಭಿಪ್ರಾಯ ಅವರದು. ಹೀಗಾಗಿ; ನೆಹರೂ ಸಂದರ್ಶನದಿಂದ ಪರಿಸ್ಥಿತಿ ಸುಧಾರಿಸೀತೆಂದು ತಿಳಿದುಕೊಂಡಿದ್ದ ಕೇರಳ ಸರಕಾರಿ ಪಕ್ಷ ತಾನು ಎದುರಿಸಬೇಕಾದುದಕ್ಕೆ ಎಡೆ ಕೊಡಲೇಬೇಕಾಗಿ ಪರಿಣಮಿಸಿದೆ. ನೆಹರೂ ಬಿರುಗಾಳಿ ಆಂದೋಲನ ಮರಳುರಾಶಿಯನ್ನು ಎತ್ತಿಕೊಂಡು ಹೋಗಲಿಲ್ಲವಷ್ಟೆ?

○ ○

ಮನೆಯಲ್ಲಿ ಮಾಡಲು ಕೊಟ್ಟಿದ್ದ ಲೆಕ್ಕಗಳನ್ನು ಮಾಡದೆ ಇದ್ದುದಕ್ಕೆ ಅಧ್ಯಾಪಕರು ಇಬ್ಬರಿಗೂ ನಾಲ್ಕು ನಾಲ್ಕು ಬಾರಿಸಿದರಂತೆ. ಶಾಲೆ ಬಿಟ್ಟ ನಂತರ, ಅವರಲ್ಲಿ ಒಬ್ಬ ಎಂದನಂತೆ— "ಅವನು ನಿಜವಾಗಿಯೂ ಸೋಮಾರಿಯಾಗಿಯೇ ಇದ್ದ. ಅದಕ್ಕೇ ಲೆಕ್ಕ ಮಾಡಲಿಲ್ಲ. ನನಗೆ ಮನೆಯಲ್ಲಿ ತುಂಬ ಬೇರೆ ಕೆಲಸವಿತ್ತು; ಆದುದರಿಂದ ಲೆಕ್ಕ ಮಾಡುವುದಾಗಲಿಲ್ಲ. ಹಾಗಿರುವಾಗ, ಅವನಿಗೆ ಹೊಡೆದದ್ದು ಸರಿಯೇ, ಆದರೆ, ನನಗೆ?"

ಕೇರಳದ ಬಗ್ಗೆ ಪ್ರಧಾನಿ ನೆಹರೂ ವ್ಯಕ್ತಪಡಿಸಿದ ಬಗ್ಗೆ ಕಮ್ಯುನಿಸ್ಟ ಪಕ್ಷದ ಕಾರ್ಯ ಸಮಿತಿಯ ಗೊತ್ತುವಳಿಯೂ ಇದೇ ವರ್ಗಕ್ಕೆ ಸೇರಿದ ಒಂದು ಉದಾಹರಣೆ. ನೆಹರೂ ಪಿಕೆಟಿಂಗ್ ನಡೆಸುವುದಕ್ಕೆ ವಿರೋಧ ವ್ಯಕ್ತಪಡಿಸಿರುವುದನ್ನಿದು ಸ್ವಾಗತಿಸಿರುವುದರೊಡನೆ "ಮರುಚುನಾವಣೆಯ ಬಗ್ಗೆ ಅನುಕೂಲಾಭಿಪ್ರಾಯ ವ್ಯಕ್ತಪಡಿಸಿದುದು ವಿಷಾದಕರ" ಎಂದಿದೆ ತನಗೆ ಬೇಕಾದಂತೆ ಹೇಳದೆ ವಾತಾವರಣವನ್ನು ಹಾಗೆಯೇ ಉಳಿಸಿದ ನೆಹರೂ ಕೇರಳಕ್ಕೆ ಬಂದುದೂ ಕೆಲದಿನಗಳಲ್ಲಿ ವಿಷಾದಕಾರಕವಾಗಿ ಪರಿಣಮಿಸಿರಬಹುದೇ

○ ○

ತಮ್ಮ ಸರಕಾರ ವಿರೋಧಿ ಆಂದೋಲನದ ಒಂದು ಮಹದಂಗವಾಗಿ ಕೇರಳದ ಎಲ್ಲ ಪಕ್ಷಗಳ ಸದಸ್ಯರೂ ತಮ್ಮ ಶಾಸನ ಸಭಾ ಸದಸ್ಯಸ್ಥಾನಕ್ಕೆ ರಾಜಿನಾಮೆ ಕೊಡುವರೆಂದು ಸುದ್ದಿ ಹರಡಿದೆ. ಹೀಗಾದಲ್ಲಿ ತೆರವಾದ ಸ್ಥಾನಕ್ಕೆ ಮಾತ್ರ ಚುನಾವಣೆ ನಡೆಯುವುದೆಂದು ಕೇರಳದ ಕಾಯದೆ ಮಂತ್ರಿ ಶ್ರೀ ಅಯ್ಯರರು ಘೋಷಿಸಿರುತ್ತಾರೆ ಹಾಗಾದರೆ, ವಿರೋಧಿಪಕ್ಷಗಳಿಗೆ ಏನುತಾನೇ ಧಕ್ಕಿದಂತಾಯಿತು? ಕಮ್ಯುನಿಸ್ಟರಿಗಿರುವ ಆತ್ಮವಿಶ್ವಾಸವು ಸತ್ಯವಾದರೆ, ಇನ್ನೂ ಕೆಲವು ಸ್ಥಾನಗಳನ್ನು ಅವರು ಗಳಿಸಬಹುದು. ಹೀಗಾಗುವುದಾದರೆ, ವಿರೋಧಿ ಪಕ್ಷಗಳು ಈಗ ಎಬ್ಬಿಸಿರುವ ಗಲಭೆ, ಹೂಡಿರುವ ಆಂದೋಲನ ಮಾತ್ರವಲ್ಲದೇ ಆಯಾ ಪಕ್ಷಗಳ ವರಿಷ್ಠರು ಕೇರಳದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳೆಲ್ಲವೂ ವೃಥಾಆರೋಪವೆಂಬುದನ್ನು ಸ್ವಯಂಸಿದ್ಧಮಾಡಿಕೊಟ್ಟಂತಾಗಲಿಲ್ಲವೆ? ಇದಕ್ಕೆ ಎರಡು ಪರಿಹಾರ ಮಾರ್ಗಗಳಿವೆ. ರಾಜಿನಾಮೆಯೀಯದೆ, ಉಪಚುನಾವಣೆಯ ಪ್ರಶ್ನೆಯೇ ಏಳದಂತೆ ಮಾಡುವುದು ಒಂದು; ರಾಜಿನಾಮೆ ಯೀಯುವುದಾದರೆ, ಪುನಃ ನಡೆಯುವ ಚುನಾವಣೆಗಳಲ್ಲಿ ತಮ್ಮ ಪಕ್ಷಗಳಿಂದ ಉಮೇದ್ವಾರರನ್ನು ನಿಲ್ಲಿಸದೇ ಎಲ್ಲಾ ಸ್ಥಾನವನ್ನೂ ಕಮ್ಯುನಿಸ್ಟರಿಗೇನೇ, ಅಥವಾ ಅವರ ಬೆಂಗೋಲಿನ (ಬೆನ್ನ ಹಿಂದೆ ಅಡಗಿಸಿಟ್ಟ ಕೋಲು) ಸಹಾಯದಿಂದ ನಿಂತಿರುವ ಉಮೇದ್ವಾರರಿಗೇನೇ ಸ್ಥಾನವನ್ನು ಉದಾರದಾನ ಮಾಡಿಬಿಡುವುದು! ಇದರಿಂದ ಕೋಲೂ ಮುರಿಯಲಾರದು; ಹಾವೂ ಸಾಯಲಾರದಲ್ಲವೆ? —ರಾಶಿ.

ಶಿಕ್ಷಣ ಕ್ಷೇತ್ರ

(೩ನೇ ಪುಟದಿಂದ)

ಇಂದಿನ ಔದ್ಯಮಿಕ ಶಿಕ್ಷಣದ ಚಿತ್ರ ಗೊಂದಲವನ್ನುಂಟು ಮಾಡುವಂತಿದೆ. ಜ್ಯೂನಿಯರ್ ಸೆಕೆಂಡರಿ ಶಾಲೆ ಹಾಗೂ ಹೈಯರ್ ಸೆಕೆಂಡರಿ ಶಾಲೆ ಒಂದು ತಾರತಮ್ಯವನ್ನು ತರುವದು. ವಿವಿಧೋದ್ದೇಶ ಶಾಲೆಗಳು ಇನ್ನೂ ಗಟ್ಟಿಯಾಗಿ ನಿಲ್ಲಬೇಕಾಗಿದೆ. ವರ್ಗಗಳಲ್ಲಿ ಬಹಳ ವಿದ್ಯಾರ್ಥಿಗಳಿರುತ್ತಾರೆ. ಆದ್ದರಿಂದ ವೈಯಕ್ತಿಕವಾಗಿ ವಿದ್ಯಾರ್ಥಿಯ ಮೇಲೆ ಲಕ್ಷ್ಯವೀಯುವದಾಗುವದಿಲ್ಲ. ಶಿಕ್ಷಣವೆಂದರೆ ಪರೀಕ್ಷೆಗಳನ್ನೆದುರಿಸುವ ಸಾಮರ್ಥ್ಯವನ್ನಷ್ಟೇ ಕೊಡುವದಲ್ಲ.

ಸ್ವತಂತ್ರ ವಿಚಾರ ಹಾಗೂ ಸ್ವತಂತ್ರ ತರ್ಕಕ್ಕೆ ಪರೀಕ್ಷೆಗಳು ವೈರಿಗಳಾಗಿ ಪರಿಣಮಿಸುತ್ತಿರುತ್ತವೆ. ಕೆಲಸಲ ಕಂಠಪಾಠ ಮಾಡುವ ಪದ್ಧತಿಗಳು ನಮ್ಮ ಬೌದ್ಧಿಕ ಜೀವನದ ಬಗ್ಗೆ ಒಂದು ಅರ್ಥ ಹೀನವಾದ ಪ್ರಾಧಾನ್ಯವನ್ನು ಕೊಡುತ್ತವೆ. ನನ್ನ ಅಭಿಪ್ರಾಯವೆಂದರೆ ಪರೀಕ್ಷೆಯ ಪದ್ಧತಿಗಳು ಬದಲಾದರೆ ಎಲ್ಲ ಮಟ್ಟಗಳಲ್ಲಿಯೂ ಶಿಕ್ಷಣ ಪದ್ಧತಿ ಸುಧಾರಿಸುವದು. ಇನ್ನು ತರಬೇತಿ ಹೊಂದಿದ ಶಿಕ್ಷಕರಿಗೆ ಒಂದು ಸಾಮಾಜಿಕ ನೋಟವನ್ನು ಒದಗಿಸಬೇಕು. ರಾಷ್ಟ್ರದ ಸಾಂಸ್ಕೃತಿಕ ಹಿನ್ನೆಲೆಯನ್ನು ಚೆನ್ನಾಗಿಕೊಟ್ಟು ಹೊಸ ಪರಿಸರದಲ್ಲಿ ಅದನ್ನು ಹೇಗೆ ಉಪಯೋಗಿಸಬೇಕೆಂಬುದನ್ನೂ ತಿಳಿಸಬೇಕು. ಇಂದು ಯಾವ ಕೆಲಸವೂ ದೊರೆಯದೇ ಇದ್ದಾಗ ಶಿಕ್ಷಣದ ದಾರಿಯನ್ನು ಹಿಡಿಯುತ್ತಿರುವುದನ್ನು ತರುಣರಲ್ಲಿ ಕಾಣುತ್ತಿದ್ದೇವೆ ಸಾಮಾಜಿಕ ಹಾಗೂ ನೈತಿಕ ಹೊಣೆಯನ್ನು ಅರಿತಂಥ ಶಿಕ್ಷಕರಿಂದು ಬೇಕಾಗಿದ್ದಾರೆ. ತರಬೇತಿಹೊಂದಿದ ಶಿಕ್ಷಕನು ಪಾಂಡಿತ್ಯದ ಆಳ, ಹೊರನೋಟದ ಅಗಲ, ಸಮಾಜಸೇವೆಯ ಉದ್ದ ಹಾಗೂ ಕಲ್ಪನೆಯ ಎತ್ತರದಿಂದ ಕೂಡಿದ ಮೂರ್ತಿಯಂತಿರಬೇಕು.

ಖಾಸಗಿ ಶಾಲೆಗಳಿಗೆ ಸರಕಾರದವರು ಸಹಾಯಧನವನ್ನು ಕೊಡುತ್ತಾರೆ. ಖಾಸಗಿ ಶಾಲೆಯ ಶಿಕ್ಷಕರ ವೇತನ ಹಾಗೂ ಸರಕಾರಿ ಶಾಲೆಗಳ ಶಿಕ್ಷಕರ ವೇತನದಲ್ಲಿ ಬದಲಾವಣೆ ಇರಬಾರದೆಂದು ನನ್ನ ಅಭಿಪ್ರಾಯವಾಗಿದೆ.

ತಾಂತ್ರಿಕ ಶಿಕ್ಷಣ ಮೈಸೂರ ರಾಜ್ಯದಲ್ಲಿ ಒಂದು ಯೋಜಿತವಾದ ತಳಹದಿಯ ಮೇಲೆ ನಡೆದಿಲ್ಲ. ಯೋಗ್ಯ ರೀತಿಯಿಂದ ಇದು ನಡೆಯದಿದ್ದರೆ ಪ್ರಯತ್ನ, ಶ್ರಮ, ಸಾಧನ ಸಂಪತ್ತು ಹಾಗೂ ವೇಳೆಯ ಅಪವ್ಯಯವಾದಂತೆ.

ಇಂದು ಶಿಕ್ಷಕನ ಹೊಣೆಯು ಸಂಕೀರ್ಣವಾಗುತ್ತ ನಡೆದಿದೆ. ಹೊಸ ವಿಷಯಗಳನ್ನು ತಿಳಿದುಕೊಳ್ಳುವದು ಅವನಿಗೆ ಅವಶ್ಯವಾಗಿದೆ, ಉಚ್ಚ ಧ್ಯೇಯಗಳಿಂದ ಸೇವೆ ಮಾಡಲು ಸಮಾಜ ಅವನಿಂದ ಅಪೇಕ್ಷಿಸುತ್ತದೆ. ಪ್ರತಿಯೊಬ್ಬ ಶಿಕ್ಷಕ ತಾನು ಒಂದು ಶಕ್ತಿಯ ಉಗ್ರಾಣವೆಂಬುದನ್ನು ಮರೆಯದಿರಲಿ. ಭಕ್ತಿ, ಆದರ, ಸಹನೆ ಈ ಮೂರನ್ನು ವಿದ್ಯಾರ್ಥಿಗಳಿಗೆ ಕಲಿಸಬೇಕು ದೇಶದ ಬಗ್ಗೆ ಅವರಲ್ಲಿ ಅಭಿಮಾನ ಉಂಟಾಗುವಂತೆ ನೋಡಬೇಕು. ಶಂಕರನ ಬುದ್ಧಿ, ಬಸವನ ಭಕ್ತಿ, ಮಹಾವೀರನ ಅಹಿಂಸೆ, ವಿವೇಕಾನಂದನ ಪಾಂಡಿತ್ಯ, ಹಾಗೂ ಗಾಂಧಿಯ ಸತ್ಯಪ್ರೀತಿಗಳಿಂದ ನೀವು ಸ್ಫೂರ್ತಿಯನ್ನು ಪಡೆಯಿರಿ."

(ಧಾರವಾಡದಲ್ಲಿ ನಡೆದ ಶಿಕ್ಷಕ ಸಮ್ಮೇಳನದಲ್ಲಿ ಉದ್ಘಾಟಕ ಶ್ರೀ ರಂ. ರಾ. ದಿವಾಕರ ಮತ್ತು ಅಧ್ಯಕ್ಷ ಶ್ರೀ ಜಿ. ಬಿ. ಮಾಲ್ಗಾರಾಧ್ಯರ ಭಾಷಣಗಳಿಂದ.)

ದಿ. ಕೆಥೋಲಿಕ್ ಬೇಂಕ್ ಲಿಮಿಟೆಡ್, ಶಿರ್ವ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ, ಪಡಕೊಂಡ ಸಾಲದನ್ನು, ಕ್ರಮ ಪ್ರಕಾರ ರಿಜಿಸ್ಟ್ರ ನೋಟೀಸು ಕೊಟ್ಟಲ್ಲಿ ಕೂಡಾ ಮರುಪಾವತಿ ಮಾಡದಿರುವುದರಿಂದ ಸದ್ರಿಯವರಿಗೆ, ವ, ಸದ್ರಿಯವರು ಮೃತಪಟ್ಟಿರುವಲ್ಲಿ, ಸದ್ರಿಯವರ ವಾರೀಸುದಾರರಿಗೆ, ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿಯವರು ಈಡಿಟ್ಟ ನಗಗಳನ್ನು ತಾರೀಕು 9—7—'59ರ ಒಳಗೆ ಬಿಡಿಸದಿದ್ದಲ್ಲಿ 11—7—'59ನೇ ಶನಿವಾರ ದಿನ ಮಧ್ಯಾಹ್ನ ಘಂಟೆ 12ಕ್ಕೆ, ಯಾ ನಮಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ.	ಹೆಸರು ಮತ್ತು ವಿಳಾಸ.	ಅಸಲು ರೂಪಾಯಿ.
33/304	ಶಿವಪ್ಪ ಪೂಜಾರಿ, N/o ಕಾಡ್ಯ ಪೂಜಾರಿ, ನ್ಯಾರ್ಮ, ಶಿರ್ವ P. O.	15-00
415	— Do —	26—00
33/871	ಲೂವಿಸ್ ಕ್ವಾಡ್ರಸ್, S/o ಫ್ರಾನ್ಸಿಸ್ ಕ್ವಾಡ್ರಸ್, ನೆಲ್ಲು, ಸನಿಯೂರ್, ಬಡಾ P. O.	80—00
34/712	ಅಬ್ದುಲ್ ಮಜೀದ್ C/o P. W. D. ಶಿರ್ವ P.O.	15—00

Office of the Catholic Bank Ltd., Shirva. 27—6—1959.

E. D'Cunha, Agent.

ವಿದ್ಯಾರ್ಥಿಗಳಿಗೆ ಉಪಯುಕ್ತವಾದ

ಭಾರದ್ವಾಜ ಡಿಕ್ಷನೆರಿ

ಇಂಗ್ಲಿಷ್ ಕನ್ನಡ ಶಬ್ದಕೋಶ ದೊರೆಯುತ್ತದೆ

ನವಭಾರತ ಬುಕ್ ಡಿಪ್ಪೊ, ಉಡುಪಿ

ನವಯುಗ ಪ್ರೆಸ್, ಉಡುಪಿ.

ಭಾವ ಕಥೆ

ಕಳ್ಳತನ

ಒಂದು ದಿನ ನಗರದ ಹಿರಿಯ ಶ್ರೀಮಂತನ ಮನೆಯಲ್ಲಿ ಕಳ್ಳತನವಾಯ್ತು. ಈ ಸುದ್ದಿ ಕೇಳಿ ಹಿರಿಯ ಶ್ರೀಮಂತನ ಮಿತ್ರರೆಲ್ಲಾ ಒಟ್ಟು ಕೂಡಿ ಅವನಿಗೆ ಸಮಾಧಾನ ಹೇಳಲು ಹೊರಟರು.

ಆದರೆ ಅವರು ಮನೆಯನ್ನು ಪ್ರವೇಶಿಸುತ್ತಲೇ ಶ್ರೀಮಂತನ ನೌಕರನು, ತನ್ನ ಯಜಮಾನನ ಲೋಹದಸ್ತಿಜೋರಿ, ರೇಶ್ಮೆಯ ವಸ್ತ್ರ ಭಂಡಾರ, ಬೆಳ್ಳಿಯ ಪಾತ್ರೆಗಳು, ಬಂಗಾರ ಮುತ್ತುರತ್ನಗಳ ಹಾರಗಳು ಸುರಕ್ಷಿತವಾಗಿವೆಯೆಂದು ತಿಳಿಸಿದನು.

ಶ್ರೀಮಂತನ ಮಿತ್ರರ ಮನಸ್ಸಿನಿಂದ ಚಿಂತೆ ದೂರವಾಯ್ತು. ಅವರು ಕಳ್ಳನ ದೃಷ್ಟಿಯಿಂದ ತಮ್ಮ ಶ್ರೀಮಂತ ಮಿತ್ರನ ಧನ ಕನಕ ಭಂಡಾರವನ್ನು ಅಗೋಚರ ಮಾಡಿದುದಕ್ಕಾಗಿ ಭಗವಂತನನ್ನು ಪ್ರಶಂಶಿಸ ತೊಡಗಿದರು.

ಆದರೆ ಅಲ್ಲಿ ಕೂಡಿದ ಅಪಾರ ಮಿತ್ರ ಸಮೂಹದಲ್ಲಿ ಯಾರೊಬ್ಬರಿಗೂ ತಮ್ಮ ಮಿತ್ರನನ್ನೂ ಕಾಣುವ ಎಂಬ ಭಾವನೆ ಯುತ್ಪನ್ನವಾಗಲೇ ಇಲ್ಲ. ಒಂದೊಮ್ಮೆ ಕಳ್ಳನು ಅವನನ್ನೇ ಕದ್ದೊಯ್ದಿದ್ದರೆ, ಆವನು ಈ ವಿಶಾಲಭಂಡಾರದ ಎಲ್ಲಾ ಮುತ್ತು ರತ್ನಗಳಿಗಿಂತಲೂ ಅತೀ ಬೆಲೆ ಬಾಳುವ ವಜ್ರ ತಾನೇ?!

(ಸುದರ್ಶನರ 'ಝುರೋಕ್'ನಿಂದ)

-ಎಸ್.ಎಂ. ಶೆಟ್ಟಿ, ಶಿಮುಂಜೆ ಪರಾರಿ ಬೊಂಬಾಯಿ.

ಆರೇ ಡೈರಿ ಫಾರ್ಮ್



ಮೇಲಿನ ಎಡ ಚಿತ್ರ—ಹಾಲು ಕರೆಯುವುದಕ್ಕೆ ಸರಿಯಾಗಿ ಕಟ್ಟಲ್ಪಟ್ಟ ಉತ್ತಮ ಜಾತಿಯ ದನಗಳು.

ಮೇಲಿನ ಬಲಚಿತ್ರ—ಕ್ಷೀರ ವಸಾಹತಿನ ಒಂದು ದೃಶ್ಯ.

ಕೆಳಗಿನ ಚಿತ್ರ—ಕ್ಷೀರ ಕೇಂದ್ರದಲ್ಲಿ ಹಾಲನ್ನು ಬಾಟ್ಲಿಗಳಲ್ಲಿ ತುಂಬಿಸುವ ಒಂದು ವಿಭಾಗ.

ಭಾರತದಲ್ಲಿ ಉತ್ತಮಸ್ತರದ ದನಗಳಿಲ್ಲವಾದುದರಿಂದ ವೈಜ್ಞಾನಿಕ ಪದ್ಧತಿಯಿಂದ ಗರ್ಭಧಾರಣೆ ಮಾಡಿಸಿ ಪಶುಗಳ ಜಾತಿಯನ್ನು ಉತ್ತಮಗೊಳಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಸಸ್ಯಾಹಾರಿಗಳು ಅಧಿಕವಾಗಿರುವ ಭಾರತದಲ್ಲಿನ ಜನತೆಗೆ ಸಾಕಷ್ಟು ಹಾಲು ದೊರೆಯುವುದು ಕಷ್ಟವಾಗಿದೆ. ದೊಡ್ಡ ನಗರಗಳಲ್ಲಿ ಕ್ಷೀರ ವಿತರಣಾ ಕೇಂದ್ರಗಳು ನಾಗರಿಕರಿಗೆ ಹಾಲನ್ನು ಒದಗಿಸುವುವು. ಕೆಲವೊಂದು ದೊಡ್ಡ ದೊಡ್ಡ ಕ್ಷೀರ ವಿತರಣಾ ಕೇಂದ್ರಗಳಲ್ಲಿ ಪ್ರಯೋಗಾಲಯಗಳೂ ಇದ್ದು, ಅಲ್ಲಿ ಊರುಪರವೂರುಗಳಿಗೂ ಹಾಲನ್ನು ಕೆಡದಂತೆ ರವಾನಿಸುವ ವ್ಯವಸ್ಥೆಯಿದೆ. "ಆರೇ ಡೈರಿ ಫಾರ್ಮ್" ಇಂತಹ ಕ್ಷೀರ ಕೇಂದ್ರಗಳಲ್ಲಿ ಒಂದಾಗಿದೆ.

ಕಲ್ಪವೃಕ್ಷ

(೪ನೇ ಪುಟದಿಂದ)

ನ್ನೂ ಬ್ಲಾಕ್‌ಗಳನ್ನೂ ತಯಾರಿಸುತ್ತಾರೆ. ಇದು ಪ್ರಚಾರಕ್ಕೆ ಬಂದರೆ ಪ್ರೆಸ್ ಕೆಲಸಗಾರರು ವಿಷವುಳ್ಳ ಸೀಸವನ್ನು ಮುಟ್ಟುವ ಅವಶ್ಯಕತೆಯಿಲ್ಲ. ಮುದ್ರಣದ ಕಾರ್ಯಕ್ಕೆ ಬೇಕಾಗುವ ಬಣ್ಣಗಳೆಲ್ಲವೂ ರಾಸಾಯನಿಕ ವಿಧಾನದಿಂದಲೇ ತಯಾರಿಸಲ್ಪಡುತ್ತವೆ.

ಯುವಕ ಯುವತಿಯರು ರಸಾಯನ ಶಾಸ್ತ್ರಕ್ಕೆ ನಿಜವಾಗಿಯೂ ಕೃತಜ್ಞರಾಗಲೇಬೇಕು. ಅವರ ಮನಸ್ಸನ್ನು ಸೆಳೆಯುವ ಕೃತಿಮ ರೇಶ್ಮೆಯ ಬಟ್ಟೆಗಳಾದ ನೈಲನ್ ರೇಯನ್, ಚಿಕರಾನ್ ಮೊದಲಾದುವು ಇದರ ಸಹಾಯದಿಂದಲೇ ಸಿದ್ಧವಾಗುತ್ತವೆ. ಈ ನೂಲಿನ ಬಟ್ಟೆಗಳು ಹೊಳಪುಳ್ಳವುಗಳೂ, ಗಟ್ಟಿಮುಟ್ಟೂ, ತೆಳುವೂ ಉಣ್ಣೆ ಅಥವಾ ರೇಶ್ಮೆಗಿಂತ ಬೆಲೆಯಲ್ಲಿ ಕಡಿಮೆವುಳ್ಳವಾಗಿಯೂ ಇರುತ್ತವೆ. ಈಗ, ಇಸ್ತ್ರಿಯ ಆವಶ್ಯಕತೆಯಿಲ್ಲದ ಕೃತಿಮ ರೇಶ್ಮೆ ಬಟ್ಟೆಯೂ ಬೆಳಕಿಗೆ ಬಂದಿದೆ. ಬಟ್ಟೆಯನ್ನು ರಾತ್ರೆ ಸಾಬೂನಿನಲ್ಲಿ ಒಗೆದು ಆರಿಸಲು ಹಾಕಿದರೆ, ಮರು ಮುಂಜಾನೆಯೇ ನೀವು ಧರಿಸಬಹುದು; ಅಗಸರವನ ಹಂಗೇ ಉಳಿಯುವುದಿಲ್ಲ.

ವಸ್ತ್ರದಂತೆಯೇ ನಮ್ಮ ಅನ್ನಸಮಸ್ಯೆಯ ಮೇಲೆ ಮೆಲ್ಲ ಮೆಲ್ಲನೆ ರಸಾಯನ ಶಾಸ್ತ್ರ ಕಾಲಿಡತೊಡಗಿದೆ. ಮರದ ತಿರುಳಿನಿಂದ ಸಕ್ಕರೆ ತಯಾರಿಸುವುದು ಸಾಧ್ಯವಾಗಿದೆಯಂತೆ. ಕೃತ್ರಿಮ ಕ್ಲೋರೋಫಿಲ್ ತಯಾರಿಸುವುದು ಸಾಧ್ಯವೆಂದಾದರೆ ಕೃತ್ರಿಮ ಧಾನ್ಯಗಳಿಸುವುದೂ ಅಸಂಭವವಾಗಲಾರದು. ಕೃತ್ರಿಮ ಎಥೀಲ್ ಆಲ್ಕೋಹಾಲ್‌ನ್ನು ತಯಾರಿಸುವ ವಿಧಾನವನ್ನು ರಸಾಯನ ಶಾಸ್ತ್ರ ಕಂಡುಕೊಂಡಿದೆ. ಆದುದರಿಂದ ಸರಾಯಿಯ ತಯಾರಿಯಲ್ಲಿ ಇದುವರೆಗೆ ಬಳಸುತ್ತಿದ್ದ ಆಹಾರ ಪದಾರ್ಥಗಳು ಇನ್ನು ಉಳಿಯುವಂತಾಗಿವೆ. ಸಾಬೂನಿನ ತಯಾರಿಯಲ್ಲಿ ಉಪಯೋಗಿಸುವ ಜೀವನೋಪಯೋಗಿ ಎಣ್ಣೆಗಳಿಗೆ ಬದಲು ಹಲವು ವಿಧದ ಚರ್ಬಿಯನ್ನೇ ಬಳಸಿಕೊಳ್ಳುವುದರಲ್ಲಿ ರಸಾಯನ ಶಾಸ್ತ್ರವು ಸಫಲವಾಗಿದೆ.

ಹೀಗೆ ಮಾನವನ ಕಲ್ಯಾಣಕ್ಕಾಗಿ ಆವಶ್ಯಕವಾದ ಅನೇಕಾನೇಕ ಪದಾರ್ಥಗಳಲ್ಲಿ ರಸಾಯನ ಶಾಸ್ತ್ರದ ತಂತ್ರ ಅಡಗಿಲ್ಲವೇ? ಹಾಗಿರುವಾಗ ರಸಾಯನ ಶಾಸ್ತ್ರವನ್ನು ಬಿಟ್ಟು ನಾವು ದೂರವಿರಬಲ್ಲೆವೆ ಎಂತಲೇ ರಸಾಯನ ಶಾಸ್ತ್ರವನ್ನು ಆಧುನಿಕ ಕಲ್ಪವೃಕ್ಷವೆಂದು ಕೊಂಡರೆ ತಪ್ಪೇನಿದೆ?

Latest Cottage Industry Book consists of complete description of various profitable industries, with sources of raw material and machineries, Price Rs. 6 and postage Re. 1.

Cottage Industry (N. U. S. 2)
Post Box 1262, Delhi.

ವಿನೋದ ವಿಹಾರ

ಓದಿದರೆ ನಕ್ಕುನಲಿಯುವಿರಿ

ಹೇಗೆ ಪ್ರಾರ್ಥಿಸಬೇಕು ಗೊತ್ತೆ?

ಮಗನೊಬ್ಬ ದೇವರ ಮುಂದೆ ಭಕ್ತಿಪುರಸ್ಸರವಾಗಿ ಪ್ರಾರ್ಥನೆ ಮಾಡುತಿದ್ದುದನ್ನು ಕಂಡು, ತಾಯಿ ಕೇಳಿದಳು—

"ಮಗೂ, ದೇವರೊಡನೆ ಏನೆಂದು ಪ್ರಾರ್ಥಿಸುತ್ತೀಯಾ, ಇಷ್ಟು ತನ್ಮಯತೆಯಿಂದ?"

ಮಗ—"ಅಮ್ಮಾ, ಊರಲ್ಲಿ ವಾಂತಿಭೇದಿ ಹರಡಿದೆಯಲ್ಲಾ? ಅದು ಗುಣಮುಖ ವಾಗಲೆಂದು ಬೇಡಿಕೊಳ್ಳುತ್ತಿದ್ದೇನೆ."

ತಾಯಿ—(ಸಿಟ್ಟಿನಿಂದ) "ನಿನಗೆ ಬುದ್ಧಿಯಿಲ್ಲ; ಇಲ್ಲವಾದರೆ,........

ಮಗ ನಡುವೆ ಬಾಯಿಹಾಕಿ ಕೇಳಿದ—"ಏನಮ್ಮಾ ಲೋಕದಲ್ಲಿ ಕಾಯಿಲೆ ಬಾರದಂತೆ ಬೇಡಿದರೆ, ಅದರಲ್ಲಿ ತಪ್ಪೇನಮ್ಮಾ?"

ತಾಯಿ—"ಅಯ್ಯೋ ಪೆದ್ದ, ಅಷ್ಟು ಗೊತ್ತಾಗುವುದಿಲ್ಲವೆ?

ಮಗ—"ಏನಮ್ಮಾ?"

ತಾಯಿ— "ನಿನ್ನ ತಂದೆ ಯಾರು ಗೊತ್ತೆ?"

ಮಗ— "ಹೌದು, ಅವರು ಡಾಕ್ಟರು."

ತಾಯಿ— (ಮಗನ ಕಿವಿ ಹಿಂಡಿ) "ನೋಡು, ಅದೇ ಕಾರಣದಿಂದ ಲೋಕದಲ್ಲಿ ರೋಗರುಜಿನಗಳು ಹೆಚ್ಚಾಗಲೆಂದು ಪ್ರಾರ್ಥಿಸಬೇಕು. ತಿಳಿಯಿತೆ?"

ಯೋಗ್ಯ ಪರಿಹಾರವಿದೇ.

ಒಬ್ಬ ಡಾಕ್ಟರರಲ್ಲಿಗೆ ಬಂದು ತನ್ನ ರೋಗವನ್ನೂ ಪರಿಸ್ಥಿತಿಯನ್ನೂ ವಿವರವಾಗಿ ನಿವೇದಿಸಿ ಪರಿಹಾರ ನೀಡಲು ವಿನಂತಿಸಿದ—ಮಹಾಸ್ವಾಮಿ, ನಾನು ಬಡವ. ಮದ್ದಿಗಾಗಿ ವ್ಯಯಿಸಲು ನನ್ನೊಡನೆ ಹಣವಿಲ್ಲ. ಹಾಗಿರುವಾಗಲೇ ಒಂದು ವಿಚಿತ್ರ ರೋಗ ನನಗೆ ಅಂಟಿದೆ. ಏನೇನು ಮಾಡಿದರೂ ನನಗೆ ರಾತ್ರೆ ಹೊತ್ತು ನಿದ್ರೆಯೇ ಬರಲೊಲ್ಲದು. ತಾವು ದಯಾಳುವೆಂದು ಜನರ ಬಾಯಿಯಿಂದ ಕೇಳಿದ್ದೇನೆ. ಏನಾದರೂ ಪರಿಹಾರವನ್ನು ತಾವು ಸೂಚಿಸಿ, ಹಣ ವ್ಯಯವಾಗದಂತೆ, ಒಂದು ಔಷಧವನ್ನು ಕೊಡುತಿದ್ದರೆ, ನಾನು ತಮಗೆ ಅಜೀವ ಕೃತಜ್ಞ".

ಡಾಕ್ಟರರು ದೀರ್ಘ ಶ್ವಾಸವೊಂದನ್ನು ಬಿಟ್ಟರು. ಆ ಮೇಲೆ ತುಂಬ ಆಲೋಚಿಸುವಂತೆ ತೋರ್ಪಡಿಸುತ್ತ ಅಂದನು—

"ಎಲ್ಲಿ ಯಾದರೂ ರಾತ್ರೆ ಕಾವಲುಗಾರನ ಕೆಲಸ ಹುಡುಕಿಕೊಳ್ಳು."

ಮಹಿಳಾ ಪ್ರಪಂಚ

ಮಲಯಾದ ಮಹಿಳೆಯರು ಬುರುಖಾ ಪದ್ಧತಿ-ಆಚರಿಸುತ್ತಾರೆ!

ವೇಳೆಯ ಮಹತ್ವವನ್ನು ಚೆನ್ನಾಗಿ ಅರಿತ ಅಲ್ಲಿಯ ಮಹಿಳೆಯರು ಸತತೋದ್ಯೋಗಿಗಳಾಗಿರುವರು!

ಮಲಾಯಾ ಇದೊಂದು ಮೂಡು ದಿಕ್ಕಿನಲ್ಲಿ ನೆಲೆಸಿರುವ ಸ್ವತಂತ್ರ ರಾಷ್ಟ್ರವು! ಅಲ್ಲಿಯ ಮೂಲ ನಿವಾಸಿಗಳೆಂದರೆ, "ಮಲೆ ಜನಾಂಗದ ಜನರು. ಅವರ ನಿಜವಾದ ಧರ್ಮ "ಇಸ್ಲಾಮ್". ಅಂತೆಯೇ ಸಮಗ್ರ ಪ್ರಪಂಚದಾದ್ಯಂತ ಕಂಡು ಬರುವ ಮುಸಲ್ಮಾನ ಧರ್ಮದ ನಡೆ—ನುಡಿಗಳನ್ನೇ ಮಲೆ ಜನರು ಅನುಸರಿಸುತ್ತಿರುವದು ಇಂದು ಕಂಡುಬರುತ್ತಿದೆ. ಮಲೆ ಜನರ ಸಹವಾಸದಿಂದ ನಮ್ಮ ಭಾರತೀಯರು ಮತ್ತು ನಮ್ಮ ಅತಿನೆರೆಯ ಚೀನಿ ಜನರೂ ಮಲಾಯಾ ದೇಶದಲ್ಲಿ ತೋರಿಬರುತ್ತಾರೆ.

ಏಶಿಯಾದಲ್ಲಿಯ ಇತರ ರಾಷ್ಟ್ರಗಳಂತೆ ಮಲಯಾ ಸಹ ಪಾಶ್ಚಾತ್ಯರ ಸಂಸ್ಕೃತಿಯಿಂದ ಮುಕ್ತವಾಗಲಿಲ್ಲ! ಮತ್ತು ಆದರಲ್ಲಿ ವಿಶೇಷ ಆಶ್ಚರ್ಯಗೊಳಿಸುವ ಮಹತ್ವವೂ ಏನೂ ಇಲ್ಲ. ನಮ್ಮ ಹಿಂದುಸ್ತಾನಿಗಳಂತೆ ಮಲೆ ಜನರ ಮೇಲೂ ಕೆಂಪು ಜನರು ಅದೆಷ್ಟೋ ವರ್ಷಗಳಿಂದ ತಮ್ಮ ಸರ್ವಾಧಿಕಾರ ಸತ್ತೆಯನ್ನು ನಡೆಸುತ್ತ ಬಂದಿರುವರು. ಈ ಸರ್ವಾಧಿಕಾರಕ್ಕೆ ಬೆಂದು ಬೇಸತ್ತು ಸುಮಾರು ಎರಡು—ಎರಡುವರೆ ವರ್ಷಗಳ ಹಿಂದೆ ಮಲಯಾ ರಾಷ್ಟ್ರವು ಸ್ವಾತಂತ್ರ್ಯವನ್ನು ಪಡೆಯಿತು! ಬಹುದಿನಗಳ ಕನಸು ಅಂದು ನನಸಾದದ್ದನ್ನು ಕಣ್ಣಾರೆ ಕಂಡು ಹಿರಿ-ಹಿರಿ ಹಿಗ್ಗಿ ಕುಣಿದಾಡಿದರು!

ಆದ್ದರಿಂದಲೇ ಮಲಾಯಾಕ್ಕೆ ಪಾಶ್ಚಾತ್ಯರ ಗಾಳಿಸೋಂಕಿದ ಬಗ್ಗೆ ಅದರಲ್ಲೇನು ಆಶ್ಚರ್ಯಪಡೆಯುವ ಕಾರಣವಿಲ್ಲ. ಆದರೂ ಅನೇಕ ವಿಷಯಗಳಲ್ಲಿ ನಮ್ಮ ಹಿಂದುಸ್ತಾನದೊಳಗಿನ ಹಳ್ಳಿ—ಪಳ್ಳಿಗಳಂತೆ ಮಲಯಾದ ಹಳ್ಳಿ—ಪಳ್ಳಿಗಳಲ್ಲಿ ಕಂಡುಬರುತ್ತದೆ. ನಮ್ಮ ಕಡೆಯ ಅದೆಷ್ಟೋ ಮುಸ್ಲೀಮ್ ಮಹಿಳೆಯರಂತೆಯೇ ಮಲೆ ಸ್ತ್ರೀಯರು ತಮ್ಮ ಶರೀರದ ಎಲ್ಲ ಅಂಗಾಂಗಗಳನ್ನು 'ಬುರುಖೆ'ಯ ಒಳಗೆ ಅಡಗಿಸಿಕೊಳ್ಳುವರು! ಆದರೆ ಮೋರೆಯ ಮೇಲೆ ಮಾತ್ರ ಬುರುಖೆಯನ್ನು ಹಾಕಿಕೊಳ್ಳುವ ರೂಢಿ ಇತ್ತೀಚೆಗೆ ತೀರ ಕಡಿಮೆಯಾಗುತ್ತ ಬಂದಿರುವದು.

ಮಲಯಾದಲ್ಲಿ ಭಾರತೀಯ ಸ್ತ್ರೀಯರು ಉಟ್ಟುಕೊಳ್ಳುವ ಸೀರೆ—ಪತ್ತಲುಗಳನ್ನೇ ಅಲ್ಲಿಯ ನಾರಿಯರು ಧರಿಸುವರು. ಆದರೆ ಚೀನಿಯರು ಸ್ವಂತ "ಕಿಮನೋ" ಎಂಬ ಉಡುಪನ್ನು ತೊಡುತ್ತಾರೆ. ಮಲಯಾ ಸ್ತ್ರೀಯರ ಪೋಷಾಕು ಉಳಿದ ದೇಶಗಳಿಗಿಂತ ಭಿನ್ನರೀತಿಯಲ್ಲಿ ಇರುವದು ಬ್ರಹ್ಮೀ ಸ್ತ್ರೀಯರು ಉಡುವಂತೆ ಕಾಲಿನವರೆಗೆ ಒಂದು ಲುಂಗಿ ಹಾಗೂ ಮೇಲೆ ಸರ್ವಸಾಧಾರಣವಾಗಿ ನಮ್ಮ ಕಡೆಯ ಪಂಜಾಬೀ ಮಹಿಳೆಯರಂತೆ "ಕಮೀಝಾ" ಪದ್ಧತಿಯನ್ನು ಉಪಯೋಗಿಸುವರು.

ಆದರೆ ಈ "ಕಮೀಝು" ಪದ್ಧತಿಯು ಬಹಳ ಸಡಿಲಾಗಿರಬೇಕಾಗುವದು. ಬಣ್ಣ ಬಣ್ಣ ಅರಿವೆಗಳನ್ನು ಮಲಯಾದ ಸ್ತ್ರೀಯರು ಸ್ವಭಾವತಃ ಮೆಚ್ಚುವರು! ಆದರೆ ಪೋಷಾಕಿನಲ್ಲಿ ಮಾತ್ರ ಪಾಶ್ಚಾತ್ಯರ ಅನುಕರಣೆ ಮಾಡಿ "ಫ್ರಾಕ್ಸ" ಅಥವಾ "ಸ್ಕರ್ಟ್ ಬ್ಲಾವುಜ್" ಹಾಕಿಕೊಳ್ಳುವ—ಆಧುನಿಕ ಹುಡುಗಿಯರು ಮಲಯಾದಲ್ಲಿ ಅಲ್ಲಲ್ಲಿ ದೊರೆಯುವರು!

ಮಲೆ ಮಹಿಳೆಯರು ಇಡೀ ದಿವಸ ತಮ್ಮ 'ಗೃಹ-ಕೈಗಾರಿಕೆ' ಕೆಲಸದಲ್ಲಿಯೇ ನಿರತರಾಗುವರು! ಅವರು ತಮ್ಮ ಮನೆಯಿಂದ ಕೆಲಸವಿಲ್ಲದೇ ಉದ್ದೇಶಪೂರ್ವಕ ಹೊರಬೀಳುವದಿಲ್ಲ. "ವೇಳೆಯ ಮಹತ್ವ" (ಮುತ್ತುಗಿಂತ ಹೊತ್ತು ಉತ್ತಮ)ವನ್ನು ಚನ್ನಾಗಿ ತಿಳಿದುಕೊಂಡಿರುವರು! ರಬ್ಬರಿನ ತೋಟಗಳಲ್ಲಿ ಮಾತ್ರ ನಿರುಪಾಯವಿಲ್ಲದೇ ಕೆಲಸ ಮಾಡುತ್ತಿರುವರು. ಮಲಯಾದ ಕನ್ಯೆಯರು 'ಚಿತ್ರಕಲೆ'ಯಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದಿರುವರು. ಮಲೆ ಜನಾಂಗವೇ ಚಿತ್ರಕಲೆಯಲ್ಲಿ ಪಾರಂಗತರಾಗಿರುವದು. ಚಿತ್ರ ಕಲೆಯಂತೆಯೇ "ಹೊಲಿಗೆಯ (ಕಸೂತಿ)" ಕೆಲಸವನ್ನು ಮಾಡುವರು ಅವರ ಪ್ರಮುಖ ವ್ಯವಸಾಯವೆಂದರೆ ಬಿದಿರುಗಳ ಅಥವಾ ಬೆತ್ತಗಳ ಕೆಲಸ. ಈ ಬೆತ್ತಗಳಿಂದ ಅನೇಕ ವಿಧದ ಬುಟ್ಟಿ, ಕುರ್ಚಿ, ಟೇಬಲು ಮತ್ತು ಮಲಗುವ ಮಂಚ, ಆರಾಮ ಕುರ್ಚಿ ಇತ್ಯಾದಿಗಳನ್ನು ಮಾಡುವದರಲ್ಲಿ ಮಲಯಾದ ಮಹಿಳೆಯರು ಅತಿ ಕುಶಲರಾಗಿರುವರು!

ಅಲ್ಲಿಯ ಹಳ್ಳಿಗಳಲ್ಲಿ ಶಿಕ್ಷಣ ಪ್ರಸಾರ ಸಾಕಷ್ಟು ಇದ್ದದ್ದು ಕಂಡು ಬರುವದಿಲ್ಲ. ಮತ್ತು ಮಹಿಳೆಯರಿಗಂತೂ ಎಳ್ಳಷ್ಟೂ ಶಿಕ್ಷಣ ಸೌಲಭ್ಯಗಳಿಲ್ಲ! ಆ ಕಾರಣದಿಂದಲೇ—ಅಲ್ಲಿಯ ಹಳ್ಳಿಯೊಳಗಿನ ಮಲೆ ಮಹಿಳೆಯರು ಶಿಕ್ಷಣದ ಸಲುವಾಗಿ ನಿಶ್ಚಿಂತರಾಗಿರುವರು. ಶಿಕ್ಷಣದಿಂದ ಉಪಯೋಗವೇನು? ಎಂಬ ಬಗ್ಗೆ ತಿಲಮಾತ್ರವೂ ಅವರು ಅರಿಯರು!

ಪಟ್ಟಣಗಳಲ್ಲಿ ಮಾತ್ರ ಕೆಲವು ಕಡೆಯಲ್ಲಿ ಶಿಕ್ಷಣ ಬಗ್ಗೆ ವಸ್ತುಸ್ಥಿತಿ ಬದಲಾಗಿರುವದು. ನಗರದೊಳಗಿನ ಮಹಿಳೆಯರು ಸಂಪೂರ್ಣ ಸುಧಾರಿಸಿದ ಜೀವನ ಪ್ರವಾಹದಿಂದ ಮುನ್ನಡೆಯುತ್ತಿರುವರು. ಇಂಥ ಸ್ಥಿತಿಯಲ್ಲಿ ಶಹರದೊಳಗಿನ ಸ್ತ್ರೀಯರು ಉಚ್ಚ ಶಿಕ್ಷಣಕ್ಕಾಗಿಯೂ ಅವಿರತ ಪ್ರಯತ್ನಿಸುತ್ತಾರೆ. ಪದವಿಗಳನ್ನು ಸಂಪಾದಿಸುವ ಬಗ್ಗೆ ಶಿಕ್ಷಣ ಪಡೆಯಬೇಕೆಂಬ ಪ್ರವೃತ್ತಿಯು ಮಾತ್ರ ಅವರಲ್ಲಿ ಎಳ್ಳಷ್ಟೂ ಇಲ್ಲ!

ತಮ್ಮ ವಿದ್ಯಾಭ್ಯಾಸದ ಲಾಭ ಪಡೆದು ಏನಾದರೊಂದು ವ್ಯವಸಾಯ, ನೌಕರಿ ಇತ್ಯಾದಿ ಮಾಡಬೇಕೆಂದು ಪುರುಷರಂತೆಯೇ ಸ್ತ್ರೀಯರ ಮುಖ್ಯ ಗುರಿಯಾಗಿದೆ.

ಒಂದುವರೆ ವರ್ಷಗಳ ಹಿಂದೆ ಪರತಂತ್ರದಿಂದ, ಸ್ವತಂತ್ರವಾದ ಈ ರಾಷ್ಟ್ರದಲ್ಲಿ ಅತಿ ದೊಡ್ಡ ನವಜಾಗ್ರತಿಯು ಉತ್ಪನ್ನವಾಗಿದೆ! ಮತ್ತು ಸಂಪೂರ್ಣವಾಗಿ ಸಮಾಜದ ಸ್ಥಿತಿಯು ಶೀಘ್ರವೇಗದಲ್ಲಿ ಬದಲಾವಣೆ ಹೊಂದುತ್ತಲಿರುವದು. ಅಲ್ಲಿಯ ನಾರಿಯರ ಜೀವನದ ಮೇಲೂ ತುಂಬಾ ಪ್ರಭಾವ ಬಿದ್ದಿರುವದರಿಂದ ಅವರು ಇತ್ತೀಚೆಗೆ ಪ್ರಗತಿ ಕಡೆಗೆ ಧಾವಿಸಿರುವರು! ಶಹರಗಳಲ್ಲಿ ಮಹಿಳೆಯರು ಪುರುಷನಿಗೆ ಸರಿಸಮಾನರಾಗಿ ವರ್ತಿಸುವರು. ಈ ಸಂಕ್ರಮಣಾವಸ್ಥೆಯು ಮಲಯಾದೊಳಗಿನ ಹಳ್ಳಿ-ಹಳ್ಳಿಗಳಿಗೆ ತಲುಪಲು ಹೆಚ್ಚು ಕಾಲಾವಧಿಯು ಬೇಕಾಗುವ ಆವಶ್ಯಕತೆ ಇಲ್ಲ! ಅಲ್ಪಾವಧಿಯಲ್ಲಿಯೇ ಸಮಗ್ರ ಮಲಯಾ ಸ್ವತಂತ್ರ ರಾಷ್ಟ್ರವು ಉನ್ನತಿಯ ಸ್ಥಾನಕ್ಕೆ ಮುಟ್ಟುವದು.

ಮಲೆ ಮಹಿಳೆಯರು ವಿನಯಶೀಲರು. ಪರರೊಡನೆ ಜಗಳ-ಕಲಹಗಳನ್ನು ಎಬ್ಬಿಸುವದು ಮಹಾ ಪಾಪವೆಂದು ಅವರು ಭಾವಿಸುವರು. ಮನೆಯಲ್ಲೂ, ಮನೆಯ ಹೊರಗೂ ಸರಳರೀತಿಯಿಂದ ವರ್ತಿಸುವರು. ಸತತೋದ್ಯೋಗಿಗಳಾದ ಮೂಲಕ ಈ ಸ್ತ್ರೀಯರ ಕೈಗಳು ಯಾವಾಗಲೂ ಕೆಲಸದತ್ತ ಎಳೆಯುವವು. ಇದರಿಂದ ಅವರಲ್ಲಿ ತಿಲಮಾತ್ರ ಆಲಸ್ಯವಿಲ್ಲವೆಂಬುದು ಸ್ಪಷ್ಟವಾಗಿ ತೋರಿಬರುವರು. ಆದರೆ ಈ ಮಹಿಳೆಯರು ವೇಷ—ಪೋಷಾಕಿನಲ್ಲಿ, ನಡೆ—ನುಡಿಗಳಲ್ಲಿ ಇನ್ನೂ ಸುಧಾರಿಸುವ ಪರಿದ್ದಾರೆ. ಬಾಹ್ಯ ಪ್ರಪಂಚದ ಬೆಳಕು ಇವರ ಮೇಲೆ ಬೀರಲಿಲ್ಲ. ಅಂತೆಯೇ ಮಲೆ ಸ್ತ್ರೀಯರು "ತಾವಾದರು, ತಮ್ಮ ಮನೆಯಾಯಿತು" ಎಂಬ ಸಾಂಪ್ರದಾಯಿಕ ಭಾವನೆಯಿಂದಲೇ ತಮ್ಮ ಕಷ್ಟಮಯ ಜೀವನವನ್ನು ಸುಖವಾಗಿ ಕಳೆಯುವರು. ಎಷ್ಟು ದೊಡ್ಡ ಕಷ್ಟ ಬಂದರೂ ಎದೆಗುಂದದೇ ಧೈರ್ಯದಿಂದ ಯಥಾಸ್ಥಿತಿಯನ್ನು ಅಲ್ಪಾವಧಿಯಲ್ಲಿಯೇ ನಿರ್ಮಿಸುವ ಚಾತುರ್ಯ ಅವರಲ್ಲಿ ಬಹುಕಾಲದಿಂದ ಮನೆಮಾಡಿಕೊಂಡಿರುವದು.

ಇವರ ಮನೆಯಲ್ಲಿ ಆಕಸ್ಮಾತ ಓರ್ವ ಅಪರಿಚಿತ ಅತಿಥಿ ಪ್ರವೇಶಿಸಿದರೆ, ಅವನೊಡನೆ ಬಹು ನಮ್ರತೆಯಿಂದ ಬಂದ ಕಾರಣವನ್ನು ತಿಳಿದುಕೊಂಡು ಆದರ್ಶ ರೀತಿಯಲ್ಲಿ ಆತನಿಗೆ ಆದರ ಸತ್ಕಾರವನ್ನು ಮಾಡುವ ರೂಢಿ ಅವರದಾಗಿದೆ. ಅಂತೂ ಮಲಯಾದ ಮಹಿಳೆಯರ ಜೀವನವು ಪರರಿಗೆ ಕಷ್ಟದಾಯಕವಾಗಿ ತೋರಿದರೂ, ಅವರಿಗೆ ಮಾತ್ರ ಸುಖಕರವಾಗಿ ಕಾಣುವದು. ಇದಕ್ಕಿಂತ ಸುಖದಾಯಕ ಜೀವನ ಇನ್ನುಮುಂದೆ ತಮಗೆ ದೊರಕಲಾರದೆಂದು ಆ ಮಹಿಳೆಯರು ಭಾವಿಸಿರುತ್ತಾರೆ.

—ರಾಮಕೃಷ್ಣ ಎ. ಪೈ,
ಅಂಕೋಲಾ.



ಭಾರತದಲ್ಲಿ ಕಬ್ಬಿಣ ಮತ್ತು ಉಕ್ಕುಗಳನ್ನು ತಯಾರಿಸುವ ಹೊಸ ಕಾರಖಾನೆಗಳು ಪ್ರಾರಂಭವಾಗಿವೆ.
ಎಡ ಚಿತ್ರ: ಭಿಲೈ ಕಬ್ಬಿಣದ ಕಾರಖಾನೆಯ ಒಂದು ನೋಟ.
ಬಲ ಚಿತ್ರ: ರೂರ್ಕೇಲಾ ಉಕ್ಕಿನ ಕಾರಖಾನೆಯ ದೃಶ್ಯವೊಂದು.

ಕಥಾ ವಿಹಾರ

(೨ನೇ ಪುಟದಿಂದ)

ವ್ರ ಕಾಣುತ್ತಿದ್ದ ಆ ಚಿಕ್ಕ ಹುಡುಗಿಯು 'ಅಣ್ಣಾ ನೀನು ತೇರ್ಗಡೆ ಹೊಂದಿ, ದೊಡ್ಡ ಸುದ್ದಿಯೊಂದು ನಿನಗೆ ಸಿಕ್ಕಿದ ಮೇಲೆ ನನಗೂ ಜಗಜಗಿಸುವ ರೇಶ್ಮೆ ಅಂಗಿಯನ್ನು ಮಾಡಿಸುವೆಯಲ್ಲವೇ?' ಎಂದು ಅಭಿಮಾನಪೂರ್ವಕವಾಗಿ ನುಡಿದಿದ್ದಳು ಎಂತಹ ಮುಗ್ಧ ಬೇಡಿಕೆ! ಎಂತಹ ದೃಶ್ಯ ತುಂಬಿತ್ತು! ಶ್ರೀಧರನಿಗೆ ಕರುಳು ಕಿತ್ತು ಬಂದಂತಾಯಿತು! ಅದನ್ನು ಸ್ಮರಿಸುವಷ್ಟೂ ಸಹನೆ ಆತನಲ್ಲಿ ಉಳಿದಿಲ್ಲ 'ತನ್ನಂತಹ ಅಯೋಗ್ಯರು ಈ ಪ್ರಪಂಚದಲ್ಲಿದ್ದು ಫಲವಿಲ್ಲವೆಂದು ಬಗೆದ

ಎಲ್ಲಿಗೆ ಹೋಗುತ್ತಿರುವೆನೆಂಬುದರ ಪರಿವೆಯೂ ಶ್ರೀಧರನಿಗಿರಲಿಲ್ಲ ಕಾಲುಗಳು ಎಳೆದತ್ತ ಸಾಗುತ್ತಿದ್ದನು ಕೊನೆಗೆ ಯಾವುದೋ ಒಂದು ನಿಶ್ಚಿತ ಮನೋಭಾವನೆಯಿಂದ ಕೂಡಿದವನಾಗಿ ರೈಲ್ವೆ ಸ್ಟೇಶನಿನತ್ತ ಹೆಜ್ಜೆ ಹಾಕಿದ ಒಂದು ಅಚಲ ನಿರ್ಧಾರವು ಆತನಲ್ಲಿ ಮೂಡಿತು. ಒಂದು ಕ್ಷಣಕಾಲ ಮನೆಯವರನ್ನು ಜ್ಞಾಪಿಸಿಕೊಂಡ ಕಣ್ಣಿನಿಂದ ಒಂದು ಹನಿ ಜಾರಿ ಕೆಳಗೆ ಬಿತ್ತು! ಮರುಕ್ಷಣವೇ ತನ್ನ ನಡಿಗೆಯನ್ನು ತೀವ್ರಗೊಳಿಸಿದ

೦೦ ೦೦

ಇತ್ತ ಶ್ರೀದರನ ಮನೆಯಲ್ಲಿ ಕೋಲಾಹಲವೇ ಕೋಲಾಹಲ ಫಲಿತಾಂಶ ನೋಡಲು ಹೊರಟ ಶ್ರೀದರನ ಪತ್ತೆಯೇ ಇಲ್ಲವೆಂದು ರಾಮಯ್ಯ ಹೆಗ್ಡೆಯವರು ತುಂಬಾ ಉದ್ವಿಗ್ನರಾಗಿದ್ದರು. ತಮ್ಮ ಮಗನ ಫಲಿತಾಂಶದ ಬಗ್ಗೆ ಸಂದೇಹವಿರದಿದ್ದರೂ, ಶ್ರೀಧರನೇಕೆ ಮರಳಲಿಲ್ಲವೆಂದು ಭೀತಿಯೂ ತಲೆದೋರಿತು ಆ ಕ್ಷಣವೇ ಪತ್ರಿಕೆ ತರಿಸಿ ನೋಡಿದಾಗ—ಇಲ್ಲ! ಶ್ರೀಧರನ ನಂಬರ್ 'ಇಲ್ಲ' ಹೆಗ್ಡೆಯವರ ಜಂಘಾ ಬಲವೇ ಉಡುಗಿ ಹೋಯಿತು ತನ್ನ ಬಯಕೆಗಳೆಲ್ಲಾ ಗಾಳಿ ಗೋಪುರಗಳಾದರೂ, ಮಗನ ಬಗ್ಗೆ ಜಾಗ್ರತನಾದರು ಜೀವಕ್ಕೆಲ್ಲಿ ಅಪಾಯ ತಂದೊಡ್ಡಿಕೊಳ್ಳುವನೋ ಎಂದು ಎಲ್ಲ ಕಡೆಗಳಲ್ಲಿಯೂ ಹುಡುಕಲಾರಂಭಿಸಿದರು ತಮ್ಮ ಮಗನು ಸುರಕ್ಷಿತವಾಗಿ ಮನೆ ಸೇರಲೆಂದು ಮನೆ ದೇವರಿಗೆ ಹರಕೆ ಹೊತ್ತರು ಆದರೆ ಇವುಗಳೆಲ್ಲಾ ನಿಷ್ಫಲವಾದುವು. ಶ್ರೀಧರನ ಸುಳಿವೇ ಸಿಗಲಿಲ್ಲ!

೦ ೦ ೦ ೦

ಮರುದಿನ ಬೆಳಗ್ಗೆ ಮರ್ಮ ಭೇದಕವಾದ ವಾರ್ತೆಯೊಂದು ರಾಮಯ್ಯ ಹೆಗ್ಡೆಯವರ ಮನೆಗೆ ತಲಪಿತು ತೇರ್ಗಡೆಯಾಗಲಿಲ್ಲವೆಂಬ ಖಿನ್ನತೆಯಿಂದ ಶ್ರೀಧರನು ಕಳೆದ ರಾತ್ರಿ ಓಡುತ್ತಿರುವ ರೈಲಿನ ಅಡಿಗೆ ಬಿದ್ದು ಆತ್ಮಹತ್ಯೆಯನ್ನೆಸಗಿದನೆಂಬ ವಿಷಯವನ್ನು ಕೇಳಿದ ಕೂಡಲೇ ಹೆಗ್ಡೆಯವರಿಗೆ ಆಕಾಶವೇ ಕಳಚಿಬಿದ್ದಂತಾಯಿತು! ಸಿಡಿಲು ಬಡಿದಂತ ಭಾಸವಾಯಿತು! ಅವರು ದೊಪ್ಪನೆ ನೆಲಕ್ಕೆ ಕುಸಿದರು! ಮನೆಯವರ ಶೋಕವೂ ಮೇರೆ ಮೀರಿತು ತಮ್ಮನ್ನಗಲಿದ ಶ್ರೀದರನಿಗಾಗಿ ಅವರೆಲ್ಲಾ 'ಗೋಳೋ' ಎಂದು ಅಳತೊಡಗಿದರು ಆದರೆ ಇದಾವುದೂ ಶ್ರೀಧರನಿಗೆ ಕೇಳುವಂತಿರಲಿಲ್ಲ! ತನ್ನ ಮನೆಯವರ ಬಯಕೆಗಳನ್ನು ಬರಿದುಮಾಡಿ ಅವನು ಇಹಲೋಕದಿಂದ ಪಾರಾಗಿದ್ದ!

೦ ೦ ೦ ೦

ಅದೇ ದಿನದ ಪತ್ರಿಕೆಯಲ್ಲಿ 'ತಿದ್ದುಪಡಿ'ಯೊಂದು ಪ್ರಕಟವಾಯಿತು 'ನಿನ್ನೆಯ ಸಂಚಿಕೆಯಲ್ಲಿ ಪ್ರಕಟಗೊಂಡ ಬಿ ಎಸ್ ಸಿ ಪರೀಕ್ಷಾ ಫಲಿತಾಂಶದಲ್ಲಿ, ಸ್ಥಳೀಯ ಕಾಲೇಜಿನ ವಿದ್ಯಾರ್ಥಿಯಾದ 'ಶ್ರೀಧರ ಹೆಗ್ಡೆ' ಎಂಬವರ ನಂಬರ್ ಪ್ರಮಾದವಶಾತ್ ಲೋಪವಾಗಿತ್ತೆಂದೂ, ಆ ವಿದ್ಯಾರ್ಥಿಯು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಗೊಂಡಿರುವುದಾಗಿಯೂ, ಆ ನಮ್ಮ ತಪ್ಪಿಗಾಗಿ ತುಂಬಾ ವಿಷಾದಪಡುವುದಾಗಿಯೂ ಪತ್ರಿಕೆಯವರು ಪ್ರಚುರಪಡಿಸಿದರು ಇದನ್ನೋದಿ ಊರಿಗೆ ಊರೇ ಪಶ್ಚಾತ್ತಾಪಗೊಂಡಿತು ಆದರೆ ಮಾಡುವುದೇನು? ಕಾಲವು ಮಿಂಚಿ ಹೋಗಿತ್ತು! ವಿಧಿಯು ತನ್ನ ಕೈವಾಡವನ್ನು ತೋರಿಸಿತ್ತು!

—**ಹೇಮನಾಥ ಶೆಟ್ಟಿ**, ಮುಂಡ್ಕೂರು

ಕೃತಜ್ಞತೆ

ನನ್ನ ಪುತ್ರ ಡಾ। ರಾಮಕೃಷ್ಣ ಹೆಗ್ಡೆಯು ನನ್ನ ಸೊಸೆ ಮ, ಶ್ರೀ ಹಿಲಿಯಾಣ ಮಹಾಬಲ ಹೆಗ್ಡೆಯವರ ಪುತ್ರಿ, ಚಿ। ಸೌ। ಸುನೀತಿಯನ್ನು ತಾ. 12-6-59ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದ ಸುಸಂದರ್ಭದಲ್ಲಿ ತಾವೆಲ್ಲರೂ ಬಂಧುಮಿತ್ರರೊಡಗೂಡಿ ಬಂದು ಶುಭಾಶಯಗಳೊಂದಿಗೆ ಉಚಿತ ಉಡುಗೊರೆಗಳನ್ನಿತ್ತು ವಧೂವರರನ್ನು ಹರಸಿ ಸಹಕರಿಸಿದ್ದಕ್ಕೆ ನಾನು ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ ಪ್ರತ್ಯಪ್ರತ್ಯೇಕವಾಗಿ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುವುದು ಅಸಾಧ್ಯವಾದ್ದರಿಂದ ಈ ಮೂಲಕ ನನ್ನ ಹೃತ್ಪೂರ್ವಕ ಆಭಾರವನ್ನು ಸೂಚಿಸುತ್ತೇನೆ

ಬೇಳಂಜೆ ವಿಟ್ಠಲ ಹೆಗ್ಡೆ

ತೃತೀಯ ಯೋಜನೆ

ಯೋಜನೆಯ ಯಶಸ್ಸಿಗೆ ಕೆಲವು ಸೂಚನೆಗಳು

ರೂಪ ಕೊಡುವಾಗಲೇ ಈ ಸೂಚನೆಗಳನ್ನು ಗಮನಿಸುವುದು ಕ್ಷೇಮಕರ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಆರ್ಥಿಕ ಸಾಧನೆಗಳ ಸಂಘಟನೆ

ಹೀಗೆ ಸಂಪತ್ಸಾಧನಗಳ ದೃಷ್ಟಿಯಿಂದ ಯೋಜನೆಯ ಸ್ವರೂಪವನ್ನು ನಿರ್ಧರಿಸುವುದರ ಜೊತೆಗೆ ಇನ್ನೂ ಒಂದು ದೃಷ್ಟಿಯ ಆಗತ್ಯವಿದೆ ನಾವು ಸಾಧಿಸುವ ಕಾರ್ಯದಿಂದ ದೊರಕುವ ಫಲ ಪ್ರಯೋಜನಕಾರಿಯಾಗಬೇಕೇ ಹೊರತು ಸಾಧನೆ ಪೂರ್ಣ ಪ್ರಯೋಜನಕ್ಕೆ ಬಾರದೆ ಉಳಿಯಬಾರದು ಉದಾಹರಣೆಗೆ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸಾಧ್ಯವಾಗಿರುವ ಎಷ್ಟೋ ಕಾರ್ಯ ಕೂಡಲೇ ಫಲಕೊಡುವ ರೀತಿಯಲ್ಲಿರಲಿಲ್ಲ ವಿವಿಧೋದ್ದೇಶಗಳಿಂದ ಕೂಡಿದ ಎಷ್ಟೋ ಕಾರ್ಯ ಯೋಜನೆಗಳಿಗೆ ಅಪಾರ ಹಣ ವೆಚ್ಚವಾಗಿದೆ ಆದರೆ ಅದರ ಪೂರ್ಣ ಪ್ರಯೋಜನ ಲಭಿಸಬೇಕಾದರೆ ಉಪನಾಲೆಗಳು ಇತ್ಯಾದಿಗಳ ರೀತಿಯಲ್ಲಿ ಇನ್ನೂ ನಡೆಯಬೇಕಾದ ಕಾರ್ಯ ಬಹಳವಿದೆ ಎಂದೇ ಈ ಕಾರ್ಯ ಯೋಜನೆಗಳಿಂದ ಎಷ್ಟು ಫಲ ಲಭ್ಯವಾಗಬೇಕೋ ಅಷ್ಟು ಸಿದ್ಧವಾಗುತ್ತಿಲ್ಲ, ಅಂತೆಯೇ ನಾಳೆಯದನ್ನು ಗಮನದಲ್ಲಿಟ್ಟುಕೊಂಡು ಮೂಲ ಕಾರ್ಯ ಯೋಜನೆಗೆ ವಿನಿಯೋಗಿಸಿರುವ ಎಷ್ಟೋ ಹಣ ಪ್ರಯೋಜನಕ್ಕೆ ಬಾರದೆ ಹೋಗಿದೆ

ಉದಾಹರಣೆಗೆ ಉಕ್ಕಿನ ಕೈಗಾರಿಕೆಯನ್ನೇ ತೆಗೆದುಕೊಳ್ಳೋಣ ಉಕ್ಕಿನ ಕಾರ್ಖಾನೆಗಳಲ್ಲಿ ವಿನಿಯೋಗವಾಗಿರುವ ಹಣವಾಗಲಿ ಹೆಚ್ಚಿರುವ ಉತ್ಪನ್ನ ಪ್ರಮಾಣವೇ ಆಗಲಿ ಪೂರ್ತಿ ಪ್ರಯೋಜನಕಾರಿಯಾಗದೆ ಹೋಗಿದೆ ಹೆಚ್ಚಿರುವ ಉಕ್ಕನ್ನು ಉತ್ಪನ್ನವನ್ನು ಕೂಡಲೇ ಯಂತ್ರೋಪಕರಣಗಳ ತಯಾರಿಕೆಗಾಗಲಿ ಅಥವಾ ಇನ್ನಾವುದೇ ಕೂಡಲೇ ಫಲ ಕೊಡುವಂತಹ ಕಾರ್ಯಗಳಿಗೆ ವಿನಿಯೋಗಿಸಿಕೊಳ್ಳಲು ವ್ಯವಸ್ಥೆ ಇಲ್ಲದಿದ್ದರೆ ಹೆಚ್ಚಿನ ಪ್ರಮಾಣದಲ್ಲಿ ಉಕ್ಕನ್ನು ತಯಾರಿಸಿದುದರ ಪ್ರಯೋಜನವಾದರೂ ಏನು? ಎರಡನೆಯ ಯೋಜನೆಯಲ್ಲಿನ ಕಾರ್ಯ ಯೋಜನೆಗಳ ಗತಿಯೇ ಈ ರೀತಿಯಾಗಿವೆ ಉತ್ಪನ್ನವಾಗುವ ಯಾವುದೇ ವಸ್ತು ನಿಷ್ಪ್ರಯೋಜಕವಾಗಿ ಉಳಿಯದೆ ಕೂಡಲೇ ಪ್ರಯೋಜನಕ್ಕೆ ಬರಬೇಕು ಹಾಗಾದರೆ ಯೋಜನೆ ವಾಸ್ತವವಾದಿಯಾಗದು ಸಂಪತ್ಸಾದನಗಳು ನಮ್ಮ ಬಡ ದೇಶದಲ್ಲಿ ಯಾವುದೇ ರೀತಿಯಲ್ಲಿ ನಿರರ್ಥಕವಾಗಬಾರದು

ಏನು ಲಭ್ಯವಿದೆಯೋ ಅದನ್ನು ಪೂರ್ತಿಯಾಗಿ ಪ್ರಯೋಜನಕ್ಕೆ ಬರುವಂತೆ ರೂಡಿಸಿಕೊಳ್ಳುವ ದೃಷ್ಟಿಗೆ ವಿಶೇಷವಾಗಿ ಗಮನಕೊಟ್ಟು ಮೂರನೆ ಯೋಜನೆಯನ್ನು ರೂಡಿಸುವುದರ ಅಗತ್ಯ ವಿಶೇಷವಾಗಿದೆ

ಈಗ ಸಾಧ್ಯವಾಗಿರುವ ಉತ್ಪನ್ನವನ್ನು ಪ್ರಯೋಜನಕಾರಿಯಾಗಿ ಬಳಸಿಕೊಳ್ಳುವುದಕ್ಕೆ ಇದೀಗ ಹೆಚ್ಚಿನ ಗಮನಕೊಡಬೇಕು ಇನ್ನೂ ಉತ್ಪನ್ನ ಹೆಚ್ಚಿಸುವುದಕ್ಕೆ ಮಾತ್ರ ಗಮನಕೊಟ್ಟು ನಿಂತರ, ಉತ್ಪನ್ನ ಹೆಚ್ಚುವುದೇ ಹೊರತು ಅದು ಕೂಡಲೇ ಸದ್ವಿನಿಯೋಗವಾಗುವುದಿಲ್ಲ ಉಕ್ಕಿನ ಉತ್ಪನ್ನ ಪ್ರಮಾಣವನ್ನು ೧೯೬೧-೬೬ರ ಅವಧಿಯಲ್ಲಿ ೬೦ ಲಕ್ಷ ಟನ್ನುಗಳಿಂದ ೧೧೦ ಲಕ್ಷ ಟನ್ನುಗಳಿಗೆ ಹೆಚ್ಚಿಸುತ್ತೇವೆಂದೇ ಇಟ್ಟುಕೊಳ್ಳೋಣ ಹಾಗೆ ವಿನಿಯೋಗಿಸುವುದು ಅಷ್ಟು ಸುಲಭವಾಗಿ ತಪ್ಪಾಗಲಾರದು. ಆದರೂ ಅಷ್ಟು ಹೆಚ್ಚು ಉತ್ಪನ್ನ ಸಾಧಿಸಿ ಉಕ್ಕನ್ನು ಮೂಲೆಪಾಲುಮಾಡಿ ಇಡುವುದರಿಂದ ಆಗುವ ಪ್ರಯೋಜನವಾದರೂ ಏನು? ಮತ್ತು, ಹಣದ ಕೊರತೆ ಇರುವಾಗ ಅದಕ್ಕಾಗುವ ಹಣದ ವೆಚ್ಚವನ್ನು ವ್ಯರ್ಥ ಮಾಡಿದಂತಾಗುವುದಿಲ್ಲವೆ? ಅಂತೆಯೇ ಈಗ ಸಾಧಿಸಿರುವಷ್ಟನ್ನು ಸಂಘಟಿಸಿ ಅದು ಪೂರ್ಣ ಪ್ರಯೋಜನಕಾರಿಯಾಗುವಂತೆ ಮಾಡುವುದು ಜಾಣ್ಮೆಯಾದೀತು. ಸುಮ್ಮನೆ ಪ್ರಯೋಜನಕ್ಕೆ ಬಾರದ ರೀತಿಯಲ್ಲಿ ಯಾವುದನ್ನೂ ವಿಸ್ತರಿಸಿಕೊಂಡು ಹೋಗುವುದು ಅನುಚಿತವಾಗುತ್ತದೆ ಕಚ್ಚಾ ಮಾಲುಗಳ ಪೂರ್ಣ ಪ್ರಯೋಜನಕ್ಕೆ ವ್ಯವಸ್ಥೆ ಇಲ್ಲದೆ ಕಚ್ಚಾ ಮಾಲುಗಳ ತಯಾರಿಕೆಗೇ ಗಮನ ಕೊಡುತ್ತಾ ನಿಂತರೆ ಹೇಗೆ? ಈ ದೃಷ್ಟಿ ಮುಖ್ಯ

ಸಾಧ್ಯವಾಗಿರುವ ಉತ್ಪನ್ನದ ಸದ್ವಿನಿಯೋಗಕ್ಕೆ ವ್ಯವಸ್ಥೆ ಆಗುವುದರಿಂದ ಬೆಲೆಗಳ ಹತೋಟಿ ಸಹ ಸಾಧ್ಯವಾಗಿ ಕೂಡಲೇ ಉಪಯೋಗಕ್ಕೆ ಬರುವ ವಸ್ತುಗಳ ಉತ್ಪನ್ನ ಸಾಧ್ಯವಾಗುತ್ತದೆ ಇಂತಹ ಕ್ರಮವನ್ನು ನಿಲಿಸಿ ಔದ್ಯೋಗಿಕತೆಗೆ ಹೋಲಿಸಬಹುದು ಸೇನೆ ಮುನ್ನಡೆದ ಹಾಗೆಲ್ಲ ತನ್ನ ಮುನ್ನಡೆ ಹಾಗೂ ವ್ಯಾಪ್ತಿಯನ್ನು

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವೂ ಪತ್ರವ್ಯವಹಾರಕ್ಕೆ ಬೇಕಾಗುವುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಕೈಗನ್ನಡಿ

ಬೆಲೆ ರೂ 1-4-0 (1-25) ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟರಾವ್ ಎಲ್ ಐ ಎಮ್ ಮಕ್ಕಳ, ಹೆಂಗಸರ ಗರ್ಭಿಣಿಯರ ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿವೆ ಹರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ ಬೆಲೆ ರೂ ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ ರೂ ಒಂದೂವರೆ

ನವಯುಗ ಪುಸ್ತಕ ಭಂಡಾರ, ಉಡುಪಿ

ರೇಡಾರ್ ಮತ್ತು ರೇಡಿಯೋ ಟೆಲಿಫೋನ್‌ಗಳ ಸಹಾಯದಿಂದ ವಾಯುನಗರದಲ್ಲಿ ವಾಹನಗಳನ್ನು ನಿಯಂತ್ರಿಸಲಾಗುತ್ತದೆ.

[illegible]

... ಕೋಟಿಯಷ್ಟು ಹೆಚ್ಚು [illegible]. ಸಾರ್ವಜನಿಕ ಕ್ಷೇತ್ರದ ಪ್ರಾಮುಖ್ಯತೆ [illegible] ಕಡಿಮೆಯಾಗಿ ಖಾಸಗಿ ಕ್ಷೇತ್ರದ ಪ್ರಾಮುಖ್ಯವನ್ನು ಹೆಚ್ಚಿಸುವ ಈ ಕ್ರಮ ಅನುಸರಿಸುವುದರಿಂದ ಬಂಡವಾಳದ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳಬೇಕಾದ ಅಗತ್ಯ ಬಾರದು. ಸಿದ್ಧಾಂತದ ಕಾಟಾಟೆ ಬಿಟ್ಟು ಸ್ವಲ್ಪ ಮಟ್ಟಿನ ವಾಸ್ತವಿಕ ದೃಷ್ಟಿ ಮಾತ್ರ ಇದಕ್ಕೆ ಬೇಕಾಗುತ್ತದೆ. ಬಂಡವಾಳದ ಮೊತ್ತ ಕಡಿಮೆ ಮಾಡಿಕೊಳ್ಳಬೇಕಾದ ಆವಶ್ಯಕತೆ ಬರುವುದಿಲ್ಲ. ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳ ಪಾತ್ರ ಪರಸ್ಪರ ಪರಿಪೂರ್ಣವಾಗುತ್ತದೆ.

ಅವಕಾಶಗಳನ್ನು ಸಾಕಷ್ಟು ಮಟ್ಟಿಗೆ ಕಲ್ಪಿಸಿಕೊಟ್ಟರೆ ಖಾಸಗಿ ಕ್ಷೇತ್ರ ತನ್ನ ಪಾಲಿನ ಹಣ ಎತ್ತಲು ಸಮರ್ಥವಾಗುತ್ತದೆಯೆಂಬ ನಂಬಿಕೆ ನನಗಿದೆ.

ಡಾ|| ಎಂ. ಎಚ್. ಗೋಪಾಲ್,
ಮೈಸೂರು ವಿಶ್ವವಿದ್ಯಾಲಯ.

ಅನುಭವಾಮೃತ

ಮಾತೃದೇವೋಭವ ಎಂಬುದು ಸರಿಯೆ?

ಪ್ರಾಣಾನಿಮಿತ್ತೇನ ನ ಸಾಧು ಸರ್ವಂ ಎಂದೇ ಒಪ್ಪಿಕೊಳ್ಳಬಹುದೆ?

ನಮ್ಮ ನೆರೆಕೆರೆಯಲ್ಲಿ ಕೆಲವು ತಿಂಗಳುಗಳ ಹಿಂದೆ ನಡೆದ ಘಟನೆಯಿದು. ಮನೆಯಲ್ಲಿ ತಾಯಿ ಮತ್ತು ಮಗಳು ಇಬ್ಬರೇ ವಾಸಿಸುತ್ತಿದ್ದರು. ತಂದೆ ಎಂದೋ ತೀರಿಹೋಗಿದ್ದ. ಅವನ ಸಂಪತ್ತೂ ಕಡಿಮೆಯಿರಲಿಲ್ಲ. ಆದರೆ, ತಾಯಿಯ ವ್ಯವಹಾರ ಚೆನ್ನಾಗಿರಲಿಲ್ಲ ಎನ್ನುತ್ತಾರೆ. ಅದು ಸತ್ಯವಿದ್ದರೂ ಇರಬಹುದು. ಇಲ್ಲ ಎನ್ನುವುದಕ್ಕೆ ಆಧಾರವೂ ಸಾಲದು. ಮಗಳು ಎಸ್. ಎಸ್. ಎಲ್. ಸಿ. ಯಲ್ಲಿ ಓದುತ್ತಿದ್ದವಳು.

ಮನೆಯಲ್ಲಿ ಆಗಾಗ ತಾಯಿ ಮತ್ತು ಮಗಳ ನಡುವೆ ವಾಗ್ವಿವಾದಗಳು ನಡೆಯುತ್ತಿದ್ದುವು. ಅದೇನು ಎಂದು ಯಾರಿಗೂ ಸುಸ್ಪಷ್ಟವಾಗಿ ಕೇಳುತ್ತಿರಲಿಲ್ಲ. ಯಾರೂ ಅತ್ತ ಕಿವಿಗೊಡುವ ಹವ್ಯಾಸಕ್ಕೂ ಹೋಗುತ್ತಿರಲಿಲ್ಲ. ಹೀಗೆಯೇ ಹಲವಾರು ಸಮಯ ಕಳೆದುಹೋಗಿತ್ತು.

ಒಂದು ದಿನ ಇದ್ದುದಕ್ಕಿದ್ದಂತೆ ಆ ಮನೆಯತ್ತಣಿಂದ ದೊಡ್ಡ ಕೂಗು ಕೇಳಿಸಿತು. ಕೊಂಚ ಸಮಯ ನಮ್ಮ ಗಮನ ಅತ್ತ ಹರಿಯಲಿಲ್ಲ. ಕೂಗು ಮತ್ತೂ ಮತ್ತೂ ಕೇಳುತ್ತ ಬಂದುದರಿಂದ, ಅದನ್ನು ಆಲಿಸಿದೆವು. ಆಗ, ರಕ್ಷಣಾರ್ಥವಾಗಿ ಬೊಬ್ಬಿಡುವರೆಂದು ತಿಳಿದು ಬಂತು. ನಾವೆಲ್ಲರೂ ಓಡಿ ಹೋದೆವು. ಮನೆಯ ಹಟ್ಟಿಯಲ್ಲಿನ ಬೈಹುಲ್ಲ ರಾಶಿಗೆ ಬೆಂಕಿ ಹಿಡಿದಿತ್ತು. ಇದೇನೆಂದು ಪರಿಶೀಲಿಸಲು ಸಮಯವಿಲ್ಲದೇ ನೀರೆರೆದು ಬೆಂಕಿಯನ್ನು ನಂದಿಸುವ ಪ್ರಯತ್ನ ನಡೆಸ ತೊಡಗಿದೆವು. ಅಷ್ಟರಲ್ಲೇ ನೂರಾರು ಜನರೂ ಸೇರಿದ್ದರು. ಬೆಂಕಿ ಆರಿಸುತಿದ್ದಂತೆಯೇ ತಾಯಿ ತನ್ನ ಮಗಳನ್ನು ಕರೆಯ ತೊಡಗಿದಳು. ಆದರೆ, ಎಲ್ಲಿಯೂ ಉತ್ತರ ದೊರೆಯಲಿಲ್ಲ. ತಾಯಿ ಕಕ್ಕಾಬಿಕ್ಕಿಯಾಗಿ ಅರಚತೊಡಗಿದಳು. ಅಷ್ಟರಲ್ಲಿ ಊರವನೊಬ್ಬನು ಹಟ್ಟಿಯೊಳಗಿಂದ ಅರೆಸುಟ್ಟ ಹುಡುಗಿಯೊಂದನ್ನು ಹೊತ್ತು ತಂದನು. ದನಗಳನ್ನು ಈ ಮೊದಲೇ ಬಿಟ್ಟಾಗಿತ್ತು. ಅದೇ ಆಕೆಯ ಮಗಳಾಗಿದ್ದಳು. ಮೈಯ ಬಟ್ಟೆ ಮಾತ್ರವಲ್ಲ, ದೇಹವೂ ಸುಟ್ಟುಹೋಗಿತ್ತು. ಮುಖವೂ ವಿಕಾರವಾಗಿತ್ತು. ಅಪಾಯಕರ ಪರಿಸ್ಥಿತಿಯಲ್ಲಿ ಆಕೆ ಇದ್ದಳು. ಹೊತ್ತು ಕಳೆಯಲು ಅಸಾಧ್ಯವಾದುದರಿಂದ ನಾಲ್ಕು ಜನರು ಆಕೆಯನ್ನು ಹೊತ್ತು ಆಸ್ಪತ್ರೆಗೆ ತಂದರು. ಆದರೆ, ಅಲ್ಲಿ ಅದೇ ರಾತ್ರಿ ಆಕೆ ತೀರಿಕೊಂಡಳು. ತಾಯಿಯು ಅಲ್ಲಿದ್ದರೂ ಆಕೆಯ ಕಣ್ಣುಗಳಿಂದ ಒಂದು ತಟಕೂ ನೀರು ಸುರಿದಿರಲಿಲ್ಲವಂತೆ!

ನಮಗೆ ಆಶ್ಚರ್ಯ ಎನಿಸಿತು. ಹೆಚ್ಚಿನ ಸಂಗತಿ ತಿಳಿಯುವ ಬಯಕೆ ಇದ್ದಿದ್ದರೂ ಆ ಹೆಂಗಸಿನ ಬಗ್ಗೆ ಸದ್ಭಾವನೆ ಇಲ್ಲದುದರಿಂದ ನಾವಾರೂ ಅತ್ತ ಗಮನಿಸಲಿಲ್ಲ. ಆದರೆ, ಕೆಲವು ದಿನಗಳ ಮೇಲೆ, ಬೆಂಕಿ ಬೀಳಲು ಕಾರಣ ಹಾಗೂ ಹುಡುಗಿಯ ಮರಣದ ಬೀಜ ತಿಳಿದುಬಂದುವು.

ತಾಯಿಯು ಮಗಳನ್ನು ತನ್ನ ವೃತ್ತಿಗೆ ಎಳೆಯಲು ಬಯಸುತಿದ್ದಳು. ಆದರೆ, ಮಗಳದಕ್ಕೆ ಸಿದ್ಧಳಿರಲಿಲ್ಲ. ಎಂತಾದರೂ ಒಂದು ಎಸ್. ಎಸ್. ಎಲ್. ಸಿ. ಮಾಡಿ ಎಲ್ಲಿಯಾದರೂ ದುಡಿದು ತಿನ್ನುವ ಆಶೆ ಆಕೆಯದ್ದು. ಆದರೆ, ಪರೀಕ್ಷೆಗೆ ಹಣ ಕಟ್ಟಲು ತಾಯಿ ಕೊಡಲಿಲ್ಲವಂತೆ! ಕಾಡಿ ಬೇಡಿದರೂ ಅನ್ನನೀರು ಬಿಟ್ಟರೂ ಆಕೆ ಮಣಿಯಲಿಲ್ಲವಂತೆ! ರೂಪಾಯಿ ಕೊಟ್ಟರೆ, ಮಗಳು ತನ್ನ ಕೈಯಿಂದ ಹಾರಿಹೋಗುವಳೆಂದಾಕೆ ತಿಳಿದುಕೊಂಡಿರಬೇಕು. ಇದರಿಂದ ಭಗ್ನಾಶೆಯಾದ ಮಗಳು ತನ್ನ ಬಟ್ಟೆಗಳಿಗೆ ಚಿಮಿಣಿ ಎಣ್ಣೆ ಸುರಿದು ಬೆಂಕಿ ಉರಿಸಿಕೊಂಡು ಹಟ್ಟಿಯ ಅಟ್ಟದ ಬೈಹುಲ್ಲಿನೆಡೆಯಲ್ಲಿ ಕುಳಿತಿದ್ದಳಂತೆ! ಇಂತಹ ತಾಯಿಯನ್ನು ನಾನೆಲ್ಲಿಯೂ ಕಂಡಿಲ್ಲ. ಮಾತೃದೇವೋಭವ ಎಂದು ನಮ್ಮ ಪೂರ್ವಜರು ಸಾರಿರಬಹುದು; ಅದರ ಸತ್ಯಾಸತ್ಯತೆಯನ್ನು ವಿಮರ್ಶೆ ಮಾಡುವುದು ಕಷ್ಟವಾದರೂ, ಅದರಲ್ಲಿ ಕೆಲವಂಶವಾದರೂ ಜೊಳ್ಳು ಇದ್ದೇ ಇದೆ ಎಂಬುದಕ್ಕೆ ಈ ಘಟನೆಯೊಂದೇ ಸಾಲದೆ?

—ರಾ.

"ಕಟ್ಟು ಬುತ್ತಿಯ ಮುಂದೆ
ಉಣಲುಂಟು ತಾಳು" ||

ಎಂದು ಕನ್ನಡದ ಕವಿಯೊಬ್ಬರು ಹಾಡಿದರು. ತಾಳುವಿಕೆಗಿಂತ ತಪವು ಬೇರಿಲ್ಲವೆಂಬ ಮಹಾ ನೀತಿ ವಾಕ್ಯವನ್ನು ಜನರ ಮುಂದಿಟ್ಟು, ಈ ಸರಕವಿಯು ಅದರ ಸಮರ್ಥನೆಗಾಗಿ ಅನೇಕ ನೀತಿಮುತ್ತುಗಳನ್ನು ಹೆಣೆದು ಅಮರಗೀತವೊಂದನ್ನು ರಚಿಸಿದರು.

"ಇಂದಿನ ತ್ಯಾಗಬುದ್ಧಿಯಿಂದ ನಾಳಿನ ಸುಖ ಪ್ರಪಂಚವನ್ನು ರಚಿಸಿರಿ. ಇಂದು ಉಳಿಸಿ ನಾಳೆ ಉಣ್ಣು" ಎಂದು ಜೀವ [illegible] ಮಹತ್ವಿಕೆಯನ್ನು ಅಂದಿನ ದಿನಗಳಲ್ಲೂ ಹಾಡಿದರು.

— ನಿಮ್ಮ ಆರ್ಥಿಕ ಯೋಜನೆ —
— ಮುಂದೆ ಉಣಲು ಇಂದು ಬುತ್ತಿ ಕಟ್ಟುವ —
ಠೇವಣಾತಿಯ ವಿವರಗಳಿಗೆ ನಮ್ಮಲ್ಲಿ ವಿಚಾರಿಸಿರಿ.

——ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಉಡುಪಿ.

THE CANARA INDUSTRIAL &
BANKING SYNDICATE LTD.,
UDIPI.

ted, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ.ಪೈಸೆ

ವರುಷ ೩೮. ವಾರ ೪೩. 9-7-1959 Vol. 38. No. 43.

ವಿಚಾರ ಮಥನ

ಪ್ರೇಕ್ಷಣೀಯ ಸ್ವರ್ಣ ಮಂದಿರ

* *

ಭಾರತ-ಅಮೆರಿಕಾ ಸ್ನೇಹ

* *

ಭಾರತದ ಭವಿಷ್ಯಾಕಾಶ

* *

ಅಧ್ಯಾಪಕರ ಸ್ಥಿತಿಗತಿಗಳನ್ನು ಸುಧಾರಿಸುವತ್ತ ರಾಜ್ಯಹಾಗೂ ಕೇಂದ್ರ ಸರಕಾರದ ಗಮನವೀಗ ಅತ್ಯಧಿಕ ವೇಗವಾಗಿ ಓಡುತ್ತಿರುವುದಾದರೂ ಅದಕ್ಕಾಗಿ ಕೆಲವಾರು ಯೋಜನೆಗಳು ತಯಾರಾಗುತ್ತಿರುವುದಾದರೂ ಅವುಗಳಿಂದ ಗಣನೀಯ ಸತ್ಫಲಗಳು ಇನ್ನೂ ದೊರೆಯುತ್ತಿಲ್ಲ ಎಂಬುದು ದೃಷ್ಟಿಗೋಚರವಾಗುತ್ತವೆ. ಇತ್ತೀಚೆಗೆ ಒಂದೆಡೆಯಲ್ಲಿ ಭಾಷಣ ಬಿಗಿಯುತ್ತ ಕೇಂದ್ರವಿದ್ಯಾಮಂತ್ರಿ ಶ್ರೀ ಮಾಲಿಯವರು ಕೆಲವೊಂದು ರಾಜ್ಯಗಳಲ್ಲಿ ಕನಿಷ್ಠವೇತನವೂ ಅಧ್ಯಾಪಕರಿಗೆ ದೊರೆಯುತ್ತಿಲ್ಲವೆಂದು ಹೇಳಿದ್ದಾರೆ. ಅಲ್ಲದೇ ಒಂದು ಸಾಮಾನ್ಯವಾದ ಮರ್ಯಾದಿತ ನಾಗರಿಕನಂತೆ ಜೀವನ ಸಾಗಿಸಲು ಸಾಕಾಗುವಷ್ಟಾದರೂ ಆತನಿಗೆ ವೇತನದೊರೆಯಬೇಕೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ, ಕೇವಲ ಕೇಂದ್ರ ವಿದ್ಯಾಸಚಿವರಲ್ಲ, ಎಲ್ಲ ರಾಷ್ಟ್ರನಾಯಕರೂ ಇದೇ ರೀತಿಯಾಗಿ ಹಲವಾರು ಸಂದರ್ಭಗಳಲ್ಲಿ ಉದ್ಗರಿಸಿದ್ದಾರೆ. ವಚನ ಶೂರತನದಿಂದ ಕಾರ್ಯಸಾಗುವುದಾದರೆ, ಭಾರತಕ್ಕೆ ಪಂಚವಾರ್ಷಿಕ ಯೋಜನೆಗಳ ಆವಶ್ಯಕತೆಯೇ ಇಲ್ಲ. ಆದರೆ, ಆಡದೇ ಮಾಡುವ ಅಭ್ಯಾಸವನ್ನೇ ತಿಳಿಯದೆ, ಆಡಿಯೂ ಮಾಡುವ ಗೋಜಿನಿಂದ ದೂರವಿರುವ ನಮ್ಮ ರಾಜಕಾರಣಿಗಳ ವ್ಯವಹಾರ ಅಧ್ಯಾಪಕರ ಹಿತಚಿಂತನೆಯನ್ನು ಎಷ್ಟರಮಟ್ಟಿಗೆ ಮಾಡುತ್ತದೆಯೋ ಹೇಳಲು ಬರುವಂತಿಲ್ಲ.

ಸ್ವಪ್ನಮಂದಿರ ನೋಡಿಯೇ ಆನಂದಿಸುವುದರಿಂದಲೇ ಸ್ವರ್ಗಸುಖ ದೊರೆಯುವುದೆಂಬ ಭಾವನೆ ಉದಿಸಬಹುದು. ಆದರೆ, ಅದು ಭಗ್ನಮಂದಿರವಾದಾಗ ಮಾತ್ರ ಉಂಟಾಗುವ ಕಳವಳವನ್ನು ವರ್ಣಿಸುವುದು ಸಾಧ್ಯವಿಲ್ಲ ನಮ್ಮ ಸರಕಾರಗಳ ಕಾರ್ಯಾಚರಣೆಯೂ ಅಧ್ಯಾಪಕರ ಭಾವನೆಯ ಸುವರ್ಣ ಮಂಟಪವನ್ನು ನೆಲಸಮ ಮಾಡುವುದರಲ್ಲಿಯೇ ಸಹಾಯಕವಾಗಿದೆ. ಭಾರತದ, ನಮ್ಮ ರಾಜ್ಯದ ವಿದ್ಯಾಕ್ಷೇತ್ರದಲ್ಲಿ ಈಗಾಗಲೇ ಆಗಿರುವ ಇನ್ನು ಕೆಲಸಮಯದಲ್ಲೇ ಆಗಲಿರುವ ಆ ಮೂಲ ಪರಿವರ್ತನೆಗಳಿಂದ ಉಂಟಾಗುವ ಗೊಂದಲದಿಂದ ಕೇವಲ ಅಧ್ಯಾಪಕರ ಜೀವನ ಮಟ್ಟ ಪತನ ಮಾತ್ರವಲ್ಲ, ಅವರ ಉದ್ಯೋಗಾದಿಗಳಲ್ಲಿ ಭರವಸೆಯೂ ದೂರ ದೂರವಾಗುತ್ತಿರುವುದನ್ನು ಕಂಡೂ ಕಾಣದಂತಿರುವುದು ಸಾಧ್ಯವಿಲ್ಲ ರಾಷ್ಟ್ರದ ಭಾವಿ ಪ್ರಜೆಗಳನ್ನು ರೂಪಿಸುವವನೆಂಬ, ರಾಷ್ಟ್ರಶಿಲ್ಪಿ ಎಂಬ ಗೌರವಾದರಗಳಿಗೆ ನಾಲಗೆ ಮಲ್ಲಾದರೂ ಪಾತ್ರರಾದ ಅಧ್ಯಾಪಕರ ಇಂತಹ ಅಭದ್ರ ಮತ್ತು ಚಿಂತನೀಯ ಸ್ಥಿತಿಯಲ್ಲಿ ರಾಷ್ಟ್ರ ಅವರಿಂದ ಏನನ್ನು ತಾನೇ ಬಯಸಿ ಪಡೆಯಬಹುದು? ಸರಕಾರ ತನ್ನ ಸಹಾನುಭೂತಿಯನ್ನು ಕೇವಲ ಶಬ್ದಗಳಲ್ಲಿ ಮಾತ್ರ ವ್ಯಕ್ತಪಡಿಸದೆ, ಕಾರ್ಯರೂಪದಲ್ಲಿಯೇ ತೋರಿಸುವುದು ಅವಶ್ಯವಲ್ಲವೆ?

○○ ○○

ಮೈಸೂರಿನ ರಾಜ್ಯಪಾಲರು ತಮ್ಮ ಅಮೆರಿಕೆ ಮೊದಲಾದ ಪಾಶ್ಚಾತ್ಯ ದೇಶಗಳ ಸಂಚಾರವನ್ನು ಮುಕ್ತಾಯಗೊಳಿಸಿ ಪುನಃ ತಮ್ಮ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಮಾನ್ಯ ಜಯಚಾಮರಾಜರು ಅಮೆರಿಕೆಯ ಜನಾಭಿಪ್ರಾಯದ ಬಗ್ಗೆ ಇಲ್ಲಿ ಪ್ರಸ್ತಾಪಿಸಿ, ಭಾರತ ಮತ್ತು ಅಮೆರಿಕೆಗಳ ನಡುವೆ ಆತ್ಮೀಯ ಸಂಪರ್ಕವು ಬೆಳೆಯುವಂತೆ ಮಾಡುವ ಲವಲವಿಕೆ ಅಮೆರಿಕನರಲ್ಲಿದೆ ಎಂದು ತಾವು ಕಂಡುಕೊಂಡಿರುವುದನ್ನು ತಿಳಿಸಿದ್ದಾರೆ. ಅಮೆರಿಕೆಯು ವಿಶ್ವಸಂಪನ್ನ ರಾಷ್ಟ್ರ. ಸುನಾಗರಿಕ ರಾಷ್ಟ್ರ. ಅದು ಕಮ್ಯುನಿಜಂನ ಪ್ರಬಲ ವಿರೋಧಿಯಾಗಿದೆ, ಎಂತೇ ಕಮ್ಯುನಿಸ್ಟ್ ಮತ್ತು ಕಮ್ಯುನಿಸ್ಟೇತರವೆಂಬ ಎರಡು ಬಣಗಳಾಗಿಯೇ ಅದು ಎಲ್ಲ ರಾಷ್ಟ್ರಗಳನ್ನು ಭಾಗಿಸುತ್ತದೆ ಕಮ್ಯುನಿಜಂ ವನ್ನು ನಷ್ಟದೇನೇ ದವಿತ್ರತನವನ್ನು ಎದುರಿಸಲು ಸಾಧ್ಯವೆಂದು ಪ್ರತ್ಯಕ್ಷ ಹೋರಾಟದಿಂದ ಸಿದ್ಧಗೊಳಿಸಲು ಸೊಂಟಕಟ್ಟಿ ನಿಂತ ಭಾರತದ ಬಗ್ಗೆ ಅಮೆರಿಕನರಲ್ಲಿ ಗೌರವದ ಭಾವನೆಯಿರುವುದು ಸ್ವಾಭಾವಿಕವಾದುದೇ. ಈ ಕಾರಣದಿಂದಾಗಿಯೇ ಅದು ಭಾರತಕ್ಕೆ ಹಲವಾರು ವಿಧಾನಗಳಲ್ಲಿ ಮುಕ್ತಹಸ್ತದಿಂದ ಸಹಾಯನೀಡುತ್ತಿದೆ.



ವಾಶಿಂಗ್‌ಟನ್‌ನಲ್ಲಿ ವರ್ಷದ ಕೆಲವು ವೇಳೆ ತಂಡಿಯು ಪ್ರಕಟಿತವಾಗುವುದು. ಆ ದಿನ ಲಿಂಕನ್ ಸ್ಮಾರಕದ ಮುಂದಿರುವ ಓಣಿಚರಿತ ಹಳ್ಳದ ಸೌಂದರ್ಯವೂ ಅಮಿತವಾದುದು. ಫೋಟೋಗ್ರಾಫರರು ಇಲ್ಲಿ ಧಾವಿಸುತ್ತಿರುವುದನ್ನು ಕಾಣಬಹುದು.

ಆದರೆ, ಅಮೆರಿಕೆಯು ಭಾರತದ ಅಭಿವೃದ್ಧಿಯನ್ನು ಬಯಸುವುದರೊಡನೆಯೇ ಮಿತ್ರದಲ್ಲಿ ತನ್ನ ಬದ್ರವಾದ ರಾಣೆಯೊಂದನ್ನು ಸ್ಥಾಪಿಸಲು ಬಯಸಿದೆ ಇದಕ್ಕಾಗಿಯೇ ಪಾಕಿಸ್ತಾನದೊಡನೆ ಸೈನಿಕ ಒಪ್ಪಂದವನ್ನು ಮಾಡಿಕೊಂಡು ಶಸ್ತ್ರಾಸ್ತ್ರ ಪೂರೈಸಲು ಒಪ್ಪಿಗೆಯಿತ್ತಿತ್ತು. ಆದರೆ, ಅಮೆರಿಕೆಯ ನ್ಯಾಯಾರ್ಜನ ಭೂತಪೂರ್ವ ರಾಜ್ಯಪಾಲರಾದ ಶ್ರೀ ಹ್ಯರಿ ಮನರು ಅಮೆರಿಕೆಯು ಅನುಸರಿಸಿದ ಈ ನೀತಿಗೆ ತನ್ನ ಅಸಮ್ಮತಿಯನ್ನು ಪ್ರಕಟಿಸಿದ್ದುದು ಮಾತ್ರವಲ್ಲದೇ ಅನಭಿವೃದ್ಧ ರಾಷ್ಟ್ರಗಳಿಗೆ ಅವುಗಳ ಅಭಿವೃದ್ಧಿಗಾಗಿ ಸಹಾಯ ನೀಡುವುದು ಅಗತ್ಯವೆಂದೂ ಸೈನಿಕ ಸಹಾಯದಿಂದ ಪ್ರಯೋಜನವಿಲ್ಲವೆಂದೂ ಈ ಮೊದಲೇ ಅಭಿಪ್ರಾಯಪಟ್ಟಿದ್ದಾರೆ. ಪ್ರಪಂಚ ಬದುಕಬೇಕಾದರೆ, ಶಸ್ತ್ರಾಸ್ತ್ರಗಳ ಪ್ರಯೋಜನ ಅಲ್ಪ ಸ್ವಲ್ಪವೇ. ಮಾನವತೆ ಮತ್ತು

(೮ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3.

ಸ್ಥಾಪನೆ - 1931

ಕಾಯಂ ಠೇವಣಾತಿ ಬಡ್ಡಿ ದರ

1	ತಿಂಗಳಿಂದ	5	ತಿಂಗಳ ವರೆಗೆ	4¼%
6	,,	12	,,	4½%
13	,,	24	,,	4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ..ಇತ್ಯಾದಿ ...

ಕಥಾ ವಿಹಾರ

ಎಣ್ಣೆ ಬರುವಾಗ ಗಾಣ ಮುರಿಯಿತು!

ಹಾರಿಹೋದ ಪರಿಮಳವುಳ್ಳ ಮಲ್ಲಿಗೆಯನ್ನೇ ಗೋಪಾಲ ಅಪ್ಪಿಕೊಳ್ಳಬೇಕಾಯಿತು!

"ಪದ್ಮಾ, ನೀನು ಕೇಶಮುಂಡನವನ್ನು ಮಾಡಿಸುವುದಿಲ್ಲವೆ?"—ವಿಧವೆಯಾದ ಪದ್ಮಳ ತಾಯಿ ಮೀನಾಕ್ಷಿ ಪದೇ ಪದೇ ಹೇಳುತ್ತಿರುವ ಮಾತು ಪದ್ಮಳನ್ನು ಸೀಳುವಂತೆ ಮಾಡುತಿತ್ತು.

ಹನ್ನೆರಡು ವರ್ಷಗಳ ಹಿಂದೆ ಕುಕ್ಕೆಹಳ್ಳಿಯ ಗೋಪಾಲನಿಗೆ ಪದ್ಮಳನ್ನು ಕೊಟ್ಟು, ಅದರಿಂದ ಆಕೆಯ ಭಾಗ್ಯೋದಯವನ್ನು ನೋಡಬಯಸಿದ್ದ ಮೀನಾಕ್ಷಿ ಇಂದು ಹತಾಶಳಾಗಿದ್ದಳು. ಗೋಪಾಲನಾದರೋ ಎಸ್. ಎಸ್. ಎಲ್. ಸಿ. ವರೆಗೆ ವಿದ್ಯಾಭ್ಯಾಸ ಮಾಡಿದ್ದ. ಆದರೆ, ಊರಲ್ಲೆಲ್ಲಿಯೂ ಉದ್ಯೋಗದೊರೆಯದೆ ಅಲೆದಾಡುತಿದ್ದ. ಕೊನೆಗೆ ಊರಲ್ಲಿ ತನ್ನ ಬಾಳು ಸಾಗಿಸಲು ಅದೃಷ್ಟ ಬರೆದಿಲ್ಲ ಎಂದು ತಿಳಿದು, ಆತ ಹೇಳದೆ ಕೇಳದೆ ಬೆಂಗಳೂರಿಗೆ ಹೋಗಿದ್ದ. ಒಂದರ ಹಿಂದೆ ಹನ್ನೆರಡು ವರ್ಷಗಳು ಸಮುದ್ರದ ತೆರೆಗಳಂತೆ ಬಂದು ಹೋದರೂ ಗೋಪಾಲನ ಸುಳಿವು ಮಾತ್ರ ಪದ್ಮಳಿಗೆ ದೊರೆಯಲಿಲ್ಲ. ಆತನಿಂದ ಒಂದು ಪತ್ರ ಕೂಡ ಬಂದಿರಲಿಲ್ಲ. ಇದರಿಂದ ಊರ ನಿರುದ್ಯೋಗಿಗಳು ಬಂದು ಸೇರಿ, ಗೋಪಾಲನು ಸಾಡಿದು ಹೋದನೆಂಬ ಸಿದ್ಧಾಂತವನ್ನು ಮಾಡಿ, ಅದನ್ನು ಪಸರಿಸ ತೊಡಗಿದರು. ಇದರಿಂದ ಧೈರ್ಯತಾಳಿದ ಊರ ಮಹನೀಯರೂ ಕೆಲವರು ಹಿಂದಿನಿಂದ ಕತ್ತಿ ಹಿರಿಯ ತೊಡಗಿದರು. ಊರ ಹಿರಿಯರಾದ ಭಟ್ಟರು ಆತನ ಮರಣವನ್ನು ಸಿದ್ಧಮಾಡಿ, ಪದ್ಮಾ ಕೇಶಮುಂಡನ ಮಾಡಿಸಬೇಕು ಎಂಬ ನಿರೂಪವನ್ನೂ ಕಳಿಸಿದರು.

"ಈಗಿನ ಕಾಲದ ಹುಡುಗಿಯರಿಗೆ ಧರ್ಮದ ಮೇಲೆ ಲವಲೇಶ ಭಕ್ತಿಯೂ ಇಲ್ಲ; ಗಂಡ ಸತ್ತರೂ ಮುಂಡನ ಮಾಡಿಸಬೇಕಾಗಿಲ್ಲ" ಎಂಬ ಊರವರ ವಕ್ರೋಕ್ತಿ ಮುದುಕಿಯಾದ ಮೀನಾಕ್ಷಿಯನ್ನು ದಿಕ್ಕುಗೆಡಿಸಿತು. ಜಾತಿ, ಧರ್ಮಗಳಲ್ಲಿ ಆಸಕ್ತಳಾದ ಮೀನಾಕ್ಷಿ ಚಿಂತಿತಳಾದಳು. ದಿನ ಬೆಳಗಾದೊಡನೆಯೇ ನೆರೆ ಹೊರೆಯವರ ಈ ನಂಜಿನ ಮಾತನ್ನು ಸಹಿಸುವ ಶಕ್ತಿ ಆಕೆಯಿಂದ ದೂರವಾಗುತಿತ್ತು.

ಆದರೆ, ಪದ್ಮ ಮಾತ್ರ ಈ ವಿಷದ ಸುಳಿಗಾಳಿಗೆ ಸಿಕ್ಕಿ ಒದ್ದಾಡಿದರೂ, ಮುಂಡನದ ಬಗ್ಗೆ ಸಹಮತವಾಗಲಿಲ್ಲ. ಆದರೆ, ಸುಳಿಗಾಳಿ ಬಲವಾಗುತ್ತ ಹೋದಂತೆ ಪದ್ಮಳ ಆತ್ಮಬಲವು ಕುಂದುತ್ತ ಬಂತು.

ಒಂದು ದಿನ ತಾಯಿ ತಾಳಲಾರದೆ, ಮಗಳನ್ನು ಸಮೀಪ ಕುಳ್ಳಿರಿಸಿ ಉಪದೇಶಿಸಿದಳು—"ಮಗೂ, ಜನರಾಡುವ ವಿಷವಚನಗಳು ಕೇಳಿಸುವುದಿಲ್ಲವೆ? ನಮ್ಮ ಹಿಂದೆ ಮುಂದೆ ಅದೆಷ್ಟು ಜನ ಛೀಗಳೆಯುತ್ತಾರೆ!"

"ಅಮ್ಮಾ, ಇನ್ನೂ ಕೊಂಚ ದಿನ ತಡೆ. ಅವರ ವರ್ತಮಾನವು ಎಲ್ಲಿಯಾದರೂ ದೊರೆತೀತು."—ಪದ್ಮಾ ಆಶಾವಾದಿಯಾಗಿಯೇ ದು:ಖದಿಂದ ಉತ್ತರಿಸಿದಳು.

ಅಷ್ಟರಲ್ಲಿಯೇ ಭಟ್ಟರ ಸವಾರಿ ಅಲ್ಲಿಗೆ ಚಿತ್ತೈಸಿತು. ಮೀನಾಕ್ಷಿ ಅವರನ್ನು ಸ್ವಾಗತಿಸಿದರೂ ಭಟ್ಟರು ನಾಗರಹಾವಿನ ನಗೆಯನ್ನೇ ತೋರ್ಪಡಿಸುತ್ತ ವಿಷಯ ಪ್ರಸ್ತಾಪಿಸಿದರು—"ಏನೋಮ್ಮ, ಅವ ಹೋಗಿ ವರ್ಷ ಹನ್ನೆರಡಾಯಿತು. ಸತ್ತು ಮಣ್ಣಾದವನ ಕಾಗದವೋ ಮತ್ತೇನೋ? ಅವ ಬದುಕಿದ್ದರೆ ಓದು ಬರಹ ತಿಳಿದವ, ಕೈಹಿಡಿದ ಹುಡುಗಿಗಾದರೂ ನಾಲ್ಕಕ್ಷರ ಬರೆಯುತ್ತಿರಲಿಲ್ಲವೆ? ಮೊನ್ನೆ ಮೊನ್ನೆ. ನಮ್ಮ ಭೀಮರಾಯರು ಬೆಂಗಳೂರಿಂದ ಬಂದಿದ್ದರಲ್ಲಾ? ಅವರು ಐದಾರು ವರ್ಷಕ್ಕೆ ಮೊದಲೊಮ್ಮೆ ಕ್ಷೀಣವಾಗಿ ಕೆಮ್ಮುತಿದ್ದ ಅವನನ್ನೊಮ್ಮೆ ಕಂಡಿದ್ದರಂತೆ ಆ ಮೇಲೆ ಪತ್ತೆಯೇ ಇಲ್ಲ. ಹಾಗಿರುವಾಗ, ಇನ್ನೂ ಏನು ಆತ ಇರುವಂತಿಲ್ಲ. ಜಾತಿ ಧರ್ಮ ಬೇಕಾದರೆ, ಇಂದು ಸೂರ್ಯ ನೆತ್ತಿಗೆ ಬರುವುದಕ್ಕೆ ಮೊದಲು ಕೆಲಸ ಪೂರೈಸಬೇಕು. ಇಲ್ಲವಾದರೆ........"

ಚೂರಿಯು ಇರಿಗಿನಂತೆ ಹರಿತವಾದ ಭಟ್ಟರ ಮಾತುಗಳನ್ನು ಕೇಳಲಾಗದೆ ಮೀನಾಕ್ಷಿ ಕಿವಿ ಮುಚ್ಚಿಕೊಂಡಳು. ಪದ್ಮ ಒಳ ಕೋಣೆಗೆ ಹೋಗಿ ಬಿದ್ದು ಕೊಂಡಳು. ಆಕೆಯ ಕಣ್ಣುಗಳು ಅಶ್ರುಧಾರಾವರ್ಷವನ್ನು ಸುರಿಸುತಿದ್ದುವು. ಭಟ್ಟರು ಮಾತ್ರ ಮುದುಕಿ ಮೀನಾಕ್ಷಿಯನ್ನು ಸಮಾಧಾನ ಪಡಿಸಿ ದೇವರು ದಿಂಡರ ಶಕ್ತಿಯನ್ನು ವರ್ಣಿಸಿ ಸ್ವರ್ಗ ಮುಕ್ತಿಗಳ ಆಶೆಯನ್ನು ತೋರಿಸಿ, ಜಾತಿ ಭ್ರಷ್ಟರಾಗಬಾರದೆಂದಿನ್ನರೆ, ತನ್ನ ಮಾತನ್ನು ಒಪ್ಪಿಕೊಳ್ಳಬೇಕೆಂದು ಸೂಚಿಸಿ ಹಿಂತಿರುಗಿದರು.

ಅಸಹಾಯಕಳಾಗಿದ್ದ ಮೀನಾಕ್ಷಿ ಅನ್ಯಗತಿ ಕಾಣದೆ ಮಗಳನ್ನು ಒಪ್ಪುವಂತೆ ಪ್ರಯತ್ನಿಸಿದಳು. ತನ್ನಿಂದಾಗಿ ತನ್ನ ತಾಯಿಯ ಗೌರವಾದರಗಳಿಗೆ ಕುಂದು ಬರಬಾರದೆಂಬ ಏಕ ಮಾತ್ರ ಕಾರಣದಿಂದ ಪದ್ಮ ಕೇಶಮುಂಡನಕ್ಕೆ ಒಪ್ಪಿಗೆಯಿತ್ತಳು. ಆದರೆ, ಆಕೆಯ ಹೃದಯವೀಣೆ ಪತಿ ಬದುಕಿರುವನು ಎಂದೇ ಮಿಡಿಯುತಿತ್ತು. ಏನು ಮಾಡುವುದು ತಾನೇ ಸಾಧ್ಯ? ಆಕೆ ನಿರುಪಾಯಳೂ ನಿಸ್ಸಹಾಯಳೂ ನಿರ್ಗತಿಕಳೂ ಆಗಿಹೋಗಿದ್ದಳು! ಆಗಬೇಕಾದ ಕೆಲಸ ಭಟ್ಟರ ಮೇಲ್ವಿಚಾರಣೆಯಲ್ಲಿ ನಿರ್ವಿಘ್ನವಾಗಿ ಆಗಿಹೋಯಿತು.

ಭಗವಾನ್ ಭಾಸ್ಕರನು ಇದನ್ನು ಕಾಣಲಾರದೆ ಪಡುಗಡಲಿನಲ್ಲಿ ಅಡಗಿಹೋದನು. ಪೃಥ್ವಿಯಲ್ಲಿ ಗಾಢಾಂಧಕಾರವು ಪಸರಿಸಿತ್ತು. ಅಲ್ಲಲ್ಲಿ ಮಿಣುಕು ದೀಪಗಳು ಮಿನುಗುತಿದ್ದುವು. ಮೀನಾಕ್ಷಿಯ ಮನೆಯಲ್ಲೂ ಪದ್ಮಾ ದೀಪವೊಂದರ ಮಂದ ಬೆಳಕಿನಲ್ಲಿ ತನ್ನ ಪತಿ ರಚಿಸಿದ್ದ ಕವನವೊಂದನ್ನು ಓದುತಿದ್ದಳು. ಓದುತಿದ್ದಂತೆ ಆಕೆಯ ಕಣ್ಣುಗಳು ಅಶ್ರುಪೂರ್ಣವಾಗಿ ಪರಿಣಮಿಸಿದುವು. ತೀಡುತಿದ್ದ ತಂಗಾಳಿಗೆ ದೀಪದ ಬೆಳಕು ಪದ್ಮಳ ಕೇಶವಿಹೀನ ಶಿರದ ಮೇಲೆ ಬಿದ್ದು ಬಿದ್ದು ನರ್ತಿಸುತಿತ್ತು.

"ಅತ್ತೇ......." ಎಂದು ಗಂಡು ದನಿ ಬಾಗಿಲ ಸಂದಿನಲ್ಲಿ ಕೇಳಿಸಿತು.

ಅನಿರೀಕ್ಷಿತ ಮತ್ತು ಅಪರಿಚಿತವಾದ ಈ ಮಾತನ್ನು ಕೇಳಿದ ಪದ್ಮಾ ಬೆಚ್ಚಿಬಿದ್ದು, "ಯಾರು?" ಎಂದು ಒಂದಿರುಗಿದಳು. ವ್ಯಕ್ತಿಯೊಂದು ಬಾಗಿಲ ಪಕ್ಕದಲ್ಲಿ ನಿಂತಿತ್ತು. ಆದರೆ, ಮುಖಮಾತ್ರ ಕಾಣಿಸಲಿಲ್ಲ. ಪದ್ಮಾ ಧೈರ್ಯಮಾಡಿಕೊಂಡು, "ಯಾರು? ಏನು ಬೇಕಾಗಿತ್ತು, ಈ ರಾತ್ರೆಗೆ...." ಎನ್ನುತ್ತಾ, ಬಾಗಿಲು ತೆರೆದಳು.

"ನಾನತ್ತೇ, ಗೋಪಾಲ...." ಎಂದವನೇ ಆ ವ್ಯಕ್ತಿ ತನ್ನ ಅತ್ತೆಯೇ ಆಕೆಯೆಂದು ಭಾವಿಸಿ ಅಡ್ಡಬಿದ್ದ.

"ಆಂ....ಯಾರು?" ಎಂದು ಗಾಬರಿಯಿಂದ ಪದ್ಮಾ ಬದಿಗೆ ಸರಿದಳು. ದೀಪದ ಮಂದವಾದ ಬೆಳಕು ಅವನ ಮುಖಕ್ಕೆ ಬಿದ್ದು, ಇದು ಕಾಣಿಸಿತು ಪದ್ಮಳಿಗೆ. ಬಲಹೀನವಾದ ಮರವನ್ನು ಸುಂಟರಗಾಳಿ ಉರುಳಿಸುವಂತೆ ಪದ್ಮ ನೆಲದ ಮೇಲೆ ಉರುಳಿದಳು "ಅಯ್ಯೋ" ಎಂಬ ಚೀತ್ಕಾರ ಆಕೆಯ ಬಾಯಿಯಿಂದ ತಾನಾಗಿಯೇ ಹೊರಬಂತು ಪದ್ಮನ ಗುರುತು ಗೋಪಾಲನಿಗೂ ಆಗಿರಬೇಕು. ಆತನೂ ಕಂಗಾಲಾಗಿ "ಅಯ್ಯೋ ಏನಿದು ಪದ್ಮಾ" ಎಂದು ಭಯಾಶ್ಚರ್ಯಗಳೊಡನೆ ಉಚ್ಚರಿಸಿ ಪದ್ಮಳ ತಲೆಯೆತ್ತಿದ.

ಆಕೆ, ಆತ ಭಾವಿಸಿದಂತೆ ಆತನ ಅತ್ತೆಯಾಗಿರಲಿಲ್ಲ; ಕೈಹಿಡಿದ ಮಡದಿ ಪದ್ಮ! ಯಾರಿಗಾಗಿ ಊರಲ್ಲಿ ಕೆಲಸ ಸಿಗದಿರಲು ದೂರದ ಊರಿಗೆ ಉದ್ಯೋಗವರಸಿ ತೆರಳಿದ್ದನೋ, ಯಾರಿಗಾಗಿ ಅರೆ ಜೀವವಾಗಿದ್ದರೂ ಆಶಾ ದೇವಿಯಾಗಿ ಬಾಳಿ ಬದುಕಿಕೊಂಡಿದ್ದನೋ, ಈಗ ಒಂದು ಮಧ್ಯಮ ಸ್ಥಿತಿಯಲ್ಲಿದ್ದು ಯಾರನ್ನು ಕರೆದುಕೊಂಡು ಹೋಗಿ ಸಂಸಾರ ಹೂಡಲು ತಯಾರಾಗಿ ಬಂದಿದ್ದನೋ ಅಂತಹ ಪದ್ಮಾ! ತಾನು ಒಂದು ಸರಿಯಾದ ಉದ್ಯೋಗ ದೊರೆತು ಅನುಕೂಲನಾಗುವರೆಗೆ ಊರಿಗೆ ಮುಖತೋರಿಸಲಾರೆ, ಒಂದಕ್ಷರವೂ ಬರೆಯಲಾರೆ ಎಂಬ ಒಂದು ಋಣ ಪ್ರತಿಜ್ಞೆಯನ್ನು ಮಾಡಿ ಆತ ನಡೆದಿದ್ದ!

. ಗೋಪಾಲ ಗಾಬರಿಯಿಂದ ಆಕೆಯನ್ನು ಎತ್ತಿದ. ಆದರೇನು? ಅಂಗಾಂಗಗಳೆಲ್ಲಾ ಹಿಮದ ಮುದ್ದೆಯಾಗಿದ್ದುವು. ಅವನಿಗೆ ಪ್ರಪಂಚವೇ ಶೂನ್ಯವೆನಿಸಿತು. ಬೀಸಿದ ಗಾಳಿಗೆ ದೀಪ ನಂದಿಹೋಗಿ ಸುಟ್ಟ ಎಣ್ಣೆಯ ವಾಸನೆ ಮನೆಯೆಲ್ಲಾ ತುಂಬಿತು.

ಹೊರಗಾದ ಸದ್ದು ಮಾತನ್ನು ಕೇಳಿ ಮೀನಾಕ್ಷಿ ಹೊರಬಂದಳು. "ಏನು ಪದ್ಮಾ, ಎಡವಿದೆಯಾ? ದೀಪ ನಂದಿತೆ?" ಎಂದು ಮಗಳನ್ನು ಸಂಬೋಧಿಸಿ ಕೇಳಿದಳು.

"ಹೌದತ್ತೇ, ನಾನು ಎಡವಿಯೇ ಬಿದ್ದೆ; ನನ್ನ ಮನೆಯ ದೀಪವು ಎಂದೆಂದಿಗೂ ನಂದಿಹೋಯಿತು" ಎಂದ, ಗೋಪಾಲ, ನಡುಗುವ ಸ್ವರದಿಂದ.

ಪದ್ಮಳಿಗೆ ತಂದ ಮಲ್ಲಿಗೆಯ ಹೂವು ಯಾರ ಕಾಲಿಗೋ ಸಿಕ್ಕಿ ಬಜ್ಜಿಯಾಗಿತ್ತು ಅದರ ಪರಿಮಳ ಗಾಳಿಯೊಡನೆ ಸೇರಿ ಹಾರಿ ಹೋಗಿತ್ತು. ನಜ್ಜುಗುಜ್ಜಾದ ಮಲ್ಲಿಗೆಯ ಹೂವು ಮಾತ್ರ ಅಲ್ಲಿಯೇ ಬಿದ್ದಿತ್ತು. ಆದರೂ ಹೂವಿನ ಮೇಲಿನ ಮಮತೆಯಿಂದ ಗೋಪಾಲ ಅದನ್ನು ಎದೆಗಪ್ಪಿಕೊಂಡು ಕುಳಿತಿದ್ದ. ಅದೆಷ್ಟು ಸಮಯ?

—ಎ. ಜಗನ್ನಾಥ ಸೆಟ್ಟಿ, ಉಡುಪಿ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಪೂರ್ಣಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸ್ಥಾಪನೆ: 1906] ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ. 20,00,000/-
ಕ್ಷೇಮನಿಧಿ	—	ರೂ. 14,40,000/-
ಠೇವಣಾತಿಗಳು	—	ರೂ. 7,19,35,000/-
ಸಾಲಗಳು	—	ರೂ. 3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ. 9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ.

The Canara Banking Corporation Ltd.

Estd:- 1906] [H. O. UDIPI (S. India)

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಲಂಕಾಯಾತ್ರೆ

ಭಾರತದ ದೆಹಲಿಯಿಂದ ಲಂಕೆಯ ಕೊಲಂಬೋವಿಗೆ

ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಶ್ರೀಲಂಕಾಯಾತ್ರೆಯ ವಿವರಣಾತ್ಮಕ ಲೇಖ

ಲೇಖಾಂಕ: ೧

ಜೂನ್ ೧೫ನೆಯ ದಿನಾಂಕ ಪ್ರಾತಃಕಾಲ ೮ ತಾಸಿಗೆ ಪಾಲಂ ನಿಲ್ದಾಣದಿಂದ ರಾಷ್ಟ್ರಪತಿಯರ "ರಾಜಹಂಸ" ವಿಮಾನವು ೧೬ ಮಂದಿ ಯಾತ್ರಿಕರನ್ನು ಹೊತ್ತುಕೊಂಡು ಬೆಂಗಳೂರಿಗೆ ಹೊರಟಿತು. ವಿದೇಶ ಶಾಖೆಯ ಉಪಮಂತ್ರಿ ಶ್ರೀಮತಿ ಲಕ್ಷ್ಮೀಮೆನನ್, ರಾಷ್ಟ್ರಪತಿಯವರ ಪ್ರಮುಖ ಕಾರ್ಯದರ್ಶಿ ಶ್ರೀ ಎ. ವಿ. ಪೈ, ವಿದೇಶ ಶಾಖೆಯ ಶಿಷ್ಟಾಚಾರ ವಿಭಾಗದ ಪ್ರಮುಖ ಅಧಿಕಾರಿ ಶ್ರೀ ಆರ್. ಕೆ. ಟಂಡನ್, ರಾಷ್ಟ್ರಪತಿ ಭವನದ ಕೆಲವು ಅಧಿಕಾರಿಗಳು ನಾನು ("ನವಭಾರತ ಟಾಯಮ್ಸ್"ನ ಧಿಲ್ಲಿಯ ಸಮಾಚಾರ ಸಂಪಾದಕ ಶ್ರೀ ಆನಂದ ಜೈನ) ಮತ್ತು ಇತರ ಮೂವರು ಪ್ರತಿಕಾ ಕರ್ತರು ಈ ಯಾತ್ರಿಕರಾಗಿದ್ದೆವು. ರಾಷ್ಟ್ರಪತಿಗಳು ಇದಕ್ಕೆ ಮೊದಲೇ ರೇಲ್ವೆಯ ಮೂಲಕ ಬೆಂಗಳೂರು ತಲಪಿದ್ದರು.

"ರಾಜ ಹಂಸ" ವಾಯ್ಕಾಂಟ್ ವಿಮಾನ. ಇದರಲ್ಲಿ ಕೂತುಕೊಳ್ಳುವ ಮೂರು ಕೋಣೆಗಳಿವೆ. ಇಂಜನಿನ ಸಮೀಪದಲ್ಲಿ ರಾಷ್ಟ್ರಪತಿಗಳ ಕೋಣೆಯಿದೆ. ಇದರಲ್ಲಿ ಕುಳಿತುಕೊಳ್ಳುವ ದೊಡ್ಡ ಕುರ್ಚಿಯಲ್ಲದೇ ಒರಗುವ ದಿಂಬಿರುವ ಆಸನವೂ ಇದೆ. ಒಂದು ಅಗಲವಾದ ಚಾಕಿಯೂ ಇದೆ. ಎರಡನೆಯ ಕೋಣೆಯಲ್ಲಿ ೧೦ ಕುರ್ಚಿಗಳೂ ಮೂರನೆಯದರಲ್ಲಿ ೬ ಕುರ್ಚಿಗಳೂ ಇವೆ. "ರಾಜಹಂಸ" ವಾತಾನುಕೂಲಿತವಾಗಿದೆ. ಸಾಮಾನ್ಯವಾಗಿ ಒಂದು ತಾಸಿಗೆ ೩೦೦ ಮೈಲು ವೇಗವಾಗಿ ೧೮ರಿಂದ ೨೦ ಸಾವಿರ ಅಡಿ ಎತ್ತರದಲ್ಲಿ ಇದು ಗಮಿಸುತ್ತದೆ.

ದಿಲ್ಲಿಯಿಂದ ಬೆಂಗಳೂರು ೧,೨೦೦ ಮೈಲು ದೂರವಿದೆ. ರಾಜ ಹಂಸವು ಇದನ್ನು ೪ ತಾಸುಗಳಲ್ಲಿ ಕ್ರಮಿಸಿತು. ದಾರಿಯಲ್ಲಿ ಉಪ ವಿದೇಶೀಯ ಮಂತ್ರಿ ಲಕ್ಷ್ಮೀ ಮೆನನ್ನರೊಡನೆ ಅಂತಾರಾಷ್ಟ್ರೀಯ ವಿಚಾರಗಳ ಮೇಲೆ ಮಾತುಕತೆ ನಡೆಯಿತು.

ಬೆಂಗಳೂರಿನ ವರೆಗಿನ ಹಾರಾಟದಲ್ಲಿ ಶ್ರೀ ಟಂಡನರು ರಾಷ್ಟ್ರಪತಿಗಳು ಉಡುಗೊರೆಯೊಯ್ಯುವುದಕ್ಕಾಗಿ ಶ್ರೀ ಲಂಕೆಗೆ ಒಯ್ಯುವ ವಸ್ತುಗಳ ಸೂಚಿಯನ್ನು ತೋರಿಸಿದರು. ಇವುಗಳಲ್ಲಿ ೨೭ ವ್ಯಕ್ತಿಗತ ಉಡುಗೊರೆಗಳಾಗಿದ್ದುವು. ಇವುಗಳಲ್ಲದೇ ವಿದ್ಯಾಲಯ, ದೇವಾಲಯ ಮೊದಲಾದ ಸಂಸ್ಥೆಗಳಿಗೆ ಬೇರೆ ಬೇರೆ ಉಡುಗೊರೆಗಳಿದ್ದುವು.

ರಾಜ ಹಂಸದ ಯಾತ್ರಿಕರಲ್ಲಿ ಮೂರು ಗಿಡಗಳೂ ಇದ್ದುವು–ಒಂದು ಅಶೋಕದ್ದು ಎರಡು ಚಂಪಕದ್ದು. ಈ ಮೂರನ್ನೂ ಡೆಹರಾಡೂನಿನಿಂದ ತರಲಾಗಿತ್ತು. ಇವನ್ನು ಒಂದು ಪ್ಲಾಸ್ಟಿಕ್‌ನ ಕಟ್ಟಿನಲ್ಲಿ ಒಯ್ಯಲಾಗಿತ್ತು.

ರಾಜಹಂಸವು ೧೫ನೆಯ ಜೂನ್ ೧೨ ಘಂಟೆಗೆ ಸರಿಯಾಗಿ ಬೆಂಗಳೂರು ತಲಪಿತು, ಎಲ್ಲ ಯಾತ್ರಿಕರೂ ನಗರ ಪ್ರವೇಶಗೈದರು. ನಾವು ಪತ್ರಕಾರ ಗೆಳೆಯರು ಒಂದು ಹೋಟೆಲಲ್ಲಿ ಉಳಿದೆವು. ಸಂಜೆ ಮುಖ್ಯಮಂತ್ರಿ ಶ್ರೀ ಜತ್ತಿಯವರು ರಾಷ್ಟ್ರಪತಿಗಳ ಗೌರವಾರ್ಥವಾದ ನೂತನ ವಿಧಾನ ಸಭಾಭವನದಲ್ಲಿ ಭೋಜನಕೂಟವನ್ನು ಏರ್ಪಡಿಸಿದರು.

೧೬.ನೆ ಜೂನ್ ಪ್ರಾತಃ ೮ ಗಂಟೆಗೆ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಹೋದೆವು. ರಾಷ್ಟ್ರಪತಿಗಳ ದಳವನ್ನು ಕೊಂಡೊಯ್ಯಲು ಮೂರು ವಿಮಾನಗಳ ವ್ಯವಸ್ಥೆ ಮಾಡಲಾಗಿತ್ತು. ರಾಜಹಂಸ ವಿಮಾನದಲ್ಲಿ ರಾಷ್ಟ್ರಪತಿಗಳು ಮತ್ತು ಅವರ ನಿಕಟವರ್ತಿ ಉಚ್ಚಾಧಿಕಾರಿಗಳು ಹೋದರು. ಎರಡನೆಯದರಲ್ಲಿ ನಾನು ಕೂಡ ೯ ಜನರು ಪತ್ರಕಾರರಿದ್ದೆವು. ಮೂರನೆಯದರಲ್ಲಿ ರಾಷ್ಟ್ರಪತಿಗಳ ಸಾಮಾನು ಸರಂಜಾಮುಗಳು ಮತ್ತು ಉಡುಗೊರೆಯ ವಸ್ತುಗಳು ತುಂಬಲ್ಪಟ್ಟವು.

ಎಲ್ಲಕ್ಕಿಂತ ಮೊದಲು ಪತ್ರಕಾರರನ್ನು ಹೊತ್ತುಕೊಂಡು ಡಕೋಟಾ ವಿಮಾನವು ೮ ಗಂಟೆಗೆ ಸರಿಯಾಗಿ ಬೆಂಗಳೂರಿನಿಂದ ಕೊಲೊಂಬೊಗೆ ಹೊರಟಿತು. ವಿಮಾನವು ಏಳು ಸಾವಿರ ಅಡಿ ಎತ್ತರದಲ್ಲಿ ೧೫೦ ಮೈಲು ವೇಗದಲ್ಲಿ ಹಾರುತಿತ್ತು. ಭಾರತದ ಗಡಿಯನ್ನು ಬಿಟ್ಟೊಡನೆಯೇ ದಪ್ಪಗಾದ ಮತ್ತು ಕಪ್ಪಾದ ಮೋಡಗಳು ದೊರೆಯ ತೊಡಗಿದುವು. ಡಕೋಟಾ ವಿಮಾನವು ಓಲಾಡುತ್ತ, ಮೋಡಗಳನ್ನು ಸೀಳುತ್ತ ಮುಂದುವರಿಯತೊಡಗಿತು. ಕೊಲಂಬೊಗೆ ಸಮೀಪಿಸುತ್ತಿರುವಾಗಲೇ ಅತಿಯಾಗಿ ಮಳೆ ಸುರಿಯತೊಡಗಿತು. ಇದರಿಂದಾಗಿ ವಿಮಾನದಿಂದ ಶ್ರೀ ಲಂಕೆಯ ಸೌಂದರ್ಯವನು ನೋಡುವುದ ಅಸಾಧ್ಯವಾಯಿತು.

೧೧ ಘಂಟೆಗೆ ಸರಿಯಾಗಿ ನಮ್ಮ ವಿಮಾನವು ಕೊಲಂಬೊವಿನ ರತ್ನಮಾಲಾ ವಿಮಾನ ನಿಲ್ದಾಣದಲ್ಲಿ ತಂಗಿತು. ವಿಪರೀತ ಮಳೆ ಸುರಿಯುತಿತ್ತು. ಹೇಗೋ ಕೊಡೆಗಳ ಸಹಾಯದಿಂದ ನಿಲ್ದಾಣದ ಕಟ್ಟಡಗಳಿಗೆ ಬಂದೆವು.

ವಿಮಾನ ನಿಲ್ದಾಣದ ಮಂದಿರಗಳು ದರ್ಶಕ ಮತ್ತು ಗಣ್ಯ ಮಾನ್ಯ ವ್ಯಕ್ತಿಗಳ ಕಚಕಚದಿಂದ ತುಂಬಿತ್ತು. ಅತಿ ವೃಷ್ಟಿಯ ಕಾರಣದಿಂದಾಗಿ ಪ್ರೇಕ್ಷಕರು ವಿಶಾಲ ಮೈದಾನದಿಂದ ಮಂದಿರಗಳಿಗೆ ಓಡಿ ಬಂದಿದ್ದರು. ಆದರೆ, ಇನ್ನೂ ಬಹಳಷ್ಟು ಮಂದಿ ಕೊಡೆಯರಳಿಸಿ ತೀಜ ವರ್ಷದಲ್ಲಿಯೇ ನಿಂತು ರಾಷ್ಟ್ರಪತಿಗಳ ಆಗಮನವನ್ನೇ ನಿರೀಕ್ಷಿಸುತ್ತ ಇದ್ದರು. ಹೊರಗಡೆ ಬಾಳೆಯ ಎಲೆಗಳನ್ನು ಕಟ್ಟಿ ನಿರ್ಮಿಸಿದ್ದ ಮಂಟಪವು ವಿಪರೀತ ಮಳೆ ಮತ್ತು ಬಿರುಗಾಳಿಯ ಕಾರಣದಿಂದ ಬಿದ್ದು ಹೋಗಿತ್ತು. ಬಹು ಸಂಖ್ಯೆಯ ಕೂಲಿಗಳು ಅದನ್ನು ಎತ್ತಿ ಇಡುತಿದ್ದರು.

೧೧ ತಾಸಿಗೆ ಸರಿಯಾಗಿಯೇ ರಾಷ್ಟ್ರಪತಿಯವರ ವಿಮಾನವು ಮೋಡಗಳನ್ನು ಸೀಳಿ ರತ್ನಮಾಲಾ ನಿಲ್ದಾಣದಲ್ಲಿ ಇಳಿಯಿತು. ನಾಲ್ಕೂ ದಿಕ್ಕಿನಿಂದ "ಜಯ ಜಯ" ಘೋಷವಾಗ ತೊಡಗಿತು. ಕೊಡೆ ಹಿಡಿದು ಶ್ರೀ ಲಂಕಾದ ಗವರ್ನರ ಜನರಲ್, ಪ್ರಧಾನ ಮಂತ್ರಿ ಮತ್ತು ಅನ್ಯ ಮಂತ್ರಿಗಣ ರಾಜ ಹಂಸದತ್ತ ನಡೆದರು. ಕೊಂಚ ಹೊತ್ತಿನಲ್ಲೇ ಹೂಗಳಿಂದ ಅಲಂಕೃತವಾದ ಏಣಿಯನ್ನು ವಿಮಾನದ ಬಾಗಿಲಿಗೆ ಏರಿಸಲಾಯಿತು. ಬಾಗಿಲು ತೆರೆದೊಡನೆಯೇ ಕೇಂಡಿಯ ಡೋಲು ಬಾರಿಸಲಾಯಿತು. ಇದನ್ನು 'ಮಂಗಳ ಭೇರಿ' ಎಂದು ಹೇಳುತ್ತಾರೆ. ಮಾನನೀಯ ವ್ಯಕ್ತಿಗಳ ಸ್ವಾಗತವನ್ನು ಈ ಡೋಲುಗಳನ್ನು ಬಾರಿಸಿಯೇ ಮಾಡಲಾಗುತ್ತದೆ.

ಶ್ರೀ ಲಂಕೆಯ ಮೂವರು ಮಂತ್ರಿಗಳು ಮತ್ತು ಕೊಲಂಬೊನಲ್ಲಿರುವ ಭಾರತೀಯ ಹೈಕಮಿಶನರರು ವಿಮಾನದೊಳಗೆ ಪ್ರವೇಶಿಸಿದರು. ಸ್ವಲ್ಪ ಹೊತ್ತಿನಲ್ಲಿಯೇ ರಾಷ್ಟ್ರಪತಿಗಳು ಅವರೊಡನೆ ವಿಮಾನದ ಬಾಗಿಲಿಂದ ಹೊರಬರುವುದು ತೋರಿಬಂತು. ರಾಷ್ಟ್ರಪತಿಗಳು ಏಣಿಯಲ್ಲಿ ಕಾಲಿಟ್ಟೊಡನೆಯೇ ತೀವ್ರವಾಗಿದ್ದ ಮಳೆ ಇಂದ್ರಜಾಲದಿಂದಲೆಂಬಂತೆ ತತ್‌ಕ್ಷಣ ನಿಂತುಹೋಯಿತು. ಪ್ರೇಕ್ಷಕರು ಕೈಚಪ್ಪಾಳೆ ಬಡಿದು ಜಯಜಯಕಾರ ಮಾಡಿದರು.

ಒಂದೆಡೆ ರಾಷ್ಟ್ರಪತಿ ವಿಮಾನದಿಂದ ಇಳಿಯುತಿದ್ದರು; ಇನ್ನೊಂದೆಡೆ ಪ್ರೇಕ್ಷಕರಿಗೆ ಹಿಂದಿಯ ಫಿಲ್ಮೀ ಗೀತ, "ಹವಾಮೆ ಉಡ್‌ತಾ ಜಾಯೇ ಲಾಲ್ ದುಪಟ್ಟಾ ಮಲ್ ಮಲ್‌ಕಾ" ಕೇಳಿಬರುತಿತ್ತು. ಇದರಿಂದ ನಮಗೆ ತುಂಬ ವಿಸ್ಮಯವಾಯಿತು. ಸಮೀಪದಲ್ಲೇ ಇದ್ದ ಶ್ರೀ ಲಂಕೆಯ ಸೂಚನಾಧಿಕಾರಿಯೊಡನೆ, "ಈ ಪದ್ಯವನ್ನು ಈಗ ಏಕೆ ಹಾಡಲಾಗುತ್ತಿದೆ?" ಎಂದು ಕೇಳಿದೆವು. ಆ ಅಧಿಕಾರಿಯೂ ಸ್ವಯಂ ಆಶ್ಚರ್ಯಚಕಿತನಾದನು. ಆತ ನಾಲ್ಕೂ ದಿಕ್ಕನ್ನು ನೋಡಿದನು. ಓರ್ವ ಸಿಂಹಲೀ ದರ್ಶಕನ ಕಿಸೆಯಲ್ಲಿ ತೀರ ಸಣ್ಣದಾದ ಒಂದು ರೇಡಿಯೋ ಸೆಟ್ ಇತ್ತು. ಅದರಿಂದ ಹಾಡಿನ ಧ್ವನಿ ಕೇಳಿಸುತಿತ್ತು! ಆ ಅಧಿಕಾರಿಯು ಕೂಡಲೆ ಅದನ್ನು ತಡೆಹಿಡಿದನು.

ರಾಷ್ಟ್ರಪತಿಗಳು ಶ್ರೀ ಲಂಕೆಯ ಭೂಮಿಯಲ್ಲಿ ಪಾದಾರ್ಪಣ ಮಾಡಿದೊಡನೆಯೇ ೨೧ ತೋಪುಗಳ ಗೌರವ ವಂದನೆ ದೊರೆಯಿತು. ಕಾರಿನಲ್ಲಿ ಕುಳಿತು ರಾಷ್ಟ್ರಪತಿಗಳು ಸೇನೆಯನ್ನು ನಿರೀಕ್ಷಿಸಿದರು. ಮತ್ತು ನಿಲ್ದಾಣದ ಮಂದಿರಗಳಲ್ಲಿದ್ದ ಮಂತ್ರಿಗಳು, ರಾಯಭಾರಿಗಳು, ಭಾರತೀಯ ಹೈ ಕಮಿಶನ್‌ನ ಸದಸ್ಯರು ಮತ್ತು ಪ್ರತಿಷ್ಠಿತ ವ್ಯಕ್ತಿಗಳ ಪರಿಚಯವನ್ನು ಅವರಿಗೆ ಮಾಡಿಕೊಡಲಾಯಿತು.

ರಾಷ್ಟ್ರಪತಿಗಳು ತಮ್ಮ ಸಂಕ್ಷಿಪ್ತ ಭಾಷಣವನ್ನು ಇಂಗ್ಲಿಷಿನಲ್ಲಿ ಓದಿ ಹೇಳಿದರು. ಅಲ್ಲಿಂದ ಅವರು ಹೊರಬಂದು ಒಂದು ತೆರೆದ ಕಾರಿನಲ್ಲಿ ಕುಳಿತರು. ಅವರೊಡನೆ ಶ್ರೀ ಲಂಕೆಯ ಗವರ್ನರ ಜನರಲ್ಲರು ಉಪಸ್ಥಿತರಾದರು.

ಈಗ ವಿಮಾನ ನಿಲ್ದಾಣದಿಂದ "ಕ್ವೀನ್ಸ್ ಹೌಸ್" ವರೆಗಿನ ಹನ್ನೆರಡು ಮೈಲುಗಳ ರಮಣೀಯ ಯಾತ್ರೆ ಮೊದಲಾಯಿತು. ಅವರ ಕಾರಿನ

(೬ನೇ ಪುಟ ನೋಡಿರಿ)

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ. ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ಕಾಲೇಜು ವಿದ್ಯಾಭ್ಯಾಸಕ್ಕಾಗಿ ಕಂತಿನ ಸಾಲಗಳು

ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿರುವ, ಮತ್ತು ಕ್ರಮವಾಗಿ ಹಾಗೂ ಸ್ಥಿರ ಆದಾಯವಿರುವ ಹೆತ್ತವರು ಈ ಕೆಳಗಿನವುಗಳಿಗಾಗಿ ರೂಪಾಯಿ 200/-ರ ವರೆಗಿನ ಸಾಲಗಳಿಗೆ ಅರ್ಜಿ ಸಲ್ಲಿಸಬಹುದು.

(a) ಕಾಲೇಜು ಫೀಸು ತೆರಲಿಕ್ಕೆ,
(b) ಪಠ್ಯಪುಸ್ತಕಗಳನ್ನು ಮತ್ತು ಉಪಕರಣಗಳನ್ನು ಕೊಂಡುಕೊಳ್ಳಲಿಕ್ಕೆ,
(c) ಶೈಕ್ಷಣಿಕ ಪ್ರವಾಸಗಳಲ್ಲಿ ಭಾಗವಹಿಸಲಿಕ್ಕೆ.

ಅಂತಹ ಸಾಲಗಳನ್ನು 10 ಸುಲಭ ತಿಂಗಳ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿದೆ.

ಪ್ರಕೃತ ಈ ಯೋಜನೆಯ ಪ್ರಯೋಜನವು ಬೆಂಗಳೂರು, ಮಂಗಳೂರು ಮತ್ತು ಉಡುಪಿಯಲ್ಲಿ ವಾಸಿಸುವ ಹೆತ್ತವರಿಗೆ ದೊರೆಯುತ್ತದೆ.

ಹೆತ್ತವರು ವಿವರಗಳಿಗಾಗಿ ನಮ್ಮ ಈ ಕೆಳಗಿನ ಆಫೀಸುಗಳಲ್ಲಿ ವಿಚಾರಿಸಬೇಕಾಗಿ ವಿನಂತಿಸಲಾಗಿದೆ.

(a) ಎವಿನ್ಯೂ ರೋಡ್, ಬೆಂಗಳೂರು
(b) ಹಂಪನಕಟ್ಟಾ, ಮಂಗಳೂರು
(c) ಉಡುಪಿ, ದಕ್ಷಿಣ ಕನ್ನಡ.

ಕೆನರಾ ಬೇಂಕ್ ಲಿಮಿಟೆಡ್

[ಸ್ಥಾಪನೆ: 1906]

ಮೈಸೂರು ರಾಜ್ಯದಲ್ಲಿ ಸಾಂಘೀಕರಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ಅತಿ ದೊಡ್ಡದಾದುದು.

ಅಲ್ಲಲ್ಲಿಯ ಸುದ್ದಿಸಾರ

ಸ್ವತಂತ್ರ ಪಕ್ಷಕ್ಕೆ ಬೆಂಬಲ— ದ. ಕ. ಜಿಲ್ಲಾ ಭೂವಜ್ಞಾಲಿಕರ ಮತ್ತು ಕೃಷಿಕರ ಸಂಘದ ಕಾರ್ಯಕಾರಿ ಸಮಿತಿಯು ಸ್ವತಂತ್ರ ಪಕ್ಷದ ರಚನೆಯನ್ನು ಸ್ವಾಗತಿಸಿ ಅದಕ್ಕೆ ತನ್ನ ಸಂಪೂರ್ಣ ಬೆಂಬಲವನ್ನೂ ಸಹಕಾರವನ್ನೂ ಸೂಚಿಸಿರುವುದಲ್ಲದೆ ಈ ಪಕ್ಷದ ರಾಜ್ಯ ಮತ್ತು ಜಿಲ್ಲಾ ಸಮಿತಿಗಳನ್ನು ರಚಿಸಬೇಕೆಂಬ ಸಲಹೆ ಕೊಡುವ ಠರಾವನ್ನೂ ಮಾಡಿರುತ್ತದೆ.

ರೋಟರಿ ಕ್ಲಬ್ಬಿನ ವರ್ಧಂತಿ— ಉಡುಪಿ ರೋಟರಿ ಕ್ಲಬ್ಬಿನ ಪ್ರಥಮ ವರ್ಷದ ವರ್ಧಂತಿಯು ಕಳೆದ ತಾ. 30ರಲ್ಲಿ ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾರ್ಯದರ್ಶಿ ಶ್ರೀ ಟಿ. ರಮೇಶ ಪೈಗಳವರು ಜೂನ್ ತಾ 30ಕ್ಕೆ ಅಂತ್ಯವಾಗುವ ಪ್ರಥಮ ವಾರ್ಷಿಕ ಯಶಸ್ವೀ ಕಾರ್ಯ ಚಟುವಟಿಕೆಗಳನ್ನು ವಿವರಿಸಿದರು. ಡಾ| ಮಾಧವ ಪೈಗಳು ಅಧ್ಯಕ್ಷ ಭಾಷಣಮಾಡುತ್ತಾ ರೋಟರಿ ತತ್ವಗಳನ್ನು ಸದಸ್ಯರು ಅನುಷ್ಠಾನಕ್ಕೆ ತರುವುದರ ಮೂಲಕ ಸಮಾಜಕ್ಕೆ ಪ್ರಯೋಜನ ದೊರಕಿಸಬೇಕೆಂದರು. ರೋಟರಿ ಮೆಂಬರರ ಗೃಹಿಣಿಯರು ತಯಾರಿಸಿದ ಭೋಜನದ ಬಳಿಕ ಶ್ರೀಮತಿ ಅನುಸೂಯಾ ಬಿ. ಶೆಟ್ಟರ ಗಾಯನ ಕಚೇರಿ ನೆರವೇರಿತು. ಶ್ರೀ ಟಿ. ರಮೇಶ ಪೈಗಳು ಧನ್ಯವಾದ ಸಮರ್ಪಣೆ ಮಾಡಿದರು.

ಪ್ರಿ ಪ್ರೊಫೆಶನಲ್ ತರಗತಿಗಳ ಉದ್ಘಾಟನೆ— ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜು ಮತ್ತು ಮಣಿಪಾಲ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಈ ವರ್ಷ ಹೊಸತಾಗಿ ಆರಂಭಿಸಲ್ಪಟ್ಟಿರುವ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಪ್ರಿ ಪ್ರೊಫೆಶನಲ್ ತರಗತಿಗಳ ಉದ್ಘಾಟನೆಯು ಮಣಿಪಾಲದಲ್ಲಿ ತಾ2 ರಂದು ಡಾ| ಟಿ. ಎಂ. ಎ. ಪೈಗಳಿಂದ ನೆರವೇರಿಸಲ್ಪಟ್ಟಿತು. ಕಾಲೇಜು ವಿದ್ಯಾಭ್ಯಾಸ ಕ್ರಮದಲ್ಲಿ ಬಂದಿರುವ ಮಾರ್ಪಾಟುಗಳನ್ನು ವಿವರಿಸಿ ಈ ಹೊಸ ತರಗತಿಗಳನ್ನು ಪ್ರಾರಂಭಿಸುವುದರಿಂದ ಕಾಲೇಜುಗಳೂ ಪರಿಪೂರ್ಣವಾದುವೆಂದೂ ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲ ಆಯಿತೆಂದೂ ಡಾ| ಪೈಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೇಳಿದರು. ಡಾ| ಕೊಪ್ಪಿಕಾರ್ ಮತ್ತು ಶ್ರೀ ಎಂ. ಎಂ. ಕಾಮತರು ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಪಾಲಿಸಬೇಕಾದ ನಿಯಮಗಳನ್ನು ಪ್ರತ್ಯೇಕವಾಗಿ ವಿವರಿಸಿದರು. ಶ್ರೀ ರಮೇಶ ಪೈಗಳು ಆರಂಭದಲ್ಲಿ ವಿದ್ಯಾರ್ಥಿಗಳನ್ನು ಸ್ವಾಗತಿಸುತ್ತಾ ಅವರು ತಮ್ಮ ವ್ಯಾಸಂಗ ಮತ್ತು ನಡತೆಯಿಂದ ಕಾಲೇಜುಗಳ ಗೌರವವನ್ನು ಕಾಯ್ದುಕೊಳ್ಳಬೇಕೆಂದರು. ಶ್ರೀ ಎನ್. ಎಸ್. ಪ್ರಭುಗಳು ಪ್ರಾಧ್ಯಾಪಕರ ಪರಿಚಯ ಮಾಡಿಕೊಟ್ಟರು.

ಶ್ರೀ ಪಾದೂರು ವಾಸುದೇವ ಉಪಾಧ್ಯಾಯರ ನಿಧನ— ಕಾರ್ಕಳದ ಪ್ರಮುಖ ವಕೀಲರುಗಳಲ್ಲೊಬ್ಬರೂ ಲೇಖಕರೂ ಸಾಮಾಜಿಕ ಕಾರ್ಯಕರ್ತರೂ ಆದ ಶ್ರೀ ಪಾದೂರು ವಾಸುದೇವ ಉಪಾಧ್ಯಾಯರು 61ನೇ ವಯಸ್ಸಿನಲ್ಲಿ ಕಳೆದ ತಾ. 30ರಲ್ಲಿ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ಇವರು ಕೆಲವು ವರ್ಷಗಳಿಂದ ಅಸ್ವಾಸ್ಥ್ಯದಿಂದಿದ್ದರು. ಇವರು ಪತ್ರಿಕಾ ಲೇಖಕರಾಗಿದ್ದರಲ್ಲದೆ ಉತ್ತಮ ವಿಡಂಬನಕಾರರೂ ಆಗಿದ್ದರು.

ಶ್ರೀ ಕೊಚ್ಚಿಕಾರ್ ಪಾಂಡುರಂಗ ಪೈಗಳ ಆಕಸ್ಮಿತ ನಿಧನ— ಉಡುಪಿಯ ಕೊಚ್ಚಿಕಾರ್ ಸಹೋದರರಲ್ಲಿ ಒಬ್ಬರೂ ಹಳೆಯ ನಿಷ್ಠಾವಂತ ಪ್ರಮುಖ ಕಾಂಗ್ರೆಸಿಗರಲ್ಲೊಬ್ಬರೂ ಆದ ಶ್ರೀ ಕೊಚ್ಚಿಕಾರ್ ಪಾಂಡುರಂಗ ಪೈಗಳವರು 64ನೆ ವಯಸ್ಸಿನಲ್ಲಿ ಇದೇ ತಾ 4ನೇ ಮಧ್ಯಾಹ್ನ ಹೃತ್‌ಚಲನೆ ನಿಂತು ಮೃತರಾದರೆನ್ನಲು ವಿಷಾದವಾಗುತ್ತದೆ. ಇವರು ಸುಮಾರು 38 ವರ್ಷಗಳ ಹಿಂದಿನಿಂದಲೂ ಸಾರ್ವಜನಿಕ ಸೇವೆ ಸಲ್ಲಿಸುತ್ತಿದ್ದರು. ಅಸಹಕಾರ ಚಳವಳದ ಸಮಯದಿಂದಲೂ ಕಾಂಗ್ರೆಸಿನ ಅಚಲ ಭಕ್ತರಾಗಿದ್ದರು. ದಿವಂಗತರು ಮಹಾರಾಷ್ಟ್ರ ಎಪೆಕ್ಸ್ ಕೊಪೊರೇಷನಿನ ಅಧ್ಯಕ್ಷರಾಗಿದ್ದರಲ್ಲದೆ ಹಲವು ಸಂಘ ಸಂಸ್ಥೆಗಳ ಡೈರೆಕ್ಟರರೂ ಆಗಿದ್ದರು.

ದೇವಾಡಿಗ ಸುಧಾರಕ ಸಂಘ, ಮುಂಬಾಯಿ,— ಇದರ 34ನೇ ವಾರ್ಷಿಕ ಮಹಾಸಭೆಯು ತಾ 28—6—59ರಂದು ಸಂಘದ ಸಭಾ ನಿಲಯದಲ್ಲಿ ಶ್ರೀ ಸಿ. ರಾಮಣ್ಣ ಮೊಯ್ಲಿ ಎಂ. ಎ. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಂಘದ ಪಂಚಮ ಪೋಷಕರಾದ ಶ್ರೀ ಸಂಕಪ್ಪ ಸಿದ್ದು ಮೊಯ್ಲಿ ಇವರ ಭಾವಚಿತ್ರವನ್ನು ಅನಾವರಣ ಮಾಡಿದ ಮೇಲೆ ಗತವರ್ಷದ ವರದಿ ಮಂಜೂರಾಯಿತು. ಸಭಿಕರಲ್ಲಿ ಶ್ರೀಗಳಾದ ಹೋಮಿ ವಾಲ್ಸಿನಾಲಾ, ಶ್ರೀ ರಾಮಯ್ಯ ದೇವಾಡಿಗ, ಶ್ರೀ ಬಾಬುರಾವ್, ದೊಂಬ ದೇವಡಿಗ, ಮಂಜುನಾಥ ಡಿ. ಸಾಲಿಯಾನ್, ಇಡ್ಯ ವೆಂಕಪ್ಪ ದೇವಡಿಗ, ಎಚ್. ಕೃಷ್ಣಪ್ಪ ದೇವಡಿಗ, ಕೆ. ಪಿ. ವಿಟ್ಠಲ ಮೊದಲಾದವರು ಸಂದರ್ಭೋಚಿತ ಭಾಷಣವಿತ್ತರು. ಸಭೆಯಲ್ಲಿ ಶ್ರೀ ಸಂಕಪ್ಪ ಸಿದ್ದು ಮೊಯ್ಲಿಯವರು ರೂ. 600ನ್ನು ಸಂಘಕ್ಕೆ ದಾನಕೊಡುವುದಾಗಿ ವಾಗ್ದಾನವಿತ್ತರು. ಅಧ್ಯಕ್ಷರು ಸಮಾಜ ಬಂಧುಗಳು ಒಗ್ಗಟ್ಟಿನಿಂದ ದುಡಿಯುವಂತೆ ಕೇಳಿಕೊಂಡರು. ಕಾರ್ಯದರ್ಶಿಗಳು ಧನ್ಯವಾದಾರ್ಪಣೆ ಮಾಡಿದರು.

ಶ್ರೀ ಕೆ. ಕೆ. ಶೆಟ್ಟರ ನೇಮಕ— ಮೈಸೂರು ಸರಕಾರವು ರಾಜ್ಯದ ನಾರು ಬೋರ್ಡ್ ಒಂದನ್ನು ರಚಿಸಿರುವುದಲ್ಲದೆ ಅದರ ಅಧ್ಯಕ್ಷರಾಗಿ ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಮೈಸೂರು ವಿಧಾನ ಪರಿಷತ್ತಿನ ಸದಸ್ಯರೂ ಆಗಿರುವ ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರನ್ನು ನೇಮಿಸಿರುತ್ತದೆ ಎಂದು ತಿಳಿದು ಬರುತ್ತದೆ.

ಪರೀಕ್ಷಾ ಫಲಿತಾಂಶ— ಪಟ್ಲ ಲೋಕಮಾನ್ಯ ತಿಲಕ ಹಾಯರ್ ಎಲಿಮೆಂಟರಿ ಶಾಲೆಯಿಂದ ಕಳೆದ ಏಪ್ರಿಲ್ ತಿಂಗಳಲ್ಲಿ ಜರಗಿದ ಇ. ಎಸ್. ಎಲ್. ಸಿ. ಪರೀಕ್ಷೆಗೆ ಕಳುಹಿಸಲ್ಪಟ್ಟ ಎಲ್ಲಾ ವಿದ್ಯಾರ್ಥಿಗಳು ಇಂಗ್ಲಿಷ್ ಸಹಿತ ತೇರ್ಗಡೆ ಹೊಂದಿ 100% ಫಲಿತಾಂಶವನ್ನು ಒದಗಿಸಿ ಕೊಟ್ಟಿದ್ದಾರೆ.

ಮುನಿಸಿಪಲ್ ಕೆಲಸಗಾರರ ಬೇಡಿಕೆ— ದ. ಕ. ಮುನಿಸಿಪಲ್ ಮತ್ತು ಲೋಕಲ್ ಬೋರ್ಡ್ ವರ್ಕರ್ಸ್ ಯೂನಿಯನಿನ ವಾರ್ಷಿಕ ಮಹಾಸಭೆಯು ತಾ. 28.6.59ರಂದು ಯಸ್. ಸಿ. ಸಿ. ಸಿ. ಬೇಂಕಿನ ಮಾಳಿಗೆಯಲ್ಲಿ ಶ್ರೀ ಎ. ಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ ಎಲ್ಲಾ ಮುನಿಸಿಪಲ್ ಕೆಲಸಗಾರರಿಗೆ ಕಡಿಮೆ ದರದಲ್ಲಿ ದವಸ ಧಾನ್ಯಗಳನ್ನು ವಿತರಣೆ ಮಾಡಲು ಮಂಗಳೂರು ಮುನ್ಸಿಪಾಲಿಟಿಯ ವತಿಯಿಂದ ಒಂದು ಸ್ಟೋರನ್ನು ತೆರೆಯಬೇಕೆಂದು ಕೇಳಿಕೊಳ್ಳುವ ಹಾಗೂ ಕೆಲಸಗಾರರ ಇತರ ಕೆಲವೊಂದು ಕಾಲಭ್ಯಗಳ ಕುರಿತೂ ನಿರ್ಣಯ ಮಾಡಲಾಗಿದೆ.

ಶ್ರೀ ಕೆ. ದೂಮಪ್ಪನವರ ಅಭಿನಂದನಾ ಸಭೆ. ಸುರತ್ಕಲ್ ಮತದಾರ ಕ್ಷೇತ್ರದ ಉಪಚುನಾವಣೆಯಲ್ಲಿ ವಿಜಯಿಗಳಾದ ಶ್ರೀ ಕೆ. ದೂಮಪ್ಪ, ಎಂ. ಎಲ್. ಎ. ಇವರನ್ನು ಅಭಿನಂದಿಸಲು ಕಳೆದ ತಾ. 24ರಲ್ಲಿ ಮಂಗಳೂರಿನ ಗೋಕರ್ಣನಾಥ ಕ್ಷೇತ್ರದ ಸಭಾ ಭವನದಲ್ಲಿ ಜಿಲ್ಲಾ ಬಿಲ್ಲವ ಯೂನಿಯನಿನವರು ಏರ್ಪಡಿಸಿದ ಸಭೆಯು ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಬಿಲ್ಲವ ಯೂನಿಯನಿನ ಕಾರ್ಯದರ್ಶಿ ಶ್ರೀ ತಿಮ್ಮಪ್ಪನವರು ಸ್ವಾಗತಿಸಿದರು. ಶ್ರೀಗಳಾದ ಎ. ಶಂಕರ ಆಳ್ವ, ಬಿ. ಮಂಜಯ್ಯ ಹೆಗ್ಡೆ, ಡಾ| ಸಂಜೀವನಾಥ, ಶ್ರೀ ಕೆ. ವಿಶ್ವನಾಥ ಕಾಮತ್ ಮೊದಲಾದವರು ಶ್ರೀ ದೂಮಪ್ಪನವರ ಪ್ರಾಮಾಣಿಕತೆ ಹಾಗೂ ಗುಣನಡತೆಗಳ ಕುರಿತು ಪ್ರಶಂಸಿಸಿ ಮಾತನಾಡಿದರು. ಅಧ್ಯಕ್ಷರು ಶ್ರೀ ದೂಮಪ್ಪನವರ ಜಯ ಜನಸಾಮಾನ್ಯರ ಜಯವೆಂದೂ ಇದರಿಂದ ಹೆಚ್ಚಿನ ಜನಸೇವೆಯಾಗುವಂತಾಗಲೆಂದೂ ಹೇಳಿದರು.

ಗರಡಿ ಮಜಲು— ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ಬಡಮಕ್ಕಳಿಗೆ ಗಂಜಿ ಹಂಚುವ ಉದ್ಘಾಟನಾ ಸಮಾರಂಭವು ಶ್ರೀ ಯು. ಯಸ್. ನಾಯಕ್ ಎಂ. ಎಲ್. ಎ. ಯವರಿಂದ ನೆರವೇರಿಸಲ್ಪಟ್ಟಿತು. ಶಾಲಾ ಪರೀಕ್ಷಾಧಿಕಾರಿಗಳಾದ ಶ್ರೀ ಎನ್. ವಿಶ್ವನಾಥನವರು ಸಭಾಧ್ಯಕ್ಷತೆ ವಹಿಸಿದ್ದರು.

ಉಡುಗೆ ವಿತರಣೆ— ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ಬಡ ವಿದ್ಯಾರ್ಥಿಗಳಿಗೆ ಉಡುಗೆ ತೊಡುಗೆಗಳನ್ನು ವಿತರಣೆ ಮಾಡುವ ಸಮಾರಂಭವು ತಾ. ೩ರಂದು ಶ್ರೀಮತಿ ಆಶಾ ಕೆ, ಆರ್. ಕೆ. ಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯ್ಕರು ಸ್ವಾಗತ ಭಾಷಣ ಮಾಡಿದ ಮೇಲೆ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರು ಉಡುಗೆ ತೊಡುಗೆಗಳನ್ನು ಬಡ ಮಕ್ಕಳಿಗೆ ವಿತರಣೆಮಾಡಿದರು. ಕೊನೆಯಲ್ಲಿ ಹೆಡ್‌ಮಾಸ್ಟರ್ ಎಚ್. ಲಕ್ಷ್ಮೀನಾರಾಯಣ ಭಟ್ಟರು ಧನ್ಯವಾದ ಸಮರ್ಪಣೆ ಮಾಡಿದರು.

ಮಳೆ, ನೆರೆ, ಗಾಳಿಯ ಹಾವಳಿ— ಒಂದು ವಾರದಿಂದ ವಿಪರೀತ ಗಾಳಿ ಮಳೆ, ನೆರೆಯಿಂದಾಗಿ ಇಡೀ ಜಿಲ್ಲೆಯಲ್ಲಿ ವಿಪರೀತ ಕಷ್ಟ ನಷ್ಟಗಳು ಒದಗಿವೆ. ಎಷ್ಟೋ ಮನೆಗಳ ಮಾಡು ಹಾರಿಹೋಗಿದೆ. ಹಲವು ಮನೆಗಳು ಕುಸಿದುಬಿದ್ದಿವೆ. ತುಂಬಾ ಮರಮಟ್ಟುಗಳು ಮುರಿದುಬಿದ್ದಿವೆ. ಕೆಲವು ದಿನ ಬಸ್ಸು ಸಾರಿಗೆಯೂ ನಿಂತುಹೋಗಿತ್ತು. ತಂತೀ ಮತ್ತು ಟೆಲಿಫೋನ್ ಸಂಪರ್ಕವೂ ಕಡಿದುಹೋಗಿತ್ತು. ಸುಮಾರು 25 ವರ್ಷಗಳಿಂದೀಚೆಗೆ ಇಷ್ಟು ದೊಡ್ಡ ನೆರೆಯು ಬಂದಿಲ್ಲವೆನ್ನಲಾಗಿದೆ. ಹಲವು ಜನರು ಜಾನವಾರುಗಳ ಪ್ರಾಣಹಾನಿಯಾಗಿರುವುದಲ್ಲದೆ ಎಷ್ಟೋ ಜನರು ನಿರ್ಗತಿಕರಾಗಿದ್ದಾರೆ.

ಮೈಸೂರು ರಾಜ್ಯದ ವಿದ್ಯಾಸಲಹಾ ಮಂಡಲಿಯು— ಒಬ್ಬ ಸದಸ್ಯರಾಗಿ ಎಕಡೆಮಿ ಆಫ್ ಜನರಲ್ ಎಜ್ಯುಕೇಶನಿನ ರಿಜಿಸ್ಟ್ರಾರ್ ಡಾ| ಟಿ. ಮಾಧವ ಪೈಗಳು ಆರಿಸಲ್ಪಟ್ಟಿರುವರೆಂದೂ ಈ ಮಂಡಳಿಯ ಪ್ರಥಮ ಸಭೆಯು ಕಳದ ತಾ. 23ರಲ್ಲಿ ಬೆಂಗಳೂರಲ್ಲಿ ಜರಗಿದಾಗ ಡಾ| ಪೈಗಳು ಕೆಲವೊಂದು ಸಲಹೆಗಳನ್ನಿತ್ತಿರುವರೆಂದೂ ತಿಳಿದು ಬರುತ್ತದೆ.

ಕಾಲೇಜು ವಿದ್ಯಾಭ್ಯಾಸಕ್ಕಾಗಿ ಸಾಲಗಳು—
ಮಧ್ಯಮ ತರಗತಿಯವರ ಉಪಯೋಗಕ್ಕಾಗಿ ಇನ್ನೊಂದು ಯೋಜನೆ

ಮಧ್ಯಮ ತರಗತಿಯ ಜನರ ಸಾಲಸೌಕರ್ಯಕ್ಕಾಗಿ ಕೆನರಾ ಬೇಂಕಿನವರು ಒಂದು ಹೊಸ ಯೋಜನೆಯನ್ನು ಪ್ರಾರಂಭಿಸಿದ್ದಾರೆ. ಬರೇ ಎರಡು ತಿಂಗಳ ಹಿಂದೆ ಮಧ್ಯಮ ತರಗತಿಯವರ ಜನಪ್ರಿಯ ವಾಹನವಾದ ಸೈಕಲನ್ನು ಕೊಂಡುಕೊಳ್ಳುವ ಬಗ್ಗೆ ಸಾಲಕೊಡುವ ಯೋಜನೆಯೊಂದನ್ನು ಜಾರಿಗೆ ತಂದಿದ್ದರು. ಉಚ್ಚ ಶಿಕ್ಷಣದಲ್ಲಿ ಹೆಚ್ಚುತ್ತಿರುವ ಖರ್ಚಿಗಾಗಿ ಹೆತ್ತವರಿಗೆ ಸಾಲಕೊಡುವ ಒಂದು ಯೋಜನೆಯನ್ನು ಇದೀಗ ಬೇಂಕಿನವರು ಜಾರಿಗೆ ತಂದಿದ್ದಾರೆ.

ಕ್ರಮಾಗತ ಆದಾಯವಿರುವ ಹೆತ್ತವರು ತಮ್ಮ ಮಕ್ಕಳ ಕಾಲೇಜು ಫೀಸು ತೆರಲಿಕ್ಕೆ, ಪಠ್ಯ ಪುಸ್ತಕ ಮತ್ತು ಉಪಕರಣಗಳನ್ನು ಕೊಂಡುಕೊಳಲಿಕ್ಕೆ ಇಲ್ಲವೆ ವೈಜ್ಞಾನಿಕ ಪ್ರವಾಸಗಳ ವೆಚ್ಚಕ್ಕೆ ರೂ. 200/- ರ ತನಕದ ಸಾಲಗಳಿಗೆ ಅರ್ಜಿಹಾಕಬಹುದು. ಈ ಸಾಲಗಳು 10 ತಿಂಗಳುಗಳೊಳಗೆ ಮರುಪಾವತಿ ಮಾಡುವಂಥವುಗಳು; ಮತ್ತು ಬೇಂಕಿನವರ ಅನುಭವವು ಸಮಾಧಾನಕರವಾದರೆ ಹೆತ್ತವರು ತಮ್ಮ ಮಕ್ಕಳ ಕಾಲೇಜು ವಿದ್ಯಾಭ್ಯಾಸ ಮುಗಿಯುವರೆಗೂ ಪ್ರತಿವರ್ಷ ಈ ಸಾಲಗಳ ಪ್ರಯೋಜನ ಪಡೆಯಬಹುದು.

ವಿದ್ಯಾಭ್ಯಾಸದ ಖರ್ಚಿನ ಹೆಚ್ಚಳದಿಂದಾಗಿ ಕಾಲೇಜುಗಳು ಪ್ರಾರಂಭವಾಗುವಾಗ ಹೆಚ್ಚಿನ ಹೆತ್ತವರು ತಮ್ಮ ಆಯವ್ಯಯಗಳನ್ನು ಹೊಂದಿಸಿಕೊಳ್ಳಲು ಬಹಳ ಕಷ್ಟ ಪಡುತ್ತಾರೆ ಆದ್ದರಿಂದ ಈ ಯೋಜನೆಯು ತಮ್ಮ ಮಕ್ಕಳು ಕೊಂಚರಿಸುವುದರ ವಿದ್ಯಾಭ್ಯಾಸ ಮಾಡುವುದಕ್ಕಾಗಿ ಮನಸ್ಸು ಮತ್ತು ಚೈತನ್ಯವಿದ್ದರೂ, ಸಾಕಷ್ಟು ಉಳಿತಾಯವಿಲ್ಲದ ಮಧ್ಯಮ ತರಗತಿಯವರಿಗೆ ಉಪಯುಕ್ತವಾಗಬಹುದು. ಪ್ರಕೃತ ಬೆಂಗಳೂರು, ಮಂಗಳೂರು, ಮತ್ತು ಉಡುಪಿಯಲ್ಲಿ ವಾಸಿಸುತ್ತಿರುವ ಹೆತ್ತವರಿಗೆ ಮಾತ್ರ ಈ ಯೋಜನೆಯ ಸೌಕರ್ಯವು ದೊರೆಯುತ್ತದೆ.

ಕೆಲವೊಂದು ಅನಾನುಕೂಲತೆಗಳಿಂದಾಗಿ ಈ ಸಂಚಿಕೆಯಲ್ಲಿ ಬರೇ 8 ಪುಟಗಳನ್ನು ಮಾತ್ರ ಕೊಡಲಾಗಿದೆ. ವಾಚಕರು ಗಮನಿಸಬೇಕಾಗಿ ವಿನಂತಿ.

—ಮೆನೇಜರ್, ನವಯುಗ.

ಗೋವಿಜಯ
(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ,

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ಸಂಗ್ರಹವೂ ಅತ್ಯಧಿಕವಿದೆ. ಆದುದರಿಂದ, ಆಹಾರ ಧಾನ್ಯಗಳ ಬೆಲೆಯು ಇಳಿಮುಖವಾಗುತ್ತಿದೆ. ಕೆಲವೆಡೆಯಲ್ಲಿ ಧಾನ್ಯದ ಅಭಾವವಿದ್ದರೆ, ನ್ಯಾಯದರದ ಅಂಗಡಿಗಳ ಮೂಲಕವಾಗಿ ಅಲ್ಲಿ ಆಹಾರ ಧಾನ್ಯಗಳನ್ನು ಒದಗಿಸಲಾಗುವುದು. ಸೀದಾ ಪದ್ಧತಿಯನ್ನು ಆರಂಭಿಸಬೇಕಾದ ಪರಿಸ್ಥಿತಿಯು ಸದ್ಯ ಭಾರತದಲ್ಲಿಲ್ಲ, ಇನ್ನು ಮುಂದಕ್ಕೂ ಬರಲಾರದು ಎಂದು ಕೇಂದ್ರ ಆಹಾರ ಸಚಿವ ಶ್ರೀ ಅಜಿತಪ್ರಸಾದ ಜೈನರು ಅಭಿಪ್ರಾಯ ಪಟ್ಟಿದ್ದಾರೆ.

ರಾಷ್ಟ್ರೀಕರಣ ಯಾಕೆ?

ಖಾಸಗಿ ವಿಭಾಗಗಳು ಯೋಗ್ಯರೀತಿಯಲ್ಲಿ ಸಾರಿಗೆ ಕೆಲಸವನ್ನು ನಡೆಸಿಕೊಂಡು ಹೋದರೆ, ಇನ್ನೂ ಹದಿನೈದು ವರ್ಷಗಳ ಕಾಲ ಅವನ್ನು ರಾಷ್ಟ್ರೀಕರಣ ಮಾಡುವುದಿಲ್ಲ ಎಂದು ಕೇಂದ್ರ ಸಾರಿಗೆ ಮಂತ್ರಿ ಶ್ರೀ ಎಸ್. ಕೆ. ಪಾಟೀಲರು ಅಹಮದಾಬಾದಿನಲ್ಲಿ ಉದ್ಗರಿಸಿದರು. ರಾಷ್ಟ್ರೀಕರಣಕ್ಕಾಗಿ ರಾಷ್ಟ್ರೀಕರಣಮಾಡುವುದನ್ನು ತಾನು ಒಪ್ಪುವುದಿಲ್ಲವೆಂದೂ, ಅದೊಂದು ವಿನೋದವಲ್ಲವೆಂದೂ ಜನತೆಗೆ ಯೋಗ್ಯ ಸೇವೆಯನ್ನೊದಗಿಸುವ ದೃಷ್ಟಿಯಿಂದ ಮಾತ್ರ ರಾಷ್ಟ್ರೀಕರಣದ ಪ್ರಶ್ನೆಯನ್ನು ಪರಿಶೀಲಿಸಬೇಕೆಂದೂ ಅವರು ಹೇಳಿದ್ದಾರೆ.

ಮಂಗಳೂರು ಸ್ಪೆಶ್ಯಲ್ ಅಸಿಸ್ಟಾಂಟ್ ಕಮಿಶನರವರ ಕೋರ್ಟಿನಲ್ಲಿ

O. P. 248/1958

Dr. A. N. ಅನಂದರಾವ್—ಅರ್ಜಿದಾರ

ಮತ್ತು

K. ಶಂಕರಾಚಾರಿ—ಕೃಷ್ಣಯ್ಯಾಚಾರಿ ಮಗ, ಉಡ್ಪಿ ತಾಲ್ಲೂಕು ನೀಲಾವರ ಗ್ರಾಮದ ಕೆಳಕುಂಜಾಲು—ಎದ್ರಿ.

ಇವರೊಳಗೆ.

ಸದ್ರಿ ಯದ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:-

ಯದ್ರಿಯು ಮನ್ಮಥ, ದುರ್ಮುಖಿ ಮತ್ತು ಹೇವಿಳಂಬಿ ಸಂ|ರದ ಗೇಣಿ ಬಾಕಿ ಮಾಡಿಕೊಂಡಿರುವದರಿಂದ ಅರ್ಜಿದಾರಗೆ ತಾ.15-10-55ರಲ್ಲಿ ಬರಕೊಟ್ಟ ಚಾಲಗೇಣಿ ಎದುರ್ಪಾಡಿಯಲ್ಲಿ ಕಾಣಿಸಿದ ಆಸ್ತಿ ಸ್ವಾಧೀನತೆ ಕೇಳಿ ವಗೈರೆ ಅರ್ಜಿದಾರನು ಅರ್ಜಿಕೊಟ್ಟಿರುವುದರಿಂದ ಸದ್ರಿ ಅರ್ಜಿಯು ತಾ.11.7.59ಕ್ಕೆ ಉಡ್ಪಿ ಕೇಂಪಿನಲ್ಲಿ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿದೆ. ಆ ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದರೆ ಆ ದಿವಸ ಬೆಳಿಗ್ಗೆ 11ಗಂಟೆಗೆ ಹಾಜ್ರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವುದು.

(By order of the Court.)

P. N. Krishnamurthi Rao,
Advocate for Petitioner.

Dated. 3-7-1959, at Udipi, S.K.

ಹರಟೆ

ಇದೇ ನೋಡಿರಿ ನಮ್ಮ ಮೆಚ್ಚಿನ ಊರು!

ಭಾರತದಲ್ಲಿ ಇಂತಹ ಅದೆಷ್ಟು ಊರುಗಳಿಲ್ಲ, ಹೇಳ ಬರುವುದೆ?

ನನ್ನ ಆಮಂತ್ರಣವನ್ನು ಮಾನ್ಯಮಾಡಿ ನಮ್ಮೂರಿಗೆ ಬರುತ್ತಿರುವ ನಿಮ್ಮನ್ನೂ ಇದಿರ್ಗೊಂಡು ಸ್ವಾಗತಿಸುವ ಸಲುವಾಗಿ ನಾನು ನಿಂತ ಈ ಸ್ಥಳವೇ ನಮ್ಮ ಊರಿನ ಉತ್ತರದ ರಾಜಮಾರ್ಗದ ಪ್ರವೇಶದ್ವಾರ. ಮಾರ್ಗದ ಇಕ್ಕಡೆಗಳಲ್ಲಿ ಪುರಾತನ ಆಲದ ಮರಗಳು ಪ್ರಾಕೃತಿಕ ಪ್ರವೇಶದ್ವಾರವಾಗಿ, ಪ್ರಯಾಣಿಕರಿಗೆ ನೆರಳನ್ನೀಯುವ ಸದುದ್ದೇಶದಿಂದ ನಿಂತಿವೆ. ಅವುಗಳಲ್ಲೊಂದರ ಆಸರೆಯಲ್ಲೇ ನಾನು ನಿಮ್ಮನ್ನು ನಿರೀಕ್ಷಿಸುತ್ತ, ಪಶ್ಚಿಮದ ಅರಬೀ ಸಮುದ್ರದಿಂದ ಬೀಸುವ ತಂಗಾಳಿಗೆ ಮೈಯೊಡ್ಡಿ, ಗಾಳಿ ಹೊತ್ತು ತರುವ ಸಮುದ್ರದ ತೀರದ ಕೊಳೆತ ಮೀನುಗಳ ನಾತಕ್ಕೆ ಮೂಗು ಮುಚ್ಚಿ ನಿಂತಿರುವೆ. ಅದೋ-ಒಂದು ಮೈಲು ದೂರದಿಂದಲೇ ನಿಮ್ಮನ್ನು ನಮ್ಮೂರಿಗೆ ಹೊತ್ತುತರುತ್ತಿರುವ ಹನುಮಾನ್ ಬಸ್ಸಿನ ಎಂಜಿನ್ನಿನ ಶಬ್ದಕ್ಕಿಂತಲೂ ಗಟ್ಟಿಯಾಗಿ ಅದರ ದೇಹದ (Body) 'ಜೀಕು'ಗುಟ್ಟುವ ಸದ್ದು ಕೇಳಿಸಹತ್ತಿದೆ. ಅನಂತರ ಬರೇ ಹದಿನೈದು ನಿಮಿಷಗಳಲ್ಲೇ ಆ ಒಂದು ಮೈಲನ್ನು ಕ್ರಮಿಸಿ, ಅರ್ಧ ಮೈಲಿಯಿರುವಾಗಲೇ ಬ್ರೇಕು ಹಾಕಿ ನನ್ನ ಎದುರು ಬಂದು ನಿಂತೇ ಬಿಟ್ಟಿತು. ಅದರಿಂದಿಳಿದ ನಿಮ್ಮನ್ನು ಬಸ್ಸು ಹೊರಟುಹೋದ ಐದು ನಿಮಿಷಗಳಲ್ಲಿ ಹುಡುಕಿದೆ. ಕಾರಣ—ಅಲ್ಲಿ ಕವಿದಿದ್ದ ಧೂಳಿನ ಪ್ರಭಾವ!

"ಓ....ನಮಸ್ಕಾರ— ಏನು ಬಸ್ಸು, ಏನು ಧೂಳು—ಎಂತಾ ರೋಡು ಇದು?" —ಇದು ನಿಮ್ಮಿಂದ ನಾನು ನಿರೀಕ್ಷಿಸುವ ಪೀಠಿಕೆ. ನಮ್ಮೂರಿಗೆ ಬಂದವರೆಲ್ಲಾ ಮಾಡಿದ ಪ್ರಾಸ್ತಾವಿಕ ಭಾಷಣ ಅದೇ. ಈ ಪೀಠಿಕೆಯ ನಂತರ ರಸ್ತೆಯ ಪಕ್ಕಕ್ಕೆ ಅತ್ತಿತ್ತ ಹೊರಳಿ ನೋಡುತ್ತಿರುವ ನಿಮ್ಮ ಮನೋಭಾವವನ್ನು ಗ್ರಹಿಸಿ, ನಿಮ್ಮನ್ನು ನಾನು ಐತಾಳರ ಹೋಟೆಲ್ಲಿಗೆ ಕರೆದೊಯ್ಯುತ್ತಿದ್ದೇನೆ. ನಮ್ಮೂರಿಗೆ ಹೊಂದಿಕೊಂಡಿರುವ ಈ ಊರೇ ನಾವುಂದ. ಇಲ್ಲಿಯ ಬಗೆಗೆ ಹೇಳುವುದಾದರೆ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಅಂಗವಾಗಿ ಸ್ಥಾಪಿಸಲ್ಪಟ್ಟ 'ಪಾರ್ಟ ಗ್ರಾಮ ಶಿಕ್ಷಣ ಕೇಂದ್ರ'ವು ಸರಕಾರಕ್ಕೆ ಅಪಾರ ನಷ್ಟವನ್ನುಂಟುಮಾಡಿ ಕೊನೆಗೂ ಮುಗುಚಿಹೋದ ಸುದ್ದಿ ನಿಮಗೆ ವಿಶೇಷವೆನಿಸಬಹುದು; ನೀವು ಈ ಸುದ್ದಿಯನ್ನೆತ್ತಿಕೊಂಡು ನಮ್ಮ ಸರಕಾರಕ್ಕೆ ಅಪಮಾನ್ಯ ಮಾಡಬಹುದು ಆದರೆ ಅಂತಹದೆಷ್ಟೋ, ಅದಕ್ಕಿಂತ ಹೆಚ್ಚಿನದಿನ್ನೆಷ್ಟೋ ದೇಶದಲ್ಲಿ ನಡೆಯುತ್ತಿರುವಾಗ ಇದೊಂದು ಸಾಮಾನ್ಯ ವಿಷಯವೇ ಸರಿ, ಇಲ್ಲಿ ಮತ್ತೇನೂ ಹೆಚ್ಚಿನ ವಿಶೇಷಗಳು ನಿಮಗೆ ಸಿಗವು. ಐತಾಳರ ಚಹಾ ಸೇವಿಸಿದಿರಷ್ಟೆ. ಇನ್ನು ನಮ್ಮೂರತ್ತ ನಡೆಯುವ, ರಸ್ತೆಯ ಮೇಲೆ ಒಂದರ್ಧ ಮೈಲು ಸಾಗುವ ವರೆಗೂ ಐತಾಳರು ಕೊಟ್ಟ ಅಮೇರಿಕದ ಸ್ಕಿಮ್ಡ್ ಪೌಡರ್ ಹಾಲಿನ ಚಹಾದ ಪರಿಮಳಯುಕ್ತ ತೇಗು ನಮ್ಮನ್ನು ಬಾಧಿಸುತ್ತದೆ. ನಮಗೆಲ್ಲಾ ಇದು ಅಭ್ಯಾಸವಾಗಿ ಹೋಗಿದೆ.

ನಾವುಂದದಿಂದ ನಮ್ಮ ಮನೆಗೆ ಒಂದೂವರೆ ಮೈಲು ದೂರವಿದೆ. ನಮ್ಮೂರ ವಿಶೇಷಗಳನ್ನೆಲ್ಲಾ ಕಿವಿಯಾರೆ ಕೇಳಿ, ಕಣ್ಣಾರೆ ನೋಡಲು ಬಂದ ನಿಮಗೆ ಅದರ ಸಂಪೂರ್ಣ ಪರಿಚಯ ಮಾಡಿಕೊಡುವುದು ಅಗತ್ಯ. ಇಲ್ಲಿಯ ಸೃಷ್ಟಿ ಸೌಂದರ್ಯ ನೋಡಿ ನಿಮಗೆ ಹುಚ್ಚು ಹಿಡಿದಂತಾಗಬಹುದು. ಪೂರ್ವ ದಿಕ್ಕಿನಲ್ಲಿ ಹರಿಯುವ ಮಂದಾಕಿನಿಯೇ ಸೌಪರ್ಣಿ. ಪಶ್ಚಿಮದಲ್ಲಿ ಭೋರ್ಗರೆವುದೇ ಅರಬೀ ಸಮುದ್ರ. ಮೇಲ್ಗಡೆ ಬೆಳ್ಳಗಿನ ಆಗಸ ಈ ಮೂರರ ನಡುವಣ ನೆಲವೇ ನಮ್ಮೂರು. ನಾವು ನಡೆಯುವ ಈ ರಸ್ತೆಯ ಇಕ್ಕಡೆಗಳಲ್ಲಿ ನಮ್ಮೂರ ಜನರ ಭೂಮಿ. ಅಲ್ಲಲ್ಲಿ ಅಡಗಿಕಟ್ಟಿಗೆ ಕಡಿಯುತ್ತಿರುವವರನ್ನು ಕಂಡು ನೀವು ಪ್ರಶ್ನಾರ್ಥಕ ದೃಷ್ಟಿಯಿಂದ ನೋಡುತ್ತೀರಿ. ನೀವು ನೋಡಿದ ದೃಶ್ಯಕ್ಕೆ ನೀವು ಕಳ್ಳತನ ವೆಂದು ಕರೆಯಬಹುದು. ಆದರೆ ಇದಿಲ್ಲಿ ಸ್ವಾಭಾವಿಕ ಇದರಿಂದ ಯಾರಿಗೂ ಲಾಭನಷ್ಟಗಳಿಲ್ಲ. ಏಕೆಂದರೆ ಇಲ್ಲಿಯ ಜನರೆಲ್ಲರೂ ಒಂದೇ ರೀತಿಯವರು. ಓ ಅಲ್ಲಿ ನೋಡುವುದು ಸ್ಮಶಾನ—ಸರಕಾರದವರು ಜನರ ಉಪಯೋಗದ ಬಗ್ಗೆ ಹೀಗೆ ಪ್ರತಿಹಳ್ಳಿಗಳಲ್ಲೂ ಈ ಬಗ್ಗೆ ಸ್ಥಳಗಳನ್ನಿಟ್ಟಿದ್ದಾರೆ. ಆದರೆ ಈ ಒಂದು ವಿಷಯದಲ್ಲಿ ನಮ್ಮೂರ ರೈತರು ಹೇಳುವಂತೆ 'ಸರಕಾರಕ್ಕೆ ಬುದ್ಧಿಯಿಲ್ಲ'. ನಮ್ಮ ರೈತರು ಮನುಷ್ಯರ ಹೆಣಗಳನ್ನು ನಮ್ಮ ಬೇಸಾಯದ ಭೂಮಿಯಲ್ಲಿ ಸುಡುವುದರಿಂದ ಸಾವಿನ ಸದುಪಯೋಗ ಹೊಂದುತಿದ್ದಾರೆ. ಆ ಗೊಬ್ಬರ—ಈ ಗೊಬ್ಬರ ಮಾಡಿರಿ ಎನ್ನುವ ಸರಕಾರ ಸ್ಮಶಾನಕ್ಕಾಗಿ ಬೇರೆ ಸ್ಥಳಗಳನಿಟ್ಟು, ಆರೋಗ್ಯಾಧಿಕಾರಿಗಳ ಮೂಲಕ 'ಅಲ್ಲಿಯೇ ನಿಮ್ಮ ಕರ್ಮಮಾಡಿರಿ'ಂದು ಒತ್ತಾಯಿಸುವುದು ಬುದ್ಧಿಯಿಲ್ಲದ ಕೆಲಸವಲ್ಲದೇ ಬೇರೇನು ?

ಇವಿಷ್ಟು ವಿಚಾರ ನಿಮಗೆ ತಿಳಿಸುವಷ್ಟರಲ್ಲಿ ನಾವು ನಮ್ಮೂರ ಪ್ರಮುಖ ಕೇಂದ್ರವಾದ 'ಜಕ್ಕನ ಕಟ್ಟೆ'ಗೆ ಬಂದು ಮುಟ್ಟಿರುತ್ತೇವೆ. ಹಿಂದೆ "ಜಕ್ಕ" ಎನ್ನುವನೊಬ್ಬ ಕಟ್ಟೆಯೊಂದನ್ನು ಕಟ್ಟಿದ್ದರಿಂದ ಇಲ್ಲಿಗೀಹೆಸರು ಬಂದಿದೆಯಂತೆ. ಆದರೆ ಇಲ್ಲಿ ನಡೆಯುವ ಘಟನೆಗಳನ್ನು ನೋಡಿ ನೀವೇ ಆ ಹೆಸರನ್ನು ಬದಲಾಯಿಸಿ "ಜಗಳದಕಟ್ಟೆ" ಎಂಬ ಅನ್ವರ್ಥನಾಮವನ್ನು ಸೂಚಿಸಬಹುದು, ಕಾರಣ ಇಲ್ಲಿ ನಿಮ್ಮ ಕಣ್ಣಮುಂದೆ ಸರಾಸರಿ ಗಂಟೆಗೊಂದರಂತೆ ನಡೆಯುತ್ತಿರುವ ಜಗಳಗಳು—ಚಹಾಕುಡಿದು ದುಡ್ಡು ಕೊಡದೇ ಹೊರ ಹೊರಟ ಗಿರಾಕಿಯ ಶಾಲನ್ನೋ ರುಮಾಲನ್ನೋ ಕಳಚಲು ಕೈಹಾಕಿದ ಹೋಟೆಲ್ ಮಾಲಕನಿಗೂ ಗಿರಾಕಿಗೂ ನಡೆಯುವ ಜಗಳ, ಮುನ್ನಾದಿನ ನಡೆದ 'ಕುಕ್ಕುಟಕದನ'ದಲ್ಲಿ ನಡೆದ ಅನ್ಯಾಯವನ್ನಲ್ಲಾದ ಕೃತಿಯೊಂದರ ಪುನರ್ವಿಮರ್ಶೆ ಆರಂಭವಾಗಿ ಅದರ ಮುಕ್ತಾಯಕ್ಕಾಗಿ ಹತ್ತಿದ ಕೈಕೈ; ಸರಕಾರದಿಂದ ತೆರೆಯಲ್ಪಟ್ಟ 'ನೀರಾ ಅಂಗಡಿ'ಯಲ್ಲಿ ಹುಳಿ ಕಳ್ಳು ಕೊಡಲು ನಿರಾಕರಿಸಿದ ಸೇಲ್ಸ್‌ಮೇನ್ ಹಾಗೂ ಗಿರಾಕಿಯ ಮಧ್ಯೆ ನಡೆಯುತ್ತಿರುವ ವಾಗ್ಯುದ್ಧ; ಅಲ್ಲಿರುವ ಸರಕಾರಿ ಭಾವಿಯಲ್ಲಿ ತಾವು ಇಟ್ಟಿದ್ದ ರಾಟೆ, ಹಗ್ಗವನ್ನುಪಯೋಗಿಸಿದ ಹೋಟೇಲಿನವರಿಗೂ, ಆ ಮನೆಯವರಿಗೂ ನಡೆದ ಹೊಡೆದಾಟ; ಹತ್ತಿರದ ಶಾಲೆಯಲ್ಲಿ ಹಿಂದಿನ ದಿನ ಏನೋ ತಪ್ಪು ಮಾಡಿ ಅಧ್ಯಾಪಕರಿಂದ ಪೆಟ್ಟುತಿಂದ ವಿದ್ಯಾರ್ಥಿಯ ಹೆತ್ತವನಿಗೂ ಅಧ್ಯಾಪಕರಿಗೂ ನಡೆಯುತ್ತಿರುವ ಬಿಸಿ ಚರ್ಚೆ—ಹೀಗೇ ಇನ್ನೆಷ್ಟೋ—ಇದು ನಿಮಗೆ ನೀರಸ್ಯವಾಗಿ ತೋರಬಹುದು. ಅದೋ ಅಲ್ಲಿ ನೋಡಿ—ಮುಂಭಾಗದ ಸುಮಾರು ಇಪ್ಪತ್ತು ಹಂಚು ಹಾರಿಹೋಗಿ ಹಿಂಬದಿಯು ಅರು ಪಕಾಸಿಯೇ ಇಲ್ಲದಿರುವ ಆ ಕಟ್ಟಡವೇ ನಮ್ಮ ಗ್ರಾಮ ಪಂಚಾಯತಿ ಆಫೀಸು. ಅದರ ಮೇಲಿಂದ ಎರಡು ಕಂಭಗಳು ಮೂರು ತಿಂಗಳ ಹಿಂದೆ ದುರಸ್ತಿಗೆ ಹೋದ ರೇಡಿಯೋದ ಇರುವಿಕೆಯ ಗುರುತು. ಓ ಅಲ್ಲಿ—ಅವರ ಸ್ವಲ್ಪ ಮುರಿದು ಬಿದ್ದಿದೆ ನೋಡಿ—ಅದು ಮೊನ್ನಿನ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ನಡೆದ ದೊಡ್ಡ ಜಗಳ ಬಡಿದಾಟಗಳ ಚಿಕ್ಕ ಕುರುಹು. ಇದು ನಮ್ಮೂರ ಕೇಂದ್ರವೆಂದೆನಷ್ಟೆ. ಇಲ್ಲಿ ಒಂಭತ್ತು ಸುಸಜ್ಜಿತ, ಎಲ್ಲಾ ಮತಸ್ತರ ಚಹಾ-ಕಾಫಿ ಕ್ಲಬ್ಬು'ಗಳಿವೆ. ಒಂದೇ ಒಂದು ಕಿರಾಣಿ ಅಂಗಡಿಯಿದೆ. ಅಲ್ಲಿರುವುದೊಂದು ಬ್ರ್ಯಾಂಚ್ ಪೋಸ್ಟಾಫೀಸು. ಇಲ್ಲಿ ದಿನ ಒಂದಕ್ಕೆ ನಾಲ್ಕೈದು ಕಾಗದ ಪತ್ರಗಳೂ ಬರುವುದುಂಟು; ಇಲ್ಲಿಂದ ಸಬ್ ಆಫೀಸಿಗೆ ಕೆಲವೇ ಬಾರಿ ಮಾತ್ರ ಬರೇ ಚೀಲ ಹೋಗುತ್ತದೆ!

ಇನ್ನು ಇಲ್ಲಿಂದ ನಮ್ಮ ಮನೆಗೆ ಅರ್ಧ ಮೈಲು ಮಾತ್ರ ಇದೆ ಇಲ್ಲಿ ಹೋಟೆಲುಗಳಿದ್ದರೂ, ನಾವುಂದದಲ್ಲಿ ನಮ್ಮ ಕಡೆಯ ಹೋಟೆಲ್ ಚಹಾದ ರುಚಿ ಕಂಡ ನಿಮಗೆ ಇಲ್ಲಿ ಕುಳಿತಿರಲೂ ಮನಸ್ಸಾಗದು. ಹಾಗಾದರೆ ಮನೆಗೇ ಹೋಗೋಣ—ನಡೆಯಿರಿ.

ನಾವು ಸಾಗಲಿದ್ದ ಈ ಅರ್ಧ ಮೈಲಿಯ ದಾರಿಯಲ್ಲಿ ಅಚೀಚೆ ಕೆಲವು 'ಭಟ್ಟಿ ಇಳಿಸುವ ಕಾರ್ಖಾನೆ'ಗಳೂ, ಅಲ್ಲಲ್ಲಿ ಕುಡಿದು ಸಾಗುವ ಕುಡುಕರ ತಂಡವಲ್ಲದೇ ಬೇರೇನೂ ವಿಶೇಷ ತೋರದು. ನಮ್ಮ ಪೋಲೀಸರು ಸಹಾ ಇವರೆಲ್ಲರಿಂದ ಉಪಕೃತರಾಗುತ್ತಿದ್ದುದರಿಂದ ಕಾರಣ, ನಾವಾಗಲೀ ನೀವಾಗಲೀ 'ಚಕಾರ'ವೆತ್ತಲು ಆಸ್ಪದವಿಲ್ಲ—ಈಗ ಈ ಓಣಿ ನಮ್ಮನ್ನು ನನ್ನ ಮನೆಗೆ ಕೊಂಡೊಯ್ಯುತ್ತದೆ. ಹಳ್ಳಿಯ ಮಾದರಿಯ, ಹುಲ್ಲು ಛಾವಣಿಯ ಚಿಕ್ಕ ಮನೆಯೇ ನಮ್ಮದು.

"ಬನ್ನಿ ಕುಳಿತುಕೊಳ್ಳಿ—ಆದರೆ ಜಾಗ್ರತೆ—ಆ ಕುರ್ಚಿ ನನ್ನ ಅಜ್ಜ—ವಿಶ್ವೇಶ್ವರಯ್ಯನವರ ಕಾಲದ್ದು. ಆದರಲ್ಲಿ ಅಜಾಗ್ರತೆಯಿಂದ ಕುಳಿತರೆ ನಾಲ್ಕುದಿನ ಹಾಸಿಗೆಯಲ್ಲಿ ಮಲಗ ಬೇಕಾದೀತು!

"ಏನೋ ಬಡವರ ಮನೆಗೆ ಭಾಗೀರಥಿ ಬಂದ ಹಾಗೆ ಬಂದಿದ್ದೀರಿ, ನಾವು ನಿಮಗೆ ಕೊಡುವುದು ಈ ಬೆಲ್ಲ—ನೀರೇ ಸರಿ". —ಎಂದು ತನ್ನ ಸಹಜ ಮಾತಿನಿಂದ ನಿಮಗೆ ನನ್ನ ತಾಯಿ ಕಪ್ಪನ ಬೆಲ್ಲ, ನೀರನ್ನು ಕೊಡುವಳು. ನಂತರ ಊಟಕ್ಕಂತೂ ಇದ್ದೇ ಇದೆ—ಹಳ್ಳಿಯ ವಾಡಿಕೆಯಂತೆ—'ಕೊಚ್ಚಿಗೆ ಅಕ್ಕಿಯ ಅನ್ನ, ಕುಂಬಳಕಾಯಿ ಗೊಜ್ಜು; ನೀರು ಮಜ್ಜಿಗೆ, ಉಪ್ಪಿನ ಕಾಯಿ. ಪೇಟೆಯಲ್ಲಿ ಮಿಲ್ಲಿನ ಅಕ್ಕಿ ಬೇಳೆ ಸಾರುಂಡ ನಿಮಗೆ ಇದು ಅ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 47 of 1959.

ನಾಗಪ್ಪಶೆಟ್ಟಿ...... ವಾದಿ

ಮತ್ತು

1. ಶೇಖರಶೆಟ್ಟಿ, 3. ಸರಸುಶೆಡ್ತಿ—ಪಟೇಲ್ ಎಲ್ಲಪ್ಪ ಶೆಟ್ರು ಮೊಮ್ಮಕ್ಕಳು ವ ಕಲ್ಯಾಣಿ ಶೆಡ್ತಿಯರ ಮಕ್ಕಳು, ಉಡುಪಿ ತಾಲೂಕು ಉದಿಯಾವರ ಗ್ರಾಮಸ್ಥರು—1 ಮತ್ತು 3ನೇ ಪ್ರತಿವಾದಿರು,

ಇವರೊಳಗೆ—

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ವಾದಿಗೆ ನೀವು ಕೂಡಾ ತಾರೀಕು 29-3-1956ರಲ್ಲು ಬರಕೊಟ್ಟ ದಿಮಾಂಡು ನೋಟಿನ ಅಸಲು ಬಡ್ಡಿ ಹಣಗಳನ್ನು ಬರಮಾಡಿಕೊಳ್ಳುವರೆ ವಾದಿಯು ದಾಕ್ಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 11-7-59ಕ್ಕೆ ಇಟ್ಟಿರುತ್ತದೆ. ಉದಾಹರಿಸು ವಂಥಾದಿದ್ದರೆ ಆ ದಿವಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Ramakrishna Rao,
Vakil for Plaintiff.

Udipi, Dated, 29-6-1959.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ದಕ್ಕಿಂತ ರುಚಿಯಾಗಿ ಕಾಣದಿರದು. ಊಟ ಮಾಡಿದ ನಿಮಗೆ ನಮ್ಮ ತೆಂಗಿನ ತೋಟದ ತಂಪು ಹಾಗೂ ಕಡಲ ಗಾಳಿಯ ಕಂಪು ನಿದ್ದೆ ತಂದೇ ತರುತ್ತದೆ.

ನಿದ್ದೆಯಿಂದೆದ್ದ ನಿಮಗೆ ನಮ್ಮ ಎಮ್ಮೆ ದಯಮಾಡಿಕೊಟ್ಟ ಮುಕ್ಕಾಲು ಸಿದ್ದೆ ಹಾಲಿನಿಂದ ತಯಾರಿಸಿದ ಚಹಾ ಸಿದ್ಧವಾಗಿರುತ್ತದೆ. ಅನಂತರ ಇದ್ದೇ ಇದೆಯಲ್ಲ—ಊರ ಪರಿಚಯಕ್ಕಾಗಿ ಪರಿಭ್ರಮಣ ಮನೆಯಿಂದ ಹೊರಹೊರಟು ಬೀದಿಗಿಳಿದಾಗ ಮೊದಲು ನಮಗಿದಿರಾಗುವುದು ಗೋವುಗಳ ತಂಡ. ಅವು ಅಷ್ಟು ಬೇಗನೇ ಮನೆಗೆ ಹಿಂತಿರುಗುವುದು ನೋಡಿ ನಿಮಗೆ ಆಶ್ಚರ್ಯವಾಗಬಹುದು. ಆದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಯಾರನ್ನೂ ದಿನಕ್ಕೆ ಎಂಟು ಗಂಟೆಗಿಂತ ಮಿಗಿಲಾಗಿ ದುಡಿಸಬಾರದೆಂದು ಕಾನೂನು ಮಾಡಿದ ಸರಕಾರ ಗೋಪಾಲಕರಿಗೆ ಬೇರೊಂದು ಕಾನೂನು ನಿರ್ಮಿಸಲಿಲ್ಲವಷ್ಟೆ. ಆದರಿಂದ ಆಗುವ ಅನಾಹುತವೇನೂ ಇಲ್ಲ. ವಿವಾಹಗಳ 'ಗೋಧೂಳಿ" ಮುಹೂರ್ತಕ್ಕೆ— ಸರಿಯಾಗಿ ಆರುಗಂಟೆಗೆ ಓಡುವ ಬಸ್ಸಿನ 'ಬಸ್ಸಧೂಳಿ' ಇದ್ದೇ ಇದೆ! ಈಗ ನಾವು ಮೊದಲು ಬಂದ ದಾರಿಬಿಟ್ಟು ಈ ಅಡ್ಡ ದಾರಿ ಹಿಡಿಯುವ. ಇದು ನಮ್ಮನ್ನು ನಮ್ಮೂರ ಇನ್ನೊಂದು ಕೇಂದ್ರವಾದ 'ಅಂಚೆಕಟ್ಟೆ'— ಹಿಂದೆ ಅಂಚೆಕಟ್ಟೆಯಿದ್ದ ಸ್ಥಳಕ್ಕೆ ಮುಟ್ಟಿಸುತ್ತದೆ. ಇಲ್ಲಿರುವ ನಾಲ್ಕೈದು ಅಂಗಡಿಗಳು ತಮ್ಮ ಮುಂಭಾಗ ಕಳೆದುಕೊಂಡು ವಿಕಾರವಾಗಿ ನಿಂತಿರುವುದರ ಕಾರಣ ನೀವು ಕೇಳದಿರಿಷ್ಟೆ. ಅದು ಮತ್ತೇನೂ ಅಲ್ಲ; ರಾಜಮಾರ್ಗದ ಸರಕಾರಿ ಸ್ಥಳವನ್ನು ತಮ್ಮದಾಗಿಸಿಕೊಂಡು, ಅಲ್ಲಿ ತಮ್ಮ ರಾಜ್ಯಸ್ಥಾಪಿಸಿದ ಮಾಲೀಕರಿಗೆ ಸರಕಾರ ಕೊಟ್ಟ ಶಿಕ್ಷೆಯಿದು. ಇದನ್ನು ನೋಡಿಯಾದರೂ ಉಳಿದವರು ಪ್ರಮಾಣ ಬುದ್ಧಿವಂತಿಕೆಯನ್ನು ಮರೆಯ

ವಿಚಾರ ಮಥನ

(೧ನೇ ಪುಟದಿಂದ)

ದಾರ್ಶನಿಕತೆಗಳಿಂದಲೇ ಪ್ರಪಂಚದ ಉಳಿವು ಪಾಕಿಸ್ತಾನಕ್ಕೆ ಸೈನಿಕ ಸಹಾಯವೀಯ ಒಪ್ಪಿದ ಅಮೇರಿಕೆಯಲ್ಲಿಯೇ ಈಗೀಗ ಈ ಕೃತ್ಯದ ಬಗ್ಗೆ ಅಸಮಾಧಾನವೂ ತೋರಿ ಬರುತ್ತಿರುವುದು ಗಣನೀಯ. ಮೈಸೂರಿನ ರಾಜ್ಯಪಾಲರೂ ತಮ್ಮ ಸಂಚಾರಾವಧಿಯಲ್ಲಿ ಈ ವಿಷಯವನ್ನು ಮನಗಂಡಿದ್ದಾರೆ; ಅಲ್ಲದೇ ಅಮೇರಿಕನರಲ್ಲಿ ವಿಚಾರ ಪ್ರಚೋದನೆ ಯಾಗುವಂತಹ ಭಾಷಣಗಳನ್ನೂ ಮಾಡಿದ್ದಾರೆ. ಭಾರತದ "ಮಹಾ ಬಿಕರು"ಗಳ ಬಗ್ಗೆ ಅವರು ಈ ಮೊದಲು ಕಲ್ಪಿಸಿದ್ದ ತಿಳಿದಿದ್ದ ಸಂಗತಿಗಳೆಲ್ಲವನ್ನೂ ಅಲ್ಲಗಳೆದು ಒಂದು ಗೌರವದ ಸ್ಥಾನವನ್ನು ಗಳಿಸಿ ಕೊಟ್ಟಿದ್ದಾರೆ. ಅಲ್ಲಿ ಗಳಿಸಿದ ಈ ಸ್ಥಾನವನ್ನು ಇಲ್ಲಿಯೂ ಉಳಿಸಿಕೊಂಡು ಬರುವುದೇ ಜಾಣ್ಮೆಯ

ಲೆಂದು ಸರಕಾರದ ಉದ್ದೇಶವಿರಬೇಕು. ಅದೇನು—ನೀವು ಅತ್ತ ನೋಡುತ್ತಿರುವಿರಿ?....ಓ,—ಅವರೇ, ಅವರು ಆ ತೆಂಗಿನ ತೋಟಕ್ಕೆ ಹತ್ತಿರದ ಕೆರೆಯಿಂದ ನೀರೆತ್ತಿ ಎರೆಯುತ್ತಿದ್ದಾರೆ. ಪಟ್ಟಣದ ಬಣ್ಣದ ಚಿಟ್ಟೆಗಳ ಕೃತಕ ಸೌಂದರ್ಯವನ್ನೇ ಕಂಡ ನೀವು ಈ ಸ್ವಾಭಾವಿಕ ಅಂದ ಚೆಂದಗಳಿಂದ ಕೂಡಿದ ಹಳ್ಳಿಯ ಬಾಲಿಕೆಯರನ್ನು ನೋಡಿ ಮುಗ್ಧರಾಗಿರಬಹುದಲ್ಲವೇ! ನಿಮ್ಮಂತಹ ಅನೇಕ ಪಟ್ಟಣವಾಸಿಗಳು ನಮ್ಮೂರಿಗೆ ಬಂದು ಅದೇ ಅಭಿಪ್ರಾಯ ವ್ಯಕ್ತಪಡಿಸಿರುವರು ಅದಾಮಿರಲ್ಲ— ಇನ್ನು ನೀವು ನಮ್ಮೂರಿನಲ್ಲಿ ನೋಡತಕ್ಕ ಅಂತಹ ವಿಶೇಷಗಳೇನೂ ಇರುವುದಿಲ್ಲ. ಇದ್ದರೂ ಅವೆಲ್ಲಾ 'ತಲೆಹರಟೆ'ಯಂತೆ ಬೇಸರ ತರಬಹುದು. ನಮ್ಮೂರಿನ ಈ ಎಲ್ಲಾ ವೈವಿಧ್ಯಗಳನ್ನು ಕಂಡ, ಮೊದಲೇ ಕವಿಯಾಗಿದ್ದ ನೀವು ನಮ್ಮೂರ ಮೇಲೆ ಬರೆಯಲಿರುವ "ಪ್ರಶಂಸನೀಯ ಆ ಊರು" ಎಂಬ ಪದ್ಯದ ಕುರಿತು ಯೋಚಿಸಲು ನಿಮಗೆ ಸಮಯವೂ, ಏಕಾಂತತೆಯೂ ಬೇಕಾಗಿದೆಯಷ್ಟೆ. ಹಾಗಾದರೆ ನಡೆಯಿರಿ—ಅರಬೀ ಸಮುದ್ರದ ಮಳಲ ದಂಡೆಗೆ.—

—"ಜನ್ನ", ಮರವಂತೆ.

ಲ್ಲವೇ?

೦೦ ೦೦

ಕೇರಳದಲ್ಲಿ ಕೇಂದ್ರ ಸರಕಾರವು ಹಸ್ತಕ್ಷೇಪ ಸದ್ಯ ಮಾಡಲಾರದೆಂದು ಪ್ರಧಾನಿ ನೆಹರೂ ಅಭಿಪ್ರಾಯಕ್ಕೆ ಬಂದಿದ್ದರು. ಕಾಂಗ್ರೆಸ್ ವರಿಷ್ಠರು, ಕೇರಳದಲ್ಲಿ ರಾಜ್ಯ ಸರಕಾರದ ಮೇಲೆ ವಿರೋಧೀ ಪಕ್ಷದವರು ಹೊರಿಸಿದ ಆರೋಪಗಳನ್ನು ಗಮನಿಸಿ, ಅಲ್ಲಿನ ಸ್ಥಿತಿ ಗತಿಗಳನ್ನೂ ಅಭ್ಯಸಿಸಿ, ಪರಿಸ್ಥಿತಿಯನ್ನು ಸುಧಾರಿಸಲು ಇನ್ನೊಂದು ಚುನಾವಣೆಯನ್ನು ನಡೆಸುವುದೇ ಪರಿಹಾರವೆಂದು ಗೊತ್ತುವಳಿ ಸ್ವೀಕರಿಸಿದೆ. ಆದರೆ, ಕಮ್ಯುನಿಸ್ಟರು ಇದಾವುದಕ್ಕೂ ಸಿದ್ಧರಿಲ್ಲ ಎಂಬುದು ಈಗ ಸುಸ್ಪಷ್ಟವಿದೆ. ಒಂದು ವೇಳೆ ಮರು ಚುನಾವಣೆಯನ್ನು ಕೇರಳ ಸರಕಾರವು ನಡೆಸದೆ ಹೋದರೆ, ಆಗ. ಕೇಂದ್ರವು ಮಧ್ಯೆಪ್ರವೇಶಿಸುವುದು ಎಂಬ ದಟ್ಟ ವರ್ತಮಾನವು ರಾಜಧಾನಿಯಲ್ಲೂ ಇತರೆಡೆಗಳಲ್ಲೂ ಹಂಡಿದೆ. ಕೇಂದ್ರವು ಕೇರಳದಲ್ಲಿ ಹಸ್ತಕ್ಷೇಪನಡೆಸುವುದರಿಂದ, ಒಂದು ಸಮಯ, ಅಲ್ಲಿನ ಪರಿಸ್ಥಿತಿಯು ಶಾಂತಗೊಳ್ಳಬಹುದು; ಆದರೆ ಪುನಃ ಚುನಾವಣೆಯು ನಡೆಯುವುದು ಆಗತ್ಯತಾನೆ? ಆಗ, ಮತ್ತೊಮ್ಮೆ ಕಮ್ಯುನಿಸ್ಟರೇ ಬಹುಮತಪಡೆದರೆ, ಆಗ ಏನು? ಎಂಬುದನ್ನೂ, ಕೇರಳದಲ್ಲಿ ವಿರೋಧಿ ಪಕ್ಷಗಳು ಆಂದೋಲನ ಹೂಡಿದಂತೆಯೇ ಉಳಿದ ರಾಜ್ಯಗಳಲ್ಲಿಯೂ ಕಮ್ಯುನಿಸ್ಟರ ನಾಯಕತನದಲ್ಲಿ ಸರಕಾರೀ ವಿರೋಧಿ ಆಂದೋಲನ ಪ್ರಾರಂಭವಾದರೆ? ಎಂಬುದನ್ನೂ ಯೋಚಿಸಬೇಡವೇ?

ಭಾರತದ ಕೇಂದ್ರ ಹಾಗೂ ಕೆಲವು ರಾಜ್ಯಗಳಲ್ಲಿ ಕಾಂಗ್ರೆಸು ನಿಚ್ಚಳಬಹುಮತಪಡೆದಿದೆ, ಒಡಿಸ್ಸದಲ್ಲಿ ಗಣತಂತ್ರ ಪರಿಷತ್ತಿನ ಸಖ್ಯಮಾಡಿಕೊಂಡಿದೆ. ಹಾಗಿರುವಾಗ ಜನತೆಯನ್ನು ಅಷ್ಟು ಸುಲಭದಲ್ಲಿ ಕೆಣಕುವುದಾಗಲೀ ಉದ್ರೇಕಿಸುವುದಾಗಲೀ ಸುಲಭವಲ್ಲವಾದರೂ ಕೆಣಕು ಶೀಲರು ಏನು ಮಾಡಲಾರರೆಂದು ನಂಬುವುದು ಸಾಧ್ಯವಿಲ್ಲ. ಆಗ, ಕಾಂಗ್ರೆಸ್ಸಿನ ನೀತಿಯಂತೆ ವಿರೋಧವು 'ಬಲ"ವಾಗಿ, ಈಗ ಕೇರಳದಲ್ಲಿರುವ ಸ್ಥಿತಿ"ಯು ತಲೆದೋರಿದರೆ, ಅಲ್ಲಿಯೂ ಮರು ಚುನಾವಣೆಯ ಸಲಹೆ—ತಪ್ಪಿದರೆ, ಕೇಂದ್ರದ ಹಸ್ತಕ್ಷೇಪಗಳೇ ನಡೆಯಬೇಕು ತಾನೆ. ಹಾಗಾದರೆ, ದೇಶದ ವಿವಿಧ ರಾಜ್ಯಗಳ ಸರಕಾರಗಳನ್ನೇ ಬರ್ಖಾಸ್ತುಗೊಳಿಸಿ ಕೇಂದ್ರ—ರಾಜ್ಯವೆಂಬ ಭೇದವಿಲ್ಲದೇ ಒಂದೇ ಸರಕಾರದ ಮೂಲಕ ಇಡಿ ದೇಶದ ರಾಜ್ಯಭಾರ ನಡೆಸುವುದೇ ಸೂಕ್ತವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ವ್ಯಕ್ತಿ ಗಟ್ಟಿಯಿರುವ ವರೆಗೆ ಮನುಷ್ಯ; ಇಲ್ಲವಾದರೆ ಮಾತ್ರ ಹೆಣವೆನ್ನುವಂತೆ ರಾಜ್ಯಾಡಳಿತೆ ಸುಸೂತ್ರವಾಗಿ ನಡೆಯುವವರೆಗೆ ಪ್ರಜಾತಂತ್ರ; ಆ ಮೇಲೆ ಸರ್ವಾಧಿಕಾರವೆ? ಪ್ರಜಾರಾಜ್ಯಗಳೂ ಸರ್ವಾಧಿಕಾರಿ ರಾಷ್ಟ್ರಗಳಾದ ಉದಾಹರಣೆಗಳು ಇತಿಹಾಸದಲ್ಲಿಲ್ಲವೆ? ರಾಜನನ್ನು ಕೊಂದು ಮಂತ್ರಿ ಪಟ್ಟವೇರಿದನೆಂದು ಚರಿತ್ರೆ ಸುಳ್ಳು ಹೇಳುವುದಿಲ್ಲ ತಾನೆ? ಇದನ್ನೆಲ್ಲಾ ಭಾವಿಸುವಾಗ, ಭಾರತದ ಭಾವಿ ಭವಿಷ್ಯತ್ತಿನ ಆಕಾಶವನ್ನು ಘನಕರಿ ಘಟಗಳು ಆಚ್ಛಾದಿಸಿದಂತೆ ಭಯಾನಕವಾಗಿ ತೋರುತ್ತಿಲ್ಲವೆ?

—ರಾಶಿ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 135/1959.

ವೆಂಕಪ್ಪ ಶೆಟ್ಟಿ—ವಾದಿಲು,

ಮತ್ತು

ಅಂಕಪ್ಪ ಶೆಟ್ಟಿ ಕೂಡಾ—ಪ್ರತಿವಾದಿರು.

ಜುಮಲೊಳಗೆ

2ನೇ ಪ್ರತಿವಾದಿ ಬಚ್ಚಶೆಟ್ಟಿ—ಸರಶಿಶೆಟ್ಟಿ ಮಗ, ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಅಕ್ಕಂಜೆ.

ಮೇಲ್ಕಂಡ ವ್ಯಾಜ್ಯದಲ್ಲಿ ಸದ್ರಿ 2ನೇ ಪ್ರತಿವಾದಿಗೆ ಆಗತಕ್ಕ ವ್ಯಾಜ್ಯದ ನೋಟೀಸು ತಾ. 27-7-59ಕ್ಕೆ ಬಿಟ್ಟಿರುವದ್ರಿಂದ ಆ ದಿವಸ ಸದ್ರಿ ಪ್ರತಿವಾದಿಯು ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao,
Vakil for Plaintiff.

Udipi, Dated. 3-7-59.

ನೋಟೀಸು

ಮಂಗಳೂರು ಡಿ. ಮು. ಕೋರ್ಟಿನಲ್ಲಿ

O. S. ನಂಬ್ರ 73/59.

ಪದ್ದು ಶೆಟ್ಟಿ......ವಾದಿ.

ಮತ್ತು

ಅಂಬಾ ಯಾನೆ ರುಕ್ಮಿಣಿ ಅಮ್ಮ ಕೂಡಾ—ಪ್ರತಿವಾದಿರು.

ಕೆ. ಮಾಧವಳಮ್ಮರ ಮಗ, ಸೂರ್ರಿಂಜೆ ಗ್ರಾಮಸ್ತ ಕುಳ್ಳಂಗಾಲು ವಿಟ್ಟಪ್ಪ ಆಳ್ವರಿಗೆ—:

ನೀವು ನಿಮ್ಮ ಹೆಂಡತಿಯಾದ ಮೇಲ್ಕಂಡ ವ್ಯಾಜ್ಯದ 1ನೇ ಪ್ರತಿವಾದಿ ಅಂಬಾ ಯಾನೆ ರುಕ್ಮಿಣಿ ಅಮ್ಮನಿಗೆ ತಾ. 31-10-1956ರಲ್ಲು ಬರಕೊಟ್ಟ ಸೆಟ್ಲ್‌ಮೆಂಟ್ ಡೀಡ್, ವಾದಿಗೂ ಅಂತೆಯೇ ನೀವು ಸಾಲ ಕೊಡಲಿಕ್ಕಿದ್ದ ಇತರರಿಗೂ ಮೋಸ ಮಾಡುವ ಉದ್ದೇಶದಿಂದ ಮಾಡಿದಾಗಿರ್ವದ್ರಿಂದ ಅದು ನೀವು ಸಾಲ ಕೊಡಲಿಕ್ಕಿರುವವರಿಗೆ ಭಾದಿಸತಕ್ಕದ್ದಲ್ಲವೆಂತ ವಗೈರೆ ನಿವೃತ್ತಿಗಳನ್ನು ಕಾಣಿಸಿ, ನಿಮ್ಮನ್ನು 2ನೇ ಪ್ರತಿವಾದಿಯಾಗಿ ದಾಖಲ್ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 24-7-1959ಕ್ಕೆ ಸದರೀ ಕೋರ್ಟಿನಲ್ಲಿ ಮುಂದಿರಿಸಲ್ಪಟ್ಟಿದೆ. ಆ ದಿನ ಹಗಲು ಗಂಟೆ11ಕ್ಕೆ ನೀವು ಖುದ್ದಾಗಿ ಯಾ ಕ್ರಮವಾಗಿ ಅಧಿಕಾರ ಹೊಂದಿದ ಪ್ಲೀಡರ್ ಮೂಲಕವಾಗಿಯಾಗ್ಲೀ ಸದ್ರಿ ಕೋರ್ಟು ಮುಂದೆ ಹಾಜರಾಗಿ ಉದಪಡಿಸದಿದ್ರೆ ನಿಮ್ಮ ಗೈರ ಹಾಜರಿಯೇ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು. ತಿಳಿದಿರತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

D. Mohan Rao,
ವಾದಿಪರ ಎಡ್ವಕೇಟ್.

ಮಂಗಳೂರು, 4-7-1959.

1960ನೇ ವರ್ಷದ E. S. L. C.
ಕನ್ನಡ ಪದ್ಯದ ಟಿಪ್ಪಣಿ
ಅಚ್ಚಿನಲ್ಲಿದೆ ಬೇಗನೇ ಪ್ರಕಟವಾಗುವುದು
ಬೆಲೆ: 0—14—0
ಸಾಮಾಜಿಕ ಅಧ್ಯಯನ ಕೈಪಿಡಿ
(V ಮತ್ತು VI ಫೋರ್ಮುಗಳಿಗೆ ಉಪಯುಕ್ತವಿದೆ)
ಬೆಲೆ: ಎರಡು ರೂಪಾಯಿಗಳು
ಅಪೇಕ್ಷಕರು ಪತ್ರ ವ್ಯವಹಾರ ನಡೆಸುವುದು
ಡಿ. ವಿ. ಹೊಳ್ಳ, ಪ್ರಕಾಶಕ, ಕುಂದಾಪುರ

ಸದ್ದು ಮಾಡದ ಬೆಳೆ

"ಬೆಳೆಯುವ ಬೆಳೆ ಸದ್ದು ಮಾಡುವುದಿಲ್ಲ" ಎಂಬುದು ಒಂದು ಜರ್ಮನ್ ಗಾದೆ. ಈ ನಾಣ್ಣುಡಿಯಲ್ಲಿ ಅಡಕವಾಗಿರುವ ವೈಜ್ಞಾನಿಕ ಸತ್ಯವು ನಮ್ಮ ಕೃಷಿಕರಿಗೆ ಮಾತ್ರವಲ್ಲದೆ ಚಿಕ್ಕ ಉಳಿತಾಯಗಾರರಿಗೂ ಚಿರಪರಿಚಿತವಾಗಿದೆ. "ಪಿಗ್ಮಿ" ಠೇವಣಾತಿಯು ಸದ್ದಿಲ್ಲದೆ ಬೆಳೆಯುತ್ತಿದೆ. ಮತ್ತು ಕಾಲಾವಧಿಯಲ್ಲಿ ಒಳ್ಳೆಯ ಫಲಕೊಡುತ್ತಿದೆ.

ಪಿಗ್ಮಿ ದೈನಿಕ ಉಳಿತಾಯ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಗ್ ಸಿಂಡಿಕೇಟ್, ಲಿಮಿಟೆಡ್.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ
ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ.

ವರುಷ ೩೮. ವಾರ ೪೪. 16-7-1959 Vol. 38. No. 44.

ವಿಚಾರ ಮಥನ

ಕೇರಳದ ಆಂದೋಲನ

* *

ಶಸ್ತ್ರಾಸ್ತ್ರಗಳ ಪೂರೈಕೆ

* *

ಮುಂಗಾರು ಮಳೆಯ ಪ್ರಕೋಪ

* *

ಕೇರಳದ ಆಂದೋಲನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿರುವ ಕಾಂಗ್ರೆಸ್ಸು ಕೇರಳ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಶಂಕರನರ ಮೂಲಕ ರಾಷ್ಟ್ರಪತಿಯವರಿಗೆ ಕೇರಳದ ಕಮ್ಯೂನಿಸ್ಟ್ ಸರಕಾರದ ವಿರುದ್ಧವಾಗಿ ಮನವಿಯೊಂದನ್ನು ಸಮರ್ಪಿಸಿ, ಕೇರಳದಲ್ಲಿನ ಅರಕ್ಷಿತತೆಯನ್ನು ಕೂಲಂಕಷವಾಗಿ ವಿವರಿಸಿ, ಅಲ್ಲಿ ಮರುಚುನಾವಣೆಯನ್ನು ನಡೆಸುವುದಕ್ಕಾಗಿ ತ್ವರಿತದಲ್ಲಿಯೇ ಅಧ್ಯಕ್ಷರ ಆಳ್ವಿಕೆಯನ್ನು ಘೋಷಿಸಬೇಕೆಂದು ಪ್ರಾರ್ಥಿಸಿಕೊಂಡರು. ರಾಷ್ಟ್ರಾಧ್ಯಕ್ಷರಾದರೂ ಈ ಮನವಿಯನ್ನು ಅಭ್ಯಸಿಸಿ ಅದಕ್ಕೆ ತನ್ನ ಅಭಿಪ್ರಾಯವನ್ನು ನಮೂದಿಸಿ ಕೇಂದ್ರ ಗೃಹಮಂತ್ರಿ ಶಾಖೆಗೆ ಕೊಟ್ಟಿರುವರೆಂದೂ ತಿಳಿದು ಬಂದಿದೆ. ಆದರೆ, ಮಾನ್ಯ ರಾಷ್ಟ್ರಪತಿಗಳವರು ತಮ್ಮ ಅಭಿಮತದಲ್ಲಿ ಬರೆದಿರುವ ವಿಷಯವೇನು ಎಂಬುದು ಮಾತ್ರ ಇನ್ನೂ ಖಚಿತವಾಗಿ ತಿಳಿದು ಬಂದಿರುವುದಿಲ್ಲ. ಆದರೂ, ಅವರು ಪ್ರಧಾನಿ ನೆಹರೂ ಅವರಿಗೆ ಒಂದು ಉದ್ದವಾದ ಪತ್ರವನ್ನು ಬರೆದಿದ್ದು, ಅದರಲ್ಲಿ ಕೇರಳ ಸರಕಾರದ ಕಂಟಕಾಕೀರ್ಣ ಪರಿಸ್ಥಿತಿಯ ಬಗ್ಗೆ ತನ್ನ ವ್ಯಕ್ತಿಗತ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಈ ಪತ್ರವನ್ನು ಬರೆಯುವುದಕ್ಕೆ ಮೊದಲು ಅವರು ಕೇರಳದ ಮುಖ್ಯಮಂತ್ರಿ ಶ್ರೀ ನಂಬೂದರಿ ಪಾದರಿಗೂ ಭೆಟ್ಟಿಯಿತ್ತಿರುವರು. ಡಾ। ಪ್ರಸಾದರು ಸಾಂವಿಧಾನಿಕ ಸ್ಥಿತಿಯನ್ನು ಉಲ್ಲೇಖಿಸುತ್ತ ಕೇರಳದ ಸಮಸ್ಯೆಯನ್ನು ದೂರಮಾಡುವುದಕ್ಕೆ ಕಠೋರ ಉಪಾಯವನ್ನು ಕೈಗೊಳ್ಳದಿರಲು ಸೂಚಿಸಲಾಗಿದೆ ಎಂದು ಊಹಿಸಲಾಗಿದೆ.

ಶಾಂತಿಪೂರ್ಣ ವಿಧಾನಗಳಿಂದ ಮೈತ್ರಿಯುಕ್ತ ಸಮಾಧಾನವಾಗುವಂತೆ ನೋಡಬೇಕು; ರಾಜ್ಯದಲ್ಲಿ ವಿರೋಧಾಭಿಪ್ರಾಯಗಳೊಡನೆ ಸಹ ಅಸ್ತಿತ್ವದಲ್ಲಿರುವಂತಾಗಬೇಕು. ವಿವಾದಾಸ್ಪದ ಕಾನೂನು ಮತ್ತು ಆಡಳಿತ ಪ್ರಣಾಳಿಗಳಿಂದ ವ್ಯಾಪಕ ಸಂದೇಹ ಮತ್ತು ಅವಿಶ್ವಾಸವನ್ನು ಹರಡಿಸಿರುವ ನಂಬೂದರಿಪಾದ ಸರಕಾರವು ಇವನ್ನು ದೂರಮಾಡಲು ಸಮರ್ಥವಲ್ಲ ಎಂದು ಹೇಳುವುದು ಸರಿಯಲ್ಲ. ಪ್ರಧಾನ ಮಂತ್ರಿಯವರು ಈ ಮೊದಲೇ ಇತ್ತ ಸಲಹೆಯಂತೆ ಶಿಕ್ಷಣ ಕಾಯದೆಯ ವಿವಾದಾಸ್ಪದ ಅನುಚ್ಛೇದಗಳನ್ನು ಸ್ಥಗಿತಗೊಳಿಸಿ, ವಿರೋಧಿಗಳೊಡನೆ ಸೇರಿಕೊಂಡು ವಿಚಾರ ವಿನಿಮಯ ಮಾಡುವುದು ಅವಶ್ಯ. ಇದರಿಂದ ಅವಿಶ್ವಾಸವು ದೂರವಾಗಬಹುದು ಎಂದವರು ಹೇಳಿರಬಹುದು.

ಕೆಲವು ಉಚ್ಚ ಪೋಲೀಸ್ ಹಾಗೂ ಅನ್ಯ ಅಧಿಕಾರಿಗಳ ಪಕ್ಷಪಾತ ಪೂರ್ಣ ಪ್ರವೃತ್ತಿಯಿಂದಾಗಿ ಕಮ್ಯುನಿಸ್ಟೇತರ ಜನತೆಯಲ್ಲಿ ಅಸುರಕ್ಷತೆಯ ಭಾವನೆಯು ಹರಡಿದೆ. ಈ ನಾಗರಿಕ ಮತ್ತು ಪೋಲೀಸು ಅಧಿಕಾರಿಗಳ ಸ್ಥಾನಗಳಲ್ಲಿ ರಾಜ್ಯದ ಹೊರಗಿನ ಪೋಲೀಸು ಅಧಿಕಾರಿಗಳನ್ನಿಟ್ಟರೆ, ವಿರೋಧಿಗಳೊಡನೆ ಸಖ್ಯವಾಗಬಹುದೆಂದು ಹೇಳಲಾಗಿದೆ.

ಕೇರಳದ ಮುಖ್ಯ ಮಂತ್ರಿ ಶಂಕರನ್ ನಂಬೂದರಿಪಾದರು ರಾಷ್ಟ್ರಪತಿ ಪ್ರಧಾನಿ ಮೊದಲಾದವರನ್ನು ಭೇಟಿಯಾಗಿ ಕೇರಳದ ಪರಿಸ್ಥಿಯ ಬಗ್ಗೆ ಮಾತಾಡಿಕೊಂಡರು. ಈ ಭೇಟಿಯ ಮುಖ್ಯ ವಿಚಾರಗಳು ಏನೆಂದು ಬಹಿರಂಗವಾಗಿಲ್ಲ. ಪ್ರಧಾನಿ ನೆಹರೂ ಹಿಂದಿನಂತೆಯೇ ಈ ಬಾರಿಯೂ ಶ್ರೀ ನಂಬೂದರಿಪಾದರಿಗೆ ಸಮಸ್ಯೆಯನ್ನು ಸೌಹಾರ್ದಮಯವಾಗಿ ದೂರವಾಗಿರಿಸುವ ಸಲುವಾಗಿ ಇನ್ನೂ ಕೆಲವಾರು ಸಲಹೆಗಳನ್ನಿತ್ತು ಪರಿಸ್ಥಿತಿಯನ್ನು ಸಮಾಧಾನಪೂರ್ವಕವಾಗಿ ಸುಧಾರಿಸುವ ಆವಶ್ಯಕತೆಯನ್ನು ಪ್ರತಿಬಿಂಬಿಸಿರುವರೆಂದು ಗೊತ್ತಾಗಿದೆ ಪ್ರಧಾನಿಯವರ ಸಲಹೆಯನ್ನು ಮುಖ್ಯ ಮಂತ್ರಿಯವರು ಒಪ್ಪಿಕೊಂಡಿರುವರೆಂದೂ ಹೇಳಲಾಗಿದೆ.

ಪ್ರಜಾ ಸಮಾಜವಾದಿ ಪಕ್ಷದ ನಾಯಕರಾದ ಶ್ರೀ ಪಟ್ಟಂಥಾನು ಪಿಳ್ಳೆಯವರು ಕಮ್ಯುನಿಸ್ಟರೊಡನೆ ಮಾತುಕತೆಯಾಡುವುದು ವ್ಯರ್ಥವೆಂದೂ ಅದುದರಿಂದ ಕಮ್ಯುನಿಸ್ಟ ಸರಕಾರದೊಡನೆ ಯಾವುದೇ ಸಮಾಧಾನವಾಗುವುದಿಲ್ಲವೆಂದೂ ಹೇಳಿದ್ದಾರೆ. ಮಾತುಕತೆಯನ್ನು ಕುರಿತಾಗಿ, ಅವರು, ಕೇರಳ ಸರಕಾರದೊಡನೆ ಮಾತುಕತೆಯಾಡುವುದು ಕೊಲೆಗಡುಕರು ಮತ್ತು ಕಳ್ಳರೊಡನೆ ಮಾತಾಡಿದಂತೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಕಮ್ಯುನಿಸ್ಟ ಮಂತ್ರಿಮಂಡಲಿಯನ್ನು ಪದಚ್ಯುತಗೊಳಿಸುವುದಕ್ಕಾಗಿಯೇ ವಿರೋಧಿಗಳು ಆಂದೋಲನವನ್ನು ಕೈಕೊಂಡಿದ್ದಾರೆ. ದುರಾಡಳಿತೆ, ಆತಂಕವಾದ, ಸಂವಿಧಾನಕ್ಕನುಸಾರವಾಗಿ ಕಾರ್ಯವೆಸಗುವುದರಲ್ಲಿ ಮಂತ್ರಿಮಂಡಳದ ಅಸಫಲತೆ, ನಾಗರಿಕರ ಅಧಿಕಾರಗಳ ಸಂಬಂಧದಲ್ಲಿ ಕಮ್ಯುನಿಸ್ಟ್ ಮತ್ತು ಕಮ್ಯುನಿಸ್ಟೇತರರ ನಡುವೆ ಭೇದಭಾವ; ಪೋಲೀಸರ ಪಕ್ಷಪಾತ ಧೋರಣೆ, ಕಮ್ಯುನಿಸ್ಟರನ್ನೂ ಕಮ್ಯುನಿಸ್ಟ್ ಪಕ್ಷವನ್ನೂ ಸುಭದ್ರಗೊಳಿಸಲು ಸಾರ್ವಜನಿಕ ಹಣದ ದುರುಪಯೋಗ, ಮತ್ತಿತರ ದುರಾಡಳಿತೆಯ ಪರಿಣಾಮಗಳೇ ನಮ್ಮ ಈ ಆಂದೋಲನಕ್ಕೆ ನೆಗವಾಗಿವೆ. ಇವುಗಳ ಮೇಲೆ ಸಮಾಧಾನವಾಗುವುದಾದರೂ ಹೇಗೆ, ಎಂದು ಶ್ರೀ ಪಿಳ್ಳೆ ಕೇಳಿದರು.

ಕೇರಳದ ಬಗ್ಗೆ ರಾಷ್ಟ್ರಾಧ್ಯಕ್ಷರ ಮತ್ತು ಪ್ರಧಾನಿಯವರ ಸ್ಪಷ್ಟಾಭಿಪ್ರಾಯ

(೫ನೇ ಪುಟ ನೋಡಿರಿ)



ವಾಶಿಂಗಟನ್ನಿನಲ್ಲಿ ೧೩೧ ಎಕ್ರೆ ವಿಸ್ತಾರದಲ್ಲಿರುವ ರಾಜಧಾನಿ ಕಟ್ಟಡ.

ದಿ ವಿಜಯ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:–
ಮಂಗಳೂರು—3. ಸ್ಥಾಪನೆ:– 1931.

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು, ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ...ಇತ್ಯಾದಿ ...

ಕಥಾ ವಿಹಾರ

ಪದವಿರಾಜಿತೆ ರಾಣಿ ಪದಚ್ಯುತೆಯಾದಳು!

ಗೋದಾವರಿಯು ಸವತಿಯನ್ನು ತಂದುಕೊಂಡು, ತನ್ನ ಕಾಲಿಗೆ ತಾನೇ ಕೊಡಲಿಯಿಕ್ಕಿಕೊಂಡಳು.

ಪಂಡಿತ ದೇವದತ್ತರ ವಿವಾಹವಾಗಿ ಬಹುದಿನಗಳು ಕಳೆದರೂ ಅವರಿಗೆ ಸಂತಾನ ಭಾಗ್ಯಮಾತ್ರ ಲಭಿಸಲಿಲ್ಲ. ಅವರ ತಾಯ್ತಂದೆಯರು ಜೀವಂತರಾಗಿರುವವರೆಗೆ ದ್ವಿತೀಯ ವಿವಾಹವಾಗಲು ಮಗನನ್ನು ಒತ್ತಾಯಿಸುತ್ತ ಇದ್ದರೂ ಪಂಡಿತರು ಮಾತ್ರ ಆ ಸೂಚನೆಯನ್ನು ಒಪ್ಪಿಕೊಳ್ಳಲಿಲ್ಲ. ಅವರಿಗೆ ತಮ್ಮ ಪತ್ನಿ ಗೋದಾವರಿಯ ಮೇಲೆ ಅಚಲ ಪ್ರೇಮವಿತ್ತು. ಮಕ್ಕಳಾಗಲಿಲ್ಲವೆಂಬ ಒಂದೇ ಕಾರಣದಿಂದ ಅವರು ಈಗ ಕುಟುಂಬದಲ್ಲಿದ್ದ ಸುಖವನ್ನು ಕಳೆದುಕೊಳ್ಳಲು ಬಯಸಲಿಲ್ಲ. ಅಲ್ಲದೇ ಅವರು ತುಸು ನವೀನ ವಿಚಾರದ ಮನುಷ್ಯರೂ ಆಗಿದ್ದರು. "ಮಕ್ಕಳು ಹುಟ್ಟುವುದರಿಂದ ತಾಯ್ತಂದೆಯರ ಹೊಣೆಗಾರಿಕೆ ಬೆಳೆಯುತ್ತದೆ. ತನ್ನ ಮಕ್ಕಳನ್ನು ಯೋಗ್ಯರೀತಿಯಲ್ಲಿ ಪಾಲಿಸಿ ಬೆಳೆಸಲು ಮತ್ತು ಅವರಿಗೆ ವಿದ್ಯಾಭ್ಯಾಸವನ್ನು ಒದಗಿಸಲು ಶಕ್ತಿ ಬರುವವರೆಗೆ ದೇಶಕ್ಕೂ ಜಾತಿಗೂ ತನಗೂ ಯಾವ ಕಲ್ಯಾಣವೂ ಆಗಲಾರದು ಎನ್ನುತ್ತಿದ್ದರವರು. ಆದರೂ ಆಗಾಗ ಮಕ್ಕಳು ನಗುನಗುತ್ತಾ ಆಡುವುದನ್ನು ಕಂಡು ಅವರ ಹೃದಯಕ್ಕೆ ಆಘಾತವಾಗುತಿತ್ತು, ಅವರೂ ತನ್ನ ಸಹಸ್ರ ದೇಶ ವಾಸಿಗಳಂತೆ ಶಾರೀರಿಕವ್ಯಾಧಿಗ್ರಸ್ತರಾದರು. ಈಗ ಅವರಿಗೆ ಕಥೆ ಕಾದಂಬರಿಗಳಿಗಿಂತ ಧಾರ್ಮಿಕ ಗ್ರಂಥಗಳಲ್ಲಿ ಅಧಿಕ ಮನೋರಂಜನೆ ದೊರೆಯುತಿತ್ತು. ಅಲ್ಲದೇ 'ಸಂತಾನ'ದ ಸ್ಮರಣೆ ಮೂಡುವುದೆಂದರೇನೇ ಅವರು ನಡುಗುತಿದ್ದರು

ಆದರೆ, ಗೋದಾವರಿಯು ಇಷ್ಟು ಶೀಘ್ರದಲ್ಲಿಯೇ ನಿರಾಶಳಾಗುವವಳಲ್ಲ. ದೇವರು, ದಿಂಡರು, ಭೂತ—ಪಿಶಾಚಿಗಳಿಗೆಲ್ಲ ಹರಕೆಹೊತ್ತಳು; ಯಂತ್ರತಂತ್ರಗಳಿಗೆ ಶರಣುಹೋದಳು. ಆದರೆ, ತನ್ನ ಯಾವ ಔಷಧಿಯೂ ಪ್ರಯೋಜನಕ್ಕೆ ಬಾರದಿರಲು ಕಾಯಕಲ್ಪಕ್ಕೆ ಸಮಾನವಾದ ಒಂದು ಮಹಾಔಷಧಿಯನ್ನೇ ಆಕೆ ಚಿಂತಿಸತೊಡಗಿದಳು. ಆಕೆ ತಿಂಗಳುಗಟ್ಟಲೆ, ವರ್ಷಗಟ್ಟಲೆ ಇದೇ ಚಿಂತಾಸಾಗರದಲ್ಲಿ ಮುಳುಗೇಳುತಿದ್ದಳು. ಆಕೆ ತನ್ನ ಹೃದಯವನ್ನು ಸಮಾಧಾನ ಪಡಿಸಿದಳು, ಆದರೆ, ಮನಸ್ಸಿನಲ್ಲಿ ಬಚ್ಚಿಡಿಸಿದ್ದ ವಿಷಯ ಪ್ರಕಟವಾಗಲಿಲ್ಲ. ಆಕೆ ದೊಡ್ಡ ಆತ್ಮತ್ಯಾಗ ಮಾಡಬೇಕಾಗುವುದು. ಪ್ರಾಯಃ ಪತಿಪ್ರೇಮದಂತಹ ಅನರ್ಘ್ಯ ರತ್ನವೂ ಕೈಜಾರಿಹೋಗಬಹುದು; ಆದರೆ ಹಾಗಾಗುವುದೆ? ಹದಿನೈದು ವರ್ಷ ನಿರಂತರ ತಾನು ಸೇವಿಸಿಕೊಂಡುಬಂದ ಪ್ರೇಮವೃಕ್ಷವು ಗಾಳಿಯ ಒಂದು ಕಂಪನವನ್ನೂ ಸಹಿಸಲಾರದೆ?

ಕೊನೆಗೆ, ತನ್ನ ಪ್ರಬಲ ವಿಚಾರಗಳ ಮುಂದೆ ತಲೆಯನ್ನು ಗೋದಾವರಿ ತಗ್ಗಿಸಲೇ ಬೇಕಾಯಿತು. ಈಗ ಸವತಿಯನ್ನು ಸ್ವಾಗತಿಸಲು ಕಂಕಣ ಬದ್ಧಳಾದಳು.

೨

ಪಂಡಿತದೇವದತ್ತರು ಗೋದಾವರಿಯ ಈ ಸೂಚನೆಯನ್ನು ಕೇಳಿ, ಈಕೆ ತನ್ನ ಪ್ರೇಮ ಪರೀಕ್ಷೆ ಮಾಡುತ್ತಿರುವಳೇ ಅಥವಾ ತನ್ನ ಮನೋಭಿಪ್ರಾಯ ತಿಳಿಯ ಬಯಸುವಳೇ ಎಂದು ಸಂದೇಹ ಹುಟ್ಟಿ, ನಕ್ಕು ಬಿಟ್ಟು ಮಾತನ್ನು ಹಾರಿಸಿ ಬಿಟ್ಟರು ಆದರೆ, "ನೀವು ನಕ್ಕು ಮಾತುಹಾರಿಸಬೇಡಿ. ಮಗುವಿನ ಮುಖನೋಡುವ ಆತುರದಿಂದ ಸವತಿಯನ್ನೂ ತರಲು ನಾನು ಸಿದ್ಧಳಿದ್ದೇನೆ' ಎಂದು ಗಂಭೀರಭಾವದಿಂದ ಅಂದಾಗ ಅವರ ಸಂಶಯ ದೂರವಾಗುತ್ತಾ ಬಂತು. ಇಷ್ಟೊಂದು ಉನ್ನತ ಮತ್ತು ಪವಿತ್ರ ಭಾವದಿಂದಕೂಡಿದ್ದ ಗೋದಾವರಿಯನ್ನವರು ಅಪ್ಪಿ ಮುದ್ದಿಟ್ಟರು. ಅವರು ಮಾತ್ರ ಹೇಳಿದರು—"ಈ ಕೆಲಸ ನನ್ನಿಂದಾಗದು; ನನಗೆ ಮಕ್ಕಳ ಅಭಿಲಾಷೆಯಿಲ್ಲ.

ಗೋದಾವರಿ ಗದರಿಸುತ್ತ ಎಂದಳು — "ನಿಮಗಿಲ್ಲದಿರಬಹುದು; ಆದರೆ, ನನಗೆ? ನಿಮ್ಮ ಅಪೇಕ್ಷೆಯಂತಲ್ಲವಾದರೆ, ನನ್ನ ಬಯಕೆಯ ಪೂರೆಗಾದರೂ ಈ ಕೆಲಸ ಆಗಲೇ ಬೇಕು."

ಪಂಡಿತರು ಸರಳ ಸ್ವಭಾವದ ಮನುಷ್ಯರು. ಪದೇ ಪದೇ ಕೇಳಿದ ನಂತರ ಕೊನೆಗೆ ಅವಶ್ಯ ಒಪ್ಪಿಗೆಯಿತ್ತರು. ಈ ದಿಸೆಯಲ್ಲಿ ಅವರದೇ ತಡವಾಗಿತ್ತು. ಪಂಡಿತರು ಎಳಷ್ಟೂ ಪರಿಶ್ರಮ ಪಡಬೇಕಾಗಿ ಬರಲಿಲ್ಲ. ಗೋದಾವರಿಯ ಕಾರ್ಯಕುಶಲತೆಯಿಂದ ಎಲ್ಲಕಾರ್ಯಗಳೂ ಅವರಿಗೆ ಸುಲಭವಾದುವು. ಆಕೆ ತನ್ನಲ್ಲಿದ್ದ ಹಣವನ್ನು ಮಾತ್ರವಲ್ಲ, ಆಭರಣ ವಸ್ತ್ರಾದಿಗಳನ್ನು ಅರ್ಪಿಸಿಬಿಟ್ಟಳು. ಲೋಕ ನಿಂದೆ ಮಾತ್ರ ಈ ಮಾರ್ಗದಲ್ಲಿ ಹರಡಿದ್ದ ದೊಡ್ಡ ಮುಳ್ಳಾಗಿತ್ತು. ದೇವದತ್ತರು ತಾನು ಬಾಸಿಂಗ ಕಟ್ಟಿಕೊಂಡು ಹೋಗುವಾಗ ಜನರೇನೆಂದಾರು ಎಂದು ಚಿಂತಿಸತೊಡಗಿದರು. ತನ್ನ ಆಫೀಸಿನ ಮಿತ್ರರು ಕಂಡು ನಕ್ಕುಬಿಟ್ಟಾರು; ತೀಕ್ಷ್ಣ ಓರೆ ನೋಟದಿಂದ ನೋಡಿಯಾರು. ಅವರ ಈ ದೃಷ್ಟಿಯು ಚೂರಿಯ ಅಲಗಿಗಿಂತಲೂ ಹರಿತವಾದುದು. ಈ ಸಂದರ್ಭದಲ್ಲಿ ಅವರಾದರೂ ಏನು ಮಾಡಬಲ್ಲರು.

ಗೋದಾವರಿ ತನ್ನ ಗತ್ರಮಕ್ಕೆ ತೆರಳಿ ಕಾರ್ಯ ಮುಂದುವರಿಸಿದಳು; ಕ್ರಮೇಣ ನಿರ್ವಿಘ್ನವಾಗಿ ಕೊನೆಗೊಳಿಸಿಯೂ ಬಿಟ್ಟಳು. ನೂತನ ವಧು ಗೃಹಕ್ಕಾಗಮಿಸಿದಳು. ತನ್ನ ಮಗಳಿಗೆ ವಿವಾಹ ಮಾಡಿದಂತಹ ಸಂತೋಷ ಗೋದಾವರಿಗಾಗ ಆಗಿತ್ತು. ಆಕೆ ಚೆನ್ನಾಗಿ ಹಾಡುತ್ತ ನಲಿಯುತ್ತ ಇದ್ದಳು. ಈ ಹಾಡಿಗೆ ಬದಲು ಶೀಘ್ರದಲ್ಲಿ ಅಳಬೇಕಾದೀತೆಂದು ಪಾಪ ಆಕೆಗೇನು ತಾನೇ ಗೊತ್ತು?

೩

ಕೆಲವಾರು ತಿಂಗಳುಗಳು ಗತಿಸಿದವು. ತನ್ನ ಸವತಿಯನ್ನು ತಾನು ಅತ್ತೆ ಎಂದು ತಿಳಿದು ಆಕೆ ಶಾಸನಿಸುತಿದ್ದಳು. ಆದರೆ, ತಾನು ಆಕೆಯ ಅತ್ತೆ ಅಲ್ಲ ಎಂಬಮಾತನ್ನು ಮಾತ್ರ ಆಕೆ ಎಂದೂ ಮರೆಯುತಿದ್ದಿಲ್ಲ. ಇತ್ತ ಗೋಮತಿಗೂ ತನ್ನ ಸ್ಥಿತಿಗತಿಯೆಲ್ಲಾ ತಿಳಿಯುತ್ತಬಂತು. ಆದುದರಿಂದಲೇ ಅತ್ತೆಯ ಶಾಸನದಂತೆ ಕಠೋರವಿರದಿದ್ದರೂ ಅದು ಅಪ್ರಿಯವಾಗುತ್ತಾ ಬಂತು. ತನ್ನ ಚಿಕ್ಕ ಪುಟ್ಟ ಅವಶ್ಯಕತೆಗಳಿಗೂ ಗೋದಾವರಿಯೊಡನೆ ಕೇಳಲು ಆಕೆಗೆ ಸಂಕೋಚವೆನಿಸುತಿತ್ತು.

ಕೆಲವು ದಿನಗಳ ನಂತರ ಗೋದಾವರಿಯ ಸ್ವಭಾವದಲ್ಲಿ ಒಂದು ವಿಶೇಷ ಪರಿವರ್ತನೆಯಾದುದು ದೃಷ್ಟಿಗೋಚರವಾಯಿತು. ಪಂಡಿತರು ಮನೆಗೆ ಬರುವುದನ್ನೂ ಹೋಗುವುದನ್ನೂ ಆಕೆ ತೀವ್ರದೃಷ್ಟಿಯಿಂದ ನೋಡತೊಡಗಿದಳು. ಆಕೆಯ ಸ್ವಾಭಾವಿಕ ಗಾಂಭೀರ್ಯವೆಲ್ಲ ಲೋಪವಾದಂತೆ ಕಾಣಿಸಿತು, ಸಾಮಾನ್ಯ ತರದ ಮಾತೂ ಆಕೆಗೆ ಜೀರ್ಣಕಾರಿಯೆನಿಸುವುದು ಕಷ್ಟವಾಯಿತು. ಪಂಡಿತರು ಮನೆಗೆ ಆಫೀಸಿನಿಂದ ಮರಳಿದ ಮೇಲೆ ಅವರ ಸನಿಹ ಕುಂಡಿಸಿ ತಾಸು ಗಟ್ಟಲೆ ಗೋಮತಿಯ ವಿಚಾರವಾಗಿ ಏನಾದರೂ ಹೇಳುತ್ತಿರುತ್ತಾಳೆ. ಈ ಮಾತುಗಳಲ್ಲಿ ಹಲವಾರು ಕ್ಷುಲ್ಲಕ ವಿಷಯಗಳೂ ಸೇರಿಕೊಳ್ಳುತಿದ್ದುವು; ಎಂತಲೇ ಈ "ಪುರಾಣ" ಮುಗಿದೊಡನೆಯೇ ಪಂಡಿತರ ತಲೆ ಸ್ವಲ್ಪ ಹಗುರವೆನಿಸುತಿತ್ತು. ಗೋದಾವರಿಯು ಇಷ್ಟೊಂದು ಮೃದುಭಾಷಿಣಿಯೇಕಾದಳೆಂದು ಹೇಳುವುದು ಕಠಿನವಾಗಿದೆ. ಪ್ರಾಯಶಃ ಆಕೆಗೆ ಗೋಮತಿಯ ಹೆದರಿಕೆ ಇದ್ದಿರಬಹುದು. ಆಕೆಯ ಸೌಂದರ್ಯ, ಜೀವನ, ಲಜ್ಜಾಯುಕ್ತ ನೇತ್ರಗಳಿಂದ ಗೋದಾವರಿ ಪರಾಭೂತಳಾಗಿರಬೇಕು. ಕಟ್ಟೆಯನ್ನು ಕಡಿದು ಆಕೆ ಪ್ರವಾಹದ ನೀರನ್ನು ತೋಳುಗಳಿಂದ ತಡೆಯಲು ಪ್ರಯತ್ನಿಸುತಿದ್ದಳಾಕೆ.

ಒಂದು ದಿನ ಗೋದಾವರಿಯು ಗೋಮತಿಯೊಡನೆ ಪರಮಾನ್ನ ಮಾಡಲು ಹೇಳಿದಳು. ಪ್ರಾಯಃ ಅಂದು ರಕ್ಷಾಬಂಧನ ದಿನವಾಗಿತ್ತು. ಗೋಮತಿ ಸಕ್ಕರೆ ಇಲ್ಲ ಎಂದು ಹೇಳಿದಳು. ಈ ಮಾತುಗಳನ್ನು ಕೇಳುತ್ತಲೇ ಗೋದಾವರಿಯು ವಿಸ್ಮಿತಳಾದಳು. –ಅಷ್ಟು ಸಕ್ಕರೆ ಇಷ್ಟು ಬೇಗ ಖರ್ಚಾಯಿತೇ? ಎದೆ ಬಡಿದು ದುಡಿಯುವವರ ಸಂಕಷ್ಟ ಕೂತುತಿನ್ನುವವರಿಗೆ ಹೇಗೆ ಗೊತ್ತಾಗಬೇಕು?

ಪಂಡಿತರು ಮನೆಗೆ ಹಿಂತಿರುಗಿದಾಗ, ಇದೇ ವಿಷಯಕ್ಕೆ ಉಪ್ಪುಖಾರ ಹಚ್ಚಿ ಅವರ ಕಿವಿಗೆ ಬೀಳಿಸಿದಳು. ಕೊಂಚ ಹೊತ್ತು ಗೋಮತಿಗೆ ಇದ್ದುದನ್ನೆಲ್ಲಾ ಸುಟ್ಟು ಹಾಕುವ ಭಸ್ಮಕ ರೋಗ ಅಂಟಿಕೊಂಡಿಲ್ಲವಷ್ಟೆ ಎಂಬ ಸಂದೇಹವೂ ಅವರಲ್ಲಿ ಹುಟ್ಟಿತು.

ಇಂತಹುದೇ ಘಟನೆ ಎರಡನೆ ಬಾರಿಯೂ ನಡೆಯಿತು. ಪಂಡಿತರು ಏನೋ ಒಂದು ವ್ರತದಿಂದಿರುವುದರಿಂದ ಕೆಂಪು ಮೆಣಸನ್ನು ತಿನ್ನುತ್ತಿರಲಿಲ್ಲ. ಗೋದಾವರಿ ಅಡುಗೆ ಮಾಡುತ್ತಿರುವಾಗ ಈ ಕೆಂಬೆಣಸನ್ನು ಪಾಕ ಶಾಲೆಗೇನೇ ತರುತ್ತಿರಲಿಲ್ಲ. ಗೋಮತಿಯು ಮಾತ್ರ ಒಂದು ದಿನ ಮಸಾಲೆಯೊಡನೆ ಕೆಂಬೆಣಸನ್ನೂ ಹಾಕಿ ಬಿಟ್ಟಳು. ಪಂಡಿತರು ಪಲ್ಯ ಕಡಿಮೆ ತಿಂದರು. ಆದರೇನು, ಗೋದಾವರಿಯು ಗೋಮತಿಯ ಮೇಲೆ ಹಾಂತಾಡಿದಳು; ವ್ಯಂಗ್ಯವಾಗಿ ಹೇಳಿದಳು–ಇಂತಹ ನಾಲಗೆ ಉರಿದು ಹೋಗಬಾರದೆ? ಧ್ವನಿಯೂ ತೀಕ್ಷ್ಣವಿತ್ತು.

೪

ಪಂಡಿತರು ತೀರ ಸರಳ ವ್ಯಕ್ತಿಗಳು. ಆಫೀಸಿನಿಂದ ಬಂದರು, ಭೋಜನ ಮುಗಿ

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಲೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪ್ರೊಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1920

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತಸೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೪.



ಲಂಕಾಯಾತ್ರೆ

ಶ್ರೀ ಲಂಕೆಯ ರಾಜಧಾನಿ ಕೊಲಂಬೊವಿನಲ್ಲಿ

ಕೊಲಂಬೊ ನಗರದ ಸ್ಥೂಲ ಪರಿಚಯದಿಂದ ಸಿಂಹಳೀಯರ ಸ್ಥಿತಿಗತಿ ದರ್ಶನ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಲೇಖಾಂಕ ೨

ರಾಜಧಾನಿಯಾಗಿರುವ ಕೊಲಂಬೋ ವು ಶ್ರೀ ಲಂಕೆಯ ಅತಿ ಹಿರಿಯ ನಗರವಾಗಿದೆ. ಇಲ್ಲಿನ ಜನಸಂಖ್ಯೆಯು ೫ರಿಂದ ೬ ಲಕ್ಷಗಳಷ್ಟಿದೆ. ಉದ್ಯಾನವನಗಳಿಗೆ ಈ ನಗರ ಸುಪ್ರಸಿದ್ಧವಾಗಿದೆ; ಸುಮಾರು ೩೫ ಚದರ ಮೈಲುಗಳಷ್ಟು ವಿಸ್ತಾರವುಳ್ಳದಾಗಿದೆ. ನಗರದ ದಕ್ಷಿಣದ ಮೂಲೆಯಲ್ಲಿ ರತ್ನಮಾಲಾ ವಿಮಾನ ನಿಲ್ದಾಣವೂ ಉತ್ತರದಲ್ಲಿ ಬಂದರವೂ ಇವೆ.

ಏಶಿಯಾದ ದೊಡ್ಡ ಬಂದರುಗಳಲ್ಲಿ ಕೊಲಂಬೊ ಒಂದಾಗಿದೆ. ಅಮೇರಿಕೆ ಮತ್ತು ಯುರೋಪಗಳಿಂದ ಪೂರ್ವ ಏಶ್ಯಾ ಆಸ್ಟ್ರೇಲಿಯಾ, ನ್ಯೂಜಿಲೇಂಡ್, ಜಪಾನ್, ಮೊದಲಾದೆಡೆಗಳಿಗೆ ಹೋಗುವ ಎಲ್ಲ ಸಮುದ್ರಯಾನಗಳೂ ಇಲ್ಲಿ ತಂಗಿ ಮುಂದುವರಿಯುತ್ತವೆ. ಇದರಿಂದಾಗಿ ನಗರದ ಹಿರಿಯ ಉದ್ದಿಮೆಯು ಯಾತ್ರಿಕರನ್ನು ಸತ್ಕರಿಸುವುದು ಹಾಗೂ ಅವರಿಗೆ ನಾನಾ ಸರಂಜಾಮುಗಳನ್ನು ಮಾರುವುದೇ ಆಗಿದೆ. ಒಂದೊಂದು ದಿನ ೫೦ರಿಂದ ೭೦ರ ವರೆಗೆ ಸಾಗರಯಾನಗಳಲ್ಲಿ ಬರುತ್ತವೆ. ಆದುದರಿಂದ ನಗರದ ಬೀದಿಗಳಲ್ಲಿ ವಿವಿಧ ದೇಶಗಳ ಜನರು ಕಾಣಸಿಗುತ್ತಾರೆ.

ಹಳೆ ಮತ್ತು ಹೊಸ ದಿಲ್ಲಿಯಿರುವಂತೆಯೇ ಕೊಲಂಬೊವೂ ಎರಡು ಭಾಗಗಳುಳ್ಳ ನಗರ. ಹೊಸ ಭಾಗವು ಫೋರ್ಟ್ ಎಂದೂ ಪ್ರಾಚೀನ ಭಾಗವು ಪೇಟೆ ಎಂದೂ ಕರೆಯಲ್ಪಡುತ್ತವೆ. ಫೋರ್ಟ್ ಭಾಗವು ಹಡಗು ತಂಗುವ ಸ್ಥಳಗಳಿಂದ ತುಂಬಿದೆ. ನಗರದ ದೊಡ್ಡ ದೊಡ್ಡ ಅಂಗಡಿಗಳು, ಬೇಂಕುಗಳು, ಅಂಚೆ ಮತ್ತು ತಂತಿ ಕಛೇರಿ, ವಿಮಾನ ಮತ್ತು ಹಡಗು ಕಂಪೆನಿಗಳ ಕಾರ್ಯಾಲಯಗಳು ಹಾಗೂ ಸಂಪತ್ತಿನ ಎರಡೂ ಮನೆಗಳು ಮತ್ತು ಸರಕಾರಿ ಕಾರ್ಯಾಲಯಗಳು ಈ ಕ್ಷೇತ್ರದಲ್ಲಿಯೇ ಇವೆ. ಗವರ್ನರ ಜನರಲ್ಲರ ನಿವಾಸಸ್ಥಾನ "ಕ್ವೀನ್ಸ್ ಹೌಸ್" ಕೂಡ ಇಲ್ಲಿಯೇ ಇದೆ

ಒಬ್ಬ ಭಾರತೀಯನು ಕೊಲಂಬೊ ಎಂಬ ಹೆಸರನ್ನು ಹೇಳದೆ ಅಲ್ಲಿನ ಫೋರ್ಟ್‌ನಲ್ಲಿ ಬಿಟ್ಟರೆ, ಆತ, ನಾನು ಬೊಂಬಾಯಿಯ ಫೋರ್ಟ್‌ನಲ್ಲಿರುವೆನೆಂದು ತಿಳಿಯುತ್ತಾನೆ. ಏಕೆಂದರೆ, ಈ ಎರಡು ಪ್ರದೇಶಗಳಲ್ಲಿರುವ ಕಟ್ಟಡಗಳು ಅಂಗಡಿಗಳು ಮತ್ತು ಆಫೀಸುಗಳು ಇಂತಹ ದಂಗು ಬಡಿಸಿ ಬಿಡುತ್ತವೆ.

ವ್ಯಾಪಾರಿಗಳಲ್ಲಿ ಹೆಚ್ಚಿನವರು ಭಾರತೀಯರು. ಇವರಲ್ಲಿ ಸಿಂಧಿ, ಪಂಜಾಬಿ, ಗುಜರಾತಿ, ಮತ್ತು ತಮಿಳರು ಹೆಚ್ಚು. ಫೋರ್ಟ್ ಕ್ಷೇತ್ರದಲ್ಲಿ ದೊಡ್ಡ ದೊಡ್ಡ ಇಲಾಖೆಯ ಸಂಗ್ರಹಾಲಯಗಳಿವೆ. ಇಲ್ಲಿ ಸೂಜಿಯಿಂದ ಹಿಡಿದು, ಮೋಟಾರು ಕಾರಿನವರೆಗಿನ ಪದಾರ್ಥಗಳೂ ಸಿಗುತ್ತವೆ.

ಶ್ರೀಲಂಕೆಯಲ್ಲಿ ತಮ್ಮದೇ ಆದ ಯಾವ ಉದ್ದಿಮೆಯೂ ಇಲ್ಲದೆ ಇರುವುದರಿಂದ ಮತ್ತು ದೇಶದ ಸಂಪೂರ್ಣ ಅರ್ಥವ್ಯವಸ್ಥೆಯು ಚಾ, ರಬ್ಬರು ಮತ್ತು ತೆಂಗುಗಳ ನಿರ್ಯಾತವನ್ನು ಹೊಂದಿಕೊಂಡಿರುವುದರಿಂದ, ಅವರಿಗೆ ಕಾರಖಾನೆಗಳಲ್ಲಿ ತಯಾರಿಸಲಾದ ಎಲ್ಲ ವಸ್ತುಗಳೂ ವಿದೇಶಗಳಿಂದಲೇ ಬರಬೇಕಾಗಿದೆ. ಪೇಟೆಗಳಲ್ಲಿ ಜಪಾನಿನ ಹತ್ತಿ ಬಟ್ಟೆ, ಚೀನದ ರೇಶ್ಮೆ ಬಟ್ಟೆ, ಜರ್ಮನಿಯ ಯಾಂತ್ರಿಕ ಪದಾರ್ಥಗಳು, ಬ್ರಿಟನಿನ ಸೌಂದರ್ಯ ಸಾಧನ, ಅಮೇರಿಕೆಯ ಔಷಧಿ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೇಂಡಿನ ಹಾಲು ಮತ್ತು ಚಾಕಲೇಟು, ಇಟಲಿಯ ಫಿಯೆಟ್ ಕಾರ್ ಮೊದಲಾದುವು ಅತ್ಯಧಿಕ ಪ್ರಮಾಣದಲ್ಲಿ ದೃಷ್ಟಿಗೋಚರವಾಗುತ್ತವೆ. ಮದ್ರಾಸಿನಲ್ಲಿ ನಿರ್ಮಿತವಾದ ಲುಂಗಿಗಳು ಬನಾರಸ ಮತ್ತು ಬೆಂಗಳೂರುಗಳ ರೇಶ್ಮೆ ಸೀರೆಗಳು ಕೂಡ ಕಂಡು ಬರುತ್ತವೆ.

ಲಂಡನ್ನಿನ ಮುದ್ರಣ ಮತ್ತು ರೇಖಾ ಕಲೆಗಳ ಶಾಲೆಯಲ್ಲಿ ಕೊಲಂಬೋ ಯೋಜನೆಯನ್ವಯ ತರಬೇತಿಯೀಯಲಾಗುತ್ತಿದೆ.

ಕೆಲವು ಮಾಸಗಳಿಗೆ ಮೊದಲು ಎಲ್ಲ ವಿದೇಶೀಯ ವಸ್ತುಗಳೂ ಇಲ್ಲಿ ಅಗ್ಗವಾಗಿದ್ದುವು. ಆದರೆ, ಈಗ ಸರಕಾರವು ಎಲ್ಲ ವಸ್ತುಗಳ ಮೇಲೂ ಹೆಚ್ಚಿನ ಪ್ರಮಾಣದಲ್ಲಿ ಆಯಾತಕರವನ್ನು ಹೇರಿದೆ; ಆದುದರಿಂದ ಬೆಲೆಯೂ ನಾಕಷ್ಟು ಏರಿಕೆಯಲ್ಲಿದೆ ಆದರೂ ವಿದೇಶೀಯ ಪದಾರ್ಥಗಳ ಬೆಲೆಯು ಭಾರತಕ್ಕಿಂತ ನೇಕಡ ೧೦ರಿಂದ ೨೦ರಷ್ಟು ಕೊಲಂಬೊದಲ್ಲಿ ಕಡಿಮೆಯಿದೆ.

ಮೋಟರು ಮತ್ತು ಶರಾಬು ವಿಶೇಷವಾಗಿ ಅಗ್ಗವಾಗಿವೆ ಫಿಯಟ್ ಮೋಟಾರು ಕಾರು ಕೊಲಂಬೊದಲ್ಲಿ ಏಳು ಸಾವಿರ ರೂಪಾಯಿಗಳಿಗೆ ಸಿಗುತ್ತವೆ. ವಿದೇಶೀಯ ಶರಾಬು ಕೊಲಂಬೊವಿನಲ್ಲಿರುವಷ್ಟು ಅಗ್ಗದರದಲ್ಲಿ ಅನ್ಯ ಏಶ್ಯನ್ ನಗರದಲ್ಲಿ ದೊರೆಯಲಾರದು. ಶ್ರೀ ಲಂಕೆಯ ವಾಮಪಕ್ಷೀಯ ಸರಕಾರವು ಜೀವನದ ಆವಶ್ಯಕ ಪದಾರ್ಥಗಳೆಲ್ಲವುಗಳ ಮೇಲೆಯೂ ಮಿತಿ ಮೀರಿದ ಕರವನ್ನು ಹೇರಿರುವುದಾದರೂ ಶರಾಬಿನ ಮೇಲೆ ಅದೇ ಪ್ರಮಾಣದಲ್ಲಿ ಕರ ಹಾಕಿದೆಯೋ ಇಲ್ಲವೋ ತಿಳಿದಿಲ್ಲ.

ಕೊಲಂಬೊ ನಗರದ ಮಹಾ ಸಮಸ್ಯೆಗಳಲ್ಲಿ ಮೋಟಾರು ನಿಲ್ಲಿಸುವುದೂ ಒಂದಾಗಿದೆ. ನಗರದ ನಾಲ್ಕು ಸೈಟ್ಸನಲ್ಲಿ ಮೋಟಾರುಗಳೇ ಕಾಣಸಿಗುತ್ತವೆ ಶ್ರೀ ಲಂಕೆಯಲ್ಲಿ ಪ್ರತಿ ೧೦ ಜನರಿಗೊಂದು ಮೋಟಾರುಕಾರು ಇದೆ ಎಂದು ನನಗೆ ತಿಳಿದು ಬಂತು ತನ್ನ ಗಮನಕ್ಕೆ ಬಂದಿರುವಂತೆ, ವಿಶ್ವದ ಬೇರೆ ಯಾವ ಪಟ್ಟಣದಲ್ಲಿಯೂ ಇಷ್ಟೊಂದು ಮೋಟಾರುಕಾರುಗಳಿರುವುದಿಲ್ಲ.

ಇಷ್ಟೊಂದು ಮೋಟಾರುಗಳಿರುವುದಕ್ಕೆ ಮೂರು ಕಾರಣಗಳನ್ನು ಉಲ್ಲೇಖಿಸಬಹುದು: (ಅ) ಇತರ ಏಶ್ಯನ್ ನಗರಗಳಿಗಿಂತ ಮೋಟಾರುಗಳು ಇಲ್ಲಿ ಅಗ್ಗದರದಲ್ಲಿ ದೊರೆಯುತ್ತವೆ; (ಆ) ವಿಶ್ವದ ಮಾರುಕಟ್ಟೆಯಲ್ಲಿ ಚಾ, ರಬ್ಬರು ಮತ್ತು ತೆಂಗಿನ ಬೆಲೆಯು ಏರಿಕೆಯಲ್ಲಿರುವುದರಿಂದ ಶ್ರೀ ಲಂಕೆಯ ನಿವಾಸಿಗಳ ಆದಾಯವು ಅತ್ಯುತ್ತಮವಾಗಿಯೇ ಇದೆ ಮತ್ತು (ಇ) ಎರಡು ರೂಪಾಯಿ ೪೦ ನಯೇ ಪೈಸೆಗಳಿಗೆ ಒಂದು ಗೆಲನ್ ಪೆಟ್ರೋಲ್ ಸಿಗುತ್ತದೆ.

ಕೊಲಂಬೊ ನಗರದಲ್ಲಿ ವಿದ್ಯುತ್ತಿನ ಟ್ರಾಮುಗಳಾಗಲೀ ಮೋಟರುಗಳಾಗಲೀ ಇಲ್ಲ. ಯಾತಾಯಾತದ ಸಾಮಾನ್ಯ ಮಾಧ್ಯಮ ಮೋಟಾರುಗಳು ಮತ್ತು ಟ್ಯಾಕ್ಸಿಗಳು. ಬಡಜನರಿಗೆ ಬಸ್ಸುಗಳು ಇರುತ್ತವೆ. ಇವಲ್ಲದೇ ಬೇರಾವತರದ ವಾಹನಗಳೂ ಕಂಡುಬರುವುದಿಲ್ಲ. ಸೈಕಲು ಕೂಡಾ ಅಪರೂಪ. ನಗರದಲ್ಲಿ ಮಾರ್ಗ ದುರ್ಘಟನೆಗಳಾಗುವುದು ಇಲ್ಲವೇ ಇಲ್ಲ ಎನ್ನಬಹುದು.

ನಗರದಲ್ಲಿ ಸಿಂಹಲೀಯ ಪುರುಷರು ಲುಂಗಿ ಮತ್ತು ಅಂಗಿಯನ್ನು ಹಾಕಿಕೊಳ್ಳುತ್ತಾರೆ; ಮಹಿಳೆಯರು ಲುಂಗಿ ಮತ್ತು ರವಕೆಗಳನ್ನು ತೊಡುತ್ತಾರೆ. ಆದರೆ, ಹೋಟೆಲು, ಆಫೀಸು ಮತ್ತು ಫೋರ್ಟ್ ಕ್ಷೇತ್ರಗಳ ಪೇಟೆಗಳಲ್ಲಿ ಪೇಂಟ್, ಅಂಗಿ ಅಥವಾ ಬುಶ್‌ಶರ್ಟ್ (ಗಿಡ್ಡಂಗಿ) ಧರಿಸಿದ ಪುರುಷರೂ ಸೀರೆಗಳನ್ನು ತೊಟ್ಟ ಸ್ತ್ರೀಯರೂ ನೋಡ ಸಿಗುತ್ತಾರೆ. ಕೊಲಂಬೊವಿನಲ್ಲಿ ಕ್ರೈಸ್ತರ ಸಂಖ್ಯೆಯೂ ಪರ್ಯಾಪ್ತವಿರುವುದರಿಂದ ಸ್ಕರ್ಟ್ ಧರಿಸಿದ ಮಹಿಳೆಯರ ಸಂಖ್ಯೆಯೂ ಯೂ ಕಡಿಮೆಯಲ್ಲ.

ಶ್ರೀಲಂಕೆಯ ಜನರಲ್ಲಿ ೭೦ ಪ್ರತಿಶತದಷ್ಟು ಸಿಂಹಳೀ ಭಾಷೆಯನ್ನೇ ಆಡುತ್ತಾರೆ. ಉಳಿದ ನೇಕಡ ೩೦ರಷ್ಟು ತಮಿಳನ್ನು ಬರೆಯುತ್ತಾರೆ, ಆಡುತ್ತಾರೆ. ಇಲ್ಲಿನ ಜನರಲ್ಲಿ ನೇಕಡಾ ೮೦ರಷ್ಟು ಸುಶಿಕ್ಷಿತರೆಂದು ತಿಳಿದು ನಾನು ವಿಸ್ಮಿತನಾದೆ. ಶಿಕ್ಷಣ ಕ್ಷೇತ್ರದ ಈ ಸಾಧನೆಯು ಆಂಗ್ಲೇಯರ ಆಡಳಿತಾವಧಿಯಲ್ಲೂ ಇದ್ದುದರಿಂದ, ಗ್ರಾಮೀಣ ಜನತೆಯೂ ಇಂಗ್ಲಿಷ್ ಭಾಷೆಯನ್ನು ಅರ್ಥಮಾಡಿಕೊಳ್ಳಬಲ್ಲುದು; ಆವಶ್ಯವಿದ್ದಲ್ಲಿಯೇ ಮಾತಾಡಬಲ್ಲುದು.

(೧೦ನೇ ಪುಟ ನೋಡಿರಿ)

NOTICE

In the Court of the Subordinate Judge of South Kanara

R. E. P. No. 23/1958

O. S No 218/1950

Between,

Dhanakeerthi and others— Petitioners

and

Padmavathi as Ejamanthi of her branch family and others— Respondents.

To

R 2 Tangamma lias Sachidevi } Children of Padmavathi
R 4 Udaya Varma }
R 5 Gulabi—wife of Nellikaru Mittasenava
R 6 Shiva Devi alias Susheela— minor by guardian 4th respondent.
R 2 residing at Mudabidri Kasba, Karkal Taluk.
R 4 C/o Sri A. N. S. Achar, Advocate, Mangalore.
R 5 residing at Danasale Pete, Karkal Kasba.

Please take notice that the petitioners have filed the above execution petition against you for recovery of the decree amount in O. S. No. 218/50 and the said petition now stands posted to 21—7—1959 for hearing. Should you fail to appear on that day before this Court at 11 A. M. either in person or through a lawyer, the case will be heard in your absence.

By Order

G. Somashekar Rao,

Advocate for Petitioners.

Mangalore, 7-7-1959.

ಸ್ಥಾಪನೆ. 1906] ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ. 20,00,000/-
ಕ್ಷೇಮನಿಧಿ	—	ರೂ 14,40,000/-
ಠೇವಣಾತಿಗಳು	—	ರೂ. 7,19,35,000/-
ಸಾಲಗಳು	—	ರೂ. 3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ. 9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ.

The Canara Banking Corporation Ltd.

Estd:- 1906] [H. O. UDIPI (S. India)

ಪರಿಶ್ರಮ

ನಿಮ್ಮ ಕೈಯಲ್ಲಿರುವ ಸ್ವಿಸ್ ಗಡಿಯಾರ!

ಅದರ ಆದಿಮ ರೂಪದಿಂದ ಇಂದಿನ ವರೆಗಾದ ಪ್ರಯತ್ನಗಳು

ಮಾನವ ನಿರ್ಮಿತ ಕಾಲಮಾಪಕಗಳಲ್ಲಿ ಬಿಸಿಲು ಗಂಟೆ ಮೊದಲನೆಯದು. ಕ್ರಿಸ್ತಶಕಕ್ಕೆ ಬಹಳ ಪೂರ್ವದಲ್ಲಿಯೇ ಆ ಕಾಲದ ಸಭ್ಯದೇಶಗಳು ಈ "ಗಡಿಯಾರ"ದ ಉಪಯೋಗವನ್ನು ಮಾಡುತಿದ್ದುವು. ನೆಲದಲ್ಲಿ ಒಂದು ಉದ್ದನೆಯ ಕೋಲನ್ನು ಊರಿ, ಅದರ ನೆರಳಿನ ಸಹಾಯದಿಂದ ಸಮಯವನ್ನು ತಿಳಿಯುತಿದ್ದರು. ಸಂಸ್ಕೃತ ಭಾಷೆಯಲ್ಲಿ ಈ ಬಿಸಿಲು ದೀಪಕ್ಕೆ ಶಂಕು ಎಂದು ಹೆಸರು. ಆದರೆ, ರಾತ್ರಿಯ ಹೊತ್ತಿನಲ್ಲಾಗಲೀ ದುರ್ದಿನಗಳಲ್ಲಾಗಲೀ ಸಮಯ ತಿಳಿಯುವುದು ಇದರಿಂದ ಅಸಾಧ್ಯವಾಗಿತ್ತು.

ಇದರ ನಂತರ, ಪ್ರಯೋಗಕ್ಕೆ ಬಂದ ಗಡಿಯಾರವು ಜಲಗಡಿಯಾರ ಮತ್ತು ಮರಳು ಗಡಿಯಾರ. ಜಲಗಡಿಯಾರದ ಸರಳರೂಪದಲ್ಲಿ: ಒಂದು ಗಡಿಗೆ, ಇದರಡಿಯಲ್ಲಿ ಒಂದು ಸಣ್ಣದಾದ ತೂತು ಮಾಡಲ್ಪಟ್ಟಿರುತ್ತದೆ. ಗಡಿಗೆಯಲ್ಲಿ ನೀರನ್ನು ತುಂಬಿಸಿದಾಗ, ನೀರು ತೂತಿನಿಂದ ಮೆಲ್ಲ ಮೆಲ್ಲನೆ ಬೊಟ್ಟು ಬೊಟ್ಟಾಗಿ ಹೊರಗೆ ಹರಿಯುತ್ತದೆ. ಗಡಿಗೆಯಲ್ಲಿರುವ ನೀರಿನ ತಳವನ್ನು ಕಂಡು ಸಮಯವನ್ನು ತಿಳಿಯಲಾಗುತಿತ್ತು. ಮರಳು ಗಡಿಯಾರದಲ್ಲಿ ಎರಡು ಗಡಿಗೆಗಳಿರುತ್ತವೆ. ಮೇಲಿರುವ ಗಡಿಗೆಯಲ್ಲಿ ಮರಳನ್ನು ತುಂಬಿಸಿರುತ್ತಾರೆ. ಈ ಮರಳು ಗಡಿಗೆಯ ತೂತಿನಿಂದ ನಿಧಾನವಾಗಿ ಕೆಳಗಿಳಿದು ಬರುತ್ತದೆ. ಒಂದು ತಾಸಿನಲ್ಲಿ ಅದು ಬರಿದು ಸರಿಯುವ ವ್ಯವಸ್ಥೆಯಿದೆ. ಭಾರತದಲ್ಲಿ ಆಂಗ್ಲ ಮೊದಲಿಯ ಗಡಿಯಾರವು ಪ್ರಚಾರಕ್ಕೆ ಬರುವವರೆಗೆ ಇವೇ ಆದಿಮವಾದ ಗಡಿಯಾರಗಳು ಬಳಕೆಯಲ್ಲಿದ್ದುವು.

ಮಧ್ಯಕಾಲದಲ್ಲಿ ಭಾರ ಅಥವಾ ಬಿಲ್ಲಿನ ಸಹಾಯದಿಂದ ನಡೆಯುವ ಯಾಂತ್ರಿಕ ಗಡಿಯಾರಗಳನ್ನು ರಚಿಸುವ ಪ್ರಯತ್ನ ನಡೆಯಿತು. ಫ್ರಾನ್ಸಿನ ರಾಜನಾದ ಐದನೆಯ ಚಾರ್ಲ್ಸನಿಗಾಗಿ ಜರ್ಮನ ಹೆನ್ರಿ ದವಿಕನು ನಿರ್ಮಿಸಿದ ಒಂದು ಗಡಿಯಾರವು ಇಂತಹ ಪ್ರಯತ್ನದಿಂದ ರಚಿಸಿದ ಸುಪ್ರಸಿದ್ಧ ಗಡಿಯಾರವಾಗಿದೆ. ೧೩೭೦ರಲ್ಲಿ ರೂಪಕ್ಕೆ ಬಂದ ಈ ಗಡಿಯಾರ ೧೮೫೦ರ ವರೆಗೆ ಸುಮಾರು ೫೦೦ ವರ್ಷ) ಉಪಯೋಗಕ್ಕೆ ಬಂತು. ದವಿಕನ ಗಡಿಯಾರ ಯಾಂತ್ರಿಕವಾಗಿತ್ತು; ಆದರೆ, ಇಂದಿನ ಶ್ರೇಷ್ಠ ಗಡಿಯಾರಗಳೊಡನೆ ಹೋಲಿಸುವಾಗ ಮಾತ್ರ ಅಷ್ಟು ಉತ್ತಮ ಸಮಯ ಸೂಚಕವೆನ್ನಬರುವುದಿಲ್ಲ.

೧೫೮೩ರಲ್ಲಿ ಗೆಲಿಲಿಯೊವು ಲೋಲಕವನ್ನು ಸಂಶೋಧಿಸಿದ ಮೇಲೆ ಗಡಿಯಾರ ನಿರ್ಮಾಣದಲ್ಲಿ ಬಹಳ ಪರಿವರ್ತನೆಗಳಾದುವು. ೧೬೫೭ರಲ್ಲಿ ಮೊದಲನೆಯ ಲೋಲಕವನ್ನು ಡಚ್ಚ ಜ್ಯೋತಿಷಿಯಾದ ಹ್ಯೂಜನು ತಯಾರಿಸಿದನು. ಲೋಲಕ ಗಡಿಯಾರಗಳು ಜಲಗಡಿಯಾರ ಮತ್ತು ಯಂತ್ರಗಡಿಯಾರಗಳಿಗಿಂತಲೂ ಉತ್ತಮ ರೀತಿಯಲ್ಲಿ ಸಮಯ ಸೂಚಿಸುತ್ತಿದ್ದುವು. ಆದರೆ, ಇದರ ಮೇಲೆ ತಾಪಮಾನದ ಪ್ರಭಾವ ಬೀಳುತ್ತದೆ. ಈ ಗಡಿಯಾರದ ಲೋಲಕಗಳ ತಂತುಗಳನ್ನು ಸಂಕೋಚ ಮತ್ತು ವಿಕಾಸಗೊಳಿಸುವುದರಿಂದ ಚಳಿಗಾಲದಲ್ಲಿ ವೇಗವಾಗಿಯೂ ಸೆಖೆಗಾಲದಲ್ಲಿ ನಿಧಾನವಾಗಿಯೂ ಲೋಲಕಗಳು ಚಲಿಸುತ್ತವೆ. ಈ ದೋಷವನ್ನು ಹೋಗಲಾಡಿಸಲು ಲೋಲಕದಲ್ಲಿರುವ ಹಿತ್ತಾಳಿಯ ಮತ್ತು ಕಬ್ಬಿಣದ ತಂತುಗಳು ಒಂದು ವ್ಯವಸ್ಥಿತರೂಪದಲ್ಲಿರಿಸಲ್ಪಟ್ಟಿವೆ. ಹಿತ್ತಾಳಿಯ ತಂತು ಉಬ್ಬಿದರೆ, ಲೋಕವು ಮೇಲೇರುವಂತೆಯೂ ಕಬ್ಬಿಣದ ತಂತು ಉಬ್ಬಿದರೆ, ಕೆಳಗಡೆ ಬರುವಂತೆಯೂ ಮಾಡುವ ವ್ಯವಸ್ಥೆಯಿದೆ. ಇದರಿಂದ ಲೋಲಕದ ಚಲನೆ ಒಂದೇ ರೂಪವಾಗಿರುತ್ತದೆ ಆದುದರಿಂದಾಗಿ, 'ಈ ಗ್ರಿಡ್ ಐರನ್" ಎಂಬ ಗಡಿಯಾರವು ಶ್ರೇಷ್ಠವಾದುದಾಗಿದೆ.

ದೊಡ್ಡ ದೊಡ್ಡ ಗಡಿಯಾರಗಳೊಡನೆಯೇ ಕಿಸೆ ಗಡಿಯಾರಗಳ ರಚನೆಯೂ ಆಯಿತು. ಸಣ್ಣ ಗಡಿಯಾರಗಳ ರಚನೆಯಲ್ಲಿ ಎಲ್ಲರಿಗಿಂತ ಮೊದಲು ಸ್ವಿಸ್ ಜನರು ಮುಂದಾಗಿ ಹೆಸರು ಗಳಿಸಿದರು. ಇಂದಿಗೂ ಅವರು ವಿಶ್ವಪ್ರಸಿದ್ಧರಿರುವರು.

೧೭೩೫ರಲ್ಲಿ ಜಾನ್ ಹರಿಸನ್ ಎಂಬ ಆಂಗ್ಲೇಯನು ತನ್ನ ಮೊದಲಿನ ಕಾಲಮಾಪಕವನ್ನು (ಕ್ರೋನಿಮೀಟರ್) ರಚಿಸಿದಾಗ, ಶುದ್ಧ ಗಡಿಯಾರಗಳ ರಚನಾಕಾರ್ಯವು ಶೀಘ್ರಗತಿಯಲ್ಲಿ ಧಾವಿಸಿತು. ತಾಪಮಾನದ ಪರಿವರ್ತನೆ ಅಥವಾ ಸಂಚಾಲನೆಯ ಕಾರಣದಿಂದ ತನ್ನ ಗತಿಯನ್ನು ಪರಿವರ್ತಿಸದಿರುವ ಮಾದರಿಯ ಒಂದು ಯುಕ್ತಿಪೂರ್ವಕವಾಗಿ ಇದನ್ನು ತಯಾರಿಸಲಾಗಿದೆ.

ವಿಶಾಲ ಸಮುದ್ರದಲ್ಲಿ ಹಡಗಿನ ಸ್ಥಿತಿಯನ್ನು ತಿಳಿಯುವುದಕ್ಕೆ ದೇಶಾಂತರ ಜ್ಞಾನ ಹಾಗೂ ಶುದ್ಧ ಗ್ರೀನ್‌ವಿಚ್ ಸಮಯದ ಜ್ಞಾನವೂ ಅವಶ್ಯವಾಗಿದೆ. ೧೭೧೪ರಲ್ಲಿ ಬ್ರಿಟನ್ನಿನ ಸರಕಾರವು ಅಕ್ಷಾಂಶಗಳೊಳಗಡೆ ದೇಶಾಂತರ ನಿಶ್ಚಯ ಮಾಡುವ ರೀತಿ ಸಂಶೋಧನೆಗೆ ೨೦,೦೦೦ ಪೌಂಡುಗಳ ಪುರಸ್ಕಾರವನ್ನು ಘೋಷಿಸಿತು. ೧೭೬೧ರಲ್ಲಿ ಒರ್ವ ಸೈನಿಕ ಅಧಿಕಾರಿಯ ಮಗ ಹರಿಸನ್ ಕಾಲಮಾಪಕವನ್ನು ಕಂಡುಹಿಡಿದನು. ಒಂದು ಬಾರಿ ಪರಿಶೀಲನೆಗೆ ಹೊರಟು ಹಿಂದಿರುಗಿ ಬರುವಾಗ ಸಮುದ್ರದಲ್ಲಿ ಹಡಗಿನ ಕಪ್ತಾನನಿಗೆ ಭೂಮಿತೋರಿಬಂತು. ಆದ್ರೆ ತಾನು ಹೊರಟ ಸ್ಥಳವೆಂಬೇ ಆತ ಬಗೆದಿದ್ದ. ಹರಿಸನ್ ಕಾಲಮಾಪಕವು ಅದು "ಲಿಜಾರ್ಡ್" ಎಂದು ತಿಳಿಸಿತು. ಇದು ಸತ್ಯವೆಂದೂ ಮುಂದೆ ತಿಳಿಯಿತು. ಕಪ್ತಾನ್‌ನ ೬೦ ಮೈಲು ಹಿಂದುಳಿದಿದ್ದ!

ಹರಿಸನ್‌ನ ಯಂತ್ರವು ಶುದ್ಧವೆಂದು ತಿಳಿದರೂ ಆತನಿಗೆ ಬಹುಮಾನಸಿಗಲಿಲ್ಲ. ಆದೇಶಕ್ಕನುಸಾರವಾಗಿ ಆತ ೧೦ ವರ್ಷಗಳಲ್ಲಿ ಮತ್ತೊಂದು ಯಂತ್ರವನ್ನು ತಯಾರಿಸಿದನು. ಪರಿಶೀಲನೆಗಾಗಿ, ಅದು ರಾಯಲ್ ಸೊಸೈಟಿಗೆ ಹೋಯಿತು. ಪರಿಶೀಲನಾನಂತರ, ತನ್ನ ಅತಿದೊಡ್ಡ ಪುರಸ್ಕಾರವಾದ ಸ್ವರ್ಣ ಪದಕವನ್ನು ವನಿಗೆ ಅದು ಕೊಟ್ಟಿತು. ಈ ಬಾರಿಯೂ ಸರಕಾರದ ಪುರಸ್ಕಾರ ದೊರೆಯದಿರಲು ಪಾರ್ಲಿಮೆಂಟಿಗೆ ವಿನಂತಿ ಮಾಡಿದನು. ಇದರಿಂದಾಗಿ, ಅದು ಪುರಸ್ಕಾರ ನೀಡುವ ಬಗ್ಗೆ ಗೊತ್ತುವಳಿ ಸ್ವೀಕರಿಸಿತು. ಆದರೆ, ಈ ಗೊತ್ತುವಳಿಯು ೧೭೭೩ರಲ್ಲಿ ಸ್ವೀಕೃತವಾಗಿದ್ದರೂ ಅವನು ಸಾಯುವುದಕ್ಕೆ ಮೂರು ವರ್ಷಗಳ ಮೊದಲು ಇದು ದೊರೆಯಿತು. ಆಗ ಅವನಿಗೆ ಹಣದ ಅಥವಾ ಪುರಸ್ಕಾರದ ಆವಶ್ಯಕತೆಯೂ ಇರಲಿಲ್ಲ. ಏಕೆಂದರೆ ಆತನ ಪ್ರಾಯ ಆಗಾಗಲೇ ನೂರಕ್ಕೆ ಹತ್ತಿರವಿತ್ತು!

ಹರಿಸನ್ನನ ಕಾಲಮಾಪಕದ ಆಧಾರದಿಂದ ತಯಾರಿಸಲಾದ ನಮ್ಮ ಇಂದಿನ ಗಡಿಯಾರಗಳು ಒಂದು ಸೆಕುಂಡು ಹಿಂದೆ ಮುಂದೆ ಹೋಗದಷ್ಟು ಉತ್ತಮ ರೀತಿಯಲ್ಲಿ ನಿರ್ಮಿಸಲ್ಪಡುತ್ತವೆ. ಗಡಿಯಾರ ನಡೆಸಲು ಮತ್ತು ರೇಡಿಯೊಗಳ ಮೂಲಕ ಸಮಯದ ಸೂಚನೆಗಳನ್ನೀಯಲು ವಿದ್ಯುತ್ತಿನ ಬಳಕೆಯಾಗುವುದರಿಂದ ಶುದ್ಧ ಸಮಯವಿಡುವ ಸಮಸ್ಯೆಯೂ ಲಘುವಾಗಿದೆ. ಸಮುದ್ರ ಮಧ್ಯದಲ್ಲಿರಲಿ, ಆಕಾಶದೆತ್ತರದಲ್ಲಿರಲಿ, ಭೂಮಿಯ ಯಾವ ಭಾಗಗಳಲ್ಲಿಯೇ ಇರಲಿ, ಎಲ್ಲೆಲ್ಲೂ ವೇಧಶಾಲೆಯಿಂದ ತಿಳಿಸಲ್ಪಟ್ಟ ಸಮಯವು ಇಂದು ಗೊತ್ತಾಗುತ್ತದೆ.

ಈಗೀಗ ಅಣುಗಡಿಯಾರದ ರಚನೆಯೂ ಆಗಿದೆ. ಇದು ಸಂಪೂರ್ಣ ನಿರ್ದೋಷವುಳ್ಳದೆನ್ನಲಾಗಿದೆ. ಇದರಿಂದಾಗಿ ಸಮಯದ ಜ್ಞಾನವು ಸರಿಯಾಗಿ ತಿಳಿಯುವುದು. ಆದರೂ ಈ ಅಣುಗಡಿಯಾರಗಳು ಇನ್ನೂ ಪ್ರಯೋಗಾವಸ್ಥೆಯಲ್ಲೇ ಇವೆ ಎನ್ನಬಹುದು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 136/59.

ಸೀತಾರಾಮ ಭಟ್ಟ—ವಾದಿ.

ಅನಂತರಾವ್—ಪ್ರತಿವಾದಿ.

ಸದ್ರಿ ವಾದಿ ಕಡೆಯಿಂದ ಈ ಮೂಲ್ಕ ಜಾಹೀರು ಮಾಡಿಕೊಳ್ಳುವದೇನೆಂದ್ರೆ

ಪ್ರತಿವಾದಿ ಅನಂತರಾವ್- ಬಿಜೂರು ಶಿವರಾಯರ ಮಗ, ಬಿಜೂರು ಗ್ರಾಮ.—

ವಾದಿಗೆ ಪ್ರತಿವಾದಿಯಿಂದ ಬರತಕ್ಕ ಬಾಕಿ ಮೂಲಗೇಣಿ ರೂ.113-57 ಬರಮಾಡಿಕೊಳ್ಳುವರೆ ಮಾಡಿದ ಮೇಲ್ಕಂಡ ದಾವೆಯು ತಾ. 5-8-59ಕ್ಕೆ ಆಖೈರ ತನ್ಕಿಗೆ ಮುಂದೋದಾಗಿಯದೆ. ಈ ಕುರಿತು ನಿಮ್ಮದೇನಾದ್ರು ಉಜಾರಡೆಯಿದ್ರೆ ಸದ್ರಿ ದಿವಸ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜರಾಗಿ ಜಾಹೀರ ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿ ಕಡೆಯಿಂದ ಈ ಮೂಲ್ಕ ತಿಳಿಯಪಡ್ಸಿಯದೆ.

G. Sanjiva Rao,
Vakil for Plaintiff.

Coondapur, Date. 8-7-59.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಅತ್ಯುಪಯುಕ್ತವಾದ ಕೈಗನ್ನಡಿ.

ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಪಥ್ಯದ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಒಂದೂವರೆ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ
ರಚಿತವಾದ

ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ
ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಮಹಿಳಾ ಪ್ರಪಂಚ

ಪಾಕಿಸ್ತಾನಿ ನಾರಿಯರು

ಈ ಮಹಿಳೆಯರು ಬುರಖಾ ಪದ್ಧತಿಯನ್ನು ತುರ್ಕಿಸ್ತಾನಿಗಳಿಂದ ಕಲಿತುಕೊಂಡರು!

ನಮ್ಮ ಅತಿ ನೆರೆಯ ರಾಜ್ಯವಾದ ಪಾಕಿಸ್ತಾನವು ಇಂದು ಒಂದು ಸ್ವತಂತ್ರ ಮುಸ್ಲಿಮ ರಾಷ್ಟ್ರವಾಗಿದೆ! ಒಂದು ರೀತಿಯಿಂದ ನೋಡಿದರೆ, ಪಾಕಿಸ್ತಾನಿ ನಾರಿಯರು ನಮ್ಮ ಸಹೋದರಿಗಳು. ಒಂದಾನೊಮ್ಮೆ ಏಕತ್ರವಾಗಿ ನಾವು ಮತ್ತು ಆವರು ಹುಟ್ಟಿ ಬದುಕಿ, ಬಾಳಿ ಜೀವಿಸಿದೆವು. ಆದರೆ ಈಗ ಮಾತ್ರ ಅಣ್ಣ—ತಮ್ಮಂದಿರ ಜಗಳವಾಗಿ ಒಂದು ಮನೆಯಲ್ಲಿ ಇಬ್ಭಾಗವಾದಂತೆ ಇಂದಿನ ಪರಿಸ್ಥಿತಿಯಾಗಿದೆ. ಒಂದೇ ಕುಟುಂಬವು ಎರಡು ಭಾಗವಾಗಿ ಪ್ರತ್ಯೇಕ ರಾಜ್ಯದೊಂದಿಗೆ ಜೀವಿಸಿರುವದು. ಆದಕಾರಣ ಪಾಕಿಸ್ತಾನಿ ನಾರಿಯರು ನಮಗೆ ಅಷ್ಟು ಪರಿಚಿತರಲ್ಲ. ಇಂದು ಸುಮಾರು ೧೦—೧೨ ವರ್ಷಗಳು ಗತಿಸಿದವು. ನಮ್ಮ ಸಂಸಾರದ ಕಲ್ಪನೆ ನಮಗಿದೆ, ಆದರೆ ನೆರೆಹೊರೆಯವರ ಸಂಸಾರವಾದರೂ ಹೇಗೆ ಸಾಗಿದೆ? ಎಂಬುವನ್ನು ಅವಶ್ಯ ನೋಡುವ ಕುತೂಹಲ ನಮಗಿಲ್ಲವೇ?

ಬುರಖಾ ಇತಿಹಾಸ—ಪಾಕಿಸ್ತಾನೀ ಮಹಿಳೆಯರು ನಿಜವಾಗಿ ಮುಸ್ಲಿಮ ನಾರಿಯರು. ಮುಸಲ್ಮಾನ ಧರ್ಮದಲ್ಲಿ “ಶಿಯಾ” ಮತ್ತು “ಸುನ್ನಿ” ಎಂದರೆ ನಾವು ಸರ್ವಸಾಧಾರಣವಾಗಿ ರೂಢಿಯಲ್ಲಿ ಕರೆಯುವಂತೆ—‘ಮುಸಲ್ಮಾನ” ಹಾಗೂ ‘ಬೋಹರಿ” ಹೀಗೆರಡು ಭೇದಗಳಿರುತ್ತವೆ. ಮುಸ್ಲಿಂ ಹೆಂಗಸರ ಜನಜೀವನದಲ್ಲಿ ಒಂದು ವಿಶೇಷ ವೈಶಿಷ್ಟ್ಯವೆಂದರೆ “ಬುರಖಾ” ಪದ್ಧತಿಯಂತೆ ಪೋಷಾಕು ಉಟ್ಟುಕೊಳ್ಳುವದು! ಈ ಬುರಖಾ ಪದ್ಧತಿಯು ಅವರ ನೆರೆಯ ರಾಷ್ಟ್ರವಾದ ತುರ್ಕಿಸ್ತಾನದಿಂದ ಬಂದಿತು. ಅಲ್ಲಿಯ ಮಹಿಳೆಯರಿಂದಲೇ ಪಾಕಿಸ್ತಾನೀ ನಾರಿಯರು ಚೆನ್ನಾಗಿ ಕಲಿತುಕೊಂಡರು. ಅದಕ್ಕೆ ಸಬಲ ಕಾರಣವೆಂದರೆ ಅಲ್ಲಿಯ ಸ್ತ್ರೀಯರ ಅಪ್ರತಿಮ ಸೌಂದರ್ಯ. ಈ ಸೌಂದರ್ಯವು ಅವರಿಗೆ ಆ ಮಹಿಳೆಯರಿಗೆ ಮೋಸದಾಯಕವೆಂದು ಅಲ್ಲಿಯ ಪುರುಷರು ಭಾವಿಸಿದ್ದರ ಮೂಲಕ, ತಮ್ಮ-ತಮ್ಮ ಹೆಂಗಸರಿಗೆ ಅಲ್ಲಿಯ ಗಂಡಂದಿರು “ಬುರಖಾ” ಉಪಯೋಗಿಸುವದಕ್ಕೆ ಆಜ್ಞೆ ಮಾಡಿದರು. ಆದರೆ ಮುಂದೆ ಈ ಕಾರಣ ನಷ್ಟವಾದರೂ ಬುರಖಾ ರೂಢಿಯು ಮಾತ್ರ ಶಾಶ್ವತವಾಗಿ ಉಳಿಯಿತು! ವಿರುದ್ಧ ಸ್ತ್ರೀಯರ ಬಂಧನ ಅಧಿಕ ಬಿಗುಗೊಂಡಿತು. ಇಂದು ಮಾತ್ರ ಈ ಬುರಖಾ ಪದ್ಧತಿಯು ಅತಿ ವಿರಲವಾಗಿದೆ. ಮುಸಲ್ಮಾನ ಸ್ತ್ರೀಯರಲ್ಲಿ ವಿಶೇಷ ಕಂಡುಬರುವ ಬುರಖಾ ವೇಷವು ಕಡಿಮೆಯಾದದ್ದು ಇಂದು ನಾವು ನಮ್ಮ ಭಾರತದಲ್ಲಿ ಅಲ್ಲಲ್ಲಿ ವಾಸವಾಗಿರುವ ಮುಸ್ಲಿಮ ಜನಾಂಗದಿಂದ ನೋಡುತ್ತೇವೆ. ಬೋಹರಿ ಸ್ತ್ರೀಯರು ಮಾತ್ರ ಬುರಖಾವನ್ನು ಹಾಕಿಕೊಳ್ಳುವರು. ಅದು ಸಹ ಅವರು ಕೇವಲ ಅಂಗದ ಮೇಲೆ ಹೊರತು ಉಳಿದ ಭಾಗದಲ್ಲಿ ತೊಟ್ಟುಕೊಳ್ಳುವದಿಲ್ಲ. ಆವರು ಮುಖದ ಮೇಲಿನ ಪರದೆಯನ್ನು ಉಪಯೋಗಿಸಲಾರರು.

ಸಮಾನ ಹಕ್ಕು, ಆದರೆ ಶಿಕ್ಷಣವಿಲ್ಲ—ಮುಸ್ಲಿಮ ಧರ್ಮವು ಸ್ತ್ರೀ-ಪುರುಷರನ್ನು ಸಮಾನವಾಗಿ ಭಾವಿಸುವದು. ಇಷ್ಟೇ ಅಲ್ಲದೇ ಹುಡುಗರಿಗೆ ಸಿಗುವ ಅರ್ಧದಷ್ಟು ಹುಡುಗಿಯರಿಗೆ ಹಿರಿಯರ ಆಸ್ತಿಯಿಂದ ವಾರಸಾ ಪ್ರಾಪ್ತವಾಗುತ್ತದೆ. ವಿವಾಹ ಪ್ರಸಂಗದಲ್ಲಿ ಮೊಟ್ಟಮೊದಲು ಹುಡುಗಿಯ ಅನುಮತಿಯನ್ನು ತೆಗೆದುಕೊಳ್ಳುವರು. ಆದರ ಹೊರತು ಅವಳ ಲಗ್ನವಾಗುವದಿಲ್ಲ. ಆದರೆ ವಿವಾಹದ ಸಮಯದಲ್ಲಿ ಹುಡುಗಿಯ ವಯಸ್ಸು ೧೬ ವರ್ಷ ಮೀರಿರಬೇಕು. ಪುರುಷರಂತೆ ಸ್ತ್ರೀಯರಿಗೂ ಪುನರ್ವಿವಾಹಕ್ಕೆ ಪರವಾನಗಿಯನ್ನು ಕೊಡಲ್ಪಡುತ್ತದೆ. ಧರ್ಮವು ದ್ವಿಪತ್ನಿತ್ವಕ್ಕೆ ಮಾನ್ಯತೆ ಕೊಟ್ಟಿದ್ದರೂ ಇತ್ತೀಚೆಗೆ ಜನಮತ ತದ್ವಿರುದ್ಧವಾಗಿದೆ. ಹಾಗೂ ಸ್ವತಃ ಮುಸ್ಲಿಮ್ ಸ್ತ್ರೀಯರೇ ಆದರ ವಿರುದ್ಧ ಬಂಡು ಹೂಡಿರುವರು! ಕೆಲವು ಮುಸ್ಲಿಮ ದೇಶಗಳಲ್ಲಿಯ ಹೊಸ ಘಟನೆಗಳಿಂದ ಆದರ ಪುರಾವೆ ಸಿಗಲು ಸುಲಭವಾಗಿದೆ.

ಈ ರೀತಿ ಮುಸ್ಲಿಮ (ಪಾಕಿಸ್ತಾನೀ) ನಾರಿಯರಿಗೆ ಅಧಿಕ ಸವಲತ್ತುಗಳು ಇದ್ದರೂ, ಶಿಕ್ಷಣದಲ್ಲಿ ತುಂಬಾ ಹಿಂದುಳಿದವರಾಗಿರುವರು. ಸದ್ಯ ಪರಿಸ್ಥಿತಿ ಸುಧಾರಿಸುತ್ತಿದ್ದರೂ ಅಷ್ಟು ಸಮಾಧಾನಕಾರಕ ಸುಧಾರಣೆ ಪಾಕಿಸ್ತಾನ-ಭಾರತದಲ್ಲಿ ಕಂಡು ಬರುತ್ತದೆ, ಎಂದು ಹೇಳಲು ಬರುವದಿಲ್ಲ. ಇತರೇತರ ವಿದೇಶಗಳಲ್ಲಿ ಮಾತ್ರ ಮುಸ್ಲಿಮ ಸ್ತ್ರೀಯರು ತಮ್ಮ ತಮ್ಮ ದೇಶದಲ್ಲಿ ಪ್ರಚಂಡ ಸಂಖ್ಯೆಯಿಂದ ಶಿಕ್ಷಣ ಪಡೆಯುತ್ತಿರುವದು ನಮಗೆ ವಾರ್ತೆಗಳಿಂದ ತಿಳಿದು ಬರುತ್ತದೆ.

ಪೋಷಾಕ—ಪಾಕಿಸ್ತಾನದ ಮಹಿಳೆಯ ಪೋಷಾಕವೆಂದರೆ, ‘ಲಹಂಗಾ,’ ‘ಖಮೀಸ್’-ಶೀರೆಯ ಪದರಿನಂತೆ ತಲೆಯಮೇಲಿಂದ ಆವರಿಸಿಕೊಂಡ ಹೊದಿಕೆ. ಆ ಹೊದಿಕೆಯೆಂದರೆ, ಸ್ವಲ್ಪಮಟ್ಟಿಗೆ ಬುರಖಾ ಅವಶೇಷವೇ ಆಗಿರುವದು! ಮುಖದ ಸೌಂದರ್ಯ ಕಂಡುಬರಬಾರದೆಂದು ಆವರು ಕೆಳಗಿನ ತನಕ ಹೊದಿಕೆ ಹಾಕಿಕೊಳ್ಳುವ ರೂಢಿಯಿರುವದು. ಇತ್ತೀಚಿನ ಕಾಲದಲ್ಲಿ ಆ ಪದ್ಧತಿಯೂ ಕ್ರಮೇಣ ವಿರಲವಾಗುತ್ತ ಹೋಗಿರುವದು. ಆದರೆ ಒಂದು ಸಂಗತಿ ಮಾತ್ರ ಉಲ್ಲೇಖನೀಯವಾಗಿರುತ್ತದೆ; ಅದೆಂದರೆ, ಇತರ ಮುಸ್ಲಿಮ ರಾಷ್ಟ್ರಗಳಲ್ಲಿಯ ಮಹಿಳೆಯರು ತಮ್ಮ ಮೂಲ (ಸಂಪ್ರದಾಯ) ಉಡುಪನ್ನು ತೊರೆದು ಪಾಶ್ಚಾತ್ಯರ ಸುಧಾರಿಸಿದ ವೇಷ ಪೋಷಾಕವನ್ನು ಧರಿಸಿಕೊಂಡರೂ, ಭಾರತ ಹಾಗೂ ಪಾಕಿಸ್ತಾನದಲ್ಲಿಯ ನಾರಿಯರು ತಮ್ಮ ಸಾಂಪ್ರದಾಯಿಕ ಉಡುಪಿಗೆ ತಿಲಾಂಜಲಿಯನ್ನು ಕೊಡಲಿಲ್ಲ. ಎಷ್ಟು ಸುಶಿಕ್ಷಿತ ಅಥವಾ ಸಮಾಜದಲ್ಲಿ ಪ್ರಾಮುಖ್ಯಳಾಗಿ ಮೆರೆಯುವ ಸ್ತ್ರೀಯರಾದರೂ ಪಾಕಿಸ್ತಾನೀ ನಾರಿಯರು ಮಾತ್ರ ಪಾಶ್ಚಿಮಾತ್ಯ ಪೋಷಾಕಿನಲ್ಲಿ ತೋರಿಬರುವದೆಂದರೆ ಅತಿ ವಿರಲ.

—ಶ್ರೀ ರಾಮಕೃಷ್ಣ ಎ. ಪೈ,
ಕಾಕರಮಠ, ಅಂಕೋಲಾ (ಎನ್ಕೇ)



ಗನಿಗಳಲ್ಲಿನ ಅಪಾಯದಿಂದ ತಪ್ಪಿಸಲು “ಗ್ಯಾಸ್ ಮಾಸ್ಕ್” ಮತ್ತಿತರ ಸಾಧನಗಳು.

ಬಾಲ ವೃಂದಾವನ

ಹತ್ತು ಸಾವಿರ ಡಾಲರ್ ಬೆಲೆ ಬಾಳುವ ಕೋಕ್‌ಟೈಲ್

ಅಮೇರಿಕೆಯ ಒಂದು ದೊಡ್ಡ ಕಾರ್ಖಾನೆಯ ಮೆನೇಜರ್ ಹುದ್ದೆಗೆ ಒಬ್ಬ ಯುವಕ ಅರ್ಜಿ ಹಾಕಿದ್ದ. ಆವನು ಈವರೆಗೆ ಮಾಡಿದ್ದ ಎಲ್ಲಾ ಉದ್ಯೋಗಗಳಿಗಿಂತಲೂ ಇದು ಅತಿ ಮಹತ್ತರ ಜವಾಬ್ದಾರಿಯುತವಾಗಿತ್ತು. ಈ ಉದ್ಯೋಗ ಪಡೆಯಲು ಆತ ತುಂಬಾ ಯತ್ನಿಸಿದ. ಕಂಪೆನಿಯ ಆಫೀಸರರು ತನ್ನ ಕುರಿತು ಉತ್ತಮ ಅಭಿಪ್ರಾಯ ತಾಳುವಂತೆ ಆತ ತುಂಬಾ ಯತ್ನಿಸಿದ. ಕಂಪೆನಿಯವರು ಆತನನ್ನು ಭೇಟಿಯ ಬಗ್ಗಾಗಿ ಕರೆದರು. ನಡದಂತಹ ಭೇಟಿಯಲ್ಲಿ ಆಫೀಸರರುಗಳು ಈತನಿಗೆ ಹೊಸ ಹುದ್ದೆ ಕೊಡಲೊಪ್ಪಿದರು. ವರ್ಷವೊಂದಕ್ಕೆ ಹತ್ತುಸಾವಿರ ಡಾಲರು ಸಂಬಳ ಇರುವ ಹುದ್ದೆ ಅದಾಗಿತ್ತು. ಈ ಸಂಬಳವು ಆತನು ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚಿನದಾಗಿತ್ತು. ಡೈರೆಕ್ಟರರುಗಳು ಆತನನ್ನು ತಮ್ಮ ಜತೆಯಲ್ಲಿ ಕೂರಿಸಿಕೊಂಡಾಗ ತಾನು ತನ್ನ ಜೀವನದ ಅತಿ ಮಹತ್ತಿಕೆಯ ಘಟ್ಟದಲ್ಲಿರುವುದಾಗಿ ಆತನು ಭಾವಿಸಿದ.

ಡೈರೆಕ್ಟರರೊಡನೆ ಮಧ್ಯಾಹ್ನ ಊಟ ಮಾಡುವ ಅವಕಾಶವೂ ಆತನಿಗೆ ಒದಗಿತು. ತನ್ನಂತಹ ಭಾಗ್ಯಶಾಲಿ ಇನ್ನೊಬ್ಬನಿಲ್ಲ ಎಂದು ಆತ ಭಾವಿಸಿದ. ಇಂತಹ ದೊಡ್ಡ ವ್ಯಕ್ತಿಗಳೆದುರು ತಾನೂ ದೊಡ್ಡ ನೆನೆನಿಸಿಕೊಳ್ಳಬೇಕು. ತನ್ನ ದೊಡ್ಡತನ ಪ್ರದರ್ಶಿಸಬೇಕೆಂದು ಆತನಿಗೆನಿಸಿತು. ಊಟ ಮಾಡುತ್ತಿದ್ದಾಗ ಆತ ಕಂಪೆನಿಯ ಅಧ್ಯಕ್ಷರೊಡನೆ ಕೇಳಿದ “ನಾನು ಒಂದು ಕೋಕ್ ಟೈಲ್ ತರಲು ಹೇಳಿದರೆ ತಾವೇನೂ ಬೇಸರಪಡುವುದಿಲ್ಲವಷ್ಟೆ? ಒಂದು ಅಥವಾ ಎರಡು ಗುಟುಕು ಅದನ್ನು ಕುಡಿದರೆ ಅದು ನನ್ನನ್ನು ತುಂಬಾ ಉತ್ಸಾಹಿಯನ್ನಾಗಿ ಮಾಡುತ್ತದೆ. ನನ್ನಲ್ಲಿ ಚೇತನ ತುಂಬುವುದು.”

ಇತರರಾರೂ ಮಾತನಾಡಲಿಲ್ಲ. ಉತ್ತ

(ಆನೇ ಪುಟ ನೋಡಿರಿ)

ಇದೀಗ ಪ್ರಕಟವಾಗಿದೆ!

‘ಮದುವೆ ಸೀರೆ’

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್, ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2-00.

ಭಾರತದ ಕರ್ಣ

“ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ...... ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು.”(ಪ್ರೊ। ಎಂ.ಆರ್. ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲೀ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂಚನೆ

“ನವಯುಗ”ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಸಮುದ್ರವನ್ನು ದಾಟಲಿರುವ ಏಕಮಾತ್ರ ಸಾಧನವು ದೋಣಿಯಾಗಿದೆ; ಅಂತೆಯೇ ಜೀವನ್ಮುಕ್ತಿಯನ್ನು ಗಳಿಸಲು ಸತ್ಯವೇ ಏಕಮೇವ ಸಾಧನವಾಗಿದೆ.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ಅಂಕ
೩೮	೧೮-೭-'೫೯	೪೪

ರಾಷ್ಟ್ರದ ಕಾಯಿದೆ ವ್ಯವಸ್ಥೆ

ಸ್ವಾಭಿವೃದ್ಧಿಗಾಗಿ ಯೋಜನೆಗಳನ್ನು ಭಾರತವು ಈಗ ಭರದಿಂದ ಕಾರ್ಯಗತಗೊಳಿಸುವ ಉತ್ಸಾಹ ತೋರಿಸಿದೆ. ದ್ವಿತೀಯ ಯೋಜನಾವಧಿಯಲ್ಲಿ ಯೋಜಿಸಿದ ಕಾರ್ಯಕ್ರಮವು ಸಂಪೂರ್ಣ ಕಾರ್ಯಗತವಾಗಬೇಕೆಂಬ ಇರಾದೆಯೂ ನಮ್ಮ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗಿದೆ. ಆದರೆ, ದೇಶದ ಕಾಯಿದೆ ಸುವ್ಯವಸ್ಥೆಯ ಪರಿಸ್ಥಿತಿಯಲ್ಲಿ ಕಂಡುಬರುವ ಕೆಲವೊಂದು ಲಕ್ಷಣಗಳು ರಾಷ್ಟ್ರಪ್ರೇಮಿಗಳಿಗೆ ಕಳವಳವನ್ನುಂಟುಮಾಡುವಂತಹದಿದೆ ಎಂಬುದು ಜನತೆಗೆ ಈಗೀಗ ಸರಿಯಾಗಿ ತಿಳಿಯುತ್ತಿದೆ. ಆದುದರಿಂದ, ಪ್ರಜಾಪ್ರಭುತ್ವದ ಕಾರ್ಯಾಚರಣೆಗೆ ವಿಘ್ನಪ್ರಾಯವಾಗಿರುವ ಇನ್ನೇನಾದರೂ ಕಾರಣಗಳಿವೆಯೇ ಎಂಬುದನ್ನು ಸರಕಾರಿ ಅಧಿಕಾರಿಗಳು ಅಭ್ಯಸಿಸಿ ಕಂಡುಕೊಳ್ಳುವ ಅಗತ್ಯತೆಯನ್ನು ಪ್ರತಿಬಿಂಬಿಸುತ್ತಾ, ವಿಶ್ವವಿದ್ಯಾಲಯದ ಸಹಾಯಧನಾಯೋಗದ ಅಧ್ಯಕ್ಷ ಡಾ. ಸಿ. ಡಿ. ದೇಶಮುಖರು ಎಚ್ಚರಿಸಿದ್ದಾರೆ. ಆಡಳಿತೆಯಂತ್ರವು ಮೇಲಿನಿಂದ ಕೆಳಗಿನವರೆಗೂ ಸ್ವಾರ್ಥಪ್ರೇರಿತವಾಗಿಯೇ ಕೆಲಸ ಮಾಡುತ್ತಿರುವ ಉದಾಹರಣೆಗಳು ದೃಷ್ಟಿಗೋಚರವಾಗುತ್ತಿರುವುದು. ಮಂತ್ರಿ ಪದದಲ್ಲಿರುವವರಿಂದ ಸಾಮಾನ್ಯ ಸರಕಾರಿ ಕಛೇರಿಯ ಚಪರಾಶಿಯವರೆಗೂ ಎಲ್ಲರೂ ವಶೀಲಿ, ತಲೆತಿರುಕತನ, ಸ್ವಜನ ಪಕ್ಷಪಾತ ಮೊದಲಾದ ವ್ಯಾಧಿಗಳಿಂದ ತುಂಬಿ ಹೋಗಿದ್ದಾರೆ. ಜನತೆಯೊದರೂ ಈ ವಿಷಯವನ್ನು ತಿಳಿದೇ ಇದೆ. ಆದರೆ, ಅದು ನಿಸ್ಸಹಾಯವಾಗಿ, ಗೋಣಾಗಿಯೇ ಆತ್ಮಸಂತೋಷ ಪಟ್ಟುಕೊಳ್ಳಬೇಕಾಗಿದೆ. 'ಪ್ರಜಾಪ್ರಭುತ್ವ' ವೆಂಬ ಹೆಸರನ್ನು ಕೊಟ್ಟು ಭಾರತದಲ್ಲಿ ಪ್ರಜಾಸತ್ತಾತ್ಮಕ ಸರಕಾರವೆಂದು ಹೇಳಿಕೊಂಡು, "ತಮ್ಮವರಾದವರ" ಸೇವೆಯನ್ನು ಮಾತ್ರ ನಿರ್ದೋಷವಾಗಿ ಮಾಡಿ, ಒಂದು ಕಣ್ಣಿಗೆ ಎಣ್ಣೆ ಇನ್ನೊಂದಕ್ಕೆ ಸುಣ್ಣ ಎರೆಯಬಯಸುವುದು ಅಪೇಕ್ಷಣೀಯವಲ್ಲ. ಸರಕಾರ ಈ ರೀತಿಯಾಗಿ ಆಚರಿಸಿದರೆ, ಅದರಿಂದ, ನಿಷ್ಪಕ್ಷಪಾತ ಆಡಳಿತೆ ನಡೆಸಲು ತನ್ನ ಅಸಮರ್ಥತೆಯನ್ನು ಪ್ರದರ್ಶಿಸಿದಂತೆಯೇ ಆಯಿತು. ಹೀಗಾದಲ್ಲಿ ರಾಷ್ಟ್ರದ ಕಾಯಿದೆ—ಸುವ್ಯವಸ್ಥೆಯ ಅವಸ್ಥೆಯೇನು? ಕೇಂದ್ರ ಸರಕಾರದಲ್ಲೂ ಹೆಚ್ಚಿನ ರಾಜ್ಯ ಸರಕಾರಗಳಲ್ಲೂ ಲಂಚನಿರೋಧ ಮತ್ತು ಮದ್ಯಪಾನ ನಿರೋಧವೇ ಮೊದಲಾದ ಕಾರ್ಯಕ್ರಮಗಳನ್ನು ಕೈಗೊಳ್ಳುವ ವ್ಯವಸ್ಥೆಯಿದೆ. ಅಪರೂಪಕ್ಕೆ ಈ ಸಮಿತಿಗಳಿಂದ ಒಂದೆರಡು ಕಟ್ಲೆಗಳೂ ಹೇರಲ್ಪಡುತ್ತವೆ. ಆದರೆ, ವರ್ಷವಿಡಿ ನಾಲ್ಕಾರು ಲಂಚ ಸ್ವೀಕರಿಸಿದ ವರದಿಗಳೂ ನೂರಾರು ಮದ್ಯ ತಯಾರಿಸಿದ ಇಲ್ಲವೇ ಕುಡಿದ ಪ್ರಸಂಗಗಳೂ ವರದಿಯಾದರೆ, ಸಾಕೇ? ದೇಶದ ತುಂಬ ಇಂತಹ ಘಟನೆಗಳು ಸಾವಿರ ಯಾನೆ ಲಕ್ಷಗಟ್ಟಲೆಯಲ್ಲಿ ನಡೆಯುತ್ತಿವೆ ಎಂದು ಜನರೆಲ್ಲರೂ ಅರಿತಿದ್ದಾರೆ; ಆದರೆ, ಅವನ್ನು ನ್ಯಾಯ ಸ್ಥಾನದಲ್ಲಿ ವಾದಿಸುವ ಬಗ್ಗೆ ಯಾವ ದಾವೆಯೂ ನಾಗರಿಕರೊಡನಿರುವುದಿಲ್ಲ. ಎಂತಲೇ ಅವರು ಮೌನಧಾರಣೆ ಮಾಡಲೇ ಬೇಕಾಗುತ್ತದೆ. ಶ್ರೀ ದೇಶಮುಖರೇ ಹೇಳುವಂತೆ ಇಂತಹ ಅಸಮರ್ಥತೆಯನ್ನು ಸರಕಾರಗಳೂ ಕಂಡುಕೊಂಡಿವೆ; ಆದರೆ, ಅವೂ ಮೌನವಾಗಿ, ತಮ್ಮ ಸ್ವೇಚ್ಛೆಯಂತೆ ಮುಂದುವರಿಯುತ್ತವೆ. ಇದೇ ರೀತಿಯಲ್ಲಿ ಸರಕಾರದ ಕಾರ್ಯಕಲಾಪಗಳು ಲಂಚ, ವಶೀಲಿ ಯಾನೇ ಪಕ್ಷಪಾತಮಯವಾಗಿಯೇ ಬಹುಕಾಲ ಮುಂದುವರಿದರೆ, ಆಗ ದೇಶದ ಸ್ಥಿತಿಗತಿಯು ಕುಗ್ಗಿ ವಿಛಿನ್ನಾವಸ್ಥೆಯನ್ನೆ ಪಡೆಯಬೇಕಾದೀತು. ಇಂತಹ ಪ್ರಸಂಗ ಬರಬಾರದು: ಜನತೆಯಲ್ಲಿ ಅತೃಪ್ತಿ, ಅಸಹಾಯಕತನ ಅಥವಾ ಅಸಮಾಧಾನಗಳು ಇನ್ನೂ ಬೆಳೆಯದಂತೆ ಮಾಡುವುದಕ್ಕೆ ಸರಕಾರದ ಕುಂದುಕೊರತೆಗಳನ್ನು ಕಂಡುಹಿಡಿದು, ಅವುಗಳ ಕಾರ್ಯಕ್ಷಮತೆಯ ಬಗ್ಗೆ ವಿಮರ್ಶೆ ನಡೆಸಿ, ರಾಷ್ಟ್ರದ ಕಾಯಿದೆ-ಸುವ್ಯವಸ್ಥೆಯ ಸ್ಥಿತಿಗತಿಗಳನ್ನು ವಿಚಾರಿಸಲು ಒಂದು ನಿಷ್ಪಕ್ಷಪಾತ ನ್ಯಾಯಮಂಡಲವು ನೇಮಿತವಾದರೆ, ಅಂತಹ ಮಂಡಲಕ್ಕೆ ನಾಗರಿಕರೆಲ್ಲರೂ ತಮ್ಮ ದೂರನ್ನು ಹೇಳಿಕೊಳ್ಳಬಹುದು ಅನುಕೂಲವಾಗುವುದೆಂದು ಶ್ರೀಯುತ ದೇಶಮುಖರು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಮೈಸೂರು ಸರಕಾರವು ಗೋರ್ವಾಲ ವರದಿಯ ಬಗ್ಗೆ ವ್ಯಕ್ತಪಡಿಸಿದಂತೆಯೇ ಇಂತಹ ನ್ಯಾಯಮಂಡಲದ ಬಗ್ಗೆ ಯೂ ಧೋರಣೆತಳೆಯುವುದಾದರೆ ಅದರಿಂದ ಪ್ರಯೋಜನವೆಳ್ಳಷ್ಟು ಇಲ್ಲ ಎಂಬುದನ್ನು ನೆನೆಪರಿಕೆ ಮಾಡಿಕೊಳ್ಳಬೇಕು. ವಿಶಾಲ ಜನತೆಯಲ್ಲಿ ಕೆಲವೇ ಜನರು ಅಸಾಧ್ಯ ಸಂಪತ್ತನ್ನು ಶೇಖರಿಸಿ ಪರರಿಗೆ ಧರ್ಮೋಪದೇಶ ಮಾಡುವುದರಿಂದ ಸಮಾಜಕ್ಕೆ ಎಂದಿಗೂ ಒಳಿತಾಗಲಾರದು. ಸರಕಾರವು ತನ್ನ ಇಂದಿನಸ್ಥಿತಿಯಲ್ಲೇ ಮುಂದುವರಿದರೆ, ಜನತೆಯಲ್ಲಿ ಕ್ಷೋಭವೇಳುವುದು ಸಹಜವೇ ಆಗಿದೆ. ಇಂತಹ ಗಂಡಾಂತರವು ಒದಗಿ ಬರುವುದಕ್ಕೆ ಮೊದಲೇ ಸರಕಾರೀ ಪಕ್ಷವು ಬುದ್ಧಿವಂತರಾದ ಮಂತ್ರಿಗಳನ್ನೇ ನೇಮಿಸಿಕೊಂಡು, ಸರಕಾರದ ಅಧಿಕಾರಿ ಹಾಗೂ ನೌಕರರಲ್ಲಿ ಕಾಯಿದೆ ಸುವ್ಯವಸ್ಥೆಯನ್ನು ಕಾಪಾಡಲು ಪ್ರಯತ್ನಿಸಿ ಜನತೆಯ ಗೌರವಾದರಗಳಿಗೆ ಪಾತ್ರನಾಗುವುದು ಉತ್ತಮ ಮಾರ್ಗವಲ್ಲವೆ? ಸರಕಾರಿ ಕಂಟ್ರಾಕ್ಟುಗಳಲ್ಲಿ ವೆಚ್ಚವಾಗುವ ಹಣದಲ್ಲಿ ನೂರಕ್ಕೆ ೨೦ರಷ್ಟು ಪೋಲು ಹೋಗುತ್ತಿದೆ ಎಂದು ತಜ್ಞರೇ ಅನ್ನುತ್ತಿರುವಾಗ, ಇಂತಹ ಮಾತುಗಳನ್ನು ನಂಬದಿರುವುದಾದರೂ ಸಾಧ್ಯವೆ? ಆದುದರಿಂದಲೇ ಶ್ರೀ ದೇಶಮುಖರಿತ್ತ ಪೂರ್ವಸೂಚನೆಯು ಸ್ವಾಗತಾರ್ಹ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ಬಗ್ಗೆ ನಿರಾಸಕ್ತಿಯನ್ನು ತೋರಿಸಬಾರದು. ಕೇಂದ್ರ ಹಾಗೂ ಕೇರಳೇತರ ರಾಜ್ಯಗಳ ಸರಕಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷವೂ ತನ್ನ ಬಲಸಂವರ್ಧನೆಯ ದೃಷ್ಟಿಯಿಂದ ಈ ಮಾತನ್ನು ಗಣನೆಗೆ ತಂದುಕೊಳ್ಳುವುದು ಅವಶ್ಯವಲ್ಲವೆ?

ಸಂಕ್ಷಿಪ್ತ ಸುದ್ದಿಗಳು

ಸಿಂಹಳದ ಭಾರತೀಯರು

ಸಿಂಹಳದಲ್ಲಿರುವ ಭಾರತೀಯರ ಪ್ರಶ್ನೆಯನ್ನು ಇತ್ತೀಚಿಗೆ ರಾಷ್ಟ್ರಪತಿಗಳು ಸಿಂಹಳ ಸಂದರ್ಶನ ಮಾಡಿದಾಗ, ಸಿಂಹಳೀಯ ಪ್ರಧಾನಿ ಭಂಡಾರ ನಾಯಕೆಯವರು ವಿದೇಶ ಉಪಮಂತ್ರಿ ಶ್ರೀಮತಿ ಲಕ್ಷ್ಮೀ ಮೆನನರೊಡನೆ ತಾವಾಗಿಯೇ ಪ್ರಸ್ತಾಪಿಸಿ ಈ ಸಮಸ್ಯೆಯನ್ನು ತೀವ್ರ ಪರಿಹರಿಸುವ ಉತ್ಸುಕತೆಯನ್ನು ಪ್ರದರ್ಶಿಸಿದ್ದರೆಂದು ಗೊತ್ತಾಗಿದೆ. ಈ ಭಾರತೀಯರು ತಲೆತಲಾಂತರಗಳಿಂದ ಸಿಂಹಳದಲ್ಲಿ ನೆಲಸಿರುವರಲ್ಲದೇ ಅಲ್ಲಿಯೇ ಉದ್ಯೋಗ ದಂಧೆಗಳಲ್ಲಿ ತೊಡಗಿರುವಂತಾದರೂ ತಾವು ಸಿಂಹಳದ ನಾಗರಿಕರೆಂದು ಒಪ್ಪಿಕೊಳ್ಳಲು ಅವರು ಎಂದಿಗೂ ಸಿದ್ಧರಿಲ್ಲ; ಅಲ್ಲದೇ ಅವರಿಗೆ ಭಾರತೀಯ ನಾಗರಿಕತ್ವವನ್ನೀಯುವುದೂ ಸಾಧ್ಯವಿಲ್ಲ. ಹೀಗಾಗಿ ಈ ಜಟಿಲ ಪ್ರಶ್ನೆಯನ್ನು ಸಮಾಧಾನಪೂರ್ವಕವಾಗಿ ಬಿಡಿಸುವ ಆವಶ್ಯಕತೆಗಳ ಕುರಿತು ಶ್ರೀ ಭಂಡಾರನಾಯಕೆ ಮತ್ತು ಶ್ರೀಮತಿ ಲಕ್ಷ್ಮೀ ಮೆನನ್ನರೊಡನೆ ವಿಚಾರ ವಿನಿಮಯವಾಯಿತೆಂದೂ ತಿಳಿಯಬಂದಿದೆ.

ಕಮ್ಯುನಿಸ್ಟರ ಕಾರಭಾರು

ಟಿಬೇಟದ ಧರ್ಮಗುರು ಹಾಗೂ "ರಾಜ"ರಾದ ದಲೈ ಲಾಮಾರು ಅಲ್ಲಿಂದ ಭಾರತಕ್ಕೆ ಬಂದಿಲ್ಲಿ ತಂಗಿರುವಾಗ, ಚೀನೀ ಕಮ್ಯುನಿಸ್ಟರು ಟಿಬೇಟದ ಸ್ವರೂಪವನ್ನೇ ಪೂರ್ಣ ಬದಲಿಸುವ ಘೋಷಣೆಯನ್ನು ಮಾಡಿದ್ದಾರೆ; ಕೆಲಸವನ್ನು ಆ ಮೊದಲೇ ಪ್ರಾರಂಭಿಸಿರಬೇಕು. ಗುಲಾಮರಿಗೆ ಸ್ವಾತಂತ್ರ್ಯ, ಭೂಮಿಗಳ ಹಂಚುವಿಕೆ, ಬಟ್ಟೆ ರದ್ದತಿಯೇ ಮೊದಲಾದ ತಾವು ಪ್ರಾರಂಭಿಸುವೆವೆಂದು ಹೇಳಲಾದ ಸುಧಾರಣೆಗಳು ಇನ್ನೂ ಹಿಂದುಳಿದಿರುವ, ಪ್ರಪಂಚದ ವ್ಯವಹಾರದಿಂದ ಹೊರದೂರವಿರುವ ಟಿಬೇಟಕ್ಕೆ ಅವಶ್ಯವಾದುವೇ ಆಗಿವೆ. ದಲೈ ಲಾಮರೂ ಈ ಮಾತನ್ನು ಒಪ್ಪಿರುತ್ತಾರೆ. ಆದರೆ, ೧೯೬೨ರಲ್ಲಿ ಪ್ರಾರಂಭವಾಗುವುದೆಂಬ ಈ ಸುಧಾರಣೆಗಳು ಮೂರು ವರ್ಷ ಮೊದಲೇ ಏತಕ್ಕಾಗಿ ವ್ಯವಹೃತವಾದುವು ಎಂಬುದನ್ನು ಯೋಚಿಸುವಾಗ, ಕಮ್ಯುನಿಸ್ಟರ ಬಣ್ಣ ಬಯಲಿಗೆ ಬರುವುದು. ಬುದ್ಧನ ಅವತಾರರೆಂದು ತಾವು ಮನ್ನಿಸುವ ದಲೈಲಾಮರ ಅನುಪಸ್ಥಿತಿಯಲ್ಲಿ ನಡೆಯುವ ಈ ಕಾರಭಾರಗಳನ್ನು ಟಿಬೇಟಿಯನರು ಸ್ವೀಕರಿಸಲೇ ಬೇಕಾಗಿದೆ; ಅನ್ಯಗತಿಯಿಲ್ಲ. ಆದರೆ, ದುರುದ್ದೇಶದಿಂದ, ಲಾಮಾರು ಇಲ್ಲದಿರುವಾಗಲೇ ಟಿಬೇಟದ ಸ್ವರೂಪವನ್ನು ಬದಲಿಸಿ ಬಿಟ್ಟರೆ, ತಾವು ಗೆದ್ದೆವೆಂದು ಚೀನ ತಿಳಿದಂತಿದೆ. ಒಂದು ಮಾತು ಮಾತ್ರ ಸತ್ಯ: ಚೀನೀಯರು ಬೌದ್ಧಿಕವಾಗಿ ಈ ಸಾಹಸದಲ್ಲಿ ಜಯಶೀಲರಾಗಬಹುದು; ಆದರೆ, ಈ ಜಯವು ನಿಜವಾಗಿಯೂ ಅವರಿಗೆ ಜಯಶ್ರೀಯನ್ನು ತರಲಾರದು.

ಸಂಸ್ಕೃತರಾಗ ಬೇಕಾದರೆ

ಭಾರತೀಯರಾದ ನಾವು ಸಂಸ್ಕೃತವನ್ನು ಬಿಟ್ಟುಬಿಟ್ಟರೆ, ಅಸಂಸ್ಕೃತರಾಗುತ್ತೇವೆ. ನಮ್ಮ ಮಹತ್ತಿಯೂ ಅದರಲ್ಲಿ ಅಡಗಿರುವ ಸಂಸ್ಕೃತಿಯೂ ಸಂಸ್ಕೃತ ಭಾಷೆಯಿಂದಲೇ ಬಂದುದೆಂದು ಇಡಿ ಜಗತ್ತೇ ತಿಳಿದಿದೆ. ಸಂಸ್ಕೃತಿ ಮತ್ತು ಭಾಷೆಗಳೆರಡರ ದೃಷ್ಟಿಯಿಂದಲೂ ಅದು ರಾಷ್ಟ್ರೀಯ ಏಕತೆಯನ್ನುಂಟುಮಾಡಿದೆ. ರಾಷ್ಟ್ರಭಾಷೆಯಾದ ಹಿಂದಿಯಲ್ಲೂ ಅದು ಗಣನೀಯ ಪ್ರಭಾವ ಬೀರಿದೆ. ಆದರೆ ಸಂಸ್ಕೃತ ಪಂಡಿತರಾಗಿರುವ ಶಿಕ್ಷಣ ಮಂತ್ರಿಗಳೇ ಅದನ್ನು ಹೊಡೆದೋಡಿಸುವ ಪ್ರಯತ್ನ ಮಾಡುತಿದ್ದಾರೆ. ಹೀಗಾದರೆ, ಅಣು ಬಾಂಬು ವಿಮಾನಗಳುಳ್ಳ ನಾಗರಿಕ ಅಸಂಸ್ಕೃತರಾಗಿ ಹೋಗುತ್ತೇವೆ ಎಂದು ಶ್ರೀ ಕೆ. ಎಂ. ಮುನಿಶಿಯವರು ಬೆಂಗಳೂರಲ್ಲಿ ಭಾಷಣಮಾಡುತ್ತ ಅಭಿಪ್ರಾಯಪಟ್ಟರು. ಸಂಸ್ಕೃತವನ್ನು ಬಿಟ್ಟುಬಿಟ್ಟರೆ, ರಾಷ್ಟ್ರವಿಡೀ ಅಚೇತನವಾಗುವಷ್ಟು ಪ್ರಭಾವ ಅದು ರಾಷ್ಟ್ರೀಯರ ಮೇಲೆ ಮಾಡಿರುತ್ತದೆ ಎಂದೂ ಉದ್ಗರಿಸಿದರು.

ಯೋಜನೆ ಕಾರ್ಯಗತವಾಗುವುದು

ದ್ವಿತೀಯ ಪಂಚವಾರ್ಷಿಕ ಯೋಜನೆಯ ಬಗ್ಗೆ ವಿಧಿಸಲಾಗಿಟ್ಟ ೪,೫೦೦ ಕೋಟಿ ರೂಪಾಯಿಗಳಲ್ಲಿ ೧೯೬೧ರ ಮಾರ್ಚಿಗೆ ಮುಗಿಯುವ ಐದು ವರ್ಷಗಳಲ್ಲಿ ೪,೪೦೦ ಕೋಟಿಗಳನ್ನಾದರೂ ಖರ್ಚು ಮಾಡುವುದು ಸಾಧ್ಯವೆಂದು ಇತ್ತೀಚಿಗಿನ ಪರಿಶೀಲನೆಯಿಂದ ಗೊತ್ತಾಗಿದೆ. ಸರ್ವಾಂಗೀಣ ಅಭಿವೃದ್ಧಿಯ ಪ್ರಮಾಣವು ಮಾತ್ರ ನೂರಕ್ಕೆ ೧೫ರಷ್ಟು ಕಡಿಮೆಯಾಗುವುದೆಂದೂ ಇದಕ್ಕೆ ಸರಕುಗಳ ಬೆಲೆಯೇರಿಕೆಯೇ ಕಾರಣವೆಂದೂ ತಿಳಿದು ಬಂದಿದೆ. ಇತ್ತೀಚೆಗಿನ ವಿವಿಧ ರಾಜ್ಯಗಳ ಮುಂಗಡ ಪತ್ರಗಳಲ್ಲಿ ಉಳಿತಾಯವೇ ಹೆಚ್ಚಾಗಿರುವುದರಿಂದ, ರಾಜ್ಯಗಳ ಆದಾಯವು ಏರುತ್ತಿರುವುದರ ದ್ಯೋತಕವೆಂದೂ ಇನ್ನೂ ಈ ಆದಾಯವು ಹೆಚ್ಚುತ್ತ ಬರುವುದೆಂದೂ ಇದು ಆಶಾದಾಯಕ ಚಿಹ್ನೆ ಎಂದೂ ಈ ಪರಿಶೀಲನೆಯಿಂದ ಗೊತ್ತಾಗಿದೆ.

ಸಹಕಾರಿ ಬೇಸಾಯಕ್ಕೆ ವಿರೋಧ

ಸಹಕಾರಿ ಬೇಸಾಯವನ್ನು ವಿರೋಧಿಸುವ ಸಲುವಾಗಿ ಭಾರತೀಯ ಜನಸಂಘವು ಜನಮತ ರೂಪಿಸಲು ನಿರ್ಧರಿಸಿ ಅದರ ವಿರುದ್ಧವಾಗಿ ಆಂದೋಲನವನ್ನು ಹೂಡಲು ನಿಶ್ಚಯಿಸಿದೆ. ಸಹಕಾರಿ ಬೇಸಾಯವನ್ನು ಅಂಗೀಕರಿಸುವುದರಿಂದ ಪ್ರಜಾಪ್ರಭುತ್ವಕ್ಕೆ ಕೊಡಲಿ ಏಟು ಬಿದ್ದಂತಾಗಿ ಅಧಿಕಾರಶಾಹಿಯು ತಲೆಯೆತ್ತಲು ಅವಕಾಶವಿತ್ತಂತಾಗುವುದೆಂದೂ ಇದು ರೈತನ ಸ್ವಾತಂತ್ರ್ಯ ಸ್ವಾವಲಂಬನಗಳಿಗೆ ಕುಠಾರಪ್ರಾಯವಾಗಿದೆ ಎಂದೂ ಆದುದರಿಂದ ಸಹಕಾರಿ ಬೇಸಾಯ ವಿರೋಧಿಸಲಾಗುವುದೆಂದೂ ಹೇಳಲಾಗಿದೆ. ಇದಕ್ಕೆ ಅವಶ್ಯಕವಾಗಿ ಗೊತ್ತುವಳಿಯೊಂದನ್ನು ಸ್ವೀಕರಿಸಿ ಅಕ್ಟೋಬರ ೧ರಿಂದ ೨೧ನೇ ತಾರೀಕಿನವರೆಗೆ ಈ ಆಂದೋಲನವನ್ನು ಸಂಘಟಿಸಲಾಗುವುದು.

ಅಲ್ಲಲ್ಲಿಯ ಸುದ್ದಿಸಾರ

ಜಿಲ್ಲೆಯ ನೆರೆಪೀಡಿತರಿಗೆ ಸಹಾಯ- ಜಿಲ್ಲೆಯಲ್ಲುಂಟಾದ ನೆರೆಯ ಬೆಸೆಯಿಂದಾಗಿ ಪೀಡಿತರಾದವರಿಗೆ ಪರಿಹಾರ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವ ಕುರಿತು ವಿಚಾರ ವಿನಿಮಯ ಮಾಡುವ ಬಗ್ಗೆ ತಾ.11ರಲ್ಲಿ ಮಂಗಳೂರಲ್ಲಿ ಜಿಲ್ಲಾಧಿಕಾರಿಗಳ ಆಫೀಸಿನಲ್ಲಿ ಜಿಲ್ಲಾ ಪರಿಹಾರ ಸಮಿತಿಯ ಸಭೆಯೊಂದು ಜರಗಿತು. ನೆರೆಪೀಡಿತ ಪ್ರದೇಶಗಳ ಸಂಚಾರಾರ್ಥವಾಗಿ ಆಗಮಿಸಿದ್ದ ಮೈಸೂರು ರಾಜ್ಯದ ಆರೋಗ್ಯ ಮಂತ್ರಿ ಡಾ| ಕೆ. ಕೆ. ಹೆಗ್ಡೆಯವರು ಸಭೆಯಲ್ಲಿ ಉಪಸ್ಥಿತರಿದ್ದರು. ಜಿಲ್ಲಾಧಿಕಾರಿಗಳಾದ ಶ್ರೀ ಶ್ರೀ ಸಿ. ಜೆ. ಪದ್ಮನಾಭನವರು ನೆರೆಪೀಡಿತ ಪ್ರದೇಶಗಳ ವಿವರಗಳನ್ನೂ ಆ ವರೆಗೆ ಕೈಗೆಕೊಂಡ ಪರಿಹಾರ ಕ್ರಮಗಳನ್ನೂ ವಿವರಿಸಿದರು. ಮಾತ್ರವಲ್ಲದೆ ಮುಂದೆ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದೆಂದೂ ಸೂಚಿಸಿದರು. ಈ ಸಭೆಯಲ್ಲಿ ಮಂಗಳೂರು ಪೌರಸಭೆ, ಜಿಲ್ಲಾ ಬೋರ್ಡ್, ಜಿಲ್ಲಾ ಅಭಿವೃದ್ಧಿ ಸಂಘಗಳ ಕಡೆಯಿಂದ ಪರಿಹಾರ ನಿಧಿಗೆ ಒಂದೊಂದು ಸಾವಿರ ರೂಪಾಯಿ ಕೊಡುವ ವಾಗ್ದಾನವಾಯಿತು. ದ. ಕ. ಸರಬರಾಯಿ ಮತ್ತು ಮಾರಾಟ ಸಂಘದಿಂದ ಅಲ್ಲದೆ ಶ್ರೀ ಟಿ. ಎ. ಪೈಯವರಿಂದ ರೂ.500ರ ಬಟ್ಟೆಯ ಆಶ್ವಾಸನೆ ದೊರೆಯಿತು. ಜಯಂತಿಲಾಲ್ ಸಹೋದರರು, ಎಫ್. ಎಕ್ಸ್. ಡಿ. ಪಿಂಟೋ, ಎಂ. ಎಲ್. ಎ ಶ್ರೀ ಮಡೇಲ್ ಶ್ರೀನಿವಾಸನಾಯಕ್ ಇವರು ರೂ. 250ರಂತೆ ಕೊಡಲೊಪ್ಪಿದರು. ಅಲ್ಲದೆ ಇನ್ನೂ ಹಲವರು ಹಣ ಮತ್ತು ಬಟ್ಟೆಬರೆಗಳನ್ನು ಕೊಡುವುದಾಗಿ ಹೇಳಿದರು. ಜಿಲ್ಲಾ ಪರಿಹಾರ ಕಮಿಟಿಯ ಅಧ್ಯಕ್ಷರಾದ ಶ್ರೀ ಸಿ. ಜೆ. ಪದ್ಮನಾಭನವರು ಸಾರ್ವಜನಿಕರಿಂದ ಹಣಕಾಸು ಮತ್ತು ವಸ್ತು ಒಡವೆಗಳ ಸಹಾಯಕ್ಕಾಗಿ ವಿನಂತಿ ಮಾಡಿಕೊಂಡರು.

ದುಃಖ ಸೂಚಕ ಸಭೆ—ಉಡುಪಿಯ ಖಾದಿ ಕೈಗಾರಿಕಾ ಸಹಕಾರ ಸಂಘದ ಆವಸರದ ಸಭೆಯೊಂದು ತಾ. 7ರಲ್ಲಿ ಉಪಾಧ್ಯಕ್ಷೆ ಶ್ರೀಮತಿ ಕೆ. ಆಶಾ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಸಂಘದ ಅಧ್ಯಕ್ಷ ಕೊಚ್ಚಿಕಾರ್ ಪಾಂಡುರಂಗ ಪೈಗಳ ನಿಧನಕ್ಕಾಗಿ ದುಃಖ ಸೂಚಕ ಠರಾವನ್ನು ಮಾಡಲಾಯಿತು. ಬಳಿಕ ಶ್ರೀಮತಿ ಆಶಾ ಭಟ್ಟರು ಸಂಘದ ಅಧ್ಯಕ್ಷರಾಗಿಯೂ ಶ್ರೀ ಎ. ಜೆ. ಅಲ್ಸೆಯವರು ಉಪಾಧ್ಯಕ್ಷರಾಗಿಯೂ ಚುನಾಯಿಸಲ್ಪಟ್ಟರು.

ಮಂಗಳೂರು ಪತ್ರಿಕೋದ್ಯೋಗಿ ಸಂಘ- ಇದರ ಸಭೆಯೊಂದು ಶ್ರೀ ಕೆ. ಆರ್. ಆಚಾರ್ಯ ಎಂ. ಪಿ. ಇವರ ಅಧ್ಯಕ್ಷತೆಯಲ್ಲಿ ತಾ.5ರಲ್ಲಿ ನೆರವೇರಿತು. ಆರಂಭದಲ್ಲಿ ಹಿಂದೂ ದಿನ ಪತ್ರಿಕೆಯ ಸಂಪಾದಕ ಶ್ರೀ ಕಸ್ತೂರಿ ಶ್ರೀನಿವಾಸನ್ ಇವರ ನಿಧನಕ್ಕಾಗಿ ದುಃಖ ಸೂಚಕ ಠರಾವು ಮಂಜೂರಾಯಿತು. ಬಳಿಕ ಕೇರಳದಲ್ಲಿಯ ಚಳವಳ ರಾಜಾಜಿಯವರ ಸ್ವತಂತ್ರಪಕ್ಷದ ಹುಟ್ಟು ಆಹಾರ ಪದಾರ್ಥಗಳ ಬೆಲೆ ಹೆಚ್ಚಳ ಮೊದಲಾದ ವಿಚಾರಗಳ ಕುರಿತು ಚರ್ಚೆ ನಡೆಯಿತು.

ಮಂಗಳೂರು ಯುವಕ ಕಾಂಗ್ರೆಸ್—ಇದರ ಮಹಾಸಭೆಯು ತಾ.5ರಲ್ಲಿ ಶ್ರೀ ಕೆ. ಆರ್. ಆಚಾರ್ ಎಂ. ಪಿ. ಇವರ ಹಿರಿತನದಲ್ಲಿ ಜಿಲ್ಲಾ ಕಾಂಗ್ರೆಸ್ ಆಫೀಸಿನಲ್ಲಿ ನೆರವೇರಿತು. ಲೆಕ್ಕ ಪತ್ರಗಳ ಮಂಜೂರಾತಿಯಾದ ಮೇಲೆ ಹೊಸಕಾರ್ಯಕಾರಿ ಮಂಡಳಿಯ ಚುನಾವಣೆ ನಡೆಯಿತು ಅಧ್ಯಕ್ಷ ಶ್ರೀ ಆಚಾರ್ಯರು ಯುವಕರ ಸಂಘ ಪ್ರೇಮದ ಕುರಿತು ಭಾಷಣವಿತ್ತರು.

ಉಡುಪಿ ನಗರಸಭೆ—ಇದರ ಸಾಮಾನ್ಯ ಸಭೆಯೊಂದು ನಗರ ಸಭಾಧ್ಯಕ್ಷ ಡಾ| ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ತಾ. 6ರಲ್ಲಿ ನೆರವೇರಿತು ಡಾ| ಪಿ. ಜಿ. ಆಚಾರ್ಯರ ಪ್ರಶ್ನೆಗಳಿಗೆ ಉತ್ತರ ಕೊಟ್ಟ ಮೇಲೆ ಪಬ್ಲಿಕ್ ಹೆಲ್ತ್ ಕಮಿಟಿ, ಎಜ್ಯುಕೇಶನ್ ಕಮಿಟಿ ಮತ್ತು ಅಪೀಲ್ ಕಮಿಟಿಗೆ ಶ್ರೀಗಳಾದ ಇರ್ವಿನ್ ಅಂದ್ರಾಡೆ, ಪಿ. ಆರ್. ಶೆಣೈ, ಟಿ. ಎ. ವಾಸುದೇವನ್ ಅನುಕ್ರಮವಾಗಿ ಆರಿಸಲ್ಪಟ್ಟರು.

ಪೌರ ಸಭೆಗೆ ತನ್ನದೇ ಆದ ಸ್ವಂತ ಕಟ್ಟಡ ನಿರ್ಮಿಸಲು ಸಾಲವಾಗಿ 50 ಸಾವಿರ ಗ್ರೇಂಟ್ ಆಗಿ 50 ಸಾವಿರ ರೂಪಾಯಿ ಕೊಡುವಂತೆ ಸರಕಾರವನ್ನು ವಿನಂತಿಸಬೇಕೆನ್ನುವ ನಗರ ಸಭಾಧ್ಯಕ್ಷರ ಸೂಚನೆಗೆ ಒಪ್ಪಿಗೆ ದೊರೆಯಿತು. ನಗರ ಸಭೆಯು ಪ್ರಾರಂಭವಾಗಿ 25 ವರ್ಷಗಳಾದ್ದರಿಂದ ಬರುವ ವರ್ಷ ಅದರ ರೌಪ್ಯ ಮಹೋತ್ಸವವನ್ನು ಯೋಗ್ಯ ರೀತಿಯಲ್ಲಿ ಜರಗಿಸುವಂತೆ ಕಾರ್ಯಕ್ರಮ ತಯಾರಿಸಲು ಅಧ್ಯಕ್ಷರಿಗೆ ಅಧಿಕಾರ ಕೊಡಲಾಯಿತು. ಅಲ್ಲದೆ ಸರಕಾರದಿಂದ ಕಿನ್ನಿಮೂಲ್ಕಿ ಮತ್ತು ಮುನ್ಸಿಪಲ್ ನೋರ್ತ್ ಸ್ಕೂಲುಗಳ ಕಟ್ಟಡಗಳಿಗಾಗಿ ರೂ. 25,000ದಂತೆ ಪಡೆಯಬೇಕೆನ್ನುವ ಗೊತ್ತುವಳಿಯೂ ಯಿತು. ಉಪಾಧ್ಯಾಯರಿಗೆ ಹೊಸ ಸ್ಕೇಲಿನಂತೆ ಸಂಬಳ ಮತ್ತು ತುಟ್ಟಿ ಭತ್ತೆ ತೆರುವ ಬಗ್ಗೆ ಬೇಕಾಗುವ ಹಣವನ್ನು ಸರಕಾರವು ಗ್ರೇಂಟ್ ರೂಪದಲ್ಲಿ ಕೊಡುವಂತೆ ಕೇಳಿಕೊಳ್ಳಬೇಕೆಂದಾಯಿತು.

ಸುರತ್ಕಲ್‌ನಲ್ಲಿ ಗೋ ಶಾಲೆ—ಸುರತ್ಕಲ್ ಕುತ್ತೆತ್ತೂರಿನ ಸಮೀಪ ಕಾಟಿಪಳ್ಳದಲ್ಲಿ ಗೋ ಶಾಲೆಯೊಂದನ್ನು ತೆರೆಯಲು ಸರಕಾರವು 50 ಎಕ್ರೆ ಸ್ಥಳವನ್ನೂ ಪ್ರತ್ಯೇಕಿಸುವ ಸೂಚನೆಯನ್ನು ಸ್ವಾಗತಿಸಿಯೂ ಅಲ್ಲಿ25000 ರೂಪಾಯಿ ವೆಚ್ಚದಲ್ಲಿ ಗೋ ಶಾಲೆಯೊಂದನ್ನು ತೆರೆಯಲು ಧನ ಸಂಗ್ರಹ ಮಾಡಬೇಕೆಂದೂ ಶ್ರೀ ಎಂ. ಕೆ. ದೇವರಾಜರ ಅಧ್ಯಕ್ಷತೆಯಲ್ಲಿ ತಾ. 5ರಲ್ಲಿ ಸೇರಿದ ಮಂಗಳೂರು ಗೋ ರಕ್ಷಣಾ ಸಮಿತಿಯು ನಿರ್ಣಯ ಮಾಡಿರುತ್ತದೆ. ನಿಧಿ ಸಂಗ್ರಹಕ್ಕಾಗಿ ಉಪಸಮಿತಿಯೊಂದು ರಚಿಸಲ್ಪಟ್ಟಿರುವುದಲ್ಲದೆ. ಈಗಾಗಲೇ ಸುಮಾರು 10,000 ರೂ. ವಾಗ್ದಾನವಾಗಿರುವುದೆಂದೂ ತಿಳಿದು ಬರುತ್ತದೆ.

ಕೆನರಾ ಬೇಂಕ್ ನೆರೆ ಪರಿಹಾರ ನಿಧಿ—ಮೈಸೂರು ಪ್ರಾಂತ್ಯದ ದಕ್ಷಿಣ ಕನ್ನಡ, ಉತ್ತರ ಕನ್ನಡ ಶಿವಮೊಗ್ಗ ಮತ್ತಿತರ ಭಾಗಗಳಲ್ಲಿ ಸಂಭವಿಸಿದ ನೆರೆ ಪೀಡಿತರಿಗೆ ಸಹಾಯ ನೀಡುವ ಸಲುವಾಗಿ ಪ್ರಾಂತ್ಯದ ಪ್ರಮುಖ ಬೇಂಕಿಂಗ್ ಸಂಸ್ಥೆಯಾದ ಕೆನರಾ ಬೇಂಕು ಸಾರ್ವಜನಿಕರಿಂದ ಒಂದು ಲಕ್ಷ ರೂಪಾಯಿ ನಿಧಿಯನ್ನು ಸಂಗ್ರಹಿಸುವ ಯೋಜನೆಯನ್ನು ಕೈಗೊಂಡಿದೆ. ಬೇಂಕು ಕೂಡಾ ಅತ್ಯಧಿಕ ಹಣವನ್ನು ಈ ನಿಧಿಗೆ ಕೊಡಲಿದೆ. ಈ ಬಗ್ಗೆ ಡೈರೆಕ್ಟರರ ಸಭೆಯನ್ನು ಬೇಗನೇ ಕರೆಯಲಿದೆ. ಈ ಪರಿಹಾರ ನಿಧಿಯನ್ನು ನೆರೆ ಪೀಡಿತರಿಗೆ ಹಂಚುವ ಬಗ್ಗೆ ರಾಜ್ಯದ ಮುಖ್ಯ ಮಂತ್ರಿಯವರಿಗೆ ಒಪ್ಪಿಸಲಾಗುವುದು.

ಕಟಪಾಡಿ–ಇದೇ ತಾ. 12ರಲ್ಲಿ ಸಮಾಜ ಮಂದಿರದಲ್ಲಿ ಅಂಬಾಡಿಯ ಪಾಂಗಾಳ ವರದರಾಯ ನಾಯ್ಕ್ ಹಾಯರ್ ಎಲಿಮೆಂಟರಿ ಶಾಲೆಯ 6ನೇ ತರಗತಿಯನ್ನು ತೆರೆಯುವ ಸಮಾರಂಭವು ಡಾ| ಕೆ. ಜೆ. ಕಿಣಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲಾ ಇನ್ಸ್‌ಪೆಕ್ಟರ್ ಶ್ರೀ ವೈ. ಗೋಪಾಲ್ ಅವರು ಹೊಸತರಗತಿಯ ಉದ್ಘಾಟನೆ ಮಾಡಿದರು. ಆರಂಭದಲ್ಲಿ ಶ್ರೀ ಪಿ. ರಾಮದಾಸ ನಾಯ್ಕರು ಸ್ವಾಗತ ಭಾಷಣಮಾಡಿದರು. ಸಭಿಕರಲ್ಲಿ ಹಲವರು ಶುಭ ಕೋರಿ ಮಾತನಾಡಿದರು.

ಆಂದೋಲನ ಹಿಂದೆಗೆದರೆ

ಕೇರಳದಲ್ಲಿನ ಆಂದೋಲನವು ಯಥಾ ಪ್ರಕಾರ ಮುಂದುವರಿಯುತ್ತಿದೆ ನಂಬೂದರಿಪಾದರೂ ವಿರೋಧೀ ನಾಯಕ ಶ್ರೀ ಶಂಕರನರೂ ರಾಷ್ಟ್ರಪತಿಗಳನ್ನು ಭೇಟಿಯಾಗಿ ತಮ್ಮ ತಮ್ಮ ವಾದವನ್ನು ಮಂಡಿಸಿದರು. ಸರಕಾರದ ವಿರುದ್ಧವಾಗಿ ತಯಾರಿಸಲಾದ ಆಪಾದನಾಪತ್ರವನ್ನು ರಾಷ್ಟ್ರಪತಿಗಳಿಗೆ ಶ್ರೀ ಶಂಕರನರು ಒಪ್ಪಿಸಿದ್ದಾರೆ. ನಂಬೂದರಿ ಪಾದರು ಪ್ರಧಾನಿ ನೆಹರೂರವರನ್ನೂ ಭೆಟ್ಟಿಮಾಡಿ ವಿಚಾರ ವಿನಿಮಯ ಮಾಡಿಕೊಂಡರೆಂದೂ ತಿಳಿಯುತ್ತದೆ. ಕೇರಳದಲ್ಲಿ ವಿರೋಧೀ ಪಕ್ಷಗಳು ಆರಂಭಿಸಿರುವ ಆಂದೋಲನವನ್ನು ನಿಲ್ಲಿಸಿದರೆ, ಮರುಚುನಾವಣೆಯನ್ನು ನಡೆಸುವ ಪ್ರಶ್ನೆಯನ್ನೂ ಪರಿಶೀಲಿಸಲಾಗುವುದು ಎಂಬ ವಾರ್ತೆಯೂ ಹರಡಿದೆ. ಆದರೆ, ಈ ಉದ್ಗಾರವು ಎಂತಾದರೂ ಒಮ್ಮೆಗೆ ಆಂದೋಲನ ಹಿಂದುಳಿಯಲಿ ಎಂಬ ಒಂದೇ ಕಾರಣದಿಂದಲ್ಲದೆ ಚುನಾವಣೆ ನಡೆಸುವ ಇರಾದೆಯಿಂದಲ್ಲ ಎಂಬುದಕ್ಕೆ ಬೇರೆ ಪ್ರಮಾಣ ಬೇಡ.

ವಿಶ್ವವಿದ್ಯಾಲಯದ ಸಹಾಯಧನಾಯೋಗದ ಅಧ್ಯಕ್ಷ ಡಾ| ಸಿ. ಡಿ. ದೇಶಮುಖರು.

ಮಹಾಜನರಲ್ಲಿ ವಿನಂತಿ

ಇತ್ತೀಚೆಗೆ, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಮತ್ತು ಕುಂದಾಪುರ ತಾಲೂಕಿನಲ್ಲಿ ಘೋರ ನೆರೆಯು ನೂರಾರು ಮನೆಗಳನ್ನು ನಾಶಗೊಳಿಸಿ ಹಲವಾರು ಕುಟುಂಬಗಳನ್ನು ನಿರ್ಗತಿಕರನ್ನಾಗಿ ಮಾಡಿಯದೆ. ಮನೆ, ಮಠಗಳು, ಬಾಳುವೆಗಳು ನೀರು ಪಾಲಾಗಿವೆ. ಬೆಳೆಗಳಿಗೂ ನಷ್ಟವಾಗಿದೆ. ಈಗಾಗಲೇ ಸರಕಾರವು ಮತ್ತು ಸ್ಥಳೀಯ ಉದಾರಿ ಮಹನೀಯರು ನೆರೆಯ ಹಾವಳಿಯಿಂದ ಪೀಡಿತರಾದವರಿಗೆ ಪರಿಹಾರನೀಡಲು ಬೇಕಾದ ಹಣ ಸಂಗ್ರಹಿಸಿ, ಊಟದ ಬಗ್ಗೆ ವ್ಯವಸ್ಥೆಮಾಡಿ ಅವರಿಗೆ ಪರಿಹಾರ ನೀಡಲು ಶಕ್ತಿಮೀರಿ ಯತ್ನಿಸಿರುವರು, ನೆರೆಯಿಂದ ನಿರಾಶ್ರಿತರಾದವರಿಗೆ ಬೇಕಾದ ಸಹಾಯ, ಸಹಕಾರ ಕೊಡಲು ತಾ.11-7-59 ರಂದು, ಮೈಸೂರು ರಾಜ್ಯದ ಆರೋಗ್ಯ ಮಂತ್ರಿಗಳ ನೇತೃತ್ವದಲ್ಲಿ ಜರಗಿದ, ಜಿಲ್ಲಾ ಪರಿಹಾರ ಸಮಿತಿಯು (Dt. Emergency Relief Organisation) ಈ ದುರಂತಕ್ಕೊಳಗಾದವರಿಗೆ ದೇಶದ ಉದಾರ ಹೃದಯಗಳಾದ ತಮ್ಮ ನೆರವಿನಿಂದ ನಿರಾಶ್ರಿತರಾಗಿ ಬಳಲಿ ಬೆಂಡಾಗಿರುವ ಸಂಸಾರಿಗಳು ಚೇತರಿಸುವಂತೆ, ಬಡವ ಬಲ್ಲಿದನೆಂಬ ಭೇದ ಭಾವವನ್ನು ತೊರೆದು ನಾವೆಲ್ಲರೂ ಒಂದೇ ಎಂಬ ಒಮ್ಮತದಿಂದ ನೆರೆ ಪೀಡಿತರಿಗೆ ಸರ್ವ ವಿಧದ ಸಹಕಾರವನ್ನೀಯಲು ಮಹಾ ಜನರನ್ನು ವಿನಂತಿಸಿಕೊಳ್ಳಬೇಕೆಂದು ನಿಶ್ಚಯಿಸಲಾಯಿತು.

ಭವ್ಯ ಭಾರತದ ಉದಾರ ಹೃದಯಿಗಳಾದ ತಾವು ಈ ನಿಧಿಗೆ ಹಣ, ದವಸಧಾನ್ಯ, ವಸ್ತ್ರ ಉಡುಗೆ ಮೊದಲಾದುವನ್ನು ಶಕ್ತಿಮೀರಿ ಕೊಟ್ಟು, ತನ್ಮೂಲಕ ಉಡುಪಿ ಮತ್ತು ಕುಂದಾಪುರ ತಾಲೂಕಿನವರ ಕಷ್ಟ—ನಷ್ಟಗಳ ನಿವಾರಣೆಗೆ ಸಹಕರಿಸಬೇಕಾಗಿ ವಿನಂತಿಸುತ್ತೇವೆ. ತಮ್ಮ ಕೊಡುಗೆಯನ್ನು, ಕಾರ್ಯದರ್ಶಿ ಜಿಲ್ಲಾ ಪರಿಹಾರ ಸಮಿತಿ ಮತ್ತು ಎಕ್ಸಿಕ್ಯೂಟಿವ್ ಇಂಜಿನೀಯರ್, ಪಿ. ಡಬ್ಲ್ಯೂ. ಡಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, ಅಥವಾ ಸಂಬಂಧ ಪಟ್ಟ ತಾಲೋಕು ತಹಶೀಲ್ದಾರರವರಿಗೆ ಕಳುಹಿಸಬೇಕಾಗಿ ಕೇಳಿ ಕೊಳ್ಳುತ್ತೇವೆ.

ಸಿ. ಜೆ. ಪದ್ಮನಾಭ,

ಡಿಪ್ಯೂಟಿ ಕಮಿಷನರ್ ಮತ್ತು ಅಧ್ಯಕ್ಷ
ಜಿಲ್ಲಾ ಪರಿಹಾರ ಸಮಿತಿ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—
ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.
ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ
ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ
ಈಗ ೧೨ನೇ ಮುದ್ರಣವನ್ನು ಕಂಡಿದೆ–
ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,
ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦-೬-೦ (ಟ. ಖರ್ಚು ಬೇರೆ).
ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ವ್ಯಕ್ತಿ ಪರಿಚಯ

ವೀರನಾರೀಮುಕುಟಮಣಿ ರಾಣಿ ರುದ್ರಮ್ಮ

ಬಳೆ ತೊಡುವ ಕೈ ರಾಜ್ಯವಾಳಿತು; ತೊಟ್ಟಿಲು ತೂಗುವ ಕೈ ಕತ್ತಿ ಹಿಡಿಯಿತು,

ಆಂಧ್ರ ಪ್ರದೇಶದಲ್ಲಿ ಇಂದಿಗೆ ಸುಮಾರು ೭೦೦ ವರ್ಷಗಳ ಹಿಂದೆ, ಅಂದರೆ ಹದಿಮೂರನೇ ಶತಮಾನದಲ್ಲಿ ಕಾಕತೀಯ ವಂಶದ ರಾಜರು ರಾಜ್ಯವಾಳುತ್ತಿದ್ದರು. ಅವರ ರಾಜಧಾನಿ ಇಂದು 'ವಾರಂಗಲ್' ಎಂದು ಕರೆಯಲ್ಪಡುವ 'ಓರುಗಲ್'" ಆಗಿತ್ತು. ಇದು ಹೈದರಾಬಾದಿನಲ್ಲಿದೆ. ಈ ಕಾಕತೀಯ ರಾಜರುಗಳಲ್ಲಿ ರಾಜಾ ಗಣಪತಿದೇವ ಬಹಳ ಪ್ರಸಿದ್ಧನಿದ್ದ.

ಗಣಪತಿದೇವ ಮಹಾ ವೀರನಿದ್ದಂತೆ, ದೊಡ್ಡ ವಿದ್ಯಾಪ್ರೇಮಿಯೂ ಆಗಿದ್ದ. ಆತ ಪಂಡಿತರನ್ನು ಬಹುವಾಗಿ ಆದರಿಸುತಿದ್ದ. ಆತನ ಆಳಿಕೆಯಲ್ಲಿ ಪ್ರಜೆಗಳು ಬಹಳ ಸುಖಿಗಳಾಗಿದ್ದರು.

ಇಂತಹ ಓರ್ವ ಯೋಗ್ಯ ಶಾಸಕನಿಗೆ ಗಂಡು ಸಂತಾನವಿಲ್ಲದುದೊಂದು ದೊಡ್ಡ ಕೊರತೆಯಾಗಿತ್ತು. ರಾಜ ತನ್ನ ಅಧಿಕಾರವನ್ನು ಯಾರಿಗೆ ಒಪ್ಪಿಸುವುದೆಂಬ ವಿಚಾರವಾಗಿ ಯಾವಾಗಲೂ ಚಿಂತಿಸುತ್ತಿದ್ದ. ಆತನಿಗಿರುವ ಓರ್ವಳೇ ಪುತ್ರಿ ರುದ್ರಮ್ಮ. ರಾಜನ ಮಂತ್ರಿ ಗೋವಿಂದಜೀ ರಾಜಕುಮಾರಿಗೆ ಎಲ್ಲ ವಿಧದ ವಿದ್ಯೆಗಳನ್ನೂ ಕಲಿಸಿದನು. ರಾಜನೀತಿಯ ಸಂಗಡವೇ ಬಿಲ್ಲುವಿದ್ಯೆ, ಖಡ್ಗವಿದ್ಯೆ ಮತ್ತು ಕುದುರೆ ಸವಾರಿ ಇತ್ಯಾದಿ ವಿಷಯಗಳಲ್ಲಿಯೂ ಆಕೆಗೆ ಶಿಕ್ಷಣ ಕೊಡಲ್ಪಟ್ಟಿತು. ಕೆಲವೇ ಸಮಯದಲ್ಲಿ ರುದ್ರಮ್ಮ ಸರ್ವ ವಿದ್ಯೆಗಳಲ್ಲೂ ನಿಪುಣಳಾದಳು. ಅವಳು ಕಾಡಿಗೆ ಹೋಗಿ ನಿರ್ಭಯಳಾಗಿ ಹಿಂಸ್ರ ಪಶುಗಳ ಬೇಟೆಯಾಡುತ್ತಿದ್ದಳು. ರುದ್ರಮ್ಮ ಎಂತಹ ಶಿಕ್ಷಣ ಹೊಂದಿದ್ದಳೆಂದರೆ ಆಕೆಯು ಅನುಕೂಲಕ್ಕೆ ತಕ್ಕಂತೆ ವೇಷಭೂಷಣ ಧರಿಸುತ್ತಿದ್ದಳಲ್ಲದೇ ಯಾವಾಗಲೂ ಶಸ್ತ್ರಧಾರಿಯಾಗಿಯೇ ಇರುತ್ತಿದ್ದಳು.

ರಾಜಾ ಗಣಪತಿದೇವ ತನ್ನ ಈ ವೀರ ಪುತ್ರಿಯನ್ನು ನೋಡಿಕೊಂಡು ಪ್ರಸನ್ನನಾಗಿರುತ್ತಿದ್ದ. ಆತ ತನ್ನ ದರ್ಬಾರಿನಲ್ಲಿ ಆಕೆಯನ್ನು ತನ್ನ ಹತ್ತಿರವೇ ಕುಳ್ಳಿರಿಸಿಕೊಂಡು, ಅವಳು ಸಹ ರಾಜಕಾರ್ಯದಲ್ಲಿ ಭಾಗವಹಿಸಲು ಅವಕಾಶ ನೀಡುತ್ತಿದ್ದ.

ಆ ಸಮಯದಲ್ಲಿ ಗಣಪತಿದೇವ ದಕ್ಷಿಣದ ಅರಸರನ್ನು ಸೋಲಿಸಿ ಕಾಂಚಿಪುರದವರೆಗೆ ತನ್ನ ಅಧೀನಕ್ಕೊಳಪಡಿಸಿ ಕೊಂಡಿದ್ದ. ಕಾಂಚಿಪುರದಲ್ಲಿ ಗಣಪತಿ ದೇವನ ಓರ್ವ ಪ್ರತಿನಿಧಿ 'ಗಂಡಗೋಪಾಲ' ರಾಜ್ಯದ ವ್ಯವಸ್ಥೆ ನೋಡಿ ಕೊಳ್ಳುತ್ತಿದ್ದ. ರಾಜ ವೃದ್ಧನಾದುದನ್ನು ನೋಡಿ ದಕ್ಷಿಣದ ರಾಜರುಗಳು ಪುನಃ ತಲೆಯೆತ್ತಿ ಕಾಂಚಿಪುರದ ಆತನ ಪ್ರತಿನಿಧಿಯನ್ನು ಓಡಿಸಿದರು. ಅವರು ಮೆಲ್ಲಮೆಲ್ಲನೆ ಆಂಧ್ರ ದೇಶದ ಒಳಗೂ ಬರಹತ್ತಿದರು.

ವೃದ್ಧ ಗಣಪತಿದೇವ ಇದನ್ನು ಕೇಳಿ ತುಂಬಾ ದುಃಖಿತನಾದ. ಆದರೆ ವೀರಾಂಗನೆ ರುದ್ರಮ್ಮ ತನ್ನ ತಂದೆಯನ್ನು ಸಾಂತ್ವನಗೊಳಿಸಿ, ದಕ್ಷಿಣದ ಅರಸರನ್ನು ಹಿಂದಟ್ಟಿ ಬರುವ ಭಾರವನ್ನು ತನಗೊಪ್ಪಿಸಬೇಕೆಂದು ಪ್ರಾರ್ಥಿಸಿದಳು. ಆತ ಇದಕ್ಕೆ ಒಪ್ಪಿಗೆ ನೀಡಿದ.

ರುದ್ರಮ್ಮ ಒಂದು ದೊಡ್ಡ ಸೇನೆ ತೆಗೆದುಕೊಂಡು ಮುಂಬೊತ್ತಿ ಬರುತ್ತಲಿದ್ದ ರಾಜರುಗಳನ್ನು ಹತ್ತಿಕ್ಕಲು ಧಾವಿಸಿದಳು. ರಣಭೂಮಿಯಲ್ಲಿ ರುದ್ರಮ್ಮನ ವೀರತ್ವದಿದಿರು ಶತ್ರುಗಳು ಮಣಿದು ಕಾಲುಕಿತ್ತರು! ಅವರೆಲ್ಲರೂ ಸೋತು ಪುನಃ ಗಣಪತಿದೇವನ ಅಧೀನತೆಯನ್ನು ಒಪ್ಪಿಕೊಂಡರು.

ರಾಜಾ ಗಣಪತಿದೇವ ತನ್ನ ವೀರ ಪುತ್ರಿಯ ವಿವಾಹವನ್ನು ಚಾಲುಕ್ಯ ವಂಶದ ರಾಜನಾದ ವೀರಭದ್ರೇಶ್ವರನೊಂದಿಗೆ ನೆರವೇರಿಸಿದ. ರಾಣಿ ರುದ್ರಮ್ಮಳಿಗೆ 'ಮುಮ್ಮಡಾಂಬಾ' ಮತ್ತು 'ರುಯ್ಯಾಂಬಿಕೆ'ಯೆಂಬೀರ್ವರು ಪುತ್ರಿಯರು ಜನಿಸಿದರು. ಮಕ್ಕಳು ಹುಟ್ಟಿದ ಸ್ವಲ್ಪ ಸಮಯದಲ್ಲೇ, ಅನಿರೀಕ್ಷಿತವಾಗಿ ಯುದ್ಧವೊಂದರಲ್ಲಿ 'ವೀರಭದ್ರೇಶ್ವರ' ಮೃತಿ ಹೊಂದಿದ. ಪಾಪ—ರುದ್ರಮ್ಮ ವಿಧವೆಯಾದಳು. ತನ್ನ ಹಿರಿಯ ಪುತ್ರಿ ಮುಮ್ಮಡಾಂಬಾಳ ಪುತ್ರ ಪ್ರತಾಪ ರುದ್ರನನ್ನು ಆಕೆ ದತ್ತಕ್ಕೆ ತೆಗೆದುಕೊಂಡಳು.

ಗಣಪತಿ ದೇವನ ಮರಣದ ನಂತರ ಆತನ ಇಚ್ಛೆಯಂತೆ ಮಂತ್ರಿ ಗೋವಿಂದಜೀ ರುದ್ರಮ್ಮಳಿಗೆ ರಾಜ್ಯಾಭಿಷೇಕ ಗೈದ. ಆದರೆ ಓರ್ವ ಸ್ತ್ರೀ ಸಿಂಹಾಸನದ ಮೇಲೆ ಕುಳಿತಿರುವುದು ರಾಜ್ಯದ ಕೆಲವರಿಗೆ ಸರಿಬೀಳಲಿಲ್ಲ. 'ಮುರಾರಿ' ಮತ್ತು 'ಹರಿಹರದೇವ'ರೆಂಬ ಇಬ್ಬರು ವ್ಯಕ್ತಿಗಳು ರಾಣಿಯ ವಿರುದ್ಧ ಒಳಸಂಚು ಹೂಡಲೆತ್ನಿಸಿದರು. ಮಂತ್ರಿ ಗೋವಿಂದಜೀ ಅದನ್ನರಿತು, ಅವರ ಒಳಸಂಚನ್ನುರುಳಿಸಿಬಿಟ್ಟ. ಆದರೆ ಸಮಯ ಸಾಧಿಸಿ ಮುರಾರಿ ಮತ್ತು ಹರಿಹರ ದೇವರು ಒಂದು ಸೇನೆಯೊಂದಿಗೆ ರಾಜ್ಯದಿಂದ ಓಡಿಹೋಗಿ ಓರುಗಲ್ಲಿನ ಹಳೆಯ ಶತ್ರುಗಳಾದ ಯಾದವ ರಾಜರೊಡನೆ ಸೇರಿಕೊಂಡರು. ಇಂತಹ ಸಂಕಟದ ಸಮಯದಲ್ಲಿ ಕೂಡ ರಾಣಿ ರುದ್ರಮ್ಮ ತನ್ನ ಕರ್ತವ್ಯದಿಂದ ಸ್ವಲ್ಪವೂ ವಿಚಲಿತಳಾಗಲಿಲ್ಲ.

ಯಾದವ ರಾಜರ ಕಡೆಯ ಆಕ್ರಮಣವನ್ನೆದುರಿಸಲು ರುದ್ರಮ್ಮ ಎಲ್ಲ ತರದ ಸಿದ್ಧತೆಗಳನ್ನು ನಡೆಸಿದಳು. ಸೇನೆಯಲ್ಲಿ ಹೆಚ್ಚಳವಾಯಿತು; ಕೋಟೆಯ ದುರಸ್ತಿ ಕಾರ್ಯ ನಡೆಯಿತು. ಯೋಚಿಸಿದಂತೆ ಯಾದವರು ಓರುಗಲ್ಲನ್ನು ಆಕ್ರಮಿಸಿದರು. ಆ ಸಮಯದಲ್ಲಿ ರುದ್ರಮ್ಮ ಕೋಟೆಯಿಂದ ಹೊರಗುಳಿದಿದ್ದಳು. ಪುನಃ ಕೋಟೆಯ ಒಳಗೆ ಶತ್ರುಗಳು ಅಧಿಕ ಸಂಖ್ಯೆಯಿಂದ ನುಗ್ಗಿದರು. ಕೂಡಲೇ ರುದ್ರಮ್ಮ ಸೇನಾ ಸಹಿತಳಾಗಿ ಕೋಟೆಯ ಹಿಂದಿನ ದಾರಿಯಾಗಿ ಒಳಪ್ರವೇಶಿಸಿದಳು. ಎರಡೂ ಕಡೆಯ ಹಲವಾರು ಮಂದಿ ಮಡಿದನಂತರವೂ ರುದ್ರಮ್ಮನ ಕೈಮೇಲಾಗಿ ಯಾದವ ರಾಜರು ಸೋತುಹೋದರು! ಈ ಯುದ್ಧದಲ್ಲಿ ರುಯ್ಯಾಂಬಿಕೆ ಸಹಾ ಪುರುಷವೇಷ ಧರಿಸಿ ರುದ್ರಮ್ಮಳಿಗೆ ಸಹಕರಿಸಿದ್ದರಿಂದ ಆಕೆಗೆ ! ವಿಜಯದೊರೆಯಿತು.

ನಿಸ್ಸಂದೇಹವಾಗಿಯೂ ರಾಣಿ ರುದ್ರಮ್ಮಳಿಗೆ ಭಾರತದ ವೀರಾಂಗನೆಯರಲ್ಲಿ ಒಂದು ಮಹತ್ವಪೂರ್ಣ ಉನ್ನತಸ್ಥಾನ ದೊರೆಯುತ್ತದೆ. (ಹಿಂದಿಯಿಂದ)

—"ಜನ್ನ" ಮರವಂತೆ.

ಬಾಲ ವೃಂದಾವನ

(೫ನೇ ಪುಟದಿಂದ)

ರವನ್ನೂ ಕೊಡಲಿಲ್ಲ ಆದರೆ ಡೈರೆಕ್ಟರರು ತಮ್ಮತಮ್ಮೊಳಗೆ ಆಶ್ಚರ್ಯಕರ ನೋಟಗಳನ್ನು ವಿನಿಮಯ ಮಾಡಿಕೊಂಡರು. ಒಬ್ಬರನ್ನೊಬ್ಬರು ಆಶ್ಚರ್ಯದಿಂದ ನೋಡಲಾರಂಭಿಸಿದರು. ವೈಟರನನ್ನು ಕರೆದರು ಮತ್ತು ಆ ಪಾನೀಯ ತರಲು ಹೇಳಿದರು. ಊಟ ಮುಗಿದು ಎಲ್ಲರೂ ಹೊರಡಬೇಕಾಗಿತ್ತು. ಆಗ ಅಧ್ಯಕ್ಷರು ಯುವಕನೊಡನೆ ಹೇಳಿದರು. "ನಾವು ನಮ್ಮ ವ್ಯಾಪಾರವನ್ನು ಕೋಕ್‌ಟೈಲ್ ಪಾನೀಯದ ಶಕ್ತಿಯಿಂದ ನಡೆಸಲಾರೆವು. ನಮಗೆ ಶುದ್ಧ ಮನದ, ದುಶ್ಚಟಗಳಿಂದ ದೂರವಿರುವ ಆರೋಗ್ಯವಂತ ಯುವಕನೇ ಬೇಕು. ನೀವು ತೆರಳಬಹುದು".

ಯುವಕನಿಗೆ ಸಿಡಿಲು ಬಡಿದಂತಾಯಿತು. ತನ್ನ ಸಂಕೋಚ ಹಾಗೂ ಅಲ್ಪಬುದ್ಧಿಗೆ ಆತನು ತುಂಬಾ ನೊಂದುಕೊಂಡ. ಪಶ್ಚಾತ್ತಾಪಪಟ್ಟ. ಆದರೇನು ಫಲ? ಕಾರ್ಯ ಮಿಂಚಿಹೋಗಿತ್ತು

— ಯಸ್. ಸದಾಶಿವ ರಾವ್,
ಕಡಿಯಾಳಿ, ಉಡುಪಿ.

ಲೈಬ್ರೆರಿಗಳಿಗೆ ಬೇಕಾದ ಕೆಲವು ಪ್ರಕಟಣೆಗಳು

ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಮಾನವನ ಮೇಲೆ ಇಂದಿನ ವಿಜ್ಞಾನವು ಬೀರಿದ ಪ್ರಭಾವವನ್ನು ಕೂಲಂಕಷವಾಗಿ ವಿಮರ್ಶಿಸಿ ಮಾನವನನ್ನೂ ವಿಜ್ಞಾನವನ್ನೂ ಸಮರಸವಾಗಿ ಬೆಳೆಯಿಸುವ ಮಾರ್ಗವನ್ನು ಸೂಚಿಸುವ ವಿಚಾರಪೂರ್ಣ ಉದ್ಗ್ರಂಥ. ಬರೆದವರು: ಡಾಕ್ಟರ ಜೇಮ್ಸ್ ಬಿ. ಕೊನೇಂಟ. ಅನುವಾದಕ: ಯು. ಲಕ್ಷ್ಮೀನಾರಾಯಣಾಚಾರ್ಯ. ಪುಟ: ೧೪೦. ಬೆಲೆ: ರೂ. ೧.೫೦

ನಡುಹಗಲಿನ ಕಗ್ಗತ್ತಲೆ

ಇದೊಂದು ರಸಪೂರ್ಣ ರೋಮಾಂಚಕ ಕಾದಂಬರಿ. ಮಾಡಿರದ ಅಪರಾಧಗಳಿಗಾಗಿ ಏಕಾಂತವಾಸಕ್ಕೆ ಗುರಿಯಾಗಿ ಅತ್ಯಾಧುನಿಕ ಚಿತ್ರಹಿಂಸೆಯ ನರಕಯಾತನೆಯಿಂದಾಗಿ ಅಪರಾಧ ಸ್ವೀಕಾರ ಮಾಡಿದ ಒಬ್ಬ ಸೆರೆಯಾಳು ಹಂತಕರು ಕರೆದೊಯ್ಯುವವರೆಗೆ ಸೆರೆಮನೆಯ ತನ್ನ ಕೋಣೆಯಲ್ಲಿ ಅನುಭವಿಸುವ ಮಾನಸಿಕ ಯಾತನೆಯ ಭೀಕರ ಚಿತ್ರಣ. ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಮನೋಜ್ಞ ಜರ್ಮನ್ ಕಾದಂಬರಿಯ ಕನ್ನಡವನ್ನು ಅನುವಾದಿಸಿದವರು ಕು.ಶಿ.ಹರಿದಾಸ ಭಟ್ಟರು. ಪುಟ: ೩೦೮ ಬೆಲೆ: ರೂ. ೨.೫೦.

ಶಿಕ್ಷಣದ ಧ್ಯೇಯಗಳು

ಪ್ರಪಂಚದ ಅತ್ಯಂತ ಮೇಧಾವಿ ತತ್ತ್ವಜ್ಞಾನಿ ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಅವರ ಮಹತ್ತ್ವಪೂರ್ಣ ಶೈಕ್ಷಣಿಕ ವಿಚಾರಗಳ ಸಂಕಲನ. ಅನುವಾದಕರು: ಕೆ. ಬಿ. ರಾಮಕೃಷ್ಣರಾಯ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ. ಪುಟ: ೨೫೦. ಬೆಲೆ: ರೂ ೨.೨೫

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಅಮೇರಿಕದ ಹಿರಿಯ ದಾರ್ಶನಿಕ ಜಾನ್ ಡ್ಯೂಯಿಯವರ ವಿಚಾರ ಪ್ರಚೋದಕ ಪ್ರಬಂಧ. ಪ್ರಜಾತಂತ್ರಾತ್ಮಕ ಸರ್ಕಾರ ಪದ್ಧತಿಯಲ್ಲಿ ಸ್ವಾತಂತ್ರ್ಯ ಮತ್ತು ಸಂಸ್ಕೃತಿಯ ವಿಕಾಸವು ಹೇಗೆಂಬುದನ್ನು ವಿಮರ್ಶಿಸುವ ಅಪೂರ್ವ ಗ್ರಂಥ. ಅನುವಾದಕ: ಕು. ಶಿ. ಹರಿದಾಸ ಭಟ್ಟ. ಪುಟ: ೨೫೦. ಬೆಲೆ: ರೂ. ೨,

ಹಿರೋಶಿಮಾದಿಂದ ಜಿನೇವಾ

'ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಬಳಗಿಸುವ ದಿಶೆಯಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಭತ್ತು ಪುಟದ ಪುಸ್ತಕದಲ್ಲಿ ಬಹು ವಿವರವಾಗಿ, ಮನೋಜ್ಞವಾಗಿ, ವಿಜ್ಞಾನಿಯಲ್ಲದವನಿಗೂ ತಿಳಿಯುವಂತೆ, ಸಮರ್ಥವಾಗಿ, ಆಧಾರಯುತವಾಗಿ' ವರ್ಣಿಸಲಾಗಿದೆ. ಬರೆದವರು: ಯು. ರಾಘವೇಂದ್ರಾಚಾರ್ಯ. ಪುಟ: ೯೦. ಬೆಲೆ: ರೂ. ೧.೫೦

ಏಶಿಯದ ಸಂಪತ್ತು

ಏಶಿಯದ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯದ ಸರ್ವತೋಮುಖ ವಿವೇಚನೆ ಒಂದು ಸ್ವತಂತ್ರ ರಚನೆ. ಬರೆದವರು: ಕು. ಶಿ. ಹರಿದಾಸ ಭಟ್ಟ. ವಿ. ಸೀತಾರಾಮಯ್ಯನವರ ಮುನ್ನುಡಿ ಇದೆ. ಪುಟ: ೧೫೦. ಬೆಲೆ: ರೂ. ೨.

ಫಂಟಮಾರಾ

ಇಗ್ನೇಜಿಯೋ ಸಿಲೋನೆ ಬರೆದ ಇಟಾಲಿಯನ್ ಕಾದಂಬರಿಯ ಅನುವಾದ. ಫಾಸಿಸ್ಟ್ ಪದ್ಧತಿಯನ್ನು ಇಟಲಿಯ ಜನತೆಯ ಮೇಲೆ ಮುಸಲೀನಿ ಹೊರಿಸಿದಾಗ ಅಲ್ಲಿನ ಗ್ರಾಮಾಂತರದ ರೈತರು ಅದನ್ನು ವಿರೋಧಿಸಿ ನಿಂತ ಹೃದಯಂಗಮ ಕಥೆ. ಅನುವಾದಕರು: ಕು. ಶಿ. ಹರಿದಾಸ ಭಟ್ಟ. ಪುಟ: ೨೦೦. ಬೆಲೆ: ರೂ. ೨.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ರೇಡಿಯೋ ಪ್ರಸಾರಕ್ಕೆ ಭದ್ರ ಹಿನ್ನೆಲೆ ಹೀಗಿದೆ!

ಕೋಕಿಲಮ್ಮ— (ಮಾರ್ಜಾಲಮ್ಮನು ಶೃಂಗಾರವಾಗಿ ಬೀದಿಯಲ್ಲಿ ಹೋಗುತ್ತಿದ್ದುದನ್ನು ಕಂಡು) ಓಹೋ, ಮಾರ್ಜಾಲಮ್ಮನವರೇ ಈ ಬೆಳಗಿನ ಹೊತ್ತು ದೂರ ಹೊಗಲಿರುವಿರಿ?

ಮಾರ್ಜಾಲಮ್ಮ: — ವಿಶೇಷವೇನೂ ಇಲ್ಲ; ನಮ್ಮ ರೇಡಿಯೋ ಡೈರೆಕ್ಟರರನ್ನು ಕಾಣಬೇಕಾಗಿದೆ.

ಕೋ—ಹ್ಹೂ-ಹ್ಹೂ-ತಿಳಿಯಿತು, ತಿಳಿಯಿತು (ಸ್ವಲ್ಪ ನಗು)

ಮಾ—(ಸ್ವಲ್ಪ ಮುಡುಕಿನಿಂದ (ರೇಡಿಯೊ ಪ್ರಸಾರ ನಿಮಗೆ ಮಾತ್ರ ಮೀಸಲಾಗಿಟ್ಟಿದೇನು?

ಕೊ—ಯಾರಮ್ಮಾ ಹಾಗೆ ಹೇಳಿದರು

ಮಾ—ಅಲ್ಲ, ನೀವು ನಕ್ಕದ್ರಿಂದ ಹಾಗೆ ಹೇಳಿದೆ. ನಮಗೂ ಹಾಡಲಿಕ್ಕೆ ಬರುತ್ತೆ-ನೋಡಲಿಕ್ಕೂ ಚೆನ್ನಾಗಿದ್ದೇನೆ- ಸ್ವರ ಏನೋ ನಿಮ್ಮ ಸ್ವರದಷ್ಟು ಇಂಪಾಗಿರಲಿಕ್ಕಿಲ್ಲ....

ಕೋ—ಸಾಕು ಬಿಡಿ, ನಿಮ್ಮ ವ್ಯಂಗ್ಯ ಮಾತುಗಳನ್ನು.

ಮಾ—ನೀವು ಅರ್ಧ ಗಂಟೆ 'ತನನಾ....' ಹಾಡಿದ್ರೆ ನಾನು ಒಂದು ಗಂಟೆ 'ಅಯ್ಯೊ, ಅಯ್ಯೊ....' ಎಂತ ಹಾಡಿಕೊಂಡು ಕೂಡೇನು.

ಕೊ—ಸರಿ, ಹೋಗಿ ಭೇಟಿಮಾಡಿಕೊಂಡು ಬನ್ನಿ....ನಿಮಗೇನಾದ್ರೂ ಹಣಕಾಸು ಸಿಕ್ಕಿದ್ರೆ ನನಗೆ ಬಹಳ ಸಂತೋಷ.

ವಿಚಾರ ಮಥನ

(೧ನೇ ಪುಟದಿಂದ)

ವಿನ್ನೂ ತಿಳಿದುಬಂದಿಲ್ಲವಾದರೂ ರಾಷ್ಟ್ರಾಧ್ಯಕ್ಷರ ಆಳಿಕೆಯನ್ನು ಶೀಘ್ರವಾಗಿ ಘೋಷಿಸುವ ನಿರೀಕ್ಷೆಯಿಲ್ಲ. ಸಂಧಾನದ ಮೂಲಕವಾಗಿಯೇ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುವ ಕಡೆಗೆ ಇವರಿಬ್ಬರೂ ಒಲವಿತ್ತಿರುವರೆಂದು ಹೇಳಬಹುದು. ಆದರೆ ಈ ಸಂಧಾನದ ಮಾತುಕತೆಗಳು ಎಷ್ಟರಮಟ್ಟಿಗೆ ಪ್ರಯೋಜನಕಾರಿಯೊದಾವೆಂಬುದು ತಿಳಿಯುವುದಿಲ್ಲ. ಶ್ರೀ ನಂಬೂದರಿಪಾದರು ಸಂಧಾನದ ಮಾತುಕತೆಗಳಿಗೆ ಆಮಂತ್ರಣವಿತ್ತಾಗ ಆಂದೋಲನಕಾರರು ಅದನ್ನು ನಿರಾಕರಿಸಿರುವುದು ಸುವೇದ್ಯ. ಇದೇ ರೀತಿಯಲ್ಲಿ ಆಂದೋಲನವು ಮುಂದುವರಿಯುತ್ತ ಹೋದರೆ, ಅವಕ್ಕೆ ಅಂತ್ಯವೆಲ್ಲಿ?

೦೦ ೦೦

ಅಮೆರಿಕೆಯ ಅಧ್ಯಕ್ಷ ಐಸನ್ ಹಾವರರು ಮುಂದಿನ ವರ್ಷಾವಧಿಯಲ್ಲಿ ವಿದೇಶಗಳಿಗೆ ಸೈನಿಕ ಸಹಾಯವನ್ನು ಒದಗಿಸುವುದಕ್ಕಾಗಿ ೧೬೦ ಕೋಟಿ ಡಾಲರ್‌ಗಳ ಬೇಡಿಕೆಯನ್ನು ಸಿನೇಟಿನ ಮುಂದೆ ಮಂಡಿಸಿದ್ದರು. ವಿದೇಶಗಳಿಗೆ ಈ ಯೋಜನೆಯನ್ವಯ ಶಸ್ತ್ರಾಸ್ತ್ರಗಳನ್ನು ಪೂರೈಸುವ ಧೋರಣೆಗೆ ಅಮೆರಿಕನರು ವಿರೋಧವಿದ್ದಾರೆಂದೂ ದಿನೇ ದಿನೇ ಈ ವಿರೋಧವು ಬೆಳೆಯುತ್ತ ಹೋಗುವುದೆಂದೂ ಇದೀಗ ಗೊತ್ತಾಗಿದೆ.

ಬೇಡಿಕೆಯೊದ ೧೬೦ ಕೋಟಿ ಡಾಲರಗಳಲ್ಲಿ ೩೦ ಕೋಟಿ ಡಾಲರಗಳನ್ನು ಸಿನೇಟು ಕಡಿಮೆಮಾಡಿದೆ. ಈ ಕಡಿತದಿಂದಾಗಿ ಅಧ್ಯಕ್ಷ ಐಸನ್ ಹಾವರರು ನೊಂದಿರುವಂತೆ ಕಂಡು ಬಂದಿದೆ. ವಿದೇಶಿ ಮಿತ್ರರಾಷ್ಟ್ರಗಳಿಗೆ ಸೈನಿಕ ಹಾಗೂ ಆರ್ಥಿಕ ಸಹಾಯ ನೀಡುವುದೂ ರಾಷ್ಟ್ರದ ಭದ್ರತೆಗೆ ಅವಶ್ಯವಾಗಿದೆ ಎಂದೂ, ಕಡಿತದ ಸೂಚನೆಗೆ ಬೆಂಬಲವಿತ್ತವರು ರಾಷ್ಟ್ರದ ಭದ್ರತೆಯನ್ನು ಕಡೆಗಣಿಸಿರುವರೆಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

೦೦ ೦೦

ದೇಶದ ಎಲ್ಲ ಮುಂಗಾರು ಮಳೆಯ ಪ್ರದೇಶಗಳಲ್ಲ ಅತಿವೃಷ್ಟಿಯ ಕಾರಣದಿಂದ ನದಿನದಗಳು ದಡಮೀರಿ ಹರಿದುದರಿಂದ ನೆರೆಯು ಸುತ್ತ ವ್ಯಾಪಿಸಿ ಇತ್ತಟಗಳ ಬಯಲುಗಳೂ ಅಲ್ಲಿದ್ದ ಮನೆಮಾರುಗಳೂ ನೀರಲ್ಲಿ ಮುಳುಗಿ ಹೋಗಿ ಅಪಾರ ನಷ್ಟವು ಸಂಭವಿಸಿದೆ. ಪ್ರತಿ ವರ್ಷವೂ ಇದೇ ರೀತಿಯ ಅತಿವೃಷ್ಟಿ, ಅನಾವೃಷ್ಟಿಗಳಿಂದ ಒಂದಲ್ಲ ಒಂದು ತೆರದ ಅನಾಹುತಗಳು ಸಂಭವಿಸುವುದಾದರೂ ಈ ಬಾರಿಯ ನೆರೆಯು ಅತ್ಯಧಿಕ ಪ್ರಮಾಣದಲ್ಲಿರುವುದರಿಂದ ಆದ ನಷ್ಟದ ಮೌಲ್ಯ ಅನಂತವಾಗಿದೆ. ಕಾಶ್ಮೀರದ ನದಿಗಳು, ಗಂಗಾ ಯಮುನಾ ಬ್ರಹ್ಮಪುತ್ರಗಳು ಉತ್ತರ ಭಾರತದಲ್ಲಿ ಹಾನಿ ತಂದೊಡ್ಡಿದ್ದರೆ, ಪಡುಕರಾವಳಿ ಮತ್ತು ಗಟ್ಟದ ಸಮೀಪದಲ್ಲಿ ತುಂಗಾ, ಭದ್ರಾ, ಮಲಪ್ರಹಾರಿ, ಉದಿಯಾವರ, ಗುರುಪುರ, ನೇತ್ರಾವತಿ, ಗಂಗೊಳ್ಳಿ ಮೊದಲಾದ ಸಣ್ಣ ದೊಡ್ಡ ನದಿಗಳೆಲ್ಲವೂ ತುಂಬಿ ಹರಿದಿವೆ.

ಇವುಗಳಿಂದ ನಿರಾಶ್ರಿತರಾಗಿರುವವರಿಗೆ ತ್ವರಿತಗತಿಯಲ್ಲಿ ನೆರವನ್ನೂ ಆಶ್ರಯವನ್ನೂ ಈಯುವುದರಲ್ಲಿ ಸ್ಥಳೀಯರೂ ಸರಕಾರವೂ ಮುಂದಾಗಿದ್ದಾರೆ. ಸರಕಾರದ ಕಡೆಯಿಂದ ಹೀಗೆ ನಿರಾಶ್ರಿತರಾದವರಿಗೆ ಉಚಿತ ಪ್ರಮಾಣದಲ್ಲಿ ಸಹಾಯವು ದೊರೆಯಬೇಕು. ಮನೆಮಾರುಗಳನ್ನೂ ಎತ್ತು ಕೋಣಗಳನ್ನೂ ಬಟ್ಟೆಬರೆಗಳನ್ನೂ ಕಳೆದುಕೊಂಡು ನಿರ್ಗತಿಕರಾದವರಿಗೆ ಅವರ ಹಾಳಾದ ಬದುಕನ್ನು ಪುನಃ ಪ್ರಾರಂಭಿಸುವುದಕ್ಕೆ ಅವಶ್ಯಕವಾದ ಸರ್ವ ಪ್ರಕಾರದ ಸಹಾಯವನ್ನು ಸರಕಾರವು ನೀಡಲೇ ಬೇಕಾಗಿದೆ. ಅಲ್ಲದೇ ಸರಕಾರ ವೀಯುವ "ಸಹಾಯ"ವೆಲ್ಲವೂ ಅಂತಹ ನಿರಾಶ್ರಿತರಿಗೆ ಸಂಪೂರ್ಣವಾಗಿ ಲಭಿಸುವಂತೆಯೂ ನೋಡಿಕೊಳ್ಳಬೇಡವೆ?

—ರಾಶಿ.

ವಿದ್ಯಾರ್ಥಿಗಳಿಗೆ ಉಪಯುಕ್ತವಾದ

ಭಾರದ್ವಾಜ ಡಿಕ್ಷನೆರಿ

ಇಂಗ್ಲಿಷ್ ಕನ್ನಡ ಶಬ್ದಕೋಷ

ದೊರೆಯುತ್ತದೆ

ನವಭಾರತ ಬುಕ್ ಡಿಪೊ, ಉಡುಪಿ

ನವಯುಗ ಪ್ರೆಸ್, ಉಡುಪಿ.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ ವಿಚಾರಿಸಿರಿ—

ನವಭಾರತ ಪುಸ್ತಕ ಭಂಡಾರ,

ಉಡುಪಿ.

ದೇಹದಾರ್ಢ್ಯಯುತ ನಾಗರಿಕ ನಿರ್ಮಾಣ



ರಾಷ್ಟ್ರೀಯರು ದೇಹದಾರ್ಢ್ಯವನ್ನು ಗಳಿಸುವಂತೆ ತಕ್ಕ ವ್ಯವಸ್ಥೆಗಳನ್ನು ಮಾಡುವುದು ಪ್ರತಿಯೊಂದು ಶಾರೀರಿಕ ಶಿಕ್ಷಣದ ರಾಷ್ಟ್ರೀಯ ಯೋಜನೆಯ ಕರ್ತವ್ಯವಾಗಿದೆ. ಇದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ರೂಪಿಸುವಾಗ, ದೇಶದ ಸಾಮಾಜಿಕ, ಮಾನಸಿಕ, ವಾತಾವರಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಲಕ್ಷಿಸಬೇಕಾಗಿದೆ. ಗ್ವಾಲಿಯೋರದ ಶಾರೀರಿಕ ಶಿಕ್ಷಣದ ಲಕ್ಷ್ಮೀಬಾಯಿ ಕಾಲೇಜು ಇಂತಹ ರಾಷ್ಟ್ರೀಯ ಸಂಸ್ಥೆಗಳಲ್ಲಿ ಮೊತ್ತಮೊದಲನೆಯದಾಗಿದೆ. ಇದು ೧೯೫೭ರಲ್ಲಿ ಸ್ಥಾಪಿತವಾಯಿತು. ಇದೇ ರೀತಿಯ ಸಂಸ್ಥೆಗಳು ದೇಶದಲ್ಲಿ ಹೆಚ್ಚೆಚ್ಚು ಸ್ಥಾಪನೆಯಾದಂತೆ, ನಾಗರಿಕರಲ್ಲಿ ದೇಹದಾರ್ಢ್ಯ ಮಾತ್ರವಲ್ಲದೆ, ನೈತಿಕ, ಬಾಹ್ಯರೂಪ, ಸಾಮೂಹಿಕ ಉತ್ಸಾಹ, ಸಖ್ಯ, ವಿಧೇಯತೆಗಳೂ ಕಾಣಿಸಿಕೊಳ್ಳುವುವು. ಶ್ರೇಷ್ಠ ಕ್ರೀಡಾಪಟುಗಳೂ ಸಿದ್ಧರಾಗುವರು.

ಒಂದು ರಾಷ್ಟ್ರೀಯ ಚಳುವಳಿಯನ್ನು ಆಟಗಳಲ್ಲಿಯೂ ಶಾರೀರಿಕ ಶಿಕ್ಷಣದಲ್ಲಿಯೂ ರೂಪಿಸಲು ವೈಜ್ಞಾನಿಕ ವಿಧಾನಗಳನ್ನು ಅಳವಡಿಸಬಲ್ಲ ನಾಯಕರನ್ನು ತರಬೇತಿಗೊಳಿಸುವ ಪ್ರಾಥಮಿಕ ಉದ್ದೇಶದಿಂದ ಈ ಸಂಸ್ಥೆ ಸ್ಥಾಪನೆಯಾಗಿದೆ.

ಸದ್ಯ ಪ್ರತಿವರ್ಷ ೧೦೦ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮಾತ್ರ ಇಲ್ಲಿ ಪ್ರವೇಶ ವೀಯುತ್ತದೆ. ಮುಂದೆ, ತರಬೇತಿ ಮತ್ತು ಸಂಶೋಧನಾ ಕೆಲಸಗಳಲ್ಲಿ ಸ್ನಾತಕೋತ್ತರ ವರ್ಗಗಳನ್ನೂ ತೆರೆಯುವ ಯೋಜನೆಯಿದೆ.

ಉತ್ತಮ ಮಾದರಿಯ ಯುವಕರನ್ನು ಶಾರೀರಿಕ ಶಿಕ್ಷಣದತ್ತ ಆಕರ್ಷಿಸಲು ವರ್ಷವೊಂದಕ್ಕೆ ಕೇವಲ ಮುನ್ನೂರು ರೂಪಾಯಿಗಳನ್ನು ಮಾತ್ರ ಶಿಕ್ಷಣ ಶುಲ್ಕ ವಸತಿ ಊಟಗಳೆಲ್ಲವುಗಳ ಬಗ್ಗೆ ವಸೂಲು ಮಾಡಲಾಗುತ್ತಿದೆ. ಅಲ್ಲದೇ ಕೆಲವೊಂದು ಶಿಷ್ಯವೃತ್ತಿಗಳನ್ನೂ ಸಮರ್ಥ ವಿದ್ಯಾರ್ಥಿಗಳಿಗೆ ಕೊಡುವ ಯೋಜನೆಯಿದೆ.

ಮೇಲಿನ ಚಿತ್ರದಲ್ಲಿ ಗ್ವಾಲಿಯೋರದ ಶಾರೀರಿಕ ಶಿಕ್ಷಣದ ರಾಷ್ಟ್ರೀಯ ಕಾಲೇಜಿನ ವಿದ್ಯಾರ್ಥಿಗಳು ನವದೆಹಲಿಯ ನೇಶನಲ್ ಸ್ಪೋರ್ಟ್ಸ್ ಕ್ಲಬ್‌ನ ಈಜಾಡುವ ಕೆರೆಯಲ್ಲಿ ಈಜುವ ಯೋಗ್ಯ ವಿಧಾನವನ್ನಭ್ಯಸಿಸುತಿದ್ದಾರೆ.

ಪ್ರವಾಹಪೀಡಿತರಿಗೆ ಆರೋಗ್ಯ ಮಂತ್ರಿವರ್ಯರ ಸಹಾನುಭೂತಿ

ಮಾನ್ಯ ಆರೋಗ್ಯ ಮಂತ್ರಿ ಡಾ| ಕೆ. ಕೆ. ಹೆಗ್ಡೆ ಅವರು ಈ ರೀತಿ ಬರೆದು ತಿಳಿಸಿದ್ದಾರೆ—

"ನಮ್ಮ ಜಿಲ್ಲೆಯ ಕೆಲವು ಪ್ರದೇಶಗಳು, ಮುಖ್ಯವಾಗಿ ಉಡುಪಿ ಮತ್ತು ಕುಂದಾಪುರ ತಾಲೂಕುಗಳಲ್ಲಿ, ವಿಪರೀತವಾದ ನೆರೆಯ ಬಾಯಿ ಸಿಕ್ಕಿ ಅಲ್ಲಿನ ನಮ್ಮ ಕೆಲವು ಬಾಂಧವರು ಮನೆಮಾರುಗಳನ್ನು ಕಳೆದು ಕೊಂಡಿರುವರೆಂದು ಕೇಳಿ, ನನಗೆ ಅತೀವ ವಿಷಾದವಾಗಿದೆ. ಈ ನೆರೆಯಿಂದ ದುಷ್ಪರಿಣಾಮ ಹೊಂದಿದವರಿಗೆ ನನ್ನ ಸಹಾನುಭೂತಿಯಿದೆ.

"ಈ ವಿಷಯದ ಬಗ್ಗೆ ತೀವ್ರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದ್ದು, ದಕ್ಷಿಣ ಕನ್ನಡದ ಡಿಪ್ಯುಟಿ ಕಮಿಶನರರು ಆ ಪ್ರದೇಶಗಳಿಗೆ ತೆರಳಿ ಅವಶ್ಯಕವಾದ ಸಹಾಯವನ್ನು ಒದಗಿಸಬೇಕೆಂದು ತಿಳಿಸಲಾಗಿದೆ. ಅಲ್ಲದೇ ಪ್ರವಾಹದಿಂದ ಪರಿಣಾಮ ಹೊಂದಿದ ಪ್ರತಿ ಕುಟುಂಬಕ್ಕೂ ೫೦ರಿಂದ ೧೦೦ ರೂಪಾಯಿಗಳ ವರೆಗಿನ ಆರ್ಥಿಕ ಸಹಾಯವನ್ನು ಶಿಫಾರಸು ಮಾಡಲು ಅವರಿಗೆ ಅಧಿಕಾರವೀಯಲಾಗಿದೆ. ಈ ವಿಷಯವನ್ನು ಸಹಾಯ ನಿರೀಕ್ಷಿಸುತ್ತಿರುವವರ ಗಮನಕ್ಕೆ ತರಬಹುದು. ಸರಕಾರವು ಇನ್ನು ಮುಂದಕ್ಕೂ ಅವಶ್ಯಕವೆನಿಸುವ ಸಹಾಯವನ್ನು ನೀಡುವ ಕುರಿತು ಆಲೋಚಿಸುವುದು. ರಾಜ್ಯ ರೆಡ್‌ಕ್ರಾಸ್ ಸಂಘವೂ ತನ್ನಿಂದ ಸಾಧ್ಯವಾದ ನೆರವನ್ನೀಯಬೇಕೆಂದು ತಿಳಿಸಲಾಗಿದೆ."

[ನೆರೆಯ ಕಾರಣದಿಂದ ನಿರಾಶ್ರಿತರಾದವರಿಗೆ ಸರಕಾರದ ಕಡೆಯಿಂದ ಸಹಾಯಧನವನ್ನು ನೀಡುವ ವ್ಯವಸ್ಥೆ ಮಾಡಿರುವುದಾಗಿ ಮಾನ್ಯ ಮಂತ್ರಿಗಳು ಈ ಹೇಳಿಕೆಯಲ್ಲಿ ತಿಳಿಸಿದ್ದಾರೆ. ನಿರಾಶ್ರಿತರು ಅವುಗಳ ಸದುಪಯೋಗವನ್ನು ಪಡೆದುಕೊಳ್ಳುವುದು ಅನುಚಿತವಾಗಲಾರದು. ಅದನ್ನು ಪಡೆಯುವ ವಿಧಾನವು ಇಷ್ಟರಲ್ಲೇ ತಿಳಿದುಬಂದೀತು. —ಸಂ. ನ.]

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

ಲಂಕಾಯಾತ್ರೆ

(೩ನೇ ಪುಟದಿಂದ)

ಸಿಂಹಳೀಯ ಭಾಷೆಯಲ್ಲಿ ಅಧಿಕ ಸಂಖ್ಯೆಯ ಶಬ್ದಗಳು ಸಂಸ್ಕೃತಭಾಷೆಯಿಂದ ಇದ್ದಕ್ಕಿದ್ದಂತೆಯೇ ತೆಗೆದುಕೊಳ್ಳಲಾಗಿದೆ. ಸಂಸ್ಕೃತವರಿತಿರುವ ಪ್ರತಿಯೊಬ್ಬನೂ ಸಿಂಹಳೀಯ ಭಾಷೆಯನ್ನು ನೂರಕ್ಕೆ ೩೦-೪೦ ರಷ್ಟು ತಿಳಿದುಕೊಳ್ಳಬಲ್ಲ. ಆದರೆ, ಲಿಪಿ ಮಾತ್ರ ದಕ್ಷಿಣ ಭಾರತೀಯ ಭಾಷೆಗಳ ಲಿಪಿಯನ್ನು ಹೋಲುತ್ತದೆ.

ಈ ವರ್ಷ ಪ್ರಾರಂಭದಲ್ಲಿ ಶ್ರೀ ಲಂಕೆಯಲ್ಲಿ ಕೇವಲ ಒಂದೇ ಒಂದು ವಿಶ್ವವಿದ್ಯಾನಿಲಯವಿತ್ತು. ಇದರ ಕೆಲವು ವಿಭಾಗ ಕೊಲಂಬೋವಿನಲ್ಲಿಯೂ ಇನ್ನು ಕೆಲವು ಕೇಂಡಿಯ ಸಮೀಪದ ಪರ ದಿನ್ಯದಲ್ಲಿಯೂ ಇತ್ತು. ಈ ವರ್ಷ ಎರಡು ಕಾಲೇಜುಗಳಿಗೆ ವಿಶ್ವವಿದ್ಯಾನಿಲಯದ ಸ್ತರವನ್ನು ಕೊಡಲಾಗಿದೆ. ಇವುಗಳಲ್ಲಿ ಒಂದು, ವಿದ್ಯಾಲಂಕಾರ ವಿಶ್ವವಿದ್ಯಾನಿಲಯ. ಇದನ್ನು ಜೂನ್ ೧೭ರಂದು ರಾಷ್ಟ್ರಪತಿ ಡಾ| ರಾಜೇಂದ್ರ ಪ್ರಸಾದರು ಉದ್ಘಾಟಿಸಿದರು. ಇನ್ನೊಂದಾದ ವಿದ್ಯೋದಯ ವಿಶ್ವವಿದ್ಯಾಲಯವನ್ನು ಶ್ರೀ ಲಂಕೆಯ ಗವರ್ನರ ಜನರಲ್ಲರು ಕೆಲಸಮಯ ಪೂರ್ವದಲ್ಲಿಯೇ ಉದ್ಘಾಟಿಸಿದ್ದರು.

ವಿದ್ಯಾಲಂಕಾರ ಮತ್ತು ವಿದ್ಯೋದಯ ವಿಶ್ವವಿದ್ಯಾನಿಲಯಗಳೆರಡೂ ಕೊಲಂಬೋವಿನಲ್ಲಿಯೇ ಇವೆ. ಮತ್ತು ಇವೆರಡೂ ಪ್ರಾಚೀನ ಬೌದ್ಧಪರಂಪರೆಯ ಆಧಾರದ ಮೇಲೆ ನಡೆಸಲ್ಪಡುತ್ತಿವೆ. ಇವುಗಳ ಅಧ್ಯಾಪಕರಲ್ಲಿ ಹೆಚ್ಚಿನವರು ಭಿಕ್ಷುಗಳಾಗಿದ್ದು ಬೌದ್ಧ ಶಿಕ್ಷಣಕ್ಕೆ ಪ್ರಾಧಾನ್ಯ ನೀಡಲಾಗುತ್ತಿದೆ. ಸಂಸ್ಕೃತ ಭಾಷಾಭ್ಯಾಸವೂ ಆವಶ್ಯಕವೆಂದು ಪರಿಗಣಿಸಲ್ಪಟ್ಟಿದೆ.

ಮೂರನೆಯದಾದ "ಶ್ರೀ ಲಂಕಾ ವಿಶ್ವವಿದ್ಯಾನಿಲಯ"ವು ಪಾಶ್ಚಾತ್ಯ ಮಾದರಿಯದ್ದಾಗಿದೆ. ಇದರ ಪ್ರಮುಖ ಕಾರ್ಯಾಲಯವು ದ್ವಿತೀಯ ವಿಶ್ವಸಂಗ್ರಾಮ ಕಾಲದಲ್ಲಿ ಕೇಂಡಿಯಲ್ಲಿ ಲಾರ್ಡ್ ಮೌಂಟ್ ಬೇಟನ್ನರ ಕಾರ್ಯಾಲಯವಿದ್ದ ಸ್ಥಳದಲ್ಲಿ ಇದೆ.

ಜೂನ್ ೧೭ಕ್ಕೆ ಕೊಲಂಬೋವಿನಿಂದ ೮ ಮೈಲು ದೂರಕ್ಕೆ ಡಾ| ರಾಜೇಂದ್ರ ಪ್ರಸಾದರು ವಿದ್ಯಾಲಂಕಾರ ವಿಶ್ವವಿದ್ಯಾಲಯದ ಉದ್ಘಾಟನೆಗಾಗಿ ತೆರಳಿದರು. ಮೂವತ್ತು ವರ್ಷಗಳಿಗೆ ಮೊದಲು ಡಾ| ಪ್ರಸಾದರು ಎರಡು ದಿನಗಳ ಮಟ್ಟಿಗೆ ಇಳಿದದ್ದ ಒಂದು ಕೋಣೆಯ ಸ್ಥಾನದಲ್ಲೇ ಉದ್ಘಾಟನಾ ಮಂಚವನ್ನು ಏರ್ಪಡಿಸಲಾಗಿತ್ತು. ಎಂಟಡಿ ಎತ್ತರದ ಆ ವೇದಿಕೆ ಬಾಳೆಯ ಗಿಡಗಳಿಂದ ಅಲಂಕೃತವಾಗಿತ್ತು. ವೇದಿಕೆಯ ಮಧ್ಯೆ ಹಿತ್ತಾಳೆಯ ಕಾಲ್ದೀಪವೊಂದನ್ನು ಇರಿಸಲಾಗಿತ್ತು. ಅದರಲ್ಲಿ ಎಂಟು ಬತ್ತಿಗಳು ಇದ್ದುವು. ರಾಷ್ಟ್ರಪತಿಗಳು ಈ ಬತ್ತಿಯನ್ನು ಉರಿಸಿ. ವಿಶ್ವವಿದ್ಯಾನಿಲಯವನ್ನು ಉದ್ಘಾಟಿಸಿದರು.

ರಾಷ್ಟ್ರಪತಿಯವರಿಗೆ "ನೀತಿ—ಚಕ್ರವರ್ತಿ" ಉಪಾಧಿದಾನ ಮಾಡುವ ಸಂದರ್ಭದಲ್ಲಿ ಹಾಡಿದ ಜಯಗಾಥೆಯು ಸಂಸ್ಕೃತದಲ್ಲಿತ್ತು. ಪ್ರಾಯಃ ಇದರಿಂದಾಗಿಯೇ ರಾಷ್ಟ್ರಪತಿಯವರು ವಿದ್ಯಾಲಂಕಾರ ವಿಶ್ವವಿದ್ಯಾನಿಲಯದಲ್ಲಿ ಹಿಂದೀ ಭಾಷೆಯಲ್ಲಿ ಭಾಷಣಮಾಡಿದರು. ಏಕೆಂದರೆ, ಏಳು ದಿನಗಳವರೆಗೆ ಅವರತ್ತ ಬೇರೆ ಎಲ್ಲಾ ಭಾಷಣಗಳೂ ಆಂಗ್ಲ ಭಾಷೆಯಲ್ಲಿದ್ದುವು.

ಇದರ ಬಗ್ಗೆ ಉಲ್ಲೇಖಿಸುತ್ತ ಕೊಲಂಬೋವಿನ ಒಬ್ಬ ಪತ್ರಿಕಾಕಾರನನ್ನೊಡನೆ ಹೇಳಿದ—"ನಿಮ್ಮ ರಾಷ್ಟ್ರಪತಿಯವರು ಆಂಗ್ಲ ಭಾಷೆಯಲ್ಲಿ ಮಾತಾಡಬಾರದು. ಅವರು ಹಿಂದಿಯಲ್ಲಿ ಮಾತಾಡಿದರೆ, ಸಿಂಹಳೀಯರು ಹೆಚ್ಚು ಕಡಿಮೆ ಅರ್ಥಮಾಡಿಕೊಳ್ಳಬಲ್ಲರು. ರಾಷ್ಟ್ರಪತಿಯವರು ರಾಷ್ಟ್ರಭಾಷೆಯಲ್ಲಿ ಮಾತಾಡಬೇಕು; ಇದರಿಂದ ದೇಶಕ್ಕೆ ಗೌರವ ಪ್ರಾಪ್ತವಾಗುವುದು."

ಡಾಕ್ಟರೇಟ್ ಪದವಿಯನ್ನು ಈಯುವ ಸಮಯ ಈಯುವ ಸಮ್ಮಾನ ಪತ್ರವನ್ನು ಲಂಕಾವಾಸಿಗಳು "ಜಯಗಾಥೆ" ಎಂದು ಹೇಳುತ್ತಾರೆ. ವಿದ್ಯಾಲಂಕಾರ ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರಪತಿಯವರಿಗಲ್ಲದೇ ಶ್ರೀಲಂಕೆಯ ಗವರ್ನರ ಜನರಲ್, ಪ್ರಧಾನ ಮಂತ್ರಿ ಶಿಕ್ಷಣ ಮಂತ್ರಿ ಮತ್ತು ಶ್ರೀಲಂಕಾ ವಿಶ್ವವಿದ್ಯಾನಿಲಯದ ಉಪಕುಲಪತಿಗಳಿಗೆ ಕೂಡ "ನೀತಿ ಚಕ್ರವರ್ತಿ" ಉಪಾಧಿದಾನ ಮಾಡಲಾಯಿತು. ಶ್ರೀಲಂಕಾ ವಿಶ್ವವಿದ್ಯಾನಿಲಯದ ಉಪಕುಲಪತಿಯವರೊಬ್ಬ ಚಿಕಿತ್ಸಕರಾಗಿದ್ದಾರೆ. ಆದುದರಿಂದ, ಅವರ ಜಯಗಾಥೆಯಲ್ಲಿ "ಇವರ ಹೆಸರು ಕೇಳಿದೊಡನೆಯೇ ಮಹಿಳೆಯರ ಗರ್ಭಕೋಶದಿಂದ ತತ್‌ಕ್ಷಣ ಮಗು ಭೂಮಿಗಿಳಿದುಬರುತ್ತದೆ" ಎಂದು ಹೇಳಲಾಗಿತ್ತು. ಇದನ್ನು ಕೇಳಿ ಪ್ರೇಕ್ಷಕರಲ್ಲಿ ನಗೆಯ ಬುಗ್ಗೆ ಅರಳಿತು; ವೇದಿಕೆಯಲ್ಲಿ ಹಾಗೂ ಕೆಳಗಡೆ ಇದ್ದ ೪೦೦ ಭಿಕ್ಷುಗಳೂ ನಕ್ಕುಬಿಟ್ಟರು.

ಅಖಂಡ ಶ್ರೀಲಂಕೆಯಲ್ಲಿ ಕೇವಲ ಕೊಲಂಬೋದಿಂದ ಮಾತ್ರ ದೈನಿಕ ಸಮಾಚಾರ ಪತ್ರಿಕೆಗಳು ಪ್ರಕಾಶಿತವಾಗುತ್ತವೆ. ಮೂರು ಆಂಗ್ಲ ದಿನ ಪತ್ರಿಕೆಗಳು, ಮೂರು ಸಿಂಹಲೀ ದೈನಿಕ ಮತ್ತು ಎರಡು ತಮಿಳು ದೈನಿಕಗಳು ಪ್ರಮುಖವಾಗಿವೆ.

ಲೇಕ್ ಹೌಸ್ ಎಂಬ ಹೆಸರಿನ ಪ್ರಕಾಶನ ಸಂಸ್ಥೆಯು ಪ್ರಭಾತಕಾಲೀನ ಆಂಗ್ಲ ದೈನಿಕ "ಸಿಲೋನ್ ಡೈಲಿ ನ್ಯೂಸ್", ಸಾಯಂಕಾಲೀನ ಆಂಗ್ಲ ದೈನಿಕ, "ಸಿಲೋನ್ ಒಬ್ಸರ್‌ವರ್" ಮತ್ತು ಪ್ರಭಾತ ಕಾಲೀನ ಸಿಂಹಲೀ ದೈನಿಕ "ದಿನಮಣಿ", ಸಾಯಂಕಾಲೀನ ಸಿಂಹಲೀ ದೈನಿಕ, "ಜನತಾ" ಮತ್ತು ತಮಿಳು ದೈನಿಕ, "ದಿನ ಕಿರಣ" ಗಳನ್ನು ಪ್ರಕಾಶಿಸುತ್ತದೆ. ಹೀಗೆ ಲೇಕ್ ಹೌಸ್‌ನ ವತಿಯಿಂದ ೫ ದೈನಿಕಗಳು ಪ್ರಕಾಶಿತವಾಗುತ್ತಿವೆ.

ಇನ್ನೊಂದು ದೊಡ್ಡ ಸಂಸ್ಥೆಯು "ಟೈಮ್ಸ್ ಆಫ್ ಸಿಲೋನ್ ಲಿಮಿಟೆಡ್" ಆಗಿದೆ. ಇದು ಪ್ರಾತಃಕಾಲೀನ ಸಿಂಹಲೀ ದೈನಿಕ "ಲಂಕಾದ್ವೀಪ" ಮತ್ತು ಸಾಯಂಕಾಲೀನ ಆಂಗ್ಲ ದೈನಿಕ, "ಟೈಮ್ಸ್ ಆಫ್ ಸಿಲೋನ್"ಗಳನ್ನು ಹೊರಡಿಸುತ್ತದೆ.

ಮೂರನೆಯದಾದ "ವೀರ ಕೇಸರಿ ಲಿಮಿಟೆಡ್" ಸಂಸ್ಥೆಯು "ವೀರಕೇಸರಿ" ಎಂಬ ತಮಿಳು ದೈನಿಕವನ್ನು ಬೆಳಕಿಗೆ ತರುತ್ತದೆ.

ಶ್ರೀ ಲಂಕೆಯಲ್ಲಿ ಅತ್ಯಧಿಕ ಪ್ರಸಾರವುಳ್ಳ ದಿನಪತ್ರಿಕೆಯೆಂದರೆ, "ಸಿಲೋನ್ ಡೈಲಿನ್ಯೂಸ್" ಆಗಿದೆ. ಇದರ ೭೫ ಸಾವಿರ ಪ್ರತಿಗಳು ದಿನಂಪ್ರತಿ ಮಾರಲ್ಪಡುತ್ತವೆ.

ಪತ್ರಿಕಾಕರ್ತರ ವೇತನವು ಒಳ್ಳೆಯದಾಗಿದೆ. ಆರು ಗಂಟೆಗೆ ಮಿಕ್ಕಿದ ಕೆಲಸಗಳಿಗೆ ಅವರಿಗೆ "ಓವರ್‌ಟೈಮ್" ಸಂಬಳವು ದೊರೆಯುತ್ತದೆ.

(ಕ್ರಮಶಃ)

ಮೂಲ: 'ನವಭಾರತ ಟೈಮ್ಸ್'

ಅನುವಾದ: **ಗೋರಾ, ಉಡುಪಿ.**

ಭಾವಕತೆ

ವ್ಯವಹಾರ ಚತುರ

ಸಾಯಂಕಾಲ ಆಫೀಸಿನ ಕೆಲಸದಿಂದ ಮುಕ್ತನಾಗಿ ಹಿಂತಿರುಗಿದ ಓರ್ವ ವ್ಯಾಪಾರಿಕನ ಮೇಜಿನ ಮೇಲೆ ಮೂರು ಪತ್ರಗಳು ಬಂದಿದ್ದುವು. ಈ ಮೂರೂ ಪತ್ರಗಳನ್ನು ಅವನ ನಿಜವಾದ ಸುಖ ದುಃಖದ ಸ್ನೇಹಿತರೇ ಬರೆದಿದ್ದರು. ಆ ಸ್ನೇಹಿತರ ಹೃದಯದಲ್ಲಿ ಕಪಟವಿರಲಿಲ್ಲ.

ಅವನು ಪ್ರಥಮವಾಗಿ ಸತಿಯೊಡನೆ ಚಹ ಸ್ವೀಕರಿಸಿ ಮೂರು ಪತ್ರಗಳಿಗೆ ಪ್ರತ್ಯುತ್ತರ ಬರೆಯ ತೊಡಗಿದನು.

ಮೊದಲನೆಯ ಪತ್ರಕ್ಕೆ ಉತ್ತರ ಬರೆಯುತ್ತಾ—"ನಿಮ್ಮ ಪುತ್ರನ ಆಕಸ್ಮಿತ ಮರಣ ವಾರ್ತೆಯನ್ನು ಓದಿ ನನಗೆ ಸಿಡಿಲು ಬಡಿದಂತಾಯ್ತು. ಅತಿ ಮನೋವೇದನೆಯಿಂದಾಗಿ ಅನ್ನನೀರೂ ಒಗ್ಗದಂತಾಗಿದೆ" ಎಂದು ಬರೆದನು.

ಎರಡನೆಯ ಪತ್ರಕ್ಕೆ—"ನಿನ್ನ ಮದುವೆಯ ಸುದ್ದಿ ಓದಿ ಇದು ನಿನ್ನ ಮದುವೆಯಲ್ಲ ನನ್ನ ಮದುವೆ ಎಂಬಷ್ಟು ಸಂತೋಷವಾಯ್ತು. ಇದೇ ವಿಷಯದ ಬಗ್ಗೆ ಇಂದು ಡಬ್ಬಲ್ ಸಿಹಿಯೂಟ ಮಾಡುತ್ತೇನೆ." ಎಂದುತ್ತರವಿತ್ತನು.

ಮೂರನೆಯದಕ್ಕೆ—"ನಾನು ರಾಯಸಾಹೇಬರಿಗೆ ಸಿಫಾರಸು ಮಾಡುತ್ತೇನೆ. ಆದರೆ ನನಗೇನೂ ವಿಶ್ವಾಸವಿಲ್ಲ, ಏಕೆಂದರೆ ಅವರಷ್ಟು ಒಳ್ಳೆಯ ಮನುಷ್ಯರಲ್ಲ. ಆದುದರಿಂದಲೇ ನಾನು ಸ್ಪಷ್ಟವಾಗಿ ಬರೆಯುತ್ತಿದ್ದೇನೆ.' ಎಂದುತ್ತರ ಬರೆದನು.

ತದನಂತರ ಆ ವ್ಯಾವಹಾರಿಕನು ಅಂಗಿ ಬದಲಿಸಿ ರೇಕೆಟ್ ಹಿಡಿದುಕೊಂಡು ಕ್ಲಬ್ಬಿಗೆ ಹೋದನು.

ಅಲ್ಲಿನ ರಾಯಸಾಹೇಬರೂ ಆಗಮಿಸಿದ್ದರು. ವ್ಯಾವಹಾರಿಕನು ಅವರ ಹತ್ತಿರ ಹೋಗಿ—'ನನ್ನ ಒಬ್ಬ ಮಿತ್ರನು ನಿಮ್ಮಲ್ಲಿ ಸಿಫಾರಸುಮಾಡಲು ತಿಳಿಸಿದ್ದರು. ಆದರೆ ನಾನು ಸಿಫಾರಸಿಗೆ ವಿರೋಧಿಯಾಗಿದ್ದೇನೆ. ಆದುದರಿಂದ ನಾನು ಸಿಫಾರಸು ಮಾಡುವುದಿಲ್ಲ. ಯಾರು ಸಿಫಾರಸು ಮಾಡುತ್ತಾನೋ ಅವನು ನೇಸ್ಯಾಟಿಯ ನಿಯಮ ಮುರಿಯುತ್ತಾನೆಂದು ನನಗೆ ತಿಳಿದಿದೆ."

[ಶ್ರೀ ಸುದರ್ಶನರ 'ಝರೋಕೆ'ಯಿಂದ.

—ಎಸ್. ಎಂ. ಶೆಟ್ಟಿ, ಶಿವಾಜಿ ನಗರಿ, ಮುಂಬಯಿ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾಸಂಕಲನ

ಅಮೇರಿಕದ ಆರು ಕತೆಗಳು

ಅಮೇರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:

ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.

ರೂ.೩ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:

ನವಯುಗ ಪ್ರೆಸ್, ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು

(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.)

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ, ಉಡುಪಿ.

1960ನೇ ವರ್ಷದ E. S. L. C.

ಕನ್ನಡ ಪದ್ಯದ ಟಿಪ್ಪಣಿ

ಬೆಲೆ: 0—14—0

ಸಾಮಾಜಿಕ ಅಧ್ಯಯನ ಕೈಪಿಡಿ

(V ಮತ್ತು VI ಫೋರ್ಮುಗಳಿಗೆ ಉಪಯುಕ್ತವಿದೆ)

ಬೆಲೆ: ಎರಡು ರೂಪಾಯಿಗಳು

ಅಪೇಕ್ಷಕರು ಪತ್ರ ವ್ಯವಹಾರ ನಡೆಸುವುದು

ಡಿ. ವಿ. ಹೊಳ್ಳ, ಪ್ರಕಾಶಕ, ಕುಂದಾಪುರ

ಕಥಾ ವಿಹಾರ

(೨ನೇ ಪುಟದಿಂದ)

ಸಿದರು, ಮಲಗಿ ನಿದ್ರಿಸಿದರು. ಅವರೊಂದು ವಾರಪತ್ರಿಕೆಯನ್ನೂ ತರಿಸುತಿದ್ದರು. ಆದರೂ, ಕೆಲವೊಮ್ಮೆ ಅದನ್ನು ಕೆಲವು ತಿಂಗಳುಗಳ ವರೆಗೂ ತೆರೆಯಲು ಮುಹುರ್ತವೇ ಬರುತ್ತಿರಲಿಲ್ಲ. ಸ್ವಲ್ಪ ಕಷ್ಟ ಅಥವಾ ಪರಿಶ್ರಮ ಪಡಬೇಕಾದ ಕೆಲಸಗಳಿಂದ ಅವರು ಹರದಾರಿ ದೂರ ಓಡುತಿದ್ದರು. ಕೆಲವೊಮ್ಮೆ ಅವರಿಗೆ ಆಫೀಸಿನಲ್ಲಿ "ಥಿಯೇಟರ್"ನ "ಪಾಸು" ಧರ್ಮಾರ್ಥವಾಗಿ ಸಿಗುತಿತ್ತು. ಆದರೆ, ಪಂಡಿತರು ಆ ಪಾಸುಗಳನ್ನು ಉಪಯೋಗಿಸುತ್ತಿರಲಿಲ್ಲ; ಇತರರು ಅವರಿಂದ ಅದನ್ನು ಕೇಳಿ ಉಪಯೋಗಿಸುತಿದ್ದರು. ರಾಮಲೀಲಾ ಮೊದಲಾದ ಉತ್ಸವಗಳನ್ನು ಪ್ರಾಯಃ ಅವರು ನೌಕರಿಗೆ ಸೇರಿಕೊಂಡ ನಂತರ ನೋಡಿರಲಿಲ್ಲ. ಗೋದಾವರಿಗೆ ಅವರ ಸ್ವಭಾವವು ಸಂಪೂರ್ಣ ಪರಿಚಿತವಾಗಿತ್ತು. ಪ್ರತಿಯೊಂದು ವಿಷಯದಲ್ಲಿಯೂ ಗೋದಾವರಿಯ ಮತಾನುಸಾರ ನಡೆಯುವುದೇ ಕ್ಷೇಮಕರವೆಂದವರೂ ತಿಳಿದಿದ್ದರು.

ಹತ್ತಿಯಂತಹ ಮೃದುವಸ್ತುವಾದರೂ ಒತ್ತುವುದರಿಂದ ಕಠೋರವಾಗುವುದು. ಪಂಡಿತರಿಗೆ ಎಂಟೂ ಪಹರೆಗಳಲ್ಲಿನ ಈ ಚಿರಿ ಚಿರಿ ಅಸಹ್ಯವಾಗಿ ಕಾಣಿಸಿತು. ಮನಸ್ಸು ಕೆಲವೊಮ್ಮೆ ಓಲಾಡುತಿತ್ತು. ಇದುವರೆಗೆ ನಿರುದ್ಯೋಗಿಯಾಗಿದ್ದುದರಿಂದ ನಿರ್ಬಲವಾಗಿದ್ದ ಅವರ ವಿಚಾರ ಶಕ್ತಿ ಈಗ ತುಸು ಸಜೀವವಾಗಲು ತೊಡಗಿತು.

ಸವತಿಯನ್ನು ಮನೆಗೆ ತರುವಲ್ಲಿ ಗೋದಾವರಿಯು ಮಹಾತ್ಯಾಗ ಮಾಡಿರುವಳೆಂದು ಪಂಡಿತರೂ ತಿಳಿದಿದ್ದರು. ಆಕೆಯ ಈ ತ್ಯಾಗ ಅಲೌಕಿಕವೆಂದೂ ಹೇಳಬಹುದಿತ್ತು. ಆದರೂ ಆಕೆ ಮಾಡಿದ ತ್ಯಾಗ ನನಗಾಗಿಯಲ್ಲದೆ, ಗೋಮತಿಗೆ ಏನು ಪಕಾರವಾದಂತಾಯಿತು ? ತಿರಸ್ಕಾರವನ್ನು ಸಹಿಸುತ್ತಿರುವ ಗೋಮತಿಗೆ ಏನು ಸುಖದೊರೆತೀತು ? ಪತಿಯೇನೋ ದೊರೆತ, ಆದರೆ ಆತ ಮುದುಕ, ಸದಾ ರೋಗಿ; ಮನೆ ಸಿಕ್ಕಿತು, ನೌಕರಿ ಹೋಯಿತು ಎಂದರೆ, ಒಲೆ ಉರಿಸುವುದೂ ಕಷ್ಟ. ಇಂತಹ ಪರಿಸ್ಥಿತಿಯಲ್ಲಿರುವಾಗ ಗೋದಾವರಿಯ ಈ ಸ್ನೇಹರಹಿತ ವರ್ತನೆಯು ಅನುಚಿತವೆಂದು ತೋರುತಿತ್ತು.

ಪಂಡಿತರ ಈ ಭಾವವನ್ನು ಕಾಣದಿರುವಷ್ಟು ಗೋದಾವರಿಯ ದೃಷ್ಟಿ ಸ್ಥೂಲವಾಗಿರಲಿಲ್ಲ. ಅವರ ಭಾವನೆಗಳೆಲ್ಲಾ ಮುಖದಲ್ಲಿ ಅಂಕಿತವಾಗಿರುವುದು ಕಂಡುಬರುತಿತ್ತು. ಒಂದೆಡೆ ಈ ರೂಪರೇಷೆ ಗೋಮತಿಯೆದುರು ಈರ್ಷ್ಯೆ ಪ್ರಚಂಡ ಅಗ್ನಿಯನ್ನು ಉರಿಸುತ್ತದೆ; ಇನ್ನೊಂದಡೆ ಪಂಡಿತ ದೇವದತ್ತರ ಮೇಲೆ ನಿಷ್ಠುರತೆ ಮತ್ತು ಸ್ವಾರ್ಥಪ್ರಿಯತೆಯ ದೋಷಾರೋಪಣೆಗಳನ್ನು ಹೊರಿಸುವುದು. ಇದರ ಪರಿಣಾಮವಾಗಿ ಮನೋಮಾಲಿನ್ಯ ದಿನದಿಂದ ದಿನಕ್ಕೆ ಬೆಳೆಯುತ್ತಾ ಹೋಯಿತು.

೫

ಗೋದಾವರಿಯು ಕ್ರಮೇಣ ಪಂಡಿತರೊಡನೆ ಗೋಮತಿಯ ವಿಷಯದಲ್ಲಿ ಮಾತಾಡುವವನ್ನೇ ಬಿಟ್ಟು ಬಿಟ್ಟಳು. ಆಕೆಯ ಸಮೀಪ ಗೋಮತಿಯೇ ಇರಲಿಲ್ಲವೆಂಬಂತಾಯಿತು. ಅವರಿಗೆ ಊಟ ಉಪಚಾರದ ಬಟ್ಟೆಬರೆಯ ನೆನಪನ್ನೂ ಮಾಡುತ್ತಿರಲಿಲ್ಲ. ಒಂದು ಸಲ ಅವರಿಗೆ ಕೆಲ ದಿನಗಳವರೆಗೆ ಉಪಹಾರಕ್ಕೂ ಸಿಗಲಿಲ್ಲ. ಪಂಡಿತರು ಆಲಸಿ ಜೀವಿಗಳಾಗಿದ್ದರು. ಅವರು ಇವೆಲ್ಲಾ ಅತ್ಯಾಚಾರಗಳನ್ನು ನೋಡುತಿದ್ದರು; ಆದರೆ, ತಮ್ಮ ಶಾಂತಿಸಾಗರದಲ್ಲಿ ಘೋರಉಪದ್ರವಿಕಾರಿ ತೆರೆಗಳೇಳುವೆಂಬ ಭಯದಿಂದ ಏನೊಂದೂ ಅನ್ನುತ್ತಿರಲಿಲ್ಲ. ಆದರೆ, ಅನ್ಯಾಯಗಳು ಅವರ ಸಹನಾ ಶಕ್ತಿಯನ್ನೂ ಮಥಿಸಿಬಿಟ್ಟುವು. ಒಂದು ಬಾರಿ ಅವರು ಅಂಜಿಕೊಂಡೇ ಗೋದಾವರಿಯೊಡನೆ ಕೇಳಿದರು— ಈಗೀಗ ಉಪಾಹಾರಕ್ಕೆ ಏನಾದರೂ ತಿಂಡಿಗಿಂಡಿ ಬರುವುದಿಲ್ಲವೇನು?

ಗೋದಾವರಿಯು ಕ್ರುದ್ಧಳಾಗಿ ಉತ್ತರಿಸಿದಳು—ನೀವು ತಾರದೆ ಹೋದರೆ, ಬರುವುದಾದರೂ ಎಲ್ಲಿಂದ ? ನನಗೆ ಯಾರಾದರೂ ನೌಕರರಿಲ್ಲ ತಾನೆ?

ಪಂಡಿತರಿಗೆ ಗೋದಾವರಿಯ ಮಾತುಗಳು ಬಾಣದಂತೆ ನಾಟಿದವು. ಇದುವರೆಗೆ ಆಕೆ ಅವರೊಡನೆ ರೋಷಪೂರ್ಣವಾದ ಮಾತುಗಳನ್ನಾಡಿರಲಿಲ್ಲ.

ಅವರು ಹೇಳಿದರು—ಮೆಲ್ಲನೆ ಹೇಳು ಸಿಡಿಸಿಡಿ ಗುಟ್ಟುವ ಆಗತ್ಯವಿಲ್ಲ. ಗೋದಾವರಿ ಕೆಳಗೆ ದೃಷ್ಟಿ ಪಸರಿಸುತ್ತ ಉತ್ತರಿಸಿದಳು—ನನಗೆ ಹೇಗೆ ಬರುತ್ತದೋ ಹಾಗೆ ಆಡುತ್ತೇನೆ. ಬೇರೆಯವರಂತೆ ಮಧುರ ವಾಣಿಯನ್ನು ಎಲ್ಲಿಂದ ತರಲಿ ?

ದೇವದತ್ತರು ತುಸು ಬಿಸಿಯಾಗಿಯೆ ಅಂದರು— ಈಗೀಗ ನಿನ್ನ ನಡವಳಿಕೆಯ ಅರ್ಥವೇ ನನಗಾಗುತ್ತಿಲ್ಲ. ಮಾತು ಮಾತಿನ ಮೇಲೆ ರೇಗಿ ಬಿಡುತ್ತೀಯೂ?

ಗೋದಾವರಿಯ ಬಣ್ಣ ಕ್ರೋಧಾಗ್ನಿ

ಬ್ರಿಟನ್ನಿನ ಪ್ರಸಿದ್ಧ ಕ್ರಿಕೆಟರ್ ಶ್ರೀ ಡಿ. ಎಸ್. ಶೆಪ್ಪರ್ಡರು ಬೀದಿಯಲ್ಲಿ ಮಕ್ಕಳೊಡನೆ ಕ್ರಿಕೆಟು ಆಡುತಿದ್ದಾರೆ.

ಯಿಂದ ಕೆಂಪಾಯಿತು. ಆಕೆ ಕುಳಿತಿದ್ದವಳು ಎದ್ದು ನಿಂತಳು. ಆಕೆಯ ತುಟಿಗಳು ಕಂಪಿಸತೊಡಗಿದವು. "ನನ್ನ ಯಾವುದೇ ಮಾತು ನಿಮಗೀಗ ಏಕೆ ಚಂದ ಕಂಡೀತು ? ಈಗ ನಾನು ಅಪಾದ ಮಸ್ತಕ ದೋಷ ಪೂರ್ಣಳಾಗಿದ್ದೇನೆ. ಈಗ ಬೇರೆಯವರು ನಿಮ್ಮ ಮನಸ್ಸಿನ ಕಾರ್ಯಗಳನ್ನು ಮಾಡುತ್ತಾರೆ. ನನ್ನಿಂದಾಗುವುದಿಲ್ಲ. ತೆಗೆದುಕೊಳ್ಳಿ, ಕಪಾಟಿನ ಕೀಲಿಕೈ. ನಿಮ್ಮ ಹಣವನ್ನು ನೀವೇ ನೋಡಿಕೊಳ್ಳಿ. ದಿನ ನಿತ್ಯದ ಈ ಕೂಗಾಟ ನನಗೂ ಮರ್ಯಾದೆಯಗ್ತಲ್ಲ ಸಾಧ್ಯವಿರುವಷ್ಟು ಕಾಲ ದಿನ ದೂಡಿದೆ. ಇನ್ನು ಸಾಧ್ಯವಿಲ್ಲ" ಗೋದಾವರಿ ಸಿಡುಕಿಯೇ ಹೇಳಿದಳು.

ಪಂಡಿತ ದೇವದತ್ತರು ಮೂರ್ಛಿತರಾದಂತಾದರು. ಅವರು ಹೆದರಿದ್ದ ಶಾಂತಿಭಂಗ ಈಗ ಭೀಕರ ರೂಪಧರಿಸಿಯೇ ಮನೆಯನ್ನು ಪ್ರವೇಶಿಸಿತ್ತು. ಏನೊಂದು ಹೇಳುವುದೂ ಅವರಿಗೆ ಅಸಾಧ್ಯವಾಯಿತು. ಆಗ, ಹೆಚ್ಚು ಆಡುವುದರಿಂದ ಮಾತು ಇನ್ನೂ ಬೆಳೆದೀತೆಂದು ಬೆದರಿದರು. ಅವರು ಹೊರಗೆ ನಡೆದು ಬಂದು ಆಲೋಚಿಸತೊಡಗಿದರು—ನಾನು ಗೋದಾವರಿಯೊಡನೆ ಯಾವ ಅನುಚಿತ ವ್ಯವಹಾರ ಮಾಡಿದ್ದೇನೆ? ಗೋದಾವರಿಯು ಕೈಯಿಲ್ಲದೆ ಮನೆಯ ವ್ಯವಸ್ಥೆ ಹೇಗೆ ನಡೆದೀತು ಈ ಅಲ್ಪಾದಾಯದಲ್ಲಿಯೇ ಆಕೆ ಹೇಗೆ ಮನೆವಾರ್ತೆ ಸಾಗಿಸುತಿದ್ದಳೋ ಹೇಳಬರುವಂತಿರಲಿಲ್ಲ. ಯಾವ ಯಾವ ಉಪಾಯವಾಡುತಿದ್ದಳೋ? ಈಗ, ನಾರಾಯಣ ಗಂಡಾಂತರದಿಂದ ಹೇಗೆ ಪಾರು ಗೊಳಿಸುತ್ತಾನೋ ಹೇಳ ಬರುವಂತಿಲ್ಲ, ಆದರೆ, ಏನು ಮಾಡುವುದು? ಗೋಮತಿಯಿಂದ ಏನು ತಾನೆ ಅಗ ಬಹುದು? ಎಲ್ಲಾ ಭಾರ ನನ್ನ ಮೇಲೆಯೇ ಬಿದ್ದಂತಾಯಿತು. ಗೋಮತಿ ಸಾಗಿಸುವಳಾದರೂ ಅದೆಷ್ಟು ಕಷ್ಟದಿಂದ? ಗೋದಾವರಿಯೇ ಪುನಃ ಕೀಲಿಕೈ ಹಿಡಿದುಕೊಂಡಿದ್ದರೆ, ಅದೆಷ್ಟು ನೆಮ್ಮದಿಯಾಗುತಿತ್ತು ?

ಆದರೆ, ಪಂಡಿತರ ಈ ಶುಭಕಾಮನೆ ನಿಷ್ಫಲವಾಯಿತು. ಸಂದೂಕಿನ ಕೀಲಿಕೈ ವಿಷ ಸರ್ಪನಂತೆ ಅಲ್ಲಿಯೇ ನೆಲದಲ್ಲಿ ಮೂರು ದಿನಗಳ ವರೆಗೆ ಬಿದ್ದುಕೊಂಡಿತ್ತು. ಯಾರೊಬ್ಬರಿಗೂ ಅದರ ಸಮೀಪ ಬರಲು ಭಯವೆನಿಸುತಿತ್ತು. ನಾಲ್ಕನೆಯ ದಿನ ಪಂಡಿತರು ಅದನ್ನು ಆಡಿಕೊಂಡೆ ಹೆಕ್ಕಿದರು. ಆದರೆ ಅದನ್ನು ಎತ್ತಿಕೊಳ್ಳುವಾಗ, ಯಾರೋ ತಮ್ಮ ತಲೆಯ ಮೇಲೆ ಪರ್ವತವನ್ನು ಹೊತ್ತು ಹಾಕಿದಂತೆ ಭಾಸವಾಯಿತು. ಆಲಸಿ ಮನುಷ್ಯರಿಗೆ ತಮ್ಮ ನಿಯಮಿತ ಮಾರ್ಗದಿಂದ ತಿಲಮಾತ್ರವಾದರೂ ತಪ್ಪುವುದು ಕಠಿನಕಾರ್ಯವೆಂದು ಕಂಡು ಬರುತ್ತದೆ ತಾನೆ?

ತಾನು ತನ್ನ ಆಫೀಸಿನ ಕೆಲಸಗಳ ನಡುವೆ ಈ ಹೊಸ ಕೆಲಸವನ್ನು ನಿರ್ವಹಿಸಲು ಅಸಮರ್ಥನೆಂದು ಪಂಡಿತರು ತಿಳಿದಿದ್ದರೂ ಬೀಗದ ಕೈಗೊಂಚಲನ್ನು ಗೋಮತಿಯ ಕೈಗೆ ಒಪ್ಪಿಸುವಷ್ಟು ಧೈರ್ಯ ಅವರಿಗೆ ಬರಲಿಲ್ಲ. ಆದರೆ, ಈ ಅಂಜಿಕೆ ತೋರ್ಪಡಿಕೆಗೆ ಮಾತ್ರವಾಗಿತ್ತು. ಬೀಗದ ಕೈಯೇನೋ. ಅವರೊಡನಿರುತಿತ್ತು. ಕಾರ್ಯವೆಲ್ಲವನ್ನೂ ಗೋಮತಿಯೇ ಮಾಡಬೇಕಾಗಿತ್ತು. ಹೀಗೆ ಮನೆಯ ಆಡಳಿತೆಯ ಅಂತಿಮ ಸಾಧನವೂ ಗೋದಾವರಿಯ ಕೈ ತಪ್ಪಿ ಹೋಯಿತು. ಗೃಹಿಣಿ ಎಂಬ ಹೆಸರಿನೊಡನಿದ್ದ ಮರ್ಯಾದೆ ಮತ್ತು ಸನ್ಮಾನಗಳೂ ಗೋದಾವರಿಯಿಂದ ಕೀಲಿಕೈಯೊಡನೆಯೇ ದೂರ ಸರಿದವು. ನೋಡುತಿದ್ದಂತೆಯೇ ಮನೆಯ ಆಸುಪಾಸಿನ ಮತ್ತು ನೆರೆಹೊರೆಯ ಸ್ತ್ರೀಯರ ವರ್ತನೆಯಲ್ಲಿಯೂ ಬಹಳ ಅಂತರವು ಕಾಣಿಸಿತು. ಗೋದಾವರಿಯೀಗ ಪದಚ್ಯುತ ರಾಣಿಯಂತಿದ್ದಳು. ಇತರರ ಸಹಾನುಭೂತಿಯು ಮಾತ್ರ ಆಕೆಗೆ ಈಗ ಆಧಿಕಾರವಿತ್ತು.

(ಮುಂದುವರಿಯುವುದು)

—ಪ್ರೇಮಚಂದ.

ಕಲಾಕ್ಷೇತ್ರ

ಕಲೆಯು ಕಲೆಗಾಗಿ ಅಲ್ಲ, ಜನತೆಯ ಕಲ್ಯಾಣಕ್ಕಾಗಿದೆ

"ಸತ್ಯಂ ಶಿವಂಸುಂದರಂ" – ಇದು "ಕಲಾ" ಪದದ ಪರಿಭಾಷೆಯಾಗಿದೆ.

ರಾಜರ್ಷಿಯಾದ ಭರ್ತೃಹರಿಯು ಅತ್ಯಂತ ನಿರ್ಭೀತನಾಗಿಯೇ "ಸಾಹಿತ್ಯ ಸಂಗೀತ ಕಲಾ ವಿಹೀನಃ ಸಾಕ್ಷಾತ್ ಪಶುಃ ಪುಚ್ಛ ವಿಷಾಣ ಹೀನಃ" (ಸಾಹಿತ್ಯ, ಸಂಗೀತ ಮತ್ತು ಕಲಾವಿಹೀನನಾದ ಮಾನವನು ಕೊಂಬು ಮತ್ತು ಬಾಲವಿಲ್ಲದ ಪಶುವಿಗೆ ಸಮಾನ) ಎಂದು ಘೋಷಿಸಿದ್ದಾನೆ. ಮನುಷ್ಯನೂ ಒಂದು ವಿಧದ ಪಶು ಎಂಬುದನ್ನು ಎಲ್ಲರೂ ಒಪ್ಪಿದ್ದಾರೆ. ಅವನು ಎರಡು ಕಾಲಿನ ಪಶುವೇ ಅಥವಾ ನಾಲ್ಕು ಕಾಲಿನ ಪಶುವೇ ಎಂಬುದು ಬೇರೆ ಮಾತು. ಕುದುರೆ, ದನ, ಆಡು ಮೊದಲಾದ ಪ್ರಾಣಿಗಳಲ್ಲಿ ಸಾಕುಪ್ರಾಣಿಗಳು ಮತ್ತು ಕಾಡು ಪ್ರಾಣಿಗಳು ಎಂಬೆರಡು ಭೇದಗಳಿರುವಂತೆಯೇ ಮನುಷ್ಯನಲ್ಲೂ ಸಭ್ಯ ಮತ್ತು ಅಸಭ್ಯ ಎಂಬೆರಡು ಪಂಗಡ ಮಾಡಬಹುದು. "ಅಸಭ್ಯ" ಎಂಬುದು "ಕಾಡಿನ" ಎಂಬ ಪದದ ಅರ್ಥವುಳ್ಳ ಸಂಸ್ಕೃತ ಪದ. ಮಾನವ ಮತ್ತು ಪಶುಗಳು ಒಟ್ಟಿಗೆ ಕಾಡಿನಲ್ಲಿ ವಾಸಿಸುತ್ತಿದ್ದ ದಿನವೊಂದಿತ್ತು. ಇವರ ಆಹಾರ ಸಂಪಾದನೆ, ಶಯನ ಮತ್ತು ಭ್ರಮಣ ವಿಧಾನಗಳು ಸಾಮಾನ್ಯತಃ ಒಂದೇ ಆಗಿದ್ದುವು. ಆ ಸಮಯ ಬಟ್ಟೆಯ ಮಾತಂತೂ ದೂರವಾಗಿಯೇ ಉಳಿದಿತ್ತು. ಕಿವಿಗಳಿಗೆ ಏನಾದರೂ ಸದ್ದು ಕೇಳಿಸಿದರೂ ಆಗ ಲಜ್ಜೆ ಎಂಬುದಿಲ್ಲದೆ ಪ್ರತಿಹಿಂಸೆಯು ಖಡ್ಗಕ್ಕೆ ಕೈಮುನ್ನುಗ್ಗುತ್ತಿತ್ತು. ಅಪ್ರಕಟ ಕ್ರೋಧದ ಹೆಸರು ಈರ್ಷ್ಯೆ ಎಂದಿರುವಂತೆಯೇ ತನ್ನ ಸೌಂದರ್ಯಬೋಧದ ಸಂಕುಚಿತ ಹೆಸರು "ಲಜ್ಜೆ" ಎಂದು ಹೇಳಬಹುದು. ಆ ಸಮಯದಲ್ಲಿ ಲಜ್ಜೆಯೆಂಬುದಿರಲಿಲ್ಲ. ಆದುದರಿಂದ ಸೌಂದರ್ಯ ಬೋಧವೂ ಇರಲಿಲ್ಲ. ಸೌಂದರ್ಯ ಬೋಧದ ಫಲವೇ ಕಲೆಯ ಸೃಷ್ಟಿ. ಆಗ ಸೌಂದರ್ಯ ಬೋಧವಿದ್ದಿಲ್ಲವಾದುದರಿಂದ ಕಲೆಯೂ ಇರಲಿಲ್ಲವೆಂದು ಹೇಳಬಹುದು. ಕಲಾವಿಹೀನ ಮಾನವನ ಹೆಸರೇ ಪಶು. ಆಗ ಕಲೆಯೇ ಇಲ್ಲವಾದುದರಿಂದ ಮಾನವನೂ ನರರೂಪೀ ಪಶುವಾಗಿದ್ದನು. ಕಲೆಯು ಮಾನವ ಮತ್ತು ಪಶುಗಳನ್ನು ಪ್ರತ್ಯೇಕಗೊಳಿಸಲಿಲ್ಲವಾದರೂ ಸಭ್ಯ ಜನರೊಡನೆ ಇರುವ ಪಶುಗಳು ಸಾಕು ಪ್ರಾಣಿಗಳು; ಅಸಭ್ಯ ಜನರೊಡನಿರುವವುಗಳು ಕಾಡುಪ್ರಾಣಿಗಳಾದುವು. ಹೀಗೆ ಕಾಡು ಪ್ರಾಣಿಗಳೊಡನೆ ವಾಸಿಸುವವನ ಅಸಭ್ಯನೆನಿಸಿದನು.

ಅತ್ಯಂತ ಪ್ರಾಚೀನ ಕಾಲದಿಂದಲೂ ಮನುಷ್ಯನ ಕಾಮನೆಯು ಪರಮಾತ್ಮನ ಕರ್ಮವನ್ನು ವರ್ಧಿಸಿತು. ದೇವರು ಅರಣ್ಯಗಳನ್ನು ಸೃಷ್ಟಿಸಿದನು; ಪಶುಗಳನ್ನು ನಿರ್ಮಿಸಿದನು; ಮನುಷ್ಯರನ್ನೂ ರೂಪಿಸಿದನು. ಮನುಷ್ಯರು ಕಾಡುಗಳನ್ನು ವಸತಿಗಳನ್ನಾಗಿಸಿದರು; ಪಶುಗಳನ್ನು ಮಾನವೀಯವಾಗಿ ಗೈದರು; ತಂತಮ್ಮನ್ನೇ ಪರಮಾತ್ಮ ಸದೃಶರಂತೆ ಮಾಡಿಕೊಂಡರು. ಇವೆಲ್ಲಕ್ಕೂ ಕಲೆಯ ಸಹಾಯ ಬೇಕಾಯಿತು. ಪಾಶ್ಚಾತ್ಯರು ಕಲೆಯು ಕೃತ್ರಿಮವೆನ್ನುತ್ತಾರೆ. ಅವರು ಊಹೆಯ ಮೇಲೆ ಮಾಡುವ ತರ್ಕ ವಿತರ್ಕಗಳೇ ಪ್ರಮಾಣಗಳೆಂಬಂತೆ ತಿಳಿಯುತ್ತವೆ. ಆದರೆ, ಅವರ ಈ ಭ್ರಮೆಯು ಭಯಂಕರ ಪರಿಣಾಮವನ್ನುಂಟುಮಾಡಿದೆ. ಅಜ್ಞಾನಾಂಧಕಾರದಲ್ಲಿ ಕಲೆಯ ಬೇರೆ ಉದ್ದೇಶವನ್ನರಿಯದೆ ಅವರು "ಕಲೆಯು ಕಲೆಗಾಗಿ" ಎಂಬ ಭೀಷಣವಾದ ಕೂಗನ್ನು ಎಬ್ಬಿಸಿದರು. ಇದರ ಪರಿಣಾಮವಾಗಿ ಇಂದು ಯುರೋಪಿನಲ್ಲಿ ಕಲೆಯೂ ಒಂದು ನಾಗರಿಕತೆಗೆ ಸಂಬಂಧಿಸಿದ ಆಡಂಬರವಾಗಿ ಹೋಗಿದೆ.

ಇದಕ್ಕೆ ಪ್ರತಿಯಾಗಿ ನಮ್ಮಲ್ಲಿ, ಕಲೆಯು ಉದ್ದೇಶಸಹಿತವಾಗಿದೆ. ನಮ್ಮಲ್ಲಿ ಪ್ರಕೃತಿಗೆ ಸತ್ಯವೆಂಬ ಇನ್ನೊಂದು ಹೆಸರಿದೆ; ಸತ್ಯವಾಗಿರುವುದೇ ಮಂಗಲಮಯವಾಗಿದೆ; ಮಂಗಲಮಯವೇ ಸುಂದರವಾಗಿದೆ. "ಸತ್ಯಂ ಶಿವಂ ಸುಂದರಂ" ಎಂಬುದು ಉಪನಿಷದ್ವಾಕ್ಯವಲ್ಲವಾದರೂ ಭಾರತೀಯ ವಿಚಾರಧಾರೆಯಲ್ಲಿ ಕಲೆಯ ಪರಿಭಾಷೆಯೇ ಇದು ಎನ್ನಬಹುದು.



ಸಣ್ಣ ವ್ಯವಸಾಯ ಕ್ಷೇತ್ರಗಳಿಗೆ ಉಪಯುಕ್ತವಾದ ಕೊಯ್ಲಿನ ಯಂತ್ರ.

"ಸತ್ಯಂ ಶಿವಂ ಸುಂದರಂ" ಎಂಬುದು ಆಂಗ್ಲ ಭಾಷೆಯ "The truth, the good, the beautiful" ಎಂಬುದರ ಅನುವಾದವೆಂದೂ ಕವೀಂದ್ರ ರವೀಂದ್ರರ ಪಿತಾಮಹರಿಂದ ಬ್ರಹ್ಮ ಸಮಾಜದಲ್ಲಿ ವ್ಯವಹೃತವಾಯಿತೆಂದೂ ಅಲ್ಲಿಂದ ಜನಸಾಮಾನ್ಯರ ಬಾಯಿಗೂ ಬಂದು ಪ್ರಚಾರಗೊಂಡಿತೆಂದೂ ಹೇಳುತ್ತಾರೆ. ಅದೇನೇ ಇರಲಿ, ನಾವು ಮಾತ್ರ ಆ ವಾಕ್ಯವನ್ನು ಕಲೆಯ ಪರಿಭಾಷೆ ಎಂದೇ ತಿಳಿಯುತ್ತೇವೆ.

ಕಲೆ ಎಂದರೇನು?—ಸತ್ಯಾಭಾಸವಾಗಿರದೆ, ಸತ್ಯದ ಛಾಯೆಯಾಗಿರದೆ ಪೂರ್ಣತಃ ಸತ್ಯವಾಗಿರುವುದೇ ಕಲೆ. ಮಂಗಲವನ್ನು ಪುಷ್ಟೀಕರಿಸುವುದಕ್ಕಾಗಿಯೇ ಕಲೆಯ ಸೃಷ್ಟಿಯಾಯಿತಲ್ಲದೆ ವಿನಾಶಕ್ಕಾಗಿಯಲ್ಲ. ನಮಗೆ ಅಶುಭವಾಗುವಂತಹುದೇನಾದರೂ ಇದ್ದರೆ, ಅದು ಕಲೆಯಲ್ಲ. ಶೂಲವು ಅದೆಷ್ಟು ಕಲಾತ್ಮಕವಾಗಿಯೇ ನಿರ್ಮಿಸಲ್ಪಟ್ಟಿರಲಿ, ಅದು ಶೂಲವೇ. ಕಲೆಯು ಸತ್ಯವಾಗಿರುವಷ್ಟೇ ಶಿವವಾಗಿಯೂ ಇರಬೇಕು. ನಮ್ಮ ಕಲ್ಯಾಣವಾಗುವ ಯಾವುದೇ ವಸ್ತುವನ್ನು ಕಂಡು ಮುಖ ತಿರುಗಿಸುವವನು ಸಾಮಾನ್ಯವಾಗಿ ಮೂರ್ಖನೆನಿಸುತ್ತಾನೆ. ನಮ್ಮ ಕಲ್ಯಾಣವಾಗುವ ವಸ್ತುಗಳಿಗಿಂತ ಹೆಚ್ಚು ಸುಂದರವಾದುದು ಬೇರೆ ಯಾವುದಿದೆ ಎಂದು ಬಲ್ಲವರು ಕೇಳುತ್ತಾರೆ. "ಕಲೆಯು ಕಲೆಗಾಗಿ"ರುವುದಲ್ಲ; ನಮ್ಮ ಕಲ್ಯಾಣಕ್ಕಾಗಿ. ಮೂಗು ಕಟ್ಟಿ ಹೋಗುವಂತಹ ಮುಖವಾಡವಿದ್ದರೆ, ಅದು ಎಂದಿಗೂ ಸ್ವಾಸ್ಥ್ಯದ ಚಿಹ್ನೆಯಾಗಲಾರದು.

ಈ ವಿಚಾರ "ಕಲಾ" ಪದದ ವ್ಯುತ್ಪತ್ತಿಯಿಂದ ಮತ್ತಷ್ಟು ತಿಳಿಯಾಗುವುದು. "ಕಂ" ಎಂಬ ಸಂಸ್ಕೃತ ಪದಕ್ಕೆ ಆನಂದ ಮತ್ತು ಪ್ರಕಾಶವೆಂಬ ಅರ್ಥವಿದೆ. 'ಲಾ' ಧಾತುವಿನ ಅರ್ಥ "ತರು" ಎಂದು. ಆದುದರಿಂದ, "ಕಲಾ" ಎಂಬುದಕ್ಕೆ "ಆನಂದ ಮತ್ತು ಪ್ರಕಾಶಗಳನ್ನು ತಂದೀಯುವ ಕ್ರಿಯೆ ಅಥವಾ ಶಕ್ತಿ" ಎಂದರ್ಥವಾಗುತ್ತದೆ. ಆನಂದದಾಯಕವಾಗಬೇಕಾದರೆ, ರಮಣೀಯವಾಗಿಯೂ ಇರಬೇಕಾಗುತ್ತದೆ. "ರಮಣೀಯತಾ" ಎಂಬುದರ ಪರಿಭಾಷೆ ಹೀಗಿದೆ: "ಕ್ಷಣೇ ಕ್ಷಣೇ ಯನ್ನವತಾ ಮುಪೈತಿ ತದೇವ ರೂಪಂ ರಮಣೀಯತಾಯಾಃ"

(ಪ್ರತಿಕ್ಷಣವೂ ಹೊಸ ಹೊಸದಾಗಿ ತೋರುವುದೇ ರಮಣೀಯತೆ) ನವೀನತೆಯು ಪ್ರಕಾಶವೀಯುತ್ತದೆ; ನವೀನತೆ ಆನಂದವನ್ನು ಕೊಡುತ್ತದೆ; ಕಲೆಯೂ ಜ್ಞಾನ ದೀಪವನ್ನು ಬೆಳಗಿಸುತ್ತದೆ. ಸತ್ಯ ಜ್ಞಾನವಾಗಿದೆ; ಅಸತ್ಯ ಅಜ್ಞಾನವಾಗಿದೆ, ಜ್ಞಾನ ಮಂಗಳಮಯವಾಗಿದೆ, ಕಲೆಯು ಮಂಗಲಮಯಿಯಾಗಿದೆ. ಕಲೆಯು ರಮಣೀಯವಾಗಿದೆ; ಎಂತಲೇ ಸುಂದರವಾಗಿದೆ. ಸಹೃದಯ ಆಂಗ್ಲೇಯ ಕವಿ ಕೀಟ್ಸ್‌ನು ಈ ಕಾರಣದಿಂದಲೇ "A thing of bueaty is a joy for ever" (ಸುಂದರ ವಸ್ತು ಶಾಶ್ವತಾನಂದ ದಾಯಕ) ಎಂದು ಹೇಳಿದ್ದಾನೆ. ಆದುದರಿಂದಲೇ ಕಲೆಯು ಸತ್ಯವಾಗಿದೆ; ಶಿವವಾಗಿದೆ ಮತ್ತು ಸುಂದರವೂ ಆಗಿದೆ.

(ವಿವಿಧ ಮೂಲಗಳಿಂದ)

— ಗೋರಾ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ
S. C. 75/59.

ವೆಂಕಪ್ಪ ಭಂಡಾರಿ—ವಾದಿ.

ಶೀನಶೆಟ್ಟಿ-ಮುನ್ನಾಲ್ಕೈ ಪಕೀರಶೆಟ್ರ ಮಗ. ಬೆಳ್ತಂಗಡಿ ತಾಲ್ಲೂಕು ಕರ್ನಾಡಿ ಗ್ರಾಮದ ಮುರ್ತಿಲೆ ಎಂಬಲ್ಲಿ. P. O. ಅಲ್ದಿಬಾದೆ—ಪ್ರತಿವಾದಿ.

ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸುವುದೇನೆಂದ್ರೆ.

ವಾದಿಯು ನಿಮ್ಮ ಮೇಲೆ ಡಿ. ಪ್ರೊ. ನೋಟಿನ ಐವೇಜಿನ ವಸೂಲಿ ಕುರಿತು ಹೂಡಿದ ಮೇಲ್ಕಂಡ ದಾವೆಯು ತಾ. 20-7-59ಕ್ಕೆ ಇಟ್ಟಿರುವುದರಿಂದ ಅದಕ್ಕೆ ನಿಮ್ಮದೇನಾದರೂ ಆಕ್ಷೇಪಣೆ ಇದ್ದವರು ಸದ್ರಿ ದಿವಸ ಮಜ್ಕೂರು ಕೋರ್ಟು ಮುಂದೆ ನೀವು ಸ್ವತಹಾ ವ ವಕೀಲರ ದ್ವಾರ ಹಾಜರಾಗಿ ಉದಪರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿಯದೆ.

(Sd) C. S. Shastry,
Vakil for Petr

ಪುತ್ತೂರು, ತಾ. 27-6-59.

ವಿಶಾಲವಾಗಿ ಹಬ್ಬಿರುವ ಸಂಸ್ಥೆ

ಮುಂಬಯಿ ಅಥವಾ ಮದರಾಸು; ಬರೋಡ ಅಥವಾ ಬೆಂಗಳೂರು; ಕೊಚ್ಚಿ ಅಥವಾ ಕಡಪ್ಪಾ; ಹುಬ್ಬಳ್ಳಿ ಅಥವಾ ಹೈದರಾಬಾದು; ಕಲ್ಲಿಕೋಟೆ ಅಥವಾ ಕೊಯಮುತ್ತೂರು;

–ನೀವು ಎಲ್ಲಿಗೆ ಹೋದರೂ(ವ್ಯಾಪಾರಕ್ಕಾಗಿ ಅಥವಾ ವಿಹಾರಕ್ಕಾಗಿ), ನಿಮ್ಮ ಆರ್ಥಿಕ ಸೌಕರ್ಯಗಳ ಕಡೆಗೆ ಗಮನ ಕೊಡಲು ಸಿಂಡಿಕೇಟ್ ಬೇಂಕ್ ಸಿದ್ಧವಿದೆ. ವಿಸ್ತಾರವಾಗಿ ಬೆಳೆಯುತ್ತಿರುವ ನಮ್ಮ ಶಾಖೆಗಳ ಪ್ರಯೋಜನವನ್ನು ಯಾವಾಗಲೂ ಪಡೆಯಬಹುದು. ನಿಮಗೇನಾದರೂ ವ್ಯವಹಾರವಿದ್ದರೆ ಸಿಂಡಿಕೇಟಿಗೆ ಬನ್ನಿರಿ ಅಥವಾ ಬರೆಯಿರಿ. ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಪ್ರಧಾನ ಕಾರ್ಯಾಲಯ, ಮುಕುಂದ ನಿವಾಸ, ಉಡುಪಿ ದಕ್ಷಿಣ ಕನ್ನಡ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಗೋವಿಜಯ
(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0-8-0

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರುಷ ೩೮. ಪಾತ ೪೫. 23-7-1959 Vol. 38. No. 45.

ವಿಚಾರ ಮಥನ

ಕೇರಳದಲ್ಲಿ ಕಮ್ಯುನಿಸ್ಟರು ಅಂಜಿಕೊಳ್ಳುವುದೇಕೆ?

ಂ ಂ

ಮರುಚುನಾವಣೆಯಲ್ಲಿ ತಮ್ಮ ಬಣ್ಣ ಬಯಲಾಗಿ ಅಧಿಕಾರ ಹೋಗುವುದೆಂಬುದರಿಂದಲೆ?

ಜನತೆಗೆ ತನ್ನ ಆಡಳಿತೆಯಲ್ಲಿ ವಿಶ್ವಾಸವಿಲ್ಲವಾದರೆ, ತಾನು ರಾಜಿನಾಮೆಯಿತ್ತು ರಾಜ್ಯದಲ್ಲಿ ಹೊಸ ಚುನಾವಣೆಗಳಿಗೆ ಅವಕಾಶವನ್ನು ಒದಗಿಸಿಕೊಡುವುದು ಎಲ್ಲ ಪ್ರಜಾತಂತ್ರ ಸರಕಾರಿ ಪಕ್ಷವು ಹಾಕಿಕೊಡಬೇಕಾದ ಸತ್‌ಸಂಪ್ರದಾಯ ಸಾಮಾನ್ಯವಾಗಿ ಈ ಪದ್ಧತಿಯಲ್ಲಿ ಪ್ರಜಾತಂತ್ರದ ಗುಟ್ಟೊ ಅಡಗಿದೆ ಎನ್ನಬಹುದು. ಆದರೆ, ಕೇರಳದ ಕಮ್ಯುನಿಸ್ಟರ ದೃಷ್ಟಿಯಲ್ಲಿ ತಾವು ಕಳೆದ ಚುನಾವಣೆಗಳಲ್ಲಿ ಬಹುಮತ ಗಳಿಸಿ ಬಂದಿರುವುದರಿಂದ, ಅಂದು ಜನತೆಗೆ ತಮ್ಮ ಮೇಲಿದ್ದ ವಿಶ್ವಾಸದ ಆಧಾರದಿಂದ ಅವಧಿ ಮುಗಿಯುವ ವರೆಗೂ ಅಧಿಕಾರದಲ್ಲುಳಿಯಲು. ಹಿಂದರಿದು ಈಗ ಹೊಸ ಚುನಾವಣೆಗಳನ್ನು ಏರ್ಪಡಿಸಿದರೆ, ತಮ್ಮ 'ಪ್ರಜಾತಂತ್ರ'ದ ತತ್ತ್ವಕ್ಕೆ ಕುಂದು ಎಂದು ಗೊತ್ತಾಗಿದೆ. ಕೇರಳ ಸರಕಾರದ ವಿರುದ್ಧವಾಗಿ ನಡೆಯುತ್ತಿರುವ ಆಂದೋಲನವನ್ನು ಹತ್ತಿಕ್ಕಲು ಬಹು ಮುಖವಾಗಿ ಪ್ರಯತ್ನಿಸಿದರೂ ಅಸಫಲರಾದ ಇವರು 'ಪ್ರಜಾತಂತ್ರ'ದ ಸೋಗನ್ನು ಹಾಕಿಕೊಂಡು ಪ್ರಜಾಪ್ರಭುತ್ವವನ್ನು ಮೆಟ್ಟಿ, ಸರ್ವಾಧಿಕಾರ ಸ್ಥಾಪಿಸುವ ಹವಣಿಕೆಯಲ್ಲಿದ್ದಾರೆ. ವಿರೋಧೀ ನಾಯಕರ ಮೇಲೆ ಹಾಗೂ ತಮಗೆ ವಿರೋಧವಾದ ಧೋರಣೆಗಳನ್ನು ತಾಳಿದ ಪತ್ರಿಕೆಗಳ ಮೇಲೆ ಕಟ್ಟಲೆಗಳನ್ನು ಹೊರಿಸುವುದಕ್ಕೂ ಹಿಂದೆ ಮುಂದೆ ನೋಡಲಿಲ್ಲ. ಆದರೆ, ಕಾಂಗ್ರೆಸ್ ಮತ್ತು ಪ್ರ. ಸ. ಪಾ. ಪಕ್ಷದ ಆಡಳಿತೆಯಿಂದಲೂ ಅಧ್ಯಕ್ಷರಾಡಳಿತೆಯಿಂದಲೂ ನೊಂದ ಕೇರಳದ ಜನತೆಗೆ ಹಿಂಡಿಯಾಸೆ ತೋರಿಸಿ ತಮ್ಮತ್ತ ಬರಸೆಳೆದು, ಅಧಿಕಾರಕ್ಕೆ ಏರಿದ ಕಮ್ಯುನಿಸ್ಟರ ವಿಚಿತ್ರ ಕಪಿಮುಷ್ಟಿಯೇ ಅಲ್ಲದೆ ಅದರೊಳಗೇನೂ ಇಲ್ಲವೆಂದು ತಿಳಿವಷ್ಟು ಜನತೆ ಈಗ ಜಾಗ್ರತವಾಗಿದೆ; ಎಂತಲೇ ದಿನೇ ದಿನೇ ಆಂದೋಲನ ಪ್ರಬಲವಾಗುತ್ತಿದೆ. ಕಮ್ಯುನಿಸ್ಟರು ತಾವು ಮಾಡಿದುದು ನ್ಯಾಯ, ತಮಗೆ ಇಂದಿಗೂ ಹಿಂದಿದ್ದ ಜನತಾ ಬೆಂಬಲವಿದೆ ಎಂದು ಅತ್ಮ ನಿರ್ಧಾರವಾಗಿ ತಿಳಿದಿರುವುದಾದರೆ, ಸರ್ವಮಾನ್ಯವಾದ ಮರುಚುನಾವಣೆಗಳಿಗೆ ಹಿಂದೇಟು ಹಾಕಬೇಕಾಗಿಲ್ಲ, ಪಂಚಾಯತ, ನಗರಸಭೆಗಳ ಚುನಾವಣೆಗಳನ್ನೂ ಮುಂದೆ ಹಾಕುವ ಅಗತ ವಿರಲಿಲ್ಲ ಕಮ್ಯುನಿಸ್ಟರ ಈ ರೀತಿಯ ಧೋರಣೆಯಿಂದ ಇನ್ನೊಂದು ಚುನಾವಣೆ ನಡೆದರೆ, ತಮಗಿರುವ ಬಹುಮತವು ತಪ್ಪಿಹೋಗುವ ಸಂಭವವೇ ಹೆಚ್ಚು, ಆದುದರಿಂದ ಕೈಗೆ ಅಧಿಕಾರ ಸಿಕ್ಕಿರುವಾಗ, ಅದನ್ನು ಏನೇ ಆಗಲಿ, ಪ್ರಜಾತಂತ್ರದ ಗೀಳಿಗೆ ಸಿಕ್ಕಿಬಿದ್ದು ಕಳಕೊಳ್ಳುವಷ್ಟು ಮೂರ್ಖರಲ್ಲ ಮೊದಲು ಸಾರಿ ಹೇಳಿದ್ದಾರೆ. A bird in hand is worth two in the bush (ಕೈಯಲ್ಲಿರುವ ಒಂದು ಹಕ್ಕಿಯೇ ಪೊದೆಯಲ್ಲಿರುವ ಎರಡು ಹಕ್ಕಿಗಳಿಗಿಂತ ಅಮೂಲ್ಯ) ಎಂಬಂತೆ ಮುಂದೆ ಈಗಿರುವುದಕ್ಕಿಂತಲೂ ಅಧಿಕ ಬಹುಮತ ತಮಗೆ ಸಿಕ್ಕುತ್ತದೆ, ಆದರೂ ಅಧಿಕಾರ ಮಾತ್ರ ಈಗ ಬಿಟ್ಟುಕೊಡಲಾರೆವು ಎಂಬ ಧೋರಣೆಯು ಎಷ್ಟರ ಮಟ್ಟಿಗೆ ಸರಿ ಎನ್ನಬರುವಂತಿಲ್ಲ ಆಂದೋಲನದ ಸ್ಥಿತಿಗತಿ ಉಲ್ಬಣಾವಸ್ಥೆಗೇರುತ್ತಿರುವಾಗ, ರಾಜ್ಯ ಸರಕಾರ ಇದೇ ರೀತಿ ತನ್ನ "ಮೊಂಡುತನ"ವನ್ನು ತೋರಿಸುತ್ತ ಇದ್ದರೆ, ಇದರಿಂದ ಕೇರಳಕ್ಕೂ ಒಳಿತಿಲ್ಲ; ರಾಷ್ಟ್ರಕ್ಕೂ ಭೂಷಣವಲ್ಲ. ಈ ಗೊಂದಲ ಹಾಗೂ ಭೀಕರ ದೃಶ್ಯ ಎಷ್ಟು ಬೇಗನೇ ಅಂತ್ಯಗೊಳ್ಳುವುದೋ ಅಷ್ಟು ಹಿತಕರ.

ಆದರೆ, ಸಂಧಾನದ ಮಾತುಕತೆಗಳು ನಿರರ್ಥಕವಾಗಿ ಗೋಚರಿಸುವಾಗ ಮುಂದಿನ ಹೆಜ್ಜೆ ಯಾವುದು? ರಾಜ್ಯ ಮತ್ತು ಕೇಂದ್ರಗಳ ಸಂಬಂಧವೆಷ್ಟು ಮಟ್ಟಿಗಿದೆ? ಸಂವಿಧಾನ ಇಂತಹ ಜಟಿಲ ಪ್ರಶ್ನೆಗಳಿಗೆ ಏನು ಉತ್ತರ ಹೇಳುತ್ತದೆ? ಕೇರಳ ಸರಕಾರವು ತನ್ನ ಹಠವನ್ನು ಬಿಡದಿರುವಷ್ಟು ಸಮಯ ಆಂದೋಲನ ಮುಂದುವರಿಯುತ್ತ ಇರಬೇಕೆ? ಮುಂದಿನ ಚುನಾವಣೆಯ ನಡುವೆ ಮರು ಚುನಾವಣೆ ನಡೆಯುವುದು ಅಸಂಬದ್ಧವೆ? ರಾಷ್ಟ್ರಾಧ್ಯಕ್ಷರು — ರಾಜ್ಯಪಾಲರು — ಪ್ರಧಾನಮಂತ್ರಿಗಳ ಅಧಿಕಾರ ಸಂವಿಧಾನದನ್ವಯ ಎಷ್ಟು? ಇವೆಲ್ಲವುಗಳಿಗೂ ದೊರೆಯುವ ಉತ್ತರಗಳಿಂದ ಕೇರಳದ ವಿಪನ್ನಾವಸ್ಥೆಯು ಕೊನೆಗೊಳ್ಳದೇ ಹೋದರೆ ಮುಂದೆ ಏನು? ಸಂವಿಧಾನಕ್ಕೇನೇ ತಿದ್ದುಪಡಿಯನ್ನು ಮಾಡಿಕೊಂಡೇ ಸಮಸ್ಯೆಯನ್ನು ಬಗೆಹರಿಸಬೇಕೆ? ಎಂಬೆಲ್ಲಾ ಪ್ರಶ್ನೆಮಾಲಿಕೆಗಳು ಮೂಡುವುದು ಸಹಜವಲ್ಲವೆ? ಪ್ರಧಾನಿ ನೆಹರೂ ಇಷ್ಟರಲ್ಲೇ. ಸಿಮ್ಲಾದಿಂದ ರಾಜಧಾನಿಗೆ ಬಂದು ತನ್ನ ಸಹಮಂತ್ರಿಗಳೊಡನೆ ಪರ್ಯಾಲೋಚಿಸಲಿದ್ದಾರೆ. ಈಗ ನಿರ್ಧಾರವೇನೂ ಹೊರಬೀಳದೆ ಹೋದರೆ, ಪಾರ್ಲಿಮೆಂಟಿಗೇನೇ ನಿರ್ಧಾರವೀಯಲು ಬಿಡುವುದೆಂಬ ಪಿಸುಮಾತೂ ಕೇಳಿಬರುತ್ತಿದೆ. ಅದು ಯಾವ ಪರಿಹಾರವನ್ನು ಸೂಚಿಸೀತು?

ಕೇರಳದಲ್ಲಿ ಮರುಚುನಾವಣೆಯನ್ನು ಏರ್ಪಡಿಸಬೇಕೆಂದು ಕೇಳಿಕೊಳ್ಳುವುದೆ? ಹಾಗೆ ಕೇಳಿಕೊಳ್ಳಲು ಪಾರ್ಲಿಮೆಂಟಿಗೆ ಅಧಿಕಾರವಿದೆಯೆ? ಇದ್ದರೂ, ರಾಜ್ಯ ಸರಕಾರವು ಆ ಕೇಳಿಕೆಯನ್ನೂ ಮನ್ನಿಸದೆ ತನ್ನ ಚಂಡಿತನವನ್ನೇ ನೆಚ್ಚಿ ಕುಳಿತರೆ? ಸಂವಿಧಾನದ ಯಾವ ಅನುಚ್ಛೇದವೂ ಸಮಸ್ಯೆಗೆ ಪರಿಹಾರ ಸೂಚಿಸದೆ ಹೋದರೆ, ಕೇರಳದ ಆಂದೋಲನವನ್ನು ನಿಲ್ಲಿಸಿ, ಅಲ್ಲಿನ ಸರಕಾರವನ್ನು ಪದಚ್ಯುತಗೊಳಿಸುವುದಕ್ಕೋ

(೧೨ನೇ ಪುಟ ನೋಡಿರಿ)

ಬ್ರಿಟಿಷ ಪೋಸ್ಟ್ ಮಾಸ್ಟರ್ ಜನರಲ್ ಡಾ। ಚಾರ್ಲ್ಸ್ ಹಿಲ್ ಅವರು (ಮಧ್ಯ) ಟ್ರಾನ್ಸ್ ಅಟ್ಲಾಂಟಿಕ ಟೆಲಿಫೋನ್ ವ್ಯವಸ್ಥೆಯನ್ನು ಉದ್ಘಾಟಿಸುವ ಚಿತ್ರ. ಅವರ ಎಡಬಲಗಳಲ್ಲಿ ಕೆನಡ ಮತ್ತು ಅಮೆರಿಕೆಗಳ ರಾಯಭಾರಿಗಳಿದ್ದಾರೆ.

ದಿ ವಿಜಯ ಬ್ಯಾಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬ್ಯಾಂಕ್)

ಪ್ರಧಾನ ಕಛೇರಿ:– ಮಂಗಳೂರು—3. ಸ್ಥಾಪನೆ:– 1931.

ಕಾಯಂ ಠೇವಣಾತಿ ಬಡ್ಡಿ ದರ

1	ತಿಂಗಳಿಂದ	5	ತಿಂಗಳ ವರೆಗೆ	4¼%
6	,,	12	,,	4½%
13	,,	24	,,	4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ ...

ಕಥಾ ವಿಹಾರ

ಪದಚ್ಯುತೆ ಗೋದಾವರಿ ಪ್ರಾಣ ಚ್ಯುತಿ ಗೆಯ್ದಳು!

ಇದಕ್ಕೆ ಕಾರಣರಾರು? ಆಕೆಯೆ? ಪಂಡಿತರೆ? ಗೋಮತಿಯೋ?

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಮನೆವಾರ್ತೆಯ ಕಾರ್ಯಗಳಲ್ಲಿ ಪರಿವರ್ತನೆಯಾದೊಡನೆಯೇ ಗೋದಾವರಿಯ ಸ್ವಭಾವದಲ್ಲಿಯೂ ತೋರಿಕೆಯ ಪರಿವರ್ತನೆಯಾಯಿತು. ಈರ್ಷ್ಯೆಯು ಮನಸ್ಸಿನಲ್ಲಿ ಉಳಿಯುವ ವಸ್ತುವಲ್ಲ. ದಿನದ ಎಂಟೂ ಪ್ರಹರಗಳಲ್ಲಿ ನೆರೆಹೊರೆಯ ಮನೆಗಳಲ್ಲಿ ಇದೇ ಚರ್ಚೆ ನಡೆಯ ತೊಡಗಿತು. "ಪ್ರಪಂಚದ ಜನರಿಗೆ ಸಂದರ್ಭವಿದೆಯೋ ಇಲ್ಲವೇ, ನೋಡುವ; ಪುಣ್ಯಾತ್ಮಗಿತ್ತಿ ಜಗಳ ಮಾಡಿ ಮಾಡಿ ಮದುವೆ ಮಾಡಿಸಿದಳು; ತಿಳಿದೂ ತಿಳಿದೂ ತನ್ನ ಕಾಲಮೇಲೆ ಕಲ್ಲು ಹೊತ್ತು ಹಾಕಿಕೊಂಡಳು. ತನ್ನ ಸ್ವಂತದ ಬಟ್ಟೆಗಳನ್ನು ಒಪ್ಪಿಸಿಬಿಟ್ಟಳು. ಈಗ ಅತ್ತು ಅತ್ತು ನೆಗು ಒಪ್ಪಮಾಡುತ್ತಾಳೆ. ಸವತಿಯೆಂದರೆ ಸವತಿಯೇ; ಪತಿಯೂ ಆಕೆಯನ್ನು ತಿರಸ್ಕರಿಸಿದ. ಸರಿ, ಇನ್ನೇನು, ಮನೆಯಲ್ಲಿ ಬಿದ್ದುಕೊಂಡು ಹೊಟ್ಟೆ ಹೊರೆದುಕೊಳ್ಳಲಿ. ಇಂತಹ ಜೀವನವೂ ಒಂದು ಜೀವನವೆ?"

ಈ ಸಹಾನುಭೂತಿಪೂರ್ಣ ಮಾತುಗಳನ್ನು ಕೇಳಿ ಗೋದಾವರಿಯ ಈರ್ಷ್ಯಾಗ್ನಿಯು ಮತ್ತಷ್ಟು ಪ್ರಜ್ವಲಿಸುವುದು. ಈ ಮಾನಸಿಕ ಸಮವೇದನೆಗಳಲ್ಲಿ ಅಧಿಕಾಂಶ ಕಪಟ ಮನಸ್ಸಿನಿಂದ ಆವಿರ್ಭವಿಸುವ ಮನೋವಿನೋದದಿಂದ ಉತ್ಪನ್ನವಾದುವುಗಳೆಂದು ಆಕೆಗೆ ಹೊಳೆಯುತ್ತಿರಲಿಲ್ಲ.

ಗೋದಾವರಿಗೆ ಪೂರ್ಣ ವಿಶ್ವಾಸವಿದ್ದ ಮತ್ತು ಪಂಡಿತರಿಗೆ ಸಂಪೂರ್ಣ ಅವಿಶ್ವಾಸವಿದ್ದ ಸಂಗತಿ ನಡೆಯಲಿಲ್ಲ. ಮನೆಯ ಕೆಲಸಗಳಲ್ಲಿ ಯಾವುದೇ ವಿಘ್ನವಾಗಲೀ ಅಡೆತಡೆಯಾಗಲೀ ಕಾಣಿಸಿಕೊಳ್ಳಲಿಲ್ಲ-ಅನುಭವದಿಂದ ಪಂಡಿತರ ವ್ಯವಸ್ಥೆ ಗೋದಾವರಿಯದರಷ್ಟು ಉತ್ತಮವಾಗಿಲ್ಲವೆಂಬುದು ನಿಜ. ಸ್ವಲ್ಪ ಹೆಚ್ಚು ಖರ್ಚಾಗುತಿತ್ತು. ಆದರೇನು ಕೆಲಸ ಸರಿಯಾಗಿಯೇ ನಡೆಯುತಿತ್ತು. ಗೋದಾವರಿಗೆ ಗೋಮತಿಯ ಎಲ್ಲ ಕಾರ್ಯಗಳೂ ದೋಷಪೂರ್ಣವಾಗಿಯೇ ಕಂಡುವು. ಈರ್ಷ್ಯೆಯಲ್ಲಿ ಅಗ್ನಿ ಇದೆ; ಆದರೆ, ಅಗ್ನಿಯ ಗುಣ ಮಾತ್ರ ಅದರಲ್ಲಿಲ್ಲ. ಅದು ಹೃದಯದಲ್ಲಿ ಹರಡುವ ಬದಲು ಒಳಗೊಳಗೇ ಹೊಗೆಯಾಡುತ್ತದೆ. ಈಗೀಗ ಮನೆಯಲ್ಲಿ ಏನಾದರೂ ಹಾನಿಯೊದಗಿದರೆ, ದುಃಖದ ಬದಲು ಗೋದಾವರಿಗೆ ಆನಂದವಾಗುತಿತ್ತು. ಮಳೆಗಾಲದ ದಿನಗಳಾಗಿದ್ದುವು. ಕೆಲವಾರು ದಿನಗಳ ವರೆಗೆ ಸೂರ್ಯನಾರಾಯಣನ ದರ್ಶನವಿರಲಿಲ್ಲ. ಸಂದೂಕದಲ್ಲಿಟ್ಟಿದ್ದ ಬಟ್ಟೆಯಲ್ಲಿ ಬುಗುಟು ಹಿಡಿದಿತ್ತು; ಉಪ್ಪಿನಕಾಯಿ ಕೊಳೆತಿತ್ತು. ಗೋದಾವರಿಗೆ ಇವನ್ನು ಕಂಡು ತಿಲಾಂಶವೂ ವ್ಯಥೆಯೆನಿಸಲಿಲ್ಲ. ನಾಲ್ಕಾರು ಕಹಿಮಾತು ಹೇಳುವ ಅವಸರ ಆಕೆಗೆ ದೊರೆತಿತ್ತು. ಯಜಮಾನಿಯಾಗಬಲ್ಲವಳು ಯಜಮಾನಿಯ ಕೆಲಸವನ್ನೂ ಮಾಡುವಳು.

ಪಂಡಿತ ದೇವದತ್ತರ ಪ್ರಕೃತಿಯಲ್ಲೂ ಈಗ ಒಂದು ಹೊಸತನ ಕಾಣಿಸುತಿತ್ತು. ಗೋದಾವರಿಯ ಮನೆಯ ಕಾರುಬಾರಗಳನ್ನು ಹೊತ್ತುಕೊಂಡು ನಡೆಸುವಷ್ಟು ಸಮಯ ಅವರಿಗೇನೂ ಕಡಿಮೆಯಾದುದೆಂಬುದಿರಲಿಲ್ಲ. ತರಕಾರಿ ತರುವುದಕ್ಕೂ ಅವರು ಸಂತೆಗೆ ಹೋದವರಲ್ಲ. ಈಗಲಾದರೂ ದಿನಕ್ಕೆ ಆರೇಳುಬಾರಿ ಪೇಟೆಗೆ ಹೋಗುವುದನ್ನು ಗೋದಾವರಿ ಕಾಣುತ್ತಾಳೆ. ಗೃಹಾಡಳಿತೆಯಲ್ಲಿ ಸಮುಚಿತ ವ್ಯವಸ್ಥೆಯಿಲ್ಲದುದರಿಂದ, ಕೆಲವೊಮ್ಮೆ ವಸ್ತು ಬೇಕೆಂದು ತಿಳಿದಾಗಲೇ ಹೊರಡಬೇಕಾಗಿಯೂ ಬರುತಿತ್ತು. ಗೋದಾವರಿ ಇದನ್ನು ಕುತೂಹಲದಿಂದ ನೋಡುತ್ತ, ಒಂದು ಹುಲ್ಲುಕಡ್ಡಿಯನ್ನೂ ಅತ್ತ ಎತ್ತಿಡದ ಮಹಾರಾಜರಿವರು ಎನ್ನುತ್ತಾಳೆ. ಈಗಲಾದರೂ ದಿನಾ ಹತ್ತುಸಾರೆ ಪೇಟೆಗೆ ಓಡುತ್ತಾರೆ. ಈಗ, ತನ್ನ ಓದು ಬರಹಕ್ಕೆ ತೊಂದರೆಯಾಗುತ್ತದೆ ಎನ್ನುವ ಮಾತನ್ನೊಂದು ಬಾರಿಯೂ ಕೇಳುತ್ತಿಲ್ಲ ಎಂದು ಹಂಗಿಸುತ್ತಾಳೆ.

ಪಂಡಿತರು ಪೇಟೆಯಿಂದ ಸಾಮಾನು ತರುವುದರಲ್ಲಿ ಕುಶಲರಲ್ಲ ಎಂಬುದುದು ಗೋದಾವರಿಗೊಂದು ಬಾರಿ ತಿಳಿಯಿತು. ತನಗೆ ಬಟ್ಟೆಬರೆಗಳ ಆವಶ್ಯಕತೆ ಬಿದ್ದಾಗ, ಆಕೆ ನೆರೆಯ ಓರ್ವ ಮುದುಕನಿಂದ ತರಿಸುತ್ತಿದ್ದಳು. ಗೋದಾವರಿಗೆ ಬಟ್ಟೆಗಳು ಬೇಕೆಂಬ ಮಾತೂ ಪಂಡಿತರಿಗೆ ಮರೆತು ಹೋಗಿತ್ತು. ಅವರ ತಲೆಯ ಮೇಲಿಂದ ಭಾರ ಇಳಿಸಿದಷ್ಟು ಅವರು ಕ್ಷೇಮಿಗಳು. ಗೋದಾವರಿಯೇ ತಂದುಕೊಟ್ಟ ವಸ್ತ್ರಗಳನ್ನೇ ಅವರು ಧರಿಸುತಿದ್ದರು. ಪಂಡಿತರಿಗೆ ನೂತನ ನಮೂನೆಯಿಂದ ಯಾವ ಪ್ರಯೋಜನವೂ ಇರಲಿಲ್ಲ. ಆದರೆ, ಈಗ ಬಟ್ಟೆ ತರುವುದಕ್ಕೂ ತಾವೇ ಹೊರಡಬೇಕಾಯಿತು. ಒಂದು ಬಾರಿ ಗೋಮತಿಯೊಡನೆ ಬಟ್ಟೆ ಬರೆ ಇರಲಿಲ್ಲ. ಪಂಡಿತರು ಹೋಗಿ ಒಂದು ಒಳ್ಳೆಯ ಜೋಡಿಯನ್ನು ತಂದಿತ್ತರು. ವ್ಯಾಪಾರಿಯೂ ಸಾಕಷ್ಟು ಬೆಲೆ ತೆಗೆದುಕೊಂಡಿದ್ದ. ಎರವಲಾಗಿ ಬಟ್ಟೆ ತರಲು ಪಂಡಿತರು ಹಿಂದೆ ಮುಂದೆ ನೋಡಲಿಲ್ಲ. ಗೋಮತಿಯು ಆ ಬಟ್ಟೆಗಳನ್ನು ಗೋದಾವರಿಗೆ ತೋರಿಸಿದಳು. ಗೋದಾವರಿಯು ಅವನ್ನು ನೋಡಿ ಮುಖಸಿಂಡರಿಸಿ ಹೇಳಿದಳು—"ಒಳ್ಳೆಯದು, ನೀನು ಇಂತಹ ಸೀರೆ ತರುವುದಕ್ಕೂ ಹೇಳಿ ಕೊಟ್ಟೆಯ? ನನಗೆ ಮದುವೆಯಾಗಿ ಹದಿನಾರು ವರ್ಷವಾಯಿತು, ಅವರ ಕೈಯಿಂದ ತಂದ ಒಂದು ಸೀರೆಯನ್ನುಡುವ ಭಾಗ್ಯವನ್ನೂ ಪಡೆದು ಬಂದಿಲ್ಲ!"

ಇಂತಹ ಘಟನೆಗಳು ಗೋದಾವರಿಯ ಈರ್ಷ್ಯಾಗ್ನಿಯನ್ನು ಮತ್ತಷ್ಟು ಪ್ರಜ್ವಲಿಸುವಂತೆಸಗುತ್ತಿದ್ದುವು. ಪಂಡಿತರು ಸ್ವಾಭಾವಿಕವಾಗಿಯೇ ಶುಷ್ಕಜೀವಿಗಳೆಂದು ತಿಳಿದಿರುವವರೆಗೆ ಗೋದಾವರಿ ಸಂತುಷ್ಟಳಾಗಿಯೇ ಇದ್ದಳು. ಆದರೆ, ಅವರಲ್ಲಿ ಕಂಡುಬಂದ ನಿತ್ಯನೂತನ ತರಂಗಳಿಂದಾಗಿ, ತಾನು ನೂರಾರುಯತ್ನ ಮಾಡಿ ಪಡೆಯದೆ ಇದ್ದುದನ್ನು ಈಕೆ ತನ್ನ ಯೌವನವೊಂದರಿಂದಲೇ ಗಳಿಸಿದ್ದಾಳೆ ಎಂದು ಕೊಂಡಳು. ತಾನು ಸತ್ಯ ಪ್ರೇಮವೆಂದು ತಿಳಿದುದು ಮಿಥ್ಯ ಪ್ರೇಮವೆಂದಾಗಿ ಅಂದುಕೊಂಡಳು. ಅದು ಪೂರ್ಣ ಸ್ವಾರ್ಥ ಎಂದೆನಿಸಿತಾಕೆಗೆ.

ದೈವಯೋಗದಿಂದ ಅದೇ ವೇಳೆಗೆ ಗೋಮತಿ ಅಸ್ವಸ್ಥಳಾಗಿ ಬಿದ್ದಳು. ಆಕೆಯಲ್ಲಿ ಏಳುವ ಕೂರುವ ಶಕ್ತಿಯೂ ಇರಲಿಲ್ಲ. ಗೋದಾವರಿ ಅಡುಗೆಮಾಡತೊಡಗಿದಳು; ಆದರೆ, ಗೋಮತಿಯು ವಾಸ್ತವವಾಗಿ ಅನಾರೋಗ್ಯದಿಂದಿರುವಳೆಂದಾಕೆಗೆ ನಿಶ್ಚಯವಿರಲಿಲ್ಲ. ಈ ಎರಡೂ ಪ್ರಾಣಿಗಳು ತನ್ನಿಂದ ಅಡುಗೆ ಮಾಡಿಸಲು ಸೋಗು ಹಾಕಿವೆ ಎಂದಾಕೆ ತಿಳಿದಳು. ಎಂತಲೇ "ದಾಸಿಯನ್ನಾಗಿ ಮಾಡಲು ಬಯಕೆಯಿತ್ತು; ಅದೂ ಈಗ ಪೂರ್ತಿಯಾಯಿತು" ಎಂದು ಹೇಳತೊಡಗಿದಳು.

ಪಂಡಿತರು ಉಣ್ಣುವಾಗ ಈಗೀಗ ಏನೇನೋ ಕೊರತೆಯಾದಂತೆ ಭಾಸವಾಗುತಿತ್ತು. ಗೋದಾವರಿಯೊಡನೆ ಏಕಾಂತದಲ್ಲಿ ಮಾತಾಡಲು ಏಕೆ ಹೆದರುವೆನೆಂದವರಿಗೆ ತಿಳಿಯುತ್ತಿರಲಿಲ್ಲ. ಆಕೆ ಎಂತಹ ಕಠೋರ ಹಾಗೂ ಹೃದಯ ವಿದ್ರಾವಕ ಮಾತುಗಳನ್ನು ಹೇಳುವಳೆಂದು ದೇವರಿಗೇನೇ ಗೊತ್ತು. ಎಂತಲೇ ಅಂತಹ ಭಯಂಕರ ಸನ್ನಿವೇಶವು ಬರಬಾರದೆಂದೇ ಅವರು ಊಟದ ವೇಳೆ ಹೆದರುತ್ತ ಕೂಡ್ರುತಿದ್ದರು. ಗೋದಾವರಿಯು ತನ್ನ ತೀವ್ರ ನೇತ್ರಗಳಿಂದ ಅವರ ಮನಸ್ಸಿನ ಇಂಗಿತವನ್ನು ಈಕ್ಷಿಸುತ್ತ ಮನಸ್ಸಿನೊಳಗೇನೇ ವ್ಯಂಗ್ಯವಾಗಿ ನಕ್ಕು ಸುಮ್ಮನಿರುತಿದ್ದಳು.

ಒಂದುದಿನ ಆಕೆಯಿಂದ ಸುಮ್ಮನಿರಲಾಗಲಿಲ್ಲ. "ನನ್ನೊಡನೆ ಮಾತಾಡುವುದನ್ನೂ ನಿಷ್ಕರಿಸಿದ್ದೀರಾ? ಹಿಂದೆಲ್ಲ ರಾತ್ರಿಯಿಡಿ ಮಾತಿನ ಪಂಕ್ತಿ ಕಡಿಯುತ್ತಿರಲಿಲ್ಲ. ಆದರೆ, ಈಗ ನನ್ನೆದುರು ಬಾಯಿ ತೆರೆಯಲಾರೆನೆಂದು ಪ್ರತಿಜ್ಞೆ ತೊಟ್ಟಿರುವಿರಾ? ಮನೆಯ ಆಗು ಹೋಗುಗಳನ್ನು ನೋಡುತ್ತಲೇ ಇದ್ದೀರಿ ತಾನೆ? ಈಗ ಎಲ್ಲವೂ ನಿಮ್ಮ ಇಚ್ಛೆಗೆ ಸರಿಯಾಗಿ ನಡೆಯುತ್ತದಲ್ಲ?"

ಪಂಡಿತರು ತಲೆಕೆಳಗಿಳಿಸಿ ಉತ್ತರಿಸಿದರು—"ಹ್ಞೂಂ, ಹೇಗೆ ನಡೆಯುತ್ತದೆಯೋ ಹಾಗೆಯೇ ನಡೆಯುತ್ತದೆ. ಈ ಚಿಂತೆಯಲ್ಲಿ ನಾನು ಪ್ರಾಣಕೊಡಬೇಕೆ? ನೀನೆ ಮನೆ ಹಾಳಾಯಿತೆಂದು ಹೇಳುವಾಗ, ನಾನೇನು ಅನ್ನಲಿ?"

ಇದಕ್ಕುತ್ತರ ರೂಪದಲ್ಲಿ ಗೋದಾವರಿಯು ಕಠೋರ ವಚನಗಳನ್ನಾಡಿದಳು. ಮಾತು ಬೆಳೆಯಿತು. ಪಂಡಿತರೂ ಮಣೆಯ ಮೇಲಿಂದೆದ್ದರು. ಗೋದಾವರಿ ಆಣೆಯಿಟ್ಟು ಅವರನ್ನು ಕೂರಿಸ ಬಯಸಿದಳು; ಆದರೆ, ಅವರು ಒಂದು ಕ್ಷಣವೂ ಅಲ್ಲಿ ನಿಲ್ಲಲಿಲ್ಲ. ಆಗ ಆಕೆಯೂ ಅಡುಗೆ ಎತ್ತಿ ಒಯ್ದಳು. ಮನೆಯೆಲ್ಲವೂ ಉಪವಾಸ ಬಿತ್ತು!

ಗೋಮತಿಯದೊಂದು ವಿಚಿತ್ರ ಸ್ವಭಾವ. ಎಂತಹ ತೀಕ್ಷ್ಣವಾಕ್ಯಗಳನ್ನಾದರೂ ಆಕೆ ಸಹಿಸಬಲ್ಲಳಾದರೂ ಹಸಿವೆಯನ್ನು ಮಾತ್ರ ಎಂದಿಗೂ ತಾಳಲಾರಳು. ಇದರಿಂದಾಗಿ ಆಕೆ ಒಂದೂ ವ್ರತವನ್ನೂ ಆಚರಿಸುತ್ತಿರಲಿಲ್ಲ. ಹೇಳಿ ಕೇಳಿ ಶ್ರೀ ಕೃಷ್ಣ ಜನ್ಮಾಷ್ಟಮಿಯೊಂದನ್ನು ಆಚರಿಸುತಿದ್ದಳು. ಈಗ ಆಕೆಯು ಕಾಯಿಲೆಯಿಂದಾಗಿ ಮತ್ತಷ್ಟು ಹಸಿದಿದ್ದಳು. ಮಧ್ಯಾಹ್ನವಾಗಿದರೂ ಭೋಜನ ದೊರೆಯುವ ಲಕ್ಷಣ ತೋರದಿದ್ದುದನ್ನು ಕಂಡು, ಪೇಟೆಯಿಂದ ತಿಂಡಿ ತರಿಸಿದಳು. ಪ್ರಾಯಃ ಈಕೆ ಗೋದಾವರಿಯ ಹೊಟ್ಟೆ ಉರಿಸುವುದಕ್ಕಾಗಿಯೇ ಈ ಆಟ ಆಡಿರಬೇಕು. ಒಂದು ಹೊತ್ತು ಉಣ್ಣದೆ ಹೋದರೆ ಯಾರಾದರೂ ಸಾಯುವುದಿಲ್ಲತಾನೆ! ಗೋದಾವರಿಯು ನಖಶಿಖಾಂತವಾಗಿ ಉರಿಯತೊಡಗಿದಳು. ತಾನೂ ತಿಂಡಿ ತರಿಸಿದಳು. ಬಹುವರ್ಷಗಳ ನಂತರ ಆಕೆ ಮಿಠಾಯಿ ತಿಂದಳು! ಈರ್ಷ್ಯೆಯ ಕೌತುಕವೆಂದರೆ ಇದೇ ಅಲ್ಲವೆ?

ಮೊದಲು ಮಧ್ಯಾಹ್ನಕ್ಕೆ ಮುಂಚೆ ಒಂದು ತೊಟ್ಟು ನೀರನ್ನೂ ನಾಲಗೆಗೆ ತೋರಿಸದ ಗೋದಾವರಿಯು ಈಗ ಪ್ರಾತಃಕಾಲವೇ ಕೊಂಚ ಉಪಾಹಾರ ಸೇವಿಸದೆ ಇರುತ್ತಿರಲಿಲ್ಲ. ಮೊದಲಾಕೆ ತಲೆಗೆ ಸಾಮಾನ್ಯ ಎಣ್ಣೆ ಹಾಕುತಿದ್ದಳು; ಈಗ ಆ ಎಣ್ಣೆಯಿಂದ ಅವಳಿಗೆ ತಲೆಸಿಡಿಯತೊಡಗುತ್ತದೆ. ವೀಳ್ಯತಿನ್ನುವ ಹೊಸ ವ್ಯಸನವೊಂದಾಕೆಯನ್ನು ಆಶ್ರಯಿಸಿತು. ಈರ್ಷ್ಯೆಯು ಆಕೆಯನ್ನೊಬ್ಬ ನವೀನ ಸೊಸೆಯನ್ನಾಗಿ ಮಾಡಿಬಿಟ್ಟಿತು.

ಜನ್ಮಾಷ್ಟಮಿಯ ಶುಭದಿನ ಬಂದಿತು. ಪಂಡಿತರ ಸ್ವಾಭಾವಿಕ ಆಲಸ್ಯ ಈ ಮೂರು ದಿನಗಳಲ್ಲಿ ಮಾಯವಾಗುತಿತ್ತು. ಅವರು ಅತ್ಯುತ್ಸಾಹದೊಡನೆ ಹಬ್ಬದೂಟದಲ್ಲಿ ಭಾಗವಹಿಸುತಿದ್ದರು. ಗೋದಾವರಿಯು ನೀರನ್ನೂ ಮುಟ್ಟುತ್ತಿರಲಿಲ್ಲ. ಪಂಡಿತರಾದರೂ ಕೃಷ್ಣೋಪಾಸಕರಾಗಿದ್ದರು. ಈಗ ಅವರೂ ಗೋಮತಿಯ ಒತ್ತಾಯದಿಂದ ನಿರ್ಜಲ ವ್ರತಾಚರಣೆಗೆ ಸಿದ್ಧರಾದರು. ಆದರೆ, ದಾಸಿಯು ಬಂದು, ದೊಡ್ಡ ಹೆಂಡತಿ ನಿರ್ಜಲಳಿರಲಾರರಂತೆ; ಅವರಿಗೆ ಫಲಾಹಾರ ತಯಾರಿಸಿರೆಂದು ಹೇಳಿದಾಗ ಅವರು ವಿಸ್ಮಿತರಾದರು.

ಸಂಧ್ಯೆಯ ಸಮಯ ಧ್ಯಾನ ಮಂದಿರಕ್ಕೆ ಹೋಗಲು ಗೋದಾವರಿಯು ಗಾಡಿ ಬೇಕೆಂದಳು. ಗೋಮತಿಗೆ ಈ ಕೇಳಿಕೆ ಅಸಾಧಾರಣವೆಂದು ಕಂಡಿತು. ಈಗೀಗ ಗಾಡಿಯ ಬಾಡಿಗೆ ಮಿತಿಮೀರಿ ಹೋಗುತ್ತಿದೆ. ಧ್ಯಾನ ಮಂದಿರವೂ ದೂರವಿಲ್ಲ. ಇದರಿಂದಾಗಿ ಆಕೆ ಸಿಡಿದು ಅಂದಳು—"ಸುಮ್ಮ ಸುಮ್ಮನೆ ಯಾಕೆ ಹಣ ಎಸೆಯಬೇಕು? ಮಂದಿರವೇನು ಹರದಾರಿ ದೂರವಿದೆಯೆ? ಇಷ್ಟಕೆ ಕೊಡುವುದೇನೋ ಸುಲಭ. ಆದರೆ, ಚಿಂತೆ ಮಾತ್ರ ಅವರಿಗೆ-ಎತ್ತಿನಂತೆ ದುಡಿಯುವವರಿಗೆ."

ಮೂರು ವರ್ಷಗಳ ಮೊದಲು ಇಂತಹುದೇ ಮಾತುಗಳನ್ನು ಗೋದಾವರಿಯ ಬಾಯಿಯಿಂದ ಗೋಮತಿ ಕೇಳಿದ್ದಳು. ಈಗ ಗೋದಾವರಿಗೂ ಗೋಮತಿಯ [illegible]

(೧೨ನೇ ಪುಟ ನೋಡಿರಿ)

ಕುಮಾರಿ ಚಿತ್ರಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಜೀವನ ಪರಿಚಯ

ಅವನ ಬೆನ್ನು ಗೂನು, ಆದರವನು ಪರ್ವತಾರೋಹಿ

ಸ್ವಿಜರ್ಲೆಂಡದ ಈ ಸಾಹಸಿಯ ಅದ್ಭುತ ಎದೆಗಾರಿಕೆ ಪ್ರಶಂಸನೀಯ

ತೇನ್ಸಿಂಗ್ ನೋರ್ಕೆಯ ಹೆಸರನ್ನು ನೀವು ಕೇಳಿರಿವಿರಲ್ಲವೆ? ಜಗತ್ತಿನಲ್ಲೇ ಅತಿ ಉನ್ನತವಾದ ಗೌರಿ ಶಂಕರ ಶಿಖರವನ್ನು ಹತ್ತಿ ಮರಳಿ ಬಂದ ಧೀರನೀತ. ಇವನು ಇಂದು ಜಗದ್ವಿಖ್ಯಾತ ಮಾತ್ರವಲ್ಲ, ಮಹಾ ಸಾಹಸಿ. ಅಂತೆಯೇ ಗೂನು ಬೆನ್ನಿನ, ಗಿಡ್ಡು ದೇಹದ, ಓಲಾಡುವ ಶರೀರದ ಪರ್ವತಾರೋಹಿಯ ಕುರಿತು ನೀವು ತಿಳಿದಿರುವಿರಾ? ಇಂತಹ ವಿಚಿತ್ರ ವ್ಯಕ್ತಿಯು ಪರ್ವತಾರೋಹಿಯೇ? ಕುಳ್ಳು ದೇಹದ ಕುಂಟನು ಪರ್ವತ ಹತ್ತುವುದೇ? ಎಂದು ನೀವು ಅಚ್ಚರಿಪಡಬಹುದು. ಆದರೆ ಈ ಸಂಗತಿ ರೂಪಾಯಿಗೆ ನೂರು ನಯೇಪೈಸೆ ಸತ್ಯ!

ಎಡ್ವರ್ಡ್ ವಿಂಪರ್ ಎಂಬವನು ಯುರೋಪಿನಲ್ಲಿ ಒಬ್ಬ ವಿಖ್ಯಾತ ಪರ್ವತಾರೋಹಿ. ಈತನು ಸ್ವಿಜರ್ಲೆಂಡ್ ಮತ್ತು ಇಟಲಿಗಳ ಹಲವಾರು ಪರ್ವತಗಳನ್ನು ಹತ್ತಿದ್ದ. ಆವನು ದೃಢ ನಿರ್ಧಾರದ, ಧೈರ್ಯಶಾಲಿಯಾಗಿದ್ದ, ಅಚಲವಾದ ಸಾಹಸಿ ಈತ. ತನ್ನ ಕೊನೆಯ ದಿನಗಳಲ್ಲಿ ತನ್ನ ಸಾಹಸಗಳನ್ನು ವಿವರಿಸುವ ಗ್ರಂಥವೊಂದನ್ನು ಈತನು ಬರೆದನು.

ಮೊದಲ ಬಾರಿ ಈತನು ಸ್ವಿಜರ್ಲೆಂಡನ್ನು ಸೇರಿ ಪರ್ವತಾರೋಹಣಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿ, ಸಂಗಾತಿಗಳಿಗಾಗಿ ಹುಡುಕಾಡುತ್ತಿದ್ದಾಗ, ಆತನಿಗೆ ಸಂಗಾತಿಗಳನ್ನು ಪಡೆಯುವುದು ಕಷ್ಟವೆನಿಸಲಿಲ್ಲ. ಈತನ ಅಪಾಯಕರ, ಸಾಹಸಮಯ ಪ್ರವಾಸದಲ್ಲಿ ಭಾಗವಹಿಸಲು ಜನ ಮುಂದು ಮುಂದು ಬರಲಾರಂಭಿಸಿದರು. ಭೂಲೋಕದ ಮೂಲೆ ಮೂಲೆಗಳಿಂದ, ತಮ್ಮನ್ನು ಸಂಗಾತಿಗಳಾಗಿ ಆರಿಸಿ, ತಮಗೊಂದು ಅವಕಾಶ ಕಲ್ಪಿಸಬೇಕೆಂದೂ, ಆ ಅಸಮಾನ ಸಾಹಸ ಕಾರ್ಯದಲ್ಲಿ ಪಾಲುಗೊಳ್ಳುವ ಸುಸಂದರ್ಭ ಒದಗಬೇಕೆಂದೂ, ಹಲವಾರು ಜನ ಮಹತ್ವಾಕಾಂಕ್ಷಿ ಯುವಕರು ಆತನಿಗೆ ಪತ್ರ ಬರೆಯುತ್ತಿದ್ದರು.

ಪರ್ವತಾರೋಹಣದ ಕಾಲ ಗಂಟು ಮೂಟೆ, ಹಾರೆಗುದ್ದಲಿ, ಡೇರೆಯ ಸಾಮಾನುಗಳು, ಹಗ್ಗಗಳು ಮೊದಲಾದುವುಗಳನ್ನು ಹೊರುವುದಕ್ಕಾಗಿ, ಅವುಗಳ ಜಾಗ್ರತೆ ವಹಿಸುವುದಕ್ಕಾಗಿ, ಎಲ್ಲಾ ಕೆಲಸಗಳಿಗೂ ನೆರವಾಗಬಲ್ಲ ಒಬ್ಬ ಸೇವಕನ ಆವಶ್ಯಕತೆ ವಿಂಪರನಿಗೆ ಇತ್ತು. ಇಂತಹ ಸೇವಕನನ್ನು ಪಡೆಯುವುದು ಸಂಗಾತಿಗಳನ್ನು ಪಡೆಯುವುದಕ್ಕಿಂತಲೂ ಅತಿ ಕಷ್ಟಕರವಾಗಿ ಪರಿಣಮಿಸಿತು. ಕಾರಣ ಒಬ್ಬ ಸಾಮಾನ್ಯ ಸೇವಕನಾಗಿ ಎಲ್ಲರ ಆಡಿಯಾಳಾಗಿರುವುದು ಅಷ್ಟೊಂದು ಗೌರವದ ಕಾರ್ಯವಲ್ಲ ಎಂದು ಎಲ್ಲರೂ ಭಾವಿಸಿದ್ದರು.

ಸೇವಕನ ಆವಶ್ಯಕತೆಯುಳ್ಳ ಎಡ್ವರ್ಡ್ ವಿಂಪರನಿಗೆ ಗೂನುಬೆನ್ನಿನ ಲ್ಯೂಕ್ ಮೈನೆಟ್ ಎಂಬವನ ವಿಚಾರ ತಿಳಿದುಬಂತು. ಅಂಗವಿಕಲನಾಗಿದ್ದರೂ ಕೂಡಾ ಹಲವಾರು ಪರ್ವತಾರೋಹಣ ಯಾತ್ರೆಗಳಲ್ಲಿ ಭಾಗವಹಿಸಿದ್ದನಾತ. ವಿಂಪರನು ಸೇವಕನಾಗಲು ಆತನಾದರೂ ಒಪ್ಪುವನೇನೋ ಎಂದು ಭಾವಿಸಿ ಆತನನ್ನು ಹುಡುಕುತ್ತಾ ಹೊರಟನು. ಆತನನ್ನು ಕಂಡ ಕೂಡಲೇ ವಿಂಪರನಿಗೆ ಸಿಡಿಲು ಬಡಿದಂತಾಯಿತು. ಆತನು ಕಂಡ ದೃಶ್ಯವನ್ನು ಆತನು ಈ ರೀತಿಯಾಗಿ ವರ್ಣಿಸಿದನು.

"ನಾವು ನಿರಾಶೆ ಹೊಂದಿದೆವು. ಕಾರಣ ನಾವು ಕಂಡ ವ್ಯಕ್ತಿ, ಒಬ್ಬ ಓಲಾಡುವ ನಿತ್ರಾಣಿಯಂತೆ ಕಾಣುತ್ತಿದ್ದ. ಆವನೊಬ್ಬ ಕುಂಟನಾಗಿದ್ದ. ಆವನ ಕಾಲುಗಳು ಒಂದೇ ಸಮನಾಗಿರದೆ ಎತ್ತರ ಗಿಡ್ಡವಾಗಿದ್ದವು. ಆವನ ತೋಳು, ತೊಡೆಗಳೂ ಏರು ಪೇರಾಗಿದ್ದುವು. ನೋಡಲು ಆತನೊಬ್ಬ ಅಸಹ್ಯ ರೂಪವೆನಿಸಿದ್ದ. ಆದರೂ, ವಿಶೇಷವೆಂದರೆ ಚಿಕ್ಕ ಮಕ್ಕಳು ಆತನನ್ನು ಕಂಡ ಕೂಡಲೆ, ತಮ್ಮ ಆಟದ ಸಾಮಾನುಗಳನ್ನು ತೆಗೆದೊಗೆದು, ಆತನ ಸ್ವಾಗತಕ್ಕಾಗಿ ಓಡಾಡುತ್ತಿದ್ದುವು. ಆವನು ಆವರನ್ನು ಎತ್ತಿ, ಆವರ ಎರಡೂ ಕೈಗಳನ್ನು ಮುದ್ದಾಡಿ, ಆವರನ್ನು ಸಂತೋಷಗೊಳಿಸುತ್ತಿದ್ದನು. ತನ್ನ ಹೇಸರಕತ್ತೆಯ ನಾಡಿಗಳಲ್ಲಿ ಆವರನ್ನು ಕುಳ್ಳಿರಿಸುತ್ತಿದ್ದ."

ವಿಂಪರನಿಗೆ ನಂತರದ ದೃಶ್ಯ ಕಂಡು ಲ್ಯೂಕ್ ಮೈನೆಟನ ಮೇಲೆ ತುಂಬಾ ಅಭಿಮಾನ ಹುಟ್ಟಿತು. ಮಕ್ಕಳ ನೆಚ್ಚಿನ ಗೆಳೆಯನಾಗಬೇಕಾದರೆ, ಆತನಲ್ಲೇನೊ ವೈಶಿಷ್ಟ್ಯ ಹಾಗೂ ಉತ್ತಮ ಗುಣಗಳಿರಬೇಕೆಂದು ಆತನು ಗ್ರಹಿಸಿದ. ಅಂದಿನಿಂದ ತಾನು ಪರ್ವತಾರೋಹಣ ಮಾಡುವಾಗ ಪ್ರತಿ ಬಾರಿಯೂ ಲ್ಯೂಕ್ ಮೈನೆಟನನ್ನು ತನ್ನ ಸಂಗಡ ಒಯ್ಯುತ್ತಿದ್ದ.

ಪ್ರಪಂಚದ ಅತಿ ಎತ್ತರ ಪರ್ವತಗಳಲ್ಲಿ ಮೆಟರ್ ಹೋರ್ನ್ ಕೂಡಾ ಒಂದು. ಇದು ಸ್ವಿಜರ್ಲೆಂಡ್ ಹಾಗೂ ಇಟಲಿಗಳ ಗಡಿಗಳ ಸಮೀಪವಿದೆ. ಇದು ೧೪೭೦೦ ಅಡಿಗಳಷ್ಟು ಎತ್ತರದ ಪರ್ವತ. ಹಲವಾರು ಪರ್ವತ ಶಿಖರಗಳನ್ನು ಏರಿದ್ದ ಪರ್ವತಾರೋಹಿಗಳು, ಈ ಮೆಟರ್ ಹೋರ್ನಿನತ್ತ ನೆಟ್ಟ ದೃಷ್ಟಿಯಿಟ್ಟು ನೋಡುತ್ತಿದ್ದರು. ಇದನ್ನು ನಾವು ಮೆಟ್ಟಿ ನಿಲ್ಲಬಲ್ಲೆವೇ ಎಂಬ ಆಶೆಯಿಂದ ಅದರ ತುದಿಯತ್ತ ದೀರ್ಘಕಾಲ ದೃಷ್ಟಿ ಹಾಯಿಸುತ್ತಿದ್ದರು. ಆದರೆ ಇದನ್ನು ಹತ್ತುವುದು ತುಂಬಾ ಅಪಾಯಕರ ಎಂದು ತಿಳಿದು, ಅದನ್ನು ಆರೋಹಣ ಮಾಡುವ ಆಲೋಚನೆಯನ್ನೇ ಬಿಟ್ಟು ಬಿಟ್ಟರು

ಸಾಹಸಿ ವಿಂಪರನು ಈ ಪರ್ವತಾರೋಹಣ ಮಾಡುವ ಒಂದು ಯತ್ನ ನಡೆಸಲು ನಿರ್ಧರಿಸಿದನು. ಈ ಪ್ರಯತ್ನ ನಡೆಸುವವರಲ್ಲಿ ಈತನೇ ಮೊದಲಿಗನಾಗಿದ್ದ. ಈತನ ಸಹೋದ್ಯೋಗಿ ಗೆಳೆಯರು ಆತನನ್ನು ಬೆದರಿಸಿದರು; ನಿರುತ್ಸಾಹಗೊಳಿಸಿದರು. ಆದರೂ ವಿಂಪರನು ತನ್ನ ನಿರ್ಧಾರದ ಕುರಿತು ಆಚಲನಾಗಿದ್ದನು. ಮುಂದೆ ನಡೆಯುವುದೇ ಆತನ ಧ್ಯೇಯವಾಗಿತ್ತು. ಇದರ ಮೇಲೆ ಆತನು ಈ ಅಸಾಧ್ಯ ಪರ್ವತವೇರುವಾಗ ತನ್ನ ಜೊತೆ ಲ್ಯೂಕ್ ಮೈನೆಟನನ್ನು ಕರೆದೊಯ್ಯುವ ನಿರ್ಧಾರ ಮಾಡಿದುದು ಆಶ್ಚರ್ಯದ ಸಂಗತಿಯೆ.

೧೮೬೫ರ ಒಂದು ಬೇಸಗೆಯ ದಿನ ಆತನ ಸಂಗಡವು ಆಜೇಯ ಪರ್ವತದ ಆರೋಹಣವನ್ನಾರಂಭಿಸಿತು. ಇದು ಒಂ

(೧೦ನೇ ಪುಟ ನೋಡಿರಿ)



ನಾಳೆಯ ಸುದ್ದಿ

ನಾವು ರಾತ್ರಿಯಲ್ಲಿ ಸುಖವಾಗಿ ನಿದ್ರಿಸುತ್ತಿರುವಾಗ ವರ್ತಮಾನ ಪತ್ರಿಕಾ ಕಚೇರಿಗಳಲ್ಲಿ ಕೆಲಸಗಾರರು ಒಂದಿಷ್ಟು ವಿರಾಮವಿಲ್ಲದೆ ದುಡಿಯುತ್ತಾರೆ. ಪ್ರಪಂಚದ ವಾರ್ತೆಗಳನ್ನು ಸಂಗ್ರಹಿಸಿ ಮುಂಜಾನೆ ನಿಮ್ಮ ಮುಂದಿಡಲು ರಾತ್ರಿಯೆಲ್ಲಾ ಶ್ರಮಿಸಿ ನಾಳೆಯ ಪತ್ರಿಕೆಯನ್ನು ಸಿದ್ಧಗೊಳಿಸುತ್ತಾರೆ.

ಪ್ರಚ್ಛನ್ನ ಯುದ್ಧ, ಅಗ್ರ ರಾಷ್ಟ್ರಗಳ ಸಮ್ಮೇಳನ, ಭಯಂಕರ ಅಪಘಾತಗಳ ಮತ್ತು ನಾನಾ ಬಗೆಯ ಮರಣಗಳ ಸುದ್ದಿಗಳನ್ನು ನೀವು ಮುಂಜಾನೆಯ ವರ್ತಮಾನ ಪತ್ರಿಕೆಯಲ್ಲಿ ಕಾಣುವಿರಿ.

ಇವೆಲ್ಲವುಗಳ ಪರಿಣಾಮವಾಗಿ ನಾವಿರಾರು ಕುಟುಂಬಗಳ ಗತಿ ಯೇನಾಗುವುದೆಂಬುದನ್ನು ಕ್ಷಣಕಾಲ ಆಲೋಚಿಸಿ ನೋಡಿರಿ.

ವರ್ತಮಾನ ಪತ್ರಿಕೆಗಳಲ್ಲಿ ದಿನಂಪ್ರತಿ ಪ್ರಕಟವಾಗುತ್ತಿರುವ ಸುದ್ದಿಗಳನ್ನು [illegible] ನಿಮ್ಮ [illegible] ನಿಮ್ಮ [illegible] ಭವಿಷ್ಯದ ಬಗ್ಗೆ [illegible] ಜೀವ ವಿಮೆಯಿಂದ [illegible] [illegible] ನಿಮ್ಮನ್ನು ಮತ್ತು ನಿಮ್ಮ [illegible] ನಿಮ್ಮ ಮತ್ತು ನಿಮ್ಮ ಕುಟುಂಬದ ಭವಿಷ್ಯದ ಬಗ್ಗೆ [illegible] ಜೀವ ವಿಮೆ [illegible]

ನಿಮಗೆ ಯೋಗ್ಯವಾದ ಒಂದು ವಿಮಾ ಯೋಜನೆ [illegible] ಜೀವ ವಿಮಾ [illegible]

ಜೀವ ವಿಮೆ

— ಜೀವ ವಿಮೆ ಮಾಡಿದಂದಿನಿಂದ ನಿಮ್ಮ ಭವಿಷ್ಯದ ಬಗ್ಗೆ ನೀವು ನಿಶ್ಚಿಂತರಾಗಿರಬಹುದು.

ಕ್ರೀಡಾಂಗಣ

ಭಾರತದ ಕ್ರೀಡೆಗಳಿಗೆ ಉಜ್ವಲ ಭವಿತವ್ಯವಿದೆ

ಭಾರತೀಯ ಕ್ರೀಡಾಪಟುಗಳ ಪರಿಶ್ರಮದಿಂದಲೇ ಇದು ಸಾಧ್ಯ

"ನನ್ನ ಅಭಿಪ್ರಾಯದಲ್ಲಿ ಭಾರತೀಯ ಕ್ರೀಡೆಗಳು ಅಧೋಮಟ್ಟಕ್ಕಿಳಿದಿವೆ ಎಂಬ ಬರೀ ಕೂಗಾಟದಿಂದ ಪ್ರಯೋಜನವಿಲ್ಲ. ತರಬೇತಿಯ (ಕೋಚಿಂಗ್) ಕಡೆ ಹೆಚ್ಚು ಹೆಚ್ಚಾಗಿ ಲಕ್ಷ್ಯ ಹರಿಸುವುದು, ಶಾಲಾ ಕಾಲೇಜುಗಳು ಮತ್ತು ರಕ್ಷಣಾ ದಳಗಳ ವ್ಯಾಯಾಮ ಆಟಗಾರರನ್ನು ಹೆಚ್ಚು ಸಂಖ್ಯೆಯಲ್ಲಿ ತಯಾರುಮಾಡುವುದು ಅತ್ಯಗತ್ಯ" ಹೀಗೆಂದು ಡಾ| ಸಿ. ಸುಬ್ಬರಾಯನ್ ಅವರು ಜೂನ್ 10ರಂದು ಆಕಾಶವಾಣಿಯ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಮಾಡಿದ ಪ್ರಸಾರ ಭಾಷಣದಲ್ಲಿ ಹೇಳಿದ್ದಾರೆ.

ಭಾರತದ ಸ್ವಾತಂತ್ರ್ಯ ಆವಿರ್ಭಾವದ ನಂತರ ಎಲ್ಲ ಕ್ರೀಡೆಗಳಲ್ಲಿಯೂ ಕೌಶಲ್ಯ ಕೀಳುಮಟ್ಟಕ್ಕಿಳಿಯಿತೆಂಬ ಸಾಮಾನ್ಯ ಭಾವನೆಯಿದೆ. ಇದಕ್ಕೆ ಮುಖ್ಯ ಕಾರಣ ನಮ್ಮ ರಾಜ ಮಹಾರಾಜರುಗಳು ಮುಖ್ಯವಾಗಿ ಕ್ರೀಡಾ ಪ್ರೇಮಿಗಳೂ ಮಹಾಪೋಷಕರೂ ಆಗಿದ್ದರು. ಪಟಿಯಾಲದ ಅರಸು ಅತೀವ ಕ್ರೀಡಾಪ್ರೇಮಿಗಳು; ಅದರಲ್ಲಿಯೂ ಕ್ರಿಕೆಟ್ ಎಂದರೆ ಪಂಚಪ್ರಾಣ.

ಪಟಿಯಾಲದ ಮಹಾರಾಜರು ವಿದೇಶಗಳಿಂದ ಖ್ಯಾತಿವೆತ್ತ ಕ್ರಿಕೆಟ್ ಆಟಗಾರರನ್ನು ಭಾರತಕ್ಕೆ ಕರೆತಂದು ಪ್ರತಿಭಾವಂತರಾದ ಅನೇಕ ಭಾರತೀಯ ಕ್ರಿಕೆಟ್ ಆಟಗಾರರಿಗೆ ಚೆನ್ನಾಗಿ ತರಬೇತಿಕೊಡಿಸಿದರು. ಈ ತರಬೇತಿ ವ್ಯವಸ್ಥೆಯಿಂದಾಗಿ ಅನೇಕ ಯುವಕ ಆಟಗಾರರು ಬೆಳಕಿಗೆ ಬರಲು ಕಾರಣವಾಯಿತು. ಭಾರತೀಯ ಕ್ರಿಕೆಟ್ ಆಟದ ಉನ್ನತಿಗೆ ನವನಗರದ ಅರಸು ಮನೆತನದವರೂ ಕಾರಣವೆನ್ನಬಹುದು. ಹೀಗೆ ಬೆಳಕಿಗೆ ಬಂದ ಆಟಗಾರರಲ್ಲಿ ವಿನೂ ಮಂಕಡ್, ಗೋಪಿನಾಥ್, ಕೃಪಾಳ್ ಸಿಂಗ್ ಈ ಮುಂತಾದವರೂ ಇರುವರು.

ನಮ್ಮ ಕ್ರಿಕೆಟ್ ಆಟಗಾರರಲ್ಲಿ ಅನೇಕರು ತರಬೇತಿ ಪಡೆದಿಲ್ಲವಾದಾಗ್ಯೂ ತರಬೇತಿ ಪಡೆದವರ ಆಟವನ್ನು ನೋಡಿ ತಂವೂ ತಮ್ಮ ಆಟದ ಮಟ್ಟವನ್ನು ಉತ್ತಮಪಡಿಸಿಕೊಂಡಿರುವರು. ಕ್ರಿಕೆಟ್ ಆಟದ ಮಟ್ಟ ಹೆಚ್ಚಿದ್ದರಿಂದಲೇ ಸುಭಾಷ್ ಗುಪ್ತ ಮತ್ತು ಚಂದು ಬೋರ್ಡೆ ಹೆಸರುಗಳಿಸಲು ಸಾಧ್ಯವಾಯಿತು.

ಆಟದ ಮಟ್ಟ ಕೆಳಗಿಳಿದಿಲ್ಲ

ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡದವರ ವಿರುದ್ಧ ನಮ್ಮ ಆಟಗಾರರ ಸಪ್ಪೆಯ ಆಟದ ಬಗ್ಗೆ ಪಾರ್ಲಿಮೆಂಟಿನಲ್ಲಿ ಉಗ್ರವಾದ ಟೀಕೆಗಳಾದಾಗ್ಯೂ ಭಾರತೀಯ ಕ್ರಿಕೆಟಿನ ಆಟದ ಮಟ್ಟ ಕೆಳಗಿಳಿದಿದೆಯೆಂದು ಹೇಳಲಿಕ್ಕಾಗುವುದಿಲ್ಲ

ಹಾಕಿ

ರೋಂ ನಗರದಲ್ಲಿ ನಡೆಯುವ ಒಲಿಂಪಿಕ್ ವ್ಯಾಯಾಮ ಕ್ರೀಡಾ ಸ್ಪರ್ಧೆಗಳನ್ನು ಗಮನದಲ್ಲಿಟ್ಟುಕೊಂಡು ಹಾಕಿ ಆಟದ ವಿಷಯವನ್ನು ಪರಿಶೀಲಿಸೋಣ. ಭಾರತ ಅನೇಕ ವರ್ಷಗಳಿಂದ ವಿಶ್ವ ಹಾಕಿ ಛಾಂಪಿಯನ್‌ಶಿಪ್ ಪ್ರಶಸ್ತಿಯನ್ನು ಗಿಟ್ಟಿಸಿಕೊಳ್ಳುತ್ತಿದೆ. ಇತ್ತೀಚೆಗೆ ಟೋಕಿಯೋದಲ್ಲಿ ನಡೆದ ಏಷಿಯನ್ ಒಲಿಂಪಿಕ್ಸ್‌ನಲ್ಲಿ ನಮ್ಮ ಹಾಕಿ ತಂಡದವರ ಆಟವನ್ನು ನೋಡಿ ನಮ್ಮ ಹಾಕಿ ಆಟದ ಮಟ್ಟ ಅಧೋಗತಿಗಿಳಿದಿದೆ ಎಂಬ ಭಾವನೆ ತಲೆದೋರುತ್ತಿದೆ. ಅಲ್ಲಿ ಕೆಲವು ಅವ್ಯವಸ್ಥೆಗಳುಂಟಾಗಿದ್ದು ದಿಟ. ನಮ್ಮಲ್ಲಿ ಧ್ಯಾನಚಂದ್ ಅವರು ಶಿಕ್ಷಕರಾಗಿರುವುದರಿಂದ ರೋಂ ಒಲಿಂಪಿಕ್ಸ್‌ಗೆ ಪೂರ್ವದಲ್ಲಿಯೇ ನಾವು ಬಲವಾದ ತಂಡವನ್ನು ಕಟ್ಟಲು ಸಾಧ್ಯವಿದೆ. ರೋಂನಲ್ಲಿ ನಮ್ಮ ತಂಡದವರು ಉತ್ತಮ ಪ್ರದರ್ಶನವನ್ನೀಯಬಹುದು. ಹಾಕಿಯಂತಹ ಆಟದಲ್ಲಿ ಸಂಘಶಕ್ತಿ ಮುಖ್ಯವೇ ಹೊರತು ಆಟಗಾರರು ವೈಯಕ್ತಿಕವಾಗಿ ಆಡುವಂತಿಲ್ಲ. ಈ ಬಗ್ಗೆ ಹೆಚ್ಚಿನ ಲಕ್ಷ್ಯಹರಿಸುವುದು ಅಗತ್ಯ. ಭವಿಷ್ಯದ ಟೀಂಗಳಿಗಾಗಿ ರೈಲ್ವೆಗಳು ಮತ್ತು ಸೇನಾದಳಗಳು ಉತ್ತಮ ಆಟಗಾರರನ್ನು ನೇಮಿಸಿಕೊಳ್ಳಬೇಕು.

ಫುಟ್‌ಬಾಲ್ ಆಟದಲ್ಲಿ ನಾವು ಮೆಲ್‌ಬೋರ್ನ್ ಒಲಿಂಪಿಕ್ಸ್ ಸ್ಪರ್ಧೆಗಳಲ್ಲಿ ಉತ್ತಮ ಪ್ರದರ್ಶನವನ್ನಿತ್ತೆವು. ಬಂಗಾಳವು ಫುಟ್‌ಬಾಲ್ ಆಟದ ತೌರು ಮನೆಯಾಗಿದ್ದು ಈ ಆಟದ ಉನ್ನತಿಗಾಗಿ ಯಥೇಚ್ಛವಾಗಿ ಶ್ರಮಿಸಿದೆ. ರಕ್ಷಣಾ ದಳಗಳು, ರೈಲ್ವೆಗಳು ಮತ್ತು ಪೋಲೀಸ್ ತಂಡಗಳು ಫುಟ್‌ಬಾಲ್ ಆಟದ ಮಟ್ಟವನ್ನು ಉಳಿಸಿಕೊಂಡು ಬರಲು ಸಾಧ್ಯವಾದಷ್ಟು ಮಟ್ಟಿಗೆ ದುಡಿದಿವೆ.

ವ್ಯಾಯಾಮ ಕ್ರೀಡೆಗಳು

ವ್ಯಾಯಾಮ ಕ್ರೀಡೆಗಳಲ್ಲಿ (ಅಥಲೆಟಿಕ್ಸ್) ನಮ್ಮಲ್ಲಿ ಹೆಚ್ಚು ಉತ್ತಮ ಆಟಗಾರರಿಲ್ಲ. ರಕ್ಷಣಾ ದಳಗಳಿಗೆ ಸೇರಿದ ಮಿಲ್ಖಾಸಿಂಗ್ ರೋಂನಲ್ಲಿ ಸಹ ಭಾರತದ ಪರವಾಗಿ 400 ಮೀಟರ್‌ಗಳ ಓಟದಲ್ಲಿ ಒಂದು ಸುವರ್ಣ ಪದಕವನ್ನು ಗಿಟ್ಟಿಸಬಹುದು ಅಷ್ಟೆ. ವ್ಯಾಯಾಮ ಕ್ರೀಡೆಗಳಲ್ಲಿ ಅಂತಾರಾಷ್ಟ್ರೀಯ ಮಟ್ಟವನ್ನು ಮುಟ್ಟುವಂತಹ ದರ್ಜೆಯ ಆಟಗಾರರು ನಮ್ಮಲ್ಲಿಲ್ಲ. ನಮ್ಮ ಆಟಗಾರರು ಅಂತಾರಾಷ್ಟ್ರೀಯ ಮಟ್ಟವನ್ನು ಸಾಧಿಸುವಂತೆ ತರಬೇತಿ ಪಡೆಯಬೇಕು. ರಾಜಕುಮಾರಿ ಅಮೃತಕೌರ್ ತರಬೇತಿ ಯೋಜನೆಯಂತೆ ಮಿಲ್ಖಾಸಿಂಗ್ ತರಬೇತಿ ಪಡೆದಿದ್ದಾರೆ. ಇದೇ ರೀತಿ ಉಳಿದವರು ಸಹ ನಾವು ಸ್ಥಾಪಿಸಲಿರುವ ತರಬೇತಿ ಸಂಸ್ಥೆಯಲ್ಲಿ ತರಬೇತಿ ಪಡೆಯುವರೆಂಬ ನಂಬಿಕೆಯಿದೆ.

ಕುಸ್ತಿ ಪಂದ್ಯಗಳಲ್ಲಿ ರಕ್ಷಣಾದಳಗಳ ಲೀಲಾರಾಂ ಉತ್ತಮ ಆಟಗಾರರು. ಬ್ಯಾಸ್ಕೆಟ್‌ಬಾಲ್ ಆಟದಲ್ಲಿ ರಾಜಕುಮಾರಿ ಅಮೃತಕೌರ್ ತರಬೇತಿ ಯೋಜನೆಯ ಪ್ರಕಾರ ಉತ್ತಮ ಶಿಕ್ಷಕರಿಂದ ನಮ್ಮ ಆಟಗಾರರು ತರಬೇತಿ ಪಡೆದಿದ್ದರಿಂದ, ಇಂದು ನಮ್ಮ ಆಟಗಾರರು ರಷ್ಯನ್ನರ ಆಟದ ಮಟ್ಟವನ್ನು ಮುಟ್ಟಿರುವರು.

ತರಬೇತಿಯಿಂದ ದೊರೆಯುವ ಅನುಕೂಲಗಳು

ರಾಜಕುಮಾರಿ ಅಮೃತಕೌರ್ ತರಬೇತಿ ಯೋಜನೆಯ ಪ್ರಕಾರ ವಿಶ್ವವಿಖ್ಯಾತ ಟೇಬಲ್ ಟೆನ್ನಿಸ್ ಆಟಗಾರರಾದ ಬಾರ್ನಾ ಅವರನ್ನು ಬರಮಾಡಿಕೊಂಡು ನಮ್ಮ ಆಟಗಾರರಿಗೆ ತರಬೇತಿ ಕೊಡಿಸಲಾಯಿತು. ತತ್ಫಲವಾಗಿ ನಮ್ಮಲ್ಲಿನ ಕೆಲವು ಆಟಗಾರರು ಜಪಾನ್ ಮತ್ತು ಚೀಣಾದ ಆಟಗಾರರ ಮಟ್ಟಕ್ಕೆ ಬಾರದಿದ್ದರೂ ಗಣ್ಯವಾದ ಸ್ಥಾನಗಳಿಸಿ ಕೊಂಡಿದ್ದಾರೆ.

ಇಂದು ನಮಗೆ ಅತ್ಯಗತ್ಯವಾಗಿರುವ ವಿಷಯವೆಂದರೆ ಯಥೋಚಿತವಾದ ತರಬೇತಿ. ನಾವು ನಮ್ಮವರೇ ಆದ ಶಿಕ್ಷಕರನ್ನು ತಯಾರಿಸಲು ಸಾಧ್ಯವಾಗುವಂತಹ ತರಬೇತಿ ಇಂದು ಅಗತ್ಯವಾಗಿದೆ. ಹೀಗೆ ತರಬೇತಿ ಪಡೆದವರು ಕಿರಿಯರಿಗೆ ತರಬೇತಿನೀಡಲು ಶಕ್ತರಾಗಿರಬೇಕು. ಭಾರತ ಸರ್ಕಾರದವರು ಕ್ರೀಡಾ ಪರಿಷತ್ತಿನ ಮೂಲಕ ಒದಗಿಸಿರುವ ಹಣಕಾಸಿನ ನೆರವಿನೊಂದಿಗೆ ತರಬೇತಿ ಸಂಸ್ಥೆಯೊಂದನ್ನು ಸ್ಥಾಪಿಸಲಾಗುವುದು.

ಇದು ಇನ್ನೂ ಪ್ರಾರಂಭ. ನಾವು ಶಿಕ್ಷಕರನ್ನು ತಯಾರಿಸಿದ ಕೂಡಲೇ, ಶಾಲಾ ಕಾಲೇಜುಗಳು, ರಕ್ಷಣಾದಳಗಳು, ರೈಲ್ವೆಗಳು ಮತ್ತು ಪೋಲೀಸ್ ಪಡೆಗಳಿಂದ ಪ್ರತಿಭಾವಂತರಾದ ಆಟಗಾರರನ್ನು ಆರಿಸಿ ಅವರಿಗೆ ತರಬೇತಿ ಕೊಡಲು ಸಾಧ್ಯವಾಗುವುದು. ಈ ತರಬೇತಿ ಸಂಸ್ಥೆ ಹೀಗೆ ಕೆಲಸ ಮಾಡುತ್ತದೆ ಎಂಬುದರ ಮೇಲೆ ಎಲ್ಲವೂ ಅವಲಂಬಿಸಿರುತ್ತದೆ. ಒಲಿಂಪಿಕ್ಸ್ ಕ್ರೀಡೆಗಳು ಮಾತ್ರವೇ ಅಲ್ಲದೆ ವ್ಯಾಯಾಮ ಕ್ರೀಡೆಗಳ ಸಾಮಾನ್ಯ ಮಟ್ಟವನ್ನು ಗಮನದಲ್ಲಿಟ್ಟುಕೊಂಡು ಭವಿಷ್ಯದ ಶಿಕ್ಷಕರನ್ನು ತಂಬೇತಿ ಮಾಡುವಂತಹ ತರಬೇತಿ ಕಾಲೇಜು ಅಥವಾ ಶಾಲೆಯನ್ನು ಸ್ಥಾಪಿಸುವುದು ಅಗತ್ಯ.

ಟೆನ್ನಿಸ್

ಲಾನ್ ಟೆನ್ನಿಸ್ ಆಟದಲ್ಲಿ ನಾವು ವಿಂಬಲ್ಡನ್ ಪಂದ್ಯಗಳಲ್ಲಿ ಜಯಗಳಿಸಿದ ಆಟಗಾರರನ್ನು ಪಡೆದಿಲ್ಲ. ಆದಾಗ್ಯೂ ಕೃಷ್ಣನ್ ಅತ್ಯುತ್ತಮ ಪ್ರದರ್ಶನವಿತ್ತಿದ್ದಾರೆ.

ತರಬೇತಿ ಅಗತ್ಯ

ಆಟದ ಮಟ್ಟ ಕೆಳಗಿದೆ ಎಂಬ ಬರೀ ಆರ್ಭಟದಿಂದ ಏನೂ ಪ್ರಯೋಜನ ಇಲ್ಲವೆಂದು ನನ್ನ ಅಭಿಪ್ರಾಯ. ತರಬೇತಿ ಕಡೆ ಹೆಚ್ಚು ಹೆಚ್ಚಾಗಿ ಲಕ್ಷ್ಯ ಹರಿಸುವುದು, ಶಾಲಾ ಕಾಲೇಜುಗಳು ಮತ್ತು ರಕ್ಷಣಾ ದಳಗಳ ವ್ಯಾಯಾಮ ಆಟಗಾರರನ್ನು ಹೆಚ್ಚು ಸಂಖ್ಯೆಯಲ್ಲಿ ತಯಾರು ಮಾಡುವುದು ಅತ್ಯಗತ್ಯ. ವಿಜಯ ಗಳಿಸುವುದೇ ಮುಖ್ಯ ಗುರಿಯಾಗಿರಬಾರದು. ಆದರೆ ರಾಷ್ಟ್ರೀಯ ಜೀವನದಲ್ಲಿ ಕ್ರೀಡೆಯ ಮಹತ್ವವನ್ನು ಯುವಕರಿಗೆ ತಿಳಿಸುವುದು ಗುರಿಯಾಗಿರಬೇಕು. ಏಕೆಂದರೆ ಕ್ರೀಡೆಯ ಮಹತ್ವವೇ ಅವರನ್ನು ದೇಶದ ಉತ್ತಮ ಆಟಗಾರರನ್ನಾಗಿ ಮಾಡಬಲ್ಲದು. ದೇಶವನ್ನು ಕ್ರೀಡಾಪ್ರೇಮಿ ರಾಷ್ಟ್ರವನ್ನಾಗಿ ಮಾಡಲು ಅಗತ್ಯವಾದ ವಿಷಯಗಳತ್ತ ಅಖಿಲ ಭಾರತ ಕ್ರೀಡಾ ಪರಿಷತ್ತು ತನ್ನ ಸರ್ವಸಾಧ್ಯ ಪ್ರಯತ್ನ ಮಾಡುವುದೆಂಬ ನಂಬಿಕೆಯಿದೆ.

(ಡಾ| ಸುಬ್ಬರಾಯನರ ಭಾಷಣದಿಂದ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ.ಗಳನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸ್ಥಾಪನೆ: 1906] ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ. 20,00,000/-
ಕ್ಷೇಮನಿಧಿ	—	ರೂ. 14,40,000/-
ಠೇವಣಾತಿಗಳು	—	ರೂ. 7,19,35,000/-
ಸಾಲಗಳು	—	ರೂ. 3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ. 9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ.

The Canara Banking Corporation Ltd.

Estd:- 1906] [H. O. UDIPI (S. India)

ನೋವುಗಳ ಅತ್ಯುತ್ತಮ ಸಂಹಾರಿಣಿ.



ಅಮೃತಾಂಜನ

ಸೇವಾಸಂಸ್ಥೆ

ನಾಗರಿಕ ಶಿಕ್ಷಣ ಹೇತು– ಜೂನಿಯರ್ ರೆಡ್‌ಕ್ರಾಸ್

ವಿದ್ಯಾರ್ಥಿಗಳಲ್ಲಿ ಸೇವೆ, ಸ್ವಾವಲಂಬನೆ, ಆತ್ಮವಿಶ್ವಾಸಾದಿಗಳನ್ನು ಬೆಳೆಸಲು ಇದು ಸಹಾಯಕವಾಗಿದೆ

ಆಧುನಿಕ ಕಾಲದ ಪ್ರಚಲಿತ ಸ್ಥಿತಿಗತಿಗಳನ್ನವಲೋಕಿಸಿದರೆ ರಾಷ್ಟ್ರ ರಾಷ್ಟ್ರಗಳೊಳಗೆ ಮತ್ಸರ ಭಾವನೆಯು ವರ್ಧಿಸುತ್ತಾ ಹೋಗುವುದನ್ನು ಮನಗಾಣಬಹುದು. ಒಂದು ದೇಶವು ಇನ್ನೊಂದನ್ನು ಸಂಶಯ ದೃಷ್ಟಿಯಿಂದಲೇ ಕಾಣುತ್ತಾ ಇದೆ ಇದರ ಪರಿಣಾಮವಾಗಿ ಯುದ್ಧದ ಭಯವು ತಪ್ಪಿದ್ದಲ್ಲ. ಯುದ್ಧವೆಂದ ಬಳಿಕ ಹೇಳಬೇಕೆ? ಎರಡು ಪಕ್ಷಗಳಲ್ಲೂ ಸಾವಿರಾರು ಸಾವುನೋವುಗಳು ಸಂಭವಿಸುತ್ತವೆ. ಅಸಂಖ್ಯಾತ ಮಾನವರು ಇದರಿಂದ ನರಳುತ್ತಿರಬೇಕಾಗುತ್ತದೆ ಇಂತಹ ಸೆಣಸಾಟಗಳು ಅಣಗಿಸಲ್ಪಡುವ ಬಗೆಯಾದರೂ ಹೇಗೆ?

ಮಾನವನ ಮನವು ಪರಿವರ್ತನೆಗೊಳ್ಳಬೇಕು ದ್ವೇಷ ಭಾವನೆಯ ಬದಲು ಪ್ರೀತಿಯು ಆವಿರ್ಭವಿಸಬೇಕು. 'ಪ್ರೀತಿಯೇ ಮಾನವನನ್ನು ಉದ್ಧರಿಸಬಲ್ಲ ಜ್ಯೋತಿ; ದ್ವೇಷವೇ ನಾಶದ ಮೂಲ' ಎಂಬ ತತ್ವದ ಅರಿವು ಉಂಟಾಗಬೇಕು ತನ್ನ ಬಂಧುಗಳನ್ನು ಕಂಡ ಹಾಗೆ ಇತರ ರಾಷ್ಟ್ರಗಳ ಹಾಗೂ ಜನಾಂಗಗಳ ನಾಗರಿಕರನ್ನು ಪ್ರೇಮ ಭಾವದಿಂದ ಕಾಣಬೇಕು ಹೀಗಾಗುವುದು ಸಂಭವನೀಯವೇ?

ಇಂದಿನ ಮಕ್ಕಳೇ ಮುಂದಿನ ಜನಾಂಗ. ಭವಿತವ್ಯದ ಕಡೆಗೆ ಗಮನ ಹರಿಸಿ ಇಂದಿನ ವಿದ್ಯಾರ್ಥಿಗಳಲ್ಲಿ ವಿಶ್ವಬಾಂಧವ್ಯದ ಪರಿಚಯ ಮಾಡುವುದು ಬಹು ಪರಿಣಾಮಕಾರಿಯಾಗಿದೆ ಎಳೆ ಹರೆಯದ ಬಾಲ ಬಾಲಕಿಯರಲ್ಲಿ ವಿಶಾಲ ಮನೋಭಾವನೆಯು ಮೂಡುವಂತೆ ಅಭ್ಯಾಸವನ್ನಿತ್ತರೆ ಅದರಿಂದ ಭವಿಷ್ಯತ್ತಿನಲ್ಲಿ ಸತ್ಫಲವನ್ನು ಹೊಂದಬಹುದು ಮಾನವ ಕುಟುಂಬದವರೆಲ್ಲರೂ ತನ್ನವರೆಂಬ ಉದಾತ್ತವಾದ ವಿಚಾರವು ಮಗುವಿನಲ್ಲಿ ಹುದುಗಬೇಕು. ಇದೇ ಆವಶ್ಯಕತೆಗಳನ್ನು ದೃಷ್ಟಿ ಪಥದಲ್ಲಿರಿಸಿಕೊಂಡು, ಇಂದು ಶಾಲೆಗಳಲ್ಲಿ ಜೂನಿಯರ್ ರೆಡ್ ಕ್ರಾಸ್ ಸಂಸ್ಥೆ ಕಾರ್ಯವೆಸಗುತ್ತದೆ. ಶ್ರೇಷ್ಠವಾದ ಧ್ಯೇಯಗಳಿಂದ ಕೂಡಿದ ಈ ಸಂಸ್ಥೆಯು ಮಕ್ಕಳ ಶೀಲವನ್ನು ತಿದ್ದಿ ಸೇವಾ ತತ್ಪರರಾಗುವಂತೆ ಪ್ರೋತ್ಸಾಹಿಸಿ, ಅವರನ್ನು ಉತ್ತಮ ನಾಗರಿಕರನ್ನಾಗಿ ಪರಿವರ್ತಿಸುವುದರಲ್ಲಿ ಯಶಸ್ವಿಯಾಗಬಲ್ಲುದು.

ರೆಡ್‌ಕ್ರಾಸ್ ಸಂಸ್ಥೆ ಹಿರಿಯರ ಸಂಸ್ಥೆ. ಇದನ್ನು ಸ್ವಿಸ್ ನಾಗರಿಕನೊಬ್ಬನು ಒಂದು ಶತಮಾನದ ಹಿಂದೆ ಸ್ಥಾಪಿಸಿ ಮಾನವ ಕಲ್ಯಾಣಕ್ಕೆ ಬುನಾದಿಯಾಗಲೆಂದು ಮನಸಾರೆ ಆಶಿಸಿದ್ದನು. ಭೀಕರ ಕದನವೊಂದನ್ನು ಕಣ್ಣಾರೆ ಕಂಡು, ಮನಕರಗಿ ಗಾಯಗೊಂಡ ಸೈನಿಕರ ಶುಶ್ರೂಷೆಗಾಗಿ ಒಂದು ದಳವನ್ನು ಏರ್ಪಡಿಸಿದನು. ಸೇವಾತತ್ಪರನಾದನು! ಮಾನವರ ದುಃಖವನ್ನು ಕಡಿಮೆಗೊಳಿಸಲು ಹೆಣಗಾಡಿದನು. ಇಂದು ಈ ಸಂಸ್ಥೆಯ ಶಾಖೋಪಶಾಖೆಗಳು ಪ್ರಪಂಚವಿಡೀ ಹರಡಿವೆ. ರಾಷ್ಟ್ರ ಹಾಗೂ ಜನಾಂಗ ಭೇದಗಳನ್ನು ಕಡೆಗಣಿಸಿ, ನೆರೆ, ಬರ, ಭೂಕಂಪ, ಅಜ್ಞಾನ ಹಾಗೂ ಅನಾರೋಗ್ಯದಿಂದ ಅನುದಿನವೂ ಬಳಲುತ್ತಿರುವ ಬಡ ಮಾನವರ ಶ್ರೇಯೋಭಿವೃದ್ಧಿಗಾಗಿ ದುಡಿಯುತ್ತಾ ಇದೆ. ಇದರ ಮೂಲ ತತ್ವಗಳನ್ನು ಇಂದಿನ ಮಕ್ಕಳಲ್ಲಿ ಪ್ರತಿಬಿಂಬಿಸುವ ಸಲುವಾಗಿ ಮಕ್ಕಳ ಶಾಖೆಯಾಗಿ ಜೂನಿಯರ್ ರೆಡ್‌ಕ್ರಾಸ್ ಸಂಸ್ಥೆಯ ರಚನೆಯು ಅನಿವಾರ್ಯವಾಗಿದೆ.

ಮಗುವು ಶಾಲೆಗೆ ಬರುವ ಮೊದಲು ಅದಕ್ಕೆ ತನ್ನ ಮನೆಯವರ ಪರಿಚಯ ಮಾತ್ರ ಇರುತ್ತದೆ ಗೆಳೆಯರ ಸಂಖ್ಯೆಯೂ ಮಿತಿಯಲ್ಲಿರುತ್ತದೆ ಆದರೆ ಸಮಯವು ಉರುಳಿದ ಹಾಗೆ ಅದು ಗಬ್ಬಿನ ಜನರ ಸಂಪರ್ಕವನ್ನಿರಿಸಿಕೊಳ್ಳಲು ತವಕಪಡುತ್ತದೆ ಪರಿಚಯ ಬೆಳೆದಂತೆ ಮಗುವಿನ ಮನಸ್ಸಿನ ಸಂಕೋಚ ಭೀತಿಗಳು ಮಾಯವಾಗತೊಡಗುತ್ತವೆ ಶಾಲೆಯ ಮಕ್ಕಳೊಡನೆ ಸ್ನೇಹದಿಂದಿರುವ ರೀತಿಯಲ್ಲಿಯೇ ಬೇರೆ ಬೇರೆ ಊರುಗಳ ದೇಶಗಳ, ಭಿನ್ನ ಭಿನ್ನ ಮತಗಳ ಹಾಗೂ ಭಾಷೆಯನ್ನಾಡುವ ಮಕ್ಕಳ ಸಂಪರ್ಕ ಪಡೆಯಲು ಬಯಸುವುದು ಅಸ್ವಾಭಾವಿಕವೇನಲ್ಲ. ಇತರರಿಗಾಗಿ ತನ್ನಿಂದ ಆದಷ್ಟು ನೆರವನ್ನೀಯುವ ಪರಿಪಾಠವು ಎಳವೆಯಲ್ಲೇ ಬಾಲ ಬಾಲಕಿಯಲ್ಲಿ ಒಡಮೂಡುವಂತೆ ಪ್ರೋತ್ಸಾಹಿಸುವುದು ಅಗತ್ಯ. ಈ ದೃಷ್ಟಿಯಿಂದಲೇ ಶಾಲೆಗಳಲ್ಲಿ ಈ ಸಂಸ್ಥೆಯು ಸ್ಥಾಪಿಸಲ್ಪಡಬೇಕು

ಪುಸ್ತಕೀಯ ವಿದ್ಯೆಯೇ ಮಹತ್ವವಾದುದಲ್ಲ ಪಠ್ಯೇತರ ಚಟುವಟಿಕೆಗಳಿಗೂ ಅವಕಾಶ ಕಲ್ಪಿಸಿ ಕೊಡಬೇಕು ಈ ಸಂಸ್ಥೆಯ ಕಾರ್ಯಕಲಾಪಗಳನ್ನೂ ಒಂದು ಪಠ್ಯೇತರ ಚಟುವಟಿಕೆಯೆಂದು ಭಾವಿಸಿ, ಇದರಲ್ಲಿ ಭಾಗವಹಿಸುವ ಉತ್ಕಟೇಚ್ಛೆಯುಳ್ಳ ಮಕ್ಕಳನ್ನು ಆರಿಸಿಕೊಳ್ಳಬಹುದು ಚಟುವಟಿಕೆಗಳನ್ನು ಏರ್ಪಡಿಸುವವರೂ ತರಬೇತಿ ಹೊಂದಿದವರಾಗಬೇಕು ಕೆಲವು ಸಲಕರಣೆಗಳ ಅಗತ್ಯವೂ ಇದೆ. ಈ ಸಂಸ್ಥೆಗೆ ಪ್ರತ್ಯೇಕವಾದ ಧ್ವಜವಿದೆ. ಇದು ಮಕ್ಕಳ ಶೀಲವನ್ನು ತಿದ್ದುವುದರಲ್ಲಿ ಗಣ್ಯ ಪಾತ್ರ ವಹಿಸುವುದರಿಂದ ವಿದ್ಯಾಸಂಸ್ಥೆಗಳು ಇದರ ಉಪಯೋಗ ಪಡೆಯುವುದು ಒಳಿತಾಗಿದೆ.

ಶಾಲೆಗಳಲ್ಲಿ ಈ ಸಂಸ್ಥೆಯ ಕಾರ್ಯಕ್ಷೇತ್ರವು ಬಹು ವಿಶಾಲವಾದುದು ಪ್ರಥಮವಾಗಿ ಪರೋಪಕಾರದ ಮಹತ್ವವು ಮಕ್ಕಳಿಗೆ ಅರಿವಾಗಬೇಕು ಇತರರಿಗೆ ಶಕ್ತ್ಯಾನುಸಾರ ತಮ್ಮ ಸೇವೆಯನ್ನು ಸಲ್ಲಿಸುವಂತೆ ಚಟುವಟಿಕೆಗಳನ್ನು ಏರ್ಪಡಿಸಬೇಕು. ಶಾಲೆಯಲ್ಲಿ ಹಲವು ವರ್ಗದ ಮಕ್ಕಳಿರಬಹುದು. ಬಡತನದ ಬೇಗೆಯಿಂದ ಬಳಲುವ ಬಡ ಮಕ್ಕಳೂ ಅನೇಕರಿರಬಹುದು ಇಂತಹ ಮಕ್ಕಳಿಗೆ ಈ ಸಂಸ್ಥೆಯ ಮೂಲಕ ಪ್ರಯೋಜನವು ದೊರೆಯುವಂತೆ ಯತ್ನಿಸಬೇಕು. ಈ ಸಂಸ್ಥೆಯ ವತಿಯಿಂದ ಬಡ ಮಕ್ಕಳ 'ಸಹಾಯ ನಿಧಿ'ಯೊಂದನ್ನು ಸ್ಥಾಪಿಸಬೇಕು. ಮಕ್ಕಳು ತಮ್ಮ ಮಾಸಿಕ ವಂತಿಗೆಯನ್ನು ತೆರುತ್ತಿರಬೇಕು. ಇತರರಲ್ಲಿ ಅನುರಾಗವು ಮೂಡಿ ಅವರನ್ನೂ ತನ್ನಂತೆ ಕಾಣುವ ಭಾವನೆಯು ಮಕ್ಕಳಲ್ಲಿ ಮೊಳೆಯುವಂತೆ ಮಾಡುವುದೇ ಇದರ ಉದ್ದೇಶವಾಗಿದೆ.

ಪ್ರಥಮ ಚಿಕಿತ್ಸೆಯ ವಿಧಾನಗಳನ್ನು ಈ ಸಂಸ್ಥೆಗೆ ಸೇರಿದ ಮಕ್ಕಳಿಗೆ ಕಲಿಸುವುದು ಬಹು ಉಪಯುಕ್ತವಾಗಿದೆ. ಇದಕ್ಕೆ ಕೆಲವು ತರದ ಔಷಧಿಗಳೂ, ಸಾಮಗ್ರಿಗಳೂ ಅಗತ್ಯವಿದೆ. ಶಾಲೆಯಲ್ಲಿ ಆಗಾಗ ಸಣ್ಣ ಅಪಘಡಗಳು ಸಂಭವಿಸಿದರೆ ಕೂಡಲೇ ಚಿಕಿತ್ಸೆ ನಡೆಸುವ ಜವಾಬ್ದಾರಿಯನ್ನು ಮಕ್ಕಳು ಹೊರಬೇಕು ಮುಂದೆ ಇದರ ಸತ್ಫಲವನ್ನು ಕಾಣಬಹುದು. ಕಷ್ಟದಲ್ಲಿರುವ ಪ್ರತಿಯೊಬ್ಬನಿಗೂ ಈ ಸಂಸ್ಥೆಯಿಂದ ಅನುಕೂಲತೆ ಸಿಗುವಂತೆ ನೋಡಿಕೊಳ್ಳುತ್ತಿರಬೇಕು. ಕ್ರಮೇಣ ಮಕ್ಕಳು ಸಾರ್ವಜನಿಕರ ಚಿಕಿತ್ಸೆಗಾಗಿ ಮುಂದುವರಿಯಬಹುದು. ಹೀಗೆ ಒಂದು ವಿದ್ಯಾಮಂದಿರದ ಜೂನಿಯರ್ ರೆಡ್ ಕ್ರಾಸ್ ಸಂಸ್ಥೆಯಿಂದ ಸಾರ್ವಜನಿಕರೂ ಪ್ರಯೋಜನ ಹೊಂದಲೆಡೆಯಿದೆ!

ಆರೋಗ್ಯ ಅಭಿವೃದ್ಧಿಗಾಗಿ ದುಡಿಯುವುದು ಈ ಸಂಸ್ಥೆಯ ಇನ್ನೊಂದು ಉದ್ದೇಶವಾಗಿದೆ ವೈಯಕ್ತಿಕ ಆರೋಗ್ಯಕ್ಕೆ ನೀಡಿದಷ್ಟು ಪ್ರಮುಖತೆಯನ್ನು ಸಾರ್ವಜನಿಕ ಆರೋಗ್ಯಕ್ಕೂ ಈಯಬೇಕು. ಪ್ರತಿಯೋರ್ವನೂ ಇದರ ನಿಯಮಗಳನ್ನು ಪಾಲಿಸಿ ಆದರ್ಶನಾಗಿರತಕ್ಕದ್ದು ನೈರ್ಮಲ್ಯದ ಕಡೆಗೂ ಸಾಕಷ್ಟು ಗಮನವನ್ನು ಹರಿಸುತ್ತಿರಬೇಕು. ಶಾಲಾ ಪರಿಸರ, ಹಾಗೂ ಹಳ್ಳಿಯ ಸ್ವಚ್ಛತೆಯೂ ಈ ಸಂಸ್ಥೆಯ ಕಾರ್ಯಭಾಗಕ್ಕೆ ಸೇರಿರುವುದೆಂದು ತಿಳಿಯಬೇಕು. ಇದರ ಕುರಿತು ಪ್ರಚಾರವೂ ಅಗತ್ಯ ಈ ಸಂಸ್ಥೆಯ ಸದಸ್ಯರು ಹಳ್ಳಿಗಳಲ್ಲಿ ಸಂಚರಿಸಿ ಹಳ್ಳಿಗರ ಅಂಧಶ್ರದ್ಧೆಗಳನ್ನು ನಿವಾರಿಸಲು ಯತ್ನಿಸಬೇಕು. ಆರೋಗ್ಯ ಮತ್ತು ವೈದ್ಯಕೀಯ ಇಲಾಖೆಗಳೊಡನೆ ಸಂಪರ್ಕವನ್ನಿಟ್ಟುಕೊಳ್ಳುವುದು ಶ್ರೇಯಸ್ಕರ

ಪ್ರಪಂಚದ ಬೇರೆ ಬೇರೆ ದೇಶಗಳ ಮಕ್ಕಳ ಸ್ನೇಹವನ್ನು ಗಳಿಸುವುದು ಇದರ ಇನ್ನೊಂದು ಮುಖ್ಯ ಕಾರ್ಯವಾಗಿದೆ ಇದಕ್ಕಾಗಿ ಪತ್ರವ್ಯವಹಾರವು ಇರಬೇಕು. ಆಗ ಪರದೇಶದ ಮಕ್ಕಳ ಸ್ಥಿತಿಯ ಅರಿವುಂಟಾಗಿ ಅವರಲ್ಲಿ ಸೌಹಾರ್ದತೆಯು ಬೆಳೆಯುತ್ತದೆ ಅವರ ಕಷ್ಟಸುಖಗಳಲ್ಲಿ ಭಾಗಿಯಾಗುವ ಆತುರ ಹುಟ್ಟಿಕೊಳ್ಳುತ್ತದೆ. ಈ ಘನ ಉದ್ದೇಶವನ್ನು ದೃಷ್ಟಿಪಥದಲ್ಲಿರಿಸಿಕೊಂಡೇ ಇಂತಹ ಚಟುವಟಿಕೆಗಳು ಈ ಸಂಸ್ಥೆಯ ಜೀವಾಳವಾಗಿವೆ ಈ ವ್ಯವಹಾರವೆಲ್ಲಾ ಯೋಗ್ಯ ಮಾರ್ಗದರ್ಶನದ ನೆರವಿನಿಂದಲೇ ಜರಗುತ್ತಿರಬೇಕು ವಿಶಾಲ ವಿಶ್ವದ ಸಂಪರ್ಕವು ಹೆಚ್ಚಿದ ಹಾಗೆ ಮಗುವಿನ ಭಾವನೆಯೂ ವಿಕಸಿತಗೊಳ್ಳುವುದು. 'ವಿಶ್ವವೇ ತನ್ನ ಬಳಗ'ವೆಂಬ ಅರಿವು ಮೂಡುತ್ತದೆ.

ತಮ್ಮ ಸ್ನೇಹದ ಕುರುಹಿಗಾಗಿ ನಾಣ್ಯ ಮತ್ತು ಅಂಚೆ ಚೀಟುಗಳ ವಿನಿಮಯ ಮಾಡಿಕೊಳ್ಳಬಹುದು. ನಮ್ಮ ದೇಶದ ನಾಣ್ಯಗಳನ್ನು ಪರದೇಶದ ಮಕ್ಕಳಿಗೆ ರವಾನಿಸಿ ಅವರಿಂದ ಆ ದೇಶದ ನಾಣ್ಯಗಳನ್ನು ತರಿಸಿದರೆ ತುಂಬಾ ಪ್ರಯೋಜನವಿದೆ. ದೂರದ ಮಕ್ಕಳಿಗಾಗಿ ನಾಣ್ಯ ಹಾಗೂ ಅಂಚೆ ಚೀಟಿಗಳನ್ನು ಮಗುವು ಆತುರದಿಂದ ಸಂಗ್ರಹಿಸುತ್ತದೆ. ಅದರಲ್ಲಿ ಅಭಿರುಚಿಯನ್ನು ತೋರ್ಪಡಿಸುತ್ತದೆ. ಈ ವಿಧಾನದಿಂದ ಇತರ ರಾಷ್ಟ್ರಗಳ ಕುರಿತು ಹೆಚ್ಚಿನ ಜ್ಞಾನವು ಮಕ್ಕಳಿಗೆ ದೊರೆಯುವುದು ಈ ವಿಷಯಗಳಿಗೆಲ್ಲಾ ಯೋಗ್ಯವಾದ ಮಾರ್ಗದರ್ಶನದ ಅಗತ್ಯವಿದೆ. ಅಧ್ಯಾಪಕರಲ್ಲಿ ಇದರ ಬಗ್ಗೆ ಆಸಕ್ತಿ ಇರಬೇಕು.

ಹೀಗೆ ಜೂನಿಯರ್ ರೆಡ್‌ಕ್ರಾಸ್ ಸಂಸ್ಥೆಯು ಅಮಿತವಾದ ಚಟುವಟಿಕೆಗಳ ಮೂಲಕ ಮಕ್ಕಳಿಗೆ ತಕ್ಕ ನಾಗರಿಕ ಶಿಕ್ಷಣ ದೊರೆಯುವಂತೆ ಮಾಡುತ್ತದೆ ಆದುದರಿಂದ ಪ್ರತಿಯೊಂದು ಶಾಲೆಯಲ್ಲಿಯೂ ಇದಕ್ಕೆ ಹೆಚ್ಚಿನ ಗಮನವೀಯಬೇಕು. ಇಂತಹ ಸಂಸ್ಥೆಗಳು ಮುಗ್ಧ 'ಬಾಲ ಬಾಲಕಿಯರ ಜೀವನವನ್ನೇ ಬೆಳಗಿಸಬಲ್ಲ ನಂದಾದೀಪಗಳೆಂದು ಹೇಳಿದರೆ ಅತಿಶಯೋಕ್ತಿಯಾಗದು ಇದರ ಮೂಲಕ ದೇಶದ ಉನ್ನತಿಯನ್ನು ಹಾರೈಸುವುದು ವಿದ್ಯಾಸಂಸ್ಥೆಗಳ ಕರ್ತವ್ಯವಾಗಿದೆ.

(ವಿವಿಧ ಮೂಲಗಳಿಂದ)

—ಶ್ರೀ ಹೇಮನಾಥ ಶೆಟ್ಟಿ,
ಮುಂಡ್ಕೂರು.

72 ನೇ
ಶಾಖೆಯ ಆರಂಭ
* * * * *
ತಾ 6ನೇ ಗುರುವಾರ ಅಗೋಸ್ತು 1959ರಲ್ಲಿ
ಭಾವನಗರ ಶಾಖೆಯು
"ಮೆಹತಾ ಚೇಂಬರ್ಸ್"
ಲೋಖಂಡ್ ಬಜಾರು, ಮಹಾತ್ಮ ಗಾಂಧಿ ರೋಡು,
ಭಾವನಗರ
ಇಲ್ಲಿ ತನ್ನ 72 ನೇ ಶಾಖೆಯು ತೆರೆಯಲ್ಪಡುವುದೆಂದು ಪ್ರಕಟಿಸಲು
ಕೆನರಾ ಬೇಂಕು ಸಂತೋಷಪಡುತ್ತದೆ.
* * * * *
ಕೆನರಾ ಬೇಂಕ್ ಲಿಮಿಟೆಡ್
[ಸ್ಥಾಪನೆ: 1906]

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವನೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು

ಮೆನೇಜರ್, ನವಯುಗ, ಉಡುಪಿ.

ಇಚ್ಛಾ ಪ್ರಾಪ್ತಿಯಾಗ ಬೇಕಾದರೆ, ತ್ಯಾಗ, ಪರಿಶ್ರಮ ಮತ್ತು ಆಸಕ್ತಿಗಳು ಬೇಕಾಗುವವು, ಕೇವಲ ಬಾಹ್ಯಾಡಂಬರಗಳಿಂದಷ್ಟೇ ನಾವು ಯೋಚಿಸಿದುವೆಲ್ಲವೂ ಕಾರ್ಯಗತ ವಾಗುವಂತಿಲ್ಲ.

NAVAYUGA

Founder:—

A. B. SHETTY,

Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ವಾರ
೩೮	೨೩-೭-'೫೯	೪೫

ಗ್ರಾಮೀಣ ಮಾರ್ಗ ಯೋಜನೆ

ಆಧುನಿಕ ಕಾಲದಲ್ಲಿ ನಾಗರಿಕತೆಯು ಪ್ರವರ್ಧಿಸುತ್ತ ಹೋಗುತ್ತಿರುವಂತೆ ಬೇರೆ ಬೇರೆ ಊರುಗಳ ನಡುವಣ ಸಂಬಂಧಗಳೂ ನಿಕಟವಾಗಿ ಬೆಳೆಯುತ್ತವೆ. ಆಗ ಒಂದು ದೇಶದ ಪ್ರತಿಯೊಂದು ಹಳ್ಳಿಯೂ ಸಮೀಪದ ನಗರದೊಡನೆ ನೇರವಾದ ಸಂಪರ್ಕವನ್ನು ಪಡೆಯುವುದೂ ಅವಶ್ಯವೆನ್ನಬೇಕು. ಭಾರತದಂತಹ ದೇಶದಲ್ಲಿರುವ ಸಾರಿಗೆ ರಸ್ತೆಗಳ ಉದ್ದವು ಅದರ ವಿಸ್ತಾರಕ್ಕನುಗುಣವಾಗಿರುವುದಿಲ್ಲ. ಇದರಿಂದಾಗಿ ಮಳೆಗಾಲಗಳಲ್ಲಿ ಒಂದಾಗ, ಆ ಪ್ರದೇಶದ ಜನರಿಗೆ ಆಹಾರಾದಿ ಆವಶ್ಯಕ ಪದಾರ್ಥಗಳನ್ನು ಶೀಘ್ರದಲ್ಲಿ ಪೂರೈಸುವುದೂ ಕಷ್ಟಸಾಧ್ಯವಾಗಿದೆ. ತಮ್ಮ ದೈನಂದಿನ ಜೀವನಕ್ಕೆ ಆವಶ್ಯವಾದ ಪದಾರ್ಥಗಳು ದೊರೆಯುವಂತೆಯೂ ತಮ್ಮಲ್ಲಿರುವ ಧಾನ್ಯಾದಿಗಳನ್ನು ನಿರ್ಯಾತಗೊಳಿಸುವುದಕ್ಕೂ ರಸ್ತೆಗಳ ಸೌಕರ್ಯವಿರುವುದು ಅವಶ್ಯವಾಗಿದೆ ನಮ್ಮ ದೇಶದಲ್ಲಿ ಆಗಿಂದಾಗ್ಗೆ ಎದ್ದು ತೋರುತ್ತಿರುವ ಈ ಕೊರತೆಯನ್ನು ಕೇಂದ್ರ ಸರಕಾರವು ಕಂಡುಕೊಂಡು, ಆ ಬಗ್ಗೆ ವಿಸ್ತೃತವಾದ ಯೋಜನೆಯೊಂದನ್ನು ತಯಾರಿಸುತ್ತಿದೆ.

ಕೇಂದ್ರ ಸರಕಾರವು ಪರ್ಯಾಲೋಚಿಸುತ್ತಿರುವ ಈ ಯೋಜನೆಯು ೧೯೬೧ರಲ್ಲಿ ಪ್ರಾರಂಭವಾಗಿ, ೨೦ ವರ್ಷಗಳವರೆಗಿನ ಅವಧಿಯದ್ದಾಗಿರುವುದು. ಈಗ ರಾಷ್ಟ್ರದಲ್ಲಿ ೩.೮ ಲಕ್ಷ ಮೈಲುದ್ದದ ರಸ್ತೆಗಳಿದ್ದು ಈ ೨೦ ವರ್ಷಗಳ ಅವಧಿಯಲ್ಲಿ ದು ಸುಮಾರು ೬ ಲಕ್ಷ ಮೈಲುಗಳಷ್ಟು ಹೆಚ್ಚಲಿದೆ. ಸಾಮಾನ್ಯತಃ ಪ್ರತಿಯೊಂದು ಹಳ್ಳಿಯನ್ನೂ ಸಮೀಪದ ನಗರ ಅಥವಾ ಪಟ್ಟಣಕ್ಕೆ ಜೋಡಿಸಲಾಗುವುದು. ಕೇಂದ್ರ ಸರಕಾರದ ಸಾರಿಗೆ ಮತ್ತು ಸಂಪರ್ಕ ಶಾಖೆಯ ನೇತೃತ್ವದಲ್ಲಿ ಕಾರ್ಯಗತವಾಗಲಿರುವ ಈ ಯೋಜನೆಯ ವೆಚ್ಚವನ್ನು ಕೇಂದ್ರ ಸರಕಾರವೇ ವಹಿಸುವದು, ಆದರೆ, ರಾಜ್ಯ ಸರಕಾರವು ಮಾರ್ಗಗಳ ನಕಾಶೆಗಳನ್ನು ತಯಾರಿಸಿ ಕೊಡಬೇಕಾಗಿದೆ. ಆವಶ್ಯಕ ತರಬೇತಿಯಿರುವ ಮತ್ತು ತಂತ್ರಜ್ಞರನ್ನು ನೇಮಿಸುವ ವೆಚ್ಚವನ್ನು ರಾಜ್ಯ ಮತ್ತು ಕೇಂದ್ರ ಸರಕಾರಗಳು ಹಂಚಿಕೊಳ್ಳುವವು. ಕ್ಷೇತ್ರಗಳಾಗಲೀ ಪಂಚಾಯತಗಳಾಗಲೀ ರಸ್ತೆಗಳನ್ನು ನಿರ್ಮಿಸಲು ಬೇಕಾಗುವ ಭೂಮಿಗಳನ್ನು ಬಿಟ್ಟುಕೊಡುವಂತೆ ನೋಡಿಕೊಳ್ಳುವುದು ಮತ್ತು ಶ್ರಮದಾನ ಮೊದಲಾದುವುಗಳ ಹೊಣೆಯನ್ನೂ ಹೊರಬೇಕಾಗಿದೆ. ಹೀಗೆ ಮೂರು ವಿಭಾಗಗಳ ಹೊಣೆಗಾರಿಕೆಯಿಂದ ಏರ್ಪಡಿಸುವಂತಿರುವ ಈ ಯೋಜನೆಯನ್ನು ಎಲ್ಲರೂ ಸ್ವಾಗತಿಸಬೇಕು.

ಗ್ರಾಮೀಣ ಪ್ರದೇಶಗಳ ಉನ್ನತಿಯಿಂದಂದೇ ಅಲ್ಲಿರುವ ಜನರು ಜಾಗ್ರತರಾದಂದೇ ದೇಶದ ಅಭ್ಯುತ್ಥಾನವೆಂಬುದು ಸುವಿದಿತ. ಈ ಮಾರ್ಗ ನಿರ್ಮಾಣವು ಪ್ರಗತಿ ಸಾಧಕವಾಗುವುದೂ ನಿಸ್ಸಂದೇಹ ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಿಸಲಾಗುವ ಈ ರಸ್ತೆಗಳಿಗೆ ಆವಶ್ಯಕವಾದ ಸ್ಥಳವನ್ನು ಆಯಾ ಗ್ರಾಮದವರೇ ಒದಗಿಸುವುದು ಮುಖ್ಯವಾದುದರಿಂದ, ಅದನ್ನು ಆತ್ಮಸಂತೋಷದಿಂದ ನೀಡಲು ಅವರು ಹಿಂದೆ ಮುಂದೆ ನೋಡುವಂತಾಗಬಾರದು. ಒಬ್ಬಿಬ್ಬರ ತ್ಯಾಗದಿಂದ ಅನೇಕ ಜನರಿಗೆ ಉಪಕಾರವೊದಗುವ ಇಂತಹ ಸಂದರ್ಭಗಳಲ್ಲಿ ಎಲ್ಲರೂ ಉತ್ಸಾಹದಿಂದ ತಾಳಿ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಮುಂದಾಗಬೇಕು. ತಂತಮ್ಮ ಆವಶ್ಯಕತೆಗಳೇನೆಂಬುದನ್ನು ಮೊದಲಿಗೇ ಕಂಡುಕೊಂಡು ಈ ಮಾರ್ಗ ನಿರ್ಮಾಣ ಯೋಜನೆಯನ್ನವರು ಅವನ್ನು ಈಡೇರಿಸಿಕೊಂಡಲ್ಲಿ ಗ್ರಾಮಸ್ಥರಿಗೆ ಮಾತ್ರ ಲಾಭವಲ್ಲದೇ ರಾಷ್ಟ್ರಕ್ಕೂ ಕಲ್ಯಾಣಪ್ರದಾಯಕವೆಂದು ನಿಸ್ಸಂದಿಗ್ಧವಾಗಿ ಹೇಳಬಹುದು. ಜನತೆಯಂತೆಯೇ ರಾಜ್ಯ ಹಾಗೂ ಕೇಂದ್ರ ಸರಕಾರಗಳೂ ಸರಕಾರಿ ಅಧಿಕಾರಿಗಳೂ ತಮ್ಮ ಅಭ್ಯಾಸಾನುಗುಣವಾದ ನಿಧಾನತೆಯನ್ನು ಪ್ರದರ್ಶಿಸದೆ, ಅವರಂತೆಯೇ ಶೀಘ್ರೋತ್ಸಾಹವನ್ನು ತೋರ್ಪಡಿಸಿ ಯೋಜನೆಯು ಸಂಪೂರ್ಣ ಯಶಸ್ವಿಯಾಗಿಯೂ ಸಾರ್ಥಕವಾಗಿಯೂ ಉಪಯೋಗಿಯಾಗಿಯೂ ಆಗುವಂತೆ ನೋಡಿಕೊಳ್ಳಬೇಕು

ನೆಹರೂ ಆರೋಗ್ಯ

ಸಿಮ್ಲಾದಲ್ಲಿ ವಿರಾಮ ಕೊಂಡಲು ತನ್ನ ಮಗಳು ಇಂದಿರಾ ಗಾಂಧಿಯವರೊಡನೆ ತೆರಳಿದ್ದ ಶ್ರೀ ನೆಹರೂ ನವದೆಹಲಿಗೆ ಹಿಂತಿರುಗಿ ಮರಳಿದಾಗ, ಅವರು ಕೊಂಚ ಜ್ವರ ಪೀಡಿತರಾಗಿದ್ದರೆಂದು ತಿಳಿದು ಬಂದಿದೆ. ಪ್ರಧಾನಿಯವರು ಸಿಮ್ಲಾದಲ್ಲಿ ವಿರಾಮ ಕೊಂಡುತಿದ್ದ ಕಾಲವನ್ನು ಅರಿತುಕೊಂಡೇ ಕೇರಳದ ನಾಯಕ ಪ್ರತಿನಾಯಕ ಶಿರೋಮಣಿಗಳು ಅವರನ್ನು ಅಲ್ಲಿ ಹೋಗಿ ಕಂಡು ತಮ್ಮ "ಬಣ ಹರಟೆ"ಗಳ ಮೂಲಕ ಅವರ ತಲೆಯನ್ನು ಬಿಸಿಗೊಳಿಸಿದುದರಿಂದಲೇ ಅವರ ತಲೆ ಸಿಡಿಯತೊಡಗಿ ತತ್ಪರಿಣಾಮವಾಗಿ ಅವರ ದೇಹದ ಉಷ್ಣತೆಯು ಹೆಚ್ಚಿ ಜ್ವರಪೀಡಿತವಾಯಿತೆಂದು ತಿಳಿದರೆ, ಅದು ಶುದ್ಧ ಕುಹಕವೆಂದೇ ಹೇಳಬೇಕು.

ಈ ನಡುವೆ ಅಮೇರಿಕನ್ ಪತ್ರಿಕೆಯೊಂದು ನೆಹರೂರವರ ಕರ್ತರೀಕ್ರಮಸ್ಥಿತಿಯ ಬಗ್ಗೆ ಕಣ್ಣೀರು ಸುರಿಸಿದೆ. ಕೇರಳದ ಮೇಲೆ ಯುಕ್ತ ಕಾರ್ಯಕ್ರಮವನ್ನು ತತ್‌ಕ್ಷಣ ಕೈಗೊಂಡಲ್ಲಿ, ಕಮ್ಯೂನಿಸ್ಟರ ಪಾಪದ ಕೊಡವು ತುಂಬುವಂತಿಲ್ಲ ಎಂದೂ, ಹಾಗೆ ಮಾಡದೆ ಹೋದರೆ ನಿರಪರಾಧಿ ಜನತೆಯು ವ್ಯರ್ಥವಾಗಿ ಹಿಂಸೆಗೆ ಗುರಿಯಾಗುವುದೆಂದೂ ನೆಹರು ಚಿಂತಿಸುತಿಪ್ಪಾರೆಂದದು ಅಭಿಪ್ರಾಯಪಟ್ಟಿದೆ. ಸಿಮ್ಲಾದಲ್ಲಿರುವಾಗಲೇ ಕೇರಳದ ಮಲ್ಲರೆಲ್ಲರೂ ಒಬ್ಬರೂ ಬಿಡದೆ, ಬಂದು ತಂತಮ್ಮ ವಾದವನ್ನು ಮಂಡಿಸಿ ಸಮರ್ಥಿಸಿದುದೂ ನೆಹರೂರ ಮೊದಲೇ ಖೇದಗೊಂಡಿದ್ದ ಮನಸ್ಸಿನ ಮೇಲೆ ವಿಶೇಷ ಪರಿಣಾಮ ಮಾಡಿದುದರಿಂದಲೇ ಅವರ ಆರೋಗ್ಯ ಕೆಡಲು ಕಾರಣವಾಯಿತೇ? ಕೇರಳ ಸಮಸ್ಯೆಯ ಬಗ್ಗೆ ಒಂದು ಖಚಿತ ಧೋರಣೆಯನ್ನು ರೂಪಿಸುವ ಬಗ್ಗೆ ಅವರು ವಿರಾಮ ಪಡೆದಿರಬಹುದಾದರೂ ವಿರಾಮದ ನಂತರವೂ ಈ ಬಗ್ಗೆ ಒಂದು ನಿಶ್ಚಿತಾಭಿಪ್ರಾಯಕ್ಕೆ ಬಂದಂತೆ ತೋರುವುದಿಲ್ಲ. ಇದನ್ನೆಲ್ಲಾ ನೋಡುವಾಗ, ನೆಹರೂ ಆರೋಗ್ಯದ ಬಗ್ಗೆ ಪ್ರಾರ್ಥಿಸುವುದು ಕೇರಳದ ಗೊಂದಲಕ್ಕಿಂತಲೂ ಹೆಚ್ಚಿನದಲ್ಲವೆ?

ಪ್ರವಾಹ ಪೀಡಿತರಿಗೆ ಬಹುಮುಖ ಸಹಾಯ

ಮಾನ್ಯ ಆರೋಗ್ಯಮಂತ್ರಿ ಡಾ| ಹೆಗ್ಡೆಯವರ ಹೇಳಿಕೆ

ನಮ್ಮ ಜಿಲ್ಲೆಯಲ್ಲಿ ಪ್ರವಾಹವು ಮಿತಿಮೀರಿದುದರಿಂದ ನೆರೆಯ ಹಾವಳಿಯಾಯಿತೆಂಬ ವಿಸ್ಮಯಕಾರಕ ವರ್ತಮಾನವನ್ನು ಕೇಳಿ ನಾನು ನೆರೆಗೆ ತುತ್ತಾದ ಪ್ರದೇಶಗಳಿಗೆ ಭೇಟಿಕೊಟ್ಟಿದ್ದೇನೆ. ಈ ಪ್ರದೇಶಗಳ ವಿಮಂಚನಾತ್ಮಕ ಸ್ಥಿತಿಯನ್ನೂ ಮುಖ್ಯವಾಗಿ ಬಡ ಜನತೆಯ ವಿಪನ್ನಾವಸ್ಥೆಯನ್ನೂ ನಾನು ಕಂಡು ದುಃಖಿತನಾಗಿದ್ದೇನೆ. ಸರಕಾರವು ನೆರೆಯ ಅನಾಹುತದ ವಾರ್ತೆಯನ್ನು ಕೇಳಿದೊಡನೆಯೇ ರೂ. ೧೦ ಸಾವಿರವನ್ನು ತತ್‌ಕ್ಷಣ ಮಂಜೂರು ಮಾಡಿರುವುದಲ್ಲದೇ ತಾ. ೧೪—೭—೫೯ರಂದು ಪುನಃ ೪೦ ಸಾವಿರ ರೂಪಾಯಿಗಳನ್ನು ಇದಕ್ಕಾಗಿ ಮಂಜೂರು ಮಾಡಿದೆ. ದಿಪ್ಯುಟಿ ಕಮಿಶನರ ಮತ್ತು ಡಿವಿಜನಲ್ ಕಮೀಶನರರೂ ಈ ಬಗ್ಗೆ ತಮ್ಮ ಪಾಲಿನ ಹಣವನ್ನು ತೆಗೆದಿರಿಸಿದ್ದಾರೆ. ಸರಕಾರವು ಈ ವಿಷಯವನ್ನು ಗಮನಿಸಿ ಆದಷ್ಟು ಹೆಚ್ಚು ಸಹಾಯ ಮಾಡಿದೆ ಎಂಬುದನ್ನು ನೀವು ಕಂಡುಕೊಳ್ಳದಿರಲಾರಿರಿ. ಇನ್ನು ಮುಂದಕ್ಕೂ ಆವಶ್ಯಕತೆ ಬಿದ್ದರೆ, ಸಹಾಯ ನೀಡಲು ಸರಕಾರ ಹಿಂಜರಿಯಲಾರದೆಂಬ ವಿಶ್ವಾಸ ನನಗಿದೆ. ಸಾರ್ವಜನಿಕರು ಮತ್ತು ಅಧಿಕಾರಿಗಳು ಈ ದಿಸೆಯಲ್ಲಿ ತ್ವರಿತ ಕಾರ್ಯಕ್ರಮವನ್ನು ಕೈಕೊಂಡಿರುವುದನ್ನು ನಾನು ಕಂಡುಕೊಂಡಿದ್ದೇನೆ. ನೆರೆಯಿಂದ ಪರಿಣಾಮಗೊಂಡವರಿಗೆ ನೆರವೀಯುವುದರಲ್ಲಿ ಇವರು ತೋರಿಸುತ್ತಿರುವ ಉತ್ಸಾಹಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳು. ಇನ್ನು ಮುಂದಕ್ಕೂ ಬೇಕಾದ ಸಹಾಯವನ್ನು ಸಾರ್ವಜನಿಕರು ನೀಡುವರೆಂಬ ಭರವಸೆಯಿದೆ. ನೆರೆಯಿಂದ ನಿರಾಶ್ರಿತರಾದವರ ಪುನರ್ನಿವೇಶನ ಕಾರ್ಯದಲ್ಲಿ ನೀವೂ ಉತ್ಸಾಹದಿಂದ ಭಾಗವಹಿಸಬೇಕು. ಕೆನರಾ ಬ್ಯಾಂಕು ಒಂದು ಲಕ್ಷ ರೂಪಾಯಿಗಳನ್ನು ಪ್ರವಾಹಪೀಡಿತರ ಸಹಾಯಕ್ಕಾಗಿ ಸಂಗ್ರಹಿಸಿ ಮುಖ್ಯಮಂತ್ರಿಯವರಿಗೆ ಒಪ್ಪಿಸುವ ಯೋಜನೆಯೊಂದನ್ನು ಕೈಗೊಂಡಿದೆ ಎಂದೂ ಈ ಸಂದರ್ಭದಲ್ಲಿ ನಾನು ಸೂಚಿಸಬಯಸುತ್ತೇನೆ. ದಕ್ಷಿಣ ಕನ್ನಡವೂ ಸಹಾಯ ನೀಡಲು ತ್ವರೆಮಾಡುತ್ತಿದೆಯೆಂದೂ ನಿರಾಶ್ರಿತರ ಪುನರ್ನಿವೇಶನಕ್ಕಾಗಿ ಆವಶ್ಯಕ ಸಾಮಗ್ರಿಗಳನ್ನೊದಗಿಸಲು ಮುಂದೆಬಂದಿರುವುದೆಂದೂ ನಾನು ತಿಳಿದಿದ್ದೇನೆ. ಸಾರ್ವಜನಿಕರು, ಅಧಿಕಾರಿಗಳು ಮತ್ತು ಸರಕಾರದ ಸಹಾಯಗಳಿಂದ ನೆರೆಯಿಂದ ನಿರಾಶ್ರಿತರಾದವರು ಯೋಗ್ಯರೀತಿಯಲ್ಲಿ ಪುನರ್ನಿವೇಶನ ಪಡೆಯುವರೆಂದು ನಾನು ನಂಬುತ್ತೇನೆ.

ಇನ್ನು ಮುಂದೆ, ನೆರೆಗಳಿಂದ ಅಪಾಯವು ತಪ್ಪುದಂತೆ ಯಾವರೀತಿಯ ಶಾಶ್ವತ ಪ್ರತಿಬಂಧಕೋಪಾಯಗಳನ್ನು ಕೈಗೊಳ್ಳಲು ಸಾಧ್ಯವಿದೆ ಎಂಬುದನ್ನು ಕಂಡುಹಿಡಿಯಲು ನಾನು ಪ್ರಯತ್ನಿಸುತಿದ್ದೇನೆ.

ಸಂಕ್ಷಿಪ್ತ ಸುದ್ದಿಗಳು

ಇರಾಕ ಸಂಘರ್ಷಣೆ

ಇರಾಕದಲ್ಲಿ ೧೯೫೮ರಲ್ಲಿ ಕೇವಲ ಒಂದೇ ರಾತ್ರಿಯೊಳಗೆ ಅರಸೊತ್ತಿಗೆಯನ್ನು ನಿವಾರಿಸಿ ಸೈನಿಕ ಬಂಡಾಯದ ಮೂಲಕ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಇರಾದೆಯಿಂದ ಪ್ರಧಾನಿ ಮಂತ್ರಿಯಾದ ಅಬ್ದುಲ್ ಕರೀಮ್ ಕಾಸೀಮರು ತಮ್ಮ ಆಡಳಿತೆಯಲ್ಲಿ ಅಸಮರ್ಥರಾದರೆಂಬುದನ್ನು ತಿಳಿಸುವ ದುರ್ಘಟನೆಗಳು ಅಲ್ಲಿ ನಡೆದಿವೆ. ಕಳೆದ ವಾರ ಅಲ್ಲಿ ರಾಜ್ಯಕ್ರಾಂತಿಯ ವಾರ್ಷಿಕೋತ್ಸವವು ನಡೆಯುತ್ತಿರುವಾಗಲೇ ರಾಷ್ಟ್ರೀಯರು ಮತ್ತು ಕಮ್ಯುನಿಸ್ಟ ಪಂಗಡಗಳ ನಡುವೆ ಹೋರಾಟ ನಡೆದು, ಕೆಲವಾರು ನಿಧನಗಳಾದುವೆಂದೂ ಹೇಳಲಾಗಿದೆ. ಅಲ್ಲದೇ ಈ ಗೊಂದಲವು ಎಣ್ಣೆ ಗನಿಗಳ ನಿಕ್ಷೇಪವಾದ ಕಿರ್ಕಕ್ ಪ್ರದೇಶದಲ್ಲಿಯೇ ಉಂಟಾದುದರಿಂದ ತುಂಬ ವಿಮಂಚನಾಸ್ಪದವಾಗಿದೆ. ಕಮ್ಯುನಿಸ್ಟ ಮತಪ್ರದರ್ಶಕರನ್ನು ಸೈನ್ಯದ ಸಹಾಯದಿಂದ ಓಡಿಸಲಾಗಿದೆ ಎಂದು ತಿಳಿದರೂ ಈ ಘಟನೆಯು ಮುಂದಿನ ದುರ್ಘಟನೆಗಳಿಗೆ ನಾಂದಿಯಾಗದೆಂದು ಹೇಳುವುದು ಸಾಧ್ಯವಿಲ್ಲ.

ಶಿಕ್ಷಣದ ಮಟ್ಟವೇನು?

ಇಂದು ಭಾರತದಲ್ಲಿ ಈಯಲಾಗುತ್ತಿರುವ ಶಿಕ್ಷಣದ ಪದ್ಧತಿಯನ್ನು ಪ್ರಮುಖ ನೇತಾರರೆಲ್ಲರೂ ದೂರುತ್ತ ಸ್ವತಂತ್ರ ಭಾರತದಲ್ಲಿ ಸ್ವಾವಲಂಬಿ ವ್ಯಕ್ತಿತ್ವ ರೂಪಿಸುವಂತಹ ಶಿಕ್ಷಣಬೇಕೆಂದು ಹೇಳುತಿದ್ದಾರೆ. ಇದೀಗ, ಭೂದಾನ ಕಾರ್ಯಕರ್ತ ಅಗ್ರೇಸರರಾದ ಶ್ರೀ ವಿನೋಬಾಜೀ ಅವರೂ ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ತಾನು ವಿದ್ಯಾರ್ಥಿಯಾಗಿರುವಾಗ ಕೊಡಲಾಗುತಿದ್ದ ದೋಷಪೂರ್ಣ ಶಿಕ್ಷಣವೇ ಇಂದೂ, ನಾಲ್ಕೈದು ದಶಕಗಳ ನಂತರವೂ, ಕೊಡಲಾಗುತ್ತಿದೆ. ಇದರಲ್ಲಿ ಕೈಗಾರಿಕೆಗಳಿಗೆ ಪ್ರಾಧಾನ್ಯವಿಲ್ಲದಿರುವುದರಿಂದ, ಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ಏರುತ್ತಿದೆ. ಒಬ್ಬ ಅಧ್ಯಾಪಕನು ಒಂದೇ ಬಾರಿ ಅಧಿಕ ವಿದ್ಯಾರ್ಥಿಗಳಿಗಿರುವ ಎರಡು ಮೂರು ವರ್ಗಗಳಿಗೆ ಕಲಿಸಬೇಕಾಗಿ ಬಂದಿರುವುದರಿಂದ ಅಧ್ಯಾಪಕರೂ ಕರ್ತರೀ ಕ್ರಮುಖ ಸ್ಥಿತಿಯಲ್ಲಿ ಬಿದ್ದು ಅವರ ಜ್ಞಾನಕ್ಕೂ ಚಾರಿತ್ರ್ಯಕ್ಕೂ

ಅಲ್ಲಲ್ಲಿಯ ಸುದ್ದಿ ಸಾರ

ಆರನೇ ತರಗತಿಯ ಉದ್ಘಾಟನೆ- ಇದೇ ತಾ 16ರಲ್ಲಿ ಮಟ್ಟು ಕೊಪ್ಲ ಎಲಿಮೆಂಟರಿ ಶಾಲೆಯಲ್ಲಿ ಹಾಯರ್ ಎಲಿಮೆಂಟರಿಯ ಆರನೇ ದರ್ಜೆಯನ್ನು ತೆರೆಯುವ ಹಾಗೂ ಶಾಲಾ ಕಟ್ಟಡದ ಶಂಕು ಸ್ಥಾಪನೆ ಮಾಡುವ ಸಮಾರಂಭವು ಶ್ರೀ ಟ ಎ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲಾ ಇನ್ಸ್‌ಪೆಕ್ಟರ್ ಶ್ರೀ ವೈ ಗೋಪಾಲನವರು ಹೊಸ ತರಗತಿಯ ಉದ್ಘಾಟನೆ ಮಾಡಿದರು, ಮಟ್ಟು ಪಟೇಲ್ ಯನ್ ಗೋವಿಂದ ರಾವ್ ಅಧಿಕಾರಿಯವರು ಕಟ್ಟಡದ ಶಂಕು ಸ್ಥಾಪನೆ ಮಾಡಿದರು ಸಭಿಕರು ಭಾಷಣ ಮಾಡಿದ ಮೇಲೆ ಅಧ್ಯಕ್ಷರು ಶಾಲಾಭಿವೃದ್ಧಿಯ ಕುರಿತು ಭಾಷಣವಿತ್ತರು ಶಾಲಾ ಮೆನೇಜರ್ ಶ್ರೀ ಕೆ ಮಂಜುನಾಥಯ್ಯನವರು ಆರಂಭದಲ್ಲಿ ವರದಿಯನ್ನು ಓದಿದರಲ್ಲದೆ ಅಂತ್ಯದಲ್ಲಿ ಧನ್ಯವಾದಗಳನ್ನರ್ಪಿಸಿದರು.

ಹಳದಿ ಬಣ್ಣದ ಮಳೆ—ಬೆಳ್ತಂಗಡಿ ತಾಲೂಕಿನ ಕುದುರೆಮುಖ ಬೆಟ್ಟದ ಕೆಳಗಿನ ಪ್ರದೇಶವಾದ ಬಂಗಾಡಿಯ ಸಾವೂರಿನಲ್ಲಿ ತಾ 12ನೇ ಸಾಯಂಕಾಲ ಸುಮಾರು 15 ಮಿನಿಟುಗಳ ವರೆಗೆ ಹಳದಿ ಬಣ್ಣದ ಮಳೆಯು ಸುರಿದಿರುವುದಾಗಿ ನಾವೂರದಿಂದ ಶ್ರೀ ನಾರಾಯಣ ಶೇಕ ಅವರು ಬರೆಯುತ್ತಾರೆ

ಜಿಲ್ಲಾ ಹಿಂದೂ ಮಹಾ ಸಭೆ— ಇದೇ ತಾ 12ರಲ್ಲಿ ಡಾ ಐ ಕೆ. ಪಿ ಶರ್ಮರ ಅಧ್ಯಕ್ಷತೆಯಲ್ಲಿ ದ ಕ. ಜಿಲ್ಲಾ ಹಿಂದೂ ಮಹಾ ಸಭೆ ಮತ್ತು ಹಿತೈಷಿಗಳ ಸಭೆಯೊಂದು ಜರಗಿ ಕೇರಳ ಸರಕಾರಕ್ಕೆ ಬೆಂಬಲ ಸೂಚಿಸುವ ಶಬರಿಮಲೆಯ ಐಯ್ಯಪ್ಪನ್ ಸ್ವಾಮಿ ದೇವಸ್ಥಾನವನ್ನು ಸುಟ್ಟವರಿಗೆ ನ್ಯಾಯ ವಿಚಾರಣೆಗೆ ಒಳಪಡಿಸಬೇಕೆನ್ನುವ ಕೇರಳದಲ್ಲಿ ಮಿಶನರಿಗಳು ಹಿಂದುಗಳನ್ನು ಮತಾಂತರಗೊಳಿಸುವುದನ್ನು ನಿಷೇಧಿಸುವ ಕಾನೂನು ರಚಿಸಬೇಕೆಂದು ಕೇಳಿಕೊಳ್ಳುವ ಇತ್ಯಾದಿ ನಿರ್ಣಯಗಳಾದುವು

ಬೀಡಿ ಮಜೂರರ ಮಹಾ ಸಭೆ— ಕುಂಜಿಬೆಟ್ಟು ಪ್ರಾದೇಶಿಕ ಬೀಡಿ ಮಜೂರರ ಮಹಾ ಸಭೆಯು ತಾ 19ರಂದು ಶ್ರೀ ಅಜಾದ್ ಸಾಹೇಬರ ಅಧ್ಯಕ್ಷತೆಯಲ್ಲಿಯೂ ಕಡಿಯಾಳಿ ಪ್ರಾದೇಶಿಕ ಬೀಡಿ ಮಜೂರರ ಮಹಾ ಸಭೆಯು ಶ್ರೀ ಮಂಜುನಾಥ ಮರಕಾಲರ ಅಧ್ಯಕ್ಷತೆಯಲ್ಲಿಯೂ ಜರಗಿ ಮಜೂರ ಸಂಘಟನೆಯ ಕುರಿತು ಭಾಷಣವಾಗಿ ಕಮಿಟಿ ರಚಿಸಲ್ಪಟ್ಟಿತು

ಶ್ರೀ ಕೆದಿಂಜೆ ಹೊನ್ನಯ್ಯ ಹೆಗ್ಡೆಯವರ ನಿಧನ— 83 ವರ್ಷಗಳ ವಯೋವೃದ್ಧರೂ ಅನುಭವಶಾಲಿಗಳೂ ಪ್ರಖ್ಯಾತ ಪಂಚಾಯತಿದಾರರೂ ಆದ್ಯ ಕೆದಿಂಜೆ ಮನೆತನದವರೂ ಆದ ಶ್ರೀ ಕೆದಿಂಜೆ ಹೊನ್ನಯ್ಯ ಹೆಗ್ಡೆಯವರು ಇದೇ ತಾ 18ನೇ ಶನಿವಾರ ರಾತ್ರಿ ದಿವಂಗತರಾದರೆನ್ನಲು ವಿಷಾದಪಡುತ್ತೇವೆ ದಿವಂಗತರು ಪರೋಪಕಾರಿಗಳೂ ಕಾಂಗ್ರೆಸ್ ಮನೋವೃತ್ತಿಯವರೂ ಆಗಿದ್ದು ಜಿಲ್ಲಾ ಬೋರ್ಡು ಎಸೆಂಬ್ಲಿ ಮೊದಲಾದ ಚುನಾವಣೆಗಳಲ್ಲಿ ಕಾಂಗ್ರೆಸ್ ಉಮೇದ್ವಾರರಿಗೆ ಬೆಂಬಲ ಕೊಡುತ್ತಿದ್ದರು ಸುಮಾರು ಎರಡು ತಿಂಗಳಿಂದ ಶ್ರೀ ಹೆಗ್ಡೆಯವರು ಅಸ್ವಸ್ಥರಾಗಿದ್ದು, ಕೆದಿಂಜೆಯಲ್ಲಿ ಸ್ವಗೃಹದಲ್ಲಿ ನಿಧನಹೊಂದಿದರು ದಿವಂಗತರಿಗೆ ಒಬ್ಬಳೇ ಹೆಣ್ಣು ಮಗಳು ಮಾಜಿ ಜಿಲ್ಲಾ ಬೋರ್ಡು ಮೆಂಬರ ಬಿ ಗಿರಿಜ ಹೆಗ್ಗಡ್ತಿ ದಿವಂಗತರು ಆರೋಗ್ಯ ಮಂತ್ರಿ ಡಾ ಕೆ. ಕೆ. ಹೆಗ್ಡೆಯವರ ಅಣ್ಣ, ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರ ಮಾವ ದಿವಂಗತರ ದುಃಖೀ ಕುಟುಂಬ ಹಾಗೂ ಮಗಳು ಮೊಮ್ಮಕ್ಕಳು ಇವರೊಡನೆ ಸಂತಾಪ ಸೂಚಿಸುತ್ತೇವೆ

ದ ಕ ನೆರೆ ಪರಿಹಾರ ನಿಧಿ— ನೆರೆಯ ಹಾವಳಿಯಿಂದ ನಿರಾಶ್ರಿತರಾದವರಿಗೆ ತ್ವರಿತ ಪರಿಹಾರ ನೀಡುವ ಸಲುವಾಗಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನವರೂ ನವಭಾರತ ದೈನಿಕದವರೂ ಸಂಯುಕ್ತವಾಗಿ ನಿಧಿ ಸಂಗ್ರಹಿಸುವ ಯೋಜನೆಯನ್ನು ಕೈಗೊಂಡಿದ್ದಾರೆ ಈ ನಿಧಿಗೆ ಸಹಾಯಧನ ಕೊಡಲಪೇಕ್ಷಿಸುವವರು ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಹಣಕೊಟ್ಟು ಪಾವತಿ ಪಡೆಯಬಹುದು

ಪ್ರವೇಶೋತ್ಸವ— ಕಡೆಕಾರಿನಲ್ಲಿ ಡಾ! ಟಿ. ಎಂ ಎ ಪೈಗಳು ದಾನವಾಗಿ ಕೊಟ್ಟ ಸ್ಥಳದಲ್ಲಿ ನಿರ್ಮಿಸಲಾದ ಸದಿಯ ಸಾಹುಕಾರ್ ಸ್ಮಾರಕ ಪ್ರಸೂತಿಕಾ ಗೃಹದ ಪ್ರವೇಶ ಸಮಾರಂಭವು ತಾ 13ರಲ್ಲಿ ಶ್ರೀ ಎನ್ ಶ್ರೀನಿವಾಸರಾವ್ ಕಡೆಕಾರ್ ಇವರಿಂದ ಉದ್ಘಾಟಿಸಲ್ಪಟ್ಟಿತು

ಕಟಪಾಡಿಯಲ್ಲಿ ನೆರೆಪೀಡಿತರ ಸಹಾಯ ಸಮಿತಿ ಸಭೆ— ಉದ್ಯಾವರ ಕಟಪಾಡಿ ಮೊದಲಾದ ಗ್ರಾಮಗಳಲ್ಲಿ ಉಂಟಾದ ನೆರೆ ನಿರಾಶ್ರಿತರಿಗೆ ಸಹಾಯ ಮಾಡುವುದಕ್ಕಾಗಿ ರಚಿಸಲ್ಪಟ್ಟ ಸಮಿತಿಯ ಸಭೆಯು ತಾ 11ರಲ್ಲಿ ಕಟಪಾಡಿಯಲ್ಲಿ ಶ್ರೀ ಟಿ ಎ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀ ಪೈಗಳು ನೆರೆಯ ಹಾವಳಿಯನ್ನು ವಿವರಿಸಿ ಜಿಲ್ಲಾ ಸಮಿತಿಯು ಕೈಗೊಂಡಿರುವ ಕಾರ್ಯಕ್ರಮಗಳ ಪ್ರಸ್ತಾಪಿಸಿದರು ಸಂಕಷ್ಟಕ್ಕೊಳಗಾದವರ ಕೇಳಿಕೆಗಳನ್ನು ಸ್ವೀಕರಿಸುವುದಕ್ಕಾಗಿ ಸ್ಥಳೀಯ ಭುವನೇಂದ್ರ ಪ್ರೌಢಶಾಲಾ ಸಂಸ್ಥೆಯ ಕಟ್ಟಡದಲ್ಲಿ ಒಂದು ಕಚೇರಿಯನ್ನು ತೆರೆದಿರುವುದಾಗಿ ಶ್ರೀ ಪೈಗಳು ಹೇಳಿದರು ತಹಸಿಲ್ದಾರ್ ಶ್ರೀ ಕೊರಗಪ್ಪನವರು ಕೆಲವೊಂದು ವಿವರಗಳನ್ನು ಸಭೆಯ ಮುಂದಿಟ್ಟರು.

ತಾ 18ರಲ್ಲಿ ಇನ್ನೊಂದು ಸಭೆಯು ಶ್ರೀ ಟಿ. ಎ ಪೈಗಳ ನೇತೃತ್ವದಲ್ಲಿ ಜರಗಿ ಆಸುಪಾಸಿನ ನೆರೆ ಪೀಡಿತ ಕೇಂದ್ರಗಳಿಗೆ ಸುಮಾರು 2½ ಸಾವಿರ ರೂಪಾಯಿ ಬೆಲೆ ಬಾಳುವ ಬಟ್ಟೆಬರೆಗಳನ್ನು ವಿತರಣೆ ಮಾಡಲಾಯಿತು

ಕೇರಳ ದಿನಾಚರಣೆ— ತಾ 13ರಲ್ಲಿ ಉಡುಪಿಯಲ್ಲಿ ಕಾಂಗ್ರೆಸ್, ಪ್ರಜಾಸೋಶಿಯಲಿಸ್ಟ್ ಮತ್ತು ಜನಸಂಘದ ಆಶ್ರಯದಲ್ಲಿ ಕೇರಳ ದಿನಾಚರಣೆಯು ಶ್ರೀ ಟಿ ಎ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀಗಳಾದ ಮಟ್ಟಾರು ವಿಠಲ ಕಿಣಿ, ಎ ಜಿ ಅಲ್ಸೆ, ಬಿ ಎಸ್ ಲೂವಿಸ್ ಮೊದಲಾದವರು ಕೇರಳದ ಪರಿಸ್ಥಿತಿಯನ್ನು ವಿವರಿಸಿ ಅಲ್ಲಿ ಮರು ಚುನಾವಣೆಯಾಗುವ ಆವಶ್ಯಕತೆಗಳನ್ನು ವಿವರಿಸಿದರು ಅಧ್ಯಕ್ಷರು ಭಾಷಣ ಮಾಡುತ್ತ ಪ್ರಸಂಚದ ಯಾವುದೇ ಭಾಗದಲ್ಲಿ ಕಮ್ಯುನಿಸ್ಟ್ ರಾಜ್ಯದಲ್ಲಿ ಪ್ರಜಾಪ್ರಭುತ್ವ ಇಲ್ಲದಿರುವುದರಿಂದ ಇಲ್ಲಿಯ ಕಮ್ಯುನಿಸ್ಟರು ಆ ಪದ್ಧತಿಯನ್ನು ನಿರ್ವಹಿಸಲಾರರೆಂದೂ ಅದನ್ನವರು ಒಪ್ಪದ ಪಕ್ಷಕ್ಕೆ ಅದನ್ನು ಮುರಿಯುವುದೊಂದೇ ಅವರ ಗುರಿಯೆಂದೂ ಹೇಳಿ ಕೇರಳ ಸಮಸ್ಯೆಗೆ ಮರು ಚುನಾವಣೆಯೇ ತಾರಕ ಮಾರ್ಗವೆಂದೂ ಅಲ್ಲಿ ನಡೆದ ಗೋಳಿಬಾರಿನ ಬಗ್ಗೆ ವಿಚಾರಣೆಯಾಗಬೇಕೆಂದೂ ಅಲ್ಲಿಯ ಪರಿಸ್ಥಿತಿಯು ಕೆಡುವ ಪೂರ್ವದಲ್ಲೇ ಕೇಂದ್ರವು ಕೈಹಾಕಬೇಕೆಂದೂ ಹೇಳಿದರು

ಅಂಬರ ಚರಕ ಪರಿಶ್ರಮಾಲಯದ ಉದ್ಘಾಟನೆ ಇದೇ ತಾ 17ನೇ ಸಂಜೆ ನಗರ ಸಭಾಪತಿ ಡಾ| ಕೆ ಎಲ್ ಐತಾಳರ ಅಧ್ಯಕ್ಷತೆಯಲ್ಲಿ ಅಂಬಲಪಾಡಿ ಕೇಂದ್ರದ ಅಂಬರ ಚರಕ ಪರಿಶ್ರಮಾಲಯದ ಉದ್ಘಾಟನೆಯನ್ನು ಮಹಿಳಾ ಸಮಾಜಮಂದಿರದಲ್ಲಿ ಶ್ರೀ ಟ ಎ ಪೈಗಳು ನೆರೆವೇರಿಸಿದರು ಆರಂಭದಲ್ಲಿ ಶ್ರೀಮತಿ ಆಶಾ ಕೆ ಆರ್ ಕೆ. ಭಟ್ಟರು ಸ್ವಾಗತಿಸಿದರು ಕೊನೆಯಲ್ಲಿ ಶ್ರೀ ಎಲ್ ಆರ್ ಬಟ್ಟರ ಸಂಗೀತ ನಡೆಯಿತು

ಮಹಾಜನರಲ್ಲಿ ವಿನಂತಿ

ಇತ್ತೀಚೆಗೆ, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಮತ್ತು ಕುಂದಾಪುರ ತಾಲೂಕಿನಲ್ಲಿ ಭೀಕರ ನೆರೆಯು ನೂರಾರು ಮನೆಗಳನ್ನು ನಾಶಗೊಳಿಸಿ ಹಲವಾರು ಕುಟುಂಬಗಳನ್ನು ನಿರ್ಗತಿಕರನ್ನಾಗಿ ಮಾಡಿಯದೆ ಮನೆ, ಮರಗಳು, ಬಾಳೆ ತೋಟಗಳು ನೀರು ಪಾಲಾಗಿವೆ ಬೆಳೆಗಳಿಗೂ ನಷ್ಟವಾಗಿದೆ ಈಗಾಗಲೇ ಸರಕಾರವು ಮತ್ತು ಸ್ಥಳೀಯ ಉದಾರಿ ಮಹನೀಯರು ನೆರೆಯ ಹಾವಳಿಯಿಂದ ಪೀಡಿತರಾದವರಿಗೆ ಪರಿಹಾರ ನೀಡಲು ಬೇಕಾದ ಹಣ ಸಂಗ್ರಹಿಸಿ, ಊಟದ ಬಗ್ಗೆ ವ್ಯವಸ್ಥೆ ಮಾಡಿ ಅವರಿಗೆ ಪರಿಹಾರ ನೀಡಲು ಶಕ್ತಿಮೀರಿ ಯತ್ನಿಸಿರುವರು, ನೆರೆಯಿಂದ ನಿರಾಶ್ರಿತರಾದವರಿಗೆ ಬೇಕಾದ ಸಹಾಯ, ಸಹಕಾರ ಕೊಡಲು ತಾ 11 7 59 ರಂದು ಮೈಸೂರು ರಾಜ್ಯದ ಆರೋಗ್ಯ ಮಂತ್ರಿಗಳ ನೇತೃತ್ವದಲ್ಲಿ ಜರಗಿದ ಜಿಲ್ಲಾ ಪರಿಹಾರ ಸಮಿತಿಯು (Dt Emergency Relief Organisation) ಈ ದುರಂತಕ್ಕೊಳಗಾದವರಿಗೆ ದೇಶದ ಉದಾರ ಹೃದಯಿಗಳಾದ ತಮ್ಮ ನೆರವಿನಿಂದ ನಿರಾಶೆ ಹರಾಗಿ ಬಳಲಿ ಬೆಂಡಾಗಿರುವ ಸಂಸಾರಿಗಳು ಜೀವಿಸುವಂತೆ, ಬಡವ ಬಲ್ಲಿದನೆಂಬ ಭೇದ ಭಾವವನ್ನು ತೋರದೆ ನಾವೆಲ್ಲರೂ ಒಂದೇ ಎಂಬ ಒಮ್ಮತದಿಂದ ನೆರೆ ಪೀಡಿತರಿಗೆ ಸರ್ವ ವಿಧದ ಸಹಕಾರವನ್ನೀಯಲು ಮಹಾ ಜನರನ್ನು ವಿನಂತಿಸಿಕೊಳ್ಳಬೇಕೆಂದು ನಿಶ್ಚಯಿಸಲಾಯಿತು

ಭವ್ಯ ಭಾರತದ ಉದಾರ ಹೃದಯಿಗಳಾದ ತಾವು ಈ ನಿಧಿಗೆ ಹಣ, ದವಸಧಾನ್ಯ, ವಸ್ತ್ರ ಉಡುಗೆ ಮೊದಲಾದುವನ್ನು ಶಕ್ತಿಮೀರಿ ಕೊಟ್ಟು, ತನ್ಮೂಲಕ ಉಡುಪಿ ಮತ್ತು ಕುಂದಾಪುರ ತಾಲೂಕಿನವರ ಕಷ್ಟ—ನಷ್ಟಗಳ ನಿವಾರಣೆಗೆ ಸಹಕರಿಸಬೇಕಾಗಿ ವಿನಂತಿಸುತ್ತೇವೆ. ತಮ್ಮ ಕೊಡುಗೆಯನ್ನು ಕಾರ್ಯದರ್ಶಿ ಜಿಲ್ಲಾ ಪರಿಹಾರ ಸಮಿತಿ ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್, ಪಿ ಡಬ್ಲ್ಯು. ಡಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, ಅಥವಾ ಸಂಬಂಧ ಪಟ್ಟ ತಾಲೂಕು ತಹಶೀಲ್ದಾರರವರಿಗೆ ಕಳುಹಿಸಬೇಕಾಗಿ ಕೇಳಿ ಕೊಳ್ಳುತ್ತೇವೆ

ಸಿ. ಜೆ. ಪದ್ಮನಾಭ,
ಡಿಸ್ಟ್ರಿಕ್ಟ ಕಮಿಷನರ್ ಮತ್ತು ಅಧ್ಯಕ್ಷ
ಜಿಲ್ಲಾ ಪರಿಹಾರ ಸಮಿತಿ.

ಮರವಂತೆ ಮಹಾರಾಜ ಸ್ವಾಮಿ ಶ್ರೀ ವರಹಾ ದೇವಸ್ಥಾನದಲ್ಲಿ ಪ್ರತಿವರ್ಷ ನಡೆಯುತ್ತಿರುವ ಕರ್ಕಾಟಕ ಅಮವಾಸ್ಯೆ ಜಾತ್ರೆಯು ತಾ 4—8—59ನೇ ಮಂಗಳವಾರ ಬರಲಿರುವುದರಿಂದ ಶ್ರೀ ದೇವರ ಭಕ್ತಾದಿಗಳೆಲ್ಲರೂ ಶ್ರೀ ದೇವರಿಗೆ ಸಲ್ಲಿಸತಕ್ಕ ಸೇವಾದಿಗಳನ್ನು ಆ ದಿನ ಸಲ್ಲಿಸಿ ಶ್ರೀ ಮುಡಿ ಗಂಧಪ್ರಸಾದವನ್ನು ಸ್ವೀಕರಿಸಿ ದೇವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಮುಕ್ತೇಸರರು ಕೋರುತ್ತಾರೆ

ಬಂಟರ ಯಾನೆ ನಾಡವರ ಸಂಘ

ಮುಂಬಯಿ-ಇದರ ಮೂವತ್ತೊಂದನೆಯ ವಾರ್ಷಿಕ ಮಹಾಸಭೆಯು ಶ್ರೀ ಕೆ ಕೆ ಅಜಿಲ B Sc (Hons) M Sc (Chem E) ಇವರ ಅಧ್ಯಕ್ಷತೆಯಲ್ಲಿ ಬಜಾರ್ ಗೇಟ್ ಹೈಸ್ಕೂಲಿನ ಹಾಲ್‌ನಲ್ಲಿ ಬಹು ವಿಜೃಂಭಣೆಯಿಂದ ತಾ 7—6—59ರಲ್ಲು ಜರಗಿತು ಹೊಸವರ್ಷದ ಆಡಳಿತ ಸಮಿತಿಗೆ ಈ ಕೆಳಗಿನ ಮಹನೀಯರು ಚುನಾಯಿಸಲ್ಪಟ್ಟರು

ಶ್ರೀ ಕೆ ಕೆ ಅಜಿಲ B Sc (Hons) M·Sc (Chem E)-ಅಧ್ಯಕ್ಷ, ಡಾ! ಪಿ ಜಗನ್ನಾಥ ಶೆಟ್ಟಿ—ಉಪಾಧ್ಯಕ್ಷ, ಶ್ರೀ ಕೆ ಚಿದಂಬರ ಶೆಟ್ಟಿ-ಗೌ ಕಾರ್ಯದರ್ಶಿ, ಶ್ರೀ ಕೆ ಕರುಣಾಕರ ಶೆಟ್ಟಿ, B Sc ಗೌ ಉಪಕಾರ್ಯದರ್ಶಿ, ಶ್ರೀ ಡಿ ವಿಟ್ಠಲ ಆಳ್ವ, B A—ಗೌ ಕೋಶಾಧಿಕಾರಿ, ಶ್ರೀ ಬಿ ಯನ್ ಗೋಪಾಲ ಶೆಟ್ಟಿ, B A LL B —ಗೌ. ಉ ಕೋಶಾಧಿಕಾರಿ ಶ್ರೀ ಯಸ್ ಸಂಜೀವ ಶೆಟ್ಟಿ—ಶಾಲಾ ಅಧ್ಯಕ್ಷ, ಶ್ರೀ ರಾಘವ ಸಿ ಶೆಟ್ಟಿ, M A LL B —ಶಾಲಾ ಕಾರ್ಯದರ್ಶಿ, ಶ್ರೀ ಮುಲ್ಕಿ ರಂಗಯ ಶೆಟ್ಟಿ—ಶಾಲಾ ಉ. ಕಾರ್ಯದರ್ಶಿ, ಶ್ರೀ ಸುಂದರ ಬಿ ಶೆಟ್ಟಿ—ಶಾಲಾ ಕೋಶಾಧಿಕಾರಿ, ಶ್ರೀ ರಾಮ ಯನ್. ಶೆಟ್ಟಿ—ಶಾಲಾ ಪುಸ್ತಕ ಭಂಡಾರಾಧಿಕಾರಿ.

ವಿದ್ಯಾರ್ಥಿ ವೇತನ

ಕರ್ನಾಟಕ ಫ್ರೀ ನೈಟ್ ಹೈಸ್ಕೂಲಿನ ಸಂಚಾಲಕರಾದ ಮುಂಬಯಿಯ ಬಂಟರ ಯಾನೆ ನಾಡವರ ಸಂಘದವರು ಅಲ್ಲಿಯ ಕಾಲೇಜುಗಳಲ್ಲಿ ಕಲಿಯಬಿಚ್ಛಿಸುವ ಸ್ವಜಾತಿ ಬಡ ವಿದ್ಯಾರ್ಥಿಗಳಿಗೆ ಎಂದಿನಂತೆ ವಿದ್ಯಾರ್ಥಿ ವೇತನ ರೂಪದಿಂದ ಸಾಲ ಕೊಡುವುದರಿಂದ ಧನಸಹಾಯ ಪಡೆಯಬಿಚ್ಛಿಸುತ್ತಿರುವ ವಿದ್ಯಾರ್ಥಿಗಳು ಕೂಡಲೇ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಬೇಕಾಗಿ ಅಪೇಕ್ಷಿಸಲಾಗಿದೆ

Hon General Secretary
Bunt alias Nadava Sangha
17 Kumta Street Bombay 1

ಉಡ್ಪಿ ತಾಲೂಕು ಖಾಸಗಿ ಶಾಲಾ ಮೆನೇಜರರ ಸಂಘದ ಮಹಾಸಭೆ.

ಪ್ರಿಯ ಬಂಧುಗಳೇ!

ಮಾನ್ಯ ವಿದ್ಯಾ ಇಲಾಖಾಧಿಕಾರಿಗಳಿಂದ ಇತ್ತೀಗೆ ಸಾದರಾದ ಹಲವು ಹುಕುಮುಗಳಲ್ಲಿ ಹೊಸ ರೀತಿಯ—ಶಾಲಾ ರಚನೆಗಳು, ವಿದ್ಯಾರ್ಥಿ ಅಧ್ಯಾಪಕರ ಪ್ರಮಾಣ, ಕ್ಲಾಸುಗಳ ವಿಭಜನೆ ಶಿಕ್ಷಕರ ನೇಮಕ, ಅವರ ಒಪ್ಪೊತ್ತಿನ ರಜೆ, ಅಧ್ಯಾಪಕರ ಶಾಲಾ ಬದಲಾವಣೆ, ವಗೈರೆ—ವಿಷಯಗಳನ್ನೂ ಮತ್ತು ಸಂಘದ ಮುಂದಿನ ಕಾರ್ಯಭಾರ, ವ ಆರ್ಥಿಕ ವಿಚಾರವನ್ನೂ ಚರ್ಚಿಸಿ ಪರ್ಯಾಲೋಚಿಸುವ ಬಗ್ಗೆ, ಸಂಘದ ಮಹಾಸಭೆಯನ್ನು ತಾ 9 8_1959ನೇ ಆದಿತ್ಯವಾರ ಅಪರಾಹ್ನ ಗಂಟೆ 2ಕ್ಕೆ ಉಡ್ಪಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿಸಬೇಕಾಗಿ ನಿಶ್ಚಯಿಸಿಯದೆ ಆದುದರಿಂದ ಉಡ್ಪಿ ತಾಲೂಕಿನ ಎಲ್ಲಾ ಶಾಲೆಗಳ ಮೆನೇಜರರೂ ಅಗತ್ಯ ದಯಮಾಡಿ ತಪ್ಪದೆ ಹಾಜರಾಗಬೇಕಾಗಿ ಅಪೇಕ್ಷಿಸಲಾಗುತ್ತದೆ ಶ್ರೀ ಟಿ ಎ ಪೈಗಳು ಅಧ್ಯಕ್ಷತೆ ವಹಿಸಲು ಒಪ್ಪಿರುವರು,

ಕುರುಕಾಲು ಗಣಪಯ್ಯ ಶೆಟ್ಟಿ,
ಜತೆ ಕಾರ್ಯದರ್ಶಿ

ಕುಂಜಾರುಗಿರಿ, ತಾ 21.7 59.

ವಂಶ ಬಡೆಯುವಂತಾಗಿದೆ ಹೀಗಾದರೆ ಶಿಕ್ಷಣದ ಮಟ್ಟವೇನು ಎಂದು ಕೇಳುತ್ತಾರೆ ವಿನೋಬಾ

ದ್ವಿತೀಯ ನೌಕಾಂಗಣ

ದ್ವಿತೀಯ ನೌಕಾಂಗಣ ಸ್ಥಾಪಿಸುವ ಬಗ್ಗೆ ಒಂದು ಸ್ಥಳವು ಈಗಾಗಲೇ ಗೊತ್ತಾಗದೆ ಹೋದರೂ ಕೇರಳ ಪ್ರದೇಶದ ಕೊಚ್ಚಿನಲ್ಲದು ಸ್ಥಾಪಿತವಾಗುವುದೆಂದು ಹೇಳಲಾಗುತ್ತಿದೆ. ಈಗ ಮೈಸೂರ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಮುಂದ, ಶ್ರೀ ಕೆ ಹನುಮಂತಯ್ಯನವರು ಒಂದು ಗೊತ್ತುವಳಿಯನ್ನು ಮಂಡಿಸಿ, ಅಂತಹ ನೌಕಾಂಗಣ ಕಾರವಾರದಲ್ಲಾಗಬೇಕೆಂದು ಕೇಳಿಕೊಂಡಿದ್ದಾರ ನೈಸರ್ಗಿಕ ಬಂದರವಾದ ಕಾರವಾರದಲ್ಲಿ ನೌಕಾಂಗಣ ಸ್ಥಾಪಿಸುವುದರಿಂದ ಅದರ ಹಿನ್ನಾಡಾದ ಮೈಸೂರಿನ ಯಾತಾಯಾತಗಳಿಗೂ ಪ್ರಯೋಜನವಾಗುವುದು ಎಂಬ ಅಭಿಪ್ರಾಯವು ಸ್ವೀಕಾರಾರ್ಹ. ಮೈಸೂರಿನವರು ಮೈಸೂರು ಕರಾವಳಿಯಲ್ಲಿ, ಕೇರಳವು ಕೇರಳ ಕರಾವಳಿಯಲ್ಲಾಗಬೇಕೆಂದು ಕೇಳಿಕೊಳ್ಳುವುದು ಅನುಚಿತವಲ್ಲವಾದರೂ, ಕೇಂದ್ರ ಸರಕಾರವು ಹೇಗೆ ನಿರ್ಧರಿಸುವುದೋ ನೋಡಬೇಕು

ಉಡ್ಪಿ ಡಿ ಮು ಕೋರ್ಟಿನಲ್ಲಿ

S. C No. 225/1959

T ಶೀನಪ್ಪ ಶೆಟ್ಟಿ —ವಾದಿ.

ಮತ್ತು

T ಮಹಾಬಲ ಶೆಟ್ಟಿ —ಪ್ರತಿವಾದಿ.

ಪ್ರತಿವಾದಿ T ಮಹಾಬಲ ಶೆಟ್ಟಿ, ನರ್ಸಂಮ ಶೆಡ್ತಿ ಮಗ, ಉಡ್ಪಿ ತಾಲ್ಲೂಕು ಪಡುಕೋನ್ನೆ ಗ್ರಾಮದ ಪಡುಮನೆಯಲ್ಲಿರುವವ—ಯಿವರೀಗೆ

ತಾರೀಕು 29—1—1954ರಲ್ಲಿ ನಿಂಮ ಕುಟುಂಬದಲ್ಲಾದ ವಿಭಾಗ ಪತ್ರ ಪ್ರಕಾರ ನಿಂಮಿಂದ ವಾದಿಗೆ ಕಳೆದ ಹೇವಿಳಂಬಿ ಮತ್ತು ವಿಳಂಬಿ ಸಂವತ್ಸರಗಳೀಗೆ ಬರತಕ್ಕ ಕೊಡುವಿಕೆ, ಒಡ್ಡಿ ವಗೈರೆ ನಿವೃತಿ ಕೇಳಿ ವಾದಿಯು ದಾಕ್ಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 3—8—59ಕ್ಕೆ ಇಟ್ಟಿದೆ ನೀವು ಆ ದಿವ್ಸ ಬೆಳಿಗ್ಗೆ 11 ಗಂಟೆಗೆ ಕೋರ್ಟ ಮುಂದೆ ಹಾಜರಾಗಿ ವ್ಯವಹರಿಸುವರೆ ತಪ್ಪಿದ್ದಲ್ಲಿ ನಿಮ್ಮ ಗೈರ್ ಹಾಜರಿಯಲ್ಲಿ ಸದ್ರಿ ದಾವೆ ತೀರ್ಮಾನಿಸಲಾಗುವುದು

Sd V G Kedlaya,
Advocate for Plaintiff
Udipi, 13—7—59

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ ವಿಚಾರಿಸಿರಿ—

ನವಭಾರತ ಪುಸ್ತಕ ಭಂಡಾರ,
ಉಡುಪಿ

ಭಾವಕಥೆ

ಗೆಲವು ಕೈಸೇರಿದಾಗ

ನನಗೆ ನನ್ನ ಗೆಲವು ಸಿಕ್ಕಿದ ದಿನ ನನ್ನ ಹೃದಯ ಕಂಪಿಸಿತು. ಅದು ನನ್ನೊಡನೆ—"ನಿನ್ನ ಒಲ ವಿವೇಕಗಳನ್ನು ಒಟ್ಟು ಮಾಡು. ನಿನ್ನ ಮನಗೆ ನಿನ್ನ ದುರ್ಬಲತೆ ಒರುತ್ತವೆ' ಎಂದಿತು.

ಸೋಲಿನ ಮಾರ್ಗದಲ್ಲಿ ತನ್ನನ್ನು ತಾನ, ಕಳೆದುಕೊಂಡವರು ತುಂಬಾ ಮಂದಿ ಇದ್ದಾರೆ. ಮತ್ತು ಗೆಲುವಿನ ಮಾರ್ಗದಲ್ಲಿ ಹೋಗಿ ಜಗತ್ತಿನ ಕಣ್ಣಿನ್ನೇ ಕಾಣದವರೂ ಇನ್ನೂ ತುಂಬಾ ಮಂದಿ ಇದ್ದಾರೆ

ಯಾರು ಸೋಲುತ್ತಾನೋ ಅವನು ಒರ್ವೇ ಒಂದು ಅವಕಾಶ ಕಳೆದುಕೊಳ್ಳುತ್ತಾನೆ. ಮತ್ತು ಆ ಅವಕಾಶ ಅವನಿಗೆ ಪುನಃ ಸಿಗುತ್ತದೆ. ಯಾರು ಗೆಲ್ಲುತ್ತಾನೋ ಅವನು ತನ್ನನ್ನು ತಾನು ಕಳೆದುಕೊಳ್ಳುತ್ತಾನೆ, ಆ ತನ್ನತನ ಅವನಿಗೆ ಮತ್ತೆಂದೂ ಲಭಿಸುವುದಿಲ್ಲ!

ನಿನ್ನ ಗೆಲುವಿನ ನಿಜವಾದ ಸ್ಥಾನ ನಿನ್ನ ಪಾದದಲ್ಲಿ. ನೀನದನ್ನು ಅಲ್ಲಿ ಇರಿಸಿದರೆ ಅದು ನಿನ್ನ ದಾಸಿಯಾಗಿ ಬಾಳುತ್ತದೆ, ನಿನ್ನ ಮಾರ್ಗಕ್ಕದು ಪ್ರಕಾಶವೀಯುತ್ತದೆ ಒಂದೊಮ್ಮೆ ನೀನದನ್ನು ಅದರ ಸ್ಥಾನದಲ್ಲಿಡದೆ ಅದರ ಮುಂದೆ ಮೊಣಕಾಲೂರಿದರೆ ಅದು ನಿನ್ನ ತಲೆಯನ್ನೇರುತ್ತದೆ, ಅದು ನಿನ್ನನ್ನು ವಿಲಾಸ ವಿನಾಶಗಳೆಡೆಗೆ ಎಳೆಯುತ್ತದೆ

ನಾನು ಕೇಳುತ್ತಲೇ ಇದ್ದೆ, ನನ್ನ ಹೃದಯ ಹೇಳುತ್ತಲೇ ಸಾಗಿತು— ನಿನ್ನ ಗೆಲುವಿನ ಗಾನ ನಿನ್ನ ನೆರೆಹೊರೆಯವರಿಗಾಗಿ ಇದೆ. ಆ ಗಾನವನ್ನವರು ಕೇಳಿದರೆ ಅವರ ಮುಂದೆ ನೀನು ದೊಡ್ಡ ಮನುಷ್ಯನಾಗುವಿ. ಒಂದೊಮ್ಮೆ ತಪ್ಪಿಯಾದರೂ ನೀನವರ ಗಾನವನ್ನು ಸ್ವಯಂ ಕೇಳಲು ಹೋದರೆ, ಆ ಗಾನವು ನಿನ್ನ ಕಿವಿಯನ್ನು ಸೇರಿ ನಿನ್ನ ನೈಜ ವ್ಯಕ್ತಿತ್ವ ಮತ್ತು ದೂರದರ್ಶಿತ್ವವನ್ನು ಸೆಳೆದುಕೊಳ್ಳುತ್ತದೆ.

ನಿನ್ನ ಗೆಲುವಿನ ರೂಪ ಬೇರೆಯವರಿಗಾಗಿ ಇದೆ ಆ ರೂಪವನ್ನವರು ಕಂಡರೆ, ಅವರಲ್ಲಿ ನಿನ್ನ ಬಗ್ಗೆ ಆದರ ಹೆಚ್ಚುವುದು. ಆದರೆ ತಪ್ಪಿ ನೀನೇ ಅದರ ರೂಪವನ್ನು ಸ್ವಯಂ ನೋಡಲು ಹೋದರೆ ಆ ರೂಪ ಪು ನಿನ್ನ ಕಣ್ಣಿಗ ಅಂಧಕಾರವೀಯಬಲ್ಲುದು. ನಿನ್ನ ಆಶೆಗಳು ನಿರಾಶೆಯಲ್ಲಿ ಪರಿವರ್ತನವಾಗಬಲ್ಲವು.

ನನ್ನ ಗೆಲುವು ಅತೀ ರೂಪವತಿಯಾಗಿತ್ತು ಮನಮೋಹಕ ರೂಪ ಅದಕ್ಕಿತ್ತು. ನಾನು ನನ್ನ ಹೃದಯದ ಮಾತನ್ನು ಕೇಳದೆ ನನ್ನ ಗೆಲುವನ್ನು ನನ್ನ ಮನೆಗೆ ಸ್ವಾಗತಿಸಿದೆ.

ನಾನದನ್ನು ನನ್ನ ಮನೆಯ ಅತೀ ಸುಂದರ ಸ್ಥಾನದಲ್ಲಿ ಕುಳ್ಳಿರಿಸಿದೆ. ಅದರೊಡನೆ ಅತಿ ಸಂತೋಷದಿಂದ ತಮಾಷೆಯಾಗಿ ಮಾತಾಡತೊಡಗಿದೆ. ನಾನದರ ರೂಪವನ್ನು ಕಂಡೆ, ಗಾನವನ್ನು ಕೇಳಿದೆ.

ನನ್ನ ಗೆಲುವನ್ನು ನೋಡಲು ಬಂದ ನನ್ನ ನೆರೆಹೊರೆಯವರು—ನಿನಗೆ ಒಳ್ಳೆಯದಾಗಲಪ್ಪಾ, ದೇವರು ಸ್ವಯಂ ನಿನ್ನ ಮಾರ್ಗವನ್ನು ಪ್ರಕಾಶಿಸಿದ್ದಾನೆ", ಎಂದು ಅಭಿನಂದನೆಗಳನ್ನಿತ್ತರು.

ನನ್ನ ನೆರೆಹೊರೆಯವರು ನನ್ನ ಮಿತ್ರರೆಂದು ನನಗೆ ಗೊತ್ತು. ನನಗೆ ಸಂತೋಷವಾದಾಗ ಅವರಿಗೆ ಸಂತೋಷವಾಗುತ್ತದೆ. ನನಗೆ ದುಃಖವಾದಾಗ ಅವರಿಗೆ ಕಷ್ಟವಾಗುತ್ತದೆ. ಎಂಬುದನ್ನು ನಾನು ಬಲ್ಲೆ.

ಆದರೆ ನನ್ನ ಗೆಲುವು ಅವರ ದೃಷ್ಟಿ ಬದಲಿಸಿತು. ಈಗವರು ನನ್ನ ಸುಖದುಃಖಗಳ ಪಾಲುಗಾರರಲ್ಲ. ನನ್ನ ಗೆಲುವು ನನ್ನ ದೃಷ್ಟಿಯನ್ನೂ ಬದಲಿಸಿತು. ನಾನು ನನ್ನ ನೆರೆಹೊರೆಯವರಲ್ಲಿ ಒಬ್ಬನೆಂದಲ್ಲ; ನಾನವರಿಗಿಂತ ಬೇರೆಯವನು ಹಾಗೂ ನನ್ನ ಸ್ಥಾನ ಅವರಿಗಿಂತ ಮೇಲಿದೆ. ಎಂದು ನಾನು ಭಾವಿಸತೊಡಗಿದೆ.

ನನ್ನ ಗೆಲುವಿನ ಹತ್ತಿರ ಕುಳಿತು ಕುಳಿತು ನನ್ನ ಕಾಲುಗಳು ಕಲ್ಲುಗಳಾದುವು. ನನ್ನ ಹಿಂದಿನ ಧೈರ್ಯ ಉತ್ಸಾಹಗಳು ಮಾಯವಾದುವು.

ನನ್ನ ಗೆಲುವೂ ತನ್ನ ಸ್ಥಾನದಿಂದ ಮಾಯವಾಗಿದೆಯೆಂದು ನನಗೊಂದು ದಿನ ತಿಳಿಯಿತು!

(ಸುದರ್ಶನರ "ಝುರೋಕ್"ನಿಂದ)
—ಶ್ರೀ ಎಸ್.ಎಂ. ಶೆಟ್ಟಿ, ಶಿವಂಜೆಪದವು.

ವಿನೋದ ವಿಹಾರ

"ಓದುವವರಾದರೆ ನಕ್ಕು ನಲಿಯಬಹುದು........"

ಸುಬ್ಬ—"ಅಪ್ಪ, ಅದೇನು ಬರಿಯುತ್ತಿರೋದು?"

ತಂದೆ—"ಲೇಖನಾ ಮಗು...."

ಸುಬ್ಬ—"ಲೇಖನವೆ? ಯಾವುದರ ಬಗ್ಗೆ?"

ತಂದೆ—"ಗಂಡಸರು ವಿವಾಹ ಮಾಡಿಕೊಳ್ಳುವ ರೂಢಿ ನಿಲ್ಲಲಿ ಎಂಬುದರ ಬಗ್ಗೆ ಚಿನ್ನ!"

ಸುಬ್ಬ—"ಹಾಗಾದರೆ?"

ತಂದೆ—"ಹೆಂಗಸರು ಬೇಕಾದರೆ ಮಾಡಿಕೊಳ್ಳಲಿ..."

oo   oo

ಸೋಡಾ ಕುಡಿವವನನ್ನು ಕಂಡು ಸುಬ್ಬ, "ಅಪ್ಪ, ಅದೇನಪ್ಪ ಅವನ ಬಾಯ್ಗೆ ನಳಿಗೆ?"

ತಂದೆ—ಅದನ್ನು ಸ್ಟ್ರಾ ಅನ್ನುತ್ತಾರೆ ಮಗೂ"

ಸುಬ್ಬ—"ಅದೇಕಪ್ಪ?"

ತಂದೆ—"ಮಗೂ, ವಸ್ತುಗಳು ತಣ್ಣಗಾದಾಗ ಕುಗ್ಗುತ್ತವೆ. ಅಂತೆಯೇ ಕೂಲ್ ಡ್ರಿಂಕ್ ಕುಡಿಯುವಾಗ ಎಲ್ಲಾದರೂ ಸೋಡಾ ಬಾಟ್ಲಿಯ ಗುಳಿಗೆ ಕುಗ್ಗಿ ಬಾಯಿಗೆ ಹೋದರೆ?...."

ಸುಬ್ಬ—"ಹ್ಞಾ...."

oo   oo

ಸುಬ್ಬ ಆನೆಕಾಲು ರೋಗಿಯನ್ನು ಕಂಡು, "ಅಪ್ಪ ಅದೇನಪ್ಪ ಅವನ ಒಂದು ಕಾಲು ತೋರವಾಗಿದೆ...?"

ಅಪ್ಪ—'ಛೂ ...ಹಾಗೆಲ್ಲ ನಕಲಿ ಮಾಡಬೇಡ ಇದು ಬೊಂಬಾಯಿ ಪಟ್ಟಣ...."

ಸುಬ್ಬ—'...ಮತ್ತೇನೆನ್ನಬೇಕಪ್ಪ...?'

ಅಪ್ಪ—"ಒಂದು ಕಾಲು ಸಪೂರ ಅನ್ನು"

oo   oo

ಉಪಾಧ್ಯಾಯ— "ಕುರುಡರಲ್ಲದಿದ್ದರೂ ಕುರುಡರೆಂದು ವೇಷ ಹಾಕಿ ಬಿಕ್ಷೆ ಬೇಡುವವರಿಗೆ ಏನು ಮಾಡಬೇಕು?"

ಸುಬ್ಬ—"ಇತರರಿಗೆ ಕೊಡುವ ಎರಡು ಪಾಲಷ್ಟು ಅಕ್ಕಿ ಅವರಿಗೆ ಕೊಡಬೇಕು ಸಾರ್"

ಉಪಾ —ಏಕೊ?"

ಸುಬ್ಬ — "ಅವರ ಬುದ್ಧಿವಂತಿಕೆಗೆ, ಸಾರ್"

oo   oo

"ನಿನ್ನ ಮನೆ?"

"ದೇವಸ್ಥಾನದ ಎದುರು?"

"ದೇವಸ್ಥಾನ?"

"ನನ್ನ ಮನೆಯ ಎದುರು!"

'.. ......' (???)

"ದೇವಸ್ಥಾನ ಮತ್ತೆ ನಿನ್ನ ಮನೆ?"

"ಎದುರೆದುರ."

'........ ..' (???)

—ರಮೇಶ ಪೈ, ಕೆ. ಉಡುಪಿ

ಅಖಿಲ ಭಾರತೀಯ ಆಕಾಶವಾಣಿಯಲ್ಲಿ ಮಕ್ಕಳ ಹಬ್ಬದ ದಿನ ಒಬ್ಬ ಶಾಲೆಯ ಹುಡುಗಿ ಉತ್ಸಾಹದಿಂದ ಭಾಗವಹಿಸುತ್ತಿದ್ದಾಳೆ.

ಮುಚ್ಚಿದರೆ ಮುಗುಳು!   **ಬಿಚ್ಚಿದರೆ ಅರಳು!!**

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ–

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು, ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦ ೬.೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು)   ಸಂ. ನ.

ಸೌಂದರ್ಯ ಸೌಗಂಧ— ಕವಿ: ಶ್ರೀ ಕೆ. ಎಸ್. ಭಟ್, ಶಿರಾಡಿಪಾಲ್, ಪ್ರಕಾಶಕರು: ವಿಚಾರ ಸಾಹಿತ್ಯಮಾಲೆ, ಮುಂಡಾಜೆ, ದ. ಕನ್ನಡ ಪುಟಗಳು: ೪೫. ಬೆಲೆ: ರೂ. ೦-೯-೦.

ವಿಚಾರ ಸಾಹಿತ್ಯಮಾಲೆಯಲ್ಲಿ ಅರಳಿದ ಅರನೆಯ ಪುಷ್ಪದ ಸೌಂದರ್ಯ ಸೌಗಂಧ ಆಸ್ವಾದನಾರ್ಹವಾಗಿವೆ. ಇಪ್ಪತ್ತು ರಸಕವನಗಳ ಈ ಸಂಕಲನದಲ್ಲಿ ಪ್ರಾಚೀನ ಹಾಗೂ ಅರ್ವಾಚೀನ ಛಂದಸ್ಸಿಗನುಗುಣವಾದ ಪ್ರಾಸಬದ್ಧ ಹಾಗೂ ಮುಕ್ತಪ್ರಾಸದ ಕವಿತೆಗಳು ಇಲ್ಲಿ ಕಂಡುಬರುತ್ತಿವೆ. ಈ ಕವಿತೆಗಳು ಶಾಸ್ತ್ರಕ್ಕೆ ಮಾತ್ರ ಕಟ್ಟುಬಿದ್ದು ಹೊರಬರದೆ ಕವಿಗಳ ಸ್ವಾಭಾವಿಕ ರಸಿಕತನ ಹಾಗೂ ಕವಿಪ್ರತಿಭೆಯಿಂದ ವ್ಯಕ್ತವಾದುದರಿಂದ, ಇವುಗಳು ತಮ್ಮ ವೈಶಿಷ್ಟ್ಯವನ್ನು ಉಳಿಸಿಕೊಂಡಿವೆ.

ಐತಿಹಾಸಿಕ ವ್ಯಕ್ತಿಗಳಾದ ವಿವೇಕಾನಂದ, ಲೋಕಮಾನ್ಯರ ಕುರಿತಾದ ಹಾಗೂ ಆಧುನಿಕ ವಿಷಯಗಳನ್ನು ಉದ್ದೇಶಿಸಿದ ಕವನಗಳಲ್ಲದೇ ವಿಶ್ವಾಮಿತ್ರ—ಮೇನಕೆಯರ ಸಮಾಗಮ ಹಾಗೂ ಶಕುಂತಲಾ—ದುಷ್ಯಂತರ ಪ್ರೇಮ ವಿವಾಹಗಳು ಪುಸ್ತಕದ ಬಹುಭಾಗವನ್ನು ಆಕ್ರಮಿಸಿವೆ. ಕವಿತೆಯ ಶೈಲಿಯು ಪ್ರೌಢವಾಗಿದೆ. ಶ್ರೀ ಭಟ್ಟರ ಲೇಖನಿಗೆ ಉಜ್ವಲ ಭವಿಷ್ಯವಿದೆ ಎಂಬುದಕ್ಕೆ ಈ ಕವನ ಸಂಕಲನವೊಂದು ಆಶಾಜ್ಯೋತಿಯಾಗಿದೆ ಎಂಬುದಕ್ಕೆ ಸಂದೇಹವಿಲ್ಲ. ಭಾವಗೀತೆಗಳ ಪ್ರಾಧಾನ್ಯದ ಈ ಕಾಲದಲ್ಲಿಯೂ ಸರಸ ಕವಿತೆಗಳಿಗೆ ಸ್ಥಾನವಿಲ್ಲ ಎಂದು ತಿಳಿಯುವುದು ಮಹಾಪರಾಧವಾಗುತ್ತದೆ. ಎಂತಲೇ ಶೈಲಿಯ ಕ್ಲಿಷ್ಟತೆಯನ್ನು ಕೊಂಚ ಶಿಥಿಲಿಸಿದರೆ, ಉನ್ನತ ಸರ್ವ ಜನಪ್ರಿಯ ಕವಿಯಾಗುವ ಗುಣ ಶ್ರೀ ಶಿರಾಡಿಪಾಲರಲ್ಲಡಗಿದೆ ಎಂದೂ ಹೇಳಬಹುದು.

—ಗೋರಾ.

ಶ್ರೀಲಂಕಾಯಾತ್ರೆ

ಲಂಕೆಯ ಶಿಲ್ಪಕೇಂದ್ರ-ಪೋಲೋನ್‌ರುಆ

ಅಲ್ಲಿನ ಭಗ್ನಾವಶೇಷಗಳಲ್ಲಿ ದಕ್ಷಿಣ ಭಾರತದ ಪ್ರತಿಬಿಂಬ ಕಾಣುತ್ತಿದೆ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಜೂನ್ ೧೭ನೆ ದಿನಾಂಕದಂದು ೧೦ ಘಂಟೆಗೆ ಒಂದು ವಿಶೇಷ ರೇಲುಗಾಡಿಯ ಮೂಲಕ ಡಾ| ರಾಜೇಂದ್ರ ಪ್ರಸಾದ ಮತ್ತವರ ಪರಿವಾರ, ಭಾರತೀಯ ಹಾಗೂ ಶ್ರೀಲಂಕೆಯ ಪತ್ರಕಾರರು, ಶ್ರೀಲಂಕೆಯ ಸರಕಾರದ ಅನೇಕ ಅಧಿಕಾರಿಗಳು ಪೋಲೋನ್‌ರೂ ಆದ ಐತಿಹಾಸಿಕ ಶಿಲ್ಪವನ್ನು ನೋಡಲು ಹೋದರು.

ವಿಶೇಷ ರೇಲುಗಾಡಿಯ ಎಲ್ಲಾ ಡಬ್ಬಿಗಳೂ ಪ್ರಥಮ ವರ್ಗದವಾಗಿದ್ದುವು. ಎಲ್ಲರಿಗೂ ಊಟ ಫಲಾಹಾರ ಮತ್ತು ಮಲಗುವ ವ್ಯವಸ್ಥೆಗಳೂ ಗಾಡಿಯಲ್ಲಿ ಇದ್ದುವು. ಮೊತ್ತ ಮೊದಲನೆಯ ಡಬ್ಬಿಯಲ್ಲಿ ರಾಷ್ಟ್ರಪತಿಗಳಿದ್ದರು. ಆ ಮೇಲೆ ಉಪ ವಿದೇಶಮಂತ್ರಿ ಶ್ರೀಮತಿ ಲಕ್ಷ್ಮಿ ಮೆನನ್ನರ, ಉಚ್ಚ ಭಾರತೀಯ ಅಧಿಕಾರಿಗಳ ಮತ್ತು ನಾವು ಆರು ಭಾರತೀಯ ಪತ್ರಿಕಾಕರ್ತರ ಮತ್ತು ಕೊನೆಯಲ್ಲಿ ಶ್ರೀಲಂಕೆಯ ಅಧಿಕಾರಿಗಳ ಡಬ್ಬಿಗಳಿದ್ದುವು. ನಾನು ಮತ್ತು ಲಖನವಿನ "ಪಯೊನೀರ್" ಪತ್ರಿಕೆಯ ಸಂಪಾದಕ ಶ್ರೀ ಘೋಷರು ಒಂದು ಕೋಣೆಯಲ್ಲಿದ್ದೆವು. ನಾವಿಬ್ಬರೂ ಬಹಳ ಹೊತ್ತು ಪತ್ರಿಕೆ ಮತ್ತು ಪತ್ರಿಕಾ ವ್ಯವಸಾಯದ ಕುರಿತು ಚರ್ಚೆಯನ್ನು ನಡೆಸುತಿದ್ದೆವು.

ರೇಲುಗಾಡಿಯು ಜೂನ್ ೧೮ರಂದು ಮುಂಜಾನೆ ೬|| ತಾಸಿಗೆ ಪೋಲೋನ್‌ರುಆ ರೇಲ್ವೇ ನಿಲ್ದಾಣವನ್ನು ಮುಟ್ಟಿತು. ಎಲ್ಲರೂ ರೇಲುಗಾಡಿಯಲ್ಲಿ ಫಲಾಹಾರ ಮುಗಿಸಿದೆವು. ೮ ಗಂಟೆಗೆ ರಾಷ್ಟ್ರಪತಿಯವರು ತಮ್ಮ ಡಬ್ಬಿಯಿಂದ ಹೊರಬಿದ್ದರು. ಶ್ರೀಲಂಕೆಯ ಕೃಷಿಮಂತ್ರಿ ಶ್ರೀ ಡಿಸಿಲ್ವಾರು ಅವರನ್ನು ಸ್ವಾಗತಿಸಿದರು. ಆ ಮೇಲೆ ನಾವೆಲ್ಲರೂ ನಮ್ಮ ನಮ್ಮ ಡಬ್ಬಿಗಳಿಂದ ಹೊರಬಂದೆವು.

ಸ್ಟೇಶನಿನ ಹೊರಗಡೆ ಕೊಲಂಬೊದಿಂದ ಬಂದ ೨೦ ಮೋಟರುಗಳು ನಿಂತಿದ್ದುವು. ಮುಂದೆ ಪೋಲೀಸರ ಮೋಟಾರು, ಅವರ ಹಿಂದೆ ರಾಷ್ಟ್ರಪತಿಯವರ ಮೋಟಾರಿತ್ತು. ಇನ್ನೂ ಹಿಂದಿದ್ದ ಮೋಟಾರುಗಳಲ್ಲಿ ಅವರ ಪರಿವಾರ ಹಾಗೂ ನಾವೂ ಕುಳಿತೆವು. ಈಗ ಮೋಟಾರುಗಳ ಮೆರವಣಿಗೆಯು ಪೋಲೋನ್‌ರುಆದ ಶಿಲ್ಪಕೇಂದ್ರಕ್ಕೆ ಹೊರಟಿತು.

ಪೋಲೋನರುಆ ಕೊಲಂಬೊವಿನಿಂದ ೧೫೮ ಮೈಲು ಈಶಾನ್ಯ ದಿಕ್ಕಿನಲ್ಲಿದೆ. ಇದರ ಸ್ಥಾಪನೆಯು ಎಂದಾಯಿತು ಎಂದು ಇಂದಿನ ವರೆಗೂ ಇತಿಹಾಸಕಾರರು ಕಂಡುಹಿಡಿದಿಲ್ಲ. ಅನುರಾಧಾಪುರದ ರಾಜರು ಎಂಟನೆಯ, ಒಂಬತ್ತನೆಯ ಮತ್ತು ಹತ್ತನೆಯ ಶತಮಾನಗಳಲ್ಲಿ ಪೊಲೋನ್‌ರು ಆದಲ್ಲಿ ವಾಸಿಸುತ್ತಿದ್ದರು; ಆದರೆ, ಈ ಕಾಲದ ಯಾವುದೇ ಶಿಲ್ಪವು ಕಂಡುಬರುವುದಿಲ್ಲ.

೧೧ನೆಯ ಶತಮಾನದ ಆರಂಭದಲ್ಲಿ ಅನುರಾಧಪುರದ ಪ್ರಾಚೀನ ರಾಜಧಾನಿಯಲ್ಲಿ ದಕ್ಷಿಣ ಭಾರತದ ಚೋಳರಾಜರು ಆಡಳಿತನಡೆಸಿದರು. ಆಗ ಸಿಂಹಳದ ಉತ್ತರ ಭಾಗವೆಲ್ಲವೂ ಇವರ ವಶವಾಯಿತು. ಚೋಳರಾಜರು ಪೋಲೋನ್‌ರುಆದಲ್ಲಿ ತಮ್ಮ ರಾಜಧಾನಿಯನ್ನು ಸ್ಥಾಪಿಸಿದರು.

೧೦೫೬ರಲ್ಲಿ ಸಿಂಹಳದ ರಾಜನಾಗಿದ್ದ ಮೊದಲನೆಯ ವಿಜಯ ಬಾಹುವು ಚೋಳ ರಾಜರನ್ನು ಶ್ರೀ ಲಂಕೆಯಿಂದ ಹೊರಗಟ್ಟಿದನು ಮೊದಲನೆಯ ವಿಜಯಬಾಹುವಿನ ಪಟ್ಟಾಭಿಷೇಕವು ಅನುರಾಧಪುರದಲ್ಲಿ ನಡೆದಿದ್ದರೂ ಆತನು ಪೊಲೋನ್‌ರುಆದಲ್ಲಿಯೇ ತನ್ನ ರಾಜಧಾನಿ ಸ್ಥಾಪಿಸಿದನು. ೧೩ನೆಯ ಶತಮಾನದ ಮಧ್ಯಕಾಲದವರೆಗೆ ಇದೇ ರಾಜಧಾನಿಯಾಗಿ ಮೆರೆಯಿತು.

ಮೊದಲನೆಯ ವಿಜಯಬಾಹುವು ತನ್ನ ರಾಜಧಾನಿಯಲ್ಲಿ ಮೂರ್ತಿ ಮಂದಿರ ಹಾಗೂ ಇನ್ನಿತರ ಅನೇಕ ಮಂದಿರಗಳನ್ನು ಕಟ್ಟಿಸಿದನೆಂದು ಹೇಳುತ್ತಾರೆ. ಆದರೆ ೧೧೫೩ರಿಂದ ರಾಜ್ಯವಾಳಿದ ಮೊದಲನೆಯ ಪರಾಕ್ರಮಬಾಹುವು ತನ್ನ ಮೂವತ್ತು ವರ್ಷಗಳ ಆಡಳಿತೆಯಲ್ಲಿ ಪೋಲೋನ್‌ರು ಆದಲ್ಲಿ ಅನೇಕ ಮಹಲು, ಮಂದಿರ, ಉದ್ಯಾನ ಮೊದಲಾದುವುಗಳನ್ನು ಕಟ್ಟಿಸಿದನು.

ಪರಾಕ್ರಮಬಾಹುವಿನನಂತರ ನಿಶಂಕಮಲ್ಲ (೧೧೮೭-೧೧೯೬)ನು ಈ ನಗರವನ್ನು ಮತ್ತಷ್ಟು ಬೆಳೆಸಿದನು. ಇಷ್ಟೊಂದು ಅಲ್ಪ ಸಮಯದಲ್ಲಿ ಈತ ಇಷ್ಟೊಂದು ಕಟ್ಟಡಗಳನ್ನು ಹೇಗೆ ಕಟ್ಟಿಸಿದನೆಂದು ಕೇಳಿ ಬಹಳ ಆಶ್ಚರ್ಯಪಡುತ್ತೇವೆ.

೧೩ನೆಯ ಶತಮಾನದ ದ್ವಿತೀಯ ದಶಕದಲ್ಲಿ ದಕ್ಷಿಣ ಭಾರತವು ಪೋಲೋನ್‌ರು ಆದ ಮೇಲೆ ಅನೇಕ ಬಾರಿ ಆಕ್ರಮಣ ಮಾಡಿತು. ಇದರಿಂದಾಗಿ ನಗರವು ಧ್ವಂಸವಾಯಿತು. ತಮಿಳರು ಅನೇಕ ವರ್ಷಗಳ ವರೆಗೆ ಈ ನಗರವನ್ನು ತಮ್ಮ ಕೈಯಲ್ಲಿಟ್ಟು ಕೊಂಡರು. ನಾಲ್ಕನೆಯ ವಿಜಯ ಬಾಹು (೧೨೬೭—೧೨೭೦) ಮತ್ತು ತೃತೀಯ ಪರಾಕ್ರಮ ಬಾಹು (೧೩೦೨—೧೩೧೦)ಗಳು ತಂತಮ್ಮ ಕಾಲಗಳಲ್ಲಿ ಈ ನಗರವನ್ನು ಪುನಃ ಕಟ್ಟಿಸುವ ಪ್ರಯತ್ನ ಮಾಡಿದರು. ಮುಂದಿನ ೫೦೦ ವರ್ಷಗಳ ವರೆಗಿನ ಇದರ ಯಾವುದೇ ಇತಿಹಾಸವು ಚರಿತ್ರೆಯಿಂದ ತಿಳಿದು ಬರುವುದಿಲ್ಲ.

ಈ ಮಧ್ಯೆ ಈ ನಗರವು ಒಂದು ದಟ್ಟವಾದ ಅರಣ್ಯದ ರೂಪವನ್ನು ಧರಿಸಿತು. ೧೯೦೧ರಲ್ಲಿ ಆಂಗ್ಲೇಯ ಶಾಸಕರು ಈ ಅಡಗಿರುವ ನಗರವನ್ನು ಶೋಧಿಸಿದರು. ಅಗೆತದಿಂದ ಅನೇಕ ಕಟ್ಟಡಗಳೂ ಮಂದಿರಗಳೂ ಮೂರ್ತಿಗಳೂ ದೊರೆತುವು; ಹಾಗೆಯೇ ಇವನ್ನು ನೋಡುವ ಸಲುವಾಗಿ ಉತ್ತಮವಾದ ರಸ್ತೆಗಳನ್ನು ನಿರ್ಮಿಸಿದರು.

ಸ್ಟೇಶನಿನಿಂದ ಪೋಲೋನರುಆದ ಶಿಲ್ಪಕೇಂದ್ರಕ್ಕೆ ಹೋಗುವುದಕ್ಕೆ ಮೊದಲು ನಿಶಂಕಮಲ್ಲನ ಮಹಲಿನ ಶಿಲ್ಪ ದೊರೆಯುತ್ತದೆ. ಈ ಮಹಲನ್ನು ನಿಶಂಕಮಲ್ಲನು ಏಳು ಮಾಸಗಳಲ್ಲಿ ಕಟ್ಟಿಸಿದನೆಂದು ಹೇಳುತ್ತಾರೆ.

ಈ ಮಹಲಿನಲ್ಲಿ ಒಂದು ಆಲೋಚನಾ ಸಭಾ ಮಂದಿರವಿದೆ. ಅದು ಒಂದು ಕಾಲದಲ್ಲಿ ಭವ್ಯ ಮಂದಿರವಾಗಿದ್ದಿರಬೇಕು. ಆದರೆ, ಈಗ ಮಾತ್ರ ಕಲ್ಲಿನ ಕಂಭಗಳು ಮಾತ್ರ ಕಣ್ಣಿಗೆ ಕಾಣಿಸುತ್ತಿವೆ. ಈ ತೊಟ್ಟಿಯಲ್ಲಿ ರಾಜಗದ್ದುಗೆಯ ಕೆಳಗಡೆ ಕಲ್ಲಿನ ಸಿಂಹವಿತ್ತು. ಈ ಸಿಂಹವನ್ನು ಈಗ ಕೊಲಂಬೊವಿನ ವಸ್ತುಸಂಗ್ರಹಾಲಯದಲ್ಲಿಟ್ಟಿದ್ದಾರೆ. ಈ ತೊಟ್ಟಿಯಲ್ಲಿರುವ ಒಂದು ಕಲ್ಲಿನಮೇಲೆ ನಿಶಂಕಮಲ್ಲನ ಸರಕಾರದ ಕಾರ್ಯವು ಯಾವ ರೀತಿ ನಡೆಸಲ್ಪಡುತ್ತಿತ್ತು ಎಂಬುದನ್ನು ಕೆತ್ತಿ ಬರೆದಿದೆ

ಸ್ವಲ್ಪ ಮುಂದೆ ಪ್ರಥಮ ಪರಾಕ್ರಮ ಬಾಹುವಿನ ಮಹಲಿದೆ. ಇದು ೨೫ ಎಕ್ರೆಗಳ ವರೆಗೆ ಹರಡಿದೆ. ಇದರಲ್ಲಿ ಒಂದು ಸಾವಿರ ಕೋಣೆಗಳಿದ್ದುವು; ಏಳು ಉಪ್ಪರಿಗೆಗಳಿದ್ದುವು. ನಡುವೆ ೧೫೦ ಅಡಿ ಎತ್ತರದ ಒಂದು ಸ್ತಂಭವೂ ಇರುವುದು. ಇದು ಈಗ ಬಿದ್ದುಹೋಗಿದೆ.

ಈ ಮಹಲಿನ ಪಕ್ಕದಲ್ಲಿ ನಾಟ್ಯಶಾಲೆಗಳು, ಚಿತ್ರಶಾಲೆಗಳು ಮೊದಲಾದುವಿದ್ದುವು. ಆದರೆ, ಈಗ ಮಾತ್ರ ಅವುಗಳ ಭಗ್ನಾವಶೇಷಗಳು ಕಣ್ಣಿಗೆ ಬೀಳುತ್ತವೆ.

ಮಹಲಿನ ಆಗ್ನೇಯದಲ್ಲಿ ಒಂದು ಸ್ನಾನಾಗಾರವಿದೆ. ಇದು ಈ ಕಾಲದಲ್ಲಿಯೂ ಉತ್ತಮ ಸ್ಥಿತಿಯಲ್ಲಿದೆ.

ಮಹಲಿನ ಉತ್ತರದಲ್ಲಿ ತಮಿಳರಾಜರು ಕಟ್ಟಿಸಿದ ಶಿವ ಮಂದಿರವೊಂದಿದೆ. ಆದರೆ, ಮುಂದೆ ಇದೇ ಮಂದಿರವನ್ನು ಪರಿವರ್ತಿಸಿ ಬೌದ್ಧ ಮಂದಿರವಾಗಿ ಮಾಡಲಾಯಿತು. ದಕ್ಷಿಣ ಭಾರತದ ಶಿಲ್ಪಕಲೆಯ ಅತ್ಯುತ್ತಮ ಮಾದರಿ ಈ ದೇವಾಲಯವಾಗಿದೆ. ಇದರಲ್ಲಿ ಭಗವಾನ್ ಬುದ್ಧನ ಮೂರ್ತಿಯನ್ನಿಡಲಾಗಿತ್ತು. ಈಗ ಈ ಮೂರ್ತಿಯು ಕೇಂಡಿಯ ಒಂದು ಬೌದ್ಧ ಮಂದಿರದಲ್ಲಿದೆ.

ಪೋಲೋನರುಆದಲ್ಲಿ ಅನೇಕ ಬೌದ್ಧ ವಿಹಾರ ಮತ್ತು ಸ್ತೂಪಗಳಿವೆ. ಸಿಂಹಳೀಯರು ಸ್ತೂಪಗಳನ್ನು "ದಗಾವಾ" ಎಂದು ಕರೆಯುತ್ತಾರೆ. ಬೇರೆ ಬೇರೆ ಕಾಲದಲ್ಲಿನ ಸಿಂಹಳೀಯ ರಾಜರು ತಂತಮ್ಮ ಆಡಳಿತ ಕಾಲದಲ್ಲಿ ಭಗವಾನ್ ಬುದ್ಧನ ವಿಗ್ರಹಗಳನ್ನಿಡುವುದಕ್ಕಾಗಿ ಬೇರೆಬೇರೆ ಮಂದಿರಗಳನ್ನು ಕಟ್ಟಿಸಿದರು

ಇವುಗಳಲ್ಲಿ ಎಲ್ಲವುಗಳಿಗಿಂತ ಸುಂದರವಾದ ಗಲವಿಹಾರದಲ್ಲಿ ಬುದ್ಧನ ಮೂರು ಮೂರ್ತಿಗಳಿವೆ. ಇವನ್ನು ಒಂದೇ ಶಾಲಿನಲ್ಲಿ ಪರ್ವತವನ್ನು ಕೊರೆದು ಮಾಡಿದಾರೆ, ಇವುಗಳಲ್ಲಿ ಮೊದಲನೆಯ ಮೂರ್ತಿಯು ಮಲಗಿದ್ದು ೪೪ ಅಡಿ ಉದ್ದವಿದೆ. ಪಕ್ಕದಲ್ಲಿಯೇ ೨೨ ಅಡಿ ಎತ್ತರದ ನಿಂತಿರುವ ಒಂದು ಪ್ರತಿಮೆಯಿದೆ. ಮೂರನೆಯದು ಆಸನದಲ್ಲಿ ಕುಳಿತಿದೆ. ಈ ಮೂರೂ ಮೂರ್ತಿಗಳು ಬಾಣಜೊಟ್ಟಿನಲ್ಲಿವೆಯಾದರೂ ಅವುಗಳ ಭಾವವು ಇಂದೂ ಸುಸ್ಪಷ್ಟವಾಗಿ ತಿಳಿದು ಬರುವುದು. ಇಲ್ಲಿಯೇ ಪರಾಕ್ರಮ ಬಾಹುವಿನ ಒಂದು ಮೂರ್ತಿಯನ್ನೂ ಪರ್ವತವನ್ನು ಕೊರೆದೇ ತಯಾರಿಸಿದ್ದಾರೆ. ಅವರ ಕೈಯಲ್ಲಿ ಖಡ್ಗವಿದೆ. ಈ ಮೂರ್ತಿಯು ೧೨ನೆಯ ಶತಮಾನಕ್ಕೆ ಸೇರಿದುದಾಗಿದೆ.

ರಾಷ್ಟ್ರಪತಿಯವರು ಈ ಮೂರ್ತಿಗಳನ್ನು ಕುತೂಹಲಪೂರ್ವಕವಾಗಿ ವೀಕ್ಷಿಸಿದರು. ಅನ್ಯ ಅವಶೇಷಗಳನ್ನು ತನ್ನ ಮೋಟಾರಿನಲ್ಲಿ ಕುಳಿತುಕೊಂಡಾಗಲೀ ಅವುಗಳ ಸಮೀಪ ತೆರಳಿಯಾಗಲೀ ನೋಡಿದರು.

ಇವೆಲ್ಲವನ್ನು ನೋಡಿದ ಮೇಲೆ ಎಲ್ಲರೂ ಪೋಲೋನರುಆದ ವಿಶ್ರಾಂತಿ ಗೃಹಕ್ಕೆ ಹೋದೆವು. ಇಲ್ಲಿ ಸಿಲೋನಿನ ಎಲ್ಲ ಪ್ರಮುಖ ಸ್ಥಾನಗಳಲ್ಲಿಯೂ ಸುಂದರವಾದ ವಿಶ್ರಾಮಧಾಮಗಳಿವೆ ಎಂಬುದನ್ನು ಹೇಳಲೇಬೇಕು. ಇಲ್ಲಿ ಬಹಳ ಅಗ್ಗದ ದರದಲ್ಲಿ ಉಳಕೊಳ್ಳುವ ಮತ್ತು ಉಣ್ಣುವ ವ್ಯವಸ್ಥೆಯಿದೆ.

ವಿಶ್ರಾಮಧಾಮದಲ್ಲಿ ಉಪಾಹಾರ ಸ್ವೀಕರಿಸಿ ೨೦ ಮೋಟರುಗಳ ಪರಿವಾರವು ಅನುರಾಧಪುರಕ್ಕೆ ಮರುಪಯಣಿಸಿತು.

(ಕ್ರಮಶಃ)

ಮೂಲ—"ನವಭಾರತ ಟಾಯಿಮ್ಸ್"
ಅನುವಾದ—"ಗೋರಾ", ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ಸ.

ಇದೀಗ ಪ್ರಕಟವಾಗಿದೆ.
ತ್ವರೆಮಾಡಿರಿ.

1960ನೇ ವರ್ಷದ E. S. L. C.
ಕನ್ನಡ ಪಠ್ಯದ ಟಿಪ್ಪಣಿ
ಬೆಲೆ: 90 ನಯೇಪೈಸೆ.
ಸಾಮಾಜಿಕ ಅಧ್ಯಯನ ಕೈಪಿಡಿ
(V ಮತ್ತು VI ಫೋರ್ಮುಗಳಿಗೆ ಉಪಯುಕ್ತವಿದೆ)
ಬೆಲೆ: ಎರಡು ರೂಪಾಯಿಗಳು
ಅಪೇಕ್ಷಕರು ಪತ್ರ ವ್ಯವಹಾರ ನಡೆಸುವುದು
ಡಿ. ವಿ. ಹೊಳ್ಳ, ಪ್ರಕಾಶಕ, ಕುಂದಾಪುರ

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್, ಗೋಪೀಚಂದ ರಾವ್, ವಿದ್ವಾನ್, ವಿಶಾರದ.
(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)
ಪುಟಗಳು: ೧೨೪. ಬೆಲೆರೂ. ೧-೫೦.
ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.
ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.
ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಜೀವನ ಪರಿಚಯ

(೩ನೇ ಪುಟದಿಂದ)

ದು ಸಾಹಸಮಯ ಹಾಗೂ ಅಪಾಯ ಕಾರಿ ಆದರೆ ಕುತೂಹಲದಾಯಿ ಯಾತ್ರೆಯಾಗಿತ್ತು. ಈ ಯಾತ್ರೆಯಲ್ಲಿ ಆತನ ಸಂಗಡದ ನಾಲ್ಕು ಜನರು ತಮ್ಮ ಪ್ರಾಣಗಳನ್ನು ಕಳಕೊಂಡರು. ಆಗಲೂ ತನ್ನ ಕಾರ್ಯದಲ್ಲಿ ಆತನು ಜಯಶೀಲನಾದ!

ಹಲವು ವರ್ಷಗಳ ಬಳಿಕ ವಿಂಪರನು ತನ್ನ ಪರ್ವತಾರೋಹಣದ ಅನುಭವಗಳನ್ನು ವರ್ಣಿಸುವ "ಆಲ್ಪ್ಸನೊಂದಿಗೆ ಹೋರಾಟ" ಎಂಬ ಗ್ರಂಥವೊಂದನ್ನು ಬರೆದ. ಇದರಲ್ಲಿ ವಿಂಪರನು 'ಮೊಟರ್ ಹೋರ್ನ್' ಪರ್ವತಾರೋಹಣ ಕಾಲದ ಸಾಹಸ ಕಾರ್ಯಗಳು ಹಾಗೂ ಪ್ರಾಣಾಪಾಯಕರ ಘಟನೆಗಳ ಕುರಿತಾಗಿ ಬರೆದಿದ್ದ. ಪರ್ವತದ ತುದಿಯಲ್ಲಿ ನಿಂತು ನೋಡಿದಾಗಿನ ದೃಶ್ಯವು ಮನೋಹರವಾಗಿದ್ದು ವರ್ಣಿಸಲಸದಳವಾಗಿತ್ತು. ವಿಂಪರನು ಹೆಚ್ಚಾಗಿ ಮೆಚ್ಚಿದ ಹಾಗೂ ಆತನ ಚಿತ್ತಭಿತ್ತಿಯಲ್ಲಿ ಸ್ಥಿರವಾಗಿ ಬೇರೂರಿದ ದೃಶ್ಯವೆಂದರೆ ತನ್ನ ಮೊಣಕಾಲುಗಳಲ್ಲಿ ಮಂಡಿಯೂರಿ ಪರ್ವತದ ತುದಿಯಲ್ಲಿ ನಿಂತ ಲ್ಯಾಕ್ ಮೈನೆಟನ ಭಂಗಿ. ಮೈನೆಟನ ಮುಖವು ಸಂತಸದಿಂದ ಅರಳಿತ್ತು. ಮೊಣಕಾಲಿನಲ್ಲಿ ನಿಂತು ಆತನು ತುದಿ ಮುಟ್ಟಿ ನಿಂತಾಗ ತನ್ನ ಕೈಗಳನ್ನು ಬೀಸುತ್ತಾ ಸಂತೋಷಾತಿರೇಕದಿಂದ ಉದ್ಗರಿಸಿದ. "ಓ, ಸುಂದರ, ಅತಿ ಸುಂದರ ಪರ್ವತಶ್ರೇಣಿ! ಆಹಾ! ಎಷ್ಟು ಆಹ್ಲಾದಕರ ಮನೋಹರ ನೋಟ?"

ಮೈನೆಟನ ಉದ್ಗಾರ ಕೇಳಿ ವಿಂಪರನು ತಿರುಗಿ ನೋಡಿದಾಗ, ಆತನಿಗೆ ಮೈನೆಟನು ಅಸಹ್ಯರೂಪಿಯಾಗಿ ಕಾಣಲಿಲ್ಲ. ಬದಲು ಸುಂದರನಾಗಿ, ಸುರೂಪಿಯಾಗಿ ಕಂಡ. ತಾನು ಮೈನೆಟನನ್ನು ತನ್ನ ಜತೆ ಒಯ್ದುದಕ್ಕಾಗಿ ವಿಂಪರನು ತುಂಬಾ ಸಂತೋಷ ತಳೆದ, ಹೆಮ್ಮೆ ತಳೆದ. "ನನ್ನ ಜೀವನದಲ್ಲಿ ಕಂಡ ಒಬ್ಬ ಅಪೂರ್ವ ವ್ಯಕ್ತಿ" ಎಂದು ಮೈನೆಟನನ್ನು ವಿಂಪರ ಹೊಗಳಿದ್ದಾನೆ.

—ಶ್ರೀ ಯಸ್. ಸದಾಶಿವ ರಾವ್,
ಕಡಿಯಾಳಿ, ಉಡುಪಿ.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1920

ಜನಮತ

ಆಹಾರ ಮಂತ್ರಿ ಶಾಹಿ ಯಾಕೆ?

ಇದೇ ಜುಲೈ 9ನೇ ತಾರೀಕಿನ ದಿವಸ ಕೇಂದ್ರ ಆಹಾರ ಮಂತ್ರಿಗಳಾದ ಶ್ರೀ ಅಜಿತ್ ಪ್ರಸಾದ ಜೈನ್‌ರವರು ಬೆಂಗಳೂರಿನಲ್ಲಿ, "ಕಳೆದ ವರ್ಷಕ್ಕಿಂತಲೂ ಈ ವರ್ಷ ಆಹಾರ ಧಾನ್ಯಗಳ ಬೆಲೆ ಕಡಿಮೆಯಾಗಿದೆ; ಈ ವರ್ಷ ಬೆಳೆ ಹೆಚ್ಚಾಗಿ, ರಾಜ್ಯ ಸರಕಾರಗಳ ಬಳಿ ಕಳೆದ ವರ್ಷಕ್ಕಿಂತಲೂ ಹೆಚ್ಚಿನ ದಾಸ್ತಾನಿರುವುದರಿಂದ ಬೆಲೆ ಹೆಚ್ಚುವುದಿಲ್ಲ; ಮುಂದಿನ ವರ್ಷದಿಂದ ಇನ್ನೂ ಹೆಚ್ಚಿನ ದಾಸ್ತಾನನ್ನು ಮಾಡಿ, ಇನ್ನು ಮುಂದೆ ಸರ್ಕಾರವೇ ವ್ಯಾಪಾರದ ಸರ್ವಸ್ವಾಮ್ಯವನ್ನೂ ವಹಿಸಿಕೊಳ್ಳುತ್ತದೆ" ಎಂದು ನುಡಿದಿದ್ದಾರೆ.

ನಿಜ! ಮಾನ್ಯ ಮಂತ್ರಿಗಳು ಹೇಳಿರುವಂತೆ ಈ ವರ್ಷ ಬೆಳೆ ಹೆಚ್ಚಾಗಿದೆ, ಆದರೆ ಬೆಲೆ ಕಡಿಮೆಯಾಗಿದೆ ಎಂಬುದು ಮಾತ್ರ ಸತ್ಯಕ್ಕೆ ದೂರವಾದ ವಿಷಯ. ಇದಕ್ಕೆ ನಮ್ಮ ರಾಜ್ಯ ಸರಕಾರದ ಆಹಾರ ಸಚಿವರು ಜೂನ್ 29 ರಂದು ಹೊರಡಿಸಿರುವ 'ಅಕ್ಕಿ ಮಾರಾಟದ ಬೆಲೆ'ಯ ಪ್ರಕಟಣೆಯೇ ಸಾಕ್ಷಿಯಾಗಿದೆ. ಪ್ರಾಯಶಃ ಶ್ರೀ ಜೈನರ ಗಮನಕ್ಕೆ ಈ ಪ್ರಕಟಣೆ ಬಂದಿಲ್ಲವೋ? ಏನೋ?

ಪ್ರಸಕ್ತ ವರ್ಷದ ಸುಗ್ಗಿಯಲ್ಲಿ ನಮ್ಮ ರಾಜ್ಯ ಸರಕಾರದವರು 'ಬೆಲೆ ಏರುವುದನ್ನು ತಡೆಗಟ್ಟಲು' ಕಡಿಮೆ ಬೆಲೆಯಲ್ಲಿ ಅಕ್ಕಿಯನ್ನು ದಾಸ್ತಾನು ಮಾಡಿದರು. ಈಗ ಅದನ್ನು ಸಹಕಾರ ಸಂಘಗಳ ಮುಖಾಂತರ ಮಾರುಕಟ್ಟೆಯಲ್ಲಿರುವದಕ್ಕಿಂತಲೂ ಹೆಚ್ಚಿನ ಬೆಲೆಗೆ ಮಾರಲು ಹೊರಟಿದ್ದಾರೆ, ಇಷ್ಟಾದರೂ ಬೆಲೆ ಇಳಿಯುತ್ತದೆ, ಎಂದು ಸಾರುವ ಆಹಾರ ಮಂತ್ರಿಗಳ ನೈತಿಕ ಧೈರ್ಯವನ್ನು ಮೆಚ್ಚಲೇ ಬೇಕು.

ನಮ್ಮ ರಾಜ್ಯ ಸರಕಾರದವರು ಬಂಗಾರ ಕಡ್ಡಿ, ನಾಗಪುರಿ ಸಣ್ಣ, ಕೊಯಮುತ್ತೂರು ಸಣ್ಣ, ರತ್ನಚೂಡಿ, ಹಾಲು ಉಬ್ಬಲು ಇತ್ಯಾದಿ ಮೊದಲನೇ ದರ್ಜೆಯ ಅಕ್ಕಿಯನ್ನು ಪಲ್ಲ 1ಕ್ಕೆ ರೂ. 54—75 ನ.ಪೈಸೆಗಳಂತೆಯೂ, ಡಬ್ಬಲ್‌ಸಾಲಾ ತುಸುಬಲು ಇತ್ಯಾದಿ ಎರಡನೇ ಮತ್ತು ಮೂರನೇ ದರ್ಜೆಯ ಅಕ್ಕಿಯನ್ನು ಪಲ್ಲ 1ಕ್ಕೆ 45 ರೂಪಾಯಿಗಳಂತೆಯೂ ಕೊಂಡಿದ್ದಾರೆ, ಇದರ ಮೇಲೆ ಖಾಲೀ ಚೀಲ, ಸಾಗಾಣಿಕೆ ಖರ್ಚು ಮತ್ತು ಮಾರಾಟದ ಲಾಭ ಪಲ್ಲ 1ಕ್ಕೆ 2 ರೂ. ಸೇರಿದರೂ, ಸರಕಾರದವರು ತಮ್ಮಲ್ಲಿರುವ 1ನೇ ರಖಂ ಅಕ್ಕಿಯನ್ನು ರೂ. 1ಕ್ಕೆ 1¾ ಸೇರಿನಂತೆಯೂ, 2ನೇ ರಖಂ ಅಕ್ಕಿಯನ್ನು ರೂ. 1ಕ್ಕೆ 2ಸೇರು ½ ಪಾವಿನಂತೆಯೂ, ಮಾರಿ ಬೆಲೆಯನ್ನು ಇಳಿಸಬಹುದಾಗಿತ್ತು.

ಆದರೆ ನಮ್ಮ ಕೇಂದ್ರ ಮತ್ತು ರಾಜ್ಯ ಸರಕಾರಗಳ ರೀತಿನೀತಿಗಳೇ ಬೇರೆ! ಲಾಭ ಸಂಪಾದನೆಯೊಂದೇ ಅವರ ಗುರಿ. ಇದರಿಂದ ಪರ್ಯಾಯವಾಗಿ ದಾಸ್ತಾನುಗಾರರಿಗೂ ಅನುಕೂಲವಾಗಿ ಕೊಳ್ಳುವವರಿಗೆ ಮಾತ್ರ ಅನ್ಯಾಯವಾಗುತ್ತದೆ.

ಆಹಾರ ಸಚಿವರ ಪ್ರಕಟಣೆಯಂತೆ, ಪಲ್ಲ 1ಕ್ಕೆ 54—75ರಂತೆ ಕೊಂಡಿರುವ ಬಂಗಾರ ಕಡ್ಡಿ, ನಾಗಪುರಿಸಣ್ಣಕ್ಕಿಯನ್ನು ರೂ. 1ಕ್ಕೆ 1 ಸೇ. 1½ ಪಾವಿನಂತೆ ಮಾರಿದರೆ. (ಪಲ್ಲ 1ಕ್ಕೆ 2 ರೂ. ಖರ್ಚು ಜಾತಾ) 16 ರೂ.ಗಳು ಲಾಭ ಬರುತ್ತದೆ. ಕೊಯಮುತ್ತೂರು ಸಣ್ಣಕ್ಕಿ ರೂ. 1ಕ್ಕೆ 1¾ ಸೇರಿನಂತೆ ಮಾರಿದರೆ, ಖರ್ಚು ಜಾತಾ ಪಲ್ಲ 1ಕ್ಕೆ 9—75 ನ. ಪೈಸೆಗಳ ಲಾಭವೂ, ರತ್ನಚೂಡಿ, ಹಾಲು ಉಬ್ಬಲು, ಅಕ್ಕಿ ರೂ. 1ಕ್ಕೆ 1ಸೇ. 2½ ಪಾವಿನಂತೆ ಮಾರಿದರೆ, ಖರ್ಚು ಜಾತಾ ಪಲ್ಲ 1ಕ್ಕೆ ರೂ. 6—75 ನ. ಪೈಗಳ ಲಾಭವೂ ಬರುತ್ತದೆ. ಅದರಂತೆಯೇ ಪಲ್ಲ 1ಕ್ಕೆ 45 ರೂಪಾಯಿಯಂತೆ ಕೊಂಡಿರುವ ಡಬ್ಬಲ್ ಸಾಲಾ ಮತ್ತು ಇತರ ಅಕ್ಕಿಯನ್ನು ರೂ. 1ಕ್ಕೆ 1 ಸೇ. 3½ ಪಾವಿನಂತೆ ಮಾರಿದರೆ ಖರ್ಚು ಜಾತಾ ಪಲ್ಲ 1ಕ್ಕೆ ರೂ. 6—93 ನ. ಪೈಗಳ ಲಾಭವೂ, ದಪ್ಪ ಮತ್ತು ತುಸುಬಲಕ್ಕಿಯನ್ನು ರೂ. 1ಕ್ಕೆ 2 ಸೇರಿನಂತೆ ಮಾರಿದರೆ ಖರ್ಚು ಜಾತಾ ಪಲ್ಲ 1ಕ್ಕೆ 3 ರೂ. ಲಾಭವೂ ಬರುತ್ತವೆ. ಸಾಮಾನ್ಯವಾಗಿ ವರ್ತಕರು ಖರ್ಚು ಜಾತಾ ಪಲ್ಲ 1ಕ್ಕೆ 4 ಅಥವಾ 8 ಆಣೆಗಳ ಲಾಭದಿಂದ ತೃಪ್ತರಾಗುತ್ತಾರೆ. ಆದರೆ ಪ್ರಜಾಹಿತಚಿಂತಕರಾದ ನಮ್ಮ ಆಡಳಿತಗಾರರಿಗೆ ಎಷ್ಟು ಲಾಭ ಬಂದರೂ ಸಾಲದು. ಅಂದ ಮೇಲೆ ಬೆಲೆ ಏರಿಕೆಗೆ ವರ್ತಕರು ಮತ್ತು ಜಮೀನುದಾರರು ಕಾರಣವೆಂದು ಹೇಳುವುದರಲ್ಲಿ ಏನಾದರೂ ಅರ್ಥವಿದೆಯೇ? ಇಲ್ಲ.

ಇದಕ್ಕೇನಾದರೂ ಪರಿಹಾರವಿದೆಯೇ?... ಇದೆ. ಅದಕ್ಕೊಂದೇ ಪರಿಹಾರ. ಆಡಳಿತ ನಡೆಸುವ ಸರಕಾರ ಇನ್ನು ಮುಂದೆ ವ್ಯಾಪಾರಕ್ಕೆ ಕೈಹಾಕಬಾರದು. ಅರ್ಥಾತ್ ಆಹಾರ ಇಲಾಖೆ ಮತ್ತು ಆಹಾರ ಮಂತ್ರಿ ಉಪಮಂತ್ರಿಗಳು ರದ್ದಾಗಬೇಕು. ಇದರಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಕೋಟ್ಯಂತರ ರೂ.ಗಳ ದುಂದು ವೆಚ್ಚ ನಿಲ್ಲುತ್ತದೆ. ಪ್ರಜೆಗಳಿಗೆ ಮಾರ್ಕೆಟ್ಟಿನಲ್ಲಿ ಅಗ್ಗದ ಆಹಾರ ಪದಾರ್ಥಗಳು ದೊರೆಯುತ್ತವೆ.

—ಎಂ. ಆರ್. ಸಿ. ಬಸಪ್ಪ,
ಮೈಸೂರು.

ಕನ್ನಡ ನಿಘಂಟಿನ ಮುನ್ನಡೆ

ಕನ್ನಡ ಸಾಹಿತ್ಯ ಪರಿಷತ್ತು ಕೈಕೊಂಡಿರುವ ಕನ್ನಡ ನಿಘಂಟಿನ ರಚನೆಗಾಗಿ ಇದುವರೆಗೆ ಸುಮಾರು ಒಂದು ಸಾವಿರ ಪುಸ್ತಕಗಳಿಂದ ನಾಲ್ಕು ಲಕ್ಷಕ್ಕೂ ಮೇಲ್ಪಟ್ಟು ಪ್ರಯೋಗಗಳನ್ನು ಸಂಗ್ರಹಿಸಿ ಪ್ರತ್ಯೇಕ ಪಟ್ಟಿಕೆಗಳಲ್ಲಿ ಬರೆದು ಅಕಾರಾದಿ ಕ್ರಮದಲ್ಲಿ ಜೋಡಿಸಲಾಗಿದೆ. (ಇನ್ನೂ ಹೆಚ್ಚಿನ ಪ್ರಯೋಗಗಳನ್ನು ಸಂಗ್ರಹಿಸುವ ಕೆಲಸ ನಡೆಯುತ್ತಿದೆ.) ಈ ಪಟ್ಟಿಕೆಗಳ ಆಧಾರದ ಮೇಲೆ ಶಬ್ದಗಳಿಗೆ ಅರ್ಥನಿರ್ಣಯಮಾಡಿ ನಿಘಂಟನ್ನು ಬರೆಯಲಾಗುತ್ತಿದೆ. ಇದುವರೆಗೆ ಸುಮಾರು ಆರು ಸಾವಿರದ ಏನೂರು (೬೫೦೦) ಪುಟಗಳಷ್ಟು ಹಸ್ತಪ್ರತಿಯು ಬರೆದು ಸಿದ್ಧವಾಗಿದೆ; ಇದು ಸ್ವರಾದಿಯಾದ ಎಲ್ಲ ಶಬ್ದಗಳನ್ನೂ ಕಕಾರದಿಂದ ಜಕಾರದವರೆಗಿನ ವ್ಯಂಜನಾದಿ ಶಬ್ದಗಳಲ್ಲಿ ಬಹುಭಾಗವನ್ನೂ ಒಳಗೊಂಡಿದೆ. (ಇದಿಷ್ಟನ್ನು ಪರಿಷ್ಕರಿಸಿ ಮುದ್ರಿಸಿದಲ್ಲಿ ಸುಮಾರು ೧೫೦೦ ಮುದ್ರಿತ ಪುಟಗಳಾಗುತ್ತವೆ. ಹಲವು ಪುಟಗಳು ಮುದ್ರಣಕ್ಕೂ ಸಿದ್ಧವಾಗಿವೆ.) ನಿಘಂಟಿನ ಸಂಪಾದಕ ಮಂಡಲಿ ಆಗಾಗ ಸಭೆಸೇರಿ, ಕರಡನ್ನು ಚರ್ಚಿಸಿ, ಪರಿಷ್ಕರಿಸುವ ಕಾರ್ಯವನ್ನು ಮಾಡುತ್ತಿದೆ. ಈ ಪರಿಷ್ಕರಣ ಕಾರ್ಯವನ್ನು ಇನ್ನೂ ತ್ವರಿತಗೊಳಿಸುವ ಏರ್ಪಾಡೂ ನಡೆಯುತ್ತಿದೆ.

ಈ ನಿಘಂಟನ್ನು ಪೂರ್ತಿಯಾಗಿ ರಚಿಸಿ ಪರಿಷ್ಕರಿಸಿ ಅಚ್ಚುಮಾಡಿ ಪ್ರಕಟಿಸುವುದಕ್ಕೆ ಸುಮಾರು ಎಳೆಂಟು ವರ್ಷಗಳ ಕಾಲ ಹಿಡಿಯುತ್ತದೆ. ಈ ಎಲ್ಲ ಕೆಲಸಕ್ಕೂ ಒಟ್ಟು ವೆಚ್ಚ ಸುಮಾರು ಹದಿನೈದು (೧೫) ಲಕ್ಷ ರೂಪಾಯಿಗಳಷ್ಟಾಗುತ್ತದೆಂದು ಅಂದಾಜು ಮಾಡಲಾಗಿದೆ.

ನಿಘಂಟಿನ ಕೆಲಸ ನಡೆಯುವುದಕ್ಕೆ ಆವಶ್ಯಕವಾದ ದ್ರವ್ಯಸಹಾಯಕ್ಕಾಗಿ ಪರಿಷತ್ತು ಮಾಡಿದ ಪ್ರಾರ್ಥನೆಯನ್ನು ಮನ್ನಿಸಿ ಸರ್ಕಾರದವರು ಈ ಕಾರ್ಯವನ್ನು ಪಂಚವಾರ್ಷಿಕ ಯೋಜನೆಗಳಲ್ಲಿ ಸೇರಿಸಿಕೊಂಡು, ಸದ್ಯದ ವೆಚ್ಚಕ್ಕಾಗಿ ಹಣವನ್ನು ಕೊಡುತ್ತಿದ್ದಾರೆ. ನಮ್ಮ ಬೇಡಿಕೆಯಂತೆ ಪೂರ್ಣ ದ್ರವ್ಯಸಹಾಯವು ಸರ್ಕಾರದ ನಿಬಂಧನೆಗಳಿಗೆ ಒಳಪಟ್ಟು ದೊರೆಯುವ ಭರವಸೆಯೂ ಇದೆ.

ಸಮಗ್ರ ನಿಘಂಟು ಡೆಮ್ಮಿ ¼ ಆಕಾರದ ಐದುಸಾವಿರ (೫೦೦೦) ಪುಟಗಳಷ್ಟು ಆಗಬಹುದೆಂದು ಅಂದಾಜು ಮಾಡಿದೆ. ಈ ಗ್ರಂಥವನ್ನು ಭಾಗಭಾಗವಾಗಿ ಸಂಚಿಕೆಗಳ ರೂಪದಲ್ಲಿ ಪ್ರಕಟಿಸುವ ಉದ್ದೇಶವಿದೆ. ಮೊದಲನೆಯ ಸಂಚಿಕೆ ಹೊರಬೀಳುವ ಸಮಯದಲ್ಲಿ ನಿಘಂಟಿನ ಬೆಲೆ ಮಾರಾಟ ಮೊದಲಾದವುಗಳ ವಿವರವನ್ನು ಪ್ರಕಟಿಸಲಾಗುತ್ತದೆ.

ಕೆ. ಗೋಪಾಲಕೃಷ್ಣರಾಯ,
ಗೌರವ ಕಾರ್ಯದರ್ಶಿ, ಸಾಹಿತ್ಯಪರಿಷತ್ತು.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಅತ್ಯುಪಯುಕ್ತವಾದ ಕೈಗನ್ನಡಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಪಡೆಯಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ
ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಒಂದೂವರೆ.

ನವಭಾರತ ಪುಸ್ತಕ ಭಂಡಾರ, ಉಡುಪಿ



ಶಿಕ್ಷಣ ಕ್ಷೇತ್ರ

ಸಫಲ ಅಧ್ಯಾಪಕನ ಪಂಚದಶ ಶೀಲಗಳು

ಇವುಗಳ ಕಾರ್ಯಾಚರಣೆಯಿಂದಲೇ ಅಧ್ಯಾಪಕನ ಮಾನ ಗೌರವಗಳು ಬೆಳೆಯುವುವು.

ನಿಮ್ಮ ಸಹೋಪಾಧ್ಯಾಯರೊಡನೆ ಸದ್ಭಾವನೆಯೊಡನೆ ವರ್ತಿಸಿರಿ. ತರಗತಿಯಲ್ಲಾಗಲೀ ಹೊರಗಡೆಯಾಗಲೀ ಅವರ ದೂರುಗಳನ್ನು ಹೇಳಬೇಡಿ. ಇನ್ನೊಬ್ಬರು ತಪ್ಪು ಮಾಡುತ್ತಿರುವರೆಂದು ತಿಳಿದರೂ ಶಿಷ್ಟಾಚಾರದಿಂದ ಅದನ್ನು ಖಂಡಿಸಿರಿ. ಇದು ಅಸಾಧ್ಯವೆನಿಸಿದರೆ, ಮೌನವಾಗಿರಿ; ಆದರೆ ಈ ಮೌನವು ಸಮರ್ಥನಾತ್ಮಕ ಮೌನವಾಗಿರದೆ ವಿರೋಧ ಸೂಚಕ ಮೌನವಾಗಿರಲಿ. ವಿದ್ಯಾರ್ಥಿಗಳೂ ಉಪಾಧ್ಯಾಯರನ್ನು ನಿಂದಿಸಲು ಬಿಡಬೇಡಿರಿ.

ವಿದ್ಯಾರ್ಥಿಗಳಿಗೆ ವೃತ್ತಿಕಾದಿ ಸಹಾಯ ನೀಡಲು ಮುಂದೆ ಬನ್ನಿರಿ. ರೋಗಿ ಶಿಷ್ಯನಿದ್ದರೆ, ಅವನ ಸೇವೆ ಮಾಡಲು ಒಂದೆ ಮುಂದೆ ಯೋಚಿಸಬೇಡಿರಿ. ಅವನು ಸೌಖ್ಯನಾಗುವ ವರೆಗೆ ಅವನ ಬಗ್ಗೆ ವಿಚಾರಿಸುತ್ತಿರಿ. ಯಾರಾದರೂ ವಿದ್ಯಾರ್ಥಿ ಆರ್ಥಿಕ ಸಹಾಯವನ್ನು ಬೇಡಿದನೆಂದರೆ, ಅದನ್ನೂ ನೀಡಲು ಪ್ರಯತ್ನ ಮಾಡಿರಿ. ನಿಜವಾಗಿಯೂ ಸಹಾಯವನ್ನು ಅಪೇಕ್ಷಿಸುವವನಿಗೆ ಬೇಡುವುದಕ್ಕೆ ಮೊದಲೇ ನೆರವೀಯುವುದು ಉತ್ತಮ.

ವಿದ್ಯಾರ್ಥಿಗಳ ಸಭೆ, ಉತ್ಸವ ಮೊದಲಾದುವುಗಳಲ್ಲಿ ನಿಮಗೆ ಆಮಂತ್ರಣ ಅಥವಾ ಕರೆಯು ಬಂದರೆ, ಅವುಗಳಲ್ಲಿ ಅವಶ್ಯ ಭಾಗವಹಿಸಿರಿ. ಆದರೆ, ಕರೆಯು ಬಾರದೆ ಹೋದರೆ ಮಾತ್ರ ಅವುಗಳಲ್ಲಿ ಸಮ್ಮಿಳಿತರಾಗಬೇಡಿರಿ.

ಶಿಷ್ಯರಿಗೆ ಜ್ಞಾನಪ್ರದಾನ ಮಾಡುವಲ್ಲಿ ಎಂದೂ ಯಾವುದೇ ಪ್ರಕಾರದ ಸಂಕೋಚಪಡಬೇಡಿರಿ. ಅವರು ನಿಮ್ಮ ಮನೆಗೆ ಎಂದಾದರೂ ಬಂದರೆ, ನಿಮ್ಮ ಕೆಲಸಗಳಿಗೆ ಭಂಗವೊದಗದಿದ್ದರೆ, ಅವರನ್ನು ಸ್ವಾಗತಿಸಿರಿ; ಭೋಜನದ ವೇಳೆ ಆಗಮಿಸಿದರೆ, ಆತನಿಗೆ ಊಟವನ್ನೂ ಬಡಿಸಿರಿ.

ಸದಾ ಪ್ರಸನ್ನರೂ ಉತ್ಸಾಹಿಗಳೂ ಆಗಿರಿ. ವಿದ್ಯಾರ್ಥಿಗಳು ನಿಮಗೆ ಪ್ರಣಾಮ ಮಾಡಿದರೆ, ಹಸನ್ಮುಖದಿಂದಲೇ ಅವರನ್ನು ಆಶೀರ್ವದಿಸಿರಿ. ನಿಮಗವರ ಪರಿಚಯ ಪೂರ್ಣವಿಲ್ಲವಾದರೂ ಅವರೊಡನೆ ಕುಶಲ ವಾರ್ತೆಗಳನ್ನು ಕೇಳಿರಿ. ನಿಮ್ಮೊಡನೆಯೇ ಅವರೂ ನಡೆದುಬರುತಿದ್ದರೆ, ತಾವು ಜ್ಞಾನನಿಧಿಯೊಡನೆ ಹೋಗುತಿದ್ದೇವೆಂದು ತಿಳಿದ ಕೊಳ್ಳುವಂತಹ ಮಾತುಗಳನ್ನು ಆಡಿರಿ.

ನಿಮ್ಮ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಅವಶ್ಯಕೊಡಿರಿ; ಆದರೆ, ಅದರ ವಿವರಗಳನ್ನು ಮಾತ್ರ ಇಟ್ಟುಕೊಳ್ಳಿರಿ.

ವಿದ್ಯಾರ್ಥಿಗಳೊಡನೆ ಶಾಲೆಯ ಒಳಗಾದರೂ ಹೊರಗಾದರೂ ವ್ಯವಹರಿಸುವಾಗ, ಒಂದೇ ಭಾಷೆಯನ್ನು ಬಳಸಿರಿ. ವಿದ್ಯಾರ್ಥಿಗಳು ಸುಲಭದಲ್ಲಿ ಅರ್ಥಮಾಡಿಕೊಳ್ಳುವಂತಹ ಪದಪುಂಜಗಳನ್ನೇ ಉಪಯೋಗಿಸಿರಿ. ಸಾಮಾನ್ಯವಾಗಿ ನಿಮ್ಮ ಪ್ರದೇಶಿಕ ಭಾಷೆಯ ಉಪಯೋಗಕ್ಕೇನೇ ಪ್ರಾಧಾನ್ಯ ನೀಡಿರಿ.

ಸಾಧಾರಣವಾಗಿ ಅಧ್ಯಾಪಕರು ಗೃಹಶಿಕ್ಷಣವನ್ನು ಕೊಡಬಾರದು. ಇದರಿಂದ ಅವರ ಮಾನಕ್ಕೆ ಧಕ್ಕೆ ಬರುವ ಸಂಭವವಿದೆ. ನಿಮ್ಮ ಮನೆಗೆ ಬರುವವರಿಗೆ ಸಾಧ್ಯವಿದ್ದ ಮಟ್ಟಿಗೆ ನಿಶ್ಶುಲ್ಕವಾಗಿ ಕಲಿಸಿರಿ. ಆದರೆ, ಕಲಿಸುವುದಕ್ಕೋಸ್ಕರ ಇನ್ನೊಬ್ಬರ ಮನೆಗೆ ಹೋಗಬೇಡಿರಿ. ಅಧ್ಯಾಪಕರ ಗೌರವ ಮರ್ಯಾದೆಯು ಇದರಿಂದ ವರ್ಧಿಸುವುದು.

ನಿಮ್ಮ ಜೀವನವನ್ನು ಸಂಯಮಿಸಿಕೊಳ್ಳಿರಿ ವ್ಯಸನಗಳಿಂದ ದೂರವಿದ್ದು ನಿರ್ಮಲ ಕನ್ನಡಿಯಂತೆ ನಿಮ್ಮ ಚರಿತ್ರವನ್ನು ನಿಷ್ಕಲ್ಮಶವಾಗಿರಿಸಿಕೊಂಡು ರಕ್ಷಿಸಿರಿ. ಹೊರಗಿನ ಜನರು ಅಥವಾ ವಿದ್ಯಾರ್ಥಿಗಳೊಡನೆ ಅಧಿಕವಾಗಿ ಸೇರಿಕೊಳ್ಳಬೇಡಿರಿ.

ವಿದ್ಯಾರ್ಥಿಗಳಿಂದ ಎಂದೂ ನಿಮ್ಮ ಸೇವೆಯನ್ನು ಮಾಡಿಸಿಕೊಳ್ಳಬೇಡಿರಿ. ಆದರೆ, ತಾವಾಗಿಯೇ ಮುಂದೆಬಂದರೆ, ಅವರ ಸೇವೆ ಸ್ವೀಕರಿಸಿರಿ. ಆದರೆ, ನಿಮ್ಮ ಶಾರೀರಿಕ ಸೇವೆ—ಕಾಲೊತ್ತುವುದು, ಎಣ್ಣೆ ತಿಕ್ಕುವುದು ಮೊದಲಾದುವು - ಎಂದೂ ಸ್ವೀಕಾರಾರ್ಹವಲ್ಲ.

ಸದಾ ನಿರ್ಮಲರಾಗಿರಿ. ನಿಮ್ಮ ಮನೆ, ಕೋಣೆ ವಸ್ತ್ರ ಪುಸ್ತಕ ಮೊದಲಾದುವೆಲ್ಲಾ ನಿರ್ಮಲವಾಗಿಯೂ ಸ್ವಚ್ಛವಾಗಿಯೂ ವ್ಯವಸ್ಥಿತವಾಗಿಯೂ ಇರುವಂತೆ ಆಸಕ್ತಿವಹಿಸಿರಿ. ಸ್ವಭಾವ ಮತ್ತು ವ್ಯವಹಾರಗಳಲ್ಲಿ ಶಿಷ್ಟರೂ ಮೃದುವಂತರೂ ಆಗಿರಿ. ವಿದ್ಯಾರ್ಥಿಗಳ ಹೆತ್ತವರೊಡನೆ ಪ್ರೇಮಪೂರ್ವಕವಾಗಿ ಭೇಟಿಯಾಗಿರಿ. ಅವರೊಡನೆ ಅವರ ಮಕ್ಕಳ ಸಂಬಂಧದಲ್ಲಿ ಉನ್ನತಿಯ ಉಚಿತ ಪರಾಮರ್ಶೆ ಮಾಡಿರಿ.

ಅಭಿಮಾನವು ಅಧ್ಯಾಪಕನ ಮಹಾವೈರಿ. ತನ್ನ ವಿದ್ಯೆ, ಬುದ್ಧಿ, ಕೌಶಲ, ಅಧ್ಯಾಪನ ಕೌಶಲ, ಪದವಿ ಮೊದಲಾದುವುಗಳ ಪ್ರಶಂಸೆ, ಆತ್ಮಶ್ಲಾಘನೆಗಳನ್ನೆಂದೂ ಮಾಡಬೇಡಿರಿ. ಇನ್ನೊಬ್ಬರನ್ನು ಕೀಳುಗಳೆಯಬೇಡಿರಿ. ಇದರಿಂದ ಮಾನಕ್ಕೆ ಧಕ್ಕೆ ಯೊದಗುವುದು, ಜನರು ನಿಮ್ಮನ್ನು ಡಂಭಾಚಾರಿಗಳೆಂದು ತಿಳಿಯುವರು, ಪರಸ್ಪರ ವೈಮನಸ್ಯ ಬೆಳೆಯುವುದು ಮತ್ತು ವಿದ್ಯಾಲಯದ ಗೌರವಕ್ಕೂ ಹಾನಿಯಾಗುವುದು.

ವಿದ್ಯಾರ್ಥಿಗಳ ನೇತ್ತವರು ಅದವಾ ರಕ್ಷಕರೊಡನೆ ತೀವ್ರ ಮೈತ್ರಿಯನ್ನಾಗಲೀ ಆತ್ಮೀಯತೆಯನ್ನಾಗಲೀ ಇಟ್ಟುಕೊಳ್ಳಬೇಡಿರಿ. ಇದರಿಂದ ಅವರು ತಮ್ಮ ಲಾಭವನ್ನು ಸಾಧಿಸಿಕೊಳ್ಳಲುಪ್ರಯತ್ನಿಸುವರು. ನಿಮಗೆ ಮಾತ್ರ ಏನಾದರೂ ಉಡುಗೊರೆಗಳನ್ನವರು ಕೊಟ್ಟರೆ ಎಂದೂ ಸ್ವೀಕರಿಸದಿರಿ. ವಿಶೇಷ ಸಂದರ್ಭಗಳಲ್ಲಿ ಈ ಬಹುಮಾನ ನಿಮಗೆ ಕೊಟ್ಟವಕ್ಷದಲ್ಲಿ ಅದನ್ನು ನಮ್ರತಾಪೂರ್ವಕವಾಗಿ ಹಿಂತಿರುಗಿಸಿಕೊಡಿರಿ.

ನೀವ ಕಲಿಸುವ ಎಲ್ಲ ವರ್ಗಗಳ ವಿದ್ಯಾರ್ಥಿಗಳ ವ್ಯಕ್ತಿಗತ ಪರಿಚಯವನ್ನಿಟ್ಟುಕೊಳ್ಳಿರಿ.

ಶಿಷ್ಯರ ಮನೆಯಲ್ಲಿ ಏನಾದರೂ ಸುಖದುಃಖಗಳ ಘಟನೆ ನಡೆದರೆ, ಅದನ್ನು ವಿಚಾರಿಸಿ ತಿಳಿದುಕೊಳ್ಳಿರಿ.

ಈ ಪಂಚದಶ ಸೂತ್ರಗಳನ್ನು ಕಾರ್ಯಗತಮಾಡುವುದರಿಂದಲೇ ಅಧ್ಯಾಪಕರ ಮಾನ, ಮರ್ಯಾದೆಗಳಡಗಿವೆ. ಅದರೊಡನೆ ನಿಮ್ಮನ್ನು ನೀವೇ ಎಂದೂ ಹೀನವೆಂದು ಅಭಿಪ್ರಾಯ ವ್ಯಕ್ತಮಾಡಬಾರದೆಂಬುದನ್ನೂ ಅವಶ್ಯ ಗಮನಿಸಬೇಕು.

ಜೀವನ ಘಟನೆ

ಉಪದೇಶಿಸಿದ ಪಾಠ ಕೂಡಲೇ ಫಲಿಸಿತು

ಗಾಂಧೀಜಿಯೊಮ್ಮೆ ಬಂಗಾಳದ ಯಾತ್ರೆ ನಡೆಸುತ್ತಿದ್ದರು. ಅಲ್ಲಿ ಒಬ್ಬ ಜಮೀನುದಾರನು ಗಾಂಧೀಜಿಯವರನ್ನು ತನ್ನ ಮನೆಗೆ ಆಮಂತ್ರಿಸಿದ. ಅವನ ಆಮಂತ್ರಣವನ್ನು ಗಾಂಧೀಜಿ ಸ್ವೀಕರಿಸಿದರು. ಅಂದಂತೆ ಜಮೀನುದಾರನ ಮನೆಗೆ ನಡೆದರು. ಅಲ್ಲಿ ಅವರನ್ನು ಕಾಣಲು ದೊಡ್ಡ ಗುಂಪೇ ಬಂದಿತ್ತು. ಜಮೀನುದಾರನೊಡನೆ ಸ್ನಾನಾದಿ ಫಲಾಹಾರ ಮುಗಿಸುವುದರೊಳಗೆ ಸಂಜೆಯಾಗಿತ್ತು. ಇನ್ನೇನು ಗಾಂಧೀಜಿಯವರಿಗೆ ಪ್ರಾರ್ಥನೆಗಾಗಿ ಸ್ಥಳ ಏರ್ಪಾಡು ಮಾಡಲು ಜಮೀನುದಾರನು ತುಂಬ ಶ್ರಮಿಸಿದನು. ಅನಂತರ ಮಹಡಿಯ ಮೇಲೆ ಪ್ರಾರ್ಥನೆ ನಡೆಸುವುದಾಗಿ ಅಭಿಪ್ರಾಯ ಬಂದಾಗ ಜಮೀನುದಾರನು ಮಹಡಿಯನ್ನು ಶುಚಿಯಾಗಿರಿಸಿದನು ತನ್ನ ನೌಕರರ ಸಹಾಯದಿಂದ. ಗಾಂಧೀಜಿ ಅಂದರು, “ಪ್ರಾರ್ಥನೆ ಮಾಡಬೇಕಾಗಿದೆ, ಅದು ನನ್ನ ನಿತ್ಯದ ದಿನಚರಿಯ ಒಂದು ಅಂಗ”. ಸರಿ ಎಲ್ಲರು ಪ್ರಾರ್ಥನೆಗಾಗಿ ಮಹಡಿ ಹತ್ತಿದರು.

ಅಲ್ಲಿ ಬಂದು ಕೂತರು. ಗಾಂಧೀಜಿಯವರದು ಒಂದು ಹವ್ಯಾಸ ಆದೇಶವಿಲ್ಲ: ಅವರಿಗೆ ಪ್ರಾರ್ಥನೆ ನಡೆವ ಮೊದಲು ಕೋಣೆಯಲ್ಲಿನ ದೀಪಗಳೆಲ್ಲವೂ ಆರಿಸಲ್ಪಡಬೇಕು. ಅದರ ವಿನಹ ಅವರ ಪ್ರಾರ್ಥನೆ ಸಾಗದು. ಆಗ ಗಾಂಧೀಜಿಯವರು ಜಮೀನುದಾರನನ್ನು ಕುರಿತು, “ದೀಪವನ್ನು (ವಿದ್ಯುತ್.) ಆರಿಸಬೇಕು. ಅನಂತರವೇ ಪ್ರಾರ್ಥನೆ....” ಎಂದರು. ಆಗ ಜಮೀನುದಾರನು ತನ್ನ ನೌಕರನ್ನು ಕರೆದು ದೀಪದ ಸ್ವಿಚ್ ಆರಿಸ ಹೇಳಿದನು. ಆ ಸ್ವಿಚ್ಚಿನ ಗುಂಡಿ ನೌಕರರಿಂದ ದೂರ ಬಹುದೂರವಿತ್ತು ಅಂದರೆ ಅದು ಜಮೀನುದಾರನು ಕುಳಿತ, ಮೇಲೆ ಇತ್ತು. ಇಷ್ಟಿದ್ದಾಗಲೂ ಅತ ಆ ಕೆಲಸಕ್ಕಾಗಿ ನೌಕರನನ್ನು ಕರೆಯಿಸಿದ. ಏಕೆ ಗೊತ್ತೇ? ಅದನ್ನು ಗಾಂಧೀಜಿ ಗಮನಿಸಿದರು ಅವರಿಗೆ ಮಾತ್ರ ಅದು ಸಹನಾತೀತವಾದ ಘಟನೆಯಾಯಿತು. ಕೂಡಲೇ ತಾನೇ ಹೋಗಿ ದೀಪವನ್ನು ಆರಿಸಿದರು. ಜಮೀನುದಾರನಿಗೆ ಆಗ ಏನಾಗಿದ್ದಿರಬಹುದೆಂದು ನೀವು ಖಂಡಿತ ತಿಳಿದಿರುವಿರಿ? ಪ್ರಾರ್ಥನೆ ಕಳೆಯಿತು. ಆಗಲೇ ಅಲ್ಲಿ ನೆರೆದವರಿಗೆ ಗಾಂಧೀಜಿ ಉಪದೇಶವಿತ್ತರು, ‘ ಈಗಿನ ವಿದ್ಯಾವಂತರು ತಾವು ವಿದ್ಯೆ ಪಡೆದಿರುವೆವೆಂಬ ಭಾವನೆಯಿಂದ ಸ್ವತಃ ಕೆಲಸ ಮಾಡಲಾರರು. ಹಣವಂತರೂ ಹೀಗೆಯೇ. ಆದರೆ ಇದು ತಿಲಮಾತ್ರವೂ ವಿಹಿತವಲ್ಲ. ಗೀತೆಯಲ್ಲಿ ಶ್ರೀಕೃಷ್ಣ ಹೇಳಿದ್ದಾನೆ, ‘ಕೆಲಸಮಾಡದೇ ಉಣ್ಣುವವನು ಚೋರತನದ ಅನ್ನ ತಿನ್ನುತ್ತಾನೆ.’ ಆದುದರಿಂದ ನಮ್ಮನಮ್ಮ ಕೆಲಸವನ್ನು ನಾವು ನಾವೇ ಮಾಡಬೇಕು”.

‘ಕರ್ಮಣ್ಯೇ ವಾಧಿಕಾರಸ್ತೇ....’ ಅಂತ ಅರ್ಥ ಗಾಂಧೀಜಿಯವರ ಉಪದೇಶ ಕೊಡುವುದು.

ಈ ಉಪದೇಶವು ಜಮೀನುದಾರನನ್ನೇ ಉದ್ದೇಶಿಸಿ ಅಂದುದೆಂದು ನೀವು ತಿಳಿದಿರಬಹುದು. ಸರಿ. ಜಮೀನುದಾರನಿಗೆ ತುಂಬಾ ನಾಚಿಕೆಯಾಯಿತು.

ಪ್ರಾರ್ಥನೆ ಮುಗಿದಿದ್ದು, ಎಲ್ಲರೂ ಹೊರಡಲನುವಾದರು ಅಷ್ಟರಲ್ಲಿ ಓರ್ವ ವ್ಯಕ್ತಿಯ ಕಾಲುತಾಗಿ ಅವನ ಬಳಿಯಲ್ಲಿದ್ದ ಮೇಜು ಬಿದ್ದಿತು. ಅದರ ಮೇಲೆ ಅಲಂಕರಿಸಿ ಇಟ್ಟಿದ್ದ ಹೂವಿನ ಪಾತ್ರೆ ಕೆಳಕ್ಕುರುಳಿತು. ಹಾಗೆ ಉರುಳಿಲಾಗಿ ಅದು ಉಳಿದೀತೆ? ಅದು ಪುಡಿಯಾಯಿತು. ಆದರೆ ಒಂದು ವಿಷಯ ಅದು ಬಿದ್ದಿತೋ ಇಲ್ಲವೋ ಒಬ್ಬ ಅದನ್ನು ಥಟ್ಟನೆ ಎತ್ತಿ ಮೇಜಿನ ಮೇಲಿಟ್ಟು, ಮೇಜನ್ನು ವ್ಯವಸ್ಥಿತಗೊಳಿಸಿದನು. ಅವನು ಯಾರು ಗೊತ್ತೆ? ಅವನೇ ಮನೆಯ ಮಾಲಿಕ ಜಮೀನ್‌ದಾರ್. ಹಾಗಾದರೆ ಗಾಂಧೀಜಿಯವರ ಉಪದೇಶ ಫಲಿಸಿದಂತಾಯಿತು. ಆಗಲೇ ಗಾಂಧೀಜಿ ಸ್ವರ್ಗೀಯ ನಗೆ ಹೊರಸೂಸಿದರು, ತನ್ನ ಪಾಠ ಫಲಿಸಿತೆಂಬ ಧೈರ್ಯದಿಂದ.

— ಕೆ. ರಮೇಶ ಪೈ, ಉಡುಪಿ.

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್, ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ ಬೆಲೆ: ರೂ. 2 00.

ಭಾರತದ ಕರ್ಣ

“ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು.”(ಪ್ರೊ। ಎಂ ಆರ್. ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6 – 0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ ಬೆಲೆ 0—12 —0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
REGD. NO. M. 3619
UDIPI, THURSDAY
23—7—1959
LICENSE NO. 31
Licensed to Post without Prepayment

ಕಥಾ ವಿಹಾರ

(೨ನೇ ಪುಟದಿಂದ)

ದಿಂದ ಕೇಳಬೇಕಾಗಿ ಬಂತು. ಕಾಲ ಮಹಿಮೆಯಿದಲ್ಲವೆ?

ಈಗೀಗ ಗೋದಾವರಿ ತೀರ ಉದಾಸೀನ ಭಾವದಿಂದಲೇ ಅಡಿಗೆ ಮಾಡುತಿದ್ದಳು. ಪಂಡಿತರ ಪಥ್ಯಾ ಪಥ್ಯದಲ್ಲಿಯೂ ಆವಳಿಗೆ ಹಿಂದಿನಂತೆ ಚಿಂತೆಯಿರಲಿಲ್ಲ. ಒಂದು ದಿನ ಆಕೆ ಸೇವಕಿಯೊಡನೆ ಆಂದಾಜಿನ ಮೇಲೆ ಮೆಣಸು ಹಾಕಿ ಮಸಾಲೆ ಮಾಡ ಹೇಳಿದಳು. ಪಲ್ಯಕ್ಕೆ ಮೆಣಸು ಸ್ವಲ್ಪ ಹೆಚ್ಚಾಯಿತು. ಪಂಡಿತರು ಅವನ್ನು ತಿನ್ನಲಿಲ್ಲ. ಆಲಸಿಗಳಿಗೆ ಇದು ರುಚಿಸಿದರೂ ಅವರು ರೋಗಿಗಳಾಗಿದ್ದರು. ಗೋಮತಿಗೆ ಇವನ್ನು ಸಹಿಸಲಾಗಲಿಲ್ಲ. ಆಕೆಗೆ ತಿಳಿದಾಗ ಭುಜ ಹೊಸೆಯುತ್ತ ರೇಗಿ ರೇಗಿ ಹೇಳಿದಳು—"ಮುದಿತನದಲ್ಲಿ ನಾಲಗೆಯೂ ಮಾರುದ್ಧವಾಯಿತೆ?"

ಇಂತಹುದೇ ಕಟು ವಾಕ್ಯಗಳನ್ನು ಒಂದು ಭಾರಿ ಗೋದಾವರಿಯೂ ಆಡಿದ್ದಳು. ಇಂದು ಆಕೆಯು ನೊಳು ಕೇಳುವುದಾಗಿತ್ತು.

೭

ಇಂದು ಗೋದಾವರಿ ಗಂಗೆಯನ್ನಾಲಂಗಿಸಲು ಬಂದಿದ್ದಾಳೆ. ಆಕೆ ವಧೂವರರನ್ನು ಗಂಗೆಗೆ ಹೂ ಏರಿಸಲು ಕರೆತಂದು ಮೂರು ವರ್ಷಗಳುರುಳಿದುವು. ಇಂದು ತನ್ನ ಪ್ರಾಣಸಮರ್ಪಣೆ ಮಾಡಲು ಬಂದಿದ್ದಾಳೆ. ಇಂದು ಗಂಗೆಯ ಆನಂದಮಯಿ ತೆರೆಗಳಲ್ಲಿ ವಿಶ್ರಾಂತಿ ಹೊಂದಲು ಬಯಸುತಿದ್ದಾಳೆ.

ಗೋದಾವರಿಗೆ ಆ ಮನೆಯಲ್ಲಿ ಒಂದು ಕ್ಷಣವಿರುವುದೂ ದುಸ್ಸಹವಾಗಿತ್ತು. ತಾನು ರಾಣಿಯಾಗಿ ಮೆರೆದಾಡಿದ್ದ ಮನೆಯಲ್ಲಿ ದಾಸಿಯಂತೆ ಜೀವಿಸಿರುವುದು ಆಕೆಯಂತಹ ಸ್ವಾಭಿಮಾನಿಗೆ ಅಸಾಧ್ಯವಾಗಿತ್ತು.

ಹಳೆಯದಾದ ಹಗ್ಗವೊಂದು ಗಂಟು ಹಾಕಿ ಜೋಡಿಸಿದ್ದರೂ ಅಲ್ಲಲ್ಲಿ ಮುರಿಯುವಂತಹ ಹೀನಸ್ಥಿತಿಯಲ್ಲಿರುವಂತೆ ಗೋದಾವರಿ ಜೀವಹಿಡಿದಿದ್ದಳು. ಆಕೆಗೆ ಗಂಗೆಗೆ ಶರಣುಹೋಗುವುದಲ್ಲದೆ ಮತ್ತಾವ ಆಶ್ರಯವಿಧಿಯೂ ಇರಲಿಲ್ಲ.

ಆಕೆಯು ಬಾಯಿಂದ ಪ್ರಾಣತ್ಯಾಗ ಮಾಡುವ ಬೆದರಿಕೆಯನ್ನು ಕೇಳಿ ಪಂಡಿತರು "ನೀನು ಹೇಗಾದರೂ ಸತ್ತುಹೋಗುತ್ತಿ" ಎಂದು ಹೇಳಿ ಬಹುದಿನ ಕಳೆದಿತ್ತು.

ಆ ವಿಷಮಯ ಶಬ್ದಗಳನ್ನು ಗೋದಾವರಿಯು ಮರೆತಿರಲಿಲ್ಲ. ಚುಚ್ಚು ಮಾತುಗಳನ್ನಾಕೆ ಎಂದೆಂದಿಗೂ ಮರೆಯುವ ಜೀವವೂ ಆಕೆಯದಲ್ಲ. ಇಂದು ಗೋಮತಿಯೂ ಅದೇ ಮಾತನ್ನಾಡಿದ್ದಳು. ಗೋದಾವರಿಗೆ ತನ್ನ ಮಾತು ಮರೆತೇ ಹೋಗಿದ್ದರೂ ಕೇವಲ ಗೋಮತಿ ಮತ್ತು ಪಂಡಿತರ ವಾಕ್ಯ ಕಿವಿಯಲ್ಲಿ ಗುಯ್‌ಗುಡುತಿತ್ತು. ಪಂಡಿತರು ಆಕೆಯನ್ನು ಲಕ್ಷಿಸುತ್ತಲೂ ಇರಲಿಲ್ಲ. ತನ್ನ ಮೇಲೆ ಇಂತಹ ಘೋರ ಅನ್ಯಾಯವನ್ನು ಹೇರುವಾಗ, ಅವರು ಬಾಯಿಯನ್ನೂ ಬಿಚ್ಚಲಿಲ್ಲ!

ಇಂದು ಎಲ್ಲ ಜನರೂ ಮಲಗಿ ನಿದ್ರಿಸಿದ ಮೇಲೆ ಗೋದಾವರಿಯು ಮನೆಯಿಂದ ಹೊರಬಿದ್ದಳು. ಆಕಾಶದಲ್ಲಿ ಕರಿ ಮೋಡಗಳು ತುಂಬಿದ್ದುವು. ಮಳೆಯ ಹೊಡೆತವು ಬೀಳುತಿತ್ತು. ಇಲ್ಲಿ, ಆಕೆಯ ನೇತ್ರ ಜಲದಗಳಿಂದಲೂ ನೀರು ಸುರಿಯುತಿತ್ತು. ಪ್ರೇಮ ಬಂಧನವು ಎಷ್ಟು ಕೋಮಲ ಮತ್ತು ದೃಢವಾಗಿದೆ! ಅಪಮಾನದೆದುರು ಕೋಮಲವಾಗಿದೆ; ವಿಯೋಗದ ಮುಂದೆ ದೃಢವಾಗಿದೆ. ಗೋದಾವರಿಯು ಜಗಲಿಯಲ್ಲಿ ನಿಂತು, ಘಂಟೆ ಗಟ್ಟಲೆ ಅಳುತ್ತಿದ್ದಳು; ಅದೆಷ್ಟೊ ಹಿಂದಿನ ಮಾತುಗಳು ಸ್ಮರಣೆಗೆ ಬಂದುವು. ಇಲ್ಲಿ ಆಕೆಯ ಕಡೆಗೆ ಪ್ರೇಮ, ಮಾನ ಜೀವನ ಸುಖಗಳು ಇದ್ದ ಒಂದು ಸಮಯವಿತ್ತು. ಶೀಘ್ರವೇ ಅವರ ಆ ಕಠೋರ ಶಬ್ದಗಳು ಪ್ರತಿ ಧ್ವನಿಸುತಿದ್ದುವು. ಕಣ್ಣುಗಳಿಂದ ಪುನಃ ಕಣ್ಣೀರಿನ ಧಾರೆ ಹರಿಯ ತೊಡಗಿದುವು. ಗೋದಾವರಿಯು ಹೊರ ಹೊರಟಳು.

ಈ ಸಮಯ ಪಂಡಿತ ದೇವದತ್ತರು ಬರಿತಲೆ ಬರಿಪಾದಗಳಿಂದ ಒಡ್ಡೆಯಾಗಿ ನಡೆದು ಬಂದಿದ್ದರೆ, ಗೋದಾವರಿಯ ಕಂಪಿತ ಕರಗಳನ್ನು ಹಿಡಿದು ತನ್ನ ಬಡೆಯುವ ಹೃದಯವನ್ನು ಕಟ್ಟಿಕೊಂಡು "ಪ್ರಿಯೆ" ಎಂಬುದಕ್ಕಿಂತ ಹೆಚ್ಚು ಮಾತಾಡದೆ ಇದ್ದರೂ ಗೋದಾವರಿಯು ತನ್ನ ವಿಚಾರಗಳ ಮೇಲೆ ಸ್ಥಿರವಾಗಿರಬಲ್ಲಳೆ?

ಆಷಾಢ ಮಾಸವಾಗಿತ್ತು ರಾತ್ರೆಯಲ್ಲಿ ಗಂಗೆಯ ತೆರೆಗಳ ಗರ್ಜನೆ ಬಹಳ ಭಯಾನಕವಾಗಿ ಕೇಳಿಬರುತಿತ್ತು. ಒಡನೆಯೇ ಮಿಂಚು ಕಣ್ಣಿಗೆ ಕಟ್ಟುತಿತ್ತು. ಆಗ ತೆರೆಗಳು ಪ್ರಕಾಶದಿಂದ ಉಜ್ವಲವಾಗುತಿದ್ದುವು. ಪ್ರಕಾಶವು ಉನ್ಮತ್ತ ಹಸ್ತಿಯರೂಪ ಧರಿಸಿ ಆಕ್ರಮಣಮಾಡುತ್ತಿರುವಂತೆ ಭಾಸವಾಗುತಿತ್ತು. ಜೀವನ ಸಂಗ್ರಾಮದ ಒಂದು ವಿಶಾಲ ದೃಶ್ಯ ಕಣ್ಣುಗಳೆದುರು ಬಂದು ನಿಲ್ಲುತಿತ್ತು.

ಗೋದಾವರಿಯ ಹೃದಯದಲ್ಲಿಯೂ ವಿಚಾರದ ಅನೇಕ ಲಹರಿಗಳು ಅತ್ಯಂತ ತೀವ್ರವಾಗಿ ಏಳುತಿದ್ದುವು. ಪರಸ್ಪರ ಹೊಡೆದಾಡುತಿದ್ದುವು; ಅಣಕಿಸುತಿದ್ದುವು; ತಮಗೆ ತಾವೇ ಮಾಯವಾಗುತಿದ್ದುವು. ಎಲ್ಲಿ? ಅಂಧಕಾರದಲ್ಲಿ!

ಈ ಬೊಬ್ಬಿಡುವ ಗಂಗೆಯು ಗೋದಾವರಿಗೆ ಶಾಂತಿ ನೀಡಬಲ್ಲಳೆ? ಆಕೆಯ ತೆರೆಗಳಲ್ಲಿ ಸುಧಾ ಸಮ ಮಧುರಧ್ವನಿಯಿಲ್ಲ; ಆಕೆಯಲ್ಲಿ ಕರುಣವಿಕಾಸವೂ ಇಲ್ಲ. ಆಕೆ ಈಗ, ಉದ್ದಂಡತೆ ಮತ್ತು ನಿರ್ದಯತೆಯ ಭೀಷಣ ಮೂರ್ತಿಯಾಗಿದ್ದಾಳೆ!

ಗೋದಾವರಿಯು ತಟದಲ್ಲಿ ನಿಂತು ಏನು ಯೋಚಿಸುತಿದ್ದಳು, ಅದು ಯಾರಿಗೆ ಗೊತ್ತು? ಪಂಡಿತ ದೇವದತ್ತರು ಬರಬಾರದೆ ಎಂದಾಕೆಗೆ ತೋರಿರಬಹುದೆ? ಪ್ರೇಮದ ಬಂಧನ ಎಷ್ಟು ಬಿಗಿಯಾಗಿರುತ್ತದೆ!

ಅದೇ ಅಂಧಕಾರದಲ್ಲಿ ಈರ್ಷ್ಯೆ, ನಿಷ್ಠುರತೆ ಮತ್ತು ನೈರಾಶ್ಯಗಳಿಂದ ನೊಂದ ಆ ಅಬಲೆಯು ಗಂಗೆಯ ತೊಡೆಗಳಲ್ಲಿ ಬಿದ್ದುಬಿಟ್ಟಳು! ತೆರೆಗಳು ಎದ್ದು ಹಾರಿದುವು!! ಆಕೆಯನ್ನು ಅದುಮಿ ಅಪ್ಪಿ ಹಿಡಿದುವು!!

ಬೆಳಗಾಯಿತು ಗೋದಾವರಿ ಮನೆಯಲ್ಲಿರಲಿಲ್ಲ. ಆಕೆಯ ಚಾಪೆಯಲ್ಲಿ ಒಂದು ಪತ್ರ ಬಿದ್ದುಕೊಂಡಿತ್ತು—

"ಸ್ವಾಮಿ, ಲೋಕದಲ್ಲಿ ತಮ್ಮ ಹೊರತು ಮತ್ತಾರು ನನ್ನ ಸ್ನೇಹಿತರಾಗಿದ್ದರು? ನಾನು ನನ್ನ ಸರ್ವಸ್ವವನ್ನೂ ತಮ್ಮ ಸುಖಕ್ಕೋಸ್ಕರ ಸಮರ್ಪಿಸಿದ್ದೇನೆ. ನಾನೀಗ ಈ ಪ್ರಪಂಚದಿಂದ ದೂರ ಹೋಗುವುದರಲ್ಲಿಯೇ ತಮ್ಮ ಸುಖ ಅಡಗಿದೆ. ಆದುದರಿಂದ, ಈ ಪ್ರಾಣವು ತಮಗೆ ಉಡುಗೊರೆ. ನನ್ನಿಂದ ಆಗಿರಬಹುದಾದ ಅಪರಾಧಗಳನ್ನು ಕ್ಷಮಿಸಿರಿ. ಪರಮಾತ್ಮನು ತಮ್ಮನ್ನು ಸದಾ ಸುಖಿಯಾಗಿಡಲಿ."

ಪಂಡಿತರು ಈ ಪತ್ರವನ್ನೋದಿದವರೇ ಮೂರ್ಛಿತರಾಗಿ ಬಿದ್ದರು. ಗೋಮತಿ ಅಳತೊಡಗಿದಳು. ಆಕೆಯ ವಿಲಾಪದ ಕಣ್ಣೀರೇ ಅಪರಾಗಿದ್ದರೆ?

(ಸಮಾಪ್ತಿ)

—ಪ್ರೇಮಚಂದ.

ವಿಚಾರ ಮಥನ

(೧ನೇ ಪುಟದಿಂದ)

ಸ್ವರವೇ ಘಟನೆಗೆ ತಿದ್ದುಪಡಿಮಾಡುವುದು ನ್ಯಾಯ ದೃಷ್ಟಿಯಿಂದ ಸರಿಯೆ? ಇವೆಲ್ಲಾ ಪರ್ಯಾಲೋಚನಾರ್ಹಗಳು.

ಇವೆಲ್ಲಾ ಸಮಸ್ಯೆಗಳನ್ನು ಸುಲಭದಲ್ಲಿ ದೂರೀಕರಿಸುವ ಸಾಧನಗಳಲ್ಲ. ತಾವು ಜನಮತ ಯುಕ್ತರಾಗಿರುವೆವೆಂಬ ಕಮ್ಯುನಿಸ್ಟ ಸರಕಾರವು ಭಾರತದ ಬಹುಸಂಖ್ಯಾಕರ ಅಭಿಪ್ರಾಯದಂತೆ ಮರುಚುನಾವಣೆಯನ್ನು ಎದುರಿಸಿ, ತಮ್ಮ ಆತ್ಮಧೈರ್ಯವನ್ನು ಪ್ರದರ್ಶಿಸುವುದರಿಂದಲೇ ಸಮಸ್ಯೆ ಸರಳವಾಗಿ ಪರಿಹಾರಗೊಳ್ಳುವುದು; ವಿರೋಧೀಪಕ್ಷಗಳ ಆಂದೋಲನಕ್ಕಿದ್ದ ಜನತಾ ಬೆಂಬಲದ ಪ್ರಮಾಣವೂ ಬಹಿರಂಗವಾಗುವುದು. ಆದರೆ, ರಶ್ಯ ಯಾತ್ರೆ ಮಾಡಿಬಂದ ಭಾರತೀಯ ಕಮ್ಯುನಿಸ್ಟ ನೇತಾರರು ಅಲ್ಲಿಂದ, ತಮ್ಮ ಪಕ್ಷವನ್ನು ಬಲಪಡಿಸುವ ಮತ್ತು ಭಾರತವನ್ನೇ ತನ್ನ ನಾಟ್ಯರಂಗವಾಗಿ ಮಾಡುವ, ಯಾವ ನೂತನೋಪಾಯಗಳ ಪಾಠವನ್ನು ಅಭ್ಯಸಿಸಿ ಬಂದಿರುವರೆಂದು ಯಾರಿಗೆ ಗೊತ್ತು? ತಾವು ಕಲಿತುಬಂದ ಪಾಠದ ಬಲದಿಂದಲೇ ಕಮ್ಯುನಿಸ್ಟ ಸರಕಾರ ಕಾರ್ಯವೆಸಗುವುದಿಲ್ಲವೆ? ರಶ್ಯ ಪ್ರಯಾಣಕ್ಕೆ ಸಿದ್ಧರಾಗುವಾಗ ಶ್ರೀ ನಂಬೂದರಿ ಪಾದರೆಂದ "ಅಂತರ್ಯುದ್ಧ"ಕ್ಕೂ ಕೇರಳದಲ್ಲಿ ಈಗ ಉಂಟಾಗಿರುವ ಪರಿಸ್ಥಿತಿಗೂ ತಾಳ ತಂತಿ ಕೂಡಿಬಂದಿದೆಯೆಂದು ಹೇಳಬೇಕೆ? ಬೇಡವೆ?

—ರಾತಿ.

ಉಡುಪಿ ಕರ್ನಾಟಕ ಸಂಘದ
ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.)

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕ್ಯುಮ್ಯುಲೆಟಿವ್
ಠೇವಣಾತಿಗಳು

ರೂಪಾಯಿ ಐದು ಅಥವಾ ಅದರ ಗುಣಕಗಳಲ್ಲಿ ಸಂಗ್ರಹಿಸಿಡಲು ಉತ್ತಮ ಸಾಧನ. ಮಾಸಿಕ ವೇತನ ಪಡೆಯುವ ಮಂದಿಗೆ ಅನುಕೂಲ ಹಾಗೂ ಆಕರ್ಷಕವಾಗಿವೆ. ಹೆಚ್ಚಿನ ವಿವರಗಳಿಗೆ ಸಿಂಡಿಕೇಟ್ ಬೇಂಕಿಗೆ ಬನ್ನಿರಿ ಅಥವಾ ಬರೆಯಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್
ಸಿಂಡಿಕೇಟ್, ಲಿಮಿಟೆಡ್

ಹಾರ್ಮೋನಿಯಮ್
ಬೋಧನ ಕ್ರಮ
ಎಂಬ ಶ್ರೀ. ಎ. ರಾಮಪ್ಪನವರಿಂದ
ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ
ಕಳಿಸಬಹುದು.
ನವಭಾರತ ಬುಕ್ ಡಿಪೊ, ಉಡುಪಿ.

ವಿದ್ಯಾರ್ಥಿಗಳಿಗೆ ಉಪಯುಕ್ತವಾದ
ಭಾರದ್ವಾಜ ಡಿಕ್ಷನೆರಿ
ಇಂಗ್ಲಿಷ್ ಕನ್ನಡ ಶಬ್ದಕೋಷ
ದೊರೆಯುತ್ತದೆ
ನವಭಾರತ ಬುಕ್ ಡಿಪೊ, ಉಡುಪಿ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ.

ವರುಷ ೩೮. ವಾರ ೪೬. 30-7-1959 Vol. 38. No. 46.

ವಿಚಾರ ಮಥನ

ಅನ್ನ ಮತ್ತು ಶಿಕ್ಷಣ ಪ್ರಶ್ನೆ

* *

ಕೇರಳದ ಬಗ್ಗೆ ಕುತೂಹಲ

* *

ಅಕ್ಕಿಯ ಬೆಲೆ ಇಳಿಯಲಿ!

* *

೧೯೬೫—೬೬ರ ಒಳಗೆ ಭಾರತದಲ್ಲಿ ೧೧ ವರ್ಷದೊಳಗಿನ ಎಲ್ಲ ಮಕ್ಕಳಿಗೂ ಉಚಿತ ಶಿಕ್ಷಣ ಕೊಡುವ ಬಗ್ಗೆ ಒಂದು ಕಾರ್ಯಕ್ರಮವೀಗ ಸಿದ್ಧವಾಗುತ್ತಿದೆ. ಭಾರತದ ಸಂವಿಧಾನವನ್ನು ತಯಾರಿಸುವಾಗ, ಅದರಲ್ಲಿ ಹತ್ತು ವರ್ಷಗಳೊಳಗೆ ೬ರಿಂದ ೧೪ ವರ್ಷ ಪ್ರಾಯದೊಳಗಿನ ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡಬೇಕೆಂದು ಉಲ್ಲೇಖಿತವಾಗಿರುವುದನ್ನು ನಾವು ಅವಶ್ಯ ಗಮನಿಸಬೇಕು. ಈ ಅವಧಿಯು ೧೯೬೦ಕ್ಕೆ ಮುಗಿಯುತ್ತದೆ ಈಗ ತಾನೇ ರೂಪಿಸಲಾಗುತ್ತಿರುವ ಯೋಜನೆಯಂತೆ, ೬೦ರಲ್ಲಿಯಲ್ಲ ೬೫ರ ಸುಮಾರಿಗೆ ಕೇವಲ ೧೧ ವರ್ಷದೊಳಗಿನವರಿಗೆ ಮಾತ್ರ ಈ ಸೌಲಭ್ಯ ದೊರೆಯುವುದು. ಸಂವಿಧಾನ ಸಿದ್ಧಪಡಿಸುವಾಗ ನಿರಕ್ಷರತೆಯನ್ನು ದೂರೀಕರಿಸುವುದು ಸರಳವೆಂದು ತಿಳಿದುಕೊಂಡು ತತ್ಪರಿಣಾಮವಾಗಿ ಆ ರೀತಿ ಹೇಳಲಾಗಿದ್ದರೂ ಈಗ ಅದನ್ನು ಕಾರ್ಯರೂಪಕ್ಕಿಳಿಸುವಾಗ ಅದರ ಕಠಿಣತೆಯು ಎದುರಾಗುತ್ತಿರುವುದು. ಅನಕ್ಷರಸ್ಥರಾದ ಭಾರತೀಯರನ್ನು ಸುಶಿಕ್ಷಿತರಾಗಿಸುವುದು ಅವರ ಮೂಲಭೂತ ಆವಶ್ಯಕತೆಗಳಲ್ಲಿ ಒಂದಾಗಿರುವುದಾದರೂ ಅದೇ ಚರಮಾವಶ್ಯಕತೆ ಎಂದು ಹೇಳುವುದು ಸಾಧ್ಯವಿಲ್ಲ. ದೇಶದ ಜನತೆಯಲ್ಲಿ ಒಂದಂಶ ನಿತ್ಯದರಿದ್ರರಾಗಿ, ಪಶುಹೀನವಾದ ಬಾಳ್ವೆಯನ್ನು ಬದುಕುತ್ತಿರುವಾಗ ಅವರ ಉದರವಹ್ನಿಯನ್ನು ದೂರೀಕರಿಸುವ ಜಟಿಲ ಪ್ರಶ್ನೆಯನ್ನು ಮೊದಲು ಉತ್ತರಿಸಿ, ತದನಂತರ ಜ್ಞಾನಪಿಪಾಸೆಯುತ್ತ ಹೊರಳುವುದು ಆವಶ್ಯವಾಗಿದೆ". ಬುಭುಕ್ಷಿತಃ ಕಿಂನ ಕರೋತಿ ಪಾಪಂ?" ಎಂಬಂತೆ ಹಸಿವೆಯನ್ನು ಮೀರಿಸಿದ ಬೇರೆ ಯಾವುದೂ ಪ್ರಪಂಚದಲ್ಲಿಲ್ಲ; ಎಲ್ಲರೂ ಮಾಡುವುದು ಹೊಟ್ಟೆಗಾಗಿ! ಆ ಸುಡು ಹೊಟ್ಟೆಯ ಹೆತ್ತವರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸದ ಸೌಲಭ್ಯವನ್ನೀಯುವುದಾದರೂ ಹೇಗೆ? ಸದ್ಯ ನಿಯೋಜಿತ ಯೋಜನೆಯಂತೆ ಮಕ್ಕಳಿಗೇನೋ ಉಚಿತ ಶಿಕ್ಷಣ ಲಭಿಸುವುದು ಬೇಕಾದರೆ, ಅದನ್ನು ಖಡ್ಡಾಯವಾಗಿಯೂ ಮಾಡುವುದು ಸಾಧ್ಯ. ಆದರೆ, ಇದರಿಂದ ಹೊಟ್ಟೆಯ ಹಸಿವು ಇಂಗುವುದೆ? ಆದುದರಿಂದ ನಮ್ಮ ಸರಕಾರ, ಕೇಂದ್ರ ಹಾಗೂ ರಾಜ್ಯ, ಮಕ್ಕಳಿಗೆ ವಿದ್ಯಾಭ್ಯಾಸ ಒದಗಿಸುವ ಯೋಜನೆಯನ್ನು ಕಾರ್ಯಗತ ಮಾಡುವುದರೊಡನೆ, ದರಿದ್ರ ಜನತೆಯ ಆರ್ಥಿಕ ಸ್ಥಿತಿಗತಿಗಳನ್ನೂ ವಿಶೇಷವಾಗಿ ಎತ್ತರಿಸುವ ಕಾರ್ಯಕ್ರಮವನ್ನು ರೂಪಿಸಿ, ಅವುಗಳ ಲಾಭವನ್ನೂ ಅವರು ಪಡೆಯುವಂತೆ ನೋಡಿಕೊಳ್ಳಬೇಡವೆ?

○○ ○○

ಕೇರಳದಲ್ಲಿ ಎಲ್ಲರೂ ಅಶಾಂತ ಪರಿಸ್ಥಿತಿ ಯೊದಗಿ ಬಂದಿದೆ ಎಂಬುದನ್ನು ಒಪ್ಪುವರಾದರೂ ಅಲ್ಲಿನ ಸ್ಥಿತಿಗತಿಗಳನ್ನು ಶಾಂತಗೊಳಿಸಲು ರಾಷ್ಟ್ರಪತಿಗಳ ಆಳಿಕೆಯನ್ನು ಘೋಷಿಸಬೇಕು (ಅಲ್ಲಿ ಕಮ್ಯುನಿಸ್ಟ ಮಂತ್ರಿಮಂಡಲ ರಾಜಿನಾಮೆಯೀಯಲು ಸಿದ್ಧವಿಲ್ಲ) ಎಂಬುದರಲ್ಲಿ ಭಿನ್ನಾಭಿಪ್ರಾಯಗಳು ವ್ಯಕ್ತಪಟ್ಟಿವೆ. ಕಮ್ಯುನಿಸ್ಟ ನಾಯಕರಾದ ಶ್ರೀ ಎ. ಕೆ. ಗೋಪಾಲನರು ಒಂದೆಡೆ ಮಾತನಾಡುತ್ತ ಒಂದು ರಾಜ್ಯದ ವಿಧಾನಸಭೆಯಲ್ಲಿ ಒಂದು ಪಕ್ಷವು ಬಹುಮತದಲ್ಲಿರುವಾಗ ಅದನ್ನು ಪದಚ್ಯುತಗೊಳಿಸುವುದು ಅನುಚಿತವೆಂಬ ಅರ್ಥದ ಮಾತುಗಳನ್ನಾಡಿರುವರು ಈ ಉದ್ಗಾರಗಳನ್ನು ಪಾಲ್ಘಾಟಿನ ಶ್ರೀ ಕೆ. ಪಿ. ಮನಮೋಹನ ಉನ್ನಿಯವರು 'ಹಿಂದೂ' ಪತ್ರಿಕೆಯಲ್ಲೊಂದು ಓಲೆ ಬರೆದು ಉತ್ತರಿಸಿದ್ದಾರೆ ಬ್ರಿಟನ್ನಿನ ರಾಜರು ೧೭೮೩ರಲ್ಲಿ ಫಾಕ್ಸ್ ಮತ್ತು ನಾರ್ಥ್‌ಗಳ ಹಾಗೂ ೧೮೩೪ರಲ್ಲಿ ಮೆಲ್ಬೋರ್ನ್‌ನ ಸರಕಾರಗಳನ್ನು ಜನತೆಯ ಅಭಿಪ್ರಾಯಗಳನ್ನು ರೂಪಿಸಲಾರವೆಂಬ ಅಭಿಪ್ರಾಯವು ಬಂದು ತನಗಿರುವ ಸಾರ್ವಭೌಮಾಧಿಕಾರದಿಂದ ಕಿತ್ತುಹಾಕಿ ಮರುಚುನಾವಣೆಯನ್ನು ನಡೆಸಬೇಕೆಂದು ಸಾರಿದರು. ರಾಜರು ಎರಡೂ ಸಂದರ್ಭಗಳಲ್ಲಿ ಸಾಂವಿಧಾನಿಕವಾಗಿಯೇ ನಡೆದುಕೊಂಡಿದ್ದಾರೆ. ಭಾರತದ ರಾಷ್ಟ್ರಪತಿಯವರ ಪದವಿ ಮತ್ತು ಅಧಿಕಾರಗಳು ಬ್ರಿಟನ್ನಿನ ರಾಜನಿಗಿರುವಂಥವೇ ಆಗಿವೆ. ಹಾಗಿರುವಾಗ ಕೇರಳದ ಕಮ್ಯುನಿಸ್ಟ ಸರಕಾರವು ಅಲ್ಲಿನ ಜನತೆಯ ಅಭಿಪ್ರಾಯಗಳಿಗೆ ಸರಿಯಾಗಿ ಆಡಳಿತವನ್ನು ನಿರ್ವಹಿಸುವುದಿಲ್ಲವೆಂದವರಿಗೆ ಖಚಿತವಾದರೆ, ಅಲ್ಲಿನ ಸರಕಾರವನ್ನು ಪದಚ್ಯುತಗೊಳಿಸುವುದು ಪ್ರಜಾಪ್ರಭುತ್ವಕ್ಕೂ ಸಂವಿಧಾನಕ್ಕೂ ವ್ಯತಿರಿಕ್ತವಾದುದಲ್ಲ ಆದರೆ, ರಾಷ್ಟ್ರಪತಿಯವರಿಗೆ ಕೇರಳದ ಕಮ್ಯುನಿಸ್ಟ ಸರಕಾರವು ಅಲ್ಲಿನ ಜನಾಭಿಪ್ರಾಯವನ್ನು ಕಡೆಗಣಿಸಿರುವುದರ ಮಟ್ಟಿಗೆ ವಿಶ್ವಾಸ ಹುಟ್ಟಬೇಕು; ಅಷ್ಟೆ.

ಈಗ ನವದೆಹಲಿಯ ರಾಜಕೀಯ ವಲಯದಲ್ಲಿ ಕೇರಳದ ಬಗ್ಗೆ ಊಹಪೋಹೆಗಳು ನಡೆಯುತ್ತಿವೆ. ಮಂತ್ರಿಮಂಡಳದ ಸಭೆಗಳು ನಡೆಯುತ್ತಿವೆ. ರಾಷ್ಟ್ರಪತಿಯವರೂ ಗೃಹ ಶಾಖೆಯೊಡನೆ ಹಾಗೂ ಪ್ರಧಾನಿಯವರೊಡನೆ ವಿಚಾರ ವಿನಿಮಯ ಮಾಡಿದ್ದಾರೆ ರಾಜ್ಯದ ಆಡಳಿತೆಯ ಬಗ್ಗೆ ರಾಜ್ಯಪಾಲರೂ ತಮ್ಮ ಅಭಿಪ್ರಾಯವನ್ನು ಇಷ್ಟರಲ್ಲೇ ಕೊಡುವ ನಿರೀಕ್ಷೆಯಿದೆ. ವಿರೋಧೀ ಪಕ್ಷಗಳು ತಮ್ಮ ಮೇಲೆ ಹೇಳಿದ ಆರೋಪಗಳಿಗೆ ಸಮರ್ಪಕವಾದ ಉತ್ತರಗಳನ್ನೂ ಕೇರಳ ಸರಕಾರ ಇತ್ತಿದೆ. ಇವೆಲ್ಲವುಗಳನ್ನು ಒಟ್ಟಿಗಲ್ಲಿಗೆ

(೧೨ನೇ ಪುಟ ನೋಡಿರಿ)



ಆಯಸ್ಕಾಂತದ ಸಹಾಯದಿಂದ ಸರಿಗೆಗಳಿಲ್ಲದ ಕರೆಗಂಟೆಗಳು ಡಾಕ್ಟರರನ್ನು ಕರೆಯಲು ಅನುಕೂಲವಾಗಿವೆ.

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3. ಸ್ಥಾಪನೆ:- 1,931.

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ...

ಕಥಾ ವಿಹಾರ

ಕಡೆಗೂ ಪತಿಬಂದ! ಆದರೆ, ಬಂದನೆ?

× ×

ದೀಪಾವಳಿಯು ಮೋಹನನನ್ನೂ ಹೊತ್ತಿಸಿ ನಲಿಯ ತೊಡಗಿತು!

ಮೋಹನ ಬರುವ ಪತ್ರವನ್ನೋದಿದಾಗಿನಿಂದಲೂ ಲಕ್ಷ್ಮೀಗೆ ದೀಪಾವಳಿಯಲ್ಲಿ ಗಂಡನಿಗೆ ಮಾಡುವ ಆರತಿಯ ಚಿತ್ರವೇ ಕಣ್ಣಮುಂದೆ ಸ್ಪಷ್ಟವಾಗಿ ಮೂಡುತ್ತಿತ್ತು. ಮದುವೆಯಾಗಿ ಎರಡು ವರ್ಷಗಳಾದರೂ ಗಂಡನಿಗೆ ದೀಪಾವಳಿ ಆರತಿ ಮಾಡುವ ಸೌಭಾಗ್ಯ ಲಕ್ಷ್ಮೀಗೆ ಬಂದಿರಲಿಲ್ಲ! ಈ ಸಲ ತನ್ನ ದೇವರು ಬಂದು, ತನ್ನ ಹೃದಯದಾಶೆಯನ್ನು ಸಫಲಗೊಳಿಸುವುದನ್ನು ಕಂಡು ಲಕ್ಷ್ಮೀಗೆ ಸ್ವರ್ಗಪಡೆದುದಕ್ಕಿಂತಲೂ ಹೆಚ್ಚು ಹರ್ಷವಾಗಿತ್ತು!. ಇಪ್ಪತ್ತು ವರ್ಷದ ಲಕ್ಷ್ಮೀಗೆ ತಾರುಣ್ಯದ ಬಿಸಿರಕ್ತದ ಆಶಾಬಾಗ್ಗೆ ಸುಂದರ ಕಮಾನಿನಂತೆ ಸುತ್ತುಮುತ್ತಲೂ ಸಿಡಿಯುತ್ತಿತ್ತು. ಬಾಳಿನ ಪ್ರಕಾಶಮಾನ ಕಾಲದ ಬೆಳಕೂ ಅವಳಲ್ಲಿ ತುಂಬಿ ತುಳುಕುತ್ತಿತ್ತು. ಚತುರ್ದಶಿಗೆ ಮೊದಲೇ ಎರಡು ದಿನ ಬರುವುದಾಗಿ ಮೋಹನ ಲಕ್ಷ್ಮೀಗೆ ಕಾಗದ ಬರೆದಿದ್ದ. ಅದರಂತೆಯೇ ಲಕ್ಷ್ಮಿಗೆ ದಿನಗಳನ್ನೆಣಿಸಿಕೊಳ್ಳುವುದೇ ಒಂದು ಕೆಲಸವಾಗಿ ಬಿಟ್ಟಿತು!

ಚತುರ್ದಶಿಗೆ ಎರಡು ದಿನ ಮೊದಲೇ ಮುಂಜಾವಿನಿಂದಲೇ ಲಕ್ಷ್ಮೀಯ ಕಲ್ಪನಾ ಸಾಮ್ರಾಜ್ಯ ಮೋಹನನತ್ತ ಓಡಿ ಹೋಗಿತ್ತು... ಮೋಹನ ಬಸ್ಸಿನಲ್ಲಿ ಕುಳಿತಿರಬಹುದಲ್ಲವೇ? ಅದು ಹುಬ್ಬಳ್ಳಿಯನ್ನು ಬಿಟ್ಟು ಈಗಾಗಲೇ ಧಾರವಾಡವನ್ನು ಸೇರಿರಬಹುದಲ್ಲವೇ? ತನ್ನನ್ನು ಕಾಣಲು ಮೋಹನ ಕಾತುರನಾಗಿರಬೇಕಲ್ಲವೇ?....ಇಲ್ಲ....ಇಲ್ಲ.... ನಾನೇ ಆತುರಳಾಗಿದ್ದೇನೆಯೋ ಏನೋ?....ಗಂಡಸು ಕಠಿಣ ಹೃದಯಿ...ಆದರೂ ಜಗತ್ತು ಇಬ್ಬರಲ್ಲೂ ಮಾಯೆಯನ್ನು ತುಂಬಿದೆ.... ಗಂಡಸು— ಹೆಂಗಸು ಒಬ್ಬರೊಬ್ಬರೂ ಒಬ್ಬರಿಗೊಬ್ಬರಿಗೆ ಕಾತುರರಾಗಲೇ ಬೇಕು! ....ಹೌದು....ಕಾತುರರಾಗಲೇ ಬೇಕು.... ಅವರು ನನಗಾಗಿ ಏನು ತರುವರೋ? ಸೀರೆಯನ್ನಂತೂ ಮರೆಯಲಾರರು, ಕುಪ್ಪಸಕ್ಕಾಗಿ ತರುವ ಅರಿವೆ ಎಷ್ಟು ಚೆಲುವಿದೋ? ಸ್ನೋ ಪೌಡರ್ ಯಾವ ಕಂಪನಿಯದೋ?

ಪತಿದೇವರು ತರಬಹುದಾದ ಸಾಮಾನುಗಳ ಬಗ್ಗೆ ಲಕ್ಷ್ಮೀ ಎಣಿಕೆ ಹಾಕುತ್ತಿದ್ದಳು! ನಡುನಡುವೆ ಏನೇನೋ ನೆನಪಾಗಿ ತನ್ನಷ್ಟಕ್ಕೆ ತಾನೇ ನಗುವಳು. ಯಾರಾದರೂ ಅದನ್ನು ಕಂಡಿದ್ದರೆ ಅವಳಿಗೆ "ಹುಚ್ಚಿ" ಎನ್ನಬಹುದಾಗಿತ್ತು! ಹುರುಪು ಬಂದಾಗಲೆಲ್ಲ ಮೋಹನನ ಪತ್ರ ತೆಗೆದು ಕಣ್ಣರಳಿಸಿ ಓದುತ್ತಿದ್ದಳು! ಸಮಾಧಾನವಾಗದೇ ಎದೆಗವಚಿ ಮುದ್ದುಕೊಡುತ್ತಿದ್ದಳು! ಅವಳಿಗೆ ಎಲ್ಲಿಲ್ಲದ ಉತ್ಸಾಹಬಂದಿತ್ತು! ಹಾಸಿಗೆಯನ್ನು ಎಷ್ಟು ಸಲ ಹಾಸಿಟ್ಟರೂ ತಲೆದಿಂಬನ್ನು ಹೇಗೇ ಇಟ್ಟರೂ ಅವಳಿಗೆ ಸಮಾಧಾನವಿರಲಿಲ್ಲ. ಅವನಿಗಾಗಿಯೇ ಎಂದು ನಿರ್ಧರಿಸಿಕೊಂಡಿದ್ದ ಕೋಣೆಯನ್ನು ಎಷ್ಟು ಸಲ ಉಡುಗಿದರೂ ಮನಸ್ಸು ಕೇಳುತ್ತಿರಲಿಲ್ಲ! ಕುಳಿತರೂ, ಎದ್ದರೂ ಅವಳಿಗೆ "ಮೋಹನ"ನ ಮೂರ್ತಿಯೇ ಎದುರಿನಲ್ಲಿ ಎದ್ದು ಕಾಣುತಿತ್ತು! ತನಗೇ ಗೊತ್ತಿಲ್ಲದೆ 'ಮೋಹನ ಧ್ವನಿ ಬಾಯಿಂದ ಹೊರ ಬೀಳುತ್ತಿತ್ತು!

ದೀಪಾವಳಿಯ ಸಡಗರದ ಸಿದ್ಧತೆಗಳೆಲ್ಲ ಸುಸೂತ್ರವಾಗಿ ಸಾಗಿದ್ದುವು! ಲಕ್ಷ್ಮಿ ಅವಳ ತಂದೆತಾಯಿಗಳೂ ಮೋಹನನಾಗಮನವನ್ನೇ ನಿರೀಕ್ಷಿಸುತಿದ್ದರು! ಚತುರ್ದಶಿಗೆ ಎರಡು ದಿನ ಮೊದಲೇ ಬರುವುದಾಗಿ ಮೋಹನ ಕಾಗದ ಬರೆದಿದ್ದ ಆದರೆ ತಿಳಿಸಿದ ದಿನ ಮೋಹನ ಬರಲಿಲ್ಲ! ಲಕ್ಷ್ಮಿ ಪ್ರತಿಯೊಂದು ಬಸ್ಸಿನ, ರೈಲುಗಾಡಿಯ ವೇಳೆಯನ್ನೇ ಕೇಳುತ್ತ ಕುಳಿತಿದ್ದಳು! ಮನೆಯಲ್ಲಿ ಕೆಲಸಮಾಡುತ್ತಿದ್ದರೂ ಅವಳ ಲಕ್ಷ್ಯವೆಲ್ಲ ಹೊರಬಾಗಿಲ ಕಡೆಗೇ ಇತ್ತು! ಸ್ವಲ್ಪ ಸಪ್ಪಳವಾದರೂ ಹೊರಗೇ ಓಡಿ ಹೋಗುತ್ತಿದ್ದಳು! ನಿರಾಶೆಯಿಂದ ಬರುತ್ತಿದ್ದಳು!

ರಾತ್ರಿ ಹನ್ನೆರಡರವರೆಗೂ ಅಂದು ವೇಳೆನೋಡಿದುದಾಯಿತು. 'ಏನೋ ಆಫೀಸು ಕೆಲಸವಿರಬೇಕು' ಎಂದು ಲಕ್ಷ್ಮೀಯ ತಂದೆ—ತಾಯಿಗಳು ಸಮಾಧಾನ ಹೇಳುತ್ತಿದ್ದರು. ಲಕ್ಷ್ಮೀ ಹೋಗಿ ಹಾಸಿಗೆಯಲ್ಲಿಯೇ ಮಲಗಿ ಪತಿಯ ಬರವನ್ನೇ ನಿರೀಕ್ಷಿಸುತ್ತಿದ್ದಳು. ಕೆಲವೊಂದು ಸಲ ತಲೆದಿಂಬನ್ನೇ ತನ್ನ ಮುಖಕ್ಕೊತ್ತಿಕೊಂಡು ಪತಿಯೊಡನೆ ತಾನು ಇರಬಹುದಾದ ಸನ್ನಿವೇಶ ಸಂದರ್ಭಗಳ ಸಾಮ್ರಾಜ್ಯದತ್ತ ಸಾಗುತ್ತಿದ್ದಳು. ಯಾವುದಕ್ಕೂ ಸಮಾಧಾನವಾಗದೆ ನಿದ್ರೆಯಿಲ್ಲದೆ ಅತ್ತಿತ್ತ ಹೊರಳಾಡುವುದಷ್ಟೇ ಅವಳ ಕಾರ್ಯವಾಯಿತು.

೦೦ ೦೦

ಹುಬ್ಬಳ್ಳಿಯಲ್ಲಿದ್ದ ಮೋಹನ ದೀಪಾವಳಿಗೆ ಬರುವುದಾಗಿ ಹೆಂಡತಿಗೆ ಕಾಗದ ಬರೆದಿದ್ದರೂ ಅವನ ಮನಸ್ಸಿನಲ್ಲಿ ಜೀವನವೇ ಬೇಸರವಾಗಿ ಏನನ್ನೂ ಮಾಡುವುದಕ್ಕೂ ದಾರಿ ತೋಚದಾಗಿತ್ತು! ಎರಡು ತಿಂಗಳ ಹಿಂದೆ ಲಂಚ ತಿಂದ ಆರೋಪದ ಮೇಲೆ ಕೆಲಸದಿಂದ ಸಸ್ಪೆಂಡಗೊಳಿಸಲ್ಪಟ್ಟಿದ್ದ ಆತ ಅದನ್ನು ಯಾರಿಗೂ ತಿಳಿಸುವ ಗೋಜಿಗೆ ಹೋಗಿರಲಿಲ್ಲ! ತನಗೆ ಕೆಲಸವಿಲ್ಲ; ಕಚೇರಿಯಲ್ಲಿ "ಕೇಸು" ವಿಚಾರಣೆಗಾರಂಭವಾಗುವುದರಲ್ಲಿದೆ; ಮನಸ್ಸು ನೂರಾರು ವಿಚಾರಗಳ ಮಧ್ಯೆ ಹೊಯ್ದಾಡಿ ಗಾಸಿಗೊಂಡಿದೆ. ಏನು ಮಾಡುವುದಕ್ಕೂ ಮನಸ್ಸಿಲ್ಲ; ಬುದ್ಧಿ ಹೀನವಾಗಿದೆ ಇವೆಲ್ಲವುಗಳ ಮಧ್ಯೆ ಒಮ್ಮೊಮ್ಮೆ ತಾನೇನು ಮಾಡುತ್ತಿರುವೆನೆಂಬುದರ ಬಗ್ಗೆಯೇ ಲಕ್ಷ್ಯವಿರುತ್ತಿರಲಿಲ್ಲ. ಇಂತಹ ಒಂದು ಪ್ರಸಂಗದಲ್ಲೇ ಆತ ತನ್ನ ನಲ್ಮೆ ಲಕ್ಷ್ಮೀಗೆ ತಾನಾಗಿಯೇ ಕಾಗದ ಬರೆದಿದ್ದ—'ದೀಪಾವಳಿಗೆ ಬರುವೆನೆಂ'ದು, ಹೆಂಡತಿಯನ್ನು ಕಾಣುವ ಹಂಬಲ ಒಂದೆಡೆ; ಕೆಲಸ ಹೋಗಿ ಅಪಮಾನವಾದ ಮುಖ ಇನ್ನೊಂದೆಡೆ; ಜೇಬು ಬರಿದಾಗಿ ಹುಚ್ಚನಂತಾಗಿದ್ದ ಅವನ ಇರವೊಂದೇ ಬೇರೊಂದೆಡೆಗೆ — ಇವೆಲ್ಲವುಗಳ ಮಧ್ಯೆ ಮೋಹನ ತಲೆ ಕೆಡಿಸಿಕೊಂಡವನಾಗಿದ್ದ. ಏನೇ ಆದರೂ ಈ ಸಲ ದೀಪಾವಳಿಗೆ ಹೆಂಡತಿಯಲ್ಲಿಗೆ ಹೋಗಿ ಅವಳಿಂದ ಆರತಿ ಮಾಡಿಸಿಕೊಳ್ಳಬೇಕೆಂಬ ಹಂಬಲದ ರಾಗವನ್ನು ಈ ತರುಣ ದೇಹದ ರಕ್ತವು ಸಿಡಿಸಿಡಿದು ಸುಂದರವಾಗಿ ಹಾಡುತ್ತಿತ್ತು! ಸದ್ಯಕ್ಕೆ ನಿರುದ್ಯೋಗಿಯಾದ ತಾನು ಅಲ್ಲಿಯೇ ಕುಳಿತು ಮಾಡಬೇಕಾದುದಾದರೂ ಏನು ಎಂಬ ಕಾರಣವೂ ಇದಕ್ಕೆ ಬೆಂಬಲವಾಗಿತ್ತು!

ಈ ರೀತಿಯಾಗಿ ತಾನು ವಿಚಾರಿಸುತ್ತಿರುವಾಗಲೇ, ಈ ತರಹದ ಸಂಕಟಗಳಲ್ಲಿ ತೊಳಲಾಡುತ್ತಿರುವಾಗಲೇ ತಾನು ಊರಿಗೆ ಬರುವೆನೆಂದು ಹೆಂಡತಿಗೆ ತಿಳಿಸಿದ ದಿನವೇ ಬಂದಿತ.! ಊರಿಗೆ ಹೊರಡುವದೆಂದು ಕೊನೆಯ ನಿರ್ಧಾರವನ್ನೂ ಮಾಡಿದ್ದ ಆದರೆ ಊರಿಗೆ ಹೋಗುವುದಕ್ಕೆ ಹಣ ಬೇಡವೇ? ಜೇಬಿನಲ್ಲಿ ಕೈ ಹಾಕಿ ನೋಡಿದಾಗ ಎರಡು ರೂಪಾಯಿಯ ನಾಣ್ಯಗಳು ಮಾತ್ರ ಕಂಡವು! ಊರಿಗೆ ಹೋಗಲು ಸಾಕಷ್ಟು ಹಣವಿತ್ತು! ಆದರೆ....? ಊರಿಗೆ ಹೋದಾತ—ಅದೂ ದೀಪಾವಳಿಯ ಆರತಿಗಾಗಿ ಹೋದಾತ—ಹಾಗೆಯೇ ಬರಿಕೈಯಲ್ಲಿ ಹೋಗುವುದೇ ? ಗಡಿಬಿಡಿಯಲ್ಲಿ ಏನೂ ತರಲಿಕ್ಕಾಗಲಿಲ್ಲವೆಂದು ನೆಪಮಾಡಿದರೂ ಆರತಿತಟ್ಟೆಯಲ್ಲಿ ಎರಡು ರೂಪಾಯಿಗಳನ್ನಾದರೂ ಹಾಕಬೇಡವೇ? ಹಾಗಾದರೆ ಊರಿಗೆ ಹೋಗುವುದಾದರೂ ಹೇಗೆ?

—ಮೋಹನನಿಗೆ ತಲೆ ಕೆಟ್ಟಂತಾಗಿತ್ತು! ಏನು ಮಾಡುವುದಕ್ಕೂ ತೋಚದೆ, ಯಾವ ವಿಚಾರವೂ ಹೊಳೆಯದೆ ದಂಗುಬಡೆದವರಂತೆ ಕುಳಿತು ಬಿಟ್ಟಿದ್ದ! ಜೀವನದ ಬಗ್ಗೆ ಆತನಿಗೆ ರೋಸಿ ಹೋಗಿತ್ತು ! ಊಟಕ್ಕೂ ಆತ ಹೋಗಲಿಲ್ಲ— ಹೋಗಬೇಕೆಂಬ ಲಕ್ಷವೂ ಇದ್ದಿಲ್ಲ—ವೇಳೆ ಕಳೆದ ಬಗೆಯೂ ಗಮನಕ್ಕೆ ಬರಲಿಲ್ಲ! ಹೀಗೆ ಎಷ್ಟು ಹೊತ್ತು ವಿಚಾರಿಸುತ್ತಾ ಕುಳಿತಿದ್ದನೋ ಏನೋ ಆತನಿಗೆ ತನ್ನದರ ಅರಿವು ಬಂದುದು ರಾತ್ರಿ ಹನ್ನೊಂದಕ್ಕೆ! ಊಟ ಮಾಡದ್ದೂ ಲಕ್ಷ್ಯಕ್ಕೆ ಸಂಕಟವಾಗತೊಡಗಿತು! ಆಗ ಅಂಗಡಿಗಳೂ ತೆಗೆದಿರುತ್ತಿರಲಿಲ್ಲ! ಸಿನೇಮಾ ಥಿಯೇಟರುಗಳಲ್ಲಿಯ ಚಹದ ಅಂಗಡಿಗಳಾದರೂ ತಿಂಡಿಗಾಗಿ ಹೋಗಬೇಕೆಂದರೆ ಇದ್ದ ಹಣ ಖರ್ಚುಮಾಡುವಂತಿರಲಿಲ್ಲ! ಮೋಹನನಿಗೆ ಎಲ್ಲವೂ ರೋಸಿಹೋಗಿತ್ತು! ಸಿಟ್ಟಿಗೆದ್ದು ಇದ್ದಬಿದ್ದ ಸಾಮಾನುಗಳೆಲ್ಲವನ್ನೂ ಕೋಣೆಯಲ್ಲಿ ಸಿಕ್ಕಸಿಕ್ಕ ಹಾಗೆ ಒಗೆಯತೊಡಗಿದ! ಅವನ ಭಾವಚಿತ್ರ ಹರಿದುಹೋಯಿತು, ಹೆಂಡತಿಯ ಭಾವಚಿತ್ರವೂ ಚೂರುಚೂರಾಯಿತು; ತಂಬಿಗೆ ಕೊಡ ಮೊದಲಾದವುಗಳೆಲ್ಲ ನೆಗ್ಗಿಹೋದುವು! ಏನು ಮಾಡಿದರೂ ಸಮಾಧಾನವಾಗಲಿಲ್ಲ. ಅಸ್ತವ್ಯಸ್ತವಾಗಿ ಬಿದ್ದಿದ್ದ ಹಾಸಿಗೆಯ ಮೇಲೆ ಹೋಗಿ ಬಿದ್ದುಬಿಟ್ಟ. ನಿದ್ದೆಯೂ ಬರಲಿಲ್ಲ— ಹಸಿದ ಹೊಟ್ಟೆಗೆ ನಿದ್ದೆ ಹೇಗೆ ತಾನೆ ಬರಬೇಕು? ಒಮ್ಮೆ ಕಣ್ಣಿಗೆ ಕತ್ತಲೆ ಬಂದಂತಾಯಿತು! ಈ ಒದ್ದಾಟದಲ್ಲಿ ಬೆಳಗಿನ ನಾಲ್ಕು ಗಂಟೆಯ ಸುಮಾರಿಗೆ ಆತನಿಗೆ ನಿದ್ದೆ ಬಂತು!

ಆದರೂ ಬೆಳಗಿನ ಆರುಗಂಟೆಯೊಳಗೇ ಎಚ್ಚರವಾಯಿತು. ಪುನಃ ವಿಚಾರಗಳ ತಾಕಲಾಟ. ಆದರೆ ಹಸಿದ ಹೊಟ್ಟೆ ಸಂಕಟಪಡುತ್ತಿತ್ತು. ಮೋರೆ ತೊಳೆದುಕೊಂಡು ಚಹಕ್ಕಾಗಿ ಹೊರಬಾಗಿಲಿಗೆ ಬಂದೊಡನೆ ಕಣ್ಣಿಗೆ ಕತ್ತಲೆ ಬಂದಂತಾಗಿ ಸ್ವಲ್ಪ ಹೊತ್ತು ಕುಳಿತು, ನಂತರ ತಾನು ಊಟ ಮಾಡುವ ಖಾನಾವಳಿಗೆ ಹೋಗಿ 'ಊಟಕ್ಕೆ ಕೊಡಿ' ಎಂದ. ಹೊಟೆಲು ಮಾಣಿ ಇದನ್ನು ಕೇಳಿ 'ಏನು ಸ್ವಾಮೀ, ಈಗ ತಾನೇ ಏಳಾಗಿದೆ, ಈಗೆಲ್ಲಿ ಊಟ" ಎಂದ. ವಿಚಾರಗಳ ಸಾಮ್ರಾಜ್ಯದಲ್ಲಿ ಸಾಯುತ್ತಿದ್ದ ಮೋಹನನಿಗೆ ಇದರಿಂದಾಗಿ ಎಚ್ಚರವಾದಂತಾಗಿ ತನ್ನ ಮೂರ್ಖತನಕ್ಕೆ ತಾನೇ ನಕ್ಕ. ಖಾನಾವಳಿಯೂ ತಿಂಡಿ ಚಹಗಳಂಗಡಿಯಾದುದರಿಂದ ನಾಲ್ಕು ಇಡ್ಲಿ, ಒಂದು ಕಪ್ ಕಾಫಿಗಿಟ್ಟಿಸಿ ಕೋಣೆಗೆ ಬಂದ! ವಿಚಾರ

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1920

ಸ್ಥಾಪನೆ: 1906] ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ. 20,00,000/-
ಕ್ಷೇಮನಿಧಿ	—	ರೂ. 14,40,000/-
ಠೇವಣಾತಿಗಳು	—	ರೂ. 7,19,35,000/-
ಸಾಲಗಳು	—	ರೂ. 3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ. 9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ.

The Canara Banking Corporation Ltd.

Estd:- 1906] [H. O. UDIPI (S. India)

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಲಂಕಾ ಯಾತ್ರೆ

ಪ್ರಾಚೀನ ರಾಜಧಾನಿ ಅನುರಾಧಾಪುರದಲ್ಲಿ

ಬೌದ್ಧ ಶಿಲ್ಪಕಲೆ, ಬೋಧಿವೃಕ್ಷಗಳು ಇಲ್ಲಿರುವುದರಿಂದ ಪುನೀತ ನಗರಿಯಿದು.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಲೇಖಾಂಕ—೪

ಜೂನ್ ೧೫ನೆ ಗುರುವಾರ ಮೂರನೆಯ ಪ್ರಹರದಲ್ಲಿ ಸುಮಾರು ೧ ತಾಸಿಗೆ ರಾಷ್ಟ್ರಪತಿಯವರ ಪರಿವಾರವು ಶ್ರೀ ಲಂಕೆಯ ಪ್ರಾಚೀನರಾಜಧಾನಿ ಅನುರಾಧಾಪುರವನ್ನು ಸೇರಿತು. ನಗರದ ಪೂರ್ವಗಡಿಯಲ್ಲಿ ಅನುರಾಧಾಪುರದ ಸಂಸದ್ ಸದಸ್ಯ ಶ್ರೀ ಮೈತ್ರಿಪಾಲ ಸೇನಾನಾಯಕರ ನೇತೃತ್ವದಲ್ಲಿ ರಾಷ್ಟ್ರಪತಿಯವರಿಗೆ ಭವ್ಯ ಸ್ವಾಗತ ದೊರೆಯಿತು. ಮಳೆ ಕಡಿಮೆಯೂ ಗಿತ್ತಲ್ಲದೇ ವಿಪರೀತವಾಗಿ ಬಿಸಿಲು ಕಾಯುತ್ತಿತ್ತು. ರಾಷ್ಟ್ರಪತಿಯವರು ತಮ್ಮ ಮೋಟಾರು ಕಾರಿನಿಂದ ಕೆಳಗಿಳಿದು ರಸ್ತೆಗಳು ಕೂಡುವಿಕೆಯಿಂದುಂಟಾದ ಕೂಡು ರಸ್ತೆಯ ಚೌಕಟ್ಟಿನಲ್ಲಿ ನಿರ್ಮಿಸಿದ್ದ ವೇದಿಕೆಯ ಮೇಲೆ ತೆರಳಿ ಐದು ನಿಮಿಷಗಳವರೆಗೆ ಆಂಗ್ಲ ಭಾಷೆಯಲ್ಲಿ ಸ್ವಾಗತಕ್ಕೆ ಸರಿಯಾದ ಉತ್ತರವಿತ್ತರು. ತದನಂತರ ಇಪ್ಪತ್ತು ಮೋಟಾರುಗಳ ಸಾಲು ನಗರದ ಮಧ್ಯದಲ್ಲಿದ್ದ ರೆಸಿಡೆನ್ಸಿಯ ಕಡೆಗೆ ಸಾಗಿತು.

ರೆಸಿಡೆನ್ಸಿಗೆ ತೆರಳಿದ ನಂತರ, ರಾಷ್ಟ್ರಪತಿಯವರ ಪರಿವಾರವು ರೆಸಿಡೆನ್ಸಿಯಲ್ಲಿಯೂ ಪತ್ರಿಕಾಪ್ರತಿನಿಧಿಗಳು ಗ್ರಾಂಡ್ ಹೋಟೇಲಿನಲ್ಲಿಯೂ ಉಳಕೊಳ್ಳುವುದೆಂದು ತಿಳಿದು ಬಂತು. ಈಗ ನಮ್ಮ ಆರು ಜನರ ಎರಡು ಮೋಟಾರು ಕಾರುಗಳು ಸುಂದರವಾದ ತಟಾಕಗಳನ್ನು ದಾಟು ಗ್ರಾಂಡ್ ಹೋಟೆಲಿನತ್ತ ಮುಂದುವರಿಯಿತು. ಒಂದು ದೊಡ್ಡ ಉದ್ಯಾನದ ಮಧ್ಯೆ ಎರಡಂತಸ್ತಿನ ಕಟ್ಟಡವೇ ಗ್ರಾಂಡ್ ಹೋಟೆಲ್. ಅನುರಾಧಾಪುರದಲ್ಲಿರುವ ಪಾಶ್ಚಾತ್ಯ ಮಾದರಿಯ ಹೋಟೆಲ್ ಇದೊಂದೇ ಆಗಿದೆ. ಆದರೆ, ಇದು ಒಂದು ಸಾಧಾರಣ ಹೋಟೆಲೆಂದೇ ಹೇಳಬಹುದು. ನಾವು ಮೊದಲು ಸ್ನಾನಮಾಡಿ ಭೋಜನ ಪೂರೈಸಿದೆವು. 'ಶ್ರೀ ಲಂಕೆಯ ಊಟ' ಎಂದು ಹೇಳುವಂತಹ ಭೋಜನವನ್ನು ಆ ದೇ ಮೊದಲು ಮಾಡಿದುದು. ಗಿಡ್ಡಗಾದ ಮತ್ತು ತೋರವಾದ ಅನ್ನ, ಭಾರತೀಯ ವಿಧಿಯಂತೆ ತಯಾರಿಸಲಾದ ಸಜ್ಜಿಗಳು, ಪಲ್ಯಗಳು ಮತ್ತು ಉತ್ತಮವಾದ ಮಾವು ಇದ್ದುವು.

ಇಷ್ಟರಲ್ಲೇ ಮಳೆ ಸುರಿಯಲು ಆರಂಭವಾಗಿತ್ತು. ಇಂತಹ ವಿಪರೀತವಾದ ವರ್ಷದಲ್ಲಿ ಅನುರಾಧಪುರದ ದೇವಾಲಯಗಳನ್ನೂ ಶಿಲ್ಪವನ್ನೂ ಹೇಗೆ ನೋಡುವುದೆಂದು ಎಲ್ಲರೂ ಚಿಂತಾಮಗ್ನರಾಗಿದ್ದರು. ಸುಮಾರು ನಾಲ್ಕು ತಾಸಿನ ಸಮಯಕ್ಕೆ ಮಳೆ ಕೊಂಚ ಕಡಿಮೆಯಾಯಿತು; ಅದೇ ಸಮಯಕ್ಕೆ ಇಪ್ಪತ್ತು ಮೋಟರುಗಳ ಪಂಕ್ತಿ ಪ್ರಾಚೀನ ನಗರದ ದರ್ಶನಾಭಿಲಾಷೆಯಿಂದ ಹೊರಟಿತು.

ಮಹಾವಂಶದ ಆಧಾರದಿಂದ ಹೇಳುವುದಾದರೆ, ಮಹಾರಾಜನಾದ ಪಾಂಡುಕಭಯನು ಕ್ರಿಸ್ತಪೂರ್ವ ೪೩೭ರಲ್ಲಿ ಅನುರಾಧಾಪುರವನ್ನು ಸ್ಥಾಪಿಸಿದನು. ಕ್ರಿಸ್ತಪೂರ್ವ ಆರನೆಯ ಶತಮಾನದಲ್ಲಿದ್ದ ಅನುರಾಧಾ ಎಂಬ ಹೆಸರಿನ ಮಂತ್ರಿಯಿಂದಾಗಿ ನಗರಕ್ಕೆ ಈ ಹೆಸರು ಬಂತೆಂದೂ ಹೇಳುವವರಿದ್ದಾರೆ.

ಕ್ರಿಸ್ತ ಪೂರ್ವ ನಾಲ್ಕನೆಯ ಶತಮಾನದಲ್ಲಿ ಈ ನಗರವಲ್ಲಿ ಸಿಂಹಳದ ರಾಜ ದೇವನಾಮಪ್ರಿಯ ತಿಸ್ಸನ ರಾಜಧಾನಿಯಿತ್ತು. ಇವನ ಜೀವನಕಾಲದಲ್ಲಿಯೇ ಭಾರತೀಯ ಸಾಮ್ರಾಟ ಅಶೋಕನ ಮಗ ಮಹೇಂದ್ರನು ಸಿಂಹಳಕ್ಕೆ ಹೋಗಿದ್ದನು ಮತ್ತು ಅನುರಾಧಾಪುರದ ಸಮೀಪದಲ್ಲಿಯೇ ಆತನನ್ನು ಬೌದ್ಧನನ್ನಾಗಿ ಮಾಡಿದನು. ಅಂದಿನಿಂದಲೇ ಶ್ರೀ ಲಂಕೆಯಲ್ಲಿ ಬೌದ್ಧಮತವು ಪ್ರಸಾರವಾಯಿತು. ಆನಂತರ ಅಶೋಕನ ಮಗಳು ಸಂಘಮಿತ್ರೆಯು ಬೌದ್ಧವೃಕ್ಷದ ಕೊಂಬೆಯನ್ನು ಹಿಡಿದುಕೊಂಡು ಬಂದಳು. ಅದೇ ಕೊಂಬೆಯು ಇಂದು ಪ್ರಾಚೀನ ನಗರದ ರೂಪದಲ್ಲಿ ಇಂದಿಗೂ ಅನುರಾಧಾ ಪುರದಲ್ಲಿ ದೃಗ್ಗೋಚರವಾಗುತ್ತಿದೆ.

ದೇವನಾಮಪ್ರಿಯ ತಿಸ್ಸನನಂತರ ಅನೇಕ ಸಿಂಹಳೀಯ ರಾಜರು ಕಾಲಕಾಲಕ್ಕೆ ಅನುರಾಧಾಪುರ ಮತ್ತು ಅದರ ಆಸುಪಾಸಿನ ಬೌದ್ಧಮಂದಿರ ಮತ್ತು ಸ್ತೂಪಗಳನ್ನು ಕಟ್ಟಿಸಿದರು. ಅವುಗಳಲ್ಲಿ ಹೆಚ್ಚಿನವು ಇಂದು ಭಗ್ನಾವಶೇಷಗಳಾಗಿಯೂ ಕೆಲವು ಮಾತ್ರ ಉತ್ತಮ ಸ್ಥಿತಿಯಲ್ಲಿಯೂ ತೋರಿ ಬರುತ್ತಿವೆ.

ಹೆಚ್ಚು ಕಡಿಮೆ ೧,೨೦೦ ವರ್ಷಗಳ ವರೆಗೆ ಅನುರಾಧಾಪುರವು ಸಿಂಹಳದ ರಾಜಧಾನಿಯಾಗಿತ್ತು. ಸನ್ ೬೮೫ರ ನಂತರ ದಕ್ಷಿಣ ಭಾರತದ ಚೋಳ ರಾಜರು ಹಲವಾರು ಧಾಳಿಗಳಲ್ಲಿ ಅನುರಾಧಾಪುರವನ್ನು ಧ್ವಂಸ ಮಾಡಿದರು; ಅಲ್ಲದೇ ಪೋಲೋನರುವವನ್ನು ತಮ್ಮ ಮುಖ್ಯನಗರಿಯನ್ನಾಗಿಟ್ಟು ಕೊಂಡರು. ಮುಂದಿನ ೩೦೦ ವರ್ಷಗಳಲ್ಲಿ ಕಾಲಕಾಲಕ್ಕೆ, ಸಿಂಹಳೀಯ ರಾಜರು ತಮ್ಮ ರಾಜ್ಯವನ್ನು ಮರಳಿ ಪಡೆದುಕೊಂಡಾಗಲೆಲ್ಲಾ ಅನುರಾಧಾಪುರವನ್ನೇ ತಮ್ಮ ರಾಜಧಾನಿಯಾಗಿಟ್ಟು ಕೊಂಡಿದ್ದರು.

ಅನುರಾಧಾಪುರವು ಈಗ ಒಂದು ಎಳೆಯ ನಗರ. ನಗರದ ಸ್ಥಾಯಿ ವಾಸಿಗಳ ಸಂಖ್ಯೆ ಕೇವಲ ೧೫ ಸಾವಿರವೆಂದು ತಿಳಿದು ನಮಗೆ ತುಂಬ ಆಶ್ಚರ್ಯವಾಯಿತು. ಆದರೆ, ಬೌದ್ಧರ ಪವಿತ್ರ ಯಾತ್ರಾಸ್ಥಳವಾದ ಕಾರಣದಿಂದ ಇಲ್ಲಿ ಪ್ರತಿನಿತ್ಯ ೫೦ ಸಾವಿರಕ್ಕೂ ಮಿಕ್ಕಿದ ಯಾತ್ರಾರ್ಥಿಗಳು ಬರುತ್ತಿರುತ್ತಾರೆ! ಜನಸಂಖ್ಯೆಯು ಅತ್ಯಲ್ಪವಿದ್ದರೂ ನಗರವು ವಿಸ್ತಾರವಾಗಿದೆ. ಇಲ್ಲಿ ಪ್ರಾಂತೀಯ ರಾಜಧಾನಿಯಿರುವುದರಿಂದ, ಸರಕಾರೀ ಕಾರ್ಯಾಲಯಗಳಿವೆ. ಪೇಟೆ ಮಾತ್ರ ತೀರ ಚಿಕ್ಕದು.

ಮೊದಲು ರಾಷ್ಟ್ರಪತಿಯವರು ಈಶ್ವರ ಮುನಿಯ ವಿಹಾರವನ್ನು ನೋಡ ಹೋದರು. ಈ ವಿಹಾರವು ಕ್ರಿ. ಪೂ. ಮೂರನೆಯ ಶತಮಾನದ್ದೆಂದು ಹೇಳಲಾಗುತ್ತಿದೆ. ಆದರೆ, ಈಗಿರುವ ದೇವಾಲಯವು ಮಾತ್ರ ಏಳನೆಯ ಶತಾಬ್ದಿಗೆ ಸೇರಿದೆ. ಮಂದಿರದಲ್ಲಿ ಮಲಗಿದ ಬುದ್ಧನ ದೊಡ್ಡದಾದ ಮೂರ್ತಿಯೊಂದಿದೆ. ಇದರ ಹಿಂದೆ ಬೆಟ್ಟಗಳನ್ನು ಕೊರೆದು ಕೆಲವಾರು ಮೂರ್ತಿಗಳನ್ನು ಕೆತ್ತಿಯೇ ರಚಿಸಿದ್ದಾರೆ.

ಮಳೆಯು ಧಾರಾಕಾರವಾಗಿ ಸುರಿಯುತ್ತಿದ್ದುದರಿಂದಲೂ ರಾಷ್ಟ್ರಪತಿಯವರು ದಣಿವೆಂತೆ ತೋರಿದುದರಿಂದಲೂ ಅವರು ಮೋಟರಿನಲ್ಲಿ ಕುಳಿತುಕೊಂಡೇ ಅವಶೇಷಗಳನ್ನು ಕಂಡರು. ಆದರೆ, ಅಭಯಗಿರಿ ವಿಹಾರದಲ್ಲಿದ್ದ ಬುದ್ಧನ ಮೂರ್ತಿಯನ್ನು ಕಾಣುವ ಸಲುವಾಗಿ ಮಾತ್ರ ಕೆಳಗಿಳಿದರು. ಈ ಮೂರ್ತಿಯು ಶ್ರೀಲಂಕೆಯ ಪುರಾತನ ಮೂರ್ತಿಯಾಗಿದೆ. ಇದನ್ನು ಕಂಡು ಶ್ರೀ ನೆಹರು ತುಂಬ ಪ್ರಭಾವಿತರಾಗಿದ್ದರು. ತನ್ನ 'ವಿಶ್ವ ಇತಿಹಾಸದ ಝಾಂಕೀ' ಎಂಬ ಪುಸ್ತಕದಲ್ಲಿಯೂ ಅವರು ಈ ಮೂರ್ತಿಯನ್ನು ಉಲ್ಲೇಖಿಸಿದ್ದಾರೆ.

ಅಭಯಗಿರಿ ವಿಹಾರವು ಪ್ರಮುಖ ಬೌದ್ಧ ಕೇಂದ್ರವಾಗಿದೆ. ಚೀನೀಯ ಯಾತ್ರಿಕ ಫಾಹಿಯಾನನು ಈ ವಿಹಾರಕ್ಕೆ ಆಗಮಿಸಿದ್ದನು. ಆತ ಈ ವಿಹಾರವನ್ನು ವಿಸ್ತಾರವಾಗಿ ವರ್ಣಿಸಿದ್ದಾನೆ.

ಆ ಮೇಲೆ ೧೦ನೆಯ ಶತಮಾನದಲ್ಲಿ ದಕ್ಷಿಣಭಾರತದಚೋಳಅರಸರು ಈವಿಹಾರವನ್ನು ಕೆಟ್ಟ ರೀತಿಯಲ್ಲಿ ಹಾಳುಗೈದರು. ಈ ಪ್ರದೇಶದಲ್ಲಿ ಇಂದಿಗೂ ನಾನಾ ಸುಂದರ ಕೆರೆ ಸರೋವರಗಳು ಕಾಣುತ್ತಿವೆ. ಇವು ಸುವ್ಯವಸ್ಥ ರೀತಿಯಲ್ಲೇ ಇವೆ. ಈ ಸರೋವರಗಳಲ್ಲಿ ವಿಹಾರಗಳಲ್ಲಿ ನೆಲಸುತಿದ್ದ ಬಿಕ್ಷುಗಳು ಸ್ನಾನ ಮಾಡುತ್ತಿದ್ದರು.

ಕೊನೆಗೆ ರಾಷ್ಟ್ರಪತಿಯವರು ಬೋಧಿವೃಕ್ಷವನ್ನು ನೋಡಲು ಹೋದರು. ಇದನ್ನು ಮಹಾರಾಜ ಅಶೋಕನ ಮಗಳಾದ ಸಂಘಮಿತ್ರಳು ತಂದಿದ್ದಳು. ಶ್ರೀ ಲಂಕೆಯ ಎಲ್ಲ ಶ್ರೇಷ್ಠ ಸ್ಥಳಗಳಿಗಿಂತಲೂ ಇದು ಪರಮ ಪವಿತ್ರವಾಗಿದೆ ಎಂಬ ಭಾವನೆಯಿದೆ. ರಾಷ್ಟ್ರಪತಿಯವರನ್ನು ಸನ್ಮಾನಿಸುವುದಕ್ಕಾಗಿ ಇಲ್ಲಿ ಏರ್ಪಾಡು ಮಾಡಲಾಗಿತ್ತು; ಆದರೆ ಕ್ರೂರ ವೃಷ್ಟಿಯಿಂದಾಗಿ ಎಲ್ಲ ವ್ಯವಸ್ಥೆಯೂ ಛಿನ್ನವಿಛಿನ್ನವಾಗಿ ಹೋಯಿತು.

ಒಂದು ಬಾಗಿಲನ್ನು ದಾಟಿ ಹೋದೊಡನೆಯೇ ಎದ್ದು ತೋರುವ ವೇದಿಯೊಂದರಲ್ಲಿ ಈ ಅಶ್ವತ್ಥದ ಮರವನ್ನು ನೆಡಲಾಗಿದೆ, ಇದರ ನಾಲ್ಕೂ ದಿಕ್ಕುಗಳಲ್ಲಿ ದೇವಾಲಯಗಳನ್ನೂ ಸ್ತೂಪಗಳನ್ನೂ ಕಟ್ಟಿಸಲಾಗಿದೆ. ಅಲ್ಲದೇ ಇನ್ನೂ ಹಲವಾರು ಅಶ್ವತ್ಥದ ಮರಗಳನ್ನು ನಾಟಲಾಗಿದೆ.

ಅನುರಾಧಾಪುರದ ಸುತ್ತ ಮುತ್ತಲೂ ಅನೇಕ ಐತಿಹಾಸಿಕ ಸರೋವರಗಳಿವೆ. ಇವುಗಳನ್ನು ನೀರಾವರಿಗಾಗಿ ನಿರ್ಮಿಸಿದ್ದರು. ಇವುಗಳಲ್ಲಿ ದೊಡ್ಡದಾದ ನುಲರಾ-ವೇವಾ ಎಂಬುದು ಮೂರು ಸಾವಿರ ಎಕ್ರೆಗಳಲ್ಲಿ ಹರಡಿದೆ. ಇದರ ದಡದಲ್ಲಿ ಕಟ್ಟಿದ ಕಟ್ಟೆ ನಾಲ್ಕು ಮೈಲುದ್ದವಿದೆ, ಇದರ ನಿರ್ಮಾಣವು ಎರಡನೆಯ ಶತಮಾನದಲ್ಲಾಗಿತ್ತು.

ರಾತ್ರಿಯನ್ನು ಅನುರಾಧಾಪುರದಲ್ಲಿಯೇ ಕಳೆದು ರಾಷ್ಟ್ರಪತಿ ಪರಿವಾರವು ಜೂನ್ ೧೯ರಂದು ಪ್ರಾತಃಕಾಲ ಸಿಂಹಗಿರಿಯತ್ತ ಪಯಣಿಸಿತು.

(ಕ್ರಮಶಃ)

ಮೂಲ; 'ನವಭಾರತ ಟಾಯಿಮ್ಸ್"
ಅನುವಾದ: "ಗೋರಾ"

ಉಡುಪಿ ಡಿ. ಮು. ಕೋರ್ಟಿನಲ್ಲಿ

S. E. A. No. 90/1959

ಪದ್ಮನಾಭ ಭಟ್ಟ —ಅರ್ಜಿದಾರ,

ಮತ್ತು

ವಾಸ್ತೇವ ಭಟ್ಟ —ಯೆದ್ರಿ.

ಇವರೊಳಗೆ-

ಯೆದ್ರಿ ವಾಸ್ತೇವ ಭಟ್ಟ—ವೆಂಕಟಕೃಷ್ಣ ಭಟ್ಟರ ಮಗ, ಉಡುಪಿ ತಾಲ್ಕು, ಆರೂರು ಕ್ಸಬಾ ಗ್ರಾಮ—

ಮೇಲ್ಕಂಡ ಅಮಲ್ಜಾರಿಯಲ್ಲಿ ಯೆದ್ರಿಗೆ ಆಗತಕ್ಕ ನೋಟೀಸು ತಾ. 7—8—59ಕ್ಕೆ ಇಟ್ಟಿರುವದರಿಂದ ಆ ದಿನ ಸದ್ರಿ ಯೆದ್ರಿಯು ಆಕ್ಷೇಪ ಏನಾದರೂ ಇದ್ದರೆ ಹಾಜರು ಮಾಡಿಕೊಳ್ಳತಕ್ಕದ್ದು.

P. Padmanabha Rao,
Vakil for Petitioner.

Udipi, 22—7—59

ಕೆನರಾ ಬೇಂಕ್ ನೆರೆ ಪರಿಹಾರ ನಿಧಿ

(ಮೈಸೂರು ರಾಜ್ಯ—1959)

ದಯಮಾಡಿ ಉದಾರ ದಾನಮಾಡಿರಿ

ಮತ್ತು ಮೈಸೂರು ರಾಜ್ಯದಲ್ಲಿಯ ನೆರೆ ಪೀಡಿತರಿಗೆ ಸಹಾಯ ಮಾಡಿರಿ. ಸಂಗ್ರಹಿಸಿದ ಹಣವನ್ನು ಮೈಸೂರು ರಾಜ್ಯದಲ್ಲಿಯ ಇತ್ತೀಚಿಗಿನ ನೆರೆ ಪೀಡಿತರಿಗೆ ನೆರವು ನೀಡುವುದಕ್ಕಾಗಿ ಮೈಸೂರಿನ ಮುಖ್ಯಮಂತ್ರಿಗಳ ವಶ ಕೊಡಲಾಗುವುದು.

ಸಹಾಯ ಧನವನ್ನು ಕೆನರಾ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಕೊಡಬಹುದು. ಇಲ್ಲವೆ ಜನರಲ್ ಮೆನೇಜರ್, ಕೆನರಾ ಬೇಂಕ್ ಲಿ., ಆಡಳಿತ ಕಚೇರಿ, 110-112 ಸಿಲ್ವರ್ ಜ್ಯುಬಿಲಿ ಪಾರ್ಕ್ ರೋಡ್; ಬೆಂಗಳೂರು-2 ಇವರಿಗೆ ಕಳಿಸಬಹುದು.

ಕೆನರಾ ಬೇಂಕ್ ಲಿಮಿಟೆಡ್

[ಸ್ಥಾಪಿತ: 1906]

– ಜನಸೇವಾ ನಿರತವಾದುದು –

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಬಲಿದಾನ

ಮಾನವತಾ ಸೇವಕ-ಡಾಕ್ಟರ ಕೋಟ್ನೀಸ

ಅತುಲನೀಯ ಮಾನವತೆಗಾಗಿ ಆತ್ಮಾರ್ಪಣೆಗೈದ ಭಾರತೀಯ ಮಹಾವೀರ

ಭಾರತದ ಕೆಲವರು ವೀರಪುತ್ರರು ತಮ್ಮ ಸಾಹಸಪೂರ್ಣ ಕಾರ್ಯಗಳಿಂದ ಜನ್ಮಭೂಮಿಯ ಹೆಸರನ್ನು ಮುಂದಕ್ಕೆ ತಂದಿರುವರು. ಡಾಕ್ಟರ್ ದ್ವಾರಕಾನಾಥ ಕೋಟ್ನೀಸರು ಕೂಡಾ ಭಾರತ ಮಾತೆಯ ಅಂತಹ ಪುತ್ರ ರತ್ನಗಳಲ್ಲಿ ಒಬ್ಬರು. ಹಿಂದೆ ಚೀನ—ಜಪಾನುಗಳೊಳಗಿನ ಯುದ್ಧದ ಸಮಯ ಡಾ| ಕೋಟ್ನೀಸರು ನಮ್ಮ ನೆರೆಯ ಚೀನಾದ ಜನತೆಗೆ ಮಹತ್ತರ ಸೇವೆಯನ್ನು ಸಲ್ಲಿಸಿದುದಲ್ಲದೇ, ಅದರಿಂದಾಗಿಯೇ ತಮ್ಮ ಜೀವವನ್ನು ಸಹಾ ಅರ್ಪಿಸಿರುವರು.

ಡಾಕ್ಟರ್ ಕೋಟ್ನೀಸರು ಶೋಲಾಪುರದ ನಿವಾಸಿಗಳು, ಅವರ ತಂದೆ ಸೌವಾಪುರದ ಒಂದು ಮಿಲ್ಲಿನ ಕಾರಕೂನರಿದ್ದರು. ಅವರು ತನ್ನ ಮಗನಿಗೆ ಡಾಕ್ಟರೀ ಕಲಿಸಲು ಬೊಂಬಾಯಿಗೆ ಕಳುಹಿದ್ದರು ಮತ್ತು ಸಾಲಮಾಡಿ ಐದು ವರ್ಷಗಳ ಕಲಿಕೆಯ ಖರ್ಚನ್ನು ಪೂರೈಸಿದರು. ಕೋಟ್ನೀಸರು ತಮ್ಮ ಅಭ್ಯಾಸವನ್ನು ಮುಗಿಸುವ ಹೊತ್ತು—೧೯೩೭—೩೮ರ ಸಮಯ—ಚೀನ ಮತ್ತು ಜಪಾನುಗಳೊಳಗೆ ಯುದ್ಧ ಪ್ರಾರಂಭವಾಗಿತ್ತು. ಜಪಾನು ವಿಜ್ಞಾನದ ನವೀನ ಸಾಧನಗಳೊಂದಿಗೆ ಚೀನವನ್ನು ಆಕ್ರಮಿಸಿತು. ಅಮೇರಿಕ, ಬ್ರಿಟನ್ನುಗಳಂತಹ ದೊಡ್ಡ ರಾಷ್ಟ್ರಗಳು ತಮಾಷೆ ನೋಡುತಿದ್ದುವು; ಜಪಾನಿನ ವಿರುದ್ಧ ಮಾತನಾಡಲು ಯಾರೂ ಪ್ರಯತ್ನಿಸುತ್ತಿರಲಿಲ್ಲ. ಅದೇ ಸಮಯ ಭಾರತದ ಸುಪುತ್ರ ಪಂ. ಜವಾಹರಲಾಲ್ ನೆಹರೂರವರು ಇಡೀ ಏಶ್ಯಾದ ಸ್ವಾತಂತ್ರ್ಯ ಮತ್ತು ಶಾಂತಿಗಾಗಿ ಚೀನವನ್ನು ಈ ಸಂಕಟದಿಂದ ಪಾರುಮಾಡಬೇಕೆಂದು ಯೋಚಿಸಿದರು. ನೆಹರೂರವರ ಸಲಹೆಯಂತೆ ಭಾರತದ ಕಡೆಯಿಂದ ಗಾಯಗೊಂಡವರ ಸೇವಾ—ಶುಶ್ರೂಷೆಗಾಗಿ 'ಡಾಕ್ಟರರ ಮಿಶನ್ನೊಂ'ದನ್ನು ಕಳುಹುವುದೆಂದು ನಿರ್ಣಯಿಸಲ್ಪಟ್ಟಿತು.

ಓರ್ವ ಅನುಭವೀ ಡಾಕ್ಟರ 'ಅತುಲ'ರ ನೇತೃತ್ವದಲ್ಲಿ ಒಂದು ಡಾಕ್ಟರರ ಮಿಶನ್ನನ್ನು ತಯಾರಿಸಲಾಯಿತು. ಇದರಲ್ಲಿದ್ದ ಐವರು ಡಾಕ್ಟರರಲ್ಲಿ ಕೋಟ್ನೀಸರೂ ಒಬ್ಬರು.

೧೯೩೮ನೇ ದಶಂಬರ ೧ರಂದು ಭಾರತದ 'ಡಾಕ್ಟರರ ಮಿಶನ್ನು' ಬೊಂಬಾಯಿಯಿಂದ ಚೀನಾಕ್ಕೆ ತೆರಳಿತು. ಶ್ರೀಮತಿ ಸರೋಜಿನಿ ನಾಯ್ಡುರ ಅಧ್ಯಕ್ಷತೆಯಲ್ಲಿ ಸಾವಿರಗಟ್ಟಲೆ ಸಂಖ್ಯೆಯಲ್ಲಿ ಜನರು ಅವರನ್ನು ಬೀಳ್ಕೊಳ್ಳಲು ಒಟ್ಟುಗೂಡಿದ್ದರು. ಕೋಟ್ನೀಸರ ವೃದ್ಧ ಮಾತಾಪಿತರು ಸಹಾ ಸೇರಿ ತಮ್ಮ ಮಗನನ್ನು ಮಾನವತೆಯ ಸೇವೆಗೈಯಲು ವಿದಾಯಗೈದರು.

ಅವರ ದಳವು 'ಹೋಂಗ್‌ಕೋಂಗ್' ಮೇಲಿನಿಂದ ಕೇಂಟನ್ ತಲಪಿತು. ಆ ಸಮಯ ಕೇಂಟನಿನಲ್ಲಿ ಬಿರುಸಿನ 'ಬಾಂಬು ಮಳೆ' ನಡೆಯುತ್ತಿತ್ತು. ಒಂದು ವಾರ ಅಲ್ಲುಳಿದು ಅನಂತರ ಅವರು "ಚಾಂಗ್ ಶಾ"ಕ್ಕೆ ಹೋಗಿ ಅಲ್ಲಿಂದ "ಹಾಂಕೋ"ಗೆ ತೆರಳಿದರು, ಅವರು ಎಲ್ಲೆಲ್ಲಿ ಹೋದರೋ ಆ ದಾರಿಯಲ್ಲೆಲ್ಲಾ ಬಾಂಬುಗಳು ಬೀಳುತ್ತಿದ್ದುವು! ಲಕ್ಷಗಟ್ಟಲೆ ಚೀನೀ ಗಾಯಾಳುಗಳು ತಿರಸ್ಕಾರದಿಂದ ನೋಡಲ್ಪಡುತ್ತಿದ್ದರು. ಇವರು ದಿನ-ರಾತ್ರಿ—ಇಪ್ಪತ್ತನಾಲ್ಕು ತಾಸೂ ಗಾಯಾಳುಗಳ ಸೇವೆಗೈಯುತ್ತಿದ್ದರು.

ಅಲ್ಲಿಂದ ಅವರು ಚೀನಾದ ರಾಜಧಾನಿ "ಚುಂಕಿಂಗ್"ಗೆ ಹೋದರು. ಚೀನದಲ್ಲಿ ಪರದೇಶದವರಿಗೆ ಚೀನೀಯ ಹೆಸರನ್ನಿಟ್ಟುಕೊಳ್ಳುವುದು ಅನಿವಾರ್ಯ. ಆದ್ದರಿಂದ ಡಾಕ್ಟರ್ ಕೋಟ್ನೀಸರನ್ನು "ಖೋ ತೇಹ್ ಹುವಾ" (ಚೀನಾದ ಭವಿಷ್ಯ ನಿಯಾಮಕ) ಎಂದು ಹೆಸರಿಸಲಾಯಿತು.

ಚೀನದಲ್ಲಿ ಯುದ್ಧದ ಪ್ರತಿಯೊಂದು ಕ್ಷೇತ್ರದಲ್ಲಿ ಈ ಭಾರತೀಯ ಡಾಕ್ಟರರು ಇತ್ತಿಂದತ್ತ ಅಲೆಯುತ್ತಿದ್ದರು. ಹೀಗೆ ಮೂರು ತಿಂಗಳು ಇದೇ ತರಹ ಒಂದು ದಿನವೂ ವಿಶ್ರಾಂತಿಯಿಲ್ಲದೇ ಕೆಲಸಮಾಡಿದರು.

ಒಂದುದಿನ ಸಂಜೆ ಭಾರತದಿಂದ ಡಾ| ಕೋಟ್ನೀಸರಿಗೆ ಬಂದ ಪತ್ರವೊಂದು ಅವರ ತಂದೆಯ ಮೃತ್ಯುವಿನ ದುಃಖದ ವಾರ್ತೆಯನ್ನು ತಂದಿತು. ಕೋಟ್ನೀಸರ ತಂದೆಯವರು, ತಮ್ಮ ಪುತ್ರ ಕಲಿತು ಉತ್ತಮ ರೀತಿಯಿಂದ ಸಂಪಾದಿಸುವನೆಂಬ ಆಶೆಯಿಂದಾಗಿ ಸಾಲಪಡೆದು ಮಗನನ್ನು ಕಲಿಸಿದ್ದರು. ಆದರೂ ದೇಶಭಕ್ತಿಯ ಭಂಡಾರದಂತಿದ್ದ ಅವರು ಮಾನವ ಸೇವೆಗಾಗಿ ಮಗನನ್ನು ಬೀಳ್ಕೊಟ್ಟಿದ್ದರು ಮಗನು ಹೊರಟು ಹೋದ ನಂತರ ಮನೆಯ ಪರಿಸ್ಥಿತಿ ಬಿಗಡಾಯಿಸಿದ್ದರಿಂದ ತಂದೆ ಆತ್ಮಹತ್ಯೆ ಮಾಡಿಕೊಂಡಿದ್ದರು.

ಈ ದುಃಖಪೂರ್ಣ ವಾರ್ತೆ ತಿಳಿದೊಡನೆಯೇ ಕೋಟ್ನೀಸರ ಸಂಗಾತಿಗಳು ಅವರು ಸ್ವದೇಶಕ್ಕೆ ಮರಳುವಂತೆ ಒತ್ತಾಯಿಸಿದರು. ಆದರೆ ಅವರು ಉತ್ತರಿಸಿದರು. "ಇಲ್ಲ; ನಾನು ಹಿಂದೆ ಹೋಗುವುದಿಲ್ಲ. ಕಾಂಗ್ರೆಸ್ಸು ನಮ್ಮನ್ನು ಇಲ್ಲಿಗೆ ಕಳುಹಿದೆ. ನಾವು ಒಂದು ವರ್ಷದೊಳಗೆ ಹಿಂತಿರುಗುವುದಿಲ್ಲವೆಂದು, ಅವರ ಶರ್ತಕ್ಕೊಪ್ಪಿ ಬಂದಿದ್ದೇವೆ. ತನ್ನ ತಂದೆ ಬಹುದೊಡ್ಡ ತ್ಯಾಗ ಮಾಡಿರುವರು. ನಾನು ಸಹಾ ನನ್ನ ಕರ್ತವ್ಯದಲ್ಲಿ ಜೀವನವನ್ನು ಅರ್ಪಿಸಿದರೆ ಅವರ ಆತ್ಮಕ್ಕೆ ಶಾಂತಿಯಾದೀತು!"

ಡಾ. ಕೋಟ್ನೀಸರು ತಂದೆಯ ಮೃತ್ಯುವಿನ ಸುದ್ದಿ ತಿಳಿದ ನಂತರ ತಮ್ಮ ಮನಸ್ಸನ್ನು ಒಂದು ರೀತಿಯಿಂದ ಕರ್ತವ್ಯದೆಡೆಗೆ ಬಂಧಿಸಹತ್ತಿದರು. ಅವರು ಚೀನೀಯರ ಭಾಷೆ, ರೀತಿ—ನಡಾವಳಿಗಳಿಗಳನ್ನು ಅರಿತುಕೊಂಡು, ಅಧಿಕವಾಗಿ ಅವರ ಸೇವೆಗೈಯುವ ದೃಢ ನಿಶ್ಚಯಮಾಡಿದರು. ಈ ಯೋಚನೆಯ ನಂತರ ಅವರ ಮುಖಮುದ್ರೆ ಮೊದಲಿಗಿಂತ ಅಧಿಕ ಕಾಂತಿಯಿಂದ ಪ್ರಕಾಶಿಸಹತ್ತಿತು.

ಕೆಲವು ಕಾಲದವರೆಗೆ 'ಚುಂಕಿಂಗ್' ನಲ್ಲುಳಿದ, ಅವರೆಲ್ಲಾ 'ಯೇನಾನ್'ಗೆ ತೆರಳಿದರು. ಆ ದಾರಿ ಬಹಳ ಅಪಾಯಕರವಾಗಿತ್ತು. ಬೇರೆ ಉತ್ತಮ ದಾರಿ ಇರಲಿಲ್ಲ ಅಲ್ಲಲ್ಲಿ ಆಗಾಗ 'ಬಾಂಬು'ಗಳ ಸುರಿಮಳೆಯಾಗುತ್ತಿತ್ತು. ಹೇಗೋ ಅವರೆಲ್ಲರೂ ಅತೀ ಕಷ್ಟದಿಂದ 'ಯೇನಾನ್' ತಲಪಿ ಅಲ್ಲಿ ಸುಮಾರು ೯ ತಿಂಗಳುಗಳ ತನಕ ಉಳಿದರು. ಚೀನ—ಜಪಾನುಗಳೊಳಗಿನ ಮಹಾಯುದ್ಧದಲ್ಲಿ ಎಲ್ಲಕ್ಕಿಂತ ವಿಧ್ವಸ್ತ ಪ್ರದೇಶ ಅದಾಗಿತ್ತು. ಅಲ್ಲೊಂದು ಸ್ಥಿರವಾದ ಮನೆಯೂ ಇರಲಿಲ್ಲ; ಜನರು ಗುಡ್ಡಗಳ ಬದಿಯಲ್ಲಿರುವ ಗುಹೆಗಳಲ್ಲಿ ವಾಸಿಸುತ್ತಿದ್ದರು. ಕೋಟ್ನೀಸ ಮತ್ತವರ ಸಂಗಡಿಗರ ಆಸ್ಪತ್ರೆಯೂ ಅಂತಹ ಒಂದು ಗುಹೆಯೇ ಆಗಿತ್ತು. ಮಧ್ಯಾಹ್ನದ ಹೊತ್ತು ಗುಹೆಯಲ್ಲಿ ಅಧಿಕ ಸೂ

(೯ನೇ ಪುಟ ನೋಡಿರಿ)

ಹಳದಿ ಎತ್ತರ ಹಾರುವ ಪ್ರಯತ್ನದಲ್ಲಿ ಅಮೆರಿಕನ್ ಆಟಗಾರ ಯಶಸ್ವಿಯಾದರು.

ಮಹಾಜನರಲ್ಲಿ ವಿನಂತಿ

ಇತ್ತೀಚೆಗೆ, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಮತ್ತು ಕುಂದಾಪುರ ತಾಲೂಕಿನಲ್ಲಿ ಬೀಸಿದ ಬಿರುಗಾಳಿ ಮನೆಗಳನ್ನು ನಾಶಗೊಳಿಸಿ ಬಡವರ ಕುಟುಂಬಗಳನ್ನು ನಿರ್ಗತಿಕರನ್ನಾಗಿ ಮಾಡಿದೆ. ಮನೆ, ಮರಗಳು, ಜಾನುವಾರುಗಳು ನೀರುಪಾಲಾಗಿವೆ. ಬೆಳೆಗಳೂ ನಷ್ಟವಾಗಿವೆ. ಈಗಾಗಲೇ ಸರಕಾರವು ಮತ್ತು ಸ್ಥಳೀಯ ಉದಾರಿ ಮಹನೀಯರು ನೆರೆ, ಗಾಳಿಯಿಂದ ಪೀಡಿತರಾದವರಿಗೆ ಪರಿಹಾರ ನೀಡಲು, ಬೇಕಾದ ಹಣ ಸಂಗ್ರಹಿಸಿ, ಊಟದ ಬಗ್ಗೆ ವ್ಯವಸ್ಥೆ ಮಾಡಿ ಅವರಿಗೆ ಪರಿಹಾರ ನೀಡಲು ಶಕ್ತಿಮೀರಿ ಯತ್ನಿಸಿರುವರು, ನೆರೆಯಿಂದ ಪೀಡಿತರಾದವರಿಗೆ ಬೇಕಾದ ಸಹಾಯ, ಸಹಕಾರ ಕೊಡಲು ತಾ. 11.7.58 ರಂದು ಮೈಸೂರು ರಾಜ್ಯದ ಆರೋಗ್ಯ ಮಂತ್ರಿಗಳ ನೇತೃತ್ವದಲ್ಲಿ ಜರಗಿದ, ಜಿಲ್ಲಾ ಪರಿಹಾರ ಸಮಿತಿಯು (Dt. Emergency Relief Organisation) ಈ ದುರಂತಕ್ಕೊಳಗಾದವರ ದೇಶದ ಉದಾರ ಹೃದಯಿಗಳಾದ ತಮ್ಮ ನೆರವಿನಿಂದ ನಿರಾಶ್ರಿತರಾಗಿ ಬಳಲಿ ಬೆಂಡಾಗಿರುವ ಸಂಸಾರಿಗಳು ಚೇತರಿಸುವಂತೆ, ಬಡವ ಬಲ್ಲಿದನೆಂಬ ಭೇದ ಭಾವವನ್ನು ತೊರೆದು ನಾವೆಲ್ಲರೂ ಒಂದೇ ಎಂಬ ಬಂಧುತ್ವದಿಂದ ನೆರೆ ಪೀಡಿತರಿಗೆ ಸರ್ವ ವಿಧದ ಸಹಕಾರವನ್ನೀಯಲು ಮಹಾ ಜನರನ್ನು ವಿನಂತಿಸಿಕೊಳ್ಳಬೇಕೆಂದು ನಿಶ್ಚಯಿಸಲಾಯಿತು.

ಭವ್ಯ ಭಾರತದ ಉದಾರ ಹೃದಯಿಗಳಾದ ತಾವು ಈ ನಿಧಿಗೆ ಹಣ, ದವಸಧಾನ್ಯ, ವಸ್ತ್ರ ಉಡುಗೆ ಮೊದಲಾದುವನ್ನು ಶಕ್ತಿಮೀರಿ ಕೊಟ್ಟು, ತನ್ಮೂಲಕ ಉಡುಪಿ ಮತ್ತು ಕುಂದಾಪುರ ತಾಲೂಕಿನವರ ಕಷ್ಟ—ನಷ್ಟಗಳ ನಿವಾರಣೆಗೆ ಸಹಕರಿಸಬೇಕಾಗಿ ವಿನಂತಿಸುತ್ತೇವೆ. ತಮ್ಮ ಕೊಡುಗೆಯನ್ನು ಕಾರ್ಯದರ್ಶಿ ಜಿಲ್ಲಾ ಪರಿಹಾರ ಸಮಿತಿ ಮತ್ತು ಎಕ್ಸಿಕ್ಯೂಟಿವ್ ಇಂಜಿನೀಯರ್, ಪಿ. ಡಬ್ಲ್ಯೂ. ಡಿ., ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, ಅಥವಾ ಸಂಬಂಧ ಪಟ್ಟ ತಾಲೂಕು ತಹಶೀಲ್ದಾರರವರಿಗೆ ಕಳುಹಿಸಬೇಕಾಗಿ ಕೇಳಿ ಕೊಳ್ಳುತ್ತೇವೆ.

ಸಿ. ಜೆ. ಪದ್ಮನಾಭ,
ಡಿಪ್ಯೂಟಿ ಕಮಿಷನರ್ ಮತ್ತು ಅಧ್ಯಕ್ಷ
ಜಿಲ್ಲಾ ಪರಿಹಾರ ಸಮಿತಿ.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2 V. P. ಮಾಡುವುದಿಲ್ಲ.

ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ಅನುಭವ

ವಿಷವನ್ನು ವಿಷದಿಂದಲೇ ದೂರೀಕರಿಸ ಬಹುದು

ಸರ್ಪ ಮತ್ತು ಅದರ ವಿಷದ ಬಗ್ಗೆ ಕುತೂಹಲ ಪೂರ್ಣ ವಿವೇಚನೆ

ಭಾರತದಲ್ಲಿ ಸುಮಾರು ಒಂದು ಲಕ್ಷ ಜನರು ಸರ್ಪದಂಶನದಿಂದ ಸಾಯುತ್ತಾರೆ; ಹೀಗಿದ್ದರೂ ಇಲ್ಲಿ ಸರ್ಪ ಪೂಜೆ ನಡೆಯುತ್ತದೆ. ಸರ್ಪವೆಂದರೆ ದೇವರು ಎಂದು ಜನರಲ್ಲಿರುವ ವಿಶ್ವಾಸವೇ ಈ ಅಂಧಾಭಿಮಾನಕ್ಕೆ ಕಾರಣವಾಗಿದೆ. ಕೇರಳದ ಜನರು ಪ್ರಾಚೀನ ಕಾಲದಿಂದಲೂ ಸರ್ಪ ಭಕ್ತರು. ಪರಮಾತ್ಮ ಹಾಗೂ ದೇವತೆಗಳ ರೂಪದಲ್ಲಿ ಅವನ್ನವರು ಪೂಜಿಸುತ್ತಾರೆ. ಕೇರಳದ ಶ್ರೀಮಂತರ ಮನೆಗಳಲ್ಲೆಲ್ಲಾ ಸರ್ಪನ ಬಿಲಗಳು ನಮಗೆ ನೋಡಸಿಗುವುವು. ಅಲ್ಲಿನ ಸರ್ಪಗಳೂ ಹಾಗೆಯೇ ಸ್ವಚ್ಛಂದವಾಗಿ ಅಲೆದಾಡುತ್ತಿರುತ್ತವೆ. ಯಾರಿಗೂ ಏನೂ ಹಾನಿಯನ್ನುಂಟು ಮಾಡುವುದಿಲ್ಲ. ಯಾರೂ ಈ ಸರ್ಪಗಳ ಪಕ್ಕಕ್ಕೆ ಹೋಗಿ ಅವುಗಳನ್ನು ಸಿಟ್ಟಿಗೆಬ್ಬಿಸುವುದೂ ಇಲ್ಲ. ಏಕೆಂದರೆ, ಈ ಸರ್ಪಗಳನ್ನು ರೇಗಿಸುವುದೂ ನಾಗದೇವತೆಯನ್ನು ಕುಪಿತವಾಗಿಸುವುದೂ ಸಮಾನವೆಂದಲ್ಲಿ ತಿಳಿಯಲಾಗುತ್ತದೆ.

ಹಲವಾರು ಸಂದರ್ಭಗಳಲ್ಲಿ ಈ ಪ್ರಾಣಿಗಳು ತಮ್ಮ ಯಜಮಾನರ ಪ್ರಾಣವನ್ನೂ ರಕ್ಷಿಸಿವೆ. ಕೆಲ ಸಮಯದ ಹಿಂದೆ, ಮಲಬಾರಿನ ಒಬ್ಬ ವ್ಯಕ್ತಿ ಜೀರ್ಣವಾದ ತನ್ನ ಮನೆಯನ್ನು ಸಂಪೂರ್ಣ ಮುಗುಚಿ ಹಾಕಿ, ಪುನಃ ಕಟ್ಟಿಸುವ ಸಂಕಲ್ಪ ಮಾಡಿದ. ಸರ್ಪಗಳನ್ನು ಓಡಿಸದೆ ಈ ಕೆಲಸ ಅಸಾಧ್ಯವಾಗಿತ್ತು. ಒಬ್ಬ ಜ್ಯೋತಿಷಿಯೊಡನೆ ಆತ ವಿಚಾರ ವಿನಿಮಯ ಮಾಡಿದ. ಮನೆಯ ಸರ್ಪಗಳಿಗೆ ಯಾವ ತೊಂದರೆಯನ್ನೂ ಉಂಟುಮಾಡಬಾರದೆಂದು ಆತ ಕಂಠೋಕ್ತವಾಗಿ ಹೇಳಿ ಬಿಟ್ಟ. ಅಲ್ಲದೇ ಆತ ಸರ್ಪಗಳು ಮನೆಯಲ್ಲಿರುವವರೆಗೆ ಯಾವ ಕೊರತೆಯೂ ಒದಗುವುದಿಲ್ಲವೆಂದನು. ಇದರಿಂದಾಗಿ ಮನೆಯ ಯಜಮಾನ ಜ್ಯೋತಿಷಿಯ ಮಾತನ್ನು ನಡೆಸಿಕೊಟ್ಟನು. ಸರ್ಪಗಳು ಮನೆ ಬಿಡುವುದೂ ಲಕ್ಷ್ಮಿ ಕೈಬಿಡುವುದೂ ಒಂದೇ ಎಂದೂ ದಾರಿದ್ರ್ಯ ಮತ್ತು ವಿಪತ್ತುಗಳ ದ್ಯೋತಕವೆಂದೂ ತಿಳಿಯುತ್ತಾರೆ.

ಕೆಲವು ವರ್ಷಗಳಿಗೆ ಮೊದಲು ಒಬ್ಬ ಧನಾಢ್ಯ ಬ್ರಾಹ್ಮಣನ ಮನೆಗೆ ಬಲವಾಯಿಯರು ಧಾಳಿಮಾಡಿದರು. ಅವನ ವಸ್ತುಗಳನ್ನೆಲ್ಲಾ ಅಪಹರಿಸತೊಡಗಿದರು. ಆದರೆ, ಅಕಸ್ಮತ್ತಾಗಿ ಹಲವಾರು ಸರ್ಪಗಳು ಬಿಲದಿಂದ ಹೊರಗೆ ಬಂದು, ಬಲವಾಯಿಯವರ ಕಡೆಗೆ ಹೆಡೆಬಿಚ್ಚಿ ಹೊಡೆಯತೊಡಗಿದುವು, ಬಲವಾಯಿಯರು ಇದನ್ನು ಕಂಡು ಓಡಿಹೋದರು. ಈ ರೀತಿಯಾಗಿ ಸರ್ಪಗಳು ತಮ್ಮ ಯಜಮಾನನನ್ನು ಮಾತ್ರವಲ್ಲದೇ ಆತನ ಸಂಪತ್ತನ್ನೂ ಉಳಿಸಿದುವು.

ಕೇರಳದ ಓರ್ವ ಕೃಷಿಕ ತನ್ನ ಮನೆಯ ಸಮೀಪದಲ್ಲಿಯೇ ವಾಸಿಸುತಿದ್ದ ಸರ್ಪವೊಂದಕ್ಕೆ ನಿತ್ಯ ಹಾಲೂಡುತಿದ್ದನು. ಒಂದು ರಾತ್ರಿ ಒಂದು ಚಿರತೆ ಅವನ ಮನೆಯನ್ನು ಪ್ರವೇಶಿಸಿತು; ಪಶುಗಳನ್ನು ಕೊಲ್ಲಹತ್ತಿತು. ಅಲ್ಲಿಯೇ ಬಿಲದಲ್ಲಿದ್ದ ನಾಗ, ಚಿರತೆಯ ಆಕ್ರಮಣವನ್ನು ತಿಳಿದು, ಹೊರಗೆ ಬಂತು. ಅದು ಹಲವಾರೆಡೆಗಳಲ್ಲಿ ಚಿರತೆಗೆ ಕಚ್ಚಿತು. ಆ ಮೇಲೆ ನಿದ್ರಿಸುತಿದ್ದ ತನ್ನ ಸ್ವಾಮಿಯ ಬಳಿಗೆ ಬಂತು. ಆತನ ಕಾಲಲ್ಲಿ ಅತ್ತಿತ್ತ ಸರಿದು ಸುತ್ತಿ ಆತನನ್ನು ಎಚ್ಚರಿಸಿತು. ಕೃಷಿಕ ಕಣ್ಣುತೆರೆದ; ಸರ್ಪ ತನ್ನ ಸುತ್ತನ್ನು ಬಿಡಿಸಿ ದ್ರುತಗತಿಯಲ್ಲಿ ಪಶುಗಳತ್ತ ಓಡಿತು. ಕೃಷಿಕ ಅಲ್ಲಿ ಬಂದು ನೋಡುವಾಗ ಒಂದು ಗಾಯಗೊಂಡ ಚಿರತೆ ಹೊರ ಹೋಗುತ್ತಿತ್ತು. ಮರು ದಿನ ಅಲ್ಲಿಯೇ ಸಮೀಪದಲ್ಲಿ ಅದೇ ಚಿರತೆ ಸತ್ತುಬಿದ್ದುದು ಗೋಚರಕ್ಕೆ ಬಂದಿತು.

ಇದೇ ರೀತಿಯ ಆದರೆ ಇನ್ನೂ ವಿಚಿತ್ರವಾದ ಒಂದು ಘಟನೆಯಿದೆ. ಒಂದು ಸರ್ಪ ದರೋಡೆಗೋರರನ್ನು ಓಡಿಸಿಕೊಂಡು, ಒಂದು ಮಗುವಿನ ಪ್ರಾಣವನ್ನುಳಿಸುತ್ತದೆ! ಅನಂತರ, ಈ ಸರ್ಪವನ್ನು ಜೋಧಪುರದ ಜನರು 'ರಖವಾಲಾ' (ರಕ್ಷಕ) ಎಂಬ ಹೆಸರಿನಿಂದಲೇ ಕರೆಯತೊಡಗಿದರು. ಆ ಘಟನೆ ನಡೆದುದು ಹೀಗೆ—ಒಂದು ಮನೆಯ ಯಜಮಾನ—ಯಜಮಾನಿಯರು ತಮ್ಮ ಹತ್ತು ವರ್ಷದ ಗಂಡು ಮಗ ಮತ್ತು ಮೂರು ವರ್ಷದ ಹೆಣ್ಣು ಮಗುವನ್ನು ಮನೆಯಲ್ಲಿ ಬಿಟ್ಟು ತಾವು ಏನೋ ಕೆಲಸದ ನಿಮಿತ್ತ ಹೊರ ಹೋಗಿದ್ದರು. ಆಗ ಕೆಲವು ಜನ ದರೋಡೆಗೋರರು ಮನೆ ನುಗ್ಗಿದರು. ಆದರೆ ಅಲ್ಲಿ ಏನೊಂದೂ ದೊರೆಯದಿದ್ದುದರಿಂದ ಮಕ್ಕಳನ್ನು ಒಯ್ದರೆ, ಅವರ ಹೆತ್ತವರಿಂದ ಒಂದಲ್ಪ ಹಣವನ್ನಾದರೂ ಕಸಿದುಕೊಳ್ಳಬಹುದೆಂದು ಭಾವಿಸಿ ಮಕ್ಕಳನ್ನೇ ಹೊತ್ತು ಹೋದರು. ಅಲ್ಲಿಯೇ ಒಂದು ಸರ್ಪ ಕಾಣಿಸಿಕೊಂಡಿತು. ಅದು ದರೋಡೆಗಾರರನ್ನು ಎದುರಿಸಿತು. ಒಬ್ಬನನ್ನದು ಕಚ್ಚಿ ಕೊಂದು ಹಾಕಿತು. ಆದರೇನು, ಎರಡನೆಯವನು ಹುಡುಗಿಯನ್ನೆತ್ತಿ ಪಲಾಯನ ಮಾಡಿದನು. ತಾಯ್ತಂದೆಯರು ಮನೆಗೆ ಹಿಂತಿರುಗಿದಾಗ ಅವರಿಗೊಂದು ಪತ್ರ ದೊರೆಯಿತು. ಊರಿನಿಂದ ಹನ್ನೆರಡು ಮೈಲು ದೂರವಿರುವ ಆ ಎಂಬಲ್ಲಿಂದ ೮ ರೂಪಾಯಿ ತೆತ್ತು ನಿಮ್ಮ ಮಗಳನ್ನು ಕರೆದುಕೊಂಡು ಹೋಗಿರಿ ಎಂದದರಲ್ಲಿ ಬರೆದಿತ್ತು.

ಆ ಮನೆಯ ಯಜಮಾನ ದರೋಡೆಗೋರರನ್ನು ಕಾಣಲು ಒಂದು ಹೊಸ ಕ್ರಮವನ್ನು ಕೈಗೊಂಡ. ತನ್ನ ಸರ್ಪ ಮತ್ತು ಅಪಹೃತ ಪುತ್ರಿಯ ವಸ್ತ್ರವನ್ನು ಹಿಡಿದುಕೊಂಡು ನಿಯಮಿತ ಸ್ಥಳದತ್ತ ಹೊರಟ. ಕಳ್ಳರನ್ನು ಕಾಣಬೇಕಾಗಿದ್ದ ಆ ಸ್ಥಳ ಪಟ್ಟ ಕಾಡಾಗಿತ್ತು. ಅಲ್ಲಿ ಅವರನ್ನು ಕೂಗಿದ. ಕೈ ಮೇಲೆತ್ತಿಕೊಂಡು ಒಂದು ಫರ್ಲಾಂಗ್ ದೂರ ಮುಂದುವರಿದು ಬನ್ನಿ ಎಂಬ ಉತ್ತರ ಅವನಿಗೆ ಸಿಕ್ಕಿತು. ಈ ಆದೇಶವನ್ನು ಪಾಲಿಸುವುದಕ್ಕೆ ಮೊದಲು ಆತ, ತಾನು ತಂದಿದ್ದ ಸರ್ಪವನ್ನು ಮಗಳ ವಸ್ತ್ರದಲ್ಲಿ ಸುತ್ತಿ ಬಿಟ್ಟುಬಿಟ್ಟ. ಮೂರು ಮಿನಿಟುಗಳಲ್ಲಿ ಯಾರೋ ಕಾರುಪ ಸದ್ದು ಆತನಿಗೆ ಕೇಳಿಸಿತು; ಆತ ಹಿಂದಿರುಗಿ ನೋಡುವಾಗ, ಒಬ್ಬ ವ್ಯಕ್ತಿ ಕಾರಿಕೊಂಡೇ ಅಷ್ಟು ಹೊತ್ತಿನಲ್ಲಿ ಸತ್ತುಹೋಗಿದ್ದ. ಆತನ ಸಹಾಯಕನಾಗಿ ಇನ್ನೊಬ್ಬ ಮಗುವನ್ನೆತ್ತಿಕೊಂಡು ಸಮೀಪ ಬರುವುದರಲ್ಲಿದ್ದ; ಸರ್ಪವು ಕೊಂಚಹೊತ್ತಿನಲ್ಲಿಯೇ ಅವನನ್ನೂ ಮುಗಿಸಿಬಿಟ್ಟಿತು. ಅಳುತ್ತಿರುವ ಮಗುವಿನತ್ತ ಆ ಸರ್ಪ ಅದರ ರಕ್ಷಣೆಗಾಗಿ ಹೋಗಿ ತಲಪಿತ್ತು!

ಭಾರತದಲ್ಲಿ ಸರ್ಪರಾಜ ಮತ್ತು ನಾಗರಾಣಿಯರ ಹಲವಾರು ಮಂದಿರಗಳಿವೆ. ಕನ್ಯಾಕುಮಾರಿಯ ಸಮೀಪದಲ್ಲಿ ನಾಗಮಾತೆಯ ತಂದೆಯ ದೇವಾಲಯವೂ ಒಂದಿದೆ. ನಾಗನ ವಿಷ ಮನುಷ್ಯ ದೇಹಕ್ಕೆ ಘಾತಕವಾದರೂ ಹಲವಾರು ರೋಗಗಳಿಗೆ ಸಿದ್ಧೌಷಧಿಯಾಗಿದೆ. ತಲೆ ಸಿಡಿಯುವುದನ್ನು ತಡೆಗಟ್ಟಲು ಸರ್ಪವಿಷ ಉಪಯೋಗಿಯಾಗಿದೆ. ವಿಯನ್ನ ನಗರದ ಯುವವೈದ್ಯನೊಬ್ಬನಿದನ್ನು ಕಂಡುಹಿಡಿದ. ಇದರ ಪ್ರಧಾನ ಉಪಾದಾನ ಸರ್ಪ ವಿಷವಾಗಿದೆ. ಒಂದು ಮುಲಾಮಿನಂತೆ ಇದರ ಪ್ರಯೋಗವಾಗಿದೆ. ಕಿವಿ ಅಥವಾ ಎದೆಗೆ ಇದನ್ನು ಹಚ್ಚುವುದಿಲ್ಲ; ಕೆನ್ನೆಯ ಗುಳಿಗಳಿಗೆ ಇದನ್ನು ಹಚ್ಚಿ ತಿಕ್ಕಿದರೆ ಒಂದೆರಡು ನಿಮಿಷಗಳಲ್ಲಿಯೇ ಈ ರೋಗ ವಾಸಿಯಾಗುವುದೆಂದು ಹೇಳಲಾಗಿದೆ. ವಿಯನ್ನದಲ್ಲಿ ಇದರ ಒಂದು ದೊಡ್ಡ ಕಾರಖಾನೆಯೇ ಇದೆ.

ಬೆಂಕಾಕಿನಲ್ಲಿ ಸರ್ಪಗಳ ಫಾರ್ಮೊಂದು ವಿಧಿವತ್ತಾಗಿ ನಡೆಯುತ್ತದೆ. ಇಲ್ಲಿ ಸರ್ವ ಪ್ರಕಾರದ ಸರ್ಪಗಳಿವೆ. ಇವನ್ನು ಕಂಡು ಓರ್ವ ಅಪರಿಚಿತ ಹೆದರಿ ಹೋಗಬಹುದು. ಆದರೆ, ಈ ಫಾರ್ಮಿನ ಡಾಕ್ಟರು ಈ ಸರ್ಪಗಳ ನಡುವೆ ಯಾವ ಹೆದರಿಕೆಯೂ ಇಲ್ಲದೆ ಸಂಚರಿಸುತ್ತಾರೆ. ಇವರು ಸರ್ಪ ಕಡಿತಕ್ಕೆ ಒಂದು ಸೀರಂ ತಯಾರಿಸಿದ್ದು, ಅದು ಸಯಾಮಿನಲ್ಲಿ ಅನೇಕರ ಪ್ರಾಣಗಳನ್ನು ಉಳಿಸಿದೆ.

ಈ ಫಾರ್ಮಿನಲ್ಲಿ ಪ್ರತಿ ಗುರುವಾರ ಹಾವುಗಳ ವಿಷ ತೆಗೆಯುತ್ತಾರೆ. ಆ ದಿನ ಸಾವಿರಾರು ಜನರು ಅಲ್ಲಿ ನೆರೆಯುತ್ತಾರೆ. ವಿಷ ತೆಗೆಯುವ ರೀತಿ ಯಾದರೂ ಬಹು ಸೋಜಿಗವಾಗಿದೆ. ಒಂದು ಮೇಜಿನ ಮೇಲೆ ಹಲವಾರು ಗಾಜಿನ ತಟ್ಟೆಗಳನ್ನು ಇಟ್ಟುಕೊಳ್ಳುತ್ತಾರೆ. ಒಬ್ಬ ವೆಟರ್ನರಿ ಡಾಕ್ಟರು ಚೆತ್ತಕ್ಕೆ ಸುತ್ತಿಕೊಂಡಿರುವ ಸರ್ಪವೊಂದನ್ನು ಅಲ್ಲಿಗೆ ತರುತ್ತಾನೆ; ತನ್ನ ಒಂದು ಬೆರಳಿನಿಂದ ಅದರ ಬಾಯಿಯನ್ನು ಅಗಲಿಸುತ್ತಾನೆ. ತಕ್ಷಣವೇ ಇನ್ನೊಬ್ಬ ಡಾಕ್ಟರು ಗಾಜಿನ ತಟ್ಟೆಯನ್ನು ಆ ಬಾಯಿಯೊಳಗೆ ಹಿಡಿಯುತ್ತಾನೆ. ಆಗ ತಟ್ಟೆಯಲ್ಲಿ ತರಲದ್ರವವೊಂದು ಇಳಿಯುತ್ತದೆ ಇದೇ ವಿಷ ಒಂದು ಯಾ ಎರಡು ಚಮಚೆಯಷ್ಟು ವಿಷ ಸುರಿಯಿತೆಂದಾದ ಮೇಲೆ ಆ ಸರ್ಪವನ್ನು ತೆಗೆದು ನೀರ ಕುಂಡಕ್ಕೆ ಎಸೆಯುತ್ತಾರೆ.

ಜಪಾನದಲ್ಲಿ ಪ್ರತಿದಿನ ಸಾವಿರ ಸಂಖ್ಯೆಯ ಸರ್ಪಗಳ ಚೂರ್ಣವನ್ನು ಮಾರುತ್ತಾರೆ. ಯಕ್ಷ್ಮರೋಗಕ್ಕೆ ಇದು ಸರ್ವೋತ್ತಮವಾದ ಔಷಧಿ ಎಂದು ಅಲ್ಲಿನ ಜನರು ತಿಳಿದಿದ್ದಾರೆ. ಇಲ್ಲಿ ಹಲವಾರು ಅಂಗಡಿಗಳಲ್ಲಿ ಚೂರ್ಣರೂಪದಲ್ಲಿ ಹಾವುಗಳು ಮಾರಲ್ಪಡುತ್ತವೆ. ಟೋಕಿಯೋದ ಸಮೀಪವೇ ಒಂದು ಸರ್ಪಗಳ ಸ್ಟೋರ್ (ಉಗ್ರಾಣ)ವಿದೆ. ಇಲ್ಲಿ ಯಾವಾಗಲೂ ಹತ್ತು ಸಾವಿರ ಸರ್ಪಗಳು ಮಾರಲು ಸಿದ್ಧವಾಗಿವೆ. ಈ ಉಗ್ರಾಣದಲ್ಲಿ ವರ್ಷದಲ್ಲಿ ಒಂದು ಲಕ್ಷ ಸರ್ಪಗಳು ಮಾರಾಟವಾಗುತ್ತವೆಂದು ಹೇಳುತ್ತಾರೆ.

ಹಾವಾಡಿಗ ಹಾವಿನ ವಿಷ ತೆಗೆಯಲು ಯಾವ ಮಂತ್ರಮಾಯೆಗಳನ್ನು ಮಾಡುವುದಿಲ್ಲ ಎಂಬುದು ಸತ್ಯ. ಆತ ತನ್ನ ಸಾಹಸದಿಂದಲೇ ಬರಿಗೈಯಿಂದದನ್ನು ಹಿಡಿಯುತ್ತಾನೆ. ಸರ್ಪಗಳಿಗೆ ಕಿವಿಯೇ ಇಲ್ಲವಾದುದರಿಂದ, ಶ್ರುತಿಯ ನಾದವನ್ನು ಕೇಳಿ ಆನಂದಪಡುವ ಇವರ ಅಂಗ ಯಾವುದೆಂಬುದು ಈ ತನಕ ಶಿಕ್ಷಣದ ರಹಸ್ಯವಾಗಿಯೇ ಉಳಿದಿವೆ.

ಸರ್ಪವು ವೀಣಾನಾದದಿಂದ ತತ್ಪರವಾಗುವುದಿಲ್ಲ. ಹಾವಾಡಿಗ ತನ್ನ ಕಣ್ಣುಗಳನ್ನು ಸರ್ಪದ ಕಣ್ಣುಗಳ ಎದುರು ಬರಿಸಿ ವೀಣೆ ಬಾರಿಸುತ್ತಾನೆ. ಕಣ್ಣು ತೆರೆಯುತ್ತ ಮುಚ್ಚುತ್ತ ಎತ್ತ ಹಾವಾಡಿಗ ತಲೆಯಾಡಿಸುತ್ತಾನೆಯೋ ಅತ್ತ ಸರ್ಪವೂ ವಾಲುತ್ತದೆ. ಇದನ್ನೇ ಸರ್ಪದ ತ

(೬ನೇ ಪುಟ ನೋಡಿರಿ)

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.
ಕಥಾ ಕೌಮುದಿ
(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1 = 50)
ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಇದೀಗ ಪ್ರಕಟವಾಗಿದೆ!
'ಮದುವೆ ಸೀರೆ'
ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ದುರ್ಜನರನ್ನು ಆದರಾಭಿಮಾನಗಳಿಂದ ಗೌರವಿಸಬಾರದು; ಸಜ್ಜನರನ್ನು ಪರುಷಪದಗಳಿಂದ ಕೆಡೆ ನುಡಿಯಬಾರದು. ಹೀಗೆ ನಡೆದುಕೊಂಡವನು ಮಾತ್ರ ಪ್ರಪಂಚದ ಅಭಿಮಾನಕ್ಕೆ ಪಾತ್ರನಾಗುವನು.

NAVAYUGA

Founder:—

A. B. SHETTY,

Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೩೦-೭-'೫೯	೪೬

ಪರಿಹಾರ ನಿಧಿಗೆ ಸಹಾಯ

ಭಾರತದ ಅತ್ಯಂತ ಮುಂಗಾರು ಮಳೆಯು ಅತಿಯಾಗಿ ಬಂದುದರಿಂದಾಗಿ ಎಲ್ಲೆಲ್ಲಿಯೂ ಪ್ರವಾಹವು ಉಕ್ಕಿ ಹರಿದುದಲ್ಲದೆ ಸಾರಿಗೆ ಸಂಪರ್ಕಗಳು ನಿಂತುಹೋಗಿ ಜನವ್ಯಾಪಾರವೂ ಸ್ಥಗಿತವಾಗಿರುವುದು. ಹಾಗೆಯೇ ಹಲವೆಡೆ ಜನತೆಯ ಪ್ರಾಣ ಮತ್ತು ವಿತ್ತಗಳಿಗೂ ಹಾನಿ ಬಡೆದ ವಾರ್ತೆಗಳು ಜುಲೈ ಮಾಸದಲ್ಲಿ ಪದೇ ಪದೇ ತಿಳಿದುಬಂದಿವೆ. ಸಣ್ಣ ಪುಟ್ಟ ನದಿಗಳು ಮಾತ್ರವಲ್ಲ ದೊಡ್ಡದೊಡ್ಡ ನದಿಗಳು ಕೂಡ ಜನತೆಯನ್ನು ವಿಮಾಚನೆಗೀಡುಮಾಡಿವೆ. ಪಶ್ಚಿಮ ಕರಾವಳಿಯ ದಕ್ಷಿಣ ಭಾಗ, ಗುಜರಾಥ ಕರಾವಳಿ ಹಾಗೂ ಕಾಶ್ಮೀರಗಳ ನೆರೆಯಿಂದ ರಾಷ್ಟ್ರದಲ್ಲಿ ಅಪಾರ ನಷ್ಟವು ಸಂಭವಿಸಿದೆ. ಅಲ್ಲದೇ ಮಲೆನಾಡಿನಲ್ಲಿ ಹಾಗೂ ಘಟ್ಟ ಪರ್ವತಗಳಲ್ಲಿ ಹುಟ್ಟುವ ನದಿಗಳು ಅತಿವೃಷ್ಟಿಯಿಂದಾಗಿ ತುಂಬಿ ಹರಿದುದರಿಂದ ಕೆಲವೆಡೆ ಒಳನಾಡಿನಲ್ಲಿಯೂ ಅದರ ಪ್ರಭಾವ ಕಾಣವಿಲ್ಲ. ಈ ರೀತಿಯಾಗಿ ಅನೇಕ ಹಿಮಾಜಲ ವರುಣರಾಯನ ಪ್ರಕೋಪವು ಕಾಣಿಸಿಕೊಂಡಿರುವುದು ಭಾರತದ ದುರದೃಷ್ಟವೆಂದೇ ಹೇಳಬೇಕು. ವಿಕಾರಿ ಸಂವತ್ಸರದ ವಿಕಾರದರ್ಶನದ ಮೊದಲನೆಯ ಘಟ್ಟ ಇದಾಗಿರಲೂ ಬಹುದು.

ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಹಾಗೂ ಚಿಕ್ಕ ಮಗಳೂರು ಜಿಲ್ಲೆಗಳಲ್ಲಿ ಕಾಣಿಸಿಕೊಂಡ ನೆರೆಯಿಂದಾಗಿ ಅಪಾರ ನಷ್ಟವಾಗಿರುವುದು ದೃಗ್ಗೋಚರವಾಗುತ್ತಿದೆ. ಗಂಗೊಳ್ಳಿ, ಸುವರ್ಣಾ, ಉದ್ಯಾವರ, ಗುರುಪುರ, ನೇತ್ರಾವತಿ, ಕುಮಾರಧಾರೆ ಮೊದಲಾದ ನದಿಗಳು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಾರಿಗೆಗೆ ಮಾತ್ರ ಆತಂಕವನ್ನು ತಂದೊಡ್ಡುದುದಲ್ಲದೇ ತಮ್ಮ ಕೂಲಗಳಲ್ಲಿ ನೆಲಸಿದ್ದವರ ಪ್ರಾಣಗಳನ್ನೂ ಮನೆಮಾರುಗಳನ್ನೂ ಕಬಳಿಸಿವೆ. ಹಾಗೆಯೇ ಆಸುಪಾಸಿನ ಗದ್ದೆಗಳಲ್ಲಿ ನೆಡಲಾಗಿದ್ದ ಪೈರನ್ನು ಸಹ ಕೊಚ್ಚಿಕೊಂಡು ಹೋಗಿದ್ದು ನೂರಾರು ಕುಟುಂಬಗಳು ಸಂಪೂರ್ಣ ನಿರ್ಗತಿಕವಾಗಿರುವುದು ಶೋಚನೀಯವೆಂದೇ ಹೇಳಬೇಕು. ಈ ರೀತಿಯ ನೆರೆಯ ನೀರಿನಿಂದಾದ ಹಾನಿ ಕಳೆದ ಮೂವತ್ತೈದು ವರ್ಷಗಳಿಂದಲೂ ಆಗಿಲ್ಲವೆಂಬುದನ್ನು ಮನಗಾಣುವಾಗ ಪ್ರವಾಹ ಪೀಡಿತರ ಸಂಖ್ಯೆ ಹಾಗೂ ನಿರ್ಗತಿಕತನವನ್ನು ಊಹಿಸಿಕೊಳ್ಳುವುದೇ ಮೇಲು.

ನಮ್ಮ ಸಹಬಂಧುಗಳಾಗಿರುವ ಈ ಪ್ರವಾಹ ಪೀಡಿತರು ಕಳೆದುಕೊಂಡ ತಮ್ಮ ಬದುಕನ್ನು ಪುನಃ ಸಂಸ್ಥಾಪಿಸಿ, ಯಥಾರೀತಿಯಲ್ಲಿ ತಮ್ಮ ದೈನಂದಿನ ಕಾರ್ಯಕಲಾಪಕ್ಕೆ ತೊಡಗುವಂತಾಗಲು ಅವರಿಗೆ ನೆರವು ಅವಶ್ಯಬೇಕೆಂಬುದು ನೂರಕ್ಕೆ ನೂರರಷ್ಟು ಸತ್ಯ. ಜನಹಿತ ಸರಕಾರವು ಈ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವುದು ಅಸಾಧ್ಯವಾದರೂ ಅದೇ ಸಂಪೂರ್ಣ ಉತ್ತರದಾಯಿತ್ವವನ್ನು ಹೊರಬೇಕು ಎಂಬುದು ಸಮಂಜಸವಲ್ಲ. ಸರಕಾರವು ಈ ದಿಸೆಯಲ್ಲಿ ತನ್ನ ಪಾಲಿನ ಸೇವೆಯನ್ನು ಸಲ್ಲಿಸುತ್ತದೆ; ಅದರೊಡನೆ ಸಾರ್ವಜನಿಕರೂ ಸಹಕರಿಸಿದರೆ, ಮಾತ್ರ ಅದು ಯಶಸ್ವಿಯಾಗಿ ಸಂಪೂರ್ಣ ರೂಪ ತಾಳುತ್ತದೆ. ಎಂಬುದನ್ನು ಅರಿತುಕೊಳ್ಳಬೇಕು. ಇದಕ್ಕಾಗಿ ನಮ್ಮ ಜಿಲ್ಲೆಗೆ ರಾಜ್ಯ ಸರಕಾರವು ಇದು ವರೆಗೆ ೭೫ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದೆ ಈ ಹಣವನ್ನು ಪೀಡಿತರಿಗ ಹಂಚಿದರೆ, ಅದೇನೂ ಗಣ ಮೊಬಲಗಾಗಲಾರದು. ಇದಕ್ಕಾಗಿಯೇ ಜಿಲ್ಲಾ ಡಿಪ್ಯುಟಿಕಮಿಶನರರ ಹಿರಿತನದಲ್ಲಿ ಜಿಲ್ಲಾ ಪ್ರವಾಹ ಪೀಡಿತರ ನೆರವಿಗಾಗಿ ಒಂದು ಸಮಿತಿಯು ಸ್ಥಾಪನೆಗೊಂಡು ಅದು ಕಾರ್ಯಪ್ರವೃತ್ತವಾಗಿದೆ ಅಂತೆಯೇ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಕೂಡ ನವಭಾರತ ದೈನಿಕದೊಡನೆ ಸೇರಿಕೊಂಡು ಜಿಲ್ಲೆಯ ನೆರೆಪೀಡಿತರಿಗೆ ಸಹಾಯವೊದಗಿಸಲು ಮುಂದೆ ಬಂದಿದೆ. ಜಿಲ್ಲಾಧಿಕಾರಿಗಳಿಂದ ಬಂದ ಒಂದು ಯಾದಿಯಂತೆ ಅವರೊಡನೆ ಸುಮಾರು ೮-೯ ಸಾವಿರ ರೂಪಾಯಿಯು ಸಂಗ್ರಹವಾಗಿದೆ. ಸಿಂಡಿಕೇಟ್-ನವಭಾರತ ಯೋಜನೆಯಲ್ಲಿ ಆರೇಳು ಸಾವಿರವಾಗಿದೆ. ಇನ್ನು ಕೆನರಾಬ್ಯಾಂಕು ಒಂದು ಲಕ್ಷ ರೂಪಾಯಿಯ ಗುರಿಯನ್ನಿಟ್ಟುಕೊಂಡು ಇದಕ್ಕಾಗಿಯೇ ಕಾರ್ಯಮಗ್ನವಾಗಿದೆ. ಬೊಂಬಾಯಿ ನಗರದಲ್ಲಿಯೂ ಈ ಪರಿಹಾರ ನಿಧಿಯ ಬಗ್ಗೆ ಆಸಕ್ತಿಯು ತೋರಿಬರುತ್ತಿದೆ. ಹೀಗೆ ಎಲ್ಲೆಲ್ಲಿಯೂ ಪರಿಹಾರ ನಿಧಿಗಳು ಸಂಗ್ರಹವಾಗುತ್ತಿರುವುದು ಸಂತೋಷದ ಸಮಾಚಾರ. ಆದರೆ, ಸಾವಿರಾರು ನಿರ್ಗತಿಕರಿಗೆ ಯೋಗ್ಯ ವಸತ್ಯಾದಿ ಸೌಕರ್ಯವನ್ನೊದಗಿಸಿ ಕೊಡುವುದು ಇಷ್ಟು ಸುಲಭದ ಕೆಲಸವಲ್ಲ; ಅದಕ್ಕಾಗಿ ಬೇಕಾಗುವ ಹಣವೂ ಸ್ವಲ್ಪವಲ್ಲ. ಆದುದರಿಂದ ಪ್ರತಿಯೊಬ್ಬನೂ ತನ್ನ ಶಕ್ತ್ಯಾನುಸಾರವಾಗಿ ಈ ಪರಿಹಾರನಿಧಿಗೆ ಧನಸಹಾಯಮಾಡಬೇಕು. ನಿರ್ಗತಿಕರೆಲ್ಲರೂ ತೃಪ್ತಿಹೊಂದುವಂತಲ್ಲವಾದರೂ, ಸಾಮಾನ್ಯವಾಗಿ 'ಸಾಧ್ಯ'ವೆನಿಸುವಷ್ಟಾದರೂ ಅವರಿಗೆ ಸಹಾಯವೀಯುವುದು ಅಗತ್ಯ. ವಿಶಾಲ ಸಮುದ್ರಕ್ಕೆ ಎಷ್ಟು ನೀರು ಹೊಯ್ದರೂ ಅದು ಹೆಚ್ಚುವುದೆಂಬುದಿಲ್ಲ. ಅಂತೆಯೇ ಹನಿಕೂಡಿ ಹಳ್ಳವಾದುದರಿಂದ, ಈ ನಿಧಿಯು ಬೆಳೆಯುವಂತೆ ಮಾಡುವುದು ನಾಗರಿಕರ ಕರ್ತವ್ಯವಾಗಿದೆ ಸಂಗ್ರಹವಾದ ಹಣವು ಉಚಿತ ರೀತಿಯಲ್ಲಿ ನಾಗರಿಕರು ಮೆಚ್ಚುವಂತೆ ಪ್ರವಾಹ ಸಂತ್ರಸ್ತರಿಗೆ ದೊರೆಯುವಂತೆ ಮಾಡುವುದು ನಿಧಿ ಸಂಗ್ರಾಹಕರ ಹೊಣೆಗಾರಿಕೆಯಾಗಿದೆ.

ಸಂಕ್ಷಿಪ್ತ ಸುದ್ದಿಗಳು

ವಿಕ್ಷುಬ್ಧ ಕೇರಳ

ಕಾಂಗ್ರೆಸ್ ವರಿಷ್ಠರೆಲ್ಲರೂ ಒಂದಾಗಿ ಕೇರಳದಲ್ಲಿ ರಾಷ್ಟ್ರಪತಿಯವರ ಆಳಿಕೆಯನ್ನು ಘೋಷಿಸುವರೆಂಬ ವಿಶ್ವಸನೀಯ ವಾರ್ತೆಗಳು ಈಗ ಬರಹತ್ತಿವೆ. ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿಯವರು ಬೆದರಿಕೆ ಹಾಕಿರುವರೆಂದೂ ಅದರಿಂದಾಗಿ ಈ ನಿರ್ಧಾರವು ಸಾಮಾನ್ಯವಾಗಿ ಬಂದಿತೆಂದೂ ಗೊತ್ತಾಗಿದೆ. ಕೇರಳದ ರಾಜ್ಯಪಾಲರು ಕೂಡ ವಿರೋಧೀ ಪಕ್ಷಗಳು ಹಾಕಿದ ಆರೋಪಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ರಾಷ್ಟ್ರಪತಿಗಳವರಿಗೆ ತಿಳಿಸಿರುವರೆಂದೂ ಅದೀಗ ಗೃಹಖಾತೆಯಲ್ಲಿದೆ ಎಂದೂ ತಿಳಿಯುತ್ತದೆ. ಇಂದು ನಾಳೆಯಲ್ಲಿ ಈ ಬಗ್ಗೆ ಅಂತಿಮ ನಿರ್ಧಾರವು ಕೈಗೊಳ್ಳಲ್ಪಡುವುದು ಖಂಡಿತವೆಂದೀಗ ಹೇಳಲಾಗಿದೆ.

ಪರಿಹಾರ ತಿರಸ್ಕೃತವಾಯಿತು!

ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಗಾಂಧಿಯವರ ಹೇಳಿಕೆಯನ್ನೇ ಆಧಾರವಾಗಿಟ್ಟು ಕೇರಳದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತೆ ತರುವುದು ಸಂವಿಧಾನ ವಿರೋಧವಾಗುವುದೆಂದು ಮುಖ್ಯಮಂತ್ರಿ ನಂಬೂದರಿ ಪಾದರಾಡಿದ್ದಾರೆ. ಶ್ರೀಮತಿಯವರು ಘಟನೆಯು ಜನರಿಗಾಗಿರುವುದಲ್ಲದೇ ಜನರು ಘಟನೆಗಾಗಿ ಅಲ್ಲ; ಆದಪ್ರಯುಕ್ತ ಕೇರಳ ಸರಕಾರವು ಘಟನೆಗೆ ಸರಿಯಾಗಿಯೇ ನಡೆಸುಕೊಂಡಿರುವುದಾದರೆ, ಅಂತಹ ಘಟನೆ ಕೇರಳೀಯರಿಗೆ ಬೇಡವೆಂದಾದರೆ, ಘಟನೆಯನ್ನೆ ತಿದ್ದುಪಡಿಮಾಡಿಯಾದರೂ ಜನತೆಯನ್ನು ಕಮ್ಯುನಿಸ್ಟ ಮುಷ್ಟಿಯಿಂದ ಬಿಡಿಸಬೇಕೆಂದಿದ್ದರು. ಅಂಕಾಮಲಿಯಲ್ಲಿ ನಡೆದ ಗೋಳಿಬಾರಿನಿಂದ ಮಡಿದವರ ಕುಟುಂಬಗಳಿಗೆ ಪ್ರತಿಯೊಂದಕ್ಕೆ ರೂ. ೩,೦೦೦ ಪರಿಹಾರವನ್ನು ಕೇರಳ ಸರಕಾರವು ಕೊಟ್ಟದ್ದರೂ ಸಂಬಂಧಪಟ್ಟವರದನ್ನು ತೆಗೆದುಕೊಳ್ಳಲಿಲ್ಲ.

ಮೂರಧಿಕ ಒಂದಧಮವೇ?

ದೇಶದಲ್ಲಿನ ಬೇರೆಬೇರೆ ಉತ್ಪಾದಕ ವೃತ್ತಿಯಲ್ಲಿ ತೊಡಗಿರುವ ಉದ್ದಿಮೆದಾರರಿಗೆ ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯವನ್ನು ಕೊಡುವುದರಿಂದ, ಅಂತಹ ಅನುಭವಿಗಳ ಅನುಭವದಿಂದ ಸರಕಾರವು ಈ ಕ್ಷೇತ್ರಗಳಿಗೆ ಸಂಬಂಧಿಸಿದ ಕಾಯದೆಗಳ ಬಗ್ಗೆ ಸಲಹೆ ಪಡೆಯಬಹುದು. ಶಾಸನಸಭೆಗಳಲ್ಲಿ ಅನರ್ಹರಾದ ಸದಸ್ಯರೇ ಸೇರಿಕೊಂಡಿರುವುದರಿಂದ ಅವರು ಈ ಬಗ್ಗೆ ಏನು ಸಲಹೆ ನೀಡಬಲ್ಲರು? ಆದುದರಿಂದ ರಾಜ್ಯಘಟನೆಯನ್ನು ತಿದ್ದಿಯಾದರೂ ಉದ್ದಿಮೆದಾರರಿಗೆ ಶಾಸನಸಭೆಗಳ ಪ್ರಾತಿನಿಧ್ಯವೀಯಬೇಕೆಂದು ರಾಜಾಜಿ ಅಭಿಪ್ರಾಯಿಸಿದ್ದಾರೆ. ಅಲ್ಲದೇ ಅವರು ಮಂತ್ರಿಮಂಡಳಿಯಲ್ಲಿ ಮೇಧಾವಿಗಳಿಗೆ ಸ್ಥಾನವಿರಬೇಕೆಂದು ಹೇಳಿ, ಅಮೆರಿಕೆಯನ್ನು ಉದಾಹರಿಸಿ, ಭಾರತದಲ್ಲಿ ವಶೀಲಿಯಿಂದಾಗಿ ಮಂತ್ರಿಪಟ್ಟ ದಕ್ಕಿಸಿಕೊಳ್ಳಬಹುದು ಎಂದು ಉಲ್ಲೇಖಿಸಿ ಇಂತಹ ಅನರ್ಹ ಮಂತ್ರಿಗಳು ಉದ್ದಿಮೆಯ ಉನ್ನತಿಯನ್ನು ಮಾಡಲಾರರು. ಆಗ ಉದ್ದಿಮೆದಾರರಾದರೂ ಕೂಗಿಕೊಳ್ಳಲೇ ಬೇಕಾಗುತ್ತದೆ. ಸರಕಾರವಿಂದು ಬ್ರಾಹ್ಮಣರು ಮಾಡುವ ಉಪದೇಶ, ವೈಶ್ಯರಂತೆ ವ್ಯಾಪಾರ ಮತ್ತು ಕ್ಷತ್ರಿಯರಂತೆ ರಕ್ಷಣೆಯ ಭಾರವನ್ನು ಹೊತ್ತು ಶೂದ್ರರು ಮಾಡುವ ದುಡಿಮೆಗೆ ಮಾತ್ರ ಹಿಂದೇಟು ಹಾಕುತ್ತಿದೆ ಎಂದರು ಸರಕಾರ ತನ್ನ ಕರ್ತವ್ಯವನ್ನು ಮರೆಯುವಂತಾದರೆ ದೇಶದ ಗತಿಯೇನು ಎಂದವರು ಕೇಳಿದ್ದಾರೆ.

ವಿಷಾದಕರ ವರ್ತನೆ

ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಶಿಕ್ಷಣಶುಲ್ಕವನ್ನು ಕಡಿಮೆ ಮಾಡಬೇಕೆಂಬ ಬೇಡಿಕೆಯನ್ನು ಪ್ರಧಾನವಾಗಿಟ್ಟು ಮುಷ್ಕರ ಹೂಡುವ ಸಾಹಸ ಕೈಗೊಂಡುದು ವಿಷಾದದ ಸಂಗತಿಯಾಗಿದೆ. ಕಾಲೇಜ್ ಪ್ರಾಸ್ಪೆಕ್ಟಸ್‌ನಲ್ಲಿ ನಮೂದಿಸಿದ ಶುಲ್ಕಗಳನ್ನು ಕಾಲೇಜು ಅಧಿಕಾರಿಗಳು ವಸೂಲು ಮಾಡಲು ಹಕ್ಕುದಾರರಿರುವಾಗ, ಪ್ರವೇಶ ಪತ್ರದಲ್ಲಿಯೂ ಈ ಶುಲ್ಕ ತೆರಲು ಸಮ್ಮತಿಸಿರುವಾಗ, ಈ ರೀತಿ ವಿದ್ಯಾರ್ಥಿಗಳು ಮುಷ್ಕರ ನಡೆಸುವುದು ಸಮಂಜಸವಲ್ಲ. ಒಂದುವೇಳೆ ಶುಲ್ಕವನ್ನು ಕಡಿಮೆ ಮಾಡಬೇಕೆಂಬುದಲ್ಲದೇ ಇತರ ಏನೇ ಕಾರಣಗಳಿದ್ದರೂ, ತರಗತಿಗೆ ಹಾಜರಾದ ಮೇಲೆ, ಆ ಕೇಳಿಕೆಗಳ ಬಗ್ಗೆ ವಿಚಾರವಿನಿಮಯ ಮಾಡೋಣ ಎಂದ ಡೀನರ ಮಾತನ್ನೂ ವಿದ್ಯಾರ್ಥಿಗಳು ಕೇಳದೆ ಇದ್ದುದು ವಿದ್ಯಾರ್ಥಿ ಸಮಾಜಕ್ಕೆ ಅವಹೇಳನವಾಗಿದೆ. ಅಲ್ಲದೇ ಈ ಮುಷ್ಕರಕ್ಕೆ ಹೊರಗಿನ ರಾಜಕಾರಣಿಗಳಿಗೂ ಸಂಬಂಧವು ಇದ್ದು ಅವರು ವಿದ್ಯಾರ್ಥಿನಾಯಕರನ್ನು ಉತ್ತೇಜಿಸುತ್ತಿರುವರೆಂದು ಕಾಲೇಜಿನ ಡೀನರು ಒಂದು ಪತ್ರಿಕಾ ಪ್ರಕಟಣೆಯಲ್ಲಿತ್ತಿದ್ದಾರೆ. ಈ ಸಂಬಂಧ ಮಾತ್ರ ನಿಜವಾಗಿಯೂ ಖೇದಾರ್ಹವಾಗಿದೆ. ವಿದ್ಯಾಕ್ಷೇತ್ರದಲ್ಲಿ ರಾಜಕಾರಣಿಗಳು ಕೈಹಾಕುತ್ತಿರುವುದರಿಂದಲೇ ಅದರಲ್ಲಿ ಒಂದು ಸ್ಥಿಮಿತತೆಯಿಲ್ಲದೆ ಅಂಕುಡೊಂಕಾಗಿ ಸಾಗುತ್ತಿರುವಾಗ, ವಿದ್ಯಾಸಂಸ್ಥೆಗಳ ಅಂತರಂಗಕ್ಕೂ ಇವರು ಪಾದಾರ್ಪಣ ಮಾಡಿದರೆ, ಅದು ವಿದ್ಯಾಲಯವಲ್ಲ, ವಿಧಾನ ಸಭೆಯೇ ಆಗಿ ಪರಿಣಮಿಸುವುದೇ ಎಂಬ ಸಂದೇಹ ಮೂಡುತ್ತದೆ ವಿಕಾರಿಯ ಪ್ರಭಾವ ಎಷ್ಟಿದೆ ಎಂಬುದೂ ಇದರಿಂದ ವ್ಯಕ್ತವಾಗುವುದಲ್ಲವೆ?

'ನವಯುಗ'ದ
ವಾಚಕರಿಗೆ

ಸಂತೋಷದ ಸುದ್ದಿ

* * *

ಪ್ರತಿವರ್ಷದಂತೆ ಈ ಸಲವೂ

ಸ್ವಾತಂತ್ರ್ಯ ದಿನೋತ್ಸವ ವಿಶೇಷ ಸಂಚಿಕೆಯು

ಉತ್ತಮ ಲೇಖನ, ಕವನ, ಕಥೆಗಳಿಂದೊಡಗೂಡಿ ವಿಶಿಷ್ಟ ರೀತಿಯಲ್ಲಿ ತಾ. 13-8-1959ಕ್ಕೆ ಪ್ರಕಟವಾಗುವುದು.

ಅಲ್ಲಲ್ಲಿಯ ಸುದ್ದಿಸಾರ

ದ. ಕ. ಕೇರಳ ವಿಮೋಚನಾ ಸಹಾಯ ಸಮಿತಿ—ತಾ. 24ರಲ್ಲಿ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ನಗರ ಸಭಾಪತಿ ಶ್ರೀ ಮುಡೇಲ್ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಕಮ್ಯುನಿಸ್ಟ್ ವಿರೋಧಿ ಪಕ್ಷಗಳ ಸಭೆಯೊಂದು ಕೇರಳದ ಚಳವಳಿಕ್ಕೆ ಬೆಂಬಲ ಕೊಡುವಬಗ್ಗೆ ಜರಗಿ ಸಮಿತಿಯೊಂದು ರಚಿಸಲ್ಪಟ್ಟಿತು. ಸಭೆಯ ಕನ್ವೀನರ್ ಶ್ರೀ ಕೆ. ಕೆ. ಶೆಟ್ಟಿ ಎಂ.ಎಲ್.ಸಿ. ಯವರು ಸಭೆಯ ಉದ್ದೇಶವನ್ನು ವಿವರಿಸಿ ಕೇರಳ ಜನತೆಯ ಹೋರಾಟಕ್ಕೆ ಬೆಂಬಲಕೊಡಲು ಜನತೆ ಮುಂದಾಗಬೇಕೆಂದರು. ಶ್ರೀಗಳಾದ ಪ್ರಭಾಕರ ಘಾಟೆ, ಎಸ್. ಎನ್. ಅಡಿಗ ಮೊದಲಾದವರು ಮಾತನಾಡಿ ಸಲಹೆ ಕೊಟ್ಟರು. ಅನಂತರ ೨೦ ಸದಸ್ಯರಿರುವ ಸಮಿತಿ ರಚಿಸಲ್ಪಟ್ಟಿತು.

ಕೇರಳ ವಿಮೋಚನಾ ದಿನಾಚರಣೆಯು—ತಾ. 26ರಲ್ಲಿ ಶ್ರೀ. ಕೆ. ಆರ್. ಆಚಾರ್, ಯಮ್. ಪಿ. ಇವರ ಅಧ್ಯಕ್ಷತೆಯಲ್ಲಿ ಮಂಗಳೂರು ಗಣಪತಿ ಹೈಸ್ಕೂಲಿನ ಸಭಾಸದನದಲ್ಲಿ ಜರಗಿತು. ಸಭಾರಂಭದಲ್ಲಿ ಶ್ರೀ. ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರು ಸ್ವಾಗತ ಭಾಷಣ ಮಾಡುತ್ತಾ ಕೇರಳದ ಪರಿಸ್ಥಿತಿಯನ್ನು ವಿವರಿಸಿ ಜನತಾ ನೈತಿಕ ಬೆಂಬಲ ಕಳಕೊಂಡ ಅಲ್ಲಿಯ ಸರಕಾರ ಅಧಿಕಾರದಲ್ಲಿರುವುದು ಉಚಿತವಲ್ಲವೆಂದರು.

ಕಣ್ಣಾನೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ. ಎಮ್. ಕುಞ ಕೃಷ್ಣನ್, ಕಾಸರಗೋಡಿನ ಶ್ರೀ. ಕೃಷ್ಣನ್ ನಾಯರ್ ಮತ್ತು ಶ್ರೀ ಎಚ್. ಎ. ಜಮನಾಡ್ ಮೊದಲಾದವರು ಮಾತನಾಡಿ ಕೇರಳ ಸರಕಾರವು ತನ್ನ ಅತ್ಯಾಚಾರಗಳಿಂದ ಜನರ ಬೆಂಬಲಗಳನ್ನು ಕಳಕೊಂಡಿದೆ ಎಂದು ಮುಂತಾಗಿ ಹೇಳಿದರು. ಶ್ರೀ. ಎಫ್. ಎಕ್ಸ್. ಡಿ. ಪಿಂಟೋ, ಎಂ. ಎಲ್. ಎ. ಅವರು ಕೇರಳ ಕಮ್ಯೂನಿಸ್ಟ್ ಸರಕಾರದ ರೀತಿ ನೀತಿಯನ್ನು ಖಂಡಿಸುವ, ಅಲ್ಲಿಯ ವೀರ ಜನತೆಯನ್ನು ಅಭಿನಂದಿಸುವ, ಠರಾವನ್ನು ಮುಂದಿಟ್ಟರು. ಅದು ಮಂಜೂರಾಯಿತು. ಅಧ್ಯಕ್ಷರು ಕೇರಳ ಜನತೆಯ ನ್ಯಾಯವಾದ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿದರು. ಶ್ರೀ ಎಚ್. ಕೆ. ತಿಂಗಳಾಯರು ಧನ್ಯವಾದಗಳನ್ನಿತ್ತರು.

ಕಾಲೇಜು ಯೂನಿಯನ್-ಉಡುಪಿ ಎಮ್. ಜಿ. ಎಮ್. ಕಾಲೇಜು ಯೂನಿಯನಿನ ಚುನಾವಣೆಯು ತಾ. 21ರಲ್ಲಿ ನಡೆದು ಶ್ರೀ ಮಾಧವನ್ ನಂಬಿಯಾರ್ ಇವರು ಯೂನಿಯನ್ ಅಧ್ಯಕ್ಷರಾಗಿಯೂ ಶ್ರೀ ಲೋರೆನ್ಸ್ ಸುವಾರಿ ಕಾರ್ಯದರ್ಶಿಯಾಗಿಯೂ ಚುನಾಯಿಸಲ್ಪಟ್ಟಿದ್ದಾರೆ. ಎಕಾನಮಿಕ್ಸ್ ಸಂಘಕ್ಕೆ ಶ್ರೀ ಸಂಜೀವ ಶೆಟ್ಟಿ, ಕಾಮರ್ಸ್ ಸಂಘಕ್ಕೆ ಶ್ರೀ ಸಾಂತಯ್ಯ ಕಾಸುತ್, ಭಾಷಾ ಸಂಘಕ್ಕೆ ಶ್ರೀ ಕೃಷ್ಣಮೂರ್ತಿ ಹೊಳ್ಳ, ಸೋಸಿಯಲ್ ಸರ್ವೀಸ್ ಲೀಗ್‌ಗೆ ಶ್ರೀ ವಿಲಿಯಮ್ ಪಿಂಟೋ, ಸಾಯನ್ಸ್ ಸಂಘಕ್ಕೆ ಶ್ರೀ ಮೋಹನದಾಸ್ ಬಾಳಿಗ, ಎತ್ಲೆಟಿಕ್ ಸಂಘಕ್ಕೆ ಶ್ರೀ ವಸಂತ ಹೆಗ್ಡೆ ಇವರು ಕಾರ್ಯದರ್ಶಿಗಳಾಗಿ ಚುನಾಯಿಸಲ್ಪಟ್ಟಿದ್ದಾರೆ.

ಅಂಗಡಿ ಕೆಲಸಗಾರರ ಸಂಘದ ಸಭೆ– ಉಡುಪಿ ಅಂಗಡಿ ಕೆಲಸಗಾರರ ಸಂಘದ ಕಾರ್ಯಕಾರಿ ಮಂಡಲಿಯ ಸಭೆಯು ಸಂಘದ ಕಾರ್ಯಾಲಯದಲ್ಲಿ ತಾ. 26-7-59 ರಂದು ಶ್ರೀ ರಾಮದಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಏರುತ್ತಿರುವ ಆಹಾರಧಾನ್ಯಗಳ ಬೆಲೆಯನ್ನು ಸರಕಾರವು ಸ್ಥಗಿತರೂಪಕ್ಕೆ ತರಬೇಕೆನ್ನುವ; ಕಲ್ಯಾಣಪುರ, ಉದ್ಯಾವರದಲ್ಲಿಯ ನೆರೆ ಸಂತ್ರಸ್ತರಿಗೆ ಸಹಾನುಭೂತಿ ವ್ಯಕ್ತಪಡಿಸುವ; ನೆರೆಪೀಡಿತ ಸಹಾಯ ಸಮಿತಿಗಳಿಗೆ ಸಹಕಾರ ನೀಡಬೇಕೆನ್ನುವ; ಕೇರಳ ಜನತಾ ಚಳವಳಿಗೆ ಬೆಂಬಲ ಸೂಚಿಸುವ ನಿರ್ಣಯಗಳಾದುವು. ಶ್ರೀ ವರದರಾಯ ಭಟ್, ಶ್ರೀ ಗೋಪಾಲ ಕಾಮತ್‌ರು ಸಂದರ್ಭೋಚಿತ ಮಾತುಗಳನ್ನಾಡಿದರು.

ವನ ಮಹೋತ್ಸವ–ಉಡುಪಿ ಪುತ್ತೂರಿನ ನಿಟ್ಟೂರು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ದಿನಾಂಕ ೨೫ರಂದು ಶಿವಳ್ಳಿ ಪಂಚಾಯತಿನ ಉಪಾಧ್ಯಕ್ಷ ಶ್ರೀ ಪಿ. ಸದಾಶಿವ ಶೆಟ್ಟರ ಅಧ್ಯಕ್ಷತೆಯಲ್ಲಿ ವನಮಹೋತ್ಸವವು ನೆರವೇರಿತು. ಮಾನವನು ದೃಢ ಆರೋಗ್ಯವಂತನಾಗಿ ಬಾಳುವುದಕ್ಕೆ, ಆತನ ಆಹಾರ ವಿಹಾರಗಳಿಗೆ ಅವನ ಚಿಕಿತ್ಸೆಗೆ ಮರಮಟ್ಟುಗಳು ಎಷ್ಟು ಅಗತ್ಯವೆಂಬುದನ್ನು ಪ್ರತಿಬಿಂಬಿಸಿ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಭಾಷಣಗಳಾದುವು ಅಧ್ಯಕ್ಷರು ಪ್ರಕೃತಿಯಮುದ್ರಂತೆ ವನಸ್ಪತಿ ಮತ್ತು ಮಾನವರ ನಡುವೆ ಗಾಢ ಸಂಪರ್ಕ ಮತ್ತು ಹೊಂದಾಣಿಕೆಗಳಿರುವುವೆಂದು ಹೇಳಿ, ಅಧಿಕ ಮರ ಬೆಳೆಸುವುದು ಅಗತ್ಯವೆಂದರು. ವಿದ್ಯಾರ್ಥಿಗಳಿಂದ ವನ ಮಹೋತ್ಸವಕ್ಕೆ ಸಂಬಂಧಿಸಿದ ವಿನೋದಾವಳಿಗಳು ನಡೆದ ಮೇಲೆ ಕೆಲವಾರು ಗಿಡಗಳನ್ನು ನೆಡಲಾಯಿತು.

ಶಾಲಾ ನಾಯಕ—ಉಡುಪಿ ಕ್ರಿಶ್ಚನ್ ಹೈಸ್ಕೂಲಿನ ಶಾಲಾ ನಾಯಕನಾಗಿ ಶ್ರೀ ಕೆ. ಲಕ್ಷ್ಮೀನಾರಾಯಣ ಕಾನುಗಾಗರೂ ಉಪನಾಯಕರಾಗಿ ಶ್ರೀ ಗೋವಿಂದ ಸೇರಿಗಾರರೂ ಚುನಾಯಿತರಾಗಿರುತ್ತಾರೆ.

ಮಣಿಪಾಲ ಹೈಸ್ಕೂಲಿನ ಶಾಲಾ ನಾಯಕರಾಗಿ ಶ್ರೀ ಪಿ. ವೇದಮೂರ್ತಿ, ಉಪನಾಯಕರಾಗಿ ಶ್ರೀ ರಮಾನಂದ ಪ್ರಭು ಇವರು ಚುನಾಯಿಸಲ್ಪಟ್ಟಿದ್ದಾರೆ.

ವಿದ್ಯಾರ್ಥಿಗಳ ಮುಷ್ಕರದ ಬಗ್ಗೆ ಕಾಲೇಜು ಡೀನರ ಪತ್ರಿಕಾ ಪ್ರಕಟಣೆ

ಕಸ್ತೂರ್ಬಾ ಮೆಡಿಕಲ್ ಕಾಲೇಜ್, ಮಣಿಪಾಲದ ವಿದ್ಯಾರ್ಥಿ ಮುಷ್ಕರದಲ್ಲಿ ಭಾಗವಹಿಸಿದ್ದವರ ಮೇಲೆ ಶಿಸ್ತಿನ ಕಾರ್ಯಕ್ರಮವನ್ನು ಕೈಗೊಂಡುದರ ಮತ್ತು ಪ್ರಿ-ಕ್ಲಿನಿಕಲ್ ಹಾಗೂ ಪ್ರಿ—ಮೆಡಿಕಲ್ ವರ್ಗಗಳನ್ನು ಅನಿಶ್ಚಿತಾವಧಿಯ ವರೆಗೆ ಮುಚ್ಚಿದುದರ ಕುರಿತಾಗಿ ಒಂದು ಪ್ರಕಟಣೆ ಹೊರಡಿಸಿ ಕಾಲೇಜಿನ ಡೀನರಾದ ಡಾ| ಆರ್. ಪಿ. ಕೊಪ್ಪಿಕರ್ ಅವರು ಇದರಿಂದ ಸಂಬಂಧಿಸಿದ ವಿದ್ಯಾರ್ಥಿಗಳನ್ನು ಬಾಳುಮಾಡುವ ಪ್ರಶ್ನೆಯಿಲ್ಲವೆಂದು ಹೇಳಿದ್ದಾರೆ. ಅವರು ಮುಂದುವರಿದು ಅನ್ಯಾಯಿ ಚಟುವಟಿಕೆಗಳನ್ನು ಗೆಯ್ದುದರಿಂದ ಮತ್ತು ಕಾಲೇಜಿನ ಸ್ಥಿಮಿತ ಜೀವನವನ್ನು ಒಡೆಯಲು ತೊಡಗಿದುದರಿಂದ ಕೈಗೊಂಡಿರುವ ಶಿಸ್ತಿನ ಕ್ರಮವಷ್ಟೇ ಅಲ್ಲದೆ ಇದು ಅವರ ಕೇಳಿಕೆಗಳಿಗೆ ವಿರುದ್ಧವಾಗಿ ತೆಗೆದುಕೊಂಡುದಲ್ಲ. ನನಗೆ, ಒಂದು ವಿದ್ಯಾರ್ಥಿಗಳ ಸಮೂಹವು ಬೆದರಿಕೆಯನ್ನು ಹಾಕುತ್ತಿದೆ ಎಂಬುದಕ್ಕೆ ಸಾಕಷ್ಟು ಆಧಾರಗಳಿರುವುದರಿಂದ, ಪರಿಸ್ಥಿತಿಯು ಸ್ಥಿಮಿತ ರೂಪಕ್ಕೆ ಬರುವವರೆಗೆ ವಿದ್ಯಾರ್ಥಿಗಳೆಲ್ಲರೂ ತಂತಮ್ಮ ಹೆತ್ತವರಲ್ಲಿಗೆ ಹೋಗಲನುಕೂಲವಾಗುವಂತೆ ಕಾಲೇಜನ್ನು ಅನಿಯಮಿತಾವಧಿಯವರೆಗೆ ಮುಚ್ಚಿಬಿಡುವ ನಿರ್ಧಾರಮಾಡಬೇಕಾಯಿತು. ಹೆಚ್ಚಿನ ಹೆತ್ತವರು ಈಗಾಗಲೇ ಶುಲ್ಕಗನ್ನು ತೆತ್ತಿರುವರು ಮತ್ತು ಈಗ ವಿದ್ಯಾರ್ಥಿಗಳು ಹೊರಗಿನ ರಾಜಕಾರಣಿಗಳಿಂದ ಪ್ರೋತ್ಸಾಹಿತರಾಗಿ ತಮ್ಮ ಬೇಡಿಕೆಗಳಿಗೆ ಅಂಟಿಕೊಂಡಿದ್ದಾರೆ. ಎಂದಿದ್ದಾರೆ. ಕಾಲೇಜಿನ ಆಂತರಿಕ ವ್ಯವಹಾರಗಳಲ್ಲಿ ರಾಜಕಾರಣಿಗಳು ಅಯೋಗ್ಯ ಮಧ್ಯಪ್ರವೇಶ ನಡೆಸಿದುದಕ್ಕೆ ಮತ್ತು ಕಾಲೇಜಿನ ಅಧಿಕಾರಿಗಳ ಅನುಮತಿಯನ್ನು ಪಡೆಯುವಷ್ಟು ಸೌಜನ್ಯವನ್ನೂ ತೋರಿಸದೆ ರಾತ್ರಿ ಹೊತ್ತಿನಲ್ಲಿ ಕಾಲೇಜಿನ ಸದನವನ್ನು ಪ್ರವೇಶಿಸಿದುದಕ್ಕೆ ಮತ್ತು ಕಾಲೇಜು ಅಧಿಕಾರಿಗಳ ಮೇಲೆ ಹೇರಿದ ದೂರುಗಳನ್ನು ಪರಿಶೀಲಿಸದೆ ಮತ್ತು ತೊಂದರೆಯ ಕಾರಣವನ್ನೂ ತಿಳಿದುಕೊಳ್ಳದೆ ಆಂದೋಲನಗಾರರಿಗೆ ಪ್ರೋತ್ಸಾಹ ನೀಡುವುದಕ್ಕೆ ಅವರು ತಮ್ಮ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ, ಕಾಲೇಜಿನಲ್ಲಿ ಯಥಾಪೂರ್ವಸ್ಥಿತಿ ನಿರ್ಮಿಸಲು ವಿದ್ಯಾರ್ಥಿಗಳ ಹೆತ್ತವರು ಮಾತ್ರ ಬಾಧ್ಯರು ಮತ್ತು ಹೆಚ್ಚಿನ ವಿದ್ಯಾರ್ಥಿಗಳು ಅವರಿಗೆ ತಮ್ಮ ನಾಯಕರ ಬೆದರಿಕೆಯಿಂದಾಗಿ ತಾವು ವರ್ಗಗಳಿಗೆ ಬರಲು ಅಂಜುತ್ತೇವೆಂದೂ ತಿಳಿಸಿದ್ದಾರೆ. ಹಲವಾರು ವಿದ್ಯಾರ್ಥಿಗಳು ಇಷ್ಟರಲ್ಲಿಯೇ ಆವರವರ ಮನೆಗಳಿಗೆ ಮರಳಿ ಹೋಗಿದ್ದಾರೆ ಎಂದೂ ಡೀನರು ಹೇಳಿದ್ದಾರೆ.

ಪೆರ್ಲಂಪಾಡಿ-ತಾ. 24-7-59ರಲ್ಲಿ ಕೊಕ್ಕಿಗೆ ಗ್ರಾಮ ಸೇವಕ ಶ್ರೀ ಬಿ. ಎಲ್. ಆನಂದ ರೈಗಳ ಅಧ್ಯಕ್ಷತೆಯಲ್ಲಿ ಪೆರ್ಲಂಪಾಡಿ ಎಲಿಮೆಂಟರಿ ಶಾಲೆಯ ಮಕ್ಕಳಿಗೆ, ಹೊಸದಾಗಿ ಸೇರಿದ ಹರಿಜನ ಹೆಣ್ಣುಮಕ್ಕಳಿಗೆ ಬಟ್ಟೆ, ಸ್ಲೇಟು, ಕಡ್ಡಿ ಮೊದಲಾದುವನ್ನು ವಿತರಣೆ ಮಾಡಲಾಯಿತು.

ಉಡುಪಿ ಸರಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಾಗಿದ್ದ ಕೇಪ್ಟನ್ ಭಾಸ್ಕರ್‌ರಾವ್ ಕಾರ್ನಾಡ್ ಇವರಿಗೆ ದಾವಣಗೆರೆಗೆ ವರ್ಗವಾದ ನಿಮಿತ್ತ ಇವರಿಗೆ ವಿದಾಯ ಕೊಡಲು ತಾ. 19ರಲ್ಲಿ ಆಸ್ಪತ್ರೆಯ ನೌಕರರು ಒಂದು ಸಮಾರಂಭವನ್ನು ಏರ್ಪಡಿಸಿದ್ದರು. ಗೌರವ ವೈದ್ಯರುಗಳಾದ ಡಾ. ಪಿ. ರಾಘವೇಂದ್ರ ನಾಯಕ್, ಡಾ. ಬಿ. ಬಿ. ಶೆಟ್ಟಿ ಇವರು ಡಾ. ಕಾರ್ನಾಡರ ಕರ್ತವ್ಯ ದಕ್ಷತೆಯನ್ನು ಶ್ಲಾಘಿಸಿ ಮಾತನಾಡಿದರು. ಡಾ. ಲೋಕನಾಥರಾಯರು ಅಭಾರ ಸೂಚಿಸಿದರು.

ಉಡುಪಿ ಆಯುರ್ವೇದಿಕ್ ಕಾಲೇಜ್ ಯೂನಿಯನ್—ಇದರ ಪ್ರಾರಂಭೋತ್ಸವವು ಇತ್ತೀಚೆಗೆ ಶ್ರೀ ಬೈಲೂರು ವಾಸುದೇವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಪಿ. ಆರ್. ನಾಯ್ಕರು ಉದ್ಘಾಟನಾ ಭಾಷಣ ಮಾಡುತ್ತ ಪಾಶ್ಚಾತ್ಯ ಡಾಕ್ಟರುಗಳು ಆಯುರ್ವೇದೀಯರ ಪಾತಾಳ ಗರುಡ ಮೊದಲಾದ ಔಷಧಗಳನ್ನು ತಮ್ಮ ಚಿಕಿತ್ಸೆಯಲ್ಲಿ ಸೇರಿಸಿಕೊಂಡಂತೆ, ಆಯುರ್ವೇದೀಯರೂ ಇತರ ವೈದ್ಯಕ್ರಮಗಳ ಉತ್ತಮ ಔಷದಿಗಳನ್ನು ಅಳವಡಿಸಿಕೊಳ್ಳುವ ವಿಶಾಲ ಮನೋಭಾವ ಉಳ್ಳವರಾಗಬೇಕೆಂದು ತಮ್ಮ ಭಾಷಣದಲ್ಲಿ ಹೇಳಿದರು.

ತಿಲಕ ಜನ್ಮ ದಿನಾಚರಣೆ—ಪಟ್ಲ ಲೋಕಮಾನ್ಯ ತಿಲಕ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. 23-7-59ರಂದು ತಿಲಕ ಜನ್ಮ ದಿನಾಚರಣೆಯು ಶ್ರೀ. ಯಂ. ಶೇಖರ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಲೇಖಕ ಶ್ರೀ ಮರ್ಣೆ ಗೋವಿಂದ ಶೆಟ್ಟರು ಸ್ವಾಗತಿಸಿದರು. ಚಿತ್ರ, ಸಂಗೀತ, ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಜಿಲ್ಲಾ ಬೋರ್ಡ್ ಸದಸ್ಯರಾದ ಶ್ರೀ ಹಿರೆಬೆಟ್ಟು ಸದಾಶಿವ ಹೆಗ್ಗಡೆಯವರು ಬಹುಮಾನ ವಿತರಣೆ ಮಾಡಿದರು. ಸಭಿಕರ ಮತ್ತು ಅಧ್ಯಕ್ಷರ ಭಾಷಣದ ನಂತರ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ. ಮರ್ಣೆ ವಾಸುದೇವ ಭಟ್ಟರು ಧನ್ಯವಾದ ಅರ್ಪಿಸಿದರು. ಅಂದು ಪೂರ್ವಾಹ್ನ ಕುಮಾರಿ ಬಿ. ಸುಶೀಲ ಇವರು ಧ್ವಜವನ್ನು ಅರಳಿಸಿದ್ದರು.

ಲೈಫ್ ಇನ್ಶ್ಯೂರೆನ್ಸ್ ಕಾರ್ಪೊರೇಶನಿನ ಉಡುಪಿ ಶಾಖೆಯವರು ಏರ್ಪಡಿಸಿದ 1958ರ ಹೊಸ ವ್ಯವಹಾರ ಸ್ಪರ್ಧೆಯಲ್ಲಿ ಗೆದ್ದವರಿಗೆ ಪಾರಿತೋಷಕ ವಿತರಣೆ ಮಾಡುವ ಸಮಾರಂಭವು ಆಗೋಸ್ತು ೧ನೇ ಸಂಜೆ 4½ ಗಂಟೆಗೆ ಬೊಂಬೈ ಲೈಫ್ ಕಟ್ಟಡದಲ್ಲಿ ಡಿವಿಜನಲ್ ಮೆನೇಜರ್ ಶ್ರೀ ಕೆ. ಆರ್. ಕೆ. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ, ಅಸ್ಲು ವ ಬಡ್ಡಿಯನ್ನು ಈ ತನಕವೂ ಬಾಕಿ ಮಾಡಿ ಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 8-8-1959ನೇ ಶನಿವಾರ ಪೂರ್ವಾಹ್ನ ಗಂಟೆ 12ಕ್ಕೆ ಸರಿಯಾಗಿ, ಯಾ ಬೇಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	30-6-1959ರ ವರೆಗಿನ ಬಡ್ಡಿ ಸೇರಿ ಮೊಬಲಗು
258/57	ಮುದ್ದು ಸೆಟ್ಟಿ, ಅಣ್ಣಪ್ಪ ಸೆಟ್ರ ಅಳಿಯ, ಹೆರೂರು ಕೆಳಗಿನ ಮನೆ, ಪೋಸ್ಟು ಇನ್ನಂಜೆ.	63 – 23
719/57	ವನಜ ಸೆಡ್ತಿ, ಸರ್ಪಿ ಸೆಡ್ತಿಯರ ಮಗಳು, ನಂದೋಡಿಗುತ್ತು, ಉಳಿಯಾರಗೋಳಿ ಗ್ರಾಮ, ಪೋಸ್ಟು ಉಳಿಯಾರಗೋಳಿ.	91 – 12
264/56	ನರ್ಸು ಸುಖಾರಿ, S/o ಪೆಗ್ಗು ಮುಖಾರಿ, ಉಳಿಯಾರಗೋಳಿ ಗ್ರಾಮ, ಪೋಸ್ಟು ಉಳಿಯಾರಗೋಳಿ.	23 – 86
695/57	ಶಾಮ ಸೆಟ್ಟಿ, ದಾಸು ಸೆಟ್ರ ಅಳಿಯ, ಅಂಬಾಡಿಗಾಲ ಬಡ ಗ್ರಾಮ, ಪೋಸ್ಟು ಉಚ್ಚಿಲ.	12 – 92

The Vijaya Bank, Ltd.,
Kaup.
D/20—7—1959.

K· Sitharama Shetty,
Agent.

INSTALMENT LOANS
FOR MEDICAL PRACTITIONERS

Fresh Medical Graduates who wish to set up practice or Established Medical Practitioners who wish to go in for additional equipment

may apply for loans upto Rs. 3000/-

repayable in monthly instalments which may extend to a maximum period of 3 years at our following Branches:

AVENUE ROAD (Bangalore),
HAMPANKATTA (Mangalore),
UDIPI (South Kanara), MADURAI,
HUBLI and SECUNDERABAD.

CANARA BANK LIMITED

(Estd: 1906)

-: In the service of the people :-

ವಿಜ್ಞಾನ ವಿಸ್ಮಯ

ಕಲಾವಸ್ತುಗಳ ಸಂರಕ್ಷಣೆಗೆ

ಕಲಾವಸ್ತುಗಳ ಸಂರಕ್ಷಣೆಯಲ್ಲಿ ವಿಜ್ಞಾನವು ಅತ್ಯುಪಯುಕ್ತ ಪಾತ್ರವನ್ನು ನಿರ್ವಹಿಸುತ್ತಿದೆ. ನವದೆಹಲಿಯ ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿ ಪ್ರಾಚೀನವಾದ,ದುರ್ಲಭ ವಸ್ತುಗಳು ಮತ್ತು ಕಲಾಕೃತಿಗಳನ್ನು ಸಂರಕ್ಷಿಸಿಡಲು ನಡೆಯುತ್ತಿರುವ ಕಾರ್ಯವಿಧಾನಗಳು ಇದಕ್ಕೆ ನಿದರ್ಶನವಾಗಿವೆ.

ಈ ವಸ್ತು ಸಂಗ್ರಹಾಲಯದ ಪ್ರಯೋಗ ಶಾಲೆಯಲ್ಲಿ ದುರ್ಲಭ ವಸ್ತುಗಳು ನಾಶಗೊಳ್ಳುವುದನ್ನು ತಪ್ಪಿಸಲು ನಿರಂತರವಾದ ಪ್ರಯತ್ನ ನಡೆಯುತ್ತಿದೆ.

ಸರ್ ಆರೆಲ್ ಸ್ಟೀನ್‌ರವರು ಮಧ್ಯ ಏಷಿಯಾದಿಂದ ತಂದ ದುರ್ಲಭ ಕಲಾಕೃತಿಗಳನ್ನು ಸುರಕ್ಷಿತಗೊಳಿಸಲು ೧೯೪೯ರಲ್ಲಿ ಈ ಪ್ರಯೋಗ ಶಾಲೆಯನ್ನು ಸ್ಥಾಪಿಸಲಾಯಿತು. ಈಗ ಈ ಪ್ರಯೋಗ ಶಾಲೆಯು ನವದೆಹಲಿಯಲ್ಲಿ ಮಧ್ಯ ಏಷಿಯಾದ, ಪ್ರಾಚ್ಯ ವಸ್ತುಸಂಗ್ರಹಾಲಯದಲ್ಲಿ ಕೆಲಸ ಮಾಡುತ್ತಿದೆ.

ಈ ಕಲಾವಸ್ತುಗಳಲ್ಲಿ ದುರ್ಲಭ ಪ್ರಾಚೀನ ಚಿತ್ರಗಳು, ಪಾಂಡು ಲಿಪಿಗಳು, ರೇಷ್ಮೆಯ ಬಾವುಟಗಳು,ಲೋಹ, ಮರ, ಮೂಳೆ ಮತ್ತು ದಂತದ ವಸ್ತುಗಳಿರುವುವು. ಅವುಗಳೆಲ್ಲವೂ ತುಂಬಾ ಜೀರ್ಣಾವಸ್ಥೆಯಲ್ಲಿದ್ದವು. ಅವುಗಳನ್ನು ಸಂರಕ್ಷಿಸುವ ಕೆಲಸವು ಅತ್ಯಂತ ಕಷ್ಟತರವಾಗಿದ್ದಿತು. ರಾಸಾಯನಿಕ ಪ್ರಯೋಗ ಶಾಲೆಗಳ ಯುವಕ ವಿಜ್ಞಾನಿಗಳು ಈ ಮೊದಲು ಈ ಕೆಲಸಗಳನ್ನು ಎಂದೂ ಮಾಡಿರಲಿಲ್ಲ. ವಾಸ್ತವವಾಗಿ, ಅವರು ಈ ಸಂಬಂಧದಲ್ಲಿ ಒಂದು ಹೊಸ ವಿಷಯವನ್ನು ಅರಿತರು.

ಮಧ್ಯ ಏಷಿಯಾದ ಕಲಾವಸ್ತುಗಳ ಸಂರಕ್ಷಣೆಯ ಕೆಲಸ ಕೈಗೊಂಡಿರುವುದಲ್ಲದೆ, ಈ ಪ್ರಯೋಗ ಶಾಲೆಯು ತನ್ನ ಕಾರ್ಯವನ್ನು ಇನ್ನೂ ವಿಸ್ತರಿಸಿಕೊಂಡಿದೆ. ೧೯೫೭ರಲ್ಲಿ ಈ ಪ್ರಯೋಗ ಶಾಲೆಯು ರಾಷ್ಟ್ರೀಯ ವಸ್ತು ಸಂಗ್ರಹಾಲಯದ ಒಂದು ಅಂಗವಾಯಿತು. ಈಗ ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿ ೫೦ ಸಾವಿರಕ್ಕಿಂತಲೂ ಹೆಚ್ಚು ಕಲಾಕೃತಿಗಳಿರುವುವು. ಅವುಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೂ ಇರುವುದು. ಈ ಕಲಾಕೃತಿಗಳೆಲ್ಲವನ್ನು ಸುರಕ್ಷಿತ ಸ್ಥಿತಿಯಲ್ಲಿ ಇಡುವುದು ಈ ಪ್ರಯೋಗ ಶಾಲೆಯ ಮುಖ್ಯ ಕೆಲಸವಾಗಿರುವುದು. ದೇಶದಲ್ಲಿರುವ ಇತರ ನೂರಾರು ವಸ್ತು ಸಂಗ್ರಹಾಲಯಗಳ ಕಲಾವಸ್ತುಗಳ ಸಂರಕ್ಷಣೆಯ ವಿಷಯದಲ್ಲಿಯೂ ಈ ಪ್ರಯೋಗ ಶಾಲೆಯು ನೆರವು ನೀಡುತ್ತಿದೆ.

ಕಲಾಕೃತಿಗಳನ್ನು ಸುರಕ್ಷಿತ ಸ್ಥಿತಿಯಲ್ಲಿಡಲು ಕೈಗೊಳ್ಳಬೇಕಾದ ವಿಧಾನಗಳು ತುಂಬಾ ಜಟಿಲವಾದುವು. ಕಲಾವಸ್ತುಗಳು ಈ ಪ್ರಯೋಗ ಶಾಲೆಗೆ ತುಂಬಾ ಜೀರ್ಣಾವಸ್ಥೆಯಲ್ಲಿ ಬರುತ್ತವೆ. ಕಾಗದ ಹಾಗೂ ಬಟ್ಟೆಯು ಹರಿದು ಹೋದ ಸ್ಥಿತಿಯಲ್ಲಿರುತ್ತವೆ. ಮರ, ಲೋಹ ಮತ್ತು ಕಲ್ಲುಗಳ ಈ ವಸ್ತುಗಳು ಚೂರ ಚೂರು ಸ್ಥಿತಿಯಲ್ಲಿರುತ್ತವೆ. ಇಲ್ಲವೆ, ತುಕ್ಕು ಹಿಡಿದೊ ಅಥವಾ ಏನೂ ಅರ್ಥವಾಗದ ಸ್ಥಿತಿಯಲ್ಲಿರುತ್ತವೆ. ಆಗ ಪ್ರತಿಯೊಂದು ಚೂರನ್ನೂ ಜಾಗರೂಕತೆಯಿಂದ ಪರಿಶೀಲಿಸಬೇಕು. ಇದರಲ್ಲಿ ಉಪಯೋಗವಾಗಿರುವ ಮೂಲ ವಸ್ತುಗಳನ್ನು ಪ್ರಥಮತಃ ನಿರ್ಧರಿಸಬೇಕು. ಅನಂತರ, ಆ ವಸ್ತು ನಾಶವಾಗಿರುವುದಕ್ಕೆ ಕಾರಣಗಳೇನೆಂಬುದನ್ನು ಕಂಡುಕೊಳ್ಳಬೇಕಾಗುತ್ತದೆ. ಈ ಕಾರಣವು ಸಾಮಾನ್ಯವಾಗಿ ವಸ್ತುವಿನಿಂದ ವಸ್ತುವಿಗೆ ಬದಲಾಗುತ್ತಿರುತ್ತದೆ. ಈ ಎರಡು ಅಂಶಗಳನ್ನು ಸಾಕಷ್ಟು ಸ್ಪಷ್ಟವಾಗಿ ಗುರುತಿಸಿದ ಮೇಲೆ, ಈ ವಸ್ತುವು ಮುಂದೆ ಹಾಳಾಗದಂತೆ ಸಂಸ್ಕರಿಸುವ ರಾಸಾಯನಿಕ ವಿಧಾನವನ್ನು ನಿರ್ಣಯಿಸಬೇಕಾಗುತ್ತದೆ.

ಕಲಾವಸ್ತುವು ಪ್ರಯೋಗ ಶಾಲೆಯನ್ನು ಸೇರಿದಾಗ ಇದ್ದ ಸ್ಥಿತಿಯನ್ನೂ, ಅದನ್ನು ಪ್ರಯೋಗ ಶಾಲೆಯಲ್ಲಿ ಸಂಸ್ಕರಿಸಿ, ಪ್ರದರ್ಶನಕ್ಕಾಗಿಡುವ ಸ್ಥಿತಿಯನ್ನೂ ನೋಡಿದಲ್ಲಿ, ಈ ಪ್ರಯೋಗಶಾಲೆಯು ಕಲಾವಸ್ತುವಿನ ಸುರಕ್ಷಣೆಯಲ್ಲಿ ನಿರ್ವಹಿಸಿರುವ ಪವಾಡದ ಅರಿವಾಗುವುದು.

ಫಲಸಂರಕ್ಷಣೆಗಾಗಿ

ಮೈಸೂರಿನ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯು ಮಾವಿನ ಹಣ್ಣುಗಳನ್ನು ಬಹುದಿನಗಳ ಕಾಲ ಕೆಡದಂತೆ ಇಡುವ ವಿಧಾನವನ್ನು ಕುರಿತು ಸಂಶೋಧನೆಯನ್ನು ನಡೆಸಿದೆ. ಮಾವಿನ ಹಣ್ಣುಗಳನ್ನು ಬಹಳ ದಿನಗಳ ಕಾಲ ಕೆಡದಂತೆಇಡುವ ಸಂಶೋಧನೆಯು ಪ್ರಾಯಶಃ ಮುಕ್ತಾಯಗೊಂಡಿದೆ. ಈ ಸಂಶೋಧನೆ ಸಂಸ್ಥೆಯಲ್ಲಿ ಮಾವಿನಹಣ್ಣಲ್ಲದೆ,ಪೊನು,ಚಪ್ಪರ ಬದನೆ ಹಣ್ಣು ಮುಂತಾದುವುಗಳನ್ನು ಕೆಡದಂತೆ ಇಡುವ ಸಂಶೋಧನೆಯು ನಡೆಯುತ್ತಿದೆ. ಈ ಕಾರ್ಯದಲ್ಲಿ ಸಾಕಷ್ಟು ಪ್ರಗತಿಯಾಗಿದೆ.

ಮುಂಬರುವ ವರ್ಷಗಳಲ್ಲಿ ಈ ಸಂಸ್ಥೆಯ ಸಂಶೋಧನಾ ಕಾರ್ಯಕ್ರಮಗಳನ್ನು ಬಹುವಾಗಿ ವಿಸ್ತರಿಸಲಾಗುವುದು. ೧೦ ಪ್ರಾದೇಶಿಕ ಸಂಶೋಧನಾ ಕೇಂದ್ರಗಳನ್ನು ತೆರೆಯುವ ಸಲಹೆಯನ್ನು ಅಂಗೀಕರಿಸಲಾಗಿದೆ. ಈ ಕೇಂದ್ರಗಳು ಮೈಸೂರಿನ ಕೇಂದ್ರ ಸಂಶೋಧನಾ ಕೇಂದ್ರದೊಂದಿಗೆ ಸಂಪರ್ಕವನ್ನಿಟ್ಟುಕೊಂಡಿರುವುವು. ಈ ಸಂಶೋಧನಾ ಕೇಂದ್ರಗಳಲ್ಲಿ ಕೆಲವು ಕೇಂದ್ರಗಳನ್ನು ದೆಹಲಿ, ಪುಣೆ, ಗೌಹತಿ, ಕೂನೂರು, ಸಿಂಲಾ, ಮತ್ತು ಸಹರನ್‌ಪುರಗಳಲ್ಲಿ ತೆರೆಯಲಾಗುವುದು. ಇನ್ನುಳಿದ ನಾಲ್ಕು ಕೇಂದ್ರಗಳನ್ನು ಜೋಧಪುರ, ನಾಗಪುರ, ತಿರುಚೂರು ಮತ್ತು ಕುಲುಗಳಲ್ಲಿ ಸ್ಥಾಪಿಸಲಾಗುವುದು.

ವಿಶೇಷ ರೀತಿಯ ತರಕಾರಿಗಳು ಮತ್ತು ಹಣ್ಣುಹಂಪಲುಗಳನ್ನು ಬೆಳೆಯುವ ಸ್ಥಳಗಳನ್ನು, ಈ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸುವ ಸಲುವಾಗಿ ಆರಿಸಿಕೊಳ್ಳಲಾಗಿದೆ. ಆಯಾಯ ಸ್ಥಳಗಳಲ್ಲಿ ಬೆಳೆಯುವ ಹಣ್ಣುಹಂಪಲುಗಳನ್ನು ಕೆಡದಂತೆ ಇಡುವ ವಿಧಾನದಲ್ಲಿ ಸಂಶೋಧನೆ ನಡೆಸಲು ಇದರಿಂದ ಅನುಕೂಲವಾಗುವುದು.



ಅಣು ಜಲಾಂತರ್ಗಾಮಿ ಅಮೆರಿಕೆಯ ಸ್ಕಿಪ್‌ಜಾಕ್. ಮುಂಗಡೆ ಟೋರ್‌ಪೆಡೋ ಮತ್ತು ಕಂಟ್ರೋಲ್ ಮಧ್ಯದಲ್ಲಿ ಸ್ಟೋರ್ ಮತ್ತು ಬೇಟ್ರಿ ಹಿಂದುಗಡೆ ಇಂಜನ್ ಕೋಣೆಗಳೂ ಇವೆ.

ಪ್ಲಾಸ್ಟರ್ ತಯಾರಿಕೆ

ನವದೆಹಲಿಯಲ್ಲಿರುವ ಸಣ್ಣ ಪ್ರಮಾಣದ ಉದ್ಯೋಗ ಸೇವಾ ಸಂಸ್ಥೆಯು ಶಸ್ತ್ರ ಚಿಕಿತ್ಸೆಯಲ್ಲಿ ಬಳಸುವ ಪ್ಲಾಸ್ಟರ್ (ಸರ್ಜಿಕಲ್ ಪ್ಲಾಸ್ಟರ್)ನ್ನು ತಯಾರಿಸುವುದಕ್ಕಾಗಿ ಒಂದು ಹೊಸ ವಿಧಾನವನ್ನು ಸಂಶೋಧಿಸಿದೆ. ಸಣ್ಣ ಪ್ರಮಾಣದ ಕೈಗಾರಿಕೋದ್ಯಮಿಗಳಿಗೆ ಉತ್ಪಾದನೆಯಲ್ಲಿ ನೆರವು ನೀಡುವುದೇ ಈ ಸಂಸ್ಥೆ ಉದ್ದೇಶವಾಗಿರುವುದು.

ಈಗ ಶಸ್ತ್ರಚಿಕಿತ್ಸೆಯಲ್ಲಿ ಉಪಯೋಗಿಸುವ ಅತ್ಯುತ್ತಮ ಗುಣಾಂಶದ ಪ್ಲಾಸ್ಟರ್ ದೊರೆಯುವುದು ಕಷ್ಟವಾಗಿದೆ. ಈ ಪ್ಲಾಸ್ಟರನ್ನು ತಯಾರಿಸುತ್ತಿರುವ ಸಣ್ಣ ಕೈಗಾರಿಕೋದ್ಯಮಿಗಳಿಗೆ, ಉತ್ತಮ ಗುಣಾಂಶವುಳ್ಳ ಪ್ಲಾಸ್ಟರನ್ನೂ ತಯಾರಿಸಲು ತಮ್ಮ ತಯಾರಿಕಾ ವಿಧಾನವನ್ನೂ ಸುಧಾರಿಸುವುದರ ಅಗತ್ಯವಿತ್ತು. ನವದೆಹಲಿಯಲ್ಲಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳ ಸೇವಾ ಸಂಸ್ಥೆಯು ಈ ಅಗತ್ಯವನ್ನು ಪೂರೈಸಿದೆ.

ಈ ನವ ವಿಧಾನವನ್ನು ಕೆಲವು ಸ್ಥಳಗಳಲ್ಲಿ ಪ್ರಯೋಗಿಸಿ ನೋಡಲಾಗಿದೆ. ಈ ವಿಧಾನವು ಉತ್ತಮ ಫಲಿತಾಂಶಗಳನ್ನು ನೀಡಿದೆ. ಉತ್ತಮ ಬಗೆಯ ಪ್ಲಾಸ್ಟರ್ ತಯಾರಿಕೆಯಲ್ಲಿ ಈ ವಿಧಾನವು ತುಂಬಾ ಅನುಕೂಲಪ್ರದವಾಗಿರುವುದು.

ಚರ್ಮದ ತಯಾರಿಕೆ

ಮದರಾಸಿನಲ್ಲಿರುವ ಕೇಂದ್ರ ಚರ್ಮ ಸಂಶೋಧನಾ ಸಂಸ್ಥೆಯು, ಉತ್ತಮವಾದ ಚರ್ಮವನ್ನು ಸಿದ್ಧಗೊಳಿಸುವ ಸಂಬಂಧದಲ್ಲಿ ನಡೆಸಿದ ಸಂಶೋಧನೆಗಳು ಫಲಕಾರಿಯಾಗಿವೆ.

ಮೋಟಾರು ಕಾರುಗಳು, ಶೀತೋಪಕರಣಗಳು, ಪ್ರವಾಸಿಗಳ ಚೀಲಗಳು, ಇತ್ಯಾದಿಗಳ ತಯಾರಿಕೆಯಲ್ಲಿ ಬಳಸುವ ಮೃದುವಾದ ಹಾಗೂ ಬಲವಾದ ಚರ್ಮವನ್ನು ಯೂರೋಪ್ ಮತ್ತು ಅಮೆರಿಕಾಗಳಲ್ಲಿ, ಹಸುಗಳ ದಪ್ಪವಾದ ಹಾಗೂ ಅಗಲವಾದ ಚರ್ಮದಿಂದ ತಯಾರಿಸುವರು, ಭಾರತದಲ್ಲಿ ಇಂತಹ ತೊಗಲು ಲಭ್ಯವಿಲ್ಲ. ಆದ್ದರಿಂದ ಇಲ್ಲಿ ದೊರೆಯುವ ತೊಗಲನ್ನೇ ಹೊಸ ರೀತಿಯಲ್ಲಿ ಹದಮಾಡುವುದರಿಂದ ಆ ಬಗೆಯ ಚರ್ಮವನ್ನು ಸಿದ್ಧಗೊಳಿಸುವ ಬಗೆಗೆ ಈ ಕೇಂದ್ರವು ಪ್ರಯೋಗಗಳನ್ನು ನಡೆಸಿ ಯಶಸ್ಸುಗಳಿಸಿತು.

ಅನುಭವ

(೫ನೇ ಪುಟದಿಂದ)

ಲೆ ತೂಗೆನ್ನುತ್ತಾರೆ. ಮೂಲತಃ ತನ್ನ ಮೇಲೆ ಆಕ್ರಮಣ ನಡೆಯುತ್ತದೆಯೋ ಎಂಬ ಭಯ ಸರ್ಪಕ್ಕಿದೆ. ಮನುಷ್ಯ ಅಜ್ಞನಾಗುವುದರಿಂದ ಅಥವಾ ಎತ್ತೆತ್ತಲೋ ನೋಡುವುದರಿಂದಲೇ ಸರ್ಪದಂಶಕ್ಕೆ ಗುರಿಯಾಗುತ್ತಾನೆ. ಹಾವಾಡಿಗ ಮತ್ತು ಹಾವುಗಳ ನಡುವೆ ಅಡ್ಡ ಬಟ್ಟೆ ಕಟ್ಟಿ ನೋಡಿರಿ; ಈ ಸತ್ಯಾಂಶ ಮನವರಿಕೆಯಾಗಬಹುದ.

ಸರ್ಪದಂಶವನ್ನು ಗುಣಮಾಡುವ ಕೆಲವು ಮಂತ್ರಗಳಿವೆ. ಕೊಚ್ಚಿನದ ಮಹಾರಾಜನೊಬ್ಬನಲ್ಲಿ ಸರ್ಪಗಳನ್ನು ತನ್ನ ಬಳಿಗೆ ಬರಿಸುವ ಮಂತ್ರಶಕ್ತಿಯಿದ್ದಿತಂತೆ— ಈ ಮಂತ್ರಶಕ್ತಿಯ ಪ್ರಭಾವ ಇಲ್ಲಿಗೇ ಮುಗಿಯಲಿಲ್ಲ; ಯಾರಿಗೆ ಸರ್ಪದಂಶವಾಗಿದೆಯೋ ಅವನ ವಿಷವನ್ನು ಸರ್ಪದಿಂದ ಹೀರಿಸುವುದಕ್ಕೂ ಈ ಮಂತ್ರ ಪ್ರಯೋಜನಕಾರಿಯಾಗಿತ್ತು. ಇಂದಿಗೂ ದಕ್ಷಿಣ ಭಾರತದ ಜನರು ಸರ್ಪದಂಶನಕ್ಕೆ ಮಂತ್ರ ಚಿಕಿತ್ಸೆಯಲ್ಲಿ ವಿಶ್ವಾಸವಿಟ್ಟಿದ್ದಾರೆ. ಮಂತ್ರದಿಂದಾಗಿ ಹಾವು ಕಡಿದ ಮನುಷ್ಯನಲ್ಲಿ ಮನೋವೈಜ್ಞಾನಿಕ ಪ್ರಭಾವವು ಬಿದ್ದು ಅಲ್ಪವಿಷವು ತಡೆಗಟ್ಟಲ್ಪಡುತ್ತದೆ. ಆದರೆ, ತೀವ್ರ ವಿಷವಾದರೆ, ಈ ಮಂತ್ರತಂತ್ರಗಳಿಂದ ಗುಣವಾಗಬಲ್ಲುದಲ್ಲ. ಆದರೂ ಇದೇನೇ ಇರಲಿ, ಈ ವಿಷಯ ಸಂಶೋಧನಾಯೋಗ್ಯವಾಗಿದೆ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ। ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು, ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦-೬-೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ,

ನವಭಾರತ ಪುಸ್ತಕ ಭಂಡಾರ, ಉಡುಪಿ.

ಬಲಿದಾನ

(೪ನೇ ಪುಟದಿಂದ)

ರ್ಯರಶ್ಮಿ ಬಿದ್ದಾಗ ಅವರು ರೋಗಿಗಳ ಶಸ್ತ್ರಕ್ರಿಯೆ ನಡೆಸಬೇಕಿತ್ತು.

ಯುದ್ಧಕ್ಷೇತ್ರ ಹೇಗೆ ದಿನದಿಂದ ದಿನಕ್ಕೆ ದೊಡ್ಡದಾಗುತ್ತ ನಡೆದಿತ್ತೊ ಹಾಗೆಯೆ ಈ ಡಾಕ್ಟರುಗಳೂ ಚಲಿಸುತ್ತಿರಬೇಕಿತ್ತು. ಜಪಾನೀಯರ ಆಕ್ರಮಣಗಳಿಂದ ತಪ್ಪಿಸಿಕೊಳ್ಳಲು ಅಂಕು—ಡೊಂಕು ಮಾರ್ಗಗಳನ್ನು ಕ್ರಮಿಸಬೇಕಿತ್ತು. ಕೆಲವೊಮ್ಮೆ ಆಯಾಸದಿಂದ ಬಳಲಿದಾಗ ತಾವೆಲ್ಲಿರುವೆವೆಂದು ದಿಕ್ಕೇ ತಿಳಿಯುತ್ತಿರಲಿಲ್ಲ! ಹಾಗೆಯೇ ಅವರು 'ಪ್ಯೂಫಿಂಗ್' ತಲಪಿದರು. ಅಲ್ಲಿಂದ ಕೋಟ್ನೀಸರ ಸಹೋದ್ಯೋಗಿಗಳೆಲ್ಲರೂ ಭಾರತಕ್ಕೆ ಹಿಂತೆರಳಿದರು. ಅವರೊಬ್ಬರೇ ಅಲ್ಲುಳಿದರು. ಅವರು ಚೀನೀ—ಭಾಷೆ ಉತ್ತಮವಾಗಿ ಕಲಿತಿದ್ದರಿಂದ "ಬೈಥ್ಯೂ ಡಾಕ್ಟರೀ ಸ್ಕೂಲ್"ನಲ್ಲಿ ಶಿಕ್ಷಕರಾಗಿ ನೇಮಿಸಲ್ಪಟ್ಟರು.

ಅದೇ ಸಮಯದಲ್ಲಿ ಕೋಟ್ನೀಸರು 'ಚಿಂಗ್‌ಲಾನ್' ಎಂಬ ಚೀನೀ ಹುಡುಗಿಯನ್ನು ಪ್ರೇಮಿಸ ಹತ್ತಿದರು. ಆಕೆ ಅಲ್ಲಿಯ ಆಸ್ಪತ್ರೆಯಲ್ಲಿ ದಾದಿಯಾಗಿದ್ದಳು. ಅಂದಿನ ತನಕ ಚೀನದಲ್ಲಿ ವಿದೇಶೀಯರನ್ನು ವಿವಾಹವಾಗುವುದು ನಿಷೇಧಿಸಲ್ಪಡುತ್ತಿತ್ತು. ಆದರೆ 'ಚಿಂಗ್‌ಲಾನ್'ಳೊಡನೆ ಕೋಟ್ನೀಸರ ಪ್ರೇಮ'ದ ಸುದ್ದಿ ಕೇಳಿ ಇಡೀ ಚೀನ ಸಂತೋಷಪಟ್ಟಿತು. ಏಕೆಂದರೆ ಅವರು ತಮ್ಮ ಸೇವೆ ಮತ್ತು ಎಲ್ಲರೊಡನೆ ಮಿಳಿತವಾದುದರ ದೆಸೆಯಿಂದಾಗಿ ಎಲ್ಲರ ಪ್ರೀತಿಪಾತ್ರರಾಗಿದ್ದರು. ಹೀಗಾಗಿ ಅಲ್ಲಿಯ ಜನರು ಅವರನ್ನು 'ಚೀನೀ ಪುತ್ರ"ನೆಂದೇ ಸಂಬೋಧಿಸುತ್ತಿದ್ದರು. ನವಂಬರ ೧೯೪೧ರಲ್ಲಿ ಅವರ ವಿವಾಹ ಜರುಗಿ ೧೯೪೨ನೇ ಮೇಯಲ್ಲಿ ಅವರಿಗೆ ಪುತ್ರೋತ್ಸವವಾಯಿತು.

ಎಡೆಬಿಡದ, ಅವಿರತವಾದ ಹಲವು ತಿಂಗಳುಗಳ ಪರಿಶ್ರಮ, ವಿವಿಧ ಆಘಾತಗಳಲ್ಲಿ ಹೊಂದಿದ ಸಂಕಷ್ಟ, ವಿರಾಮ ಮತ್ತು ಉತ್ತಮ ಆಹಾರದ ಅಭಾವ—ಇತ್ಯಾದಿ ಕಾರಣಗಳಿಂದಾಗಿ ಕೋಟ್ನೀಸರ ಆರೋಗ್ಯ ಕೆಟ್ಟು ಅಪಸ್ಮಾರ ರೋಗ ಆರಂಭವಾಯಿತು. ಆದರೆ ಆಗಲೂ ಕೂಡ ತಮ್ಮ ಅನಾರೋಗ್ಯದ ಸುದ್ದಿಯನ್ನು ಯಾರಿಗೂ ಹೇಳದೇ ಬಚ್ಚಿಟ್ಟು, ಯುದ್ಧದ ಗಾಯಾಳುಗಳ ಶುಶ್ರೂಷೆಗೈಯುತ್ತಲೇ ಇದ್ದರು. ಅವರು ಡಾಕ್ಟರರಾಗಿದ್ದುದರಿಂದ ಅಪಸ್ಮಾರದ ಮೂರ್ಛೆ ಬರುವ ಮೊದಲೇ ತಿಳಿಯುತ್ತಿದ್ದ'ರಿಂದ, ಅವರು ಸುಮ್ಮನೆ ಗುಡ್ಡದ ಏಕಾಂತ ಸ್ಥಳಗಳತ್ತ ನಡೆದು ಬಿಡುತ್ತಿದ್ದರು.

ದಿನ ಕಳೆದಂತೆ ಕೋಟ್ನೀಸರ ರೋಗ ಪ್ರಬಲವಾಗುತ್ತ ಬಂದು ೧೯೪೨ನೇ ದಿಸೆಂಬರ ೯ರಂದು ಅವರು ಸ್ವರ್ಗಸ್ಥರಾದರು. ಅವರು ಮೃತಿ ಹೊಂದುವಾಗ ಉತ್ತರ ಚೀನದ ಅಪರಿಚಿತ ಮೂಲೆಯೊಂದರ ಧೂಳಿನಿಂದಾವೃತವಾದ ಜೋಪಡಿಯೊಂದರಲ್ಲಿ ಬಿದ್ದಿದ್ದರು!

ಹಿಂದುಸ್ಥಾನದಲ್ಲಿ ಡಾಕ್ಟರ್ ಕೋಟ್ನೀಸರ ಮೃತ್ಯುವಿನ ದುರ್ವಾರ್ತೆ ಬರುವಾಗ ಅವರ ತಾಯಿ ಜೀವಂತವಿದ್ದರು. ಆ ವೀರ ಮಾತೆಯ ದುಃಖ ಬಣ್ಣಿಸಲಸದಳವಾಗಿರಲಿಲ್ಲ; ಅದನ್ನು ಭಾರತ ಮತ್ತು ಚೀನಗಳಂತಹ ಮಹಾ ರಾಷ್ಟ್ರಗಳು ಅನುಭವಿಸಿದ್ದುವು.

(ಹಿಂದಿಯಿಂದ)

—"ಜನ್ನ" ಮರವಂತೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ನಿರಾಶ್ರಿತ ಮಹಿಳೆಗೆ ಜೀವನವೃತ್ತಿ

ಕಲಕತ್ತೆಯ ಸಮೀಪದಲ್ಲಿರುವ ವಸ್ತ್ರಕ್ಕೆ ಮುದ್ರೆಯೊತ್ತುವ ತರಬೇತಿ ಕೇಂದ್ರವೊಂದರಲ್ಲಿ ಪೂರ್ವ ಪಾಕಿಸ್ಥಾನದ ನಿರಾಶ್ರಿತೆಯೊರ್ವಳು ಆಕರ್ಷಕ ಮಾದರಿಯನ್ನು ರಚಿಸಲು ಅಭ್ಯಸಿಸುವುದನ್ನೀ ಚಿತ್ರದಲ್ಲಿ ಕಾಣಬಹುದು. ಬೇರೆ ಬೇರೆ ರಾಜ್ಯಗಳಲ್ಲಿನ ಜನರಿಗೆ ಅಭಿರುಚಿಯನ್ನು ಹುಟ್ಟಿಸಬಲ್ಲ ಸುಂದರ ಪರಂಪರಾ ಪ್ರಾಪ್ತವಾದ ಮಾದರಿಗಳನ್ನೇ ಇದು ಹೊಂದಿದೆ.

ಭಾರತೀಯ ಗುಡಿಕೈಗಾರಿಕೆಗಳಲ್ಲಿ ಬಟ್ಟೆತಯಾರಿಯು ಅಗ್ರಗಣ್ಯ ಸ್ಥಾನವನ್ನು ಪಡೆದಿರುವುದು ಇದಕ್ಕೆ ತಾತ್ಪರ್ಯವಾಗಿ ಅವುಗಳ ಕಲಾಪೂರ್ಣವಾದ ಮಾದರಿ ರಂಗೋಲಿಯೇ ಕಾರಣ. ಇತ್ತೀಚೆಗೆ ಈ ಉತ್ತಮ ಪರಂಪರೆಯನ್ನು ಬೆಳೆಸಲು ಮಾಡಿದ ಪ್ರಯತ್ನಗಳು ಪ್ರೋತ್ಸಾಹದ ಫಲಿತಾಂಶವನ್ನು ತಂದುಕೊಟ್ಟವೆ. ಗುಡಿ ಕೈಗಾರಿಕೆಯ ಅಭಿವೃದ್ಧಿಗಾಗಿ ಕೈಗೊಳ್ಳಲಾಗುತ್ತಿರುವ ಯೋಜನೆಯಲ್ಲಿ ಈ ರಂಗೋಲೆ ಮಾದರಿಯಲ್ಲಿ ಸುಧಾರಣೆ, ಇದಕ್ಕಾಗಿ ಪ್ರಯತ್ನಿಸುವ ಕಲಾ ಶಾಲೆಗಳಿಗೆ ಸಹಾಯ, ತರಬೇತಿ ಹೊಂದುತ್ತಿರುವವರಿಗೆ ಶಿಷ್ಯ ವೃತ್ತಿಗಳನ್ನು ನೀಡುವುದೂ ಸೇರಿಕೊಂಡಿದೆ.

ಹೀಗೆ ನಮ್ಮ ದೇಶದ ಕೈಮಗ್ಗದ ಬಟ್ಟೆಗಳು ಒಂದು ಕಾಲದಲ್ಲಿ ಗಳಿಸಿ, ಈಗ ಕಳೆದುಕೊಂಡಿದ್ದ ಸ್ಥಾನಮಾನಗಳನ್ನೇ ಪುನಃ ಪಡೆಯುವಂತೆ ಪ್ರಯತ್ನಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಭಾವಕತೆ

ನಾನು ಸೋಲಿನೊಡನೆ ಮುನ್ನಡೆಯುತ್ತೇನೆ!

ನನ್ನ ಸೋಲು ನನಗೆ ಸಿಕ್ಕಿದ ದಿನ ನನ್ನ ಹೃದಯ ಪುಲಕಿತಗೊಂಡು—"ಎದ್ದು ಸ್ವಾಗತಿಸು, ನಿನ್ನ ಶಕ್ತಿ ನಿನ್ನ ಹತ್ತಿರ ಬರುತ್ತಿದೆ" ಎಂದಿತು.

ನಾನು ನನ್ನ ಹೃದಯದ ಅಪ್ಪಣೆಯಂತೆ ನನ್ನ ಸೋಲನ್ನು ಸ್ವಾಗತಿಸಿದೆ.

ನನ್ನ ಸೋಲು ನನ್ನ ಜೀವನ ಯಾತ್ರೆಯ ದೀಪ್ತಿಯಾಗಿದೆ, ಅದು ನನ್ನ ರಾತ್ರಿಯ ರಾಗವಾಗಿದೆ!

ನಾನು ಪ್ರತಿಸಲ ಸೋತಾಗಲೂ ನನ್ನ ಗೆಲುವು ನನ್ನನೂ ತನ್ನಡೆಗೆ ಆಹ್ವಾನಿಸುತ್ತಿತ್ತು. ಆಗ ನನ್ನ ಯೌವನವು ರೋಮರೋಮಗಳಲ್ಲಿ ನರೆಯಂತೆ ವ್ಯಾಪಿಸುತ್ತದೆ ಆಗ ನನ್ನ ಹೃದಯ ಕ್ರೋಧದಿಂದ—"ನೀನು ಸಂತೋಷವಾಗಿರುವಿ! ನೀನಿನ್ನೂ ಜೀವಿಸಿರುವಿಯೇನು?" ಎನ್ನುತ್ತಿತ್ತು.

ನನ್ನ ಸೋಲು ನನ್ನನ್ನು ನಿದ್ರೆಯ ಮೃದು ಶಯ್ಯೆಯಿಂದ ದೂರವಿಡುತ್ತದೆ. ನಿದ್ರೆಯು ಮಾನವ ಜೀವನದ ಭಯಂಕರ ರೋಗ ಎಂಬುದನ್ನು ನಾನು ಬಲ್ಲೆ. ಯಾರಿಗೆ ಈ ರೋಗವು ತಗಲುತ್ತದೋ, ಅವನಿಗೆ ತನ್ನ ಜೀವನವೇ ಭಾರವಾಗುತ್ತದೆ. ಮೃತ್ಯು ಅವನ ಹತ್ತಿರ ಸರಿಯತೊಡಗುತ್ತದೆ.

ನನ್ನ ಸೋಲು ನನ್ನ ಕಣ್ಣುಗಳು ಯಾವಾಗಲೂ ಕೆಳಗೆ ನೋಡುವಂತೆ ಮಾಡುತ್ತದೆ. ಯಾರ ಕಣ್ಣುಗಳು ಕೆಳಗೆ ನೋಡುತ್ತಿರುತ್ತವೋ ಅದರ ಹೃದಯ ಮೇಲೆ ನೋಡುತ್ತಿರುತ್ತದೆ ಎಂದು ನನಗೆ ತಿಳಿದಿದೆ. ಯಾರ ಕಣ್ಣುಗಳು ಮೇಲೆ ನೋಡುತ್ತವೋ, ಅವನು ಬಹು ಬೇಗ ಎಡವಿ ಬೀಳುತ್ತಾನೆ. ಅವನ ಕಾಲುಗಳ ಆಯಾಸವು ಅವನ ನಿಕಟಕ್ಕೆ ಸಾಗುತ್ತವೆ.

ನನ್ನ ಸೋಲು ನನ್ನ ಆತ್ಮದ ಪ್ರಕಾಶವಾಗಿದೆ. ಈ ಪ್ರಕಾಶದಿಂದಾಗಿ ನನ್ನ ದಾರಿಯಲ್ಲಿರುವ ಕಲ್ಲು ಮುಳ್ಳು ಏರು ತಗ್ಗುಗಳು ನನಗೆ ಗೋಚರಿಸುತ್ತವೆ. ಈ ಕಂಟಕಗಳಿಂದ ಸುಲಭವಾಗಿ ತಪ್ಪಿ ನಾನು ನನ್ನ ಗುರಿಯತ್ತ ಯಾ ಯುಕ್ತ ಸ್ಥಾನದತ್ತ ಸಾಗುತ್ತಲೇ ಇದ್ದೇನೆ.

[ಶ್ರೀ ಸುದರ್ಶನರ ಝುರೋಕೆಯಿಂದ]

—ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆ ಪರಾರಿ, ಬೊಂಬಾಯಿ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. 109/1959.

T. S. ಮುಹಮ್ಮದ್ ಯಿಬ್ರಾಹಿಂ ಸಾಹೇಬ—ವಾದಿ.

ಮತ್ತು

ಲತೀಪಾಂಬಿ ಕೂಡಾ—ಪ್ರತಿವಾದಿರು

4ನೇ ಪ್ರತಿವಾದಿ ಹಮ್ಮದ್ ಸಾಹೇಬ—ಕಟಂಗೇರಿ ಹಸನಸಾಹೇಬರ ಮಗ. ಉಡ್ಪಿ ತಾಲ್ಲೂಕು ಹಾರಾಡಿ ಗ್ರಾಮ—

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:—

ತಾರೀಕು 15-3-1952ರಲ್ಲು 1ರಿಂದ4ನೇ ಪ್ರತಿವಾದಿರು ರೂಪ್ಯಾ 600/-ಕ್ಕೆ ವಾದಿಗೆ ಬರಕೊಟ್ಟ ಸ್ಥಿರಾಸ್ತಿ ಈಡು ದಸ್ತಾವೇಜಿನ ಅಸಲು ಮತ್ತು ತಾ. 15-3-53ರ ಲಾಗ್ಯಾತಿನ ಬಡ್ಡಿ ಕೂಡಾ ರೂಪ್ಯಾ 831.06ಕ್ಕೆ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 4-8-59ಕ್ಕೆ ನಿಮ್ಮ ನೋಟಿಸಿನ ಬಗ್ಗೆ ಯಿಟ್ಟದೆ. ಆ ಕುರಿತು ನಿಮಗೇನಾದರೂ ಉದಾಹರಿಸುವಂತಾದಿದ್ದರೆ ಆ ದಿವಸ ಹಗಲು ಗಂಟೆ11ಕ್ಕೆ ಈ ಕೋರ್ಟಿನ ಮುಂದೆ ಬಂದು ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವುದು.

(By order of the Court.)

Sri. T.S.Mohammad Ali,
Advocate for Plaintiff.

Udipi S.K. Dated. 23-7-59

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವನೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಚಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

ಸಫಲ ಜೀವನ

ಸಫಲ ಜೀವನವೂ ಒಂದು ಅಮೋಘ ಕಲೆ!

ಜೀವನ ಕಲಾಕಾರನು ಮಾತ್ರ ಸತ್ಯಂ ಶಿವಂ ಸುಂದರಂ ಆಗಿ ಜೀವಿಸಬಲ್ಲನು.

ಸಂಗೀತ, ನೃತ್ಯ, ಚಿತ್ರಕಲೆಗಳಂತೆ ಸಫಲ ಜೀವನವನ್ನು ನಡೆಸುವುದೂ ಒಂದು ಕಲೆಯಾಗಿದೆ. ಸಾಧಾರಣವಾದ ಬಣ್ಣ, ಕುಂಚಗಳಿಂದ ಚಿತ್ರಕಾರನು ಅತ್ಯುತ್ತಮವಾದ ಕೃತಿಯನ್ನು ರಚಿಸುವಂತೆ, ಗೇಣುದ್ದದ ಬಿದಿರ ಕೊಳಲಿನಿಂದ ನುರಿತ ಸಂಗೀತಜ್ಞನು ಆಕರ್ಷಕ ಗೀತೆಯನ್ನು ನುಡಿಸುವಂತೆ, ಚಿಕ್ಕದೊಂದು ಉಳಿಯಿಂದ, ಬಂಡೆಕಲ್ಲೊಂದನ್ನು (ಅ) ಸುಂದರ ಮೂರ್ತಿಯನ್ನಾಗಿ ಪರಿವರ್ತಿಸುವ ಶಿಲ್ಪಿಯಂತೆ, ಜೀವನ ಕಲಾಕಾರನು ದೈವದತ್ತವಾದ ತನ್ನ ಸಾಮಾನ್ಯ ಉಪಕರಣಗಳಿಂದಲೂ, ಸಫಲ ಹಾಗೂ ಆನಂದಮಯ ಜೀವನವನ್ನು ನಿರ್ಮಿಸಿಕೊಳ್ಳಬಲ್ಲನು.

ನಾವೆಲ್ಲರೂ ಜೀವನ ಕಲೆಯನ್ನು ಅಭ್ಯಸಿಸಬೇಕು. ಜೀವನದಲ್ಲಿ ಯಾವ ಅಡಚಣೆಗಳೇ ಬರಲಿ, ಪ್ರತಿಕೂಲ ಪರಿಸ್ಥಿತಿಗಳೇ ಉಂಟಾಗಲಿ, ಅವುಗಳಿಗೆ ಬೆದರದೆ, ಜೀವನದ ದಿನ, ಮಾಸ, ವರುಷಗಳೆಂಬ ಕಚ್ಚಾವಸ್ತುವನ್ನು ನಮ್ಮ ಮಾನಸಿಕ ನಿಯಂತ್ರಣ, ಬಾಹ್ಯ ದೃಷ್ಟಿಕೋನ, ಸತ್ಯ, ಪ್ರೇಮ, ವಿವೇಕ ಹಾಗೂ ಧೈರ್ಯಗಳ ಚಮತ್ಕಾರೀ ಉಪಯೋಗದಿಂದ ಆಕರ್ಷಕಗೊಳಿಸಿ, ಜೀವನಕಲಾ ವೈಭವವನ್ನು ಪ್ರದರ್ಶಿಸಬೇಕು.

ಕಲೆಯ ಉದ್ದೇಶವೇ ಸೌಂದರ್ಯದ ಸೃಷ್ಟಿ, ನವೀನತೆಯ ನಿರ್ಮಾಣ. "ಸತ್ಯಂ ಶಿವಂ ಸುಂದರಂ"ಗಳ ಪ್ರಕಟಣೆ. ನಾವು ವಿಘ್ನ ಬಾಧೆಗಳಿಂದಾವೃತವಾಗಿರುವ ಈ ಜಗತ್ತಿನಲ್ಲಿ ಸುಂದರ ಜೀವನವನ್ನು ಸೃಷ್ಟಿಸಬೇಕು. ಜೀವನ ಸೌಂದರ್ಯವೇ ನಮ್ಮ ಧ್ಯೇಯವಾಗಿರಬೇಕು. ಏಕಮುಖಿಗಳಲ್ಲಿ ಸೌಂದರ್ಯವನ್ನು ಕಾಣಲು ಯತ್ನಿಸಬೇಕು. ಜೀವನ ಕ್ಷಿತಿಜದಲಿ ಕರಾಳ ಮೋಡಗಳು ಆವರಿಸಿದಾಗಲೂ, ಆಗಾಗ ಹೊಳೆಯುವ ಕೋಲ್ಮಿಂಚುಗಳಿಂದ ಬೆಳಗುವ ಮೋಡಗಳ ಅಂಚನ್ನು ದೃಷ್ಟಿಸಬೇಕು. ಮುಳ್ಳುಗಳಿಂದ ಆವೃತವಾದುದಾದರೂ ಪುಷ್ಪವನ್ನೇ ನೋಡಲು ಯತ್ನಿಸಬೇಕು.

ಕಲಾಕಾರನು ಸೌಂದರ್ಯದ ಅರ್ಜಕನು. ಜೀವನದ ಸೌಂದರ್ಯವೆಲ್ಲಿದೆ? ಸೌಂದರ್ಯವಿದೆ ನಮ್ಮ ಉಚ್ಛತಮ ಆದರ್ಶಗಳಲ್ಲಿ, ಪವಿತ್ರತಮ ಉದ್ದೇಶಗಳಲ್ಲಿ, ಜೀವನದ ಸುನಿಶ್ಚಿತ ಧ್ಯೇಯದಲ್ಲಿ, ಧ್ಯೇಯವನ್ನು ಸಾಕಷ್ಟು ಮನನ ಚಿಂತನಗಳ ನಂತರವೇ ನಿರ್ಧರಿಸಬೇಕು. ಆದರೆ ಅದರ ಸಾಧನೆಯಲ್ಲಿ ಎಂದೂ ಹಿಂಜರಿಯಬಾರದು. ನಮ್ಮ ಸರ್ವ ಶಕ್ತಿಯಿಂದ ಅದರಲ್ಲಿ ಸೌಂದರ್ಯವನ್ನು ಎರಕ ಹೊಯ್ಯುತ್ತಾ ಮುಂದೆ ಸಾಗಬೇಕು. ಇದಕ್ಕೆ ಆಡಂಬರದ ಸೌಂದರ್ಯೋಪಕರಣಗಳ ಆವಶ್ಯಕತೆ ಇಲ್ಲ. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹೊಸ ಹೊಸ "ಫೇಶನ್"ಗಳ ಗೊಡವೆಯೇ ಅಗತ್ಯವಿಲ್ಲ.

ಜೀವನದ ಕಲಾಕಾರರಾಗಿ ಅಲ್ಪ ಶಕ್ತಿ ಮತ್ತು ಸಾಧನಗಳಿಂದ ನಿಮ್ಮ ಕಲಾತ್ಮಕ ದೃಷ್ಟಿಕೋನವನ್ನು ಪ್ರಕಟಿಸಿರಿ. ನಿಮ್ಮೊಡನೆ ಮನಮೆಚ್ಚುವ ಸೌಂದರ್ಯ ಸಾಧನಗಳಿಲ್ಲದಿರಬಹುದು. ಆದರೂ, ನಿರಾಶರಾಗುವ ಅಗತ್ಯವಿಲ್ಲ. ನಿಮ್ಮೊಡನಿರುವ ಅಲ್ಪ ಸ್ವಲ್ಪ ಸಾಧನಗಳಿಂದ, ಬಡತನದ ಸಂಪತ್ತಿನಿಂದ ನಿಮ್ಮ ಜೀವನದ ಕಲಾತ್ಮಕ ಸೌಂದರ್ಯವು ಪ್ರಕಟಗೊಳ್ಳಲಿ. ಘನಘೋರ ಅಂಧಕಾರವು ಆವರಿಸಿದ್ದರೂ, ತನ್ನ ಸುಂದರ ಪ್ರಕಾಶದಿಂದ ಮನೆಗಳನ್ನು ಬೆಳಗಿಸುವ ಹಣತೆಯನ್ನು ನೋಡಿ; ಒಂದುಹಿಡಿ ಮಣ್ಣು, ಒಂದಷ್ಟು ಎಣ್ಣೆ, ಒಂದಂಗುಲ ಬತ್ತಿ, ಇವಿಷ್ಟೇ ಅದರ ಬಂಡವಾಳ. ಅದೇ ಸಹಸ್ರಾರು ರೂಪಾಯಿಗಳ ವೆಚ್ಚದಿಂದ ತಯಾರಿಸಿದ ವಿದ್ಯುತ್ತು ಕ್ಷಣದಲ್ಲಿ ಅಡಗಬಹುದು. ಮಣ್ಣಿನ ದೀಪವಾದರೋ, ಪ್ರಕಾಶಮಾನವಾಗಿ ಬೆಳಸಿ ತನ್ನ ಮಹತ್ವಿಕೆಯನ್ನು ಪ್ರಕಟಿಸಿ, ಜನರ ಪ್ರೀತಿ ವಿಶ್ವಾಸಗಳನ್ನು ಪಡೆದು ತನ್ನ ಜೀವನವನ್ನು ಧನ್ಯಗೊಳಿಸುವುದು. ಅದು ತನ್ನೊಡನೆ ಮಣಗಟ್ಟಲೆ ಎಣ್ಣೆ ಇಲ್ಲ, ದೊಡ್ಡ ಆಕಾರವಿಲ್ಲವೆಂದು ಅಳುವುದೇ? ಅದಕ್ಕೆ ಕರ್ಮಹೀನ ಆಲಸಿಯಂತೆ ಕುಳಿತು ಕಪೋಲ ಕಲ್ಪನೆಗಳಲ್ಲಿ ಸಮಯ ಕಳೆಯಲು ಅವಕಾಶವೆಲ್ಲಿದೆ? ಅದರ ಕಾರ್ಯವು ಬರೇ ಅಲ್ಪವಾಗಿರಬಹುದು. ಆದರೂ ಆ ಅಲ್ಪತೆಯಲ್ಲಿಯೂ, ಸೂರ್ಯ ಚಂದ್ರರ ಬೆಳಗುವಿಕೆಯಷ್ಟೇ ಸಫಲತೆಯ ಮಹತ್ವವು ಅಡಗಿದೆ.

ಹಾಗಾದರೆ ನಾವು ಹೇಗೆ ಸಫಲಜೀವನವನ್ನು ನಡೆಸಬಹುದು? ಜೀವನ ಸಾಗರದಲ್ಲಿ ತೇಲಾಡಲು ನಮ್ಮೊಡನೆ ಯಾವ ಸಲಕರಣೆಗಳಿವೆ? ಎಂಬುದನ್ನು ನೋಡೋಣ.

ನಮ್ಮ ಮನಸ್ಸನ್ನು ಸರಿಯಾಗಿ ಪರಿಶೀಲಿಸಿದರೆ ಅದರಲ್ಲಿ ಅನೇಕ ದೈವೀಗುಣಗಳೂ, ದಾನವೀ ವಾಸನೆಗಳೂ ಅಡಕವಾಗಿವೆ. ನಾವು ಸದ್ಗುಣಗಳು ಮಾತ್ರ ಪ್ರಕಟಗೊಳ್ಳಲು ಅನುವು ಮಾಡಿಕೊಟ್ಟರೆ, ದುರ್ಗುಣಗಳು ತಮ್ಮಷ್ಟಕ್ಕೇ ನಾಶವಾಗುವುವು. ಸತತ ಸದುದ್ಯೋಗ, ಸದ್ವಿಚಾರ, ಸದ್ಭಾವನೆಗಳನ್ನು ಅಭಿವೃದ್ಧಿಗೊಳಿಸುವುದರಿಂದ ದಾನವೀ ವಾಸನೆಗಳು ಸ್ವಯಂ ನಷ್ಟಹೊಂದುವುವು.

ಬಾಯಲ್ಲೊಂದು ಹಲ್ಲು ಹುಳುಕು ಹಿಡಿದಿದ್ದರೆ, ಅದನ್ನು ತೆಗೆಯದೆ ಮನಸ್ಸಿಗೆ ನೆಮ್ಮದಿ ಇರಲಾರದು. ಬೆಳೆದ ತಲೆಗೂದಲನ್ನು ತಿಂಗಳಿಗೊಮ್ಮೆ ತೆಗೆಯಿಸದಿದ್ದರೆ ರಾತ್ರೆ ನಿದ್ದೆ ಬೀಳನು. ಬೆವರಿನಿಂದ ಮೈಗೆ ವಾಸನೆ ಬರುತಿದ್ದರೆ ಸ್ನಾನಮಾಡದೆ ಶಾಂತಿ ಸಿಗದು. ಅಂದಮೇಲೆ, ಲಜ್ಜಾಸ್ಪದ ಹಾಗೂ ಘೃಣಿತ ವಿಚಾರಗಳನ್ನು ನಾವೇಕೆ ಮನಸ್ಸಿನಿಂದ ಹೊರದೂಡಬಾರದು? ತುಚ್ಛ ವಿಚಾರಗಳನ್ನು ತ್ಯಜಿಸದಿದ್ದರೆ ಮನೋ ಮಟ್ಟವು ಉತ್ತಮವಾಗಲಾರದು. ಅಶುದ್ಧ ವಿಚಾರಗಳು ಒಂದಲ್ಲ ಒಂದು ದಿನ ನಮ್ಮ ಪತನಕ್ಕೆ ಕಾರಣವಾಗುವವು. ನಿರರ್ಥಕ ಕಸವನ್ನು ಪೊರಕೆಯಿಂದ ಗುಡಿಸಿ ಹೊರ ಬಿಸುಡುವಂತೆ ದುರ್ಭಾವನೆಗಳನ್ನು ತ್ಯಜಿಸದಿದ್ದರೆ ಮಾನಸಿಕ ಸ್ವಾಸ್ಥ್ಯವು ಸುರಕ್ಷಿತವಾಗುಳಿಯದು.

ದುರ್ವ್ಯಸನ, ವ್ಯಭಿಚಾರಗಳು ಸರ್ವಥಾ ನಿಂದ್ಯವಾಗಿವೆ. ಈರ್ಷ್ಯೆ, ಕ್ರೋಧ, ಮದ, ಮತ್ಸರ, ಅಸತ್ಯ, ಛಲ, ಕಪಟ ಹಾಗೂ ಸ್ವಾರ್ಥಗಳ ಅವಲಂಬನೆಯು ಲೌಕಿಕ, ಪರ ಲೌಕಿಕ ದೃಷ್ಟಿಗಳೆರಡರಲ್ಲಿಯೂ ಹಾನಿಕರ ಮತ್ತು ದುಃಖದಾಯಕ. ಈ ದುರ್ಗುಣಗಳ ಸ್ಥಾನದಲ್ಲಿ, ಸತ್ಯ, ಶಾಂತಿ, ದಯೆ, ಮೈತ್ರಿ ಮುಂತಾದ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕು. ಸದ್ಗುಣಿಯು ಸರ್ವರಿಗೂ ವಂದನೀಯನು.

ಮಾನವನ ಅಂತಃಕರಣವು ದೈವೀ ತತ್ವದಿಂದ ಪರಿಪೂರ್ಣವಾಗಿದೆ. ಪರಮೇಶ್ವರನ ಅನುಗ್ರಹವು ನಮ್ಮನ್ನು ಸತ್ಪಥದಲ್ಲಿ ನಡೆಸುವುದು. ಆತ್ಮ ಧ್ವನಿಯು ವಿವೇಕಮಯವಾಗಿ ವರ್ತಿಸಲು ಪ್ರೇರೇಪಿಸುವುದು. ಆ ಧ್ವನಿಯನ್ನನುಸರಿಸಿ, ಅದರಂತೆ ಕಾರ್ಯಾನ್ವಿತರಾಗುವುದು ಶ್ರೇಯಸ್ಕರ. ಯಾವ ಶಕ್ತಿಯು ನಮ್ಮನ್ನು ದುಷ್ಪ್ರವೃತ್ತಿಗಳಿಂದ ದೂರವಿರುವಂತೆ ಪ್ರೇರೇಪಿಸುವುದೋ ಅದೇ ಆತ್ಮಶಕ್ತಿಯು.

ತಾಸಿಗೆ ೨೮೬ ಮೈಲಿನಂತೆ ನೀರಿನಲ್ಲಿ ಪ್ರಯಾಣಿಸಿದ್ದ ಶ್ರೀ ಡೋನಾಲ್ಡ್ ಕಾಂಪ್‌ಬೆಲ್

"ನಿಮ್ಮ ಜೀವನವು ಒಂದು ತೆರೆದ ಪುಸ್ತಕ ವಂತಿರಲಿ. ಅದನ್ನು ಮುಚ್ಚುಮರೆಗಳಿಂದ ದೂರವಾಗಿಡಿ. ಅದರ ಪ್ರತಿಯೊಂದು ಪುಟವೂ ತೆರೆಯಲನುಕೂಲವಾಗಿರಲಿ. ಪಂಕ್ತಿಯು ಸ್ವಚ್ಛವಾಗಿರಲಿ. ಅದರ ಒಂದೊಂದು ಶಬ್ದವೂ ಸುಂದರ ಹಾಗೂ ಸ್ಪಷ್ಟವಾಗಿರಲಿ. ಇದು ಮಹಾತ್ಮರ ಉಪದೇಶ. ಯಾವ ವ್ಯಕ್ತಿಯ ಜೀವನದಲ್ಲಿ ವಂಚನೆ, ಕಪಟ, ಮೋಸಗಳಿಲ್ಲವೋ, ಅಡಗಿಸಿಡುವ ಯಾವ ವಿಷಯವೇ ಇಲ್ಲವೋ, ಅವನು ಅನುಕರಣೀಯ.

ಯಾವ ವಿಷಯವನ್ನು ಮನಸ್ಸು ಇತರರಿಂದ ಅಡಗಿಸಲು ಯತ್ನಿಸುವುದೋ— ಅದು ದುಷ್ಪ್ರವೃತ್ತಿಯಾಗಿದೆ. ಯಾವುದನ್ನು ಅಂತರಾತ್ಮವು ತಿರಸ್ಕರಿಸುವುದೋ ಅದು ಸರ್ವದಾ ತ್ಯಾಜ್ಯವಾಗಿದೆ. ಈ ಮಾರ್ಗದಿಂದ ಸದಾ ದೂರವಿರಬೇಕು ಅಂತಃಕರಣದ ಧ್ವನಿಯನ್ನನುಸರಿಸಿ, ಸದ್ಭಾವನೆಗಳನ್ನು ವೃದ್ಧಿಗೊಳಿಸಿ, ನ್ಯಾಯ ಮಾರ್ಗದಲ್ಲೇ ನಡೆಯುವುದು ಶ್ರೇಷ್ಠ ವ್ಯಕ್ತಿತ್ವದ ಕುರುಹು.

ಜೀವನದ ನಿಜವಾದ ಕಲಾಕಾರನು ತನ್ನ ದೈವೀ ಗುಣಗಳೆಂಬ ಅಲ್ಪ ಸಾಧನಗಳಿಂದಲೇ, ಜೀವನವನ್ನು ಶಾಂತ, ಸಂತುಷ್ಟ, ಸರಸ, ಸುಂದರವನ್ನಾಗಿ ಮಾಡುವನು. ಅವನ ವಿಶೇಶತೆಯು ಯೋಜನೆಗಳ ನಿರ್ಮಾಣದಲ್ಲಿದೆಯಲ್ಲದೆ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ಜೀವನದ ನಿಜವಾದ ಕಲಾಕಾರರಾಗಿ ಜೀವನ ಸೌಂದರ್ಯವನ್ನು ವೃದ್ಧಿಗೊಳಿಸುವ. ಆ ದಿಸೆಯಲ್ಲಿ ಮುಂದರಿಯಲು ಪರಮಾತ್ಮನು ನಮಗೆ ಶಕ್ತಿಯನ್ನು ಕರುಣಿಸಲಿ.

—ಶ್ರೀ ಕೆ. ಪುರುಷೋತ್ತಮ ಮಲ್ಯ, ಮಂಗಳೂರು.

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್, ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2·00.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ| ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

PHONE 203 ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE.

ಕಥಾ ವಿಹಾರ

(೨ನೇ ಪುಟದಿಂದ)

ಮಾಡುತ್ತ ಮಾಡುತ್ತ ಕೊನೆಗೆ ಸೈಕಲ್ ಮೇಲಾದರೂ ಹೊರಡುವುದೆಂದು ನಿರ್ಧರಿಸಿಕೊಂಡ! ವೇಳೆ ಮಾಡಕೂಡದೆಂದು ಯಾವ ವಿಚಾರವನ್ನೂ ಮಾಡದೆ, ಕೋಣೆಗೆ ಬೀಗ ಹಾಕಿ ಹೊರಟೇ ಬಿಟ್ಟ! ಆದರೆ ತಿಕೀಟಿಲ್ಲದೆ ರೈಲು ಪ್ರವಾಸ ಏಕೆ ಕೈಕೊಳ್ಳಬಾರದೆಂಬ ವಿಚಾರವೂ ಎದುರು ಮೂಡಿತು. ಆದರೆ ಈಗಾಗಲೇ ಲಂಚದ ಕೇಸಿನಲ್ಲಿ ಸಿಕ್ಕ ಆತ ರೈಲಿನಲ್ಲೂ ಸಿಕ್ಕರೆ, ಮುಂದೆ ನೌಕರಿಯುಳಿಯುವುದು ಕಠಿಣವೆಂದೇ ಭಾವಿಸಿ ಆ ವಿಚಾರವನ್ನು ಬಿಟ್ಟುಬಿಟ್ಟ. ತನ್ನ ಗುರುತಿನಂಗಡಿಯಲ್ಲಿ ಹೋಗಿ ಬಾಡಿಗೆಗೆ ಸೈಕಲ್ ತೆಗೆದುಕೊಂಡು ಊರ ಕಡೆಗೆ ಹೊರಟ! ಅಲ್ಲಿಯ ವರೆಗೂ ವಿಚಾರಗಳ ಮಥನದಲ್ಲಿ ಗಾಸಿಯಾಗಿದ್ದ ಆತನ ಮುಖದ ಮೇಲೆ ತುಸುವಾದರೂ ನಗೆಯ ರೂಪ ಈಗ ಕಂಡು ಬರುತ್ತಿತ್ತು!

ಮಧ್ಯಾಹ್ನದ ಚುರುಚುರು ಬಿಸಿಲಿನಲ್ಲಿ ಹೊರಟ ಮೋಹನನಿಗೆ ಧಾರವಾಡವನ್ನು ದಾಟಿದ ಕೆಲಹೊತ್ತಿನಲ್ಲೇ ಬಾಯಾರಿಕೆ, ದಣಿವುಗಳು ತಲೆದೋರಿದವು; ಊಟವೂ ಇರದುದೂ ಆತನ ಲಕ್ಷಕ್ಕೆ ಬಂದುದು ಆಗಲೇ. ಊಟಮಾಡದೇ ಹೊರಟುದು ತಪ್ಪಾಯಿತೆಂದು ಆಗ ಆತನಿಗೆ ಹೊಳೆಯಿತು! ಮರಳಿ ಹೋಗುವಂತೆಯೂ ಇಲ್ಲ! ಆಗಿ ಹೋದ ಮಾತಿಗೆ ಚಿಂತಿಸಿ ಫಲವೇನು? ಎಂದೆಂದು ಅಲ್ಲಿಯೋ ಎಲ್ಲಿಯಾದರೂ ನೀರು ಸಿಗುವುದೋ ಹೇಗೆಂದು—ಅತ್ತಿತ್ತ ನೋಡುತ್ತ ಮುಂದೆ ಸಾಗಿದ. ಸ್ವಲ್ಪ ಹೊತ್ತಿನಲ್ಲೇ ದಾರಿಯಲ್ಲೊಂದು ಬಾವಿ ಕಂಡಿತು. ಅಲ್ಲಿ ಇಳಿದು ಸಾಕಾಗುವಷ್ಟು ನೀರು ಕುಡಿದ! ನಂತರ ಅಲ್ಲಿಯೇ ಸ್ವಲ್ಪ ಸಮಯ ಕುಳಿತುಕೊಳ್ಳಬೇಕೆನಿಸಿತು; ಅಲ್ಲಿಯ ದೊಡ್ಡ ಮರದ ಬುಡದ ನೆರಳಿಗೆ ಹೋಗಿ ಅಡ್ಡಾದ; ರಾತ್ರಿ ನಿದ್ದೆ ಇರದ ಹಾಗೂ ದಣಿದ ಆತ ಅಲ್ಲಿ ಕೂಡಲೇ ನಿದ್ರಾದೇವಿಯ ಕೈವಶವಾದ.

ಮೋಹನನಿಗೆ ಎಚ್ಚರವಾದಾಗ ಸೂರ್ಯ ಪಶ್ಚಿಮ ದಿಗಂತದಲ್ಲಿ ಇಳಿಯುತ್ತಿದ್ದ! ಸರಿಯಾದ ವೇಳೆ ಗೊತ್ತಾಗದಿದ್ದರೂ, ಕತ್ತಲೆಯಾಗುವುದಕ್ಕೆ ವೇಳೆಯಿಲ್ಲವೆಂಬುದನ್ನರಿತ ಮೋಹನನಿಗೆ ಗಾಬರಿಯಾಯಿತು! ಊರು ಮುವ್ವತ್ತು ಮೈಲುಗಳಿಗೂ ಮಿಕ್ಕಿ ಇದೆ ಎಂಬಂತಿದೆ! ಮೋಹನನ ಎದೆ ಒಮ್ಮೆ ಧಸಕ್ಕೆಂದಿತು! ಆದರೂ ಊರಿಗೆ ಹೊರಡುವ ನಿರ್ಧಾರ ಅಚಲವಾಗಿತ್ತು! ಸೈಕಲ್ಲಿಗೊಂದು ದೀಪವಿರದಿದ್ದುದೂ ಮೋಹನನ ದುರ್ದೈವವೇ ಎನ್ನಬೇಕು! ನೀರು ಕುಡಿದಿದ್ದರೂ ಹಸಿವಿನ ಸಂಕಟದಿಂದ ಹೊಟ್ಟೆ ಬಳಲುತ್ತಿತ್ತು! ಆದರೂ ಮುಂದೆ ಹೊರಟ—ಬೆಳಗಾವಿ ತಲುಪಲೇಬೇಕೆಂಬ ಅಚಲ ದೃಢನಿರ್ಧಾರದಿಂದ!

ಒಂದು ಗಂಟೆ ಕಳೆಯುವುದರಲ್ಲೇ ಕತ್ತಲೆಯಾಯಿತು! ಆಕಾಶದಲ್ಲಿ ಚಂದಿರನ ಬೆಳಕೂ ಇಲ್ಲ! ಆದರೂ ನಿರ್ಧಾರದಿಂದ ಹೊರಟ! ಏಕೋ ಈಗೀಗ ಆವನಿಗೆ ಮನೆ ಮುಟ್ಟುವೆನೆಂಬ ಧೈರ್ಯ ಹಾರಿಹೋಗಿತ್ತು! ಆದರೂ ಯಾವುದರ ಪರಿವೆಯೂ ಇಲ್ಲದೆ ಮುಂದೆ ಹೊರಟಿದ್ದ!

೦೦

ಲಕ್ಷ್ಮೀಗೆ ಅತ್ತು ಅತ್ತು ಕಣ್ಣುಗಳು ನೋವಾಗಿದ್ದುವು. ನರಕಚತುರ್ದಶಿಗೆ ಮೋಹನ ಬರುವುದೇ ಇಲ್ಲವೆಂದು ಭಾವಿಸಿದಳು; ಬರದಿದ್ದವರು ಕಾಗದವನ್ನಾದರೂ ಹಾಕಿ ತಿಳಿಸಬಾರದೇ? ಎಂಥ ಹೃದಯ ಅವರದು—ಎಂದು ಒಮ್ಮೊಮ್ಮೆ ಪತಿಯನ್ನೇ ಶಪಿಸಿದರೆ ಮಧ್ಯೇ ದಾರಿಯಲ್ಲೇನಾದರೂ ಆಗಿರಬಹುದೇ? ಎಂಬ ಶಂಕೆಯಿಂದ ಒಮ್ಮೊಮ್ಮೆ ಬೆಚ್ಚಿದವಳಂತೆಯೂ ಮಾಡುತ್ತಿದ್ದಳು! ಅತ್ತು ಅತ್ತು ಹಾಸಿಗೆಯಲ್ಲಿ ಹಾಗೂ ಹೀಗೂ ಹೊರಳಾಡುತ್ತಿದ್ದಳು! ನಿದ್ದೆಯೂ ಬರಲಿಲ್ಲ; ಚಿಂತೆಯೂ ಬಿಡಲಿಲ್ಲ — ಸಂಕಟ ಹೆಚ್ಚಾಗ ತೊಡಗಿತು! ಎಷ್ಟು ಹೊತ್ತು ಹೀಗೆಯೇ ಬಿದ್ದುಕೊಂಡಿದ್ದಳೋ ಏನೋ ಅವಳಿಗೆ ಏನೋ ಕೇಳಿಸಿದಂತಾಯಿತು. ಆಲಿಸಿ ಚಿತ್ತ ಕೊಟ್ಟು ಕೇಳಿದಳು,—ಪುನಃ ಅದೇ ಧ್ವನಿ—"ಲಕ್ಷ್ಮೀ..."

ಲಕ್ಷ್ಮೀಗೆ ಸ್ವರ್ಗವೇ ಬಂದಂತಾಯಿತು. ದೀಪವನ್ನೇರಿಸುತ್ತಲೇ "ಯಾರು? ...ಬಂದೆ...' ಎಂದಳು. ಕೂಡಲೇ ಕೆಳಗೆ ಹೋಗಿ ಬಾಗಿಲು ತೆರೆದಳು. ಇದುರಿಗೆ ತನ್ನ ದೇವರು! ಮುಖ ಅತ್ತು ಅತ್ತು ಬಾಡಿದಂತಾಗಿತ್ತು! ಆದರೆ ಇಬ್ಬರೂ ಒಬ್ಬರನ್ನೊಬ್ಬರು ನೋಡಿದೊಡನೆ ಮುಖಗಳು ಹಸನ್ಮುಖಗೊಂಡುವು. ಮೋಹನ 'ಲಕ್ಷ್ಮೀ' ಎಂದ! ಲಕ್ಷ್ಮಿ ಮೋಹನನ ಕಣ್ಣುಗಳನ್ನು ನೋಡುತ್ತಿದ್ದಂತೆಯೇ ಅವನ ಬಾಹು ಪಾಶಗಳಲ್ಲಿ ಬಂದಿತಳಾಗಿ ತನಗೆ ಮಾತನಾಡಲೂ ಅನುವು ಕೊಡದಂತೆ ತನ್ನ ತುಟಿಗಳನ್ನು ಮೋಹನನ ತುಟಿಗಳ ಬಂಧನಕ್ಕೊಪ್ಪಿಸಿ ಅಧರರಸಾಮೃತದ ಸ್ವರ್ಗದಲ್ಲಿ ತೇಲಬಿಟ್ಟಿದ್ದಳು.

ಇಷ್ಟರಲ್ಲೇ ಎಚ್ಚರಾದ ಲಕ್ಷ್ಮೀಯ ತಂದೆ—ತಾಯಿಗಳು 'ಮೋಹನರಾವ್ ಬಂದರೇನೇ ಲಕ್ಷ್ಮೀ" ಎಂದು ಕೇಳುತ್ತ ಹರ್ಷದಿಂದ ಹೊರಗೆ ಬಂದರು. ಮೋಹನ ಲಕ್ಷ್ಮೀ ದೂರ ಸರಿದನಂತರ ಮೋಹನ ತನ್ನ ಅತ್ತೆ-ಮಾವಂದಿರಿಗೆ ನಮಸ್ಕರಿಸಿ ಬರುವುದಕ್ಕೆ ರೈಲುಗಾಡಿ ವಿಳಂಬವಾಯಿತೆಂದೂ, ಕೆಲಸದ ಮೂಲಕ ತನಗೆ ಮೊದಲು ಬರಲಿಕ್ಕಾಗಲಿಲ್ಲವೆಂದೂ ಹೇಳಿದ ನಂತರ ಲಕ್ಷ್ಮೀ ಮಾಡಿಕೊಟ್ಟ ಚಾ ಕುಡಿದು ವಿಶ್ರಾಂತಿಗಾಗಿ ಕುಳಿತ! ಆಗ ಟಾವರ್ ಕ್ಲಾಕ್‌ನಿಂದ ನಾಲ್ಕರ ಗಂಟೆ ಕೇಳಿ ಬಂದಿತು.

ಊಟವಿಲ್ಲದೆ ಹೊರಟ್ಟಿದ್ದ ಮೋಹನನಿಗೆ ಚಹ ಕುಡಿದೊಡನೆಯೇ ಸಂಕಟವಾದಂತಾಗಿ ಹೊಟ್ಟೆಯಲ್ಲಿ ಏನೇನೋ ಆಗುವಂತೆ ಎನಿಸುತಿತ್ತು! ಕಣ್ಣಿಗೆ ಕತ್ತಲೆ ಬಂದಂತಾಗಿ ಕುಳಿತು ಬಿಟ್ಟಿದ್ದ; ಸಂಕಟದಿಂದ ತಳಮಳಪಡುತ್ತಿದ್ದ! ಆದರೂ ಊರು ತಲುಪಿದ ಹರ್ಷದಲ್ಲಿ ಎಲ್ಲವನ್ನೂ ಮರೆತುಬಿಟ್ಟಿದ್ದ! ದೀಪವಿಲ್ಲದ ರೋಡಿನಲ್ಲಿ—ಅದೂ ಒಬ್ಬನೇ ಆಧೈರ್ಯ ಅಧೈರ್ಯವಾಗಿ ಊರು ಸೇರಿದ್ದೇ ಸಾಕಾಗಿತ್ತು! ಆತ ಊರು ಸೇರಿದ್ದೇ ಆಶ್ಚರ್ಯ!

ಹೊಟ್ಟೆ ತಿಂಡಿ ಬೇಡುತ್ತಿತ್ತು! ಕೇಳಿದರೆ ಏನಾದರೂ ಸಂಶಯ ಬರಬಹುದೆಂದುಕೊಂಡು ನಾಚಿ ಸುಮ್ಮನೆ ಕುಳಿತ! ಒಮ್ಮೆಲೇ ತನ್ನ ಎಲ್ಲ ವಿಚಾರಗಳೂ ಧುಮ್ಮಿಕ್ಕಿ ಕಣ್ಣುಮುಂದೆ ಬಂದುವು! ತಲೆ ಭಾರವಾದಂತಾಯಿತು! ಈ ಗೊಂದಲದಲ್ಲೇ ನಸುಬೆಳಕು ಸರಿದು, ಆರತಿಗಾಗಿ ಮೋಹನ ಕರೆಯಲ್ಪಟ್ಟ! ಆರತಿಯ ಹುರುಪೊಂದು ಆತನಿಗೆ! ಸಂಕಟದ ಬಾಧೆ ಇನ್ನೊಂದೆಡೆಗೆ! ಮೋಹನ ಮಾವರೊಡನೆ ಎದ್ದುಬಂದು ಹಾಸಿದ ಕಂಬಳಿ ಮೇಲೆ ಕುಳಿತ! ತನ್ನ ಅತ್ತೆ ಹಾಗೂ ನಲ್ಮೆಯರು ತಟ್ಟೆಯೆತ್ತಿ ಆರತಿ ಮಾಡತೊಡಗಿದರು! ಮೋಹನನಿಗೆ ಎಲ್ಲಿಲ್ಲದ ಉತ್ಸಾಹ ಬಂದಿತ್ತು! ಜೇಬಿನಲ್ಲಿಯ ಎರಡು ರೂಪಾಯಿ ತೆಗೆದು ತಟ್ಟೆಯಲ್ಲಿ ಹಾಕುವುದಕ್ಕೆ ಸಿದ್ಧನಾದ! ಒಮ್ಮೆಲೇ—ಹಸಿದಿದ್ದ, ಪ್ರವಾಸದಿಂದ ಬಳಲಿದ್ದ—ಆತನಿಗೆ ಇದ್ದ ಎರಡು ರೂಪಾಯಿಗಳೂ ಹೋದರೆ ಏನು ಮಾಡುವುದು? ಎಂಬ ವಿಚಾರ ಮುಂದೆಬಂದಿತು. ಆರತಿಯಲ್ಲಿ ಹಾಕುವುದಕ್ಕೆಂದು ಆ ಎರಡೇ ರೂಪಾಯಿಗಳನ್ನು ಯಾವುದಕ್ಕೂ ವೆಚ್ಚ ಮಾಡದೆ ತಂದಿದ್ದ ಆತನಿಗೆ ಆರತಿಯ ವೇಳೆಗೇ ಈ ವಿಚಾರ ಬಂದು ಏನು ಮಾಡುವುದಕ್ಕೂ ತೋಚಲಿಲ್ಲ! ತಾನೋ ಸಂಕಟದಿಂದ ಬಳಲುತ್ತಿದ್ದಾನೆ; ಪ್ರವಾಸದಿಂದ ದಣಿದಿದ್ದಾನೆ; ಎರಡು ರೂಪಾಯಿಗಾಗಿ ಕೊನೆಯ ಕ್ಷಣದಲ್ಲಿ ಕೊರಗುತ್ತಿದ್ದಾನೆ—ಈ ವಿಚಾರ ಗೊಂದಲದಲ್ಲಿ ಆ ಎರಡು ರೂಪಾಯಿಗಳು ಆರತಿ ತಟ್ಟೆಯಲ್ಲಿ ಅವನಿಗೇ ಅರಿವಾಗದೆ ಬಿದ್ದುವು! ಬಿದ್ದುದೊಂದೇ ತಡ, ಆತನಿಗೆ ಕೆಟ್ಟ ಸಂಕಟವಾಯಿತು! ಲಕ್ಷ್ಮೀ ಆರತಿ ಬೆಳಗಿ ವಾಪಸೆಯೊಳ್ಳೆ ತೆಗೆದುಕೊಂಡು ಬಂದಳು! ತನ್ನ ತಂದೆಯ ತಲೆಗೆ ಹಚ್ಚಿ, ಪತಿದೇವರ ತಲೆಗೆ ಹಚ್ಚುವಾಗ ಆತ ಏನೇನೋ ಮಾಡುತ್ತಿರುವುದು ಕಂಡು ಗಾಬರಿಯಾಗಿ ಕೂಗಿದಳು. ಅವಳ ತಂದೆ—ತಾಯಿಗಳೂ ಬಂದರು. ಮೋಹನ ಬಡಬಡಿಸುತ್ತಿದ್ದ—'ಎರಡು ರೂಪಾಯಿ....ಎರಡು ರೂಪಾಯಿ....ನೌಕರಿ....ನೌಕರಿ.... ಹುಬ್ಬಳ್ಳಿ... ಸರಕಾ....ಸರಕಾರ ಲಕ್ಷ್ಮೀ..." ಈ ಬಡಬಡಿಕೆಯ ವಿಚಾರವೇ ಯಾರೊಬ್ಬರಿಗೂ ತಿಳಿಯಲಿಲ್ಲ! ಗಾಬರಿಯಾಗಿ ಡಾಕ್ಟರರನ್ನು ಕರೆಸಿದರು. ಡಾಕ್ಟರು ಬಂದು ಮೋಹನನ ಉಳಿಯುವುದು ಅಸಾಧ್ಯವೆಂದು ತಿಳಿಸಿ "ಹಾರ್ಟ್‌ಫೇಲ್" ಎಂದು ಹೇಳಿದರು!

"ಮೋಹನ್' ಎಂದು ಕೂಗಿ ಲಕ್ಷ್ಮೀ ಮೂರ್ಛೆ ಹೋದಳು!

ದೀಪಾವಳಿಯ ದೀಪ ಮೋಹನನನ್ನೂ ಹೊತ್ತಿಸಿ ನಲಿಯತೊಡಗಿತು!! ಜಗತ್ತಿಗೇ ಆರತಿ ಮಾಡುವೆನೆಂದು ಜಂಭ ಕೊಚ್ಚಿಕೊಳ್ಳುತ್ತಿತ್ತು!!!

—ಮೋಹನ ಮುತಾಲಿಕ, ಬಿ ಎ.,
ಬೆಳಗಾವಿ.

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ; ನೋಡಿರಿ!

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.
ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.
ಹೊಸ ಮುದ್ರಣ—ಸಾದಾ ಪ್ರತಿ 1:50. ಉತ್ತಮ ಪ್ರತಿ 2:0.
ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.
ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತವೆ.

ವಿಚಾರ ಮಂಥನ

(೧ನೇ ಪುಟದಿಂದ)

ಹೆಚ್ಚಿ, ಆ ಮೇಲೆ ಕೇರಳದ ಸ್ಥಿತಿಗತಿಗಳ ಮೇಲೆ ತೆಗೆದುಕೊಳ್ಳಬೇಕಾದ ಕಾರ್ಯಕ್ರಮ ನಿರ್ಧಾರವಾಗುವ ನಿರೀಕ್ಷೆಯಿದೆ. ಈ ನಡುವೆ ಕಾಂಗ್ರೆಸ್ಸಿನ ವರಿಷ್ಠರು, ರಾಷ್ಟ್ರಾಧ್ಯಕ್ಷರು ಹಸ್ತಕ್ಷೇಪವನ್ನು ನಡೆಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿರುವರಾದರೂ, ಕೇಂದ್ರ ಸರಕಾರದ ಮೇಲವರು ಪ್ರಭಾವ ಬೀರುವುದಿಲ್ಲವೆಂದೂ ಹೇಳಲಾಗಿದೆ. ಆದರೆ, "ಭಾರತದಿಂದ ತೊಲಗಿರಿ" ಚಳವಳಿಯ ಪ್ರಾರಂಭ ದಿನ ಆಗೋಸ್ತು ೯ರಂದು ತಿರುವನಂತಪುರದಲ್ಲಿ ಕಮ್ಯೂನಿಸ್ಟ್ ಸರಕಾರವು ಕೊನೆಗೊಳ್ಳುವ ಬಗ್ಗೆ ಚಳುವಳಿಯನ್ನು ವಿರೋಧಿಗಳು ಬಿಗಿಗೊಳಿಸುವರೆಂದೂ ತಿಳಿದು ಬಂದಿದೆ. ಇವೆಲ್ಲವುಗಳ ಪರಿಣಾಮವನ್ನು ಭಾರತ ಮಾತ್ರವಲ್ಲ ಲೋಕವೇ ಕಣ್ಣು ತೆರೆದು ನೋಡುತ್ತಿಲ್ಲವೆ?

೦ ೦

ನಿತ್ಯೋಪಯೋಗಿ ಪದಾರ್ಥಗಳೆಲ್ಲವುಗಳ ಬೆಲೆಯೂ ದಿನೇದಿನೇ ಏರುತ್ತ ಹೋಗುತ್ತಿರುವುದು ಯಾರೊಬ್ಬರ ಕಣ್ಣಿಗೂ ಗೋಚರಿಸದಿರಲಾರದು. ಅವರಲ್ಲೂ ಅಕ್ಕಿಯ ಧಾರಣೆಯು ಇದೀಗ "ಕಾಳಸಂತೆ"ಯ ಬರವನ್ನೇ ಮುಟ್ಟುತ್ತಿರುವಂತೆ ತೋರುತ್ತದೆ. ರಾಜ್ಯಸರಕಾರವು ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆದು ಅವುಗಳ ಮೂಲಕ ಜಿಲ್ಲೆಯ ಕೆಲವೇ ಸ್ಥಳಗಳಲ್ಲಿಯಾದರೂ ಕಡಿಮೆ ಬೆಲೆಯಲ್ಲಿ ಅಕ್ಕಿಯನ್ನು ಕೊಡಲು ಪ್ರಾರಂಭಿಸಿದ ಮೇಲೆಯಾದರೂ ಅದು ಮಾರುಕಟ್ಟೆಯಲ್ಲಿ ಒಂದು ಮಿತಿಯಲ್ಲುಳಿಯಬೇಕಿತ್ತು. ಆದರೆ ಈಗ ನ್ಯಾಯಬೆಲೆಯ ಅಂಗಡಿಯಲ್ಲಿ ರೂ. ೧೯.೩೭ರಂತೆ ಮಾರುತ್ತಿದ್ದರೆ, ಮಾರುಕಟ್ಟೆಯ ಬೆಲೆ ಇದರ ಒಂದೂವರೆ ಪಾಲಷ್ಟಿದೆ!

ಈ ರೀತಿಯಲ್ಲಿ ಧಾರಣೆಯೇರಲು ಸರಕಾರವು ತಾನು ಧಾನ್ಯವಶಪಡಿಸಲು ಇಟ್ಟುಕೊಂಡ ಮತ್ತು ಅದನ್ನು ಹಂಚಲು ಮಾಡಿದ ನೀತಿಯೇ ಕಾರಣವಲ್ಲದೆ ಮತ್ತೇನೂ ಇಲ್ಲ. ಸರಕಾರವು ಇದೇ ನೀತಿಯನ್ನು ಅನುಸರಿಸುತ್ತ ಮುಂದುವರಿದರೆ, ಇನ್ನೂ ಒಂದು ತಿಂಗಳಲ್ಲಿ ಮತ್ತೂ ಒಂದೆರಡು ರೂಪಾಯಿಗಳಷ್ಟು ಬೆಲೆ ಏರುವುದೆಂಬುದನ್ನು ಅಲಕ್ಷಿಸುವಂತಿಲ್ಲ. ಒಂದು ಫರ್ಲಾಂಗುದ್ದದ ಕ್ಯೂವಿನಲ್ಲಿ ಒಂದು ತಾಸು ನಿಂತು ಒಂದು ಸೇರು ಅಕ್ಕಿ ಪಡೆಯುವುದೂ ಕೆಲವೆಡೆ ದುರ್ಲಭವಾಗಿದೆ ಎಂಬ ಮಾತು ಸತ್ಯವೆಂದಾದರೆ, ಆಹಾರ ಧಾನ್ಯಗಳ ವಿತರಣೆಯಲ್ಲಿ ಸರಕಾರದ ಅಸಾಮರ್ಥ್ಯವು ಪ್ರಕಟವಾದಂತೆಯೇ ಆಯಿತು. ಏರಿದ ಬೆಲೆಯನ್ನು ಇನ್ನಾದರೂ ಒಂದು ಮಿತಿಯಲ್ಲಿ ಸಾಮಾನ್ಯ ಎಲ್ಲರಿಗೂ ಹಗುರವೆನಿಸುವ ದರದಲ್ಲಿ ಇರಿಸುವುದು ಸರಕಾರದ ಆದ್ಯ ಕರ್ತವ್ಯ. ಅನ್ನದ ಪ್ರಶ್ನೆಯನ್ನು ಉತ್ತರಿಸಿದ ನಂತರವೇ ಉಳಿದ ಪ್ರಶ್ನೆಗಳ ಬಗ್ಗೆ ಯೋಚನೆಯಲ್ಲವೆ?

—ರಾಶಿ

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಜೀವನ ಚಿತ್ರ

ನಮ್ಮೂರಿನವರಿಗೆ ಪ್ರಿಯರಾದ ಪಟೇಲರು

ಮುಂಜಾನೆಯಿಂದ ಮಧ್ಯಾಹ್ನದ ವರೆಗಿನ ಅವರ ಭಾರಿ ಭಾರಿ ಕಾರ್ಯಕ್ರಮಗಳು

ಊರ ಪಟೇಲರೆಂದರೆ ಎಲ್ಲರಿಗೂ ಶ್ರದ್ಧೆ. ಊರಲ್ಲಿಯ ಸಣ್ಣಪುಟ್ಟ ಕಳವು—ವ್ಯಾಜ್ಯಗಳನ್ನು ಕಂಡು ಶಿಕ್ಷಿಸುವ ನ್ಯಾಯಮೂರ್ತಿಗಳವರು! ತೀರ್ವೆ, ಸರಕಾರದ ತೆರಿಗೆಯನ್ನು ಕಲೆ ಹಾಕುವ—ಮುಂದೊಡುವ—ಮುನಾಫೆ ಮಾಡಿಸುವ—ಹುದ್ದೆ ಅವರದು. ಬೆಳೆ ಸಹಾಯ, ಕಲೆ ಸಹಾಯ, ತಗಾದೆಯಿಂದ ಹಿಡಿದು ಯೋಗ್ಯ ವಧುವರರ ಸಮ್ಮಿಲನ ಕಾರ್ಯವೂ ಅವರಿಂದ ನಡೆಯುತ್ತಲಿದೆ. ಇನ್ನೊಂದು ವಿಷಯವೆಂದರೆ ವಯಸ್ಸಾದ ಅವರು ಇಂದಿನ ಯುವಕರಿಗಿಂತ ಹಿರಿಯರೂ ಅನುಭವಿಕರೂ ಎನ್ನುವ ಅಭಿಮಾನ! ಊರಿನ ಮಕ್ಕಳಿಗೆ ಶಾಲೆಯಲ್ಲಿ ಫೀಸು ಸವಲತ್ತಿನಲ್ಲಿ ಊರ ಪಾಟೇಲರ ಶಿಫಾರಸ್ ಅಲ್ಲದೆ ಆಗುತ್ತಿದ್ದಿಲ್ಲ! ಹೀಗಾಗಿ ಊರವರಿಗೆ ಪಾಟೇಲರ ಹಂಗಿನಲ್ಲಿರದೆ ಆಗುತ್ತಿದ್ದಿಲ್ಲ!

ನಮ್ಮ ಪಾಟೇಲರೊ—ಬೆಳಿಗ್ಗೆ ಎದ್ದು ಮೋರೆ ತೊಳೆದು ಹೊರಟರೆ, (ಮನೆಯಲ್ಲಿ ಕಾಫಿ ಕುಡಿಯುವ ಪರಿಪಾಠವೇ ಇದ್ದಿಲ್ಲ) ಮಧ್ಯಾಹ್ನದ ಊಟಕ್ಕೆ ತಿರುಗಿ ಬರುವನು. ಅಲ್ಲಿಯತನಕ—ಅವರ ಕಾರ್ಯಕ್ರಮವೊಂದು ಕಥೆಯಂತಲೇ ಹೇಳಬೇಕು.

ಪಟೇಲರು ಹೆಸರಿಗೆ ಬ್ರಾಹ್ಮಣರಾಗಿದ್ದು ಶೆಟ್ಟರ ಅಂಗಡಿಯ ಕಾಫಿ ಕುಡಿಕುಡಿಯುವುದೇ! ಅವರಾಗಿ ಕರೆಯದೇ ದಿನಾ ಅವರ ಅಂಗಡಿಗೆ ಬೆಳಿಗ್ಗೆ ಹೋಗಿ ಕುಳಿತರೆ—ಸಾಕು. ಪರಿಪಾಠಗೊಂಡ ಅವರ ಕೈಮುಷ್ಟಿಗೊಂಡು ಬಾಯಿ ತನಕ ಹೋಗುವದು. ಅದನ್ನರಿತ ಅಲ್ಲಿಯೇ ಚಹಾ ಕುಡಿಯಲು ಬಂದ ನಮ್ಮ ವೆಂಕಯ್ಯವರು—ಊರ ಪಟೇಲರೆಂಬ ಅಭಿಮಾನದಿಂದ "ಬೀಡಿ"ಯೊಂದನ್ನು ಕೊಡುವರು. ಬೀಡಿ ಸೇದಿಯಾದೊಡನೇ—ಮಾಮೂಲಿನಂತೆ ಶೆಟ್ಟರು ಮುಫತ್ ಕಾಫಿ ತಂದಿಡುವರು. ಊರ ಪಟೇಲರು ತಮ್ಮಲ್ಲಿ ಕಾಫಿ ಕುಡಿಯುವರೆಂಬ ಅಭಿಮಾನವೇ ಅವರಿಗೆ ಸಾಕಾಗಿತ್ತು—ಊರ ಹಳಬ "ತಳವಾರ" ತನ್ನ ಸಂಚಿಯನ್ನು ತಾಂಬೂಲ—ಸೇವನೆಗೆಂದು ಪಟೇಲರ ಮುಂದೊಡ್ಡುವ. ಶೆಟ್ಟರು ಕಾಫಿಯ ಜೊತೆಗೆ ತಿಂಡಿಯನ್ನು ಕೊಡುವ ವಾಡಿಕೆಯಿಲ್ಲವೆಂದು ಅರಿತ ಪಟೇಲರು ಕಾಫಿ ಬಂದೊಡನೆಯೇ ಶೆಟ್ಟರು ಕಾಣಿಸಿದ ಅವಲಕ್ಕಿಯ ತಾಟಿನತ್ತ ಹೋಗಿ ತಮ್ಮ ಬೆರಳು ಜೋಡಿಸಿದ ಕೈಯನ್ನು ತಾಟಿನೊಳಗೆ ಸೇರಿಸುವರು. ನೇರಾಗಿ ಹೊರಟ ಕೈ ತಾಟಿನೊಳಗೆ ಹೋದೊಡನೆ—ಬೊಗಸೆ ತುಂಬ ಅವಲಕ್ಕಿಯನ್ನು ತರುತ್ತಿರುವದು ಸೆಟ್ಟರ ಮಡ್ಡು ತಲೆಗೂ ಹೊಳೆಯದೆ ಇರುತ್ತಿರಲಿಲ್ಲ. ಅವರಿಗೆ ಪಟೇಲರ ಆಗಮನದಿಂದ ನಾಲ್ಕು ಗಿರಾಕಿ ಜಾಸ್ತಿ ಬರುತ್ತಿದ್ದದ್ದರಿಂದ ಅವರು ಮೌನ ಧಾರಣೆ ಮಾಡಲೇಬೇಕಾಗಿತ್ತು!! ಅಂತೂ ಸೆಟ್ಟರ ಕಾಫಿ ಅವಲಕ್ಕಿ ಮುಗಿದು—ಹಳಬರಿಂದ ದೊರೆತ ತಾಂಬೂಲ ಸೇವಿಸಿಯಾದನಂತರ ಚಹದಂಗಡಿಯ ಹೊರ ಛಾವಡಿಯಲ್ಲಿ ಒರಗುಮಣೆಯ ಮೇಲೆ ಪಟೇಲರು ಮಂಡಿಸುವದೇ ತಡ ನಶ್ಯದ ಗೋಪಾಲಯ್ಯನವರ ನೆನಪು ಅವರಿಗೆ ಬರುವದು ಸ್ವಾಭಾವಿಕ. ಗೋಪಾಲಯ್ಯನವರಿಗೆ ಹಂಟೆಯ ಹುಚ್ಚು!! ಅಂತೆಯೇ ಅವರು ಪಟೇಲರ ಒಂದೇ ಕರೆಗೇ ಓಗೊಟ್ಟು, ಒತ್ತಿಗಿನ ಅಂಗಡಿಯಿಂದ ಓಡಿಬಂದುಬಿಡುತ್ತಿದ್ದರು. ಅವರ ನಶ್ಯದ ಡಬ್ಬಿ ದೊರೆತೊಡನೆ, ಶುರುವಾದ ಆ ಈ ಮಾತುಕತೆ ಇನ್ನೊಬ್ಬ ಬಿಟ್ಟಿ ಕಾಫಿ ಕುಡಿಸುವ ಜನಬರುವವರೆಗೆ ಅಥವಾ ಶೀನಣ್ಣನವರು ತರಿಸುವ ವರ್ತಮಾನ ಪತ್ರ ಬರುವವರೆಗೆ ನಡೆಯುತ್ತಿದೆ.

ಅಲ್ಲ ಸ್ವಾಮಿ ಇನ್ನೊಂದು ತಮಾಷೆ ನೋಡಿ!! ಅದೇನೆಂದ್ರೆ ನಮ್ಮ ಪಟೇಲರ ಕೈಯಲ್ಲಿ ಯಾರೋ ಬೀಡಿ ಸೇದಲು ಕೊಟ್ಟು ಅರ್ಧ ಸೇದುತ್ತಿದ್ದಾಗ ಇನ್ನೊಬ್ಬ ಬಿಟ್ಟಿ ಬೀಡಿ ಕೊಡುವ ಗಿರಾಕಿ ಬಂದಲ್ಲಿ ಈ ಅರ್ಧ ಸೇದಿದ ಬೀಡಿಯನ್ನು ಅಲ್ಲಿಯೇ ನೊಂದಿಸಿ—ಹೊಸ ಬೀಡಿಗಾಗಿ ಮಾಮೂಲಿನಂತೆ ಕೈಚಾಚುವ ಅಭ್ಯಾಸ ಅವರದು.

THE CANARA INDUSTRIAL & BANKING SYNDICATE LIMITED

Head Office: **Mukund Nivas, UDIPI**, Mysore State.
Established: 1925

We have pleasure to announce the introduction of three new types of Personal Loans for financing:

1. STUDIES ABROAD
2. MEDICAL PRACTICE
3. SMALL BUSINESS

Easy terms of repayment.
Reasonable rates of interest.

For full particulars, contact any one of our 121 Branches in the States of Andhra, Kerala, Madras and Mysore.

Dr. T. M. A. Pai, M.B.B.S., Managing Director. Sri T. A. Pai, B.Com., A.I.I.B., General Manager.

ಅಂತೆಯೇ ನಶ್ಯದ ಡಬ್ಬಿ ವೆಂಕಯ್ಯನವರಿಂದ ದೊರೆಯುತ್ತಿದ್ದರೂ ಇನ್ನಾರಾದರೂ ನಶ್ಯದವರು ಬಂದರೆ ಅವರ ನಶ್ಯದ ಡಬ್ಬಿಯನ್ನು ಪಡೆದು ಅರ್ಧ ಡಬ್ಬಿ ನಶ್ಯವನ್ನು ಬರಿದುಮಾಡಿ—ಅವಲಕ್ಕಿಯನ್ನು ಬಾಯಲ್ಲಿ ಸೇರಿಸುವಂತೆ ನಶ್ಯ ಮೂಗಿನಲ್ಲಿ ತುಂಬಿಕೊಂಡು ಆ ವ್ಯಕ್ತಿ ಆಚೆ ಸರಿದು ಕಣ್ಮರೆಯಾಗುತ್ತಲೂ, ನಶ್ಯವನ್ನೆಲ್ಲ ಮೂಗಿನಿಂದ ಕಡ್ಡಿಯೊಂದರ ಸಹಾಯದಿಂದ ಕೆರಸಿ ತೆಗೆದು........ಅದನ್ನು ಸಾಯಂಕಾಲದ ಉಪಯೋಗಕ್ಕೆಂದು ಚಿಕ್ಕ ಕಾಗದವೊಂದರಲ್ಲಿ ಮಡಚಿ ಕಿಸೆಗೆ ಸೇರಿಸುವರು! ಅಬ್ಬಾ ಎಂತಹ ಚಾಣಾಕ್ಷರು ನೋಡಿ! ತಾಂಬೂಲ ಸೇವನೆಯಲ್ಲಿಯೂ ಅದೇ ನಾಜೂಕು—ಬೆಳಗಿಂದ ಮಧ್ಯಾಹ್ನದೊಳಗೆ ಕನಿಷ್ಟ—೨೫ ತಾಂಬೂಲ ಅವರು ಸೇವಿಸುವದಲ್ಲದೆ—೧೨ ಘಂಟೆಗೆ ಮನೆಯತ್ತ ತೆರಳುವಾಗ ಅವರು, ಕಿಸೆಗೆ ಸೇರಿಸಿದ ತಾಂಬೂಲದ ಸಾಮಾನು ಎರಡು ದಿನದ ಸಂಗ್ರಹವೇ ಆಗುತ್ತಿತ್ತು! ವ್ಯತ್ಯಾಸ ಇಷ್ಟೆ........ತುಂಡು ಮಾಡಿದ ಹೊಗೆಸೊಪ್ಪು ಅಡಿಕೆ ಹೋಳುಗಳು, ಎಲೆಯ ತುಂಡುಗಳು—ಅಲ್ಲದೆ—೧೦-೧೫ ಅರ್ಧ ಸೇದಿದ ಬೀಡಿಯ ತುಂಡುಗಳು—ಒಂದು ತೊಲೆ ಯಾ ಹೆಚ್ಚು ನಾಸಿಪುಡಿ—ಅವಷ್ಟು ಅನಾಯಾಸ ಗಳಿಕೆ—! ಇದಲ್ಲದೆ—ಹಳ್ಳಿಯ ಹುಂಬ ಒಕ್ಕಲಿಗರನ್ನು ಹೆದರಿಸಿ—ಕಾಯ್ದೆಯ ತತ್ವ ಹೇಳಿ ಮಾಮೂಲಾಗಿ ದೊರೆಯುವ ತೆಂಗಿನ ಕಾಯಿ, ಗುಂಬಳ ಕಾಯಿ, ಪಲ್ಲೆ ಕಾಯಿ— ಅಲ್ಲದೆ ಇನ್ನೂ ಹಲವಾರು ಮಾಮೂಲಾಗಿ ಪಟೇಲರ ಮನೆ ಸೇರುವವು!

ಯಾರಾದರೂ ಮೇಲಧಿಕಾರಿಗಳು ತಹಸೀಲ್ದಾರ ರೆವಿನ್ಯೂ ಇನ್ಸ್‌ಪೆಕ್ಟರ್ ಬಂದಾಗ ಮಾತ್ರ ಪಟೇಲರು ಅವರ ಬಾಲ ಬಡಿಯಲು ತೆರಳಿ— ಇತ್ತ ಮಾಮೂಲ ರದ್ದಾಗುತ್ತಿತ್ತು! ಆದರೆ ಆ ದಿನ ಪಟೇಲರಿಗೆ ದೊರೆಯುವ ನಾಲ್ಕು ಪಟ್ಟು ಮೇಲಧಿಕಾರಿಗಳಿಗೆ ಪಟೇಲರ ಸಲಹೆಯಂತೆ ದೊರೆಯಬೇಕಾಗಿತ್ತು! ಅಂತೂ ನಮ್ಮ ಪಟೇಲರು ನಮಗೆಲ್ಲಾ ವಿಶೇಷವಾಗಿದ್ದಾರೆಯೆಂದು ತಿಳಿಸಲು ಸಂತೋಷವಾಗುತ್ತಿದೆ.

— ಸಿರಿಪತಿ

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ.

ವರುಷ ೩೮. ವಾರ ೪೭. 6-8-1959 Vol. 38. No. 47.

ವಿಚಾರ ಮಥನ

ಕೇರಳೀಯರ ಕಷ್ಟ ದೂರವಾಯಿತು

ಆದರೆ, ಅವರ ಹೊಣೆಗಾರಿಕೆ ಮಾತ್ರ ಇನ್ನೂ ಹೆಚ್ಚಿತಲ್ಲವೆ?

ಕಳೆದ ೨೮ ತಿಂಗಳುಗಳಿಂದ ಕೇರಳದಲ್ಲಿ ಅಧಿಕಾರ ಚಲಾಯಿಸಿದ ಕಮ್ಯುನಿಸ್ಟ ಸರಕಾರವನ್ನು ವಿರೋಧಿಸಿ ಒಂದೂವರೆ ತಿಂಗಳುಗಳಿಂದ ನಡೆದುಬಂದ ಆಂದೋಲನವು, ಅದು ಯಶಸ್ವಿಯಾದುದರಿಂದ ಹಿಂತೆಗೆಯಲ್ಪಟ್ಟು, ಕೇರಳದಲ್ಲಿ ಶಾಂತಿ ನೆಲಸುವಂತಾಗಿದೆ. ರಾಷ್ಟ್ರಾಧ್ಯಕ್ಷರು ಕೇಂದ್ರ ಸರಕಾರದ ಸಲಹೆಯ ಮೇರೆಗೆ ಸಂವಿಧಾನದ ೩೫೬ನೆಯ ಅನುಚ್ಛೇದದನ್ವಯ ತನಗಿರುವ ಅಧಿಕಾರದಿಂದ, ಅಲ್ಲಿನ ಕಮ್ಯುನಿಸ್ಟ ಮಂತ್ರಿಮಂಡಲಿಯನ್ನು ಉಚ್ಚಾಟನೆ ಮಾಡಿ, ಕಳೆದ ಹಲವು ದಿವಸಗಳಿಂದ ಕುತೂಹಲದಿಂದ ನಿರೀಕ್ಷಿಸುತಿದ್ದ ವಿಶ್ವದ ಪ್ರಜಾಪ್ರಭುತ್ವವಾದಿ ಜನತೆಯ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ಕಮ್ಯುನಿಸ್ಟ ಪಕ್ಷದ ಮಂತ್ರಿ ಮಂಡಳಿಯು ಕೇರಳದಲ್ಲಿ ಸಂವಿಧಾನಕ್ಕೆ ಸರಿಯಾಗಿ ಕಾರ್ಯನಡೆಸಗುವೆವೆಂದು ಪ್ರತಿಜ್ಞೆ ಸ್ವೀಕರಿಸಿದ್ದರೂ ಅದು ಪ್ರಜಾಪ್ರಭುತ್ವವನ್ನು ಮಟ್ಟ ಮಲಗಿಸುವುದರಲ್ಲಿಯೇ ಕಾರ್ಯತತ್ಪರವಾಗಿದೆ ಎಂಬುದು ಈಗ ಜಗಜ್ಜನಿತ ವಿಚಾರವಾಗಿದೆ. ಅಲ್ಲಿ ಸರಕಾರಕ್ಕೆ ವಿರುದ್ಧವಾಗಿ ಎದ್ದ ಆಂದೋಲನವು ಅಧ್ಯಕ್ಷರ ಆಳಿಕೆಯ ಘೋಷಣೆಯೊಂದಿಗೇನೇ ಕೊನೆಗೊಳ್ಳುವುದೆಂದು ಎಲ್ಲರೂ ತಿಳಿದಿದ್ದರು. ಆದರದು ಈಡೇರಲು ಬಹುಕಾಲ ಬೇಕಾಯಿತು.

ಕೇಂದ್ರ ಸರಕಾರವಾದರೂ ಈ ಸಂದರ್ಭದಲ್ಲಿ ಸಾಕಷ್ಟು ಸಹನೆಯನ್ನೇ ಪ್ರದರ್ಶಿಸಿದೆ ಎನ್ನಬೇಕು ಕೇರಳದಲ್ಲಿ ಸಂವಿಧಾನಕ್ಕೆ ಸರಿಯಾದ ಆಡಳಿತೆಯು ನಡೆಯುವುದಿಲ್ಲ; ಆದರೆ, ಅಲ್ಲಿನ ಆಡಳಿತಪಕ್ಷಕ್ಕೆ ವಿಧಾನಸಭೆಯಲ್ಲಿ ಬಹುಮತವಿರುವಾಗ, ಕೇಂದ್ರವು ಹಸ್ತಕ್ಷೇಪ ನಡೆಸಲು ಹಿಂದೆ ಮುಂದೆ ನೋಡಿತು. ಪ್ರಧಾನಿ ನಮವರೂ ಕೇರಳವನ್ನು ಸಂದರ್ಶಿಸಿ, ನಂಬೂದರಿ ಪಾದರಿಗೆ ಮರುಚುನಾವಣೆಯ ಸಲಹೆಯನ್ನೂ ಇತ್ತರು. ಪಾಪ, ನಂಬೂದರಿಯವರಿದಕ್ಕೆ ಸಿದ್ಧರಿದ್ದಿರಬಹುದಾದರೂ ಅವರನ್ನು ಕಟ್ಟಿಹಾಕಿದ ಪಕ್ಷ ಬಿಡಬೇಕಲ್ಲ? ತಮಗೆ ಮರುಚುನಾವಣೆ ನಡೆದಲ್ಲಿ ಬಹುಮತ ಸಿಕ್ಕೇ ಸಿಗುವುದಾದರೂ, ವಿಧಾನಸಭೆಯಲ್ಲಿ ಬಹುಮತವಿರುವಾಗ ರಾಜಿ ಕೊಡಬಾರದು ಎಂದದು ವಿಶ್ವಾಸ ಪ್ರದರ್ಶಿಸಿ, ಬಹುಮತವಿರುವ ಪಕ್ಷವನ್ನು ಕಿತ್ತೊಗೆಯುವುದು ಸಂವಿಧಾನಕ್ಕೇನೇ ವಿರೋಧ ಎಂದು ಸಾರಿತು. ಪ್ರಧಾನಿಯವರ ಸಲಹೆಯನ್ನು ಕೇಳುತಿದ್ದರೆ, ಕಮ್ಯುನಿಸ್ಟರಿಗೆ ಒಂದು ಗೌರವವೂ ಮರ್ಯಾದೆಯೂ ಇರುತಿತ್ತು; ಮರುಚುನಾವಣೆಯಲ್ಲಿ ಅವರೇ ಪುನಃ ಬಹುಮತ ಪಡೆಯುತ್ತಾರೆಯೇ ಇಲ್ಲವೇ ಎಂಬುದು ಈಗ ಹೇಳುವುದು ಕಷ್ಟವಾದರೂ, "ಮನೆ ಬಿಟ್ಟು ಹೋಗುವುದು ಒಳ್ಳೆಯದು" ಎಂದೊಡನೆಯೇ ಮುಂದಿನ ಆಗುಹೋಗು, ಗೌರವಾದರಗಳನ್ನು ಅನುಲಕ್ಷಿಸಿ ಮನೆಬಿಟ್ಟು ಹೋಗುವುದು ಸಂಭಾವಿತರ ಲಕ್ಷಣ. ಆದರೆ, ಸಿಕ್ಕಿದ ಅಧಿಕಾರವನ್ನು ಸಂಪೂರ್ಣ ಚಲಾಯಿಸಿಯೇ ಬಿಡಬೇಕೆಂಬ ಹಠದಿಂದ ಅವರು ಹಾಗೆ ಮಾಡಲಿಲ್ಲ. ಹಾಗಾಗಿ, ಕುತ್ತಿಗೆಗೆ ಕೈ ಹಾಕಿಯೇ ಹೊರದಬ್ಬ ಬೇಕಾಗಿ ಬಂತು; ಅನ್ಯತ್ರಗತಿಯಿಲ್ಲವಾದುದರಿಂದ. ಇಂತಹ ನೂರಾರು ಸೋಲುಂಡ ಕಮ್ಯುನಿಸ್ಟರಿಗೆ ಈ ಒಂದೂ ಹೆಚ್ಚೆನಿಸದು. ಆದರೂ ಇದು ಅತಿ ದೊಡ್ಡ ಸೋಲು ಎಂಬುದನ್ನು ಅಲ್ಲಗಳೆಯುವಂತಿಲ್ಲ.

ತಮ್ಮ ಅಧಿಕಾರವನ್ನು ಕಿತ್ತೊಗೆಯುವ ಹವಣಿಕೆಯನ್ನು ಮಾಡುತ್ತಿರುವರೆಂದವರಿಗೆ ತಿಳಿಯ ತೊಡಗಿದಾಗ, ಅವರು

ಬುಡಕಟ್ಟಿನ ಗದಬ ಜನಾಂಗದ ಒಬ್ಬ ಹುಡುಗಿ ಅಕ್ಷರಾಭ್ಯಾಸ ಮಾಡುತಿದ್ದಾಳೆ

ಕೇಂದ್ರ ಸರಕಾರವನ್ನೂ ಹೆದರಿಸ ತೊಡಗಿದರು. ಉಳಿದ ರಾಜ್ಯಗಳಲ್ಲಿಯೂ ಅಂತಹ ಸರಕಾರೀ ವಿರೋಧಿ ಆಂದೋಲನ ಸಂಘಟಿಸುವ ಬೆದರಿಕೆ ಹಾಕಿದರು. ಪಶ್ಚಿಮ ಬಂಗಾಲ ಸರಕಾರ ವಿರುದ್ಧ ಆರೋಪ ಪತ್ರವನ್ನು ಸಿದ್ಧಪಡಿಸಿಯೂ ಆಯಿತು. ದರು. ಆದರೆ, ಒಂದು ಸತ್ಯ ಮಾತನ್ನು ನಾವು ಮರೆಯುವಂತಿಲ್ಲ. ಕಮ್ಯುನಿಸ್ಟರು ಸಂದರ್ಭ ಸಾಧಕರು; ಅವರು ಕಿಡಿಹಾರಿದುದರಲ್ಲಿಯೇ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುವಷ್ಟು ಬುದ್ಧಿವಂತರು; ಬಣ್ಣ ಬದಲಿಸುವ ಓತಿಗಳಂತೆ ಒಂದೊಂದೆಡೆಯಲ್ಲಿ ಒಂದೊಂದು ರೀತಿ ನಡೆಸುಕೊಳ್ಳತಕ್ಕವರು. ಕೇರಳದಲ್ಲಿಯಾದರೂ ಇವರ ಬಣ್ಣ ಅಧಿಕಾರ ಸ್ವೀಕರಿಸಿದ ಒಂದು ವರ್ಷದೊಳಗೆ ಬಯಲಾಗಿದೆ. ಆದರೆ, ಅವರ ಉಚ್ಚಾಟನೆಯಾಗಲು ಅವರ ಅನ್ಯಾಯದ ಕೊಡ ಮಾತ್ರ ತುಂಬಿರಲಿಲ್ಲ ಎನ್ನಬಹುದು.

ಈಗ, ಕೇರಳದ ಜನತೆಯಲ್ಲಿ ಅಧಿಕಾಂಶ ಜನತೆ ಕಮ್ಯುನಿಸ್ಟ ಆಡಳಿತೆ, ಸರ್ವಾಧಿಕಾರ ಮನೋವೃತ್ತಿ, ಹಾಗೂ ಶಾಂತಿ ಸುವ್ಯವಸ್ಥೆಗಳಲ್ಲಿ ಪಕ್ಷಪಾತ ಮೊದಲಾದ ವಾಮ ಮಾರ್ಗಗಳಿಂದ ಬಿಡುಗಡೆಹೊಂದಿದ್ದಾರೆ; ಸದ್ಯವೇ ಅಲ್ಲಿನ ಮತದಾರ ಯಾದಿಯು, ಅದರಲ್ಲಿ ವಂಚನೆ ನಡೆದಿದೆ ಎಂಬ ದೂರುಗಳಿರುವುದರಿಂದ, ಪುನರ್ಪರಿಶೀಲನೆಗೀಡಾಗುತ್ತದೆ. ಇದಾದ ಮೇಲೆ ಅಲ್ಲಿ ಮರುಚುನಾವಣೆ ನಡೆಯಲಿರುವುದರಿಂದ, ಕೇರಳೀಯರು ಎಂದಿಗಿಂತ ಹೆಚ್ಚಿನ ಜಾಣ್ಮೆಯಿಂದ ವರ್ತಿಸುವುದು ಅವಶ್ಯ

ಸ್ವಯಂ ಕಮ್ಯುನಿಸ್ಟರು ತಾವೇ ಮ

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3. ಸ್ಥಾಪನೆ:- 1931.

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ	5 ತಿಂಗಳ ವರೆಗೆ		4¼%
6 ,,	12	,,	4½%
13 ,,	24	,,	4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ ...

ಕಥಾ ವಿಹಾರ

ಸ್ತ್ರೀ ವಿವಾಹಿತಳೇ ಆಗಿರಬೇಕೆ? ಏಕೆ?

ಶಾರದೆಯು ಪತಿಗೃಹಕ್ಕೆ ತೆರಳಿದಳು; ಆದರೆ, ಅಲ್ಲಿ ಉಳಿಯದೆ ತವರಿಗೆ ಮರಳಿದಳು. ಮುಂದೆ........

ಅಂದು ಶುಕ್ರವಾರ. ನಮ್ಮೂರ ಶಾಲೆಯಲ್ಲಿ ಪ್ರತಿ ವಾರವೂ ನಡೆಯುತಿದ್ದ ಯಕ್ಷಗಾನವು ಆ ದಿನ ಕೊಂಚ ವಿಜೃಂಭಣೆಯಿಂದಲೇ ಜರಗಲಿತ್ತು. ಯಕ್ಷಗಾನದಲ್ಲಿ ಅಭಿರುಚಿಯಿಲ್ಲದಿದ್ದರೂ ಕಲಾಗಾರರಿಗೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ನಾನು ಅಂದು ಒಂಭತ್ತು ಗಂಟೆ ರಾತ್ರೆಗೇ ಶಾಲೆಗೆ ಹಾಜರಾದೆ. ಆಗ ಅಲ್ಲಿ ಇದ್ದವರೆಂದರೆ ಕೇವಲ ಎಂಟು ಮಂದಿ ಮಾತ್ರ. ಯಕ್ಷಗಾನ ಸಂಘದ ಕಾರ್ಯದರ್ಶಿಗಳು ಹಾಗೂ ಓರ್ವ ಅಧ್ಯಾಪಕರು ಚದುರಂಗದಾಟದಲ್ಲಿ ತನ್ಮಯರಾಗಿದ್ದರು. ಒಬ್ಬರು ಎರಡೂ ಕೈಗಳನ್ನು ತಲೆಯ ಮೇಲಿಟ್ಟು ಯೋಜನಾಮಗ್ನರಾಗಿದ್ದರೆ ಮತ್ತೊಬ್ಬರು ಬೀಡಿಯನ್ನು ತುಟಿಯಲ್ಲಿಟ್ಟು ಕುಣಿಸುತ್ತಾ ಚದುರಂಗದ ಬಲಾಬಲಗಳನ್ನು ಈಕ್ಷಿಸುತಿದ್ದರು. ದೂರದಲ್ಲಿ ಮೇಜೊಂದನ್ನಿಟ್ಟು ನಾಲ್ಕು ಮಂದಿ 'ಕೇರಂ' ಆಡುತಿದ್ದರು. ಈ ಮಹಾಶಯರು ಆಟದೊಂದಿಗೆ ಬಾಯಲ್ಲೂ ಏನೇನೋ ಹರಟೆ ಹೊಡೆಯುತಿದ್ದರು. ಓರ್ವ ಮಹಾಶಯರು ಪಕ್ಕದ ಬೆಂಚಿನಲ್ಲಿ ಒರಗಿದ್ದರು. ಬಾಳಿಹೋದ ಕಲಾವಿದರು. ಕಾದಂಬರಿಯೊಂದನ್ನು ಹಿಡಿದು ಹಾಳೆಗಳನ್ನು ಮಗುಚುತಿದ್ದರು. ಈ ಎಂಟನೇ ಮಹಾಶಯರು ನನ್ನ ಪ್ರೀತಿಯ ಗೆಳೆಯರಲ್ಲೊಬ್ಬರಾದುದರಿಂದ ನನ್ನನ್ನು ಕಂಡೊಡನೆಯೆ ಪುಸ್ತಕವನ್ನು ಮುಚ್ಚಿಟ್ಟು ನನ್ನ ಬಳಿ ಬಂದರು. ಯಕ್ಷಗಾನವು ಬೇಗನೆ ಪ್ರಾರಂಭವಾಗುವಂತಿಲ್ಲವೆಂದರಿತ ನಾವು ಶಾಲೆಯ ಮೂಲೆಯೊಂದರಲ್ಲಿ ಎರಡು ಬೆಂಚುಗಳನ್ನು ಜೋಡಿಸಿ ಒರಗಿಕೊಂಡೆವು. ಮಾತುಕತೆಗಳು ಸಾಗತೊಡಗಿದುವು.

ಶ್ರೀಯುತರ ಹೆಸರು ಗೋಪಾಲರಾವ್ ಯಕ್ಷಗಾನಕ್ಕೆಂದು ಆಮಂತ್ರಿಸಲ್ಪಟ್ಟದ್ದ ಇವರು ಎಂಟು ಮೈಲು ದೂರದ ಹಳ್ಳಿಯಿಂದ ನಡೆದುಕೊಂಡೇ ಬಂದಿದ್ದರು. ತುಂಬಾ ದಣಿದಿರಬಹುದೆಂದು ಊಹೆಗೊಂಡ ನಾನು ಮನೆಗೆ ಆಮಂತ್ರಿಸುತ್ತ ನುಡಿದೆ. "ನೀವಿಷ್ಟು ಬೇಗ ಊಟಮಾಡಿ ಬಂದಿರಲಾರಿರಿ. ಬೇಗನೆ ಮನೆಗೆ ಹೋಗಿ ಊಟ ತೀರಿಸಿಕೊಂಡು ಬರೋಣ" ತಕ್ಷಣ "ಬೇಡ ಬೇಡ, ನಾನು ಸಂಜೆ ಆರು ಗಂಟೆಗೇ ಊಟ ತೀರಿಸಿ, ಬಳಿಕ ನಮ್ಮ ಗೋವಿಂದ ಭಟ್ಟರ ಹೋಟೇಲಿನಲ್ಲಿ ಎರಡು ಗ್ಲಾಸು ಟೀ ಕುಡಿದು ಬಂದಿರುವೆನು. ಹಸಿವೆಯು ಕಣ್ಣುಸ್ಸಿಯೂ ಈ ಕಡೆ ಸುಳಿಯದು" ಸಿಡಾರದಿಂದ ಗೋಪಾಲರೆಂದರು.

'ಭಟ್ಟರ ಹೋಟೇಲು' ಎಂದೊಡನೆ ಆ ಮಂದಿರವು ಹೋಟೇಲೊಮ್ಮೆ ಕಣ್ಮುಂದೆ ಕಂಡಂತಾಯಿತು. ಕಾರಣ, ನಾನದನ್ನೊಮ್ಮೆ ಅನಿರೀಕ್ಷಿತವಾಗಿ ಸಂದರ್ಶಿಸಿದ್ದೆ. ಕುತೂಹಲ ಕೆರಳಿದ ನಾನು ವಿನೋದವಾಗಿ ಪ್ರಶ್ನಿಸಿದೆ "ಗೋಪಾಲರೇ, ನಿಮ್ಮ ಆ ಭಟ್ಟರ ಹೋಟೇಲಿನಲ್ಲಿ ಹೋಟೇಲು ಕೆಲಸಗಳಲ್ಲಿ ಭಟ್ಟರಿಗೆ ಸಹಕರಿಸುತ್ತಿರುವ ಆ ಹೆಂಗಸು—ಯಾರದು?"

"ಅವಳೇ? ಅವಳ ಕತೆ ಬಹಳ ಚಿಂತಾಜನಕವಾದುದು. ಆಕೆಯೋರ್ವ ನಿರ್ಭಾಗ್ಯ ಕುವರಿ, ಗೋವಿಂದ ಭಟ್ಟರ ಹಿರಿಯ ಮಗಳಾಕೆ."

"ಅವಳಿಗೆ........"

"ಅವಸರಿಸಬೇಡಿ. ಸವಿಸ್ತಾರವಾಗಿ ಹೇಳುತ್ತೇನೆ. ಸಮಯವೆಂತೂ ಇದೆತಾನೆ?" ಎನ್ನುತ್ತಾ ಗೋಪಾಲರು ಕತೆ ಪ್ರಾರಂಭಿಸಿದರು.

"ಆಕೆಯ ಹೆಸರು ಶಾರದೆ. ಆಕೆಯ ಬಳಿಕ ವಿಜಯ, ವಿಮಲರೆಂಬ ಎರಡು ಸೋದರಿಯರಿಗೆ ಒಮ್ಮೆಲೆ ಜನ್ಮವಿತ್ತ ಆಕೆಯ ತಾಯಿ ಬಾಲಲೀಲೆಗಳನ್ನು ಕಣ್ತುಂಬ ನೋಡಿ ಆನಂದಿಸುವ ಸಮಯ ಆದಾವುದೋ ಕಾಯಿಲೆಯಿಂದಾಗಿ ಕಣ್ಮುಚ್ಚಿಕೊಂಡರು. ಸತಿ ವಿಯೋಗದ ದುಃಖದೊಂದಿಗೆ ಮೂವರು ಕುವರಿಯರ ಲಾಲನೆಪಾಲನೆಯ ಭಾರ ಭಟ್ಟರ ಹೆಗಲಿಗೆ ಬಂತು ಮನೆ ಕೆಲಸದ ಚಿಂತೆ ಬೇರೊಂದೆಡೆಯಿಂದ ಕಾಡತೊಡಗಿತು. ಹೇಗೂ ಮಾಡಿ ಬಹಳ ಕಷ್ಟದಿಂದ ಜೀವನ ಸಾಗಿಸತೊಡಗಿದರು. ವಿದ್ಯೆಯನ್ನು ಪಡೆಯುವ ಭಾಗ್ಯದಿಂದ ವಂಚಿತರಾದ ಆ ಕುವರಿಯರು ಎಂಟೊಂಭತ್ತರ ಹರೆಯದಲ್ಲಿಯೇ ಮನೆ ಕೆಲಸಗಳಲ್ಲೆಲ್ಲಾ 'ಅನುಭವಿ' ಎನಿಸಿಕೊಂಡರು. ಆದರೆ ನೆರೆಹೊರೆಯ ಯಾರ ಒಡನಾಟದ ರುಚಿಯನ್ನೂ ಸವಿಯದ ಆ ಹುಡುಗಿಯರು 'ಶುಚಿ' ಎಂದರೇನೆಂದೇ ಅರಿಯರು. ನವೀನ ರೀತಿಯ ಉಡುಪುತೊಡುಪುಗಳ ಪರಿಚಯವೇ ಅವರಿಗಿಲ್ಲ. ಆದರೂ ಹುಡುಗಿಯರು 'ಸೌಂದರ್ಯದ ಮೂರ್ತಿಗಳು' ಎಂದು ಹೊಗಳಿಸಿಕೊಳ್ಳುವಂತಿರದಿದ್ದರೂ ಕುರೂಪಿಗಳಾಗಿರಲಿಲ್ಲ. ಲಕ್ಷಣೆಯರಾಗಿದ್ದರು.

ರಾತ್ರಿ-ಹಗಲುಗಳೆಂಬ ತನ್ನೆರಡು ಹೆಜ್ಜೆಗಳನ್ನಿಡುತ್ತಾ ಸಮಯವು ಓಡುತಿತ್ತು. ಪ್ರಾಯಪ್ರಬುದ್ಧತೆಯರಾಗಿದ್ದ ಹುಡುಗಿಯರನ್ನು ಕಂಡಾಗ ಭಟ್ಟರ ಎದೆ ನಡುಗುತಿತ್ತು. ಯೋಚನೆಯಿಂದ ತಲೆ ಸಿಡಿಯುತಿತ್ತು. ಈ ಮೂವರು ಕುವರಿಯರನ್ನು ಹೊರ ಹಾಕುವುದೆಂದರೆ ಅದೇನೂ ಸಾಮಾನ್ಯ ಕೆಲಸವಾಗಿರಲಿಲ್ಲ. ಮೂವರೂ ಒಂದೇ ರೀತಿ ಬೆಳೆದು ನಿಂತಿದ್ದರು. ಬಾಲ್ಯದಲ್ಲಿಯೇ ತಾಯಿಯ ಪ್ರೇಮದಿಂದ ವಂಚಿತರಾಗಿದ್ದ ಆ ಮಕ್ಕಳನ್ನು, ಅಕ್ಕರೆಯಿಂದ ಸಲಹಿದ ಭಟ್ಟರ ಮನೆಮಾರು, ನೆಲಕೊಲಗಳಿಲ್ಲದ 'ದರಿದ್ರ ವರ'ನ ಕೊರಳಿಗೆ ಕಟ್ಟಲು ಸಿದ್ಧರಿರಲಿಲ್ಲ. ಸಿರಿಯ ಒಡನಾಡಿಯಾದ ಅಳಿಯನನ್ನೇ ಅರಸುತಿದ್ದರು. ದಿನಗಳು ಉರುಳುತಿದ್ದುವು.

ಹಿರಿಯಾಕೆಯ ವಯಸ್ಸು ಇಪ್ಪತ್ತೆರಡು. ಉಳಿದೀರ್ವರದು ಇಪತ್ತೊಂದು. ಭಟ್ಟರ ಎದೆಯ ಬಡಿತ ಹೆಚ್ಚತೊಡಗಿತು. ಸಮೀಪದ ಸಂಬಂಧಿಕರಲ್ಲೆಲ್ಲಾ ಮಕ್ಕಳ ವಿವಾಹಕ್ಕಾಗಿ ಪ್ರಯತ್ನಿಸಬೇಕೆಂದು ವಿನಂತಿಸಿಕೊಂಡರು ತಾನೂ ದಿನರಾತ್ರಿ ಪ್ರಯತ್ನಿಸತೊಡಗಿದರು.

ಪ್ರಯತ್ನದ ಫಲವೋ, ದೇವರ ದಯೆಯೊ, ಅಲ್ಲ ಮಕ್ಕಳ ಪುಣ್ಯವೋ ತಿಳಿಯದು. ಈರ್ವರು ಶ್ರೀಮಂತ ಅವಳಿ ಜವಳಿ ಸಹೋದರರು, ಒಟ್ಟಿಗೆ ಹುಟ್ಟಿದ ಸಹೋದರಿಯರೀರ್ವರನ್ನು ಮದುವೆಯಾಗಲು ನಿಶ್ಚೈಸಿದರು. ಭಟ್ಟರ ಮದುಳೀಗ ಕೆಲಸ ಮಾಡಲಾರದಾಯಿತು. ಹಿರಿಯ ಮಗಳನ್ನಿಟ್ಟುಕೊಂಡು ಕಿರಿಯ ಹುಡುಗಿಯರನ್ನು ಹೇಗೆ ಕೊಡಲಿ? ಜನರೇನೆಂದಾರು? ಬಂದವರನ್ನು ಬಿಟ್ಟರೆ ಅದು ಮೂರ್ಖತನವಲ್ಲದೆ ಮತ್ತೇನು? ಯೋಚನಾಭರಿತರಾದ ಭಟ್ಟರು ಸಮಸ್ಯೆ ಬಗೆಹರಿಸಲೆಂದು ತನ್ನ ಭಾವನವರಲ್ಲಿಗೆ ಹೊರಟುಹೋದರು.

ಇಲಂಪುರಿ ಶ್ರೀನಿವಾಸಯ್ಯನವರೇ ಅವರ ಭಾವ— ಅಂದರೆ ಮಕ್ಕಳ ಸೋದರ ಮಾವನವರು. ಬಹಳ ಶ್ರೀಮಂತರು. ಆದರೆ ತಂಗಿಯ ದೇಹಾಂತ್ಯದ ಬಳಿಕ ಮಕ್ಕಳನ್ನು ಕಾಣಲೆಂದು ಒಂದೆರಡು ಬಾರಿಯೂ ಬಂದವರವರಲ್ಲ. ಆದರೂ ಈ ಬಾರಿ ಹೆಣ್ಣು ಮಕ್ಕಳಿಲ್ಲದ ಅವರಿಗೆ ಏನೋ ಒಂದು ಯೋಚನೆ ಹೊಳೆದು 'ಒಂದು ವಿವಾಹ ಮಾಡಿಸಿದ ಪುಣ್ಯವನ್ನು ಕಟ್ಟಿಕೊಳ್ಳೋಣ' ಎಂದು ಯೋಚಿಸಿ ಕಾರ್ಯ ನಿರತರಾದರು.

ಎಂಟುಹತ್ತು ದಿನಗಳ ಪರಿಶ್ರಮದ ಫಲವಾಗಿ, ಹಿರಿಯ ಸೊಸೆಗೆಂದು ಓರ್ವ ನಗರದ ವರನನ್ನು ಮುನ್ನೂರು ರೂಪಾಯಿ ವರದಕ್ಷಿಣೆ ಕೊಡುವ ನಿರ್ಣಯದ ಮೇಲೆ ನಿಶ್ಚಯಿಸಿದರು. ಸುಂದರ ಪುರುಷನಲ್ಲದಿದ್ದರೂ ಸುಶಿಕ್ಷಿತ ವರ. S. S. L. C. ಪಾಸಾಗಿ ಯಾವುದೋ ಒಂದು ಆಫೀಸಿನಲ್ಲಿ ಕೆಲಸದಲ್ಲಿ ಇದ್ದಾನೆ. ಮನೆಯ ವಹಿವಾಟುಗಳನ್ನು ನಡೆಸಲು ಹಿರಿಯಣ್ಣನಿದ್ದಾನೆ. ಅಂತೂ ಉತ್ತಮವಾದ ಸಂಸಾರ-ಸಾಕು. ಮದುವೆ ನಿಶ್ಚಯವಾಯಿತು.

ವಿವಾಹದ ಶುಭದಿನದಂದು ನಿಶ್ಚಿತ ಮುಹೂರ್ತಕ್ಕೆ ಸರಿಯಾಗಿ ಪಾಣಿಗ್ರಹಣ ಜರಗುವಂತೆ ವರನು 'ಮದುವೆ ಮಂಟಪ'ವನ್ನು ಪ್ರವೇಶಿಸಿದನು. ಕೆಲವು ನಿಮಿಷಗಳ ಬಳಿಕ ವಧುವೂ ಪ್ರವೇಶಿಸಿದ್ದಾಯಿತು. ವರನನ್ನು ಇಷ್ಟರ ತನಕ ಕಂಡಿರದ ಶಾರದೆಯು ಕಣ್ಣೆತ್ತಿ ತನ್ನ ಭಾವಿ ಪತಿಯನ್ನೊಮ್ಮೆ ದೃಷ್ಟಿಸಿದಳು. ತನ್ನ ಮುಖವನ್ನೇ ಆತನೂ ನೋಡುತ್ತಿರುವನೆಂದರಿತ ಆಕೆ ಥಕ್ಕನೆ ಮುಖವನ್ನು ತಗ್ಗಿಸಿದಳು. ಮನದಲ್ಲೇನೇನೋ ಭಾವನೆಗಳು ಮೂಡಿ ಬಂದುವು. ಹೃದಯವು ಏನೋ ಒಂದು ತರದ ವೇದನೆಯನ್ನು ಅನುಭವಿಸ ತೊಡಗಿತು. ಮನದ ಉದ್ವೇಗವನ್ನು ತಡೆಯಲಾರದೆ ಮತ್ತೊಮ್ಮೆ ತುಂಬಿದ ಕಣ್ಣುಗಳಿಂದ ಆತನ ಮುಖವನ್ನು ನೋಡಿದಳು. 'ಅಯ್ಯೋ' ಎಂದಿತು ಮನಸ್ಸು. ಕಣ್ಣೀರು ಧಾರಾಕಾರವಾಗಿ ಹರಿಯತೊಡಗಿತು. "ಕಪ್ಪಾದ ದೇಹ, ಉದ್ದುದ್ದ ಕೈಕಾಲುಗಳು, ಅಂದವಿಲ್ಲದ ಮುಖ, ಮುಸಿಮುಂತಿರುವ ತುಟಿಗಳು. ಮೇಲಿರುವ ಆವಕ್ರ ಮೀಸೆ, ಮುಖದಲ್ಲಿರುವ ಆ ಸಿಡುಬಿನ ಕಲೆಗಳು— ಯಾಕಾಗಿ ಈ ವಿವಾಹ? ವಿವಾಹವೇ ಬೇಡವಾಗಿತ್ತು. ಹಿರಿಯಕ್ಕನಾಗಿ ಹುಟ್ಟಿದುದಕ್ಕಾಗಿ ನನಗೀ ಶಿಕ್ಷೆ— ಯಾಕಾಗಿ ನಾನು ದೊಡ್ಡವಳಾದೆ? ಅಯ್ಯೋ" ಶಾರದೆಯ ಮನಸ್ಸು ಮರುಗುತ್ತಲಿತ್ತು.

ಆದರೆ ವರ ಸುಂದರನ ಪಾಡು ಈ ರೀತಿಯಾಗಿರಲಿಲ್ಲ. ಅದು ತೀರಾ ಭಿನ್ನವಾಗಿತ್ತು. ಆತನಿಗೆ ವರ್ಷ ಮೂವತ್ತು ದಾಟಿದ್ದರೂ ಮದುವೆಯಾಗುವ ಇಚ್ಛೆ ಆತನಲ್ಲಿರಲಿಲ್ಲ. ಮದುವೆಯಾಗಬೇಕೆಂಬಾಸೆ ಆತನ ಮನಸ್ಸಿನಲ್ಲಿ ಹಲವು ಬಾರಿ ಹುಟ್ಟುತಿತ್ತು. ಹಾಗೇ ನಾಶ ಹೊಂದುತಿತ್ತು. ನೀರೆರೆದು ಬೆಳೆಸುವ ಸ್ವಭಾವ ಆತನಲ್ಲಿರಲಿಲ್ಲ. ಶ್ರೀನಿವಾಸಯ್ಯನವರು ಮುನ್ನೂರು ರೂಪಾಯಿಗಳನ್ನು ಕೈಗಿತ್ತು "ಹುಡುಗಿ ಕೊಡಿಸುತ್ತೇನೆ" ಎಂದಾಗ ಮಾತ್ರ ಅದೇಕೋ ಅಣ್ಣನ ಒತ್ತಾಯಕ್ಕಾಗಿಯೋ, ಹಣದ ಆಸೆಗಾಗಿಯೋ, ಅಲ್ಲ ಮದುವೆಯಾಗಬೇಕು ಎಂಬ ಇಚ್ಛೆಯಿಂದಲೋ, ಹುಡುಗಿಯನ್ನು ನೋಡದೆಯೇ ಮದುವೆಯಾಗುವ ತೀರ್ಮಾನಕ್ಕೆ ಬಂದಿದ್ದನಾತ.

ಆದರೆ ಈಗ ಹುಡುಗಿಯನ್ನು ಕಂಡಾಗ ಆನಂದದಿಂದ ಹೃದಯ ನಲಿಯಿತು. ನಗು ಹೊರಟಿತು. 'ಅಹಾ, ಎಷ್ಟೊಂದು ಸುಂದರಿಯಾಗಿಲ್ಲ ನನ್ನ ಶಾರದೆ? ಕಪ್ಪಾದ, ಬಳುಕುತ್ತಿರುವ, ಬಿಳಿ ದೇಹ, ಉರುಟಾದ ಸುಂದರ ವದನ, ಆ ಮೂಗು ಆ ತುಟಿ, ಹೊಳೆಯುತ್ತಿರುವ ಕಣ್ಣುಗಳು — ಹೌದು, ನಿಜವಾಗಿಯೂ ಸುಂದರಿ ಈಕೆ. ಸುಂದರಿಯೆಂಬ ಹೆಸರೇ ಈಕೆಗೆ ಚೆನ್ನಾಗಿ ಒಪ್ಪ

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಕ್ಲಾಸ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೮.

ಲಂಕಾ ಯಾತ್ರೆ

ವೈಮನಸ್ಯದ ಸ್ಮಾರಕ ಭಗ್ನವಾದ ಸಿಂಹಗಿರಿ

ಒಂಟಿಗಲ್ಲಿನ ಎತ್ತರದಲ್ಲಿ ಉಳಿದುಕೊಂಡರೂ ಮನಸ್ತಾಪವೇ ಆತನನ್ನು ಕೊಂದಿತಲ್ಲವೆ?

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಲೇಖಾಂಕ ೫

ಒಬ್ಬ ರಾಜನಿದ್ದನು ಅವನಿಗೆ ಇರ್ವರು ರಾಣಿಯರಿದ್ದರು. ಇವರಲ್ಲಿ ಒಬ್ಬಾಕೆ ಸುಂದರಿಯಾಗಿದ್ದಳು. ಆದುದರಿಂದ ರಾಜ ಆಕೆಯನ್ನು ಪ್ರೀತಿಸುತಿದ್ದನು, ಆದರೇನು, ಆಕೆಯು ಹೀನ ಜಾತಿಯವಳಾಗಿದ್ದಳು ಇನ್ನೊಬ್ಬಳು ಉನ್ನತ ಕುಲೀನಳಾಗಿದ್ದಳಾದರೂ ಸಾಧಾರಣ ಸುಂದರಿಯಾಗಿದ್ದಳು. ಆಕೆ ರಾಜನನ್ನು ಅತೀವ ಪ್ರೀತಿಸುತಿದ್ದಳು. ರಾಜನಿಗೆ ಇಬ್ಬರು ಪುತ್ರರಿದ್ದರು. ಸುಂದರಿ ರಾಣಿಯ ಮಗ ಸುಂದರನಾಗಿದ್ದರೂ ಹೆಡ್ಡ, ಎರಡನೆಯವ ಕುರೂಪಿಯ ಮಗನಾಗಿದ್ದರೂ ಚತುರನಾಗಿದ್ದನು

ರಾಜನಿಗೊಬ್ಬಾಕೆ ಸುಂದರ ಪುತ್ರಿಯೂ ಇದ್ದಳು. ಪ್ರಧಾನ ಸೇನಾಪತಿಯೊಡನೆ ಪುತ್ರಿಯ ವಿವಾಹವೂ ಆಗಿತ್ತು. ಆದರೇನು? ಆಕೆ ಎಂದೂ ಸಂತುಷ್ಟಳಾಗಿರುತ್ತಿದ್ದಿಲ್ಲ. ಆಕೆಯ ಅತ್ತೆ ಆಕೆಯೊಡನೆ ದುರ್ವ್ಯವಹಾರ ನಡೆಸುತ್ತಿದ್ದಳು ಈ ಕಾರಣದಿಂದ ಕುಪಿತನಾದ ರಾಜನು ಆಕೆಯ ಅತ್ತೆಯನ್ನು ಕೊಂದೇ ಹಾಕಿ ಬಿಟ್ಟ ಆಗ, ಸೇನಾಪತಿಯು ಹಡ್ಡ ಮಗನ ಮಿತ್ರತ್ವಗಳಿಸತೊಡಗಿದ ಆತನ ಸಲಹೆಯಿಂದಾಗಿ ಮೂರ್ಖ ರಾಜಕುಮಾರ ತನ್ನ ತಂದೆಯನ್ನು ಜೀವಂತ ಕೊಲೆ ಮಾಡಿ ರಾಜ್ಯವನ್ನು ವಶಪಡಿಸಿಕೊಂಡನು. ಆ ಮೇಲೆ ತನ್ನ ಸಹೋದರನ ಹತ್ಯೆಗಾಗಿ ಅತ ತಡಪಡಿಸಿದರೂ ಅದು ಅಸಫಲವಾಯಿತು ಚತುರನಾಗಿದ್ದುದರಿಂದಾತ ಎಲ್ಲಿಗೋ ತಪ್ಪಿಸಿಕೊಂಡು ಓಡಿ ಹೋದ ಇದರಿಂದ ಕಂಗೆಟ್ಟ ರಾಜ ಕುಮಾರನು ರಾಜಧಾನಿಯಲ್ಲಿ ಭಯಭೀತನಾಗಿ ದಿನಗಳೆಯ ತೊಡಗಿದನು. ಅಲ್ಲದೇ ಒಂದು ಎತ್ತರವಾದ ಪರ್ವತ ಶಿಖರದಲ್ಲಿ ತನ್ನ ದುರ್ಗವನ್ನು ಕಟ್ಟಿಸಿ ಅಲ್ಲಿ ನೆಲಸ ತೊಡಗಿದನು ಹೀಗೆ ಮಾಡುವುದರಿಂದ, ತನ್ನ ಸಹೋದರ ತನ್ನ ಮೇಲೆ ಆಕ್ರಮಣ ಮಾಡಲಾರನೆಂದಾತ ದೃಢ ನಿಶ್ಚಯ ತಾಳಿದ್ದ. ಆ ದುರ್ಗದಲ್ಲಿದ್ದು ಕೊಂಡೇ ಆತ ರಾಜ್ಯ ಭಾರವನ್ನು ನಡೆಸ ತೊಡಗಿದನು.

೧೮ ವರ್ಷಾನಂತರ ಒಂದು ವಿಶಾಲ ಸೇನೆ ದುರ್ಗದತ್ತ ಧಾವಿಸುತ್ತಿರುವುದು ದುರ್ಗ ರಕ್ಷಕರಿಗೆ ದೃಗ್ಗೋಚರವಾಯ್ತು. ಮೂರ್ಖ ರಾಜಕುಮಾರ ತನ್ನ ಸಹೋದರನೊಡನೆ ಕಾದಾಡುವುದಕ್ಕೆ ದುರ್ಗದಿಂದ ಇಳಿದು ಬಂದ ಆತನ ಸೇನೆಯು ಸಹೋದರನ ಸೈನ್ಯವನ್ನು ಕಂಡೊಡನೆಯೇ ಓಡಿ ಹೋಯಿತ, ಆಗ ಖಡ್ಗ ಸಹಾಯದಿಂದ ತನ್ನ ಕಂಠವನ್ನೇ ಕತ್ತರಿಸಿ ಕೊಂಡ

ಇದು ಸಿಂಹಗಿರಿಯ ಕಥೆ. ೧೫ನೆಯ ಶತಮಾನದಲ್ಲಿನ ರಾಜ ಕಶ್ಯಪ (೧೪೭೭-೯೬) ನು ತನ್ನ ತಂದೆಯನ್ನು ಕೊಂದು ಉನ್ನತ ಪರ್ವತ ಶಿಖರದಲ್ಲಿ ದುರ್ಗ ಕಟ್ಟಿಸಿದ ಸಮಯದ ಘಟನೆಯಿದು ಆತನ ತಪ್ಪು ಮೊಗಲ್ಲಾನಾನು ಆತನನ್ನು ಸೋಲಿಸಿ ಆ ಕೋಟೆಯ ವೈಭವವನ್ನು ಸಮೂಪ್ತಿಗೊಳಿಸಿದನು

ಜೂನ್ ೧೯ಕ್ಕೆ ಪ್ರಾತಃಕಾಲ ೭ ತಾಸಿಗೆ ಪತ್ರಿಕಾಕರ್ತರ ಸಮೂಹವು ರಾಷ್ಟ್ರಪತಿಗಳಿಗೆ ಮೊದಲೇ ಅನುರಾಧಾಪುರದಿಂದ ಸಿಂಹಗಿರಿಯತ್ತ ಪ್ರಯಾಣ ಬೆಳೆಸಿತು. ಖಂಪ್ಯೆಲುಗಳ ಪ್ರಯಾಣವನ್ನು ಮುಗಿಸಿ ನಾವು ಒಂಬತ್ತು ಘಂಟೆಗೆ ಸಿಂಹ ಗಿರಿಯನ್ನು ತಲಪಿದೆವು. ನಾಲ್ಕೂ ದಿಕ್ಕುಗಳಲ್ಲಿ ವಿಶಾಲವಾದ ಮೈದಾನುಗಳಿವೆ, ಆದರೆ, ಅದರ ಮಧ್ಯೆ ಸುಮಾರು ೪೦೦ ಅಡಿ ಎತ್ತರದ ಕರಿ ಶಿಲೆಯ ಒಂದು ಬೆಟ್ಟವಿದೆ ಈ ಬೆಟ್ಟದ ತುತ್ತ ತುದಿಯಲ್ಲಿಯೇ ಸಿಂಹಗಿರಿಯ ಸುವಿಖ್ಯಾತ ಕೋಟೆಯಿದೆ

ನಾವು ಮೋಟಾರಿನಿಂದಿಳಿದು ಮೆಟ್ಟಲುಗಳನ್ನು ಏರ ತೊಡಗಿದೆವು. ಸುಮಾರು ೧೦೦ ಅಡಿ ಎತ್ತರದಲ್ಲಿ ಒಂದು ವಿಶಾಲ ಸ್ಥಳವಿದ್ದು ಇಲ್ಲಿಂದ ಮುಂದೆ ಏರು ಕಡಿದಾಗುವುದು ಮೊದಲು ಕಲ್ಲನ್ನು ಕೆತ್ತಿ ಮೆಟ್ಟಲುಗಳನ್ನು ಮಾಡಿದ್ದರೂ ಈಗ ಅವೆಲ್ಲಾ ಕೆಟ್ಟು ಒಡೆದು ಹೋಗಿವೆ. ಈಗ ಸರಕಾರವು ಕಬ್ಬಿಣದ ಏಣಿಯನ್ನು ಇಟ್ಟಿದೆ ಹೆಚ್ಚು ಕಡಿಮೆ ೨೦೦ ಅಡಿ ಎತ್ತರದಲ್ಲಿ ಪರ್ವತದ ಒಳಮಗ್ಗುಲಿಗೆ ಕೊರೆದು ಒಂದು ಗಲರಿಯನ್ನು ಕಡಿಸಿದ್ದಾರೆ. ಇಲ್ಲಿನ ಗೋಡೆಗಳಲ್ಲಿ ೨೧ ಭಿತ್ತಿ ಚಿತ್ರಗಳಿವೆ ಈ ಚಿತ್ರಗಳು ನಮ್ಮ ದೇಶದ ಅಜಂತಾದ ಗುಹೆಗಳಲ್ಲಿನ ಚಿತ್ರಗಳಂತಿವೆ ಎಲ್ಲವೂ ಮಹಿಳೆಯರ ಚಿತ್ರಗಳೇ ಆಗಿವೆ ಶ್ರೀಲಂಕೆಯ ಸರ್ವ ಪುರಾತನವಾದ ಚಿತ್ರಗಳೆಂದರೆ ಇವೇ ಎಂದು ಹೇಳಬಹುದು ಆದರೆ, ಇವುಗಳ ಬಣ್ಣಗಳು ಆಕರ್ಷಕವಾಗಿದ್ದು ಈಗ ತಾನೇ ಬಿಡಿಸಿವವುಗಳಂತೆ ಪ್ರಕಾಶಮಾನವಾಗಿವೆ.

ಈ ಚಿತ್ರಗಳಿರುವಲ್ಲಿಂದ ಪುನಃ ಏರು ಪ್ರಾರಂಭ ವಾಗುತ್ತದೆ ಸುಮಾರು ನೆಲದಿಂದ ೩೦೦ ಅಡಿ ಎತ್ತರದಲ್ಲಿ ಒಂದು ಸಿಂಹವು ಕೆತ್ತಲ್ಪಟ್ಟಿದ್ದು, ಇದರ ಮುಂಭಾಗದ ಪಾದಗಳ ಕೆಳಗಿಂದ ಮೆಟ್ಟಲುಗಳು ಮೊದಲಾಗುತ್ತವೆ ಇವು ಸ್ವಲ್ಪ ದೂರದವರೆಗಿರುವುವು, ಮುಂದಿನವು ಒಡೆದು ಹೋಗಿವೆ. ಇಲ್ಲಿ ಕಬ್ಬಿಣದ ಸೇತುವೆ ಏಣಿಯನ್ನಿಟ್ಟಿದ್ದಾರೆ. ಇವುಗಳ ಮೇಲಿಂದ ಹೋಗುವುದು ಪ್ರಯಾಸಕರವಾಗಿದೆ

ಬೆಟ್ಟದ ತುದಿಯಲ್ಲಿ ಒಂದು ಅಲ್ಪ ಸ್ಥಳದಲ್ಲಿ ಕಲ್ಲಿನ ಸುಂದರ ಅರಮನೆ ಕಟ್ಟಿಸಿದ್ದರು, ಇದರ ಭಗ್ನಾವಶೇಷಗಳು ಇಂದೂ ಕಂಡು ಬರುತ್ತಿವೆ.

ಈ ಕಿರಿಯ ಶಿಖರದಲ್ಲಿ ಕೋಟೆ ಕಟ್ಟಿಸಿದ ಬಗೆ ಹೇಗೆಂದು ಆಶ್ಚರ್ಯವಾಗುತ್ತದೆ. ಆ ದಿನಗಳಲ್ಲಿ ಏರುತೊಟ್ಟಿಲು (ಲಿಫ್ಟ್) ಗಳಿರಲಿಲ್ಲ, ಹಾಗಿರುವಾಗ ಬುಡದಿಂದ ಸಾಮಾನುಗಳು ಕಡಿದಾದ ಪರ್ವತ ಶಿಖರಕ್ಕೆ ಹೋದ ಬಗೆ ಹೇಗೆಂಬುದು ಕಲ್ಪನೆಗೂ ಸಿಲುಕಲಾರದು

ರಾಜಕುಮಾರ ಕಶ್ಯಪನೇನೋ ಭೂಮಟ್ಟದಿಂದ ನಾಲ್ಕು ನೂರಡಿ ಎತ್ತರದಲ್ಲಿ ಉಳಿದು ತನ್ನ ಜೀವವನ್ನುಳಿಸಿಕೊಳ್ಳಬಲ್ಲೆನೆಂದು ಭಾವಿಸಿದ್ದನು; ಆದರೆ, ಏರನ್ನು ಏರಿ ಯಾರಾದರೂ ಉಳಿದವರಿದ್ದಾರೆಯೆ?

ಸಿಂಹಗಿರಿಯ ಬುಡದಲ್ಲಿ ಒಂದು ವಿಸ್ತಾರವಾದ ಸುಂದರ ಸರೋವರವಿದೆ; ಇನ್ನೊಂದೆಡೆ ಹಳೆಯ ನಗರದ ಅಚ್ಚುಕಟ್ಟಾದ ಕೆರೆಯಿದೆ. ಈಗ ಇಲ್ಲಿ ಒಂದು ಹಳ್ಳಿಯಿದೆ, ಇದರ ಹೆಸರು ಸಿಗಿರಿಯಾ ಎಂದು ಆಗಿದೆ ಇದು 'ಸಿಂಹಗಿರಿ'ಯ ಅಪಭ್ರಂಶವಾಗಿರಲಾರದೆ?

ಪತ್ರಿಕಾಕರ್ತರಾದ ನಾವು ಸಿಂಹಗಿರಿಯ ಕೋಟೆಯನ್ನು ಹತ್ತಿ ನೋಡಿ ಇಳಿದಾಗ ರಾಷ್ಟ್ರಪತಿಯವರೂ ಬಂದು ಮುಟ್ಟಿದರು ಆದರೆ, ರಾಷ್ಟ್ರಪತಿಯವರು ಅಸ್ವಸ್ಥರಿದ್ದುದರಿಂದ ಅವರು ಕೋಟೆಯನ್ನು ಸಮೀಪದಲ್ಲಿ ನೋಡಲಿಲ್ಲ. ಮೋಟಾರಿನಲ್ಲಿಯೇ ಸ್ವಲ್ಪ ದೂರ ದುರ್ಬೀನಿನ ಸಹಾಯದಿಂದ ನೋಡಲು ಪ್ರಯತ್ನಿಸಿದರು.

ಸಿಂಹಗಿರಿಯ ಭ್ರಮಣವನ್ನು ಮಾಡುತ್ತ ೧೧ ತಾಸಿನ ಸಮಯ ಕಳೆದೆವು. ಆಗಾಗಲೇ ವಿಪರೀತ ಮಳೆ ಸುರಿಯಲು ಮೊದಲಾಯಿತು. ಈ ಮಳೆಯಲ್ಲಿಯೇ ೨೦ ಮೋಟಾರುಗಳ ಮೆರವಣಿಗೆ ಕ್ಯಾಂಡಿಯತ್ತ ಹೊರಟಿತು ಈಗಾಗಲೇ ಏರೂ ಸುರುವಾಗಿತ್ತು, ಜತೆಗೆ ಹಸಿರೂ ಎನ್ನಿ. ಚಾ ಮತ್ತು ಕರಿಮೆಣಸಿನ ವ್ಯವಸಾಯ ಕ್ಷೇತ್ರಗಳೂ ದೃಷ್ಟಿಗೋಚರವಾಗತೊಡಗಿದುವು

(ಕ್ರಮಶಃ)

ಮೂಲ: "ನವಭಾರತ ಟಾಯಿಮ್ಸ್"

ಅನುವಾದ. "ಗೋರಾ".



ಸ್ಕೋಟಿಶ್ ಇಂಜಿನಿಯರ್ ಬಟಾಟೆ ಅಗೆಯುವುದರಲ್ಲಿ ತತ್ಪರನಾಗಿದ್ದಾನೆ.

ಸ್ಥಾಪನೆ 1906] ಪ್ರಧಾನ ಕಚೇರಿ ಉಡುಪಿ (ದ ಭಾರತ)

ದಿ. ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್

(ದಿನಾಂಕ 31-12-1958ರಂದು)

ತೆತ್ತ ಬಂಡವಾಳ	—	ರೂ.	20,00,000/-
ಕ್ಷೇಮನಿಧಿ	—	ರೂ	14,40,000/-
ಠೇವಣಾತಿಗಳು	—	ರೂ	7,19,35,000/-
ಸಾಲಗಳು	—	ರೂ	3,95,40,000/-
ಒಟ್ಟು ಚಲಾವಣಾ ಬಂಡವಾಳ	—	ರೂ	9,18,94,000/-

(ಸಾವಿರ ರೂಪಾಯಿಗಳಿಗೆ ಸರಿಯಾಗಿ)

ಒಟ್ಟು 53 ಶಾಖೆಗಳೂ, ದೇಶವಾದ್ಯಂತ ಏಜೆನ್ಸಿ ಏರ್ಪಾಡುಗಳೂ ಈ ಬೇಂಕಿಗಿದ್ದು, ಇದು ಎಲ್ಲಾ ವಿಧದ ಆಧುನಿಕ ಬೇಂಕು ವಹಿವಾಟುಗಳನ್ನು ನಡೆಸುತ್ತಿದೆ

The Canara Banking Corporation Ltd.

Estd 1906] [H O. UDIPI (S. India)

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ನ.

ರಾಜಕೀಯ

ಅನಿಶ್ಚಿತತೆ ದೂರವಾಗಿ ಆತ್ಮ ವಿಶ್ವಾಸ ಬೆಳೆಯಬೇಕು

ರಾಜಾಜಿಯವರಿಂದ ಸ್ವತಂತ್ರ ಪಕ್ಷದ ಉದ್ದೇಶಗಳ ವಿವರಣೆ

ವೈಯಕ್ತಿಕ ಸ್ವಾತಂತ್ರ್ಯದ ಹನನ ದೊಡನೆಯೇ ಕಾಂಗ್ರೆಸಿನ ಅವಿಚಾರಿತ ಪ್ರಗತಿಯು ಸಮಾಪ್ತವಾಗುವುದು; ಆಡಳಿತೆಯು ಒಬ್ಬ ದೈತ್ಯನಾಕಾರದಲ್ಲಿ ವಿಕಾಸಗೊಳ್ಳುವುದು, ಆದುದರಿಂದ ಕಾಂಗ್ರೆಸಿನ ಈ ಅವಿಚಾರಿತ ಪ್ರಗತಿಗೆ ವಿರುದ್ಧವಾಗಿ ಒಂದು ಮಹತ್ವಪೂರ್ಣವಾದ ಹಾಗೂ ಗಂಭೀರವಾದ ಸ್ವಾತಂತ್ರ್ಯ ಆಂದೋಲನವನ್ನು ಪ್ರಾರಂಭಿಸಬೇಕು, ಮತ್ತು ಈ ಆಂದೋಲನವು ಸ್ವಾತಂತ್ರ್ಯಕ್ಕಾಗಿ ಬ್ರಿಟಿಷ ಶಾಸನದ ವಿರುದ್ಧ ಹೂಡಿರುವ ಸ್ವಾತಂತ್ರ್ಯ ಸಂಗ್ರಾಮದಂತೆಯೇ ನಡೆಯಬೇಕಾಗಿದೆ ಎಂಬ ನಿರ್ಧಾರಕ್ಕೆ ನಾನು ಬಂದಿದ್ದೇನೆ.

ನಾಗರಿಕ ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಹಸ್ತಕ್ಷೇಪ ಮಾಡುತ್ತ, ಜನತೆಯಲ್ಲಿ ಅವಿಶ್ವಾಸವನ್ನು ತೋರ್ಪಡಿಸುತ್ತ, ಹಲವಾರು ನಿಯಂತ್ರಣ ಹಾಗೂ ನಿಯಮಗಳನ್ನು ಕೈಗೊಳ್ಳುತ್ತ, ಕೃಷಿ, ಉದ್ಯೋಗ ಮತ್ತು ವ್ಯಾಪಾರಗಳಲ್ಲಿ ತನ್ನ ಹೆಜ್ಜೆಯನ್ನು ಮುಂದುವರಿಸುತ್ತ ಅಧಿಕಾರಿಗಳ ಸೇನೆಯನ್ನು ಬೆಳೆಸಿ, ಆಡಳಿತೆಯು ನಷ್ಟದಲ್ಲುಂಟಾದ ಕೊರತೆಯನ್ನು ತುಂಬಿಕೊಳ್ಳಲು ಅಧಿಕ ಕರವನ್ನು ಹೇರುತ್ತ, ತನ್ನ ಆಕರ್ಷಕ ಘೋಷಣೆಗಳಿಂದಲೇ ಜನತೆಯನ್ನು ಮೋಹಿಸುತ್ತ, ನಾಗರಿಕರ ತಮ್ಮ ಹಿತಾಹಿತಗಳ ಜ್ಞಾನವೇ ಆಗದಂತ ಯೋಜನೆಗಳನ್ನು ರೂಪಿಸುತ್ತ ರಾಜ್ಯದ ಜನತೆಯೆದುರು ಭಯಾವಹ ರೂಪದಿಂದ ದೈತ್ಯಾಕಾರದ ಆಡಳಿತಾಧಿಕಾರಿಗಳು ನಡೆಯುತ್ತಿದ್ದಾರೆ.

ಕಾಂಗ್ರೆಸ್ಸಿನ ನೀತಿ ಮತ್ತು ಮನೋವೃತ್ತಿಗಳು ಹಾಗೂ ಅವುಗಳ ಅನಿವಾರ್ಯ ಪರಿಣಾಮಗಳು ಅತಿ ತೀಕ್ಷ್ಣವಾಗಿವೆ, ಆದರೆ, ಅವು ಅತಿಶಯೋಕ್ತಿ ಪೂರ್ಣವಾಗಿಲ್ಲ ಕಾಂಗ್ರೆಸ್ ತಪ್ಪಾಗಿ ತಿಳಿದುಕೊಂಡಿತ್ತು; ಅವುಗಳ ಆಧಾರದಿಂದ ಮಾತಿತ್ತಿತು. ಕಾಂಗ್ರೆಸ್ಸಿನಲ್ಲಿ ನಂಬುಗೆಯಿಟ್ಟವರು ಮೊದಲಿಗಿಂತ ಹೆಚ್ಚು ಕಾರ್ಯಕ್ಷಮತೆಯನ್ನು ಕಾಣಬಯಸಿದಾಗ,ಅದು ಅಸಂಭವವೆಂದು ತಿಳಿದು ಬಂದುದರಿಂದ ತಮ್ಮ ಹಳೆಯ ವಚನಗಳಿಗೆ ಬದಲು ಹೊಸ ಭರವಸೆಗಳನ್ನೀಯತೊಡಗಿತು. ಇವೆಲ್ಲವುಗಳೂ ಅಭದ್ರ ತಳಹದಿಯಲ್ಲಿ ಕಟ್ಟಿದ ಗೋಪುರಗಳಾಗಿರುವುದರಿಂದ ಜನತೆಯು ಒಂದು ಹೊಡೆತದ ನಂತರ ಮತ್ತೊಂದು ಹೊಡೆತವನ್ನೇ ತಿನ್ನಬೇಕಾಯಿತು.

ಉದಾಹರಣೆಗಾಗಿ ಐಚ್ಛಿಕವಾಗಿ ಭೂದಾನ ಆಂದೋಲನವು ಒಂದು ರೀತಿಯಿಂದ ನಡೆಯುತಿತ್ತು. ಆಗ, ಕಾಂಗ್ರೆಸ್ಸು ಅದಕ್ಕೆ "ಅನಿವಾರ್ಯ"ತನವನ್ನು ಹೇರುವಂತೆ ಅಧಿಕತಮ ಭೂಮಿಯ ಮಿತಿಯನ್ನು ನಿರ್ಧರಿಸುವ ಮಾತಿತ್ತಿತು ಆಗ ಭೂರಹಿತ ಕೃಷಿಕರಿಗೆ ವಿತರಣೆ ಮಾಡಲು ಅಷ್ಟು ಭೂಮಿ ದೊರೆಯುವುದಿಲ್ಲ ಎಂದು ತಿಳಿದು ಬಂತು. ಇದರಿಂದ ದಾನದ ಮಾತನ್ನು ಬಿಟ್ಟುಕೊಟ್ಟು, ಕೃಷಿ ವಿಶೇಷಜ್ಞರ ಆಲೋಚನೆಯಿಂದಾಗಿ ಕೃಷಿಯ ಬದಲು ಸಾಮೂಹಿಕ ಕೃಷಿಯ ಸೂಚನೆ ಮುಂದೆ ಬರುವುದು. ಆಗ, ಅನಿವಾರ್ಯ ಸಾಮೂಹಿಕೀಕರಣದ ವಿರುದ್ಧ ಎದ್ದ ಕೂಗನ್ನು ಅದು ಅನಿವಾರ್ಯವಲ್ಲ, ಕೇವಲ ಐಚ್ಛಿಕ ಯಾರಮೇಲೂ ಬಲಾತ್ಕಾರ ಹೇರುವುದಿಲ್ಲವೆಂಬ ಮರು ಘೋಷಣೆಯೊಡನೆ ಎದುರಿಸಲಾಗುತ್ತಿದೆ. ಜನತೆಯ ಆಪತ್ತುಗಳನ್ನು ದೂರೀಕರಿಸಲು ಮತ್ತು ಸಹಕಾರೀ ವ್ಯವಸಾಯದ ಸಾಫಲ್ಯದ ಮೋಹವನ್ನು ತೋರಿಸುವುದಕ್ಕ ಆರ್ಥಿಕ ಸಹಾಯ ಮತ್ತಿತರ ಸಾಕರ್ಯಗಳನ್ನು ನೀಡುವ ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಅಧಿಕತಮ ಭೂಮಿಯ ಮಿತಿಯನ್ನು ಹೇರುವುದರಿಂದ ಭೂರಹಿತರಿಗೆ ಭೂಮಿ ದೊರೆಯುತ್ತದೆ ಎಂದು ಹೇಳುವುದರಲ್ಲಿ ಏನೂ ಅರ್ಥವಿಲ್ಲ ಆದರೆ, ಈ ಭ್ರಮೆಯನ್ನೇ ಹರಡಿ ಗ್ರಾಮೀಣ ಪ್ರದೇಶಗಳಲ್ಲಿ ಕಾಂಗ್ರೆಸ್ ಪ್ರಭಾವಬೀರಿದೆ.

ಆಟರ್ನಿ ಜನರಲ್ ಶ್ರೀ ಸೆಟಲ್‌ವಾಡರು ಇತ್ತೀಚೆಗೆ ಬೊಂಬಾಯಿಯಲ್ಲಿ ಮಾಡಿದ ಭಾಷಣವೊಂದು ಒಬ್ಬ ಕುಶಲ ವಕೀಲನ ಭಾಷೆಯಲ್ಲಿ ದೊಡ್ಡ ಆರೋಪಹೊರಿಸಿದಂತಾಗಿದೆ ಅವರು ಸದ್ಯದ ಆಡಳಿತೆಯ ಪಾತಕ ಕುಂದುಕೊರತೆಗಳನ್ನು ಎತ್ತಿ ಹೇಳದೆ ಇದ್ದರೂ ನಮ್ಮಂತಹ ಒಂದು ವಿರೋಧೀ ಪಕ್ಷದ ಸ್ಥಾಪನೆಯಾಗುವ ಆವಶ್ಯಕತೆಯನ್ನು ಒತ್ತಿಹೇಳಿದರು. ಅವರು ನಮ್ಮ ಈ ಹೊಸ ಪಕ್ಷದ ಸ್ಥಾಪನೆಯನ್ನು ಸ್ಪಷ್ಟವಾಗಿ ಸ್ವಾಗತಿಸದಿದ್ದರೂ ಅವರು ಹೇಳಿದುದರಲ್ಲಿಯೇ ಸ್ವಾಗತವು ಸಿದ್ಧವಾಗುತ್ತದೆ ದುಃಖದ ಸ್ಥಿತಿ ಮತ್ತು ಮೌನ ತಾಳಿಕೊಂಡಿರುವುದಕ್ಕೆ ಅವರು ಜನತೆಯ ಮೇಲೆ ಆರೋಪ ಹೊರಿಸಿದರು. ಅಧಿಕಾರಾರೂಢ ಪಕ್ಷವು ಸಮಾಜವಾದ ಮತ್ತು ಸಮಾಜವಾದದ ಗುರಿಯತ್ತ ಸಾಗುವ ಹೆಸರಿನಲ್ಲಿ ಅವರ ಜೀವನ ಮತ್ತು ಉದ್ಯೋಗಗಳನ್ನು ತನ್ನ ಕೈಯೊಳಗೆ ತಂದುಕೊಳ್ಳುತ್ತಿದೆ. ಇದಕ್ಕಿಂತಲೂ ಮುಂದ ಹರಿದು, ಅಧಿಕಾರಾರೂಢ ಪಕ್ಷ ಮತ್ತದರ ನಾಯಕರು ಕ್ರಾಂತಿಯಿಲ್ಲದೇನೇ ಕ್ರಾಂತಿಯನ್ನೆಬ್ಬಿಸಬಲ್ಲೆವು; ಸಮಾಜದ ತಂತ್ರದಲ್ಲಿ ಮೂಲಭೂತ ಪರಿವರ್ತನೆಯನ್ನು ಮಾಡುವೆವು; ಹೀಗೆ ಮಾಡುವ ಸ್ಥಿತಿ ಹಾಗೂ ಅಧಿಕಾರವೂ ತಮಗೆ ಬಂದಿದೆ ಎಂದು ತಿಳಿದು ಕೊಂಡಿದ್ದಾರೆ. ಆದರೆ, ಇದೆಲ್ಲವೂ ಭ್ರಮೆಯಾಗಿದೆ. ಅವರು ಭಾರತೀಯ ಜೀವನದಿಂದ ಧರ್ಮ ಮತ್ತು ಜೀವನವನ್ನು ನಾಶಗೊಳಿಸ ಬಯಸುತ್ತಾರೆ ನಿಯಮವನ್ನು ಎಲ್ಲಿ ಕಲ್ಪಿಸುವದೇ ಅನ್ಯಾಯವಾಗುವುದೋ ಅಂತಹ ಕಡೆಗಳಲ್ಲಿ ಅವರು ನಿಯಮ ಹೇರುತ್ತಾರೆ. ಅವರೇ ನಮ್ಮ ದೇಶದ ಮೂಲಭೂತ ಕೃಷಿತಂತ್ರದಲ್ಲಿಯೂ ಅಶಾಂತಿಯನ್ನು ಹರಡಿಸ ಬಯಸುತ್ತಾರೆ.

ಅಧಿಕಾರಾರೂಢ ಪಕ್ಷದ ಸಂಸ್ಥಾಗತ ಪ್ರಣಾಲಿ ಮತ್ತು ನಾಯಕತ್ವದ ಸ್ಥಿತಿಗಳು ಸರಕಾರವನ್ನು ಈ ಅಬುದ್ಧಿ ಮತ್ತಾಪೂರ್ಣ ಕಾರ್ಯಕ್ರಮದ ಕಾರ್ಯಾನ್ವಯದಿಂದ ಅದನ್ನು ತಡೆಯುವಂತಿಲ್ಲ. ಅಧಿಕಾರ ಮದ ಮತ್ತು ಜನತೆಯ ವಿಶ್ವಾಸಗಳಿಗೆ ಕೊಡಲಿಯೇಟು ಬೀಳುವ ಹೆದರಿಕೆ ತೋರುವಷ್ಟು ಸಮಯ ಅವರು ಸರಿಯಾಗಿ ಕೆಲಸಮಾಡಲಾರರು

ಅಧಿಕಾರ ಬಲದಿಂದಾಗಿ ನಾಯಕರು ಹಾಗೂ ತತ್ವಪಾಲಕರು ಆಡಳಿತೆಯಲ್ಲಿ ಹಸ್ತಕ್ಷೇಪ ನಡೆಸುತಿದ್ದಾರೆ, ಸರಕಾರಿ ಅಧಿಕಾರಿಗಳಲ್ಲಿ ರಾಜನೀತಿಕ ಹೊಡೆತವನ್ನು ಎದುರಿಸುವ ಇಂತಹಬಲ ಮೊದಲಿರಲಿಲ್ಲ ಕಾಂಗ್ರೆಸ್ಸು ಜನಪ್ರೀತಿಗೆ ಎರವಾಗಲು ಇದೇ ಮೊದಲ ಕಾರಣವಾಗಿದೆ.

ಇಂದಿನ ಅಧಿಕಾರಾರೂಢ ಪಕ್ಷದ ಸ್ಥಾನದಲ್ಲಿ ಪ್ರತಿಯೊಬ್ಬನ ಸ್ವಾತಂತ್ರ್ಯವನ್ನು ಮನ್ನಿಸುವ ಒಂದು ಪಕ್ಷವನ್ನು ಏರಿಸುವುದು ಅಗತ್ಯವಿದೆ. ಸ್ವತಂತ್ರ್ಯಪಕ್ಷವು ಈ ಸ್ವಾತಂತ್ರ್ಯದ ಸಮರ್ಥಕವಾಗಿದೆ. ಸ್ವಪ್ರಯತ್ನ ಮತ್ತು ಉದ್ಯೋಗಗಳನ್ನು ಈ ಪಕ್ಷವು ಸಮರ್ಥಿಸುತ್ತದೆ. ಸರಕಾರದ ಪ್ರಯತ್ನವು ಆವಶ್ಯಕತೆ ಇಲ್ಲದಿರುವಲ್ಲಿರಬೇಕಾರದು. ಅನಿವಾರ್ಯತೆಯು ಲಕ್ಷ್ಯವನ್ನು ವಿಕೇಂದ್ರೀಕರಿಸುತ್ತದೆ ಮತ್ತು ನಿಯಮವು ಅಭಿರುಚಿಯನ್ನೂ ಹೊಣೆಗಾರಿಕೆಯನ್ನೂ ಕಡಿಸುತ್ತದೆ.

ದೇಶದ ಪ್ರಗತಿಗೆ ಸರಕಾರೀ ಹಸ್ತಕ್ಷೇಪವು ಆವಶ್ಯಕವೆಂದು ಕೆಲವರು ತಿಳಿದುಕೊಂಡಿದ್ದಾರೆ, ಆದರೆ, ಸ್ವಾತಂತ್ರ್ಯ ಸಿದ್ಧಾಂತಕ್ಕೆ ವಿರುದ್ಧವಾದ ಇದರಲ್ಲಿ ನನಗೆ ವಿಶ್ವಾಸವಿಲ್ಲ.

ಪಕ್ಷದ ಸಫಲತೆಯ ಬಗ್ಗೆ ಸಂದೇಹ ವ್ಯಕ್ತಪಡಿಸುವವರೂ ಕೆಲವರಿದ್ದಾರೆ. ಪಕ್ಷವು ಮುಂದೆ ಬೆಳೆಯುವುದೆಂದವರಿಗೆ ವಿಶ್ವಾಸವಿಲ್ಲ. ಸ್ವಾತಂತ್ರ್ಯದಲ್ಲಿ ವಿಶ್ವಾಸವಿಟ್ಟಿರುವ ಕಾರಣದಿಂದ, ಸ್ವತಂತ್ರ ಪಕ್ಷಕ್ಕೆ ಉತ್ತರೋತ್ತರ ಮಂಗಲವಾಗುವುದು ಖಂಡಿತ. ಸತ್ಯವು ಸದಾ ಜಯಶೀಲವಾಗುವುದು.

ಇಂದು ದೇಶದಪ್ರಗತಿಗೆ ಘಾತಕವಾಗಬಲ್ಲ ಅನಿಶ್ಚಿತತೆಯು ನಾಲ್ಕು ಸುತ್ತಲೂ ಹರ

(೯ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಲೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಅತ್ಯುಪಯುಕ್ತವಾದ ಕೈಗನ್ನಡಿ.

ಬೆಲೆ ರೂ. 1-4-0 (1=25) ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಒಂದೂವರೆ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರುಗಳು, ಜಾಹೀರಾತುದಾರರುಗಳು ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

ಜೀವನ ಪರಿಚಯ

ಅಮೇರಿಕೆಯ ಉಪರಾಷ್ಟ್ರಾಧ್ಯಕ್ಷ ಮಿ. ರಿಚರ್ಡ ನಿಕ್ಸನ್

ಅಂದು ಅಮೇರಿಕೆಯ ಲೆಫ್ಟಿನೆಂಟ್ ಆಗಿ ಸೈನಿಕ ಕ್ಷೇತ್ರದಲ್ಲಿ ಅಡಿಯನ್ನಿರಿಸಿದವರು—ಇಂದು ರಾಷ್ಟ್ರದ ವಾಯ್ಸ ಪ್ರೆಸಿಡೆಂಟರಾಗಿ ರಾಜಕೀಯ ಕ್ಷೇತ್ರದ ಶ್ರೇಷ್ಠ ಸ್ಥಾನಕ್ಕೆ ಮುಟ್ಟಿದರು!

ಭಾರತ-ಅಮೇರಿಕೆ ಸಮ್ಮೇಲನದಲ್ಲಿ ಭಾರತದ ಮುಂಬರುವ ೫-೧೦ ವರ್ಷಗಳಲ್ಲಿ ಆಗುವ ಪ್ರಗತಿಯ ಪ್ರಶ್ನೆಯು ಪಶ್ಚಿಮದ ಬರ್ಲಿನ್ ಪ್ರಶ್ನೆಯ ಮೇಲೆ ಸೋವಿಯೆಟ್ ರಶಿಯಾದೊಡನೆ ಆಗುವ ವಾರ್ತೆಗಿಂತ ಅಧಿಕ ಮಹತ್ವಪೂರ್ಣವಾದ ಸಂಗತಿಯ ಮೇಲೆ ಅಮೇರಿಕೆಯ ಇಂದಿನ ಉಪರಾಷ್ಟ್ರಾಧ್ಯಕ್ಷ ಮಿಸ್ಟರ್ ರಿಚರ್ಡ್ ನಿಕ್ಸನ್‌ರು ಕಳೆದ ನಾಲ್ಕು ವರ್ಷಗಳ ಹಿಂದೆ ಭಾರತದ ತಟಸ್ಥ ಧೋರಣೆಯ ಮೇಲೆ, ಪಾಕಿಸ್ತಾನದಲ್ಲಿ ಜರುಗಿದ ಪತ್ರಿಕಾಪ್ರತಿನಿಧಿಗಳ ಸಮ್ಮೇಲನದಲ್ಲಿ ಆಪತ್ತಿ ಜನರ ಅಪೇಕ್ಷೆ ಎತ್ತಿದರು. ತತ್ಕಾಲವೇ ಅಮೇರಿಕೆಯ ಕೂಟ-ನೀತಿಯ ಸೂತ್ರಧಾರಿಗಳು, ಭಾರತದಲ್ಲಿ ಹರಡಿದ ಉತ್ತೇಜಜನಕ ರೋಷಕ್ಕೆ ಶಾಂತ ಮಾಡುವ ಪ್ರಯತ್ನ ಮಾಡಿದರು. ಕೊನೆಗೆ ಅದರ ಪರಿಣಾಮ ಅಡಗಿತು! ಆ ನಿಕ್ಸನ್ನರೇ ಇಂದು ಭಾರತದ ಪ್ರಗತಿಗೆ ಪಶ್ಚಿಮಕ್ಕಾಗಿ ಮಹತ್ವಪೂರ್ಣವೆಂದು ಹೇಳುತ್ತಾರೆ. ಇದು ನಿಜವಾಗಿಯೂ ಭಾರತದ ವಿದೇಶ ನೀತಿಯ ಅಪೂರ್ವ ವಿಜಯವಾಗಿರುತ್ತದೆ. ಮಿಸ್ಟರ್ ರಿಚರ್ಡ್ ನಿಕ್ಸನ್‌ರು ಸನ್ ೧೯೫೨ರಿಂದ ಅಮೇರಿಕೆಯ ವ್ಯಾಯಿಸ್ ಪ್ರೆಸಿಡೆಂಟ್ (ಉಪಾಧ್ಯಕ್ಷ) ರಾಗಿ ಅಧಿಕಾರಿಸುತ್ತಿರುವರು! ಸನ್ ೧೯೫೨ರ ನವಂಬರದಲ್ಲಿ ನಡೆದ ಮಹಾ ಚುನಾವಣೆಯಲ್ಲಿ ರಿಪಬ್ಲಿಕ್ ಪಾರ್ಟಿಯ ಐಸೆನ್ ಹಾವರ್-ರಿಚರ್ಡ ನಿಕ್ಸನ್‌ರ ಜೋಡಿಯು, ಅಲ್ಲಿಯ ಇನ್ನೊಂದು ವಿರೋಧಿ ಪಕ್ಷವಾದ "ಡೆಮೊಕ್ರೆಟಿಕ್ ಪಾರ್ಟಿ"ಯ ಮಿ. ಸ್ಟಿವೇನ್ಸನ್-ಕೇಫೊವರ್ ಜೋಡಿಯನ್ನು ಅಡ್ಡ ಮಲಗಿಸಿತು!

ಉಜ್ವಲ ಪರಿಶ್ರಮಶೀಲ ರಿಚರ್ಡ್ ನಿಕ್ಸನ್‌ರು ಚುನಾವಣೆಯ ಘನಘೋರ ಸಂಗ್ರಾಮದ ದಿನಗಳಲ್ಲಿ ನಾಲ್ವತ್ತೆರಡು ಸಾವಿರಕ್ಕಿಂತ ಅಧಿಕ ಮೈಲುಗಳ ಯಾತ್ರೆಯನ್ನು ಕೈಕೊಂಡರು! ಯಾಕೆ? ಕೇವಲ ತಮ್ಮ ಶ್ರೇಷ್ಠ ಜೋಡಿಯನ್ನು ಮೇಲಕ್ಕೆ ತರುವ ಪ್ರಚಾರಕ್ಕೋಸ್ಕರ! ಈ ೪೨ ಸಾವಿರ ಮೈಲುಗಳ ಪ್ರಚಾರಯಾತ್ರೆಯ ಕಾಲಕ್ಕೆ ಅವರು ೩೩ ರಾಜ್ಯಗಳಲ್ಲಿ ೧೫೦ ಸಲ ಕಳಕಳಿಯ ಭಾಷಣ ಮಾಡಿ ಒಂದು ಮಹತ್ವದ ವಿಕ್ರಮವನ್ನೇ ಸ್ಥಾಪಿಸಿದ್ದಾರೆ. ರಿಪಬ್ಲಿಕನ ಪಕ್ಷದ ಪ್ರಚಂಡ ವಿಜಯದ ಬಹು ಶ್ರೇಯಸ್ಸು ಈ ಧೀರ ನಿಕ್ಸನ್‌ರಿಗೆ ಸಲ್ಲುತ್ತದೆ! ಮಿ. ನಿಕ್ಸನ್‌ರು ಸಾರ್ವಜನಿಕ ಜೀವನದಲ್ಲಿ ಬೆಂದು ೧೦-೧೨ ವರ್ಷಗಳೂ ಪೂರ್ತಿಯಾಗಿಲ್ಲವೆಂದು ಹೇಳಿದರೆ ಯಾರಿಗಾದರೂ ಸೋಜಿಗವೇ ಅನಿಸುವದು! ಆದರೆ ೪೬ ವರ್ಷಗಳ ಅಮೇರಿಕೆಯ ಉಪರಾಷ್ಟ್ರಾಧ್ಯಕ್ಷ ಪದ ಇಂದು ದೇಶ-ವಿದೇಶಗಳಲ್ಲಿ ಪ್ರಸಿದ್ಧವಾಗಿದೆ. ರಾಷ್ಟ್ರಾಧ್ಯಕ್ಷ ಮಿಸ್ಟರ್ ಐಸೆನ್ ಹಾವರ್‌ರ ವ್ಯಕ್ತಿಗತ ಪ್ರತಿನಿಧಿಯ ಖಾತೆಯಿಂದ ರಿಚರ್ಡ್ ನಿಕ್ಸನ್‌ರು ೫೦ ವರ್ಷಕ್ಕಿಂತ ಮೇಲ್ಪಟ್ಟು ದೇಶಗಳ ಯಾತ್ರೆ ಮಾಡಿ ಅಪಾರ ಕೀರ್ತಿ—ಗೌರವವನ್ನು ಸಂಪಾದಿಸಿ ಕೊಂಡಿರುವರು! ಉಪರಾಷ್ಟ್ರಾಧ್ಯಕ್ಷ ನಿಕ್ಸನ್‌ರು, "ತಾವು ಅಂತಾರಾಷ್ಟ್ರೀಯ ತಾಪಾದಿ"ಗಳೆಂದು ಹೇಳುತ್ತಾರೆ. ಅವರು ಉಪಾಧ್ಯಕ್ಷರಾಗುವ ಮುನ್ನ ಪ್ರತಿನಿಧಿ ಸಭಾ ಮತ್ತು ಸಿನೇಟ್ ಈ ಎರಡು ಸಂಸ್ಥೆಗಳಲ್ಲಿ ಸದಸ್ಯರಾಗಿದ್ದರು. ಅವುಗಳ ಪಕ್ಷಿಯಿಂದಲೇ ಅವರು "ಸ್ವತಂತ್ರ ವಿಶ್ವ"ವನ್ನು ಬಲಪಡಿಸುವಗೋಸ್ಕರ ಪ್ರಸ್ತುತ ಸಹಾಯತಾ ಕಾರ್ಯಕ್ರಮಗಳ ಸಮರ್ಥನೆಯನ್ನು ಪ್ರಥಮವಾಗಿ ಮಾಡಿದರು. ಪ್ರಮುಖ ಧುರೀಣತ್ವಕ್ಕೆ ಅವಶ್ಯವಾದ ಕೆಲವು ಗುಣಗಳು ಮಿ. ನಿಕ್ಸನ್‌ರಲ್ಲಿ ತೋರಿ ಬರುತ್ತವೆ. ಆಕರ್ಷಕ ವ್ಯಕ್ತಿತ್ವಕ್ಕೆ ಶ್ರೀ ನಿಕ್ಸನ್ನರು ತನ್ನ ದೇಶದ ಉತ್ತಮ ಭಾಷಣಕಾರರಲ್ಲಿ ಒಬ್ಬರಾಗಿರುವರು.

"ಯುನೈಟೇಡ್ ಸ್ಟೇಟ್ಸ್ ಆಫ್ ಅಮೇರಿಕಾ"ದ ೩೬ನೇ ಉಪರಾಷ್ಟ್ರಾಧ್ಯಕ್ಷ ಮಿಸ್ಟರ್ ರಿಚರ್ಡ್ ನಿಕ್ಸನ್‌ರು ಮಧ್ಯದಿಂದ ರಾಜ ಕಾರಣಕ್ಕೆ ಕಾಲಿಟ್ಟರು. ಸನ್ ೧೯೪೨ರಲ್ಲಿ ಜ್ಯೂನಿಯರ್ ಲೆಫ್ಟಿನೆಂಟ್" ರೂಪದಿಂದ ಇವರು ಅಮೇರಿಕೆಯ ನೌಕಾದಳದಲ್ಲಿ ಪ್ರವೇಶ ಮಾಡಿದರು. ದಕ್ಷಿಣ ಪ್ರಶಾಂತದಲ್ಲಿ ೧ ವರ್ಷದ ವರೆಗೆ ಅಮೋಘ ಕಾರ್ಯದಲ್ಲಿ ಪಾರಂಗತರಾದರು. ಅದಕ್ಕಾಗಿ ಪುರಸ್ಕೃತರಾದರು. ವರ್ಷಗಳ ತರುವಾಯ "ಲೆಫ್ಟಿನೆಂಟ್ ಕಮಾಂಡರ್" ಹುದ್ದೆಯನ್ನು ಏರಿದರು. ಸನ್ ೧೯೪೬ರಲ್ಲಿ ಕೆಲಿಫೋರ್ನಿಯಾದ—ನಿರ್ವಾಚಕ ಮಂಡಲವು ಇವರಿಗೆ ಉಮೇದವಾರರನ್ನಾಗಿ ಆರಿಸಲು ತಮ್ಮ ಸಮ್ಮತಿಯನ್ನು ನೀಡಿತು. ತಕ್ಷಣವೇ ಬಹುಮತಗಳಿಂದ ಆರಿಸಲ್ಪಟ್ಟರು.

ದೇಶ-ವಿದೇಶಗಳಲ್ಲಿ ಕಮ್ಯುನಿಜಮ್‌ದಿಂದ ಸಂಘರ್ಷರತ ಅಮೇರಿಕೆಯ ಹಿರಿಯ ಧುರೀಣರಲ್ಲಿ ಮಿ. ಜಾನ್‌ಫಾಸ್ಟರ್ ಡಲೆಸ್ ತರುವಾಯ; ಈ ಶ್ರೇಷ್ಠ ಧುರೀಣರಾದ ರಿಚರ್ಡ ನಿಕ್ಸನ್‌ರ ಹೆಸರೇ ಎಲ್ಲಿಡೆಯಲ್ಲೂ ಆಗಾಗ್ಗೆ ಕೇಳಿ ಬರುತ್ತದೆ! ಪ್ರತಿನಿಧಿ ಸಭೆಯ-ಸದಸ್ಯತ್ವರೂಪದಲ್ಲಿ ಕಮ್ಯುನಿಸ್ಟರ ನಿರೀಕ್ಷಣೆ ಮಾಡುವದರಿಂದ ಅಧಿಕವಾಗಿ ಅವರಿಗೆ ರಾಷ್ಟ್ರವ್ಯಾಪೀ ಖ್ಯಾತಿ ಪ್ರಾಪ್ತವಾಯಿತು!

ಮಿ. ರಿಚರ್ಡ್ ನಿಕ್ಸನ್‌ರ ಜನ್ಮವು, ಅಮೇರಿಕೆಯ ಒಂದು ರಾಜ್ಯವಾದ ಕೆಲಿಫೋರ್ನಿಯಾದ "ಯೊರ್ಬ-ಲಿಂಡಾ" ಎಂಬ ಒಂದು ಚಿಕ್ಕ ಊರಲ್ಲಿ ಆಯಿತು. ಬಡ ಕಾಯಸ್ಥ ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿದರೂ ಚುರುಕು ಬುದ್ಧಿಯ ಬಾಲಕರಾಗಿದ್ದರು. ಇವರು ಚಿಕ್ಕಂದಿನಿಂದ ತಮ್ಮ ತಂದೆಯ ಒಂದು ಸಣ್ಣ ಕಿರಾಣಿ ಅಂಗಡಿಯಲ್ಲಿ ಕುಳಿತುಕೊಳ್ಳುತ್ತಿದ್ದರು. ಕೇವಲ ಅಲ್ಲಿ ಬರುವ ಗಿರಾಕಿಗಳನ್ನು ನೋಡುತ್ತ ಕೂಡ್ರದೇ ತಮ್ಮ ಮನಸ್ಸು ಹಾಗೂ ದೃಷ್ಟಿಯನ್ನು ಕೊಡು-ಕೊಳ್ಳುವ ವ್ಯವಹಾರದಲ್ಲಿ ಕೇಂದ್ರೀಕರಿಸುತ್ತಿದ್ದರು. ಅಂತೆಯೇ ಅಲ್ಪ ವಯಸ್ಸಿನಲ್ಲಿ ಅವರು ಉತ್ತಮ ವ್ಯಾಪಾರ ಮಾಡುವುದರಲ್ಲಿ ಪಳಗಿದರು. ಕೇವಲ ವ್ಯಾಪಾರ ಮಾಡುವುದೇ ಒಂದು ಕೆಲಸವೆಂದು ತಿಳಿಯದೇ ತಮ್ಮ ಜ್ಞಾನವನ್ನು ವಿಕಸಿತಗೊಳಿಸಲು ಅದೇ ಊರಲ್ಲಿರುವ "ವ್ಹಿಟಿಯರ್" ಹಾಗೂ "ಕೆಲಿಫೋರ್ನಿಯಾದ ಪಬ್ಲಿಕ್ ಸ್ಕೂಲ್"ಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹೊಂದಿದರು. ತರುವಾಯ ಮಾಧ್ಯಮಿಕ ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸಿ ಪ್ರಥಮ ಕ್ರಮಾಂಕದಲ್ಲಿ ತೇರ್ಗಡೆಹೊಂದಿ, ಕೊನೆಗೆ ಉಚ್ಚ ಶಿಕ್ಷಣವನ್ನು ಪಡೆಯಲು ಉತ್ತರ ಕೆಲಿಫೋರ್ನಿಯಾದಲ್ಲಿರುವ "ವ್ಹಿಟಿಯರ್ ಕಾಲೇಜ್"ದಲ್ಲಿ ಪ್ರವೇಶಿಸಿದರು. ಬಹು ಬೇಗನೇ ಬಿ. ಎ. ಪದವಿಯನ್ನು ಪಡೆದು, ಕಾಯಿದೆ ವಿಷಯದಲ್ಲಿ ವಿಶೇಷ ಆಸಕ್ತಿ ಇದ್ದ ಮೂಲಕ ತತ್ಕಾಲದಲ್ಲಿಯೇ "ಡ್ಯೂಕ್ ಯುನಿವರ್ಸಿಟಿ ಲಾ ಕಾಲೇಜ", ದಲ್ಲಿ ಸೇರಿದರು. ಆ ವಿಷಯದಲ್ಲಿ ಅಪಾರ ಅಭಿರುಚಿಯ ಕಾರಣ ಅಲ್ಪಾವಧಿಯಲ್ಲಿಯೇ ಲಾ ಪದವೀಧರರಾದರು! ವ್ಹಿಟಿಯರ್‌ದಲ್ಲಿ ವಕೀಲತನ್ನು ಮಾಡುವ ಸಮಯದಲ್ಲಿ ಕೆಂಪು ಕೇಶ ರಾಶಿಯಿಂದ ಹೊಳೆಯುವ, ಅಪಾರ ಸೌಂದರ್ಯವುಳ್ಳ ಓರ್ವ ಯುವತಿಯಾದ ಪೇಟ್ರಿಶಿಯಾಳ ಮೇಲೆ ನಿಕ್ಸನ್‌ರ ದೃಷ್ಟಿಯು ಹೊರಳಿತು. ಕೇವಲ ತಮ್ಮ ದೃಷ್ಟಿಕೋನದಿಂದಲೇ, ತಮ್ಮ ಪ್ರೀತಿಯ ಬಲೆಯನ್ನು ಆ ಸುಂದರ ತರುಣಿಯ ಮೇಲೆ ಬೀಸಿದರು. ತಡವಿಲ್ಲದೇ ಪೇಟ್ರಿಶಿಯಾಳು ನಿಕ್ಸನ್ನರಿಗೆ ಮನಸೋತು, ಅವರನ್ನೇ ಪ್ರೇಮ ವಿವಾಹವಾದಳು. ಹೇಗಿದೆ ಹಿರಿಯರ ಪ್ರಣಯ ಕಥೆ?

ಸನ್ ೧೯೫೩ರ ದಶಂಬರ ತಿಂಗಳಲ್ಲಿ ರಿಚರ್ಡ ನಿಕ್ಸನ್ನರು ನಮ್ಮ ಭಾರತಕ್ಕೆ ಭೆಟ್ಟಿಯಿತ್ತಿದ್ದರು. ಒಂದೆರಡು ವರ್ಷಗಳ ಹಿಂದೆ ಅವರು ಮೆಕ್ಸಿಕೋ ಮತ್ತು ವ್ಹೇನೆಝುವೇಲಾಗಳಲ್ಲಿ ಪ್ರವಾಸ ಕೈಕೊಂಡಾಗ ಅಲ್ಲಿಯ ನಿವಾಸಿಗಳು ಇವರ ಮೇಲೆ ತೀವ್ರ ಅಸಂತೋಷವನ್ನು ವ್ಯಕ್ತಪಡಿಸಿದರು. ಮಿ. ನಿಕ್ಸನ್ ಆಗ ಎಳ್ಳಷ್ಟು ಎದೆಗುಂದದೇ ತಮ್ಮ ಪ್ರವಾಸವನ್ನು ಯಶಸ್ವಿಗೊಳಿಸಿದರು! ಭಾರತದ "ವಿದೇಶಿ—ನೀತಿಗೆ" ಇಂದಿಗೂ ನಿಕ್ಸನ್ನರು ಮೆಚ್ಚುತ್ತಾರೋ, ಇಲ್ಲವೋ ಎಂಬುದನ್ನು ದೃಢವಾಗಿ ಹೇಳುವದು ದುಸ್ತರವಾಗಿದೆ. ಆದರೂ ಅವರು ಭಾರತಕ್ಕೆ ಆರ್ಥಿಕ ಸಹಾಯವನ್ನೀಡಲು ಸಮರ್ಥಕರಿದ್ದಾರೆ!

ಮಿಸ್ಟರ್ ರಿಚರ್ಡ ನಿಕ್ಸನ್ನ ಅಮೇರಿಕೆಯೊಡನೆ ಏಶಿಯಾ ಆಫ್ರಿಕಾಗಳ ತುಂಬಾ ನಿಕಟ ಸಂಬಂಧವನ್ನು ಬೆಳೆಸಿಕೊಳ್ಳುವ ಮಹತ್ವವನ್ನು ಚೆನ್ನಾಗಿ ಅರಿತುಕೊಂಡಿರುವರು. ಕಳೆದ ಎರಡು ವರ್ಷಗಳ ಪೂರ್ವದಲ್ಲಿ ಅವರು ಅಮೇರಿಕೆಗೆ, ಆಫ್ರಿಕೆಯೊಡನೆ ತಮ್ಮ ಸಂಬಂಧಕ್ಕೆ ಪ್ರಾಥಮಿಕತೆಯನ್ನು ಕೊಡಲು ಅವಶ್ಯಕತೆಯ ಮೇಲೆ ಭಾರಿ ಒತ್ತಾಯವನ್ನು ಹೇರಿದ್ದರು. ಅವರು ಸನ್ ೧೯೫೯ರಲ್ಲಿ ಮಾಸ್ಕೋದಲ್ಲಿ ಯಾತ್ರೆಯನ್ನು ಕೈಕೊಂಡಿದ್ದರು. ಕೇವಲ ಯಾತ್ರೆಗಳಿಂದಲೇ ಅಗಣಿತ ಕೀರ್ತಿಯನ್ನು ಗಳಿಸಿ ಆದರ್ಶ ರಾಜಕೀಯ ಧುರಿಣರೆಂದು ಪ್ರಪಂಚದಾಂತ್ಯದ ಮಾನವ ಕೋಟಿಯಿಂದ ಹೊಗಳಿಸಿಕೊಂಡಿರುವರು! ಕೆಲಕಾಲ ಅಧ್ಯಕ್ಷ ಐಸೆನ್ ಹಾವರ್‌ರರ ನೆರಳಿನಲ್ಲಿಯೇ ನಡೆದಾಡುವ ಉಪರಾಷ್ಟ್ರಾಧ್ಯಕ್ಷ ರಿಚರ್ಡ ನಿಕ್ಸನ್ನರು ಇಂದು ಪ್ರಖರ ಬಿಸಿಲಿನಲ್ಲಿ ಚಲಿಸುವವರಾಗಿದ್ದಾರೆ!

—ಶ್ರೀ ರಾಮಕೃಷ್ಣ ಅನಂತ ಪೈ.
ಅಂಕೋಲ, ಎನ್ಕೆ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: **ಶ್ರೀ. ಎಸ್. ಗೋಪೀಚಂದ ರಾವ್**, ವಿದ್ವಾನ್, ವಿಶಾರದ.

ಬೆಲೆ: ರೂ. ೧-೮-೦ (1=50)

ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೋ, ಉಡುಪಿ.

> ತನಗಿಂತ ಎಳೆಯರು ತನಗೆಸಗಿದ ಅಪಚಾರವನ್ನು ತಾಳಿಕೊಳ್ಳುವುದೇ ಸಹನಾಶೀಲತೆಯಾಗಿದೆ; ಏಕೆಂದರೆ, ತನಗಿಂತ ದೊಡ್ಡವರು ತನಗೈದ ಅಪರಾಧವನ್ನು ಎಲ್ಲರೂ ಸ್ವಾಭಾವಿಕವಾಗಿ ಸಹಿಸಿಕೊಳ್ಳುತ್ತಾರೆ.

NAVAYUGA

Founder:—

A. B. SHETTY,

Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೬-೮-'೫೯	೪೭

ರಾಜ್ಯಸರಕಾರಕ್ಕೆ ಪಾಠ

ಆಗಸ್ಟ್ ೯ರಂದು "ಕೇರಳದಿಂದ ಕಮ್ಯುನಿಸ್ಟರನ್ನು ಹೊಡೆದೋಡಿಸುವ" ಕಮ್ಯುನಿಸ್ಟೇತರ ಪಕ್ಷಗಳ ದಿನಾಚರಣೆಯ ಬದಲು ಇರಂಡು ಕಮ್ಯುನಿಸ್ಟರೇ ರಾಷ್ಟ್ರಪತಿಯವರ ಕೇರಳದ ಕಮ್ಯುನಿಸ್ಟ ಮಂತ್ರಿಮಂಡಳಿಯನ್ನು ಮನೆಗೆ ಕಳಿಸುವ ಕಾರ್ಯಕ್ರಮವನ್ನು ವಿರೋಧಿಸುವ ದಿನಾಚರಣೆಯನ್ನು ದೇಶದಾದ್ಯಂತ, ಕೇರಳದಲ್ಲಿ ಮಾತ್ರವಲ್ಲ, ನಡೆಸಿದರು. ರಾಷ್ಟ್ರಪತಿಯವರು ಕೈಗೊಂಡ ನಿರ್ಧಾರ ಹಾಗೂ ತೆಗೆದುಕೊಂಡ ಕಾರ್ಯಕ್ರಮವನ್ನು ಸಂವಿಧಾನಕ್ಕೆ ವಿರೋಧ ಎಂದೂ ಅವರು ಕೂಗಿದರು. ಕಮ್ಯುನಿಸ್ಟರು ಈ ಪಲ್ಲವಿಯನ್ನು ಈಗತಾನೇ ಹಾಡಲು ತೊಡಗಿರುವುದಲ್ಲ, ಕೇರಳದಲ್ಲಿ ವಿರೋಧೀ ಪಕ್ಷಗಳ ಆಂದೋಲನವು ತೀವ್ರವಾಗುತ್ತ ಬಂದಾಗ, ಕಮ್ಯುನಿಸ್ಟ ಸರಕಾರವು ಅದನ್ನು ಯಾವ ಉಪಾಯದಿಂದಲೂ ತಡೆಯಲು ಅಸಮರ್ಥವಾದಾಗ, ಕೇಂದ್ರದ ಹಸ್ತಕ್ಷೇಪವು ಸಂಭವನೀಯವೆಂದು ತಿಳಿದು ಬಂದಾಗಲೇ ಅವರು ಈ ರೀತಿ ಬಡಬಡಿಸಲಾರಂಭಿಸಿದ್ದಾರೆಂಬುದನ್ನು ಗಮನಿಸುವಾಗ, ಕಮ್ಯುನಿಸ್ಟರ ಈ ಘೋಷಣೆಯಲ್ಲಿ ಯಾವ ಹುರುಳೂ ಇಲ್ಲವೆಂಬುದು ಸುವಿದಿತವಾಗಿದೆ.

ಕಮ್ಯುನಿಸ್ಟೇತರರ ಹೇಳಿಕೆಯಂತೆ ಕೇರಳದ ಜನತೆಯು ಕೇಂದ್ರದ ಹಸ್ತಕ್ಷೇಪವನ್ನೇ ಬಯಸಿತ್ತು. ಕಮ್ಯುನಿಸ್ಟ ಸರಕಾರವು ಜನತೆಯ ವಿಶ್ವಾಸವನ್ನು ಕಳೆದುಕೊಂಡಿದ್ದು, ಸಂವಿಧಾನಕ್ಕೆ ಸರಿಯಾಗಿ ಅದು ಆಡಳಿತೆಯನ್ನು ನಿರ್ವಹಿಸುವಲ್ಲಿ ಸಂಪೂರ್ಣ ಅಸಫಲವಾಗಿದೆ ಎಂದು ಅವರು ಪ್ರಾರಂಭದಲ್ಲಿಯೇ ಹೇಳ ತೊಡಗಿದ್ದಾರೆ. ಕಮ್ಯುನಿಸ್ಟರು ಸಂಪ್ರದಾಯದಂತೆ ಅದನ್ನು ಅಲ್ಲಗಳೆದರೂ ಉಗ್ರೋಪಾಯಗಳಿಂದ ಆಂದೋಲನವನ್ನು ಸದೆಬಡಿಯಲು ಪ್ರಯತ್ನಿಸಿದರೂ ಅದು ಅಸಮರ್ಥತೆಯನ್ನೇ ಪ್ರದರ್ಶಿಸಿದೆ. ಪ್ರಧಾನಿಯವರು ಮರು ಚುನಾವಣೆಯೊಂದೇ ಕೇರಳದ ಸ್ಥಿತಿಸ್ಥಾಪಕತೆಗೆ ಪರಿಹಾರವೆಂದು ಸಲಹೆಯಿತ್ತರೂ ಅದು ಅವರಿಗೆ ಪಥ್ಯವಾಗಲಿಲ್ಲ. ಆದರೆ, ಮುಂದೆ ಮುಂದೆ, ಆಂದೋಲನವು ಬಲಿಯುತ್ತ ಬಂದಂತೆ, ಜನತೆಯ ಸಾಮಾಜಿಕ ಸ್ಥಿತಿಗತಿಗಳ ಮೇಲೆ ಅದು ದುಷ್ಪರಿಣಾಮವನ್ನು ಬೀರಿ, ಜೀವನವನ್ನೇ ಸ್ಥಗಿತಗೊಳಿಸಿ ತಡೆಯನ್ನುಂಟುಮಾಡಿರುವಾಗ, ಹಾಗೂ ದಿನದಿಂದ ದಿನಕ್ಕೆ ಅದು ಉಲ್ಬಣ ವಸ್ಥೆಗೇರುತ್ತಿರುವಾಗ, ಸರಕಾರದ ಶಕ್ತಿಸಾಹಸಗಳೆಲ್ಲವೂ ವ್ಯರ್ಥಗೊಂಡಿರುವಾಗ, ಕಮ್ಯುನಿಸ್ಟರು ನಿಜವಾಗಿಯೂ ಹೆದರಿಹೋಗಿರಬೇಕು; ಎಂತಲೇ ಕಮ್ಯುನಿಸ್ಟ ನಾಯಕರು ಪ್ರಧಾನಿಯವರನ್ನು ಕಂಡು ಕೇರಳದಲ್ಲಿನ ಅನಿಶ್ಚಿತತೆಯನ್ನು ದೂರೀಕರಿಸುವಂತೆ ಕೇಳಿಕೊಂಡರೆಂದೂ, ಕಮ್ಯುನಿಸ್ಟರೂ ಅಲ್ಲಿ ಕೇಂದ್ರದ ಹಸ್ತಕ್ಷೇಪವನ್ನೇ ಬಯಸುತಿದ್ದರೆಂದೂ ಪ್ರಧಾನಿಯವರು ಹೊರಗೆಡಹಿದ್ದಾರೆ. ಈ ಮಾತನ್ನು ಗಮನಿಸುವಾಗ, ಕಮ್ಯುನಿಸ್ಟರು ಸಂಪೂರ್ಣ ಸೋತು ಹೋಗಿರುವರೆಂದು ತಿಳಿದುಕೊಳ್ಳಲೇ ಬೇಕಾಗಿದೆ.

ಆದರೆ, ಇಂತಹ ಕಮ್ಯುನಿಸ್ಟರೇ ಈಗ ಅಲ್ಲಿ ರಾಷ್ಟ್ರಪತಿಯವರ ಆಳಿಕೆಯನ್ನು ಪ್ರತಿಭಟಿಸುವ ಮಹತ್ಕಾರ್ಯವನ್ನು ಮಾಡುತಿದ್ದಾರೆ. ಲೋಕಸಭೆಯಲ್ಲಿಯೂ ಅವರು ಸಭಾತ್ಯಾಗ ಮಾಡುವ ಅವಸರವನ್ನು ಕಳೆದುಕೊಳ್ಳುವಷ್ಟು ಮೂರ್ಖರಾಗಿಲ್ಲ. ಆದರೆ, ರಾಷ್ಟ್ರಪತಿಯವರ ಈ ಕೃತ್ಯವನ್ನು ಮಾತ್ರ ಅವರು ವಿರೋಧಿಸಿ ಮೂಮೂಲು ಮೆರವಣಿಗೆ ಘೋಷಣೆ ಮತ್ತು ಸಭೆಗಳನ್ನು ನಡೆಸುತಿದ್ದರೆ, ಚಿಂತೆಯಿಲ್ಲ. ರಶ್ಯನ್ ಕ್ರಾಂತಿ ದಿನಾಚರಣೆ ಮೊದಲಾದುವುಗಳಂತೆಯೇ ಇದೂ ಒಂದೆಂದು ಸುಮ್ಮನಿರಬಹುದು. ಆದರೆ, ರಾಷ್ಟ್ರಪತಿಯವರ ಈ ಕೃತ್ಯವು ಭಾರತೀಯ ಸಂವಿಧಾನಕ್ಕೇನೇ ಕುಠಾರಪ್ರಾಯವಾಗಿದೆ ಎಂದು ಹೇಳುವಷ್ಟು ಅವರು ಮುಂದುವರಿದುದು ಮಾತ್ರ ಶೋಚನೀಯ. ರಾಷ್ಟ್ರಪತಿಯವರು ಕೇರಳ ರಾಜ್ಯದ ಆಡಳಿತೆಯನ್ನು ವಶಪಡಿಸಿಕೊಳ್ಳಲು ಸಂವಿಧಾನದ ಇಶಾರೆಯ ಅನುಚ್ಛೇದದ ಮೂಲಕ ತನಗಿರುವ ಅಧಿಕಾರವನ್ನು ಬಳಸಿಕೊಂಡಿರುವರೆಂದು ಘೋಷಿಸಿರುವಾಗ ಆ ಕೃತ್ಯವು ಸಂವಿಧಾನ ವಿರೋಧಿಯಾಗುವುದಾದರೆ, ಈ ಇಶಾರೆಯ ನಿಬಂಧನೆಯನ್ವಯ ರಾಷ್ಟ್ರಪತಿಯವರಿಗೆ ರಾಜ್ಯ ಸರಕಾರವನ್ನು, ವಿಧಾನ ಸಭೆಯನ್ನೂ ಬರ್ಖಾಸ್ತುಗೊಳಿಸುವ ಅಧಿಕಾರವಿಲ್ಲ ಎಂದಂತಾಯಿತು. ಆದರೆ, ಇದು ಎಷ್ಟು ಮಟ್ಟಿಗೆ ಸತ್ಯ ಸಂಗತಿ? ಕಮ್ಯುನಿಸ್ಟರು ತಮ್ಮ ಸ್ವಭಾವ ಹಾಗೂ ಧೋರಣೆಗನುಸಾರವಾಗಿಯೇ ಇಂತಹ ಅಸಭ್ಯ ಘೋಷಣೆಗಳನ್ನು ಮಾಡುತ್ತಿರುವುದರಿಂದ, ಇವನ್ನು ಯಾರೂ ಗಮನಿಸದಿರಬಹುದು; ಆದರೆ, ವಾಸ್ತವಿಕವಾಗಿ ಕೇಳುವುದಾದರೆ, ಅವರು ಬಹುದೊಡ್ಡ ಅನ್ಯಾಯವನ್ನೇ ಮಾಡುತಿದ್ದಾರೆನ್ನಬೇಕಾಗಿದೆ.

ಕಮ್ಯುನಿಸ್ಟರು ಕೇರಳದಲ್ಲಿ ಸರಕಾರವನ್ನು ತಮ್ಮ ಪಕ್ಷದ ಬಲಸಂವರ್ಧನೆಗೆ ಉಪಯೋಗಿಸಿಕೊಂಡಿದ್ದುದು ಅವರ ಮಹಾಪರಾಧ. ಅಂತೆಯೇ ಇನ್ನಿತರ ಅಪರಾಧಗಳನ್ನೂ ಮಾಡಿದ್ದಾರೆ; ಸಂವಿಧಾನಕ್ಕನುಸಾರವಾಗಿ ಆಡಳಿತೆಯನ್ನವರು ನಿರ್ವಹಿಸಲು ಅಸಮರ್ಥರೆಂದು ರಾಜ್ಯಪಾಲರ ವರದಿ ಹಾಗೂ ಇನ್ನಿತರ ವಿಧಾನಗಳಿಂದ ರಾಷ್ಟ್ರಾಧ್ಯಕ್ಷರು ಮನಗಂಡೇ ತಮ್ಮ ಅಧಿಕಾರವನ್ನು ಚಲಾಯಿಸಿದ್ದಾರೆ. ಈ ಘಟನೆ ಭಾರತೀಯ ವಿವಿಧ ರಾಜ್ಯಗಳ ಸರಕಾರಗಳಿಗೂ ಒಂದು ಮುನ್ನೆಚ್ಚರಿಕೆ ಎನ್ನಬೇಕು. ಯಾವ ರಾಜ್ಯ ಸರಕಾರವು ಜನತೆಯ ಆಶೆಆಕಾಂಕ್ಷೆಗಳನ್ನು ಈಡೇರಿಸಲು ಅಸಮರ್ಥವಾಗಿದೆಯೋ, ಸಂವಿಧಾನದಲ್ಲಿ ಸಮಸ್ತ ಪ್ರಜಾಜನರಿಗೆ ಒದಗಿಸಲಾದ ಅಧಿಕಾರಗಳನ್ನು ಕಿತ್ತು ಅಪಚಾರವೆಸಗಲು ಮುಂದಾಗುವುದೋ ಆಗ ಅದು ಸಾಂವಿಧಾನಿಕವಾಗಿ ಕಾರ್ಯವೆಸಗಲು ಅಶಕ್ತವೆಂದೇ ತಿಳಿಯಬೇಕಾಗುವುದು. ಆದುದರಿಂದ, ಭಾರತದ ಉಳಿದ ರಾಜ್ಯಗಳಲ್ಲಿ ಸರಕಾರ ಚಲಾಯಿಸುತ್ತಿರುವ ಕಾಂಗ್ರೆಸ್ಸು ಕೂಡ ಕೇರಳದ ಈ ದುರ್ಘಟನೆಯಿಂದ ಸರಿಯಾದ ಪಾಠವನ್ನು ಕಲಿತುಕೊಂಡು ಕಾರ್ಯತತ್ಪರವಾಗಬೇಕು. ಜನತೆಯಲ್ಲಿ ಅಸಮಾಧಾನ, ಅಶಾಂತಿಗಳು ಕಾಣಿಸಿಕೊಳ್ಳದಂತೆ ಸರ್ವಪ್ರಕಾರದ ಪ್ರಯತ್ನ ನಡೆಸಬೇಕು. ಆಳಾಗಿ ದುಡಿಯಬಲ್ಲವನು ಮಾತ್ರ ಅರಸಾಗಿ ಬಾಳಬಲ್ಲನೇ ಹೊರತು, ಕೇವಲ ಅರಸಾಗಿ ಉಳಿದರೆ, ಅವನು ಪದಚ್ಯುತನಾಗುವುದು ಸ್ವತಃ ಸಿದ್ಧ. ಈ ಒಂದು ಕಠೋರ ಸತ್ಯದರ್ಶನವನ್ನು ಹೊರಗೆಡಹಿ ಉಳಿದವರಿಗೂ ಅದನ್ನು ನೋಡುವ ಅವಕಾಶವನ್ನು ಮಾತ್ರ ಒದಗಿಸಿದ ಕೀರ್ತಿಗೆ ಕೇರಳದ ಕಮ್ಯುನಿಸ್ಟರೇ ಭಾಜನರೆಂದು ಎನ್ನಬಹುದು; ಇನ್ನುಳಿದ ನಿದ್ದೆಗೇಡಿಗಳು ಕಮ್ಯುನಿಸ್ಟೇತರರೇ ಎಂದು ಹೇಳಿದರೂ ಅತ್ಯುಕ್ತಿಯಾಗಲಾರದು.

ಕಾಂಗ್ರೆಸ್ ಕಮ್ಯುನಿಸ್ಟಾದರೆ..

ಕಾಂಗ್ರೆಸ್ಸು ಒಂದು ಕಾಲದಲ್ಲಿ ಭಾರತೀಯರಿಗೆ ಇತ್ತಿದ್ದ ವಚನಗಳನ್ನು ನಡೆಸಿಕೊಡುವಲ್ಲಿ ಅಶಕ್ತವಾಗಿ ಅದು ಹೊಸ ಹೊಸ ಘೋಷಣೆಗಳನ್ನು ಹೊರಡಿಸಿ ಜನತೆಯನ್ನು ಭ್ರಮಾಕಾಶದಲ್ಲಿ ವಿಹರಿಸುವಂತೆ ಮಾಡಿ, ಕಾಂಗ್ರೆಸ್ಸು ಕಮ್ಯೂನಿಸ್ಟ್ ಪಕ್ಷವಾಗುತ್ತ ಬಂದಿದೆ. ಆದುದರಿಂದ ಕಾಂಗ್ರೆಸ್ಸಿನ ಈ ಅನ್ಯಾಯದ ಮಾರ್ಗವನ್ನು ವಿರೋಧಿಸಲು ಸ್ವತಂತ್ರ ಪಕ್ಷದಂತಹ ವಿರೋಧೀ ಪಕ್ಷವು ಅಗತ್ಯವಾಗಿದೆ ಎಂದು ಮುಂತಾಗಿ ಬೊಂಬಾಯಿಯಲ್ಲಿ ಸೇರಿದ್ದ ಸ್ವತಂತ್ರ ಪಕ್ಷದ ಸಮ್ಮೇಳನದ ವೇದಿಕೆಯಿಂದ ಪ್ರತಿಧ್ವನಿತವಾಗಿದೆ. ಒಂದು ಕಾಲದಲ್ಲಿ ಕಾಂಗ್ರೆಸಿಗರಾಗಿದ್ದವರೇ ಈಗ ಈ ಹೊಸ ಪಕ್ಷದ ನಾಯಕತನವನ್ನು ವಹಿಸಿರುವುದನ್ನು ಕಾಣುವಾಗ, ಇವರು ಜನತೆಗೆ ಈಗ ಕಾಂಗ್ರೆಸ್ ಕೊಡಲಸಮರ್ಥವಾದ ಹಿಂದೆ ಕಾಂಗ್ರೆಸ್ ಕೊಟ್ಟಿರುವ ವಚನಗಳನ್ನೇ ಕೊಡಲು ಸಮರ್ಥರಿದ್ದಾರೆ ಎನ್ನಬಹುದು. ಆದರೆ, ಅಂದು ಕಾಂಗ್ರೆಸ್ ಸರಕಾರ ನಡೆಸುವ ಕಷ್ಟದ ಅನುಭವವಿಲ್ಲದೆ ಆ ರೀತಿ ಮಾತಿತ್ತಿತ್ತಾದರೆ, ಈಗ ಮಾಜಿ ಅಧಿಕಾರಿಗಳು ವಚನವೀಯುತ್ತಾರೆ. ಇಷ್ಟೇ ವಿಶೇಷ. ಇವರೂ ಅಧಿಕಾರ ಚಲಾಯಿಸುವಾಗ, ಯಾವ ಪರಿವರ್ತನೆಯಾಗುವುದೆಂದು ನೋಡಬೇಕಷ್ಟೆ. ಆದರೆ, ಕಾಂಗ್ರೆಸ್ ದಿನಗಳೆದಂತೆ ಕಮ್ಯುನಿಸ್ಟ್ ಆಗಿ ಪರಿವರ್ತನೆಗೊಳ್ಳುತ್ತಿದೆ ಎಂಬುದು ಸ್ವತಂತ್ರ ಪಕ್ಷದವರ ಅಭಿಪ್ರಾಯ ಮಾತ್ರವಲ್ಲ; ಕಮ್ಯುನಿಸ್ಟರ ಸಂದೇಹವೂ ಇದೇ ರೀತಿ ಮಾಗಿದೆ. ಕೇರಳದಲ್ಲಿ ಕಮ್ಯುನಿಸ್ಟರು ಸಂವಿಧಾನ ವಿರೋಧಿಯಾಗಿ ಆಡಳಿತೆ ನಿರ್ವಹಿಸುತ್ತಿದೆ ಎಂದು ಕಾಂಗ್ರೆಸ್ಸು ದೂರಿದ್ದರೆ, ಈಗ ಕಾಂಗ್ರೆಸ್ ಸಂವಿಧಾನಕ್ಕೆ ವಿರೋಧವಾಗಿ ಕೇರಳದಲ್ಲಿ ಕೇಂದ್ರ ಹಸ್ತಕ್ಷೇಪ ಮಾಡುವಂತೆ ಮಾಡಿ

ಸಂಕ್ಷಿಪ್ತ ಸುದ್ದಿಗಳು

ರಾಜ್ಯಪಾಲರಿಗೆ ವಿಶೇಷಾಧಿಕಾರ

ರಾಷ್ಟ್ರಪತಿ ಆಳಿಕೆಯ ಘೋಷಣೆಯೊಂದಿಗೆ ಕೇರಳದ ಸರಕಾರ ಉಚ್ಚಾಟಿತವಾಯಿತಲ್ಲದೇ ವಿರೋಧೀ ಪಕ್ಷಗಳು ಸಂಘಟಿಸಿದ್ದ ಆಂದೋಲನವು ಹಿಂತೆಗೆಯಲ್ಪಟ್ಟಿತು. ಕಮ್ಯುನಿಸ್ಟರ ಜೀವವಿತ್ತಗಳಿಗೆ ಹಾನಿ ತಂದೀಯಲಾಗುತ್ತದೆ ಎಂದು ಈಗ ದೂರಲಾಗಿದೆ. ಕೇರಳದ ರಾಜ್ಯಪಾಲರಿಗೆ ರಾಜ್ಯದಲ್ಲಿ ಸಾಮಾನ್ಯ ಪರಿಸ್ಥಿತಿಯನ್ನು ತರುವುದಕ್ಕೂ, ರಾಜಕೀಯ ತಂಟೆ ಹಾಗೂ ದ್ವೇಷಪೂರ್ಣವಾದ ವಿಘಾತಕ ಶಕ್ತಿಗಳನ್ನು ತಡೆಹಿಡಿಯುವುದಕ್ಕೂ ಕಠೋರ ಕ್ರಮಗಳನ್ನು ಕೈಗೊಳ್ಳಲು ವಿಶೇಷಾಧಿಕಾರಗಳನ್ನೀಯಲಾಗಿದೆ. ರಾಜ್ಯದ ಆರ್ಥಿಕ ಸ್ಥಿತಿಗತಿಗಳು ತೀರ ಕೆಟ್ಟಿದ್ದು, ಕರವಸೂಲಿಯು ಮೊದಲೇ ಸರಿಯಾಗಿ ನಡೆಯುತಿದ್ದಿಲ್ಲವೆಂದೂ ಆಂದೋಲನದಿಂದಾಗಿ, ಅದು ಮತ್ತಷ್ಟು ಕೆಟ್ಟುಹೋಗಿದೆ ಎಂದೂ ಈಗ ತಿಳಿದು ಬಂದಿದ್ದು, ಅದನ್ನು ವಸೂಲು ಮಾಡಲು ಆವಶ್ಯಕ ಕಾರ್ಯ ಕ್ರಮವನ್ನು ಕೈಗೊಳ್ಳಲು ಕೇಂದ್ರವು ಆದೇಶಿಸಿದೆ.

ವಿಜ್ಞಾನದಿಂದ ಆಹಾರವಸ್ತುಗಳು

ಜಗತ್ತಿನ ಜನರ ಮುಖ್ಯ ಆಧಾರವಾದ ಆಹಾರ ಪದಾರ್ಥಗಳು ಸಾಕಷ್ಟು ದೊರೆಯದೆ ಇದ್ದು ಅದನ್ನು ಆಧುನಿಕ ವಿಜ್ಞಾನ ಮುಖ್ಯವಾಗಿ ಅಣು ವಿಜ್ಞಾನದಿಂದ ಬೆಳೆಸುವಂತೆ ಮಾಡುವ ಸಾಧ್ಯಾಸಾಧ್ಯತೆಗಳನ್ನು ವಿವೇಚಿಸುವುದು ಅವಶ್ಯ. ಮತ್ತು ಜಾಗತಿಕ ಆರೋಗ್ಯ ಸಂಸ್ಥೆಯ ಏಶ್ಯ—ದೂರ ಪ್ರಾಚ್ಯ ಪ್ರಾದೇಶಿಕ ಆಹಾರ ತಾಂತ್ರಿಕ ವಿಜ್ಞಾನ ಪರಿಷತ್ತಿನಲ್ಲಿ ಸೇರಿದ ಸದಸ್ಯರು ಈ ವಿಷಯವನ್ನು ಅವಶ್ಯ ಪರಿಶೀಲಿಸಬೇಕೆಂದು ಮ್ಯೆಸೂರಿನ ರಾಜ್ಯಪಾಲರೂ ಏಶ್ಯ ಮತ್ತು ದೂರ ಪ್ರಾಚ್ಯಗಳಿಗೊಂದು ಪ್ರತ್ಯೇಕ ಆಹಾರ ಕೇಂದ್ರ ಬೇಕೆಂದು ಕೇಂದ್ರ ಆಹಾರ ಮಂತ್ರಿಗಳೂ ತಮ್ಮ ಭಾಷಣದಲ್ಲಿ ಆಡಿದ್ದಾರೆ.

ಭಂಡಾರನಾಯಕೆಯವರಿಗೆ ಆಹ್ವಾನ

೧೦೧ ಸದಸ್ಯರಿರುವ ಸಿಂಹಳೀಯ ಪ್ರತಿನಿಧಿ ಸಭೆಯಲ್ಲಿ ೫೦ ಸದಸ್ಯರ ಬೆಂಬಲದಿಂದ ಶ್ರೀ ಭಂಡಾರನಾಯಕೆಯವರು ಸರಕಾರ ನಡೆಸುತಿದ್ದಾರೆ. ಆದರೆ, ಈಗ ಸರಕಾರದ ಬಹುಮತ ಕುಸಿಯುತ್ತಿದೆ ...

ಲಾಯಿಸಿದೆ ಎಂದು ಅವರೂ ದೂರುತ್ತಾರೆ. ಈ ಪರಸ್ಪರ ಆರೋಪ ಪ್ರತ್ಯಾರೋಪಗಳು ಸಮಾನವಾದರೆ, ಸ್ವತಂತ್ರ ಪಕ್ಷದ ಧುರೀಣರ ಅಭಿಪ್ರಾಯ ಸರಿಯೇ ಅಲ್ಲವೆ?

ನಿರೀಕ್ಷಿಸಿರಿ!

ಬರುವ ವಾರ

ಸ್ವಾತಂತ್ರ್ಯ ದಿನೋತ್ಸವ ವಿಶೇಷ ಸಂಚಿಕೆಯು

ಉತ್ತಮ ಲೇಖನ, ಕವನ, ಕಥೆಗಳಿಂದೊಡಗೂಡಿ ವಿಶಿಷ್ಟರೀತಿಯಲ್ಲಿ ಪ್ರಕಟವಾಗುವುದು.

ಅಲ್ಲಲ್ಲಿಯ ಸುದ್ದಿ ಸಾರ

ಕೆನರಾ ಬ್ಯಾಂಕಿನ ಆದರ್ಶ ಸಾಹಸ.

ಮೈಸೂರು ರಾಜ್ಯದ ಪ್ರವಾಹಪೀಡಿತ ಪ್ರದೇಶಗಳಿಗೆ ಪರಿಹಾರ ನೀಡುವ ಸಲುವಾಗಿ ಕೆನರಾ ಬ್ಯಾಂಕು ಸಂಗ್ರಹಿಸಿದ ಹಣದಲ್ಲಿ ರೂ. ಒಂದು ಲಕ್ಷದ ಒಂದನ್ನು ಬ್ಯಾಂಕಿನ ಅಧ್ಯಕ್ಷ ಶ್ರೀ ಎ. ದಾಮೋದರ ಪೈ ಅವರು ಮೈಸೂರಿನ ಮುಖ್ಯ ಮಂತ್ರಿ ಶ್ರೀ. ಬಿ. ಡಿ. ಜತ್ತಿಯವರಿಗೆ ಚೆಕ್ಕಿನ ಮೂಲಕ ತಾ. ೨೯ ರಂದು ಅರ್ಪಿಸಿದರು. ಈ ಬಗ್ಗೆ ಏರ್ಪಡಿಸಲಾದ ಸಮಾರಂಭದಲ್ಲಿ ರಾಜ್ಯ ಮಂತ್ರಿ ಮಂಡಳಿಯ ಸದಸ್ಯರೂ ಇನ್ನಿತರ ಪ್ರಮುಖರೂ ಉಪಸ್ಥಿತರಿದ್ದರು.

ಸಭಿಕರನ್ನು ಸ್ವಾಗತಿಸುತ್ತ ಶ್ರೀ ಎ. ದಾಮೋದರ ಪೈ ಅವರು, "ನಿಮ್ಮೆಲ್ಲರ ಆಶೀರ್ವಾದದಿಂದ, ಜುಲೈ ೧೩ ರಂದು ಕೆನರಾ ಬ್ಯಾಂಕು ಪ್ರವಾಹ ಪರಿಹಾರ ನಿಧಿಯು ಒಂದು ಲಕ್ಷದ ಗುರಿಯನ್ನಿಟ್ಟು ಕೊಂಡು ಉದ್ಘಾಟಿತವಾಗಿತ್ತು. ಒಂದು ಪಕ್ಷದ ಅಲ್ಪಾವಧಿಯಲ್ಲೇ ಅದು ತನ್ನ ಗುರಿಯನ್ನು ಸಾಧಿಸಿದೆ ಎಂದು ತಿಳಿಸಲು ಸಂತೋಷ ಪಡುತ್ತೇನೆ" ಎಂದರು. ಶ್ರೀ ಪೈ ಅವರು ನಿಧಿಯ ಅಸಂಖ್ಯಾತ ದಾನಿಗಳಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತ, "ನಮ್ಮ ಗುರಿಯು ಪೂರೈಸಿದರೂ ಕಾರ್ಯವು ಕೊನೆಗೊಂಡಿಲ್ಲ; ಇನ್ನೂ ತಮ್ಮ ಸಹಾಯವನ್ನು ರವಾನಿಸುವ ಸಹಾನುಭೂತಿಪರರು ಅಸಂಖ್ಯರಿರುವರು, ಆದುದರಿಂದ, ಅವರು ತಮ್ಮ ಕೊಡುಗೆಯನ್ನು ಕೆನರಾ ಬ್ಯಾಂಕಿಗೆ ಬೇಗನೇ ರವಾನಿಸಬೇಕೆಂದು ವಿನಂತಿಸುತ್ತೇನೆ" ಎಂದು ಹೇಳಿದರು.

ಚೆಕ್ಕನ್ನು ಸ್ವೀಕರಿಸುತ್ತ ಮುಖ್ಯ ಮಂತ್ರಿ ಜತ್ತಿಯವರು, "ಇತ್ತೀಚೆಗೆ ನಮ್ಮ ದುರದೃಷ್ಟದಿಂದ ರಾಜ್ಯದ ಪಶ್ಚಿಮ ಭಾಗದಲ್ಲಿ ತೋರಿಬಂದ ಪ್ರವಾಹಗಳಿಂದ ನಿಸ್ಸಹಾಯಂದವರಿಗೆ ನೀಡಲು ಕೊಡಲಾಗುತ್ತಿರುವ

ರಕಾರೇತರ ಪಕ್ಷಗಳು ಅವರನ್ನು ಪಂಥಾಹ್ವಾನವಿತ್ತು ಕರೆಯುವಂತಾಗಿದೆ. ಪ್ರತಿನಿಧಿ ಸಭೆಯ ಸದಸ್ಯರು, ಮಂತ್ರಿಗಳ ವಿರುದ್ಧ ಲಂಚ ಸ್ವೀಕರಿಸಿದ ಆರೋಪವನ್ನು ಹೊರಿಸಿ, ಅದನ್ನು ವಿಚಾರಿಸಲು ಒಂದು ಸಮಿತಿಯನ್ನೇರ್ಪಡಿಸಬೇಕೆಂದು ಸರಕಾರವನ್ನು ಕೇಳಿಕೊಂಡಿವೆ. ಇದು ನಿಲುವಳಿ ಸೂಚನೆಯಾಗಿ ಮುಂದೆ ಬರುವಾಗ ಕೇವಲ ವಿರೋಧೀಪಕ್ಷಗಳವರು ಮಾತ್ರವಲ್ಲ, ಸ್ವಯಂ ಸರಕಾರಿ ಪಕ್ಷದ ಕೆಲವು ಸದಸ್ಯರೂ ಇದನ್ನು ಬೆಂಬಲಿಸಲಿರುವರೆಂದು ಹೇಳಲಾಗಿದೆ. ಭಂಡಾರ ನಾಯಕೆಯವರು ಈ ಗಂಭೀರಾರೋಪದಿಂದ ಏನಾಗುವರೆಂದು ಹೇಳುವುದು ಅಸಾಧ್ಯ.

ರಶ್ಯನರ ಯುಕ್ತಿ ಚಾತುರ್ಯ

ಅಮೆರಿಕೆಯ ಉಪಾಧ್ಯಕ್ಷ ಶ್ರೀ ರಿಚಾರ್ಡ್ಸ್ ನಿಕ್ಸನರು ರಶ್ಯದ ಸಂದರ್ಶನವನ್ನು ಕೊನೆಗೊಳಿಸಿದರು. ಅವರನ್ನು ಹಲವು ರೀತಿಯಾಗಿ ಪ್ರಶ್ನಿಸಿದ ಪತ್ರಿಕಾಕರ್ತರಿಗೆ ಅವರು ಸಮರ್ಪಕವಾದ ಉತ್ತರವಿತ್ತಿದ್ದಾರೆ. ರಶ್ಯವು ವಿದೇಶೀ ಠಾಣ್ಯಗಳನ್ನು ತ್ಯಜಿಸಿದೆ; ಆದರೆ, ಅಮೆರಿಕೆ ಬಿಟ್ಟುಕೊಟ್ಟಿಲ್ಲ ಎಂಬುದರ ಬಗ್ಗೆ ಪ್ರಶ್ನಿಸಿದಾಗ, ರಶ್ಯವು ತನ್ನ ಸೇನಾ ಠಾಣ್ಯಗಳನ್ನು ಹಿಂತೆಗೆದು ಕೊಂಡಿದೆ ಎಂಬ ಮಾತನ್ನು ವಾಸ್ತವಿಕವಾಗಿ ಪರಿಶೀಲಿಸುವುದಾದರೆ, ಪೂರ್ವ ಜರ್ಮನಿ, ಪೋಲೇಂಡ್ ಮತ್ತು ಹಂಗೆರಿಗಳೂ ರಶ್ಯಕ್ಕೆ ಸೇರಿವೆಂದು ಒಪ್ಪಿಕೊಳ್ಳಬೇಕಾಗಿದೆ. ಆದರೆ, ಅದು ಸಾಧ್ಯವೆ? ಎಂದವರು ಕೇಳಿದರು. ತಾವು ಆಕ್ರಮಿಸಿಕೊಂಡಿರುವ ಎಲ್ಲವೂ ತಮ್ಮದೇ ಎನ್ನುವ ಕಮ್ಯುನಿಸ್ಟರ ಯುಕ್ತಿಚಾತುರ್ಯ ಮಾತ್ರ ಪ್ರಶಂಸನೀಯವಲ್ಲವೆ?

ಈ ರೂ.೧,೦೦,೦೦೦ರ ದಾನವನ್ನು ಸ್ವೀಕರಿಸಲು ನನಗೆ ಅತೀವ ಆನಂದವಾಗುತ್ತದೆ. ನಾನು ಕೃತಜ್ಞತಾ ಪೂರ್ವಕವಾಗಿ ನಿಮ್ಮ ಕೊಡುಗೆಯನ್ನು ಸ್ವೀಕರಿಸುತ್ತೇನೆ." ಎಂದರು. ಮೈಸೂರು ರಾಜ್ಯದ ವ್ಯಾಪಾರಿವರ್ಗದ ಸಮಾಜ ಸೇವಾ ಬುದ್ಧಿಯನ್ನು ಪ್ರಶಂಸಿಸುತ್ತ, 'ಸಮಾಜ ಸೇವಾಕಾರ್ಯಗಳಲ್ಲಿ ಆಸಕ್ತಿ ವಹಿಸುವ ಕೆನರಾ ಬ್ಯಾಂಕಿನ ಅಧಿಕಾರಿಗಳಿಗೆ ನನ್ನ ವಿಶೇಷ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ. ಬ್ಯಾಂಕು ಮತ್ತು ಇತರ ಸಂಸ್ಥೆಗಳು ಕೆನರಾ ಬ್ಯಾಂಕಿನ ಆದರ್ಶವನ್ನು ಅನುಸರಿಸುವುದು ಅವಶ್ಯ. ಕೆನರಾ ಬ್ಯಾಂಕು ನಮ್ಮ ರಾಜ್ಯಕ್ಕೆ ಸೇರಿದುದೆಂದು ಹೇಳಲು ನನಗೆ ಹೆಮ್ಮೆಯೆನಿಸುತ್ತದೆ ಎಂದರು.

ಮೈಸೂರು ಚೇಂಬರ್ ಆಫ್ ಕಾಮರ್ಸಿನ ಅಧ್ಯಕ್ಷರೂ ಬ್ಯಾಂಕಿನ ಡೈರೆಕ್ಟರರೂ ಆದ ಶ್ರೀ ಜಿನಾ ಭಾಯಿ ದೇವಿದಾಸರು ಧನ್ಯವಾದ ಸಮರ್ಪಿಸಿದರು.

ಉದ್ಘಾಟನೆ— ಮಂಗಳೂರಿನ ಸೈಂಟ್ ಎಲೋಸಿಯಸ್ ಕಾಲೇಜಿನ ಕರ್ನಾಟಕ ಸಂಘದ ಉದ್ಘಾಟನೆಯು ಪ್ರಸಿದ್ಧ ಸಾಹಿತಿ ಶ್ರೀ ವಿ. ಎಂ. ಇನಾಮುದಾರರಿಂದ ತಾ. ೧ರಲ್ಲಿ ನೆರವೇರಿಸಲ್ಪಟ್ಟಿತು. ಜನಜೀವನದಲ್ಲಿ ಸಾಹಿತ್ಯದ ಸ್ಥಾನದ ಕುರಿತು ಉದ್ಘಾಟಕರು ಮಾತನಾಡಿ ಸಂಘಕ್ಕೆ ಶುಭವನ್ನು ಹಾರೈಸಿದರು. ಆರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ. ಟಿ. ಗೋಪಾಲಕೃಷ್ಣಭಟ್ಟರು ಸ್ವಾಗತಿಸಿದ್ದರು.

ನೆರೆಪರಿಹಾರಾರ್ಥವಾಗಿ ಹಂಚಲು ಮೈಸೂರು ಸರಕಾರವು ದಕ್ಷಿಣಕನ್ನಡಕ್ಕೆ ರೂ.೫೦,೦೦೦ ಧನ ಸಹಾಯವನ್ನು ಮಾಡಿರುತ್ತದೆ.

ನಿಷೇಧ ದಿನಾಚರಣೆ— ಕೇರಳದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ವಿರೋಧಿಸುವರೆ ಮಂಗಳೂರಿನ ಕಮ್ಯುನಿಸ್ಟ್ ಪಕ್ಷದ ವತಿಯಿಂದ ತಾ.೩ರಲ್ಲಿ ಕೇಂದ್ರ ಮೈದಾನಿನಲ್ಲಿ ಶ್ರೀ ಸಿಂಪ್ಸನ್ ಸೋನ್ಸರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀಗಳಾದ ಎ ಕೃಷ್ಣಶೆಟ್ಟಿ, ಎ. ಶಾಂತಾರಾಮ್ ಪೈ, ವಾಮನ ಕೊಡಿಯಾಲ ಬೈಲ್ ಮೊದಲಾದವರ ಭಾಷಣಗಳಾದುವು.

ಉಡುಪಿ ಮುನಿಸಿಪಲ್ ಕಮಿಷನರರಿಗೆ ವಿದಾಯ ಸತ್ಕಾರ— ಉಡುಪಿ ನಗರಸಭೆಯ ಕಮಿಶನರ್ ಶ್ರೀ ವಿ. ಎಸ್. ಡಿಸೋಜರು ತಮ್ಮ ನೌಕರಿಯಿಂದ ನಿವೃತ್ತರಾದ್ದರಿಂದ ತಾ ೧ರಲ್ಲಿ ಮುನಿಸಿಪಲ್ ನೌಕರರು ಅವರಿಗೆ ವಿದಾಯ ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಪೌರಸಭೆಯ ಹೆಲ್ತ್ ಆಫೀಸರ್ ಡಾ| ಪಿ. ಎಲ್. ಪಂಡಿತರು ನೌಕರರ ಪರವಾಗಿ ಮಾತನಾಡಿ ಸೋಜರ ಆರಾಮಜೀವನ ಸುಖದಾಯಕವಾಗಲೆಂದರು. ಶ್ರೀ ಸೋಜರು ಸಂದರ್ಭೋಚಿತ ಮಾತನಾಡಿ ಕೃತಜ್ಞತೆಯನ್ನರ್ಪಿಸಿದರು. ಶ್ರೀ ಕೆ. ಎಸ್. ನಾಯ್ಕರು ಆಭಾರ ಸೂಚಿಸಿದರು. ತಾ. ೧ ರಂದು ಆರೋಗ್ಯಾಧಿಕಾರಿಗಳು ಕಮಿಷನರರ ಚಾರ್ಜನ್ನು ವಹಿಸಿಕೊಂಡರು.

ತಾ. ೫ನೇ ಸಂಜೆ ನಗರಸಭಾಧ್ಯಕ್ಷರು ಶ್ರೀ ಸೋಜರಿಗೆ ವಿದಾಯಸತ್ಕಾರವಿತ್ತರು. ನಗರಸಭಾಧ್ಯಕ್ಷ ಡಾ| ಕೆ. ಎಲ್. ಐತಾಳರು ಸಂದರ್ಭೋಚಿತ ಮಾತುಗಳನ್ನಾಡಿ ಶುಭವಿದಾಯ ಕೋರಿದರು. ಶ್ರೀ ಸೋಜರು ತನಗಿತ್ತ ಸತ್ಕಾರಕ್ಕಾಗಿ ಕೃತಜ್ಞತೆಯನ್ನು ಸೂಚಿಸಿ ಇಂದೇ ಬೆಳಿಗ್ಗೆ ಕಮಿಷನರರ ಚಾರ್ಜು ವಹಿಸಿಕೊಂಡ ಶ್ರೀ ಐ. ಜೋಶುವರೂ ಸಮಯೋಚಿತವಾಗಿ ಮಾತನಾಡಿದರು.

ವಿಮಾ ವ್ಯವಹಾರ ಸ್ಪರ್ಧೆಯ ವಿಜಯಿಗಳಿಗೆ ಪಾರಿತೋಷ ವಿತರಣಾ ಸಮಾರಂಭವು ತಾ. ೧ರಂದು ಬೋರ್ಡ್ ಹೈಸ್ಕೂಲ್ ಕಟ್ಟಡದಲ್ಲಿ ಯಲ್. ಐ.ಸಿ ಯ ವತಿಯಿಂದ ನೆರವೇರಿತು ಉಪಾಧ್ಯಕ್ಷರಾದ ಮೇಲೆ ಅಸಿಸ್ಟಂಟ್ ಡಿವಿಜನಲ್ ಮೆನೇಜರ ಶ್ರೀ ಇ ಯು ಜಾಕೋಬರು ಸ್ವಾಗತ ಭಾಷಣ ಮಾಡಿದರು. ೧೯೫೮ರ ಕೊನೆಯ ಮೂರು ತಿಂಗಳಲ್ಲಿ ಲೈಫ್ ಇನ್ ಶೂರೆನ್ಸ್ ಕಾರ್ಪೋರೇಶನಿನ ಉಡುಪಿ ಶಾಖೆಯ ಏಜಂಟರುಗಳಾದ ಶ್ರೀ ಕೆ. ರಾಮದಾಸ ಭಟ್ಟರಿಗೆ ಅತಿ ಹೆಚ್ಚು ವಹಿವಾಟು ಮಾಡಿದ್ದಕ್ಕಾಗಿಯೂ ಶ್ರೀ ಎಂ. ಸಿ. ಮಾಬೆನ್ನರಿಗೆ ಅತಿ ಹೆಚ್ಚು ಪಾಲಿಸಿಗಳನ್ನು ಮಾಡಿದ್ದಕ್ಕಾಗಿಯೂ ಸುವರ್ಣ ಪದಕಗಳನ್ನು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಿವಿಜನಲ್ ಮೆನೇಜರ್ ಶ್ರೀ ಕೆ. ಆರ್. ಕೆ. ಭಟ್ಟರ ಹಸ್ತದಿಂದ ಕೊಡಿಸಲಾಯಿತು. ಸಮಾರಂಭಕ್ಕೆ ಹಲವಾರು ಏಜಂಟರೂ ಊರಿನ ಮಹನೀಯರೂ ಆಗಮಿಸಿದ್ದರು. ಅಸಿಸ್ಟಂಟ್ ಬ್ರಾಂಚ್ ಮೆನೇಜರ್ ಶ್ರೀ ಟಿ. ಸಿ. ಯನ್. ಸಂಜಿಯೂರರು ಧನ್ಯವಾದಗಳನ್ನಿತ್ತರು.

ಅನಂತರ ವಿಮಾ ಏಜಂಟರ ಪರಿಷತ್ತು ಜರಗಿತು. ವಿಮಾ ಏಜಂಟರು ನಗರಗಳಲ್ಲಿಯೇ ತಮ್ಮ ಕಾರ್ಯಕ್ಷೇತ್ರಗಳನ್ನಿಟ್ಟುಕೊಳ್ಳದೆ ಗ್ರಾಮಗ್ರಾಮಗಳಿಗೂ ಅದನ್ನು ವಿಸ್ತರಿಸಿಕೊಂಡು ಹಳ್ಳಿಯ ಜನತೆಗೂ ವಿಮೆಯ ಪ್ರಯೋಜನ ದೊರಕಿಸುವಂತೆ ಮಾಡಬೇಕೆಂದು ಪರಿಷತ್ತನ್ನು ಉದ್ಘಾಟಿಸುತ್ತಾ ಶ್ರೀ ಕೆ. ಆರ್. ಕೆ. ಭಟ್ಟರು ಉಪದೇಶಿಸಿದರು. ಏಜಂಟರುಗಳ ಕೆಲವೊಂದು ತೊಡಕುಗಳ ಕುರಿತು ಕೆಲವರು ಸೂಚನೆಗಳನ್ನಿತ್ತರು. ಏಜಂಟರ ಪರವಾಗಿ ಶ್ರೀಕೊಟ್ಟಕಾರ್ ಮಂಜುನಾಥಪೈ ಗಳು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಲಕ್ಷ್ಮೀ ವೆಂಕಟೇಶ ದೇವಸ್ಥಾನದಲ್ಲಿ— ತಾ. 9—8—59 ರಿಂದ ತಾ. 16—8—59ರ ವರೆಗೆ ವಾಡಿಕೆಯಂತೆ ಭಜನೆ ಸಪ್ತಾಹ ಮಹೋತ್ಸವವು ಜರಗಲಿರುವುದೆಂದೂ ಸರ್ವರೂ ಸಂತ ಮಂಡಳಿಯೊಡನೆ ಬಂದು ಸಹಕರಿಸಿ ಶ್ರೀ ದೇವರ ಶ್ರೀ ಮುಡಿಗಂಧ ಪ್ರಸಾದವನ್ನು ಸ್ವೀಕರಿಸಬೇಕೆಂದೂ ಆಡಳಿತೆ ಮುಕ್ತೇಸರ್ ಡಾ| ಪಿ. ರಾಘವೇಂದ್ರ ನಾಯ್ಕರು ಆತ್ಮಾದರದಿಂದ ಕೋರುತ್ತಾರೆ.

ಬೆಳ್ಳಾರೆಯಲ್ಲಿ ನೆರೆ ಪರಿಹಾರ ನಿಧಿಯ ಬಗ್ಗೆ ಸಹಾಯಧನ ಸಂಗ್ರಹ

ತಾ. 22—7—59ರಲ್ಲು ಪುತ್ತೂರು ತಾಲೂಕು ಆಫೀಸಿನಲ್ಲಿ ಶ್ರೀ ಕೆ. ಪಿ. ಗೌಡ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿದ "ಎಮರ್ಜನ್ಸಿ ರಿಲೀಫ್ ಕೆಲಸಗಳ ತಾಲೂಕು ಎಡ್ವೈಸರಿ ಕಮಿಟಿಯಲ್ಲಿ ಆದ ನಿರ್ಣಯದಂತೆ ನೆರೆ ಪರಿಹಾರ ನಿಧಿ ಸಂಗ್ರಹಣೆಗಾಗಿ, ತಾಲೂಕಿನ ಬೇರೆ ಬೇರೆ ಬ್ಲೋಕ್‌ಗಳಲ್ಲಿ ಕಮಿಟಿಗಳನ್ನು ಮಾಡಲಾಗಿತ್ತು. ಸುಳ್ಯ ಬ್ಲೋಕಿನಲ್ಲಿಯ ಬೆಳ್ಳಾರೆ ಗ್ರೂಪ್‌ನಲ್ಲಿ ಒಟ್ಟು ರೂಪಾಯಿ 70.25 ನಿಧಿ ಸಂಗ್ರಹವಾಗಿದೆ. ಈ ನಿಧಿಗೆ ಬೆಳ್ಳಾರೆ, ಐವರ್ನಾಡ್, ಕಾಣ್ಯೂರು ಪಂಚಾಯತಗಳೂ, ಬೆಳ್ಳಾರೆ ಮತ್ತು ಕಳಂಜದ ಕೋಓಪರೇಟಿವ್ ಸೊಸೈಟಿಗಳೂ, ಅಲ್ಲದೆ ಮುವ್ವತ್ತೆಂಟು ಕುಟುಂಬಗಳೂ ಸಹಾಯಕೊಟ್ಟದ್ದವು. ಈ ಬಗ್ಗೆ ಕಾರ್ಯದರ್ಶಿ ಮತ್ತು ಟ್ರೆಜರರ್‌ರನ್ನಾಗಿ ಶ್ರೀ ಬಿ. ಕಿಟ್ಟಣ್ಣ ರೈ ಮತ್ತು ಎ. ರಾಮಣ್ಣ ಗೌಡರನ್ನು ಸುಳ್ಯ ಬ್ಲೋಕಿನಲ್ಲಿ ನೇಮಿಸಲಾಗಿತ್ತು.

ಡಾ| ಟಿ. ಎಂ. ಎ. ಪೈಗಳ ವಿದೇಶ ಯಾತ್ರೆ— ಸಿಂಡಿಕೇಟ್ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರರೂ ಎಕೆಡೆಮಿ ಆಫ್ ಜನರಲ್ ಎಡ್ಯುಕೇಶನಿನ ರಿಜಿಸ್ಟ್ರಾರರೂ ಆದ ಡಾ| ಟಿ. ಎಂ. ಎ. ಪೈ, ಎಂ.ಬಿ.ಬಿ.ಎಸ್. ಇವರು ಇಂಡಿಯನ್ ಮೆಡಿಕಲ್ ಕೌನ್ಸಿಲಿನವರು ವ್ಯವಸ್ಥೆಗೊಳಿಸಿದ ಅನುಭವದಾಯಕ ಸಂಚಾರದಲ್ಲಿ ಭಾಗವಹಿಸಿ ಇದೇ ತಾ. 22ರಿಂದ ಆರು ವಾರಗಳ ವರೆಗೆ ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಇಟಲಿ ಮೊದಲಾದ ನವರಾಷ್ಟ್ರಗಳ ಪ್ರವಾಸವನ್ನು ಕೈಗೊಳ್ಳಲಿರುವರೆಂದು ತಿಳಿದು ಬರುತ್ತದೆ.

ಉಡುಪಿಯವರಿದ್ದು ಈಗ ಹಾಸನದಲ್ಲಿ ವೈದ್ಯಕೀಯ ವೃತ್ತಿ ನಡೆಸುತ್ತಿರುವ ಡಾ| ಬಿ. ಕರುಣಾಕರ ಹೆಗ್ಡೆಯವರೂ ಈ ಜ್ಞಾನ ಯಾತ್ರೆಯಲ್ಲಿ ಭಾಗವಹಿಸಲಿದ್ದಾರೆಂದು ಸಹಾ ಕೇಳುತ್ತೇವೆ.

ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಮಣಿಪಾಲ ಇಲ್ಲಿಯ ವಿದ್ಯಾರ್ಥಿಗಳು ಹೂಡಿದ ಮುಷ್ಕರದ ಪರಿಣಾಮವಾಗಿ ಅನಿಶ್ಚಿತಾವಧಿಯ ವರೆಗೆ ಮುಚ್ಚಿದ ಕಾಲೇಜು ತಾ.30 ರಿಂದ ಪುನಃ ಪ್ರಾರಂಭವಾಗಿದೆ ಎಂದೂ, ಆದರೆ ಹೆಚ್ಚಿನ ವಿದ್ಯಾರ್ಥಿಗಳು ಊರಿಗೆ ಹೋಗಿರುವುದರಿಂದ ಅವರ ಸೌಕರ್ಯಕ್ಕಾಗಿ ಕ್ರಮವಾದ ತರಗತಿಗಳು ತಾ.೫ರಿಂದ ಪ್ರಾರಂಭವಾಗುವುದೆಂದೂ, ವಿದ್ಯಾರ್ಥಿಗಳೂ ರಕ್ಷಕರೂ ಮಹಾಜನರೂ ಕಾಲೇಜಿನ ಯಥೋಚಿತ ಶಾಂತ ವಾತಾವರಣ ಏರ್ಪಡಲು ಸಹಕಾರ ನೀಡಬೇಕೆಂದೂ, ಕಾಲೇಜಿನ ಕಡೆಯಿಂದ ಪತ್ರಿಕಾ ಪ್ರಕಟಣೆಯೊಂದು ಹೊರಟಿದೆ.

ಹೊಸ ಡಾಕ್ಟರರು:— ಉಡುಪಿ ಸರಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಾಗಿ ದಾವಣಗೆರೆಗೆ ವರ್ಗವಾದ ಕೆಪ್ಟನ್ ಭಾಸ್ಕರ್ ರಾವ್ ಕಾರ್ನಾಡ್ ಇವರ ಸ್ಥಾನಕ್ಕೆ ಶಿವಮೊಗ್ಗದಿಂದ ಡಾ| ಎ. ಕೆ. ಸೆಟ್ಟಿಯವರು ಬಂದಿರುವರು.

ಕವಿತಾವಿತಾನ

ಬಂಧು-ಬಳಗ

ಸಿಹಿಯ ತುಂಡುಬೆಲ್ಲದಲ್ಲಿ
ಇರುವೆ ಗುಂಪು ಮುತ್ತುವಂತೆ
ತುಂಬು ಜೇನು ಇರುವ ತನಕ
ನೊಣಗಳೆನಿತೊ ಸುತ್ತುವಂತೆ;—

ಹಣ್ಣು ಕಾಯಿ ತುಂಬಿ ಇರಲು
ಹಕ್ಕಿ ಹಿಂಡು ಹಾರಲಿಲ್ಲ!
ಸುಮ್ಮ ಮುಗಿದ ಬಳಿಕ ಹಾರಿ,—
ಅವುಗಳತ್ತ ಸುಳಿಯಲಿಲ್ಲ!

ಅರಳಿ ಬರುವ ಹೂವಿನೊಡನೆ
ಭೃಂಗಕಿಹುದು ತುಂಬುನೇಹ!
ಹಣಕೆ ಸೊಂಪಿಕೊಂಡುಬಹುದು—
ಬಂಧುಬಳಗದವರ ಮೋಹ!

ಹಾಲುಕೊಡುವ ತುರುಕರುಗಳಿಗೆ
ಹುಲ್ಲು ಹಿಂಡಿ ಕೊಡುವ ಜನರು,—
ಪ್ರಾಣಿ ದಯೆಯ ತೋರುವವರೆ?
ಬಂಜೆಗಿಲ್ಲ, ಬರಿಯ ನೀರು!

ಹಿಂದು ತೇಗುವವರ ಕರೆದು—
"ಉಣ್ಣು ತಿನ್ನು" ಎನುವ ಧರ್ಮ;
ಹಸಿವ ತಿರುಕಗಂಜಲನ್ನ—
ಕೊಡುವರಿಲ್ಲವೇನು ಮರ್ಮ?

ಕಿಸೆಯು ಬೆಚ್ಚಗಿರುವುದೇನು?
ಗೆಳೆಯರೆನಿತೊ ಮಂದಿ ಜೊತೆಗೆ!
ಸೋತೆನೆಂದು ತಿಳಿದ ಬಳಿಕ—
ಅತ್ತು ಸತ್ತರಿಲ್ಲ ಬಳಗ!

ಕೈಯ ಕಾಸು—ಮೈಯ ರಕ್ತ
ಇರುವ ತನಕ ಬಂಧು-ಬಳಗ!
ಟೊಂಗೆಮುರಿದ ಮೇಲೆ ಹಕ್ಕಿ—
ಹಾರಿ ಹೋಗದಿಹುದೆ ಬೇಗ?

—ಶ್ರೀ ಕೆ. ಜೆ. ಶೆಟ್ಟಿ, ಕಡಂದಲೆ.

ಇದೀಗ ಪ್ರಕಟವಾಗಿದೆ.
ತ್ವರೆಮಾಡಿರಿ.
1960ನೇ ವರ್ಷದ E. S. L. C.
ಕನ್ನಡ ಪಠ್ಯದ ಟಿಪ್ಪಣಿ
ಬೆಲೆ: 90 ನಯೇಪೈಸೆ.
ಸಾಮಾಜಿಕ ಅಧ್ಯಯನ ಕೈಪಿಡಿ
(V ಮತ್ತು VI ಫೋರ್ಮುಗಳಿಗೆ ಉಪಯುಕ್ತವಿದೆ)
ಬೆಲೆ: ಎರಡು ರೂಪಾಯಿಗಳು
ಅಪೇಕ್ಷಕರು ಪತ್ರ ವ್ಯವಹಾರ ನಡೆಸುವುದು
ಡಿ. ವಿ. ಹೊಳ್ಳ, ಪ್ರಕಾಶಕ, ಕುಂದಾಪುರ

ವಿದ್ಯಾರ್ಥಿಗಳಿಗೆ ಉಪಯುಕ್ತವಾದ
ಭಾರದ್ವಾಜ ಡಿಕ್ಶನೆರಿ
ಇಂಗ್ಲಿಷ್ ಕನ್ನಡ ಶಬ್ದಕೋಶ
ನವಭಾರತ ಬುಕ್ ಡಿಪೊ, ಉಡುಪಿ

ವಿಚಿತ್ರ ಸತ್ಯ

ಪ್ರಪಂಚದ ಅತಿ ದೊಡ್ಡ ಪುಸ್ತಕಾಲಯವಿಲ್ಲಿದೆ!

ಪ್ರತಿವರ್ಷ ಸುಮಾರು ಒಂದುವರೆ ಲಕ್ಷ ಹೊಸ ಪುಸ್ತಕಗಳಿಲ್ಲಿ ಜಮೆಯಾಗುತ್ತವೆ.

ಅಮೂಲ್ಯ ಪುಸ್ತಕಗಳ ಪ್ರಾಪ್ತಿ ಸ್ಥಾನವಾದ, ಹಾರ್ವರ್ಡ್ ವಿಶ್ವವಿದ್ಯಾಲಯವು, ಇಂದು, ಅಮೇರಿಕದ ಮಹಾ ವಿಶ್ವವಿದ್ಯಾನಿಲಯಕ್ಕೆ ಸರಿ ಸಮನೆನಿಸಿದೆ. ಪ್ರಪ್ರಥಮವಾಗಿ, ಶ್ರೀ ಜೋನ್ ಹಾರ್ವರ್ಡ್‌ರು, ಈ ವಿಶ್ವವಿದ್ಯಾನಿಲಯಕ್ಕೆ ಕಾಣಿಕೆಯಾಗಿ, ನಾಲ್ಕುನೂರು ಗ್ರಂಥಗಳನ್ನು ಕೊಟ್ಟರು. ಪ್ರಪಂಚದ ಮಹಾ ಪುಸ್ತಕಾಲಯವೆನಿಸಿರುವ, ಇಂದಿನ ಈ ಪುಸ್ತಕಾಲಯವು, ಹಾರ್ವರ್ಡ್‌ರ ನಾಲ್ನೂರು ಪುಸ್ತಕಗಳಿಂದಲೇ ಪ್ರಾರಂಭಿಸಲ್ಪಟ್ಟಿತು!

ಸುಮಾರು ೧೬೩೮ರಲ್ಲಿ ಹಾರ್ವರ್ಡ್‌ರ ಕೊಡುಗೆಯಿಂದ ಪ್ರಾರಂಭಿಸಲ್ಪಟ್ಟ ಈ ಪುಸ್ತಕಾಲಯವು, ಈ ೩೨೦ ವರ್ಷಗಳ ದೀರ್ಘ ಅವಧಿಯಲ್ಲಿ ಎಷ್ಟು ವಿಶಾಲವಾಗಿದೆಯೆಂದರೆ, ಪುಸ್ತಕಾಲಯಕ್ಕೆ ಬೃಹತ್ ಕಟ್ಟಡವಿದ್ದೂ ಆ ಮಹಾ ಗ್ರಂಥಗಳನ್ನು ಸುವ್ಯವಸ್ಥಿತವಾಗಿ ಎಲ್ಲಿ ಹೇಗೆ ಇರಿಸಬೇಕೆಂಬ ದೊಡ್ಡ ಸಮಸ್ಯೆ, ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ಯೋಚನೆಗೀಡು ಮಾಡಿದೆ!

ಹಾರ್ವರ್ಡ್ ವಿಶ್ವವಿದ್ಯಾಲಯದ ಈ ಪುಸ್ತಕಾಲಯವು, ಅಮೇರಿಕದ ಒಂದು ದೊಡ್ಡ ಪುಸ್ತಕಾಲಯವನ್ನು ಬಿಟ್ಟರೆ— ಈಗ ವಿಶ್ವದ ಅತ್ಯಂತ ದೊಡ್ಡ ಪುಸ್ತಕಾಲಯವೆಂದು ಮಾನ್ಯತೆ ಪಡೆದಿದೆ.

ಈ ಗ್ರಂಥಾಲಯವು, ಪ್ರಪಂಚದ, ಮಹಾ ವಿದ್ವಾಂಸರ ಒಂದು ಪವಿತ್ರ ಯಾತ್ರಾಸ್ಥಳವೆನಿಸಿರುವುದು. ಜಗತ್ತಿನ ನಾನಾ ಭಾಗಗಳಿಂದ, ವಿದ್ವಾಂಸರು ಬಹು ಸಂಖ್ಯೆಯಲ್ಲಿ ಆಗಾಗ ಇಲ್ಲಿಗೆ ಬರುತ್ತಿದ್ದು, ವಿವಿಧ ವಿಷಯಗಳ ಗ್ರಂಥಗಳನ್ನವಲೋಕಿಸುತ್ತ ಸಂಶೋಧನೆ ಮಾಡುತ್ತ ಅನೇಕಾನೇಕ ವಿಷಯಗಳಲ್ಲಿ ಜ್ಞಾನ ಸಂಪಾದನೆ ಮಾಡುತ್ತಿರುತ್ತಾರೆ!

ಇಲ್ಲಿ ವಿಜ್ಞಾನ, ಇತಿಹಾಸ, ಸಾಹಿತ್ಯ ವಿಷಯಗಳ ಉದ್ಗ್ರಂಥಗಳಲ್ಲದೆ, ಇನ್ನೂ ಅನೇಕ ಬಗೆಯ ಗ್ರಂಥಗಳೂ ಇವೆ. ಅನ್ಯತ್ರ ದುರ್ಲಭವಾದ ಎಷ್ಟೋ ಗ್ರಂಥಗಳು ಇಲ್ಲಿವೆ!

ಪ್ರತಿಯೊಬ್ಬ ವಿದ್ವಾಂಸನ, ಪ್ರತಿಯೊಬ್ಬ ಲೇಖಕನ, ಪ್ರತಿಯೊಂದು ಪುಸ್ತಕವೂ ಇಲ್ಲಿ ಸಂಗ್ರಹಿಸಲ್ಪಡುತ್ತದೆ! ವಿಶೇಷವೆಂದರೆ, ಒಬ್ಬ ವಿದ್ವಾಂಸನ, ಈ ಒಂದು ಗ್ರಂಥ ಇಲ್ಲಿ ಸಿಕ್ಕುವುದಿಲ್ಲ, ಎಂಬ ಅನುಭವ. ಈ ಪುಸ್ತಕಾಲಯದಲ್ಲಿ ಬರುವಂತಿಲ್ಲ! ಪ್ರತಿಯೊಬ್ಬರ ಪ್ರತಿಯೊಂದು ಪುಸ್ತಕವೂ ಇಲ್ಲಿರುವುದು!

ಇಲ್ಲಿಯ ಪುಸ್ತಕಗಳ ಸಂಖ್ಯೆ ಅರುವತ್ತು ಲಕ್ಷಕ್ಕೂ ಮಿಕ್ಕಿರುವುದು. ಪ್ರತಿವರ್ಷವೂ ಈ ಮೇಲಿನ ಸಂಖ್ಯೆಗೆ, ಸುಮಾರು ಒಂದು ಲಕ್ಷದ ಮೂವತ್ತೈದು ಸಾವಿರ ಪುಸ್ತಕಗಳು, ಬಂದು ಸೇರುತ್ತವೆ ಈ ಮುಖ್ಯ ಪುಸ್ತಕಾಲಯಕ್ಕೆ ಸಂಬಂಧಪಟ್ಟ ಇವರ ೩೨ ಶಾಖೆಗಳು, ಪ್ರತ್ಯೇಕವಾಗಿವೆ. ಇವುಗಳಲ್ಲದೆ, ವಿವಿಧ ವಿಷಯಗಳಿಗೆ ಸಂಬಂಧಿಸಿದ, ಪ್ರತ್ಯೇಕ ಪುಸ್ತಕಗಳ, ಬೇರೆ ಬೇರೆ ಚಿಕ್ಕ ಪುಸ್ತಕಾಲಯಗಳೂ, ಹಲವಾರು ಇರುವುದಲ್ಲದೆ, ಪದವೀಧರರ ಹೊರತು, ಕೆಳತರಗತಿಯವರ ಉಪಯೋಗದ ಬಗ್ಗೆ, ಬೇರೆ ಬೇರೆಯಾಗಿ ಎಂಟು ಶಾಖೆಗಳೂ ಇರುವುವು.

ಈ ಮಹಾ ಗ್ರಂಥಾಲಯದ, ಎಲ್ಲ ಬಗೆಯ ಪುಸ್ತಕಗಳ, ಸೂಚಿಪತ್ರಗಳನ್ನು ತಯಾರಿಸಿ, ಅವುಗಳನ್ನು ಒಂದು ಕ್ರಮದಂತೆ! ಇರಿಸುವುದೂ ಕೂಡ ಬಹು ಕಠಿಣ ಕಾರ್ಯವಾಗಿದೆ. ವಿದ್ವಾಂಸರಿಗೂ, ವಿದ್ಯಾರ್ಥಿಗಳಿಗೂ, ಬೇಕಾದಾಗ, ಬೇಕಾದ ಪುಸ್ತಕವನ್ನು ತಟ್ಟನೆ, ತೆಗೆದುಕೊಡುವ ಕಾರ್ಯವೂ ಎಷ್ಟು ಕಷ್ಟಕರವಾದುದೆಂದು, ಸಹಜವಾಗಿಯೇ ಮನವರಿಕೆಯಾಗುವುದು.

ಇಂತು, ವಿಶಾಲವಾಗಿರುವ, ಈ ಪುಸ್ತಕಾಲಯದ ವ್ಯವಸ್ಥೆಯ ಕಾರ್ಯಕ್ರಮಗಳಿಗಾಗಿ, ನ್ಯೂಯಾರ್ಕಿನ, ಸಾರ್ವಜನಿಕ ಪುಸ್ತಕ ಭಂಡಾರದ ಅಧ್ಯಕ್ಷರಾದ, ಶ್ರೀ ಕೇಟ್ ಮೆಟ್ ಕಾಫ್‌ರವರನ್ನು ಇಲ್ಲಿಗೆ ಒಂದು ಸಲ ಆಮಂತ್ರಿಸಲಾಗಿತ್ತು.

ಪುಸ್ತಕಾಲಯಕ್ಕೆ ಮತ್ತೊಂದು ದೊಡ್ಡ ಕಟ್ಟಡದರಚನೆ ಮಾಡುವಬದಲು, ಪುಸ್ತಕಾಲಯದ ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸಬೇಕು; ಎಂಬುದಾಗಿ ಮೆಟ್ ಕಾಫ್‌ರು ಸೂಚನೆಕೊಟ್ಟಾಗ, ಅದು ಎಲ್ಲರಿಗೂ ಒಪ್ಪಿಗೆಯಾಯಿತು.

ಆ ಬಳಿಕ, ಮೆಟ್‌ಕಾಫ್‌ರು, ಪುಸ್ತಕಗಳ ಬೇರೆ ಬೇರೆ ವಿಭಾಗಗಳನ್ನು ಮಾಡಿ, ಪ್ರಪ್ರತ್ಯೇಕ ಪುಸ್ತಕಾಲಯಗಳನ್ನು ತೆರೆದು, ಪುಸ್ತಕಗಳನ್ನಿಡುವ ವ್ಯವಸ್ಥೆಯನ್ನು ಬಹಳ ಚಲೋದಾಗಿ ಮಾಡಿದರು.

ಈ ವ್ಯವಸ್ಥೆಗಳಿಂದಾಗಿ, ಇಂದು ಈ ಮುಖ್ಯ ಪುಸ್ತಕಾಲಯವು, ಒಂದು ಅನುಸಂಧಾನ ಕೇಂದ್ರವಾಗಿ ಪರಿಣಮಿಸಿದೆ. ವಿಶ್ವವಿದ್ಯಾಲಯದ ಪದವೀಧರರು, ಮಾತ್ರ, ಈ ಪುಸ್ತಕಾಲಯದೊಳಗೆ ಪ್ರವೇಶಿಸುವ ಅರ್ಹತೆ, ಪಡೆಯುತ್ತಾರೆ, ಡಿಗ್ರಿ ಪರೀಕ್ಷೆಗಳಿಗಿಂತ ಕೆಳಮಟ್ಟದ ವಿದ್ಯಾರ್ಥಿಗಳಿಗೆ, ಇಲ್ಲಿ ಪ್ರವೇಶವಿಲ್ಲ ಈ ಕ್ರಮದಿಂದ ಮಹಾ ಪುಸ್ತಕಾಲಯದ ಕಾರ್ಯಕಲಾಪಗಳಿಗೆ, ಸ್ವಲ್ಪ ಅನುಕೂಲವಾಗುವುದು, ಸಹಜವಾಗಿದೆ.

ಒಂದು ಸಲ ತೆಗೆದ, ಒಂದು ಪುಸ್ತಕವನ್ನು ತಿರುಗಿ, ಅದೇ ಸ್ಥಾನದಲ್ಲಿಡುವ, ಈ ಜವಾಬ್ದಾರಿಯುತವಾದ, ಕೆಲಸದಲ್ಲಿ ಇಲ್ಲಿ ಎಷ್ಟೋ ಮಂದಿ ಮಗ್ನರಾಗಿರುತ್ತಾರೆ. ಇಡೀ ದಿನ ಈ ಕೆಲಸಮಾಡಬೇಕಾಗುತ್ತವೆ.

ಒಂದುವೇಳೆ, ಯಾವುದಾದರೂ, ಒಂದು ಪುಸ್ತಕ ಏನಾದರೂ ಸ್ವಲ್ಪ ಅಜಾಗರೂಕತೆಯಿಂದ, ಅದರ ಸ್ಥಾನದ ಹೊರತು, ಬೇರೆ ಸ್ಥಾನದಲ್ಲಿ ಇರಿಸಿದ್ದೇ ಆದರೆ, ಮತ್ತೆ ವರ್ಷಗಟ್ಲೆ ಹುಡುಕಿದರೂ ಆ ಪುಸ್ತಕ ಸಿಕ್ಕುವುದು ಕಷ್ಟವೇ ಸರಿ.

೧೯೪೭ರಲ್ಲಿ ಸ್ನಾತಕರಲ್ಲದವರಿಗಾಗಿ, ಮತ್ತೊಂದು ಪುಸ್ತಕಾಲಯ ತೆರೆಯಲ್ಪಟ್ಟಿತು. ಕೆಳತರಗತಿಯ ವಿದ್ಯಾರ್ಥಿಗಳಿಗೆ ಅತಿ ಅಗತ್ಯವಿರುವ, ಒಂದು ಲಕ್ಷ ಪುಸ್ತಕಗಳು ಇಲ್ಲಿ ಸಂಗ್ರಹಿಸಲ್ಪಟ್ಟಿವೆ. ಅಗತ್ಯವುಳ್ಳ ಪುಸ್ತಕಗಳನ್ನು ವರ್ಷ ವರ್ಷವೂ ಇಲ್ಲಿ ಸಂಗ್ರಹಿಸಲಾಗುತ್ತಿದೆ. ವಿದ್ಯಾರ್ಥಿಗಳ ಅಧ್ಯಯನಕ್ಕೆ, ವಿಶಾಲವಾದ ಸ್ಥಳ ಮತ್ತು ಯೋಗ್ಯ ಅನುಕೂಲತೆಗಳೂ ಇಲ್ಲಿವೆ.

ಇದಕ್ಕೆ ಸಂಬಂಧಿಸಿದ ಇನ್ನೊಂದು ಕಟ್ಟಡದಲ್ಲಿ ಮಹತ್ವಪೂರ್ಣವಾದ ಅಲಭ್ಯವಾಗಿರುವ ಪುಸ್ತಕಗಳನ್ನೂ ಪಾಂಡುಲಿಪಿಯ ಪ್ರತಿಗಳನ್ನೂ ಸಂಗ್ರಹಿಸಿ, ಸುರಕ್ಷಿತವಾಗಿ ಇಡಲಾಗಿದೆ. ಪುಸ್ತಕಗಳ ರಕ್ಷಣೆಗೆ, ಆಗತ್ಯವುಳ್ಳ ವೈಜ್ಞಾನಿಕ ಸಲಕರಣೆಗಳೂ ಇಲ್ಲಿವೆ.

ಇಷ್ಟು ದೊಡ್ಡ ಈ ಪುಸ್ತಕಾಲಯದಲ್ಲಿ ಜನರ ಆಗಮನದಿಂದ, ವಿಶೇಷ ಗಲಾಟೆಯಾಗದಂತೆ, ಶ್ರೀ ಮೆಟ್‌ಕಾಫ್‌ರವರು, ಇದರ ಶಾಖೋಪಶಾಖೆಗಳಲ್ಲೂ ಕೂಡ, ಇಲ್ಲಿ ಲಭ್ಯವಾಗುವ, ಪ್ರತಿಯೊಂದು ಪುಸ್ತಕದ, ಒಂದೊಂದು ಪ್ರತಿಯನ್ನಿರಿಸುವ ವ್ಯವಸ್ಥೆಮಾಡಿರುವರು. ಇದರಿಂದಾಗಿ, ಪ್ರತಿಯೊಂದು ಗ್ರಂಥಕ್ಕೂ, ಮುಖ್ಯ ಪುಸ್ತಕಾಲಯಕ್ಕೇ ನುಗ್ಗುವ ತೊಂದರೆ ತಪ್ಪಿದೆ. ಇಂತಿದು, ಪ್ರಪಂಚದ ಅತಿ ದೊಡ್ಡ ಪುಸ್ತಕಾಲಯವಾಗಿ ಬೆಳಗುತ್ತಿದೆ!

(ಆಧಾರ)

—ಕೆ. ಎಸ್. ಭಟ್, ಶಿರಾಡಿಪಾಲ್.



ಸೂರ್ಯತಾಪವನ್ನು ರಕ್ಷಿಸಲು ಬಳಸುವ ಸಾಧನವೊಂದು. ಸೂರ್ಯತಾಪದಿಂದ ೫೦೦೦ ಅಂಶಗಳಷ್ಟು ಉಷ್ಣವನ್ನಿದರಿಂದ ಪಡೆಯಬಹುದು.

In the Court of the District Munsif of Karkala.

O. S. No. 106/59

Kamalu Hengsu & others—Plaintiffs.

Namiraja Pergade & others—Defendants.

To

The 1st defendant Sri Namiraja Pergade, son of Laxmivathi, residing at Puthye in Konaje village of Puttur Taluq.

Take notice that the above suit for maintenance due to plaintiffs filed against you and Smt. Kusumaji Hengsu stands posted to 17—8—1959 and should you fail to appear on that day at 11 A. M. before the above court you will be declared exparte and the suit decided on merits.

By order of Court.

V. V. Upadhyaya,
Advocate for Plaintiffs.

Karkala, 29—7—59.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೋ, ಉಡುಪಿ.

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಭಾವ ಕಥೆ

ಅತ್ಯಂತ ಸುಖಿಯಾರು?

ಒಂದು ದಿನ ಕಣಿವೆಯ ಮಾರ್ಗದಲ್ಲಿ ವಿದ್ಯಾರ್ಥಿ, ರಾಜ ಮತ್ತು ಸನ್ಯಾಸಿ ಒಟ್ಟಾದರು. ಅವರೊಡನೆ ಅವರ ದೊಡ್ಡತನದ ಅಭಿಮಾನವಿತ್ತು. ಆ ಅಭಿಮಾನದೊಡನೆ ಅವರು ನೆಲದಿಂದ ಒಂದು ಗಜ ಮೇಲಿಂದ ನಡೆಯುತ್ತಿದ್ದರು.

ಪ್ರಪಂಚದ ಸಮಸ್ತ ಪ್ರಾಣಿಗಳಲ್ಲಿ ಅತಿ ಸುಖಿ ನಾನು. ನನಗೆ ಯಾವ ಕರಿವೆಯಾ ಹಂಗು ಇಲ್ಲ. ನನ್ನ ಚಿಂತೆಯನ್ನು ನನ್ನ ಭಕ್ತರು ಮಾಡುತ್ತಾರೆ. ಭಗವಂತನು ನನ್ನಿಂದ ಪ್ರೀತಿಸಲ್ಪಡುತ್ತಾನೆ. ಎಂದು ಉಚ್ಚ ಕಂಠದಿಂದ ನುಡಿದ ಸನ್ಯಾಸಿ.

"ಈ ಭೂಲೋಕದಲ್ಲಿ ನನ್ನಷ್ಟು ಸುಖಿಗಳು ಯಾರೂ ಇರಲಿಕ್ಕಿಲ್ಲ. ನನಗೆ ಈ ಜಗತ್ತಿನಲ್ಲಿ ಯಾವೊಂದು ಚಿಂತೆಯೂ ಇಲ್ಲ. ನನ್ನ ಪ್ರತಿಯೊಂದು ಚಿಂತೆಯನ್ನೂ ನನ್ನ ತಂದೆತಾಯಿಯವರು ಅರಿತು ಅವನ್ನು ಪೂರೈಸುತ್ತಾರೆ ಪ್ರತಿದಿನ ಉದಯಿಸುವ ಸೂರ್ಯನು, ನಾನು ಜ್ಞಾನದ ಹಾದಿಯಲ್ಲಿ ಮುಂದುವರಿದುದನ್ನೇ ಕಾಣುತ್ತಾನೆ" ಎಂದು ಅಭಿಮಾನದಿಂದ ಹೇಳಿದ ವಿದ್ಯಾರ್ಥಿ.

"ಈ ವಸುಂಧರೆಯಲ್ಲಿ ಎಲ್ಲರಿಗಿಂತಲೂ ದೊಡ್ಡವ ಹಾಗೂ ಸುಖಿ ನಾನು. ಭಾಗ್ಯವು ನನಗಾಗಿ ಯಾವ ಕೆಲಸವನ್ನೂ ಬಾಕಿಯಿಟ್ಟಿಲ್ಲ ನನ್ನ ಎಲ್ಲಾ ಕಾರ್ಯಗಳನ್ನು ನನ್ನ ಪ್ರಜೆಗಳು ಮಾಡುತ್ತಾರೆ. ನನ್ನ ಸುಖ ಶೋಭೆಗಳು ತನ್ನಿಂದ ತಾನೇ ಅಧಿಕವಾಗುತ್ತವೆ. ನನ್ನ ಎದುರಿನಲ್ಲಿ ಯಾರೂ ತಲೆ ಎತ್ತಿ ಮಾತಾಡಲಾರರು. ನಾನು ಬೇಕಾದುದನ್ನೆಲ್ಲಾ ಮಾಡಬಲ್ಲೆ. ನನ್ನ ಬಾಯಿಯಿಂದ ಹೊರಬಿದ್ದ ಮಾತುಗಳು ನನ್ನ ದೇಶದ ಕಾನೂನಾಗಿ ಪರಿವರ್ತನೆಯಾಗುತ್ತದೆ. ಇದನ್ನೆಲ್ಲರೂ ಬಲ್ಲರು" ಎಂದು ಉನ್ನತ ಮಸ್ತಕನಾಗಿ ನುಡಿದ ರಾಜ.



ದಕ್ಷಿಣ ಧ್ರುವ ಯಾತ್ರೆ ಮಾಡಿರುವ ಕೋವನ್‌ವೆಲ್ತಿನ ಮಗ್ಗಡನ್ ಹಡಗ

ಹತ್ತಿರದಿಂದಲೇ ಓರ್ವ ಕೂಲಿಯವನು ಹೋಗುತ್ತಿದ್ದನು. ಅವನೊಡನೆ ಅವನ ಚಿಂತೆ ಯೋಚನೆಗಳ ಭಂಡಾರವಿತ್ತು. ಅವನು ತನ್ನ ಚಿಂತೆಯಲ್ಲಿಯೂ ಸುಖಿಯಾಗಿದ್ದನು. ಅವನು ಈ ಮೂವರೂ ಅಡ್ಡಿ ಆತಂಕಗಳಿಲ್ಲದೆ ಜೀವಿಸುವವರ ಮಾತನ್ನು ಕೇಳಿದನು. ಆಗ ಅವನು ಮುಗಳ್ನಕ್ಕು—"ನೀವೆಲ್ಲಾ ಸಣ್ಣವರು, ನಿಮ್ಮಲ್ಲಿ ಯಾರೂ ದೊಡ್ಡವರಲ್ಲ!" ಎಂದನು.

"ಸನ್ಯಾಸಿಗೆ ಭಕ್ತಿ, ವಿದ್ಯಾರ್ಥಿಗೆ ಚಿಂತೆಯಿಲ್ಲದ ಜೀವನ, ರಾಜನಿಗೆ ಸುಖ ಶೋಭೆಗಳನ್ನೀಯುವವನೇ ನಿಜವಾಗಿ ದೊಡ್ಡವನು. ಯಾರ ಧೈರ್ಯ ಪರ್ವತಕ್ಕಿಂತಲೂ ಎತ್ತರವಾಗಿದೆಯೋ, ಯಾರ ಹೃದಯ ಸಮುದ್ರಕ್ಕಿಂತಲೂ ಆಳವಾಗಿದೆಯೋ, ಯಾರ ನಿಶ್ಚಯವು ಕಬ್ಬಿಣಕ್ಕಿಂತಲೂ ಗಟ್ಟಿಯಾಗಿದೆಯೋ ಅವನೇ ನಿಜವಾಗಿ ದೊಡ್ಡವನು."

ಸನ್ಯಾಸಿ, ವಿದ್ಯಾರ್ಥಿ ರಾಜ ಮೂವರಿಗೂ ಆಶ್ಚರ್ಯವಾಯಿತು.—'ನಮಗಿಂತಲೂ ಸುಖಿಗಳು ಹಾಗೂ ದೊಡ್ಡವರು ಯಾರು? ನಮ್ಮ ಅಭಿಪ್ರಾಯದಲ್ಲಿ ಈ ವಿಶಾಲ ಪ್ರಪಂಚದಲ್ಲಿ ನಾವೇ ದೊಡ್ಡವರು" ಎಂದು ಅಂದರವರು.

ಆಗ ಕೂಲಿಯವನು—'ನಾನು ಭಕ್ತ, ನಾನು ಭಕ್ತಿಯನ್ನು ಸನ್ಯಾಸಿಗೀಯುತ್ತೇನೆ. ಅವನದನ್ನು ದೇವರಿಗೆ ಅರ್ಪಿಸುತ್ತಾನೆ. ನಾನು ತಂದೆಯಾಗಿದ್ದೇನೆ. ನಾನು ನನ್ನ ಪರಿಶ್ರಮವನ್ನು ನನ್ನ ವಿದ್ಯಾರ್ಥಿ ಮಗನಿಗೀಯುತ್ತೇನೆ. ಅವನು ಪುಸ್ತಕದಿಂದ ಜ್ಞಾನ ಪಡೆಯುತ್ತಾನೆ. ನಾನು ಪ್ರಜೆಯಾಗಿದ್ದೇನೆ. ನಾನು ನನ್ನ ಪರಿಶ್ರಮಕ್ಕೆ ಸಿಕ್ಕಿದ ಬೆಲೆಯನ್ನು ರಾಜನಿಗೀಯುತ್ತೇನೆ. ಅವನಿಗದರಿಂದ ಸುಖಶೋಭೆಗಳು ಸಿಗುತ್ತವೆ. ಒಂದೊಮ್ಮೆ ನಾನಲ್ಲದಿರುತ್ತಿದ್ದರೆ, ನಿಮ್ಮ ಮೂವರ ಪ್ರತಿಷ್ಠಿತ ಆಸನವೂ ನಿಮ್ಮ ಹತ್ತಿರವಿರುತ್ತಿರಲಿಲ್ಲ."

"ನಮ್ಮ ದೊಡ್ಡತನ ನಮ್ಮ ಹತ್ತಿರವಿದೆ. ನಿನ್ನ ಹತ್ತಿರ ಏನು ಇದೆ? ನಿನ್ನ ಹತ್ತಿರವಿರುವುದು ಬರೇ ನಿನ್ನ ಚಿಂತೆಯ ಭಂಡಾರ! ಎಲ್ಲಿ ಚಿಂತೆಯಿರುತ್ತದೋ ಅಲ್ಲಿ ದೊಡ್ಡತನವಿರಲು ಸಾಧ್ಯವಿಲ್ಲ!' ಎಂದು ನುಡಿದ ರಾಜ. ವಿದ್ಯಾರ್ಥಿ ಮತ್ತು ಸನ್ಯಾಸಿ ಅದನ್ನು ಸಮರ್ಥಿಸಿದರು.

"ನಾನು ನನ್ನ ದೊಡ್ಡತನವನ್ನು ನಿಮಗೆಲ್ಲರಿಗೂ ಹಂಚಿಕೊಟ್ಟಿರುವುದೇ ನನ್ನ ದೊಡ್ಡತನ. ಒಂದೊಮ್ಮೆ ನಾನು ನನ್ನ ದೊಡ್ಡತನ ನಿಮಗೆ ಕೊಡದಿರುತ್ತಿದ್ದರೆ, ಜಗತ್ತಿನಲ್ಲೇ ನೀವು ಅತಿ ಬಡವರಾಗಿರುತ್ತಿದ್ದಿರಿ ನಿಮ್ಮ ಎಡಬಲಗಳಲ್ಲಿ ಇಂದಿನ ದೊಡ್ಡತನವಿರುತ್ತಿರಲಿಲ್ಲ. ಬದಲಾಗಿ ನನ್ನ ಚಿಂತೆಯ ಭಂಡಾರವಿರುತ್ತಿತ್ತು. ನಿಮ್ಮ ನಯನಗಳಿಂದ ಅಶ್ರುವು ಧಾರಾಕಾರವಾಗಿ ಸುರಿಯುತ್ತಿತ್ತು. ರಾತ್ರಿಯ ಪ್ರಶಾಂತ ನಿದ್ರೆ ನಿಮ್ಮ ಹತ್ತಿರ ಸುಳಿಯುತ್ತಿರಲಿಲ್ಲ." ಎಂದೆಂದು ಮುಖ ತಿರುಗಿಸಿ ತನ್ನ ಯಜಮಾನನ ಗದ್ದೆಯಲ್ಲಿ ಕೆಲಸ ಮಾಡಲು ಕೂಲಿಯವನು ಹೊರಟು ಹೋದನು.

ಸಾಧು ಮತ್ತು ವಿದ್ಯಾರ್ಥಿ ಅವನೆಡೆಗೆ ಪ್ರೀತಿ ಆದರಗಳಿಂದ ನೋಡತೊಡಗಿದರು ಆದರೆ ರಾಜನು ತನ್ನಲ್ಲಿಯೇ ತಾನು ಇವನೋರ್ವ ಭಯಂಕರ ಮನುಷ್ಯ, ಇವನ ಸ್ವಲ್ಪ ಚಿಂತೆಯನ್ನಾದರೂ ನಾನು ತೆಗೆದುಕೊಳ್ಳಬೇಕು. ಇಲ್ಲದಿದ್ದಲ್ಲಿ ಒಂದಲ್ಲ ಒಂದು ದಿನ ಅವನು ಬೇಸರಗೊಂಡು, ತನ್ನ ಎಲ್ಲಾ ಚಿಂತೆಯ ಭಂಡಾರವನ್ನು ನನ್ನ ಹಿಂದೆಯೇ ಬಿಟ್ಟುಬಿಡಬಹುದು ಅನಂತರ ನನ್ನ ಜೀವನವೂ ತನಗೆ ಬೇಸರವಾಗಬಹುದು, ಎಂದುಕೊಂಡನು

ಸನ್ಯಾಸಿ ಮತ್ತು ವಿದ್ಯಾರ್ಥಿಯ ದೊಡ್ಡತನಗಳು ತಮ್ಮಲ್ಲಿಯೇ, 'ಯಾರ ಧೈರ್ಯವು ಪರ್ವತಕ್ಕಿಂತಲೂ ಎತ್ತರವಾಗಿದೆಯೋ, ಯಾರ ಹೃದಯವು ಸಮುದ್ರಕ್ಕಿಂತಲೂ ಆಳವಾಗಿದೆಯೋ, ಯಾರ ನಿಶ್ಚಯವು ಕಬ್ಬಿಣಕ್ಕಿಂತಲೂ ಗಟ್ಟಿಯಾಗಿದೆಯೋ, ಅವನ ಬಳಿ ನಾವು ಹೋಗಿ ಏಕಿರಬಾರದು?' ಎಂದುಕೊಂಡುವು.

ಆದರೆ ಕೂಲಿಯವನು ತನ್ನ ಯಜಮಾನನ ಗದ್ದೆಯನ್ನು ಉಳುತ್ತಿದ್ದನು. ಅವನ ಅತಿ ಪರಿಶ್ರಮದಿಂದಾಗಿ ಬೆವರು ತಲೆಯಿಂದ ಕಾಲ ಹಿಮ್ಮಡಿಯೆಡೆಗೆ ಹರಿಯುತ್ತಲೇ ಇತ್ತು!

(ಸುದರ್ಶನರ ಝರೋಕಾ‌ನಿಂದ)

— ಶ್ರೀ ಎಸ್. ಎಮ್. ಶೆಟ್ಟಿ,
ಶಿವಾಜಿಪಾರ್ಕ್, ಬೊಂಬಾಯಿ.

ರಾಜಕೀಯ

(೪ನೇ ಪುಟದಿಂದ)

ಡಿದೆ. ಜನತೆಯಲ್ಲಿ ಪುನಃ ಆತ್ಮವಿಶ್ವಾಸವು ಪ್ರವಹಿಸುವಂತೆ ಮಾಡುವುದು ವ್ಯಕ್ತಿಗತ ಪರಿಶ್ರಮಕ್ಕೆ ಪ್ರೋತ್ಸಾಹ ನೀಡುವುದು ಸ್ವತಂತ್ರ ಪಕ್ಷದ ಸರ್ವ ಪ್ರಥಮ ಕಾರ್ಯಕ್ರಮವಾಗಿದೆ. ಸಂವಿಧಾನದಲ್ಲಿ ಉಲ್ಲೇಖಿತವಾದ ಮೂಲಭೂತ ಅಧಿಕಾರ ಮತ್ತು ಆಶ್ವಾಸನೆಗಳನ್ನು ಸಂಪೂರ್ಣವಾಗಿ ಪೂರೈಸಿಕೊಟ್ಟರೆ ಮಾತ್ರ ಇದು ಸಂಭವನೀಯವಾಗುವುದು. ಸರಕಾರವು ಯಾವುದೇ ಒಂದು ಬಗೆಯ "ಸಂಪತ್ತನ್ನು" ಅನಿವಾರ್ಯ ರೂಪವಾಗಿ ತನ್ನ ವಶಕ್ಕೆ ತಂದುಕೊಳ್ಳುವುದಾದರೆ, ಅದಕ್ಕೆ ಉಚಿತವಾದ ಪರಿಹಾರವನ್ನು ನೀಡಲೇ ಬೇಕಾಗಿದೆ, ಪಕ್ಷದ ಸಿದ್ಧಾಂತಗಳಲ್ಲಿ ಅಂತರ್ಗತವಾಗದ ಏನಾದರೂ ವಿಷಯಗಳಿದ್ದರೆ, ಅವುಗಳಲ್ಲಿ ಸದಸ್ಯರು ಸ್ವತಂತ್ರಾಭಿಪ್ರಾಯ ತಾಳಬಹುದು. ಇದರಿಂದ ಪಕ್ಷದಲ್ಲಿ ಎಲ್ಲ ಪ್ರಕಾರದ ಜನರೂ ಸೇರಿಕೊಳ್ಳಬಹುದು. ಸದಸ್ಯರಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಭಾವನೆಗಳನ್ನು ಬೆಳಸಿಕೊಂಡು ಬರಲು ಇದು ಅವಶ್ಯವಾಗಿದೆ.

(ರಾಜಾಜೀಯವರ ಭಾಷಣದಿಂದ ಸಂಗ್ರಹಿತ)

ನೋಟೀಸು

ಉಡುಪಿ ಡಿ ಮು ಕೋರ್ಟಿನಲ್ಲಿ

S. C. No 305/1959.

N. ವಿಠಲ ಶೆಟ್ಟಿ—ವಾದಿ.

ಮತ್ತು

ಯು. ವಾಸುದೇವ ಶೆಣೈ—ಯು ನರಸಿಂಹ ಶೆಣೈಯರ ಮಗ ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಗುಂಡಿಬೈಲಿನಲ್ಲಿರುವವರು—ಪ್ರತಿವಾದಿ.

ಇವರೊಳಗೆ

ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದರೆ:

ತಾ. 6–12–1958ರಲ್ಲು ರೂ200!–ಕ್ಕೆ ನೀವು ವಾದಿಗೆ ಬರೆಕೊಟ್ಟ ಹುಂಡಿ ಪ್ರಾಮಿಸ್ಸರಿ ನೋಟಿನ ಬಾಬ್ತು ವಾದಿಗೆ ಬಡ್ಡಿ ಖರ್ಚುಗಳನ್ನು ಕೇಳಿ ನಿಮ್ಮ ಮೇಲೆ ಮಾಡಿದ ದಾವೆಯನ್ನು ತಾ.24-9-1959ಕ್ಕೆ ಇಟ್ಟಿದೆ. ಈ ಬಾಬಿನಲ್ಲಿ ನಿಮ್ಮದೇನಾದರೂ ಆಕ್ಷೇಪಣೆ ಇದ್ದರೆ ಸದ್ರಿ ದಿನ ಪೂರ್ವಾಹ್ನ 11ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜವಾಬು ಹೇಳಿಕೊಳ್ಳತಕ್ಕದ್ದು. ತಪ್ಪಿದಲ್ಲಿ ವಾದಿಯ ಅಪೇಕ್ಷೆ ಮೇರೆಗೆ ಸದ್ರಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಮೇರೆಗೆ)

ಯು. ಬಿ ಕೃಷ್ಣರಾವ್,
ವಾದಿಯ ಕಡೆ ಎಡ್ವೋಕೇಟ್.
ಉಡುಪಿ, ತಾರೀಕು 31-7-59.

ದಿ। ಕಿಲ್ಲೆಯವರ ನೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ ಬೆಲೆ: ರೂ. 2 00.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ...... ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ। ಎಂ ಆರ್. ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತಂಗತಿಯ ಕವಿತೆಗಳ ಸಂಗ್ರಹ ಬೆಲೆ 0—1½—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಭಾವ ಕಥೆ

ಅತ್ಯಂತ ಸುಖಿಯಾರು?

ಒಂದು ದಿನ ಕಣಿವೆಯ ಮಾರ್ಗದಲ್ಲಿ ವಿದ್ಯಾರ್ಥಿ, ರಾಜ ಮತ್ತು ಸನ್ಯಾಸಿ ಒಟ್ಟಾದರು ತಮರೊಡನೆ ಅವರ ದೊಡ್ಡತನದ ಅಭಿಮಾನವಿತ್ತು. ಆ ಅಭಿಮಾನದೊಡನೆ ಅವರು ನೆಲದಿಂದ ಒಂದು ಗಜ ಮೇಲಿಂದ ನಡೆಯುತ್ತಿದ್ದರು

ಪ್ರಪಂಚದ ಸಮಸ್ತ ಪ್ರಾಣಿಗಳಲ್ಲಿ ಅತಿ ಸುಖಿ ನಾನು. ನನಗೆ ಯಾರ ಪರಿವೆಯಾ ಹಂಗು ಇಲ್ಲ. ನನ್ನ ಚಿಂತೆಯನ್ನು ನನ್ನ ಭಕ್ತರು ಮಾಡುತ್ತಾರೆ. ಭಗವಂತನು ನನ್ನಿಂದ ಪ್ರೀತಿಸಲ್ಪಡುತ್ತಾನೆ. ಎಂದು ಉಚ್ಚ ಕಂಠದಿಂದ ನುಡಿದ ಸನ್ಯಾಸಿ.

"ಈ ಭೂಲೋಕದಲ್ಲಿ ನನ್ನಷ್ಟು ಸುಖಿಗಳು ಯಾರೂ ಇರಲಿಕ್ಕಿಲ್ಲ. ನನಗೆ ಈ ಜಗತ್ತಿನಲ್ಲಿ ಯಾವೊಂದು ಚಿಂತೆಯೂ ಇಲ್ಲ. ನನ್ನ ಪ್ರತಿಯೊಂದ ಚಿಂತೆಯನ್ನೂ ನನ್ನ ತಂದೆತಾಯಿಯವರು ಅರಿತು ಅವನ್ನು ಪೂರೈಸುತ್ತಾರೆ. ಪ್ರತಿದಿನ ಉದಯಿಸುವ ಸೂರ್ಯನು, ನಾನು ಜ್ಞಾನದ ಹಾದಿಯಲ್ಲಿ ಮುಂದುವರಿದುದನ್ನೇ ಕಾಣುತ್ತಾನೆ" ಎಂದು ಅಭಿಮಾನದಿಂದ ಹೇಳಿದ ವಿದ್ಯಾರ್ಥಿ.

"ಈ ವಸುಂಧರೆಯಲ್ಲಿ ಎಲ್ಲರಿಗಿಂತಲೂ ದೊಡ್ಡವ ಹಾಗೂ ಸುಖಿ ನಾನು. ಭಾಗ್ಯವು ನನಗಾಗಿ ಯಾವ ಕೆಲಸವನ್ನೂ ಬಾಕಿಯಿಟ್ಟಿಲ್ಲ ನನ್ನ ಎಲ್ಲಾ ಕಾರ್ಯಗಳನ್ನು ನನ್ನ ಪ್ರಜೆಗಳು ಮಾಡುತ್ತಾರೆ. ನನ್ನ ಸುಖ ಶೋಭೆಗಳು ತನ್ನಿಂದ ತಾನೇ ಅಧಿಕವಾಗುತ್ತವೆ ನನ್ನ ಎದುರಿನಲ್ಲಿ ಯಾರೂ ತಲೆ ಎತ್ತಿ ಮಾತಾಡಲಾರರು. ನಾನು ಬೇಕಾದುದನ್ನೆಲ್ಲಾ ಮಾಡಬಲ್ಲೆ. ನನ್ನ ಬಾಯಿಯಿಂದ ಹೊರಬಿದ್ದ ಮಾತುಗಳು ನನ್ನ ದೇಶದ ಕಾನೂನಾಗಿ ಪರಿವರ್ತನೆಯಾಗುತ್ತದೆ ಇದನ್ನೆಲ್ಲರೂ ಬಲ್ಲರು" ಎಂದು ಉನ್ನತ ಮಸ್ತಕನಾಗಿ ನುಡಿದ ರಾಜ.



ದಕ್ಷಿಣ ಧ್ರುವ ಯಾತ್ರೆ ಮಾಡಿರುವ ಕೋಪನ್‌ಹೆಲ್ತಿನ ಮಗ್ಗಡನ್ ಹಡಗ

ಹತ್ತಿರದಿಂದಲೇ ಓರ್ವ ಕೂಲಿಯವನು ಹೋಗುತ್ತಿದ್ದನು. ಅವನೊಡನೆ ಅವನ ಚಿಂತೆ ಯೋಚನೆಗಳ ಭಂಡಾರವಿತ್ತು. ಆವನು ತನ್ನ ಚಿಂತೆಯಲ್ಲಿಯೂ ಸುಖಿಯಾಗಿದ್ದನು. ಆವನು ಈ ಮೂವರೂ ಅಡ್ಡಿ ಆತಂಕಗಳಿಲ್ಲದೆ ಜೀವಿಸುವವರ ಮಾತನ್ನು ಕೇಳಿದನು ಆಗ ಆವನು ಮುಗುಳ್ನಕ್ಕು—"ನೀವೆಲ್ಲಾ ಸಣ್ಣವರು; ನಿಮ್ಮಲ್ಲಿ ಯಾರೂ ದೊಡ್ಡವರಲ್ಲ!" ಎಂದನು.

"ಸನ್ಯಾಸಿಗೆ ಭಕ್ತಿ, ವಿದ್ಯಾರ್ಥಿಗೆ ಚಿಂತೆಯಿಲ್ಲದ ಜೀವನ, ರಾಜನಿಗೆ ಸುಖ ಶೋಭೆಗಳನ್ನೀಯುವವನೇ ನಿಜವಾಗಿ ದೊಡ್ಡವನು. ಯಾರ ಧೈರ್ಯ ಪರ್ವತಕ್ಕಿಂತಲೂ ಎತ್ತರವಾಗಿದೆಯೋ, ಯಾರ ಹೃದಯ ಸಮುದ್ರಕ್ಕಿಂತಲೂ ಆಳವಾಗಿದೆಯೋ, ಯಾರ ನಿಶ್ಚಯವು ಕಬ್ಬಿಣಕ್ಕಿಂತಲೂ ಗಟ್ಟಿಯಾಗಿದೆಯೋ ಅವನೇ ನಿಜವಾಗಿ ದೊಡ್ಡವನು.'

ಸನ್ಯಾಸಿ, ವಿದ್ಯಾರ್ಥಿ ರಾಜ ಮೂವರಿಗೂ ಆಶ್ಚರ್ಯವಾಯಿತು.— 'ನಮಗಿಂತಲೂ ಸುಖಿಗಳು ಹಾಗೂ ದೊಡ್ಡವರು ಯಾರು? ನಮ್ಮ ಅಭಿಪ್ರಾಯದಲ್ಲಿ ಈ ವಿಶಾಲ ಪ್ರಪಂಚದಲ್ಲಿ ನಾವೇ ದೊಡ್ಡವರು" ಎಂದು ಚೀರಿದರು.

ಆಗ ಕೂಲಿಯವನು- 'ನಾನು ಭಕ್ತ, ನಾನು ಭಕ್ತಿಯನ್ನು ಸನ್ಯಾಸಿಗೀಯುತ್ತೇನೆ. ಅವನದನ್ನು ದೇವರಿಗ ಅರ್ಪಿಸುತ್ತಾನೆ. ನಾನು ತಂದೆಯಾಗಿದ್ದೇನೆ. ನಾನು ನನ್ನ ಪರಿಶ್ರಮವನ್ನು ನನ್ನ ವಿದ್ಯಾರ್ಥಿ ಮಗನಿಗೀಯುತ್ತೇನೆ ಆವನು ಪುಸ್ತಕದಿಂದ ಜ್ಞಾನ ಪಡೆಯುತ್ತಾನೆ. ನಾನು ಪ್ರಜೆಯಾಗಿದ್ದೇನೆ. ನಾನು ನನ್ನ ಪರಿಶ್ರಮಕ್ಕೆ ಸಿಕ್ಕಿದ ಬೆಲೆಯನ್ನು ರಾಜನಿಗೀಯುತ್ತೇನೆ. ಅವನಿಗದರಿಂದ ಸುಖಶೋಭೆಗಳು ಸಿಗುತ್ತವೆ ಒಂದೊಮ್ಮೆ ನಾನಿಲ್ಲದಿರುತ್ತಿದ್ದರೆ, ನಿಮ್ಮ ಮೂವರ ಪ್ರತಿಷ್ಠಿತ ಆಸನವೂ ನಿಮ್ಮ ಹತ್ತಿರವಿರುತ್ತಿರಲಿಲ್ಲ."

"ನಮ್ಮ ದೊಡ್ಡತನ ನಮ್ಮ ಹತ್ತಿರವಿದೆ ನಿನ್ನ ಹತ್ತಿರ ಏನು ಇದೆ? ನಿನ್ನ ಹತ್ತಿರವಿರುವುದು ಬರೀ ನಿನ್ನ ಚಿಂತೆಯ ಭಂಡಾರ! ಎಲ್ಲಿ ಚಿಂತೆಯಿರುತ್ತದೋ ಅಲ್ಲಿ ದೊಡ್ಡತನವಿರಲು ಸಾಧ್ಯವಿಲ್ಲ!" ಎಂದು ನುಡಿದ ರಾಜ. ವಿದ್ಯಾರ್ಥಿ ಮತ್ತು ಸನ್ಯಾಸಿ ಅದನ್ನು ಸಮರ್ಥಿಸಿದರು.

"ನಾನು ನನ್ನ ದೊಡ್ಡತನವನ್ನು ನಿಮಗೆಲ್ಲರಿಗೂ ಹಂಚಿಕೊಟ್ಟಿರುವುದೇ ನನ್ನ ದೊಡ್ಡತನ ಒಂದೊಮ್ಮೆ ನಾನು ನನ್ನ ದೊಡ್ಡತನ ನಿಮಗೆ ಕೊಡದಿರುತ್ತಿದ್ದರೆ, ಜಗತ್ತಿನಲ್ಲೇ ನೀವು ಅತಿ ಬಡವರಾಗಿರುತ್ತಿದ್ದಿರಿ ನಿಮ್ಮ ಎಡಬಲಗಳಲ್ಲಿ ಇಂದಿನ ದೊಡ್ಡತನವಿರುತ್ತಿರಲಿಲ್ಲ. ಬದಲಾಗಿ ನನ್ನ ಚಿಂತೆಯ ಭಂಡಾರವಿರುತ್ತಿತ್ತು ನಿಮ್ಮ ನಯನಗಳಿಂದ ಅಶ್ರುವು ಧಾರಾಕಾರವಾಗಿ ಸುರಿಯುತ್ತಿತ್ತು ರಾತ್ರಿಯ ಪ್ರಶಾಂತ ನಿದ್ರೆ ನಿಮ್ಮ ಹತ್ತಿರ ಸುಳಿಯುತ್ತಿರಲಿಲ್ಲ." ಎಂದೆಂದು ಮುಖ ತಿರುಗಿಸಿ ತನ್ನ ಯಜಮಾನನ ಗದ್ದೆಯಲ್ಲಿ ಕೆಲಸ ಮಾಡಲು ಕೂಲಿಯವನು ಹೊರಟು ಹೋದನು.

ಸಾಧು ಮತ್ತು ವಿದ್ಯಾರ್ಥಿ ಅವನೆಡೆಗೆ ಪ್ರೀತಿ ಆದರಗಳಿಂದ ನೋಡತೊಡಗಿದರು ಆದರೆ ರಾಜನು ತನ್ನಲ್ಲಿಯೇ ತಾನು ಇವನೋರ್ವ ಭಯಂಕರ ಮನುಷ್ಯ, ಇವನ ಸ್ವಲ್ಪ ಚಿಂತೆಯನ್ನಾದರೂ ನಾನು ತೆಗೆದುಕೊಳ್ಳಬೇಕು ಇಲ್ಲದಿದ್ದಲ್ಲಿ ಒಂದಲ್ಲ ಒಂದು ದಿನ ಆವನು ಬೇಸರಗೊಂಡು, ತನ್ನ ಎಲ್ಲಾ ಚಿಂತೆಯ ಭಂಡಾರವನ್ನು ನನ್ನ ಹಿಂದೆಯೇ ಬಿಟ್ಟುಬಿಡಬಹುದು ಅನಂತರ ನನ್ನ ಜೀವನವೂ ತನಗೆ ಬೇಸರವಾಗಬಹುದು, ಎಂದುಕೊಂಡನು.

ಸನ್ಯಾಸಿ ಮತ್ತು ವಿದ್ಯಾರ್ಥಿಯು ದೊಡ್ಡತನಗಳು ತಮ್ಮಲ್ಲಿಯೇ, 'ಯಾರ ಧೈರ್ಯವು ಪರ್ವತಕ್ಕಿಂತಲೂ ಎತ್ತರವಾಗಿದೆಯೋ, ಯಾರ ಹೃದಯವು ಸಮುದ್ರಕ್ಕಿಂತಲೂ ಆಳವಾಗಿದೆಯೋ ಯಾರ ನಿಶ್ಚಯವು ಕಬ್ಬಿಣಕ್ಕಿಂತಲೂ ಗಟ್ಟಿಯಾಗಿದೆಯೋ, ಅವನ ಬಳಿ ನಾವು ಹೋಗಿ ಏಕಿರಬಾರದು?' ಎಂದುಕೊಂಡರು.

ಆದರೆ ಕೂಲಿಯವನು ತನ್ನ ಯಜಮಾನನ ಗದ್ದೆಯನ್ನು ಉಳುತ್ತಿದ್ದನು. ಅವನ ಅತಿ ಪರಿಶ್ರಮದಿಂದಾಗಿ ಬೆವರು ತಲೆಯಿಂದ ಕಾಲ ಹಿಮ್ಮಡಿಯೆಡೆಗೆ ಹರಿಯುತ್ತಲೇ ಇತ್ತು!

(ಸುದರ್ಶನರ ಘುರೋಕ್‌ನಿಂದ)

— ಶ್ರೀ ಎಸ್. ಎಮ್. ಶೆಟ್ಟಿ,
ಶಿವಾಂಜಿಪರಾರಿ, ಬೊಂಬಾಯಿ.

ರಾಜಕೀಯ

(೪ನೇ ಪುಟದಿಂದ)

ಡಿದೆ. ಜನತೆಯಲ್ಲಿ ಪುನಃ ಆತ್ಮವಿಶ್ವಾಸವು ಪ್ರವಹಿಸುವಂತೆ ಮಾಡುವುದು ವ್ಯಕ್ತಿಗತ ಪರಿಶ್ರಮಕ್ಕೆ ಪ್ರೋತ್ಸಾಹ ನೀಡುವುದು ಸ್ವತಂತ್ರ ಪಕ್ಷದ ಸರ್ವ ಪ್ರಥಮ ಕಾರ್ಯಕ್ರಮವಾಗಿದೆ. ಸಂವಿಧಾನದಲ್ಲಿ ಉಲ್ಲೇಖಿತವಾದ ಮೂಲಭೂತ ಅಧಿಕಾರ ಮತ್ತು ಆಶ್ವಾಸನೆಗಳನ್ನು ಸಂಪೂರ್ಣವಾಗಿ ಪೂರೈಸಿಕೊಟ್ಟರೆ ಮಾತ್ರ ಇದು ಸಂಭವವಾಗುವುದು. ಸರಕಾರವು ಯಾವುದೇ ಒಂದು ಬಗೆಯ "ಸಂಪತ್ತನ್ನು" ಅನಿವಾರ್ಯ ರೂಪವಾಗಿ ತನ್ನ ವಶಕ್ಕೆ ತಂದುಕೊಳ್ಳುವುದಾದರೆ, ಅದಕ್ಕೆ ಉಚಿತವಾದ ಪರಿಹಾರವನ್ನು ನೀಡಲೇ ಬೇಕಾಗಿದೆ, ಪಕ್ಷದ ಸಿದ್ಧಾಂತಗಳಲ್ಲಿ ಅಂತರ್ಗತವಾಗದ ಏನಾದರೂ ವಿಷಯಗಳಿದ್ದರೆ, ಅವುಗಳಲ್ಲಿ ಸದಸ್ಯರು ಸ್ವತಂತ್ರಾಭಿಪ್ರಾಯ ತಾಳಬಹುದು ಇದರಿಂದ ಪಕ್ಷದಲ್ಲಿ ಎಲ್ಲ ಪ್ರಕಾರದ ಜನರೂ ಸೇರಿಕೊಳ್ಳಬಹುದು ಸದಸ್ಯರಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಭಾವನೆಗಳನ್ನು ಬೆಳಸಿಕೊಂಡು ಬರಲು ಇದು ಅವಶ್ಯವಾಗಿದೆ.

(ರಾಜಾಜೀಯವರ ಭಾಷಣದಿಂದ ಸಂಗ್ರಹಿತ)

ನೋಟೀಸು

ಉಡುಪಿ ಡಿ ಮು. ಕೋರ್ಟಿನಲ್ಲಿ

S C· No 305/1959·

N. ವಿಠಲ ಶೆಟ್ಟಿ—ವಾದಿ.

ಮತ್ತು

ಯು. ವಾಸುದೇವ ಶೆಣೈ-ಯು. ನರಸಿಂಹ ಶೆಣೈಯವರ ಮಗ. ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಗುಂಡಿಬೈಲಿನಲ್ಲಿರುವವರು—ಪ್ರತಿವಾದಿ.

ಇವರೊಳಗೆ

ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದರೆ:

ತಾ. 6-12-1958ರಲ್ಲು ರೂ300|-ಕ್ಕೆ ನೀವು ವಾದಿಗೆ ಬರಕೊಟ್ಟ ಹುಂಡಿ ಪ್ರೊಮಿಸ್ಸರಿ ನೋಟಿನ ಬಾಬ್ತು ವಾದಿಗೆ ಬರಾ ಐವೇಜುಗಳನ್ನು ಕೇಳಿ ನಿಮ್ಮ ಮೇಲೆ ಮಾಡಿದ ದಾವೆಯನ್ನು ತಾ 24.8.1959ಕ್ಕೆ ಇಟ್ಟಿದೆ. ಈ ಬಾಬಿನಲ್ಲಿ ನಿಮ್ಮದೇನಾದರೂ ಆಕ್ಷೇಪಣೆ ಇದ್ದರೆ ಸದ್ರಿ ದಿನ ಪೂರ್ವಾಹ್ನ 11ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ವಾದಿಯ ಅಪೇಕ್ಷೆ ಮೇರೆಗೆ ಸದ್ರಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಮೇರೆಗೆ)

ಯು. ಬಿ. ಕೃಷ್ಣರಾವ್,
ವಾದಿಯ ಕಡೆ ಎಡ್ವೊಕೇಟ್.

ಉಡುಪಿ, ತಾರೀಕು. 31.7.59.

ದಿ| ಕಿಲ್ಲೆಯವರ ನೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ ಬೆಲೆ: ರೂ. 2 00

ಭಾರತದ ಕರ್ಣ

"ಭಾರತದ ಕರ್ಣನು ದಿ| ಕಿಲ್ಲೆಯವರಿಗೆ ಒಲಿದಿದ್ದ...... ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ| ಎಂ ಆರ್. ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಹೂಬಿರಲಿ

ಪೋಲ್ತುರಿಗೆಯ ಕವಿತೆಗಳ ಸಂಗ್ರಹ ಬೆಲೆ 0—1½—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ ಉಡುಪಿ.

ಪ್ರಜಾತಂತ್ರ

'ಬಹುಮತ' ಪದ್ಧತಿಯು ಯೋಗ್ಯವೆ? ಅಯೋಗ್ಯವೆ?

ಕೆಲವೊಂದು ಸಂದರ್ಭಗಳಲ್ಲಿ ಅದು ಘಾತುಕವಾಗಿ ಪರಿಣಮಿಸಿದೆ.

ಹಿಂದಿನ ಕಾಲದಲ್ಲಿ ಸಂತರು ಮತ್ತು ಋಷಿಗಳ ಮಾತುಗಳನ್ನು ಎಲ್ಲರೂ ಮನ್ನಿಸುತ್ತಿದ್ದರು. ಅವರು ಕೊಡುಕೊಟ್ಟ ಶಿಕ್ಷಣಗಳಿಗೆ ಸರಿಯಾಗಿಯೇ ರಾಷ್ಟ್ರದ ಆಗಿನ ಕಾನೂನುಗಳಿರುತ್ತಿದ್ದುವು. ರಾಜನಾದವನು ಶಾಸನಾಂಗ ಹಾಗೂ ನ್ಯಾಯಾಂಗಗಳ ಅಧಿಕಾರಿಯಾದರೂ, ಆತನು ತನ್ನ ಕುಲ ಗುರುಗಳ ಆದೇಶವನ್ನು ಶಿರಸಾವಹಿಸುತ್ತಿದ್ದನು. ಅದರಿಂದಲೇ ಕೋಟ್ಯನುಕೋಟಿ ಜನರ ಮೇಲೆ ಒಬ್ಬ ವ್ಯಕ್ತಿಯು ಪ್ರಭಾವ ಬೀಳುತಿತ್ತು ಎಂದಂತಾಯಿತು. ಕುಟುಂಬದಲ್ಲಿ ಹಿರಿಯನ ಮಾತು ನಡೆಯುತಿತ್ತು. ಆದರೆ, ಇಂದು ಮಾತ್ರ ಸ್ಥಿತಿ ಪರಿವರ್ತನೆಯಾಗಿದೆ. ಪಂಡಿತ ಜವಾಹಿರಲಾಲರ ಒಂದು "ಮತ" ಮತ್ತು ಒಬ್ಬ ಮೂರ್ಖ ಹಾಗೂ ಧೂರ್ತನ ಒಂದು "ಮತ" ಎರಡೂ ಸಮಾನ ಬೆಲೆಯುಳ್ಳವುಗಳಾಗಿವೆ. ಒಂದು ಗ್ರಾಮದಲ್ಲಿ ನೂರು ದುರ್ಜನರಿರುವಾಗ ಕೆಲವರೇ ಸಜ್ಜನರಿದ್ದರೆ, ದುರ್ಜನರ ಆಟವೇ ಅಲ್ಲಿ ನಡೆಯುತ್ತದೆ. ಉತ್ತಮ ವ್ಯಕ್ತಿಗಳನ್ನೆಲ್ಲಾ ಹೊರದಬ್ಬಲಾಗುತ್ತದೆ. ಇದನ್ನೇ ನಾವು ಪ್ರಜಾಪ್ರಭುತ್ವ ಅಥವಾ ಬಹುಮತದ ರಾಜ್ಯಪದ್ಧತಿ ಎನ್ನುತ್ತೇವೆ. ಹಿಟ್ಲರ ಒಂದು ಕಡೆ ಬರೆದಿದ್ದಾನೆ—"ಅಧಿಕ ಸಂಖ್ಯೆಯ ಮೂರ್ಖರ ಮೇಲೆ ಕೆಲವೇ ಮಂದಿ ಶಠಮೂರ್ಖರ ಆಡಳಿತವೇ ಇಂದಿನ ಪ್ರಜಾತಂತ್ರ!" ಬೇರೆ ದೇಶಗಳಲ್ಲಿ ಏನೇ ಇರಲಿ, ನಮ್ಮ ದೇಶದ ಸ್ಥಿತಿಯಂತೂ ಇದೇ ಎನ್ನಬಹುದು. ಕೆಲಸ ನಡೆಯುವಲ್ಲೆಲ್ಲಾ ಸ್ವಾರ್ಥಲೋಲುಪರೇ ಕಾಣ ಸಿಗುತ್ತಾರೆ. ತಮ್ಮ ಕಾರ್ಯ ಸಾಧಿಸುವುದಕ್ಕೋಸ್ಕರ ಮನೆಯ ಯಜಮಾನರನ್ನು ಮೋಸದಿಂದ ಹೊರದಬ್ಬುತ್ತಾರೆ—ಇದಕ್ಕೆ ಆಧಾರ ಬಹುಮತ! ಈ ಅಂಥ ಬಹುಮತದ ಕಾರಣದಿಂದಾಗಿಯೇ ಕೆಲವಾರು ಉತ್ತಮ ಸಂಘ ಸಂಸ್ಥೆಗಳೂ ಹಾಳಾಗಿ ಹೋಗಿವೆ; ಹೋಗುತ್ತಿವೆ; ಹೋಗುತ್ತವೆ.

ನಮ್ಮ ದೇಶದಲ್ಲಿ ಜನರು ಮೋಸಯಾಗುವುದಕ್ಕೆ ಮೊದಲೇ ಆತ್ತೆಯಾಗುವ ಕಲೆಯಲ್ಲಿ ಪರಿಣತರಾಗಿದ್ದಾರೆ. ಹೊರಗಣ ಜನರೂ ಇದರಿಂದ ಸಮುಚಿತ ಲಾಭ ಎತ್ತಿಕೊಳ್ಳುತ್ತಾರೆ.

ಬಹುಮತದ ಬಲದಿಂದಲೇ ಲೋಕಮಾನ್ಯ ಬಾಲಗಂಗಾಧರ ತಿಲಕರನ್ನು ಜನರು ಕಾಂಗ್ರೆಸ್ಸಿನಿಂದ ಹೊರದಬ್ಬಿದರು. ಅವರು ಬ್ರಿಟಿಷರೊಡನೆ ಹೋರಾಡಬಯಸುತ್ತಿದ್ದುದೇ ಅವರ ಮಹಾಪರಾಧವಾಗಿತ್ತು! ಲಾಲಾಲಜಪತರಾಯರ ಮೇಲೆಯೂ ಇದೇ ತಪ್ಪನ್ನು ಹೊರಿಸಿ ಅವರನ್ನೂ ಓಡಿಸಲಾಯಿತು. ಪಂ. ಮದನಮೋಹನ ಮಾಲವೀಯರನ್ನು ಹೊರಹಾಕದಿದ್ದರೂ ಅವರು ಹಿಂದೂ ಆದುದರಿಂದ ಅವಮಾನಪಡಿಸಲಾಯಿತು. ತಿಲಕರ ಮೇಲಿನ ಅಪರಾಧವನ್ನೇ ಸುಭಾಷಚಂದ್ರಬೋಸರ ತಲೆಗೇರಿಸಿ ಅವರನ್ನೂ ಹೊರದೂಡಲಾಯಿತು; ಬಹಳ ದೂರವಿರಿಸಲಾಯಿತು. "ರಾಷ್ಟ್ರವಾದಿ" ಪತ್ರಿಕೆಗಳಲ್ಲಿಯೂ ಅವರನ್ನು "ದೇಶದ್ರೋಹಿ" ಎಂದು ಕರೆಯಲಾಯಿತು— ಇದೆಲ್ಲ ಬಹುಮತದ ಕೃಪೆ! ಸುಭಾಷರೊಡನೆಯಾವ ಕಾಂಗ್ರೆಸಿಗನೂ ಸೇರಬಾರದು; ಮಾತಾಡಬಾರದು; ಹೆಚ್ಚೇನು, ಅವರ ಸಭೆಗಳಿಗೆ ದೂರದಲ್ಲೇ ಸಲಾಂ ಹೊಡೆಯಬೇಕು ಎಂದೂ ಆದೇಶವನ್ನು ಎಲ್ಲ ಕಾಂಗ್ರೆಸಿಗರಿಗೂ ಕಳಿಸಿಕೊಡಲಾಯಿತು!

ರಾಜರ್ಷಿ ಪುರುಷೋತ್ತಮದಾಸರಿಗೆ ಬಹುಮತವೇ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಒಪ್ಪಿಸಿಕೊಟ್ಟಿತು; ಆದರೇನು? ಈ 'ಬಹುಮತ'ವೇ ಮೋಸಹೋಯಿತು! ಕೆಲವೇ ದಿನಗಳಲ್ಲಿ ಬಹುಮತವನ್ನು ಕಷ್ಟೆಂದು ತಿಳಿಯಲಾಯಿತು. ಆ ದು ದೂರದಲ್ಲಿಯೇ ಕಣ್ಣು ಮಿಟುಕಿಸಿತು; ಟಂಡನರು ಬಹುಮತದ ಕ್ರೂರ ಕಟಾಕ್ಷವನ್ನೀಕ್ಷಿಸಲಾರದೆ ದೂರ ನಿಂತರು.

ಕಾಶಿಯ ನಾಗರಿ ಪ್ರಚಾರಿಣೀ ಸಭೆಯು ಹಿಂದಿಗೆ ತುಂಬ ಸೇವೆ ಸಲ್ಲಿಸಿದೆ. ಬಾಬೂ ಶ್ಯಾಮಸುಂದರದಾಸರು ಆದರ ಬೀಜ ಬಿತ್ತಿ ಅದನ್ನು ಬೆಳೆಸಿದವರು. ಅವರಿಲ್ಲದಿರುತಿದ್ದರೆ, ಸಭೆಯೇ ಇಲ್ಲವಾಗುತ್ತಿತ್ತು. ಆದರೆ, ಅವರ ವೃದ್ಧಾಪ್ಯದಲ್ಲಿ ನವಯುವಕರ ಬಹುಮತದಿಂದ ಅವರನ್ನೂ ದೂರ ಓಡಿಸಲಾಯಿತು. ಇದರಿಂದಾಗಿ ತಾನು ಮಗುವಿನಂತೆ ಸಾಕಿ ಸಲಹಿದ ಸಂಸ್ಥೆಯ ಇತಿವೃತ್ತಗಳನ್ನು ಪರರಿಂದ ಅವರು ತಿಳಿದುಕೊಳ್ಳುತಿದ್ದರು!

ಸಭೆಯ ಸಂಸ್ಥಾಪಕರಲ್ಲೊಬ್ಬರಾದ ಪಂ. ರಾಮನಾರಾಯಣ ಮಿಶ್ರರನ್ನೂ ಬಹುಮತದಿಂದ ಹೊರದಬ್ಬಲಾಯಿತು. ಹೊರದೂಡಿದವರೇ ಹೊರಹೋದನಂತರ ಅವರು ಪುನಃ ಒಳಹೋದರು. ಅವರು ಪ್ರತಿದಿನವೂ ಸಭೆಯ ಅಂಗಳಕ್ಕೆ ಬಂದು ಅಲ್ಲಿನ ಮಣ್ಣನ್ನು ತಲೆಗೆ ಹಚ್ಚಿಕೊಂಡು ಮರಳುತಿದ್ದರು.

ಹಿಂದೀ ಸಾಹಿತ್ಯ ಸಮ್ಮೇಳನವು ಬೆಳೆಯುತ್ತ ಬಂದಾಗ ಅಲ್ಲಿಯೂ ಬಿಸಿರಕ್ತದ 'ಬಹುಮತ' ಕಾಣಿಸಿತು. ಸಮ್ಮೇಳನದ ವಿಕೇಂದ್ರೀಕರಣವಾಗಬೇಕೆಂಬ ಲೇಖನಗಳು ಪ್ರಕಟವಾಗತೊಡಗಿದುವು. ರಾಜರ್ಷಿ ಟಂಡನರು ಅದರಲ್ಲಿರುವ ವರೆಗೆ ಸ್ವೇಚ್ಛಾನುಸಾರ ವರ್ತನೆಗೆ ಅವಕಾಶವಿರಲಿಲ್ಲ. ಅದುದರಿಂದ ಟಂಡನರನ್ನು ಹೊರಗೆ ಹಾಕಲು ಫಿತೂರಿ ನಡೆಯಿತು. ಈ ಫಿತೂರಿಯ ಕಾರಣದಿಂದಲೇ ಅವರ ಕೈಯಿಂದ ಸಾಹಿತ್ಯ ಸಮ್ಮೇಳನ ತಪ್ಪಿ ಹೋಯಿತು. ಮತ್ತು ಅವರ ಮನಸ್ಸು ಸದಾ ಚಿಂತೆಗೀಡಾಯಿತು. ಈ ಚಿಂತೆಯಿಂದಲೇ ಅವರು ಇಹಲೋಕ ತ್ಯಾಗಮಾಡ ಬೇಕಾಗಿಯೂ ಬರಬಹುದು.

ಮದ್ರಾಸಿನ ಮಾಜಿ ಮುಖ್ಯಮಂತ್ರಿ ರಾಜಾಜಿಯವರ ಮೇಲೆ ಅವರನ್ನು ಅಧಿಕಾರಕ್ಕೆ ಕರೆದು ತಂದು ಅಂಟಿಸಿದ ಬಹುಮತವೇ ಅವರನ್ನು ಹೊರಗೋಡಿಸುವಲ್ಲಿಯೂ ಮುತುವರ್ಜಿವಹಿಸಿತು. ಮೈಸೂರಿನ ಹನುಮಂತಯ್ಯ, ನಿಜಲಿಂಗಪ್ಪನವರ ಮೇಲಿಯೂ ಅನಕ್ಷಪೆ ಬಿದ್ದುದು ಬಹುಮತವೇ. ಇದೇ ರೀತಿ ಈ 'ಪ್ರಜಾತಂತ್ರ'ದಲ್ಲಿ ಬಹುಮತದ ಪ್ರಭಾವ ಅತ್ಯಧಿಕವಾಗಿದೆ. ಇವೇ "ಬಹುಮತ" ನಾಳೆ ನೆಹರೂ ಮೇಲೆಯೂ ತನ್ನ ಪ್ರಭಾವ ಬೀರುವುದಿಲ್ಲ ಎಂದು ನಂಬುವುದು ಸಾಧ್ಯವಿದೆಯೆ?

(ಸಂಗ್ರಹ)

ವಿನೋದ ವಿಹಾರ

ಓದುವಿರಾದರೆ ನಕ್ಕುನಲಿಯಬಹುದು!

ಅಪ್ಪನಂತೆ ಮಗ....

ತಂದೆ-"ಮಲ್ಲ ಎಲ್ಲಾ ಕೆಲಸವ ಬಲ್ಲ,
ಹೇಳಿದರೊಂದು ಮಾಡಲೊಲ್ಲ,
ಕಸಗುಡಿಸೆಂದರೆ ಕೈ ನೋವೆಂದ,
ಹುಸಿ ಹುಸಿ ಸುಳ್ಳನು ನುಡಿಯುತ
ಬಂದ'

ಮಗೂ, ಈ ಪದ್ಯವನ್ನು ನಿನ್ನನ್ನು ಅನ್ವಯಿಸಿ ಬರೆದುದಂತಿದೆ ಅಲ್ಲವೆ? ಕವಿಯು ಚತುರನು."

ಸುಬ್ಬ—ಆದರೆ ಅಪ್ಪ.......

ತಂದೆ—ಆಂ?

ಸುಬ್ಬ—'ತಂದೆಯಂತೆ ಮಗ' ಅನ್ನುವ ಗಾದೆಯನ್ನು ಎಲ್ಲೋ ಕೇಳಿದನೆನಪು. ಹಾಗಾದರೆ.......

o o o

ಇಲಿ ಮುಷ್ಟಿ ಹುಲಿ ಮುಷ್ಟಿ

ತಂದೆ— (ಅಂಗಡಿಯವನೊಡನೆ) ಓ, ಓ, ಏನು ಸಮಾಚಾರ? ಟೊಮೆಟೊಗೆ ಹೇಗಂತೆ ರಾತ್ರಿಗೆ?

ಅಂಗಡಿಯವ-ಒಳ್ಳೆಯ ಟೊಮೆಟೊ ಈ ದಿನ ಖರ್ಚಾಗಿದೆ ಬುದ್ಧೀ,

ಅಷ್ಟರಲ್ಲಿ ಸುಬ್ಬ—ಅಪ್ಪ, ಆಗೋ ಬುಗರಿ ಹಣ್ಣು...

ತಂದೆ—ಛೇ, ಛೇ, ಶೀತವಾದೀತು...

ಸುಬ್ಬ (ತಲೆತುರಿಸುತ್ತ) ಅಪ್ಪ...

ಆಗ ಅಂಗಡಿಯವ— ಹೊ! ಹೊ! ಏನಡ್ಡಿ? ಒಂದು ಮುಷ್ಟಿ ತೆಗಿಯಪ್ಪ, ಬಿಟ್ಟಿಯಿಂದ! ಅದಕ್ಕೇನಂತೆ?

ಅಷ್ಟು ಹೇಳಿದರೂ ಸುಬ್ಬ ಕೈ ಹಾಕಿ ತೆಗೆಯದಿರಲು ಅಂಗಡಿಯವನೆ ಒಂದು ಮುಷ್ಟಿ ತೆಗೆದುಕೊಟ್ಟ. ಇಬ್ಬರೂ ಹೊರಟರು ದಾರಿಯಲ್ಲಿ ಅಪ್ಪ— ನೀನೇಕೆ ಅವರಂದಾಗ ಕೈ ಹಾಕಿ ತೆಗೆಯದೆ ಸುಮ್ಮನಿದ್ದೆ?

ಸುಬ್ಬ—ನಂಗೊತ್ತು, ನಾನು ತೆಗೆಯದಿದ್ದಲ್ಲಿ ಅವರೇ ತೆಗೆದುಕೊಡುತ್ತಾರೆಂಬು.......

ಅಪ್ಪ—ಅದಕ್ಕೇನಾಯಿತು?

ಸುಬ್ಬ—ನನ್ನ ಮುಷ್ಟಿ ಇಲಿಮುಷ್ಟಿ, ಅಪ್ಪ, ಅವರದು ಹುಲಿಮುಷ್ಟಿಯೇ ಸರಿ ಅದಕ್ಕೆನೆ ಕಾದಿದ್ದೆ ಅಪ್ಪ.

ತಂದೆಯ ಕಣ್ಣಿನ ಕಪ್ಪುಭಾಗ ಕೆಳಗಿಳಿಯಿತು ಸಖೇದಾಶ್ಚರ್ಯದಿಂದ!

o o o

ರೇಡಿಯೊ ಎಲ್ಲಿ?

ಸುಬ—ಓ.......ಬಾಳು, ಅಂದಂತೆ ಕೋಣೆಯಲ್ಲಿನ ರೇಡಿಯೊ ಎಲ್ಲಿ?

ಜವಾನ—ಬುದ್ಧಿ, ತಾವಂದಿದ್ದೀರಲ್ಲ ತಮಗೆ ಪರೀಕ್ಷೆ ಈ ಕೋಣೆಯೊಳಕ್ಕೆ ಬಂದು ಯಾರೂ ಗಲಾಟೆ ಮಾಡಕೂಡದೆಂದು? ಅದಕ್ಕೇನೆ ಅಡಿಗೆ ಕೋಣೆಯೊಳಗೆ ಇಟ್ಟಿದ್ದೇನೆ, ಬುದ್ಧಿ, ನನ್ನ ಅಜ್ಞೆ ಸ್ವೀಕರಿಸುವ ಚತುರತೆ ಹೇಗೆ?

ಸುಬ್ಬ—(ಸಿಟ್ಟಿಗೆದ್ದು) ಥೂ......

oo oo

ಸಿಂಹಳದ ಜನ

ಸಿಂಹಳದ ಜನರ ಪರಿಚಯ ಕೊಡು ಎಂದು ಸುಬ್ಬನಿಗೆ ಪರೀಕ್ಷೆಯಲ್ಲಿ ಪ್ರಶ್ನೆ ಬಂದಿತ್ತು. ಸುಬ್ಬನಿಗೆ ಸಿಂಹಳ ಎಂಬುವುದು ಸಿಂಬಳ ಎಂಬುವುದಾಗಿ ತೋರಿ ಆತ ಈ ರೀತಿ ಬರೆದ, "ಅವರ ಬಲಗಡೆ ನಿಲ್ಲಬಾರದು. (2) ಅವರಲ್ಲಿ ಕರವಸ್ತ್ರವಿದೆ. (3) ಅವರ ಮೂಗು ಯಾವಾಗಲೂ ಕೆಂಪು. ಕೆಂಪು(4) ಸ್ವರ ದೊರಗು.

ಮರುದಿನ ಸುಬ್ಬನಿಗೆ ಕ್ಲಾಸು ಕ್ಲಾಸು ಮೆರವಣಿಗೆ!

oo oo

ಮೊಟ್ಟೆಯ ಕ್ರಯ

ಇನ್ಸ್‌ಪೆಕ್ಟರ್— ಎರಡೂವರೆಯ ಎಂಟು ಮೊಟ್ಟೆಗಳನ್ನು ತರಲು ನೀನು ತಂದೆಯಿಂದ ಎಷ್ಟು ಲೆಕ್ಕಮಾಡಿ ತೆಗೆದುಕೊಳ್ಳುವಿ?

ಎಲ್ಲಾರ್— ಒಂದೂಕಾಲು ರೂಪಾಯಿ ಸಾರ್.

ಇನ್ಸ್— ಬೇರಿಗೂಡ್ ಆಯಿ ಸೀ....

ಸುಬ್ಬ—ಸಾರ್..! ಒಂದು ರೂಪಾಯಿ ನಾಲ್ಕೂವರಾಣೆ ಆಗುತ್ತದೆ...

ಇನ್ಸ್—ಹೇಗೊ?

ಸುಬ್ಬ-ಅಲ್ಲ ಸರ್, ಅಂಗಡಿಗೆ ಹೋಗಿ ಮೊಟ್ಟೆ ತಂದುದಕ್ಕೆ ತಂದೆ ನನಗೆ ಅರ್ಧಾಣೆ ಕೊಡುತ್ತಾರೆ ಒಟ್ಟಿಗೆ ರೂ.1-4-6 ಆಗುವುದಲ್ಲವೆ?

oo oo

ಚಿತ್ರವಲ್ಲ? ಕನ್ನಡಿ

ತಂದೆ—ಅಯ್ಯೋ! ಇದೇನು ಚಿತ್ರ ಸುಷ್ಟು, ಅದರ ಮೂಗೇನು? ಕಪ್ಪು ಜಾತಿಯವರ ಮೂಗಿನಂತೆ. ಕಿವಿ! ಅಬ್ಬ! ಆನೆ ಕಿವಿಯೇ ಕಾಲು? ಕುದುರೆ ಕಾಲೇ ಸರಿ, ಮುಖ! ಅಬ್ಬಬ್ಬಾ! ಹಂದಿ ಮುಸುಡು....

ಸುಬ್ಬ—"........."

ತಂದೆ—ಅಯ್ಯೋ ಇದು ಚಿತ್ರವೆಂದು ಯಾರೂ ಹೇಳಲಾರರು, ಇದು ಮನುಷ್ಯನಲ್ಲ ಪಿಶಾಚಿ, ಭೂತ ಪ್ರೇತ....

ಸುಬ್ಬ—"ಅಪ್ಪ...."

ತಂದೆ—"ಚಿತ್ರವಲ್ಲ ಇದೂ...."

ಸುಬ್ಬ—ಅಪ್ಪ ಸರಿ ಚಿತ್ರವಲ್ಲ. ಮೊನ್ನೆ ಮೊನ್ನೆ ನವಯುಗ ಸ್ಟೋರಿಂದ ತಂದ ಕನ್ನಡಿ....ತಿಳಿಯಿತೆ?



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಕಥಾ ವಿಹಾರ

(೨ನೇ ಪುಟದಿಂದ)

ಬಹುದು.” ಆನಂದದ ಭರದಿಂದ ವನದಲ್ಲೇ ಮುಂದಿಗೆ ಹಾಕುತಿದ್ದ ಸುಂದರಿ.

ವಿಜೃಂಭಣೆಯಿಂದ ವಿವಾಹ ಮಹೋತ್ಸವ ನೆರವೇರಿತು. ಎಂಟು ದಿನಗಳ ಬಳಿಕ ಉಳಿದ ಸೋದರಿಯರಿಬ್ಬರ ವಿವಾಹವೂ ಜರಗಿತು. ಮೂವರು ವಧುಗಳೂ ತುಂಬಿದ ಹೃದಯದಿಂದ ತಮ್ಮ ತಮ್ಮ ಪತಿಗೃಹಕ್ಕೆ ತೆರಳಿದರು.

ಪತಿಗೃಹದಲ್ಲಿ ಹೆಚ್ಚಿನ ಹುಡುಗಿಯರಿಗೆ ದೊರೆಯುವ ಅನುಭವದಂತೆ ಶಾರದೆಗೆ ದೊರಕಲಿಲ್ಲ. ಅದು ಭಿನ್ನವಾಗಿತ್ತು. ಮದುವೆಯಿಂದೊಮ್ಮೆ ದುಃಖವು ಉಕ್ಕಿಬಂದಿದ್ದರೂ ಮೂರು ನಾಲ್ಕು ದಿನಗಳಲ್ಲಿಯೇ ಅದು ಅಳಿಸಿ ಹೋದಂತಿತ್ತು. ಪತಿರಾಯನ ಅತಿಯಾದ ಪ್ರೇಮದಿಂದಾಗಿ ಶಾರದೆಯ ಪಾಲಿಗೆ ಸದಾ ಆನಂದವೇ ಒದಗಿತ್ತು. ಸಂಜೆ ಹೊತ್ತು ನಗರದ ತಿರುಗಾಟ, ಚಲಚಿತ್ರ ದರ್ಶನ, ಸೌಂದರ್ಯ ಪ್ರದರ್ಶನ- ಎಲ್ಲೆಲ್ಲೂ ಆನಂದವೇ ಆನಂದ. ಆದರೆ ಈ ಆನಂದ ಹೆಚ್ಚುದಿನ ಆಕೆಯ ಬಳಿ ಉಳಿಯಲಿಲ್ಲ. ಕಾರಣ ಆಕೆಯ ಪತಿರಾಯನ ಸ್ವಭಾವ ವಿಚಿತ್ರರೀತಿಯದಾಗಿತ್ತು.

ಹೊಸತನ್ನು ಪ್ರೀತಿಸುವುದು ಆತನ ಮುಖ್ಯ ಸ್ವಭಾವವಾಗಿತ್ತು. ಶಾರದೆಯ ಸೌಂದರ್ಯವನ್ನು ಕಂಡು ಆತ ಒಮ್ಮೆಲೇ ಮನಸೋತಿದ್ದ. ಪ್ರೀತಿಸತೊಡಗಿದ್ದ. ಆದರೆ ಆ ಪ್ರೀತಿ ಕೆಲವೇ ದಿನಗಳ ಸೊತ್ತಾಗಿತ್ತು. ಬಯಸಿದ ಸುಖವನ್ನು ಪಡೆದಾದ ಬಳಿಕ ಆತನ ಮನಸ್ಸು ಬೇರೆಡೆಗೆ ಅದೆಲ್ಲಿಗೋ ಚಲಿಸಿತು. ಶಾರದೆಯ ಹೃದಯವನ್ನು ತಿಳಿಯುವ ಇಚ್ಛೆ ಆ ಮನಸ್ಸಿಗೆ ಇರಲಿಲ್ಲ. ಅದೆಲ್ಲಿಗೋ ನವೀನತೆಯ ತೃಷಿತನಾಗಿ ಚಲಿಸಿರಬೇಕು. ಅಂತೂ ಹೊಸಾರ್ಥವಲ್ಲೆಂಬಂತೆ ಶಾರದೆಯ ಪಾಲಿಗೆ ಹರಿಯುತಿದ್ದ ಪ್ರೇಮದ ತೊರೆ ಬೇರೆಲ್ಲಿಗೋ ಹರಿಯುತ್ತೊಡಗಿತು. ಆಕೆಯ ಆನಂದದ ಬಳ್ಳಿಯು ಬಾಡಿ ಮುದುಡಿತು.

ತಿಂಗಳ ಬಳಿಕ ತವರಿಗೆ ಬಂದಿದ್ದ ಶಾರದೆಯನ್ನು ಹದಿನೈದು ದಿನಗಳ ಬಳಿಕ ಭಟ್ಟರೇ ಕಳುಹಿಸಿಕೊಟ್ಟು ಬರಬೇಕಾಯಿತು. ಈ ಬಾರಿ ಶಾರದೆಗೆ ದೊರೆತ ಅನುಭವಗಳು ಅತಿ ವಿಚಿತ್ರವಾದವುಗಳು. ಗಂಡನು ಮನೆಗೆ ಬರುವುದೇ ಕಡಿಮೆ. ಬಂದರೂ ಹೆಚ್ಚು ಸಮಯ ನಿಲ್ಲಲಾರ. ಮಾತನಾಡಿದರೂ ಉತ್ತರ ದೊರಕದು. ಬೇಸರ ಹಿಡಿದ ಶಾರದೆ ಒಂದೂವರೆ ತಿಂಗಳ ಬಳಿಕ ತಿರುಗಿ ತವರನ್ನು ಸೇರಿದಳು. ಎರಡು ತಿಂಗಳು ಕಳೆದರೂ ಗಂಡನ ಸುಳಿವಿಲ್ಲ. ಬರೆದ ಕಾಗದಗಳಿಗೆ ಉತ್ತರವಿಲ್ಲ. ಚಿಂತೆಗೊಂಡ ಭಟ್ಟರು ಭಾವ ಶ್ರೀನಿವಾಸಯ್ಯನವರಲ್ಲಿ ದೂರಿಟ್ಟರು. ಅವರು ಎರಡು ಮೂರು ಬಾರಿ ಸುಂದರನಲ್ಲಿಗೆ ಹೋಗಿ ಮಾತನಾಡಿ ಬಂದರು. ಎಲ್ಲವೂ ನಿಷ್ಫಲ. ಅಳಿಯನ ಆಗಮನವೇ ಆಗದಾಯಿತು. ಸಿಟ್ಟುಗೊಂಡ ಗೋವಿಂದ ಭಟ್ಟರು ಆತನ ಗೊಡವೆಯನ್ನೇ ಬಿಟ್ಟು, ಬಿಟ್ಟು ‘ಎಲ್ಲವೂ ತನ್ನ ಹಣೇಬರಹ’ ಎಂದುಕೊಂಡು ಸುಮ್ಮನಾದರು.

ಕೆಲವು ತಿಂಗಳುಗಳ ತನಕ ಚಿಂತಾಸಾಗರದಲ್ಲಿ ತೇಲುತ್ತಿದ್ದ ಶಾರದೆ ‘ಎಲ್ಲವೂ ವಿಧಿಲೀಲೆ” ಎಂದುಕೊಂಡು ಚೇತರಿಸಿ ಕೊಳ್ಳ ತೊಡಗಿದಳು. ಮಕ್ಕಳ ವಿವಾಹದ ಬಳಿಕ ತನಗೂ ಒಂದು ಉದ್ಯೋಗ ಬೇಕು, ಎಂದು ಕಂಡ ಭಟ್ಟರು ಮನೆಯ ಕೊಟ್ಟಿಗೆಯಲ್ಲಿಯೇ ಆ ಹೋಟೇಲನ್ನು ಪ್ರಾರಂಭಿಸಿದ್ದರು. ಮನೆ ಕೆಲಸದಲ್ಲಿ ಅನುಭವಿಯಾಗಿದ್ದ ಶಾರದೆ ಸಮಯ ಕಳೆಯಲೆಂದೋ, ಅಥವಾ ಮುದಿ ತಂದೆಗೆ ಸಹಾಯವಾಗಲೆಂದೋ, ಭಟ್ಟರ ಹೋಟೇಲು ಕೆಲಸಗಳಲ್ಲಿ ಸ್ವಲ್ಪ ಸ್ವಲ್ಪ ಸಹಕರಿಸ ತೊಡಗಿದಳು.

ವರ್ಷಗಳು ಐದು ಉರುಳಿದುವು. ಆಕೆಯ ಜೀವನದಲ್ಲಿ ಏನೂ ಬದಲಾವಣೆಗಳಾಗಲಿಲ್ಲ. ಆದರೆ, ಊರ ಜನರು ಆಕೆಯ ಕುರಿತಾಗಿ ಏನೇನೋ ಆಡಿಕೊಂಡಿರುತ್ತಾರೆ.

“ಆ ಹುಡುಗಿ ಹೋಟೇಲಿನಲ್ಲಿ ಯಾಕಿರುತ್ತಾಳಪ್ಪಾ? ಮನೆಯಲ್ಲೇ ಇರಬಾರದೇ ?” ಕೆಲವು ಹೆಂಗಸರ ಅಭಿಪ್ರಾಯವಿದು.



ಅರುವತ್ತಡಿವ್ಯಾಸವುಳ್ಳ ಅಲ್ಯೂಮಿನಿಯಂನ ಭಿನ್ನ ವೃತ್ತ. ಇದರಿಂದ ಅಲಾಸ್ಕಾ ಎದುರಿಲ್ಲಿರುವ ಉತ್ತರ ಧ್ರುವದೊಡನೆ ಸಂಬಂಧವನ್ನು ಕಲ್ಪಿಸಲು ಪ್ರಯತ್ನಿಸುವುದು.

“ಹೋಟೇಲಿನಿಂದ ಭಟ್ಟರ ಜೀವನ ಖಂಡಿತ ಸಾಗದು. ಮಗಳಿಂದಾಗಿಯೆ ಅವರ ಜೀವನ ಅಷ್ಟು ಸುಗಮವಾಗಿ ಸಾಗುತ್ತಿರಬೇಕು” ಕೆಲವು ತರ್ಕಶಾಸ್ತ್ರಿಗಳ ಶಂಕೆಯಿದು.

“ಆಕೆಗೆ ಗಂಡನಿಂದ ಏನಾದರೂ ಜೀವನಾಂಶ ಸಿಗದೇ?” ಹಳ್ಳಿಯ ಹೆಂಗಸರ ಹುಚ್ಚು ಆಸೆಯ ನುಡಿ.

“ಹೆಂಡತಿಯ ಹೊಟ್ಟೆ ಹೊರೆಯಲಾರದೆ ಉಂಡಲೆಯುವ ಆ ಸೋಮಾರಿಯ ಮದುವೆಯಾದುದಾದರೂ ಯಾತಕ್ಕಾಗಿ?” ಎಂದು ತರುಣ ಗೃಹಸ್ಥರವಾದ.

“ಆ ಭಟ್ಟರಿಗೆ ಮಗಳನ್ನು ಬೇರೆಯವರಿಗಾದರೂ ವಿವಾಹ ಮಾಡಿಕೊಡಬಾರದೆ? ಸುಮ್ಮನೆ ಯಾಕೆ ಇಟ್ಟುಕೊಂಡಿರುವರು?” ಸಮಾಜ ಸುಧಾರಕರೆಂತಿರುವವರ ಅಂಬೋಣ.

“ಮುದಿ ತಂದೆಗೆ ಆಧಾರವೆಂದು ತಿಳಿದು ಆಕೆ ಬದುಕಿರಬೇಕು. ಇಲ್ಲದಿದ್ದರೆ ಎಂದೋ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಳು.” ಆದಾವ ಕಾರಣದಿಂದಲೋ ತಾಯಿ ಮನೆಯನ್ನು ಸೇರಿದ ಕೆಲವು ತರುಣಿಯರ ಸಮರ್ಥನೆ.

ಆದರೆ ಆಕೆಯ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಯಾರು ಅರಿಯಬಲ್ಲರು?” ಎಂದು, ನಿಟ್ಟುಸಿರೊಂದನ್ನು ಬಿಟ್ಟು ಗೋಪಾಲಾಚಾರ್ಯರು ಮೌನ ತಾಳಿದರು. ಯಕ್ಷಗಾನ ಪ್ರಾರಂಭಕ್ಕೆ ಇನ್ನು ಹೆಚ್ಚು ಸಮಯ ಉಳಿದಿರಲಿಲ್ಲ. ಚೆಂಡೆವಾದಕ ‘ಆಚಾರ್ಯ’ರು ತಮ್ಮ ‘ಕೈಚಳಕ’ದ ಪ್ರದರ್ಶನಕ್ಕೆ ಸಮಯ ಕಾಯುತ್ತಿದ್ದರು. ಆದರೂ ತಾಳ್ಮೆ ತಪ್ಪಿ ಒಮ್ಮೊಮ್ಮೆ ಏನೇನೋ ಬಡಿಯುತಿದ್ದರು. ನಾವೂ ಬೆಂಚುಗಳನ್ನು ಮಧ್ಯೆ ಕಿಟ್ಟು ಕುಳಿತುಕೊಂಡೆವು.

೦೦ ೦೦ ೦೦

ತಿಂಗಳುಗಳು ಎರಡು ಕಳೆದಿರ ಬಹುದು. ಮತ್ತೊಂದು ಶುಕ್ರವಾರ. ಅಧ್ಯಾಪಕರೋರ್ವರ ಒತ್ತಾಯಕ್ಕೆ ಬಲಿಬಿದ್ದು ಯಕ್ಷಗಾನಕ್ಕೆ ತೆರಳಲೇ ಬೇಕಾಯಿತು. ಅಂದು ಶಾಲೆಗೆ ಮುಟ್ಟುವಾಗಲೇ ಗಂಟೆ ಹತ್ತಾಗಿತ್ತು. ಯಕ್ಷಗಾನವು ಪ್ರಾರಂಭವಾಗುವುದರಲ್ಲಿತ್ತು. ಅಂದು ಅನಿರೀಕ್ಷಿತವಾಗಿ ಬಂದಿದ್ದ ಗೋಪಾಲಾಚಾರ್ಯರು ನನ್ನನ್ನು ಕಂಡೊಡನೆಯೇ ತವಕದಿಂದೆದ್ದು ಶಾಲೆಯ ಹೊರಗೆ ನನನ್ನು ಕರೆದುಕೊಂಡು ಹೋದರು. ಅಲ್ಲಿ ಬೀಡಿ ಹಚ್ಚುತ್ತಾ “ಆ ಹೋಟೇಲಿನ ಹುಡುಗಿ ಹದಿನೈದು ದಿನಗಳ ಹಿಂದೆ ಮುದಿ ತಂದೆಯನ್ನು ಬಿಟ್ಟು ಬಿಟ್ಟು ಅದೆಲ್ಲಿಗೋ ಯಾರೊಡನೆಯೋ ಹೋಗಿರುವಳು. ತಂದೆಯ ಅವಸ್ಥೆ ಶೋಚನೀಯ ವಾಗಿದೆ” ಎಂದರು. ನಂದಿದ ಬೀಡಿಯನ್ನು ಉರಿಸಲೆಂದು ಮತ್ತೊಮ್ಮೆ ಕಡ್ಡಿ ಗೀರಿದರು. ಅವರ ಮುಖದಲ್ಲೂ ಬೇಸರದ ಛಾಯೆ ಮೂಡಿತ್ತು.—

ರಾಧಾಕೃಷ್ಣ ಯಳಚಿತ್ತಾಯ,
ವಿಶಾರದ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.



ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)
ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ವಿಚಾರ ಮಥನ

(೧ನೇ ಪುಟದಿಂದ)

ಯ ಚುನಾವಣೆಯಲ್ಲಿ ಗೆಲ್ಲುವುದು ದಿಟವೆಂಬ ವಿಶ್ವಾಸವನ್ನು ಪ್ರದರ್ಶಿಸಿದ್ದಾರೆ. ಮಂತ್ರಿಮಂಡಳಿಯಾದರೂ ಸೆಕ್ರೆಟೇರಿಯಟನ್ನು ಅಗಲುವ ವೇಳೆ ಪುನಃ ಸಂಧಿಸುವ ಆಶೆಯನ್ನು ವ್ಯಕ್ತಪಡಿಸಿದ್ದಾರೆ. ಇದ ಅನ್ಯಾಯವಾದುದೇನೂ ಅಲ್ಲ; ಆತ್ಮ ವಿಶ್ವಾಸ ಎಲ್ಲರಿಗೂ ಇರಬೇಕಾದುದೇ. ಒಂದು ಬಾರಿ ಸಂವಿಧಾನಕ್ಕನುಗುಣವಾದ ಆಡಳಿತೆಯನ್ನು ನಡೆಸಲು ಅಸಮರ್ಥರಾದ ಕಮ್ಯುನಿಸ್ಟರು ಪುನಃ ಬಹುಮತ ಪಡೆಯುವುದು ಅಸಂಭವವಾದರೂ ಸಂಭವನೀಯವಲ್ಲ ಎಂದು ಧೈರ್ಯದಿಂದ ಹೇಳುವಂತಿಲ್ಲ. ಆದರೆ, ಪುನಃ ಅವರೇ ಬಂದರೆ? ಆಗ....? ಪರಿಸ್ಥಿತಿ ಮತ್ತಷ್ಟು ಗಂಭೀರವಾಗುವುದು.

ಆದುದರಿಂದ ಕೇರಳದ ಜನತೆಯ ಕರ್ತವ್ಯವು ಅಮೂಲ್ಯವಾದುದಿದೆ. ರಾಷ್ಟ್ರಾಧ್ಯಕ್ಷರ ಮನವಿಕೆಯನ್ನು ಪ್ರಶ್ನಿಸುವಂತಿಲ್ಲವಾದರೂ, ಅವರ ಅಭಿಪ್ರಾಯವೀಗ ಜನತೆಯಿಂದ ಪುಷ್ಟೀಕರಿಸಲ್ಪಟ್ಟರೆ, ಕಿರೀಟಕ್ಕೆ ನವಿಲುಗರಿ ಮೂಡಿದಂತೆ. ಎಂತಲೇ ಇದು ವರೆಗೆ ಕಮ್ಯುನಿಸ್ಟರ ಅಸಹನೀಯ ಕಪಿಮುಷ್ಟಿಯಲ್ಲಿ ಸಿಕ್ಕಿ ಬಿದ್ದು ಈಗ ತಾನೇ ಹೊರಬಂದ ಕೇರಳೀಯರು ಮರು ಚುನಾವಣೆಯಲ್ಲಿ ಕಮ್ಯುನಿಸ್ಟರನ್ನು ಸಂಪೂರ್ಣವಾಗಿ ಸೋಲಿಸುವುದರಿಂದಲೇ ಅವರ ಭವಿಷ್ಯ ವೃದ್ಧಿಯಾಗುತ್ತದೆ. ಕಮ್ಯುನಿಜಂ ಅನ್ನು ಭಾರತದಿಂದಲೇ ಹೊಡೆದೋಡಿಸುವುದರ ಸಾಧ್ಯಾಸಾಧ್ಯತೆಗಳ ಸತ್ವ ಪರೀಕ್ಷೆಯನ್ನು ಕೇರಳೀಯರು ಮಾಡಬೇಕಾಗಿದೆ.

ಕಮ್ಯುನಿಸ್ಟರ ಪೊಳ್ಳು ಬೆದರಿಕೆಗಳು ಯಾವುವೂ ಪ್ರಯೋಜನಕ್ಕೆ ಬರುವಂತಿಲ್ಲ. ಸದ್ಯ ಕಮ್ಯುನಿಸ್ಟರು ನಾಕಷ್ಟು ಸಂಪ್ರೈಯಲ್ಲಿರುವಲ್ಲೆಲ್ಲಾ ಒಂದಲ್ಲ ಒಂದು ವಿಧದ ಕಿರುಕುಳಗಳನ್ನು ಕೊಡುತ್ತಲೇ ಬಂದಿದ್ದಾರೆ. ಪದದ ಚರ್ಮವನ್ನು ಹೊದ್ದುಕೊಂಡು ತೋಳ ಬಂದರೂ ಒಂದು ಬಾರಿ ಮಾತ್ರ ಜನತೆಯನ್ನು ಮೋಸಗೊಳಿಸಬಹುದು ಸಮರ್ಥವಾದೀತೇ ಹೊರತು ಕೊನೆಗೆ ಸತ್ಯ ಬಹಿರಂಗವಾಗದುಳಿಯದು ಎಂಬುದು ಚಿರಸತ್ಯ. ಕಮ್ಯುನಿಸ್ಟರ ಸಂವಿಧಾನ ಪ್ರಿಯತೆ ಇದಕ್ಕೊಂದುದಾಹರಣೆ. ಪ್ರಜಾಪ್ರಭುತ್ವದಲ್ಲಿಯೇ ವಿಶ್ವಾಸವಿಲ್ಲದ ಸರ್ವಾಧಿಕಾರ ಪ್ರಿಯರಾದ ಇವರು ಭ್ರಾಂತೀಯರನ್ನು ವಂಚಿಸುವುದಕ್ಕಾಗಿಯೇ ಇಲ್ಲದ ಸಂವಿಧಾನ ವಿಶ್ವಾಸವನ್ನು ಪ್ರದರ್ಶಿಸಿದರು; ಬಚ್ಚ ಬಯಲಲ್ಲಿ ಅಡಗಲು ಪ್ರಯತ್ನಿಸಿದರು. ಆದರದು ತಮ್ಮಿಂದಲ್ಲ, ಯಾರಿಂದಲೂ ಹೀಗೆ ಮರೆಯಾಗುವುದು ಅಸಾಧ್ಯವೆಂದವರು ತಿಳಿಯದೆ ಹೋದರು. ಇದೇ ಅವರ ಮೊದ್ದುತನವೆ?

— ರಾಶಿ.

NAVAYUGA' WEEKLY
is in the list of periodicals and Newspapers approved for use in Secondary Schools as per proceedings Roc· No· 466 N/50 date 2-12-1950 of the Director of public Instruction, Madras·

ಜೀವನ ಚಿತ್ರ

ನಮ್ಮೂರ ಶಾಲೆಯ ಶಂಕರ ಮಾಸ್ತರ್

ಅವರ ಅನುಭವವು ನಮ್ಮ ಸರಕಾರದ ವಿದ್ಯಾ ಇಲಾಖೆಯವರಿಗೂ ಇಲ್ಲವೆನ್ನಬಹುದಲ್ಲವೆ?

ನಮ್ಮೂರಲ್ಲಿ ಶಂಕರ್ ಮಾಸ್ತರರನ್ನು ಆಬಾಲವೃದ್ಧರೂ ಅರಿತಿದ್ದಾರೆ. ಕಳೆದ ೩೫ ವರ್ಷಗಳಿಂದ ಅವರು ನಮ್ಮೂರ ಹಳ್ಳಿಯ ಶಾಲೆಯಲ್ಲಿ ಮಾಸ್ತರರಾಗಿ ದುಡಿಯುತಿದ್ದಾರೆ. ಅವರಿಗೆ "ಶಂಕರ ಮಾಸ್ತರರೆಂದು ಹೆಸರಿಟ್ಟು ಸಂಬೋಧಿಸುವ ಕಾರಣವೆಂದರೆ—"ಶಂಕರ ಎಂಬ ಹೆಸರಿನಲ್ಲಿ ೨೦ ವರ್ಷದವರಿದ್ದಾಗ ಗ್ರ್ಯಾಂಟ್ ಶಾಲೆಯ ಮಾಸ್ತರರಾಗಿ ಅವರು ನಮ್ಮೂರಿಗೆ ಬಂದಿದ್ದು, ಇಂದು ನಮ್ಮೂರ ಶಾಲೆ ಬೋರ್ಡ್ ಶಾಲೆಯಾಗಿ ೬ ಜನ ಅಸಿಸ್ಟೆಂಟ್ (ಸಹಾಯಕ) ಮಾಸ್ತರಿಂದ ಸುಶೋಭಿತರಾದ ಹೆಡ್‌ಮಾಸ್ಟರ್‌ರಾಗಿದ್ದರೂ ಅವರಿಗೆ ಊರವರೆಲ್ಲ ಹೆಸರಿಟ್ಟು ಶಂಕರ ಮಾಸ್ತರರೆಂದೇ ಕರೆಯುತ್ತಾರೆ! ಮೊದಲು ೨೦ ಜನ ವಿದ್ಯಾರ್ಥಿಗಳಿದ್ದ ಶಾಲೆ ಇಂದು ೧೨೦ ಜನ ಹುಡುಗರಿಂದ ಸೇರಿ ನಲಿಯುತ್ತಿದ್ದರೂ—ಮಾಸ್ತರರ ಮನಕ್ಕೆ ನೆಮ್ಮದಿಯಿಲ್ಲ ಅದಕ್ಕೆ ಕಾರಣ ಅವರನ್ನೇ ಕೇಳಿ ತಿಳಿಯಬೇಕೆಂದು ಎಣಿಕೆ. ಹಾಕಿ ಅಂದು ಪ್ರಸ್ತಾಪವೆತ್ತಿದೆ. ಅವರ ಉತ್ತರ ಸ್ವಾಭಾವಿಕವಾದದ್ದೆಂದು ಭಾವಿಸಲೇ? ನನಗವರ ಮೇಲೆ—ತುಂಬಾ ಸಹಾನುಭೂತಿ ಶ್ರದ್ಧೆ ಇದೆ. ಅವರು ತಮ್ಮ ೩೫ ವರ್ಷದ ಅನುಭವವನ್ನು ತಿಳಿಸುತ್ತಿದ್ದಾರೆ!

ನಮ್ಮೂರ ಇಂದಿನ ತರುಣರೆಲ್ಲ ಅವರಲ್ಲಿಯೇ ಪ್ರಥಮ ಪಾಠ ಕಲಿತವರು! ಇಂದಿನ ನಮ್ಮ ಜಿಲ್ಲಾ ಕಲೆಕ್ಟರ್ ಮಿ. ಕುಲಕರ್ಣಿಯವರು ಸಹ ಅವರ ಶಿಷ್ಯರೇ—ನೋಡಲು ಸಣ್ಣದಾಗಿದ್ದರು ನಮ್ಮೂರ ನವ್ಯ ಭವ್ಯ–ಆಶ್ರಯ ಆಶ್ರಿತರಿಂದಲೂ ತನ್ನದೇ ಆದ ಸೃಷ್ಟಿ ಸೌಂದರ್ಯದಿಂದಲೂ ಮೆರೆಯುತ್ತಿದೆ—ಶಂಕರ ಮಾಸ್ತರರು ನಮ್ಮೂರ ಹಳ್ಳಿಗೆ ನಿಸ್ವಾರ್ಥ ವಿದ್ಯಾದಾನ ಮಾಡಿದ್ದಾರೆ—ಮಾಡುತ್ತಲೂ ಇದ್ದಾರೆ—ಅವರ ಹೇಳಿಕೆಯಲ್ಲಿ ತಥ್ಯಾಂಶವಿದ್ದೇ ಇದೆ.

ನಮ್ಮ ಇಂದಿನ ಹಾಗೂ ಅಂದಿನ ಶಿಕ್ಷಣದಲ್ಲಿ ಎಷ್ಟು ಮಾರ್ಪಾಟು! ಏನು ಬದಲಾವಣೆ! ಅಂದಿನ ಹುಡುಗರೇನು! ಇಂದಿನವರೇನು? ಅಂದಿನ ಕಾಯ್ದೆಗಳೇನು? ಇಂದಿನ ಸರ್ಕ್ಯುಲರ್‌ಗಳೇನು! ಶಾಲೆಯಲ್ಲಿ ಇಂದಿನ ಲೆಕ್ಕ ಪತ್ರಗಳೇನು ಇಂದಿನ ರಜಿಸ್ಟರ್ ಪ್ಯಾಲುಗಳೇನು ಅಬ್ಬ ನಮ್ಮ ಶಂಕರ ಮಾಸ್ತರರಂಥ ತಾಳ್ಮೆಯ ಜೀವಿಗೆ ಸಹ ಕಲೆಸಿಡಿತವೆದ್ದಾಗ ಉಳಿದವರಿಗೆನಾಗಿರಬೇಕು!

ಅಂದಿನ ಶಿಕ್ಷಣದಲ್ಲಿ ಪಾಠಕ್ಕೆ ಪ್ರಾಧಾನ್ಯತೆಯಿತ್ತು! ಇಂದಾದರೂ ಯೋಜನೆಯ ಮೇಲೊಂದು ಯೋಜನೆ ಬದಲಾವಣೆಯಿಂದಾಗಿ ಕಾಯ್ದೆ ಕಾನೂನುಗಳು ತಿದ್ದುಪಡಿ ಹೊಂದುತ್ತ ಒಂದು ಶಾಲಾ ಶಿಕ್ಷಣದ ಮಟ್ಟವು ಏರುವುದರ ಬದಲು ಇಳಿಮುಖವಾಗಿದೆಯೆಂದು ನಮ್ಮ ಶಂಕರ ಮಾಸ್ತರರು ವಿಷಾದಪೂರ್ವಕ ಸಂಗತಿ ತಿಳಿಸಿದರು. ಅಲ್ಲದೆ ಹುಡುಗರ ಗುಣನೀತಿ ಮಟ್ಟವೂ ವಿದ್ಯಾಗುರುಗಳಲ್ಲಿಯ ಶ್ರದ್ಧೆಯೂ ಸಹ ಇಳಿಮುಖವಾಗಿದೆಯೆಂದರು.

ಈ ಚಹಾ ಕಾಫಿ ಕುಡಿಯುವ ಚಟದಿಂದಾಗಿ ಹುಡುಗರಿಗೆ ಬೆಳಿಗ್ಗೆ ಎದ್ದೊಡನೆ ಓದುವ ಪರಿಪಾಠ ತಪ್ಪೇ ಹೋಗಿದೆ. ೩೫ ವರ್ಷಗಳ ಹಿಂದೆ—ಕೋಳಿ ಕೂಗುವಾಗಲೇ ಎದ್ದು—ಓದಿ–ಬೆಳಗಾದೊಡನೆಯೇ ಹೂವು ತುಲಸಿ ಕೊಯ್ದು—ದೇವರಿಗೆ ವಂದಿಸಿ—ಗುರುಹಿರಿಯರಿಗೆ ವಂದಿಸಿ—ತಮ್ಮ ವಿದ್ಯಾರ್ಜನೆ ಮಾಡಿಕೊಂಡ ಆ ಹುಡುಗರೆಲ್ಲಿ!! ಕಾಫಿ ತಯಾರಾದ ನಂತರ ೮ ಘಂಟೆಗೆ ಎದ್ದು—ಕಣ್ಣುಜ್ಜಿಕೊಳ್ಳುತ್ತಾ ತಾಟುಗಳನ್ನೆಣಿಸುವ ಈಗಿನ ಹುಡುಗರೆಲ್ಲಿ— ದೇವರು— ಗುರುಹಿರಿಯರನ್ನು ಶ್ರದ್ಧೆಯಿಂದಲೂ ಭಯಭಕ್ತಿಯಿಂದಲೂ ವಂದಿಸುವ ವಿದ್ಯಾರ್ಥಿಗಳೆಂದಿರುವರೇ?-

ಇಂದಿನ ಕಾಯ್ದೆಗಳೂ ಅದಕ್ಕೆ ಅನುಕೂಲವಾಗಿದೆ!!

ಪತ್ರವ್ಯವಹಾರದಮೇಲೆ ಪತ್ರವ್ಯವಹಾರ! ರಿಪೋರ್ಟುಗಳ ಕಂತೆ!! ಪ್ಯಾಲುಗಳ ಗಂಟು—ರಜಿಸ್ಟರುಗಳು!!—ಅಬ್ಬ— ಶಾಲೆಯೆಂದರೆ ಕಚೇರಿಯಾಗಿದೆ!! ಇರಲಿ ಕಾಯ್ದೆಯೇ!! ಅದಕ್ಕೆ ಬುಡ–ತುದಿಯಿಲ್ಲವ್ವ!! ೯—೩೦ ಘಂಟೆಗೆ ಶಾಲೆ ಪ್ರಾರಂಭಿಸುವದೆಂತಲೂ ೧೨—೩೦ಗೆ ಬೆಳಗಿನ ಶಾಲೆ–ಬಿಡುವದೆಂತಲೂ, ೨-೩೦ಕ್ಕೆ ಮಧ್ಯಾಹ್ನ ಪ್ರಾರಂಭಿಸಿ— ೪-೩೦ಕ್ಕೆ ಬಿಡುವುದೆಂತಲೂ, ಇಂದಿನ ಕಾಯ್ದೆ ಅನ್ವಯಿಸಿದೆ.—ಅದರಲ್ಲಿ ಬೆಳಿಗ್ಗೆ ೯-೩೦ ಯಿಂದ ೧೦-೩೦ ವರೆಗೆ ಸಾಮೂಹಿಕ–ವ್ಯಾಯಾಮ ಹಾಗೂ ಪ್ರಾರ್ಥನೆ ನಡೆಯಬೇಕು. ಪ್ರಾರ್ಥನೆಯ ಪದಗಳೂ ಸರಕಾರದಿಂದಲೇ ಬಂದಿರುವುವು—ಅವನ್ನು ಕೇಳಿಸಲು ೧ ತಾಸು ಬೇಕೇಬೇಕು. ಅದಾದ ನಂತರ - "Basic Education"— ತೋಟಗಾರಿಕೆ—ಗ್ರಾಮೋದ್ಯೋಗ – ಒಕ್ಕಲುತನ— ಇವುಗಳಿಗೆ ಒಂದು ತಾಸಿನ ಅವಧಿ—. ಇನ್ನುಳಿದುದು ಒಂದು ತಾಸು— ಅದರಲ್ಲಿ ಹುಡುಗರಿಗೆ ಮೂತ್ರ ವಿಸರ್ಜನೆಗೆ – ಕನಿಷ್ಟ ೧೫ ನಿಮಿಷವಾದರೂ ಬೇಕು. ಆಯಿತು. ಮುಂಜಾನೆಯ ಅವಧಿಯಲ್ಲಿ ಕೇವಲ ೪೫ ಮಿನಿಟು ಪಾಠದ ವಿಷಯ ಹೇಳಿಕೊಡುವದು. ಅದರಲ್ಲಿಯೂ ಎರಡು ಮೂರು ಕ್ಲಾಸು ನೋಡಿಕೊಳ್ಳುವ ಗುರುಗಳಿಗೆ ಒಂದು ಕ್ಲಾಸಿಗೆ ೨೦ ಮಿನಿಟು ದೊರೆತರೆ— ಪರಮಾವಧಿ ಎಣಿಕೆ! ಮಧ್ಯಾಹ್ನವೂ ಇದೇ ಹಾಡು! ಇಂತಾಗಿ ಹುಡುಗರ ಶಿಕ್ಷಣದ ಮಟ್ಟ— ಅವರ ಬೌದ್ಧಿಕ ಮಟ್ಟ—ಎಷ್ಟು ಇರಬಹುದು ನೀವೇ ನೋಡಿ!!

ಹಿಂದೆ "ಛಡಿ ಛಂ! ಛಂ!! ವಿದ್ಯೆ ಘಂ, ಘಂ!! ಎಂದೆಣಿಸುತ್ತಿದ್ದರು. ಆಲಸಿ ಹಾಗೂ ಮಂದಬುದ್ಧಿಯ ಯೂ ಕಿಡಿಗೇಡಿ ಹುಡುಗರಿಗೆ ಗುರುಗಳ ಅಂಜಿಕೆ ಇರುತ್ತಿತ್ತು! ಅವರು ಒತ್ತಾಯದಿಂದಲಾದರೂ ಓದುತ್ತಿದ್ದರು! ಇಂದಿನ ಕಾಯ್ದೆಯಂತೆ—ಛಡಿ ಹಿಡಿಯಕೂಡದು. ಹುಡುಗರಿಗೆ ಪೆಟ್ಟು ಕೊಡಬಾರದು! ಹುಡುಗರ ಸರ್ವಾಂಗೀಣ ಬುದ್ಧಿ– ವಿಕಾಸ ಇದರಿಂದ ತಾನೇ ಆಗಲು ಶಕ್ಯವೇ? ಹಿಂದಿನವರ ಹೇಳಿಕೆ ಹೋಗಿ ಇಂದು ಕಿಸೆ ‹ಝಣ್ ಝಣ್ ಪುರಿಬಾಜಿ ಘಂ, ಘಂ! ಎಂದಾಗಿದೆ" ಇಂದು ಹುಡುಗರ ಕಿಸೆಯಲ್ಲಿ ದುಡ್ಡು ತುರುಕಿ ಒತ್ತಾಯದಿಂದ ಶಾಲೆಗೆ ಹಾಕುವಂಥ ಪರೀಕ್ಷೆಯಲ್ಲಿ ಅಯಶಸ್ವಿಯಾದ ಹುಡುಗರನ್ನು ಮೇಲ್ಕ್ಲಾಸಿಗೇರಿಸಲ ಉಪಾಧ್ಯಾಯರಕಿಸೆ ಬೆಚ್ಚಗೆ ಮಾಡುವ ತಂದೆತಾಯಿಯರೆಷ್ಟು ಬೇಕು ಅಂತೂ ಇಂದಿನ ಶಿಕ್ಷಣದ ಮಟ್ಟವೂ ತನ್ನ ಪ್ರಗತಿ ಪಥದಲ್ಲಿ ಸಾಗಿ ಮುಂದೆ ಯಾವ ಗುರಿಮುಟ್ಟಬಹುದೆಂದು ಆಲೋಚನೆ ಹರಿಯದಂತಾಗಿದೆ.

— ಸಿರಿಪತಿ.

THE CANARA INDUSTRIAL & BANKING SYNDICATE LIMITED
Head Office: Mukund Nivas, UDIPI, Mysore State.
Established: 1925

We have pleasure to announce the introduction of three new types of Personal Loans for financing:

1. STUDIES ABROAD
2. MEDICAL PRACTICE
3. SMALL BUSINESS

Easy terms of repayment.
Reasonable rates of interest.

For full particulars, contact any one of our 121 Branches in the States of Andhra, Bombay, Kerala, Madras and Mysore.

Dr. T. M. A. Pai, M.B.B.S., Managing Director.
Sri T. A. Pai, B.Com., A.I.I.B., General Manager.

ಗೋ ವಿಜಯ
(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ. ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

NAVAYUGA

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ ೧೯೫೯

INDEPENDENCE DAY SPECIAL 1959

ಬೆಲೆ: ೧೫ ನಯೇಪೈಸೆ

ಮರಳಿ ಬಂದಿದೆ ಆಗೋಸ್ತು ಹದಿನೈದು. ಅಂದು............. ಸಾವಿರದೊಂಭೈನೂರನಲ್ವತ್ತೇಳರ ಆಗೋಸ್ತು ಹದಿನೈದರಂದು ಭಾರತದ ಸ್ವಾತಂತ್ರ್ಯ ಕೋಗಿಲೆ ಇಂಚರದಿಂದ ಇಂಪಾಗಿ ಹಾಡಿತು ಸ್ವಾತಂತ್ರ್ಯಗೀತೆ.......

ಮುಂದೆ, ಮುಂದು ಮುಂದಕ್ಕಡಿಯಿಡುತ್ತಾ ನಡೆದುಬಂದ ಭಾರತದ ಸ್ವಾತಂತ್ರ್ಯ ಕಿಶೋರನಿಂದು ತಾನು ನಡೆದು ಬಂದ ದಾರಿಯನ್ನು ಇದೀಗ ಹದಿನೆರಡನೆಯ ಬಾರಿ ಹಿಂದಿರುಗಿ ನೋಡುತಿದ್ದಾನೆ. ಈ ದಾರಿಯಲ್ಲಿ ತಾನು ಪಡೆದ ಅನುಭವವನ್ನು ಮತ್ತೊಮ್ಮೆ ಸ್ಮರಿಸುತಿದ್ದಾನೆ. ತನ್ನ ಸಾಧನೆಯ ಸಂಪತ್ತನ್ನು ಮಗದೊಮ್ಮೆ ಈಕ್ಷಿಸುತಿದ್ದಾನೆ.

.... ಬಂದೆಡರಿದ ಅಡಮೆ ತಡಮೆಗಳೆನಿತು....! ಏಳುಬೀಳುಗಳೆನಿತು....!! ಅವೆಲ್ಲವನ್ನೂ ಧೈರ್ಯದಿಂದ ದಾಟಿ, ಕೈಗೂಡಿಸಿಕೊಂಡ ನಾಡ ಪ್ರಗತಿಯ, ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮಗಳೆನಿತು....!!! ಕೃತಕೃತ್ಯತೆಯ, ಸಂತೃಪ್ತಿಯ, ಆನಂದದ ನಿಡಿಮುಸಿರು ತಾನೇ ತಾನಾಗಿ ಹೆಮ್ಮೆಯಿಂದ ಹೊರಹೊಮ್ಮುತ್ತಿದೆ.

ಸ್ವಾತಂತ್ರ್ಯ ಚಿರಾಯುವಾಗಲಿ !

ನಾಡ ಆರ್ಥಿಕ ಪ್ರಗತಿ ಭರದಿಂದ ಸಾಗಲಿ !!

ಈ ದಿಸೆಯಲ್ಲಿ ನಮ್ಮ ಬೇಂಕಿನ ಸೇವೆ ಸತತವಾಗಿ ಸಲ್ಲುತ್ತಿರಲಿ.

ಶುಭಾಶಯಗಳು:

THE CANARA INDUSTRIAL & BANKING SYNDICATE LTD.

For Safe, Quick & Efficient Transport of your parcels and goods You can always rely on

C. P. C.
LORRY SERVICE

We have our Lorry Office at important places like Bombay, Bangalore, Coimbatore, Madras, Salem, Calicut, Cannanore, Tellicherry, Virajpet, Mysore, Mercara, Puttur, Mangalore, Karkal, Udipi, Coondapur, Kadur, Hassan, Chickmagalur, Kasargod etc. etc.

Solve your transport problem by entrusting your parcels to our care.

The Canara Public Conveyance Company Ltd., Mangalore 3.

SOUTHERN RAILWAY OUTAGENCY CONTRACTORS AT PUTTUR, KARKAL, UDIPI, COONDAPUR, CHICKMAGALUR & MULKI.

ದಿ ವಿಜಯ ಬೇಂಕ್ ಲಿಮಿಟೆಡ್
[ಶೆಡ್ಯೂಲ್ಡ್ ಬೇಂಕ್]

ಪ್ರಧಾನ ಕಛೇರಿ:— **ಮಂಗಳೂರು-3.**

ಸ್ಥಾಪನೆ:— **1931.**

ಕಾಯಂ ಠೇವಣಾತಿ ಬಡ್ಡಿ ದರ

1	ತಿಂಗಳಿಂದ	5	ತಿಂಗಳ ವರೆಗೆ	4¼%
6	,,	12	,,	4½%
13	,,	24	,,	4¾%

ರೂಪ್ಯಾ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:

ಮೈಸೂರು ರಾಜ್ಯ: - ಬೆಂಗಳೂರು, ಭಟ್ಕಳ, ಬ್ರಹ್ಮಾವರ, ಬೈಂದೂರು, ಚಾಮರಾಜನಗರ, ಸಿಟಿ-ಮಂಗಳೂರು, ಕುಂದಾಪುರ, ಗೋಣಿಕೊಪ್ಪಲ್, ಕಾರ್ಕಳ, ಕಾಪು, ಕೊಳ್ಳೇಗಾಲ, ಮಂಗಳೂರು, ಮಡಿಕೇರಿ, ಮೂಡಿಗೆರೆ, ಮೈಸೂರು, ನಂಜನಗೂಡು, ಪುತ್ತೂರು, ಉಡುಪಿ.

ಕೇರಳ ರಾಜ್ಯ:— ಕಾಂಞಂಗಾಡು, ಕಾಸರಗೋಡು.

ಬೊಂಬ್ಯಾ ರಾಜ್ಯ: - ಬೊಂಬ್ಯಾ (ಪಾರ್ಸಿ ಬಜಾರ್ ಸ್ಟ್ರೀಟ್, ಬೊಂಬ್ಯಾ-1)

THE VIJAYA BANK LIMITED
(SCHEDULED BANK)

ಇನ್ನೊಬ್ಬರ ಮೇಲೆ ಅಧಿಕಾರ ನಡೆಸಲು ನನ್ನ ಬಳಿ ಪ್ರೇಮದ ಹೊರತು ಇನ್ನಾವ ಆಯುಧವೂ ಇರುವುದಿಲ್ಲ.

—ಮ. ಗಾಂಧಿ.

ನವಯುಗ

ಸಂಪುಟ 38 ಸಂಚಿಕೆ 48

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ ೧೯೫೯

ನಮ್ಮ ಸಂಸ್ಕೃತಿಯ ವೈಶಿಷ್ಟ್ಯಗಳನ್ನು ಕಾಪಾಡುವುದಕ್ಕಿಂತ ಸ್ವರಾಜ್ಯದ ಘನ ಉದ್ದೇಶ ಬೇರಾವುದೂ ಇಲ್ಲ.

—ಮ. ಗಾಂಧಿ.

ಸ್ವಾತಂತ್ರ್ಯ ಭಾಸ್ಕರನಿಗೆ ವಂದನಾರ್ಪಣೆ

ಆಗೋಸ್ತು ೧೫ ಪುನಃ ಬಂದಿದೆ. ಭಾರತೀಯರು ಸ್ವತಂತ್ರವಾಗಿ ಉಸುರಾಡಲಾರಂಭಿಸಿದ ಆ ದಿನವನ್ನು ಗೌರವಾದರದಿಂದ ಸ್ಮರಿಸಿಕೊಳ್ಳುವ ದಿನ ಬಂದಿದೆ. ನಲುವತ್ತು ಕೋಟಿ ಭಾರತೀಯರು ಪಾರತಂತ್ರ್ಯ ಶೃಂಖಲೆಯನ್ನು ಕಡಿದೊಗೆದು ಆಂಗ್ಲೇಯರ ಕಪಿ ಮುಷ್ಟಿಯಿಂದ ಹೊರಬಂದು ಯಥೇಚ್ಛವಾಗಿ ಸ್ವತಂತ್ರ ವಾಯುವಿನಲ್ಲಿ ಉಸುರಾಡಿದ ಆ ಸುದಿನವನ್ನು ನೆನಪಿಸಿಕೊಳ್ಳುವ ಸದವಕಾಶ ಮರಳಿ ಬಂದಿದೆ.

ಭಾರತವು ಸ್ವತಂತ್ರವಾದ ಈ ದಿನವನ್ನು ನಾವೆಲ್ಲರೂ ವಿಜೃಂಭಣೆಯಿಂದ ಆಚರಿಸುತ್ತೇವೆ. ಆದರೆ, ಈ ಆಚರಣೆಯಲ್ಲಿ ನಮ್ಮ ಮನಸ್ಸು ರಾಷ್ಟ್ರಭಕ್ತಿ ಪ್ರೇರಿತವಾಗಿರಬೇಕೆಂಬತ್ತ ಗಮನ ಹರಿಸುವ ಪರಿಪಾಠ ದೂರವಾಗುತ್ತ ಬಂದಿದೆ. ಮೊದಲ ಕೆಲವು ವರ್ಷಗಳಲ್ಲಿ ತಾವು ತೋರಿದ ಉತ್ಸಾಹ ವರ್ಷಗಳೆದಂತೆ ಕ್ಷೀಣವಾಗುತ್ತ ಬರುತ್ತಿದೆ. ಇದಕ್ಕೆ ಕಾರಣವೇನು? ಸ್ವಾತಂತ್ರ್ಯ ಪಡೆಯುವುದಕ್ಕೆ ಮೊದಲು ನಮ್ಮಲ್ಲಿದ್ದ ಉತ್ಸಾಹ, ಆತ್ಮ ವಿಶ್ವಾಸ, ಧೈರ್ಯ, ಸಾಹಸ, ಕಾರ್ಯತತ್ಪರತೆಗಳು ಆ ಮೇಲಿನ ವರ್ಷಗಳಲ್ಲಿ ಬರಿದಾಗುತ್ತ ಬಂದಿವೆ. ಎಂತಲೇ ಒಂದು ವಿಧದ ಒತ್ತಾಯಕ್ಕೆ ಕಟ್ಟು ಬಿದ್ದವರಂತೆ ಈ ದಿನದ ಆಚರಣೆಯನ್ನು ಆವಶ್ಯಕತೆಯಿದ್ದವರು ಮಾತ್ರ ಸೂಕ್ಷ್ಮದಲ್ಲಿ ಮಾಡಿ ಮುಗಿಸುತ್ತಾರೆ.

ಆದರೆ, ಇದು ಸರಿಯೆ? ನಮ್ಮ ರಾಷ್ಟ್ರದ ಬಗ್ಗೆ ನಮಗೆ ಪ್ರೇಮ ಭಕ್ತಿ ಶ್ರದ್ಧೆಗಳಿರಬೇಡವೆ? ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಬಲಿದಾನವಿತ್ತ ಸಾವಿರಾರು ರಾಷ್ಟ್ರ ಭಕ್ತರ ನೆನಪನ್ನು ನಾವು ಈ ದಿನ ಮಾಡಬೇಡವೆ? ಕಷ್ಟದಿಂದ ಗಳಿಸಿದ ಸ್ವಾತಂತ್ರ್ಯವನ್ನು ಆಚಂದ್ರಾರ್ಕವಾಗಿ ಉಳಿಸಿಕೊಳ್ಳಲು ನಾವು ದೃಢ ಪ್ರತಿಜ್ಞರಾಗಿ, ಇದಕ್ಕೆ ಎದುರಾಗುವ ದುಷ್ಟ ಶಕ್ತಿಗಳ ನಿರ್ಮೂಲನಕ್ಕೆ ಅಣಿಕಟ್ಟಬೇಡವೆ? ರಾಷ್ಟ್ರತುಂಬ ತಾಂಡವವಾಡುತ್ತಿರುವ ಅಭಾವ ರಾಕ್ಷಸನನ್ನು ಹೊಡೆದಟ್ಟಲು ಒಮ್ಮತದೊಳೇಕಪಂಥವ ಹಿಡಿದು ಸಾಗಬೇಡವೆ? ಭಾರತದ ಉಜ್ವಲ ಸ್ವಾತಂತ್ರ್ಯ ಜ್ಯೋತಿಯ ಪ್ರಕಾಶವು ಮಂದವಾಗದಂತೆ ನೋಡಿಕೊಳ್ಳಬೇಡವೆ? ರಾಷ್ಟ್ರದ ಐಕ್ಯವನ್ನು ಬಲಪಡಿಸಿ, ಇಂದಿನ ವಿಜ್ಞಾನಯುಗದಲ್ಲಿ ಜಗತ್ತಿನ ಗಣನೀಯ ಸಂಪತ್ಸಮೃದ್ಧ ಭಾರತವನ್ನು ಕಟ್ಟಲು ನಾವು ಹಿಂಜರಿಯದೆ ಮುಂದುವರಿಯಬೇಡವೆ?

ಬೇಕು; ನಿಜವಾಗಿಯೂ ಬೇಕು. ಬ್ರಿಟಿಷರು ತಮ್ಮ ಸುಮಾರು ಇನ್ನೂರು ವರ್ಷದ ಆಳಿಕದ ಅವಧಿಯಲ್ಲಿ ಏನೇ ದ್ರೋಹವನ್ನು ಭಾರತಕ್ಕೆ ಮಾಡಿದ್ದರೂ ಅಖಿಲ ಭಾರತವನ್ನು ಒಂದೇ ಶಾಸನದ ಅಡಿಯಲ್ಲಿ ತಂದು, ಏಕಸೂತ್ರದಿಂದ ಬಂಧಿಸುವ ಮಹಾ ಕಾರ್ಯವನ್ನು ಮಾಡಿದ್ದಾರೆ. ಎಂತಲೇ ಇಂದಿಗೂ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಸೌರಾಷ್ಟ್ರದಿಂದ ಅಸ್ಸಾಮದವರೆಗೆ ಭಾರತವು ಏಕ ಸೂತ್ರದಲ್ಲಿ ಕೋದಿದೆ ಎಂಬುದನ್ನು ಗಮನಿಸಬೇಕು. ದಟ್ಟದರಿದ್ರರೂ ಅನಕ್ಷರ ಕುಕ್ಷಿಗಳೂ ಆದ ಭಾರತೀಯರನ್ನು ಸನ್ಮಾರ್ಗದಲ್ಲಿ ಮುಂದುವರಿಸುವ ಉತ್ತರದಾಯಿತ್ವವನ್ನೂ ಭಾರತೀಯರೇ ಹೊರಬೇಕು. ಕಳೆದ ಹನ್ನೊಂದು ವರ್ಷಗಳಲ್ಲಿ ಭಾರತೀಯರು ಆಡಳಿತೆ ನಿರ್ವಹಿಸುವುದರಲ್ಲಿ, ತಮ್ಮ ಆವಶ್ಯಕತೆಗಳನ್ನು ಕಂಡುಕೊಂಡು ಅವನ್ನು ಪೂರೈಸಿಕೊಳ್ಳುವಲ್ಲಿ ನಿಷ್ಣಾತರೇ ಇರುವರೆಂದು ಪ್ರಪಂಚಕ್ಕೆ ಸಾರಿ ತೋರಿಸಿದ್ದಾರೆ. ಪಂಚವಾರ್ಷಿಕ ಯೋಜನೆಗಳು ಪ್ರಾಥಮಿಕಾಭಿವೃದ್ಧಿಯ ಹಂತವಾದರೂ ಅವುಗಳಲ್ಲಿ ಬಹುಮಟ್ಟಿನ ಯಶಸ್ಸು ನಮ್ಮ ಪಾಲಿಗೆ ಬಂದಿದೆ ಎಂಬುದನ್ನು ಸಂಪೂರ್ಣ ಅಲ್ಲಗಳೆಯುವಂತಿಲ್ಲ.

ಬಂಡವಳಶಾಹಿ ಮತ್ತು ಸಾಮ್ಯವಾದಗಳ ನಡುವೆ ಉಳಿದ ತಟಸ್ಥ ರಾಷ್ಟ್ರ ಭಾರತದ ಬಗ್ಗೆ ಜಗತ್ತಿನ ಎಲ್ಲ ರಾಷ್ಟ್ರಗಳ ಸಹಾನುಭೂತಿಯೂ ದೊರೆಯುತ್ತಿದೆ. ಎಂತಲೇ ಆಧುನಿಕ ಬಲಭೀಮನಾದ ಉಕ್ಕನ್ನು ತಯಾರಿಸುವ ಮೂರು ಹೊಸ ಕಾರಖಾನೆಗಳು ನಮ್ಮಲ್ಲಿ ನಿರ್ಮಾಣಗೊಂಡಿವೆ. ವಿಮಾನ, ರೇಲು, ನೌಕೆ, ಗೊಬ್ಬರ, ರಾಸಾಯನಿಕ ಪದಾರ್ಥಗಳು, ಮೋಟರು ಕಾರು, ಯಾಂತ್ರಿಕೋಪಕರಣ ಮೊದಲಾದ ಮಹಾ ಮಹಾ ವಸ್ತು ಪದಾರ್ಥಗಳು ಇದೀಗ ನಮ್ಮಲ್ಲೇ ಸಿದ್ಧವಾಗುವ ಸಲ್ಲಕ್ಷಣಗಳು ದೃಗ್ಗೋಚರವಾಗುತ್ತಿವೆ. ಇದು ಪ್ರಗತಿ ಸೂಚಕವಲ್ಲವೆ?

ರಾಷ್ಟ್ರದ ಪುನರುತ್ಥಾನ ಕಾರ್ಯಕ್ರಮಗಳು ಭರದಿಂದ ಸಾಗುತ್ತಿವೆ. ಈ ಕಾರ್ಯಕ್ರಮಗಳು ಎಲ್ಲರ ಮನಸ್ಸಿಗೂ ಏಕರೀತಿಯಿಂದ ಪರಿಣಾಮ ಬೀರುವುದು ಕಷ್ಟಸಾಧ್ಯ. ಲೋಕೋಭಿನ್ನರುಚಿಃ ಯಾದುದರಿಂದ, ರಾಷ್ಟ್ರ ಶಾಸನದ ಚುಕ್ಕಾಣಿಯನ್ನು ಹಿಡಿದು ಮುಂದೆ ಸಾಗಿಸುತ್ತಿರುವ ಕಾಂಗ್ರೆಸ್ ಕೈಗೊಂಡ ಯೋಜನೆಗಳು ಎಲ್ಲರನ್ನೂ ತೃಪ್ತಿಪಡಿಸಬೇಕೆಂದು ಬಯಸಿದರೆ, ಅದು ಅನುಚಿತವಲ್ಲವಾದರೂ ಅಸಾಧ್ಯವೆಂದೇ ಹೇಳಬೇಕಾಗುತ್ತದೆ. ಪ್ರಕೃತದ ವರ್ಷದಲ್ಲಿ ಕಾಂಗ್ರೆಸ್ ಮುಂದೆ ತಂದ ಸಹಕಾರಿ ಕೃಷಿ ಪದ್ಧತಿ ಹಾಗೂ ಭೂಮಿಯ ಹಿಡುವಳಿಗೆ ಮಿತಿ ಹೇರುವ ಕ್ರಮವನ್ನು ಸ್ವೀಕರಿಸಿ ಅದನ್ನು ಕಾರ್ಯಗತಗೊಳಿಸಲು ಮಾಡಿದ ದೃಢ ನಿರ್ಧಾರದಿಂಲೇ ಹಿರಿಯ ಮುತ್ಸದ್ದಿ ರಾಜಾಜಿಯವರು ಸ್ವತಂತ್ರ ಪಕ್ಷವನ್ನು ಸ್ಥಾಪಿಸಿದರು. ಎಲ್ಲರನ್ನೂ ಮೆಚ್ಚಿಸುವುದು ಹುಚ್ಚುತನವೆಂಬುದನ್ನು ಲೋಕವೇ ಬಲ್ಲುದು. ಆದರೆ, ಯಾವ ಪಕ್ಷದ ಯಾವ ಧೋರಣೆಯೇ ಇರಲಿ, ಅದು ರಾಷ್ಟ್ರೀಯ ಭಾವನೆಯನ್ನು ಕಡಿಮೆ ಮಾಡಬಾರದೆಂಬುದನ್ನು ನೆನಪಿನಲ್ಲಿಟ್ಟಿರಬೇಕು.

ಭಾರತೀಯ ಸ್ವಾತಂತ್ರ್ಯದೊಡನೆ ಭಾರತೀಯರ ಹೊಣೆಗಾರಿಕೆಯೂ ಹೆಚ್ಚಿದೆ. ನಮ್ಮನ್ನು ನಾವೇ ಉದ್ಧರಿಸಿಕೊಳ್ಳಬೇಕಾಗಿದೆ. ದುಡಿಮೆಯೇ ದೇವರು; ಕಾಯಕವೇ ಕೈಲಾಸವೆಂಬ ಮಾತನ್ನು ಜಪಿಸಿ, ಪರಿಶ್ರಮಪೂರ್ವಕವಾಗಿ ರಾಷ್ಟ್ರಾಭ್ಯುದಯಕ್ಕಾಗಿ, ನಮ್ಮೆಲ್ಲರ ಹಿತಕ್ಕಾಗಿ ಮೈಮುರಿದು ದುಡಿಯುವುದಕ್ಕೆ ಎಲ್ಲರೂ ಸಿದ್ಧರಾಗಬೇಕಾಗಿದೆ. ಆಲಸ್ಯ ಹಾಗೂ ಸೋಮಾರಿತನವನ್ನು ದೂರವಿರಿಸಬೇಕಾಗಿದೆ ಸ್ವಾತಂತ್ರ್ಯ ದೊರೆತೊಡನೆಯೇ ಆಕಾಶದಿಂದ ಹಾಲು ಜೇನಿನ ಮಳೆ ಸುರಿಯುವುದಿಲ್ಲವೆಂಬುದನ್ನೂ ನಮ್ಮ ಏಳಿಗೆಗಾಗಿ ನಾವೇ ಪ್ರಯತ್ನಿಸಬೇಕೆಂಬುದನ್ನೂ ನಾವು ಮರೆಯಬಾರದು. ನಾವು ಈ ಹನ್ನೊಂದು ವರ್ಷಗಳಲ್ಲಿ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸಿದ್ದೇವೆ; ಆದರೆ, ನಮ್ಮ ವಿಪುಲ ಪ್ರಜಾಕೋಟಿಯನ್ನೂ ರಾಷ್ಟ್ರದ ವಿಸ್ತಾರವನ್ನೂ ಗಣಿಸುವಾಗ ಇದು ತೀರ ಅತ್ಯಲ್ಪ ಎಂಬುದನ್ನು ಮರೆಯುವುದು ಸಾಧ್ಯವಿಲ್ಲ. ಆಧುನಿಕ ಪ್ರಪಂಚವು ಮನೋವೇಗದಲ್ಲಿ ಮುಂದುವರಿಯುತ್ತಿರುವಾಗ, ನಾವು ಮಾತ್ರ ಆಮೆಯ ನಡಿಗೆಯಲ್ಲಿ ಪದವಿಡುವುದು ಸರ್ವಥಾ ವಾಂಛನೀಯವಲ್ಲ. ಲಭ್ಯವಾದ ವೇಗವಾಗಿ ಸಾಗಬಲ್ಲ ವಾಹನವನ್ನಾದರೂ ಏರಲೇ ಬೇಕಾಗುತ್ತದೆ.

ಸ್ವತಂತ್ರ ಜನತೆಯಲ್ಲಿ ರಾಷ್ಟ್ರಭಕ್ತಿಯು ತುಂಬಿತುಳುಕಾಡಬೇಕಾಗಿದೆ. ಆದರೆ, ನಮ್ಮಲ್ಲಿಯೇ ರಾಷ್ಟ್ರದ್ರೋಹಿಗಳ ಒಂದು ಪಂಗಡವೂ ದಿನೇ ದಿನೇ ಬೆಳೆದು ಬರುತ್ತಿದೆ ಎಂಬುದನ್ನು ಗಮನಿಸದೆ ಬಿಡುವಂತಿಲ್ಲ; ಅಲ್ಲದೇ ಈ ದುಷ್ಟ ಶಕ್ತಿ ಅಜ್ಞ ಜನತೆಯನ್ನು ಸುಲಭದಲ್ಲಿ ತನ್ನ ಬಗಲಿಗೆ ಸಿಕ್ಕಿಸಿಕೊಳ್ಳುತ್ತಿರುವುದನ್ನೂ ಆ ದುಶ್ಶಕ್ತಿಯು ದಿನದಿಂದ ದಿನಕ್ಕೆ ಬೆಳೆಯುತ್ತಿರುವುದನ್ನೂ ನಿತ್ಯವೆಂಬಂತೆ ನೋಡುತ್ತಿದ್ದೇವೆ. ಇಂತಹ ದುಶ್ಶಕ್ತಿಯನ್ನು ಬೆಳೆಯಗೊಡುವುದೇ ರಾಷ್ಟ್ರದ್ರೋಹವಲ್ಲವೆ? ಆದುದರಿಂದ ರಾಷ್ಟ್ರೀಯರೆಲ್ಲರೂ ರಾಷ್ಟ್ರದ್ರೋಹೀ ಶಕ್ತಿಯನ್ನು ಪರಾಜಿತಗೊಳಿಸುವ ಮಹಾ ಸಾಹಸ ತೋರಿಸಬೇಕು; ಇದು ಸುಲಭದಲ್ಲಿ ಮರೆಯುವ ವಿಷಯವಲ್ಲ.

ಭಾರತದ ಈ ದ್ವಾದಶವರ್ಷದ ಸ್ವಾತಂತ್ರ್ಯ ಸೂರ್ಯೋದಯದ ಅರುಣೋದಯದಲ್ಲಿ ಸ್ವಾತಂತ್ರ್ಯ ಸಹೋದರತೆ, ಸಮಾನತೆಗಳ ತಳಹದಿಯಲ್ಲಿ ಭದ್ರ ಪ್ರಜಾಪ್ರಭುತ್ವವನ್ನು ಕಟ್ಟಿ ಬೆಳೆಸುವ ಮತ್ತಿದಕ್ಕೆ ಎದುರಾಗುವ ಸರ್ವ ಕುಶಕ್ತಿಗಳನ್ನು ನಿರ್ಮೂಲಗೊಳಿಸುವ ದೃಢ ಪ್ರತಿಜ್ಞಾಬದ್ಧರಾಗುವುದು ಭಾರತೀಯರೆಲ್ಲರ ಕರ್ತವ್ಯವಾಗಿದೆ.

ಸ್ವಾತಂತ್ರ್ಯ ಸಂಚಿಕೆ

ಸ್ವಾತಂತ್ರ್ಯದಿನದ ಸವಿನೆನಪಿಗಾಗಿ ಈ ಬೃಹದಾಕಾರದ ಸಂಚಿಕೆಯೊಂದನ್ನು ಪ್ರಕಟಿಸಿ ನಮ್ಮ ಸಹೃದಯ ವಾಚಕರ ಕೈಗಳಿಗಿಡುವ ಮಹಾ ಸಾಹಸವನ್ನು ನಾವು ಕೈಗೊಂಡಿದ್ದೇವೆ. ಸ್ವಾತಂತ್ರ್ಯ ಸಂಚಿಕೆಯ ಔಚಿತ್ಯವನ್ನುಳಿಸಿಕೊಂಡು ಜನ ಹೃದಯಂಗಮವೆನಿಸುವ ವೈವಿಧ್ಯಪೂರ್ಣ ಬರಹಗಳನ್ನೂ ಬೆಳಕುಗಾಣಿಸಿದ್ದೇವೆ. ಈ ಸಂಚಿಕೆಯನ್ನು ಪ್ರಕಾಶಪಡಿಸುವಲ್ಲಿ ನೆರವಾದ ಲೇಖಕ ಬಂಧು ಭಗಿನಿಯರಿಗೂ, ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿದವರಿಗೂ ಮುದ್ರಣಾಲಯದ ಕರ್ಮಚಾರಿಗಳಿಗೂ ಅನನ್ಯ ಮನಸ್ಸಿನಿಂದ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 150/1959.

ದಾಮೋದರ ಕಮ್ತಿ —ವಾದಿ.

ಕೊಗ್ಗಣ್ಣ ಶ್ಯಾನುಭಾಗ, ವಾಮನ ಶ್ಯಾನುಭಾಗರ ಮಗ, ಪಡುಬಿದ್ರಿ ನಡಿಸಾಲ ಗ್ರಾಮ —ಪ್ರತಿವಾದಿ.

ಪ್ರತಿವಾದಿ ಆದ ನಿಮಗೆ ತಿಳಿಸುವದೇನಂದ್ರೆ.

ನೀವು ಮತ್ತು ನಿಮ್ಮ ತಮ್ಮ ಲಕ್ಷ್ಮಣ ಶ್ಯಾನುಭಾಗರು ಕೂಡಾ ವಾದಿಗೆ ತಾ. 14_4_53ರಲ್ಲು ರೂ. 1200_00ಕ್ಕೆ ಬರೆ ಕೊಟ್ಟ ದಿಮಾಂಡ ಪ್ರೋಮಿಸರಿ ನೋಟಿನ ಬಾಬ್ತು ಬಾಕಿಬರತಕ್ಕ ಅಸಲು ಬಡ್ಡಿ ರೂ. 1149—69ಕ್ಕೆ ವಾದಿಯು ದಾಖಲ್ಲು ಮಾಡಿದ ಮೇಲಿನ ದಾವೆಯಲ್ಲಿ ನಿಮಗೆ ಅಕ್ಯೈರ ನೋಟೀಸಿನ ಬಗ್ಗೆ ತಾರೀಕು 21_8_59ಕ್ಕೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉಜ್ರಾ ಹರಕೆ ಕೊಡತಕ್ಕದ್ದು ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. V. Kamath,
Advocate for Plaintiff.

ಕಾರ್ಕಳ, 8_8_1959.

ಒಂದು ಉಪದೇಶ - ಸ್ವಾತಂತ್ರ್ಯ ದಿನಕ್ಕಾಗಿ

ಕೈಸಾಗದ ವ್ಯಕ್ತಿ ಮಾತಿನಲ್ಲಿ ಕಾಲಕಳೆಯುತ್ತಾನಂತೆ. ಅಂತೆಯೇ ಕೇವಲ ಉಪದೇಶಗಳಿಂದ ದೇಶ ಸೇವೆ ಸಾಧ್ಯವಾದರೆ-ಜನತೆ ಎಂದು ಸಂಬೋಧಿಸಿ ತಾನು ಜನತೆಯಿಂದ ದೂರವಿರಲು ಸಾಧ್ಯವಾದರೆ-ಅಂತಹ ಜನತೆಗೆ ಒಂದು ಉಪದೇಶ ನೀಡಲು ಇಂದಿನ ದಿನಕ್ಕಿಂತ ಶುಭ ದಿನ ದೊರೆಯಲಾರದು. ಸ್ವಾತಂತ್ರ್ಯ -ದೇಶಸೇವೆ—ಇತ್ಯಾದಿ ವಿಚಾರಗಳಿಗಿಂತ ಉತ್ತಮ ವಿಚಾರಗಳೂ ದೊರೆಯಲಾರವು -ಆದ್ದರಿಂದಲೇ ಉಪದೇಶಿಗಳ ವರ್ಗದವನಾಗಿ ನಾನು ಇಂದು ಆ ಸಂದರ್ಭವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ದೃಷ್ಟಿಯಿಂದಲೇ ಈ ಲೇಖನ—ವಾಚಕರು ಈ ಲೇಖನವನ್ನು ಓದುವ ಕುರಿತು ಅಷ್ಟೇನು ಶ್ರದ್ಧೆ ವಹಿಸಬೇಕಾಗಿಯೂ ಇಲ್ಲ. ವಿಚಾರಶೀಲರಾಗಬೇಕಾಗಿಯೂ ಇಲ್ಲ.

ಬರೆದವರು: ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯ.

ಇಂದು ಹುತಾತ್ಮರದಿನ, ದೇಶಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣೆ ಮಾಡಿದ ಮಹಾನುಭಾವರುಗಳನ್ನು ನೆನಸಿಕೊಂಡು ಅವರ ಆದರ್ಶಗಳನ್ನು ಅಷ್ಟು ಇಷ್ಟಾದರೂ ಪಾಲಿಸುವ ಪ್ರತಿಜ್ಞೆ ಮಾಡಿ ಅವರ ಆತ್ಮಕ್ಕೆ ಶಾಂತಿ ಕೋರುವ ದಿನ. ಆ ಹಿರಿಯ ಆತ್ಮಜ್ಯೋತಿರ್ಲಿಂಗಗಳು ಸದಾ ಭಾರತವನ್ನು ಬೆಳಗುವಂತಾಗಲಿ ಎಂದು ಪ್ರಾರ್ಥನೆ ಗೈವದಿನ—ಗಾಂಧೀಜಿ-ದೇಶಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನುಭಾವರಲ್ಲಿ ಹಿರಿಯರು. ಕಾಂಗ್ರೆಸ್ಸಿನ ಧ್ಯೇಯ ರೀತಿ, ನೀತಿ ವಿಚಾರಗಳ ಬಗ್ಗೆ ದೇಶದ ಸಾವಿರ ಪ್ರಶ್ನೆಗಳಿಗೆ ಉತ್ತರ ಹೇಳಿದವರೂ ಅವರೇ. ರಾಮ ರಾಜ್ಯದ ಕನಸನ್ನು ಕಂಡವರೂ ಅವರೇ "ರಾಮರಾಜ್ಯವೆಂದರೆ ಪಾರಮಾರ್ಥಿಕ ದೃಷ್ಟಿಯಿಂದ ಭೂಸ್ವರ್ಗ, ಭೂವೈಕುಂಠ; ರಾಜಕೀಯ ದೃಷ್ಟಿಯಿಂದ ಪರಿಪೂರ್ಣ ಪ್ರಜಾತಂತ್ರ. ಆ ಪ್ರಜಾತಂತ್ರದಲ್ಲಿ ಭಾಗ್ಯವಂತರಿಲ್ಲ, ನಿರ್ಭಾಗ್ಯರಿಲ್ಲ; ಕುಲಗೋತ್ರವಿಲ್ಲ, ಲಿಂಗ ಭೇದವಿಲ್ಲ. ರಾಮರಾಜ್ಯದಲ್ಲಿ ಭೂಮಿ, ರಾಷ್ಟ್ರ ಇವೆಲ್ಲ ಪ್ರಜೆಗಳಿಗೆ ಸೇರಿದ್ದು, ನ್ಯಾಯವೇ ಸಿದ್ಧಾಂತ, ಪರಿಪೂರ್ಣ, ಅಗ್ಗ. ಅಲ್ಲಿ ವಾಕ್ ಸ್ವಾತಂತ್ರ್ಯವುಂಟು, ಪೂಜಾ ಸ್ವಾತಂತ್ರ್ಯವುಂಟು. ಅದಕ್ಕೆ ಕಾರಣವಿಷ್ಟೆ: ಅದು ಸ್ವಯಂ ಸ್ಥಾಪಿತ ಶಾಸನಪ್ರಭುತ್ವ, ಅದರಲ್ಲಿ ನೈತಿಕ ಸಂಯಮವಿದೆ. ಇಂಥ ರಾಷ್ಟ್ರ ಸತ್ಯ ಅಹಿಂಸೆಗಳ ಅಸ್ತಿ ಭಾರದ ಮೇಲೆ ನಿಲ್ಲಬೇಕು. ಆ ರಾಷ್ಟ್ರದಲ್ಲಿ ಸುಖಸಂಪದ್ಯುಕ್ತ ಸ್ವಸಂಪೂರ್ಣ ಗ್ರಾಮಗಳೂ ಗ್ರಾಮ ಕೂಟಗಳೂ ಇರಬೇಕು.-ಎಂದಿಗೂ ಸಾಧ್ಯವಾಗದ ಕನಸಾದೀತು ಇದು. ಆದರೆ ಆ ಕನಸಿನ ಲೋಕದಲ್ಲಿ ಜೀವಿಸುವುದೇ ಆದಷ್ಟು ಬೇಗ ಅದನ್ನು ಸಾಧಿಸಲು ಪ್ರಯತ್ನಿಸುವುದೇ ನನಗೊಂದು ಆನಂದ."

ಗಾಂಧೀಜಿಯ ಕನಸು ಕನಸಾಗಿಯೇ ಉಳಿಯಿತು. ಆ ಕನಸಿನ ಲೋಕದಲ್ಲಿ ಜೀವಿಸಬೇಕು, ಅದನ್ನು ಸಾಧಿಸಿ ಆನಂದ ಪಡೆಯಬೇಕೆಂಬ ಹಂಬಲ ಗಾಂಧೀಜಿಗೆ ಇತ್ತು.-ನಮ್ಮಲ್ಲಿ ಇಂದು ಈ ಹಂಬಲ ಉಳಿದಿದೆಯೇ? ನಮಗೆ ಲಭ್ಯವಾದ ರಾಜ್ಯದ ಬೆಲೆಯೇನು? ಗಾಂಧೀಜಿಯ ಆದರ್ಶಕ್ಕೆ ನಾವು ಕಟ್ಟುವ ಮೌಲ್ಯವೆಷ್ಟು?

ನಮ್ಮ ಗ್ರಾಮಗಳು ಸ್ವಸಂಪೂರ್ಣವಾಗಿವೆಯೆ? ನಮ್ಮ ಗ್ರಾಮಗಳಲ್ಲಿ ಕುಂಬಾರರು, ಗಾಣಿಗರು, ಕಮ್ಮಾರರು, ಅಕ್ಕಸಾಲಿಗರು ಮುಂತಾದ ಗ್ರಾಮ ಕಸಬುಗಳನ್ನು ನಡೆಸಿಕೊಂಡು ಬರುತ್ತಿದ್ದ ಜನರು ಅಂದು ಬ್ರಿಟಿಷರ ಕಾಲದಲ್ಲಿ ಕೈಗಾರಿಕಾ ಯಾಂತ್ರೀಕೀಕರಣದ ಹೊಡೆತಕ್ಕೆ ಸಿಲುಕಿ ನಿರುದ್ಯೋಗಿಗಳಾಗಿ ಮನೆಮಠಗಳ ಜತೆಗೆ ವ್ಯಕ್ತಿತ್ವವನ್ನೂ ಕಳಕೊಂಡಿರಬಹುದು. ಆದರೆ ಇಂದು-ಸ್ವತಂತ್ರರಾದ ಮೇಲೂ—ಗಾಂಧೀಜಿಯ ಆದರ್ಶವನ್ನು ಪಾಲಿಸಿಕೊಂಡು ಬರುತ್ತೇವೆ,' ಗ್ರಾಮಗಳ ಪುನರುದ್ಧಾರದಿಂದಲೇ ರಾಮರಾಜ್ಯದ ಸ್ಥಾಪನೆ ಸಾಧ್ಯ ಎಂಬ ಘೋಷಣೆ ಕೇಳಿದ ಮೇಲೂ, ಗ್ರಾಮ ಜೀವಿಗಳ ಸ್ಥಿತಿ ಸುಧಾರಿಸಿರಬೇಡವೆ?

ಗಾಂಧೀಜಿ ಹೇಳಿದ್ದರು "ಕಾಂಗ್ರೆಸಿಗರು ಪ್ರಾಮಾಣಿಕತೆಯಿಂದ ಖಾದಿ ಕೆಲಸ ಮಾಡಿದರೆ ನೂರಕ್ಕೆ ನೂರರಷ್ಟು ಕೆಲಸ ಆಗುತ್ತದೆ. ಈ ಪ್ರಧಾನಗ್ರಾಮೋದ್ಯೋಗವನ್ನು ಅದರ ಜತೆಯ ಕೈಗಾರಿಕೆಗಳನ್ನು ಉದ್ದೇಶಪೂರ್ವಕವಾಗಿ ನಾಶ ಮಾಡಿದ ಮೇಲೆ ಹಳ್ಳಿಗಳಿಂದ ಬುದ್ಧಿ, ಜಾಣತನ, ಚುರುಕು ಮಾಯವಾಗಿ ಹೋದಾವು ಜನ ಕಳಾಹೀನರಾಗಿ ನೀರಸರಾಗಿ ತಾವೂ ತಮ್ಮ ಬಡಕಲು ದನದಂತೆಯೇ ಆದಾರು —ಆಗಿದ್ದಾರೆ—"

ಇಂದು ಕೂಡಾ ಈ ಮಾತನ್ನು ಕಾಂಗ್ರೆಸಿಗರಿಗಾಗಿಯೇ ಎಚ್ಚರಿಸಿ ಹೇಳಬೇಕಾಗಿದೆ. ಕೇರಳ ಒಂದು ಪ್ರಾಂತ ಬಿಟ್ಟು ಮಿಕ್ಕ ಪ್ರಾಂತಗಳಲ್ಲೂ, ಕೇಂದ್ರದಲ್ಲೂ ಕಾಂಗ್ರೆಸ್ಸು ಆಡಳಿತ ಪಕ್ಷವಾಗಿದೆ.[ಕೇರಳವೂ ಈಗ (ಕಾಂಗ್ರೆಸಿನ) ಕೇಂದ್ರದಾಡಳಿತೆಯಡಿ ಬಂದಂತಾಯಿತು.] ಎಲ್ಲಿ ಎಡವಿಬಿದ್ದರು, ಪರಿಹಾರಕ್ಕಾಗಿ ಗಾಂಧಿ ನಾಮವನ್ನು ಜಪಿಸುತ್ತಾರೆ. ದೇಶದ ಒಳಿತಿನ ಹೊಣೆ ಕಾಂಗ್ರೆಸಿನ ಮೇಲಿದ್ದಷ್ಟು ಇತರರಲ್ಲಿಲ್ಲ ಎಂದು ನಾವು ಹೇಳಬೇಕಾಗಿಲ್ಲ-ಅವರೇ ಚುನಾವಣೆ ಕಾಲಗಳಲ್ಲಿ ಘೋಷಿಸಿದ್ದಾರೆ. It is Congress that can deliver the goods safely. ಸ್ವಾತಂತ್ರ್ಯದ ಸರಕನ್ನು ಜನತೆಗೆ ಮುಟ್ಟಿಸುವ ಜವಾಬ್ದಾರಿ ನಮ್ಮದು ಎಂಬುದೇ ಕಾಂಗ್ರೆಸ್ಸಿನ ವಾದ. ಆದರೆ ಇಂದು ಕಾಂಗ್ರೆಸ್ಸು ಈ ಕೆಲಸವನ್ನು ಎಷ್ಟು ತೃಪ್ತಿಕರವಾಗಿ ನಡೆಸಿದೆ? ಕಾಂಗ್ರೆಸ್ಸು ತಾನು ಒಂದು ರಾಜಕೀಯ ಪಕ್ಷವೆಂದು ತಿಳಿದಿದೆಯೇ ಹೊರತು, ಅದು ಒಂದು ರಚನಾತ್ಮಕ ಕಾರ್ಯಕರ್ತರ ಸಂಸ್ಥೆ ಎಂಬುದನ್ನು ಮರೆತಂತಿದೆ—ಇತರ ಪಕ್ಷಗಳಂತೆಯೇ ಚುನಾವಣೆಯಿಂದ ಚುನಾವಣೆಗೆ ಜನತೆಯ ಮುಂದೆ ಬಂದು ನಿಮ್ಮ ಮತ ಬೇಡಿದರೆ, ಅಥವಾ ಮತ ಖರೀದಿ ಮಾಡಿದರೆ ಅಥವಾ ಮತಗಳನ್ನು ಸುಲಿಗೆ ಮಾಡಿದರೆ ಸಾಕಾದೀತೆ? ಮಿಕ್ಕ ಕಾಲದಲ್ಲಿ ಕಾಂಗ್ರೆಸ್ಸಿನ ಧೋರಣೆಗಳ ಪ್ರಚಾರ, ಅವುಗಳನ್ನು ಕಾರ್ಯರೂಪಕ್ಕೆ ತರುವ ಯತ್ನ, ಜನತೆ ಮತ್ತು ಸರಕಾರಗಳ ನಡುವಿನ ಸಂಬಂಧ ಇತ್ಯಾದಿ—ಇವುಗಳನ್ನಿಲ್ಲಿ ಹೆಚ್ಚಿಸಲು ಕಾಂಗ್ರೆಸ್ಸಿನ ಮುಂದೆ ಏನು ಕಾರ್ಯಕ್ರಮಗಳಿವೆ? ವರುಷಕ್ಕೊಮ್ಮೆಯಾದರೂ ಕಾಂಗ್ರೆಸ್ ಕಾರ್ಯಕರ್ತರು ಗ್ರಾಮಗಳನ್ನು ಸಂಚರಿಸುತ್ತಾರೆಯೆ? ಗ್ರಾಮ ಕೈಗಾರಿಕೆಗಳ ಬೆಳವಣಿಗೆ ಹೇಗೆ ಸಾಗಿದೆ;—ಒಂದು ಗ್ರಾಮದಲ್ಲಿ ಎಷ್ಟು ಎಣ್ಣೆ ಗಾಣಗಳು ಇವೆ, ಆ ಗ್ರಾಮದ ಒಟ್ಟು ಎಣ್ಣೆಯ ಉತ್ಪತ್ತಿ ಎಷ್ಟು? ಎಷ್ಟು ಮಂದಿ ಗಾಣಗಳಲ್ಲಿ ದುಡಿಯುತ್ತಿದ್ದಾರೆ, ಅವರ ಒಟ್ಟು ಆದಾಯ ಎಷ್ಟು; ತಯಾರಾದ ಈ ಶುದ್ಧ ಎಣ್ಣೆ ಹೇಗೆ ವಿತರಣೆ ಆಗುತ್ತಿದೆ, ಆ ಗ್ರಾಮದ ಉಪಯೋಗಕ್ಕೆ ಎಷ್ಟು ಖರ್ಚಾಗಿ ಉಳಿದವು ಎಲ್ಲಿಗೆ ಸಾಗುತ್ತಿವೆ, ಹೇಗೆ ಸಾಗುತ್ತಿವೆ—ಇಲ್ಲಿ ಸಹಕಾರಿ ಪದ್ಧತಿ, ಅಥವಾ ವಿನಿಮಯ ವ್ಯಾಪಾರ ರೂಪ ಏನಾದರೂ ಇದೆಯೆ, ಹತ್ತಿರದಲ್ಲಿ ಎಲ್ಲಿಯಾದರೂ ಎಣ್ಣೆ ಮಿಲ್ಲು ಇದೆಯೆ, ಇತ್ಯಾದಿ. ಅಂತೆಯೇ ಕುಂಬಾರ, ಕಮ್ಮಾರ, ಅಕ್ಕಸಾಲಿಗ, ಬಟ್ಟೆ ನೇಯುವವ- ಹೀಗೆ ಗ್ರಾಮಜೀವಿಗಳ ಒಂದು ಖಾನೆಸುಮಾರಿ ಕೇವಲ ಕುತೂಹಲದ ದೃಷ್ಟಿಯಿಂದಲಾದರೂ, ನಮ್ಮ ಮಂಡಲ ಕಾಂಗ್ರೆಸ್ಸಿನ ಮಹಾನುಭಾವರು ಈ ಹತ್ತು ವರ್ಷಗಳಲ್ಲಿ ಒಮ್ಮೆಯಾದರೂ ತೆಗೆದದ್ದುಂಟೆ?—ಗುಡಿಕೈಗಾರಿಕೆಗಳ ಬಗ್ಗೆ ಸಮಾಜಕಲ್ಯಾಣ-ಕಲಾಭಿವೃದ್ಧಿ ಇತ್ಯಾದಿ ಎಲ್ಲ ಉದ್ಯೋಗಗಳ ಬಗ್ಗೆ ಸರಕಾರವಿದೆ, ಗುಡಿಕೈಗಾರಿಕಾ ಮುಂತಾದ ಬೋರ್ಡು ಸ್ಥಾಪಿತವಾಗಿವೆ. ಅದಕ್ಕಾಗಿ ಗ್ರಾಂಟುಗಳು ಮಂಜೂರಾಗುತ್ತಿವೆ. ಕಸಬು ಗೊತ್ತಿದ್ದೂ, ಇಲ್ಲದೆಯೂ ಅವುಗಳ ಮಹಾನುಭಾವರುಗಳಿದ್ದಾರೆ. ಆದ್ದರಿಂದ ಕಾಂಗ್ರೆಸ್ ಸಂಸ್ಥೆಗೆ ತೃಪ್ತಿ, ಈ ಅಭಿವೃದ್ಧಿ ಕಾರ್ಯಗಳ ಹೆಸರಲ್ಲಿ ಖರ್ಚಾಗುವ ಪ್ರತಿಯೊಂದು ಪೈಸೆಯೂ ಸದ್ವಿನಿಯೋಗ ಆಗುತ್ತಿದೆಯೆ? ಅದರ ಲಾಭ ಗ್ರಾಮಕ್ಕೇನೆ ಆಗುತ್ತಿದೆಯೆ ಎಂಬ ಕುತೂಹಲ ನಮ್ಮ ಪಕ್ಷಗಳಿಗೆ ಇರಬೇಕು. ಕೆಲಸ ನಡೆಯುತ್ತಿದೆ ಎಂಬ ವರದಿಯಷ್ಟು ಇದ್ದರೆ ಆತ್ಮಕ್ಕೆ ತೃಪ್ತಿ ಎಂದರೆ ಸಾಲದು.—ಇಷ್ಟೆಲ್ಲ ಇದ್ದೂ ನಮ್ಮ ಗ್ರಾಮ ಕೈಗಾರಿಕೆಗಳು, ಕಲೆಗಳು ಸುಪ್ತವಾಗಿವೆಯಲ್ಲ—ಗ್ರಾಮರಾಜ್ಯ ಸ್ಥಾಪನೆ ಹಾಗಾದರೆ ಕನಸೆ? ಈ ಗ್ರಾಮ ರಾಜ್ಯದ ಪುನರುತ್ಥಾನಕ್ಕೆ ಮಾರ್ಗ ಏನಾದರೂ ಇದೆಯೇ ಎಂದು ಗಾಂಧೀಜಿಯವರ ಆಶೀರ್ವಚನ ಬೇಡುವ ನಮ್ಮ ಕಾಂಗ್ರೆಸ್ಸಿನವರು ಯೋಚಿಸಬೇಕು.

ಗ್ರಾಮರಾಜ್ಯ ಸ್ಥಾಪನೆ—ಕನಸಲ್ಲ—ನನಸು ಆಗಲು ಸಾಧ್ಯ—ಆದರೆ ನಮ್ಮ ರಾಜ್ಯಪಾಲಕರು, ಸಾರ್ವಜನಿಕ ಕಾರ್ಯಕರ್ತರು, ಪಕ್ಷಗಳ ಮುಂದಾಳುಗಳು, ಜನತೆ ಎಂದು ಸಂಬೋಧಿಸಿ, ಜನತೆಗೆ ಸದಾ ಉಪದೇಶ ನೀಡುವ ಮಹಾನುಭಾವ

(೨೬ನೇ ಪುಟ ನೋಡಿರಿ)



ಶಿಸ್ತಿಲ್ಲದೆ ರಾಷ್ಟ್ರವುಂಟೆ?

ಶಿಸ್ತು ಎಂಬುದು ಇರಬೇಕಾದಲ್ಲಿ ಇರಲೇಬೇಕಾದ ಸರ್ವೋತ್ತಮ ಗುಣ. ರಾಷ್ಟ್ರಕ್ಕೂ ರಾಷ್ಟ್ರೀಯನಿಗೂ ಶಿಸ್ತು ಬೇಕೇ ಬೇಕು; ಶಿಸ್ತುಗೆಟ್ಟ ಪ್ರಜಾಜನರ ಮತ್ತು ಅವರ ರಾಷ್ಟ್ರದ ಅವಸ್ಥೆ ಎಲ್ಲಿಗೆ ಬಂದು ನಿಂತೀತು?

ಬರೆದವರು: ಶ್ರೀ ಎ. ಎಸ್. ರಾಮಕೃಷ್ಣ.

“ಕ್ರಾಂತಿಯೆಂದರೆ ಯುದ್ಧದಂತೆಯೇ ಮಹಾ ಘೋರವಾದುದು. ಏಕೆಂದರೆ ಸ್ವಾಭಾವಿಕವಾಗಿ ಅದರಲ್ಲಿ ನೋವು ನರಳಾಟ ಇದ್ದೇ ಇದೆ. ಅದಕ್ಕೂ ಮಿಗಿಲಾಗಿ ಕ್ರಾಂತಿಯ ಗುರಿ, ಆ ಗುರಿಯನ್ನು ತಲಪುವ ಸಾಧನ—ಇವುಗಳ ಕುರಿತು ವಿಚಿತ್ರಕಾರಕವಾದ ಗಲಿಬಿಲಿಯುಂಟಾಗಿರುತ್ತದೆ” ಎಂದಿದ್ದಾನೆ ಹೆರಾಲ್ಡ್ ಲಾಸ್ಕಿ. ಈ ಮಾತು ಮಹಾ ಕ್ರಾಂತಿಗಳಿಗೆ ಹೇಗೆ ಅನ್ವಯಿಸುವುದೋ ಅದೇ ರೀತಿ ಸಣ್ಣಪುಟ್ಟ ಸಾಮಾಜಿಕ ಹಾಗೂ ರಾಜಕೀಯ ಘರ್ಷಣೆಗಳಿಗೂ ಚಳುವಳಿಗಳಿಗೂ ಬಹುಮಟ್ಟಿಗೆ ಅನ್ವಯಿಸುವುದು. ಚಳುವಳಿಗಳಲ್ಲಿ ತೊಡಗುವವರು ಎಂಥ ಸುಬಗರಾದರೂ ಸಿದ್ಧಿಗಾಗಿ ಹೋರಾಡುವ ಭರದಲ್ಲಿ ತಾವು ಉಪಯೋಗಿಸುತ್ತಿರುವ ಸಾಧನಗಳೆಂಥವೆಂಬುದನ್ನು ಮರೆಯುವ ಸಂಭವವಿದೆ. ಅದರ ಪರಿಣಾಮವಾಗಿ ಜನ ಜೀವನದ ಎಷ್ಟೋ ಒಳ್ಳೆಯ ಅಂಶಗಳಿಗೆ ಧಕ್ಕೆ ತಗಲುವುದಿದೆ. ಹಾಗೆ ಅಪಾಯಕ್ಕೊಳಗಾಗುವ ಸದಂಶಗಳಲ್ಲಿ ಶಿಸ್ತು ಕೂಡ ಒಂದು.

ಶಿಸ್ತು ಇರಲೇಬೇಕಾದಲ್ಲಿ ಅದಿಲ್ಲದಿದ್ದರೆ ಬೇರೆ ಏನಿದ್ದೂ ವ್ಯರ್ಥ. ಒಡೆದು ಹೋಗುವಂತಿದ್ದ ತನ್ನ ರಾಷ್ಟ್ರವನ್ನು ಆ ಗಂಡಾಂತರದಿಂದ ಪಾರುಮಾಡಿ ಭದ್ರಗೊಳಿಸಿದ ಅಬ್ರಾಹಂ ಲಿಂಕನ್ ಶಿಸ್ತಿನ ಮಹತ್ವವನ್ನು ತನ್ನ ಸೈನಾಧಿಕಾರಿಯೊಬ್ಬನಿಗೆ ಮನವರಿಕೆ ಮಾಡಿಕೊಟ್ಟ ಸಂದರ್ಭವೊಂದಿದೆ.

ಅಮೇರಿಕದ ಸಂಯುಕ್ತ ರಾಷ್ಟ್ರಗಳಲ್ಲಿ ದಕ್ಷಿಣೋತ್ತರದವರೊಳಗೆ ಅಂತಯುದ್ಧ ನಡೆಯುತ್ತಿದ್ದ ಕಾಲ. ಉತ್ತರದ ಸೈನ್ಯಾಧಿಕಾರಿ ಜನರಲ್ ಬರ್ನ್‌ಸೈಡ್ ಎಂಬಾತನಿಗೂ ಆತನ ಕೈಕೆಳಗಿನ ಅಧಿಕಾರಿಗಳಿಗೂ ಸರಿಹೋಗದ್ದರಿಂದ ಬರ್ನ್‌ಸೈಡ್ ನಿವೃತ್ತನಾಗಬೇಕಾಯಿತು. ಅವನ ಕೈಕೆಳಗಿನ ಅಧಿಕಾರಿ ಹೂಕರ್ ಎಂಬವನನ್ನೇ ಆತನ ಸ್ಥಾನಕ್ಕೆ ನೇಮಿಸಲಾಯಿತು. ಈ ಹೂಕರನು, ಬರ್ನ್‌ಸೈಡ್ ಅಧಿಕಾರದಲ್ಲಿದ್ದಾಗ ಆತನನ್ನು ಕಟುವಾಗಿ ಟೀಕಿಸಿದ್ದಲ್ಲದೆ ಸೇನೆಯಲ್ಲಿ ಆತನ ಕುರಿತು ಸಾಕಷ್ಟು ವಿರೋಧ ಬೆಳೆಯುವಂತೆ ಪ್ರಯತ್ನಿಸಿದವನು. ಹೀಗಿದ್ದರೂ ಕೂಡ ಹೂಕರನ ಇತರ ಯೋಗ್ಯತೆಗಳನ್ನು ಗಮನಿಸಿ ಆತನನ್ನೇ ದಳಪತಿಯಾಗಿ ನೇಮಿಸಿ ಲಿಂಕನ್ ಅವನಿಗೊಂದು ಪತ್ರ ಬರೆದ. ಆ ಪತ್ರ ಇತಿಹಾಸದಲ್ಲಿ ಶಾಶ್ವತವಾಗಿಯೂ ಉಳಿಯುವಂಥಾದ್ದು. ಲಿಂಕನ್ ಆ ಪತ್ರದಲ್ಲಿ ಮಹತ್ವಾಕಾಂಕ್ಷಿಯಾದ ಹೂಕರನನ್ನು ಅವನ ಒಳ್ಳೆಯ ಗುಣಗಳಿಗಾಗಿ ಮೊದಲು ಪ್ರಶಂಸಿಸಿ ಅನಂತರ ಅವನ ಅವಿಧೇಯತಾ ಬುದ್ಧಿಯನ್ನು ಪ್ರಸ್ತಾಪಿಸಿದ್ದ. ಸೇನೆಯಲ್ಲಿ ದಳಪತಿಯನ್ನು ಟೀಕಿಸುವ ಹಾಗೂ ಅವನಲ್ಲಿ ಅಪನಂಬಿಕೆ ಹುಟ್ಟಿಸುವಂಥ ವಾತಾವರಣವನ್ನು ಕಲ್ಪಿಸಿದ್ದಕ್ಕಾಗಿ ಹೂಕರನನ್ನು ಭರ್ತ್ಸನೆ ಮಾಡಿ “ನೀನು ಪ್ರಚೋದಿಸಿದ ಅವಿಧೇಯತಾ ಬುದ್ಧಿ ಈಗ ನಿನಗೇನೆ ಎದುರು ನಿಲ್ಲುತ್ತದೆ. ಜೋಕೆ. ನೆಪೋಲಿಯನ್ನಂಥ ಮಹಾ ಸಮರ್ಥ ದಳಪತಿಯಾದರೂ ಕೂಡ ಅವಿಧೇಯತಾ ವಾತಾವರಣವುಳ್ಳ ಸೇನೆಯಿಂದ ಏನನ್ನೂ ಸಾಧಿಸಲಾರ” ಎಂದು ಬರೆದಿದ್ದ ಲಿಂಕನ್.

ಲಿಂಕನ್ ಅಂದು ಕೊಟ್ಟ ಎಚ್ಚರಿಕೆ ಬಹಳ ಮಹತ್ವದ್ದು. ಶಿಸ್ತು ಇರಲೇಬೇಕಾದಲ್ಲಿ ಅವಿಧೇಯತೆ ಬೆಳೆದುಬಂದರೆ ಅದು ಸೇನೆಯೇ ಇರಲಿ, ಸಂಸ್ಥೆಯೇ ಇರಲಿ, ಸರಕಾರ ಯಂತ್ರವೇ ಇರಲಿ ರಾಷ್ಟ್ರಕ್ಕೆ ಅವರ ಉಪಯುಕ್ತತೆ ಬಹುಮಟ್ಟಿಗೆ ಇಲ್ಲವಾಗುತ್ತದೆ. ಮಾತ್ರವಲ್ಲದೆ, ಯಾರು ಇಂಥ ಅಶಿಸ್ತು, ಅವಿಧೇಯತೆಗಳನ್ನು ಪ್ರಚೋದಿಸುವರೋ ಅಂಥವರಿಗೇ ಅದು ಎದುರಾಗಿ ಹೆಚ್ಚು ದುಷ್ಪರಿಣಾಮಕಾರಿಯಾಗುತ್ತದೆ.

ಒಂದು ರಾಷ್ಟ್ರದ ಜನಜೀವನದ ಪ್ರತಿಯೊಂದು ಅಂಗದಲ್ಲೂ ಶಿಸ್ತು ಅವಶ್ಯವೆಂಬುದು ನಿಜವಾದರೂ ಕೆಲವೊಂದು ವಿಷಯಗಳಲ್ಲಿ ಶಿಸ್ತೇ ಜೀವಾಳವಾಗಿರುವುದುಂಟು. ಉದಾಹರಣೆಗಾಗಿ ಸೇನೆಯಲ್ಲಿ ವಿದ್ಯಾಮಂದಿರಗಳಲ್ಲಿ ಕಚೇರಿಗಳಲ್ಲಿ ಶಿಸ್ತು ಸಡಿಲವಾಗುತ್ತ ಬಂತೆಂದರೆ ರಾಷ್ಟ್ರಕ್ಕೆ ಉಳಿಗಾಲವಿಲ್ಲ.

ಮೇಲಿನವರು ದಡ್ಡರಿದ್ದರೂ, ತಲೆ ತಿರುಕರಿದ್ದರೂ, ಕೆಳಗಿನವರು ಕಣ್ಮುಚ್ಚಿ ಹಿಂಬಾಲಿಸಬೇಕೆ ಎಂಬ ಪ್ರಶ್ನೆಯೊಂದಿದೆ. ಅನ್ಯಾಯಗಳು ನಡೆಯುತ್ತಿದ್ದರೂ ಶಿಸ್ತಿನ ಹೆಸರಲ್ಲಿ ಕೈಕಟ್ಟಿ ಕುಳಿತುಕೊಳ್ಳುವುದೆ ಎಂಬಂಥ ಆಪಾದನೆ ಮೂಡುವುದು ಸಹಜವೇ. ಆದರೆ ಅಂಥ ಅನ್ಯಾಯಗಳನ್ನೂ ಅಸಾಮರ್ಥ್ಯಗಳನ್ನೂ ಸರಿಪಡಿಸುವ ಜವಾಬ್ದಾರಿಯನ್ನು ಇತರರು ವಹಿಸಿಕೊಂಡು ದಕ್ಷತೆಯಿಂದ ನಡೆಸಿಕೊಡಬೇಕು. ಹಾಗಲ್ಲದೆ ಸೈನಿಕರೇ ತಮ್ಮ ದಳಪತಿಯನ್ನು ತಿದ್ದಲು ಹೊರಟರೆ, ವಿದ್ಯಾರ್ಥಿಗಳೇ ಶಿಕ್ಷಕರನ್ನು ಸರಿಪಡಿಸಲು ಯತ್ನಿಸಿದರೆ, ಕೈಕೆಳಗಿನವರು ಮೇಲಧಿಕಾರಿಗಳ ಶಿಕ್ಷಣಕ್ಕೆ ಸನ್ನದ್ಧರಾದರೆ ತಾವೇ ನ್ಯಾಯವಾದಿಗಳೂ, ನ್ಯಾಯಾಧಿಪತಿಗಳೂ ಆಗಿ ವರ್ತಿಸಿದರೆ, ತಮಗಾಗದವರನ್ನು ತಿದ್ದಿ ಸರಿಪಡಿಸಲು ಅಥವಾ ತಳ್ಳಿ ಒದ್ದೋಡಿಸಲು ನಿಂತರೆ, ಶಿಸ್ತೆಂಬುದು ಉಳಿಯಲಾರದು.

ಶಿಸ್ತು ಶಿಥಿಲವಾಗುತ್ತಿದೆ ಎಂದು ಎಲ್ಲರೂ ಹೇಳುತ್ತಿರುವ ಕಾಲವಿದು. ಅದಕ್ಕೆ ಒಬ್ಬೊಬ್ಬರು ಒಂದೊಂದು ಕಾರಣವನ್ನೂ, ಔಷಧವನ್ನೂ ಸೂಚಿಸುತ್ತಿದ್ದಾರೆ

(೨೬ನೇ ಪುಟ ನೋಡಿರಿ)

BISON BRAND

QUALITY PAPERS

Manufacturers:

THE MYSORE PAPER MILLS LTD.,
BHADRAVATI.

Distributors:

SCHOOL BOOK COMPANY
CAR STREET

Telephone: 229 Telegrams: SCHOOL BOOK

MANGALORE.

Branch at

VISHWA BHAVAN, HAMPANKATTA,
MANGALORE.

ಪಾವಿತ್ರ್ಯತೆಗೆ ಪ್ರಾಧಾನ್ಯತೆ!

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಟಪಾಡಿ ನಾಯಕ ಮನೆತನವೆಂದರೆ ವೈದ್ಯಾಭ್ಯಾಸದಲ್ಲಿ ಶ್ರೀಮದ್ವಸುದೇಂದ್ರತೀರ್ಥ ಶ್ರೀಪಾದಂಗಳವರಿಂದ ಅನುಗ್ರಹಿಸಲ್ಪಟ್ಟ ಮನೆತನ. ಅದರಲ್ಲೂ ವೈದ್ಯಶಾಲೆಯಲ್ಲೇ ಬೆಳೆದು ನುರಿತ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರವರು ಈಗ ತಮ್ಮದೇ ಆದ

‘ನಾಯಕ ಆಯುರ್ವೇದ ಆಶ್ರಮದಲ್ಲಿ’

ತಯಾರಿಸಿದ ಶುದ್ಧಾಯುರ್ವೇದೀಯ ಔಷಧಿಗಳಲ್ಲಿ
ಬಾಣಂತಿಯರಿಗೆ: ಅಷ್ಟವರ್ಗ ಸಹಿತ ಕಸ್ತೂರಿಯುಕ್ತ
ದಶಮೂಲ ಮತ್ತು ಪ್ರಸೂತಿ ಕಲ್ಯಾಣ,
ಇನ್ನು ಅಮೃತ ಮಂಜರಿ, ಜಂಭೀರದ್ರಾವ, ಚ್ಯವನಪ್ರಾಶ,
ಬಾಲಕಲ್ಯಾಣ, ಸಿದ್ಧಲಕ್ಷ್ಮೀ ವಿಲಾಸ, ಹೇಮಗರ್ಭ ಪೋಟಲಿ,
ರಾಜಮೃಗಾಂಕ ಇತ್ಯಾದಿ ರಸಪ್ರಧಾನ ಔಷಧಿಗಳೂ, ಮತ್ತು
ಮೂರ್ಛಿತ ಮಹಾವಿಷ್ಣು, ನಾರಾಯಣ, ನಯನಾಮೃತ ತೈಲಗಳೂ
ಲೇಹ, ಆಸವಾರಿಷ್ಟಗಳೂ ಪ್ರಸಿದ್ಧವಾಗಿವೆ.

ಇನ್ನಿತರ ಆಯುರ್ವೇದ ಔಷಧಗಳ ಬಗ್ಗೆ ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿರಿ-

ನಾಯಕ ಆಯುರ್ವೇದಾಶ್ರಮ

ಕಟಪಾಡಿ, ದ. ಕ.

ಪ್ರಧಾನ ಮಾರಾಟ ಕೇಂದ್ರ: —
ಇಗರ್ಜಿ ಎದುರು, ಉಡುಪಿ, (ದ. ಭಾರತ)

ಭಿಕ್ಷಾಟನೆ - ರಶಿಯದ ಒಂದು ಆಂತರಿಕ ಸಮಸ್ಯೆ

ಸಾಮ್ಯವಾದದ ಸ್ವರ್ಗಭೂಮಿ ರಶಿಯದಲ್ಲೂ ಭಿಕ್ಷಾಟನೆಯಿಂದ ಉದರ ಹೊರೆದುಕೊಳ್ಳುವ ಜನರಿದ್ದಾರೆ. ಸೋವಿಯಟ್ ಪ್ರವಾಸಿಯೊಬ್ಬನೇ ಈ ಭಿಕ್ಷಾಟನೆಯನ್ನು ಜುಲುಮಾನೆಯಿಂದಲಾದರೂ ನಿಲ್ಲಿಸಬೇಕೆಂದು ಹೇಳುತ್ತಾನೆ. ನಮ್ಮ ದೇಶದಲ್ಲಿಯೂ ಇಂತಹ ಮಹತ್ವದ ಹದಸ್ಯಾ ಸಪಿಡುವುದು ಆವಶ್ಯವಲ್ಲವೆ?

ಬರೆದವರು: ಶ್ರೀ ಕು. ಶಿ. ಹರಿದಾಸ ಭಟ್ಟ, ಎಂ. ಎ.

ರಶಿಯನ್ ಕ್ರಾಂತಿಯು ನಡೆದು ನಲತ್ತು ವರ್ಷಗಳಾದರೂ ಹೊಸತೆನ್ನಲಾಗುತ್ತಿರುವ ಸಮಾಜವು ಇನ್ನೂ ಸಂಪೂರ್ಣವಾಗಿ ಅಲ್ಲಿ ನೆಲೆಗೊಂಡ ಹಾಗಿಲ್ಲ. ಇದಕ್ಕೆ ಅಲ್ಲಿನ ಪತ್ರಿಕೆಗಳಲ್ಲಿ ಸ್ಟಾಲಿನ್ ಯುಗದ ಅನಂತರ ಕಂಡು ಬರುತ್ತಿರುವ ಪ್ರಚಾರದ ವೈಖರಿಯೇ ನಿದರ್ಶನ, ಸೋಮಾರಿತನ, ಕುಡಿತ, ವಿಲಾಸ ಜೀವನ, ಮಕ್ಕಳ ಲಾಲನೆ ಪಾಲನೆ ಮುಂತಾದ ದೈನಂದಿನ ಸಮಸ್ಯೆಗಳ ಪರಿಹಾರಕ್ಕೋಸ್ಕರ ಅಧಿಕಾರವಾಣಿ ಪದೇ ಪದೇ ನುಡಿಯುವ ಸನ್ನಿವೇಶ ಅಲ್ಲಿ ಈಗ ನಮಗೆ ಕಂಡು ಬರುತ್ತಿವೆ. ಎಡ್ವರ್ಡ್ ಕ್ರ್ಯಾಂಕ್ ಶಾ ಎಂಬವರು ತಮ್ಮ ಪರ್ಯಟನದ ತರುವಾಯ ಬರೆದ 'ಸ್ಟಾಲಿನ್ ಇಲ್ಲದ ರಶಿಯ' ಎಂಬ ಪ್ರವಾಸ ಕಥನದ ಅನುಬಂಧದಲ್ಲಿ ಸೇರಿಸಿದ ರಶಿಯನ್ ಪತ್ರಿಕೆಗಳ ಉದ್ಧರಣೆಯಿಂದ ಭಿಕ್ಷುಕರ ಸಮಸ್ಯೆಯ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಿ ಕೊಡಲಾಗುವುದು.

ಲಿಟರರಿ ಗಝೆಟ್: ಸೆಪ್ಟಂಬರ ೨೩, ೧೯೫೪ರ ಸಂಚಿಕೆಯಿಂದ:—

ಮೊಸ್ಕೊ ನಗರದಿಂದ ಹೊರವಲಯಕ್ಕೆ ಹೋಗುವ ವಿದ್ಯುತ್ ಬಂಡಿಯನ್ನೇರಿದ ಕೂಡಲೇ ದುರಂತಪೂರ್ಣವಾದ ಒಂದು ಹಾಡನ್ನು ಹಾಡುತ್ತ ಬಂಡಿಯೊಳಗೆ ಸಂಚರಿಸುವ ಒಬ್ಬ ಭಿಕ್ಷುಕನು ನಿಮ್ಮ ಕಣ್ಣಿಗೆ ಬೀಳುತ್ತಾನೆ. ಕುಡಿತದ ಅಮಲಿನಿಂದಲೂ, ಕರ್ಕಶವಾದ ಕಂಠದಿಂದಲೂ ಹೊಮ್ಮುವ ಈ ಹಾಡು ಮುಗಿದ ತರುವಾಯ ಅವನು "ಅಣ್ಣಂದಿರೇ ಅಕ್ಕಂದಿರೆ, ತಾಯಂದಿರೇ ತಂದೆಯರೇ, ಯುದ್ಧದಲ್ಲಿ ಗಾಯಹೊಂದಿದ ಒಬ್ಬ ಸೈನಿಕನಿಗೆ ಒಂದು ಕೊಪೆಕ್ (ಕಾಸು) ಕೊಡಲಾರಿರಾ?" ಎಂದು ಅಂಗಲಾಚುವನು. ಅವನಲ್ಲವಾದರೆ ಸಂಗೀತ ಸಾಧನೆ ಇಲ್ಲದೆ ನೇರವಾಗಿ 'ತವಾರ್, ಮಾಜಿ ಸೈನಿಕನಿಗೆ ಕುಡಿಯಲಿಕ್ಕೆ ಎರಡು ಕಾಸು" ಎಂದು ಬೇಡುವ ಇನ್ನೊಬ್ಬ ಬಂಡಿಯ ಒಳಗೆ ಹೊಗುವುದುಂಟು. ಹೀಗೆಯೆ ಇನ್ನೆಷ್ಟೋ ಜನ ಇರಬಹುದು.

ಯುದ್ಧದಲ್ಲಿ ಮಡಿದ, ನೊಂದ ಸಂಗಾತಿಗಳ ಮೇಲೆ ನಮಗೆಲ್ಲ ಅಪೂರ್ವ ಪ್ರೀತಿ; ಗೌರವ. ಆದರೆ ಸೋಮಾರಿಗಳೂ ಪರಪೀಡಕರೂ ಆದ ಇಂಥ ದರವೇಶಿಗಳು ಆ ಪವಿತ್ರ ಹೆಸರನ್ನು ದುರುಪಯೋಗಿಸುತ್ತಿರುವುದನ್ನು ಕಂಡರೆ ಸಿಟ್ಟು ಬಾರದೆ? ಇಂಥ ಭಿಕ್ಷುಕರು ಕೆಲವೇ ಜನ ನಿಜ, ಇಂಥವರು ಗುಂಪು ಗುಂಪಾಗಿ ಇಲ್ಲದೆ ಇರಬಹುದು—ಆದರೂ ಕೂಡ ಭಿಕ್ಷೆಗೆ ಕೈಯೊಡ್ಡುವ ಈ ಜನ ಯಾರು? ಕಾಯಕಷ್ಟದಿಂದ ಸಂಪಾದಿಸಿದ ಕಾಸುಗಳನ್ನು ಸೋವಿಯಟ್ ಪ್ರಜೆಯಾರಿಗೆ ಎಸೆಯುತ್ತಿದ್ದಾನೆ—ಎಂಬುದರ ಶೋಧನೆ ನಡೆಯ ಬೇಕಾದ ಕಾಲ ಬಂದಿದೆ.

ಈ ಭಿಕ್ಷುಕರು ಯುದ್ಧ ರಂಗದಲ್ಲಿ ಗಾಯಾಳುಗಳಾಗಿ ಮರಳಿದವರಿರಬಹುದು. ಆದರೆ ಯಥಾರ್ಥವಾಗಿ ಸೋವಿಯಟ್ ಗಾಯಾಳುವೆನಿಸಿದವರು. ಸಾವಿರ ಸಂಖ್ಯೆಯಲ್ಲಿ ದುಡಿಯುತ್ತಿರುವುದನ್ನು ನಾವು ನೋಡಬಹುದು. ಕಾಲುಗಳಿಲ್ಲದ ಅಲೆಕ್ಸಿ ಮರೆಸಿಯೆವ್, ಪ್ರೊಕೊಫಿ ನೆಶ್ಡೊವ್ ಇವರನ್ನು ನೋಡಿ, ತೋಳುಗಳನ್ನು ಕಳೆದುಕೊಂಡ ಕಿರಿಲ್ ಒರ್ಲೊವ್ಸ್ಕಿಯನ್ನು ನೋಡಿ ಅಥವಾ ವಸಿಲಿ ಡೊನ್‌ಸ್ಕೊವ್ ಇವರನ್ನು ನೋಡಿ. ಮೊದಲನೆಯ ಇಬ್ಬರು ಈಗ ಕಾರ್ಖಾನೆಯ ಶ್ರಮಜೀವಿಗಳು. ಮೂರನೆಯವರು ಬೈಲೊ ರಶಿಯದ ದೊಡ್ಡ ಸಾಮೂಹಿಕ ಕೃಷಿ ಕ್ಷೇತ್ರದ ಅಧ್ಯಕ್ಷರು. ನಾಲ್ಕನೆಯವನು ಮೊಸ್ಕೊದ ತಾಂತ್ರಿಕ ಶಾಲೆಯಲ್ಲಿ ಮಹೋಪಾಧ್ಯಾಯ. ಸ್ವತಂತ್ರ ಭೂಮಿಯಲ್ಲಿ ದುಡಿಯುವುದರ ಸಲುವಾಗಿ ತಾನೇ ಇವರೆಲ್ಲ ಸಮರಭೂಮಿಯಲ್ಲಿ ನಿರ್ಭೀತಿಯಿಂದ ಕಾದಾಡಿದುದು? ಕೆಲವರಿಗೆ ಆರೋಗ್ಯವು ತೀರ ಕೆಟ್ಟು ಕೆಲಸಮಾಡುವ ಶಕ್ತಿ ಉಡುಗಿರಬಹುದು ಎಂಬುದನ್ನು ಒಪ್ಪಿದರೂ, ಇಂಥವರು ಕೂಡ 'ಸೋವಿಯಟ್ ಪ್ರಜೆ'ಯ ವೈಶಿಷ್ಟ್ಯವನ್ನು ಕಾಯುವುದಕ್ಕೋಸುಗವೋ ಎಂಬಂತೆ ದುಡಿಮೆಗೆ ಮಾರುಹೋಗಿರುವರು.

ಆದರೆ ರೈಲುಬಂಡಿಯೊಳಗೆ ನರಳಿಕೆಯ ನಾಟಕವನ್ನಾಡುವ ಸೋಗುಗಾರರು ಇಂಥ ವೀರಯೋಧರು ಹೇಗೆ ಆಗಬಲ್ಲರು? ಇವರು ಕೇವಲ ಕುಡುಕರು. ಇವರ ನರಳಿಕೆಯೆಲ್ಲ ಠಕ್ಕು. ಬಾಗಿಲು ಮುಚ್ಚಿದರೆ ಅವರು ರೈಲಿನ ಕಿಟಕಿಯ ಸಲಿಕೆಗಳಿಗೆ ಕೈಯಿಟ್ಟು ನೆಗೆಯುವ ರಭಸವನ್ನು ನೀವು ನೋಡಬೇಕು. ಆಗ ಬಂಡಿಯೊಳಗೆ ಅವರು ನಿಮಗೆ ತೋರಿಸಿದ ಆಯಾಸ, ವೇದನೆ ಇವೆಲ್ಲ ಒಂದೂ ಕಾಣದು.

ಇವರಲ್ಲಿ ಕೆಲವರ ಪರಿಚಯ ನನಗೆ ಇದೆ. ವಿಕ್ಟರ್ ಬಾರ್ಟ್‌ಕೆವಿಚ ಎಂಬವನಿಗೆ ೩೨ ವರ್ಷ ವಯಸ್ಸು. ಯುದ್ಧ ಕಾಲದಲ್ಲಿ ಈತ ಸೇನಾಧಿಕಾರಿಯಾಗಿ, ಆದರ ಮೇಲೆ ಆರೇಳು ವರ್ಷ ತಂತ್ರ ಶಾಲೆಯಲ್ಲಿ ಉಪಾಧ್ಯಾಯನಾಗಿ, ಈಗ ೬೦೦ ರೂಬಲ್ (ಸುಮಾರು ಅಷ್ಟೇ ರುಪಾಯಿ) ಪೆನ್ಶನ್ ಪಡೆಯುತ್ತಿದ್ದಾಗ್ಯೂ 'ಊಟ'ಕ್ಕಾಗಿ ಬೇಡುತ್ತಿದ್ದಾನೆ! ವಸಿಲಿ ಮರ್ಕುಲೊವ್ ಕೂಡ ಹೇರಳ ಪೆನ್ಶನ್ ಪಡೆಯುವ ಒಬ್ಬ ಮಾಜಿ ಅಧಿಕಾರಿ. ಅವನು ದಾರಿಯ ಪಕ್ಕದಲ್ಲಿ ನಿಂತು 'ಮನೆಗೆ ಹೋಗಲು ಒಂದು ರೂಬಲ್ ಕೊಡಿ' ಎಂಬ ಹೊಸತೊಂದು ವಿಧಾನ ಕಂಡು ಹಿಡಿದಿದ್ದಾನೆ. ಆದರೆ ಅವನು ಸದಾ ಅಮಲಿನಲ್ಲಿರುವುದನ್ನು ಎಲ್ಲರೂ ನೋಡಬಹುದು.

ಈ ಜನಗಳಿಗೆ ಕೆಲಸ ಮಾಡಲು ಪ್ರೇರಣೆಯದೇನು? ಭಿಕ್ಷುಕನ 'ಉದ್ಯೋಗ' ಮಾಡುತ್ತಿರುವ ವ್ಯಕೆಲನನ್ನು ಎಷ್ಟು ಸಾರಿ ಹಿಡಿದಾಯಿತು. ಆದರೆ ಅವನು ವೇಳೆ ಸಿಕ್ಕಾಗಲೆಲ್ಲ ಬೇಡುತ್ತಾನೆ.

ಹಳ್ಳಿಯಲ್ಲಿ ಮಜಬೂತಾದ ಮನೆ, ಜಾನುವಾರು, ಜಮೀನು ಇರುವ ಫೆಡೊಸ್ಯೆ ಎಂಬ ಮಹಿಳೆ ಕೂಡ ಮೊಸ್ಕೊವರೆಗೆ ಪಯಣ ಬೆಳಸಿ, ಚಿಂದಿಬಟ್ಟೆಯನ್ನು ಧರಿಸಿ ಭೋಳೇ ಜನರನ್ನು ಮೋಸ ಮಾಡುತ್ತ ಈ ಬೇಡುವ ಉದ್ಯೋಗ ಮಾಡುತ್ತಾಳೆ.

ಸೋವಿಯಟ್ ಪ್ರಜೆಯ ವರಮಾನವು ಅಭಿವೃದ್ಧಿಯಾದಂತೆ ಇಂಥ "ಭಿಕ್ಷುಕರ" ಕ್ಷೇಮಾಭಿವೃದ್ಧಿಯೂ ಜತೆಯಲ್ಲೇ ಆಗುತ್ತಿದೆ. ಏಕೆ ವಸಿಲಿ ಎಂಬವನು ಈ ಉದ್ಯೋಗದಿಂದಲೇ ಹೊಸ ಮನೆ ಕಟ್ಟಿಸಿದ್ದಾನೆ.

ನಮ್ಮ ರಾಷ್ಟ್ರವು ಸಾಮಾಜಿಕ ವಿಮೆಯ ಕ್ಷೇತ್ರವನ್ನು ವಿಶಾಲವಾಗಿ ವಿಸ್ತರಿಸಿದೆ. ಕಿಂಡರ್ ಗಾರ್ಟನ್, ಮುಂತಾದ ಶಿಶು ವಿಹಾರಗಳು ಹೆಚ್ಚುತ್ತಿವೆ. 'ಭಿಕಾರಿ' ಎಂಬ ಪದವೇ ಮರೆಯಾಗುತ್ತಿದೆ. ಯುದ್ಧದ ಗಾಯಾಳುಗಳಿಗೆ ಸರಕಾರವು ವಿಶೇಷ ಆಸಕ್ತಿಯಿಂದ ಅನ್ನವಸನ ಉದ್ಯೋಗ ಕಲ್ಪಿಸಿದೆ. ಹಾಗೆ ಯಾರಿಗಾದರೂ ಕಷ್ಟವಾದರೆ ಸಹಕಾರಿ ಬ್ಯಾಂಕಿನಲ್ಲಿ ಸಾಲವೂ ಸಿಗುತ್ತದೆ, ನಮ್ಮ ರಾಷ್ಟ್ರದಲ್ಲಿ—ಯಾರೂ ಏಕಾಕಿಯಾಗಿರಲಾರ ಎಂಬುದನ್ನು ನೆನಪಿನಲ್ಲಿಡಿ. ಕಷ್ಟದಲ್ಲಿ ಪಾಲುಗಾರರಾಗಲು ಅನೇಕ ಸಂಗಾತಿಗಳು ಮುಂದೆ ಬರುತ್ತಾರೆ. ಬಂಡವಾಳಶಾಹಿ ರಾಜ್ಯಗಳಲ್ಲಿರುವಂತೆ ನಿರುದ್ಯೋಗ, ಹಸಿವೆ, ಅಸಹಾಯತೆ ಇವುಗಳ ದೆಸೆಯಿಂದ ಯಾರೂ ಇಲ್ಲಿ ಸಾಯಬೇಕಾಗಿಲ್ಲ.

ಆದರೂ ಈ ದರಿದ್ರ ಭಿಕ್ಷುಕರು ಯಾಕೆ ನಮ್ಮನ್ನು ಪೀಡಿಸುತ್ತಿದ್ದಾರೆ ಎಂಬುದು ನನಗೆ ತಿಳಿಯದು.

ತಪ್ಪಿನ ಸ್ವಲ್ಪ ಜವಾಬುದಾರಿ ನಮ್ಮ ಪೋಲೀಸರು ಹೊರಬೇಕು. ಇಂಥ ದರಿದ್ರರರನ್ನು ಬಂಡಿಯಿಂದಲೂ ಕಾಲ್ದಾರಿಯಿಂದಲೂ ದಬ್ಬಿ ಓಡಿಸುವ ಬದಲು ಅವರು 'ಈತ ಏನೂ ಅಪರಾಧ ಮಾಡಿಲ್ಲವಲ್ಲ, ನಮಗೇನು?' ಎಂದು ಕೊಂಡು ಸುಮ್ಮನಿರುತ್ತಾರೆ. 'ಸೋವಿಯಟ್ ಪ್ರಜೆಯ ಅಭಿಮಾನಕ್ಕೆ ಕುಂದೊಡ್ಡುವ ಇಂಥ ನಡತೆಯ ಕುರಿತು ಯಾರೂ ಕನಿಕರ ತೋರಿಸಲೇ ಕೂಡದು ಎಂದು ನನ್ನ ಅಭಿಪ್ರಾಯ.

ಭಿಕ್ಷುಕರಲ್ಲಿ ಎಷ್ಟೋ ಜನ ಮಕ್ಕಳನ್ನು ಕಟ್ಟಿಕೊಂಡು ಬೇಡುತ್ತಾರೆ. ಅಂಥವರ ಮೇಲೆ ಕ್ರಿಮಿನಲ್ ಕೋಡಿನ ೭೩ನೇ ಕಲಮನ್ನಾದರು ಜಾರಿಗೆ ತರಬಹುದಲ್ಲಾ? (ಕಿರಿಯ ಮಕ್ಕಳನ್ನು ಭಿಕ್ಷೆಗೆ ಎಳೆದವರಿಗೆ ಐದು ವರ್ಷ ಬಂಧನವೆಂಬ ಶಾಸನವು ೭೩ನೇ ಕಲಮಿನಲ್ಲಿದೆ)

ವಿಖ್ಯಾತ ಗಾರ್ಕಿ ಬರೆದಿಲ್ಲವೆ?—"ಭಿಕ್ಷೆಯನ್ನು ಎಸೆಯುವ ಮನುಷ್ಯನಿಗಿಂತ ದುಷ್ಟರು ಬೇರೆ ಯಾರೂ ಈ ಪ್ರಪಂಚದಲ್ಲಿಯೇ ಇಲ್ಲ' ಈ ಮಾತು ಆ ಕಾಲದ ಸೋಮಾರಿ ಶ್ರೀಮಂತರ ಕುರಿತು ಬರೆದರೂ ಈಗ ಶ್ರಮಜೀವಿಗಳ ಕೈಯಿಂದ ಸೋಮಾರಿಗಳ ಮೇಲೆ ಹಣವು ದುರ್ವಿನಿಯೋಗವಾಗುತ್ತಿದೆ.

'ಭಿಕ್ಷುಕರ' ವಿರುದ್ಧ ಹೋರಾಟ ನಡೆಸುವುದಗತ್ಯವೆ? ಎಂದು ನೀವು ಕೇಳಿದರೆ, ಅಗತ್ಯವೆಂದು ನಾನು ಹೇಳಬೇಕಾಗುತ್ತದೆ. ಹಳೆಯ ಕಾಲದಿಂದ ಉಳಿದುಕೊಂಡುಬಂದ ಈ ದುಶ್ಚಟವು ಸೋಮಾರಿಗಳಿಗೂ, ಕುಡುಕರಿಗೂ, ವಂಚಕರಿಗೂ ಆಸ್ಪದವನ್ನು ಕೊಡುತ್ತದೆ. ಅಲ್ಲದೆ ನಮ್ಮ ಸಮಾಜದಲ್ಲಿ ಭಿಕ್ಷುಕವೃತ್ತಿಗೆ ಬೇಕಾದ ಸಾಮಾಜಿಕ ಕಾರಣವೇ ನಿರ್ಮೂಲವಾಗಿರುವಾಗ ಇಂಥ ಸುಲಭದರೋಡೆಗೆ ನಾವು ಅವಕಾಶ ಕೊಡಲೇ ಕೂಡದು.

ಜನ ಇಂಥವರ ಮೇಲೆ ಕನಿಕರ ತೋರಿಸುವುದನ್ನು ನಿಲ್ಲಿಸಿದರೆ, ಭಿಕ್ಷುಕನ ಸುತ್ತ ಗುಂಪುಗೂಡಿದ ಜನ ಕನಿಕರದ ಬದಲು ಅವಹೇಳನದ ದಿಟ್ಟಿ ಬೀರಿದರೆ ಮಾತ್ರ 'ತವಾರ್, ಮಾಜಿ ಸೈನಿಕನಿಗೆ ಕುಡಿಯಲಿಕ್ಕೆ ಏನಾದರೂ ಕೊಡುವಿರಾ' ಎಂಬ ಸ್ವರವನ್ನು ನಾವು ಅಡಗಿಸಬಹುದು.

ತಾಯಂದಿರ ಆರೋಗ್ಯಕ್ಕೆ ಹೆರಿಗೆಯ ನಂತರ

ದಶಮೂಲಾರಿಷ್ಟ | ಅಥವಾ | ಬಾಣಂತಿ ಕಷಾಯ

ಕಸ್ತೂರಿಯುಕ್ತ ಪ್ರಶಸ್ತವಾದದ್ದು.

ನಂ. ೧ ಹೆರಿಗೆಯ ೧೦ ದಿನಗಳಿಗೆ
ನಂ. ೨ ಆ ಮೇಲೆ ಕೊಡುವದು.

ಸೌಭಾಗ್ಯ ಶುಂಠೀಪಾಕ

ಬಾಣಂತಿಗೆ ತಿಂಗಳ ನಂತರ ಕೊಡಲು ಯೋಗ್ಯ ಲೇಹ.

ತಯಾರಕರು:

ತಾರಾನಾಥ ರಸೌಷಧಿ ವರ್ಕ್ಸ್,

ಪ್ರೈವೇಟ ಲಿಮಿಟೆಡ್, ಚಿಕ್ಕಮಗಳೂರು.

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಭಾವೈಕತೆಯ ಅಭಾವದಿಂದಾಗಿ ಕುಂಟುತ್ತಿರುವ ಕರ್ನಾಟಕ

ರಾಜ್ಯದ ಹೆಸರು ಮೈಸೂರು ಕರ್ನಾಟಕಕ್ಕೆ ಅಪಚಾರವೆಸಗಿದೆ; ರಾಜಧಾನಿ ಬೆಂಗಳೂರು ಕನ್ನಡಕ್ಕೇ ಎರವಾಗಿದೆ; ಇದರಿಂದ ಕರ್ನಾಟಕದಲ್ಲಿ ಭಾವೈಕತೆಯ ಅಭಾವ ತಾಂಡವವಾಡುತ್ತಿದೆ. ಕರ್ನಾಟಕದಲ್ಲಿ ಹೊಸ ಹುರುಪಿನ ಕಾರಂಜಿ ಚಿಗಿಯ ಬೇಕಾದರೆ, ಕರ್ನಾಟಕ ನಿಜವಾಗಿಯೂ ಕರ್ನಾಟಕವಾಗಬೇಕು; ಕರ್ನಾಟಕ ಪರಂಪರೆಯ ವಿಜಯ ನಗರ ರಾಜಧಾನಿಯಾಗಬೇಕು.

ಕೇಳಿಕೊಂಡವರು: ಶ್ರೀ ಕಲ್ಲೂರ, ಕೃಷ್ಣಕುಮಾರ.

ಸ್ವಾತಂತ್ರ್ಯದ ಗ್ಲಾನಿ

ಕನ್ನಡನಾಡು ವಿಜಯನಗರದ ಪತನದ ನಂತರ ಕುಂಟಲಾರಂಭಿಸಿದ್ದು ಇನ್ನೂ ಕುಂಟುತ್ತಲೇ ಇದ್ದುದು ಒಡೆಯಲಾರದ ಒಡಪೇ ಆಗಿದೆ. ಸುಮಾರು ೪೦೦ ವರ್ಷಗಳ ಅಧಃಪತನ! ಕನ್ನಡನಾಡಿನ ಅಥವಾ ಮತ್ತಾವುದೇ ಜನಾಂಗದ ಇತಿಹಾಸದಲ್ಲಿ ಇಷ್ಟು ದೊಡ್ಡ ಅವಧಿಯ ಅಂಧಕಾರ ಹಿಂದೆಂದೂ ಆವರಿಸಿದ್ದುದು ಕಾಣಬರುವುದಿಲ್ಲ. ಕದಂಬರಿಂದ ವಿಜಯನಗರದ ರಾಯರವರೆಗೆ ಪ್ರತಿ ಶತಕದಲ್ಲೂ ಒಂದೊಂದು ವೈಭವದ ಹೆದ್ದೆರೆ ತಲೆಯೆತ್ತಿ ಮೆರೆಯುತ್ತಲೇ ಬಂದಿದೆ,—ಕಡಲತೆರೆ ಒಂದು ಇಳಿಯುವಷ್ಟರಲ್ಲಿ ಮತ್ತೊಂದು ಮೇಲೇರಿ ಬರುವಂತೆ! ಜಗತ್ತಿನ ಯಾವುದೇ ಸಂಸ್ಕೃತಿವೇತ್ತ ಜನಾಂಗವನ್ನು ಬಗೆದರೂ, ಇಷ್ಟು ದೀರ್ಘಕಾಲದ ಪತನ ಕಂಡುಬರುವುದಿಲ್ಲ. ಕನ್ನಡಿಗರು ತಾವು ಸಂಸ್ಕೃತಿವೇತ್ತರು ಇಷ್ಟೇ ಅಲ್ಲ, ಸಮಸ್ತ ಭಾರತಕ್ಕೇ ಸಂಸ್ಕೃತಿ ದಾನಮಾಡಿದವರು. ಹೀಗಿದ್ದೂ ಸಹ ಕನ್ನಡಿಗರೇ ಇಂದು ಒಂದು ಉಜ್ವಲವಾದ ಕರ್ತೃತ್ವಶಕ್ತಿಯ ಬಲವಿಲ್ಲದೆ ಬಾಳುತ್ತಿರುವುದು ಯಾವ ಅಭಿಮಾನಿಯಾದ ಕನ್ನಡಿಗನ ಅಂತಃಕರಣದಲ್ಲಿ ಕಸಿವಿಸಿಯನ್ನುಂಟುಮಾಡದಿರದು. ಸಾಮಾನ್ಯವಾಗಿ ಇಂದಿನ ಕನ್ನಡಿಗರ ವಿಶಿಷ್ಟವಾದ ಲಕ್ಷಣವೆಂದರೆ ಉದಾಸೀನತೆ. "ಇಂದಿಲ್ಲ ನಾಳೆ; ಎಲ್ಲಾ ಒಮ್ಮೆಲೇ ಸಾಧ್ಯವೇ! ಆದೀತು; ಆದೀತು!!" ಎಂಬ ಭಾವನೆ ಎಲ್ಲೆಲ್ಲೂ ಪರಿವ್ಯಾಪಿಸಿಬಿಟ್ಟಿದೆ. ಎರಡನೆಯ ಹಿರಿದಾದ ಲಕ್ಷಣ—'ವೈಯಕ್ತಿಕವಾದ ಕಿರುಕುಳ ಲಾಭದಾಸೆ; ಅದರಲ್ಲಿ ಅರ್ಧ ದೊರೆತರೂ ಹತ್ತರಷ್ಟು ದೊರೆತ ಹೆಮ್ಮೆ ತೋರಿಕೊಳ್ಳುವುದು."

ಜೊಳ್ಳು ಜಂಭ

ಇವೆರಡೂ ಕಾರಣಗಳಿಂದ ಕರ್ನಾಟಕದಲ್ಲಿ ಜನಸಾಮಾನ್ಯವಾದ ವ್ಯಕ್ತಿತ್ವವೂ, ನಾಡಚಾರಿತ್ರ್ಯವೂ ರೂಪುಗೊಳ್ಳದಿರುವುದು ಒಂದು ಪಕ್ಷವಾದರೆ, ನಾಡಿನ ಅಭಿವೃದ್ಧಿಯನ್ನು ಸಾಧಿಸಬಲ್ಲ ಹಿರಿದಾದ ಘಟನೆ ಸಂಘಟನೆಗಳೂ ಉಂಟಾಗದಿರುವುದು ಇನ್ನೊಂದು. ಆನುಷಂಗಿಕವಾಗಿ ನಡೆದ ಅರೆಮರ್ಧ ಕಾರ್ಯಗಳನ್ನೇ ಹಿರಿದಾದ ಸಾಧನೆಯೆಂದು ಜಂಬ ಕೊಚ್ಚಿಕೊಳ್ಳುವುದು ಈಚಿಗಿನ ಕನ್ನಡಿಗರ ಸರಕಾರದಲ್ಲೂ ಒಡೆದು ಕಾಣುವ ಮಾತಾಗಿದೆ. ಆದುದೆಷ್ಟು? ಇನ್ನೂ ಆಗಬೇಕಾದುದರಲ್ಲಿ ಇದು ನೂರರ ಎಷ್ಟನೇ ಭಾಗ ಎಂಬುದರ ಎಣಿಕೆಯೇ ಇಲ್ಲದೆ ಈ ಜಂಭಕೊಚ್ಚಿ ಕೊಳ್ಳುವ ತರಾತುರಿ ಎಣೆಯಿಲ್ಲದೆ ನಡೆಯುತ್ತಲಿದೆ. ಉದಾಹರಣೆಗೆ ನೀರಾವರಿ ಹಾಗು ವಿದ್ಯುತ್ತಿನ ಅಭಿವೃದ್ಧಿಗಳ ಲೆಕ್ಕವನ್ನು ಪರಿಶೀಲಿಸುವ. ಕರ್ನಾಟಕದ ಸುಮಾರು ೪||| ಕೋಟಿ ಎಕರೆ ಭೂಮಿಯಲ್ಲಿ ಕಾಲುವೆ—ನೀರಾವರಿಯ ಲಾಭ ಪಡೆಯುತ್ತಿರುವುದು ೪ ಲಕ್ಷ ಎಕರೆಯಷ್ಟು ಮಾತ್ರ; ಎಂದರೆ ನೂರಕ್ಕೆ ·೯ರಷ್ಟು. ಇಂಥ ನೀರಾವರಿಗೆ ಪರಮಾವಧಿ ಆಸ್ಪದವುಳ್ಳ ಜಮೀನು ನೂರಕ್ಕೆ ೧೪—೨೦ರಷ್ಟಿದೆ. ಎಂದರೆ ಈಗಿರುವ ನೀರಾವರಿಯ ಸೌಲಭ್ಯ ಕನಿಷ್ಠ ಪಕ್ಷ ಈಗಿರುವುದರ ೨೦ರಷ್ಟು. ತುಂಗಭದ್ರಾ ಎಡ ಕಾಲುವೆಯ ಕೆಲಸ ಇತ್ಯಾದಿಗಳು ಪೂರ್ತಿಯಾದರೆ ಈಗಿನ ·೯ರ ಪ್ರಮಾಣ ನೂರಕ್ಕೆ ೩—೩|| ಅಷ್ಟಕ್ಕೇರಬಲ್ಲದು. ಎಂದರೂ ಆಗಬೇಕಾದ ಯೋಜನೆಯ ೧/೬ದಷ್ಟು ಮಾತ್ರ. ಈ ಲೆಕ್ಕಚಾರವನ್ನು ಬಗೆದರೂ ನಾವು ನಿಜವಾಗಿ ಅಭಿಮಾನಪಡಬೇಕಾದ ಅವಸ್ಥೆಗಿಂತ ಇಪ್ಪಟ್ಟು ಕೆಳಮಟ್ಟದಲ್ಲಿದ್ದೇವೆಂಬುದು ಸ್ಪಷ್ಟ. ಇನ್ನು, ಆಗಬೇಕಾದುದರ ಅರ್ಧ ಮಾತ್ರವೇ ಸಾಧ್ಯ ಎಂದು ಬಗೆದರೂ ನಾವು ಗುರಿಯಿಂದ ಎಷ್ಟು ದೂರವಾಗಿದ್ದೇವೆಂಬುದನ್ನು ಒಪ್ಪಲೇ ಬೇಕು.

ಹಾಗೆಯೇ, ಕರ್ನಾಟಕದ ಪರಮಾವಧಿಯ ವಿದ್ಯುದುತ್ಪಾದನೆಯ ಪರಿಮಿತಿ ೪೦–೫೦ ಲಕ್ಷದಷ್ಟಾಗಲು ಪರವಿಲ್ಲ. ಈಗಿರುವುದು ಸುಮಾರು ೩ ಲಕ್ಷದ ಹೊರಹೊಗೆ, ಇದು ಬೇಗನೆ ೪ ಲಕ್ಷಕ್ಕೇರಿದರೂ ಆಗಬೇಕಾದುದರ ೧೦ರಲ್ಲಿ ಒಂದು ಪಾಲು ಮಾತ್ರ. ಸರಕಾರೀ ಚೀಫ್ ಇಲೆಕ್ಟ್ರಿಕ್ ಎಂಜನಿಯರಾದ ಶ್ರೀ ಡೀಸಾ ಅವರ ಅಂಕಿಗಳ ಮೇರೆಗೆ ಈ ಪರಿಮಿತಿ ೩೩ ಲಕ್ಷ ಎಂದರೂ ಸಹ, ನಾವು ಸಾಧ್ಯಕ್ಕಿಂತ ಈ ವಿಷಯದಲ್ಲೂ ಎಷ್ಟು ದೂರವಾಗಿದ್ದೇವೆ ಎಂಬುದು ಸುಸ್ಪಷ್ಟ. ಆದರೂ—"ಮೈಸೂರು ರಾಜ್ಯವು ವಿದ್ಯುಚ್ಛಕ್ತಿ-ಸಂಬಂಧದಲ್ಲಿ ಇಡೀ ಏಷ್ಯಾ ಖಂಡದಲ್ಲೇ ಅಗ್ರಗಾಮಿ ರಾಜ್ಯವಾಗಿದೆ"-ಎನ್ನುತ್ತಾರೆ ಶ್ರೀ ಡೀಸಾ ಅವರೇ! ಸಹಕಾರಕ್ಕೆ ಹೋಲಿಸಿದ್ದರೆ ಇನ್ನೂ ಮೇಲಿನ ಪಟ್ಟ ದೊರೆಯಬಹುದಿತ್ತಲ್ಲದೇ! ಇಂಥ ಅಲ್ಪಖ್ಯಾತಿಗಳಿಂದ ಮೊದಲೇ ಉದಾಸೀನ ವೃತ್ತಿಯುದಾದ ಜನತೆ ಇನ್ನಷ್ಟು ಘೋರವಾದ ಕುಂಭಕರ್ಣಾವತಾರ ಧರಿಸಲು ದಾರಿಯಾಗುತ್ತದೆ. ಅದರಲ್ಲಿನ ತಜ್ಞರೆನ್ನಿಸಿಕೊಳ್ಳುವವರು ಹೀಗೆ ಕೊಚ್ಚಿಕೊಂಡರೆ ಜನತೆ ಕೊಚ್ಚಿಕೊಂಡೇ ಹೋದೀತು.

ಮಾದಕತ್ವದ ಮಾದರಿ

ಈಚಿಗೆ ಇನ್ನೂ ಒಂದು ಮಾದಕತೆ ಕನ್ನಡಿಗರನ್ನು ಬಾಧಿಸುತ್ತಿದೆ—ಅದು 'ಮಾದರಿ ಮೈಸೂರು' ಎಂಬ ಯಾವ ಬಾದರಾಯಣಸಂಬಂಧವಿಲ್ಲದ ಒಂದು ಮಾತು. ಕರ್ನಾಟಕಕ್ಕೆ ಮೈಸೂರು ಎಂಬ ಅಪಾರ್ಥದ ಹೆಸರು ಬಿದ್ದುದೇ ಇದಕ್ಕೆ ಕಾರಣ. ಕುರುಡುಗಣ್ಣುಗಳಲ್ಲಿ ಮೆಳ್ಳೆಗಣ್ಣು ಎಂಬಂತೆ ಅಳಿದುಹೋದ ಸಂಸ್ಥಾನಗಳಲ್ಲಿ (ಅಳಿದು ಹೋಗಲು ಮಾತ್ರ ತಕ್ಕುದಾದ ಸಂಸ್ಥಾನಗಳಲ್ಲಿ) ಮೈಸೂರು ತಕ್ಕಮಟ್ಟಿಗೆ ಮಾದರಿಯದಾಗಿರಬಹುದು. ಅಂಥದನ್ನೂ ಈಗಲೂ ಮಾದರಿಯೆಂದು ವೃಥಾಭಿಮಾನಪಡುವುದು ಉದಾಸೀನತೆಯನ್ನು ಮತ್ತೂ ಉಕ್ಕೇರಿಸಿದಂತೆಯೇ ಸರಿ. ಭಾರತದ ಎಷ್ಟೋ ರಾಜ್ಯಗಳ,—ಮುಖ್ಯತಃ ಮುಂಬಯಿ, ಉತ್ತರ ಪ್ರದೇಶ, ಬಂಗಾಲ, ಮದ್ರಾಸಾದಿ ರಾಜ್ಯಗಳ ತುಲನಾತ್ಮಕ ದೃಷ್ಟಿಯಿಂದ ನಾವು ಎಷ್ಟೊಂದು ಹಿಂದುಳಿದಿರುವೆವೆಂಬುದೂ, ನಮ್ಮ ನಾಡೇ ಪಡೆಯಬಹುದಾದ ಅಭಿವೃದ್ಧಿಯ ಪರಮಾವಧಿ ಪರಿಮಿತಿಗಿಂತ ನಾವು ಎಷ್ಟು ಕೆಳಮಟ್ಟದಲ್ಲಿದ್ದೇವೆಂಬುದೂ ನಮ್ಮ ಜನತೆಗೆ ಅಡಿಗಡಿಗೆ ಎದೆಯಲ್ಲಿ ನಡುಕ ತಾಗಬೇಕು; ಆದರಿಂದಾಗಿ ಅವರಲ್ಲಿ ಹೊಸ ಹವ್ಯಾಸ-ಹುಮ್ಮಸಗಳು ಚಿಗಿತು ಪುಟಿದೆದ್ದು ಚಿಮ್ಮಿ ಹೊರಹೊಮ್ಮುವಂತಾಗಬೇಕು.

ಭಾವನೆಯ ಅಭಾವ

ಮೇಲ್ಕಾಣಿಸಿದ ಉದಾಸೀನತೆ, ವೈಯಕ್ತಿಕ ಅಲ್ಪ ಸಂತುಷ್ಟಿ, ಹಾಗು ಅಲ್ಪ ಖ್ಯಾತಿ ಪ್ರಿಯತೆಗಳ ಭಾವ (ಇರುವಿಕೆ) ದಂತೆಯೇ, ಇನ್ನೊಂದರ ಅಭಾವವೂ ಕನ್ನಡಿಗರ ಇಂದಿನ ರಾಷ್ಟ್ರೀಯ ಕೀಳ್ಮಟ್ಟಕ್ಕೆ ಕಾರಣವಾಗಿದೆ. ಅದು ಭಾವೋಜ್ವಲತೆಯ ಅಭಾವ. ಕನ್ನಡಿಗರಲ್ಲಿ ತನ್ನ ಜನಾಂಗ ಶಕ್ತಿಯ, ರಾಷ್ಟ್ರನಿರ್ಮಾಣಕ ಶಕ್ತಿಯ ಅರಿವೇ ಇಲ್ಲದಂತಾಗಿದೆ ಈಚೆಗೆ; ಶ್ವಾನವೃತ್ತಿ ಬೆಳೆದಿದೆ ಅದರ ಜಾಗದಲ್ಲಿ. ಮಿಕ್ಕವರು ಬಿಟ್ಟುಕೊಟ್ಟಷ್ಟು ಮಾತ್ರ ನಮ್ಮದು; ಕೇಂದ್ರ ಸರಕಾರ ಬೀಸಾಡಿದ ತುಂಡು ಮಾತ್ರ ನಮ್ಮ ಆಹಾರ ಎಂಬ ಭಾವನೆಯಿದೆ. ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಮಿಕ್ಕ ರಾಜ್ಯಗಳಿಗೆ ಸರಿಮಿಗಿಲೆಂಬ ಮಟ್ಟ ನಮಗಿಲ್ಲ. ಮಿಕ್ಕನೇಕ ರಾಜ್ಯಗಳ ರಾಜಕೀಯ ಧುರೀಣರಿಗೆ ಸರಿ ದೊರೆಯಾಗಬಲ್ಲ ಧುರೀಣರೂ ನಮ್ಮಲ್ಲಿಲ್ಲ. ಅದು ಹೋಗಲಿ; ಅಂಥದೊಂದು ಸಾಂಘಿಕ ಶಕ್ತಿಯೂ ನಮ್ಮಲ್ಲಿಲ್ಲ. ಈಚೆಗೆ ಸರ್ಕಾರದಲ್ಲಿದ್ದವರು ಜನತೆಗೆ ಭಾವನಾತ್ಮಕ ಏಕೀಕರಣದ ಮಾತು ಹೇಳುವುದು ವಾಡಿಕೆಯಾಗಿದೆ. ಭಾವನೆಯಿದ್ದರಲ್ಲವೇ ಏಕೀಕರಣದ ಮಾತು. ಕನ್ನಡಿಗರು ಈಗಿನಷ್ಟು ಭಾವನಾಶೂನ್ಯರು ಕಳೆದ ೫೦ ವರ್ಷಗಳಲ್ಲಿ ಮತ್ತೆಂದೂ ಆಗಿರಲಿಲ್ಲ—ಎನ್ನಬಹುದು. ಕನ್ನಡದ್ದೇ ಒಂದು ರಾಜ್ಯವಾದರೆ ಅಭ್ಯುದಯ ಎಂಬುದು ಸ್ವಯಂಭೂ ಮೂರ್ತಿಯಂತೆ ಒಡಮೂಡಿ ಬಂದು ಬಿಡುವುದೆಂದು ಕರ್ನಾಟಕ ಏಕೀಕರಣಕಾರರ ಕನಸಾಗಿತ್ತು. ಆದರೀಗ ಕನ್ನಡ ರಾಜ್ಯವಾಗಿ ಲಾಭದ ಪಾಲು ಹಂಚಿಕೊಳ್ಳುವ ಏರ್ಪಾಡುಗಳೇ ಪ್ರಾಮುಖ್ಯವಾಗಿವೆ. ಹೊರತು, ಅಭ್ಯುದಯ ಎಂಬುದು ಕೇವಲ ಚುನಾವಣೆಯ ಮಾತುಗಾರಿಕೆ ಮಾತ್ರ ಆಗಿ ಉಳಿತಿದೆ.

(೨೪ನೇ ಪುಟ ನೋಡಿ)

ಜಯಂತಿಲಾಲ್ ಬ್ರದರ್ಸ್

ಮಂಗಳೂರು. ದ. ಕನ್ನಡ.

ನಿಮ್ಮ ವಿವಿಧೋದ್ದೇಶಗಳಿಗೊಪ್ಪುವ ಯಾವತ್ತೂ ಜವುಳಿಗಳಿಗೆ ಜಿಲ್ಲೆಯ ಪ್ರಾಮುಖ್ಯ ಜವುಳಿ ಮಳಿಗೆ.

ಬೆಂಗಳೂರು, ಬೆನಾರಿಸ್, ಧರ್ಮಾವರಂ, ಕಂಜೀವರಂ, ತಂಜಾವೂರು, ಆರಣಿ, ಕಲ್ಕತ್ತಾ, ಮುಂಬಯಿ, ವರಿಯೂರು, ಕೊಯಮುತ್ತೂರು, ಮಧುರೆ, ಕಂಬಾಯತ್ ವಗೈರೆ ಉತ್ಪಾದಕ ಕೇಂದ್ರಗಳಿಂದಲೇ ನೇರವಾಗಿ ತರಿಸಿ ವಿತರಣೆ ಮಾಡುವ ಪ್ರಾಮುಖ್ಯ ವಸ್ತ್ರ ಭಂಡಾರ.

ದಿ ಬಕ್ಕಿಂಗ್‌ಹಾಮ್ ಎಂಡ್ ಕರ್ನಾಟಿಕ್ ಕಂಪೆನಿ ಲಿಮಿಟೆಡ್, ಮದ್ರಾಸು

ದಿ ಬೆಂಗಳೂರು ಊಲನ್, ಕೋಟನ್ ಎಂಡ್ ಸಿಲ್ಕ್ ಮಿಲ್ಸ್ ಲಿಮಿಟೆಡ್, ಬೆಂಗಳೂರು

ದಿ ಮೆಟ್ಟೂರ್ ಇಂಡಸ್ಟ್ರೀಸ್ ಲಿಮಿಟೆಡ್, ಮೆಟ್ಟೂರು

ಇವರ ಅಧಿಕೃತ ವಿತರಣೆಗಾರರು.

ವಿಷ್ಣು ಸಹಸ್ರ ನಾಮ

ಪಾರಮಾರ್ಥಿಕ ಸುಖಾಪೇಕ್ಷಿ ಭಾರತೀಯರಿಗೆ ಶ್ರೀ ಮದ್ಭಗವದ್ಗೀತೆಯು ಕೈದೀವಿಗೆಯಾದರೆ, ಆದಕ್ಕೆ ಸುರಿಯುವ ಎಣ್ಣೆ ವಿಷ್ಣು ಸಹಸ್ರನಾಮ. ಇವುಗಳ ಪಠನದಿಂದಲೇ ಮಾನವನಲ್ಲಿ ಹುದುಗಿರುವ ತಾಮಸತೆಯು ಅವ್ಯಕ್ತವಾಗಿಯೇ ಮಾಯವಾಗುವುದು ಅನುಭವ ಸಿದ್ಧ.

ತಿಳಿಸಿದವರು: ಶ್ರೀ ಯು. ನಾ. ಉಡುಪ; ವಿದ್ವಾನ್.

'ಯಜ್ಞಾನಾಂ ಜಪಯಜ್ಞೋಽಸ್ಮಿ'
(ಗೀತಾ. ೧೦—೨೫)

ಗೀತೆಯು ಭೀಷ್ಮಪರ್ವದಲ್ಲಿ ವಿರಾಜಿಸುವ ಒಂದು ಜೀವಂತ ಕೊಹಿನೂರಾದರೆ, ವಿಷ್ಣು ಸಹಸ್ರನಾಮವು ಮಹಾಭಾರತದ ಅನುಶಾಸನ ಪರ್ವದ ದಾನಧರ್ಮವೆಂಬ ಉಪಪರ್ವದಲ್ಲಿ ಹೊಳೆಯುತ್ತಿರುವ ಒಂದು ಮಿಂಚುವ ಮಾಣಿಕ. ಈ ಅನುಶಾಸನ ಪರ್ವದಲ್ಲಿ ವಿವಿಧ ದಾನಗಳು, ದಾನಕೊಡುವ ಕಾಲಾಕಾಲಗಳು, ಪಾತ್ರಾಪಾತ್ರಗಳು, ವರ್ಣಾಶ್ರಮ ಧರ್ಮಗಳು, ಶ್ರಾದ್ಧ ವಿಧಿ ಮುಂತಾದ ಧರ್ಮಶಾಸ್ತ್ರ ವಿಚಾರಗಳನ್ನು ಕೇಳಬಹುದಲ್ಲದೆ, ವಿಷ್ಣು ಸಹಸ್ರನಾಮ ಮತ್ತು ಶಿವ ಸಹಸ್ರನಾಮಗಳೆರಡನ್ನೂ ಕೇಳುವೆ. ಆ ಕಾಲದ ಸಮಾಜದಲ್ಲಿ ವಿಷ್ಣು ಶಿವರಿಗೆ ಮಾತ್ರ ವಿಶೇಷ ಪ್ರಾಧಾನ್ಯವಿದ್ದಂತೆ ತೋರುತ್ತದೆ. ಆಗಿನ ಜನರಿಗೆ ವಿಷ್ಣು ಶಿವರು ಸಾಮಾನ್ಯವಾಗಿ ಏಕರೂಪರೆಂಬ ಅದ್ವೈತ ದೃಷ್ಟಿ ಇದ್ದಿರಬೇಕು. ಶಿವನ ಪರ್ಯಾಯ ಪದಗಳಾದ ಶರ್ವ, ಶಿವ, ಸ್ಥಾಣು, ಶಂಭು, ರುದ್ರ—ಈ ಹೆಸರುಗಳು ವಿಷ್ಣು ಸಹಸ್ರನಾಮದಲ್ಲಿ ವಿಷ್ಣುವಿನ ಹೆಸರುಗಳಾಗಿವೆ. ಹೀಗೆಯೇ ವಿಷ್ಣು, ಪದ್ಮನಾಭ ಮೊದಲಾದ ವಿಷ್ಣುವಿನ ಹೆಸರುಗಳು ಶಿವ ಸಹಸ್ರನಾಮದಲ್ಲಿವೆ. ಹೀಗೆ ಎರಡು ಸಹಸ್ರನಾಮಗಳಲ್ಲಿ ಸಾಮಾನ್ಯವಾಗಿರುವ ಹೆಸರುಗಳು ನೂರಕ್ಕಿಂತ ಹೆಚ್ಚು ದೊರೆಯುತ್ತವೆ. ಇದರಿಂದ ಆ ಇಬ್ಬರ ಅಭಿನ್ನತ್ವ ಮತ್ತು ಏಕತ್ವವು ತಿಳಿಯುತ್ತದೆ.

ಸಹಸ್ರನಾಮವಾಗಲು ಸಾವಿರ ಹೆಸರುಗಳಿರಬೇಕು. ಸಾವಿರ ಹೆಸರುಗಳು ಮಾತ್ರ ಭಗವಂತನ ನಾಮಗಳಲ್ಲ. ಅವನ ವಿಭೂತಿಯು ಅನಂತವಾದುದು. ಭಗವಂತನನ್ನು ಸಹಸ್ರ ಸಹಸ್ರನಾಮಗಳಿಂದ ಸಂಬೋಧಿಸುವುದು ಸಂಸ್ಕೃತ ಭಾಷೆಗೊಂದು ಹಿರಿಮೆ. ಈ ಭಾಷೆಯ ಸ್ನಿಗ್ಧತೆ ಮತ್ತು ಧಾತುಗಳಿಗಿರುವ ವಿಶಾಲಾರ್ಥವು ಜಗತ್ತಿನ ಯಾವ ಭಾಷೆಗೂ ಇರಲಾರದು. ಈ ಶಕ್ತಿಯ ಬಲದಿಂದಲೇ ಸಂಸ್ಕೃತದಲ್ಲಿ ವಿಷ್ಣು, ಶಿವ ಸಹಸ್ರನಾಮಗಳಲ್ಲದೆ ಸೂರ್ಯ, ರಾಮ, ಗಣಪತಿ, ಲಲಿತಾ ಸಹಸ್ರನಾಮಗಳೇ ಮೊದಲಾದ ಹಲವು ಸಹಸ್ರನಾಮಗಳು ಜನ್ಮವೆತ್ತಿವೆ. ಇವುಗಳಲ್ಲಿ ಗಣಪತಿ ಸಹಸ್ರನಾಮದಲ್ಲಿರುವ ಸಹಸ್ರ ನಾಮಗಳು ಗಕಾರದಿಂದಲೇ ಆರಂಭಿಸಲ್ಪಟ್ಟಿವೆ! ಇದೊಂದು ಪರಮಾಶ್ಚರ್ಯ; ಸಂಸ್ಕೃತ ಭಾಷೆಯ ಅಪೂರ್ವ ಮಹತ್ವ.

ಭಗವದ್ಗೀತೆಯ ಉತ್ಪತ್ತಿಗೆ ಅರ್ಜುನನ ಸಂಶಯವು ಕಾರಣವಾದಂತೆ, ವಿಷ್ಣು ಸಹಸ್ರನಾಮದ ಜನ್ಮಕ್ಕೆ ಯುಧಿಷ್ಠಿರನ ಸಂದೇಹವೇ ಕಾರಣ. ಗೀತೆಯನ್ನು ಶ್ರೀ ಕೃಷ್ಣನು ಉಪದೇಶ ಮಾಡಿದ್ದರೆ ವಿಷ್ಣು ಸಹಸ್ರನಾಮವನ್ನು ಭೀಷ್ಮನು ಉಪದೇಶಮಾಡಿದ್ದಾನೆ. ಧರ್ಮರಾಜನು ಭೀಷ್ಮನೊಡನೆ—'ಲೋಕದಲ್ಲಿ ಏಕ ಮಾತ್ರನಾದ ದೇವನು ಯಾರು? ಶ್ರೇಷ್ಠ ಆಶ್ರಯ ಸ್ಥಾನವು ಯಾವುದು? ಯಾರ ಗುಣ ಕೀರ್ತನೆಯಿಂದ—ಪೂಜೆಯಿಂದ—ಮನುಷ್ಯನು ಶುಭವನ್ನು ಹೊಂದುವನು? ಶ್ರೇಷ್ಠ ಧರ್ಮವು ಯಾವುದು? ಸಂಸಾರ ಬಂಧನದಿಂದ ಪಾರಾಗಲು ಯಾವುದನ್ನು ಜಪಿಸಬೇಕು?' ಎಂದು ಕೇಳಿದ ಪ್ರಶ್ನೆಗೆ ಭೀಷ್ಮನು 'ವಿಷ್ಣುವೇ ಏಕ ಮಾತ್ರನಾದ ದೇವ. ವಿಷ್ಣುವೇ ಉತ್ತಮ ಆಶ್ರಯ ಸ್ಥಾನ. ವಿಷ್ಣು ಕೀರ್ತನೆ ಮತ್ತು ಪೂಜೆಗಳಿಂದ ಮಾನವನು ಶುಭವನ್ನು ಹೊಂದುತ್ತಾನೆ. ಆತನನ್ನು ಭಕ್ತಿಯಿಂದ ಹೃದಯ ಕಮಲದಲ್ಲಿಟ್ಟು ಪೂಜಿಸುವ ಧರ್ಮವೇ ಉತ್ತಮ ಧರ್ಮ. ಪುರುಷೋತ್ತಮನಾದ ಆತನ ಗುಣ ಕೀರ್ತನೆಯನ್ನು ಸಹಸ್ರನಾಮಗಳಿಂದ ಮಾಡುವುದರಲ್ಲಿ ನಿರಂತರ ಉದ್ಯುಕ್ತನಾದವನು ಸಂಸಾರ ಬಂಧನದಿಂದ ಪಾರಾಗುತ್ತಾನೆ'ಂದು ಕ್ರಮವಾಗಿ ಉತ್ತರ ಕೊಟ್ಟು ವಿಷ್ಣು ಸಹಸ್ರನಾಮವನ್ನು ಹೇಳಲು ಆರಂಭಿಸುತ್ತಾನೆ.

ವಿಷ್ಣು ಸಹಸ್ರನಾಮಕ್ಕೆ ಮಾತ್ರ ಹದಿನೈದು ಭಾಷ್ಯಕ್ಕಿಂತ ಹೆಚ್ಚಿವೆ. ಇದರಿಂದಲೇ ಇದರ ಜನಪ್ರಿಯತೆಯು ಸ್ಪಷ್ಟವಾಗುತ್ತದೆ. ಇದಕ್ಕೆ ದ್ವೈತಾದ್ವೈತ ವಿಶಿಷ್ಟಾದ್ವೈತ. ಸಂಪ್ರದಾಯದ ಭಾಷ್ಯಗಳೂ ರೂಢಿಯಲ್ಲಿರುವುದರಿಂದ ಗೀತೆಯಂತೆ ವಿಷ್ಣು ಸಹಸ್ರನಾಮವೂ ಆಧ್ಯಾತ್ಮಿಕ ಅಮೂಲ್ಯ ನಿಧಿಯೆನ್ನಿಸಿದೆ. ನಮ್ಮಲ್ಲಿ ಇಂದೂ ಸನಾತನ ಧರ್ಮ ಪ್ರಿಯರ ಮಕ್ಕಳಿಗೆ ಉಪನಯನ ಕಾಲದಲ್ಲಿ ಗಾಯತ್ರೀ ಉಪದೇಶ ಮಾಡುವಂತೆ ಉಪನಯನಾನಂತರ ವಟುವಿಗೆ ವಿಷ್ಣು ಸಹಸ್ರನಾಮವನ್ನು ಉಪದೇಶಿಸುವ ಪರಿಪಾಟವಿದೆ.

ವಿಷ್ಣು ಸಹಸ್ರನಾಮವು ಶ್ರೀ ಕೃಷ್ಣನ ಆದರ್ಶ ಚರಿತ್ರವನ್ನು ಎತ್ತಿ ಸಾರುವ ಉತ್ತಮ ಧ್ವಜಪಟ. ಭಾಗವತ, ವಿಷ್ಣು ಪುರಾಣಗಳಲ್ಲಿ ಶ್ರೀ ಕೃಷ್ಣನ ಕಥೆಯು ವಿಸ್ತಾರವಾಗಿದೆ. ಇವುಗಳಲ್ಲಿ ಶ್ರೀ ಕೃಷ್ಣನು ಷೋಡಶ ಸ್ತ್ರೀ ಸಹಸ್ರೇಶನಾಗಿದ್ದಾನೆ; ಗೋಪೀಶ್ವರ, ಗೋಪೀ ವಸ್ತ್ರಾಪಹಾರಕನಾಗಿದ್ದಾನೆ. ಇವಲ್ಲದೆ ಇನ್ನೂ ಕೆಲವು ಅಶ್ಲೀಲ ವಿಚಾರಗಳು ಅವನ ಕೊರಳನ್ನು ಸುತ್ತಿಕೊಂಡಿವೆ. ಆದರೆ ವಿಷ್ಣು ಸಹಸ್ರನಾಮದಲ್ಲಿ ಶ್ರೀ ಕೃಷ್ಣನನ್ನು ಮಹಾದ್ರಿಧೃಕ್, ಶೌರಿ, ದಾಮೋದರ, ಗೋಪತಿ (ಗೋವುಗಳನ್ನು ಪಾಲಿಸಿದವ, ಪೃಥ್ವಿಗೊಡೆಯ), ಸಾತ್ವತಾಂಪತಿ (ಸಾತ್ವತ ವಂಶದ ಯಾದವರಿಗೆ ಅಥವಾ ವೈಷ್ಣವರಿಗೆ ಸ್ವಾಮಿ), ಗೋಹಿತ (ಭೂಭಾರವನ್ನಿಳಿಸಲು ಶರೀರ ಗ್ರಹಣ ಮಾಡಿದವನು), ಧನಂಜಯ, ರಣಪ್ರಿಯ, ಯದು ಶ್ರೇಷ್ಠ, ಸುಯಾಮುನಾ (ದೇವಕಿ ಮೊದಲಾದ ಯಮುನಾ ತೀರ ವಾಸಿಗಳಿಗೆ ಬಂಧುವಾದವನು), ಗದಾಗ್ರಜ, ಚಾಣೂರಾಂಧ್ರನಿಷೂದನ (ಚಾಣೂರನೆಂಬ ಆಂಧ್ರನನ್ನು ಕೊಂದವ)ನೆಂಬ ಹೆಸರಿನಿಂದ ಮಾತ್ರ ಕರೆದಿರುವರಲ್ಲದೆ ಗೋಪಿವಲ್ಲಭನಾದ ವಿಚಾರವಾಗಲೀ, ಇದಕ್ಕೆ ಸಮಾನವಾದ ಅಗೌರವ ವಿಚಾರಗಳೊಂದೂ ಕಾಣಸುವುದಿಲ್ಲ. ಅನುಶಾಸನ ಪರ್ವದಲ್ಲಿ ಶಿವನು ಪಾರ್ವತಿಗೆ ಶ್ರೀಕೃಷ್ಣನ ವಂಶಾನುಕ್ರಮವನ್ನು ಹೇಳುವಾಗಲೂ, ಗೋಪಿಕಾವಲ್ಲಭನಾದ ವಿಚಾರವಾಗಲೀ, ವಸ್ತ್ರಾಪಹಾರ ಮಾಡಿದ ಭೀಭತ್ಸ ಸಾಹಸವಾಗಲೀ ಬಂದಿಲ್ಲ. ಅಲ್ಲದೆ ಸಮಗ್ರ ಭಾರತದಲ್ಲೇ ಈ ವಿಚಾರವಿಲ್ಲ. ರಾಜಸೂಯ ಯಾಗಾನಂತರ ಅಗ್ರಪೂಜಾವಸರದಲ್ಲಿ ಶಿಶುಪಾಲನ ಬಾಯಿಯಿಂದ ಹಲವು ಅವಾಚ್ಯ ಪದಗಳು ಬಂದಿದ್ದರೂ ಈ ಕೆಳಮಟ್ಟದ ಮಾತುಗಳೊಂದೂ ಬಂದಿಲ್ಲ. ಅಮರ ಸಿಂಹನು ತನ್ನ ಕೋಶದಲ್ಲಿ ವಿಷ್ಣುವನ್ನು 'ಕೃಷ್ಣ, ದಾಮೋದರ, ಗದಾಗ್ರಜ, ದೇವಕೀನಂದನ' ಮೊದಲಾದ ಹೆಸರುಗಳಿಂದ ಸಂಬೋಧಿಸಿದ್ದರೂ, ಗೋಪಿಕಾವಲ್ಲಭನೆನ್ನಲಿಲ್ಲ. ಪುರುಷೋತ್ತಮ ಪಂಡಿತನ ತ್ರಿಕಾಂಡ ಶೇಷದಲ್ಲಿ 'ನರಕಜಿತ್, ವೃಷ್ಣಿವೃಷ, ಕಾಲನೇಮ್ಯರಿ, ಯವನಾರಿ, ಖಾಂಡವಾಭೀಲ ಸಿಂಧು, ಪೂತನಾ ಸೂದನ, ಧೇನುಕಾರಿಷ್ಟ ಸೂದನ' ಇತ್ಯಾದಿ ಶ್ರೀಕೃಷ್ಣನ ಹೆಸರುಗಳಿದ್ದರೂ ಆ ಅಶ್ಲೀಲ ವಿಚಾರಗಳಿಲ್ಲ. ಸಾರಾಂಶ—ಶ್ರೀಕೃಷ್ಣನು ಗೀತಾಧರ್ಮವನ್ನೇ ಮೈಗೂಡಿಸಿಕೊಂಡಿದ್ದ ವ್ಯಕ್ತಿಯೆಂಬುದಕ್ಕೆ ವಿಷ್ಣು ಸಹಸ್ರನಾಮವೊಂದು ಪ್ರಬಲವಾದ ಆಧಾರ.

ವಿಷ್ಣು ಸಹಸ್ರನಾಮದಲ್ಲಿ ಸಾವಿರ ಹೆಸರುಗಳು ಮಾತ್ರ ಇವೆ. ಇದರಲ್ಲಿ ಸರ್ವಪ್ರಹರಣಾಯುಧವೆಂಬುದೇ ಕೊನೆಯ ಹೆಸರು. ಶಿವ ಸಹಸ್ರನಾಮದಲ್ಲಿ ಸಾವಿರದೆಂಟು ಹೆಸರುಗಳಿವೆ. ವಿಷ್ಣು ಸಹಸ್ರನಾಮದಲ್ಲಿ ಮೊದಲು ಹತ್ತುಸಾವಿರ ವಿಷ್ಣು ನಾಮಗಳಿದ್ದು ಅವು ಇಳಿದು ಒಂದು ಸಾವಿರಕ್ಕೆ ಬಂದುವೆಂದು ಕೆಲವರು ಹೇಳುತ್ತಾರೆ.

ವಿಷ್ಣು ಸಹಸ್ರನಾಮದಲ್ಲಿ ಈ ಕೆಳಗಿನ ಎಪ್ಪತ್ತೊಂಬತ್ತು ಹೆಸರುಗಳು ಎರಡೆರಡು ಸಾರಿ ಬಂದಿವೆ.

೧ ಅನಘ ೨. ಅನಂತ ೩. ಅನಲ ೪. ಅನಿರುದ್ಧ ೫. ಅಕ್ಷೋಭ್ಯ ೬. ಅನಿರ್ದೇಶ್ಯವಪು ೭. ಅನಿರ್ವಿಣ್ಣ ೮. ಅನಿಲ ೯. ಅಪರಾಜಿತ ೧೦. ಅಮಿತ ವಿಕ್ರಮ ೧೧. ಅಮೋಘ ೧೨. ಆದಿತ್ಯ ೧೩. ಆದಿದೇವ ೧೪ ಈಶ್ವರ ೧೫. ಉತ್ತಮ ೧೬. ಉದ್ಭವ ೧೭ ಋದ್ಧ ೧೮. ಕರ್ತಾ ೧೯. ಕಾಂತ ೨೦. ಕುಮುದ ೨೧. ಕೃತಜ್ಞ ೨೨. ಕೃತಾಗಮ ೨೩. ಕೃಷ್ಣ ೨೪. ಕೇಶವ ೨೫. ಕ್ಷಾಮ ೨೬. ಗಹನ ೨೭. ಗುರು ೨೮. ಗೋಪತಿ ೨೯. ಗೋಪ್ತಾ ೩೦. ಗೋವಿಂದ ೩೧. ಚಕ್ರಿ ೩೨. ಚತುರಾತ್ಮ ೩೩. ಚತುರ್ವ್ಯೂಹ ೩೪. ತಾರ ೩೫. ದಕ್ಷ ೩೬. ದುರ್ಧರ ೩೭. ದ್ಯುತಿಧರ ೩೮. ಧರ್ಮ ೩೯. ನಿಯಮ ೪೦. ನಿವೃತ್ತಾತ್ಮ ೪೧ ಪುಣ್ಯ ೪೨ ಪುರುಷ........೭೭. ಸ್ಥವಿಷ್ಠ ೭೮. ಹಿರಣ್ಯಗರ್ಭ ೭೯. ಹುತಭುಕ್.

ಈ ಹದಿನಾಲ್ಕು ಹೆಸರುಗಳು ಮೂರು ಮೂರು ಸಾರಿ ಬಂದಿವೆ—

೧. ಅಜ ೨. ಅಚ್ಯುತ ೩. ಜ್ಯೋತಿ ೪. ಪದ್ಮನಾಭ ೫. ಪ್ರಾಣ....೧೨. ವೀರಹಾ ೧೩. ಶಕ್ರ ೧೪. ಸ್ಥಾಣು.

ಕೆಳಗಿನ ಮೂರು ಹೆಸರುಗಳು ನಾಲ್ಕು ನಾಲ್ಕು ಸಾರಿ ಬಂದಿವೆ.

೧ ಅವ್ಯಯ ೨ ಪ್ರಾಣದ ೩ ಶ್ರೀಮಾನ್.

ಹೀಗೆ ಸಾವಿರ ಹೆಸರುಗಳಲ್ಲಿ ೧೧೬ ಹೆಸರುಗಳನ್ನು ಕಡಿಮೆ ಮಾಡಿದಂತೆ ತೋರುತ್ತದೆ. ಶಂಕರಾಚಾರ್ಯರು ಬರೆದ ವಿಷ್ಣು ಸಹಸ್ರನಾಮ ವ್ಯಾಖ್ಯಾನದಲ್ಲಿ ಪ್ರತಿ ಹೆಸರಿಗೂ ಪ್ರತ್ಯೇಕ ಅರ್ಥವನ್ನು ಹೇಳಿದ್ದಾರೆ. ಸಮಗ್ರ ಭಾರತಕ್ಕೆ ಟೀಕೆ ಬರೆದ ನೀಲಕಂಠನೂ ಅರ್ಥ ಭಿನ್ನತೆ ಇರುವುದರಿಂದ ಪುನರುಕ್ತಿ ದೋಷವಿಲ್ಲವೆಂದಿದ್ದಾನೆ. (ಉದಾ—ಶ್ರೀಮಾನ್ ಎಂಬ ಹೆಸರು ಸಹಸ್ರನಾಮದಲ್ಲಿ ನಾಲ್ಕು ಆವೃತ್ತಿ ಬಂದಿದೆ. ಈ ಪದಕ್ಕೆ—ವಕ್ಷಸ್ಥಳದಲ್ಲಿ ಲಕ್ಷ್ಮಿಯುಳ್ಳವನು, ಸಕಲೈಶ್ವರ್ಯರೂಪವಾದ ಶ್ರೀಯಿಂದ ಒಡಗೂಡಿದವನು, ಸರ್ವಾತಿಶಯವಾದ ಕಾಂತಿಯುಳ್ಳವನು, ಎಲ್ಲಾ ಸಂಪತ್ತುಗಳುಳ್ಳವನು-ಎಂದು ನಾಲ್ಕು ವಿಧದ ಅರ್ಥವಾಗುವುದು.)

ವೇದವ್ಯಾಸರು ಒಬ್ಬನೇ ಆದ ಭಗವಂತನನ್ನು ಸಹಸ್ರನಾಮಗಳಿಂದ ಸಂಬೋಧಿಸಿದರೇಕೆಂಬುದನ್ನು ಭಗವದ್ಗೀತೆಯ ವಿಭೂತಿ ಯೋಗದಿಂದ ಸ್ಪಷ್ಟವಾಗಿ ತಿಳಿಯಬಹುದು.

(೧೯ನೇ ಪುಟ ನೋಡಿರಿ)

ಸುಂದರ ಕ್ಲೋತ್ ಸ್ಟೋರ್ಸ್
ಕೆಥೋಲಿಕ್ ಬೇಂಕಿನ ಎದುರು, ಉಡುಪಿ, ದ. ಕ.
ಯಾವತ್ತೂ ತರದ ಕೈಮಗ್ಗ ಮತ್ತು ಗಿರಣಿ
ಬಟ್ಟೆಗಳು, ಸಿಲ್ಕ್ ಬಟ್ಟೆಗಳು ಸದಾ ಸಿದ್ಧವಿವೆ.
ಮಿತದರದಲ್ಲಿ— ಸರ್ವರ ಮನಮೆಚ್ಚುವ ಸುಂದರವಾದ
ಬಟ್ಟೆಗಳಿಗೆ ಜನಪ್ರಿಯತೆ ಗಳಿಸಿದೆ—
ಸುಂದರ ಕ್ಲೋತ್ ಸ್ಟೋರ್ಸ್.
SUNDARA CLOTH STORES
Opp: Catholic Bank, UDIPI, S. Kanara.
Prop: K. G. Sunder Rao.

ಏಶಿಯಾದಲ್ಲಿ ಸಮಾಜವಾದ

ವಿಶಾಲ ಏಶ್ಯದ ಬಹು ದೇಶಗಳಲ್ಲಿ ಸಮಾಜವಾದವು ಮಾನ್ಯತೆಗಳನ್ನು ಪಡೆದಿವೆ; ಬೇರೆ ಬೇರೆ ದೇಶಗಳಲ್ಲಿ ಸಮಾಜವಾದದ ಕಳೆ ಭಿನ್ನ ಭಿನ್ನವಿದ್ದರೂ, ಅವೆಲ್ಲವೂ ಒಂದುಸೇರಿ, ಪೌರ್ವಾತ್ಯ ಸಮಾಜವಾದವಾಗಿ ಲೋಕಹಿತ ಕಾರಕವಾಗಲಿ.

ಆಶಿಸಿದವರು: ಶ್ರೀ. ಗೌರೀಶ ಕಾಯ್ಕಿಣಿ

ಆರು ವರ್ಷಗಳ ಆಚೆ ರಂಗೂನಿನಲ್ಲಿ ಏಶಿಯಾದ ಸಮಾಜವಾದಿಗಳ ಅಧಿವೇಶನ ನೆರೆದಿತ್ತು. ಆಗ ಪೂರ್ವದಿಗಂತದಲ್ಲಿಯೇ ಏನೋ ಒಂದು ನವ ಅರುಣೋದಯ ಚಿಮ್ಮುತ್ತಿದೆಯೆಂಬ ಭರವಸೆ ಉಂಟಾಗಿತ್ತು. ಹತ್ತು ದೇಶಗಳ ಹತ್ತು ಸಮಾಜವಾದಿ ಪಕ್ಷಗಳು ರಂಗೂನಿನಲ್ಲಿ ಕೂಡಿದ್ದವು. ಭೂಮಧ್ಯ ಸಮುದ್ರದ ದಂಡೆಯಿಂದ ಜಪಾನಿನ ವರೆಗೆ ಹಿಮಾಲಯದಿಂದ ದಕ್ಷಿಣಕ್ಕೆ ಇಂಡೀಜ ನಡುಗಡ್ಡೆಗಳತನಕವೂ ಬಹುದೊಡ್ಡ ಭೂಭಾಗದ ಪ್ರತಿನಿಧಿಗಳು ಒಂದೆಡೆಗೆ ಕಲೆತಿದ್ದರು. ಆಫ್ರಿಕೆಯಿಂದಲೂ ನಿರೀಕ್ಷಕರು ಬಂದಿದ್ದರು!

ಯಜಮಾನ್ಯ ವಹಿಸಿದ ಬ್ರಹ್ಮದೇಶದ ಪಕ್ಷ ಅಲ್ಲಿಯೇ ಸರಕಾರವನ್ನು ಕಟ್ಟಿತ್ತು. ಅತ್ತ ಇಸ್ರಾಯೆಲ್‌ದ ಸಮಾಜವಾದಿಗಳೂ ಸರಕಾರೀ ಪಕ್ಷವಾಗಿದ್ದರು. ಅವರ ವಿದೇಶ ಮಂತ್ರಿಯೇ ಸಭೆಗೆ ಬಂದಿದ್ದನು. ಇಂಡೋನೇಶಿಯಾದ ಪ್ರತಿನಿಧಿ ಮಂಡಳದ ನಾಯಕ ಅಲ್ಲಿಯ ಹಿಂದಿನ ಪ್ರಧಾನ ಮಂತ್ರಿ ವಹಿಸಿದ್ದನು. ಭಾರತೀಯ ಪಕ್ಷಕ್ಕೆ ಮಿಕ್ಕ ಯಾವದೇ ಸಮಾಜವಾದಿ ಪಕ್ಷಗಳಿಗಿಂತ ಹೆಚ್ಚು ಮತಸಂಖ್ಯೆ ಚುನಾವಣೆಗಳಲ್ಲಿ ದೊರೆತಿತ್ತು. ಅಂದರೆ ಅಷ್ಟು ದೊಡ್ಡ ಜನಸಂಖ್ಯೆಗೆ ಅದು ಪ್ರತಿನಿಧಿಯಾಗಿತ್ತು. ಅಷ್ಟು ಮತ ಬ್ರಿಟಿಷ ಲೇಬರ ಪಕ್ಷಕ್ಕೂ ಸಿಕ್ಕಿದ್ದಿಲ್ಲ. ಯುಗೋಸ್ಲಾವದವರು ಮಾರ್ಶಲ ಟಿಟೋರ ನಿಕಟವರ್ತಿಯಾದ ಡ'ದಲಾಸನನ್ನೇ ಕಳಿಸಿದ್ದರು. ಅಂತಾರಾಷ್ಟ್ರೀಯ ಸಮಾಜವಾದೀ ಸಂಘದ ಪ್ರತಿನಿಧಿಗಳ ಮುಂದಾಳಾಗಿ ಮೇಜರ್ ಅಟ್ಲಿಯವರೇ ಬಂದಿದ್ದರು. ಅಂದರೇನು? ಅಷ್ಟು ಮಹತ್ವ ಇವೆಲ್ಲ ಪಾಶ್ಚಾತ್ಯ ಪೌರ್ವಾತ್ಯ ದೇಶಗಳು ಈ ಅಧಿವೇಶನಕ್ಕೆ ಕೊಟ್ಟಿದ್ದರು. ಕೆಂಪು ತಾರೆ ಮತ್ತು ಡಾಲರು ಇವೆರಡೂ ತಮ್ಮೊಳಗೆ ಹಂಚಿಕೊಂಡು ಆಳುವ ಪ್ರಪಂಚದ ಇಬ್ಬಣಗಳ ನಡುವೆ ಈ ರಂಗೂನಿನಲ್ಲಿ ನೆರೆದ ಸಮಾಜವಾದಿಗಳ ದಿಬ್ಬಣ "ಮೂರನೆಯ ಶಕ್ತಿ"ಯನ್ನೊಂದು ಸ್ಥಾಪಿಸಿ ಜಾಗತಿಕ ಶಾಂತಿರಂಗದ ಸಮತೋಲವನ್ನು ಕಾಪಾಡಿಕೊಳ್ಳುವದೆಂಬುದೇ ಆ ಅಧಿವೇಶನ ಉಂಟುಮಾಡಿದ ಹೊಸ ಭರವಸೆ ಆಗಿತ್ತು.

ಆದರೆ ಈಗ ೬ ವರ್ಷಗಳ ಈಚೆಗೆ ಆ ಭರವಸೆಯೇ ವಿಚಿತ್ರವೆನಿಸಹತ್ತಿದೆ. "ಮೂರನೆಯ ಶಕ್ತಿ"ಯು ಮೂರನೇ ದೌರ್ಬಲ್ಯವೋ ಎನಿಸಹತ್ತಿದೆ! ಅಂತಾರಾಷ್ಟ್ರೀಯ ಸಮಾಜವಾದಿ ಸಂಘಟನೆಯೆಂಬುದು ಬೃಹ್ಮಾರಣ್ಯದ ಬೆಳದಿಂಗಳೇ ಆಯಿತೆಂದು ಅನಿಸಹತ್ತಿದೆ. ಏಶಿಯಾದ ಎರಡು ತುದಿಗಳಲ್ಲಿ ಇನ್ನೂ ಸಮಾಜವಾದ ಸರಕಾರವಾಗಿ ತಲೆಎತ್ತಿಯೇ ಇದೆ, ನಿಜ. ಅತ್ತ ಇಸ್ರಾಯಿಲ್‌ದಲ್ಲಿ ಅವರದೇ ಸರಕಾರವಿದೆ. ಆದರೂ ಸುಯೇಜ ಪ್ರಕರಣದಲ್ಲಿ ಅವರ ಪತ್ತು ಕೆಟ್ಟಿತು. ಇತ್ತ ಜಪಾನಿನಲ್ಲಿಯೂ ಸಮಾಜವಾದಿಗಳು ತಮ್ಮ ಕೋಟೆ ಭದ್ರಗೊಳಿಸಿದ್ದಾರೆ. ನಡುವೆ ಸಿಲೋನಿನಲ್ಲಿ ಶ್ರೀಲಂಕಾ ಸ್ವಾತಂತ್ರ್ಯ ಪಕ್ಷವಿದೆ. ನೇಪಾಲ ಕಾಂಗ್ರೆಸ್ ಇದೆ. ವ್ಹಿಯೆತನಾಮದ ಸೋಶಲಿಷ್ಟ ಪಕ್ಷವಿದೆ. ಲಂಕೆಯ ಪಕ್ಷ ಭಂಡಾರನಾಯಕೆಯವರ ಹಿರಿತನದಲ್ಲಿ ಅಧಿಕಾರಕ್ಕೂ ಏರಿದೆ. ಆದರೆ ಅದರ ಗುರಿಯು ಸಮಾಜವಾದವೋ ಸಿಲೋನೀ ರಾಷ್ಟ್ರವಾದವೋ ಇನ್ನೂ ನಿಚ್ಚಳವಾಗಿಲ್ಲ ನೇಪಾಲ ಹಿಮಾಲಯಗಳ ನಡುವೆ ಹೆಪ್ಪುಗಟ್ಟಿ ನಿಂತಿದೆ ಅಲ್ಲಿಯ ಪಕ್ಷದಿಂದ ಲೋಕಕ್ಕೆ ಏನು ಹಿತವೋ ಗೊತ್ತಿಲ್ಲ. ವ್ಹಿಯೆತನಾಮದ ಪಕ್ಷ ಇನ್ನೂ ಅಗಣ್ಯವಾಗಿದೆ. ಒಟ್ಟಾರೆ ರಂಗೂನಿನಲ್ಲಿ ರಂಗೇರಿದಂತೆ ಕಂಡ ಸಮಾಜವಾದಿಪಕ್ಷಗಳ ಅಂತಾರಾಷ್ಟ್ರೀಯ ರಂಗವೇ ಇಂದು ಸಿಡಿದು ಒಡೆದು ಬಿದ್ದಿದೆ. ತಾಳ-ಮೇಳ ಕೆಟ್ಟಿದೆ. ಎಲ್ಲವೂ ಕೀಲ ತಪ್ಪಿದೆ. ಅರುಣೋದಯದ ಬೆನ್ನಿಗೇ ಸೂರ್ಯಾಸ್ತವಾದಂತೆ ಅನಿಸುತ್ತದೆ!

ರಂಗೂನ ಅಧಿವೇಶನದ ಕೆಚ್ಚಿನ ಅಂಶವೆಂದರೆ ಭಾರತ ಬ್ರಹ್ಮದೇಶ ಹಾಗೂ ಇಂಡೋನೇಶಿಯಾದ ಪಕ್ಷಗಳಾಗಿದ್ದವು. ಆ ಕೆಚ್ಚಿಗೇ ಗೆದ್ದಲಿ ಹಿಡಿದದ್ದು ಆಗಲೇ ಕಂಡು ಬರುತ್ತಿತ್ತು. ಒಂದು ಹಿರಿಯ ರಾಜಕೀಯ ಶಕ್ತಿಯಾಗಬಹುದೆಂದು ಪಣ ಕಟ್ಟಿದ ಇಂಡೋನೇಶಿಯದ ಸಜಹರಿತ್‌ರ ಸಮಾಜವಾದಿಪಕ್ಷ ೧೯೫೫ರ ಸಾರ್ವತ್ರಿಕ ಚುನಾವಣೆಗಳಲ್ಲಿಯೇ ಪೆಟ್ಟು ತಿಂದು ಅಲ್ಪಸಂಖ್ಯ ಪಕ್ಷವೆನಿಸಿ ಕೊಂಡಿತು. ಅನಂತರ ೧೯೫೭ರ ಚುನಾವಣೆಗಳು ಹತ್ತಿರವಿರುವಾಗಲೇ ಭಾರತದ ಸಮಾಜವಾದಿಪಕ್ಷ ಒಡೆದು ತುಂಡಾಯಿತು! ಇದರಿಂದ ಕಾಂಗ್ರೆಸಿಗೆ ಪ್ರಮುಖ ವಿರೋಧಿಯಾಗಿ ಕಮ್ಯುನಿಷ್ಟ ಪಕ್ಷ ಒಂದೇ ಕಾಳಗದ ಕಣದಲ್ಲಿ ಬಲಿಯಾಗಿ ನಿಂತಿತು! ಕೊನೆಯದಾಗಿ ಕಳೆದ ವರ್ಷ ಬ್ರಹ್ಮದೇಶದ ಸಮಾಜವಾದಿಗಳಲ್ಲಿಯೂ ಪಂಗಡ-ಪಂಗಡವೆದ್ದಿತು. ಇದರಿಂದ ಸುಮಾರು ೧೦ ವರ್ಷ ಅಖಂಡ ಅಧಿಕಾರಭೋಗ ಪಡೆದು ಬಂದ ಆ ಪಕ್ಷ ಆಯೋಗ ಕಳೆದು ಕೊಂಡಿತು. ಏಶಿಯಾದ ಸರ್ವ ಸಮಾಜವಾದಿಗಳ ಸಂಘಟನೆಯ ಕೇಂದ್ರ ಕಚೇರಿ ರಂಗೂನಿನಲ್ಲಿಯೇ ಆ ಅಧಿವೇಶನದಂದಿನಿಂದ ಸ್ಥಾಪಿತವಾಗಿತ್ತು. ಅದಕ್ಕೆ ಸಿಗುತ್ತಿದ್ದ ಸಿಗಬೇಕಾದ ಆಧಾರ ಆಶ್ರಯ ತಪ್ಪಿತು. ಇದರಿಂದ ಇಡಿ ಸಂಘಟನೆಗೇ ಕುತ್ತು ಬಂತು.

ಇದು ಹೀಗೇಕೆ ಆಯಿತು? ಏಶಿಯಾದಲ್ಲಿ ಸಮಾಜವಾದಿಗಳ ಈ ಸೋಲು-ಬೀಳು ಪ್ರಪಂಚಕ್ಕೆ ಒದಗಿದ ಒಂದು ಮುಖ್ಯ ದುರಂತ. ಪ್ರಪಂಚದ ಎಲ್ಲ ಸಮಾಜವಾದಿಗಳಲ್ಲಿ ಇದು ಚರ್ಚೆಗೂ ಚಿಂತೆಗೂ ಕಾರಣವಾಗಿದೆ. ಒಂದು ಸಂಗತಿ ನಾವು ನೆನಪಿಡಬೇಕು. ಏಶಿಯಾದಲ್ಲಿ ಸಮಾಜವಾದಿ ಆಂದೋಲನ ಹಳೆಯದಲ್ಲ. ಅದು ಇತ್ತೀಚೆಯ ಸದ್ಯದ ಒಂದು ಬೆಳವಣಿಗೆ! ಕಳೆದ ಮಹಾಯುದ್ಧಕ್ಕೂ ಮೊದಲು ಈ ವಾದದ ಗಾಳಿ ಅಲ್ಲಲ್ಲಿ ಜೋರಾಗಿಯೇ ಎದ್ದಿತ್ತು ಬೀಸಿತ್ತು—ವಿಶೇಷತಃ ಜಪಾನಿನಲ್ಲಿ ಮತ್ತು ನಮ್ಮ ಭಾರತದಲ್ಲಿ! ಆದರೆ ಸಾಮಾನ್ಯವಾಗಿ ಏಶಿಯಾದಲ್ಲೆಲ್ಲ ಸಮಾಜವಾದ ಒಂದು ಪ್ರತ್ಯೇಕ ಪ್ರಚಾರದ ವಿಶಿಷ್ಟ ವಿಚಾರವಾಗಿ ಬೆಳೆದು ಬಂದಿದ್ದಿಲ್ಲ. ರಾಷ್ಟ್ರೀಯ ಆಂದೋಲನದ ಒಂದು ಅಂಶವಾಗಿ ಅದು ಬಲಿದು ಬಂತು. ಇದಕ್ಕೆ ಅಪವಾದ ಜಪಾನ. ಅಲ್ಲಿ ಜನ ಸ್ವಾತಂತ್ರ್ಯ ಕಳೆದುಕೊಂಡಿದ್ದಿಲ್ಲ. ಅಲ್ಲಿ ರಾಷ್ಟ್ರವಾದ ಬಲಪಕ್ಷದ ವಿಚಾರಧಾರೆಯಾಗಿ ನಿಂತಿತು—ಅದು ಆಕ್ರಮಣಶೀಲ ಸಾಮ್ರಾಜ್ಯವಾದದ ಸಿಂಹಮುಖ ಧರಿಸಿತು. ಆದರೆ ಇತರ ದೇಶಗಳಲ್ಲಿ—ನಮ್ಮಲ್ಲಿಯಂತೆ— ರಾಷ್ಟ್ರೀಯತೆಯು ವಾದ ಸಾಮ್ರಾಜ್ಯ ವಿರೋಧಿ, ಉಗ್ರಗಾಮಿ ಆ ಮಟ್ಟಿಗೆ ಕ್ರಾಂತಿಕಾರಿಯಾಗಿ ನೃಸಿಂಹಾವತಾರ ತಾಳಿ ಎದ್ದು ನಿಂತಿತು ಅದು ಅವಶ್ಯವಾಗಿ ಜನಾಭಿಮುಖವಾಗಿ ಎಡಕ್ಕೆ ಸಮಾಜವಾದ-ಸಾಮ್ಯವಾದಗಳತ್ತ ಒಲಿಯಿತು.

ರಾಷ್ಟ್ರವಾದದ ಆ ಸ್ವರೂಪದ ಉದ್ದೇಶ ವಿದೇಶೀ ಆಳರಸರ ಕೈಯಿಂದ ಸತ್ತೆಯನ್ನು ದೇಶೀಯರು ಸೆಳೆದುಕೊಳ್ಳುವದೇ ಆಗಿತ್ತು. ಸರಕಾರ ವಶಪಡಿಸಿಕೊಳ್ಳುವದು, ಸರಕಾರದ ಮೇಲೆ ತಮ್ಮ ಅಂಕೆ ಸ್ಥಾಪಿಸುವದು ರಾಷ್ಟ್ರವಾದಿ ಚಳವಳಿಗಳ ಗುರಿಯಿತ್ತು. ಪ್ರಜಾಪ್ರಭುತ್ವ ಮತ್ತು ಸ್ವಯಂ ನಿರ್ಣಯ ಇವೆರಡು ಆ ಚಳವಳಿಗಳ ಅಡಿಗಲ್ಲು. ಆದರೆ ಆ ತಂತ್ರಗಳನ್ನು ಸಾಮ್ರಾಜ್ಯವಾದಿ ವಿದೇಶಿಯರಿಂದಲೇ ಎರವಲ ತಂದಂಥವು! "ನಿಮ್ಮ ತತ್ವದಂತೆಯೇ ನಿಮಗೆ ನಮ್ಮನ್ನು ಆಳಲು ಅಧಿಕಾರವಿಲ್ಲ, ನೋಡಿ!"—ಎಂಬುದೇ ಸಾಮ್ರಾಜ್ಯವಾದಿಗಳಿಗೆ ರಾಷ್ಟ್ರೀಯ ಸ್ವಾತಂತ್ರ್ಯವಾದಿಗಳ ಆಹ್ವಾನವಾಗಿತ್ತು!

ಏಶಿಯಾದ ದೊಡ್ಡ ಮೊತ್ತದ ಉದ್ದಿಮೆಯೆಲ್ಲ ವಿದೇಶೀಯರ ಕೈಯಲ್ಲಿತ್ತು. ಅದನ್ನು ತಾವು ಕೈವಶಮಾಡಿಕೊಳ್ಳುವುದೇ ರಾಷ್ಟ್ರೀಯ ಚಳವಳಿಗಾರರ ಆರ್ಥಿಕ ಗುರಿಯಾಗಿತ್ತು. ರಾಜಕೀಯ ಮತ್ತು ಆರ್ಥಿಕ ಗುರಿಗಳೆರಡೂ ಕೂಡಿದ್ದರಿಂದ ಆ ಚಳವಳಿಯ ಆಕರ್ಷಣೆ ಇಮ್ಮಡಿಯಾಯಿತು. ರಾಷ್ಟ್ರೀಯ ಚಳವಳಿ ಸರಕಾರ ವಶಪಡಿಸಿಕೊಳ್ಳುವದು. ಸರಕಾರ ಉದ್ದಿಮೆಗಳನ್ನು ವಶಪಡಿಸಿಕೊಳ್ಳುವುದು. ಹೀಗೆ ರಾಷ್ಟ್ರೀಕರಣ ಪ್ರಾಮುಖ್ಯವಾಗಿ ರಾಷ್ಟ್ರವಾದದ ಧೋರಣೆಯಾಗಿತ್ತು. ಏಶಿಯಾದ ಸ್ವಾತಂತ್ರ್ಯ ಚಳವಳಿಗಳಿಗೆ ಇಂಥ ರಾಷ್ಟ್ರೀಕರಣವೇ ತಿರುಳಾಗಿದ್ದ ಸಮಾಜವಾದಿ ತತ್ವಗಳು ಆಕರ್ಷಕವೆನಿಸುವದು ಅನಿವಾರ್ಯವಾಗಿತ್ತು!

(೨೨ನೇ ಪುಟ ನೋಡಿರಿ)

'ಶ್ವಪಚನನು ಜತೆಗೊಳದೆ ದಿವಕೇರ್ವೆನೆಂತು?'

(ಅಷ್ಟಾದಶಪದಿ)

ಮರದಡಿಗಳಲಿ [1]ಸೋಸಿ ದೊರೆತ ಸೌದೆಯ ಹೊತ್ತು
ಮಸಣಕೊಯ್ದಿರಿಸಿ, ಮನೆಗಯ್ದು [2]ರೋಹಿತನ
[3]ಹಾವಗಿದ ಶವವೆತ್ತಿ ಮಧ್ಯರಾತ್ರಿಯ ಹೊತ್ತು
ಕಾವಲ್ಲಿ ಚಿತಿ ಹಾಸಿ ಮಲಗಿಸುತ ಸುತನ
ಕೊನೆಗೊಮ್ಮೆ [4]ಶೈಬ್ಯೆ ಮುತ್ತಿಟ್ಟು ಗೋಳೆನೆ ಮರುಗೆ,
ಕೇಳಿ ಕಾವಲ ಹರಿಶ್ಚಂದ್ರನಯ್ತಂದು,
[5]ಎಲೆಗೆ! [6]ಕದ್ದಿಲ್ಲಿ ಸುಡ ಬಂದೆ! ಮಸಣದ ತೆರಿಗೆ[7]
ಕೊಡದೆ ಸುಡ ಬಿಡೆ! [8]ಜೋಕೆ ಹಚ್ಚಿ ಅಡೋಕೆಂದು!
ತಡೆಯೆ, ಕೊಡೆ [7]ಸುಂಕವೆನ್ನುತ್ತೊಂದೆ ಹಳೆ ಬಟ್ಟೆ
ಹೊರತು ತನ್ನೊಡನೆ ಬೇರೊಂದು ಚೂರಿಲ್ಲ!
ಎನಲವಳು, ತನಗೆ ಬಹ [9]ಹೆಣದಕ್ಕಿಯನು ಬಿಟ್ಟೆ,
[2]ಶವಮಡಿಗೆ, ತೆರಿಗೆ ಕೊಡದನ್ಯ ದಾರಿಲ್ಲ!
ಸತ್ಯದಿಂ ಧರ್ಮದಿಂ ಕದಲೆ, ವಂಚಿಸೆ [10]ಧನಿಯ!
ಎನಲು, ಸೀರೆಯ ಹರಿಯೆ ಕೈಯೆತ್ತುವಂದು,
ಬನ್ನಿ ದಿವಕೆಂದು ಮೊಳಗಿಸಲು ಗಗನಂ ಧ್ವನಿಯ
ನಿಳಿತಹ ವಿಮಾನ ಗರ್ರನೆ ಸುತ್ತುವಂದು,
ನೋಡಿ ಉಸ್ಮಸನಾಗಿ ನುಡಿನನವನಿಂತು—
[10]ಶ್ವಪಚನನು ಜತೆಗೊಳದೆ ದಿವಕೇರ್ವೆನೆಂತು?'

ಗೋವಿಂದ ಪೈ,
ಮಂಜೇಶ್ವರ.

೧೪-೭-೧೯೫೪.

೧ ಹುಡುಕಾಡಿ ೨ ಹರಿಶ್ಚಂದ್ರನ ಮಗನಿಗೆ ರೋಹಿತಾಶ್ವನೆಂದೂ ರೋಹಿತನೆಂದೂ ಹೆಸರಿದೆ. ೩ ಹಾವು + ಅಗಿದ = ಸರ್ಪ + ಕಚ್ಚಿದ. ೪ ಹರಿಶ್ಚಂದ್ರನ ರಾಣಿ ಶೈಬ್ಯ ದೇಶದ ಅರಸನ ಮಗಳಾಗಿದ್ದ ಕಾರಣ, ಆಕೆಗೆ ಶೈಬ್ಯೆ ಎಂದೂ ಹೆಸರಿದೆ. ೫ ಎಲೆಗೆ! = ಎಲೇ ಹೆಂಗಸೇ! ೬ ಕದ್ದು = ಯಾರಿಗೂ ಅರಿಯದಂತೆ ಬಹಳ ಗೋಪ್ಯವಾಗಿ. ೭ ಮಸಣದ ತೆರಿಗೆ ಅಥವಾ ಸುಂಕವೆಂದರೆ ಶವದಹನದ ಬಗ್ಗೆ ಸ್ಮಶಾನದ ಒಡೆಯನಿಗೆ ಕೊಡತಕ್ಕ ಹಣ; ಅದರೊಂದಿಗೆ ಹೆಣಕ್ಕೆ ಹೊದಿಸಿದ ಬಟ್ಟೆಯನ್ನೂ ಆತನಿಗೆ ಕೊಡತಕ್ಕದ್ದು. ೮ ಜೋಕೆ! = ಜಾಗ್ರತೆ! ೯ ಹೆಣದಕ್ಕಿ ಅಂದರೆ ಸ್ಮಶಾನದ ಕಾವಲುಗಾರನಿಗೆ ಕೊಡತಕ್ಕ ಅಕ್ಕಿ. ೧೦ ಶ್ವಪಚ = ಚಂಡಾಲ; ಇಲ್ಲಿ ಹರಿಶ್ಚಂದ್ರನು ಕಾವಲುಗಾರನಾಗಿದ್ದ ಸ್ಮಶಾನದ ಒಡೆಯನೂ ಆತನ ಧನಿಯೂ (ಅಂದರೆ ಒಡೆಯನೂ) ಆಗಿದ್ದ ವೀರಬಾಹು ಎಂಬ ಚಂಡಾಲನು.

ಇದು ಕೌತುಕದ ಸಂಧಿಕಾಲ

ಸ್ವಾತಂತ್ರ್ಯ ದೊರೆಯುವಾಗ, ಮತ್ತಂದಿನಿಂದ ಈ ಹನ್ನೆರಡು ವರ್ಷಗಳ ಕಾಲ ಕಾಂಗ್ರೆಸ್ಸಿಗೆ ತಾತ್ವಿಕ ವಿರೋಧವನ್ನು ಹೆಚ್ಚು ಕಡಿಮೆ ವಿರೋಧಿಸುವ ಪ್ರಸಂಗ ಒದಗಿರಲಿಲ್ಲ. ಆದರೆ, ಈ ಹನ್ನೆರಡನೆಯ ವರ್ಷದ ಅಂತ್ಯಕಾಲದಲ್ಲಿ ಹಿರಿಯ ಮುತ್ಸದ್ದಿ ಶ್ರೀ. ರಾಜಾಜಿಯವರ ಸ್ವತಂತ್ರ ಪಕ್ಷ ರೂಪ ಪಡೆದುದರಿಂದ ಇದು ಕಾಂಗ್ರೆಸ್ಸು-ಸ್ವತಂತ್ರ ಪಕ್ಷಗಳ ತಾತ್ವಿಕ ಹುಮ್ಮಲಾಟಗಳು ಕೌತುಕದ ಸಂಧಿಕಾಲವಲ್ಲವೆ?

ಎಂದವರು: ಶ್ರೀ. ಸೇವನಮಿರಾಜ ಮಲ್ಲ: ಎಂ. ಎ.; ಬಿ. ಎಲ್.

ಸ್ವಾತಂತ್ರ್ಯದ ಹನ್ನೆರಡು ವರ್ಷಗಳು ಕಳೆಯುವಾಗ ನಮ್ಮಲ್ಲಿ ಸ್ವಾತಂತ್ರ ಪಕ್ಷದ ಉದಯವಾಗಿದೆ. ಅಂದರೆ ಹನ್ನೆರಡು ವರ್ಷದಿಂದ ನಾವು ಅನುಭವಿಸಿದ ಸ್ವಾತಂತ್ರ್ಯವು ಅಷ್ಟು ವಿಚಾರ ಪ್ರಚೋದಕವಾಗಿತ್ತೆನ್ನಬೇಕೋ, ಅಥವಾ ವಿಚಾರ ಕಂಟಕವಾಗಿತ್ತೆನ್ನಬೇಕೋ ಎಂಬುದು ಪ್ರಚಲಿತ ಪ್ರಶ್ನೆ.

ಸ್ವಾತಂತ್ರ ಸಿಗುವ ವರೆಗೆ ರಾಷ್ಟ್ರೀಯ ಚಳವಳದ ಸಂಸ್ಥೆಯಾಗಿದ್ದ ಕಾಂಗ್ರೆಸ್ಸು ರಾಜಕೀಯಾಧಿಕಾರದ ಸಂಸ್ಥೆಯಾಗಿ ಈ ಹನ್ನೆರಡು ವರ್ಷಕಾಲ ಬೆಳೆದಿದೆ. ರಾಜಕೀಯ ಚಳವಳದ ಘಟ್ಟದಲ್ಲಿ ಅದರ ಪ್ರಮುಖ ವಿರೋಧ ಪಕ್ಷವಾಗಿದ್ದ ಮುಸ್ಲಿಂ ಲೀಗು ದೇಶದ ವಿಭಜನೆಯೊಡನೆ ನಾಮ ಮಾತ್ರವಾಗಿ ಉಳಿಯಿತು. ಸ್ವಾತಂತ್ರ್ಯ ಕಾಲದಲ್ಲಿ, ಹಿಂದಿದ್ದ ಜಸ್ಟಿಸ್ ಪಕ್ಷ ಮುಂತಾದ ಚಿಕ್ಕ ಪುಟ್ಟ ಉಳಿದ ರಾಜಕೀಯ ಸಂಸ್ಥೆಗಳ ಅವಸಾನವೂ ಆಯಿತು. ಕಮ್ಯುನಿಸ್ಟ್ ಪಕ್ಷವೊಂದು ಕೆಲಕಾಲ ಕಾಂಗ್ರೆಸಿನೊಳಗೇ ಇದ್ದರೂ ದ್ವಿತೀಯ ಮಹಾ ಯುದ್ಧದ ಸಮಯದಲ್ಲಿ ಅದರ ವಿಚಾರಧಾರೆ ಕಾಂಗ್ರೆಸ್ಸಿನಿಂದ ವಿಚ್ಛೇದನಗೊಂಡಿತು. ಸಾಮ್ರಾಜ್ಯಶಾಹೀ ಯುದ್ಧವೆಂದು ಅದನ್ನು ಕಾಂಗ್ರೆಸ್ ತೆಗಳಿದಾಗ ಕಮ್ಯುನಿಸ್ಟ್ ಪಕ್ಷವು ಅದು ಜನತಾ ಯುದ್ಧವೆಂದು ಸಾರಿತು.

ಹೀಗಿದ್ದರೂ ಸ್ವಾತಂತ್ರ್ಯ ದೊರೆಯುವಾಗ ದೇಶದಲ್ಲಿ ಕಾಂಗ್ರೆಸ್ಸಿನ ಪ್ರತಿಷ್ಠೆ ಅದ್ವಿತೀಯವಾಗಿತ್ತು. ಅದರ ತಾತ್ವಿಕ ವಿರೋಧಿ ಪಕ್ಷವಾದ ಕಮ್ಯುನಿಸ್ಟ್ ಪಕ್ಷ ರಾಜಕೀಯ ಬೆಂಬಲದ ದೃಷ್ಟಿಯಿಂದ ಕ್ಷೀಣವಾಗಿತ್ತು. ಮುಸ್ಲಿಂ ಲೀಗ್ ಪಾಕಿಸ್ತಾನಕ್ಕೆ ಸ್ಥಳಾಂತರವಾದ ಬಳಿಕ ಹಿಂದೂ ಮಹಾ ಸಭೆಗೆ ಯಾವ ಧೋರಣೆ ವಹಿಸಬೇಕೆಂಬುದೇ ತಿಳಿಯಲಿಲ್ಲ. ಇಂದು ಕೂಡಾ ಅದು ಆಗ ಸಂಭವಿಸಿದ ತಾತ್ವಿಕ ಗತಿಕೇಡಿತನದಿಂದ ಪಾರಾಗಿದೆಯೆಂದು ಹೇಳಲು ಸಾಧ್ಯವಿಲ್ಲ. ಸ್ವಾತಂತ್ರ್ಯ ಪಡೆಯುವಾಗ ಕಾಂಗ್ರೆಸಿಗೆ ವಿರೋಧ ಪಕ್ಷವಿರಲಿಕ್ಕೇ ಇಲ್ಲ ಎಂದು ಭಾವಿಸಲು ತುಂಬಾ ಎಡೆಯಿತ್ತು.

ಆದರೆ ಅದರಿಂದ ಸೋಶಲಿಸ್ಟರು ಸ್ವಾತಂತ್ರ ಸಿಕ್ಕಿದ ಎರಡು ವರ್ಷದಲ್ಲೇ ಹೊರಬಿದ್ದರು. ಬಾಬು ಶರತ್ ಬೋಸ್ ತಮ್ಮ ನ್ಯಾಶನಲ್ ರಿಪಬ್ಲಿಕನ್ ಪಕ್ಷವನ್ನು ಕಾಂಗ್ರೆಸಿನಿಂದ ಹೊರಬಂದು ರಚಿಸಿದರು. ಕಾಂಗ್ರೆಸ್ ಅಧ್ಯಕ್ಷಪದದ ಗದ್ದುಗೆಯನ್ನೇರಿದ ಆಚಾರ್ಯ ಕೃಪಾಲಿನಿ, ಆಂಧ್ರ ಕೇಸರಿ ಪ್ರಕಾಶಂ ಮೊದಲಾದ ಪ್ರಭೃತಿಗಳೊಡನೆ ಕೃಷಿಕ ಮಜದೂರ ಪ್ರಜಾ ಪಕ್ಷವನ್ನು ಸಂಘಟಿಸಿ ಪ್ರಥಮ ಚುನಾವಣೆಯಲ್ಲಿ ಕಾದಿದರು. ಆದರೆ ಕಾಂಗ್ರೆಸ್ ಪಕ್ಷ ಸೋಲಲಿಲ್ಲ. ವಿರೋಧಿ ಪಕ್ಷಗಳು ಹೆಚ್ಚು ಗೆಲ್ಲಲೂ ಇಲ್ಲ.

ಎರಡನೆಯ ಮಹಾ ಚುನಾವಣೆಯ ವೇಳೆ ಕೃಷಿಕ ಮಜದೂರ ಪ್ರಜಾ ಪಕ್ಷವು ಸೋಶಲಿಸ್ಟ್ ಪಕ್ಷದೊಡನೆ ಕೂಡಿಕೊಂಡಿತ್ತು. ಹೀಗಿದ್ದರೂ ಕೇರಳದ ಹೊರತು ಉಳಿದೆಡೆ ಕಾಂಗ್ರೆಸ್ ತನ್ನ ಅಧಿಕಾರವನ್ನು ಉಳಿಸಿಕೊಂಡಿತು. ಒರಿಸ್ಸಾದಲ್ಲಿ ಕಾಂಗ್ರೆಸ್ ಬಹುಮತ ಅಪಾಯಕಾರೀ ತಳಕ್ಕೆ ಇಳಿಯಿತು. ಈಗ [illegible] ತಿಂಗಳ ಹಿಂದೆ ಆದು ಗಣತಂತ್ರ ಪರಿಷತ್ತು ಎಂಬ ಪ್ರಬಲ ಪಕ್ಷದೊಡನೆ ಸಂಧಿಮಾಡಿಕೊಂಡು ಹೇಗೋ ಸಮ್ಮಿಶ್ರ ಸರ್ಕಾರ ನಡೆಸುತ್ತಿದೆ. ಪಶ್ಚಿಮ ಬಂಗಾಲ, ಉತ್ತರ ಪ್ರದೇಶಗಳಲ್ಲೂ ಅದರ ಬಲ ಕಡಿಮೆಯಾಗಿದೆ. ಮುಂಬಯಿಯಲ್ಲಿ ಭಾಷಾವಾರು ಗೊಂದಲದಿಂದಾಗಿ ಪ್ರಬಲ ವಿರೋಧ ಪಕ್ಷವನ್ನು ಅದು ಎದುರಿಸುತ್ತಿದೆ. ಆಂಧ್ರದಲ್ಲೂ ಇತ್ತೀಚೆಗೆ ಕಾಂಗ್ರೆಸ್ಸಿನಲ್ಲಿ ಒಡಕುಂಟಾಗಿ ೪೦ ಮಂದಿ ಶಾಸನ ಸಭಾ ಸದಸ್ಯರು ಬೇರೆ ಪಕ್ಷವನ್ನು ಕಟ್ಟಿದ್ದಾರೆ.

ಕಾಂಗ್ರೆಸಿಗೆ ಹೀಗೆ ಇಂದು ಇರುವ ಪ್ರತಿಪಕ್ಷಗಳಲ್ಲಿ ಹೆಚ್ಚಿನವು ಅದರಿಂದಲೇ ಒಡೆದು ಹೊರ ಬಂದವುಗಳು. ಕಮ್ಯುನಿಸ್ಟ್ ಪಕ್ಷವು ಸೈದ್ಧಾಂತಿಕವಾಗಿ ಕಾಂಗ್ರೆಸಿನಿಂದ ದೂರವಿದ್ದರೂ, ಇತ್ತೀಚೆಗೆ ಕಾಂಗ್ರೆಸಿನ ಸಮಾಜವಾದಿ ಧೋರಣೆಗೆ ಅದು ಬೆಂಬಲವೀಯುತ್ತದೆ. ರಷ್ಯಾ—ಚೀನಾಗಳೊಡನೆ ಮೈತ್ರಿಯಿಂದಿರುವ ಕಾಂಗ್ರೆಸಿನ ವಿದೇಶೀ ಧೋರಣೆಯೂ ಅದಕ್ಕೆ ಮೇಲಿಂದ ಮೇಲೆ ಹಿತಕರವಾಗಿ ತೋರುತ್ತಿದೆ. ಮತ್ತೆ ಉಳಿದ ಪ್ರಜಾಸೋಶಲಿಸ್ಟ್ ಪಕ್ಷ, ಇತರ ಸಮಾಜವಾದೀ ಪಕ್ಷಗಳು ಎಲ್ಲವೂ ಕಾಂಗ್ರೆಸಿನ ಸಮಾಜವಾದೀ ಧೋರಣೆಗಳನ್ನು ಪುರಸ್ಕರಿಸುವುವುಗಳಾಗಿವೆ. ಅವುಗಳಿಗೂ ಕಾಂಗ್ರೆಸಿಗೂ ಇರುವ ತಾತ್ವಿಕ ಭಿನ್ನತೆ ಸಾಮಾನ್ಯ ಜನರಿಗೆ ಸ್ಪಷ್ಟವಾಗುವಂಥದ್ದಲ್ಲ. ಅದರಲ್ಲೂ ಕಾಂಗ್ರೆಸ್ಸಿನಲ್ಲಿರುವಷ್ಟು ವರ್ಚಸ್ಸುಳ್ಳ ಮುಖಂಡರು ಬಾಕಿ ಪಕ್ಷಗಳಲ್ಲಿ ಇಲ್ಲ. ಪ್ರಧಾನಿ ನೆಹರೂರಿಗೆ ಸಮಾನರಾದ ಮುಖಂಡರಂತೂ ಇಲ್ಲವೇ ಇಲ್ಲ. ಹೀಗಾಗಿ ಕಾಂಗ್ರೆಸಿಗೆ ತಾತ್ವಿಕ ವಿರೋಧವು ರಾಜಕೀಯ ಪಕ್ಷಗಳ ನೆಲೆಯಲ್ಲಿ ಮಾಯವಾಗುತ್ತಿರುವಾಗ ಅದರ ಪ್ರಬಲ ತಾತ್ವಿಕ ವಿರೋಧಿಯಾಗಿ ಸ್ವತಂತ್ರ ಪಕ್ಷವು ಹುಟ್ಟಿದೆ.

ಸ್ವತಂತ್ರ ಪಕ್ಷದ ವೈಶಿಷ್ಟ್ಯವೆಂದರೆ, ಅದಕ್ಕೆ ಸ್ಪಷ್ಟವಾದ ತಾತ್ವಿಕ ನಿಲುವೆಯಿದೆ. ಅವನ್ನು ಕಾಂಗ್ರೆಸಿನಿಂದ ಮತ್ತು ಇತರ ಪಕ್ಷಗಳಿಂದ ಸಂಪೂರ್ಣವಾಗಿ ಬೇರ್ಪಡಿಸಲು ಕಷ್ಟವಿಲ್ಲ. ಅದರ ಮತ್ತು ಕಾಂಗ್ರೆಸಿನ ಭೇದಗಳು ಮೂಲಭೂತವಾದವುಗಳು.

ಸ್ವತಂತ್ರ ಪಕ್ಷದ ನಾಯಕ ರಾಜಾಜಿ ಹೇಳಿದ್ದಾರೆ: ಇದು ಸಂಪ್ರದಾಯವಾದೀ ಪಕ್ಷ. ಪಕ್ಷ ಸ್ವಾತಂತ್ರ್ಯ, ವ್ಯಾಪಾರ ಸ್ವಾತಂತ್ರ್ಯ, ಕೃಷಿ ಸ್ವಾತಂತ್ರ್ಯ—ಇವುಗಳು ಇದರ ಗುರಿಗಳು. ಕಾಂಗ್ರೆಸ್ ಇಂದು ಲಂಗು ಲಗಾಮಿಲ್ಲದೆ ದೇಶವನ್ನು ತೀವ್ರಗಾಮಿ ತತ್ವಗಳಿಗೆ ಬಲಿಕೊಡುತ್ತಿದೆ. ಸ್ವತಂತ್ರ ಪಕ್ಷದ ಸ್ವಾತಂತ್ರ್ಯದ ವ್ಯಾಖ್ಯೆಯು ನಕಾರಾತ್ಮಕವಲ್ಲ; ಕ್ರಿಯಾತ್ಮಕವಾದುದು.

ಶಾಸಕ ರೀತಿಯ ಹಳೆಯ ಸರ್ಕಾರ ಪದ್ಧತಿಯುಳ್ಳ ಬ್ರಿಟನಿನಲ್ಲಿಯೂ ಮುಖ್ಯವಾಗಿ ಹೀಗೆ ಎರಡು ಪಕ್ಷಗಳಿವೆ. ಟೋರಿ ಪಕ್ಷವು ಸಾಂಪ್ರದಾಯಬದ್ಧವಾದುದು. ಲೇಬರ್ ಪಕ್ಷವು ಸಮಾಜವಾದಿ ನೀತಿಯದು. ಪಕ್ಷಗಳ ಈ ರೀತಿಯ ವಿಭಜನೆ ಮತದಾರನಿಗೆ ಮತದಾನವೀಯುವ ನಿರ್ಣಯಮಾಡಲು ಸಹಕಾರಿಯಾಗಿದೆ.

ಸ್ವತಂತ್ರ ಪಕ್ಷದ ಬೆಂಬಲಿಗರು ಹಳೆಯ ಕಾಂಗ್ರೆಸಿಗರೇ. ಅದರ ನಾಯಕ ಎಂಬತ್ತಮೂರು ವರ್ಷ ವಯಸ್ಸಿನ ರಾಜಾಜಿ ದೇಶದ ಹಿರಿಯ ಮುತ್ಸದ್ದಿ. ಸ್ವತಂತ್ರ ಬಂದೊಡನೆ ದೇಶದ ಅತ್ಯಂತ ಹಿರಿಯ ಹುದ್ದೆಯಲ್ಲಿ ಅವರು ಕೆಲಸಮಾಡಿದವರು. ಅವರು ಸುಧಾರಣೆಗೆ ಅಂಜುವವರಲ್ಲ. ಅವರು ಮಾಡಿದ ಸುಧಾರಣೆಯ ಅನೇಕ ಮೂಲ ಪ್ರಯೋಗಗಳು ಬಹಳ ಯಶಸ್ವಿಯಾಗಿದೆ. ಇಂತಹ ಹಿರಿಯ ಮುತ್ಸದ್ದಿ ತನ್ನ ವಾನಪ್ರಸ್ಥ ಕ್ರಮವನ್ನು ಬಿಟ್ಟು ರಾಜಋಷಿ ವಿಶ್ವಾಮಿತ್ರನಂತೆ ಕಾಂಗ್ರೆಸಿಗೆ ಎದುರುನಿಲ್ಲಲು ಕಾರಣವೇನು?

ರಾಜಾಜಿ ನಾಲ್ಕೈದು ವರ್ಷ ಹಿಂದಿನ ವರೆಗೆ ನೆಹರೂರ ಆಪ್ತರಾಗಿದ್ದು ರಾಜಕಾರಣದಲ್ಲಿ ನೆಹರೂ ಮಾತಿಗೆ ವ್ಯಾಖ್ಯಾನ ಮಾಡುತಿದ್ದವರು. ನೆಹರೂ ಧೋರಣೆಯ ವಿರೋಧಿಗಳನ್ನು ಭಾಷಾವಾರು ಪ್ರಾಂತ್ಯ ಇತ್ಯಾದಿ ವಿಷಯಗಳಲ್ಲಿ ಮೂದಲಿಸಿದವರು. ಆದರೆ ಪ್ರತ್ಯಕ್ಷ ರಾಜಕೀಯ ಚಟುವಟಿಕೆಯಿಂದ ನಿವೃತ್ತರಾಗಿ ವಸ್ತುನಿಷ್ಠರಾಗಿ ಕಾಂಗ್ರೆಸ್ ನೀತಿಯುಗತಿಯನ್ನು ಪರಿಶೀಲಿಸುವಾಗ ಅವರಿಗೆ ಅದು ಸರ್ವಾಧಿಕಾರದತ್ತ ಸಾಗುತ್ತಿದೆಯೆಂದು ಸ್ಪಷ್ಟವಾಯಿತು. ರಾಜಾಜಿಯ ಈ ವಿರೋಧವು ಮೊದಲು ಕಾಣಿಸಿಕೊಂಡುದು ಹಿಂದೀ ಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡುವ ವಿಷಯದಲ್ಲಿ. ಆ ಮೇಲೆ ಇತ್ತೀಚೆಗೆ ಭೂ ಸುಧಾರಣೆಯ ಕಾಂಗ್ರೆಸ್ ನೀತಿಯೂ ಅವರನ್ನು ಕುಲುಕಿಸಿತೆನ್ನಬಹುದು. ಆದ್ದರಿಂದಲೇ ಈಗ ಅವರು ನೆಹರೂ ನೀತಿಯ ವಿರೋಧಿಗಳನ್ನು ಪ್ರಚೋದಿಸುವ ಪಕ್ಷವನ್ನು ಯಶಸ್ವಿಯಾಗಿ ಆರಂಭಿಸಿದ್ದಾರೆ.

ಕಾಂಗ್ರೆಸ್ಸನ್ನು ಅಧಿಕಾರದಲ್ಲುಳಿಸಲು ನೆಹರೂ ವ್ಯಕ್ತಿತ್ವ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಸಂಸ್ಥೆಯೊಳಗೆ ಅವರನ್ನು ವಿರೋಧಿಸುವವರಿಗೆ ರಾಜಕೀಯ ಉಳಿಗಾಲವಿದ್ದಿಲ್ಲ. ದಿವಂಗತ ಸರ್ದಾರ ಪಟೇಲ, ಮೌಲಾನಾ ಅಜಾದ್ ಮುಂತಾದವರೂ ಅವರ ಧೋರಣೆಗಳನ್ನೊಪ್ಪದೆ, ವಿವಾದ ಮಾಡಿದ್ದರು. ಆದರೆ ನೆಹರೂವಿನೊಡನೆ ಬಹಿರಂಗವಾಗಿ ಮತಭೇದ ಮಾಡಿಕೊಂಡವರು ಆಚಾರ್ಯ ಕೃಪಾಲಾನಿಯವರಂತೆ ಪಕ್ಷದಿಂದ ಹೊರಗೆ ಬರಲೇಬೇಕಿತ್ತು. ಹೀಗೆ ನೆಹರೂ ಕಾಂಗ್ರೆಸಿನಲ್ಲಿ ಶಿಸ್ತನ್ನು ಜಾರಿಮಾಡಿದುದು ಹೆಚ್ಚೋ ಅಥವಾ ತಮ್ಮ ವಿರೋಧಿಗಳಿಗೆ ಸಹಿಷ್ಣುತೆ ತೋರಿಸದಿದ್ದುದು ಹೆಚ್ಚೋ ಎಂಬುದು ಮುಂದಿನ ಇತಿಹಾಸದಲ್ಲಿ ತಿಳಿಯಬೇಕಷ್ಟೆ. ಆದರೆ ಈಗ ಅವರು ಎದುರಿಸುತ್ತಿರುವ ರಾಜಾಜಿಯವರ ವಿರೋಧವು ಮಾತ್ರ ಎಲ್ಲ ದೃಷ್ಟಿಗಳಿಂದಲೂ ಅಪೂರ್ವವಾದುದು. ರಾಜಾಜಿಯನ್ನು ನೆಹರೂ ಟೀಕಿಸುವುದು ಸುಲಭವಲ್ಲ; ರಾಜಾಜಿಗೂ ದೇಶದಲ್ಲಿ ವಿಶೇಷ ಗೌರವವಿದೆ. ಅವರು ಕಾಂಗ್ರೆಸಿನ ಯಾವ ಯಾವ ಧೋರಣೆಗಳನ್ನು ವಿರೋಧಿಸುವರೆಂಬುದು ಎಲ್ಲರಿಗೂ ತಿಳಿದಿದೆ. ಈ ಪಂಥಾಹ್ವಾನವು ದೇಶದ ರಾಜಕೀಯ ಭವಿಷ್ಯತ್ತಿಗೆ ಶುಭಕಾರಿಯಾಗಬಹುದೆಂದು ಆಶಿಸಲು ಎಡೆಯಿದೆ.

ಹನ್ನೆರಡು ವರ್ಷ ಕಾಲ ನೆಹರೂ ಪ್ರಧಾನಿಯಾಗಿ ಅಧಿಕಾರ ಚಲಾಯಿಸಿದ್ದಾರೆ. ಸರ್ಕಾರವೂ ಅವರೇ, ಕಾಂಗ್ರೆಸ್ಸೂ ಅವರೇ ಆಗಿದ್ದಾರೆ. ಹಿಂದೆ ಕಾಂಗ್ರೆಸಿನ ಅಧ್ಯಕ್ಷರಾಗಿ ಆಯ್ಕೆಗೊಂಡ ಟಂಡನ್ ಮತ್ತು ಕೃಪಲಾನಿಯವರನ್ನು ನೆಹರೂವಿಗೆ ಸಹಿಸಲಿಕ್ಕಾಗದೇ, ತಾವೇ ಕೆಲವು ವರ್ಷ ಕಾಂಗ್ರೆಸಿನ ಅಧ್ಯಕ್ಷರೂ ಆದರು. ಈಗ ಅವರ ಮಗಳೇ ಅಧ್ಯಕ್ಷರಾಗಿದ್ದಾರೆ! ಕಾಂಗ್ರೆಸಿಗೂ ತಮಗೂ ಮತಭೇದವಾಗದಂತೆ ಹೀಗೆ ಅವರು ವ್ಯವಸ್ಥೆ ಮಾಡಿಗೊಂಡಿದ್ದಾರೆ ಈಗ ತಂದೆ ಮತ್ತು ಮಗಳು ಇಬ್ಬರೂ "ನಮ್ಮ ನೀತಿಗಳನ್ನು ಒಪ್ಪದ

ಅತ್ಯುತ್ತಮ ತರಗತಿಯ ಕೈಮಗ್ಗದ ಶೀರೆಗಳಿಗೆ
ಮತ್ತು ಬಟ್ಟೆಗಳಿಗೆ

ಪೂರ್ಣಿಮಾ ಸ್ಟೋರ್ಸ್

ಕೈಮಗ್ಗ ಬಟ್ಟೆಗಳ ರಖಂ ಮತ್ತು ಚಿಲ್ರೆ ಜವುಳಿ ಮಳಿಗೆ.
ಪೊಪ್ಪುಲರ ಕಟ್ಟಡ, ಮಂಗಳೂರು-1.

ಬೊಂಬೈಯಲ್ಲಿ ನಮ್ಮ ಶೀರೆಗಳು ಸಿಗುವ ಸ್ಥಳ:

ಶ್ರೀ. K. G. ನಾಯಕ್

ತುಳಸೀ ಬಿಲ್ಡಿಂಗ್ಸ್ 2ನೇ ಮಾಳಿಗೆಯ 78ನೇ ನಂಬ್ರ
ಕೇಟವಾಡಿ ಬ್ಯಾಕ್ ರೋಡ್, ಬೊಂಬೈ ನಂಬ್ರ-4.

ಸಾಹಿತ್ಯ ಮತ್ತು ಧರ್ಮ

"ಧಾರಣಾದ್ಧರ್ಮ ಇತ್ಯಾಹುಃ", "ಹಿತೇನ ಸಹ ಸಾಹಿತ್ಯಂ" ಎಂದಾಡಿದ ನಮ್ಮ ಗುರುಜನರು ದೂರದರ್ಶಿಗಳೂ ಸೂಕ್ಷ್ಮಮತಿಗಳೂ ಆಗಿದ್ದರು. ವ್ಯಕ್ತಿಜೀವಿಯಾಗಿದ್ದ ಮಾನವನಿಂದು ವಿಶ್ವಜೀವಿಯಾಗಿ ಬಾಳುವ ಸಮಯ ಸನ್ನಿಹಿತವಾಗಿರುವಾಗ, ನಮ್ಮ ಧರ್ಮ ಮತ್ತು ಸಾಹಿತ್ಯಗಳೂ ಸಂಕುಚಿತತೆಯನ್ನು ತ್ಯಜಿಸಿ ವಿಶ್ವರೂಪವನ್ನು ತಾಳುವುದು ಬೇಡವೆ?

ಕೇಳಿದವರು: ಶ್ರೀ ಯೆಸ್. ವೆಂಕಟರಾಜ.

ಸಾಹಿತ್ಯ ಎನ್ನುವ ಶಬ್ದವೇ ತುಂಬಾ ವ್ಯಾಪಕವಾದುದಾಗಿದೆ. ನ್ಯಾಯ ವ್ಯಾಕರಣಾದಿ ತತ್ವಗಳಿಂದ ಸಹಿತವಾದುದು ಸಾಹಿತ್ಯ. ಸಾಹಿತ್ಯವು ನಿರಪೇಕ್ಷಕವಾದುದಲ್ಲ—ಸಾಪೇಕ್ಷಕವಾದುದು. ಅದು ವಿರಹಿತವಾಗಿದ್ದರೆ ನಿರಪೇಕ್ಷಕವಾಗುತ್ತಿದ್ದಿತು. ಆದರೆ ಸಹಿತವಾದುದು ಸಾಪೇಕ್ಷಕವಾಗಲೇ ಬೇಕು. ಒಂದೊಂದು ವಿಚಾರಗಳು ಕವಲೊಡೆದು ವಾಙ್ಮಯವು ಬೇರೆ ಬೇರೆಯಾಗಿ ಬೆಳೆದುಬರಬಹುದು. ತತ್ವಶಾಸ್ತ್ರ ಸಸ್ಯಶಾಸ್ತ್ರ ಪ್ರಾಣಿಶಾಸ್ತ್ರ ಆ ಶಾಸ್ತ್ರ ಈ ಶಾಸ್ತ್ರ ಎಂಬುದಾಗಿ ಹಲವು ಹನ್ನೆರಡು ವಿಚಾರಗಳ ಉದಯವಾಗಿ ವಿಸ್ತೀರ್ಣವಾಗಬಹುದು. ಆದರೆ ಅವುಗಳೆಲ್ಲದರ ಸಮ್ಮೇಳನವು ಸಾಮುದಾಯಿಕವಾಗಿ ಬೆಳೆದುಬಂದಾಗ ಸಾಹಿತ್ಯದ ಸೃಷ್ಟಿಯಾಗುವುದು. ಎಂದರೆ ವಿಶಿಷ್ಟವಾಗಿರುವುದು ಮಾತ್ರ ಸಾಹಿತ್ಯವೆಂಬ ಪ್ರತಿಪಾದನೆಯು ಇಲ್ಲಿಗೆ ಸಿದ್ಧಾಂತವಾಗುವುದು. ಲೌಕಿಕವಾಗಿ ಹೇಳುವುದಾದರೆ ಮನೆಯ ಸಾಹಿತ್ಯವೆಂಬ ಮಾತು ಪ್ರಚಾರದಲ್ಲಿದೆ. ಮನೆಗೆ ಬೇಕಾದ ಹಲವು ಹದಿನಾರು ಸಾಧನಗಳ ಸಮುಚ್ಚಯ ಸಾಹಿತ್ಯವೆನಿಸಿದೆ. ಮಳೆಗಾಲದ ಸಾಹಿತ್ಯ ಅಟ್ಟಣಿಗೆಯಾಗಲಿಲ್ಲವೆಂದು ತಾಯಿ ಬೇಸಗೆಯ ಅಂತ್ಯದಲ್ಲಿ ಕೊರಗುತ್ತಾಳೆ. ಮನೆ ಸಾಹಿತ್ಯ ತರಬೇಕೆಂದು ತಂದೆ ಪೇಟೆಯ ಕಡೆ ತೆರಳುತ್ತಾನೆ. ಇಲ್ಲಿ ಸಾಹಿತ್ಯವೆಂಬುದು ಒಂದು ವಸ್ತುವಲ್ಲ. ವಿವಿಧ ವಸ್ತುಗಳ ಸಮುದಾಯ. ಅದು ಉಪ್ಪು, ಹುಳಿ, ಮೆಣಸು ಆಗಬಹುದು. ಕಟ್ಟಿಗೆ, ಹುಲ್ಲು, ಕಾಳುದವಸಧಾನ್ಯಗಳೂ ಆಗಬಹುದು. ಅಂತೂ ಅವುಗಳೆಲ್ಲದರ ಮೊತ್ತವಾಗಿರುವುದು ಮಾತ್ರ ಸಾಹಿತ್ಯ.

ಅರ್ಥಾತ್—ಸಾಹಿತ್ಯವು ಏಕಾಂತವಲ್ಲ—ಅನಂತ!

ಇಂತಹ ಸಾಹಿತ್ಯ ಜನಜನತೆಯ ಅಭಿರುಚಿಗೆ ಅನುಗುಣವಾಗಿ ಬೆಳೆದು ಬರುತ್ತದೆ. ಇಂತಹ ರುಚಿಯು ನಿನ್ನೆ ಮೊನ್ನೆಯದಲ್ಲ. ಯುಗಯುಗಗಳಿಂದಲೂ ಹರಿದು ಬಂದ ಒಂದು ವಿಶಾಲವಾದ ಮನೋವೇದನೆ. ತಿನಬೇಕು—ತುಷ್ಟಿಗೊಳಬೇಕು ಎಂಬ ರುಚಿಯು ಆಶೆ ಒಡಮೂಡಿದಾಗ ಗೃಹಕೃತ್ಯದಲ್ಲಿ ಸಾಹಿತ್ಯದ ಸಲಕರಣೆಯು ಹೆಚ್ಚುವಂತೆ, ತಿಳಿಯಬೇಕು ತಾಳಬೇಕು ಎಂಬ ಆನಂದಾನುಭೂತಿಯ ಉದ್ರೇಕವು ಸ್ಫುರಣಗೊಂಡಾಗ ಸಾಹಿತ್ಯದಲ್ಲಿ ಹೊಸ ಹೊಸ ಸೃಷ್ಟಿಯಾಗುವುದು ಸ್ವಾಭಾವಿಕ. ರುಚಿ-ಮತ್ತು ಅಭಿರುಚಿಗಳಲ್ಲಿರುವ ತಾರತಮ್ಯ ಇಷ್ಟೆ—ಒಂದು ದೈಹಿಕವಾಗಿ ನಂತರ ಮಾನಸಿಕ ಪರಿಣಾಮಕ್ಕೆ ಕಾರಣವಾದರೆ ಇನ್ನೊಂದು ಮಾನಸಿಕವಾಗಿ ನಂತರ ದೈಹಿಕಾನುಭೂತಿಗೆ ಹೊಂದಿ ಬರುವುದು. ಒಂದು ಲೌಕಿಕವೆಂದಾದರೆ ಮತ್ತೊಂದು ಅಲೌಕಿಕ. ರುಚಿಯು ನಾಲಿಗೆಯ ಮೇಲೆ ನಿತ್ಯನಲಿದಾಡಬಹುದು. ಮಾನವನ ನಿತ್ಯ ಅತೃಪ್ತತೆಯನ್ನು ಕೆರಳಿಸಿ ಬಾಯಲ್ಲಿ ನೀರೂರಿಸಿ ಕೊನೆಗೆ ನಿತ್ಯತೃಪ್ತತೆಯ ಕಡೆ ಸೆಳೆಯುವುದು. ಅಭಿರುಚಿಯು ಮನೋವೇದನೆಯ ತಂತಿ ತಂತಿಗಳ ಮೇಲೆ ತಾನನಾಡಿ ಹೃದಯದಲ್ಲಿ ಗುಣುಗುಣಿಸುವ ಬೌದ್ಧಿಕ ವಿಷಯವಾಗಿದೆ. ಮಾರಾಟಗಾರನ ಅಂಗಡಿಯಲ್ಲಿ ಉಪ್ಪು ಹುಳಿ ಖಾರ ಮೊದಲಾದ ಆರು ರಸ ಪದಾರ್ಥಗಳೂ ಪ್ರಪ್ರತ್ಯೇಕವಾಗಿ ಸಮೃದ್ಧವಾಗಿವೆ. ಹಾಗೆಯೇ ನಿಸರ್ಗದ ವಿಶಾಲವಾದ ವಸಾಹತಿನಲ್ಲಿ ಶೃಂಗಾರಾದಿ ನವರಸಗಳೂ ಧಾರಾಳವಾಗಿ ನೆಲೆನಿಂತಿವೆ. ಮನೆಯಾಕೆ ಆ ಆರು ರಸ ಪದಾರ್ಥಗಳನ್ನು ಹೊಂದಿಸಿ ಹೊಂದಿಸಿ ಅಪೂರ್ವವಾದ ರಸಪಾಕವನ್ನು ನಿರ್ಮಿಸುವಳು. ಇಂತಹ ಹೊಂದಿಕೆ ಎಲ್ಲರಲ್ಲೂ ಒಂದೇ ರೀತಿಯಾಗಿಲ್ಲ. ಸಿಹಿ ಹೆಚ್ಚು ಬೇಕಾದವ ಕಹಿಯನ್ನು ಬಿಡಬಹುದು. ಖಾರವನ್ನು ದ್ವೇಷಿಸಬಹುದು. ಆದರೆ ಅವುಗಳ ಸಮನ್ವಯವಾದ ರಸಪಾಕ ಎಲ್ಲರಿಗೂ ಹಿತಮಿತವಾಗಿದೆ. ನಿಸರ್ಗದ ನವರಸಗಳ ಅನುಭೂತಿಯೂ ವಿಧವಿಧ ಜೀವಿಗಳ ಮೇಲೆ ಬೇರೆ ಬೇರೆಯಾಗಿ ಪರಿಣಾಮವನ್ನು ಬೀರಲೂ ಬಹುದು. ಅಂತೆಯೇ ಅವುಗಳ ಸಮನ್ವಯದ ಸಾಹಿತ್ಯವೂ ಇದ ಒಂದು ವಿಶಿಷ್ಟ ಮತ್ತು ವ್ಯಾಪಕವಾದ ಕೇಂದ್ರವಾಗಿದೆ. ನಾಲಿಗೆಯ ರುಚಿಯು ಸ್ವಭಾವ ಮತ್ತು ಅಭ್ಯಾಸಕ್ಕೆ ಅನುಗುಣವಾಗಿ ಹೆಚ್ಚುಕಡಿಮೆಯಾಗುವಂತೆ ಜೀವನದ ಅಭಿರುಚಿಯೂ ಮಾನವ ಸಹಜವಾದ ಸ್ವಭಾವ ಮತ್ತು ಸುತ್ತುಮುತ್ತಲಿನ ವಾತಾವರಣದ ಒತ್ತಡಕ್ಕೆ ಅನುಸೃತವಾಗಿ ಬೆಳೆದು ಬರುವುದು.

ಅಭಿರುಚಿಯನ್ನು ತಿದ್ದಬಹುದು. ಹೊಂದಿಸಿಕೊಳ್ಳಬಹುದು. ಇವುಗಳೆಲ್ಲ ಒಂದೊಂದು ತರದ ಸಾಧನೆ. ಸ್ವಾಭಾವಿಕವಾಗಿ ಚಿಕ್ಕ ಮಕ್ಕಳಿಗೆ ಒಗರು-ಹುಳಿಯಲ್ಲಿ ಅಭಿಲಾಷೆ. ಮಾಗಿದ ಹಣ್ಣಿಗಿಂತಲೂ ಮಾವಿನಕಾಯಿ, ಹುಣಸೆಹುಳಿಗೆ ಸೋಲುವ ಮಕ್ಕಳೇ ಜಾಸ್ತಿ. ನೆಲ್ಲಿಯ ಮರಕ್ಕೆ ನೇತಬೀಳದ ಮಕ್ಕಳೇ ಇಲ್ಲ. ಇದು ಮನುಷ್ಯನ ಮೂಲ ಸ್ವಭಾವ. ದೇವರು ಮನುಷ್ಯ ಜಗತ್ತನ್ನು ಮೂಲತಃ ಸಾನವನನ್ನಾಗಿ ಸೃಷ್ಟಿಸಲಿಲ್ಲ—ಬರೇ ಪ್ರಾಣಿಯಾಗಿ ನಿರ್ಮಿಸಿರುವನು. ಮನುಷ್ಯನ ಮನುಷ್ಯತ್ವ ಅವನ ಬೆಳವಣಿಗೆಯ ಅಭ್ಯಾಸಕ್ಕೆ ಹೊಂದಿಕೊಂಡಿದೆ. ಆದುದರಿಂದಲೇ ಜಗತ್ತಿನಲ್ಲಿ ಕಣ್ಣಿದ್ದೂ ಕಾಣದವರಿದ್ದಾರೆ. ನಾಲಿಗೆಯಿದ್ದೂ ರುಚಿ ತಿಳಿಯದವರಿದ್ದಾರೆ. ಎಂದರೆ ಮಾನವನ ಮೂಲ ಸ್ವಭಾವದಲ್ಲಿ ಇನ್ನೂ ತಿದ್ದುಪಡಿಯಾಗಿಲ್ಲವೆಂದೇ ಗ್ರಹಿಸಬೇಕು. ಅಂತಹ ತಿದ್ದುಪಡಿ ಆಗಲೂ ಬಹುದು ಆಗದಿರಲೂ ಬಹುದು. ಅದು ಚೇತನಾನುಸಾರಿ. ನಿಸರ್ಗದಲ್ಲಿ ಸೌಂದರ್ಯ—ರುಚಿ ಸಮೃದ್ಧವಾಗಿದೆ. ಅಂತಹ ಸೌಂದರ್ಯ—ರುಚಿಯನ್ನು ನೋಡಬೇಕು ಸವಿಯಬೇಕು ಎಂಬ ಸ್ಫೂರ್ತಿಯಿಂದ ಕಾಣುವುದೊಂದು ವಿಧಾನ—ಬರೇ ನೋಡಬೇಕಲ್ಲ—ಸವಿಯಬೇಕಲ್ಲ—ಎಂಬ ಅನಾಸ್ಥೆಯಿಂದ ತಿಳಿಯುವುದೊಂದು ವಿಧಾನ. ಇವುಗಳಿಗಿರುವ ವ್ಯತ್ಯಾಸವಿಷ್ಟೆ. ಪ್ರಪಂಚದ ಮೇಲೆ ಎಲ್ಲಾ ಪ್ರಾಣಿಗಳಿಗೂ ಸಮಾನವಾದ ಹಕ್ಕಿದೆ. ಬೆಳಗಿನ ಭವ್ಯತೆಯನ್ನು ಕಂಡು ಹಾಡುವ ಹಕ್ಕಿಯೂ ಇರಬಹುದು. ಅಂತೆಯೇ ಹಸನಾದ ಹೂದೋಟದಲ್ಲಿ ಸುಳಿದಾಡುವ ತುಂಬಿಯಿರಬಹುದು. ಆ ಹೂದೋಟದ ಹೂ ಹೂಗಳನ್ನು ಮೆದ್ದು ಮೆಲುಕಾಡುವ ಪ್ರಾಣಿಯೂ ಇರಬಹುದು. ಅಂತೆಯೇ ಮುಂಜಾವದ ಮಧುರ ಸನ್ನಿವೇಶ—ಕಿರಣ ಕಿರಣಗಳ ತಾಕಲಾಟ ಇವುಗಳೆಲ್ಲ ಕೆಲಕೆಲವರಲ್ಲಿ ಅನಿರ್ವಚನೀಯ ಆನಂದವನ್ನು ಹೊರಹೊಮ್ಮಿಸಬಹುದು. ಹೂ ಹೂಗಳ ರಮ್ಯ ದರ್ಶನದಿಂದ ಹೃದಯ ತುಂಬಿ ಬರಬಹುದು. ಅಂತಹ ಹೂಗಳನ್ನು ಕಂಡು ಅನುಭವಿಸುವ ಜನ— ಕೊಂಡು ಮುಡಿದು ಸಂತೋಷಪಡುವ ಜನ—ಅಥವಾ ಅದನ್ನು ಕಿತ್ತು ಕ್ಷಣಕಾಲ ಹಿಸುಕಿ ತುಳಿದು ಮುನ್ನಡೆಯುವ ಜನಾಂಗ ಇದಕ್ಕೂ ಕಡಿಮೆಯಿಲ್ಲ. ಒಂದೇ ವಸ್ತು ವಿವಿಧ ಚೇತನಗಳಲ್ಲಿ ವಿವಿಧ ಭಾವನೆಗಳನ್ನು ಕೆದರಿಸಬಲ್ಲುದು. ಅಂತಹ ಭಾವನೆಯೇ ಮನುಷ್ಯನ ಮಾನವತೆಯ ಮಾಪಕವಾಗಿದೆ. ಹೂವನ್ನು ಹೆಣ್ಣುಮಗಳು ಕಂಡು ಸಂತೋಷಗೊಂಡು ಕುಣಿದು ತಲೆಗೇರಿಸಿಕೊಂಡಾಗ ಪ್ರಪಂಚದ ಸೌಂದರ್ಯ ಬೋಧೆಯಲ್ಲಿ ಆಕೆಗಿರುವ ಸಹಯೋಗಿತ್ವ ಕಂಡುಬರುತ್ತದೆ. ಅಂತಹ ಸೌಂದರ್ಯ ಬೋಧೆಯ ಅನುಭವದ ಪ್ರತೀಕವಾಗಿ ಹೊರಹೊಮ್ಮುವ ಉದ್ಗಾರ—ಅಥವಾ ಹಾಡು ಅದೇ ಪ್ರಪಂಚದ ಸಾಹಿತ್ಯ. ಪ್ರಪಂಚ ಸೌಂದರ್ಯದತ್ತ ಕಡೆ ಹಕ್ಕಿಯ ಹೃದಯ ತುಂಬಿ ಹಾಡಿನಂತೆ ಹೆಣ್ಣುಮಗಳ ಹೃದಯ ತುಂಬಿ ಗುಣುಗುಣಿಸಿದಂತೆ ಹೊರಹೊಮ್ಮುವ ನಾದವೇ ಸಾಹಿತ್ಯ!

ಅಂತಹ ಸಾಹಿತ್ಯ ನಾದಮಯವಾದಾಗ ಸಂಗೀತ—ಶಬ್ದಮಯವಾದಾಗ ಅದೇ ಕಾವ್ಯವಾಗಿದೆ.

ಸೌಂದರ್ಯವನ್ನು ಅಳೆದು ತಿಳಿಯುವ ಜನಾಂಗದ ಹೃದಯ ಪಾತ್ರ ಒಂದೇ ಸಮನಾಗಿಲ್ಲ. ತಿಳಿಯದಿರುವ ಶೂನ್ಯ ಹೃದಯಕ್ಕೆ ಸೌಂದರ್ಯದ ಗಂಧಗಾಳಿಯೇ ತಟ್ಟದಿರಬಹುದು. ಅಥವಾ ತನ್ನ ಚಿಕ್ಕ ಪಾತ್ರದಿಂದ ಅಳೆಯುವ ಅಪ್ರಬುದ್ಧ ಚೇತನ—ಅದಕ್ಕೂ ಮೀರಿ ಅಳೆದು ತುಳುಕಿ ಹೊರ ಹೊಮ್ಮುವ ತುಂಬು ಹೃದಯ

(೨೦ನೇ ಪುಟ ನೋಡಿರಿ)

(೮ನೇ ಪುಟದಿಂದ)

ವರು ಕಾಂಗ್ರೆಸಿನಿಂದ ಹೊರಗೆ ನಡೆಯಿರಿ" ಎನ್ನುತಿದ್ದಾರೆ. "ಕಾಂಗ್ರೆಸಿನಿಂದ ಹೊರಗೆ ಹೋದವರು ಒಳಗೆ ಬನ್ನಿ" ಎಂದೂ ಆಮಂತ್ರಣವನ್ನು ಈಯುತಿದ್ದಾರೆ.

ನೆಹ್ರು ತ್ಯಾಗ ಜೀವಿ, ಸಾಮಾನ್ಯ ಮನುಷ್ಯರ ಮೇಲೆ ಪ್ರೇಮವಿರುವವರು ನಿಜ ಆದರೆ ಅವರ ಆತ್ಮವಿಶ್ವಾಸ ವಾಸ್ತವಿಕತೆಯ ಅಂಶವನ್ನು ಮೀರಿದೆ. ಮೇಘದೂತದಲ್ಲಿ ಸಂಚರಿಸುವ ಅವರಿಗೆ ಜನರು ತಮ್ಮ ಧೋರಣೆಯ ಬಗ್ಗೆ ಏನು ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ ಎಂದು ಪರಿಶೀಲಿಸಲು ಎಡೆಯಿಲ್ಲ. 'ನೆಹರೂ ಸವಿಮಾತುಗಳನ್ನೇ ಸದಾ ಕೇಳುತಿದ್ದಾರೆ' ಎಂದಿದ್ದಾರೆ ರಾಜಾಜಿ. ಕಳೆದ ಡಿಸೆಂಬರ ತಿಂಗಳಲ್ಲಿ ಭೂಸುಧಾರಣೆಯ ನೀತಿಯನ್ನು ಮದ್ರಾಸಿನ ಮಂತ್ರಿ ಸುಬ್ರಹ್ಮಣ್ಯಂ ಬಹಿರಂಗವಾಗಿ ವಿರೋಧಿಸಿದ್ದರು. ಆದರೆ ಮುಂದಿನ ತಿಂಗಳಲ್ಲಿ ನಾಗಪುರ ಕಾಂಗ್ರೆಸಿನಲ್ಲಿ ಅವರೇ ಭೂಸುಧಾರಣೆಯ ನಿರ್ಣಯವನ್ನು ಮಂಡಿಸಿ ಅದನ್ನು ಪುಷ್ಟೀಕರಿಸಿದರು! ನೆಹರೂರವರ ವ್ಯಕ್ತಿತ್ವ ಹೇಗೆ ಕಾಂಗ್ರೆಸಿಗರನ್ನು ಏನೂ ಮಾಡಬಲ್ಲದೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ನೆಹ್ರುರನ್ನು ಟೀಕಿಸುವವರ ಸಂಖ್ಯೆ ಸ್ವತಂತ್ರ ಪಕ್ಷದ ಉದಯದೊಡನೆ ಬಹಳ ಬೆಳೆದಿದೆ ಎಂದು ತೋರುತ್ತದೆ. ಈ ವರ್ಷ ಅವರು ಹಲವುಬಾರಿ ಸಂಧಿಗ್ಧ ಪರಿಸ್ಥಿತಿಯಲ್ಲೂ ಬಿದ್ದರು. ಹದಿಮೂರು ವರ್ಷಕಾಲ ಅವರ ಆಪ್ತ ನೌಕರನಾಗಿದ್ದ ಮಥ್ಥಾಯಿ ನಿಧಿ ಸಂಗ್ರಹ ಚಟುವಟಿಕೆಯನ್ನು ನೆಹ್ರು ಸಮರ್ಥಿಸಬೇಕಾಯಿತು. ಹಾಗೆಯೇ ತನ್ನೊಡನೆಯೇ ವಾಸಿಸುವ ತನ್ನ ಮಗಳನ್ನು ಕಾಂಗ್ರೆಸ್ ಅಧ್ಯಕ್ಷಳನ್ನಾಗಿ ತಾನು ಮಾಡಿಲ್ಲವೆಂದೂ ಸಾಧಿಸಬೇಕಾಯಿತು. ಟಿಬೇಟ ಪ್ರಶ್ನೆಯು ಉದ್ಭವಿಸಿದಾಗ ಅತ್ತ ಚೀನವನ್ನು ಒಲಿಸಬೇಕು, ಇತ್ತ ಟಿಬೇಟನರಿಗೆ ಸಹಾಯ ಮಾಡಬೇಕು ಎಂಬ ಅವರ ನೀತಿಯು ಅವರೇ ಸಾರಿದ ಪಂಚಶೀಲ ತತ್ವಕ್ಕೆ ಅಪಾಯ ತಂದೊಡ್ಡಿತು. ಜೀವವಿಮಾ ಸಂಸ್ಥೆಗೆ ಕೋಟ್ಯಂತರ ರೂಪಾಯಿಗಳನ್ನು ನಷ್ಟಪಡಿಸಲು ಕಾರಣರಾದ ಹಳೆಯ ಹಿರಿಯ ಅಧಿಕಾರಿಗಳು ಅಪರಾಧಿಗಳೆಂದ ನ್ಯಾಯಮೂರ್ತಿಗಳು ಸಾರಿದರೂ, ಅವರು ನಿರ್ದೋಷಿಗಳೆಂದು ನೆಹ್ರೂ ಸಾಧಿಸುವುದರೊಡನೆ ನ್ಯಾಯಮೂರ್ತಿಗಳಿಗೂ ಅನುಚಿತ ಅವಹೇಳನಮಾಡಬೇಕಾಯಿತು; ಹಾಗೆ ಅವಹೇಳನೆ ಮಾಡಿದುದಕ್ಕೆ ಬಹಿರಂಗವಾಗಿ ಕ್ಷಮಾಯಾಚನೆಯನ್ನು ಮಾಡಿದರು. ಕೇರಳದ ಚಳವಳದಲ್ಲಿ ಯಾರಿಗೂ ಸರಿಯಾದ ಮಾರ್ಗದರ್ಶನವನ್ನೀಯಲು ಅವರು ಅಸಮರ್ಥರಾದರು.

ಅಂತೂ ಸ್ವಾತಂತ್ರ್ಯದ ಈ ಹದಿಮೂರನೆಯ ವರ್ಷವು ರಾಜಕೀಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಕಾಂಗ್ರೆಸ್ ಮತ್ತು ನೆಹರೂರವರು ಈ ಅಸ್ಖಲಿತ ಮತ್ತು ತಾತ್ವಿಕ ತಳಹದಿಯ ವಿರೋಧವನ್ನು ಹೇಗೆ ಸಹಿಸುವರು, ಅದರಿಂದ ಯಾವ ಪರಿಣಾಮವನ್ನು ಹೊಂದುವರು ಎಂಬುವದರ ಕೌತುಕವೂ ನಿರೀಕ್ಷಣೆಯಲ್ಲಿ ಸ್ವಾತಂತ್ರ್ಯದ ಹದಿಮೂರನೆಯ ವರ್ಷ ಆರಂಭವಾಗುತ್ತದೆ. ಒಂದೆಡೆ ಪಾಕಿಸ್ತಾನ, ಇನ್ನೊಂದೆಡೆ ಟಿಬೇಟ್ ಎಂದಿರುವಾಗ ಮೇಘರಾಜನೂ ತನ್ನ ಸ್ವಾಗತರಹಿತ ಉದಾರತೆಯನ್ನು ತೋರಿಸಿ, ತನ್ನ ಪಾಲಿನ ಭಾರವನ್ನು ದೇಶದ ಮೇಲೆ, ದೇಶನಾಯಕರ ಮೇಲೆ ಹೊರಿಸಿದ್ದಾನೆ. ರಾಜಕೀಯ ಮುತ್ಸದ್ದಿಗಳಿಗೆ ಹೀಗೆ ಮುಳ್ಳಿನ ಹಾಸಿಗೆಯು ತಯಾರಾಗುತ್ತಲಿದೆ.

ದೈತ್ಯ ಮುಷ್ಟಿ

ಋಣದಲ್ಲಿ ಬಿದ್ದು ಸಾಯಬಾರದೆಂದು ಮಾಲಿಂಗ ಮತ್ತೂ ಮತ್ತೂ ಸೇರುಗಾರರೊಡನೆ ದುಡಿದರೂ ಅವರ ಸಾಲ ಮಾತ್ರ ಸಂದಾಯವಾಗುತ್ತಿರಲಿಲ್ಲ; ಆದರೆ, ಒಂದು ದಿನ ಆ ಸಾಲ ತನಗೆ ತಾನಾಗಿಯೇ ಸಂದು ಹೋಯಿತು. ಆ ದೈತ್ಯ ಮುಷ್ಟಿಯಿಂದ ಬಿಡುಗಡೆಯಾಯಿತು. ಅದು ಹೇಗೆ?

ಕತೆಗಾರರು: ಶ್ರೀ ವಿಷ್ಣೇಶ್ವರ ಶರ್ಮಾ, ತಪ್ಪಲಸೆ.

ಬೆಳಗಿನ ಸಮಯಕ್ಕೆ ಸರಿಯಾಗಿ ಕೋಳಿಗಳು ಕೂಗಿದಾಗ ಮಾಲಿಂಗನೆದ್ದು ಹೆಂಡತಿಯನ್ನೆಬ್ಬಿಸಿದ. ಹಾಗೇ ಹೆಂಡತಿ ಗಂಜೀ ಮಾಡಲು ಒಳಗೆ ನಡೆದಾಗ ಮಾಲಿಂಗ ಕೋಳಿಯ ಗೂಡಿನ ಹತ್ತಿರ ಬಂದು ಬಾಗಿಲ ಹಲಗೆ ಸರಿಸಿ ಒಂದೊಂದಾಗಿ ಹೊರಗೆ ಬಿಡಹತ್ತಿದ. ಸಣ್ಣ ಮರಿಗಳ ಮೈಮೇಲೆ ಕೈಯ್ಯಾಡಿಸಿ ಎತ್ತಿಕೊಂಡು ಏನಾದರೂ ಅಪಾಯವಾಗಿದೆಯೇ ಎಂದು ಪರೀಕ್ಷಿಸಿಯೇ ಹೊರಗೆ ಕಳಿಸುತಿದ್ದ.

ಮಾಲಿಂಗನ ದೃಷ್ಟಿ ಗೂಡಿನಲ್ಲಿಯೇ ಕೇಂದ್ರೀಕೃತವಾಗಿತ್ತು. ಆಗಲೇ ಅವನ ಸುತ್ತಲೂ ನಿಂತ ನಾಲ್ವರನ್ನು ನೋಡಿಯೂ ಇರಲಿಲ್ಲ. ಮುಂದೆ ಹೋಗುತ್ತಿದ್ದ ಕೋಳಿಗಳು ಗಾಬರಿಗೊಂಡು ಹಿಂದೆ ಸರಿಯುತ್ತಿದ್ದುದನ್ನು ನೋಡಿಯೇ ತಲೆ ಎತ್ತಿದ. ಆಗಲೇ ನಾಲ್ಕು ಕೈಗಳೂ ಮಾಲಿಂಗನ ಎರಡೂ ರಟ್ಟೆ ಹಿಡಿದಿದ್ದವು.

“ಏನು!....ಯಾಕ್ಬಂದೀರಿ!” ಮಾಲಿಂಗನ ಪ್ರಯತ್ನವಿಲ್ಲದೆಯೇ ಮಾತು ಹೊರಟು ಹೋಯಿತು.

ದೂರದಲ್ಲಿ ನಿಂತ ಸುಬ್ಬೈ ಸೆಟ್ಟರು ಮುಂದೆ ಬಂದರು. “ಬೋ....ಮಕ್ಳ... ಯಾರ ಹಣನಾದ್ರೂ ತಿಂಬೂಕೆ ಸಾಯ್ತ್ರಿ. ಯಳ್ಕಂಡು ಹೋಯ್ನೀನಿ.” ಆಳುಗಳಿಗೆ ಸೆಟ್ಟರ ಸುಗ್ರೀವಾಜ್ಞೆಯಾಯಿತು.

ಒಳಗೆ ಗಂಜೀ ಕಾಸುತಿದ್ದ ಮರ್ಲೀಗೆ ಇದೊಂದೂ ತಿಳಿಯದು. ಸೆಟ್ಟರು ಗುಡುಗಿದಾಗ ಇದೇನು ಗದ್ದಲವೆಂದು ಹೊರಗೆ ಬಂದಳು. ನಾಲ್ವರು ಗಂಡನನ್ನು ಹಿಡಿದದ್ದೂ ಸೆಟ್ಟರು ಅಟ್ಟಹಾಸದಿಂದ ನೋಡುತ್ತಿದ್ದುದೂ—ಕಂಡಿತು. ಇದಕ್ಕೆ ಯಾವ ಮಾತನ್ನು ಆಡಲೂ ತಿಳಿಯದೇ ಅಲ್ಲೇ ಕುಕ್ಕರಿಸಿಬಿಟ್ಟಳು.

ಸೆಟ್ಟರ ದೃಷ್ಟಿ ಮರ್ಲೀಯತ್ತ ತಿರುಗಿತು. “ಏನು.... ಗಂಡಾ ಹೆಂಡ್ತೀದು ಬಾಳಾ ಗಡ್ಚು ಅಲ್ದಾ. ನಮ್ಹ್ಕ್ರಣಾ ಹೆಲಾಕ್ಕು. ಇಲ್ದಿದ್ರೆ ನಮ್ಸಂಗ್ದಾಗೆ ಯ್ಯಾಕೆ ಬರಕ್ಕು. ಏನು ಹೇಳ್ನಿ.”

ಈ ಮಾತು ಮಾಲಿಂಗನಿಗೆ ಹೊಸತೇನೂ ಅಲ್ಲ, ಎರಡು ಮೂರು ಸಾರೆ ಇಂಥ ಪ್ರಸಂಗವನ್ನು ಕಂಡಿದ್ದಲ್ಲದೇ ಇದೇ ಮಾತನ್ನೂ ಆಡಿಸಿಕೊಂಡಿದ್ದ. ಮೂರು ನಾಲ್ಕು ತಿಂಗಳಿಗೆ ಈ ರೀತಿ ಬರುವುದೂ ಏನಾದರೂ ಸಮಾಧಾನದ ಮಾತು ಹೇಳಿ ಕಳಿಸುವದೂ ಇದ್ದೇ ಇತ್ತು.

ಸುಬ್ಬೈ ಸೆಟ್ಟರು ಬೈಂದೂರಿನಲ್ಲಿ ದೊಡ್ಡ ಸೇರೇಗಾರರು. ನೂರಾರು ಆಳುಗಳಿಗೆ ಹಣಕೊಟ್ಟು ದುಡಿಸಿಕೊಳ್ಳುವವರು. ವರ್ಷದಲ್ಲಿ ಎಂಟು ತಿಂಗಳು ಘಟ್ಟಕ್ಕೆ ಹೋಗಿ ಸೆಟ್ಟರ ಸೇರೂಗಾರಿಕೆಯಲ್ಲಿ ದುಡಿದು ನಾಲ್ಕು ತಿಂಗಳು ಊರ ಬದಿಯಲ್ಲಿ ಕಾಲ ಹಾಕುವುದು, ಆಗ ಮತ್ತೆ ಹಣ ತೆಗೆಯುವದು, ಈ ರೀತಿ ಅಲ್ಲಿಯ ಜನಗಳ ವ್ಯವಹಾರವಾಗಿತ್ತು.

ವಿಶೇಷವಾಗಿ ಮದುವೆಯ ಕಾಲಕ್ಕೆ ಹೆಚ್ಚು ಹಣ ತೆಗೆಯುವದು ರೂಢಿಯಾಗಿತ್ತು. ಅನಂತರ ಹಣ, ಹಣದ ಬಡ್ಡಿ ತೀರುವ ವರೆಗೆ ಅವರ ಕೈಕೆಳಗೆ ದುಡಿಯಬೇಕಾಗಿತ್ತು. ಮಧ್ಯದಲ್ಲಿ ಎಲ್ಲಾದರೂ ಮಾರಮ್ಮನ ಜಾತ್ರೆ, ದಿಪೋತ್ಸವ, ಮುಂತಾದ್ದಕ್ಕೆ ಚಿಲ್ಲರೇ ಸಾಲ ಸಿಗುತ್ತಿತ್ತು.

ಲಗ್ನದ ಕಾಲದ್ದು ಮುನ್ನೂರು, ತಂದೆಯ ಕಾಲದ್ದು ಇನ್ನೂರು, ಹೀಗೆ ಐದು ನೂರು ರೂಪಾಯಿ ಮಾಲಿಂಗ, ಸೆಟ್ಟರಿಗೆ ಕೊಡಬೇಕೆಂತ ಲೆಕ್ಕವಾಗಿತ್ತು. ಲಗ್ನಕ್ಕಾಗಿ ಹಣ ಪಡೆಯುವಾಗ ತಂದೆಯ ಸಾಲವನ್ನೂ ಕಾಣಿಸಿ “ರಿಜಿಸ್ತ್ರೀ” ನೋಟು ಬರೆಯಿಸಿ ಎಡಗೈಯ್ಯ ಹೆಬ್ಬೆಟ್ಟಿನ ದಸ್ಕತ್ತು ಹಾಕಿ ಕೊಟ್ಟಿದ್ದ.

ಹದಿನೈದು ವರ್ಷದ ಹಿಂದೆಯೇ ತಂದೆ ತೀರಿದನಂತರ ಸೆಟ್ಟರಲ್ಲೇ ಕೆಲಸಮಾಡುತ್ತ ಬಂದಿದ್ದ. ಈಗಂತೂ ಲಗ್ನವಾಗಿ ಏಳೆಂಟು ವರ್ಷಗಳು ಕಳೆದಿತ್ತು. ಹೀಗೆ ಇಷ್ಟರೂ ದುಡಿಯುತ್ತಿದ್ದರೂ ಅವರ ಸಾಲ ಮಾತ್ರ ತೀರುತ್ತ ಬಂದಿರಲಿಲ್ಲ.

ವರ್ಷದ ಆಖೈರಕ್ಕೆ. ಜಡಿಮಳೆ ಹಿಡಿಯುವ ಹೊತ್ತಿಗೆ ಲೆಕ್ಕಾಚಾರ. ಆಡ್ಮೀ ಆಳು ಗಜಾಹಾಕಿ, ಕೆಲಸದ ಆಳಿಗೆ ತಿಂಗಳಿಗೆ ಎಷ್ಟೆಂದು ದರಾ ನಿಶ್ಚೈಸಿ, ಹಿಂದೆ ಪಡೆದ ಹಣಾ ವಜಾಮಾಡಿ, ಕೋಳೀ ಹಬ್ಬ, ಕುರೀಹಬ್ಬ, ಮೀನು ತಿಂದದ್ದು. ಇವೆಲ್ಲ ಕಳೆದು, ಸಾಲದ ಹಣಕ್ಕೆ ಬಡ್ಡೀ ಸೇರಿಸಿ, ಮತ್ತೆ ಬೇಕಾದರೆ ಅಲ್ಪ ಸ್ವಲ್ಪ ಹಣ ಕೊಟ್ಟು, ನಿಕ್ಕೀರೂಪಾಯಿಗೆ ಹೊಸ ನೋಟು ಬರೆದುಕೊಡುವುದು ಲೆಕ್ಕಾಚಾರದಲ್ಲಿಯ ಸಂಪ್ರದಾಯ. ಮಾಲಿಂಗನೂ ಇದೇ ರೀತಿ ಲೆಕ್ಕಮಾಡಿ ನೋಟು ಬರೆದುಕೊಡುತ್ತಲೇ ಬಂದಿದ್ದ.

ಯಾವ ವರ್ಷದಲ್ಲೂ ಹಿಂದಿನ ಸಾಲ ತೀರಿಸುವಷ್ಟು ಅವನ ಕೆಲಸದ ಆದಾಯ ಬೆಳೆದಿರಲಿಲ್ಲ. ಇನ್ನು ಏನಾದರೂ ವಿಶೇಷ ಪ್ರಯತ್ನಿಸಿದರೆ ಬಡ್ಡೀ ಹಣ ಮಾತ್ರ ವಜಾ ಆಗುತ್ತಿತ್ತು. ಆ ವರ್ಷ ಉಳಿದ ಆಳುಗಳಿಗಿಂತ ಮಾಲಿಂಗನಿಗೆ ಹೆಚ್ಚು ಗೌರವ ಸಿಗುತ್ತಿತ್ತು. ಮಾರನೆ ವರುಷ ಸೇರುಗಾರರ ಕೈಕೆಳಗಿನ “ಬಗಲಿ”ಯಾಗುತ್ತಿದ್ದ.

ಕೆಲಸದಲ್ಲಿಯೂ ಮಾಲಿಂಗನನ್ನು ಮೀರಿಸುವವರು ಸೆಟ್ಟರ ತಂಡದಲ್ಲಿ ಯಾರೂ ಇರಲಿಲ್ಲ, ಎಲ್ಲಾ ಕೆಲಸಗಳ ಮಾಹಿತಿಯೂ ಇದ್ದುದರಿಂದ ಅನೇಕರು ಮಾಲಿಂಗನನ್ನೇ ಕೆಲಸಕ್ಕೆ ಕಳಿಸಿಕೊಡು ಎಂದು ಹೇಳುತ್ತಿದ್ದರು. ಗುತ್ತಿಗೆಯ ಕೆಲಸದಲ್ಲಂತೂ ಆಳಿಗೆ ಎರಡಾಳಿನಷ್ಟು ಲಾಭ ದೊರಕಿಸಿಕೊಡುತ್ತಿದ್ದ.

ಹಾಗಿದ್ದರೂ ಅವನಿಗೆ ಹಾಕುವ ಸಂಬಳ ಒಂದೇ ರೀತಿ. ಅಕ್ಕಿಯ ಧಾರಣೆ ಏರಿ ಕೂಲಿಯ ಮಾನ ಏರಿದ್ದರೂ ಸೇರೂಗರಾನ ತಂಡದ ಆಳಿನ ಸಂಬಳ ಮಾತ್ರ ಏರಿರಲಿಲ್ಲ. ಹಿಂದೆ ಬೆಳಗ್ಗೆ ಗಂಜೀ ಊಟವಿತ್ತು, ಇತ್ತೀಚೆಗೆ ಹಾಲುಹಿಟ್ಟಿನ ಚಹಾ. ಇನ್ನು ಗುತ್ತಿಗೆಯಲ್ಲಿ ವಿಶೇಷ ಲಾಭವಾದರೆ ತಿಂಗಳಿಗೊಮ್ಮೆ ಕೋಳಿಯ ಪಲ್ಲೆ. ಊರಿಗೆ ಹೋಗುವ ಮುಂಚೆ ಕಡಬಿನ ಊಟ. ಕುರಿಯ ಹಬ್ಬ. ಇಷ್ಟೇ ಬದಲಾವಣೆ.

ತಂಡದಲ್ಲಿ ಇಪ್ಪತ್ತೈದು ಮುವತ್ತು ಗಂಡಾಳಿದ್ದರೆ ಹತ್ತೆಂಟು ಹೆಣ್ಣಾಳಿರುವದು ಸ್ವಾಭಾವಿಕವಾಗಿತ್ತು. ಈ ಹೆಣ್ಣಾಳುಗಳಲ್ಲಿ ಸೇರುಗಾರ ಯಾರನ್ನು ಬಯಸಿದರೂ ಅವರು ಅವನ ಕಾಮವೃತ್ತಿಗೆ ಬಲಿಯಾಗಬೇಕಾಗಿತ್ತು. ಇದು ಗಂಡಾಳುಗಳಿಗೆ ತಿಳಿದಿದ್ದರೂ ಇದನ್ನು ವಿರೋಧಿಸುವದು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ.

ಮಾಲಿಂಗ ಮದುವೆಯಾದ ಮಾರನೆಯ ವರ್ಷದಿಂದ ಹೆಂಡತಿ ಮರ್ಲೀಯನ್ನು ತಂಡದ ಜೊತೆಯಲ್ಲಿ ತಂದಿದ್ದ. ಮರ್ಲಿ ಅಷ್ಟೇನೂ ರೂಪವತಿಯಲ್ಲ ಎಣ್ಣೆಗಪ್ಪಿನ ಮೈಬಣ್ಣ. ಸಾಮಾನ್ಯ ಮಧ್ಯಮ ಆಳ್ತನ. ಆಕರ್ಷಕ ಕಣ್ಣು. ಅವರ ಜಾತಿಯಲ್ಲಿರುವ ಕೊರಳಿಗೆ ಭಾರವಾಗುವ ಕರಿಮಣಿ, ಹವಳದ ಸರ, ಕಿವಿಗೊಂದು ದೊಡ್ಡ ಓಲೆ, ಮೂಗಿಗೊಂದು ಉದ್ದ ಮೂಗುತಿ, ಇವೆಲ್ಲ ಇರದೇ ತುಸು ಹೊಸ ರೀತಿಯ ಉಡಿಗೆ ತೊಡಿಗೆ ಇದ್ದುದರಿಂದ ನೋಡುವದಕ್ಕೆ ಮರ್ಲೀ ಆ ವರ್ಗದಲ್ಲೇ ಹೊಸ ಹೆಣ್ಣಾಗಿ ಕಾಣುತ್ತಿತ್ತು. ಮೇಲೆ ಇಪ್ಪತ್ತು ದಾಟಿದ ಯೌವ್ವನದ ಬೆಡಗು ಬೇರೆ.

ಗಂಡನೊಡನೆ ತಂಡದ ಜೊತೆಯಲ್ಲಿ ಘಟ್ಟಕ್ಕೆ ಬಂದ ಮರ್ಲೀಯ ಮೇಲೆ ಸೇರೂಗಾರನ ಕಾಮ ದೃಷ್ಟಿ ಬೀಳುವುದಕ್ಕೆ ಹೆಚ್ಚು ದಿನಗಳೇನೂ ಬೇಕಾಗಲಿಲ್ಲ. ತಿಂಗಳಿಗೊಮ್ಮೆ ಒಬ್ಬೊಬ್ಬರಿಗೆ ಅಡಿಗೆಯ ಬಾರಿ ಬರುತ್ತಿತ್ತು. ಆ ದಿನ ತುಸು ಮುಂಚಿತವಾಗಿಯೇ ಕೆಲಸ ಬಿಟ್ಟುಬಂದು ಅನ್ನ ಬೇಯಿಸಿ, ಖಾರದ ಮುದ್ದೆ ಅರೆದು ಇಟ್ಟು ಸೇರೂಗಾರನಿಗೆ ಮಾತ್ರ ತುಸು ಬೇಳೆ ಸಾರು, ಪಲ್ಯ ಮಾಡಬೇಕಾಗಿತ್ತು. ಅದರಲ್ಲಿ ಮಿಕ್ಕಿದ್ದು ಅವರ ಪ್ರೀತಿಯ ಆಳಿಗೆ ದೊರಕುವುದು ರೂಢಿ. ಅದರಂತೆ ಪಲ್ಯ ಸಾರುಗಳು ಮರ್ಲೀಗೂ ದೊರೆಯುತ್ತಿತ್ತು.

ಒಂದು ದಿನ ಅಡಿಗೆಗಾಗಿ ಮುಂಚಿತವಾಗಿ ಬಂದ ಮರ್ಲೀಯನ್ನು ಎಲೆ ಅಡಿಕೆಯ ನಿಮಿತ್ತವಾಗಿ ತಮ್ಮ ಮಂಚದ ಹತ್ತಿರ ಸೇರೂಗಾರರು ಕರೆದರು. ಬಿಡಾರದಲ್ಲಿಯೂ ಯಾರೂ ಇರಲಿಲ್ಲ. ಮರ್ಲೀ ಎಲೆ ಅಡಿಕೆಯ ಸಂಚಿಯನ್ನು ಕೊಡುವದಕ್ಕೆ ದೂರದಿಂದ ಕೈ ಚಾಚಿದಳು. ಸೇರೂಗಾರ ಸಂಚಿಯನ್ನು ಹಿಡಿಯುವ ಬದಲು ಮರ್ಲೀಯ ಕೈಯ್ಯನ್ನೇ ಜಗ್ಗಿ ಎಳೆದು ಸೆಳಕೊಂಡಾಗ ಹೆಗೋ ಹೋಗೋ ಮಾಡಿ ತಪ್ಪಿಸಿಕೊಂಡು ಹೊರಗೆ ಬಂದುಬಿಟ್ಟಳು.

ಸುಬ್ಬೈ ಸೆಟ್ಟರು ತಮ್ಮ ಇಡಿಯ ಆಯುಷ್ಯದಲ್ಲಿಯೇ ಇಂಥ ಸೋಲನ್ನು ಕಂಡಿರಲಿಲ್ಲ. ಅವರು ಬಯಸಿದ ಹೆಣ್ಣು ಎಂದೂ ಈ ರೀತಿ ಬಿಸರಿಸಿರಲಿಲ್ಲ. ಹಾಗಾಗಿ ಅವರಿಗೆ ಸಿಟ್ಟು ನೆತ್ತಿಗೇರಿತು—“ಕಾಣತೆ, ನೀ ಮಾ ಪ್ರತಿವ್ರತಿ ಅಲ್ದಾ, ನಿನ್ನ ಸ್ವಭಾವ ಗೊತ್ತಿಲ್ಲೆ ಅಂತ ಮಾಡಿದ್ಯಾ ಕಾಣು ಹಂಗಾರ” ಎಂದು ಗುಡುಗಿದ.

ಮರ್ಲೀ ನೀರು ತರುವುದಕ್ಕೆ, ಹೊಂಡದ ಬದಿಗೆ ಹೋದವಳು ಮತ್ತೊಂದು ಹೆಂಗಸಿನ ಸಹಾಯ ಪಡೆದು ಅಡಿಗೆಯ ಬಾರಿ ಮುಗಿಸಿದಳು. ಅಂದಿನಿಂದ ಅವರ ಪಲ್ಯ, ಸಾರು, ಬಿಡಬೇಕಾಯಿತು.

ಇನ್ನೊಂದು ಅಡಿಗೆಯ ಬಾರಿಯ ಒಳಗಾಗಿ ಹೇಗಾದರೂ ಮಾಡಿ ಮರ್ಲೀಯನ್ನು ಒಲಿಸಿಕೊಳ್ಳುವುದಕ್ಕೆ ಸೇರೂಗಾರರ ಯೋಚನೆ ನಡೆಯಿತು. ಮಾರನೆಯ ದಿನದಿಂದ ಮಾಲಿಂಗ “ಬಗಲಿ”ಯ ಪಟ್ಟಕ್ಕೇರಿದ. ಬಗಲಿಯೆಂದರೆ ಸ್ವತಃ ದುಡಿಯಬೇಕಾದುದಿಲ್ಲ. ಆಳುಗಳ ಮೇಲೆ ಉಸ್ತುವಾರಿ ಮಾಡುವುದು, ಮಾಲಿ, ಸಂತೆಯ ಕೆಲಸ ಮುಂತಾದುವಾಗಿತ್ತು. ಮರ್ಲೀ ಇದರ ಸೂಕ್ಷ್ಮ ಅರಿತಿದ್ದರೂ ಮಾಲಿಂಗನಿಗೆ ಇದರ ವಿಚಾರವೇ ತಿಳಿಯಲಿಲ್ಲ.

ಅಡಿಗೆಯ ಬಾರಿ ಸಮೀಪಿಸಿದ ಹಾಗೆ ಮರ್ಲೀಗೆ ಭಯವಾಗಹತ್ತಿತು. ಆ ದಿನವೂ ಬಂದಿತು. ಅಂದು ಮಾಲಿಂಗನಿಗೂ ದೂರದ ಹಳ್ಳಿಯ ಯಾವುದೋ ಕೆಲಸದ ಮೇಲ್ವಿಚಾರಕ್ಕೆ ಹೋಗಲು ಹೇಳಿಕೆಯಾಯಿತು. ಅಡಿಗೆಗಾಗಿ ಮರ್ಲೀ ಬಂದಾಗ ಬಿಡಾರದಲ್ಲಿ ಯಾರೂ ಇರಲಿಲ್ಲ ಆದರೂ ಸುತ್ತಲೂ ಕಣ್ಣಿಟ್ಟುಕೊಂಡೇ ಅಡಿಗೆಯ ಕೆಲಸ ಸಾಗಿತು.

(೧೮ನೇ ಪುಟ ನೋಡಿರಿ)

Grand reduction in rates!

ಮೈಸೂರು ಟ್ಯಾಪ್ ಫೌಂಡ್ರಿ,

ಸುಬೆದಾರ್ ಛತ್ರಂ ರೋಡು, ಬೆಂಗಳೂರು—2.

ದರವನ್ನು ಬಹಳ ಕಡಿಮೆ ಮಾಡಿದೆ.

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ “ಮೈಸೂರು ಟ್ಯಾಪ್ ಫೌಂಡ್ರಿಯಲ್ಲಿ ಪ್ರಿಂಟಿಂಗ್ ಟ್ಯಾಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟ್ಯಾಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ. ಇಂದೇ ವಿವರಗಳಿಗೆ ಬರೆಯಿರಿ:

THE MYSORE TYPE FOUNDRY
Subedar Chatram Road, BANGALORE-2.

ಭೋಜನದ ಮೈಲುಕಲ್ಲುಗಳು

೧

ಹಿತ ಮಿತ, ಶುಚಿ ರುಚಿಯಾದ ಆಹಾರವು ಮಾನವನನ್ನು ಆರೋಗ್ಯವಂತನನ್ನಾಗಿಯೂ ದೃಢ ಶರೀರಿಯನ್ನಾಗಿಯೂ ರೂಪಿಸಬಲ್ಲುದೆಂದು ಆರೋಗ್ಯ ಶಾಸ್ತ್ರಿಗಳು ಹೇಳುತ್ತಾರೆ. ಹಾಗಾದರೆ, ನಮ್ಮ ಭೋಜನದ ಮೈಲುಕಲ್ಲುಗಳಾವುವೆಂಬುದನ್ನಾದರೂ ನಾವು ಅರಿತುಕೊಳ್ಳಬೇಡವೆ?

ತಿಳಿಸಿದವರು: ಶ್ರೀಮತಿ ರುಕ್ಮಿಣೀದೇವಿ, ಐರೋಡಿ.

ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪಗಳು ಕಲೆಯಂತೆ; ಪಂಚೇಂದ್ರಿಯಗಳಲ್ಲಿ ಕಣ್ಣು ಕಿವಿಗಳನ್ನು ತೃಪ್ತಿಪಡಿಸುವ ಕಾರ್ಯಗಳು ಮಾತ್ರ ಕಲೆಯಂತೆ! ನಾಲಗೆಯನ್ನು ತೃಪ್ತಿಪಡಿಸುವ ಕಾರ್ಯವು ಕಲೆಯಲ್ಲವೇಕೆ? ಪಾಕ ಕಾರ್ಯವು ಅಷ್ಟು ಸುಲಭವಾಗಿದ್ದರೆ ಎಲ್ಲಾ ಸ್ತ್ರೀ ಪುರುಷರು ನಳಪಾಕವನ್ನೇ ಬಟ್ಟಿ ಇಳಿಸುತ್ತಿದ್ದರು. ಪ್ರಾಚೀನ ಕಾಲದಲ್ಲಿ ಒಬ್ಬ ನಳ, ಇನ್ನೊಬ್ಬ ಭೀಮನು ಅಡುಗೆಯ ಮರ್ಮವನ್ನು ತಿಳಿದಿದ್ದರೆಂದು ಇತಿಹಾಸವು ಹೇಳುವುದು. ಈಚೆಗೆ ಬಂಗಾಲದಲ್ಲಿದ್ದ ತಾರಾನಾಥ ತರ್ಕವಾಚಸ್ಪತಿಯೆಂಬ ಘನವಿದ್ವಾಂಸನೊಬ್ಬ ಹೃದಯಹಾರಿಯಾದ ಅಡುಗೆಯನ್ನು ತಯಾರಿಸುತ್ತಿದ್ದನಂತೆ! ಜಗತ್ತಿನ ಆದಿಯಿಂದ ಇಂದಿನವರೆಗೆ ಪಾಕಶಾಸ್ತ್ರದ ಮೈಲುಗಲ್ಲುಗಳು ಇಷ್ಟುಮಂದಿ ಮಾತ್ರವೆ? ಸಾಹಿತ್ಯ ಸೇವೆಮಾಡಿದ ಕಾಳಿದಾಸ ಪಂಪಾದಿಗಳೂ, ಸಂಗೀತದ ಮಾಧುರ್ಯವನ್ನು ಹರಡಿದ ಪುರಂದರ ತ್ಯಾಗರಾಜರೂ, ಇನ್ನುಳಿದ ಕಲಾವಂತರೂ ಅಜರಾಮರವಾದ ಯಶಸ್ಸನ್ನು ಪಡೆದಿದ್ದಾರೆ. ಅಡುಗೆಯನ್ನು ಕಲಾಬದ್ಧವಾಗಿ ಮಾಡಿದ ಸ್ತ್ರೀಪುರುಷರ ಹೆಸರುಗಳು? ಅವು ಎಂದೋ ವಾಯುಮಂಡಲದಲ್ಲಿ ಹಾರಿ ತೂರಿ ಅದೃಶ್ಯವಾಗಿ ಹೋಗಿವೆ. ಇನ್ನು ಮುಂದಂದರೂ ವರ್ತಮಾನ ಯುಗದ ಪಾಕಮಲ್ಲರ ಹೆಸರು ಮತ್ತು ಅಡುಗೆಯ ವಿಧಾನಗಳನ್ನಾದರೂ ಮನೆಮನೆಗೆ ಹಂಚುವ ಎತ್ತುಗಡೆಯನ್ನು ಜನತೆಯು ಕೈಗೊಳ್ಳಬಾರದೆ? ಭೂಸ್ವರ್ಗವು ಕ್ರಮಬದ್ಧವಾದ—ಸವಿಕಟ್ಟಾದ ಪಾಕದ ರೀತಿಯನ್ನು ಮನೆಮನೆಗೆ ಹರಡುವುದರಲ್ಲೇ ಇದೆ. ಇಂದಿನ ಹಲವು ಹೋಟೆಲುಗಳ ಅಡುಗೆಗೆ ಸ್ವಲ್ಪವಾದರೂ ರುಚಿಯುಂಟೇ? ಮನುಷ್ಯನ ಅಲ್ಪಾಯುಷ್ಯಕ್ಕೆ ಸವಿಕಟ್ಟಾದ ಅಡುಗೆಯ ಕ್ರಮಕ್ಕೆ ಗಮನಕೊಡದುದು ಒಂದು ಪ್ರಬಲ ಕಾರಣ. ರುಚಿಯಾದ ಅಡುಗೆಯ ಪ್ರಕರಣಗಳನ್ನು ಆಯಾಪ್ರಾಂತದ ಪ್ರಸಿದ್ಧ ಭಟ್ಟರಿಂದ ರೇಡಿಯೋ ಮೂಲಕ ಪ್ರಸಾರ ಮಾಡುವುದು ಇಂದಿನ ಎಷ್ಟೋ ಸ್ತ್ರೀಯರಿಗೆ ಮಹೋಪಕಾರವಾಗುವುದು. ಮೇಲೋಗರದ ರುಚಿಯು ಒಂದು ನಿಯಮಬದ್ಧವಾದ ವಸ್ತುಗಳ ಸೇರಿಕೆಯಿಂದ ಮಾತ್ರ ದೊರೆಯಬಲ್ಲುದು. ಸ್ತ್ರೀಯರಿಗೆ ರೂಪ, ಸಂಗೀತ, ಉತ್ತಮ ಪಾಕಜ್ಞಾನ ಇವು ಭೂಷಣ. ಇವು ಸಂಸಾರ ಕಷ್ಟಗಳನ್ನು ಮರೆಮಾಡತಕ್ಕ ಚಿಂತಾಮಣಿಗಳು; ಸ್ವರ್ಗ ಜೀವನದ ಪ್ರಮುಖ ಸಾಧನಗಳು.

ಸಾಹಿತ್ಯ ಮಂಟಪವು ನವರಸಗಳ ಚೆಲುಮೆಯ ಮೇಲೆ ಚಿತ್ರಿತವಾಗಿದ್ದರೆ, ಅನ್ನಬ್ರಹ್ಮ ಮಂದಿರವು ಷಡ್ರಸಗಳ ತಳಹದಿಯ ಮೇಲೆ ರಚಿತವಾಗಿದೆ. ಸಾಹಿತ್ಯಕ್ಕೆ ಬೇಡನೊಬ್ಬ (ವಾಲ್ಮೀಕಿ) ಪಿತಾಮಹನಾಗಿದ್ದರೆ, ಪಾಕ ಶಾಸ್ತ್ರಕ್ಕೆ ನಳಚಕ್ರವರ್ತಿ, ಭೀಮಸೇನ ಮೊದಲಾದ ಪುರಾಣ ಪುರುಷರೂ, ಗೌರಿ ಮೊದಲಾದ ಸ್ತ್ರೀಯರೂ ಪ್ರಪಿತಾಮಹರು ಮತ್ತು ಪ್ರಪಿತಾಮಹಿಯರಾಗಿದ್ದಾರೆ. ಸಾಹಿತ್ಯವು ಎಂದು ಹುಟ್ಟಿತೆಂದು ಹೇಳಬಹುದು; ಅದಕ್ಕಿಂತಲೂ ಹಿರಿಯದೆನ್ನಿಸಿದ ವೇದ ಶಾಸ್ತ್ರಗಳ ಜನ್ಮಕಾಲವನ್ನೂ ಹೇಳಬಹುದು. ಆದರೆ ಪಾಕಶಾಸ್ತ್ರವು ಎಂದು ಜನ್ಮಿಸಿತೆಂದು ಹೇಳಬಹುದೆ? ಇದು ಮಾನವ ಜನ್ಮಕ್ಕಿಂತಲೂ ಅನಾದಿ!

ಸಾಹಿತ್ಯಕ್ಕೆ ವ್ಯಾಕರಣ ಮತ್ತು ಲಕ್ಷಣ ಗ್ರಂಥಗಳೆಂಬ ಇರ್ತಟಗಳಿವೆ. ಪಾಕವಿದ್ಯೆಗೂ ಅಂಬಲಿ ಮತ್ತು ಔತಣಗಳೆಂಬ ಎರಡು ದಡಗಳಿವೆ. ಇವುಗಳನಡುವಿನಿಂದ ಇದು ಹಲವು ಸಾವಿರ ವರ್ಷಗಳಿಂದಲೂ ಹರಿಯುತ್ತಾ ಇದೆ! ಇದನ್ನೇ 'ಅಂಬಲಿಯನುಂಬನರಗಮೃತಾನ್ನವೇಕೆ?' ಎಂದು ದಾಸ ಸಾಹಿತ್ಯವೂ ಇದರ ಅಡಿಮುಡಿಯ ಗಡಿಕಲ್ಲುಗಳನ್ನು ನಿರ್ಣಯಿಸಿ ಹೇಳಿರುವುದು. ಅಂಬಲಿಯು—ತೆಳುಗಂಜಿಯು—ಬಡವನ ಸೊತ್ತಾದರೆ, ಮೃಷ್ಟಾನ್ನವು ಸಿರಿವಂತನನ್ನು ಬೇಯಿಸುವ ಸಾಧನ. ಈ ಭೋಜನದ ಇತಿಮಿತಿಯೇ ಮಾನವರಲ್ಲಿ ಅಂತಸ್ತುಗಳನ್ನೇರ್ಪಡಿಸುವುವು. ಈ ಅಂತಸ್ತುಗಳ ಆಕರ್ಷಣಾಪಕರ್ಷಣಕ್ಕೆ ಜಗತ್ತೇ ಇಂದು ಒಲಿಯುತ್ತಿದೆ. ಅದಕ್ಕಾಗಿಯೇ ಖಂಡಾಡಿಗಳು ಇಂದಿನ ಯುಗವು ವಿಜ್ಞಾನಿಗಳ ಯುಗವಲ್ಲ; ಅನ್ನೋಪಾಸಕರ ಯುಗವೆನ್ನುವುದು. ಅಣುಬಾಂಬಿನಿಂದಾಗದ ಅಸಾಧ್ಯ ಕಾರ್ಯವನ್ನೂ ಇಂದು ಅನ್ನವು ಭಾರತದಲ್ಲಿ ಸಾಗಿಸುತ್ತಿದೆ! ಭೋಜನದ ಗುಳಿಗೆಯು ಗಂಟಲೊಳಗೆ ಇಳಿಯುವುದು ಸಾವಕಾಶವಾದರೆ ಪಂಚಪ್ರಾಣಗಳೂ ಗೂಡನ್ನು ಬಿಟ್ಟು ನಡೆಯುವ ಮಸಲತ್ತು ನಡೆಸುವಾಗ ಮಾನವನು ಅನ್ನದ ವಿಚಾರದಲ್ಲಿ ಎಷ್ಟು ಎಚ್ಚರದಿಂದ ನಡೆಯಬೇಕು!

ಅನ್ನಕ್ಕೆ ಈ ಯುಗದಲ್ಲಿ ಅತ್ಯಂತ ಪ್ರಾಮುಖ್ಯ ಇದೆ. ಒಂದು ಯುಗದಲ್ಲಿ ಮಾನವನ ಪ್ರಾಣವು ಅಸ್ಥಿಮಯವಾಗಿ ನಿಧಾನವಾಗಿ ಮಾಂಸಮಯಕ್ಕಿಳಿದು ಈಗೀಗ ಅನ್ನಮಯವಾಗಿದೆ! ಇದನ್ನೇ ಇಂದಿನವರು 'ಕೋಟಿ ವಿದ್ಯೆ ಕೂಳಿಗಾಗಿ' "ರಸನೇಂದ್ರಿಯಂ ತುಷ್ಟಿ ಪಡೆಯಲಿಹಪರ ಸೌಖ್ಯ ಸಮನಿಸುವುದು" (ಸೂಪ ಶಾಸ್ತ್ರ, ಮಂಗರಸ ೩) ಎಂದು ಸಾರುತ್ತಿರುವರು. ಈಗೀಗ ಇದರ ಸ್ಥಾನವನ್ನು ಇದರ ಪರಿವಾರ ಬಂಟರು ಆಕ್ರಮಿಸಿರುವರು. ಈ ಪರಿವಾರ ಬಂಟರನ್ನೇ (ಕಾಫಿ, ಚಾ, ಕೊಕ್ಕೋ...) ಈಚೀಚಿನವರು ಪಾಕಶಾಸ್ತ್ರದ ವ್ಯಾಖ್ಯಾನವೆಂದೂ, ಅಮೋಘವಾದ ಟಿಪ್ಪಣಿಯೆಂದೂ ಹೇಳುತ್ತಾರೆ. ಲೋಕವು ಭಿನ್ನ ರುಚಿ ಚಾತುರ್ಯವುಳ್ಳದಾದುದರಿಂದ ಈ ಕುರಿತು ಹೀಗೆಯೇ ಎಂದು ನಿರ್ಣಯಿಸುವುದು ಕಷ್ಟ.

ಇಂದಿನ ತರುಣರು—ಮುಂದಿನ ಜನಾಂಗವು—ನಸುಕು ಹರಿಯುವ ಮೊದಲೇ ಪಾನಮಂದಿರದಲ್ಲಿ ಕೂಟಕೂಡಿ ಪಾಕಶಾಸ್ತ್ರದ ಪಾರಾಯಣದಲ್ಲಿ ಪರಾಯಣರಾಗುವರು. ಇವರು ಮಧ್ಯಾಹ್ನ ರಾತ್ರಿ ಇದರ ಮೂಲ (ಭೋಜನ) ವನ್ನೇ ಓದುತ್ತಾರೆ. ಇವರಿಗೆ ಸಂಪೂರ್ಣ ಮೂಲವನ್ನೇ ಆಧರಿಸುವ ಶಕ್ತಿ ಇಲ್ಲ. ಆದರಿಂದ ಈ ಟೀಕೆ ಆ ಟಿಪ್ಪಣಿಗಳನ್ನು ಆಗಾಗ ತಿರುವಿನೋಡುತ್ತಿರಬೇಕಾಗುವುದು. ಮಹಾಋಷಿಗಳ ಮತ್ತು ಮಹಾಕವಿಗಳ ಅಂತರ್ಯವನ್ನು ತಿಳಿಯಲು ವ್ಯಾಖ್ಯಾನಗಳ ಆಗತ್ಯವಿಲ್ಲವೆ? ಅಂತೆಯೇ ಪಾಕಶಾಸ್ತ್ರದ ತಿರುಳನ್ನರಿಯಲೂ ಟೀಕೆ ಟಿಪ್ಪಣಿಗಳು ಬೇಕಾಗಿವೆ. ಇಂದಿನ ಧೀರೋದಾತ್ತರು ಮೂಲವನ್ನಾದರೂ ತ್ಯಜಿಸ್ಯಾರು; ವ್ಯಾಖ್ಯಾನವನ್ನು ಬಿಟ್ಟು 'ಕಟುಂಕುಟುಂ' ಎನ್ನುವಂತಿಲ್ಲ.

ಭೋಜನ ಕಲೆಯಲ್ಲಿ ಪ್ರಾಚೀನ ಕಾಲದಿಂದಲೂ ಬ್ರಾಹ್ಮಣರು ಪಾರಂಗತರು. ಇದರಿಂದಲೇ ಬ್ರಾಹ್ಮಣರು ಭೋಜನಪ್ರಿಯರೆಂಬ ಮಾತು ಹುಟ್ಟಿತು. ಈ ವಾಕ್ಯಕ್ಕೆ ಗಾಂಪರೊಡೆಯರು—ಊಟದಲ್ಲಿ ಬ್ರಾಹ್ಮಣರು ಜಾಣರು ಎಂದು ಅರ್ಥಮಾಡುತ್ತಾರೆ. ಆದರೆ ತಿಳಿದ ರಸಿಕ ಶಿರೋಮಣಿಗಳು—ಪಾಕವಿದ್ಯೆಯಲ್ಲಿ ಬ್ರಾಹ್ಮಣರು ಪಾರಂಗತರು—ಎಂದು ಅರ್ಥವಿವರಿಸುತ್ತಾರೆ. ಸಾರಾಂಶ—ಭೋಜನ ವಿದ್ಯೆ ಮತ್ತು ಅವುಗಳ ವೈವಿಧ್ಯವು ಬ್ರಾಹ್ಮಣ ಸಮಾಜದಲ್ಲಿ ಕಲಾವಂತವಾಗಿದೆ. ಇವನ್ನರಿತೇ ಪರಮಾತ್ಮನು ಬ್ರಾಹ್ಮಣರು ಮಮದೇವತೆಗಳೆಂದಿರಬಹುದೆ?

ಬ್ರಾಹ್ಮಣರಲ್ಲಿ ಕುಡಿಬಾಳೆ ಎಲೆಯು ಗೌರವ ಗೃಹಸ್ಥರಿಗೂ, ಮುತ್ತೈದೆಯರಿಗೂ ವಿಶೇಷವಾಗಿ ಬಳಸಲ್ಪಡುವುದು. ಈ ಎಲೆಗಳ ಎಡಪಕ್ಕದಲ್ಲಿ ದೊನ್ನೆ (ಎಲೆಯ ತಟ್ಟೆ) ಗಳನ್ನು ಹಾಕುತ್ತಾರೆ. ಇದು ಸಾರು, ರಸಾಯನ, ಪಾಯಸಗಳನ್ನು ಒಂದು ಬೊಟ್ಟಷ್ಟು ಹಾಳುಮಾಡದೆ ಉಣ್ಣುವ ಸಾಧನ. ಆ ಮೇಲೆ ಬಡಿಸಲು ತೊಡಗುವರು. ಬಡಿಸಲೂ ಶಿಸ್ತು ಕ್ರಮಗಳಿವೆ.

ಮೊದಲು ಸುಮಂಗಲಿಯೊಬ್ಬಳು ಅಭಿಘಾರ(ಹಾಲು, ತುಪ್ಪದ ತೊಟ್ಟು, ಪಾಯಸದ ಬೊಟ್ಟು(ಪಾಯಸವನ್ನು ಮಾತ್ರ ಗಂಡಸರು ಬಡಿಸುತ್ತಾರೆ)ವನ್ನು ಬಡಿಸಿಯಾದ ಮೇಲೆ ಉಪ್ಪು, ಉಪ್ಪಿನಕಾಯಿ, ಕೋಸುಂಬರಿ, ಗೊಜ್ಜು, ಸಾಸಿವೆ, ಪಲ್ಯ, ಚಿತ್ರಾನ್ನ, ಕಡುಬು, ಅನ್ನ, ತೊವ್ವೆ, ಹಪ್ಪಳ, ಸಂಡಿಗೆ, ತುಪ್ಪವನ್ನು ಬಡಿಸಿದ ಮೇಲೆ ಊಟಕ್ಕೆ ತೊಡಗುತ್ತಾರೆ ಎಲೆಯ ಮೇಲೆ ಎಲ್ಲೆಲ್ಲಿ ಯಾವ ಯಾವುದನ್ನು ಬಡಿಸಬೇಕೆಂದು ಕ್ರಮವಿದೆ. ಕಡಬು, ಚಿತ್ರಾನ್ನ, ಹಪ್ಪಳ, ಸಂಡಿಗೆಗಳು ಎಡದಿಕ್ಕಿನ ಕುಡಿಯ ಮೇಲೆಯೇ ಬಡಿಸಬೇಕು; ಇನ್ನುಳಿದವುಗಳೆಲ್ಲಾ ಬಲಮಗ್ಗುಲಿನಿಂದಲೇ ಬಡಿಸಬೇಕು. ಇಲ್ಲಿಗೆ ಊಟದ ಪ್ರಥಮ ಪಾದವಾಯಿತು. ಮನೆಯ ಯಜಮಾನನು ಗೋಗ್ರಾಸವನ್ನಿತ್ತು, ಶ್ರೀಕೃ

(೧೮ನೇ ಪುಟ ನೋಡಿರಿ)

ಸ್ಪೆಶಲ್ ನಂ. ೧

ರಾಮತೀರ್ಥ ಬ್ರಾಹ್ಮಿ ತೈಲ

[ಆಯುರ್ವೇದಿಕ್ ಔಷಧ]



ರಾಮತೀರ್ಥ ಬ್ರಾಹ್ಮಿ ತೈಲ (ರಜಿಸ್ಟರ್ಡ ಸ್ಪೆಶಲ್ ನಂ. ೧) ಅನೇಕ ಔಷಧಗಳಿಂದ ತಯಾರಿಸಿದ ರಾಮತೀರ್ಥ ಬ್ರಾಹ್ಮೀ ತೈಲದಿಂದ ಎಲ್ಲ ಋತುಗಳಲ್ಲೂ ಎಲ್ಲರಿಗೂ ಲಾಭ ದೊರಕುತ್ತದೆ. ಶರೀರಕ್ಕೆ ಮಾಲೀಶ್ (ಅಭ್ಯಂಜನ) ಮಾಡಿದರೆ ಉತ್ತಮ.

ಚಿತ್ರಪಟದ ಬೆಲೆ ೫೦ ನ. ಪೈಸೆ

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ, (ಸೆಂಟ್ರಲ್ ರೇಲ್ವೆ) ಮುಂಬಯಿ-೧೪

(ಬೆಳಗ್ಗಿನ ಹೊತ್ತು. ಕೋಳಿಯ ಕೂಗು. ಪಕ್ಷಿಗಳ ಚಿಲಿಪಿಲಿ. ಕಾಗೆಯ ಕಾಕಾ. ಅಣ್ಣತಂಗಿಯರಾದ ಮಧು, ಸರಳಾ ಹಾಡುತ್ತಿರುತ್ತಾರೆ)

ಮಧು, ಸರಳಾ—

ಮೂಡಣ ದಿಶೆಯಲಿ ಬೆಳಗಾಗುತಿದೆ
ಭಾರತ ಭೂಮಿಗೆ ಬೆಳಕಾಗುತಿದೆ
ಬೇಗಿದ ಕಾಲವ ಬರಿದೇ ಕಳೆಯದೆ
ಕೆಲಸವ ಮಾಡಿ ಫಲಿಸೋಣ—ಬಾಳ್ವೆಯ
ಸೊಗಸಿಂದುಳಿಸೋಣ—ಹಳ್ಳಿಯ
ಕಳೆಯ ಬೆಳಗಿಸೋಣ—ಭಾರತ
ಜ್ಯೋತಿಯ ಪ್ರಕಾಶಿಸೋಣ.

ಶ್ರೀಪತಿರಾವ್— ಏನು ರಗಳೆಪ್ಪಾ ಇದೂ! ಬೆಳ್ಳಂಬೆಳಗ್ಗೆ! ತಾವೂ ಮಲಗೋದಿಲ್ಲ, ಇನ್ನೊಬ್ರನ್ನ ಮಲಗಲಿಕ್ಕೂ ಬಿಡೋದಿಲ್ಲ ಈ ಹಾಳು ಮಕ್ಕಳು.

ಶಾರದೆ— ಎಷ್ಟು ಚಂದಾಗಿ ಹಾಡ್ತಾ ಇದ್ದಾರೆ ಮಕ್ಕಳೂ, ಕೇಳಿ ಸಂತೋಷಪಡುತ್ತಾ ಏಳೋದು ಬಿಟ್ಟು ಏನೊಂದೆ ನೀವು?

ಮಧು— ಅಪ್ಪಾ, ಬೆಳಗ್ಗೆ ಬೇಗನೇ ಎದ್ದು ಕೂಡಿದಷ್ಟು ತೋಟದ ಕೆಲ್ಸಾ ಮಾಡಬೇಕೂಂತ ಮಾಸ್ತರು ಕೂಡಾ ಹೇಳಿದ್ದಾರಪ್ಪಾ. ಆಗ ವ್ಯಾಯಾಮ ಮಾಡಿದ ಹಾಗಾಗಿ ಹಸಿವೇ, ಉತ್ಸಾಹ ಎಲ್ಲಾ ಚುರುಚುರುಕ್ಕಾಗಿ ಬರುತ್ತಂತಪ್ಪಾ.

ಶ್ರೀಪತಿ— ಹೌದೌದು! ಚುರುಕ್ಕಂತ ಎರಡು ಬಾರಿಸಿಬಿಟ್ರೂನೂ ಅದೇ ಉತ್ಸಾಹ ಬಂದುಬಿಡುತ್ತೆ. ಮಾಸ್ತರು ಹೇಳಿದ್ರಂತೆ. ಜನರಿಗೆ ಇದ್ದ ಹಸಿವೆಗೇ ತಿನ್ನಲಿಕ್ಕೆ ಸಾಲದಿರುವಾಗ, ಹುಡುಗರು ಇನ್ನಿಷ್ಟು ಹಸಿವೇ ಹೆಚ್ಚು ಮಾಡಿಕೋಬೇಕಂತಲಾ ಮಾಸ್ತರು? ಬೆಳಗ್ಗೆ ಎದ್ದು ಓದಬೇಕು ಬರೀಬೇಕು ಅನ್ನೋದು ಸಹಜ.

ಮಧು—ಅದಕ್ಕೂ ಸಮಯ ಉಂಟಪ್ಪ. ಆ ಮೇಲೆ ಓದಿಕೊಳ್ತೇನೆ. ಬಾರೇ ಸರಳಾ. ಹರಿವೇಕಳಕ್ಕೆ ನೀರು ತರುತ್ತೇನೆ ಅಂದಿಯಲ್ಲಾ! ಅರೆರೆ! ಬಾವೀಲಿ ನೀರು ಸೇದ್ತಾ ಇದ್ಯಾ!

(ಭೊಳೊಮ್ಮ ಬಾವಿಗೆ ಕೊಡಪಾನ ಬಿದ್ದ ಸದ್ದು)

ಶಾರದೆ ಏನೇ ಇದು ಸರಳಾ? (ಓಡುತ್ತಾ) ನಿನಗೆ ಕೂಡದ ಕೆಲ್ಸ ಮಾಡ್ಬೇಡ್ವೇ. ಅಣ್ಣ ಸೇದಿ ಕೊಟ್ರೆ, ನೀನು ಎತ್ತಿಕೊಂಡು ಹೋಗ್ಬೇಕೇ! ಪುಣ್ಯಕಾಲ! ಹಗ್ಗ ಕೈಲೇ ಹಿಡಕೊಂಡಿದ್ದಿಯಲ್ಲ!

ಮಧು—ಬಿಡಮ್ಮ, ನಾನು ಸೇದ್ತೇನೆ.

ಶಾರದೆ—ಸರಳಾ, ಹಾಗೇ ಗಿಡದಿಂದ ಸ್ವಲ್ಪ ಎಳೆಮೆಣಸೂ, ಕರುವಿಗೆ ಸ್ವಲ್ಪ ಹಸಿ ಹುಲ್ಲೂ ತರಬೇಕು ತಿಳೀತೆ?

ಸರಳಾ—ಓ! ತರ್ತೇನಮ್ಮ.

ಮಧು— ನಾನು ಕುಂಬಳಕಾಯಿಗೆ ಓಳಿ ತೆಗೆದಿಟ್ಟಿರುತ್ತೇನಮ್ಮ. ಆ ಮೇಲೆ ನೀನು ಬೀಜ ಹಾಕಿಬಿಡಮ್ಮ.

ಶ್ರೀಪತಿ—ಇಂಥಾ ಕೆಲಸಗಳನ್ನು ಈ ಮಕ್ಕಳಿಂದ ಮಾಡಿಸುವುದೇಕೆ ಹೇಳು. ಆ ಮಾರಪ್ಪನ್ನ ಬರಲಿಕ್ಕೆ ಹೇಳಿದ್ದೇನೆ. ಅವನಿಂದ ಮಾಡಿಸುವ. ಗೇಣಿಕೊಡದೆ ಬಾಕಿ ಮಾಡಿಕೊಂಡಿದ್ದಾನಲ್ಲಾ.

ಶಾರದೆ—ಆ ಗೇಣಿಬಾಕಿಗೆ ಅವನಿಂದ ಬಿಟ್ಟೀ ಚಾಕ್ರಿ ಮಾಡಿಸುವುದೆ?

ಶ್ರೀಪತಿ—ಅಲ್ವೇ. ಅದರಿಂದ ನಮ್ಮ

ಒಂದು ದಿನ ಬೆಳಗ್ಗೆ

"ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂಬ ಆರ್ಯೋಕ್ತಿಯಿದ್ದರೂ ಬುದ್ಧಿವಂತೆ ಶಾರದೆ ಅದನ್ನು ಮೀರದೆ ತನ್ನ ಯೋಜನೆಗಳಿಗೆ ಪತಿಯ ಅನುಮೋದನೆಯನ್ನು ಕುಶಲತೆಯಿಂದ ಒಂದು ದಿನ ಬೆಳಗ್ಗೆ ಪಡೆದುಕೊಂಡಳು. ಅಂದಿನಿಂದ ಶ್ರೀಪತಿರಾಯರ ವಿಚಾರ ಮತ್ತು ಜೀವನದಲ್ಲಿಯೂ ನವ ಸೂರ್ಯೋದಯವಾಯಿತು.

ನಾಟಿಕ ಕರ್ತರು: "ನವಗಿರಿನಂದ."

ಲೆಕ್ಕ ಮುಗಿದೀತೆ? ಪ್ರೋ ನೋಟು ಬರ್ಸಿಕೊಳ್ತೇನೆ ಗೊತ್ತೆ? ಒಪ್ಪಿದ್ದಾನೆ. ಹೇಳಿದರೆ ಈ ಕೆಲಸ ಕೂಡಾ ಮಾಡ್ತಾನೆ.

ಶಾರದೆ— ಅದೇ ಬೇಡಾ ಅನ್ನೋದು. ಅವನಿಂದ ಗದ್ದೆ ಬಿಡಿಸಿ ಬೇರೆ ಜನಕ್ಕೆ ಕೊಟ್ಟಾಯಿತಲ್ಲ. ಸಾಲಕ್ಕೂ ಬಿಟ್ಟಿ ಚಾಕ್ರೀಗೂ ಯಾಕೆ ಗಂಟು ಹಾಕ್ತೀರಿ? ಈಗ ಗದ್ದೆ ಬಿಡಿಸಿದ್ದಕ್ಕೆ ಆತ ಎಷ್ಟು ಚಿಂತೇಲಿದ್ದಾನೋ ಏನೋ.

ಶ್ರೀಪತಿ— ಹಾಗೆಲ್ಲಾ ಮನಸು ಕರಗಿದರೆ ಈ ಕಾಲದಲ್ಲಿ ಬದುಕಿದ ಹಾಗೇ. ನಿನಗ್ಯಾಕೆ ಅದೆಲ್ಲಾ?

ಶಾರದೆ— ಏನೋ ಕಾರ್ಯೋನ್ಮುಖ ಮಂತ್ರೀ ಅನ್ನುವ ಹಾಗೆ ನನಗೆ ತೋರಿದ್ದು ಹೇಳಿದೆ. ಆಗೊಳ್ಳಿ. ಮಾರನೇ ಬರುತ್ತಾ ಇದ್ದಾನೆ.

(೭ ಗಂಟೆ ಹೊಡೆದ ಸದ್ದು. ಶ್ರೀಪತಿ ಪೇಪರ್ ಓದುತ್ತಾ ಕೂಡುತ್ತಾನೆ. ಮಾರ ಬಂದ)

ಮಾರ— ನಮಸ್ಕಾರ ಬುದ್ಧಿ.

ಶ್ರೀಪತಿ— ಆ. ಇಕೋ ಶಾರದಾ. ಅಲ್ಲೊಂದು ಕಾಗದ ಉಂಟು ನೋಡು ಮೇಜೀ ಮೇಲೆ, ರೆವಿನ್ಯೂ ಸ್ಟಾಂಪು ಹಚ್ಚಿದ್ದು—ಅದನ್ನಿಲ್ಲಿ ತಾ.

ಮಾರ— ಮೂವತ್ತು ರೂಪಾಯಿ ತಾನೇ ಬುದ್ಧಿ? ಒಂದೂವರೆ ತಿಂಗಳಲ್ಲಿ ಹ್ಯಾಗಾದರೂ ತೀರಿಸಿಬಿಡ್ತಿದ್ದೆ. ಪ್ರೋನೋಟೇ ಆಗಬೇಕಂತೀರಿ ನೀವು. ಆ...ಯ್ತು.

ಶ್ರೀಪತಿ— ರೂಪಾಯಿಯಪ್ಪಾ ಅದೂ. ಎಲ್ಲಾ ಕಾನೂನಿಗೆ ಸರಿಯಾಗಿರಬೇಕು ನೋಡು.

ಶಾರದೆ— ಇಕ್ಕೊಳ್ಳಿ ಕಾಗದ—

ಶ್ರೀಪತಿ— ಇಕೋ ಮಾರಾ, ಈ ಸ್ಟಾಂಪಿನ ಮೇಲೆ ನಿನ್ನ ಹೆಬ್ಬೆರಳ ಮುದ್ರೆ ಒತ್ತಬೇಕು. ಶಾರದಾ, ಆ ಬ್ಲ್ಯಾಕ್ ರಿಬ್ಬನ್ ತಾಯಿಲ್ಲಿ. ನಾನು ಓದಿಹೇಳ್ತೇನೆ ಕೇಳು ಮಾರ.

ಮಾರ— ಬೇಡಬುದ್ಧಿ. ನಾನು ರುಜು ಮಾಡ್ತೇನೆ. ಸ್ವಲ್ಪ ಪೆನ್ನು ಕೊಟ್ಬಿಡಿ.

ಶ್ರೀಪತಿ—ಓ! ರುಜುಮಾಡ್ಲಿಕ್ಕೆ ಕಲ್ತಿದ್ದಿಯೇನೊ?

ಮಾರ—ಅದಕ್ಕೇನಾಗ್ಬೇಕು ಬುದ್ಧಿ. ಕಾಗ್ದಾ ಹೀಗೆ ಕೊಡೀ.

ಶ್ರೀಪತಿ—ತಡೀ ನಾ ಓದಿಹೇಳ್ತೇನೆ.

ಮಾರ—ಯಾಕೆ ಬುದ್ಧಿ ನಿಮಗೆ ಶ್ರಮ? ನನಗೇ ಓದಕ್ಕೆ ಬರುತ್ತಲ್ಲಾ. ಒಂದು ಕಾಗ್ದಾ ಕೊಟ್ರೆ, ನಾನೇ ಸ್ವಹಸ್ತ ನೋಟೂ ಬರುದು ಕೊಟ್ಟೇನು ಬುದ್ಧಿ.

ಶ್ರೀಪತಿ—ಎ....ಲಾ!....(ಸ್ವರದಲ್ಲಿ ತುಸು ನಡುಕ)

ಮಾರ—ಏನ ಸ್ವಾಮೀ— ಆಶ್ಚರ್ಯಪಡ್ತೀರಾ?

ಶ್ರೀಪತಿ—ಅಲ್ಲಾ ಯಾವಾಗ ನೀನು ಬರೆಹ ಕಲ್ತದ್ದೂಂತ?

ಮಾರ—ಓ! ಅದಾ? ಈಗ ದೊಡ್ಡೋರಿಗೇ ಅಂತ ರಾತ್ರಿ ಶಾಲೇ ಮಾಡಿ ಕಲ್ಸಿಕೊಡ್ತಾರಲ್ಲ ಬುದ್ಧಿ? ಅಲ್ಲಿ ಕಲ್ತೆ ನಾನು.

ಶ್ರೀಪತಿ—ಓಹೋ...ಸ....ರೀ...ಸರೀ ಅರರೆ! ಶಾರದಾ, ಇದಲ್ಲ—ನಾನು ಯಾವುದು ತರಲಿಕ್ಕೆ ಹೇಳಿದ್ರೆ ನೀನು ಯಾವುದು ತಂದದ್ದೆ? ಛೇ ಛೇ!

ಶಾರದೆ—ನೀವು ಹೇಳಿದಲ್ಲಿ ಇದೇ ಇತ್ತು. ತಂದೆ.

ಶ್ರೀಪತಿ—ಓ! ಅದು ನನ್ನ ಕಿಸೇಲೇ ಇದೇಂತ ಕಾಣುತ್ತೆ. ಇದಲ್ಲ. ಇದು ಬೇರೆ ವಿಷಯದ ಕಾಗದ.

ಶಾರದೆ—(ಒಳಗಿನಿಂದ) ಇಲ್ಲವಲ್ಲಾ. ನಿಮ್ಮ ಕಿಸೆಯಲ್ಲಿಯೂ ಇಲ್ಲ. ಎಲ್ಲಿಟ್ಟೀದೀರೋ ಏನೊ?

ಶ್ರೀಪತಿ—ಡ್ರಾವರಿನಲ್ಲಿಟ್ಟಿದ್ದೇನಾ ಅಲ್ಲ ಪುಸ್ತಕದೊಳಗಿಟ್ಟಿದ್ದೇನೋ? ಸರಿ ಮಾರಪ್ಪ. ನಾಳೇಬಾರೋ. ನೋಟು ಬರಿವ.

ಮಾರ— ನಿಮ್ಮಿಷ್ಟ ಬುದ್ಧಿ.

ಶಾರದೆ— ನಾನು ಹೇಳೋದು ಕೇಳ್ತೀರಾಂದ್ರೆ, ಒಂದು ಮೂವತ್ತು ರೂಪಾಯಿಗೆ ನೋಟು ಬರ್ಸೋದು ಯಾಕೇಂತ? ಬೇರೆ ದಾರಿಯೇನೂ ಇಲ್ಲವೆ?

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಪ್ರಕಾಶಕರು: **ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.**

ಮಾರಾಟಗಾರರು: **ನವಭಾರತ ಬುಕ್ ಡಿಪೊ, ಉಡುಪಿ.**

ಮಾರ— ಅಮ್ಮಾ, ನಾನು ಮಂದಿ ನೊತ್ತು ತಿಂದು ನಾಯೋ ಜಾತಿಯೇನಲ್ಲ. ಇನ್ನೊಂದುವರೆ ತಿಂಗಳಿನಲ್ಲಿ ಹುಲ್ಲು ಮಾರಿದ ದುಡ್ಡು ಬರುತ್ತೆ. ಆಗ ಹ್ಯಾಗಾದರೂ......

ಶಾರದೆ— ಅಂದ ಹಾಗೆ ನಮಗೆ ಎರಡು ಸಲಿಗೆ ಹುಲ್ಲು ತಂದುಹಾಕು. ಅದರಲ್ಲಿ ವಜಾಮಾಡಿದರೆ ಆಯಿತಲ್ಲ. ಉಳಿದದ್ದಕ್ಕೆ ನಾನು ದಾರಿಹೇಳುತ್ತೇನೆ.

ಮಾರ— ನೀವು ಪುಣ್ಯಾತ್ಮರು. ನಿಮ್ಮ ಹೊಟ್ಟೆ ತಣ್ಣಗಿರ್ಲೀ. ನಿಜಕ್ಕೂ ಕಳದ ವರ್ಷ ಮಳೇ ಕಾಲ ತಪ್ಪಿಬಂತು. ಗದ್ದೇನೂ ರಿಪೇರಿಯಿಲ್ಲದೆ ಮಣ್ಣು ಹೂತುಹೋಗಿದೆ. ಅದ್ದರಿಂದಲೇ ಬೆಳೇ ಬರ್ಲಿಲ್ಲಮ್ಮ. ಹೇಳಿದರೆ ನಂಬೋದಿಲ್ಲಾಂತಾರೆ ಯಜಮಾನ್ರು.

ಶ್ರೀಪತಿ— ಆ ಪುರಾಣ ಈಗ ಯಾಕಪ್ಪಾ? ನಿನ್ನಿಂದ ನೋಡಚೀಟಿ ಆದ್ಯಾತು ಹೋದ್ಯಾತು.

ಮಾರ - ಅದು ಸರೀ ಬುದ್ಧಿ. ಆ ಜನ್ರನೂ ನೀವು ಗದ್ದೆ ರಿಪೇರಿ ಮಾಡಿಸಿ ಕೊಟ್ರೇನೇ ಯಾರಾದ್ರೂ ಸರಿಯಾಗಿ ಬೆಳೆ ತೆಗೆದಾರು, ಸರಿಯಾಗಿ ಗೇಣೀನೂ ಕೊಟ್ಟಾರು ನಾಬರ್ತೇನ್ಬುದ್ಧಿ. (ಹೊರಟು ಹೋಗುವನು)

ಶ್ರೀಪತಿ— ಹೋದ್ನಾ? ಅಬ್ಬ! ಬದುಕಿದೆ ಪುಣ್ಯಕ್ಕೆ! ಇವ ಓದು ಬರೆಹ ಕಲ್ತು, ಕಾನೂನು ಮಾತಾಡ್ತಿದಾನೇ! ಹುಂ!

ಶಾರದೆ—ನನ್ನ ಮುಖಕ್ಕೆ ಮಂಗಳಾರ್ತೀ ಎತ್ತತಾನೇ ಅನ್ನಿ.

ಶ್ರೀಪತಿ—ಏನೇ ಶಾರೀ, ನೀನು ಕೂಡಾ.

ಶಾರದೆ—ಮತ್ತೇನೊಂದ್ರೆ, ಈ ಕಾಗ್ದ ಅವ ಓದ್ತಿದ್ರೆ ಏನಾಗ್ತಿತ್ತು ನಿಮ್ಮಗತಿ?

ಶ್ರೀಪತಿ—ಹೂಂ. ಬಿಡೂ. ಏನೋ ಹೇಳಿ ತಪ್ಪಿಕೊಂಡ್ಬಿಟ್ನಲ್ಲಾ!

ಶಾರದೆ—ಅಲ್ಲಾ, ಅವ ಮೂವತ್ರೂಪಾಯಿ ಕೊಡೋದಕ್ಕಿರುವಾಗ ಇದರಲ್ಲಿ ನೀವು ನೂರಮೂವತ್ರೂಂತ........

ಶ್ರೀಪತಿ—ಶ್ಶೂ! ಮಾತಾಡ್ಬೇಡ. ತಾಯಿತ್ತ—(ಪತ್ರ ಪತ್ರ ಹರಿದು) ಒಲೆಗೆ ಹಾಕಿದನ್ನು.

ಶಾರದೆ—ಅವ ನಿಜವಾಗಿ ಬರೆಹ ಗೊತ್ತಿಲ್ಲದವನಾಗಿರ್ತಿದ್ರೆ ಇದಕ್ಕೆ ರುಜು ಮಾಡೇ ಬಿಡ್ತಿದ್ದ ಪಾಪ. ಹೀಗೇ ನನ್ನ ತಾಯಿಗೂ ಅಣ್ಣ ತಮ್ಮಂದ್ರು ಮೋಸಮಾಡಿ, ಅವಳಿಗೊಂದು ಬಿಡಿಗಾಸೂ ಇಲ್ಲದ ಹಾಗೆ ಮಾಡಿಬಿಟ್ರು. ಬರೆಹ ಕಲೀದೆ ಇದ್ರೆ ಕಲಿತೋರು ಮಾಡುವ ಮೋಸ ಹ್ಯಾಗೆ ಗೊತ್ತಾದೀತು?

ಶ್ರೀಪತಿ-ನನ್ನ ಮೇಲೆ ಅವನಿಗೇನಾದರೂ ಸಂದೇಹ ಬಂದಿದ್ದೀತೇ?

ಶಾರದೆ-ಇರ್ಲಿಕ್ಕಿಲ್ಲ ಬಿಡೀ. ಥಕ್ಕನೆ ನೀವು ಸರಿಮಾಡಿಕೊಂಡು ಬಿಟ್ರಲ್ಲಾ. ಹೀಗೆ ಮೋಸ ಮಾಡುವ ಬುದ್ಧಿ ನಿಮಗೆ ಹ್ಯಾಗೆ ಬಂತೂಂತ?

ಶ್ರೀಪತಿ—ಮೋಸವೇನೂ ಇಲ್ಲ ಬಿಡೇ ಈ ಒಕ್ಕಲುಗಳು ಇದ್ದಾರಲ್ಲಾ, ಧನಿಗಳಿಗೆ ಮೋಸಮಾಡೋದಂದರೆ ಅವರಿಗೆ ನೀರು ಕುಡಿದ ಹಾಗೆ. ಅದಕ್ಕಾಗಿ ಹೀಗೊಂದು ಯುಕ್ತಿ ಹೂಡಿದೆ. ಆತ ಸರಿಯಾಗಿ ಹಣ ತಂದುಕೊಟ್ರಾ ಸರಿಹೋ

(೧೭ನೇ ಪುಟ ನೋಡಿರಿ)

"ಕೆನರಾ"-ನಾಮಕರಣದ ರಹಸ್ಯ

ಎಲ್ಲ ಜಿಲ್ಲೆಗಳಿಗೂ ಅವುಗಳ ಮುಖ್ಯ ಪಟ್ಟಣಗಳ ಹೆಸರನ್ನು ಕೊಡುವಾಗ, ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೊಂದು ವಿಶಿಷ್ಟ ನಾಮಕರಣವಾಗಿದೆ. ಇದರ ರಹಸ್ಯವೇನು ಎಂದು ತಿಳಿಯುವುದೂ ಕುತೂಹಲಕಾರಿಯಲ್ಲವೆ?

ಬರೆದವರು: ಶ್ರೀ ಸೆವೆರಿನ್ ಸಿಲ್ವ, ಬಿ. ಎ; ಎಲ್. ಎಲ್.ಬಿ.

ಬಹುಶಃ ಭಾರತದಲ್ಲಿನ ಪ್ರತಿಯೊಂದು ಜಿಲ್ಲೆಯೂ ಅದರ ಮುಖ್ಯ ಪಟ್ಟಣದ ನಾಮಕರಣವನ್ನೇ ಪಡೆದಿರುತ್ತದೆ. ಮುಖ್ಯಪಟ್ಟಣಗಳಾದ ಧಾರವಾಡ, ಬೆಳಗಾಂವ್‌ಗಳ ನಾಮಕರಣಗಳನ್ನೇ ಆಯಾಯ ಜಿಲ್ಲೆಗಳಿಗೂ ಮಾಡಿಲ್ಲವೆ? ಅಷ್ಟೇ ಅಲ್ಲದೆ ಈ ಜಿಲ್ಲೆಗಳಲ್ಲಿನ ಮುಖ್ಯ ತಾಲೂಕುಗಳಿಗೂ ಜಿಲ್ಲೆಯ ಹೆಸರುಗಳೇ ಇರುತ್ತವೆ. ಇಂಥ ತಾಲೂಕಿನ ಸುತ್ತಲಿನ ಇತರ ತಾಲೂಕುಗಳನ್ನು ಸಂಘಟಿಸಿಯೇ ಜಿಲ್ಲೆಗಳನ್ನು ರಚಿಸಿದರೆಂಬುದು ನಿರ್ವಿವಾದ. ಈ ವಿಚಾರವು ಎಲ್ಲ ಜಿಲ್ಲೆಗಳಿಗೂ ಅನ್ವಯಿಸುತ್ತದೆ.

ಈ ಸಾಮಾನ್ಯ ನಿಯಮಕ್ಕೆ ಅಪವಾದಗಳೆಂದರೆ 'ಕೆನರಾ' ಜಿಲ್ಲೆಗಳು ಮಾತ್ರ. ಉತ್ತರ ಯಾ ದಕ್ಷಿಣ ಕೆನರಾ (ಕನ್ನಡ) ಜಿಲ್ಲೆಗಳಲ್ಲಿ ಯಾವ ಸ್ಥಳದ ಹೆಸರೂ 'ಕೆನರಾ' ಎಂದಿಲ್ಲ ಮಾತ್ರವಲ್ಲ. ದಕ್ಷಿಣ ಕೆನರಾ ಜಿಲ್ಲೆಗೆ ಮಂಗಳೂರು ಮುಖ್ಯ ಪಟ್ಟಣವಿದ್ದರೆ, ಉತ್ತರ ಕೆನರಾ ಜಿಲ್ಲೆಗೆ ಈಗ ಕಾರವಾರವೂ ೧೮೬೨ರ ಪೂರ್ವದಲ್ಲಿ ಹೊನ್ನಾವರವೂ ಮುಖ್ಯಪಟ್ಟಣಗಳಾಗಿದ್ದುವು. ಹಲವರು ಇತ್ತೀಚೆಗೆ ಈ ಜಿಲ್ಲೆಗಳನ್ನು ಮಂಗಳೂರು ಮತ್ತು ಕಾರವಾರ ಜಿಲ್ಲೆಗಳೆಂದು ಕರೆಯಹತ್ತಿದರೂ, ಈ ಹೆಸರುಗಳು ಸಾಕಷ್ಟು ಬಳಕೆಗೆ ಬಂದಿಲ್ಲ.

'ಕೆನರಾ'ವನ್ನು ಇಂಗ್ಲೀಷಿನಲ್ಲಿ ಬರೆವಾಗ K ಯಿಂದಲೂ C ಯಿಂದಲೂ ಆರಂಭಿಸಿ ಬರೆಯುವುದಿದೆ. ಈ ಶಬ್ದದ ಉತ್ಪತ್ತಿ ಹೇಗಿದ್ದಿರಬಹುದು?

'ಕೆನರಾ' ಶಬ್ದವು ಬಳಕೆಗೆ ಬಂದುದಾದರೋ ಟಿಪ್ಪುವಿನ ಪತನದ ನಂತರವೇ, ಅಂದರೆ ೧೭೯೯ರಿಂದ. ಟಿಪ್ಪುಸುಲ್ತಾನನು ಸೋತೊಡನೆ, ಆತನ ಪ್ರಾಂತಗಳನ್ನೆಲ್ಲ ಇಂಗ್ಲಿಷರು ಮತ್ತು ಅವರ ಮಿತ್ರರೂ ತಂತಮ್ಮೊಳಗೆ ಹಂಚಿಕೊಂಡರು. ಮುಖ್ಯವಾಗಿ ಮೈಸೂರು ಅರಸನೊಡನೆ ೧೭೯೯ರಲ್ಲಿ ಮಾಡಿಕೊಂಡ ಒಪ್ಪಂದದ ಮೇರೆಗೆ ಟಿಪ್ಪು ಸೋತೊಡನೆಯೇ ಮೈಸೂರು ಪ್ರಾಂತವನ್ನೆಲ್ಲ ಆತನಿಗೊಪ್ಪಿಸಿ ಆತನಿಗೆ ಪಟ್ಟಾಭಿಷೇಕ ಮಾಡಲಾಯಿತು.

ಆತನಿಗೊಪ್ಪಿಸಬೇಕಾಗಿದ್ದ ಕರಾವಳಿ ಪ್ರಾಂತವನ್ನೆಲ್ಲ ಬ್ರಿಟಿಷರು, ತಮಗೆಂದು ಇರಿಸಿಕೊಂಡರು. ಅಲ್ಲದೆ ಈ ಪ್ರಾಂತವನ್ನೆಲ್ಲ 'ಕೆನರಾ' ವೆಂದು ಕರೆದು ಅಲ್ಲಿಗೆ ಮೇಜರ್ ಮನ್ರೋ ರೇವನ್ನಾ ಮತ್ತು ರೀಡ್‌ರನ್ನು ಆಡಳಿತಾಧಿಕಾರಿಗಳಾಗಿ ನೇಮಿಸಿದರು.

ಮದ್ರಾಸ್ ಸರಕಾರದ ಅಂಕೆಗೊಳಪಡಿಸಿದ ಈ ಪ್ರಾಂತವನ್ನು ಉತ್ತರ ಮತ್ತು ದಕ್ಷಿಣ ಭಾಗಗಳಾಗಿ ವಿಂಗಡಿಸಿ, ಕುಂದಾಪುರ ತಾಲೂಕನ್ನೊಳಗೊಂಡ ಉತ್ತರಕ್ಕೆ ಹೊನ್ನಾವರವನ್ನು ಮುಖ್ಯಪಟ್ಟಣವಾಗಿಯೂ, ದಕ್ಷಿಣಕ್ಕೆ ಮಂಗಳೂರನ್ನು ಮುಖ್ಯಪಟ್ಟಣವಾಗಿಯೂ ನಿಶ್ಚಯಿಸಲಾಯಿತು. ೧೮೬೨ರಲ್ಲಿ, ಕುಂದಾಪುರ ತಾಲೂಕನ್ನು ಹೊರತು ಉತ್ತರಭಾಗವನ್ನು ಮುಂಬೈ ಪ್ರಾಂತಕ್ಕೇ ಸೇರಿಸಲಾಯಿತು. ಉಳಿದೆಲ್ಲ ತಾಲೂಕುಗಳು ದಕ್ಷಿಣ ಜಿಲ್ಲೆಯಾಗಿ ಮದ್ರಾಸಿನಲ್ಲಿ ಉಳಿದುವು.

'ಕೆನರಾ' ಶಬ್ದದಂಥ ಪದವನ್ನು ಮೊದಲು ಅಂದರೆ ಕ್ರಿ. ಶ. ೯೪೩ರ ಸುಮಾರಿಗೆ ಉಪಯೋಗಿಸಿದವನು ಮಸೂದಿ (Masudi). ಮಂಕಿ (Manki) ಅಂದರೆ ಮಂಗ ಛೇಟಿ ಅಥವಾ ಮಾಲ್ಖೇಡದಲ್ಲಿನ (ಈಗಿನ ಮೈಸೂರಿನ ಗುಲ್ಬರ್ಗಾ ಜಿಲ್ಲೆಯಲ್ಲಿ) ಜನರು 'ಕಿರಿಯ' (Kiriya) ಭಾಷೆಯನ್ನು ಆಡುತ್ತಾರೆ ಎಂಬ ಈತನ ಉಲ್ಲೇಖವನ್ನು ನಕಲುತೆಗೆಯುವಾಗ 'ನನ್' (Nun) ಎಂಬ ಭಾಗವನ್ನು ತಪ್ಪಿಬಿಡಲಾಯಿತೆಂದೂ, ಆದುದರಿಂದ ಮೇಲಿನ ಉಲ್ಲೇಖದ ಭಾಷೆಯೇ 'ಕೆನರ್ಯ' ವಾ ಕೆನರಾ ಭಾಷೆ ಇರಬೇಕೆಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಸುಮಾರು ಕ್ರಿ. ಶ. 900 ರಷ್ಟರಲ್ಲೇ ಕರ್ನಾಟಕ ದೇಶದ ಮುಖ್ಯಪಟ್ಟಣವು ಗುಲ್ಬರ್ಗಾವೇ ಆಗಿದ್ದು, ಆ ದೇಶದ ಕನ್ನಡ ಭಾಷೆಯನ್ನೇ ಮಸೂದಿ ಮೇಲೆ ಹೇಳಿದಂತೆ 'ಕನರ್ಯ', 'ಕಿರಿಯಾ' ಎಂದು ಬರೆದನೆಂದೇ ಹೇಳಬಹುದು.

ಸುಮಾರು ೧೬೦೦ರಲ್ಲಿ ಬರೆದ ಲೇಖವೊಂದರಲ್ಲಿ ಡಾಯಗೋ ಡಿ ಕೌತಾ (Diogo De Couto) ಎಂಬಾತನು ವಿಜಯನಗರ ಸಾಮ್ರಾಜ್ಯವನ್ನೇ 'ಕೆನರಾ' ರಾಜ್ಯವೆಂದು ಕರೆದಿದ್ದಾನೆ. "ಈ ಕೆನರಾ ರಾಜ್ಯವು 1320ರಲ್ಲಿ ಸ್ಥಾಪಿತವಾಯಿತು. ಇದರ ಮೂಲನಾಮವು ಚರನ-ಥಾಕಾ (Charna-Thaca) ಎಂದಿದ್ದು ಇದು ರೂಪಾಂತರಹೊಂದುತ್ತ ಕೆನರಾವೆಂದು ಕರೆಯಲ್ಪಡುತ್ತಿದೆ." ಇದರಿಂದಲಂತೂ ಆತನು ವಿಜಯನಗರವನ್ನೇ ಕೆನರಾವೆಂದು ಕರೆದಿರಬೇಕು ಎನ್ನಬಹುದು.

ಸುಮಾರು ಹದಿನಾರನೆಯ ಶತಮಾನದಿಂದ ಇತ್ತ ಬರಲಾರಂಭಿಸಿದ ಐರೋಪ್ಯರಾದ ಪೋರ್ಚುಗೀಸ್, ಡಚ್ಚರು ಮತ್ತು ಇಂಗ್ಲಿಷರೇ ಈ ಶಬ್ದದ ಸೃಷ್ಟಿಗೆ ಕಾರಣರಾಗಿರಬೇಕು. ಮೊದಲು ಪೋರ್ಚುಗೀಸರೂ, ಸುಮಾರು ಒಂದು ಶತಮಾನದನಂತರ ಇಂಗ್ಲಿಷರೂ ಬಂದು ಇಲ್ಲಿನ ಕರಾವಳಿಯಲ್ಲೇ ವಿಸ್ತರಿಸಿದ ಬೆಡ್ನೂರ್ ಅರಸರೊಡನೆ ವ್ಯಾಪಾರಕ್ಕಾಗಿ ಸಂಪರ್ಕವನ್ನಿಟ್ಟುಕೊಂಡರು. ಮೊದಮೊದಲು ಈ ಸಂಪರ್ಕವು ಕೇವಲ ವ್ಯಾವಹಾರಿಕವಾಗಿದ್ದರೂ ಮುಂದೆ ಈ ಪಾಶ್ಚಾತ್ಯರು ಬೆಡ್ನೂರಿನ ಅರಸರನ್ನೂ 'ಕನ್ನಡ' ಅರಸರೆಂದೇ ಕರೆದರು.

ಆದರೆ 'ಕನ್ನಡ'ವನ್ನು ಬರೆಯುವಾಗ ಕನ್ನರ (Kannara) ವೆಂದೇ ಇವರು ಬರೆದರು. ಇದಕ್ಕಾದರೋ ಸಾಮಾನ್ಯ ಐರೋಪ್ಯನೊಬ್ಬನಿಗೆ 'ಡ'ವನ್ನುಚ್ಚರಿಸುವುದರಲ್ಲಿನ ಹೆಚ್ಚಿನ ಶ್ರಮವೇ ಕಾರಣವಾಗಿರುತ್ತದೆ. ಇನ್ನೊಂದು ಉದಾಹರಣೆಯೆಂದರೆ, ಇಂಗ್ಲಿಷರು ಕಾಡುವಾಡ (Kadwad) ವನ್ನು ಕಾರವಾರ (Carrvarra) ಎಂದು ಕರೆದುದು ಆಗಿರುತ್ತದೆ. ಮೊದಲ ಐರೋಪ್ಯ ವ್ಯಾಪಾರಿಗಳು ತಮ್ಮ ವ್ಯಾವಹಾರಿಕ ಭಾಷೆಯಾಗಿದ್ದ 'ಪಾಪಿಯಾ ಕ್ರಿಸ್ತಾವೊ'ನಲ್ಲಿ 'ಕೆನರಾ' ಶಬ್ದದಿಂದ ಬೆಡ್ನೂರು ರಾಜ್ಯವನ್ನು ಅಲ್ಲಿನ ಭಾಷೆಯಾದ ಕನ್ನಡವನ್ನು ಕರೆದರು ಎನ್ನುವುದು ನಿರ್ವಿವಾದ. ತನ್ನ 'ಲೂಸಿಯಾದ್' ಗ್ರಂಥದಲ್ಲಿ ಕಮೋಯೆ (Camoes) ಈ ಶಬ್ದವನ್ನು ಇದೇ ಅರ್ಥದಲ್ಲಿ ಬಳಸಿಕೊಂಡಿದ್ದಾನೆ.

ಆದರೆ ಈ ಶಬ್ದದ ವ್ಯುತ್ಪತ್ತಿಯನ್ನೇ ತಿಳಿಯದ ಪಾಶ್ಚಾತ್ಯರ ಮನಸ್ಸಿನಲ್ಲಿ ಅನೇಕ ಸಂದೇಹಗಳೂ ಇದ್ದು, ಈ ಶಬ್ದದ ಅಪಾ

(೧೬ನೇ ಪುಟ ನೋಡಿರಿ)

ಮೈಸೂರು ರಾಜ್ಯದಲ್ಲಿ ಸಂಭವಿಸಿದ ನೆರೆಹಾವಳಿಯಲ್ಲಿ ನೊಂದವರ ಪರಿಹಾರಕ್ಕಾಗಿ

ಕೆನರಾ ಬ್ಯಾಂಕಿನ ಚೇರಮನ್

ಶ್ರೀ ಎ. ದಾಮೋದರ ಪೈರವರು

ನಮ್ಮ ಮಾನ್ಯ ಮುಖ್ಯಮಂತ್ರಿ ಶ್ರೀ ಜತ್ತಿಯವರಿಗೆ

ತಾ. 29-7-1959ನೇ ಬುಧವಾರ ಒಪ್ಪಿಸಿದ

ಒಂದು ಲಕ್ಷ ಮತ್ತು ಒಂದು ರೂಪಾಯಿಯ

ಚೆಕ್ಕಿನ ಚಿತ್ರ



— ಜನತೆಯ ಸೇವೆಯಲ್ಲಿ —

ಕೆನರಾ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ: 1906

ವಿಶಾಲ ಭಾರತದ ಜನಜೀವನ



ಚಿತ್ರ: ೧

ಆಸ್ಯಾದ ಪ್ರಜಾಪ್ರಭುತ್ವವಾದೀ ರಾಷ್ಟ್ರಗಳಲ್ಲಿ ಅತಿ ವಿಶಾಲವಾದ ಮತ್ತು ಜನನಿಬಿಡವಾದ ರಾಷ್ಟ್ರ ಭಾರತದ ಜನಬಲವೂ ಅತ್ಯಧಿಕವಿದೆ. ಈ ಬಹುಧರ್ಮ, ಮತ ಮತ್ತು ಜಾತಿಗಳಿಗೆ ಸೇರಿದ ಜನರ ಜೀವನವು ಭಿನ್ನಭಿನ್ನವಾಗಿದ್ದು ತೀರ ನಿಕೃಷ್ಟಾವಸ್ಥೆಯಲ್ಲಿದೆ. ಪ್ರಜಾಪ್ರಭುತ್ವ ರಾಷ್ಟ್ರಗಳ ಆದ್ಯ ಕರ್ತವ್ಯಗಳಲ್ಲಿ ಜನಜೀವನವನ್ನು ಉನ್ನತೀಕರಿಸುವುದೂ ಒಂದಾಗಿದೆ ಎಂಬುದನ್ನು ಯಾರೂ ಮರೆಯುವಂತಿಲ್ಲ. ಇದಕ್ಕಾಗಿಯೇ ನವಭಾರತದ ನಿರ್ಮಾತರು ಈ ಬಗ್ಗೆ ಬಹುವಾಗಿ ಚಿಂತಿಸಿ, ಆವಶ್ಯಕವಾದ ಯೋಜನೆಗಳನ್ನು ರೂಪಿಸಿದ್ ರೆ; ಮತ್ತವನ್ನು ಯಥಾಯೋಗ್ಯವಾಗಿ ಕಾರ್ಯರೂಪಕ್ಕೆ ತರುತಿದ್ದಾರೆ.

ಇಲ್ಲಿ ತೋರುವ ಚಿತ್ರಗಳಲ್ಲಿ ಭಾರತದ ನಾನಾ ರೂಪವಾದ ಜನಜೀವನ ವಿಧಾನವನ್ನು ತಿಳಿದುಕೊಳ್ಳಬಹುದು.

ಮೊದಲನೆ ಚಿತ್ರ: ದೊಡ್ಡ ನೀರಾವರಿ ಯೋಜನೆಗಳು ದೇಶದ ಅಭಿವೃದ್ಧಿಗೆ ಕಾರಣವಾಗುತ್ತವೆ ಎಂಬುದು ನಿಜವಾದರೂ, ಅವುಗಳೊಡನೆ ಸಣ್ಣ ನೀರಾವರಿ ಕೆಲಸವನ್ನೂ ಮುಂದುವರಿಸಿಕೊಂಡು ಹೋಗುವುದು ಅವಶ್ಯವಾಗಿದೆ. ಈ ಚಿತ್ರದಲ್ಲಿ ಬೊಂಬಾಯಿ ರಾಜ್ಯದ ಹಳ್ಳಿಯೊಂದರಲ್ಲಿ ಕೊಳವೆ ಬಾವಿಗಳ ಮೂಲಕ ನೀರು ಹಾಯಿಸುತ್ತಿರುವುದನ್ನು ಕಾಣಬಹುದು.

ಎರಡನೆಯ ಚಿತ್ರ: ಗ್ರಾಮೀಣ ಪ್ರದೇಶದಲ್ಲಿ ರಸ್ತೆಗಳ ಅಭಾವವಿಂದು ತಾಂಡವವಾಡುತ್ತಿವೆ. ಇಂತಹ ದಿನಗಳಲ್ಲಿ ಅಲ್ಲಿ ಶ್ರಮದಾನದ ಮೂಲಕ ರಸ್ತೆಗಳನ್ನು ರಚಿಸುವ ಕಾರ್ಯವು ಬಿರುಸಿನಿಂದನಾಗುತ್ತಿದೆ. ಈ ಚಿತ್ರದಲ್ಲಿ ರಾಜಸ್ಥಾನದ ಮರಳುಗಾಡಿನಲ್ಲಿ ರಾಜಸ್ಥಾನಿಗಳು ವಿದ್ಯಾರ್ಥಿಗಳು ಶ್ರಮದಾನದ ಮೂಲಕ ಮಾರ್ಗ ನಿರ್ಮಾಣ ಕಾರ್ಯದಲ್ಲಿ ತತ್ಪರರಾಗಿರುವುದನ್ನು ಕಾಣಹುದು.

ಮೂರನೆಯ ಚಿತ್ರ: ಭಾರತದ ನೈಋತ್ಯ ಮತ್ತು ಆಗ್ನೇಯ ಭಾಗಗಳಲ್ಲಿ ಮುಂಗಾರು ಮಳೆಯನ್ನೇ ಕೃಷಿಯು ಹೊಂದಿಕೊಂಡಿದೆ. ಮಳೆ ಸುರಿಯಲಾರಂಭಿಸಿತೆಂದರೆ, ಅಲ್ಲಿನ ರೈತ ಜನರ ಸಡಗರಕ್ಕೆ ಪಾರವೇ ಇಲ್ಲ. ಆದರೆ, ಅವರು ಮುಂಗಾರಿನೊಡನೆ ಜೂಜಾಟಕ್ಕೆ ನಿಲ್ಲಬೇಕಾಗುವುದು. ಭಾರತೀಯ ಕೃಷಿಕನೊರ್ವನು ತನ್ನ ಪ್ರೀತಿಯ ಎತ್ತು ಜೋಡಿಗೆ ನೇಗಿಲನ್ನು ಕಟ್ಟಿ ಉಳುತ್ತಿರುವುದನ್ನು ಈ ಚಿತ್ರದಲ್ಲಿ ನೋಡಬಹುದು. ಸದ್ಯ ನಡೆಯುತ್ತಿರುವ ಮತ್ತು ಮುಂದೆ ನಡೆಯಲಿರುವ ನೀರಾವರಿ ಯೋಜನೆಗಳಿಂದ ರೈತರು ಮುಂಗಾರನ್ನೇ ಹೊಂದಿಕೊಂಡಿರಬೇಕಾದ ಪ್ರಮೇಯ ಕಡಿಮೆಯಾಗಬಹುದು.

ನಾಲ್ಕನೆಯ ಚಿತ್ರ: ಗುಡ್ಡಗಾಡುಗಳ ಜನರನ್ನು ಇತರ ಭಾರತೀಯ ನಾಗರಿಕರ ಮಟ್ಟಕ್ಕೆ ತರುವ ಪ್ರಯತ್ನಗಳು ತುದಿ ಮೊದಲಿಲ್ಲದೆ ಸಾಗುತ್ತಿವೆ. ತಮ್ಮ ಸ್ಥಾನಮಾನಗಳ ಬಗೆಗೆ ಸಂಕುಚಿತರಾದ ಈ ಜನಾಂಗವನ್ನು ನಾಗರಿಕಗೊಳಿಸುವುದು ತುಂಬ ಪ್ರಯಾಸಕರವಾದ ಕೆಲಸ. ಆದರೂ ದಿನೇ ದಿನೇ ನಿರಂತರವಾಗಿ ಸಾಗುತ್ತಿರುವ ಕಾರ್ಯಯೋಜನೆಗಳಿಂದ ಅವರೂ ಇತರರೊಡನೆ ಬೆರೆಯುವ ಧೈರ್ಯ ತಾಳಿದ್ದಾರೆ; ಇತರರೂ ಅವರನ್ನು ಕರುಣಾಕಟಾಕ್ಷದಿಂದ ನೋಡುತ್ತಾರೆ. ಉಭಯತರ ನಡುವಿನ ಸಾಮರಸ್ಯದಿಂದಾಗಿಯೇ ಗಿರಿಜನರು, ಹರಿಜನರು ಹಾಗೂ ಬುಡಕಟ್ಟಿನ ಜನರು ಸಾಮಾಜಿಕ ಜೀವನದಲ್ಲಿ ಪಾದಾರ್ಪಣ ಮಾಡುತಿದ್ದಾರೆ. ಈ ಚಿತ್ರದಲ್ಲಿ ಅಂತಹ ಇರ್ವರು ಬುಡಕಟ್ಟು ಪ್ರದೇಶ ವಾಸಿಗಳು ಗೋದಿ ಕೆರೆಯುವುದನ್ನು ಕಾಣಬಹುದು.

ಐದನೆಯ ಚಿತ್ರ: ಗ್ರಾಮೀಣ ಪ್ರದೇಶದ ಜನರು ತಮ್ಮ ಉದರಭರಣ ಕಾರ್ಯದಲ್ಲಿಯೇ ಆಸಫಲರಾಗಿರುವಾಗ ತಮ್ಮ ಮಕ್ಕಳಿಗೆ ವಿದ್ಯೆಯೂಯುವುದರಲಿ ಅವರೊಡನೆ ನಿಮಿಷಾರ್ಧ ವಿನೋದವಾಡುವುದಕ್ಕೂ ಬಿಡುವು ಮಾಡಿಕೊಳ್ಳಲಾರರು. ಆದುದರಿಂದಲೇ ಗ್ರಾಮೀಣ ಜನಾಂಗವು ನಾಗರಿಕ ಪ್ರಪಂಚದಿಂದ ಹರದಾರಿ ದೂರವಿರುತ್ತದೆ. ಆದರೆ, ಗ್ರಾಮ ಸೇವಿಕೆಯರನ್ನು ಅಂತಹ ಹಳ್ಳಿಗಳಿಗೆ ಕಳಿಸಿ ಅವರ ಮೂಲಕ ಆ ಮಕ್ಕಳಿಗೆ ಆವಶ್ಯಕವಾದ ಆಟ, ಪಾಠ, ವಿನೋದಾದಿಗಳನ್ನು ಕಲ್ಪಿಸುವ ಕಾರ್ಯವು ಈಗೀಗ ಸಫಲವಾಗುತ್ತಿದೆ. ಇದರಿಂದ ಆ ಮಕ್ಕಳೂ ಬೆಳೆದುಬರುವಾಗ ಉತ್ತಮ ನಾಗರಿಕರಾಗುವುದು ಸಾಧ್ಯವೆಂದು ಹೇಳಬಹುದು. ಈ ಚಿತ್ರದಲ್ಲಿ ಉತ್ತರ ಪ್ರದೇಶದ ಜನೋಳಿ ಹಳ್ಳಿಯಲ್ಲಿ ಮಾಯಾದೇವಿ ಎಂಬ ಗ್ರಾಮ ಸೇವಿಕೆಯು ಸಂತೋಷಜನಕವಾದ ಆರೋಗ್ಯವಂತವಾದ ಜೀವನವನ್ನು ಬದುಕಲು ಅವಶ್ಯಕವೆನಿಸಿದ ವಿದ್ಯೆಯನ್ನು ಅಂತಹ ಹಳ್ಳಿಯ ಮಕ್ಕಳಿಗೆ ಪ್ರದಾನಿಸುತ್ತಿರುವುದನ್ನು ಕಾಣಬಹುದು.

ಆರನೆಯ ಚಿತ್ರ: ಭಾರತದ ಸಮಸ್ಯೆಗಳಲ್ಲಿ ಅತಿ ಮಹತ್ವಪೂರ್ಣ ಸ್ಥಾನವನ್ನು ಪಡೆದ ಆಹಾರ ಸಮಸ್ಯೆಯನ್ನೂ ದೂರೀಕರಿಸುವತ್ತ ದೇಶನಾಯಕರು ಗಮನ ಹರಿಸಿದ್ದಾರೆ. ಉತ್ತಮ ರೀತಿಯ ನೀರಾವರಿ ಸೌಕರ್ಯವನ್ನು ಒದಗಿಸುವುದಲ್ಲದೇ ಸಾರವತ್ತಾದ ರಾಸಾಯನಿಕ ಹಾಗೂ ಹಸುರು ಗೊಬ್ಬರಗಳ ಉಪಯೋಗ, ಪುಷ್ಟಿಕರವಾದ ಸುಧಾರಿತ ಬೀಜ ಮೊದಲಾದುವುಗಳ ಒದಗಿಸುವಿಕೆಯೂ ಈ ದಿಸೆಯಲ್ಲಾದ ಸಾಧನೆಗಳು ಆಂಧ್ರ ಪ್ರದೇಶದ ನೀರು ತುಂಬಿನ ವಿಶಾಲ ಕ್ಷೇತ್ರವೊಂದರಲ್ಲಿ ಅಲ್ಲಿನ ಸ್ತ್ರೀಯರು ಈ ರೀತಿಯ ಉತ್ತಮಸ್ತರದ ಭತ್ತದ ಅಗೆಗಳನ್ನು ನಾಟುವುದರಲ್ಲಿ ತಲ್ಲಿನರಾಗಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ಇದೇ ರೀತಿಯಲ್ಲಿ ಜೀವನದ ಸರ್ವಕ್ಷೇತ್ರದಲ್ಲಿಯೂ ಅದನ್ನು ಉನ್ನತೀಕರಿಸುವ ಪ್ರಯತ್ನ ನಿರಂತರವಾಗಿ ಸಾಗುತ್ತಿದೆ ಎಂಬುದನ್ನು ನೆನಪಿನಲ್ಲಿಡಬೇಕು.

ಚಿತ್ರ: ೨

ಚಿತ್ರ: ೩

ಚಿತ್ರ: ೪

ಚಿತ್ರ: ೫

ಚಿತ್ರ: ೬

"ಕೆನರಾ" ನಾಮಕರಣದ ರಹಸ್ಯ

(೧೩ನೇ ಪುಟದಿಂದ)

ಶಾಸ್ತ್ರೀಯ ಪ್ರಯೋಗಗಳನ್ನು ನಾವು 16ನೆ ಮತ್ತು 17ನೆಯ ಶತಮಾನದ ಲೇಖಕರಲ್ಲಿ ಕಾಣುತ್ತೇವೆ. ಪೆ. ಫೆರ್ನಾವೊ. ಕ್ವೆರೋಜ ನಮೂದುಗಳವು: "ಪಾದ್ರಿಯೊಗ ತಕ್ಕವರು ಮಂಗಳೂರಿನಲ್ಲಿ ಹಿಂದಿಯನ್ನೂ, ಉತ್ತರದಲ್ಲಿ ಮರಾಠಿಯನ್ನೂ ಗೋವಾದಲ್ಲಿ ಕೆನರಿನ್‌ವನ್ನೂ, ಕೆನರಾ ಮತ್ತು ಮೈಸೂರುಗಳಲ್ಲಿ ಕೆನರ ಭಾಷೆಯನ್ನೂ ಕಲಿಯತಕ್ಕದ್ದು." ಹಾಗೆ ಕೆನರಾ ಶಬ್ದದಿಂದ ಭಾಷೆಯನ್ನೂ, ದೇಶವನ್ನೂ ಕರೆಯುತ್ತಿದ್ದರು. ಕೆನರಾಶಬ್ದವು ವಿಶಿಷ್ಟ ಭಾಷೆಯನ್ನೇ ನಿರ್ದೇಶಿಸುತ್ತದೆ ಎಂಬುದು ಜೂಲಿಯೋ ಬಿಕರ್‌ನ ಅಭಿಪ್ರಾಯ. ಶಾಸನ್ ಹೀಡಾನ ಅಭಿಪ್ರಾಯದ ಮೇರೆಗೆ ಕೆನರಾವು ಮ್ಲೇಚ್ಛರ ಭಾಷೆ. ಇಂಥ ಭಾಷೆಯ ಶಬ್ದಗಳನ್ನೆಲ್ಲ ಡಾ। ದಲ್ಗಾಡೋ ತನ್ನ ಗ್ರಂಥವೊಂದರಲ್ಲಿ ಕ್ರೋಢೀಕರಿಸಿದ್ದಾರೆ.

ಈ ಪಾಶ್ಚಾತ್ಯ ಪ್ರವಾಸಿಗಳು, ವ್ಯಾಪಾರಿಗಳು 'ಕೆನರಿನ್' (Canarin) ಎಂಬ ಇನ್ನೊಂದು ಶಬ್ದವನ್ನು ಪ್ರಯೋಗಿಸುತ್ತಿದ್ದರು. ಇದು ಕೆನರಾಶಬ್ದದಿಂದ ಪ್ರತ್ಯೇಕವಾದುದು ಎಂಬುದನ್ನು ಗಮನಿಸಬೇಕು. ಕ್ರಿ. ಶ. ಹತ್ತನೆಯ ಶತಮಾನದಲ್ಲಿ ಶೇಣ್ವಿ (ಕೊಂಕಣಿ ಬ್ರಾಹ್ಮಣರು) ಉತ್ತರದಿಂದ ಗೋವದತ್ತ ವಲಸೆ ಬಂದಾಗ ಅಲ್ಲಿ ಕದಂಬರಾಳುತ್ತಿದ್ದು ರಾಜ ಭಾಷೆಯು ಕನ್ನಡವಾಗಿತ್ತು. ಈ ವ್ಯಾಪಾರಿಗಳಾದ ಶೇಣ್ವಿಗಳು ತಮ್ಮ ಕೊಂಕಣಿಭಾಷೆಯಲ್ಲೇ ಆದರೆ ಕನ್ನಡ ಲಿಪಿಯಲ್ಲಿ ಲೆಕ್ಕ ಪತ್ರಗಳನ್ನಿಡುತ್ತಿದ್ದರು. ಅಲ್ಲದೆ ತಂತಮ್ಮೊಳಗೆ ಪತ್ರವ್ಯವಹಾರವನ್ನೂ ಕನ್ನಡಲಿಪಿಯಲ್ಲಿನ ಕೊಂಕಣಿಯಲ್ಲೇ ನಡೆಸುತ್ತಿದ್ದರು.

೧೩ನೆಯ ಶತಮಾನದಲ್ಲಿ ಕದಂಬ ರಾಜ್ಯವು ಪತನವಾದ ನಂತರವೂ ಇದೇ ಪದ್ಧತಿ ಪ್ರಚಾರದಲ್ಲಿದ್ದು ೧೬, ೧೭ನೇ ಶತಮಾನಗಳಲ್ಲಿ ಗೋವೆಗೆ ಬಂದ ಯುರೋಪ್ಯರು ಕೂಡ ಈ ಭಾಷೆ ಮತ್ತು ಪದ್ಧತಿಗಳಿಂದ ವಿಸ್ಮಿತರಾದರು. ಬೆಷ್ಟಾರಿನ ಕನ್ನಡ ಭಾಷೆಗಿಂತ ಪ್ರತ್ಯೇಕವೇ ಆಗಿದ್ದ ಇದನ್ನು ಇವರು "ಕೆನರಿನ್" ಎಂದು ಕರೆದರಲ್ಲದೆ ಎಲ್ಲ ಯುರೋಪ್ಯರೂ ಈ ಹೊಸ ಶಬ್ದವನ್ನು ಬಳಸಿದರು. ಪಿರಾರ್ಡ್‌ನ (Pyrard) ಮಾತುಗಳಿವು: "ಗೋವೆಯಲ್ಲಿ ಎಲ್ಲ ಬಿಡು ವ್ಯಾಪಾರವೂ ಬಂಜಾಮ (ಬನಿಯಾ) ಕೆನರಿನ್ ಮತ್ತಿತರ ವಿದೇಶೀಯರ....ಕೈಯಲ್ಲಿದೆ".

ಹೀಗೆ ಕೆನರಿನ್ ಶಬ್ದದಿಂದ ಕೊಂಕಣಿಯನ್ನೂ ಆ ಭಾಷೆಯನ್ನಾಡುವವರನ್ನು ಸಂಬೋಧಿಸಲಾಗುತ್ತಿತ್ತು. ಫಾ. ಥೋಮಸ್ ಸ್ಟೀವನ್ಸ್, ಎಸ್.ಜೆ ಕ್ರಿಶ್ಚಿಯನ್ ಸೂತ್ರಗಳನ್ನು ಬರೆದ ಗ್ರಂಥಕ್ಕೆ ಕೂಡ 'ಬ್ರಾಹ್ಮಣ-ಕೆನರಿನರ ಭಾಷೆಯಲ್ಲಿ ಕ್ರೈಸ್ತ ಸೂತ್ರಗಳು" (doctrina Crista en lingua Brahmana Canarrina) ಎಂಬ ಶಿರೋನಾಮೆಯನ್ನೇ ಕೊಡಲಾಗಿದೆ.

೧೬೮೪ರಲ್ಲಿ ಕೊಂಕಣಿ ಭಾಷೆಗೇ ಮುಟ್ಟುಗೋಲು ಹಾಕಿದ ಪೋರ್ಚುಗೀಸ ಸರಕಾರದ ಆಶ್ರಯದಲ್ಲಿ ಈ ಭಾಷೆಯು ಬೆಳೆದುದಾಯಿತು. ಇದನ್ನು ಮುಂದೆ ಕಂಝ್ಬಿ (Kanzbi) ಭಾಷೆಯೆಂದು ಕರೆದರು. ಪೋರ್ಚುಗೀಸು ಪ್ರಾಬಲ್ಯದ ಕಾಲದಲ್ಲೂ ಇದನ್ನು ಅಂಗಡಿಗಳಲ್ಲಿ, ಇತರ ಮಾರುಕಟ್ಟೆಗಳಲ್ಲಿ ವ್ಯವಹರಿಸತಕ್ಕವರಿಗೆಲ್ಲ ಕಲಿಸಲಾಗುತ್ತಿತ್ತು. ಈ ಭಾಷೆಯ ಬರೆಹಗಳನ್ನು ಮ್ಯೂಜಿಯಮ್‌ನಲ್ಲಿ ಇಂದಿಗೂ ನೋಡಬಹುದು. ಡಚ್ಚರೂ ಕೂಡ ತಮ್ಮ ಬರಹಗಳಲ್ಲಿ ಕೆನರಿನ್ ಮತ್ತು ಕಂಝ್ಬಿ ಭಾಷೆಗಳ ಕುರಿತಾಗಿ ಬರೆಯುತ್ತಾರೆ.

೧೭೨೧ರಲ್ಲಿ 'ಕೊಂಕಣಾಖ್ಯಾನ' ಗ್ರಂಥವು ಪ್ರಕಾಶಿತವಾಯಿತು. ಅದರ ನಂತರ ಕೆನರಿನ್ ಪದದ ಪ್ರಯೋಗವು ಕಾಣುವುದಿಲ್ಲ. ಅನಂತರ ಕೆನರ ಶಬ್ದವು ಮಾತ್ರ ಉಳಿದಿದೆ. ಮತ್ತು ಕೆನರಿನ್ ಭಾಷೆಯನ್ನು ಕೊಂಕಣಿ ಭಾಷೆಯೆಂದೇ ಕರೆಯಲಾಗುತ್ತಿದೆ.

೧೭೬೩ರಲ್ಲಿ ಹೈದರನು ಈ ರಾಜ್ಯವನ್ನು ಗೆದ್ದ ನಂತರ ಕೆನರಾ ಶಬ್ದವನ್ನು ತ್ಯಜಿಸಿ ಈ ಭಾಗವನ್ನೆಲ್ಲ 'ಸುಭಾ, ಕಿನಾರ' ಎಂದು ಕರೆದನು. ಇದು ಕಂಠವಳಿಯ ಜಿಲ್ಲೆ (ಸುಭಾ) ಎಂದರ್ಥವನ್ನೀಯುತ್ತದೆ. ಈ ಜಿಲ್ಲೆಯಲ್ಲಿ ಈಗಿನ ಉತ್ತರ, ದಕ್ಷಿಣ ಕನ್ನಡಗಳೆರಡೂ ಸೇರಿದ್ದವು.

೧೭೯೯ ರ ನಂತರ ಬ್ರಿಟಿಷರು ಇದನ್ನು ಪಡೆದು ಇದರ ವಿಂಗಡೀಕರಣದಲ್ಲಿ ಅಷ್ಟರತನಕ ಪ್ರಚಲಿತವಿದ್ದ ಸೂತ್ರಗಳನ್ನೇ ಗ್ರಹಿಸಿದರೂ, ತಮ್ಮ ಹಳೆಯ ಭಾವನೆಗಳಿಗೆ ಅನುಸಾರವಾಗಿಯೇ ಆ ಭಾಗಗಳನ್ನು 'ಕೆನರಾ' ಎಂದು ಕರೆದರು.

ನಮ್ಮ ಗ್ರಾಹಕರಿಗೂ, ಹಿತಚಿಂತಕರಿಗೂ

೧೩ನೇ ಸ್ವಾತಂತ್ರ್ಯೋತ್ಸವದ

ಹಾರ್ದಿಕ ಅಭಿನಂದನೆಗಳು

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್

ತೆಂಕಪೇಟೆ - - - - ಉಡುಪಿ

SRI GAJANANA CLOTH STORES

TENKAPET, UDIPI.

THE FASHION CREATORS IN THE TOWN &
WHERE ALWAYS SOME THING IS NEW!

ಶ್ರೀ ಅಂಬಾಳ್ ರವರ

ಆಫೀಸರ್ಸ್ ನಶ್ಯದ

ಒಂದೇ ಒಂದು ಚುಟಿಕೆಯು ಬಹು
ಚಮತ್ಕಾರಕವಾಗಿ ಕೆಲಸಮಾಡುತ್ತೆ.



ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ೧.

ಧಾತುಪುಷ್ಟಿ ಲೇಹ (ಸುವರ್ಣ, ಸಾಲಾಮಿಶ್ರಿ ಕಲ್ಮದ ಮಿಶ್ರಿತ)
ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ –
ಪೌಂಡಿಗೆ ರೂ. 7 - 0—0. ಪೌ. ½ರ ರೂ. 4—0 - 0.

ಕಸ್ತೂರಿ ಮಿಶ್ರಣ ದಶಮೂಲ – ಇದು ಪ್ರಸವಾನಂತರ ಬಾಣಂತಿಯರಿಗೆ ಶಕ್ತಿವರ್ಧಕ ರಸಾಯನ –
24 ಔನ್ಸ್ ರೂ. 6-0-0. 12 ಔ. ರೂ. 3-0-0 8 ಔ. ರೂ. 2-0-0

ಚ್ಯವನ ಪ್ರಾಶ ಲೇಹ (ಬಂಗಾರ ಮಿಶ್ರಿತ) ಶಾರೀರಿಕ ಮತ್ತು ಮೆದುಳು ಶಕ್ತಿವರ್ಧಕ ಪೌಂಡಿಗೆ ರೂ. 6—0—0. ½ಪೌ. ರೂ. 3—4—0.

ಬಾಲಗ್ರಹ ಗುಟಿಕೆ ಮಕ್ಕಳ ಚೇಷ್ಟೆಗೆ- ಬಾಟ್ಲಿ 1ರ ರೂ.1-0-0.

ಮಹಾ ಭೃಂಗಾಮಲಕ ತೈಲ - ನಿದ್ರಾಹೀನತೆಗೆ ಜ್ಞಾಪಕ ಶಕ್ತಿಗೆ
ಬಾಟ್ಲಿ 1ರ ರೂ. 2—0—0.

ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ.
ಕೆಟಲಾಗಿಗೆ ಬರೆಯಿರಿ.

ಔಷಧಿಗಳು ಸಿಗುವ ಸ್ಥಳ: 1) ನ್ಯೂ ಬ್ಯಾಕುಲ್ಲಾ ಸ್ಟೋರ್ಸ್, ಕೆಮಿಸ್ಟ್ಸ್, 643-A ಡಿಲ್ಯಾಲ್ ರೋಡು, ಬ್ಯಾಕುಲ್ಲಾ 2) ಜನರಲ್ ಸ್ಟೋರ್ಸ್, G.I.P. ಮಾಟುಂಗಾ, 3) ನ್ಯೂ ಕೆನರಾ ಜನರಲ್ ಸ್ಟೋರ್ಸ್, ವಿಕ್ಟೋರಿಯಾ ಗಾರ್ಡನ್ ರೋಡ್, ಬ್ಯಾಕುಲ್ಲಾ. 4) ಪ್ರಭು ಫಾರ್ಮಸಿ, ಕಾರ್ಕಳ, 5) ಜಯಾ ಫಾರ್ಮಸಿ, ಕುಂದಾಪುರ. 6) ಶ್ರೀಧರ ಭಟ್ ಬ್ರದರ್ಸ್, ಪುತ್ತೂರು. 7) ವೆಂಕಟ ಸ್ಟೋರ್ಸ್, ಸುಳ್ಯ 8) T. ಗೋಪಾಲಕೃಷ್ಣ ಪೈ, ಮರ್ಚಂಟ್, ಬ್ರಹ್ಮಾವರ. 9) ಪೈ ಸ್ಟೋರ್ಸ್, ಪುತ್ತೂರು. 10) ಶ್ರೀಕೃಷ್ಣಾ ಫಾರ್ಮಸಿ ಪುತ್ತೂರು.

ಸತ್ಯವೇ ಗೆಲ್ವುದನೃತಂ ಸಲ್ಲದೈ-‡

[ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.]

ಅಥರ್ವವೇದಕ್ಕೆ ಸಂಬಂಧಿಸಿದ ಮುಂಡಕೋಪನಿಷತ್ತಿನಲ್ಲಿ ಮೂರು ಮುಂಡಕಗಳಿವೆ. ಪ್ರತಿ ಮುಂಡಕವೂ ಎರಡು ಖಂಡಗಳನ್ನೊಳಗೊಂಡಿದೆ. ಈ ಉಪನಿಷತ್ತು, ಅವಿದ್ಯೆಯಿಂದುಂಟಾದ ಭ್ರಾಂತಿಯನ್ನು ಮುಂಡನ ಕ್ರಿಯೆಯಂತೆ ಕತ್ತರಿಸುವುದೆಂದೂ, ಇದಕ್ಕೆ ಮುಂಡನ ಕ್ರಿಯೆಯನ್ನು ಮಾಡಿದ ಸನ್ಯಾಸಿಗಳೇ ಅರ್ಹರೆಂದೂ, ಈ ಉಪನಿಷತ್ತಿಗೆ ಮುಂಡಕೋಪನಿಷತ್ ಎಂಬ ಹೆಸರು ಬಂತು. ಈ ಮೂರನೆಯ ಮುಂಡಕದಲ್ಲಿ ಯುಕ್ತಾತ್ಮರು ಬ್ರಹ್ಮವನ್ನು ಹೊಂದುವ ರೀತಿ ಮತ್ತು ಮುಕ್ತಿಯ ಲಕ್ಷಣಗಳನ್ನು ತಿಳಿಸಿದೆ. ಬ್ರಹ್ಮವನ್ನು ತಿಳಿದವನು ಬ್ರಹ್ಮನಾಗುವನು; ಅವನು ಹೃದಯ ಗ್ರಂಥಿಗಳಿಂದ ಬಿಡುಗಡೆ ಹೊಂದಿ ಅಮೃತನಾಗುವನೆಂಬುದೇ ಈ ಉಪನಿಷತ್ತಿನ ಸಂದೇಶವಾಗಿದೆ.

ಎರಡು ಹಕ್ಕಿಗಳು ಗೆಳೆತನಗೊಂಡು ಜತೆಯಾಗಿ
ಒಂದೆ ವೃಕ್ಷವ ಹೊಂದಿಕೊಂಡಿರುವುವು;
೧- ಅವುಗಳಲ್ಲೊಂದು ತಿನುತಿದೆ ಹಣ್ಣ ಸವಿಯಾಗಿ,
ನೋಡುತಿದೆ ತಿನದೆ ಮೇಣೊಂದು ಖಗವು.

ಒಂದೆ ವೃಕ್ಷದಿ ಕುಳಿತು ಗೊಂದಲದೊಳಿಹ ಜೀವಿ
ಶೋಕಿಪಂ ದೈನ್ಯದಿಂ ಮೋಹಗೊಂಡು;
೨- ಸೇವ್ಯನಹ ಸ್ವಾಮಿಯ ಮಹಾತ್ಮೆಯನ್ನಿಂತೆಂದು
ನೋಳ್ಪಂದು ಬತ್ತುವುದು ದುಃಖಸಿಂಧು.

ಎಂದು ನೋಳ್ಪನು ಸ್ವರ್ಣವರ್ಣ ಕರ್ತಾರನನ
ಬ್ರಹ್ಮಯೋನಿಯ ನೀಶನನ್ನು ಋಷಿಯು—
೩- ಅಂದು ತೊಲಗಿಸಿ ಪುಣ್ಯಪಾಪಗಳ ವಿದ್ವಾನ್ ನಿ
ರಂಜನಂ ಪಡೆವ ಪರಮಂ ಸಾಮ್ಯವು.

ಪ್ರಾಣವಿದು ಸರ್ವಭೂತಗಳಲ್ಲಿ ಹೊಳೆಯುವುದು,
ಅತಿವಾದಿಯಾಗನಿದ ನರಿತುಕೊಂಡು;
೪- ಆತ್ಮರತಿಯಾತ್ಮ ಕ್ರೀಡಂ ಕ್ರಿಯಾವಾನ್ ಬ್ರಹ್ಮ
ವಿದರೊಳವನು ವರಿಷ್ಠನಹನುಯೆಂದು.

ಸತ್ಯದಿಂ ಲಭ್ಯನಾತ್ಮಂ ಮೇಣು ತಪದಿ ಸ
ಮ್ಯಗ್ಜ್ಞಾನ ಬ್ರಹ್ಮಚರ್ಯದಿ ನಿತ್ಯವು;
೫- ಅಂತಃ ಶರೀರದಲಿ ಜ್ಯೋತಿರ್ಮಯಂ ಶುಭ್ರ
ನಿವನ ನಿರ್ದೋಷಿಯತಿಗಳ್ ಬಲ್ಲರು.

ಸತ್ಯವೇ ಗೆಲ್ವುದನೃತಂ ಸಲ್ಲದೈ; ದೊರಕು
ವುದು ದೇವಯಾನಪಥ ಸತ್ಯದಿಂದ;
೬- ಆಪ್ತಕಾಮರು ಋಷಿಗಳೈದು ತಿಹರಾವುದರ
ನಿದೆ ಹಿರಿಯ ನೆಲೆಯಹುದು ಸತ್ಯಕೆಂದ.

ಅದು ಬೃಹತ್ತದು ದಿವ್ಯಮದ ಚಿಂತ್ಯ ರೂಪವದು
ಸೂಕ್ಷ್ಮದಿಂ ಸೂಕ್ಷ್ಮತರವೆನೆ ಹೊಳೆವುದು;
೭- ಅದು ದೂರದಿಂ ಸುದೂರವದಿಲ್ಲಿ ಹತ್ತಿರ ದೊ
ಳಿಹುದು ನೋಳ್ಪರ್ಗದೆಯೊಳಿರುತಿರುವುದು.

ಕಣ್ಗೆ ಕಾಣದ ನುಡಿಗೆ ಸಿಗದಯಿತರೇಂದ್ರಿಯ ಗ
ಳಿಂತಪಃ ಕರ್ಮಂಗಳಿಂಗೆ ದೂರಂ;
೮- ಜ್ಞಾನ ಪ್ರಸಾದದಿಂ ನಿರ್ಮಲಾಂತಃ ಕರಣ
ದಿಂ ಧ್ಯಾನಿಪಂ ಕಾಂಬನವನ ನೇರಂ.

ಅವನಲ್ಲಿಯೆ ಪ್ರಾಣ ಪಂಚವಿಧ ಸೇರಿಹುದು,
ಅಲ್ಲಿಯಣುವಾತ್ಮನಂ ತಿಳಿದಿರುವುದು;
೯- ಪ್ರಾಣಂಗಳಲ್ಲಿ ಪ್ರಜೆಗಳ ಚಿತ್ತನೆಯ್ದಿಹುದು
ಅದು ವಿಶುದ್ಧಿಸಲಾತ್ಮ ಹೊಳೆಯಬಹುದು

ಆವಾವಲೋಕಗಳ ನಿಚ್ಛಿಪನು ಶುದ್ಧಾತ್ಮ
ನಾಪ ಬಯಕೆಗಳ ಬಯಸುತ್ತಿರುವನು;
೧೦- ಅದೇ ಲೋಕ ಬಯಕೆಗಳ ಪಡೆವನದರಿಂಭೂತಿ-
ಕಾಮನಾತ್ಮಜ್ಞನನ್ನರ್ಚಿಸುವನು.

II

ವಿಶ್ವವೆಲ್ಲಿಹುದು ಶುಭ್ರಂ ಹೊಳೆವುದಾವುದಾ
ಪರಮಬ್ರಹ್ಮದ ನೆಲೆಯ ನವನೆ ಬಲ್ಲಂ;
೧- ನಿಷ್ಕಾಮರಾಗಿ ಪುರುಷನ ಪೂಜಿಸುವ ಧೀರ
ರವರು ಜನ್ಮದ ಮರಳಿ ಪಡೆವುದಿಲ್ಲಂ

ಬಗೆ ಬಗೆಯ ಕಾಮಗಳ ಬಯಸುವವನಲ್ಲಲ್ಲಿ
ಜನಿಸುವಂ ಕಾಮ ಬಂಧನದಿ ಬಿಗಿದು;
೨- ಪರ್ಯಾಪ್ತ ಕಾಮನಪ್ಪ ಕೃತಾತ್ಮನಿಂಗಿಲ್ಲಿ
ಸರ್ವ ಕಾಮಗಳು ಕೊನೆಗೊಳ್ಳುತಿಹುವು.

ವೇದವೋದಿದ ಮಾತ್ರದಿಂದಾತ್ಮ ಸಿಗಲೊಲ್ಲ,
ಬುದ್ಧಿಯಿಂ ಶ್ರವಣದಿಂ ದೊರಕಲೊಲ್ಲ;
೩- ದೇವದಯೆಯುಳ್ಳವಗೆ ದಿವ್ಯದರ್ಶನವೆಲ್ಲ
ರೂಪವನ್ನಾತ್ಮನಾತಗೆ ತೋರದಿಲ್ಲ

ಆತ್ಮನಿವ ಬಲಹೀನನಿಂಗಲಭ್ಯನು, ಪ್ರಮಾ
ದದಿ ನಸನ್ಯಾಸತಪದಿಂದೊಂಸಕನು;
೪- ಈ ವುಪಾಯಂಗಳಿಂ ಯತ್ನಿಸುವ ವಿದ್ವಾಂಸ
ನಂ ಬ್ರಹ್ಮಧಾಮಕಿವನೊಯ್ಯುತಿಹನು.

ಈತನನ್ನರಿತ ಋಷಿಗಳು ಜ್ಞಾನತೃಪ್ತರು "ಕೃ
ತಾತ್ಮರು ವಿರಾಗರಲ್ಲದೆ ಶಾಂತರು;
೫- ಸರ್ವ ವ್ಯಾಪಿಯನು ಸರ್ವತ್ರವರಿತಾ ಧೀರ
ರೆಲ್ಲವನು ಪೊಗುತಿಹರು ಯುಕ್ತಾತ್ಮರು.

ವೇದಾಂತ ವಿಜ್ಞಾನದರ್ಥ ತಿಳಿದವರಾಗಿ
ಸನ್ಯಾಸದಿಂ ಶುದ್ಧರಾದ ಯತಿಗಳ್,
೬- ಚರಮಕಾಲದೊಳವರು ಬ್ರಹ್ಮಲೋಕಂಗಳಲಿ
ಬ್ರಹ್ಮರೆನಿಸುತ ಮುಕ್ತರಪ್ಪರೆಲ್ಲರ್.

ಪಂಚದಶ ಕಲೆಗಳೈದುವುವು ಪ್ರಕೃತಿಗಳನ್ನು
ದೇವರೆಲ್ಲವರು ಪ್ರತಿದೇವರನ್ನು;
೭- ಕರ್ಮಗಳು ವಿಜ್ಞಾನಮಯನೆನಿಪ್ಪಾತ್ಮನಂ
ಒಂದಾಗುವರು ಪರಾವ್ಯಯನೊಳಿನ್ನು.

ಹರಿವ ಹೊಳೆಗಳು ನಾಮರೂಪಗಳ ತ್ಯಜಿಸುತಲಿ
ಸಾಗರವಸೇರಿ ಲಯವಪ್ಪವೆಂತು;
೮- ವಿದ್ವಾಂಸ ಪಡೆಯುವನು ನಾಮರೂಪವತ್ಯಜಿಸಿ
ದಿವ್ಯ ಪುರುಷನ—ಪರಾತ್ಪರನನಂತು.

ಆವನಾಪರಮ ಬ್ರಹ್ಮನನರಿವನವ ಬ್ರಹ್ಮ
ನಹನವನ ಕುಲದೊಳ ಬ್ರಹ್ಮವಿದನು
೯- ಜನಿಸನ್ನೈ; ಶೋಕಪಾಪಗಳದಾಂಟುತ ಮಹಾ
ಗ್ರಂಥಿ ಮುಕ್ತನೆಯಾಗುತ ಮೃತನಹನು.

ಶ್ರೋತ್ರಿಯರು ಬ್ರಹ್ಮನಿಷ್ಠರು ಶ್ರದ್ಧೆಯುಳ್ಳವರು
ಕ್ರಿಯಾವಂತರೇಕರ್ಷಿ ಹೋಮದವರು;
೧೦- ಶಿರೋವ್ರತವ ವಿಧಿವದಾಚರಿಪರರ್ಹರು ಬ್ರಹ್ಮ
ವಿದ್ಯೆಗೆಂದಿಂತು ಋಕ್ ಸಾರುತಿಹುದು.

ಪೇಳ್ದನೀ ಸತ್ಯವಂ ಋಷಿಯಾಂಗಿರಸ ಹಿಂದೆ
ಇದನು ಕಲಿತುದು ಸಲ್ಲ ವ್ರತಿಯಲ್ಲದೆ.
೧೧-ನಮಸ್ಕಾರವಯ್ಯ ನಿಮಗಿದೊ ಪರಮ ಋಷಿಗಳಿಗೆ
ನಮಸ್ಕಾರವಯ್ಯ ಪರಮರ್ಷಿಗಳಿಗೆ.

‡ ಮುಂಡಕೋಪನಿಷತ್—ಮೂರನೆಯ ಮುಂಡಕ.

ಒಂದು ದಿನ ಬೆಳಿಗ್ಗೆ

(೧೩ನೇ ಪುಟದಿಂದ)

ಯ್ರಿ. ಇಲ್ಲದಿದ್ರೆ ಅವನ ಕೀಲು ನಮ್ಮ ಕೈಲಿ ಗಟ್ಟಿಯಾಗಿರುತ್ತೆ ನೋಡು.

ಶಾರದೆ— ನೀವೇನೇ ಹೇಳಿದರೂ ಮೋಸ ಮೋಸತಾನೇ. ಇನ್ನು ಮೇಲೆ ಎಲ್ಲರೂ ವಿದ್ಯೆ ಕಲೀಲಿಕ್ಕೆ ಹತ್ತಿದಾರೆ. ಓದು ಬರೆಹ ಕಲೀತಾರೆ. ಹೀಗೆ ಸುಲಭದಲ್ಲಿ ಮೋಸಮಾಡುವ ಯೋಚನೆ ಬಿಟ್ಟುಬಿಡೀ. ಒಕ್ಕಲುಗಳು ಧನಿಗಳಿಗೆ ಮೋಸಾನೇ ಮಾಡೋದೂ ಅಂತೀರಲ್ಲಾ. ನಿಜವಾಗಿ ನಿಮಗೆ ಗದ್ದೆ ಅಂದ್ರೇನು, ಅದು ಹ್ಯಾಗಿರಬೇಕು, ಯಾವಯಾವ ಕಾಲಕ್ಕೆ ಹೇಗೆಹೇಗೆ ಭೂಸೇವೆ ಸಾಗಿಸಬೇಕು, ಮಳೆ ಹೇಗಿರಬೇಕು ಎಂಬ ವಿಷಯವೆಲ್ಲಾ ಏನು ಗೊತ್ತಿದೆ? ತಾತನ ಕಾಲದಿಂದ ಒಕ್ಕಲುಗಳೇ ಗೆಯ್ಯೋದು. ಅವರು ಏನಾದ್ರೂ ಕಷ್ಟ ನಷ್ಟ ಹೇಳಿಕೊಂಡ್ರೆ ಮೋಸ ಮಾಡ್ತಾರೇ ಅನ್ನೋದು, ಅದಕ್ಕಾಗಿಯೆ ಎಲ್ಲರೂ ವಿದ್ಯೆಯ ಜತೆಯಲ್ಲೇ ಕೃಷಿ ಕೈಗಾರಿಕೆಗಳನ್ನೂ ಕಲೀಬೇಕೂ ಅನ್ನೋದು.

ಶ್ರೀಪತಿ — ಕಲ್ತುಗದ್ದೆ ಉಳಬೇಕು ಅನ್ನುವಿಯಾ?

ಶಾರದೆ—ಅದನ್ನೆಲ್ಲಾ ತಿಳಿದಿರಬೇಕು ಅಂದೆ. ನಮಗೆ ಮೂರು ನಾಲ್ಕು ಮಕ್ಕಳಿದ್ದರೆ ಎಲ್ಲರೂ ಬರೀ ಓದೀ ಕಲ್ತು ಉದ್ಯೋಗಸ್ಥರಾಗಿ ಬಿಡುತ್ತಾರೆ ಅನ್ನುವಿರಾ?

ಶ್ರೀಪತಿ – ನಮ್ಮಂಥವರು ಮಣ್ಣಿನ ಕೆಲಸ ಮಾಡುವುದು ಗೌರವ ಎನ್ನುವಿಯಾ?

ಶಾರದೆ— ಗೌರವ ಯಾಕಿಲ್ಲ? ಕಲಿತ ಕೆಲಸ ಬಾಳುವೆಯನ್ನು ಬೆಳಗಿಸುವಂಥ ಕೆಲಸ ಯಾವುದಾದರೂ ಗೌರವದ್ದೇ, ನಮ್ಮ ಮನೆ ನಾವೇ ಗುಡಿಸುವುದು ಅಗೌರವವಾದೀತೆ? ಈ ಬಗೆಯ ದುರಭಿಮಾನವೇ ನಮ್ಮ ಮಕ್ಕಳಿಗೆ ಬರಬಾರದು. ಈಗ ನಿಮ್ಮನ್ನೇ ನೋಡಿ. ಗೌರವದಿಂದ ನಡೆಯಲು ಸಂಬಳ ಸಾಲದ್ದರಿಂದ ತಾನೇ ಏನಾದರೂ ಮೋಸ ಮಾಡುವ ಬುದ್ಧಿ ಬರುವುದು? ಅದೇ ವಿದ್ಯೆಯ ಜತೇಲೇ ಕೃಷಿ ಕೈಗಾರಿಕೆಗಳನ್ನು ಕೂಡಾ ಕಲಿತವನಾದರೆ ಹ್ಯಾಗೂ ಬದುಕಿಯಾನು. ಒಬ್ಬನೇ ದುಡಿದು ಹತ್ತು ಜನ ಉಣ್ಣುವುದೆಂಬ ಪರಿಸ್ಥಿತಿ ತಪ್ಪೀತು.

ಶ್ರೀಪತಿ:—ಈ ನೀತಿ ಎಲ್ಲರೂ ಹಿಡೀಬೇಕಲ್ಲಾ?

ಶಾರದೆ:—ಬೇಕು ಮತ್ತೆ.

ಶ್ರೀಪತಿ – ನಾನು ಕೆಲಸ ಗಿಲಸ ಮಾಡ್ಬೇಕೇನು ಇನ್ನು?

ಶಾರದೆ— ಬೇಡ ಬಿಡೀ. ಗಿಡ ಬಗ್ಗುವ ಹಾಗೆ ಮರ ಬಗ್ಗೀತೆ? ನಿಮಗೆಲ್ಲಿ ಅಭ್ಯಾಸವಿದೆ ನ್ಯೆಬಗ್ಗಿಸಿ? ಕೆಲಸ ಮಾಡಬೇಕೆಂಬ ಮನಸ್ಸಿರುವವರಿಗೆ ನಿಮ್ಮ ಬೆಂಬಲವೂ ಹರಕೆಯೂ ಇದ್ದರೇನೇ ಸಾಕು. ನಿಮ್ಮ ಹಾಗೆ ನಿಮ್ಮ ಮಕ್ಕಳು ಆಗದ ಹಾಗೆ ನೋಡಿಕೊಂಡರೇನೇ ಸಾಕು.

ಶ್ರೀಪತಿ—ಬದುಕಿದೆ ಬಿಡು. ಶಾರದಾ, ಇಷ್ಟು ತಿಳುವಳಿಕೆ ನಿನಗೆ ಹೇಗೆ ಬಂತೂಂತ!

ಶಾರದೆ—ಏನು ತಿಳುವಳಿಕೆಯಿದು ಮಹಾ! ನನ್ನಂಥ ಹಳ್ಳೀ ಹೆಣ್ಣಿಗೆ ಅಂಥ ದೊಡ್ಡ ತಿಳವಳಿಕೆಯೇನು ಬಂದೀತು!

ಶ್ರೀಪತಿ—ಹಳ್ಳೀಯವಳಾದರೂ ವಿದ್ಯಾವತಿಯಾಗಿರುವಿ. ನಾಗರಿಕಳಾಗಿರುವಿ. ನಿನ್ನ ಈ ಗುಟ್ಟು ನನಗೆ ಇವರೆಗೆ ಯಾಕೆ ಗೊತ್ತಾಗಿಲ್ಲಾ ಅಂತ?

ಶಾರದೆ—ಹೆಂಗುಸರು ತಮ್ಮ ನಿಜಸ್ವಭಾವ ಒಂದೇ ಸಾರಿ ಕಾಣ್ಸೋದಿಲ್ಲಾ. ವಿದ್ಯಾವತೀ ನಾಗರಿಕತೆ ತಿಳಿದೋಳುಅಂತ ನೀವು ನನ್ನ ಮಾಡಿಕೊಂಡ್ರಿ. ನಿಮ್ಮ ಭ್ರಮೆಗೆ ಸರಿಯಾಗಿ ನಾನೂ ಆಡಿದೇ ಅಂತಿಟ್ಕೊಳ್ಳಿ. ಈಗ ವಿದ್ಯೆಯೊಂದಿಗೆ ನಾನು ಅಭ್ಯಾಸಮಾಡಿದ ಕೆಲಸಗಳನ್ನೂ ನಿಮಗೆ ತೋರಿಸಿದೆ ಅಷ್ಟೇ. ನನ್ನ ಮೇಲೆ ಸಿಟ್ಟಿಲ್ಲವಷ್ಟೆ?

ಶ್ರೀಪತಿ—ಸಿಟ್ಟೇ?

(ಸರಳಾ ಮಧು ಓಡಿಬರುವರು)

ಸರಳಾ-ಇಕೋಮ್ಮ, ಕರುವಿಗೆಹುಲ್ಲು.

ಮಧು —ಅಮ್ಮ! ಓಳಿ ತೆಗೆದಿಟ್ಟದೇನೆ. ನಮ್ಮ ಮನೇ ತಾರೆ ವುಂಟಮ್ಮ ಇನ್ನು.

ಶ್ರೀಪತಿ-ನಾಳೆ ನಿಮ್ಮೊಂದಿಗೆ ನಾನೂ ಬರ್ತೇನೋ ತೋಟದ ಕೆಲ್ಸಕ್ಕೇ. ನನಗೂ ಒಂದು ಹಾರೆ ಉಂಟಷ್ಟೆ?

ಶಾರದೆ – ನಿಮ್ಮಾಶೀರ್ವಾದ ಇದ್ರೆ ಸಾಕೂ ಅನ್ನೋ.

ಸರಳಾ— ಮಧು-ಅಪ್ಪಾ, ನಮ್ಮ ಕೆಲ್ಸಕ್ಕೆ ನಿಮ್ಮ ಆಶೀರ್ವಾದ ಇದ್ರೇನೇ ಸಾಕಪ್ಪಾ.

ಶ್ರೀಪತಿ-ಭೇಷ್! ಒಳ್ಳೇ ಮಕ್ಳು! ಎಲ್ಲಿ ಅಪ್ಪ ಸೊಂಟ ಮುರಿದುಕೋಗುತ್ತೋ ಅಂತ ಭಯಪಡ್ತೀರಿ ಹ್ಯಾದೋ?

(ಸರಳಾ ಮಧು—"ಇಹ್ಹಿಹ್ಹಿಹ್ಹಿ" ನಗುವರು. ಶಾರದೆಯೂ ನಗುವಳು.)

ದೈತ್ಯ ಮುಷ್ಟಿ

(೧೧ನೇ ಪುಟದಿಂದ)

ಶೇರೂಗಾರ ಕಪ್ಪಿಲ್ಲದೇ ಬಿಡಾರ ಪ್ರವೇಶಿಸಿ ಬಾಗಿಲು ಹಾಕಿಕೊಂಡು ಒಲೆಯ ಮುಂದೆ ಕುಳಿತ ಮರ್ಲಿಯನ್ನು ತೆಕ್ಕೆ ಹಾಕಿ ಹಿಡಿಯಲು ಹೋದ. ಮರ್ಲಿ ಹೇಗೋ ತಪ್ಪಿಸಿಕೊಂಡಳು. ಸುತ್ತಲೂ ಸುತ್ತತೊಡಗಿದ. ಆದರೂ ಸಿಕ್ಕಲಿಲ್ಲ. ಬಾಗಿಲು ಹಾಕಿದ್ದರಿಂದ ಒಂದೆರಡು ನಿಮಿಷದಲ್ಲೇ ಶೇರೂಗಾರನ ಬಂದಿಯಾಗ ಬೇಕಾಯಿತು. ಮರ್ಲಿ.

"ಅಲ್ಲಾ…ನಾಯೇನು ನಿನ್ನ ತಿಂತ್ನಾ ನಿಂದೇನು ಹೋತ್ತು ಹೇಳು. ನಿನಗೆ ಶೀರೇ ತಂದ್ಕೊಡ್ತ್ಯಾ. ಏನ್ಬೇಕು ಹೇಳು".

ಶೇರೂಗಾರ ಸಂತೈಸುವ ರೀತಿಯಲ್ಲಿ ಹೇಳಿದ.

"ನಿಮ್ದೇನೂ ಬೇಡ, ನನ್ಬಿಡಿನಿ. ದಮ್ಮಯ್ಯ" ಎಂದು ಹೇಳುತ್ತ ಮರ್ಲಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಲೇ ಇದ್ದಳು ಆದರೂ ಶೇರೂಗಾರ ಬಲಾತ್ಕಾರದಿಂದ ಚುಂಬನ, ಆಲಿಂಗನ ಮಾಡತೊಡಗಿದ.

ಯಾವುದೋ ತೊಂದರೆಯಾಗಿ ಮಾಲಿಂಗ ಹಿಂದಿರುಗಿ ಬಂದಿದ್ದ. ಅಡಿಗೆಯ ವೇಳೆಯಾಗಿದ್ದರೂ ಬಿಡಾರದ ಬಾಗಿಲು ಹಾಕಿತ್ತು. ಮೆಲ್ಲಗೆ ಬಾಗಿಲು ಸರಿಸಿ ಪ್ರವೇಶಿಸಿದ. ಶೇರೂಗಾರನ ತೋಳ ತೆಕ್ಕೆಯಲ್ಲಿ ಕಸುರಿಕೊಳ್ಳುತ್ತಿದ್ದ ಮರ್ಲಿಯನ್ನು ನೋಡಿದ. ತಡೆಯಲಾಗಲಿಲ್ಲ. ಮುಷ್ಟಿಗಳು ಬಿಗಿಯಿತು. ರೋಮ ರೋಮಗಳಲ್ಲಿಯೂ ರಕ್ತ ಸಂಚಾರವಾಯಿತು. ಒಮ್ಮೆಲೇ ಹೋಗಿ ಏಳೆಂಟು ಸಾರೆ ಗುದ್ದಿದ. ಶೇರೂಗಾರನ ರಟ್ಟೆ ಹಿಡಿದು ಝಾಡಿಸಿಯೂ ಬಿಟ್ಟ.

ಮರ್ಲಿಗೆ ಹೋದ ಜೀವ ಬಂದಂತಾಯಿತು. ಶೇರೂಗಾರ ಮುಂಡು ಸುತ್ತಿಕೊಂಡು ಮುಖ ತೋರಿಸದೇ ಹೊರಗೆ ನಡೆದ. ಕೆಲವು ದಿನಗಳ ವರೆಗೆ ಮಾಲಿಂಗನಿಗೆ ಮುಖ ತೋರಿಸಿ ಮಾತನಾಡುವ ಧೈರ್ಯವೇ ಇರಲಿಲ್ಲವಾಗಿತ್ತು.

ಆದರೂ ಸಣ್ಣಪುಟ್ಟ ಕಿರುಕುಳ ಇದ್ದೇ ಇರುತ್ತಿತ್ತು. ಏನಾದರೂ ಆಶೆ ತೋರಿಸಿ ಬಲೆಗೆ ಕೆಡಗುವ ಹಂಚಿಕೆ ನಡೆಯುತ್ತಲೇ ಇತ್ತು. ಸಂಬಳ ಹೆಚ್ಚಿಸುವ, ಹೆಚ್ಚು ಸಾಲ ಕೊಡುವದಾಗಿ ಹೇಳುತ್ತಿದ್ದ. ಆದರೂ ಮರ್ಲಿಯ ಮೈಸುಖ ದೊರೆಯಲಿಲ್ಲ.

ಒಮ್ಮೊಮ್ಮೆ ಇವರ ತಂಡದಿಂದ ಬೇರೆ ಇರುವ ಆಲೋಚನೆ ಮಾಡಿದರೂ ಸಾಲದ ಭಯಕ್ಕಾಗಿ ಮಾಲಿಂಗ ಹೆದರುತ್ತಿದ್ದ. "ರಜಿಸ್ತ್ರೀ" ನೋಟು ಬರಿಸಿ ಕೊಟ್ಟಿದ್ದರಿಂದ ಎಲ್ಲಿ ಯಾದರೂ ದಾವೆ ಹಾಕಿ ಶಿಕ್ಷೆಯಾದರೆ ಎಂಬುದು ಅವನ ವಿಚಾರವಾಗಿತ್ತು. ಹಾಗಾಗಿ ಕೆಲವು ವರ್ಷ ತಂಡದ ಜೊತೆಯಲ್ಲಿಯೇ ಕಳೆದ. ಆದರೂ ಸಾಲ ಮಾತ್ರ ತೀರಲಿಲ್ಲವಾಗಿತ್ತು. ಖರ್ಚಿಗೆ ತೆಗೆದುಕೊಂಡ ಹಣ ಕಡಿಮೆ ಇದ್ದರೂ ಲೆಕ್ಕದಲ್ಲಿ ಅದು ಹೆಚ್ಚಾಗುತ್ತಿತ್ತು.

ಈ ಸಾರೆ ಪ್ರತ್ಯೇಕವಾಗಿಯೇ ಘಟ್ಟಕ್ಕೆ ಬಂದು ಬಾಳೂರಿನ ಪಟೇಲರಲ್ಲಿ ಕೆಲಸಕ್ಕೆ ಉಳಿದಿದ್ದ. ತಂಡದಿಂದ ತಪ್ಪಿಸಿಕೊಂಡು ಬಂದ ಮಾಲಿಂಗನನ್ನು ಹಿಡಿಯಲು ಎರಡು ಮೂರು ಸಾರೆ ಬಂದು ಏನೇನೋ ಜವಾಬು ಪಡೆದು ಹೋಗಿದ್ದ. ತಾನು ಹೇಳಿದಂತೆ ಕೇಳಿದರೆ ಅರ್ಧ ಸಾಲ ಬಿಡುವದಾಗಿಯೂ ಮರ್ಲಿಯ ಮೋಹಕ್ಕಾಗಿ ಹೇಳಿದ್ದ. ಆದರೂ ಮರ್ಲಿ ಮರುಳಾಗಲಿಲ್ಲ.

ಆ ದಿನ ಬೆಳಿಗ್ಗೆ ನಾಲ್ವರು ಆಳುಗಳ ಸಹಿತ ಸುಬ್ಬೈ ಸೆಟ್ಟರು ಬಂದಿದ್ದರು. ಆಳುಗಳಿಂದ ಮಾಲಿಂಗನನ್ನು ಬಿಗಿಸಿ ಕಳಿಸುವದು. ನಂತರ ತಾನು ನಿರಾತಂಕವಾಗಿ ಮರ್ಲಿಯನ್ನು ಕಾಪಿಸುವದು, ಇದು ಸೆಟ್ಟರ ದೈತ್ಯಶಕ್ತಿಯ ಹಂಚಿಕೆಯಾಗಿತ್ತು!

ಸೆಟ್ಟರು ಮತ್ತೊಮ್ಮೆ ಕೇಳಿದರು —

"ಏನು, ನಮ್ದುಣಾ ಕೊಡ್ತ್ಯಾ, ಇಲ್ಲಿದ್ರೆ ನಮ್ಜಂಗ್ತಾ ಬರಕ್ಕ"

"ಈ ಸಾರೆ ಅಯ್ಯೆರಕ್ಕೆ ನಿಮ್ದುಣಾ ಚುಕ್ತಾ ಮಾಡ್ತೆ. ಈಗಳು ನನ್ಹತ್ರ ಪಾವಾಣೇನೂ ಇಲ್ಲ"

"ಅದು ಆಸ್ಕಿಲ್ಲೆ. ಹಣಾ ಇಲ್ಲ್ಯಾ ನಮ್ಜಂಗ್ತಾ ಉಳಿ."

ಮಾಲಿಂಗನಿಗೆ ಏನು ಹೇಳಲೂ ತಿಳಿಯಲಿಲ್ಲ. ಪಟೇಲರನ್ನು ಕರೆಯುವಂತೆ ಮರ್ಲಿಗೆ ತಿಳಿಸಿದ.

ಕಂಗಾಲಾಗಿ ಹೇಳಿದ ಮರ್ಲಿಯ ಮಾತು ಕೇಳಿ ಪಟೇಲರು ಧಾವಿಸಿ ಬಂದರು. ಪಟೇಲರನ್ನು ಕಂಡೊಡನೆ ಮಾಲಿಂಗನನ್ನು ಹಿಡಿದ ಆಳುಗಳು ಬದಿಗೆ ನಿಂತರು. ಶೇರೂಗಾರನಿಗೂ ಪಟೇಲರಿಗೂ ಮಾತುಕತೆಯಾಗಿ ಲೆಕ್ಕಾಚಾರದಂತೆ ಮಾಲಿಂಗನ ಸಾಲ ತೀರಿಸುವದಾಗಿ ಹೇಳಿ ಹಿಂದಿನ ಲೆಕ್ಕಾಚಾರದ ಪಟ್ಟಿ ತೆಗಸಿದರು.

ಅದರಲ್ಲಿ ಕೊಟ್ಟ ಹಣದ ವಿವರ ಹೀಗೆ ಬರೆಯಲಾಗಿತ್ತು.

ಮಾರೆಮ್ಮನ ಜಾತ್ರೆಗೆ ಕೊಟ್ಟದ್ದು ಹದಿನೈದು. ತೆಗೆದುಕೊಂಡದ್ದು ಹದಿನೈದು- ಕೂಡಾ ಮೂವತ್ತು. ಹೀಗೆಲ್ಲಾ ಕೂಡಿಸಿ ಬರೆದಿತ್ತು.

"ಇದೆಲ್ಲಾ ಎಂಥ ಲೆಕ್ಕ ಶೇರೂಗಾರ"

"ನಮ್ಮ ಲೆಕ್ಕಾನೇ ಹೀಗೆ"

"ಹಂಗಾದ್ರೆ ಕಾಯಿದೇ ಶೀರ ನೋಟು ಇತ್ತು. ಕೋರ್ಟಿಗೆ ಹೋಗು. ಇಲ್ಲಿ ಏನಾದರೂ ಮೈ ಕೈ ಮುಟ್ಟಿದರೆ ಹುಶಾರು."

ಪಟೇಲರ ಎಚ್ಚರಿಕೆ ಶೇರೂಗಾರನನ್ನು ಭಯಪಡಿಸಿತು. ಬಿರಿಗಣ್ಣಿನಿಂದ ಮರ್ಲಿಯತ್ತ ನೋಡುತ್ತಾ "ನಿಮ್ಗೆ ಮಾಡ್ತೆ" ಎಂದು ಹೇಳುತ್ತಾ ಸಾಗಿದ.

ಮತ್ತೆಂದೂ ಆ ದೈತ್ಯ ಮುಷ್ಟಿ ಮಾಲಿಂಗನನ್ನು ಮುಟ್ಟಲು ಬರಲಿಲ್ಲ.

ಭೋಜನದ ಮೈಲುಕಲ್ಲುಗಳು

(೧೧ನೇ ಪುಟದಿಂದ)

ಷ್ಣಾರ್ಪಣವೆಂದು ನೀರನ್ನು ಬಿಟ್ಟೊಡನೆ ಎಲ್ಲರೂ ಒಮ್ಮೆಯೇ ಊಟಕ್ಕೆ ಆರಂಭಿಸುವರು. ಊಟದ ಮೊದಲು ತೀರ್ಥಪ್ರಾಶನ, ಅಕ್ಷತೆಯ ಧಾರಣವಾಗಬೇಕು. ಇದೇ ಬ್ರಾಹ್ಮಣರ ಊಟದ ಒಂದು ವೈಶಿಷ್ಟ್ಯ; ಬಡಿಸುತ್ತಾ ಬಡಿಸುತ್ತಾ ಇತರ ಸಂಪ್ರದಾಯದವರಂತೆ ಹಕ್ಕಿ ಪಕ್ಷಿಗಳು ಕುಟುಕುತ್ತಿರುವಂತೆ ತಿನ್ನುತ್ತಿರುವುದು ನಿಷೇಧಿಸಲ್ಪಟ್ಟಿದೆ. ಅನಂತರ ಎಣ್ಣೆ, ಪಲ್ಯಗಳ ವಿಚಾರ ಮುಗಿದ ಮೇಲೆ, ಸಾರು, ಮುದ್ದುಹುಳಿ, ಹುಳಿಗಳ ಜತೆಯಲ್ಲಿ ಬಿಸಿನೀರೂ ವಿಚಾರಿಸಲ್ಪಡುವುದು. ಇಲ್ಲಿಗೆ ಊಟದ ಎರಡನೆಯ ಪಾದ ಮುಗಿಯಿತು. ಮುಂದೆ ಹೆಂಗಸರು ಊಟದಲ್ಲಿ ರಸದಭಾವವಿದ್ದರೆ ಅದನ್ನು ತಮ್ಮ ಕೋಕಿಲ ಕಂಠದ ಹಾಡುಗಳಿಂದ ಭರತಿ ಮಾಡುತ್ತಾರೆ! ಪುರುಷರು ಪರಮಾತ್ಮನ ಯಶೋಗಾನವನ್ನು ಚೂರ್ಣಿಕೆಯಾಗಿ ಹಾಡುತ್ತಾರೆ! ಈ ಕಾಲದಲ್ಲೇ ಯಜಮಾನನು ರಸಿಕನಾಗಿದ್ದರೆ ಹಗಲು ವೇಷಗಳನ್ನು ಹೊರಡಿಸುವನು. ಆಗ ಆ ವೇಷಧಾರಿಗಳ ನಟನೆಯಿಂದ ನಕ್ಕು ನಕ್ಕು ಭೋಜನವು ಅಮೃತೋಪಮವಾಗುವುದು. ಮುಂದೆ ಕಜ್ಜಾಯಗಳ ಹಡಿಗೆ! ಪಳಿದ್ಯಗಳ ಕವಳಿಗೆ, ಪರಮಾನ್ನಗಳ ಉಗ್ಗ ಹೊರಡುವುದು. ಆಗ ಕಲವರು ವಿಶೇಷವಾಗಿ ಮಕ್ಕಳು—ತಮ್ಮ ಹೊಟ್ಟೆಗೆ ಸುತ್ತಿದ್ದ ವೈರಾಸಗಳನ್ನು ಸಡಲಿಸಿಕೊಳ್ಳುತ್ತಾರೆ- ಈ ಭಕ್ಷ್ಯಭೋಜ್ಯಗಳ ಪುನಃ ಪುನಃ ವಿಚಾರಣೆ ಮಾಡುವುದರಿಂದಲೇ ಊಟದ ಯೋಗ್ಯತೆಯು ನಿರ್ಣಯವಾಗುವುದು. ಕೊನೆಗೆ ಭೋಜನದ ನಾಲ್ಕನೆಯ ಪಾದದಲ್ಲಿ ಮೊಸರು, ಬೆಂಡದ ಮಜ್ಜಿಗೆ, ಉಪ್ಪಿನಕಾಯಿಗಳು ಬಡಿಸಲ್ಪಡುವುವು. ಆ ಮೇಲೆ ಎಲ್ಲರೂ 'ಹರ ಹರ ಮಹಾದೇವ' ಎಂದು ಘೋಷಿಸುತ್ತಾ ಏಳುವರು. ಇಂಥಾ ಸೊಬಗಿನ ಊಟಗಳ ವೈವಿಧ್ಯವು ದ್ರಾವಿಡ ಬ್ರಾಹ್ಮಣರಿಗೇ ಮಾರಿಹೋದುದಾಗಿರಬೇಕು. ರೇಶನ್ ಕಾಲದಲ್ಲಿ ಇಂಥಾ ಪುಷ್ಕಲ ಭೋಜನಗಳಿಗೆ ಅಲ್ಲಲ್ಲಿ ತಡೆ ಬಂದಿದೆ. ಆದರೂ ಕೋಟೆದ ಪಲ್ಯ, ಉಡುಪಿಯ ಸಾರು, ಮಂಗಳೂರು ಪುತ್ತೂರು ಕಡೆಯ ಪಳಿದ್ಯ (ಕಾಯಿಹುಳಿ)ಗಳಿಗನ್ನೂ ಮುದಿತನ ಬಂದಿಲ್ಲ; ಇವೂ ನಮ್ಮ ಜಿಲ್ಲೆಯ ಸಂಸ್ಕೃತಿಯ ಮೈಲುಕಲ್ಲುಗಳು!

ಮೊತ್ತ ಮೊದಲು ಈ ಭೋಜನದ ಇತಿಮಿತಿಯನ್ನೇ ಕಲಾವಂತ ಕಾವ್ಯಕ್ಕಿಳಿಸಿದವನು. ಜಯಬಂಧು ನಂದನನೆಂಬವನು (ಸು. ಕ್ರಿ. ಶ. ೮೦೦). ಅನಂತರ ಸುಕವಿಪಿಕಮಾಕಂದನೆನ್ನಿಸಿದ ಮೂರನೆಯ ಮಂಗರಸನು (ಕ್ರಿ. ಶ. ೧೫೦೮). ಇವನ ಸೂಪ ಶಾಸ್ತ್ರವು ಪ್ರಾಚೀನರ ಪಾಕಶಾಸ್ತ್ರದ ಕ್ರಮವನ್ನು ಬಯಲಿಗೆಳೆಯುತ್ತದೆ. ಆ ಮೇಲೆ ೧೯ನೇ ಶತಮಾನದ ಅಂತ್ಯದಲ್ಲಿ ಮೈಸೂರು ಚಾಮರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದ ಜಯರಾಯಾಚಾರ್ಯರು ಗದ್ಯರೂಪದ ಪಾಕಶಾಸ್ತ್ರವೊಂದನ್ನು ವಿಸ್ತಾರವಾಗಿ ರಚಿಸಿದರು. ಹೀಗೆ ಭೋಜನದ ಹಿತಮಿತವನ್ನು ವೈವಿಧ್ಯದೊಡನೆ ಸಪ್ರಮಾಣಿಕವಾಗಿ ಬರೆದು ಪಾರಮಾರ್ಥಿಕವನ್ನು ಪ್ರಾಪಂಚಿಕಕ್ಕೆ ಬೆಸೆದ ನಮ್ಮವರ ರಸಿಕತನವನ್ನು ಎಷ್ಟು ಕೊಂಡಾಡಿದರೂ ಅಲ್ಪವೇ. ನಮ್ಮಲ್ಲಿ ಒಪ್ಪತ್ತುಂಡವ ಯೋಗಿಯಂತೆ! ಎರಡು ಹೊತ್ತುಂಡವ ಭೋಗಿಯಂತೆ! ಮೂರು ಹೊತ್ತುಂಡವ ರೋಗಿಯಂತೆ! ನಾಲ್ಕು ಹೊತ್ತುಂಡವನನ್ನು ಹೊತ್ತುಕೊಂಡು ಹೋಗಬೇಕಂತೆ! ನಮ್ಮ ಪೂರ್ವಿಕರಿಗೆ ಆಹಾರಾಭಾವದ ಸಮಸ್ಯೆ ಮೊದಲೇ ಹೊಳೆದಿರಬಹುದೆ?

ಇಂದಿನ ಆಂಗ್ಲ ಸಂಸ್ಕೃತಿಯು ಭಾರತೀಯರ ರೂಪ ಸಂಸ್ಕೃತಿಯನ್ನು ಭೋಜನ ಶಾಸ್ತ್ರದೊಂದಿಗೆ ಕಲುಷಿತಗೊಳಿಸಿದೆ. ಇನ್ನು ಸದ್ಯವೇ ಇದು ಆರ್ಯರ ಪದ್ಧತಿ, ಇದು ದ್ರಾವಿಡರ ಪದ್ಧತಿ ಎನ್ನುವುದನ್ನು ಮರೆತು ಕ್ರಿಸ್ತಾನರ ಪದ್ಧತಿಯಾದ ಮೇಜಿನ ಊಟ, ಚಮಚೆಗಳ ತುತ್ತುಗಳೇ ಬೆಳಕಿಗೆ ಬಂದಾಗ ಭಾರತೀಯರು ಆಂಗ್ಲರಾದಾರೆ? ಇದು ಸುತರಾಂ ಅಸಾಧ್ಯ. ನಮ್ಮ ಭಾರತ ಜನಾಂಗಕ್ಕೆ ಆಂಗ್ಲರು ಬೇಡವಂತೆ! ಅವರ ಸಂಪ್ರದಾಯಗಳೆಲ್ಲಾ ಬೇಕಂತೆ! ಇದೂ ಗುಲಾಮತನದ ಗುಪ್ತ ನಟನೆಯಲ್ಲದೆ ಮತ್ತೇನು?

ಇಂದಿನ ಪ್ರತಿಯೊಬ್ಬ ಭಾರತೀಯನ ಹಾರೈಕೆ—

"ಅನ್ನ ಬ್ರಹ್ಮನು ಸದಾ ಸಂತುಷ್ಟನಾಗಿ ಭಾರತವನ್ನು ಪ್ರಸನ್ನ ದೃಷ್ಟಿಯಿಂದ ನೋಡುತ್ತಿರಲಿ! ಅನ್ನಪೂರ್ಣಾದೇವಿಯು ಬಡ ಗುಡಿಸಲುಗಳನ್ನೇ ತನ್ನ ಶಯ್ಯಾಗೃಹವನ್ನಾಗಿ ಮಾಡಿಕೊಳ್ಳಲಿ!"

ಸದ್ಯ ಬಡ ಭಾರತೀಯನಿಗೆ ಈ ಭೋಜನ ಪ್ರಕರಣವನ್ನು ಬಿಟ್ಟು ಇನ್ನಾವುದರಲ್ಲಿ ಹಿರಿದಾದ ಬಯಕೆ ಇರಬಹುದು?

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ಎಲ್ಲಾ ತರದ ಫೋಟೋ
ಮತ್ತು
ಆರ್ಟ್ ಕೆಲಸಗಳಿಗೆ ಸಂದರ್ಶಿಸಿರಿ.

ನಾಯಕ್ ಸ್ಟುಡಿಯೋ,

ಲೈಟ್ ಹೌಸ್ ಹಿಲ್ ರೋಡು,
ಹಂಪನಕಟ್ಟೆ — ಮಂಗಳೂರು-1.

ವಿಷ್ಣು ಸಹಸ್ರ ನಾಮ

(೬ನೇ ಪುಟದಿಂದ)

ಶ್ಲೋ|| ಹಂತತೇ ಕಥಯಿಷ್ಯಾಮಿ
ದಿವ್ಯಾಹ್ಯಾತ್ಮ ವಿಭೂತಯಃ
ಪ್ರಾಧಾನ್ಯತಃ ಕುರು ಶ್ರೇಷ್ಠನಾಸ್ತ್ಯಂ
ತೊ ವಿಸ್ತರಸ್ಯಮೇ || ೧೦–೧೯ ||

'ಎಲೈ ಕುರು ಶ್ರೇಷ್ಠನೇ, ನನ್ನ ದಿವ್ಯವಾದ ವಿಭೂತಿಗಳನ್ನು ನಿನಗೆ ಮುಖ್ಯವಾಗಿ ಹೇಳುವೆನು. ಏಕೆಂದರೆ ನನ್ನ ವಿಭೂತಿಯ ವಿಸ್ತಾರಕ್ಕೆ ಕೊನೆಯಿಲ್ಲ'. ಇದೇ ಗೀತೆಯ ಹತ್ತನೆಯ ಅಧ್ಯಾಯದ ಕೆಲವು ಶ್ಲೋಕಗಳು ವಿಷ್ಣು ಸಹಸ್ರನಾಮಕ್ಕೆ ಬೀಜ ರೂಪಗಳಾಗಿವೆ.

ಸಹಸ್ರನಾಮದಲ್ಲಿ ಬರುವ 'ಅರ್ಕ, ಆದಿತ್ಯ, ಜ್ಯೋತಿರಾದಿತ್ಯ, ಜ್ಯೋತಿರ್ಗಣೇಶ್ವರ, ಭಾನು....... ಸೂರ್ಯ, ಸವಿತೃ ಎಂಬ ಸೂರ್ಯನ ಹೆಸರುಗಳೂ, ಅನಲ, ವಹ್ನಿ, ಸಪ್ತಜಿಹ್ವ, ಸಪ್ತೈಧಸ, ಹುತಭುಕ್ ಎಂಬ ಅಗ್ನಿಯ ಹೆಸರುಗಳೂ, ಅಪಾಂನಿಧಿ, ವರುಣ, ಅಂಬೋನಿಧಿ, ಪರ್ಜನ್ಯವೆಂಬ ಜಲಕ್ಕೆ ಸಂಬಂಧಪಟ್ಟ ಹೆಸರುಗಳೂ, ಅನಿಲ, ಪವನ, ವಾಯು, ಸಮೀರಣವೆಂಬ ವಾಯುವಿನ ಹೆಸರುಗಳೂ ಭಗವಂತನಾದ ವಿಷ್ಣುವಿಗೇ ಸಂಬಂಧಿಸಿವೆ.

ಶ್ಲೋ|| ಯದ್ಯದ್ವಿಭೂತಿಮತ್ ಸತ್ವಂ
ಶ್ರೀಮದೂರ್ಜಿತಮೇವವಾ ।
ತತ್ತದೇವಾವಗಚ್ಛತ್ವಂ ಮಮತೇ
ಜೋಂಶ ಸಂಭವಂ || ೧೦—೪೧ ।

'ಯಾವ ಯಾವ ವಸ್ತು ವಿಭೂತಿಯುಳ್ಳದ್ದೋ, ಶ್ರೀಯುಕ್ತವೋ ಅವೆಲ್ಲವೂ ನನ್ನ ತೇಜಸ್ಸಿನ ಒಂದಂಶದಿಂದ ಉಂಟಾದುವೆಂದು ತಿಳಿದುಕೊ' ಈ ಗೀತಾ ವಾಕ್ಯದ ಮೇರೆಗೆ ಹಂಸ, ಸುಪರ್ಣ, ಸಿಂಹ, ಶರಭ, ಭುಜಗೋತ್ತಮ, ಮಹೋರಗ, ನ್ಯಗ್ರೋಧ, ಉದುಂಬರ, ಅಶ್ವತ್ಥವೆಂಬ ಹೆಸರುಗಳೆಲ್ಲಾ ವಿಷ್ಣು ನಾಮಗಳಾಗಿವೆ.

ಕೆಲವು ಸಾಮಾನ್ಯ ಹೆಸರುಗಳೂ ಭಗವಂತನ ಸಂಬಂಧದಿಂದ ವಿಷ್ಣುಪದಗಳಾಗಿವೆ.

ನಿಮಿಷೋsನಿಮಿಷ, ಕಾಮಹಾ, ಕಾಮಕೃತ್, ಕ್ರೋಧಹಾ, ಕ್ರೋಧಕೃತ್, ...ಅಮೂರ್ತಿಮಾನ್, ಅನೇಕ ಮೂರ್ತಿ, ಏಕೋsನೈಕ,...ಯುಜ್ಞಾಂತಕೃತ್.

ಕೆಲವು ಕಡೆಯಲ್ಲಿ ವ್ಯಾಸರು ಅನುಪ್ರಾಸದ ತತ್ವವನ್ನು ಹಿಡಿದು ಎಷ್ಟೋ ಶಬ್ದಗಳನ್ನು ಒಟ್ಟುಕೂಡಿಸಿದ್ದಾರೆ. ಕೆಲವು ಕಡೆ ಒಂದೇ ಪದದಿಂದ ಹೊಸ ಹೊಸ ಪದಗಳನ್ನು ನಿರ್ಮಾಣಮಾಡಿದ್ದಾರೆ.

ಅನಂತ—ಅನಂತ ಜಿತ್, ಅನಂತ ರೂಪ. ಅಮೃತ—ಅಮೃತಪ, ಅಮೃತವಪು. ಕಾಮ—ಕಾಮಕೃತ್, ಕಾಮದೇವ, ಕಾಮಪಾಲ. ಚತುರ-ಚತುರಶ್ರ, ಚತುರಾತ್ಮಾ, ಚತುರ್ಗತಿ. ಸರ್ವ-ಸರ್ವಗ, ಸರ್ವಜ್ಞ, ಸರ್ವದೃಕ್, ಸರ್ವಾದಿ, ಸರ್ವಂಸಹ.

ಕೆಲವು ಕಡೆ ಪದಗಳ ಹೃದಯಂಗಮವಾದ ಜೋಡಣೆಯಿದ್ದು ಇವನ್ನು ಉಚ್ಚರಿಸುವಾಗ ಮಾನವನಿಗೆ ಭಕ್ತಿ ಸಾಗರದಲ್ಲಿ ಮುಂದರಿದು ಭಗವತ್ ಸಾನಿಧ್ಯವನ್ನು ಸೇರುತ್ತೇನೆಂಬ ಉದಾತ್ತಭಾವನೆಯುಂಟಾಗುವುದು—

ಗುರುರ್ಗುರುತಮ, ಸಹಸ್ರಜಿದನಂತಜಿತ್, ಸನಾತ್ ಸನಾತನತಮ, ಯೋಗೋಯೋಗ ವಿದಾಂನೇತಾ, ಅನ್ನಮನ್ನಾದ ಏವಚ, ಧಾತಾ ವಿಧಾತಾ ಧಾತುರುತ್ತಮ.

ಹಲವು ನಾಮಗಳು ಅವನ ಗುಣಮಹಿಮೆಯನ್ನು ಸಾರುತ್ತಿವೆ.

೧. ಜನನವಿಲ್ಲದವನು ಅಜ, ಅಯೋನಿಜ, ಅನಾದಿ.

೨. ನಾಶರಹಿತನು-ಸ್ಥಾಣು, ಶಾಶ್ವತ, ಶಾಶ್ವತಸ್ಥಾಣು, ಸ್ಥವಿರೋಧ್ರುವ, ಸ್ಥಿರ, ಧ್ರುವ.

೩. ಜಗತ್ತಿನ ಉತ್ಪತ್ತಿಗೆ ಕಾರಣನು-ಸಂಭವ, ಭಾವನ, ಪ್ರಭವ, ವಿಶ್ವಯೋನಿ, ಸರ್ಗ, ಉದ್ಭವ, ಧಾತಾ, ವಿಧಾತಾ.

೪. ಜಗತ್ತನ್ನು ಧಾರಣಮಾಡುವವನು—ಭರ್ತಾ, ವರ್ಧನ, ಗೋಪ್ತಾ, ಭೋಕ್ತಾ, ಭೂತಭೃತ್, ಶರೀರಭೃತ್.

೫. ಉತ್ಪತ್ತಿ ಸ್ಥಿತಿಲಯಗಳಿಗೆ ಕಾರಣನು—ಭೂತಭವ್ಯಭವನ್ನಾಥ, ಭೂತಭವ್ಯಭವತ್ಪ್ರಭು.

೬. ಜಗತ್ತನ್ನು ನಾಶಮಾಡುವವ—ಅಂತಕ.

೭. ಸರ್ವವ್ಯಾಪಿಯು—ವಿಷ್ಣು, ವಿಶ್ವ, ಸರ್ವ, ಸರ್ವಗ.

೮. ವಿಷ್ಣುವು ದೇವತೆಗಳಲ್ಲೂ ಮನೆಮಾಡಿದ್ದಾನೆ; ಇದರಿಂದ ದೇವತೆಗಳು ಬೇರಲ್ಲ—ಪುರಂದರ, ಮಹೇಂದ್ರ, ಉಪೇಂದ್ರ, ಪ್ರಜಾಪತಿ, ಭಾನು, ವಾಯು, ವಹ್ನಿ, ವರುಣ.

೯. ಸರ್ವ ದೇವತೆಗಳ ನಾಯಕನು-ಅಮರ ಪ್ರಭು, ಸುರೇಶ. ಸರ್ವೇಶ್ವರ, ಸುರಾಧ್ಯಕ್ಷ, ಮಹಾದೇವ.

೧೦. ವಿವಿಧಾವತಾರಿಯು—ಮಹಾಶೃಂಗ (ಮತ್ಸ್ಯ) ಮಹಾ ವರಾಹ, ನಾರಸಿಂಹವಪು, ವಾಮನ, ತ್ರಿವಿಕ್ರಮ, ರಾಮ, ಕೃಷ್ಣ.

೧೧. ಶ್ರೀ ಕೃಷ್ಣಾವತಾರವು ಪೂರ್ಣಾವತಾರ—ಮಾಧವ, ಮಧುಸೂದನ, ಗೋವಿಂದ, ವಾಸುದೇವ, ಶೌರಿ, ದೇವಕೀನಂದನ.

೧೨. ಭಗವಂತನ ಲೀಲೆಗಳು-ವನಮಾಲಿ, ಸುಯಾಮುನ, ಚಾಣೂರಾಂಧ್ರನಿಷೂದ ಮಧುಸೂದನ, ಕೇಶಿಹಾ.

೧೩. ವೇದ ತಳಹದಿಯ ಮೇಲೆ ಧರ್ಮ ಮಂದಿರವು ಕಟ್ಟಲ್ಪಟ್ಟಿದೆ—ವೇದ, ವೇದವಿತ್, ವೇದಾಂಗ, ಶ್ರುತಿಸಾರ, ಮಂತ್ರ.

೧೪. ಯಜ್ಞವು ವಿಷ್ಣುವಾಚಕ—ಯಜ್ಞ, ಕೃತು, ಹವಿ, ಇಜ್ಯ.

ಭಗವಂತನು ಪುಂಡರೀಕಾಕ್ಷನೂ, ಶುಭೇಕ್ಷಣನೂ, ರವಿಲೋಚನನೂ, ಆಗಿದ್ದು ಸುಮುಖನಾಗಿದ್ದಾನೆ. ಅಲ್ಲದೆ ಶುಭಾಂಗನೂ, ಸುವರ್ಣ ವರ್ಣನೂ ಆಗಿದ್ದು, ಪದ್ಮನಾಭನೂ, ಚಂದನಾಂಗದಿಯೂ, ಕನಕಾಂಗದಿಯೂ ಆಗಿದ್ದಾನೆ. ಭ್ರಾಜಿಷ್ಣು, ಮಹಾದ್ಯುತಿ, ಚಂದ್ರಾಂಶು, ಭಾಸ್ಕರ ದ್ಯುತಿ ಮೊದಲಾದ ವಿಶೇಷಣಗಳು ಅವನಿಗೆ ಯೋಗ್ಯವಾಗಿವೆ. ಅವನು ಸುಧನ್ವನು, ರಥಾಂಗಪಾಣಿಯು, ಖಂಡಪರಶುವು, ಶಂಖಭೃತ್ತುವು, ನಂದಕಿಯು, ಸರ್ವಪ್ರಹರಣಾಯುಧನು. ಇವನು ಜಗತ್ತಿನ ವ್ಯವಹಾರಕ್ಕಾಗಿ ಕಾಲವಿಭಾಗ ಮಾಡಿದುದರಿಂದ ನಿಮಿಷ, ಅಹ, ಋತು, ಸಂವತ್ಸರನಾದನು. ಈತನು ಸಾಮವೇದಪ್ರಿಯನಾದುದರಿಂದ ತ್ರಿಸಾಮಾ, ಸಾಮಗ, ಸಾಮನಾದನು ಪ್ರಧಾನ ಪುರುಷೇಶ್ವರ, ಮಹರ್ಷಿ, ಕಪಿಲಾಚಾರ್ಯವೆಂಬ ಪದಗಳು ಸಾಂಖ್ಯ ಶಾಸ್ತ್ರಕ್ಕೂ, ಯಮ, ನಿಯಮ, ಯೋಗಿ, ಯೋಗೀಶ ಪದಗಳು ಯೋಗ ಶಾಸ್ತ್ರಕ್ಕೂ ಸಂಬಂಧಿಸಿವೆ. ಇನ್ನು ಧನುರ್ವೇದದ ಹೆಸರೂ, ಔಷಧ, ಭಿಷಕ್, ಭೇಷಜ, ಅನಾಮಯವೆಂಬ ಆಯುರ್ವೇದದ ವಿಚಾರವೂ, ಕಿಂ, ಯತ್, ತತ್ ಮೊದಲಾದ ವ್ಯಾಕರಣ ಶಬ್ದಗಳೂ ಅಲ್ಲಲ್ಲಿ ಭಗವನ್ನಾಮವಾಗಿ ಬಂದಿವೆ. ವಿಷ್ಣುವು ಸತಾಂಗತಿಯು, ಗತಿಸತ್ತಮನು, ಮುಕ್ತಾನಾಂಪರಮಾಗತಿಯು. ಈ ಮಹತ್ವದ ಹೆಸರುಗಳು ಈ ದೇವ ದೇವನನ್ನು ಬಿಟ್ಟು ಮತ್ತಾರಿಗೆ ಅನ್ವರ್ಥವಾದೀತು?

ಗೀತೆಗಳಲ್ಲಿ ರುದ್ರ ಗೀತೆ, ಶಿವ ಗೀತೆ, ರಾಮ ಗೀತೆ, ದೇವಿ ಗೀತೆ ಮೊದಲಾದ ಎಷ್ಟೇ ಗೀತೆಗಳಿದ್ದರೂ ಭಗವದ್ಗೀತೆಯ ಸ್ಥಾನಮಾನವು ಯಾವ ಗೀತೆಗೂ ಹೇಗೆ ದೊರೆಯಲಾರದೋ ಹಾಗೆಯೇ ಎಷ್ಟೇ ಸಹಸ್ರ ನಾಮಗಳಿದ್ದರೂ ವಿಷ್ಣು ಸಹಸ್ರನಾಮದ ಯೋಗ್ಯತೆ ವಿಷ್ಣು ಸಹಸ್ರ ನಾಮಕ್ಕಲ್ಲದೆ ಅನ್ಯ ಸಹಸ್ರನಾಮಗಳಿಗೆ ಬರಲಾರದು.

ವಿಷ್ಣು ಸಹಸ್ರನಾಮವನ್ನು ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯರಾದ ಶ್ರೀ ರಾಮಕೃಷ್ಣಾನಂದರು ನಿತ್ಯ ಪಾರಾಯಣ ಮಾಡುತ್ತಿದ್ದರಂತೆ. ಈ ಸಹಸ್ರನಾಮದ ಪದಜೋಡಣೆಯಲ್ಲೊಂದು ದೈವಿಕ ತೇಜಸ್ಸಿದೆ. ಇದನ್ನು ಏಕಾಗ್ರತೆಯಿಂದ ಮತ್ತು ಭಕ್ತಿಯಿಂದ ಪಾರಾಯಣ ಮಾಡುವವನನ್ನು ಆ ದೈವಿಕ ತೇಜಸ್ಸು ಮೆಲ್ಲಮೆಲ್ಲನೆ ಆವರಿಸಿ, ಆತನ ಅಸುರ ಗುಣಗಳನ್ನು ಕಳಿಸಿ ಶಾಂತಿಯನ್ನು ದಯಪಾಲಿಸುತ್ತದೆ. ಇದರಿಂದ ಜನ್ಮಪಾವನವಾಗುವುದರಲ್ಲಿ ಸಂದೇಹವುಂಟೆ? ತುಲಸೀದಾಸರ ಬಾಯಿಯಿಂದ ಬಂದ ಒಂದೇ ಒಂದು ರಾಮನಾಮವು ಮಹಾಪಾಪಿಯನ್ನು ಪಾವನಗೊಳಿಸಿತಂತೆ! ಅಂದಮೇಲೆ ಭೀಷ್ಮರ ಬಾಯಿಯಿಂದ ಬಂದು, ವೇದವ್ಯಾಸರಿಂದ ಹೇಳಲ್ಪಟ್ಟ ವಿಷ್ಣು ಸಹಸ್ರನಾಮವು ಜನತೆಯ ಹೃದಯದ ಮೇಲೆ ಏನು ಪರಿಣಾಮಮಾಡಲಾರದು?

ಮಹಾಭಾರತವೊಂದು ಇತಿಹಾಸ (ಇತಿ + ಹ + ಆಸ); ಹೀಗೆ ಇತ್ತಂತೆ; ಹೀಗೆ ನಡೆಯಿತು ಎನ್ನುವ ಗ್ರಂಥ. ಇದರ ಕಾಲದ ಕುರಿತು ವೆ.ಗ್ರಾ. ನಲ್ಲರು—'ಭಾರತ ಯುದ್ಧವು ಕ್ರಿ. ಪೂ. ೧೦ನೆಯ ಶತಮಾನಕ್ಕಿಂತ ಈಚೆ ನಡೆದಿರಲಾರದು' ಎಂದಿದ್ದಾರೆ. ನಮ್ಮ ದೇಶೀಯರು ಭಾರತ ಯುದ್ಧದ ಕಾಲವನ್ನು ಇನ್ನೂ ಹಿಂದೆ ಹಾಕುತ್ತಾರೆ. ಭಾರತ ಯುದ್ಧವು ನಡೆದ ಒಂದು ಶತಮಾನದ ಮೇಲೆ ಜನಮೇಜಯ ರಾಜನ ಆಳ್ವಿಕೆಯಲ್ಲಿ ಭಾರತ ಇತಿಹಾಸವು ವೇದವ್ಯಾಸರಿಂದ ನಿರ್ಮಿತವಾಯಿತೆಂದು ಹೇಳುತ್ತಾರೆ. ಇದನ್ನು ಡಾ|| ವಿಂಟರ್ ನಿಟ್ಸರು ಕ್ರಿ. ಪೂ. ೪೦೦ ರಿಂದ ಕ್ರಿ. ಶ. ४೦೦ರ ವರೆಗೆ ಅಂದರೆ ೮೦೦ ವರ್ಷಗಳು ಭಾರತಕ್ಕೆ ಇಂದಿನ ರೂಪ ತಳೆಯಲು ಬೇಕಾಯಿತು ಎಂದಿದ್ದಾರೆ. ಭಾರತವು ಯಾವಕಾಲದಲ್ಲಿ ಜನ್ಮತಳೆದಿದ್ದರೂ ಅದರೊಡನೆ ವಿಷ್ಣು ಸಹಸ್ರನಾಮವು ಜನ್ಮವೆತ್ತಿತು ಎನ್ನುವುದರಲ್ಲಿ ಎರಡಿಲ್ಲ. ಅದು ಹಲವು ಶತಮಾನಗಳಿಂದ ಭಾರತದಲ್ಲಿ ಜೋಪಾನವಾಗಿ ಬಾಳಿಕೊಂಡು ಬಂದುದು ಭಾರತೀಯರ ಭಾಗ್ಯದ ಬಲದಿಂದಲೇ. ಗೀತೆಗಳಲ್ಲಿ ಭಗವದ್ಗೀತೆ. ಸಹಸ್ರನಾಮಗಳಲ್ಲಿ ವಿಷ್ಣು ಸಹಸ್ರನಾಮ—ಇವಿಷ್ಟಿದ್ದರೆ ಭಾರತೀಯರು ಪಾರಮಾರ್ಥಿಕ ಸುಖಕ್ಕಾಗಿ ಪರರ ಮುಂದೆ ಕೈನೀಡಬೇಕಾಗಿಲ್ಲ.



ಹಾರ್ಮೋನಿಯಮ್
ಬೋಧನ ಕ್ರಮ
ಎಂಬ ಶ್ರೀ. ಎ. ರಾಮಪ್ಪನವರಿಂದ
ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಬುಕ್ ಡಿಪ್ಪೊ, ಉಡುಪಿ.

ಸಾಹಿತ್ಯ ಮತ್ತು ಧರ್ಮ

(೯ನೇ ಪುಟದಿಂದ)

ಇಷ್ಟಗಳಿಗನುಗುಣವಾಗಿ ಸಾಹಿತ್ಯ ಕ್ಷೇತ್ರದಲ್ಲೂ ಸೃಷ್ಟಿಸ್ಥಿತಿ ಲಯಗಳಾಗುತ್ತಿವೆ. ಹೀಗೆ ತುಂಬಿ ತುಳುಕಿದ ಹೃದಯದ ಕಲ್ಯಾಣ ಕಲ್ಪನೆಯೇ ಕಾವ್ಯ. ಅದನ್ನು ಅನುಭವಿಸಿ ಹಾಡುವ ಆರಾಧಕನೇ ಕವಿ!

ಪ್ರತಿ ಸೂರ್ಯ ರಶ್ಮಿಯಲ್ಲೂ ಏಳು ಬಣ್ಣಗಳ ಬೆರಕೆ ಇದ್ದೇಯಿದೆ. ಆದರೆ ಅದನ್ನು ಕಾಣುವ ಕಣ್ಣು ನಮ್ಮದಲ್ಲ. ಗಾಜಿನ ತ್ರಿಕೋಣಾಕೃತಿಯ ಮೇಲೆ ಬಿದ್ದಾಗ ಅದರ ಅಭಿವ್ಯಕ್ತಿ ರಂಜಕವಾಗುವುದು. ಆಗ ಮಾತ್ರ ನಾವು ಅದನ್ನು ಕಂಡೇ ಕಾಣುವೆವು, ಅಂತೆಯೇ ಪ್ರಕೃತಿಯೇ ಸೌಂದರ್ಯದ ದೊಡ್ಡ ದೇವಾಲಯ. ಅಲ್ಲಿ ನಡೆದು ಕಂಡವರಿಗೆಲ್ಲ ದೇವರ ದರ್ಶನವಾಗುವುದಿಲ್ಲ. ಅದರಿಂದ ಆತ ಹಾಗೆಯೇ ದೂಷಿಸಿ ಹಿಂದೆರಳುತ್ತಾನೆ. ಆದರೆ ಅವಿಕಲ್ಪ ಚಿತ್ತದ ಸಾಧಕನೊಬ್ಬ ಮುನ್ನಡೆದು ದೇವರನ್ನು ಕಂಡೇ ಕಾಣುತ್ತಾನೆ. ಕಂಡಾಗ ಅವನ ಹೃದಯದ ಮುಚ್ಚುಬಾಗಿಲು ತೆರೆದು ಅದೇ ಹೆಬ್ಬಾಗಿಲಾಗುವುದು. ಅಂತಹ ದೈವಿಕ ಪ್ರೇರಣೆಯೇ ಕವಿತ್ವ! ಆ ದಿವ್ಯ ದರ್ಶನದ ಪ್ರತಿಸ್ಪಂದ ಎಲ್ಲ ಜೀವಿಗಳನ್ನು ಮುಟ್ಟಿ ತಟ್ಟಿ ಹೊಡೆದೆಬ್ಬಿಸುವುದು. ಆಗ ಸೂರ್ಯ ಕಿರಣವಲ್ಲಿ ಏಳು ಬಣ್ಣಗಳನ್ನು ಕಾಣದ ಬರೆಗಣ್ಣೂ ಅಂತಹ ವಿಶಿಷ್ಟ ವಿನ್ಯಾಸವನ್ನು ಕಂಡು ಬೆರಗಾಗುವುದು. ದೇವರ ಸಾನ್ನಿಧ್ಯವನ್ನು ಒಪ್ಪದ ದೂಷಕನೂ ಹೌದೆಂದು ನಂಬಿ ತಲೆದೂಗುವನು. ಮತ್ತೂ ಕೆಲಜನರು ಕಾಣದೆ ಹೋದರೆ ನಂಬದಿದ್ದರೆ ಅವರೇ ಹುಟ್ಟು ಕುರುಡರು— ನಾಸ್ತಿಕರು! ಅಂಥವರ ವಿಚಾರ ಒತ್ತಟ್ಟಿಗಿರಲಿ—

"ಜಲರು ಕಣ್ದೆರೆದಿಲ್ಲ ತೆರೆದರೂ
ಕಂಡಿಲ್ಲ
ಕಂಡಿಹುದು ಕಾಮ ಕಲ್ಮಷದ ಬದುಕು
ಹಲರಿಣಿಕೆಗಳ ಹೊತ್ತು ಕೈಲಾಸ
ವೇರಲಿಕೆ
ಬರಲುಂಟೆ? ಬಂದವರು ಬರಲಿ
ಸಾಕು"!

(ಕವಿತಾಕಾಮಿನಿ.)

ಸೌದಾಸ ಮಹಾರಾಜನ ಬಳಿಗೆ ಉದಂಕ ಋಷಿ ಕುಮಾರನು ಬಂದು ಅವನ ಹೆಂಡತಿಯ ಕಿವಿಯೋಲೆಗಳನ್ನು ಕೇಳಿದಾಗ ಆತ ಹೇಳುತ್ತಾನೆ—ನೀನೇ ಹೋಗಿ ಕೇಳು. ನಾನು ಹೇಳಿದೆನೆಂದು ಈ ಸಂಕೇತ ವಾಕ್ಯವನ್ನು ತಿಳಿಸು, ಅಲ್ಲೇ ಅರಮನೆಯಲ್ಲಿ ಅಂತಃಪುರದಲ್ಲಿದ್ದಾಳೆ—

ಉದಂಕನು ಅರಮನೆಯ ಕೋಣೆ ಕೋಣೆಗಳಲ್ಲೆಲ್ಲ ಹುಡುಕಿ ಮಹಾರಾಣಿಯನ್ನು ಕಾಣದೆ—ಇದು ರಾಜನ ಮೋಸಗಾರಿಕೆ —ಎಂದು ಕೋಪಗೊಂಡು ರಾಜನ ಬಳಿ ಮರು ಬಂದಾಗ ಮಹಾಭಾರತದಲ್ಲಿ ಕಂಡು ಬರುವ ರಾಜನ ಮಾತು ಬಹಳ ಗಮನಾರ್ಹವಾಗಿದೆ-ನನ್ನ ಪತ್ನಿ ಮಹಾ ಪತಿವ್ರತೆ.ಆಕೆಯ ದರ್ಶನಕ್ಕೆ ಹೋದಾಗ ನೀನು ಅಶುಚಿಯಾಗಿದ್ದಿ ಅದುದರಿಂದಲೇ ಆ ಸತಿಯನ್ನು ಕಾಣಲಾಗಲಿಲ್ಲ. ಇನ್ನೊಮ್ಮೆ ಶುಚಿರ್ಭೂತನಾಗಿ ಹೋಗು—ಎಂದನು. ಕೊನೆಗೆ ಋಷಿಕುಮಾರನಿಗೆ ಆ ಸಾಧ್ವಿಯ ದರ್ಶನವಾಗುವುದು.

ಈ ಪ್ರಪಂಚದ ಪರಿಸ್ಥಿತಿಗೆ ಇದೊಂದು ಮಾದರಿಯಾಗಿದೆ. ಸತ್ತನ್ನು ಅಸತ್ತಿನಿಂದ ಕಾಣಲು ತಿಳಿಯಲು ಬರುವಂತಿಲ್ಲ. ಮಾಂಗಲ್ಯದ ರೂಪದರ್ಶನವಾಗಬೇಕಾದರೆ ಮಾನವನ ಮನಸ್ಸು ಅಸತ್ತಿನ ಆಘಾತಾಳದಿಂದ ಮೇಲೆದ್ದಿರಬೇಕು. ಕವಿಯ ಕಲ್ಪನೆಯ ಮಟ್ಟವನ್ನು ಅಳೆಯಬೇಕಾದರೆ ಬರೇ ವಾಮನನಾಗಿದ್ದರೆ ಸಾಲದು. ತ್ರಿವಿಕ್ರಮಾವತಾರವೂ ನಡೆಯಬೇಕು. ಮೇಲುಗಾಲಿನಿಂದ ನಿಂತು ನೀಳ್ದಿರಿಸಿ ನೋಡುವ ಸ್ಥೈರಣೆ ಬೇಕು— ಸಾಧನೆಯೂ ಬೇಕು. ಪ್ರಪಂಚದಲ್ಲಿ ಪಶುಗಳಿಗಾಗಿ ಯಾವ ಕಾವ್ಯದ ನಿರ್ಮಾಣವೂ ಆಗಿಲ್ಲ. ಆದರೆ ಅಂತಹ ಪಶುಗಳನ್ನು ಮಾನವತೆಯ ಮಹತ್ವದ ಕಡೆ ಒಂದುಗೂಡಿಸಿ ಬಿಗಿಯಲು ಬೇಕಾದ ಸಾಹಸ ಸಾಹಿತ್ಯದಲ್ಲಿ ನಡೆದೇ ನಡೆದಿದೆ. ಅದೇ ಸಾಹಿತ್ಯವನ್ನು ಹೊಂದಿಕೊಂಡಿರುವ ವಿಶಾಲ ಧರ್ಮ!

ಈ ಸಾಹಸ ಇಂದು ನಿನ್ನೆಯದಲ್ಲ. ಈಗ ಐದು ಸಾವಿರ ವರ್ಷಗಳ ಹಿಂದೆ ನಿಸರ್ಗ ನಗುತಿದ್ದಾಗ ಮುಂಬೆಳಕು ಹೂಹುಡಿ ಚೆಲ್ಲಿದಾಗ ಮಹಾಬ್ರಹ್ಮಣನೊಬ್ಬ ತಮಸಾ ನದಿಯ ಕಡೆ ಸ್ನಾನಕ್ಕಾಗಿ ತೆರಳಿದ್ದ. ಮುಂಗಡೆ ಚಾತಕ ಪಕ್ಷಿಗಳ ಜೋಡು ಅವನಿಗೆ ಸ್ವಾಗತವನ್ನು ಬಯಸಿ ಕೂಗುತಿದ್ದಿತು. ಒಮ್ಮಿಂದೊಮ್ಮೆಗೆ ಅಂತಹ ಕಲ್ಯಾಣದ ಕೂಗು ಕಡಿದುಹೋಗಿ ಕೊಲೆಯ ಚೀತ್ಕಾರದ ಕರ್ಕಶ ಶಬ್ದ ಆ ಮಹಾನುಭಾವನ ಮನಸ್ಸನ್ನು ಕದಡಿ ಬಿಟ್ಟಿತು. ಅಂತಹ ಉದ್ರೇಕದ ಉಗಮವಾಗಿ ಜೋರ ಹೊಮ್ಮಿದ ಮಾತು ಅದೇ ಪ್ರಪಂಚದ ಮೊದಲ ಮಹಾ ಕಾವ್ಯದ ನಾಂದಿ. ಅದರ ಕರ್ತನೇ ಋಷಿಪುಂಗವ ವಾಲ್ಮೀಕಿ!

ಇದೊಂದು ಸರ್ವ ಸಾಮಾನ್ಯವಾದ ಘಟನೆ. ಬೇಡನ ಬಾಣಕ್ಕೆ ಆಹುತಿಯಾಗಿ ಹಕ್ಕಿಯೊಂದು ಬಿದ್ದಿದ್ದರೆ ಆದರ ಅನಂತ ಆತ್ಮದ ಆಕ್ರಂದನ ವಾಲ್ಮೀಕಿಗೆ ಒಂದು ಚಿರಂತನವಾದ ಚೇತನದ ಆಕ್ರಂದನವಾಗಿ ಕೇಳಿಸಿತು. ಅವನ ಜನ್ಮ ಜನ್ಮಗಳ ಪೂರ್ವವಾಸನೆ ಮರುಕಳಿಸಿತ್ತು. ಅದುದರಿಂದಲೇ ಅವನ ಸಹಾನುಭೂತಿಯು ಸಹನೆಯ ಕಟ್ಟೆ ಮೀರಿ ಶಾಪವಾಗಿ ಬೇಡನ ಮೇಲೆ ಚೆಲ್ಲಿತು. ಒಂದಿಗೆ ರಸಬಿಂದಿಗೆಯ ಕಾವ್ಯಾಮೃತವೂ ಹರಿದು ಸಾಹಿತ್ಯವು ಶಾಶ್ವತವಾಯಿತು.

ಅಂದು ಬೆಳಗಿನ ಭವ್ಯತೆಗಾಗಿ ಅವನ ಹೃದಯವು ತೆರೆದು ಕಾವ್ಯ ಗಂಗೆಯು ಹರಿದು ಬರಲಿಲ್ಲ. ಹಕ್ಕಿಗಳ ಹಾಡಿಗಾಗಿ ಹೊಮ್ಮಲಿಲ್ಲ. ಆದರೆ ರಸವನ್ನು ದಬ್ಬಿದ ವಿರಸಕ್ಕಾಗಿ ಶೃಂಗಾರದ ಕೊರಳು ಕೊಯ್ದ ಕರುಣೆಗಾಗಿ ಕಾವ್ಯಸ್ರೋತವು ನಿರರ್ಗಳವಾಗಿ ಹರಿದು ಬಂದಿತು.

—'ಬದುಕಿನಲಿ ಸೊಗಸಿಲ್ಲ ಕೆಡುಕನೊಂ
ದನು ಕಂಡು
ಕೊಲುವ ಬಿಲ್ಬತ್ತಳಿಕೆ ಬಿಗಿಯಬೇಕು"–

(ಕವಿತಾಕಾಮಿನಿ)

ಇದೇ ಅಂದಿನಿಂದ ಇಂದಿನತನಕವೂ ಅವ್ಯಾಹತವಾಗಿ ನಡೆದುಬಂದ ಕಾವ್ಯ ಧರ್ಮ.

ಸಾಹಿತ್ಯಕ್ಕೂ ಒಂದು ಧರ್ಮವಿದೆ ಎಂದಂತಾಯಿತು. —ಧಾರಣಾದ್ಧರ್ಮ ಇತ್ಯಾದು:—

ಜಗತ್ತನ್ನು ಆಧರಿಸಿರುವುದು ಧರ್ಮ. ಜನ ಜನತೆಯ ವೈಯಕ್ತಿಕತೆಯನ್ನು ಅಳಿಸಿ ಸಾಂಘಿಕವಾಗಿ ಬಿಗಿದಿರುವುದು ಧರ್ಮ. ಮನುಷ್ಯ ಮೊತ್ತಮೊದಲಿಗೆ ವ್ಯಕ್ತಿ ಜೀವಿಯಾಗಿರಬಹುದು. ಆಗಲಾಗ ಆತನ ಧರ್ಮದ ನಿಲುವಳಿ ಬಹಳ ಅಲ್ಪ. ಅವನ ಚಿಕ್ಕ ಬಳಗದ ಹೊಂದಾಣಿಕೆಗೆ ಬೇಕಾದಷ್ಟೆ ಅವನ ದೃಷ್ಟಿ ಮುಂದುವರಿಯುತಿದ್ದಿತು. ಅದಕ್ಕೂ ಮೀರಿದ ದೂರಾಲೋಚನೆಯ ಆಗತ್ಯವಾದರೂ ಅಂದಿಗಿದ್ದಿಲ್ಲ. ಬರಬರುತ್ತ ಮಾನವಕುಲದ ವಿಸ್ತಾರವಾದಂತೆ ಅದು ವ್ಯಕ್ತಿ ಜೀವನದಿಂದ ಕೂಟಜೀವನಕ್ಕೆ ಹೊಂದಿಬಂದಂತೆ ಆದರ ಪರಿಪೋಷಕವಾಗಿ ಒಂದು ವಿಶಿಷ್ಟ ಧರ್ಮದ ಆವಿಷ್ಕಾರವಾಗಲೇ ಬೇಕಾಯಿತು. ಅದೇ ಮಾನವ ಧರ್ಮ. ಮನುಷ್ಯನು ಪಶುಜೀವನದಿಂದ ಮೇಲ್ಮಟ್ಟಕ್ಕೆ ಬಂದು ಮಾನವ ಜೀವನಕ್ಕೆ ಕೂಡ ತೊಡಗಿದಾಗ ಅಳವಡಿಸಿಕೊಂಡ ಮಾನವಧರ್ಮ. ಮನುಷ್ಯನು ನಾವು ನೋವುಗಳಿಗೆ ಜೀನೆ ಬಣಣೆಗಳಿಗೆ ಸುಖ ಸಂತೋಷದೊಡನೆ ಸಮತೋಲನೆಗೊಟ್ಟು ಎಲ್ಲಾ ಜೀವಿಗಳೊಡನೆ ಸಾಮಾನ್ಯವಾಗಿ ಬೆರೆತುಬಾಳಲು ಬಲ್ಲಂತಹ ವಿವೇಕದ ವಿಶಾಲಧರ್ಮ.

ಮಹರ್ಷಿ ವಾಲ್ಮೀಕಿಯ ರಾಮಾಯಣವು ಯಾವೊಂದು ಧರ್ಮಕ್ಕಾಗಿಯೂ ಮೀಸಲಾಗಿಲ್ಲ. ಯಾವೊಂದು ಮತಕ್ಕೂ ಮೀಸಲಾಗಿಲ್ಲ, ಅದನ್ನು ತಮಗೆ ಬೇಕಾದಂತೆ ಮತಮತಗಳಿಗೆ ಅಪಾರ್ಥವಾಗಿ ಹೊಂದಿಸಿಕೊಂಡರೆ ಅದಕ್ಕಾಗಿ ನಾವು ದುಃಖಪಡಬೇಕು. ಏಕೆಂದರೆ ಅದು ಕವಿಯ ಕನಿಷ್ಟ ಕಲ್ಪನೆಯಲ್ಲ. ಕರುಣೆಯ ಕಣ್ಣೀರಿನಲ್ಲಿ ಮಿಂದು ಮೈ ಮಡಿಗೊಂಡ ಅವನ ಮಹಾಕಾವ್ಯದ ಕಲ್ಪನೆಯೇ ಒಂದು ವಿಶಾಲ ಧರ್ಮ. ಅಲ್ಲಿ ನಾವು ಕಾಣುವುದು ಸೋದರರ ಸಾಹಚರ್ಯ. ಸತೀತ್ವದ ಸಾಹಚರ್ಯ-ಸ್ನೇಹಿತರ ಸಾಹಚರ್ಯ. ಇದನ್ನು ವಿನಷ್ಟಗೊಳಿಸುವ ಎಲ್ಲಾ ಪಶುಶಕ್ತಿಗಳ ವಿನಾಶ.. ಇಷ್ಟೆ ತಾನೆ! ಇದೇ ಸಾಹಿತ್ಯದ ಮೂಲ ಧರ್ಮ!

ಸ್ವಾನುಭವದಿಂದ ಸಾಹಿತ್ಯದ ಸೃಷ್ಟಿಯಾಗಬೇಕು. ಅನುಭವವೇ ಸಾಹಿತ್ಯದ ಬೆಂಗೋಲು—ಜೀವಾಳ. ಧರ್ಮ ಪ್ರವೃತ್ತಿ ಮತ್ತು ಸಂಯಮದಿಂದ ಮಾತ್ರ ಅಂತಹ ಅಮೂಲ್ಯ ಅನುಭವವು ಬಂದೀತು. ಸಂಯಮದಿಂದ ಮಾತ್ರ ಸೌಂದರ್ಯದ ಸಿದ್ಧಿಯಾಗ ಬಲ್ಲುದು. ಅನಿಯಮಿತವಾಗಿ ತಿನ್ನುವ ಹೊಟ್ಟೆಬಾಕ ತನ್ನ ದೊಡ್ಡ ಹೊಟ್ಟೆಗಾಗಿ ಮಾತ್ರ ತಿನ್ನುತ್ತಾನೆ—ರುಚಿಗಾಗಿಯಲ್ಲ. ಸಾತ್ವಿಕ ಪ್ರೇಮದ ಸೌಂದರ್ಯದ ಪರಿಪೂರ್ಣತೆಯನ್ನು ಸತಿಯಿಂದ ಕೇಳಿ ತಿಳಕೊಳ್ಳಬೇಕು—ಸೂಳೆಯಿಂದಲ್ಲ. ಸಂಯಮ ರಹಿತವಾದ ಅಧಾರ್ಮಿಕ ವೃತ್ತಿಯ ದುಷ್ಟ ಅನುಭವದಿಂದ ಬಂದ ಸಾಹಿತ್ಯದಿಂದಾಗಿ ಮಾನವ ಕುಲದ ಉದ್ಧಾರವಾಗಲಾರದು. ಅಂತಹ ಅನುಭವವು ಅಹಂಕಾರಕ್ಕೆ ಮಾತ್ರ ಹೇತುಕವಾಗಿದೆ. ಅಹಂಕಾರದಿಂದಲೇ ಮಾನವ ಕುಲದ ನಾಶ—ಜಗತ್ತಿನ ನಾಶ.

'ನಾ ಋಷಿಃ ಕುರುತೇ ಕಾವ್ಯಂ—ಋಷಿಯಲ್ಲದಾತ ಹೇಗೆ ಸತ್ಕಾವ್ಯವನ್ನು ಸೃಷ್ಟಿಸಿಯಾನು? ಅಪೂರ್ಣ ಬೋಧೆಯ ವಿಕಾರ ಮನಸ್ಸಿನ ಅಹಂಕಾರದ ಸೃಷ್ಟಿಯೇ ವಿಶ್ವಾಮಿತ್ರ ಸೃಷ್ಟಿ- ಅಂತಹ ಸೃಷ್ಟಿ ಪ್ರಪಂಚಕ್ಕೆ ಏನನ್ನು ಸಾಧಿಸಿಕೊಟ್ಟಿದೆ? ಎಲ್ಲವೂ ತಿರುವು ಮುರುವು!

—'ತಾನೆಂದ ಮಾತು ಬ್ರಹ್ಮಾನಂದ
ವಾಗಲಿಕೆ
ತನ್ನನೇ ತಾನರಿತು ನೋಡಬೇಕು
ಆನಂದ ಸಾಗರದ ತೆರೆಯೊಳುಯ್ಯಾಲೆ
ಯಾಡಿ,
ತನ್ನತನವನು ಜಗಕೆ ನೀಡಬೇಕು!'—

(ಕವಿತಾ ಕಾಮಿನಿ)

ಜಗತ್ತಿಗೆ ನಾವು ಕೊಡಬೇಕಿರುವುದು ವಿಕಾರವನ್ನಲ್ಲ ವಿಕಾಸನವನ್ನು! ಆತ್ಮಾನುಭವದ ಆತ್ಮಾವಲೋಕನದ ಆತ್ಮ ಸೈಸ್ಥ್ಯದ ಆತ್ಮೀಯತೆಯನ್ನು! ಇದೇ ಸಾಹಿತ್ಯ ಧರ್ಮದ ಸೂತ್ರ ಪಾತ!

ಆದರೂ ಜನತೆಯಲ್ಲಿ ಅಹಂಕಾರವಿದೆ. ನಮಗೆ ರಾಜಧಾನಿಗೆ ಹೋಗುವುದು ಮುಖ್ಯ. ಈ ತನಕ ನಡೆದ. ಬಂದ ದಾರಿ ಇದ್ದೇ ಇದೆ. ಆದರೆ ಮತ್ತೊಂದು ಹೊಸ ದಾರಿ ಕಂಡುಹಿಡಿಯಬೇಕೆಂಬ ಲವಲವಿಕೆ ಬುದ್ಧಿವಂತನಿಗೆ ಹುಟ್ಟಿಯೇ ಹುಟ್ಟುವುದು. ಅಂತೆಯೇ ಆತ ಒಂದು ದಾರಿ ಹುಡುಕಿ ಅದೇ ನೇರವಾದ ಮಾರ್ಗ ಎಂದು ಡಂಗುರ ಸಾರುವನು. ಜನತೆಗೂ ಇಂತಹ ನಾವೀನ್ಯವೇ ಬೇಕಾಗಿದೆ. ನಾವೀನ್ಯವೇ ಹುಟ್ಟಿನ ಲಕ್ಷಣ—ಬೆಳವಣಿಗೆಯ ಲಕ್ಷಣ. ಹಾಗೆ ಆ ದಾರಿ ಹಿಡಿದು ಸಾಗುವವರೂ ಕೆಲವು ಮಂದಿ ಬಂದೇ ಬರುವರು. ಅದೇ ಅವರದೊಂದು ಗುಂಪು. ಅಂತಹ ಗುಂಪೇ ಒಂ

(೨೩ನೇ ಪುಟ ನೋಡಿರಿ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. ೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ವ್ಯಕ್ತಿ - ಅವನ ಜೀವನ ಮಟ್ಟ

ವ್ಯಕ್ತಿಯ ಜೀವನ ಮಟ್ಟವು ಭಿನ್ನ ಭಿನ್ನ ಕಾರಣಗಳಿಂದ ದಿನದಿಂದ ದಿನಕ್ಕೆ ಏರುತ್ತ ಹೋಗುತ್ತಿರುವುದನ್ನು ಕಂಡು ವಿಷಂಜನೆಯುಂಟಾಗುವುದು ಸಹಜ. ಆದರೆ, ಇದನ್ನು ಇಳಿಸುವುದು ಸಾಧ್ಯವಿಲ್ಲವೆ? ಇದೆ; ಅಲ್ಪ ಪರಿಶ್ರಮದಿಂದಲೇ ಅದನ್ನು ತಡೆಗಟ್ಟಬಹುದು.

ಸೂಚಿಸಿದವರು: ಶ್ರೀ. ಮೋಹನ ಮುತಾಲಿಕ, ಬಿ. ಎ.

ದೈನಂದಿನ ಜೀವನಮಟ್ಟವೇನೋ ಏರುತ್ತಿದೆ. ಆರ್ಥಿಕ ತೊಂದರೆ—ತಾಪತ್ರಗಳೂ ಒಂದರ ಹಿಂದೊಂದರಂತೆ ಬರುತ್ತಿರುವುದೂ ಸ್ವಾಭಾವಿಕವಾಗಿದೆ. ಜೀವನದಲ್ಲಿ ಅನುದಿನವೂ ಬೇಕಾಗುತ್ತಿರುವ ವಸ್ತು—ಪದಾರ್ಥಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವುದೂ, ಹೊಸತಾದ ಬೇಡಿಕೆಗಳು ಅಭಿರುಚಿಯ ಹೊಸ ಮಾದರಿಯಿಂದಾಗಿ ಜನತೆಯನ್ನು ಆಕರ್ಷಿಸುತ್ತಿರುವುದೂ ವ್ಯಕ್ತಿಗಳ ಜೀವನಮಟ್ಟವನ್ನು ಕಠಿಣತಮವಾಗಿ ಮಾಡುತ್ತಿದೆ. ಆದಾಯದ ಪ್ರಮಾಣವನ್ನು ಇಂದಿನ ಬೇಡಿಕೆಗಳ ಪ್ರಮಾಣದಲ್ಲಿ ಹೋಲಿಸಿದ್ದಾದರೆ ಹಿಂದಿನ ಹಾಗೂ ಇಂದಿನ ಪರಿಸ್ಥಿತಿಯಲ್ಲಿ ಆದ ಬದಲಾವಣೆಯು ವ್ಯಕ್ತಿಗಳ ಜೀವನಮಟ್ಟವನ್ನು ಯಾವ ರೀತಿಯಲ್ಲಿ ಸ್ಥಿತ್ಯಂತರಿಸಿದೆ? — ಎಂಬುದು ಎದ್ದು ಕಾಣುತ್ತದೆ.

ಇದಕ್ಕೆ ಪ್ರಸ್ತುತಕಾಲದ ರಾಜಕೀಯ ಅಥವಾ ಭೌಗೋಳಿಕ ಪರಿಸ್ಥಿತಿಯೇ ಕಾರಣವೆಂದೆನ್ನಲಾಗದು. ಇದು ಬಹುಶಃ ಐತಿಹಾಸಿಕ ಸಂಗತಿಗಳ ಭಯಂಕರ ಪರಿಣಾಮವನ್ನೂ ಮಾಡಿದೆಯೆಂದೆನ್ನಬಹುದು. ಈಗೀಗ ಸರಕಾರಗಳು ಕೇವಲ ದೇಶರಕ್ಷಣ ಕಾರ್ಯವನ್ನಷ್ಟೇ ಕೈಕೊಳ್ಳದೆ ದೇಶದಲ್ಲಿಯ ಸರ್ವತೋಮುಖ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳುತ್ತಿರುವುದರಿಂದ ದೇಶದ ಆದಾಯ-ಖರ್ಚುಗಳೆಲ್ಲವೂ ವಿಪರೀತವಾಗಿ ಏರುತ್ತಿದ್ದು ಇದನ್ನು ಗಳಿಸುವುದಕ್ಕೋಸ್ಕರ ಸರಕಾರದವರು ಜನತೆಯ ಮೇಲೆ ಕರಭಾರವನ್ನು ಹೆಚ್ಚಿಸುವುದರಲ್ಲಿ ಸಂಶಯವಿಲ್ಲ. ಆದರೆ ಸಂರಕ್ಷಣಾ ಭಾರವು ಎಷ್ಟು ಖರ್ಚಿನ ವಿಷಯವಾಗಿತ್ತೋ! ಅದಕ್ಕೂ ಹೆಚ್ಚಿನ ಭಾರ ಇತರ ವಿಷಯಗಳಿಂದ ಕೂಡಿದುದರಿಂದ ಹಿಂದಿನ ಸರಕಾರೀ ವೆಚ್ಚಕ್ಕೂ ಇಂದಿನ ಸರಕಾರೀ ವೆಚ್ಚವೂ ವಿಪರೀತವಾಗಿ ಏರಿ ಹೋಗಿದೆ. ಇದರಿಂದ ರಾಷ್ಟ್ರಗಳು ಹೆಚ್ಚಿನ ಹಣವನ್ನು ಜನರಿಂದ ಎತ್ತುವುದಕ್ಕಾಗಿ ಪ್ರಯತ್ನಿಸಿದ್ದುದು ಆಶ್ಚರ್ಯಕರವೇನಿಲ್ಲ.

ಆದರೆ ಜನತೆಯ ಮೇಲೆ ಭಾರ ಹಾಕಿ ಹೆಚ್ಚಿನ ಆದಾಯ ಪಡೆಯುವ ರಾಷ್ಟ್ರಗಳು ಜನತೆಯ ಜೀವನ ಮಟ್ಟದ ಮೇಲೆ ಆರ್ಥಿಕ ಪರಿಸ್ಥಿತಿಯ ಪರಿಣಾಮಗಳು ಯಾವ ರೀತಿಯಲ್ಲಿ ದೃಷ್ಟಿ ಚೆಲ್ಲುತ್ತವೆಂಬುದನ್ನು ಗಮನಿಸಬೇಕಾದದ್ದಗತ್ಯವಿದೆ. ಕೇವಲ ಕರಭಾರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹೇರುವುದರಿಂದಾಗಲೀ, ಇದ್ದವುಗಳ ಬೆಲೆಯನ್ನೇರಿಸುವುದರಿಂದಾಗಲೀ ರಾಷ್ಟ್ರದ ಆದಾಯ ಶಕ್ತಿಯನ್ನೇರಿಸುವುದನ್ನು ನೋಡಬಹುದಲ್ಲವೆ ಜನಸಾಮಾನ್ಯರ ಮೇಲೆ ಅದರ ಪರಿಣಾಮವೇನಾಗುವುದೆಂಬುದನ್ನು ಸಾಮಾನ್ಯವಾಗಿ ಯಾರೂ ಅರಿತಂತಿಲ್ಲ. ಕೇವಲ ಟೀಕೆ, ವಿಮರ್ಶೆಗಳನ್ನು ಮಾಡುವುದರಿಂದ ಈ ವಿಷಯಗಳ ಇತ್ಯರ್ಥ ಮಾಡಿದಂತಾಗಲಿಲ್ಲ. ಆದರೆ ಇವುಗಳ ಸತ್ಯಚಿತ್ರದ ದೃಶ್ಯಗಳನ್ನು ನೋಡಿ, ಅದಕ್ಕನುಸರಿಸಿ ಯೋಗ್ಯ ಮತ್ತು ಸೂಕ್ತ ಬದಲಾವಣೆಗಳನ್ನು ಮಾಡಿದಲ್ಲಿ ಅದರ ಪರಿಣಾಮ ಪ್ರಜೆಗಳ ಮೇಲೂ ರಾಷ್ಟ್ರದ ಮೇಲೂ ಆಗುವುದರಲ್ಲಿ ಸಂಶಯವಿಲ್ಲ.

ವ್ಯಕ್ತಿಗಳ ಜೀವನಮಟ್ಟದ ಮೇಲೆ ಸದ್ಯದ ವಾತಾವರಣವು ಕೆಲಮಟ್ಟಿಗೆ ಕಾರಣವಾಗುತ್ತಿದ್ದರೂ, ಈ ಕಾರಣವನ್ನೇ ಆಧಾರವಾಗಿಟ್ಟುಕೊಂಡು ರಾಷ್ಟ್ರದ ಆಡಳಿತಗಾರರು ರಾಷ್ಟ್ರದ ಆದಾಯವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ತೋರಿಸಬೇಕೆಂಬ ಕಾರಣಗಳಿಂದಲೂ ತಮ್ಮ ಅಧಿಕಾರದ ಉಪಯೋಗದಿಂದ ಎಲ್ಲವುಗಳ ಮೇಲೆ ಹೆಚ್ಚಿನ ಹಣವನ್ನು ಭಾರವಾಗಿ ಹಾಕುತ್ತಾರೆ. ಆದರೆ ರಾಷ್ಟ್ರಗಳು ಆದಾಯದ ವಿಷಯವನ್ನಷ್ಟೇ ಗಮನಿಸುವವಲ್ಲದೆ ಅದರ ಪರಿಣಾಮವು ಸಾಮಾನ್ಯ ಮನುಷ್ಯನ ಮೇಲೆ ಯಾವ ರೀತಿಯಿಂದಾಗುವುದೆಂಬುದನ್ನು ಸಾಮಾನ್ಯವಾಗಿ ಗಮನಿಸಿದಂತಿಲ್ಲ. ಇದ್ದ ವ್ಯಕ್ತಿಗತ ಆದಾಯವೇ ಸಾಮಾನ್ಯರಿಗೆ ಸಾಕಾಗದಿರುವ ಸಂದರ್ಭದಲ್ಲಿ ಇನ್ನಷ್ಟು ಭಾರವನ್ನು ರಾಷ್ಟ್ರದ ಅಧಿಕಾರೀ ವರ್ಗವೇ ಮುಂದಾಗಿ ಮಾಡಿದಲ್ಲಿ ಕೇವಲ ಇದರ ಭಾರವಷ್ಟೇ ಅವನ ಮೇಲೆ ಹೆಚ್ಚಾಗುವುದೆಂದು ಭಾವಿಸುವುದು ಸಮಂಜಸವಾಗದು. ಸರಕಾರದ ಈ ಭಾರವು ಉಳಿದ ವಸ್ತು—ಪದಾರ್ಥಗಳ ಮೇಲೂ, ಅವಶ್ಯಕತೆಗಳ ಮೇಲೂ ಪರಿಣಾಮ ಮಾಡದಿರದು. ಒಂದರ ಮೇಲಾದ ಹೆಚ್ಚಿನ ಭಾರ ಮತ್ತೊಂದರ ಬೆಲೆಯನ್ನು ಏರಿಸುವುದರಲ್ಲಿ ನಿಸ್ಸಂಶಯವಾಗಿ ಸಹಾಯ ಮಾಡುತ್ತದೆ. ರಾಷ್ಟ್ರೇತರ ಹಂಚಿಕೆದಾರರು ಅರ್ಥಾತ್ ಅನಿಯಂತ್ರಿತ ಅವಶ್ಯಕತೆಗಳ ಉತ್ಪಾದಕರು ತಮ್ಮ ಗ್ರಾಹಕರ ಬೇಡಿಕೆಗಳ ಬೆಲೆಗಳನ್ನು ಏರಿಸಿದ್ದಾದರೆ ಅದು ಕೆಲವು ದಿನಗಳ ವರೆಗೆ ಮಾತ್ರ ಪೇಟೆಯಲ್ಲಿ ಪರಿಣಾಮ ಮಾಡಬಹುದೇ ಹೊರತು ನಿರಂತರವಾಗಿ ಅಲ್ಲ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳನ್ನು ಹೇಳಬಹುದು. ಒಂದನೇಯದಾಗಿ ಅಂತಹವುಗಳಿಗೆ ಸರಕಾರೀ ಅಥವಾ ಸ್ವಾಧಿಕಾರದ ಅಧಿಕಾರ ಇರದಿರುವುದು; ಹಾಗೂ ಎರಡನೇಯದಾಗಿ ಗ್ರಾಹಕರನ್ನು ಅವಲಂಬಿಸುವುದು. ಸರಕಾರೇತರ ಇಂತಹ ಸಂಘಟನೆಗಳು ಅಥವಾ ಹಂಚಿಕೆದಾರರು ಜನತೆಯ ಸಹಾಯ, ಸೌಹಾರ್ದ, ಸಹಕಾರ, ವಿಶ್ವಾಸಗಳಿಗೆ ಮಣಿಯಬೇಕಾಗುತ್ತದಲ್ಲವೆ ಸರಕಾರದ ಹಾಗೆ 'ಮಾಡಿದ್ದೇ ಮಾಣಿಕ್ಯ' ಎಂದೆನ್ನಲಾಗದು. ಸರಕಾರವು ಏನೇ ಮಾಡಿದರೂ ಅದು ಕಾನೂನಿಗಳಿಗನುಗುಣವಾಗಿ ಬಂಧನಕಾರಕವಾಗುತ್ತದೆ. ಅಲ್ಲದೆ ಇಂತಹ ಸರಕಾರೇತರ ಹಂಚಿಕೆದಾರರ ಮೇಲೆಯೂ ಕೂಡ ಸರಕಾರವೇ ಕಾನೂನುಗಳಿಂದ ತನ್ನ ಅಧಿಕಾರ ಪ್ರಸ್ಥಾಪಿಸುವುದರಿಂದ ಅಂತಹವರು ಸರಕಾರವನ್ನೂ ಅವಲಂಬಿತರಾಗಿ ನೋಡಬೇಕಾಗುತ್ತದೆ. ಜನತೆ ಹಾಗೂ ಸರಕಾರಗಳೆರಡರ ಮನಸ್ಸಿನಂತೆ ನಡೆದರೇನೇ ಉತ್ಪಾದಕರು ಅಥವಾ ಒಡೆಯರು ಬದುಕಿ ಬಾಳಬಹುದು; ಹೀಗಾಗಿ ಅವರಿಗೆ ಸಾಮಾನ್ಯ ತೊಂದರೆಗಳು ವಿಶೇಷವಾಗಿವೆಯೆಂದೆನ್ನಲಡ್ಡಿಯಿಲ್ಲ. ಆದರೆ ಸರಕಾರವು ಸರ್ವತಂತ್ರ ಸ್ವತಂತ್ರವಾಗಿದ್ದು ತನ್ನ ಅಧಿಕಾರಕ್ಷೇತ್ರದಲ್ಲಿ ಏನನ್ನಾದರೂ ಮಾಡಬಲ್ಲುದು. ಇಲ್ಲಿ ಸರಕಾರ ಹಾಗೂ ಜನತೆಯೆಂಬ ಎರಡೇ ಪಕ್ಷಗಳು ಬರುತ್ತಿದ್ದು ಉತ್ಪಾದಕರ ಹಾಗೆ ಅಂಜಿ ನಡೆಯುವ ಮೂರನೇ ಪಕ್ಷದ [ಸರಕಾರೇತರ ಒಡೆಯರು ಅಥವಾ ಹಂಚಿಕೆದಾರರು] ಹಾಗೆ ಅರ್ಥ ದೃಷ್ಟಿಯಿಂದ ಯಾರನ್ನೂ ಕಾಣುವ ಪ್ರಸಂಗ ಸರಕಾರಕ್ಕಿರುವದಿಲ್ಲ. ಹೀಗಾಗಿ ಸರಕಾರದವರು ಬೆಳೆಸಬಹುದಾದ ಹಾಗೂ ಹೆಚ್ಚಿಸಬಹುದಾದ ಪತ್ರಿಯೊಂದರ ದರಗಳನ್ನು ನೋಡಿಕೊಂಡು ಮೂರನೇ ಪಕ್ಷದವರು ಹೊಂದಿಕೊಂಡು ನಡೆಯಬೇಕಾಗುವುದರಿಂದ ಸರಕಾರದವರು ದರಗಳನ್ನು ಏರಿಸಿದ ಪ್ರಮಾಣದಲ್ಲೇ ತಮ್ಮ ಹಂಚಿಕೆಯ ದರಗಳನ್ನು ಉಪಾಯಗಾಣದೆ ಏರಿಸಬೇಕಾಗುತ್ತದೆ, ಹೀಗಾಗಿ ಸಾಮಾನ್ಯ ಜನರ ಎಲ್ಲ ಅವಶ್ಯಕತೆಗಳ ಬೆಲೆಗಳೂ ಏರಿ ಸಾಮಾನ್ಯ ವ್ಯಕ್ತಿಯ ಜೀವನ ಮಟ್ಟದ ಮೇಲೆ ಪರಿಣಾಮವನ್ನುಂಟು ಮಾಡುತ್ತವೆ. ಈ ರೀತಿಯಿಂದಾಗಿ ವೆಚ್ಚದ ಪಟ್ಟಿಯು ದೊಡ್ಡದಾಗುವುದೇ ಹೊರತು ಆದಾಯದಲ್ಲಿ ಯಾವ ಬದಲಾವಣೆಗಳೂ ಕಂಡು ಬರುವುದಿಲ್ಲ. ಹೀಗಾಗಿ ವ್ಯಕ್ತಿಗಳ ಜೀವನ ಮಟ್ಟದಲ್ಲಿ ಏರಿಳಿತವಾಗಿ ಅನೇಕ ಸಮಸ್ಯೆಗಳನ್ನೆದುರಿಸಬೇಕಾದ ಪ್ರಸಂಗ ಬರುತ್ತದೆ. ಈ ಸಂದರ್ಭದಲ್ಲಿ ಅನೇಕ ವಿಚಾರಗಳು ಬಂದು ಹೋದರೂ ಯಾವುದು ಯೋಗ್ಯ ಮತ್ತು ಉತ್ತಮವೆಂಬುದನ್ನರಿಯುವುದೇ ಕಠಿಣವಾಗುತ್ತದೆ.

ಈ ಕಾಲದಲ್ಲಿ ಹೊಸ ಹೊಸ ಮಿಶ್ರಿತ ವಸ್ತುಗಳ ಉಪಯೋಗದಿಂದಾಗಿ (alternative uses) ಹೊಸ ಹೊಸ ಮಾದರಿಗಳು ಬರುತ್ತಿವೆ. ಇದರಿಂದಾಗಿ ಖರ್ಚು ಹೆಚ್ಚಾಗುವುದರಲ್ಲಿ ಸಂಶಯವೇ ಇಲ್ಲ. ಆದರೆ ಈ ವೆಚ್ಚವನ್ನು ತಡೆಯಲಿಕ್ಕಾಗದೇ ಎಂದೂ ಜನ ಕೇಳಬಹುದು. ಲಕ್ಷಾಂತರ ಜನರು ಹೊಸ ರುಚಿಗಳಿಗಂಟಿಕೊಂಡುದರಿಂದಲೂ ಈಗಿನ ವಸ್ತು—ಪದಾರ್ಥಗಳು ಅಥವಾ ಮಾದರಿಗಳು ವೈಜ್ಞಾನಿಕ ಲಕ್ಷಣಗಳ ಶಾಸ್ತ್ರೀಯ ರೂಪಗಳ ಧಾರಣ ಮಾಡುತ್ತಿದ್ದುದರಿಂದ ಅವುಗಳನ್ನು ಜನ ಬಿಡಲಾರರು. ಹಾಗಾದರೆ ಇಂತಹವುಗಳ ಮೇಲೆ ವೆಚ್ಚವಾಗುತ್ತಿರುವ ಹೆಚ್ಚಿನ ಹಣಕ್ಕಾಗಿ ಏನು ಮಾಡಬೇಕು? ಸರಕಾರದವರು ತಮ್ಮ ಅಧಿಕಾರ ಕ್ಷೇತ್ರದಲ್ಲಿನ ಮಾದರಿಗಳ ದರಗಳನ್ನು ಏರಿಸುತ್ತಿರುವುದರಿಂದ ದೈನಂದಿನ ಬೇಡಿಕೆಗಳ ದರಗಳೂ ಏರುತ್ತಿರುವುದರಿಂದ ಅದರ ಭಾರ ಬಿದ್ದು ವೆಚ್ಚದ ಬಾಬುಗಳು ಏರುತ್ತಿರುತ್ತವೆ. ಇದನ್ನು ತಡೆಗಟ್ಟುವುದು ಹೇಗೆ? ಅಲ್ಲದೆ ಈಗೀಗ ಮೋಜಿನ ಒಡವೆಗಳಿಗೆ ಮಾಡುತ್ತಿರುವ ವೆಚ್ಚದ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಬಹುದು? ಮುಂತಾದ ಸಮಸ್ಯೆಗಳು ಅನುದಿನವೂ ತಲೆ ತಿನ್ನುತ್ತಿವೆ. ಇವೆಲ್ಲ ಕಾರಣಗಳಿಂದ ಇಳಿಯುತ್ತಿರುವ ಜನತೆಯ ಜೀವನಮಟ್ಟವನ್ನು ಯಾವ ರೀತಿಯಲ್ಲಿ ಸುಧಾರಿಸುವುದು ಶಕ್ಯವಿದೆ?-ಇವೇ ಮೊದಲಾದ ಸಮಸ್ಯೆಗಳು ದಿನದಿನವೂ ಕೇಳಬರುತ್ತಿವೆ.

ಇವುಗಳೆಲ್ಲವನ್ನೂ ಗಮನಿಸಿದಾಗ ನಾವು ಯಾವ ಕ್ರಮಗಳನ್ನೂ ಕೈಕೊಳ್ಳುವುದು ಸಾಧ್ಯವಿಲ್ಲವೆಂದು ಒಮ್ಮೊಮ್ಮೆ ಅನಿಸುತ್ತದೆ. ಆದರೆ ವಿಶೇಷವಾಗಿ ವಿಚಾರಿಸಿ ನೋಡಿದಲ್ಲಿ ಇದೂ ಕೂಡ ಸಾಧ್ಯವೆಂದೆನಿಸದಿರದು. ಹೊಸ ಹೊಸ ಮಾದರಿಯ ರುಚಿಗಳಿಗೆ ಪ್ರೋತ್ಸಾಹ ನೀಡಬೇಕಾದುದು ಅಗತ್ಯವಿದೆ. ಆದರೆ ಅವುಗಳಿಂದಾಗುತ್ತಿರುವ ಹೆಚ್ಚಿನ ವೆಚ್ಚವನ್ನು ಇಳಿಸುವುದಕ್ಕೋಸ್ಕರ ಅಂತಹ ಮಾದರಿಗಳ ಬೆಲೆಯನ್ನು ನಾವು ಇಳಿಸುವುದರ ಕಡೆಗೆ ಗಮನ ಕೊಡಬೇಕು. ಹಾಗಾಗಬೇಕಾದರೆ ಅದರ ಬೇಡಿಕೆ ಹೆಚ್ಚಬೇಕಾದದ್ದಂತೂ ಅಗತ್ಯ. ಹೆಚ್ಚಿನ ಬೇಡಿಕೆಯೂ ಇಂದಿನ ಜನಾಂಗದಿಂದ ಬರುತ್ತಲಿವೆ; ಆದರೆ ದರಗಳು ಅಥವಾ ಬೆಲೆಗಳು ಮಾತ್ರ ಏರುತ್ತಲಿವೆ. ಇದನ್ನು ಪ್ರತಿಬಂಧಿಸಿ ಇದಕ್ಕೆ ವಿರುದ್ಧವಾದ ದಿಶೆಯಲ್ಲಿ—ಅಂದರೆ-ಬೆಲೆಗಳನ್ನು ಇ

(೨೨ನೇ ಪುಟ ನೋಡಿರಿ)

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್, ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.

(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2 00.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ...... ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ| ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)

ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.

(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಏಶಿಯಾದಲ್ಲಿ ಸಮಾಜವಾದ

(೭ನೇ ಪುಟದಿಂದ)

ಇದರ ಪರಿಣಾಮವೇನಾಯಿತು? ಏಶಿಯೂದ ದೇಶಗಳಲ್ಲಿ ಸಾಮ್ರಾಜ್ಯ ವಿರೋಧಿ ಸ್ವಾತಂತ್ರ್ಯ ಚಳವಳಿಗಳು ಹೋರಾಟದ ನಿಕಂಕ್ಕೆ ಸಿದ್ಧಿಯ ಶಿಖರಕ್ಕೆ ಮುಟ್ಟಿದಾಗ ಏಶಿಯೂದ ಸಮಾಜವಾದದ ಕಡಲಿಗೂ ಉಕ್ಕೇರಿತು. ಇದಕ್ಕೆ ಇನ್ನೊಂದು ಬಲವಾದ ಕಾರಣವೂ ಇತ್ತು. ಸಾಮ್ರಾಜ್ಯವಾದದ ತಳಹದಿ ಆರ್ಥಿಕವೆಂಬುದರ ಸರಿಯಾದ ಅರಿವು ಅದರ ಆರ್ಥಿಕ ವರ್ಗ ಚೇತನೆಯ ಸ್ವರೂಪದ ತಿಳುವಳಿಕೆ ಮಿಕ್ಕ ರಾಷ್ಟ್ರೀಯ ನಾಯಕರಿಗಿಂತ ಮಾರ್ಕ್ಸ್‌ನ ಮತದ ದೀಕ್ಷೆ ಪಡೆದ ಸಮಾಜವಾದದ ದೃಷ್ಟಿ ಪಳಗಿಸಿಕೊಂಡ ಧುರೀಣರಿಗೇ ಹೆಚ್ಚು ಚೆನ್ನಾಗಿತ್ತು. ಅವರೇ ಹಳೆಯ ನಾಯಕರಿಗಿಂತ ಹೆಚ್ಚು ಉಗ್ರವಾಗಿ ಶೀಘ್ರವಾಗಿ ಸ್ವಾತಂತ್ರ್ಯ ಚಳವಳಿಯ ಸಮಾಜವಾದಿ ಕ್ರಾಂತಿಕಾರಿಗಳು ಮುಖಂಡತ್ವವನ್ನು ನಡೆಯಿಸಲು ಸಮರ್ಥರಾದವರು. (ನಮ್ಮ ದೇಶದಲ್ಲಿ ತಲೆದೋರಿದ ಪಂಡಿತ ನೇಹರೂರ ನಾಯಕತ್ವ. ಅನಂತರ ಆಗಸ್ಟ ಚಳವಳಿಯಲ್ಲಿ ಜಯಪ್ರಕಾಶರಂಥ ಸೋಶಲಿಸ್ಟರ ನೇತೃತ್ವ ನೆನಪಿಸಿಕೊಳ್ಳಿರಿ.) ಹಾಗಾದರೆ ಇಲ್ಲಿ ಒಂದು ಸ್ವಾರಸ್ಯದ ಪ್ರಶ್ನೆ ಏಳುತ್ತಿದೆ—ಕಮ್ಯುನಿಸ್ಟರೂ ಮಾರ್ಕ್ಸವಾದಿಗಳು ಕ್ರಾಂತಿಕಾರಿಗಳು. ಅವರೇಕೆ ಆಗಿನ ಆಂದೋಲನದಲ್ಲಿ ಸಮಾಜವಾದಿಗಳಂತೆಯೋ ಅವರಿಗಿಂತಲೂ ಹೆಚ್ಚು ನಾಯಕತ್ವ ಹೊಂದಲಿಲ್ಲ? ಅದಕ್ಕೆ ಉತ್ತರ ಆ ಪ್ರಶ್ನೆಯಲ್ಲಿಯೇ ಇದೆ ಸಮಾಜವಾದಿಗಳಿಗಿಂತಲೂ ಕಮ್ಯುನಿಸ್ಟರು ತೀವ್ರವಾದ ಕರ್ಮಠ ಮಾರ್ಕ್ಸ ಲೆನಿನ್ ನಿಷ್ಠರು, ಉಗ್ರರಾದ ಕ್ರಾಂತಿಕಾರಿಗಳು. ಆದ್ದರಿಂದಲೇ ಅವರು ಅಷ್ಟು ನಿಷ್ಠಾವಂತ ರಾಷ್ಟ್ರವಾದಿಗಳಲ್ಲ. ಕಮ್ಯುನಿಸ್ಟರು ತತ್ವತಃ ಅಂತಾರಾಷ್ಟ್ರೀಯ ದೃಷ್ಟಿ ನಿಷ್ಠೆಯುಳ್ಳವರು. ರಾಷ್ಟ್ರವಾದಿಗಳಿಗೆ ಅಂಥವರಲ್ಲಿ ನಂಬಿಗೆ ಸ್ಥಿರವಲ್ಲ. ಕಳೆದ ಮಹಾ ಯುದ್ಧದಲ್ಲಿ ಭಾರತೀಯ ಕಮ್ಯುನಿಸ್ಟ ಪಕ್ಷದ ನೀತಿ-ರೀತಿ ಇದಕ್ಕೆ ಒಂದು ಉದಾಹರಣೆ. ೧೯೪೮ರಲ್ಲಿ ಬ್ರಹ್ಮದೇಶ—ಇಂಡೋನೇಶಿಯಾಗಳಲ್ಲಿ ಕಮ್ಯುನಿಸ್ಟರು ಎಬ್ಬಿಸಿದ ಬಂಡಾಯಗಳು ವಿದೇಶೀ ಆಳರಸರಿಗಿಂತ ಹೆಚ್ಚು ಹೊಸದಾಗಿ ನೆಲೆಯೂರಿದ ರಾಷ್ಟ್ರೀಯ ಸರಕಾರಗಳ ವಿರುದ್ಧವೇ ಆಗಿದ್ದವು.

ಮೇಲಿನ ವಿವೇಚನೆ ಸರಿಯಿದ್ದರೆ ಅದರಿಂದ ಹೊರಡುವ ತೀರ್ಮಾನವೆಂದರೆ ಏಶಿಯಾದ ಸಮಾಜವಾದಿ ಪಕ್ಷಗಳ ಅಸುವೂ ಕಸುವೂ ರಾಷ್ಟ್ರೀಯ ಆಂದೋಲನದ ಉತ್ಕರ್ಷದಿಂದ ವೃದ್ಧಿಯಾದಂತೆ ಆ ಚಳವಳಿಯ ಅಪಕರ್ಷದೊಂದಿಗೆ ಅದು ಕ್ಷಯವೂ ಆಗಬೇಕು. ಅದು ಹಾಗೆಯೇ ಆಗಿದೆ. ಇದು ಒಂದು ಗಂಭೀರ ತೀರ್ಮಾನ. ಏಕೆಂದರೆ ಸ್ವಾತಂತ್ರ್ಯ ಸಿದ್ಧಿ ಸ್ವರಾಜ್ಯ ಪ್ರಾಪ್ತಿಯೊಂದಿಗೆ ರಾಷ್ಟ್ರೀಯ ಆಂದೋಲನದ ಸಮಾಪ್ತಿಯೇ ಆಯಿತು. ಅಂದಾಗ ಅದರ ಅಂಗವಾಗಿ ಬೆಳೆದು ಇಳಿದ ಈ ಸಮಾಜವಾದಿ ಆಂದೋಲನವೂ ಅಳಿದು ಕೊನೆಗಂಡಂತೆಯೇ? ಇದೊಂದು ತಾತ್ಕಾಲಿಕ ತಪ್ಪೆ, ಕೆಲಕಾಲದ ಖಂಡ ಗ್ರಹಣವಾಗಲಾರದು!

ರಾಷ್ಟ್ರೀಯ ಸ್ವಾತಂತ್ರ್ಯದ ಉತ್ತರಕಾಲದಲ್ಲಿ ಈ ಪಕ್ಷಗಳು ಒಂದಿಲ್ಲೊಂದು ರೀತಿಯಲ್ಲಿ ಮಾರ್ಕ್ಸವಾದದಿಂದ ದೂರಸರಿದಿರುತ್ತವೆ. ಕೆಲವೆಡೆ ಅವು ಪಾಶ್ಚಾತ್ಯ ಸಮಾಜವಾದದತ್ತ ಕೆಲವೆಡೆ (ಭಾರತದಲ್ಲಿ) ಗಾಂಧೀವಾದದತ್ತ ಅವು ಹೊರಳಿವೆ. ಕೆಲವು ಸಮಾಜವಾದವನ್ನು ಧರ್ಮದೊಂದಿಗೆ ಥಳಕು ಹಾಕಿದಂತಿದೆ. ತಾತ್ವಿಕ ಪಾತಳಿಯಲ್ಲಿಯ ಈ ವಿಚಾರ—ಮಂಥನದಿಂದ ಪಕ್ಷದ ಮನೋ ಭೂಮಿಕೆ ಕದಡಿ—ಕೋಲಾಹಲವೆದ್ದು ಪಂಗಡಗಳುಂಟಾಗಿ ತಿಕ್ಕಾಟ ಬಿಕ್ಕಟ್ಟು ಒಡಕು, ಮತ್ತು ತಂಡ—ತುಂಡುಗಳಾಗಿ ಬಿದ್ದಿವೆ! ಸಂಘಟನೆ ದುರ್ಬಲ, ತತ್ವಭೂಮಿಕೆ ಸಂದಿಗ್ಧ ಹಾಗೂ ಒಟ್ಟಾರೆ ಪಕ್ಷಗಳ ಭವಿತವ್ಯ ಭಯಗ್ರಸ್ತವೆನಿಸುವಂತಾಗಿದೆ!

ಇದಾಯಿತು ಒಂದು ಮಗ್ಗಲು. ಇದರ ಇನ್ನೊಂದು ಮಗ್ಗಲು ಮೋಜಿನದಿದೆ. ಸಮಾಜವಾದಿಗಳ ಪಕ್ಷೀಯ ಸಂಘಟನೆಯು ಹೀಗೆ ಹ್ರಾಸವಾಗಿದ್ದರೆ—ಆಗುತ್ತಿದ್ದರೆ, ಏಶಿಯಾದಲ್ಲಿ ಸಮಾಜವಾದದ ಪ್ರಭಾವ ಒಟ್ಟಾರೆ ಹೆಚ್ಚುತ್ತಿದೆ ಹಬ್ಬುತ್ತಿದೆ. ಇದೊಂದು ವಿರೋಧಾಭಾಸ. ಈ ವಿರೋಧಾಭಾಸ ಬರೆ ಕಲ್ಪನೆ ಅಲ್ಲ. ಇದರ ಪ್ರಮಾಣವೆಂದರೆ ಸಮಾಜವಾದಿಗಳೆಂದು ಕರೆದುಕೊಳ್ಳದ ಎಡಪಕ್ಷಗಳೆಂದೆನಿಸಿಕೊಳ್ಳದ ಇತರ ಪಕ್ಷಗಳೂ ಸಮಾಜವಾದದ ಹೆಸರೆತ್ತಿಕೊಂಡು ತಮ್ಮ ಕಾರ್ಯಕ್ರಮಗಳ ತೆಪ್ಪ ತೇಲಿಸತೊಡಗಿರುತ್ತವೆ ನಮ್ಮ "ಸಮಾಜವಾದಿ ಸ್ವರೂಪದ ಸಮಾಜರಚನೆ"ಯ ಪಂಥತೊಟ್ಟ ಕಾಂಗ್ರೆಸಿನಿಂದ ಮುಂದಾಗಿ ಕಾಂಬೋಡಿಯೂದ ಪೊಪ್ಯುಲರ ಸೋಶಲಿಸ್ಟ ಕಮ್ಯುನಿಟಿಯ ತನಕ, ಸಿಲೋನದ ಯುನೈಟೆಡ್ ನ್ಯಾಶನಲ ಪಾರ್ಟಿ, ಇಂಡೋನೇಶಿಯೂದ ಮುಸ್ಲುಮಿ ಮತ್ತು ರಾಷ್ಟ್ರೀಯ ಪಕ್ಷವೇ ಮುಂತಾದವುಗಳನ್ನು ಒಳಗೊಂಡು ಅನೇಕ ಬಲಬದಿಯ ಪಕ್ಷಗಳು ಹೀಗೆ ಸಮಾಜವಾದದ ಭಾಷೆ—ಭಾವಗಳನ್ನೂ ಒಡಮೂಡಿಸಹತ್ತಿವೆ. ಅನೇಕ ಮಾದರಿಯ ಕಾರ್ಯಕ್ರಮಗಳಿಗೆಲ್ಲ ಇದೊಂದೇ ಹೆಸರಪಟ್ಟಿ ಅಂಟಿಸಲಾಗುತ್ತದೆ; ಇಲ್ಲಿ ಮುಖ್ಯವೆಂದರೆ ಆ ಹೆಸರಿನ ಆಕರ್ಷಣೆ. ಇತ್ತ ಸಮಾಜವಾದಿಗಳು ಎಂಬ ಪಕ್ಷಗಳು ಸಮಾಜವಾದದ ಅಧಿಷ್ಠಾನವಾದ ಮಾರ್ಕ್ಸವಾದದಿಂದ ದೂರ ಸರಿಯುತ್ತಿದ್ದು ಅತ್ತ ಬೇರೆ ರಾಜಕೀಯ ಪಕ್ಷಗಳೂ ಸಮಾಜವಾದದ ಹಲವಾರು ತತ್ವ-ತಂತ್ರಗಳನ್ನು ಎತ್ತಿಕೊಳ್ಳುತ್ತಿರುವದರಿಂದ ಏಶಿಯೂದ ಸಮಾಜವಾದೀ ಪರಿಷತ್ತಿನ ಒಳಗೆ—ಹೊರಗೆ ಎಂಬ ಭೇದ ಅಳಿಸಿದಂತಾಗಿದೆ.

"ಸಮಾಜವಾದಿ ಅಂತಾರಾಷ್ಟ್ರೀಯ"ವೆಂಬ ಒಂದು ಜಾಗತಿಕ ಸಂಘಟನೆ (ಹಳೆಯ ಸುಪ್ರಸಿದ್ಧ "ಕಮ್ಯುನಿಸ್ಟ ಇಂಟರ್‌ನ್ಯಾಶನಲ್" ಎಂಬ ಸಂಘಟನೆಯ ಅನುಕರಣದಿಂದಲೋ(?)) ಉಂಟಾಗಿದೆ. ಏಶಿಯೂದ ಪರಿಷತ್ತಿನ ಸದಸ್ಯರಾದ ಸುಮಾರು ೧೦ ಪಕ್ಷಗಳನ್ನು ಈ ಅಂತಾರಾಷ್ಟ್ರೀಯ ಸಂಘಟನೆ ಒಪ್ಪಿಕೊಂಡಿದೆ. ಇವುಗಳಲ್ಲಿ ಅತಿ ಬಲಿಷ್ಠವೆಂದರೆ ಇಸ್ರಾಯಿಲ್ ಮತ್ತು ಜಪಾನೀ ಪಕ್ಷಗಳು. ಇವೆರಡು ಏಶಿಯಾದ ಸಮಾಜವಾದೀ ಪರಿಷತ್ತು ಕೂಡುವ ಮುಂಚಿನಿಂದಲೂ ಅಂತಾರಾಷ್ಟ್ರೀಯ ಸಂಘಟನೆಯ ಸದಸ್ಯರಾಗಿವೆ. ಇನ್ನುಳಿದವು ಪರಿಷತ್ತಿನ ಹೊರಗಿನವು ಇವುಗಳಲ್ಲಿ ಕೆಲವು ಕೊಂಚವಾದರೂ ನಿಜವಾದ ಸಮಾಜವಾದೀ ಸ್ವರೂಪವಿದ್ದವು ಆದರೆ ಮಿಕ್ಕವು ಬರಿ ಆ ಹೆಸರಿನಪಟ್ಟಿ ಜನಪ್ರಿಯತೆಗಾಗಿ ಹಚ್ಚಿಕೊಂಡವು!

ಆದರೆ ಹೀಗೆ ಹೇಳುವದೂ ಕಷ್ಟ. ನಿಜವಾದದು ನಕಲು ಯಾವದು ವಿಂಗಡಿಸುವ ಗೆರೆ ಎಳೆಯುವದೇ ಸ್ವಲ್ಪ ಬಿಗಿ. ನಾವು ಮೆಚ್ಚಿದ ಪ್ರಕಾರದ ಸಮಾಜವಾದವೇ ನಿಜವಾದ ಮಾದರಿಯೆಂದು ನಂಬುವ ಕಡೆಗೇ ನಮ್ಮ ಒಲವು ಇರುತ್ತದೆ. ಆದರೂ ಸಿದ್ಧಾಂತದ ಕರ್ಕಶ ಕಟ್ಟುನಿಟ್ಟು ಸಡಲಿಸಿಯೇ ಆ ಪ್ರಶ್ನೆಯನ್ನು ಪರಿಶೀಲಿಸುವದಾದರೆ, ಪಂಡಿತ ನೆಹರೂ ನಾಯಕರಾಗಿದ್ದ ಕಾಂಗ್ರೆಸು ರಾಜಪುತ್ರ ನರೋತ್ತಮ ಸಿಹನೌಕ ನಾಯಕನಾಗಿದ್ದ ಕಾಂಬೋಡಿಯೂದ ಪೊಪ್ಯುಲರ ಸೋಶಲಿಸ್ಟ ಕಮ್ಯುನಿಟಿಗಿಂತ ಹೆಚ್ಚು ಸಮಾಜವಾದಿ ಸ್ವರೂಪದ್ದೆಂದು ಕೇಳಲು ಅಡ್ಡಿಯಿಲ್ಲ. ಭಾರತೀಯ ಸಮಾಜವಾದೀ ಪಕ್ಷಗಳಿಗೆ ಕಾಂಗ್ರೆಸಿನ—ಅದರೊಳಗಿನ ಎಡಬದಿಯ ಗೊಂಬೆಗಳೊಂದಿಗೆ ಹೆಚ್ಚು ಸೌಮ್ಯವಿದೆ. ಅದೇ ರೀತಿ ಶ್ರೀ ಬಂಡಾರ ನಾಯಕೇ ಪಂಡಿತ ನೇಹರೂರಿಗಿಂತ ಸಮಾಜವಾದಕ್ಕೆ ಹೆಚ್ಚು ಹಕ್ಕುದಾರರೆಂದರೆ ಎಷ್ಟು ಜನ ನಂಬಬಹುದು? ಹಾಗೆ ನಂಬುವವರಲ್ಲಿ ಭಂಡಾರನಾಯಕೇ ಕೂಡ ಒಬ್ಬರಲ್ಲವೇನೋ! ಭಂಡಾರನಾಯಕೇ ಆಗಲಿ ಬ್ರಹ್ಮದೇಶದ ಸಮಾಜವಾದಿ ನಾಯಕ ಬಾಸ್ವೇ ಆಗಲಿ ಪಂಡಿತ ನೆಹರೂರ ಮೇಲೆಯೇ ಹೆಚ್ಚು ಅನಿಸಿಕೊಂಡದ್ದುಂಟು. ಅಂದರೆ ಇದರ ಅರ್ಥ ಭಾರತೀಯ ಕಾಂಗ್ರೆಸ್ಸನ್ನು ಏಶಿಯಾದ ಸಮಾಜವಾದಿ ಪರಿಷತ್ತಿನಲ್ಲಿ ಸೇರಿಸಬೇಕೆಂದಲ್ಲ. ಹೇಳುವದೇಕೆಂದರೆ, ಏಶಿಯದ ಮಟ್ಟಿಗೆ ಆ ಪರಿಷತ್ತಿನಲ್ಲಿ ಸೇರಿದ ಪಕ್ಷಗಳ ಗುಂಪೊಂದೇ ಏಶಿಯಾದ ಸಮಾಜವಾದದ ಪ್ರತಿನಿಧಿಯೆಂದು ಹಟಹಿಡಿದರೆ ಅದು ಪರಿಷತ್ತಿನ ಹಿತವನ್ನೂ ಚಿಂತಿಸಿದಂತೆ ಅಲ್ಲ! ಪಶ್ಚಿಮದಲ್ಲಿ ಅಂಥ ಕಟ್ಟುನಿಟ್ಟಿನ ನಿಲುಮೆ ಸರಿಹೋದೀತು. ಯುರೋಪದ ಸಮಾಜವಾದೀ ಪಕ್ಷಗಳ ಸ್ಥಿರವೂ ದೃಢವೂ ಆದ ಸಂಘಟನೆ ಅಂತಾರಾಷ್ಟ್ರೀಯ ಸಮಾಜವಾದಿ ಸಂಘಕ್ಕೆ ಸರಿಒಗ್ಗಬಹುದು. ಆದರೆ ಏಶಿಯಾದಲ್ಲಿ ರಾಜಕೀಯ ಪರಿಸ್ಥಿತಿ ಬಹಳ ಪ್ರವಾಹಿಯಾಗಿದೆ. ಅದು ಕಟ್ಟಿದ ಕೆರೆಯಲ್ಲ, ಹರಿಯುವ ಹಳ್ಳ, ಆದ್ದರಿಂದ ಅಂತಾರಾಷ್ಟ್ರೀಯ ಸಹಕಾರ ಸಂಘಟನೆ ಸಮಾಜವಾದಿಗಳಲ್ಲಿ ಸ್ಥಾಪಿಸಬೇಕಾದರೆ ಏಶಿಯಾದ ಅಂಥ ಪರಿಷತ್ತು ಸದ್ಯ ವಿಪರೀತ ಕರ್ಮಠತನ ಅಥವಾ ಮತಸ್ಥಿತೆ ತೋರಿಸಿದರೆ ನಡೆಯದು. ಇಲ್ಲಿಯ ಸಮಾಜವಾದದ ಒಟ್ಟು ಒಡಗೂಟ ಆ ಮಟ್ಟಿಗೆ ವ್ಯಾಪಕವೂ ಶಿಥಿಲವೂ ಆಗುವದು ಅನಿವಾರ್ಯ.

ಮೊನ್ನೆ ನೇಪಾಲದಲ್ಲಿ ಮಾತನಾಡುವಾಗ ಪಂಡಿತ ನೆಹರೂ ಒಂದು ಸತ್ಯ ಒಪ್ಪಿಕೊಂಡರು—"ದರಿದ್ರ ದೇಶಗಳಲ್ಲಿ ಸಮಾಜವಾದ ನೆಲಸುವದು ಕಠಿಣ" ಎಂದು. ಈ ಮಾತು ಸಮಗ್ರ ಏಶಿಯಾಕ್ಕೇ ಅನ್ವಯಿಸಬಹುದು. ದಾರಿದ್ರ್ಯದ ದಾರಿ ಕಮ್ಯುನಿಜಂಗೇ ಹೆಚ್ಚು ಹತ್ತಿರ. ಮತ್ತು ನೇರ. ಸಮಾಜವಾದಕ್ಕೆ ಹೆಚ್ಚು ಸ್ವಾಸ್ಥ್ಯದ ಸಾರ್ವಜನಿಕ ನೀತಿಮತ್ತೆಯ ವಾತಾವರಣ ಬೇಕು. ವ್ಯಕ್ತಿ ಸ್ವಾತಂತ್ರ್ಯ, ಅದನ್ನು ಪೋಷಿಸಿಯೇ ಬೆಳೆದು ಬಲಿತ ಪ್ರಜಾಪ್ರಭುತ್ವದ ಸತ್ ಸಾಂಪ್ರದಾಯಗಳು ನಾಗರಿಕ ನೀತಿಯ ಪುಟಗೊಂಡ ಸಂಸ್ಕಾರ, ಒತ್ತಾಯಕ್ಕಿಂತ ಒಪ್ಪಂದದಿಂದ ಕ್ರಾಂತಿಯನ್ನು ಕೈಗೂಡಿಸುವ ಕೌಶಲ್ಯ—ಇವೇ ಮುಂತಾದ ಸಾಮಾಜಿಕ ಮೂಲ್ಯಗಳ ಜೋಪಾಸನೆಯ ತರಬೇತಿ ಹೊಂದಿದ ಪ್ರಗತಿಪರ ವರ್ಗಗಳು ನೆಲಸಿದ್ದ ನಾಡುಗಳಲ್ಲಿಯೇ ಸಮಾಜವಾದ ಬೇರೂರುವದು ಹೂ ಬೀಳಲುಬಿಟ್ಟು ಹಬ್ಬಿ ಬೆಳೆಯುವದು.

ಆ ತನಕ ಏಶಿಯಾದ ಬೇರೆ ಬೇರೆ ದೇಶಗಳಲ್ಲಿ ಈಗಾಗಲೆ ಪ್ರಚಲಿತವಾದ ಸಮಾಜವಾದದ ಪ್ರಕಾರಗಳು ಪರಸ್ಪರ ಪ್ರಭಾವಬೀರಿ ಪ್ರಗತಿಹೊಂದಿ ಹೊಸದೊಂದು ಕಳೆಯನ್ನೂ ಬೆಳೆಯನ್ನೂ ತಾಳಿದ ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯ ಹಾಗೂ ಜನತೆಯ ಘನತೆಯ ಒಂದು ಅಪೂರ್ವ ಪೌರ್ವಾತ್ಯ ಮಾದರಿಯನ್ನು ರೂಪಿಸಿ ಲೋಕದ ಕಲ್ಯಾಣಕ್ಕೆ ತಮ್ಮದೇ ಆದ ಕಾಣಿಕೆಯನ್ನು ಕೊಡಬಹುದು!

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.
ಕಥಾ ಕೌಮುದಿ
(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1 = 50)
ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಸಾಹಿತ್ಯ ಮತ್ತು ಧರ್ಮ

(೨೦ನೇ ಪುಟದಿಂದ)

ದೊಂದು ಮತಗಳ ಸಂಪ್ರದಾಯ.

ಈ ಉದ್ದೇಶದಲ್ಲೇನೂ ಕೊರತೆಯಿಲ್ಲ. ಅಂತಹ ಹಲಹಲವು ಮಾರ್ಗಗಳಲ್ಲಿ ಅವರವರು ಸಾಗುವುದೇನೋ ಸಮಂಜಸ. ಆದರೆ ವಸ್ತುಸ್ಥಿತಿಯು ಇದಕ್ಕೆ ವಿಪರೀತವಾಗಿ ನಡೆದಿದೆ. ಆ ಕಡೆ ಬಾರದಾತನನ್ನು ದಬ್ಬಿ ಸೆಳೆದೊಯ್ಯುವ ವಿಕಾರ ಪ್ರವೃತ್ತಿ ಆಗ ತೊಡಗುವುದು. ಇದರಿಂದಾಗಿ ಬೇಕು ಬೇಡೆಂಬ ಎರಡು ಮನಸ್ಸಿನ ಬಣಗಳ ಘರ್ಷಣೆ ನಡೆದೇ ನಡೆಯುವುದು. ಇದರ ಪರಿಣಾಮವಾಗಿ ನೇರವಾಗಿ ನಡೆಯುವ ಸುಸಂಘಾವಿತನಿಗೂ ಹಾದಿ ತಪ್ಪಿದಂತಾಗುವುದು. ಕಟ್ಟಕಡೆಗೆ ಯಾವ ರಾಜಧಾನಿಗೆ ನೇರವಾಗಿ ಹೋಗಬೇಕೆಂಬ ಉದ್ದೇಶದಿಂದ ಹೊಸ ಸಾರಿಗೆಯು ನಿರ್ಮಾಣವಾಯಿತೋ ಆ ಗೊಡವೆಯೇ ಮರೆತು ರಾಜಧಾನಿಯ ಕಲ್ಪನೆಯೇ ಬಹುದೂರವಾಗಿ ಮಾರ್ಗದ ಕಾದಾಟದಲ್ಲೇ ಎಲ್ಲಾ ಪರಿಸಮಾಪ್ತವಾಗುವುದು. ಇದೇ ಮತಗಳ ಅವಾಂತರ. ಧರ್ಮವು ಮಾನವ ಕುಲಕೋಟಿಗಾಗಿ. ಮತವು ಒಂದೊಂದು ವಿಶಿಷ್ಟ ಪಂಗಡಕ್ಕಾಗಿ. ಜಗತ್ತಿನ ಕಲ್ಯಾಣ ಧರ್ಮದ ಮೇಲಿದೆ ಹೊರತು ಮತಗಳ ಮೇಲಲ್ಲ. ಅದೇ ಸಾಹಿತ್ಯದ ಗೊತ್ತುಗುರಿಯಾದ ಪರಮ ಧರ್ಮ! ಆದಿ ಕವಿಯು ತೋರಿಸಿಕೊಟ್ಟ ಸಮಾಜ ಧರ್ಮ— ಕಾಳಿದಾಸನು ಅನುಸರಿಸಿದ ಮಾನವ ಧರ್ಮ!

ಕಾಲಕಾಲಕ್ಕೂ ಜ್ಞಾನದ ಮೇಲೆ ಶಕ್ತಿಯು ತನ್ನ ಬಲಾತ್ಕಾರವನ್ನು ನಡೆಸಿದೆ. ಶಕ್ತಿ ಪೂಜೆಯ ಮುಂದೆ ಜ್ಞಾನಸತ್ರವು ಕುಸಿದು ಬಿದ್ದಿದೆ. ಶಕ್ತಿಗಾಗಿ ಹಿರಿದ ಶಕ್ತಿ ಜ್ಞಾನದ ಮೇಲೂ ಆಕ್ರಮಣ ನಡೆಸಿ ತನ್ನ ಸ್ವಾಯತ್ತತೆಯ ಲಗಾಮನ್ನು ಅದರ ಮೇಲೆ ಹೇರಿದೆ. ಇದರಿಂದಾಗಿ ಸಾಹಿತ್ಯದಲ್ಲೂ ವಿಚಿತ್ರ ಪರಿವರ್ತನೆಯಾಯಿತು. ಸಾಹಿತ್ಯದ ವಿಶಾಲ ಧರ್ಮ ಸಂಕುಚಿತವಾಗಿ ಅವರವರ ಪಕ್ಷಸಾಧನೆಗಾಗಿ ಬಡಿದಾಡಲು ಸಾಹಿತ್ಯದ ಸೂರೆಯಾಯಿತು. ರಾಜ ರಾಜರನ್ನು ಹೊಗಳುವ ಭಟ್ಟಂಗಿಗಳ ಹೊಗಳು ಸಾಹಿತ್ಯ— ಮತ ಮತಗಳ ವಿಕೋಪವನ್ನು ಕಾರುವ ತೆಗಳು ಸಾಹಿತ್ಯಗಳೆಲ್ಲ ಒಂದೇ ಸವನೆ ಮುಂದೆ ಬಂದು ಅದೇ ಒಂದು ಗೊಂದಲವಾಯಿತು. ಪವಿತ್ರವಾದ ದೇವಾಲಯದ ಆಶ್ರಯ ಪಡೆದು ಹೊರಗೆ ಗುಂಡುಹಾರಿಸಿದಂತೆ ಸಾತ್ವಿಕ ಸಾಹಿತ್ಯದ ನೆರವುಗೊಂಡು ಮತ ಮತಗಳ ಅಹಂಕಾರದ ತಾಮಸ ಗರ್ಜನೆ ಗಂಭೀರವಾಯಿತು. ಕಟ್ಟ ಕಡೆಗೆ ಸಾಹಿತ್ಯದ ವಿಶಾಲ ಧರ್ಮದ ನೆನಪೇ ಮರೆತು ಸಾಹಿತ್ಯಧರ್ಮವೆಂದರೆ ಪ್ರತಿಪಾದಿಸುವ ಕ್ಷುಲ್ಲಕ ಮತಗಳೆಂಬ ಭಾವನೆಯೇ ಬಲವಾಗಿ ಬೇರೂರಿತು. ಇದರಿಂದಾಗಿ ನೋಡಿದರೆ ನಮ್ಮ ಕನ್ನಡ ಸಾಹಿತ್ಯದಲ್ಲೂ ಜೈನ—ವೀರಶೈವ—ಬ್ರಾಹ್ಮಣಗಳೆಂಬ ಸಾಹಿತ್ಯ ಪರಿಚ್ಛೇದ ಪ್ರಚಾರಗೊಂಡಿದೆ. ಇಂತಹ ವಾದದಲ್ಲೆ ಸಾಹಿತ್ಯ ಸವೆಯಿತು. ಹಾಲು ಕರೆಯಬೇಕೆಂದಿದ್ದ ಕಾಮಧೇನುವಿನಿಂದ ನೆತ್ತರನ್ನು ಕರೆಯ ತೊಡಗಿದೆವು. ಆದರೂ ಅಲ್ಲಿ ಇಲ್ಲಿ ಮೂಡಿಬಂದ ವಿಶಾಲ ತಳಹದಿಯ ಕೆಲ ಕೆಲವು ಸಾಹಿತ್ಯ ಸೃಷ್ಟಿ ಜಗತ್ತಿಗೆ ತಾರಕವಾಗಿ ನಿಂತಿವೆ. ಸಾಹಿತ್ಯವು ಎಂದಿಗೂ ಸಾಯಲಾರದು. ಧರ್ಮವು ಎಂದೂ ಕೆಡಲಾರದು.

'ಧರ್ಮ ಏವ ಹತೋಹಂತಿ ಧರ್ಮೋರಕ್ಷತಿ ರಕ್ಷಿತಃ' ಧರ್ಮವು ನಷ್ಟವಾದರೆ ಸಾಹಿತ್ಯ ಸತ್ತರೆ ಅಂದಿಗೆ ಜಗತ್ತಿನ ಮಹಾ ಪ್ರಲಯ!

ಕೊನೆಯದಾಗಿ ಹೇಳುವುದಾದರೆ ಇದು ಕಲಿಯುಗ - ಬಹಳವಾಗಿ ಕಲಿತವರ ಯುಗ—ಸ್ಪುಟ್ನಿಕ್ ಯುಗ! ಕಲಿಯುಗ —ಧರ್ಮವೆಲ್ಲ ನಾಶವಾಯಿತು ಎನ್ನುವ ಮಹಾನುಭಾವರು ಕೊಂಚ ಕೃತತ್ರೇತ ದ್ವಾಪರಗಳ ಕಡೆ ಹೊರಳಿನೋಡಬೇಕು. ರಾಜರೂಪಿಯಾಗಿ ಮಾನವತೆಯ ಸೀರೆ ಸೆಳೆದುದು ಕೃಷ್ಣನ ಯುಗದಲ್ಲೇ! ಎಲ್ಲಾ ಯುಗಗಳಲ್ಲೂ ಬೇಕಾದಷ್ಟು ಧರ್ಮನಾಶವಾಗಿಯೇ ಆಗಿದೆ. ಆದರೆ ಅದರ ಪುನರುತ್ಥಾನವೂ ನಡೆದಿದೆ. ಈ ಯುಗದಲ್ಲೂ ಎಷ್ಟು ಧರ್ಮನಾಶವಾಗಿದೆಯೋ ಅಷ್ಟೇ ಅದರ ಉದ್ಧಾರದ ಪ್ರಯತ್ನವೂ ನಡೆದೇತೀರಿದೆ. ಬುದ್ಧ…ಅಶೋಕ-ಗಾಂಧಿಯವರಂತಹ ವಿಭೂತಿ ಪುರುಷರ ಅವತಾರ ನಡೆದುದರಿಂದಲೇ ಕಲಿಯುಗವೂ ಪಾವನ ಯುಗವಾಯಿತು! ಆ ಪಾವನ ಮೂರ್ತಿಗಳ ಅಮೃತವಾಣಿ ನಮ್ಮಲ್ಲಿ ನೆಲೆನಿಂತಿರುವನಕ ಧರ್ಮಕ್ಕೆ ಬರಗಾಲವಿಲ್ಲ. ಮೊತ್ತ ಮೊದಲಿಗೆ ವ್ಯಕ್ತಿಜೀವಿಯಾಗಿ-ಕುಟುಂಬ ಜೀವಿಯಾಗಿ— ಸಂಘ ಜೀವಿಯಾಗಿ— ರಾಷ್ಟ್ರಜೀವಿಯಾಗಿದೇಶಜೀವಿಯಾಗಿ ಇಂದು ಮನುಷ್ಯ ವಿಶ್ವಜೀವಿಯಾಗಿ ಬಾಳುವ ಭಾಗ್ಯದ ಸದವಕಾಶ ಒದಗಿಬಂದಿದೆ. ಅದಕ್ಕನುಗುಣವಾಗಿ ನಮ್ಮ ಧರ್ಮದ ಉದ್ದಗಲವೂ ಹಿರಿದಾಗಿ ನಮ್ಮ ಧರ್ಮ ವಿಶ್ವಧರ್ಮವಾಗಲಿ! ಅದರ ನೆರವುಗೊಂಡು ಸಾಹಿತ್ಯವೂ ವಿಶ್ವಸಾಹಿತ್ಯವಾಗಲಿ! ಮಾನವ ಕುಲಕೋಟಿಯು ಸತ್ಯ ಶಿವ ಸುಂದರಗಳ ತತ್ವಾರಾಧನೆಯಲ್ಲಿ ನಿರಂತರ ತೊಡಗಿ ಮಾನವನು ಅತಿಮಾನವನಾಗುವ ಶುಭ ಮುಹೂರ್ತಕ್ಕಾಗಿ ನಾವು ಹಿಗ್ಗಿ ಇಂದೇ ಸನ್ನದ್ಧರಾಗೋಣ!

ವ್ಯಕ್ತಿ—ಅವನ ಜೀವನ ಮಟ್ಟ

(೨೧ನೇ ಪುಟದಿಂದ)

ಳಿಸುವುದರ ಕಡೆಗೆ ಗಮನ ಕೊಡಬೇಕಾದರೆ ನಾವು ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ವಿಶೇಷವಾಗಿ ಅವಲೋಕಿಸಬೇಕು.

ಪ್ರಪ್ರಥಮವಾಗಿ ಈ ದಿಶೆಯಲ್ಲಿ ಗಮನವೀಯುವ ನಾವು ಉತ್ಪಾದಕರಿಗೆ ಮತ್ತು ಹೊಸ ಕಾರ್ಯವನ್ನು ಆರಂಭಿಸುವವರಿಗೆ ಬೇಕಾಗುವ ಸಾಹಿತ್ಯ ಸಾಮಗ್ರಿಗಳನ್ನು ಸುಲಭವಾಗಿಯೂ, ಆವಶ್ಯಕತೆಗೆ ತಕ್ಕಂತೆಯೂ ಸಾಧ್ಯವಿದ್ದಷ್ಟು ಮಟ್ಟಿಗೆ ಕಡಿಮೆ ದರದಲ್ಲಿ ದೊರಕುವ ಹಾಗೆ ಮಾಡಬೇಕಾದದ್ದವಶ್ಯವಿದೆ. ಅಂದರೆ ಅವರಿಂದ ಉತ್ಪಾದಿಸಲ್ಪಡುವ ಅಥವಾ ಸಿದ್ಧಗೊಳಿಸಲ್ಪಡುವ ತಯಾರಿಕೆಗಳು ಅಲ್ಪ ಕ್ರಯದ್ದಾಗುತ್ತವೆ. ಅಲ್ಲದೆ ಸರಕಾರದವರು ಮೇಲಿಂದ ಮೇಲೆ ಕರಾಕರಣೆ ವಿಷಯದಲ್ಲಿ ಬದಲಾವಣೆಯನ್ನು ಮಾಡದಿರುವುದು ಲೇಸು. ಇಲ್ಲವಾದರೆ ಇದರ ಪರಿಣಾಮದಿಂದ ತಯಾರಿಕೆಗಳ ಮೇಲೆ ಅಸ್ಥಿರತೆಯುಂಟಾಗಿ ಗೊಂದಲವುಂಟಾಗುವ ಸಂಭವವಿದೆ. ಸ್ಥಿರತೆಯಿದ್ದಲ್ಲಿ ನಿಶ್ಚಿತತೆ ಹಾಗೂ ಶಾಂತ ವಾತಾವರಣವಿರುವುದು ಸ್ವಾಭಾವಿಕವಾದುದರಿಂದ ಈ ವಿಷಯವನ್ನು ಗಮನದಲ್ಲಿಟ್ಟುಕೊಳ್ಳುವುದು ಅತ್ಯವಶ್ಯ.

ಎರಡನೇಯದಾಗಿ ಸರಕಾರದವರು ತಮ್ಮ ಅಧಿಕಾರವಾಪಳಿತೆಯಲ್ಲಿರುವ ಉಪಯೋಗಗಳ (needs) ಮೇಲೆ ಸರಕಾರದವರು ಮೇಲಿಂದ ಮೇಲೆ ಬೆಲೆಗಳನ್ನಾಗಲೀ (price), ದರಗಳನ್ನಾಗಲೀ (rate) ಏರಿಸದಿರುವುದೇ ಲೇಸು. ಇದರ ಪರಿಣಾಮವೆಂದರೆ ಇತರರೂ ಕೂಡ ತಮ್ಮ ತಯಾರಿಕೆಗಳ ಬೆಲೆಗಳನ್ನೂ, ದರಗಳನ್ನೂ ಏರಿಸುವುದಕ್ಕೆ ಅವಕಾಶವಿತ್ತಂತಾಗುವದಿಲ್ಲ. ಇದರ ಪರಿಣಾಮವಾಗಿ ಸುಸ್ಥಿರತೆ ನೆಲೆಗೊಳ್ಳುವುದರಲ್ಲಿ ಯಾವ ಸಂಶಯವೂ ಇಲ್ಲ. ಇದರ ಮತ್ತೊಂದು ಸುಪರಿಣಾಮವೆಂದರೆ ಹೊಸ ಹೊಸ ಉತ್ಪಾದಕರಿಗೆ ಅಥವಾ ಆರಂಭಗಾರರಿಗೆ ಅವರ ಹೊಸ ತಯಾರಿಕೆಗಳಿಗೆ ನಾವು ಪ್ರೋತ್ಸಾಹ ಕೊಟ್ಟಂತಾಗುವುದಲ್ಲದೆ ನಾವು ಎದುರಿಸಬೇಕಾದ ನಿರುದ್ಯೋಗ ಸಮಸ್ಯೆಯ ಗಂಭೀರ ಸಮಸ್ಯೆಗೆ ಕೆಲಮಟ್ಟಿನ ಪರಿಹಾರವನ್ನೂ ಕಂಡುಕೊಳ್ಳಬಹುದು. ಬೇಡಿಕೆದಾರರಿಗೂ ಕಡಿಮೆ ಬೆಲೆಯಲ್ಲಿ ವಸ್ತು-ಪದಾರ್ಥಗಳು ದೊರಕುವುದರಿಂದ ಅವರಿಗೆ ಹೆಚ್ಚಿನ ತೊಂದರೆಯೂ ಬರಲಾರದು. ಇದೇ ರೀತಿಯಲ್ಲಿ ನಮ್ಮ ಧಾರ್ಮಿಕ ಪ್ರವೃತ್ತಿಗಳೆಡೆಗೆ ವಿಶೇಷ ಗಮನ ಹರಿಸುವುದರ ಕಡೆಗೆ ನಾವು ಲಕ್ಷ್ಯವಿಡಬೇಕಾಗುವದು. ಇಂದಿನ ಪಾಶ್ಚಿಮಾತ್ಯರ ಸಂಸ್ಕೃತಿಯು ನಮ್ಮ ಜೀವನದಲ್ಲಿ ಸಾಕಷ್ಟು ಪರಿಣಾಮವನ್ನುಂಟು ಮಾಡಿದ್ದು ನಾವು ನಮ್ಮತನವನ್ನು ಮರೆತು ಹೆಚ್ಚಿನದುಂದು ವೆಚ್ಚಕ್ಕೆ ಬಲಿಬೀಳುತ್ತಿದ್ದೇವೆ. ಇದನ್ನು ನಮ್ಮ ಶೈಕ್ಷಣಿಕ ಜೀವನದಲ್ಲೂ ಕಡ್ಡಾಯವಾಗಿ ಕಲಿಸುವ ಏರ್ಪಾಡು ಮಾಡಿದರೇನೇ ನಾವು ನಮ್ಮತನವನ್ನು ಉಳಿಸಿಕೊಳ್ಳುವುದರ ಕಡೆಗೆ ಕೆಲಮಟ್ಟಿನ ಪ್ರಯತ್ನ ಮಾಡಿದಂತಾಗುತ್ತದೆ. ಇದರಿಂದಾಗಿ ಆಗಬಹುದಾದ ದುಂದು ವೆಚ್ಚವನ್ನೂ ನಾವು ತಡೆಗಟ್ಟಬಹುದು.

ಇಂದಿನ ಕಾಲದಲ್ಲಿ ಒಂದೊಂದು ದಿನವೂ ಒಂದೊಂದು ಸಮಸ್ಯೆಯನ್ನು ಮುಂದೊಡ್ಡುತ್ತಿದೆ. ಇಂತಹ ಸಂದರ್ಭದಲ್ಲಿ ನಾವು ಬದುಕಿ ಸುಖವಾಗಿ ಬಾಳಬೇಕಾದರೆ ಸರ್ವತೋಮುಖ ಅಭಿವೃದ್ಧಿ ಅವಶ್ಯಕವಾದುದು. ನಮ್ಮ ಜೀವನಮಟ್ಟದಲ್ಲಿ ಸುಧಾರಣೆಯಾಗದೆ ನಾವು ಏನನ್ನೂ ಸಾಧಿಸುವಂತಿಲ್ಲ. ವೈಯುಕ್ತಿಕ ಬೆಳವಣಿಗೆಯ ಮೂಲಕ ರಾಷ್ಟ್ರದ ಬೆಳವಣಿಗೆಯನ್ನು ಸಾಧಿಸಬೇಕಾದ ಇಂದಿನ ವರ್ತಮಾನ ಕಾಲದಲ್ಲಿ ತಾನು ಮುಂದೊರೆದರೆ ನಾಡು ಮುಂದೊರೆಯುವುದೆಂಬುದನ್ನು ಗಮನದಲ್ಲಿಡಬೇಕು. ಈ ದಿಶೆಯಲ್ಲಿ ನಾವು ಪ್ರಯತ್ನಿಸಿ ನಮ್ಮ ಜೀವನಮಟ್ಟದಲ್ಲಿ ಯಶಸ್ವಿಯಾಗಿ ಮುನ್ನಡೆದಲ್ಲಿ ಅದು ಭಾರತದ ಜನಕೋಟಿಗೂ, ಭಾರತಕ್ಕೂ ನೆರವಾಗದಿರದೆಂದು ಹೇಳಬಹುದು.

ಉಷಾ
ಹೊಲಿಗೆ ಯಂತ್ರಗಳು



ಗಟ್ಟಿಮುಟ್ಟಾದ ರಚನೆ! ಸರ್ವರ ಅಭಿರುಚಿ ಗೊಪ್ಪುವ ವಿವಿಧ ಮಾದರಿಯ ತಯಾರಿಕೆ!
ಪ್ರತಿಯೊಂದು ಶೋಧನೆಯಲ್ಲೂ ಶ್ರೇಷ್ಠತೆಯನ್ನು ಗಳಿಸಿ, ನಮ್ಮ ದೇಶದಲ್ಲಿ ವಿಶೇಷವಾಗಿ ವಿಕ್ರಯವಾಗುತ್ತಿರುವ ಹೊಲಿಗೆ ಯಂತ್ರ.
ದಯಮಾಡಿ ನಮ್ಮ ಶೋ ರೂಮನ್ನು ಸಂದರ್ಶಿಸಿ ಯಂತ್ರಗಳನ್ನು ಪರಿಶೀಲಿಸಿರಿ!
ಇಂಡಿಯನ್ ಒಟೋಮೊಬೈಲ್ಸ್
ಕಾರ್ನಾಡ್‌ಕರ್ ಬಿಲ್ಡಿಂಗ್ಸ್, ಉಡುಪಿ, ದ. ಕನ್ನಡ.
ಫೋನ್: 65 ತಂತಿ: ಕಾರ್ನಾಡ್

ಜ್ಯಾಹೀರುಮಾಡಲ್ಪಟ್ಟ ಸಾಮಾನುಗಳನ್ನೇ ಪಡಕೊಳ್ಳಿರಿ.

ಭಾವೈಕತೆಯ ಅಭಾವದಿಂದಾಗಿ ಕುಂಟುತ್ತಿರುವ ಕರ್ನಾಟಕ

(೫ನೇ ಪುಟದಿಂದ)

ಕನ್ನಡಕ್ಕೇ ಸೊನ್ನೆ

ಇಂದಿನ ಭಾವನಾ ಶೂನ್ಯತೆಗೆ ಎರಡು-ಮೂರು ಮುಖ್ಯ ಕಾರಣಗಳಿವೆ. ಮೊತ್ತ ಮೊದಲಾಗಿ ರಾಜ್ಯಕ್ಕೆ 'ಕರ್ನಾಟಕ' ಎಂಬ ಹೆಸರಾಗದಿದ್ದುದು. ಯಾವುದು ಕನ್ನಡಿಗರ ಜಪಮಂತ್ರವಾಗಿದ್ದಿತೋ, ೪೦ ವರ್ಷಗಳ ಹೋರಾಟದ ಘೋಷಣಾ ಧ್ವನಿಯಾಗಿದ್ದಿತೋ, "ರಕ್ಷಿಸು ಕರ್ನಾಟಕ ದೇವಿ' 'ಕರ್ನಾಟಕಕಾಂತೆ ನೀ ಧನ್ಯೆ ಧನ್ಯೆ' "ಅಖಂಡ ಕರ್ನಾಟಕಾ" ಎಂದು ಮುಂತಾಗಿ ಯಾವ ರಾಷ್ಟ್ರ—ಮಾತೃತ್ವವನ್ನು ನಮ್ಮ ಕವಿವರರು ಉದ್ಘೋಷಿಸಿದರೋ, ಯಾವುದರ ನಾಮ ಮಾತ್ರದಿಂದ ಕನ್ನಡಿಗರ ಸದಭಿಮಾನ ಉಕ್ಕೇರಿದ ಹೊನಲಾಗಿ ಹೊಯ್ದಾಡುತ್ತಿದ್ದಿತೋ ಆ ಭಾವನೋದ್ದೀಪಕ ಮಂತ್ರ ಶಕ್ತಿ ಇದೀಗ ಇಲ್ಲದಾಗಿದೆ.

ಉತ್ತರ ಕರ್ನಾಟಕದವರು--ಕೇವಲ ಉತ್ತರ ಕುಮಾರರಂತಾಗಿದ್ದಾರೆ-ಬೆಂಗಳೂರಿನ ಮನೆಯಳಿಯತನಕ್ಕೆ ಸಿಕ್ಕು ಇದ್ದ ಬಿದ್ದ ಗಂಡುತನವನ್ನು ತೋರಬಹುದಾದ ಬಳ್ಳಾರಿಗರು ಆಂಧ್ರದ ದವಡೆಯಿಂದ ಪಾರಾದುದೇ ಸಾಕು ಎಂಬ ಅವಸ್ಥೆಯಲ್ಲಿದ್ದಾರೆ. ಈಗಲೂ ಕನ್ನಡತ್ವದ ಉಜ್ವಲತೆಯನ್ನು ಕೆಲಮಟ್ಟಿಗಾದರೂ ಕಾಯ್ದುಕೊಂಡಿರುವವರು ದಕ್ಷಿಣ ಕನ್ನಡಿಗರು. ಆದರೆ ಅವರಿಗೆ ಇತರರ ಬೆಂಬಲವಿಲ್ಲ; ಅಲ್ಲದೆ, ದಕ್ಷಿಣ ಕನ್ನಡ ಜಿಲ್ಲೆ ಮದ್ರಾಸಿನಿಂದ ಮೈಸೂರಿಗೆ ಸೇರಿದ್ದರಿಂದ ತಮ್ಮ ಜಿಲ್ಲೆಯ ಪರಿಣಾಮವೇನು ಎಂಬ ಇತಿಮಿತಿಯಲ್ಲಿ ಸಿಕ್ಕಿದೆ ಅಲ್ಲಿಯ ಜನ. ಇನ್ನು ಹಳೆಯ ಮೈಸೂರಿಗರೋ, ಅವರು ಕನ್ನಡಿಗರೇ ಅಲ್ಲ ಎಂಬಂತೆ ಬೆಳೆದುಬಂದಿದ್ದಾರೆ. ಮಾಸ್ತಿ, ಅ. ನ. ಕೃ, ಕುವೆಂಪು, ಶಿವಮೂರ್ತಿ ಶಾಸ್ತ್ರಿಗಳು ಮುಂತಾದ ಕೆಲವರು ಸಾಹಿತಿಗಳನ್ನುಳಿದರೆ, ಮಿಕ್ಕ ಮೈಸೂರು ಮಂದಿಯೆಲ್ಲರಿಗೆ ಕರ್ನಾಟಕತ್ವದ, ಅದೇಕೆ ಕನ್ನಡಿಗತನದ ಅರಿವೇ ಮೊದಲಿಂದಲೂ ಇಲ್ಲವೆನ್ನಬಹುದು. ದಿವಾನ ರಂಗಾಚಾರ್ಲು—ಶೇಷಾದ್ರಿ ಅಯ್ಯರ ಕಾಲದಿಂದೀಚೆಗಂತೂ ಕನ್ನಡ ಎಂಬುದು ಮೈಸೂರಿಗರಿಗೆ ಮನೆಯ ಮಾತು, ಉಪಯೋಗದ ಸೊತ್ತು ಮಾತ್ರವಾಗಿದೆಯಲ್ಲದೆ, ಕನ್ನಡಕ್ಕೆ ಮಾತೃತ್ವದ ಉಚ್ಚಸ್ಥಾನ, ದೈವಿಕತೆ—ಭಾವುಕತೆಯ ವೈಭವ ದೊರೆತಿಲ್ಲ. ಅವರಿಗೆ ಕನ್ನಡಿಗರು ಎಂದೆನ್ನಿಸಿಕೊಳ್ಳುವುದಕ್ಕಿಂತ ಮೈಸೂರ ಮಕ್ಕಳು ಎಂದೆನ್ನಿಸಿಕೊಳ್ಳುವುದರಲ್ಲಿಯೇ ಗೌರವ

ಹೃದಯದಲ್ಲೇ ಚಿಮ್ಮುವ ರಕ್ತವಿಲ್ಲ

ಕರ್ನಾಟಕವು ಒಂದು ರಾಜ್ಯವಾದ ಮೇಲೆಯೂ ಇದು ಕನ್ನಡ ರಾಜ್ಯ ಎಂದೆನ್ನಿಸದಂತಿರುವುದಕ್ಕೆ ಇನ್ನೂ ಒಂದು ಹಿರಿ ಕಾರಣವೆಂದರೆ—ಈ ಹೊಸ ರಾಜ್ಯದ ಆಡಳಿತದ ಅಧಿಕಾರಿಗಳಲ್ಲಿ ಹಳೆಯ ಮೈಸೂರಿನ ಅರೆ-ಗನ್ನಡಿಗರೇ ಹೆಚ್ಚಾಗಿದ್ದಾರೆ. ಮೂಲತಃ ತಮಿಳರಾಗಿ, ಹೊಟ್ಟೆಪಾಡಿಗೆ ಎಷ್ಟೋ ಅಷ್ಟರ ಮಟ್ಟಿಗೆ ಮಾತ್ರ ಕನ್ನಡವನ್ನು ಕಲಿತಿರುವ ಈ ಅಧಿಕಾರಿ ವರ್ಗಕ್ಕೆ ಕನ್ನಡತ್ವದ ಅಭಿಮಾನ ಮೊಳೆಯುವುದೂ ಪರಿಸ್ಥಿತಿಜನ್ಯವಾಗಿಲ್ಲ. ಅಚ್ಚಗನ್ನಡ ಪರಂಪರೆಯುಳ್ಳ ಹಳೆಯ ಮೈಸೂರಿಗರನೇಕರಿಗೇ ಕನ್ನಡವು ತಾಯಿಯಾಗದೆ ತೊತ್ತಾಗಿರುವಾಗ, ಪಾಪ, ಈ ಬಡ ಅಧಿಕಾರಿಗಳಿಗೂ ದೋಷ ಕೊಡಲಾಗಲಿಕ್ಕಿಲ್ಲ. ಆದರೆ ವಸ್ತುಸ್ಥಿತಿ ಮಾತ್ರ ಕನ್ನಡತನದ ಭಾವೋಜ್ವಲತೆಯು ಇಲ್ಲದಾಗಲು ಅನುಕೂಲವೇ ಆಗಿದೆ. ಕೆಲ ದಿನಗಳ ಹಿಂದೆ ಮುಂಬಯಿ ರಾಜ್ಯದ ಪಿ. ಡಬ್ಲ್ಯು.ಡಿ.ಇಲಾಖೆಯ ವರಿಷ್ಠ ಅಧಿಕಾರಿಗಳಾಗಿ ದಿವಾನ ಬಹಾದ್ದೂರ್ ರಾಮಸ್ವಾಮಿ ಯೆಂಬವರಿದ್ದರು. ಆಗ ಅವರು ಕಚೇರಿಯಲ್ಲಿದ್ದರೆ ಸಾಕು, ಇಡೀ ಮುಂಬಯಿ ಪಿ ಡಬ್ಲ್ಯು. ಡಿ. ಸೆಕ್ರೆಟರಿಯಟ್ಟಿನಲ್ಲಿ ಅವರ ಕನ್ನಡ ಕಂಠ ಘಂಟಾಘೋಷವಾಗಿ ಕೇಳಬರುತ್ತಿತ್ತು. ಅವರ ಕೈಕೆಳಗಿನವರೂ ಅನೇಕರು ಕನ್ನಡಿಗರಾದ್ದರಿಂದ ಅವರು ಅವರೆಲ್ಲರೊಂದಿಗೆ—ಮೊದಲೇ ದೊಡ್ಡದಾದ ತಮ್ಮ ಗರ್ಜನಾಸ್ವರದಲ್ಲಿ--ಕನ್ನಡದಲ್ಲೇ ಮಾತನಾಡಿದ್ದನ್ನು ದೂರದಿಂದಲೇ ನಾನು ಕೇಳಿದಾಗ ನನ್ನ ಮೈ ಜುಮ್ಮೆಂದುದು ಈಗಲೂ ನೆನಪಿದೆ. ಆದರೆ ಬೆಂಗಳೂರಿನ ವಿಧಾನ ಸೌಧದಲ್ಲಿ ಈಚೆಗೆ ನಾಲ್ಕೈದು ಸಲ ನಾನು ಹೋದಾಗಲೂ, ಕೆಲ ಜವಾನರನ್ನು, ಮಂತ್ರಿಗಳನ್ನು ಬಿಟ್ಟರೆ—(ಅರ್ಥಾತ್ ಸ್ಥಾನ ಮಾಹಾತ್ಮ್ಯದಿಂದಾಗಿ ಈ ಎರಡೂ ಜಾತಿಯವರು ಮಲ್ಲಿಗೆ, ಹಿಡಿದುಬಿಟ್ಟಂತೆಯೇ ಮಾತಾಡುವವರು)— ಮಿಕ್ಕವರಾರಲ್ಲೂ ಕನ್ನಡದ ಕಳೆಯೇ ಕಾಣಲಿಲ್ಲ. ಯಾವ ಕಚೇರಿಯಲ್ಲಿ ಹೊಕ್ಕರೂ, ಯಾವ ಸೆಕ್ರೆಟರಿ, ಅಂಡರ್ ಸೆಕ್ರೆಟರಿಗಳನ್ನು ಕಂಡರೂ, ಮಾಧವನ್, ಹರಿಹರನ್, ಪದ್ಮನಾಭನ್, ಮಣಿ, ಅಯ್ಯರ್‌ಗಳೇ ಹೆಚ್ಚಾಗಿ ಕೈಗೆ ಸಿಕ್ಕಿದರೇ ಹೊರತು, ಕನ್ನಡಿಗರೆಂಬುವರು ಹೆಕ್ಕಿ ಹೆಕ್ಕಿ ಹುಡುಕಿದಾಗ ಮಾತ್ರ ಸಿಕ್ಕುತ್ತಿದ್ದರು. ಅಭಿವೃದ್ಧಿ ಶಾಖೆಯ ಸೆಕ್ರೆಟರಿಗಳೊಬ್ಬರನ್ನು ನಾನು ಕನ್ನಡದಲ್ಲೇ ಸಂದರ್ಶಿಸಿದಾಗ, ಅವರು ಯಾವುದೋ ಲೋಕದಿಂದ ಮತ್ತೊಂದು ಲೋಕಕ್ಕೆ ಇಳಿದುಬಂದವರಂತೆ ನೆನೆಸಿ ನೆನೆಸಿಕೊಂಡು, ಕನ್ನಡ ಮಾತನಾಡಿದರು. ಅವರು ತಮಿಳರೇ ಆದುದರಿಂದ ನಾನು ಅವರಿಗೆ ಹೆಚ್ಚಿನ ದೋಷಕೊಡಲಾರೆ ಎನ್ನಿ. ಹಳೆಯ ಮೈಸೂರಿನ (ಸಾಹಿತಿಗಳನ್ನುಳಿದರೆ) ಮಿಕ್ಕ ಸಾಮಾನ್ಯ ಕನ್ನಡಿಗರನೇಕರಿಗೆ ನಾಲ್ಕು ವಾಕ್ಯ ಪೂರ್ತಿ ಶುದ್ಧವಾದ ಕನ್ನಡದಲ್ಲಿ ಈಗಲೂ ಮಾತನಾಡಲು ಬರುವುದಿಲ್ಲ. ಇದಕ್ಕೆ ಕೈಲಾಸಂ ಅವರು ಪೂರ್ತಿ ಸಾಕ್ಷಿ ಪುರಾವೆಗಳನ್ನು ಒದಗಿಸಿಯೇ ಹೋಗಿದ್ದಾರೆ. ಹೀಗೆ ಹಳೆಯ ಮೈಸೂರಿನಲ್ಲೇ ಕನ್ನಡದ ಪ್ರಖರತೆ ಸಾಕಷ್ಟು ಇಲ್ಲದಿರುವ ವಾತಾವರಣ ಪಸರಿಸಿರುವಾಗ, ರಾಜಧಾನಿಯಾದ ಬೆಂಗಳೂರಲ್ಲಿ ಸುತ್ತಿದರೆ ಇದು ಕನ್ನಡ ರಾಜ್ಯದ ಹೃದಯ ಎಂದು "ಸುತರಾಂ" ಎನ್ನಿಸುವುದಿಲ್ಲ. ಪಾಲಪ್ಪಕ್ಕೆ, ಕೆಚ್ಚು ಕನ್ನಡಿಗರು ಎಂದು ಹೇಳಿಸಿಕೊಳ್ಳಬಹುದಾದ ಕೆಂಗಲ್ಲರೇ—ಇದು ಕನ್ನಡರಾಜ್ಯವಲ್ಲ, ಕಲಸು-ರಾಜ್ಯ (ಕಂಪೋಜಿಟ್ ಸ್ಟೇಟ್) ಎಂದು ಹೇಳಿ ಬೆಂಗಳೂರಲ್ಲಿ ಕನ್ನಡವೇ ಕಂಗಾಲವಾಗುವಂತೆ ಮಾಡಿದ್ದಾರೆಂದ ಮೇಲೆ ಬೆಂಗಳೂರಿನ ಅಧಿಕಾರಿ ವರ್ಗ ಕನ್ನಡಕ್ಕೆ ಕೊಡಬೇಕಾದ ಮನ್ನಣೆ ಕೊಡದಿದ್ದುದು ಸಹಜವೇ ಎನ್ನಬೇಕಾದೀತು. ಈಗ ಎರಡು ವರ್ಷಗಳ ಹಿಂದೆ ಶ್ರೀ ಕೇ. ಎಫ್. ಪಾಟೀಲ (ಈಗಿನ ಮಂತ್ರಿಗಳು)ಅವರೂ ನಾನೂ ಅವರಿಗಾಗಿ ಬೆಂಗಳೂರಲ್ಲಿ ಮನೆ ಹುಡುಕಲೆಂದು ಕೆಂಟೋನ್ ಮೆಂಟ್ ಪರಿಸರದಲ್ಲಿ ಸುತ್ತುತ್ತಿದ್ದಾಗ ಅನೇಕ ಜನ ತಮಗೆ ಕನ್ನಡ ಬಾರದು ಎಂದು ಹೇಳಿ ನಮ್ಮನ್ನು ಕನ್ನಡದ ರಾಜಧಾನಿಯಲ್ಲೇ ಪೂರ್ತಿ ನಿಸ್ಸಹಾಯರನ್ನಾಗಿ ಮಾಡಿದ್ದುಂಟು. ಕಳೆದ ಎರಡು ಮೂರು ವರ್ಷಗಳಿಂದ ಬಂದರ ಅಭಿವೃದ್ಧಿಯ ಸಂಬಂಧವಾಗಿಯೂ, ಮಲೆನಾಡು ಅಭಿವೃದ್ಧಿ ಮಂಡಲದ ಸದಸ್ಯನೆಂತಲೂ ಬೆಂಗಳೂರಿನಲ್ಲಿಯ ಸರಕಾರದ ವರಿಷ್ಠರೊಂದಿಗೆ ನಾನು ಕನ್ನಡದಲ್ಲಿಯೇ ಪತ್ರವ್ಯವಹಾರ ನಡೆಸಿದ್ದರೂ ನಾನು ಆ ಕಡೆಯಿಂದ ಒಂದೂ ಪತ್ರವನ್ನು ಕನ್ನಡದಲ್ಲಿ ಪಡೆದಿಲ್ಲ. ಇದೇನೋ ಒಂದು ಕೆಳಮಟ್ಟದ ಮಾತಾದರೂ, ಒಟ್ಟಾರೆ ಮೇಲಿನಿಂದ ಕೆಳಗಿನವರೆಗೂ ಕನ್ನಡಕ್ಕೆ ಇರಬೇಕಾದ ಮನ್ನಣೆಯೂ ಇಲ್ಲದಾಗ, ಬೆಂಗಳೂರು ಕನ್ನಡದ ಕನ್ನಡತನದ , ಸದಭಿಮಾನಕ್ಕೆ, ಸ್ಫೂರ್ತಿಗೆ ನೆಲೆಯಾಗಿ ಸೆಲೆಯಾಗಿ ಚೆಲುವೆಯಾಗಿ ಚಿಮ್ಮಿ ಕನ್ನಡಿಗರಿಗೆಲ್ಲ ಒಂದು ಉನ್ನತವಾದ ಆದರ್ಶಾತ್ಮಕವಾದ ಭಾವೋಜ್ವಲತೆಯನ್ನು ಒದಗಿಸೀತು ಎಂಬುದು ಅನಿಶ್ಚಿತವಾದುದೇ ಸರಿ. ಭಾವನೆಗಳ ಒರತೆಯೇ ಬತ್ತಿರುವಾಗ ಭಾವನೆಗಳೆಲ್ಲಿ ? ಭಾವನಾತ್ಮಕ ಏಕೀಕರಣವೆಲ್ಲಿ? ಭಾರತದ ೧೪ ರಾಷ್ಟ್ರೀಯ ಭಾಷೆಗಳಲೊಂದಾದ ಕನ್ನಡಕ್ಕೆ ತನ್ನ ಮನೆಯೇ ತಂಗಿನವರ ಮನೆ (ಆ ವಿಧಾನ ಸೌಧ) ಯಾಗಿರುವಾಗ ಆ ಕನ್ನಡಮ್ಮ ಬೇರೊಂದು ಇಂಗಡದ ಗುಡಿಲೇನೆಂದು ಹುಡುಕಿ ಕೊಂಡು ಹೋಗುವುದೇ ಮಾರ್ಗ.

ಕರ್ನಾಟಕತ್ವಕ್ಕೇ ಕುಠಾರವಾದ ಬೆಂಗಳೂರು

ಬೆಂಗಳೂರು ಭೌಗೋಲಿಕವಾಗಿ ನಾಡಿನ ಒಂದು ಅತ್ಯಂತ ಅನಾನುಕೂಲದ ಮೂಲೆಯಲ್ಲಿದ್ದಂತೆ, ಭಾವನಾತ್ಮಕವಾಗಿಯೂ ಅದು ಅತ್ಯಂತ ಅನಾನುಕೂಲದ ಮೂಲೆಯಲ್ಲಿದೆ; ಅಲ್ಲದೆ ಅದು ರುಕ್ಷ ಮೂಲೆ. ಈ ಕಾರಣದಿಂದಾಗಿಯೂ ಬೆಂಗಳೂರು ಹೊಸನಾಡಿನ ರಾಜಧಾನಿಯಾದುದೇ ಭಾವನಾತ್ಮಕ ಏಕೀಕರಣಕ್ಕೆ ಅತ್ಯಂತ ವಿಘಾತಾತ್ಮಕ ಸಾಧನವಾಗಿ ಪರಿಣಮಿಸಿದೆ ಅದರಿಂದ ಹಳೆಯ ಮೈಸೂರಿಗರಿಗೆ 'ಹಳೆಯ ಪರಂಪರೆಯೇ ಮುಂದುವರಿದಿದೆ—ಹೊಸತೇನೂ ಇಲ್ಲವಲ್ಲ, ಕೆಲ ಹೊರಗಿನವರು ಕಣಿಕಿ ಹಾಕಿದುದರ ಹೊರತಾಗಿ' ಎಂದೆನಿಸಿದೆ. ಹಳೆಯ ಮೈಸೂರಿನ ಹೊರಗಿನವರಿಗೆ ಬೆಂಗಳೂರು ಒಂದು ಬಗೆಯ ಲೋಲುಪತೆಗೆ ಆಸ್ಪದವಾಗಿದೆಯೇ ಹೊರತು, ಹೊಸ ಹುಮ್ಮಸ್ಸಿನ, ನಾಡ ಸ್ಫೂರ್ತಿಯ ಸೆಲೆಯಾಗಿಲ್ಲ. ಇದು ರುಕ್ಷತೆಯ ಮೂಲಕಾರಣ. ಬೆಂಗಳೂರು ಮೋಹಕವಾದ ಊರು; ಋಷ್ಯಶೃಂಗನೂ ಮರುಳಾಗಬಹುದಾದ ಬೆಡಗು ಅದರಲ್ಲಿದೆ. ಅದರ ಚೆಲುವು, ಅದರ ಮಾಧುರ್ಯ ಕರ್ನಾಟಕದ ಮತ್ತಾವ ಊರಲ್ಲಿಲ್ಲ; ನಿಜ! ವ್ಯಾಪಾರ, ಉದ್ದಿಮೆ, ಆರ್ಥಿಕ ಸಂವಿಧಾನಗಳ ದೃಷ್ಟಿಯಲ್ಲೂ ಅದು ಮೇಲ್ಗೈ ನಗರ; ಇದೂ ನಿಜವೇ!! ಆದರೂ ಆದರಲ್ಲಿ ತಾಯ್ತನದ ಹಿರಿಮೆ, ನಾಡ ಹೃದಯದ ಹೆಚ್ಚುಗಾರಿಕೆ ಇಲ್ಲದಿರುವಲ್ಲಿ ಭಾವನಾತ್ಮಕ ಏಕೀಕರಣದ ಶೀಲ ಉಂಟಾಗಲಾರದು. ಭಾವನಾತ್ಮಕತೆ ಇಲ್ಲದೆ ನಾಡು ಬಾಳದು. ಭಾರತೀಯ ರಾಷ್ಟ್ರೀಯತ್ವಕ್ಕೆ ಈ ಭಾವನಾತ್ಮಕತೆಯೇ ಗರುಡೀ ಮಸೆ. ನಾವು ಮೊದಲು ಕನ್ನಡಿಗತನದ ಗರುಡಿಯ ಆಳಾಗದೆ, ಕನ್ನಡತನವನ್ನು ಅರಗಿಸಿಕೊಳ್ಳದೆ, ಭಾರತೀಯತ್ವದ ಒಕ್ಕಾಲನ್ನೂ ಸಾಧಿಸಲಾರೆವು; ಭಾರತ ಸಂಸ್ಕೃತಿಯ ಕೆನೆ ಅಥವಾ ತಾಯಿಬೇರಿನಂತಿದ್ದ ಕನ್ನಡ ಸಂಸ್ಕೃತಿಯ ಜೀರ್ಣೋದ್ಧಾರವಾಗದು. ಆದಾಗದೆ ನಾವು ನಮ್ಮ ಹಿಂದಿನ ಹಿರಿಯರಂತೆ ಜಗತ್ತಿಗೆಲ್ಲ ಸಂಸ್ಕೃತಿ, ಕಲೆ, ತತ್ವ ಧರ್ಮ, ನೀತಿಗಳನ್ನು ದಾನಮಾಡಲಾರೆವು; ಒಮ್ಮೆ ದಾನಿಗಳಾಗಿದ್ದ ನಾವು ಕೊನೆಗೂ ತಿರುಕರಾಗಬೇಕಾದೀತು.

(೨೫ನೇ ಪುಟ ನೋಡಿರಿ)

ESTD: 1919 VISIT PHONE NO. 374
K.R.K. SHET DIAMOND MART
JEWELLERS & DIAMOND MERCHANTS
FRESH ARRIVALS OF LATEST SPORTS PRESENTATION ARTICLES
HAMPANKATTA, MANGALORE, S. K.
Prop: K. R. K. SHET. TEL. AD. BLUEYAGAR.

(೨೪ನೇ ಪುಟದಿಂದ)

ಜನಾಂಗದ ಐಕ್ಯತೆಯ ಎರಡು ಅಡಿಗಲ್ಲು

ಸಾರಾಂಶ—ಭಾವನಾತ್ಮಕ ಏಕೀಕರಣವಾಗಬೇಕಾದರೆ, ಭಾವನೆಗಳು ಜೀವಂತವಾಗಿ ಜಾಗ್ರತವಾಗಿರಬೇಕಾದುದು ಮೊತ್ತಮೊದಲ ಮಾತು. ಭಾವನಾ ಜಾಗೃತಿಗೆ ಭಾವನೋದ್ದೀಪಕವಾದ, ಪೋಷಕವಾದ ಸನ್ನಿವೇಶಗಳಿರಬೇಕು. ಪತಿಪತಿಯರು ಸನ್ಯಾಸಿಗಳಂತಿದ್ದರೆ. ಭಾವೈಕ್ಯತೆಯಾದೀತೇ? ಭಾವೈಕ್ಯತೆಗೆ ಸಮ್ಮುಖತೆ ಆಗತ್ಯ. ಅದರಂತೆ ಒಂದು ಹಿರಿದಾದ ಗೌರವಯುಕ್ತವಾದ, ಅಭಿಮಾನಾಸ್ಪದವಾದ ರಾಷ್ಟ್ರೀಯ ಪರಂಪರೆಯೂ, ಒಂದು ಭವ್ಯ—ಭವಿಷ್ಯದ ಸಂಕಲ್ಪವೂ ಸಿದ್ಧಿಯ ಹುಮ್ಮಸ್ಸೂ ಅಗತ್ಯ. ಇದಲ್ಲದೆ ಒಂದು ತನದ ಕಲ್ಪನೆ, ಸಹ ಜೀವನದ ಯೋಜನೆಗಳಿದ್ದರೆ, ವಿಚಾರೈಕ್ಯತೆಯೂ ಸಾಧಿಸಬಲ್ಲುದು. ರಾಷ್ಟ್ರ ನಿರ್ಮಾಣಕ್ಕೆ ಈ ಭಾವೈಕ್ಯತೆ ವಿಚಾರೈಕ್ಯತೆಗಳೆರಡೂ ಅಷ್ಟೇ ಅತ್ಯಗತ್ಯ. ಹಳೆಯ ಮೈಸೂರಿಗರಲ್ಲೂ ಮಿಕ್ಕ ಕರ್ನಾಟಕದ ಕನ್ನಡಿಗರಲ್ಲೂ ಇವೆರಡೂ ದೃಷ್ಟಿಗಳು ಬೆಳೆಯುವ ಆಸ್ಪದವೇ ಸಧ್ಯದ ಸನ್ನಿವೇಶದಲ್ಲಿ ಅಸಾಧ್ಯವಾಗಿದೆ.

ಮೈಸೂರು ಹುದುವನ್ನು ಒದಗಿಸಲಾರದು

ಮೈಸೂರಿನ ಪರಂಪರೆ ಇಡೀ ಕರ್ನಾಟಕಕ್ಕಾಗಲೀ, ಅಥವಾ ಹಳೆಯ ಮೈಸೂರಿಗರಿಗೇ ಆಗಲಿ, ಒಂದು ಗೌರವಾಸ್ಪದವಾದ ಉಜ್ವಲ ರಾಷ್ಟ್ರೀಯ ಪರಂಪರೆಯನ್ನು ಒದಗಿಸಿಲ್ಲ—ಟಿಪ್ಪುವು ಬ್ರಿಟಿಶರೊಡನೆ ಹೋರಾಡಿದ ಒಂದು ಮಾತನ್ನುಳಿದರೆ ಅದು ಹೆಚ್ಚಾಗಿ ಬ್ರಿಟಿಷರ ಕೈಗೂಸೋ, ಊಳಿಗದಾಳೋ ಆಗಿ ಬೆಳೆದುದು. ಭಾರತದ ರಾಷ್ಟ್ರೀಯ ಸಂಗ್ರಾಮದಲ್ಲಿ ಕಳೆದ ೧೦೦ ವರ್ಷಗಳ ಇತಿಹಾಸದಲ್ಲಿ, ಅದು ನೀಡಬೇಕಾದ ಸಹಯೋಗವನ್ನು ಸಾಕಷ್ಟು ನೀಡಲೇ ಇಲ್ಲ. ಅತ್ತ ಒಂದು ಹಿರಿ ಪರಂಪರೆಯಿಲ್ಲ; ಇತ್ತ ಹೋರಾಟದ ಹೆಮ್ಮೆಗಾರಿಕೆಯಿಲ್ಲ. ಹೀಗಾಗಿ ಮೈಸೂರಿನಲ್ಲಿ ರಾಷ್ಟ್ರೀಯತ್ವ ಈಗಲಾದರೂ ಪೂರ್ತಿ ಜಾಗೃತವಾಗಿದೆಯೋ ಇಲ್ಲವೋ ಎಂಬುದು ಶಂಕಾಸ್ಪದ. ಮೈಸೂರು ಮೈಸೂರೇ ಆದ ೧|-೨ ಶತಮಾನಗಳಲ್ಲಿ ಅದು ರಾಷ್ಟ್ರೀಯತ್ವಕ್ಕೆ ವಿರೋಧಿಯಾದ ಸಂಸ್ಥಾನೀ ಪದ್ಧತಿಗೆ ಮಾತ್ರ ಮಾದರಿಯಾಯ್ತೇ ಹೊರತು ರಾಷ್ಟ್ರೀಯತ್ವಕ್ಕಲ್ಲ. ಆ ಸಂಸ್ಥಾನಗಳೇ ಅಳಿದಿರುವಾಗ ಆ ಸಂಸ್ಥಾನಗಳ 'ಮಾದರಿ' ಇದೊಂದು ಮಾತ್ರ ಪ್ರಜಾಸತ್ತಾತ್ಮಕ ಭಾರತದಲ್ಲಿ ಇನ್ನೂ ಏಕೆ ಉಳಿದಿದೆ ಎಂಬುದೇ ಕೂಟ ಪ್ರಶ್ನೆ! ಕೊನೆಕೊನೆಗೆ ನಾಲ್ಮಡಿ ಕೃಷ್ಣರಾಜ ಒಡೆಯರೇ ಸ್ವಲ್ಪ ಪ್ರಗತಿಪರ ದೃಷ್ಟಿಯನ್ನಿಟ್ಟುಕೊಂಡದ್ದಷ್ಟೋ ಅಷ್ಟೇ ಮೈಸೂರಿನ ರಾಷ್ಟ್ರೀಯತ್ವದ ಕಿರಿಮಿಂಚು. ಅದೂ ಪರಿಸ್ಥಿತಿಗೆ ಬಾಗಿದ ಜಾಣತನದ ಒಂದು ರೀತಿ ಮಾತ್ರ.

ಕರ್ನಾಟಕವೇ ಶರಣು

ಇಷ್ಟೆಲ್ಲಾ ಅಂಶಗಳನ್ನು ಹಿಂಜಿ ಹಿಂಜಿ ನೋಡಿದ ಮೇಲೆ ಕಂಡು ಬರುವುದು ಒಂದೇ ಮಾತು ಅದೆಂದರೆ ಜನತೆ ಕೂಡಲೇ ಕರ್ನಾಟಕತ್ವಕ್ಕೇ ಶರಣು ಹೋಗಬೇಕು. ಮೈಸೂರು ಮೈಸೂರಿಗರ ಮನ್ನ ಕೂಡ ಹಳೆಯ ಮೈಸೂರಿನ ಪ್ರದೇಶದಲ್ಲಿ ಬೆಳೆದು ಬಂದ ಕಳಕಾಡು, ಹೊಯ್ಸಳರ ಪರಂಪರೆಗಳೂ ಕರ್ನಾಟಕದ ಪರಂಪರೆಗಳೇ ಹೊರತು ಮೈಸೂರು ಪರಂಪರೆಯಲ್ಲ. ಹಳೆಯ ಮೈಸೂರಿನ ಸಂಗೀತ, ಕಲೆ, ಶಿಲ್ಪ, ಸಾಹಿತ್ಯ, ಜೀವನದ ಬಗೆ—ಇವೆಲ್ಲ ಕರ್ನಾಟಕ ಪರಂಪರೆಯುವೇ. ಹಳೆಯ ಮೈಸೂರಿಗರಿಗೂ ಮಿಕ್ಕ ಕರ್ನಾಟಕದವರಿಗೂ ಅಷ್ಟೇ ಗೌರವಾಸ್ಪದವಾಗಿ ಅಭಿಮಾನ—ಸ್ಫೂರ್ತಿಗಳ ನೆಲೆಯಾಗಿರುವ ಶಕ್ತಿಯುಳ್ಳದು ಕರ್ನಾಟಕತ್ವ. ಮೈಸೂರತ್ವ ಅಳಿದು ಕರ್ನಾಟಕತ್ವದಲ್ಲಿ ಅದು ಲೀನವಾದರೇ, ಕಟ್ಟೆಯ ಕಲ್ಲು ಕಟ್ಟೆಗೆ ಕೂತಂತೆ; ಕರು ತಾಯನ್ನು ಸೇರಿದಂತೆ. ಅವರಲ್ಲಿ ಗೌರವ ಭೂಷಣಗಳೆರಡೂ ಇವೆಯಲ್ಲದೆ, ಕೈಕಯಿಯಿಂದಾಗಿ ರಾಜ್ಯಕ್ಕೆ ಹೊರತಾದ ರಾಮನಿಗೇ ಪಟ್ಟ ದೊರೆತಂತಾಗುತ್ತದೆ. ಸಧ್ಯದ ದುರ್ಭರವಾದ ಪರಿಸ್ಥಿತಿ ತಾಳಿ-ಬಾಳುವಂತಹದಲ್ಲ; ಒಮ್ಮೆಲ್ಲೇ ಸ್ಫೋಟನವಾಗದೆ ಇರದು. ಆ ಮೊದಲೇ ನಾವು ನಮ್ಮ ರಾಷ್ಟ್ರೀಯತ್ವಕ್ಕೆ ಮೊರೆ ಹೋಗುವದೊಳ್ಳಿತು ಕರ್ನಾಟಕತ್ವ ಒಂದು ಪ್ರಾದೇಶಿಕ ವಿಷಯವಲ್ಲ. ಭಾರತಕ್ಕೆ ದಾರ್ಶನಿಕ ದೃಷ್ಟಿ, ಕಲೆಯ ನೆಲೆ, ಸಂಸ್ಕೃತಿಯ ತಿರುಳನ್ನೇ ಒದಗಿಸಿದ ಒಂದು ಮಹಾನ್ ತತ್ವ. ಒಂದು ವೇಳೆ ಮಹಾರಾಷ್ಟ್ರತ್ವ, ಗುಜರಾತತ್ವ, ಮಧ್ಯಪ್ರದೇಶತ್ವ, ಉತ್ತರ ಪ್ರದೇಶತ್ವಗಳು—ಪ್ರಾದೇಶಿಕ ತತ್ತ್ವಗಳಾದಾವು; ಕರ್ನಾಟಕತ್ವ ಹಾಗಲ್ಲ. ಇಡೀ ಆರ್ಯ–ದ್ರಾವಿಡ ಸಾಂಸ್ಕೃತಿಕ ಪ್ರತೀಕವೇ ಅದು. ಅದರ ಹಿರಿಮೆ ಮಾತ್ರ ಅವಶ್ಯಕವಾದ ಭಾವೋಜ್ವಲತೆಯನ್ನು ಉಕ್ಕಿಸಬಲ್ಲುದು; ಮಿಕ್ಕಿಸಬಲ್ಲುದು; ದಕ್ಕಿಸಲೂ ಬಲ್ಲುದು.

ರಾಮನ ಪಟ್ಟ ಭರತನಿಗೆ!

ಒಟ್ಟಾರೆ, ಕನ್ನಡಿಗರಲ್ಲಿ ಭಾವೈಕ್ಯತೆ, ಅದರೊಂದಿಗೆ ವಿಚಾರೈಕ್ಯತೆಗಳೆರಡೂ ಸಾಧಿಸಲ್ಪಟ್ಟು, ಅವರು ರಾಷ್ಟ್ರ ನಿರ್ಮಾಣಕ್ಕೆ ತಕ್ಕವರಾಗಬೇಕಾದರೆ ಕರ್ನಾಟಕವು "ಕರ್ನಾಟಕವೇ" ಆಗುವುದು ಅತ್ಯನಿವಾರ್ಯ. 'ಮೈಸೂರಿನಿ'ಂದ ಕರ್ನಾಟಕದ ಮೈಸೂರೆ ಆಗುವದಲ್ಲದೆ, ನಾಳೆ ಆತ್ಮವೂ ಸೂರೆಗೊಂಡೀತು. ಆ ಸ್ಥಿತಿಯಿಂದ ಕನ್ನಡಿಗರನ್ನುಳಿಸಬೇಕಾದರೆ ಕರ್ನಾಟಕವೇ ಶಕ್ತ. ಕನ್ನಡಿಗರನ್ನು ಕಂಗಾಲಿರೆನ್ನಿಸಿದ ಕೆಂಗಲ್ಲರಿಗೆ ಕೋಲಾರದ ತೆಲುಗು ಭಾಗವನ್ನು ಅರಗಿಸಲು 'ಮೈಸೂರು' ಎಂಬುದು ಸಹಾಯಕಾರಿ ಎಂಬ ನೆಪ ತೋರಿಸಬಹುದು. ಅವರೆ ಅದು ಆ ರಾಷ್ಟ್ರೀಯ ಘೋರಣೆ. ಭರತನನ್ನು ರಾಮ ಪಟ್ಟ ಕ್ಕೇರಿಸುವ ಘೋರಣೆ. ಆದರೆ ಭರತ ಬುದ್ಧಿಗೆಡದ್ದರಿಂದಲೇ ರಾಮ ಪಟ್ಟ ಉಳಿಯಿತು. ಮೈಸೂರಿಗರಿಗೂ ಅದೇ ಮನವಿ.

ವಿಜಯನಗರವೇ ಕರ್ನಾಟಕದ ರಾಜಧಾನಿ

ಭಾವೈಕ್ಯತೆಯ ಎರಡನೆಯ ಹಿರಿ ಸಾಧನೆ, ರಾಜಧಾನಿಯನ್ನು ಬೆಂಗಳೂರಿನಿಂದ ಕಿತ್ತಿ, ಮರಳಿ ವಿಜಯನಗರಕ್ಕೇ ಒಯ್ಯುವದು. ಬೆಂಗಳೂರಿನ ಹೆಂಗಸರವನಗಿಂತ ವಿಜಯನಗರದ ಕಂಗಡದ ಗುಡಿಗಳೇ ಲೇಸು ಕನ್ನಡಮ್ಮನಿಗೆ. ಕರ್ನಾಟಕತ್ವ ಕೆನೆಗೊಂಡುದ, ಪರಮಾವಧಿಯ ತ್ರೀಯತ್ತಿಯನ್ನೇರಿದ್ದು ವಿಜಯನಗರದ ಕಾಲದಲ್ಲಿ. ಕರ್ನಾಟಕ ರತ್ನ ಸಿಂಹಾಸನ ಖಚಿತವಾದುದು, ರಚಿತವಾದುದು ವಿಜಯನಗರದ ಕಾಲದಲ್ಲೇ! ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು ಹೊಯ್ಸಳರು ಬೆಳೆಸಿದ ಬೆಳೆವನೆಗೊಂಡು, ಮೊನೆಗೊಂಡು, ತೆನೆಗೊಂಡುದು ವಿಜಯನಗರದಲ್ಲಿ! ಆ ತೆನೆಯಿಂದ ಎಸೆದ್ದೋ ಉದುರಿದ ಒಂದು ಕಾಳು ಮೈಸೂರು. ಅದನ್ನೇ ನಾವು ಮತ್ತೆ ವಿಜಯನಗರದಲ್ಲಿ ಬಿತ್ತಿದರೆ ಮತ್ತೊಂದು ಹೊಸ—ಹುಟ್ಟು ಆರಂಭವಾಗುವುದು. ಅದು ಮೈಸೂರಿಗರನ್ನು ಪೂರ್ತಿ ಕನ್ನಡಿಗರನ್ನಾಗಿಸುವುದು. ಕನ್ನಡಿಗರೆಲ್ಲರಿಗೂ ನಿರಂತರ ಸ್ಫೂರ್ತಿಯ ನೆಲೆಯಾಗುವುದು. ವಿಜಯನಗರದಲ್ಲಿ ಅಂಥ ಒಂದು ಸಿಸ್ಲೀವ. ಶಕ್ತಿಯಿದೆ.

ಕವಿ ಕಂಡ ಕಣಸು

ಕರ್ನಾಟಕದ ಅಸ್ತಮರ್ಗಕಾಗಿದ್ದ ದಿವಂಗತ ಶ್ರೀ ಅವರೇ "ಕನ್ನಡ ತಾಯ ನೋಟ"ದಲ್ಲಿ ಕಟ್ಟಿದ—

"ಹಾಳು ಹಂಪೆಯ ನಡುವೆ, ನಡುಕಟ್ಟಿ ಮತ್ತೊಮ್ಮೆ ಮುಡಿಯಾಗಿ ತಾಯ್ಗೆ|
ಭಕ್ತಿಯಿಂ, ಜೀವವನು ಸಲಿಸುವರು ಏಳು!
ನಾಡ ಸಿಂಗರವಾಯ್ತು; ಬೀಡು
ಹೆಪ್ಪೆಕಾಯ್ತು; ಅದೊ ಹಬ್ಬ ಮೊರೆತ!!
ನಿನ್ನೊಂದು ಕರ್ನಾಟಕನ್ನ ಸಿಂಹಾಸನಂ ಬೆಳ್ಗೆ, ಅದು ಬೆಸೆ||
ಕನ್ನಡದ ಮುಡಿಯಾಗಿ, ಕನ್ನಡದ
ನುಡಿಯಾಗಿ, ಕನ್ನಡದ ಬಾಳ ಕುಡಿಯಾಗಿ|
ಬಾರಮ್ಮ| ಹರಸ ||"

ಎಂಬೀ ಕಲ್ಪನೆಯೂ ಕನಸೂ ಕಣಸೂ (ದೃಷ್ಟಾಂತವೂ) ನನಸಾಗುವುದು. ಇದು ಕನ್ನಡಿಗರಿಗೆ ದೊರೆಯಬಹುದಾದ ಅತ್ಯಂತ ಹಿರಿದಾದ ಕಾಣಿಕೆ. ಭಾರತದ ೧೪ ರಾಜ್ಯಗಳಲ್ಲಿ ವಿ-ಶಾಲ ರಾಜ್ಯದಲ್ಲೂ ವಿಜಯ ನಗರದಂತಹ ಹಿರಿಮೆ, ಗೌರವ, ರಾಷ್ಟ್ರೀಯಾಭಿಮಾನದ ಪ್ರತೀಕವಾದ, ಸಾಂಸ್ಕೃತಿಕ ಸಂಗಮವಾದ ಸ್ಥಾನ ಮಾಹಾತ್ಮ್ಯವನ್ನು ಪಡೆದ ಸ್ಥಳ ಇನ್ನೊಂದಿಲ್ಲ. ಇದು ಕನ್ನಡಿಗರ ಹೆಚ್ಚಳವಷ್ಟೇ ಅಲ್ಲ, ಪುಣ್ಯ.

ವಿಜಯ ನಗರವೇ ನಾಡಿನ ರಾಜಕೀಯ, ಸಾಂಸ್ಕೃತಿಕ, ತಾತ್ವಿಕ ಹೃದಯ

ವಿಜಯ ನಗರದ ಎಲ್ಲಕ್ಕೂ ಹೆಚ್ಚಿನ ವೈಶಿಷ್ಟ್ಯವೆಂದರೆ, ಅದು ಇಡೀ ನಾಡಿಗೇ ಭೌಗೋಲಿಕವಾಗಿ ಅತ್ಯಂತ ಮಧ್ಯವರ್ತಿಯಾಗಿರುವದಲ್ಲದೆ ಒಂದು ಆಧುನಿಕ ನಗರದ ಅಭಿವೃದ್ಧಿಗೆ ಅಗತ್ಯವಾದ ಪ್ರತಿಯೊಂದು ಅನುಕೂಲತೆಯನ್ನೂ ಪಡೆದುದಾಗಿದೆ. ಈಚೆಗೆ ನಿರ್ಮಿತವಾದ ಭುವನೇಶ್ವರ, ಶಿಲಾಂಗ್, ಚಂಡಿಘರ್, ಭೋಪಾಲ್, ಮುಂತಾದ ಯಾವ ಹೊಸ ರಾಜಧಾನಿಗೂ ಸಲ್ಲದ ಅನೇಕ ಸೌಕರ್ಯಗಳು ಇಲ್ಲಿ ಸ್ವಾಭಾವಿಕವಾಗಿಯೇ ದೊರೆಯುವಂತಿವೆ. ಮಾತ್ರವಲ್ಲ, ಬೆಂಗಳೂರಿಗಿಂತಲೂ ನೂರು ಪಾಲು ಸುಂದರ ನಗರ ಇಲ್ಲಿ ಆಗಬಲ್ಲುದು. ಒಂದು ಕಾಲಕ್ಕೆ ಪ್ರಪಂಚವೇ ಆಕರ್ಷಿತವಾದ ನಗರ ಇದು ಆಗ ಸತ್ಯ ಇದು ಕನ್ನಡಿಗರ ಹೃದಯಗಳನ್ನು ಆಕರ್ಷಿಸಬೇಕಾಗಿದೆ ಅಷ್ಟೇ!

ನಮ್ಮ ಯಾವತ್ತೂ ಗ್ರಾಹಕ ಮತ್ತು ಹಿತೈಷಿಗಳಿಗೆ
ಸ್ವಾತಂತ್ರ್ಯೋತ್ಸವದ ಶುಭಾಶಯಗಳು
* * *
ಎಂದಿನಂತೆ ಎಂದೆಂದೂ ನಮ್ಮ ನಿಮ್ಮೊಳಗಣ ಬಾಂಧವ್ಯವು ನಮ್ಮ ವೈಶಿಷ್ಟ್ಯಪೂರ್ಣ ಸೇವೆಯೊಂದಿಗೆ ಸದಾ ವೃದ್ಧಿಸಲೆಂದು ಹಾರೈಸುವೆವು.

ಶ್ರೀನಿವಾಸ ಬ್ರದರ್ಸ್

ಪ್ರಮುಖ ಕಾಗದ ವ್ಯಾಪಾರಿಗಳು
ಪೋಸ್ಟ್ ಬಾಕ್ಸ್ ನಂಬ್ರ 130
ರಥಬೀದಿ, ಮಂಗಳೂರು, ದ. ಕನ್ನಡ.

ಅಧಿಕೃತ ವಿತರಣೆಗಾರರು:
ಪ್ರಖ್ಯಾತಿಪಟ್ಟ "BAMBOO" ಕಾಗದಗಳು
"J. B. A." ಮುದ್ರಣ ಶಾಯಿಗಳು
ಮತ್ತು ಮುದ್ರಕರ ಇತರ ಸಲಕರಣೆಗಳು.

SRINIVAS BROTHERS
Post Box No. 130,
CAR STREET, MANGALORE.
Phone: 449 : : Grams: "ACTIVE"

ಒಂದು ಉಪದೇಶ— ಸ್ವಾತಂತ್ರ್ಯದಿನಕ್ಕಾಗಿ

(೨ನೇ ಪುಟದಿಂದ)

ರು ಹಿಂದು ಹಿಂದಾಗಿ ಗ್ರಾಮಕ್ಕಿಳಿಯಬೇಕು – ಗ್ರಾಮಜೀವನದ ಅಧ್ಯಯನ ಮಾಡಬೇಕು.–ಇಪ್ಪತ್ತು ವರ್ಷಗಳ ಹಿಂದೆ ನಮ್ಮ ಶಾಲಾ ಮಕ್ಕಳು, ನಾಲ್ಕಾರಾಣೆಗೆ ಒಳಗಾದ ಬೆಲೆಯ–ಕೈಯ ಕೆಲಸದಿಂದ ತಯಾರಾದ ಓಲಿಕೊಡೆಗಳನ್ನು ಹಿಡಿದು ಸಾಲಾಗಿ ಶಾಲೆಗೆ ಹೋಗುತ್ತಿದ್ದರು. ಅಲಂಕಾರದ ಈ ಗರಿಯ ಕೊಡೆಗಳನ್ನು ಹಿಡಿದು ಜನರು ಹಳ್ಳಿಗಳಲ್ಲಿ ತಿರುಗುತ್ತಿದ್ದರು. ಇಂದೂ ನಮ್ಮ ದೇವರಿಗೆ ಓಲಿಯ ಕೊಡೆ, ದೇಶ ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಕಾಂಗ್ರೆಸ್ ಸತ್ಯಾಗ್ರಹಿಗಳು ಶುದ್ಧ ಓಲಿಕೊಡೆಗಳನ್ನು ಹಿಡಿದು ತಿರುಗುತ್ತಿದ್ದುದು ನಾನು ನೋಡಿದ್ದೇನೆ. ಆಗ ಆ ಕೊಡೆಗಳನ್ನು ತಯಾರಿಸುವ ಜನಕ್ಕೆ ಆ ಕಸಬಿನಿಂದಲೇ ಜೀವನ ಸಾಗುತ್ತಿತ್ತು. ಕೊಳ್ಳುವವನಿಗೂ ಬೆಲೆ ಹೆಚ್ಚಲ್ಲ— ಇಂದು – ಸಾರ್ವತ್ರಿಕ ಅರಿವೆಯ ಕೊಡೆಯ ಕಾಲ. ಒಂದು ಕುಟುಂಬದ ವರ್ಷದ ವರಮಾನದಲ್ಲಿ ಕನಿಷ್ಠ ಇಪ್ಪತ್ತು ರೂಪಾಯಿ ಈ ಕೊಡೆಯ ಖಾತೆಗೆ ವಿನಿಯೋಗ ಆಗುತ್ತದೆ— ಈ ಹಣದಲ್ಲಿ ಗ್ರಾಮದಲ್ಲಿ ಉಳಿಯುವದೆಷ್ಟು? ಏನೂ ಇಲ್ಲ. ಓಲಿಕೊಡೆ ತಯಾರಿಸುವ ಕೈಗಾರಿಕಾ ಕಸಬುದಾರರು ಎಲ್ಲಿ? ಬೊಂಬಾಯಿಯಲ್ಲಿ— ನಾನಾರೂಪದ ಅಸಹ್ಯ ಜೀವನದ ಸೋಗಿನಲ್ಲಿ? ಹಾಗಾದರೆ ನಾವು ಸಾಧಿಸಿದ್ದೇನು? ಇದು ಒಂದು ಉದಾಹರಣೆ. ಇದೇ ರೀತಿ ಒಂದು ಗ್ರಾಮದ ಕುಟುಂಬದ ವರ್ಷದ ಆಯವ್ಯಯದ ಏರಿಕೆ—ಅದಕ್ಕೆ ಸಮನಾದ ಉದ್ಯೋಗ ಇವುಗಳನ್ನು ಅಭ್ಯಸಿಸಿದರೆ ಅಲ್ಲಿನ ದುರಂತ ಚಿತ್ರದ ಅರಿವಾಗುತ್ತದೆ.

ಗ್ರಾಮ ಜೀವನದ ವಿಮರ್ಶನಾ ಕುತೂಹಲಿಗಳು ಇಂತಹ ಹಲವು ಉದಾಹರಣೆಗಳನ್ನು ಪರಿಶೀಲಿಸಬೇಕು. ಆಗ ಗ್ರಾಮಜೀವನದ ರುದ್ರಸ್ವರೂಪದ ದರ್ಶನವಾಗುತ್ತದೆ. ಗ್ರಾಮದ ಭಂಡವಳ ಹೊರಗೆ ಹರಿದು, ದೇಶದಲ್ಲಿ ಭಂಡವಳಶಾಹಿತನ ಬೆಳೆದು, ಸಂಪತ್ತಿನ ಕೇಂದ್ರೀಕರಣವಾಗಿ ವ್ಯಕ್ತಿ ಸ್ವಾತಂತ್ರ್ಯ, ಸ್ವಾವಲಂಬನ ಇವೆಲ್ಲ ಬರಿಯ ಘೋಷಣೆಯ ಮಾತು ಎನ್ನಿಸುತ್ತದೆ.

"ಪ್ರಾಣಾಧಾರದಂಥ ಬೀಸುವುದು ಕುಟ್ಟುವುದು, ಚರ್ಮ ಹದಮಾಡುವುದು, ಎಣ್ಣೆ ಗಾಣ ಮೊದಲಾದ ಗ್ರಾಮ ಉದ್ಯೋಗಗಳಿಲ್ಲದೆ ಹಳ್ಳಿಯ ಆರ್ಥಿಕ ರಚನೆ ಅಸಂಪೂರ್ಣವಾದೀತು. ಕಾಂಗ್ರೆಸ್ಸಿನವರು ಈ ಕೈಗಾರಿಕೆಗಳಲ್ಲಿ ಆಸಕ್ತಿವಹಿಸಬೇಕು. ಪ್ರತಿಯೊಬ್ಬರೂ ಆದಷ್ಟು ಮಟ್ಟಿಗೆ ಹಳ್ಳಿಯ ಸಾಮಾನನ್ನೇ ಬಳಸುವ ಸಂಪ್ರದಾಯವನ್ನು ಬೆಳಸಬೇಕು. ನಮ್ಮ ಮನಸ್ಸು ಹಳ್ಳಿಯ ಸಂಸ್ಕೃತಿಗೆ ತಿರುಗಿದರೆ ವಿಲಾಯತಿಯ ನಕಲಿ ಸಾಮಾನಾಗಲೀ ಗಿರಣಿಯ ಸಾಮಾನಾಗಲೀ ಬೇಡವಾಗುತ್ತದೆ. ಬಡತನ ಉಪವಾಸ, ಸೋಮಾರಿತನಗಳಿಗೆ ಇಂಬಿರದ ಹೊಸ ಹಿಂದುಸ್ಥಾನದ ಕಲ್ಪನೆಗೆ ತಕ್ಕಂತೆ ಸರಿಯಾದ ರಾಷ್ಟ್ರೀಯ ಅಭಿರುಚಿಯನ್ನು ಬೆಳಸಿಕೊಳ್ಳುತ್ತೇವೆ"–ಇಂದಿಗೆ ಇಪ್ಪತ್ತು ವರ್ಷಗಳ ಹಿಂದೆ ಬಾಪು ನುಡಿದ ವಾಣಿ ಇದು–ಬಾಪು ನುಡಿದಂತೆ ನಡೆವೆವಾದರೆ ಇನ್ನಾದರೂ ಈ ಅಮೃತ ವಾಣಿಯ ಕಡೆಗೇ ನಮ್ಮ ಲಕ್ಷ್ಯ ಹರಿಯಬೇಕು.

ಗ್ರಾಮದ ಜನರು ಕಲಾಹೀನರಾಗಿ— ಬಡಕಲು ದನಗಳಂತಾದಾರು— ಎಂಬ ಮಾತು ಹಿಂದೆ ಬಂದಿದೆ. ದನಗಳನ್ನು ಕಾಮಧೇನು ಎಂದು ಪೂಜಿಸಿದ ದೇಶ ನಮ್ಮದು. ಇಂದಿಗೂ ಗೋಪೂಜೆ ಈ ಬಡಕಲು ದನಗಳಿಗೇ ನಡೆಯುತ್ತಿದೆ. ಈ ದನಗಳಿಗಾಗಿಯೇ ದೇವರು ಕೃಷ್ಣಾವತಾರ ತಾಳಿ ಕೊಳಲನ್ನೂದಿ ದನಗಳನ್ನು ಕಾಯುವ ಕೆಲಸ ಮಾಡಿದ.. ದನಗಳ ಹಾಲು, ಸೆಗಣಿ, ಮೂತ್ರ, ಎಲ್ಲವೂ ನಮಗೆ ಅಮೃತ. ದನಕರುಗಳು ನಮ್ಮ ಕುಟುಂಬಕ್ಕೆ ಸೇರಿದವು. ನಮ್ಮ ಗದ್ದೆಗಳು ದನಗಳಿಂದಲೇ ಬೆಳೆಯಬೇಕು—ಆದರೆ ಇಂಥ ದೇಶದಲ್ಲಿ ಇಂದು ಅಧಿಕ ಆಹಾರ ಬೆಳಸುವ ಸೋಗಿನಲ್ಲಿ–ಟ್ರಾಕ್ಟರುಗಳ ಉಪಯೋಗ, ರಾಸಾಯನಿಕ ಗೊಬ್ಬರದ ಪ್ರಚಾರ—ಅಮೇರಿಕದ ಆಜ್ಯದಾನ. ಅಮೇರಿಕದ ಕಂಪನಿಯ ಕ್ಷೀರ ಡಬ್ಬಿಗಳ ದಾನ–ಇವು ನಡದಿದೆ. ಇಂದು ದಾನ, ನಾಳೆ ಖರೀದಿ, ಇಂಡಿಯಾ ಕಾಫಿ ಮತ್ತು ಟೀ ಬೋರ್ಡಿನವರು, ಆರು ತಿಂಗಳು ಒಂದು ಕ್ಷೇತ್ರದಲ್ಲಿ ದರ್ಮಾರ್ಥ ಕಾಫಿ ಟೀ ಗಳನ್ನು ಹಂಚಿದರು. ದಿನಬಿಡದೆ ಕಾಫಿಯ ಮೋಟರ್ ಬಂದು ಕಾಫಿದಾನ ಮಾಡಿತು. ಏಳನೆಯ ತಿಂಗಳು ಕಾಫಿ ಮೋಟರು ಬರಲಿಲ್ಲ. ಜನರೇ ಕಾಫಿಯನ್ನು ಹುಡುಕಿಕೊಂಡು ಹೋದರು.–ಶ್ರೀಮಂತರ ಕಾಫಿ ತೋಟ ಹೆಚ್ಚು ತುಂಬಿ ಬೆಳೆಯಿತು. ಬಡವರ ಹೊಟ್ಟೆಗೆ ಕರಿಕಾಫಿ ಬಿತ್ತು. ದೇಹ ಬತ್ತಿತು–ಕಿಸೆ ಬರಿದಾಯಿತು. ಇಂದು ಕಾಫಿ ಚಹಾ ಅನಿವಾರ್ಯ ವಸ್ತುಗಳಾಗಿವೆ—ಸರಕಾರಿ ಸೌಲಭ್ಯ ಪಡೆದ ಕೈಗಾರಿಕೆಗಳಾಗಿವೆ.—

ಅಮೇರಿಕೆಯ ಹಾಲಿನ ಹುಡಿ, ಟ್ರಾಕ್ಟರ್ ಉಳುವಿಕೆ, ರಾಸಾಯನ ಗೊಬ್ಬರ ಪ್ರಚಾರ, ವಿದೇಶಿಯ ಆಜ್ಯ ದಾನ,—ಇವೆಲ್ಲ—ಈ ಕಥೆಯನ್ನು ನೆನಪಿಗೆ ತರುತ್ತಿವೆ. ಗೊಬ್ಬರು ಕೊಳ್ಳಲು ಸಿಗುವುದಾದರೆ, ಹಾಲಿನ ಪುಡಿ ಅಂಗಡಿಯಲ್ಲಿ ದೊರೆಯುವುದಾದರೆ, ಉಳಲು ಯಂತ್ರ ದೊರೆಯುವುದಾದರೆ–ಮನೆಯಲ್ಲಿ ಈ ಕಾಮಧೇನು ಯಾಕೆ?--ಊರಲ್ಲಿ ವನಮಹೋತ್ಸವಗಳು ಯಾಕೆ? ಕೆಲವು ಕಾಲಗಳ ನಂತರ ನಮ್ಮ ಜನ ತಮ್ಮ ಮೂಲಭೂತವಾದ ವ್ಯವಸಾಯದ ಪದ್ಧತಿಯನ್ನೇ ಮರೆತು, ಪ್ರತಿಯೊಂದಕ್ಕೂ ಅಂಗಡಿಯನ್ನೂ—ಯಂತ್ರವನ್ನೂ–ದುಡ್ಡಿಗಾಗಿ ಬಂಡವಾಳತನವನ್ನೂ ಅವಲಂಬಿಸುವ ಸ್ಥಿತಿ ಬಂದೀತು.— ಆಗ ಗ್ರಾಮರಾಜ್ಯ ರಾವಣ ರಾಜ್ಯವೇ ಸರಿ.

ಕಾಮಧೇನು–ಕಲ್ಪವೃಕ್ಷಗಳ ಪೂಜೆ ಮತ್ತೆ ನಮ್ಮ ಗ್ರಾಮಗಳಲ್ಲಿ ನಡೆಯಲಿ. ಇವುಗಳ ತತ್ವಸಾರದ ಪ್ರಚಾರ ಗ್ರಾಮಗಳಲ್ಲಿ ನಮ್ಮ ಕಾಂಗ್ರೆಸ್ಸು ಇನ್ನಾದರೂ ಮಾಡಲಿ. ಗಾಂಧೀಜಿ, ಕೃಷ್ಣಾವತಾರ ತಾಳಿ ಮತ್ತೆ ನಮ್ಮ ಗ್ರಾಮದ ಗೋಸಂಪತ್ತನ್ನೂ ಉಳಿಸಬೇಕು–.

ಮಾತು ಬೆಳಸಿದರೆ ಬಹಳವಿದೆ ಇಪ್ಪತ್ತು ವರ್ಷಗಳ ಹಿಂದೆ ಕಾಂಗ್ರೆಸ್ಸಿನ ಮುಂದೆ ಹದಿಮೂರು ಅಂಶಗಳಿದ್ದುವು— 1. ಜಾತಿಯ ಐಕ್ಯ ಮತ್ಯ, 2. ಅಸ್ಪೃಶ್ಯತಾ ನಿವಾರಣೆ, 3. ಪಾನನಿರೋಧ, 4. ಖಾದಿ, 5. ಇತರಗ್ರಾಮೋದ್ಯೋಗ, 6. ಗ್ರಾಮ ನೈರ್ಮಲ್ಯ, 7. ನಯೀತಾಲಿಂ, 8. ವಯಸ್ಕರ ಶಿಕ್ಷಣ, 9. ಸ್ತ್ರೀ ಜನೋದ್ಧಾರ, 10. ಆರೋಗ್ಯ ಶುಚಿ ಶಿಕ್ಷಣ, 11. ರಾಷ್ಟ್ರಭಾಷಾ ಪ್ರಚಾರ, 12. ಸ್ವಭಾಷಾ ಪ್ರೇಮ, 13. ಆರ್ಥಿಕ ಸಮತೆಗಾಗಿ ಕೃಷಿ ಇಂದು ಕಾಂಗ್ರೆಸ್ಸು ಇವುಗಳನ್ನು ಸಾಧಿಸಲು ತಾನು ಮಾಡಿದುದೇನು ಎಂದು ಪ್ರತಿಯೊಬ್ಬ ಕಾಂಗ್ರೆಸಿಗನೂ ವಿಚಾರಮಾಡಬೇಕು.

ಕಾಂಗ್ರೆಸ್ ಸರಕಾರದ ಕುರಿತು ನಾನೇನು ಹೇಳಲಾರೆ, ಆದರೆ ಕಾಂಗ್ರೆಸ್ ಸಂಸ್ಥೆಯ ಜವಾಬ್ದಾರಿ ಬಹಳ ಇದೆ. ಆ ಸಂಸ್ಥೆ ತನ್ನ ಆತ್ಮ ವಿಮರ್ಶೆಮಾಡಿಕೊಂಡು ಗಾಂಧೀಜಿ ನುಡಿದಂತೆ ನಡೆಯಲು ಯತ್ನಿಸಬೇಕು–ತಪ್ಪು ಹೆಜ್ಜೆ ಇಟ್ಟಲ್ಲಿ ಇನ್ನಾದರೂ ತಿದ್ದಿಕೊಳ್ಳಬೇಕು–. ಕೇವಲ ಚುನಾವಣಾ ಘೋಷಣೆ ಮಾತ್ರ ಹೊರಡಿಸಿ ಮೌನವಾಗಿದ್ದರೆ ಸಾಲದು–

ಶ್ರೀಕೃಷ್ಣನು ಪಾಂಡವರ ಪಕ್ಷಪಾತಿಯಾಗಿದ್ದಕಾರಣ ಪಾಂಡವರ ನೀತಿ ಹೆಚ್ಚು ವಿಮರ್ಶೆಗೆ ಬಂತು. ಧರ್ಮವೂ ಅವರ ಕಡೆ ಉಳಿಯಿತು— ಗಾಂಧೀಜಿ ಕಾಂಗ್ರೆಸಿನ ಪಕ್ಷವಾದ್ದರಿಂದ—ಈ ಪಕ್ಷದ ನೀತಿಯು ವಿಮರ್ಶೆಗೆ ಬರುವುದು ಸ್ವಾಭಾವಿಕ. ಪಾಂಡವರಂತೆ ಧರ್ಮವನ್ನೂ ಉಳಿಸಿಕೊಳ್ಳಲು ಕಾಂಗ್ರೆಸ್ಸೂ ಯತ್ನಿಸಬೇಕು.

ಶಿಸ್ತಿಲ್ಲದೆ ರಾಷ್ಟ್ರವುಂಟೆ?

(೪ನೇ ಪುಟದಿಂದ)

ರಿ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಚಳುವಳಿಗಳಿಗೂ ಅಸಹಕಾರಕ್ಕೂ ದೊರೆತ ಮನ್ನಣೆಯೇ ಇಂದಿನ ಅಶಿಸ್ತಿಗೆ ಹೇತುವೆಂದು ಕೆಲವರ ವಾದ. ಹಾಗಲ್ಲ, ಎಲ್ಲ ರಾಷ್ಟ್ರಗಳಲ್ಲಿಯೂ ಶಿಸ್ತು ಸಡಿಲವಾಗುತ್ತಿದೆ ಎಂದು ಸಮಾಧಾನಪಡಿಸುವವರೂ ಇದ್ದಾರೆ.

ಅದೇನೇ ಇರಲಿ, ನಮ್ಮ ದೇಶದ ಇತ್ತೀಚಿನ ಕೆಲವು ವಿದ್ಯಮಾನಗಳು ಗಾಬರಿ ಹುಟ್ಟಿಸುವಂತಿವೆ. ಇನ್ನೂ ಇತ್ತೀಚೆಗೆ ಸ್ವತಂತ್ರವಾದ ಹಾಗೂ ಪ್ರಜಾಪ್ರಭುತ್ವ ಪದ್ಧತಿಯನ್ನು ಅನುಸರಿಸುವ ಈ ರಾಷ್ಟ್ರದಲ್ಲಿ ನಾನಾ ಬಗೆಯ ಚಳುವಳಿಗಳು ಕಂಡುಬರುತ್ತಿರುವುದು ಸಹಜವೇ. ಇಲ್ಲಿ ಯಾವುದು ಸರಿ, ಯಾವುದು ತಪ್ಪು, ಎಂದು ತೂಗಿನೋಡುವ ಅಗತ್ಯವಿಲ್ಲ. ಮುಖ್ಯವಾಗಿ ಯಾರು ಶಿಸ್ತಿನಲ್ಲಿರಬೇಕಾದವರೋ ಅಂಥವರು ಈ ಚಳುವಳಿಗಳಲ್ಲಿ ಮುಖ್ಯ ಪಾತ್ರ ವಹಿಸತೊಡಗಿದರೆ, ದೀರ್ಘಕಾಲ ತಮ್ಮ ಮುಖ್ಯ ಕರ್ತವ್ಯವನ್ನು ಮರೆಯುವಂತಾದರೆ ಈ ನಾಡಿನ ಭವಿಷ್ಯ ಹೇಗೆ ರೂಪುಗೊಂಡೀತೆಂದು ಊಹಿಸುವಂತಿಲ್ಲ.

ತಾತ್ಕಾಲಿಕವಾಗಿಯಾದರೂ ಶಿಸ್ತು ಇರಬೇಕಾದಲ್ಲಿ ಅಶಿಸ್ತು ಮೆರೆದರೆ ಎಂಥ ಅಪಾಯವಿದೆ ಎಂಬುದನ್ನು ಲಿಂಕನ್ ತನ್ನ ದಳಪತಿಗೆ ಒತ್ತಿ ಹೇಳುತ್ತಾನೆ. ಮಾತ್ರವಲ್ಲದೆ ಅವಿಧೇಯತೆಯನ್ನು ಪ್ರೇರೇಪಿಸಿದವರೇ ಕೊನೆಗೆ ಅದನ್ನು ಎದುರಿಸಬೇಕಾಗುತ್ತದೆಂಬುದನ್ನು ಮನಗಾಣಿಸುತ್ತಾನೆ. ಚಳುವಳಿಗಳಲ್ಲಿ ಗುರಿ ಹಾಗೂ ಅದನ್ನು ತಲಪುವ ಸಾಧನಗಳ ಕುರಿತು ವಿಪರೀತ ಗಲಿಬಿಲಿಯಿರುತ್ತದೆಂಬುದನ್ನೂ ಬಲ್ಲೆವು ಹೀಗಿರುವಾಗ ಸಣ್ಣಪುಟ್ಟವೇ ಆದರೂ ಚಳುವಳಿಗಳು ದೇಶದಲ್ಲಿ ಸಾರ್ವತ್ರಿಕವಾಗಿ ವ್ಯಾಪಿಸಿದರೆ, ಶಿಸ್ತಿನಲ್ಲಿರಬೇಕಾದವರು ಅವುಗಳಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸುವಂತಾದರೆ ಕೊನೆ ಮೊದಲಿಲ್ಲದ ಈ ಶಿಸ್ತು ಭಂಗದ ವಾತಾವರಣ ನಮ್ಮನ್ನೆತ್ತ ನಡೆಸೀತೆಂದು ಹೇಳುವಂತಿಲ್ಲ.

ಮನೋರಂಜಕ ವಿಧ-ವಿಧದ ಬಟ್ಟೆಗಳಿಗೆ—

ಗುಂಡು ನಾಯಕ್ಸ್

ಫೇಶನ್ ಎಂಪೋರಿಯಮ್

ತೆಂಕಪೇಟೆ --- ಉಡುಪಿ

ಹೊಸ ಅಂಗಡಿ! ನವನವೀನ ಉಡುಗೆ ತೊಡುಗೆಗಳು!!

ಎಲ್ಲ ಪ್ರಸಿದ್ಧ ಪಟ್ಟಣಗಳ ಪ್ರಖ್ಯಾತ ಬಟ್ಟೆಬರೆಗಳು ದೊರೆಯುತ್ತವೆ.

ಬೆಲೆ ಬಹಳ ಕಡಿಮೆ.

ಮದುವೆ ಜರತಾರಿ ಸೀರೆಗಳಿಗೆ ವಿಶೇಷ ರಿಯಾಯಿತಿ.

ಅತ್ಯಾಧುನಿಕ ಕಥಾನ್ ಮತ್ತು ನೈಲೋನ್ ಸೀರೆಗಳೂ ದೊರೆಯುತ್ತವೆ.

ದಯವಮಾಡಿ ಒಮ್ಮೆ ಸಂದರ್ಶಿಸಿರಿ:—

ಗುಂಡು ನಾಯಕ್ಸ್ ಫೇಶನ್ ಎಂಪೋರಿಯಮ್

WE ARE

The Manufacturers, Specialists & Dealers in Wholesale and Retail, of all varieties of

DOMESTIC UTENSILS

of Up-to-date pattern, as well as

POOJA ARTICLES

at moderate Prices.

For Illustrated Catalogue of Pooja Articles write to:—

Airody Radhakrishna Pai,

Dealers in Aluminium, Stainless Steel, Copper, Brass, Bronze & Silverware.

CAR STREET, **UDIPI**, (S. Kanara.)

ಸ್ವಾತಂತ್ರ್ಯದಿನ

೧

ಸ್ವಾತಂತ್ರ್ಯದುಸಿರ ಭಾರತದಿ ಸೂಸಿ ನೀ ಬಂದುದಿಲ್ಲವೇನು?
ಭರತಜರಿಗಂದು ಹಿರಿಯೊಸಗೆ ತಂದು ನೀ ನಿಂದುದಿಲ್ಲವೇನು ?
ಕರ್ತವ್ಯನಿರತನಾಗಿರುತ ಸತತ ವರುವರುಷ ಬರುವ ನೀನು
ಹೊಸತನ್ನೆ ತೀಡಿ, ಹೊಸತನ್ನೆ ಊಡಿ, ಮುನ್ನಡೆಸುದಿಲ್ಲವೇನು?

೨

ಭಾರತಕೆ ನವ್ಯ ಚಾರಿತ್ರ್ಯವನ್ನೆ ನೀ ಹೊತ್ತು ತಂದೆಯಲ್ಲಾ,
ಭಾರತಕೆ ಭಾಗ್ಯದಾ ದಿವ್ಯ ಬಾಗಿಲನ ತೆರೆದು ನಿಂದೆಯಲ್ಲಾ;
ನಮ್ಮ ನಾಡಿನಲಿ ಹಾಲು–ಜೇನು–ಗೊಳೆ ಹರಿಯಲೆಂದೆ ಎಲ್ಲಾ,
ವರುವರುಷಕೊಮ್ಮೆ ನೀ ಬರುವಿಯಲ್ಲಾ, ತಾನದುವೆ ಚೆಂದವೆಲ್ಲಾ.

೩

ಸತ್ಯ ಸೌಂದರ್ಯ ಒಂದೆ ಒಂದೆಂಬ ತತ್ವವನ್ನು ನೆಮ್ಮಿ,
ವಿಶ್ವರಂಗದಲಿ ಮನುಜನಂಗದಲಿ ಸತ್ಯ ನಡತೆ ಹೊಮ್ಮಿ,
ಮಾನವನ ಬಾಳು ಮಂಗಳದಿ ಸಾಗಿ, ನಾವೀನ್ಯವನ್ನು ಚಿಮ್ಮಿ,
ಸೊಗಸು— ಸೌಭಾಗ್ಯ ಸೂಸಲೆಂದಿಗೂ ನಾಡಿನಲ್ಲಿ ಒಮ್ಮೆ.

— ಎಸ್. ಎಸ್. ಬಸುಪಟ್ಟದ
ಗುಳೇದ ಗುಡ್ಡ.

ಗುಡಿಯೇರಿತು!

— ೧ —

ಗುಡಿಯೇರಿತು ಬಾನಗಲಕೆ
ಹಾರಿತು!
ಚೈತನ್ಯದ ತೂರಿ ರಿಂಗಣ
ಗುಣಿಯಿತು!
ಜಯಹೇ ಭಾರತ! ನಾದವು
ನಲಿಯಿತು!
ಸ್ವಾತಂತ್ರ್ಯದ ಸಂದೇಶವ—
ನೊರೆಯಿತು!
ಕೋಟಿ ಕೋಟಿ ಕಲಕಂಠದ
ಶುಭದನಿ
ಮೇಘ ಮಂಡಳದ ಅಟ್ಟಳೆ
ತಟ್ಟಿತು!
ದೇಶದ ರಕ್ಷಣೆಗೊಡ್ಡಿದ
ವೀರರ
ಬಲಿದಾನದ ವರದಾನವು
ಸಂದಿತು!
ನಿರಂತರ ಸಮರದ ಸಂಭ್ರಮ
ಸಂಪದ
ಇತಿಹಾಸವ ರೋಮಾಂಚಿತ
ಗೊಳಿಸಿತು!
ರಕುತದೋಕುಳಿಗೆ ಒಲಿಯು—
ದಿದ್ದ ಫಲ
ಶಾಂತಿ ಅಹಿಂಸೆಗೆ ಸಾಕ್ಷಾ—
ತ್ಕರಿಸಿತು!
ಧ್ಯೇಯದ ಗೇಯವ ರಾಷ್ಟ್ರವು
ಹಾಡಿತು!
ಭಕುತಿ ಭಾವ ಬಾವುಟ
ಸಂಚಲಿಸಿತು!

— ೨ —

ಖಡ್ಗ ಢಾಲು ಮುದ್ಗರಗಳ
ಯೋಜನೆ
ನೆಲದ ಹದದ ಪ್ರಯೋಜ—
ನರಾಯಿತು!
ರಣಯಜ್ಞಕೆ ಸಲ್ಲದು ಅಣು
ಕಾರ್ಯದ ಭಾರ
ದೇಶದ ಪ್ರಗತಿಯ ಸಾಧ—
ನೆಗಾಯಿತು!
ಯುದ್ಧ! ಶುದ್ಧ ಮೂಢಾತ್ಮರ
ಪಂಥವು!
ಶಾಂತಿಮಂತ್ರ ಸಂಜೀವನ
ವೆಂದಿತು!
ಸ್ವಾತಂತ್ರ್ಯದ ಫಲ ಅನಾ—
ಮಾನ್ಯಬಲ!
ನಾಡಿನ ನಾಡಿಗೆ ಚೇತನ
ವಿತ್ತಿತು.
ನೂತನ ಸ್ಫೂರ್ತಿಯ ನವೀ—
ನ ಜೀವನ
ಚಿರ ಶಾಂತಿಯ ನವ ನಿಲುವೆ—
ಯ ತಳೆಯಿತು!

ಕೆ. ವಾಸುದೇವಾಚಾರ್ಯ,
ವಿದ್ವಾನ್.

SPECTACLES TO SUIT
ALL SIGHTS
AND TASTES
at moderate rates

Enquire at:

M/S. Y. RAMA RAO & CO.,
OPHTHALMIC OPTICIANS,
MANGALORE -1.

39 ವರುಷಗಳ
ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ ಪಾಂಗಾಳ ನಾಯಕ್ ಬೇಂಕ್ ಲಿ.,

ಪ್ರಧಾನ ಕಾರ್ಯಾಲಯ:
ಉಡುಪಿ, ದ.ಕನ್ನಡ.

ನಮ್ಮ **3** ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣೆ ಮಾಡಿರಿ. ಬಡ್ಡಿ ಸೇಕಡಾ **5**ರಂತೆ. ರೂ. **87** ಮೂರು ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. **100**ನ್ನು ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು. ಬಡ್ಡಿ ಸೇಕಡಾ 4¾ರ ವರೆಗೆ. ದೊಡ್ಡ ಠೇವಣೆಗಳ ಮೇಲೆ ಹೆಚ್ಚಿನ ಬಡ್ಡಿ.

ಶಾಖೆಗಳು:—ಮಂಗಳೂರು—ಬೆಂಗಳೂರು—ಬೇಲೂರು—ಶಿವಮೊಗ್ಗ—ಕಾಸರಗೋಡು—ಕುಣಿಗಲ್ ಇತ್ಯಾದಿ.

ಸ್ಥಾಪನೆ: **1920**.

THE MYSORE SUGAR COMPANY, LTD.,

Head Office:
SREE JAYACHAMARAJA WADIYAR ROAD,
BANGALORE-2.

Factory and Distillery
MANDYA (Mysore State)

Manufacturers of
PURE WHITE CRYSTAL SUGAR

Other Products include
Delicious Golden Syrup and wide range of Alcohols— Absolute, Rectified, denature and potable.

ನಮ್ಮ ದೇಶದ 13ನೆಯ ಸ್ವಾತಂತ್ರ್ಯ ಮಹೋತ್ಸವದಂದು

ಪ್ರತಿಯೊಬ್ಬ ನಾಗರಿಕನೂ, ಪ್ರತಿಯೊಂದು ಸಂಘ-ಸಂಸ್ಥೆಯೂ
ದೇಶಕ್ಕಾಗಿ ಸಲ್ಲಿಸಿದ ಸೇವೆಯನ್ನು ಸಿಂಹಾವಲೋಕಿಸುವುದಲ್ಲದೆ,
ಇನ್ನು ಮುಂದಕ್ಕೂ ಹೆಚ್ಚಿನ ಸೇವೆ ಸಲ್ಲಿಸುವ ಪ್ರತಿಜ್ಞೆಯನ್ನು ತೊಡಬೇಕಾದುದು ಅತ್ಯವಶ್ಯ.

ಅಂತೆಯೇ,

"ಕೋರ್ಪೋರೇಶನ್" ಬೇಂಕೂ ತಾನು ದೇಶಕ್ಕಾಗಿ ಸಲ್ಲಿಸಿದ ಈ ಕೆಳಗಣ ಸೇವೆಗಳನ್ನು—
— ಈ ಶುಭಸಂದರ್ಭದಲ್ಲಿ—ನೆನಪಿಗೆ ತಂದುಕೊಳ್ಳುತ್ತದೆ:

- ಜನರಲ್ಲಿ ಆರ್ಥಿಕ ಉಳಿತಾಯ ಜಾಗೃತಿಯನ್ನುಂಟುಮಾಡಿ, ಆ ಮೂಲಕ ಕೂಡಿಸಿದ ಹಣದಿಂದ ದೇಶದ ಅಭಿವೃದ್ಧಿ ಯೋಜನೆಗಳಿಗೆಲ್ಲಾ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದೆ.
- ಖಾಸಗಿ ಇಲ್ಲವೆ ಸಾರ್ವಜನಿಕ ಕ್ಷೇತ್ರಗಳಲ್ಲಿ ಬೆಳೆಯುತ್ತಿರುವ ದೇಶದ ವ್ಯಾಪಾರ, ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಬಹುವಾಗಿ ಆರ್ಥಿಕ ನೆರವು ನೀಡಿದೆ.
- ಹಲವಾರು ಯುವಕರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟು, ದೇಶದ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವ ಕಾರ್ಯದಲ್ಲಿ ತನ್ನ ಕೈಲಾದಷ್ಟು ದುಡಿದಿದೆ.

ಇನ್ನು ಮುಂದಕ್ಕೂ

ಇದು ದೇಶದ ಉತ್ತರೋತ್ತರ ಶ್ರೇಯೋಭಿವೃದ್ಧಿಗಾಗಿ ಕೂಡಿದಷ್ಟು ಸೇವೆ ಸಲ್ಲಿಸುವ
ಪ್ರತಿಜ್ಞೆಯನ್ನು—ಈ ಸಂದರ್ಭದಲ್ಲಿ—ತೊಡುತ್ತಿದೆ!

ದಿ. ಕೆನರಾ ಬೇಂಕಿಂಗ್ ಕೋರ್ಪೋರೇಶನ್ ಲಿಮಿಟೆಡ್

(ರಾಷ್ಟ್ರಸೇವೆಯಲ್ಲಿ ಇದೀಗ ನಡೆಯುತ್ತಿರುವುದು ಈ ಬೇಂಕಿನ 54ನೆಯ ವರುಷ!)

ಸರ್ವರಿಗೂ ಸ್ವಾತಂತ್ರ್ಯದಿನದ ಶುಭಾಶಯಗಳು.

ಪುಣ್ಯಸ್ಥಳವೆಂದೂ ವಿದ್ಯಾಕ್ಷೇತ್ರವೆಂದೂ
ಪ್ರಖ್ಯಾತವಾಗಿದೆ—ಉಡುಪಿ!

ಉಡುಪಿಯಲ್ಲಿ ಸಕಲ ಸೌಕರ್ಯಗಳಿಂದೊಡಗೂಡಿ
ಅತ್ಯುತ್ಕೃಷ್ಟ ವಸತಿ ಗೃಹವೆಂದು ಪ್ರಸಿದ್ಧವಾಗಿದೆ—

ರೋಯಲ್ ಮಹಾಲ್!

ಹೆಚ್ಚಿನ ಕೋಣೆಗಳು ಸೇರಿಸಲ್ಪಟ್ಟು ವಿಸ್ತರಿಸಲ್ಪಟ್ಟ

ಪ್ರವಾಸಿಕರ ಆದರ್ಶ ನಿವಾಸ

- ಸ್ಥಾನ ನಗರದ ಕೇಂದ್ರ
- ವಾತಾವರಣ ಪ್ರಶಾಂತ

ರೋಯಲ್ ಮಹಾಲ್

ಉಡುಪಿ.

ಮ್ಯಾನೇಜರು:- ಕೆ. ವೆಂಕಟ್ರಮಣ ಭಟ್.

ಪುತ್ತೂರು ಡಿ. ಮುಂ. ಕೋರ್ಟಿನಲ್ಲಿ
O.S. 170/58 in R.E.P. 280/1959
ಶಿವಣ್ಣ ಗೌಡ —ಅರ್ಜಿದಾರ.
ಮತ್ತು
ಸಂಕಪ್ಪ ರೈ —ಯೆದ್ರಿ.

ಸಂಕಪ್ಪ ರೈ, ಬಿಳಿಂಜ ಕರಿಯಪ್ಪ ರೈಗಳ ಮಗ; ಮ, ದೇಲಂಪಾಡಿ ಸಂಕಯ್ಯ ಬಂಟರ ಅಳಿಯ ಪುತ್ತೂರು ತಾಲೂಕು ಕೊಳ್ತಿಗೆ ಗ್ರಾಮದ್ದು ಉರ್ಫ ಪೋಸ್ಟು ಪೆರ್ಲಂಪಾಡಿ(ದ. ಕ.) ಯದ್ರಿ (ಪ್ರತಿವಾದಿ) ಯೆದ್ರಿಗೆ ಕೋರ್ಟು ಸಮ್ಮಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ವಾದಿಯು ಈ ಕೋರ್ಟು O S. 170/58ನೇ ದಾವೆಯಲ್ಲಿ ಪಡದ ಡಿಕ್ರಿಗಳ ಪ್ರಕಾರ ಬಹಾ ಲ್ಯವೇಜು ವ್ಸಲು ಬಗ್ಗೆ ದಾಖಲು ಮಾಡಿದ ಈ ಕೋರ್ಟು R. E. P. 280/59ನೇ ಅರ್ಜಿಯು ನಿಂಮ ಹಾಜರಾತಿ ಬಗ್ಗೆ ತಾ 21—6—1959ಕ್ಕೆ ವ್ಯಾದೆ ಇರುತ್ತದೆ. ಆ ದಿನ ಬೆಳಿಗ್ಗೆ 11 ಗಂಟೆಗೆ ನೀವು ಹಾಜರಾಗದಿದ್ದಲ್ಲಿ ಅದನ್ನು ನಿಂಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು.

(By Court order).

K. R. Chamayya,
Advocate for Petitioner.

ಪುತ್ತೂರು, 23—7—59.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಕುಮಾರಿ ಚಿಕ್ಕಿಗಳು

Govt. Regd.

ಹೆಂಗಸರ ಹಿತಮಿತನಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಪ್ರಶಸ್ತ.

ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಅಂದವಾದ ಮನೆಗಳಿಗೆ!

ಆಕರ್ಷಕವಾದ ಆಫೀಸುಗಳಿಗೆ!!

ಸುಸಜ್ಜಿತವಾದ ಆಸ್ಪತ್ರೆಗಳಿಗೆ

ಮೆ। ಖೀರಾ ಸ್ಟೀಲ್ ವರ್ಕ್ಸ್ ಪ್ರೈವೇಟ್ ಲಿಮಿಟೆಡ್, ಬೊಂಬಾಯಿ

ಇವರ ಅತ್ಯಾಧುನಿಕ ರೀತಿಯ ಕಾರ್ಖಾನೆಯಲ್ಲಿ ತಯಾರಿಸಲ್ಪಟ್ಟ

"ಮಿಡ್ಗೆಟ್", "ಪ್ರೊಪ್ಯುಲರ್", "ಯುಟಿಲಿಟೀ" ಎಂಬ ಮೂರು ನಮೂನೆಯ ಸಾದಾ ಮತ್ತು ಒಳಗಡೆ ಲೋಕರ್ ಕನ್ನಡಿಗಳಿಂದೊಡಗೂಡಿದ ಕಪಾಟುಗಳು, ಅಗಲವಾದ "ವಾರ್ಡ್ರೋಬುಗಳು", ವಿವಿಧ ರೀತಿಯ "ರೇಕ್"ಗಳು, ತರತರದ ಊಟದ ಮತ್ತು ಬರೆಯುವ ಟೇಬಲು ಮತ್ತು ಕುರ್ಚಿಗಳು, ಹೋಟೆಲುಗಳಿಗತ್ಯುಪಯುಕ್ತವಾದ "ಸ್ಟೈನ್‌ಲೆಸ್ ಸ್ಟೀಲ್"ನ ಟೇಬಲ್‌ಗಳು, ಸೋಫಾ ಸೆಟ್ಟು, ಡ್ಯಾನಿಂಗ್ ಸೆಟ್ಟುಗಳು ಇತ್ಯಾದಿ ಇತ್ಯಾದಿ.

ಝುನಕ್ ಮೆನ್ಯುಫೆಕ್ಚರಿಂಗ್ ಕಂಪೆನಿ, ಬೊಂಬಾಯಿ

ಇವರಿಂದ ತಯಾರಿಸಲ್ಪಟ್ಟ

ಡಾಕ್ಟರುಗಳಿಗೆ, ನರ್ಸಿಂಗ್ ಹೋಂಗಳಿಗೆ, ಆಸ್ಪತ್ರೆಗಳಿಗೆ ಅತ್ಯುಪಯುಕ್ತವಾದ ಎಲ್ಲಾ ತರದ ಸ್ಟೀಲ್ ಫರ್ನಿಚರುಗಳು— ನಮ್ಮ ವೈಶಿಷ್ಟ್ಯ.

ಹೆಚ್ಚಿನ ವಿವರಗಳಿಗೆ:—

ಶಾಸ್ತ್ರಿ ಎಂಡ್ ಕಂಪೆನಿ

ಹಂಪನಕಟ್ಟೆ - - - ಮಂಗಳೂರು-1.

ವೈದ್ಯರತ್ನಂ ಪಿ. ಯಸ್. ವಾರಿಯಾರರ

ಆರ್ಯ ವೈದ್ಯ ಶಾಲಾ

(ಸ್ಥಾಪನೆ: 1902)

ಕೊಟ್ಟಕ್ಕಲ್ (ಕೇರಳ ರಾಜ್ಯ)

ಫೋನ್ ನಂ. 44 (ಟಿರೂರು)

ಶಾಖೆಗಳು: ಕೊಝಿಕೋಡ್ (ಫೋನ್ ನಂ. 155); ಪಾಲ್ಘಾಟ್ (ಫೋನ್ ನಂ. 104) ವೆಟ್ಟಿಲಕುಲಂ ರಸ್ತೆಯಲ್ಲಿಯ ಮಾರಾಟ ಡಿಪೋ ಸಹಿತ; ಟಿರೂರು (ಫೋನ್ ನಂ. 31); ಎರ್ನಾಕುಲಂ (ಫೋನ್ ನಂ. 674) ಮತ್ತು ಈರೋಡು.

ದಕ್ಷರ ಮೇಲ್ವಿಚಾರಣೆಯಲ್ಲಿ ವೈಜ್ಞಾನಿಕ ರೀತಿಯಲ್ಲಿ ತಯಾರಿಸಲ್ಪಟ್ಟ 600ಕ್ಕೂ ಮಿಕ್ಕಿದ ಪ್ರಖ್ಯಾತ ಆಯುರ್ವೇದೀಯ ಔಷಧಗಳು ಕೊಟ್ಟಕಲ್ ಪ್ರಧಾನ ಕಾರ್ಯಾಲಯದಲ್ಲಿಯೂ, ಶಾಖೆಗಳಲ್ಲಿಯೂ ದೊರೆಯುತ್ತವೆ. ಸ್ವತಃ ವಿಚಾರಿಸಿದರೆ ಯಾ, ಪತ್ರವ್ಯವಹಾರ ನಡೆಸಿದರೆ ದಕ್ಷ ವೈದ್ಯಕೀಯ ಸಲಹೆಗಳನ್ನು ಕೊಡಲಾಗುವುದು.

ಪಿಝಿಚಿಲ್, ನವರಕಿಝಿ ಮುಂತಾದ ವಿಶಿಷ್ಟ ಚಿಕಿತ್ಸೆಗಳು

ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮ್, ಕೊಟ್ಟಕಲ್

ಇಲ್ಲಿ ನಮ್ಮ ಪ್ರಧಾನ ವೈದ್ಯರಿಂದ ನಡೆಸಲ್ಪಡುತ್ತವೆ.

Regd. No. M. 3619
LICENCE NO. 31
Licensed to Post without Prepayment

15th
August
1959

Greetings and Good Wishes
to all

We are proud of the tremendous progress made by our country during the Twelve Years of Independence and on this happy occasion We Pledge Anew For Better & Quicker Service.

(Estd. 1935)

Wholesale Department
MISSION ST..
MANGALORE-1.

Purchasing
Office
BOMBAY.

Retail Department
HAMPANKATTA,
MANGALORE-1.

QUALITY IN

MEANS MANY THINGS.....

- BRILLIANCE
- DEPTH OF COLOUR
- COVERING POWER
- DRYING CAPACITY
- WORKABILITY
- FASTNESS TO LIGHT ETC.

the emphasis is on QUALITY
used and proved for 33 years

• • •

Factories at
HOWRAH – BOMBAY – MADRAS

Edited. Printed & Published by K. H. Shetty at the Navayuga Press Udipi, S. India.

ನವಯುಗ

ವಾ. ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ

ವರುಷ ೩೮. ವಾರ ೪೯. 20-8-1959 Vol. 38. No. 49.

ವಿಚಾರ ಮಥನ

ಸಹಕಾರಿ ಬೇಸಾಯದ ಮೂಲೋದ್ದೇಶವೇನು?

ಮಹತ್ವಪೂರ್ಣ ವಿಷಯದಲ್ಲಿ ದ್ವಿಮುಖದರ್ಶನ

* *

ಚರ್ಚೆಯ ವಿಷಯ

ಕಾಂಗ್ರೆಸಿನ ನಾಗಪುರ ಅಧಿವೇಶನದಲ್ಲಿ ಸ್ವೀಕೃತವಾದ ಸಹಕಾರಿ ವ್ಯವಸಾಯ ಸಂಬಂಧದ ಗೊತ್ತುವಳಿಯು ಇದೀಗ ಚರ್ಚೆಯ ಮುಖ್ಯ ವಿಷಯವಾಗಿದೆ. ದೇಶದ ಅನೇಕ ಪ್ರಮುಖ ವ್ಯಕ್ತಿಗಳಿಂದ ಇದು ಕಟು ಟೀಕೆಗೆ ಗುರಿಯಾಗಿದೆ ಶ್ರೀ ನೆಹರೂರವರು ಸಹಕಾರಿ ವ್ಯವಸಾಯವು ಕೃಷಿಕರ ಕಲ್ಯಾಣ ಮತ್ತು ಉತ್ಪಾದನೆಯಲ್ಲಿ ವೃದ್ಧಿ ಮಾಡಲು ಏಕಮೇವ ಉಪಾಯವೆಂದು ಹೇಳಿದರೆ, ಇನ್ನೊಂದೆಡೆಯಲ್ಲಿ ಅನುಭವ ವಯೋವೃದ್ಧ ರಾಜನೇತಾರರಾದ ಶ್ರೀ ರಾಜಗೋಪಾಲಾಚಾರಿಯವರು ಸಹಕಾರಿ ವ್ಯವಸಾಯದಿಂದ ಆಹಾರೋತ್ಪಾದನೆಯು ಕಡಿಮೆಯಾಗುವುದಲ್ಲದೇ ವ್ಯಕ್ತಿ ಮತ್ತು ಕುಟುಂಬದ ಸ್ವಾತಂತ್ರ್ಯವೂ ನಷ್ಟವಾಗುವುದೆಂದು ಅಭಿಪ್ರಾಯಪಡುತ್ತಾರೆ.

ದೇಶದ ಬಹು ದೊಡ್ಡ ನಾಯಕರಲ್ಲಿಯೇ ಈ ಬಗ್ಗೆ ತೋರಿಬಂದ ಭಿನ್ನಾಭಿಪ್ರಾಯದ ದೆಸೆಯಿಂದ, ಸಾಮಾನ್ಯ ಜನತೆಗೆ ಈ ಮುತ್ಸದ್ದಿಗಳಲ್ಲಿ ಯಾರ ಹೇಳಿಕೆ ಸ್ವೀಕಾರಾರ್ಹವೆಂದು ತಿಳಿಯುವುದೇ ಕಠಿನವಾಗಿ ಪರಿಣಮಿಸಿದೆ. ಇಬ್ಬರು ಪರಸ್ಪರ ವಿರುದ್ಧವಾದ ಅಭಿಪ್ರಾಯಗಳನ್ನು ಪ್ರಕಟಿಸುತ್ತಿರುವುದೇ ಈ ಗೊಂದಲಕ್ಕೆ ಹೇತುವೆಂದೆನಿಸಿದೆ.

ಸಹಕಾರಿ ಕೃಷಿಯ ಗೊತ್ತುವಳಿ

ಮೊದಲು ಸ್ವೀಕೃತ ಸಹಕಾರಿ ವ್ಯವಸಾಯದ ಸ್ವರೂಪವೇನು ಎಂಬುದನ್ನು ತಿಳಿಯುವುದು ಅಗತ್ಯ. ಸಹಕಾರಿ ಕೃಷಿಯ ಬಗ್ಗೆ ಕಾಂಗ್ರೆಸ್ಸಿನ ದೃಷ್ಟಿಕೋಣವೇನು ಎಂಬುದನ್ನೂ ತಿಳಿಯುವುದು ಸಮಂಜಸವಾಗಿದೆ.

ಕಾಂಗ್ರೆಸ್‌ನ ಮಾಜಿ ಕಾರ್ಯದರ್ಶಿ ಮತ್ತೀಗ ಯೋಜನಾ ಆಯೋಗದ ಸದಸ್ಯರಾಗಿರುವ ಶ್ರೀ ಶ್ರೀಮನ್ನಾರಾಯಣರ ಶಬ್ದಗಳಲ್ಲಿ, "ಸಾಮಾಜಿಕ, ನೈತಿಕ ಮತ್ತು ಆರ್ಥಿಕ ಕ್ರಾಂತಿಯನ್ನು ಜೀವನದ ಸಮೀಪ ತರಲೆತ್ನಿಸುವುದು ಮತ್ತು ಸಮಾಜವಾದೀ ಸಮಾಜಸ್ಥಾಪನೆಯ ಮಾರ್ಗವನ್ನು ಸುಲಭಗೊಳಿಸುವುದು" ಇದರ ಉದ್ದೇಶವಾಗಿದೆ.

ಸಹಕಾರೀ ಕೃಷಿ ಪದ್ಧತಿ

"ಸಹಕಾರ ಮತ್ತು ಸಹಕಾರೀ ಕೃಷಿ ಪದ್ಧತಿಯಿಂದ ದೇಶದಲ್ಲಿ ಸಮಾಜವಾದದ ಬುನಾದಿಯು ಗಟ್ಟಿಯಾಗುವುದು. ಸೂಚಿತವಾದ ಸಹಕಾರೀ ಕೃಷಿಗೆ ಮೊದಲು ಸೇವಾಸಹಕಾರೀ ಸಂಸ್ಥೆಗಳು ಸ್ಥಾಪನೆಗೊಳ್ಳುವುವು. ಮತ್ತು ಕ್ರಮೇಣ ಸಂಯುಕ್ತ ಕೃಷಿಯು ಸ್ಥಾಪನೆಯಾಗುವುದು. ಮೊದಲು ರೈತರ ಸಣ್ಣ ಸಣ್ಣ ಸೇವಾಸಹಕಾರೀ ಸಂಸ್ಥೆಗಳನ್ನು ಕಟ್ಟಲಾಗುವುದು; ರೈತನಿಗೆ ತನ್ನ ಭೂಮಿಯ ಮೇಲಿನ ಒಡೆತನ ಹಾಗೆಯೇ ಉಳಿಯುವುದು" ಎಂದು ಪ್ರಧಾನಿ ನೆಹರೂ ಹೇಳುತ್ತಾರೆ.

ಬಂಡವಾಳಶಾಹಿ ಮತ್ತು ಸಾಮ್ಯವಾದ ವ್ಯವಸ್ಥೆಗಳಿಂದ ಭಿನ್ನವಾಗಿದ್ದು ಅವುಗಳ ನಡುವಿನ ಮಾರ್ಗವೊಂದನ್ನು ಇಲ್ಲಿ ಹೇಳಲಾಗಿದೆ. ಸಹಕಾರಿ ಕೃಷಿ ಪದ್ಧತಿಯನ್ನು ವ್ಯವಹರಿಸಲು ಎರಡು ಮುಖ್ಯ ಕಾರಣಗಳನ್ನು ತಿಳಿಸಲಾಗಿದೆ— ಆಹಾರೋತ್ಪಾದನೆಯನ್ನು ಅಧಿಕಗೊಳಿಸುವುದು ಮತ್ತು ದೇಶದ ಬಹುಸಂಖ್ಯಾಕ ಕೃಷಿಕರ ಉದ್ಧಾರ ಮಾಡುವುದು.

ಸಾಮೂಹಿಕ ವ್ಯವಸಾಯ

ರಶ್ಯದ ಸಾಮೂಹಿಕ ವ್ಯವಸಾಯ ಮತ್ತು ಈಗ ಪ್ರಸ್ತಾವಿತವಾದ ಸಹಕಾರೀ ವ್ಯವಸಾಯಗಳ ನಡುವಣ ಅಂತರವೇನು? ಕಳೆದ ಮಾರ್ಚಿಯಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಸಮ್ಮೇಳನವು ದಿಲ್ಲಿಯಲ್ಲಿ ಸಮಾವೇಶಗೊಂಡಾಗ ಶ್ರೀ ಮನ್ನಾರಾಯಣರು ಈ ಎರಡರ ನಡುವಿರುವ ಮುಖ್ಯವಾದ ಮೂರು ಭೇದಗಳನ್ನು ತಿಳಿಸಿದರು. (೧) ಸಹಕಾರೀ ವ್ಯವಸಾಯ ಪದ್ಧತಿಯನ್ನು ಸ್ವೀಕರಿಸುವುದು ರೈತನ ಸ್ವೇಚ್ಛೆಗೆ ಸೇರಿದುದು; ಆದರೆ ರಶ್ಯದಲ್ಲಿದು ಅನಿವಾರ್ಯ. (೨) ಸಹಕಾರಿ ಕೃಷಿಯಲ್ಲಿ ದೈಹಿಕ ಕರ್ಮವೇ ಹೆಚ್ಚು; ಸಾಮೂಹಿಕ ವ್ಯವಸಾಯದಲ್ಲಿ ಯಾಂತ್ರೀಕರಣದಿಂದಾಗಿ ಯಂತ್ರಗಳ ಶಕ್ತಿ ಬೆಳೆಯುವುದು ಮತ್ತು (೩) ಸಹಕಾರಿ ವ್ಯವಸಾಯ ಕ್ಷೇತ್ರವು ಹೆಚ್ಚೆಂದರೆ ೫೦೦ ಎಕ್ರೆಗಳಷ್ಟು ವಿಸ್ತೀರ್ಣವುಳ್ಳದು, ಆದರೆ ಸಾಮೂಹಿಕ ವ್ಯವಸಾಯ ಕ್ಷೇತ್ರದಡಿಯಲ್ಲಿ ಸಾವಿರಾರು ಎಕ್ರೆಗಳಿರಬಹುದು. ಸಣ್ಣ ಕ್ಷೇತ್ರಗಳಿಂದ ಕೃಷಿಕರೊಳಗೆ ನಿಕಟ ಸಂಬಂಧವನ್ನೂ ಸ್ಥಾಪಿಸುವುದೂ ಒಂದು ಉತ್ತಮ ಸೌಲಭ್ಯವಾಗಿದೆ.

ಶ್ರೀ ನೆಹರೂರವರು ಈ ಸಂಬಂಧದಲ್ಲಿ, "ಭಾರತದ ಔದ್ಯೋಗೀಕರಣವು ಅಧಿಕಾಂಶತಃ ಸುವ್ಯವಸ್ಥಿತ ಕೃಷಿ ಅರ್ಥವ್ಯವಸ್ಥೆಯ ಮೇಲೆ ಹೊಂದಿಕೊಂಡಿದೆ ಸುವ್ಯವಸ್ಥಿತ ಕೃಷಿ, ಅರ್ಥ-ವ್ಯವಸ್ಥೆ, ಉತ್ಪಾದನೆ ಮತ್ತು ಕೃಷಿ ಗೋಷ್ಠಿಯಂತಹ ಅನ್ಯ ಸಂಸ್ಥೆಗಳನ್ನು ಅವಲಂಬಿಸಿವೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

ಭೂಮಿಯೊಡೆತನ

ಅಧಿಕಾಧಿಕ ಉತ್ಪಾದನೆಯನ್ನು ಆಧುನಿಕ ವೈಜ್ಞಾನಿಕ ಸಾಧನಗಳ ಉಪಯೋಗ ಬೆಳೆದಂತೆ, ಪಡೆಯುವುದು ಸಾಧ್ಯ....

(೫ನೇ ಪುಟ ನೋಡಿರಿ)

ಇದ್ದಲಿನ ಗಣಿಯೊಳಗಿನ ಕರ್ಮಚಾರಿಯೊಬ್ಬನು ಕಾರ್ಯಮಗ್ನನಾಗಿದ್ದಾನೆ.

ದಿ ವಿಜಯ ಬ್ಯಾಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬ್ಯಾಂಕ್)

ಪ್ರಧಾನ ಕಛೇರಿ:- ಮಂಗಳೂರು—3. ಸ್ಥಾಪನೆ.- 1931

ಕಾಯಂ ಠೇವಣಾತಿ ಬಡ್ಡಿ ದರ

1	ತಿಂಗಳಿಂದ	5	ತಿಂಗಳ ವರೆಗೆ	4¼%
6	,,	12	,,	4½%
13	,,	24	,,	4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ ...

ಕಥಾ ವಿಹಾರ

ಹೆಣ್ಣಿನ ಕರುಳನ್ನು ಗಂಡರಿಯ ಬಲ್ಲನೆ?

ವಿಮಲಾಬಾಯಿಯ ಭಾವೋದ್ರೇಕಕ್ಕೆ ರಾಜಾರಾಯರ ಅಸಡ್ಡೆಯೇ ಕಾರಣವಾಯಿತು.

ಕಾರು ಸರ್ರೆಂದು ಹಾದು ಹೋಯಿತು!

ಅದರೊಂದಿಗೆ ಕೇಳಿಸಿತು, ಆ ಮರಣ ವೇದನೆಯ ಧೀತ್ಕಾರ! ಆ ಎಳೆ ಹಸುಳೆಯ ಕೊರಳಿಂದ ಮೃತ್ಯು ಕೂಗಿದ ಕೂಗು! ವೇಗವಾಗಿ ಬಾಲಕನ ಮೇಲೆ ಸರಿದ ಕಾರು ಸ್ವಲ್ಪ ದೂರಹೋಗಿ ಭರ್ರನೆ ನಿಂತಿತು. ಒಂದೇ ಒಂದು ಬಾರಿ ಕಿರುಚಿದ ಆ ಬಾಲಕನ ಕೊರಳ ಕೂಗಿನೊಂದಿಗೆ ಕಾರಿನ ಸಪ್ಪಳ ಮೇಳಗೊಂಡಾಗ ಸುತ್ತಮುತ್ತಲಿನ ಜನರೆಲ್ಲಾ ಹೌಹಾರಿ ಒಮ್ಮೆಲೇ ಧಾವಿಸಿಬಂದರು. ಏನು ನಡೆದಿತ್ತು ಎಂದು ಯಾರಿಗೂ ಗೊತ್ತಿರಲಿಲ್ಲ. ಹೇಗೆ ನಡೆದೀತೆಂದು ಯಾರೂ ಊಹಿಸಿರಲಿಲ್ಲ. ಆದುದರಿಂದಲೇ ಜನರೆಲ್ಲಾ ಯಂತ್ರ ಮೂರ್ತಿಗಳಂತೆ ಓಡಿಬಂದರು.

ಒಂದೇ ಕೂಗಿಗೆ ಬಾಲಕನ ಆತ್ಮ ಹಾರಿಹೋಗಿತ್ತು. ಎಡ ಕಿಬ್ಬೊಟ್ಟೆಯಿಂದ ಬಲ ಭುಜದ ಮೇಲೆ ಕಾರಿನ ಚಕ್ರ ಸರಿದು ಹೋಗಿತ್ತು. ರಕ್ತದ ಕೋಡಿ ಹರಿದಿತ್ತು. ಎದೆಗೂಡು ನುಚ್ಚುನೂರಾಗಿತ್ತು. ಎಲುಬು, ಮಾಂಸಗಳು ನಜ್ಜುಗುಜ್ಜಾಗಿ ಅವಶೇಷಗಳು ಕಾಂಕ್ರೀಟಿನ ಬೀದಿಗೆ ಅಂಟಿಹೋಗಿದ್ದುವು. ಬಾಯಿಂದ ರಕ್ತ ನೊರೆ ನೊರೆಯಾಗಿ ಬರುತ್ತಿತ್ತು ಇನ್ನೂ! ಶರೀರ ಸ್ತಬ್ಧವಾಗಿತ್ತು. ಆದರೆ ನೋಟಕರ ಕಣ್ಣಿಗೆ ಇನ್ನೂ ಆ ದೇಹ ಹೊರಳಾಡುತ್ತಿರುವಂತೆ, ನರಳುತ್ತಿರುವಂತೆ, ಆಕ್ರಂದಿಸುತ್ತಿರುವಂತೆ ಕಾಣಿಸುತ್ತಿತ್ತು. ಆ ಮೃತ್ಯು ವೇದನೆಯ ಆಕ್ರಂದನ ಇನ್ನೂ ಗುಂಯ್ಗುಡುತಿತ್ತು.

ಎಲ್ಲಾ ಒಂದೇ ಕ್ಷಣದಲ್ಲಿ; ಕಣ್ಣೆವೆ ಚಲಿಸುವ ಹೊತ್ತಿನಲ್ಲಿ! ಜನರೆಲ್ಲಾ ಗುಂಪುಗೂಡಿದರು. ಎಲ್ಲಿಂದಲೋ ಪೋಲಿಸರೂ ಓಡಿಬಂದರು. ಎಲ್ಲವೂ ನಿಮಿಷದೊಳಗೇ ನಡೆಯಿತು.

ಅಷ್ಟರಲ್ಲೇ ಆ ಎಳೆ ಹಸುಳೆಯ ಮೇಲೆ ಸರಿದು ಮುಂದೆ ಹೋಗಿನಿಂತ ಅದೇ ಆ ಅಸಹಾಯಕ ಕಾರಿನಿಂದ ಗಂಡಹೆಂಡಿರಿಬ್ಬರು ಇಳಿದುಬಂದರು.

ರಾಜಾರಾಯರು; ಹಂಚಿನ ಕಾರ್ಖಾನೆಯ ಒಡೆಯರು! ಲಕ್ಷಾಧೀಶರು! ಅವರೊಂದಿಗೆ ಅವರ ಪತ್ನಿಯೂ! ಅಲ್ಲದೆ ಪತ್ನಿ ತುಂಬು ಗರ್ಭಿಣಿ!

ರಾಜಾರಾಯರ ಮುಖದಲ್ಲಿ ದರ್ಪ ಅಸಹನೆ ಹೆಡೆಯಾಡುತ್ತಿತ್ತು. ತನ್ನ ಕಾರಿನೆದುರಷ್ಟ ಹಾದು ಅವಿವೇಕದಿಂದ ಅವಸಾನಗೊಂಡ ಈ ಪ್ರಾಣಿ ಯಾವುದೆಂಬ ಅಚ್ಚರಿಯ ನಿಸ್ಸಾರ ಕಾಣುತ್ತಿತ್ತು.

ಅವರ ಪತ್ನಿ ವಿಮಲಾಬಾಯಿ, ಅವರೂ ಗಂಡನೊಂದಿಗೆ ಇಳಿದುಬಂದರು. ಅವರ ಮುಖವು ದಯೆಯ ಬಿಂಬವಾಗಿತ್ತು. ಏನಾಯಿತೆಂದರಿಯದ ಗಾಬರಿಯಿತ್ತು.

ದರ್ಪದ ಹೆಜ್ಜೆಯನ್ನಿಡುತ್ತಾ ಬಂದರು ರಾಜಾರಾಯರು. ಆದರೆ ಅವರ ಪತ್ನಿ, ಬೆದರಿದ ಹುಲ್ಲೆಯಂತೆ ಅವರ ಹಿಂದಿನಿಂದ ಬರುತ್ತಿದ್ದರು.

ಜನರೆಲ್ಲಾ ಸರಿದು ನಿಂತರು. ಮೃತದೇಹವನ್ನು ಇರುವೆಗಳಂತೆ ಮುತ್ತಿದ್ದರು ಜನರು! ಅವರೆಡೆಯಲ್ಲಿ ಪೋಲೀಸರು!

ವಿಮಲಾಬಾಯಿ ಈ ದೃಶ್ಯವನ್ನು ನೋಡಿ ಸ್ತಂಭಿತರಾದರು. ಆ ಬೀದಿಯಲ್ಲಿ ಜಿನುಗುತ್ತಿದ್ದ ರಕ್ತ, ಮಾಂಸ, ನಜ್ಜುಗುಜ್ಜಾಗಿ ಅಸ್ತವ್ಯಸ್ತವಾಗಿದ್ದ ಮೃತದೇಹ ...ಪಾಪ, ಎಳೆ ಮಗು.... ಯಾವ ತಾಯಿಯ ಮುದ್ದು ಮಗುವೋ ...ನನ್ನ ಹೊಟ್ಟೆಯಲ್ಲಿದ್ದ ಮಗುವಿನಂತೆಯೇ ಅಲ್ಲವೆ?.... ತಾನು ಕುಳಿತ ಕಾರಿನಡಿಯಲ್ಲಿ ಪ್ರಾಣ ಹೋಗುವಂತಾಯಿತಲ್ಲಾ...ರಕ್ತ! ಮಾಂಸ!....ಪಾಪ ಎಳೆ ಬಾಲಕ....

ಸುತ್ತಮುತ್ತಲೂ ಆ ಬಾಲಕನ ಕೂಗು, ಆ ಮರಣ ವೇದನೆಯ ಧೀತ್ಕಾರವೇ ಕೇಳಿಸಿತು ಅವರಿಗೆ! ರಕ್ತದ ಹೊಳೆಯೇ ಕಾಣಿಸಿತು. ಆ ನಜ್ಜುಗುಜ್ಜಾದ ದೇಹವು ಕುಣಿಯುತ್ತಿರುವಂತೆ ಭಾಸವಾಯಿತು. ಆ ಬಾಲಕನ ತಾಯಿ ಎಲ್ಲಿಂದಲೋ ಬೊಬ್ಬಿಟ್ಟು ಓಡಿ ಬರುತ್ತಿರುವಂತೆ ಕಾಣಿಸಿತು.

ವಿಮಲಾಬಾಯಿ ಮೂರ್ಛಿತರಾಗಿ ಬಿದ್ದುಬಿಟ್ಟರು. ಈ ಆಕಸ್ಮಿಕ ಘಟನೆಯೆಡೆಗೆ ಜನಸಂದಣಿಯ ದೃಷ್ಟಿ ಹರಿಯಿತು. "ಪಾಪ, ಈ ದೃಶ್ಯವೇ ಅಷ್ಟು ಕಠೋರವಾಗಿದೆ; ಅಲ್ಲದೆ ಗರ್ಭಿಣಿ ಕೂಡ" ಎಂದುಕೊಂಡರು ಕೆಲವರು.

ರಾಜಾರಾಯರಿಗೆ ಹಾಗೇನೂ ಆಗಿರಲಿಲ್ಲ. 'ಯಾರೋ ಅಜಾಗ್ರತ ತಾಯಿ ಬುದ್ಧಿಯಿಲ್ಲದ ತನ್ನ ಹುಡುಗನನ್ನು ಮಾರ್ಗದ ಮಧ್ಯದಲ್ಲಿ ಬಿಟ್ಟಿದ್ದಾಳೆ' ಎಂದುಕೊಂಡರು.

ಇದೊಂದು ವಿಶೇಷ ವಿಷಯವೆಂದವರೆಣಿಸಲಿಲ್ಲ. ಒಬ್ಬ ಬಾಲಕ ಪ್ರಾಣಕಳಕೊಂಡುದಾಗಲೀ, ಆ ಧೀತ್ಕಾರವಾಗಲೀ ಆ ಬೀಭತ್ಸ ದೃಶ್ಯವಾಗಲೀ ಅಥವಾ ಆ ದುರ್ಭಾಗ್ಯ ಬಾಲಕನ ತಾಯಿಯ ವೇದನಾಪೂರ್ಣ ಮೂರ್ತಿಯಾಗಲೀ ಅವರ ಮನವನ್ನು ಅಲುಗಾಡಿಸಲಿಲ್ಲ. ಸಾಮಾನ್ಯ ಜನ ಜೀವನ, ಅವರ ಮನಸ್ಸು, ಮಾತೃ ಹೃದಯದ ಆಗಾಧತೆಯ ಪರಿಚಯ ಅವರಿಗಿರಲೇ ಇಲ್ಲ.

ವಿಲಾಸ, ದರ್ಪ, ಸಂಪತ್ತು, ವೈಭವವೊಂದೇ ಅವರ ಕಣ್ಣೆದುರು ಕಟ್ಟಿತ್ತು. 'ಇಂತಹ ಸಾವಿರ ಬಾಲಕರ ಮೇಲೆ ಕಾರು ಹರಿದರೂ ಏನಾಯ್ತುದರಲ್ಲಿ?' ಎಂಬ ಭಾವವಿತ್ತೇನೋ?

ಮಧ್ಯಾಹ್ನದ ಹೊತ್ತು, ಶಾಲೆ ಬಿಟ್ಟು ಹೋಗುವಾಗ ಬಾಲಕ ಕಾರಿನಡಿಗೆ ಬಿದ್ದಿದ್ದ. ಇವೆಲ್ಲರಿಗೂ ಗೊತ್ತು.

ಆದರೆ ತನ್ನ ಕಾರ್ಖಾನೆಯ ಆಳು ಗಂಗಮ್ಮನ ಒಂದೇ ಮಗ ಈ ಬಾಲಕನೆಂದು ಆ ಮೇಲೆ ರಾಜಾರಾಯರಿಗೆ ತಿಳಿಯಿತು.

ಸುದ್ದಿ ಕೇಳಿ ಧಾವಿಸಿ ಬಂದಿದ್ದಳು ಗಂಗಮ್ಮ. ಅಷ್ಟರಲ್ಲಿ ಶವವನ್ನು ಹೆಕ್ಕಿ ಆಸ್ಪತ್ರೆಗೆ ಕೊಂಡೊಯ್ದಿದ್ದರು. ಗಂಗಮ್ಮನ ರೋದನ ಧ್ವನಿ ಆಸ್ಪತ್ರೆಯನ್ನು ಅಲುಗಾಡಿಸಿತು. ಗಂಗಮ್ಮ ಎದೆ ಎದೆ ಬಡಕೊಂಡಳು. ತಲೆಯನ್ನು ಗೋಡೆಗೆ ಜಜ್ಜಿದಳು. ತಲೆ ಕೂದಲು ಕಿತ್ತುಕೊಂಡಳು. ದುಃಖದಿಂದ ಬೊಬ್ಬಿರಿದಳು. ಎದೆಯೇ ಒಡೆದು ಹೋಗುವಂತೆ ಅತ್ತಳು.

ಗಂಗಮ್ಮನ ಗಂಡ ಎಂದೋ ಮೃತನಾಗಿದ್ದ. ಒಂದೇ ಒಂದು ಮಗುವನ್ನು ದೇವರು ಕರುಣಿಸಿದ್ದ ಅವಳಿಗೆ. ಅದಕ್ಕಾಗಿಯೇ ಅವಳು ಜೀವಿಸಿದ್ದಳು. ಅದರ ಮೇಲಿನ ಅಪಾರ ಪ್ರೇಮಕ್ಕಾಗಿ ಕಷ್ಟವನ್ನು ಸುಖವಾಗಿ ಕಂಡಿದ್ದಳು.

ಕೆಲವರು ಅವಳನ್ನು ಹಿಡಿದು, ಸಮಾಧಾನಪಡಿಸಿದರು; ಆದರೆ ಗಂಗಮ್ಮ ಹುಚ್ಚಿಯಂತೆ ಅರಚುತ್ತಿದ್ದಳು.

ವಿಮಲಾ ಬಾಯಿ ಮೂರ್ಛಿತರಾಗಿದ್ದವರಿನ್ನೂ ಜಾಗೃತ ಸ್ಥಿತಿಗೆ ಬಂದಿರಲಿಲ್ಲ. ಗರ್ಭಿಣಿಯನ್ನು ಹಾಗೆ ಅಂತಹ ಸ್ಥಳಕ್ಕೆಲ್ಲಾ ಕರಕೊಂಡು ಹೋಗಬಾರದಿತ್ತು ಎಂದರು ಡಾಕ್ಟರ್.

ಅಂತೂ ಸ್ವಲ್ಪ ಹೊತ್ತಿನಲ್ಲಿ ವಿಮಲಾಬಾಯಿ ಮೂರ್ಛೆ ತಿಳಿದೆದ್ದರು. "ಬೇರೇನೂ ಗಾಬರಿಯಿಲ್ಲ; ಆಕಸ್ಮಿಕ ಮಾನಸಿಕ ಉದ್ವೇಗವೇ ಕಾರಣ. ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ಹೋಗಿ" ಡಾಕ್ಟರೆಂದರು.

ಸ್ವಲ್ಪ ಹೊತ್ತಿನಲ್ಲಿ ವಿಮಲಾ ಬಾಯಿಯನ್ನು ಕರಕೊಂಡು ರಾಜಾರಾಯರು ಹೊರಟರು. ಹೊರಬರುತ್ತಿರುವಾಗಲೇ ಗಂಗಮ್ಮನ ಆಕ್ರಂದನ ಕೇಳಿಸಿತು.

ಆ ತಾಯ್ಗರುಳಿನ ರೋದನವನ್ನು ಕೇಳಿ ನಡುಗಿದರು ವಿಮಲಾ ಬಾಯಿ! ಅವರ ಕರುಳು ಹಿಂಡಿದಂತಾಯಿತು. ಹೃದಯದಲ್ಲಿ ಮಂಜುಗಡ್ಡೆ ಇರಿಸಿದಂತಾಯಿತು.

ಬಿಚ್ಚಿದ ತಲೆಕೂದಲು, ಕೆಂಪಾದ ಕಣ್ಣುಗಳು, ಕಂಬನಿಯಿಂದ ತೋಯ್ದ ಮುಖ, ಅಸ್ತವ್ಯಸ್ತ ದೇಹದ ಗಂಗಮ್ಮನನ್ನು ನೋಡಿ ವಿಮಲಾ ಬಾಯಿ, ಇವಳು ನನ್ನನ್ನು ಅಪ್ಪಲು ಬರುತ್ತಿರುವಳೋ ಎಂದು ಭಾವಿಸಿದರು.

ಗಂಗಮ್ಮ ಧಾವಿಸಿ ಬಂದಳು. "ನನ್ನ ಮಗುವನ್ನು ಕೊಂದೆಯಲ್ಲಾ, ಪುಣ್ಯಾದ್ಗಿತ್ತಿ! ನನ್ನ ಕಂದನನ್ನು ಕೊಂದೆಯಲ್ಲಾ! ನಿನಗೆ ಕಣ್ಣಿಲ್ಲವೇ. ಕರುಳಿಲ್ಲವೇ, ನನ್ನಂತೆ ಹೆಣ್ಣಲ್ಲವೇ ನೀನು!" ಎಂದು ಅರಚಿದಳು.

ಕೆಲವರು ಬಂದು ಗಂಗಮ್ಮನನ್ನು ಹಿಡಕೊಂಡರು. ಸುಮ್ಮನಿರುವಂತೆ ಗದರಿಸಿದರು. ರಾಜರಾಯರು ವಿಮಲಾ ಬಾಯಿಯ ಕೈಯನ್ನು ಹಿಡಕೊಂಡು ಮೆಲ್ಲನೆ ಕಾರಿನಲ್ಲಿ ಕುಳ್ಳಿರಿಸಿದರು. ಡಾಕ್ಟರರು "ಗಾಬರಿಯಿಲ್ಲ ಹೋಗಿ" ಎಂದರು.

"ಎಲ್ಲಿ ಹೋಗುತ್ತಿರುವೆ ರಕ್ಕಸಿ....... ನನ್ನ ಮಗುವನ್ನು ಕೊಂದು ಎಲ್ಲಿ ಹೋಗುತ್ತಿರುವೆ? ನನ್ನ ಕಂದನ ಮೇಲೆ ಹರಿದ ಚಕ್ರ ನಿನ್ನ ಹೊಟ್ಟೆಯ ಮೇಲೇಕೆ ಹೋಗಬಾರದಿತ್ತು!........"

ಎಂದು ಬೊಬ್ಬಿರಿದಳು ಗಂಗಮ್ಮ.

"ಏನು ಅಸಂಬದ್ಧ ಅರಚುತ್ತಿರುವಳು?" ಎಂದರು ರಾಜರಾಯರು. ತನ್ನ ತುಂಬುಗರ್ಭವೊಮ್ಮೆ ಅಲುಗಿದಂತಾಯಿತು ವಿಮಲಾಬಾಯಿಗೆ. ತನ್ನನ್ನು ಗಂಗಮ್ಮ ಬಂದು ಅಪ್ಪುತ್ತಿರುವಂತೆ ಭಾಸ

(೧೧ನೇ ಪುಟ ನೋಡಿ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ
ರೂ.೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ, ಉಡುಪಿ.

ರಾಮತೀರ್ಥ ಬ್ರಾಹ್ಮೀ ತೈಲ

ನಿಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0 –0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೪.

ಶ್ರೀಲಂಕಾಯಾತ್ರೆ

ಅತ್ಯಂತ ಸುಂದರ ಕೇಂಡಿ ನಗರದಲ್ಲಿ

ರಾಷ್ಟ್ರಪತಿಯವರು ಇಲ್ಲಿತ್ತ ಭಾಷಣಗಳು ಮತ್ತು ಕೃತ್ಯಗಳು ಅಪ್ರಿಯವಾಗಿದ್ದುವು.

(ತಾ ೬ರ ಸಂಚಿಕೆಯಿಂದ ಮುಂದುವರಿದುದು)

ಲೇಖಾಂಕ ೬

ಜೂನ್ ೧೯ನೆ ಶುಕ್ರವಾರ ಸಿಂಹಗಿರಿಯಿಂದ ಹೊರಟು ಪರ್ವತ ಪ್ರದೇಶದ ಸುಂದರ ಮಾರ್ಗವಾಗಿ ಹೋಗುತ್ತ ರಾಷ್ಟ್ರಪತಿಯವರ ೨೦ ಮೋಟಾರುಗಳ ಪಂಕ್ತಿ ಸುಮಾರು ಮೂರನೆಯ ಪ್ರಹರದ, ಒಂದು ತಾಸಿಗೆ, ಸರ್ವಸುಂದರವಾದ ಕೇಂಡಿ ನಗರವನ್ನು ಮುಟ್ಟಿತು. ನಗರವನ್ನು ಪ್ರವೇಶಿಸುತ್ತಲೇ ಮಹಾವೇಲಿ ಗಂಗೆಯ ಸೇತುವಿನಲ್ಲಿ ಕೇಂಡಿಯ ಮಹಾಪೌರರು ರಾಷ್ಟ್ರಪತಿಯವರ ಸ್ವಾಗತಕ್ಕೆ ಸಿದ್ಧರಾಗಿದ್ದರು. ಆ ಸಮಯ ವಿಪರೀತ ಮಳೆಯು ಸುರಿಯುತ್ತಿತ್ತು ಇದರಿಂದಾಗಿ ಎಲ್ಲ ವ್ಯವಸ್ಥೆಯೂ ಕೂಡೆ ಬಡಿಸಿಕೊಂಡೇ ನಡೆಯಿತು.

ರಾಷ್ಟ್ರಪತಿಯವರು ನೇರಾಗಿ ರಾಜಮಹಲಿನ ಕಡೆಗೆ ಹೋದರು ಅವರೊಡನಿದ್ದ ಸರಕಾರಿ ಅಧಿಕಾರಿಗಳು ಮತ್ತು ಪತ್ರಕಾರರು ಕೇಂಡಿಯ ಮನೋರಮ ಸರೋವರದ ತಟದಲ್ಲಿನ ಕ್ವೀನ್ಸ್ ಹೋಟೇಲಿನಲ್ಲಿ ಉಳಕೊಂಡರು. ಶ್ರೀ ಲಂಕೆಯ ಸುಪ್ರಸಿದ್ಧ ಹೋಟೇಲುಗಳಲ್ಲಿ ಇದೂ ಒಂದಾಗಿದೆ. ಅಲ್ಲದೇ ಪ್ರತಿದಿನಕ್ಕೆ ಕೋಣೆಯೊಂದರ ೧೦೦ ರುಪಾಯಿಯಷ್ಟು ವೆಚ್ಚವೂ ಬೀಳುತ್ತಿತ್ತು ನಾಲ್ಕಂತಸ್ತಿನ ಈ ಹೋಟೇಲಿನಲ್ಲಿ ಆಧುನಿಕ ಸೌಕರ್ಯಗಳೆಲ್ಲವೂ ದೊರೆಯುತ್ತಿತ್ತು

ಮಧ್ಯಾಹ್ನದ ಭೋಜನವನ್ನು ಪೂರೈಸಿ, ನಾವೆಲ್ಲರೂ ಕಿಂಚಿತ ವಿಶ್ರಾಂತಿ ಪಡೆದೆವು. ನಾಲ್ಕೂವರೆ ತಾಸಿನ ಹೊತ್ತಿಗೆ ಶ್ರೀ ಲಂಕಾ ವಿಶ್ವವಿದ್ಯಾಲಯದತ್ತ ಪಯಣಿಸಿದೆವು ಕೇಂಡಿಯಿಂದ ನಾಲ್ಕು ಮೈಲು ದೂರದ ಪರಿಧಿನ್ಯದಲ್ಲಿ ಈ ವಿಶ್ವವಿದ್ಯಾಲಯವಿದೆ. ಈ ಪ್ರದೇಶವು ಪರ್ವತಮಯವಾಗಿದೆ ಆದರೆ, ಸುಂದರವಾದ ಉದ್ಯಾನಗಳಿಂದ ಕೂಡಿದೆ ಎರಡನೆಯ ಮಹಾಯುದ್ಧದ ಕಾಲದಲ್ಲಿ ಲಾರ್ಡ್ ಮೌಂಟ್ ಬ್ಯಾಟನರ ಕಾರ್ಯಾಲಯವಿದ್ದ ಭವನದಲ್ಲಿಯೇ ಈಗ ವಿಶ್ವವಿದ್ಯಾಲಯವಿದೆ.

ರಾಷ್ಟ್ರಪತಿಯವರ ಗೌರವಾರ್ಥವಾಗಿ ಇಲ್ಲಿ ಒಂದು ವಿಶೇಷ ಸಮಾರಂಭದ ಏರ್ಪಾಡಾಗಿತ್ತು ಈ ಸಂದರ್ಭದಲ್ಲಿ ರಾಷ್ಟ್ರಪತಿಯವರು ಮಾಡಲಿದ್ದ ಭಾಷಣವನ್ನು ಮೊದಲೇ ಮುದ್ರಿಸಿ ಪೂರ್ವಭಾವಿಯಾಗಿ ಪತ್ರಿಕಾ ಕರ್ತರಿಗೆ ಕೊಡಲಾಗಿತ್ತು ಆದರೆ, ಮುಂದೆ ಹೀಗೆ ಹಂಚಿದ ಭಾಷಣ—ಲೇಖನದ ಮುದ್ರಿತ ಪ್ರತಿಗಳನ್ನು ಹಿಂದೆ ಪಡೆದುಕೊಂಡರು; ರಾಷ್ಟ್ರಪತಿಯವರು ಮೌಖಿಕ ಭಾಷಣವನ್ನೇ ಮಾಡಿದರು

ಈ ಘಟನೆಯ ಸಂಬಂಧದಲ್ಲಿ ಮುದ್ರಿತ ಪೂರ್ವಭಾವಿ ಪ್ರತಿಯು ರಾಷ್ಟ್ರಪತಿಯವರೊಡನೆ ಹೊರಡುವ ಉಚ್ಚ ಅಧಿಕಾರಿಗಳಿಗೆ ಮೆಚ್ಚುಗೆಯಾಗಲಿಲ್ಲವೆಂಬ ಕಾರಣದಿಂದಲೇ ಅದನ್ನು ತಡೆಹಿಡಿಯಲಾಯಿತೆಂದು ತಿಳಿಯಿತು. ಈ ವಿಷಯದಲ್ಲಿ ಪರದೆಯ ಮರೆಯಲ್ಲಿ ಸಾಕಷ್ಟು ಚರ್ಚೆ, ಜಗಳಗಳೂ ನಡೆದಿದ್ದುವು ಆದರೆ, ಪತ್ರಿಕಾ ಕರ್ತರಿಗೆ ಈ ವಿಷಯದ ನಿಜ ಸ್ವರೂಪವು ತಿಳಿಯಲಿಲ್ಲ ಒಂದು ಮಾತು ಮಾತ್ರ ಸತ್ಯ: ಈ ನಂತರದ ಎಲ್ಲ ಭಾಷಣಗಳನ್ನೂ ರಾಷ್ಟ್ರಪತಿಯವರು ಮೌಖಿಕವಾಗಿಯೇ ಮಾಡಿದರು. ಅವುಗಳ ಪೂರ್ವಭಾವಿ ಪ್ರತಿಗಳು ತಯಾರಾಗಲೇ ಇಲ್ಲ

ಶ್ರೀ ಲಂಕಾ ವಿಶ್ವವಿದ್ಯಾಲಯವು ರಾಷ್ಟ್ರಪತಿಯವರಿಗೆ "ನೀತಿ ಚಕ್ರವರ್ತಿ ಬಿರುದನ್ನು ದಯಪಾಲಿಸಿತು ರಾಷ್ಟ್ರಪತಿಯವರು ಆಂಗ್ಲ ಭಾಷೆಯಲ್ಲಿ ಭಾಷಣ ಮಾಡುತ್ತ ವರ್ತಮಾನ ಭಾರತೀಯ ಶಿಕ್ಷಣದ ಕುರಿತಾಗಿ ಕಟುವಾಗಿಯೇ ಮಾತಾಡಿದರು ಆದರೆ ಭಾರತೀಯ ಅಧಿಕಾರಿಗಳಿಗೆ ಈ ಭಾಷಣದಿಂದ ನಿರಾಶೆಯೇ ಕವಿಯಿತು ಏಕೆಂದರೆ, ರಾಷ್ಟ್ರಪತಿಯವರು ವಿದೇಶಕ್ಕೆ ಹೋಗಿ ಅಲ್ಲಿ ಭಾರತೀಯ ಶಿಕ್ಷಣ ವ್ಯವಸ್ಥೆಯ ಕುರಿತಾಗಿ ಈ ರೀತಿ ನಿಂದಿಸುವುದು ಅವರಿಗೆ ಸರಿಬರಲಿಲ್ಲ

ರಾಷ್ಟ್ರಪತಿಯವರ ವಿದೇಶ ಯಾತ್ರೆಗೆ ಮೊದಲು ಭಾರತ ಸರಕಾರವು ರಾಷ್ಟ್ರಪತಿಯವರಿಗೆ ಯಾವ ಸಂದರ್ಭದಲ್ಲಿ ಏನೇನು ಹೇಳಬೇಕೆಂದು ತಿಳಿಸಬೇಕೆಂದು ಭಾರತೀಯ ಪತ್ರಿಕಾಕಾರರ ಒಟ್ಟಿನ ಅಭಿಪ್ರಾಯವಾಗಿತ್ತು ರಾಷ್ಟ್ರಪತಿಯವರು ಶ್ರೀ ಲಂಕಾ ಯಾತ್ರೆಯ ಬೇರೆ ಸ್ಥಾನಗಳಲ್ಲಿ ಮಾಡಿದ ಭಾಷಣಗಳೂ ಅನುಚಿತವಾಗಿದ್ದುವೆಂತೇ ಅವರು ಹೇಳುತ್ತಾರೆ

ರಾತ್ರಿಯ ಊಟವನ್ನು ಮುಗಿಸಿದ ಮೇಲೆ ನಾವು ರಾಷ್ಟ್ರಪತಿಯವರು ತಂಗಿದ್ದ ರಾಜಮಹಲಿಗೆ ತೆರಳಿದೆವು. ಈ ಅರಮನೆಯನ್ನು ಸಿಂಹಳದ ಅಂತಿಮ ರಾಜನು ಕಟ್ಟಿಸಿದ್ದನು; ಅಲ್ಲದೇ ಇದು ಒಂದು ಸುಂದರ ಮತ್ತು ಎತ್ತರವಾದ ಬೆಟ್ಟದ ತುದಿಯಲ್ಲಿ ನಿರ್ಮಿಸಲ್ಪಟ್ಟಿದೆ. ಈ ಭವನದ ನಾಲ್ಕೂ ದಿಕ್ಕುಗಳಲ್ಲಿ ಮನಮೋಹಕವಾದ ಉಪವನಗಳಿವೆ

ರಾಜಮಹಲಿನಲ್ಲಿ ಕೇಂಡಿಯ ಪ್ರಸಿದ್ಧ ನೃತ್ಯಗಳ ಏರ್ಪಾಡು ನಡೆದಿತ್ತು ಉಪ್ಪರಿಗೆಯ ಮುಂದಿನ ಆಸನಗಳಲ್ಲಿ ರಾಷ್ಟ್ರಪತಿ ಮತ್ತು ಶ್ರೀಲಂಕೆಯ ಗವರ್ನರ ಜನರಲ್ಲರು ಮಂಡಿಸಿದ್ದರು. ಕಳಗಡೆಯ ಅಂಗಣದಲ್ಲಿ ನೃತ್ಯ ಸಾಗುತ್ತಿತ್ತು ಆಗ, ಮೇಲ್ಗಡೆಯ ಸಿಂಹಾಸನದಲ್ಲಿ ರಾಜ ಮತ್ತು ತನ್ನ ಪರಿವಾರವು ಕೂತುಕೊಂಡಿರುವಾಗ, ಕೆಳಗಡೆ ನರ್ತನ ನಡೆಯುತಿದ್ದಂತೆ ಕಾಣುತಿತ್ತು.

ಈ ಸಂದರ್ಭದಲ್ಲಿಯೂ ಕೊಂಚ ಅಪ್ರಿಯ ಘಟನೆಗಳು ನಡೆದುವು. ನರ್ತನವು ಮುಂದುವರಿಯುತ್ತಿದ್ದಾಗ ಒಬ್ಬ ವೃದ್ಧನು ರಾಷ್ಟ್ರಪತಿಯವರಿಗೆ ಎರಡು ಉಡುಗೊರೆಗಳನ್ನು ಕಾಣಿಕೆಯಾಗಿ ನೀಡಲು ಮುಂದೆ ಬಂದನು ಒಂದು ರಾಷ್ಟ್ರಪತಿಯವರ ಪ್ರತಿಮೆ, ಇನ್ನೊಂದು ಬಾಲ್ಯ, ಯೌವನ ಮತ್ತು ವೃದ್ಧಾಪ್ಯದ ಪ್ರತಿರೂಪವಾದ ಮೂರು ಚಿತ್ರಗಳದ್ದು ಈ ಎರಡೂ ವಸ್ತುಗಳನ್ನು ರಾಷ್ಟ್ರಪತಿಯವರಿಗೆ ಈ ಉಡುಗೊರೆಗಳನ್ನು ಅರ್ಪಿಸಿದ ಮೇಲೆ ಭಾರತೀಯ ಅಧಿಕಾರಿಯೊಬ್ಬನು ನೂರು ರೂಪಾಯಿಯ ನೋಟೊಂದನ್ನು ಆ ವೃದ್ಧನಿಗೆ ಕೊಡಲು ಹೋದನು ಆದರೆ, ಆ ವೃದ್ಧನು ಅದನ್ನು ಸ್ವೀಕರಿಸಲು ಒಪ್ಪಲಿಲ್ಲ ತಾನು ಹಣಕ್ಕಾಗಿ ಉಡುಗೊರೆ ಇತ್ತಿಲ್ಲವೆಂದಾತ ಹೇಳಿಯೇ ಬಿಟ್ಟ. ಕೂಡಲೆ ಶ್ರೀ ಲಂಕೆಯ ಅಧಿಕಾರಿಗಳು ತಿಳಿಹೇಳಿದ ನಂತರ ಆತ ತೆಗೆದುಕೊಂಡು ಹೊರಟುಹೋದ ಆದರೆ, ನೂರು ರೂಪಾಯಿ ಕೊಟ್ಟು ತನ್ನನ್ನು ಅವಮಾನಿಸಿದರೆಂದಾತ ಹೇಳಿಯೇ ಬಿಟ್ಟ. ನಗದಿ ಹಣ ಕೊಡುವುದರ ಬದಲು ಆತನಿಗೆ ಏನಾದರೂ ಭಾರತೀಯ ವಸ್ತುವನ್ನೇ ಕೊಡುತ್ತಿದ್ದರೆ ಒಳ್ಳೆಯದಾಗುತ್ತಿತ್ತು.

ನರ್ತಕ ನರ್ತಕಿಯರಿಗೂ ಇದೇ ರೀತಿ ಹಣದ ರೂಪದಲ್ಲಿಯೇ ಉಡುಗೊರೆ ನೀಡಲಾಯಿತು. ಇದರಿಂದಾಗಿ ಅವರನ್ನೂ ಪ್ರಸನ್ನಗೊಳಿಸಲಾಗಲಿಲ್ಲ

ಕೇಂಡಿ ನೃತ್ಯವು ಶ್ರೀಲಂಕೆಯ ಸರ್ವೋತ್ತಮ ನೃತ್ಯವೆನ್ನಲಾಗುತ್ತದೆ ಆದರೆ, ಭಾರತೀಯ ನೃತ್ಯಗಳೊಡನೆ ಹೋಲಿಸುವಾಗ ಇದು ಅವಕ್ಕೆ ಸಮಜೋಡಿಯಾಗಿ ನಿಲ್ಲಲಾರದು ರಾಜಕುಮಾರ ವಿಜಯನು ಭಾರತದಿಂದ ಕ್ರಿ.ಪೂ. ೫೪೩ರಲ್ಲಿ ಸಿಂಹಳಕ್ಕೆ ಹೋದಾಗ, ತನ್ನೊಡನೆ ಭಾರತೀಯ ನೃತ್ಯಕಾರರನ್ನೂ ಕರೆದೊಯ್ದನೆಂದೂ ಇಂದಿನ ಕೇಂಡಿ ನೃತ್ಯ ಅವರ ನರ್ತನದ ಅವಶೇಷವೆಂದೂ ಹೇಳಲಾಗುತ್ತದೆ

ಕೇಂಡಿ ನೃತ್ಯದಲ್ಲಿ ನಾಲ್ಕು ಅವಾಂತರಗಳಿವೆ ಅಲ್ಲದೇ ಇವೆಲ್ಲವೂ ಕಥಕ್ಕಳಿಯನ್ನು ಹೋಲುತ್ತವೆ ನರ್ತಕರು ಕಥಕ್ಕಳಿಯಲ್ಲಿ ತೊಡುವಂತಹ ಬಟ್ಟೆಗಳನ್ನು ತೊಡುತ್ತಾರೆ ಮಾತ್ರವಲ್ಲ ಅಂತೆಯೇ ಶೃಂಗರಿಸುತ್ತಾರೆ.

ಜೂನ್ ೨೦ರಂದು ಪೂರ್ವಾಹ್ನ ೮ ಗಂಟೆಗೆ ಉಪಾಹಾರ ಸ್ವೀಕರಿಸಿ, ನಾಲ್ಕು ಮೈಲು ದೂರದ ಪರಿಧಿನದಲ್ಲಿ ನೂರೈವತ್ತು ಎಕರೆಗಳಲ್ಲಿ ಹರಡಿದ ಸಸ್ಯ ಸಂಬಂಧಿ ಉಪವನಕ್ಕೆ ಹೋದೆವು. ಅಲ್ಲಿ ರಾಷ್ಟ್ರಪತಿಯವರು ಚಂಪಕದ ಗಿಡ ನೆಟ್ಟರು.

ಈ ಉಪವನವು ಏಶ್ಯದಲ್ಲಿಯೇ ಸುಪ್ರಸಿದ್ಧವಾಗಿದೆ ವಿಶ್ವದ ಎಲ್ಲ ಪ್ರಕಾರದ ಮರಗಿಡಗಳ ಇಲ್ಲಿವೆ ಉದ್ಯಾನದ ಒಂದು ಪಕ್ಕದಲ್ಲಿ ಶ್ರೀ ಲಂಕೆಯ ಅತಿ ದೊಡ್ಡ ನದಿ ಮಹಾವೇಲಿ ಗಂಗೆಯು ಹರಿಯುತ್ತದೆ ಇದರ ಮೇಲೆ ತೂಗುವ ಸೇತುವೆ ಇದೆ ಇನ್ನೊಂದೆಡೆ ಎತ್ತರವಾದ ಹಸುರು ಬೆಟ್ಟಗಳಲ್ಲಿ ರಬ್ಬರಿನ ತೋಟವೂ ದೃಷ್ಟಿಗೋಚರವಾಗುತ್ತವೆ

ಮಧ್ಯಾಹ್ನ ನಾವು ಕೇಂಡಿ ನಗರ ಸಂದರ್ಶನೆಗೆ ಹೋದೆವು. ಇದರ ಜನಸಂಖ್ಯೆ ಕೇವಲ ೫೫ ಸಾವಿರವಾದರೂ ನಗರವು ವಿಸ್ತಾರವಾಗಿದೆ ಕ್ವೀನ್ಸ್ ಹೋಟೇಲಿನ ಬಳಿಯಲ್ಲೊಂದು ಪ್ರಸಿದ್ಧ ಕೆರೆ ಇದೆ. ಇದನ್ನು ಅಂತಿಮ ಸಿಂಹಲೀಯ ರಾಜನು ತೋಡಿಸಿದನು. ಸರೋವರ

(೧೦ನೇ ಪುಟ ನೋಡಿರಿ)

ಸ್ವಾತಂತ್ರ್ಯೋತ್ಸವದ ಶುಭಾಶಯಗಳು.

ಆಗಸ್ಟ 15ನೇ ತಾರೀಖು! ಇಂದು ಭಾರತೀಯರೆಲ್ಲರೂ ಸಂತೋಷದಿಂದ ನಕ್ಕುನಲಿಯುವ ದಿನ! ಕಾರಣ, ಇದು ನಾವು ಪರದಾಸ್ಯದಿಂದ ಸ್ವತಂತ್ರರಾದ ದಿನ!!

ನಾವು ರಾಜಕೀಯವಾಗಿ ಸ್ವತಂತ್ರರಾಗಿದ್ದರೂ, ಆರ್ಥಿಕವಾಗಿ ನಾವಿನ್ನೂ ಸ್ವತಂತ್ರರಾಗಿಲ್ಲ ನಾವು ಆರ್ಥಿಕವಾಗಿ ಸ್ವತಂತ್ರರಾಗಬೇಕಾದರೆ, ನಮ್ಮ ದೇಶೀಯ ಕೈಗಾರಿಕೆಗಳು ಅಭಿವೃದ್ಧಿಹೊಂದಬೇಕು ನಮ್ಮ ನಿರುದ್ಯೋಗ ಸಮಸ್ಯೆ ಪರಿಹಾರವಾಗಬೇಕು.

ಕಳೆದ **30** ವರ್ಷಗಳಿಂದಲೂ ನಮ್ಮ 'ಜೆ ಎಸ್' ಮತ್ತು 'ಕಾಂಗ್ರೆಸ್' **ಮಂಗಳೂರು ಬೀಡಿಗಳು** ಅತ್ಯಂತ ಜನಪ್ರಿಯವಾಗಿ, ನಿರುದ್ಯೋಗ ಸಮಸ್ಯೆಯನ್ನು ಗಣನೀಯವಾದ ಪ್ರಮಾಣದಲ್ಲಿ ಪರಿಹರಿಸುತ್ತಿರುವ ಗೃಹ ಕೈಗಾರಿಕೆಗಳಲ್ಲಿ ಒಂದಾಗಿದೆ

ಈ ಸ್ವಾತಂತ್ರ್ಯೋತ್ಸವದ ಶುಭದಿನದಲ್ಲಿ ಜಗದೀಶ್ವರನು ಎಲ್ಲರಿಗೂ ಸುಖಸಂತೋಷಗಳನ್ನು ಕರುಣಿಸಲೆಂದೂ, ಬೀಡಿ ಪ್ರೇಮಿಗಳು ನಮ್ಮ ಜನಪ್ರಿಯವಾದ **'ಜೆ ಎಸ್' ಮತ್ತು 'ಕಾಂಗ್ರೆಸ್' ಮಂಗಳೂರು ಬೀಡಿಗಳನ್ನೇ** ಹೆಚ್ಚು ಹೆಚ್ಚಾಗಿ ಉಪಯೋಗಿಸಿ, ಈ ಗೃಹ ಕೈಗಾರಿಕೆಗೆ ಪ್ರೋತ್ಸಾಹ ನೀಡುವುದರ ಮೂಲಕ, ನಮಗೆ ಆರ್ಥಿಕ ಸ್ವಾತಂತ್ರ್ಯವೂ ದೊರೆಯಲು ನೆರವಾಗಲೆಂದೂ ಹಾರೈಸುತ್ತೇವೆ

ಎಂ. ಆರ್. ಸಿ. ಬಸಪ್ಪ ಅಂಡ್ ಸನ್ಸ್

ಸುಪ್ರಸಿದ್ಧ 'ಜೆ. ಎಸ್.' ಮತ್ತು 'ಕಾಂಗ್ರೆಸ್' ಮಂಗಳೂರು ಬೀಡಿಗಳನ್ನು ತಯಾರಿಸುವವರು,

ಜ್ಯುಬಿಲಿ ಸ್ಟೋರ್ಸ್, 1, ಬಸ್ ಟರ್ಮಿನಸ್, ಮೈಸೂರು.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಸಂಸ್ಮರಣೆ

ಪಂಡಿತ ಜವಾಹರರ ಬಾಲ್ಯ ಜೀವನ

ಬೆಳೆಯು ಸಿರಿಯು ಎಳೆಯಲ್ಲೇ ಕಾಣುವುದು ಎಂಬುದು ಜವಾಹರರ ಬಾಲ್ಯದಲ್ಲಿ ಎದ್ದು ತೋರುತ್ತದೆ.

ಇಂದು ಭಾರತದಲ್ಲಿ, ಅಷ್ಟೇ ಅಲ್ಲ, ಜಗತ್ತಿನ ಯಾವದೇ ರಾಷ್ಟ್ರದಲ್ಲಿ ಪಂಡಿತ ಜವಾಹರಲಾಲರ ಹೆಸರು ಕೇಳರಿಯದ ಜನರಿಲ್ಲವೆಂದು ಅಂದರೆ ಅತಿಶಯೋಕ್ತಿಯಾಗಲಾರದು. ಭಾರತದಲ್ಲಿ ಸ್ವಾತಂತ್ರ್ಯದ ನಂತರದ ಈ ೧೨ ವರುಷ



ಮೋತಿಲಾಲ್ ನೆಹರು.

* *

ಅವರು ಒಳ್ಳೇ ಜನಪ್ರಿಯ ಪ್ರಧಾನ ಮಂತ್ರಿಗಳೆಂದು ಕೀರ್ತಿ ಪಡೆದರೆ, ಜಾಗತಿಕ ಕ್ಷೇತ್ರದಲ್ಲಿ ಅವರು ಒಳ್ಳೇ ಪ್ರಭಾವಶಾಲೀ ಶಾಂತಿ ಪ್ರಚಾರಕರು ಎಂದು ಕೀರ್ತಿ ಪಡೆದಿದ್ದಾರೆ. ಇಂಥ ಮಹಾನುಭಾವರ ಬಾಲ್ಯ ಜೀವನದ ಅಲ್ಪ ಪರಿಚಯವನ್ನು ಮಾಡಿಕೊಡುವದೇ ಈ ಲೇಖನದ ಉದ್ದೇಶ.

“ಮೂರು ವರುಷದ ಬುದ್ಧಿ ನೂರು ವರುಷದ ವರೆಗೆ” ಎಂಬ ಗಾದೆ ಮಾತಿಗೆ ನೆಹರೂರವರ ಬಾಲ್ಯ ಜೀವನ ಒಂದು ಒಳ್ಳೇ ಉದಾಹರಣೆಯಾಗಿದೆ. ಮುಂದೆ ಅವರೊಬ್ಬ ಮೇಧಾವಿಗಳಾಗಿ, ಒಂದು ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟು, ಅದರ ಆಡಳಿತ ಸೂತ್ರವನ್ನು ಕೈಯಲ್ಲಿ ತೆಗೆದುಕೊಂಡು, ಅದರ ಏಳ್ಗೆಗೆ ಕಾರಣೀಭೂತರಾಗುವಂಥ ಗುಣಗಳು ಅವರಲ್ಲಿ ಮೊದಲಿನಿಂದಲೇ ರೂಪಗೊಂಡವು. ಇದಕ್ಕೆ ಅವರ ಕುಲೀನ ಹಾಗು ಪ್ರತಿಷ್ಠಿತ ಮನೆತನ ಅವರ ತಂದೆಯವರ ಅಸಾಮಾನ್ಯ ವ್ಯಕ್ತಿತ್ವ ಹಾಗು ಮಾರ್ಗದರ್ಶನ ಮತ್ತು ದೇಶವಿದೇಶಗಳಿಂದ ಬರು ಹೋಗುವಂಥ ಮಹಾತ್ಮರುಗಳ ನಿಕಟ ಪರಿಚಯ ಇ ಕಾರಣಗಳೆಂದು ಹೇಳಿದರೆ ತಪ್ಪಾಗಲಾರದು. ದಿವಂಗತ ಮೋತಿಲಾಲರು ಜವಾಹರಲಾಲರ ಶಿಕ್ಷಣ ಹಾಗು ಬೆಳವಣಿಗೆಗೆ ಒಳ್ಳೇ ದಕ್ಷತೆ ವಹಿಸಿ ಅವರನ್ನೊಬ್ಬ ಅಸಾಮಾನ್ಯ ವ್ಯಕ್ತಿಗಳನ್ನಾಗಿ ಮಾಡಿದ ಕೀರ್ತಿಗೆ ಪಾತ್ರರಾಗಿದ್ದಾರೆ.

ಇತರ ಬಾಲಕರಂತೆ ನೆಹರು ಅವರು ಚಿಕ್ಕಂದಿನಲ್ಲಿ ಯಾವದೇ ಶಾಲೆಗೆ ಹೋಗಲಿಲ್ಲ, ಅವರ ಶಿಕ್ಷಣ ಮನೆಯಲ್ಲಿಯೇ ಆಯಿತು ಡಾ. ಅನ್ನಿಬೆಸೆಂಟರ ಶಿಫಾರಸಿನ ಮೇರೆಗೆ ಫರ್ಡಿನಾಂಡ ಬ್ರೂಕ್ಸ ಎಂಬವರು ನೆಹರು ಅವರಿಗೆ ಪಾಠ ಹೇಳಿಕೊಡುತ್ತಿದ್ದರು. ಬ್ರೂಕ್ಸರ ತಂದೆ ಐರಿಶ, ತಾಯಿ ಬೆಲ್ಜಿಯನ್. ಭಾರತೀಯ ತತ್ವಜ್ಞಾನದಲ್ಲಿ ಇವರಿಗೆ ಒಲವು ಹೆಚ್ಚಾಗಿ, ಸಂಸ್ಕೃತ ಕಲಿತು, ಭಗವದ್ಗೀತೆಯನ್ನು ಇಂಗ್ಲಿಷಿನಲ್ಲಿ ಭಾಷಾಂತರಿಸಿದರು. ಬ್ರೂಕ್ಸರು ಬ್ರಹ್ಮಜ್ಞಾನ ಸಮಾಜಕ್ಕೆ (Theosophy) ಸೇರಿದವರಾಗಿದ್ದರು. ಹೀಗಾಗಿ ಇವರು ನೆಹರೂರ ಮೇಲೆ ವಿಶೇಷ ಪ್ರಭಾವ ಬೀರಿದರು. ಇಂಗ್ಲಿಷ ಸಾಹಿತ್ಯದ ವಾಚನಾಭಿರುಚಿ, ವಿಜ್ಞಾನದಲ್ಲಿ ಉತ್ಸುಕತೆ, ಶಾಂತಿ ಪ್ರೇಮ, ಸೌಶೀಲ್ಯ ಮುಂತಾದ ಉದಾತ್ತ ಗುಣಗಳನ್ನು ಬಾಲಕ ನೆಹರೂರ ಹೃದಯದಲ್ಲಿ ಬ್ರೂಕ್ಸರು ಬಿತ್ತಿದರು. ಅಂದು ಬಿತ್ತಲ್ಪಟ್ಟ ಈ ವಿಶೇಷ ಗುಣಗಳೇ ಬೆಳೆದು ಇಂದು ಅವರನ್ನು ವಿಶ್ವದ ಶಾಂತಿದೂತರನ್ನಾಗಿ ಮಾಡಿವೆ ಎಂದು ಹೇಳಬಹುದು.

ನೆಹರೂ ಅವರಿಗೆ ಹಿಂದಿ ಹಾಗು ಸಂಸ್ಕೃತ ಕಲಿಸಲು ಅವರ ಮನೆತನಕ್ಕೆ ಚಿರಪರಿಚಿತನಾದ ಒಬ್ಬ ಪಂಡಿತನನ್ನು ಗೊತ್ತುಮಾಡಲಾಗಿತ್ತು. ಆದರೆ ಆ ಪಂಡಿತನ ಕೆಲಸವೇಕೋ ಸರಿಯಾಗಿ ನೆರವೇರಲಿಲ್ಲ. ಅದಕ್ಕೆ ಕಾರಣವಿಲ್ಲದಿಲ್ಲ. ನೆಹರೂ ಅವರಿಗೆ ಹಿಂದಿಗಿಂತ ಇಂಗ್ಲಿಷಿನಲ್ಲಿ ಒಲವು, ಪಾಂಡಿತ್ಯ ಹೆಚ್ಚು. ಅವರು ವಿಚಾರಿಸುವದು ಕೂಡ ಇಂಗ್ಲಿಷಿನಲ್ಲೇ ಎಂದು ಹೇಳಿದರೆ ಅಡ್ಡಿ ಇಲ್ಲ. ಒಮ್ಮೆ ಅಹಮ್ಮದ ನಗರದ ಜೇಲಿನಲ್ಲಿ ನೆಹರು ಹಾಗು ದಿವಂಗತ ಆಝಾದರನ್ನೂ ಒಂದೇ ಖೋಲಿಯಲ್ಲಿ ಇಡಲಾಗಿತ್ತು. ಅಲ್ಲಿ ಒಂದು ರಾತ್ರಿ ನೆಹರು ಅವರು ಮಲಗಿದಾಗ ಇಂಗ್ಲಿಷಿನಲ್ಲಿ ಏನೋ ಬಡಬಡಿಸಿದರು. ಅದನ್ನು ನೋಡಿದ ಆಝಾದರು “He not only talks in English but also dreams in English” ಎಂದು ಉದ್ಗಾರ ತೆಗೆದರು.

ನೆಹರೂರ ಶಿಕ್ಷಣವು ಇಂಗ್ಲೆಂಡಿನ ಹ್ಯಾರೋ (Harrow) ಶಾಲೆಯಲ್ಲಿ ಆಯಿತು. ಈ ಶಾಲೆಯು ಅತ್ಯಂತ ಪ್ರಖ್ಯಾತವಾದದ್ದು ಇಲ್ಲಿಯೇ ವಿನ್ಸಟನ್ ಚರ್ಚಿಲ್, ಪಾಮರ್ಸ್ಟನ್, ಬೈರನ್ ಮುಂತಾದ ಮೇಧಾವಿಗಳು ಶಿಕ್ಷಣ ಪಡೆದಿದ್ದರು. ಅಂದ ಮೇಲೆ ಇಲ್ಲಿಯ ಶೈಕ್ಷಣಿಕ ದರ್ಜೆಯು ಸಾಮಾನ್ಯರಿಗೆ ಎಟುಕಲಾರದಂಥದು ಎಂಬುದರಲ್ಲಿ ಸಂಶಯವಿಲ್ಲ ಇಲ್ಲಿ ಎರಡು ವರುಷ ಶಿಕ್ಷಣಪಡೆದ ನಂತರ ಅವರು ಕೇಂಬ್ರಿಜ್ ವಿಶ್ವವಿದ್ಯಾಲಯವನ್ನು ಹೆಚ್ಚಿನ ಶಿಕ್ಷಣಕ್ಕಾಗಿ ಸೇರಿದರು. ಶಾಲೆಯಲ್ಲಿ ಕೂಡ ಅವರು ಆದರ್ಶ ವಿದ್ಯಾರ್ಥಿಗಳಾಗಿದ್ದರು. ಅವರು ಈ ಶಾಲೆಯಲ್ಲಿ ಶಿಕ್ಷಣ ಪಡೆದು ಮುಗಿಸಿ ೩೫ ವರುಷಗಳಾದ ಮೇಲೆ ಅಲ್ಲಿಯ ಒಬ್ಬ ಶಿಕ್ಷಕರು ಅವರ ಬಗ್ಗೆ ನುಡಿದ ಮಾತುಗಳು ಅವರ ಒಳ್ಳೇ ನಡತೆಯನ್ನು ಎತ್ತಿತೋರಿಸುವವು. “A very nice boy, quiet and very refined He was not demonstrative, but one felt there was great streangth of character”

ನೆಹರು ಅವರು ತಮ್ಮ ಆತ್ಮಚರಿತ್ರೆಯಲ್ಲಿ ತಮ್ಮ ಬಾಲ್ಯಜೀವನದ ಬಗ್ಗೆ ನಿವೇದಿಸಿದ ಕೆಲಸಂಗತಿಗಳು ಮೋಜಿನವು ಹಾಗೂ ಒಳ್ಳೇ ಮಹತ್ವದ್ದು ಆಗಿರುವವು. ಅವನ್ನು ಹೇಳದೆ ಅವರ ಬಾಲ್ಯ ಜೀವನದ ಪರಿಚಯವು ಪೂರ್ಣವಾಗಲಾರದು ಅವುಗಳಲ್ಲಿ ಕೆಲವನ್ನು ಇಲ್ಲಿ ಉದಹರಿಸಬಹುದಾಗಿದೆ.

“ನಮ್ಮ ತಾಯಿಯವರು ರಾಮಾಯಣ, ಮಹಾಭಾರತದ ಕತೆಗಳನ್ನು ನನಗೆ ಹೇಳುತ್ತಿದ್ದರು. ನಮ್ಮ ಅಕ್ಕನೂ ಅವುಗಳನ್ನು ಹೇಳುತ್ತಿದ್ದರು. ರಾಮಾಯಣ ಮಹಾಭಾರತದಲ್ಲಿ ಅವಳಿಗೆ ಅರಿಯದ ವಿಷಯವೇ ಇದ್ದಿಗಲಿಲ್ಲವೆಂದು ಹೇಳಬಹುದು. ಇಲ್ಲ ನನ್ನ ತಾಯಿಯ ಬಗ್ಗೆ ನನಗೆ ಹೆದರಿಕೆಯೇ ಇರಲಿಲ್ಲ. ನಾನೇ ಅವಳನ್ನು ಆಗಾಗ ಹೆದರಿಸುತ್ತಿದ್ದ. ನನ್ನ ಎಲ್ಲ ತಪ್ಪುಗಳನ್ನು ಅವಳು ಕ್ಷಮಿಸಿ ಬಿಡುತ್ತಿದ್ದಳು. ಆದೇ ನಮ್ಮ ತಂದೆಯವರೆಂದರೆ ಎಲ್ಲಿಲ್ಲದ ಭೀತಿ. ಅವರಿಗೆ ಕೋಪ ಬಂದಾಗ ಅವರ ಮುಂದೆ ನಿಲ್ಲುವ ಎದೆಗಾರಿಕೆ ನಮಗಿರುತ್ತಿರಲಿಲ್ಲ.”

“ಅವರ ಉಗ್ರ ಕೋಪದ ಬಗ್ಗೆ ನನಗಾದ ಅನುಭವ ಮರೆಯಲಾರದಂಥದು. ಒಮ್ಮೆ ಅವರ ಖೋಲಿಯಲ್ಲಿ ಆಡುತ್ತ ಹೋದಾಗ ಅವರ ಮೇಜಿನ ಮೇಲೆ ಎರಡು ಪೆನ್ನುಗಳು ಇದ್ದುದನ್ನು ನೋಡಿದೆ. ಒಬ್ಬರಿಗೆ ಒಂದೇ ಪೆನ್ನು ಸಾಕೆಂದು ತಿಳಿದು ಅದರಲ್ಲಿಯ ಒಂದನ್ನು ತೆಗೆದುಕೊಂಡು ನನ್ನ ಬಳಿ ಇಟ್ಟುಕೊಂಡೆ. ತಂದೆಯವರು ಎಲ್ಲ ಕಡೆಗೂ ಹುಡುಕಿದರು, ಅದು ನನ್ನಲ್ಲಿದ್ದದ್ದು ಅವರಿಗೆ ತಿಳಿದು ಬಂದಿತು. ಅವರಿಗೆ ತುಂಬಾ ಕೋಪ ಬಂದು ನನ್ನನ್ನು ಚನ್ನಾಗಿ ಹೊಡೆದರು. ಮುಂದೆ ಎಷ್ಟೋ ದಿನಗಳ ವರೆಗೆ ಮೈಮೇಲೆ ಬಾಸುಂಡಿಗಳು ಹಾಗೆಯೇ ಇದ್ದವು.”

“ನನಗೆ ಎಲ್ಲ ಹಬ್ಬಗಳಿಗಿಂತ ಮುಖ್ಯವಾದದ್ದು ನನ್ನ ಹುಟ್ಟಿದ ಹಬ್ಬ ಅವತ್ತು ಸಡಗರವೇ ಸಡಗರ. ಬೆಳಿಗ್ಗೆ ನನ್ನನ್ನು ತಕ್ಕಡಿಯಲ್ಲಿ ಧಾನ್ಯಗಳಿಂದ ತೂಗಿ ಅದನ್ನು ಬಡವರಿಗೆ ದಾನಮಾಡುತ್ತಿದ್ದರು. ನನಗೆ ಹೊಸ ಬಟ್ಟೆ ತೊಡಿಸಿ, ಮಣೆಯ ಮೇಲೆ ಕುಳ್ಳಿರಿಸಿ ಆರತಿ ಮಾಡುತ್ತಿದ್ದರು. ಅಂದು ನಾನೇ ನಾಯಕನಾಗಿ ಅಟ್ಟಹಾಸಪಡುತ್ತಿದ್ದೆ ವರ್ಷಕ್ಕೆ ಒಂದೇ ಸಾರೆ ಬರುವುದಲ್ಲ ಈ ಹಬ್ಬ ಈ ಉತ್ಸವ ಎಂದು ನನಗೆ ಅಸಮಾಧಾನವಾಗುತ್ತಿತ್ತು ಹುಟ್ಟಿದ ಹಬ್ಬವೆಂದರೆ ವೃದ್ಧಾಪ್ಯವು ಸಮೀಪಿಸುತ್ತಿರುವದರ ಗುರುತೆಂಬುದನ್ನು ನಾನು ಅರಿತಿರಲಿಲ್ಲ.”

“ನನಗೆ ಏಳನೇ ಅಥವಾ ಎಂಟನೇ ವರ್ಷ ನಡೆಯುತ್ತಿದ್ದಾಗ ನಡೆದ ಒಂದು ಸಂಗತಿ ನನಗೆ ಇನ್ನೂ ನೆನಪಿನಲ್ಲಿದೆ. ನಾನು ದಿನಾಲು ಕುದುರೆ ಹತ್ತಿಕೊಂಡು ಒಬ್ಬ ಸೇವಕನೊಡನೆ ಊರ ಹೊರಗೆ

ಜವಾಹರಲಾಲ್ ನೆಹರು.

* *

ಹೋಗುತ್ತಿದ್ದೆ. ಒಂದು ದಿನ ನಾನು ಕುದುರೆಯ ಮೇಲಿಂದ ಬಿದ್ದು ಬಿಟ್ಟೆ. ಆದರೆ ಕುದುರೆ ಒಂದೇ ಮನೆಗೆ ಹೋಯಿತು. ಮನೆಯ ಜನರಿಗೆಲ್ಲ ಬಹಳೇ ಗಾಬರಿ ಆಯಿತು, ಎಲ್ಲರೂ ನನ್ನನ್ನು ಹುಡುಕಲು ಹೊರಟರು ದಾರಿಯಲ್ಲಿ ಬಿದ್ದ ನನ್ನನ್ನು ಎತ್ತಿಕೊಂಡು ಮೆರವಣಿಗೆ ಮಾಡುತ್ತ ಕರೆದುಕೊಂಡು ಬಂದರು. ಕುದುರೆಯಿಂದ ಜಾರಿಬಿದ್ದುದಕ್ಕೆ ಯಾವದೇ ರಾಜ್ಯ ಗೆದ್ದುಬಂದವನಿಗೆ ನಡೆಯುತಕ್ಕ ಮರ್ಯಾದೆ ನನಗೆ ಮಾಡಲ್ಪಟ್ಟಿತು.”

“ನಮ್ಮ ತಂದೆಯವರು ಯುರೋಪಿಗೆ ಹೋದಾಗ ನನ್ನ ತಂಗಿ (ವಿಜಯಲಕ್ಷ್ಮಿ ಪಂಡಿತ) ಹುಟ್ಟಿದಳು. ಆಗ ನನಗೆ ಹನ್ನೊಂದು ವರ್ಷವಿರಬಹುದು ನನಗೆ ತಮ್ಮ ಅಥವಾ ತಂಗಿ ಯಾರೂ ಇಲ್ಲದೇ ಏಕಾಕಿ ಇರುವದರಿಂದ ಬೇಸರವಾಗುತ್ತಿತ್ತು. ಅಂದು ತಮ್ಮ ಅಥವಾ ತಂಗಿ ಹುಟ್ಟುವದು ನಿಶ್ಚಿತವೆಂದು ನಾನು ಒಳ್ಳೇ ಉತ್ಸುಕತೆಯಿಂದ ಹೊರಾಂಗಣದಲ್ಲಿ ಕುಳಿತಿದ್ದೆ. ಒಳಗಿನಿಂದ ಡಾಕ್ಟರನೊಬ್ಬ ಬಂದು, “ನಿನಗ ತಂಗಿ ಹುಟ್ಟಿದಳು. ಆಸ್ತಿಯಲ್ಲಿ ಪಾಲುಕೇಳಲು ತಮ್ಮ ಹುಟ್ಟಲಿಲ್ಲವೆಂದು ನಿನಗೆ ಸಂತೋಷವಾಗಿರಬಹುದು” ಎಂದು ಚೇಷ್ಟೆ ಮಾಡಿದನು ನನ್ನಲ್ಲಿ ಅಷ್ಟು ಸ್ವಾರ್ಥತೆ, ಅಲ್ಪತೆಯನ್ನು ತೋರಿಸಿ ಮಾತನಾಡಿದನೆಂದು ಅವನ ಮೇಲೆ ನನಗೆ ಕೋಪ ಬಂದಿತು.”

“ನನ್ನ ತಂದೆಯ ಹಳೆಯ ಕಾಲದಿಂದಲೂ ಪರಿಚಿತನಾದ ಮುನಶಿ ಮುಬಾರಕ ಆಲಿ ಎಂಬ ವೃದ್ಧನಲ್ಲಿ ನನಗೆ ಬಹಳೇ ಆದರ ಭಾವನೆ ಇದ್ದಿತು. ಬಿಳಿ ಗಡ್ಡದಿಂದ ತುಂಬಿದ ಅವನ ಮುಖದಲ್ಲಿ ಸದಾ ಕರು

(೯ನೇ ಪುಟ ನೋಡಿರಿ)

ಸಾಮಾನ್ಯರಿಗೂ, ಸಿರಿವಂತರಿಗೂ
— ಸರ್ವರಿಗೂ —
ಬೇಕಾಗುವ ಬೇಂಕು ಸೌಲಭ್ಯಗಳಿಗೆ
ನೆಟ್ಟಗೆ ನಮ್ಮಲ್ಲಿಗೆ ನಡೆಯಿರಿ ಇಲ್ಲವೆ ನಮಗೆ ಬೇಗನೆ ಬರೆಯಿರಿ.
ಎಲ್ಲರಿಗೂ, ಎಲ್ಲ ಕಾಲಕ್ಕೂ, ಎಲ್ಲ ವಿಧದ ಬೇಂಕು ಸೌಲಭ್ಯಗಳಿಗೂ
ನಮ್ಮ ಬೇಂಕು ಯೋಗ್ಯವಿದೆ!
ದಿ. ಕೆನರಾ ಬೇಂಕಿಂಗ್ ಕೋಪ್ರೋರೇಶನ್ ಲಿಮಿಟೆಡ್
ಸ್ಥಾಪನೆ: 1906
ಪ್ರಧಾನ ಕಚೇರಿ : ಉಡುಪಿ (ದ. ಭಾರತ)
(ಸಮಗ್ರ ಮೈಸೂರು ರಾಜ್ಯದಲ್ಲಿ ಸಂಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ನಮ್ಮ ಬೇಂಕಿಗೆ ಅತಿ ದೀರ್ಘ ಕಾಲದ ಬೇಂಕು ಮಾಹಿತಿ ಇದೆ!)

ವಿಚಾರ ಮಥನ

(೧ನೇ ಪುಟದಿಂದ)

ಸೇವಾ ಸಹಕಾರಿ ಸಂಘಗಳಿಂದ ರೈತರಿಗೆ ತಮ್ಮ ಭೂಮಿಯ ಮೇಲೆ ಒಡೆತನವು ಶಾಶ್ವತವಾಗಿರುವುದು. ಒಟ್ಟಿಗೆ ಕೆಲಸವನ್ನೂ ಮಾಡಬಹುದು. ಗೊಬ್ಬರ, ಬೀಜ ಮೊದಲಾದ ಸಹಕಾರಿತೆಯೊಳಗಿನ ಪ್ರಯೋಗಗಳನ್ನೂ ಮಾಡಬಲ್ಲರು.

ಸಹಕಾರಿ ಕೃಷಿಯ ಟೀಕಾಕಾರರಿಗೆ ಉತ್ತರ ರೂಪವಾಗಿ ಕಳೆದ ಮಾರ್ಚಿ ತಿಂಗಳಲ್ಲಿ ಲೋಕಸಭೆಯಲ್ಲಿ ಶ್ರೀ ನೆಹರೂರವರು, "ಸಹಕಾರದ ಕಲ್ಪನೆಯು ಕ್ರಾಂತಿಕಾರಿಯಾದ ಪ್ರಶ್ನೆಯೇನಲ್ಲ. ಗ್ರಾಮೀಣ ಪ್ರದೇಶಗಳಲ್ಲಿರುವ ಅನೇಕ ಸಂಯುಕ್ತ ಹಿಂದೂ ಪರಿವಾರಗಳು ಸಹಕಾರಿ ಕೃಷಿಯ ಆಧಾರದಿಂದಲೇ ಮುನ್ನಡೆಯುತ್ತವೆ" ಎಂದು ಅಂದಿದ್ದರು.

ಸಹಕಾರಿ ಕೃಷಿಯ ವಿರೋಧಿಗಳಲ್ಲಿ ಶ್ರೀ ರಾಜಗೋಪಾಲಾಚಾರಿ, ಪ್ರೊ| ರಂಗ ಹಾಗೂ ಶ್ರೀ ಕೆ. ಎಂ. ಮುನ್ಶಿಯವರು ಮುಖ್ಯರಾಗಿದ್ದಾರೆ.

ಶ್ರೀ ರಾಜಗೋಪಾಲಾಚಾರಿ

ಶ್ರೀ ರಾಜಗೋಪಾಲಾಚಾರಿಯವರ ಅಭಿಪ್ರಾಯದಲ್ಲಿ ಸಹಕಾರಿ ಬೇಸಾಯದಿಂದ ಆಹಾರೋತ್ಪಾದನೆಯು ಕಡಿಮೆಯಾಗುವುದಲ್ಲದೇ ಹೆಚ್ಚುವುದಿಲ್ಲ; ಮತ್ತು ವ್ಯಕ್ತಿ ಹಾಗೂ ಕುಟುಂಬಗಳ ಸ್ವಾತಂತ್ರ್ಯವೂ ಅಪಹೃತವಾಗುವುದು. ರಾಜಾಜಿಯವರು ವಾಸ್ತವಿಕವಾಗಿ ಸಹಕಾರಿತನಕ್ಕೆ ವಿರೋಧಿಯಲ್ಲ; ಆದರೆ, ಈಗ ಮುಂದೆ ತಂದಿರುವ ಸಹಕಾರಿ ಕೃಷಿಯಿಂದ ಭೂಮಿಯ ಮೇಲೆ ಒಬ್ಬನ ಒಡೆತನದ ಬದಲು ಬಹು ಜನತೆಯ ಒಡೆತನ ಬಂದಂತಾಗುವುದು. ಸಂಯುಕ್ತ ಮತ್ತು ಸಹಕಾರಿ ಕೃಷಿ ಎಂಬ ಘೋಷಣೆಗಳಲ್ಲಿ ಭ್ರಮೆಯುಂಟಾಗುವುದು. ಈ ಮಾದರಿಯ ಕೃಷಿ ವಿಧಾನದಿಂದ ಬಹುಸ್ವಾಮಿತ್ವವು ಬರುವುದರಿಂದ ಹಲವು ಸಮಗಾರರಿಂದ ಚರ್ಮವು ಹದಗೆಡುವುದು ಎಲ್ಲರಿಗೂ ಗೊತ್ತು. ಇದರಿಂದ ಕೃಷಿಯ ಕ್ಷೇತ್ರದಲ್ಲಿ ಒಂದು ಹೊಸ ತಾನಾಶಾಹಿಯು ಪ್ರಾರಂಭವಾಗಿ ಮೊದಲಿನ ವಿಧದ ಕೃಷಿ ಪದ್ಧತಿ ದೂರ ಹೋಗುವುದು.

ಕೆ. ಎಂ. ಮುನಶಿಜಿ

ಮಾಜಿ ಕೇಂದ್ರದ ಆಹಾರ ಮಂತ್ರಿ ಮತ್ತು ಉತ್ತರ ಪ್ರದೇಶದ ಮಾಜಿ ರಾಜ್ಯಪಾಲ ಶ್ರೀ ಕೆ. ಎಂ. ಮುನ್ಶಿಯವರು "ಇದು ಸ್ವೇಚ್ಛಾಪಹಳಿತೆಯ ನಿರ್ಮಾಣಕ್ಕೆ ಅನುಕೂಲವಾದ ಪರಿಸ್ಥಿತಿಗಳಿಗೆ ಜನ್ಮವೀಯುವ ಯೋಜನೆಗಳಲ್ಲಿ ಒಂದು" ಎನ್ನುತ್ತಾರೆ.

"ಈಗ, ಮುಂದಿರುವ ಪ್ರಯೋಗಗಳನ್ನು ಸಫಲಗೊಳಿಸಲು ದೇಶದಲ್ಲಿ ಅವಶ್ಯಕ ಸಾಧನಗಳೂ ಕಾರ್ಯಕರ್ತರೂ ದೇಶದಲ್ಲಿಲ್ಲ. ಇಂದಿನ ಸಹಕಾರಿ ಸಮಿತಿಗಳಲ್ಲಿ ಹೆಚ್ಚಿನವು ಸ್ಟೇಟ್ ಬ್ಯಾಂಕಿನ ಸಹಾಯದಿಂದ ಸಾಲಕೊಡುವ ಕೆಲಸಗಳನ್ನಷ್ಟೇ ನಡೆಸುತ್ತಿವೆ. ಆದುದರಿಂದ ಈ ಯೋಜನೆಯು ವಿಫಲಗೊಂಡಾಗ ಪ್ರಜಾಪ್ರಭುತ್ವ ವಿರೋಧಿಗಳು ಕ್ರೂರಾಚರಣೆ ಕೈಗೊಳ್ಳುವಂತೆ ಕೇಳಿಕೊಳ್ಳುವಂತಾಗುವುದು."

ವಿಫಲತೆಯ ಉದಾಹರಣೆ

ವಿಶ್ವದ ಯಾವ ದೇಶದಲ್ಲಿಯಾದರೂ ಸಹಕಾರಿ ವ್ಯವಸಾಯದಿಂದ ಉತ್ಪಾದನೆಯಲ್ಲಿ ಹೆಚ್ಚಳವಾದುದಿಲ್ಲ. ಕೃಷಿಕರಿಗೆ ಸಹಕಾರಿ ಕೃಷಿಯನ್ನು ಒತ್ತಾಯದಿಂದ ಹೇರಿದಾಗ ಅಲ್ಲಿ ಸೇಕಡಾ ೧೫ ರಿಂದ ೨೦ ರಷ್ಟು ಕಡಿಮೆ ಉತ್ಪಾದನೆಯಾದ ಘಟನೆಯುಗೊಸ್ಲಾವಿಯಾದಲ್ಲಿ ನಡೆದಿದೆ. ರಶ್ಯ ಮತ್ತು ಚೀನಗಳಲ್ಲಿ ಮಾನವ ಜೀವನದ ಬೆಲೆಯನ್ನು ತೆತ್ತು ಮಾನವ ಮೂಲ್ಯವನ್ನು ಬಲಿಯಿತ್ತು ಸಾಮೂಹಿಕ ಕೃಷಿ ಪ್ರಯೋಗ ಮಾಡಿವೆ. ಭಾರತದಲ್ಲಿಯೂ ಸಹಕಾರಿ ಕೃಷಿಯ ಪ್ರಯೋಗ ಮಾಡಿದಲ್ಲಿ ಅದೂ ಅಸಫಲವಾದುದು ಅನುಭವವೇದ್ಯವಾಗಿದೆ. (ಇದಕ್ಕೆ ಉತ್ತರವಾಗಿ ಶ್ರೀ ನೆಹರೂ ರೋಹತಕ ಜಿಲ್ಲೆಯಲ್ಲಿ ಸಹಕಾರಿ ಕೃಷಿಯಿಂದ ಕೃಷಿಯ ಉತ್ಪಾದನೆಯು ನೂರಕ್ಕೆ ಐವತ್ತರಷ್ಟು ಹೆಚ್ಚಿದೆ ಎಂದಿದ್ದಾರೆ.) ವಿಶ್ವದ ಯಾವ ಎಡೆಯಲ್ಲಿಯೇ ಆಗಲೀ ಸಹಕಾರಿ ಕೃಷಿಯು ಸ್ವೇಚ್ಛೆಯಿಂದ ತರಲ್ಪಟ್ಟಿಲ್ಲ ಮತ್ತು ಒತ್ತಾಯದಿಂದ ಅದು ಹೇರಲ್ಪಟ್ಟಲ್ಲಿ ವೃದ್ಧಿಯಾಗಿಲ್ಲ."

ಪ್ರೊ| ಎನ್. ಜಿ. ರಂಗ

ಪ್ರೊ| ಎನ್. ಜಿ. ರಂಗರ ಅಭಿಪ್ರಾಯ ಈ ರೀತಿಯಿದೆ: ಸಹಕಾರಿ ಕೃಷಿಯಿಂದ ಕೃಷಿಕರ ಸ್ವಾತಂತ್ರ್ಯವು ಅಪಹರಿಸಲ್ಪಡುವುದು. ಕೃಷಿ ಮೆನೇಜರರ ಒಂದು ಹೊಸ ವರ್ಗವು ನಮ್ಮೆದುರು ನಿಲ್ಲುವುದು. ಇದರಿಂದ ಕೃಷಿಕರಿಗೆ ಅನೇಕ ಕಠಿನತೆಗಳು ಎದುರಾಗುವುವು. ವಿಶ್ವದಲ್ಲಿ ಸಹಕಾರಿ ಕೃಷಿಯ ಪ್ರಯೋಗವಾದಲ್ಲೆಲ್ಲಾ ಅದು ಸಂಪೂರ್ಣ ವಿಫಲವಾಗಿದೆ. ರಶ್ಯ ಹಾಗೂ ಅನ್ಯ ಕಮ್ಯುನಿಸ್ಟ ದೇಶಗಳಲ್ಲಿಯೂ ಉತ್ಪಾದನೆಯು ತುಲನಾತ್ಮಕ ದೃಷ್ಟಿಯಿಂದ ಏರಿದ್ದಿಲ್ಲ.

ಒಟ್ಟಿನಲ್ಲಿ

ಹೀಗೆ ಚುಟುಕಿನಲ್ಲಿ ಈ ವಿರೋಧಿಗಳ ಅಭಿಪ್ರಾಯ ಹೇಳುವುದಾದರೆ, ಸಹಕಾರಿ ಕೃಷಿಯಿಂದ ವ್ಯಕ್ತಿ ಸ್ವಾತಂತ್ರ್ಯವು ಅಪಹರಿಸಲ್ಪಡುವುದು ಮತ್ತು ಉತ್ಪಾದನೆಯಲ್ಲಿ ಕೂಡ ಏರಿಕೆಯುಂಟಾಗುವುದಿಲ್ಲ.

ಇದಕ್ಕೆ ವಿರುದ್ಧವಾಗಿ ಸಹಕಾರಿ ವ್ಯವಸಾಯ ಪದ್ಧತಿಯ ಸಮರ್ಥಕರ ಅಂಬೋಣದ ವೈಖರಿ ಇದು— "ಸೇವಾ ಸಹಕಾರದ ಮೇಲೆ ಸಹಕಾರಿ ನಿಯಂತ್ರಣವಿರುವುದಿಲ್ಲ. ರೈತರಿಗೆ ತಮ್ಮ ಭೂಮಿಯ ಮೇಲಿನ ಒಡೆತನ ಶಾಶ್ವತವಾಗಿರುವುದು. ಆದುದರಿಂದ ವ್ಯಕ್ತಿ ಸ್ವಾತಂತ್ರ್ಯಾಪಹರಣದ ಪ್ರಶ್ನೆಯೇ ಏಳುವುದಿಲ್ಲ. ದೇಶದ ಕೃಷಿ ವ್ಯವಸ್ಥೆಯು ಸುಧಾರಿಸಬೇಕಾದರೆ ಮತ್ತು ಆಹಾರೋತ್ಪಾದನೆಯು ಹೆಚ್ಚಬೇಕಾದರೆ, ಸಹಕಾರಿ ಪದ್ಧತಿಯೊಂದೇ ಮಾರ್ಗ."

ಈ ದ್ವಿಮುಖಗಳಲ್ಲಿ ಸಿಂಹಮುಖ ಯಾವುದು ಮತ್ತು ವ್ಯಾಘ್ರಮುಖ ಯಾವುದು ಎಂದು ತಿಳಿಯುವಷ್ಟು ವಿವೇಚನಾಶಕ್ತಿ ಪ್ರತ್ಯೇಕ ಭಾರತೀಯನಿಗಿದೆಯೆ?

(ವಿವಿಧ ಮೂಲಗಳಿಂದ)

— ರಾಶಿ

ಹರಟೆ

ನೀವು ಏತಕ್ಕೆ ಕಣ್ಣೀರು ಸುರಿಸುತ್ತೀರಿ?

ಕಣ್ಣೀರು ಸುರಿಸದವರಿಲ್ಲ; ತಣ್ಣೀರು ಕುಡಿಯದವರಿಲ್ಲ; ಇದೂ ಒಂದು ಭವ್ಯವಾದ ಪರಂಪರೆ!

ಕಂಬನಿ ಸುರಿಸದ ಮಾನವರಿಲ್ಲ. ಅತಿರೇಕವಾದ ವ್ಯಥೆಯಿಂದ ಅನುತಾಪಗೊಂಡವರು ದುಃಖಾಶ್ರುಗಳನ್ನು ಹೊರಸೂಸುವಂತೆ, ಮೇರೆ ಮೀರಿದ ಆನಂದವನ್ನು ಅನುಭವಿಸುವವರು 'ಸಂತೋಷ ಬಾಷ್ಪ'ಗಳನ್ನು ಸುರಿಸುತ್ತಾರೆ. ಜನಿಸುವಾಗಲೇ ಅಳುತ್ತಾ ಕಣ್ಣೀರನ್ನು ಹರಿಯಿಸಿ, ನಂತರ ಜೀವನದ ಏರಿಳಿತಗಳಲ್ಲಿ ಹಲವಾರು ಬಗೆಯ ಕಂಬನಿ ಉದುರಿಸಿ ಜೀವನಾಂತ್ಯದಲ್ಲಿ ಪರಲೋಕಯಾತ್ರೆ ಕೈಗೊಳ್ಳುವಾಗಲೂ ಅಶ್ರುಧಾರೆಯನ್ನಿಳಿಸುವುದು ಮಾನವ ಧರ್ಮವಾಗಿದೆ. ಹುಟ್ಟಿದ ಶಿಶು ಅತ್ತರೂ, "ತಮ್ಮ ಕುಲವನ್ನುದ್ಧರಿಸಬಲ್ಲ ಪುತ್ರನು ಅವತಾರವೆತ್ತಿದನು" ಎಂದು ಶಿಶುವಿನ ಹೆತ್ತವರು ಹರ್ಷದ ದ್ಯೋತಕವಾಗಿ ಕಣ್ಣೀರು ಸುರಿಸಿದರೆ ಅದು ಹೆಚ್ಚಲ್ಲ! ಆನಂದ ಬಾಷ್ಪಗಳಿಗಿಂತಲೂ ದುಃಖಾಶ್ರುಗಳ ಪರಿಮಾಣವು ಹಿರಿದೆಂದು ಹೇಳಬಹುದು. ಮರಣಾವಸ್ಥೆಯಲ್ಲಿ ನರಳುತ್ತಿರುವವನು ಅನೇಕ ಜನರ ಕಣ್ಣುಗಳಲ್ಲಿ ನೀರು ಹರಿಯಲು ಕಾರಣೀಭೂತನಾಗುತ್ತಾನೆ.

ತನ್ನ ವ್ಯಥೆಯ ಕಾರಣವು ಇತರರ ದೃಷ್ಟಿಗೆ ಗೋಚರವಾಗಬೇಕೆಂದೇ ಕಂಬನಿ ಸುರಿಸುವವನಿದ್ದರೆ, ತಮ್ಮ ದುಃಖದ ಸುಳಿವು ಇತರರಿಗೆ ಸಿಗದಂತೆ ಮಾಡುವ ಉದ್ದೇಶದಿಂದ ರಾತ್ರಿಕಾಲದಲ್ಲಿ ಹಾಸಿಗೆಯನ್ನೇ ಕಣ್ಣೀರಿನಿಂದ ತೋಯಿಸುವ 'ನಿಗ್ರಹಶಾಲಿ'ಗಳೂ ಇದ್ದಾರೆ! ಕೆಲವರು ಆನಂದ ಬಾಷ್ಪಗಳನ್ನು ವ್ಯಕ್ತಪಡಿಸುವುದರಲ್ಲಿ ಜಾಣರಾದರೆ, ಇನ್ನು ಕೆಲವರು ದುಃಖದ ಸಂಕೇತವಾಗಿ ಕಂಬನಿಯನ್ನು ಮಾತ್ರ ಪ್ರದರ್ಶಿಸುವುದರಲ್ಲಿ ಗಟ್ಟಿಗರೆನಿಸಿಕೊಳ್ಳುವರು.

ಕವಿಗಳು ಕಣ್ಣೀರ ಧಾರೆಯನ್ನು ಹಲವು ವಿಶೇಷೋಕ್ತಿಗಳಿಂದ ವಿವರಿಸುವರು. 'ಪತಿಯಿಂದ ಪರಿತ್ಯಕ್ತಳಾದ ಸೀತಾದೇವಿಯು ಅರಣ್ಯದಲ್ಲಿ ನೊಂದ ಹೃದಯದಿಂದ, ಕಂಬನಿಯ ಪ್ರವಾಹವನ್ನೇ ಹರಿಯಿಸಿದಳು' ಎಂದು ಒಂದೆಡೆ ಬಣ್ಣಿಸಿದರೆ 'ಗಾಂಧರ್ವ ವಿಧಿಯಿಂದ ವಿವಾಹವಾದುದನ್ನೂ ಮರೆತು ದುಷ್ಯಂತನು ಶಕುಂತಲೆಯನ್ನು ತಿರಸ್ಕರಿಸಿದಾಗ, ಅವಳ ಕಣ್ಣೀರ ಕಟ್ಟೆಯೊಡೆಯಿತು' ಎಂದು ಮತ್ತೊಂದೆಡೆ ಮುಟ್ಟುವಂತೆ ವರ್ಣಿಸಿ ತಮ್ಮ ಚಮತ್ಕಾರವನ್ನು ತೋರಿಸಿದ್ದಾರೆ. ಇವರ ಆಶಯದಂತೆ ಇಷ್ಟು ಪರಿಮಾಣದ ಜಲರಾಶಿಯನ್ನು ಪರಮಾತ್ಮನು ಮಾನವರ ಕಣ್ಣಿನಲ್ಲಿ ತುಂಬಿಸಿದ್ದರೆ, ಈ ಭೂಮಿ ಎಂದೋ ಮುಳುಗಿ ಹೋಗುತ್ತಿತ್ತು! ಜಗತ್ತಿನ ಜೀ

(೧೩ನೇ ಪುಟ ನೋಡಿರಿ)

ಕುಟುಂಬ ಯೋಜನೆ

(ಮಿತ ಸಂತಾನ)

Family Planning

ಮಾಜಿ ಮಂತ್ರಿ ಎ. ಬಿ. ಶೆಟ್ಟರ ಮುನ್ನುಡಿಯೊಂದಿಗೆ ದ. ಕ. ಜಿಲ್ಲಾ ಕುಟುಂಬಯೋಜನಾ ಸಮಿತಿಯ ಪರವಾಗಿ ಪ್ರಕಟಿಸಲ್ಪಟ್ಟ ಕುಟುಂಬ ಯೋಜನೆಯ ಆವಶ್ಯಕತೆಯನ್ನೂ ಸಂತತಿಯನ್ನೂ ಒಂದು ಉಚಿತ ಪ್ರಮಾಣದಲ್ಲಿ ನಿರೋಧಿಸುವ ಸರಳ ಮಾರ್ಗವನ್ನೂ ಬೋಧಿಸುವ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಕೈಪಿಡಿಗಳು.

ಪ್ರತಿಯೊಂದರ ಬೆಲೆ 19 ನಯಾಪೈಸೆ.

ಪ್ರತಿಗಳು ಎಲ್ಲೆಲ್ಲಿಯೂ ವಿಕ್ರಯಿಸಲ್ಪಡುತ್ತವೆ

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 160/1959.

ನರಹರಿ ಸೆಟ್ — ವಾದಿ.

K. P. ಶ್ರೀನಿವಾಸ ಸೆಟ್

— ಪ್ರತಿವಾದಿ.

ಹಾಲಿ ಕೊಡಗು ಜಿಲ್ಲಾ ಪ್ರಸಾರ್ ಪೇಟೆಯಲ್ಲಿ ಸರಾಫರಾಗಿರುವ ಬೈಂದೂರು ಪುತ್ತುಸೆಟರ ಮಗ ಪ್ರತಿವಾದಿ K. P. ಶ್ರೀನಿವಾಸ ಸೆಟ್‌ರಿಗೆ ಈ ಮೂಲ್ಕ ತಿಳಿಯಪಡಿಸುವುದೇನಂದ್ರೆ—

ಪ್ರತಿವಾದಿಯಿಂದ ವಾದಿಗೆ ದಾವಾ ಮೂಲ ಗೇಣಿ, ಗೇಣಿ ಬಾಕಿ ಬಾಬ್ತು ಕಳೆದ ಸರ್ವಧಾರಿ ಸಂ|ರದ ಅಾಗಸ್ಟ್ ತಿಂಗಳಿಂದ ಸಂ|ರದ ವರೇಗೆ ವಾದಿಗೆ ಬರ ರೂ.171=12 ವಗೈರೆ ಬರಮಾಡಿಕೊಳ್ಳುವ ಕುರಿತು ದಾಖಲ್ಲ ಮಾಡಿದ ಮೇಲಿನ ದಾವಾ ಮೊಕದ್ದಮೆಯ ಕೋರ್ಟಿನಲ್ಲಿ ತಾರೀಕು 4–9–59ನೇ ದಿನ ಬೆಳಿಗ್ಗೆ 11 ಗಂಟೆಗೆ ತನ್ಕಿಗೆ ಇಟ್ಟಿದೆ ಎಂಬ ಸಂಗ್ತಿ ಈ ಮೂಲ್ಕ ತಿಳಿಸೋಣಾಗಿದೆ.

B. S. Shetty, B. A., B. L.
Vakil for Plaintiff.

Coondapoor, 12-8-59.

ಅತ್ಯಂತ ಹೆಚ್ಚು ಪ್ರಸಾರವುಳ್ಳ

ಎಸ್. ಆರ್. ಬೀಡಿಗಳು

ಎಲ್ಲಾ ಕಡೆಗಳಲ್ಲಿಯೂ ದೊರಕಲ್ಪಡುತ್ತವೆ.

SR

REGD.

S. R. BEEDI WORKS, UDIPI, S. K.

> ತನ್ನ ಮೂರ್ಖತನವನ್ನು ಅರಿತುಕೊಂಡಿರುವ ಮೂಢ ಮನುಷ್ಯನು ಕ್ರಮೇಣವಾಗಿಯಾದರೂ ತನ್ನ ತಪ್ಪನ್ನು ತಿದ್ದಿಕೊಳ್ಳುವುದು ಸಾಧ್ಯ, ಆದರೆ, ತಾನೇ ಪ್ರವೀಣನೆಂದು ತಿಳಿದುಕೊಳ್ಳುವ ಮೂರ್ಖನ ರೋಗ ಎಂದಿಗೂ ಗುಣವಾಗಲಾರದು.

NAVAYUGA

Founder —

A B SHETTY,

Former Minister for Public Health
Govt of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ಸಾರ
೩೮	೨೦-೮-'೫೯	೪೯

ಬಗಲಲ್ಲಿ ಚೂರಿಯೆ?

"ಭಾರತ ಚೀನಾ ಭಾಯಿ ಭಾಯಿ" ಎಂದು ಘೋಷಿಸಿದ್ದ ಕಾಲ ದೂರವುಳಿದು ಈಗ ಭಾರತ ಚೀನಾಗಳು ಬಾಯಿ ಬಾಯಿ ಬಡಿದುಕೊಳ್ಳುವ ಪರಿಸ್ಥಿತಿಯೊದಗಿದೆ ಎನ್ನಬೇಕು. ಪಂಚಶೀಲವನ್ನು ಎದುರಲ್ಲಿ ಚೆಂಬಲಿಸಿದ ವಿಶ್ವದ ಅತಿ ವಿಸ್ತಾರ ಹಾಗೂ ಜನಸಮೃದ್ಧವಾದ ಚೀನವು ಕೆಂಪು ಚೀನವಾಗಿದ್ದರೂ ಮಾನವತೆಯ ಕೈವಾರಿ ಭಾರತವು ಅದಕ್ಕೆ ತನ್ನ ಸಹಾನುಭೂತಿ ತೋರಿಸುತಿತ್ತು. ಒಂದಲ್ಲ ಹಲವು ಬಾರಿ ವಿಶ್ವಸಂಸ್ಥೆಯಲ್ಲಿ ಅದಕ್ಕೆ ಪ್ರಾತಿನಿಧ್ಯವಿರಬೇಕು ಎಂದು ವಾದಿಸಿತ್ತು. ಎಲ್ಲಿರೊಡನೆಯೂ ಏಕಸಮಾನವಾಗಿ ಬಾಳುವ ಭಾರತೀಯ ವಿದೇಶ ಧೋರಣೆಯಲ್ಲಿಯೂ ಕಮ್ಯುನಿಸ್ಟ್ ಚೀನಕ್ಕೆ ಒಂದು ಗೌರವಪೂರ್ಣವಾದ ಸ್ಥಾನವಿತ್ತು. ಎರಡೂ ರಾಷ್ಟ್ರಗಳು ಸ್ನೇಹ ಸೌಹಾರ್ದಗಳಿಂದ ಇನ್ನೂ ಮುಂದುವರಿಯುತಿದ್ದರೆ, ವಿಶ್ವದ ಚಲನೆಯಲ್ಲಿಯೂ ಒಂದು ಮಹತ್ವಪೂರ್ಣ ಘಟನೆಯಾಗಬಹುದೆಂದೂ ನಿರೀಕ್ಷಿಸಬಹುದಾಗಿತ್ತು. ಆದರೆ, ಕಮ್ಯುನಿಸ್ಟ ಚೀನವು ಇಗೀಗ ಭಾರತದ ಕಡೆಗೆ ಬೀರುತ್ತಿರುವ ದೃಷ್ಟಿಕೋಣದಲ್ಲಿ ಒಂದು ವಿಧದ ತೀಕ್ಷ್ಣತೆಯು ದೃಷ್ಟಿಗೋಚರವಾಗುತ್ತಿರುವುದು. ಈಗ ಪ್ರಧಾನಿ ನೆಹರೂ ಅವರಿಗೂ ತೋರಿಬಂದದು ವ್ಯಕ್ತವಾಗುತ್ತದೆ. ಧಂಧವಾಳಶಾಹಿ ರಾಷ್ಟ್ರವಿರಲಿ, ಸಮಾಜವಾದಿ ರಾಷ್ಟ್ರವಿರಲಿ, ಹಿರಿದಿರಲಿ ಕಿರಿಯದಿರಲಿ ಎಲ್ಲರೊಡನೆಯೂ ಸೌಹಾರ್ದವನ್ನಿಟ್ಟುಕೊಂಡು ಪಂಚಶೀಲವನ್ನು ನೆಮ್ಮಿಕೊಂಡು, ತನ್ನ ವಿಶಿಷ್ಟರೀತಿಯಲ್ಲಿ ಮುನ್ನಡೆಯುವ ಭಾರತದ ಶಿರೋವೇದನೆ ಈಗ ಉಲ್ಬಣಾವಸ್ಥೆಗೇರುವಂತಾಗಿದೆ.

ಟಿಬೇಟಿನ ಆಂತರಿಕ ಸ್ವಾಯತ್ತತೆಯನ್ನು ಮನ್ನಿಸಿದ ಚೀನದ ಕೆಂಪು ಸರಕಾರ ಈ ವರ್ಷದಾಡಿಯಲ್ಲಿ ಅದಕ್ಕೆ ಕೊಡಲಿಯೇಟನ್ನಿತ್ತುದು ಮಾತ್ರವಲ್ಲ, ಇತ್ತೀಚೆಗೆ ಟಿಬೇಟಿನ ಸರ್ವವ್ಯವಹಾರಗಳಲ್ಲಿಯೂ ತನ್ನ ಕೈವಾಡವನ್ನು ತೋರಿಸಿ, ಅಲ್ಲಿನ ಸಂಸ್ಕೃತಿಹಾಗೂ ಸಭ್ಯತೆಗಳ ಮೂಲವನ್ನೇ ಕೆದಕಿ ತೆಗೆದು ತಮಗನುಕೂಲವಾದ ಪರಿಸ್ಥಿತಿಯನ್ನು ನಿರ್ಮಿಸುವ ಒಂದು ಪ್ರಯತ್ನವನ್ನೂ ನಡೆಸುತ್ತದೆ. ಟಿಬೇಟನವರೆಗೆ ಕಮ್ಯುನಿಸ್ಟರು ಬಂದಂತಾಯಿತು. ಈಗ ಭಾರತ ಮತ್ತು ಟಿಬೇಟದ ನಡುವಣ ನೇಪಾಲ, ಭೂತಾನ ಹಾಗೂ ಸಿಕ್ಕಿಂ ಪರ್ವತ ರಾಜ್ಯಗಳಲ್ಲಿಯೂ ತನ್ನ ಬೇಳೆ ಬಿತ್ತಿ ಬೇಯಿಸುವ ಹಂಚಿಕೆಯೂ ತೆರೆಯ ಮರೆಯಲ್ಲಿಯೇ ನಡೆಯುತ್ತದೆ. ಎಂಬುದನ್ನು ತೀರಾ ಅಲ್ಲಗಳೆಯುವಂತಿಲ್ಲ. ಚೀನದ ವಿಶ್ವರೂಪವನ್ನು ತೋರಿಸುವ ಭೂಪಟದಲ್ಲಿ ಭಾರತದ ಗಡಿ ಪ್ರದೇಶದ ಕೆಲವೊಂದು ಭಾಗವನ್ನೂ ಅದು ರೇಖಿಸಿದೆ ಎಂದು ಈಗ ಜಗತ್ತೇ ತಿಳಿದಿದೆ. ಆದರೆ, ಇದಕ್ಕೆ ಭಾರತ ಸೂಚಿಸಿದ ಪ್ರತಿಭಟನೆಗೆ ಮೊದಮೊದಲು ಅದು ಪೂರ್ಣ ಪರಿಷ್ಕೃತ ನಕ್ಷೆಯಲ್ಲ ಎಂದಾದರೂ ಉತ್ತರಿಸುವ ಸೌಜನ್ಯವನ್ನು ತೋರಿಸುತಿತ್ತು; ಈಗ ಮಾತ್ರ ಮೌನವ್ರತಾಚಾರಣೆ ಮಾಡುತ್ತಿದೆ! ಟಿಬೇಟದಲ್ಲಿ ನೆಲಸಿರುವ ಭಾರತೀಯರನ್ನೂ ಕಡೆಗಣಿಸಲಾಗುತ್ತಿದೆ. ಭಾರತದ ಗಡಿಪ್ರದೇಶದಲ್ಲೂ ಚೀನೀಯ ಗುಪ್ತಚಾರರೂ ಸೇನೆಗಳೂ ಇವೆ ಎಂಬುದನ್ನು ಮರೆಯುವಂತಿಲ್ಲ. ಇಷ್ಟು ಮಾತ್ರವಲ್ಲದೇ ಭಾರತವನ್ನು ಆದರ್ಶ ರಾಷ್ಟ್ರವೆಂದು ಕರೆದ ಕೆಂಪು ಚೀನೀಯರ ನಾಲಗೆಯು ಇದೀಗ ಅದನ್ನು ಹಲವಾರು ಉಪನಾಮಗಳಿಂದಲೂ ಹಸರಿತ್ತತೊಡಗಿದೆ. ಸಾಮ್ರಾಜ್ಯವಾದಿಗಳ ಕೈವಾರಿ ಹಾಗೂ ಸಾಮ್ರಾಜ್ಯವಾದಿ ಎಂಬಿತ್ಯಾದಿಯಾಗಿ ಬಿರುದುಗಳನ್ನೂ ದಾನಮಾಡತೊಡಗಿ, ಭಾರತದ ಬಗ್ಗೆ ಅಪಚಾರವೆಸಗುವುದನ್ನು ಕಣ್ಣಾರೆ ಕಾಣುವಂತಾಗಿದೆ. ಇವೆಲ್ಲವೂ ಮೈತ್ರಿಯುತರ ಲಕ್ಷಣವೆಂದು ಹೇಳುವುದು ಸಾಧ್ಯವಿಲ್ಲತಾನೆ?

ಭಾರತ—ಚೀನ ಸಂಬಂಧ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿರುವುದು ಶೋಚನೀಯ. ಹಾಗೆಂದು ಈಸಂಬಂಧ ಪುನಃ ಬೆಸೆಯಲ್ಪಡಬಹುದೆಂದೂ ತೋಚುವುದಿಲ್ಲ. ಚೀನೀಯ ಸಾಮ್ರಾಜ್ಯ ಶಾಹಿಯ ವಿಶ್ವರೂಪ ದರ್ಶನವಿನ್ನೂ ಆಗವೇಕಷ್ಟೆ. ಆಗ, ಇಡಿ ದಕ್ಷಿಣ ಏಶ್ಯವನ್ನೇ ತಾನು ಕಬಳಿಸುವ ಹಂಚಿಕೆ ಮಾಡುವುದೆಂಬುದೇನೂ ಕಲ್ಪನಾತೀತವೆನಿಸಲಾರದು. ಭಾರತದಲ್ಲಿ ಯಾದರೋ ಪ್ರಜಾಪ್ರಭುತ್ವದ ಹೆಸರಿನಲ್ಲಿ ಪ್ರಜಾಪ್ರಭುತ್ವದಲ್ಲಿ ವಿಶ್ವಾಸದ ಹೊದಿಕೆಯನ್ನು ಎಳೆದುಕೊಂಡ, ಕಮ್ಯುನಿಸ್ಟ ಪಕ್ಷಕ್ಕೂ ಮಾನ್ಯತೆಯಿದೆ. ಆದರೆ, ಈ ಪಕ್ಷದ ಸಕಲ ಆಗು ಹೋಗುಗಳಿಗೂ ವಿದೇಶೀಯ ಕೆಂಪು ರಾಜ್ಯಗಳ ನಾಯಕರೇ ಕಾರಣವೆಂದು ಎಲ್ಲರಿಗೂ ಗೊತ್ತು. ಚೀನಾವು ಟಿಬೇಟದಲ್ಲಿ ಮಾಡಿದ ಆಕ್ರಮಣವನ್ನು ಭಾರತ ಪ್ರತಿಭಟಿಸಿದಾಗ ಭಾರತೀಯ ಕಮ್ಯುನಿಸ್ಟರು ಭಾರತದ ನೀತಿಯನ್ನೇ ವಿರೋಧಿಸಿದ್ದರು. ಆದರೆ, ಕಮ್ಯುನಿಸ್ಟರು ರಾಷ್ಟ್ರದ್ರೋಹದ ಪರಮಾಪರಾಧವೆಸಗುತ್ತಿರುವಂತೆಯೇ ಒಂದು ದಿನ ತಮ್ಮ ಬಾಯಿ ಮುಚ್ಚಿಕೊಳ್ಳ ತೊಡಗಿದರು. ಅವರ ಈ ವರ್ತನೆಗೆ ಅಲ್ಲಿಂದ ಬಂದ ಆದೇಶವೇ ಕಾರಣವಲ್ಲ ಎಂದು ನಂಬಲು ಅರ್ಹವಾದ ಆಧಾರಗಳಿಲ್ಲ. ಇತ್ತ ಕೇರಳದಲ್ಲಿ ರಾಜ್ಯವಾಳುತಿದ್ದ ಕಮ್ಯುನಿಸ್ಟ ಸರಕಾರವನ್ನೂ ಭಾರತ ಸರಕಾರ ಮನೆಗೆ ಕಳಿಸಿತು. ಇದರಿಂದ ಕಮ್ಯುನಿಸ್ಟರಿಗೆ ಆಡಳಿತ ಸೂತ್ರವನ್ನು ತಮ್ಮ ಸ್ವಾರ್ಥಕ್ಕೆ ಉಪಯೋಗಿಸುವ ಸದವಕಾಶ ತಪ್ಪಿತಾದರೂ ಈ ಘಟನೆಯ ಪರಿಣಾಮ, ಬಾಹ್ಯ ಕಮ್ಯುನಿಸ್ಟ ರಾಷ್ಟ್ರಗಳ ಮೇಲೆಯೂ ಆಗಲಾರದೆಂದು ಹೇಳುವುದು ಕಷ್ಟ. ಹೀಗೆ ಭಾರತವು ತನ್ನ ನೆರೆಯಲ್ಲಿಯೆ ಕಮ್ಯುನಿಸ್ಟರನ್ನು ಕಾಣುತ್ತಿದೆ; ಅವರಿನ್ನೂ ಕೊಂಚ ಮುಂದುವರಿದು, ಭಾರತದ ಮೇಲೆಯೂ ಪ್ರತೀಕಾರ ಭಾವನೆಯನ್ನು ಮೂಡಿಸುವುದು ಮಾತ್ರ ಬಾಕಿಯಿದೆ. ಚೀನವು ಈಗ ಕೈಗೊಂಡಿರುವ ಮೌನವ್ರತದ ಅಂತಾರಹಸ್ಯವೂ ಇದೇ ಏಕಾಗಿರಬಾರದು! ಎಂತಲೇ ಪ್ರಧಾನಿ ನೆಹರೂ ಈ ಸಂಬಂಧದಲ್ಲಿ ಚಿಂತಿತ ಮನಸ್ಕರಾಗಿದ್ದಾರೆ. ಹಾವಿಗೆ ಹಾಲೆರೆದ ಫಲವನ್ನು ಉಣ್ಣುವ ಮೊದಲೇ ಭಾರತವನ್ನು ಕಮ್ಯುನಿಸ್ಟ ಸರ್ಪದಿಂದ ಉಳಿಸುವುದು ಆದ್ಯ ಕರ್ತವ್ಯವೆಂಬುದನ್ನು ಮರೆಯದೆ ಪ್ರಧಾನಿಯವರೂ ಸಂರಕ್ಷಣಾ ಮಂತ್ರಿಯವರೂ ಈಗಿಂದೀಗಲೇ ಸೂಕ್ತ ಕಾರ್ಯಕ್ರಮ ಯೋಜಿಸಿಕೊಳ್ಳುವುದು ಆಗತ್ಯ.

ಕಾಂಗ್ರೆಸ್ ಮತ್ತು ಸ್ವತಂತ್ರ ಪಕ್ಷ

ಕಾಂಗ್ರೆಸ್ ಸಹಕಾರಿ ವ್ಯವಸಾಯದ ಮೂಲಕವೇ ಭಾರತದ ಉನ್ನತಿ ಎಂಬ ಧೋರಣೆಯನ್ನು ಅನುಸರಿಸಿ, ಭೂ ಹಿಡುವಳಿಯ ಮೇಲೆ ಪರಮಾವಧಿ ಮಿತಿಯನ್ನು ಹೇರುವುದು, ರೈತರು ಸ್ವೇಚ್ಛೆಯಿಂದ ಸಹಕಾರಿ ಸಂಘಗಳಲ್ಲಿ ಸೇರಿಕೊಂಡು ಅವುಗಳ ಮೂಲಕ ವ್ಯವಸಾಯ ಮಾಡುವಂತೆ ಉತ್ತೇಜಿಸುವುದು; ಸಮಾಜವಾದ ಮಾದರಿಯ ಸಮಾಜ ಸ್ಥಾಪನೆಯನ್ನು ಮಾಡುವುದು ಮೊದಲಾದ ಕಾರ್ಯಕ್ರಮಗಳನ್ನು ಇಟ್ಟುಕೊಂಡು, ರಾಷ್ಟ್ರವನ್ನೊಂದು ಗುರಿಯತ್ತ ಕೊಂಡೊಯ್ಯುತ್ತಿರುವಾಗ, ಈ ಧ್ಯೇಯ ಧೋರಣೆಗಳಿಗೆ ವಿರುದ್ಧವಾಗಿ ಸ್ವತಂತ್ರ ಪಕ್ಷವು ತಲೆಯೆತ್ತಿದೆ. ಕಾಂಗ್ರೆಸ್ ಇಂದು ಧರ್ಮವನ್ನೂ ತತ್ವವನ್ನೂ ಪಾದದಡಿಯಲ್ಲಿ ತುಳಿ, ಅದು ಜನತೆಯ "ಸ್ವಾತಂತ್ರ್ಯ"ವನ್ನು ಅಪಹರಿಸಿರುವುದಲ್ಲದೇ ಸಂವಿಧಾನದ ಮೂಲಕ ರಾಷ್ಟ್ರೀಯರಿಗೆ ಈಯಲಾದ ಮೂಲಭೂತ ಹಕ್ಕುಗಳನ್ನೂ ಕಡೆಗಣಿಸುತ್ತಿದೆ; ಹೀಗಾಗಿ ಕಾಂಗ್ರೆಸ್ ತನ್ನ ಹಿಂದಿನ ಪರಂಪರೆಯನ್ನೂ ಹಿಂದಿನ ಧ್ಯೇಯ, ಗುರಿ ಸಾಧನೆಯ ವಿಧಾನಗಳನ್ನೂ ಮರೆತು ಬಿಟ್ಟು ಕಮ್ಯುನಿಸ್ಟ್ ಆಗಿ ಪರಿವರ್ತನೆಗೊಳ್ಳುತ್ತಿದೆ ಎಂಬ ದೂರನ್ನು ಸ್ವತಂತ್ರ ಪಕ್ಷ ಹೇರುತ್ತದೆ. ಕಾಂಗ್ರೆಸ್ ಕಮ್ಯುನಿಸ್ಟ್ ಪಕ್ಷದ ತತ್ವವನ್ನೆಂದೂ ಒಪ್ಪುವುದಿಲ್ಲ; ಆದರೂ ಸಮಾಜವಾದದ ಉತ್ತಮೋತ್ತಮ ತತ್ವಗಳಲ್ಲಿ ಮಾತ್ರ ಆಸಕ್ತಿ ವಹಿಸುತ್ತಿದೆ. ಭಾರತದಂತಹ ವಿಶಾಲವಾದ, ಜನನಿಬಿಡವಾದ ಮತ್ತು ಕೃಷಿ ಪ್ರಧಾನವಾದ ಪ್ರಜಾಪ್ರಭುತ್ವ ರಾಷ್ಟ್ರದ ಬಡತನವನ್ನು ದೂರ ಓಡಿಸಿ, ಜನತೆಗೆ ಅನ್ನಬಟ್ಟೆ ಮನೆ, ವಿದ್ಯೆ ಮೊದಲಾದ ಅವಶ್ಯಕ ಸೌಕರ್ಯವನ್ನೊದಗಿಸುವ ಮಹೋದ್ದೇಶದಿಂದ, ಅಧಿಕ ಆಹಾರೋತ್ಪಾದನೆ ಹಾಗೂ ರೈತ ಜನರ ಆರ್ಥಿಕ ಸ್ಥಿತಿಗತಿ ಸುಧಾರಣೆಯಾಗುವುದೆಂದು ಮನಗಂಡು ಈ ಸಹಕಾರಿ ವ್ಯವಸಾಯ ಪದ್ಧತಿಯತ್ತ ಒಲಿದಿದೆ. ಆದರೆ, ಸಹಕಾರಿ ವ್ಯವಸಾಯವು ಸಾಮ್ಯವಾದಿ ರಾಷ್ಟ್ರವಾದ ಚೀನದಲ್ಲಿಯೇ ನಿಷ್ಫಲವಾಗಿರುವಾಗ, ಭಾರತದ ಗತಿ? ಇದೇ ಮೊದಲಾದ ಕಾರಣಗಳಿಂದ ಕಾಂಗ್ರೆಸ್ಸಿನ ವಿರೋಧಿಯಾಗಿ, ಸ್ವತಂತ್ರ ಪಕ್ಷ ಸ್ಥಾಪನೆಗೊಂಡಿದೆ. 'ಸಾಮಾಜಿಕೋದ್ಧಾರಗೈಯುವ, ಧಾರ್ಮಿಕ ಭಾವನೆಗಳಿಗೆ ಪ್ರಾಧಾನ್ಯವೀಯುವ ಈ ಪಕ್ಷದ ಗುರಿಯು ಈ ಯುಗಕ್ಕೆ ಸೇರಿದುದಲ್ಲ ಎಂದು ಪಂ। ನೆಹರೂ ಅನ್ನುತ್ತಾರೆ. ಅದೇನೇ ಇರಲಿ, ಸ್ವತಂತ್ರ ಪಕ್ಷದ ಬಲ ದಿನೇ ದಿನೇ ಬೆಳೆಯುತ್ತದೆ. ಜತೆಗೆ ಕಾಂಗ್ರೆಸ್‌ನ ಶಕ್ತಿ ಕುಂಟುವುದೂ ದೃಗ್ಗೋಚರವಾಗುತ್ತಿದೆ. ಕಾಂಗ್ರೆಸ್ ಮಂತ್ರಿಗಳು ಕೆಲವರು ತಮ್ಮ ಘನ ಸ್ಥಾನ, ಗುರುತರ ಹೊಣೆಗಾರಿಕೆ ಅರಿಯದೆ ವ್ಯರ್ಥವಾಗಿ ಜನತೆಯನ್ನು ಉದ್ರೇಕಿಸುವ ಕಾರ್ಯ ಮಾಡುವುದರಿಂದಲೇ ಇತರ ಪಕ್ಷಗಳ ಬಲ ಬೆಳೆಯಲು ಕಾರಣವಾಗುತ್ತದೆ. ನಮ್ಮ ಮಂತ್ರಿಗಳ ಮೇಲೆ ಜನತೆಗೆ ವಿಶ್ವಾಸವಂತೂ ದೂರವಿರಲಿ; ಒಂದು ಗೌರವದ ಭಾವನೆಯೂ ಇಲ್ಲ ಎಂದಾದರೆ, ಅದಕ್ಕೆ ಯಾರು ಹೊಣೆ? ದಿಲ್ಲಿಯಲ್ಲಿ ಪ್ರಧಾನಿ ನೆಹರೂ ಕೂತು, ಕಾಂಗ್ರೆಸ್ ಜನಹಿತ ಬಯಸುವ ಪಕ್ಷ ಎಂದು ಹೇಳಿದರೆ ಸಾಲದು; ಬೆಂಗಳೂರಿನ ಕಾಂಗ್ರೆಸ್ ಸರಕಾರವೂ ಆ ಜನಹಿತತ್ವವನ್ನು ಜನತೆಯೆದುರು ಬಿಚ್ಚಿ ತೋರಿಸಬೇಡವೆ? ಇಲ್ಲವಾದರೆ ಜನರು ಏನೆಂದುಕೊಳ್ಳಬೇಕು?

ಸಂಕ್ಷಿಪ್ತ ಸುದ್ದಿಗಳು

ಮೈಸೂರಿಗೊಂದು ಅಂಚೆ ಸರ್ಕಲ್

ಭಾರತ ಸರಕಾರದ ಸಾರಿಗೆ ಹಾಗೂ ಸಂಪರ್ಕ ಶಾಖೆಯ ಮಂತ್ರಿ ಶ್ರೀ ಎಸ್. ಕೆ. ಪಾಟೀಲರು ಮುಂದಿನ ವರ್ಷದಿಂದ ಮೈಸೂರಿಗೊಂದು ಪ್ರತ್ಯೇಕ ಅಂಚೆವೃತ್ತದನ್ನು ಪ್ರಾರಂಭಿಸಲಾಗುವುದೆಂದು ಭರವಸೆಯಿತ್ತಿದ್ದಾರೆ. ಈಗ ಹೈದರಾಬಾದ್ ಸರ್ಕಲ್ಲಿನಲ್ಲಿರುವ ಕೆಲವು ಜಿಲ್ಲೆಗಳನ್ನು ಮುಂಬಯಿ ಮತ್ತು ಮೈಸೂರುಗಳಿಗೆ ವರ್ಗಾಯಿಸಿ ಉಳಿದುವನ್ನು ಆಂಧ್ರದೊಡನೆ ಸೇರಿಸುವುದಾಗಿಯೂ ಹೈದರಾಬಾದದಲ್ಲಿ ಆಂಧ್ರ ವೃತ್ತದ ಪ್ರಧಾನ ಕಚೇರಿಯನ್ನಿಡುವುದಾಗಿಯೂ ಅವರು ಹೇಳಿದರು. ಮೈಸೂರಿಗೊಂದು ಪ್ರತ್ಯೇಕ ಅಂಚೆ ತಂತಿವೃತ್ತ ಬೇಕೆಂಬ ಕೇಳಿಕೆಯು ಒಂದೆರಡು ವರ್ಷಗಳಿಂದ ಬಲವತ್ತರವಾಗಿದೆ.

ಕೇರಳದಾಡಳಿತೆಯ ವರದಿ

ಕೇರಳದಲ್ಲಿ ರಾಷ್ಟ್ರಾಧ್ಯಕ್ಷರ ಆಳಿಕೆಯನ್ನು ಘೋಷಿಸಿದುದರ ಬಗ್ಗೆ ಲೋಕಸಭೆಯಲ್ಲಿ ಸಂಮತಿಗಾಗಿ ಇಟ್ಟ ಗೊತ್ತುವಳಿಯನ್ನು ಮಂಡಿಸಿದಾಗ, ಈ ಘೋಷಣೆಗೆ ಅನುಕೂಲವಾದ ರಾಜ್ಯಪಾಲರ ವರದಿಯನ್ನೂ ಸಭೆಯ ಮುಂದಿರಿಸಬೇಕೆಂದು ಕೆಲವು, ಮುಖ್ಯವಾಗಿ ಕಮ್ಯುನಿಸ್ಟ ಸದಸ್ಯರು ಕೇಳಿಕೊಂಡಿದ್ದರು ಸಭಾಧ್ಯಕ್ಷರೂ ಆ ವರದಿಯ ಸಾರಾಂಶವನ್ನು ಲೋಕಸಭೆಯ ಮುಂದಿಡುವಂತೆ ಸೂಚಿಸಿದ್ದು ತದನ್ವಯವಾಗಿ ಅದು ಲೋಕಸಭೆಯ ಮುಂದೆ ಬಂದಿದೆ. ಈ ವರದಿಯಲ್ಲಿ ರಾಜ್ಯಪಾಲ ಡಾ॥ ರಾಮಕೃಷ್ಣರಾಯರು ಕೇರಳದ ಕಮ್ಯುನಿಸ್ಟ ಸರಕಾರದ ವಿರುದ್ಧ ಹೇರಲಾದ ಪ್ರಜಾಪ್ರಭುತ್ವದ ಅಧಃಪತನ ಮತ್ತು ದುರಾಡಳಿತೆಯ ಆರೋಪಗಳಲ್ಲಿ ಸಾಕಷ್ಟು ಹುರುಳಿ

ರುವುದೆಂದೂ, ಕಮ್ಯುನಿಸ್ಟ ಸರಕಾರವು ರಾಜ್ಯದ ಬಹುಸಂಖ್ಯ ಪ್ರಜೆಗಳ ಬೆಂಬಲ ಕೈರವಾಗಿರುವುದು ಸಹಜವೆಂದೂ ಅಭಿಪ್ರಾಯಪಟ್ಟು ರಾಷ್ಟ್ರಾಧ್ಯಕ್ಷರು ಸಂವಿಧಾನದ ೩೫೬ನೆಯ ಅನುಚ್ಛೇದದನ್ವಯ ಕಾರ್ಯಕ್ರಮ ಕೈಗೊಳ್ಳಬೇಕೆಂದೂ ಸೂಚಿಸಿರುವರು. ಬೇರೆ ರಾಜ್ಯಗಳಲ್ಲಿನ ಜನತೆಯೂ ಕೊಂಚಮಟ್ಟಿಗೆ ಸರಕಾರದ ಮೇಲೆ ಅವಿಶ್ವಾಸದಿಂದಿದ್ದರೂ ಅದಕ್ಕೆ ವೈಯಕ್ತಿಕ ಅಸಾಮರ್ಥ್ಯವೇ ಕಾರಣವೆಂದೂ ಕೇರಳದಲ್ಲಿ ಅಧಿಕಾರಾರೂಢ ಪಕ್ಷದ ಪಕ್ಷಪಾತವೇ ಕಾರಣವೆಂದೂ ಅದರಲ್ಲಿ ಹೇಳಲಾಗಿದೆ.

ಭೂಸುಧಾರಣಾ ಮಸೂದೆ

ಮೈಸೂರು ಭೂಸುಧಾರಣಾ ಮಸೂದೆಯು ವಿಧಾನಸಭೆ ಮತ್ತು ಪರಿಷತ್ತುಗಳಲ್ಲಿ ಬಹಳಷ್ಟು ಚರ್ಚೆಗೆ ಗುರಿಯಾಯಿತು. ರಾಜ್ಯದ ಕಂದಾಯ ಮಂತ್ರಿ ಕಡಿದಾಳ ಮಂಜಪ್ಪನವರು ರಾಜ್ಯದಲ್ಲಿ ಶ್ರೀಮಂತರು ಮತ್ತು ಬಡವರ ಮಧ್ಯೆ ಇರುವ ಅಸಮಾನತೆಯನ್ನು ಹೋಗಲಾಡಿಸುವುದೇ ಸರಕಾರದ ಕರ್ತವ್ಯವೆಂದೂ ವ್ಯವಸಾಯದ ಆದಾಯದ ಮೇಲೆ ಮಿತಿ ಹೇರದೆ ವ್ಯವಸಾಯದ ಕ್ಷೇತ್ರಕ್ಕೆ ಮಾತ್ರ ಮಿತಿ ಹೇರಲಾಗುವುದೆಂದೂ ಸರಕಾರಿ ಭೂಮಿಯನ್ನು ಸಾಗುವಳಿಗೆ ಕೊಡುವ ಕೆಲಸ ಈಗಾಗಲೇ ಪ್ರಾರಂಭವಾಗಿರುವುದೆಂದೂ ಸಹಕಾರ ವ್ಯವಸಾಯ ಪದ್ಧತಿಯನ್ನನುಸರಿಸಲು ಒತ್ತಾಯ ಹೇರಲಾಗುವುದಿಲ್ಲವೆಂದೂ ಚಿಕ್ಕಪುಟ್ಟ ಹೊಲದೊಡೆಯರ ಹಿತಾಸಕ್ತಿಗಳನ್ನು ರಕ್ಷಿಸುವ ಪ್ರಯತ್ನ ಮಾಡಲಾಗುವುದೆಂದೂ ಹೇಳಿದರು. ಮುಂದೆ ಈ ಮಸೂದೆಯು ಪರಿಶೀಲನಾ ಸಮಿತಿಗೆ ಒಪ್ಪಿಸಲ್ಪಟ್ಟಿತು.

ಅಂತಾರಾಷ್ಟ್ರೀಯ ಅಭಿವೃದ್ಧಿ ಮಂಡಳಿ

ಅನಭಿವೃದ್ಧ ದೇಶಗಳಿಗೆ ತಮ್ಮ ಅಭಿವೃದ್ಧಿ ಸಾಧಿಸಲು ನೆರವಾಗುವಂತೆ ಸಾಲ ನೀಡುವ ಒಂದು ಹೊಸ ಸಂಸ್ಥೆಯನ್ನು ಸ್ಥಾಪಿಸುವ ವಿಷಯವಾಗಿ ಅಮೇರಿಕೆಯು ಈಗ ಆತುರ ತೋರಿಸುತ್ತಿದೆ. ಈ ಸಂಸ್ಥೆಯ ರಚನೆಯ ಬಗ್ಗೆ ಅಮೇರಿಕೆ ಹಾಗೂ ಇತರ ಹಲವಾರು ಮುಂದರಿದ ಮತ್ತು ಹಿಂದುಳಿದ ರಾಷ್ಟ್ರಗಳ ಸರಕಾರಗಳ ನಡುವೆ ಮಾತುಕತೆಯು ಒಂದು ವರ್ಷದಿಂದ ನಡೆದು ಬರುತ್ತಿದೆ. ಜಾಗತಿಕ ಬೇಂಕಿನೊಡನೆ ನಿಕಟ ಸಂಬಂಧವಿಟ್ಟುಕೊಳ್ಳುವ ಈ ಸಂಸ್ಥೆಯ ಹೆಸರು ಅಂತಾರಾಷ್ಟ್ರೀಯ ಅಭಿವೃದ್ಧಿ ಮಂಡಲವೆಂದಿರುವುದು. ಇದರ ಮೂಲ ಬಂಡವಳವು ೧೦೦೦ ಕೋಟಿ ಡಾಲರುಗಳಿದ್ದು ಇದರ ಮೂರರಲ್ಲೊಂದು ಪಾಲನ್ನು ಅಮೇರಿಕೆಯೇ ಕೊಡುವುದು. ಅತಿ ಕಡಿಮೆ ದರದ ಬಡ್ಡಿಯಲ್ಲಿ ಹಿಂದುಳಿದ ರಾಷ್ಟ್ರಗಳಿಗೆ ದೀರ್ಘಾವಧಿಯ ಸಾಲಗಳನ್ನು ಕೊಡುವುದಲ್ಲದೇ ಸ್ಥಳೀಯ ಹಣದಲ್ಲೇ ಸಾಲವನ್ನೂ ಮರಳಿ ಪಡೆಯಲಾಗುವುದು. ಈ ಮಂಡಳ ರಚನೆಯ ಬಗ್ಗೆ ಜಾಗತಿಕ ಬೇಂಕಿನ ಈ ವರ್ಷದ ವಾರ್ಷಿಕ ಸಭೆಯಲ್ಲಿ ಪ್ರಸ್ತಾವಿಸುವ ಸಂಭವವು ಹೆಚ್ಚಾಗಿದೆ. ೫ ವರ್ಷಾನಂತರ ಬೇಕಾದರೆ, ಸಂಸ್ಥೆಯ ಬಂಡವಳವನ್ನು ಏರಿಸಬಹುದು.

ರಾಜಾಜೀಯವರ ಪ್ರತಿಜ್ಞೆ

ಸ್ವತಂತ್ರ ಪಕ್ಷದ ಸಂಸ್ಥಾಪಕರಾದ ಚಕ್ರವರ್ತಿ ರಾಜಗೋಪಾಲಾಚಾರಿಯವರು ದಕ್ಷಿಣ ಭಾರತದಲ್ಲಿ ಸ್ವತಂತ್ರಪಕ್ಷವನ್ನು ಸಾಕಷ್ಟು ಬಲಗೊಳಿಸದೆ ತಾನು ದಿಲ್ಲಿಗೆ ಪಾದಾರ್ಪಣೆ ಮಾಡುವುದಿಲ್ಲ ಎಂದು ಪ್ರತಿಜ್ಞೆಯನ್ನು ತೊಟ್ಟಿದ್ದಾರೆ. ಕಾಂಗ್ರೆಸ್ ಸರಕಾರವು ಜನತೆಯನ್ನು ತಪ್ಪು ದಾರಿಯಲ್ಲಿ ಕೊಂಡೊಯ್ಯುತ್ತಿದೆ ಎಂದವರು ದೂರಿ ಅದನ್ನು ಪ್ರತಿಭಟಿಸಲು ಬಯಸುವವರೆಲ್ಲರೂ ಸ್ವತಂತ್ರ ಪಕ್ಷವನ್ನು ಸೇರಬೇಕೆಂದು ಕೇಳಿಕೊಂಡಿದ್ದಾರೆ.

ಅಲ್ಲಲ್ಲಿಯ ಸುದ್ದಿ ಸಾರ

ಉಡುಪಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ವಾಡಿಕೆಯಂತೆ ಶಾಲೆ ಕಾಲೇಜುಗಳಲ್ಲಿ ಸಂಘ ಸಂಸ್ಥೆಗಳಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಪೌರ ಸಭೆ ಮತ್ತು ಸಾರ್ವಜನಿಕ ಸಮಿತಿಯ ವತಿಯಿಂದ ಗಾಂಧೀ ಮೈದಾನದಲ್ಲಿ ನಗರ ಸಭಾಧ್ಯಕ್ಷ ಡಾ| ಕೆ. ಎಲ್. ಐತಾಳರು ಧ್ವಜಾರೋಹಣ ಮಾಡಿ ಆ ದಿನದ ಮಹತ್ವವನ್ನು ವಿವರಿಸಿದರು. ಬಳಿಕ ಶಾಲಾ ಮಕ್ಕಳಿಗೆ ಸಿಹಿ ತಿಂಡಿ ವಿತರಣೆ ಮಾಡಲಾಯಿತು. ಸಂಜೆ ಸಾರ್ವಜನಿಕ ಸಭೆಯು ಬೋರ್ಡ್ ಹೈಸ್ಕೂಲಿನ ಜನತಾ ಸದನದಲ್ಲಿ ಶ್ರೀ. ಟಿ. ಎ. ಪೈಗಳ ಹಿರಿತನದಲ್ಲಿ ನೆರವೇರಿತು. ಮುನಿಸಿಪಲ್ ಕಮಿಶನರ್ ಶ್ರೀ ಐ. ಜೋಶಿಯವರವರು ಅಧ್ಯಕ್ಷರನ್ನು ಸ್ವಾಗತಿಸಿದ ತರುವಾಯ ಡಾ| ಕೆ. ಎಲ್. ಐತಾಳರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರು ಬೇರೆಬೇರೆ ವಿದ್ಯಾರ್ಥಿವೇತನಗಳನ್ನು ವಿತರಣೆ ಮಾಡಿ ಎಲ್ಲರೂ ದುಡಿದು ಕರ್ತವ್ಯ ವಿವರಣೆ ಮಾಡಿದರೆ ಮಾತ್ರ ಸ್ವಾತಂತ್ರ್ಯವು ಉಳಿದು ಬೆಳೆದೀತು ಎಂದರು. ಡಾ| ವಿ. ಎಲ್. ಪಂಡಿತರು ಧನ್ಯವಾದವಿತ್ತ ಬಳಿಕ ಮನೋರಂಜನೆಯ ಕಾರ್ಯಕ್ರಮಗಳಾದುವು.

ಕಸೂತಿ ಮತ್ತು ಹೊಲಿಗೆ ಶಾಲೆಯ ಉದ್ಘಾಟನೆ.... ಮಂಗಳೂರಲ್ಲಿ ಶ್ರೀ ಕೆ. ಕೆ. ಆರ್. ಶೇಟರು ದೈವಜ್ಞ ಬ್ರಾಹ್ಮಣ ಮಹಿಳೆಯರಿಗಾಗಿ ಏರ್ಪಡಿಸಿದ ಕಸೂತಿ ಮತ್ತು ಹೊಲಿಗೆ ಶಾಲೆಯು ತಾ. 14ರಲ್ಲಿ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದ ವಠಾರದ ತನ್ನ ಸ್ವಂತ ಕಟ್ಟಡದಲ್ಲಿ ಎಸ್. ಎಲ್. ಶೇಟರ ಅಧ್ಯಕ್ಷತೆಯಲ್ಲಿ ಶ್ರೀಮತಿ ವತ್ಸಲಾ ಎಸ್. ಶೇಟ್ ಇವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಕೆ. ಕೆ. ಆರ್. ಶೇಟರು ಸ್ವಜಾತಿ ಮಹಿಳೆಯರು ಈ ಶಾಲೆಯ ಪ್ರಯೋಜನವನ್ನು ಪಡೆದು ಅದನ್ನು ಯಶಸ್ವಿಗೊಳಿಸಬೇಕೆಂದರು. ಸಭಿಕರ ಭಾಷಣವಾದ ಮೇಲೆ ಅಧ್ಯಕ್ಷರು ಸಂದರ್ಭೋಚಿತ ಭಾಷಣ ಮಾಡಿ ಶಾಲೆಗೆ ಹೊಲಿಗೆ ಯಂತ್ರವೊಂದನ್ನು ದಾನವಿತ್ತರು. ದೈವಜ್ಞ ವೆಲ್‌ಫೇರ್ ಸೆಂಟರಿನ ಆರ್ಗನೈಜರ್ ಶ್ರೀ ಲಕ್ಷ್ಮಿನಾರಾಯಣ ರಾಯರು ಧನ್ಯವಾದಗಳನ್ನಿತ್ತರು.

ದೈವಜ್ಞ ಸಮಾಜದವರು ಸಮಾಜದ ಸೇವಾದಳದ ಆಶ್ರಯದಲ್ಲಿ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದ ವಠಾರದಲ್ಲಿ ತಾ. 15ರಲ್ಲಿ ಸ್ವಾತಂತ್ರ್ಯದಿನವನ್ನು ಆಚರಿಸಿದರು. ಶ್ರೀ ಎಂ. ಎನ್. ಶೇಟರು ಧ್ವಜಾರೋಹಣ ಮಾಡಿದರು. ಅನಂತರ ಅವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಡಾ. ಎಸ್. ಎಸ್. ದೇವದಾಸ್ ರಾವ್, ಎನ್. ಪಿ. ಶೇಟ್, ಎಸ್. ಎಲ್. ಶೇಟ್, ಬಿ. ಗಣಪತಿ ಶೇಟ್, ಬಿ. ಭಾಸ್ಕರ ಶೇಟ್, ಎಂ. ನಾರಾಯಣ ಶೇಟ್, ಎ. ರಾಮರಾವ್ ಇವರು ಭಾಷಣ ಮಾಡಿದರು. ದೈವಜ್ಞ ಬ್ರಾಹ್ಮಣ ಸೇವಾದಳದ ಅಧ್ಯಕ್ಷ ಶ್ರೀ ಕೆ. ಕೆ. ಆರ್. ಶೇಟರು ಧನ್ಯವಾದವಿತ್ತರು.

ಉಡುಪಿ ಲಾ ಕಾಲೇಜ ಯೂನಿಯನಿನ ಉದ್ಘಾಟನೆಯು ತಾ. 10ರಲ್ಲಿ ಎಕೆಡೆಮಿ ರಿಜಿಸ್ಟ್ರಾರ್ ಡಾ. ಟಿ. ಎಂ. ಎ. ಪೈಗಳಿಂದ ಜರಗಿಸಲ್ಪಟ್ಟಿತು. ಪ್ರಿನ್ಸಿಪಾಲ್ ಶ್ರೀ ಬಿ. ಎಲ್. ಎನ್. ರೈಗಳು ಸ್ವಾಗತಿಸಿ ಡಾ| ಪೈಗಳು ಸದ್ಯವೇ ಕೈಗೊಳ್ಳಲಿರುವ ವಿದೇಶ ಯಾತ್ರೆಯು ಜಯ ಮತ್ತು ಸುಖಪ್ರದವಾಗಲೆಂದರು. ಯೂನಿಯನ್ ಪ್ರೆಸಿಡೆಂಟ್ ಶ್ರೀ ಯಸ್. ವಿ. ಡಯಾಸ್ ಅವರು ಯೂನಿಯನಿನ ಕಾರ್ಯಕ್ರಮಗಳನ್ನು ಪ್ರಸ್ತಾಪಿಸಿ ವಿದ್ಯಾರ್ಥಿಗಳ ಸಹಕಾರವನ್ನು ಅಪೇಕ್ಷಿಸಿದರು. ಡಾ. ಪೈಗಳು ವಿದ್ಯಾರ್ಥಿಗಳಲ್ಲಿ ಶಿಸ್ತು, ಸಭ್ಯತೆಗಳು ಅವಶ್ಯವೆಂದೂ ಯೂನಿಯನಿನಿಂದ ಎಲ್ಲರೂ ಪ್ರಯೋಜನ ಪಡೆಯುವಂತಾಗಲೆಂದೂ ಹೇಳಿದರು. ಡಾ. ಎಸ್. ಆರ್. ಪೈಗಳು ವಿದ್ಯಾರ್ಥಿ ಜೀವನದ ಮುಖ್ಯ ಗುಣಗಳನ್ನು ವಿವರಿಸಿದ ಬಳಿಕ ಕಾರ್ಯದರ್ಶಿ ಶ್ರೀ ಕೃಷ್ಣ ಶೇಟರು ಕೃತಜ್ಞತೆಯನ್ನರ್ಪಿಸಿದರು.

ವಿದ್ಯಾರ್ಥಿ ನಾಯಕ — ಉಡುಪಿ ಬೋರ್ಡ್ ಹೈಸ್ಕೂಲಿನ ವಿದ್ಯಾರ್ಥಿ ನಾಯಕರಾಗಿ ಶ್ರೀ ಶ್ರೀಪತಿ ಆಚಾರರವರೂ ಉಪವಿದ್ಯಾರ್ಥಿ ನಾಯಕರಾಗಿ ಅಧಮ್ ಸಾಹೇಬರವರೂ ಅವಿರೋಧವಾಗಿ ಆಯ್ಕೆಗೊಂಡರು.

ಪಡುಕೆರೆತ್ತೂರು— ತಾ. 15–8–59 ರಲ್ಲಿ ಇಲ್ಲಿಯ ಹಾ. ಎ. ಶಾಲೆಯಲ್ಲಿ ಸ್ಟಿಂಟ್ ಮೇರೀಸ್ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ಅನಂತರಾಮ್ ಭಟ್ ಇವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯದಿನಾಚರಣೆಯು ವಿಜೃಂಭಣೆಯಿಂದ ಜರಗಿತು. ಶಾಲಾ ಮಕ್ಕಳಿಂದ ಪ್ರಭಾತಪೇರಿಯಾದ ನಂತರ ಅಧ್ಯಕ್ಷರು ಧ್ವಜಾರೋಹಣವನ್ನು ಮಾಡಿದರು. ಮಕ್ಕಳ ವಿವಿಧ ವಿನೋದಾವಳಿ—ಸಭಿಕರ ಭಾಷಣ ಮತ್ತು ಅಧ್ಯಕ್ಷರ ಭಾಷಣಗಳಾದ ನಂತರ ಕಳತ್ತೂರು ಪಂಚಾಯತ ಬೋರ್ಡಿನ ಅಧ್ಯಕ್ಷರು ಕಳುಹಿಸಿದ ಸಿಹಿ ತಿಂಡಿಯನ್ನು ಹಂಚಲಾಯಿತು. ಮುಖ್ಯೋಪಾಧ್ಯಾಯರು ವಂದನೆಗಳನ್ನು ಅರ್ಪಿಸಿದರು.

ಬೈಲೂರು - ಯಮ್. ಯಮ್ ಹಿರಿಯ ಬುನಾದಿ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಡಾ| ಶ್ಯಾಮ ಸೆಟ್ಟರಿಂದ ಧ್ವಜಾರೋಹಣ, ಶ್ರೀ ಮುಖ್ಯಪ್ರಾಣ ತಂತ್ರಿ ಇವರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀ ಗ್ಲೇಡಾ ಸನ್ ಚತನ್ನ, ಜನಾರ್ದನ ಭಟ್ಟ, ಪೀಟರ್ ಡಿಸೋಜ, ಕುಮಾರಿ ಮನೋರಮಾ ಜತನ್ನ ಮೊದಲಾದವರ ಭಾಷಣದೊಂದಿಗೆ ನೆರವೇರಿಸಲ್ಪಟ್ಟಿತು.

ಸುರತ್ಕಲ್ — ಮುಕ್ಕ ಮಿತ್ರಪಟ್ಟಣ ಮೊಗವೀರ ಧರ್ಮಾರ್ಥ ರಾತ್ರಿ ಶಾಲೆ ಮತ್ತು ಅಗ್ಗಿದ ಕರಿ ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಆಜ್ರಿಹರೆ—ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಕೆ. ಶಂಕರ ಸೆಟ್ಟರಿಂದ ಧ್ವಜಾರೋಹಣವಾಗಿ ಶ್ರೀ ಎ. ನಾರಾಯಣ ಐತಾಳರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಶ್ರೀ ಕೆ. ರಾಮಕೃಷ್ಣ ಅಡಿಗ ಮೊದಲಾದವರ ಭಾಷಣಾದಿ ಕಾರ್ಯಕ್ರಮಗಳೊಂದಿಗೆ ಜರಗಿತು.

ಯಕ್ಷಗಾನ ಕಲಾ ಮಂಡಲ ಉಡುಪಿ—ಇವರ ಪ್ರಧಾನ ಕಾರ್ಯಾಲಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಕೆ. ನಾರಾಯಣ ಶೆಟ್ಟರಿಂದ ಧ್ವಜಾರೋಹಣವಾಗಿ ಶ್ರೀ ಸಿ. ಸೀನ ಸೆಟ್ಟರ ಅಧ್ಯಕ್ಷತೆಯಲ್ಲಿ ಕೃಷ್ಣ ಸಂಧಾನ ಎಂಬ ಯಕ್ಷಗಾನದೊಂದಿಗೆ ಜರಗಿತು.

ರಾಜಾಪುರ ಸಾರಸ್ವತ ಸಂಘ ಮುಂಬಯಿ ವಿಜ್ಞಾನದಲ್ಲಿ ಉಚ್ಚ ಪದವಿ (Ph. D.)ಯನ್ನು ಗಳಿಸುವುದಕ್ಕಾಗಿ ಅಮೇರಿಕದ ನ್ಯೂಜರ್ಸಿ ಯುನಿವರ್ಸಿಟಿಗೆ ತೆರಳಲಿರುವ ನಮ್ಮ ಸಂಘದ ಸದಸ್ಯರೂ ಸಾಂತೂರು ಶ್ರೀ ವಿ. ಯಸ್ ಪ್ರಭುರವರ ಸಹೋದರರೂ ಆದ ಶ್ರೀ ಆರ್. ಎಸ್. ಪ್ರಭು, M. Sc, ಇವರನ್ನು ತಾ. 8-8-59ರಲ್ಲು ಸಂಘದ ಕಾರ್ಯಾಲಕ್ಕೆ ಆಮಂತ್ರಿಸಿ ಶ್ರೀ ಬಿ. ಎ. ನಾಯಕ್‌ರವರ ಅಧ್ಯಕ್ಷತೆಯಲ್ಲಿ ಸತ್ಕಾರ ಕೂಟವನ್ನು ನೆರವೇರಿಸಲಾಯಿತು

ಗೌ. ಕಾರ್ಯದರ್ಶಿಗಳಾದ ಶ್ರೀ ಡಿ. ಬಿ. ಪ್ರಭುರವರಿಂದ ಸ್ವಾಗತ ಭಾಷಣವಾದ ಬಳಿಕ ಮಾನ್ಯ ಅತಿಥಿಯವರು ತಾನು ಕೈಕೊಂಡ ಕಾರ್ಯದ ವಿವರವನ್ನು ತಿಳಿಸಿದರು ನಂತರ ಸಭಿಕರ ಮತ್ತು ಅಧ್ಯಕ್ಷರ ಭಾಷಣಗಳಾದುವು ಶ್ರೀ ಪ್ರಭುಗಳು ತಾ 10-8-59 ರಂದು ಜಲ ಮಾರ್ಗವಾಗಿ ಅಮೇರಿಕಕ್ಕೆ ತೆರಳಿದರು.

ಅಲೂರು– ಸರಸ್ವತಿ ಎಲಿಮೆಂಟರಿ ಶಾಲಾ ವಠಾರದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ವಂಡ್ಸೆ ನಾರಾಯಣ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಉಪ್ಪೂರು ಜಗನ್ನಾಥ ಶೆಟ್ರು ಭಾಷಣವಿತ್ತರು. ಶ್ರೀ ಆಲೂರು ಸುಬ್ರಾಯ ಆಚಾರ್ಯರು ಮಕ್ಕಳಿಗೆ ಸಿಹಿ ತಿಂಡಿ ಹಂಚಿದರು.

ನಿಧನ—ಉಡುಪಿ ಸಂಸ್ಕೃತ ಕಾಲೇಜಿನ ನಿವೃತ್ತ ಅಧ್ಯಾಪಕರೂ, ಲೇಖಕರೂ, ಉಪನ್ಯಾಸಕರೂ ಆಗಿದ್ದ ಶ್ರೀ ಬಿ. ಶ್ರೀನಿವಾಸ ಭಟ್ಟರು ತಾ 10ರಲ್ಲಿ ತಮ್ಮ 76ನೆಯ ವಯಸ್ಸಿನಲ್ಲಿ ನಿಧನಹೊಂದಿರುತ್ತಾರೆಂದು ತಿಳಿಸಲು ವಿಷಾದವಾಗುತ್ತದೆ.

ಕುಕ್ಕಿಕಟ್ಟೆ– ಶ್ರೀ ಕೆಮ್ಮಣ್ಣು ಮೇಲ್ಮನೆ ಗಿರಿಯಣ್ಣ ಶೆಟ್ರ ಪತ್ನಿ ಶ್ರೀಮತಿ ಗೌರಮ್ಮನವರು ತಾ. 15-8–59ರಲ್ಲಿ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ.

ಸಂಯುಕ್ತ ವಾಗ್ವರ್ಧಿನೀ ಸಭಾ ಉದ್ಘಾಟನಾ ಸಮಾರಂಭ—ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ಸಂಯುಕ್ತ ವಾಗ್ವರ್ಧಿನೀ ಸಭೆಯ ಉದ್ಘಾಟನಾ ಸಮಾರಂಭವು ಕಳೆದ ತಾ. 14ರಂದು ಶ್ರೀ ಪಿ. ಶೀನ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ವಿ. ಗುರುರಾಜ ಭಟ್ಟರು ಸ್ವಾಗತಿಸಿದರು. ಕುಮಾರಿ ಮೋಹಿನಿ ಮತ್ತು ಸುಮತಿಯವರು ಕನ್ನಡ ಹಾಡನ್ನು ಹಾಡಿದರು. ಮನರಂಜನೆಯ ಕಾರ್ಯಕ್ರಮಗಳು ಜರಗಿದ ಬಳಿಕ ವಿದ್ಯಾರ್ಥಿಗಳ ಉಪನ್ಯಾಸಗಳು ಜರಗಿದುವು. ಲೇಖನ, ಭಾಷಣ ಸ್ಪರ್ಧೆಗಳಲ್ಲಿ ವಿಜಯಿಗಳಿಗೆ ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ವಿದ್ಯಾರ್ಥಿಗಳಿಗೆ ಹಲವಾರು ಹಿತೋಕ್ತಿಗಳನ್ನು ಹೇಳಿದರು.

ಕಡಿಯಾಳಿ ಹಿರಿಯ ಬುನಾದಿ ಶಾಲೆಯ ಶಾಲಾ ನಾಯಕನ ಚುನಾವಣೆಯು ಗುಪ್ತ ಮತದಾನ ಪದ್ಧತಿಯ ಮೂಲಕ ಜರಗಿ ಶ್ರೀ ಕೆ. ಆನಂದ ಶೆಟ್ಟಿ ಇವರು ನಾಯಕರಾಗಿಯೂ, ಕುಮಾರಿ ವತ್ಸಲಾ ಇವರು ಉಪನಾಯಕರಾಗಿಯೂ ಆರಿಸಲ್ಪಟ್ಟರು. ಕುಮಾರಿ ಕೆ. ಸುಮತಿಯವರು ಕಾರ್ಯದರ್ಶಿಯಾಗಿಯೂ, ಶ್ರೀ ಶೇಕ್ ಅಬ್ದುಲ್‌ಖಾದರ್ ಇವರು ಉಪ ಕಾರ್ಯದರ್ಶಿಯಾಗಿಯೂ ಆರಿಸಿಬಂದಿರುವರು.

ಸ್ವಾತಂತ್ರ್ಯ ದಿನಾಚರಣೆ—ಕಡಿಯಾಳಿ ಹಿರಿಯ ಬುನಾದಿ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ವಿವೇಕಾನಂದ ಸಮಾಜದ ಆಶ್ರಯದಲ್ಲಿ ಕುಮಾರಿ ಎಂ. ಸೀತಾಲಕ್ಷ್ಮಿ ದೇವಿ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಸಪ್ತಾಹ ಮಂಗಲ—ಉಡುಪಿ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ತಾ. 9ರಲ್ಲಿ ಪ್ರಾರಂಭವಾದ ಭಜನಾ ಸಪ್ತಾಹದ ಮಂಗಲೋತ್ಸವವು ತಾ. 16ರಲ್ಲಿ ವಿಜೃಂಭಣೆಯಿಂದ ನೆರವೇರಿತು. ಈ ಸಂದರ್ಭದಲ್ಲಿ ದೇವಸ್ಥಾನದ ಆಡಳಿತೆ ಕಮಿಟಿಯವರು ಡಾ. ಮಾಧವ ಪೈಗಳಿಗೆ ಅವರು ಕೈಗೊಳ್ಳಲಿರುವ ಪರದೇಶ ಗಮನವು ಸುಖದಾಯಕವಾಗಲೆಂದು ಪ್ರಸಾದವಿತ್ತು ಹರಸಿದರು.

ಗುರುದಕ್ಷಿಣಾ ಉತ್ಸವ— ಉಡುಪಿಯ ರಾಮದಾಸ್ ಪ್ರಭಾತ ಶಾಖೆಯ ಗುರುದಕ್ಷಿಣಾ ಉತ್ಸವವು ತಾ. 2–8–59 ರಲ್ಲಿ ಮುನ್ಸಿಪಲ್ ಕೌನ್ಸಿಲರ್ ಶ್ರೀ ಟಿ. ಎ. ವಾಸುದೇವನರ ಅಧ್ಯಕ್ಷತೆಯಲ್ಲಿ ಜರಗಿತು.

ನವಯುಗದ
ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ಟ್ ತಿಂಗಳಾಂತ್ಯಕ್ಕೆ 'ನವಯುಗ'ದ **38**ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ **39**ನೇ ವರ್ಷಾರಂಭವಾಗುವುದು ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿಯಿರುವ ಮಹನೀಯರೂ ತಮ್ಮ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೇ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್.

ಖಾಸಗಿ ಶಾಲಾ ಮೆನೇಜರರ ಸಂಘದ ಅಪೂರ್ವ ಸಭೆ

ಉಡುಪಿ ತಾಲೂಕ ಖಾಸಗಿ ಶಾಲಾ ಮೆನೇಜರರ ಸಂಘದ ಸಭೆಯು ತಾ. ೯ರಂದು ನೋರ್ಮಲ್ ಪ್ರಾಕ್ಟಿಸಿಂಗ್ ಎಲಿಮೆಂಟರಿ ಶಾಲೆಯಲ್ಲಿ ನಡೆಯಿತು. ಶ್ರೀ ಟಿ. ರಮೇಶ ಸ್ವ ಅವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಜತೆಕಾರ್ಯದರ್ಶಿ ಶ್ರೀ ಕುರುಕಾಲು ಗಣಪಯ್ಯ ಶೆಟ್ಟರ ಪ್ರಾಸ್ತಾವಿಕ ಭಾಷಣ ಮಾಡುತ್ತ ಇತ್ತೀಚೆಗೆ ಖಾಸಗಿ ಶಾಲಾ ಮೆನೇಜುಮೆಂಟುಗಳನ್ನು ಸದೆಬಡೆಯುವಂತಹ ಸರಕಾರದ ಆಜ್ಞೆಗಳು ಬಂದಿರುವುದರಿಂದ ಎಲ್ಲರೂ ಒಗ್ಗಟ್ಟಿನಿಂದ ಇವನ್ನು ಪ್ರತಿಭಟಿಸುವ ಆವಶ್ಯಕತೆಯನ್ನು ಒತ್ತಿಹೇಳಿದರು. ಡಾ ಕೆ. ಕೆ. ಕಲ್ಯಾರರು ಮಾತನಾಡಿ ಮೆನೇಜುಮೆಂಟುಗಳಿಗಾಗಿರುವ ಅನ್ಯಾಯಗಳನ್ನು ಒಮ್ಮತದಿಂದ ಪ್ರತಿಭಟಿಸಬೇಕು ಎಂದು, ಕೇರಳದ ಮೆನೇಜುಮೆಂಟುಗಳು ಅಲ್ಲಿನ ಸರಕಾರದ ವಿರುದ್ಧ ಹೋರಾಡಿ ಅವನ್ನು ಬಗ್ಗಿಸಿಬಿಟ್ಟುದನ್ನು ಉದಾಹರಿಸಿ, ಹಲವಾರು ಸಲಹೆಗಳನ್ನಿತ್ತರು. ಅಧ್ಯಕ್ಷರು ನಮ್ಮ ಜಿಲ್ಲೆಯಲ್ಲಿ ಸರಕಾರಿ ಶಾಲೆಗಳು ಬೆರಳೆಣಿಕೆಯಷ್ಟು ಮಾತ್ರವಿದ್ದು, ಎಲ್ಲವೂ ಖಾಸಗಿ ಕ್ಷೇತ್ರಕ್ಕೆ ಸಂಬಂಧಿಸಿವೆ. ಇಲ್ಲಿ ಒಬ್ಬೊಬ್ಬ ವ್ಯಕ್ತಿಯೇ ಒಂದೊಂದು ಶಕ್ತಿಯಾಗಿದ್ದಾರೆ. ಇಂದಿನ ಅನಪೇಕ್ಷಿತ ಕಾಯಿದೆಗಳ ಸಂಕೋಲೆಗಳಿಂದ ಅವನ್ನು ಬಂಧಿಸತೊಡಗಲು ಸರಕಾರಿ ವಲಯವು ಇಟ್ಟ ಹೆಜ್ಜೆಯು ವಿಷಾದಪೂರ್ಣವಾಗಿದೆ ಎಂದು ಹೇಳಿ, ಜಿಲ್ಲಾ ಮಟ್ಟದ ಒಂದು ಸಭೆ ಸೇರಿಸಿ, ಅಲ್ಲಿ ಈ ಗಂಭೀರ ಪರಿಸ್ಥಿತಿಯನ್ನು ಅಧ್ಯಯನ ಮಾಡಿ, ಪರಿಹಾರ ಕಂಡು ಹಿಡಿಯುವ ಅವಶ್ಯಕತೆಗಳನ್ನು ಪ್ರತಿಬಿಂಬಿಸಿದರು.

ಆ ಮೇಲೆ, ಆಗೋಸ್ತು ೩೦ರಂದು ಖಾಸಗಿ ಶಾಲಾ ಮೆನೇಜರರ ಜಿಲ್ಲಾಮಟ್ಟದ ಸಭೆಯನ್ನು ಉಡುಪಿ ಮಹಾತ್ಮಾ ಗಾಂಧಿ ಎಲಿಮೆಂಟರಿ ಶಾಲೆಯಲ್ಲಿ ಕರೆದು, ಯೋಗ್ಯ ಪರಿಹಾರವನ್ನು ಕಂಡುಹಿಡಿಯಲು ಮತ್ತು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲು ಹಾಗೂ ಅವಶ್ಯಕವೆನಿಸಿದರೆ ಬೆಂಗಳೂರಿಗೆ ನಿಯೋಗ ಹೋಗಲೂ ನಿರ್ಧರಿಸಿ, ಶ್ರೀ ಎ. ಜಿ. ಅಲ್ಸೆಯವರನ್ನು ಸ್ವಾಗತಸಮಿತಿಯ ಅಧ್ಯಕ್ಷರಾಗಿಯೂ ಶ್ರೀ ಕುರುಕಾಲು ಗಣಪಯ್ಯ ಶೆಟ್ಟರನ್ನು ಕನ್ವೀನರರನ್ನಾಗಿಯೂ ಆರಿಸಲಾಯಿತು. ಸ್ವಾಗತಸಮಿತಿಗೆ ಡಾ। ಕಲ್ಯಾರ್, ಶ್ರೀಗಳಾದ ಸುಬ್ಬಣ್ಣ ಹೆಗ್ಗಡೆ, ಓ. ಮೈಕಾ ಮೊದಲಾದವರೂ ಚುನಾಯಿತರಾದರು.

ಈ ಕೆಳಗಿನ ಗೊತ್ತುವಳಿಗಳು ಸಭೆಯಲ್ಲಿ ಸರ್ವಾನುಮತದಿಂದ ಮಂಜೂರಾದುವು:

೧. ಮೈಸೂರಿನೊಡನೆ ಸಂಯೋಜನೆಗೊಂಡ ಮದ್ರಾಸು ಕರ್ನಾಟಕದಲ್ಲಿ ಅಧ್ಯಾಪಕರಿಗೆ ಅರ್ಧದಿನ ಕೆಜುವಲ್ ರಜೆಯನ್ನು ಪಡೆಯುವ ಹಕ್ಕಿದ್ದರೂ ಮೈಸೂರು ವಿದ್ಯಾ ಇಲಾಖೆಯ ಡೈರೆಕ್ಟರರ ೨-೩-೫೯ರ ಆಜ್ಞೆ ಮೇರೆಗೆ ಇಂತಹ ರಜೆಯನ್ನು ಇಡಿ ದಿನವೆಂದು ಪರಿಗಣಿಸಬೇಕೆಂದು ಹೇಳಿರುವುದರಿಂದ, ಅಧ್ಯಾಪಕರಿಗೆ ಅನ್ಯಾಯವಾಗಿದೆ. ಆದುದರಿಂದ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಧ್ಯಾಪಕರಿಗೆ ಅರ್ಧ ದಿನವೂ ರಜೆ ಪಡೆಯುವ ಹಿಂದಿನ ಕ್ರಮವನ್ನೇ ಊರ್ಜಿತದಲ್ಲಿಡಬೇಕು.

೨. ರಾಜ್ಯದಲ್ಲಿ ಏಕರೀತಿಯ ರಜಾ ದಿನಗಳು ಮತ್ತು ಶಾಲಾ ಅವಧಿಗಳನ್ನು ಅನುಕರಿಸುವ ಉದ್ದೇಶದಿಂದ ಕೊಡಲ್ಪಟ್ಟ ಮೈಸೂರು ಸರಕಾರದ ತಾ. ೧೯-೩ ೫೯ರ ಆಜ್ಞೆಯು ಮೆನೇಜರರ ಸ್ಥಳೀಯ ಆವಶ್ಯಕತೆಗಳಿಗೆ ಅನುಕೂಲವಾಗಿ ರಜಾ ದಿನಗಳನ್ನು ನಿರ್ಧರಿಸುವ ಹಕ್ಕನ್ನು ಕಸಿದುಕೊಳ್ಳುವ ಉದ್ದೇಶವಾದುದರಿಂದ ಆ ಹುಕುಮನ್ನು ಈ ಸಭೆಯು ವಿರೋಧಿಸುತ್ತದೆ. ಹಳ್ಳಿಯ ಶಾಲೆಗಳಲ್ಲಿ ಮಳೆಗಾಲದಲ್ಲಿ ಜಡಿಮಳೆಯ ದೆಸೆಯಿಂದಲೂ ಬೇಸಾಯದ ಸಮಯ ಬೇಸಾಯಗಾರರ ಮಕ್ಕಳಿಗೆ ಶಾಲೆಗೆ ಬರಲು ಸಾಧ್ಯವಿಲ್ಲವಾದುದರಿಂದಲೂ ಅ ಸಮಯದಲ್ಲಿ ಹಳ್ಳಿಯ ಶಾಲೆಗಳಲ್ಲಿ ಸಾಕಷ್ಟು ಹಾಜರಿಯು ದೊರೆಯದುದರಿಂದಲೂ ಬೇಸಗೆಯ ರಜೆಯನ್ನು ಮನ್ನಾ ಮಾಡಿ ಹಿಂದಿನಂತೆ ಕಾರ್ತಿ ಮತ್ತು ಸುಗ್ಗಿ ಸಾಗುವಳಿಗಳಿಗೆ ರಜೆ ಕೊಡುವ ಏರ್ಪಾಡು ಮಾಡುವಂತೆ ಸರಕಾರವನ್ನು ಕೇಳಿಕೊಳ್ಳುತ್ತದೆ.

೩. ಶಾಲೆ ಪ್ರಾರಂಭವಾದ ಒಂದು ತಿಂಗಳೊಳಗೆ ಡಿವಿಜನುಗಳ ಬಗ್ಗೆ ಅರ್ಜಿ ಕಳಿಸಬೇಕೆಂದೂ ಅದರನಂತರ ಬಂದವನ್ನು ನಿರಾಕರಿಸಲಾಗುವುದೆಂದೂ ದ. ಕ. ಜಿಲ್ಲಾ ವಿದ್ಯಾಧಿಕಾರಿಗಳ ತಾ. ೨೨-೫-೫೯ರ ಆಜ್ಞೆಯನ್ನು ಈ ಸಭೆಯು ವಿರೋಧಿಸಿ ಈ ಅವಧಿಯನ್ನು ಆರು ತಿಂಗಳುಗಳ ವರೆಗೆ ಹೆಚ್ಚಿಸಬೇಕೆಂದು ಕೇಳಿಕೊಳ್ಳುತ್ತದೆ.

೪. ಖಾಸಗಿ ಶಾಲೆಗಳ ಅಧ್ಯಾಪಕರು ಒಂದು ಶಾಲೆಯನ್ನು ಬಿಟ್ಟು ಮತ್ತೊಂದು ಶಾಲೆಗೆ ಸೇರುವಾಗ, ಅವರ ಸಂಬಳದ ಏರಿಕೆಯನ್ನು ತಡೆಹಿಡಿದು ಹೊಸ ನೇಮಕಗೊಂಡವರನ್ನಾಗಿಯೇ ಪರಿಗಣಿಸಲಾಗುವುದೆಂಬ ನಿರ್ಧಾರವನ್ನು ಈ ಸಭೆಯು ಪ್ರತಿಭಟಿಸುತ್ತದೆ. ಊರು ಬಿಟ್ಟು ಹೋಗುವುದೇ ಮೊದಲಾದ ಅನಿವಾರ್ಯ ಸಂದರ್ಭದಲ್ಲಿ ಅಧ್ಯಾಪಕರಿಗೆ ಅನ್ಯಾಯ ಮಾಡಿದಂತಾಗುವುದರಿಂದ, ಅವರ ಸರ್ವಿಸನ್ನು ಲೆಕ್ಕಕ್ಕೆ ಹಿಡಿದು ರಜೆ ಮತ್ತು ಭಡ್ತಿ ಕೊಡಬೇಕೆಂದು ಕೇಳಿಕೊಳ್ಳುತ್ತದೆ.

೫. ಅಧ್ಯಾಪಕ ವಿದ್ಯಾರ್ಥಿ ದಾಮಾಶಯು ೧:೨೦ ಇದ್ದುದನ್ನು ೧:೩೦ ಎಂಬುದಾಗಿಯೂ ವಿಭಜನಾ ಸರಾಸರಿ ಹಾಜರಿ ೩೬ ಎಂಬುದನ್ನು ೪೬ ಎಂದೂ ಗ್ರಾಂಟ್ ನಿಬಂಧನೆಯ ಪ್ರಕರಣ II 4 (2) ಮತ್ತು 4 (3) ನ್ನು ತಿದ್ದುಪಡಿಮಾಡುವ ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾಧಿಕಾರಿಗಳ ಅಪೇಕ್ಷೆ ಮೇರೆಗೆ ಕೊಡಲ್ಪಟ್ಟ ಮೈಸೂರು ವಿದ್ಯಾ ಇಲಾಖೆಯ ೨೫-೫-೫೯ರ ಆಜ್ಞೆಯನ್ನು ತೀವ್ರವಾಗಿ ಪ್ರತಿಭಟಿಸುತ್ತದೆ. ಹೊಸ ಮೈಸೂರು ರಾಜ್ಯಕ್ಕೆ ಏಕರೂಪದ ಅಧ್ಯಾಪಕ ವಿದ್ಯಾರ್ಥಿ ದಾಮಾಶಯವು ನಿರ್ಣಯವಾಗದೆ ಈ ಜಿಲ್ಲೆಯ ಮಟ್ಟಿಗೆ ಮಾತ್ರ ಪಕ್ಷಪಾತ ಮಾಡುವುದು ಸರಿಯಲ್ಲವೆಂದು ಈ ಸಭೆಯು ನಿರ್ಣಯಿಸುತ್ತದೆ.

೬. ಅದೇ ಆಜ್ಞೆಯಲ್ಲಿ ಹೊಸದಾಮಾಶಯವಿಲ್ಲದೆ ಹೊಸ ಇಸಂಗಳಾಗಲೀ ರಜೆಯ ಬದಲಿಗಾಗಲೀ ನೇಮಕವನ್ನು ಮಾಡಬಾರದೆಂದೂ ದ. ಕ. ಜಿಲ್ಲಾ ವಿದ್ಯಾಧಿಕಾರಿಗಳು ತಾ. ೧-೬-೫೯ರಲ್ಲಿ ಒಬ್ಬನು ರಜೆ ಪಡೆದಾಗ, ನಿವೃತ್ತಿಯಾದಾಗ, ರಾಜಿನಾಮೆಯಿತ್ತಾಗ, ನಿವೃತ್ತಿ ಪಡಿಸಿದಾಗ, ಸತ್ತುಹೋದಾಗ ಆ ಸ್ಥಾನಕ್ಕೆ ಬೇರೆ ಅಧ್ಯಾಪಕರನ್ನು ನೇಮಕ ಮಾಡಬೇಕಾಗಿದ್ದರೆ ಇಡಿ ಶಾಲೆಯಲ್ಲಿ ಹೊಸ ದಾಮಾಶಯವಿರಬೇಕೆಂದು ಕೊಟ್ಟ ಭಿನ್ನಾಭಿಪ್ರಾಯದ ಹುಕುಂಗಳ ಬಗ್ಗೆ ಈ ಸಭೆಯು ವಿಷಾದಿಸುತ್ತದೆ. ಈ ರೀತಿಯ ಹುಕುಂಗಳಿಂದ ಇಡಿ ಶಾಲೆಯ ವಿದ್ಯಾಭಿವೃದ್ಧಿಯೇ ಕುಂಠಿತವಾಗುವುದರಿಂದ ವಿದ್ಯಾ ಮಟ್ಟವು ಇಳಿಯುವುದರಿಂದ ಇವನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸುತ್ತದೆ.

೭. ಮೇಲಿನ ಹುಕುಂಗಳನ್ನು ಸ್ಪಷ್ಟೀಕರಿಸುವ ತಾ. ೨೦-೬-೫೯ರ ದ. ಕ. ಜಿಲ್ಲಾ ವಿದ್ಯಾಧಿಕಾರಿಗಳ ಹುಕುಮಿನಲ್ಲಿ ಹಿಂದಿನ ವರ್ಷಗಳಲ್ಲಿದ್ದ ಡಿವಿಜನುಗಳನ್ನು ಹಳೆಯ ದಾಮಾಶಯದ ಪ್ರಕಾರ ಮಂಜೂರು ಮಾಡಬೇಕಾದರೆ, ಹಿಂದಿನ ವರ್ಷದಲ್ಲಿದ್ದ ಅಧ್ಯಾಪಕರೇ ಕೆಲಸಮಾಡಿಕೊಂಡಿರಬೇಕೆಂದು ಸೂಚಿಸಿದ್ದನ್ನು ಈ ಸಭೆಯು ಆಕ್ಷೇಪಿಸುತ್ತದೆ. ಯಾವ ಕ್ಲಾಸನ್ನೇ ಆಗಲೀ, ಯಾವ ಉಪಾಧ್ಯಾಯನನ್ನೇ ಆಗಲಿ ನೇಮಿಸಿ ಹಳೆಯ ದಾಮಾಶಯದಲ್ಲಿ ಡಿವಿಜನುಗಳನ್ನು ಮಾಡುವ ಹಳೆಯ ರೂಲುಗಳನ್ನೇ ಇರಗೊಡಿಸುವಂತೆ ಈ ಸಭೆಯು ಕೇಳಿಕೊಳ್ಳುತ್ತದೆ.

೮. ಹಲವಾರು ಎಲಿಮೆಂಟರಿ ಶಾಲೆಗಳು ಹಾಯರ್ ಎಲಿಮೆಂಟರಿ ಶಾಲೆಗಳಾಗಿ ಮಾರ್ಪಾಟು ಹೊಂದಿದರೂ ಹೊಸ ರೂಲುಗಳಿಂದಾಗಿ ಹೊಸ ಅಧ್ಯಾಪಕರನ್ನು ನೇಮಿಸಲು ಅನುಮತಿ ಇಲ್ಲದುದರಿಂದ ಮಕ್ಕಳ ವಿದ್ಯಾಭ್ಯಾಸವು ಕುಂಠಿತವಾಗುವುದರಿಂದ ಹಳೆಯ ದಾಮಾಶಯದಂತೆಯೇ ಅಧ್ಯಾಪಕರನ್ನು ನೇಮಿಸಲು ಅನುಮತಿ ಕೊಡಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ.

೯. ಸದ್ಯದ ಹುಕ್ಕುಂಗಳೆಲ್ಲವೂ ಶಾಲಾ ವರ್ಷ ಪ್ರಾರಂಭವಾದ ನಂತರ ಜೂನ್ ಮತ್ತು ಜುಲೈಗಳಲ್ಲಿ ಅನಿರೀಕ್ಷಿತವಾಗಿ ಕೊಡಲ್ಪಟ್ಟದ್ದು ಅಧ್ಯಾಪಕರ ನೇಮಕ—ಬಿಡುಗಡೆಗಳಲ್ಲಿ ಅಧ್ಯಾಪಕ ಮೆನೇಜರರೊಳಗೆ ಗೊಂದಲವುಂಟಾಗಿದೆ. ಹೊಸ ಅಧ್ಯಾಪಕರು ನಿರುದ್ಯೋಗಿಗಳಾಗಿದ್ದಾರೆ (ಸಾಲದುದಕ್ಕೆ ಜಿಲ್ಲೆಯಲ್ಲಿ ಸರಕಾರಿ ಹುದ್ದೆಯಿಂದ ಈ ಬಾರಿಯೂ ಅಧ್ಯಾಪಕರ ತರಬೇತಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುತ್ತಿದೆ) ಖಾಲಿ ಬಿದ್ದ ಸ್ಥಾನಗಳನ್ನು ತುಂಬಿಸುವುದು ಅಸಾಧ್ಯವಾದುದರಿಂದ ಪಾಠ ಪ್ರವಚನಗಳು ಸರಿಯಾಗಿ ನಡೆಯಲಾರವು ಹಲವು ರಾಜ್ಯಗಳ ಭಾಗಗಳ ಸಂಯೋಜನೆಯಿಂದಾದ ಹೊಸ ಮೈಸೂರು ರಾಜ್ಯದಲ್ಲಿ ಒಂದೇ ಕ್ರಮದ ರೂಲು ತಯಾರಾಗುವವರೆಗೆ ಆಯಾಯ ಭಾಗಗಳಲ್ಲಿದ್ದ ರೂಲುಗಳೇ ಜ್ಯಾರಿಯಲ್ಲಿರಬೇಕೆಂದಿದ್ದರೂ ದಕ್ಷಿಣಕನ್ನಡ ಜಿಲ್ಲೆಗೆ ಮಾತ್ರ ಅನಿರೀಕ್ಷಿತವಾಗಿ ಜ್ಯಾರಿಗೆತಂದ ಈ ಕಾನೂನುಗಳ ಬಗ್ಗೆ ವಿಷಾದ ಸೂಚಿಸುವುದಲ್ಲದೇ ಈ ಕಾನೂನುಗಳನ್ನೆಲ್ಲಾ ರದ್ದುಪಡಿಸಿ ಹಿಂದಿನವನ್ನೇ ಜ್ಯಾರಿಯಲ್ಲಿಸಿರಬೇಕೆಂದು ಅಪೇಕ್ಷಿಸುತ್ತದೆ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು.) ಸಂ. ನ.

ಯಕ್ಷಗಾನ ಅರ್ಥಸಹಿತ ಕರ್ಣಾರ್ವಸಾನ. ಬರೆದವರು ಮತ್ತು ಪ್ರಕಾಶಕರು: ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟ, ದೇಲಂಪಾಡಿ. ಪುಟಗಳು: ೪೦. ಬೆಲೆ: ರೂ. ೦-೯-೦.

ದಕ್ಷಿಣ ಕನ್ನಡ ಜಿಲ್ಲೆಯ ತೆಂಕುತಿಟ್ಟಿನ ವರೆಗೆ ಹೆಚ್ಚು ಪ್ರಚಾರದಲ್ಲಿರುವ ದಿವಂಗತ ಗೇರುಸೊಪ್ಪೆ ಶಾಂತಪ್ಪಯ್ಯನವರ ಕೃತಿಯಾದ ಕರ್ಣಪರ್ವದಲ್ಲಿನ ಕರ್ಣಾರ್ವಸಾನಕ್ಕೆ ಸಂಬಂಧಿಸಿದ ಪದ್ಯಗಳನ್ನು ಆಯ್ದು ಅವಕ್ಕೆ ಸರಳ ಹಾಗೂ ಸುಲಭವಾದ ಅರ್ಥವನ್ನು ಬರೆಯುವ ಪ್ರಯತ್ನವನ್ನಿಲ್ಲಿ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರು ಮಾಡಿದ್ದಾರೆ. ಸ್ವತಃ ಯಕ್ಷಗಾನ ಪಟುಗಳಾದ ಶ್ರೀ ಮಾಸ್ತರ್ ಭಟ್ಟರ ಈ ಕಾರ್ಯದಿಂದ ಯಕ್ಷಗಾನಾಭ್ಯಾಸಿಗಳಿಗೆ ಸಹಾಯವಾಗುವುದು ನಿಸ್ಸಂದೇಹ.

ನಾವು ಸಾಹುಕಾರ ಕುಲದವರು—ಲೇಖಕರು. ಶ್ರೀ. ಕುಡ್ಪಿ ವಾಸುದೇವ ಶೆಣೈ. ಪ್ರಕಾಶಕರು: ಪ್ರಭಾತ ಆಫೀಸು, ರಥಬೀದಿ—ಮಂಗಳೂರು-೧. ಪುಟಗಳು: ೩೨. ಬೆಲೆ: ನಾಲ್ಕು ಆಣೆ.

ಆಲಸಿ ಹಾಗೂ ಸೋಮಾರಿಗಳಾದ ಪುರುಷರಿರುವಾಗ, ಅವರನ್ನು ಸನ್ಮಾರ್ಗದಲ್ಲಿ ಹಚ್ಚಲು ಬಯಕೆಯಿದ್ದರೂ ಉಪಾಯಗಾಣದ ಸ್ತ್ರೀಯು ಜಾಣತನದಿಂದ ಯಾವರೀತಿಯಲ್ಲಿ ಅದನ್ನು ಸಾಧಿಸಿಕೊಳ್ಳುವಳು ಎಂಬ ವಿಷಯವನ್ನು ಪ್ರತಿಪಾದಿಸುವ ಏಕಾಂಕ ಪ್ರಹಸನವಿದು. ತಾವು ಉನ್ನತ ಕುಲದಲ್ಲಿ ಹುಟ್ಟಿದವರು, ಪರಸೇವೆ ಮಾಡುವುದು ಅಪಮಾನವೆಂದು ತಿಳಿದು ಸುಮ್ಮನುಳಿದು ಮರೆಯಲ್ಲೇ ಪರರೊಡ್ಡವಕ್ಕೆ ಕೈನೀಡುವ ದುರವಸ್ಥೆಯಲ್ಲಿರುವ ಪುರುಷರಾದ ಮಾಧವಜ್ಜಿ ಮತ್ತು ಶುಕಾಜಿಯವರನ್ನು ಅವರ ಪತ್ನಿಯರು ಪ್ರಭಾಕರ ಮತ್ತು ಚಂದ್ರರ ಮಾರ್ಗದರ್ಶನದಿಂದ ಕೆಲಸಕ್ಕೆ ಹಚ್ಚಿ ಕಾಯಕವೇ ಕೈಲಾಸ, ದುಡಿಮೆಗೆ ಕುಲ, ಆಕುಲಗಳ ಗೊಡವೆಯಿಲ್ಲ ಎಂಬುದನ್ನು ಜಗತ್ತಿಗೆ ಸಾರಿಹೇಳಿರುವರು.

ಸ್ವಾಭಾವಿಕ ಹಾಸ್ಯಪಟುವಾದ ಶ್ರೀ ಕುಡ್ಪಿಯವರ ಲೇಖನಿಯು ತನ್ನ ಗುಣವನ್ನು ಇಲ್ಲಿ ಬಿಟ್ಟುಕೊಟ್ಟಿಲ್ಲ. ಒಂದು ತಾಸಿನ ಮನೋರಂಜನೆಯ ಕಾರ್ಯಕ್ರಮಕ್ಕೆ ತಕ್ಕಂತೆ ಈ ಏಕಾಂಕಿಯು ಪ್ರಹಸನ ರೂಪದಲ್ಲಿ ಪ್ರಕಟವಾಗಿದೆ. ಶಾಲೆಕಾಲೇಜುಗಳಲ್ಲಿ ಅಭಿನಯಿಸುವುದಕ್ಕೆ ಸರಿಯಾಗಿಯೇ ನಾಟಕದ ಸನ್ನಿವೇಶವೂ ಜೋಡಿಸಲ್ಪಟ್ಟಿರುವುದರಿಂದ ಇಂದಿನ ಕಾಲಸ್ಥಿತಿಗೆ ಉಪದೇಶಾತ್ಮಕವಾದ ಈ ಪ್ರಹಸನ ರಂಗಮಂಚವನ್ನು ಏರುವುದರಿಂದ ಕಲ್ಯಾಣವಾಗುವುದು.

ಹಿಂದ್ ಕುಷ್ಠ ನಿವಾರಣಾ ಸಂಘದ ವರದಿ—ದಕ್ಷಿಣ ಕನ್ನಡ ಜಿಲ್ಲಾ ಶಾಖೆಯ ೧೯೫೮ನೆ ವರ್ಷಕ್ಕೆ ಸಂಬಂಧಿಸಿದ ವರದಿಯು ಕೈಸೇರಿದೆ. ಇದರಂತೆ ಸಂಘವು ಗುರುಪುರ ಸಿಲಾರು ಮತ್ತು ಸುರತ್ಕಲ್ಲುಗಳಲ್ಲಿ ಚಿಕಿತ್ಸಾಲಯಗಳನ್ನು ನಡೆಸಿಕೊಂಡು ಬರುತಿದ್ದು, ಇವುಗಳಲ್ಲಿ ಒಟ್ಟು ೧೮೬೯ ರೋಗಿಗಳು ಚಿಕಿತ್ಸೆ ಪಡೆದಿದ್ದಾರೆ. ಶಿರ್ವ ಗ್ರಾಮದಲ್ಲಿ ರೋಗ ಪರಿಶೀಲನಾ ಕಾರ್ಯವು ಭರದಿಂದ ಸಾಗುತ್ತಿದೆ. ವರದಿ ವರ್ಷದಲ್ಲಿ ಕಾಪುವಿನಲ್ಲಿಯೂ ಒಂದು ಹೊಸ ಚಿಕಿತ್ಸಾಕೇಂದ್ರವನ್ನು ತೆರೆಯಲಾಗಿದೆ.

ಕುಷ್ಠರೋಗಿಗಳನ್ನು ಕಂಡುಹಿಡಿದು ಅವರನ್ನು ಯೋಗ್ಯ ಚಿಕಿತ್ಸೆಯ ಮೂಲಕ ಸುಧಾರಣೆಗೊಳಿಸುವ ಮತ್ತು ರೋಗ ನಿರೋಧಿಸುವ ಮಹಾಕಾರ್ಯದಲ್ಲಿ ತತ್ಪರವಾದ ಈ ಸಂಘದ ಕಾರ್ಯಕ್ರಮವು ಸ್ತುತ್ಯ ಮತ್ತು ಆವಶ್ಯಕವಾಗಿದೆ. ಆದರೆ, ಸಂಘದ ಆರ್ಥಿಕ ಸ್ಥಿತಿಗತಿಯು ಮಾತ್ರ ದಿನದಿಂದ ದಿನಕ್ಕೆ ಕ್ಷೀಣಿಸುತ್ತ ಬರುತ್ತಿರುವುದನ್ನು ಕಾಣುವಾಗ, ಇದೇ ರೀತಿ ಮುನ್ನಡೆದರೆ ಯಾವ ವಿಧದಿಂದ ಸೇವೆ ನಡೆದೀತು ಎಂಬ ಸಂದೇಹವೂ ಮೂಡುತ್ತದೆ. ನಮ್ಮ ಜನತೆಯ ಸೇವೆಯಲ್ಲಿ ನಿರತವಾಗಿರುವ ಈ ಸಂಘದ ಕಾರ್ಯಕ್ರಮಗಳಿಗೆ ಶಕ್ತ್ಯನುಸಾರ ಸಹಾಯ ನೀಡುವುದು ನಮ್ಮೆಲ್ಲರ ಧರ್ಮವಾಗಿದೆ. ಆದುದರಿಂದ ಜನಸೇವಾಸಕ್ತರು ಮಾತ್ರವಲ್ಲದೆ ಶಕ್ತರೆಲ್ಲರೂ ಈ ಸಂಘಕ್ಕೆ ತಮ್ಮ ಕೊಡುಗೈ ಚಾಚಿ ಅದರ ಆರ್ಥಿಕ ಸ್ತರವನ್ನು ಉನ್ನತೀಕರಿಸುವುದು ಅವಶ್ಯವೆಂದು ತಿಳಿಯುತ್ತೇವೆ.

ರೋಮಾಯ ಮತವು ಕ್ರೈಸ್ತಮತ ಅಲ್ಲ— ಪ್ರಕಾಶಕರು: ದಿ ಕ್ರುಸೇಡರ್ಸ್ ಲೀಗ್, ಇಂಡಿಯಾ, ಹಂಪನಕಟ್ಟೆ, ಮಂಗಳೂರು-೧.

ಕ್ರುಸೇಡರ್ ಅಥವಾ ಧರ್ಮವೀರ ಎಂಬ ಈ ಪತ್ರಿಕೆಯ ಒಂಬತ್ತನೆ ಸಂಪುಟದ ಜನೆಯ ಅಂಕವಿದು. ಇದರಲ್ಲಿ ರೋಮಾಯರು ಕ್ರೈಸ್ತರಲ್ಲವೆಂದೂ ಅವರು ದೇವರಿಗಿಂತಲೂ ತಮ್ಮ ಪೋಪನಿಗೆ ಹೆಚ್ಚು ಹೆದರುವರೆಂದೂ, ಸ್ವಾತಂತ್ರ್ಯಘಾತುಕರೆಂದೂ ಹೇಳಿ, ರೋಮಾಯ ಇಗರ್ಜಿಗಳು ಜನತೆಯಿಂದ ಸಂಪತ್ತನ್ನು ಸೂರೆಮಾಡಿ ತಮ್ಮ ಉದರ ಭರಿಸುತ್ತಿವೆ ಎಂದು ಮುಂತಾಗಿ ಪ್ರತಿಪಾದಿಸಲಾಗಿದೆ. ಅಲ್ಲದೇ ರೋಮಾಯರ ಆಡಳಿತೆ ಹಾಗೂ ಪ್ರಭಾವ ಬೀರಿರುವಲ್ಲಿ ಜನತೆ ತೀರ ಅನಾಗರಿಕವಾಗಿದ್ದು ಪೋಪರನ್ನು ಅಂಧಾನುಕರಣೆ ಮಾಡಿ ಅವರನ್ನೇ ದೇವರೆಂದು ತಿಳಿಯುತ್ತದೆ ಎಂದು ಹೇಳಿ, ಇದನ್ನು ಖಂಡಿಸಲಾಗಿದೆ.

ಅವಳ ಸಾವು—ಮೂಲ: ಶ್ರೀ ಮಾಯಾವಿ, ಅನುವಾದ: ಶ್ರೀ ಬಳ್ಳಾರು ಸುಬ್ರಾಯ ಅಡಿಗ ಪ್ರಕಾಶಕರು: ಪರಾಗ ಪುಸ್ತಕ, ಉಡುಪಿ. ಪುಟಗಳು: ೧೩. ಬೆಲೆ: ರೂ. ೦-೦೫.

ವಿದ್ಯುಜ್ಜನ್ಮದ ಪ್ರಭಾವದಿಂದ ಪತಿತಳಾದ ನಾರಿಯೊರ್ವಳಿಂದ ಸಾಧ್ವಿಯೊಬ್ಬಳು ಆತ್ಮಹತ್ಯೆಮಾಡಿಕೊಳ್ಳಬೇಕಾದ ಪ್ರಮೇಯವೊದಗಿದುದನ್ನು ಈ ಕಿರುಗತೆಯಲ್ಲಿ ಚಿತ್ರಿಸಲಾಗಿದೆ.

—ಗೋರಾ.

Notice

ಕುಂದಾಪುರ ಡಿ. ಮು. ಕೋರ್ಟನಲ್ಲಿ

O. S 134/59.

ಬಿ. ಸುಬ್ಬಣ್ಣ ಸೆಟ್ಟಿ, ಯಡ್ತರೆ ಕೃಷ್ಣಪ್ಪ ಸೆಟ್ರ ಮಗ. ಕುಂದಾಪುರ ತಾಲ್ಲೂಕ ಯಡ್ತರೆ ಗ್ರಾಮ—ವಾದಿ.

ಬಿಲ್ಲ ತಿಮ್ಮ, ಬಿಲ್ಲ ಚಿಕ್ಕ ಹೆಂಗ್ಸಿನ ಮಗ. ಕುಂದಾಪುರ ತಾಲ್ಲೂಕ. ನಂಬ್ರ 1ನೇ ಶಿರೂರು ಗ್ರಾಮದ ಪೈದಿನ್‌ಪುರ—ಪ್ರತಿವಾದಿ

ಸದ್ರಿ ಪ್ರತಿವಾದಿಗೆ ತಿಳಿಯಪಡಿಸಿದ್ದು.

ಸದ್ರಿ ಪ್ರತಿವಾದಿಯಿಂದ ವಾದಿಗೆ ಕಳೆದ ಹೇವಿಳಂಬಿ ವಿಳಂಬಿ ಸಂವತ್ಸರಗಳಿಗೆ ಬರತಕ್ಕ ಗೇಣಿ ಬಾಕಿ ವಗೈರೆ ಬಾಬ್ತು ರೂಪಾಯಿ 173=85 ನ್ನು ಬರಮಾಡಿಕೊಳ್ಳುವರೇ ವಾದಿ ದಾಖಲ್ಲು ಮಾಡಿದ ಸದ್ರಿ ದಾವೆ ತಾ. 26-8-59ಕ್ಕೆ ತನ್ನಿಗೆ ಇಟ್ಟಿದೆ. ಆ ಕುರಿತು ಉದಾಹರಣೆಯಿದ್ದರೆ, ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣ್ಸಿದ ಕೋರ್ಟು ಮುಂದೆ ಹಾಜರಾಗಿ ತಿಳಿಸತಕ್ಕದ್ದು.

Y. Manjaya Shetty,

Advocate for Plff.

ಮೊಕ್ಕಾಂ: ಕುಂದಾಪುರ

ತಾ. 10-8-59.

ಭಾವಕತೆ

ಸಭ್ಯತೆಯು ರಹಸ್ಯ

ಭೇದವರಿಯದ ಮಾನವ

ಗಾಳಕ್ಕೆ ಸಿಕ್ಕಿದ ಮೀನಾಗಿ ಹೋದ

ಒಂದು ದಿವಸ ಮಾನವನ ಹತ್ತಿರ ಸುಳ್ಳು ಆಗಮಿಸಿತು. ಈ ಸುಳ್ಳು ಅತಿ ಕಪ್ಪಾಗಿ, ಕುರೂಪವಾಗಿ ವಿಕಾರವಾಗಿತ್ತು. ಅದಕ್ಕೆಷ್ಟೋ ಬಾಯಿಗಳಿದ್ದುವು.

ಅದು ಮನುಷ್ಯನೊಡನೆ – ಎಲೈ ಮಾನವನೇ, ನೀನು ನನ್ನನ್ನು ಮಿತ್ರನನ್ನಾಗಿ ಸ್ವೀಕರಿಸು ಎಂದಿತು. ನಿನ್ನ ನೆರೆಹೊರೆಯವರಲ್ಲಿ ನೀನು ಮಸ್ತಕವನ್ನು ಎತ್ತಿ ನಿಲ್ಲುವಂತೆ ಮಾಡುತ್ತೇನೆ. ನನ್ನ ಮಿತ್ರತ್ವವು ನಿನ್ನ ಶತ್ರುಗಳ ಕತ್ತಿಗೆ ಗಾಳವಾಗುತ್ತದೆ. ನೀನು ನೆಲದಲ್ಲಿ ಹುಲ್ಲಿನಂತೆ ಬೆಳೆಯುತ್ತಿ, ರೋಗದಂತೆ ಹಬ್ಬುತ್ತಿ ಎಂದಿತು ಸುಳ್ಳು.

ಮೊದಲು ನೀನು ಯಾರು? ಪ್ರಪಂಚದಲ್ಲಿ ನಿನ್ನದೇನು ಕೆಲಸ? ಎಂದು ತಿಳಿಸು ಎಂದ ಮಾನವ.

ಆಗ ಸುಳ್ಳು ಸತ್ಯವನ್ನೇ ನುಡಿಯಿತು. —ನನ್ನ ಹೆಸರು ಸುಳ್ಳು. ಮಿತ್ರರನ್ನು ಕುಟಿಲತೆಯಿಂದ ರಕ್ಷಿಸುವುದು ನನ್ನ ಕಾರ್ಯ.

ಸುಳ್ಳಿನ ಉತ್ತರ ಕೇಳಿ ಮಾನವನು ಮುಖ ಸಿಂಡರಿಸಿಕೊಂಡು— ನಿನಗೆ ಧಿಕ್ಕಾರವಿರಲಿ. ನೀನಿಲ್ಲಿಂದ ಓಡಿ ಹೋಗು. ನಿನ್ನಂಥವನಿಗಿಲ್ಲಿ ಸ್ಥಾನವಿಲ್ಲ. ನೀನು ಯಾರನ್ನಾದರೂ ಬೇರೆ ಹುಡುಕು" ಎಂದನು.

ಕೆಲದಿವಸದ ನಂತರ ಮಾನವನ ಹತ್ತಿರ ಸಭ್ಯತೆಯು ಆಗಮಿಸಿತು. ಸಭ್ಯತೆಯು ತನ್ನ ಗೌರವರ್ಣದಿಂದ ಸುಂದರವಾಗಿ ನಾಜೋಕಾಗಿ ಇತ್ತು. ಅದರ ಮಾತಿನಲ್ಲಿ ಮೃದುತ್ವ ಮತ್ತು ಸ್ವಾದ ಇತ್ತು. ಅದರ ಮಾತುಗಳು ಶ್ರಾವಕನ ಮನಸ್ಸ ಮೋಹಿಸುತ್ತಿತ್ತು.

ಅದು ಮಾನವನೊಡನೆ—ನನ್ನ ಮಿತ್ರತ್ವವನ್ನು ನೀನು ಸ್ವೀಕರಿಸು, ನಿನ್ನನ್ನು ಜಗತ್ತು ಸನ್ಮಾನಿಸುತ್ತದೆ. ನಿನ್ನ ಜೀವನ ಮಾರ್ಗವು ವಿಶಾಲವಾಗುವುದು, ಸುಂದರವಾಗುವುದು ಹಾಗೂ ಸ್ನೈ ವಿಧ್ಯ ಪೂರ್ಣವಾಗುವುದು. ಎಲ್ಲರೂ ನಿನ್ನನ್ನು ಪ್ರಶಂಸಿಸ ತೊಡಗುತ್ತಾರೆ.

ಮೊದಲು ನೀನು ಯಾರು? ಪ್ರಪಂಚದಲ್ಲಿ ನಿನ್ನದೇನು ಕೆಲಸ? ಎಂದು ಹೇಳು ಎಂದ ಮಾನವ.

"ನನ್ನನ್ನು ಸಭ್ಯತೆಯೆನ್ನುತ್ತಾರೆ. ನಾನು ಸಭ್ಯ ಮಾನವರೊಡನಿರುತ್ತೇನೆ. ಮನಸ್ಸಿನಲ್ಲಿರುವ ಏರು ತಗ್ಗುಗಳನ್ನು ನಾನು ಸಮತಲ ಮಾಡುತ್ತೇನೆ. ಯಾರು ನನ್ನನ್ನು ಪ್ರೀತಿಸುತ್ತಾರೋ ಅವರನ್ನು ಜಗತ್ತು ಸಂಭಾವಿಸುತ್ತದೆ." ಎಂದು ಸೌಮ್ಯವಾಗಿ ಉತ್ತರವಿತ್ತಿತು ಸಭ್ಯತೆ.

ಉತ್ತರ ಕೇಳಿ ಮುಗ್ಧನಾದ ಮಾನವನು ತನ್ನ ಬಾಹುದ್ವಯಗಳನ್ನೆತ್ತಿ, ಸಭ್ಯತೆಯನ್ನು ಸ್ವಾಗತಿಸಿ – ಎಲೈ ಸಭ್ಯತೆಯೇ ನಿನಗೆ ಸ್ವಾಗತವು. ನನಗೆ ನಿನ್ನ ಮಿತ್ರತ್ವವು ಬೇಕು. ನೀನು ನನ್ನೊಡನಿದ್ದು ನನ್ನ ಜೀವನ ಮಾರ್ಗವನ್ನು ಸುಂದರವಾಗಿರಿಸು. ನನ್ನ ಮಸ್ತಕವನ್ನು ಉನ್ನತಿಯತ್ತ ತುದಿಗೇರಿಸು ಎಂದನು.

ಸಭ್ಯತೆಯು ಮಾನವನೊಡನೆ ಇರಲು ಪ್ರಾರಂಭಿಸಿತು. ಮಾನವನು ತನ್ನ ಪ್ರೀತಿಯನ್ನು ಅದಕ್ಕಿತ್ತು ಅದನ್ನು ತನ್ನೊಡನಿರಿಸಿಕೊಂಡನು.

ಸಭ್ಯತೆಯು ತನ್ನ ಮಾತನ್ನು ಪೂರೈಸಿತು. ಆವನ ಬಗ್ಗೆ ಇನ್ನೊಬ್ಬನಿಗಿರುವ ಏರು ತಗ್ಗುಗಳನ್ನದು ಸಮತಲ ಮಾಡಿತು. ಆವನ ಮಾರ್ಗವನ್ನು ಸುಂದರವಾಗಿ, ವಿಶಾಲವಾಗಿ ಪ್ರಕಾಶಮಾನವಾಗಿರಿಸಿತು. ಮಾನವನ ಮಸ್ತಕವು ಉನ್ನತಿಗೇರಿತು. ಆವನ ಪ್ರಶಂಸೆಯು ದೂರ ದೂರ ಹಬ್ಬಿತು.

ಅಷ್ಟರಲ್ಲಿ ಒಂದು ದಿವಸ ಮಾನವನಿಗೆ ಈ ಸಭ್ಯತೆಯು ಸುಳ್ಳಿನ ಇನ್ನೊಂದು ರೂಪ ಎಂದು ತಿಳಿಯಿತು.

ಆದರೆ ಮಾನವನದನ್ನು ಮತ್ತೂ ಪ್ರೀತಿಸತೊಡಗಿದನು ಮತ್ತು ಅದನ್ನು ತನ್ನ ಬಳಿಯಲ್ಲಿರಿಸಿಕೊಂಡನು. ಆದರೆ ಇಂದು ಅದನ್ನು ಎಬ್ಬಿಸಿ ಓಡಿಸುವ ಧೈರ್ಯವೂ ಮಾನವನಿಗಿಲ್ಲ.

(ಸುದರ್ಶನರ ಝುರೋಕ್ ನಿಂದ)

—ಶ್ರೀ ಎಸ್. ಎಂ. ಶೆಟ್ಟಿ,
ಶಿಮುಂಜೆ ಪರಾರಿ.

ಸಂಸ್ಮರಣೆ

(೪ನೇ ಪುಟದಿಂದ)

ಣಿಯೇ ಕಾಣುತ್ತಿತ್ತು. ಅವನಿಂದ ನಾನು "ಅರೇಬಿಯನ್ ನೈಟ್ಸ್" ಕತೆಗಳನ್ನು ಕೇಳುತ್ತಿದ್ದೆ. ೧೮೫೭ರ ದಂಗೆಯಲ್ಲಿ ಅವರ ಆಸ್ತಿ ಎಲ್ಲ ಮುಳುಗಿದುದರಿಂದ ನೊಂದ ಅವರು ಒಳ್ಳೇ ದಯಾಳುಗಳೂ, ಅಂಥಃಕರಣಿಯೂ ಆಗಿದ್ದರು. ಅವರ ಪ್ರಭಾವ ನನ್ನ ಮೇಲೆ ಬಹಳಾಯಿತು" ನೆಹರುವರು ಮುಬಾರಕ ಅಲಿ ಅವರ ಬಗ್ಗೆ ತಮಗಿದ್ದ ಆದರವನ್ನು ಈ ರೀತಿಯಾಗಿ ವ್ಯಕ್ತಗೊಳಿಸಿದ್ದಾರೆ. "The memory of him remains with me as a dear and precions possession".

—ಶ್ರೀ ಸಂಜೀವ ಲಕ್ಷ್ಮೀಶ್ವರ,
ಮುಂಬಯಿ.

ಈ ಲೇಖನ ಬರೆಯುವಾಗ ವಿಷಯ ಸಂಗ್ರಹಣೆಗಾಗಿ Frank Moreas ಅವರು ಬರೆದ "Jawaharlal Nehru" ಹಾಗು ಶ್ರೀಮಾನ್ ಕಂದಾಡೆ ಕೃಷ್ಣಯ್ಯಂಗಾರ ಅವರು ಕನ್ನಡದಲ್ಲಿ ಬರೆದ "ಜವಾಹರಲಾಲ್ ನೆಹರು" ಎಂಬ ಪುಸ್ತಕದ ಸಹಾಯ ಪಡೆದಿದ್ದೇನೆ. ಅದಕ್ಕಾಗಿ ಆ ಲೇಖಕರಿಗೆ ಕೃತಜ್ಞನಾಗಿದ್ದೇನೆ—ಲೇಖಕ.

(ಸ್ವಾತಂತ್ರ್ಯ ದಿನೋತ್ಸವ ಸಂಚಿಕೆಗಾಗಿ ಬಂದುದು)

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರುಗಳಿ, ಜಾಹೀರಾತುದಾರರುಗಳಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

ಇದು ಪ್ರಪಂಚ

ಕಣ್ಣಿದ್ದೂ ಕುರುಡರು!

ಒಂದು ಹಳ್ಳಿಯಲ್ಲಿ ಒಬ್ಬ ಕುರುಡನಿದ್ದ. ಆತನೇನೂ ಹುಟ್ಟು ಕುರುಡನಲ್ಲ. ಇತ್ತೀಚೆಗೆ ಹಲವು ವರುಷಗಳಿಂದ ಆತ ತನ್ನ ದೃಷ್ಟಿಯನ್ನು ಕಳಕೊಂಡಿದ್ದ. ಆದರೂ ಆತ ಹಳ್ಳಿಯಿಡೀ ಸಂಚರಿಸುತ್ತಿದ್ದ. ಹೆಜ್ಜೆಕೆ ಅವನಿಗೆ ಯಾವ ಯಾವ ಮಾರ್ಗದಿಂದ ಹೋದಲ್ಲಿ ಏನೇನು ಬರುತ್ತವೆಂದು ಸ್ಪಷ್ಟ ಬರುತ್ತಿತ್ತು, ಅರ್ಥೇನು ಮಹಾ? ಅದನ್ನು ಜನರಿಗೆ ಹೇಳುತ್ತಲೂ ಇದ್ದ.

ಒಮ್ಮೆ ಯಾವುದೋ ಕಾರ್ಯನಿಮಿತ್ತ ಕುರುಡ ಒಂದು ಗಡಿಗೆ ಹಿಡಿದುಕೊಂಡು ಹೊರ ಹೊರಟ. ಸುಮಾರು ರಾತ್ರಿ ಏಳು ಗಂಟೆ ಸಂದಿತ್ತು! ಕತ್ತಲೆಲ್ಲ ಆವರಿಸಿತ್ತು ಧರಣಿಯನ್ನು! ಆದರೆ ವಿಚಿತ್ರಕ್ಕೆ ಆತ ತನ್ನ ಇನ್ನೊಂದು ಕೈಯಲ್ಲಿ ಉರಿಯುತ್ತಿರುವ ಲಾಟನನ್ನು ಹಿಡಿದಿದ್ದ. "ಅರೆ, ಇದೇನು? ಕುರುಡನಿಗೆ ಲಾಟನಿನ ಆವಶ್ಯಕತೆ?" ಜನರ ತರ್ಜನೀ ಬೆರಳ್ಗಳು ನಾಸಿಕವನ್ನು ಒತ್ತಿತು. 'ಇದೇನು ಪ್ರತಿನಿತ್ಯವೆಂಬಂತೆ ಹಳ್ಳಿಯಿಡೀ ತಿರುಗಿ ಬರುವಾತ ಈಗ ಲಾಟನ್ನನ್ನು ಹಿಡಿದುಕೊಂಡು ತಿರುಗುತ್ತಾನೆ?" ಎಲ್ಲರಲ್ಲೂ ಇದೇ ಚರ್ಚೆ.

ಎಲ್ಲರೂ ಪರಸ್ಪರ ಕೇಳಿಕೊಂಡರು 'ಅದೇನು. ಇದೇನು?' ಅಂತ ಯಾರಿಗೂ ಅರ್ಥವಾಗದಿದ್ದುದರಲ್ಲಿ ಆಶ್ಚರ್ಯವೇನಿದೆ? ಒಬ್ಬ ಏಕಾಏಕಿಯಾಗಿ ಆ ಕುರುಡನನ್ನು ಕೇಳಿಯೇ ಬಿಟ್ಟ.

"ಅಂದಂತೆ, ನೀನು ಕುರುಡನಾಗಿದ್ದುಕೊಂಡು ಈ ಲಾಟನ್ನನ್ನು ಹಿಡಿದುಕೊಂಡು ಹೋಗುವಿಯಲ್ಲ? ಒಂದು ಕೋಲನ್ನಾದರೂ ಹಿಡಿದುಕೊಂಡು ಹೋದಲ್ಲಿ ಅದು ಅವಶ್ಯವೆನಿಸೀತು; ಆದರೆ ಲಾಟನ್ನು ನಮಗೆ ನಿಜಕ್ಕೂ ಆಶ್ಚರ್ಯವೆನಿಸಿದೆ ಇದೇನು ಬಾಬಾ?"

ಅದಕ್ಕೆ ಕುರುಡನು ಮಾರ್ಮಿಕವಾಗಿ ಇತ್ತ ಉತ್ತರ ಸಮರ್ಪಕವಾಗಿತ್ತು. ಅವ ನೆಂದನಂತೆ, "ನಾನೇನೋ ಕುರುಡನೆಂಬ ಮಾತು ಸ್ವವಿದಿತ. ಅದರಲ್ಲೇನಾಯಿತಂತೆ? ನಾನು ಪ್ರತಿನಿತ್ಯವೆಂಬಂತೆ ಇಡಿಯ ಹಳ್ಳಿಯನ್ನೇ ಸುತ್ತಿಬರುವೆ......'

"ಅದು ಸರಿ, ಬಾಬಾ! ಆದರೆ ಈ ಲಾಟನ್ನ?" "ಅದೇ ಹೇಳುವುದರಲ್ಲಿದ್ದೆ, ನೀನೇ ತಡೆದೆ....ಆದರೆ ಮೊನ್ನೆ ಮೊನ್ನೆ ಒಬ್ಬ ಕಣ್ಣಿದ್ದಾತನೂ ನನಗೆ ಬಂದು ಎಡವಿ ನನ್ನ ಗಡಿಗೆ ಒಡೆದುಹಾಕಿದನು. ಆದುದರಿಂದ ನಾನೇನಾದರೂ ಲಾಟನ್ನು ಹಿಡಿದುದೇ ಆದರೆ ಅಂತಹವರಿಗೆ ಸಹಾಯವಾದೀತು, ಇಂದಿನ ಜಗತ್ತಿನಲ್ಲಿ ಕಣ್ಣಿದ್ದಾತರೂ ಕೆಲವೊಮ್ಮೆ ಕುರುಡರಂತೆ ವರ್ತಿಸುತ್ತಾರೆ. ಅಂತವರು ಸುಖವಾಗಿರಲೆಂದೇ ಈ ಲಾಟನ್ ಹಿಡಿದಿದ್ದೇನೆ".

"ಓಹೋ, ಸರಿ, ಸರಿ ಒಪ್ಪಿದೆ...." ಅಂದ ಪ್ರಶ್ನಕಾರ. ಸರಿ, ಅಂದಂತೆ ಇಂದಿನ ಜಗತ್ತಿನಲ್ಲಿ ಎಷ್ಟೋ ಜನರು ಕಣ್ಣಿದ್ದವರೂ ಕುರುಡರಂತೆ ವರ್ತಿಸುತ್ತಾರೆ. ಎಂಬ ಮಾತು ನಿಜಕ್ಕೂ ಸತ್ಯವೆಂದನ್ನಿಸುತ್ತದೆ.

—ಶ್ರೀ ಕೆ. ರಮೇಶ ಪೈ, ಉಡುಪಿ.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಪ್ರಶಸ್ತ,

ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-

(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಕವಿತಾ ವಿತಾನ

ಕಾಣಬಾರೇ!

— ೧ —

ಬಂದಲ್ಲಿ ಬರುವವಳು
ನಿಂದಲ್ಲಿ ನೆರೆವವಳು
ಒಂದು ವರ್ಷ ಕಳೆಯಿತು
ಓ ಇಂದೂ ಕಾಣಬಾರೆ!

— ೨ —

ಹೂ ದೋಟದಲ್ಲಿ ಅಂದು
'ಬೇಗ ಬರುವೆ' ಮರೆಯಬಾರದು!
ಎಂದು ಹೇಳಿ ಹೋದವಳು
ಒಂದು ವರ್ಷ ಗತಿಸಿತು ಬರಬಾರದೆ?

— ೩ —

ಬಾರಿ ಬಾರಿಗೂ ಮನ ಕೇಳುತ್ತಿದೆ
ಇಂದೂ ಹೇಗೆ? ಏನ? ಎಂತು?
ಮನದ ಹೊಡೆತಕ್ಕೆ, ತಾಳ ತಪ್ಪಿದೆ
ಓ ಇಂದೂ ಕಾಣಬಾರೆ!

— ೪ —

ತುಂಬು ದಿನದಿಂದ ಕಾಗದ ಬರೆಯದೇ
ಮೌನದ ಕವಿತೆಯ ಕಾಗದ ಬರೆದಿದ್ದೇನೆ!
ಮನದಮಳೆಗಾಳಿಗೆ ಸಿಲುಕಿದೀಪ ನಂದಿದೆ
ಓ ಇಂದೂ ತಿರುಗಿ ಬಂದು ಹಚ್ಚಿ
ಹೋಗು.

—ಶ್ರೀ ಚಂದ್ರಶೇಖರ ಹುರಳಿ,
ದಾರವಾಡ.

ನೋಟೀಸು

ಪೆರ್ಡೂರು ಶ್ರೀ ಅನಂತ ಪದ್ಮನಾಭನರ ಭಂಡಾರದ ಬಾಬ್ತು ಕೊಳ್ಳಲು ಅಕ್ಕಿ ಮುಡಿ ೯೯ ಮತ್ತು ಬೆಳ್ತಿಗೆ ಅಕ್ಕಿ ಮುಡಿ 15 ಕೂಡಾ ಅಕ್ಕಿ ಮುಡಿ 100 (ನೂರು ಮುಡಿ)ನ್ನು ಇದೇ ತಾರೀಕು 22—8—59ನೇ ಶನಿವಾರ ಅಪರಾಹ್ನ ಗಂಟೆ 4ಕ್ಕೆ (4 P. M.) ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಲ್ಲಿ ಭಂಡಾರದ ಶರ್ತಕ್ಕೊಳಪಟ್ಟು ಬಹಿರಂಗವಾಗಿ ಏಲಂ ಮಾಡಲಾಗುವುದು. ಅಪೇಕ್ಷೆ ಉಳ್ಳವರು ಏಲಂ ಸಮಯಕ್ಕೆ ಬಂದು ಹರಾಜಿನಲ್ಲಿ ಭಾಗವಹಿಸಬಹುದು.

K. B. Shetty,
Executive Officer,
Sri Ananthapadmanaba Temple.
Perdur.

ಪೆರ್ಡೂರು, ತಾ. 12-8-59.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ಅನುಭವ

ವಿಜ್ಞಾನವೇ ಜಗತ್ತನ್ನು ನಾಶಗೊಳಿಸಬಹುದೆ?

* * *

ಜಗತ್ತಿನ ಕಲ್ಯಾಣಕ್ಕಾಗಿಯೇ ಇದನ್ನು ಬಳಸಿಕೊಳ್ಳುವುದು ಶ್ರೇಯಸ್ಕರವಲ್ಲವೆ?

ಇಂದು ಜಗತ್ತಿನ ಮುನ್ನಡೆಗಿರುವ ನಾಗರಿಕರಿಗಾ ಒಂದು ದಾರಿ ಪ್ರಗತಿಯ ವೇಗ ಕೊಡುತ್ತಿರುವ ಇನ್ನೊಂದು ವಿನಾಶಕ್ಕೆ ದೂಡುತ್ತದೆ. ಜಗತ್ತು ಸೃಷ್ಟಿಯಾದಂದಿನಿಂದ ಇಂದಿನ ತನಕ ಪ್ರಗತಿಯ ಜಾಡನ್ನೇ ಹಿಡಿದು ಸಾಗುತ್ತ ಬಂದಿದೆ. ಈಗ ಆ ದಾರಿ ಕವಲೊಡೆದಿದೆ. ಇಂತಹ ಸಂದಿಗ್ಧಕಾಲ ಜಗತ್ತು ಇಡಲಿರುವ ತನ್ನ ಮುಂದಿನ ಒಂದೇ ಒಂದು ಹೆಜ್ಜೆಯಲ್ಲಿ ಅದರ ಭವಿಷ್ಯ ನಿರ್ಣಯವಾಗುವುದು. ಆದರ ಭವಿಷ್ಯನಿರ್ಣಯವು ಮುಖ್ಯವಾಗಿ ಜನತೆ ಮತ್ತು ವಿಜ್ಞಾನಿಗಳ ಕೈವಾಡದಲ್ಲಿ ಮಾತ್ರ.

ವಿಜ್ಞಾನದ ಕೈವಾಡ: ವಿಜ್ಞಾನ ಬಂದುದರಿಂದ ಜಗತ್ತಿನ ಜನರ ಪ್ರಗತಿಯು ಶೀಘ್ರವಾಯಿತು. ನಾಗರಿಕನನ್ನಾಗಿ ಮಾಡಿತು. ಹಸಿ ಮಾಂಸ ಭಕ್ಷಕನಾದ ಮನುಷ್ಯ ತನ್ನ ಆಹಾರವನ್ನು ಬೇಯಿಸಿ ತಿನ್ನಲು ಕಲಿತ, ತನ್ನ ವಾಸಸ್ಥಾನವನ್ನು ಮರದಿಂದ ಮನೆಗೆ ಬದಲಾಯಿಸಿದ, ಸೊಪ್ಪು, ಮರದ ತೊಗಟೆಯ ಬದಲಾಗಿ ಬಟ್ಟೆ ಉಪಯೋಗಿಸ ಹತ್ತಿದ. ಸಂಚಾರಕ್ಕಾಗಿ ಶೀಘ್ರಗಾಮಿಯಾದ ವಿವಿಧ ಶಕ್ತಿಗಳಿಂದೋಡುವ ಹಾರುವ ವಾಹನಗಳನ್ನು ಕಂಡು ಕೊಂಡ. ಹೀಗೆ ವಿಜ್ಞಾನವನ್ನು ತನ್ನ ನಾಗರಿಕತೆಯ ಮುನ್ನಡೆಗಾಗಿ ಬಳಸಿದ ಮನುಷ್ಯ ಇಂದೇನು ಮಾಡುತ್ತಿದ್ದಾನೆ? ಯಾವ ವಿಜ್ಞಾನದಿಂದ ಜನತೆ ಉತ್ಕರ್ಷ ಹೊಂದಿದ್ದರೇ ಈಗ ಹೊಂದುತ್ತಿರುವರೋ ಅದೇ ವಿಜ್ಞಾನದಿಂದೀಗ ಅಪಕಾರ ಹೊಂದಬೇಕೇ? ಕ್ಷಣಮಾತ್ರದಲ್ಲಿ ಜಗತ್ತನ್ನೇ ಸುಟ್ಟು ಭಸ್ಮ ಮಾಡಬಲ್ಲ, ಇದರ ಹಣೆಗಣ್ಣನ್ನೂ ಮೀರಿಸುವಂತಿರುವ ಅಣುಬಾಂಬು ಮತ್ತು ಜಲಜನಕ ಬಾಂಬುಗಳು. ಇದಕ್ಕೊಂದು ನಿದರ್ಶನ. ಅಸ್ತ್ರಗಳ ತಯಾರಿ ಮಾನವನ ಬುದ್ಧಿಯ ಮಟ್ಟವನ್ನು ಹೆಚ್ಚಿಸಿತಾದರೂ ಅದರ ಪ್ರಯೋಗದ ಫಲ ಜಗತ್ತಿನ ವಿನಾಶವಷ್ಟೆ.

ಜನತೆಯ ಪಾತ್ರ: ಲೋಕದ ಪ್ರಗತಿ ಮತ್ತು ವಿನಾಶಗಳಲ್ಲಿ ಮುಖ್ಯ ಪಾತ್ರ ವಹಿಸುವುದು. ವಿಜ್ಞಾನವನ್ನು ಶೋಧಿಸಿದ ಮಾನವನಷ್ಟೇ ಜನತೆ ಪ್ರಗತಿ ಪಥವನ್ನು ಹಿಡಿದು ಸಾಗಿದ್ದರೆ ಲೋಕವನ್ನೇ ಏಕೆ, ಪರಲೋಕವನ್ನೂ ತನ್ನ ಕೈಹಿಡಿತದೊಳಗಿಟ್ಟುಕೊಳ್ಳುವ ಸಾಹಸವನ್ನು ಕೈಗೊಳ್ಳುತ್ತಿರುವ ಮಾನವರಿಂದ ಅದಿ ಜ್ಞಾನವನ್ನು ತನ್ನ ಹಿಂದೆ, ತಾನು ತುಳಿಯುವ ದಾರಿಗುಂಟ ಸಾಗಿಸುವುದು ದೊಡ್ಡ ಕೆಲಸವಾಗುತ್ತಿರಲಿಲ್ಲ. ಆದರೆ ಅಂತಹ ಯೋಗ್ಯತೆಯುಳ್ಳ ಮಾನವ ತನ್ನ ದಾರಿ ತಪ್ಪೆಂದು ತಿಳಿದಿದ್ದರೂ ಸರಿಯಾದ ದಾರಿಯ ಪರಿಚಯವಿದ್ದರೂ ಅದನ್ನು ಬೇಕೆಂದೇ ದೂರ ತಳ್ಳಿ ತಪ್ಪುದಾರಿ ಹಿಡಿಯುತ್ತಿರುವುದು ವಿಷಾದದ ಸಂಗತಿ.

ಇಂದಿನ ತಲೆಮಾರಿನ ಜನರು ಸ್ವಾರ್ಥಕ್ಕಾಗಿ ಹೋರಾಡುವಂತೆ ಪರಾರ್ಥಕ್ಕಾಗಿ ಮಾಡರು. ಲೋಕದ ಹಿತಕ್ಕಾಗಿಯೇ ದುಡಿಯುವವರು ಒಂದು ವಿಲಿಯಕ್ಕೊಬ್ಬ ದೊರಕಿದರೆ ಅದು ಈ ಜಗತ್ತಿನ ಭಾಗ್ಯ ವಿಶೇಷ! ಆ ಒಬ್ಬ, ಲೋಕಹಿತಕ್ಕಾಗಿ ಉಳಿದವರಿಗೆ ಒಂದು ಮಾತು ಹೇಳಿದರೆ ಅವರು ಆ ಮಾತಿಗೆ ಬೆಲೆಕೊಟ್ಟರೆ. ಇಲ್ಲ, ಹಾಗೆ ಮನುಷ್ಯ ಮಾಡಲು ಅದಕ್ಕೆ ಕಾರಣ ವಿಜ್ಞಾನ. ವಿಜ್ಞಾನದಿಂದ ಮನುಷ್ಯನಿಗೆ ಸ್ವಂತ ವಿಚಾರಶಕ್ತಿಯನ್ನೊದಗಿಸಿದೆ. ಆ ವಿಚಾರಧಾರೆ ಒಬ್ಬೊಬ್ಬನದು ಒಂದೊಂದು ರೀತಿಯದಾಗಿಯೇ ಹರಿಯುತ್ತದೆ. ಅದು ಒಂದಾಗಲು ಶಕ್ಯವೇ ಇಲ್ಲ.

ಮನುಷ್ಯ ಹಿಂದಿದ್ದಂತೆ ಇಂದಿಲ್ಲ. ತನ್ನ ಪ್ರತಿಯೊಂದು ನಡತೆಯಲ್ಲೂ ಹೊಸತನ್ನು—(ಅದು ಪ್ರಗತಿಪರವೋ ವಿನಾಶದಾಯಕವೋ ಅತ ಅರಿಯ) ಹಟ್ಟಿಸಿಕೊಂಡಿದ್ದಾನೆ. ಮಾನವ ಸ್ವಾರ್ಥಕ್ಕಾಗಿ ಏನನ್ನೂ ಮಾಡಲು ಹೇಸದ ಕಾಲ ಇನ್ನೊಂದಿದೆ—ಹುಟ್ಟಿದ ಮನುಷ್ಯ ಸಾಯಲೇಬೇಕು. ಆ ಸಾವು ಒರುವತನಕ ತಾನು ಹಾಯಾಗಿ ಉಂಡುಟ್ಟು ಜೀವಿಸಿದರೆ ಸಾಕೆನ್ನುವ ಮನೋಭಾವನೆ ಕೆಲವರಲ್ಲಿದ್ದರೆ, ತಾನು ದೊಡ್ಡ ಮನುಷ್ಯನಾಗಿ ಮೆರೆಯಬೇಕೆಂಬ ಭಾವನೆ ಹಲವರಲ್ಲಿದೆ. ತನ್ನ ಈ ಕಾರ್ಯಸಾಧನೆಗಳಿಗೆ ಭಂಗಬಂದಾಗ ಮನುಷ್ಯ ಏನು ಬೇಕೆಂದರೂ ಮಾಡಲೂ ಹೇಸುವುದಿಲ್ಲ. ಇಂದಿನವರೇ ಹೀಗಾದರೆ ನಮ್ಮ ಮುಂದಿನವರು ಪಶುಗಳಂತಾದರೂ ಆಶ್ಚರ್ಯವಿಲ್ಲ. ಇಂದು ಯಾದವರಿಂದಂತೆ ಕೊಲೆಮಾಡುವವರು ನಂತರ ಎಲ್ಲರೆದುರಿನಲ್ಲೇ ಕೊಲೆಗೈದುಕೊಳ್ಳುವರು. ಅಂದೇ ಮಾನವತೆಯ ಅಂತ್ಯ—ಕೊನೆಗಂತೂ ಇದೆಯಲ್ಲ ವಿಜ್ಞಾನ ಸಾಧಿಸಿದ ಪ್ರಗತಿಯ ಪ್ರತಿರೂಪವಾದ ಮಹಾ ಆಯುಧಗಳು. ಜಗತ್ತಿನ ಅಂತ್ಯಕ್ಕಾಗಿ ಈಶ್ವರ ಮಾಡಿದ ಯೋಜನೆ ಇದಾಗಿರಬಹುದೆ? ಹಿರಿಯರು ಹೇಳಿಲ್ಲವೇ—"ಅತಿರೇಕಂ ವಿನಾಶಕೃತಿ" ಇಂದು ಪ್ರಗತಿಗೆಂದೇ ಎನ್ನಿಸಿಕೊಂಡ ವಿಜ್ಞಾನ ಹಾಗೂ ಅದರಿಂದ್ಭವಿಸಿದ ನಾಗರಿಕತೆಗೆ—ಅವು ಅತಿರೇಕವಾದಾಗ ಎಲ್ಲವುಗಳಿಗಿರುವಂತೆ ಒಂದು ಕೊನೆ ಅದಕ್ಕೂ ಬರಬಹುದಲ್ಲವೇ? ಆ ವಿನಾಶವನ್ನು ತಡೆಯಲು ಉಪಾಯವಿದೆಯೇ? ಇದೆ, ಜಗತ್ತು ಈ ಸಂದಿಗ್ಧ ಪರಿಸ್ಥಿತಿಯಲ್ಲಿ ತನ್ನ ಹೆಜ್ಜೆಯನ್ನು ಸರಿಯಾದ ದಾರಿಯಲ್ಲಿಡಬೇಕು. ವಿಜ್ಞಾನ ಹಾಗೂ ನಾಗರಿಕತೆ ಮಾನವನ ಕಲ್ಯಾಣವನ್ನೇ ಸಾಧಿಸುವಂತ ಜಾಡು ಹಿಡಿಯಬೇಕು. ಅಂತೆಯೇ ಆಗಲೆಂದು ಆ ದಯಾಮಯನಾದ ಪರಮಾತ್ಮನೊಡನೆ ನಾವೆಲ್ಲರೂ ಬೇಡೋಣ.

—'ಜನ್ನ' ಮರವಂತೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ಸ

ಶ್ರೀಲಂಕಾಯಾತ್ರೆ

(೧ನೇ ಪುಟದಿಂದ)

ದ ನಾಲ್ಕು ಸುತ್ತೂ ಮೋಟಾರಲ್ಲಿಯೇ ತಿರುಗಿ ಎದುರಿನ ಎತ್ತರವಾದ ತೋಟ ನೋಡಲು ಹೊರಟೆವು.

ಹೋಟೆಲಿನ ಬಲಪಕ್ಕದಲ್ಲಿ ಪೇಟೆ ಇದೆ. ಇಲ್ಲಿ ಪ್ರಪಂಚದ ಎಲ್ಲ ಭಾಗದ ವಸ್ತುಗಳನ್ನೂ ಭಾರತಕ್ಕಿಂತ ಅಗ್ಗದರದಲ್ಲಿ ಕೊಂಡುಕೊಳ್ಳಬಹುದು. ಜಪಾನಿ, ಫ್ರೆಂಚ, ಜರ್ಮನ್ ಮತ್ತು ಅಮೆರಿಕನ್ ಬಟ್ಟೆಗಳಿಂದಲೇ ಪೇಟೆ ತುಂಬಿಹೋಗಿದೆ.

ಕೈಗಾರಿಕೆಯ ಸಾಮಗ್ರಿಗಳಿಗೆ ಕೇಂಡಿ ಪ್ರಸಿದ್ಧವಿದೆ. ಇಲ್ಲಿ ಆನೆಯ ದಂತ, ಮೋಪ, ಕೊಳಲು ಮತ್ತು ಮಣ್ಣಿನ ಆಟಿಕೆಗಳು ಅತ್ಯಂತ ಅಗ್ಗವಾಗಿವೆ. ಬಣ್ಣದ ಚಾಪೆಗಳೂ ಧಾರಾಳವಾಗಿವೆ.

ಸಂಜೆ ಕೇಂಡಿಯಲ್ಲಿ ರಾಷ್ಟ್ರಪತಿಯವರಿಗೆ ಭವ್ಯವಾದ ಸನ್ಮಾನ ನಡೆಯಿತು. ರಾಜಮಹಲಿನಿಂದ ಪೋಲೀಸು ಮೈದಾನದ ವರೆಗಿನ ಮೆರವಣಿಗೆಯನ್ನು ಎಂದಿಗೂ ಮರೆಯಲಾರೆ. ಮುಂದೆ ಶೃಂಗರಿಸಲ್ಪಟ್ಟ ಹತ್ತು ಆನೆ, ಅವುಗಳ ಹಿಂದೆ ನೂರು ನರ್ತಕರೂ ನರ್ತಕಿಯರೂ, ಅವರ ಹಿಂದೆ ರಾಷ್ಟ್ರಪತಿಯವರ ತೆರೆದ ಕಾರು ಮತ್ತವರ ಹಿಂದೆ ನೂರು ಇತರ ಮೋಟಾರುಗಳ ಮೆರವಣಿಗೆಯನ್ನು ಮರೆಯುವುದು ಸಾಧ್ಯವೆ?

ರಸ್ತೆಯ ಇಕ್ಕೆಡೆಗಳಲ್ಲಿಯೂ ಜನರ ನೂಕುನುಗ್ಗಲಿತ್ತು. ಈ ಮೆರವಣಿಗೆಯನ್ನು ಕಾಣಲು ನಗರವಿಡಿ ಬಂದಂತಾಗಿತ್ತು. ಡೋಲಿನ ಬಡಿತಕ್ಕೆ ಸರಿಯಾಗಿ ಕುಣಿತ ಸಾಗುತಿತ್ತು. ಮೋಟಾರುಗಳು ಸರ್ಪದಂತೆ ಹಿಂಬಾಲಿಸುತಿದ್ದುವು.

ಸುಮಾರು ಒಂದು ಘಂಟೆಯಲ್ಲಿ ಮೆರವಣಿಗೆ ಪೋಲೀಸು ಮೈದಾನಿಗೆ ಬಂತು. ಒಂದು ಎತ್ತರವಾದ ಮಂಚದಲ್ಲಿ ರಾಷ್ಟ್ರಪತಿಯವರನ್ನು ಕೂರಿಸಲಾಯಿತು. ಮುಂದೆ ಮೈದಾನಿನಲ್ಲಿ ಸುಮಾರು ೧೦ ಸಾವಿರ ಶ್ರೋತಾರರು ಮಂಡಿಸಿದ್ದರು.

ನಾಗರಿಕ ಸನ್ಮಾನಾನಂತರ ರಾಷ್ಟ್ರಪತಿಯವರು ದಂತದ ಮಂದಿರವನ್ನು ಕಂಡರು. ಈ ಹಳೆಯ ಮಂದಿರವೀಗ ಹೊಸತಾಗಿ ಭವ್ಯವಾಗಿ ನಿರ್ಮಾಣವಾದುದು. ಭಗವಾನ್ ಬುದ್ಧನ ಒಂದು ದಂತವನ್ನಿಲ್ಲಿಡಲಾಗಿದೆ. ರಾಷ್ಟ್ರಪತಿಯವರ ಗೌರವಾರ್ಥವಾಗಿ ಈ ದಂತವನ್ನು ತೋರಿಸಲಾಯಿತು. ಏಳು ಸಂದೂಕಗಳೊಳಗಡೆ ಈ ದಂತವನ್ನಿಡಲಾಗಿದೆ.

ಸಂಜೆ ಏಳು ಗಂಟೆಗೆ ರೇಲುಗಾಡಿಯ ಮೂಲಕ ಕೇಂಡಿಯಿಂದ ಕೊಲಂಬೊವಿಗೆ ಮರಳಿದೆವು. (ಕ್ರಮಶಃ)

ಮೂಲ. "ನವಭಾರತ ಟಾಯಿಮ್ಸ್"

ಅನುವಾದ "ಗೋರಾ"

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನಸಹ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ

ಬೆಲೆ ರೂ 1-4-0 (1=25) ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟರಾವ್, ಎಲ್ ಐ ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ ಹರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—

ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಸಾದಾ ಪ್ರತಿ ಬೆಲೆ ರೂ ಒಂದೂವರೆ, ಉತ್ತಮ ಪ್ರತಿ ರೂ ಎರಡು

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ, ಉಡುಪಿ

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ ಎ ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ

ಬೆಲೆ ರೂ 2 V P ಮಾಡುವುದಿಲ್ಲ.

ರೂ 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು

ನವಭಾರತ ಬುಕ್ ಡಿಪ್ಪೊ, ಉಡುಪಿ.

ಕಥಾ ವಿಹಾರ

(೨ನೇ ಪುಟದಿಂದ)

ವಾಯಿತು. ತಾಯ್ತನದೊಳಗಿನ ಅಸಾಮಾನ್ಯ ವೇದನೆಯು ರಾಕ್ಷಸೀ ರೂಪ ತಾಳ್ದು ನರ್ತಿಸಿತು. ಭೀತಿ, ದುಃಖದಿಂದ ಕೊರಳು ಬಿಗಿದಂತಾಯಿತು.

ಪಾಪ, ಅವರ ಅಪರಾಧವಾದರೂ ಏನಿತ್ತು?

ಮನೆ ಮುಟ್ಟಿದಾಗ ವಿಮಲಾಬಾಯಿ ಸಂಪೂರ್ಣ ಸೋತಿದ್ದರು. ಮೈಯಲ್ಲಿ ಶಕ್ತಿಯೇ ಇಲ್ಲ. ಅಲ್ಲದೆ ತುಂಬು ಗರ್ಭಿಣಿ!

ರಾಜರಾಯರು ತಮ್ಮ ಪ್ರೀತಿಯ ಪತ್ನಿಯ ಮೈ ಮುಟ್ಟಿನೋಡಿದರು. ಕೆಂಡದಂತೆ ಸುಡುತ್ತಿತ್ತು ದೇಹ!

"ಮೊದಲ ಬಸಿರು; ಜಾಗ್ರತರಾಗಿರಬೇಕು" ಎಂದು ಸೂಚಿಸಿದ್ದರು ಫ್ಯಾಮಿಲಿ ಡಾಕ್ಟರ್.

ಎಳೆ ದೇಹ; ಹೊಸ ಅನುಭವ; ಅದರೊಂದಿಗೆ ಈ ಆಕಸ್ಮಿಕ ಘಟನೆ....

ರಾಜರಾಯರು ಫ್ಯಾಮಿಲಿ ಡಾಕ್ಟರ್ ಸೀತಾರಾಘವರಿಗೆ ಫೋನ್ ಮಾಡಿದರು. ಡಾಕ್ಟರ್ ಆಗಮಿಸಿದರು.

ವಿಮಲಾಬಾಯಿ ಸಂಪೂರ್ಣ ಅಸ್ವಸ್ಥರಾಗಿದ್ದರು. ಪ್ರಜ್ಞಾಹೀನರಾದಂತಿತ್ತು. ದೇಹದಲ್ಲಿ ಏನೇನೂ ಶಕ್ತಿಯಿಲ್ಲ

ಹೆದರಬೇಡಿ. ಸ್ವಲ್ಪ ಭೀತರಾಗಿದ್ದಾರೆ, ಅಷ್ಟೇ. ತಿಂಗಳೂ ಹತ್ತಿರವಾಗುತ್ತಾ ಬಂತಲ್ಲಾ, ಮಿಡ್‍ವೈಫನ್ನು ಕಳಿಸುವೆ" ಎಂದರು ಡಾಕ್ಟರ್.

ರಾಜಾರಾಯರ ಹೃದಯದಲ್ಲಿ ಭೀತಿ ತಲೆದೋರಿತು. ತನ್ನೊಲುಮೆಯ ಮಡದಿ ತನ್ನನ್ನು ತೊರೆಯುವಳೇನೋ ಎನ್ನಿಸಿತು.

ಇಷ್ಟು ಅಸ್ವಸ್ಥಳಾಗುವಂತಹ ವಿಷಯ ಅಲ್ಲೇನಿತ್ತು ಎಂದವರ 'ಎಳೆಮನ' ಚಿಂತಿಸಿತು.

ಆ ಹುಡುಗ, ಅವನ ಹೆಣೆಯ ಬರಹದಿಂದ ಸತ್ತ. ಗಂಗಮ್ಮಳಿಗೆ ಭಾಗ್ಯವಿರಲಿಲ್ಲ. ಆದರೆ ಇವಳಿಗೇಕೆ ಹೀಗಾಯಿತು?

ಹಾಗಾದರೆ ನನಗೇಕೆ ಏನೂ ಆಗಲಿಲ್ಲ?

ವಿಮಲಾಬಾಯಿ ಕನವರಿಸಲಾರಂಭಿಸಿದರು.

ಇಲ್ಲ....ನಾನಲ್ಲ.......ಇಲ್ಲ ಗಂಗಮ್ಮ ನಾನು ನಿನ್ನ ಮಗುವನ್ನೇನೂ ಮಾಡಿಲ್ಲ.......

"ಬೇಡ...ಬೇಡ ನನ್ನ ಮಗು....ನನ್ನ ಮಗುವನ್ನ ಕೊಂಡೊಯ್ಯಬೇಡ...."

ರಾಜರಾಯರು ಮೃದುವಾಗಿ ಕರೆದರು, ವಿಮಲಾ ವಿಮಲಾಬಾಯಿ ಮೆಲ್ಲನೆ ಒಮ್ಮೆ ಕಣ್ತೆರೆದರು. ಹಾಗೆಯೇ ಕಣ್ಮುಚ್ಚಿ, ಅರೆ ನಿದ್ದೆಯಲ್ಲಿದ್ದಂತೆ ನರಳಿದರು.

"ಪಾಪ, ಚಿಕ್ಕ ಮಗು....ಒಬ್ಬನೇ ಹುಡುಗ....ಅಯ್ಯೋ ಗಂಗಮ್ಮ ಎಷ್ಟು ದುಃಖಿಸುವಳೋ........ಹೆತ್ತ ಕರುಳು...ಪಾಪ, ತಾಯಿ ಮಕರು....

"ಅಯ್ಯೋ, ರಕ್ತ...ರಕ್ತ...ಬೇಡ.... ನನ್ನನ್ನು ಕೊಂಡು ಹೋಗಿ...ನೋಡಲಾರೆ..." ಎಂದು ಚೀರಿದರು.

ಒಮ್ಮೆ ಮಗುವಿಗಾಗಿ ಬೇಡುತ್ತಿರುವ ಗಂಗಮ್ಮ ಕಣ್ಮುಂದೆ ಕಾಣಿಸಿದಳು.

ಇನ್ನೊಮ್ಮೆ ರೋದಿಸುವ ಗಂಗಮ್ಮ ಗೋಚರಿಸಿದಳು.

ಮತ್ತೊಮ್ಮೆ, ಅರುಚುತ್ತಾ ರಕ್ಕಸಿಯಂತೆ ಧಾವಿಸಿ ಬರುತ್ತಿರುವ ಗಂಗಮ್ಮ ಕಾಣಿಸಿದಳು.

ಆಡುತ್ತಿರುವ ಅವಳ ಚಿಕ್ಕ ಹುಡುಗನೂ ಕಾಣಿಸಿದ.

ಅವನನ್ನೆತ್ತಿಕೊಂಡ ಅವನ ತಾಯಿ, ಗಂಗಮ್ಮ ನಗುತ್ತಾ, ಕಾಣಿಸಿದಳು ಆದೊ!...ಬಾಲಕನ ಮೇಲೆ ಕಾರು ಸರಿಯಿತು ...ರಕ್ತ... ಮಾಂಸ .... ಭೀತ್ಕಾರ ...ಎಲ್ಲವೂ ವಿಮಲಾಬಾಯಿಯ ಕಿವಿಗೆ ಕೇಳಿಸಿತು.

ವಿಮಲಬಾಯಿ ಮತ್ತೊಮ್ಮೆ ಕಿಟ್ಟನೆ ಕಿರುಚಿದರು. ಮತ್ತೂ ಮತ್ತೂ ಅದೇ ಪುನರಾವೃತ್ತಿ!

ರಾಜಾರಾಯರ ಹೃದಯದಲ್ಲಿ ಭೀತಿ ತಲೆದೋರಿತು, ಕಣ್ಣ ಬೆಳಗಾದ ಮಾನಸಿಕ ಆಘಾತದ ಅರಿವು ಆಗ ತೊಡಗಿತ್ತು.

ರಾತ್ರಿಯೇ ಡಾಕ್ಟರರಿಗೆ ಕರೆ ಹೋಯಿತು. ಔಷಧಿಯಿತ್ತರು. ವಿಮಲಾಬಾಯಿಯ ಪ್ರಕೃತಿ ಸ್ವಲ್ಪ ಶಾಂತವಾಯಿತು.

ಮರುದಿನ ಮಧ್ಯಾಹ್ನದಿಂದ ಪ್ರಸವ ವೇದನೆ ಆರಂಭವಾಯಿತು. ಆದರೆ ವಿಮಲಾ ಬಾಯಿಯ ಶರೀರದಲ್ಲಿ ಏನೇನೂ ತ್ರಾಣವಿರಲಿಲ್ಲ.

ಮತ್ತೆ ಆರಂಭವಾಯಿತು ಅದೇ ಕನವರಿಕೆ; ಅದೇ ನರಳಾಟ.

ಗಂಗಮ್ಮನ ನಾನಾರೀತಿಯ ಮುಖಗಳು ವಿವಿಧ ಭಾವದಿಂದ ವಿಮಲಾ ಬಾಯಿಯನ್ನು ಮುತ್ತಿಕೊಂಡವು.

ಮೃತ ಬಾಲಕನ ಮುದ್ದು ಮುಖಗಳು ಕಣ್ಣೆದುರು ನಲಿದುವು.

ಒಡನೆಯೇ ರಕ್ತರಂಜಿತವಾಗಿ ನರ್ತಿಸಿದುವು.

ಕೂಡಲೇ ನೋವಿನಿಂದ ನರಳಿ ಮೂರ್ಛೆ ಹೋದರು ವಿಮಲಬಾಯಿ.

ಸಂಜೆಯ ಹೊತ್ತಿಗೆ ಬೇರೆ ದಾರಿಯಿಲ್ಲದೆ ಡಾಕ್ಟರರು ಶಸ್ತ್ರಕ್ರಿಯೆ ನಡೆಸಿದರು. ಮಗುವನ್ನು ಹೊರತೆಗೆದರು. ಆದರೆ ಮಗು ಮೃತವಾಗಿತ್ತು.

ಅರ್ಧ ಗಂಟೆಯ ವರೆಗೂ ವಿಮಲಾಬಾಯಿಗೆ ಪ್ರಜ್ಞೆ ಬರಲಿಲ್ಲ. ಅರ್ಧ ಗಂಟೆಯ ನಂತರ ಮೆಲ್ಲನೆ ಕಣ್ತೆರೆದರು.

ತಾನು ಮೃತ ಶಿಶುವನ್ನು ಹೆತ್ತಿದ್ದೇನೆಂದು ಆಗಲೇ ಅರಿವಾಯಿತವರಿಗೆ. ತನ್ನ ಮಗುವಿನ ಎಳೆಗೊರಳಿನ ಕೂಗನ್ನವರು ಕೇಳಲಿಲ್ಲ.

ಅವರ ಕಣ್ಣಲ್ಲಿ ನೀರು ತುಂಬಿತು. ಆಗೊಮ್ಮೆ ಯಾರನ್ನೋ ಕಂಡಂತೆ ಕಣ್ಣುಗಳು ಚಲಿಸಿದುವು. ತುಟಿ ನಡುಗಿತು. ಕಣ್ಣು ಮಿಂಚಿತು. ಸುತ್ತಲಿದ್ದವರು ಕಣ್ಣು ಹೊರಳಿಸಿ ಅವರ ಕಡೆಗೆ ನೋಡುತ್ತಿರುವಂತೆಯೇ ವಿಮಲಾ ಬಾಯಿ ಹೊರಟು ಹೋಗಿದ್ದರು.

ತನ್ನ ಪ್ರೇಯಸಿಯ ಮರಣ ವಾರ್ತೆ ರಾಜಾರಾಯರಿಗೆ ಸಿಡಿಲೆರಗಿದಂತಾಯಿತು ಅವರ ಕಣ್ಣಲ್ಲಿ ಕಂಬನಿ ಚಿಮ್ಮಿತು. ತನ್ನ ಪತ್ನಿಯನ್ನು ಕಳಕೊಂಡ ರಾಜಾರಾಯರಿಗೆ, ತನ್ನ ಬಾಳಗೆಳತಿ ತನ್ನನ್ನಗಲಿದ ಆ ಪಾರ ವೇದನೆಯ ಅನುಭವವಾಯಿತು.

ಅದರೊಂದಿಗೇ ಹೆಂಗರುಳಿನ, ಅಸಾಮಾನ್ಯ ಪ್ರೇಮದಿಂದ ತುಂಬಿದ ತಾಯ್ತನದೊಳಗಿನ ಬೃಹತ್-ಭಾವದ ಅರಿವಾಗತೊಡಗಿತ್ತು

—ಕೂಡ್ಲು ತಿಮ್ಮಪ್ಪ ಗಟ್ಟಿ,
ಮಧೂರು.



ಮದ್ರಾಸಿನ ದಕ್ಷಿಣ ಆರ್ಕಾಟಿನ ನೆವೇಲಿಯಲ್ಲಿನ ಬಂಡೆಗಲ್ಲುಗಳನ್ನು ಒಡೆದು ಪುಡಿಮಾಡುವುದರಲ್ಲಿ ಬುಲ್ ಡೋಜರ್ ನಿಮಗ್ನವಾಗಿದೆ.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಜನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪ್ಪೊ, ಉಡುಪಿ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. A. 454/59 in
R. E. P. 199/59 in O. S. 313/57

ಪಿ. ಗೋಪಾಲ ಪೈ —ಅರ್ಜಿದಾರ.
Us
ಸಂಕಮ್ಮ ಕೂಡಾ —ಎದ್ರಿರು.

ಪುತ್ತೂರು ತಾಲೂಕು ಕೆಮ್ಮಿಂಜೆ ಗ್ರಾಮದ ಕೊರುಂಗು ಎಂಬಲ್ಲಿರುವ ಕೊರಗ ಪೂಜಾರಿ ಸೊಸೆ-ವ-ತಿಮ್ಮೊಲು ಹೆಂಗ್ಸಿನ ಮಗಳು ಸಂಕಮ್ಮ ಮತ್ತು ಈ ಸಂಕಮ್ಮ ಹೆಂಗ್ಸಿನ ಮಗ ಶ್ರೀಧರ ಪೂಜಾರಿಗಳಿಗೆ ಕೂಡಾ ಈ ಮೂಲಕ ಕೋರ್ಟ ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದ್ರೆ—

ಮೇಲ್ಕಂಡ ಅರ್ಜಿದಾರನು ನಿಮ್ಮ ಬಾಬ್ತು ಕೆಮ್ಮಿಂಜೆ ಗ್ರಾಮದ ಆಸ್ತಿಯನ್ನು ಏಲಂಪಡಿಸುವರೆ ಮೇಲಿನ ಅಮಲ್ದಾರಿ ಅರ್ಜಿ ನೂಡಿರುವುದರಿಂದ ಆ ವಿಷಯದಲ್ಲಿ ಏಲಂನ ಶರ್ತುಗಳನ್ನು ನಿರ್ಣಯಿಸುವ ಬಗ್ಗೆ ಸದ್ರಿ ಅಮಲ್ದಾರಿಯು 7—9—1959ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಆ ದಿನ ನೀವು ಖುದ್ದಾಗಿ ಪ ವಕೀಲ ದ್ವಾರ ಹಾಜರಾಗಿ ಉದಹರಿಸದಿದ್ದರೆ ಏಕಪಕ್ಷವಾಗಿ ಅರ್ಜಿಯು ತೀರ್ಮಾನಿಸಲ್ಪಡುವುದು.

(Sd) K. Veerasimha,
Advocate for Petitioner.

Puttur, 10—8—59.

ಸರಟಿ

(೫ನೇ ಪುಟದಿಂದ)

ಮಂತ್ರಿಗಳ ನ್ಯಾಯದ ಫಲವೋ ಎಂಬಂತೆ ಹಾಗಾಗಲಿಲ್ಲ.

ನಿಜವಾಗಿ ಕಂಬನಿ ಸುರಿಸುವುದು ಕೃತ್ರಿಮತೆಯದ್ಯೋತಕವೆಂದು ತಿಳಿದುಕೊಳ್ಳುವ ಜ್ಞಾನಿಗಳೂ ನಮ್ಮಲ್ಲಿದ್ದಾರೆ. ಇತರರ ಕಣ್ಣೀರ ಧಾರೆಯನ್ನು ಕಂಡು ಮನ ಕರಗಿ ಸಹಾನುಭೂತಿ ತೋರ್ಪಡಿಸಿ ತಾವೂ ತಮ್ಮ ನಯನಗಳಲ್ಲಿ ಅಶ್ರು ಬಿಂದುಗಳನ್ನು ತೋರ್ಪಡಿಸುವ 'ಉದಾರವಾದಿಗಳು' ಇರುವ ಹಾಗೆ, ದ್ರೌಪದಿಯು ಮಾನಭಂಗದ ಸಮಯದಲ್ಲಿ ಆಕೆಯ ಕಂಬನಿ ಕಂಡು, 'ಶಹಭಾಸ್' ಎಂದು ದಿಟ್ಟತನದಿಂದ ತೊಡೆತಟ್ಟಿ ಅಟ್ಟಹಾಸಗೈದ ದುರ್ಯೋಧನನಂತಹ ದುಷ್ಟರೂ ಇರುವರು. ಇದೇ ದ್ರೌಪದಿಯ ಕಣ್ಣೀರು ಭೀಮನಲ್ಲಿ ವಿಲಕ್ಷಣವಾದ ಪರಿಣಾಮವನ್ನುಂಟು ಮಾಡುತ್ತದೆ. ಘನಘೋರವಾದ ಪ್ರತಿಜ್ಞೆಗೈಯಲು ಇದು ಉತ್ತೇಜನ ನೀಡಿತು.

ಪುರಾಣ ಕಾವ್ಯಗಳಲ್ಲಿ ಅತಿಯಾದ ಮನೋವ್ಯಥೆಯಿಂದ ಕೊರಗಿದ ಎಲ್ಲಾ ಸ್ತ್ರೀಯರ ದುಃಖದ ಪರಿಮಾಣದ ಪರಿಚಯವಿದೆಯಾದರೂ, ಓರ್ವ ಸಾಧ್ವಿಯ ಅಶ್ರುಧಾರೆಯನ್ನು ಗಮನಿಸಿದವರಿಲ್ಲ. ಆಕೆ ಬೇರಾರೂ ಆಗಿರದೆ ಅಯೋಧ್ಯೆಯ ರಾಜನಾದ ದಶರಥನ ಸೊಸೆ ಹಾಗೂ ಲಕ್ಷ್ಮಣನ ಪ್ರಿಯ ಮಡದಿಯಾದ ಊರ್ಮಿಳಾದೇವಿ. ಪತಿದೇವರು ಹದಿನಾಲ್ಕು ವರ್ಷಗಳವರೆಗೆ ವನವಾಸಗೈಯುತ್ತಿರುವಾಗ ಆ ಕೋಮಲಾಂಗಿಯು ಅದೆಷ್ಟು ವಿರಹತಾಪವನ್ನು ಅನುಭವಿಸಿರಲಿಕ್ಕಿಲ್ಲ? ತನ್ನ ನಯನಗಳಿಂದ ಅದೆಷ್ಟು ಕಂಬನಿಧಾರೆಯನ್ನು ಹರಿಯಿಸಿರಲಿಕ್ಕಿಲ್ಲ? ಲೋಕದ ಹೆಚ್ಚಿನ ಜನರಿಗೆ ಈ ವಿಷಯ ಅರಿತಿರಲಿಕ್ಕಿಲ್ಲ. ಆಕೆಯಷ್ಟು ಸಂಯಮಿಯೇ ದೊರೆಯುವುದು ವಿರಳ. ಕರ್ತವ್ಯಪಾಲನೆಗಾಗಿ ತನ್ನ ಅಗ್ರಜನ ಜತೆಯಲ್ಲಿ ಕಾನನಕ್ಕೆ ತೆರಳಿದ ಲಕ್ಷ್ಮಣನು ಹಿಂದಿರುಗುವ ತನಕ ತನ್ನ ದುಃಖದ ಅರಿವು ಇತರರಿಗಾಗದಂತೆ ಅದನ್ನು ಬಚ್ಚಿಟ್ಟುಕೊಂಡ ಈ ತ್ಯಾಗಶೀಲೆಯೇ ಧನ್ಯಳಲ್ಲವೇ?

ಕಣ್ಣುಗಳು ಅಶ್ರುಪೂರಿತವಾಗಲು ಬಹುಮುಖವಾದ ಕಾರಣಗಳಿವೆ. ಮಾನಸಿಕ ಆಘಾತದಿಂದ ತತ್ತರಿಸಿ, ವಯಸ್ಕರು ಪ್ರಲಾಪಿಸಿದರೆ, ದೈಹಿಕ ಯಾತನೆಯಿಂದ ಚಿಕ್ಕ ಮಕ್ಕಳು ಎಡೆಬಿಡದೆ ಕಣ್ಣೀರು ಸುರಿಸುತ್ತಾರೆ. ಕೊನೆಮೊದಲಿಲ್ಲದ ತನ್ನ ದುಃಖದಿಂದ ಜರ್ಝರಿತನಾಗಿ ಒಬ್ಬನು ಕಂಬನಿ ಹರಿಯಿಸಿದರೆ, ಬೇರೆ ಕೆಲವರು 'ತಾನು ಅನುಭವಿಸುವ ಯಾತನೆಯು ಇತರರಿಗೆ ತಟ್ಟದೆ ಹೋಯಿತಲ್ಲಾ!' ಎಂದು ಏಕಾಂತದಲ್ಲಿ ಬೇಕಾದಷ್ಟು ಅತ್ತು ಸಕಾರಣವಾಗಿ ಕಣ್ಣೀರ ಧಾರೆಯನ್ನು ಹರಿಯಿಸುವ 'ಪರೋಪಕಾರಿ'ಗಳೂ ಇದ್ದಾರೆ. ತೇರ್ಗಡೆ ಹೊಂದದ ವಿದ್ಯಾರ್ಥಿಗಳು ಗಳಗಳನೆ ಅಳುತ್ತಾ ತಮ್ಮ ಆಹಾರದೊಂದಿಗೆ ಕಂಬನಿಯನ್ನು ಬೆರಸಿ ಉಂಡರೆ, ತೇರ್ಗಡೆಗೊಂಡವರಲ್ಲಿ ಕೆಲವರು ಮುಂದಿನ ವಿದ್ಯಾಭ್ಯಾಸವನ್ನು ಪಡೆಯುವ ಭಾಗ್ಯವಿಲ್ಲದೆ ಶೋಕಿಸುವರು. ಭಗ್ನ ಮನೋರಥರಾದ ಪ್ರೇಮಿಗಳು, ತಮ್ಮ ಮನದುಂಬಿದ ಮಾನದನ್ನೆ ದೊರೆಯದೆ ಖಿನ್ನರಾಗಿ, ಅಶ್ರು ಜಲವನ್ನು ಹರಿಯಿಸಿದರೆ ಕಲವು 'ಲಲನಾ ಮಣಿ'ಗಳು ಪತಿಯ ವಿರಹದಿಂದ ಬಳಲಿ ಸದಾ ಕಣ್ಣ ಜಲದಿಂದ ಭೂಮಾತೆಯನ್ನು ನಿರ್ಮಲಗೊಳಿಸುತ್ತಾರೆ. ಧಾರಾಳ ಧನ ಸಂಪಾದನೆಗೈದ ಮಹಾನುಭಾವರು ತಮ್ಮಲ್ಲಿದ್ದುದನ್ನು ಕರಗಿಸಿಕೊಳ್ಳಲಾರದೆ ಬನ್ನಪಟ್ಟರೆ, ನಿರ್ಗತಿಕರಾದ ಬಡಜೀವಿಗಳು ಹಸಿವನ್ನು ತಾಳಲಾರದೆ ಕಣ್ಣೀರು ಸುರಿಸುತ್ತಾರೆ.

ಹಿಂದಿನ ಕಾಲದಲ್ಲಿ ಮಹಾ ತೇಜಸ್ವಿಗಳಾದ ಋಷಿಗಳು ಭವಿಷ್ಯದ ಘಟನೆಗಳನ್ನು ತಮ್ಮ ಜ್ಞಾನಶಕ್ತಿಯಿಂದ ತಿಳಿದುಕೊಂಡು ಅದರ ಫಲವಾಗಿ ಕಂಬನಿ ಹರಿಯಿಸಿದ ಉದಾಹರಣೆಗಳೂ ಇವೆ. ಭಗವಾನ್ ಬುದ್ಧನು ಜನ್ಮವೆತ್ತಿದಾಗ ಶುದ್ಧೋದನನು ಸಂತೋಷಸಾಗರದಲ್ಲಿ ತೇಲಾಡಿ ಮೈಮರೆತಿದ್ದನು. ಆಗ ಅಲ್ಲಿಗೆ ಅಸಿತ ಮಹರ್ಷಿಯು ಆಗಮಿಸಿ, ದಿವ್ಯ ಲಕ್ಷಣಗಳಿಂದ ಕೂಡಿದ ಆ ಶಿಶುವನ್ನು ಕಂಡು ಒಂದೇ ಸಮನೆ ತನ್ನ ಕಣ್ಣುಗಳಿಂದ ಜಲಧಾರೆಯನ್ನು ಇಳಿಸಿದನಂತೆ. ಇದರಿಂದ ಕುತೂಹಲಪಟ್ಟ ಅರಸನು ಈ ಕುರಿತು ಋಷಿಯನ್ನು ಪ್ರಶ್ನಿಸಿದಾಗ, 'ಈ ಮಗು ಬೆಳೆದು ದೊಡ್ಡವನಾಗಿ ಮುಂದೆ ಲೋಕ ಕಲ್ಯಾಣ ಕಾರ್ಯಗೈಯ್ಯುತ್ತಿರುವಾಗ ಅದನ್ನು ಕಣ್ಣಾರೆ ಕಾಣುವ ಭಾಗ್ಯವು ತನಗಿಲ್ಲವಲ್ಲವೆಂದು ಮಾತ್ರ ದುಃಖಿಸುತ್ತಿರುವೆನು!' ಎಂದು ಆ ಮುನಿಯು ಉತ್ತರಿಸಿದನಂತೆ. ಈ ಕಾಲದಲ್ಲಿ ಅಂತಹ ಶಕ್ತಿಯನ್ನು ಜನರು ಪಡೆದಿದ್ದರೆ ಅದನ್ನು ನಿವಾರಿಸಲು ಎಷ್ಟು ಬಗೆಗಳಲ್ಲಿ ಯತ್ನಿಸುವರೆಂಬುದನ್ನು ಹೇಳಲಸಾಧ್ಯ.

ಕೃತಕವಾಗಿ ಕಣ್ಣೀರು ಬರುವಂತೆ ಮಾಡುವ ಪ್ರಯತ್ನವು ವಿಫಲವಾದಲ್ಲಿ, ಸ್ವಾಭಾವಿಕವಾಗಿಯೇ ಅದನ್ನು 'ಉದ್ರೇಕಿ'ಸಿಕೊಂಡ 'ಚಲಚ್ಚಿತ್ರ ನಿರ್ದೇಶಕ'ರೂ ಇದ್ದಾರೆ. ದುಃಖದ ದೃಶ್ಯವೊಂದನ್ನು ಚಿತ್ರೀಕರಿಸುವ ಸಂದರ್ಭದಲ್ಲಿ, ಅದರಲ್ಲಿ ಅಭಿನಯಿಸುವ ತಾರೆಯರು ಕಂಬನಿ ಸುರಿಸಬೇಕಾಗುತ್ತದೆ. ಆದರೆ ಇದನ್ನು ಕೃತಕವಾಗಿ ಹರಿಯುವಂತೆ ಮಾಡಬೇಕಾದುದರಿಂದ ಕೆಲವೊಮ್ಮೆ ಕಣ್ಣೀರೇ ಬರುವುದಿಲ್ಲ! ಕೂಡಲೇ ನಿರ್ದೇಶಕರು ಎಚ್ಚೆತ್ತು ನಟಿಯರು ಕಂಬನಿ ಸುರಿಸುವಂತೆ ಹಲವು ಬಗೆಯಲ್ಲಿ ಶ್ರಮಿಸುತ್ತಾರೆ. ಏಕೆಂದರೆ ಅವರ ಚಿತ್ರಪಟವು ಯಶಸ್ವಿಯಾಗಿ ಮುಗಿಯಬೇಕೆಂಬ ಹೆಬ್ಬಯಕೆಯು ಅವರಲ್ಲಿದೆ. ಬೇರೆ ಉಪಾಯಗಾಣದೆ ಕೊನೆಗೆ ಕೈಗೆ ಸಿಕ್ಕಿದ ಚಾಟಿಯಿಂದ ನಟಿಯರ ಬೆನ್ನನ್ನು ಬಲವಾಗಿ ಥಳಿಸಿದಾಗ, ಉಂಟಾದ ನೋವಿನ ದೆಸೆಯಿಂದ ಅವರು ಕೂಡಲೇ ಸ್ವಾಭಾವಿಕವಾಗಿ ದುಃಖಿಸಿ ಕಣ್ಣೀರು ಸುರಿಸುತ್ತಾರೆ. ದಿಗ್ದರ್ಶಕರ ಇಷ್ಟಾರ್ಥ ಕೈಗೂಡುವುದು. ಇಲ್ಲದಿದ್ದರೆ ಆ ಒಂದು 'ಕೆಟ್ಟಗಳಿಗೆ'ಗಾಗಿ ಅಪಾರ ಹಾನಿಯನ್ನು ಅನುಭವಿಸಬೇಕಾದೀತು!

'ಕೋಮಲ ಹೃದಯಿ'ಗಳಾದ ಮಹಿಳೆಯರ ಕಂಬನಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬಹುದು. ಬಹಳ ಸಿಟ್ಟಿನಿಂದ ಗೃಹಪ್ರವೇಶ ಮಾಡಿದ ಪತಿದೇವರ ಕ್ರೋಧವು ಸತಿಯ ಕಂಬನಿ ಕಂಡ ಕೂಡಲೇ ಝರ್ರನೇ ಇಳಿದು ಬಿಡುತ್ತದೆ! ಅಲ್ಲದೆ ಆಕೆಯ ಇಷ್ಟಾರ್ಥವನ್ನು ನೆರವೇರಿಸಿ ಕೊಡಲು ಮುಂದಾಗುತ್ತಾನೆ.

ಯಾವ ಕಾಲದಲ್ಲಿಯೂ ಹೆಂಗಳೆಯರ ಕಣ್ಣೀರ ಒರತೆಗೆ ಕೊರತೆಯೇ ಇಲ್ಲ. ಇದರಿಂದಲೇ ತಮ್ಮ ಹೆಂಡತಿಯ ಅಳುಮೋರೆಯನ್ನು ಕಂಡು ಬೇಸತ್ತ ಮಹನೀಯರೊಬ್ಬರು, 'ಗಂಗಾ ನದಿಯು ನೀರೇ ಒಂದು ಕಾಲಕ್ಕೆ ಬತ್ತಿ ಹೋಗಿ ಬರಿದಾಗಿ ಕಂಡರೂ, ಈ ಸ್ತ್ರೀಯರ ಕಣ್ಣುಗಳಲ್ಲಿ ನೀರಿನ ಒಸರು ಬತ್ತುವುದೇ ಇಲ್ಲವಲ್ಲಾ!' ಎಂದು ಉದ್ಗರಿಸಿರಬೇಕು. ಈ ಉದ್ಗಾರದ ಔಚಿತ್ಯವನ್ನು ವಾಚಕರೇ ಅರಿತುಕೊಳ್ಳುವುದು ಹಿತಕರ.

ಕೆಲವು ಸ್ತ್ರೀಯರು ಕಂಬನಿ ಸುರಿಸುವುದನ್ನು ತಮ್ಮ ಕಾರ್ಯ ಸಾಧನೆಯ ಸಾಧನವನ್ನಾಗಿ ಮಾಡಿಕೊಳ್ಳುತ್ತಾರೆ. ಇದರ ಪ್ರಭಾವದಿಂದ ಕೈ ಹಿಡಿದ ಗಂಡನನ್ನು 'ಆಟದ ಗೊಂಬೆ'ಯಂತೆ ಪರಿವರ್ತಿಸಿ ಬೇಕಾದಂತೆ ಕುಣಿಸಿ ತಮ್ಮ ದಾಸಾನುದಾಸನನ್ನಾಗಿ ಸೇವಿಸಿಕೊಳ್ಳುವ ನಾರಿಯರೂ ಇರುವರು. ಇಂತಹ ನಾರಿಯರು ಕೆಲವೊಮ್ಮೆ ತಾವು ತುಂಬಿದ ಮನೆಗೆ ಮಾರಿಗಳಾಗಿ ಪರಿಣಮಿಸಿ ಮಾರಕ ಪ್ರಾಯರಾಗುವುದೂ ಇದೆ. ಆತ್ಮೀಯತೆ ಹಾಗೂ ಸೌಹಾರ್ದತೆಗಳು ಲಾಸ್ಯವಾಡುತ್ತಿದ್ದ ಮನೆಯು ಕಲಹಗಳಿಂದ ಕದಡಿಹೋಗುವುದಕ್ಕೂ ಇದೇ ಕಾರಣ. ಅತ್ತೆಯನ್ನು ಕಂಡು ಉರಿಕಾರುವ ಸೊಸೆಯು, ಅತ್ತೆಗೆ ತಕ್ಕ ಶಾಸ್ತಿ ಮಾಡಿಸಲು, ನೆಪಮಾತ್ರಕ್ಕೆ ಕಣ್ಣಲ್ಲಿ ನೀರು ತುಂಬಿ ಗಂಡನೊಡನೆ ಒಂದೆರಡು ಮಾತಿನ ಕಿಡಿಗಳನ್ನು ಹಾರಿಸಿದರೆ ಸಾಕು! ಇದರಿಂದ ಪ್ರೇರಿತರಾದ ಕೆಲವು ಗಂಡುಗಳು, ಜನ್ಮವಿತ್ತ ತಾಯಿಗೂ ತರತರದ ಕಷ್ಟಗಳನ್ನು ಕೊಡಲು ಹಿಂಜರಿಯುವುದಿಲ್ಲ. ಪತ್ನಿಯ ಕಂಬನಿ ಕಂಡು ಮಾತೆಯ ಕಣ್ಣಲ್ಲಿ ನೀರು ಬರುವಂತೆ ಮಾಡುವ ಕೃತಘ್ನರ ಸಂಖ್ಯೆ ಕಡಿಮೆಯಿಲ್ಲ

ಹೊಸದಾಗಿ ಮದುವೆಯಾದ ಕನ್ನೆಯೊಬ್ಬಳು, ತನ್ನನ್ನು ಸಾಕಿ ಸಲಹಿದ ಮಾತಾಪಿತರನ್ನಗಲಿ ಪತಿಗೃಹಕ್ಕೆ ಹೊರಟು ನಿಂತಾಗ, ಬಾಲ್ಯದ ಸ್ಮರಣೆಗಳ ಪ್ರಭಾವದಿಂದ ಕಣ್ಣಿನಲ್ಲಿ ನೀರು ತುಂಬುತ್ತಾಳೆ. ಇದೇ ಸಮಯದಲ್ಲಿ ಅವಳ ಓರಗೆಯ ಗೆಳತಿಯರೂ ಶೋಕ ಪ್ರದರ್ಶನಮಾಡುತ್ತಾರೆ. ಇವರಲ್ಲಿ ಕೆಲವರು ನಿಜವಾಗಿಯೂ ತಮ್ಮ ಗೆಳತಿಯ ವಿರಹದಿಂದ ದುಃಖಿಸಿದರೆ, ಉಳಿದವರು ಕಂಬನಿ ಸುರಿಸುವುದಕ್ಕೆ ಬೇರೆಯೇ ಕಾರಣವಿರಬಹುದು. 'ತಮಗೆ ಲಗ್ನವಾಗುವ ಭಾಗ್ಯವೆಂದಿಗೆ ಒದಗುವುದೋ?' ಎಂದು ಈ ಯುವತಿಯರು ಕಂಬನಿದುಂಬಿದರೆ ಅದು ಅತಿಶಯವೆಂದು ಹೇಳಲಿಕ್ಕಾಗುವುದಿಲ್ಲ.

ಅಂತೂ ಜಗತ್ತಿನಲ್ಲಿ ಅನೇಕ ವಿಧದ ಬದಲಾವಣೆಗಳು ತಲೆದೋರಿದರೂ ಕಂಬನಿ ಹರಿಯುವುದಕ್ಕೆ ಚ್ಯುತಿ ಬರಲಾರದು. ಪರಮಾತ್ಮನು ಮಾನವರಿಗಿತ್ತ ವರಗಳಲ್ಲಿ ಇದನ್ನೂ ಸೇರಿಸಿಕೊಳ್ಳಬಹುದು. ಕಣ್ಣಲ್ಲಿ ನೀರು ಕಾಣಿಸಿಕೊಂಡಾಗ ಮುಖವು ಹೇಗೆ ಪರಿವರ್ತನೆಗೊಳ್ಳುವುದೋ ಅದೇ ರೀತಿ ಮನಸ್ಸು ಕೂಡಾ ಬದಲಾದರೆ ಅದರಿಂದ ಹೆಚ್ಚಿನ ತೊಡಕಿಲ್ಲ! ಕಪಟದ ಸುಳಿವಿರುವುದಿಲ್ಲ! ಅಂತೆಯೇ ಎಲ್ಲರೂ ತಮ್ಮನ್ನು ತಿದ್ದಿಕೊಳ್ಳಲಿ !

— ಹೇಮನಾಥ ಶೆಟ್ಟಿ, ಮುಂಡ್ಕೂರು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ ಎಲ್. ವಿಠಾಳ, ಎಂ.ಬಿ.ಬಿ.ಎಸ್.)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
(ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕೇರಳ ರಾಜ್ಯದಲ್ಲಿ
ಆದರ್ಶ ಆರ್ಥಿಕ ಸೇವೆಗೆ
ಅನುಕೂಲವಾಗಿರುವ ೧೩ ಶಾಖೆಗಳು

ಆಲೆಪ್ಪಿ ಅಯರ್ನ್ ಬ್ರಿಡ್ಜ್ ಬಳಿ.	**ಬಡಗರ** ಕೋರ್ಟ್ ರೋಡ್.	**ಕಣ್ಣಾನೂರು** ಫೋರ್ಟ್ ರೋಡ್.
ಕೊಚ್ಚಿ ಕೊಟ್ಟುಕುಲಮ್ ರೋಡ್.	**ಕಾಂಞ್ಞಂಗಾಡ್** ಮೈನ್ ರೋಡ್.	**ಕಾಸರಗೋಡು** ನಾಯಕ್ಸ್ ರೋಡ್.
ಕೋಝಿಕೋಡ್ ಕೊಪ್ರ ಬಜಾರ್.	**ಕುಂಬಳೆ** ಟೆಂಪ್ಲ್ ಸ್ಟ್ರೀಟ್.	**ನೀಲೇಶ್ವರ** ಟೆಂಪ್ಲ್ ರೋಡ್.
ಪಾಲ್ಘಾಟ್ ಬಿಗ್ ಬಜಾರ್	**ಪಯ್ಯನೂರು** ಮೈನ್ ರೋಡ್.	**ತಳಿಪರಂಬ** ಮೈನ್ ರೋಡ್.
	ತಲಚೇರಿ ಮೈನ್ ರೋಡ್.	

ಒಟ್ಟು ಶಾಖೆಗಳು ೧೨೧
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್
ಮೈಸೂರು ರಾಜ್ಯದಲ್ಲಿ ಅತ್ಯಧಿಕ ಶಾಖೆಗಳಿರುವ ಬೇಂಕ್

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ

ವರುಷ ೩೮. ವಾರ ೫೦. 27-8-1959 Vol. 38. No. 50.

ವಿಚಾರ ಮಥನ

ಒಲವಿನತ್ತ ಮತ

* *

ಅಜಿತರ ಪರಾಜಯ

* *

ಉಪ್ಪುನೀರು ಸೇವಿಸಲೆ?

* *

ಕೇರಳದಲ್ಲಿ ಸಂವಿಧಾನದ ೩೫೬ನೆಯ ಅನುಚ್ಛೇಧದನ್ವಯ ರಾಷ್ಟ್ರಾಧ್ಯಕ್ಷರು ಹಸ್ತಕ್ಷೇಪ ನಡೆಸಿದ ಬಗ್ಗೆ ವಿವಿಧಾಭಿಪ್ರಾಯಗಳು ಹೊರಪಟ್ಟಿವೆ. ರಾಷ್ಟ್ರದಲ್ಲಿ ಕಮ್ಯುನಿಷ್ಟರನ್ನುಳಿದ ಇತರರೆಲ್ಲರೂ ಈ ಘಟನೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದ್ದಾರೆ. ಇದರಿಂದಾಗಿಯೇ ಲೋಕಸಭೆಯು ಪ್ರಚಂಡ ಬಹುಮತದಿಂದ ರಾಷ್ಟ್ರಾಧ್ಯಕ್ಷರ ಹಸ್ತಕ್ಷೇಪವನ್ನು ಸಮರ್ಥಿಸಿತು. ಈ ಬಗ್ಗೆ ಗೊತ್ತುವಳಿಯನ್ನು ಮಂಡಿಸಿದ ಗೃಹ ಮಂತ್ರಿಯವರು ವಿರೋಧಿಗಳೆಲ್ಲರ ವಿರೋಧವನ್ನು ಅಲ್ಲಗಳೆದನಂತರ ಮತಕ್ಕೆ ಹಾಕುವಾಗ, ಇದಕ್ಕೆ ಪರವಾಗಿ ೨೭೦ ಮತಗಳು ಬೀಳುವಾಗ ವಿರುದ್ಧವಾಗಿ ಕೇವಲ ೩೮ ಮತಗಳ ಮಾತ್ರ ಬಿದ್ದುವೆ ಎನ್ನುವಾಗ, ರಾಷ್ಟ್ರದ ಮನಸ್ಸು ಯಾವ ಕಡೆಗಿತ್ತು, ರಾಷ್ಟ್ರದ ಜನತೆ ಏನನ್ನು ಬಯಸಿತ್ತು ಎಂಬುದು ಸ್ಪಷ್ಟವಾಗುವುದು. ಕೇರಳದ ಆಡಳಿತೆ ನಡೆಸುವ ಹಕ್ಕು ಕೇರಳೀಯರಿಗೆ ಇದೆ; ಕೇರಳದ ಆಡಳಿತೆಯನ್ನು ಕೇಂದ್ರ ಸರಕಾರವು ಮಾಡುವುದಲ್ಲ ಎಂಬ ವಾದವನ್ನು ಒಪ್ಪಬೇಕು; ಆದರೆ, ಇದರೊಡನೆಯೇ ಕೇರಳವೂ ಭಾರತದ ೧೩ ರಾಜ್ಯಗಳಲ್ಲಿ ಒಂದು ಎಂಬುದನ್ನು ಮರೆಯುವುದು ಅಸಾಧ್ಯವಲ್ಲವೆ? ಕೇರಳದ ಪುರೋಭಿವೃದ್ಧಿಯನ್ನು ಅಭಿಲಷಿಸುವವರು ಭಾರತದ ಹಿತವನ್ನು ಅಲ್ಲಗಳೆಯುವುದು ನ್ಯಾಯುವಲ್ಲ. ಕೇರಳದಲ್ಲಿ ವಾಸಿಸುವವರೂ ಭಾರತೀಯರೇ ಆಗಿದ್ದಾರೆ. ಆದುದರಿಂದ, ಕೇರಳದ ಹಿತವನ್ನು ಪ್ರಜಾಪ್ರಭುತ್ವದ ತತ್ವಗಳಿಗನುಸಾರವಾಗಿ ಸಾಧಿಸಲು ಕೇರಳದ ಕಮ್ಯುನಿಷ್ಟ ಸರಕಾರ ಅಸಮರ್ಥವಾದಾಗ, ಅಲ್ಲಿ ಭಾರತ ಸರಕಾರವು ಕೈಹಾಕ ಬೇಕಾಗಿ ಬಂದುದು ಅನಪೇಕ್ಷಣೀಯವೆನ್ನಬಹುದಾದರೂ ಅನಿವಾರ್ಯವೇ ಆಗಿತ್ತು. ಇಂತಹ ನಿಸ್ಸಹಾಯಕ ಗಂಡಾಂತರಮಯ ಪರಿಸ್ಥಿತಿಯಲ್ಲಿ ಕೇಂದ್ರವೂ ಮೌನವ್ರತಧಾರಣೆ ಮಾಡುತಿದ್ದರೆ, ಅದರಿಂದೊದಗಬಹುದಾಗಿದ್ದ ದುರ್ಘಟನೆಗಳೆಷ್ಟು ಎಂಬುದು ಅಗಣಿತ. ಕೆಲವಾರು ಮಾಸಗಳ ಕಾಲ ಉಸಿರು ಹಿಡಿದುಕೊಂಡ ಕೇರಳದ ಬಹುಜನರು ಉಸಿರುಕಟ್ಟಿಯೇ ಸತ್ತು ಕಮ್ಯುನಿಷ್ಟರಿಗೆ ಬಲಿಯಾಗಬೇಕಾಗಿತ್ತೋ ಏನೋ! ಆದುದರಿಂದಲೇ ಈ ವಿಚಾರದ ಸತ್ಯಾಸತ್ಯತೆಯನ್ನು ಕಂಡುಕೊಂಡು ಲೋಕಸಭೆಯು ಉಚಿತ ಮಾರ್ಗಗಾಮಿಯಾದುದು ಸಂತೋಷಜನಕವಾಗಿದೆ.

o o

ಆಹಾರೋತ್ಪಾದನೆ ಅಧಿಕವಾಗಿದ್ದರೂ ಅದೇನೋ ಕಾರಣದಿಂದ ಆಹಾರ ಧಾನ್ಯಗಳ ಬೆಲೆಯೂ ಹೆಚ್ಚಿದೆ ಎಂಬುದು ಎಲ್ಲೆಲ್ಲಿಯೂ ಸುಸ್ಪಷ್ಟವಿದೆ. ದಕ್ಷಿಣದ ರಾಜ್ಯಗಳಲ್ಲಿಯೇ ಇದು ಉತ್ತರಾವಸ್ಥೆಯಲ್ಲಿದ್ದರೆ, ಪಶ್ಚಿಮ ಬಂಗಾಳದಲ್ಲಿ ತನ್ನ ವಿಕ್ರಮವನ್ನೇ ಸ್ಥಾಪಿಸಿದೆ. ಕೇರಳದಲ್ಲಿ ತಮ್ಮ ಮುಖಕ್ಕೆ ಮಸಿ ಬಳಿದುಕೊಂಡ ಕಮ್ಯುನಿಷ್ಟರು ಪಶ್ಚಿಮ ಬಂಗಾಳದಲ್ಲಿ ದೊಂಬರಾಟ ಹೂಡಿ ಉದ್ರೇಕಗೊಂಡಿದ್ದಾರೆ. ಆಹಾರ ಧಾನ್ಯಗಳ ಬೆಲೆಯು ಕಳೆದ ಕೆಲವು ವರ್ಷಗಳಿಂಗಿಂತ ಈ ಬಾರಿ ಮಳೆಗಾಲದಲ್ಲಿ ಏರಿದೆ ಎಂಬುದು ಸರಿಯೆ. ಅದನ್ನು ತಗ್ಗಿಸುವಂತೆ ನೋಡಿಕೊಳ್ಳುವುದೂ ರಾಜ್ಯಸರಕಾರದ ಹಾಗೂ ಕೇಂದ್ರದ ಕರ್ತವ್ಯಗಳಲ್ಲಿ ಒಂದು. ರಾಜ್ಯಸರಕಾರಗಳೂ ಈ ಬಗ್ಗೆ ತೀರ ಅನಾಸ್ಥೆಯನ್ನು ತೋರ್ಪಡಿಸುತ್ತಿವೆ ಎಂದು ಹೇಳುವಂತಿಲ್ಲವಾದರೂ ತೀರ ಆಸ್ಥೆವಹಿಸುತ್ತವೆ ಎಂದು ನುಡಿಯುವುದು ಕಷ್ಟ. ಮೊನ್ನೆ ಮೊನ್ನೆ ಲೋಕಸಭೆಯಲ್ಲಿ ಈ ಬಗ್ಗೆ ರಾದ್ಧಾಂತವೇ ಎದ್ದುಬಿಟ್ಟಿತು. ಕೇವಲ ವಿರೋಧಿ ಪಕ್ಷದವರು ಮಾತ್ರ ಅಲ್ಲ, ಸರಕಾರಿ ಪಕ್ಷದ ಸದಸ್ಯರೂ ಸರಕಾರದ ಆಹಾರ ಪೂರೈಕೆಯ ನೀತಿಯನ್ನು ಕಟುವಾಗಿಯೇ ಟೀಕಿಸಿದರು. ಹೊಟ್ಟೆಯಲ್ಲಿ ಸಂಕಟ ತಲೆದೋರುವಾಗ ಏನು ಮಾಡುವುದೆಂದು ಮಾನವನಿಗೆ ತೋಚುವುದಿಲ್ಲವಂತೆ. ಅಂತೆಯೇ ಬಡವಬಲ್ಲಿದನೆನ್ನದೆ ಧನಿಕ ನಿರ್ಧನನೆನ್ನದೆ ಎಲ್ಲರೂ ಏಕಸಮವಾಗಿ ಬಳಸುವ ಆಹಾರಧಾನ್ಯಗಳ ಬೆಲೆಯು ಹೆಚ್ಚಳವು ನಿಜವಾಗಿಯೂ ಮಿತಿಮೀರಿ ಹೋಗಿದೆ. ಈ ಬಾರಿಯಾದರೂ ನಮ್ಮ ಪ್ರತಿನಿಧಿಗಳು ಜನತೆಯ ಹೃದಯದುರಿಯನ್ನು ನಿಷ್ಕಪಟ ಹೃದಯದಿಂದ ಹೊರಗೆಡಹಿದ್ದು ಅಭಿನಂದನಾರ್ಹ. ಆದರೇನು? ಇವರು ಕಾರಿದ ಟೀಕಾವಾಕ್ಯಗಳನ್ನು ಜೀರ್ಣಿಸಿಕೊಳ್ಳುವ ಶಕ್ತಿಯು ಆಹಾರ ಮಂತ್ರಿಗಳಿಗಿಲ್ಲ. ಆಹಾರ ಶಾಖೆಯ ಮಂತ್ರಿ ಶ್ರೀ ಅಜಿತಪ್ರಸಾದ ಜೈನರ ಸ್ಥಿತಿ ಶೋಚನೀಯವಾಗಿ ಪರಿಣಮಿಸಿತು. ಈ ಸಲ ಮಾತ್ರವಲ್ಲದೇ ಕಳೆದ ವರ್ಷವೂ ಅವರ ಮೇಲೆ ಇದೇ ರೀತಿಯ ಟೀಕಾವರ್ಷ ಸುರಿದಿತ್ತು; ಆದರೆ, ಈ ಸಲ ಮಾತ್ರ ಪ್ರಕೃತಿಯಲ್ಲಿಯೇ ವರ್ಷವು ವಿಪರೀತವಾಗಿ ಸುರಿದು ನೆರೆಯೆಬ್ಬಿಸಿದಂತೆ ಶ್ರೀ ಜೈನರು ಅಜಿತರಾದರೂ ಅವರೇ ಅಜಿತರಾಗಿ ಹೋದರು; ಅವರು ಪ್ರಸಾದ ನೀಡುವ ಶಾಖೆಯಲ್ಲಿದ್ದರೂ ಅವರಿಗೆ ಪ್ರಸಾದ ದೊರೆಯದೆ ಹೋಯಿತು. ಟೀಕಾಪ್ರವಾಹ ಪೀಡಿತರಾಗಿ ನೊಂದ ಮಾನ್ಯರು ಅನಿವಾರ್ಯವಾಗಿ ತನ್ನ ಸೋಲನ್ನೊಪ್ಪಿಕೊಂಡು ರಾಜಿನಾಮೆಯಿತ್ತೇ ಹೊರನಡೆದರು! ಪ್ರಜಾಸತ್ತೆಯಲ್ಲಿ ಜನತೆಯ ವಿಶ್ವಾಸಕ್ಕೆ ಎರವಾದವನು ಮಂತ್ರಿಯಾಗಿ ಉಳಿಯುವುದು ಅನ್ಯಾಯ ಎಂತಲೇ ಶ್ರೀ ಪ್ರಸಾದರ ರಾಜಿನಾಮೆ ಸ್ವೀಕಾರವಾಯಿತು.

(೧೩ನೇ ಪುಟ ನೋಡಿರಿ)



ರೂರ್ಕೇಲಾ ಉಕ್ಕಿನ ಕಾರ್ಖಾನೆಯ ನಗರಕ್ಕೆ ನೀರು ಪೂರೈಸುವ ಸಂಪಿರುವ ಮನೆ.

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3. ಸ್ಥಾಪನೆ:- 1931.

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ....

ಕಥಾ ವಿಹಾರ

ರಾಷ್ಟ್ರಧ್ವಜವು ಪ್ರಾಣಕ್ಕಿಂತಲೂ ಪ್ರಿಯ

ಉಸಿರಿರುವತನಕ ರಾಷ್ಟ್ರಧ್ವಜ ಬಿಡಲಾರೆನೆಂದ ಅಮೆರಿಕೆಯ ನಾರಿಯ ಮುಂದೆ ಸೇನಾಧಿಪನೂ ಸೋಲೊಪ್ಪಬೇಕಾಯಿತು.

ಮಾನವತೆಯ ಪ್ರತಿ ಮೂರ್ತಿ ಅಬ್ರಹಮ್ ಲಿಂಕನನು ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷನಾಗಿದ್ದ ಕಾಲವದು. ಗುಲಾಮಗಿರಿ ಪದ್ಧತಿಯ ರದ್ದತಿಯ ದೆಸೆಯಿಂದ ಸಂಯುಕ್ತ ಪ್ರಾಂತ್ಯಗಳ ಉತ್ತರ ಮತ್ತು ದಕ್ಷಿಣ ಪ್ರಾಂತ್ಯಗಳೊಳಗೆ ಯಾದವೀ ಕಲಹ ನಡೆಯುತಿತ್ತು. ದಕ್ಷಿಣ ಪ್ರಾಂತ್ಯಗಳವರು ಗುಲಾಮಗಿರಿಯ ರದ್ದತಿಗೆ ವಿರೋಧನಾಗಿದ್ದರು. ಮಾತ್ರವಲ್ಲ ಸಂಯುಕ್ತ ಸಂಸ್ಥಾನಗಳ ಯೂನಿಯನ್ನಿನಿಂದ ಪ್ರತ್ಯೇಕವಾಗಿರಲು ಯತ್ನಿಸುತ್ತಿದ್ದರು. ಇದಕ್ಕಾಗಿ ದಕ್ಷಿಣದವರು ಉತ್ತರದವರ ಮೇಲೆ ಯುದ್ಧ ಸಾರಿದರು. ಆ ಯುದ್ಧದ ಕಾಲ ನಡೆದ ಸ್ವಾರಸ್ಯಕರವಾದ ಘಟನೆಯೊಂದು ದೇಶಪ್ರೇಮಿ ಜನರ ಹೃದಯ ಕಲಕುವಂತಹದಾಗಿದೆ. ಇದು ಸ್ವಾರಸ್ಯಕರ ಮಾತ್ರವಲ್ಲ, ರೋಮಾಂಚನಕಾರಿಯೂ ಹೌದು!

ಉತ್ತರ ಪ್ರಾಂತ್ಯದಲ್ಲಿರುವ ಫ್ರೆಡರಿಕ್ ಎಂಬುದೊಂದು ಸುಂದರವಾದ ನಗರ. ಪೈರು ಪಚ್ಚೆಗಳಿಂದ ತುಂಬಿದ ಹೊಲಗದ್ದೆಗಳಿಂದಲೂ, ಗುಂಪು ಗುಂಪಾಗಿ ಎದ್ದು ನಿಂತ ಗೋಪುರಗಳಿಂದಲೂ, ಸುಂದರವಾದ ಸೌಧಗಳಿಂದಲೂ, ಸೇಬು ಪೀಚ್ ಮೊದಲಾದ ಹಣ್ಣುಗಳ ತೋಟಗಳಿಂದಲೂ ತುಂಬಿದ ಫ್ರೆಡರಿಕ್ ನಗರವು ಮೇರಿಲ್ಯಾಂಡ್ ಗುಡ್ಡಗಳಿಂದ ಆವೃತವಾಗಿದ್ದು ಸ್ವರ್ಗ ಸಮಾನವೆನಿಸಿತ್ತು. ಸೆಪ್ಟಂಬರದ ಒಂದು ದಿನದ ಮುಂಜಾನೆ ಈ ನಗರವು ದಕ್ಷಿಣದ ಧಾಳಿಗಾರರ ಧಾಳಿಗೆ ಆಹುತಿಯಾಯಿತು! ಹಸಿದ ದಕ್ಷಿಣದ ಧಾಳಿಗಾರರು ಮೇರಿಲ್ಯಾಂಡ್ ಗುಡ್ಡಗಳಿಂದ ಇಳಿದು ಫ್ರೆಡರಿಕ್ ನಗರದತ್ತ ಧಾವಿಸಿಬಂದರು. ಅಶ್ವಾರೋಹಿಗಳಾಗಿ ಕೆಲವರು. ಪದಾತಿಗಳಾಗಿ ಹಲವರು ಫ್ರೆಡರಿಕ್ ನಗರವನ್ನು ಮುತ್ತಿದರು. ಕ್ಷಣ ಮಾತ್ರದಲ್ಲಿ ನಗರವನ್ನು ಅವರು ವಶಪಡಿಸಿಕೊಂಡರು ನಗರ ನಿವಾಸಿಗಳು ಹೆದರಿಕೆಯಿಂದ ತಮ್ಮ ತಮ್ಮ ಮನೆಗಳಲ್ಲಿ ಅವಿತು ಕುಳಿತರು. ನಗರದ ರಸ್ತೆಗಳಲ್ಲಿ ಜನಸಂಚಾರ ನಿಂತಿತು. ಎಲ್ಲಿ ನೋಡಿದರೂ ಕುದುರೆಗಳ ಗೊರಸುಗಳ ಸದ್ದು; ಕಿರುಚಾಟ; ಸೈನಿಕರ ಅರ್ಭಟ, ಬೊಬ್ಬಾಟ; ಗುಂಡುಗಳ ಎದೆ ನಡುಗಿಸುವ ಸದ್ದು.

ನಗರದ ಎತ್ತರದ ಗೋಪುರಗಳಲ್ಲಿ ಕೆಂಪು ಬಿಳಿ ಪಟ್ಟೆಗಳಿಂದಲೂ, ಬಿಳಿ ಬಣ್ಣದ ನಕ್ಷತ್ರಗಳಿಂದಲೂ ಶೋಭಿಸುತ್ತಿದ್ದ ಅಮೇರಿಕದ ಸಂಯುಕ್ತ ಸಂಸ್ಥಾನಗಳ ರಾಷ್ಟ್ರ ಧ್ವಜಗಳು ಹಾರುತ್ತಿದ್ದುವು. ಮಧ್ಯಾಹ್ನದ ನಡುಹಗಲಿನ ಸಮಯದಲ್ಲಿ ಬೀಸುವ ಗಾಳಿಗೆ ಅವುಗಳು ಸ್ವತಂತ್ರವಾಗಿ ಪಟಪಟನೆ ಹಾರುತ್ತಿದ್ದುವು. ನಗರ ವಶಪಡಿಸಿಕೊಂಡ ದಕ್ಷಿಣದ ಸೈನಿಕರ ಗುಂಡುಗಳು ಢಂ ಢಂ ಎಂದು ಸದ್ದುಗೈದು ಆ ಧ್ವಜಗಳನ್ನು ನೆಲಸಮ ಮಾಡಿದುವು. ಮಧ್ಯಾಹ್ನದ ನಡು ಹಗಲಿನ ನೆತ್ತಿಯ ಮೇಲಣ ಸೂರ್ಯನಿಗೆ ಜನರಾರೂ ಕಾಣಿಸಲಿಲ್ಲ. ಧ್ವಜಗಳೊಂದೂ ಗೋಚರಿಸಲಿಲ್ಲ. ಆತನು ದುಃಖದಿಂದ ಮುಖ ಕೆಳಗೆಮಾಡಿ ಸಮುದ್ರದತ್ತ ಇಳಿಯಲಾರಂಭಿಸಿದನು.

ಕ್ಯಾಪ್ಟನ್ ಲೀ ಮತ್ತು ಅವನ ಸಂಗಡಿಗರು ಫ್ರೆಡರಿಕ್ ನಗರದ ಬೀದಿ ಬೀದಿಗಳಲ್ಲಿ ಸಂಚರಿಸಿದರು. ಒಂದೊಂದು ದಳದವರು ಒಂದೊಂದು ಬೀದಿಗಳಲ್ಲಿ ಸಂಚರಿಸುತ್ತಿದ್ದರು. ಅಮೆರಿಕೆಯ ಜನರ ಪ್ರಾಣಕ್ಕಿಂತ ಮಿಗಿಲಾದ, ಗೌರವಾರ್ಹವಾದ ರಾಷ್ಟ್ರಧ್ವಜವು ಎಲ್ಲೂ ಕಾಣಿಸುತ್ತಿರಲಿಲ್ಲ. ವೈರಿ ಸೈನಿಕರು ಸಂತೋಷದಿಂದ ಅಟ್ಟಹಾಸದ ನಗು ಬೀರುತ್ತಾ ನಡೆಯುತ್ತಿದ್ದರು. ನೆಲಸಮವಾದ ಧ್ವಜಗಳನ್ನು ಕಾಲಿನಿಂದ ತುಳಿಯುತ್ತಿದ್ದರು. ಛಿದ್ರ ಛಿದವಾಗಿ ಹರಿದೊಗೆಯುತ್ತಿದ್ದರು.

ನೆತ್ತಿಯಲ್ಲಿದ್ದ ಸೂರ್ಯನು ಕೆಳಗಿಳಿಯುತ್ತಿದ್ದಂತೆ ತನ್ನ ಗುಡಿಸಲಿನಲ್ಲಿ ಮಲಗಿದ್ದ ಬಾರ್ಬರಾ ಫ್ರೆಚ್ಚಿ ಮೇಲಕ್ಕೆದ್ದಳು. ತೊಂಭತ್ತು ವರ್ಷಗಳ ಮುದುಕಿ ಯಾಕೆ. ಅವಳ ಬೆನ್ನು ಬಾಗಿತ್ತು. ಅವಳ ಕಾಲುಗಳಲ್ಲಿ ಎದ್ದು ನಿಲ್ಲುವ ಶಕ್ತಿ ಇರಲಿಲ್ಲ. ತೊಂಭತ್ತು ವರ್ಷಗಳ ದೀರ್ಘಕಾಲದ ಜೀವನ ಆಕೆಯನ್ನು ಬಾಗಿಸಿ ನೆಲಕ್ಕೆ ಸಮೀಪ ಮಾಡಿತ್ತು. ವೈರಿ ಸೈನಿಕರ ಗುಂಡುಗಳು ತನ್ನ ಅಭಿಮಾನದ ರಾಷ್ಟ್ರಧ್ವಜವನ್ನು ಸುಟ್ಟುದನ್ನು ಕಂಡ ಆಕೆಯ ರಾಷ್ಟ್ರಾಭಿಮಾನ ಸೆಟೆದು ನಿಂತಿತು. ದೇಶಭಕ್ತಿ ಉಕ್ಕಿ ಹರಿಯಿತು. ವೈರಿಗಳು ಕೆಳಗೆ ಉರುಳಿಸಿದ ಧ್ವಜವೊಂದು ರಸ್ತೆಯಲ್ಲಿ ಬಿದ್ದಿತ್ತು. ನೆಲಹಿಡಿದಿದ್ದ ಧ್ವಜದ ಸ್ಥಿತಿ ಕಂಡ ಆಕೆಯು ಮರುಗಿದಳು. ಆಕೆಯ ಕಣ್ಣಿನಿಂದ ಕಣ್ಣೀರು ಕೋಡಿಯಾಗಿ ಆಕೆಗೆ ಅರಿವಿಲ್ಲದಂತೆ ಹರಿಯಿತು. ಅದೇ ಕಾಲ ಆಕೆಯ ರಾಷ್ಟ್ರಪ್ರೇಮ ಬೃಹದಾಕಾರ ತಾಳಿ ನಿಂತಿತು ರಾಷ್ಟ್ರದ ಗೌರವದ ಪ್ರತೀಕವಾದ, ದೇಶದ ಧ್ಯೇಯ ಧೋರಣೆಗಳನ್ನು ನಿರೂಪಿಸುವ ಧ್ವಜವನ್ನು ರಕ್ಷಿಸುವ, ಗಾಳಿಯಲ್ಲಿ ಹಾರಗೊಡುವ ಧೀರ ಪುರುಷರು ಫ್ರೆಡ್‌ರಿಕ್ ನಗರದಲ್ಲೇ ಇಲ್ಲವಾದರಲ್ಲ ಎಂದಾಕೆ ಖೇದಗೊಂಡಳು.

ಸಾಹಸಿ, ಧೀರೆ, ರಾಷ್ಟ್ರಾಭಿಮಾನಿ ಫ್ರೆಚ್ಚಿ ಗುಡಿಸಲಿನಿಂದ ಹೊರಬಂದಳು. ಮುಗ್ಗರಿಸಿ ಬೀಳುತ್ತಿದ್ದಳಾಕೆ. ಮತ್ತೆ ಏಳುತ್ತಿದ್ದಳು. ದಂಟೆಯೂರುತ್ತಾ ರಸ್ತೆಯನ್ನು ಸೇರಿದಳು. ವೈರಿ ಸೈನಿಕರು ಕೆಳಗುರುಳಿಸಿದ, ನೆಲವನ್ನಪ್ಪಿಹಿಡಿದಿದ್ದ ಧ್ವಜವನ್ನಾಕೆ ಎತ್ತಿಹಿಡಿದಳು ತನ್ನ ದಂಟೆಯ ತುದಿಗೆ ಅದನ್ನು ಕಟ್ಟಿದಳು. ಇನ್ನು ಧ್ವಜವನ್ನು ಹಾರಗೊಡಬೇಕು. ಎತ್ತರದಲ್ಲಿ ಹಾರಗೊಡಬೇಕೆಂದಾಕೆಯ ಆಶೆ! ಆದರೆ ಮುದುಕಿ ಬಾರ್ಬರಾಳಿಂದ ಇದು ಸಾಧ್ಯವೆ? ಕೊನೆಗೆ ಆಕೆ ಆ ಧ್ವಜಕಟ್ಟಿದ ದಂಟೆಯನ್ನು ತನ್ನ ಮನೆಯ ಕಿಟಕಿಯಲ್ಲಿ ಸಿಕ್ಕಿಸಿ ಆ ಧ್ವಜವನ್ನು ಹಾರಗೊಟ್ಟಳು. ಧ್ವಜ ಗೌರವವನ್ನು ಸಲ್ಲಿಸಿದಳು. ನಗರ ನಾಶವಾದರೂ, ನಾಗರಿಕರು ಮೌನವಾಗಿದ್ದರೂ, ಇನ್ನೂ ಒಂದು ಹೃದಯ ದೇಶಕ್ಕಾಗಿ ಮಿಡಿಯುತ್ತಿದೆ; ಇನ್ನೂ ಒಂದು ಜೀವ ದೇಶಕ್ಕಾಗಿ ತ್ಯಾಗ ಮಾಡಲು ಸಿದ್ಧವಿದೆ ಎಂಬುದನ್ನು ಆಕೆ ತೋರಿಸಿಕೊಟ್ಟಳು. ಆಕೆಯ ಹೃದಯ ಕರ್ತವ್ಯ ಪೂರೈಸಿದ ತೃಪ್ತಿಯಿಂದ ತುಂಬಿತು. ಸಂತಸ ತಾಳಿತು.

ಅಷ್ಟರಲ್ಲಿ ಬಾರ್ಬರಾ ಫ್ರೆಚ್ಚಿಯ ಮನೆಯ ರಸ್ತೆಯಲ್ಲಿ ಧಾಳಿಗಾರರ ಪಡೆಯು ಬಂತು. ಸ್ಟೋನ್ ವೋಲ್ ಜಾಕ್‌ಸನ್ ಎಂಬವನು ಆ ಪಡೆಯ ನಾಯಕನಾಗಿ ಮುಂಭಾಗದಲ್ಲಿದ್ದನು. ತಲೆಯ ಮೇಲೆ ಇಟ್ಟ ಫೆಲ್ಟ್ ಹ್ಯಾಟಿನ ಅಡಿ ಭಾಗದಲ್ಲಿದ್ದ ಆತನ ಎರಡು ಕಣ್ಣುಗಳ ಕಠೋರ ದೃಷ್ಟಿಗೆ ಬಾರ್ಬರಾ ಫ್ರೆಚ್ಚಿಯ ಗುಡಿಸಲಿನ ಕಿಟಕಿಯಲ್ಲಿ ಹಾರಗೊಟ್ಟ ಅಮೆರಿಕೆಯ, ನಕ್ಷತ್ರ ಖಚಿತ ಕೆಂಪು ಬಿಳಿ ಪಟ್ಟೆಯ ರಾಷ್ಟ್ರಧ್ವಜವು ಗೋಚರಿಸಿತು.

"ನಿಲ್ಲಿರಿ!" ಸ್ಟೋನ್‌ವೋಲನು ಗಟ್ಟಿಯಾಗಿ ಕೂಗಿ ಆಜ್ಞಾಪಿಸಿದನು. ಧೂಳು ತುಂಬಿ ಹಾರುತ್ತಿದ್ದ ರಸ್ತೆಯಲ್ಲಿ ಸೈನಿಕರ ಸಾಲು ಒಮ್ಮೆಲೆ ನಿಂತಿತು. "ಗುಂಡಿಕ್ಕಿರಿ!" ಅದೇ ಸ್ಟೋನ್‌ವೋಲನು ಮತ್ತೂ ಗಟ್ಟಿಯಾಗಿ ಕೂಗಿದನು. ಧಾಳಿಗಾರರಲ್ಲೊಬ್ಬನ ಕೋವಿಯಿಂದ ಗುಂಡು ಹಾರಿತು. ಅದು ಕಿಟಕಿಯನ್ನು ಕದಲಿಸಿತು. ಗೋಡೆ ಬಿರುಕು ಬಿಡುವಂತೆ ಮಾಡಿತು. ಕಿಟಕಿಯಲ್ಲಿ ಸಿಕ್ಕಿಸಿ ಇಟ್ಟಿದ್ದ ಅಮೆರಿಕೆಯ ರಾಷ್ಟ್ರ ಧ್ವಜವು ಕೆಳಗೆ ಬೀಳುತ್ತಿತ್ತು! ಕೋಲಿಗೆ ಗುಂಡೇಟಾಗಿ ಧ್ವಜವು ಕೋಲಿನಿಂದ ಕೆಳಗೆ ಬೀಳುವಷ್ಟರಲ್ಲಿ ವೃದ್ಧೆ ಬಾರ್ಬರಾ ಆ ಸಿಲ್ಕಿನ ಬಟ್ಟೆಯನ್ನು ಗಟ್ಟಿಯಾಗಿ ತನ್ನ ಕೈಯ್ಯಲ್ಲಿ ಹಿಡಿದಳು. ಆಕೆಯ ಕೈ ನಡುಗುತ್ತಿತ್ತು! ಆಕೆ ಕುಸಿದ ಕಿಟಕಿಯಲ್ಲಿ ತನ್ನ ತಲೆಯನ್ನು ಹೊರಗೆ ಹಾಕುತ್ತಾ ಆ ಧ್ವಜವನ್ನು ಹೆಮ್ಮೆಯಿಂದ ತನ್ನ ಕೈಯಲ್ಲಿ ಹಿಡಿದು ಅಲುಗಾಡಿಸಿದಳು. ಕಂಪಿಸುತ್ತಿದ್ದ ಕರಗಳಿಂದ ಮತ್ತೂ ಮತ್ತೂ ಬೀಸಿ ಧ್ವಜವನ್ನು ಹಾರಗೊಟ್ಟಳು. ಅಭಿಮಾನ ತುಂಬಿದ ಹೃದಯದಿಂದ!

"ನಿಮಗೆ ಗುಂಡಿಕ್ಕಬೇಕೆಂದಿದ್ದರೆ ಇದೋ, ಈ ಹಳೆಯ ಮುದಿ ತಲೆಗೆ ಗುಂಡಿಕ್ಕಿರಿ. ಆದರೆ ನಿಮ್ಮದೇ ಆದ ಈ ಧ್ವಜವನ್ನು, ರಾಷ್ಟ್ರದ ಗೌರವಾಭಿಮಾನದ ಪ್ರತೀಕವಾದ ಈ ಧ್ವಜವನ್ನು ಉಳಿಸಿರಿ. ರಕ್ಷಿಸಿರಿ. ಇದು ನನ್ನದು ಮಾತ್ರವಲ್ಲ. ನಿಮ್ಮದೂ ಹೌದು. ಸಮಸ್ತ ಅಮೆರಿಕೆಯ ಜನ ಕೋಟಿಯದು. ಇಂತಹ ಧ್ವಜವನ್ನು ಸುಡುವಿರಾ! ಇದೋ, ನಿಮ್ಮ ಗುಂಡಿಗೆ ಆಹುತಿ ನಾನಾಗುವೆ! ಆದರೆ ಈ ಧ್ವಜವು ಆಹುತಿಯಾಗಲು ಬಿಡಲಾರೆ!" ಮುದುಕಿ ಧ್ವಜವನ್ನು ಗಟ್ಟಿಯಾಗಿ ಹಿಡಿಯುತ್ತಾ ಆತ್ಮ ಬಲದಿಂದ, ಧೈರ್ಯದಿಂದ, ಅಭಿಮಾನದಿಂದ ನುಡಿದಳು.

ಸ್ಟೋನ್‌ವೋಲ್ ಜಾಕ್ಸನನ ಸ್ಥಿತಿ ಕೆನ್ನೆಗೆ ನಾಲ್ಕು ಬಾರಿಸಿದಂತಾಯಿತು. ಆತನ ಮುಖದಲ್ಲಿ ನಾಚಿಕೆಯ ಛಾಯೆ ಕವಿಯಿತು. ನಾಚಿಕೆಯಿಂದ ಆತ ತಲೆ ತಗ್ಗಿಸಿದ. ವೃದ್ಧೆ ಬಾರ್ಬರಾಳ ಮಾತು ಹಾಗೂ ಸಾಹಸದ ಕಾರ್ಯ ಆತನಲ್ಲಿದ್ದ ಪ್ರಾಮಾಣಿಕತೆಯನ್ನು ಬಡಿದೆಬ್ಬಿಸಿತು. ಆತನ ಉದಾರತೆಯನ್ನು ಕಲಕಿತು. ಆದರೆ ಮುದುಕಿಯೊಡನೆ ಸೋಲೊಪ್ಪಿಕೊಳ್ಳಲು ಆತನ ಶುಷ್ಕಾಭಿಮಾನ ಬಿಡಲಿಲ್ಲ. ಆತ ತಾತ್ಸಾರ ದೃಷ್ಟಿಯಿಂದ ಆಕೆಯನ್ನು ಕಂಡು ಹೇಳಿದ. "ನಿನ್ನ ಮುದಿ ತಲೆಯನ್ನು ಯಾರು ಮುಟ್ಟುವರು? ಒಂದು ದಿನ ನೀನು ನಾಯಿಯಂತೆ ಸಾಯುವವಳು. ಮುಂದೆ ಸಾಗಿರಿ!" ಎಂದಾತ ಆಜ್ಞಾಪಿಸಿದನೇ ಹೊರತು ಬಾರ್ಬರಾಳ ಒಂದು ಕೂದಲೆಳೆ ಮುಟ್ಟುವ ಧೈರ್ಯ ಆತನಲ್ಲಿ ಇರಲಿಲ್ಲ.

ಆ ದಿನವಿಡೀ ದಂಡಿಗಾರರು ಫ್ರೆಡರಿಕ್ ನಗರದಲ್ಲಿ ಸುತ್ತಾಡಿದರು, ಅವರ ತಲೆಯ ಮೇಲೆಯೇ ದಿನವಿಡೀ ಬಾರ್ಬರಾ ಫ್ರೆಚ್ಚಿಯು ಹಾರಿಸಿದ ಅಮೆರಿಕೆಯ ರಾಷ್ಟ್ರ ಧ್ವಜವು ಹಾರುತ್ತಿತ್ತು. ಅದನ್ನು ಸದಾ ಕಾಲ ಅಪ್ಪಿ ಹಿಡಿಯಲು ಹವಣಿಸುತ್ತಿದ್ದ ಅಮೆರಿಕೆಯ ದೇಶಪ್ರೇಮಿ ಗಾಳಿಯ ರಭಸಕ್ಕೆ ಆ ಧ್ವಜವು ಪಟಪಟ ಸದ್ದುಗೈಯುತ್ತಾ ಹಾರುತ್ತಿತ್ತು. ಧಾಳಿಗಾರರ ಹಲವಾರು ಕುದುರೆಗಳ ಗೊರಸಿನ ಸಪ್ಪಳಕ್ಕಿಂತಲೂ ಒಂದು ಧ್ವಜವು ಹಾರುವ ಸದ್ದೇ ಅಧಿಕವಾಗಿತ್ತು. ಅಸ್ತಮಿಸಿದ ಸೂರ್ಯನೂ ಹಾರುತ್ತಿದ್ದ ಆ ಧ್ವಜದ ಮೇಲೆ ತನ್ನ ಬಣ್ಣಗಳ ಕಿರಣ ಬೀರಿ ಶೋಭಿಸುವಂತೆ ಮಾಡಿದನು. ಬಾರ್ಬರಾ ಫ್ರೆಚ್ಚಿಯು ಮಾಡಬೇಕಾಗಿದ್ದ ಕೆಲಸ ಮುಗಿಯಿತು. ಆಕೆ ತನ್ನ ಕೊನೆಯ ಕಾಲದಲ್ಲಿ ತನ್ನ ಜೀವನ ಸಾರ್ಥಕ ಪಡಿಸಿಕೊಂಡು ಪುಣ್ಯಶಾಲಿನಿಯಾದಳು. ದೇಶಭಕ್ತೆಯೆನಿಸಿದಳು. ಅಮೆರಿಕೆಯ ನೆಲದಲ್ಲಿ ಹುಟ್ಟಿ ಬೆಳೆದು ಬಾಳಿದುದಕ್ಕೆ ಆ ನೆಲದ ಋಣ ತೀರಿಸಿದಳು.

ರಾಷ್ಟ್ರಧ್ವಜದ ಮೇಲಣ ಆಕೆಯ ಅಭಿಮಾನ ಶ್ಲಾಘನೀಯ ಮಾತ್ರವಲ್ಲ ಅನುಕರಣೀಯ. ಧ್ವಜಕ್ಕಾಗಿ, ಧ್ವಜದ ಗೌರವ ರಕ್ಷಣೆಗಾಗಿ ಪ್ರಾಣವನ್ನು ಪಣವಾಗಿಟ್ಟ ಬಾರ್ಬರಾ ಫ್ರೆಚ್ಚಿ ಸ್ವತಂತ್ರ ರಾಷ್ಟ್ರಗಳ ಪ್ರಜೆಗಳಿಗೆಲ್ಲಾ ಆದರ್ಶಪ್ರಾಯಳಾದ ಸ್ತ್ರೀ ರತ್ನ!

—ಶ್ರೀ. ಎಸ್. ಸದಾಶಿವರಾವ್,
ಉಡುಪಿ.

(ಸ್ವಾತಂತ್ರ್ಯ ಸಂಚಿಕೆಗಾಗಿ ಬಂದುದು)

ಸಾಮಾನ್ಯರಿಗೂ, ಸಿರಿವಂತರಿಗೂ
— ಸರ್ವರಿಗೂ —
ಬೇಕಾಗುವ ಬೇಂಕು ಸೌಲಭ್ಯಗಳಿಗೆ
ನೆಟ್ಟಗೆ ನಮ್ಮಲ್ಲಿಗೆ ನಡೆಯಿರಿ ಇಲ್ಲವೆ ನಮಗೆ ಬೇಗನೆ ಬರೆಯಿರಿ.
ಎಲ್ಲರಿಗೂ, ಎಲ್ಲ ಕಾಲಕ್ಕೂ, ಎಲ್ಲ ವಿಧದ ಬೇಂಕು ಸೌಲಭ್ಯಗಳಿಗೂ
ನಮ್ಮ ಬೇಂಕು ಯೋಗ್ಯವಿದೆ!
ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906
ಪ್ರಧಾನ ಕಚೇರಿ : ಉಡುಪಿ (ದ. ಭಾರತ)
(ಸಮಗ್ರ ಮೈಸೂರು ರಾಜ್ಯದಲ್ಲಿ ಸಂಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ನಮ್ಮ ಬೇಂಕಿಗೆ ಅತಿ ದೀರ್ಘ ಕಾಲದ ಬೇಂಕು ಮಾಹಿತಿ ಇದೆ!)

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಕವಿ ಪರಿಚಯ

ದಿವಂಗತ ಮುಂಡ್ಕೂರು ನರಸಿಂಗ ಕಾಮತರು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸ ಗನ್ನಡ ಸಾಹಿತ್ಯದ ಆದ್ಯ ಪ್ರವರ್ತಕರಲ್ಲೊಬ್ಬರಿವರು

ಪರಕೀಯರ ಆಡಳಿತೆ ನಮ್ಮ ಮೇಲೆ ವಿಶೇಷ ಪರಿಣಾಮ ಬೀರುವುದರೊಂದಿಗೆ ನಮ್ಮ ಸಾಹಿತ್ಯದ ಮೇಲೂ ಪ್ರಭಾವ ಬೀರಿದೆ. ಬ್ರಿಟಿಷ್ ಆಡಳಿತೆಯಿಂದ ಜಿಗುಪ್ಸೆಗೊಂಡ ನಮ್ಮ ಜನರು ಸ್ಫೂರ್ತಿಯ ನೆಲೆಗಟ್ಟಿನಲ್ಲಿ ಹೊಸತರದ ಸಾಹಿತ್ಯರಚನೆಗೆ ಕೈಹಾಕಿದರು. ಆಂಗ್ಲಸಾಹಿತ್ಯ ಹಾಗೂ ಇತರ ಭಾಷಾ ಸಾಹಿತ್ಯದ ಅಭ್ಯಾಸ ಮಾಡಿದ ಮಹನೀಯರು ಈ ಕೆಲಸಕ್ಕೆ ಕೈ ಹಾಕಿದರು. ಅಂತವರಲ್ಲಿ ದಿವಂಗತ ಮುಂಡ್ಕೂರು ನರಸಿಂಗ (ಎಂ ಎನ್) ಕಾಮತರು ಮುಖ್ಯರಾಗಿದ್ದಾರೆ.

ಶ್ರೀ ಕಾಮತರು ಪ್ರತಿಯೊಂದು ಕ್ಷೇತ್ರದಲ್ಲೂ ಬಹಳವಾಗಿ ದುಡಿದಿರುವರು. ಸಾಹಿತ್ಯ ಮತ್ತು ಶೈಕ್ಷಣಿಕ ವಿಚಾರಗಳಲ್ಲಿ ಅವರು ತುಂಬಾ ಅನುಭವಸ್ಥರು. ಹಾಸ್ಯ ಪ್ರಬಂಧಗಳನ್ನು ಬರೆಯುವುದರಲ್ಲಿ ಅವರದು ಎತ್ತಿದ ಕೈ. ರಂಗಸಿದ್ಧತೆಯೊಂದಿಗೆ ನಾಟಕಗಳನ್ನು ಬರೆದು ಮಕ್ಕಳಿಂದ ಆಡಿಸುವುದರಲ್ಲಿ ಅವರು ಸಿದ್ಧಹಸ್ತರು.

ದಿವಂಗತ ಕಾಮತರು ಬಡತನದಲ್ಲೇ ಹುಟ್ಟಿ, ಬಡತನದಲ್ಲೇ ಬೆಳೆದು ತಮ್ಮ ಜೀವನವನ್ನು ಸಾಗಿಸಿ, ಬಡತನದಲ್ಲಿ ಮುಕ್ತಿಯನ್ನು ಪಡೆದರು. ಅವರ ತಂದೆ ಮುನಿಸಿಪಾಲಿಟಿಯ ಬಡ ನೌಕರರಾಗಿದ್ದರು. ಅವರು ೧೯೦೦ರಲ್ಲಿ ಮದ್ರಾಸು ವಿಶ್ವವಿದ್ಯಾಲಯದ ಎಫ್. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅವರ ವಿದ್ಯಾರ್ಥಿ ಜೀವನವು ಬಡತನದೊಂದಿಗಿನ ಕಾಳಗದ ಕಾಲವಾಗಿತ್ತು. ಅವರು ಪಾಸಾದೊಡನೆ ೧೯೦೧ರಲ್ಲಿ ಕಲಕತ್ತಾದಲ್ಲಿ ಕೆಲಸಕ್ಕೆ ಸೇರಿದರು.

ನಮ್ಮ ದೇಶದಲ್ಲಿ ಅಂದು ಬಿಡುಗಡೆಯ ಬೇಡಿಕೆ ಹೆಚ್ಚುತ್ತ ಬಂಗಾಳದಲ್ಲಿ ನವಕವಿಗಳು ತಮ್ಮ ಸ್ಫೂರ್ತಿಯುತವಾದ ಕೃತಿಗಳಿಂದ ಜನಜಾಗೃತಿಯನ್ನುಂಟು ಮಾಡುತ್ತಿದ್ದರು. ಸ್ವಾತಂತ್ರ್ಯ ಸಮರದ ಆಸೆ ಜನರಲ್ಲಿ ಮೂಡಿತ್ತು. ರಾಷ್ಟ್ರಕವಿ ರವೀಂದ್ರನಾಥ ಠಾಗೂರರು, ಬಂಕಿಂ ಚಂದ್ರ ಚಟರ್ಜಿ, ಶರಚ್ಚಂದ್ರ ಚಟರ್ಜಿಯವರ ಬಂಗಾಳಿ ಕೃತಿಗಳಿಂದ ಕಾಮತರು ಮೋಹಿತರಾಗಿ ಅಲ್ಲಿ ಬಂಗಾಳಿ ಸಾಹಿತ್ಯಾಭ್ಯಾಸವನ್ನು ಮಾಡಿದರು. ಸಾಹಿತ್ಯಾಭ್ಯಾಸ ಪೂರ್ಣವಾದ ನಂತರ ಅವರು ತನ್ನ ತಾಯಿನಾಡಾದ ದಕ್ಷಿಣ ಕನ್ನಡವನ್ನು ಸೇರಿದರು. ಇಲ್ಲಿಗೆ ಬಂದವರು ಸೆಕೆಂಡರಿ ತರಬೇತಿ ಶಿಕ್ಷಣವನ್ನು ಪಡೆದು, ಬಂಟ್ವಾಳದ ದೇವಸ್ಥಾನದೊಂದು ಶಾಲೆಯನ್ನು ಸೇರಿದರು. ೧೯೦೮ರಿಂದ ಆರಂಭಿಸಿ ೧೯೪೦ ಎಪ್ರಿಲ್ ತನಕ ಅಂದರೆ ತನ್ನ ಕೊನೆಯುಸಿರನ್ನೆಳೆಯುವವರೆಗೆ ಅವರು ಮಂಗಳೂರು ಕೆನರಾ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದರು.

ಶ್ರೀ ಕಾಮತರು ಮಂಜೇಶ್ವರ ಗೋವಿಂದ ಪೈ (ರಾಷ್ಟ್ರಕವಿ)ಗಳ ಸಹಾಧ್ಯಾಯಿಗಳಾಗಿ (೧೮೯೭ ರಲ್ಲಿ)ಕೆನರಾ ಹೈಸ್ಕೂಲಿನಲ್ಲಿದ್ದರು. ಕೇವಲ ೧೬ ವರ್ಷ ವಯಸ್ಸಿನ ಕಾಮತರು ಆಗಲೆ ಅನೇಕ ಲೇಖನಗಳನ್ನು ಬರೆಯುತ್ತಿದ್ದರಂತೆ. ೧೮೯೯ರಲ್ಲಿ ರಾಷ್ಟ್ರಕವಿ ಗೋವಿಂದ ಪೈಗಳ ಮುಖಂಡತ್ವದಲ್ಲಿ 'Angel' ಎಂಬ ಕೈಬರಹದ ಪತ್ರಿಕೆ ಹೊರಡುತ್ತಿದ್ದಾಗ, ಅದರಲ್ಲಿ ಕಾಮತರು ಆಂಗ್ಲ ಭಾಷಾಕವಿತೆಗಳನ್ನು ಬರೆದು ಕೊಟ್ಟಿದ್ದರು ಅವುಗಳಲ್ಲಿ ಕೆಲವು ಸ್ವತಂತ್ರವಾದವುಗಳೂ, ಕೆಲವು ಸೋಮೇಶ್ವರ ಶತಕದ ಇಂಗ್ಲೀಷ ಅನುವಾದಗಳಾಗಿದ್ದುವು ಎಂದು ಶ್ರೀ ಗೋವಿಂದ ಪೈಗಳವರೇ ಹೇಳಿರುವರು.

ಅದರ ಅನಂತರ ಅವರು ಹಾಸ್ಯಪೂರ್ಣವಾದ ಹರಟೆ, ಚಿಕ್ಕಕತೆ ನಾಟಕ ಇತ್ಯಾದಿಗಳನ್ನು ಬರೆಯಲು ತೊಡಗಿದರು. ನಮ್ಮ ಜಿಲ್ಲೆಯ ಪತ್ರಿಕಾ ಪ್ರಪಂಚದಲ್ಲಿ ಅಗ್ರಸ್ಥಾನವನ್ನು ಪಡೆದರು.

ಬಂಗಾಳಿ ಸಾಹಿತ್ಯದ ಅನುವಾದ ಮಾಡಿ ಬಂಗಾಳ ಕವಿಗಳ ವಿಚಾರ ಧಾರೆಯ ಅರಿವನ್ನು ಅವರು ನಮಗೆ ಮಾಡಿಸಿಕೊಟ್ಟರು. ಠಾಗೂರರ 'ಅಂಚೆ ಮನೆ', 'ಎಲ್ಲಿ ಮನಕಳುಕಿರದೊ'....ಎಂಬ ಪದ್ಯ ಇವೇ ಮೊದಲಾದ ಕೃತಿಗಳು ಬಂಗಾಳಿ ಭಾಷೆಯಿಂದ ಅನುವಾದಿತವಾದುವುಗಳಾಗಿವೆ. ರನ್ನನ ಸಾಹಸ ಭೀಮ ವಿಜಯವನ್ನು ಹೊಸಗನ್ನಡ ಗದ್ಯರೂಪದಲ್ಲಿ ಅವರು ಬರೆದರು. ಇದರಿಂದ ಆಳವಾದ ಕನ್ನಡ ಅಭ್ಯಾಸ ಅವರಲ್ಲಿ ಅವಿತುಕೊಂಡಿತ್ತೆಂದು ತಿಳಿದು ಬರುವುದು.

ಮೈಸೂರಲ್ಲಿ 'ಶ್ರೀ ಕೈಲಾಸಂ'ರವರ ನಾಟಕ ಜನಪ್ರಿಯವಾದಂತೆ ಮಂಗಳೂರಲ್ಲಿ 'ಶ್ರೀ ಕಾಮತ'ರ ನಾಟಕಗಳು ಜನಾದರಣೀಯವಾಗಿದ್ದುವು. ಹೊಸ ವಿಧಾನಗಳನ್ನನುಸರಿಸಿ, ಜನಮೆಚ್ಚುವಂತೆ ಅವರು ನಾಟಕಗಳನ್ನು ರಚಿಸಿದರು. ಶಾಲಾ ವರ್ಧಂತ್ಯುತ್ಸವದ ಸಂದರ್ಭದಲ್ಲಿ ಅವರು ತಾವೇ ಬರೆದ ನಾಟಕಗಳನ್ನು ಮಕ್ಕಳಿಂದ ಆಡಿಸುತ್ತಿದ್ದರು. ಅವರ ನಾಟಕಗಳಲ್ಲಿ ಭಾಷೆಯ ಬಿಗುವು, ಸದ್ನೀತಿ, ಶಿಕ್ಷಣ ವಿಚಾರಗಳು ಅಡಕವಾಗಿದ್ದುವು. ಅವರು ನಾಟಕಗಳನ್ನು ೧೯೦೩ರಿಂದ ಬರೆಯಲಾರಂಭಿಸಿದರು. ಬಂಗಾಳಿ ಮರಾಠಿ ಸಾಹಿತ್ಯದ ಅಭ್ಯಾಸ ಮಾಡಿದ ಅವರು ಆ ಭಾಷೆಯ ಸಾಹಿತ್ಯದಿಂದ ನಮ್ಮ ಸಾಹಿತ್ಯಕ್ಕೆ ಪ್ರಯೋಜನ ದೊರಕುವಂತೆ ಮಾಡಿದರು. ಅವರು ಒಟ್ಟು ಸಾಧಾರಣ ಇಪ್ಪತ್ತೈದು ನಾಟಕಗಳನ್ನು ಬರೆದಿದ್ದರು. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಮಾತ್ರವಲ್ಲದೆ ಏಕಾಂಕ ನಾಟಕಗಳನ್ನೂ, ಶಾಲಾ ಜೀವನಕ್ಕೆ ಸಂಬಂಧಪಟ್ಟ ನಾಟಕಗಳನ್ನೂ ಅವರು ಬರೆದರು. ಕೃಷ್ಣಸಂಧಾನ, ಚಂದ್ರಹಾಸಾಭ್ಯುದಯ, ಮೌರ್ಯ ಸಿಂಹಾಸನ, ಪ್ರತಾಪಸಿಂಹ ಮರ್ಜಿ, ಸದ್ರಿ ಸುಬ್ಬ, ನಮ್ಮ ನಾಟಕಾಭಿನಯ, ಟ್ಯೂಶನ್ ಫೀ ಮೊದಲಾದುವುಗಳು ಅವರ ಉತ್ತಮ ನಾಟಕಗಳು.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಪತ್ರಿಕೆಗಳು ದಿ| ಶ್ರೀ ಕಾಮತರನ್ನೆ ನಂಬಿ ಆರಂಭವಾಗಿದ್ದುವೆನ್ನಬಹುದು. ನಮ್ಮ ಜಿಲ್ಲೆಯ ಹಿರಿಯ ಪತ್ರಕರ್ತರಾದ ಹುರುಳಿ ಭೀಮರಾಯರು ಇವರನ್ನೊಮ್ಮೆ 'ಕರ್ನಾಟಕ ಪತ್ರಿಕಾ ಪ್ರಪಂಚದ ಅಕ್ಷಯ ಪಾತ್ರೆ'ಯೆಂದು ಕರೆದಿದ್ದರು. ಅದು ಅಕ್ಷರಶಃ ನಿಜವಾಗಿದೆ. ಎಲ್ಲಾ ಪತ್ರಿಕೆಗಳ 'ಲೀಡರ್' ಬರೆಯುವುದಕ್ಕೂ ಕಾಮತರೇ ಬೇಕು. ಅನೇಕ ವರ್ಷಗಳವರೆಗೆ 'ಬೋಧಿನಿ' ಎಂಬ ಮಾಸಪತ್ರಿಕೆಯನ್ನು ಅವರು ನಡೆಸುತ್ತಿದ್ದರು. 'ಶ್ರೀ ಕೃಷ್ಣಸೂಕ್ತಿ', 'ಸ್ವದೇಶಾಭಿಮಾನಿ', 'ಪ್ರವಾಸಿ' 'ಕಂಠೀರವ', 'ನವಯುಗ', 'ಪ್ರಭಾತ', ಮೊದಲಾದ ಜಿಲ್ಲೆಯರ ಪತ್ರಿಕೆಗಳಿಗಲ್ಲದೆ ಮೈಸೂರಿನ ಮಧುರವಾಣಿ' ಎಂಬ ಉತ್ಕೃಷ್ಟ ಪತ್ರಿಕೆಗೂ ತಮ್ಮ ಲೇಖನಗಳನ್ನು ಕಳುಹಿಸುತ್ತಿದ್ದರು. ಕತೆ ಹೇಳಿ ನೀತಿ ಬೋಧಿಸುವ ಅವರ ಮಾರ್ಗವು ಜನಾದರಣೀಯವಾಗಿತ್ತು. ಅವರು ಬೇರೆ ಸಾಹಿತ್ಯದ ಸರಳ ಗಂಭೀರ ಶೈಲಿಯನ್ನು ಅನುಸರಿಸಿ, ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದರು,

ದಿ| ಶ್ರೀ ಕಾಮತರು ಸಾಹಿತಿಗಳಲ್ಲದೆ ಶಿಕ್ಷಕರೂ ಆಗಿದ್ದರು. ಅವರ ಶಿಕ್ಷಣ ಕ್ರಮ ನವೀನವಾದುದು. ತುಸು ವಿನೋದದೊಂದಿಗೆ ವಿಚಾರ ಪ್ರಚೋದಕ ಶಿಕ್ಷಣವನ್ನು ಅವರು ಕೊಡುತ್ತಿದ್ದರು ಶಿಕ್ಷಣಕ್ಕೆ ಸಹಾಯಕವಾಗುವ ಪುಸ್ತಕಗಳನ್ನು ಕೂಡಾ ಅವರು ಬರೆದಿದ್ದರು.

ಅವರು ಬಹು ವಿನೋದ ಪ್ರಿಯರು. ಸಾಯುವ ಸನ್ನಿವೇಶದಲ್ಲೂ ಅವರು ನಗುವುದನ್ನು ಬಿಡಲಿಲ್ಲವೆಂದು ಕೋಟಿಶಿವರಾಮ ಕಾರಂತರೊಮ್ಮೆ ಅಂದಿದ್ದರು.

ಕಾಮತರ ಲೇಖನಗಳೆಂದರೆ ಮಹಾಸಮುದ್ರ, ಅವುಗಳಲ್ಲೊಂದರ ಉದಾಹರಣೆಯನ್ನಿಲ್ಲಿ ಈಯುತ್ತೇನೆ.

ಇದು 'ಭಾರತ ಪ್ರಯೋಗ" ಕತೆಯ ಹಾಸ್ಯ ಸನ್ನಿವೇಶ. ಇದರಲ್ಲಿ ಹಳ್ಳಿಯ ಜನ ಭಾರತ ಪ್ರಯೋಗ ಬಹು ಕಾಲದ ಹಿಂದೆ ಯಾವ ರೀತಿಯಾಗಿ ಮಾಡಿಕೊಳ್ಳುತ್ತಿದ್ದರೆನ್ನುವುದನ್ನು ಚೆನ್ನಾಗಿ ದಿವಂಗತ ಕಾಮತರು ವಿವರಿಸಿರುವರು.

"ಅರಸಕೇಳ್ ಬಿಲುವಿದ್ಯೆಯಲಿ ಮೂವರು ಕಣಾ ಸಾಮರ್ಥ್ಯ ಪುರುಷರು
ಧರೆಯೊಳೊಬ್ಬರಿಗೊಂದು ಗುಣ,
ಪಾರ್ಥಂಗೆ ಮೂರು ಗುಣ |
ಭರಿತವಾಗಿಹುದಾತನೊಬ್ಬನ
ಸರಿಸದಲಿ ಮಾರಾಂತು ಜೀವಿಸಿ
ಮರಳ ಬಲ್ಲವನಾವನೈ? ಹೇಳೆಂದನಾ
ಶಕುನಿ ||"

ಭಾಗವತ ಉವಾಚ:— 'ಶೆಟ್ರೇ! ಕೇಳಬೇಕು. ಇಂಥ ವಿದ್ಯೆಯಲ್ಲಿ ಮೂವರು ಸಾಮರ್ಥ್ಯ ಪುರುಷರು ಇರುವರು— ಎಂದು ಮೊದಲಾಗಿ ಹೇಳಿದ್ದಾರೆ ವ್ಯಾಸಋಷಿಗಳು. ಈ ಮೂವರು ಯಾರು?"

ಇಬ್ಬರು ಅವರಿ ಆಳುಗಳು ಅರ್ಧಾಣೆಗಾಗಿ ಬಂದವರು. ಇನ್ನು ಅವರ ಜೊತೆಗೆ ಸೇರತಕ್ಕವನ್ಯಾರು? ಪರೇಲರು ತೋರಿಸಿದ ಅರ್ಜಿಯಲ್ಲಿ ಅವರಿಬ್ಬರ ಹೆಸರೇ ಇದೆ. ನೀವು ಮೂವರೆಂದರೆ ಯಾರೆಂದು ನಾವು ಹೇಗೆ ಹೇಳಲಿ? ವ್ಯಾಸರಿಗೆ ಗೊತ್ತು." (ಎಂದರು ಶೆಟ್ರು.)

"ಸರಿ, ಮೂವರು ಯಾರು ಬಲ್ಲಿರಾ? ಒಬ್ಬರಿಗೆ ಒಂದೊಂದು ಗುಣವಿದೆ ಆದರೆ ಪಾರ್ಥನಿಗೆ ಮೂರು ಗುಣವಿದೆಯೆನ್ನುತ್ತಾರೆ ಋಷಿಗಳು.

"ಪಾರ್ಥಂಗೆ ಮೂರು ಗುಣ!" ಈ ಪಾರ್ಥನಾದರೂ ಯಾರಪ್ಪ! ಮೂರು ಮಡಿ ಕಣ್ಣೋಜಿ?" ಭಾಗವತರಿಗೆ ನಸುನಗು ತುಂಬಿಯೇ ಇತ್ತು.

ಶೆಟ್ರಿಗೆ ಪುನಃ ಪುನಃ ಈ ಪ್ರಶ್ನೆ ಕೇಳಿದುದರಿಂದ ಸ್ವಲ್ಪ ಜ್ಞಾನೋದಯವಾಯಿತು. ಆದರೂ ಇಬ್ಬರೂ ಬಾಯಿ ಬಿಡಲಿಲ್ಲ. ಇನ್ನೂ ಆಲೋಚಿಸುತ್ತಿದ್ದಂತೆ ತೋರಿದರು. ಭಾಗವತರದಂತೂ 'ಕೃತಿಮುದ ಮುಖ'

"ಶೆಟ್ರೇ! ಕೇಳಿ, ಅವರಿಬ್ಬರ ಮಾತು ಹಾಗಿರಲಿ. ಇವನೊಬ್ಬನ ಈ ಮೂರನೆಯವನೆಂಬ ಪಾರ್ಥನ ಮುಮ್ಮಡಿ ವಿದ್ಯಾವಂತ ಪಾರ್ಥನ ಸಮಾನನಾಗಿ ಇದಿರಲ್ಲಿ ನಿಂತು ಯುದ್ಧಮಾಡಿ, ವ್ಯಾಜ್ಯ ಅಥವಾ ಮೊಕದ್ದಮೆಯಲ್ಲಿ ಗೆಲ್ಲಬಲ್ಲನು ಯಾವನಿದ್ದಾನೆ. ಈ ಧರಿತ್ರಿಯಲ್ಲಿ? ಎಂದು ಮಹಾ ತಂತ್ರಗಾರನಾದ ಶಕುನಿಯೇ ಎನ್ನುತ್ತಿದ್ದಾನಲ್ಲ. ಇನ್ನೂ ತಿಳಿಯಲಾರಿರಾ! ಈ ಪಾರ್ಥನು ಯಾರಾಗಿರಬಹುದೆಂದು."

"ಸರಿ, ಅವನ ಬೊಡ್ಡಿ ಮಗ ಪಾರ್ಥ. (ಇದು ಭಾಗವತರು ಸೇಡು ತೀರಿಸಿದ ವಿಧಾನ) ಮುತ್ತಜ್ಜನ ಕಾಲದಿಂದ ನಮ್ಮ 'ಒಚ್ಚಲಿಗೆ' ನೀರು ಹೋಗುತ್ತಿದ್ದ ನ. ಈಗ ಬಾರಿ ಪಾರ್ಥನಾಗಿ ಬಿಟ್ಟಿದ್ದಾನೆ ನಿಮ್ಮ ಬಬ್ರುವಾಹನನಿಗೆ ಇದಿರಾಗಿ ಅಂದೇ ಅರ್ಥ ಹೇಳಿದವ. (ಇದೇ ಭಾಗವತರ ಸೇಡು) ನಮ್ಮನ್ನು ನೋಡಿದರೆ ಕಣ್ಣು ಮುಚ್ಚಿ ಕೊಳ್ಳುತ್ತಾನೆ. ಬೆಕ್ಕು! ಗಂಟಾ! ಕಣ್ಮುಚ್ಚಿ ಹಾಲು ಕುಡಿದರೆ ಯಾರಿಗೂ ತಿಳಿಯದೆಂದೆಣಿಸಿದೆಯಲ್ಲಾ! ಹುಃ ಹುಃ ವ್ಯಾಸರ ಭಾರತವಿದೆ. ಈ ಪುಣ್ಯಾತ್ಮ ಭಾಗವತರಿದ್ದಾರೆ. ಇನ್ನು ನಿನ್ನ ಮುಚ್ಚಿದ ಕಣ್ಣನ್ನು ಬಿಕ್ಕಿ ಕೀಳುತ್ತೇವೆಯೊ ಇಲ್ಲವೊ ನೋಡು! ಅಬ್ಬ! ಕುತ್ತಿನ ಮೇಲೆ ನಿನ್ನ ಕಣ್ಣು!! ಹುಂ.!!" ಎಂದರು ಶೆಟ್ರು

ಹೇಗಿದೆ ಭಾಗವತರ ಭಾರತ ಪ್ರಯೋಗ?

—ಕೆ. ದಾಮೋದರ ಐತಾಳ;
ವಿದ್ವಾನ್ ಉಡುಪಿ.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣ ಕಾರ್ಯಗಳಿಗೆ ವಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣ ಪತ್ರಿಕೆಗಳನ್ನೂ
ಬುಕ್‌ವರ್ಕನ್ನೂ ಚಲೋದಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI
Printers & Publishers
Santhekatte — UDIPI.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಹರಟೆ

ಕೈ ಮತ್ತು ಅದರ ಉಪಗ್ರಹಗಳು

ಎಲ್ಲಿ ಹೋದರೂ ಮಗ ಕೈ ಕೊಟ್ಟಾ ನಂತೆ; ಅದರೆ, ಕೈಗೂ ಕೈ ಕೊಡ ಬಲ್ಲನೆ?

ಸಂಪೂರ್ಣವಾಗಿ ಸಾಹಿತ್ಯಕವಾಗಿಯೇ ಅಲ್ಲವಾದರೂ ದಿನ ಬಳಕೆಯ ಮಾತುಗಳಲ್ಲಿ ಕೆಲವೊಂದು ಪದಗಳು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಶಬ್ದಗಳೊಂದಿಗೆ ಬೆರೆತು ಬೇರೆ ಬೇರೆ ಅರ್ಥಗಳನ್ನು ಕೊಡುತ್ತವೆ. ಅವುಗಳ ಸಂದರ್ಭೋಚಿತ ಅರ್ಥಗಳನ್ನು ಅರಿಯುವುದರಲ್ಲಿ ಒಳ್ಳೆಯ ರಸವಿದೆ-ಪ್ರಯೋಜನವೂ ಇದೆ. 'ಕೈ' ಎಂಬ ಕನ್ನಡದ ಪದವು ಅಂಥವುಗಳಲ್ಲಿ ಒಂದು.

ಕೈಗೆ ಪುರಾಣ ಕಾಲದಿಂದಲೇ ಪ್ರಾಮುಖ್ಯ ಬಂದಿದೆ. ಎಂತಲೇ ಅಲ್ಲವೇ ಕವಿಗಳು ಕಾರ್ತವೀರ್ಯನನ್ನು ಸಾವಿರ ಕೈಯವನೆಂದು ವರ್ಣಿಸಿದ್ದು? ದಶಕಂಠನಿಗೆ ಇಪ್ಪತ್ತು ಕೈಗಳಿದ್ದುದರಿಂದ ಖಂಡಿತವಾಗಿಯೂ ಅವನ ಮಹತ್ವ ಹಿರಿದಾಗಿದೆ. ಈ ಆಧುನಿಕ ಯುಗದಲ್ಲಿ ಕೈಗಳ ಸಂಖ್ಯೆಯೂ ಮಹತ್ವವೂ ಇನ್ನಷ್ಟೂ ಹೆಚ್ಚಾಗಿದೆಯೆಂದರೆ ಫಕ್ಕನೆ ಆಶ್ಚರ್ಯವಾಗಬಹುದಾದರೂ ಕೈಯ ವಿವಿಧ ರೂಪಾಂತರಗಳನ್ನು ಅರೈದರೆ ಇದು ಸತ್ಯವೆಂದು ಹೊಳೆಯದಿರದು.

ಕೆಲವರು ಹೇಳುವುದನ್ನು ಕೇಳಿರಬಹುದು ನೀವು "ಅವರೇನೂ ಸಾಮಾನ್ಯರಲ್ಲವಯ್ಯಾ, ಅವರಿಗೆ ಮೇಲೆ ಕೂಡಾ 'ಕೈ' ಇದೆ" ಎಂದು. ಹೀಗೆ ಹೇಳಿದಾಗ ಆ 'ಅವರು' ಯಾರೋ ಮಂತ್ರಿಗಳ ಅಥವಾ ಪಾರ್ಲಿಮೆಂಟಿನ ಮೆಂಬರರ ಸಂಬಂಧಿಕರಿರಬೇಕೆಂದು ನಿಮಗೆ ಕೂಡಲೇ ಅರ್ಥವಾಗಬೇಕು. ಅವರಿಗೆ ನಾವು ಇಂಗ್ಲಿಷಿನಲ್ಲಿ ಹೇಳುತ್ತೇವೆ ನೋಡಿ 'ಇನ್‌ಫ್ಲುಯೆನ್ಸ್' ಎಂತ ಅದು ಇದೆ ಎಂದು ತಿಳಿಯಬೇಕು. ಈ 'ಮೇಲಿನ ಕೈ' ಯಿಂದ ಈಗಿನ ಕಾಲದಲ್ಲಿ ಅದ್ಭುತ ಚಮತ್ಕಾರಗಳಾಗಿ ಹೋಗುವುಂಟು. ಗಾರ್ಡ್ ಫೋರೆಸ್ಟರ್ ಆಗುವುದು, ಎಲ್ಲಿಯೋ ಇದ್ದ ವ್ಯಕ್ತಿ ಒಮ್ಮೆಯೇ ಕಲೆಕ್ಟರರ ಪರ್ಸನಲ್ ಅಸಿಸ್ಟೆಂಟ್ ಆಗಿಬಿಡುವುದು, ಮೇಲಿದ್ದವರು ಕೆಳಗೆ ಹೋಗಿ ಕೆಳಗಿದ್ದವರು ಮೇಲೆ ಬರುವುದು, ಜೈಮಿನಿ ಭಾರತವು ರಾಘವಾಂಕನ ಶ್ರೇಷ್ಠ ಕೃತಿಯೆಂದು ಉತ್ತರ ಬರೆಯುವ ವಿದ್ಯಾರ್ಥಿಯೂ ಪರೀಕ್ಷೆಯಲ್ಲಿ ಪಾಸಾಗುವುದು—ಎಲ್ಲಾ ಈ 'ಮೇಲಿನ ಕೈ'ಯ ಪ್ರಭಾವದಿಂದಲೇ! ಮೇಲೆ ಕೈಯಿದ್ದಷ್ಟೂ ಅವರ 'ಡಿಗ್ನಿಟಿ' ಜಾಸ್ತಿ ಎಂದು ಲೆಕ್ಕ.

ಯಾರಿಗಾದರೂ ಭಯಂಕರ ಸಿಟ್ಟು ಬಂದು ಕಣ್ಣು ಕೆಂಪಾದಾಗ "ಅದದ್ದಾಗಲಿ, ಈ ಸಲ ಅವನಲ್ಲಿ ಒಂದು ಕೈ ನೋಡಿಯೇ ಬಿಡುತ್ತೇನೆ" ಎಂದು ಶರ್ಟಿನ ಕೈ ಮೇಲೆ ಮಾಡುತ್ತಾರಲ್ಲಾ—ಇದು ಕೈಯ ಪ್ರಯೋಗಕ್ಕೆ ಇನ್ನೊಂದು ದೃಷ್ಟಾಂತ. ಹೆಚ್ಚು ಸಿಟ್ಟು ಬಂದಾಗ ನಮ್ಮ ಕೆಚ್ಚನ್ನು ಬಿಚ್ಚಿ ತೋರಿಸಲು ಇದಕ್ಕಿಂತ ಒಳ್ಳೆಯ ಶಬ್ದ ಬೇರೆ ಸಿಕ್ಕುವುದಿಲ್ಲ. ಹೀಗೆ ಭೀಮ ಸಿಟ್ಟು ಬಂದವರನ್ನು ಮಾತನಾಡಿಸುವುದಕ್ಕೆ ಮಾತ್ರ ಹೋಗಬೇಡಿ ಏಕೆಂದರೆ ಬಗ ಅವರ ಕೈ ನಿಮ್ಮ ಕೆನ್ನೆಯನ್ನೂ ನೋಡಬಹುದು.

ಇನ್ನು ಕೈ ನೋಡುವವರ ಪಂಗಡ ಬೇರೆಯೇ ಒಂದು ಇದೆ. ಅವರು ನೋಡಿ ಹೆಚ್ಚಾಗಿ ಪಟ್ಟಣದ ಮಾರ್ಗಗಳ ಬದಿ ಕುಳಿತಿರುತ್ತಾರೆ. ಕೆಲವರು ಮನೆ ಮನೆಗೂ ಬರುತ್ತಾರೆ. ನಿರುದ್ಯೋಗ ಸಮಸ್ಯೆಯ ಈ ಕಾಲದಲ್ಲಿ ಕೈ ನೋಡುವ ವಿದ್ಯೆ ಬಹಳ ಪ್ರಯೋಜನಕಾರಿಯೆಂದು ಅನುಭವಕ್ಕೆ ಬಂದಿದೆ. ಇವರಲ್ಲಿ ಹೆಚ್ಚಿನವರು ಮೊದಲು ಮುಖ ನೋಡಿ ಮತ್ತೆ ಕಿಸೆ ನೋಡಿ ಕೊನೆಗೆ ಕೈ ನೋಡುವವರು! ಕೆಲವರಂತೂ ರೈಲಿನಲ್ಲಿ ಕೈ ನೋಡಿ ನೋಡಿ ಕಡೆಗೆ ನಮ್ಮ ಬೇಗಿಗೋ ಕೊಡೆಗೋ ಕೈ ಕೊಡುವುದೂ ಇದೆ. ಈಗ ಉಳುವವರಿಂದ ಹಿಡಿದು ಆಳುವವರ ತನಕ ಈ ಕೈ ನೋಡಿಸಿಕೊಳ್ಳುವ ಹವ್ಯಾಸವಿರುವುದರಿಂದ ಕೈ ನೋಡುವವರಿಗೆ 'ಕಾಯಿಸು' ಹೆಚ್ಚಾಗುತ್ತಿದೆಯಂತೆ.

ಕೈ ಕೊಡುವವರಲ್ಲಿ ಮುಖ್ಯವಾಗಿ ಎರಡು ವಿಧ. 'ಇಂಥವರನ್ನು ನಂಬಬೇಕಯ್ಯಾ, ಖಂಡಿತ ಕೊಡುತ್ತೇನೆಂದು ಹೇಳಿ ಸಮಯಕ್ಕಾಗುವಾಗ ಕೈ ಕೊಡುವುದೂ ಅಂತಂದ್ರೆ....?" ಎಂದು ಆರೋಪಿಸಲ್ಪಡುವವರು ಕೈ ಕೊಡುವವರಲ್ಲಿ ಮೊದಲ ಪಂಗಡಕ್ಕೆ ಸೇರಿದವರು. ಇನ್ನು ಕೈ ಕೊಡುವವರು ಎಂದರೆ ಸಹಾಯ ಮಾಡುವವರು—ಎರಡನೆಯ ಗುಂಪಿನವರು! ಆದರೂ ಈಗ ಮೊದಲ ವಿಭಾಗಕ್ಕೇ 'ಓಟು' ಜಾಸ್ತಿ. ಹತ್ತು ಜನ ಸೇರಿದಲ್ಲಿ ನಮ್ಮ ಚೀಲ, ಜೋಡು, ಕೊಡೆಗಳನ್ನು ಜಾಗ್ರತೆಯಾಗಿ ಇಡಬೇಕಾಗುತ್ತದೆ. ಯಾಕೆಂದರೆ ಈಗೀಗ ಕೈ ಕೊಡುವವರ ಸಂಖ್ಯೆ ಹೆಚ್ಚಾಗುತ್ತಿದೆ.

'ಕೈಗುಣ' ಅಥವಾ 'ಕೈಫಲಿತ' ಎಂಬುದು ಕೈ ಶಬ್ದ ಭಂಡಾರದ ಬಹಳ ಪ್ರಾಮುಖ್ಯವಾದ ಪದ. ಇದು ಡಾಕ್ಟರರಿಗಿರಬೇಕಾದ ಗುಣಗಳಲ್ಲೆಲ್ಲಾ ಅಗ್ರಸ್ಥಾನವನ್ನು ಪಡೆಯುತ್ತದೆ. ಯಾರಾದರೂ ವೈದ್ಯರು ಫಕ್ಕನೆ ಹಣಮಾಡಿ ಹೆಸರು ಗಳಿಸಿದರೆ ಜನರು ಹೇಳುವ ಕ್ರಮವಿದೆ—"ಹಣ ಆಗದೆ ಇರುತ್ತದೊ? ಅವರ ಕೈಗುಣವೇ ಅಂಥಾದ್ದು. ಅವರು ಕೊಟ್ಟದ್ದೇ ಮದ್ದಯ್ಯಾ." ಎಂದು. ಇಲ್ಲಿ ತಿಳಿಯಬೇಕು ನೀವು ಕೈಗುಣದ ಮಹತ್ವವನ್ನು!

'ಕೈ ಹಿಡಿಯುವುದು'ಎಂಬ ಪದ ನೀವು ಕೇಳಿರಬಹುದು. ಇದರ ವಾಚ್ಯಾರ್ಥ ಬರೇ ಕೈಯನ್ನು ಹಿಡಿಯುವುದು ಎಂದಾದರೂ ವಾಡಿಕೆಯ ಸೂಚ್ಯಾರ್ಥ ಮದುವೆಯಾ



೭೫ ಅಡಿ ಎತ್ತರದ ಸ್ತಂಭದಲ್ಲಿ ಚಂದ್ರನ ಕಡೆಗೆ ಹಾರಲು ಸಿದ್ಧವಾದ ಆಕಾಶಯಾನವೊಂದು ನಿಂತಿದೆ. ಈ ಸ್ತಂಭದ ಅಂತಸ್ತುಗಳಲ್ಲಿ ಯಾನಕ್ಕೆ ಅವಶ್ಯಕವಾದ ಶಕ್ತಿಯನ್ನು ಒದಗಿಸಲಾಗಿದೆ.

ಗುವುದು ಎಂದಾಗುತ್ತದೆ. ಇದನ್ನು ಎರಡನೇ ಸಲ ಮದುವೆಯಾಗುವವರಿಗೆ ಉಪಯೋಗಿಸುವುದು ಹೆಚ್ಚು. ಈ ಪದದಿಂದ ತುಂಬಾ ಪ್ರಯೋಜನವಿದೆ. ಯಾರಾದರೂ ಉದ್ಧಟತನದಿಂದ ನಿಮ್ಮ ಕೈ ಹಿಡಿದರೆ 'ಮಹಾರಾಯ, ನನ್ನ ಕೈ ಹಿಡಿಯುವವರು ಬೇರೆಯೇ ಜನ ಇದ್ದಾರೆ' ಎಂದು ಹೇಳಿ ನೋಡಿ. ಅವರು ಮುಖ ಸಣ್ಣಗೆ ಮಾಡಿ ಬಾಲ ಮಡಚಿ ಮೂಲೆಯಲ್ಲಿ ಕುಳಿತುಕೊಳ್ಳದಿದ್ದರೆ ಮತ್ತೆ ಹೇಳಿ.

ಹಿಂದಿನ ಕಾಲದಲ್ಲಿ—ಎಂದರೆ ಹಾವು ಕಪ್ಪೆಗಳು ಆಟವಾಡಿಕೊಂಡಿದ್ದ ಕಾಲವೇ ಎನ್ನಿ—'ಕೈಗಡ"ವಾಗಿಯೇ ಕೊಡುತ್ತಿದ್ದರಂತೆ. ಆದರೆ ಈಗ ಮಾತ್ರ ಹಾಗೆ ಹಣ ಸಾಲ ಕೊಡುವುದು ಸ್ವಲ್ಪ ಮೋಸವೇ! ಕಾರಣ ನೀವು ಯಾರಿಗಾದರೂ ನೂರು ರೂಪಾಯಿ "ಕೈಗಡ" ಕೊಟ್ಟು ನಾಲ್ಕು ತಿಂಗಳು ಕಳೆದು ಅವರ ವಸೂಲಿಗಾಗಿ ಅವರ ಮನೆಗೆ ಹೋದರೆ ಅವರು ನಿಮ್ಮನ್ನು ಕುರ್ಚಿಯಲ್ಲಿ ಕುಳ್ಳಿರಿಸಿ ಹಾಗೆ ಮೋರೆ ಓರೆ ಮಾಡಿ "ತಮಗೆ....ಎಲ್ಲಾಯಿತು? ತಮ್ಮನ್ನು ಎಲ್ಲಿಯೋ ನೋಡಿದ ಹಾಗಾಗುತ್ತದಲ್ಲಾ?" ಎಂದು ಹೇಳುವ ಕಾಲವಿದು. ಮತ್ತೆ ನೀವು 'ಊರು ಉರುಟಾಗಿ ಹೋಯಿತಪ್ಪಾ' ಎಂದು ಹೇಳಿ ಹೊರಡಬೇಕಷ್ಟೆ.

'ಕೈಗಾಣಿಕೆ' ಎಂಬ ಪದ ಈಗ ತುಂಬಾ ಪ್ರಸಿದ್ಧಿಗೆ ಬಂದಿದೆ. ಮೇಲಧಿಕಾರಿಗಳ ಮೆಚ್ಚಿಗೆ ಪಡೆಯಬೇಕಾದರೆ ಇದು ಬೇಕೇ ಬೇಕು. ಈಗ 'ಲಂಚ, ಎಂದು ಹೇಳುವ ಕ್ರಮ ಸ್ವಲ್ಪ ಕಡಿಮೆ. 'ಅದೇನೋ ಕೈಗಾಣಿಕೆ' ಎಂದು ಹೇಳುವ ಕ್ರಮ ಸ್ವಲ್ಪ ತಗ್ಗಿದ ಸ್ವರದಲ್ಲಿ ಕಣ್ಣು ತುಸು ಮುಚ್ಚಿ ಹೇಳಿಬಿಟ್ಟರೆ ಹೇಳುವವರಿಗೂ ಇಬ್ಬರಿಗೂ ಅರ್ಥವಾಯಿತು—ಆದರೂ ಯಾರಿಗೂ ಅರ್ಥವಾಗಲಿಲ್ಲ ಎಂಬ ಗಂಭೀರ ಭಾವನೆ ಅವರ ಮುಖದಲ್ಲಿ—!

'ಅವನೆಂದರೆ ಹೆಂಡತಿಯ 'ಕೈ ಗೊಂಬೆ'....ಎಂಬ ಮಾತು ನೀವು ಕೇಳಿರಲೇಬೇಕು. ಅದನ್ನು ವಿವರಿಸುವ ಅಗತ್ಯವಿಲ್ಲ ಇನ್ನು 'ಕೈತಟ್ಟು, ಎಂಬುದು ಬಹಳ ಜನಪ್ರಿಯವಾದ ಪದ. ಕೆಲವು ಭಾಷಣಗಾರರು ಅಥವಾ ಯಕ್ಷಗಾನ ವೇಷಗಾರರು 'ನಾನು ಹೀಗೆ ಹೇಳುವಾಗ ನೀವು ಕೈ ತಟ್ಟಿ ಬಿಡಿ, ಎಂದು ಹೇಳಿ ತಮ್ಮ ಆಪ್ತರಿಬ್ಬರನ್ನು ಮೊದಲೇ ಸಭೆಯಲ್ಲಿ ಕುಳಿತುಕೊಳ್ಳಿಸುವ ಕ್ರಮವೂ ಉಂಟು. ಯಕ್ಷಗಾನ ಕೂಟಗಳಲ್ಲಿ ಯಾರ್‍ಯಾರ ಅರ್ಥಕ್ಕೆ ಎಷ್ಟೆಷ್ಟು ಸಲ ಕೈತಟ್ಟಿದ್ದಾರೆ. ಎಂದು ಲೆಕ್ಕ ಹಾಕುವವರೂ ಇದ್ದಾರೆ.

ಹೀಗೆಯೇ ಕೈ ಸೋಲು, ಕೈಮೀರು, ಕೈ ಜೋಡಿಸು, ಕೈಚಳಕ, ಕೈಗೊಳು, ಮೊದಲಾದ ಅನೇಕ ಪದಗಳಿವೆ. ಹೊರ ನೋಟಕ್ಕೆ ಇವುಗಳಲ್ಲಿ ಏನಿದೆ ಎಂದು ತೋರಬಹುದಾದರೂ ಸೂಕ್ಷ್ಮವಾಗಿ ವಿವೇಚಿಸಿದರೆ ಅರ್ಥಸ್ಪಷ್ಟತೆಗೆ ಇವು ಅಗತ್ಯವೇ. ಉದಾಹರಣೆಗೆ ಕೈಗುಣ, ಒಂದು ಕೈ ನೋಡು, ಕೈಕೊಡು ಮೊದಲಾದುವುಗಳಷ್ಟು ಸಮಯೋಚಿತವಾದ ಶಬ್ದಗಳು ಫಕ್ಕನೆ ಸಿಕ್ಕುವುದಿಲ್ಲ. ಭಾಷೆ ಬೆಳೆಯ ಬೇಕಾಗಿದ್ದರೆ ಇಂತಹ ಶಬ್ದಗಳೂ ಬೇಕಾಗುತ್ತವೆ.

—ಶ್ರೀ ರಮಾನಂದ ಬನಾರಿ.
ದೇಲಂಪಾಡಿ.

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price: Rs. 1 = 25. (Postage extra)

If Rs.1=50 is sent by M.O one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.
M/s Navabharat Book Depot, Udipi.

ಅಭಿಪ್ರಾಯ

ಸಂಸ್ಕೃತ ಭಾಷೆಯು ಜ್ಞಾನ ಮಹಾಸಾಗರ!

ಅದರಲ್ಲಿ ಮಧುರತೆ, ಕೋಮಲತೆ, ಗಂಭೀರತೆಗಳು ತುಂಬಿ ತುಳುಕಾಡುತ್ತಿವೆ!

ನಿಮ್ಮ ಮಹಾ ಪಾಠಶಾಲೆಗೆ ೫೫ ವರ್ಷಗಳಾದರೆ, ನನಗದಕ್ಕಿಂತ ೧೫ ಕಡಿಮೆ. ಸಂಸ್ಕೃತದ ಗಂಧಗಾಳಿಯೂ ಇಲ್ಲದ ನನ್ನನ್ನು ಸಂಸ್ಕೃತ ಕಾಲೇಜಿನ ವರ್ಧಂತ್ಯುತ್ಸವದ ಅಧ್ಯಕ್ಷಸ್ಥಾನಕ್ಕೆ ಆರಿಸಿದ್ದಾರೆ. ನಾನು ಕಲಿಯುತ್ತಿರುವಾಗ, ಸಂಸ್ಕೃತ ವಿಷಯವನ್ನು ತೆಗೆದುಕೊಂಡರೆ ಎಲ್ಲಿ ಫೇಲಾದೇನೋ ಎಂದು ಹೆದರಿ, ಎಸ್.ಎಸ್.ಸಿ.ಯಲ್ಲಿ ಕನ್ನಡವನ್ನೇ ತೆಗೆದುಕೊಂಡೆ. ಮುಂದಕ್ಕೆ ಕಾಲೇಜಿನಲ್ಲಿ ಕೂಡಾ ಸಂಸ್ಕೃತವನ್ನಲ್ಲಿಯೇ ದೂರವಿಟ್ಟು ಅರ್ಥಶಾಸ್ತ್ರವನ್ನೇ ಮುಟ್ಟಿದ್ದೆ. ವಿದ್ವಾಂಸರಾದ ವಕೀಲರು ಹೇಳಿದ ಕಾನೂನಿನಲ್ಲೇ ತಲೆ ಕೆರೆದುಕೊಳ್ಳಬೇಕಾದ ಉದ್ಯೋಗವನ್ನೂ ಹೊಟ್ಟೆಪಾಡಿಗಾಗಿ ಕೈಗೊಳ್ಳಬೇಕಾಯಿತು. ಇದಕ್ಕೇನೇ ಬಿಡುವಿಲ್ಲದ ನನ್ನಂತಹ ಮನುಷ್ಯ ವೇದೋಪನಿಷತ್ತುಗಳನ್ನು ಅಭ್ಯಸಿಸುವುದು ಎಂದು? ಹೊಟ್ಟೆಪಾಡಿಗಾಗಿ ಏನೇನೋ ಉದ್ಯೋಗ ಮಾಡಿಕೊಂಡಿರಬೇಕಾದರೂ ಇಂತಹ ಕೂಟಗಳಲ್ಲಿ ಭಾಗ ವಹಿಸುವುದರಿಂದಲಾದರೂ ಸ್ವಲ್ಪ ಮಟ್ಟಿನ ಶಾಂತಿಯೊದಗಬಹುದು.

ಸಂಸ್ಕೃತವು ಒಂದು ಮಹಾ ಜ್ಞಾನ ಸಾಗರವಾಗಿದೆ. ಸಂಸ್ಕೃತ ಸಾಹಿತ್ಯ ಬೆಳೆಯುತ್ತಿಲ್ಲ, ಅದು ಮೃತ ಭಾಷೆ ಎಂದರೆ, ಅದೇನೂ ಹಳ್ಳತಿಳ್ಳವಲ್ಲ, ಹರಿಯಲಿಕ್ಕೆ. ನದಿ ಹರಿಯುತ್ತದೆ, ಸಾಗರ ಎಲ್ಲಿಯಾದರೂ ಹರಿಯುವುದುಂಟೆ? ಇಲ್ಲವೇ ಇಲ್ಲ. ಸಂಸ್ಕೃತ ಮಹಾ ಸಾಗರದಿಂದ ನೀರೆತ್ತಿಕೊಂಡೇ ಉಳಿದ ಸಾಹಿತ್ಯಗಳು ಬದುಕುತ್ತವೆ. ಸಮುದ್ರದಿಂದ ಹುಟ್ಟಿದ ನೀರೇ ಹಳ್ಳವಾಗಿ ತಿಳ್ಳವಾಗಿ ತೋಡಾಗಿ ನದಿಯಾಗಿ ಹರಿಯುವುದು ತಾನೆ?

"ಸುಲಿದ ಬಾಳೆಯ ಹಣ್ಣಿನಂದದಿ ಸುಲಭವಾಗಿರುವ" ಕನ್ನಡವಿರಲು ಸಂಸ್ಕೃತದಲ್ಲಿನ್ನೇನು? ಎಂದು ಒಬ್ಬ ಕನ್ನಡದ ಕವಿ ಕೇಳಿಬಿಟ್ಟಿದ್ದಾನೆ ಆದರೆ, ಅಚ್ಚಗನ್ನಡದಲ್ಲಿ ಬರೆಯುವ ಪ್ರತಿಜ್ಞೆ ತೊಟ್ಟ ಆಂಡಯ್ಯನ ಕಬ್ಬಿಗರ ಕಾವದಲ್ಲಿ ತದ್ಭವ ಪದಗಳೇ ತುಂಬಿ ಹೋಗಿವೆ! ಭಾರತೀಯ ಭಾಷೆಗಳನ್ನು ಹಡೆದ ತಾಯಿ ಇಲ್ಲವೇ ಪೋಷಿಸಿದ ತಾಯಿ, ಸಂಸ್ಕಾರ ವಿಶೇಷವನ್ನಿತ್ತ ತಾಯಿ ಸಂಸ್ಕೃತವೇ ಆಗಿದೆ, ಆದುದರಿಂದ ಅದಕ್ಕೆ ವಿಶೇಷ ಪ್ರೋತ್ಸಾಹ ದೊರೆಯಬೇಕಾದರೂ ಅದಿಂದು ಲಭಿಸುತ್ತಿಲ್ಲ.

ಸಂಸ್ಕೃತವು ರಾಷ್ಟ್ರಭಾಷೆಯಾಕಾಗಬಾರದು ಎಂದು ಕೆಲವರು ಹೇಳುತ್ತಾರೆ. ಇದಕ್ಕೆ ಪಕ್ಷ ಪ್ರತಿಪಕ್ಷಗಳಿವೆ. ಸಂಸ್ಕೃತ ಗಡಸು ಬಾಷೆಯಾದರೂ ಅದರಲ್ಲಿ ಮಧುರತೆ ತುಂಬಿ ತುಳುಕಾಡುತ್ತಿದೆ. ಕೋಮಲತೆಯಿದೆ, ಗಂಭೀರತೆಯಿದೆ— ಎಂತಲೇ ಇದು ಜೀವಂತ ಭಾಷೆ. ಸಂಸ್ಕೃತ ಭಾರತೀಯರ ಮೇಲೆ ಸಂಸ್ಕೃತಿಯ ಪ್ರಭಾವವನ್ನು ಬೀರಿದೆ. ಆ ಸೇತು ಹಿಮಾಚಲಗಳ ನಡುವಣ ಜನರನ್ನು ಏಕ ಸಂಸ್ಕಾರ ಸೂತ್ರದಿಂದ ಬಂಧಿಸಿದೆ. ಸಂಸ್ಕೃತದ ಸಂಸ್ಕೃತಿಯಿದ್ದುದರಿಂದಲೇ ಅನೇಕಾನೇಕ ಆಕ್ರಮಣಕಾರರ ದಾಳಿಯಿಂದಲೂ ನಮ್ಮ ಸಂಸ್ಕೃತಿ ಬದುಕಿಕೊಂಡಿದೆ ಭಾರತವು ತನ್ನ ವಿಶಿಷ್ಟ ಸಂಸ್ಕೃತಿಯಿಂದಲೇ ವಿಶ್ವವಿಖ್ಯಾತವಾಗಿದೆ. ನಮ್ಮ ದೇಶದಲ್ಲಿ ಅನ್ಯಾನ್ಯ ಭಾಷಾಭ್ಯಾಸಿಗಳಿದ್ದರೂ ಏಕತೆಯ ಸೂತ್ರದಲ್ಲಿ ನಾವು ಬಂಧಿತರಾಗಿದ್ದೇವೆ ಇದಕ್ಕೆ ಸಂಸ್ಕೃತವೇ ಕಾರಣ. ಇಂಗ್ಲಿಷ್ ಭಾಷೆಯನ್ನೀಗ ಕಲಿತುಕೊಂಡರೆ ಹೊಟ್ಟೆ ತುಂಬುತ್ತದೆ; ಅದರಿಂದ ಸೂನಮುಯರ್ಾದೆಗಳು ಲಭಿಸುತ್ತವೆ ಎಂಬ ಭಾವನೆಯು ನಮ್ಮಲ್ಲಿ ನೆಲನಿಂತಂದಿನಿಂದ ನಮ್ಮ ಸಂಸ್ಕೃತಿಯ ಅಭ್ಯಾಸವು ದೂರವುಳಿದಿದೆ. ನಮ್ಮ ಸಂಸ್ಕೃತಿ ಎಂದರೇನೆಂದೇ ಇಂದು ನಮ್ಮಲ್ಲಿ ಹಲವರಿಗೆ ತಿಳಿದಿಲ್ಲ.

ಇಂದು ದೇಶ ಸ್ವತಂತ್ರವಾಗಿದೆ. ಇಂಗ್ಲಿಷ್‌ನ ಸ್ಥಾನಮಾನ ದೂರವಾಗುತ್ತಿದೆ. ಸಂಸ್ಕೃತದ ಬಗ್ಗೆ ಆಸಕ್ತಿ ಬೆಳೆಯುತ್ತಿದೆ. ಸಂಸ್ಕೃತಾಭ್ಯಾಸದ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಸಹಾಯ ಮಾಡಬೇಕು. ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ಎನ್ನುವಂತೆ, ಇವನ್ನು ಸಾಧಿಸಿಕೊಂಡೇ ಆತ್ಮ ಪರಮಾತ್ಮಗಳ ಬಗ್ಗೆ ವಿಚಾರಮಾಡಬೇಕು ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಸಂಸ್ಕೃತಾಭ್ಯಾಸವನ್ನು ಖಡ್ಡಾಯವಾಗಿಯೂ ಮಾಡಬಹುದು ಸಂಸ್ಕೃತದ ವ್ಯಾಕರಣ ನಿಯಮಗಳು ಮಾತ್ರ ಬಿಗಿ. ನುಡಿ ಮೊದಲು, ಸಾಹಿತ್ಯ ಮೊದಲು, ವ್ಯಾಕರಣ ಕಡೆಗೆ; ವ್ಯಾಕರಣಕ್ಕೆ ಪ್ರಾಧಾನ್ಯವನ್ನು ಕೊಡದೆ ಸಾಹಿತ್ಯದೃಷ್ಟಿಯಿಂದ ಇದನ್ನು ಅನಿವಾರ್ಯ ವಿಷಯವನ್ನಾಗಿ ಮಾಡಬಹುದು ಹೀಗೆ ಮಾಡಿದರೆ, ಸಂಸ್ಕೃತವು ಉಳಿಯಬಹುದು ಹಿರಿಯರೇ ಸಂಸ್ಕೃತವನ್ನು ಅಭ್ಯಸಿಸಿ ಅದರಲ್ಲಿ ನಿಪುಣರಾಗಿರುವಾಗ ನಾವು ಮಾತ್ರ ಅದನ್ನು ಮರೆತುಬಿಡುವುದು ನ್ಯಾಯವೆ?

ಉಡುಪಿ ಒಂದು ಪುಣ್ಯಸ್ಥಳ ಸಂಸ್ಕೃತ ಮಹಾಪೀಠವನ್ನು ಸ್ಥಾಪಿಸಲು ಇದು ಯೋಗ್ಯ ಸ್ಥಳ. ಇಲ್ಲಿನ ಅಷ್ಟಮಠಾಧೀಶರು ಸಂಸ್ಕೃತಾಭ್ಯಾಸಕ್ಕೆ ಇದನ್ನು ಭಾರತ ಪ್ರಸಿದ್ಧವನ್ನಾಗಿ ಏಕೆ ಮಾಡಬಾರದು? ಸಂಸ್ಕೃತಿ ಮತ್ತು ಧರ್ಮಗಳನ್ನು ಉಳಿಸುವ ಹೊಣೆ ಮಠ ಸಂಸ್ಥಾನಗಳದ್ದು. ಇದರಿಂದ ಸಮಾಜದ ಉದ್ಧಾರವೂ ಆಗುವುದು ಎಂತಲೇ ಈ ಸಂಸ್ಥೆಯನ್ನು ಪೋಷಿಸಿಕೊಂಡು ಬರಬೇಕೆಂದೂ, ಇದನ್ನು ಭಾರತ ಪ್ರಸಿದ್ಧ ಮಾಡಬೇಕೆಂದೂ ಅವರೊಡನೆ ವಿನಮ್ರನಾಗಿ ವಿನಂತಿಸುತ್ತೇನೆ ಶಕ್ತಿಯಿದ್ದವರು ಇಂತಹ ಕೆಲಸ ಮಾಡದೆ ಹೋದರೆ ಇನ್ನಾರು ತಾನೇ ಮಾಡಬೇಕು?

ಇಂದಿನ ಜುಗವನ್ನು ವಿಜ್ಞಾನ ಯುಗ ಎನ್ನುತ್ತಾರೆ ವಿಜ್ಞಾನ ಯುಗದ ನಾನಾ ಸೌಕರ್ಯಗಳಿದ್ದರೂ ನಮಗೆ ಮಾನಸಿಕ ಸುಖವೆಂಬುದಿದೆಯೆ? ಇಲ್ಲ; ಆತ್ಮ ಸುಖವೆಂಬುದು ಇಲ್ಲವೇ ಇಲ್ಲ ಶಾಂತಿ ಹರದಾರಿ ದೂರ ಯಾವ ಮಾರುಕಟ್ಟೆಯಲ್ಲೇ ಆಗಲೀ ಲಕ್ಷಾಂತರ ಡಾಲರ್ ಕೊಡುತ್ತೇವೆ ಎಂದರೂ ಸುಖ ಶಾಂತಿಗಳು ದೊರೆಯಲಾರವು. ಮಾನಸ ಸರೋವರದ ಮರಳಿನಷ್ಟಾದರೂ ಸಾಕು, ನಮ್ಮ ಧರ್ಮವನ್ನು ನಾವು ಅರಿತ ಕೊಂಡರೆ. ಇದು ಲಭ್ಯವಾಗಿದೆ ದಿನನಿತ್ಯ ಐದು ನಿಮಿಷ ದೇವ ಪ್ರಾರ್ಥನೆ ಮಾಡಿರಿ ಆಗ ಶಾಂತಿಯೂ ಸುಖವೂ ನಿಮಗೆ ಖಂಡಿತ ದೊರೆಯುವುದು. ವಿಜ್ಞಾನದ ಪುಸ್ತಕಗಳನ್ನು ಓದಿ ತಲೆ ಬಿಸಿಯಾದೀತೇ ಹೊರತು ಈ ಶಾಂತಿ ಸಿಗಲಾರದು

ಶಾಂತಿಬೇಕೆಂದು ಅಶಾಂತಿ ಹರಡಿಸುವ ಈ ಕಾಲದಲ್ಲಿ ನಿಜ ಶಾಂತಿಬೇಕಾದರೆ, ವೈದಿಕ ಧರ್ಮವನ್ನು ಬೋಧಿಸುವ ಸಂಸ್ಕೃತ ಭಾಷಾಭ್ಯಾಸಬೇಕು ಈ ಬಗ್ಗೆ ಶ್ರಮಿಸುತ್ತಿರುವ ಸ್ವಾಮಿಗಳವರೊಡನೆ ಸಮಾಜದವರೂ ಸಹಕರಿಸಬೇಕು. ಹೀಗಾದರೆ ಮಾತ್ರ ಭಾರತೀಯ ಸಂಸ್ಕೃತಿ ಉಳಿಯಬಲ್ಲುದು. ಈ ಉದ್ದೇಶದಿಂದ ಬೆಳೆಸಿದ ಈ ಸಂಸ್ಥೆಯಲ್ಲೇ ಸಂಸ್ಕೃತಾಭ್ಯಾಸವನ್ನು ವಿದ್ಯಾರ್ಥಿಗಳು ಮುಗಿಸದೆ, ಸಾಹಿತ್ಯ ವಿಮರ್ಶಾದಿಗಳನ್ನೂ ಓದಿ ಮುಂದುವರಿಯಬೇಕು ಇದರಿಂದ ಆತ್ಮ ಸುಖ, ಆತ್ಮ ಶಾಂತಿಗಳು ದೊರೆಯುವುವು ಬಹು ಶಾಲಿಗಳಾದ ಆಡಳಿತ ಮಂಡಳಿಯವರ ಕೈಯಲ್ಲಿ ಈ ಸಂಸ್ಥೆಯಿರುವುದೂ ಇಲ್ಲಿ ಜ್ಞಾನಸಂಪನ್ನರಾದ ಪ್ರಾಧ್ಯಾಪಕರಿರುವುದೂ ಸಂತೋಷದ ವಿಷಯ. ಈ ಕಾಲೇಜ್ ಉತ್ತರೋತ್ತರಾಭಿವೃದ್ಧಿಯಾಗಲೆಂದು ಹಾರೈಸುತ್ತೇನೆ.

(ಉಡುಪಿ ಸಂಸ್ಕೃತ ಕಾಲೇಜಿನ ವರ್ಧಂತ್ಯುತ್ಸವದ ಅಧ್ಯಕ್ಷಸ್ಥಾನದಿಂದ ಡಿಸ್ಟ್ರಿಕ್ಟ್ ಮುನ್ಸೀಫ್ ಶ್ರೀ ಜಿ ಎಸ್ ನಾಗಮೋತಿ ಅವರು ಮಾಡಿದ ಭಾಷಣದ ಸಾರ)

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

NAVAYUGA WEEKLY

(Estd in 1921)

ADVERTISEMENT RATES

Display Advertisements— Rs. 2-8/ per column inch for contracts of 100" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to
ADVERTISEMENT MANAGER,
'NAVAYUGA'
Post Box No 22, UDIPI, S. K.

ಭಾವಕಥೆ

ನಾಲ್ವರೂ ಕಲಾಕಾರರು!

ನಾಲ್ಕು ಮಕ್ಕಳೂ ತಮ್ಮ ಆಟವಾಡಿ ಮುಗಿದ ನಂತರ ದಟ್ಟವಾಗಿ, ಹಸಿರಾಗಿ, ಹುಲುಸಾಗಿ ಬೆಳೆದ ಹುಲ್ಲಿನ ಮೇಲೆ ಕುಳಿತು ತಮ್ಮ ಮುಂದಿನ ಬಾಳುವೆಯ ಬಗ್ಗೆ ಮಾತಾಡಿಕೊಳ್ಳತೊಡಗಿದರು

ಅವರಲ್ಲಿ ಒಬ್ಬ ಹುಡುಗನು— "ನಾನು ದೊಡ್ಡವನಾದಾಗ ಸುಂದರ ಕವಿತೆಗಳನ್ನು ರಚಿಸಿ ವಿದ್ವಾಂಸರೂ ತಲೆದೂಗುವಂತಹ ಕವಿಯಾಗುತ್ತೇನೆ" ಎಂದನು.

ಎರಡನೆಯ ಹುಡುಗನು— "ನಾನು ದೊಡ್ಡವನಾಗಿ ಒಬ್ಬ ವಿಖ್ಯಾತ ಚಿತ್ರಗಾರನಾಗುತ್ತೇನೆ. ನನ್ನ ಚಿತ್ರಸಂಗ್ರಹವನ್ನು ನೋಡಿ ಎಲ್ಲರೂ ಬೆರಳು ಕಚ್ಚಬೇಕು" ಎಂದನು

ಕೂಡಲೇ ಮೂರನೆಯವನು—"ನಾನು ಓರ್ವ ಶಿಲ್ಪಿಯಾಗಬಯಸುತ್ತೇನೆ. ನನ್ನಿಂದ ಕಡೆಯಲ್ಪಟ್ಟ ಪ್ರತಿಯೊಂದು ಮೂರ್ತಿಯನ್ನು ಕಂಡು ಜನರು ವಾಹ್ ವಾಹ್ ಎನ್ನಬೇಕು" ಎಂದ

ನಾಲ್ಕನೆಯವಳು ಒಬ್ಬ ಸುಂದರಿಯಾದ ಹುಡುಗಿ ಆಕೆಯ ಹೆಸರು ಸುಂದರಿ ಎಂದೇ. ಅವಳು ತನ್ನ ಮಿತ್ರತ್ರಯರೊಡನೆ—"ನಾನು ನಿಮ್ಮ ಭಾವೀ ಜೀವನದ ಮಾರ್ಗದಲ್ಲಿ ನಿಮ್ಮೊಡನಿದ್ದು ಸಹಕರಿಸುತ್ತೇನೆ. ನಿಮ್ಮ ಪ್ರತಿಯೊಂದು ನಿಶ್ಚಯವನ್ನೂ ಪೂರೈಸಲು ನಾನೂ ಪ್ರಯತ್ನಿಸುತ್ತೇನೆ" ಎಂದಂದಳು

ಆ ಮೂವರು ಬಾಲಕರೂ ತಮ್ಮ ಮುಂದಿನ ಜೀವನದ ಆಶೆಯಲ್ಲಿ ಕರ್ತವ್ಯ ಬದ್ಧರಾಗಿದ್ದರು ಅವರು ರಾತ್ರಿಯನ್ನು ರಾತ್ರಿಯೆಂದೂ, ಹಗಲನ್ನು ಹಗಲೆಂದೂ ತಿಳಿಯದ, ತಮ್ಮ ಭಾವೀ ಜೀವನ ಮಾರ್ಗದಲ್ಲಿ ನಿಶ್ಚಿತರಾಗಿ ಮುನ್ನಡೆಯುತ್ತಾ ಹೋದರು. ಅವರ ಮನಸ್ಸಿನ ಧ್ಯೇಯ ಮತ್ತು ಆಶಯ ಸುಂದರಿಯ ವಿನಃ ಇವೆ

(೮ನೇ ಪುಟ ನೋಡಿರಿ)

Notice

In the Court of the Special Assistant Commissioner (Tenancy) Mangalore

O P No 764/59.

Sundari Shedthi ... Petitioner.

and

Narayana Shetty & another ... Respondent.

To the 2nd respondent Shekhara Shetty, son of Cheenka Shetty, residing at Achibettu of Neere village, Karkala Taluk, Post Bailur.

Please take notice that the above application filed by the petitioner for possession of the properties enjoyed by you on chalgeni, stands posted for hearing on 7—9—1959 On your failure to appear in person or by pleader in the said court at Karkala at 11 A. M. on that date the matter will be proceeded exparte.

(By order)

P Vittaldas Hegde,
Advocate for petitioner

Karkala, Dated 22-8-1959

ನವು ಭಾರತಕ್ಕೆ ತುಂಬಿಬಾರದ ನಷ್ಟವಾಗಿದೆ. ಸಂಯುಕ್ತ ರಾಷ್ಟ್ರ ಸಂಘದಲ್ಲಿಯೂ ಭಾರತದ ಪ್ರಸಿದ್ಧಿಯ ಬಗ್ಗೆ ಇವರು ಅಮಿತ ಸೇವೆ ಸಲ್ಲಿಸಿರುತ್ತಾರೆ. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿಯೂ ದುಡಿದಿದ್ದಾರೆ. ರಾಜ್ಯ ಪುನರ್ಘಟನಾ ಆಯೋಗದ ಅಧ್ಯಕ್ಷರಾಗಿ ಇವರು ಮಾಡಿದ ಕಾರ್ಯವನ್ನು ಮರೆಯುವಂತಿಲ್ಲ. ದಿವಂಗತರ ಆತ್ಮಕ್ಕೆ ಚಿರ ಶಾಂತಿಯನ್ನು ಬಯಸಿ ಅವರ ಬಂಧು ಮಿತ್ರರ ಅನುತಾಪದಲ್ಲಿ ನಾವೂ ಸಹ ಭಾಗಿಗಳಾಗುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ಆಹಾರ ಮಂತ್ರಿಯ ರಾಜಿನಾಮೆ

ಕೇಂದ್ರ ಆಹಾರ ಮಂತ್ರಿ ಶ್ರೀ ಅಜಿತ ಪ್ರಸಾದ ಜೈನರು ತನ್ನ ಹುದ್ದೆಗೆ ರಾಜಿನಾಮೆಯನ್ನಿತ್ತಿದ್ದು ಅದನ್ನು ಪ್ರಧಾನಿ ನೆಹರೂ ಸ್ವೀಕರಿಸಿದ್ದಾರೆ. ಈ ತೆರವಾದ ಸ್ಥಾನಕ್ಕೆ ದಕ್ಷಿಣ ಭಾರತದ ಓರ್ವ ಮಂತ್ರಿ ಯಾಗಲೀ ಮಾಜಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್. ದೇಬರರಾಗಲೀ ಬರುವ ನಿರೀಕ್ಷೆಯಿದೆ. ಆದರೆ, ಆಹಾರ ಶಾಖೆಯನ್ನು ಶ್ರೀ ಎಸ್. ಕೆ. ಪಾಟೀಲರು ನೋಡಿಕೊಳ್ಳುವರೆಂದೂ ಹೇಳಲಾಗುತ್ತಿದೆ. ಅಂತಿಮ ನಿರ್ಧಾರವಿನ್ನೂ ಆಗಿಲ್ಲ.

ನಂಗಲ್ ಕಟ್ಟೆ ಒಡೆಯಿತು

ವಿಪರೀತ ನೆರೆ ಬಂದುದರಿಂದ ನಂಗಲ್ ಅಣೆಕಟ್ಟಿನ ಕೆಳಗಿನ ಭಾಗವು ಒಡೆದು ಹೋಗಿ ತೀವ್ರ ನಷ್ಟ ಸಂಭವಿಸಿದೆ. ಕೆಳಗಿದ್ದ ವಿದ್ಯುದಾಗಾರವೂ ನಷ್ಟವಾಗಿರುವುದಲ್ಲದೆ ೫೦ ಲಕ್ಷ ರೂಪಾಯಿ ಬೆಲೆಬಾಳುವ ಒಂದು ಯಂತ್ರವೂ ನೀರಲ್ಲಿ ಕೊಚ್ಚಿಹೋಗಿದೆ ಎಂದು ಗೊತ್ತಾಗಿದೆ. ಇದರಿಂದಾಗಿ ೧೦ ಜನರು ಸತ್ತಿರುವರೆಂದೂ ನಿಜವಾಗಿ ಸಂಭವಿಸಿದ ನಷ್ಟವೆಷ್ಟು ಎಂಬುದೂ ಸರಿಯಾಗಿ ತಿಳಿದುಬಂದಿಲ್ಲ. ಅಣೆಕಟ್ಟಿನ ಕೆಳಗೆ ೧೨೦೦ ಅಡಿಗಳಿಗೂ ಮಿಕ್ಕಿ ನೀರು ನಿಂತಿದ್ದು ಹಾನಿಯ ಪ್ರಮಾಣ ಊಹನೆಗೂ ನಿಲುಕುವಂತಿಲ್ಲ.

ಟಿಬೇಟಿಗೆ ಬರಬೇಡಿ

ಟಿಬೇಟಿನ ಬಂಡುಗಾರರನ್ನು ಅಡಗಿಸಲು ಚೀನವು ಮಿಲಿಟರಿ ಸಹಾಯವನ್ನು ಪಡೆದುಕೊಂಡಿದೆ. ಮಾತ್ರವಲ್ಲದೆ, ಈ ಸಮಯದಲ್ಲಿ ಭಾರತೀಯರು ಟಿಬೇಟಿಕ್ಕೆ ಯಾವುದೇ ಕಾರಣದಿಂದ ಬರುವುದು ಭದ್ರತೆಯ ದೃಷ್ಟಿಯಿಂದ ಒಳಿತಲ್ಲವೆಂದೂ, ಒಂದುವೇಳೆ ಯಾರಾದರೂ ಬಂದರೆ, ಅವರು ಸ್ವಂತ ಹೊಣೆಗಾರಿಕೆಯಿಂದ ಬಂದಂತಾಗುವುದರಿಂದ, ಅಂತಹರ ವಿಪತ್ತಿಗೆ ವಿಪತ್ತುಗಳಿಗೆ ಅವರೇ ಜವಾಬುದಾರರಾಗುವರೆಂದೂ ಚೀನೀ ಸರಕಾರ ಆದೇಶವಿತ್ತಿದೆ.

ಮಲಯದ ಹೊಸ ಸರಕಾರ

ಮಲಯ ಪ್ರಜಾರಾಜ್ಯದಲ್ಲಿ ಚುನಾವಣೆಗಳು ನಡೆದು ಸರಕಾರಿ ಪಕ್ಷವಾದ ಮಲಯಾ ಮಹಾ ಮಂಡಳದ ಸಂಯುಕ್ತ ಪಕ್ಷವು ಪುನಃ ಗೆದ್ದು ಬಂದಿದೆ. ಶ್ರೀ ಟಂಕು ಅಬ್ದುಲ್ ರಹಿಮಾನರ ಪ್ರಧಾನಿತನದಲ್ಲಿ ೧೧ ಜನರ ಮಂತ್ರಿ ಮಂಡಳವು ಪ್ರತಿಜ್ಞೆ ಸ್ವೀಕರಿಸಿದೆ. ಈ ಮಂತ್ರಿ ಮಂಡಳಿಯಲ್ಲಿ ಇರ್ವರು ಚೀನೀಯರೂ ಒಬ್ಬ ಭಾರತೀಯನೂ ಇರುವರು.

ಅಲ್ಲಲ್ಲಿಯ ಸುದ್ದಿ ಸಾರ

ಕಾಂಗ್ರೆಸ್ ಸದಸ್ಯರಿಂದ ಪರಿಶೀಲನೆ—ದ. ಕ. ಜಿಲ್ಲೆಯಲ್ಲಿ 1958ನೇ ವರ್ಷದಲ್ಲಿ ಬೇರೆ ಬೇರೆ ಮಂಡಲ ಪ್ರದೇಶದಲ್ಲಿ ಮಾಡಲ್ಪಟ್ಟ ಕಾಂಗ್ರೆಸ್ ಪ್ರಾಥಮಿಕ ಮತ್ತು ಸಕ್ರಿಯ ಸದಸ್ಯರ ಪಟ್ಟಿಯು ಆಯಾಯ ಮಂಡಲಗಳ ಆಫೀಸುಗಳಲ್ಲಿಯೂ ಅಧಿಕಾರಿವರ್ಗದವರೊಡನೆ ಇರುತ್ತದೆ. ಈ ಪಟ್ಟಿಯು ಇದೇ ತಾ 31ರಿಂದ ಸಾರ್ವಜನಿಕರ ಪರಿಶೀಲನೆಗಾಗಿ ತೆರೆದಿಡಲಾಗುವುದು. ಜಿಲ್ಲಾ ಕಾಂಗ್ರೆಸ್ ಸಮಿತಿ ಆಫೀಸಿನಲ್ಲಿಯೂ ಇಡೀ ಜಿಲ್ಲೆಯ ಪಟ್ಟಿಯು ಪ್ರಕಟಿಸಲ್ಪಡುವುದು. ಈ ಪಟ್ಟಿಗಳ ಪರಿಶೀಲನೆ ನಡೆಸಿ, ಆಕ್ಷೇಪಗಳೇನಾದರೂ ಇದ್ದರೆ ಅವನ್ನು ತಾ.15-9-59ರೊಳಗೆ ಜಿಲ್ಲಾ ಕಾಂಗ್ರೆಸ್ ಸಮಿತಿ ಆಫೀಸಿಗೆ ಅಥವಾ ಆಯಾಯ ಮಂಡಲ ಆಫೀಸಿಗೆ ತಿಳಿಸತಕ್ಕದ್ದು. ತಾ. 30-9-59ರಲ್ಲಿ ಜಿಲ್ಲಾ ಪರಿಶೀಲನಾ ಸಮಿತಿಯು ಈ ಆಕ್ಷೇಪಗಳನ್ನು ಪರಿಶೀಲಿಸಿ ನಿರ್ಣಯ ಕೊಡುವುದು. ಈ ನಿರ್ಣಯದ ಕುರಿತು ಅಪೀಲು ಇದ್ದಲ್ಲಿ ತಾ. 10-10-59ರೊಳಗೆ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗೆ ಕಳುಹಿಸತಕ್ಕದ್ದು. ತಾ. 25-10-59ಕ್ಕೆ ಪ್ರದೇಶ ಪರಿಶೀಲನಾ ಸಮಿತಿಯು ತನ್ನ ನಿರ್ಧಾರವನ್ನೀಯುವುದು. ತಾ. 30-10-59ರಲ್ಲಿ ಕೊನೆಯದಾಗಿ ಪಟ್ಟಿಯು ಪ್ರಕಟಿಸಲ್ಪಡುವುದು ಎಂದು ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಸಾಲಿಗ್ರಾಮ— ಇಲ್ಲಿಯ ಸಂಸ್ಕೃತ ಪಾಠಶಾಲೆಯ ವರ್ಧಂತ್ಯುತ್ಸವವೂ ಶಾಲಾ ಸಮಿತಿಯ ವಾರ್ಷಿಕೋತ್ಸವವೂ ತಾ. 18ರಂದು ಶ್ರೀ ಕೆ. ಸಂಜೀವ ಭಟ್, ಎಂ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಮಿತಿಯ ಅಧ್ಯಕ್ಷರು ಸ್ವಾಗತಿಸಿದ ಮೇಲೆ ಕಾರ್ಯದರ್ಶಿಗಳು ವರದಿಯನ್ನು ಓದಿದರು. ಶಾಲಾ ಮುಖ್ಯ ಉಪಾಧ್ಯಾಯರು ಶಾಲಾ ವರದಿಯನ್ನು ಓದಿದ ಬಳಿಕ ಸಭಿಕರ ಭಾಷಣ, ವಿದ್ಯಾರ್ಥಿಗಳಿಂದ ನಾಟಕಾಭಿನಯಗಳಾದುವು. ಅಧ್ಯಕ್ಷರು ಸಂಸ್ಕೃತ ಭಾಷೆಯ ಮಹತ್ವವನ್ನು ವಿವರಿಸಿ ಭಾಷಣವಿತ್ತು ಬಹುಮಾನ ವಿತರಣೆ ಮಾಡಿದರು.

ಮರುದಿನ ಪಾಠಶಾಲೆಯ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಶ್ರೀ ಕೆ. ಶ್ರೀನಿವಾಸ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿದಾಗ ಅಧ್ಯಕ್ಷರಿಗೆ ಮಾನಪತ್ರವನ್ನೂ ರೂ. 801ರ ನಿಧಿಯನ್ನೂ ಅರ್ಪಿಸಲಾಯಿತು. ಬಳಿಕ ಭಾಷಣ, ನಾಟಕ ಪ್ರದರ್ಶನಗಳಾದುವು.

ದ ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಪರಿಷತ್ತು—ಮಾನ್ಯ ವಿದ್ಯಾ ಇಲಾಖಾಧಿಕಾರಿಗಳಿಂದ, ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸಂಬಂಧಪಟ್ಟಿರುವ ವ, ಇತ್ತೀಚೆಗೆ ಅಕಾಲದಲ್ಲಿ ಕೊಡೋಣಾದ ಹಲವು ಹುಕುಂಗಳಲ್ಲಿ—ಅಧ್ಯಾಪಕರ ಒಪ್ಪೊತ್ತಿನ ರಜೆ, ಶಾಲಾ ರಜೆಗಳು, ಮತ್ತು ಅಧ್ಯಾಪಕ—ವಿದ್ಯಾರ್ಥಿ ದಾಮಾಶಯ, ತರಗತಿಗಳ ವಿಭಜನೆ, ಶಿಕ್ಷಕರ ನೇಮಕ, ಅವರ ಶಾಲಾ ಬದಲಾವಣೆ—ಇತ್ಯಾದಿ ಹೊಸ ವಿಧಾನಗಳಿಂದ ನಮ್ಮ ಜಿಲ್ಲೆಯಲ್ಲಿ ವಿದ್ಯಾಪ್ರಚಾರ, ಶಾಲಾಭಿವೃದ್ಧಿ ಮತ್ತು ಸಾವಿರಗಟ್ಟಲೆ ನಿರುದ್ಯೋಗಿಗಳಾಗಿರುವ ತರಬೇತಾದ ಅಧ್ಯಾಪಕರ ನೇಮಕಕ್ಕೆ ಸಹ ತಡೆಯುಂಟಾಗಿ, ಖಾಸಗಿ ಶಾಲೆಗಳಲ್ಲಿ ಗೊಂದಲಕ್ಕೆಡೆಯುಂಟಾಗಿರುವುದಷ್ಟು!

ಪ್ರಚಲಿತ ವಾತಾವರಣಕ್ಕನುಸರಿಸಿ ಖಾಸಗಿ ಶಾಲಾ ಮೆನೇಜರರ ಸಂಘಟನೆಯು ಅತ್ಯಗತ್ಯವಾಗಿರುವುದರಿಂದ ಜಿಲ್ಲಾ ಸಂಘ ಸ್ಥಾಪನೆ, ನಿಧಿ ಸಂಚಯ ಮೊದಲಾದ ವಿಚಾರಗಳನ್ನು ಪರ್ಯಾಲೋಚಿಸುವರೇ ಇದೇ ತಾ. 30-8-59ನೇ ರವಿವಾರ ಮೆನೇಜರರ ಪರಿಷತ್ತನ್ನು ಉಡುಪಿಯಲ್ಲಿ ಮುನಿಸಿಪಲ್ ಮಹಾತ್ಮಾ ಗಾಂಧಿ ಎಲಿಮೆಂಟರಿ ಶಾಲೆಯಲ್ಲಿ ಜರಗಿಸುವ ವ್ಯವಸ್ಥೆ ಮಾಡಲಾಗಿದೆ. ಬೆಳಿಗ್ಗೆ ೧೦ ಗಂಟೆಗೆ ವಿಷಯ ನಿಯಾಮಕ ಸಮಿತಿಯ ಸಭೆ ಜರಗುವುದು. ಮಧ್ಯಾಹ್ನ 2 ಗಂಟೆಗೆ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಪರಿಷತ್ತು ಜರಗುವುದು. ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಯವರು ಪರಿಷತ್ತನ್ನು ಉದ್ಘಾಟಿಸುವರು. ಜಿಲ್ಲೆಯ ಎಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರು ಯಾ ಅವರ ಪ್ರತಿನಿಧಿಗಳು ಪರಿಷತ್ತಿಗೆ ದಯಮಾಡಿ ಬರಬೇಕಾಗಿಯೂ, ಸಂಘದ ಸದಸ್ಯರಾಗಬೇಕಾಗಿಯೂ ಕಾರ್ಯದರ್ಶಿ ಕೆ. ಕಾರ್ಕಳ ಗಣಪಯ್ಯ ಶೆಟ್ಟರು ಅಪೇಕ್ಷಿಸುತ್ತಾರೆ

ಸ್ವಾತಂತ್ರ್ಯ ದಿನಾಚರಣೆ— ಮಂಗಳೂರಿನ ಮೂರನೇ ಮಂಡಲ ಕಾಂಗ್ರೆಸ್ ಸಮಿತಿಯ ಆಫೀಸಿನಲ್ಲಿ ಕೌನ್ಸಿಲರ್ ಶ್ರೀ ಪಿ ಎಫ್. ರೊಡ್ರಿಗ್ಸ್ ಇವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಜರಗಿತು. ಶ್ರೀ ಪಿ. ಅಚ್ಯುತ ಪ್ರಭುಗಳು ಸ್ವಾಗತಿಸಿದ ಮೇಲೆ ಶ್ರೀಗಳಾದ ಎಚ್. ಎಮ್. ಭೀಮಪ್ಪ, ಬಿ. ನಾರಾಯಣ ನಾಯ್ಕ ಮೊದಲಾದವರು ಭಾಷಣ ಮಾಡಿದರು. ಅಧ್ಯಕ್ಷರು ಆಟಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಿ ಭಾಷಣ ಮಾಡಿದರು. ಬೆಳಿಗ್ಗೆ ವಿಜಯಲಕ್ಷ್ಮಿ ಗಾರ್ಡನಿನಲ್ಲಿ ಸಾರ್ವಜನಿಕರ ಸಹಾಯದಿಂದ ಸುಮಾರು 300 ಬಡಬಗ್ಗರಿಗೆ ಅನ್ನದಾನ ಮಾಡಲಾಯಿತು.

ಅರ್ಥಶಾಸ್ತ್ರ ಮತ್ತು ಇತಿಹಾಸ ಸಂಘದ ಉದ್ಘಾಟನೆ—ಎಂ. ಜಿ. ಎಂ. ಕಾಲೇಜಿನ ಅರ್ಥಶಾಸ್ತ್ರ ಮತ್ತು ಇತಿಹಾಸ ಸಂಘದ ಉದ್ಘಾಟನೆಯು ಉಡುಪಿ ಲಾ ಕಾಲೇಜಿನ ಪ್ರಾಧ್ಯಾಪಕ ಮತ್ತು ನಗರ ಸಭೆಯ ಉಪಾಧ್ಯಕ್ಷರಾದ ಶ್ರೀ ಪಿ. ರಂಗನಾಥ ಶೆಣೈ ಅವರಿಂದ ತಾ. ೧೯ರಂದು ನೆರವೇರಿತು. ಪ್ರಿನ್ಸಿಪಾಲ್ ಎಚ್. ಸುಂದರರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು. ಉದ್ಘಾಟಕರು 'ಭಾರತದ ಮೂಲಭೂತ ಅಧಿಕಾರ' ಎಂಬ ವಿಷಯದ ಬಗ್ಗೆ ಉದ್ಬೋಧಕ ಭಾಷಣ ಮಾಡಿದರು. ಪ್ರಾರಂಭದಲ್ಲಿ ಸಂಘದ ಉಪಾಧ್ಯಕ್ಷ ಶ್ರೀ ಕು ಶಿ. ಹರಿದಾಸ ಭಟ್ಟರು ಸ್ವಾಗತ ಕೋರಿದರು. ಕೊನೆಗೆ ಕಾರ್ಯದರ್ಶಿ ಶ್ರೀ. ಕೆ. ಸಂಜೀವ ಶೆಟ್ಟಿ ಅವರು ಧನ್ಯವಾದಗಳನ್ನು ಅರ್ಪಿಸಿದರು.

ಸಂಸ್ಕೃತ ಕಾಲೇಜಿನ ವರ್ಧಂತ್ಯುತ್ಸವ—ಉಡುಪಿ ಸಂಸ್ಕೃತ ಕಾಲೇಜಿನ ೫೫ನೆಯ ವರ್ಧಂತ್ಯುತ್ಸವವು ದಿನಾಂಕ ೨೦ರಂದು ಡಿಸ್ಟ್ರಿಕ್ಟ್ ಮುನ್ಸೀಫ್ ಶ್ರೀ ಜಿ. ಎಸ್. ನಾಗಪೋತಿಯವರ ಹಿರಿತನದಲ್ಲಿ ನಡೆಯಿತು. ಆಡಳಿತ ಮಂಡಳಿಯ ಅಧ್ಯಕ್ಷ ಶ್ರೀ. ಪಿ. ವಿ. ಆಚಾರ್ಯರು ಹಾರವನ್ನರ್ಪಿಸಿದರು. ಪ್ರಿನ್ಸಿಪಾಲ್ ಕಾಳಿಂಗ ಶೇಷಾಚಾರ್ಯರು ವರದಿಯನ್ನೋದುತ್ತ ಶಿರೋಮಣಿ ಮತ್ತು ವಿದ್ವಾನ್ ತರಗತಿಗಳ ಬದಲು ಬಿ. ಎ (ಭಾಷಾವಿಷಯಗಳಲ್ಲಿ) ವರ್ಗಗಳನ್ನು ತೆರೆಯುವ ಪ್ರಯತ್ನ ನಡೆಸುತ್ತಿರುವುದಾಗಿ ಹೇಳಿದರು. ಶ್ರೀ ಕೆ. ಶ್ರೀಪತಿ ಭಟ್ಟರು ಸ್ವಸ್ತಿವಾಚನ ಮಾಡಿದ ಮೇಲೆ ಶ್ರೀಗಳಾದ ಪಿ. ರಾಜಗೋಪಾಲ ಶಾಸ್ತ್ರಿ ಮತ್ತು ಪದ್ಮನಾಭ ಭಟ್ಟರು ಉತ್ತರವಿತ್ತರು. ಬಹುಮಾನ ವಿತರಣೆಯ ನಂತರ ಸಮಾರಂಭದಲ್ಲಿ ಉಪಸ್ಥಿತರಿದ್ದ ಶ್ರೀ ಅದಮಾರು ಮಠಾಧೀಶರು ಮಾತನಾಡಿ ಶುಭ ಕೋರಿದರು. ಅಧ್ಯಕ್ಷರು ಸಂಸ್ಕೃತ ಭಾಷೆಯ ಮಹತ್ವವನ್ನು ವಿವರಿಸಿ, ಭಾಷಣವಿತ್ತರು. ಹೈಸ್ಕೂಲ್ ವಿಭಾಗದ ಮುಖ್ಯೋಪಾಧ್ಯಾಯರಾದ ಎಂ. ಎಸ್ ಅನಂತ ಕೃಷ್ಣ ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು. ರಾತ್ರೆ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಸ್ಕೃತ ಮತ್ತು ಕನ್ನಡ ನಾಟಕಗಳೂ ಯಕ್ಷಗಾನವೂ ನಡೆಯಿತು.

ಹರಿದ್ವಾರವತಿಯಲ್ಲಿ— ಸ್ವಾತಂತ್ರ್ಯೋತ್ಸವವು ಡಾ| ಎ. ಎಂ. ವೆಂಕಟೇಶನ್ ಇವರಿಂದ ಧ್ವಜಾರೋಹಣವಾಗಿ ಶ್ರೀ ಎಂ. ಬಿ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಶ್ರೀ ಜಿ. ಪಂಚಾಕ್ಷರಯ್ಯ ಇವರಿಂದ ಸ್ವಾಗತ ಭಾಷಣ, ಮಕ್ಕಳಿಂದ ವಿನೋದಾವಳಿ ಶೇರೆಗಾರ ಕೃಷ್ಣಪ್ಪ ಶೆಟ್ಟಿ ಮತ್ತು ಪಾರ್ಟಿಯವರಿಂದ ಯಕ್ಷಗಾನ ಸಭಿಕರ ಭಾಷಣಗಳೊಂದಿಗೆ ನೆರವೇರಿತು.

ಸಾಮೂರು—ಯು. ಬಿ. ಯಂ. ಸಿ. ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಚಂದ್ರಶೇಖರ ಶೆಟ್ಟಿ, ಕುಂದಾಪುರ ಇವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಜರಗಿತು. ಪಟೇಲ್ ಶ್ರೀ ನಾರಾಯಣ ಉಪಾಧ್ಯಾಯರು ಧ್ವಜಾರೋಹಣ ಮಾಡಿದರು. ಶ್ರೀಗಳಾದ ವಾಸು ಶೆಟ್ಟಿ ಹೆರೂರು ಕುಟ್ಟಿ ಶೆಟ್ಟಿ, ಹಿ. ಮುದ್ದಣ್ಣ ಶೆಟ್ಟಿ, ನಾರಾಯಣ ಉಪಾಧ್ಯಾಯ ಮೊದಲಾದವರು ಭಾಷಣವಿತ್ತರು. ಶ್ರೀ ಜಯರಾಮ ಹೆಗ್ಗಡೆಯವರು ಧನ್ಯವಾದವಿತ್ತರು

ಆಲೂರು— ಶಾರದಾ ಎಲಿಮೆಂಟರಿ ಪಂಚಾಯತ್ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಆಲೂರು ಶ್ರೀನಿವಾಸ ಜೋಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ಧ್ವಜವಂದನೆ ಆಟಪಾಠಗಳಲ್ಲಿ ಗೆದ್ದ ಹುಡುಗರಿಗೆ ಬಹುಮಾನ ವಿತರಣೆ, ಭಾಷಣ ಶ್ರೀ ಆಲೂರು ಲಕ್ಷ್ಮೀನಾರಾಯಣ ಜೋಯಿಸರಿಂದ ಮಕ್ಕಳಿಗೆ ಸಿಹಿತಿಂಡಿ ವಿತರಣೆಗಳಾದ ಮೇಲೆ ಶ್ರೀ ಎ. ಎಸ್. ದತ್ತಾತ್ರೇಯ ಮೂರ್ತಿಯವರು ವಂದನಾರ್ಪಣೆ ಮಾಡಿದರು.

ಪ್ರವಾಹ ಪೀಡಿತರಿಗೆ ಪರಿಹಾರ—ಕಳೆದ ನೆರೆಯ ಆವಾಹನದಿಂದ ಕಷ್ಟಕ್ಕೀಡಾದ ಕುಂದಾಪುರ ತಾಲೂಕಿನ ಬಟ್ಟೆಕುದುರು ಊರಿನ ಸಂಸಾರಿಕರ ನೆರವಿಗಾಗಿ ಸದ್ರಿ ಊರಿನ ಮುಂಬಯಿಯಲ್ಲಿರುವ ಮೊಗವೀರರು ಈಗಾಗಲೇ ರೂಪಾಯಿ 410ನ್ನು ಸಂಗ್ರಹಿಸಿದ್ದಾರೆ. ಊರಿನ 45 ಸಂಸಾರಿಕರೊಳಗೆ ಹಂಚಲ್ಪಡಬೇಕೆಂದು ನಿರ್ಧರಿಸಲಾದ ಈ ನಿಧಿಯನ್ನು ಪ್ರತ್ಯಪ್ರತ್ಯೇಕ ಸಂಸಾರಿಕರಿಗೆ ತಾ. 22-8-59ರಂದು ಮನಿಯಾರ್ಡರ್ ಮೂಲಕ ಕಳುಹಿಸಲಾಗಿದೆ ಎಂದು ಮುಂಬಯಿಯ ಬಟ್ಟೆಕುದುರು ನಿಧಿ ಸಂಗ್ರಹ ಸಮಿತಿಯವರು ತಿಳಿಸುತ್ತಾರೆ.

ಬಿ. ಇ. ಎಸ್. ಟಿ. ವೆಲ್‌ಫೇರ್ ಕ್ಯಾಂಟೀನ್ ನೆರೆ ಸಂತ್ರಸ್ತರ ಸಹಾಯಾರ್ಥ ಸಂಘ: ಮುಂಬೈ—ಮೇಲ್ಕಂಡ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ದಿನಾಂಕ 7—8—1959ರಲ್ಲಿ ಶ್ರೀ ಕೆ. ನರಸಿಂಹ ಶೆಟ್ರ ಅಧ್ಯಕ್ಷತೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚಿನ ಪ್ರವಾಹದಿಂದ ಪೀಡಿತರಾದ ಜನರಿಗೆ ಧನಸಹಾಯ ಮಾಡುವ ಸಲುವಾಗಿ ಸೇರಿತ್ತು.

ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀ ಎನ್. ಆರ್. ಎಸ್. ರಾವ್. ಇವರು ವಿಷಯವನ್ನು ಮಂಡಿಸಿ ಭಾಷಣವಿತ್ತರು ಸಂಘದ ಸದಸ್ಯರು ಒಮ್ಮತದಿಂದ ಒಪ್ಪಿಗೆಯನ್ನಿತ್ತ ನಂತರ ಅಧ್ಯಕ್ಷರು ನಿಧಿ ಸಂಗ್ರಹಕ್ಕಾಗಿ ಪ್ರತಿಯೊಬ್ಬರೂ ಕಟಿಬದ್ಧರಾಗಬೇಕೆಂದರು.

ಮೊವಾಡಿರು ಇಲ್ಲಿನ ಯೂತ್ ಕ್ಲಬ್ಬಿನವರ ಆಶ್ರಯದಲ್ಲಿ ಆಗಸ್ಟ್ 15ರಂದು ಸ್ವಾತಂತ್ರ್ಯ ದಿನಾಚರಣೆಯು ವಿದ್ವಾನ್ ವೆಂಕಟರಾಜ ಪುಣಿಂಚಿತ್ತಾಯರ ಅಧ್ಯಕ್ಷತೆಯಲ್ಲಿ, ಶ್ರಮದಾನ, ಸ್ಪರ್ಧೆಗಳು, ಇತ್ಯಾದಿ ಕಾರ್ಯಕ್ರಮಗಳೊಂದಿಗೆ ನಡೆಯಿತು. ಶ್ರೀ ಸುಬ್ಬಯ್ಯ ಶೆಟ್ಟಿ ಮತ್ತು ಪಾರ್ಟಿಯವರಿಂದ ಪುರಾಣ ವಾಚನವೂ ಜರಗಿತು. ವೈ. ಕೇಶವ ಭಟ್, ಕೃಷ್ಣ ಭಟ್ ಮುಂತಾದವರು ಭಾಷಣವಿತ್ತರು.

ಮಂಗ್ಳೂರು (ಟೆನೆನ್ಸಿ) ಸ್ಪೆಶಲ್ ಅಸಿಸ್ಟಾಂಟ ಕಮಿಶನರ ಕೋರ್ಟಿನಲ್ಲಿ

O. P. No. 864/1959

M. ವಾರಿಜಾಕ್ಷಿ—ಅರ್ಜಿದಾರಳು

ಮತ್ತು

1. ಮೊನಶೆಟ್ಟಿ. ಸೂರುಶೆಟ್ರ ಸೊಸ್ತೆ 2. ದೊಡ್ಡಣ್ಣ ಶೆಟ್ಟಿ. ಶೀನಶೆಟ್ಟಿ ಮಗ. 1ನೆಯವಳು ಕಾರ್ಕಳ ತಾಲ್ಲೂಕು ಕಡಂದಲೆ ಗ್ರಾಮದ ಕಾಂಗ್ರಾಲು, 2ಯವರು C/o K. M. ಶೀನ ಶೆಟ್ಟಿ. ರೈಟರ್ ಮಗ್ಗಜಿ ಹಳ್ಳಿ ಎಸ್ಟೇಟು ದೇವಲದಕೆರೆ ಪೋಸ್ಟು. ಚಿಕ್ಕಮಗಳೂರು—ಎದ್ರಿರು.

ಇವರೊಳಗೆ

ಈ ಮೂಲ್ಕ ಸದ್ರಿ ಎದ್ರಿರಿಗೆ ತಿಳಿಸುವದೇನೆಂದ್ರೆ—

ಅರ್ಜಿದಾರಳು ನೀವು ಚಾಲಗೇಣಿಗೆ ಅನುಭವಿಸುವ ಆಸ್ತಿಯ ಗೇಣಿ ಬಾಕಿ ಇದ್ದು ಆಸ್ತಿ ಸ್ವಾಧೀನತೆ ಬಗ್ಗೆ ದಾಖಲು ಮಾಡಿದ ಮೇಲ್ಕಂಡ ಅರ್ಜಿ ನಿಮ್ಮ ಹಾಜರತಿ ಬಗ್ಗೆ ತಾರೀಕು 7—9—1959ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10ಗಂಟೆಗೆ ನೀವು ಸ್ವತಹಾ ಯಾ ವಕೀಲರ ದ್ವಾರಾ ಮೇಲ್ಕಂಡ ಕೋರ್ಟಿನ ಮುಂದೆ ಕಾರ್ಕಳ ಕೇಂಪಿನಲ್ಲಿ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮನ್ನು ಗೈರ್ಹಾಜರಿ ಮಾಡಿ ಸದ್ರಿ ವ್ಯವಹಾರ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(By order of the Court)

N. M. Adyanthaya,
Advocate for Petitioner.

Karkala, 24—8—1959

ಋತು ವರ್ಣನೆ

ಕವಿವರ ಮುದ್ದಣನು ಕಂಡ ವರ್ಷಾಕಾಲ

ಈ ಶತಮಾನದಾದಿಯಲ್ಲಿ ಪ್ರಕಟಗೊಂಡ ಹಳೆಗನ್ನಡ ಗದ್ಯಕಾವ್ಯ ರಾಮಾಶ್ವಮೇಧದ ಈ ಭಾಗ ಶೀರ ಸೊಗಸಾಗಿದೆ

ಶ್ರೀ ರಾಮನು ಅಶ್ವಮೇಧ ಯಾಗ ಮಾಡಿದ ಕಥೆಯೇ ಶ್ರೀ ರಾಮಾಶ್ವಮೇಧವಾಗಿದೆ. ಆದರೆ, ಮಹಾ ಕವಿ ಮುದ್ದಣ್ಣನ ರಾಮಾಶ್ವಮೇಧವಾದರೂ, ಹಾಗೆ ಕೇವಲ ಕಥೆಯುಷ್ಟೇ ಅಲ್ಲ; ಅದರಲ್ಲಿ ಬರುವ, ಕವಿ, ಮತ್ತು ಕವಿ ಮನೋಹರೆಯಾದ ಮುದ್ದಣ ಮನೋರಮೆಯರ ಸಂವಾದವು ದ್ರಾಕ್ಷಾಪಾಕದಂತೆ, ಅತಿ ಮಧುರವಾಗಿದೆ! ಅದನ್ನೆಷ್ಟೋ ಸಲ ಓದಿ ಓದಿ, ಆನಂದಪಟ್ಟರೂ, ಮತ್ತೂ ಓದಬೇಕೆನಿಸುವಷ್ಟು ಸವಿಯಾಗಿ, ಆ ಸಂವಾದವು; ನಿತ್ಯ ನೂತನವಾಗಿರುವಂತೆ ಭಾಸವಾಗುವುದು. ಮುದ್ದಣನ ಪ್ರಕೃತಿ ವರ್ಣನಾ ವೈಖರಿ, ರಮಣೀಯವಾಗಿದೆ. ವೀರ ಶೃಂಗಾರ, ಕರುಣ, ಭಕ್ತಿ, ಹಾಸ್ಯಾದಿ, ಷಡ್ ರಸಗಳಿಂದ, ಸಮೃದ್ಧವಾದ, ಮುದ್ದಣ್ಣನ ರಾಮಾಶ್ವಮೇಧವು, ಹಳಗನ್ನಡದ ಪೌಢನುಡಿಗಟ್ಟುವಾಗಿ, ರಸ ತುಂಬಿದ ಕಬ್ಬಿನಂತಿರುವುದು!

ಮುದ್ದಣ್ಣನ ವರ್ಷಾಕಾಲದ ವರ್ಣನೆಯನ್ನಷ್ಟೇ ಈಗಿಲ್ಲಿ ನೋಡೋಣ.

ಕಪ್ಪೆಗಳ ಕಿರುಚಾಟಕ್ಕಂಜಿದ ಕೋಗಿಲೆ, ವರ್ಷಾಕಾಲದಲ್ಲಿ ಮೌನವಾಗಿದ್ದು, ಶರತ್ಕಾಲದ ಆಗಮನವನ್ನೇ ಎದುರು ನೋಡುತ್ತಿರುತ್ತದೆ. ಅಂತೆಯೇ ಮುದುಡಿಕೊಂಡು, ಮೌನಿಯಾಗಿದ್ದ, ಕೋಗಿಲೆಯೊಡನೆ, ಕವಿ ಮುದ್ದಣ ಒಂದೆರಡು ಮಾತುಗಳನ್ನಾಡುತ್ತಾನೆ—

"ಎಲೆ! ಕೋಗಿಲೆ! ಮಾಮರದ ರೆಂಬೆಯ ಮೇಲೇಕೆ ಮೌನವಾಗಿ ಕುಳಿತಿರುವೆ? ನಿನ್ನಾ ಮಧುರ ಸ್ವರದಿಂದ ಗಾನ ಮಾಡು! ಆದೇ! ನಿನ್ನ ಕಣ್, ಕೆಂಪಾಗಿರುವುದಲ್ಲ್ ಏಕೆ? ಎಲೆ ಕೋಗಿಲೆ! ನಿನಗಿಂತು ಏತರ ಭಯ? ಅಸ್ಪಷ್ಟವಾದ ಧ್ವನಿಯಿಂದ ನೀನು ಹೇಳುತ್ತಿರುವುದಾದರೂ ಏನು? ಏನು! ಮಾಮರದಲ್ಲಿ ಚಿಗುರೇ ಇಲ್ಲ! ಎನ್ನುವೆಯಾ? ಹಾಗಲ್ಲವೇ? ಹಾಗಾದರೆ ಮತ್ತೇನು? ಕಾಲ ಮರುವನು ಜಡನಾಗಿರುವನೆಂದೆಯಾ? ಹಾಗೆಂದು ಅದನ್ನಾರು ನಿನಗೊರೆದವರು ಇದನ್ನೆಲ್ಲ ತಿಳಿದಿದ್ದೂ ನೀನು ಇಂತು ಮೋನಿಯಾಗಿ ಕುಳಿತಿರುವುದು ಸರಿಯೇ? ಎಲೆಲೆ! ಕೋಗಿಲೆ! ನಿನ್ನೀಪರಿ ಯೋಚಿಸುತ್ತಿರುವೆ? ನಡೆನಡೆ!"

ಇಂತು ಕೋಗಿಲೆಯನ್ನೆತ್ತ ಕಳುಹಿಸಿದ ಕವಿ, ಇತ್ತ ಚಂದದ ಗಿಳಿಯ ಮಾತಿಗೆ ಕಿವಿಗೊಡುತ್ತಾನೆ. ಕೊನೆಗೆ ಗಿಳಿಗೆ ಒಂದು ಶಾಪವನ್ನೂ ಕೊಟ್ಟೇ ಬಿಡುತ್ತಾನೆ!

"ಎಲಾ! ಇದೇನು? ಗಿಳಿಯೊಂದು ಏನೋ ಮಾತನಾಡುತ್ತಿರುವುದಲ್ಲ? ಏನೆಂದು ಕೇಳುವೆ—ಎಲೆ ಪಂಡಿತಪಕ್ಕಿ! ನಿನಗೀ ಹೆಸರನ್ನಿಟ್ಟವರಾರು? ನೀನು ಪಂಡಿತ ಪಕ್ಕಿಯಾಹುದಾದರೆ, ಜಲೋದರಕ್ಕೆ ಔಷಧವೇನು? ಹೇಳು ನೋಡುವ! ಅಂ? ಏನು? ಅದಕ್ಕೆ ಮಾವಿನ ಹಣ್ಣೇ ಮದ್ದು! ಎನ್ನುವೆಯಾ? ಪ್ರಶ್ನೆಗುತ್ತರ ಕೊಡದೆ ಏಕೆ ಸುಮ್ಮನಿರುವೆ? ನಿನಗ ನೂಕ್ತು ಉಕ್ತಿಯೇ! ಕಾತರದಲ್ಲಿ ಕೂರದೆ, ಮಾತನಾಡಿಸಿದವರಲ್ಲಿ ಮಾತನಾಡದೆ, ಇರುವ ನಿನಗೆ, ಪವನಾಶನನೇ ಪ್ರಾಪ್ತನಾಗಲಿ! ಜನರ ಕೈಗೆ ಸಿಕ್ಕಿದೊಡನೆ ನಿನಗೆ ಬಂಧನ ಪ್ರಾಪ್ತವಾಗಲಿ! ಹಾಗೆ, ಬಂಧನಕ್ಕೊಳಗಾಗಿ ಪಂಜರದಲ್ಲಿದ್ದ ನಿನಗೆ, ಬೆಕ್ಕಿನ ಮೂಲಕ, ಸಾವು ಉಂಟಾಗಲಿ! ಇದು ನಿನಗೆನ್ನ ಶಾಪ! ನಿನಗೆ ಪಂಡಿತಪಕ್ಕಿಯೆಂಬ ಹೆಸರಿಟ್ಟ ಆ ವಸಂತನಿಗೆ ಧಿಕ್ಕಾರವಿರಲಿ!" ಇಂತು, ಕವಿ, ಯು, ಚೆಲುಗಿಳಿಗೆ ಸಹಜವಾದ ಶಾಪಕೊಡುತ್ತಿರುವಾಗಲೇ ಇತ್ತ ಶಕುನಪಕ್ಕಿಯೊಂದು 'ಭದ್ರಂ ಭೂಫಾ! ಮಂಗಳಂ!' ಎಂಬಂತೆ, ಶುಭಶಕುನ ಹೇಳಿತಂತೆ!

ವರ್ಷಾಗಮನದ ಮುನ್ಸೂಚನೆಯಂತೆ ಬರುವ ಬಡಗಿನ ಗಾಳಿ, ಬೀಸುವಿಕೆಯನ್ನು ಕುರಿತು ಕವಿಯ ವರ್ಣನೆ, ವಿಸ್ತಾರವಾಗಿದೆ.

"ವೇಶ್ಯೆಯರ ಕೇರಿಯಲ್ಲಿದ್ದ—ತುಂಬು ಜವ್ವನೆಯರ ಸೆರಗನ್ನು ಹಾರಿಸಿ, ಅವರ ಕೋಮಲಾಂಗದ ಸುತ್ತ ಸುತ್ತಿ ಸುಳಿದು, ತೋರ ಮೊಲೆಗಳನ್ನು ಸ್ಪರ್ಶಿಸಿ, ಮತ್ತೆ ಸಿಡಿಲಾಂಕಿ ಬಳಿಕ ಹಾವಿನೋಪಾದಿಯಲ್ಲಿ ಜಾರಿಹೋಗಿ ನೀರೆಯರ ಕೆರೆಯೊಳಗೆ ಸೇರಿ, ಕೈಯ್ಯಡಿ ಕಾಲುವೆಗಳಲ್ಲಿ, ಸಂದುಗೊಂದುಗಳಲ್ಲಿ ತೂರಿ, ಸುಳಿದಾಡಿ, ಸಂಚರಿಸುತ್ತ ಅಕ್ರಮವಾಗಿ ವರ್ತಿಸಿ, ಶ್ರೀಖಂಡದಂತಹ ಕೊಳೆ ಕೆಸರಲ್ಲಿ ಕಾಲ್ಜಾರಿ ದಂತಾಗಿ ಮಾಲೆಗಾತಿಯರ, ಕೈಗಳ ಮೇಲೆ ಹತ್ತಿ, ಹೂಮಾಲೆಗಳನ್ನಲುಗಾಡಿಸಿ, ಆ ಲತಾಂಗಿಯರ ಲತಾಂಗವನ್ನು ಕುಲುಕಿಸಿ, ಬೀಸುತ್ತಿದ್ದ, ದಕ್ಷಿಣಾನಿಲನ ಈ ಅಕ್ರಮದ ನರ್ತನ ನಡೆಯುತ್ತಿರಲು, ಇತ್ತ ಪಶ್ಚಿಮದ ಗಾಳಿ ಬೀಸಿತು. ಮೊಲ್ಲೆ ಮಲ್ಲಿಗೆ ಜಾಜಿಯೇ ಮೊದಲಾದ ಪುಷ್ಪಲತಾ ಸಮೂಹ ಚಿಗುರುತ್ತ, ಸುಮಗಳ ಮುಗುಳುಗಳಾಗಿ, ಮುಗುಳುಗಳರಳುತ್ತ ಸುಂದರವಾಗಿ ಶೋಭಿಸಿ, ನವಚೇತನ ಪಡೆದಂತೆಸೆದುವು!

ಅಷ್ಟರಲ್ಲಿ ಆಕಾಶವು ಕಾರ್ಮೋಡಗಳಿಂದ ತುಂಬುತ್ತಿರುವುದನ್ನು ಕಂಡ ಕವಿ, ಅದನ್ನು ಅಲಂಕಾರಿಕವಾಗಿ ಹೇಳುತ್ತಾನೆ-

"ಎಲಲಾ! ಪಶ್ಚಿಮದಿಕ್ಕಿನಲ್ಲಿ ಹೊಗೆಯೇಸಿದೆ? ಕಡಲಿಂದ ಹುಟ್ಟಿದ ವಡಬಾಗ್ನಿ ಗಾಳಿಯಿಂದ ಉರಿದೆದ್ದು ಗುಡ್ಡ ಬೆಟ್ಟಗಳನ್ನು ಸುಡುತ್ತಿರುವುದರಿಂದಲೇ ಈ ಹೊಗೆ ಬಂದಿರಬೇಕು! ಓ....ಓ...ತಪ್ಪಿದೆ! ಇದು ಹೊಗೆಯಲ್ಲ! ನನಗೂ ಹುಚ್ಚು; ಅಲ್ಲದಿದ್ದರೆ, ನೀರಿನಲ್ಲಿ ಬೆಂಕಿಯೆದ್ದೀತೆಂಬ ಕಲ್ಪನೆ ಬಂದೀತೇ? ಹಾಗಾದರೆ ಇದೇನು ಹೊಗೆ? ಒಂದು ಅಪಾಯದ ಸಂದರ್ಭದಲ್ಲಿ ಸಾಗರದ ಮರೆಹೊಕ್ಕ ವಿಂಧ್ಯಾದಿಪರ್ವತಗಳು, ಇಂದು ತಮ್ಮ ಪೂರ್ವವೈರವನ್ನು ಸಾಧಿಸಿ, ಸ್ವರ್ಗಕ್ಕೆ ಧಾಳಿಯಿಡಲು, ಹೊರಟಿರುವುವೋ? ಎಂಬಂತೆ, ಆಕಾಶವು, ಕಪ್ಪಾದ ಹೊಗೆಯಂತಹ ಕಾರ್ಮೋಡಗಳಿಂದ, ಕವಿಯಿತು! ಕಾಲನೆಂಬ ರಕ್ಕಸನು, ಕಪ್ಪಾದ ಹೊದಿಕೆಯಂತೆ, ಆಕಾಶವು, ಕಾರ್ಮೋಡಗಳಿಂದ ತುಂಬಿ, ಭಯಂಕರವಾಯಿತು! ಬಳ್ಳಿ ಮಿಂಚು ಮಿಂಚಿ, ಝಗ್ ಝಗನೆ, ಕಣ್ಣು ಕುಕ್ಕಿದಂತಾಯಿತು!

ಇದಿಷ್ಟು ಪೂರ್ವಸಿದ್ಧತೆಯಾದಬಳಿಕ, ಧಾರಾಕಾರವಾಗಿ ಮಳೆ ಸುರಿಯಲಾರಂಭಿಸಿದುದನ್ನು ಕವಿ, ಸುಂದರವಾದ ವರ್ಣನೆಯೊಂದಿಗೆ, ಸೇರಿಸುತ್ತಾನೆ--

ದೇವರಾಜನ ಮದಗಜಗಳು, ಬೇಸಿಗೆಯ ಬಿಸಿಲತಾಪಕ್ಕೆ ಬಳಲಿ ಬೆಂಡಾಗಿ, ಬಾಯಾರಿ, ಸಮುದ್ರವನ್ನು ಕಂಡು, ಹಿಂಡು ಹಿಂಡಾಗಿ ಹೋಗಿ, ಮನದಣಿಯೆ ಜಲವನ್ನು ಹೀರಿ ಹೀರಿ, ಹೊಟ್ಟೆತುಂಬಿ, ತಣ್ಣಗಾಗಿ, ಶೀತವಾಗುವವರೆಗೂ, ಕುಡಿ ಕುಡಿದು, ಉಲ್ಲಾಸದೊಡನೆ ಮರಳುವ ವೇಳೆಯಲ್ಲಿ ಕೂಗಾಡುತ್ತ ಕೈಕುಣಿಯುತ್ತ ಕೋರೆದಾಡೆಗಳನ್ನು ಝಗ್ಗನೆ ಝಳಪಿಸುತ್ತ ಹೋಗುವಾಗ, ತಂತಮ್ಮ ಸೊಂಡಿಲುಗಳ ಮೂಲಕ, ನೀರನ್ನು ಚಿಮುಕಿಸುತ್ತಿರುವುವೋ ಎಂಬಂತೆ ಎಡೆಬಿಡದೆ, ಮಳೆ ಧಾರಾಕಾರವಾಗಿ ಸುರಿಯುತ್ತ, ಪ್ರಾಪ್ತವಾದ ವರ್ಷಾಕಾಲವು ಚೆಲುವಾಯ್ತು!"

ಇಂತು, ವರ್ಷಾ ಕಾಲದ ವರ್ಣನೆ, ಸೊಗಸಾಗಿರುವುದು.

—ಶ್ರೀ ಕೆ. ಎನ್. ಭಟ್,
ಶಿರಾಡಿಪಾಲ್.

ಭಾವಕಥೆ

(೫ನೇ ಪುಟದಿಂದ)

ರಿಗೆ ಸಹಕರಿಸಲು ಇನ್ನಾರೂ ಇರಲಿಲ್ಲ.

ಆದರೆ ಹದಿನೈದು ವರ್ಷಗಳ ಸುದೀರ್ಘ ಅವಧಿಯ ನಂತರ ಆ ಮೂವರು ಗೆಳೆಯರೂ ಒಂದು ಪ್ರದರ್ಶನದಲ್ಲಿ ಒಟ್ಟಾದರು. ಈಗ ಅವರೊಡನೆ ಅವರ ಹಿರಿತನವಿತ್ತು. ಅವರ ಪ್ರಶಂಸೆಯು ದೂರ ದೂರದ ವರೆಗೆ ಹಬ್ಬಿತ್ತು.

ತಮ್ಮ ಗಾಢ ವಾರ್ತಾಲಾಪದಲ್ಲಿ ಮುಳುಗಿದ್ದ ಅವರು ಒಬ್ಬನ ಕಲೆಯನ್ನು ಇನ್ನೊಬ್ಬನು ಹೊಗಳುತ್ತಿದ್ದನು—"ಸುಂದರಿ ಈಗ ಎಲ್ಲಿದ್ದಾಳೋ ಏನೋ, ನನ್ನೊಡನೆ ಪ್ರಿಯಳಾಗಲೂ ಇರುತ್ತೇನೆ ಎಂದಿದ್ದಳವಳು" ಎಂದವರು ಮಾತಾಡಿಕೊಂಡರು.

ಅಷ್ಟರಲ್ಲಿ ಅತಿ ರೂಪವತಿಯಾದ ಹೆಂಗಸೊಂದು ಅವರ ಮುಂದೆ ನಿಂತಳು. ಚಿತ್ರಕಾರರೂ ಸುಂದರಿಯನ್ನು ತಕ್ಷಣವೇ ಗುರುತಿಸಿದರು.

ಸುಂದರಿಯೂ ಎಲ್ಲಿಗೂ ಹೋಗಿರಲಿಲ್ಲ. ಯಾವಾಗಲೂ ಅವರೊಂದಿಗೆಯೇ ಇದ್ದಳೆಂದು ಅವರಿಗೀಗ ಭಾಸವಾಯ್ತು. ಕವಿಯು ಅವಳ ರೂಪದ ಪ್ರಶಂಸಾತ್ಮಕ ಕವಿತೆ ಬರೆದು, ಚಿತ್ರಕಾರನು ಸಜೀವ ಸುಂದರಿಯ ಯೌವನವನ್ನು ರೇಖೆಯಲ್ಲಿ ಚಿತ್ರಿಸಿ, ಶಿಲ್ಪಿಯು ಅವಳ ಪ್ರೀತಿಯನ್ನೇ ಪ್ರತಿಬಿಂಬಿಸಿ ಮೂರ್ತಿಯನ್ನಾಗಿ ಕಡೆದು, ಜಗತ್ತಿನ ಮುಂದಿಟ್ಟು ಪ್ರಶಂಸೆಗೆ ಪಾತ್ರರಾಗಿದ್ದರು.

(ಸುದರ್ಶನರ ಥುರೋರ್ಕ್‌ನಿಂದ)

—ಶ್ರೀ ಎಸ್. ಎಮ್. ಶೆಟ್ಟಿ,
ಮುಂಬಯಿ.

Notice

In the Court of the District Munsif of Karkala

O. S. No. 19 1959

Between —

Ignatius Gregory Colaco and another Plaintiffs

Beepathima & others Defendants

To the Defendants.

2 Abdul Khadar, 4. Asamma 5. Halimamma, 6. Athijamma, 7. S H Ahamad—children of the 1st defendant and Hammabba Beary

residing in Sangabettu village of Beltangadi Taluk Post Shiddakatte S K.

Where as the plaintiffs have instituted the above suit for Rs 698-02 towards arrears of mulgeni rent and further interest and cost of suit etc and the same stands posted to 29-8-1959, you are hereby informed that you are at liberty to appear before the said court at 10 A M. on that day and plead your defence if any failing which the suit will be heard and decided in your absence.

P. Ramachandra Rao,
Pleader for Plaintiffs.

Karkal, Dated 18-8-59.

ದಿ| ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.

(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ ಬೆಲೆ: ರೂ. 2 00.

ಭಾರತದ ಕರ್ಣ

"ಭಾರತದ ಕರ್ಣನು ದಿ| ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ| ಎಂ.ಆರ್. ಶಾಸ್ತ್ರಿಗಳ ಮುನ್ನುಡಿಯಿಂದ)

ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೆಲ್ಲುರಗತಿಯ ಕವಿತೆಗಳ ಸಂಗ್ರಹ ಬೆಲೆ 0—12—0.

(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ದೇಶ ಪರಿಚಯ

ಸರೋವರಗಳ ಬೀಡು ಫಿನ್ ಲೇಂಡ್

ಅರಣ್ಯ ಸಂಪತ್ತಿನಿಂದಲೇ ಸ್ವರ್ಗಸುಖ ಪಡೆಯುವ ಫಿನ್ನರು ಅದೃಷ್ಟಶಾಲಿಗಳು

ಸಾವಿರ ಸರೋವರಗಳು ಮುಕ್ಕಾಲು ಪಾಲು ಭೂಭಾಗವು ಕಾಡಿನಿಂದ ಆವರಿಸಲ್ಪಟ್ಟ ರಾಜ್ಯವು ಫಿನ್‌ಲ್ಯಾಂಡು. ಇಲ್ಲಿ ಮರಗಳ ಮೂರಂಟೆದ ವ್ಯಾಪಾರ ತುಂಬ. ಈ ಮರಗಳನ್ನು ರಫ್ತು ಮಾಡಲು ಬಂದರಕ್ಕೆ ಸಾಗಿಸಬೇಕಾದರೆ ಜಲಮಾರ್ಗ ಒಂದೇ ಹೊರತು ಬೇರೆ ದಾರಿಯೇ ಇಲ್ಲ. ಅಲ್ಲಿರುವ ಅನೇಕ ಸರೋವರಗಳು ಮತ್ತು ನದಿಗಳನ್ನು ದಾಟುವರೆ ಮರಗಳಿಂದ ಸೇತುವೆಯನ್ನು ಕಟ್ಟಿರುವರು. ಈ ಸೇತುವೆ ಜನರ ತಿರುಗಾಟಕ್ಕಾಗಿ ಮರಗಳಿಂದಲೇ ನಿರ್ಮಿಸಿದ ಕಾಲುದಾರಿಯಾಗಿರುವುದು. ಕತ್ತಲೆಯಲ್ಲಿ ಪ್ರಯಾಣಮಾಡುವರಿಗೆ ಸಹಾಯವಾಗುವರೆ ಒಂದು ಹಿಡಿ ಬೇಲಿಯೂ ಇವುಗಳಲ್ಲಿಲ್ಲ.

ಭೂಮಿಯನ್ನು ಉಳುವ ಮೊದಲು ಅದರಲ್ಲಿ ಬೆಳೆದಿರುವ ಮರಗಳನ್ನು ಮತ್ತು ಗಿಡ ಪೊದೆಗಳನ್ನು ತೆಗೆದು ಸ್ವಚ್ಛಮಾಡಬೇಕಾಗುವುದು. ನಮ್ಮ ದೇಶದಲ್ಲಿ ಗುಡ್ಡಗಾಡಿನ ಜನರು "ಕುಮ್ರಿ" ಸುಟ್ಟು ರಾಗಿ ಬೆಳೆಯನ್ನು ತೆಗೆದಂತೆ ಇವರು ಪೂರ್ಣ ಮರಮುಟ್ಟುಗಳನ್ನು ಸುಟ್ಟು ಹಾಳುಮಾಡುವರು.

ಫಿನ್‌ಲ್ಯಾಂಡಿನ ಉದ್ದಿಮೆಗಳೆಲ್ಲಾ ಆ ದೇಶದ ವಿಶೇಷವಾದ ಕಾಡು ಸಂಪತ್ತನ್ನು ಹೊಂದಿಕೊಂಡಿವೆ. ಮರದ ವ್ಯಾಪಾರಸ್ತರು ತಾವು ಕೊಂಡುಕೊಂಡ ತುಂಡುಗಳನ್ನು ಹೊಳೆಯ ಪ್ರವಾಹದಲ್ಲಿ ಬಳಿದುಬಿಟ್ಟು ಅವುಗಳು ನೀರಿನಲ್ಲಿ ತೇಲಿಕೊಂಡು ಕೆಳಗೆ ಬಂದಾಗ ತೆಪ್ಪದ ಮೇಲೆ ತಾವು ನಿಂತುಕೊಂಡು ತುದಿಯಲ್ಲಿ ಕೊಕ್ಕೆಯಾದ ದೊಣ್ಣೆಗಳಿಂದ ಒಟ್ಟುಮಾಡುವರು. ಇವುಗಳನ್ನು ಕಟ್ಟಡಕ್ಕೆ ಉಪಯೋಗಿಸುವರು. ಅವುಗಳಿಂದ ಕಾಗದಕ್ಕೆ ಬೇಕಾಗುವ "ಪಲ್ಪು" ರೇಸಿನ್, ಮತ್ತು ಟರ್ಪೆಂಟೈನ್ ಮುಂತಾದ್ದನ್ನು ತಯಾರಿಸುವರು. ಈ ರಾಜ್ಯದ ಕಾಡುಗಳ ಪೈಕಿ ಅರೆವಾಶಿ ಕಾಡುಗಳು "ಪೈನ್" (Pine) ಮರಗಳಿಂದ ತುಂಬಿವೆ. ಈ ಕಾಡಿನ ಪೈಕಿ ನೂರನೇ ಒಂದು ಪಾಲು ಅರಮನೆಯ ಸ್ವಂತ ಕಾಡಾಗಿರುವದು.

ಹಿಮಕಾಲದಲ್ಲಿ ಜನರು ಸೀಲ್ ಎಂಬ ಒಂದು ಜಾತಿಯ ಮೀನುಗಳನ್ನು ಗುಂಡಿಕ್ಕಿ ಕೊಲ್ಲುವರು. "ಸ್ಲೆಜ್ಜ್" ಎಂಬ ಹಲಗೆಯಾಕಾರದ ದೋಣಿಯನ್ನು ಇದಕ್ಕಾಗಿ ಉಪಯೋಗಿಸುವರು. ಇದರ ಮೇಲೆ ಅವಿತುಕೊಂಡು ಹಿಮದ ಮೇಲೆ ಕಾಲಿನಿಂದ ಬಲಿದುಕೊಂಡು ಮೀನುಗಳಿದ್ದಲ್ಲಿಗೆ ಹರಿದುಕೊಂಡು ಹೋಗುವರು. ಹೀಗೆ ಹೋಗುವಾಗ ಸೀಲುಗಳು ತಮ್ಮನ್ನು ಕಾಣದಂತೆ ಸ್ಲೆಜ್ಜಿನ ಮುಂಭಾಗದಲ್ಲಿ ಒಂದು ಬಿಳಿವಸ್ತ್ರವನ್ನು ಹಿಮವೆಂದು ತೋರಬೇಕೆಂದು ಇಟ್ಟುಕೊಳ್ಳುವರು. ಅಥವಾ ಬಿಳಿ ವಸ್ತ್ರವನ್ನು ತವಗೆ ಮುಚ್ಚಿಕೊಳ್ಳುವರು. ಹಲಗೆ ದೋಣಿಯ ಮುಂದೆ ಇಟ್ಟ ವಸ್ತ್ರದಲ್ಲಿ ಬಂದೂಕಿನ ಬಾಯಿ ಹೋಗುವಷ್ಟರ ಒಂದು ತೂತು ಮಾತ್ರ ಇರುವದು.

ಶಿಶು ಸಾಕಣೆ ಸಮುದ್ರಯಾನ ಮತ್ತು ಇನ್ನಿತರ ಕೆಲಸದ ಕುರಿತು ರಾಜ್ಯದ ಸರ್ಕಾರವು ಆಗತ್ಯವಿರುವ ಶಿಕ್ಷಣವನ್ನು ಜನರಿಗೆ ಕೊಡುವದು. ಆ ದೇಶದಲ್ಲಿ ಧರ್ಮಾರ್ಥ ಪುಸ್ತಕಾಲಯ ಮತ್ತು ವಾಚನಾಲಯಗಳಿವೆ. ಅನೇಕ ಕೃಷಿಕರ ಸಹಕಾರಿ ಸಂಘಗಳು ಸದಾ ಇವೆ. ರಾಜಕೀಯ ಮತ್ತು ಆರ್ಥಿಕ ವ್ಯವಹಾರಗಳಲ್ಲಿ ಸ್ತ್ರೀ ಪುರುಷರಿಗೆ ಸಮಾನ ಹಕ್ಕಿದೆ. ೨೪ ವರುಷ ಪ್ರಾಯ ಬಂದಹೊರತು ಮತಕೊಡುವ ಹಕ್ಕು ದೊರೆಯುವದಿಲ್ಲ. ಸೈನ್ಯ ಮತ್ತು ಮತಗಳೆರಡನ್ನು ಬಿಟ್ಟು ಬೇರಾವ ಉದ್ಯೋಗದಲ್ಲಿಯೂ ಸ್ತ್ರೀಯರು ಪುರುಷರಂತೆಯೇ ಸೇರಬಹುದ. ಪ್ರತಿಯೊಂದು ಹುಡುಗಿಗೂ ತನ್ನ ಜೀವನೋಪಾಯವನ್ನು ತಾನೇ ಕಂಡು ಕೊಳ್ಳುವಂತೆ ತರಬೇತಿ ಮಾಡಿದುದರಿಂದ ಮದುವೆಯಾದ ನಂತರವೂ ಅವರು ತಾವು ಅನುಸರಿಸಿ ಬಂದ ಉದ್ಯೋಗವನ್ನು ಬಿಡ ಬೇಕೆಂದಿಲ್ಲ. ಸ್ತ್ರೀ ಸ್ವಾತಂತ್ರ್ಯದ ಲಕ್ಷಣವಾಗಿ ವಿವಾಹ ವಿಚ್ಛೇದವು ಬಹು ಸುಲಭದಿಂದಾಗುವುದು. ಒಂದು ವರುಷದ ವರೆಗೆ ಗಂಡ ಹೆಂಡಂದಿರು ಬೇರೆ ಬೇರೆಯಾಗಿ ಜೀವಿಸಿ ನಂತರ ಎರಡೂ ಕಡೆಯವರ ಒಪ್ಪಿಗೆಯಿಂದ ಯಾವ ಪ್ರಕಟನೆಯಿಲ್ಲದೆ ದಾಂಪತ್ಯವನ್ನು ರದ್ದುಗೊಳಿಸ ಬಹುದು.

ಪುರಾತನ ಕಾಲದ ಅನಾಗರಿಕ ಫಿನ್ನರು ಪ್ರತಿಯೊಂದು ಆಗು ಹೋಗುಗಳ ಅದೃಷ್ಟ ನಿಯಮದಂತೆ ನಡೆಯುವುದೆಂದು ನಂಬಿರುವರು. ಒಂದೊಂದು ಭೂತಕ್ಕೆ ಒಂದೊಂದು ಕಾರ್ಯಾಧಿಕಾರವಿದೆ ಎಂದು ನಂಬಿರುವರು. ಹೀಗೆ ಲೋಕದಲ್ಲಿ ನಡೆಯುತಕ್ಕುದನ್ನೆಲ್ಲಾ ಅವುಗಳಿಗೆ ವಿಂಗಡಿಸಿ ಕೊಟ್ಟಿರುವರು. ಮೇಘ, ಸಿಡಿಲು, ಮಿಂಚು, ವಾಯು, ನೀರು, ಬೆಂಕಿ ಇವುಗಳಿಗೆಲ್ಲಾ ಒಂದೊಂದು ಅಧಿಕಾರವಿದೆ ಎನ್ನುವರು. ಅವರ ಇಡೀ ವರುಷದ ಹಬ್ಬಗಳೇ ಇವುಗಳ ಸ್ಮರಣಾರ್ಥಕವಾಗಿ ಆಚರಿಸುವುದಾಗಿದೆ. ಈ ಕಾಲದಲ್ಲಿ ಸಹಾ ಇದರ ಕುರುಹ ಕಾಣಬಹುದು. ವಸಂತ ಕಾಲದ ಪ್ರಾತಃ ಸಂಧ್ಯಾ ಸಮಯದಲ್ಲಿ ತಮ್ಮ ನಾಡಿನ ಪದ ಮತ್ತು ಹಾಡುಗಳನ್ನು ಕೈ ಕಟ್ಟಿಕೊಂಡು ಪಠನಮಾಡುವರು. ಈ ಹಾಡುಗಳ ಕಥೆಯು ಪುರಾಂತ್ರಿಕ ಕಾಲದ ಕುರಿತು ಪ್ರಸ್ತಾಪಿಸಿ ಎತ್ತಿಹೇಳುವವುಗಳಾಗಿವೆ. ಈ ಸಂಪ್ರದಾಯಗಳೆಲ್ಲಾ ಅಂಧ ಶ್ರದ್ಧೆಯಿಂದ ಹುಟ್ಟಿದವುಗಳಾಗಿವೆ ಒಬ್ಬ ಫಿನ್ನನು ಇನ್ನೊಬ್ಬನ ಮನೆಗೆ ಹೋದ ಕೂಡಲೇ ಇಲ್ಲಿರುವವರೆಲ್ಲರಿಗೂ ಶುಭವಾಗಲಿ" ಎಂದು ಹೇಳಲೇಬೇಕು. ಮನೆಯಲ್ಲಿ ಆ ಸಮಯಯೂ ರೂ ಹಾಜರಿಲ್ಲವಾದರೂ ಈ ಮಾತುಗಳನ್ನು ಉಚ್ಚರಿಸಲೇಬೇಕು. ಹಾಗೆ ಹೇಳದೆ ಇದ್ದರೆ ಆ ಸ್ಥಳದ ಅಧಿದೇವತೆ, ಅದಕ್ಕೆ ಇವರು ಟೋಮಟೂರ ಅಥವಾ ಬ್ರೌನಿ ಎನ್ನುವರು ಸಿಟ್ಟುಮಾಡಿಯೇನಾದರೂ ಕೆಟ್ಟದ್ದನ್ನು ಮಾಡೀತೆಂಬ ಸಂಶಯದ ಭೀತಿ. ಕಾಡಿನಲ್ಲಿ ಅಥವಾ ಸಮುದ್ರದಲ್ಲಿ ದಾರಿ ಸಿಗದಿದ್ದರೆ ಸಂಧ್ಯಾ ಸುವಾಸಿನೀ ದೇವತೆಯನ್ನು ಪ್ರಾರ್ಥಿಸಿದರೆ ಒಂದು ಭಂಗಾರದ ತಂತಿಯನ್ನು ಆ ದೇವತೆಯೇ ಇದು ಮನೆಯ ವರೆಗೆ ಹಾಕುವಳು.

ಮರಗಳನ್ನು ಜೋಡಿಸಿ ಮಧ್ಯ ಮಣ್ಣು ಸೇರಿಸಿ ಒಕ್ಕಲಿಗರು ಮನೆಕಟ್ಟಿ ಹಿಮವು ಜಾರಿ ಹೋಗುವಂತೆ ಮಾಡುಗಳನ್ನು ಬಹು ಇಳಿಯಾಗಿ ಮಾಡುವರು. ಮನೆಯೊಳಗೆ ದೊಡ್ಡ ಅಗ್ಗಿಷ್ಟಿಕೆಯಿರುವುದರಿಂದ ಬೆಚ್ಚಗಾಗಿರುವದು. ವರ್ಷ ಒಂದರ ಸಾವಿರಗಟ್ಟಲೆ ಟನ್ ಕಾಗದ ಈ ದೇಶದಿಂದ ರಫ್ತಾಗುವದು. ಅನೇಕ ಜೋಗಗಳಿಂದ ವಿದ್ಯುತ್ಪಾದನೆ ಮಾಡುವರು. ನದಿಗಳ ಪ್ರವಾಹ ವೇಗ ಮತ್ತು ಸುಳಿಗಳ ದೆಸೆಯಿಂದ ಉದ್ದ ಮತ್ತು ಸಪೂರಾದ ಒಂದು ನವೀನ ರೀತಿಯ ದೋಣಿಯನ್ನು ತಯಾರಿಸಿರುವರು. ಅವರ ಕುದುರೆಗಳು ನೋಡಲು ಚಲೋದಿಲ್ಲವಾದರೂ ಹುಲ್ಲುಗಾಡಿ ಎಳೆಯುವವು.

ಪಾನನಿರೋಧ ಕಾನೂನನ್ನು ಜ್ಯಾರಿಗೆ ತಂದಾಗ್ಯೂ ಸ್ತ್ರೀಯರು ಅದಕ್ಕೆ ಸಂಪೂರ್ಣ ಪ್ರೋತ್ಸಾಹ ಕೊಟ್ಟರೂ ಯಶಸ್ವಿಯಾಗಲಿಲ್ಲ. ಆ ಶಾಸನವನ್ನು ತೆಗೆದು ಹಾಕಿ ಸರ್ಕಾರವು ಶರಾಬು ಕೊಡುವದನ್ನು ರಾಷ್ಟ್ರೀಕರಿಸಿ ತನ್ನ ಅಂಕೆಯೊಳಗಿರಿಸಿತು. ಒಂದು ಕಾಲದಲ್ಲಿ ಮದುವೆಯಲ್ಲಿ ಮದುಮಗಳು ಅಳುವ ವರೆಗೆ ಚುಚ್ಚಿ ಭಾಷಣ ಮಾಡುವ ವಿಚಿತ್ರ ಕಟ್ಟಳೆಯಿದ್ದಿತ್ತು. ಬಹಿರಂಗ ಸಂತೆಯಲ್ಲಿ ಚೌಕಶಿಯಿಂದ ವ್ಯಾಪಾರ ನಡೆಯುವದು ಅಲ್ಲಿಳಿಹಿ ಮರ ಸಿಗಿಯುವ ಕಾರ್ಖಾನೆ ಮತ್ತು ಕಾಗದ ಸಲ್ಪು ತೆಗೆಯುವ ಉದ್ದಿಮೆಗಳಿವೆ. ಯವೆ ಗೋದಿಯಿಂದ ದೋಸೆಯಾಕಾರದ ಕಪ್ಪು ರೊಟ್ಟಿ ಮಾಡುವರು. ಇದನ್ನು ಹಗ್ಗಕ್ಕೆ ಸುರಿದು ತೂಗಾಡಿಸುವರು ಹೀಗೆ ಮಾಡಿದರೆ ಹೆಚ್ಚು ದಿನಗಳ ವರೆಗೆ ಕೆಡುವದಿಲ್ಲ. ಉಗಿ ಸ್ನಾನ ಪ್ರತಿಮನೆಯಲ್ಲಿದೆ ಕೋಣೆಯ ಮಧ್ಯದಲ್ಲಿ ಕಲ್ಲುರಾಶಿ ಮಾಡಿ ಬಿಸಿಮಾಡೊಡನೆ ನೀರು ಹೊಯ್ಯುವರು ಬಾಗಿಲು ಹಾಕಿ ಮರದ ತುಂಡನ್ನು ಗೋಡೆಗೆ ಸಿಕ್ಕಿಸಿ ಸ್ನಾನ ಮಾಡುವವರು ಕೂತುಕೊಳ್ಳುವರು.

—ಶ್ರೀ ಸಿ. ಎಚ್. ಶೆಟ್ಟಿ.

ನವಯುಗದ ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ತ ತಿಂಗಳಾಂತ್ಯಕ್ಕೆ 'ನವಯುಗ'ದ 38ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ 39ನೇ ವರ್ಷಾರಂಭವಾಗುವುದು ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿಯಿರುವ ಮಹನೀಯರೂ ತಮ್ಮ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೇ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇನೆ.

ಮೆನೇಜರ್.

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ ನೋಡಿರಿ

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾದಾ ಪ್ರತಿ 1:50. ಉತ್ತಮ ಪ್ರತಿ 2:0.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತವೆ.

ಚಹಮೀಮಾಂಸೆ

ಚಹಪಾನವೂ ಅಮೋಘ ಕಲೆ!

ಜಾಪಾನೀಯರನ್ನು ಚಹ ತುಂಬ ಪ್ರೀತಿಸುತ್ತದೆ ಅದು ಏಕೆ ಗೊತ್ತೆ!

ಸರ್ವಸಾಮಾನ್ಯವಾಗಿ ಪ್ರಪಂಚದ ಎಲ್ಲ ದೇಶಗಳ ಜನರೂ ಚಹವನ್ನು ಕುಡಿಯುತ್ತಾರೆ; ಮತ್ತು ಪ್ರೀತಿಸುತ್ತಾರೆ. ಆದರೆ, ಚಹದೊಡನೆ ನಿನಗೆ ಅತಿ ಪ್ರಿಯರಾದವರು ಯಾರು ಎಂದು ಕೇಳಿದರೆ, ಅದು ಸಂತೋಷದಿಂದ ಅದು ಉತ್ತರಿಸಿತು: "ಜಾಪಾನೀಯರು" ಎಂದು. ಈ ಉತ್ತರವೂ ಸರಿ ಎಂದು ಹೇಳಬಹುದು. ಏಕೆಂದರೆ, ಜಾಪಾನಿನಲ್ಲಿ ಚಹವು ಪಡೆಯುವಷ್ಟು ಗೌರವಾದರಗಳನ್ನು ಅನ್ಯ ರಾಷ್ಟ್ರಗಳಲ್ಲಿ ಪಡೆಯುವುದಿಲ್ಲ. ಅಲ್ಲಿ ಚಹಪಾನ ಮಾಡುವುದು ಜಿಹ್ವೆಯ ಚಪಲತೆಯನ್ನು ಹೋಗಲಾಡಿಸಲು ಅಥವಾ ಶರೀರದಲ್ಲಿ ಸ್ಫೂರ್ತಿ ತುಂಬಿಸಲು ಬಳಸುವ ಸಾಧನ ಮಾತ್ರ ಆಗಿಲ್ಲ; ಜಾಪಾನೀಯರ ಕಲೆಗಳಲ್ಲಿ ಚಹಪಾನವೂ ಒಂದು ಮಾತ್ರವಲ್ಲದೇ ಕಲೆಗಿಂತಲೂ ಸ್ವಲ್ಪ ಹೆಚ್ಚು ದೈನಿಕ ಸಂಸ್ಕಾರವಾಗಿ ಪರಿಣಮಿಸಿದೆ. ಆರ್ಯರಿಗೆ ಸೋಮಪಾನವು ಪ್ರಿಯವಾಗಿರುವಂತೆ ಜಾಪಾನಿಯರಿಗೆ ಚಹವು ಅತಿ ಪ್ರಿಯವಾಗಿದೆ.

ಇತರ ದೇಶಗಳಲ್ಲಿ ಯಾವುದೇ ಸಮಯದಲ್ಲಿ ಯಾವುದೇ ರೂಪದಲ್ಲಿ—ನಿಂತು, ಕೂತು ಮತ್ತು ಅರ್ಧ ಒರಗಿಕೊಂಡು—ಚಹ ಕುಡಿದುಬಿಟ್ಟರೆ, ಜಾಪಾನೀಯರು ನೊಂದುಕೊಳ್ಳುತ್ತಾರೆ. ಇದನ್ನು ಅವರು ಎಂದೂ ಸಹಿಸಿಕೊಳ್ಳಲಾರರು. ಚಹಕ್ಕೆ ಈ ರೀತಿಯಾಗಿ ಅಪಮಾನವಾಗುವುದನ್ನು ಅವರು ತಾಳಿಕೊಳ್ಳುವುದಾದರೂ ಹೇಗೆ? ಜಾಪಾನಿನಲ್ಲಿ ಚಹ ಕುಡಿಯುವ ಸ್ಥಾನ, ಅದಕ್ಕೋಸ್ಕರ ಕೂರುವ ವಿಧಾನ, ಅದನ್ನು ಬಡಿಸುವ ಕ್ರಮ ಇತ್ಯಾದಿ ಎಲ್ಲ ವಿಷಯಗಳಲ್ಲಿಯೂ ನಿಶ್ಚಿತ ವಿಧಾನಗಳು ಇವೆ—ಇವು ಶಾಸ್ತ್ರಗಳಲ್ಲಿಯೂ ಬರೆಯಲ್ಪಟ್ಟಿವೆ. ಈ ಚಹಕಲಾಕೌಶಲಕ್ಕೆ ಚಾ-ನೋ-ಯೂ ಎಂಬ ಹೆಸರೂ ಪ್ರಸಿದ್ಧಿಸಿದೆ.

ಜಾಪೆಯಲ್ಲಿ ಜಾಪಾನಿ ವಿಧಾನದಲ್ಲಿ ಕಾಲುಮಡಚಿ ಕೂತುಕೊಳ್ಳಬೇಕು. ಜಾಪಾನಿನ ಪದ್ಮಾಸನಕ್ರಮವು ಭಾರತೀಯ ಪದ್ಮಾಸನಕ್ಕಿಂತ ಭಿನ್ನವಾಗಿದೆ. ಭಾರತೀ ಗಾಯಕರು ಹಿಂದೆ ಕೂರುತಿದ್ದ ಚಿತ್ರಗಳನ್ನು ಇದು ಸರ್ವಸಾಮಾನ್ಯವಾಗಿ ಹೋಲುತ್ತದೆ. ಎಲ್ಲರೂ ಕೂತುಕೊಂಡ ನಂತರ ಚೀನೀ ಮಣ್ಣಿನ ಬಟ್ಟಲುಗಳನ್ನು ಇಡುತ್ತಾರೆ. ಮೊದಲು ಒಂದೊಂದು ಚಮಚೆಯ ತುಂಬ ಚಹದ ಎಲೆಯ ಪುಡಿಯನ್ನು ತಟ್ಟೆಗಳಲ್ಲಿ ಸುರಿಯುತ್ತಾರೆ. ಮತ್ತೆ ಅದಕ್ಕೆ ನೀರು ಸುರಿದು ಬಿದಿರಿನ ಕಡ್ಡಿಯಿಂದ ಕದಡಿಸುತ್ತಾರೆ. ಮತ್ತೆ ಅದನ್ನು ಕುಡಿಯುತ್ತಾರೆ. ಇದರೊಡನೆ ಅಕ್ಕಿ ಹಿಟ್ಟಿನ ರೊಟ್ಟಿಯನ್ನೂ ತಿನ್ನುವ ಅಭ್ಯಾಸ ಇದೆ. ಈ ಸಮಯದಲ್ಲಿ ಎಲ್ಲರೂ ದೃಷ್ಟಿಯನ್ನು ಚಹದಲ್ಲಿಯೇ ಕೇಂದ್ರೀಕರಿಸುತ್ತಾರೆ. ಮಾತನಾಡುವುದೇನಾದರೂ ಇದ್ದರೆ, ಅದೂ ಚಹದ ಕುರಿತಾಗಿಯೇ ಇರುತ್ತದೆ. ಚಾ-ನೋ-ಯೂವಿನಲ್ಲಿ ನೀವು ಅನೌಪಚಾರಿಕ ರೂಪವಾಗಿ "ಓವರ್ ಎಕ್ಸ್ ಆಫ್ ಟೀ" ಯಲ್ಲಿ ಪ್ರಪಂಚದಲ್ಲಿ ಯಾವ ಕುರಿತಾಗಿಯೂ ಆಡಬಾರದು. ಡಾ| ಜಾನ್ಸನ್‌ರಂತೆ ಮಾತಾಡುತ್ತ ಕೆಟಲಿಗಟ್ಟಲೆ ಚಹವನ್ನೂ ಏರಿಸಬಾರದೆಂದು ಹೇಳಿದೆ. ಚಾ-ನೋ-ಯೂವಿನಲ್ಲಿ ಸಂಯಮ, ಶಾಂತಿ, ಗಾಂಭೀರ್ಯ, ಸರಳತೆ ಮತ್ತು ಔಪಚಾರಿಕತೆಯ ಕುರಿತು ಪ್ರಾಧಾನ್ಯವಿದೆ.

ಚೀನವು ಮೊತ್ತಮೊದಲಿಗೆ ಜಪಾನಿಗೆ ಚಹದ ಪರಿಚಯ ಮಾಡಿಕೊಟ್ಟಿತು. ಚೀನದಲ್ಲಿ ಬೌದ್ಧ ಭಿಕ್ಷುಗಳು ಚಹ ಸೇವನೆ ಮಾಡುತ್ತಿರುವುದನ್ನು ಜಾಪಾನೀ ಯಾತ್ರಿಕರು ಕಂಡರು. ಆ ಮೇಲೆ ಚೀನದಿಂದ ಚಹ ಮತ್ತು ಚಹ ಶಾಸ್ತ್ರವನ್ನವರು ಸ್ವದೇಶಕ್ಕೆ ಒಯ್ದರು. ನಾರಾಯುಗ (ಕ್ರಿ. ಶ. ೭೧೦-೭೯೪) ದಲ್ಲಿ ಈ ಪೇಯವು ಜಾಪಾನಿನಲ್ಲಿ ಪಾದಾರ್ಪಣ ಮಾಡಿತು; ಆದರದ ಸ್ವಾಗತವನ್ನೂ ಪಡೆಯಿತು. ಹೇಯಿಯನ್ ಯುಗದಲ್ಲಿ (೭೯೪-೧೧೮೫) ರಾಜಭವನದಲ್ಲಿ ಸಂಭ್ರಾಂತ ಜನರಲ್ಲಿ ಬೆಲೆಬಾಳುವ ಪಾತ್ರೆಗಳಲ್ಲಿ ಚಹಪಾನ ಮಾಡಲಾಗುತ್ತಿತ್ತು. ಚಹಕ್ಕೆ ಹಾಕುವ ಸಾಮಾನುಗಳಿಂದಲೇ ಮನುಷ್ಯನ ಆರ್ಥಿಕ ಮಟ್ಟವನ್ನು ಅಳೆಯುವ ರೂಢಿಯೂ ಇತ್ತು.

ಕಾಮಾಕುರಾಯುಗ (೧೧೮೫-೧೩೩೩) ದಲ್ಲಿ ಇಂದಿನ ಚಾ-ನೋ-ಯೂವಿನ ರಚನೆಯಾಯಿತು. ಚಹ ಎಲೆಯನ್ನು ಪುಡಿ ಮಾಡುವ ಕ್ರಮ ಪ್ರಾರಂಭವಾಯಿತು. ಈ ಯುಗದಲ್ಲಿ ಸಾಸಾಕೀ ಡೋಯಿ ಎಂಬೊಬ್ಬ ರಸಿಕನು ಚಹ ಕೂಟ ಸಿದ್ಧಪಡಿಸುವುದರಲ್ಲಿ ನಿಸ್ಸೀಮನಾಗಿದ್ದನು. ಅತಿಥಿಗಳು ಬಂದಿಸಿದಾಗ ಲೋಟೆಯಲ್ಲಿ ಪುಡಿಯನ್ನು ಹಾಕುತಿದ್ದರು. ಆ ಮೇಲೆ ಒಬ್ಬ ತರುಣ ಬೌದ್ಧ ಭಿಕ್ಷುವು ಬಂದು ಬಿಸಿ ನೀರೆರೆಯುತಿದ್ದನು; ಬಿದಿರಿನ ತುಂಡಿನಿಂದ ಕದಡಿಸುತಿದ್ದನು. ಇಂದಿಗೂ ಇದೇ ಕ್ರಮವು ರೂಢಿಯಲ್ಲಿದೆ.

ಕಾಮಾಕುರಾಯುಗವು ಚಹದ ಸುವರ್ಣ ಯುಗ ಎನ್ನಬಹುದು. ಚಹಪಾನ ಸ್ಪರ್ಧೆಗೆ ಈ ಕಾಲ ನಾಮಾಂಕಿತಲಾಗಿದೆ ಎಂದರೆ, ಕೂತು ಕೊಡಪಾನಗಟ್ಟಲೆ ಚಹ ಗಂಟೆಲಲ್ಲಿ ಗುಟುಕರಿಸುತಿದ್ದರೆಂದರ್ಥವಲ್ಲ. ಸಾಮಾನ್ಯವಾಗಿ ಎಲ್ಲ ಸತ್ಕಾರ ಸಮಾರಂಭಗಳಲ್ಲಿಯೂ ಇದು ಪ್ರವೇಶಿಸುತಿತ್ತು. ಅಲ್ಲಲ್ಲಿ ಚಹದ ಸ್ಪರ್ಧೆಗಳೂ ನಡೆಯುತಿದ್ದುವು. ಪ್ರತಿಸ್ಪರ್ಧಿಗಳಿಗೆ ಎಂಟುಹತ್ತು ಬಗೆಯ ಚಹವನ್ನು ಕುಡಿಸಿ, ಅವುಗಳಲ್ಲಿ ಉತ್ತಮೋತ್ತಮವಾದುದಾವುದೆಂದು ಪ್ರಶ್ನಿಸುತಿದ್ದರು. ಸರಿಯಾದ ಉತ್ತರಹೇಳಿದವನೇ ವಿಜಯಿ. ಇದೇ ರೀತಿಯಲ್ಲಿ ಚಹಪಾನವು ಒಂದು ಜುಗಾರಿಯಾಡುವ ಸಾಧನವಾಗಿಯೂ ರೂಪಿತವಾಗಿತ್ತು. ಚಹದ ಸಂಪ್ರದಾಯ ಬೆಳೆದಂತೆ ಸ್ಪರ್ಧೆಯ ವಿಧಿಗಳೂ ಜಟಿಲ ಹಾಗೂ ಆಡಂಬರಪೂರ್ಣವಾಗುತಿದ್ದುವು.

ಮೋಮೋಯಾಮಾ ಯುಗದ ನೋಬುನಾಗಾ ಮತ್ತು ಹಿದಿಯೋಶೀ ಸರದಾರರು ರಾಜಸತ್ಕಾರ ಸಮಾರಂಭದಲ್ಲೂ ಇದನ್ನು ಮನ್ನಿಸಿದರು. ಚಹ ನಿರ್ಮಾಣದಲ್ಲಿ ಸರಳತೆಯನ್ನು ತಂದರು. ತನ್ನ ಅಧ್ಯಯನ ಕಕ್ಷೆಯಲ್ಲಿ ಕೂತೇ ಬೌದ್ಧ ಭಿಕ್ಷು ಚಹ ಸೇವಿಸುತಿದ್ದನು. ಮುಂದೆ ಮನೆ ಮಠಗಳಲ್ಲಿ ಇದು ಸರಳವಾಗಿ ಹರಡಿತು. ಈ ಚಹವನ್ನು ಮಾಬೀ ಚಾ ಎನ್ನುತ್ತಾರೆ. ಇದರ ಆವಿಷ್ಕರ್ತ ಮುರಾತಾ ಶುಕೋಕೋ ಎಂಬ ಬೌದ್ಧ ಭಿಕ್ಷು. ನೋಬುನಾಗಾ ಮತ್ತು ಹಿದೇಶಿಯರು ಆರಂಭದಲ್ಲಿಬಡವರಿದ್ದು ಸ್ವಪರಾಕ್ರಮದಿಂದ ಪ್ರತಿಷ್ಠಾವಂತರಾದರು. ಸರಳವಾದ ಈ ಚಹವು ಸತ್ಕಾರ ಪಡೆಯಿತು. ೧೫೮೭ರಲ್ಲಿ ರಾಜ ಸತ್ಕಾರಕ್ಕೂ ಚಹ ಕಾಲಿರಿಸಿತು.

ಚಾ-ನೋ-ಯೂ ವಿನ ಕೋಣೆಗಳ ವ್ಯವಸ್ಥೆಯೂ ಈ ವ್ಯವಸ್ಥೆಯ ಅರ್ಥವೂ ಅರ್ಥವತ್ತಾಗಿದೆ. ಗೋಡೆಯಲ್ಲಿ ಕಾಗದ ಇಲ್ಲವೇ ರೇಷ್ಮೆಯ ಕಾಗದದ ತುಂಡು ತೂಗಹಾಕುತ್ತಾರೆ. ಇದರಲ್ಲಿ ಯಾವುದಾದರೂ ಒಂದು ಕಾವ್ಯ ಇಲ್ಲವೇ ಶಾಸ್ತ್ರದ ಕೆಲವು ಅಂಶವು ಬರೆದಿರುತ್ತದೆ. ಕೆಳಗಡೆ ಚಾಪೆ ಹಾಸಿರುತ್ತಾರೆ. ಕೋಣೆಯಲ್ಲಿ ಹೂದಾನಿಯಿಡಲ್ಪಡುತ್ತದೆ. ಕೇವಲ ಚಹಪಾನವಿರುವುದಾದರೆ, ಕಾಗದ ಮಾತ್ರ ತೂಗುತ್ತಾರೆ. ಎರಡು ಪತ್ರಗಳಿದ್ದರೆ, ಭೋಜನ ಕೂಟವೂ ಇದೆ ಎಂದರ್ಥ. ಭೋಜನಾನಂತರ ಚಹ ಪಾನವಿರುವುದಾದರೆ, ಹೂದಾನಿಯನ್ನಿಡುತ್ತಾರೆ.

ಕಾಗದ ತೂಗಹಾಕುವ ಸಂಪ್ರದಾಯ ನಿಮಗೆ ವಿಚಿತ್ರವಾಗಿ ಕಾಣಿಸಬಹುದು. ಈ ಪದ್ಧತಿಯು ಬೌದ್ಧ ಭಿಕ್ಷುಗಳಿಂದಲೇ ಮೊದಲಾಗಿರಬಹುದು. ಅವರು ಚಹಪಾನ ಮಾಡುವ ವೇಳೆ ತಮ್ಮ ಗುರು ಹೇಳಿಕೊಟ್ಟ ಪಾಠವನ್ನು ಬರೆದ ಕಾಗದವನ್ನು ತಮ್ಮೊಂದಿಗಿಟ್ಟುಕೊಂಡು ಅದನ್ನು ಮನನ ಮಾಡುತ್ತಿದ್ದರು. ಇದೇ ಪದ್ಧತಿ ರೂಪಾಂತರಹೊಂದಿ ಇಂದಿನ ಘಟ್ಟಕ್ಕೆ ಬಂದಿತು.

"ಚಹವು ಕೋಣೆಗೆ ಬಂದೊಡನೆಯೇ ಪಾರಸ್ಪರಿಕ ಭೇದಭಾವನೆಗಳು ದೂರಾಗಬೇಕು. ವಿನಯ, ಭಾವುಕತೆ, ಅಗ್ರಹ ಹೀನತೆಗಳಿಂದ ಬೌದ್ಧಿಕ ವಿಶ್ವಾಸ ಮತ್ತು ಹಾರ್ದಿಕ ಶಾಂತಿಯು ಪ್ರಾಪ್ತಿಸುತ್ತವೆ" ಎಂದು ಜುಕೋ ಹೇಳಿದ್ದಾನೆ.

ಚಹಾ ಕೋಣೆಗಳನ್ನು ಜಾಪಾನಿನಲ್ಲಿ ಆಡಂಬರಪೂರ್ಣವಾಗಿಯೇ ಅಲಂಕರಿಸುತ್ತಾರೆ. ಕತ್ಸುರಾ ಅರಮನೆಯಲ್ಲಿ ಸಿಂಗರಿಸಿದ ಒಂದು ಚಹ ಗೃಹವಿದೆ. ಈ ರೀತಿಯ ಚಹ ಮಂದಿರದ ಪುರಸ್ಕರ್ತ ಕೋಬಾರೀ ಎಂಶೂ ಆದರೆ, ಸರಳತಾಪೂರ್ಣ ಚಹ ಮಂದಿರಗಳಾದ ಮ್ಯೋಜಿಯನ್—ಚಹಗೃಹಗಳ ಉತ್ತೇಜಕನು ರಿಕ್ಯೂ ಎಂಬವನು.

"ನೋಚಾತೇ" ಎಂಬ ಒಂದು ಚಹ ಕೂಟದ ಪ್ರಚಾರವು ಜಪಾನದಲ್ಲಿದೆ. ಉಪವನಗಳಲ್ಲಿಯೇ ಇಂತಹ ಕೂಟಗಳನ್ನು ಏರ್ಪಡಿಸುವುದು ಸಾಧ್ಯ. ಇಲ್ಲಿ ಹೆಂಗಸರೂ ಮಕ್ಕಳೂ ಬರುತ್ತಾರೆ.

ದ್ವಿತೀಯ ಮಹಾ ಯುದ್ಧಾನಂತರ ಚಾ-ನೋ-ಯೂವಿನ ಮೇಲೆ ಜಾಪಾನಿ ಯುವಕರು ವಿದ್ರೋಹ ಹೂಡಿದರೂ ಅವರು ಈಗ ಅದರ ಮಹತ್ವವನ್ನರಿತುಕೊಂಡಿದ್ದಾರೆ. ಸ್ತ್ರೀಯರಾದರೂ ಇದರ ಮರ್ಮವನ್ನು ತಿಳಿಯದೆ ಹೋದರೆ, "ಆದರ್ಶ ಗೃಹಿಣಿ" ಬಿರುದಿಗೆ ಭಾಜನರಾಗುವುದಿಲ್ಲ. ಕೇವಲ ಒಂದು ನಿಮಿಷದೊಳಗೆ ಕುಡಿದು ಗುಟುಕರಿಸಿಬಿಡುವ ಚಹಾದ ತಯಾರಿಯೂ ಒಂದು ಅಮೋಘ ಕಲೆ ಎಂಬ ಭಾವನೆ ಜಪಾನಿನಲ್ಲಿದೆ.

ಎಂತಲೇ ತನ್ನನ್ನು ಎಲ್ಲರಿಗಿಂತಲೂ ಅಧಿಕಾಧಿಕವಾಗಿ ಆದರಿಸಿ ಗೌರವಿಸುವ ಜಪಾನೀಯರನ್ನು ತಾನು ಅಧಿಕವಾಗಿ ಪ್ರೀತಿಸುತ್ತೇನೆ ಎಂದು ಚಹ ನುಡಿದರೆ, ಆಶ್ಚರ್ಯವಿಲ್ಲ ತಾನೆ?

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕುಮಾರಿ ಬಿಲ್ಲೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಪ್ರಶಸ್ತ,
ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & Co. (N. J.) CALCUTTA—40
ಸ್ಟಾಕಿಸ್ಟರು: ಪ್ರಾ ಕಂಪೆನಿ, ಮಂಗಳೂರು—1.

ಹಾರ್ಮೋನಿಯಮ್
ಬೋಧನ ಕ್ರಮ
ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಬುಕ್ ಡಿಪೊ, ಉಡುಪಿ.

ಲಂಕಾಯಾತ್ರೆ

ಸಿಂಹಳದ ಕೊಲಂಬೊದಿಂದ ಸ್ವದೇಶದ ಬೆಂಗಳೂರಿಗೆ

ಉತ್ತರ ಸಿಂಹಳದ ಜಾಫನಾದಲ್ಲಿ ಭಾರತೀಯ ತಮಿಳರ ಆದರ ಸತ್ಕಾರ

* *

ಲೇಖಾಂಕ: ೭

ಜೂನ್ ೨೦ನೆ ಶನಿವಾರ ದಿನ ಸಂಜೆ ೭ ತಾಸಿಗೆ ಸರಿಯಾಗಿ ರಾಷ್ಟ್ರಪತಿಯವರನ್ನು ಹೊತ್ತ ವಿಶೇಷರೇಲುಗಾಡಿಯು ಕೇಂಡಿಯಿಂದ ಕೊಲಂಬೊ ನಗರವನ್ನು ಸೇರಿತು. ರೇಲುಗಾಡಿಯಲ್ಲಿ ರಾಷ್ಟ್ರಪತಿಯವರಿಗೂ ಅವರ ದಳದ ಪ್ರತ್ಯೇಕ ವ್ಯಕ್ತಿಗೂ ಬೇರೆ ಬೇರೆ ಸ್ಥಾನಗಳ ಏರ್ಪಾಡಿತ್ತು. ರೇಲು ಸಾಗುತ್ತಿದ್ದಂತೆಯೇ ರಾತ್ರೆ ಭೋಜನದ ಕರೆಯೂ ಬಂತು. ಗಾಡಿಯ ಮಧ್ಯದ ಅನೇಕ ಕೋಣೆಗಳಲ್ಲಿ ಊಟದ ವ್ಯವಸ್ಥೆಯು ಇತ್ತು.

ಸುಮಾರು ಮೂರು ತಾಸುಗಳನಂತರ ರೇಲುಗಾಡಿಯು ಕೊಲಂಬೊವನ್ನು ಸೇರಿತು. ನಿಲ್ದಾಣದಿಂದ ರಾಷ್ಟ್ರಪತಿಯವರು ಗವರ್ನರ ಜನರಲ್ಲರ ನಿವಾಸಕ್ಕೆ ತೆರಳಿದರು. ಜತೆಯ ಸರಕಾರಿ ಅಧಿಕಾರಿಗಳು ಪ್ರಧಾನ ಮಂತ್ರಿಯವರ ಸರಕಾರಿ ನಿವಾಸ ಸ್ಥಾನವಾದ "ಟೆಂಪಲ್ ಟ್ರೀಸ್" ಗೆ ಹೋದರು. ಉಳಿದ ಪತ್ರಿಕಾ ಕರ್ತರಾದ ನಾವು ನಮ್ಮ ಮೊದಲಿನ ಸ್ಥಾನ ಗಾಲ್‌ಫೇಸ್ ಹೋಟೆಲ್ಲಿಗೆ ಮರಳಿ, ಅಲ್ಲಿ ಒರಗಿಕೊಂಡೆವು. ರಾತ್ರಿ ಎಲ್ಲರೂ ಸಾಕಷ್ಟು ವಿಶ್ರಮಿಸಿದೆವು. ಮುಂದಿನ ರವಿವಾರ ನಮಗೆ ತುಂಬ ಕಾರ್ಯಕ್ರಮವಿತ್ತು.

ರವಿವಾರ ೨೧ರಂದು ಪ್ರಾತಃಕಾಲ ೯॥ ಗಂಟೆಗೆ ಸರಿಯಾಗಿ ರಾಷ್ಟ್ರಪತಿಯವರು ವಿದ್ಯೋದಯ ವಿಶ್ವವಿದ್ಯಾಲಯಕ್ಕೆ ಹೋದರು. ಅಲ್ಲಿ ಅವರು ಒಂದು ಮಹತ್ವಪೂರ್ಣವಾದ ಭಾಷಣವನ್ನು ಮಾಡಿದರು.

ನಾವು ಉಳಿದಿದ್ದ ಗೇಲ್ ಫೇಸ್ ಹೋಟೆಲಿನಲ್ಲಿ ಮಧ್ಯಾಹ್ನ ಒಂದು ಸಮಾರಂಭವಿತ್ತು. ರಾಷ್ಟ್ರಪತಿಯವರ ಗೌರವಾರ್ಥವಾಗಿ ಶ್ರೀ ಲಂಕೆಯಲ್ಲಿ ವಾಸಿಸುತ್ತಿರುವ ಭಾರತೀಯರೆಲ್ಲರೂ ಕೂಡಿ ಈ ಸಮಾರಂಭವನ್ನೇರ್ಪಡಿಸಿದ್ದರು. ಅಲ್ಲಿ ಸಾವಿರಾರು ಭಾರತೀಯರು ಸೇರಿದ್ದರು. ಇಲ್ಲಿಯೂ ರಾಷ್ಟ್ರಪತಿಯವರು ಆಂಗ್ಲಭಾಷೆಯಲ್ಲಿ ಭಾಷಣ ಮಾಡಿದರು. "ನಾನು ಭಾರತದ ರಾಷ್ಟ್ರಪತಿಯಾಗಿ ಶ್ರೀ ಲಂಕೆಯಲ್ಲಿ ವಾಸಿಸುತ್ತಿರುವ ಭಾರತೀಯರಿಗೆ, ಅವರು ಶ್ರೀ ಲಂಕೆಯ ಸೇವೆಯನ್ನು ತನು ಮನಗಳಿಂದ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ" ಎಂದವರು ಹೇಳಿದರು. ಈ ಭಾಷಣವನ್ನು ಕೊಲಂಬೊವಿನ ಸಮಾಚಾರ ಪತ್ರಗಳೆಲ್ಲವೂ ಆದರದಿಂದ ಸ್ವಾಗತಿಸಿದುವು.

ಮೂರನೆಯ ಪ್ರಹರದಲ್ಲಿ ಪತ್ರಕಾರರೆಲ್ಲರೂ ಶ್ರೀ ಲಂಕೆಯ. ಪ್ರಧಾನ ಮಂತ್ರಿ ಶ್ರೀ ಸೊಲೊಮನ್ ಭಂಡಾರ ನಾಯಿಕೆಯವರ ಭೇಟಿ ಮಾಡಲು, ಅವರ ನಿವಾಸಸ್ಥಾನಕ್ಕೆ ಹೋದೆವು. ಶ್ರೀ ಭಂಡಾರ ನಾಯಿಕೆಯವರೊಡನೆ ಭೇಟಿಯಾದ ನಂತರ ನನ್ನಲ್ಲಿ ಯಾವ ಪ್ರಭಾವವಾಯಿತೆಂದು ಮಾತ್ರ ಹೇಳುತ್ತೇನೆ.

ನಾನು ವಿಶ್ವದ ಅನೇಕ ಪ್ರಮುಖ ನಾಯಕರೊಡನೆ ಅವರ ರಾಜಧಾನಿಯಲ್ಲಿ ಭೆಟ್ಟಿಯಾಗಿದ್ದೇನೆ. ಕೈರೋದಲ್ಲಿ ರಾಷ್ಟ್ರಾಧ್ಯಕ್ಷ ನಾಸಿರರೊಡನೆ, ಪೇರಿಸ್‌ನಲ್ಲಿ ಮೂಂದೆಸ್ ಫ್ರಾನ್ಸ್‌ರೊಡನೆ, ಮಾಸ್ಕೋವಿನಲ್ಲಿ ಶ್ರೀ ಕ್ರುಶ್ಚೇವರೊಡನೆ, ಪೇಕಿಂಗ್‌ನಲ್ಲಿ ಶ್ರೀ ಚಾಎನ್ ಲಾಯ್‌ಯವರೊಡನೆ, ರಂಗೂನ್‌ನಲ್ಲಿ ಊನೂರವರೊಡನೆಯೂ ಭೇಟಿ ಮಾಡಿದ್ದೇನೆ. ಆದರೆ, ನಾನು ಶ್ರೀ ಭಂಡಾರ ನಾಯಿಕೆಯವರ ಸರಳತೆಯಿಂದ ಅತ್ಯಂತ ಪ್ರಭಾವಿತನಾಗಿದ್ದೇನೆ. ಅವರು ತಮ್ಮ ಹಳೆಯ ಸಣ್ಣದಾದ ಬಂಗಲೆಯಲ್ಲಿಯೇ ಇರುತ್ತಾರೆ. ಅಲ್ಲಿ ಯಾವ ಮಹಾ ಸೇವಕರೂ ಇರುವುದಿಲ್ಲ. ನಮ್ಮ ಕಾರು ಮುಖದ್ವಾರವನ್ನು ಹಾದು ಹೋಗುವಾಗ, ಯಾರೊಬ್ಬರೂ ವಿಚಾರಿಸುವ ಮಹನೀಯರು ಮುಂಬರಲಿಲ್ಲ.

ನಾವು ಪತ್ರಕಾರರು ಮೋಟಾರಿನಿಂದ ಇಳಿದು ಅಂಗಳದಲ್ಲಿ ಇಳಿದಾಗ ಬಾಗಿಲಿನಿಂದ ಶ್ರೀ ಭಂಡಾರನಾಯಿಕೆ ಅವರು ಹೊರಬರುತ್ತಿದ್ದರು. ನಮ್ಮನ್ನು ತಿಳಿದಿದ್ದವರಂತೆಯೇ ಹಸ್ತಾಂದೋಲನ ಮಾಡಲು ಕೈ ನೀಡಿದರು. ಅವರ ಸುತ್ತು ಕಾರ್ಯದರ್ಶಿಯಾಗಲೀ ಅಂಗರಕ್ಷಕರಾಗಲೀ ಇರಲಿಲ್ಲ.

ಜಗಲಿಯನ್ನು ದಾಟಿಹೋದೊಡನೆ ಅವರು ಕೂರುವ ಕೋಣೆಯಿದೆ. ನಾವು ಬೆತ್ತದ ಕುರ್ಚಿಗಳಲ್ಲಿ ಮಂಡಿಸಿದೆವು. ಶ್ರೀ. ಭಂಡಾರನಾಯಿಕೆ ಅವರ ಮನೆಯಲ್ಲಿನ ಕೂರುಕೋಣೆ ಅದೇ ಆಗಿತ್ತು. ನಮ್ಮ ಸಂಸತ್ತು ಸಚಿವರ ಗೃಹಗಳಲ್ಲಿ ಇದಕ್ಕಿಂತ ಉತ್ತಮವಾದ ವ್ಯವಸ್ಥೆಗಳಿರುತ್ತವೆ.

ಶ್ರೀ ಭಂಡಾರ ನಾಯಿಕೆ ಅವರು ಬಿಳಿ ಅಂಗಿ ಬಿಳಿ ಲುಂಗಿಗಳನ್ನು ಧರಿಸಿದ್ದರು. ಸುವರ್ಣ ಅಂಚಿನ ಬಿಳಿ ಚಾದರ ಅವರ ಕುತ್ತಿಗೆಯನ್ನು ಸುತ್ತಿತ್ತು. ಪಾದಗಳಲ್ಲಿ ಚಪ್ಪಲಿ, ಕೈಯಲ್ಲಿ ಅವರ ದೊಡ್ಡದಾದ ಪೈಪ್ ಇದ್ದುವು. ಈ ಪೈಪಿನ ಬಾಯಿಯು ತಂಬಾಕು ತುಂಬಿ ಮುಚ್ಚಲ್ಪಟ್ಟಿತ್ತು.

ಮೊತ್ತಮೊದಲಾಗಿ ನಾವು ಯಾವ ಪ್ರಶ್ನೆಯನ್ನು ಕೇಳ ಬಯಸುವೆವೆಂದು ಪ್ರಶ್ನಿಸಿದರು. ನಮ್ಮ ಕೇಳಿಕೆಯ ಮೇಲೆ ಅವರು ಮೊದಲು ಶ್ರೀ ಲಂಕೆಯ ರಾಜಕೀಯ ಪರಿಸ್ಥಿತಿ ಮತ್ತು ಆ ಮೇಲೆ ಅಂತಾರಾಷ್ಟ್ರೀಯ ಸ್ಥಿತಿಗತಿಗಳ ಕುರಿತಾಗಿ ಮಾತಾಡಿದರು.

ಇಷ್ಟೊಂದು ಸ್ಪಷ್ಟವಾಗಿ ಆಡಿದ ಬೇರೆ ಯಾವ ರಾಜಕೀಯ ನೇತಾರರನ್ನೂ ನಾನು ಕಂಡಿಲ್ಲ. ಯಾವ ಆತಂಕವಾಗಲೀ ಮರೆಯಾಗಲೀ ಇವರಲ್ಲಿಲ್ಲ. ಅವರೊಡನೆ ಸೇರಿ ಅಂತಾರಾಷ್ಟ್ರೀಯ ಮಹತ್ವದ ವಿಷಯಗಳನ್ನು ನಾವು ತಿಳಿದುಕೊಂಡೆವು. ಇಷ್ಟು ವಿಶಿಷ್ಟವಾದ ರೀತಿಯಲ್ಲಿ ಬೇರಾವ ರಾಜಕಾರಣಿಯೂ ಅಭಿಪ್ರಾಯಗಳನ್ನು ಹೊರಗೆಡಹಲಿಲ್ಲ.

ಸಂಜೆ ೬॥ ತಾಸಿಗೆ ಪ್ರಧಾನಮಂತ್ರಿಯವರ ವತಿಯಿಂದ ಟೆಂಪಲ್ ಟ್ರೀಸ್‌ನಲ್ಲಿ ರಾಷ್ಟ್ರಪತಿಯವರ ಸನ್ಮಾನಕ್ಕಾಗಿ ಒಂದು ಸಮಾರೋಹದ ಏರ್ಪಾಡಾಗಿತ್ತು. ಕೊಲಂಬೊ ನಗರದ ಮಧ್ಯದಲ್ಲಿರುವ ಈ ಭವನದ ಹಿಂದೆ ಒಂದು ವಿಶಾಲವಾದ ಉದ್ಯಾನವಿದ್ದು ಇಲ್ಲಿ ಸುಮಾರು ೪ ಸಾವಿರ ಜನರು ಸೇರಿದ್ದರು. ಶ್ರೀ ಲಂಕೆಯ ಮಂತ್ರಿಗಳು; ವಿದೇಶೀಯ ರಾಜದೂತರು ಮತ್ತು ಕೊಲಂಬೊದಲ್ಲಿನ ಭಾರತೀಯರೂ ಇದರಲ್ಲಿ ಭಾಗವಹಿಸಿದ್ದರು.

ಉದ್ಯಾನವನದ ಹಿಂಬದಿಯಲ್ಲಿ ಒಂದು ವೇದಿಕೆಯು ಕಟ್ಟಲ್ಪಟ್ಟಿತ್ತು. ರಾಷ್ಟ್ರಪತಿಯವರು ಬಂದೊಡನೆಯೇ ವೇದಿಕೆಯಲ್ಲಿ ಶ್ರೀ ಲಂಕೆಯ ನೃತ್ಯವು ಪ್ರಾರಂಭವಾಯಿತು. ಈ ಸಮಾರಂಭ ಸುಮಾರು ಒಂದು ತಾಸು ನಡೆಯಿತು.

ಈ ಸಮಾರಂಭದಲ್ಲಿ ಮಾಲದೀವಿಯ ರಾಜಕೀಯ ಪ್ರತಿನಿಧಿಯೊಡನೆ ಭೇಟಿಯಾಯಿತು. ಆತನು ಮಾಲದೀವಿಯ ಘಟನೆಗಳ ಮೇಲೆ ಪ್ರಕಾಶ ಬೀರಿದ. ಅಲ್ಲದೇ ಅಲ್ಲಿ ಬರುವಂತೆಯೂ ನಮ್ಮನ್ನು ಆಮಂತ್ರಿಸಿದ. ಆದರೆ, ಸಮಯಾಭಾವದಿಂದಾಗಿ ಪತ್ರಕಾರರಾದ ನಾವು ಆ ಕರೆಯನ್ನು ಸ್ವೀಕರಿಸುವುದು ಅಸಾಧ್ಯವಾಯಿತು.

ರಾತ್ರಿ ೮॥ ಘಂಟೆಗೆ ಗಾಲ್‌ಫೇಸ್ ಹೋಟಲಿನಲ್ಲಿ ದೊಡ್ಡ ಸ್ತರದಲ್ಲಿಯೇ ರಾಷ್ಟ್ರಪತಿಯವರು ಒಂದು ಭೋಜನ ಕೂಟವನ್ನೇರ್ಪಡಿಸಿದರು ಅತಿಥಿಗಳೂ ಬಹಳ ಸಂಖ್ಯೆಯಲ್ಲಿ ಆಗಮಿಸಿದ್ದರು. ಎಲ್ಲರಿಗೂ ಪ್ರತ್ಯೇಕ ಸ್ಥಾನ ನಿಶ್ಚಿತವಾಗಿತ್ತು. ಶರ್ಬತ್ತಿನ ಲೋಟ ಹಿಡಿದು ಅಗಣಿತ ಜಾಮನ್ನು ಕುಡಿದರು.

ಸೋಮವಾರ ೨೨ನೆ ಜೂನಿನಂದು ಪ್ರಾತಃ ೮॥ ತಾಸಿಗೆ ಸ್ವದೇಶಕ್ಕೆ ಮರುಯಾತ್ರೆ ಮೊದಲಾಯಿತು. ಮಾರ್ಗದಲ್ಲಿ ೯। ತಾಸಿಗೆ ಕನಕೇಶನತುರೆಯ ವಿಮಾನ ನಿಲ್ದಾಣದಲ್ಲಿ ಇಳಿದೆವು. ಮೋಟರಿನಲ್ಲಿ ಜಾಫನಾ ಪೇಟೆಯ ವರೆಗೆ ಹೋದೆವು. ಜಾಫನಾ ನಗರ ಸಭೆಯು ರಾಷ್ಟ್ರಪತಿಯವರ ಗೌರವಾರ್ಥ ಒಂದು ಕೂಟವನ್ನೂ ಏರ್ಪಡಿಸಿತ್ತು.

ಜಾಫನೀ ನಗರ ಶ್ರೀಲಂಕೆಯ ಉತ್ತರದ ತುದಿಯಲ್ಲಿದೆ. ಕೊಲಂಬೊವಿನಿಂದ ೨೫೦ ಮೈಲು ಅಂತರ. ಉತ್ತರ ರಾಜ್ಯದ ರಾಜಧಾನಿಯೂ ಇದೇ. ಜಾಫನಿನ ಹೆಚ್ಚಿನ ಜನರು ಕೆಲವು ಶತಮಾನಗಳಿಗೆ ಮೊದಲು ತೆರಳಿ ಅಲ್ಲಿ ತಳವೂರಿದ ಭಾರತೀಯರೇ ಆಗಿದ್ದಾರೆ. ಈಗ ಮಾತ್ರ ಅವರಲ್ಲಿನ ನಾಗರಿಕರು. ಇವರು ತಮಿಳು ಭಾಷೆಯನ್ನು ಆಡುತ್ತಾರೆ. ಜಾಫನಾ ನಗರವು ತಮಿಳು ಸಾಮ್ರಾಜ್ಯದ ರಾಜಧಾನಿಯಾಗಿತ್ತು.

ಈ ಉತ್ತರ ಪ್ರಾಂತದಲ್ಲಿ ಸುಮಾರು ೧೦ ಲಕ್ಷ ಜನರು ವಾಸಿಸುತ್ತಾರೆ; ಎಲ್ಲರೂ ಶ್ರೀಲಂಕೆಯ ನಾಗರಿಕರಾಗಿದ್ದಾರೆ. ಸಿಂಹಳಿಯೊಡನೆ ತಮಿಳನ್ನೂ ರಾಷ್ಟ್ರಭಾಷೆಯಾಗಿ ಘೋಷಿಸಬೇಕೆಂದು ಇವರೇ ಬೇಡುತ್ತಿದ್ದಾರೆ. ಈ ವಿಷಯದಲ್ಲಿ ಹಿಂದೊಮ್ಮೆ ದಂಗೆಯೂ ಆಗಿ ಹಲವರು ಪ್ರಾಣ ನೀಗಿದ್ದಾರೆ.

ಭಾರತದ ತಮಿಳು ನಾಡಿನಲ್ಲಿ ಕಾಲಿಟ್ಟಂತೆ ಜಾಫನಾದಲ್ಲಿ ಪಾದಾರ್ಪಣ ಮಾಡಿದಾಗ ಜ್ಞಾತವಾಗುವುದು. ಅದೇ ರೀತಿಯ ಉಡುಗೆ ತೊಡುಗೆಗಳು, ಆಹಾರ ವಿಹಾರಗಳು. ಇಲ್ಲಿ ಕ್ರೈಸ್ತರ ಸಂಖ್ಯೆಯೂ ತುಂಬ ಇದೆ. ಜಾಫನಾ ನಗರ ಸಭೆಯ ಅಧ್ಯಕ್ಷನೊಬ್ಬ ಕ್ರಿಶ್ಚಿಯನ್ ತಮಿಳು ಯುವಕ.

ಜಾಫನಾದಲ್ಲಿ ಬೌದ್ಧ ಮಂದಿರಗಳಲ್ಲ ಹಿಂದೂ ದೇವಾಲಯಗಳೂ ಇಗರ್ಜಿಗಳೂ ಇರುತ್ತವೆ. ೧೭ ನೆ ಶತಮಾನದಲ್ಲಿ ಡಚ್ಚರು ಶ್ರೀ ಲಂಕೆಯ ಈ ಭಾಗದಲ್ಲಿ ತಮ್ಮ ವಸಾಹತನ್ನು ಸ್ಥಾಪಿಸಿದ್ದರು. ಇದರ ಅವಶೇಷ ಇಂದಿಗೂ ಕಾಣುತ್ತಿದೆ.

ಜಾಫನದಲ್ಲಿ ಎರಡು ಘಂಟೆ ವಿಹರಿಸಿ, ರಾಷ್ಟ್ರಪತಿಯವರು ೧೧॥ ಗಂಟೆಗೆ ಬೆಂಗಳೂರಿಗೆ ಹೊರಟರು. ಐದು ಮಿನಿಟುಗಳ ನಂತರ ನಮ್ಮ ವಾಯುಯಾನವೂ ಬೆಂಗಳೂರತ್ತ ಹೊರಟಿತು. ೨ ತಾಸಿಗೆ ಬೆಂಗಳೂರು ತಲಪಿತು

ಈ ರೀತಿಯಾಗಿ ಜೂನ್ ೧೭ಕ್ಕೆ ಬೆಂಗಳೂರಿನಿಂದ ಹೊರಟನಾವು ಶ್ರೀ ಲಂಕೆಯ ಯಾತ್ರೆಯನ್ನು ಮುಗಿಸಿ ಮರಳಿ ಸ್ವದೇಶಕ್ಕೆ ಸೇರಿದೆವು. ನಮ್ಮ ಯಾತ್ರೆಯು ಕುತೂಹಲದಾಯಕವಾಗಿತ್ತು. ಕೆಲವೊಂದು ಚಿಕ್ಕಪುಟ್ಟ ಅಪ್ರಿಯ ಘಟನೆಗಳನ್ನು ಬಿಟ್ಟರೆ, ಅದು ಯಶಸ್ವಿಯಾಗಿಯೇ ಸಮಾಪ್ತವಾಯಿತೆನ್ನಬಹುದು.

(ಸಮಾಪ್ತ)

ಮೂಲ: "ನವಭಾರತ ಟಾಯಮ್ಸ್"

ಅನುವಾದ: "ಗೋರಾ"

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ 4¼%
5 ,, 12 ,, 4½%
13 ,, 24 ,, 4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ವಿನೋದ ವಿಹಾರ

ಓದುವಿರಾದರೆ ನಕ್ಕುನಲಿಯಬಹುದು!

ಪ್ರಾರ್ಥನೆ

ತಾಯಿ—"ಮಗೂ, ಯಾವಾಗಲೂ ದೇವರ ಬಳಿ ನಿಂತು ಪ್ರಾರ್ಥನೆಮಾಡ ಬೇಕು ತಿಳಿಯಿತೆ? ಅದರಿಂದ ದೇವರು ಮೆಚ್ಚಿ ನಿನ್ನ ಇಷ್ಟಾರ್ಥಸಿದ್ಧಿಯನ್ನು ಕೈಗೂಡಿಸುತ್ತಾನೆ"

ಸುಬ್ಬ—"ಆಯಿತು ತಾಯಿ, ನಾಳೆಯಿಂದಲೇ ಶುರುಮಾಡುತ್ತೇನೆ" ಮರು ದಿನ ಸುಬ್ಬ ದೇವರ ಬಳಿ ಬಂದು ಕಣ್ಣುಗಳನ್ನು ಅರೆ ಮುಚ್ಚಿ, ಕಣ್ಣುಗಳನ್ನು ನಾಸಿಕದಗ್ರದತ್ತ ಹರಿಯಿಸಿ ಮುಕುಳಿತ ಹಸ್ತನಾಗಿ ಎಲ್ಲರಿಗೂ ಕೇಳಿಸುವಂತೆ, 'ದೇವ, ದೇವಾಧಿದೇವ, ಯಾವಾಗಲೂ ಪಾಸ್‍ಕ್ಯಾಂಡಿ, ದೂದ್‍ಕ್ಯಾಂಡಿ, ಬೀಡಿ ಬೀಡಾ ಸೀಗರೇಟ್‍ಗಳಲ್ಲಿ ವಿಟಾಮಿನ್ನುಗಳನ್ನು ಹೆಚ್ಚು ಹೆಚ್ಚಾಗಿ ಹೆಚ್ಚಿಸು ಇದೇ ನನ್ನ ಪ್ರಾರ್ಥನೆ" ಎಂದನಂತೆ ಅದಕ್ಕೆ—

ತಾಯಿ—"ಈ ರೀತಿ ಪ್ರಾರ್ಥನೆ ಮಾಡಕೂಡದು ಮಗೂ, 'ನನಗೆ ವಿದ್ಯೆ ಬುದ್ಧಿ ಯಾಯಬೇಕು" ಎಂದು ಬೇಡಿಕೊಳ್ಳಬೇಕು ತಿಳಿಯಿತೆ?

ಸುಬ್ಬ—"ಆಯಿತು ತಾಯಿ, ನಾಳೆಯಿಂದಲೇ ಶುರುಮಾಡುತ್ತೇನೆ" ಮರು ದಿನ ಸುಬ್ಬ ದೇವರ ಬಳಿ ಬಂದು "ದೇವ ದೇವಾಧಿದೇವ ನನ್ನ ತಾಯಿಗೆ ವಿದ್ಯೆ ಬುದ್ಧಿ ಯಾಯಬೇಕು" ಎಂದನಂತೆ. ಅಂದಿನಿಂದ ಸುಬ್ಬನಿಗೆ ಪ್ರಾರ್ಥನೆಯ ಆರ್ಡರೇ ಇಲ್ಲ.

o o o

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

"ಇಂತಹ ಜನ ಬಹಳವಿದ್ದಿದ್ದರೆ..."

ಸುಬ್ಬ ಒಂದೊಮ್ಮೆ ಮಲ್ಪೆಗೆ ಹೋಗಿದ್ದ. ಜತೆಗೆ ಗೆಳೆಯ ಎಪ್ಪಾರನೂ ಇದ್ದ. ಮಲ್ಪೆಯ ಪ್ರಾಕೃತಿಕ ದೃಶ್ಯಗಳನ್ನು ಕಂಡೀರ್ವರೂ ಮುಗ್ಧರಾದರು. ಆದರೆ ಮರಳುವಾಗ ಕೊನೆಯ ೮ ಘಂಟೆಯ ಬಸ್ಸು ಆಗಲೇ ಹೊರಡಿತ್ತು. ಅಯ್ಯೋ ಈಗೇನು ಮಾಡಲಿ? ಇಬ್ಬರ ಹೃದಯ ಬಡಿತ ಮಿನಿಟಿಗೆ ೯೯ ಬಾರಿ ಬಡಿಯಿತು. ಮಲ್ಪೆಯಲ್ಲಂತೂ ಸುಬ್ಬನ ನೆಂಟರಿಷ್ಟವರ್ಗದವರಿಲ್ಲ. ನಡೆದುಬರೋಣವೆಂದರೆ ಎರಡೂವರೆ ಮೈಲಿನ ಬೃಹತ್ ದಾರಿ ಜತೆಗೆ ಕತ್ತಲೂ ಹೀಗೆ ಬಟ್ಟೆಗಾಳಿಡೆ ಕಿಂಕರ್ತವ್ಯಮೂಢರಾಗಿ ನಿಂತಿದ್ದರೀರ್ವರು. ಸುಮಾರು ೧೦ ಗಂಟೆಯ ಸಮಯಕ್ಕೆ ಅವರಿಗೆ ಬಾಡಿಗೆ ಕಾರು ದೊರೆಯಿತು. "ನಾವೂ ಬರಬಹುದೆ?" ದೈನ್ಯತೆಯ ಜತೆಗೆ ಭೀತಿಯೂ ಆವರಿಸಿತು. "ಬರೋಣಾಗಲಿ...." ಕಾರಿನ ಒಳಗಿಂದ ಯಾರೋ ಅಂದರು. ಇಬ್ಬರೂ ಹಣವಿದೆಯೋ ಎಂದು ಪರೀಕ್ಷಿಸಿ ಕಾರನ್ನು ಕೊಕ್ಕರು. ಅದೇನು? ಬರಿಯ ೧೦ ನಿಮಿಷದೊಳಗೆ ಉಡುಪಿ ಗೋಚರಿಸಿತು. ಕಾರು ನಿಂತಿತು. "ಇನ್ನು ಇಳಿಯಬಹುದು" ಅಂತ ಆರ್ಡರ್ ಬಂತು. ಸುಬ್ಬ ಗಡಿಬಿಡಿಯಲ್ಲಿ ಎಸ್ದ "ದುಡ್ಡು?" "ಬೇಡ.... ಬೇಡ...." ಕಾರಿನ ಒಡೆಯ ಅನ್ನುವುದರೊಳಗೆ ಕಾರು ವಾಯುವೇಗದಿಂದ ಧಾವಿಸಿತು. "ಅರೇ, ನಮ್ಮಿಂದ ದುಡ್ಡು ಕೊಂಡುಕೊಳ್ಳಲಿಲ್ಲವಲ್ಲ ಆತ? ಇಂತಹ ಜನ ಬಹಳವಿದ್ದಿದ್ದರೇ...." ಅಂದ ಸುಬ್ಬ.

ಮುಂದೆ ಮನೆಯ ಬಳಿ ಸಾಗುತ್ತಿರಲು ಸುಬ್ಬನಿಗೆ ಎದೆ ಜಬಕ್ ಎಂದಿತು ಏನು ನೋಡುತ್ತಾನೆ? ತಾನು ತನ್ನ ಕೊಡೆಯನ್ನು ಕಾರಿನಲ್ಲೇ ಬಿಟ್ಟುಬಂದಿದ್ದ ಅಂದೇ ಕೊಂಡ ಹೊಸ ಕೊಡೆ. "ಅಯ್ಯೋ ಅದಕ್ಕಾಗಿ ನಮ್ಮಿಂದ ಹಣ ಕೊಂಡುಕೊಳ್ಳಲಿಲ್ಲ ಖಟಿಂಗ..." ಎಂದ ಎಪ್ಪಾರ "ಇಂತಹ ಜನ ಬಹಳವಿದ್ದಿದ್ದರೇ....?"

ಸುಬ್ಬನ ಮೊಸಳೆ ಕಣ್ಣೀರು

ಉಪಾಧ್ಯಾಯ "ಹರ್ಷನು ಯಾವಾಗ ನಮ್ಮ ಭಾರತವನ್ನು ಆಳಿದ್ದನು?"

ಸುಬ್ಬ "ಆವಾಗ ನಾನಿರಲಿಲ್ಲ ಸಾರ್"

ಉಪಾಧ್ಯಾಯ "ಇದೇ ರೀತಿ ಉತ್ತರ ಕೊಡು....ನೋಡು ಈ ವರ್ಷ ಮೇಲೆ ಬೀಳುವುದಿಲ್ಲ...."

ಸುಬ್ಬ ಮೊಸಳೆ ಕಣ್ಣೀರು ಸುರಿಸತೊಡಗಿದ.

o o o

ಉಪಕಾರಕ್ಕೂ ಸುಕೃತಬೇಕೆ?

ಸುಬ್ಬ ಒಮ್ಮೆ ಕಲ್ಯಾಣಪುರಕ್ಕೆ ಹೋಗಿದ್ದ. ಅವನ ಮಾವನ ಮನೆಗೆ. ಹೀಗೆ ನಡೆದು ಹೋಗುತ್ತಿರಲು ಒಂದು ಬಸ್ಸು ವೇಗವಾಗಿ ಬಂದಿತು. ಯಾರೋ ಅದನ್ನು ನಿಲ್ಲಿಸಲೆಂದು ದೂರದ ಓಣಿಯಿಂದ ಓಡಿ ಬರುತ್ತಿದ್ದರೇನೊ? ಸುಬ್ಬನಿಗೆ ಅವರಿಗೆ ಉಪಕಾರ ಮಾಡಲೆಂಬ ಆಸೆ ಹುಟ್ಟಿತೇನೊ? ಸ್ವತಃ ಅವರಿಗಾಗಿ ತಾನೇ ಬಸ್ಸು ನಿಲ್ಲಿಸಿದ. ಬಸ್ಸೇನೊ ನಿಂತಿತಾದರೂ ಸುಬ್ಬ ಮೇಲೆ ಹತ್ತದಿರಲು "ಏನಯ್ಯಾ, ಹತ್ತುವುದಾದರೆ ಬೇಗ ಹತ್ತು" ಅಂದರು ಕಂಡಕ್ಟರ್ ಸಾಬ್. "ಅಗೋ, ಅಲ್ಲೊಬ್ಬ ಮಹನೀಯರು ಓಡಿ ಬರುತ್ತಿದ್ದಾರೆ ಅವರಿಗಾಗಿ ನಿಲ್ಲಿಸಿದೆ" ಎಂದನ್ನುವುದರೊಳಗೆ ಆ ಜನ ಸನಿಹಕ್ಕೆ ಬಂದರು "ನಿಮಗಾಗಿ ನಿಲ್ಲಿಸಿದೆ" ಅಂದ ಸುಬ್ಬ. 'ಅಯ್ಯೋ ನನಗಾಕಪ್ಪ? ನಾನು ನಿಮ್ಮೊಡನೆ ಮಾತಾಡಲು ಧಾವಿಸಿದುದ," ಎಂದ. ಸರಿ, ಡ್ರೈವರ್ ಸಾಬ್ ಕಂಡಕ್ಟರ್ ಸಾಬ್ ಒಳಗೆ ಕುಳಿತ ಜನರಿಂದ ಬೈಗಳ ಸುರಿಮಳೆಯಾಯಿತು ಸುಬ್ಬ ಕನ್ನಡಕವನ್ನು ಹಣೆಯ ಮೇಲಿಟ್ಟು ಮೀಸೆ ತಿರುಪಿದ ಅಂದುಕೊಂಡ "ಉಪಕಾರಕ್ಕೂ ಮುನ್ನ ಸುಕೃತ ಮಾಡಿದ್ದಿರಬೇಕು."

o o o

ಮಹತ್ ಕಾವ್ಯ

ಸುಬ್ಬ ನಕ್ಕ, ಮತ್ತೂ ಮತ್ತೂ ನಕ್ಕ ಪುನಃ ಪುನಃ ಓದಿದ, ಉತ್ತರವಾಗಿ ಪುನಃ ಪುನಃ ನಕ್ಕ. ಕೊನೆಗೆ ಗಲ್ಲವೆಲ್ಲ ಕೆಂಪಾಯಿತು, ಕಣ್ಣಿಂದ ನೀರು ಸುರಿಯಲೂ ಆರಂಭವೂ ಆಯಿತು. ಅಷ್ಟರಲ್ಲಿ ಅವನ ಆ ಹಾಸ್ಯ ವರ್ತನೆಯನ್ನು ಕಂಡು ತಂದೆಗೆ ದಿಗಿಲಾಯಿತು. "ಎ....ಲ್ಲಾ....ದ...ರೂ...." ಅಂತ "ಏನೊ ಅಷ್ಟು ಹುಚ್ಚು ಹುಚ್ಚಾಗಿ ನಗುತ್ತಿರುವುದು?" ಅಂತ ತಂದೆ ಪ್ರಶ್ನಿಸಿದ.

ಸುಬ್ಬ "ಅಪ್ಪ ಈ ವಾಕ್ಯ ಓದು, ನೀನೇ ನಿನ್ನ ಪ್ರಶ್ನೆಗೆ ಉತ್ತರ ಹುಡುಕುವಿಯಂತೆ"

ತಂದೆ ಸುಬ್ಬನ ಕೈಯಿಂದ ಪುಸ್ತಕ ಎಳೆದು ಆ ವಾಕ್ಯ ಓದಿ ನಗಲು ಮೊದಲು ಮಾಡಿದ.

ಆ ತರದ ವಾಕ್ಯವೇನೆಂದು ನೀವೂ ತವಕ ಪಡುವಿರಲ್ತೆ? ನೋಡಿ ಅದು ಸೀಗರೇಟನ್ನು ಕುರಿತು ಬರೆದಿರ್ಪ ಮಹತ್ ಕಾವ್ಯ....

'ಸೀಗರೇಟು ಎಂದರೆ ಬೇರೆನಲ್ಲ ಅದರ ಒಂದು ತುದಿಯಲ್ಲಿ ನೀಳವಾದ ಹೊಗೆಯಿದ್ದರೆ ಮತ್ತೊಂದು ತುದಿಯಲ್ಲಿ ಹುಚ್ಚನಿದ್ದಾನೆ'

o o o

"ಗಾಂಧೀಜಿ ಎಲ್ಲಿ ಹುಟ್ಟಿದ್ದು?"

"ತಾಯಿಯ ಹೊಟ್ಟೆಯಲ್ಲೆಂದು ಅಷ್ಟೂ ಗೊತ್ತಿಲ್ಲವೆ?" ಸುಬ್ಬಗೊಣಗಿದ.

ವಿಚಾರ ಮಂಥನ

(೧ನೇ ಪುಟದಿಂದ)

ಹಿಂದೆ, 'ಮುಂಧ್ರಾ ಪ್ರಕರಣ'ದ ವೇಳೆ ವಿತ್ತ ಮಂತ್ರಿಯಾಗಿದ್ದ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ರಾಜಿನಾಮೆಯಿತ್ತಿದ್ದರು; ಶ್ರೀ ಪ್ರಸಾದರ ರಾಜಿನಾಮೆ ಎರಡನೆಯದು. ಮೂರನೆಯ ಸರದಿಯಾರದು?

o o

ಉಡುಪಿ ಸಂಸ್ಕೃತ ಕಾಲೇಜಿನ ವರ್ಧಂತ್ಯುತ್ಸವದ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತ ಡಿಸ್ಟ್ರಿಕ್ಟ್ ಮುನ್ಸೀಫರಾದ ಶ್ರೀ ಜಿ. ಎಸ್. ನಾಗಮೋತಿಯವರು ಸಂಸ್ಕೃತವನ್ನು ಮಹಾಸಾಗರಕ್ಕೆ ಹೋಲಿಸಿದರು. ಸಂಸ್ಕೃತ ಭಾಷೆ ಬೆಳೆಯದಿರುವುದರಿಂದದು ಮೃತ ಭಾಷೆ ಎನ್ನುವವರನ್ನು ಅಲ್ಲಗಳೆದು, ಅದು ಹರಿಯುವ ನದಿ ಹಳ್ಳ ಕೊಳ್ಳವಲ್ಲ; ಸಾಗರವು ಹರಿಯುವುದಿಲ್ಲ; ಸಾಗರದಿಂದಲೇ ಉಳಿದ ಹಳ್ಳಕೊಳ್ಳ ನದಿನದಗಳಿಗೆಲ್ಲ ನೀರು ದೊರೆಯುವುದು. ಅಂತೆಯೇ ಸಂಸ್ಕೃತ ಮಹಾಸಾಗರದಿಂದಲೇ ಉಳಿದ ಭಾರತೀಯ ಭಾಷಾ ಸಾಹಿತ್ಯಗಳು ಜನಿಸಿದುವು ಎಂದು ನ್ಯಾಯವಾಕ್ಯನ್ನು ಆಡಿದರು. ಶ್ರೀಮಾನ್ ನ್ಯಾಯಾಧೀಶರ ವಾದವು ಒಪ್ಪತಕ್ಕುದೇ. ಭಾರತೀಯ ಭಾಷೆಗಳಲ್ಲೆಲ್ಲ ಸಂಸ್ಕೃತದ ಪ್ರಭಾವವು ಬಿದ್ದಿದೆ. ಮಹಾಸಾಗರದ ನೀರು ಉಪ್ಪಾಗಿರುವುದರಿಂದಲೇ ಅದನ್ನು ಯಾರೂ ಸೇವಿಸಲು ಬಳಸಿಕೊಳ್ಳುವುದಿಲ್ಲ. ಆದರೆ, ಮಹಾ ಸಾಗರ ಮೂಲದಿಂದಲೇ ಜನಿಸುವ ನದಿನದಗಳ ತಿಳಿ ನೀರನ್ನು ಗುಟುಕರಿಸಲು ಹಿಂಜರಿಯುವವನಿಲ್ಲವೆಂಬುದನ್ನೂ ನೆನಪಿನಲ್ಲಿಡಬೇಕು ತಾನೆ? ಮಹಾ ಸಾಗರದ ಉಪ್ಪಿನ ಅಂಶವನ್ನು ಭಟ್ಟಿಯಿಸುವುದು ಸಾಧ್ಯವಾದರೆ, ಸಂಸ್ಕೃತ ಮಹಾ ಸಾಗರದಲ್ಲೇ ಯಾವಾಗಲೂ ಬಿದ್ದುಕೊಂಡಿರಬಹುದಲ್ಲವೆ?

- ರಾಶಿ.

ಹಲ್ಲಿದ್ದಾಗಲೇ ಹುರಿಗಡಲೆ

ಒಂದು ಹಳೆಯ ಗಾದೆ. ಮಾತು ಹಳತಾದರೂ ಅಭಿಪ್ರಾಯ ಹಳತಲ್ಲ. ಹಲ್ಲು ಬಿದ್ದ ಮೇಲೆ ಹುರಿಗಡಲೆಯನ್ನು ಸವಿಯುವ ಕನಸು ನನಸಾಗಲಾರದು. ಮುರುಗಿದರೆ ಹಲ್ಲುಗಳು ಮತ್ತೆ ಬರುವಂತಿಲ್ಲ. ಇದ್ದಾಗಲೇ ಯಾಕೆ ಕಾರ್ಯೋನ್ಮುಖರಾಗಬಾರದು?

ಉಳಿತಾಯದ ಸವಿಯೂ ಹಾಗೆಯೇ. ನಿಮ್ಮ ಭಾಗ್ಯಲಕ್ಷ್ಮಿಯು ಒಲಿದು ಬಂದಾಗ ಇಂದು ನಾಳೆನ್ನದೆ ಬಂದು

ಲಕ್ಕೀ ಕ್ಯಾಶ್ ಸರ್ಟಿಫಿಕೇಟಿಗಾಗಿ

ಸಿಂಡಿಕೇಟ್ ಬೇಂಕಿನಲ್ಲಿ ವಿಚಾರಿಸಿರಿ.

ಚಲಾವಣಾ ನಿಧಿ ರೂ. 18 ಕೋಟಿಗೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ, ಉಡುಪಿ.

The Canara Industrial & Banking Syndicate Ltd., Udipi.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

59-60